

# ಮೋಕ್ಷಮಾರ್ಗ ಪ್ರಕಾಶಕ

**ಮಿಥ್ಯಾತ್ವವೈರಿಯ ಅಂಶವುಕೂಡ ಕೆಡಕಿದೆ !**

# मोक्षमार्ग प्रकाशक


मूल लेखक :

**आचार्यकल्प पंडित टोडरमलजी**

कन्नड़ अनुवादक

**श्री एम. बी. पाटील, शेडबाल,**

'शुद्धात्म सदन', हुलबत्ते कॉलनी,

शहापुर - बेलगावी - कर्नाटक



प्रकाशक

**श्री दिगंबर जैन स्वाध्याय मंडल ट्रस्ट,**

बेंगलूरु.

# ಮೋಕ್ಷಮಾರ್ಗ ಪ್ರಕಾಶಕ

ಮೂಲ ಲೇಖಕರು ಃ

**ಆಚಾರ್ಯಕಲ್ಪ ಪಂಡಿತ ಟೋಡರಮಲ್ಲರು**

ಕನ್ನಡ ಅನುವಾದಕರು ಃ

**ಶ್ರೀ ಎಂ. ಬಿ. ಪಾಟೀಲ, ಸೇಡಬಾಳ**

'ಶುದ್ಧಾತ್ಮಸದನ', ಶಹಾಪುರ - ಬೆಳಗಾವಿ.

ಪ್ರಕಾಶಕರು :

**ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,**

ಬೆಂಗಳೂರು.

A

ಮೊದಲನೆಯ ಆವೃತ್ತಿ : ಒಂದು ಸಾವಿರ ಪ್ರತಿಗಳು, (೧೦೦೦) ಫೆಬ್ರುವರಿ, ೧೯೮೧
ಎರಡನೆಯ ಆವೃತ್ತಿ ಃ ಒಂದು ಸಾವಿರ ಪ್ರತಿಗಳು, (೧೦೦೦) ಅಗಸ್ಟ ೧೯೯೪
ಮೂರನೆಯ ಆವೃತ್ತಿ ಃ ಒಂದು ಸಾವಿರ ಪ್ರತಿಗಳು (೧೦೦೦) ನವ್ಹಂಬರ ೨೦೧೩

ಬೆಲೆ : ಎಂಭತ್ತು ರೂಪಾಯಿ ೮೦/-
(ಮೂಲ ಬೆಲೆ : ೧೫೦ ರೂ.)

ದೊರಕುವ ಸ್ಥಳ :


n ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ
೧೪೧, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - ೫೬೦ ೦೫೩.

n ''ಶ್ರುತ ಭಂಡಾರ'',
೩೬, ಶುದ್ಧಾತ್ಮ ಸದನ, ಹುಳಬತ್ತಿ ಕಾಲೋನಿ,
ಶಹಾಪುರ-ಬೆಳಗಾವಿ.
ಫೋನ ಃ ೨೪೬೬೯೧

n ಮುದ್ರಕರು :
ಇಮೇಜ ಪ್ರಿಂಟ್ಸ,
೨೩೯೩, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
ಫೋನ : ೨೪೨೬೧೩೭




ದೇವಾಧಿದೇವ ಶ್ರೀ ಋಷಭದೇವ ಜಿನಬಿಂಬ, ಬೆಂಗಳೂರು



ಶ್ರೀಮದ್ ಭಗವದ್ ಕುಂದಕುಂದಾಚಾರ್ಯದೇವ





ಪರಮಪೂಜ್ಯ ಗುರುದೇವ ಶ್ರೀ ಕಾನಜೀ ಸ್ವಾಮಿಗಳು

# ಪ್ರಕಾಶಕೀಯ

'ಮೋಕ್ಷಮಾರ್ಗಪ್ರಕಾಶಕ'ದ ಸರ್ವಾಂಗ ಸುಂದರವಾದ ಈ ಮೂರನೆಯ ಆವೃತ್ತಿಯನ್ನು ಹೊರಗೆ ತರಲು ನಮಗೆ ವಿಶೇಷ ಆನಂದವಾಗುತ್ತಿದೆ. ಇದು ಮಹಾನ್ ಆಚಾರ್ಯರುಗಳ ಕೃತಿಗಳ ಅಭ್ಯಾಸಕ್ಕೆ ಮೂಲಗ್ರಂಥವಿದೆ.

ಪಂ. ಟೋಡರಮಲ್ಲರು ಸಮಸ್ತ ಜೈನ ಸಿದ್ಧಾಂತಗಳ ಆಳವಾದ ಅಧ್ಯಯನದಿಂದ ಪ್ರಾಪ್ತ ಮಾಡಿಕೊಂಡ ಆತ್ಮಾನುಭೂತಿಯ ಪರಿಪಾಕದಿಂದ ಈ ಉದ್ಧಕೃತಿಯ ರಚನೆ ಮಾಡಿರುವುದರಿಂದ ಇದು ಪಂಡಿತ-ಪಾಮರರೆಲ್ಲರನ್ನು ಎಂದರೆ ಸ್ವಾತ್ಮಸುಖದ ಅಪೇಕ್ಷೆಯುಳ್ಳವರೆಲ್ಲರನ್ನು ಸಮಾನರೂಪದಲ್ಲಿ ಆಕರ್ಷಿಸಿದೆ. ಅವರೆಲ್ಲರುಗಳ ಮನಸ್ಸನ್ನು ಸೆರೆಹಿಡಿದಿದೆ. ತತ್ ಪರಿಣಾಮವಾಗಿ ಇದು ಭಾರತದ ವಿವಿಧ ಭಾಷೆಗಳಲ್ಲಿ ಅನುವಾದವಾಗಿ ಎಲ್ಲ ಭಾಷೆಯ ಪ್ರತಿಗಳು ಸೇರಿ ಸುಮಾರು ಒಂದು ಲಕ್ಷ ಸಂಖ್ಯೆಯನ್ನು ಮೀರಿರುವುದು ಅದು ತನ್ನದೇ ಆದ ವಿಶೇಷ ಮಹಿಮೆಯನ್ನು ಎತ್ತಿ ತೋರಿಸುತ್ತದೆಯಲ್ಲದೆ ಲೋಕಪ್ರಿಯತೆಯನ್ನೂ ಸಾರಿ ಹೇಳುತ್ತಿದೆ. ಈ ಗ್ರಂಥದ ಸರ್ವಜನ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಇನ್ನೊಂದು ನಿದರ್ಶನವೆಂದರೆ ಇದು ೧೯೮೦ ರಲ್ಲಿ ದಾತೀರಾಮ ಚಾರಿಟೇಬಲ್‌ಟ್ರಸ್ಟ, ದೆಹಲಿಯ ವತಿಯಿಂದ ಉರ್ದುಭಾಷೆಯಲ್ಲಿ ಅನುವಾದವಾಗಿ ಒಂದು ಸಾವಿರ ಪ್ರತಿಗಳು ಹೊರಬಂದು ಉರ್ದುಭಾಷಾ ಭಾಷಿಗಳನ್ನೂ ಅಧ್ಯಾತ್ಮ ರಸದಲ್ಲಿ ಆಮದು ಮಾಡಿಕೊಂಡಿದೆ.

ಹೀಗೆ ಈ ಮೋಕ್ಷಮಾರ್ಗಪ್ರಕಾಶಕವು ತನ್ನ ಆಂತರಿಕ ಉತ್ತಮತೆಯಿಂದ ವಿವಿಧ ಮತ-ಪಕ್ಷ-ಪಂಗಡಗಳಿಗೆ ಸೇರಿದ ಜನರ ಮನಸ್ಸಿನಲ್ಲಿರುವ ಭೇದ-ಭಾವಗಳನ್ನೆಲ್ಲ ಮರೆಸಿ ಒಂದು ನೈಜವಾದ ವಸ್ತುಸ್ವರೂಪದ - ಆತ್ಮಸ್ವರೂಪದ ಕಡೆಗೆ ಆಕರ್ಷಿಸಿರುವುದು ನಿಜವಾಗಿ ಎಲ್ಲರಿಗೂ ಹೆಮ್ಮೆ ತರುವಂಥ ವಿಷಯವಾಗಿದೆ. ಇಂಥ ಸರ್ವಜನ ಮಾನ್ಯವಾದ ಕೃತಿರತ್ನವನ್ನು ರಚಿಸಿರುವುದರಿಂದಲೇ ಪಂ. ಟೋಡರಮಲ್ಲರನ್ನು ಎಲ್ಲರು 'ಪಂಡಿತ ಪ್ರವರ', 'ಆಚಾರ್ಯಕಲ್ಪ'ರೆಂದು ಮೊದಲಾಗಿ ಸಂಬೋಧಿಸಿ ಸಹೃದಯಿಗಳು ತಮ್ಮನ್ನು ತಾವೇ ಗೌರವಿಸಿಕೊಂಡಂತೆ ಇದೆ.

ಈ ಮಹಾಗ್ರಂಥದ ಏಳನೆಯ ಅಧ್ಯಾಯದ ನಿಮಿತ್ತದಿಂದಲೇ ಶ್ರೀ ಕಹಾನ ಗುರುಗಳು ಮತ ಪರಿವರ್ತಿತರಾಗಿ ತಮ್ಮ ಅನಾದಿ ಮಿಥ್ಯಾತ್ವವನ್ನು ಬಿಟ್ಟುಕೊಟ್ಟಿದ್ದರು ಮತ್ತು ಇಂದು ಇಡೀ ಭಾರತದ ತುಂಬೆಲ್ಲ ಹಾಗೂ ಹೊರ ದೇಶಗಳಲ್ಲಿಯೂ ಕೂಡ ಅವರ ಪುಣ್ಯಪ್ರಭಾವದಿಂದ ಪವಿತ್ರ ಜಿನಶಾಸನದ ಪ್ರಚಾರ-ಪ್ರಸಾರವಾಗುತ್ತಿದೆ ಸ್ವಾಧ್ಯಾಯ-ಚಿಂತನಾದಿಗಳು ನಡೆಯುತ್ತಿದ್ದು ಎಲ್ಲರಿಗೂ ಮೋಕ್ಷಮಾರ್ಗವು ತಿಳಿದು ಬರುವಂತಾಗಿದೆ.

ಸರ್ವಜನೋಪಯೋಗಿಯಾದ ಇಂಥ ಒಂದು ಒಳ್ಳೆಯ ಕೃತಿಯನ್ನು ತಮ್ಮ ವಿದ್ವದ್ಧೀಮಂತಿಕೆಯಿಂದ ಸತತ ಅಧ್ಯಯನದ ಪರಿಪಕ್ವಜ್ಞಾನದಿಂದ ಸಾರವತ್ತಾಗಿ ಸ್ವಾರಸ್ಯವಾಗಿ ಕನ್ನಡದಲ್ಲಿ ಇಳಿಸಿಕೊಟ್ಟ ಸೇಡಬಾಳದ ಶ್ರೀ ಎಂ. ಬಿ. ಪಾಟೀಲರನ್ನು ನಾವು ಹಾರ್ದಿಕವಾಗಿ ಅಭಿನಂದಿಸುತ್ತೇವೆ. ಅವರು ನಮ್ಮ ಸಂಸ್ಥೆಯ ಒಂದು ಅಂಗವಾಗಿದ್ದರೆಂದು ಹೇಳುವುದಕ್ಕಿಂತ ಇಡೀ ಸಂಸ್ಥೆಯೇ ಅವರಾಗಿದ್ದರು, ಅವರೇ ಸಂಸ್ಥೆಯಾಗಿದ್ದರು ಎಂದು ಹೇಳುವಲ್ಲಿ ನನಗೆ ಅಧಿಕ ತೃಪ್ತಿಯೆನಿಸುತ್ತದೆ. ಈ ಮಾತನ್ನು ಕನ್ನಡಿಗರೆಲ್ಲರು ಒಪ್ಪುತ್ತಾರೆ.

ಇನ್ನು ಯಾವ ಯಾವ ಸಿಂಪಗಳಲ್ಲಿ ಎಂಥೆಂಥ ಬಹುಮೌಲ್ಯ ಮುತ್ತುಗಳಿವೆಯೆಂಬುದು ಅವು ಸಿಂಪದಿಂದ ಹೊರಬಂದಮೇಲೆಯೇ ತಿಳಿಯುವಂತೆ ಯಾವ ಯಾವ ಪರಂಪರೆಯಲ್ಲಿ ಜನ್ಮತಾಳಿದ ಯಾವ ಯಾವ ಜೀವರುಗಳಲ್ಲಿ ಎಂಥೆಂಥ ಬಹುಮೌಲ್ಯ ಭಾವಗಳಿರುತ್ತವೆಯೆಂಬುದು ಅವು ಪ್ರಕಟವಾದ ಮೇಲೆಯೇ ನಮಗೆ ಪರಿಚಯವಾಗುವುದು. ರಾಜಸ್ಥಾನ ಸಿವಾನಾದ ಸ್ಥಾನಕವಾಸಿ ಪರಂಪರೆಯಲ್ಲಿ ಜನ್ಮತಾಳಿದ ಶ್ರೀ ಸಂಪತರಾಜ್ ಅವರು ತಮ್ಮ ಅಗ್ರಜರಾದ ಸಹೋದರ ಶ್ರೀ ಜಸರಾಜಜೀಯವರ ಪ್ರೇರಣೆಯಿಂದ ನಮ್ಮ ಹಾಗೂ ನಮ್ಮ ಸಂಸ್ಥೆಯ ಸಂಪರ್ಕದಿಂದ ವಸ್ತು ತತ್ತ್ವ ಹಾಗೂ ದಿಗಂಬರ ಜೈನಾಚಾರ್ಯರುಗಳ ಪವಿತ್ರ ಅಂತರ್ಭಾವವನ್ನು ಪ್ರಕಟಪಡಿಸುವ ಶಾಸ್ತ್ರಗಳಿಂದ ಪ್ರಭಾವಿತರಾಗಿ ಈ ಕೃತಿಯ ಪ್ರಕೃತ ಆವೃತ್ತಿಯ ಸಂಪೂರ್ಣ ಖರ್ಚನ್ನು ದಾನವಾಗಿ ಕೊಟ್ಟಿದ್ದಾರೆ. **'ಶ್ರೀ ಸಂಪತ್‌ರಾಜ್ ಮತ್ತು ಅವರ ಸುಪುತ್ರರಾದ ಪ್ರವೀಣಕುಮಾರ್ ಹಾಗೂ ರಾಜೇಶಕುಮಾರ್ ಬಾಗ್ರೇಚಾ (ಜಿನಾನಿ) ಪರಿವಾರ'** ಇವರುಗಳು ಪ್ರಾಪ್ತ ಮನುಷ್ಯಭವದ ಸದುಪಯೋಗ ಪಡೆಯಲಿ ಎಂದರೆ ಅನಾದಿ ಮಿಥ್ಯಾತ್ವದ ನಾಶಮಾಡಿ ಮೋಕ್ಷಮಾರ್ಗದಲ್ಲಿ ಪ್ರವೇಶ ಪಡೆಯುವಂತಾಗಲೆಂದು ಹಾರೈಸುತ್ತೇವೆ.

ಅದೇ ಪ್ರಕಾರ ಶ್ರೀ ಇಮೇಜ ಪ್ರಿಂಟ್ಸ್‌ದ ಒಡೆಯರಾದ ಶ್ರೀ ಅಜಿತ ಪಾಟೀಲರು ಈ ಕೃತಿಯನ್ನು ಆತ್ಮೀಯತೆಯಿಂದ ಸುಂದರವಾಗಿ ಮುದ್ರಿಸಿಕೊಟ್ಟಿದ್ದಾರೆ ಅವರಿಗೂ ಹಾಗೂ ಅಲ್ಲಿನ ಕುಶಲ ಕರ್ಮಚಾರಿಗಳಿಗೂ ಅನೇಕ ಧನ್ಯವಾದಗಳು.

ಬೆಂಗಳೂರು. **ಶ್ರೀ ಸಿ. ಬಿ. ಭಂಡಾರಿ**

ದಿ. ೩೦-೧೧-೨೦೧೩. ಅಧ್ಯಕ್ಷರು, ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ, ಬೆಂಗಳೂರು.

# ಪ್ರಸ್ತಾವನೆ

ವಿಶಾಲವಾದ ಭಾರತದೇಶದಲ್ಲಿ ಅನೇಕ ಮಹಾನಗರಗಳಿದ್ದು ಅವೆಲ್ಲವುಗಳಲ್ಲಿ ಗುಲಾಬಿ ನಗರವೆಂದು ಹೆಸರುವಾಸಿಯಾದ - ಇಂದಿನ ರಾಜಸ್ಥಾನದ ರಾಜಧಾನಿಯಾದ ಜೈನಪುರದಲ್ಲಿ-ಜೈಪುರದಲ್ಲಿ ಇಂದಿಗೆ ಇನ್ನೂರಾ ಎಪ್ಪತ್ತು ಎಪ್ಪತ್ತೈದು ವರ್ಷಗಳ ಪೂರ್ವದಲ್ಲಿ ಎಲ್ಲರ ಗೌರವ-ಆದರಗಳಿಗೆ, ಪ್ರೀತಿ-ವಿಶ್ವಾಸಗಳಿಗೆ ಪಾತ್ರರಾಗಿ ಆದರ್ಶ ಜೀವನ ಬಾಳುತ್ತಿದ್ದ ಪಂ. ಟೋಡರಮಲ್ಲರು ಸಮಸ್ತ ಜಿನಾಗಮಗಳ ಆಳವಾದ ಅಧ್ಯಯನದಿಂದ ಸೂಕ್ಷ್ಮವಾದ ಚಿಂತನ-ಮನನಗಳಿಂದ ವಿಶ್ವದ ಸಮಸ್ತ ಪದಾರ್ಥಗಳ ಸ್ವರೂಪವನ್ನು ಅದರಲ್ಲಿಚಿದಾನಂದ ಸ್ವರೂಪನಾದ ಭಗವಾನ ಆತ್ಮನ ಸ್ವತಂತ್ರ ಅಸ್ತಿತ್ವವನ್ನೂ ತಿಳಿದುಕೊಂಡು ಭೇದ ವಿಜ್ಞಾನದ ಮೂಲಕ ಪರಮ ಪುರುಷಾರ್ಥ ಮಾಡಿ, ಸ್ವಾಭಾವಿಕ ರೀತಿಯಿಂದ ಪ್ರಾಪ್ತವಾಗುವಂಥ ಅಪೂರ್ವ ಆತ್ಮಾನುಭೂತಿಯನ್ನು ಪಡೆದುಕೊಂಡಿದ್ದರು. ತಮ್ಮ ಅನಾದಿ ಸಂಸಾರವನ್ನು ಸೀಮಿತಮಾಡಿಕೊಂಡಿದ್ದರು.

ಪಂ. ಟೋಡರಮಲ್ಲರು ಬಾಲ್ಯದಿಂದಲೇ ಗಂಭೀರ ಪ್ರಕೃತಿಯ ಅಧ್ಯಾತ್ಮಿಕ ಅಭಿರುಚಿಯುಳ್ಳ ಮಹಾಪುರುಷರಿದ್ದರು. ಅವರು ಸ್ವಭಾವದಿಂದ ಅತ್ಯಂತ ಸರಳರು, ವಿವೇಕ ಸಂಪನ್ನರು, ನಿರಭಿಮಾನಿಗಳು, ನಿರಂತರ ಅಧ್ಯಯನ ಶೀಲರು ಸಂಸಾರದಿಂದ ಉದಾಸೀನರು ಆಗಿರುವುದಲ್ಲದೆ ಸಿದ್ಧಾಂತ-ಗ್ರಂಥಗಳ ಯಶಸ್ವೀ ಟೀಕಾಕಾರರು, ಲೋಕಪ್ರಿಯ ಪ್ರವಚನಕಾರರು ದೃಢ ಸಂಕಲ್ಪಿಗಳು, ಆತ್ಮಾನುಭವಿಗಳು ಆಗಿರುವುದರಿಂದ ಅವರ ಆಚಾರ-ವಿಚಾರ, ನಡೆ-ನುಡಿಗಳೆಲ್ಲವೂ ತೀರ ಸ್ವಾಭಾವಿಕವಾಗಿದ್ದವು. ಬಾಹ್ಯಾಡಂಬರದ ವಿರೋಧಿಯಾದ ಅವರ ಮಾತುಗಳು ಕಟು ಸತ್ಯವಾಗಿದ್ದರೂ ಕರುಣೆಯಿಂದ-ಸಹಾನುಭೂತಿಯಿಂದ ಓತ ಪ್ರೋತವಾಗಿದ್ದು ಆತ್ಮನ ಉತ್ಥಾನಕ್ಕೆ ನಿಮಿತ್ತಭೂತ ವಾಗಿರುತ್ತಿದ್ದವು.

ಸರಸ್ವತಿ ಮಾತೆಯ ಶ್ರೀಮಂತ ಪುತ್ರನಾದ ಪಂ. ಟೋಡರಮಲ್ಲರು ಜೀವನವು ಆಧ್ಯಾತ್ಮಿಕ ಸಾಧನೆಗಳಿಂದ ಪರಿಪೂರ್ಣ ತುಂಬಿಹೋಗಿರುವಂತೆ ಸಾಹಿತ್ಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿಯೂ ಅವರು ಅಪೂರ್ವ ಕಾಣಿಕೆ ಸಲ್ಲಿಸಿದ್ದರು. ಅವರು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರವೇಶ ಪಡೆದುಕೊಂಡಂಥ ವಿಕೃತಿಗಳನ್ನು-ರೂಢಿವಾದಗಳನ್ನು ಅತ್ಯಂತ ಸಾರ್ಥಕ ಹಾಗೂ ಸಮರ್ಥರೀತಿಯಿಂದ ತೊಡೆದು ಹಾಕಿದ್ದರಲ್ಲದೆ ಅವನ್ನು ಬೇರು ಸಹಿತ ಕಿತ್ತು ಎಸೆದಿದ್ದರು. ಅವರ ಕಾಲವು ಒಂದು ಸಂಕ್ರಮಣಕಾಲದ ಯುಗವಾಗಿದ್ದು ಆಗ ರಾಜನೀತಿಯಲ್ಲಿ ಅಸ್ಥಿರತೆ, ಸಂಪ್ರದಾಯಗಳಲ್ಲಿ ಬಿಗುವು, ಸಾಹಿತ್ಯದಲ್ಲಿ ಶೃಂಗಾರದ ಬಾಹುಳ್ಯತೆ, ಧಾರ್ಮಿಕ ಕ್ಷೇತ್ರದಲ್ಲಿ ರೂಢಿವಾದ, ಪಟ್ಟ ಭದ್ರ ಹಿತಾಸಕ್ತಿಗಳ ಕೈವಾಡ, ಆರ್ಥಿಕ ಜೀವನದಲ್ಲಿ ವಿಷಮತೆ ಮತ್ತು ಸಾಮಾಜಿಕ ಜೀವನದಲ್ಲಿ ಬಾಹ್ಯಾಡಂಬರ ಇವೇ ಮೊದಲಾದವುಗಳೆಲ್ಲವೂ ತಮ್ಮ ಚರಮ ಸೀಮೆಯವರೆಗೆ ತಲುಪಿದ್ದು ಅವೆಲ್ಲವುಗಳೊಡನೆ ಇವರು ಹೋರಾಡಬೇಕಾಗಿತ್ತು. ಅವರು ಇವೆಲ್ಲ ಸಮಸ್ಯೆಗಳೊಡನೆ ಸಮರ್ಥ ರೀತಿಯಿಂದ ಹೋರಾಡಿದರಲ್ಲದೆ ತಮ್ಮ ಪ್ರಾಣವನ್ನೂ ಪಣಕೊಡ್ಡಿ ಅವನ್ನು ಎದುರಿಸಿದರು.

ಆತ್ಮಾನುಭೂತಿಯ ಉಪಲಬ್ಧತೆಯಿಂದ ಸಹಜತೆಗೆ ಮರಳಿದ ಪಂ. ಟೋಡರಮಲ್ಲರು ಧರ್ಮದ ಹೆಸರಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡದಲ್ಲಿ ಸಿಲುಕಿ ಶೋಷಣೆಗೊಳಗಾಗಿದ್ದ ಜನಸಾಮಾನ್ಯರ ದುಃಖ-ಕಷ್ಟಗಳನ್ನು ನೋಡಿ ಅವರ ಹೃದಯವು ತಲ್ಲಣಿಸಿ ಹೋಗಿತ್ತು. ಅದಕ್ಕಾಗಿ ಅವರು ಜನಸಾಮಾನ್ಯರಲ್ಲಿ ಮನೆ ಮಾಡಿಕೊಂಡಿದ್ದ ಅಂಧ ಶ್ರದ್ಧೆಗಳನ್ನು ಕುರೂಢಿಗಳನ್ನು ಕಳಚಿ ಹಾಕುವ ಸಲುವಾಗಿ ನಿಷೇಧಪರವಾದ ಕಾರ್ಯವನ್ನು ಕೈಕೊಳ್ಳದೆ ವಿಧಿ ಪೂರ್ವಕವಾಗಿ ಆಧ್ಯಾತ್ಮಿಕ ತತ್ತ್ವಜ್ಞಾನದ ಪ್ರಚಾರ-ಪ್ರಸಾರದ ಕಾರ್ಯವನ್ನು ಕೈಗೆತ್ತಿಕೊಂಡರು. ಅದನ್ನು ಅವರು ಲೇಖನ, ಪ್ರವಚನ ಮೊದಲಾದವುಗಳ ಸಹಾಯದಿಂದ ಮಾಡುತ್ತಿದ್ದರು. ಇದರಿಂದ ಅವರ ಸಂಪರ್ಕವು ಪ್ರತ್ಯಕ್ಷ ಪರೋಕ್ಷರೂಪದಿಂದ ಅನೇಕ ಜನರೊಡನೆ ಬರುವುದರಿಂದ ಅದೆಷ್ಟೋ ಜನರು ಅವರ ಪ್ರತಿಭೆಯಿಂದ ಪ್ರಭಾವಿತರಾಗಿ

ತತ್ತ್ವದ ಅಭ್ಯಾಸ ಮಾಡತೊಡಗಿದರು. ತತ್ತ್ವದಲ್ಲಿ ಸಂದೇಹ ತಲೆದೋರಿದಾಗಲೆಲ್ಲ ಪ್ರಶ್ನೋತ್ತರಗಳ ಮೂಲಕ ಸಂದೇಹ ಪರಿಹರಿಸಿಕೊಳ್ಳುತ್ತಿದ್ದರು.

ಅದೆಷ್ಟೋ ಲಘು ಕರ್ಮಿಗಳು ಇವರ ಸಂಪರ್ಕ ಪಡೆದು ತಮ್ಮ ಜೀವನವನ್ನೇ ತಿದ್ದಿಕೊಂಡರೆ ಅದೆಷ್ಟೋ ಜಿಜ್ಞಾಸುಗಳು ಇವರ ಸಂಪರ್ಕದಲ್ಲಿ ಬಂದು ವಿದ್ವಾಂಸರುಗಳಾದರು. ಮತ್ತು ಎಷ್ಟೋ ವಿದ್ವಾಂಸರು ಇವರಿಂದ ಪ್ರೇರಣೆ ಪಡೆದು ಸಾಹಿತ್ಯ ಸೇವೆಯಲ್ಲಿ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡರು. ಇನ್ನುಳಿದ ವಿದ್ವಾಂಸರಾದ ಪಂ. ಜಯಚಂದ ಛಾಬಡಾ, ಪಂ. ದೌಲತರಾಮ ಕಾಸಲೀವಾಲ, ಪಂ. ದೇವಿದಾಸ ಗೋದಾ ಮೊದಲಾದ ಅನೇಕರು ಅತ್ಯಂತ ಉತ್ಸಾಹದಿಂದ ಪಂ. ಟೋಡರಮಲ್ಲರ ಸಾನ್ನಿಧ್ಯದಲ್ಲಿ ಲಾಭ ಪಡೆದು ಅವರಿಂದ ಪ್ರೇರಿತರಾಗಿ ಅವರ ಅನುಕರಣೆ ಮಾಡಿದರು. ಇನ್ನು ಸಹಸ್ರಾರು ಸ್ತ್ರೀ-ಪುರುಷರು ಅವರ ದೈನಿಕ ಶಾಸ್ತ್ರ ಸಭೆಯ ಶ್ರೋತೃಗಳಾಗಿ ರೂಪುಗೊಂಡರು.

ಪಂ. ಟೋಡರಮಲ್ಲರು ಜೈನದರ್ಶನ ಮತ್ತು ಸಿದ್ಧಾಂತಗಳ ಆಳವಾದ ಅಧ್ಯಯನವನ್ನು ಮಾಡುವುದರ ಜತೆ-ಜತೆಯಲ್ಲೇ ಅವನ್ನು ಆ ಕಾಲದ ಜನರಾಡುವ ಭಾಷೆಯಲ್ಲಿ ಬರೆದಿಡಲೂ ಪ್ರಾರಂಭಿಸಿದ್ದರು. ಅದರಲ್ಲಿ ಅವರು ತಮ್ಮ ದಾರ್ಶನಿಕ ಚಿಂತನೆಯನ್ನು ಜನಸಾಮಾನ್ಯರವರೆಗೆ ತಲುಪಿಸಿ ಅವರನ್ನೂ ಧರ್ಮಮಾರ್ಗದಲ್ಲಿ ಆರೂಢ ಮಾಡಿಸುವ ಪ್ರಮುಖ ಉಪದೇಶವಿತ್ತರು. ಅವರು ಪ್ರಾಚೀನವಾದ ಜೈನ ಗ್ರಂಥಗಳ ಮೇಲೆ ವಿಸ್ತಾರವೂ, ಆಳವೂ ಆದ ಅದರಲ್ಲೂ ಎಲ್ಲರಿಗೆ ಸುಲಭವಾಗಿ ತಿಳಿಯುವಂಥ ಭಾಷಾ ಟೀಕೆಗಳನ್ನು ರಚಿಸಿದ್ದಾರೆ. ಅದರಲ್ಲಿ ಅವರ ಸ್ವತಂತ್ರ ಚಿಂತನೆಯ ಪರಿಣಾಮವಾಗಿ ಅದೆಷ್ಟೋ ಮೂಲಭೂತ ವಿಚಾರಗಳು ದೊರಕುತ್ತವೆ. ಅದರಂತೆ ಅವರ ಕೆಲವು ಸ್ವತಂತ್ರ ಕೃತಿಗಳೂ ಲಭ್ಯವಿವೆ. ಭಾಷಾ ಟೀಕೆಗಳಲ್ಲಿ 'ಸಮ್ಯಗ್ಜ್ಞಾನ ಚಂದ್ರಿಕೆ' ಮೊದಲಾಗಿ ಏಳು ಕೃತಿಗಳಿದ್ದರೆ 'ಮೋಕ್ಷಮಾರ್ಗಪ್ರಕಾಶಕ' ಮೊದಲಾಗಿ ಐದು ಸ್ವತಂತ್ರ ಕೃತಿಗಳು ಉಪಲಬ್ಧವಿವೆ.

ಈ 'ಮೋಕ್ಷಮಾರ್ಗಪ್ರಕಾಶಕ'ವು ಅವರ ಸ್ವತಂತ್ರ ಕೃತಿರಚನೆಗಳಲ್ಲಿ ಅತ್ಯಂತ ಮಹತ್ವಪೂರ್ಣವಾದ ಗ್ರಂಥವಾಗಿದೆ. ಇದಕ್ಕೆ ಯಾವುದೇ ಒಂದು ಗ್ರಂಥವು ಆಧಾರವಾಗಿರದೆ ಸಂಪೂರ್ಣ ಜೈನ ಸಾಹಿತ್ಯವೇ ಇದರ ಆಧಾರಭೂತವಾಗಿದೆ. ಪಂ. ಟೋಡರಮಲ್ಲರು ಸಂಪೂರ್ಣ ಜೈನ ಸಿದ್ಧಾಂತಗಳನ್ನು ಇದರಲ್ಲಿ ಕ್ರೋಡೀಕರಿಸುವ ಸಾರ್ಥಕ ಪ್ರಯತ್ನ ಮಾಡಬಯಸಿದ್ದರು. ಆದರೆ ನಮ್ಮೆಲ್ಲರ ದುರ್ದೈವದಿಂದ ಈ ಗ್ರಂಥರಾಜವು ಪೂರ್ಣಗೊಳ್ಳಲಿಲ್ಲ. ಒಂದು ವೇಳೆ ಗ್ರಂಥವು ಪೂರ್ಣವಾಗಿದ್ದರೆ ಜೈನ ದರ್ಶನಕ್ಕೆ ಸಂಬಂಧಿಸಿದ ಯಾವುದೇ ಮಾತನ್ನು ಸರಳ, ಸುಲಭ ಭಾಷೆಯಲ್ಲಿ ತಿಳಿದುಕೊಳ್ಳುವುದಿದ್ದರೆ ನೀವು ಮೋಕ್ಷಮಾರ್ಗಪ್ರಕಾಶಕ ಗ್ರಂಥವನ್ನು ಅವಲೋಕಿಸಿರೆಂದು ಹೇಳಲು ಯಾರಿಗೂ ಒಂದಿಷ್ಟೂ ಸಂಕೋಚವೆನಿಸುತ್ತಿರಲಿಲ್ಲ.

ಈ ಗ್ರಂಥದ ನಿರ್ಮಾಣದಲ್ಲಿ ಗ್ರಂಥಕಾರರ ಅಂತಃ ಪ್ರೇರಣೆಯ ಪರಿಣಾಮವೇ ಕಾರಣವಾಗಿದೆ. ಮತ್ತು ಆ ಅಂತಃ ಪ್ರೇರಣೆಗೆ ಪ್ರೇರಕವಾಗಿ ನಿಂತುಕೊಂಡಿರುವುದು ಅಲ್ಪಬುದ್ಧಿಯುಳ್ಳ ಜಿಜ್ಞಾಸು ಜೀವರುಗಳ ಕುರಿತಾಗಿರುವ ಧರ್ಮಾನುರಾಗವೇ ಇದೆ. ಇದನ್ನು ಹೊರತುಪಡಿಸಿ ಗ್ರಂಥನಿರ್ಮಾಣದ ಮೂಲದಲ್ಲಿ ಯಾವ ಲೌಕಿಕ ಆಸೆ ಆಕಾಂಕ್ಷೆಗಳಾಗಲಿ, ಪೂಜೆ-ಪ್ರತಿಷ್ಠೆಗಳಾಗಲಿ, ಯಶಸ್ಸು-ಲಾಭಗಳಾಗಲಿ ಯಾವುದೂ ಪ್ರೇರಕವಾಗಲಿಲ್ಲ. ಆದರೆ ಯಾರಿಗೆ ನ್ಯಾಯ, ವ್ಯಾಕರಣ, ನಯ-ಪ್ರಮಾಣಗಳ ಜ್ಞಾನವಿಲ್ಲ ಮತ್ತು ಯಾರು ಪ್ರಾಕೃತ-ಸಂಸ್ಕೃತ ಶಾಸ್ತ್ರಗಳ ಅರ್ಥವನ್ನು ತಿಳಿದುಕೊಳ್ಳುವಲ್ಲಿ ಅಸಮರ್ಥರಿದ್ದಾರೆ, ಅವರ ಸಲುವಾಗಿ ಜನರಾಡುವ ಭಾಷೆಯಲ್ಲಿ ಸುಲಭವಾದ ಗ್ರಂಥವೊಂದನ್ನು ರಚಿಸಬೇಕೆಂಬ ಪವಿತ್ರ ಉದ್ದೇಶದಿಂದಲೇ ಈ ಮಹಾನ ಗ್ರಂಥದ ನಿರ್ಮಾಣವಾಗಿದೆ.

ಉಪಲಬ್ಧ ಮೋಕ್ಷಮಾರ್ಗಪ್ರಕಾಶಕದಲ್ಲಿ ಒಟ್ಟು ಒಂಭತ್ತು ಅಧಿಕಾರಗಳಿದ್ದು ಮೊದಲಿನ ಎಂಟು ಅಧಿ ಕಾರಗಳಂತೂ ಪೂರ್ಣವಾಗಿ ಹೋಗಿವೆ; ಆದರೆ ಒಂಭತ್ತನೆಯ ಅಧಿಕಾರವು ಮಾತ್ರ ಅಪೂರ್ಣವಾಗಿಯೇ ಉಳಿದುಕೊಂಡಿದೆ. ಈ ಅಧಿಕಾರದಲ್ಲಿ ಯಾವ ಪ್ರಕಾರ ವಿಷಯ (ಸಮ್ಯಗ್ದರ್ಶನ)ವನ್ನು ಎತ್ತಿಕೊಳ್ಳಲಾಗಿದೆ ಅದಕ್ಕೆ

ಅನುರೂಪವಾಗಿ ಏನನ್ನೂ ಹೇಳುವ ಸಾಧ್ಯತೆಯಾಗಿಲ್ಲ. ಸಮ್ಯಗ್ದರ್ಶನದ ಎಂಟು ಅಂಗಗಳ ಹಾಗೂ ಇಪ್ಪತ್ತೈದು ದೋಷಗಳ ಹೆಸರುಗಳನ್ನು ಮಾತ್ರ ಹೇಳಲಾಗಿದೆ. ಅವುಗಳ ಸಾಂಗೋಪಾಂಗ ವಿವೇಚನೆಯಾಗಲಿಲ್ಲ. ಎಲ್ಲಿ ವಿಷಯವು ನಿಂತು ಹೋಗಿದೆ ಅಲ್ಲಿ ವಿವೇಚನೆ ಮಾಡಬೇಕಾಗಿರುವ ಪ್ರಕರಣವು ಕೂಡ ಅಪೂರ್ಣವಾಗಿ ಉಳಿದುಕೊಂಡಿದೆ, ಇಷ್ಟೇ ಏಕೆ ಕೊನೆಯ ಪುಟದ ಕೊನೆಯ ಶಬ್ದವಾದ 'ಬಹುರಿ'ಯು ಕೂಡ 'ಬಹು'ವಾಗಿಯೇ ಉಳಿದಿದೆ ಅದಕ್ಕೆ 'ರಿ' ಅಕ್ಷರವನ್ನು ಸೇರಿಸುವುದು ಸಾಧ್ಯವಾಗಲಿಲ್ಲ ಎಂದರೆ 'ಬಹು' ಬರೆಯುಷ್ಟರಲ್ಲಿ ಅವರ ಲೆಕ್ಕಣಿಕೆಯಲ್ಲಿಯ ಶಾಯಿಯು ತೀರಿಹೋಗಿರಬೇಕೇ ಅಥವಾ ಗ್ರಂಥಕರ್ತರಿಗೆ ಅಷ್ಟು ಸಮಯವಿರಲಿಕ್ಕಿಲ್ಲವೇ, ಅಥವಾ ಅವರ ಮೇಲೆ ಯಾವುದಾದರೂ ವಿಪತ್ತು ಬಂದೊದಗಿ ಆ ಕಾರ್ಯದಿಂದ ಬಲವಂತವಾಗಿ ಬಿಡಿಸಿರಬೇಕೆ? ಎಂಬುದನ್ನು ಯಾರು 'ಹೀಗೆ ಇರಬೇಕೆಂದು' ನಿರ್ದಿಷ್ಟವಾಗಿ ಹೇಳುವ ಸಾಧ್ಯತೆಯಿದೆ ! ಕೇವಲ 'ರಿ' ಅಕ್ಷರವನ್ನು ಬರೆಯುವಷ್ಟು ಕಾಲಾವಕಾಶ ದೊರಕದಿರುವುದು ವಿಶ್ವದ ಇತಿಹಾಸದಲ್ಲಿಯೇ ಇದೊಂದು ವಿಚಾರಾರ್ಹವಾದ ಸಮಸ್ಯಾಪೂರ್ಣವಾದ ಸಂಗತಿಯಾಗಿದೆ.

ಗ್ರಂಥವು ಅಪೂರ್ಣವಾಗಿ ಉಳಿಯುವುದಕ್ಕೆ ಕಾರಣವು ಯಾವುದೇ ಆಗಿರಲಿ, ಆದರೆ ಅದರಿಂದ ಅಧ್ಯಾತ್ಮ ಲೋಕದಲ್ಲಿ ಎಂದೂ ತುಂಬಿ ಬರಲಾಗದಷ್ಟು ಕ್ಷತಿಯುಂಟಾಗಿದೆಯೆಂದು ಅನಿವಾರ್ಯವಾಗಿ ಹೇಳಬೇಕಾದ ಸಂದರ್ಭವೊದಗಿದೆ.

ಒಂಭತ್ತನೆಯ ಅಧಿಕಾರವನ್ನು ಪೂರ್ಣ ಮಾಡಿದ ನಂತರವೂ ಮತ್ತೆ ಕೆಲವು ಅಧಿಕಾರಗಳನ್ನು ಬರೆಯುವ ವಿಚಾರವು ಗ್ರಂಥಕಾರರ ಮನಸ್ಸಿನಲ್ಲಿ ಅವಶ್ಯವಾಗಿ ಇದ್ದಿರಲೇ ಬೇಕು. ಇಲ್ಲದಿದ್ದರೆ ಈ ಪ್ರಾಪ್ತ ಒಂಭತ್ತು ಅಧಿಕಾರಗಳಲ್ಲಿ ಲೇಖಕರು ಹನ್ನೆರಡು ಸ್ಥಳಗಳಲ್ಲಿ 'ಈ ವಿಷಯದ ಮೇಲೆ ಮುಂದೆ ಯಥಾಸ್ಥಾನದಲ್ಲಿ ವಿಸ್ತಾರದಿಂದ ವಿವರಣೆ ಮಾಡಲಾಗುವುದೆ'ಂದೇಕೆ ಹೇಳುತ್ತಿದ್ದರು ?

ಆದುದರಿಂದ ಅವರು ಹೇಳಿದ ಸಂಕೇತಗಳ ಮೇಲಿಂದ ಮತ್ತು ಪ್ರತಿಪಾದಿಸಲ್ಪಟ್ಟ ವಿಷಯ ವಸ್ತುವಿನ ಆಧಾರದ ಮೇಲೆ ಈ ಗ್ರಂಥವು ನಿರ್ವಿಘ್ನವಾಗಿ ಕೊನೆಗೊಂಡಿದ್ದರೆ ಸಾವಿರಾರು ಪುಟಗಳ ಒಂದು ಮಹಾಗ್ರಂಥ ವಾಗುತ್ತಿತ್ತೆಂದು ತಿಳಿದು ಬರುತ್ತದೆ. ಮತ್ತು ಅದರಲ್ಲಿ ಮೋಕ್ಷಮಾರ್ಗದ ಮೂಲಾಧಾರಭೂತವಾದ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರದ ವಿಸ್ತಾರವಾದ ವಿವೇಚನೆಯು ಆಗುತ್ತಿತ್ತು. ಜತೆಯಲ್ಲೇ ಸಾಧಕ ಜೀವನಿಗೆ ಇದೊಂದು ಆಧಾರಭೂತವಾದ ಪ್ರಾಮಾಣಿಕ ಗ್ರಂಥವಾಗುತ್ತಿತ್ತೆಂದು ನಿಸ್ಸಂಕೋಚವಾಗಿ ಹೇಳಬಹುದಾಗಿದೆ.

ಪಂ. ಟೋಡರಮಲ್ಲರು ತಮ್ಮ ಮನೋಮಂದಿರದಲ್ಲಿ-ಜ್ಞಾನ ಭಾಂಡಾರದಲ್ಲಿ ಏನೇನು ತುಂಬಿಕೊಂಡಿದ್ದರು ಮತ್ತು ಇದರಲ್ಲಿ ಯಾವ-ಯಾವ ವಿಷಯವನ್ನು ತರಲು ಬಯಸಿದ್ದರೆಂಬುದು ಅವರಿಗೇ ತಿಳಿದ ವಿಷಯವಾಗಿದೆ. ಇಲ್ಲಿ ನಾವು ಕೇವಲ ಊಹೆ ಮಾಡುತ್ತಿದ್ದೇವೆ. ನಮ್ಮ ಊಹೆಗೆ ಮೀರಿದ ವಿಷಯವೂ ಅವಶ್ಯವಾಗಿ ಅವರ ಮೆದುಳಿನಲ್ಲಿ ತುಂಬಿರಬೇಕು.

ಈ ಗ್ರಂಥವನ್ನು ವಿವೇಚನಾತ್ಮಕವಾದ ಗದ್ಯ ಶೈಲಿಯಲ್ಲಿ ರಚಿಸಲಾಗಿದ್ದು, ವಿಷಯವನ್ನು ಪ್ರಶ್ನೋತ್ತರಗಳ ಮೂಲಕ ಸ್ಪಷ್ಟಪಡಿಸಲಾಗಿದೆ. ವಾಕ್ಯರಚನೆಯು ಸಂಕ್ಷಿಪ್ತವಿದ್ದು ವಿಷಯ ಪ್ರತಿಪಾದನೆಯ ಶೈಲಿಯು ಅತ್ಯಂತ ಗಂಭೀರವಿದೆ. ವ್ಯರ್ಥವಾದ ವಿಸ್ತಾರವಿಲ್ಲದಿದ್ದರೂ ವಿಸ್ತಾರದ ಭಯದಿಂದ ಯಾವುದೇ ವಿಷಯವು ಅಸ್ಪಷ್ಟವಾಗಿ ಉಳಿದಿಲ್ಲ. ಎಲ್ಲಿ ಉಚಿತವಾಗಿ ಕಂಡು ಬರುತ್ತದೆ ಅಲ್ಲಿ ವಿಷಯದ ವಿಸ್ತಾರವೂ ಆಗಿದೆ, ಆದರೆ ಅದರಲ್ಲಿ ಉತ್ತರೋತ್ತರ ನವೀನತೆಯಿದೆ. ಮತ್ತು ಆ ವಿಷಯದ ವಿಸ್ತಾರವು ಸಾಂಗೋಪಾಂಗ ವಿಷಯ ವಿವೇಚನೆಯ ಪ್ರೇರಣೆಯಿಂದಲೇ ಆಗಿದೆ.

ವಿಷಯವನ್ನು ಸ್ಪಷ್ಟೀಕರಿಸುವ ಸಲುವಾಗಿ ಉಚಿತ ಉದಾಹರಣೆಗಳ ಸಮಾವೇಶ ಮಾಡಲಾಗಿದೆ. ಕೆಲವು ಉದಾಹರಣೆಗಳಂತೂ ಪೂರ್ಣಾಕಾರ ರೂಪದಂತೆ ನಾಲ್ಕಾರು ಅಧಿಕಾರಗಳವರೆಗೆ ನಡೆದು ಬರುತ್ತವೆ. ಅವುಗಳಲ್ಲಿ ರೋಗಿ ಮತ್ತು ವೈದ್ಯನ ಉದಾಹರಣೆಯು ಎರಡು, ಮೂರು, ನಾಲ್ಕು ಮತ್ತು ಐದನೆಯ ಅಧಿಕಾರಗಳ ಆರಂಭದಲ್ಲಿ

ಬರುತ್ತದೆ. ತಮ್ಮ ಮಾತು ವಾಚಕರ ಹೃದಯದಲ್ಲಿ ಇಳಿದು ಬರುವ ಸಲುವಾಗಿ ಸಾಕಷ್ಟು ಆಗಮ ಪ್ರಮಾಣಗಳನ್ನು ಅನೇಕ ಉದ್ಧರಣೆಗಳನ್ನು ಪ್ರಸ್ತುತ ಪಡಿಸುತ್ತಾರೆ. ಅವರು ಎಷ್ಟು ವಸ್ತುವಿನ ಆಳದಲ್ಲಿ ಇಳಿಯುತ್ತಾರೆ ಅಷ್ಟೇ ಅವರ ಅನುಭೂತಿಯು ಅವರ ಲೇಖನಿಯಲ್ಲಿಯೂ ಇಳಿದು ಬರುತ್ತದೆ.

ಈ ಮೋಕ್ಷಮಾರ್ಗಪ್ರಕಾಶದಲ್ಲಿನ ಪ್ರತಿಯೊಂದು ವಾಕ್ಯವು ಆರ್ಷಸಮ್ಮತವಿದ್ದರೂ ಅದರಲ್ಲಿ ಬಹಳಷ್ಟು ನವೀನ ಪ್ರಮೇಯಗಳನ್ನು ಮಂಡಿಸಲಾಗಿದ್ದು ಅವು ಆ ರೂಪದಲ್ಲಿ ಜಿನಾಗಮದೊಳಗೆ ಬೇರೆಲ್ಲಿಯೂ ಕಂಡು ಬರುವುದಿಲ್ಲ. ಈ ಪ್ರಕಾರದ ವಿಷಯಗಳನ್ನು ಗ್ರಂಥದ ತುಂಬೆಲ್ಲ ಕಾಣಬಹುದಾಗಿದೆ. ಈ ದೃಷ್ಟಿಯಿಂದ ವಿಶೇಷವಾಗಿ ಏಳು ಮತ್ತು ಎಂಟನೆಯ ಅಧಿಕಾರಗಳು ಉಲ್ಲೇಖನೀಯವಿವೆ. ಇನ್ನು ಸೈದ್ಧಾಂತಿಕ ದೃಷ್ಟಿಯಿಂದಲೂ ಅವರು ನವೀನ ಪ್ರಮೇಯಗಳನ್ನು ಮಂಡಿಸಿರುವುದಲ್ಲದೆ ಅವರ ಲೋಕ ನಿರೀಕ್ಷಣ ದೃಷ್ಟಿಯೂ ಅತ್ಯಂತ ಸೂಕ್ಷ್ಮವಿತ್ತು. ಅಂದು ಅವರು ಚಿತ್ರಿಸಿದ ಚಿತ್ರಣವು ಇಂದು ಕೂಡ ಎಲ್ಲೆಡೆಗೆ ಕಂಡು ಬರುತ್ತದೆ. ಇಲ್ಲಿ ಕೆಲವನ್ನು ನೋಡೋಣ.

ಅಲ್ಲಿ ಅದೆಷ್ಟೋ ಜನರು ಕುಲಪ್ರವೃತ್ತಿಯಿಂದ ಅಥವಾ ಅನುಕರಣ ಮಾಡಿ ಲೋಭಾದಿಗಳ ಅಭಿಪ್ರಾಯದಿಂದ ಧರ್ಮಸಾಧನೆ ಮಾಡುತ್ತಾರೆ, ಅವರಿಗಂತೂ ಧರ್ಮ ದೃಷ್ಟಿಯೇ ಇಲ್ಲ.

ಭಕ್ತಿ ಮಾಡುತ್ತಿದ್ದರೆ ಚಿತ್ತವು ಎಲ್ಲಿಯೋ ಇರುತ್ತದೆ, ದೃಷ್ಟಿಯು ಸುತ್ತುತ್ತಿರುತ್ತದೆ ಮತ್ತು ಮುಖದಿಂದ ಪಾಠಾದಿಗಳನ್ನು ಹೇಳುತ್ತಾರೆ ಹಾಗೂ ನಮಸ್ಕಾರಾದಿಗಳನ್ನು ಮಾಡುತ್ತಾರೆ; ಆದರೆ ಇದು ಒಳ್ಳೆಯದಿಲ್ಲ. ನಾನು ಯಾರು, ಯಾರ ಸ್ತುತಿ ಮಾಡುತ್ತಿರುವೆನು, ಯಾವ ಪ್ರಯೋಜನದ ಸಲುವಾಗಿ ಸ್ತುತಿ ಮಾಡುತ್ತಿರುವೆನು, ಪಾಠದಲ್ಲಿ ಯಾವ ಅರ್ಥವಿದೆ, ಇವು ಯಾವುದರ ಎಚ್ಚರವೇ ಇಲ್ಲ.

ಅಲ್ಲದೆ ಒಮ್ಮೊಮ್ಮೆ ಕುದೇವಾದಿಗಳ ಸೇವೆಯನ್ನು ಕೂಡ ಮಾಡತೊಡಗುತ್ತಾನೆ, ಅಲ್ಲಿ ಸುದೇವ-ಗುರು-ಶಾಸ್ತ್ರಾದಿಗಳ ಮತ್ತು ಕುದೇವ-ಗುರು-ಶಾಸ್ತ್ರಾದಿಗಳ ವಿಶೇಷ ಪರಿಚಯವೇ ಇಲ್ಲ.

ಮತ್ತು ದಾನಕೊಡುವುದಾದರೆ ಪಾತ್ರ-ಅಪಾತ್ರಗಳ ವಿಚಾರವಿಲ್ಲದೆ ತನ್ನ ಪ್ರಶಂಸೆಯಾಗುವಂತೆ ದಾನ ಕೊಡುತ್ತಾನೆ.

ಮತ್ತು ತಪಸ್ಸು ಮಾಡುವುದಾದರೆ ಉಪವಾಸವಿದ್ದುಕೊಂಡು ದೊಡ್ಡಸ್ತನ ಬರುವಂಥ ಕಾರ್ಯ ಮಾಡುತ್ತಾನೆ ಪರಿಣಾಮಗಳ ಪರಿಚಯವೇ ಇರುವುದಿಲ್ಲ.

ಅದರಂತೆ ವ್ರತಾದಿಗಳನ್ನು ಧಾರಣ ಮಾಡುವುದಾದರೆ ಅಲ್ಲಿ ಬಾಹ್ಯ ಕ್ರಿಯೆಗಳ ಮೇಲೆ ದೃಷ್ಟಿಯಿರುತ್ತದೆ; ಅದೂ ಓರ್ವನು ನಿಜವಾದ ಕ್ರಿಯೆ ಮಾಡಿದರೆ ಓರ್ವನು ಸಟೆಯಾದ ಕ್ರಿಯೆ ಮಾಡುತ್ತಾನೆ; ಮತ್ತು ಅಂತರಂಗದಲ್ಲಿ ರಾಗಾದಿಭಾವಗಳು ಕಂಡು ಬರುತ್ತವೆ ಅವುಗಳ ವಿಚಾರವೇ ಇಲ್ಲ. ಮತ್ತು ಬಾಹ್ಯದಲ್ಲೂ ರಾಗಾದಿಗಳ ಪೋಷಣೆಯ ಸಾಧನೆ ಮಾಡುತ್ತಾನೆ.

ಅದರಂತೆ ಪೂಜೆ-ಪ್ರಭಾವನೆ ಮೊದಲಾದ ಕಾರ್ಯ ಮಾಡುವುದಾದರೆ ಅಲ್ಲಿ ಲೋಕದೊಳಗೆ ಯಾವ ಪ್ರಕಾರ ಪ್ರಶಂಸೆಯಾಗುವುದು, ಹಾಗೂ ವಿಷಯ-ಕಷಾಯಗಳ ಪೋಷಣೆಯಾಗುವುದು ಆ ಪ್ರಕಾರ ಕಾರ್ಯಮಾಡುತ್ತಾನೆ. ಮತ್ತು ಬಹಳಷ್ಟು ಹಿಂಸಾದಿಗಳನ್ನು ಮಾಡುತ್ತಾನೆ.

ಈ ಕಾರ್ಯಗಳನ್ನಂತೂ ತಮ್ಮ ಹಾಗೂ ಅನ್ಯ ಜೀವರುಗಳ ಪರಿಣಾಮವು ಸುಧಾರಿಸುವ ಸಲುವಾಗಿ ಹೇಳಿದ್ದಾರೆ. ಇನ್ನು ಅಲ್ಲಿ ಒಂದಿಷ್ಟು ಹಿಂಸಾದಿಗಳೂ ಉತ್ಪನ್ನವಾಗುತ್ತವೆ, ಆದರೆ ಯಾವುದರಲ್ಲಿ ಕಡಿಮೆ ಅಪರಾಧವಿದೆ ಮತ್ತು ಗುಣಗಳು ಅಧಿಕವಿವೆ ಆ ಕಾರ್ಯ ಮಾಡಲು ಹೇಳಿದೆ ಆದರೆ ಪರಿಣಾಮಗಳದ್ದಂತೂ ಪರಿಚಯವೇ ಇಲ್ಲ ಮತ್ತು ಎಲ್ಲಿ ಎಷ್ಟು ಅಪರಾಧಗಳಾಗುತ್ತವೆ, ಗುಣಗಳೆಷ್ಟಾಗುತ್ತವೆಂಬ ಲಾಭ-ಹಾನಿಯ ಜ್ಞಾನವೇ ಇಲ್ಲ ಅದರಂತೆ

ವಿಧಿ-ನಿಷೇಧಗಳ ಜ್ಞಾನ ಕೂಡ ಇಲ್ಲ.

ಇನ್ನು ಶಾಸ್ತ್ರಾಭ್ಯಾಸ ಮಾಡುವುದಾದರೆ ಅಲ್ಲಿ ಪದ್ಧತಿಗೆ ಅನುಸರಿಸಿ ಪ್ರವರ್ತಿಸುತ್ತಾನೆ, ಓದುವುದಾದರೆ ಇತರರಿಗೆ ಕೇಳಿಸುವಂತೆ ಓದುತ್ತಾನೆ. ಪಾಠ ಹೇಳುವುದಾದರೆ ತಾನು ಓದಿ ಬಿಡುತ್ತಾನೆ, ಕೇಳುವುದಾದರೆ ಏನು ಹೇಳುತ್ತಾರೆ ಅದನ್ನು ಕೇಳಿಕೊಳ್ಳುತ್ತಾನೆ; ಆದರೆ ಯಾವುದು ಶಾಸ್ತ್ರಾಭ್ಯಾಸದ ಪ್ರಯೋಜನವಿದೆ ಅದನ್ನು ತಾನು ಅಂತರಂಗದಲ್ಲಿ ಇಳಿಸಿಕೊಳ್ಳುವುದಿಲ್ಲ. ಇವೇ ಮೊದಲಾದ ಧರ್ಮಕಾರ್ಯಗಳ ಮರ್ಮವನ್ನು ಪರಿಚಯಿಸಿಕೊಳ್ಳುವುದಿಲ್ಲ.

ಕೆಲವರಂತೂ ತಮ್ಮ ಕುಲದಲ್ಲಿ ದೊಡ್ಡವರು ಯಾವ ಪ್ರಕಾರ ಪ್ರವರ್ತಿಸುತ್ತಾರೆ ಅದೇ ಪ್ರಕಾರ ನಾವೂ ಮಾಡುವುದಿದೆ, ಅಥವಾ ಇತರರು ಮಾಡುವಂತೆ ನಾವೂ ಮಾಡುವುದು, ಮತ್ತು ಹೀಗೆ ಮಾಡುವುದರಿಂದ ನಮ್ಮ ಲೋಭಾದಿಗಳ ಸಿದ್ಧಿಯಾಗುವುದು. ಇವೇ ಮೊದಲಾದ ವಿಚಾರ ಸಹಿತ ಅಭೂತಾರ್ಥವಾದ ಧರ್ಮವನ್ನು ಸಾಧಿಸುತ್ತಾರೆ.

ಇದೇ ಪ್ರಕಾರ ಜೈನಧರ್ಮದ ಮೂಲತತ್ತ್ವಗಳನ್ನು ಪ್ರಕಟ ಮಾಡುವಂಥ ಕ್ರಾಂತಿಕಾರಿಯಾದ ವಾಕ್ಯತುಂಡುಗಳು ಏಳು ಮತ್ತು ಎಂಟನೆಯ ಅಧಿಕಾರಗಳಲ್ಲಿ ಬಂದಿದೆ. ಅವನ್ನು ಮೂಲಗ್ರಂಥವನ್ನೋದಿಯೇ ತಿಳಿದುಕೊಳ್ಳಬೇಕು. ಇಲ್ಲಿ ವಿಸ್ತಾರಭಯದಿಂದ ಕೈ ಬಿಡಲಾಗಿದೆ.

ಈ ಮೋಕ್ಷಮಾರ್ಗಪ್ರಕಾಶದಲ್ಲಿ ಗ್ರಂಥಕರ್ತರು ವೀತರಾಗತೆಗೆ ಸರ್ವೋಚ್ಚ ಪ್ರಾಥಮಿಕತೆಯನ್ನು ಕೊಟ್ಟಿದ್ದಾರೆ. ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರ ಈ ಮೂರರ ಪರಿಭಾಷೆ ಮಾಡುತ್ತ ಅವರು ಜೈನ ದರ್ಶನದ ಪ್ರಾಣಭೂತವಾದ ವೀತರಾಗತೆಗೆ ಪ್ರಮುಖ ಸ್ಥಾನ ಕೊಟ್ಟಿದ್ದಾರೆ. ವಿಸ್ತಾರವಾಗಿ ವಿಶ್ಲೇಷಣೆ ಮಾಡಿದ ನಂತರ ಹೀಗೆ ಹೇಳುತ್ತಾರೆ,-

ಆದುದರಿಂದ ಹೆಚ್ಚಿಗೇನು ಹೇಳುವುದು, ಯಾವ ಪ್ರಕಾರದಿಂದ ರಾಗಾದಿಗಳನ್ನು ದೂರ ಮಾಡುವ ಶ್ರದ್ಧೆಯಾಗುವುದು ಆ ಶ್ರದ್ಧೆಯೇ ಸಮ್ಯಗ್ದರ್ಶನವಿದೆ. ಯಾವ ಪ್ರಕಾರದಿಂದ ರಾಗಾದಿಗಳನ್ನು ದೂರಮಾಡುವ ತಿಳಿವಳಿಕೆಯಾಗುವುದು ಆ ತಿಳಿವಳಿಕೆಯೇ ಸಮ್ಯಗ್ಜ್ಞಾನವಿದೆ, ಮತ್ತು ಯಾವ ಪ್ರಕಾರದಿಂದ ರಾಗಾದಿಗಳನ್ನು ದೂರಮಾಡಲಾಗುವುದು ಆ ಆಚರಣೆಯೇ ಸಮ್ಯಕ್ಚಾರಿತ್ರವಿದೆ; ಈ ಪ್ರಕಾರವಾಗಿಯೇ ಮೋಕ್ಷಮಾರ್ಗವನ್ನು ಮನ್ನಿಸುವುದು ಯೋಗ್ಯವಿದೆ.

ಪಂ. ಟೋಡರಮಲ್ಲರ ಇನ್ನೊಂದು ವಿಶೇಷತೆಯೇನೆಂದರೆ ಅವರು ಪ್ರಾಕೃತ ಮತ್ತು ಸಂಸ್ಕೃತದಲ್ಲಿ ನಿಬದ್ಧವಾಗಿರುವ ನಮ್ಮ ಆಧ್ಯಾತ್ಮಿಕ ತತ್ತ್ವಜ್ಞಾನವನ್ನು ಸುಲಭವಾದ ಗದ್ಯ ಭಾಷೆಯ ಮಾಧ್ಯಮದಿಂದ ವ್ಯಕ್ತಪಡಿಸಿದ್ದಾರೆ ಮತ್ತು ತತ್ತ್ವವಿವೇಚನೆಯಲ್ಲಿ ತಮ್ಮದೇ ಆದ ಒಂದು ನವೀನ ದೃಷ್ಟಿಯನ್ನು ಕೊಟ್ಟಿದ್ದಾರೆ. ಆ ನವೀನತೆಯು ಅವರ ಕ್ರಾಂತಿಕಾರಿಯಾದ ದೃಷ್ಟಿಯಲ್ಲಿ ಜನ್ಮ ತಳೆದಿದೆ. ಅವರು ತತ್ತ್ವಜ್ಞಾನವನ್ನು ಕೇವಲ ಪರಂಪರಾಗತವಾದ ಮನ್ನಣೆ ಹಾಗೂ ಶಾಸ್ತ್ರೀಯ ಪ್ರಾಮಾಣಿಕತೆಯ ಸಂದರ್ಭದಲ್ಲಿ ಮಾತ್ರ ನೋಡುವುದಿಲ್ಲ. ಆದರೆ ತತ್ತ್ವಜ್ಞಾನವು ಅವರ ಸಲುವಾಗಿ ಒಂದು ಸಜೀವ ಚಿಂತನ ಪ್ರಕ್ರಿಯೆಯಾಗಿದೆ. ಜನರು ಯಾವ ತತ್ತ್ವಜ್ಞಾನದಿಂದ ರೂಢಿವಾದದ ಸಮರ್ಥನೆ ಮಾಡುತ್ತಿದ್ದರು. ಅದೇ ತತ್ತ್ವಜ್ಞಾನದಿಂದ ಅವರು ರೂಢಿವಾದವನ್ನು ನಿರಸ್ತ ಮಾಡಿದ್ದಾರೆ. ತತ್ತ್ವಜ್ಞಾನದ ಅನುಶೀಲನದ ಸಲುವಾಗಿ ಅವರು ಕೆಲವು ಯೋಗ್ಯತೆಗಳನ್ನು ಅತ್ಯಾವಶ್ಯಕವೆಂದು ಮನ್ನಿಸಿದ್ದಾರೆ. ಅವರ ಅನುಸಾರ ಮೋಕ್ಷಮಾರ್ಗವೇನು ಪೃಥಕ್‌ವಿಲ್ಲ ಆದರೆ ಆತ್ಮ ವಿಜ್ಞಾನವೇ ಇದ್ದು ಅದನ್ನು ಅವರು ವೀತರಾಗ-ವಿಜ್ಞಾನವೆಂದು ಹೇಳುತ್ತಾರೆ.

'ಶೈಲಿ'-ಎಂದರೇನೆಂಬ ಪ್ರಶ್ನೆಗೆ ಸರಿಯಾದ ಸೂತ್ರಪ್ರಾಯವಾದ ಉತ್ತರವೊಂದನ್ನು ಕೊಡುವುದು ಕಷ್ಟವಿದೆ. ಆದರೆ ಬಹಳಷ್ಟು ಜನರು ಒಪ್ಪುವ ಅರ್ಥದಲ್ಲಿ ಹೇಳಬೇಕೆಂದರೆ ಚಿತ್ತವೃತ್ತಿ, ಮನೋಧರ್ಮ ಅಥವಾ ವ್ಯಕ್ತಿತ್ವವೇ

ಶೈಲಿಯೆಂದು ಹೇಳಬಹುದಾಗಿದೆ. ಚಿತ್ತವೃತ್ತಿಯು ಹೊರಗಿನ ಥಳುಕಿಗಿಂತ ಹೆಚ್ಚು ಸ್ವರಸವಾಗಿರುವಂತೆ ಅಂತಶ್ಶೀಲವು ಹೊರಗಣ ಶೀಲಕ್ಕಿಂತ ಹೆಚ್ಚು ಮುಖ್ಯವಾಗಿರುತ್ತದೆ, ಮತ್ತು ಇವೆರಡೂ ವ್ಯಕ್ತಿಯಲ್ಲಿಯೇ ನಿಹಿತವಾಗಿರುತ್ತವೆ. ಈ ದೃಷ್ಟಿಯಿಂದ ನೋಡಹೋದರೆ ವ್ಯಕ್ತಿತ್ವವೇ ಶೈಲಿಯೆಂದು ಹೇಳುವುದರಲ್ಲಿ ಯಾವ ಅಭ್ಯಂತರವಿಲ್ಲ. ಪ್ರತಿಬಿಂಬವನ್ನು ನೋಡಿ ಹೇಗೆ ಮೂಲ ವಸ್ತುವಿನ ರೂಪರೇಖೆಗಳನ್ನು ತಿಳಿಯಬಹುದಾಗಿದೆಯೋ ಹಾಗೆಯೇ ಶೈಲಿಯಿಂದಲೂ ಕವಿಯ-ಗ್ರಂಥಕರ್ತೃವಿನ ಚಿತ್ತವೃತ್ತಿಯ ಪರಿಚಯವನ್ನು ಪಡೆಯಬಹುದಾಗಿದೆ.

ಪ್ರಶ್ನವನ್ನು ತಾವೇ ಮಾಡುವುದು ಮತ್ತು ಉತ್ತರವನ್ನು ತಾವೇ ಕೊಡುವುದು ಇದು ಅವರ ಶೈಲಿಯ ವಿಶೇಷತೆಯಿದೆ. ಪಾಠಕರು ಸ್ವಯಂ ಅಭೀಷ್ಟ ನಿಷ್ಕರ್ಷದ ಮೇಲೆ ಬಂದು ಬಿಡುವಂತೆ ಅವರ ಎದುರಿಗೆ ವಸ್ತುಸ್ಥಿತಿಯ ಚಿತ್ರಣ ಮತ್ತು ಅದರ ವಿಶ್ಲೇಷಣೆ ಮಾಡುವುದರಲ್ಲಿಯೇ ಅವರ ಶೈಲಿಯ ಮೌಲಿಕತೆಯಿದೆ. ಓರ್ವ ಚಿಕಿತ್ಸಕನು ರೋಗದ ಉಪಚಾರದಲ್ಲಿ ಯಾವ ಪ್ರಕ್ರಿಯೆಗಳನ್ನು ಅನುಸರಿಸುತ್ತಾನೆ ಅವೇ ಪ್ರಕ್ರಿಯೆಗಳು ಇವರ ಶೈಲಿಯಲ್ಲೂ ಕಂಡು ಬರುತ್ತವೆ. ಅವರ ಶೈಲಿಯು ತರ್ಕವಿತರ್ಕಮೂಲಕವಾಗಿದ್ದರು ಕೂಡ ಅದು ಅನುಭೂತಿ ಪೂರ್ವಕವಾಗಿಯೇ ಇರುತ್ತದೆ. ಅವರು ಒಮ್ಮೊಮ್ಮೆ ಮನೋವೈಜ್ಞಾನಿಕ ತರ್ಕಗಳಿಂದಲು ಕೂಡ ಕಾರ್ಯ ನಿರ್ವಹಿಸುತ್ತಾರೆ. ಅವರ ಗದ್ಯಶೈಲಿಯಲ್ಲಿ ಅವರದೇ ಆದ ಅಗಾಧ ಪಾಂಡಿತ್ಯ ಮತ್ತು ಆಸ್ಥೆಯು ಇಡೀ ಗ್ರಂಥದ ತುಂಬೆಲ್ಲ ಎದ್ದು ಕಾಣುತ್ತದೆ. ಅವರ ಪ್ರಶ್ನೋತ್ತರ ಶೈಲಿಯು ಆತ್ಮೀಯವಿದ್ದು, ಅದರಲ್ಲಿ ಶಾಸ್ತ್ರೀಯ ಮತ್ತು ಲೌಕಿಕ ಜೀವನಕ್ಕೆ ಸಂಬಂಧಿಸಿದ ಎರಡೂ ಪ್ರಕಾರದ ಸಮಸ್ಯೆಗಳ ವಿವೇಚನೆಯಿದೆ. ದೃಷ್ಟಾಂತಗಳಂತೂ ಅವರ ಶೈಲಿಯಲ್ಲಿ ಮಣಿ-ಮೌಕ್ತಿಕಗಳಂತೆ ಹೊಳೆಯುತ್ತವೆ. ದೃಷ್ಟಾಂತಗಳ ಪ್ರಯೋಗದಲ್ಲಿ ಅವರ ಸೂಕ್ಷ್ಮವಸ್ತು ನಿರೀಕ್ಷಣೆಯು ಪ್ರತಿಬಿಂಬಿತವಾಗುತ್ತದೆ.

ಇಲ್ಲಿ ಪ್ರಶ್ನಕಾರರು ಪ್ರಾಯಃ ಪ್ರತಿಯೊಂದು ಪ್ರಶ್ನವನ್ನು ಆರ್ಷವಚನದ ಮೂಲಕವಾಗಿಯೇ ಮಂಡಿಸುತ್ತಾರೆ, ಮತ್ತು ಸಮಾಧಾನಕರ್ತೃಗಳು ಆರ್ಷವಚನಗಳ ಅಪೇಕ್ಷೆಯುಳ್ಳ ಪ್ರಯೋಗಗಳನ್ನು ಅತ್ಯಂತ ಕಡಿಮೆ ಮಾಡುತ್ತಾರೆ. ಮತ್ತು ಅನುಭೂತಿಜನ್ಯಯುಕ್ತಿಗಳಿಂದ ಹಾಗೂ ಉದಾಹರಣೆಗಳಿಂದ ಅವರ ಜಿಜ್ಞಾಸೆಯನ್ನು ಶಾಂತ ಮಾಡುತ್ತಾರೆ.

ಪಂ. ಟೋಡರಮಲ್ಲರ ಶೈಲಿಯ ಇನ್ನೊಂದು ಮುಖ್ಯ ಗುಣವೆಂದರೆ ಅದರ ಅರ್ಥವ್ಯಕ್ತತೆ ಇವರ ವಾಕ್ಯಗಳ ಅರ್ಥವನ್ನಾಗಲಿ ಅಥವಾ ಭಾವವನ್ನಾಗಲಿ ಗ್ರಹಿಸುವುದಕ್ಕೆ ಅಧಿಕ ಕ್ಲೇಶಪಡಬೇಕಾಗಿಲ್ಲ. ಮನಸ್ಸುಗೊಟ್ಟು ಪ್ರೀತಿಯಿಂದ ಒಂದು ಸಲ ಓದಿದರೆ ಸಂಪೂರ್ಣ ಅಭಿಪ್ರಾಯವು ಭ್ರಾಂತಿಗೆ ಅವಕಾಶವಿಲ್ಲದಂತೆ ಮನಸ್ಸನ್ನು ಮುಟ್ಟುತ್ತದೆ. ಇದೇನು ದೊಡ್ಡಗುಣವೆಂದು ತಾವು ಕೇಳಬಹುದು. ಆದರೆ ತತ್ತ್ವಮೂಲಕವಾಗಿ ಕಣ್ಣಿಗೆ ಕಂಡ ವಸ್ತುವನ್ನಾಗಲಿ ಮನಸ್ಸಿಗೆ ಹೊಳೆದ ವಿಚಾರವನ್ನಾಗಲಿ, ಅಂತರಂಗದಿಂದ ಮೂಡಿ ಬಂದ ಅನುಭೂತಿಯನ್ನಾಗಲಿ ಸ್ವಭಾವ ಸಿದ್ಧವಾಗಿರುವಂತೆ ಬಿಡಿಸಿ ಹೇಳುವ ಶಕ್ತಿಯು ಸಾಮಾನ್ಯವಾದುದ್ದಲ್ಲ. ಎಲ್ಲರೂ ಇದನ್ನು ಪಡೆದುಕೊಂಡು ಬಂದಿರುವುದಿಲ್ಲ. ಅರ್ಥವ್ಯಕ್ತಿಯ ರಮಣೀಯತೆಯು ಇವರ ಗ್ರಂಥದ ತುಂಬೆಲ್ಲ ಕಂಗೊಳಿಸುತ್ತಿದೆ. ಹುಡುಕಿಕೊಂಡು ಹೋಗಬೇಕಾದ ಪ್ರಯಾಸವಿಲ್ಲ. ಅಂತರಂಗದ ಅಭಿಪ್ರಾಯವನ್ನು ಶಬ್ದಗಳ ಜಾಲದಲ್ಲಿ ಮರೆ ಮಾಡಿ ಹೋದ ಕೃತಕ ಕವಿಯಲ್ಲ. ವಸ್ತುಸ್ವಭಾವವನ್ನು ಸ್ಪರ್ಶಾನುಮೇಯವಾಗುವಂತೆ ಮುಷ್ಟಿಗ್ರಾಹ್ಯವಾಗುವಂತೆ ಎದುರಿಗೆ ತಂದು ನಿಲ್ಲಿಸುವ ಶಕ್ತಿಯುಳ್ಳ ಸಮರ್ಥ ಸಾಧಕನಿದ್ದಾನೆ.

ಧರ್ಮದೃಷ್ಟಿ ಋಷಿದರ್ಶನಗಳಿಂದ ಕೂಡಿದ **'ಅಪೂರ್ಣವಾದರೂ ಅಪೂರ್ವವಾದ ಈ ಮೋಕ್ಷಮಾರ್ಗ ಪ್ರಕಾಶಕವು'** ಜೈನ ಧರ್ಮದ ಬಹಳಷ್ಟು ವಿಷಯಗಳನ್ನು ಒಳಗೊಂಡಿದೆ ಸಕಲ ಜೀವಕಲ್ಯಾಣಕಾರಿಯೂ ಭವತಾರಿಣಿಯೂ ಆದ ಈಶ್ವರೀ ಚಿತ್ ತಪಸ್ಸು ಇಲ್ಲಿ ಅಂತರ್ಮುಖಿಯಾಗಿ ತನ್ನ ಪರಮಾತ್ಮನ ಸಾನ್ನಿಧ್ಯಸಾಧಿಸಿದೆ ಇಲ್ಲಿನ ದರ್ಶನಪೂರ್ವಕವಾದ ಕಲೆಯು ಶಾಶ್ವತತರವಾದ ಪರಮಪುರುಷಾರ್ಥದ ಸಾಧನೆಗೆ ಸಹಾಯಕವಾಗಿರುವುದರಿಂದ ಇದು ಸುಪಕ್ವ ಚೇತನರಿಗೆ ಅಚ್ಚುಮೆಚ್ಚಾಗಿದೆ. ತ್ರಿಕಾಲಾತೀತವಾದ ಅಲೋಕ ಸತ್ಯಗಳು

ಲೋಕ-ಕಾಲ-ದೇಶಾಧೀನವಾಗಿ ರೂಪುಗೊಂಡು ಹೇಗೆ ವಿಕಾಸಗೊಳ್ಳುತ್ತವೆಂಬುದರ ಭವ್ಯ ಚಿತ್ರವು ಇಲ್ಲಿ ಬಹು ಮನೋಹರವಾಗಿ ಮೂಡಿ ಬಂದಿದೆ. ಸಂಸಾರದಲ್ಲಿ ಬಿದ್ದ ಜೀವನು ತನ್ನ ನಿಜ ಸ್ವರೂಪವನ್ನು ತಿಳಿದುಕೊಂಡು ಅತೀವ ಕಠೋರ ನಿಷ್ಠೆಯಿಂದ ಕೂಡಿದ ಸಾಧನೆಯಿಂದ ಆ ದಿವ್ಯ ಚೇತನಶಕ್ತಿಯನ್ನು ಸಾಕ್ಷಾತ್ಕರಿಸಿಕೊಂಡು ಪರಮ ಪದವಿಗೆ ತಲುಪಬಹುದಾಗಿದೆಯೆಂದು ನಿಜಾನುಭವದಿಂದ ಇಲ್ಲಿ ತಿಳಿಯಪಡಿಸಲಾಗಿದೆ; ಎತ್ತಿ ಹೇಳಲಾಗಿದೆ.

ಸಮ್ಯಗ್ದರ್ಶನ-ಸಮ್ಯಗ್ಜ್ಞಾನ-ಸಮ್ಯಕ್ಚಾರಿತ್ರಗಳನ್ನು ನಂಬಿ, ಆತ್ಮಸಾಕ್ಷಾತ್ಕಾರ ಪಡೆದು ಸದ್ಧರ್ಮಪಥದಲ್ಲಿ ಶುಚಿ ಜೀವನವನ್ನು ಬಾಳಿಬೆಳಗಿ ಕಣ್ಮರೆಯಾಗಿ ಹೋದ ಪಂ. ಟೋಡರಮಲ್ಲರು ತಮ್ಮ ನಂಬುಗೆಯ ಅನುಭವದ ಧರ್ಮಮಾರ್ಗವನ್ನು ಇಲ್ಲಿ ಸಮಸ್ತ ಜೀವಕೋಟಿಯ ಕಲ್ಯಾಣಕ್ಕಾಗಿ ತಮ್ಮಲ್ಲಿ ಉದಿಸಿ ಬಂದ ಸ್ವಾಭಾವಿಕವಾದ ಕಾರುಣ್ಯ ಬುದ್ಧಿಯಿಂದ ಈ ಕೃತಿರತ್ನದಲ್ಲಿ ನಿರೂಪಣೆ ಮಾಡಿದ್ದಾರೆ. ಆದರಿಂದಾಗಿ ಈ ಕೃತಿಯು ರಸರೂಪಿಯಾದ ನಿಜಾತ್ಮನ ಸಾಕ್ಷಾತ್ಕಾರಕ್ಕೆ ಸಾಧನವೂ ಸೋಪಾನವೂ ಆಗಿ ಪರಿಣಮಿಸಿದೆ. ಈಕೃತಿಯನ್ನು 'ಯಾರು ಎಂತಹ ಸಂಸ್ಕಾರ ಸೋಪಾನಗಳಲ್ಲಿ ನಿಂತು ನಿರೀಕ್ಷಿಸುತ್ತಾರೋ ಅವರೆಲ್ಲರಿಗೆ ಆಯಾಯ ರೀತಿಯಿಂದಲೇ ದರ್ಶನವಿತ್ತು' ಉದ್ಧಾರಗೈವ ಪವಾಡ ಕೃತಿಯಾಗಿದೆ. ಇದು ಸಹೃದಯರ ಹೃದಯಾರಾಮವನ್ನು ಹೊಕ್ಕು ಅವರ ಹೃದಯದ ನಾಡಿ-ನಾಡಿಗಳಲ್ಲಿ ಪರಿಸ್ಪಂದನಗೊಳಿಸುತ್ತದೆ, ಕೊನೆಗೆ ಆತ್ಮಾನಂದದ ಬೃಹದಾನಂದವನ್ನು ಉಣ್ಮಿಸುತ್ತದೆ. ಲೋಕ-ಲೋಕಗಳಲ್ಲಿ, ಜನ್ಮ-ಜನ್ಮಗಳಲ್ಲಿ, ಚತುರ್ಗತಿಗಳ ಕೀಟಲೆಗಳಲ್ಲಿ ಅದಾವುದೋ ನಿಯತಿಯ ನಿಯಮಕ್ಕೆ ಸಿಲುಕಿ ಎಂದರೆ ತನ್ನದೇ ಆದ ಮಿಥ್ಯಾಜ್ಞಾನದಿಂದ ಕಟ್ಟಿಹಾಕಿಕೊಂಡು ಪರಿಭ್ರಮಿಸುತ್ತಿರುವ ಜೀವಕೋಟಿಗೆ ಈ ಗ್ರಂಥದ ಅಧ್ಯಯನವೊಂದು ತಾರಕ ಮಂತ್ರವಾಗಿದೆ.

ವಿಶ್ವದ ಸಮಸ್ತ ಜೀವಕೋಟಿಯು ಅನಾದಿ ಅನಂತ ಕಾಲದಿಂದ ದುಃಖದ ನಿವೃತ್ತಿ ಹಾಗೂ ಸುಖದ ಪ್ರಾಪ್ತಿಗಾಗಿ ಸತತವಾಗಿ ಸಂತಪಿಸುತ್ತಿದೆ. ಆದರೆ ನಿಜವಾದ ಸುಖವು ಎಲ್ಲಿದೆ, ಯಾವುದರಿಂದ ಬರುತ್ತದೆಂಬುದರ ಅರಿವಿಲ್ಲದೆ ಅದು 'ಅನುಕೂಲವೇದನೀಯಂ ಸುಖಂ ಪ್ರತಿಕೂಲವೇದನೀಯಂ ದುಃಖಂ' ಎಂದರೆ ಬಾಹ್ಯದಲ್ಲಿ ಅನುಕೂಲವಿರುವ ನೋವನ್ನು ಸುಖವೆಂದು ಪ್ರತಿಕೂಲವಿರುವ ನೋವನ್ನು ದುಃಖವೆಂದೂ ಕಲ್ಪಿಸಿಕೊಂಡು, ಆ ಸುಖ-ದುಃಖಗಳ ಇಚ್ಚೆಯ ಮಡುವಿನಲ್ಲಿ ಕ್ರೋಧ-ಮಾನ-ಮಾಯೆ-ಲೋಭಗಳೆಂಬ ಚತುಃ ಕಷಾಯಗಳನ್ನು ಸೃಜಿಸಿಕೊಂಡು ಅವುಗಳ ಚಿತ್ರ ವಿಚಿತ್ರತರವಾದ ತಿರುವು-ಮುರುವಿನ ಸುಳಿಯೊಳಗೆ ಸಿಲುಕಿ ಕಷ್ಟ-ಕಾರ್ಪಣ್ಯಗಳ, ಕಸ-ಮುಸುರೆಗಳ, ಹೊಲಸು, ಹೇಸಿಕೆಗಳ ಸಹಸ್ರ-ಸಹಸ್ರ ಕೋಟಲೆಗಳಲ್ಲಿ ಕರಗಿ-ಕುದ್ದು-ಬೆಂದು ಹೋಗುತ್ತಿದ್ದರೂ ಅದಾವುದನ್ನು ಲಕ್ಷಕ್ಕೆ ತಂದುಕೊಳ್ಳದೆ ಕೇವಲ ಕಷಾಯ-ಪೋಷಣೆಯ ಕರ್ತವ್ಯ ಭಾವನೆಯಿಂದ ಅದನ್ನು ಪುಷ್ಟೀಕರಿಸುತ್ತಲೇ ಬರುತ್ತಿದೆ. ಇಂಥ ಕಷಾಯ ವಾಸನೆಯ ಪಾಶವೀ ವೃತ್ತಿಯ ತೊತ್ತಳದುಳಿತಕ್ಕೆ ಸಿಲುಕಿ ಶಾಶ್ವತ ಸುಖವಂತೂ ದೂರವಿರಲಿ, ಆದರೆ ಅದು ತಾನು ಕಲ್ಪಿಸಿಕೊಂಡ ಲೌಕಿಕ ಸುಖದ ಆಸ್ವಾದನೆಯನ್ನೂ ಪಡೆದುಕೊಳ್ಳಲಾರದೆ ನಿರಂತರ ಮೋಹದ ಮಡುವಿನಲ್ಲಿ ಮುಳುಗಿ ಹೋಗುತ್ತಿದೆ, ಜನ್ಮ-ಮರಣಗಳ ರಾಟಳದಲ್ಲಿ ಸಿಲುಕಿ ಚಕ್ರಾಕಾರದಲ್ಲಿ ತಿರುಗುತ್ತಿದೆ. ಇವೆಲ್ಲವುಗಳಿಗೆ ಐಚ್ಛಿಕವಾದ ವಿಷಯವಾಸನೆಯೇ ವಿಷಯ ಕಷಾಯಗಳ ಪರಿಪೋಷಣೆಯೇ ಮೂಲಕಾರಣವಿದೆಯೆಂಬುದರ ಅರಿವು ಆ ಜೀವಕ್ಕೆ ಮೂಡಿ ಬರುತ್ತಿಲ್ಲ.

ಅದು ಹಿಂಸೆಯಲ್ಲಿ ಪ್ರಮಾದ ಪರಿಣತಿ, ವಿಷಯ ಸೇವನೆಯಲ್ಲಿ ತೀವ್ರ ಅಭಿಲಾಷೆ ಮತ್ತ ತತ್ತ್ವನಿರ್ಣಯದಲ್ಲಿ ವಿಪರೀತಾಭಿನಿವೇಶ ಇವೇ ಮೊದಲಾದವುಗಳನ್ನು ಸುರಕ್ಷಿತವಾಗಿ ಇಟ್ಟುಕೊಂಡು ಬಾಹ್ಯದಲ್ಲಿ ಎಷ್ಟೇ ನಿರ್ಬಂಧನೆಗಳನ್ನು ತಂದರೆ ವ್ರತಾಚರಣೆಗಳನ್ನು ಆಚರಿಸಿದರೆ ಏನು ಪ್ರಯೋಜನವಿದೆ ? ಎಲ್ಲಿಯವರೆಗೆ ಕಷಾಯ ರಹಿತವಾದ ಉದಾಸೀನ ಭಾವನೆ, ರಾಗರಹಿತವಾದ ವೀತರಾಗ ಭಾವನೆ ಆವಿರ್ಭವಿಸುವುದಿಲ್ಲವೋ ಅಲ್ಲಿಯವರೆಗೆ ಜೀವದ ಉದ್ಧಾರವೇ ಸಾಧ್ಯವಿಲ್ಲ.

ಇನ್ನು ವೀತರಾಗತೆಯೆಂದರೆ ಕೇವಲ ನಿವೃತ್ತಿಯಲ್ಲ, ದಿಗಂಬರತ್ವವಲ್ಲ, ಶರೀರದ ನಗ್ನತೆಯಲ್ಲ, ಆದರೆ ಅದು ವಿವೇಕಪೂರ್ವಕವಾದ ನಿವೃತ್ತಿಯಿದೆ, ಅನುಭವಪೂರ್ವಕವಾದ ಆತ್ಮನ ಧರ್ಮವಿದೆ. ಆಧ್ಯಾತ್ಮಿಕತೆಯು ಅದು ಪ್ರವೃತ್ತಿ ಮತ್ತು ನಿವೃತ್ತಿಗಳನ್ನು ಅವಲಂಬಿಸಿಲ್ಲ, ಆದರೆ ಅದು ವೀತರಾಗತೆಯನ್ನು ಆಧರಿಸಿದೆ. ಒಂದು ವೇಳೆ ಪ್ರವೃತ್ತಿಯು ವೀತರಾಗತೆಗೆ ಸಹಾಯಕವಾಗಿದ್ದರೆ ಅದನ್ನು ಸ್ವಾಗತಿಸಲೇಬೇಕಾಗುವುದು ಮತ್ತು ನಿವೃತ್ತಿಯು ರಾಗ ಹಾಗೂ ಕಷಾಯಗಳ ಅಭಿವೃದ್ಧಿಗೆ ಕಾರಣವಾಗಿದ್ದರೆ ಅದನ್ನು ನಿರಾಕರಿಸಲೇಬೇಕಾಗುವುದು. ಅಂತರ್ವಿವೇಕದಿಂದ ಶೂನ್ಯವಾದ ನಿವೃತ್ತಿಯು ಆತ್ಮನನ್ನು ಅಧೋಗತಿಗೆ ತಳ್ಳುತ್ತದೆ. ಆದುದರಿಂದ ಬಾಹ್ಯ ಪ್ರವೃತ್ತಿಯ ಬೆನ್ನು ಹತ್ತಿ ಕೇವಲ ವಿವೇಕ ಶೂನ್ಯವಾದ ಆಚರಣೆಯನ್ನು ಆಚರಿಸುವುದಕ್ಕಿಂತ ಅಂತರ್ವಿವೇಕ ಪೂರ್ವಕವಾದ ವೀತರಾಗ ವಿಜ್ಞಾನದಿಂದಲೇ ಆತ್ಮನ ಸಂಪೂರ್ಣವಿಕಾಸವು ಸಾಧ್ಯವಿದೆಯೆಂಬ ಕಠೋರ ಸತ್ಯವನ್ನು ಈ ಮೋಕ್ಷಮಾರ್ಗಪ್ರಕಾಶಕವು ನಿರೂಪಿಸುತ್ತದೆ. ಇದರಲ್ಲಿ ಸಂಸಾರರೋಗದ ನಿದಾನವಿಷ್ಟೇ ಇಲ್ಲ, ಆದರೆ ಔಷಧಿಯೂ ಇದೆ ಜೊತೆಗೆ ಪಥ್ಯಾಪಥ್ಯಗಳ ನಿಯಮವೂ ಇದೆ.

ಈ ಗ್ರಂಥವು ತನ್ನ ಹೆಸರಿನಂತೆ ಮೋಕ್ಷಮಾರ್ಗಪ್ರಕಾಶಕವಿದೆಯೇ ವಿನಹ ಮೋಕ್ಷದ ಕರ್ತೃಭೂತವಾಗಿಲ್ಲ ಎಂದರೆ ಮೋಕ್ಷಮಾರ್ಗವನ್ನು ತೋರಿಸಿಕೊಡುತ್ತದೆಯೇ ಹೊರ್ತು ಸ್ವಯಂ ಅದರ ಮೇಲೆ ನಡೆಯುವ ಕಾರ್ಯ ಮಾಡುವುದಿಲ್ಲ; ಅದು ಮೋಕ್ಷದ ಸಲುವಾಗಿ ಸಾಧನವಿದೆಯೇ ವಿನಃ ಸಾಧ್ಯವಿಲ್ಲ. ಕೇವಲ ಪರಕರ್ತೃತ್ವವನ್ನೇ ಅವಲಂಬಿಸಿದ ಜಡಮತಿಗಳು ಯಥಾರ್ಥತೆಯನ್ನು ಅರ್ಥವಿಸಿಕೊಳ್ಳಲಾರದೆ ಕೇವಲ ಜೈನಕುಲದಲ್ಲಿ ಜನ್ಮವೆತ್ತಿದ ಮಾತ್ರಕ್ಕೆ ಹಾಗೂ ಯಂತ್ರದಂತೆ ಬಾಹ್ಯಕ್ರಿಯೆಗಳನ್ನು ಆಚರಿಸಿದ ಮಾತ್ರಕ್ಕೆ ತಮ್ಮನ್ನು ಸಮ್ಯಗ್ದೃಷ್ಟಿಯೆಂದು ಶ್ರಾವಕರೆಂದು ಹೇಳಿಕೊಳ್ಳುತ್ತಿರುವವರಿಗೆ ಈ ಗ್ರಂಥವು ಸರಿಯಾದ ಪಾಠ ಕಲಿಸುತ್ತದೆ. ಮಿಥ್ಯಾತ್ವ-ಮಿಥ್ಯಾತ್ವವೆಂದು ಹಾರಾಡುತ್ತಿರುವವರಲ್ಲಿಯೇ ಎಂಥ ಘೋರತರವಾದ ಮಿಥ್ಯಾತ್ವವು ಮನೆ ಮಾಡಿಕೊಂಡಿದೆಯೆಂಬ ಕಠೋರ ಸತ್ಯವನ್ನು ಹೇಳುವಾಗ ನಿಶ್ಚಯಾಭಾಸ-ವ್ಯವಹಾರಾಭಾಸ-ಉಭಯಾಭಾಸ ಮತ್ತು ಸಮ್ಯಕ್ತ್ವಸನ್ಮುಖ ಮಿಥ್ಯಾ ದೃಷ್ಟಿಯೆಂಬ ವಿಭಾಗಗಳನ್ನು ಮಾಡಿಕೊಂಡು ಅವುಗಳ ಮುಖಾಂತರ ಜೈನರಲ್ಲಿ ವ್ಯಾಪಿಸಿಕೊಂಡಿರುವ ಬಾಹ್ಯಾಡಂಬರತೆ, ಆಧ್ಯಾತ್ಮಿಕ ಸ್ವಚ್ಛಂದತೆ, ಪರಾವಲಂಬನೆಯ ವ್ಯಾಮೋಹ, ಸಂಶಯವಾದಗಳನ್ನೆಲ್ಲ ಬಯಲಿಗೆಳೆದಿದ್ದಾರೆ. ನಮ್ಮೆದುರು ಭೂತಗನ್ನಡಿ ಹಿಡಿದು ನಮ್ಮ ಮತ್ತು ನಮ್ಮ ಸಮಾಜದ ಜನರ ವಾಸ್ತವಿಕ ಮುಖದ ಆಕಾರವನ್ನು ಎತ್ತಿ ತೋರಿಸಿದ್ದಾರೆ; ನಿಜವಾದ ದರ್ಶನ ಮಾಡಿಸಿದ್ದಾರೆ. ಆದರೆ ಅವರು ಎಲ್ಲಿಯೂ ತಪ್ಪಿಕೂಡ ಸಮಾಜ ಸುಧಾರಕರಂತೆ ಉಪದೇಶಕರಂತೆ ವರ್ತಿಸಿಲ್ಲ; ಆದರ್ಶಪುರುಷರಾಗಿ ಕಾಣಿಸಿಕೊಂಡಿಲ್ಲ.

ಸಮಸ್ತ ಪ್ರಾಣಿಕೋಟಿಯ ಅಜ್ಞಾನವನ್ನು ಬಿಡಿಸಿ ಅವರಿಗೆ ಸತ್ಯಸ್ವರೂಪದ ಪರಿಚಯ ಮಾಡಿಸಿಕೊಡುವ ಸಲುವಾಗಿ ಪಂ. ಟೋಡರಮಲ್ಲರು ಈ ಮೋಕ್ಷಮಾರ್ಗಪ್ರಕಾಶಕದ ಮೂಲಕ ಇಡೀ ಜಿನಾಗಮಗಳ ಗೂಢತರವಾದ ರಹಸ್ಯಗಳನ್ನು-ತಮ್ಮ ಜೀವನದಲ್ಲಿ ಕಂಡುಕೊಂಡ ಅನುಭವಗಳನ್ನು ಸಮನ್ವಯಾತ್ಮಕವಾದ ದೃಷ್ಟಿಕೋಣದಿಂದ ತಮ್ಮ ತಮ್ಮದೇ ಆದ ತರ್ಕಪೂರ್ಣವಿಧಾನದಿಂದ ಸುಲಭ ಭಾಷೆಯ ಸರಳ ಶೈಲಿಯಲ್ಲಿ ಜನಸಾಮಾನ್ಯರಿಗೂ ತಿಳಿದು ಬರುವಂತೆ ಪ್ರಕಟಪಡಿಸಿದ್ದಾರೆ. ಅದರಿಂದಾಗಿ ಈ ಗ್ರಂಥವು ಮಹತ್ತು-ಬೃಹತ್ತುಗಳಲ್ಲಿಯೂ, ದಿವ್ಯತೆ-ಭವ್ಯತೆಗಳಲ್ಲಿಯೂ ಮೇರು-ಮಂದರಗಳಂತೆ ಬೆಳೆದು ನಿಂತು ನಮ್ಮ ಕಣ್ಮನಗಳನ್ನು ಸೆರೆಹಿಡಿದು ನಮ್ಮನ್ನು ವಿಸ್ಮಯಮೂಕರನ್ನಾಗಿ ಮಾಡಿ, ಕೊನೆಗೆ ನಮ್ಮನ್ನೇ ಇಲ್ಲಗೈಯುವ ಮಹಾಪವಾಡದಲ್ಲಿ ತೊಡಗುತ್ತದೆ. ಎಂದರೆ ನಮ್ಮ ಬಾಹ್ಯ ಪ್ರಜ್ಞೆಮರೆಸಿ ನಮ್ಮನ್ನು ಅಂತರೋನ್ಮುಖಮಾಡುತ್ತದೆ.

ಇಲ್ಲಿ ಮೂಡಿಬಂದ ವಿಚಾರದ ಅಲೆಗಳನ್ನು-ಭಾವನೆಯ ತರಂಗಗಳನ್ನು ಅರಗಿಸಿಕೊಳ್ಳಲಾರದೆ ಓದುಗನು ಮೂರ್ಛೆ ಹೋಗುವ ಸಂಭವವೂ ಉಂಟು. ಇದಕ್ಕೆ ಉದಾಹರಣೆಯಾಗಿ ಏಳು ಮತ್ತು ಎಂಟನೆಯ ಅಧಿಕಾರಗಳನ್ನು ಓದಿ ಸಂತತವಾದ ಧ್ಯಾನ-ಮನನಾದಿಗಳಿಂದ ಈ ಮಾತಿನ ಸತ್ಯತೆಯು ಪ್ರತಿಯೊಬ್ಬರಿಗೆ ತಿಳಿದು ಬರುತ್ತದೆ. ಇಲ್ಲಿ ಬರುವ ವರ್ಣನೆಯು ಆತ್ಮಸ್ಪರ್ಶಿಯಾಗಿದ್ದು ಅದ್ಭುತ ರಸೋಜ್ವಲವಾಗಿದೆ, ಅಲೌಕಿಕವಾಗಿದೆ; ಪಂ. ಟೋಡರಮಲ್ಲರ

ಮತಿಕಲ್ಪನೆ-ದಿವ್ಯಪ್ರತಿಭೆ ಮತ್ತು ಆತ್ಮಾನುಭೂತಿಗೆ ಇವೆರಡೂ ಅಧ್ಯಾಯಗಳು ಶ್ರೀಮಂತ ಸಾಕ್ಷಿಗಳಾಗಿ ನಿಂತುಕೊಂಡಿವೆ. ಪಂ. ಟೋಡರಮಲ್ಲರು ಈ ಗ್ರಂಥವನ್ನು ಕೇವಲ ನನ್ನ ಸಲುವಾಗಿಯೇ ರಚಿಸಿರಬೇಕೆಂಬ ಸಂದೇಹವು ಪ್ರತಿಯೊಬ್ಬ ವಾಚಕನಿಗೆ ಬಾರದೆ ಇರಲಾರದು. ಇಷ್ಟೇ ಏಕೆ, ಈ ಗ್ರಂಥವನ್ನು ಒಂದು ಸಲ ಕೈಗೆತ್ತಿಕೊಂಡ ಪಾಠಕನು ತನ್ನ ಜೀವಿತಕಾಲದಲ್ಲಿ ಅದೆಷ್ಟು ಬಾರಿ ಓದುತ್ತಾನೆಂಬುದು ಅವನಿಗೆ ಅರಿಯದ ವಿಷಯವಾಗಿದೆ. ಏಕೆಂದರೆ ಇಲ್ಲಿ ಬರುವ ವಿಷಯವು ನಿತ್ಯನೂತನವಾಗಿದ್ದು ಅದು ಚಿರಂತನ ಸತ್ಯದ ಕಡೆಗೆ ಆತ್ಮಸಾಕ್ಷಾತ್ಕಾರದ ಕಡೆಗೆ ಕೊಂಡೊಯ್ಯುವುದರಿಂದ ಎಷ್ಟು ಸಲ ಓದಿದರೂ ಹೊಸ-ಹೊಸ ವಿಷಯವೇ ತಿಳಿದು ಬರುವುದರಿಂದ ಗ್ರಂಥವು ನವೀನವೇ ಎನಿಸುತ್ತದೆ.

ಪಂ. ಟೋಡರಮಲ್ಲರಂಥ ಮಹಾನ ದಾರ್ಶನಿಕರ ಮಹತ್ವಪೂರ್ಣವಾದ ಕಾರ್ಯಗಳನ್ನೆಲ್ಲ ಇಲ್ಲಿ ಸಮ್ಯಕ್ತ್ವ ರೂಪದಿಂದ ದಿಗ್ದರ್ಶನ ಮಾಡುವುದು ತುಂಬಕಷ್ಟಸಾಧ್ಯವಾದ ಕಾರ್ಯವಾಗಿದ್ದರೂ ಈ ಗ್ರಂಥದ ಅಧ್ಯಯನ ಮಾಡುವುದರಿಂದ ನನ್ನಲ್ಲಿ ಉಂಟಾದ ಭಾವನೆಯ ತರಂಗಗಳನ್ನು-ಅಂತರಂಗದ ಅನಿಸಿಕೆಗಳನ್ನು ಯಾವ ಮುಚ್ಚು ಮರೆಯಿಲ್ಲದೆ ಇಲ್ಲಿ ವ್ಯಕ್ತಪಡಿಸುತ್ತಲಿದ್ದೇನೆ. ನಾನು ಇದರಲ್ಲಿನ ಅಚ್ಚ ಹೊಸ ಮಾತುಗಳಿಗೆ, ವಿಷಯ ಪ್ರತಿಪಾದನೆಯ ವಿನೂತನ ಶೈಲಿಗೆ, ವಿಷಯದಲ್ಲಿ ಕುತೂಹಲವನ್ನು ಕಾಯ್ದುಕೊಂಡು ಹೋಗುವ ಪರಿಪಕ್ವ ಪದ್ಧತಿಗೆ, ಒಂದು ಮಾತೂ ಹೆಚ್ಚಿಲ್ಲದ ಧೀರ-ಗಂಭೀರ ಪಾಂಡಿತ್ಯಕ್ಕೆ ಮಾರು ಹೋಗಿದ್ದೇನೆ, ಮೈಮರೆತಿದ್ದೇನೆ. ಅತ್ಯಂತ ಸರಸವೂ ಸಾತ್ವಿಕವೂ, ಬೋಧಪ್ರದವೂ ಆದ ನುಡಿ ಮುತ್ತುಗಳಿಂದ ಪ್ರಾಶ್ನಿಕ ಹಾಗೂ ಉತ್ತರ ದಾತೃವಿನ ರೂಪದಲ್ಲಿ ಕಣ್ಣೆದುರಿಗೆ ಬಂದು ನಿಲ್ಲುವ ಪಂ. ಟೋಡರಮಲ್ಲರ ದಿವ್ಯವೂ-ಭವ್ಯವೂ -ನಿರ್ಮಲವೂ ಆದ ಚೈತನ್ಯಾಕೃತಿಯನ್ನಿಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದೇನೆ, ಸೌಜನ್ಯದಿಂದ ಪ್ರಶ್ನೆ ಕೇಳಿದ್ದೇನೆ ಉತ್ತರ ಪಡೆದಿದ್ದೇನೆ. ಹೃದಯದ ಆ ವೇದ್ಯಾನುಭವವನ್ನೆಲ್ಲ ಅಕ್ಷರಗಳ ಮಾಲಿಕೆಯಲ್ಲಿ ಹೇಗೆ ತುಂಬುವುದು ? ಭಾಷೆಯ ಮೂಲಕ ಹೊರತರಬೇಕೆಂದರೆ ಆ ಹೃದಯದ ಅನುಭೂತಿಯನ್ನು ನಾಲಗೆಯು ಹೇಗೆ ವ್ಯಕ್ತಪಡಿಸೀತು ? ನಾಲಗೆಗೆ ಇರುವಂಥ ವಾಚಾಶಕ್ತಿಯು ಹೃದಯಕ್ಕೆ ಎಲ್ಲಿದೆ ! ಹೀಗಾಗಿ ನಾನು ಆ ವಾಸ್ತವಿಕಾಂಶವನ್ನು ತಮ್ಮೆದುರು ವ್ಯಕ್ತಪಡಿಸಲು ಸರ್ವಥಾ ಅಸಮರ್ಥನಾಗಿದ್ದೇನೆ. ನಾಲಗೆಯ ಮೇಲಿರಿಸಿದ ಕಲ್ಲು ಸಕ್ಕರೆಯ ಸ್ವಾದ-ಮಾಧುರ್ಯವನ್ನು ಯಾರು ಹೇಗೆ ಬಾಯಿ ಬಿಟ್ಟು ಹೇಳುವ ಸಾಧ್ಯತೆಯಿದೆ ! ಇದು ನನ್ನೊಬ್ಬನ ಅನುಭವವಲ್ಲ, ಆದರೆ ಪರುಷಮಣಿ ಸ್ಪರ್ಶಿಸಿದ ಕಬ್ಬಿಣನ್ನದಂತೆ ಈ ಕೃತಿಯನ್ನು ಆಶ್ರಯಿಸಿದವರೆಲ್ಲರ ಹಾಡು ಇದೇ ಇದೆ. ಆದುದರಿಂದ 'ಈ ಗ್ರಂಥದ ಅಧ್ಯಯನದಿಂದ ಯಾರ ಭವಿಷ್ಯ ಬಾಳು ಪರಿವರ್ತನೆ ಹೊಂದುವುದಿಲ್ಲ, ಸಂಸಾರದ ವಿಸ್ಮರಣೆಯಾಗುವುದಿಲ್ಲ, ತಮ್ಮಲ್ಲಿ ತಾವೇ ಮೈಮರೆಯುವುದಿಲ್ಲ, ಮೂರ್ಛೆಹೋಗುವುದಿಲ್ಲ ಅವರೆಲ್ಲರಿಗೆ ಈ ಗ್ರಂಥದ ರಹಸ್ಯವೇ ಹೊಳೆದಿಲ್ಲ, ವಿಷಯವೇ ತಿಳಿದಿಲ್ಲ!'ವೆಂದು ಅನಿವಾರ್ಯವಾಗಿ ಹೇಳಲೇ ಬೇಕಾಗುವುದು.

ಆದುದರಿಂದ ಯಾರಿಗೆ ನಿಜವಾಗಿ ತಮ್ಮ ಕಲ್ಯಾಣಮಾಡಿಕೊಳ್ಳುವುದಿದೆ, ಪ್ರಾಪ್ತವಾದ ಈ ಮನುಷ್ಯ ಪರ್ಯಾಯದ ಸಾರ್ಥಕತೆ ಮಾಡಿಕೊಳ್ಳುವುದಿದೆ ಅವರು ತಮ್ಮ ಜೀವಿತಕಾಲದಲ್ಲಿ ಒಂದು ಸಲವಾದರೂ ಈ ಗ್ರಂಥವನ್ನು ಆದ್ಯಂತವಾಗಿ ಮನೋಯೋಗದಿಂದ ಓದಿಕೊಳ್ಳಬೇಕು. ''ಈ ಗ್ರಂಥವು ಓದುವುದಕ್ಕಾಗಲಿ, ಕೇಳುವುದಕ್ಕಾಗಲಿ ಅಥವಾ ವಿಚಾರ ಮಾಡುವುದಕ್ಕಾಗಲಿ ಅತ್ಯಂತ ಸುಲಭವಿದೆ. ಯಾವ ವ್ಯಾಕರಣ ಮೊದಲಾದವುಗಳ ಅಭ್ಯಾಸವಿಲ್ಲದವರು ಕೂಡ ಇದನ್ನು ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆಯೆಂದು ಮತ್ತು ಇದರಿಂದ ತಮ್ಮದು ಪರಮ ಕಲ್ಯಾಣವಾಗುವುದೆಂದು'' ಸ್ವಯಂ ಗ್ರಂಥಕರ್ತೃಗಳೇ ಹೇಳಿದ್ದಾರೆ. ಅವರು ನಮ್ಮ ಸಲುವಾಗಿ ಎಂದರೆ ಮಂದ ಬುದ್ಧಿಯುಳ್ಳ ಜೀವರುಗಳ ಸಲುವಾಗಿ ಎಂಥ ಕರುಣಾಭಾವನೆಯನ್ನು ಭಾವಿಸಿದ್ದಾರೆಂಬುದನ್ನು ಅವರ ಮಾತುಗಳಲ್ಲಿಯೇ ಹೇಳಿ ಈ ಪ್ರಸ್ತಾವನೆಯನ್ನು ಪರಿಸಮಾಪ್ತಗೊಳಿಸುತ್ತೇನೆ.

ಬೆಳಗಾವಿ.
ಮಹಾವೀರ ಜಯಂತಿ
೨೪-೪-೧೯೯೪

**ಶ್ರೀ ಎಂ. ಬಿ. ಪಾಟೀಲ**
ಶುದ್ಧಾತ್ಮಸದನ, ಶಹಾಪೂರ,
ಬೆಳಗಾವಿ.

# ವಿಷಯಾನುಕ್ರಮಣಿಕೆ

## ಮೊದಲನೆಯ ಅಧಿಕಾರ (ಪೀಠಬಂಧ ಪ್ರರೂಪಣೆ)


ಮಂಗಲಾಚರಣೆ-1, ಅರಹಂತರ ಸ್ವರೂಪ-2, ಸಿದ್ಧರ ಸ್ವರೂಪ-2, ಆಚಾರ್ಯ-ಉಪಾಧ್ಯಾಯ-ಸಾಧುಗಳ ಸಾಮಾನ್ಯ ಸ್ವರೂಪ-3, ಆಚಾರ್ಯರ ಸ್ವರೂಪ-4, ಉಪಾಧ್ಯಾಯರ ಸ್ವರೂಪ-4, ಸಾಧುಗಳ ಸ್ವರೂಪ-4, ಪೂಜ್ಯತ್ವದ ಕಾರಣ-5, ಅರಹಂತಾದಿಗಳಿಂದ ಪ್ರಯೋಜನದ ಸಿದ್ಧಿ-7, ಮಂಗಲಾಚರಣೆ ಮಾಡುವ ಕಾರಣ-9, ಗ್ರಂಥದ ಪ್ರಾಮಾಣಿಕತೆ ಮತ್ತು ಆಗಮ ಪರಂಪರೆ-11, ನಮ್ಮ ಮಾತು-12, ಅಸತ್ಯಪದ ರಚನೆಯ ಪ್ರತಿಷೇಧ-13,ಓದಲು-ಕೇಳಲು ಯೋಗಶಾಸ್ತ್ರಗಳು-15, ವಕ್ತಾರನ ಸ್ವರೂಪ-16, ಶ್ರೋತಾರನ ಸ್ವರೂಪ-19, ಮೋಕ್ಷಮಾರ್ಗಪ್ರಕಾಶಕ ಗ್ರಂಥದ ಸಾರ್ಥಕತೆ-20.


## ಎರಡನೆಯ ಅಧಿಕಾರ (ಸಂಸಾರ ಅವಸ್ಥೆಯ ಸ್ವರೂಪ)


**ಕರ್ಮಬಂಧನದ ನಿದಾನ** 24-50

ಕರ್ಮಗಳ ಅನಾದಿತನದ ಸಿದ್ಧಿ-25, ಜೀವ ಮತ್ತು ಕರ್ಮಗಳ ಭಿನ್ನತೆ-26, ಅಮೂರ್ತಿಕ ಆತ್ಮನಿಂದ ಮೂರ್ತಿಕ ಬಂಧನವು ಹೇಗಾಗುತ್ತದೆ-27, ಘಾತಿ-ಅಘಾತಿ ಕರ್ಮ ಮತ್ತು ಅವುಗಳ ಕಾರ್ಯ-27, ನಿರ್ಬಲಜಡಕರ್ಮಗಳಿಂದ ಜೀವಸ್ವಭಾವದ ಘಾತ ಮತ್ತು ಬಾಹ್ಯಸಾಮಗ್ರಿಯ ಲಾಭ-28.

**ನವೀನಬಂಧ ವಿಚಾರ**

ಯೋಗ ಮತ್ತು ಅದರಿಂದಾಗುವಂಥ ಪ್ರಕೃತಿ ಬಂಧ, ಪ್ರದೇಶ ಬಂಧ-30, ಕಷಾಯದಿಂದ ಸ್ಥಿತಿ ಮತ್ತು ಅನುಭಾಗ ಬಂಧ-31, ಜ್ಞಾನಶೂನ್ಯ ಜಡ-ಪುದ್ಗಲ ಪರಮಾಣುಗಳ ಯಥಾಯೋಗ್ಯ ಪ್ರಕೃತಿರೂಪ ಪರಿಣಮನ-32, ಸತ್ತಾರೂಪಕರ್ಮಗಳ ಅವಸ್ಥೆ-33, ಕರ್ಮಗಳ ಉದಯರೂಪ ಅವಸ್ಥೆ-33, ದ್ರವ್ಯಕರ್ಮ ಮತ್ತು ಭಾವ ಕರ್ಮದ ಸ್ವರೂಪ ಹಾಗೂ ಪ್ರವೃತ್ತಿ-34, ನೋಕರ್ಮದ ಸ್ವರೂಪ ಹಾಗೂ ಪ್ರವೃತ್ತಿ-34, ನಿತ್ಯನಿಗೋದ ಮತ್ತು ಇತರ ನಿಗೋದ-35.

**ಕರ್ಮಬಂಧನರೂಪ ರೋಗದ ನಿಮಿತ್ತದಿಂದಾಗುವ ಜೀವದ ಅವಸ್ಥೆ** 36-50

ಜ್ಞಾನಾವರಣ-ದರ್ಶನಾವರಣ ಕರ್ಮೋದಯ ಜನ್ಯ ಅವಸ್ಥೆ-36, ಮತಿಜ್ಞಾನದ ಪರಾಧೀನ ಪ್ರವೃತ್ತಿ-37, ಶ್ರುತಜ್ಞಾನದ ಪರಾಧೀನ ಪ್ರವೃತ್ತಿ-38, ಅವಧಿಜ್ಞಾನ, ಮನಃಪರ್ಯಯಜ್ಞಾನ, ಕೇವಲಜ್ಞಾನದ ಪ್ರವೃತ್ತಿ-39, ಚಕ್ಷು-ಅಚಕ್ಷು-ಅವಧಿ-ಕೇವಲದರ್ಶನದ ಪ್ರವೃತ್ತಿ-39, ಮೋಹನೀಯ ಕರ್ಮೋದಯ ಜನ್ಯ ಅವಸ್ಥೆ-42, ದರ್ಶನಮೋಹರೂಪ ಜೀವದ ಅವಸ್ಥೆ-42, ಚಾರಿತ್ರಮೋಹರೂಪ ಜೀವದ ಅವಸ್ಥೆ-43, ಅಂತರಾಯಕರ್ಮೋದಯ ಜನ್ಯ ಅವಸ್ಥೆ-46, ವೇದನೀಯ ಕರ್ಮೋದಯ ಜನ್ಯ ಅವಸ್ಥೆ-46, ಆಯು ಕರ್ಮೋದಯಜನ್ಯ ಅವಸ್ಥೆ-47, ನಾಮಕರ್ಮೋದಯ ಜನ್ಯ ಅವಸ್ಥೆ-48, ಗೋತ್ರಕರ್ಮೋದಯ ಜನ್ಯ ಅವಸ್ಥೆ-49.


## ಮೂರನೆಯ ಅಧಿಕಾರ (ಸಂಸಾರ ದುಃಖ ಹಾಗೂ ಮೋಕ್ಷ ಸುಖದ ನಿರೂಪಣೆ)


**ಸಂಸಾರದುಃಖ ಹಾಗೂ ಅದರ ಮೂಲ ಕಾರಣ** 52-86

**ಕರ್ಮದ ಅಪೇಕ್ಷೆಯಿಂದ**

ಜ್ಞಾನಾವರಣ ಮತ್ತು ದರ್ಶನಾವರಣದ ಕ್ಷಯೋಪಶಮದಿಂದಾಗುವ ದುಃಖ ಹಾಗೂ ಅದರಿಂದ ನಿವೃತ್ತಿ-52, ಮೋಹನೀಯಕರ್ಮದ ಉದಯದಿಂದಾಗುವ ದುಃಖ ಹಾಗೂ ಅದರಿಂದ ನಿವೃತ್ತಿ-57, ದರ್ಶನ ಮೋಹದಿಂದ ದುಃಖ ಮತ್ತು ಅದರಿಂದ ನಿವೃತ್ತಿ-57, ಚಾರಿತ್ರಮೋಹದಿಂದ ದುಃಖ ಹಾಗೂ ಅದರಿಂದ

ನಿವೃತ್ತಿ-59, ಅಂತರಾಯಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ-64, ವೇದನೀಯ ಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ-65, ಆಯುಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ 69, ನಾಮಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ-70, ಗೋತ್ರ ಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ-70.

**ಪರ್ಯಾಯದ ಅಪೇಕ್ಷೆಯಿಂದ** 70

ಏಕೇಂದ್ರಿಯ ಜೀವಗಳ ದುಃಖ-71, ವಿಕಲತ್ರಯ ಹಾಗೂ ಅಸಂಜ್ಞೀ ಜೀವಗಳ ದುಃಖ-73.

**ಸಂಜ್ಞೀ ಪಂಚೇಂದ್ರಿಯ ಜೀವಗಳ ದುಃಖ** 74

ನರಕಗತಿಯ ದುಃಖ-74, ತಿರ್ಯಂಚಗತಿಯ ದುಃಖ-75, ಮನುಷ್ಯಗತಿಯ ದುಃಖ-76, ದೇವಗತಿಯ ದುಃಖ-78, ದುಃಖದ ಸಾಮಾನ್ಯ ಸ್ವರೂಪ-79, ನಾಲ್ಕು ಪ್ರಕಾರದ ಇಚ್ಛೆಗಳು-79.

**ಮೋಕ್ಷ ಸುಖ ಮತ್ತು ಅದರ ಪ್ರಾಪ್ತಿಯ ಉಪಾಯ** 81

## ನಾಲ್ಕನೆಯ ಅಧಿಕಾರ (ಮಿಥ್ಯಾದರ್ಶನ-ಜ್ಞಾನ-ಚಾರಿತ್ರದ ನಿರೂಪಣೆ)

**ಮಿಥ್ಯಾದರ್ಶನದ ಸ್ವರೂಪ** 87-96

ಪ್ರಯೋಜನಭೂತ-ಅಪ್ರಯೋಜನಭೂತ ಪದಾರ್ಥಗಳು-89, ಮಿಥ್ಯಾದರ್ಶನದ ಪ್ರವೃತ್ತಿ-91, ಜೀವ-ಅಜೀವ ತತ್ತ್ವಗಳ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-91, ಆಸ್ರವತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-94, ಬಂಧತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-94, ಸಂವರತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-95, ನಿರ್ಜರಾತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-95, ಮೋಕ್ಷತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-96, ಪುಣ್ಯ-ಪಾಪಗಳ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ-96.

**ಮಿಥ್ಯಾಜ್ಞಾನದ ಸ್ವರೂಪ** 97-100

**ಮಿಥ್ಯಾಚಾರಿತ್ರದ ಸ್ವರೂಪ** 101-108

ಇಷ್ಟಾನಿಷ್ಟತೆಯ ಮಿಥ್ಯಾಕಲ್ಪನೆ-102, ರಾಗ-ದ್ವೇಷದ ವಿಧಾನ ಹಾಗೂ ವಿಸ್ತಾರ-104, ಮೋಹದ ಮಹಿಮೆ-107.

## ಐದನೆಯ ಅಧಿಕಾರ (ವಿವಿಧಮತ-ಸಮೀಕ್ಷೆ)

**ಸರ್ವವ್ಯಾಪಿ ಅದ್ವೈತಬ್ರಹ್ಮ** 110-140

ಸೃಷ್ಟಿಕರ್ತಾವಾದದ ನಿರಾಕರಣೆ-113, ಲೋಕದ ಅನಾದಿನಿಧನತೆಯ ಪುಷ್ಟಿ-125, ಬ್ರಹ್ಮನಿಂದ ಕುಲಪ್ರವೃತ್ತಿ ಮೊದಲಾದವುಗಳ ಪ್ರತಿಷೇದ-126, ಅವತಾರ ಮೀಮಾಂಸೆ-126, ಯೋಗಮೀಮಾಂಸೆ; ಭಕ್ತಿಯೋಗ ಮೀಮಾಂಸೆ-130, ಜ್ಞಾನಯೋಗ ಮೀಮಾಂಸೆ-134, ಅನ್ಯಮತದಲ್ಲಿ ಕಲ್ಪಿತ ಮೋಕ್ಷಮಾರ್ಗದ ಮೀಮಾಂಸೆ-138, ಮುಸ್ಲಿಮ ಮತ ಸಂಬಂಧದಲ್ಲಿ ವಿಚಾರ-140.

**ಅನ್ಯಮತದಲ್ಲಿ ನಿರೂಪಿಸಿದ ತತ್ತ್ವವಿಚಾರ** 141-154

ಸಾಂಖ್ಯಮತ-141, ಶಿವಮತ; ನೈಯಾಯಿಕ ಮತ-144, ವೈಶೇಷಿಕ ಮತ-146, ಮೀಮಾಂಸಕ ಮತ-149, ಜೈಮಿನೀಯ ಮತ-149, ಬೌದ್ಧಮತ-150, ಚಾರ್ವಾಕ ಮತ-152, ಅನ್ಯಮತ ನಿರಾಕರಣದ ಉಪಸಂಹಾರ-154.

**ಅನ್ಯಮತಗಳೊಡನೆ ಜೈನಮತದ ತುಲನೆ** 155-162

ಅನ್ಯಮತದ ಗ್ರಂಥೋದ್ಧರಣಗಳಿಂದ ಜೈನ ಧರ್ಮದ ಸಮೀಚೀನತೆ ಹಾಗೂ ಪ್ರಾಚೀನತೆ-157.

**ಶ್ವೇತಾಂಬರಮತ ವಿಚಾರ** 163-167

ಅನ್ಯಲಿಂಗದಿಂದ ಮುಕ್ತಿಯ ನಿಷೇಧ; ಗೃಹಸ್ಥ ಮುಕ್ತಿಯ ನಿಷೇಧ-164, ಸ್ತ್ರೀ ಮುಕ್ತಿಯ ನಿಷೇಧ-164, ಶೂದ್ರಮುಕ್ತಿಯ ನಿಷೇಧ-166, ಅಛೇರಾಗಳ ನಿರಾಕರಣೆ-166.

**ಶ್ವೇತಾಂಬರಮತಕಥಿತ ದೇವ-ಗುರು-ಧರ್ಮಗಳ ಅನ್ಯಥಾ ಸ್ವರೂಪ**

ದೇವರ ಅನ್ಯಥಾ ಸ್ವರೂಪ-168, ಗುರುವಿನ ಅನ್ಯಥಾ ಸ್ವರೂಪ-172, ಧರ್ಮದ ಅನ್ಯಥಾ ಸ್ವರೂಪ-177.

**ಢೂಂಢಕಮತ ವಿಚಾರ**

ಪ್ರತಿಮಾಧಾರಿಯು ಶ್ರಾವಕನಾಗುವುದಿಲ್ಲವೆಂಬ ಮನ್ನಣೆಯ ನಿಷೇಧ-181, ಮುಖಪಟ್ಟಿ ಮೊದಲಾದವುಗಳ ನಿಷೇಧ-182, ಮೂರ್ತಿಪೂಜೆ ನಿಷೇಧದ ನಿರಾಕರಣೆ-182.

## ಆರನೆಯ ಅಧಿಕಾರ (ಕುದೇವ, ಕುಗುರು ಮತ್ತು ಕುಧರ್ಮದ ನಿಷೇಧ)

**ಕುದೇವ ನಿರೂಪಣೆ ಹಾಗೂ ಕುದೇವ ಶ್ರದ್ಧೆಯ ನಿಷೇಧ** 198-211

ವ್ಯಂತರಾದಿಕರ ಸ್ವರೂಪ ಮತ್ತು ಅವರ ಪೂಜೆಯ ನಿಷೇಧ-191, ಕ್ಷೇತ್ರಪಾಲ, ಪದ್ಮಾವತಿ ಮೊದಲಾದವರ ಪೂಜೆಯ ನಿಷೇಧ-196.

**ಕುಗುರುವಿನ ನಿರೂಪಣೆ ಮತ್ತು ಅವನ ಶ್ರದ್ಧಾದಿಗಳ ನಿಷೇಧ** 198-211

ಕುಲದ ಅಪೇಕ್ಷೆಯಿಂದ ಗುರುತನದ ನಿಷೇಧ-189, ಶಿಥಿಲಾಚಾರ ಪೋಷಕ ಯುಕ್ತಿಗಳು ಮತ್ತು ಅವುಗಳ ನಿಷೇಧ-209.

**ಕುಧರ್ಮದ ನಿರೂಪಣೆ ಮತ್ತು ಅದರ ಶ್ರದ್ಧೆಯ ನಿಷೇಧ** 212-218

## ಏಳನೆಯ ಅಧಿಕಾರ (ಜೈನ ಮಿಥ್ಯಾದೃಷ್ಟಿಗಳ ವಿವೇಚನೆ)

**ನಿಶ್ಚಯಾಭಾಸಿ ಮಿಥ್ಯಾದೃಷ್ಟಿ** 219-240

ನಿಶ್ಚಯಾಭಾಸಿಯ ಸ್ವಚ್ಛಂದತೆ ಮತ್ತು ಅದರ ನಿಷೇಧ-226, ಕೇವಲ ನಿಶ್ಚಯಾಭಾಸವನ್ನವಲಂಬಿಸಿದ ಜೀವದ ಪ್ರವೃತ್ತಿ-233.

**ವ್ಯವಹಾರಾಭಾಸದ ಮಿಥ್ಯಾದೃಷ್ಟಿ** 241-249

ಕುಲಅಪೇಕ್ಷೆಯಿಂದ ಧರ್ಮಧಾರಕ ವ್ಯವಹಾರಾಭಾಸಿ-241, ಪರೀಕ್ಷೆಯಿಲ್ಲದೆ ಕೇವಲ ಆಜ್ಞಾನುಸಾರ ಧರ್ಮಧಾರಕ ವ್ಯವಹಾರಾಭಾಸಿ-243, ಸಂಸಾರದ ಪ್ರಯೋಜನಾರ್ಥ ಧರ್ಮಧಾರಕ ವ್ಯವಹಾರಾಭಾಸಿ-247 ಉಕ್ತವ್ಯವಹಾರಾಭಾಸಿ ಧರ್ಮಧಾರಕರ ಸಾಮಾನ್ಯ ಪ್ರವೃತ್ತಿ-248, ಧರ್ಮಬುದ್ಧಿಯಿಂದ ಧರ್ಮಧಾರಕ ವ್ಯವಹಾರಾಭಾಸಿ-249.

**ಸಮ್ಯಗ್ದರ್ಶನದ ಅನ್ಯಥಾರೂಪ** 250-264

ದೇವಭಕ್ತಿಯ ಅನ್ಯಥಾರೂಪ-250, ಗುರುಭಕ್ತಿಯ ಅನ್ಯಥಾರೂಪ-252, ಶಾಸ್ತ್ರಭಕ್ತಿಯ ಅನ್ಯಥಾ ರೂಪ-252, ಸಪ್ತತತ್ತ್ವಗಳ ಅನ್ಯಥಾರೂಪ-253, ಜೀವ-ಅಜೀವ ತತ್ತ್ವದ ಅನ್ಯಥಾರೂಪ-254, ಆಸ್ರವ ತತ್ತ್ವದ ಅನ್ಯಥಾರೂಪ-255, ಬಂಧತತ್ತ್ವದ ಅನ್ಯಥಾರೂಪ-256, ಸಂವರತತ್ತ್ವದ ಅನ್ಯಥಾ ರೂಪ-257, ನಿರ್ಜರಾತತ್ತ್ವದ ಅನ್ಯಥಾರೂಪ-260, ಮೋಕ್ಷತತ್ತ್ವದ ಅನ್ಯಥಾರೂಪ-263.

**ಸಮ್ಯಗ್ಜ್ಞಾನದ ಅನ್ಯಥಾರೂಪ-265 ಮತ್ತು ಸಮ್ಯಕ್ಚಾರಿತ್ರದ ಅನ್ಯಥಾರೂಪ-268**
**ಉಭಯಾಭಾಸಿ ಮಿಥ್ಯಾದೃಷ್ಟಿ** 280-289
**ಸಮ್ಯಕ್ತ್ವ ಸನ್ಮುಖ ಮಿಥ್ಯಾದೃಷ್ಟಿ** 290-294
**ಐದು ಲಬ್ಧಿಗಳ ಸ್ವರೂಪ** 295-301

## ಎಂಟನೆಯ ಅಧಿಕಾರ (ಉಪದೇಶದ ಸ್ವರೂಪ)

**ಅನುಯೋಗಗಳ ಪ್ರಯೋಜನ** 302-305

ಪ್ರಥಮಾನುಯೋಗದ ಪ್ರಯೋಜನ-302, ಕರಣಾನುಯೋಗದ ಪ್ರಯೋಜನ-303, ಚರಣಾನುಯೋಗದ ಪ್ರಯೋಜನ-304, ದ್ರವ್ಯಾನುಯೋಗದ ಪ್ರಯೋಜನ-305

**ಅನುಯೋಗಗಳ ವ್ಯಾಖ್ಯಾನದ ವಿಧಾನ** 306-322

ಪ್ರಥಮಾನುಯೋಗದ ವ್ಯಾಖ್ಯಾನದ ವಿಧಾನ-306, ಕರಣಾನುಯೋಗದ ವ್ಯಾಖ್ಯಾನದ ವಿಧಾನ-310, ಚರಣಾನುಯೋಗದ ವ್ಯಾಖ್ಯಾನದ ವಿಧಾನ-313, ದ್ರವ್ಯಾನುಯೋಗದ ವ್ಯಾಖ್ಯಾನದ ವಿಧಾನ-320.

**ಅನುಯೋಗಗಳ ವ್ಯಾಖ್ಯಾನದ ಪದ್ಧತಿ** 323-324

ವ್ಯಾಕರಣ, ನ್ಯಾಯ ಮೊದಲಾದ ಶಾಸ್ತ್ರಗಳ ಪ್ರಯೋಜನ-324

**ಅನುಯೋಗಗಳಲ್ಲಿ ದೋಷ ಕಲ್ಪನೆಗಳ ನಿರಾಕರಣೆ** 325-332

ಪ್ರಥಮಾನುಯೋಗದಲ್ಲಿ ದೋಷಕಲ್ಪನೆಯ ನಿರಾಕರಣೆ-325, ಕರಣಾನುಯೋಗದಲ್ಲಿ ದೋಷ ಕಲ್ಪನೆಯ ನಿರಾಕರಣೆ-327, ಚರಣಾನುಯೋಗದಲ್ಲಿ ದೋಷ ಕಲ್ಪನೆಯ ನಿರಾಕರಣೆ-328, ದ್ರವ್ಯಾನುಯೋಗದಲ್ಲಿ ದೋಷ ಕಲ್ಪನೆಯ ನಿರಾಕರಣೆ-329, ವ್ಯಾಕರಣ-ನ್ಯಾಯ ಶಾಸ್ತ್ರಗಳ ಉಪಯೋಗತೆ-332

**ಅನುಯೋಗಗಳಲ್ಲಿ ಕಂಡು ಬರುವ ಪರಸ್ಪರ ವಿರೋಧದ ನಿರಾಕರಣೆ** 332-343

ಅನುಯೋಗಗಳ ಅಭ್ಯಾಸ ಕ್ರಮ-343.

## ಒಂಭತ್ತನೆಯ ಅಧಿಕಾರ (ಮೋಕ್ಷಮಾರ್ಗದ ಸ್ವರೂಪ)

ಆತ್ಮನ ಹಿತವು ಮೋಕ್ಷವೇ ಇದೆ-344, ಪುರುಷಾರ್ಥದಿಂದಲೇ ಮೋಕ್ಷಪ್ರಾಪ್ತಿ-349.

**ಮೋಕ್ಷಮಾರ್ಗದ ಸ್ವರೂಪ** 354-373
**ಸಮ್ಯಗ್ದರ್ಶನದ ನಿಜವಾದ ಲಕ್ಷಣ**

ತತ್ತ್ವಾರ್ಥಗಳು ಏಳೇ ಏಕೆ ?-357, ತತ್ತ್ವಾರ್ಥ ಶ್ರದ್ಧೆಯ ಲಕ್ಷಣದಲ್ಲಿ ಅವ್ಯಾಪ್ತಿ, ಅತಿವ್ಯಾಪ್ತಿ ಮತ್ತು ಅಸಂಭವ ದೋಷದ ಪರಿಹಾರ-361, ಸಮ್ಯಕ್ತ್ವದ ವಿಭಿನ್ನ ಲಕ್ಷಣಗಳ ಸಮನ್ವಯ-365.

**ಸಮ್ಯಕ್ತ್ವದ ಭೇದ ಮತ್ತು ಅವುಗಳ ಸ್ವರೂಪ** 374
**ಸಮ್ಯಗ್ದರ್ಶನದ ಎಂಟು ಅಂಗಗಳು** 383
**ಸಮ್ಯಗ್ದರ್ಶನದ ಇಪ್ಪತ್ತೈದು ದೋಷಗಳು** 384
**ಪರಿಶಿಷ್ಟ -1- ರಹಸ್ಯಪೂರ್ಣ ಪತ್ರ** 385
**ಪರಿಶಿಷ್ಟ -2- ಕಥಾಸಂದರ್ಭ** 394
**ಪರಿಶಿಷ್ಟ -3- ಕರಣಲಬ್ಧಿ** 400
**ಪಾರಿಭಾಷಿಕ ಶಬ್ದಕೋಶ** 405

- ನಮಃ ಸಿದ್ಧೇಭ್ಯಃ -

ಆಚಾರ್ಯಕಲ್ಪ ಪಂ. ಟೋಡರಮಲ್ಲ ವಿರಚಿತ

# ಮೋಕ್ಷಮಾರ್ಗ ಪ್ರಕಾಶಕ

## ಮೊದಲನೆಯ ಅಧಿಕಾರ
## ಪೀಠಬಂಧ ಪ್ರರೂಪಣೆ

### ಈಗ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರವನ್ನು ಬರೆಯಲಾಗುತ್ತದೆ.

(ಮಂಗಲಾಚರಣೆ)

**ವೀತರಾಗ-ವಿಜ್ಞಾನ ಸ್ವಯಂ ಮಂಗಲಮಯ ಮಂಗಲಕರಣವಿದೆ ।**
**ಅದರಿಂದರಹಂತಾದಿಗಳು ಸಂದಿಹರದರಿಂದದಕೆರಗುವೆನು ॥1॥**
**ಗ್ರಂಥ ರಚನೆಯ ಶುಭಕಾರ್ಯದಲಿ ಕೋರುವೆ ನಾ ಮಹಮಂಗಲವ ।**
**ದೊರಕಲಿ ಭುವನದ ಭವ್ಯರಿಗೆ ಚಿರಸುಖ ಶಾಂತಿಯ ಪಾವನಸ್ಥಾನ ॥2॥**

ಈಗ ಮೋಕ್ಷಮಾರ್ಗ ಪ್ರಕಾಶಕವೆಂಬ ನಾಮದ ಶಾಸ್ತ್ರವು ಉದಯವಾಗುತ್ತದೆ. ಅಲ್ಲಿ ಮೊದಲು ಮಂಗಲ ಮಾಡುತ್ತಾರೆ.

**ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯರಿಯಾಣಂ ।**
**ಣಮೋ ಉವಜ್ಝಾಯಾಣಂ, ಣಮೋ ಲೋಏ ಸವ್ವ ಸಾಹೂಣಂ ॥**

ಈ ಪ್ರಾಕೃತ ಭಾಷಾಮಯವಾದ ನಮಸ್ಕಾರಮಂತ್ರವು ಮಹಾಮಂಗಲಸ್ವರೂಪವಿದೆ ಮತ್ತು ಇದರ ಸಂಸ್ಕೃತರೂಪವು ಹೀಗಾಗುತ್ತದೆ.

ನಮೋऽರ್ಹದ್ಭ್ಯಃ , ನಮಃ ಸಿದ್ಧೇಭ್ಯಃ , ನಮಃ ಆಚಾರ್ಯೇಭ್ಯಃ , ನಮಃ ಉಪಾಧ್ಯಾಯೇಭ್ಯಃ, ನಮೋ ಲೋಕೇ ಸರ್ವಸಾಧುಭ್ಯಃ । ಮತ್ತು ಇದರ ಅರ್ಥವು ಅರಹಂತರಿಗೆ ನಮಸ್ಕಾರ, ಸಿದ್ಧರಿಗೆ ನಮಸ್ಕಾರ, ಆಚಾರ್ಯರಿಗೆ ನಮಸ್ಕಾರ, ಉಪಾಧ್ಯಾಯರಿಗೆ ನಮಸ್ಕಾರ, ಲೋಕದಲ್ಲಿನ ಎಲ್ಲಸಾಧುಗಳಿಗೆ ನಮಸ್ಕಾರ ಎಂದಿದೆ. ಹೀಗೆ-ಇದರಲ್ಲಿ ನಮಸ್ಕಾರ ಮಾಡಿರುವುದರಿಂದ ಇದರ ಹೆಸರು ನಮಸ್ಕಾರ ಮಂತ್ರವಿದೆ.

ಈಗ ಇಲ್ಲಿ ಯಾರಿಗೆ ನಮಸ್ಕಾರ ಮಾಡಿದೆ ಅವರ ಸ್ವರೂಪದ ಚಿಂತನೆ ಮಾಡುತ್ತಾರೆ.

**ಅರಹಂತರ ಸ್ವರೂಪ :-**

ಇಲ್ಲಿ ಮೊದಲು ಅರಹಂತರ ಸ್ವರೂಪದ ವಿಚಾರ ಮಾಡುತ್ತಾರೆ- ಅವರು ಗೃಹಸ್ಥಾವಸ್ಥೆಯನ್ನು ತ್ಯಾಗ ಮಾಡಿ, ಮುನಿಧರ್ಮದ ಅಂಗೀಕಾರ ಮಾಡಿ, ನಿಜಸ್ವಭಾವಸಾಧನೆಯ ಮುಖಾಂತರ ನಾಲ್ಕು ಘಾತಿಕರ್ಮಗಳನ್ನು ನಾಶ ಮಾಡಿ ಅನಂತ ಚತುಷ್ಟಯರೂಪದಿಂದ ವಿರಾಜಮಾನರಾದರು; ಅವರು ಅನಂತ ಜ್ಞಾನದಿಂದಂತೂ ತಮ್ಮ ಅನಂತಗುಣ- ಪರ್ಯಾಯಗಳ ಸಹಿತವಾಗಿ ಸಮಸ್ತ ಜೀವಾದಿ ದ್ರವ್ಯಗಳನ್ನು ಯುಗಪತ್ ವಿಶೇಷರೂಪದಿಂದ ಪ್ರತ್ಯಕ್ಷ ತಿಳಿಯುತ್ತಾರೆ. ಅನಂತದರ್ಶನದಿಂದ ಅವುಗಳ ಸಾಮಾನ್ಯ ಅವಲೋಕನ ಮಾಡುತ್ತಾರೆ. ಅನಂತವೀರ್ಯದಿಂದ ಅಂಥ ಸಾಮರ್ಥ್ಯವನ್ನು ಧಾರಣ ಮಾಡುತ್ತಾರೆ. ಅನಂತಸುಖದಿಂದ ನಿರಾಕುಲ ಪರಮಾನಂದದ ಅನುಭವ ಮಾಡುತ್ತಾರೆ. ಮತ್ತೆ ಅವರು ಸರ್ವದಾ ಸಮಸ್ತ ರಾಗ-ದ್ವೇಷ ಮೊದಲಾದ ವಿಕಾರಭಾವಗಳಿಂದ ರಹಿತರಾಗಿ ಶಾಂತರಸರೂಪದಿಂದ ಪರಿಣಮಿತರಾಗಿದ್ದಾರೆ; ಮತ್ತು ಕ್ಷುಧೆ-ತೃಷೆ ಮೊದಲಾದ ಸಮಸ್ತ ದೋಷಗಳಿಂದ ಮುಕ್ತರಾಗಿ ದೇವಾಧಿದೇವತನಕ್ಕೆ ಪ್ರಾಪ್ತರಾಗಿದ್ದಾರೆ; ಅಲ್ಲದೆ ಅವರದು ಆಯುಧ-ಅಂಬರ ಮೊದಲಾದ ಹಾಗೂ ಅಂಗವಿಕಾರ ಮೊದಲಾದ ಆ ಕಾಮಕ್ರೋಧಾದಿ ನಿಂದ್ಯಭಾವಗಳ ಚಿಹ್ನಗಳಿಂದ ರಹಿತವಾಗಿ ಪರಮ ಔದಾರಿಕ ಶರೀರವಾಗಿದೆ; ಮತ್ತು ಅವರ ವಚನಗಳಿಂದ ಲೋಕದಲ್ಲಿ ಧರ್ಮತೀರ್ಥವು ಪ್ರವರ್ತಿಸುತ್ತದೆ. ಅದರಿಂದ ಜೀವರುಗಳಿಗೆ ಕಲ್ಯಾಣವಾಗುತ್ತದೆ; ಮತ್ತು ಲೌಕಿಕ ಜನರು ಅವರ ಪ್ರಭುತ್ವವನ್ನು ಮನ್ನಿಸಲು ಕಾರಣರೂಪವಾದ ಅನೇಕ ಅತಿಶಯಗಳು ಹಾಗೂ ನಾನಾಪ್ರಕಾರದ ವೈಭವದ ಸಂಯುಕ್ತತೆಯು ಅವರಲ್ಲಿ ಕಂಡುಬರುತ್ತದೆ; ಅಲ್ಲದೆ ತಮ್ಮ ಹಿತದ ಸಲುವಾಗಿ ಗಣಧರ ಇಂದ್ರಾದಿಗಳಂಥ ಉತ್ತಮ ಜೀವರುಗಳು ಅವರ ಸೇವನೆ ಮಾಡುತ್ತಾರೆ. ಹೀಗೆ ಎಲ್ಲ ಪ್ರಕಾರದಿಂದ ಪೂಜಿಸಲು ಯೋಗ್ಯರಾದ ಶ್ರೀ ಅರಹಂತ ದೇವರಿದ್ದಾರೆ ಅವರಿಗೆ ನಮ್ಮ ನಮಸ್ಕಾರವಿರಲಿ.

**ಸಿದ್ಧರ ಸ್ವರೂಪ :-**

ಈಗ ಸಿದ್ಧರ ಸ್ವರೂಪವನ್ನು ಧ್ಯಾನಿಸುತ್ತಾರೆ-ಅವರು ಗೃಹಸ್ಥಾವಸ್ಥೆಯನ್ನು ತ್ಯಾಗಮಾಡಿ, ಮುನಿಧರ್ಮ ಸಾಧನೆಯ ಮುಖಾಂತರ ನಾಲ್ಕು ಘಾತಿ ಕರ್ಮಗಳು ನಾಶವಾದ ಮೇಲೆ ಅನಂತಚತುಷ್ಟಯ ಸ್ವಭಾವವನ್ನು ಪ್ರಕಟಮಾಡಿಕೊಂಡು, ಕೆಲಕಾಲದನಂತರ ನಾಲ್ಕು ಅಘಾತಿಕರ್ಮಗಳು ಕೂಡ ಭಸ್ಮವಾದ ಮೇಲೆ ಪರಮ ಔದಾರಿಕ ಶರೀರವನ್ನೂ ಬಿಟ್ಟುಕೊಟ್ಟು ಊರ್ಧ್ವಗಮನ ಸ್ವಭಾವದಿಂದ ಲೋಕದ ಅಗ್ರಭಾಗದಲ್ಲಿ ಹೋಗಿ ವಿರಾಜಮಾನರಾದರು; ಅಲ್ಲಿ ಅವರಿಗೆ ಸಮಸ್ತ ಪರದ್ರವ್ಯಗಳ ಸಂಬಂಧವು ಬಿಡುವುದರಿಂದ ಮುಕ್ತಾವಸ್ಥೆಯ

ಸಿದ್ಧಿಯಾಯಿತು ಮತ್ತು ಅವರದು ಚರಮ ಶರೀರಕ್ಕಿಂತ ಕಿಂಚಿತ್ ನ್ಯೂನತೆಯುಳ್ಳ ಪುರುಷಾಕಾರದಂತೆ ಆತ್ಮ ಪ್ರದೇಶಗಳ ಆಕಾರವು ಅವಸ್ಥಿತವಾಯಿತು ಮತ್ತು ಅವರಿಗೆ ಎದುರಾಳಿಯಾದ ಕರ್ಮಗಳ ನಾಶವಾಗಿರುವುದರಿಂದ ಸಮಸ್ತ ಸಮ್ಯಕ್ತ್ವ ಜ್ಞಾನ-ದರ್ಶನ ಮೊದಲಾದ ಆತ್ಮಿಕ ಗುಣಗಳು ಸಂಪೂರ್ಣವಾಗಿ ತಮ್ಮ ಸ್ವಭಾವಕ್ಕೆ ಪ್ರಾಪ್ತವಾಗಿವೆ, ಇನ್ನು ಅವರಿಗೆ ನೋಕರ್ಮದ ಸಂಬಂಧವು ದೂರವಾಗಿರುವುದರಿಂದ ಸಮಸ್ತ ಅಮೂರ್ತತ್ವ ಮೊದಲಾದ ಆತ್ಮಿಕ ಧರ್ಮಗಳು ಪ್ರಕಟವಾಗಿವೆ, ಹಾಗೂ ಅವರಿಗೆ ಭಾವಕರ್ಮದ ಅಭಾವವಾಗಿರುವುದರಿಂದ ನಿರಾಕುಲ ಆನಂದಮಯವಾದ ಶುದ್ಧಸ್ವಭಾವರೂಪವು ಪರಿಣಮನವಾಗುತ್ತಲಿದೆ; ಅಲ್ಲದೆ ಅವರ ಧ್ಯಾನದಿಂದ ಭವ್ಯ ಜೀವರುಗಳಿಗೆ ಸ್ವದ್ರವ್ಯ ಪರದ್ರವ್ಯಗಳ ಮತ್ತು ಔದಯಿಕ ಭಾವ-ಸ್ವಭಾವ ಭಾವಗಳ ವಿಜ್ಞಾನವಾಗುತ್ತದೆ, ಅದರಿಂದ ತಾವು ಆ ಸಿದ್ಧರಸಮಾನವಾಗುವ ಸಾಧನವಾಗುತ್ತದೆ. ಆದುದರಿಂದ ಸಾಧಿಸಲು ಯೋಗ್ಯವಾದ ಆ ತಮ್ಮ ಶುದ್ಧಸ್ವರೂಪವನ್ನು ತೋರಿಸಿಕೊಡಲು ಪ್ರತಿಬಿಂಬದಂತಿದ್ದಾರೆ ಮತ್ತು ಅವರು ಕೃತಕೃತ್ಯರಾಗಿರುವುದರಿಂದ ಹೀಗೆಯೇ ಅನಂತಕಾಲದವರೆಗೆ ಉಳಿಯುತ್ತಾರೆ. ಹೀಗೆ ನಿಷ್ಪನ್ನರಾದ ಸಿದ್ಧಭಗವಂತರಿಗೆ ನಮ್ಮ ನಮಸ್ಕಾರವಿರಲಿ.

## ಆಚಾರ್ಯ-ಉಪಾಧ್ಯಾಯ-ಸಾಧುಗಳ ಸಾಮಾನ್ಯ ಸ್ವರೂಪ :

ಈಗ ಆಚಾರ್ಯ -ಉಪಾಧ್ಯಾಯ-ಸಾಧುಗಳ ಸ್ವರೂಪದ ಅವಲೋಕನ ಮಾಡುತ್ತಾರೆ.

ಅವರು ವಿರಾಗಿಯಾಗಿ ಸಮಸ್ತ ಪರಿಗ್ರಹದ ತ್ಯಾಗ ಮಾಡಿ, ಶುದ್ಧೋಪಯೋಗರೂಪವಾದ ಮುನಿಧರ್ಮವನ್ನು ಅಂಗೀಕಾರ ಮಾಡಿ, ಅಂತರಂಗದಲ್ಲಂತೂ ಆ ಶುದ್ಧೋಪಯೋಗದ ಮುಖಾಂತರ ತಮ್ಮನ್ನು ತಮ್ಮ ರೂಪದಿಂದ ಅನುಭವ ಮಾಡುತ್ತಾರೆ, ಪರದ್ರವ್ಯದಲ್ಲಿ ಅಹಂಬುದ್ಧಿಯನ್ನು ಧಾರಣಮಾಡುವುದಿಲ್ಲ ಮತ್ತು ತಮ್ಮ ಜ್ಞಾನ ಮೊದಲಾದ ಸ್ವಭಾವವನ್ನೇ ತನ್ನದೆಂದು ಮನ್ನಿಸುತ್ತಾರೆ, ಪರಭಾವಗಳಲ್ಲಿ ಮಮತ್ವ ಮಾಡುವುದಿಲ್ಲ ಮತ್ತು ಆ ಪರದ್ರವ್ಯಗಳು ಹಾಗೂ ಅವುಗಳ ಸ್ವಭಾವಗಳು ಜ್ಞಾನದಲ್ಲಿ ಪ್ರತಿಭಾಸಿತವಾಗುತ್ತಿರುವುದನ್ನಂತೂ ತಿಳಿಯುತ್ತಾರೆ, ಆದರೆ ಅವನ್ನು ಇಷ್ಟಾನಿಷ್ಟವೆಂದು ಮನ್ನಿಸಿ ಅವುಗಳಲ್ಲಿ ರಾಗ-ದ್ವೇಷ ಮಾಡುವುದಿಲ್ಲ; ಶರೀರದ ಅನೇಕ ಅವಸ್ಥೆಗಳಾಗುತ್ತವೆ ಬಾಹ್ಯದಲ್ಲಿ ನಾನಾ ನಿಮಿತ್ತಗಳೊದಗುತ್ತವೆ, ಆದರೆ ಅಲ್ಲಿ ಒಂದಿಷ್ಟೂ ಸುಖ-ದುಃಖ ಮನ್ನಿಸುವುದಿಲ್ಲ ತಮಗೆ ಯೋಗ್ಯವಾದ ಬಾಹ್ಯಕ್ರಿಯೆಗಳು ಹೇಗೆ ಆಗುತ್ತವೆ ಹಾಗೆ ಆಗುತ್ತವೆ ಅವನ್ನು ಬಲವಂತದಿಂದ ಮಾಡುವುದಿಲ್ಲ; ಅಲ್ಲದೆ ತಮ್ಮ ಉಪಯೋಗವನ್ನು ಹೆಚ್ಚು ತಿರುಗಾಡಿಸುವುದಿಲ್ಲ, ಉದಾಸೀನರಾಗಿ ನಿಶ್ಚಲ ವೃತ್ತಿಯನ್ನು ಧಾರಣ ಮಾಡುತ್ತಾರೆ; ಮತ್ತು ಎಂದಾದರೂ ಮಂದರಾಗದ ಉದಯದಿಂದ ಶುಭೋಪಯೋಗವಾದರೂ ಅದರಿಂದ ಆ ಶುದ್ಧೋಪಯೋಗಕ್ಕೆ ಬಾಹ್ಯ ಸಾಧನಗಳಿರುವಲ್ಲಿ ಅನುರಾಗ ಮಾಡುತ್ತಾರೆ. ಆದರೆ ಆ ರಾಗಭಾವಗಳನ್ನು ಹೇಯವೆಂದು ತಿಳಿದುಕೊಂಡು ದೂರಮಾಡಲಪೇಕ್ಷಿಸುತ್ತಾರೆ; ಇನ್ನು ತೀವ್ರ ಕಷಾಯಗಳ ಉದಯದ ಅಭಾವವಿರುವುದರಿಂದ ಹಿಂಸಾದಿರೂಪ ಅಶುಭೋಪಯೋಗ ಪರಿಣತಿಯದಂತೂ ಅಸ್ತಿತ್ವವೇ ಉಳಿದಿರುವುದಿಲ್ಲ; ಹೀಗೆ ಅಂತರಂಗ ಅವಸ್ಥೆಯಾದ ಮೇಲೆ ಬಾಹ್ಯದಲ್ಲಿ ದಿಗಂಬರ ಸೌಮ್ಯಮುದ್ರಾಧಾರಿಗಳಾಗಿದ್ದಾರೆ, ಶರೀರದ ಸರಿಪಡಿಸುವಿಕೆ ಮೊದಲಾದ ವಿಕ್ರಿಯೆಗಳಿಂದ ರಹಿತರಾಗಿದ್ದಾರೆ, ವನಖಂಡದಲ್ಲಿ ವಾಸಮಾಡುತ್ತಾರೆ. ಇಪ್ಪತ್ತೆಂಟು ಮೂಲಗುಣಗಳ ಪಾಲನೆಯನ್ನು ಅಖಂಡವಾಗಿ ಮಾಡುತ್ತಾರೆ. ಇಪ್ಪತ್ತೆರಡು ಪರೀಷಹಗಳನ್ನು ಸಹನೆ ಮಾಡುತ್ತಾರೆ, ಹನ್ನೆರಡು ಪ್ರಕಾರದ ತಪಗಳನ್ನು ಆದರಿಸುತ್ತಾರೆ, ಒಮ್ಮೊಮ್ಮೆ

ಧ್ಯಾನ ಮುದ್ರೆಯನ್ನು ಧಾರಣ ಮಾಡಿ ಪ್ರತಿಮೆಯಂತೆ ನಿಶ್ಚಲರಾಗುತ್ತಾರೆ, ಒಮ್ಮೊಮ್ಮೆ ಅಧ್ಯಯನ ಮೊದಲಾದ ಬಾಹ್ಯಧರ್ಮಕ್ರಿಯೆಗಳಲ್ಲಿ ಪ್ರವರ್ತಿಸುತ್ತಾರೆ ಒಮ್ಮೊಮ್ಮೆ ಮುನಿಧರ್ಮಕ್ಕೆ ಸಹಕಾರಿಯಾದ ಶರೀರದ ಸ್ಥಿತಿಯ ಉದ್ದೇಶದಿಂದ ಯೋಗ್ಯ ಆಹಾರ-ವಿಹಾರ ಮೊದಲಾದ ಕ್ರಿಯೆಗಳಲ್ಲಿ ಸಾವಧಾನರಿರುತ್ತಾರೆ.

ಈ ಪ್ರಕಾರ ಜೈನಮುನಿಗಳಿರುತ್ತಾರೆ ಅವರೆಲ್ಲರ ಅವಸ್ಥೆಯು ಹೀಗೆಯೇ ಇರುತ್ತದೆ.

## ಆಚಾರ್ಯರ ಸ್ವರೂಪ :

ಮುನಿಗಳಲ್ಲಿ ಅವರು ಸಮ್ಯಗ್ದರ್ಶನ-ಸಮ್ಯಕ್‌ಜ್ಞಾನ-ಸಮ್ಯಕ್ಚಾರಿತ್ರದ ಅಧಿಕತೆಯಿಂದ ಪ್ರಧಾನ ಪದವನ್ನು ಪ್ರಾಪ್ತ ಮಾಡಿಕೊಂಡು ಸಂಘದಲ್ಲಿ ನಾಯಕರಾಗಿದ್ದಾರೆ; ಮತ್ತು ಅವರು ಮುಖ್ಯರೂಪದಿಂದಂತೂ ನಿರ್ವಿಕಲ್ಪ ಸ್ವರೂಪಾಚರಣೆಯಲ್ಲಿಯೇ ಮಗ್ನರಿರುತ್ತಾರೆ, ಮತ್ತು ಅವರು ಎಂದಾದರೂ ಧರ್ಮದ ಲೋಭವುಳ್ಳ ಅನ್ಯ-ಯಾಚಕ ಜೀವರುಗಳನ್ನು ಕಂಡು ರಾಗಾಂಶದ ಉದಯದಿಂದ ಕರುಣಾಬುದ್ಧಿಯುಂಟಾದರೆ ಅವರಿಗೆ ಧರ್ಮೋಪದೇಶ ಕೊಡುತ್ತಾರೆ ಯಾರು ದೀಕ್ಷಾಗ್ರಾಹಕರಿದ್ದಾರೆ ಅವರಿಗೆ ದೀಕ್ಷೆಕೊಡುತ್ತಾರೆ ಯಾರು ತಮ್ಮ ದೋಷಗಳನ್ನು ಪ್ರಕಟ ಮಾಡುತ್ತಾರೆ ಅವರನ್ನು ಪ್ರಾಯಶ್ಚಿತ್ತ ವಿಧಿಯಿಂದ ಶುದ್ಧ ಮಾಡುತ್ತಾರೆ.

ಈ ಪ್ರಕಾರದ ಆಚರಣೆಯನ್ನಾಚರಿಸುವಂಥ ಆಚಾರ್ಯರಿಗೆ ನಮ್ಮ ನಮಸ್ಕಾರವಿರಲಿ !

## ಉಪಾಧ್ಯಾಯರ ಸ್ವರೂಪ :-

ಮತ್ತು ಅವರು ಬಹಳಷ್ಟು ಜೈನ ಶಾಸ್ತ್ರಗಳನ್ನು ತಿಳಿದವರಾಗಿರುವುದರಿಂದ ಸಂಘದಲ್ಲಿ ಪಠನ-ಪಾಠನದ ಅಧಿಕಾರಿಯಾಗಿದ್ದಾರೆ; ಮತ್ತು ಅವರು ಸಮಸ್ತ ಶಾಸ್ತ್ರಗಳ ಪ್ರಯೋಜನಭೂತವಾದ ಅರ್ಥವನ್ನು ತಿಳಿದು ಏಕಾಗ್ರರಾಗಿ ತಮ್ಮ ಸ್ವರೂಪವನ್ನು ಧ್ಯಾನಿಸುತ್ತಾರೆ ಮತ್ತು ಒಂದು ವೇಳೆ ಎಂದಾದರೂ ಕಷಾಯಾಂಶದ ಉದಯದಿಂದ ಅಲ್ಲಿ ಉಪಯೋಗವು ಸ್ಥಿರ ಉಳಿಯದಿದ್ದರೆ ಆ ಶಾಸ್ತ್ರಗಳನ್ನು ಸ್ವಯಂ ಓದುತ್ತಾರೆ ಹಾಗೂ ಅನ್ಯ ಧರ್ಮ ಬುದ್ಧಿಯುಳ್ಳವರಿಗೆ ಓದಿಸುತ್ತಾರೆ.

ಈ ಪ್ರಕಾರ ಸಮೀಪವರ್ತಿಯಾದ ಭವ್ಯರಿಗೆ ಅಧ್ಯಯನ ಮಾಡಿಸುವಂಥ ಉಪಾಧ್ಯಾಯರಿಗೆ ನಮ್ಮ ನಮಸ್ಕಾರವಿರಲಿ.

## ಸಾಧುವಿನ ಸ್ವರೂಪ :-

ಮತ್ತೆ ಇವೆರಡು ಪದಗಳ ಧಾರಕರನ್ನು ಹೊರತು ಪಡಿಸಿ ಉಳಿದವರೆಲ್ಲರು ಆ ಮುನಿಪದದ ಧಾರಕರಿದ್ದಾರೆ ಮತ್ತು ಅವರು ಆತ್ಮಸ್ವಭಾವವನ್ನು ಸಾಧಿಸುತ್ತಾರೆ; ಅವರು ತಮ್ಮ ಉಪಯೋಗವು ಪರದ್ರವ್ಯಗಳಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸಿ ಮೋಸ ಹೋಗದ ಹಾಗೆ ಮತ್ತು ತಪ್ಪಿಸಿಕೊಳ್ಳದ ಹಾಗೆ ಉಪಯೋಗವನ್ನು ಸಾಧಿಸುತ್ತಾರೆ ಹಾಗೂ ಬಾಹ್ಯದಲ್ಲಿ ಅದಕ್ಕೆ ಸಾಧನಭೂತವಾದ ತಪಶ್ಚರಣ ಮೊದಲಾದ ಕ್ರಿಯೆಗಳಲ್ಲಿ ಪ್ರವರ್ತಿಸುತ್ತಾರೆ ಮತ್ತು ಎಂದಾದರೂ ಭಕ್ತಿ-ವಂದನೆ ಮೊದಲಾದ ಕಾರ್ಯಗಳಲ್ಲಿ ಪ್ರವರ್ತಿಸುತ್ತಾರೆ.

ಹೀಗೆ ಆತ್ಮಸ್ವಭಾವದ ಸಾಧಕರಾದ ಸಾಧುಗಳಿದ್ದಾರೆ, ಅವರಿಗೆ ನಮ್ಮ ನಮಸ್ಕಾರವಿರಲಿ.

**ಪೂಜ್ಯತ್ವದ ಕಾರಣ :-**

ಈ ಪ್ರಕಾರ ಈ ಅರಹಂತ ಮೊದಲಾದವರುಗಳ ಸ್ವರೂಪವಿದ್ದು ಅವರು ವೀತರಾಗ ವಿಜ್ಞಾನಮಯರಿದ್ದಾರೆ. ಅದರ ಮುಖಾಂತರವೇ ಅರಹಂತ ಮೊದಲಾದವರು ಸ್ತುತಿ ಯೋಗ್ಯ ಮಹಾನರಾಗಿದ್ದಾರೆ. ಏಕೆಂದರೆ ಜೀವತತ್ತ್ವದ ಅಪೇಕ್ಷೆಯಿಂದಂತೂ ಎಲ್ಲ ಜೀವಗಳು ಸಮಾನವೇ ಇವೆ. ಆದರೆ ರಾಗಾದಿ ವಿಕಾರಗಳಿಂದ ಹಾಗೂ ಜ್ಞಾನದ ಹೀನತೆಯಿಂದ ಜೀವಗಳು ನಿಂದಾಯೋಗ್ಯವಾಗುತ್ತವೆ. ಮತ್ತು ರಾಗಾದಿಗಳ ಹೀನತೆಯಿಂದ ಹಾಗೂ ಜ್ಞಾನದ ವಿಶೇಷತೆಯಿಂದ ಸ್ತುತಿಯೋಗ್ಯವಾಗುತ್ತವೆ; ಆ ಅರಹಂತ-ಸಿದ್ಧರುಗಳಿಗಂತೂ ಸಂಪೂರ್ಣ ರಾಗಾದಿಗಳ ಹೀನತೆ ಮತ್ತು ಜ್ಞಾನದ ವಿಶೇಷತೆಯಿರುವುದರಿಂದ ಸಂಪೂರ್ಣ ವೀತರಾಗವಿಜ್ಞಾನ ಭಾವವು ಸಂಭವವಿದೆ ಮತ್ತು ಆಚಾರ್ಯ- ಉಪಾಧ್ಯಾಯ ಹಾಗೂ ಸಾಧುಗಳಿಗೆ ಏಕದೇಶ ರಾಗಾದಿಗಳ ಹೀನತೆ ಮತ್ತು ಜ್ಞಾನದ ವಿಶೇಷತೆಯಿರುವುದರಿಂದ ಏಕದೇಶ ವೀತರಾಗ-ವಿಜ್ಞಾನವು ಸಂಭವವಿದೆ. ಆದುದರಿಂದ ಆ ಅರಹಂತ ಮೊದಲಾದವರುಗಳನ್ನು ಸ್ತುತಿಯೋಗ್ಯರಾದ ಮಹಾನರೆಂದು ತಿಳಿಯುವುದು.

ಇನ್ನು ಈ ಅರಹಂತ ಮೊದಲಾದ ಯಾವ ಪದಗಳಿವೆ ಅವುಗಳಲ್ಲಿ ಮುಖ್ಯರೂಪದಿಂದಂತೂ ತೀರ್ಥಂಕರರ ಹಾಗೂ ಗೌಣರೂಪದಿಂದ ಸಮಸ್ತ ಕೇವಲಿಗಳ ಹೆಸರು ಪ್ರಾಕೃತ ಭಾಷೆಯಲ್ಲಿ ಅರಹಂತ ಮತ್ತು ಸಂಸ್ಕೃತದಲ್ಲಿ ಅರ್ಹತ್ ಇದೆಯೆಂದು ತಿಳಿಯುವುದು ಮತ್ತು ಹದಿನಾಲ್ಕನೆಯ ಗುಣಸ್ಥಾನದ ಅನಂತರ ಸಮಯದಿಂದ ಹಿಡಿದು ಸಿದ್ಧವೆಂಬ ಹೆಸರಿದೆಯೆಂದು ತಿಳಿಯುವುದು ಇನ್ನು ಯಾರಿಗೆ ಆಚಾರ್ಯಪದವಾಗಿದೆ ಅವರು ಸಂಘದಲ್ಲಿರಲಿ ಅಥವಾ ಏಕಾಕಿ ಆತ್ಮಧ್ಯಾನದಲ್ಲಿರಲಿ ಅಥವಾ ಏಕವಿಹಾರಿಯಾಗಿರಲಿ ಅಥವಾ ಆಚಾರ್ಯರುಗಳಲ್ಲಿ ಕೂಡ ಪ್ರಧಾನತೆಯನ್ನು ಪಡೆದು ಗಣಧರ ಪದವಿಯ ಧಾರಕರಾಗಿರಲಿ ಅವರೆಲ್ಲರುಗಳ ಹೆಸರು ಆಚಾರ್ಯರೆಂದು ಹೇಳುತ್ತಾರೆ. ಮತ್ತು ಪಠನ-ಪಾಠನವನ್ನಂತೂ ಅನ್ಯ ಮುನಿಗಳೂ ಮಾಡುತ್ತಾರೆ ಆದರೆ ಯಾರಿಗೆ ಆಚಾರ್ಯರುಗಳಿಂದ ಕೊಡಲ್ಪಟ್ಟ ಉಪಾಧ್ಯಾಯ ಪದವು ಪ್ರಾಪ್ತವಾಗಿದೆ ಅವರು ಆತ್ಮಧ್ಯಾನ ಮೊದಲಾದ ಕಾರ್ಯ ಮಾಡುತ್ತಿದ್ದರೂ ಉಪಾಧ್ಯಾಯವೆಂಬ ಹೆಸರನ್ನೇ ಪಡೆಯುತ್ತಾರೆ. ಮತ್ತು ಪದವೀಧಾರಕರಿಲ್ಲದಂಥ ಮುನಿಗಳೆಲ್ಲರೂ ಸಾಧು ಸಂಜ್ಞೆಯ ಧಾರಕರೆಂದು ತಿಳಿಯುವುದು.

ಇಲ್ಲಿ ಪಂಚಾಚಾರಗಳಿಂದ ಆಚಾರ್ಯ ಪದವಾಗುತ್ತದೆ. ಪಠನ-ಪಾಠನಗಳಿಂದ ಉಪಾಧ್ಯಾಯ ಪದವಾಗುತ್ತದೆ ಮತ್ತು ಮೂಲಗುಣಗಳ ಸಾಧನೆಯಿಂದ ಸಾಧುಪದವಾಗುತ್ತದೆಯೆಂಬ ನಿಯಮವಿಲ್ಲ; ಏಕೆಂದರೆ ಈ ಕ್ರಿಯೆಗಳಂತೂ ಎಲ್ಲ ಮುನಿಗಳಿಗೆ ಸಾಧಾರಣವಿವೆ ಆದರೆ ಶಬ್ದನಯದಿಂದ ಅವುಗಳ ಅಕ್ಷರಾರ್ಥವನ್ನು ಹಾಗೆ ಮಾಡಲಾಗುತ್ತದೆ. ಸಮಭಿರೂಢನಯದಿಂದ ಪದವಿಯ ಅಪೇಕ್ಷೆಯೇ ಆಚಾರ್ಯ ಮೊದಲಾದ ಹೆಸರುಗಳೆಂದು ತಿಳಿಯುವುದು ಯಾವ ಪ್ರಕಾರ ಶಬ್ದನಯದಿಂದ ಯಾವುದು ಗಮನ ಮಾಡುತ್ತದೆ ಅದಕ್ಕೆ ಗೋವುಯೆಂದು ಹೇಳುತ್ತಾರೆ, ಆದರೆ ಗಮನವನ್ನಂತೂ ಮನುಷ್ಯ ಮೊದಲಾದವರೂ ಮಾಡುತ್ತಾರೆ; ಆದರೆ ಸಮಭಿರೂಢನಯದಿಂದ ಪರ್ಯಾಯ-ಅಪೇಕ್ಷೆಯಿಂದ ಹೆಸರು ಇದೆ. ಅದೇ ಪ್ರಕಾರ ಇಲ್ಲಿ ತಿಳಿಯಬೇಕು.

**ಪ್ರಶ್ನೆ :-** ಇಲ್ಲಿ ಸಿದ್ಧರಿಗಿಂತ ಮೊದಲು ಅರಹಂತರಿಗೆ ನಮಸ್ಕಾರ ಮಾಡಿದೆ ಅದರ ಕಾರಣವೇನು ?

**ಉತ್ತರ :-** ನಮಸ್ಕಾರ ಮಾಡುವವರಂತೂ ತಮ್ಮ ಪ್ರಯೋಜನ ಸಾಧಿಸುವ ಅಪೇಕ್ಷೆಯಿಂದ ಮಾಡುತ್ತಾರೆ ಅದಕ್ಕಾಗಿ ಅರಹಂತರುಗಳಿಂದ ಉಪದೇಶ ಮೊದಲಾದವುಗಳ ಪ್ರಯೋಜನದ ಸಿದ್ಧಿಯು ವಿಶೇಷವಾಗಿ ಆಗುತ್ತಿರುವುದರಿಂದ ಅವರಿಗೆ ಮೊದಲು ನಮಸ್ಕಾರ ಮಾಡಿದೆ.

ಈ ಪ್ರಕಾರ ಅರಹಂತ ಮೊದಲಾದವರ ಸ್ವರೂಪದ ಚಿಂತನೆ ಮಾಡಿತು, ಏಕೆಂದರೆ ಸ್ವರೂಪದ ಚಿಂತನೆ ಮಾಡುವುದರಿಂದ ವಿಶೇಷ ಕಾರ್ಯಸಿದ್ಧಿಯಾಗುತ್ತದೆ ಅಲ್ಲದೆ ಈ ಅರಹಂತ ಮೊದಲಾದವರನ್ನು ಪಂಚ ಪರಮೇಷ್ಠಿಗಳೆಂದು ಹೇಳುತ್ತಾರೆ; ಏಕೆಂದರೆ ಯಾರು ಸರ್ವೋತ್ಕೃಷ್ಟ ಇಷ್ಟರಿದ್ದಾರೆ ಅವರ ಹೆಸರು ಪರಮೇಷ್ಟವಿದೆ. ಆ ಪಂಚಪರಮೇಷ್ಟಗಳ ಸಮಾಹಿತ ಸಮುದಾಯದ ಹೆಸರು ಪಂಚಪರಮೇಷ್ಟಿಯೆಂದು ತಿಳಿಯುವುದು.

ಅದರಂತೆ ಋಷಭ, ಅಜಿತ, ಸಂಭವ, ಅಭಿನಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವ , ಚಂದ್ರಪ್ರಭ, ಪುಷ್ಪದಂತ, ಶೀತಲ, ಶ್ರೇಯಾಂಶ, ವಾಸುಪೂಜ್ಯ , ವಿಮಲ, ಅನಂತ, ಧರ್ಮ, ಶಾಂತಿ, ಕುಂಥು, ಅರಹ, ಮಲ್ಲಿ, ಮುನಿಸುವ್ರತ, ನಮಿ, ನೇಮಿ, ಪಾರ್ಶ್ವ , ವರ್ಧಮಾನವೆಂಬ ಹೆಸರುಗಳನ್ನು ಧರಿಸಿದ ಇಪ್ಪತ್ತಾ ಲ್ಕರು ತೀರ್ಥಂಕರರು ಈ ಭರತ ಕ್ಷೇತ್ರದಲ್ಲಿ ವರ್ತಮಾನ ಧರ್ಮತೀರ್ಥದ ನಾಯಕರಾಗಿದ್ದಾರೆ; ಅವರು ಗರ್ಭ, ಜನ್ಮ, ತಪ, ಜ್ಞಾನ, ನಿರ್ವಾಣ ಕಲ್ಯಾಣಕಗಳಲ್ಲಿ ಇಂದ್ರಾದಿಕರುಗಳಿಂದ ವಿಶೇಷ ಪೂಜ್ಯರಾಗಿ ಈಗ ಸಿದ್ಧಾಲಯದಲ್ಲಿ ವಿರಾಜಮಾನರಿದ್ದಾರೆ; ಅವರುಗಳಿಗೆ ನಮ್ಮ ನಮಸ್ಕಾರವಿರಲಿ.

ಅಲ್ಲದೆ ಸೀಮಂಧರ, ಯುಗಮಂಧರ, ಬಾಹು, ಸುಬಾಹು, ಸಂಜಾತಕ, ಸ್ವಯಂಪ್ರಭ, ವೃಷಭಾನನ, ಅನಂತವೀರ್ಯ, ಸೂರಪ್ರಭ, ವಿಶಾಲಕೀರ್ತಿ, ವಜ್ರಧರ, ಚಂದ್ರಾನನ, ಚಂದ್ರಬಾಹು, ಭಜಂಗಮ, ಈಶ್ವರ, ನೇಮಿಪ್ರಭ, ವೀರಸೇನ, ಮಹಾಭದ್ರ , ದೇವಯಶ, ಅಜಿತವೀರ್ಯವೆಂಬ ಹೆಸರುಗಳನ್ನು ಧರಿಸಿದ ಇಪ್ಪತ್ತು ತೀರ್ಥಂಕರರು ಪಂಚಮೇರು ಸಂಬಂಧದ ವಿದೇಹ ಕ್ಷೇತ್ರಗಳೊಳಗೆ ವರ್ತಮಾನದಲ್ಲಿ ಕೇವಲಜ್ಞಾನ ಸಹಿತರಾಗಿ ವಿರಾಜಮಾನರಿದ್ದಾರೆ; ಅವರುಗಳಿಗೆ ನಮ್ಮ ನಮಸ್ಕಾರವಿರಲಿ.

ಪರಮೇಷ್ಠಿ ಪದದಲ್ಲಿ ಇವರುಗಳ ಸಮಾವೇಶತೆಯಿದ್ದರೂ ಕೂಡ ವಿದ್ಯಮಾನ ಕಾಲದಲ್ಲಿ ಇವರುಗಳ ವಿಶೇಷತೆಯನ್ನು ತಿಳಿದುಕೊಂಡು ಪ್ರತ್ಯೇಕ ನಮಸ್ಕಾರ ಮಾಡಿದೆ.

ಅದರಂತೆ ಮೂರು ಲೋಕಗಳಲ್ಲಿ ಯಾವ ಅಕೃತ್ರಿಮ ಜಿನಬಿಂಬಗಳು ವಿರಾಜಮಾನವಿವೆ, ಮಧ್ಯಲೋಕದಲ್ಲಿ ವಿಧಿಪೂರ್ವಕವಾದ ಕೃತ್ರಿಮ ಜಿನಬಿಂಬಗಳು ವಿರಾಜಮಾನವಿವೆ; ಅವುಗಳ ದರ್ಶನದಿಂದ ಒಂದು ಧರ್ಮೋಪದೇಶವನ್ನು ಹೊರತು ಪಡಿಸಿ ಇತರ ತಮ್ಮ ಹಿತದ ಸಿದ್ಧಿಯು ತೀರ್ಥಂಕರ ಕೇವಲಿಗಳ ದರ್ಶನಾದಿಕಗಳಿಂದ ಆಗುವಂತೆಯೇ ಆಗುತ್ತದೆ; ಆ ಎಲ್ಲ ಜಿನಬಿಂಬಗಳಿಗೆ ನಮ್ಮ ನಮಸ್ಕಾರವಿರಲಿ.

ಅಲ್ಲದೆ ಕೇವಲಿಗಳ ದಿವ್ಯಧ್ವನಿಯ ಮುಖಾಂತರ ಕೊಡಲ್ಪಟ್ಟ ಉಪದೇಶದ ಅನುಸಾರ ಗಣಧರರುಗಳಿಂದ ರಚಿತವಾದ ಅಂಗ ಪ್ರಕೀರ್ಣಕಗಳ ಅನುಸಾರವಾಗಿ ಇತರ ಆಚಾರ್ಯರುಗಳ ಮುಖಾಂತರ ರಚಿಸಲ್ಪಟ್ಟ ಗ್ರಂಥಾದಿಕಗಳೆಲ್ಲವೂ ಜಿನವಚನಗಳಿವೆ ಸ್ಯಾದ್ವಾದ ಚಿಹ್ನದಿಂದ ಗುರುತಿಸಲು ಯೋಗ್ಯವಿವೆ. ನ್ಯಾಯಮಾರ್ಗದಿಂದ

ಅವಿರುದ್ಧವಿರುವುದರಿಂದ ಪ್ರಾಮಾಣಿಕವಿವೆ; ಜೀವನಿಗೆ ತತ್ತ್ವಜ್ಞಾನದ ಕಾರಣವಾಗಿರುವುದರಿಂದ ಉಪಕಾರಿಯಿವೆ; ಅವೆಲ್ಲವುಗಳಿಗೆ ನಮ್ಮ ನಮಸ್ಕಾರವಿರಲಿ.

ಅದರಂತೆ ಚೈತ್ಯಾಲಯ, ಆರ್ಯಿಕೆ, ಉತ್ಕೃಷ್ಟ ಶ್ರಾವಕ ಮೊದಲಾದ ದ್ರವ್ಯಗಳು; ತೀರ್ಥಕ್ಷೇತ್ರಾದಿ ಕ್ಷೇತ್ರಗಳು; ಕಲ್ಯಾಣಕಕಾಲ ಮೊದಲಾದ ಕಾಲಗಳು ಹಾಗೂ ರತ್ನತ್ರಯ ಮೊದಲಾದ ಭಾವಗಳೆಲ್ಲವೂ ನನ್ನಿಂದ ನಮಸ್ಕಾರ ಮಾಡಲು ಯೋಗ್ಯವಿವೆ, ಅವೆಲ್ಲವುಗಳಿಗೆ ನಾನು ನಮಸ್ಕಾರ ಮಾಡುತ್ತೇನೆ ಮತ್ತು ಒಂದಿಷ್ಟು ವಿನಯ ಮಾಡಲು ಯೋಗ್ಯವಿರುವವುಗಳಿಗೆಲ್ಲ ಯಥಾ ಯೋಗ್ಯ ವಿನಯ ಮಾಡುತ್ತೇನೆ.

ಈ ಪ್ರಕಾರ ತಮ್ಮ ಇಷ್ಟಗಳ ಸನ್ಮಾನ ಮಾಡಿ ಮಂಗಲ ಮಾಡಿದೆ.

ಈಗ ಆ ಅರಹಂತ ಮೊದಲಾದವರು ಇಷ್ಟ ಹೇಗಾಗುತ್ತಾರೆಂಬುದರ ವಿಚಾರ ಮಾಡುತ್ತಾರೆ- ಯಾವುದರಿಂದ ಸುಖವು ಉತ್ಪನ್ನವಾಗುವುದು ಮತ್ತು ದುಃಖದ ವಿನಾಶವಾಗುವುದು ಆ ಕಾರ್ಯದ ಹೆಸರು ಪ್ರಯೋಜನವಿದೆ; ಇನ್ನು ಯಾವುದರಿಂದ ಆ ಪ್ರಯೋಜನದ ಸಿದ್ಧಿಯಾಗುತ್ತದೆ ಅದೇ ತನ್ನ ಇಷ್ಟವಿದೆ. ಆದುದರಿಂದ ನಮಗೆ ಈ ಸಮಯದಲ್ಲಿ ವೀತರಾಗದ ವಿಶೇಷಜ್ಞಾನವಾಗುವುದರದೇ ಪ್ರಯೋಜನವಿದೆ; ಏಕೆಂದರೆ ಅದರಿಂದ ನಿರಾಕುಲ ನಿಜವಾದ ಸುಖದ ಪ್ರಾಪ್ತಿಯಾಗುತ್ತದೆ ಮತ್ತು ಸಮಸ್ತ ಆಕುಲತೆಯರೂಪ ದುಃಖದ ನಾಶವಾಗುತ್ತದೆ.

## ಅರಹಂತಾದಿಕರಿಂದ ಪ್ರಯೋಜನ ಸಿದ್ಧಿ :-

ಈ ಪ್ರಯೋಜನದ ಸಿದ್ಧಿಯು ಅರಹಂತಾದಿಕರಿಂದ ಆಗುತ್ತದೆ. ಅದು ಹೇಗೆಂಬುದರ ವಿಚಾರ ಮಾಡುತ್ತಾರೆ-

ಆತ್ಮನ ಪರಿಣಾಮಗಳು ಸಂಕ್ಲೇಶ, ವಿಶುದ್ಧ ಮತ್ತು ಶುದ್ಧವೆಂದು ಮೂರು ಪ್ರಕಾರವಾಗಿವೆ. ಅಲ್ಲಿ ತೀವ್ರ ಕಷಾಯರೂಪವು ಸಂಕ್ಲೇಶವಿದ್ದರೆ ಮಂದಕಷಾಯರೂಪವು ವಿಶುದ್ಧವಿದೆ, ಹಾಗೂ ಕಷಾಯರಹಿತವು ಅದು ಶುದ್ಧವಿದೆ. ಅಲ್ಲಿ ವೀತರಾಗ-ವಿಶೇಷ ಜ್ಞಾನರೂಪವಾದ ತಮ್ಮ ಸ್ವಭಾವದ ಘಾತಮಾಡುವಂಥವು ಆ ಜ್ಞಾನಾವರಣ ಮೊದಲಾದ ಘಾತಿ ಕರ್ಮಗಳಿವೆ; ಸಂಕ್ಲೇಶ ಪರಿಣಾಮಗಳಿಂದಂತೂ ಅವುಗಳ ತೀವ್ರ ಬಂಧವಾಗುತ್ತದೆ, ಮತ್ತು ವಿಶುದ್ಧ ಪರಿಣಾಮಗಳಿಂದ ಮಂದ ಬಂಧವಾಗುತ್ತದೆ. ಇನ್ನು ವಿಶುದ್ಧ ಪರಿಣಾಮಗಳು ಪ್ರಬಲವಾಗಿದ್ದರೆ ಪೂರ್ವಕಾಲದಲ್ಲಿ ತೀವ್ರ ಬಂಧವಾಗಿರುವುದನ್ನು ಕೂಡ ಮಂದಮಾಡುತ್ತದೆ. ಶುದ್ಧ ಪರಿಣಾಮಗಳಿಂದ ಬಂಧವಾಗುವುದಿಲ್ಲ, ಕೇವಲ ಅವುಗಳ ನಿರ್ಜರೆಯೇ ಆಗುತ್ತದೆ. ಅರಹಂತ ಮೊದಲಾದವರ ಕುರಿತು ಸ್ತವನಾದಿರೂಪದ ಯಾವ ಭಾವಗಳಾಗುತ್ತವೆ, ಅವು ಕಷಾಯಗಳ ಮಂದತೆಯೊಡನೆಯೇ ಆಗುತ್ತಿರುವುದರಿಂದ ಅವು ವಿಶುದ್ಧ ಪರಿಣಾಮಗಳಿವೆ. ಅಲ್ಲದೆ ಸಮಸ್ತ ಕಷಾಯಗಳು ದೂರವಾಗುವುದರ ಸಾಧನಗಳಿರುವುದರಿಂದ ಶುದ್ಧ ಪರಿಣಾಮದ ಕಾರಣವಿವೆ; ಆದುದರಿಂದ ಇಂಥ ಪರಿಣಾಮಗಳಿಂದ ತಮ್ಮ ಘಾತಮಾಡುವಂಥ ಘಾತಿಕರ್ಮಗಳ ಹೀನತೆಯಾಗುವುದರಿಂದ ಸ್ವಾಭಾವಿಕವಾಗಿಯೇ ವೀತರಾಗ-ವಿಶೇಷಜ್ಞಾನವು ಪ್ರಕಟವಾಗುತ್ತದೆ. ಎಷ್ಟು ಅಂಶಗಳಲ್ಲಿ ಅದರ ಹೀನತೆಯಾಗುವುದು ಅಷ್ಟು ಅಂಶಗಳಲ್ಲಿ ಇದು ಪ್ರಕಟವಾಗುತ್ತದೆ. ಹೀಗೆ ಅರಹಂತ ಮೊದಲಾದವರಿಂದ ತಮ್ಮ ಪ್ರಯೋಜನದ ಸಿದ್ಧಿಯಾಗುತ್ತದೆ.

ಅಥವಾ ಅರಹಂತ ಮೊದಲಾದವರ ಆಕಾರದ ಅವಲೋಕನೆ ಮಾಡುವುದು ಅಥವಾ ಸ್ವರೂಪದ ವಿಚಾರ ಮಾಡುವುದು ಅಥವಾ ವಚನ ಕೇಳುವುದು ಅಥವಾ ನಿಕಟವರ್ತಿಯಾಗುವುದು ಅಥವಾ ಅವರ ಅನುಸಾರ ಪ್ರವರ್ತನೆ ಮಾಡುವುದು ಇತ್ಯಾದಿ ಕಾರ್ಯಗಳು ಕೂಡಲೆ ನಿಮಿತ್ತಭೂತವಾಗಿ ರಾಗಾದಿಗಳನ್ನು ಕಡಿಮೆ ಮಾಡುತ್ತವೆ, ಜೀವ-ಅಜೀವ ಮೊದಲಾದವುಗಳ ವಿಶೇಷ ಜ್ಞಾನವನ್ನು ಉತ್ಪನ್ನ ಮಾಡುತ್ತವೆ. ಆದುದರಿಂದ ಹೀಗೆ ಕೂಡ ಅರಹಂತ ಮೊದಲಾದವರ ಮುಖಾಂತರ ವೀತರಾಗ-ವಿಶೇಷ ಜ್ಞಾನರೂಪವಾದ ಪ್ರಯೋಜನದ ಸಿದ್ಧಿಯಾಗುತ್ತದೆ.

**ಪ್ರಶ್ನೆ :-** ಈ ಪ್ರಕಾರ ಇವರುಗಳಿಂದ ಇಂಥ ಪ್ರಯೋಜನದ ಸಿದ್ಧಿಯಂತೂ ಆಗುತ್ತದೆ, ಆದರೆ ಅವರುಗಳಿಂದ ಇಂದ್ರಿಯಜನಿತ ಸುಖದ ಉತ್ಪತ್ತಿಯಾಗುವಂಥ ಹಾಗೂ ದುಃಖದ ವಿನಾಶವಾಗುವಂಥ ಪ್ರಯೋಜನದ ಸಿದ್ಧಿಯೂ ಆಗುತ್ತದೆಯೋ ಅಥವಾ ಇಲ್ಲವೋ ?

**ಉತ್ತರ :-** ಅರಹಂತ ಮೊದಲಾದವರ ಕುರಿತು ಸ್ತವನಾದಿಗಳ ರೂಪದ ಯಾವ ವಿಶುದ್ಧ ಪರಿಣಾಮಗಳಾಗುತ್ತವೆ. ಅವುಗಳಿಂದ ಅಘಾತಿಕರ್ಮಗಳ ಸಾತಾ ಮೊದಲಾದ ಪುಣ್ಯಪ್ರಕೃತಿಗಳ ಬಂಧವಾಗುತ್ತದೆ. ಮತ್ತು ಒಂದು ವೇಳೆ ಆ ಪರಿಣಾಮಗಳು ತೀವ್ರವಾಗಿದ್ದರೆ ಪೂರ್ವಕಾಲದಲ್ಲಿ ಅಸಾತಾ ಮೊದಲಾದ ಪಾಪ ಪ್ರಕೃತಿಗಳ ಬಂಧವಾಗಿರುವುದನ್ನು ಕೂಡ ಮಂದ ಮಾಡುತ್ತದೆ ಅಥವಾ ನಷ್ಟ ಮಾಡಿ ಪುಣ್ಯಪ್ರಕೃತಿ ರೂಪವಾಗಿ ಪರಿಣಮಿತ ಮಾಡುತ್ತದೆ; ಮತ್ತು ಆ ಪುಣ್ಯದ ಉದಯವಾದ ಮೇಲೆ ತಾವಾಗಿಯೇ ಇಂದ್ರಿಯ ಸುಖಕ್ಕೆ ಕಾರಣಭೂತವಾದ ಸಾಮಗ್ರಿಗಳು ಪ್ರಾಪ್ತವಾಗುತ್ತವೆ ಮತ್ತು ಪಾಪದ ಉದಯವು ದೂರವಾದ ಮೇಲೆ ತಾವಾಗಿಯೇ ದುಃಖಕ್ಕೆ ಕಾರಣಭೂತವಾದ ಸಾಮಗ್ರಿಗಳು ದೂರವಾಗಿ ಬಿಡುತ್ತವೆ. ಹೀಗೆ ಈ ಪ್ರಯೋಜನದ ಸಿದ್ಧಿ ಕೂಡ ಅವರ ಮುಖಾಂತರ ಆಗುತ್ತದೆ. ಅಥವಾ ಜಿನಶಾಸನದ ಭಕ್ತರಾದ ದೇವಾದಿಕರಿದ್ದಾರೆ ಅವರು ಆ ಭಕ್ತ ಪುರುಷನಿಗೆ ಇಂದ್ರಿಯ ಸುಖಕ್ಕೆ ಕಾರಣಭೂತವಾದ ಅನೇಕ ಸಾಮಗ್ರಿಗಳ ಸಂಯೋಗ ಮಾಡಿಸುತ್ತಾರೆ ಮತ್ತು ದುಃಖಕ್ಕೆ ಕಾರಣಭೂತವಾದ ಸಾಮಗ್ರಿಗಳನ್ನು ದೂರ ಮಾಡುತ್ತಾರೆ ಈ ಪ್ರಕಾರ ಕೂಡ ಈ ಪ್ರಯೋಜನದ ಸಿದ್ಧಿಯು ಆ ಅರಹಂತಾದಿಕರುಗಳಿಂದ ಆಗುತ್ತದೆ. ಆದರೆ **ಈ ಪ್ರಯೋಜನದಿಂದ ಸ್ವಲ್ಪ ಕೂಡ ತಮ್ಮ ಹಿತವಾಗುವುದಿಲ್ಲ.** ಏಕೆಂದರೆ ಈ ಆತ್ಮನು ಕಷಾಯ ಭಾವಗಳಿಂದ ಬಾಹ್ಯ ಸಾಮಗ್ರಿಗಳಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸಿ ತಾನೇ ಸುಖ-ದುಃಖದ ಕಲ್ಪನೆ ಮಾಡುತ್ತಾನೆ. ಕಷಾಯವಿಲ್ಲದೆ ಬಾಹ್ಯ ಸಾಮಗ್ರಿಗಳು ಯಾವ ಸುಖ-ದುಃಖದ ದಾತೃಗಳಾಗಿಲ್ಲ ಇನ್ನು ಕಷಾಯವಿದೆ ಅದೆಲ್ಲವು ವ್ಯಾಕುಲಮಯವಿರುವುದರಿಂದ ಇಂದ್ರಿಯ ಜನ್ಯ ಸುಖದ ಇಚ್ಛೆ ಮಾಡುವುದು ಮತ್ತು ದುಃಖದಿಂದ ಭಯಭೀತವಾಗುವುದು ಅದು ಭ್ರಾಂತಿಯಿದೆ.

ಅಲ್ಲದೆ **ಈ ಪ್ರಯೋಜನದ ಉದ್ದೇಶದಿಂದ ಅರಹಂತ ಮೊದಲಾದವರ ಭಕ್ತಿ ಮಾಡುವುದರಿಂದ ಕೂಡ ತೀವ್ರ ಕಷಾಯವಾಗುವ ಕಾರಣ ಪಾಪ ಬಂಧವೇ ಆಗುತ್ತದೆ.** ಆದುದರಿಂದ ತಮಗೆ ಈ ಪ್ರಯೋಜನಗಳಂತೂ ತಾವಾಗಿಯೇ ಸಿದ್ಧವಾಗುತ್ತವೆ.

ಈ ಪ್ರಕಾರ ಅರಹಂತ ಮೊದಲಾದವರು ಪರಮ ಇಷ್ಟರೆಂದು ಮನ್ನಿಸಲು ಯೋಗ್ಯರಿದ್ದಾರೆ.

ಮತ್ತು ಆ ಅರಹಂತ ಮೊದಲಾದವರುಗಳೇ ಪರಮ ಮಂಗಲರಿದ್ದಾರೆ ಅವರಲ್ಲಿ ಭಕ್ತಿಭಾವವಿರುವುದರಿಂದ ಪರಮ ಮಂಗಲವಾಗುತ್ತದೆ. 'ಮಂಗ' ಎಂದರೆ ಸುಖ, ಅದನ್ನು 'ಲಾತಿ' ಎಂದರೆ ಕೊಡುವಂಥದು; ಅಥವಾ 'ಮಂ' ಎಂದರೆ ಪಾಪ, ಅದನ್ನು 'ಗಾಲಯತಿ' ಎಂದರೆ ಗಾಲನ, ದೂರ ಮಾಡುವುದರ ಹೆಸರು ಮಂಗಲವಿದೆ ಈ ಪ್ರಕಾರ ಅವರ ಮುಖಾಂತರ ಪೂರ್ವೋಕ್ತ ಪ್ರಕಾರದಿಂದ ಎರಡೂ ಕಾರ್ಯಗಳ ಸಿದ್ಧಿಯಾಗುತ್ತಿರುವುದರಿಂದ ಅವರಿಗೆ ಪರಮ ಮಂಗಲತನವು ಸಂಭವವಿದೆ.

**ಮಂಗಲಾಚರಣೆ ಮಾಡುವ ಕಾರಣ :-**

**ಪ್ರಶ್ನೆ :-** ಮೊದಲು ಗ್ರಂಥದ ಪ್ರಾರಂಭದಲ್ಲಿ ಮಂಗಲವನ್ನೇ ಮಾಡಿರುವುದರ ಕಾರಣವೇನು ?

**ಉತ್ತರ :-** ಸುಖದಿಂದ ಗ್ರಂಥದ ಸಮಾಪ್ತಿಯಾಗಲಿ, ಪಾಪದ ಕಾರಣವಾಗಿ ಯಾವುದೇ ವಿಘ್ನವಾಗದಿರಲೆಂದು ಇಲ್ಲಿ ಮೊದಲು ಮಂಗಲ ಮಾಡಿದೆ.

**ಪ್ರಶ್ನೆ :-** ಅನ್ಯ ಮತಿಗಳು ಈ ಪ್ರಕಾರ ಮಂಗಲ ಮಾಡುವುದಿಲ್ಲ, ಆದಾಗ್ಯೂ ಅವರ ಗ್ರಂಥಗಳ ಸಮಾಪ್ತಿ ಹಾಗೂ ವಿಘ್ನಗಳಾಗದಿರುವುದನ್ನು ಕಾಣುತ್ತೇವೆ, ಅದರ ಕಾರಣವೇನು ?

**ಉತ್ತರ :-** ಅನ್ಯಮತದವರು ತಾವು ರಚಿಸುವ ಗ್ರಂಥಗಳಲ್ಲಿ ಮೋಹದ ತೀವ್ರ ಉದಯದಿಂದ ಮಿಥ್ಯಾತ್ವದ ಕಷಾಯ ಭಾವಗಳ ಪೋಷಣೆ ಮಾಡುವಂಥ ವಿಪರೀತ ಅರ್ಥಗಳನ್ನಿಡುತ್ತಾರೆ, ಆದುದರಿಂದ ಅವುಗಳ ನಿರ್ವಿಘ್ನ ಸಮಾಪ್ತಿಯಂತೂ ಇಂಥ ಮಂಗಲವನ್ನು ಮಾಡದೆಯೇ ಆಗುವುದು. ಒಂದು ವೇಳೆ ಇಂಥ ಮಂಗಲಗಳಿಂದ ಮೋಹವು ಮಂದವಾಗಿ ಹೋದರೆ ಅಂಥ ವಿಪರೀತ ಕಾರ್ಯವು ಹೇಗಾಗುವುದು ? ಇನ್ನು ನಾವೂ ಗ್ರಂಥ ರಚಿಸುತ್ತೇವೆ. ಅದರಲ್ಲಿ ಮೋಹದ ಮಂದತೆಯ ಕಾರಣವಾಗಿ ವೀತರಾಗ ತತ್ತ್ವಜ್ಞಾನದ ಪೋಷಣೆ ಮಾಡುವಂಥ ಅರ್ಥಗಳನ್ನು ಇಡುವೆವು; ಅದರ ನಿರ್ವಿಘ್ನ ಸಮಾಪ್ತಿಯು ಇಂಥ ಮಂಗಲ ಮಾಡುವುದರಿಂದಲೇ ಆಗುವುದು. ಒಂದು ವೇಳೆ ಇಂಥ ಮಂಗಲ ಮಾಡದಿದ್ದರೆ ಮೋಹದ ತೀವ್ರತೆಯುಳಿಯುವುದು, ಆಗ ಇಂಥ ಉತ್ತಮ ಕಾರ್ಯವು ಹೇಗಾಗುವುದು ?

**ಪ್ರಶ್ನೆ :-** ಹೀಗಂತೂ ಮನ್ನಿಸಬಹುದು; ಆದರೆ ಇಂಥ ಮಂಗಲ ಮಾಡದವರಿಗೆ ಕೂಡ ಸುಖವು ಕಂಡು ಬರುತ್ತದೆ, ಪಾಪದ ಉದಯವು ಕಂಡು ಬರುವುದಿಲ್ಲ ಮತ್ತು ಇಂಥ ಮಂಗಲ ಮಾಡಿದವರಿಗೆ ಕೂಡ ಸುಖವು ಕಂಡು ಬರುವುದಿಲ್ಲ ಪಾಪದ ಉದಯವು ಕಂಡು ಬರುತ್ತದೆ. ಆದುದರಿಂದ ಪೂರ್ವೋಕ್ತ ಮಂಗಲತನವು ಹೇಗೆ ಸಿದ್ಧಿಸುವುದು ?

**ಉತ್ತರ :-** ಜೀವಗಳ ಸಂಕ್ಲೇಶ-ವಿಶುದ್ಧ ಪರಿಣಾಮಗಳು ಅನೇಕ ಜಾತಿಯವಿವೆ. ಅವುಗಳ ಮುಖಾಂತರ ಮೊದಲು ಅನೇಕ ಕಾಲಗಳಲ್ಲಿ ಕಟ್ಟಲ್ಪಟ್ಟ ಕರ್ಮಗಳು ಏಕಕಾಲದಲ್ಲಿ ಉದಯಕ್ಕೆ ಬರುತ್ತವೆ. ಆದುದರಿಂದ ಯಾವ ಪ್ರಕಾರ ಮೊದಲು ಬಹಳಷ್ಟು ಹಣದ ಸಂಗ್ರಹವಿದ್ದವನಿಗೆ ಸಂಪಾದನೆ ಮಾಡದೆಯೂ ಹಣವು ಕಂಡು ಬರುತ್ತದೆ ಮತ್ತು ಋಣವು ಕಂಡು ಬರುವುದಿಲ್ಲ, ಇನ್ನು ಮೊದಲು ಬಹಳಷ್ಟು ಋಣವು ಇದ್ದವನಿಗೆ ಹಣದ ಸಂಪಾದನೆ ಮಾಡಿದರೂ ಕೂಡ ಋಣವು ಕಂಡು ಬರುತ್ತದೆ, ಹಣವು ಕಂಡು ಬರುವುದಿಲ್ಲ; ಆದರೆ ಸಂಪಾದಿಸುವುದಂತೂ

ಹಣದ ಕಾರಣವೇ ಇದೆ, ಋಣದ ಕಾರಣವಿಲ್ಲವೆಂಬುದು ವಿಚಾರ ಮಾಡುವುದರಿಂದ ತಿಳಿದು ಬರುತ್ತದೆ; ಅದೇ ಪ್ರಕಾರ ಪೂರ್ವದಲ್ಲಿ ಬಹಳಷ್ಟು ಪುಣ್ಯದ ಬಂಧವಾದವನಿಗೆ ಇಲ್ಲಿ ಇಂಥ ಮಂಗಲವನ್ನು ಮಾಡದೆಯು ಕೂಡ ಸುಖವು ಕಂಡು ಬರುತ್ತದೆ; ಪಾಪದ ಉದಯವು ಕಂಡು ಬರುವುದಿಲ್ಲ ಮತ್ತು ಪೂರ್ವದಲ್ಲಿ ಬಹಳಷ್ಟು ಪಾಪದ ಬಂಧವಾದವನಿಗೆ ಇಲ್ಲಿ ಇಂಥ ಮಂಗಲ ಮಾಡಿದ ಮೇಲೂ ಸುಖವು ಕಂಡು ಬರುವುದಿಲ್ಲ, ಪಾಪದ ಉದಯವು ಕಂಡು ಬರುತ್ತದೆ; ಆದರೆ ಇಂಥ ಮಂಗಲವಂತೂ ಸುಖದ ಕಾರಣವೇ ಇದೆ, ಪಾಪ ಉದಯದ ಕಾರಣವಿಲ್ಲವೆಂಬುದು ವಿಚಾರ ಮಾಡುವುದರಿಂದ ತಿಳಿದು ಬರುತ್ತದೆ; ಈ ಪ್ರಕಾರ ಪೂರ್ವೋಕ್ತ ಮಂಗಲದ ಮಂಗಲತನವು ಸಿದ್ಧವಾಗುತ್ತದೆ.

**ಪ್ರಶ್ನೆ ಃ-** ಇದನ್ನೂ ಮನ್ನಿಸಿತು; ಆದರೆ ಜಿನಶಾಸನದ ಭಕ್ತರಾದ ದೇವಾದಿಕರು ಆ ಮಂಗಲ ಮಾಡುವವನಿಗೆ ಸಹಾಯ ಮಾಡಲಿಲ್ಲ ಮತ್ತು ಮಂಗಲ ಮಾಡದವನಿಗೆ ದಂಡನೆಯನ್ನೂ ಕೊಡಲಿಲ್ಲ, ಇದರ ಕಾರಣವೇನು ?

**ಉತ್ತರ ಃ-** ಜೀವಗಳಿಗೆ ಸುಖ-ದುಃಖವಾಗುವ ಪ್ರಬಲ ಕಾರಣವೇನೆಂದರೆ ತಮ್ಮ ಕರ್ಮದ ಉದಯವಿದೆ, ಅದರ ಅನುಸಾರವಾಗಿಯೇ ಬಾಹ್ಯ ನಿಮಿತ್ತಗಳು ಸಿದ್ಧವಾಗುತ್ತವೆ, ಆದುದರಿಂದ ಪಾಪದ ಉದಯವಿರುವವನಿಗೆ ಸಹಾಯದ ನಿಮಿತ್ತವೊದಗುವುದಿಲ್ಲ ಮತ್ತು ಪುಣ್ಯದ ಉದಯವಿದ್ದವನಿಗೆ ದಂಡದ ನಿಮಿತ್ತವೊದಗುವುದಿಲ್ಲ.

ಈ ನಿಮಿತ್ತಗಳು ಹೇಗೆ ಕೈಗೂಡುವುದಿಲ್ಲವೆಂಬುದನ್ನು ಹೇಳುತ್ತಾರೆ - ಆ ದೇವಾದಿಕರು ಕ್ಷಯೋಪಶಮ ಜ್ಞಾನದಿಂದ ಎಲ್ಲವನ್ನು ಯುಗಪತ್ ತಿಳಿಯುವ ಸಾಧ್ಯತೆಯಿಲ್ಲ. ಆದುದರಿಂದ ಮಂಗಳ ಮಾಡುವಂಥವನ ಮತ್ತು ಮಾಡದಂಥವನ ತಿಳಿವಳಿಕೆಯು ಯಾವನೋ ದೇವಾದಿಕನಿಗೆ ಯಾವುದೇ ಕಾಲದಲ್ಲಿ ಆಗುತ್ತದೆ. ಆದುದರಿಂದ ಅವರುಗಳ ತಿಳಿವಳಿಕೆಯೇ ಇಲ್ಲದಿದ್ದರೆ ಹೇಗೆ ಸಹಾಯ ಮಾಡುವುದು ಅಥವಾ ದಂಡ ಕೊಡುವುದು ? ಮತ್ತು ತಿಳಿವಳಿಕೆಯಾದಾಗ ತನಗೆ ಅತ್ಯಂತ ಮಂದ ಕಷಾಯವಿದ್ದರೆ ಸಹಾಯಮಾಡುವ ಅಥವಾ ದಂಡ ಕೊಡುವ ಪರಿಣಾಮವೇ ಇರುವುದಿಲ್ಲ, ಇನ್ನು ತೀವ್ರ ಕಷಾಯವಿದ್ದರೆ ಧರ್ಮಾನುರಾಗವಿರುವ ಸಾಧ್ಯತೆಯಿಲ್ಲ, ಮತ್ತು ಮಧ್ಯಮ ಕಷಾಯರೂಪದಿಂದ ಆ ಕಾರ್ಯಮಾಡುವ ಪರಿಣಾಮವಾದಾಗ ತನ್ನ ಶಕ್ತಿ ಇಲ್ಲದಿದ್ದರೆ ಏನು ಮಾಡುವುದು? ಈ ಪ್ರಕಾರ ಸಹಾಯ ಮಾಡುವ ಅಥವಾ ದಂಡವೀಯುವ ನಿಮಿತ್ತವು ಕೈಗೂಡುವುದಿಲ್ಲ.

ಒಂದು ವೇಳೆ ತಮ್ಮಲ್ಲಿ ಶಕ್ತಿಯಿದ್ದರೆ ಮತ್ತು ತಮಗೆ ಧರ್ಮಾನುರಾಗರೂಪವಾದ ಮಧ್ಯಮ ಕಷಾಯದ ಉದಯವಿರುವುದರಿಂದ ಅಂಥವೇ ಪರಿಣಾಮಗಳಾದರೆ ಮತ್ತು ಆ ಸಮಯದಲ್ಲಿ ಅನ್ಯಜೀವದ ಧರ್ಮ-ಅಧರ್ಮರೂಪದ ಕರ್ತವ್ಯವು ತಿಳಿದು ಬಂದರೆ, ಆಗ ಯಾವನೋ ದೇವಾದಿಕನು ಯಾವನೋ ಧರ್ಮಾತ್ಮನಿಗೆ ಸಹಾಯ ಮಾಡುತ್ತಾನೆ. ಅಥವಾ ಯಾವನೋ ಅಧರ್ಮಿಗೆ ದಂಡನೆ ನೀಡುತ್ತಾನೆ. ಈ ಪ್ರಕಾರ ಕಾರ್ಯವಾಗುವುದರದು ಯಾವ ನಿಯಮವಂತೂ ಇಲ್ಲ. ಹೀಗೆ ಸಮಾಧಾನ ಮಾಡಿದೆ.

ಸುಖವಾಗುವ, ದುಃಖವಾಗದಿರುವ, ಸಹಾಯ ಮಾಡಿಸುವ, ದುಃಖಕೊಡಿಸುವ ಇಚ್ಛೆಗಳೆಲ್ಲವು ಕಷಾಯಮಯವಿವೆ; ಅವು ಕೂಡಲೇ ಹಾಗೂ ಭವಿಷ್ಯಕಾಲದಲ್ಲಿ ದುಃಖದಾಯಕವಿವೆಯೆಂದು ತಿಳಿಯಬೇಕು.

ಅದಕ್ಕಾಗಿ ನಾವಂತೂ ಇಂಥ ಇಚ್ಛೆಯನ್ನು ಬಿಟ್ಟುಕೊಟ್ಟು ಒಂದು ವೀತರಾಗ-ವಿಶೇಷ ಜ್ಞಾನವಾಗುವ ಇಚ್ಛೆಯುಳ್ಳವರಾಗಿ ಅರಹಂತ ಮೊದಲಾದವರಿಗೆ ನಮಸ್ಕಾರಾದಿರೂಪದ ಮಂಗಲ ಮಾಡಿದ್ದೇವೆ.

## ಗ್ರಂಥದ ಪ್ರಾಮಾಣಿಕತೆ ಮತ್ತು ಆಗಮ ಪರಂಪರೆ :-

ಹೀಗೆ ಮಂಗಲಾಚರಣೆಯನ್ನು ಮಾಡಿ ಈಗ 'ಮೋಕ್ಷಮಾರ್ಗ ಪ್ರಕಾಶಕ'ವೆಂಬ ಸಾರ್ಥಕ ಹೆಸರುಳ್ಳ ಗ್ರಂಥವನ್ನು ಉದ್ಯೋತಗೊಳಿಸುತ್ತೇವೆ. ಮೊದಲು ಈ ಗ್ರಂಥವು 'ಪ್ರಾಮಾಣಿಕವಿದೆ'ಯೆಂಬ ಪ್ರತೀತಿ ಮಾಡಿಸುವ ಉದ್ದೇಶದಿಂದ ಪೂರ್ವಾನುಸಾರವಾಗಿ ಸ್ವರೂಪದ ನಿರೂಪಣೆ ಮಾಡುತ್ತೇವೆ.

ಅಕಾರ ಮೊದಲಾದ ಅಕ್ಷರಗಳು ಅನಾದಿ ನಿಧನವಿವೆ, ಅವು ಯಾರಿಂದಲೂ ಮಾಡಿದವುಗಳಿಲ್ಲ. ಇವುಗಳ ಆಕಾರ ಬರೆಯುವುದಂತೂ ತಮ್ಮ ಇಚ್ಛೆಗೆ ಅನುಸರಿಸಿ ಅನೇಕ ಪ್ರಕಾರಗಳಿವೆ. ಆದರೆ ಉಚ್ಚಾರದಲ್ಲಿ ಬರುವ ಅಕ್ಷರಗಳಂತೂ ಯಾವತ್ತೂ ಎಲ್ಲ ಕಡೆಗೆ ಒಂದೇ ರೀತಿಯಾಗಿ ಪ್ರವರ್ತಿಸುತ್ತವೆ. ಅದಕ್ಕಾಗಿ 'ಸಿದ್ಧೋ ವರ್ಣ ಸಮಾಮ್ನಾಯಃ' ಎಂದು ಹೇಳಿದೆ ಎಂದರೆ ಆ ಅಕ್ಷರಗಳ ಸಂಪ್ರದಾಯವು ಸ್ವಯಂ ಸಿದ್ಧವಿದೆ, ಮತ್ತು ಆ ಅಕ್ಷರಗಳಿಂದ ಉತ್ಪನ್ನವಾದ ಸತ್ಯಾರ್ಥ ಪ್ರಕಾಶಕ ಪದಗಳ ಸಮೂಹದ ಹೆಸರು ಶ್ರುತವಿದೆ, ಅದು ಕೂಡ ಅನಾದಿ ನಿಧನವಿದೆ. ಹೇಗೆಂದರೆ 'ಜೀವ'ವೆಂಬ ಅನಾದಿ ನಿಧನ ಪದವು ಅದು ಜೀವವನ್ನು ತಿಳಿಸಿಕೊಡುವಂಥದ್ದಿದೆ. ಹೀಗೆ ತಮ್ಮ-ತಮ್ಮ ಸತ್ಯಾರ್ಥ ಪ್ರಕಟಪಡಿಸುವ ಅನೇಕ ಪದಗಳ ಸಮುದಾಯವನ್ನು ಶ್ರುತವೆಂದು ತಿಳಿಯಬೇಕು. ಇನ್ನು ಯಾವ ಪ್ರಕಾರ ಸ್ವಯಂ ಸಿದ್ಧವಿರುವ ಮುತ್ತುಗಳೊಳಗಿಂದ ಒಬ್ಬನು ಕಡಿಮೆ ಮುತ್ತುಗಳನ್ನು ಇನ್ನೊಬ್ಬನು ಹೆಚ್ಚು ಮುತ್ತುಗಳನ್ನು ಒಬ್ಬನು ಒಂದು ಪ್ರಕಾರದಿಂದ ಇನ್ನೊಬ್ಬನು ಇನ್ನೊಂದು ಪ್ರಕಾರದಿಂದ ಹೆಣೆದು ಆಭರಣಗಳನ್ನು ಮಾಡುತ್ತಾರೆ; ಅದೇ ಪ್ರಕಾರ ಸ್ವಯಂ ಸಿದ್ಧವಿರುವ ಪದಗಳೊಳಗಿಂದ ಒಬ್ಬನು ಕಡಿಮೆ ಪದಗಳನ್ನು ಇನ್ನೊಬ್ಬನು ಹೆಚ್ಚು ಪದಗಳನ್ನು ಒಬ್ಬನು ಒಂದು ಪ್ರಕಾರದಿಂದ ಇನ್ನೊಬ್ಬನು ಇನ್ನೊಂದು ಪ್ರಕಾರದಿಂದ ಹೆಣೆದು ಗ್ರಂಥ ರಚನೆ ಮಾಡುತ್ತಾರೆ. ಇಲ್ಲಿ ನಾನು ಕೂಡ ಆ ಸತ್ಯಾರ್ಥಪದಗಳನ್ನು ನನ್ನ ಬುದ್ಧ್ಯಾನುಸಾರವಾಗಿ ಹೆಣೆದು ಗ್ರಂಥ ರಚನೆ ಮಾಡುತ್ತೇನೆ; ನನ್ನ ಬುದ್ಧಿಯಿಂದ ಕಲ್ಪಿಸಿದ ಅಸತ್ಯಾರ್ಥವನ್ನು ಸೂಚಿಸುವ ಪದಗಳನ್ನು ಇದರಲ್ಲಿ ಸೇರಿಸುವುದಿಲ್ಲ. ಅದಕ್ಕಾಗಿ ಈ ಗ್ರಂಥವು ಪ್ರಾಮಾಣಿಕವಿದೆಯೆಂದು ತಿಳಿಯಬೇಕು.

**ಪ್ರಶ್ನೆ :-** ಆ ಪದಗಳ ಪರಂಪರೆಯು ಈ ಗ್ರಂಥದವರೆಗೆ ಹೇಗೆ ಪ್ರವರ್ತಮಾನವಾಗಿದೆ ?

**ಉತ್ತರ :-** ಅನಾದಿಯಿಂದ ತೀರ್ಥಂಕರ ಕೇವಲಿಗಳು ಆಗುತ್ತ ಬಂದಿದ್ದಾರೆ, ಅವರಿಗೆ ಸಕಲದರ ಜ್ಞಾನವಿರುವುದರಿಂದ ಆ ಪದಗಳ ಹಾಗೂ ಅವುಗಳ ಅರ್ಥಗಳ ಜ್ಞಾನ ಕೂಡ ಇರುತ್ತದೆ ಮತ್ತು ಆ ತೀರ್ಥಂಕರ ಕೇವಲಿಗಳ ದಿವ್ಯಧ್ವನಿಯ ಮುಖಾಂತರ ಇತರ ಜೀವಗಳಿಗೆ ಪದಗಳ ಹಾಗೂ ಅರ್ಥಗಳ ಜ್ಞಾನವಾಗುವಂಥ ಉಪದೇಶವಾಗುತ್ತದೆ; ಅದರ ಅನುಸಾರ ಗಣಧರ ದೇವರು ಅಂಗಪ್ರಕೀರ್ಣಕರೂಪದ ಗ್ರಂಥಗಳನ್ನು ರಚಿಸುತ್ತಾರೆ ಮತ್ತು ಅವುಗಳಿಗೆ ಅನುಸರಿಸಿ ಇತರ ಆಚಾರ್ಯ ಮೊದಲಾದವರು ನಾನಾ ಪ್ರಕಾರದ ಗ್ರಂಥಾದಿಗಳ ರಚನೆ ಮಾಡುತ್ತಾರೆ. ಕೆಲವರು ಅವುಗಳ ಅಭ್ಯಾಸ ಮಾಡುತ್ತಾರೆ, ಕೆಲವರು ಅವನ್ನು ಹೇಳುತ್ತಾರೆ, ಕೆಲವರು ಕೇಳುತ್ತಾರೆ, ಈ ಪ್ರಕಾರವಾಗಿ ಪರಂಪರೆಯ ಮಾರ್ಗವು ನಡೆದುಕೊಂಡು ಬಂದಿದೆ.

ಈಗ ಈ ಭರತಕ್ಷೇತ್ರದಲ್ಲಿ ಪ್ರಕೃತ ಅವಸರ್ಪಿಣೀ ಕಾಲವಿದೆ. ಅದರಲ್ಲಿ ಇಪ್ಪತ್ತುನಾಲ್ಕು ತೀರ್ಥಂಕರರಾದರು, ಅವರುಗಳಲ್ಲಿ ಶ್ರೀ ವರ್ಧಮಾನರೆಂಬವರು ಅಂತಿಮ ತೀರ್ಥಂಕರ ದೇವರಾದರು. ಅವರು ಕೇವಲಜ್ಞಾನದಿಂದ ವಿರಾಜಮಾನರಾಗಿ ಜೀವರುಗಳಿಗೆ ದಿವ್ಯಧ್ವನಿಯ ಮುಖಾಂತರ ಉಪದೇಶ ಮಾಡಿದರು. ಅದನ್ನು ಕೇಳುವ ನಿಮಿತ್ತ ಪಡೆದು ಗೌತಮನಾಮದ ಗಣಧರರು ಅಗಮ್ಯವಾದ ಅರ್ಥಗಳನ್ನು ಕೂಡ ತಿಳಿದುಕೊಂಡು ಧರ್ಮಾನುರಾಗದ ವಶದಿಂದ ಅಂಗಪ್ರಕೀರ್ಣಕಗಳ ರಚನೆ ಮಾಡಿದರು. ಮುಂದೆ ವರ್ಧಮಾನ ಸ್ವಾಮಿಗಳಂತೂ ಮುಕ್ತರಾದರು ಅವರ ನಂತರ ಈ ಪಂಚಮಕಾಲದಲ್ಲಿ ೧) ಗೌತಮ, ೨) ಸುಧರ್ಮಾಚಾರ್ಯ, ಮತ್ತು ೩) ಜಂಬೂಸ್ವಾಮಿಗಳೆಂದು ಮೂವರು ಕೇವಲಿಗಳಾದರು. ಅವರುಗಳ ನಂತರ ಕಾಲದೋಷದಿಂದ ಕೇವಲಜ್ಞಾನಿಗಳಾಗುವುದರ ಅಭಾವವಾಯಿತು, ಆದರೆ ಕೆಲವು ಕಾಲದವರೆಗೆ ದ್ವಾದಶಾಂಗಗಳ ಪಾಠಿಯಾದ ಶ್ರುತಕೇವಲಿಗಳಿದ್ದರು, ಮುಂದೆ ಅವರದು ಕೂಡ ಅಭಾವವಾಯಿತು. ಅನಂತರ ಕೆಲವು ಕಾಲದವರೆಗೆ ಕಡಿಮೆ ಅಂಗಗಳ ಪಾಠವುಳ್ಳವರಿದ್ದರು, ನಂತರ ಅವರದೂ ಅಭಾವವಾಯಿತು. ಆಗ ಆಚಾರ್ಯ ಮೊದಲಾದವರ ಮುಖಾಂತರ ಅವರ ಅನುಸಾರವಾಗಿ ರಚಿಸಲಾದ ಗ್ರಂಥಗಳು ಮತ್ತು ಅನುಸರಿಸಿದ ಗ್ರಂಥಗಳ ಅನುಸಾರವಾಗಿ ರಚಿಸಲಾದ ಗ್ರಂಥಗಳ ಪ್ರವೃತ್ತಿಯೇ ಉಳಿಯಿತು, ಅವುಗಳಲ್ಲೂ ಕಾಲದೋಷದಿಂದ ಅದೆಷ್ಟೋ ಗ್ರಂಥಗಳು ದುಷ್ಟರಿಂದ ವಿನಾಶವಾದವು ಮತ್ತು ಅಭ್ಯಾಸಾದಿಗಳಿಲ್ಲದುದರಿಂದ ಮಹಾನ ಗ್ರಂಥಗಳ ವ್ಯುಚ್ಛಿತ್ತಿಯಾಯಿತು. ಇನ್ನು ಅದೆಷ್ಟೋ ಮಹಾಗ್ರಂಥಗಳು ಕಂಡುಬರುತ್ತವೆ, ಆದರೆ ಬುದ್ಧಿಯ ಮಂದತೆಯ ಕಾರಣವಾಗಿ ಅವುಗಳ ಅಭ್ಯಾಸವಾಗುವುದಿಲ್ಲ. ಹೇಗೆಂದರೆ ದಕ್ಷಿಣದಲ್ಲಿ ಗೊಮ್ಮಟಸ್ವಾಮಿಯ ನಿಕಟವರ್ತಿಯಾದ ಮೂಡುಬಿದಿರೆ ನಗರದಲ್ಲಿ ಧವಲ, ಜಯಧವಲ, ಮಹಾಧವಲಗಳು ಕಂಡುಬರುತ್ತವೆ; ಆದರೆ ಅವು ದರ್ಶನಮಾತ್ರವೇ ಇವೆ. ಮತ್ತು ಅದೆಷ್ಟೋ ಗ್ರಂಥಗಳು ತಮ್ಮ ಬುದ್ಧಿಯಿಂದ ಅಭ್ಯಾಸಮಾಡಲು ಯೋಗ್ಯವಾಗಿ ಕಂಡಬರುತ್ತವೆ. ಅವುಗಳಲ್ಲೂ ಕೆಲವು ಗ್ರಂಥಗಳದ್ದೇ ಅಭ್ಯಾಸವಾಗುತ್ತದೆ. ಹೀಗೆ ಈ ನಿಕೃಷ್ಟಕಾಲದಲ್ಲಿ ಉತ್ಕೃಷ್ಟವಾದ ಜೈನಮತದ ಹ್ರಾಸವಂತೂ ಆಯಿತು, ಆದರೆ ಈ ಪರಂಪರೆಯ ಮುಖಾಂತರ ಈಗಲೂ ಕೂಡ ಜೈನಶಾಸ್ತ್ರಗಳಲ್ಲಿ ಸತ್ಯಾರ್ಥವನ್ನು ಪ್ರಕಟಪಡಿಸುವಂಥ ಪದಗಳ ಸದ್ಭಾವವು ಪ್ರವರ್ತಮಾನವಿದೆ.

**ನಮ್ಮ ಮಾತು :-**

ನಾವು ಈ ಕಾಲದಲ್ಲಿ ಈಗ ಇಲ್ಲಿ ಮನುಷ್ಯ ಪರ್ಯಾಯವನ್ನು ಪ್ರಾಪ್ತಮಾಡಿಕೊಂಡಿದ್ದೇವೆ. ಇದರಲ್ಲಿ ನಮ್ಮ ಪೂರ್ವಸಂಸ್ಕಾರದಿಂದ ಹಾಗೂ ಒಳ್ಳೆಯ ಭಾಗ್ಯೋದಯದಿಂದ ಜೈನಶಾಸ್ತ್ರಗಳ ಅಭ್ಯಾಸಮಾಡುವ ಪ್ರಯತ್ನ ನಡೆದಿದೆ, ಅದರಿಂದಾಗಿ ವ್ಯಾಕರಣ, ನ್ಯಾಯ, ಗಣಿತ ಮೊದಲಾದ ಉಪಯುಕ್ತ ಗ್ರಂಥಗಳ ಅಭ್ಯಾಸವನ್ನು ಅವಶ್ಯಕತೆಗನುಸರಿಸಿ ಮಾಡಿ, ಟೀಕಾಸಹಿತವಾಗಿ ಸಮಯಸಾರ, ಪಂಚಾಸ್ತಿಕಾಯ, ಪ್ರವಚನಸಾರ, ನಿಯಮಸಾರ, ಗೊಮ್ಮಟಸಾರ, ಲಬ್ಧಿಸಾರ, ತ್ರಿಲೋಕಸಾರ, ತತ್ತ್ವಾರ್ಥಸೂತ್ರ ಮೊದಲಾದ ಶಾಸ್ತ್ರಗಳು ಮತ್ತು ಕ್ಷಪಣಾಸಾರ, ಪುರುಷಾರ್ಥಸಿದ್ಧ್ಯುಪಾಯ, ಅಷ್ಟಪಾಹುಡ, ಆತ್ಮಾನುಶಾಸನ ಮೊದಲಾದ ಶಾಸ್ತ್ರಗಳು ಮತ್ತು ಶ್ರಾವಕ-ಮುನಿಗಳ ಆಚರಣೆಯನ್ನು ಪ್ರರೂಪಿಸುವ ಅನೇಕ ಶಾಸ್ತ್ರಗಳು ಹಾಗೂ ಒಳ್ಳೆಯ ಕಥೆಗಳಿಂದ ಕೂಡಿದ ಪುರಾಣ ಮೊದಲಾದ ಶಾಸ್ತ್ರಗಳು ಹೀಗೆ ಅನೇಕ ಶಾಸ್ತ್ರಗಳಿದ್ದು, ನಮ್ಮ ಬುದ್ಧಿಗೆ ಅನುಸರಿಸಿ ಅವುಗಳ ಅಭ್ಯಾಸವು ನಡೆಯುತ್ತಿದೆ; ಅದರಿಂದ ನಮಗೆ ಕೂಡ ಒಂದಿಷ್ಟು ಸತ್ಯಾರ್ಥಪದಗಳ ಜ್ಞಾನವಾಗಿದೆ.

ಅಲ್ಲದೆ ಈ ನಿಕೃಷ್ಟ ಸಮಯದಲ್ಲಿ ನಮ್ಮಂಥ ಮಂದಬುದ್ಧಿಯವರಿಗಿಂತಲೂ ಕಡಿಮೆಬುದ್ಧಿಯ ಅಧಿಪತಿಗಳು ಬಹಳಷ್ಟು ಜನರು ಕಂಡು ಬರುತ್ತಾರೆ. ಅವರಿಗೆ ಆ ಪದಗಳ ಅರ್ಥದ ಜ್ಞಾನವಾಗಲೆಂಬ ಉದ್ದೇಶದಿಂದ ದೇಶೀಯ ಭಾಷೆಯಲ್ಲಿ ಗ್ರಂಥ ರಚಿಸಬೇಕೆಂಬ ಇಚ್ಛೆಯು ನಮಗೆ ಧರ್ಮಾನುರಾಗದ ವಶದಿಂದ ಉಂಟಾಗಿರುವುದರಿಂದ ನಾವು ಈ ಗ್ರಂಥವನ್ನು ರಚಿಸುತ್ತಿದ್ದೇವೆ. ಇದರಲ್ಲಿ ಕೂಡ ಅರ್ಥಸಹಿತವಾಗಿ ಅವೇ ಪದಗಳ ಪ್ರಕಟನೆಯಾಗುತ್ತದೆ, ಇಲ್ಲಿರುವ ವಿಶೇಷತೆಯೆಂದರೆ-ಪ್ರಾಕೃತ-ಸಂಸ್ಕೃತ ಶಾಸ್ತ್ರಗಳಲ್ಲಿ ಯಾವ ಪ್ರಕಾರ ಪ್ರಾಕೃತ-ಸಂಸ್ಕೃತ ಪದಗಳನ್ನು ಬರೆಯಲಾಗುತ್ತದೆ, ಅದೇ ಪ್ರಕಾರ ಇಲ್ಲಿ ಅಪಭ್ರಂಶದೊಡನೆ ಅಥವಾ ಯಥಾರ್ಥತೆಯೊಡನೆ ದೇಶಭಾಷಾರೂಪವಾದ ಪದಗಳನ್ನು ಬರೆಯುತ್ತೇವೆ; ಆದರೆ ಅರ್ಥದಲ್ಲಿ ಯಾವುದೇ ವ್ಯಭಿಚಾರವಿಲ್ಲ.

ಈ ಪ್ರಕಾರ ಈ ಗ್ರಂಥದವರೆಗೆ ಆ ಸತ್ಯಾರ್ಥಪದಗಳ ಪರಂಪರೆಯು ಪ್ರವರ್ತಿಸುತ್ತದೆ.

### ಅಸತ್ಯಪದ ರಚನೆಯ ಪ್ರತಿಷೇಧ :-

**ಪ್ರಶ್ನೆ :-** ನಾವು ಈ ಪ್ರಕಾರ ಪರಂಪರೆಯನ್ನಂತೂ ತಿಳಿದುಕೊಂಡೆವು; ಆದರೆ ಈ ಪರಂಪರೆಯಲ್ಲಿ ಸತ್ಯಾರ್ಥ ಪದಗಳ ರಚನೆಯೇ ಆಗುತ್ತ ಬಂದಿದೆ, ಅಸತ್ಯಪದಗಳು ಸೇರಿಲ್ಲವೆಂಬ ಪ್ರತೀತಿಯು ನಮಗೆ ಹೇಗುವುದು?

**ಉತ್ತರ :-** ಅತ್ಯಂತ ತೀವ್ರಕಷಾಯವಾಗದಹೊರತು ಅಸತ್ಯಪದಗಳ ರಚನೆಯಾಗುವುದಿಲ್ಲ; ಏಕೆಂದರೆ ಆ ಅಸತ್ಯರಚನೆಯಿಂದ ಅನೇಕ ಜೀವಗಳ ಪರಂಪರೆಯು ತೀರ ಕೆಡಕಾಗುತ್ತದೆ ಮತ್ತು ತಮಗೆ ಇಂಥ ಮಹಾ ಹಿಂಸೆಯ ಫಲರೂಪದಿಂದ ನರಕ-ನಿಗೋದಗಳಲ್ಲಿ ಗಮನ ಮಾಡಬೇಕಾಗುವುದು. ಇಂಥ ಮಹಾವಿಪರೀತ ಕಾರ್ಯವಂತೂ ಕ್ರೋಧ, ಮಾನ, ಮಾಯೆ, ಲೋಭಗಳು ಅತ್ಯಂತ ತೀವ್ರವಾದಾಗಲೇ ಆಗುತ್ತದೆ; ಆದರೆ ಜೈನಧರ್ಮದಲ್ಲಂತೂ ಇಂಥ ಕಷಾಯವುಳ್ಳವನು ಇರುವುದಿಲ್ಲ.

ಮೊದಲು ಮೂಲ ಉಪದೇಶದಾತರಂತೂ ತೀರ್ಥಂಕರ ಕೇವಲಿಗಳಿದ್ದು, ಅವರು ಸರ್ವಥಾ ಮೋಹದ ನಾಶದಿಂದ ಎಲ್ಲ ಕಷಾಯಗಳಿಂದ ರಹಿತರಾಗೇ ಇದ್ದಾರೆ. ಮತ್ತೆ ಗ್ರಂಥಕರ್ತೃಗಳಾದ ಗಣಧರ ಹಾಗೂ ಆಚಾರ್ಯರುಗಳು ಮೋಹದ ಮಂದೋದಯದಿಂದ ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹಗಳನ್ನು ತ್ಯಾಗಮಾಡಿ ಮಂದ ಕಷಾಯಿಗಳಾಗಿದ್ದಾರೆ; ಅವರಿಗೆ ಆ ಮಂದಕಷಾಯದ ಕಾರಣದಿಂದ ಒಂದಿಷ್ಟು ಶುಭೋಪಯೋಗದ ಪ್ರವೃತ್ತಿ ಕೂಡ ಕಂಡುಬರುತ್ತದೆ ಮತ್ತು ಅದರಿಂದ ಯಾವ ಪ್ರಯೋಜನವೂ ಇಲ್ಲ. ಇನ್ನು ಶ್ರದ್ಧೆಯುಳ್ಳ ಗೃಹಸ್ಥರು ಕೂಡ ಕೆಲ ಗ್ರಂಥಗಳನ್ನು ಬರೆಯುತ್ತಾರೆ ಅವರೂ ತೀವ್ರ ಕಷಾಯವುಳ್ಳವರಿರುವುದಿಲ್ಲ. ಒಂದುವೇಳೆ ಅವರಿಗೆ ತೀವ್ರಕಷಾಯವಿದ್ದರೆ ಯಾವುದೇ ಪ್ರಕಾರದಿಂದ ಎಲ್ಲ ಕಷಾಯಗಳನ್ನು ನಾಶಮಾಡುವಂಥ ಆ ಜಿನಧರ್ಮದಲ್ಲಿ ಅವರಿಗೆ ರುಚಿ ಹೇಗಾಗುವುದು ? ಅಥವಾ ಯಾವನಾದರೂ ಮೋಹದ ಉದಯದಿಂದ ಅನ್ಯಕಾರ್ಯಗಳಿಂದ ಕಷಾಯದ ಪೋಷಣೆ ಮಾಡುತ್ತಿದ್ದರೆ ಮಾಡಲಿ; ಆದರೆ ಜಿನಾಜ್ಞೆಯ ಭಂಗಮಾಡಿ ತಮ್ಮ ಕಷಾಯದ ಪೋಷಣೆ ಮಾಡಿದರೆ ಜೈನತ್ವವೇ ಉಳಿಯುವುದಿಲ್ಲ.

ಈ ಪ್ರಕಾರ ಆ ಅಸತ್ಯಪದಗಳ ರಚನೆಮಾಡಿ ಪರ್ಯಾಯ-ಪರ್ಯಾಯದಲ್ಲಿ ಇತರರಿಗೆ ಹಾಗೂ ತನಗೆ ಕೆಡಕುಮಾಡುವಂಥ ತೀವ್ರಕಷಾಯಿಗಳು ಜಿನಧರ್ಮದಲ್ಲಿ ಯಾರೂ ಇರುವುದಿಲ್ಲ.

**ಪ್ರಶ್ನೆ :-** ಯಾವನೋ ಜೈನಾಭಾಸಿಯು ತೀವ್ರಕಷಾಯಿಯಾಗಿ ಜೈನ ಶಾಸ್ತ್ರಗಳಲ್ಲಿ ಅಸತ್ಯಾರ್ಥಪದಗಳನ್ನು ಸೇರಿಸಿದರೆ ಮತ್ತು ಮುಂದೆ ಅದೇ ಪರಂಪರೆಯು ಉಳಿದುಕೊಂಡರೆ ಏನು ಮಾಡಲಾಗುವುದು ?

**ಉತ್ತರ :-** ಯಾವನೋ ಒಬ್ಬನು ನಿಜವಾದ ಮುತ್ತುಗಳ ಆಭರಣದಲ್ಲಿ ಕೃತಕ ಮುತ್ತುಗಳನ್ನು ಸೇರಿಸಬಹುದು, ಆದರೆ ಕಾಂತಿಯ ಹೊಂದಾಣಿಕೆಯಾಗುವುದಿಲ್ಲ; ಆದುದರಿಂದ ಪರೀಕ್ಷಕನು ಪರೀಕ್ಷೆಮಾಡಿ ಮೋಸಕೂಡ ಹೋಗುವುದಿಲ್ಲ, ಯಾವನೋ ಅನನುಭವಿಯಾಗಿರುವವನೇ ಮುತ್ತಿನ ಹೆಸರಿನಲ್ಲಿ ಮೋಸ ಹೋಗುತ್ತಾನೆ; ಮತ್ತು ಅವನ ಪರಂಪರೆಯೂ ನಡೆಯುವುದಿಲ್ಲ, ಯಾವನೋ ಓರ್ವನು ಶೀಘ್ರದಲ್ಲೇ ಕೃತಕ ಮುತ್ತುಗಳ ನಿಷೇಧ ಮಾಡುತ್ತಾನೆ. ಅದೇ ಪ್ರಕಾರ ಯಾವನಾದರೂ ಸತ್ಯಾರ್ಥಪದಗಳ ಸಮೂಹರೂಪವಾದ ಜೈನಶಾಸ್ತ್ರದಲ್ಲಿ ಅಸತ್ಯಾರ್ಥ ಪದಗಳನ್ನು ಸೇರಿಸಬಹುದು; ಆದರೆ ಜೈನಶಾಸ್ತ್ರಗಳ ಪದಗಳಲ್ಲಂತೂ ಕಷಾಯಗಳನ್ನು ಕೆಡಿಸುವ ಹಾಗೂ ಲೌಕಿಕ ಕಾರ್ಯಗಳನ್ನು ಕುಂದಿಸುವ ಪ್ರಯೋಜನವಿದೆ, ಮತ್ತು ಆ ಪಾಪಿಯು ಅಸತ್ಯಾರ್ಥಪದಗಳನ್ನು ಸೇರಿಸಿದ್ದು ಅವುಗಳಲ್ಲಿ ಕಷಾಯದ ಪೋಷಣೆ ಮಾಡುವ ಹಾಗೂ ಲೌಕಿಕ ಕಾರ್ಯಗಳನ್ನು ಸಾಧಿಸುವ ಪ್ರಯೋಜನವಿದೆ, ಹೀಗೆ ಪ್ರಯೋಜನದ ಹೊಂದಿಕೆಯಾಗುವುದಿಲ್ಲ; ಆದುದರಿಂದ ಜ್ಞಾನಿಯು ಪರೀಕ್ಷೆಮಾಡಿ ಮೋಸಹೋಗುವುದಿಲ್ಲ, ಮೂರ್ಖನಿದ್ದವನೇ ಜೈನಶಾಸ್ತ್ರದ ಹೆಸರಿನಲ್ಲಿ ಮೋಸಹೋಗುತ್ತಾನೆ; ಮತ್ತು ಅವನ ಪರಂಪರೆಯೂ ನಡೆಯುವುದಿಲ್ಲ; ಯಾವನೋ ಓರ್ವನು ಶೀಘ್ರದಲ್ಲೇ ಆ ಅಸತ್ಯಾರ್ಥ ಪದಗಳ ನಿಷೇಧ ಮಾಡುತ್ತಾನೆ.

ಇಂಥ ತೀವ್ರ ಕಷಾಯವುಳ್ಳ ಜೈನಾಭಾಸಿಗಳು ಇಲ್ಲಿ ಈ ನಿಕೃಷ್ಟ ಕಾಲದಲ್ಲಿಯೇ ಇರುತ್ತಾರೆ; ಉತ್ಕೃಷ್ಟ ಕ್ಷೇತ್ರಕಾಲಗಳು ಬಹಳಷ್ಟು ಇದ್ದು ಅವುಗಳಲ್ಲಂತೂ ಇಂಥವರು ಇರುವುದಿಲ್ಲ. ಆದುದರಿಂದ ಜೈನಶಾಸ್ತ್ರಗಳಲ್ಲಿ ಅಸತ್ಯಾರ್ಥಪದಗಳ ಪರಂಪರೆಯು ನಡೆಯುವುದಿಲ್ಲವೆಂದು ನಿಶ್ಚಯಮಾಡಬೇಕು.

**ಪ್ರಶ್ನೆ :-** ಕಷಾಯಗಳಿಂದಂತೂ ಅಸತ್ಯಾರ್ಥ ಸೇರಿಸುವುದಿಲ್ಲ, ಆದರೆ ಗ್ರಂಥ ರಚಿಸುವವರಿಗೆ ಕ್ಷಯೋಪಶಮ ಜ್ಞಾನವಿರುವುದರಿಂದ ಯಾವುದೇ ಅರ್ಥವು ವಿರುದ್ಧವಾಗಿ ಭಾಸವಾದರೆ ಅದರಿಂದ ಅಸತ್ಯಾರ್ಥ ಪದಗಳು ಸೇರಿಕೊಂಡರೆ, ಅದರದಂತೂ ಪರಂಪರೆಯು ನಡೆಯುವುದಲ್ಲವೇ ?

**ಉತ್ತರ :-** ಮೂಲ ಗ್ರಂಥ ಕರ್ತೃಗಳಂತೂ ಗಣಧರದೇವರಿದ್ದಾರೆ, ಅವರು ಸ್ವಯಂ ನಾಲ್ಕು ಜ್ಞಾನಗಳ ಧಾರಕರಿದ್ದು ಪ್ರತ್ಯಕ್ಷ ಕೇವಲಿಯ ದಿವ್ಯಧ್ವನಿಯ ಉಪದೇಶವನ್ನು ಆಲಿಸುತ್ತಾರೆ, ಅದರ ಅತಿಶಯದಿಂದ ಸತ್ಯಾರ್ಥವೇ ಭಾಸವಾಗುತ್ತದೆ. ಮತ್ತು ಅದರ ಅನುಸಾರವಾಗಿಯೇ ಗ್ರಂಥಗಳನ್ನು ರಚಿಸುತ್ತಿರುವುದರಿಂದ ಆ ಗ್ರಂಥಗಳಲ್ಲಿ ಅಸತ್ಯಾರ್ಥ ಪದಗಳು ಹೇಗೆ ಹೆಣೆಯಲ್ಪಡುತ್ತವೆ ? ಮತ್ತು ಆ ಅನ್ಯ ಆಚಾರ್ಯ ಮೊದಲಾದವರು ಗ್ರಂಥ ರಚಿಸುತ್ತಾರೆ ಅವರು ಕೂಡ ಯಥಾಯೋಗ್ಯ ಸಮ್ಯಕ್‌ಜ್ಞಾನದ ಧಾರಕರಿದ್ದು ಅವರು ಮೂಲ ಗ್ರಂಥಗಳ ಪರಂಪರೆಯಿಂದ ಗ್ರಂಥ ರಚಿಸುತ್ತಾರೆ. ಮತ್ತು ಅವರು ತಮಗೆ ಯಾವ ಪದಗಳ ಜ್ಞಾನವಿಲ್ಲ ಅವನ್ನಂತೂ ರಚಿಸುವುದಿಲ್ಲ, ಇನ್ನು ಯಾವ ಪದಗಳ ಜ್ಞಾನವಿದೆ ಅವನ್ನು ಸಮ್ಯಕ್‌ಜ್ಞಾನದ ಪ್ರಮಾಣದಿಂದ ಸರಿಯಾಗಿ

ಹೆಣೆಯುತ್ತಾರೆ. ಆದುದರಿಂದ ಇಂಥ ಸಾವಧಾನತೆಯಲ್ಲಿ ಮೊದಲಂತೂ ಅಸತ್ಯಾರ್ಥ ಪದಗಳು ಹೆಣೆಯಲ್ಪಡುವುದಿಲ್ಲ, ಮತ್ತು ಬಹುಶಃ ತಮಗೆ ಪೂರ್ವಗ್ರಂಥಗಳ ಪದಗಳ ಅರ್ಥವು ವಿರುದ್ಧವಾಗೇ ಭಾಸವಾದರೆ, ಹಾಗೂ ತಮ್ಮ ಪ್ರಮಾಣತೆಯಲ್ಲೂ ಅದೇ ಪ್ರಕಾರ ಬಂದು ಬಿಟ್ಟರೆ ಅದರದಾವ ಹತೋಟಿಯಿಲ್ಲ; ಆದರೆ ಹೀಗೆ ಯಾವನಿಗೋ ಭಾಸವಾಗುತ್ತದೆ ಎಲ್ಲರಿಗಂತೂ ಆಗುವುದಿಲ್ಲ, ಆದುದರಿಂದ ಸತ್ಯಾರ್ಥವು ಸ್ಫುರಿಸಿದವರು ಅದರ ನಿಷೇಧ ಮಾಡಿ ಪರಂಪರೆಯನ್ನು ನಡೆಯಗೊಡುವುದಿಲ್ಲ.

ಅಲ್ಲದೆ ದೇವ-ಗುರು-ಧರ್ಮ ಹಾಗೂ ಜೀವ-ಅಜೀವ ತತ್ತ್ವಗಳನ್ನು ವಿರೋಧವಾಗಿ ತಿಳಿದುಕೊಳ್ಳುವುದರಿಂದ ಜೀವನಿಗೆ ಕೇಡಾಗುವುದೆಂಬ ಶ್ರದ್ಧೆಯುಳ್ಳ ಜೈನನು ವಿರೋಧವಾಗಿ ತಿಳಿದುಕೊಳ್ಳುವುದೇ ಇಲ್ಲ; ಜೈನ ಶಾಸ್ತ್ರಗಳಲ್ಲಿ ಇವುಗಳ ಕಥನವು ಪ್ರಸಿದ್ಧವಿವೆ. ಮತ್ತು ಅವುಗಳನ್ನು ಭ್ರಾಂತಿಯಿಂದ ವಿರೋಧವಾಗಿ ತಿಳಿದುಕೊಂಡರೂ ಜಿನಾಜ್ಞೆಯನ್ನು ಮನ್ನಿಸುವುದರಿಂದ ಜೀವನಿಗೆ ಕೆಡಕಾಗದಂಥ ಕೆಲವು ಸೂಕ್ಷ್ಮ ಅರ್ಥಗಳಿವೆ; ಅವುಗಳೊಳಗಿಂದ ಒಬ್ಬನಿಗೆ ಇನ್ನೊಬ್ಬನು ವಿರೋಧವಾಗಿ ಪ್ರಮಾಣ ಮಾಡತೊಡಗಿಸಿದರು ಕೂಡ ಅವನದು ವಿಶೇಷ ದೋಷವಿಲ್ಲ. ಅದನ್ನೇ ಗೊಮ್ಮಟಸಾರದಲ್ಲಿ ಹೇಳಿದೆ-

**ಸಮ್ಮಾಇಟ್ಠೀ ಜೀವೋ ಉವಇಟ್ಠಂ ಪವಯಣಂ ತು ಸದ್ದಹದಿ !**
**ಸದ್ದಹದಿ ಅಸಭ್ಭಾವಂ ಅಜಾಣಮಾಣೋ ಗುರುನಿಯೋಗಾ ॥ (ಜೀವಕಾಂಡ ಗಾಥೆ 27)**

**ಅರ್ಥ** :- ಸಮ್ಯಗ್ದೃಷ್ಟಿ ಜೀವನು ಉಪದೇಶಿಸಿದ ಸತ್ಯವಚನದ ಶ್ರದ್ಧೆ ಮಾಡುತ್ತಾನೆ ಮತ್ತು ತಿಳಿವಳಿಕೆಯಿಲ್ಲದ ಗುರುವಿನ ಆಜ್ಞೆಯಿಂದ ಅಸತ್ಯದ ಶ್ರದ್ಧೆ ಕೂಡ ಮಾಡುತ್ತಾನೆ - ಎಂದು ಹೇಳಿದೆ.

ಅದರಂತೆ ನಮಗೂ ವಿಶೇಷ ಜ್ಞಾನವಿಲ್ಲ ಮತ್ತು ಜಿನಾಜ್ಞೆಯು ಭಂಗವಾದೀತೆಂಬ ಭಯವು ಅಧಿಕವಾಗಿದೆ, ಆದರೆ ಇದೇ ವಿಚಾರದ ಬಲದಿಂದ ಗ್ರಂಥ ರಚಿಸುವ ಸಾಹಸ ಮಾಡುತ್ತಿದ್ದೇವೆ. ಆದುದರಿಂದ ಈ ಗ್ರಂಥದಲ್ಲಿ ಪೂರ್ವಗ್ರಂಥಗಳಲ್ಲಿನ ವರ್ಣನೆಯಂತೆಯೇ ವರ್ಣನೆ ಮಾಡುವೆವು. ಅಥವಾ ಪೂರ್ವ ಗ್ರಂಥಗಳಲ್ಲಿ ಎಲ್ಲಾದರೂ ಸಾಮಾನ್ಯವಾಗಿ ಗೂಢ ವರ್ಣನೆಯಿದ್ದರೆ ಅದನ್ನು ಇಲ್ಲಿ ವಿಶೇಷ ಸ್ಪಷ್ಟಮಾಡಿ ವರ್ಣನೆ ಮಾಡುವೆವು. ಈ ಪ್ರಕಾರ ವರ್ಣನೆ ಮಾಡುವಲ್ಲಿಯಂತೂ ಅತ್ಯಂತ ಎಚ್ಚರಿಕೆ ವಹಿಸುವೆನು. ಹೀಗೆ ಎಚ್ಚರಿಕೆ ವಹಿಸಿದ ನಂತರವೂ ಎಲ್ಲಿಯಾದರೂ ಅರ್ಥದ ವರ್ಣನೆಯು ವಿರೋಧವಾಗಿ ಹೋದರೆ ವಿಶೇಷ ಬುದ್ಧಿಯುಳ್ಳವರು ಅದನ್ನು ಸರಿಪಡಿಸಿ ಶುದ್ಧ ಮಾಡಬೇಕೆಂಬುದು ನನ್ನ ಪ್ರಾರ್ಥನೆಯಿದೆ.

ಈ ಪ್ರಕಾರ ಶಾಸ್ತ್ರ ರಚಿಸುವ ನಿರ್ಣಯ ಮಾಡಿದ್ದೇವೆ,

ಈಗ ಇಲ್ಲಿ ಎಂಥ ಶಾಸ್ತ್ರಗಳು ಓದಲು-ಕೇಳಲು ಯೋಗ್ಯವಿವೆ ಮತ್ತು ಆ ಶಾಸ್ತ್ರಗಳನ್ನು ಹೇಳುವವರು ಕೇಳುವವರು ಹೇಗಿರಬೇಕೆಂಬುದರ ವರ್ಣನೆ ಮಾಡುತ್ತಾರೆ,

## ಓದಲು-ಕೇಳಲು ಯೋಗ್ಯ ಶಾಸ್ತ್ರಗಳು :-

ಮೋಕ್ಷಮಾರ್ಗವನ್ನು ಪ್ರಕಟಪಡಿಸುವಂಥ ಶಾಸ್ತ್ರಗಳೇ ಓದಲು-ಕೇಳಲು ಯೋಗ್ಯವಾಗಿವೆ; ಏಕೆಂದರೆ ಸಂಸಾರದಲ್ಲಿ ಜೀವಗಳು ನಾನಾ ಪ್ರಕಾರದ ದುಃಖಗಳಿಂದ ಪೀಡಿತವಾಗಿವೆ. ಒಂದು ವೇಳೆ ಶಾಸ್ತ್ರರೂಪದ

ದೀವಿಗೆಯ ಮುಖಾಂತರ ಮೋಕ್ಷಮಾರ್ಗವನ್ನು ಪ್ರಾಪ್ತಮಾಡಿಕೊಂಡರೆ ಆ ಮಾರ್ಗದಲ್ಲಿ ಸ್ವಯಂ ಗಮನ ಮಾಡಿ ಆ ದುಃಖಗಳಿಂದ ಮುಕ್ತವಾಗುವೆವು. ಆ ಮೋಕ್ಷಮಾರ್ಗವು ಒಂದು ವೀತರಾಗ ಭಾವವಿರುವುದರಿಂದ ಹಲವು ಪ್ರಕಾರಗಳಿಂದ ರಾಗ-ದ್ವೇಷ-ಮೋಹಭಾವಗಳ ನಿಷೇಧ ಮಾಡಿ ವೀತರಾಗಭಾವದ ಪ್ರಯೋಜನವನ್ನು ಪ್ರಕಟ ಪಡಿಸಿರುವಂಥ ಶಾಸ್ತ್ರಗಳೇ ಓದಲು-ಕೇಳಲು ಯೋಗ್ಯವಾಗಿವೆ. ಮತ್ತು ಯಾವ ಶಾಸ್ತ್ರಗಳಲ್ಲಿ ಶೃಂಗಾರ-ಭೋಗ-ಕುತೂಹಲ ಮೊದಲಾದವುಗಳ ಪೋಷಣೆ ಮಾಡಿ ರಾಗಭಾವದ, ಹಿಂಸೆ-ಮೊದಲಾದವುಗಳ ಪೋಷಣೆ ಮಾಡಿ ದ್ವೇಷಭಾವದ, ಹಾಗೂ ಅತತ್ತ್ವಶ್ರದ್ಧೆಯ ಪೋಷಣೆ ಮಾಡಿ ಮೋಹಭಾವದ ಪ್ರಯೋಜನವನ್ನು ಪ್ರಕಟಪಡಿಸಿರುವಂಥ ಶಾಸ್ತ್ರಗಳು ಅವು ಶಾಸ್ತ್ರಗಳಲ್ಲ, ಶಸ್ತ್ರಗಳಿವೆ; ಏಕೆಂದರೆ ಯಾವ ರಾಗ-ದ್ವೇಷ-ಮೋಹಭಾವಗಳಿಂದ ಜೀವನು ಅನಾದಿಯಿಂದ ದುಃಖಿಯಾಗಿದ್ದಾನೆ ಅವುಗಳ ವಾಸನೆಯಂತೂ ಜೀವನಿಗೆ ಶಿಕ್ಷಣ ಕೊಡದೆಯೇ ಇವೆ. ಮತ್ತು ಈ ಶಾಸ್ತ್ರಗಳಿಂದ ಅವುಗಳದೇ ಪೋಷಣೆ ಮಾಡಿದರೆ ಒಳ್ಳೆಯದಾಗುವ ಯಾವ ಶಿಕ್ಷಣ ಕೊಟ್ಟಂತಾಯಿತು ? ಜೀವ ಸ್ವಭಾವದ ಘಾತವನ್ನೇ ಮಾಡಿತು. ಆದುದರಿಂದ ಇಂಥ ಶಾಸ್ತ್ರಗಳು ಓದಲು-ಕೇಳಲು ಉಚಿತವಿಲ್ಲ.

ಇಲ್ಲಿ ಯಾವ ಪ್ರಕಾರ ಓದುವುದು-ಕೇಳುವುದು ಹೇಳಿದೆ ಅದೇ ಪ್ರಕಾರ ಜೋಡಿಸುವುದು, ಕಲಿಯುವುದು, ಕಲಿಸುವುದು, ವಿಚಾರ ಮಾಡುವುದು, ಬರೆಯುವುದು ಮೊದಲಾದ ಕಾರ್ಯಗಳನ್ನು ಉಪಲಕ್ಷಣದಿಂದ ತಿಳಿದುಕೊಳ್ಳಬೇಕು.

ಈ ಪ್ರಕಾರ ಪ್ರತ್ಯಕ್ಷ ಅಥವಾ ಪರಂಪರೆಯಿಂದ ವೀತರಾಗಭಾವದ ಪೋಷಣೆ ಮಾಡುವಂಥ ಶಾಸ್ತ್ರಗಳ ಅಭ್ಯಾಸವನ್ನೇ ಮಾಡುವುದು ಯೋಗ್ಯವಿದೆ.

## ವಕ್ತಾರನ ಸ್ವರೂಪ :-

ಮೊದಲಂತೂ ವಕ್ತಾರನು ಜೈನಶ್ರದ್ಧೆಯಲ್ಲಿ ದೃಢನಿರಬೇಕು; ಏಕೆಂದರೆ ತಾನೇ ಅಶ್ರದ್ಧೆಯುಳ್ಳವನಿದ್ದರೆ ಇತರರನ್ನು ಹೇಗೆ ಶ್ರದ್ಧೆಯುಳ್ಳವರನ್ನಾಗಿ ಮಾಡುವನು ? ಶ್ರೋತೃಗಳಂತೂ ತಮಗೆ ತಾವೇ ಹೀನಬುದ್ಧಿಯ ಧಾರಕರಿರುತ್ತಾರೆ, ಅವರನ್ನು ಯಾವುದೇ ಯುಕ್ತಿಯಿಂದ ಹೇಗೆ ಶ್ರದ್ಧಾಳರನ್ನಾಗಿ ಮಾಡುವನು ? ಮತ್ತು ಶ್ರದ್ಧೆಯೇ ಸರ್ವಧರ್ಮದ ಮೂಲವಿದೆ.★ ವಕ್ತಾರನಿಗೆ ವಿದ್ಯಾಭ್ಯಾಸ ಮಾಡುವುದರಿಂದ ಶಾಸ್ತ್ರ ಓದಲು ಯೋಗ್ಯವಾದ ಬುದ್ಧಿಯು ಪ್ರಕಟವಾಗಿರಬೇಕು, ಏಕೆಂದರೆ ಇಂಥ ಶಕ್ತಿಯಿಲ್ಲದೆ ವಕ್ತೃತ್ವದ ಅಧಿಕಾರಿ ಹೇಗಾಗುವನು ? ಅಲ್ಲದೆ ವಕ್ತಾರನು ಸಮ್ಯಕ್‌ಜ್ಞಾನದಿಂದ ಎಲ್ಲ ಪ್ರಕಾರದ ವ್ಯವಹಾರ-ನಿಶ್ಚಯಾದಿರೂಪವಾದ ವ್ಯಾಖ್ಯಾನಗಳ ಅಭಿಪ್ರಾಯವನ್ನು ತಿಳಿದವನಾಗಿರಬೇಕು; ಏಕೆಂದರೆ ಹೀಗಿರದಿದ್ದರೆ ಒಂದು ಪ್ರಯೋಜನದಿಂದ ಕೂಡಿದ ವ್ಯಾಖ್ಯಾನದಲ್ಲಿ ಇನ್ನೊಂದು ಪ್ರಯೋಜನವನ್ನು ಪ್ರಕಟ ಮಾಡಿ ವಿಪರೀತ ಪ್ರವೃತ್ತಿ ಮಾಡಿಸಬಹುದು. ಮತ್ತು ವಕ್ತಾರನಿಗೆ ಜಿನಾಜ್ಞೆಯನ್ನು ಭಂಗ ಮಾಡುವ ಭಯವು ಅಧಿಕವಿರಬೇಕು; ಏಕೆಂದರೆ ಹೀಗಿರದಿದ್ದರೆ ಯಾವುದೇ

★ ದಂಸಣಮೂಲೋಧಮ್ಮೋ - ದರ್ಶನಪಾಹುಡ ಗಾಥೆ-೨

ಅಭಿಪ್ರಾಯದ ವಿಚಾರಮಾಡಿ ಸೂತ್ರವಿರುದ್ಧ ಉಪದೇಶವಿತ್ತು ಜೀವರುಗಳಿಗೆ ಅಹಿತ ಮಾಡುವನು. ಅದನ್ನೇ ಹೇಳಿದ್ದಾರೆ.

**ಬಹು ಗುಣವಿಜ್ಜಾಣಿಲಯೋ ಅಸತ್ತುಭಾಸೀ ತಹಾದಿ ಮುತ್ತವ್ವೋ ।**
**ಜಹ ವರಮಣಿಜುತ್ತೋ ವಿ ಹು ವಿಘ್ನಯರೋ ವಿಸಹರೋ ಲೋಏ ॥**

**ಅರ್ಥ :-** ಸರ್ಪವು ಉತ್ಕೃಷ್ಟಮಣಿ ಸಂಯುಕ್ತವಾಗಿದ್ದರೂ ಅದು ಲೋಕದಲ್ಲಿ ವಿಘ್ನವನ್ನೇ ಉಂಟು ಮಾಡುವಂತೆ ಕ್ಷಮಾದಿಗುಣಗಳಿಂದ ಹಾಗೂ ವ್ಯಾಕರಣ ಮೊದಲಾದ ವಿದ್ಯೆಗಳಿಂದ ಯುಕ್ತನಾಗಿದ್ದರೂ ಉತ್ಸೂತ್ರ ಭಾಷೆಯುಳ್ಳವನಿದ್ದರೆ ಅವನು ತ್ಯಾಗ ಯೋಗ್ಯನೇ ಇದ್ದಾನೆ.

ಅಲ್ಲದೆ ವಕ್ತಾರನಿಗೆ ಶಾಸ್ತ್ರ ಹೇಳಿ ಆಜೀವಿಕೆ ಮೊದಲಾದ ಲೌಕಿಕ ಕಾರ್ಯಗಳನ್ನು ಸಾಧಿಸುವ ಇಚ್ಛೆ ಇರಕೂಡದು; ಏಕೆಂದರೆ ಅವನು ಆಶೆಯುಳ್ಳವನಿದ್ದರೆ ಯಥಾರ್ಥ ಉಪದೇಶ ಕೊಡುವ ಸಾಧ್ಯತೆಯಿಲ್ಲ, ಅವನಿಗಂತೂ ಕೆಲವು ಶ್ರೋತೃಗಳ ಅಭಿಪ್ರಾಯಕ್ಕೆ ಅನುಸರಿಸಿ ವ್ಯಾಖ್ಯಾನ ಮಾಡಿ ತನ್ನ ಪ್ರಯೋಜನ ಸಾಧಿಸುವ ಸಾಧನೆಯೇ ಇರುತ್ತದೆ.ಮತ್ತು ಶ್ರೋತೃಗಳಿಗಿಂತ ವಕ್ತಾರನ ಸ್ಥಾನವು ಉಚ್ಚವಿದ್ದರೂ ವಕ್ತಾರನು ಲೋಭಿಯಾದರೆ ಅವನು ಸ್ವಯಂ ಹೀನನಾಗುತ್ತಾನೆ ಮತ್ತು ಶ್ರೋತೃಗಳು ಉಚ್ಚರಾಗುತ್ತಾರೆ.

ಅಲ್ಲದೆ ವಕ್ತಾರನಿಗೆ ತೀವ್ರ ಕ್ರೋಧ-ಮಾನಗಳಿರಕೂಡದು; ಏಕೆಂದರೆ ತೀವ್ರಕ್ರೋಧಿ-ಮಾನಿಗಳ ನಿಂದೆಯಾಗುವುದು, ಶ್ರೋತೃಗಳು ಅವನಿಗೆ ಹೆದರುವರು, ಆಗ ಅವನಿಂದ ತಮ್ಮ ಹಿತವನ್ನು ಹೇಗೆ ಮಾಡಿಕೊಳ್ಳುವರು? ಅಲ್ಲದೆ ವಕ್ತಾರನು ತಾನೇ ಅನೇಕ ಪ್ರಶ್ನೆಗಳನ್ನು ಉಪಸ್ಥಿತ ಮಾಡಿ ತಾನೇ ಉತ್ತರ ಕೊಡಬೇಕಾಗುವುದು; ಅಥವಾ ಇತರರು ಅನೇಕ ಪ್ರಕಾರದಿಂದ ಅಧಿಕ ಬಾರಿ ಪ್ರಶ್ನೆ ಕೇಳಿದರೂ ಸಿಹಿ ಮಾತುಗಳಿಂದ ಅವರ ಸಂದೇಹವು ದೂರವಾಗುವಂತೆ ಸಮಾಧಾನ ಮಾಡಬೇಕಾಗುವುದು. ಒಂದು ವೇಳೆ ತನ್ನಲ್ಲಿ ಉತ್ತರ ಕೊಡುವ ಸಾಮರ್ಥ್ಯವಿಲ್ಲದಿದ್ದರೆ ನನಗೆ ಇದರ ಜ್ಞಾನವಿಲ್ಲವೆಂದು ಹೇಳಬೇಕು; ಏಕೆಂದರೆ ಹೀಗಿಲ್ಲದಿದ್ದರೆ ಶ್ರೋತೃಗಳ ಸಂದೇಹವು ದೂರವಾಗಲಾರದು, ಆಗ ಅವರ ಕಲ್ಯಾಣ ಹೇಗಾಗುವುದು ? ಮತ್ತು ಜಿನಮತದ ಪ್ರಭಾವನೆಯೂ ಆಗುವ ಸಾಧ್ಯತೆಯಿಲ್ಲ.

ಅಲ್ಲದೆ ವಕ್ತಾರನಿಗೆ ಅನೀತಿರೂಪವಾದ ಲೋಕನಿಂದ್ಯ ಕಾರ್ಯಗಳ ಪ್ರವೃತ್ತಿ ಇರಕೂಡದು; ಏಕೆಂದರೆ ಲೋಕನಿಂದ್ಯ ಕಾರ್ಯಗಳಿಂದ ಅವನು ಹಾಸ್ಯದ ಸ್ಥಾನನಾಗುವನು, ಆಗ ಅವನ ವಚನಗಳನ್ನು ಯಾರು ಪ್ರಮಾಣ ಮಾಡುವರು ? ಅವನು ಜಿನಧರ್ಮಕ್ಕೆ ಲಜ್ಜೆ ತರುತ್ತಾನೆ. ಅದರಂತೆ ವಕ್ತಾರನ ಕುಲವು ಹೀನವಿರಬಾರದು, ಅಂಗವು ಹೀನವಿರಬಾರದು, ಸ್ವರವು ಭಂಗವಾಗಬಾರದು, ಸಿಹಿಮಾತುಗಳಿರಬೇಕು, ಪ್ರಭುತ್ವವಿರಬೇಕು; ಅದರಿಂದ ಲೋಕದಲ್ಲಿ ಮಾನ್ಯನಾಗುವನು. ಒಂದು ವೇಳೆ ಹೀಗಿರದಿದ್ದರೆ ಅವನಿಗೆ ವಕ್ತೃತ್ವದ ಮಹಾನತೆಯು ಶೋಭಿಸುವುದಿಲ್ಲ. ವಕ್ತಾರನು ಇಂಥವನಿರಬೇಕು. ಅವನಲ್ಲಿ ಈ ಗುಣಗಳಂತೂ ಅವಶ್ಯ ಇರಬೇಕಾಗುವುದು.

ಇದೇ ಪ್ರಕಾರ ಆತ್ಮಾನುಶಾಸನದಲ್ಲಿ ಹೇಳಿದೆ,

**ಪ್ರಾಜ್ಞಃ ಪ್ರಾಪ್ತ ಸಮಸ್ತಶಾಸ್ತ್ರಹೃದಯಃ ಪ್ರವ್ಯಕ್ತಲೋಕಸ್ಥಿತಿಃ**
**ಪ್ರಾಸ್ತಾರಃ ಪ್ರತಿಭಾಪರಃ ಪ್ರಶಮವಾನ್ ಪ್ರಾಗೇವ ದೃಷ್ಟೋತ್ತರಃ ।**
**ಪ್ರಾಯಃ ಪ್ರಶ್ನಸಹಃ ಪ್ರಭುಃ ಪರಮನೋಹಾರೀ ಪರಾನಿಂದಯಾ**
**ಬ್ರೂಯಾದ್ಧರ್ಮಕಥಾಂ ಗಣೀ ಗುಣನಿಧಿಃ ಪ್ರಸ್ಪಷ್ಟಮಿಷ್ಟಾಕ್ಷರಃ ॥5॥**

**ಅರ್ಥ ಃ-** ಅವನು ಬುದ್ಧಿವಂತನಿರಬೇಕು, ಅವನಿಗೆ ಸಮಸ್ತ ಶಾಸ್ತ್ರಗಳ ರಹಸ್ಯವು ಪ್ರಾಪ್ತವಾಗಿರಬೇಕು, ಅವನಿಗೆ ಲೋಕ ಮರ್ಯಾದೆಯು ಪ್ರಕಟವಾಗಿರಬೇಕು, ಅವನಿಗೆ ಆಶೆಯು ಅಸ್ತಮಿಸಿ ಹೋಗಿರಬೇಕು, ಅವನು ಕಾಂತಿವಂತನಿರಬೇಕು, ಉಪಶಮಿಯಿರಬೇಕು, ಪ್ರಶ್ನೆ ಮಾಡುವ ಮೊದಲೇ ಉತ್ತರವನ್ನು ತಿಳಿದವನಿರಬೇಕು, ಪ್ರಶ್ನೆಗಳ ಬಾಹುಳ್ಯತೆಯನ್ನು ಸಹಿಸುವಂಥವನಿರಬೇಕು, ಪ್ರಭುವಿರಬೇಕು, ಪರರ ಹಾಗೂ ಪರರ ಮುಖಾಂತರ ತನ್ನ ನಿಂದಾರಹಿತತೆಯಿಂದ ಪರರ ಮನಸ್ಸನ್ನು ಗೆಲ್ಲುವಂಥವನಿರಬೇಕು, ಗುಣನಿಧಾನನಿರಬೇಕು, ಅವನ ಮಾತುಗಳು ಸ್ಪಷ್ಟ ಮಧುರವಾಗಿರಬೇಕು ಇಂಥವನು ಸಭೆಯ ನಾಯಕನಾಗಿ ಧರ್ಮ ಕಥೆಯನ್ನು ಹೇಳಬೇಕು.

ಅದರಂತೆ ವಕ್ತಾರನಿಗೆ ನ್ಯಾಯ-ವ್ಯಾಕರಣ ಮೊದಲಾದ ಹಾಗೂ ದೊಡ್ಡ-ದೊಡ್ಡ ಜೈನ ಶಾಸ್ತ್ರಗಳ ವಿಶೇಷ ಜ್ಞಾನವಿದ್ದರೆ ಅವನಿಗೆ ವಕ್ತಾತನವು ವಿಶೇಷರೂಪದಿಂದ ಶೋಭಿಸುವುದು, ಮತ್ತು ಹೀಗೆಯೇ ಇರಬೇಕು; ಆದರೆ ಅವನಿಗೆ ಅಧ್ಯಾತ್ಮರಸದಿಂದ ಯಥಾರ್ಥವಾಗಿ ತನ್ನ ಸ್ವರೂಪದ ಅನುಭವವಾಗಿರದಿದ್ದರೆ ಅವನು ಜಿನಧರ್ಮದ ಮರ್ಮವನ್ನು ತಿಳಿಯುವುದಿಲ್ಲ, ಪದ್ಧತಿಯಿಂದಲೇ ವಕ್ತಾರನಾಗುತ್ತಾನೆ. ಅಧ್ಯಾತ್ಮರಸಮಯವಾದ ಸತ್ಯ ಜಿನಧರ್ಮದ ಸ್ವರೂಪವನ್ನು ಅವನಿಂದ ಹೇಗೆ ಪ್ರಕಟ ಪಡಿಸಲಾಗುವುದು ? ಆದುದರಿಂದ ಆತ್ಮಜ್ಞಾನಿಯಿದ್ದರೇನೇ ನಿಜವಾದ ವಕ್ತಾತನವಿರುತ್ತದೆ. ಏಕೆಂದರೆ ಆತ್ಮಜ್ಞಾನದಿಂದ ಶೂನ್ಯ ಆಗಮಜ್ಞಾನ, ತತ್ತ್ವಾರ್ಥಶ್ರದ್ಧೆ, ಸಂಯಮಭಾವ- ಇವು ಮೂರೂ ಕಾರ್ಯಕಾರಿಯಿಲ್ಲವೆಂದು ಪ್ರವಚನಸಾರದಲ್ಲಿ ಹೇಳಿದೆ.

ದೋಹಾಪಾಹುಡದಲ್ಲಿ ಹೀಗೆ ಹೇಳಿದೆ,-

**ಪಂಡಿಯ ಪಂಡಿಯ ಪಂಡಿಯ ಕಣ ಛೋಡಿ ವಿ ತುಸ ಕಂಡಿಯಾ**
**ಪಯ ಅತ್ಥಂ ತುಟ್ಠೋಸಿ ಪರಮತ್ಥಂ ಣ ಜಾಣಇ ಮೂಢೋಸಿ ॥**

**ಅರ್ಥ ಃ-** ಓ ಪಂಡಿತನೇ ! ಓ ಪಂಡಿತನೇ !! ಓ ಪಂಡಿತನೇ !!! ನೀನು ಕಾಳನ್ನು ಬಿಟ್ಟುಕೊಟ್ಟು ಹೊಟ್ಟನ್ನೇ ಕುಟ್ಟುತ್ತಲಿರುವೆ; ನೀನು ಅರ್ಥ ಮತ್ತು ಶಬ್ದಗಳಲ್ಲಿ ಸಂತುಷ್ಟನಾಗಿರುವೆ; ನೀನು ಪರಮಾರ್ಥವನ್ನು ತಿಳಿಯದಿರುವುದರಿಂದ ಮೂರ್ಖನೇ ಇರುವೆ-ಎಂಬುದಾಗಿ ಹೇಳಿದೆ.

ಇನ್ನು ಹದಿನಾಲ್ಕು ವಿದ್ಯೆಗಳಲ್ಲಿ ಕೂಡ ಮೊದಲು ಅಧ್ಯಾತ್ಮವಿದ್ಯೆಯೇ ಮುಖ್ಯವೆಂದು ಹೇಳಿದೆ. ಆದುದರಿಂದ ಆ ಅಧ್ಯಾತ್ಮರಸದ ರಸಿಕನಾದ ವಕ್ತಾರನನ್ನು ಜಿನಧರ್ಮದ ರಹಸ್ಯದ ವಕ್ತಾರನೆಂದು ತಿಳಿಯಬೇಕು ಮತ್ತು ಆ ಬುದ್ಧಿ-ಋದ್ಧಿಯ ಧಾರಕರನ್ನು ಹಾಗೂ ಅವಧಿ, ಮನಃಪರ್ಯಯ, ಕೇವಲಜ್ಞಾನದ ಅಧಿಪತಿಗಳಾದ ವಕ್ತಾರರಿದ್ದಾರೆ ಅವರನ್ನು ಮಹಾನ ವಕ್ತಾರರೆಂದು ತಿಳಿಯಬೇಕು. ಹೀಗೆ ವಕ್ತಾರರ ವಿಶೇಷ ಗುಣಗಳನ್ನು ತಿಳಿಯುವುದು.

ಈ ವಿಶೇಷ ಗುಣಗಳ ಧಾರಕರಾದ ವಕ್ತಾರರ ಸಂಯೋಗ ದೊರೆತರಂತೂ ತುಂಬ ಒಳ್ಳೆಯದೇ ಇದೆ, ಮತ್ತು ದೊರಕದಿದ್ದರೆ ಶ್ರದ್ಧಾದಿಗುಣಗಳಿಂದ ಯುಕ್ತರಾದ ವಕ್ತಾರರ ಮುಖದಿಂದಲೇ ಶಾಸ್ತ್ರ ಕೇಳಬೇಕು. ಈ ಪ್ರಕಾರದ ಗುಣಗಳನ್ನು ಧರಿಸಿದ ಮುನಿ ಅಥವಾ ಶ್ರಾವಕರ ಮುಖದಿಂದ ಶಾಸ್ತ್ರಕೇಳುವುದು ಯೋಗ್ಯವಿದೆ, ಮತ್ತು ಪದ್ಧತಿಯ ಬುದ್ಧಿಯಿಂದ ಅಥವಾ ಶಾಸ್ತ್ರ ಕೇಳುವ ಲೋಭದಿಂದ ಶ್ರದ್ಧಾದಿಗುಣಗಳಿಲ್ಲದ ಪಾಪಿ ಪುರುಷರ ಮುಖದಿಂದ ಶಾಸ್ತ್ರ ಕೇಳುವುದು ಉಚಿತವಿಲ್ಲ. ಹೀಗೆ ಹೇಳಿದ್ದಾರೆ,-

**ತಂ ಜಿಣಆಣಪರೇಣ ಯ ಧಮ್ಮೋ ಸೋಯವ್ವ ಸುಗುರುಪಾಸಮ್ಮಿ ।**
**ಅಹ ಉಚಿಓ ಸದ್ಧಾಓ ತಸ್ಸುವಏಸಸ್ಯ ಕಹಗಾಓ ॥**

**ಅರ್ಥ :-** ಆ ಜಿನಾಜ್ಞೆಯನ್ನು ಮನ್ನಿಸುವಲ್ಲಿ ಸಾವಧಾನನಿರುವವನಿಗೆ ನಿರ್ಗ್ರಂಥ ಸುಗುರುಗಳ ಹತ್ತಿರವೇ ಧರ್ಮ ಕೇಳುವುದು ಯೋಗ್ಯವಿದೆ, ಅಥವಾ ಆ ಗುರುಗಳ ಉಪದೇಶವನ್ನೇ ಹೇಳುವಂಥ ಉಚಿತ ಶ್ರದ್ಧೆಯುಳ್ಳ ಶ್ರಾವಕನಿಂದ ಧರ್ಮ ಕೇಳುವುದು ಯೋಗ್ಯವಿದೆ.

ಹೀಗೆ ಆ ವಕ್ತಾರನು ಧರ್ಮಬುದ್ಧಿಯಿಂದ ಉಪದೇಶ ಕೊಡುತ್ತಿದ್ದರೆ ಅವನೇ ತನ್ನ ಹಾಗೂ ಇತರ ಜೀವಗಳ ಕಲ್ಯಾಣ ಮಾಡುವನು, ಮತ್ತು ಕಷಾಯ ಬುದ್ಧಿಯಿಂದ ಉಪದೇಶ ಕೊಡುವವನು ತನ್ನ ಹಾಗೂ ಇತರ ಜೀವಗಳ ಅಕಲ್ಯಾಣ ಮಾಡುತ್ತಾನೆಂದು ತಿಳಿಯಬೇಕು.

ಈ ಪ್ರಕಾರ ವಕ್ತಾರನ ಸ್ವರೂಪ ಹೇಳಿತು.

## ಶ್ರೋತಾರನ ಸ್ವರೂಪ :

ಒಳ್ಳೆಯ ಭವಿತವ್ಯವಿರುವ ಜೀವನಿಗೆ ನಾನು ಯಾರು ? ನನ್ನ ಸ್ವರೂಪ ಹೇಗಿದೆ ? ಈ ಚಾರಿತ್ರವು ಹೇಗೆ ಸಂಭವಿಸುತ್ತಿದೆ ? ಈ ನನ್ನ ಭಾವಗಳ ಫಲವೇನಾಗುವುದು ? ಜೀವನು ದುಃಖಿಯಾಗುತ್ತಿದ್ದಾನೆ ಆ ದುಃಖ ದೂರವಾಗುವ ಉಪಾಯವೇನು ? - ಎಂಬ ವಿಚಾರ ಬರುತ್ತವೆ. ಮತ್ತು ನನಗೆ ಇಷ್ಟು ಮಾತುಗಳ ನಿರ್ಣಯ ಮಾಡಿ ಸ್ವಲ್ಪ ನನಗೆ ಹಿತವಾಗುವುದನ್ನು ಮಾಡಬೇಕಾಗುವುದೆಂಬ ವಿಚಾರದಿಂದ ಉದ್ಯಮಶೀಲನಾಗುವನು. ಮತ್ತು ಈ ಕಾರ್ಯದ ಸಿದ್ಧಿಯು ಶಾಸ್ತ್ರಕೇಳುವುದರಿಂದ ಆಗುತ್ತದೆಯೆಂದು ತಿಳಿದುಕೊಂಡು ಅತ್ಯಂತ ಪ್ರೀತಿಯಿಂದ ಶಾಸ್ತ್ರ ಕೇಳುತ್ತಾನೆ; ಏನಾದರೂ ಕೇಳಬೇಕೆನಿಸಿದರೆ ಕೇಳುತ್ತಾನೆ; ಮತ್ತು ಗುರುಗಳು ಹೇಳಿದ ಅರ್ಥವನ್ನು ತನ್ನ ಅಂತರಂಗದಲ್ಲಿ ಮತ್ತೆ ಮತ್ತೆ ವಿಚಾರಿಸುತ್ತಾನೆ, ತನ್ನ ವಿಚಾರದಿಂದ ಸತ್ಯಾರ್ಥದ ನಿರ್ಣಯ ಮಾಡಿ ಕರ್ತವ್ಯದ ಉದ್ಯಮಿಯಾಗುತ್ತಾನೆ. ಇದಂತೂ ನವೀನ ಶ್ರೋತೃವಿನ ಸ್ವರೂಪವಿದೆಯೆಂದು ತಿಳಿಯುವುದು.

ಅಲ್ಲದೆ ಯಾರು ಜೈನಧರ್ಮದ ಗಾಢಶ್ರದ್ಧೆಯುಳ್ಳವರಿದ್ದಾರೆ ಮತ್ತು ನಾನಾ ಶಾಸ್ತ್ರಗಳನ್ನು ಕೇಳುವುದರಿಂದ ಅವರ ಬುದ್ಧಿಯು ನಿರ್ಮಲವಾಗಿದೆ ಹಾಗೂ ವ್ಯವಹಾರ-ನಿಶ್ಚಯಾದಿಗಳ ಸ್ವರೂಪವನ್ನು ಚನ್ನಾಗಿ ತಿಳಿದುಕೊಂಡು ಕೇಳಿದ ಅರ್ಥವನ್ನು ಯಥಾವತ್ ನಿಶ್ಚಯವೆಂದು ತಿಳಿದುಕೊಂಡು ಅವಧಾರಣ ಮಾಡುತ್ತಾರೆ, ಮತ್ತು ಪ್ರಶ್ನೆ ಉಪಸ್ಥಿತವಾದಾಗ ಅತ್ಯಂತ ವಿನಯವುಳ್ಳವರಾಗಿ ಪ್ರಶ್ನೆ ಕೇಳುತ್ತಾರೆ ಅಥವಾ ಪರಸ್ಪರರಲ್ಲಿ ಅನೇಕ ಪ್ರಶ್ನೋತ್ತರ ಮಾಡಿ ವಸ್ತುವಿನ ನಿರ್ಣಯ ಮಾಡುತ್ತಾರೆ; ಶಾಸ್ತ್ರಾಭ್ಯಾಸದಲ್ಲಿ ತುಂಬ ಆಸಕ್ತರಿರುತ್ತಾರೆ; ಧರ್ಮ ಬುದ್ಧಿಯಿಂದ ನಿಂದ್ಯ ಕಾರ್ಯಗಳನ್ನು ತ್ಯಾಗ ಮಾಡಿದ್ದಾರೆ. ಇಂಥವರು ಆ ಶಾಸ್ತ್ರಗಳ ಶ್ರೋತಾರರಿರಬೇಕಾಗುವುದು.

ಒಂದು ವೇಳೆ ಅವನಿಗೆ ಸ್ವಲ್ಪ ವ್ಯಾಕರಣ-ನ್ಯಾಯಾದಿಗಳ ಹಾಗೂ ದೊಡ್ಡ ಜೈನ ಶಾಸ್ತ್ರಗಳ ಜ್ಞಾನವಿದ್ದರೆ ಶ್ರೋತೃತ್ವವು ವಿಶೇಷ ಶೋಭೆ ಕೊಡುತ್ತದೆ. ಶ್ರೋತೃವು ಇಂಥವನಿದ್ದರೂ ಅವನಿಗೆ ಆತ್ಮಜ್ಞಾನವು ಆಗಿರದಿದ್ದರೆ ಅವನು ಉಪದೇಶದ ಮರ್ಮವನ್ನು ತಿಳಿಯುವ ಸಾಧ್ಯತೆಯಿಲ್ಲ; ಆದುದರಿಂದ ಆತ್ಮಜ್ಞಾನದ ಮುಖಾಂತರ ಸ್ವರೂಪದ ಆಸ್ವಾದಿಯಾದವನು ಜಿನಧರ್ಮದ ರಹಸ್ಯವನ್ನರಿತ ಶ್ರೋತೃನಿದ್ದಾನೆ. ಮತ್ತು ಅವನು ಅತಿಶಯವಾದ ಬುದ್ಧಿಯಿಂದ ಅಥವಾ ಅವಧಿ- ಮನಃಪರ್ಯಯದಿಂದ ಸಂಯುಕ್ತನಿದ್ದರೆ ಅವನನ್ನು ಮಹಾನ ಶ್ರೋತೃವೆಂದು ತಿಳಿಯಬೇಕು. ಹೀಗೆ ಶ್ರೋತಾರರ ವಿಶೇಷ ಗುಣಗಳಿವೆ. ಜಿನ ಶಾಸ್ತ್ರಗಳ ಶ್ರೋತಾರರು ಹೀಗಿರಬೇಕಾಗುವುದು.

ಇನ್ನು ಶಾಸ್ತ್ರ ಕೇಳುವುದರಿಂದ ನಮಗೆ ಒಳ್ಳೆಯದಾಗುತ್ತದೆಯೆಂಬ ಬುದ್ಧಿಯಿಂದ ಶಾಸ್ತ್ರ ಕೇಳುವವರು ಜ್ಞಾನದ ಮಂದತೆಯಿಂದ ವಿಶೇಷ ತಿಳಿದುಕೊಳ್ಳುವುದಿಲ್ಲ ಅವರಿಗೆ ಪುಣ್ಯ ಬಂಧವಾಗುತ್ತದೆ; ಆದರೆ ವಿಶೇಷ ಕಾರ್ಯಸಿದ್ಧಿಯಾಗುವುದಿಲ್ಲ. ಮತ್ತೆ ಕೆಲವರು ಕುಲ ಪ್ರವೃತ್ತಿಯಿಂದ ಅಥವಾ ಪದ್ಧತಿಯ-ಬುದ್ಧಿಯಿಂದ ಅಥವಾ ಸಹಜವಾಗಿ ಯೋಗವು ಪ್ರಾಪ್ತವಾಗಿದೆಯೆಂದು ಶಾಸ್ತ್ರ ಕೇಳುತ್ತಾರೆ ಅಥವಾ ಶಾಸ್ತ್ರವನ್ನೇನೋ ಕೇಳುತ್ತಾರೆ ಆದರೆ ಏನನ್ನೂ ಗ್ರಹಣ ಮಾಡುವುದಿಲ್ಲ; ಅವರ ಪರಿಣಾಮಕ್ಕೆ ಅನುಸರಿಸಿ ಒಮ್ಮೆ ಪುಣ್ಯ ಬಂಧವಾಗುತ್ತದೆ, ಒಮ್ಮೆ ಪಾಪಬಂಧವಾಗುತ್ತದೆ, ಮತ್ತು ಯಾರು ಮದ-ಮತ್ಸರ ಭಾವದಿಂದ ಶಾಸ್ತ್ರ ಕೇಳುತ್ತಾರೆ ಅಥವಾ ವಿವಾದ ಮಾಡುವುದೇ ಅವರ ಅಭಿಪ್ರಾಯವಿದೆ. ಹಾಗೂ ಯಾರು ದೊಡ್ಡಸ್ತಿಕೆಯ ಉದ್ದೇಶದಿಂದ ಅಥವಾ ಯಾವುದೇ ಲೋಭಾದಿಗಳ ಪ್ರಯೋಜನದ ಉದ್ದೇಶದಿಂದ ಶಾಸ್ತ್ರ ಕೇಳುತ್ತಾರೆ ಅವರು ಶಾಸ್ತ್ರವನ್ನೇನೋ ಕೇಳುತ್ತಾರೆ ಆದರೆ ಅದು ರುಚಿಸುವುದಿಲ್ಲ-ಇಂಥ ಶ್ರೋತೃಗಳಿಗೆಲ್ಲ ಕೇವಲ ಪಾಪಬಂಧವೇ ಆಗುತ್ತದೆ.

ಹೀಗೆ ಶಾಸ್ತ್ರದ ಹಾಗೂ ವಕ್ತಾರ-ಶ್ರೋತಾರರ ಸ್ವರೂಪ ಹೇಳಿತು. ಆದುದರಿಂದ ಉಚಿತ ಶಾಸ್ತ್ರವನ್ನು ಉಚಿತ ವಕ್ತಾರನಾಗಿ ಓದುವುದು, ಉಚಿತ ಶ್ರೋತೃವಾಗಿ ಕೇಳುವುದು ಯೋಗ್ಯವಿದೆ.

**ಮೋಕ್ಷಮಾರ್ಗ ಪ್ರಕಾಶಕ ಗ್ರಂಥದ ಸಾರ್ಥಕತೆ ಃ-**

ಈಗ ಈ ಮೋಕ್ಷಮಾರ್ಗಪ್ರಕಾಶಕ ನಾಮದ ಶಾಸ್ತ್ರರಚಿಸುತ್ತೇವೆ ಅದರ ಸಾರ್ಥಕತೆಯನ್ನು ತಿಳಿಸುತ್ತೇವೆ,-

ಈ ಸಂಸಾರರೂಪದ ಗೊಂಡಾರಣ್ಯದಲ್ಲಿ ಸಮಸ್ತ ಜೀವಗಳಿದ್ದು ಅವು ಕರ್ಮನಿಮಿತ್ತದಿಂದ ಉತ್ಪನ್ನವಾದ ನಾನಾ ಪ್ರಕಾರದ ದುಃಖದಿಂದ ಪೀಡಿತವಾಗುತ್ತಲಿವೆ; ಮತ್ತು ಅಲ್ಲಿ ಮಿಥ್ಯಾತ್ವವೆಂಬ ಗಾಢಾಂಧಕಾರವು ವ್ಯಾಪಿಸಿಕೊಳ್ಳುತ್ತಿರುವ ಕಾರಣ ಅಲ್ಲಿಂದ ಬಿಡುಗಡೆಹೊಂದುವ ಮಾರ್ಗವನ್ನು ಪಡೆಯದೆ, ಅಲ್ಲಿಯೇ ಚಡಪಡಿಸುತ್ತ-ಚಡಪಡಿಸುತ್ತ ದುಃಖವನ್ನು ಸಹಿಸುತ್ತಲಿವೆ.

ಇಂಥ ಜೀವಗಳ ಕಲ್ಯಾಣವಾಗುವ ಕಾರಣಭೂತವಾಗಿ ತೀರ್ಥಂಕರ ಕೇವಲೀ ಭಗವಾನರೂಪ ಭಾಸ್ಕರನ ಉದಯವಾಗುವುದು; ಅವರ ದಿವ್ಯಧ್ವನಿರೂಪದ ಕಿರಣಗಳಿಂದ ಅಲ್ಲಿಂದ ಬಿಡುಗಡೆಯಾಗುವ ಮಾರ್ಗವು ಪ್ರಕಾಶಿತವಾಯಿತು, ಯಾವ ಪ್ರಕಾರ ಭಾಸ್ಕರನಿಗೆ ನಾನು ಮಾರ್ಗಪ್ರಕಾಶಿತ ಪಡಿಸುವೆನೆಂಬ ಇಚ್ಛೆಯಿರುವುದಿಲ್ಲ, ಆದರೆ ಸ್ವಾಭಾವಿಕವಾಗಿಯೇ ಅವನ ಕಿರಣಗಳು ಹರಡಿ ಅವುಗಳಿಂದ ಮಾರ್ಗವು ಪ್ರಕಾಶಿತವಾಗುತ್ತದೆ; ಅದೇ ಪ್ರಕಾರ ಕೇವಲಿಗಳು ವೀತರಾಗರಿರುವುದರಿಂದ ಅವರಿಗೆ ನಾವು ಮೋಕ್ಷಮಾರ್ಗವನ್ನು ಪ್ರಕಟಮಾಡುತ್ತೇವೆಂಬ ಇಚ್ಛೆಯಿರುವುದಿಲ್ಲ, ಆದರೆ ಸ್ವಾಭಾವಿಕವಾಗಿಯೇ ಅಂಥವೇ ಅಘಾತಿಕರ್ಮಗಳ ಉದಯದಿಂದ ಅವರ

ಶರೀರರೂಪದ ಪುದ್ಗಲವು ದಿವ್ಯಧ್ವನಿರೂಪದಿಂದ ಪರಿಣಮಿಸುತ್ತದೆ, ಅದರಿಂದ ಮೋಕ್ಷಮಾರ್ಗವು ಪ್ರಕಾಶಿತವಾಗುತ್ತದೆ.

ಕೇವಲಜ್ಞಾನರೂಪದ ಸೂರ್ಯನು ಅಸ್ತಂಗತನಾದಾಗ ಜೀವರುಗಳು ಮೋಕ್ಷ ಮಾರ್ಗವನ್ನು ಹೇಗೆ ಪ್ರಾಪ್ತ ಮಾಡಿಕೊಳ್ಳುವರೆಂಬ ವಿಚಾರವು ಗಣಧರದೇವರಿಗೆ ಬರುತ್ತದೆ ಮತ್ತು ಮೋಕ್ಷಮಾರ್ಗವನ್ನು ಪ್ರಾಪ್ತಮಾಡಿಕೊಂಡಲ್ಲದೆ ಜೀವರುಗಳು ದುಃಖ ಸಹನೆ ಮಾಡಬೇಕಾಗುವುದೆಂಬ ಕರುಣಾಬುದ್ಧಿಯಿಂದ ಅಂಗ ಪ್ರಕೀರ್ಣಕಾದಿ ರೂಪದ ಗ್ರಂಥಗಳೇ ಮಹಾನ ದೀವಿಗೆಗಳೆಂದು ಅವುಗಳನ್ನು ಉದ್ಯೋತಗೊಳಿಸಿದರು.

ಮತ್ತೆ ಯಾವ ಪ್ರಕಾರ ದೀವಿಗೆಯಿಂದ ದೀವಿಗೆಯನ್ನು ಉರಿಸುವುದರಿಂದ ದೀವಿಗೆಗಳ ಪರಂಪರೆಯು ಪ್ರವರ್ತಿಸುತ್ತದೆ ಅದೇ ಪ್ರಕಾರ ಆಚಾರ್ಯ ಮೊದಲಾದವರು ಆ ಗ್ರಂಥಗಳಿಂದ ಬೇರೆ ಗ್ರಂಥಗಳ ರಚನೆ ಮಾಡಿದರು ಮತ್ತು ಪುನಃ ಅವುಗಳ ಮೇಲಿಂದ ಯಾರೋ ಬೇರೆ ಗ್ರಂಥ ರಚಿಸಿದರು. ಈ ಪ್ರಕಾರ ಗ್ರಂಥಗಳಾಗುವುದರಿಂದ ಗ್ರಂಥಗಳ ಪರಂಪರೆಯು ಪ್ರವರ್ತಿಸುತ್ತದೆ. ನಾನು ಕೂಡ ಪೂರ್ವಗ್ರಂಥಗಳಿಂದ ಈ ಗ್ರಂಥವನ್ನು ರಚಿಸುತ್ತೇನೆ.

ಮತ್ತೆ ಯಾವ ಪ್ರಕಾರ ಸೂರ್ಯ ಹಾಗೂ ಸಮಸ್ತ ದೀವಿಗೆಗಳು ಮಾರ್ಗವನ್ನು ಏಕರೂಪವಾಗಿಯೇ ಪ್ರಕಾಶಿತ ಮಾಡುತ್ತವೆ, ಅದೇ ಪ್ರಕಾರ ದಿವ್ಯಧ್ವನಿ ಹಾಗೂ ಸಮಸ್ತ ಗ್ರಂಥಗಳು ಮೋಕ್ಷಮಾರ್ಗವನ್ನು ಏಕರೂಪವಾಗಿಯೇ ಪ್ರಕಾಶಿತ ಮಾಡುತ್ತವೆ; ಅಂತೆ ಈ ಗ್ರಂಥವೂ ಕೂಡ ಮೋಕ್ಷಮಾರ್ಗವನ್ನು ಪ್ರಕಾಶಿತ ಮಾಡುತ್ತದೆ. ಈ ಪ್ರಕಾರ ಪ್ರಕಾಶಿತಗೊಳಿಸಿದ ಮೇಲೂ ನೇತ್ರರಹಿತ ಅಥವಾ ದೋಷಯುಕ್ತ ನೇತ್ರಗಳುಳ್ಳ ಪುರುಷರಿಗೆ ಮಾರ್ಗವು ಗೋಚರಿಸುವುದಿಲ್ಲವೆಂದರೆ ದೀವಿಗೆಯದಂತೂ ಮಾರ್ಗ ಪ್ರಕಾಶಕತನದ ಅಭಾವವಾಗಿಲ್ಲ; ಅದೇ ಪ್ರಕಾರ ಪ್ರಕಟ ಮಾಡಿದ ನಂತರವೂ ಆ ಮನ ಜ್ಞಾನ ರಹಿತರಿಗೆ ಅಥವಾ ಮಿಥ್ಯಾತ್ವಾದಿ ವಿಕಾರ ಸಹಿತರಿಗೆ ಮೋಕ್ಷಮಾರ್ಗವು ಗೋಚರಿಸುವುದಿಲ್ಲವೆಂದರೆ ಗ್ರಂಥದ್ದಂತೂ ಮೋಕ್ಷಮಾರ್ಗಪ್ರಕಾಶಕತನದ ಅಭಾವವಾಗಿಲ್ಲ.

ಹೀಗೆ ಈ ಗ್ರಂಥಕ್ಕೆ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರು ಸಾರ್ಥಕವಾಗಿದೆಯೆಂದು ತಿಳಿಯಬೇಕು.

**ಪ್ರಶ್ನೆ ಃ-** ಮೋಕ್ಷಮಾರ್ಗವನ್ನು ಪ್ರಕಾಶಿಸುವಂಥ ಗ್ರಂಥಗಳು ಈ ಮೊದಲೇ ಇವೆ, ತಾವು ನವೀನ ಗ್ರಂಥವನ್ನು ಏತಕ್ಕಾಗಿ ರಚಿಸುತ್ತಿರುವಿರಿ ?

**ಉತ್ತರ ಃ-** ಯಾವ ಪ್ರಕಾರ ದೊಡ್ಡ ದೀವಿಗೆಗಳ ಉದ್ಯೋತವಂತೂ ಹೆಚ್ಚು ಎಣ್ಣೆ ಮೊದಲಾದವುಗಳ ಸಾಧನದಿಂದಿರುತ್ತದೆ, ಹೆಚ್ಚು ಎಣ್ಣೆ ಮೊದಲಾದವುಗಳ ಶಕ್ತಿಯಿಲ್ಲದವರಿಗೆ ಚಿಕ್ಕ ದೀವಿಗೆ ಉರಿಸಿದರೆ ಅವರು ಅದನ್ನು ಸಾಧನ ಮಾಡಿಕೊಂಡು ಅದರ ಉದ್ಯೋತದಿಂದ ತಮ್ಮ ಕಾರ್ಯ ಮಾಡುವರು ಅದೇ ಪ್ರಕಾರ ದೊಡ್ಡ ಗ್ರಂಥಗಳ ಪ್ರಕಾಶವಂತೂ ಹೆಚ್ಚು ಜ್ಞಾನಾದಿಗಳ ಸಾಧನದ ಮೇಲಿರುತ್ತದೆ, ಅಧಿಕ ಜ್ಞಾನಾದಿಗಳ ಶಕ್ತಿಯಿಲ್ಲದವರಿಗೆ ಚಿಕ್ಕ ಗ್ರಂಥವನ್ನು ರಚಿಸಿಕೊಟ್ಟರೆ ಅವರು ಅದನ್ನು ಸಾಧನ ಮಾಡಿಕೊಂಡು ಅದರ ಪ್ರಕಾಶದಿಂದ ತಮ್ಮ ಕಾರ್ಯ ಮಾಡುವರು; ಅದಕ್ಕಾಗಿ ಈ ಕಿರಿದಾದ ಸುಲಭ ಗ್ರಂಥವನ್ನು ರಚಿಸುತ್ತಿದ್ದೇವೆ.

ಇಲ್ಲಿ ನಾನು ಈ ಗ್ರಂಥ ರಚಿಸುತ್ತಿರುವುದು ಅದೇನು ಕಷಾಯಗಳಿಂದ ನನ್ನ ಮಾನ ವೃದ್ಧಿಯ ಸಲುವಾಗಿ ಅಥವಾ ಲೋಭ ಸಾಧನೆಯ ಸಲುವಾಗಿ ಅಥವಾ ಯಶಸ್ಸಿನ ಪ್ರಾಪ್ತಿಯ ಸಲುವಾಗಿ ಅಥವಾ ನಮ್ಮ ಪದ್ಧತಿಯನ್ನು ಕಾಯ್ದುಕೊಳ್ಳುವ ಸಲುವಾಗಿ ರಚಿಸುತ್ತಿಲ್ಲ, ಆದರೆ ವ್ಯಾಕರಣ-ನ್ಯಾಯಾದಿಗಳ, ನಯ-ಪ್ರಮಾಣಾದಿಗಳ ಹಾಗೂ ವಿಶೇಷ ಅರ್ಥಗಳ ಜ್ಞಾನವಿಲ್ಲದವರಿಗೆ ದೊಡ್ಡ ಗ್ರಂಥಗಳ ಅಭ್ಯಾಸವಂತೂ ಆಗುವ ಸಾಧ್ಯತೆಯಿಲ್ಲ; ಮತ್ತು ಯಾವುದಾದರೂ ಕಿರಿಯ ಗ್ರಂಥಗಳ ಅಭ್ಯಾಸ ಮಾಡಿದರೂ ಯಥಾರ್ಥ ಅರ್ಥವು ಭಾಸವಾಗುವುದಿಲ್ಲ. ಈ ಪ್ರಕಾರ ಇಂದು ಮಂದ ಜ್ಞಾನವುಳ್ಳ ಜೀವರುಗಳು ಹೆಚ್ಚಾಗಿ ಕಂಡುಬರುತ್ತಿದ್ದು ಅವರ ಹಿತದ ಸಲುವಾಗಿ ಧರ್ಮಬುದ್ಧಿಯಿಂದ ಈ ದೇಶ ಭಾಷಾಮಯವಾದ ಗ್ರಂಥವನ್ನು ರಚಿಸುತ್ತೇನೆ.

ಯಾವ ಪ್ರಕಾರ ದಟ್ಟದರಿದ್ರನಿಗೆ ಅವಲೋಕನ ಮಾಡುವಷ್ಟರಲ್ಲಿ ಚಿಂತಾಮಣಿರತ್ನದ ಪ್ರಾಪ್ತಿಯಾಗುವುದು ಮತ್ತು ಅವನು ಅದರ ಅವಲೋಕನ ಮಾಡದಿರುವುದು ಹಾಗೂ ಕುಷ್ಟರೋಗಿಗೆ ಅಮೃತಪಾನ ಮಾಡಿಸುವುದು ಮತ್ತು ಅವನು ಕುಡಿಯದಿರುವುದು; ಅದೇ ಪ್ರಕಾರ ಸಂಸಾರದಿಂದ ಪೀಡಿತನಾದ ಜೀವನಿಗೆ ಸುಲಭ ಮೋಕ್ಷ ಮಾರ್ಗದ ಉಪದೇಶದ ನಿಮಿತ್ತ ದೊರಕುವುದು ಮತ್ತು ಅವನು ಅದರ ಅಭ್ಯಾಸ ಮಾಡದಿದ್ದರೆ ಅವನ ಅಭಾಗ್ಯದ ಮಹಿಮೆಯನ್ನು ಹೇಳುವುದು ನಮ್ಮಿಂದಂತೂ ಸಾಧ್ಯವಿಲ್ಲ. ಅವನ ಭವಿತವ್ಯದ ವಿಚಾರ ಮಾಡಿದರೆ ನಮ್ಮ ಅಂತಃಕರಣವು ಸಮತಾ ಭಾವನೆಯಿಂದ ತುಂಬಿ ಬರುತ್ತದೆ. ಹಾಗೆ ಹೇಳಿಯೇ ಇದ್ದಾರೆ,-

**ಸಾಹೀಣೇ ಗುರುಜೋಗೇ ಜೇ ಣ ಸುಣಂತೀಹ ಧಮ್ಮವಯಣಾಇ ।**
**ತೇ ದಿಟ್ಠದುಟ್ಠಚಿತ್ತಾ ಅಹ ಸುಹಡಾ ಭವಭಯವಿಹುಣಾ ॥**

**ಅರ್ಥ :-** ದೈವಯೋಗದಿಂದ ಸ್ವತಂತ್ರ ಉಪದೇಶ ಕೊಡುವ ಗುರುಗಳು ದೊರೆತ ನಂತರವೂ ಧರ್ಮ ವಚನಗಳನ್ನು ಕೇಳದಂಥ ಜೀವರುಗಳು ಧಿಟ್ಟರಿದ್ದಾರೆ ಮತ್ತು ಅವರ ಚಿತ್ತವು ದುಷ್ಟವಿದೆ. ಅಥವಾ ಯಾವ ಸಂಸಾರ ಭಯದಿಂದ ತೀರ್ಥಂಕರ ಮೊದಲಾದವರು ಹೆದರಿ ಹೋದರು ಅಂಥ ಸಂಸಾರದ ಭಯದಿಂದ ಇವರು ರಹಿತರಾಗಿದ್ದಾರೆಂದರೆ ಮಹಾಯೋಧರಿದ್ದಾರೆ.

ಶ್ರೀ ಪ್ರವಚನಸಾರದಲ್ಲಿ ಕೂಡ ಮೋಕ್ಷಮಾರ್ಗವೆಂಬ ಅಧಿಕಾರ ಮಾಡಿದ್ದು, ಅಲ್ಲಿ ಮೊದಲು ಆಗಮ ಜ್ಞಾನವೇ ಉಪಾದೇಯವೆಂದು ಹೇಳಿದ್ದಾರೆ.

**ಏಯಗ್ಗಗದೋ ಸಮಣೋ ಏಯಗ್ಗಂ ಣಿಚ್ಛಿದಸ್ಸ ಅತ್ಥೇಸು ।**
**ಣಿಚ್ಛಿತ್ತೀ ಆಗಮದೋ ಆಗಮ ಚೇಟ್ಠಾ ತದೋ ಜೇಟ್ಠಾ ॥**

**ಅರ್ಥ :-** ಶ್ರಮಣನು ಏಕಾಗ್ರತೆಗೆ ಪ್ರಾಪ್ತನಾಗುತ್ತಾನೆ ಏಕಾಗ್ರತೆಯು ಪದಾರ್ಥಗಳ ನಿಶ್ಚಯವುಳ್ಳವನಿಗೆ ಆಗುತ್ತದೆ ನಿಶ್ಚಯವು ಆಗಮದಿಂದ ಆಗುತ್ತದೆ ಆದ್ದರಿಂದ ಆಗಮದಲ್ಲಿ ವ್ಯಾಪಾರವು ಮುಖ್ಯವಿದೆ. ಆದುದರಿಂದ ಈ ಜೀವನಿಗಂತೂ ಆಗಮಜ್ಞಾನ ಮಾಡಿಕೊಳ್ಳುವುದು ಮುಖ್ಯ ಕರ್ತವ್ಯವಿದೆ, ಆಗಮ ಜ್ಞಾನವಾಗುವುದರಿಂದ

ತತ್ತ್ವಗಳ ಶ್ರದ್ಧೆಯಾಗುತ್ತದೆ, ತತ್ತ್ವಗಳ ಶ್ರದ್ಧೆಯಾಗುವುದರಿಂದ ಸಂಯಮಭಾವವಾಗುತ್ತದೆ, ಮತ್ತು ಆ ಆಗಮದಿಂದ ಆತ್ಮಜ್ಞಾನದ ಪ್ರಾಪ್ತಿ ಕೂಡ ಆಗುತ್ತದೆ; ಆಗ ಸ್ವಾಭಾವಿಕವಾಗಿಯೇ ಮೋಕ್ಷದ ಪ್ರಾಪ್ತಿಯಾಗುತ್ತದೆ,

ಧರ್ಮದಲ್ಲಿ ಅನೇಕ ಅಂಗಗಳಿದ್ದು ಅವುಗಳಲ್ಲಿ ಧ್ಯಾನವೊಂದನ್ನುಳಿದು ಇನ್ನಾವ ಶ್ರೇಷ್ಠ ಅಂಗವು ಧರ್ಮದಲ್ಲಿಲ್ಲ, ಆದುದರಿಂದ ಯಾವ ಪ್ರಕಾರದಿಂದಲಾದರೂ ಆಗಮದ ಅಭ್ಯಾಸ ಮಾಡುವುದು ಯೋಗ್ಯವಾಗಿದೆ.

ಈ ಗ್ರಂಥವನ್ನು ಓದುವುದು, ಕೇಳುವುದು, ವಿಚಾರ ಮಾಡುವುದಂತೂ ತುಂಬ ಸುಲಭವಿದೆ, ಯಾವುದೇ ವ್ಯಾಕರಣ ಮೊದಲಾದವುಗಳ ಸಾಧನೆಯ ಅವಶ್ಯಕತೆಯಿಲ್ಲ; ಆದುದರಿಂದ ಎಲ್ಲರೂ ಇದರ ಅಭ್ಯಾಸದಲ್ಲಿ ಅವಶ್ಯವಾಗಿ ಪ್ರವರ್ತಿಸಬೇಕು, ಅದರಿಂದ ತಮ್ಮದು ಕಲ್ಯಾಣವಾಗುವುದು.

**ಈ ಪ್ರಕಾರ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರದಲ್ಲಿ**
**ಪೀಠಬಂಧ ಪ್ರರೂಪಣೆಯೆಂಬ**
**ಮೊದಲನೆಯ ಅಧಿಕಾರವು ಸಮಾಪ್ತವಾಯಿತು.**

# ಎರಡನೆಯ ಅಧಿಕಾರ
## ಸಂಸಾರ ಅವಸ್ಥೆಯ ಸ್ವರೂಪ

**ಮಿಥ್ಯಾಭಾವದಭಾವದಿಂ ಪ್ರಕಟಿಸುವಾ ನಿಜಭಾವ ।**
**ಅದುವೆ ಇರಲಿ ಸದಾ ಜಯವಂತ ಇದುವೆ ಮೋಕ್ಷ ಉಪಾಯ ॥**

ಈಗ ಈಶಾಸ್ತ್ರದಲ್ಲಿ ಮೋಕ್ಷಮಾರ್ಗದ ಪ್ರಕಾಶ ಮಾಡುತ್ತೇವೆ. ಅಲ್ಲಿ ಬಂಧನದಿಂದ ಬಿಡುಗಡೆ ಹೊಂದುವುದರ ಹೆಸರು ಮೋಕ್ಷವಿದೆ. ಈ ಆತ್ಮನಿಗೆ ಕರ್ಮದ ಬಂಧನವಿದೆ ಮತ್ತು ಆ ಬಂಧನದಿಂದ ಆತ್ಮನು ದುಃಖಿಯಾಗುತ್ತಲಿದ್ದಾನೆ, ಮತ್ತು ಈತನ ನಿರಂತರ ಉಪಾಯ ಕೂಡ ದುಃಖ ದೂರ ಮಾಡುವುದರದೇ ಇರುತ್ತದೆ, ಆದರೆ ನಿಜವಾದ ಉಪಾಯವನ್ನು ಪ್ರಾಪ್ತ ಮಾಡದ ಹೊರತು ದುಃಖವು ದೂರವಾಗುವುದಿಲ್ಲ ಮತ್ತು ದುಃಖವನ್ನು ಸಹಿಸುವುದೂ ಆಗುವುದಿಲ್ಲ; ಆದುದರಿಂದ ಈ ಜೀವನು ವ್ಯಾಕುಲನಾಗುತ್ತಲಿದ್ದಾನೆ.

ಈ ಪ್ರಕಾರ ಜೀವನಿಗೆ ಸಮಸ್ತ ದುಃಖದ ಮೂಲಕಾರಣವು ಕರ್ಮಬಂಧನವಿದೆ. ಅದರ ಅಭಾವರೂಪವಾದ ಮೋಕ್ಷವೇ ಪರಮಹಿತವಿದ್ದು ಅದರ ನಿಜವಾದ ಉಪಾಯ ಮಾಡುವುದೇ ಕರ್ತವ್ಯವಿದೆ; ಆದುದರಿಂದ ಇವನಿಗೆ ಇದರದೇ ಉಪದೇಶ ಕೊಡುತ್ತಾರೆ. ಯಾವ ಪ್ರಕಾರ ವೈದ್ಯನು ವ್ಯಾಧಿಗ್ರಸ್ತ ಮನುಷ್ಯನಿಗೆ ನಿನಗೆ ಹೀಗೆ ಈ ರೋಗವಾಗಿದೆಯೆಂದು ಮೊದಲು ರೋಗದ ನಿದಾನ ಹೇಳುತ್ತಾನೆ; ಮತ್ತು ಆ ರೋಗದ ನಿಮಿತ್ತದಿಂದ ಅವನಿಗೆ ಯಾವ-ಯಾವ ಅವಸ್ಥೆಯಾಗುತ್ತಲಿದೆ ಅದನ್ನು ತಿಳಿಸಿಕೊಡುತ್ತಾನೆ. ಅದರಿಂದ ಅವನಿಗೆ ನನಗೆ ಇಂಥದೇ ರೋಗವಿದೆಯೆಂದು ನಿಶ್ಚಯವಾಗುತ್ತದೆ. ಅನಂತರ ಆ ರೋಗವನ್ನು ದೂರಮಾಡುವ ಉಪಾಯವನ್ನು ಅನೇಕ ಪ್ರಕಾರದಿಂದ ತಿಳಿಸಿಕೊಡುತ್ತಾನೆ ಮತ್ತು ಅವನಿಗೆ ಆ ಉಪಾಯದ ಪ್ರತೀತಿ ಮಾಡಿಸುತ್ತಾನೆ. ಇಷ್ಟು ಮಾತ್ರ ವೈದ್ಯನದು ತಿಳಿಸಿಕೊಡುವುದಿದೆ. ಒಂದು ವೇಳೆ ಆ ರೋಗಿಯು ಅದರ ಸಾಧನೆ ಮಾಡಿದರೆ ರೋಗದಿಂದ ಮುಕ್ತನಾಗಿ ತನ್ನ ಸ್ವಭಾವರೂಪದಲ್ಲಿ ಪ್ರವರ್ತಿಸುತ್ತಾನೆ ಇದು ರೋಗಿಯ ಕರ್ತವ್ಯವಿದೆ.

ಅದೇ ಪ್ರಕಾರ ಇಲ್ಲಿ ಕರ್ಮಬಂಧನಕ್ಕೊಳಪಟ್ಟ ಜೀವನಿಗೆ ನಿನಗೆ ಹೀಗೆ ಈ ಕರ್ಮದ ಬಂಧನವಾಗಿದೆಯೆಂದು ಮೊದಲು ಕರ್ಮಬಂಧನದ ನಿದಾನ ತಿಳಿಸಿಕೊಡುತ್ತಾರೆ; ಮತ್ತು ಆ ಕರ್ಮಬಂಧನದ ನಿಮಿತ್ತದಿಂದ ಇವನಿಗೆ ಯಾವ-ಯಾವ ಅವಸ್ಥೆಯಾಗುತ್ತಲಿದೆ ಅದನ್ನು ತಿಳಿಸಿಕೊಡುತ್ತಾರೆ. ಅದರಿಂದ ಜೀವನಿಗೆ ನನಗೆ ಹೀಗೆಯೇ ಕರ್ಮಬಂಧನವಿದೆಯೆಂದು ನಿಶ್ಚಯವಾಗುತ್ತದೆ, ಮತ್ತು ಆ ಕರ್ಮಬಂಧನವು ದೂರವಾಗುವ ಉಪಾಯಗಳನ್ನು ಅನೇಕ ಪ್ರಕಾರದಿಂದ ತಿಳಿಸಿಕೊಡುತ್ತಾರೆ ಮತ್ತು ಇವನಿಗೆ ಆ ಉಪಾಯಗಳ ಪ್ರತೀತಿ ಮಾಡಿಸುತ್ತಾರೆ. ಇಷ್ಟು ಮಾತ್ರ ಶಾಸ್ತ್ರದ ಉಪದೇಶವಿದೆ. ಒಂದು ವೇಳೆ ಈ ಜೀವನು ಅದರ ಸಾಧನೆ ಮಾಡಿದರೆ ಕರ್ಮಬಂಧನದಿಂದ ಮುಕ್ತನಾಗಿ

ತನ್ನ ಸ್ವಭಾವರೂಪದಲ್ಲಿ ಪ್ರವರ್ತಿಸುತ್ತಾನೆ, ಇದು ಜೀವದ ಕರ್ತವ್ಯವಿದೆ.

**ಕರ್ಮಬಂಧನದ ನಿದಾನ :-**

ಇಲ್ಲಿ ಪ್ರಾರಂಭದಲ್ಲೇ ಕರ್ಮಬಂಧನದ ನಿದಾನ ತಿಳಿಸಿಕೊಡುತ್ತಾರೆ.

ಕರ್ಮಬಂಧನವಿರುವುದರಿಂದ ನಾನಾ ಪ್ರಕಾರದ ಔಪಾಧಿಕ ಭಾವಗಳಲ್ಲಿ ಪರಿಭ್ರಮಣತೆಯು ಕಂಡು ಬರುತ್ತದೆ, ಏಕರೂಪವಿರುವುದಾಗುವುದಿಲ್ಲ; ಆದುದರಿಂದ ಕರ್ಮಬಂಧನ ಸಹಿತವಾದ ಅವಸ್ಥೆಯ ಹೆಸರು ಸಂಸಾರ-ಅವಸ್ಥೆಯಿದೆ, ಈ ಸಂಸಾರ-ಅವಸ್ಥೆಯಲ್ಲಿ ಅನಂತಾನಂತ ಜೀವದ್ರವ್ಯಗಳಿದ್ದು ಅವು ಅನಾದಿಯಿಂದಲೇ ಕರ್ಮಬಂಧನ ಸಹಿತವಿವೆ. ಮೊದಲು ಜೀವವು ಬೇರೆಯಿತ್ತು ಮತ್ತು ಕರ್ಮವು ಬೇರೆಯಿತ್ತು, ಅನಂತರ ಇವುಗಳ ಸಂಯೋಗವಾಗಿದೆಯೆಂಬುದಾಗಿಲ್ಲ. ಯಾವ ಪ್ರಕಾರ ಮೇರುಗಿರಿ ಮೊದಲಾದ ಅಕೃತ್ರಿಮ ಸ್ಕಂಧಗಳಲ್ಲಿ ಅನಂತ ಪುದ್ಗಲ ಪರಮಾಣುಗಳು ಅನಾದಿಯಿಂದ ಏಕಬಂಧನರೂಪದಿಂದಿವೆ, ಪುನಃ ಅವುಗಳೊಳಗಿಂದ ಅದೆಷ್ಟೋ ಪರಮಾಣುಗಳು ಬೇರೆಯಾಗುತ್ತವೆ, ಅದೆಷ್ಟೋ ನವೀನ ಬಂದು ಸೇರುತ್ತವೆ, ಈ ಪ್ರಕಾರ ಬೆರೆಯುವುದು-ಬೇರೆಯಾಗುವುದು ಆಗುತ್ತಿರುತ್ತದೆ. ಅದೇ ಪ್ರಕಾರ ಈ ಸಂಸಾರದಲ್ಲಿ ಒಂದು ಜೀವದ್ರವ್ಯವು ಮತ್ತು ಅನಂತ ಕರ್ಮರೂಪ ಪುದ್ಗಲ ಪರಮಾಣುಗಳ ಏಕಬಂಧನರೂಪವು ಅನಾದಿಯಿಂದಿದೆ, ಪುನಃ ಅವುಗಳಲ್ಲಿ ಅದೆಷ್ಟೋ ಕರ್ಮಪರಮಾಣುಗಳು ಭಿನ್ನವಾಗುತ್ತವೆ. ಅದೆಷ್ಟೋ ನವೀನ ಬಂದು ಸೇರುತ್ತವೆ. ಈ ಪ್ರಕಾರವಾಗಿ ಬೆರೆಯುವುದು-ಭಿನ್ನವಾಗುವುದು ಆಗುತ್ತಿರುತ್ತದೆ.

**ಕರ್ಮಗಳ ಅನಾದಿತನದ ಸಿದ್ಧಿ :-**

**ಪ್ರಶ್ನೆ :-** ಪುದ್ಗಲ ಪರಮಾಣುಗಳಂತೂ ರಾಗಾದಿಗಳ ನಿಮಿತ್ತದಿಂದ ಕರ್ಮರೂಪವಾಗುತ್ತವೆಂದರೆ ಅನಾದಿ ಕರ್ಮರೂಪವು ಹೇಗಿವೆ ?

**ಉತ್ತರ :-** ನಿಮಿತ್ತವಂತೂ ನವೀನ ಕಾರ್ಯವಾಗುವುದರಲ್ಲೇ ಸಂಭವಿಸುತ್ತದೆ, ಅನಾದಿ ಅವಸ್ಥೆಯಲ್ಲಿ ನಿಮಿತ್ತದ ಯಾವ ಪ್ರಯೋಜನವಿಲ್ಲ. ಯಾವ ಪ್ರಕಾರ ಪುದ್ಗಲ ಪರಮಾಣುಗಳ ಕಟ್ಟುವಿಕೆಯಂತೂ ಸ್ನಿಗ್ಧ-ರೂಕ್ಷ ಗುಣಗಳ ಅಂಶಗಳಿಂದಲೇ ಆಗುತ್ತದೆ ಮತ್ತು ಮೇರುಗಿರಿ ಮೊದಲಾದ ಸ್ಕಂಧಗಳಲ್ಲಿ ಅನಾದಿ ಪುದ್ಗಲ ಪರಮಾಣುಗಳ ಕಟ್ಟುವಿಕೆಯಿಲ್ಲ, ಅಲ್ಲಿ ನಿಮಿತ್ತದ ಪ್ರಯೋಜನವೇನಿದೆ ? ಅದೇ ಪ್ರಕಾರ ನವೀನ ಪರಮಾಣುಗಳ ಕರ್ಮರೂಪವಾಗುವುದಂತೂ ರಾಗಾದಿಗಳಿಂದಲೇ ಆಗುತ್ತದೆ ಮತ್ತು ಅನಾದಿ ಪುದ್ಗಲ ಪರಮಾಣುಗಳ ಅವಸ್ಥೆಯೇ ಕರ್ಮರೂಪವಿದೆ, ಅಲ್ಲಿ ನಿಮಿತ್ತದ ಪ್ರಯೋಜನವೇನಿದೆ ? ಇನ್ನು ಅನಾದಿಯಲ್ಲಿ ಕೂಡ ನಿಮಿತ್ತವನ್ನು ಮನ್ನಿಸಿದರೆ ಅನಾದಿತನವು ಉಳಿಯುವುದಿಲ್ಲ, ಆದುದರಿಂದ ಕರ್ಮದ ಬಂಧವನ್ನು ಅನಾದಿಯೆಂದು ಮನ್ನಿಸುವುದು. ಶ್ರೀ ಪ್ರವಚನಸಾರ ಶಾಸ್ತ್ರದ ತತ್ತ್ವಪ್ರದೀಪಿಕೆಯೆಂಬ ವ್ಯಾಖ್ಯಾನದಲ್ಲಿ ಸಾಮಾನ್ಯಜ್ಞೇಯಾಧಿಕಾರದೊಳಗೆ ರಾಗಾದಿಗಳ ಕಾರಣವಂತೂ ದ್ರವ್ಯಕರ್ಮವಿದೆ ಮತ್ತು ದ್ರವ್ಯಕರ್ಮದ ಕಾರಣವು ರಾಗಾದಿಗಳಿವೆಯೆಂದು ಹೇಳಿದೆ. ಆಗ ಅಲ್ಲಿ ಹೀಗಂತೂ ಇತರೇತರಾಶ್ರಯ ದೋಷ ತಗಲುತ್ತದೆ-ಅದು ಇದರ ಆಶ್ರಿತ, ಇದು ಅದರ ಆಶ್ರಿತ, ಎಲ್ಲಿ ತಡೆಯೇ ಇಲ್ಲವೆಂದು ತರ್ಕ ಮಾಡದೆ ಅದಕ್ಕೆ ಹೀಗೆ ಹೇಳಿದ್ದಾರೆ,-

**ನೈವಂ ಅನಾದಿಪ್ರಸಿದ್ಧದ್ರವ್ಯಕರ್ಮ್ಮಸಂಬಂಧಸ್ಯ ತತ್ರ ಹೇತುತ್ವೇನೋಪಾದಾನಾತ್★**

**ಅರ್ಥ :-** ಈ ಪ್ರಕಾರ ಇತರೇತರಾಶ್ರಯ ದೋಷವಿಲ್ಲ; ಏಕೆಂದರೆ ಅನಾದಿಯಿಂದ ದ್ರವ್ಯಕರ್ಮದ ಸಂಬಂಧವು ಸ್ವಯಂ ಸಿದ್ಧವಿದೆ ಅದನ್ನು ಅಲ್ಲಿ ಕಾರಣರೂಪದಿಂದ ಸ್ವೀಕರಿಸಲಾಗಿದೆ.

ಕರ್ಮದ ನಿಮಿತ್ತವಿಲ್ಲದೆ ಮೊದಲು ಜೀವಕ್ಕೆ ರಾಗಾದಿಗಳನ್ನು ಹೇಳಹೊರಟರೆ ರಾಗಾದಿಗಳು ಜೀವದ ಒಂದು ಸ್ವಭಾವವಾಗಿ ಹೋಗುವವು; ಏಕೆಂದರೆ ಪರನಿಮಿತ್ತವಿಲ್ಲದೆ ಇರುವುದರ ಹೆಸರು ಸ್ವಭಾವವಿದೆಯೆಂದು ಆಗಮದಲ್ಲಿ ಹೇಳಿದೆ ಮತ್ತು ಯುಕ್ತಿಯಿಂದ ಕೂಡ ಹೀಗೆಯೇ ಸಂಭವವಿದೆ.

ಆದುದರಿಂದ ಕರ್ಮದ ಸಂಬಂಧವನ್ನು ಅನಾದಿಯೆಂದೇ ಮನ್ನಿಸಬೇಕು.

**ಪ್ರಶ್ನೆ :-** ಭಿನ್ನ-ಭಿನ್ನ ದ್ರವ್ಯಗಳು ಮತ್ತು ಅವುಗಳ ಸಂಬಂಧವು ಅನಾದಿಯೆಂದರೆ ಅದು ಹೇಗೆ ಸಂಭವವಿದೆ?

**ಉತ್ತರ :-** ಯಾವ ಪ್ರಕಾರ ಮೂಲದಿಂದಲೇ ಹಾಲು-ನೀರಿನ, ಕನಕ-ಕಾಳಿಕೆಯ, ಕಾಳು-ತೌಡಿನ ಮತ್ತು ಎಳ್ಳು-ಎಣ್ಣೆಯ ಸಂಬಂಧವು ಕಂಡುಬರುತ್ತದೆ, ಇವುಗಳ ನವೀನ ಸಂಯೋಗವಾಗಿಲ್ಲ; ಅದೇ ಪ್ರಕಾರ ಅನಾದಿಯಿಂದ ಜೀವ-ಕರ್ಮಗಳ ಸಂಬಂಧವಿದೆಯೆಂದು ತಿಳಿಯಬೇಕು, ಅವುಗಳ ನವೀನ ಸಂಯೋಗವಾಗಿಲ್ಲ. ಮತ್ತು ಹೇಗೆ ಸಂಭವವಿದೆಯೆಂದು ನೀವು ಕೇಳಿದಿರಿ, ಯಾವ ಪ್ರಕಾರ ಅನಾದಿಯಿಂದ ಕೆಲವು ಭಿನ್ನ ದ್ರವ್ಯಗಳಿವೆ, ಅದೇ ಪ್ರಕಾರ ಕೆಲವು ಸಂಯುಕ್ತ ದ್ರವ್ಯಗಳಿವೆ; ಹೀಗೆ ಸಂಭವಿಸುವಲ್ಲಿ ಯಾವ ವಿರೋಧವಂತೂ ಭಾಸವಾಗುವುದಿಲ್ಲ.

**ಪ್ರಶ್ನೆ :-** ಮೊದಲು ಭಿನ್ನವಿದ್ದು ನಂತರ ಸಂಯುಕ್ತವಾಗಿದ್ದರೆ ಮಾತ್ರ ಸಂಬಂಧ ಅಥವಾ ಸಂಯೋಗವೆಂದು ಹೇಳುವ ಸಂಭವವಿದೆ. ಇಲ್ಲಿ ಅನಾದಿಯಿಂದ ಸಂಯುಕ್ತವಾದ ಜೀವ-ಕರ್ಮಗಳ ಸಂಬಂಧ ಹೇಗೆ ಹೇಳಲಾಗಿದೆ?

**ಉತ್ತರ :-** ಅನಾದಿಯಿಂದಂತೂ ಸಂಯುಕ್ತವಿದ್ದವು ; ಆದರೆ ನಂತರ ಭಿನ್ನವಾದವು. ಭಿನ್ನವಿದ್ದುವೆಂದೇ ಭಿನ್ನವಾದುವೆಂದು ಆಗ ತಿಳಿಯುವುದು. ಆದುದರಿಂದ ಮೊದಲು ಕೂಡ ಭಿನ್ನವೇ ಇದ್ದುವೆಂದು ಅನುಮಾನದಿಂದ ಹಾಗೂ ಕೇವಲಜ್ಞಾನದಿಂದ ಪ್ರತ್ಯಕ್ಷ ಭಿನ್ನವಿದ್ದುವೆಂದು ಭಾಸವಾಗುತ್ತದೆ. ಆದುದರಿಂದ ಅವುಗಳ ಬಂಧನವಿದ್ದರೂ ಕೂಡ ಭಿನ್ನತೆಯು ಕಂಡು ಬರುತ್ತದೆ. ಇನ್ನು ಆ ಭಿನ್ನತೆಯ ಅಪೇಕ್ಷೆಯಿಂದ ಅವುಗಳ ಸಂಬಂಧ ಅಥವಾ ಸಂಯೋಗ ಹೇಳಲಾಗಿದೆ, ಏಕೆಂದರೆ ಹೊಸದಾಗಿ ಕೂಡಿರಲಿ ಅಥವಾ ಕೂಡಿಕೊಂಡವುಗಳೇ ಇರಲಿ ಭಿನ್ನ ದ್ರವ್ಯಗಳ ಸಂಯೋಗದಲ್ಲಿ ಹೀಗೆಯೇ ಹೇಳುವ ಸಂಭವವಿದೆ.

ಈ ಪ್ರಕಾರ ಈ ಜೀವ-ಕರ್ಮಗಳ ಸಂಬಂಧವು ಅನಾದಿಯಿಂದಿದೆ.

### ಜೀವ ಮತ್ತು ಕರ್ಮಗಳ ಭಿನ್ನತೆ :-

ಜೀವದ್ರವ್ಯವಂತೂ ನೋಡುವ-ತಿಳಿಯುವರೂಪ ಚೇತನಾಗುಣದ ಧಾರಕವಿದ್ದು ಇಂದ್ರಿಯಗಮ್ಯವಿಲ್ಲದ ಮೂಲಕ ಅಮೂರ್ತಿಕವಿದೆ, ಸಂಕೋಚ-ವಿಸ್ತಾರ ಶಕ್ತಿಸಂಯುಕ್ತ ಅಸಂಖ್ಯಾತ ಪ್ರದೇಶಿಯಾದ ಒಂದು ದ್ರವ್ಯವಿದೆ,

★ ನಹಿ ಅನಾದಿಪ್ರಸಿದ್ಧದ್ರವ್ಯಕರ್ಮಾಭಿಸಂಬದ್ಧಸ್ಯಾತ್ಮನಃ ಪ್ರಾಕ್ತನದ್ರವ್ಯಕರ್ಮಣಸ್ತತ್ರ ಹೇತುತ್ವೇನೋಪಾದಾನಾತ್ ।
– ಪ್ರವಚನಸಾರ ೧೨೧ ನೇ ಗಾಥೆಯ ಟೀಕೆ

ಮತ್ತು ಕರ್ಮವು ಚೇತನಗುಣವಿಲ್ಲದ ಜಡವಿದ್ದು ಮೂರ್ತಿಕವಿದೆ, ಅನಂತ ಪುದ್ಗಲಪರಮಾಣುಗಳ ಪಿಂಡವಿರುವುದರಿಂದ ಒಂದು ದ್ರವ್ಯವಿಲ್ಲ. ಈ ಪ್ರಕಾರ ಈ ಜೀವ ಮತ್ತು ಕರ್ಮಗಳಿದ್ದು ಇವುಗಳ ಅನಾದಿ ಸಂಬಂಧವಿದ್ದರೂ ಕೂಡ ಜೀವದ ಯಾವುದೇ ಪ್ರದೇಶವು ಕರ್ಮರೂಪವಾಗುವುದಿಲ್ಲ ಮತ್ತು ಕರ್ಮದ ಯಾವುದೇ ಪರಮಾಣುವು ಜೀವರೂಪವಾಗುವುದಿಲ್ಲ; ಅವೆರಡೂ ತಮ್ಮ-ತಮ್ಮ ಲಕ್ಷಣಗಳನ್ನು ಧಾರಣ ಮಾಡಿ ಭಿನ್ನ-ಭಿನ್ನವೇ ಉಳಿಯುತ್ತವೆ. ಹೇಗೆ ಚಿನ್ನ-ಬೆಳ್ಳಿಯ ಒಂದು ಸ್ಕಂಧವಿದ್ದರೂ ಕೂಡ ಪೀತಾದಿ ಗುಣಗಳನ್ನು ಧಾರಣ ಮಾಡಿ ಚಿನ್ನವು ಬೇರೆ ಇರುತ್ತದೆ ಮತ್ತು ಶ್ವೇತಾದಿ ಗುಣಗಳನ್ನು ಧಾರಣಮಾಡಿ ಬೆಳ್ಳಿಯು ಬೇರೆ ಇರುತ್ತದೆ ಹಾಗೆ ಭಿನ್ನವೆಂದು ತಿಳಿಯಬೇಕು.

## ಅಮೂರ್ತಿಕ ಆತ್ಮನಿಂದ ಮೂರ್ತಿಕ ಕರ್ಮಗಳ ಬಂಧನವು ಹೇಗಾಗುತ್ತದೆ ?

**ಪ್ರಶ್ನೆ :-** ಮೂರ್ತಿಕ-ಮೂರ್ತಿಕದ ಬಂಧನವು ಸಾಧ್ಯವಿದೆ, ಆದರೆ ಅಮೂರ್ತಿಕ-ಮೂರ್ತಿಕದ ಬಂಧನವು ಹೇಗೆ ಸಾಧ್ಯವಿದೆ ?

**ಉತ್ತರ :-** ಯಾವ ಪ್ರಕಾರ ವ್ಯಕ್ತ-ಇಂದ್ರಿಯಗಮ್ಯಗಳಿಲ್ಲದಂಥ ಸೂಕ್ಷ್ಮ ಪುದ್ಗಲಗಳು ಹಾಗೂ ವ್ಯಕ್ತ-ಇಂದ್ರಿಯಗಮ್ಯಗಳಿರುವಂಥ ಸ್ಥೂಲ ಪುದ್ಗಲಗಳ ಬಂಧನವಾಗುವುದನ್ನು ಮನ್ನಿಸುತ್ತಾರೆ; ಅದೇ ಪ್ರಕಾರ ಆ ಇಂದ್ರಿಯಗಮ್ಯವಾಗಲು ಯೋಗ್ಯವಿಲ್ಲದಂಥ ಅಮೂರ್ತಿಕ ಆತ್ಮ ಮತ್ತು ಇಂದ್ರಿಯಗಮ್ಯವಾಗಲು ಯೋಗ್ಯವಾದ ಮೂರ್ತಿಕ ಕರ್ಮಗಳದ್ದೂ ಬಂಧನವಾಗುವುದನ್ನು ಮನ್ನಿಸಬೇಕು, ಮತ್ತು ಈ ಬಂಧನದಲ್ಲಿ ಯಾವುದು ಯಾವುದನ್ನು ಮಾಡುವುದಂತೂ ಇಲ್ಲ. ಬಂಧನವಿರುವವರೆಗೆ ಜತೆಯಲ್ಲಿರುತ್ತವೆ-ಅಗಲುವುದಿಲ್ಲ, ಮತ್ತು ಅವುಗಳ ಕಾರಣ-ಕಾರ್ಯತನವು ಜೀವಂತವಿರುತ್ತದೆ; ಇಲ್ಲಿ ಬಂಧನವು ಇಷ್ಟು ಮಾತ್ರವೆಂದು ತಿಳಿಯಬೇಕು. ಆದುದರಿಂದ ಹೀಗೆ ಮೂರ್ತಿಕ ಅಮೂರ್ತಿಕದ ಬಂಧನವಾಗುವಲ್ಲಿ ಯಾವ ವಿರೋಧವಿಲ್ಲ.

ಹೀಗೆ ಯಾವ ಪ್ರಕಾರ ಒಂದು ಜೀವಕ್ಕೆ ಕರ್ಮಸಂಬಂಧವು ಅನಾದಿಯೆಂದು ಹೇಳಿದೆ ಅದೇ ಪ್ರಕಾರ ಭಿನ್ನ ಭಿನ್ನ ಅನಂತ ಜೀವಗಳದ್ದೂ ತಿಳಿಯಬೇಕು.

## ಘಾತಿ-ಅಘಾತಿ ಕರ್ಮ ಮತ್ತು ಅವುಗಳ ಕಾರ್ಯ :-

ಆ ಕರ್ಮಗಳು ಜ್ಞಾನಾವರಣ ಮೊದಲಾದ ಭೇದಗಳಿಂದ ಎಂಟು ಪ್ರಕಾರದ್ದಿವೆ. ಅವುಗಳಲ್ಲಿ ನಾಲ್ಕು ಘಾತಿಕರ್ಮಗಳ ನಿಮಿತ್ತದಿಂದ ಜೀವಸ್ವಭಾವದ ಘಾತವಾಗುತ್ತದೆ. ಜ್ಞಾನಾವರಣ-ದರ್ಶನಾವರಣಗಳಿಂದಂತೂ ಜೀವದ ಸ್ವಭಾವಗಳಾದ ಆ ಜ್ಞಾನ-ದರ್ಶನಗಳ ವ್ಯಕ್ತತೆಯಾಗುವುದಿಲ್ಲ; ಆ ಕರ್ಮಗಳ ಕ್ಷಯೋಪಶಮಕ್ಕೆ ಅನುಸರಿಸಿ ಕಿಂಚಿತ್ತು ಜ್ಞಾನ-ದರ್ಶನಗಳ ವ್ಯಕ್ತತೆಯಿರುತ್ತದೆ. ಇನ್ನು ಮೋಹನೀಯದಿಂದ ಜೀವ ಸ್ವಭಾವಗಳಲ್ಲದಂಥ ಮಿಥ್ಯಾಶ್ರದ್ಧೆ ಮತ್ತು ಕ್ರೋಧ, ಮಾನ, ಮಾಯೆ, ಲೋಭ ಮೊದಲಾದ ಕಷಾಯಗಳ ವ್ಯಕ್ತತೆಯಿರುತ್ತದೆ. ಮತ್ತು ಅಂತರಾಯದಿಂದ ಜೀವಸ್ವಭಾವವಾದ ದೀಕ್ಷೆ ಸ್ವೀಕರಿಸುವ ಸಾಮರ್ಥ್ಯರೂಪ ವೀರ್ಯದ ವ್ಯಕ್ತತೆಯಾಗುವುದಿಲ್ಲ; ಅದರ ಕ್ಷಯೋಪಶಮಕ್ಕೆ ಅನುಸರಿಸಿ ಕಿಂಚಿತ್ತು ಶಕ್ತಿಯಿರುತ್ತದೆ.

ಈ ಪ್ರಕಾರ ಘಾತಿ ಕರ್ಮಗಳ ನಿಮಿತ್ತದಿಂದ ಜೀವಸ್ವಭಾವದ ಘಾತವು ಅನಾದಿಯಿಂದಲೇ ಆಗಿದೆ.

ಮೊದಲು ಸ್ವಭಾವರೂಪನಾದ ಶುದ್ಧಾತ್ಮನಿದ್ದನು, ಅನಂತರ ಕರ್ಮದ ನಿಮಿತ್ತದಿಂದ ಸ್ವಭಾವದ ಘಾತವಾಗುವುದರಿಂದ ಅಶುದ್ಧನಾದನು-ಎಂಬುದಾಗಿಲ್ಲ.

**ಪ್ರಶ್ನೆ :-** ಘಾತವೆಂಬ ಹೆಸರಂತೂ ಅಭಾವದ್ದಿದೆ; ಆದುದರಿಂದ ಮೊದಲು ಸದ್ಭಾವವಿರುವುದರ ಅಭಾವ ಹೇಳಲಾಗುತ್ತದೆ. ಇಲ್ಲಿ ಸ್ವಭಾವದ್ದಂತೂ ಸದ್ಭಾವವೇ ಇಲ್ಲವೆಂದ ಮೇಲೆ ಯಾವುದರ ಘಾತ ಮಾಡಿತು ?

**ಉತ್ತರ :-** ಕರ್ಮದ ನಿಮಿತ್ತವಿಲ್ಲದಿದ್ದರೆ ಕೇವಲಜ್ಞಾನ ಮೊದಲಾದ ತನ್ನ ಸ್ವಭಾವರೂಪವಾಗಿ ಪ್ರವರ್ತಿಸುವಂಥ ಶಕ್ತಿಯು ಜೀವದಲ್ಲಿ ಅನಾದಿಯಿಂದಲೇ ಕಂಡು ಬರುತ್ತದೆ; ಆದರೆ ಅನಾದಿಯಿಂದಲೇ ಕರ್ಮದ ಸಂಬಂಧವು ಕಂಡುಬರುತ್ತಿರುವುದರಿಂದ ಆ ಶಕ್ತಿಯ ವ್ಯಕ್ತತೆಯಾಗಲಿಲ್ಲ. ಆದುದರಿಂದ ಶಕ್ತಿಯ ಅಪೇಕ್ಷೆಯಿಂದ ಸ್ವಭಾವವಿದೆ, ಆದರೆ ಅದನ್ನು ವ್ಯಕ್ತವಾಗಗೊಡದಿರುವ ಅಪೇಕ್ಷೆಯಿಂದ ಘಾತಮಾಡಿತೆಂದು ಹೇಳುತ್ತಾರೆ.

ಮತ್ತು ನಾಲ್ಕು ಅಘಾತಿ ಕರ್ಮಗಳ ನಿಮಿತ್ತದಿಂದ ಈ ಆತ್ಮನಿಗೆ ಬಾಹ್ಯ ಸಾಮಗ್ರಿಗಳ ಸಂಬಂಧವುಂಟಾಗುತ್ತದೆ. ಅವುಗಳಲ್ಲಿ ವೇದನೀಯದಿಂದಂತೂ ಶರೀರದಲ್ಲಿ ಅಥವಾ ಶರೀರದ ಹೊರಗೆ ನಾನಾ ಪ್ರಕಾರದ ಸುಖ-ದುಃಖಗಳಿಗೆ ಕಾರಣವಾದ ಪರದ್ರವ್ಯಗಳ ಸಂಯೋಗ ಕಲ್ಪಿಸುತ್ತದೆ; ಆಯುವಿನಿಂದ ತನ್ನ ಸ್ಥಿತಿಯವರೆಗೆ ಪ್ರಾಪ್ತ ಶರೀರದಲ್ಲಿ ಸಂಬಂಧವು ಬಿಟ್ಟುಹೋಗುವುದಿಲ್ಲ; ನಾಮದಿಂದ ಗತಿ, ಜಾತಿ, ಶರೀರ ಮೊದಲಾದವುಗಳು ಉತ್ಪನ್ನವಾಗುತ್ತದೆ. ಮತ್ತು ಗೋತ್ರದಿಂದ ಉಚ್ಚ-ನೀಚ ಕುಲದ ಪ್ರಾಪ್ತಿಯಾಗುತ್ತದೆ.

ಈ ಪ್ರಕಾರ ಅಘಾತಿಕರ್ಮಗಳಿಂದ ಬಾಹ್ಯಸಾಮಗ್ರಿಗಳು ಏಕತ್ರಿತವಾಗುತ್ತವೆ. ಅವುಗಳಿಂದ ಮೋಹದ ಉದಯದ ಸಹಯೋಗವಾದ ಮೇಲೆ ಜೀವವು ಸುಖಿ-ದುಃಖಿಯಾಗುತ್ತದೆ. ಮತ್ತು ಶರೀರ ಮೊದಲಾದವುಗಳ ಸಂಬಂಧದಿಂದ ಜೀವದ ಅಮೂರ್ತತ್ವ ಮೊದಲಾದ ಸ್ವಭಾವಗಳು ತಮ್ಮ ಸ್ವಭಾವಭೂತ ಕಾರ್ಯಗಳನ್ನು ಮಾಡುವುದಿಲ್ಲ. ಹೇಗೆಂದರೆ ಯಾರಾದರೂ ಶರೀರವನ್ನು ಹಿಡಿದುಕೊಂಡರೆ ಆತ್ಮನೂ ಹಿಡಿಯಲ್ಪಡುತ್ತಾನೆ. ಕರ್ಮದ ಉದಯವಿರುವವರೆಗೆ ಬಾಹ್ಯ ಸಾಮಗ್ರಿಗಳು ಹಾಗೆಯೇ ಇರುತ್ತವೆ, ಬೇರೆ ಬಗೆಯಾಗದಂತೆ ಈ ಅಘಾತಿಕರ್ಮಗಳ ನಿಮಿತ್ತವಿದೆಯೆಂದು ತಿಳಿಯಬೇಕು.

## ನಿರ್ಬಲ ಜಡಕರ್ಮಗಳಿಂದ ಜೀವಸ್ವಭಾವದ ಘಾತ ಮತ್ತು ಬಾಹ್ಯ ಸಾಮಗ್ರಿಯ ಲಾಭ :-

**ಪ್ರಶ್ನೆ :-** ಕರ್ಮಗಳಂತೂ ಜಡವಿದ್ದು ಸ್ವಲ್ಪವೂ ಬಲಿಷ್ಠವಿಲ್ಲವೆಂದ ಮೇಲೆ ಅವುಗಳಿಂದ ಜೀವ ಸ್ವಭಾವದ ಘಾತವಾಗುವುದು ಹಾಗೂ ಬಾಹ್ಯ ಸಾಮಗ್ರಿಗಳು ದೊರಕುವುದು ಹೇಗೆ ಸಂಭವವಿದೆ ?

**ಉತ್ತರ :-** ಕರ್ಮಗಳು ಸ್ವಯಂ ಕರ್ತೃವಾಗಿ ಪ್ರಯತ್ನದಿಂದ ಜೀವ ಸ್ವಭಾವದ ಘಾತ ಮಾಡಿದರೆ, ಬಾಹ್ಯ ಸಾಮಗ್ರಿಗಳನ್ನು ದೊರಕಿಸಿಕೊಟ್ಟರೆ ಆ ಕರ್ಮಗಳಲ್ಲಿ ಚೈತನ್ಯತನವೂ ಬೇಕು ಮತ್ತು ಬಲಿಷ್ಠತನವೂ ಬೇಕು ; ಹಾಗಂತೂ ಇಲ್ಲ, ಆದರೆ ಸ್ವಾಭಾವಿಕವಾಗಿಯೇ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಆ ಕರ್ಮಗಳ ಉದಯಕಾಲವಿದ್ದಾಗ ಆತ್ಮನು ತಾನಾಗಿಯೇ ಸ್ವಭಾವರೂಪದಿಂದ ಪರಿಣಮಿಸದೆ ವಿಭಾವರೂಪದಿಂದ ಪರಿಣಮಿಸುತ್ತಾನೆ, ಮತ್ತು ಆ ಅನ್ಯ ದ್ರವ್ಯಗಳು ಹಾಗೆಯೇ ಸಂಬಂಧರೂಪವಾಗಿ ಪರಿಣಮಿಸುತ್ತವೆ.

ಹೇಗೆಂದರೆ ಓರ್ವ ಪುರುಷನ ತಲೆಯ ಮೇಲೆ ಮೋಹನ ಧೂಳು ಬೀಳುವುದರಿಂದ ಆ ಪುರುಷನು

ಹುಚ್ಚನಾಗುವನು ; ಆ ಮೋಹನ ಧೂಳಕ್ಕೆ ಜ್ಞಾನವೂ ಇರಲಿಲ್ಲ ಮತ್ತು ಬಲಿಷ್ಠತನವೂ ಇರಲಿಲ್ಲ, ಆದರೆ ಆ ಮರುಳತನವು ಮೋಹನ ಧೂಳದಿಂದಲೇ ಆಗಿರುವುದನ್ನು ಕಾಣುತ್ತೇವೆ. ಅದರಲ್ಲಿ ಮೋಹನ ಧೂಳದ್ದಂತೂ ನಿಮಿತ್ತವಿದೆ ಮತ್ತು ಪುರುಷನು ತಾನೇ ಹುಚ್ಚನಾಗಿ ಪರಿಣಮಿಸುತ್ತಾನೆ, ನಿಮಿತ್ತ-ನೈಮಿತ್ತಿಕಗಳು ಹೀಗೆಯೇ ಆಗುತ್ತಿರುತ್ತವೆ.

ಯಾವ ಪ್ರಕಾರ ಸೂರ್ಯೋದಯದ ಕಾಲದಲ್ಲಿ ಹೆಣ್ಣು-ಗಂಡು ಚಕ್ರವಾಕ ಪಕ್ಷಿಗಳ ಸಂಯೋಗವಾಗುತ್ತದೆ; ಆದರೆ ರಾತ್ರಿಯಲ್ಲಿ ಯಾರೂ ದ್ವೇಷ ಬುದ್ಧಿಯಿಂದ ಬಲವಂತ ಮಾಡಿ ಅಗಲಿಸಿಲ್ಲ, ಹಗಲಿನಲ್ಲಿ ಯಾರೂ ಕಾರುಣ್ಯ ಬುದ್ಧಿಯಿಂದ ತಂದು ಕೂಡಿಸಿಲ್ಲ, ಸೂರ್ಯೋದಯದ ನಿಮಿತ್ತ ಪಡೆದು ಅವು ತಾವಾಗಿಯೇ ಬೆರೆಯುತ್ತವೆ. ನಿಮಿತ್ತ-ನೈಮಿತ್ತಿಕತನವು ಹೀಗೆಯೇ ಆಗುತ್ತಲಿದೆ. ಅದೇ ಪ್ರಕಾರ ಕರ್ಮದ್ದೂ ನಿಮಿತ್ತ-ನೈಮಿತ್ತಿಕ ಭಾವಗಳನ್ನು ತಿಳಿಯಬೇಕು. ಕರ್ಮದ ಉದಯದಿಂದ ಈ ಪ್ರಕಾರದ ಅವಸ್ಥೆಗಳಾಗುತ್ತವೆ.

## ನವೀನ ಬಂಧ ವಿಚಾರ :-

ಈಗ ನವೀನ ಕರ್ಮಬಂಧವು ಹೇಗಾಗುತ್ತದೆಂಬುದನ್ನು ಹೇಳುತ್ತಾರೆ- ಯಾವ ಪ್ರಕಾರ ಸೂರ್ಯನ ಪ್ರಕಾಶವು ಎಷ್ಟು ಮೋಡದ ಆವರಣದಿಂದ ವ್ಯಕ್ತವಿಲ್ಲ ಅಷ್ಟರದು ಆ ಕಾಲದಲ್ಲಿ ಅಭಾವವಿದೆ, ಮತ್ತು ಆ ಮೋಡದ ಆವರಣದ ಕುಗ್ಗುವಿಕೆಯಿಂದ ಎಷ್ಟು ಪ್ರಕಾಶವು ಪ್ರಕಟವಿದೆ ಅದು ಆ ಸೂರ್ಯನ ಸ್ವಭಾವದ ಅಂಶವಿದೆ-ಮೋಡದ ಆವರಣ ಜನ್ಯವಲ್ಲ, ಅದೇ ಪ್ರಕಾರ ಜೀವದ-ಜ್ಞಾನ-ದರ್ಶನ-ವೀರ್ಯ ಸ್ವಭಾವವು ಜ್ಞಾನಾವರಣ, ದರ್ಶನಾವರಣ, ಅಂತರಾಯದ ನಿಮಿತ್ತದಿಂದ ಎಷ್ಟು ವ್ಯಕ್ತವಿಲ್ಲ ಅಷ್ಟರದಂತೂ ಆ ಕಾಲದಲ್ಲಿ ಅಭಾವವಿದೆ. ಮತ್ತು ಆ ಕರ್ಮಗಳ ಕ್ಷಯೋಪಶಮದಿಂದ ಎಷ್ಟು ಜ್ಞಾನ-ದರ್ಶನ-ವೀರ್ಯಗಳು ಪ್ರಕಟವಿವೆ ಅದು ಆ ಜೀವ ಸ್ವಭಾವದ ಅಂಶವೇ ಇದೆ, ಕರ್ಮಜನ್ಯ ಔಪಾಧಿಕ ಭಾವಗಳಲ್ಲ. ಆದುದರಿಂದ ಇಂಥ ಸ್ವಭಾವಾಂಶದ ಅಭಾವವು ಅನಾದಿಯಿಂದ ಹಿಡಿದು ಎಂದೂ ಆಗುವುದಿಲ್ಲ. ಇದರಿಂದಲೇ ಈ ನೋಡುವಂಥ-ತಿಳಿದುಕೊಳ್ಳುವಂಥ ಶಕ್ತಿಯನ್ನು ಧರಿಸಿದ ವಸ್ತುವೇ ಆತ್ಮವಿದೆಯೆಂದು ಜೀವದ ಜೀವತ್ವತನದ ನಿಶ್ಚಯ ಮಾಡಲಾಗುತ್ತದೆ.

ಈ ಸ್ವಭಾವದಿಂದ ನವೀನ ಕರ್ಮದ ಬಂಧವಾಗುವುದಿಲ್ಲ; ಏಕೆಂದರೆ ನಿಜಸ್ವಭಾವವೇ ಬಂಧದ ಕಾರಣವಾದರೆ ಬಂಧದ ಬಿಡುಗಡೆ ಹೇಗಾಗುವುದು ? ಮತ್ತು ಆ ಕರ್ಮಗಳ ಉದಯದಿಂದ ಎಷ್ಟು ಜ್ಞಾನ-ದರ್ಶನ-ವೀರ್ಯಗಳು ಅಭಾವರೂಪವಿವೆ ಅವುಗಳಿಂದಲೂ ಬಂಧವಾಗುವುದಿಲ್ಲ; ಏಕೆಂದರೆ ತನ್ನದೇ ಅಭಾವವಾದ ಮೇಲೆ ಉಳಿದವುಗಳಿಗೆ ಕಾರಣ ಹೇಗಾಗುವುದು ? ಆದುದರಿಂದ ಜ್ಞಾನಾವರಣ, ದರ್ಶನಾವರಣ, ಅಂತರಾಯದ ನಿಮಿತ್ತದಿಂದ ಉತ್ಪನ್ನವಾದ ಭಾವಗಳು ನವೀನ ಕರ್ಮಬಂಧಕ್ಕೆ ಕಾರಣಗಳಿಲ್ಲ.

ಅದರಂತೆ ಮೋಹನೀಯ ಕರ್ಮದಿಂದ ಜೀವನಿಗೆ ಅಯಥಾರ್ಥ-ಶ್ರದ್ಧಾರೂಪದ ಮಿಥ್ಯಾತ್ವಭಾವವಿರುತ್ತದೆ ಮತ್ತು ಕ್ರೋಧ, ಮಾನ, ಮಾಯೆ, ಲೋಭ ಮೊದಲಾದ ಕಷಾಯಗಳಿರುತ್ತವೆ. ಅವು ಜೀವದ ಅಸ್ತಿತ್ವಮಯವಿದ್ದರೂ, ಜೀವದಿಂದ ಭಿನ್ನವಿಲ್ಲದಿದ್ದರೂ, ಜೀವವೇ ಅವುಗಳ ಕರ್ತೃವಾಗಿದ್ದರೂ, ಜೀವದ ಪರಿಣಮನರೂಪವಾಗಿಯೇ ಆ ಕಾರ್ಯಗಳಿದ್ದರೂ ಅವು ಮೋಹನೀಯ ಕರ್ಮದ ನಿಮಿತ್ತದಿಂದಲೇ ಆಗುತ್ತವೆ, ಕರ್ಮದ ನಿಮಿತ್ತವು ದೂರವಾದ

ಮೇಲೆ ಅವುಗಳ ಅಭಾವವೇ ಆಗುತ್ತಿರುವುದರಿಂದ ಅವು ಜೀವದ ನಿಜಸ್ವಭಾವಗಳಲ್ಲ, ಔಪಾಧಿಕ ಭಾವಗಳಿವೆ. ಆ ಭಾವಗಳಿಂದ ನವೀನ ಬಂಧವಾಗುತ್ತದೆ; ಆದುದರಿಂದ ಮೋಹದ ಉದಯದಿಂದ ಉತ್ಪನ್ನವಾದ ಭಾವಗಳು ಬಂಧಕ್ಕೆ ಕಾರಣವಿವೆ.

ಮತ್ತು **ಅಘಾತಿ ಕರ್ಮಗಳ ಉದಯದಿಂದ ಬಹು ಸಾಮಗ್ರಿಗಳು ದೊರಕುತ್ತವೆ.** ಅದರಲ್ಲಿ ಶರೀರಾದಿಗಳಂತೂ ಜೀವಪ್ರದೇಶಗಳೊಡನೆ ಏಕಕ್ಷೇತ್ರಾವಗಾಹಿಯಾಗಿ ಏಕಬಂಧನರೂಪವಿರುತ್ತವೆ, ಇನ್ನು ಧನ, ಕುಟುಂಬ ಮೊದಲಾದವುಗಳು ಆತ್ಮನಿಂದ ಭಿನ್ನರೂಪವಾಗಿರುವುದರಿಂದ ಅವೆಲ್ಲವು ಬಂಧಕ್ಕೆ ಕಾರಣವಾಗಿಲ್ಲ. ಏಕೆಂದರೆ **ಪರದ್ರವ್ಯಗಳು ಬಂಧದ ಕಾರಣವಾಗುವುದಿಲ್ಲ. ಅವುಗಳಲ್ಲಿ ಜೀವನಿಗೆ ಮಮತೆಯರೂಪದ ಮಿಥ್ಯಾತ್ವ ಮೊದಲಾದ ಭಾವಗಳಿರುವುದೇ ಬಂಧದ ಕಾರಣವೆಂದು ತಿಳಿಯಬೇಕು.,**

## ಯೋಗ ಮತ್ತು ಅದರಿಂದಾಗುವಂಥ ಪ್ರಕೃತಿಬಂಧ, ಪ್ರದೇಶಬಂಧ :-

ನಾಮಕರ್ಮದ ಉದಯದಿಂದ ಶರೀರ, ವಚನ ಮತ್ತು ಮನಸ್ಸುಗಳು ಉತ್ಪನ್ನವಾಗುತ್ತವೆಯೆಂದು ತಿಳಿಯಬೇಕು; ಅವುಗಳ ಚೇಷ್ಟೆಯ ನಿಮಿತ್ತದಿಂದ ಆತ್ಮ ಪ್ರದೇಶಗಳ ಚಂಚಲತೆಯಾಗುವುದರಿಂದ ಆತ್ಮನಿಗೆ ಪುದ್ಗಲವರ್ಗಣಗಳಿಂದ ಏಕಬಂಧನವಾಗುವ ಶಕ್ತಿಯುಂಟಾಗುವುದರ ಹೆಸರು ಯೋಗವಿದೆ. ಅದರ ನಿಮಿತ್ತದಿಂದ ಪ್ರತಿಸಮಯಕ್ಕೆ ಕರ್ಮರೂಪವಾಗಲು ಯೋಗ್ಯವಾದ ಅನಂತ ಪರಮಾಣುಗಳ ಗ್ರಹಣವಾಗುತ್ತದೆ ಅಲ್ಲಿ ಅಲ್ಪ ಯೋಗವಿದ್ದರೆ ಅಲ್ಪ ಪರಮಾಣುಗಳ ಗ್ರಹಣವಾಗುತ್ತದೆ ಮತ್ತು ಅಧಿಕ ಯೋಗವಿದ್ದರೆ ಅಧಿಕ ಪರಮಾಣುಗಳ ಗ್ರಹಣವಾಗುತ್ತದೆ. ಮತ್ತು ಒಂದು ಸಮಯದಲ್ಲಿ ಗ್ರಹಣ ಮಾಡಿದ ಆ ಪುದ್ಗಲ ಪರಮಾಣುಗಳಲ್ಲಿ ಜ್ಞಾನಾವರಣ ಮೊದಲಾದ ಮೂಲ ಪ್ರಕೃತಿಗಳ ಹಾಗೂ ಅವುಗಳ ಉತ್ತರ ಪ್ರಕೃತಿಗಳ ವರ್ಗೀಕರಣವು ಸಿದ್ಧಾಂತದಲ್ಲಿ ಹೇಳಿದಂತೆ ಆಗುತ್ತದೆ. ಆ ವರ್ಗೀಕರಣಕ್ಕೆ ಅನುಸರಿಸಿ ಪರಮಾಣುಗಳು ಆ ಪ್ರಕೃತಿಗಳ ರೂಪದಿಂದ ತಾವೇ ಪರಿಣಮಿಸಲ್ಪಡುತ್ತವೆ.

ಯೋಗದಲ್ಲಿ ಶುಭಯೋಗ, ಅಶುಭಯೋಗವೆಂದು ಎರಡು ಪ್ರಕಾರವಿವೆ. ಅವುಗಳಲ್ಲಿ ಧರ್ಮದ ಅಂಗಗಳೊಳಗೆ ಮನ-ವಚನ-ಕಾಯದ ಪ್ರವೃತ್ತಿಯಾದರೆ ಶುಭಯೋಗವಾಗುತ್ತದೆ ಮತ್ತು ಅಧರ್ಮದ ಅಂಗಗಳೊಳಗೆ ಅವುಗಳ ಪ್ರವೃತ್ತಿಯಾದರೆ ಅಶುಭಯೋಗವಾಗುತ್ತದೆ. ಅಲ್ಲಿ ಶುಭಯೋಗವಿರಲಿ ಅಥವಾ ಅಶುಭಯೋಗವಿರಲಿ ಸಮ್ಯಕ್ತ್ವ ಪ್ರಾಪ್ತ ಮಾಡಿಕೊಂಡಲ್ಲದೆ ಘಾತಿಕರ್ಮಗಳದ್ದಂತೂ ಸರ್ವಪ್ರಕೃತಿಗಳ ಬಂಧವು ನಿರಂತರ ಆಗುತ್ತಲೇ ಇರುತ್ತದೆ. ಯಾವುದೇ ಸಮಯವು ಯಾವುದೇ ಪ್ರಕೃತಿಯ ಬಂಧವಿಲ್ಲದೆ ಇರುವುದಿಲ್ಲ. ವಿಶೇಷವೆಂದರೆ ಮೋಹನೀಯದ ಹಾಸ್ಯ-ಶೋಕದ ಯುಗಲದಲ್ಲಿ, ರತಿ-ಅರತಿಯ ಯುಗಲದಲ್ಲಿ, ಮೂರೂ ವೇದಗಳಲ್ಲಿ ಒಂದು ಕಾಲದಲ್ಲಿ ಒಂದೊಂದೇ ಪ್ರಕೃತಿಯ ಬಂಧವಾಗುತ್ತದೆ.

ಮತ್ತು ಅಘಾತಿಕರ್ಮಗಳ ಪ್ರಕೃತಿಗಳಲ್ಲಿ ಶುಭಯೋಗವಿದ್ದರೆ ಸಾತಾವೇದನೀಯ ಮೊದಲಾದ ಪುಣ್ಯಪ್ರಕೃತಿಗಳ ಬಂಧವಾಗುತ್ತದೆ, ಅಶುಭಯೋಗವಿದ್ದರೆ ಅಸಾತಾವೇದನೀಯ ಮೊದಲಾದ ಪಾಪಪ್ರಕೃತಿಗಳ ಬಂಧವಾಗುತ್ತದೆ, ಮಿಶ್ರಯೋಗವಿದ್ದರೆ ಅದೆಷ್ಟೋ ಪುಣ್ಯಪ್ರಕೃತಿಗಳ ಹಾಗೂ ಅದೆಷ್ಟೋ ಪಾಪ ಪ್ರಕೃತಿಗಳ ಬಂಧವಾಗುತ್ತದೆ.

ಈ ಪ್ರಕಾರ ಯೋಗದ ನಿಮಿತ್ತದಿಂದ ಕರ್ಮಗಳ ಆಗಮನವಾಗುತ್ತದೆ. ಆದುದರಿಂದ ಯೋಗವು ಅದು ಆಸ್ರವವಿದೆ ಮತ್ತು ಅದರ ಮುಖಾಂತರ ಗ್ರಹಣವಾದ ಕರ್ಮಪರಮಾಣುಗಳ ಹೆಸರು ಪ್ರದೇಶವಿದೆ, ಅವುಗಳ ಬಂಧವಾಗುವುದರಿಂದ ಮತ್ತು ಅವುಗಳಲ್ಲಿ ಮೂಲೋತ್ತರ ಪ್ರಕೃತಿಗಳ ವಿಭಾಗವಾಗುವುದರಿಂದ ಯೋಗಗಳಿಂದ ಪ್ರದೇಶಬಂಧ ಹಾಗೂ ಪ್ರಕೃತಿಬಂಧವಾಗುತ್ತದೆಯೆಂದು ತಿಳಿಯಬೇಕು.

**ಕಷಾಯದಿಂದ ಸ್ಥಿತಿ ಮತ್ತು ಅನುಭಾಗಬಂಧ :-**

ಮೋಹದ ಉದಯದಿಂದ **ಮಿಥ್ಯಾತ್ವ, ಕ್ರೋಧ ಮೊದಲಾದ ಭಾವಗಳಾಗುತ್ತವೆ, ಸಾಮಾನ್ಯವಾಗಿ ಅವೆಲ್ಲವುಗಳ ಹೆಸರು ಕಷಾಯವಿದೆ.** ಅದರಿಂದ ಆ ಕರ್ಮಪ್ರಕೃತಿಗಳ ಸ್ಥಿತಿಯು ಕಟ್ಟಲ್ಪಡುತ್ತದೆ. ಅದರೊಳಗೆ ಕಟ್ಟಿದ ಸ್ಥಿತಿಯಲ್ಲಿ ಅಬಾಧಾಕಾಲವನ್ನು ಹೊರತುಪಡಿಸಿ ಅನಂತರ ಕಟ್ಟಿದ ಸ್ಥಿತಿಯು ಪೂರ್ಣವಾಗುವವರೆಗೆ ಪ್ರತಿಯೊಂದು ಸಮಯದಲ್ಲಿ ಆ ಪ್ರಕೃತಿಯ ಉದಯವು ಬರುತ್ತಲೇ ಇರುತ್ತದೆ. ಅಲ್ಲಿ ದೇವ-ಮನುಷ್ಯ, ತಿರ್ಯಂಚಾಯುವನ್ನು ಬಿಟ್ಟು ಉಳಿದ ಎಲ್ಲ ಘಾತಿ-ಅಘಾತಿ ಪ್ರಕೃತಿಗಳ ಅಲ್ಪಕಷಾಯವಿದ್ದರೆ ಅಲ್ಪಸ್ಥಿತಿ ಬಂಧವಾಗುತ್ತದೆ, ಅಧಿಕ ಕಷಾಯವಿದ್ದರೆ ಅಧಿಕ ಸ್ಥಿತಿಬಂಧವಾಗುತ್ತದೆ. ಈ ಮೂರು ಆಯುಗಳದು ಅಲ್ಪಕಷಾಯದಿಂದ ಅಧಿಕ ಮತ್ತು ಅಧಿಕ ಕಷಾಯದಿಂದ ಅಲ್ಪಸ್ಥಿತಿಬಂಧವಾಗುತ್ತದೆಯೆಂದು ತಿಳಿಯಬೇಕು.

ಮತ್ತು ಆ ಕಷಾಯದಿಂದಲೇ ಆ ಕರ್ಮಪ್ರಕೃತಿಗಳಲ್ಲಿ ಅನುಭಾಗ ಶಕ್ತಿಯ ವಿಶೇಷತೆಯಾಗುತ್ತದೆ. ಅಲ್ಲಿ ಅನುಭಾಗ ಬಂಧವಾದ ಹಾಗೆಯೇ ಉದಯಕಾಲದಲ್ಲಿ ಆ ಪ್ರಕೃತಿಗಳ ಅಧಿಕ ಅಥವಾ ಅಲ್ಪ ಫಲವು ಉತ್ಪನ್ನವಾಗುತ್ತದೆ. ಅಲ್ಲಿ ಘಾತಿಕರ್ಮಗಳ ಸರ್ವಪ್ರಕೃತಿಗಳಲ್ಲಿ ಹಾಗೂ ಅಘಾತಿ ಕರ್ಮಗಳ ಪಾಪಪ್ರಕೃತಿಗಳಲ್ಲಂತೂ ಅಲ್ಪ ಕಷಾಯವಿದ್ದರೆ ಅಲ್ಪ ಅನುಭಾಗವು ಬಂಧಿಸುತ್ತದೆ, ಅಧಿಕ ಕಷಾಯವಿದ್ದರೆ ಅಧಿಕ ಅನುಭಾಗವು ಬಂಧಿಸುತ್ತದೆ; **ಮತ್ತು ಪುಣ್ಯಪ್ರಕೃತಿಗಳಲ್ಲಿ ಅಲ್ಪ ಕಷಾಯವಿದ್ದರೆ ಅಧಿಕ ಅನುಭಾಗವು ಬಂಧಿಸುತ್ತದೆ, ಅಧಿಕ ಕಷಾಯವಿದ್ದರೆ ಅಲ್ಪ ಅನುಭಾಗವು ಬಂಧಿಸುತ್ತದೆ.**

ಈ ಪ್ರಕಾರ ಕಷಾಯಗಳಿಂದ ಕರ್ಮಪ್ರಕೃತಿಗಳ ಸ್ಥಿತಿ-ಅನುಭಾಗದ ವಿಶೇಷತೆಯಾಯಿತು; ಆದುದರಿಂದ ಕಷಾಯಗಳಿಂದ ಸ್ಥಿತಿಬಂಧ ಹಾಗೂ ಅನುಭಾಗಬಂಧವಾಗುವುದನ್ನು ತಿಳಿಯಬೇಕು.

ಯಾವ ಪ್ರಕಾರ ಅಧಿಕಮದ್ಯವಿದ್ದರೂ ಅದರಲ್ಲಿ ಸ್ವಲ್ಪಕಾಲದವರೆಗೆ ಸ್ವಲ್ಪ ಉನ್ಮತ್ತತೆಯನ್ನುಂಟು ಮಾಡುವ ಶಕ್ತಿಯಿದ್ದರೆ ಆ ಮದ್ಯವು ಕೀಳುತನಕ್ಕೆ ಪ್ರಾಪ್ತವಾಗುತ್ತದೆ, ಮತ್ತು ಸ್ವಲ್ಪ ಮದ್ಯವಿದ್ದರೂ ಅದರಲ್ಲಿ ಹೆಚ್ಚು ಕಾಲದವರೆಗೆ ಅಧಿಕ ಉನ್ಮತ್ತತೆಯನ್ನುಂಟು ಮಾಡುವ ಶಕ್ತಿಯಿದ್ದರೆ ಆ ಮದ್ಯವು ಉಚ್ಚತನಕ್ಕೆ ಪ್ರಾಪ್ತವಾಗುತ್ತದೆ; ಅದೇ ಪ್ರಕಾರ ಅಧಿಕ ಕರ್ಮಪ್ರಕೃತಿಗಳ ಪರಮಾಣುಗಳಲ್ಲಿಯೂ ಸ್ವಲ್ಪಕಾಲದವರೆಗೆ ಸ್ವಲ್ಪ ಫಲ ಕೊಡುವ ಶಕ್ತಿಯಿದ್ದರೆ ಆ ಕರ್ಮಪ್ರಕೃತಿಗಳು ಕೀಳುತನಕ್ಕೆ ಪ್ರಾಪ್ತವಾಗುತ್ತವೆ, ಮತ್ತು ಸ್ವಲ್ಪ ಕರ್ಮಪ್ರಕೃತಿಗಳ ಪರಮಾಣುಗಳಲ್ಲಿಯೂ ಹೆಚ್ಚು ಕಾಲದವರೆಗೆ ಫಲಕೊಡುವ ಶಕ್ತಿಯಿದ್ದರೆ ಆ ಕರ್ಮಪ್ರಕೃತಿಗಳು ಉಚ್ಚತನಕ್ಕೆ ಪ್ರಾಪ್ತವಾಗುತ್ತವೆ.

ಆದುದರಿಂದ ಯೋಗಗಳಿಂದಾದ ಪ್ರಕೃತಿಬಂಧ-ಪ್ರದೇಶಬಂಧಗಳು ಬಲಶಾಲಿಯಿಲ್ಲ, ಕಷಾಯಗಳಿಂದ ಮಾಡಲ್ಪಟ್ಟ ಸ್ಥಿತಿಬಂಧ-ಅನುಭಾಗಬಂಧಗಳೂ ಬಲಶಾಲಿಯಿಲ್ಲ; ಆದುದರಿಂದ ಮುಖ್ಯರೂಪದಿಂದ ಕಷಾಯವನ್ನೇ

ಬಂಧದ ಕಾರಣವೆಂದು ತಿಳಿಯಬೇಕು. **ಬಂಧಮಾಡಿಕೊಳ್ಳುವ ಇಚ್ಛೆಯಿಲ್ಲದವರು ಕಷಾಯವನ್ನು ಮಾಡಬಾರದು.**

## ಜ್ಞಾನಶೂನ್ಯ ಜಡ-ಪುದ್ಗಲ ಪರಮಾಣುಗಳ ಯಥಾಯೋಗ್ಯ ಪ್ರಕೃತಿರೂಪ ಪರಿಣಮನ :-

**ಪ್ರಶ್ನೆ :-** ಪುದ್ಗಲ ಪರಮಾಣುಗಳು ಜಡವಾಗಿದ್ದು ಅವಕ್ಕೆ ಸ್ವಲ್ಪಕೂಡ ಜ್ಞಾನವಿಲ್ಲವೆಂದಮೇಲೆ ಅವು ಯಥಾಯೋಗ್ಯ ಪ್ರಕೃತಿರೂಪವಾಗಿ ಹೇಗೆ ಪರಿಣಮನ ಮಾಡುತ್ತವೆ ?

**ಉತ್ತರ :-** ಯಾವ ಪ್ರಕಾರ ಹಸಿವೆಯಾದ ಮೇಲೆ ಮುಖದಿಂದ ಗ್ರಹಣ ಮಾಡಿದ ಭೋಜನ ರೂಪದ ಪುದ್ಗಲ ಪಿಂಡವು ಅದು ಮಾಂಸ, ವೀರ್ಯ, ರಕ್ತ ಮೊದಲಾದ ಧಾತುಗಳ ರೂಪದಿಂದ ಪರಿಣಮಿಸುತ್ತದೆ. ಇನ್ನು ಆ ಭೋಜನದ ಪರಮಾಣುಗಳಲ್ಲಿ ಯಥಾಯೋಗ್ಯವಾಗಿ ಒಂದು ಧಾತುರೂಪದಿಂದ ಅಲ್ಪ ಹಾಗೂ ಇನ್ನೊಂದು ಧಾತುರೂಪದಿಂದ ಅಧಿಕ ಪರಮಾಣುಗಳಿರುತ್ತವೆ, ಮತ್ತು ಅವುಗಳಲ್ಲಿ ಕೆಲವು ಪರಮಾಣುಗಳ ಸಂಬಂಧವು ಅಧಿಕಕಾಲವಿರುತ್ತದೆ ಕೆಲವುಗಳದ್ದು ಅಲ್ಪಕಾಲವಿರುತ್ತದೆ. ಇನ್ನು ಆ ಪರಮಾಣುಗಳಲ್ಲಿ ಕೆಲವಂತೂ ತಮ್ಮ ಕಾರ್ಯವನ್ನುತ್ಪನ್ನ ಮಾಡುವ ಅಧಿಕ ಶಕ್ತಿ ಹೊಂದಿದ್ದರೆ ಕೆಲವು ಅಲ್ಪಶಕ್ತಿ ಹೊಂದಿವೆ. ಹೀಗಾಗುವಲ್ಲಿ ಆ ಭೋಜನ ರೂಪದ ಪುದ್ಗಲಪಿಂಡಕ್ಕೆ ನಾನು ಈ ಪ್ರಕಾರ ಪರಿಣಮನ ಮಾಡುವೆ, ಬೇರೆ ಯಾವ ಪ್ರಕಾರ ಪರಿಣಮನ ಮಾಡುವುದಿಲ್ಲವೆಂಬ ಜ್ಞಾನವಂತೂ ಇಲ್ಲ, ಹೀಗೆಯೇ ನಿಮಿತ್ತ-ನೈಮಿತ್ತಿಕ ಭಾವವಾಗುತ್ತಿರುವುದರಿಂದ ಪರಿಣಮನವು ಹಾಗೇ ಕಂಡು ಬರುತ್ತದೆ.

ಅದೇ ಪ್ರಕಾರ ಕಷಾಯವಾದ ಮೇಲೆ ಯೋಗದ್ವಾರದಿಂದ ಗ್ರಹಣ ಮಾಡಿದ ಕರ್ಮವರ್ಗಣಾರೂಪದ ಪುದ್ಗಲ ಪಿಂಡವು ಜ್ಞಾನಾವರಣ ಮೊದಲಾದ ಪ್ರಕೃತಿರೂಪದಿಂದ ಪರಿಣಮಿಸುತ್ತದೆ, ಇನ್ನು ಆ ಕರ್ಮ ಪರಮಾಣುಗಳಲ್ಲಿ ಯಥಾಯೋಗ್ಯವಾಗಿ ಒಂದು ಪ್ರಕೃತಿರೂಪದಿಂದ ಅಲ್ಪ ಹಾಗೂ ಇನ್ನೊಂದು ಪ್ರಕೃತಿರೂಪದಿಂದ ಅಧಿಕ ಪರಮಾಣುಗಳಿರುತ್ತವೆ. ಮತ್ತು ಅವುಗಳಲ್ಲಿ ಕೆಲವು ಪರಮಾಣುಗಳ ಸಂಬಂಧವು ಅಧಿಕ ಕಾಲವಿರುತ್ತದೆ ಕೆಲವುಗಳದ್ದು ಅಲ್ಪಕಾಲವಿರುತ್ತದೆ ಮತ್ತು ಆ ಪರಮಾಣುಗಳಲ್ಲಿ ಕೆಲವಂತೂ ತಮ್ಮ ಕಾರ್ಯವನ್ನುತ್ಪನ್ನ ಮಾಡುವ ಅಧಿಕ ಶಕ್ತಿ ಹೊಂದಿದ್ದರೆ ಕೆಲವು ಅಲ್ಪ ಶಕ್ತಿ ಹೊಂದಿವೆ. ಹೀಗಾಗುವಲ್ಲಿ ಆ ಕರ್ಮವರ್ಗಣಾರೂಪದ ಪುದ್ಗಲ ಪಿಂಡಕ್ಕೆ ನಾನು ಈ ಪ್ರಕಾರ ಪರಿಣಮನ ಮಾಡುವೆ ಬೇರೆ ಯಾವ ಪ್ರಕಾರ ಪರಿಣಮನ ಮಾಡುವುದಿಲ್ಲವೆಂಬ ಜ್ಞಾನವಂತೂ ಇಲ್ಲ; ಆದರೆ ಹೀಗೆಯೇ ನಿಮಿತ್ತ-ನೈಮಿತ್ತಿಕ ಭಾವವಾಗುತ್ತಿರುವುದರಿಂದ ಪರಿಣಮನವು ಹಾಗೇ ಕಂಡು ಬರುತ್ತದೆ.

ಜಗತ್ತಿನಲ್ಲಿ ಇಂಥ ನಿಮಿತ್ತ-ನೈಮಿತ್ತಿಕಗಳು ಸಾಕಷ್ಟು ಸಂಭವಿಸುತ್ತಿವೆ. ಯಾವ ಪ್ರಕಾರ ಮಂತ್ರದ ನಿಮಿತ್ತದಿಂದ ನೀರು ಮೊದಲಾದವುಗಳಲ್ಲಿ ರೋಗಾದಿಗಳನ್ನು ದೂರ ಮಾಡುವ ಶಕ್ತಿಯುಂಟಾಗುತ್ತದೆ ಮತ್ತು ಹರಳು ಮೊದಲಾದವುಗಳಲ್ಲಿ ಸರ್ಪಾದಿಗಳನ್ನು ತಡೆಯುವ ಶಕ್ತಿಯುಂಟಾಗುತ್ತದೆ; ಅದೇ ಪ್ರಕಾರ ಜೀವಭಾವದ ನಿಮಿತ್ತದಿಂದ ಪುದ್ಗಲ ಪರಮಾಣುಗಳಲ್ಲಿ ಜ್ಞಾನಾವರಣಾದಿರೂಪದ ಶಕ್ತಿಯುಂಟಾಗುತ್ತದೆ. ಇಲ್ಲಿ ವಿಚಾರ ಮಾಡಿ ತಮ್ಮ ಪ್ರಯತ್ನದಿಂದ ಕಾರ್ಯ ಮಾಡಬೇಕಾದರೆ ಜ್ಞಾನಬೇಕು, ಆದರೆ ಹಾಗೆ ನಿಮಿತ್ತವೊದಗಿದ ಮೇಲೆ ತಾನಾಗಿಯೇ ಹಾಗೆ ಪರಿಣಮನವಾದರೆ ಅಲ್ಲಿ ಜ್ಞಾನದ ಪ್ರಯೋಜನವೇನೂ ಇಲ್ಲ.

ಈ ಪ್ರಕಾರ ನವೀನಬಂಧವಾಗುವ ವಿಧಾನವನ್ನು ತಿಳಿಯಬೇಕು.

**ಸತ್ತಾರೂಪ ಕರ್ಮಗಳ ಅವಸ್ಥೆ :-**

ಕರ್ಮರೂಪವಾಗಿ ಪರಿಣಮಿಸಿದ ಪರಮಾಣುಗಳ ಉದಯಕಾಲವು ಬರುವವರೆಗೆ ಜೀವ ಪ್ರದೇಶಗಳಿಂದ ಏಕಕ್ಷೇತ್ರಾವಗಾಹರೂಪದ ಬಂಧನವಿರುತ್ತದೆ, ಅಲ್ಲಿ ಜೀವಭಾವದ ನಿಮಿತ್ತದಿಂದ ಕೆಲವು ಪ್ರಕೃತಿಗಳ ಅವಸ್ಥೆಯ ಬದಲಾವಣೆಯೂ ಆಗಿಹೋಗುತ್ತದೆ. ಅಲ್ಲಿ ಕೆಲವು ಬೇರೆ ಪ್ರಕೃತಿಗಳ ಪರಮಾಣುಗಳು ಸಂಕ್ರಮಣರೂಪವಾಗಿ ಅನ್ಯಪ್ರಕೃತಿಗಳ ಪರಮಾಣುಗಳಾಗಿ ಹೋಗುತ್ತವೆ, ಇನ್ನು ಕೆಲವು ಪ್ರಕೃತಿಗಳ ಸ್ಥಿತಿ ಹಾಗೂ ಅನುಭಾಗಗಳು ಅಧಿಕವಿದ್ದವು ಅಪಕರ್ಷಣವಾಗಿ ಅಲ್ಪವಾಗುತ್ತವೆ. ಮತ್ತು ಕೆಲವು ಪ್ರಕೃತಿಗಳ ಸ್ಥಿತಿ ಹಾಗೂ ಅನುಭಾಗಗಳು ಅಲ್ಪವಿದ್ದವು ಉತ್ಕರ್ಷಣವಾಗಿ ಅಧಿಕವಾಗುತ್ತವೆ. ಈ ಪ್ರಕಾರ ಪೂರ್ವದಲ್ಲಿ ಕಟ್ಟಿದ ಪರಮಾಣುಗಳ ಅವಸ್ಥೆ ಕೂಡ ಜೀವ ಭಾವಗಳ ನಿಮಿತ್ತ ಪಡೆದು ಬದಲಾಗುತ್ತದೆ, ಮತ್ತು ನಿಮಿತ್ತವು ದೊರಕದಿದ್ದರೆ ಬದಲಾವಣೆಯಾಗುವುದಿಲ್ಲ, ಇದ್ದ ಹಾಗೆಯೇ ಉಳಿಯುತ್ತದೆ.

ಈ ಪ್ರಕಾರ ಸತ್ತಾರೂಪ ಕರ್ಮಗಳಿರುತ್ತವೆ.

**ಕರ್ಮಗಳ ಉದಯರೂಪ ಅವಸ್ಥೆ :-**

ಕರ್ಮಪ್ರಕೃತಿಗಳ ಉದಯಕಾಲವು ಬಂದಾಗ ಆ ಪ್ರಕೃತಿಗಳ ಅನುಭಾಗಕ್ಕನುಸರಿಸಿ ತಾನಾಗಿಯೇ ಕಾರ್ಯವಾಗುವುದು, ಕರ್ಮವು ಆ ಕಾರ್ಯಗಳನ್ನು ಉತ್ಪನ್ನ ಮಾಡುವುದಿಲ್ಲ. ಅವುಗಳ ಉದಯಕಾಲ ಬಂದ ಮೇಲೆ ಕಾರ್ಯಗಳಾಗುವುದೇ ನಿಮಿತ್ತ-ನೈಮಿತ್ತಿಕ ಸಂಬಂಧವೆಂದು ತಿಳಿಯಬೇಕು, ಯಾವ ಸಮಯದಲ್ಲಿ ಫಲವು ಉತ್ಪನ್ನವಾಗುವುದು ಅದರ ಅನಂತರ ಸಮಯದಲ್ಲಿ ಆ ಕರ್ಮರೂಪ ಪುದ್ಗಲಗಳಿಗೆ ಅನುಭಾಗ ಶಕ್ತಿಯ ಅಭಾವವಾಗುವುದರಿಂದ ಕರ್ಮತ್ವತನದ ಅಭಾವವಾಗುತ್ತದೆ, ಆ ಪುದ್ಗಲಗಳು ಅನ್ಯಪರ್ಯಾಯರೂಪದಿಂದ ಪರಿಣಮಿಸುವುದರ ಹೆಸರು ಸವಿಪಾಕ ನಿರ್ಜರೆಯಿದೆ.

ಈ ಪ್ರಕಾರ ಪ್ರತಿ ಸಮಯದಲ್ಲಿ ಉದಯವಾಗಿ ಕರ್ಮಗಳು ಉದುರಿ ಹೋಗುತ್ತವೆ.

ಕರ್ಮತ್ವತನದ ನಾಸ್ತಿಯಾದನಂತರ ಆ ಪರಮಾಣುಗಳು ಅದೇ ಸ್ಕಂಧದಲ್ಲಿರಲಿ ಅಥವಾ ಭಿನ್ನವಾಗಲಿ ಯಾವ ಪ್ರಯೋಜನವಿಲ್ಲ. ಆದರೆ ಈ ಜೀವಕ್ಕೆ ಪ್ರತಿಯೊಂದು ಸಮಯದಲ್ಲಿ ಅನಂತ ಪರಮಾಣುಗಳು ಬಂಧಿಸುತ್ತವೆ; ಆ ಒಂದು ಸಮಯದಲ್ಲಿ ಬಂಧಿಸಿದ ಪರಮಾಣುಗಳು ಅಬಾಧಾಕಾಲವನ್ನು ಬಿಟ್ಟುಕೊಟ್ಟು ತಮ್ಮ ಸ್ಥಿತಿಯಿರುವಷ್ಟು ಸಮಯಗಳಲ್ಲಿ ಕ್ರಮದಿಂದ ಉದಯಕ್ಕೆ ಬರುತ್ತವೆ. ಮತ್ತು ಅಧಿಕ ಸಮಯಗಳಲ್ಲಿ ಕಟ್ಟಿದ ಪರಮಾಣುಗಳೆಲ್ಲವು ಒಂದು ಸಮಯದಲ್ಲಿ ಉದಯಕ್ಕೆ ಬರಲು ಯೋಗ್ಯವಿದ್ದರೆ ಅವೆಲ್ಲವು ಏಕತ್ರಿತವಾಗಿ ಉದಯಕ್ಕೆ ಬರುತ್ತವೆ. ಅವೆಲ್ಲ ಪರಮಾಣುಗಳ ಅನುಭಾಗಗಳು ಸೇರಿ ಎಷ್ಟು ಅನುಭಾಗಗಳಾಗುವವು ಅಷ್ಟು ಫಲವು ಆ ಕಾಲದಲ್ಲಿ ಉತ್ಪನ್ನವಾಗುತ್ತದೆ. ಮತ್ತು ಅನೇಕ ಸಮಯಗಳಲ್ಲಿ ಕಟ್ಟಿದ ಪರಮಾಣುಗಳು ಬಂಧ ಸಮಯದಿಂದ ಹಿಡಿದು ಉದಯ ಸಮಯದವರೆಗೆ ಕರ್ಮರೂಪ ಅಸ್ತಿತ್ವವನ್ನು ಧಾರಣಮಾಡಿ ಜೀವದೊಡನೆ ಸಂಬಂಧರೂಪವಾಗಿರುತ್ತವೆ.

ಈ ಪ್ರಕಾರ ಕರ್ಮಗಳ ಬಂಧ-ಉದಯ-ಸತ್ತಾರೂಪವಾದ ಅವಸ್ಥೆಯನ್ನು ತಿಳಿಯಬೇಕು. ಅವುಗಳಲ್ಲಿ ಪ್ರತಿಯೊಂದು ಸಮಯದಲ್ಲಿ ಒಂದು ಸಮಯಪ್ರಬದ್ಧಮಾತ್ರ ಪರಮಾಣುಗಳು ಬಂಧಿಸುತ್ತವೆ ಮತ್ತು ಒಂದು ಸಮಯಪ್ರಬದ್ಧ ಮಾತ್ರದ ನಿರ್ಜರೆಯಾಗುತ್ತದೆ. ಒಂದೂವರೆ-ಗುಣಹಾನಿಯಿಂದ ಗುಣಿಸಿದ ಸಮಯಪ್ರಬದ್ಧ ಮಾತ್ರ ಸದಾಕಾಲವು ಸತ್ತಾದಲ್ಲಿರುತ್ತದೆ.

**ಇವೆಲ್ಲವುಗಳ ವಿಶೇಷ ವರ್ಣನೆಯನ್ನು ಮುಂದೆ ಕರ್ಮಾಧಿಕಾರದಲ್ಲಿ ಮಾಡುವೆವು ಅಲ್ಲಿಂದ ತಿಳಿದುಕೊಳ್ಳಬೇಕು.**

## ದ್ರವ್ಯಕರ್ಮ ಮತ್ತು ಭಾವಕರ್ಮದ ಸ್ವರೂಪ ಹಾಗೂ ಪ್ರವೃತ್ತಿ :-

ಈ ಪ್ರಕಾರ ಈ ಕರ್ಮವು ಪರಮಾಣುರೂಪ ಅನಂತ ಪುದ್ಗಲದ್ರವ್ಯಗಳಿಂದ ಉತ್ಪನ್ನವಾಗಿರುವ ಕಾರ್ಯವಿರುವುದರಿಂದ ಅದರ ಹೆಸರು ದ್ರವ್ಯಕರ್ಮವಿದೆ. ಮತ್ತು ಮೋಹದ ನಿಮಿತ್ತದಿಂದ ಮಿಥ್ಯಾತ್ವ-ಕ್ರೋಧಾದಿ ರೂಪದ ಪರಿಣಾಮಗಳು ಜೀವದ ಅಶುದ್ಧಭಾವದಿಂದ ಉತ್ಪನ್ನವಾದ ಕಾರ್ಯವಿರುವುದರಿಂದ ಇದರ ಹೆಸರು ಭಾವಕರ್ಮವಿದೆ. ದ್ರವ್ಯಕರ್ಮದ ನಿಮಿತ್ತದಿಂದ ಭಾವಕರ್ಮವಾಗುತ್ತದೆ ಮತ್ತು ಭಾವಕರ್ಮದ ನಿಮಿತ್ತದಿಂದ ದ್ರವ್ಯಕರ್ಮದ ಬಂಧವಾಗುತ್ತದೆ. ಇನ್ನು ದ್ರವ್ಯಕರ್ಮದಿಂದ ಭಾವಕರ್ಮ ಮತ್ತು ಭಾವಕರ್ಮದಿಂದ ದ್ರವ್ಯಕರ್ಮ ಹೀಗೆ ಪರಸ್ಪರ ಕಾರಣಕಾರ್ಯಭಾವದಿಂದ ಸಂಸಾರಚಕ್ರದಲ್ಲಿ ಪರಿಭ್ರಮಣವಾಗುತ್ತದೆ.

ತೀವ್ರ-ಮಂದ ಬಂಧವಾಗುವುದರಿಂದ ಅಥವಾ ಸಂಕ್ರಮಣಾದಿಗಳಾಗುವುದರಿಂದ ಅಥವಾ ಏಕಕಾಲದಲ್ಲಿ ಕಟ್ಟಿದ್ದು ಅನೇಕ ಕಾಲದಲ್ಲಿ ಅಥವಾ ಅನೇಕ ಕಾಲದಲ್ಲಿ ಕಟ್ಟಿದ್ದು ಏಕಕಾಲದಲ್ಲಿ ಉದಯಕ್ಕೆ ಬರುವಲ್ಲಿ ಯಾವುದೇ ಒಂದು ಕಾಲದಲ್ಲಿ ತೀವ್ರ ಉದಯ ಬಂದಾಗ ತೀವ್ರಕಷಾಯವಾಗುವುದು ಆಗ ನವೀನ ಬಂಧವು ತೀವ್ರವೇ ಆಗುವುದು; ಮತ್ತು ಯಾವುದೇ ಒಂದು ಕಾಲದಲ್ಲಿ ಮಂದ ಉದಯಬಂದಾಗ ಮಂದಕಷಾಯವಾಗುವುದು ಆಗ ಬಂಧವು ಮಂದವೇ ಆಗುವುದೆಂದು ತಿಳಿಯಬೇಕು. ಇನ್ನು ಆ ತೀವ್ರ-ಮಂದಕಷಾಯಗಳಿಗನುಸರಿಸಿಯೇ ಮೊದಲು ಕಟ್ಟಿದ ಕರ್ಮಗಳದ್ದೂ ಸಂಕ್ರಮಣಾದಿಗಳಾದರೆ ಆಗುವವು.

ಈ ಪ್ರಕಾರ ಅನಾದಿಯಿಂದ ಹಿಡಿದು ಧಾರಾಪ್ರವಾಹರೂಪದಿಂದ ದ್ರವ್ಯಕರ್ಮ ಮತ್ತು ಭಾವಕರ್ಮದ ಪ್ರವೃತ್ತಿಯಿದೆಯೆಂದು ತಿಳಿಯಬೇಕು.

## ನೋಕರ್ಮದ ಸ್ವರೂಪ ಹಾಗೂ ಪ್ರವೃತ್ತಿ :-

ನಾಮಕರ್ಮದ ಉದಯದಿಂದ ಶರೀರವಾಗುತ್ತಿದ್ದು ಅದು ದ್ರವ್ಯಕರ್ಮದಂತೆ ಒಂದಿಷ್ಟು ಸುಖ-ದುಃಖದ ಕಾರಣವಿರುವುದರಿಂದ ಶರೀರವನ್ನು ನೋಕರ್ಮವೆಂದು ಹೇಳುತ್ತಾರೆ. ಇಲ್ಲಿ ನೋ ಶಬ್ದವನ್ನು ಈಷತ್ (ಅಲ್ಪ) ವಾಚಕವೆಂದು ತಿಳಿಯಬೇಕು. ಆದುದರಿಂದ ಶರೀರವು ಪುದ್ಗಲ ಪರಮಾಣುಗಳ ಪಿಂಡವಿದ್ದು ದ್ರವ್ಯೇಂದ್ರಿಯ, ದ್ರವ್ಯಮನ, ಶ್ವಾಸೋಚ್ಛ್ವಾಸ ಮತ್ತು ವಚನಗಳೆಲ್ಲವೂ ಶರೀರದ ಅಂಗಗಳೇ ಇರುವುದರಿಂದ ಅದನ್ನು ಕೂಡ ಪುದ್ಗಲ ಪರಮಾಣುಗಳ ಪಿಂಡವೆಂದು ತಿಳಿಯಬೇಕು.

ಈ ಪ್ರಕಾರ ಶರೀರದ ಮತ್ತು ದ್ರವ್ಯಕರ್ಮದ ಸಂಬಂಧದೊಡನೆ ಜೀವಕ್ಕೆ ಏಕಕ್ಷೇತ್ರಾವಗಾಹರೂಪದ ಬಂಧವಾಗುತ್ತದೆ. ಆದುದರಿಂದ ಶರೀರದ ಜನ್ಮ ಸಮಯದಿಂದ ಹಿಡಿದು ಆಯುವಿನ ಸ್ಥಿತಿಯಿರುವಷ್ಟು ಕಾಲದವರೆಗೆ ಶರೀರದ ಸಂಬಂಧವಿರುತ್ತದೆ. ಮತ್ತು ಆಯುಷ್ಯವು ಪೂರ್ಣವಾದ ಮೇಲೆ ಮರಣವಾದಾಗ ಆ ಶರೀರದ ಸಂಬಂಧವು ಬಿಡುತ್ತದೆ. ಶರೀರ ಮತ್ತು ಆತ್ಮ ಬೇರೆ-ಬೇರೆಯಾಗಿ ಹೋಗುತ್ತವೆ. ಇನ್ನು ಅದರ ಅನಂತರ ಸಮಯದಲ್ಲಿ ಅಥವಾ ಎರಡನೆಯ, ಮೂರನೆಯ, ನಾಲ್ಕನೆಯ ಸಮಯದಲ್ಲಿ ಜೀವವು ಕರ್ಮೋದಯದ ನಿಮಿತ್ತದಿಂದ ಹೊಸ ಶರೀರವನ್ನು ಧಾರಣ ಮಾಡುತ್ತದೆ; ಅಲ್ಲಿ ಕೂಡ ತನ್ನ ಆಯುಷ್ಯದವರೆಗೆ ಅದೇ ಪ್ರಕಾರದ ಸಂಬಂಧವಿರುತ್ತದೆ, ಪುನಃ ಮರಣವಾದಾಗ ಅದರಿಂದ ಸಂಬಂಧವು ಬಿಟ್ಟುಹೋಗುತ್ತದೆ, ಈ ಪ್ರಕಾರ ಪೂರ್ವ ಶರೀರದ ತ್ಯಾಗ ಮಾಡುವುದು ಹಾಗೂ ನವೀನ ಶರೀರದ ಗ್ರಹಣ ಮಾಡುವುದು ಇದು ಅನುಕ್ರಮದಿಂದ ಆಗುತ್ತಿರುತ್ತದೆ.

ಈ ಆತ್ಮನು ಅಸಂಖ್ಯಾತಪ್ರದೇಶಿಯಾಗಿದ್ದರೂ ಸಂಕೋಚ-ವಿಸ್ತಾರ ಶಕ್ತಿಯಿಂದ ಶರೀರ ಪ್ರಮಾಣವಾಗಿಯೇ ಇರುತ್ತಾನೆ; ಇನ್ನು ಸಮುದ್ಘಾತವಾದಮೇಲೆ ಶರೀರದ ಹೊರಗೂ ಆತ್ಮನ ಪ್ರದೇಶಗಳು ಹರಡುತ್ತವೆ ಮತ್ತು ಅಂತರಾಳ ಸಮಯದಲ್ಲಿ ಮೊದಲು ಬಿಟ್ಟ ಶರೀರದ ಪ್ರಮಾಣದಷ್ಟಿರುತ್ತವೆ.

ಈ ಶರೀರದ ಅಂಗಭೂತವಾದ ದ್ರವ್ಯೇಂದ್ರಿಯ ಮತ್ತು ಮನಸ್ಸುಗಳ ಸಹಾಯದಿಂದ ಜೀವನಿಗೆ ತಿಳಿದುಕೊಳ್ಳುವ ಪ್ರವೃತ್ತಿಯಾಗುತ್ತದೆ. ಮತ್ತು ಶರೀರದ ಅವಸ್ಥೆಗೆ ಅನುಸರಿಸಿ ಮೋಹದ ಉದಯದಿಂದ ಜೀವನು ಸುಖಿ-ದುಃಖಿಯಾಗುತ್ತಾನೆ. ಇನ್ನು ಒಮ್ಮೆಯಂತೂ ಜೀವದ ಇಚ್ಛೆಗೆ ಅನುಸರಿಸಿ ಶರೀರವು ಪ್ರವರ್ತಿಸುತ್ತದೆ, ಇನ್ನೊಮ್ಮೆ ಶರೀರದ ಅವಸ್ಥೆಗೆ ಅನುಸರಿಸಿ ಜೀವನು ಪ್ರವರ್ತಿಸುತ್ತಾನೆ; ಒಮ್ಮೆ ಜೀವನು ಬೇರೆ ಬಗೆಯ ಇಚ್ಛಾರೂಪದಿಂದ ಪ್ರವರ್ತಿಸುತ್ತಾನೆ, ಇನ್ನೊಮ್ಮೆ ಪುದ್ಗಲವು ಬೇರೆ ಬಗೆಯ ಅವಸ್ಥೆಯರೂಪದಿಂದ ಪ್ರವರ್ತಿಸುತ್ತದೆ.

ಹೀಗೆ ಈ ನೋಕರ್ಮದ ಪ್ರವೃತ್ತಿಯಿದೆಯೆಂದು ತಿಳಿಯಬೇಕು.

## ನಿತ್ಯನಿಗೋದ ಮತ್ತು ಇತರ ನಿಗೋದ :-

ಮೊದಲಂತೂ ಈ ಜೀವನಿಗೆ ಅನಾದಿಯಿಂದ ಹಿಡಿದು ನಿತ್ಯನಿಗೋದರೂಪ ಶರೀರದ ಸಂಬಂಧವು ಕಂಡು ಬರುತ್ತದೆ, ಅಲ್ಲಿ ನಿತ್ಯ ನಿಗೋದ ಶರೀರವನ್ನು ಧಾರಣಮಾಡಿ ಆಯುಷ್ಯ ಪೂರ್ಣವಾದ ಮೇಲೆ ಸತ್ತು ಪುನಃ ನಿತ್ಯನಿಗೋದ ಶರೀರವನ್ನು ಧಾರಣಮಾಡುತ್ತಾನೆ, ಪುನಃ ಆಯುಷ್ಯಪೂರ್ಣಮಾಡಿ ಸತ್ತು ನಿತ್ಯನಿಗೋದ ಶರೀರವನ್ನೇ ಧಾರಣಮಾಡುತ್ತಾನೆ. ಇದೇ ಪ್ರಕಾರ ಅನಂತಾನಂತ ಪ್ರಮಾಣವಾಗಿ ಜೀವರಾಶಿಯಿದ್ದು ಅದು ಅನಾದಿಯಿಂದ ಅಲ್ಲಿಯೇ ಜನ್ಮ-ಮರಣ ಮಾಡುತ್ತಲಿದೆ.

ಮತ್ತು ಅಲ್ಲಿಂದ ಆರುತಿಂಗಳು ಎಂಟು ಸಮಯದಲ್ಲಿ ಆರುನೂರಾಎಂಟು ಜೀವಗಳು ಹೊರಗೆ ಬರುತ್ತವೆ, ಹೊರಗೆ ಬಂದು ಅವು ಇತರ ಪರ್ಯಾಯಗಳನ್ನು ಧಾರಣಮಾಡುತ್ತವೆ, ಅವು ಪೃಥ್ವೀ, ಜಲ, ಅಗ್ನಿ, ಪವನ, ಪ್ರತ್ಯೇಕ ವನಸ್ಪತಿರೂಪದ ಏಕೇಂದ್ರಿಯ ಪರ್ಯಾಯಗಳಲ್ಲಿ ಹಾಗೂ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ರೂಪದ ಪರ್ಯಾಯಗಳಲ್ಲಿ ಅಥವಾ ನಾರಕ, ತಿರ್ಯಂಚ, ಮನುಷ್ಯ, ದೇವರೂಪದ ಪಂಚೇಂದ್ರಿಯ

ಪರ್ಯಾಯಗಳಲ್ಲಿ ಭ್ರಮಣ ಮಾಡುತ್ತವೆ. ಅಲ್ಲಿ ಅದೆಷ್ಟೋ ಕಾಲ ಭ್ರಮಣಮಾಡಿ ಪುನಃ ನಿಗೋದ ಪರ್ಯಾಯವನ್ನು ಪ್ರಾಪ್ತಮಾಡಿಕೊಳ್ಳುತ್ತವೆ, ಅದರ ಹೆಸರು ಇತರ ನಿಗೋದವಿದೆ.

ಅಲ್ಲಿ ಅದೆಷ್ಟೋ ಕಾಲದವರೆಗಿದ್ದು ಅಲ್ಲಿಂದ ಹೊರಹೊರಟು ಇತರ ಪರ್ಯಾಯಗಳಲ್ಲಿ ಭ್ರಮಣಮಾಡುತ್ತವೆ. ಅಲ್ಲಿ ಪರಿಭ್ರಮಣಮಾಡುವ ಉತ್ಕೃಷ್ಟಕಾಲವು ಪೃಥ್ವೀ ಮೊದಲಾದ ಸ್ಥಾವರಗಳಲ್ಲಿ ಅಸಂಖ್ಯಾತ ಕಲ್ಪ ಮಾತ್ರವಿದೆ, ಮತ್ತು ದ್ವೀಂದ್ರಿಯದಿಂದ ಪಂಚೇಂದ್ರಿಯದವರೆಗಿನ ತ್ರಸಗಳಲ್ಲಿ ಸಾಧಿಕ ಎರಡು ಸಾವಿರಸಾಗರವಿದೆ, ಇತರ ನಿಗೋದಗಳಲ್ಲಿ ಎರಡೂವರೆ ಪುದ್ಗಲ ಪರಾವರ್ತನ ಮಾತ್ರವಿದೆ, ಅದು ಕೂಡ ಅನಂತಕಾಲವಿದೆ. ಇತರ ನಿಗೋದದಿಂದ ಹೊರಹೊರಟು ಯಾವುದೇ ಒಂದು ಸ್ಥಾವರ ಪರ್ಯಾಯವನ್ನು ಪಡೆದು ಪುನಃ ನಿಗೋದಕ್ಕೆ ಹೋಗುತ್ತವೆ.

ಈ ಪ್ರಕಾರ ಏಕೇಂದ್ರಿಯ ಪರ್ಯಾಯಗಳಲ್ಲಿ ಉತ್ಕೃಷ್ಟ ಪರಿಭ್ರಮಣಕಾಲವು ಅಸಂಖ್ಯಾತ ಪುದ್ಗಲ ಪರಾವರ್ತನ ಮಾತ್ರವಿದೆ ಮತ್ತು ಜಘನ್ಯವಂತೂ ಎಲ್ಲೆಡೆ ಒಂದು ಅಂತರ್ಮುಹೂರ್ತಕಾಲವಿದೆ. ಹೀಗೆ ಅಧಿಕಾಂಶವಂತೂ ಏಕೇಂದ್ರಿಯ ಪರ್ಯಾಯಗಳನ್ನೇ ಧಾರಣ ಮಾಡುವುದಿದೆ, ಅನ್ಯಪರ್ಯಾಯಗಳ ಪ್ರಾಪ್ತಿಯಂತೂ ಕಾಕತಾಲೀಯ ನ್ಯಾಯದಂತಿದೆಯೆಂದು ತಿಳಿಯಬೇಕು.

ಈ ಪ್ರಕಾರವಾಗಿ ಈ ಜೀವನಿಗೆ ಅನಾದಿಯಿಂದಲೇ ಕರ್ಮಬಂಧನರೂಪದ ರೋಗವಾಗಿದೆ.

## ಕರ್ಮಬಂಧನರೂಪ ರೋಗದ ನಿಮಿತ್ತದಿಂದಾಗುವ ಜೀವದ ಅವಸ್ಥೆ :-

ಈ ಕರ್ಮಬಂಧನರೂಪ ರೋಗದ ನಿಮಿತ್ತದಿಂದ ಜೀವದ ಅವಸ್ಥೆ ಹೇಗಾಗುತ್ತದೆಯೆಂಬುದನ್ನು ಹೇಳುತ್ತಾರೆ,-

**ಜ್ಞಾನಾವರಣ-ದರ್ಶನಾವರಣ ಕರ್ಮೋದಯ ಜನ್ಯ ಅವಸ್ಥೆ**-ಈ ಜೀವದ ಸ್ವಭಾವವು ಚೈತನ್ಯವಿದ್ದು ಅದು ಎಲ್ಲವುಗಳ ಸಾಮಾನ್ಯ-ವಿಶೇಷ ಸ್ವರೂಪವನ್ನು ಪ್ರಕಟಪಡಿಸುವಂಥದ್ದಿದೆ. ಅವುಗಳ ಸ್ವರೂಪವಿರುವಂತೆ ತಮಗೆ ಪ್ರತಿಭಾಸವಾಗುವುದರ ಹೆಸರೇ ಚೈತನ್ಯವಿದೆ. ಇನ್ನು ಸಾಮಾನ್ಯಸ್ವರೂಪವು ಪ್ರತಿಭಾಸವಾಗುವುದರ ಹೆಸರು ದರ್ಶನವಿದ್ದರೆ ವಿಶೇಷಸ್ವರೂಪವು ಪ್ರತಿಭಾಸವಾಗುವುದರ ಹೆಸರು ಜ್ಞಾನವಿದೆ. ಇಂಥ ಸ್ವಭಾವದ ಮುಖಾಂತರ ಸಮಸ್ತ ಪದಾರ್ಥಗಳನ್ನು ತ್ರಿಕಾಲವರ್ತಿ ಸರ್ವಗುಣಪರ್ಯಾಯಸಹಿತ ಪ್ರತ್ಯಕ್ಷ ಏಕಕಾಲದಲ್ಲಿ ಯಾವ ಸಹಾಯವಿಲ್ಲದೆ ನೋಡುವಂಥ- ತಿಳಿಯುವಂಥ ಶಕ್ತಿಯು ಆತ್ಮನಲ್ಲಿ ಸದಾಕಾಲವಿದೆ; ಆದರೆ ಅನಾದಿಯಿಂದಲೇ ಜ್ಞಾನಾವರಣ, ದರ್ಶನಾವರಣ ಸಂಬಂಧವಿದ್ದು ಅದರ ನಿಮಿತ್ತದಿಂದ ಈ ಶಕ್ತಿಯ ವ್ಯಕ್ತತೆಯಾಗುವುದಿಲ್ಲ. ಆ ಕರ್ಮಗಳ ಕ್ಷಯೋಪಶಮದಿಂದ ಕಿಂಚಿತ ಮತಿಜ್ಞಾನ-ಶ್ರುತಜ್ಞಾನಗಳು ಕಂಡು ಬರುತ್ತವೆ ಮತ್ತು ಎಂದಾದರೊಮ್ಮೆ ಅವಧಿ ಜ್ಞಾನವೂ ಕಂಡುಬರುತ್ತದೆ, ಅಚಕ್ಷುದರ್ಶನವೂ ಕಂಡು ಬರುತ್ತದೆ ಅದರಂತೆ ಎಂದಾದರೊಮ್ಮೆ ಚಕ್ಷುದರ್ಶನ ಮತ್ತು ಅವಧಿದರ್ಶನ ಕೂಡ ಕಂಡುಬರುತ್ತದೆ.

ಇವುಗಳ ಪ್ರವೃತ್ತಿ ಕೂಡ ಹೇಗಿದೆಯೆಂಬುದನ್ನು ತಿಳಿಸಿಕೊಡುತ್ತಾರೆ.

## ಮತಿಜ್ಞಾನದ ಪರಾಧೀನ ಪ್ರವೃತ್ತಿ :-

ಮೊದಲಂತೂ ಮತಿಜ್ಞಾನವಿದ್ದು ಅದು ಶರೀರದ ಅಂಗಭೂತಗಳಾದ ಜಿಹ್ವೆ, ನಾಸಿಕ, ನಯನ, ಕರ್ಣ, ಸ್ಪರ್ಶನ ಈ ದ್ರವ್ಯೇಂದ್ರಿಯಗಳ ಮತ್ತು ಹೃದಯಸ್ಥಾನದಲ್ಲಿರುವ ಅರಳಿದ ಅಷ್ಟದಲ ಕಮಲದ ಆಕಾರವುಳ್ಳ ದ್ರವ್ಯಮನದ ಸಹಾಯದಿಂದಲೇ ತಿಳಿಯುತ್ತದೆ, ಯಾವ ಪ್ರಕಾರ ದೃಷ್ಟಿಮಂದವಾದವನು ತನ್ನ ಕಣ್ಣುಗಳಿಂದಲೇ ನೋಡುತ್ತಿದ್ದರೂ ಕನ್ನಡಕ ಹಚ್ಚಿದ ನಂತರವೇ ನೋಡುತ್ತಾನೆ, ಕನ್ನಡಕವಿಲ್ಲದಿದ್ದರೆ ನೋಡುವ ಸಾಧ್ಯತೆಯಿಲ್ಲ. ಅದೇ ಪ್ರಕಾರ ಆತ್ಮನ ಜ್ಞಾನವು ಮಂದವಿದ್ದು ಅವನು ತನ್ನ ಜ್ಞಾನದಿಂದಲೇ ತಿಳಿಯುತ್ತಾನೆ, ಆದರೆ ದ್ರವ್ಯೇಂದ್ರಿಯ ಹಾಗೂ ಮನಸ್ಸಿನ ಸಂಬಂಧವಾದ ನಂತರವೇ ತಿಳಿಯುತ್ತಾನೆ, ಅವುಗಳಿಲ್ಲದೆ ತಿಳಿಯುವ ಸಾಧ್ಯತೆಯಿಲ್ಲ, ಇನ್ನು ಯಾವ ಪ್ರಕಾರ ಕಣ್ಣುಗಳಂತೂ ಇದ್ದಕ್ಕಿದ್ದಂತೆ ಇವೆ, ಆದರೆ ಕನ್ನಡಕದಲ್ಲಿ ಸ್ವಲ್ಪ ದೋಷವಾಗಿದ್ದರೆ ನೋಡುವ ಸಾಧ್ಯತೆಯಿಲ್ಲ ಅಥವಾ ಸ್ವಲ್ಪ ಕಾಣುತ್ತದೆ ಇಲ್ಲವೆ ವಿಪರೀತ ಕಾಣುತ್ತದೆ; ಅದೇ ಪ್ರಕಾರ ತಮ್ಮ ಕ್ಷಯೋಪಶಮ ಜ್ಞಾನವಂತೂ ಇದ್ದಕ್ಕಿದ್ದಂತೆ ಇದೆ, ಆದರೆ ದ್ರವ್ಯೇಂದ್ರಿಯ ಹಾಗೂ ಮನಸ್ಸಿನ ಪರಮಾಣುಗಳು ವಿರುದ್ಧವಾಗಿ ಪರಿಣಮಿತವಾಗಿದ್ದರೆ ತಿಳಿಯುವ ಸಾಧ್ಯತೆಯಿಲ್ಲ ಅಥವಾ ಸ್ವಲ್ಪ ತಿಳಿಯುತ್ತದೆ ಇಲ್ಲವೆ ವಿರುದ್ಧವಾಗಿ ತಿಳಿಯುತ್ತದೆ. ಏಕೆಂದರೆ ದ್ರವ್ಯೇಂದ್ರಿಯ ಹಾಗೂ ಮನಸ್ಸುರೂಪ ಪರಮಾಣುಗಳ ಪರಿಣಮನಕ್ಕೆ ಮತ್ತು ಮತಿಜ್ಞಾನಕ್ಕೆ ನಿಮಿತ್ತ-ನೈಮಿತ್ತಿಕ ಸಂಬಂಧವಿರುವುದರಿಂದ ಅವುಗಳ ಪರಿಣಮನಕ್ಕೆ ಅನುಸರಿಸಿ ಜ್ಞಾನದ ಪರಿಣಮನವಾಗುತ್ತದೆ. ಇದಕ್ಕೆ ಉದಾಹರಣೆ-ಹೇಗೆ ಮನುಷ್ಯ ಮೊದಲಾದವರಿಗೆ ಬಾಲ್ಯ-ವೃದ್ಧ ಅವಸ್ಥೆಯಲ್ಲಿ ದ್ರವ್ಯೇಂದ್ರಿಯ ಹಾಗೂ ಮನಸ್ಸು ಶಿಥಿಲವಿದ್ದಾಗ ಬುದ್ಧಿಯೂ ಶಿಥಿಲವಿರುತ್ತದೆ ಮತ್ತು ಶೀತ ವಾಯು ಮೊದಲಾದವುಗಳ ನಿಮಿತ್ತದಿಂದ ಸ್ಪರ್ಶ ಮೊದಲಾದ ಇಂದ್ರಿಯಗಳ ಹಾಗೂ ಮನಸ್ಸಿನ ಪರಮಾಣುಗಳು ವಿಪರೀತವಾದಾಗ ತಿಳಿದುಕೊಳ್ಳುವುದಾಗುವುದಿಲ್ಲ ಅಥವಾ ಸ್ವಲ್ಪ ತಿಳಿಯುವುದಾಗುತ್ತದೆ.

ಈ ಜ್ಞಾನಕ್ಕೆ ಮತ್ತು ಬಾಹ್ಯದ್ರವ್ಯಗಳಿಗೆ ಕೂಡ ನಿಮಿತ್ತ-ನೈಮಿತ್ತಿಕ ಸಂಬಂಧವು ಕಂಡುಬರುತ್ತದೆ. ಇದಕ್ಕೆ ಉದಾಹರಣೆ-ನೇತ್ರೇಂದ್ರಿಯಕ್ಕೆ ಅಂಧಕಾರದ ಪರಮಾಣುಗಳು ಅಥವಾ ನೇತ್ರಸ್ತಂಭಾದಿಗಳ ಪರಮಾಣುಗಳು ಅಥವಾ ಪಾಷಾಣಾದಿಗಳ ಪರಮಾಣುಗಳು ಅಡ್ಡಲಾಗಿ ಬಂದರೆ ಕಾಣುವ ಸಾಧ್ಯತೆಯಿಲ್ಲ. ಮತ್ತು ಕೆಂಪು ಗಾಜು ಅಡ್ಡಲಾಗಿ ಬಂದರೆ ಎಲ್ಲವೂ ಕೆಂಪು ಕಾಣುತ್ತದೆ, ಹಸಿರು ಅಡ್ಡಲಾಗಿ ಬಂದರೆ ಎಲ್ಲವೂ ಹಸಿರಾಗಿ ಕಾಣುತ್ತದೆ. ಈ ಪ್ರಕಾರ ವಿಪರೀತವಾಗಿ ತಿಳಿಯುವುದಾಗುತ್ತದೆ.

ದೂರದರ್ಶಕ ಯಂತ್ರ, ಕನ್ನಡಕ ಇತ್ಯಾದಿಗಳು ಅಡ್ಡಲಾಗಿ ಬಂದರೆ ಹೆಚ್ಚು ಕಾಣಲಾರಂಭಿಸುತ್ತದೆ. ಪ್ರಕಾಶ, ನೀರು, ನಿರ್ಮಲ ಗಾಜು ಇತ್ಯಾದಿಗಳ ಪರಮಾಣುಗಳು ಅಡ್ಡಲಾಗಿ ಬಂದರೂ ಕೂಡ ಇದ್ದಕ್ಕಿದ್ದಂತೆ ಕಾಣುತ್ತದೆ. ಹೀಗೆ ಇತರ ಇಂದ್ರಿಯಗಳ ಹಾಗೂ ಮನಸ್ಸಿನದು ಕೂಡ ಯಥಾಸಂಭವ ತಿಳಿಯಬೇಕು. ಮಂತ್ರಾದಿಗಳ ಪ್ರಯೋಗದಿಂದ ಅಥವಾ ಮದ್ಯಪಾನಾದಿಗಳಿಂದ ಅಥವಾ ಭೂತಾದಿಗಳ ನಿಮಿತ್ತದಿಂದ ತಿಳಿಯದಾಗುವುದು, ಸ್ವಲ್ಪ ತಿಳಿಯುವುದು ಅಥವಾ ವಿಪರೀತ ತಿಳಿಯುವುದಾಗುತ್ತದೆ. ಹೀಗೆ ಈ ಜ್ಞಾನವು ಬಾಹ್ಯದ್ರವ್ಯಗಳ ಆಧೀನವಿದೆಯೆಂದೂ ತಿಳಿಯಬೇಕು.

ಈ ಜ್ಞಾನದಿಂದ ತಿಳಿಯುವುದಾಗುತ್ತದೆ ಅದು ಅಸ್ಪಷ್ಟವಾಗಿ ತಿಳಿಯುವುದಾಗುತ್ತದೆ; ದೂರದಿಂದ ಹೇಗೋ ತಿಳಿಯುತ್ತದೆ, ಸಮೀಪದಿಂದ ಹೇಗೋ ತಿಳಿಯುತ್ತದೆ, ಕೂಡಲೇ ಹೇಗೋ ತಿಳಿಯುತ್ತದೆ. ತಿಳಿಯುವಲ್ಲಿ ಹೆಚ್ಚು ಸಮಯವಾಗಿ ಹೋದಾಗ ಹೇಗೋ ತಿಳಿಯುತ್ತದೆ, ಒಂದನ್ನು ಸಂಶಯದೊಡನೆ ತಿಳಿಯುತ್ತದೆ, ಒಂದನ್ನು ವಿಪರೀತವಾಗಿ ತಿಳಿಯುತ್ತದೆ, ಒಂದನ್ನು ಕಿಂಚಿತ್ತು ತಿಳಿಯುತ್ತದೆ, ಇತ್ಯಾದಿರೂಪದಿಂದ ಶುದ್ಧವಾಗಿ ತಿಳಿಯುವ ಸಾಧ್ಯತೆಯಿಲ್ಲ.

ಹೀಗೆ ಈ ಮತಿಜ್ಞಾನವು ಪಾರತಂತ್ರ್ಯದೊಡನೆ ಇಂದ್ರಿಯ-ಮನಸ್ಸುಗಳಿಂದ ಪ್ರವರ್ತಿಸುತ್ತದೆ. ಆ ಇಂದ್ರಿಯಗಳಿಂದಂತೂ ಎಷ್ಟು ಕ್ಷೇತ್ರದ ವಿಷಯವಿದೆ ಅಷ್ಟು ಕ್ಷೇತ್ರದಲ್ಲಿ ವರ್ತಮಾನದೊಳಗೆ ಸ್ಥೂಲ ತನಗೆ ತಿಳಿಯಲು ಯೋಗ್ಯ ಪುದ್ಗಲ ಸ್ಕಂಧಗಳಿದ್ದರೆ ಅವನ್ನು ತಿಳಿಯುತ್ತದೆ. ಅವುಗಳಲ್ಲೂ ಭಿನ್ನ-ಭಿನ್ನ ಇಂದ್ರಿಯಗಳಿಂದ ಭಿನ್ನ-ಭಿನ್ನ ಕಾಲದಲ್ಲಿ ಯಾವುದೇ ಸ್ಕಂಧದ ಸ್ಪರ್ಶಾದಿಗಳನ್ನು ತಿಳಿಯುತ್ತದೆ. ಮತ್ತು ಮನಸ್ಸಿನಿಂದ ತನಗೆ ತಿಳಿಯಲು ಯೋಗ್ಯ ಸ್ವಲ್ಪಮಾತ್ರ ತ್ರಿಕಾಲ ಸಂಬಂಧದ ದೂರ ಕ್ಷೇತ್ರವರ್ತಿ ಅಥವಾ ಸಮೀಪ ಕ್ಷೇತ್ರವರ್ತಿಯಾದ ರೂಪಿ-ಅರೂಪಿ ದ್ರವ್ಯಗಳನ್ನು ಮತ್ತು ಪರ್ಯಾಯಗಳನ್ನು ಅತ್ಯಂತ ಅಸ್ಪಷ್ಟರೂಪದಿಂದ ತಿಳಿಯುತ್ತದೆ. ಅದು ಕೂಡ ಇಂದ್ರಿಯಗಳಿಂದ ಜ್ಞಾನವಾಗಿರುವುದನ್ನೇ ಅಥವಾ ಊಹೆ ಮಾಡಿರುವುದನ್ನೇ ತಿಳಿಯುವ ಸಾಧ್ಯತೆಯಿದೆ. ಎಂದಾದರೊಮ್ಮೆ ತನ್ನ ಕಲ್ಪನೆಯಿಂದಲೇ ಅಸತ್ತನ್ನು ತಿಳಿಯುತ್ತದೆ. ಹೇಗೆಂದರೆ-ಸ್ವಪ್ನದಲ್ಲಿ ಅಥವಾ ಜಾಗೃತದಲ್ಲೂ ಎಂದೂ ಎಲ್ಲಿಯೂ ಕಂಡುಬಾರದಂಥ ಆಕಾರಾದಿಗಳ ಚಿಂತನೆ ಮಾಡುತ್ತದೆ ಮತ್ತು ಹೇಗಿಲ್ಲವೋ ಹಾಗೆ ಮನ್ನಿಸುತ್ತದೆ. ಈ ಪ್ರಕಾರ ಮನಸ್ಸಿನಿಂದ ತಿಳಿಯುವುದಾಗುತ್ತದೆ. ಆದುದರಿಂದ ಈ ಇಂದ್ರಿಯಗಳು ಹಾಗೂ ಮನಸ್ಸಿನಿಂದ ಆಗುವ ಜ್ಞಾನದ ಹೆಸರು ಮತಿಜ್ಞಾನವಿದೆ.

ಪೃಥ್ವಿ, ಜಲ, ಅಗ್ನಿ, ವಾಯು, ವನಸ್ಪತಿರೂಪದ ಏಕೇಂದ್ರಿಯಗಳಿಗೆ ಕೇವಲ ಸ್ಪರ್ಶಜ್ಞಾನವಿದೆ; ಬಾಲಹುಳ, ಶಂಖಹುಳ ಮೊದಲಾದ ದ್ವೀಂದ್ರಿಯ ಜೀವಗಳಿಗೆ ಸ್ಪರ್ಶ, ರಸದ ಜ್ಞಾನವಿದೆ; ಇರುವೆ, ತಿಗುಣೆ ಮೊದಲಾದ ತ್ರೀಂದ್ರಿಯ ಜೀವಗಳಿಗೆ ಸ್ಪರ್ಶ, ರಸ, ಗಂಧದ ಜ್ಞಾನವಿದೆ; ದುಂಬಿ, ನೊಣ, ಪತಂಗದಹುಳು ಮೊದಲಾದ ಚತುರಿಂದ್ರಿಯ ಜೀವಗಳಿಗೆ ಸ್ಪರ್ಶ, ರಸ, ಗಂಧ, ವರ್ಣದ ಜ್ಞಾನವಿದೆ; ಮೀನು, ಹಸು, ಪಾರಿವಾಳ, ಇತ್ಯಾದಿ ತಿರ್ಯಂಚ ಮತ್ತು ಮನುಷ್ಯ, ದೇವ, ನಾರಕಿಗಳು ಪಂಚೇಂದ್ರಿಯವಿದ್ದು ಇವಕ್ಕೆ ಸ್ಪರ್ಶ, ರಸ, ಗಂಧ, ವರ್ಣ, ಶಬ್ದಗಳ ಜ್ಞಾನವಿದೆ. ತಿರ್ಯಂಚಗಳಲ್ಲಿ ಕೆಲವು ಸಂಜ್ಞೀಯಿದ್ದು ಕೆಲವು ಅಸಂಜ್ಞೀಯಿವೆ. ಸಂಜ್ಞಿಗಳಿಗೆ ಮನೋಜನ್ಯ ಜ್ಞಾನವಿದ್ದರೆ ಅಸಂಜ್ಞಿಗಳಿಗೆ ಇಲ್ಲ. ಮನುಷ್ಯ, ದೇವ, ನಾರಕಿಗಳು ಸಂಜ್ಞೀಯಿದ್ದು ಅವೆಲ್ಲವುಗಳಿಗೆ ಮನೋಜನ್ಯ ಜ್ಞಾನವು ಕಂಡು ಬರುತ್ತದೆ.

ಈ ಪ್ರಕಾರ ಮತಿಜ್ಞಾನದ ಪ್ರವೃತ್ತಿಯನ್ನು ತಿಳಿಯಬೇಕು.

## ಶ್ರುತಜ್ಞಾನದ ಪರಾಧೀನ ಪ್ರವೃತ್ತಿ :-

ಮತಿಜ್ಞಾನದಿಂದ ತಿಳಿದುಕೊಂಡಿರುವ ವಸ್ತುವಿನ ಸಂಬಂಧದಿಂದ ಅನ್ಯ ವಸ್ತುವನ್ನು ಯಾವುದರಿಂದ ತಿಳಿದುಕೊಳ್ಳಲಾಗುತ್ತದೆ ಅದು ಶ್ರುತಜ್ಞಾನವಿದೆ. ಅದರಲ್ಲಿ ಅಕ್ಷರಾತ್ಮಕ ಮತ್ತು ಅನಕ್ಷರಾತ್ಮಕವೆಂದು ಎರಡು ಪ್ರಕಾರವಿವೆ. ಹೇಗೆಂದರೆ 'ಘಟ'ವೆಂಬ ಎರಡಕ್ಷರಗಳನ್ನು ಕೇಳುವುದು ಅಥವಾ ನೋಡುವುದಂತೂ

ಮತಿಜ್ಞಾನವಾಯಿತು; ಅವುಗಳ ಸಂಬಂಧದಿಂದ ಘಟ-ಪದಾರ್ಥವನ್ನು ತಿಳಿಯುವುದು ಅದು ಶ್ರುತಜ್ಞಾನವಿದೆ. ಹೀಗೆ ಉಳಿದುವವನ್ನೂ ತಿಳಿಯಬೇಕು. ಇದಂತೂ ಅಕ್ಷರಾತ್ಮಕವಾದ ಶ್ರುತಜ್ಞಾನವಿದೆ, ಮತ್ತು ಸ್ಪರ್ಶದಿಂದ ಶೀತದ ಜ್ಞಾನವಾಗುವುದಂತೂ ಅದು ಮತಿಜ್ಞಾನವಿದೆ; ಅದರ ಸಂಬಂಧದಿಂದ 'ಇದು ಹಿತಕರವಿಲ್ಲದುದರಿಂದ ಓಡಿ ಹೋಗುವ' ಇತ್ಯಾದಿ ರೂಪದ ಜ್ಞಾನವಾಗುವುದು ಅದು ಶ್ರುತಜ್ಞಾನವಿದೆ. ಹೀಗೆ ಉಳಿದವುಗಳನ್ನೂ ತಿಳಿಯಬೇಕು. ಇದು ಅನಕ್ಷರಾತ್ಮಕ ಶ್ರುತಜ್ಞಾನವಿದೆ.

ಏಕೇಂದ್ರಿಯ ಮೊದಲಾದ ಅಸಂಜ್ಞೀ ಜೀವಗಳಿಗಂತೂ ಅನಕ್ಷರಾತ್ಮಕ ಶ್ರುತಜ್ಞಾನವೇ ಇದೆ ಮತ್ತು ಸಂಜ್ಞೀ ಪಂಚೇಂದ್ರಿಯಗಳಿಗೆ ಎರಡೂ ಇವೆ. ಈ ಶ್ರುತಜ್ಞಾನವು ಅನೇಕ ಪ್ರಕಾರಗಳಿಂದ ಪರಾಧೀನವಿರುವಂಥ ಮತಿಜ್ಞಾನದ ಆಧೀನವೂ ಇದೆ ಮತ್ತು ಅನ್ಯ ಅನೇಕ ಕಾರಣಗಳ ಆಧೀನವಿರುವುದರಿಂದ ಅತ್ಯಂತ ಪರಾಧೀನವಿದೆಯೆಂದು ತಿಳಿಯಬೇಕು.

## ಅವಧಿಜ್ಞಾನ, ಮನಃಪರ್ಯಯಜ್ಞಾನ, ಕೇವಲಜ್ಞಾನದ ಪ್ರವೃತ್ತಿ :-

ತನ್ನ ಮರ್ಯಾದೆಗೆ ಅನುಸರಿಸಿ ಕ್ಷೇತ್ರ-ಕಾಲಗಳ ಪರಿಮಿತಿಗೊಳಪಟ್ಟು ರೂಪಿ ಪದಾರ್ಥಗಳನ್ನು ಸ್ಪಷ್ಟರೂಪದಿಂದ ತಿಳಿಯಲಾಗುವುದು ಅದು ಅವಧಿಜ್ಞಾನವಿದೆ. ಅದು ದೇವ, ನಾರಕಿಗಳೆಲ್ಲರಲ್ಲೂ ಕಂಡು ಬರುತ್ತದೆ ಮತ್ತು ಸಂಜ್ಞೀ ಪಂಚೇಂದ್ರಿಯ ತಿರ್ಯಂಚ ಹಾಗೂ ಮನುಷ್ಯರಲ್ಲೂ ಕೆಲವರಿಗೆ ಕಂಡು ಬರುತ್ತದೆ. ಅಸಂಜ್ಞೀವರೆಗಿನ ಜೀವಗಳಿಗೆ ಇದು ಇರುವುದೇ ಇಲ್ಲ. ಇದು ಕೂಡ ಶರೀರ ಮೊದಲಾದ ಪುದ್ಗಲಗಳ ಆಧೀನವಿದೆ. ದೇಶಾವಧಿ, ಪರಮಾವಧಿ, ಸರ್ವಾವಧಿಯೆಂದು ಅವಧಿಜ್ಞಾನದಲ್ಲಿ ಮೂರು ಭೇದಗಳಿವೆ. ಇವುಗಳಲ್ಲಿ ಸ್ವಲ್ಪ ಕ್ಷೇತ್ರ-ಕಾಲಗಳ ಮರ್ಯಾದೆಗೊಳಪಟ್ಟು ಕಿಂಚಿತ್ಮಾತ್ರರೂಪಿ ಪದಾರ್ಥಗಳನ್ನು ತಿಳಿಯುವಂಥದು ದೇಶಾವಧಿಯಿದೆ, ಅದು ಕೂಡ ಯಾವುದೇ ಒಂದು ಜೀವಕ್ಕೆ ಆಗುತ್ತದೆ,

ಇನ್ನು ಪರಮಾವಧಿ, ಸರ್ವಾವಧಿ ಮತ್ತು ಮನಃಪರ್ಯಯ ಜ್ಞಾನಗಳು ಮೋಕ್ಷಮಾರ್ಗದಲ್ಲಿ ಪ್ರಕಟವಾಗುತ್ತವೆ; ಕೇವಲಜ್ಞಾನವು ಮೋಕ್ಷರೂಪವಿರುವುದರಿಂದ ಈ ಅನಾದಿ ಸಂಸಾರ-ಅವಸ್ಥೆಯಲ್ಲಿ ಇವುಗಳ ಸದ್ಭಾವವೇ ಇಲ್ಲ.

ಹೀಗಂತೂ ಜ್ಞಾನದ ಪ್ರವೃತ್ತಿಯು ಕಂಡು ಬರುತ್ತದೆ.

## ಚಕ್ಷು-ಅಚಕ್ಷು-ಅವಧಿ-ಕೇವಲದರ್ಶನಗಳ ಪ್ರವೃತ್ತಿ :-

ಇಂದ್ರಿಯ ಮತ್ತು ಮನಸ್ಸಿಗೆ ಸ್ಪರ್ಶ ಮೊದಲಾದ ವಿಷಯಗಳ ಸಂಬಂಧವಿರುವುದರಿಂದ ಪ್ರಥಮ ಕಾಲದಲ್ಲಿ ಮತಿಜ್ಞಾನದ ಮೊದಲು ಆ ಸತ್ತಾಮಾತ್ರ ಅವಲೋಕನರೂಪದ ಪ್ರತಿಭಾಸವಾಗುವುದರ ಹೆಸರು ಚಕ್ಷುದರ್ಶನ ಹಾಗೂ ಅಚಕ್ಷುದರ್ಶನವಿದೆ. ಅಲ್ಲಿ ನೇತ್ರೇಂದ್ರಿಯದ ಮುಖಾಂತರ ದರ್ಶನವಾಗುವುದರ ಹೆಸರಂತೂ ಚಕ್ಷುದರ್ಶನವಿದ್ದು ಅದು ಚತುರಿಂದ್ರಿಯ, ಪಂಚೇಂದ್ರಿಯ ಜೀವಿಗಳಿಗೇ ಇರುತ್ತದೆ. ಇನ್ನು ಸ್ಪರ್ಶನ, ರಸನ, ಘ್ರಾಣ, ಶ್ರೋತ್ರವೆಂಬೀ ಈ ನಾಲ್ಕು ಇಂದ್ರಿಯಗಳು ಮತ್ತು ಮನಸ್ಸಿನ ಮುಖಾಂತರ ಆಗುವ ದರ್ಶನದ ಹೆಸರು ಅಚಕ್ಷುದರ್ಶನವಿದೆ; ಅದು ಯಥಾಯೋಗ್ಯ ಏಕೇಂದ್ರಿಯ ಮೊದಲಾದ ಜೀವಿಗಳಿಗೆ ಇರುತ್ತದೆ.

ಅವಧಿಯ ವಿಷಯಗಳ ಸಂಬಂಧವಾದ ಮೇಲೆ ಅವಧಿಜ್ಞಾನದ ಮೊದಲು ಆ ಸತ್ತಾಮಾತ್ರ ಅವಲೋಕನರೂಪ ಪ್ರತಿಭಾಸವಾಗುವುದರ ಹೆಸರು ಅವಧಿದರ್ಶನವಿದೆ. ಇದು ಅವಧಿಜ್ಞಾನದ ಸಂಭವವಿರುವವರಿಗೇ ಆಗುತ್ತದೆ.

ಈ ಚಕ್ಷು, ಅಚಕ್ಷು, ಅವಧಿದರ್ಶನಗಳು ಮತಿಜ್ಞಾನ ಮತ್ತು ಶ್ರುತಜ್ಞಾನದಂತೆ ಪರಾಧೀನವಿವೆಯೆಂದು ತಿಳಿಯಬೇಕು. ಇನ್ನು ಕೇವಲದರ್ಶನವು ಮೋಕ್ಷಸ್ವರೂಪವಿದ್ದು ಇಲ್ಲಿ ಅದರ ಸದ್ಭಾವವೇ ಇಲ್ಲ.

ಈ ಪ್ರಕಾರ ದರ್ಶನದ ಸದ್ಭಾವವು ಕಂಡು ಬರುತ್ತದೆ.

ಈ ಪ್ರಕಾರ ಜ್ಞಾನ-ದರ್ಶನದ ಸದ್ಭಾವವು ಜ್ಞಾನಾವರಣ, ದರ್ಶನಾವರಣದ ಕ್ಷಯೋಪಶಮದ ಅನುಸಾರವಾಗಿ ಇರುತ್ತದೆ. ಕ್ಷಯೋಪಶಮವು ಅಲ್ಪವಿದ್ದಾಗ ಜ್ಞಾನ-ದರ್ಶನದ ಶಕ್ತಿಯು ಕಡಿಮೆಯಿರುತ್ತದೆ; ಅಧಿಕವಿದ್ದಾಗ ಹೆಚ್ಚು ಇರುತ್ತದೆ. ಕ್ಷಯೋಪಶಮದಿಂದ ಶಕ್ತಿಯಂತೂ ಹೀಗಾಗಿರುತ್ತಿದ್ದರೂ ಪರಿಣಮನದಿಂದ ಒಂದು ಜೀವಕ್ಕೆ ಒಂದು ಕಾಲದಲ್ಲಿ ಒಂದು ವಿಷಯವನ್ನೇ ನೋಡುವುದು ಮತ್ತು ತಿಳಿಯುವುದಾಗುತ್ತದೆ. ಈ ಪರಿಣಮನದ ಹೆಸರೇ ಉಪಯೋಗವಿದೆ. ಒಂದು ಜೀವಕ್ಕೆ ಒಂದು ಕಾಲದಲ್ಲಿ ಜ್ಞಾನೋಪಯೋಗವಿರುತ್ತದೆ ಅಥವಾ ದರ್ಶನೋಪಯೋಗವಿರುತ್ತದೆ. ಒಂದು ಉಪಯೋಗಕ್ಕೂ ಒಂದು ಭೇದದ ಪ್ರವೃತ್ತಿಯಿರುತ್ತದೆ. ಹೇಗೆಂದರೆ ಮತಿಜ್ಞಾನವಿದ್ದಾಗ ಬೇರೆ ಜ್ಞಾನವಿರುವುದಿಲ್ಲ. ಮತ್ತು ಒಂದು ಭೇದದಲ್ಲೂ ಒಂದು ವಿಷಯದಲ್ಲಿಯೇ ಪ್ರವೃತ್ತಿಯಾಗುತ್ತದೆ ಹೇಗೆಂದರೆ-ಸ್ಪರ್ಶವನ್ನು ತಿಳಿಯುತ್ತಿರುವಾಗ ರಸಾದಿಗಳನ್ನು ತಿಳಿಯುವುದಿಲ್ಲ, ಮತ್ತು ಒಂದು ವಿಷಯದಲ್ಲಿಯೂ ಅದಕ್ಕೆ ಯಾವುದೇ ಒಂದು ಅಂಗದಲ್ಲಿಯೇ ಪ್ರವೃತ್ತಿಯಾಗುತ್ತದೆ. ಹೇಗೆಂದರೆ-ಉಷ್ಣ ಸ್ಪರ್ಶವನ್ನು ತಿಳಿಯುತ್ತಿರುವಾಗ ರೂಕ್ಷ ಸ್ಪರ್ಶಾದಿಗಳನ್ನು ತಿಳಿಯುವುದಿಲ್ಲ.

ಈ ಪ್ರಕಾರ ಒಂದು ಜೀವಕ್ಕೆ ಒಂದು ಕಾಲದಲ್ಲಿ ಒಂದು ಜ್ಞೇಯ ಅಥವಾ ದೃಶ್ಯದಲ್ಲಿ ಜ್ಞಾನ ಅಥವಾ ದರ್ಶನದ ಪರಿಣಮನವಿರುತ್ತದೆಂದು ತಿಳಿಯಬೇಕು, ಮತ್ತು ಹೀಗೆಯೇ ಕಂಡು ಬರುತ್ತದೆ. ಉಪಯೋಗವು ಕೇಳುವುದರಲ್ಲಿ ತೊಡಗಿದ್ದರೆ ಕಣ್ಣುಗಳ ಸಮೀಪದಲ್ಲಿಯೇ ಸ್ಥಿರವಿರುವ ಪದಾರ್ಥಗಳು ಗೋಚರಿಸುವುದಿಲ್ಲ. ಇದೇ ಪ್ರಕಾರ ಉಳಿದ ಪ್ರವೃತ್ತಿಗಳು ಕಂಡು ಬರುತ್ತವೆ.

ಪರಿಣಮನದಲ್ಲಿ ಅಧಿಕ ಶೀಘ್ರತೆಯಿರುವುದರಿಂದ ಒಂದೇ ಸಮಯದಲ್ಲಿ ಅನೇಕ ವಿಷಯಗಳನ್ನು ತಿಳಿಯುವುದು ಹಾಗೂ ನೋಡುವುದಾಗುತ್ತದೆಯೆಂದು ಯಾವುದೇ ಕಾಲದಲ್ಲಿ ಮನ್ನಿಸಿಕೊಳ್ಳುತ್ತಾರೆ, ಆದರೆ ಯುಗಪತ್ ಆಗುವುದಿಲ್ಲ, ಕ್ರಮದಿಂದಲೇ ಆಗುತ್ತದೆ, ಸಂಸ್ಕಾರ ಬಲದಿಂದ ಅವುಗಳ ಸಾಧನೆಯಿರುತ್ತದೆ. ಹೇಗೆಂದರೆ-ಕಾಗೆಯ ಕಣ್ಣಿನಲ್ಲಿ ಎರಡು ಗೋಲಕಗಳಿದ್ದು ಒಂದೇ ಗೊಂಬೆಯಿದೆ, ಅದು ಶೀಘ್ರವಾಗಿ ತಿರುಗುತ್ತಿರುವುದರಿಂದ ಎರಡೂ ಗೋಲಕಗಳ ಸಾಧನೆ ಮಾಡುತ್ತದೆ; ಅದೇ ಪ್ರಕಾರ ಈ ಜೀವನಿಗೆ ದ್ವಾರಗಳಂತೂ ಅನೇಕವಿದ್ದು ಉಪಯೋಗ ಒಂದೇ ಇದೆ, ಅದು ಶೀಘ್ರವಾಗಿ ತಿರುಗುತ್ತಿರುವುದರಿಂದ ಎಲ್ಲ ದ್ವಾರಗಳ ಸಾಧನೆಯಿರುತ್ತದೆ.

**ಪ್ರಶ್ನೆ :-** ಒಂದು ಕಾಲದಲ್ಲಿ ಒಂದು ವಿಷಯವನ್ನು ತಿಳಿಯುವುದು ಅಥವಾ ನೋಡುವುದಾಗುತ್ತಿದ್ದರೆ

ಇಷ್ಟೇ ಕ್ಷಯೋಪಶಮವಾಗಿದೆಯೆಂದು ಹೇಳಿರಿ, ಅಧಿಕವೆಂದೇಕೆ ಹೇಳುತ್ತಿರುವಿರಿ ? ಮತ್ತು ನೀವು ಕ್ಷಯೋಪಶಮದಿಂದ ಶಕ್ತಿಯಿರುತ್ತದೆಯೆಂದು ಹೇಳುತ್ತಿರುವಿರಿ, ಆದರೆ ಶಕ್ತಿಯಂತೂ ಆತ್ಮನಲ್ಲಿ ಕೇವಲಜ್ಞಾನ-ದರ್ಶನದ್ದೂ ಕೂಡ ಕಂಡು ಬರುತ್ತದೆ.

**ಉತ್ತರ :-** ಹೇಗೆಂದರೆ ಓರ್ವ ಪುರುಷನಿಗೆ ಅಧಿಕ ಊರುಗಳಲ್ಲಿ ಗಮನ ಮಾಡುವ ಶಕ್ತಿಯಿದೆ. ಮತ್ತು ಅವನನ್ನು ಯಾವನೋ ಒಬ್ಬನು ತಡೆದು ನೀನು ಐದು ಊರುಗಳಿಗೆ ಮಾತ್ರ ಹೋಗು, ಅದೂ ಒಂದು ದಿವಸದಲ್ಲಿ ಒಂದು ಊರಿಗೆ ಹೋಗೆಂದು ಹೇಳುತ್ತಾನೆ. ಅಲ್ಲಿ ಆ ಮನುಷ್ಯನಿಗೆ ಅಧಿಕ ಊರುಗಳಿಗೆ ಹೋಗುವ ಶಕ್ತಿಯಂತೂ ದ್ರವ್ಯ ಅಪೇಕ್ಷೆಯಿಂದ ಕಂಡು ಬರುತ್ತದೆ; ಅನ್ಯಕಾಲದಲ್ಲಿ ಸಾಮರ್ಥ್ಯವಿರಬಹುದು, ಆದರೆ ವರ್ತಮಾನದಲ್ಲಿ ಸಾಮರ್ಥ್ಯರೂಪವಿಲ್ಲ. ಏಕೆಂದರೆ ವರ್ತಮಾನದಲ್ಲಿ ಐದು ಗ್ರಾಮಗಳಿಗಿಂತ ಅಧಿಕ ಗ್ರಾಮಗಳಿಗೆ ಗಮನ ಮಾಡುವ ಸಾಧ್ಯತೆಯಿಲ್ಲ. ಮತ್ತು ಪರ್ಯಾಯ-ಅಪೇಕ್ಷೆಯಿಂದ ವರ್ತಮಾನದಲ್ಲಿ ಐದು ಊರುಗಳಿಗೆ ಹೋಗುವ ಸಾಮರ್ಥ್ಯ ರೂಪ ಶಕ್ತಿಯಿದೆ, ಏಕೆಂದರೆ ಅವುಗಳಿಗೆ ಗಮನ ಮಾಡುವ ಸಾಧ್ಯತೆಯಿದೆ; ಮತ್ತು ವ್ಯಕ್ತತೆಯು ಒಂದು ದಿವಸದಲ್ಲಿ ಒಂದು ಊರಿಗೇನೇ ಗಮನ ಮಾಡುವುದು ಕಂಡುಬರುತ್ತದೆ.

ಅದೇ ಪ್ರಕಾರ ಈ ಜೀವನಿಗೆ ಎಲ್ಲವನ್ನು ನೋಡುವ-ತಿಳಿಯುವ ಶಕ್ತಿಯಿದೆ. ಮತ್ತು ಅವನನ್ನು ಕರ್ಮವು ತಡೆದು ನೀನು ಸ್ಪರ್ಶಾದಿಕ ವಿಷಯಗಳನ್ನು ತಿಳಿಯು ಅಥವಾ ನೋಡು, ಆದರೆ ಒಂದು ಕಾಲದಲ್ಲಿ ಒಂದನ್ನೇ ತಿಳಿಯುವಷ್ಟು ಅಥವಾ ನೋಡುವಷ್ಟು ಕ್ಷಯೋಪಶಮವಾಗಿದೆ. ಈ ಜೀವನಿಗೆ ಎಲ್ಲವನ್ನು ನೋಡುವ-ತಿಳಿಯುವ ಶಕ್ತಿಯಂತೂ ದ್ರವ್ಯ-ಅಪೇಕ್ಷೆಯಿಂದ ಕಂಡುಬರುತ್ತದೆ; ಅನ್ಯಕಾಲದಲ್ಲಿ ಸಾಮರ್ಥ್ಯವಿದೆ, ಆದರೆ ವರ್ತಮಾನದಲ್ಲಿ ಸಾಮರ್ಥ್ಯರೂಪದಿಂದಿಲ್ಲ, ಏಕೆಂದರೆ ತನ್ನ ಯೋಗ್ಯ ವಿಷಯಗಳಿಗಿಂತ ಅಧಿಕ ವಿಷಯಗಳನ್ನು ನೋಡುವ-ತಿಳಿಯುವ ಸಾಧ್ಯತೆಯಿಲ್ಲ. ಮತ್ತು ಪರ್ಯಾಯ-ಅಪೇಕ್ಷೆಯಿಂದ ವರ್ತಮಾನದಲ್ಲಿ ತನ್ನ ಯೋಗ್ಯ ವಿಷಯಗಳನ್ನು ನೋಡುವ-ತಿಳಿಯುವ ಸಾಮರ್ಥ್ಯರೂಪ ಶಕ್ತಿಯಿದೆ, ಏಕೆಂದರೆ ಅವನ್ನು ನೋಡುವ-ತಿಳಿಯುವ ಸಾಧ್ಯತೆಯಿದೆ; ಮತ್ತು ವ್ಯಕ್ತತೆಯು ಒಂದು ಕಾಲದಲ್ಲಿ ಒಂದನ್ನೇ ನೋಡುವುದು ಅಥವಾ ತಿಳಿಯುವುದು ಕಂಡುಬರುತ್ತದೆ.

**ಪ್ರಶ್ನೆ :-** ಹೀಗಂತೂ ತಿಳಿಯಿತು; ಆದರೆ ಕ್ಷಯೋಪಶಮವಂತೂ ಕಂಡು ಬರುತ್ತದೆ ಮತ್ತು ಬಾಹ್ಯ ಇಂದ್ರಿಯಾದಿಗಳ ನಿಮಿತ್ತವು ವಿಪರೀತವಾದ ಮೇಲೆ ನೋಡುವುದು-ತಿಳಿಯುವುದು ಆಗುವುದಿಲ್ಲ ಅಥವಾ ಸ್ವಲ್ಪ ಆಗುತ್ತದೆ ಅಥವಾ ಅನ್ಯಥಾ ಆಗುತ್ತದೆ, ಅದು ಹೀಗಾದ ಮೇಲೆ ಕೇವಲ ಕರ್ಮದ ನಿಮಿತ್ತವಂತೂ ಉಳಿಯಲಿಲ್ಲವಲ್ಲ?

**ಉತ್ತರ :-** ಯಾವ ಪ್ರಕಾರ ತಡೆಯುವವನು ಒಂದು ದಿವಸಕ್ಕೆ ಐದು ಊರುಗಳೊಳಗಿಂದ ಒಂದು ಊರಿಗೆ ಹೋಗು, ಆದರೆ ಜತೆಯಲ್ಲಿ ಈ ಸೇವಕರನ್ನು ಕರೆದುಕೊಂಡು ಹೋಗೆಂದು ಹೇಳುತ್ತಾನೆ. ಅಲ್ಲಿ ಆ ಸೇವಕರು ಅನ್ಯಥಾ ಪರಿಣಮಿಸಿದರೆ ಹೋಗುವುದಾಗುವುದಿಲ್ಲ ಅಥವಾ ಸ್ವಲ್ಪ ಹೋಗುವುದು ಆಗುವುದು ಅಥವಾ ವಿಪರೀತವಾಗಿ ಹೋಗುವುದಾಗುವುದು; ಅದೇ ಪ್ರಕಾರ ಕರ್ಮದ ಉಪಶಮವು ಇಷ್ಟು ವಿಷಯಗಳೊಳಗಿಂದ ಒಂದು ವಿಷಯವನ್ನು ಒಂದು ಕಾಲದಲ್ಲಿ ನೋಡುವಂತೆಯೇ ಅಥವಾ ತಿಳಿದುಕೊಳ್ಳುವಂತೆಯೇ ಆಗಿರುತ್ತದೆ; ಆದರೆ ಇಷ್ಟು ಬಾಹ್ಯ ದ್ರವ್ಯಗಳ ನಿಮಿತ್ತವಿದ್ದ ಮೇಲೆ ನೋಡಬೇಕು-ತಿಳಿಯಬೇಕು. ಅಲ್ಲಿ ಆ ಬಾಹ್ಯ ದ್ರವ್ಯಗಳು

ಅನ್ಯಥಾ ಪರಿಣಮಿಸಿದರೆ ನೋಡುವುದು-ತಿಳಿಯುವುದು ಆಗುವುದಿಲ್ಲ ಅಥವಾ ಸ್ವಲ್ಪ ಆಗುವುದು ಅಥವಾ ವಿಪರೀತವಾಗಿ ಆಗುವುದು. ಹೀಗೆ ಈ ಕರ್ಮದ ಕ್ಷಯೋಪಶಮದ್ದೇ ವಿಶೇಷವಿರುವುದರಿಂದ ಕರ್ಮದ್ದೇ ನಿಮಿತ್ತವೆಂದು ತಿಳಿಯಬೇಕು. ಹೇಗೆ ಯಾವನಿಗೋ ಅಂಧಕಾರದ ಪರಮಾಣುಗಳು ಅಡ್ಡಲಾಗಿ ಬಂದರೆ ನೋಡುವುದಾಗುವುದಿಲ್ಲ; ಆದರೆ ಗೂಬೆ, ಬೆಕ್ಕು ಮೊದಲಾದವುಗಳಿಗೆ ಅವು ಅಡ್ಡಲಾಗಿ ಬಂದರೆ ನೋಡುವುದಾಗುತ್ತದೆ; ಹೀಗೆ ಈ ಕ್ಷಯೋಪಶಮದ್ದೇ ವಿಶೇಷವಿದೆ. ಹೇಗೆ-ಹೇಗೆ ಕ್ಷಯೋಪಶಮವಿರುತ್ತದೆ ಹಾಗೆ-ಹಾಗೆಯೇ ನೋಡುವುದು ತಿಳಿಯುವುದಾಗುತ್ತದೆ.

ಈ ಪ್ರಕಾರ ಈ ಜೀವಕ್ಕೆ ಕ್ಷಯೋಪಶಮಜ್ಞಾನದ ಪ್ರವೃತ್ತಿಯು ಕಂಡುಬರುತ್ತದೆ.

ಮತ್ತು ಮೋಕ್ಷಮಾರ್ಗದಲ್ಲಿ ಅವಧಿ-ಮನಃಪರ್ಯಯಗಳಿರುತ್ತವೆ ಅವು ಕೂಡ ಕ್ಷಯೋಪಶಮಜ್ಞಾನಗಳೇ ಇದ್ದು ಅವನ್ನು ಕೂಡ ಇದೇ ಪ್ರಕಾರ ಒಂದು ಕಾಲದಲ್ಲಿ ಒಂದನ್ನು ಪ್ರತಿಭಾಸಗೊಳಿಸುವುದು ಹಾಗೂ ಪರದ್ರವ್ಯದ ಆಧೀನತೆಯನ್ನು ತಿಳಿಯುವುದು ಮತ್ತು ವಿಶೇಷವಿರುವುದನ್ನು ವಿಶೇಷವಾಗಿ ತಿಳಿಯುವುದು.

ಈ ಪ್ರಕಾರ ಜ್ಞಾನಾವರಣ-ದರ್ಶನಾವರಣಗಳ ಉದಯದ ನಿಮಿತ್ತದಿಂದ ಅಧಿಕ ಜ್ಞಾನ-ದರ್ಶನದ ಅಂಶಗಳದ್ದಂತೂ ಅಭಾವವಿದೆ ಮತ್ತು ಅವುಗಳ ಕ್ಷಯೋಪಶಮದಿಂದ ಸ್ವಲ್ಪ ಅಂಶಗಳ ಸದ್ಭಾವವು ಕಂಡುಬರುತ್ತದೆ.

**ಮೋಹನೀಯ ಕರ್ಮೋದಯಜನ್ಯ ಅವಸ್ಥೆ :-**

ಈ ಜೀವನಿಗೆ ಮೋಹದ ಉದಯದಿಂದ ಮಿಥ್ಯಾತ್ವ ಮತ್ತು ಕಷಾಯ ಭಾವಗಳು ಆಗುತ್ತವೆ.

**ದರ್ಶನಮೋಹರೂಪ ಜೀವದ ಅವಸ್ಥೆ :-**

ದರ್ಶನಮೋಹದ ಉದಯದಿಂದಂತೂ ಮಿಥ್ಯಾತ್ವಭಾವವಾಗುತ್ತದೆ, ಅದರಿಂದ ಈ ಜೀವನು ವಿಪರೀತ ಪ್ರತೀತಿಯಿಂದ ಅತತ್ತ್ವ ಶ್ರದ್ಧೆ ಮಾಡುತ್ತಾನೆ-ಹೇಗಿದೆ ಹಾಗಂತೂ ಮನ್ನಿಸುವುದಿಲ್ಲ ಮತ್ತು ಹೇಗಿಲ್ಲವೋ ಹಾಗೆ ಮನ್ನಿಸುತ್ತಾನೆ. ಅಮೂರ್ತಿಕ ಪ್ರದೇಶಗಳ ಪುಂಜನೂ, ಪ್ರಸಿದ್ಧ ಜ್ಞಾನಾದಿಗುಣಗಳ ಧಾರಕನೂ, ಅನಾದಿನಿಧನನಾದ ವಸ್ತುವೂ ತಾನಾಗಿದ್ದಾನೆ; ಮತ್ತು ಮೂರ್ತಿಕ ಪುದ್ಗಲದ್ರವ್ಯಗಳ ಪಿಂಡವೂ, ಪ್ರಸಿದ್ಧ ಜ್ಞಾನಾದಿಗಳಿಂದ ರಹಿತವೂ ಆಗಿ ನವೀನ ಸಂಯೋಗವಾಗಿರುವಂಥ ಶರೀರ ಮೊದಲಾದ ಪುದ್ಗಲಗಳು ಪರವಿವೆ; ಇವುಗಳ ಸಂಯೋಗ ರೂಪದಿಂದ ನಾನಾ ಪ್ರಕಾರದ ಮನುಷ್ಯ ತಿರ್ಯಂಚ ಮೊದಲಾದ ಪರ್ಯಾಯಗಳಾಗುತ್ತವೆ. ಆ ಪರ್ಯಾಯಗಳಲ್ಲಿ ಅಹಂಬುದ್ಧಿಧಾರಣ ಮಾಡುತ್ತಾನೆ, ಸ್ವ-ಪರಗಳ ಭೇದ ಮಾಡುವುದಿಲ್ಲ. ಆ ಪ್ರಾಪ್ತ ಪರ್ಯಾಯವನ್ನೇ ತಾನೆಂದು ಮನ್ನಿಸುತ್ತಾನೆ.

ಅದರಂತೆ ಆ ಪರ್ಯಾಯದಲ್ಲಿರುವ ಜ್ಞಾನಾದಿಗಳಂತೂ ತಮ್ಮ ಗುಣಗಳಿದ್ದು ರಾಗಾದಿಗಳು ಅವು ತಮಗೆ ಕರ್ಮನಿಮಿತ್ತದಿಂದ ಔಪಾಧಿಕಭಾವಗಳಾಗಿವೆ, ಮತ್ತು ವರ್ಣಾದಿಕಗಳಿವೆ ಅವು ಶರೀರ ಮೊದಲಾದ ಪುದ್ಗಲದ ಗುಣಗಳಿವೆ, ಇನ್ನು ಶರೀರ ಮೊದಲಾದುವಲ್ಲಿ ವರ್ಣಾದಿಗಳ ಹಾಗೂ ಪರಮಾಣುಗಳ ನಾನಾ ಪ್ರಕಾರದ ಬದಲಾವಣೆಯಾಗುತ್ತಿರುವುದು ಅದು ಪುದ್ಗಲದ ಅವಸ್ಥೆಯಿದೆ; ಆದರೆ ಇವೆಲ್ಲವುಗಳನ್ನು ತನ್ನ ಸ್ವರೂಪವೆಂದು ತಿಳಿಯುತ್ತಾನೆ, ಸ್ವಭಾವ-ಪರಭಾವಗಳ ವಿವೇಕವಾಗುವುದಿಲ್ಲ.

ಅದರಂತೆ ಮನುಷ್ಯ ಮೊದಲಾದ ಪರ್ಯಾಯಗಳಲ್ಲಿ ಕುಟುಂಬ-ಧನ ಮೊದಲಾದವುಗಳ ಸಂಬಂಧವಾಗುತ್ತದೆ ಅವು ಪ್ರತ್ಯಕ್ಷ ತಮ್ಮಿಂದ ಭಿನ್ನವಿವೆ ಮತ್ತು ಅವು ತಮ್ಮ ಆಧೀನವಾಗಿ ಪರಿಣಮಿಸದಿದ್ದರೂ ಕೂಡ ಅವುಗಳಲ್ಲಿ ಇವು ನನ್ನವಿವೆಯೆಂದು ಮಮಕಾರ ಮಾಡುತ್ತಾನೆ. ಅವು ಯಾವ ಪ್ರಕಾರದಿಂದಲೂ ತನ್ನವುಗಳಾಗುವುದಿಲ್ಲ, ಈತನೇ ತನ್ನ ಮನ್ನಣೆಯಿಂದಲೇ ತನ್ನವೆಂದು ಮನ್ನಿಸುತ್ತಾನೆ. ಮತ್ತು ಮನುಷ್ಯಾದಿ ಪರ್ಯಾಯಗಳಲ್ಲಿ ಎಂದಾದರೂ ದೇವಾದಿಕರ ಅಥವಾ ತತ್ತ್ವಗಳ ಸ್ವರೂಪವನ್ನು ವಿಪರೀತವಾಗಿ ಕಲ್ಪಿಸಿಕೊಂಡಿರುವುದರದಂತೂ ಪ್ರತೀತಿ ಮಾಡುತ್ತಾನೆ, ಆದರೆ ಯಥಾರ್ಥ ಸ್ವರೂಪವು ಹೇಗಿದೆ ಹಾಗೆ ಪ್ರತೀತಿ ಮಾಡುವುದಿಲ್ಲ.

ಈ ಪ್ರಕಾರ ದರ್ಶನಮೋಹದ ಉದಯದಿಂದ ಜೀವನಿಗೆ ಅತತ್ತ್ವಶ್ರದ್ಧಾರೂಪದ ಮಿಥ್ಯಾತ್ವಭಾವವಾಗುತ್ತದೆ, ತೀವ್ರ ಉದಯವಿರುವಲ್ಲಿ ಸತ್ಯಶ್ರದ್ಧೆಯಿಂದ ಅಧಿಕ ವಿಪರೀತ ಶ್ರದ್ಧೆಯಾಗುತ್ತದೆ. ಮಂದ ಉದಯವಾದಾಗ ಸತ್ಯಶ್ರದ್ಧೆಯಿಂದ ಅಲ್ಪ ವಿಪರೀತ ಶ್ರದ್ಧೆಯಾಗುತ್ತದೆ.

## ಚಾರಿತ್ರಮೋಹರೂಪ ಜೀವದ ಅವಸ್ಥೆ :-

ಚಾರಿತ್ರಮೋಹದ ಉದಯದಿಂದ ಈ ಜೀವನಿಗೆ ಕಷಾಯಭಾವವಾದಾಗ ಈತನು ನೋಡುತ್ತ-ತಿಳಿಯುತ್ತಿದ್ದರೂ ಕೂಡ ಪರಪದಾರ್ಥಗಳಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸಿ ಕ್ರೋಧಾದಿಗಳನ್ನು ಮಾಡುತ್ತಾನೆ.

ಕ್ರೋಧದ ಉದಯವಾದನಂತರ ಪದಾರ್ಥಗಳಲ್ಲಿ ಅನಿಷ್ಟತೆಯನ್ನು ಮನ್ನಿಸಿ ಅವುಗಳ ಕೆಡಕನ್ನು ಅಪೇಕ್ಷಿಸುತ್ತಾನೆ. ಯಾವುದೇ ಮಂದಿರ ಮೊದಲಾದ ಅಚೇತನ ಪದಾರ್ಥಗಳು ಅನಿಷ್ಟವೆನಿಸಿದಾಗ ಒಡೆಯುವ-ಕೆಡವುವ ಮೊದಲಾದ ರೂಪದಿಂದ ಅವುಗಳ ಕೆಡಕನ್ನಪೇಕ್ಷಿಸುತ್ತಾನೆ ಮತ್ತು ಶತ್ರು ಮೊದಲಾದ ಸಚೇತನ ಪದಾರ್ಥಗಳು ಅನಿಷ್ಟವೆನಿಸಿದಾಗ ಅವರಿಗೆ ವಧೆ-ಬಂಧನಗಳಿಂದ ಅಥವಾ ಹೊಡೆ-ಬಡಿಯುವುದರಿಂದ ದುಃಖವನ್ನುತ್ಪನ್ನ ಮಾಡಿ ಅವರ ಕೆಡಕನ್ನಪೇಕ್ಷಿಸುತ್ತಾನೆ. ಇನ್ನು ಸ್ವಯಂ ತಾನು ಅಥವಾ ಬೇರೆ ಸಚೇತನ-ಅಚೇತನ ಪದಾರ್ಥಗಳು ಯಾವುದೇ ಪ್ರಕಾರ ಪರಿಣಮಿಸಿದರೆ ಮತ್ತು ಆ ಪರಿಣಮನವು ತನಗೆ ಕೆಡಕೆನಿಸಿದಾಗ ವಿಪರೀತ ಪರಿಣಮನ ಮಾಡಿಸಿ ಆ ಪರಿಣಮನದ ಕೆಡಕನ್ನಪೇಕ್ಷಿಸುತ್ತಾನೆ.

ಈ ಪ್ರಕಾರ ಕ್ರೋಧದಿಂದ ಕೆಡಕನ್ನಪೇಕ್ಷಿಸುವ ಇಚ್ಛೆಯಂತೂ ಆಗುತ್ತದೆ, ಆದರೆ ಕೆಡಕಾಗುವುದು ಅದು ಭವಿತವ್ಯದ ಆಧೀನವಿದೆ.

ಅದರಂತೆ ಮಾನದ ಉದಯವಾದ ನಂತರ ಪದಾರ್ಥಗಳಲ್ಲಿ ಅನಿಷ್ಟತೆಯನ್ನು ಮನ್ನಿಸಿ ಅದನ್ನು ನೀಚ ಮಾಡಲು ಅಪೇಕ್ಷಿಸುತ್ತಾನೆ ಮತ್ತು ಸ್ವಯಂ ಉಚ್ಚನಾಗಲಪೇಕ್ಷಿಸುತ್ತಾನೆ; ಮಲ ಧೂಳು ಮೊದಲಾದ ಅಚೇತನ ಪದಾರ್ಥಗಳಲ್ಲಿ ಅಸಹ್ಯ ಹಾಗೂ ತಿರಸ್ಕಾರ ಮೊದಲಾದವುಗಳಿಂದ ಅವುಗಳ ಹೀನತೆ ಹಾಗೂ ತನ್ನ ಉಚ್ಚತೆಯನ್ನಪೇಕ್ಷಿಸುತ್ತಾನೆ. ಇನ್ನು ಪುರುಷ ಮೊದಲಾದ ಸಚೇತನ ಪದಾರ್ಥಗಳನ್ನು ಒಲಿಸಿಕೊಳ್ಳುವುದೂ, ತನ್ನ ಆಧೀನದಲ್ಲಿ ಇಟ್ಟುಕೊಳ್ಳುವುದು ಇತ್ಯಾದಿರೂಪದಿಂದ ಅವುಗಳ ಹೀನತೆ ತನ್ನ ಉಚ್ಚತೆಯನ್ನಪೇಕ್ಷಿಸುತ್ತಾನೆ. ಮತ್ತು ಜಗತ್ತಿನಲ್ಲಿ ತಾನು ಉಚ್ಚನಾಗಿ ಕಾಣಿಸುವಂತೆ ಶೃಂಗಾರಾದಿಗಳನ್ನು ಮಾಡುವುದು ಹಾಗೂ ಹಣ ಖರ್ಚು

ಮಾಡುವುದು ಇತ್ಯಾದಿ ರೂಪದಿಂದ ಇತರರನ್ನು ಕೀಳಾಗಿ ಕಾಣಿಸಿ ಸ್ವಯಂ ಉಚ್ಚನಾಗಲಪೇಕ್ಷಿಸುತ್ತಾನೆ. ಇನ್ನು ಬೇರೆ ಯಾವನಾದರೂ ತನಗಿಂತ ಉಚ್ಚಕಾರ್ಯ ಮಾಡಿದರೆ ಅವನನ್ನು ಯಾವುದೇ ಉಪಾಯದಿಂದ ಕೀಳಾಗಿ ಕಾಣಿಸುತ್ತಾನೆ ಮತ್ತು ತಾನು ನೀಚ ಕಾರ್ಯ ಮಾಡಿದರೂ ಅದನ್ನು ಉಚ್ಚವಾಗಿ ತೋರಿಸುತ್ತಾನೆ.

ಈ ಪ್ರಕಾರ ಮಾನದಿಂದ ತನ್ನ ಹಿರಿಮೆಯ ಇಚ್ಛೆಯಂತೂ ಆಗುತ್ತದೆ, ಆದರೆ ಹಿರಿತನ ಬರುವುದು ಅದು ಭವಿತವ್ಯದ ಆಧೀನವಿದೆ,

ಅದರಂತೆ ಮಾಯೆಯ ಉದಯವಾದನಂತರ ಯಾವುದೇ ಪದಾರ್ಥವನ್ನು ಇಷ್ಟವೆಂದು ಮನ್ನಿಸಿ ನಾನಾ ಪ್ರಕಾರದ ಕಪಟಗಳಿಂದ ಅದರ ಸಿದ್ಧಿಮಾಡಲಪೇಕ್ಷಿಸುತ್ತಾನೆ, ರತ್ನ, ಚಿನ್ನ ಮೊದಲಾದ ಅಚೇತನ ಪದಾರ್ಥಗಳ ಹಾಗೂ ಸ್ತ್ರೀ , ದಾಸ, ದಾಸಿ ಮೊದಲಾದ ಸಚೇತನ ಪದಾರ್ಥಗಳ ಸಿದ್ಧಿಯ ಸಲುವಾಗಿ ಅನೇಕ ಕಪಟ ಮಾಡುತ್ತಾನೆ ಮೋಸ ಮಾಡುವ ಸಲುವಾಗಿ ತನ್ನ ಅನೇಕ ಅವಸ್ಥೆಗಳನ್ನು ಮಾಡುತ್ತಾನೆ ಮತ್ತು ಇತರ ಅನೇಕ ಅಚೇತನ-ಸಚೇತನ ಪದಾರ್ಥಗಳ ಅವಸ್ಥೆಯನ್ನು ಮಾರ್ಪಡಿಸುತ್ತಾನೆ. ಇತ್ಯಾದಿರೂಪದ ಕಪಟಗಳಿಂದ ತನ್ನ ಅಭಿಪ್ರಾಯವನ್ನು ಸಿದ್ಧಮಾಡಲಪೇಕ್ಷಿಸುತ್ತಾನೆ.

ಈ ಪ್ರಕಾರ ಮಾಯೆಯಿಂದ ಇಷ್ಟಸಿದ್ಧಿಯ ಸಲುವಾಗಿ ಕಪಟವನ್ನಂತೂ ಮಾಡುತ್ತಾನೆ, ಆದರೆ ಇಷ್ಟಸಿದ್ಧಿಯಾಗುವುದು ಅದು ಭವಿತವ್ಯದ ಆಧೀನವಿದೆ.

ಅದರಂತೆ ಲೋಭದ ಉದಯವಾದನಂತರ ಪದಾರ್ಥಗಳನ್ನು ಇಷ್ಟವೆಂದು ಮನ್ನಿಸಿ ಅವುಗಳ ಪ್ರಾಪ್ತಿಯನ್ನು ಅಪೇಕ್ಷಿಸುತ್ತಾನೆ ವಸ್ತ್ರಾಭರಣ, ಧನ-ಧಾನ್ಯಾದಿ ಅಚೇತನ ಪದಾರ್ಥಗಳ ತೃಷ್ಣೆಯಾಗುತ್ತದೆ; ಹಾಗೂ ಸ್ತ್ರೀ-ಪುತ್ರ ಮೊದಲಾದ ಚೇತನ ಪದಾರ್ಥಗಳ ತೃಷ್ಣೆಯಾಗುತ್ತದೆ, ಮತ್ತು ತನಗೆ ಅಥವಾ ಬೇರೆ ಸಚೇತನ-ಅಚೇತನ ಪದಾರ್ಥಗಳಿಗೆ ಯಾವುದೇ ಪರಿಣಮನವಾಗುವುದು ಇಷ್ಟವೆಂದು ಮನ್ನಿಸಿ ಅವನ್ನು ಆ ಪರಿಣಮನರೂಪವಾಗಿ ಪರಿಣಮಿತಮಾಡಲಪೇಕ್ಷಿಸುತ್ತಾನೆ.

ಈ ಪ್ರಕಾರ ಲೋಭದಿಂದ ಇಷ್ಟಪ್ರಾಪ್ತಿಯ ಇಚ್ಛೆಯಂತೂ ಆಗುತ್ತದೆ, ಆದರೆ ಇಷ್ಟಪ್ರಾಪ್ತಿಯಾಗುವುದು ಭವಿತವ್ಯದ ಆಧೀನವಿದೆ.

ಈ ಪ್ರಕಾರ ಕ್ರೋಧಾದಿಗಳ ಉದಯದಿಂದ ಆತ್ಮನು ಪರಿಣಮಿತನಾಗುತ್ತಾನೆ.

ಈ ಕಷಾಯಗಳು ೧) ಅನಂತಾನುಬಂಧೀ, ೨) ಅಪ್ರತ್ಯಾಖ್ಯಾನಾವರಣ, ೩) ಪ್ರತ್ಯಾಖ್ಯಾನಾವರಣ, ಮತ್ತು ೪) ಸಂಜ್ವಲನವೆಂದು ನಾಲ್ಕು ಪ್ರಕಾರವಾಗಿವೆ. ಅವುಗಳ ಉದಯವಾದ ಮೇಲೆ ಆತ್ಮನಿಗೆ ಸಮ್ಯಕ್ತ್ವವಾಗುವುದಿಲ್ಲ, ಸ್ವರೂಪಾಚರಣಚಾರಿತ್ರವಾಗುವ ಸಾಧ್ಯತೆಯಿಲ್ಲದಂಥವು ಅನಂತಾನುಬಂಧೀ ಕಷಾಯಗಳಿವೆ. ಯಾವವುಗಳ ಉದಯವಾದ ಮೇಲೆ ದೇಶಚಾರಿತ್ರವಾಗದಿರುವುದರಿಂದ ಸ್ವಲ್ಪ ಕೂಡ ತ್ಯಾಗವಾಗುವ ಸಾಧ್ಯತೆಯಿಲ್ಲದಂಥವು ಅಪ್ರತ್ಯಾಖ್ಯಾನಾವರಣ ಕಷಾಯಗಳಿವೆ. ಮತ್ತು ಯಾವವುಗಳ ಉದಯವಾದ ಮೇಲೆ ಸಕಲಚಾರಿತ್ರವಾಗದಿರುವುದರಿಂದ ಎಲ್ಲದರ ತ್ಯಾಗವಾಗುವ ಸಾಧ್ಯತೆಯಿಲ್ಲ ಅಂಥವು ಪ್ರತ್ಯಾಖ್ಯಾನಾವರಣ ಕಷಾಯಗಳಿವೆ. ಇನ್ನು ಅವುಗಳ ಉದಯವಾದ ಮೇಲೆ ಸಕಲಚಾರಿತ್ರದಲ್ಲಿ ದೋಷವು ಉತ್ಪನ್ನವಾಗುತ್ತಿರುವುದರಿಂದ ಯಥಾಖ್ಯಾತಚಾರಿತ್ರವಾಗುವ ಸಾಧ್ಯತೆಯಿಲ್ಲದಂಥವು ಸಂಜ್ವಲನ ಕಷಾಯಗಳಿವೆ.

ಅನಾದಿ ಸಂಸಾರ ಅವಸ್ಥೆಯಲ್ಲಿ ಈ ನಾಲ್ಕರದೂ ಉದಯವು ನಿರಂತರವಾಗಿ ಕಂಡುಬರುತ್ತದೆ. ಪರಮ ತೀವ್ರ ಕೃಷ್ಣಲೇಶ್ಯಾರೂಪದ ತೀವ್ರ ಕಷಾಯವಿರುವಲ್ಲಿಯೂ ಮತ್ತು ಶುಕ್ಲಲೇಶ್ಯಾರೂಪದ ಮಂದಕಷಾಯವಿರುವಲ್ಲಿಯೂ ಈ ನಾಲ್ಕರ ಉದಯವು ನಿರಂತರವಿರುತ್ತದೆ. ಏಕೆಂದರೆ ತೀವ್ರ-ಮಂದಗಳ ಅಪೇಕ್ಷೆಯಿಂದ ಅನಂತಾನುಬಂಧೀ ಮೊದಲಾದ ಭೇದಗಳಿಲ್ಲ, ಸಮ್ಯಕ್ತ್ವ ಮೊದಲಾದವುಗಳ ಘಾತ ಮಾಡುವ ಅಪೇಕ್ಷೆಯಿಂದ ಈ ಭೇದಗಳಿವೆ. ಇವೇ ಪ್ರಕೃತಿಗಳ ತೀವ್ರ ಅನುಭಾಗದ ಉದಯವಾದ ಮೇಲೆ ತೀವ್ರ ಕ್ರೋಧಾದಿಗಳಾಗುತ್ತವೆ, ಮಂದ ಅನುಭಾಗದ ಉದಯವಾದ ಮೇಲೆ ಮಂದವಾಗುತ್ತವೆ.

ಮೋಕ್ಷಮಾರ್ಗವಾದ ಮೇಲೆ ಈ ನಾಲ್ಕವುಗಳೊಳಗಿಂದ ಮೂರು, ಎರಡು, ಒಂದರ ಉದಯವಿರುತ್ತದೆ, ಪುನಃ ನಾಲ್ಕರ ಅಭಾವವಾಗಿ ಹೋಗುತ್ತದೆ.

ಕ್ರೋಧ ಮೊದಲಾದ ನಾಲ್ಕು ಕಷಾಯಗಳೊಳಗೆ ಒಂದು ಕಾಲದಲ್ಲಿ ಒಂದರದೇ ಉದಯವಿರುತ್ತದೆ. ಈ ಕಷಾಯಗಳಲ್ಲಿ ಪರಸ್ಪರ ಕಾರಣಕಾರ್ಯತನವಿದೆ. ಕ್ರೋಧದಿಂದ ಮಾನಾದಿಗಳಾಗಿ ಬಿಡುತ್ತವೆ, ಮಾನದಿಂದ ಕ್ರೋಧಾದಿಗಳಾಗಿ ಹೋಗುತ್ತವೆ; ಆದುದರಿಂದ ಯಾವುದೇ ಕಾಲದಲ್ಲಿ ಭಿನ್ನತೆಯು ಭಾಸವಾದರೆ ಯಾವುದೇ ಕಾಲದಲ್ಲಿ ಭಾಸವಾಗುವುದಿಲ್ಲ.

ಈ ಪ್ರಕಾರ ಕಷಾಯರೂಪದ ಪರಿಣಮನವನ್ನು ತಿಳಿಯಬೇಕು.

ಅದರಂತೆ ಚಾರಿತ್ರಮೋಹದ ಉದಯದಿಂದಲೇ ನೋಕಷಾಯಗಳಾಗುತ್ತವೆ; ಹಾಸ್ಯದ ಉದಯದಿಂದ ಎಲ್ಲಾದರೂ ಇಷ್ಟತೆಯನ್ನು ಮನ್ನಿಸಿ ಪ್ರಫುಲ್ಲಿತನಾಗುತ್ತಾನೆ, ಹರುಷಗೊಳ್ಳುತ್ತಾನೆ. ರತಿಯ ಉದಯದಿಂದ ಯಾವುದನ್ನೋ ಇಷ್ಟವೆಂದು ಮನ್ನಿಸಿ ಪ್ರೀತಿ ಮಾಡುತ್ತಾನೆ, ಅಲ್ಲಿ ಆಸಕ್ತನಾಗುತ್ತಾನೆ. ಅರತಿಯ ಉದಯದಿಂದ ಯಾವುದನ್ನೋ ಅನಿಷ್ಟವೆಂದು ಮನ್ನಿಸಿ ಅಪ್ರೀತಿ ಮಾಡುತ್ತಾನೆ, ಅಲ್ಲಿ ಉದ್ವೇಗರೂಪನಾಗುತ್ತಾನೆ. ಶೋಕದ ಉದಯದಿಂದ ಎಲ್ಲಾದರೂ ಅನಿಷ್ಟತೆಯನ್ನು ಮನ್ನಿಸಿ ಉದಾಸೀನನಾಗುತ್ತಾನೆ, ವಿಷಾದ ಮನ್ನಿಸುತ್ತಾನೆ. ಭಯದ ಉದಯದಿಂದ ಯಾವುದನ್ನೋ ಅನಿಷ್ಟವೆಂದು ಮನ್ನಿಸಿ ಅದರಿಂದ ಹೆದರುತ್ತಾನೆ, ಅದರ ಸಂಯೋಗವನ್ನಪೇಕ್ಷಿಸುವುದಿಲ್ಲ. ಮತ್ತು ಜುಗುಪ್ಸೆಯ ಉದಯದಿಂದ ಯಾವುದೇ ಪದಾರ್ಥವನ್ನು ಅನಿಷ್ಟವೆಂದು ಮನ್ನಿಸಿ ಅದರ ತಿರಸ್ಕಾರ ಮಾಡುತ್ತಾನೆ ಅದರ ವಿಯೋಗವನ್ನಪೇಕ್ಷಿಸುತ್ತಾನೆ.

ಈ ಪ್ರಕಾರ ಈ ಹಾಸ್ಯ ಮೊದಲಾದವು ಆರು ಇವೆಯೆಂದು ತಿಳಿಯಬೇಕು.

ವೇದಗಳ ಉದಯದಿಂದ ಇವನಿಗೆ ಕಾಮ ಪರಿಣಾಮಗಳಾಗುತ್ತವೆ. ಅಲ್ಲಿ ಸ್ತ್ರೀ ವೇದದ ಉದಯದಿಂದ ಪುರುಷನ ಜತೆ ರಮಣ ಮಾಡುವ ಇಚ್ಛೆಯಾಗುತ್ತದೆ ಮತ್ತು ಪುರುಷ ವೇದದ ಉದಯದಿಂದ ಸ್ತ್ರೀಯಜತೆ ರಮಣಮಾಡುವ ಇಚ್ಛೆಯಾಗುತ್ತದೆ, ಮತ್ತು ನಪುಂಸಕ ವೇದದ ಉದಯದಿಂದ ಎರಡರೊಡನೆ ಒಮ್ಮೆಲೆ ರಮಣಮಾಡುವ ಇಚ್ಛೆಯಾಗುತ್ತದೆ.

ಈ ಪ್ರಕಾರ ಇವು ಒಂಭತ್ತಂತೂ ನೋಕಷಾಯಗಳಿವೆ. ಇವು ಕ್ರೋಧಾದಿಗಳಂತೆ ಬಲವಂತವಿಲ್ಲದಿರುವುದರಿಂದ ಇವನ್ನು ಈಷತ್ ಕಷಾಯವೆಂದು ಹೇಳುತ್ತಾರೆ. ಇಲ್ಲಿ ನೋ ಶಬ್ದವು

ಈಷತ್‌ವಾಚಕವಿದೆಯೆಂದು ತಿಳಿಯಬೇಕು. ಇವುಗಳ ಉದಯವು ಆ ಕ್ರೋಧಾದಿಗಳ ಜತೆಯಲ್ಲಿ ಯಥಾಸಂಭವವಾಗಿರುತ್ತದೆ.

ಈ ಪ್ರಕಾರ ಮೋಹದ ಉದಯದಿಂದ ಮಿಥ್ಯಾತ್ವ ಮತ್ತು ಕಷಾಯಭಾವಗಳಾಗುತ್ತವೆ, ಆದುದರಿಂದ ಇವೇ ಸಂಸಾರದ ಮೂಲಕಾರಣವಿವೆ. ಇವುಗಳಿಂದಲೇ ವರ್ತಮಾನಕಾಲದಲ್ಲಿ ಜೀವರುಗಳು ದುಃಖಿಯಿದ್ದಾರೆ ಮತ್ತು ಮುಂಬರುವ ಕರ್ಮಬಂಧಕ್ಕೂ ಇವೇ ಕಾರಣವಿವೆ. ಇವುಗಳ ಹೆಸರೇ ರಾಗ-ದ್ವೇಷ-ಮೋಹವಿದೆ. ಅಲ್ಲಿ ಮಿಥ್ಯಾತ್ವದ ಹೆಸರು ಮೋಹವಿದೆ; ಏಕೆಂದರೆ ಅಲ್ಲಿ ಸಾವಧಾನತೆಯ ಅಭಾವವಿದೆ. ಮತ್ತು ಮಾಯೆ, ಲೋಭ ಕಷಾಯ ಹಾಗೂ ಹಾಸ್ಯ, ರತಿ ಮತ್ತು ಮೂರು ವೇದಗಳ ಹೆಸರು ರಾಗವಿದೆ; ಏಕೆಂದರೆ ಅಲ್ಲಿಇಷ್ಟಬುದ್ಧಿಯಿಂದ ಅನುರಾಗವು ಕಂಡು ಬರುತ್ತದೆ. ಇನ್ನು ಕ್ರೋಧ, ಮಾನಕಷಾಯ ಮತ್ತು ಅರತಿ, ಶೋಕ, ಭಯ, ಜುಗುಪ್ಸೆಗಳ ಹೆಸರು ದ್ವೇಷವಿದೆ-ಏಕೆಂದರೆಅಲ್ಲಿ ಅನಿಷ್ಟ ಬುದ್ಧಿಯಿಂದ ದ್ವೇಷವು ಕಂಡು ಬರುತ್ತದೆ. ಸಾಮಾನ್ಯವಾಗಿ ಎಲ್ಲವುಗಳ ಹೆಸರು ಮೋಹವಿದೆ; ಏಕೆಂದರೆ ಇವುಗಳಲ್ಲಿ ಎಲ್ಲೆಡೆಗೆ ಅಸಾವಧಾನತೆಯು ಕಂಡುಬರುತ್ತದೆ.

## ಅಂತರಾಯಕರ್ಮೋದಯಜನ್ಯ ಅವಸ್ಥೆ :-

ಅಂತರಾಯದ ಉದಯದಿಂದ ಜೀವನು ಅಪೇಕ್ಷಿಸುವುದಾಗುವುದಿಲ್ಲ. ದಾನ ಕೊಡಲಪೇಕ್ಷಿಸಿದರೆ ಅದು ಕೊಡುವುದಾಗುವುದಿಲ್ಲ, ವಸ್ತುವಿನ ಪ್ರಾಪ್ತಿಯನ್ನಪೇಕ್ಷಿಸಿದರೆ ಅದು ಆಗುವುದಿಲ್ಲ, ಭೋಗ ಮಾಡಲಪೇಕ್ಷಿಸಿದರೆ ಅದು ಆಗುವುದಿಲ್ಲ, ಉಪಭೋಗಮಾಡಲಪೇಕ್ಷಿಸಿದರೆ ಅದು ಆಗುವುದಿಲ್ಲ, ತನ್ನ ಜ್ಞಾನ ಮೊದಲಾದ ಶಕ್ತಿಗಳನ್ನು ಪ್ರಕಟಮಾಡಲಪೇಕ್ಷಿಸಿದರೆ ಅದು ಪ್ರಕಟವಾಗುವುದಿಲ್ಲ. ಈ ಪ್ರಕಾರ ಅಂತರಾಯದ ಉದಯದಿಂದ ಅಪೇಕ್ಷಿಸಿದ್ದು ಆಗುವುದಿಲ್ಲ, ಮತ್ತು ಅದರ ಕ್ಷಯೋಪಶಮದಿಂದ ಸ್ವಲ್ಪ ಮಾತ್ರ ಅಪೇಕ್ಷಿಸಿದ್ದೂ ಆಗುತ್ತದೆ. ಅಪೇಕ್ಷೆಯಂತೂ ಅಧಿಕವಿದೆ, ಆದರೆ ಸ್ವಲ್ಪ ಮಾತ್ರ ದಾನ ಕೊಡುತ್ತಾನೆ, ಲಾಭವಾಗುತ್ತದೆ ಜ್ಞಾನಾದಿ ಶಕ್ತಿಗಳು ಪ್ರಕಟವಾಗುತ್ತವೆ; ಅಲ್ಲಿಯೂ ಅನೇಕ ಬಾಹ್ಯ ಕಾರಣಗಳು ಬೇಕಾಗುತ್ತವೆ.

ಈ ಪ್ರಕಾರ ಘಾತಿಕರ್ಮಗಳ ಉದಯದಿಂದ ಜೀವದ ಅವಸ್ಥೆಯಾಗುತ್ತದೆ.

## ವೇದನೀಯ ಕರ್ಮೋದಯಜನ್ಯ ಅವಸ್ಥೆ :-

ಅಘಾತಿಕರ್ಮಗಳಲ್ಲಿ ವೇದನೀಯದ ಉದಯದಿಂದ ಶರೀರದಲ್ಲಿ ಬಾಹ್ಯ ಸುಖ-ದುಃಖದ ಕಾರಣಗಳು ಉತ್ಪನ್ನವಾಗುತ್ತವೆ. ಶರೀರದಲ್ಲಿ ಆರೋಗ್ಯತೆ, ಶಕ್ತಿಯುಕ್ತತೆ ಇತ್ಯಾದಿ ಹಾಗೂ ಕ್ಷುಧೆ, ತೃಷೆ, ರೋಗ, ಖೇದ ಪೀಡೆ ಇತ್ಯಾದಿ ಸುಖ-ದುಃಖದ ಕಾರಣಗಳಾಗುತ್ತವೆ. ಬಾಹ್ಯದಲ್ಲಿ ರಮಣೀಯ ಋತು-ಪವನಾದಿಗಳು, ಇಷ್ಟ ಸ್ತ್ರೀ-ಪುತ್ರಾದಿಕರು ಹಾಗೂ ಮಿತ್ರ-ಧನಾದಿಗಳು; ರಮಣೀಯವಿಲ್ಲದ ಋತು-ಪವನಾದಿಗಳು, ಅನಿಷ್ಟ ಸ್ತ್ರೀ-ಪುತ್ರಾದಿಕರು ಹಾಗೂ ಶತ್ರು, ದಾರಿದ್ರ್ಯ, ವಧೆ-ಬಂಧನ ಮೊದಲಾದ ಸುಖ-ದುಃಖದ ಕಾರಣಗಳಾಗುತ್ತವೆ.

ಈ ಬಾಹ್ಯ ಕಾರಣಗಳಲ್ಲಿ ಅದೆಷ್ಟೋ ಕಾರಣಗಳ ನಿಮಿತ್ತದಿಂದ ಶರೀರದ ಅವಸ್ಥೆಯು ಸುಖ-ದುಃಖಕ್ಕೆ ಕಾರಣವಾಗುತ್ತದೆ ಮತ್ತು ಆ ಕಾರಣಗಳೇ ಸುಖ-ದುಃಖಕ್ಕೆ ಕಾರಣವಾಗುತ್ತವೆ. ಇನ್ನು ಅದೆಷ್ಟೋ ಕಾರಣಗಳು ತಾವೇ ಸುಖ-ದುಃಖಕ್ಕೆ ಕಾರಣವಾಗುತ್ತವೆ. ಇಂಥ ಕಾರಣಗಳು ದೊರಕುವುದು ವೇದನೀಯದ

ಉದಯದಿಂದಾಗುತ್ತದೆ. ಅಲ್ಲಿ ಸಾತಾವೇದನೀಯದಿಂದ ಸುಖದ ಕಾರಣಗಳು ದೊರಕುತ್ತವೆ ಮತ್ತು ಅಸಾತಾವೇದನೀಯದಿಂದ ದುಃಖದ ಕಾರಣಗಳು ದೊರಕುತ್ತವೆ.

ಇಲ್ಲಿ ಆ ಕಾರಣಗಳೇ ಸುಖ-ದುಃಖಗಳನ್ನುತ್ಪನ್ನ ಮಾಡುವುದಿಲ್ಲ, ಆದರೆ ಆತ್ಮನು ಮೋಹಕರ್ಮದ ಉದಯದಿಂದ ತಾನೇ ಸುಖ-ದುಃಖಗಳನ್ನು ಮನ್ನಿಸುತ್ತಾನೆಂದು ತಿಳಿಯಬೇಕು. ಅಲ್ಲಿ ವೇದನೀಯ ಕರ್ಮೋದಯದ ಹಾಗೂ ಮೋಹನೀಯ ಕರ್ಮೋದಯದ ಸಂಬಂಧವು ಇಂಥದೇ ಇದೆ. ಸಾತಾವೇದನೀಯವು ಉತ್ಪನ್ನ ಮಾಡಿದ ಬಾಹ್ಯ ಕಾರಣಗಳು ದೊರೆತಾಗಂತೂ ಸುಖ ಮನ್ನಿಸುವರೂಪದ ಮೋಹಕರ್ಮದ ಉದಯವಿರುತ್ತದೆ; ಮತ್ತು ಅಸಾತಾವೇದನೀಯವು ಉತ್ಪನ್ನ ಮಾಡಿದ ಬಾಹ್ಯ ಕಾರಣಗಳು ದೊರೆತಾಗ ದುಃಖ ಮನ್ನಿಸುವರೂಪದ ಮೋಹಕರ್ಮದ ಉದಯವಿರುತ್ತದೆ.

ಇದೇ ಹೇತುವು ಕೆಲವರಿಗೆ ಸುಖಕ್ಕೆ ಕೆಲವರಿಗೆ ದುಃಖಕ್ಕೆ ಕಾರಣವಾಗುತ್ತದೆ, ಹೇಗೆಂದರೆ-ಒಬ್ಬನಿಗೆ ಸಾತಾವೇದನೀಯದ ಉದಯದಿಂದ ದೊರೆತಂಥ ವಸ್ತ್ರವು ಸುಖದ ಕಾರಣವಾಗುತ್ತದೆ, ಮತ್ತು ಅಂಥದೇ ವಸ್ತ್ರವು ಇನ್ನೊಬ್ಬನಿಗೆ ಅಸಾತಾವೇದನೀಯದ ಉದಯದಿಂದ ದೊರಕಿದ್ದರೆ ಅದು ದುಃಖದ ಕಾರಣವಾಗುತ್ತದೆ. ಆದ್ದರಿಂದ ಬಾಹ್ಯವಸ್ತುಗಳು ಸುಖ-ದುಃಖಕ್ಕೆ ನಿಮಿತ್ತ ಮಾತ್ರವಾಗುತ್ತವೆ. ಸುಖ-ದುಃಖಗಳು ಮೋಹದ ನಿಮಿತ್ತದಿಂದ ಆಗುತ್ತವೆ. ನಿರ್ಮೋಹಿ ಮುನಿಗಳಿಗೆ ಅನೇಕ ಋದ್ಧಿ ಮೊದಲಾದವು ಹಾಗೂ ಪರೀಷಹ ಮೊದಲಾದ ಕಾರಣಗಳು ದೊರಕಿದರೂ ಕೂಡ ಸುಖ-ದುಃಖಗಳು ಉತ್ಪನ್ನವಾಗುವುದಿಲ್ಲ. ಮೋಹೀ ಜೀವನಿಗೆ ಕಾರಣ ದೊರೆತಮೇಲೆ ಅಥವಾ ಕಾರಣ ದೊರಕದಿದ್ದರೂ ಕೂಡ ತನ್ನ ಸಂಕಲ್ಪದಿಂದಲೇ ಸುಖ-ದುಃಖಗಳು ಆಗುತ್ತಲೇ ಇರುತ್ತವೆ. ಅಲ್ಲಿ ಕೂಡ ತೀವ್ರ ಮೋಹಿಗೆ ಯಾವ ಕಾರಣಗಳು ದೊರೆತಮೇಲೆ ತೀವ್ರ ಸುಖ-ದುಃಖಗಳಾಗುತ್ತವೆ, ಅದೇ ಕಾರಣಗಳು ದೊರೆತ ಮೇಲೆ ಮಂದಮೋಹಿಗೆ ಮಂದ ಸುಖ-ದುಃಖಗಳಾಗುತ್ತವೆ.

**ಆದುದರಿಂದ ಸುಖ-ದುಃಖದ ಮೂಲ ಬಲಿಷ್ಠ ಕಾರಣವು ಮೋಹದ ಉದಯವಿದೆ.** ಅನ್ಯವಸ್ತಗಳು ಅವು ಬಲಿಷ್ಟ ಕಾರಣಗಳಿಲ್ಲ; ಆದರೆ ಅನ್ಯ ವಸ್ತುಗಳಲ್ಲಿ ಮತ್ತು ಮೋಹೀ ಜೀವದ ಪರಿಣಾಮಗಳಲ್ಲಿ ನಿಮಿತ್ತ-ನೈಮಿತ್ತಿಕದ ಮುಖ್ಯತೆಯು ಕಂಡುಬರುತ್ತದೆ; ಅದರಿಂದ ಮೋಹೀ ಜೀವನು ಅನ್ಯ ವಸ್ತುಗಳನ್ನೇ ಸುಖ-ದುಃಖದ ಕಾರಣವೆಂದು ಮನ್ನಿಸುತ್ತಾನೆ.

ಈ ಪ್ರಕಾರ ವೇದನೀಯದಿಂದ ಸುಖ-ದುಃಖದ ಕಾರಣಗಳು ಉತ್ಪನ್ನವಾಗುತ್ತವೆ.

### ಆಯುಕರ್ಮೋದಯಜನ್ಯ ಅವಸ್ಥೆ :-

ಆಯುಕರ್ಮದ ಉದಯದಿಂದ ಮನುಷ್ಯ ಮೊದಲಾದ ಪರ್ಯಾಯಗಳ ಸ್ಥಿತಿಯಿರುತ್ತದೆ. ಆಯುವಿನ ಉದಯವಿರುವವರೆಗೆ ಅನೇಕ ರೋಗಾದಿ ಕಾರಣಗಳು ದೊರೆತರೂ ಕೂಡ ಶರೀರದಿಂದ ಸಂಬಂಧವು ಬಿಡುವುದಿಲ್ಲ ಮತ್ತು ಆಯುವಿನ ಉದಯವಿಲ್ಲದಾಗ ಅನೇಕ ಉಪಾಯ ಮಾಡಿದರೂ ಕೂಡ ಶರೀರದೊಡನೆ ಸಂಬಂಧವು ಉಳಿಯುವುದಿಲ್ಲ, ಅದೇ ಸಮಯದಲ್ಲಿ ಆತ್ಮ ಮತ್ತು ಶರೀರಗಳು ಪೃಥಕ್ಕಾಗಿ ಬಿಡುತ್ತವೆ.

ಈ ಸಂಸಾರದಲ್ಲಿ ಜನ್ಮ-ಜೀವನ-ಮರಣದ ಕಾರಣವು ಆಯುಕರ್ಮವೇ ಇದೆ. ನವೀನ ಆಯುವಿನ

ಉದಯವಾದಾಗ ನವೀನ ಪರ್ಯಾಯದಲ್ಲಿ ಜನ್ಮವಾಗುತ್ತದೆ ಮತ್ತು ಆಯುವಿನ ಉದಯವಿರುವವರೆಗೆ ಪರ್ಯಾಯರೂಪ ಪ್ರಾಣಗಳ ಧಾರಣದಿಂದ ಬದುಕಿರುವುದಾಗುತ್ತದೆ. ಇನ್ನು ಆಯುವಿನ ಕ್ಷಯವಾದಾಗ ಆ ಪರ್ಯಾಯರೂಪ ಪ್ರಾಣಗಳ ಬಿಡುಗಡೆಯಿಂದ ಮರಣವಾಗುತ್ತದೆ. ಹೀಗೆ ಸ್ವಾಭಾವಿಕವಾಗಿಯೇ ಆಯುಕರ್ಮದ ನಿಮಿತ್ತವಿದೆ; ಬೇರೆ ಯಾರೂ ಉತ್ಪನ್ನ ಮಾಡುವಂಥವರು, ಕ್ಷಯ ಮಾಡುವಂಥವರು ಅಥವಾ ರಕ್ಷಣೆ ಮಾಡುವಂಥವರು ಇಲ್ಲವೆಂದು ನಿಶ್ಚಯದಿಂದ ತಿಳಿಯಬೇಕು.

ಯಾವ ಪ್ರಕಾರ ಒಬ್ಬನು ನವೀನ ಬಟ್ಟೆಯನ್ನು ತೊಡುತ್ತಾನೆ, ಕೆಲಕಾಲದವರೆಗೆ ತೊಟ್ಟುಕೊಂಡಿರುತ್ತಾನೆ, ಪುನಃ ಅದನ್ನು ಬಿಟ್ಟುಕೊಟ್ಟು ಬೇರೆ ಬಟ್ಟೆಯನ್ನು ತೊಡುತ್ತಾನೆ; ಅದೇ ಪ್ರಕಾರ ಜೀವನು ನವೀನ ಶರೀರವನ್ನು ಧಾರಣ ಮಾಡುತ್ತಾನೆ, ಕೆಲಕಾಲದವರೆಗೆ ಧಾರಣ ಮಾಡಿಕೊಂಡಿರುತ್ತಾನೆ, ಪುನಃ ಅದನ್ನು ಬಿಟ್ಟುಕೊಟ್ಟು ನವೀನ ಶರೀರವನ್ನು ಧಾರಣ ಮಾಡುತ್ತಾನೆ. ಆದುದರಿಂದ ಶರೀರ ಸಂಬಂಧದ ಅಪೇಕ್ಷೆಯಿಂದ ಜನ್ಮ ಮೊದಲಾದವುಗಳಿವೆ. ಜೀವನು ಜನ್ಮಾದಿಗಳಿಂದ ರಹಿತನಾಗಿ ನಿತ್ಯನಿದ್ದರೂ ಕೂಡ ಮೋಹೀ ಜೀವನಿಗೆ ಭೂತ-ಭವಿಷ್ಯದ ವಿಚಾರವಿಲ್ಲದಿರುವುದರಿಂದ ಪ್ರಾಪ್ತ ಪರ್ಯಾಯಮಾತ್ರವನ್ನೇ ತನ್ನ ಸ್ಥಿತಿಯೆಂದು ಮನ್ನಿಸಿ ಪರ್ಯಾಯ ಸಂಬಂಧದ ಕಾರ್ಯಗಳಲ್ಲಿ ತತ್ಪರನಾಗುತ್ತಲಿದ್ದಾನೆ.

ಈ ಪ್ರಕಾರ ಆಯುವಿನಿಂದ ಪರ್ಯಾಯದ ಸ್ಥಿತಿಯಿದೆಯೆಂದು ತಿಳಿಯಬೇಕು.

## ನಾಮಕರ್ಮೋದಯಜನ್ಯ ಅವಸ್ಥೆ :-

ನಾಮಕರ್ಮದ ಉದಯದಿಂದ ಈ ಜೀವನು ಮನುಷ್ಯ ಮೊದಲಾದ ಗತಿಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ; ಆ ಪರ್ಯಾಯರೂಪವಾಗಿ ತನ್ನ ಅವಸ್ಥೆಯಾಗುತ್ತದೆ. ಅಲ್ಲಿ ತ್ರಸ-ಸ್ಥಾವರ ಮೊದಲಾದ ವಿಶೇಷ-ಅವಸ್ಥೆಗಳು ಉತ್ಪನ್ನವಾಗುತ್ತವೆ ಮತ್ತು ಏಕೇಂದ್ರಿಯ ಮೊದಲಾದ ಜಾತಿಯನ್ನು ಧಾರಣ ಮಾಡುತ್ತಾನೆ. ಈ ಜಾತಿ ಕರ್ಮದ ಉದಯಕ್ಕೆ ಮತ್ತು ಮತಿಜ್ಞಾನಾವರಣದ ಕ್ಷಯೋಪಶಮಕ್ಕೆ ನಿಮಿತ್ತ-ನೈಮಿತ್ತಿಕತನವಿದೆಯೆಂದು ತಿಳಿಯಬೇಕು. ಎಂಥ ಕ್ಷಯೋಪಶಮವಿರುತ್ತದೆ ಅಂಥ ಜಾತಿಯನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಅದರಂತೆ ಶರೀರಗಳ ಸಂಬಂಧವಾಗುತ್ತದೆ; ಆ ಶರೀರದ ಪರಮಾಣುಗಳ ಹಾಗೂ ಆತ್ಮನ ಪ್ರದೇಶಗಳ ಏಕಬಂಧನವಿರುತ್ತದೆ, ಆತ್ಮನು ಸಂಕೋಚ-ವಿಸ್ತಾರರೂಪನಾಗಿ ಶರೀರಪ್ರಮಾಣದಷ್ಟಿರುತ್ತಾನೆ. ಆ ನೋಕರ್ಮ ರೂಪದ ಶರೀರದಲ್ಲಿ ಅಂಗೋಪಾಂಗಾದಿಗಳ ಯೋಗ್ಯ ಸ್ಥಾನಗಳು ಪ್ರಮಾಣಸಹಿತವಾಗಿರುತ್ತವೆ. ಇದರಿಂದಲೇ ಸ್ಪರ್ಶನ, ರಸನ ಮೊದಲಾದ ದ್ರವ್ಯೇಂದ್ರಿಯಗಳು ಉತ್ಪನ್ನವಾಗುತ್ತವೆ ಮತ್ತು ಹೃದಯಸ್ಥಾನದಲ್ಲಿ ಅರಳಿದ ಅಷ್ಟದಲ ಕಮಲದ ಆಕಾರದಂತಿರುವ ದ್ರವ್ಯಮನವಿರುತ್ತದೆ. ಇನ್ನು ಆ ಶರೀರದಲ್ಲಿಯೇ ಆಕಾರಾದಿಗಳ ವಿಶೇಷತೆಯಾಗುವುದು, ವರ್ಣಾದಿಗಳ ವಿಶೇಷತೆಯಾಗುವುದು ಮತ್ತು ಸ್ಥೂಲ-ಸೂಕ್ಷ್ಮತ್ವಾದಿಗಳಾಗುವುದು ಇತ್ಯಾದಿ ಕಾರ್ಯಗಳು ಉತ್ಪನ್ನವಾಗುತ್ತವೆ; ಆ ಶರೀರರೂಪವಾಗಿ ಪರಿಣಮಿಸಿದ ಪರಮಾಣುಗಳು ಈ ಪ್ರಕಾರ ಪರಿಣಮಿತವಾಗುತ್ತವೆ.

ಅದರಂತೆ ಶ್ವಾಸೋಚ್ಛ್ವಾಸ ಮತ್ತು ಸ್ವರಗಳು ಉತ್ಪನ್ನವಾಗುತ್ತವೆ; ಅವು ಕೂಡ ಪುದ್ಗಲದ ಪಿಂಡಗಳಿದ್ದು ಶರೀರದೊಡನೆ ಏಕಬಂಧನರೂಪವಿವೆ. ಇವುಗಳಲ್ಲಿ ಕೂಡ ಆತ್ಮನ ಪ್ರದೇಶಗಳು ವ್ಯಾಪ್ತವಿವೆ, ಶ್ವಾಸೋಚ್ಛ್ವಾಸವಂತೂ

ಪವನವಿದೆ. ಯಾವ ಪ್ರಕಾರ ಆಹಾರವನ್ನು ಗ್ರಹಣ ಮಾಡಿದರೆ ಮತ್ತು ನಿಹಾರವನ್ನು ಹೊರತಳ್ಳಿದಾಗಲೇ ಜೀವಂತವಿರುವುದಾಗುತ್ತದೆ; ಅದೇ ಪ್ರಕಾರ ಬಾಹ್ಯ ಪವನವನ್ನು ಗ್ರಹಣ ಮಾಡಿದರೆ ಮತ್ತು ಅಭ್ಯಂತರ ಪವನವನ್ನು ಹೊರತಳ್ಳಿದಾಗಲೇ ಜೀವಿತವ್ಯವಿರುತ್ತದೆ. ಆದುದರಿಂದ ಶ್ವಾಸೋಚ್ಛ್ವಾಸವು ಜೀವಿತವ್ಯದ ಕಾರಣವಿದೆ. ಈ ಶರೀರದಲ್ಲಿ ಯಾವ ಪ್ರಕಾರ ಮೂಳೆ-ಮಾಂಸಗಳಿವೆ ಅದೇ ಪ್ರಕಾರ ಗಾಳಿಯಿದೆಯೆಂದು ತಿಳಿಯಬೇಕು. ಮತ್ತು ಹೇಗೆ ಕೈ ಮೊದಲಾದವುಗಳಿಂದ ಕಾರ್ಯಮಾಡುತ್ತೇವೆ ಹಾಗೆಯೇ ಪವನದಿಂದ ಕಾರ್ಯಮಾಡುತ್ತೇವೆ. ಬಾಯಲ್ಲಿ ಇಡಲಾದ ತುತ್ತುಗಳನ್ನು ಗಾಳಿಯಿಂದ ನುಂಗುತ್ತೇವೆ ಮತ್ತು ಗಾಳಿಯಿಂದಲೇ ಮಲಾದಿಗಳನ್ನು ಹೊರಕ್ಕೆ ತಳ್ಳುತ್ತೇವೆ, ಹಾಗೆಯೇ ಉಳಿದವುಗಳನ್ನು ತಿಳಿಯಬೇಕು. ಅದರಂತೆ ನಾಡಿ, ವಾಯುರೋಗ, ವಾಯುಗುಳ್ಳೆ ಇವೇ ಮೊದಲಾದವುಗಳನ್ನು ಪವನರೂಪವಾದ ಶರೀರದ ಅಂಗಗಳೆಂದು ತಿಳಿಯಬೇಕು.

ಸ್ವರವು ಅದು ಶಬ್ದವಿದೆ. ಯಾವ ಪ್ರಕಾರ ವೀಣೆಯ ತಂತಿಯನ್ನು ಮೀಟುವುದರಿಂದ ಭಾಷಾರೂಪವಾಗಲು ಯೋಗ್ಯವಿರುವ ಪುದ್ಗಲಸ್ಕಂಧಗಳು ಸಾಕ್ಷರ ಅಥವಾ ಅನಕ್ಷರ ಶಬ್ದರೂಪವಾಗಿ ಪರಿಣಮಿಸುತ್ತವೆ; ಅದೇ ಪ್ರಕಾರ ನಾಲಿಗೆ, ತುಟಿ ಇತ್ಯಾದಿ ಅಂಗಗಳನ್ನು ಅಲ್ಲಾಡಿಸುವುದರಿಂದ ಭಾಷಾಪರ್ಯಾಪ್ತಿಯಲ್ಲಿ ಗ್ರಹಣ ಮಾಡಲ್ಪಟ್ಟ ಆ ಪುದ್ಗಲಸ್ಕಂಧಗಳು ಸಾಕ್ಷರ ಅಥವಾ ಅನಕ್ಷರ ಶಬ್ದರೂಪವಾಗಿ ಪರಿಣಮಿಸುತ್ತವೆ.

ಅದರಂತೆ ಶುಭ-ಅಶುಭ ಗಮನಾದಿಗಳಾಗುತ್ತವೆ. ಅಲ್ಲಿ ಈರ್ವರು ಪುರುಷರಿಗೆ ಒಂದು ಬಳೆಯ ಸಂಕಲೆಯಿದೆಯೆಂದು ತಿಳಿಯಬೇಕು ಆ ಒಬ್ಬ ಪುರುಷನು ಗಮನಮಾಡಲಿಚ್ಛಿಸುವುದು ಮತ್ತು ಇನ್ನೊಬ್ಬನು ಕೂಡ ಅವನ ಜತೆ ಗಮನ ಮಾಡಿದರೆ ಗಮನವಾಗುವ ಸಾಧ್ಯತೆಯಿದೆ, ಈರ್ವರಲ್ಲಿ ಒಬ್ಬನು ಕುಳಿತಿದ್ದರೆ ಗಮನವಾಗುವ ಸಾಧ್ಯತೆಯಿಲ್ಲ, ಇನ್ನು ಈರ್ವರಲ್ಲಿ ಒಬ್ಬನು ಬಲವಂತನಿದ್ದರೆ ಇನ್ನೊಬ್ಬನನ್ನೂ ಎಳೆದೊಯ್ಯಬಹುದು. ಅದೇ ಪ್ರಕಾರ ಆತ್ಮನ ಹಾಗೂ ಶರೀರರೂಪ ಪುದ್ಗಲದ ಏಕಕ್ಷೇತ್ರಾವಗಾಹರೂಪದ ಬಂಧನವಿದೆ; ಅಲ್ಲಿ ಆತ್ಮನು ನಡೆದಾಡಲಪೇಕ್ಷಿಸುವುದು ಮತ್ತು ಪುದ್ಗಲವು ಆ ಶಕ್ತಿಯಿಂದ ರಹಿತವಿದ್ದರೆ ನಡೆದಾಡುವುದಾಗುವುದಿಲ್ಲ ಅಥವಾ ಪುದ್ಗಲದಲ್ಲಿ ಶಕ್ತಿಯು ಕಂಡುಬರುತ್ತಿದ್ದರೂ ಆತ್ಮನಿಗೆ ಇಚ್ಛೆಯಿಲ್ಲದಿದ್ದರೆ ನಡೆದಾಡುವುದಾಗುವ ಸಾಧ್ಯತೆಯಿಲ್ಲ. ಮತ್ತು ಇವುಗಳಲ್ಲಿ ಪುದ್ಗಲವು ಬಲಶಾಲಿಯಾಗಿ ಚಲಿಯಿಸಿದರೆ ಅದರ ಜತೆ ಇಚ್ಛೆಯಿಲ್ಲದಿದ್ದರೂ ಕೂಡ ಆತ್ಮನು ಚಲಿಸುತ್ತಾನೆ. ಹೀಗೆ ಚಲನಾದಿ ಕ್ರಿಯೆಗಳಾಗುತ್ತವೆ. ಮತ್ತು ಇವನ ಅವಯವ ಮೊದಲಾದವು ಬಾಹ್ಯನಿಮಿತ್ತವಾಗುತ್ತವೆ. ಈ ಪ್ರಕಾರ ಈ ಕಾರ್ಯಗಳು ಉತ್ಪನ್ನವಾಗುತ್ತವೆ, ಅವುಗಳಿಂದ ಮೋಹಕ್ಕನುಸರಿಸಿ ಆತ್ಮನು ಸುಖಿಯೂ-ದುಃಖಿಯೂ ಆಗುತ್ತಾನೆ.

ಹೀಗೆ ನಾಮಕರ್ಮದ ಉದಯದಿಂದ ತಾನಾಗಿಯೇ ನಾನಾಪ್ರಕಾರದ ರಚನೆಯಾಗುತ್ತದೆ. ಬೇರೆ ಯಾರೂ ಮಾಡುವವರಿಲ್ಲ, ಮತ್ತು ತೀರ್ಥಂಕರ ಮೊದಲಾದ ಪ್ರಕೃತಿಗಳು ಇಲ್ಲಿ ಇಲ್ಲವೇ ಇಲ್ಲ.

### ಗೋತ್ರಕರ್ಮೋದಯಜನ್ಯ ಅವಸ್ಥೆ :-

ಗೋತ್ರಕರ್ಮದಿಂದ ಉಚ್ಚ-ನೀಚ ಕುಲದಲ್ಲಿ ಉತ್ಪನ್ನವಾಗುವುದಾಗುತ್ತದೆ. ಅಲ್ಲಿ ತನ್ನ ಅಧಿಕತೆ-ಹೀನತೆಯು ಪ್ರಾಪ್ತವಾಗುತ್ತದೆ. ಮೋಹದ ಉದಯದಿಂದ ಆತ್ಮನು ಸುಖಿಯೂ-ದುಃಖಿಯೂ ಆಗುತ್ತಾನೆ.

ಈ ಪ್ರಕಾರ ಅಘಾತಿಕರ್ಮಗಳ ನಿಮಿತ್ತದಿಂದ ಅವಸ್ಥೆಯಾಗುತ್ತದೆ.

ಈ ಪ್ರಕಾರ ಈ ಅನಾದಿ ಸಂಸಾರದಲ್ಲಿ ಘಾತಿ-ಅಘಾತಿಕರ್ಮಗಳ ಉದಯದ ಅನುಸಾರವಾಗಿ ಆತ್ಮನ ಅವಸ್ಥೆಯಾಗುತ್ತದೆ. ಆದುದರಿಂದ ಎಲೈ ಭವ್ಯನೇ! ಇದು ಹೀಗೆಯೇ ಇದೆಯೋ ಅಥವಾ ಇಲ್ಲವೋ ಎಂಬುದನ್ನು ನಿನ್ನ ಅಂತರಂಗದಲ್ಲಿ ವಿಚಾರಮಾಡಿ ನೋಡು ! ವಿಚಾರಮಾಡಿದ ನಂತರ ಹೀಗೆಯೇ ಪ್ರತಿಭಾಸವಾಗುತ್ತದೆ. ಒಂದು ವೇಳೆ ಹೀಗಿದ್ದರೆ 'ನನಗೆ ಅನಾದಿ ಸಂಸಾರರೋಗವು ಕಂಡು ಬರುತ್ತದೆ, ನನಗೆ ಅದರ ನಾಶದ ಉಪಾಯ ಮಾಡಬೇಕಾಗಿದೆಯೆಂಬುದನ್ನು ನಂಬಬೇಕು. ಇಂಥ ವಿಚಾರದಿಂದ ನಿನ್ನದು ಕಲ್ಯಾಣವಾಗುವುದು.

**ಈ ಪ್ರಕಾರ ಶ್ರೀಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರದಲ್ಲಿ**
**ಸಂಸಾರ ಅವಸ್ಥೆಯ ನಿರೂಪಣೆ ಮಾಡುವ**
**ಎರಡನೆಯ ಅಧಿಕಾರವು ಸಮಾಪ್ತವಾಯಿತು.**

# ಮೂರನೆಯ ಅಧಿಕಾರ
## ಸಂಸಾರದುಃಖ ಹಾಗೂ ಮೋಕ್ಷಸುಖದ ನಿರೂಪಣೆ

**ಸದಾಸುಖದ ನಿಜಭಾವವನು ಮಾಡುವೆನಾತ್ಮಪ್ರಕಾಶ ।**
**ಮಾಡುವುದದು ಬಹುವಿಧ ಭವದುಃಖದ ಸತ್ತಾನಾಶ ।**

ಈ ಸಂಸಾರ-ಅವಸ್ಥೆಯಲ್ಲಿ ನಾನಾ ಪ್ರಕಾರದ ದುಃಖಗಳಿದ್ದು ಈಗ ಅವುಗಳ ವರ್ಣನೆ ಮಾಡುತ್ತೇವೆ. ಏಕೆಂದರೆ **ಒಂದುವೇಳೆ ಸಂಸಾರದಲ್ಲಿ ಕೂಡ ಸುಖವಿದ್ದರೆ ಆ ಸಂಸಾರದಿಂದ ಮುಕ್ತವಾಗುವ ಉಪಾಯವನ್ನು ಏತಕ್ಕಾಗಿ ಮಾಡುವುದು.** ಈ ಸಂಸಾರದಲ್ಲಿ ಅನೇಕ ದುಃಖಗಳಿರುವುದರಿಂದ ಮುಕ್ತವಾಗುವ ಉಪಾಯ ಮಾಡುತ್ತೇವೆ.

ಯಾವ ಪ್ರಕಾರ ವೈದ್ಯನು ರೋಗದ ನಿದಾನ ಮತ್ತು ಅದರ ಅವಸ್ಥೆಯ ವರ್ಣನೆ ಮಾಡಿ, ರೋಗಿಗೆ ರೋಗದ ನಿಶ್ಚಯಮಾಡಿಸಿ, ಪುನಃ ಅದರ ಉಪಾಯಮಾಡುವ ಅಭಿರುಚಿ ಮಾಡಿಸುತ್ತಾನೆ. ಅದೇ ಪ್ರಕಾರ ಇಲ್ಲಿ ಸಂಸಾರದ ನಿದಾನ ಹಾಗೂ ಅದರ ಅವಸ್ಥೆಯ ವರ್ಣನೆ ಮಾಡಿ, ಸಂಸಾರಿಗೆ ಸಂಸಾರ-ರೋಗದ ನಿಶ್ಚಯಮಾಡಿಸಿ, ಈಗ ಅದರ ಉಪಾಯಮಾಡುವ ಅಭಿರುಚಿ ಮಾಡಿಸುತ್ತಾರೆ.

ಯಾವ ಪ್ರಕಾರ ರೋಗಿಯು ರೋಗದಿಂದ ದುಃಖಿಯಾಗುತ್ತಲಿದ್ದಾನೆ ಆದರೆ ಅದರ ಮೂಲಕಾರಣ ತಿಳಿಯುವುದಿಲ್ಲ, ನಿಜವಾದ ಉಪಾಯ ತಿಳಿಯುವುದಿಲ್ಲ ಮತ್ತು ದುಃಖದ ಸಹನೆಯೂ ಆಗುವುದಿಲ್ಲ; ಆಗ ಅವನಿಗೆ ಹೊಳೆದ ಉಪಾಯವನ್ನೇ ಮಾಡುವುದರಿಂದ ದುಃಖವು ದೂರವಾಗುವುದಿಲ್ಲ, ಆಗ ಚಡಪಡಿಸಿ ಪರವಶನಾಗಿ ಆ ದುಃಖಗಳನ್ನು ಸಹಿಸುತ್ತಾನೆ. ಅವನಿಗೆ ವೈದ್ಯನು ದುಃಖದ ಮೂಲಕಾರಣ ತಿಳಿಸುತ್ತಾನೆ, ದುಃಖದ ಸ್ವರೂಪ ತಿಳಿಸುತ್ತಾನೆ, ಆ ಉಪಾಯಗಳನ್ನು ಅಸತ್ಯವೆಂದು ತಿಳಿಸುತ್ತಾನೆ, ಆಗ ನಿಜವಾದ ಉಪಾಯ ಮಾಡುವ ಅಭಿರುಚಿಯಾಗುತ್ತದೆ. ಅದೇ ಪ್ರಕಾರ ಸಂಸಾರಿಯು ಸಂಸಾರದಿಂದ ದುಃಖಿಯಾಗುತ್ತಲಿದ್ದಾನೆ, ಆದರೆ ಅದರ ಮೂಲ ಕಾರಣ ತಿಳಿಯುವುದಿಲ್ಲ, ನಿಜವಾದ ಉಪಾಯ ತಿಳಿಯುವುದಿಲ್ಲ ಮತ್ತು ದುಃಖದ ಸಹನೆಯೂ ಆಗುವುದಿಲ್ಲ; ತನಗೆ ಹೊಳೆದ ಉಪಾಯವನ್ನೇ ಮಾಡುವುದರಿಂದ ದುಃಖವು ದೂರವಾಗುವುದಿಲ್ಲ, ಆಗ ಚಡಪಡಿಸಿ ಪರವಶನಾಗಿ ಆ ದುಃಖಗಳನ್ನು ಸಹಿಸುತ್ತಾನೆ. ಅವನಿಗೆ ಇಲ್ಲಿ ದುಃಖದ ಮೂಲಕಾರಣ ತಿಳಿಸುತ್ತಾರೆ, ದುಃಖದ ಸ್ವರೂಪ ತಿಳಿಸುತ್ತಾರೆ, ಮತ್ತು ಆ ಉಪಾಯಗಳನ್ನು ಅಸತ್ಯವೆಂದು ತಿಳಿಸುತ್ತಾರೆ, ಆಗ ನಿಜವಾದ ಉಪಾಯ ಮಾಡುವ ಅಭಿರುಚಿಯಾಗುವುದು. ಆದುದರಿಂದ ಆ ವರ್ಣನೆಯನ್ನಿಲ್ಲಿ ಮಾಡುತ್ತೇವೆ.

# ಸಂಸಾರದ ದುಃಖ ಹಾಗೂ ಅದರ ಮೂಲಕಾರಣ

## ಕರ್ಮಗಳ ಅಪೇಕ್ಷೆಯಿಂದ-

ಸಮಸ್ತ ದುಃಖಗಳ ಮೂಲ ಕಾರಣವು ಮಿಥ್ಯಾದರ್ಶನ, ಅಜ್ಞಾನ ಮತ್ತು ಅಸಂಯಮವಿದೆ. ಆ ದರ್ಶನಮೋಹದ ಉದಯದಿಂದಾದ ಅತತ್ತ್ವಶ್ರದ್ಧೆಯು ಮಿಥ್ಯಾದರ್ಶನವಿದೆ, ಅದರಿಂದ ವಸ್ತುಸ್ವರೂಪದ ಯಥಾರ್ಥ ಪ್ರತೀತಿಯಾಗುವುದಿಲ್ಲ, ವಿಪರೀತ ಪ್ರತೀತಿಯಾಗುತ್ತದೆ. ಮತ್ತು ಆ ಮಿಥ್ಯಾದರ್ಶನದ ನಿಮಿತ್ತದಿಂದಲೇ ಕ್ಷಯೋಪಶಮರೂಪದ ಜ್ಞಾನವು ಅಜ್ಞಾನವಾಗುತ್ತಲಿದೆ, ಅದರಿಂದ ಯಥಾರ್ಥವಸ್ತುಸ್ವರೂಪದ ತಿಳಿವಳಿಕೆಯಾಗುವುದಿಲ್ಲ, ವಿಪರೀತ ತಿಳಿವಳಿಕೆಯಾಗುತ್ತದೆ. ಇನ್ನು ಚಾರಿತ್ರಮೋಹದ ಉದಯದಿಂದಾದ ಕಷಾಯಭಾವದ ಹೆಸರು ಅಸಂಯಮವಿದೆ, ಅದರಿಂದ ವಸ್ತುಸ್ವರೂಪವಿರುವಂತೆ ಪ್ರವೃತ್ತಿಯಾಗುವುದಿಲ್ಲ, ವಿಪರೀತ ಪ್ರವೃತ್ತಿಯಾಗುತ್ತದೆ.

ಈ ಪ್ರಕಾರ ಈ ಮಿಥ್ಯಾದರ್ಶನ ಮೊದಲಾದವುಗಳೇ ಸಮಸ್ತ ದುಃಖಗಳ ಮೂಲ ಕಾರಣವಿವೆ. ಹೇಗೆಂಬುದನ್ನು ಈಗ ತಿಳಿಸಿಕೊಡುತ್ತಾರೆ.

**ಜ್ಞಾನಾನಾವರಣ ಮತ್ತು ದರ್ಶನಾವರಣದ ಕ್ಷಯೋಪಶಮದಿಂದಾಗುವ ದುಃಖ ಹಾಗೂ ಅದರಿಂದ ನಿವೃತ್ತಿ :-**

ಮಿಥ್ಯಾದರ್ಶನ ಮೊದಲಾದವುಗಳಿಂದ ಜೀವನಿಗೆ ಸ್ವ-ಪರಗಳ ವಿವೇಕವಾಗುವುದಿಲ್ಲ. ಸ್ವಯಂ ಒಬ್ಬ ಆತ್ಮ ಮತ್ತು ಅನಂತ ಪುದ್ಗಲ ಪರಮಾಣುಮಯವಾದ ಶರೀರಗಳ ಸಂಯೋಗರೂಪವಾಗಿ ಮನುಷ್ಯ ಮೊದಲಾದ ಪರ್ಯಾಯಗಳು ಉತ್ಪನ್ನವಾಗುತ್ತವೆ, ಆ ಪರ್ಯಾಯವನ್ನೇ ತಾನೆಂದು ಮನ್ನಿಸುತ್ತಾನೆ. ಮತ್ತು ಆತ್ಮನ ಜ್ಞಾನ-ದರ್ಶನ ಮೊದಲಾದ ಸ್ವಭಾವಗಳ ಮುಖಾಂತರ ಒಂದಿಷ್ಟು ತಿಳಿಯುವುದು-ನೋಡುವುದಾಗುತ್ತದೆ; ಮತ್ತು ಕರ್ಮೋಪಾಧಿಯಿಂದಾದ ಕ್ರೋಧಾದಿಭಾವಗಳ ರೂಪದ ಪರಿಣಾಮಗಳು ಕಂಡು ಬರುತ್ತವೆ; ಹಾಗೂ ಶರೀರದ ಸ್ಪರ್ಶ, ರಸ, ಗಂಧ, ವರ್ಣ ಸ್ವಭಾವವು ಪ್ರಕಟವಿದೆ ಮತ್ತು ಸ್ಥೂಲ-ಕೃಶ ಮೊದಲಾದವುಗಳಾಗುವುದು ಹಾಗೂ ಸ್ಪರ್ಶಾದಿಗಳ ಬದಲಾವಣೆ ಇತ್ಯಾದಿ ಅನೇಕ ಅವಸ್ಥೆಗಳಾಗುತ್ತವೆ, ಅವೆಲ್ಲವನ್ನು ತನ್ನ ಸ್ವರೂಪವೆಂದು ತಿಳಿಯುತ್ತಾನೆ.

ಜ್ಞಾನ-ದರ್ಶನದ ಪ್ರವೃತ್ತಿಯು ಇಂದ್ರಿಯ ಮನಸ್ಸಿನ ಮುಖಾಂತರ ಆಗುತ್ತಿರುವುದರಿಂದ ಈ ತ್ವಚೆ, ಜಿಹ್ವೆ, ನಾಸಿಕ, ನೇತ್ರ, ಕರ್ಣ, ಮನಸ್ಸುಗಳು ನನ್ನ ಅಂಗಗಳಿವೆಯೆಂದು ಇವನು ಮನ್ನಿಸುತ್ತಾನೆ. ಮತ್ತು ಇವುಗಳಿಂದ ನಾನು ನೋಡುತ್ತೇನೆ, ತಿಳಿಯುತ್ತೇನೆಂಬ ಮನ್ನಣೆಯಿಂದ ಇಂದ್ರಿಯಗಳಲ್ಲಿ ಪ್ರೀತಿಯು ಕಂಡುಬರುತ್ತದೆ.

ಅದರಂತೆ ಮೋಹದ ಆವೇಶದಿಂದ ಆ ಇಂದ್ರಿಯಗಳ ಮುಖಾಂತರ ವಿಷಯ ಗ್ರಹಣ ಮಾಡುವ ಇಚ್ಛೆಯಾಗುತ್ತದೆ. ಮತ್ತು ಆ ವಿಷಯಗಳ ಗ್ರಹಣವಾದ ಮೇಲೆ ಆ ಇಚ್ಛೆಯ ಪೂರ್ತಿಯಿಂದ ನಿರಾಕುಲತೆಯಾದಾಗ ಆನಂದ ಮನ್ನಿಸುತ್ತಾನೆ. ಯಾವ ಪ್ರಕಾರ ಶ್ವಾನವು ಮೂಳೆಯನ್ನು ಜಗಿಯುವುದರಿಂದ ತನ್ನ ಒಸಡೆಯಿಂದ ಒಸರಿದ ರಕ್ತದ ಸ್ವಾದ ಪಡೆದು ಇದು ಮೂಳೆಗಳಿಂದ ಬಂದ ಸ್ವಾದವೆಂದು ಮನ್ನಿಸುತ್ತದೆ. ಅದೇ ಪ್ರಕಾರ ಈ ಜೀವನು ವಿಷಯಗಳನ್ನು ತಿಳಿಯುತ್ತಾನೆ, ಅದರಿಂದ ತನ್ನ ಜ್ಞಾನವು ಪ್ರವರ್ತಿಸುತ್ತದೆ, ಅದರ ಸ್ವಾದ ಪಡೆದು ಇದು ವಿಷಯದ ಸ್ವಾದವೆಂದು ಮನ್ನಿಸುತ್ತಾನೆ; ಆದರೆ ವಿಷಯಗಳಲ್ಲಂತೂ ಸ್ವಾದವಿಲ್ಲ, ತಾನೇ ಇಚ್ಛೆ ಮಾಡಿ ಅದನ್ನು ತಾನೇ

ತಿಳಿದುಕೊಂಡು ತಾನೇ ಆನಂದ ಮನ್ನಿಸಿದನು; 'ಆದರೆ ನಾನು ಅನಾದಿ ಅನಂತ ಜ್ಞಾನ-ಸ್ವರೂಪನಾದ ಆತ್ಮನಿದ್ದೇನೆಂಬ ನಿಃಕೇವಲಜ್ಞಾನದ್ದಂತೂ ಅನುಭವವಿಲ್ಲ. ಮತ್ತು ನಾನು ನೃತ್ಯ ನೋಡಿದೆ, ರಾಗ ಆಲಿಸಿದೆ, ಪುಷ್ಪ ಆಘ್ರಾಣಿಸಿದೆ, ಪದಾರ್ಥದ ಸ್ವಾದ ಪಡೆದೆ, ಪದಾರ್ಥದ ಸ್ಪರ್ಶ ಮಾಡಿದೆ, ಶಾಸ್ತ್ರ ತಿಳಿದೆ, ನನಗೆ ಇದನ್ನು ತಿಳಿಯುವುದಿದೆಯೆಂಬ ಜ್ಞೇಯಮಿಶ್ರಿತ ಜ್ಞಾನದ ಅನುಭವವಿರುವುದರಿಂದ ವಿಷಯಗಳ ಮುಖ್ಯತೆಯೇ ಭಾಸವಾಗುತ್ತದೆ. ಹೀಗೆ ಈ ಜೀವನಿಗೆ ಮೋಹದ ನಿಮಿತ್ತದಿಂದ ವಿಷಯಗಳ ಇಚ್ಛೆಯು ಕಂಡುಬರುತ್ತದೆ.

ತ್ರಿಕಾಲವರ್ತಿಯಾದ ಸಮಸ್ತ ವಿಷಯಗಳನ್ನು ಗ್ರಹಣ ಮಾಡುವ ಇಚ್ಛೆಯಿದೆ. ನಾನು ಎಲ್ಲದರ ಸ್ಪರ್ಶ ಮಾಡಬೇಕು, ಎಲ್ಲದರ ಸ್ವಾದ ಪಡೆಯಬೇಕು, ಎಲ್ಲವನ್ನು ಆಘ್ರಾಣಿಸಬೇಕು, ಎಲ್ಲವನ್ನು ನೋಡಬೇಕು, ಎಲ್ಲವನ್ನು ಆಲಿಸಬೇಕು, ಎಲ್ಲವನ್ನು ತಿಳಿಯಬೇಕೆಂಬ ಇಚ್ಛೆಯಂತೂ ಇದೆ. ಆದರೆ ಶಕ್ತಿಯಂತೂ ಇಂದ್ರಿಯಗಳ ಸಮ್ಮುಖ ಬರುವಂಥ ವರ್ತಮಾನ ಸ್ಪರ್ಶ, ರಸ, ಗಂಧ, ವರ್ಣ, ಶಬ್ದಗಳೊಳಗಿಂದ ಯಾವುದಾದರೊಂದನ್ನು ಸ್ವಲ್ಪ ಮಾತ್ರ ಗ್ರಹಣ ಮಾಡುವ ಹಾಗೂ ಸ್ಮರಣೆಯಿಂದ ಮನಸ್ಸಿನ ಮುಖಾಂತರ ಸ್ವಲ್ಪ ಮಾತ್ರ ತಿಳಿಯುವಷ್ಟಿದೆ, ಅದು ಕೂಡ ಬಾಹ್ಯದ ಅನೇಕ ಕಾರಣಗಳು ದೊರಕಿದಮೇಲೆ ಸಿದ್ಧವಾಗುವುದು, ಆದುದರಿಂದ ಇಚ್ಛೆಯು ಎಂದೂ ಪೂರ್ಣವಾಗುವುದಿಲ್ಲ. ಇಂಥ ಇಚ್ಛೆಯಂತೂ ಕೇವಲಜ್ಞಾನವಾದನಂತರ ಸಂಪೂರ್ಣವಾಗುವುದು.

ಕ್ಷಯೋಪಶಮರೂಪದ ಇಂದ್ರಿಯಗಳಿಂದಂತೂ ಇಚ್ಛೆಯು ಪೂರ್ಣವಾಗದಿರುವುದರಿಂದ ಇಂದ್ರಿಯಗಳಿಗೆ ಮೋಹದ ನಿಮಿತ್ತದಿಂದ ತಮ್ಮ-ತಮ್ಮ ವಿಷಯ ಗ್ರಹಣದ ಇಚ್ಛೆಯು ನಿರಂತರ ಆಗುತ್ತಲೇ ಇರುತ್ತದೆ; ಅದರಿಂದ ವ್ಯಾಕುಲಿತನಾಗಿ ದುಃಖಿಯಾಗುತ್ತಲಿದ್ದಾನೆ. ಯಾವುದೇ ಒಂದು ವಿಷಯ ಗ್ರಹಣದ ಸಲುವಾಗಿ ತನ್ನ ಮರಣವನ್ನು ಕೂಡ ಲೆಕ್ಕಿಸದಷ್ಟು ದುಃಖಿಯಾಗುತ್ತಲಿದ್ದಾನೆ. ಹೇಗೆ ಆನೆಗೆ ವಂಚಕ ಹೆಣ್ಣಾನೆಯ ಶರೀರ ಸ್ಪರ್ಶ ಮಾಡುವ, ಮೀನಿಗೆ ಕೋಲಿನ ಕೊನೆಗೆ ಕಟ್ಟಿದ ಮಾಂಸದ ಸ್ವಾದ ಪಡೆಯುವ, ದುಂಬಿಗೆ ಕಮಲ ಪುಷ್ಪದ ಸುಗಂಧ ಆಘ್ರಾಣಿಸುವ, ಪತಂಗಕ್ಕೆ ದೀಪ ಜ್ಯೋತಿಯ ವರ್ಣ ನೋಡುವ ಮತ್ತು ಜಿಂಕೆಗೆ ರಾಗ ಆಲಿಸುವ ಇಚ್ಛೆಯು ಅದರಿಂದ ಕೂಡಲೆ ಮರಣವು ಕಂಡು ಬಂದರೂ ಆ ಮರಣವನ್ನು ಲೆಕ್ಕಿಸದಷ್ಟು ತೀವ್ರವಾಗಿರುತ್ತದೆ. ವಿಷಯಗಳ ಗ್ರಹಣೆ ಮಾಡುವುದರಿಂದ ಮರಣವಾದರೂ ವಿಷಯ ಸೇವನೆ ಮಾಡದಿರುವುದರಿಂದ ಇಂದ್ರಿಯಗಳ ಪೀಡೆಯು ಇನ್ನೂ ಅಧಿಕವಾಗಿ ಭಾಸವಾಗುತ್ತದೆ. ಇಂದ್ರಿಯಗಳ ಬಾಧೆಯಿಂದ ಪೀಡಿತಗೊಂಡ ಸಮಸ್ತ ಜೀವರುಗಳು ವಿಚಾರಶೂನ್ಯರಾಗಿ ತುಂಬ ದುಃಖಿಯಾದವನೋರ್ವನು ಪರ್ವತ ಶಿಖರದಿಂದ ಉರುಳಿ ಬೀಳುವಂತೆ ವಿಷಯಗಳಲ್ಲಿ ಧುಮುಕಿ ಬಿಡುತ್ತಾರೆ. ಅದೆಷ್ಟೋ ಕಷ್ಟದಿಂದ ಸಂಪಾದಿಸಿದ ಧನರಾಶಿಯನ್ನು ವಿಷಯದ ಸಲುವಾಗಿ ಕಳೆದುಕೊಳ್ಳುತ್ತಾರೆ. ಮತ್ತು ವಿಷಯಗಳ ಸಲುವಾಗಿ ಅಲ್ಲಿಗೆ ಹೋದರೆ ಮರಣವಾಗುತ್ತದೆಯೆಂಬುದನ್ನು ತಿಳಿದೂ ಕೂಡ ಅಲ್ಲಿ ಹೋಗುತ್ತಾರೆ. ನರಕಾದಿಗಳಿಗೆ ಕಾರಣವಾದಂಥ ಆ ಹಿಂಸಾದಿ ಕಾರ್ಯಗಳನ್ನು ಮಾಡುತ್ತಾರೆ. ಮತ್ತು ಕ್ರೋಧ ಮೊದಲಾದ ಕಷಾಯಗಳನ್ನು ಉತ್ಪನ್ನ ಮಾಡುತ್ತಾರೆ.

ಇಂದ್ರಿಯಗಳ ಬಾಧೆಯು ಸಹನವಾಗದಿರುವುದರಿಂದ ಬೇರೆ ಯಾವ ವಿಚಾರಗಳೇ ಬರುವುದಿಲ್ಲ ಪಾಪ ಅವರೇನು ಮಾಡಿಯಾರು ? ಇಂದ್ರಾದಿಕರು ಇದೇ ಬಾಧೆಯಿಂದ ಪೀಡಿತರಾಗಿದ್ದಾರೆ; ಅವರು ಕೂಡ ವಿಷಯಗಳಲ್ಲಿ ಅತ್ಯಂತ ಆಸಕ್ತರಾಗುತ್ತಿದ್ದಾರೆ. ಯಾವ ಪ್ರಕಾರ ತುರಿಕೆ ರೋಗದಿಂದ ಪೀಡಿತನಾದ ಪುರುಷನು ಆಸಕ್ತನಾಗಿ

ತುರಿಸಿಕೊಳ್ಳುತ್ತಾನೆ, ಪೀಡೆಯಾಗದಿದ್ದರೆ ಏತಕ್ಕಾಗಿ ತುರಿಸಿಕೊಳ್ಳುವನು ? ಅದೇ ಪ್ರಕಾರ ಇಂದ್ರಿಯ ರೋಗದಿಂದ ಪೀಡಿತರಾದ ಇಂದ್ರಾದಿಕರು ಆಸಕ್ತರಾಗಿ ವಿಷಯಸೇವನೆ ಮಾಡುತ್ತಾರೆ. ಬಾಧೆಯಾಗದಿದ್ದರೆ ವಿಷಯ ಸೇವನೆಯನ್ನು ಏತಕ್ಕಾಗಿ ಮಾಡುವರು ?

ಈ ಪ್ರಕಾರ ಜ್ಞಾನಾವರಣ-ದರ್ಶನಾವರಣದ ಕ್ಷಯೋಪಶಮದಿಂದಾದ ಇಂದ್ರಿಯಜನ್ಯ ಜ್ಞಾನವು ಅದು ಮಿಥ್ಯಾದರ್ಶನಾದಿಗಳ ನಿಮಿತ್ತದಿಂದ ಇಚ್ಛಾಸಹಿತವಾಗಿ ದುಃಖದ ಕಾರಣವಾಗಿದೆ.

ಈ ದುಃಖ ದೂರವಾಗುವ ಸಲುವಾಗಿ ಜೀವನು ಯಾವ ಉಪಾಯ ಮಾಡುತ್ತಾನೆಂಬುದನ್ನು ಈಗ ಹೇಳುತ್ತಾರೆ-ಇಂದ್ರಿಯಗಳಿಂದ ವಿಷಯಗಳ ಗ್ರಹಣವಾದ ಮೇಲೆ ನನ್ನ ಇಚ್ಛೆಯು ಪೂರ್ಣವಾಗಬಹುದೆಂದು ತಿಳಿದುಕೊಂಡು ಮೊದಲು ನಾನಾ ಪ್ರಕಾರದ ಭೋಜನಾದಿಗಳಿಂದ ಇಂದ್ರಿಯಗಳನ್ನು ಪ್ರಬಲ ಮಾಡುತ್ತಾನೆ ಮತ್ತು ಇಂದ್ರಿಯಗಳು ಪ್ರಬಲವಿರುವುದರಿಂದ ನನ್ನ ವಿಷಯ ಗ್ರಹಣದ ಶಕ್ತಿಯು ವಿಶೇಷವಾಗುವುದೆಂದೇ ತಿಳಿಯುತ್ತಾನೆ. ಮತ್ತು ಅಲ್ಲಿ ಬೇಕಾಗುವ ಅನೇಕ ಬಾಹ್ಯ ಕಾರಣಗಳ ನಿಮಿತ್ತ ಹೊಂದಿಸಿಕೊಳ್ಳುತ್ತಾನೆ.

ಇಂದ್ರಿಯಗಳು ವಿಷಯ ಸಮ್ಮುಖವಾದ ಮೇಲೆ ಅವನ್ನು ಗ್ರಹಣ ಮಾಡುತ್ತಿರುವುದರಿಂದ ಅನೇಕ ಬಾಹ್ಯ ಉಪಾಯಗಳ ಮುಖಾಂತರ ಇಂದ್ರಿಯಗಳ ಹಾಗೂ ವಿಷಯಗಳ ಸಂಯೋಗ ಹೊಂದಿಸುತ್ತಾನೆ. ನಾನಾ ಪ್ರಕಾರದ ವಸ್ತ್ರಾದಿಗಳ, ಭೋಜನಾದಿಗಳ, ಪುಷ್ಪಾದಿಗಳ, ಆಲಯ-ಆಭೂಷಣಾದಿಗಳ ಹಾಗೂ ಗಾಯನ ವಾದ್ಯಾದಿಗಳ ಸಂಯೋಗ ಸಂಬಂಧದ ಸಲುವಾಗಿ ತುಂಬ ಖೇದಖಿನ್ನನಿರುತ್ತಾನೆ.

ಈ ಇಂದ್ರಿಯಗಳ ಸಮ್ಮುಖ ವಿಷಯವಿರುವವರೆಗೆ ಆ ವಿಷಯದ ತಿಳಿವಳಿಕೆಯು ಒಂದಿಷ್ಟು ಸ್ಪಷ್ಟವಾಗಿರುತ್ತದೆ, ಅನಂತರ ಮನಸ್ಸಿನ ಮೂಲಕ ಸ್ಮರಣೆ ಮಾತ್ರ ಉಳಿಯುತ್ತದೆ. ಕಾಲವು ವ್ಯತೀತವಾದಮೇಲೆ ಸ್ಮರಣೆ ಕೂಡ ಮಂದವಾಗುತ್ತ ಹೋಗುವುದರಿಂದ ಆ ವಿಷಯಗಳನ್ನು ತನ್ನ ಆಧೀನದಲ್ಲಿಟ್ಟುಕೊಳ್ಳುವ ಉಪಾಯ ಮಾಡುತ್ತಾನೆ ಮತ್ತು ಶೀಘ್ರ-ಶೀಘ್ರವಾಗಿ ಅವುಗಳ ಗ್ರಹಣ ಮಾಡತೊಡಗುತ್ತಾನೆ. ಇಂದ್ರಿಯಗಳಿಂದಂತೂ ಒಂದು ಕಾಲದಲ್ಲಿ ಒಂದೇ ವಿಷಯದ ಗ್ರಹಣವಾಗುತ್ತದೆ, ಆದರೆ ಇವನು ಅಧಿಕ ಗ್ರಹಣಮಾಡಲಪೇಕ್ಷಿಸುತ್ತಿರುವುದರಿಂದ ವ್ಯಾಕುಲನಾಗಿ ಶೀಘ್ರ-ಶೀಘ್ರ ಒಂದು ವಿಷಯವನ್ನು ಬಿಟ್ಟು ಇನ್ನೊಂದನ್ನು ಗ್ರಹಣ ಮಾಡುತ್ತಾನೆ ಮತ್ತು ಅದನ್ನೂ ಬಿಟ್ಟು ಬೇರೆ ಮತ್ತೊಂದನ್ನು ಗ್ರಹಣಮಾಡುತ್ತಾನೆ. ಹೀಗೆ ನೆಗೆಯುತ್ತಾನೆ.

ಈ ಪ್ರಕಾರ ತನಗೆ ಹೊಳೆದ ಉಪಾಯಗಳನ್ನೆಲ್ಲ ಮಾಡುತ್ತಾನೆ, ಆದರೆ ಅವು ಅಸತ್ಯವಿವೆ. ಏಕೆಂದರೆ ಮೊದಲಂತೂ ಇವೆಲ್ಲವುಗಳದು ಹೀಗೇ ಆಗುವುದು ತಮ್ಮ ಆಧೀನವಿಲ್ಲ, ಅದು ಅತ್ಯಂತ ಕಠಿಣವಿದೆ; ಇನ್ನು ಎಂದಾದರೂ ಉದಯಕ್ಕೆ ಅನುಸರಿಸಿ ವಿಧಿಯು ಹಾಗೆಯೇ ಕೂಡಿಬಂದರೆ ಇಂದ್ರಿಯಗಳನ್ನು ಬಲಿಷ್ಠ ಮಾಡುವುದರಿಂದೇನು ವಿಷಯ ಗ್ರಹಣದ ಶಕ್ತಿಯು ಹೆಚ್ಚುವುದಿಲ್ಲ; ಆ ಶಕ್ತಿಯಂತೂ ಜ್ಞಾನ-ದರ್ಶನಗಳು ಹೆಚ್ಚುವುದರಿಂದ ವೃದ್ಧಿಸುತ್ತದೆ, ಆದರೆ ಇದು ಕರ್ಮದ ಕ್ಷಯೋಪಶಮದ ಆಧೀನವಿದೆ. ಪುಷ್ಟಶರೀರವಿರುವವರಿಗೆ ಇಂಥ ಶಕ್ತಿಯು ಅಲ್ಪವಾಗಿ ಕಂಡುಬಂದರೆ ದುರ್ಬಲ ಶರೀರವಿರುವವರಿಗೆ ಅಧಿಕವಾಗಿ ಕಂಡುಬರುತ್ತದೆ. ಆದುದರಿಂದ ಭೋಜನ ಮೊದಲಾದವುಗಳಿಂದ ಇಂದ್ರಿಯಗಳನ್ನು ಪುಷ್ಟಮಾಡುವುದರಿಂದ ಯಾವ

ಸಿದ್ಧಿಯಾಗುವುದಿಲ್ಲ, ಕಷಾಯಾದಿಗಳು ಕಡಿಮೆಯಾಗುವುದರಿಂದ ಕರ್ಮದ ಕ್ಷಯೋಪಶಮವಾದ ಮೇಲೆ ಜ್ಞಾನ-ದರ್ಶನಗಳು ವೃದ್ಧಿಸಿದಾಗ ವಿಷಯ ಗ್ರಹಣದ ಶಕ್ತಿಯು ವೃದ್ಧಿಸುತ್ತದೆ.

ಆ ವಿಷಯಗಳ ಸಂಯೋಗವು ಕೂಡಿ ಬರುತ್ತಿರುವುದು ಅಧಿಕಕಾಲದವರೆಗೆ ಉಳಿಯುವುದಿಲ್ಲ ಅಥವಾ ಎಲ್ಲ ವಿಷಯಗಳ ಸಂಯೋಗವು ಲಭಿಸದಿರುವುದರಿಂದ ಈ ಆಕುಲತೆಯು ಜೀವಂತವಾಗಿಯೇ ಉಳಿಯುತ್ತದೆ. ಮತ್ತು ಆ ವಿಷಯಗಳನ್ನು ತನ್ನ ಆಧೀನದಲ್ಲಿಟ್ಟುಕೊಂಡು ಶೀಘ್ರ-ಶೀಘ್ರವಾಗಿ ಗ್ರಹಣ ಮಾಡುತ್ತಾನೆ, ಆದರೆ ಅವು ಆಧೀನ ಉಳಿಯುವುದಿಲ್ಲ. ಆ ಭಿನ್ನದ್ರವ್ಯಗಳಂತೂ ತಮ್ಮ-ತಮ್ಮ ಆಧೀನದಲ್ಲಿ ಪರಿಣಮಿಸುತ್ತವೆ ಅಥವಾ ಕರ್ಮೋದಯದ ಆಧೀನವಿವೆ. ಇಂಥ ಕರ್ಮದ ಬಂಧವು ಯಥಾಯೋಗ್ಯ ಶುಭಭಾವವಾದ ಮೇಲೆ ಆಗುತ್ತದೆ ಮತ್ತು ನಂತರ ಉದಯಕ್ಕೆ ಬಂದಾಗ ಪ್ರತ್ಯಕ್ಷ ಕಾಣುತ್ತೇವೆ. ಅನೇಕ ಉಪಾಯ ಮಾಡಿದರೂ ಕರ್ಮದ ನಿಮಿತ್ತವಿಲ್ಲದೆ ಸಾಮಗ್ರಿಗಳು ದೊರಕುವುದಿಲ್ಲ.

ಒಂದು ವಿಷಯವನ್ನು ಬಿಟ್ಟು ಇನ್ನೊಂದರ ಗ್ರಹಣ ಮಾಡುತ್ತಾನೆ ಹೀಗೆ ನೆಗೆಯುವುದರಿಂದ ಸಿದ್ಧಿಯಾಗುತ್ತದೆಯೇನು ? ಯಾವ ಪ್ರಕಾರ ಬಂಡಿ ತುಂಬ ತಿನ್ನುವ ಕ್ಷುಧೆಯುಳ್ಳವನಿಗೆ ಹಿಡಿ ಅನ್ನ ದೊರಕಿದರೆ ಹಸಿವೆ ಹಿಂಗುವುದೇನು ? ಅದೇ ಪ್ರಕಾರ ಎಲ್ಲವನ್ನು ಗ್ರಹಣಮಾಡುವ ಇಚ್ಛೆಯುಳ್ಳವನಿಗೆ ಒಂದು ವಿಷಯದ ಗ್ರಹಣವಾದ ಮೇಲೆ ಇಚ್ಛೆ ದೂರವಾಗುವುದೇನು ? ಇಚ್ಛೆದೂರವಾದಲ್ಲದೆ ಸುಖವಾಗುವುದಿಲ್ಲ, ಅದಕ್ಕಾಗಿ ಈ ಉಪಾಯಗಳು ಅಸತ್ಯವಿವೆ.

**ಪ್ರಶ್ನೆ :-** ಈ ಉಪಾಯಗಳಿಂದ ಕೆಲವರು ಸುಖಿಯಾಗುತ್ತಿರುವುದು ಕಂಡು ಬರುತ್ತಿರುವಾಗ ತಾವು ಸರ್ವಥಾ ಅಸತ್ಯವೆಂದು ಹೇಗೆ ಹೇಳುತ್ತೀರಿ ?

**ಉತ್ತರ :-** ಸುಖಿಗಳಂತೂ ಆಗುವುದಿಲ್ಲ, ಆದರೆ ಭ್ರಾಂತಿಯಿಂದ ಸುಖವೆಂದು ಮನ್ನಿಸುತ್ತಾರೆ. ಒಂದು ವೇಳೆ ಸುಖಿಯಾಗಿದ್ದರೆ ಅನ್ಯ ವಿಷಯಗಳ ಇಚ್ಛೆ ಹೇಗಿರುವುದು ? ಯಾವ ಪ್ರಕಾರ ರೋಗಿಯು ರೋಗದೂರವಾದರೆ ಅನ್ಯ ಔಷಧಗಳನ್ನೇಕೆ ಇಚ್ಛಿಸುವನು ? ಅದೇ ಪ್ರಕಾರ ದುಃಖ ದೂರವಾದ ಮೇಲೆ ಅನ್ಯ ವಿಷಯಗಳನ್ನೇಕೆ ಅಪೇಕ್ಷಿಸುತ್ತಾನೆ ? ಆದುದರಿಂದ ವಿಷಯದ ಗ್ರಹಣದಿಂದ ಇಚ್ಛೆಯು ನಿಂತುಹೋದರೆ ನಾವು ಅದನ್ನು ಸುಖವೆಂದು ಮನ್ನಿಸುತ್ತೇವೆ. ಆದರೆ ಆ ವಿಷಯದ ಗ್ರಹಣವಾಗದವರೆಗೆ ಅದರ ಇಚ್ಛೆಯಿರುತ್ತದೆ ಮತ್ತು ಅದರ ಗ್ರಹಣವಾದ ಸಮಯದಲ್ಲಿಯೇ ಅನ್ಯ ವಿಷಯ-ಗ್ರಹಣದ ಇಚ್ಛೆಯಾಗುತ್ತಿರುವುದು ಕಂಡು ಬರುತ್ತಿರುವಾಗ ಇದನ್ನು ಸುಖವೆಂದು ಹೇಗೆ ಮನ್ನಿಸುವುದು ? ಯಾವ ಪ್ರಕಾರ ತೀವ್ರ ಕ್ಷುಧೆಯುಳ್ಳ ಓರ್ವ ದರಿದ್ರನಿಗೆ ಒಂದು ಅನ್ನದಕಣ ದೊರೆತರೆ ಅದನ್ನು ತಿಂದು ತೃಪ್ತಿ ಹೊಂದುವನೇನು ? ಅದೇ ಪ್ರಕಾರ ತೀವ್ರ ತೃಷ್ಣೆಯುಳ್ಳವನಿಗೆ ಒಂದು ವಿಷಯದ ನಿಮಿತ್ತ ದೊರಕಿದರೆ ಅದರ ಗ್ರಹಣ ಮಾಡಿ ಸುಖಮನ್ನಿಸುವನೇನು ? ಪರಮಾರ್ಥದಿಂದ ಸುಖವಿಲ್ಲ.

**ಪ್ರಶ್ನೆ :-** ಯಾವ ಪ್ರಕಾರ ಕಣ-ಕಣ ತಿಂದು ತನ್ನ ಹಸಿವೆ ಹಿಂಗಿಸುತ್ತಾನೆ ಅದೇ ಪ್ರಕಾರ ಒಂದೊಂದು ವಿಷಯದ ಗ್ರಹಣಮಾಡಿ ತನ್ನ ಇಚ್ಛೆ ಪೂರ್ಣ ಮಾಡಿದರೆ ದೋಷವೇನಿದೆ ?

**ಉತ್ತರ :-** ಆ ಕಣಗಳೆಲ್ಲ ಏಕತ್ರವಾದರೆ ಹಾಗೆ ಮನ್ನಿಸಿಕೊಳ್ಳಬಹುದು, ಆದರೆ ಎರಡನೆಯ ಕಣವು

ದೊರೆಯುವಷ್ಟರಲ್ಲಿ ಮೊದಲನೆಯ ಕಣವು ನಿರ್ಗಮಿಸಿದರೆ ಹಸಿವೆ ಹೇಗೆ ಹಿಂಗುವುದು ? ಅದೇ ಪ್ರಕಾರ ಜ್ಞಾನದಲ್ಲಿ ವಿಷಯಗಳ ಗ್ರಹಣವು ಏಕತ್ರಗೊಂಡರೆ ಇಚ್ಛೆಯು ಪೂರ್ಣವಾಗಬಹುದು, ಆದರೆ ಎರಡನೆಯ ವಿಷಯವನ್ನು ಗ್ರಹಣ ಮಾಡುವಾಗ ಮೊದಲು ಗ್ರಹಣ ಮಾಡಿದ ವಿಷಯದ ಜ್ಞಾನ ಉಳಿಯುವುದಿಲ್ಲವೆಂದ ಮೇಲೆ ಇಚ್ಛೆಪೂರ್ಣ ಹೇಗಾಗುವುದು? ಇಚ್ಛೆಯು ಪೂರ್ಣವಾದುದಲ್ಲದೆ ಆಕುಲತೆಯು ನಾಶವಾಗುವುದಿಲ್ಲ ಮತ್ತು ಆಕುಲತೆಯು ನಾಶವಾದುದಲ್ಲದೆ ಸುಖವೆಂದು ಹೇಗೆ ಹೇಳಲಾಗುವುದು ?

ಒಂದು ವಿಷಯದ ಗ್ರಹಣ ಕೂಡ ಮಿಥ್ಯಾದರ್ಶನಾದಿಗಳ ಸದ್ಭಾವದೊಡನೆ ಮಾಡುತ್ತಿರುವುದರಿಂದ ಭವಿಷ್ಯದಲ್ಲಿ ಅನೇಕ ದುಃಖಗಳಿಗೆ ಕಾರಣವಾದ ಕರ್ಮವು ಕಟ್ಟುತ್ತದೆ. ಆದುದರಿಂದ ಈ ವರ್ತಮಾನದಲ್ಲಿ ಸುಖವಿಲ್ಲ, ಭವಿಷ್ಯ ಸುಖದ ಕಾರಣವೂ ಇಲ್ಲದಿರುವುದರಿಂದ ದುಃಖವೇ ಇದೆ. ಇದನ್ನೇ ಪ್ರವಚನಸಾರದಲ್ಲಿ ಹೇಳಿದ್ದಾರೆ,-

**ಸಪರಂ ಬಾಧಾಸಹಿಯಂ ವಿಚ್ಛಿಣ್ಣಂ ಬಂಧಕಾರಣಂ ವಿಸಮಂ ।**
**ಜಂ ಇಂದಿಏಹಿಂ ಲದ್ಧಂ ತಂ ಸೋಕ್ಖಂ ದುಕ್ಖಮೇವ ತಹಾ ॥76॥**

**ಅರ್ಥ** ಃ- ಇಂದ್ರಿಯಗಳಿಂದ ಪ್ರಾಪ್ತವಾಗುವ ಸುಖವು ಪರಾಧೀನವಿದೆ, ಬಾಧೆಯಿಂದ ಕೂಡಿದೆ, ವಿನಾಶಶೀಲವಿದೆ, ಬಂಧದ ಕಾರಣವಿದೆ, ವಿಷಮವಿದೆ; ಆದುದರಿಂದ ಇದು ಸುಖವಲ್ಲ ದುಃಖವೇ ಇದೆ.

ಈ ಪ್ರಕಾರ ಈ ಸಂಸಾರಿ ಜೀವನಿಂದ ಮಾಡಲಾಗುವ ಉಪಾಯಗಳೆಲ್ಲವು ಅಸತ್ಯವಿವೆಯೆಂದು ತಿಳಿಯಬೇಕು.

**ಪ್ರಶ್ನೆ** ಃ- ಹಾಗಾದರೆ ನಿಜವಾದ ಉಪಾಯವೇನು ?

**ಉತ್ತರ** ಃ- ಇಚ್ಛೆಯು ದೂರವಾದಾಗ ಮತ್ತು ಎಲ್ಲ ವಿಷಯಗಳ ಗ್ರಹಣವು ಯುಗಪತ್ ಆಗುತ್ತಿರುವಾಗ ಈ ದುಃಖವು ದೂರವಾಗುವುದು. ಆದರೆ ಇಚ್ಛೆಯಂತೂ ಮೋಹ ಹೋದ ನಂತರ ದೂರವಾಗುವುದು ಮತ್ತು ಎಲ್ಲವುಗಳ ಯುಗಪತ್ ಗ್ರಹಣವು ಕೇವಲಜ್ಞಾನವಾದ ಮೇಲೆ ಆಗುವುದು-ಇವುಗಳ ಉಪಾಯವು ಸಮ್ಯಗ್ದರ್ಶನಾದಿಗಳಿದ್ದು ಅದೇ ನಿಜವಾದ ಉಪಾಯವೆಂದು ತಿಳಿಯಬೇಕು.

ಈ ಪ್ರಕಾರ ಮೋಹದ ನಿಮಿತ್ತದಿಂದ ಜ್ಞಾನಾವರಣ-ದರ್ಶನಾವರಣಗಳ ಕ್ಷಯೋಪಶಮ ಕೂಡ ದುಃಖದಾಯಕ ವಿದೆಯೆಂಬುದರ ವರ್ಣನೆ ಮಾಡಲಾಯಿತು.

**ಪ್ರಶ್ನೆ** ಃ- ಜ್ಞಾನಾವರಣ-ದರ್ಶನಾವರಣಗಳ ಉದಯದಿಂದ ತಿಳಿದುಕೊಳ್ಳುವುದಾಗದಿರುವುದರಿಂದ ಅದನ್ನು ದುಃಖದ ಕಾರಣವೆಂದು ಹೇಳಿರಿ; ಕ್ಷಯೋಪಶಮವನ್ನೇಕೆ ಹೇಳುತ್ತಿರುವಿರಿ ?

**ಉತ್ತರ** ಃ- ತಿಳಿಯುವುದಾಗದಿರುವುದು ದುಃಖದ ಕಾರಣವಾದರೆ ಪುದ್ಗಲಕ್ಕೆ ಕೂಡ ದುಃಖವಿದೆಯೆಂದಾಗುವುದು, ಆದರೆ ದುಃಖದ ಕಾರಣವಂತೂ ಇಚ್ಛೆಯಿದೆ ಮತ್ತು ಇಚ್ಛೆಯು ಕ್ಷಯೋಪಶಮದಿಂದಲೇ ಆಗುತ್ತಿರುವುದರಿಂದ ಕ್ಷಯೋಪಶಮವನ್ನು ದುಃಖದ ಕಾರಣವೆಂದು ಹೇಳಿದೆ; **ಪರಮಾರ್ಥದಿಂದ ಕ್ಷಯೋಪಶಮವು ಕೂಡ ದುಃಖದ ಕಾರಣವಿಲ್ಲ. ಮೋಹದಿಂದ ವಿಷಯ-ಗ್ರಹಣದ ಇಚ್ಛೆಯಾಗುವುದೇ ದುಃಖದ ಕಾರಣವಿದೆಯೆಂದು** ತಿಳಿಯಬೇಕು.

**ಮೋಹನೀಯ ಕರ್ಮದ ಉದಯದಿಂದಾಗುವ ದುಃಖ ಹಾಗೂ ಅದರಿಂದ ನಿವೃತ್ತಿ :-**

ಮೋಹದ ಉದಯವು ಅದು ಯಾವ ಪ್ರಕಾರ ದುಃಖರೂಪವಿದೆಯೆಂಬುದನ್ನು ಹೇಳುತ್ತಾರೆ,-

**ದರ್ಶನಮೋಹದಿಂದ ದುಃಖ ಮತ್ತು ಅದರಿಂದ ನಿವೃತ್ತಿ :-**

ಮೊದಲಂತೂ ದರ್ಶನಮೋಹದ ಉದಯದಿಂದ ಮಿಥ್ಯಾದರ್ಶನವಾಗುತ್ತದೆ; ಅದರ ಮುಖಾಂತರ ಈತನ ಶ್ರದ್ಧೆಯಿರುವಂತೆಯಂತೂ ಪದಾರ್ಥಗಳಿರುವುದಿಲ್ಲ, ಪದಾರ್ಥಗಳಿರುವಂತೆ ಇವನು ಮನ್ನಿಸದಿರುವುದರಿಂದ ಇವನಿಗೆ ಆಕುಲತೆಯೇ ಇರುತ್ತದೆ.

ಹೇಗೆಂದರೆ-ಹುಚ್ಚನಿಗೆ ಒಬ್ಬನು ಬಟ್ಟೆ ತೊಡಿಸುತ್ತಾನೆ. ಆ ಹುಚ್ಚನು ಆ ಬಟ್ಟೆಯನ್ನು ತನ್ನ ಅಂಗವೆಂದು ತಿಳಿದುಕೊಂಡು ತನ್ನನ್ನು ಮತ್ತು ಬಟ್ಟೆಯನ್ನು ಏಕವೆಂದು ಮನ್ನಿಸುತ್ತಾನೆ. ಆ ಬಟ್ಟೆಯು ತೊಡಿಸುವವನ ಆಧೀನವಿರುವುದರಿಂದ ಒಮ್ಮೆ ಅವನು ಹರಿಯುತ್ತಾನೆ, ಒಮ್ಮೆ ಜೋಡಿಸುತ್ತಾನೆ, ಒಮ್ಮೆ ಕಸಿದುಕೊಳ್ಳುತ್ತಾನೆ, ಒಮ್ಮೆ ಹೊಸದನ್ನು ತೊಡಿಸುತ್ತಾನೆ, ಇತ್ಯಾದಿ ಪ್ರಕ್ರಿಯೆ ಮಾಡುತ್ತಾನೆ. ಆ ಹುಚ್ಚನು ಅದನ್ನು ತನ್ನ ಆಧೀನವೆಂದು ಮನ್ನಿಸುತ್ತಾನೆ, ಅದರ ಕ್ರಿಯೆಗಳು ಪರಾಧೀನವಾಗುತ್ತಿರುವುದರಿಂದ ಅವನು ಅತ್ಯಂತ ಖೇದ ಖಿನ್ನನಾಗುತ್ತಾನೆ. ಅದೇ ಪ್ರಕಾರ ಈ ಜೀವನಿಗೆ ಕರ್ಮೋದಯವು ಶರೀರ ಸಂಬಂಧವನ್ನುಂಟು ಮಾಡಿದೆ. ಈ ಜೀವನು ಆ ಶರೀರವನ್ನು ತನ್ನ ಅಂಗವೆಂದು ತಿಳಿದುಕೊಂಡು ತನ್ನನ್ನು ಮತ್ತು ಶರೀರವನ್ನು ಏಕವೆಂದು ಮನ್ನಿಸುತ್ತಾನೆ. ಈ ಶರೀರವು ಕರ್ಮದ ಆಧೀನವಾಗಿ ಒಮ್ಮೆ ಕೃಶವಾಗುತ್ತದೆ, ಒಮ್ಮೆ ಸ್ಥೂಲವಾಗುತ್ತದೆ, ಒಮ್ಮೆ ನಷ್ಟವಾಗುತ್ತದೆ, ಒಮ್ಮೆ ನವೀನ ಉತ್ಪನ್ನವಾಗುತ್ತದೆ- ಇತ್ಯಾದಿ ಪ್ರಕ್ರಿಯೆಗಳಾಗುತ್ತವೆ. ಈ ಜೀವನು ಅದನ್ನು ತನ್ನ ಆಧೀನವೆಂದು ಮನ್ನಿಸುತ್ತಾನೆ. ಅದರ ಕ್ರಿಯೆಗಳು ಪರಾಧೀನವಿರುವುದರಿಂದ ಅತ್ಯಂತ ಖೇದಖಿನ್ನನಾಗುತ್ತಾನೆ.

ಇನ್ನು ಆ ಹುಚ್ಚನು ನಿಂತುಕೊಂಡಿರುವಲ್ಲಿ ಮನುಷ್ಯ, ಕುದುರೆ, ಹಣ ಮೊದಲಾದವು ಎಲ್ಲಿಂದಲೋ ಬಂದು ಇಳಿಯುತ್ತವೆ, ಆ ಹುಚ್ಚನು ಅವನ್ನು ತನ್ನವೆಂದು ತಿಳಿಯುತ್ತಾನೆ. ಅವಂತೂ ಅವುಗಳ ಆಧೀನವಾಗಿ ಕೆಲವು ಬರುತ್ತವೆ, ಕೆಲವು ಹೋಗುತ್ತವೆ, ಕೆಲವು ಅನೇಕ ಅವಸ್ಥೆಯ ರೂಪದಿಂದ ಪರಿಣಮನ ಮಾಡುತ್ತವೆ, ಆ ಹುಚ್ಚನು ಅವನ್ನು ತನ್ನ ಆಧೀನವೆಂದು ಮನ್ನಿಸುತ್ತಾನೆ, ಅವುಗಳ ಕ್ರಿಯೆಗಳು ಪರಾಧೀನವಾದಾಗ ಖೇದ ಖಿನ್ನನಾಗುತ್ತಾನೆ. ಅದೇ ಪ್ರಕಾರ ಈ ಜೀವನು ಪರ್ಯಾಯ ಧಾರಣ ಮಾಡುವಲ್ಲಿ ತಾನಾಗಿಯೇ ಪುತ್ರ, ಕುದುರೆ, ಹಣ ಮೊದಲಾದವು ಎಲ್ಲಿಂದಲೋ ಬಂದು ಪ್ರಾಪ್ತವಾಗುತ್ತವೆ, ಈ ಜೀವನು ಅವನ್ನು ತನ್ನವೆಂದು ತಿಳಿಯುತ್ತಾನೆ. ಅವಂತೂ ಅವುಗಳ ಆಧೀನವಾಗಿ ಕೆಲವು ಬರುತ್ತವೆ, ಕೆಲವು ಹೋಗುತ್ತವೆ, ಕೆಲವು ಅನೇಕ ಅವಸ್ಥೆಯ ರೂಪದಿಂದ ಪರಿಣಮನ ಮಾಡುತ್ತವೆ; ಈ ಜೀವನು ಅವನ್ನು ತನ್ನ ಆಧೀನವೆಂದು ಮನ್ನಿಸುತ್ತಾನೆ. ಮತ್ತು ಅವುಗಳ ಕ್ರಿಯೆಗಳು ಪರಾಧೀನವಾದಾಗ ಖೇದಖಿನ್ನನಾಗುತ್ತಾನೆ.

**ಪ್ರಶ್ನೆ :-** ಯಾವುದೇ ಕಾಲದಲ್ಲಿ ಶರೀರದ ಹಾಗೂ ಪುತ್ರಾದಿಕರ ಕ್ರಿಯೆಗಳು ಈ ಜೀವನ ಆಧೀನವಾಗಿರುವಂತೆಯೂ ಕಂಡು ಬರುತ್ತವೆ, ಆಗಲಾದರೂ ಇವನು ಸುಖಿಯಾಗುತ್ತಿರಬೇಕಲ್ಲ ?

**ಉತ್ತರ :-** ಶರೀರಾದಿಗಳ ಭವಿತವ್ಯದ ಮತ್ತು ಜೀವದ ಇಚ್ಛೆಯ ಯೋಗವು ಕೂಡಿಬಂದರೆ

ಯಾವುದಾದರೊಂದು ಪ್ರಕಾರ ಅವನು ಅಪೇಕ್ಷಿಸುವಂತೆ ಯಾವುದೇ ಒಂದು ಪರಿಣಮಿಸುವುದರಿಂದ ಯಾವುದೇ ಕಾಲದಲ್ಲಿ ಅದರದೇ ವಿಚಾರವಾದರೆ ಸುಖದ ಆಭಾಸವಾಗುತ್ತದೆ; ಆದರೆ ಎಲ್ಲವೂ ಎಲ್ಲ ಪ್ರಕಾರದಿಂದ ಇವನು ಅಪೇಕ್ಷಿಸುವಂತೆ ಪರಿಣಮಿಸದಿರುವುದರಿಂದ ಅಭಿಪ್ರಾಯದಲ್ಲಿ ಅನೇಕ ಆಕುಲತೆಯು ಯಾವಾಗಲೂ ಇದ್ದೇ ಇರುತ್ತದೆ.

ಮತ್ತು ಯಾವುದಾದರೊಂದು ಕಾಲದಲ್ಲಿ ಯಾವುದೇ ಪ್ರಕಾರದ ಇಚ್ಛೆಗೆ ಅನುಸರಿಸಿ ಪರಿಣಮಿಸುತ್ತಿರುವುದನ್ನು ಕಂಡು ಈ ಜೀವನು ಶರೀರ, ಪುತ್ರಾದಿಕರಲ್ಲಿ ಅಹಂಕಾರ-ಮಮಕಾರ ಮಾಡುತ್ತಾನೆ; ಮತ್ತು ಇದೇ ಬುದ್ಧಿಯಿಂದ ಅವುಗಳನ್ನು ಉತ್ಪನ್ನ ಮಾಡುವ, ವೃದ್ಧಿಸುವ ಹಾಗೂ ರಕ್ಷಣೆ ಮಾಡುವ ಚಿಂತೆಯಿಂದ ಯಾವಾಗಲೂ ವ್ಯಾಕುಲನಿರುತ್ತಾನೆ. ನಾನಾ ಪ್ರಕಾರದ ಕಷ್ಟಗಳನ್ನು ಸಹಿಸಿಯೂ ಕೂಡ ಅವುಗಳ ಒಳ್ಳೆಯದನ್ನು ಅಪೇಕ್ಷಿಸುತ್ತಾನೆ.

ಅಲ್ಲದೆ ಆ ವಿಷಯಗಳ ಇಚ್ಛೆಯಾಗುತ್ತದೆ, ಕಷಾಯವಾಗುತ್ತದೆ; ಬಾಹ್ಯ ಸಾಮಗ್ರಿಗಳಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸುತ್ತಾನೆ. ವಿಪರೀತ ಉಪಾಯ ಮಾಡುತ್ತಾನೆ, ನಿಜವಾದ ಉಪಾಯದ ಶ್ರದ್ಧೆ ಮಾಡುವುದಿಲ್ಲ, ವಿರುದ್ಧ ಕಲ್ಪನೆ ಮಾಡುತ್ತಾನೆ, ಇವೆಲ್ಲವುಗಳ ಮೂಲ ಕಾರಣವು ಒಂದು ಮಿಥ್ಯಾದರ್ಶನವಿದೆ. ಅದರ ನಾಶವಾದ ನಂತರ ಎಲ್ಲವುಗಳ ನಾಶವಾಗಿ ಹೋಗುವುದರಿಂದ ಎಲ್ಲ ದುಃಖಗಳ ಮೂಲಕಾರಣವು ಈ ಮಿಥ್ಯಾದರ್ಶನವಿದೆ.

ಆ ಮಿಥ್ಯಾದರ್ಶನದ ನಾಶದ ಉಪಾಯಕೂಡ ಮಾಡುವುದಿಲ್ಲ. ವಿಪರೀತ ಶ್ರದ್ಧೆಯನ್ನು ನಿಜವಾದ ಶ್ರದ್ಧೆಯೆಂದು ಮನ್ನಿಸಿದಾಗ ಏತಕ್ಕಾಗಿ ಉಪಾಯ ಮಾಡುವನು ?

ಸಂಜ್ಞೀ ಪಂಚೇಂದ್ರಿಯನು ಎಂದಾದರೊಮ್ಮೆ ತತ್ತ್ವನಿರ್ಣಯ ಮಾಡುವ ಉಪಾಯ ವಿಚಾರಿಸುವನು, ಆಗ ದುರ್ಭಾಗ್ಯದಿಂದ ಕುದೇವ-ಕುಗುರು-ಕುಶಾಸ್ತ್ರಗಳ ನಿಮಿತ್ತವೊದಗಿದರೆ ಅತತ್ತ್ವಶ್ರದ್ಧೆಯು ಪುಷ್ಟವಾಗಿ ಹೋಗುತ್ತದೆ. ಅವನಂತೂ ಇವುಗಳಿಂದ ನನ್ನ ಕಲ್ಯಾಣವಾಗುವುದೆಂದು ತಿಳಿಯುತ್ತಾನೆ; ಆದರೆ ಇವನು ಮೂಢನಾಗುವಂಥ ಉಪಾಯಗಳನ್ನು ಅವರು ಮಾಡುತ್ತಾರೆ. ವಸ್ತುಸ್ವರೂಪದ ವಿಚಾರ ಮಾಡುವುದಕ್ಕೆ ಪ್ರವೃತ್ತನಾದವನು ವಿಪರೀತ ವಿಚಾರಗಳಲ್ಲಿ ದೃಢನಾಗುತ್ತಾನೆ ಮತ್ತು ಆಗ ವಿಷಯ-ಕಷಾಯದ ವಾಸನೆಯು ವೃದ್ಧಿಸುವುದರಿಂದ ಇನ್ನೂ ಅಧಿಕ ದುಃಖಿಯಾಗುತ್ತಾನೆ.

ಇನ್ನು ಎಂದಾದರೊಮ್ಮೆ ಸುದೇವ-ಸುಗುರು-ಸುಶಾಸ್ತ್ರಗಳ ನಿಮಿತ್ತವೂ ಒದಗಿ ಬಂದಾಗ ಅವರ ನಿಶ್ಚಯ ಉಪದೇಶದ ಶ್ರದ್ಧೆಮಾಡುವುದಿಲ್ಲ, ವ್ಯವಹಾರ ಶ್ರದ್ಧೆಯಿಂದ ಅತತ್ತ್ವಶ್ರದ್ಧೆಯುಳ್ಳವನಾಗಿ ಉಳಿಯುತ್ತಾನೆ. ಅಲ್ಲಿ ಕಷಾಯವು ಮಂದವಾದರೆ, ವಿಷಯದ ಇಚ್ಛೆಯು ಕುಗ್ಗಿದರೆ ಸ್ವಲ್ಪ ದುಃಖಿಯಾಗುತ್ತಾನೆ; ಆದರೆ ಪುನಃ ಇದ್ದ ಹಾಗೆ ಆಗಿಬಿಡುತ್ತಾನೆ, ಆದುದರಿಂದ ಈ ಸಂಸಾರಿಗಳು ಮಾಡುವ ಉಪಾಯಗಳೆಲ್ಲವೂ ಅಸತ್ಯವೇ ಆಗುತ್ತವೆ.

ತಮಗೆ ಶ್ರದ್ಧೆಯಿರುವಂತೆಯೇ ಪದಾರ್ಥಗಳನ್ನು ಪರಿಣಮಿಸಲಪೇಕ್ಷಿಸುವುದು ಸಂಸಾರಿಗಳ ಉಪಾಯ ವಾಗಿದೆ. ಅವು ಹಾಗೆ ಪರಿಣಮಿಸಲ್ಪಟ್ಟರೆ ಈತನ ಶ್ರದ್ಧೆಯು ನಿಜವಾಗುವುದು. ಆದರೆ **ಅನಾದಿ ನಿಧನವಾದ ವಸ್ತುಗಳು ತಮ್ಮ ಮರ್ಯಾದೆಗೆ ಒಳಪಟ್ಟು ಭಿನ್ನ-ಭಿನ್ನವಾಗಿ ಪರಿಣಮಿಸುತ್ತವೆ, ಯಾವುದೂ ಯಾವುದರ**

**ಆಧೀನವಿಲ್ಲ, ಯಾವುದೂ ಯಾವುದನ್ನು ಪರಿಣಮನ ಮಾಡಿಸುವುದರಿಂದ ಪರಿಣಮಿತವಾಗುವುದಿಲ್ಲ.** ಅವನ್ನು ಪರಿಣಮನಗೊಳಿಸಲಿಚ್ಛಿಸುವುದು ಅದು ಉಪಾಯವಲ್ಲ, ಅದಂತೂ ಮಿಥ್ಯಾದರ್ಶನವೇ ಇದೆ.

**ಪ್ರಶ್ನೆ ಃ-** ಹಾಗಾದರೆ ನಿಜವಾದ ಉಪಾಯವೇನು ?

**ಉತ್ತರ ಃ-** ಪದಾರ್ಥಗಳ ಸ್ವರೂಪವಿರುವಂತೆ ಶ್ರದ್ಧೆಯಾಗಿ ಬಿಟ್ಟರೆ ಸಮಸ್ತ ದುಃಖಗಳು ದೂರವಾಗುವವು. ಯಾವ ಪ್ರಕಾರ ಯಾವನೋ ಓರ್ವನು ಮೋಹಿತನಾಗಿ ಶವವನ್ನು ಜೀವಂತವೆಂದು ಮನ್ನಿಸಿದರೆ ಅಥವಾ ಬದುಕಿಸಲಪೇಕ್ಷಿಸಿದರೆ ತಾನೇ ದುಃಖಿಯಾಗುತ್ತಾನೆ. ಮತ್ತು ಅದನ್ನು ಶವವೆಂದು ಮನ್ನಿಸುವುದು ಹಾಗೂ ಇದು ಬದುಕಿಸುವುದರಿಂದ ಬದುಕುವುದಿಲ್ಲವೆಂದು ಮನ್ನಿಸುವುದೇ ಆ ದುಃಖವು ದೂರವಾಗುವ ಉಪಾಯವಿದೆ. ಅದೇ ಪ್ರಕಾರ ಮಿಥ್ಯಾದೃಷ್ಟಿಯಾಗಿ ಪದಾರ್ಥಗಳನ್ನು ವಿಪರೀತವಾಗಿ ಮನ್ನಿಸಿದರೆ, ವಿರುದ್ಧವಾಗಿ ಪರಿಣಮಿಸಲಪೇಕ್ಷಿಸಿದರೆ ತಾನೇ ದುಃಖಿಯಾಗುತ್ತಾನೆ. ಇನ್ನು **ಅವನ್ನು ಯಥಾರ್ಥವಾಗಿ ಮನ್ನಿಸುವುದು ಮತ್ತು ಇದು ಪರಿಣಮನ ಮಾಡಿಸುವುದರಿಂದ ವಿರುದ್ಧವಾಗಿ ಪರಿಣಮಿಸಲಾರದೆಂದು ಮನ್ನಿಸುವುದೇ ಆ ದುಃಖವು ದೂರವಾಗುವ ಉಪಾಯವಿದೆ. ಭ್ರಮಜನ್ಯದುಃಖದ ಉಪಾಯವು ಆ ಭ್ರಮೆಯನ್ನು ದೂರ ಮಾಡುವುದೇ ಇದೆ.** ಆ ಭ್ರಾಂತಿಯು ದೂರವಾಗುವುದರಿಂದ ಸಮ್ಯಕ್‌ಶ್ರದ್ಧೆಯಾಗುತ್ತದೆ, ಮತ್ತು ಇದೇ ಸತ್ಯ ಉಪಾಯವಿದೆಯೆಂದು ತಿಳಿಯಬೇಕು.

## ಚಾರಿತ್ರಮೋಹದಿಂದ ದುಃಖ ಹಾಗೂ ಅದರಿಂದ ನಿವೃತ್ತಿ ಃ-

ಜೀವನಿಗೆ ಚಾರಿತ್ರಮೋಹದ ಉದಯದಿಂದ ಕ್ರೋಧಾದಿ ಕಷಾಯರೂಪದ ಹಾಗೂ ಹಾಸ್ಯಾದಿ ನೋಕಷಾಯರೂಪದ ಭಾವಗಳಾಗುತ್ತವೆ, ಆಗ ಈ ಜೀವನು ಕ್ಲೇಶದಿಂದ ಕಳವಳಗೊಂಡು ದುಃಖಿಯಾಗುತ್ತ ವಿಹ್ವಲನಾಗಿ ನಾನಾ ಪ್ರಕಾರದ ಕೀಳು ಕಾರ್ಯಗಳಲ್ಲಿ ಪ್ರವೃತ್ತಿ ಮಾಡುತ್ತಾನೆ. ಅದನ್ನೇ ತಿಳಿಸಿಕೊಡುತ್ತಾರೆ.

ಇವನಿಗೆ ಕ್ರೋಧಕಷಾಯವು ಉತ್ಪನ್ನವಾದಾಗ ಇತರರಿಗೆ ಕೆಡಕು ಮಾಡುವ ಇಚ್ಛೆಯಾಗುತ್ತದೆ ಮತ್ತು ಅದರ ಸಲುವಾಗಿ ಅನೇಕ ಉಪಾಯಗಳನ್ನು ಚಿಂತಿಸುತ್ತಾನೆ, ಮರ್ಮಭೇದಕವಾದ ದುರ್ವಚನಗಳನ್ನು ಆಡುತ್ತಾನೆ; ತನ್ನ ಅಂಗಗಳಿಂದ ಹಾಗೂ ಶಸ್ತ್ರ-ಪಾಷಾಣಗಳಿಂದ ಘಾತ ಮಾಡುತ್ತಾನೆ, ಅನೇಕ ಕಷ್ಟಗಳನ್ನು ಸಹಿಸಿ ಹಾಗೂ ಹಣವನ್ನೂ ವ್ಯಯಿಸಿ ಅಲ್ಲದೆ ಮರಣಾದಿಗಳಿಂದ ತನ್ನದು ಕೂಡ ಕೆಡಕು ಮಾಡಿಕೊಂಡು ಅನ್ಯರಿಗೆ ಕೇಡು ಮಾಡುವ ಕಾರ್ಯ ಮಾಡುತ್ತಾನೆ ಅಥವಾ ಇತರರಿಂದ ಕೆಡಕಾಗುವಂತಿದ್ದರೆ ಇತರರಿಂದ ಕೆಡಕು ಮಾಡಿಸುತ್ತಾನೆ. ತಾನಾಗಿಯೇ ಅವನ ಕೆಡಕಾಗುವಂತಿದ್ದರೆ ಅನುಮೋದನ ಕೊಡುತ್ತಾನೆ. ಅವನಿಗೆ ಕೆಡಕಾಗುವುದರಿಂದ ತನ್ನ ಯಾವ ಪ್ರಯೋಜನವು ಸಿದ್ಧಿಸದಿದ್ದರೂ ಕೂಡ ಅವನಿಗೆ ಕೇಡು ಮಾಡುತ್ತಾನೆ. ಮತ್ತು ತನಗೆ ಕ್ರೋಧವುಂಟಾದಾಗ ಯಾರೋ ಪೂಜ್ಯರು ಅಥವಾ ಇಷ್ಟ ಜನರು ಕೂಡ ಮಧ್ಯದಲ್ಲಿ ಬಂದರೆ ಅವರಿಗೆ ಅಪಶಬ್ದ ಆಡುತ್ತಾನೆ, ಹೊಡೆಯಲು ಉದ್ಯುಕ್ತನಾಗುತ್ತಾನೆ, ಯಾವ ವಿಚಾರವಿರುವುದಿಲ್ಲ. ಇನ್ನು ಅನ್ಯರದು ಕೇಡಾಗದಿದ್ದರೆ ತನ್ನ ಅಂತರಂಗದಲ್ಲಿ ತಾನೇ ಉರಿದು ಹೋಗುತ್ತಾನೆ, ಮತ್ತು ತನ್ನ ಅಂಗಗಳ ಘಾತ ಮಾಡಿಕೊಳ್ಳುತ್ತಾನೆ ಹಾಗೂ ವಿಷಪ್ರಾಶನ ಮಾಡಿ ಸತ್ತು ಹೋಗುತ್ತಾನೆ. ಕ್ರೋಧವಾಗುವುದರಿಂದ ಇಂಥ ಅವಸ್ಥೆಯಾಗುತ್ತದೆ.

ಇವನಿಗೆ ಮಾನಕಷಾಯವು ಉತ್ಪನ್ನವಾದಾಗ ಇತರರನ್ನು ಕೀಳು ಮತ್ತು ತನ್ನನ್ನು ಉಚ್ಚವಾಗಿ ತೋರಿಸಿಕೊಳ್ಳುವ ಇಚ್ಛೆಯಾಗುತ್ತದೆ ಮತ್ತು ಅದರ ಸಲುವಾಗಿ ಅನೇಕ ಉಪಾಯಗಳನ್ನು ಚಿಂತಿಸುತ್ತಾನೆ. ಇತರರ ನಿಂದೆ ಮಾಡುತ್ತಾನೆ ತನ್ನ ಪ್ರಶಂಸೆ ಮಾಡುತ್ತಾನೆ ಮತ್ತು ಅನೇಕ ಪ್ರಕಾರದಿಂದ ಇತರರ ಮಹಿಮೆಯನ್ನು ಅಳಿಸುತ್ತಾನೆ, ತನ್ನ ಮಹಿಮೆ ಮಾಡುತ್ತಾನೆ. ಅತ್ಯಂತ ಕಷ್ಟದಿಂದ ಸಂಪಾದಿಸಿದ ಹಣವನ್ನು ವಿವಾಹ ಮೊದಲಾದ ಕಾರ್ಯಗಳಲ್ಲಿ ಖರ್ಚು ಮಾಡುತ್ತಾನೆ ಹಾಗೂ ಸಾಲ ಮಾಡಿ ಕೂಡ ಖರ್ಚು ಮಾಡುತ್ತಾನೆ. ಮರಣವಾದ ಮೇಲೆ ತನ್ನ ಯಶಸ್ಸು ಉಳಿಯುವುದೆಂದು ವಿಚಾರ ಮಾಡಿ ತನ್ನ ಮರಣ ಸ್ವೀಕರಿಸಿ ಕೂಡ ತನ್ನ ಮಹಿಮೆಯನ್ನು ವೃದ್ಧಿಸುತ್ತಾನೆ. ತನ್ನ ಸನ್ಮಾನಾದಿಗಳನ್ನು ಮಾಡದವರಿಗೆ ಭಯಾದಿಗಳನ್ನು ತೋರಿಸಿ ದುಃಖವನ್ನುತ್ಪನ್ನ ಮಾಡಿ ತನ್ನ ಸನ್ಮಾನ ಮಾಡಿಸಿಕೊಳ್ಳುತ್ತಾನೆ. ಮತ್ತು ಅಹಂಕಾರದ ಅಮಲಿನಲ್ಲಿ ಯಾವ ಪೂಜ್ಯರಿರಲಿ-ದೊಡ್ಡವರಿರಲಿ ಅವರ ಸನ್ಮಾನ ಕೂಡ ಮಾಡುವುದಿಲ್ಲ, ಯಾವ ವಿಚಾರವಿರುವುದಿಲ್ಲ. ಅನ್ಯರು ನೀಚರಾಗಿ ಮತ್ತ ತಾನು ಉಚ್ಚವಾಗಿ ಕಂಡು ಬರದಿದ್ದರೆ ತನ್ನ ಅಂತರಂಗದಲ್ಲಿ ತಾನು ಉರಿದುಬೀಳುತ್ತಾನೆ ಮತ್ತು ತನ್ನ ಅಂಗಗಳ ಘಾತ ಮಾಡಿಕೊಳ್ಳುತ್ತಾನೆ ಹಾಗೂ ವಿಷಪ್ರಾಶನ ಮಾಡಿ ಸತ್ತುಹೋಗುತ್ತಾನೆ, ಮಾನವಾಗುವುದರಿಂದ ಇಂಥ ಅವಸ್ಥೆಯಾಗುತ್ತದೆ.

ಇವನಿಗೆ ಮಾಯಾ ಕಷಾಯವು ಉತ್ಪನ್ನವಾದಾಗ ಕಪಟದಿಂದ ಕಾರ್ಯಸಿದ್ಧಿ ಮಾಡಿಕೊಳ್ಳುವ ಇಚ್ಛೆಯಾಗುತ್ತದೆ; ಅದರ ಸಲುವಾಗಿ ಅನೇಕ ಉಪಾಯಗಳನ್ನು ಚಿಂತಿಸುತ್ತಾನೆ, ನಾನಾ ಪ್ರಕಾರದ ಮೋಸದ ಮಾತುಗಳನ್ನಾಡುತ್ತಾನೆ, ಶರೀರದ ಅವಸ್ಥೆಯನ್ನು ಮೋಸರೂಪವಾಗಿ ಮಾಡುತ್ತಾನೆ, ಬಾಹ್ಯವಸ್ತುಗಳನ್ನು ವಿರುದ್ಧವಾಗಿ ನಿದರ್ಶಿಸುತ್ತಾನೆ, ಅದರಲ್ಲಿ ತನ್ನ ಮರಣವಾಗುವಂಥ ವಂಚನೆಯನ್ನು ಕೂಡ ಮಾಡುತ್ತಾನೆ. ಮೋಸವು ಬೆಳಕಿಗೆ ಬಂದ ಮೇಲೆ ತನಗೆ ತುಂಬಾ ಕೆಡಕಾಗುವಂಥ, ಮರಣ ಸಂಭವಿಸುವಂಥವುಗಳನ್ನೂ ಗಣನೆಗೆ ತಂದುಕೊಳ್ಳುವುದಿಲ್ಲ, ಮಾಯೆಯುಂಟಾದಾಗ ಯಾವ ಪೂಜ್ಯರ ಹಾಗೂ ಇಷ್ಟರ ಸಂಬಂಧವುಂಟಾಗಿದ್ದರೆ ಅವರಿಗೆ ಕೂಡ ಮೋಸ ಮಾಡುತ್ತಾನೆ, ಯಾವ ವಿಚಾರವಿರುವುದಿಲ್ಲ, ವಂಚನೆಯಿಂದ ಕಾರ್ಯಸಿದ್ಧಿಯಾಗದಿದ್ದರೆ ತಾನು ಉರಿದುಹೋಗುತ್ತಾನೆ, ತನ್ನ ಅಂಗಗಳ ಘಾತ ಮಾಡಿಕೊಳ್ಳುತ್ತಾನೆ ಹಾಗೂ ವಿಷ ಪ್ರಾಶನ ಮಾಡಿ ಸತ್ತು ಹೋಗುತ್ತಾನೆ. ಮಾಯೆಯಾಗುವುದರಿಂದ ಇಂಥ ಅವಸ್ಥೆಯಾಗುತ್ತದೆ.

ಇನ್ನು ಇವನಿಗೆ ಲೋಭಕಷಾಯವು ಉತ್ಪನ್ನವಾದಾಗ ಇಷ್ಟಪದಾರ್ಥಗಳ ಲಾಭದ ಇಚ್ಛೆಯಾಗುವುದರಿಂದ ಅದರ ಸಲುವಾಗಿ ಅನೇಕ ಉಪಾಯಗಳನ್ನು ಚಿಂತಿಸುತ್ತಾನೆ. ಅದರ ಸಾಧನರೂಪವಾದ ವಚನಗಳನ್ನು ಆಡುತ್ತಾನೆ, ಶಾರೀರಿಕ ಪ್ರಯತ್ನ ಮಾಡುತ್ತಾನೆ, ಅದೆಷ್ಟೋ ಕಷ್ಟ ಸಹಿಸುತ್ತಾನೆ, ಸೇವೆ ಮಾಡುತ್ತಾನೆ, ವಿದೇಶಗಮನ ಮಾಡುತ್ತಾನೆ. ಅದರಲ್ಲಿ ಮರಣವಾಗುವುದೆಂದು ತಿಳಿದರೂ ಆ ಕಾರ್ಯ ಮಾಡುತ್ತಾನೆ. ತುಂಬ ದುಃಖ ಉತ್ಪನ್ನವಾಗುವಂಥ ವ್ಯವಸಾಯ ಮಾಡುತ್ತಾನೆ. ಲೋಭವುಂಟಾದನಂತರ ಪೂಜ್ಯರ ಹಾಗೂ ಇಷ್ಟರ ಕಾರ್ಯವಿದ್ದರೂ ಅದರಲ್ಲಿ ಕೂಡ ತನ್ನ ಪ್ರಯೋಜನ ಸಾಧಿಸುತ್ತಾನೆ, ಯಾವ ವಿಚಾರವಿರುವುದಿಲ್ಲ. ಮತ್ತು ಪ್ರಾಪ್ತವಾದ ಇಷ್ಟ ವಸ್ತುವಿನ ರಕ್ಷಣೆಯನ್ನು ಅನೇಕ ಪ್ರಕಾರದಿಂದ ಮಾಡುತ್ತಾನೆ, ಇಷ್ಟವಸ್ತುವಿನ ಪ್ರಾಪ್ತಿಯಾಗದಿದ್ದರೆ ಅಥವಾ ಇಷ್ಟದ ವಿಯೋಗವಾದರೆ ತಾನು ಉರಿದು ಬೀಳುತ್ತಾನೆ, ತನ್ನ ಅಂಗಗಳ ಘಾತಮಾಡಿಕೊಳ್ಳುತ್ತಾನೆ ಹಾಗೂ ವಿಷಪ್ರಾಶನಮಾಡಿ ಸತ್ತು ಹೋಗುತ್ತಾನೆ. ಲೋಭ ಉಂಟಾಗುವುದರಿಂದ ಇಂಥ ಅವಸ್ಥೆಯಾಗುತ್ತದೆ.

ಈ ಪ್ರಕಾರ ಕಷಾಯಗಳಿಂದ ಪೀಡಿತನಾಗಿ ಇಂಥ ಅವಸ್ಥೆಗಳಲ್ಲಿ ಪ್ರವರ್ತಿಸುತ್ತಾನೆ,

ಈ ಕಷಾಯಗಳ ಜತೆಯಲ್ಲಿ ನೋಕಷಾಯಗಳಾಗುತ್ತವೆ. ಹಾಸ್ಯಕಷಾಯವಾದಾಗ ಸ್ವಯಂ ವಿಕಸಿತನಾಗುತ್ತಾನೆ, ಪ್ರಫುಲ್ಲಿತನಾಗುತ್ತಾನೆ; ಅದು ಸನ್ನಿಪಾತರೋಗಿಯ ಹಾಸ್ಯದಂತಿರುತ್ತದೆ, ತಾನು ಅನೇಕ ರೋಗಗಳಿಂದ ಪೀಡಿತನಿದ್ದರೂ ಯಾವುದೇ ಕಲ್ಪನೆ ಮಾಡಿ ನಗಲು ಪ್ರಾರಂಭಿಸುತ್ತಾನೆ. ಇದೇ ಪ್ರಕಾರ ಈ ಜೀವನು ಅನೇಕ ಪೀಡೆಗಳಿಗೊಳಗಾಗಿದ್ದರೂ ಕೂಡ ಯಾವುದೇ ತಪ್ಪುಕಲ್ಪನೆಮಾಡಿ, ತನಗೆ ರುಚಿಸುವ ಕಾರ್ಯವೆಂದು ನಂಬಿ ಹರ್ಷಮನ್ನಿಸುತ್ತಾನೆ, ನಿಜವಾಗಿ ದುಃಖಿಯಾಗುತ್ತಾನೆ. ಸುಖವಂತೂ ಕಷಾಯ-ರೋಗವು ದೂರವಾಗುವುದರಿಂದ ಆಗುವುದು.

ರತಿಯು ಉತ್ಪನ್ನವಾದಾಗ ಇಷ್ಟವಸ್ತುವಿನಲ್ಲಿ ಅತ್ಯಂತ ಆಸಕ್ತನಾಗುತ್ತಾನೆ. ಹೇಗೆ ಬೆಕ್ಕು ಇಲಿಯನ್ನು ಹಿಡಿದುಕೊಂಡು ಆಸಕ್ತವಾಗುತ್ತದೆ, ಯಾರು ಹೊಡೆದರೂ ಬಿಡುವುದಿಲ್ಲ; ಅದರಂತೆ ಕಠಿಣತೆಯಿಂದ ಪ್ರಾಪ್ತವಾಗುವ ಕಾರಣ ಹಾಗೂ ವಿಯೋಗವಾಗುವ ಅಭಿಪ್ರಾಯದಿಂದ ಆಸಕ್ತತೆಯಾಗುವುದರಿಂದ ದುಃಖವೇ ಆಗುತ್ತದೆ.

ಅದರಂತೆ ಅರತಿಯು ಉತ್ಪನ್ನವಾದಾಗ ಅನಿಷ್ಟವಸ್ತುವಿನ ಸಂಯೋಗ ಪಡೆದು ಅತ್ಯಂತ ವ್ಯಾಕುಲನಾಗುತ್ತಾನೆ. ಅನಿಷ್ಟದ ಸಂಯೋಗವಾಗಿರುವುದು ತನಗೆ ರುಚಿಸುವುದಿಲ್ಲ, ಆ ಪೀಡೆಯನ್ನು ಸಹಿಸುವುದಾಗದಿರುವುದರಿಂದ ಅದರ ವಿಯೋಗ ಮಾಡುವುದಕ್ಕಾಗಿ ಚಡಪಡಿಸುತ್ತಾನೆ; ಅದು ದುಃಖವೇ ಇದೆ.

ಇನ್ನು ಶೋಕವು ಉತ್ಪನ್ನವಾದಾಗ ಇಷ್ಟದ ವಿಯೋಗ ಹಾಗೂ ಅನಿಷ್ಟದ ಸಂಯೋಗವಾಗುವುದರಿಂದ ಅತ್ಯಂತ ವ್ಯಾಕುಲವಾಗಿ ಸಂತಾಪವನ್ನುಂಟು ಮಾಡುತ್ತದೆ, ಆಗ ರೋದಿಸುತ್ತಾನೆ, ಕೂಗಿಕೊಳ್ಳುತ್ತಾನೆ, ಅಸಾವಧಾನನಾಗಿ ಹೋಗುತ್ತಾನೆ, ತನ್ನ ಶರೀರದ ಘಾತ ಮಾಡಿಕೊಂಡು ಸತ್ತು ಹೋಗುತ್ತಾನೆ; ಯಾವ ಸಿದ್ಧಿಯಾಗದಿದ್ದರೂ ಸ್ವಯಂ ಮಹಾದುಃಖಿಯಾಗುತ್ತಾನೆ.

ಅದರಂತೆ ಭಯವು ಉತ್ಪನ್ನವಾದಾಗ ಯಾವನನ್ನಾದರೂ ಇಷ್ಟವಿಯೋಗ ಮತ್ತು ಅನಿಷ್ಟ ಸಂಯೋಗದ ಕಾರಣವೆಂದು ತಿಳಿದುಕೊಂಡು ಹೆದರುತ್ತಾನೆ, ಅತ್ಯಂತ ವಿಹ್ವಲನಾಗುತ್ತಾನೆ, ಓಡಿ ಹೋಗುತ್ತಾನೆ, ಅವಿತುಕೊಳ್ಳುತ್ತಾನೆ, ಸೋತು ಹೋಗುತ್ತಾನೆ, ಕಷ್ಟವಾಗುವ ಸ್ಥಾನಕ್ಕೆ ತಲುಪುತ್ತಾನೆ ಮತ್ತು ಸತ್ತು ಹೋಗುತ್ತಾನೆ. ಅದರಿಂದ ಇದು ದುಃಖರೂಪವೇ ಇದೆ.

ಇನ್ನು ಜುಗುಪ್ಸೆಯು ಉತ್ಪನ್ನವಾದಾಗ ಅನಿಷ್ಟ ವಸ್ತುವಿನಿಂದ ಜುಗುಪ್ಸೆ ಪಡುತ್ತಾನೆ. ಅದರ ಸಂಯೋಗವಾದರೆ ಅದನ್ನು ತಿರಸ್ಕರಿಸಿ ಓಡಿಹೋಗಲಪೇಕ್ಷಿಸುತ್ತಾನೆ ಅಥವಾ ಅದನ್ನು ದೂರಮಾಡಲಪೇಕ್ಷಿಸುತ್ತಾನೆ ಮತ್ತು ಖೇದಖಿನ್ನನಾಗಿ ಮಹಾನ ದುಃಖಕ್ಕೆ ಪಾತ್ರನಾಗುತ್ತಾನೆ.

ಮತ್ತು ಮೂರೂ ವೇದಗಳಿಂದ ಕಾಮವಾಸನೆಯು ಉತ್ಪನ್ನವಾದಾಗ ಪುರುಷವೇದದಿಂದ ಸ್ತ್ರೀಯಜತೆ ಕ್ರೀಡಿಸುವ, ಸ್ತ್ರೀವೇದದಿಂದ ಪುರುಷನಜತೆ ಕ್ರೀಡಿಸುವ ಮತ್ತು ನಪುಂಸಕ ವೇದದಿಂದ ಎರಡರ ಜತೆ ಕ್ರೀಡಿಸುವ ಇಚ್ಛೆಯಾಗುತ್ತದೆ. ಅದರಿಂದ ಅತ್ಯಂತ ವ್ಯಾಕುಲನಾಗುತ್ತಾನೆ, ಸಂತಾಪವು ಉತ್ಪನ್ನವಾಗುತ್ತದೆ, ನಿರ್ಲಜ್ಯನಾಗುತ್ತಾನೆ, ಹಣಖರ್ಚು ಮಾಡುತ್ತಾನೆ, ಅಪಯಶವನ್ನು ಗಣನೆಗೆ ತಂದುಕೊಳ್ಳುವುದಿಲ್ಲ, ಪರಂಪರೆಯಿಂದ ದುಃಖವಾಗಲಿ

ಮತ್ತು ಶಿಕ್ಷೆ ಮೊದಲಾದವುಗಳಾಗಲಿ ಅವನ್ನು ಗಣಿಸುವುದಿಲ್ಲ. ಕಾಮಬಾಧೆಯಿಂದ ಹುಚ್ಚನಾಗಿ ಹೋಗುತ್ತಾನೆ, ಸತ್ತು ಹೋಗುತ್ತಾನೆ. ಕಾಮಶಾಸ್ತ್ರಗಳಲ್ಲಿ ಕಾಮದ ಹತ್ತು ಅವಸ್ಥೆಗಳನ್ನು ಹೇಳಿದ್ದಾರೆ. ಅಲ್ಲಿ ಹುಚ್ಚು ಹಿಡಿಯುವುದು, ಮರಣವಾಗುವುದನ್ನು ಹೇಳಿದ್ದಾರೆ. ವೈದ್ಯಕೀಯ ಗ್ರಂಥಗಳಲ್ಲಿ ಜ್ವರದ ಭೇದಗಳಲ್ಲಿ ಕಾಮ ಜ್ವರವನ್ನು ಮರಣದಕಾರಣವೆಂದು ಹೇಳಿದ್ದಾರೆ. ಕಾಮವಾಸನೆಯಿಂದ ಮರಣದವರೆಗೆ ತಲುಪಿದ ಸಂಗತಿಗಳು ಪ್ರತ್ಯಕ್ಷದಲ್ಲಿ ಕಂಡು ಬರುತ್ತಿವೆ. ಕಾಮಾಂಧನಿಗೆ ಯಾವ ವಿಚಾರವಿರುವುದಿಲ್ಲ. ತಂದೆ-ಮಗಳು ಹಾಗೂ ಮನುಷ್ಯರು ತಿರ್ಯಂಚಗಳೊಡನೆ ಕ್ರೀಡೆಮಾಡಲಾರಂಭಿಸುತ್ತಾರೆ. ಹೀಗೆ ಕಾಮದ ಬಾಧೆಯಿದ್ದು ಅದು ಅತ್ಯಂತ ದುಃಖರೂಪವಿದೆ.

ಈ ಪ್ರಕಾರ ಕಷಾಯಗಳಿಂದ ಹಾಗೂ ನೋಕಷಾಯಗಳಿಂದ ಅವಸ್ಥೆಗಳಾಗುತ್ತವೆ.

ಒಂದು ವೇಳೆ ಈ ಅವಸ್ಥೆಗಳಲ್ಲಿ ಪ್ರವರ್ತಿಸದಿದ್ದರೆ ಕ್ರೋಧಾದಿಗಳ ಬಾಧೆಯು ಉತ್ಪನ್ನವಾಗುತ್ತದೆ ಮತ್ತು ಈ ಅವಸ್ಥೆಗಳಲ್ಲಿ ಪ್ರವರ್ತಿಸಿದರೆ ಮರಣ ಪರ್ಯಂತದ ಕಷ್ಟಗಳಾಗುತ್ತವೆಯೆಂಬ ವಿಚಾರವು ಬರುತ್ತದೆ. ಅಲ್ಲಿ ಮರಣ ಪರ್ಯಂತದ ಕಷ್ಟವನ್ನಂತೂ ಸ್ವೀಕಾರ ಮಾಡುತ್ತಾನೆ, ಆದರೆ ಕ್ರೋಧಾದಿಗಳ ಬಾಧೆ ಸಹಿಸುವುದನ್ನು ಮಾತ್ರ ಸ್ವೀಕಾರ ಮಾಡುವುದಿಲ್ಲ. ಇದರಿಂದ ಮರಣ ಮೊದಲಾದವುಗಳಿಗಿಂತ ಕಷಾಯಗಳ ಬಾಧೆಯು ಅಧಿಕವಿದೆಯೆಂಬುದು ನಿಶ್ಚಿತವಾಗುತ್ತದೆ.

ಅದರಂತೆ ಇವನಿಗೆ ಕಷಾಯದ ಉದಯವಾದಾಗ ಕಷಾಯ ಮಾಡಿದಲ್ಲದೆ ಇರುವುದಾಗುವುದಿಲ್ಲ. ಕಷಾಯಗಳಿಗೆ ಬಾಹ್ಯಕಾರಣಗಳು ದೊರೆತರೆ ಅವುಗಳ ಆಶ್ರಯದಿಂದ ಕಷಾಯ ಮಾಡುತ್ತಾನೆ. ಒಂದು ವೇಳೆ ದೊರಕದಿದ್ದರೆ ತಾನೇ ಕಾರಣಗಳನ್ನು ನಿರ್ಮಾಣ ಮಾಡುತ್ತಾನೆ. ಹೇಗೆಂದರೆ ವ್ಯಾಪಾರ ಮೊದಲಾದ ಕಷಾಯಗಳ ಕಾರಣವು ಇಲ್ಲದಿದ್ದರೆ ಜೂಜು ಆಡುವುದು, ಕ್ರೋಧಾದಿಗಳಿಗೆ ಕಾರಣವಾದ ಇತರ ಅನೇಕ ಆಟಗಳನ್ನಾಡುವುದು, ದುಷ್ಟ-ಕಥೆ ಕೇಳುವುದು-ಹೇಳುವುದು ಇತ್ಯಾದಿ ಕಾರಣಗಳನ್ನು ನಿರ್ಮಿಸುತ್ತಾನೆ. ಮತ್ತು ಕಾಮ-ಕ್ರೋಧಾದಿಗಳ ಬಾಧೆಯಾಗುತ್ತಿದ್ದು ಶರೀರದಲ್ಲಿ ಆ ಕಾರ್ಯಗಳನ್ನು ಮಾಡುವ ಶಕ್ತಿಯಿಲ್ಲದಿದ್ದರೆ ಔಷಧದ ಉಪಯೋಗ ಮಾಡುತ್ತಾನೆ. ಅದರಂತೆ ಬೇರೆ ಅನೇಕ ಉಪಾಯ ಮಾಡುತ್ತಾನೆ. ಇನ್ನು ಯಾವ ಕಾರಣಗಳೇ ಕೈಗೂಡದಿದ್ದರೆ ತನ್ನ ಉಪಯೋಗದಲ್ಲಿ ಕಷಾಯಗಳಿಗೆ ಕಾರಣಭೂತವಾದ ಪದಾರ್ಥಗಳ ಚಿಂತನೆ ಮಾಡಿ ತಾನೇ ಕಷಾಯಗಳರೂಪವಾಗಿ ಪರಿಣಮಿಸುತ್ತಾನೆ.

ಈ ಪ್ರಕಾರ ಈ ಜೀವನು ಕಷಾಯ ಭಾವನೆಗಳಿಂದ ಪೀಡಿತನಾಗಿ ಅತ್ಯಂತ ದುಃಖಿಯಾಗುತ್ತಾನೆ.

ಯಾವ ಪ್ರಯೋಜನದ ಸಲುವಾಗಿ ಕಷಾಯಭಾವಗಳಾಗಿವೆ ಆ ಪ್ರಯೋಜನದ ಸಿದ್ಧಿಯಾದರೆ ನನ್ನ ಈ ದುಃಖವು ದೂರವಾಗಿ ನನಗೆ ಸುಖವಾಗುವುದೆಂದು ಯೋಚಿಸಿ, ಆ ಪ್ರಯೋಜನದ ಸಿದ್ಧಿಯಾಗುವ ಸಲುವಾಗಿ ಅನೇಕ ಉಪಾಯಗಳನ್ನು ಮಾಡುವುದೇ ಆ ದುಃಖ ದೂರವಾಗುವ ಉಪಾಯವೆಂದು ಅವನು ಮನ್ನಿಸುತ್ತಾನೆ.

ಇಲ್ಲಿ ಕಷಾಯ ಭಾವಗಳಿಂದ ದುಃಖವಾಗುತ್ತಿರುವುದಂತೂ ನಿಜವೇ ಇದೆ, ತಾನೇ ಪ್ರತ್ಯಕ್ಷ ದುಃಖಿಯಾಗುತ್ತಾನೆ; ಆದರೆ ಮಾಡುತ್ತಿರುವ ಉಪಾಯಗಳು ಅಸತ್ಯವಿವೆ, ಏಕೆಂಬುದನ್ನು ಹೇಳುತ್ತಾರೆ.

ಕ್ರೋಧದಲ್ಲಂತೂ ಇತರರಿಗೆ ಕೇಡು ಮಾಡುವ, ಮಾನದಲ್ಲಿ ಇತರರನ್ನು ಕೀಳಾಗಿ ಕಾಣಿಸಿ ಸ್ವಯಂ

ಉಚ್ಚನಾಗುವುದು, ಮಾಯೆಯಲ್ಲಿ ಕಪಟದಿಂದ ಕಾರ್ಯಸಿದ್ಧಿ ಮಾಡುವುದು, ಲೋಭದಲ್ಲಿ ಇಷ್ಟದ ಪ್ರಾಪ್ತಿ ಮಾಡುವುದು, ಹಾಸ್ಯದಲ್ಲಿ ವಿಕಸಿತವಾಗುವ ಕಾರಣಗಳನ್ನು ಜೀವಿತವಿಡುವ, ರತಿಯಲ್ಲಿ ಇಷ್ಟಸಂಯೋಗವನ್ನು ನೆಲೆಗೊಳಿಸುವ, ಅರತಿಯಲ್ಲಿ ಅನಿಷ್ಟವು ದೂರವಾಗುವ, ಶೋಕದಲ್ಲಿ ಶೋಕದ ಕಾರಣಗಳನ್ನು ನಾಶಮಾಡುವ, ಭಯದಲ್ಲಿ ಭಯದ ಕಾರಣಗಳನ್ನು ವಿನಾಶಗೊಳಿಸುವ, ಜುಗುಪ್ಸೆಯಲ್ಲಿ ಜುಗುಪ್ಸೆಯ ಕಾರಣಗಳು ದೂರವಾಗುವ, ಪುರುಷ ವೇದದಲ್ಲಿ ಸ್ತ್ರೀಯೊಡನೆ ಕ್ರೀಡಿಸುವ, ಸ್ತ್ರೀವೇದದಲ್ಲಿ ಪುರುಷನೊಡನೆ ಕ್ರೀಡಿಸುವ, ನಪುಂಸಕವೇದದಲ್ಲಿ ಎರಡರ ಜತೆ ಕ್ರೀಡಿಸುವಂಥ ಪ್ರಯೋಜನಗಳು ಕಂಡು ಬರುತ್ತವೆ.

ಇವುಗಳ ಸಿದ್ಧಿಯಾದರೆ ಕಷಾಯದ ಉಪಶಮನವಾಗುವುದರಿಂದ ದುಃಖವು ದೂರವಾಗಿ ಸುಖಿಯಾಗುವನು; ಆದರೆ ಅವುಗಳ ಸಿದ್ಧಿಯು ಇವನು ಮಾಡುವ ಉಪಾಯಗಳ ಆಧೀನವಿಲ್ಲ, ಅವು ಭವಿತವ್ಯದ ಆಧೀನವಿವೆ; ಏಕೆಂದರೆ ಅನೇಕ ಉಪಾಯ ಮಾಡುತ್ತಿರುವುದನ್ನು ನೋಡುತ್ತೇವೆ, ಆದರೆ ಸಿದ್ಧಿಯಾಗುವುದಿಲ್ಲ, ಮತ್ತು ಉಪಾಯಗಳಾಗುವುದೂ ತಮ್ಮ ಆಧೀನವಿಲ್ಲ, ಅವು ಭವಿತವ್ಯದ ಆಧೀನವಿವೆ. ಏಕೆಂದರೆ ಅನೇಕ ಉಪಾಯಮಾಡುವ ವಿಚಾರ ಮಾಡುತ್ತಾನೆ, ಆದರೆ ಒಂದೂ ಉಪಾಯವಾಗದಿರುವುದನ್ನು ಕಾಣುತ್ತೇವೆ.

ಕಾಕತಾಲೀಯ ನ್ಯಾಯದಂತೆ ತನ್ನ ಪ್ರಯೋಜನವಿರುವಂಥದೇ ಭವಿತವ್ಯವಿದ್ದರೆ ಅಂಥದೇ ಉಪಾಯವಾಗುವುದು, ಮತ್ತು ಅದರಿಂದ ಕಾರ್ಯದ ಸಿದ್ಧಿ ಕೂಡ ಆಗಿ ಹೋಗುವುದು-ಹಾಗೆ ಆ ಕಾರ್ಯ ಸಂಬಂಧವಾಗಿ ಒಂದು ಕಷಾಯದ ಉಪಶಮವಿರುವುದು; ಆದರೆ ಅಲ್ಲಿ ತಡೆಯಾಗುವುದಿಲ್ಲ. ಕಾರ್ಯಸಿದ್ಧಿಯಾಗದವರೆಗಂತೂ ಆ ಕಾರ್ಯಸಂಬಂಧದ ಕಷಾಯವಿತ್ತು, ಮತ್ತು ಕಾರ್ಯದಸಿದ್ಧಿಯಾದ ಸಮಯದಲ್ಲಿಯೇ ಬೇರೆ ಕಾರ್ಯ ಸಂಬಂಧದ ಕಷಾಯಗಳಾಗಿ ಬಿಡುತ್ತವೆ. ಒಂದು ಸಮಯ ಮಾತ್ರವೂ ನಿರಾಕುಲವಿರುವುದಿಲ್ಲ. ಯಾವ ಪ್ರಕಾರ ಒಬ್ಬನು ಕ್ರೋಧದಿಂದ ಇನ್ನೊಬ್ಬನ ಕೆಡಕನ್ನು ಚಿಂತಿಸುತ್ತಿರುವಾಗ ಅವನದು ಕೆಡಕಾಗಿ ಹೋಗುತ್ತದೆ, ಆಗ ಅವನು ಅನ್ಯರ ಮೇಲೂ ಕ್ರೋಧ ಮಾಡಿ ಅವರದೂ ಕೆಡಕನ್ನು ಚಿಂತಿಸಲಾರಂಭಿಸುವನು. ಅಥವಾ ಅಲ್ಪಶಕ್ತಿಯಿದ್ದಾಗ ಚಿಕ್ಕವರ ಕೆಡಕನ್ನು ಅಪೇಕ್ಷಿಸುತ್ತಿದ್ದವನು ಅಧಿಕಶಕ್ತಿಯಾದಾಗ ದೊಡ್ಡವರ ಕೆಡಕನ್ನು ಅಪೇಕ್ಷಿಸಲಾರಂಭಿಸುವನು, ಅದೇ ಪ್ರಕಾರ ಮಾನ-ಮಾಯೆ-ಲೋಭಾದಿಗಳಿಂದ ಯಾವ ಕಾರ್ಯವನ್ನು ಚಿಂತಿಸುತ್ತಿದ್ದನು ಅದು ಸಾಧ್ಯವಾಗಿ ಹೋದೊಡನೆ ಅನ್ಯರಲ್ಲಿ ಮಾನಾದಿಗಳನ್ನು ಉತ್ಪನ್ನಮಾಡಿ ಅದರ ಸಿದ್ಧಿಮಾಡಲಪೇಕ್ಷಿಸುತ್ತಾನೆ. ಅಲ್ಪ ಶಕ್ತಿಯಿದ್ದಾಗ ಚಿಕ್ಕ ಕಾರ್ಯದ ಸಿದ್ಧಿಮಾಡಲಪೇಕ್ಷಿಸುತ್ತಿದ್ದವನು ಅಧಿಕ ಶಕ್ತಿಯಾದಾಗ ದೊಡ್ಡ ಕಾರ್ಯದ ಸಿದ್ಧಿಮಾಡಲಪೇಕ್ಷಿಸುವನು. ಕಷಾಯಗಳಲ್ಲಿ ಕಾರ್ಯದ ಪ್ರಮಾಣವಿದ್ದರೆ ಆ ಕಾರ್ಯದ ಸಿದ್ಧಿಯಾದ ಮೇಲೆ ಸುಖಿಯಾಗುವನು; ಆದರೆ ಪ್ರಮಾಣವೇ ಇಲ್ಲದಿದ್ದರೆ ಇಚ್ಛೆಯೇ ಬೆಳೆಯುತ್ತ ಹೋಗುತ್ತದೆ.

ಇದನ್ನೇ ಆತ್ಮಾನುಶಾಸನದಲ್ಲಿ ಹೇಳಿದ್ದಾರೆ,-

**ಆಶಾಗರ್ತಃ ಪ್ರತಿಪ್ರಾಣೀ ಯಸ್ಮಿನ್ ವಿಶ್ವಮಣೂಪಮಮ್ ।**
**ಕಸ್ಯ ಕಿಂ ಕಿಯದಾಯಾತಿ ವೃಥಾ ವೋ ವಿಷಯೈಷಿತಾ ॥36॥**

**ಅರ್ಥ :-** ಪ್ರತಿಯೊಂದು ಪ್ರಾಣಿಯಲ್ಲಿ ಆಶಾರೂಪದ ಹೊಂಡವು ಕಂಡುಬರುತ್ತದೆ. ಅನಂತಾನಂತ ಜೀವಗಳಿದ್ದು ಅವೆಲ್ಲವುಗಳಲ್ಲಿ ಆಶೆಯು ಕಂಡು ಬರುತ್ತದೆ. ಮತ್ತು ಆ ಆಶಾರೂಪದ ಹೊಂಡವು ಎಷ್ಟು ಆಳವಿದೆಯೆಂದರೆ ಆ ಒಂದೇ ಹೊಂಡದಲ್ಲಿ ಸಂಪೂರ್ಣ ಜಗತ್ತು ಅಣು ಸಮಾನವಾಗುವುದು ಮತ್ತು ಜಗತ್ತಂತೂ ಒಂದೇ ಇದ್ದು ಅದರಲ್ಲಿ ಯಾರಿಗೆ ಎಷ್ಟು ಪಾಲು ಬರುವುದೆಂಬುದನ್ನು ನೀವೇ ಹೇಳಿರಿ ? ಆದುದರಿಂದ ತಮಗೆ ಇರುವಂಥ ವಿಷಯಗಳ ಇಚ್ಛೆಯು ಅದು ವ್ಯರ್ಥವೇ ಇದೆ.

ಇಚ್ಛೆಯಂತೂ ಪೂರ್ಣವಾಗದಿರುವುದರಿಂದ ಯಾವುದೇ ಕಾರ್ಯದ ಸಿದ್ಧಿಯಾದ ಮೇಲೂ ದುಃಖವು ದೂರವಾಗುವುದಿಲ್ಲ. ಅಥವಾ ಯಾವುದೇ ಒಂದು ಕಷಾಯವು ದೂರವಾದೊಡನೆ ಅದೇ ಸಮಯದಲ್ಲಿ ಬೇರೆ ಕಷಾಯವು ಉತ್ಪನ್ನವಾಗುತ್ತದೆ. ಯಾವ ಪ್ರಕಾರ ಒಬ್ಬನಿಗೆ ಹೊಡೆಯುವವರು ಹಲವು ಜನರಿದ್ದು ಅವರಲ್ಲಿ ಯಾವಾಗ ಒಬ್ಬನು ಹೊಡೆಯುವುದಿಲ್ಲ ಆಗ ಇತರರು ಹೊಡೆಯುತ್ತಿರುತ್ತಾರೆ. ಅದೇ ಪ್ರಕಾರ ಜೀವನಿಗೆ ದುಃಖ ಕೊಡುವಂಥ ಕಷಾಯಗಳು ಅನೇಕವಿರುತ್ತವೆ; ಯಾವಾಗ ಕ್ರೋಧವಾಗುವುದಿಲ್ಲ ಆಗ ಮಾನಾದಿಗಳಾಗುತ್ತವೆ, ಮತ್ತು ಮಾನವಿಲ್ಲದಾಗ ಕ್ರೋಧಾದಿಗಳಾಗುತ್ತವೆ. ಈ ಪ್ರಕಾರ ಕಷಾಯದ ಸದ್ಭಾವವು ಅಖಂಡವಾಗಿ ಇದ್ದೇ ಇರುತ್ತದೆ, ಒಂದು ಸಮಯವು ಕೂಡ ಕಷಾಯರಹಿತವಾಗಿ ಇರುವುದಿಲ್ಲ. ಆದುದರಿಂದ ಒಂದು ಕಷಾಯದ ಯಾವುದೇ ಒಂದು ಕಾರ್ಯವು ಸಿದ್ಧವಾದ ಮೇಲೂ ದುಃಖವು ಹೇಗೆ ದೂರವಾಗುವುದು ? ಮತ್ತು ಈತನ ಅಭಿಪ್ರಾಯವಂತೂ ಎಲ್ಲ ಕಷಾಯಗಳ ಎಲ್ಲ ಪ್ರಯೋಜನವನ್ನು ಸಿದ್ಧಮಾಡುವುದಿದೆ. ಅದು ಆದರೆ ಇವನು ಸುಖಿಯಾಗುವನು; ಆದರೆ ಅದಂತೂ ಎಂದೂ ಆಗುವ ಸಾಧ್ಯತೆಯಿಲ್ಲ, ಆದುದರಿಂದ ಅಭಿಪ್ರಾಯದಲ್ಲಿ ಯಾವಾಗಲೂ ದುಃಖಿಯಾಗಿಯೇ ಇರುತ್ತಾನೆ ಆದುದರಿಂದ ಕಷಾಯಗಳ ಪ್ರಯೋಜನವನ್ನು ಸಾಧಿಸಿ ದುಃಖ ದೂರಮಾಡಿ ಸುಖಿಯಾಗಲು ಅಪೇಕ್ಷಿಸುತ್ತಾನೆ; ಆದರೆ ಈ ಉಪಾಯವು ವ್ಯರ್ಥವಾಗಿಯೇ ಇದೆ.

**ಪ್ರಶ್ನೆ :-** ಹಾಗಾದರೆ ನಿಜವಾದ ಉಪಾಯ ಯಾವುದು ?

**ಉತ್ತರ :-** ಸಮ್ಯಗ್ದರ್ಶನ-ಜ್ಞಾನದಿಂದ ಯಥಾರ್ಥ ಶ್ರದ್ಧೆ ಮತ್ತು ಜ್ಞಾನವಾದಾಗ ಇಷ್ಟಾನಿಷ್ಟದ ಬುದ್ಧಿಯು ದೂರವಾಗುವುದು, ಮತ್ತು ಅವುಗಳ ಬಲದಿಂದ ಚಾರಿತ್ರಮೋಹದ ಅನುಭಾಗವು ಕ್ಷೀಣವಾಗುವುದು. ಹೀಗಾದ ಮೇಲೆ ಕಷಾಯಗಳ ಅಭಾವವಾಗುವುದು, ಆಗ ಅವುಗಳ ಬಾಧೆಯು ದೂರವಾಗುವುದು; ಮತ್ತು ಆಗ ಯಾವ ಪ್ರಯೋಜನವೂ ಉಳಿಯದೆ ನಿರಾಕುಲವಾಗುವುದರಿಂದ ಅತ್ಯಂತ ಸುಖಿಯಾಗುವನು ಆದುದರಿಂದ ಸಮ್ಯಗ್ದರ್ಶನ ಮೊದಲಾದವುಗಳೇ ಈ ದುಃಖವನ್ನು ದೂರಮಾಡುವ ನಿಜವಾದ ಉಪಾಯಗಳಾಗಿವೆ.

## ಅಂತರಾಯಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ :-

ಜೀವದ ಮೋಹದಿಂದ ದಾನ, ಲಾಭ, ಭೋಗ, ಉಪಭೋಗ, ವೀರ್ಯಶಕ್ತಿಯ ಉತ್ಸಾಹವು ಉತ್ಪನ್ನವಾಗುತ್ತದೆ; ಆದರೆ ಅಂತರಾಯದ ಉದಯದಿಂದ ಆಗುವ ಸಾಧ್ಯತೆಯಿಲ್ಲ, ಆಗ ಅತ್ಯಂತ ಆಕುಲತೆಯಾಗುತ್ತದೆ. ಆದುದರಿಂದ ಇದು ದುಃಖರೂಪವೇ ಇದೆ.

ಇದರ ಉಪಾಯವಾಗಿ ಇವನು ವಿಘ್ನಕ್ಕೆ ಯಾವವು ಬಾಹ್ಯಕಾರಣಗಳಾಗಿ ತೋರುತ್ತವೆ ಅವನ್ನು

ದೂರಮಾಡುವ ಪ್ರಯತ್ನ ಮಾಡುತ್ತಾನೆ, ಆದರೆ ಆ ಉಪಾಯವು ಅಸತ್ಯವಿದೆ. ಉಪಾಯ ಮಾಡಿದರೂ ಕೂಡ ಅಂತರಾಯದ ಉದಯವಿರುವುದರಿಂದ ವಿಘ್ನವಾಗುತ್ತಿರುವುದು ಕಂಡುಬರುತ್ತದೆ. ಅಂತರಾಯದ ಕ್ಷಯೋಪಶಮವಾದಮೇಲೆ ಉಪಾಯಮಾಡದಿದ್ದರೂ ಕೂಡ ವಿಘ್ನವಾಗುವುದಿಲ್ಲ. ಆದುದರಿಂದ ವಿಘ್ನಗಳ ಮೂಲ ಕಾರಣವು ಅಂತರಾಯವಿದೆ.

ಯಾವ ಪ್ರಕಾರ ಪುರುಷನು ನಾಯಿಗೆ ಕೋಲಿನಿಂದ ಹೊಡೆದರೆ ಆ ನಾಯಿಯು ವ್ಯರ್ಥವಾಗಿ ಆ ಕೋಲಿನ ಮೇಲೆ ದ್ವೇಷ ಮಾಡುತ್ತದೆ; ಅದೇ ಪ್ರಕಾರ ಜೀವಕ್ಕೆ ಅಂತರಾಯದ ನಿಮಿತ್ತಭೂತವಾಗಿ ಮಾಡಲ್ಪಟ್ಟ ಬಾಹ್ಯ ಚೇತನ-ಅಚೇತನ ದ್ರವ್ಯಗಳಿಂದ ವಿಘ್ನಗಳಾದರೆ ಈ ಜೀವನು ಆ ಬಾಹ್ಯ ದ್ರವ್ಯಗಳ ಮೇಲೆ ವ್ಯರ್ಥವಾಗಿ ದ್ವೇಷ ಮಾಡುತ್ತಾನೆ. ಅನ್ಯದ್ರವ್ಯಗಳು ಇವನಿಗೆ ವಿಘ್ನಮಾಡಲಿಚ್ಛಿಸಿದರೆ ಇವನಿಗೆ ವಿಘ್ನವಾಗುವುದಿಲ್ಲ ಮತ್ತು ಅನ್ಯ ದ್ರವ್ಯಗಳು ವಿಘ್ನಮಾಡಲಿಚ್ಛಿಸದಿದ್ದರೂ ಇವನಿಗೆ ವಿಘ್ನಗಳಾಗುತ್ತವೆ, ಆದುದರಿಂದ ಅನ್ಯದ್ರವ್ಯಗಳ ಆಧೀನದಲ್ಲಿ ಯಾವ ವಿಘ್ನಗಳಿಲ್ಲವೆಂಬುದು ತಿಳಿದುಬರುತ್ತದೆ. ಯಾವವುಗಳ ಆಧೀನವಿಲ್ಲ ಅವುಗಳೊಡನೆ ಏತಕ್ಕಾಗಿ ಹೋರಾಡುವುದು? ಆದುದರಿಂದ ಈ ಉಪಾಯವು ವ್ಯರ್ಥವಿದೆ-ಅಸತ್ಯವಿದೆ.

**ಪ್ರಶ್ನೆ ಃ-** ಹಾಗಾದರೆ ನಿಜವಾದ ಉಪಾಯ ಯಾವುದು ?

**ಉತ್ತರ ಃ-** ಮಿಥ್ಯಾದರ್ಶನಾದಿಗಳಿಂದ ಇಚ್ಛೆಯ ಮುಖಾಂತರ ಉತ್ಪನ್ನವಾಗುತ್ತಿರುವ ಈ ಉತ್ಸಾಹವು ಸಮ್ಯಗ್ದರ್ಶನಾದಿಗಳಿಂದ ದೂರವಾಗುತ್ತದೆ ಮತ್ತು ಸಮ್ಯಗ್ದರ್ಶನಾದಿಗಳಿಂದಲೇ ಅಂತರಾಯದ ಅನುಭಾಗವು ಕ್ಷೀಣಿಸಿದಾಗ ಇಚ್ಛೆಯು ದೂರವಾಗುವುದು ಮತ್ತು ಶಕ್ತಿಯು ವೃದ್ಧಿಸುವುದು, ಆಗ ಆ ದುಃಖವು ದೂರವಾಗಿ ನಿರಾಕುಲ ಸುಖವು ಉತ್ಪನ್ನವಾಗುತ್ತದೆ. **ಆದುದರಿಂದ ಸಮ್ಯಗ್ದರ್ಶನ ಮೊದಲಾದವುಗಳೇ ನಿಜವಾದ ಉಪಾಯವಾಗಿವೆ.**

## ವೇದನೀಯಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ ಃ-

ವೇದನೀಯದ ಉದಯದಿಂದ ದುಃಖ-ಸುಖದ ಕಾರಣಗಳ ಸಂಯೋಗವಾಗುತ್ತದೆ. ಅಲ್ಲಿ ಕೆಲವಂತೂ ಶರೀರದಲ್ಲಿಯೇ ಅವಸ್ಥೆಗಳಾಗುತ್ತವೆ, ಕೆಲವಂತೂ ಶರೀರದ ಅವಸ್ಥೆಗೆ ನಿಮಿತ್ತಭೂತವಾದ ಬಾಹ್ಯ ಸಂಯೋಗಗಳಾಗುತ್ತವೆ. ಮತ್ತು ಕೆಲವು ಬಾಹ್ಯ ವಸ್ತುಗಳದೇ ಸಂಯೋಗವಾಗುತ್ತವೆ. ಅಲ್ಲಿ ಅಸಾತಾದ ಉದಯದಿಂದ ಶರೀರದಲ್ಲಂತೂ ಕ್ಷುಧೆ, ತೃಷೆ, ಉಚ್ಛ್ವಾಸ, ಬಾಧೆ, ರೋಗ ಇತ್ಯಾದಿಗಳಾಗುತ್ತವೆ; ಮತ್ತು ಶರೀರದ ಅನಿಷ್ಟ ಅವಸ್ಥೆಗೆ ನಿಮಿತ್ತಭೂತವಾದ ಅತ್ಯಂತ ಶೀತ, ಉಷ್ಣ, ಪವನ, ಬಂಧನ ಮೊದಲಾದವುಗಳ ಬಾಹ್ಯ ಸಂಯೋಗವಾಗುತ್ತದೆ; ಅಲ್ಲದೆ ಶತ್ರು , ಕುಪುತ್ರಾದಿಗಳ ಹಾಗೂ ಕುವರ್ಣಾದಿ ಸಹಿತವಾಗಿ ಬಾಹ್ಯ ಸ್ಕಂಧಗಳ ಸಂಯೋಗವಾಗುತ್ತದೆ, ಮತ್ತು ಮೋಹದಿಂದ ಇವುಗಳಲ್ಲಿ ಅನಿಷ್ಟ ಬುದ್ಧಿಯಾಗುತ್ತದೆ, ಇವುಗಳ ಉದಯವಾದಾಗ ಮೋಹದ ಉದಯವು ಹೀಗೆಯೇ ಬರುವುದರಿಂದ ಪರಿಣಾಮಗಳಲ್ಲಿ ಅತ್ಯಂತ ವ್ಯಾಕುಲತೆಯಾಗಿ ಇವನ್ನು ದೂರ ಮಾಡಲಪೇಕ್ಷಿಸುತ್ತಾನೆ, ಮತ್ತು ಎಲ್ಲಿಯವರೆಗೆ ಅವು ದೂರವಾಗುವುದಿಲ್ಲ ಅಲ್ಲಿಯವರೆಗೆ ದುಃಖಿಯಾಗಿರುತ್ತಾನೆ. ಇವುಗಳ ಸಂಯೋಗದಿಂದಂತೂ ಎಲ್ಲರೂ ದುಃಖವನ್ನು ಮನ್ನಿಸುತ್ತಾರೆ.

ಇನ್ನು ಸಾತಾದ ಉದಯದಿಂದ ಶರೀರದಲ್ಲಿ ಆರೋಗ್ಯ ಸಂಪನ್ನತೆ, ಬಲಿಷ್ಠತನ ಇತ್ಯಾದಿಗಳಾಗುತ್ತವೆ, ಮತ್ತು ಶರೀರದ ಇಷ್ಟ ಅವಸ್ಥೆಗೆ ನಿಮಿತ್ತಭೂತವಾಗಿ ಬಾಹ್ಯದಲ್ಲಿ ಅನ್ನ-ನೀರು ಮೊದಲಾದವುಗಳ ಹಾಗೂ ಸೊಗಸಾದ ಗಾಳಿ ಮೊದಲಾದವುಗಳ ಸಂಯೋಗವಾಗುತ್ತದೆ; ಮತ್ತು ಬಾಹ್ಯದಲ್ಲಿ ಮಿತ್ರ, ಸುಪುತ್ರ, ಸ್ತ್ರೀ, ಸೇವಕ, ಆನೆ, ಕುದುರೆ, ಧನ, ಧಾನ್ಯ, ಮನೆ, ವಸ್ತ್ರ ಮೊದಲಾದವುಗಳ ಸಂಯೋಗವಾಗುತ್ತದೆ ಹಾಗೂ ಮೋಹದಿಂದ ಇವುಗಳಲ್ಲಿ ಇಷ್ಟಬುದ್ಧಿಯಾಗುತ್ತದೆ, ಇವುಗಳ ಉದಯವಾದಾಗ ಮೋಹದ ಉದಯವು ಹೀಗೆಯೇ ಬರುವುದರಿಂದ ಪರಿಣಾಮಗಳಲ್ಲಿ ಸುಖವನ್ನು ಮನ್ನಿಸಿ, ಅವುಗಳ ರಕ್ಷಣೆಯನ್ನು ಅಪೇಕ್ಷಿಸುತ್ತಾನೆ. ಅವು ಎಲ್ಲಿಯವರೆಗೆ ಇರುತ್ತವೆ ಅಲ್ಲಿಯವರೆಗೆ ಸುಖವೆಂದು ಮನ್ನಿಸುತ್ತಾನೆ. ಆದರೆ ಈ ಸುಖವನ್ನು ಮನ್ನಿಸುವುದು ಹೇಗಿದೆಯೆಂದರೆ ಒಬ್ಬನು ಅನೇಕ ರೋಗಗಳಿಂದ ಅತ್ಯಂತ ಬಾಧೆ ಪಡುತ್ತಿರುವಾಗ ಅವನ ಯಾವುದೇ ಉಪಚಾರದಿಂದ ಯಾವುದೇ ಒಂದು ರೋಗವು ಕೆಲ ಕಾಲದ ಸಲುವಾಗಿ ಒಂದಿಷ್ಟು ಉಪಶಮನಗೊಂಡರೆ ಅವನು ಪೂರ್ವಾವಸ್ಥೆಯ ಅಪೇಕ್ಷೆಯಿಂದ ತನ್ನನ್ನು ಸುಖಿಯೆಂದು ಹೇಳುತ್ತಾನೆ; ಆದರೆ ಪರಮಾರ್ಥದಿಂದ ಸುಖವಿಲ್ಲ. ಅದೇ ಪ್ರಕಾರ ಈ ಜೀವನು ತನ್ನ ದುಃಖಗಳಿಂದ ಅತ್ಯಂತ ಬಾಧೆ ಪಡುತ್ತಿರುವಾಗ ಅವನಿಗೆ ಯಾವುದೇ ಪ್ರಕಾರದಿಂದ ಯಾವುದೇ ಒಂದು ದುಃಖವು ಕೆಲಕಾಲದ ಸಲುವಾಗಿ ಒಂದಿಷ್ಟು ಉಪಶಮನಗೊಂಡರೆ ಅವನು ಪೂರ್ವಾವಸ್ಥೆಯ ಅಪೇಕ್ಷೆಯಿಂದ ತನ್ನನ್ನು ಸುಖಿಯೆಂದು ಹೇಳುತ್ತಾನೆ; ಆದರೆ ಪರಮಾರ್ಥದಿಂದ ಸುಖವಿಲ್ಲ.

ಇವನಿಗೆ ಅಸಾತಾದ ಉದಯವಾದ ಮೇಲೆ ಯಾವುದು ಆಗುತ್ತದೆ, ಅದರಿಂದಂತೂ ದುಃಖದ ಭಾಸವಾಗುತ್ತದೆ, ಆದುದರಿಂದ ಅದನ್ನು ದೂರಮಾಡುವ ಉಪಾಯ ಮಾಡುತ್ತಾನೆ; ಮತ್ತು ಸಾತಾದ ಉದಯವಾದ ಮೇಲೆ ಯಾವುದು ಆಗುತ್ತದೆ ಅದರಿಂದ ಸುಖದ ಭಾಸವಾಗುತ್ತದೆ, ಆದುದರಿಂದ ಅದನ್ನು ಉಳಿಸಿಕೊಳ್ಳುವ ಉಪಾಯ ಮಾಡುತ್ತಾನೆ. ಈ ಉಪಾಯವು ವ್ಯರ್ಥವಿದೆ-ಅಸತ್ಯವಿದೆ.

ಮೊದಲಂತೂ ಇವನ ಉಪಾಯದ ಆಧೀನವಿಲ್ಲ, ವೇದನೀಯ ಕರ್ಮದ ಉದಯದ ಆಧೀನವಿದೆ. ಅಸಾತಾವನ್ನು ದೂರ ಮಾಡುವ ಮತ್ತು ಸಾತಾವನ್ನು ಪ್ರಾಪ್ತಮಾಡಿಕೊಳ್ಳುವುದಕ್ಕಾಗಿಯಂತೂ ಎಲ್ಲರ ಪ್ರಯತ್ನವಿರುತ್ತದೆ; ಆದರೆ ಒಬ್ಬನಿಗೆ ಅಲ್ಪ ಪ್ರಯತ್ನ ಮಾಡಿದರೂ ಕೂಡ ಅಥವಾ ಮಾಡದಿದ್ದರೂ ಕೂಡ ಸಿದ್ಧಿಯಾಗಿ ಹೋಗುವುದು, ಇನ್ನೊಬ್ಬನಿಗೆ ಅಧಿಕ ಪ್ರಯತ್ನ ಮಾಡಿದರೂ ಕೂಡ ಸಿದ್ಧಿಯಾಗುವುದಿಲ್ಲ; ಆದುದರಿಂದ ಇದರ ಉಪಾಯವು ಇವನ ಆಧೀನವಿಲ್ಲವೆಂಬುದು ತಿಳಿದುಬರುತ್ತದೆ.

ಎಂದಾದರೊಮ್ಮೆ ಉಪಾಯವನ್ನೂ ಮಾಡಿದರೆ ಮತ್ತು ಅಂಥದೇ ಉದಯವು ಬಂದರೆ ಕೆಲಕಾಲದವರೆಗೆ ಒಂದಿಷ್ಟು ಯಾವುದೇ ಪ್ರಕಾರದ ಅಸಾತಾದ ಕಾರಣವು ದೂರವಾಗುವುದು ಮತ್ತು ಸಾತಾದ ಕಾರಣವು ದೊರಕುವುದು; ಆದಾಗ್ಯೂ ಮೋಹದ ಸದ್ಭಾವದಿಂದ ಅವನ್ನು ಭೋಗಿಸುವ ಇಚ್ಛೆಯಿಂದ ಉದ್ವಿಗ್ನನಾಗುತ್ತಾನೆ. ಒಂದು ಭೋಗ್ಯ ವಸ್ತುವನ್ನು ಭೋಗಿಸುವ ಇಚ್ಛೆಯಾದಾಗ ಅದು ಎಲ್ಲಿಯವರೆಗೆ ದೊರಕುವುದಿಲ್ಲ ಅಲ್ಲಿಯವರೆಗಂತೂ ಅದರ ಇಚ್ಛೆಯಿಂದ ವ್ಯಾಕುಲನಾಗುತ್ತಾನೆ, ಮತ್ತು ಅದು ದೊರೆತರೆ ಅದೇ ಸಮಯದಲ್ಲಿ ಇನ್ನೊಂದನ್ನು ಭೋಗಿಸುವ ಇಚ್ಛೆಯಾಗುತ್ತದೆ, ಆಗ ಅದರಿಂದ ವ್ಯಾಕುಲನಾಗುತ್ತಾನೆ. ಹೇಗೆಂದರೆ ಒಬ್ಬನಿಗೆ ಸ್ವಾದ ತೆಗೆದುಕೊಳ್ಳುವ ಇಚ್ಛೆಯಾಗುತ್ತದೆ, ಆದರೆ ಯಾವ ಸಮಯದಲ್ಲಿ ಅದರ ಆಸ್ವಾದ ತೆಗೆದುಕೊಳ್ಳುತ್ತಾನೆ ಅದೇ ಸಮಯದಲ್ಲಿ ಇನ್ನೊಂದು ವಸ್ತುವಿನ ಸ್ವಾದ ತೆಗೆದುಕೊಳ್ಳುವ ಹಾಗೂ ಸ್ಪರ್ಶ ಮೊದಲಾದವುಗಳ ಇಚ್ಛೆಯು ಉತ್ಪನ್ನವಾಗುತ್ತದೆ.

ಅಥವಾ ಒಂದೇ ವಸ್ತುವನ್ನು ಮೊದಲು ಅನ್ಯಪ್ರಕಾರದಿಂದ ಭೋಗಿಸುವ ಇಚ್ಛೆಯಾಗುವುದು, ಎಲ್ಲಿಯವರೆಗೆ ಅದು ದೊರಕುವುದಿಲ್ಲ ಅಲ್ಲಿಯವರೆಗೆ ಅದರ ಆಕುಲತೆಯಿರುತ್ತದೆ ಮತ್ತು ಆ ಭೋಗವಾದ ಸಮಯವೇ ಅನ್ಯಪ್ರಕಾರದಿಂದ ಭೋಗಿಸುವ ಇಚ್ಛೆಯಾಗುತ್ತದೆ. ಹೇಗೆಂದರೆ ಸ್ತ್ರೀಯರನ್ನು ನೋಡುವ ಇಚ್ಛೆಯಾಗುತ್ತದೆ ಮತ್ತು ನೋಡಿದ ಸಮಯದಲ್ಲಿಯೇ ಕ್ರೀಡಿಸುವ ಇಚ್ಛೆಯಾಗುತ್ತದೆ, ಮತ್ತು ಹೀಗೆ ಭೋಗ ಭೋಗಿಸುತ್ತಿದ್ದರೂ ಅವುಗಳ ಬೇರೆ ಉಪಾಯ ಮಾಡುವ ಆಕುಲತೆಯಾಗುತ್ತಿದ್ದರೆ ಅದನ್ನು ಬಿಟ್ಟುಕೊಟ್ಟು ಬೇರೆ ಉಪಾಯ ಮಾಡುವುದರಲ್ಲಿ ತೊಡಗುತ್ತಾನೆ; ಅಲ್ಲಿ ಅನೇಕ ಪ್ರಕಾರದ ಆಕುಲತೆಯಾಗುತ್ತದೆ.

ಒಂದು ಹಣ ಸಂಪಾದನೆ ಮಾಡುವಲ್ಲಿ ವ್ಯಾಪಾರಾದಿಗಳನ್ನು ಮಾಡುತ್ತಿರುವಾಗ ಮತ್ತು ಅದರ ರಕ್ಷಣೆ ಮಾಡುವಲ್ಲಿ ಎಚ್ಚರಿಕೆ ವಹಿಸುತ್ತಿರುವಾಗ ಎಷ್ಟು ಆಕುಲತೆಯಾಗುತ್ತದೆಯೆಂಬುದನ್ನು ನೋಡಬೇಕು ! ಮತ್ತು ಕ್ಷುಧೆ, ತೃಷೆ, ಶೀತ, ಉಷ್ಣ, ಮಲ, ಕಫಾದಿಗಳ ಅಸಾತಾದ ಉದಯವು ಬರುತ್ತಲೇ ಇರುತ್ತದೆ; ಅದರ ನಿರಾಕರಣದಿಂದ ಸುಖವನ್ನು ಮನ್ನಿಸುವುದು ಅದೆಂತಹ ಸುಖವಿದೆ ? ಇದಂತೂ ರೋಗದ ಪ್ರತಿಕಾರವಿದೆ. ಕ್ಷುಧೆ ಮೊದಲಾದವುಗಳಿರುವವರೆಗೆ ಅವನ್ನು ದೂರಮಾಡುವ ಇಚ್ಛೆಯಿಂದ ಆಕುಲತೆಯಾಗುತ್ತದೆ, ಅದು ದೂರವಾದೊಡನೆ ಇನ್ನೊಂದು ಇಚ್ಛೆಯು ಉತ್ಪನ್ನವಾಗಿ ಅದರ ಆಕುಲತೆಯಾಗುತ್ತದೆ, ಮತ್ತೆ ಪುನಃ ಕ್ಷುಧಾದಿಗಳಾದಾಗ ಅವುಗಳ ಆಕುಲತೆಯಾಗುತ್ತದೆ.

ಈ ಪ್ರಕಾರ ಇವನು ಉಪಾಯ ಮಾಡುತ್ತಿರುವಾಗ ಎಂದಾದರೊಮ್ಮೆ ಅಸಾತಾದ ನಾಶವಾಗಿ ಸಾತಾ ಆಗುತ್ತದೆ, ಆಗಲೂ ಆಕುಲತೆಯು ಅಖಂಡವಿರುವುದರಿಂದ ದುಃಖವೇ ಇರುತ್ತದೆ.

ಮತ್ತು ಹಾಗೆಯೇ ಇರುವುದಂತೂ ಆಗುವುದಿಲ್ಲ ಉಪಾಯ ಮಾಡುತ್ತ-ಮಾಡುತ್ತಿರುವಾಗಲೇ ತನಗೆ ಅಸಾತಾದ ಉದಯವು ಎಂಥದು ಬರುತ್ತದೆಯೆಂದರೆ ಅದರ ಮೇಲೆ ಯಾವ ಉಪಾಯವು ನಡೆಯುವುದಿಲ್ಲ ಮತ್ತು ಅದರಿಂದಾಗುವ ಅಧಿಕ ಬಾಧೆಯನ್ನು ಸಹಿಸುವುದೂ ಆಗುವುದಿಲ್ಲ, ಆಗ ಅದರ ಆಕುಲತೆಯಿಂದ ವಿಹ್ವಲನಾಗುತ್ತಾನೆ; ಅತ್ಯಂತ ದುಃಖಿಯಾಗುತ್ತಾನೆ.

ಈ ಸಂಸಾರದಲ್ಲಿ ಸಾತಾದ ಉದಯವಂತೂ ಯಾವುದೇ ಪುಣ್ಯದ ಉದಯದಿಂದ ಯಾವನೋ ಒಬ್ಬನಿಗೆ ಎಂದಾದರೊಮ್ಮೆ ಕಂಡುಬರುತ್ತದೆ; ಅಧಿಕ ಜೀವರುಗಳಿಗೆ ಅಧಿಕ ಕಾಲದವರೆಗೆ ಅಸಾತಾದ ಉದಯವೇ ಇರುತ್ತದೆ ಆದುದರಿಂದ ಉಪಾಯ ಮಾಡುತ್ತಾರೆ ಅವು ವ್ಯರ್ಥವಿವೆ, ಅಸತ್ಯವಿದೆ.

ಇನ್ನು ಬಾಹ್ಯ ಸಾಮಗ್ರಿಗಳಿಂದ ಸುಖ-ದುಃಖಗಳನ್ನು ಮನ್ನಿಸುತ್ತಿರುವುದು ಕೂಡ ಭ್ರಾಂತಿಯಿದೆ. ಸುಖ-ದುಃಖಗಳಂತೂ ಸಾತಾ-ಅಸಾತಾದ ಉದಯವಾದ ಮೇಲೆ ಮೋಹದ ನಿಮಿತ್ತದಿಂದ ಆಗುತ್ತವೆಯೆಂಬುದು ಪ್ರತ್ಯಕ್ಷವಾಗಿ ಕಂಡು ಬರುತ್ತದೆ. ಲಕ್ಷಾಧೀಶನಿಗೆ ಸಹಸ್ರ ರೂಪಾಯಿಗಳ ಹಾನಿಯಾದಾಗ ಅವನಂತೂ ದುಃಖಿಯಾಗುತ್ತಾನೆ ಮತ್ತು ಶತಾಧೀಶನಿಗೆ ಸಹಸ್ರರೂಪಾಯಿಗಳ ಲಾಭವಾದಾಗ ಅವನು ಸುಖಿಯಾಗುತ್ತಾನೆ. ಬಾಹ್ಯ ಸಾಮಗ್ರಿಗಳಂತೂ ಅವನಿಗೆ ತನಗಿಂತ ತೊಂಭತ್ತೊಂಭತ್ತು ಗುಣಿತವಿವೆ. ಅಥವಾ ಲಕ್ಷಾಧೀಶನಿಗೆ ಅಧಿಕಧನದ ಇಚ್ಛೆಯಿರುವುದರಿಂದ ಅವನು ದುಃಖಿಯಿದ್ದಾನೆ ಮತ್ತು ಶತಾಧೀಶನಿಗೆ ಸಂತೋಷವಿರುವುದರಿಂದ ಅವನು

ಸುಖಿಯಿದ್ದಾನೆ. ಸಮಾನ ವಸ್ತುಗಳು ದೊರೆತ ಮೇಲೂ ಕೆಲವರು ಸುಖ ಮನ್ನಿಸುತ್ತಾರೆ ಕೆಲವರು ದುಃಖ ಮನ್ನಿಸುತ್ತಾರೆ. ಹೇಗೆಂದರೆ ಒಬ್ಬನಿಗೆ ದಪ್ಪ ಬಟ್ಟೆ ದೊರಕುವುದು ದುಃಖಕರವಾದರೆ ಇನ್ನೊಬ್ಬನಿಗೆ ಅದೇ ಸುಖಕರವಾಗುತ್ತದೆ, ಮತ್ತು ಶರೀರದಲ್ಲಿ ಕ್ಷುಧಾದಿಗಳ ಬಾಧೆ ಹಾಗೂ ಬಾಹ್ಯ ಇಷ್ಟದ ವಿಯೋಗ, ಅನಿಷ್ಟದ ಸಂಯೋಗವಾದ ಮೇಲೆ ಒಬ್ಬನಿಗೆ ಅಧಿಕ ದುಃಖವಾಗುತ್ತದೆ, ಇನ್ನೊಬ್ಬನಿಗೆ ಅಲ್ಪ ದುಃಖವಾಗುತ್ತದೆ ಮತ್ತೊಬ್ಬನಿಗೆ ದುಃಖವೇ ಆಗುವುದಿಲ್ಲ, ಆದುದರಿಂದ ಸಾಮಗ್ರಿಗಳ ಆಧೀನವಾಗಿ ಸುಖ-ದುಃಖಗಳಿಲ್ಲ, ಸಾತಾ-ಅಸಾತಾಗಳ ಉದಯವಾದನಂತರ ಮೋಹ ಪರಿಣಮನದ ನಿಮಿತ್ತದಿಂದಲೇ ಸುಖ-ದುಃಖಗಳನ್ನು ಮನ್ನಿಸುತ್ತಾರೆ.

**ಪ್ರಶ್ನೆ :-** ಬಾಹ್ಯ ಸಾಮಗ್ರಿಗಳಂತೂ ನೀವು ಹೇಳುತ್ತಿರುವಂತೆಯೇ ಇವೆ; ಆದರೆ ಶರೀರದಲ್ಲಂತೂ ಬಾಧೆಯಾದ ಮೇಲೆ ದುಃಖಿಯೇ ಆಗುತ್ತಾನೆ ಮತ್ತು ಬಾಧೆಯಾಗದಿದ್ದಾಗ ಸುಖಿಯಾಗುತ್ತಾನೆ. ಹೀಗಂತೂ ಶರೀರ ಅವಸ್ಥೆಯ ಆಧೀನವಾಗಿ ಸುಖ-ದುಃಖಗಳು ಭಾಸವಾಗುತ್ತವೆ ?

**ಉತ್ತರ :-** ಆತ್ಮನ ಜ್ಞಾನವಂತೂ ಇಂದ್ರಿಯಾಧೀನವಿದೆ ಮತ್ತು ಇಂದ್ರಿಯಗಳು ಶರೀರದ ಅಂಗಗಳಿರುವುದರಿಂದ ಇದರಲ್ಲಿ ಆಗುವ ಅವಸ್ಥೆಯನ್ನು ತಿಳಿಯುವರೂಪದ ಜ್ಞಾನ ಪರಿಣಮನವಾಗುತ್ತದೆ; ಅದರ ಜತೆಯಲ್ಲೇ ಮೋಹಭಾವವಾಗುವುದರಿಂದ ಶರೀರದ ಅವಸ್ಥೆಯ ಮುಖಾಂತರ ಸುಖ-ದುಃಖಗಳು ವಿಶೇಷವಾಗಿ ತಿಳಿದು ಬರುತ್ತವೆ. ಮತ್ತು ಪುತ್ರ ಧನಾದಿಗಳಲ್ಲಿ ಅಧಿಕ ಮೋಹವಿದ್ದರೆ ತಮ್ಮ ಶರೀರದ ಕಷ್ಟವನ್ನು ಸಹಿಸಿ ಅದರ ದುಃಖವನ್ನು ಅಲ್ಪವಾಗಿ ಮನ್ನಿಸುತ್ತೇವೆ; ಹಾಗೂ ಅವರಿಗೆ ದುಃಖವಾದ ಮೇಲೆ ಅಥವಾ ಅವರ ಸಂಯೋಗವು ದೂರವಾದ ಮೇಲೆ ಅಧಿಕ ದುಃಖ ಮನ್ನಿಸುತ್ತೇವೆ; ಇನ್ನು ಮುನಿಗಳು ಅವರು ಶರೀರಕ್ಕೆ ಬಾಧೆಯಾದರೂ ಕೂಡ ಒಂದಿಷ್ಟೂ ದುಃಖ ಮನ್ನಿಸುವುದಿಲ್ಲ; ಆದುದರಿಂದ ಸುಖ-ದುಃಖಗಳನ್ನು ಮನ್ನಿಸುವುದಂತೂ ಮೋಹದ ಆಧೀನವೇ ಇದೆ. ಮೋಹ ಮತ್ತು ವೇದನೀಯದಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿರುವುದರಿಂದ ಸಾತಾ-ಅಸಾತಾಗಳ ಉದಯದಿಂದ ಸುಖ-ದುಃಖಗಳಾಗುತ್ತಿರುವಂತೆ ಭಾಸವಾಗುತ್ತದೆ. ಇನ್ನು ಮುಖ್ಯವಾಗಿ ಅದೆಷ್ಟೋ ಸಾಮಗ್ರಿಗಳು ಸಾತಾದ ಉದಯದಿಂದಾಗುತ್ತವೆ, ಅದೆಷ್ಟೋ ಅಸಾತಾದ ಉದಯದಿಂದಾಗುತ್ತವೆ; ಆದುದರಿಂದ ಸಾಮಗ್ರಿಗಳಿಂದ ಸುಖ-ದುಃಖಗಳಾಗುತ್ತಿರುವಂತೆ ಭಾಸವಾಗುತ್ತದೆ. ಆದರೆ ನಿರ್ಣಯ ಮಾಡಿದ ಮೇಲೆ ಮೋಹದಿಂದಲೇ ಸುಖ-ದುಃಖಗಳಾಗುತ್ತಿರುವುದನ್ನು ಮನ್ನಿಸಬೇಕಾಗುತ್ತದೆ, ಉಳಿದವುಗಳಿಂದ ಸುಖ-ದುಃಖಗಳಾಗುವ ನಿಯಮವಿಲ್ಲ, ಕೇವಲಿಗಳಿಗೆ ಸಾತಾ-ಅಸಾತಾಗಳ ಉದಯವೂ ಇದೆ ಮತ್ತು ಸುಖ-ದುಃಖಕ್ಕೆ ಕಾರಣವಾದ ಸಾಮಗ್ರಿಯ ಸಂಯೋಗವೂ ಇದೆ; ಆದರೆ ಮೋಹದ ಅಭಾವದಿಂದ ಅವರಿಗೆ ಸ್ವಲ್ಪ ಮಾತ್ರವೂ ಸುಖ-ದುಃಖಗಳಾಗುವುದಿಲ್ಲ. ಆದುದರಿಂದ ಸುಖ-ದುಃಖಗಳನ್ನು ಮೋಹಜನ್ಯವೆಂದೇ ಮನ್ನಿಸಬೇಕು. ಅದಕ್ಕಾಗಿ ನೀನು ಸಾಮಗ್ರಿಗಳನ್ನು ದೂರಮಾಡುವ ಅಥವಾ ಸಂಗ್ರಹಮಾಡುವ ಉಪಾಯಮಾಡಿ ದುಃಖ ದೂರ ಮಾಡಲಪೇಕ್ಷಿಸಿ ಅಥವಾ ಸುಖಿಯಾಗಲಪೇಕ್ಷಿಸಿ ಈ ಉಪಾಯಗಳನ್ನು ಮಾಡುವುದು ಅಸತ್ಯವಿದೆ.

**ಪ್ರಶ್ನೆ :-** ಹಾಗಾದರೆ ನಿಜವಾದ ಉಪಾಯವೇನು ?

**ಉತ್ತರ :-** ಸಮ್ಯಗ್ದರ್ಶನ ಮೊದಲಾದವುಗಳಿಂದ ಭ್ರಮೆಯು ದೂರವಾದಾಗ ಸಾಮಗ್ರಿಗಳಿಂದ ಸುಖ-ದುಃಖಗಳು ಭಾಸವಾಗದೆ ತನ್ನ ಪರಿಣಾಮದಿಂದಲೇ ಭಾಸವಾಗುತ್ತವೆ. ಮತ್ತು ಯಥಾರ್ಥ ವಿಚಾರದ

ಅಭ್ಯಾಸದಿಂದ ತನ್ನ ಪರಿಣಾಮವು ಸಾಮಗ್ರಿಯ ನಿಮಿತ್ತದಿಂದ ಸುಖಿ-ದುಃಖಿಯಾಗದಂತೆ ಸಾಧನೆ ಮಾಡುತ್ತಾನೆ ಮತ್ತು ಸಮ್ಯಗ್ದರ್ಶನಾದಿಗಳ ಭಾವನೆಯಿಂದಲೇ ಮೋಹವು ಮಂದವಾದಾಗ ಅನೇಕ ಕಾರಣಗಳು ದೊರೆತರೂ ತನಗೆ ಸುಖ-ದುಃಖಗಳಾಗದಂಥ ಅವಸ್ಥೆಯಾಗಿ ಬಿಡುತ್ತದೆ; ಆಗ ಒಂದು ಶಾಂತಸ್ವರೂಪದಿಂದ ನಿರಾಕುಲನಾಗಿ ನಿಜವಾದ ಸುಖದ ಅನುಭವ ಮಾಡುತ್ತಾನೆ, ಮತ್ತು ಆಗ ಎಲ್ಲ ದುಃಖಗಳು ದೂರವಾಗಿ ಸುಖಿಯಾಗುತ್ತಾನೆ. ಇದು ನಿಜವಾದ ಉಪಾಯವಿದೆ.

## ಆಯುಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ :-

ಆಯುಕರ್ಮದ ನಿಮಿತ್ತದಿಂದ ಪರ್ಯಾಯದ ಧಾರಣ ಮಾಡುವುದು ಅದು ಜೀವಿತವಿದ್ದರೆ ಪರ್ಯಾಯದ ಬಿಡುಗಡೆಯು ಅದು ಮರಣವಿದೆ. ಈ ಜೀವನು ಮಿಥ್ಯಾದರ್ಶನಾದಿಗಳಿಂದ ಪರ್ಯಾಯಕ್ಕೇನೇ ತನ್ನ ಸ್ವರೂಪವೆಂದು ಅನುಭವ ಮಾಡುತ್ತಾನೆ; ಆದುದರಿಂದ ಜೀವಂತವಿದ್ದ ಮೇಲೆ ತನ್ನ ಅಸ್ತಿತ್ವವಿದೆಯೆಂದು ಮನ್ನಿಸುತ್ತಾನೆ ಮತ್ತು ಮರಣವಾದ ಮೇಲೆ ತನ್ನ ಅಭಾವವಾಯಿತೆಂದು ಮನ್ನಿಸುತ್ತಾನೆ. ಇದೇ ಕಾರಣದಿಂದ ಇವನಿಗೆ ಯಾವಾಗಲೂ ಮರಣದ ಭಯವಿರುತ್ತದೆ, ಆ ಭಯದಿಂದ ಯಾವಾಗಲೂ ಆಕುಲತೆಯಿರುತ್ತದೆ. ಯಾವವುಗಳನ್ನು ಮರಣದ ಕಾರಣವೆಂದು ತಿಳಿಯುತ್ತಾನೆ ಅವುಗಳಿಗೆ ಅಧಿಕವಾಗಿ ಭಯಪಡುತ್ತಾನೆ, ಎಂದಾದರೊಮ್ಮೆ ಅವುಗಳ ಸಂಯೋಗವಾದರೆ ಅತ್ಯಂತ ವಿಹ್ವಲನಾಗಿ ಹೋಗುತ್ತಾನೆ. ಈ ಪ್ರಕಾರ ಮಹಾದುಃಖಿಯಾಗಿರುತ್ತಾನೆ.

ಅದರ ಉಪಾಯವೆಂದು ಮರಣದ ಕಾರಣಗಳನ್ನು ದೂರವಿಡುತ್ತಾನೆ ಅಥವಾ ತಾನೇ ಅವುಗಳಿಂದ ದೂರ ಸರಿಯುತ್ತಾನೆ, ಔಷಧ ಮೊದಲಾದವುಗಳ ಸಾಧನೆ ಮಾಡುತ್ತಾನೆ, ಕೋಟೆ, ದುರ್ಗ ಮೊದಲಾದುವನ್ನು ನಿರ್ಮಿಸುತ್ತಾನೆ. ಹೀಗೆ ಅನೇಕ ಉಪಾಯ ಮಾಡುತ್ತಾನೆ, ಆದರೆ ಈ ಉಪಾಯಗಳೆಲ್ಲವು ವ್ಯರ್ಥವಿವೆ; ಏಕೆಂದರೆ ಆಯುಷ್ಯವು ಪೂರ್ಣವಾದ ಮೇಲಂತೂ ಅನೇಕ ಉಪಾಯ ಮಾಡಿದರೂ, ಅನೇಕರು ಸಹಾಯಕರಾದರೂ ಕೂಡ ಮರಣವು ಆಗಿಯೇ ಹೋಗುತ್ತದೆ, ಒಂದು ಸಮಯ ಮಾತ್ರವೂ ಜೀವಂತವಿರುವುದಿಲ್ಲ. ಮತ್ತು ಎಲ್ಲಿಯವರೆಗೆ ಆಯುಷ್ಯವು ಪೂರ್ಣವಾಗುವುದಿಲ್ಲ ಅಲ್ಲಿಯವರೆಗೆ ಅನೇಕ ಕಾರಣಗಳು ದೊರೆತರೂ ಕೂಡ ಮರಣವು ಸರ್ವಥಾ ಆಗುವುದೇ ಇಲ್ಲ. ಆದುದರಿಂದ ಉಪಾಯ ಮಾಡುವುದರಿಂದ ಮರಣವು ದೂರವಾಗುವುದಿಲ್ಲ, ಮತ್ತು ಆಯುವಿನ ಸ್ಥಿತಿಯು ಪೂರ್ಣವಾಗೇ ಆಗುತ್ತದೆ, ಅದರಿಂದ ಮರಣವೂ ಆಗೇ ಆಗುತ್ತದೆ. ಇದರ ಉಪಾಯ ಮಾಡುವುದು ವ್ಯರ್ಥವೇ ಇದೆ, ಅಸತ್ಯವೇ ಇದೆ.

**ಪ್ರಶ್ನೆ :-** ಹಾಗಾದರೆ ನಿಜವಾದ ಉಪಾಯವೇನು ?

**ಉತ್ತರ :-** ಸಮ್ಯಗ್ದರ್ಶನಾದಿಗಳಿಂದ ಪರ್ಯಾಯದಲ್ಲಿನ ಅಹಂಬುದ್ಧಿಯು ಬಿಟ್ಟುಹೋಗುವುದು, ಸ್ವಯಂ ಅನಾದಿನಿಧನ ಚೈತನ್ಯದ್ರವ್ಯವಿದ್ದು ಅದರಲ್ಲಿ ಅಹಂಬುದ್ಧಿಯುಂಟಾಗುವುದು, ಪರ್ಯಾಯವು ಸೋಗದ ಸಮವಾಗಿ ತಿಳಿದು ಬರುವುದು; ಆಗ ಮರಣದ ಭಯವು ಉಳಿಯುವುದಿಲ್ಲ, ಮತ್ತು ಸಮ್ಯಗ್ದರ್ಶನಾದಿಗಳಿಂದಲೇ ಸಿದ್ಧ ಪದವನ್ನು ಪ್ರಾಪ್ತ ಮಾಡಿಕೊಂಡಾಗ ಮರಣದ ಅಭಾವವೇ ಆಗುವುದು, ಆದುದರಿಂದ ಸಮ್ಯಗ್ದರ್ಶನಾದಿಗಳೇ ನಿಜವಾದ ಉಪಾಯಗಳಿವೆ.

## ನಾಮಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ :-

ನಾಮಕರ್ಮದ ಉದಯದಿಂದ ಗತಿ, ಜಾತಿ, ಶರೀರ ಮೊದಲಾದವು ಉತ್ಪನ್ನವಾಗುತ್ತವೆ, ಅವುಗಳಲ್ಲಿ ಪುಣ್ಯದ ಉದಯದಿಂದಾಗುವಂಥವುಗಳಂತೂ ಸುಖಕ್ಕೆ ಕಾರಣವಾದರೆ ಪಾಪದ ಉದಯದಿಂದಾಗುವಂಥವುಗಳು ದುಃಖಕ್ಕೆ ಕಾರಣವಾಗುತ್ತವೆ; ಆದುದರಿಂದ ಇಲ್ಲಿ ಸುಖವನ್ನು ಮನ್ನಿಸುವುದು ಭ್ರಾಂತಿಯಿದೆ. ಮತ್ತು ಇವನು ದುಃಖದ ಕಾರಣಗಳನ್ನು ದೂರ ಮಾಡುವ ಮತ್ತು ಸುಖದ ಕಾರಣಗಳನ್ನು ಉಂಟುಮಾಡುವ ಉಪಾಯ ಮಾಡುತ್ತಾನೆ, ಅದು ವ್ಯರ್ಥ-ಅಸತ್ಯವಿದೆ, ನಿಜವಾದ ಉಪಾಯವೆಂದರೆ ಸಮ್ಯಗ್ದರ್ಶನಾದಿಗಳಿವೆ. ವೇದನೀಯದ ಕಥನ ಮಾಡುವಾಗ ಹೇಗೆ ನಿರೂಪಣೆ ಮಾಡಿದೆ ಹಾಗೆಯೇ ಇಲ್ಲಿಯೂ ತಿಳಿಯಬೇಕು; ವೇದನೀಯ ಮತ್ತು ನಾಮದಲ್ಲಿ ಸುಖ-ದುಃಖದ ಕಾರಣತನದ ಸಮಾನತೆಯಿಂದ ನಿರೂಪಣೆಯ ಸಮಾನತೆಯಿದೆಯೆಂದು ತಿಳಿಯುವುದು.

## ಗೋತ್ರಕರ್ಮದ ಉದಯದಿಂದಾಗುವಂಥ ದುಃಖ ಮತ್ತು ಅದರಿಂದ ನಿವೃತ್ತಿ :-

ಗೋತ್ರಕರ್ಮದ ಉದಯದಿಂದ ಉಚ್ಚ-ನೀಚ ಕುಲದಲ್ಲಿ ಉತ್ಪನ್ನನಾಗುತ್ತಾನೆ. ಉಚ್ಚ ಕುಲದಲ್ಲಿ ಉತ್ಪನ್ನನಾದ ಮೇಲೆ ತನ್ನನ್ನು ಉಚ್ಚನೆಂದು ಮನ್ನಿಸುತ್ತಾನೆ ಮತ್ತು ನೀಚಕುಲದಲ್ಲಿ ಉತ್ಪನ್ನನಾದ ಮೇಲೆ ತನ್ನನ್ನು ನೀಚನೆಂದು ಮನ್ನಿಸುತ್ತಾನೆ. ಅಲ್ಲಿ ಕುಲವನ್ನು ಬದಲಿಸುವ ಉಪಾಯವಂತೂ ಇವನಿಗೆ ಹೊಳೆಯದಿರುವುದರಿಂದ ಪ್ರಾಪ್ತ ಕುಲದಲ್ಲಿಯೇ ತನ್ನತನವನ್ನು ಮನ್ನಿಸುತ್ತಾನೆ. ಆದರೆ ಕುಲದ ಅಪೇಕ್ಷೆಯಿಂದ ಉಚ್ಚನೀಚನೆಂದು ಮನ್ನಿಸುವುದು ಭ್ರಾಂತಿಯಿದೆ. ಉಚ್ಚಕುಲವುಳ್ಳವನೋರ್ವನು ನಿಂದ್ಯ ಕಾರ್ಯ ಮಾಡಿದರೆ ಅವನು ನೀಚನಾಗಿ ಹೋಗುವನು ಮತ್ತು ನೀಚಕುಲವುಳ್ಳವನೋರ್ವನು ಶ್ಲಾಘ್ಯಕಾರ್ಯ ಮಾಡಿದರೆ ಅವನು ಉಚ್ಚನಾಗಿ ಹೋಗುವನು. ಲೋಭಾದಿಗಳಿಂದ ಉಚ್ಚಕುಲವುಳ್ಳವರು ನೀಚಕುಲದವರ ಸೇವೆ ಮಾಡತೊಡಗುತ್ತಾರೆ.

ಕುಲವು ಎಷ್ಟು ಕಾಲದವರೆಗಿರುತ್ತದೆ ? ಪರ್ಯಾಯವು ಬಿಟ್ಟುಹೋದ ಮೇಲೆ ಕುಲದ ಬದಲಾವಣೆಯಾಗಿ ಹೋಗುತ್ತದೆ; ಆದುದರಿಂದ ಉಚ್ಚ-ನೀಚ ಕುಲದಿಂದ ತಮ್ಮನ್ನು ಉಚ್ಚ-ನೀಚನೆಂದು ಮನ್ನಿಸಿದ ಮೇಲೆ ಉಚ್ಚಕುಲವಂತನಿಗೆ ನೀಚವಾಗುವ ಭಯದ ಮತ್ತು ನೀಚಕುಲವಂತನಿಗೆ ಪ್ರಾಪ್ತವಾದ ನೀಚತನದ ದುಃಖವೇ ಇದೆ.

ಸಮ್ಯಗ್ದರ್ಶನ ಮೊದಲಾದವುಗಳಿಂದ ಉಚ್ಚ-ನೀಚ ಕುಲದಲ್ಲಿ ಹರ್ಷ-ವಿಷಾದಗಳನ್ನು ಮನ್ನಿಸದಿರುವುದು ಇದರ ನಿಜವಾದ ಉಪಾಯವಿದೆ. ಮತ್ತು ಅವುಗಳಿಂದಲೇ ಪುನಃ ಬದಲಾಗದಂಥ ಎಲ್ಲಕ್ಕಿಂತ ಉಚ್ಚವಾದ ಸಿದ್ಧ ಪದವನ್ನು ಪ್ರಾಪ್ತ ಮಾಡಿಕೊಂಡಾಗ ಎಲ್ಲ ದುಃಖಗಳು ದೂರವಾಗುತ್ತವೆ ಮತ್ತು ಸುಖಿಯಾಗುತ್ತಾನೆ.

ಈ ಪ್ರಕಾರ ಕರ್ಮೋದಯದ ಅಪೇಕ್ಷೆಯಿಂದ ಮಿಥ್ಯಾದರ್ಶನ ಮೊದಲಾದವುಗಳ ನಿಮಿತ್ತದಿಂದ ಸಂಸಾರದಲ್ಲಿ ದುಃಖವೇ ದುಃಖವು ಕಂಡುಬರುತ್ತದೆ, ಅದರ ವರ್ಣನೆ ಮಾಡಲಾಯಿತು.

## ಪರ್ಯಾಯದ ಅಪೇಕ್ಷೆಯಿಂದ :-

ಈಗ ಪರ್ಯಾಯಗಳ ಅಪೇಕ್ಷೆಯಿಂದ ಇದೇ ದುಃಖದ ವರ್ಣನೆ ಮಾಡುತ್ತಾರೆ.

**ಏಕೇಂದ್ರಿಯ ಜೀವಗಳ ದುಃಖ :-**

ಈ ಸಂಸಾರದಲ್ಲಿ ಅಧಿಕಕಾಲವಂತೂ ಏಕೇಂದ್ರಿಯ ಪರ್ಯಾಯದಲ್ಲಿಯೇ ಕಳೆಯುತ್ತದೆ. ಆದುದರಿಂದ ಅನಾದಿಯಿಂದಂತೂ ನಿತ್ಯನಿಗೋದದಲ್ಲಿ ಇರುವುದಾಗುತ್ತದೆ. ಪುನಃ ಅಲ್ಲಿಂದ ಹೊರಬರುವುದೆಂದರೆ ಒಲೆಯ ಮೇಲೆ ಬಾಣಲೆಯಲ್ಲಿ ಹುರಿಯುತ್ತಿರುವ ಕಡಲೆಗಳಲ್ಲಿನ ಒಂದು ಕಾಳು ಒಡೆಯದೆ ಎದ್ದು ಹೊರಬಿದ್ದಂತಿದೆ. ಹೀಗೆ ಅಲ್ಲಿಂದ ಹೊರಬಂದು ಇತರ ಪರ್ಯಾಯಗಳನ್ನು ಧಾರಣ ಮಾಡಿದರೂ ತ್ರಸದಲ್ಲಂತೂ ತೀರ ಕಡಿಮೆ ಕಾಲವೇ ಇರುತ್ತದೆ; ಏಕೇಂದ್ರಿಯದಲ್ಲಿಯೇ ಅಧಿಕ ಕಾಲವು ವ್ಯತೀತವಾಗುತ್ತದೆ.

ಅಲ್ಲಿ ಇತರ ನಿಗೋದದಲ್ಲಿ ಅಧಿಕಕಾಲ ಇರುವುದಾಗುತ್ತದೆ. ಮತ್ತು ಅದೆಷ್ಟೋ ಕಾಲದವರೆಗೆ ಪೃಥ್ವೀ, ಆಪ್, ತೇಜ, ವಾಯು ಮತ್ತು ಪ್ರತ್ಯೇಕ ವನಸ್ಪತಿಯಲ್ಲಿ ಇರುವುದಾಗುತ್ತದೆ. ನಿತ್ಯನಿಗೋದದಿಂದ ಹೊರಹೊರಟ ನಂತರ ತ್ರಸದಲ್ಲಿರುವ ಉತ್ಕೃಷ್ಟಕಾಲವೆಂದರೆ ಸ್ವಲ್ಪ ಹೆಚ್ಚು ಎರಡು ಸಾವಿರ ಸಾಗರವೇ ಇದೆ ಮತ್ತು ಏಕೇಂದ್ರಿಯದಲ್ಲಿರುವ ಉತ್ಕೃಷ್ಟಕಾಲವು ಅಸಂಖ್ಯಾತ ಪುದ್ಗಲ ಪರಾವರ್ತನ ಮಾತ್ರವಿದೆ, ಇನ್ನು ಪುದ್ಗಲ ಪರಾವರ್ತನದ ಕಾಲವೆಂದರೆ ಅದರ ಅನಂತದ ಭಾಗದಲ್ಲೂ ಅನಂತ ಸಾಗರಗಳಾಗುತ್ತವೆ. ಆದುದರಿಂದ ಈ ಸಂಸಾರಿಗೆ ಮುಖ್ಯವಾಗಿ ಏಕೇಂದ್ರಿಯ ಪರ್ಯಾಯದಲ್ಲಿಯೇ ಕಾಲವು ವ್ಯತೀತವಾಗುತ್ತದೆ.

ಏಕೇಂದ್ರಿಯಕ್ಕೆ ಜ್ಞಾನ-ದರ್ಶನದ ಶಕ್ತಿಯಂತೂ ಸ್ವಲ್ಪ ಮಾತ್ರವೇ ಇರುತ್ತದೆ. ಒಂದು ಸ್ಪರ್ಶನೇಂದ್ರಿಯದ ನಿಮಿತ್ತದಿಂದಾದ ಮತಿಜ್ಞಾನ ಮತ್ತು ಅದರ ನಿಮಿತ್ತದಿಂದಾದ ಶ್ರುತಜ್ಞಾನ ಹಾಗೂ ಸ್ಪರ್ಶನೇಂದ್ರಿಯ ಜನ್ಯ ಅಚಕ್ಷುದರ್ಶನ ಅವುಗಳಿಂದ ಶೀತ-ಉಷ್ಣಾದಿಗಳನ್ನು ಸ್ವಲ್ಪ ಮಾತ್ರ ತಿಳಿಯುತ್ತವೆ-ನೋಡುತ್ತವೆ. ಜ್ಞಾನಾವರಣ-ದರ್ಶನಾವರಣಗಳ ತೀವ್ರ ಉದಯವಿರುವುದರಿಂದ ಅಧಿಕ ಜ್ಞಾನ-ದರ್ಶನಗಳು ಕಂಡುಬರುವುದಿಲ್ಲ ಮತ್ತು ವಿಷಯಗಳ ಇಚ್ಛೆಯು ಕಂಡುಬರುವುದರಿಂದ ಅತ್ಯಂತ ದುಃಖಿಯಿವೆ. ಇನ್ನು ದರ್ಶನಮೋಹದ ಉದಯದಿಂದ ಮಿಥ್ಯಾದರ್ಶನವಿರುವುದರಿಂದ ಪರ್ಯಾಯಕ್ಕೇನೇ ತಮ್ಮ ರೂಪವೆಂದು ಶ್ರದ್ಧೆ ಮಾಡುತ್ತೇವೆ, ಬೇರೆ ವಿಚಾರ ಮಾಡುವ ಶಕ್ತಿಯೇ ಇರುವುದಿಲ್ಲ.

ಚಾರಿತ್ರಮೋಹದ ಉದಯದಿಂದ ತೀವ್ರ ಕ್ರೋಧಾದಿಗಳ-ಕಷಾಯರೂಪವಾಗಿ ಪರಿಣಮಿಸುತ್ತವೆ; ಏಕೆಂದರೆ ಕೇವಲೀ ಭಗವಂತರು ಅವಕ್ಕೆ ಕೃಷ್ಣ, ನೀಲ, ಕಾಪೋತವೆಂಬ ಈ ಮೂರು ಅಶುಭ ಲೇಶ್ಯೆಗಳನ್ನೇ ಹೇಳಿದ್ದಾರೆ ಮತ್ತು ಅವು ತೀವ್ರ ಕಷಾಯವಿದ್ದಮೇಲೇ ಇರುತ್ತವೆ. ಅಲ್ಲಿ ಕಷಾಯವಂತೂ ಅಧಿಕವಿದ್ದು ಶಕ್ತಿಯು ಎಲ್ಲ ಪ್ರಕಾರದಿಂದ ಅತ್ಯಂತ ಹೀನವಿರುವುದರಿಂದ ಅತ್ಯಂತ ದುಃಖಿಯಾಗುತ್ತಲಿವೆ, ಯಾವ ಉಪಾಯ ಮಾಡುವ ಸಾಧ್ಯತೆಯಿಲ್ಲ.

**ಪ್ರಶ್ನೆ :-** ಜ್ಞಾನವಂತೂ ಕಿಂಚಿತ್ ಮಾತ್ರವೇ ಇದೆಯೆಂದ ಮೇಲೆ ಅವೇನು ಕಷಾಯ ಮಾಡುತ್ತವೆ?

**ಉತ್ತರ :-** ಎಷ್ಟು ಜ್ಞಾನವಿರುತ್ತದೆ ಅಷ್ಟೇ ಕಷಾಯವಿರುತ್ತದೆಯೆಂಬ ಯಾವ ನಿಯಮವಂತೂ ಇಲ್ಲ, ಜ್ಞಾನವಂತೂ ಕ್ಷಯೋಪಶಮವಿರುವಷ್ಟು ಇರುತ್ತದೆ. ಹೇಗೆಂದರೆ ಓರ್ವ ಕುರುಡ-ಕಿವುಡ ಪುರುಷನಿಗೆ ಜ್ಞಾನವು ಅಲ್ಪವಿದ್ದರೂ ಕೂಡ ಕಷಾಯವು ಅಧಿಕವಿರುವುದು ಕಂಡು ಬರುತ್ತದೆ ಅದೇ ಪ್ರಕಾರ ಏಕೇಂದ್ರಿಯಗಳಿಗೆ ಜ್ಞಾನವು ಅಲ್ಪವಿದ್ದರೂ ಕೂಡ ಅಧಿಕ ಕಷಾಯವಿರುವುದನ್ನು ಮನ್ನಿಸಲಾಗಿದೆ.

ಕಷಾಯದ ಅನುಸಾರವಾಗಿ ಏನಾದರೂ ಉಪಾಯ ಮಾಡಿದಾಗ ಬಾಹ್ಯದಲ್ಲಿ ಕಷಾಯವು ಪ್ರಕಟವಾಗುತ್ತದೆ, ಆದರೆ ಅವು ಶಕ್ತಿಹೀನವಿರುವುದರಿಂದ ಯಾವ ಉಪಾಯವನ್ನೂ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ಅವುಗಳ ಕಷಾಯವು ಪ್ರಕಟವಾಗುವುದಿಲ್ಲ. ಹೇಗೆಂದರೆ ಓರ್ವ ಪುರುಷನು ಶಕ್ತಿಹೀನನಿದ್ದು ಅವನಿಗೆ ಯಾವುದೇ ಕಾರಣದಿಂದ ತೀವ್ರ ಕಷಾಯವಾಗಿದೆ, ಆದರೆ ಅವನು ಏನನ್ನೂ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ಅವನ ಕಷಾಯವು ಬಾಹ್ಯದಲ್ಲಿ ಪ್ರಕಟವಾಗುವುದಿಲ್ಲ, ಅವನು ಅತ್ಯಂತ ದುಃಖಿಯಿರುತ್ತಾನೆ; ಅದೇ ಪ್ರಕಾರ ಏಕೇಂದ್ರಿಯ ಜೀವಗಳು ಶಕ್ತಿಹೀನವಿರುತ್ತವೆ; ಅವಕ್ಕೆ ಯಾವುದೇ ಕಾರಣದಿಂದ ಕಷಾಯವಾಗುತ್ತದೆ, ಆದರೆ ಏನನ್ನೂ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ಅವುಗಳ ಕಷಾಯವು ಬಾಹ್ಯದಲ್ಲಿ ಪ್ರಕಟವಾಗುವುದಿಲ್ಲ, ಅವು ತಾವೇ ದುಃಖಿಯಾಗಿರುತ್ತವೆ.

ಕಷಾಯವು ಅಧಿಕವಿದ್ದು ಶಕ್ತಿಯು ಅಲ್ಪವಿರುವಲ್ಲಿ ದುಃಖವು ಅಧಿಕವಿರುತ್ತದೆ ಮತ್ತು ಹೇಗೆ-ಹೇಗೆ ಕಷಾಯವು ಕಡಿಮೆಯಾಗುತ್ತ ಹೋಗುತ್ತದೆ ಹಾಗೂ ಶಕ್ತಿಯು ವೃದ್ಧಿಸುತ್ತ ಹೋಗುತ್ತದೆ ಹಾಗೆ-ಹಾಗೆ ದುಃಖವು ಕಡಿಮೆಯಾಗುತ್ತದೆಯೆಂದು ತಿಳಿಯಬೇಕು. ಆದರೆ ಏಕೇಂದ್ರಿಯಗಳಿಗೆ ಕಷಾಯವು ಅಧಿಕವಿದ್ದು ಶಕ್ತಿಯು ಅಲ್ಪವಿರುವುದರಿಂದ ಏಕೇಂದ್ರಿಯ ಜೀವಗಳು ಅತ್ಯಂತ ದುಃಖಿಯಿರುತ್ತವೆ, ಅವುಗಳ ದುಃಖವನ್ನು ಅವೇ ಭೋಗಿಸುತ್ತವೆ ಮತ್ತು ಕೇವಲಿಗಳು ತಿಳಿಯುತ್ತಾರೆ. ಹೇಗೆಂದರೆ ಸನ್ನಿಪಾತವಾದ ರೋಗಿಯ ಜ್ಞಾನವು ಕಡಿಮೆಯಾಗಿ ಹೋಗುತ್ತದೆ, ಮತ್ತು ಬಾಹ್ಯಶಕ್ತಿಯ ಅಲ್ಪತೆಯಿಂದ ತನ್ನ ದುಃಖವನ್ನು ಪ್ರಕಟಪಡಿಸುವ ಸಾಧ್ಯತೆಯೂ ಇರುವುದಿಲ್ಲ, ಆದರೆ ಅವನು ಮಹಾದುಃಖಿಯಿದ್ದಾನೆ. ಅದೇ ಪ್ರಕಾರ ಏಕೇಂದ್ರಿಯದ ಜ್ಞಾನವಂತೂ ಅಲ್ಪವಿದ್ದು ಬಾಹ್ಯಶಕ್ತಿಹೀನತೆಯ ಕಾರಣದಿಂದ ತನ್ನ ದುಃಖವನ್ನು ಪ್ರಕಟ ಮಾಡುವ ಸಾಧ್ಯತೆಯೂ ಇರುವುದಿಲ್ಲ, ಆದರೆ ಮಹಾದುಃಖಿಯಿದೆ.

ಅದರಂತೆ ಅಂತರಾಯದ ತೀವ್ರ ಉದಯದಿಂದ ಅಪೇಕ್ಷಿಸಿದ್ದು ಬಹಳಷ್ಟು ಆಗದಿರುವುದರಿಂದಲೂ ದುಃಖಿಯೇ ಆಗಿರುತ್ತವೆ.

ಅಘಾತಿ ಕರ್ಮಗಳಲ್ಲಿ ವಿಶೇಷರೂಪದಿಂದ ಪಾಪಪ್ರಕೃತಿಗಳ ಉದಯವಿರುತ್ತದೆ; ಅಲ್ಲಿ ಅಸಾತಾ ವೇದನೀಯದ ಉದಯವಾದ ಮೇಲೆ ಅದರ ನಿಮಿತ್ತದಿಂದ ಮಹಾದುಃಖಿಯಾಗುತ್ತವೆ, ವನಸ್ಪತಿಯಿದೆ ಅದು ಗಾಳಿಯಿಂದ ಮುರಿದು ಬೀಳುತ್ತದೆ, ಶೀತೋಷ್ಣಗಳಿಂದ ಬಾಡಿಹೋಗುತ್ತದೆ, ನೀರಿನ ಅಭಾವದಿಂದ ಒಣಗಿ ಹೋಗುತ್ತದೆ, ಅಗ್ನಿಯಿಂದ ಸುಟ್ಟು ಹೋಗುತ್ತದೆ; ಅದನ್ನು ಮನುಷ್ಯನು ಛೇದಿಸುತ್ತಾನೆ, ಭೇದಿಸುತ್ತಾನೆ, ಮರ್ದಿಸುತ್ತಾನೆ, ತಿನ್ನುತ್ತಾನೆ, ತುಂಡರಿಸುತ್ತಾನೆ ಇವೇ ಮೊದಲಾದ ಅವಸ್ಥೆಗಳಾಗುತ್ತವೆ, ಅದೇ ಪ್ರಕಾರ ಯಥಾಸಂಭವವಾಗಿ ಪೃಥ್ವೀ ಮೊದಲಾದವುಗಳಲ್ಲಿ ಅವಸ್ಥೆಗಳಾಗುತ್ತವೆ, ಆ ಅವಸ್ಥೆಗಳಾಗುವುದರಿಂದ ಅವು ಮಹಾದುಃಖಿಯಾಗುತ್ತವೆ.

ಯಾವ ಪ್ರಕಾರ ಮನುಷ್ಯನ ಶರೀರದಲ್ಲಿ ಇಂಥ ಅವಸ್ಥೆಗಳಾದ ಮೇಲೆ ದುಃಖವಾಗುತ್ತದೆ ಅದೇ ಪ್ರಕಾರ ಅವಕ್ಕೆ ಆಗುತ್ತದೆ, ಏಕೆಂದರೆ ಇವುಗಳ ಜ್ಞಾನವು ಸ್ಪರ್ಶನೇಂದ್ರಿಯದಿಂದ ಆಗುತ್ತದೆ ಮತ್ತು ಅವಕ್ಕೆ ಸ್ಪರ್ಶನೇಂದ್ರಿಯವು ಇದ್ದೇ ಇದೆ, ಅದರ ಮುಖಾಂತರ ಅವನ್ನು ತಿಳಿದುಕೊಂಡು ಮೋಹವಶದಿಂದ ಅತ್ಯಂತ ವ್ಯಾಕುಲವಿರುತ್ತವೆ; ಆದರೆ

ಓಡಿಹೋಗುವ, ಹೋರಾಡುವ ಅಥವಾ ಕೂಗಿಕೊಳ್ಳುವ ಶಕ್ತಿಯು ಇಲ್ಲದಿರುವುದರಿಂದ ಅಜ್ಞಾನಿ ಜನರು ಅವುಗಳ ದುಃಖವನ್ನು ತಿಳಿಯುವುದಿಲ್ಲ, ಎಂದಾದರೊಮ್ಮೆ ಒಂದಿಷ್ಟು ಸಾತಾದ ಉದಯವಾಗುತ್ತದೆ, ಆದರೆ ಅದು ಬಲವಂತವಿರುವುದಿಲ್ಲ.

ಆಯುಕರ್ಮದಿಂದ ಈ ಏಕೇಂದ್ರಿಯ ಜೀವಗಳಲ್ಲಿ ಅಪರ್ಯಾಪ್ತವಿರುವವುಗಳಿಗಂತೂ ಪರ್ಯಾಯದ ಸ್ಥಿತಿಯು ಉಚ್ಛ್ವಾಸದ ಹದಿನೆಂಟರ ಒಂದು ಭಾಗಮಾತ್ರವೇ ಇದೆ, ಮತ್ತು ಪರ್ಯಾಪ್ತಗಳದ್ದು ಅಂತರ್ಮುಹೂರ್ತದಿಂದ ಹಿಡಿದು ಎಷ್ಟೋ ವರ್ಷಗಳವರೆಗಿದೆ. ಅಲ್ಲಿ ಆಯುಷ್ಯವು ಕಡಿಮೆಯಿರುವುದರಿಂದ ಜನ್ಮ-ಮರಣಗಳು ಆಗುತ್ತಲೇ ಇರುತ್ತವೆ, ಅದರಿಂದ ದುಃಖಿಯಿರುತ್ತದೆ.

ನಾಮಕರ್ಮದಲ್ಲಿ ತಿರ್ಯಂಚಗತಿ ಮೊದಲಾದ ಪಾಪಪ್ರಕೃತಿಗಳ ಉದಯವೇ ವಿಶೇಷರೂಪದಿಂದ ಕಂಡು ಬರುತ್ತದೆ, ಯಾವುದೇ ಹೀನ ಪುಣ್ಯ ಪ್ರಕೃತಿಯ ಉದಯವಿದ್ದರೆ ಅದರ ಬಲವಾನತೆಯಿಲ್ಲದಿರುವುದರಿಂದ ಅವುಗಳಿಂದಲೂ ಮೋಹದ ವಶದಿಂದ ದುಃಖಿಯಾಗಿರುತ್ತದೆ.

ಗೋತ್ರ ಕರ್ಮದಲ್ಲಿ ನೀಚಗೋತ್ರದ್ದೇ ಉದಯವಿರುವುದರಿಂದ ಮಹಂತತೆಯಿರುವುದಿಲ್ಲ, ಅದರಿಂದಲೂ ದುಃಖಿಯಾಗಿಯೇ ಇರುತ್ತವೆ.

ಈ ಪ್ರಕಾರ ಏಕೇಂದ್ರಿಯ ಜೀವಗಳು ಮಹಾದುಃಖಿಯಿವೆ ಮತ್ತು ಈ ಸಂಸಾರದಲ್ಲಿ ಯಾವ ಪ್ರಕಾರ ಪಾಷಾಣವು ಆಧಾರದ ಮೇಲೆ ಅಧಿಕಕಾಲವಿರುತ್ತದೆ, ನಿರಾಧಾರವಾದ ಆಕಾಶದಲ್ಲಂತೂ ಎಂದಾದರೊಮ್ಮೆ ಕಿಂಚಿತ್‌ಕಾಲಮಾತ್ರವಿರುತ್ತದೆ; ಅದೇ ಪ್ರಕಾರ ಜೀವವು ಏಕೇಂದ್ರಿಯ ಪರ್ಯಾಯದಲ್ಲಿ ಅಧಿಕಕಾಲವಿರುತ್ತದೆ, ಅನ್ಯಪರ್ಯಾಯಗಳಲ್ಲಂತೂ ಎಂದಾದರೊಮ್ಮೆ ಕಿಂಚಿತ್‌ಕಾಲಮಾತ್ರವಿರುತ್ತದೆ; ಆದುದರಿಂದ ಈ ಜೀವವು ಸಂಸಾರದಲ್ಲಿ ಮಹಾದುಃಖಿಯಿದೆ.

## ವಿಕಲತ್ರಯ ಹಾಗೂ ಅಸಂಜ್ಞೀ ಪಂಚೇಂದ್ರಿಯ ಜೀವಗಳ ದುಃಖ :-

ಜೀವವು ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಅಸಂಜ್ಞೀ ಪಂಚೇಂದ್ರಿಯ ಪರ್ಯಾಯಗಳನ್ನು ಧಾರಣ ಮಾಡಿದರೂ ಅಲ್ಲಿಯೂ ಏಕೇಂದ್ರಿಯದಂತೆಯೇ ದುಃಖವಿರುತ್ತದೆಯೆಂದು ತಿಳಿಯಬೇಕು. ಇಲ್ಲಿ ಕ್ರಮದಿಂದ ಒಂದೊಂದು ಇಂದ್ರಿಯಜನ್ಯ-ಜ್ಞಾನ ದರ್ಶನದ ಹಾಗೂ ಸ್ವಲ್ಪ ಶಕ್ತಿಯ ಅಧಿಕತೆಯಾಗಿರುವುದು ಮತ್ತು ಮಾತನಾಡುವ-ನಡೆಯುವ ಶಕ್ತಿಯಾಗಿರುವುದಿಷ್ಟೇ ವಿಶೇಷವಿದೆ. ಅಲ್ಲಿಕೂಡ ಕೆಲವು ಅಪರ್ಯಾಪ್ತವಿವೆ ಹಾಗೂ ಪರ್ಯಾಪ್ತಗಳೂ ಹೀನಶಕ್ತಿಯಧಾರಕವಿವೆ, ಚಿಕ್ಕ ಜೀವಗಳಿವೆ ಅವುಗಳ ಶಕ್ತಿಯು ಪ್ರಕಟವಾಗುವುದಿಲ್ಲ. ಮತ್ತು ಅದೆಷ್ಟೋ ಪರ್ಯಾಪ್ತಗಳು ಅಧಿಕಶಕ್ತಿಯ ಧಾರಕವಾಗಿ ದೊಡ್ಡ ಜೀವಗಳಿವೆ ಅವುಗಳ ಶಕ್ತಿಯು ಪ್ರಕಟವಾಗುತ್ತದೆ; ಆದುದರಿಂದ ಆ ಜೀವಗಳು ವಿಷಯಗಳ ಉಪಾಯಮಾಡುತ್ತವೆ, ದುಃಖದೂರಮಾಡುವ ಉಪಾಯ ಮಾಡುತ್ತವೆ. ಕ್ರೋಧಾದಿಗಳಿಂದ ಇರಿಯುವ, ಹೊಡೆಯುವ, ಹೋರಾಡುವ, ಮೋಸಮಾಡುವ, ಅನ್ನಾದಿಗಳನ್ನು ಸಂಗ್ರಹ ಮಾಡುವ, ಓಡುವ ಇತ್ಯಾದಿ ಕಾರ್ಯಮಾಡುತ್ತವೆ; ದುಃಖದಿಂದ ಚಡಪಡಿಸುವ, ಕಿರುಚಿಕೊಳ್ಳುವ ಇತ್ಯಾದಿ ಕ್ರಿಯೆಗಳನ್ನು ಮಾಡುತ್ತವೆ; ಅದರಿಂದ ಅವುಗಳ ದುಃಖವು ಸ್ವಲ್ಪ ಪ್ರಕಟವೂ ಆಗುತ್ತದೆ. ಈ ಪ್ರಕಾರ ಹೇನು, ಸಣ್ಣ

ಕ್ರಿಮಿ ಮೊದಲಾದ ಜೀವಗಳಂತೂ ಶೀತ, ಉಷ್ಣ, ಛೇದನ, ಭೇದನಾದಿಗಳಿಂದ ಹಾಗೂ ಹಸಿವು-ಬಾಯಾರಿಕೆ ಮೊದಲಾದವುಗಳಿಂದ ಅತ್ಯಂತ ದುಃಖಿಯಾಗಿ ಕಂಡುಬರುತ್ತವೆ. ಪ್ರತ್ಯಕ್ಷವಾಗಿ ಕಂಡು ಬರುತ್ತಿರುವುದರ ವಿಚಾರ ಮಾಡಿಕೊಳ್ಳಬೇಕು. ಇಲ್ಲಿ ಹೆಚ್ಚಿಗೇನು ಹೇಳುವುದು ?

ಈ ಪ್ರಕಾರ ದ್ವೀಂದ್ರಿಯ ಮೊದಲಾದ ಜೀವಗಳನ್ನು ಕೂಡ ಮಹಾದುಃಖಿಯೆಂದೇ ತಿಳಿಯಬೇಕು.

## ಸಂಜ್ಞೀ ಪಂಚೇಂದ್ರಿಯ ಜೀವಗಳ ದುಃಖ

**ನರಕಗತಿಯ ದುಃಖ :-**

ಸಂಜ್ಞೀ ಪಂಚೇಂದ್ರಿಯಗಳಲ್ಲಿ ನಾರಕಿ ಜೀವಗಳಿದ್ದು ಅವಂತೂ ಎಲ್ಲ ಪ್ರಕಾರದಿಂದ ಅತ್ಯಂತ ದುಃಖಿಯಿವೆ. ಅವುಗಳಲ್ಲಿ ಜ್ಞಾನಾದಿಗಳ ಶಕ್ತಿಯು ಒಂದಿಷ್ಟು ಇದ್ದರೂ ವಿಷಯಗಳ ಇಚ್ಛೆಯು ಅಧಿಕವಿದೆ ಮತ್ತು ಇಷ್ಟ ವಿಷಯಗಳ ಸಾಮಗ್ರಿಯು ಕಿಂಚಿತ್ ಮಾತ್ರವೂ ದೊರಕದಿರುವುದರಿಂದ ಆ ಶಕ್ತಿಯಿದ್ದರು ಕೂಡ ಅತ್ಯಂತ ದುಃಖಿಯಿವೆ. ಅವಕ್ಕೆ ಕ್ರೋಧಾದಿ ಕಷಾಯಗಳ ತೀವ್ರತೆಯು ಅಧಿಕವಾಗಿ ಕಂಡು ಬರುತ್ತದೆ; ಏಕೆಂದರೆ ಅವಕ್ಕೆ ಕೃಷ್ಣಾದಿ ಅಶುಭ ಲೇಶ್ಯೆಗಳೇ ಇವೆ.

ಅಲ್ಲಿ ಕ್ರೋಧ-ಮಾನಗಳಿಂದ ಪರಸ್ಪರರಲ್ಲಿ ದುಃಖಕೊಡುವ ಕಾರ್ಯವು ನಿರಂತರವಾಗಿ ಕಂಡುಬರುತ್ತದೆ. ಒಂದುವೇಳೆ ಪರಸ್ಪರರಲ್ಲಿ ಮಿತ್ರತ್ವವನ್ನು ಮಾಡಿದರೆ ದುಃಖವು ದೂರವಾಗುವುದು. ಮತ್ತು ಅನ್ಯರಿಗೆ ದುಃಖ ಕೊಡುವುದರಿಂದ ಅವರುಗಳ ಯಾವ ಕಾರ್ಯವೂ ಸಿದ್ಧಿಸುವುದಿಲ್ಲ, ಆದರೆ ಕ್ರೋಧ-ಮಾನಗಳ ಅತ್ಯಂತ ತೀವ್ರತೆಯು ಕಂಡುಬರುವುದರಿಂದ ಪರಸ್ಪರರಲ್ಲಿ ದುಃಖಕೊಡುವ ಬುದ್ಧಿಯೇ ಇರುತ್ತದೆ. ವಿಕ್ರಿಯದಿಂದ ಅನ್ಯರಿಗೆ ದುಃಖಕೊಡುವಂಥ ಶರೀರದ ಅವಯವಗಳನ್ನು ಮಾಡಿಕೊಳ್ಳುತ್ತಾರೆ ಹಾಗೂ ಶಸ್ತ್ರಾದಿಗಳನ್ನು ನಿರ್ಮಿಸುತ್ತಾರೆ. ಅವುಗಳಿಂದ ಇತರರಿಗೆ ಸ್ವಯಂ ಬಾಧೆ ಕೊಡುತ್ತಾರೆ ಮತ್ತು ತಮಗೆ ಬೇರೆ ಮತ್ತಾರೋ ಬಾಧೆಕೊಡುತ್ತಾರೆ, ಕಷಾಯವು ಎಂದೂ ಉಪಶಾಂತವಾಗುವುದೇ ಇಲ್ಲ. ಮತ್ತು ಅವರಲ್ಲಿ ಮಾಯೆ-ಲೋಭಗಳ ತೀವ್ರತೆಯೂ ಅಧಿಕವಾಗಿರುತ್ತದೆ, ಆದರೆ ಅಲ್ಲಿ ಯಾವ ಇಷ್ಟ ಸಾಮಗ್ರಿಯು ಕಂಡುಬಾರದಿರುವುದರಿಂದ ಮತ್ತು ಆ ಕಷಾಯಗಳ ಕಾರ್ಯವನ್ನು ಪ್ರಕಟಪಡಿಸುವ ಸಾಧ್ಯತೆಯಿಲ್ಲದಿರುವುದರಿಂದ ಅಂತರಂಗದಲ್ಲಿ ಅತ್ಯಂತ ದುಃಖಿಯಾಗುತ್ತಾರೆ. ಮತ್ತು ಎಂದಾದರೊಮ್ಮೆ ಒಂದಿಷ್ಟು ಯಾವುದಾದರೂ ಪ್ರಯೋಜನಪಡೆದು ಅವರುಗಳ ಕಾರ್ಯವೂ ಆಗುತ್ತದೆ.

ಅದರಂತೆ ಹಾಸ್ಯ-ರತಿಕಷಾಯಗಳಿದ್ದರೂ ಕೂಡ ಬಾಹ್ಯದಲ್ಲಿ ನಿಮಿತ್ತಗಳಿಲ್ಲದಿರುವುದರಿಂದ ಪ್ರಕಟ ವಾಗುವುದಿಲ್ಲ, ಎಂದಾದರೊಮ್ಮೆ ಯಾವುದೇ ಕಾರಣದಿಂದ ಒಂದಿಷ್ಟು ಪ್ರಕಟವಾಗುತ್ತವೆ. ಅಲ್ಲದೆ ಅರತಿ-ಶೋಕ-ಭಯ ಜುಗುಪ್ಸೆಗಳ ಬಾಹ್ಯಕಾರಣಗಳು ಆಗುತ್ತಿರುವುದರಿಂದ ಆ ಕಷಾಯಗಳು ತೀವ್ರವಾಗಿ ಪ್ರಕಟವಾಗುತ್ತವೆ. ಮತ್ತು ವೇದಗಳಲ್ಲಿ ನಪುಂಸಕವೇದವಿರುವುದರಿಂದ ಇಚ್ಛೆಯಂತೂ ಅಧಿಕವಿದ್ದು ಸ್ತ್ರೀ-ಪುರುಷರೊಡನೆ ಕ್ರೀಡೆ ಮಾಡುವ ನಿಮಿತ್ತವಿಲ್ಲದಿರುವುದರಿಂದ ತುಂಬ ಬಾಧೆಗೊಳಗಾಗಿರುತ್ತಾರೆ.

ಈ ಪ್ರಕಾರ ಕಷಾಯಗಳಿಂದ ಅತ್ಯಂತ ದುಃಖಿಯಾಗಿರುತ್ತಾರೆ.

ವೇದನೀಯದಲ್ಲಿ ಅಸಾತಾದ ಉದಯವೇ ಇರುವುದರಿಂದ ಅಲ್ಲಿ ಅನೇಕ ವೇದಗಳ ನಿಮಿತ್ತಗಳಿದ್ದು

ಶರೀರದಲ್ಲಿ ಕುಷ್ಟ, ದಮ್ಮು, ಶ್ವಾಸ ಮೊದಲಾದ ಅನೇಕ ರೋಗಗಳು ಯುಗಪತ್ ಕಂಡು ಬರುತ್ತವೆ ಮತ್ತು ಕ್ಷುಧೆ-ತೃಷೆಗಳಂತೂ ಎಲ್ಲವನ್ನು ಏಕಕಾಲಕ್ಕೆ ತಿನ್ನಬೇಕು-ಕುಡಿಯಬೇಕೆನ್ನುವಷ್ಟಿರುತ್ತವೆ, ಆದರೆ ಅಲ್ಲಿಯ ಮಣ್ಣಿನಿಂದಾದ ಊಟವೇ ದೊರಕುತ್ತದೆ. ಆ ಮಣ್ಣು ಕೂಡ ಹೇಗಿರುತ್ತದೆಯೆಂದರೆ ಒಂದು ವೇಳೆ ಅದು ಇಲ್ಲಿ ಬಂದು ಬಿದ್ದರೆ ಅದರ ದುರ್ಗಂಧದಿಂದ ಅದೆಷ್ಟೋ ಹರದಾರಿಗಳವರೆಗಿನ ಮನುಷ್ಯರು ಸತ್ತು ಹೋಗುತ್ತಾರೆ. ಮತ್ತು ಅಲ್ಲಿನ ಶೀತ-ಉಷ್ಣಗಳು ಒಂದು ಲಕ್ಷಯೋಜನದ ಕಬ್ಬಿಣ ಗುಂಡಿದ್ದರೂ ಅದನ್ನು ಭಸ್ಮಮಾಡಿ ಬಿಡುವಂತಿರುತ್ತವೆ. ಒಂದೆಡೆ ಶೀತವಿದ್ದರೆ ಒಂದೆಡೆ ಉಷ್ಣವಿದೆ. ಅಲ್ಲಿಯ ನೆಲವು ಶಸ್ತ್ರಗಳಿಗಿಂತಲೂ ತೀರ ತೀಕ್ಷ್ಣತರವಾದ ಮುಳ್ಳುಗಳಿಂದ ಕೂಡಿದೆ. ಅಲ್ಲಿಯ ವನದಲ್ಲಿನ ಮರಗಳು ಶಸ್ತ್ರದ ಧಾರೆಯಂತಿರುವ ಎಲೆಗಳಿಂದ ಯುಕ್ತವಿವೆ ಅಲ್ಲಿಯ ನದಿಯು ಅದರ ಸ್ಪರ್ಶವಾದೊಡನೆ ಶರೀರವು ತುಂಡು-ತುಂಡಾಗಿ ಹೋಗುವಂಥ ನೀರಿನಿಂದ ಯುಕ್ತವಿದೆ. ಅಲ್ಲಿಯ ಗಾಳಿಯು ಶರೀರವನ್ನು ದಗ್ಧಮಾಡಿಬಿಡುವಷ್ಟು ಪ್ರಚಂಡವಾಗಿರುತ್ತದೆ. ಮತ್ತು ನಾರಕರು ಒಬ್ಬರು ಇನ್ನೊಬ್ಬರಿಗೆ ಅನೇಕ ಪ್ರಕಾರದಿಂದ ದುಃಖ ಕೊಡುತ್ತಾರೆ, ಗಾಣದ ದಿಂಡಿನಲ್ಲಿ ಹಾಕಿ ಹಿಂಡುತ್ತಾರೆ, ತುಂಡು-ತುಂಡು ಮಾಡಿ ಎಸೆಯುತ್ತಾರೆ, ದೊಡ್ಡ ಪಾತ್ರೆಯಲ್ಲಿ ಹಾಕಿ ಕುದಿಸುತ್ತಾರೆ, ಚಾಟಿಯಿಂದ ಹೊಡೆಯುತ್ತಾರೆ, ತಪ್ತ ಲೋಹಾದಿಗಳ ಸ್ಪರ್ಶ ಮಾಡಿಸುತ್ತಾರೆ. ಇವೇ ಮೊದಲಾದ ಬಾಧೆ ಕೊಡುತ್ತಾರೆ. ಮೂರನೆಯ ನರಕದವರೆಗೆ ಅಸುರಕುಮಾರರು ಹೋಗುತ್ತಾರೆ. ಅವರು ಸ್ವಯಂಬಾಧೆ ಕೊಡುತ್ತಾರೆ ಮತ್ತು ಪರಸ್ಪರರಲ್ಲಿ ಕದನ ಹಚ್ಚುತ್ತಾರೆ. ಇಂಥ ವೇದನೆಯಾದರೂ ಕೂಡ ಶರೀರದ ವಿಯೋಗವಾಗುವುದಿಲ್ಲ, ಪಾರಜದ ಹಾಗೆ ತುಂಡು-ತುಂಡಾಗಿ ಹೋದರೂ ಕೂಡ ಮತ್ತೆ ಕೂಡಿಕೊಳ್ಳುತ್ತದೆ. ಹೀಗೆ ಭೀಕರ ಬಾಧೆಯಿದೆ.

ಸಾತಾದ ನಿಮಿತ್ತವಂತೂ ಸ್ವಲ್ಪವೂ ಇರುವುದಿಲ್ಲ. ಎಂದಾದರೊಮ್ಮೆ ಕೆಲವಂಶದಲ್ಲಿ ಯಾವನೋ ಓರ್ವನಿಗೆ ತನ್ನ ಮಾನ್ಯತೆಯಿಂದ ಯಾವುದೇ ಕಾರಣದ ಅಪೇಕ್ಷೆಯಿಂದ ಸಾತಾದ ಉದಯವಾದರೆ ಅದು ಬಲವಂತವಿರುವುದಿಲ್ಲ, ಅಲ್ಲಿ ಆಯುಷ್ಯವು ಅಧಿಕವಿರುತ್ತದೆ. ಜಘನ್ಯ ಆಯುಷ್ಯವು ಹತ್ತು ಸಾವಿರ ವರ್ಷಗಳಿದ್ದರೆ ಉತ್ಕೃಷ್ಟ ಆಯುಷ್ಯವು ಮೂವತ್ತುಮೂರು ಸಾಗರವಿರುತ್ತದೆ. ಅಷ್ಟು ಕಾಲದವರೆಗೆ ಅಲ್ಲಿ ಇಂಥ ದುಃಖವನ್ನು ಸಹಿಸಬೇಕಾಗುತ್ತದೆ. ಅಲ್ಲಿ ನಾಮಕರ್ಮದ ಎಲ್ಲ ಪಾಪ ಪ್ರಕೃತಿಗಳದ್ದೇ ಉದಯವಿದ್ದು ಒಂದು ಕೂಡ ಪುಣ್ಯ ಪ್ರಕೃತಿಯ ಉದಯವಿಲ್ಲದಿರುವುದರಿಂದ ಅತ್ಯಂತ ದುಃಖಿಯಾಗಿರುತ್ತಾರೆ. ಇನ್ನು ಗೋತ್ರದಲ್ಲಿ ನೀಚ ಗೋತ್ರದ್ದೇ ಉದಯವಿರುವುದರಿಂದ ಮಹಂತತೆಯಾಗದಿರುವುದರಿಂದ ದುಃಖಿಗಳಾಗಿಯೇ ಇದ್ದಾರೆ. ಈ ಪ್ರಕಾರ ನರಕಗತಿಯಲ್ಲಿ ಅತ್ಯಂತ ದುಃಖವಿದೆಯೆಂದು ತಿಳಿಯಬೇಕು.

**ತಿರ್ಯಂಚಗತಿಯ ದುಃಖ :-**

ತಿರ್ಯಂಚಗತಿಯಲ್ಲಿ ಲಬ್ಧಿ-ಅಪರ್ಯಾಪ್ತ ಜೀವಗಳು ಅಧಿಕವಿವೆ. ಅವುಗಳಿಗಂತೂ ಉಚ್ಛ್ವಾಸದ ಹದಿನೆಂಟನೆಯ ಭಾಗಮಾತ್ರದಷ್ಟು ಆಯುಷ್ಯವಿದೆ, ಮತ್ತು ಅದೆಷ್ಟೋ ಚಿಕ್ಕ ಜೀವಗಳು ಪರ್ಯಾಪ್ತಗಳಿದ್ದರೂ ಕೂಡ ಅವುಗಳ ಶಕ್ತಿಯು ಪ್ರಕಟವಾಗಿ ಭಾಸವಾಗುವುದಿಲ್ಲ. ಅವುಗಳ ದುಃಖವನ್ನು ಏಕೇಂದ್ರಿಯಗಳಂತೆಯೇ ಇರುವುದೆಂದು ತಿಳಿಯಬೇಕು; ಜ್ಞಾನಾದಿಗಳ ವಿಶೇಷವಿರುವುದನ್ನು ವಿಶೇಷವೆಂದು ತಿಳಿಯಬೇಕು. ಇನ್ನು ಅದೆಷ್ಟೋ ದೊಡ್ಡ ಪರ್ಯಾಪ್ತ ಜೀವಗಳು ಸಮ್ಮೂರ್ಛನವಿವೆ, ಅದೆಷ್ಟೋ ಗರ್ಭಜವಿವೆ, ಅವುಗಳಲ್ಲಿ ಜ್ಞಾನಾದಿಗಳು

ಪ್ರಕಟವಾದರೂ ಅವು ವಿಷಯಗಳ ಇಚ್ಛೆಯಿಂದ ವ್ಯಾಕುಲವಾಗಿವೆ, ಅವುಗಳಲ್ಲಿ ಬಹಳಷ್ಟುವುಗಳಿಗಂತೂ ಇಷ್ಟವಿಷಯದ ಪ್ರಾಪ್ತಿಯಿಲ್ಲ; ಕೆಲವಕ್ಕೆ ಎಂದಾದರೊಮ್ಮೆ ಕಿಂಚಿತ್ ಆಗುತ್ತದೆ.

ಮಿಥ್ಯಾತ್ವಭಾವದಿಂದ ಅತತ್ತ್ವ ಶ್ರದ್ಧೆಯುಳ್ಳವುಗಳೇ ಆಗುತ್ತಲಿವೆ ಮತ್ತು ಮುಖ್ಯವಾಗಿ ತೀವ್ರಕಷಾಯವೇ ಕಂಡು ಬರುತ್ತದೆ. ಕ್ರೋಧ-ಮಾನಗಳಿಂದ ಪರಸ್ಪರದಲ್ಲಿ ಹೋರಾಡುತ್ತವೆ, ಭಕ್ಷಣ ಮಾಡುತ್ತವೆ, ದುಃಖ ಕೊಡುತ್ತವೆ; ಮಾಯೆ-ಲೋಭಗಳಿಂದ ಮೋಸ ಮಾಡುತ್ತವೆ, ವಸ್ತುಗಳನ್ನು ಅಪೇಕ್ಷಿಸುತ್ತವೆ; ಹಾಸ್ಯ ಮೊದಲಾದವುಗಳಿಂದ ಆ ಕಷಾಯಗಳ ಕಾರ್ಯಗಳಲ್ಲಿ ಪ್ರವರ್ತಿಸುತ್ತವೆ. ಮತ್ತು ಎಂದಾದರೊಮ್ಮೆ ಯಾವುದಾದರೊಂದಕ್ಕೆ ಮಂದಕಷಾಯ ವಾಗುತ್ತದೆ, ಆದರೆ ಅತ್ಯಲ್ಪ ಜೀವಗಳಿಗೆ ಆಗುತ್ತಿರುವುದರಿಂದ ಅದರ ಮುಖ್ಯತೆಯಿಲ್ಲ.

ವೇದನೀಯದಲ್ಲಿ ಮುಖ್ಯವಾಗಿ ಅಸಾತಾದ ಉದಯವಿರುತ್ತದೆ. ಅದರಿಂದ ಕಾಯಿಲೆ, ಬಾಧೆ, ಕ್ಷುಧೆ, ತೃಷೆ, ಛೇದನ, ಭೇದನ, ಅಧಿಕ ಭಾರಹೊರುವುದು, ಶೀತ, ಉಷ್ಣ, ಅಂಗವಿಚ್ಛೇದ ಮೊದಲಾದ ಅವಸ್ಥೆಗಳಾಗುತ್ತವೆ. ಅದರಿಂದ ದುಃಖಿಯಾಗುತ್ತಿರುವುದು ಪ್ರತ್ಯಕ್ಷವಾಗಿ ಕಂಡುಬರುತ್ತಿರುವುದರಿಂದ ಹೆಚ್ಚು ಹೇಳಲಾಗಿಲ್ಲ. ಎಂದಾದರೊಮ್ಮೆ ಯಾವುದಾದರೊಂದಕ್ಕೆ ಒಂದಿಷ್ಟು ಸಾತಾದ ಉದಯವಿದ್ದರೂ ಅತ್ಯಲ್ಪ ಜೀವಗಳಿಗಿರುತ್ತದೆ ಮುಖ್ಯವಾಗಿ ಇಲ್ಲ. ಆಯುಷ್ಯವು ಅಂತರ್ಮುಹೂರ್ತದಿಂದ ಹಿಡಿದು ಕೋಟಿವರ್ಷಗಳವರೆಗೆ ಇರುತ್ತದೆ. ಅಲ್ಲಿ ಅಧಿಕ ಜೀವಗಳು ಅಲ್ಪಾಯುಧಾರಕವಿರುವುದರಿಂದ ಜನ್ಮ-ಮರಣಗಳ ದುಃಖ ಪಡೆಯುತ್ತವೆ. ಭೋಗಭೂಮಿಯ ತಿರ್ಯಂಚಗಳಿಗೆ ಅಧಿಕ ಆಯುಷ್ಯವಿರುತ್ತದೆ ಮತ್ತು ಅವಕ್ಕೆ ಸಾತಾದ ಉದಯವೂ ಇರುತ್ತದೆ, ಆದರೆ ಆ ಜೀವಗಳು ಅತ್ಯಲ್ಪವಿವೆ. ಮುಖ್ಯವಾಗಿ ನಾಮಕರ್ಮದ ತಿರ್ಯಂಚಗತಿ ಮೊದಲಾದ ಪಾಪಪ್ರಕೃತಿಗಳ ಉದಯವೇ ಇರುತ್ತದೆ. ಎಂದಾದರೊಮ್ಮೆ ಯಾವುದಾದರೊಂದಕ್ಕೆ ಪುಣ್ಯಪ್ರಕೃತಿಗಳದ್ದೂ ಉದಯವಿರುತ್ತದೆ, ಆದರೆ ಕೆಲವೇ ಜೀವಿಗಳಿಗೆ ಅತ್ಯಲ್ಪವಿರುತ್ತದೆ ಮುಖ್ಯವಾಗಿ ಇಲ್ಲ, ಗೋತ್ರದಲ್ಲಿ ನೀಚಗೋತ್ರದ್ದೇ ಉದಯವಿರುವುದರಿಂದ ಕೀಳು ಆಗುತ್ತಲಿವೆ. ಈ ಪ್ರಕಾರ ತಿರ್ಯಂಚಗತಿಯಲ್ಲಿ ಮಹಾದುಃಖವಿದೆಯೆಂದು ತಿಳಿಯಬೇಕು.

## ಮನುಷ್ಯಗತಿಯ ದುಃಖ :-

ಮನುಷ್ಯಗತಿಯಲ್ಲಿ ಅಸಂಖ್ಯಾತ ಜೀವಗಳಂತೂ ಲಬ್ಧಿ ಅಪರ್ಯಾಪ್ತಕವಿದ್ದು ಅವು ಸಮ್ಮೂರ್ಚ್ಛನವೇ ಇವೆ, ಅವುಗಳ ಆಯುಷ್ಯವಂತೂ ಉಚ್ಛ್ವಾಸದ ಹದಿನೆಂಟನೆಯ ಭಾಗಮಾತ್ರವಿದೆ. ಮತ್ತು ಅದೆಷ್ಟೋ ಜೀವಗಳು ಗರ್ಭದಲ್ಲಿ ಬಂದು ಸ್ವಲ್ಪ ಕಾಲದಲ್ಲಿಯೇ ಮರಣಹೊಂದುತ್ತವೆ, ಅವುಗಳ ಶಕ್ತಿಯಂತೂ ಪ್ರಕಟವಾಗಿ ಭಾಸವಾಗುವುದಿಲ್ಲ; ಅವುಗಳ ದುಃಖವು ಏಕೇಂದ್ರಿಯಗಳ ಹಾಗೆಂದು ತಿಳಿಯಬೇಕು. ವಿಶೇಷವಿರುವುದನ್ನು ವಿಶೇಷವಾಗಿ ತಿಳಿಯಬೇಕು.

ಗರ್ಭಜಗಳು ಕೆಲಕಾಲದವರೆಗೆ ಗರ್ಭದಲ್ಲಿದ್ದುಕೊಂಡು ಅನಂತರ ಹೊರಗೆ ಬರುವುದಾಗುತ್ತದೆ. ಅವುಗಳ ದುಃಖದ ವರ್ಣನೆಯನ್ನು ಕರ್ಮದ ಅಪೇಕ್ಷೆಯಿಂದ ಮೊದಲು ಮಾಡಿದ ಹಾಗೆ ತಿಳಿಯಬೇಕು. ಆ ಎಲ್ಲ ವರ್ಣನೆಯು ಗರ್ಭಜ ಮನುಷ್ಯರಿಗೆ ಸಂಭವಿಸುತ್ತದೆ. ಅಥವಾ ತಿರ್ಯಂಚಗಳ ವರ್ಣನೆ ಮಾಡಿದೆ ಆ ಪ್ರಕಾರ ತಿಳಿಯಬೇಕು.

ವಿಶೇಷವೇನೆಂದರೆ ಇಲ್ಲಿ ಕೆಲವೊಂದು ಶಕ್ತಿವಿಶೇಷತೆಯು ಕಂಡು ಬರುತ್ತದೆ ಮತ್ತು ದೊರೆ ಮೊದಲಾದವರಿಗೆ ವಿಶೇಷವಾಗಿ ಸಾತಾದ ಉದಯವಿರುತ್ತದೆ ಹಾಗೂ ಕ್ಷತ್ರಿಯ ಮೊದಲಾದವರಿಗೆ ಉಚ್ಚಗೋತ್ರದ್ದೇ ಉದಯವಿರುತ್ತದೆ. ಅದರಂತೆ ಧನ-ಕುಟುಂಬಾದಿಗಳ ನಿಮಿತ್ತವು ವಿಶೇಷವಾಗಿ ಕಂಡುಬರುತ್ತದೆ. ಇವೇ ಮೊದಲಾದ ವಿಶೇಷಗಳನ್ನು ತಿಳಿಯಬೇಕು.

ಅಥವಾ ಗರ್ಭ ಮೊದಲಾದ ಅವಸ್ಥೆಗಳ ದುಃಖವು ಪ್ರತ್ಯಕ್ಷವಾಗಿ ಭಾಸವಾಗುತ್ತದೆ. ಯಾವ ಪ್ರಕಾರ ಮಲದಲ್ಲಿ ಕ್ರಿಮಿಗಳು ಉತ್ಪನ್ನವಾಗುತ್ತವೆ ಅದೇ ಪ್ರಕಾರ ಗರ್ಭದಲ್ಲಿ ಶುಕ್ರ-ಶೋಣಿತದ ಬಿಂದುಗಳನ್ನು ತನ್ನ ಶರೀರರೂಪವನ್ನಾಗಿ ಮಾಡಿಕೊಂಡು ಜೀವವು ಉತ್ಪನ್ನವಾಗುತ್ತದೆ. ಅನಂತರ ಅಲ್ಲಿ ಕ್ರಮದಿಂದ ಜ್ಞಾನಾದಿಗಳ ಹಾಗೂ ಶರೀರದ ವೃದ್ಧಿಯಾಗುತ್ತದೆ. ಗರ್ಭದ ದುಃಖವು ಅತಿಶಯವಿದೆ. ಸಂಕುಚಿತರೂಪದಿಂದ ಅಧೋಮುಖವಾಗಿ ಕ್ಷುಧೆ-ತೃಷಾದಿಗಳೊಡನೆ ಅಲ್ಲಿಯ ಕಾಲವನ್ನು ಪೂರ್ಣಮಾಡುತ್ತದೆ. ಹೊರಗೆ ಬರುವಾಗ, ಬಾಲ್ಯಾವಸ್ಥೆಯಲ್ಲಿ ಅತ್ಯಂತ ದುಃಖವಾಗುತ್ತದೆ. ಬಾಲ್ಯಾವಸ್ಥೆಯಲ್ಲಿ ದುಃಖವು ಕಡಿಮೆಯಿರುತ್ತದೆಯೆಂದು ಕೆಲವರು ಹೇಳುತ್ತಾರೆ, ಆದರೆ ನಿಜವಾಗಿ ಹಾಗಿಲ್ಲ, ಶಕ್ತಿಯು ಅಲ್ಪವಿರುವುದರಿಂದ ಅದು ವ್ಯಕ್ತವಾಗುವುದಿಲ್ಲ. ಅನಂತರದಲ್ಲಿ ವ್ಯಾಪಾರ ಮೊದಲಾದ ಹಾಗೂ ವಿಷಯೇಚ್ಛೆ ಮೊದಲಾದ ದುಃಖಗಳ ಪ್ರಕಟತೆಯಾಗುತ್ತದೆ. ಇಷ್ಟಾನಿಷ್ಟಜನ್ಯ ಆಕುಲತೆಯು ಅಖಂಡವಾಗಿರುತ್ತದೆ. ಅನಂತರ ವೃದ್ಧನಾದಾಗ ಶಕ್ತಿಹೀನನಾಗುತ್ತಾನೆ ಮತ್ತು ಅತ್ಯಂತ ದುಃಖಿಯಾಗುತ್ತಾನೆ. ಈ ದುಃಖಗಳು ಪ್ರತ್ಯಕ್ಷವಾಗುತ್ತಿರುವುದು ಕಂಡುಬರುತ್ತವೆ.

ನಾವು ಹೆಚ್ಚಿಗೇನು ಹೇಳುವುದು ? ಪ್ರತ್ಯಕ್ಷ ಭಾಸವಾಗದವನು ಹೇಳಿದುದನ್ನು ಹೇಗೆ ಕೇಳುವನು ? ಎಂದಾದರೊಮ್ಮೆ ಯಾವನೋ ಒಬ್ಬನಿಗೆ ಸಾತಾದ ಉದಯವಾದರೆ ಅದು ಆಕುಲತಾಮಯವಿರುತ್ತದೆ ಮತ್ತು ತೀರ್ಥಂಕರ ಮೊದಲಾದ ಪದಗಳು ಮೋಕ್ಷಮಾರ್ಗವನ್ನು ಪ್ರಾಪ್ತಮಾಡಿಕೊಂಡಲ್ಲದೆ ದೊರಕುವುದಿಲ್ಲ. ಹೀಗೆ ಮನುಷ್ಯ ಪರ್ಯಾಯದಲ್ಲಿ ಕೂಡ ದುಃಖವೇ ಇದೆ.

**ಒಂದು ಮನುಷ್ಯ ಪರ್ಯಾಯದಲ್ಲಿ ಯಾವನಾದರೊಬ್ಬನು ತನ್ನ ಒಳಿತಾಗುವ ಉಪಾಯ ಮಾಡಿದರೆ ಆಗುವ ಸಾಧ್ಯತೆಯಿದೆ.** ಯಾವ ಪ್ರಕಾರ ಒರಟು ಕಬ್ಬಿನ ಮೂಲ ಮತ್ತು ಅದರ ಮೇಲಿನ ನೀರಸ ಭಾಗವಂತೂ ರಸ ಹೀರಲು ಯೋಗ್ಯವೇ ಇಲ್ಲ ಮತ್ತು ಮಧ್ಯದ ಗಣಿಕೆಗಳು ಹುಳುಕಿದ್ದರೆ ಅವನ್ನೂ ಚೀಪಲಾಗುವುದಿಲ್ಲ ಯಾವನೋ ಸ್ವಾದದ ಲೋಭಿಯು ಅವನ್ನು ಹಾಳು ಮಾಡುತ್ತಿದ್ದರೆ ಮಾಡಲಿ; ಆದರೆ ಒಂದು ವೇಳೆ ಅವನ್ನು ಬಿತ್ತಿ ಬಿಟ್ಟರೆ ಅವುಗಳಿಂದ ಬಹಳಷ್ಟು ಕಬ್ಬುಗಳಾಗುವವು, ಮತ್ತು ಅವುಗಳ ಸ್ವಾದ ಕೂಡ ತುಂಬ ಸಿಹಿಯಾಗಿ ಬರುತ್ತದೆ. ಅದೇ ಪ್ರಕಾರ ಮನುಷ್ಯ ಪರ್ಯಾಯದ ಬಾಲ್ಯ-ವೃದ್ಧತ್ವಗಳಂತೂ ಸುಖಯೋಗ್ಯವಿಲ್ಲ, ಮತ್ತು ಮಧ್ಯದ ಅವಸ್ಥೆಯು ರೋಗ-ಕ್ಲೇಶಾದಿಗಳಿಂದ ಯುಕ್ತವಿದ್ದರೆ ಆಗ ಕೂಡ ಸುಖವಾಗುವ ಸಾಧ್ಯತೆಯಿಲ್ಲ; ಯಾವನೋ ಓರ್ವ ವಿಷಯ ಸುಖದ ಲೋಭಿಯು ಅದನ್ನು ಹಾಳು ಮಾಡುತ್ತಿದ್ದರೆ ಮಾಡಲಿ; ಆದರೆ ಒಂದು ವೇಳೆ ಅದನ್ನು ಧರ್ಮಸಾಧನೆಯಲ್ಲಿ ತೊಡಗಿಸಿದರೆ ತುಂಬ ಉಚ್ಚವಾದ ಪದವನ್ನು ಪಡೆಯುವನು, ಅಲ್ಲಿ ಸುಖವು ಅಧಿಕವಿದ್ದು ನಿರಾಕುಲತೆಯು ಕಂಡುಬರುತ್ತದೆ. ಆದುದರಿಂದ ಇಲ್ಲಿ ತಮ್ಮ ಹಿತವನ್ನು ಸಾಧಿಸಬೇಕು, ಸುಖವಾಗುವುದೆಂಬ ಭ್ರಮೆಯಿಂದ ವ್ಯರ್ಥಕಳೆಯಬಾರದು.

**ದೇವಗತಿಯ ದುಃಖ :-**

ದೇವಪರ್ಯಾಯದಲ್ಲಿ ಜ್ಞಾನಾದಿಗಳ ಶಕ್ತಿಯು ಉಳಿದ ಜೀವಗಳಿಗಿಂತ ಸ್ವಲ್ಪ ವಿಶೇಷವಿರುತ್ತದೆ. ಅವರು ಮಿಥ್ಯಾತ್ವದಿಂದ ಅತತ್ತ್ವದಲ್ಲಿ ಶ್ರದ್ಧೆಯುಳ್ಳವರಾಗುತ್ತಿದ್ದಾರೆ. ಅವರಿಗೆ ಕಷಾಯಗಳು ಸ್ವಲ್ಪ ಮಂದವಿವೆ. ಭವನವಾಸಿ, ವ್ಯಂತರ, ಜ್ಯೋತಿಷ್ಕರ ಕಷಾಯಗಳು ಅಧಿಕ ಮಂದವಿಲ್ಲ ಮತ್ತು ಅವರ ಉಪಯೋಗವು ಅಧಿಕ ಚಂಚಲವಿದ್ದು ಸ್ವಲ್ಪ ಶಕ್ತಿಯೂ ಇರುತ್ತದೆ ಅದರಿಂದ ಕಷಾಯಗಳ ಕಾರ್ಯಗಳಲ್ಲಿಯೇ ಪ್ರವರ್ತಿಸುತ್ತಾರೆ; ಕೌತೂಹಲ, ವಿಷಯ ಮೊದಲಾದ ಕಾರ್ಯಗಳಲ್ಲಿ ತೊಡಗುತ್ತಿದ್ದಾರೆ ಮತ್ತು ಆ ಆಕುಲತೆಯಿಂದ ದುಃಖಿಯೇ ಇದ್ದಾರೆ. ವೈಮಾನಿಕರಲ್ಲಿ ಮೇಲೆ-ಮೇಲೆ ವಿಶೇಷ ಮಂದಕಷಾಯವಿದ್ದು ಶಕ್ತಿಯೂ ವಿಶೇಷವಿರುವುದರಿಂದ ಆಕುಲತೆಯು ಕಡಿಮೆಯಿರುವುದರಿಂದ ದುಃಖವೂ ಕಡಿಮೆಯಾಗುತ್ತದೆ.

ದೇವಾದಿಕರಿಗೆ ಕ್ರೋಧ-ಮಾನ ಕಷಾಯಗಳಿದ್ದರೂ ಅದರ ಕಾರಣಗಳು ಕಡಿಮೆಯಿರುವುದರಿಂದ ಅವುಗಳ ಕಾರ್ಯದ ಗೌಣತೆಯಿದೆ. ಒಬ್ಬನಿಗೆ ಕೆಡಕು ಮಾಡುವ ಹಾಗೂ ಒಬ್ಬನನ್ನು ಕೀಳಾಗಿ ಮಾಡುವ ಇತ್ಯಾದಿ ಕಾರ್ಯಗಳು ನಿಕೃಷ್ಟ ದೇವರುಗಳಲ್ಲಂತೂ ಕುತೂಹಲಾದಿಯಿಂದ ಆಗುತ್ತವೆ, ಆದರೆ ಉತ್ಕೃಷ್ಟ ದೇವಗಳಲ್ಲಿ ಅಲ್ಪವಿರುತ್ತವೆ, ಮುಖ್ಯತೆಯಿರುವುದಿಲ್ಲ; ಮತ್ತು ಮಾಯೆ-ಲೋಭ ಕಷಾಯಗಳ ಕಾರಣಗಳು ಕಂಡುಬರುತ್ತಿರುವುದರಿಂದ ಅವುಗಳ ಕಾರ್ಯದ ಮುಖ್ಯತೆಯಿದೆ; ಆದುದರಿಂದ ಮೋಸಮಾಡುವುದು, ವಿಷಯ-ಸಾಮಗ್ರಿಗಳ ಅಪೇಕ್ಷೆ ಮಾಡುವುದು ಇತ್ಯಾದಿ ಕಾರ್ಯಗಳು ವಿಶೇಷವಾಗಿ ಆಗುತ್ತವೆ, ಅವು ಕೂಡ ಮೇಲೆ-ಮೇಲಿನ ದೇವಗಳಿಗೆ ಕಡಿಮೆಯಿವೆ.

ಅಲ್ಲದೆ ಹಾಸ್ಯ, ರತಿ ಕಷಾಯದ ಕಾರಣಗಳು ಅಧಿಕವಾಗಿ ಕಂಡು ಬರುತ್ತಿರುವುದರಿಂದ ಇವುಗಳ ಕಾರ್ಯದ ಮುಖ್ಯತೆಯಿದೆ. ಮತ್ತು ಅರತಿ, ಶೋಕ, ಭಯ, ಜುಗುಪ್ಸೆಗಳ ಕಾರಣಗಳು ಕಡಿಮೆಯಿರುವುದರಿಂದ ಇವುಗಳ ಕಾರ್ಯದ ಗೌಣತೆಯಿದೆ, ಇನ್ನು ಸ್ತ್ರೀವೇದ, ಪುರುಷವೇದಗಳ ಉದಯವಿದ್ದು ಕ್ರೀಡೆ ಮಾಡುವುದರದೂ ನಿಮಿತ್ತವಿರುವುದರಿಂದ ಕಾಮ ಸೇವನೆ ಮಾಡುತ್ತಾರೆ. ಇವುಗಳ ಕಷಾಯಗಳೂ ಮೇಲೆ-ಮೇಲೆ ಮಂದವಿವೆ, ಅಹಮಿಂದ್ರರಿಗೆ ವೇದಗಳ ಮಂದತೆಯ ಕಾರಣ ಕಾಮಸೇವನೆಯ ಅಭಾವವಿದೆ. ಈ ಪ್ರಕಾರ ದೇವಾದಿಕರಿಗೆ ಕಷಾಯಭಾವವಿದೆ ಮತ್ತು ಕಷಾಯದಿಂದಲೇ ದುಃಖವಿದೆ.

ಇವರಿಗೆ ಕಷಾಯಗಳು ಕಡಿಮೆಯಿರುವಷ್ಟು ದುಃಖವೂ ಕಡಿಮೆಯಿರುವುದರಿಂದ ಇತರರ ಅಪೇಕ್ಷೆಯಿಂದ ಇವರನ್ನು ಸುಖಿಯೆಂದು ಹೇಳುತ್ತಾರೆ. ಪರಮಾರ್ಥದಿಂದ ಕಷಾಯಭಾವವು ಜೀವಿತವಿರುವುದರಿಂದ ದುಃಖಿಗಳೇ ಇದ್ದಾರೆ.

ವೇದನೀಯದಲ್ಲಿ ಸಾತಾದ ಉದಯವು ಅಧಿಕವಿದೆ. ಅಲ್ಲಿ ಭವನತ್ರಿಕರಿಗೆ ಅಲ್ಪವಿದೆ, ವೈಮಾನಿಕರಿಗೆ ಮೇಲೆ -ಮೇಲೆ ಅಧಿಕವಿದೆ. ಇಷ್ಟ ಶರೀರದ ಅವಸ್ಥೆ, ಸ್ತ್ರೀ, ಪ್ರಾಸಾದ ಮೊದಲಾದ ಸಾಮಗ್ರಿಗಳ ಸಂಯೋಗವು ಕಂಡು ಬರುತ್ತದೆ. ಎಂದಾದರೊಮ್ಮೆ ಯಾವುದೇ ಕಾರಣದಿಂದ ಒಂದಿಷ್ಟು ಅಸಾತಾದ ಉದಯವೂ ಆಗುತ್ತದೆ

ಅದು ನಿಕೃಷ್ಟ ದೇವಗಳಿಗೆ ಸ್ವಲ್ಪ ಪ್ರಕಟವೂ ಇದೆ, ಆದರೆ ಉತ್ಕೃಷ್ಟದೇವಗಳಿಗೆ ವಿಶೇಷ ಪ್ರಕಟವಿಲ್ಲ, ಮತ್ತು ಆಯುಷ್ಯವು ಅಧಿಕವಿದೆ, ಜಘನ್ಯ ಆಯುಷ್ಯವು ಹತ್ತು ಸಾವಿರ ವರ್ಷವಿದ್ದರೆ ಉತ್ಕೃಷ್ಟವು ಮೂವತ್ತೊಂದು ಸಾಗರವಿದೆ. ಮೋಕ್ಷಮಾರ್ಗವು ಪ್ರಾಪ್ತವಾದಲ್ಲದೆ ಇದಕ್ಕಿಂತ ಅಧಿಕ ಆಯುಷ್ಯಧಾರಕನಾಗುವುದಿಲ್ಲ, ಆದುದರಿಂದ ಇಷ್ಟುಕಾಲದವರೆಗೆ ವಿಷಯ- ಸುಖದಲ್ಲಿ ಮಗ್ನರಿರುತ್ತಾರೆ, ನಾಮಕರ್ಮದಲ್ಲಿ ದೇವಗತಿ ಮೊದಲಾದ ಸಮಸ್ತ ಪುಣ್ಯಪ್ರಕೃತಿಗಳದ್ದೇ ಉದಯವಿರುವುದರಿಂದ ಸುಖದ ಕಾರಣವಿದೆ. ಮತ್ತು ಗೋತ್ರಕರ್ಮದಲ್ಲಿ ಉಚ್ಚಗೋತ್ರದ್ದೇ ಉದಯವಿರುವುದರಿಂದ ಶ್ರೇಷ್ಠ ಪದವಿಗೆ ಪ್ರಾಪ್ತರಿದ್ದಾರೆ.

ಈ ಪ್ರಕಾರ ಇವರಿಗೆ ಪುಣ್ಯೋದಯದ ವಿಶೇಷತೆಯಿಂದ ಇಷ್ಟ ಸಾಮಗ್ರಿಗಳು ದೊರಕಿವೆ ಮತ್ತು ಕಷಾಯಗಳಿಂದ ಇಚ್ಛೆಯು ಕಂಡುಬರುತ್ತಿರುವುದರಿಂದ ಅದನ್ನು ಭೋಗಿಸುವಲ್ಲಿ ಆಸಕ್ತರಿರುತ್ತಾರೆ. ಆದರೆ ಇಚ್ಛೆಯು ಅಧಿಕವಾಗಿಯೇ ಇರುವುದರಿಂದ ಸುಖಿಯಾಗುವುದಿಲ್ಲ.ಶ್ರೇಷ್ಠದೇವಗಳಿಗೆ ಉತ್ಕೃಷ್ಟ ಪುಣ್ಯೋದಯವಿದ್ದು ಕಷಾಯವು ಅತ್ಯಂತ ಮಂದವಿದ್ದರೂ ಕೂಡ ಅವರಿಗೂ ಇಚ್ಛೆಯ ಅಭಾವವಾಗಿರದಿರುವುದರಿಂದ ಪರಮಾರ್ಥದಿಂದ ದುಃಖಿಗಳಾಗಿಯೇ ಇದ್ದಾರೆ.

ಈ ಪ್ರಕಾರದಿಂದ ಸಂಸಾರದಲ್ಲಿ ಎಲ್ಲೆಲ್ಲೂ ದುಃಖವೇ ದುಃಖವಾಗಿ ಕಂಡು ಬರುತ್ತದೆ, ಈ ಪ್ರಕಾರವಾಗಿ ಪರ್ಯಾಯದ ಅಪೇಕ್ಷೆಯಿಂದ ದುಃಖದ ವರ್ಣನೆ ಮಾಡಲಾಯಿತು.

## ದುಃಖದ ಸಾಮಾನ್ಯ ಸ್ವರೂಪ

ಈಗ ಈ ಎಲ್ಲ ದುಃಖಗಳ ಸಾಮಾನ್ಯ ಸ್ವರೂಪವನ್ನು ಹೇಳುತ್ತಾರೆ, ದುಃಖದ ಲಕ್ಷಣವು ಆಕುಲತೆಯಿದ್ದು ಆ ಆಕುಲತೆಯು ಇಚ್ಛೆಯಿದ್ದ ಮೇಲೆ ಆಗುತ್ತದೆ.

### ನಾಲ್ಕು ಪ್ರಕಾರದ ಇಚ್ಛೆಗಳು :-

ಈ ಸಂಸಾರಿ ಜೀವದ ಇಚ್ಛೆಯು ಅನೇಕ ಪ್ರಕಾರವಾಗಿ ಕಂಡುಬರುತ್ತದೆ.

೧) ಒಂದು ಇಚ್ಛೆಯಂತೂ ವಿಷಯಗ್ರಹಣದ್ದಿದ್ದು ಅದರಿಂದ ಇವನು ನೋಡಲು-ತಿಳಿಯಲು ಅಪೇಕ್ಷಿಸುತ್ತಾನೆ, ಹೇಗೆಂದರೆ ವರ್ಣವನ್ನು ನೋಡುವ, ರಾಗವನ್ನು ಆಲಿಸುವ, ಅವ್ಯಕ್ತವನ್ನು ತಿಳಿಯುವ ಇತ್ಯಾದಿಗಳ ಇಚ್ಛೆಯಾಗುತ್ತದೆ. ಅಲ್ಲಿ ಬೇರೆ ಯಾವ ಬಾಧೆಯಿಲ್ಲದಿದ್ದರೂ ಎಲ್ಲಿಯವರೆಗೆ ನೋಡುವ-ತಿಳಿಯುವುದಿಲ್ಲ ಅಲ್ಲಿಯವರೆಗೆ ಅತ್ಯಂತ ವ್ಯಾಕುಲನಿರುತ್ತಾನೆ. ಈ ಇಚ್ಛೆಯ ಹೆಸರು ವಿಷಯವಿದೆ.

೨) ಒಂದು ಇಚ್ಛೆಯು ಕಷಾಯಭಾವಗಳಿಗೆ ಅನುಸರಿಸಿ ಕಾರ್ಯಮಾಡುವುದಿದ್ದು ಅದರಿಂದ ಅವನು ಕಾರ್ಯಮಾಡಲು ಅಪೇಕ್ಷಿಸುತ್ತಾನೆ. ಹೇಗೆಂದರೆ-ಕೆಡಕು ಮಾಡುವ, ಕೀಳು ಮಾಡುವ ಇತ್ಯಾದಿಗಳ ಇಚ್ಛೆಯಾಗುತ್ತದೆ. ಇಲ್ಲಿಯೂ ಬೇರೆ ಯಾವ ಬಾಧೆಯಿಲ್ಲದಿದ್ದರೂ ಎಲ್ಲಿಯವರೆಗೆ ಆ ಕಾರ್ಯವಾಗುವುದಿಲ್ಲ ಅಲ್ಲಿಯವರೆಗೆ ಅತ್ಯಂತ ವ್ಯಾಕುಲನಿರುತ್ತಾನೆ ಈ ಇಚ್ಛೆಯ ಹೆಸರು ಕಷಾಯವಿದೆ.

೩) ಒಂದು ಇಚ್ಛೆಯು ಪಾಪದ ಉದಯದಿಂದ ಆ ಶರೀರದಲ್ಲಿ ಅಥವಾ ಬಾಹ್ಯದಲ್ಲಿ ಅನಿಷ್ಟ ಕಾರಣಗಳು ದೊರಕುತ್ತವೆ ಅವನ್ನು ದೂರ ಮಾಡುವುದಿರುತ್ತದೆ. ಹೇಗೆಂದರೆ-ರೋಗ, ಬಾಧೆ, ಕ್ಷುಧೆ ಮೊದಲಾದವುಗಳ ಸಂಯೋಗವಾದ ಮೇಲೆ ಅವನ್ನು ದೂರಮಾಡುವ ಇಚ್ಛೆಯಾಗುತ್ತದೆ ಅವನು ಇಲ್ಲಿ ಅದನ್ನೇ ಬಾಧೆಯೆಂದು ಮನ್ನಿಸುತ್ತಾನೆ, ಎಲ್ಲಿಯವರೆಗೆ ಅದು ದೂರವಾಗುವುದಿಲ್ಲ ಅಲ್ಲಿಯವರೆಗೆ ಅತ್ಯಂತ ವ್ಯಾಕುಲನಿರುತ್ತಾನೆ. ಈ ಇಚ್ಛೆಯ ಹೆಸರು ಪಾಪದ ಉದಯವಿದೆ.

ಹೀಗೆ ಈ ಮೂರು ಪ್ರಕಾರದ ಇಚ್ಛೆಯಾದ ಮೇಲೆ ಎಲ್ಲರೂ ದುಃಖವೆಂದು ಮನ್ನಿಸುತ್ತಾರೆ ಅದು ದುಃಖವೇ ಇದೆ.

೪) ಒಂದು ಇಚ್ಛೆಯು ಬಾಹ್ಯ ನಿಮಿತ್ತದಿಂದ ಆಗುತ್ತದೆ; ಅದು ಈ ಮೂರು ಪ್ರಕಾರದ ಇಚ್ಛೆಗಳಿಗೆ ಅನುಸರಿಸಿ ಪ್ರವರ್ತಿಸುವ ಇಚ್ಛೆಯಾಗುತ್ತದೆ. ಈ ಮೂರು ಪ್ರಕಾರದ ಇಚ್ಛೆಗಳಲ್ಲಿ ಒಂದೊಂದು ಪ್ರಕಾರದ ಇಚ್ಛೆಯಲ್ಲಿ ಅನೇಕ ಪ್ರಕಾರಗಳಿವೆ. ಅಲ್ಲಿ ಅದೆಷ್ಟೋ ಪ್ರಕಾರದ ಇಚ್ಛೆಗಳು ಪೂರ್ಣವಾಗುವ ಕಾರಣಗಳು ಪುಣ್ಯೋದಯದಿಂದ ಲಭಿಸುತ್ತವೆ, ಆದರೆ ಅವುಗಳ ಸಾಧನೆಯು ಏಕಕಾಲಕ್ಕೆ ಆಗುವ ಸಾಧ್ಯತೆಯಿಲ್ಲದಿರುವುದರಿಂದ ಒಂದನ್ನು ಬಿಟ್ಟು ಇನ್ನೊಂದರಲ್ಲಿ ತೊಡಗುತ್ತಾನೆ. ಪುನಃ ಅದನ್ನು ಬಿಟ್ಟು ಮತ್ತೊಂದರಲ್ಲಿ ತೊಡಗುತ್ತಾನೆ, ಹೇಗೆಂದರೆ ಒಬ್ಬನಿಗೆ ಅನೇಕ ಪ್ರಕಾರದ ಸಾಮಗ್ರಿಗಳು ದೊರಕಿವೆ ಅಲ್ಲಿ ಅವನು ಒಂದನ್ನು ನೋಡುತ್ತಾನೆ, ಅದನ್ನು ಬಿಟ್ಟುಕೊಟ್ಟು ಸಂಗೀತ ಕೇಳುತ್ತಾನೆ, ಪುನಃ ಅದನ್ನು ಬಿಟ್ಟುಕೊಟ್ಟು ಯಾರಿಗೋ ಕೆಡಕು ಮಾಡುವುದರಲ್ಲಿ ತೊಡಗುತ್ತಾನೆ, ಅದನ್ನು ಬಿಟ್ಟುಕೊಟ್ಟು ಭೋಜನ ಮಾಡುತ್ತಾನೆ. ಅಥವಾ ನೋಡುವುದರಲ್ಲಿ ಒಂದನ್ನು ನೋಡುತ್ತಿದ್ದಂತೆ ಇನ್ನೊಂದನ್ನು ನೋಡುತ್ತಾನೆ. ಇದೇ ಪ್ರಕಾರ ಅನೇಕ ಕಾರ್ಯಗಳ ಪ್ರವೃತ್ತಿಯಲ್ಲಿ ಇಚ್ಛೆಯಾಗುತ್ತದೆ. ಆದುದರಿಂದ ಈ ಇಚ್ಛೆಯ ಹೆಸರು ಪುಣ್ಯದ ಉದಯವಿದೆ.

ಇದಕ್ಕೆ ಜಗತ್ತು ಸುಖವೆಂದು ಮನ್ನಿಸುತ್ತದೆ, ಆದರೆ ಇದು ಸುಖವಿಲ್ಲ, ದುಃಖವೇ ಇದೆ. ಏಕೆಂದರೆ ಮೊದಲಂತೂ ಎಲ್ಲ ಪ್ರಕಾರದ ಇಚ್ಛೆಗಳು ಪೂರ್ಣವಾಗುವ ಕಾರಣಗಳು ಯಾರಿಗೂ ಸಿದ್ಧಿಸುವುದಿಲ್ಲ. ಮತ್ತು ಯಾವುದೇ ಪ್ರಕಾರ ಇಚ್ಛೆಯನ್ನು ಪೂರ್ಣಮಾಡುವ ಕಾರಣಗಳು ಕೈಗೂಡಿದರೆ ಯುಗಪತ್ತಾಗಿ ಅವುಗಳ ಸಾಧನೆಯಾಗುವುದಿಲ್ಲ. ಆದುದರಿಂದ ಎಲ್ಲಿಯವರೆಗೆ ಒಂದರ ಸಾಧನೆಯಾಗುವುದಿಲ್ಲ ಅಲ್ಲಿಯವರೆಗೆ ಅದರ ಆಕುಲತೆಯಿರುತ್ತದೆ; ಮತ್ತು ಅದರ ಸಾಧನೆಯಾದ ಮೇಲೆ ಅದೇ ಸಮಯದಲ್ಲಿ ಇನ್ನೊಂದರ ಸಾಧನೆಯ ಇಚ್ಛೆಯಾಗುತ್ತದೆ ಆಗ ಅದರ ಆಕುಲತೆಯಾಗುತ್ತದೆ. ಒಂದು ಸಮಯ ಕೂಡ ನಿರಾಕುಲವಿರುವುದಿಲ್ಲ, ಆದುದರಿಂದ ದುಃಖವೇ ಇದೆ. ಅಥವಾ ಮೂರು ಪ್ರಕಾರದ ಇಚ್ಛಾರೂಪದ ರೋಗವನ್ನು ದೂರಮಾಡುವ ಒಂದಿಷ್ಟು ಉಪಾಯ ಮಾಡುತ್ತಿರುವುದರಿಂದ ಸ್ವಲ್ಪ ದುಃಖವು ಕಡಿಮೆಯಾಗುತ್ತದೆ. ಸಮಸ್ತ ದುಃಖದ್ದಂತೂ ನಾಶವಾಗದಿರುವುದರಿಂದ ದುಃಖವೇ ಇದೆ. ಈ ರೀತಿಯಾಗಿ ಸಂಸಾರಿ ಜೀವಗಳಿಗೆ ಎಲ್ಲ ಪ್ರಕಾರದಿಂದ ದುಃಖವೇ ಇದೆ.

ಸಂಪೂರ್ಣ ಜಗತ್ತು ಮೂರು ಪ್ರಕಾರದ ಇಚ್ಛೆಗಳಿಂದ ಪೀಡಿತವಿದ್ದು ನಾಲ್ಕನೆಯ ಇಚ್ಛೆಯಂತೂ ಪುಣ್ಯದ ಉದಯ ಬಂದ ಮೇಲೆ ಆಗುತ್ತದೆ; ಮತ್ತು ಪುಣ್ಯದ ಬಂಧವು ಧರ್ಮಾನುರಾಗದಿಂದ ಆಗುತ್ತದೆ; ಆದರೆ ಜೀವವು

ಧರ್ಮಾನುರಾಗದಲ್ಲಿ ಅತ್ಯಲ್ಪವಾಗಿ ತೊಡಗುತ್ತದೆ, ಜೀವವಂತೂ ಅಧಿಕವಾಗಿ ಪಾಪಕ್ರಿಯೆಗಳಲ್ಲಿಯೇ ಪ್ರವರ್ತಿಸುತ್ತದೆ. ಆದುದರಿಂದ ನಾಲ್ಕನೆಯ ಇಚ್ಛೆಯು ಯಾವುದಾದರೊಂದು ಜೀವಕ್ಕೆ ಎಂದಾದರೊಮ್ಮೆ ಆಗುತ್ತದೆಯೆಂದು ತಿಳಿಯಬೇಕು.

ಸಮಾನ ಇಚ್ಛೆಯುಳ್ಳ ಜೀವರುಗಳ ಅಪೇಕ್ಷೆಯಿಂದಂತೂ ನಾಲ್ಕನೆಯ ಇಚ್ಛೆಯುಳ್ಳವನಿಗೆ ಮೂರು ಪ್ರಕಾರದ ಇಚ್ಛೆಗಳು ಒಂದಿಷ್ಟು ಕಡಿಮೆಯಾಗುವುದರಿಂದ ಸುಖವೆಂದು ಹೇಳುತ್ತಾರೆ. ಮತ್ತು ನಾಲ್ಕನೆಯ ಇಚ್ಛೆಯುಳ್ಳವನ ಅಪೇಕ್ಷೆಯಿಂದ ಅಧಿಕ ಇಚ್ಛೆಯುಳ್ಳವನು ನಾಲ್ಕನೆಯ ಇಚ್ಛೆಯಾದ ನಂತರ ಕೂಡ ದುಃಖಿಯಿರುತ್ತಾನೆ. ಒಬ್ಬನಿಗೆ ಅಧಿಕ ಐಶ್ವರ್ಯವಿದ್ದು ಅವನಿಗೆ ಇಚ್ಛೆಯೂ ಅಧಿಕವಿದ್ದರೆ ಅವನು ಅಧಿಕ ಆಕುಲತೆಯುಳ್ಳವನಿದ್ದಾನೆ ಮತ್ತು ಒಬ್ಬನಿಗೆ ಅಲ್ಪ ಐಶ್ವರ್ಯವಿದ್ದು ಅವನಿಗೆ ಇಚ್ಛೆಯೂ ಅಲ್ಪವಿದ್ದರೆ ಅವನು ಅಲ್ಪ ಆಕುಲತೆಯುಳ್ಳವನಿದ್ದಾನೆ. ಅಥವಾ ಒಬ್ಬನಿಗೆ ಅನಿಷ್ಟ ಸಾಮಗ್ರಿಗಳು ದೊರಕಿದ್ದು ಅವನಿಗೆ ಅವನ್ನು ದೂರ ಮಾಡುವ ಇಚ್ಛೆಯು ಅಲ್ಪವಿದ್ದರೆ ಅವನು ಅಲ್ಪ ಆಕುಲತೆಯುಳ್ಳವನಿದ್ದಾನೆ. ಇನ್ನು ಒಬ್ಬನಿಗೆ ಇಷ್ಟಸಾಮಗ್ರಿಗಳು ದೊರಕಿದ್ದು ಅವನಿಗೆ ಅವನ್ನು ಭೋಗಿಸುವ ಹಾಗೂ ಅನ್ಯ ಸಾಮಗ್ರಿಗಳ ಇಚ್ಛೆಯು ಅಧಿಕವಿದ್ದರೆ ಆ ಜೀವನು ಅಧಿಕ ಆಕುಲತೆಯುಳ್ಳವನಿದ್ದಾನೆ, **ಆದುದರಿಂದ ಸುಖಿ-ದುಃಖಿಯಾಗುವುದು ಇಚ್ಛೆಯ ಅನುಸಾರವಿದೆಯೆಂದು ತಿಳಿಯಬೇಕು, ಅದು ಬಾಹ್ಯ ಕಾರಣದ ಆಧೀನವಾಗಿಲ್ಲ.**

ನಾರಕಿಗಳು ದುಃಖಿ ಮತ್ತು ದೇವಗಳು ಸುಖಿಯೆಂದು ಹೇಳಲಾಗುತ್ತಿರುವುದು ಕೂಡ ಇಚ್ಛೆಯ ಅಪೇಕ್ಷೆಯಿಂದಲೇ ಹೇಳುತ್ತಾರೆ. ಏಕೆಂದರೆ ನಾರಕಿಗಳಿಗೆ ತೀವ್ರಕಷಾಯದಿಂದ ಇಚ್ಛೆಯು ಅಧಿಕವಿದ್ದರೆ ದೇವಗಳಿಗೆ ಮಂದ ಕಷಾಯದಿಂದ ಇಚ್ಛೆಯು ಅಲ್ಪವಿರುತ್ತದೆ. ಮನುಷ್ಯ-ತಿರ್ಯಂಚಗಳನ್ನು ಕೂಡ ಇಚ್ಛೆಯ ಅಪೇಕ್ಷೆಯಿಂದಲೇ ಸುಖಿ-ದುಃಖಿಯೆಂದು ತಿಳಿಯಬೇಕು. ತೀವ್ರ ಕಷಾಯದಿಂದ ಅಧಿಕ ಇಚ್ಛೆಯಿರುವವನನ್ನು ದುಃಖಿಯೆಂದು ಹೇಳುತ್ತಾರೆ, **ಮಂದ ಕಷಾಯದಿಂದ ಅಲ್ಪ ಇಚ್ಛೆಯಿರುವವನನ್ನು ಸುಖಿಯೆಂದು ಹೇಳುತ್ತಾರೆ. ಪರಮಾರ್ಥದಿಂದ ಸುಖವಿಲ್ಲ, ದುಃಖವೇ ಅಧಿಕ ಅಥವಾ ಅಲ್ಪವಿದೆ.** ದೇವಾದಿಕರನ್ನು ಕೂಡ ಸುಖಿಯೆಂದು ಮನ್ನಿಸುತ್ತಿರುವುದು ಭ್ರಾಂತಿಯೇ ಇದೆ. ಅವರಿಗೆ ನಾಲ್ಕನೆಯ ಇಚ್ಛೆಯ ಮುಖ್ಯತೆಯಿರುವುದರಿಂದ ಆಕುಲರಿದ್ದಾರೆ.

ಈ ಪ್ರಕಾರ ಇಚ್ಛೆಯು ಅದು ಮಿಥ್ಯಾತ್ವ, ಅಜ್ಞಾನ, ಅಸಂಯಮದಿಂದ ಆಗುತ್ತದೆ. ಇಚ್ಛೆಯು ಅದು ಆಕುಲಮಯವಿದ್ದು ಆ ಆಕುಲತೆಯೇ ದುಃಖವಿದೆ. ಈ ಪ್ರಕಾರ ಸಮಸ್ತ ಸಂಸಾರಿ ಜೀವರುಗಳು ನಾನಾದುಃಖಗಳಿಂದ ಅಖಂಡವಾಗಿ ದುಃಖಿಗಳೇ ಆಗುತ್ತಲಿದ್ದಾರೆ.

## ಮೋಕ್ಷಸುಖ ಮತ್ತು ಅದರ ಪ್ರಾಪ್ತಿಯ ಉಪಾಯ :-

ದುಃಖದಿಂದ ಬಿಡುಗಡೆಯಾಗಬೇಕೆನ್ನುವಂಥ ಜೀವರುಗಳು ಮೊದಲು ಇಚ್ಛೆಯನ್ನು ದೂರಮಾಡುವ ಉಪಾಯ ಮಾಡಬೇಕು. ಇಚ್ಛೆಯು ಮಿಥ್ಯಾತ್ವ, ಅಜ್ಞಾನ, ಅಸಂಯಮಗಳ ಅಭಾವವಾದಾಗಲೇ ದೂರವಾಗುತ್ತದೆ ಮತ್ತು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಪ್ರಾಪ್ತಿಯಾಗುತ್ತದೆ. ಆದುದರಿಂದ ಇದೇ ಕಾರ್ಯದ ಉದ್ಯೋಗ

ಮಾಡುವುದು ಯೋಗ್ಯವಿದೆ. ಇಂಥ ಸಾಧನೆ ಮಾಡಿದ ಮೇಲೆ ಎಷ್ಟೆಷ್ಟು ಇಚ್ಛೆಯು ಇಲ್ಲದಂತಾಗುವುದು ಅಷ್ಟಷ್ಟು ದುಃಖವು ದೂರವಾಗುತ್ತ ಹೋಗುತ್ತದೆ ಮತ್ತು ಮೋಹದ ಸರ್ವಥಾ ಅಭಾವದಿಂದ ಸಮಸ್ತ ಇಚ್ಛೆಯ ಅಭಾವವಾದಾಗ ಸಂಪೂರ್ಣ ದುಃಖವು ದೂರವಾಗುತ್ತದೆ, ನಿಜವಾದ ಸುಖವು ಪ್ರಕಟವಾಗುತ್ತದೆ. ಜ್ಞಾನಾವರಣ, ದರ್ಶನಾವರಣ ಮತ್ತು ಅಂತರಾಯದ ಅಭಾವವಾದಾಗ ಇಚ್ಛೆಯ ಕಾರಣಭೂತವಾದ ಕ್ಷಾಯೋಪಶಮಿಕ ಜ್ಞಾನ-ದರ್ಶನದ ಹಾಗೂ ಶಕ್ತಿಹೀನತೆಯದೂ ಅಭಾವವಾಗುತ್ತದೆ, ಅನಂತಜ್ಞಾನ-ದರ್ಶನ-ವೀರ್ಯದ ಪ್ರಾಪ್ತಿಯಾಗುತ್ತದೆ. ಮುಂದೆ ಅದೆಷ್ಟೋ ಕಾಲದನಂತರ ಅಘಾತಿಕರ್ಮಗಳದ್ದೂ ಅಭಾವವಾದಾಗ ಇಚ್ಛೆಯ ಬಾಹ್ಯಕಾರಣಗಳದ್ದೂ ಅಭಾವವಾಗುತ್ತದೆ. ಏಕೆಂದರೆ ಮೋಹವು ಹೊರಟುಹೋದನಂತರ ಯಾವುದೇ ಕಾಲದಲ್ಲಿ ಯಾವುದೂ ಇಚ್ಛೆಯನ್ನು ಉತ್ಪನ್ನಮಾಡುವಲ್ಲಿ ಸಮರ್ಥವಿಲ್ಲ, ಮೋಹವಿದ್ದಮೇಲೆ ಕಾರಣವಿರುವುದರಿಂದ ಕಾರಣವೆಂದು ಹೇಳಿದ್ದಾರೆ; ಅವುಗಳದೂ ಅಭಾವವಾದಾಗ ಜೀವನು ಸಿದ್ಧಪದವನ್ನು ಪಡೆಯುತ್ತಾನೆ.

ಅಲ್ಲಿ ದುಃಖದ ಹಾಗೂ ದುಃಖದ ಕಾರಣಗಳ ಸರ್ವಥಾ ಅಭಾವವಾಗುವುದರಿಂದ ಸದಾಕಾಲ ಅನುಪಮವೂ, ಅಖಂಡಿತವೂ, ಸರ್ವೋತ್ಕೃಷ್ಟವೂ ಮತ್ತು ಆನಂದ ಸಹಿತರಾಗಿ ಅನಂತ ಕಾಲದವರೆಗೆ ವಿರಾಜಮಾನರಿರುತ್ತಾರೆ. ಅದನ್ನೇ ಹೇಳುತ್ತಾರೆ,-

ಜ್ಞಾನಾವರಣ, ದರ್ಶನಾವರಣಗಳ ಕ್ಷಯೋಪಶಮವಾದ ಮೇಲೆ ಹಾಗೂ ಉದಯವಾದಮೇಲೆ ಮೋಹದಿಂದ ಒಂದೊಂದು ವಿಷಯವನ್ನು ನೋಡುವ-ತಿಳಿಯುವ ಇಚ್ಛೆಯಿಂದ ಅತ್ಯಂತ ವ್ಯಾಕುಲನಾಗುತ್ತಿದ್ದನು; ಈಗ ಮೋಹದ ಅಭಾವವಾಗುವುದರಿಂದ ಇಚ್ಛೆಯ ಅಭಾವವೂ ಆಗಿರುವುದರಿಂದ ದುಃಖದ ಅಭಾವವಾಗಿದೆ ಮತ್ತು ಜ್ಞಾನಾವರಣ, ದರ್ಶನಾವರಣಗಳ ಕ್ಷಯವಾಗುವುದರಿಂದ ಎಲ್ಲ ಇಂದ್ರಿಯಗಳ ಎಲ್ಲ ವಿಷಯಗಳ ಯುಗಪತ್ ಗ್ರಹಣವಾಗುವುದರಿಂದ ದುಃಖದ ಕಾರಣಗಳು ಕೂಡ ದೂರವಾಗಿವೆ ಅದನ್ನೇ ತಿಳಿಸಿಕೊಡುತ್ತಾರೆ. ಹೇಗೆಂದರೆ-ಕಣ್ಣುಗಳಿಂದ ಒಂದೊಂದು ವಿಷಯವನ್ನು ನೋಡಲಪೇಕ್ಷಿಸುತ್ತಿದ್ದವನು ಈಗ ತ್ರಿಕಾಲವರ್ತಿಯಾದ ತ್ರಿಲೋಕದ ಸಮಸ್ತ ವರ್ಣಗಳನ್ನು ಯುಗಪತ್ ನೋಡುತ್ತಾನೆ, ಇಂಥದನ್ನು ನೋಡುವ ಇಚ್ಛೆಯು ಉತ್ಪನ್ನವಾಗಬೇಕಾದರೆ ನೋಡದಂಥದು ಯಾವುದೂ ಉಳಿದಿರುವುದಿಲ್ಲ. ಇದೇ ಪ್ರಕಾರ ಸ್ಪರ್ಶ ಮೊದಲಾದವುಗಳಿಂದ ಒಂದೊಂದು ವಿಷಯ ಗ್ರಹಣ ಮಾಡಲಪೇಕ್ಷಿಸುತ್ತಿದ್ದನು, ಈಗ ತ್ರಿಕಾಲವರ್ತಿಯಾದ ತ್ರಿಲೋಕದ ಎಲ್ಲ ಸ್ಪರ್ಶ, ರಸ, ಗಂಧ ಹಾಗೂ ಶಬ್ದಗಳನ್ನು ಯುಗಪತ್ ಗ್ರಹಣ ಮಾಡುತ್ತಾನೆ. ಗ್ರಹಣ ಮಾಡುವ ಇಚ್ಛೆಯು ಉತ್ಪನ್ನವಾಗಬೇಕಾದರೆ ಗ್ರಹಣ ಮಾಡುವಂಥದು ಯಾವುದೂ ಬಾಕಿ ಉಳಿದಿಲ್ಲ.

**ಪ್ರಶ್ನೆ** :- ಶರೀರ ಮೊದಲಾದವುಗಳಿಲ್ಲದೆ ಗ್ರಹಣವು ಹೇಗಾಗುವುದು ?

**ಉತ್ತರ** :- ಇಂದ್ರಿಯಜ್ಞಾನವಿದ್ದ ಮೇಲಂತೂ ದ್ರವ್ಯೇಂದ್ರಿಯ ಮೊದಲಾದವುಗಳಿಲ್ಲದೆ ಗ್ರಹಣವಾಗುತ್ತಿರಲಿಲ್ಲ. ಈಗ ಇಂದ್ರಿಯಗಳಿಲ್ಲದೆಯೇ ಗ್ರಹಣವಾಗುವಂಥ ಸ್ವಭಾವವು ಪ್ರಕಟವಾಗಿದೆ.

**ಪ್ರಶ್ನೆ** :- ಸ್ಪರ್ಶ ಮೊದಲಾದುವನ್ನು ಹೇಗೆ ಮನಸ್ಸಿನ ಮುಖಾಂತರ ತಿಳಿಯುತ್ತಾರೆ ಅದೇ ಪ್ರಕಾರ ತಿಳಿಯುವುದಾಗುತ್ತಿರಬೇಕು; ತ್ವಚೆ, ಜಿಹ್ವೆ ಮೊದಲಾದವುಗಳಿಂದ ಗ್ರಹಣವಾಗುವಂತೆ ಆಗುತ್ತಿರಲಿಕ್ಕಿಲ್ಲ ?

**ಉತ್ತರ ಃ-** ಹಾಗೆ ಇಲ್ಲ; ಏಕೆಂದರೆ ಮನಸ್ಸಿನ ಮುಖಾಂತರವಂತೂ ಸ್ಮರಣಾದಿಗಳಾದ ಮೇಲೆ ಅಸ್ಪಷ್ಟವಾಗಿ ತಿಳಿಯುವುದು ಸ್ವಲ್ಪ ಆಗುತ್ತದೆ. ಇಲ್ಲಿಯಂತೂ ಯಾವಪ್ರಕಾರ ತ್ವಚೆ, ಜಿಹ್ವೆ ಇತ್ಯಾದಿಗಳಿಂದ ಸ್ಪರ್ಶಷ ರಸನಾದಿಗಳ-ಸ್ಪರ್ಶಮಾಡಿದ ಮೇಲೆ, ಸ್ವಾದ ತೆಗೆದುಕೊಂಡ ಮೇಲೆ ವಾಸನೆ ತೆಗೆದುಕೊಂಡ ಮೇಲೆ ನೋಡಿದ-ಕೇಳಿದ ಮೇಲೆ ಹೇಗೆ ಸ್ಪಷ್ಟ ತಿಳಿಯುವುದಾಗುತ್ತದೆ ಅದಕ್ಕಿಂತಲೂ ಅನಂತಗುಣಿತವಾಗಿ ಸ್ಪಷ್ಟ ತಿಳಿಯುವುದು ಅವರಿಗೆ ಆಗುತ್ತದೆ.

ಅಲ್ಲಿ ಇಂದ್ರಿಯ ವಿಷಯದ ಸಂಯೋಗವಾದ ನಂತರವೇ ತಿಳಿದುಕೊಳ್ಳುವುದಾಗುತ್ತಿತ್ತು , ಇಲ್ಲಿ ದೂರವಿದ್ದು ಕೂಡ ಹಾಗೆಯೇ ತಿಳಿದುಕೊಳ್ಳುವುದಾಗುತ್ತಿರುವುದು ಇದು ಶಕ್ತಿಯ ಮಹಿಮೆಯಿದೆ. ಮನಸ್ಸಿನ ಮುಖಾಂತರ ಒಂದಿಷ್ಟು ಅತೀತ-ಅನಾಗತವನ್ನು ಹಾಗೂ ಅವ್ಯಕ್ತವನ್ನು ತಿಳಿದುಕೊಳ್ಳಲಿಚ್ಛಿಸುತ್ತಿದ್ದವನು ಈಗ ಅನಾದಿಯಿಂದ ಅನಂತಕಾಲದವರೆಗಿನ ಎಲ್ಲವನ್ನು ಎಲ್ಲ ಪದಾರ್ಥಗಳ ದ್ರವ್ಯ, ಕ್ಷೇತ್ರ, ಕಾಲ, ಭಾವಗಳನ್ನು ಯುಗಪತ್ ತಿಳಿಯುತ್ತಾನೆ; ಅವನಿಗೆ ತಿಳಿದುಕೊಳ್ಳುವ ಇಚ್ಛೆಯು ಉತ್ಪನ್ನವಾಗಬೇಕಾದರೆ ತಿಳಿದುಕೊಳ್ಳದಿರುವಂಥದು ಯಾವುದೂ ಬಾಕಿ ಉಳಿದಿಲ್ಲ, ಈ ಪ್ರಕಾರ ಈ ದುಃಖ ಮತ್ತು ದುಃಖದ ಕಾರಣಗಳ ಅಭಾವವಾಗುತ್ತದೆಯೆಂದು ತಿಳಿಯಬೇಕು.

ಮೋಹದ ಉದಯದಿಂದ ಮಿಥ್ಯಾತ್ವ ಹಾಗೂ ಕಷಾಯ ಭಾವಗಳಾಗುತ್ತಿದ್ದವು, ಈಗ ಅವುಗಳ ಸರ್ವಥಾ ಅಭಾವವಾಗಿರುವುದರಿಂದ ದುಃಖದ ಅಭಾವವಾಗಿದೆ; ಮತ್ತು ಇವುಗಳ ಕಾರಣಗಳ ಅಭಾವವಾಗಿರುವುದರಿಂದ ದುಃಖದ ಕಾರಣಗಳದ್ದೂ ಅಭಾವವಾಗಿದೆ. ಆ ಕಾರಣಗಳ ಅಭಾವವನ್ನು ಇಲ್ಲಿತಿಳಿಸಿಕೊಡುತ್ತಾರೆ-

ಎಲ್ಲ ತತ್ತ್ವಗಳು ಯಥಾರ್ಥವಾಗಿ ಪ್ರತಿಭಾಸವಾದನಂತರ ಅತತ್ತ್ವಶ್ರದ್ಧೆಯರೂಪದ ಮಿಥ್ಯಾತ್ವವು ಹೇಗೆ ಇರುವುದು ? ಯಾವ ಅನಿಷ್ಟಗಳು ಉಳಿಯಲಿಲ್ಲ, ನಿಂದಕನು ತಾನಾಗಿಯೇ ಅನಿಷ್ಟಕ್ಕೆ ಪ್ರಾಪ್ತನಾಗುತ್ತಾನೆ, ತಾನು ಯಾರಮೇಲೆ ಕ್ರೋಧ ಮಾಡುವುದು ? ಸಿದ್ಧರಿಗಿಂತ ಶ್ರೇಷ್ಠರು ಯಾರೂ ಇಲ್ಲ, ಇಂದ್ರಾದಿಗಳು ತಾವಾಗಿಯೇ ನಮನ ಮಾಡುತ್ತಾರೆ ಮತ್ತು ಇಷ್ಟಸಿದ್ಧಿಯನ್ನು ಪಡೆಯುತ್ತಾರೆ; ಯಾವುದರ ಅಭಿಮಾನ ಪಡುವುದು ? **ಭವಿತವ್ಯವೆಲ್ಲವೂ ಭಾಸವಾಗಿದೆ,** ಯಾವ ಕಾರ್ಯವು ಉಳಿದಿಲ್ಲ, ಯಾವುದರ ಪ್ರಯೋಜನವು ಉಳಿದಿಲ್ಲವೆಂದ ಮೇಲೆ ಯಾವುದರ ಲೋಭ ಮಾಡುವುದು ? ಅನ್ಯ ಇಷ್ಟರುಗಳಾರೂ ಉಳಿದಿಲ್ಲವೆಂದಬಳಿಕ ಯಾವ ಕಾರಣದಿಂದ ಹಾಸ್ಯವಾಗುವುದು ? ರತಿಮಾಡಲು ಯೋಗ್ಯವಾದ ಬೇರಾವುದೂ ಇಷ್ಟವಿಲ್ಲವೆಂದಮೇಲೆ ಎಲ್ಲಿ ಪ್ರೀತಿ ಮಾಡುವುದು ? ದುಃಖದಾಯಕವಾದ ಸಂಯೋಗಗಳಾವವೂ ಉಳಿದಿಲ್ಲವೆಂದ ಬಳಿಕ ಎಲ್ಲಿ ಆ ಪ್ರೀತಿ ಮಾಡುವುದು? ಯಾವ ಇಷ್ಟಾನಿಷ್ಟಗಳ ಸಂಯೋಗ-ವಿಯೋಗಗಳಾಗುವುದಿಲ್ಲವೆಂದಮೇಲೆ ಯಾವುದರ ಶೋಕ ಮಾಡುವುದು? ಅನಿಷ್ಟ ಮಾಡುವಂಥ ಕಾರಣಗಳಾವವೂ ಉಳಿದಿಲ್ಲವೆಂದ ಬಳಿಕ ಯಾವುದಕ್ಕೆ ಭಯಪಡುವುದು ? ಸಮಸ್ತ ವಸ್ತುಗಳು ತಮ್ಮ ಸ್ವಭಾವ ಸಹಿತವಾಗಿ ಭಾಸವಾಗುತ್ತಿದ್ದು ತಮಗೆ ಅನಿಷ್ಟವಾದವುಗಳೇ ಇಲ್ಲವೆಂದಮೇಲೆ ಎಲ್ಲಿ ಜುಗುಪ್ಸೆ ಮಾಡುವುದು? ಕಾಮಬಾಧೆಯು ದೂರವಾಗುವುದರಿಂದ ಸ್ತ್ರೀ-ಪುರುಷರೀರ್ವರಿಂದಲೂ ಕ್ರೀಡಿಸುವ ಯಾವ ಪ್ರಯೋಜನವೂ ಉಳಿದಿಲ್ಲವೆಂದಬಳಿಕ ಪುರುಷ, ಸ್ತ್ರೀ ಅಥವಾ ನಪುಂಸಕವೇದರೂಪದ ಭಾವಗಳು ಏತಕ್ಕಾಗಿ ಆಗುವವು ?

ಈ ಪ್ರಕಾರ ಮೋಹವು ಉತ್ಪನ್ನವಾಗುವ ಕಾರಣಗಳ ಅಭಾವವಾಗಿದೆಯೆಂದು ತಿಳಿಯಬೇಕು.

ಅಂತರಾಯದ ಉದಯದಿಂದ ಶಕ್ತಿಹೀನತೆಯ ಕಾರಣವಾಗಿ ಪೂರ್ಣವಾಗುತ್ತಿರಲಿಲ್ಲ; ಈಗ ಅದರ ಅಭಾವವಾಗಿರುವುದರಿಂದ ದುಃಖದ ಅಭಾವವಾಗಿದೆ. ಮತ್ತು ಅನಂತ ಶಕ್ತಿಯು ಪ್ರಕಟವಾಗಿರುವುದರಿಂದ ದುಃಖದ ಕಾರಣಗಳದ್ದೂ ಅಭಾವವಾಗಿದೆ.

**ಪ್ರಶ್ನೆ :-** ದಾನ, ಲಾಭ, ಭೋಗ ಉಪಭೋಗಗಳನ್ನಂತೂ ಮಾಡುವುದಿಲ್ಲ; ಇವರ ಶಕ್ತಿಯು ಹೇಗೆ ಪ್ರಕಟವಾಯಿತು ?

**ಉತ್ತರ :-** ಈ ಕಾರ್ಯಗಳು ರೋಗದ ಉಪಚಾರಗಳಿದ್ದವು; ರೋಗವೇ ಇಲ್ಲವೆಂದ ಬಳಿಕ ಉಪಚಾರಗಳನ್ನೇಕೆ ಮಾಡುವುದು ? ಆದುದರಿಂದ ಈ ಕಾರ್ಯಗಳ ಸದ್ಭಾವವಂತೂ ಇಲ್ಲವೇ ಇಲ್ಲ ಮತ್ತು ಇವನ್ನು ತಡೆಯುವಂಥ ಕರ್ಮಗಳ ಅಭಾವವಾಗಿರುವುದರಿಂದ ಶಕ್ತಿಯು ಪ್ರಕಟವಾಗಿದೆಯೆಂದು ಹೇಳುತ್ತಾರೆ. ಹೇಗೆಂದರೆ ಒಬ್ಬನು ಗಮನ ಮಾಡಲು ಇಚ್ಛಿಸುತ್ತಿದ್ದನು. ಅವನನ್ನು ಬೇರೊಬ್ಬನು ತಡೆಯುವುದರಿಂದ ಅವನು ದುಃಖಿಯಾಗಿದ್ದನು ಮತ್ತು ಅವನ ಪ್ರತಿಬಂಧವು ದೂರವಾದಾಗ ಯಾವಕಾರ್ಯದ ಸಲುವಾಗಿ ಹೋಗಲಪೇಕ್ಷಿಸುತ್ತಿದ್ದನು ಆ ಕಾರ್ಯವು ಉಳಿಯದಿರುವುದರಿಂದ ಗಮನವೂ ನಿಂತು ಹೋಯಿತು. ಅಲ್ಲಿ ಅವನು ಗಮನ ಮಾಡದಿದ್ದರೂ ಕೂಡ ಶಕ್ತಿಯು ಪ್ರಕಟವಾಯಿತೆಂದು ಹೇಳಲಾಗುತ್ತದೆ; ಅದೇ ಪ್ರಕಾರ ಇಲ್ಲಿಯೂ ತಿಳಿದುಕೊಳ್ಳಬೇಕು, ಮತ್ತು ಅವರಿಗೆ ಜ್ಞಾನಾದಿಗಳ ಶಕ್ತಿರೂಪದ ಅನಂತವೀರ್ಯವು ಪ್ರಕಟವಾದದ್ದು ಕಂಡು ಬರುತ್ತದೆ.

ಅದರಂತೆ ಅಘಾತಿ ಕರ್ಮಗಳಲ್ಲಿ ಮೋಹದಿಂದ ಪಾಪಪ್ರಕೃತಿಗಳ ಉದಯವಾದ ಮೇಲೆ ದುಃಖವೆಂದು ಮನ್ನಿಸುತ್ತಿದ್ದನು, ಪುಣ್ಯಪ್ರಕೃತಿಗಳ ಉದಯವಾದ ಮೇಲೆ ಸುಖವೆಂದು ಮನ್ನಿಸುತ್ತಿದ್ದನು, ಆದರೆ ಪರಮಾರ್ಥದಿಂದ ಆಕುಲತೆಯ ಕಾರಣವು ಎಲ್ಲವೂ ದುಃಖವೇ ಇತ್ತು ಈಗ ಮೋಹದ ನಾಶದಿಂದ ಸಮಸ್ತ ಆಕುಲತೆಗಳು ದೂರವಾದ ಮೇಲೆ ಸಮಸ್ತ ದುಃಖಗಳು ನಾಶವಾದವು. ಮತ್ತು ಯಾವ ಕಾರಣಗಳಿಂದ ದುಃಖವೆಂದು ಮನ್ನಿಸುತ್ತಿದ್ದನು ಆ ಕಾರಣಗಳೆಲ್ಲವೂ ನಷ್ಟವಾದವು; ಮತ್ತು ಯಾವ ಕಾರಣಗಳಿಂದ ಒಂದಿಷ್ಟು ದುಃಖವು ದೂರವಾಗುವುದರಿಂದ ಸುಖವೆಂದು ಮನ್ನಿಸುತ್ತಿದ್ದನು ಈಗ ಮೂಲದಲ್ಲಿಯೇ ಆ ದುಃಖವು ಉಳಿಯದಿರುವುದರಿಂದ ಆ ಕಾರಣಗಳಿಂದ ಕಾರ್ಯಸಿದ್ಧಿ ಮಾಡಿಕೊಳ್ಳಲಪೇಕ್ಷಿಸುವಂತೆ ಆ ದುಃಖದ ಉಪಚಾರಗಳ ಯಾವ ಪ್ರಯೋಜನವೂ ಉಳಿಯಲಿಲ್ಲ. ಅದರ ಸಿದ್ಧಿಯು ತಾನಾಗಿಯೇ ಆಗುತ್ತಲಿದೆ.

ಇದರ ವಿಶೇಷವನ್ನೇ ತಿಳಿಸಿಕೊಡುತ್ತಾರೆ-ವೇದನೀಯದಲ್ಲಿ ಅಸಾತಾದ ಉದಯದಿಂದ ದುಃಖದ ಕಾರಣಗಳಾದ ರೋಗ, ಕ್ಷುಧೆ ಮೊದಲಾದವು ಶರೀರದಲ್ಲಾಗುತ್ತಿದ್ದವು; ಈಗ ಶರೀರವೇ ಇಲ್ಲವೆಂದ ಮೇಲೆ ಎಲ್ಲಿ ಆಗುವವು ? ಮತ್ತು ಶರೀರದ ಅನಿಷ್ಟ ಅವಸ್ಥೆಗೆ ಕಾರಣವಾಗಿ ಬಿಸಿಲು ಮೊದಲಾದವುಗಳಿದ್ದವು; ಆದರೆ ಈಗ

ಶರೀರವಿಲ್ಲದೆ ಅವು ಯಾವುದಕ್ಕೆ ಕಾರಣವಾಗುತ್ತವೆ ? ಅಲ್ಲದೆ ಬಾಹ್ಯದಲ್ಲಿ ಅನಿಷ್ಟ ನಿಮಿತ್ತಗಳು ಒದಗುತ್ತಿದ್ದವು; ಆದರೆ ಈಗ ಇವರಿಗೆ ಅನಿಷ್ಟಗಳು ಉಳಿದೇ ಇಲ್ಲ. ಈ ಪ್ರಕಾರವಾಗಿ ದುಃಖದ ಕಾರಣಗಳದ್ದಂತೂ ಅಭಾವವಾಗಿದೆ.

ಸಾತಾದ ಉದಯದಿಂದ ಒಂದಿಷ್ಟು ದುಃಖವು ದೂರವಾಗುವ ಕಾರಣಗಳಾಗಿ ಔಷಧ, ಭೋಜನ ಮೊದಲಾದವುಗಳಿದ್ದರೆ ಈಗ ಅವುಗಳ ಪ್ರಯೋಜನವು ಉಳಿದಿಲ್ಲ, ಮತ್ತು ಇಷ್ಟಕಾರ್ಯಗಳು ಪರಾಧೀನವಾಗಿ ಉಳಿದಿಲ್ಲ; ಆದುದರಿಂದ ಬಾಹ್ಯದಲ್ಲಿ ಕೂಡ ಮಿತ್ರಾದಿಕರನ್ನು ಇಷ್ಟರೆಂದು ಮನ್ನಿಸುವ ಪ್ರಯೋಜನವು ಉಳಿಯಲಿಲ್ಲ, ಅವರುಗಳ ಮುಖಾಂತರ ದುಃಖ ದೂರಮಾಡಲು ಅಪೇಕ್ಷಿಸುತ್ತಿದ್ದನು ಮತ್ತು ಇಷ್ಟರನ್ನಾಗಿ ಮಾಡಿಕೊಳ್ಳಲು ಬಯಸುತ್ತಿದ್ದನು; ಆದರೆ ಈಗಂತೂ ಸಂಪೂರ್ಣ ದುಃಖವು ನಷ್ಟವಾಗಿದೆ ಮತ್ತು ಸಂಪೂರ್ಣ ಇಷ್ಟವು ಪ್ರಾಪ್ತವಾಗಿದೆ.

ಆಯುವಿನ ನಿಮಿತ್ತದಿಂದ ಜೀವನ-ಮರಣಗಳಿದ್ದವು.ಅಲ್ಲಿ ಮರಣದಿಂದ ದುಃಖವನ್ನು ಮನ್ನಿಸುತ್ತಿದ್ದನು; ಆದರೆ ಈಗ ಅವಿನಾಶಿಯಾದ  ಪದವನ್ನು ಪ್ರಾಪ್ತಮಾಡಿಕೊಂಡಿರುವುದರಿಂದ ದುಃಖದ ಕಾರಣಗಳು ಉಳಿದಿಲ್ಲ. ಮತ್ತು ದ್ರವ್ಯಪ್ರಾಣಗಳನ್ನು ಧಾರಣಮಾಡಿ ಅದೆಷ್ಟೋ ಕಾಲದವರೆಗೆ ಜನನ-ಮರಣಗಳಿಂದ ಸುಖವನ್ನು ಮನ್ನಿಸುತ್ತಿದ್ದನು, ಅದರಲ್ಲೂ ನರಕ ಪರ್ಯಾಯದಲ್ಲಿ ದುಃಖದ ವಿಶೇಷತೆಯಿಂದ ಅಲ್ಲಿ ಜೀವಿಸಿರಲು ಅಪೇಕ್ಷಿಸುತ್ತಿರಲಿಲ್ಲ; ಆದರೆ ಈಗ ಸಿದ್ಧ ಪರ್ಯಾಯದಲ್ಲಿ ದ್ರವ್ಯಪ್ರಾಣವಿಲ್ಲದೆಯೇ ತನ್ನ ಚೈತನ್ಯ ಪ್ರಾಣದಿಂದ ಸದಾಕಾಲ ಜೀವಿಸುತ್ತಾನೆ ಮತ್ತು ಅಲ್ಲಿ ದುಃಖದ ಲವಲೇಶ ಕೂಡ ಉಳಿದಿಲ್ಲ.

ನಾಮಕರ್ಮದ ಉದಯದಿಂದ ಅಶುಭ ಗತಿ, ಜಾತಿ ಮೊದಲಾದವುಗಳಾದ ಮೇಲೆ ದುಃಖವೆಂದು ಮನ್ನಿಸುತ್ತಿದ್ದನು; ಆದರೆ ಈಗ ಅವೆಲ್ಲವುಗಳ ಅಭಾವವಾಗಿರುವುದರಿಂದ ದುಃಖವೆಲ್ಲಿಂದ ಆಗುವುದು ? ಮತ್ತು ಶುಭಗತಿ, ಜಾತಿ ಮೊದಲಾದವುಗಳಾದ ಮೇಲೆ ಒಂದಿಷ್ಟು ದುಃಖವು ದೂರವಾಗುವುದರಿಂದ ಸುಖವೆಂದು ಮನ್ನಿಸುತ್ತಿದ್ದನು. ಆದರೆ ಈಗ ಅವೆಲ್ಲವುಗಳಿಲ್ಲದೆಯು ಕೂಡ ಸಮಸ್ತ ದುಃಖದ ನಾಶ ಮತ್ತು ಸಂಪೂರ್ಣ ಸುಖದ ಪ್ರಕಾಶವು ಕಂಡು ಬರುತ್ತದೆ. ಆದುದರಿಂದ ಅವುಗಳದು ಕೂಡ ಯಾವ ಪ್ರಯೋಜನವು ಉಳಿಯಲಿಲ್ಲ.

ಗೋತ್ರದ ನಿಮಿತ್ತದಿಂದ ನೀಚಕುಲವು ಪ್ರಾಪ್ತವಾದ ಮೇಲೆ ದುಃಖವೆಂದು ಮನ್ನಿಸುತ್ತಿದ್ದನು, ಈಗ ಅದರ ಅಭಾವವಾಗಿರುವುದರಿಂದ ದುಃಖದ ಕಾರಣವು ಉಳಿಯಲಿಲ್ಲ; ಮತ್ತು ಉಚ್ಚಕುಲವು ಪ್ರಾಪ್ತವಾದ ಮೇಲೆ ಸುಖವೆಂದು ಮನ್ನಿಸುತ್ತಿದ್ದನು, ಆದರೆ ಈಗ ಉಚ್ಚಕುಲವಿಲ್ಲದೆಯು ಕೂಡ ತ್ರೈಲೋಕ್ಯ ಪೂಜ್ಯವಾದ ಉಚ್ಚಪದವಿಗೆ ಪ್ರಾಪ್ತನಾಗಿದ್ದಾನೆ.

ಈ ಪ್ರಕಾರ ಸಿದ್ಧರಿಗೆ ಎಲ್ಲ ಕರ್ಮಗಳು ನಾಶವಾಗಿರುವುದರಿಂದ ಎಲ್ಲ ದುಃಖದ ನಾಶವಾಗಿ ಹೋಗಿದೆ.

ದುಃಖದ  ಲಕ್ಷಣವಂತೂ ಆಕುಲತೆಯಿದ್ದು ಆ ಆಕುಲತೆಯು ಇಚ್ಛೆಯಾದಾಗ ಆಗುತ್ತದೆ; ಆದರೆ ಇಚ್ಛೆಯ ಹಾಗೂ ಇಚ್ಛೆಯ ಕಾರಣಗಳ ಸರ್ವಥಾ ಅಭಾವವಾಗುವುದರಿಂದ ನಿರಾಕುಲನಾಗಿ ಸಮಸ್ತ ದುಃಖಗಳಿಂದ ರಹಿತನಾಗಿ ಅನಂತ ಸುಖದ ಅನುಭವ ಮಾಡುತ್ತಾನೆ; ಏಕೆಂದರೆ ನಿರಾಕುಲತೆಯೇ ಸುಖದ ಲಕ್ಷಣವಿದೆ.

ಸಂಸಾರದಲ್ಲಿ ಕೂಡ ಯಾವುದೇ ಪ್ರಕಾರದಿಂದ ನಿರಾಕುಲರಾಗಿ ಎಲ್ಲರೂ ಸುಖವೆಂದು ಮನ್ನಿಸುತ್ತಾರೆ; ಹಾಗಾದರೆ ಸರ್ವಥಾ ನಿರಾಕುಲತೆ ಯಾಗಿರುವಲ್ಲಿ ಸಂಪೂರ್ಣ ಸುಖವೆಂದೇಕೆ ಮನ್ನಿಸಬಾರದು ?

ಈ ಪ್ರಕಾರ ಸಮ್ಯಗ್ದರ್ಶನ ಮೊದಲಾದವುಗಳ ಸಾಧನದಿಂದ ಸಿದ್ಧಪದವನ್ನು ಪ್ರಾಪ್ತಮಾಡಿಕೊಂಡ ಮೇಲೆ ಸಂಪೂರ್ಣ ದುಃಖದ ಅಭಾವವಾಗುತ್ತದೆ, ಮತ್ತು ಸಂಪೂರ್ಣ ಸುಖವು ಪ್ರಕಟವಾಗುತ್ತದೆ.

ಎಲೈ ಭವ್ಯನೇ ! ಸೋದರನೇ !! ಈಗ ನಿನಗೆ ಈ ಸಂಸಾರದಲ್ಲಿರುವ ದುಃಖಗಳನ್ನು ತೋರಿಸಿ ಕೊಡಲಾಗಿದೆ ಅವು ನಿನಗೆ ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂಬುದನ್ನು ವಿಚಾರ ಮಾಡು. ಮತ್ತು ನೀನು ಮಾಡುತ್ತಿರುವ ಉಪಾಯಗಳನ್ನು ವ್ಯರ್ಥವೆಂದು ತಿಳಿಸಿಕೊಡಲಾಗಿದೆ ಅವು ಹಾಗೆಯೇ ಇವೆಯೋ ಅಥವಾ ಇಲ್ಲವೋ ಎಂಬುದನ್ನೂ ವಿಚಾರಮಾಡು. ಅದರಂತೆ ಸಿದ್ಧಪದವು ಪ್ರಾಪ್ತವಾದನಂತರ ಸುಖವು ಆಗುತ್ತದೆಯೋ ಅಥವಾ ಇಲ್ಲವೋ ಎಂಬುದರದು ಕೂಡ ವಿಚಾರ ಮಾಡು ನಾವು ಹೇಳಿದ ಹಾಗೆಯೇ ನಿನಗೆ ಪ್ರತೀತಿಯಾಗುತ್ತಿದ್ದರೆ ನೀನು ಸಂಸಾರದಿಂದ ಬಿಡುಗಡೆಯಾಗಿ ಸಿದ್ಧಪದವನ್ನು ಪ್ರಾಪ್ತಮಾಡಿಕೊಳ್ಳುವ ಯಾವ ಉಪಾಯವನ್ನು ನಾವು ಹೇಳುತ್ತಿದ್ದೇವೆ ಅದನ್ನು ಮಾಡು, ವಿಲಂಬ ಮಾಡಬೇಡ ಈ ಉಪಾಯ ಮಾಡುವುದರಿಂದ ನಿನ್ನದು ಅವಶ್ಯವಾಗಿ ಕಲ್ಯಾಣವಾಗುವುದು !

**ಈ ಪ್ರಕಾರ ಶ್ರೀ ಮೋಕ್ಷಮಾರ್ಗಪ್ರಕಾಶಕ ಶಾಸ್ತ್ರದಲ್ಲಿ ಸಂಸಾರದ ದುಃಖ ಹಾಗೂ ಮೋಕ್ಷಸುಖದ ನಿರೂಪಣೆ ಮಾಡುವ ಮೂರನೆಯ ಅಧ್ಯಾಯವು ಸಮಾಪ್ತವಾಯಿತು.**

# ನಾಲ್ಕನೆಯ ಅಧಿಕಾರ

## ಮಿಥ್ಯಾದರ್ಶನ-ಜ್ಞಾನ-ಚಾರಿತ್ರದ ನಿರೂಪಣೆ

**ಈ ಭವದೆಲ್ಲದುಃಖಕೆ ಕಾರಣ ಇರುವುದು ಮಿಥ್ಯಾಭಾವ ।**
**ನಷ್ಟಗೆಯ್ದರದರಸ್ತಿತ್ವ ಪೊಳೆವುದು ಮೋಕ್ಷೋಪಾಯ ॥**

ಸಂಸಾರದ ದುಃಖಗಳಿಗೆ ಬೀಜಪ್ರಾಯವಾಗಿ ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರಗಳಿದ್ದು ಈಗ ಇಲ್ಲಿ ಅವುಗಳ ಸ್ವರೂಪದ ವಿಶೇಷ ನಿರೂಪಣೆ ಮಾಡುತ್ತಾರೆ. ಯಾವ ಪ್ರಕಾರ ವೈದ್ಯನು ರೋಗದ ಕಾರಣಗಳನ್ನು ವಿಶೇಷ ರೂಪದಿಂದ ಹೇಳಿದರೆ ರೋಗಿಯು ಅಪಥ್ಯ ಸೇವನೆ ಮಾಡದಿದ್ದರೆ ಅವನು ರೋಗರಹಿತನಾಗುವನು. ಅದೇ ಪ್ರಕಾರ ಇಲ್ಲಿ ಸಂಸಾರದ ಕಾರಣಗಳನ್ನು ವಿಶೇಷವಾಗಿ ನಿರೂಪಣೆ ಮಾಡುತ್ತಾರೆ, ಅದರಿಂದ ಸಂಸಾರಿಯು ಮಿಥ್ಯಾತ್ವ ಮೊದಲಾದವುಗಳ ಸೇವನೆ ಮಾಡದಿದ್ದರೆ ಅವನು ಸಂಸಾರರಹಿತನಾಗುವನು. ಆದುದರಿಂದ ಮಿಥ್ಯಾದರ್ಶನಾದಿಗಳ ನಿರೂಪಣೆಯನ್ನು ವಿಶೇಷವಾಗಿ ಮಾಡುತ್ತಾರೆ.

### ಮಿಥ್ಯಾದರ್ಶನದ ಸ್ವರೂಪ :-

ಈ ಜೀವನು ಅನಾದಿಯಿಂದ ಕರ್ಮಸಂಬಂಧ ಸಹಿತನಿದ್ದಾನೆ. ಅವನಿಗೆ ದರ್ಶನಮೋಹದ ಉದಯದಿಂದಾದ ಆ ಅತತ್ತ್ವಶ್ರದ್ಧೆಯ ಹೆಸರು ಮಿಥ್ಯಾದರ್ಶನವಿದೆ. ಏಕೆಂದರೆ ತತ್‌ಭಾವವು ಅದು ತತ್ತ್ವವಿದೆ; ಎಂದರೆ ಶ್ರದ್ಧೆ ಮಾಡಲು ಯೋಗ್ಯವಾದ ಅರ್ಥದ ಯಾವ ಭಾವವಿದೆ-ಸ್ವರೂಪವಿದೆ ಅದರ ಹೆಸರು ತತ್ತ್ವವಿದೆ. ತತ್ತ್ವವಿಲ್ಲದುದರ ಹೆಸರು ಅತತ್ತ್ವವಿದೆ. ಆದುದರಿಂದ ಅತತ್ತ್ವವು ಅಸತ್ಯವಿದ್ದು ಅದರ ಹೆಸರೇ ಮಿಥ್ಯೆಯಿದೆ ಮತ್ತು 'ಇದು ಹೀಗೆಯೇ ಇದೆ'ಯೆಂಬ ಪ್ರತೀತಿಭಾವದ ಹೆಸರು ಶ್ರದ್ಧೆಯಿದೆ.

ಇಲ್ಲಿ ಶ್ರದ್ಧೆಯ ಹೆಸರೇ ದರ್ಶನವಿದೆ. ದರ್ಶನದ ಶಬ್ದಾರ್ಥವು ಸಾಮಾನ್ಯ ಅವಲೋಕನವೆಂದಿದ್ದರೂ ಇಲ್ಲಿ ಪ್ರಸಂಗವಶದಿಂದ ಇದೇ ಧಾತುವಿನ ಅರ್ಥವು ಶ್ರದ್ಧೆಯೆಂದು ತಿಳಿಯಬೇಕು. ಸರ್ವಾರ್ಥಸಿದ್ಧಿನಾಮದ ಸೂತ್ರದ ಟೀಕೆಯಲ್ಲಿ ಹೀಗೆಯೇ ಹೇಳಿದೆ. ಏಕೆಂದರೆ ಸಾಮಾನ್ಯ ಅವಲೋಕನವು ಸಂಸಾರ-ಮೋಕ್ಷಗಳಿಗೆ ಕಾರಣವಿರುವುದಿಲ್ಲ; ಶ್ರದ್ಧೆಯೇ ಸಂಸಾರ-ಮೋಕ್ಷಗಳಿಗೆ ಕಾರಣವಿರುವುದರಿಂದ ಸಂಸಾರದ-ಮೋಕ್ಷದ ಕಾರಣದಲ್ಲಿ ದರ್ಶನದ ಅರ್ಥವನ್ನು ಶ್ರದ್ಧೆಯೆಂದೇ ತಿಳಿಯುವುದು.

ಮತ್ತು ಮಿಥ್ಯಾರೂಪವಾದ ಆ ದರ್ಶನದ ಎಂದರೆ ಶ್ರದ್ಧೆಯ ಹೆಸರು ಮಿಥ್ಯಾದರ್ಶನವಿದೆ. ವಸ್ತುವಿನ ಸ್ವರೂಪವು ಹೇಗೆ ಇಲ್ಲ ಹಾಗೆ ಮನ್ನಿಸುವಂಥ, ಹೇಗೆ ಇದೆ ಹಾಗೆ ಮನ್ನಿಸದಂಥ ವಿಪರೀತಾಭಿನಿವೇಶವನ್ನು ಎಂದರೆ ವಿಪರೀತಾಭಿಪ್ರಾಯವನ್ನು ಆಧರಿಸಿ ಮಿಥ್ಯಾದರ್ಶನವಿದೆ.

**ಪ್ರಶ್ನೆ** :- ಕೇವಲಜ್ಞಾನವಿಲ್ಲದೆ ಎಲ್ಲ ಪದಾರ್ಥಗಳು ಯಥಾರ್ಥವಾಗಿ ಭಾಸವಾಗುವುದಿಲ್ಲ ಮತ್ತು ಯಥಾರ್ಥವಾಗಿ ಭಾಸವಾದಲ್ಲದೆ ಯಥಾರ್ಥ ಶ್ರದ್ಧೆಯಾಗುವುದಿಲ್ಲವೆಂದಬಳಿಕ ಮಿಥ್ಯಾದರ್ಶನದ ತ್ಯಾಗ ಹೇಗಾಗುವುದು?

**ಉತ್ತರ** :- ಪದಾರ್ಥಗಳನ್ನು ತಿಳಿಯುವುದು, ತಿಳಿಯದಿರುವುದು, ಅನ್ಯಥಾ ತಿಳಿಯುವುದಂತೂ ಜ್ಞಾನಾವರಣದ ಅನುಸಾರವಿದೆ; ಮತ್ತು ತಿಳಿದನಂತರವೇ ಪ್ರತೀತಿಯಾಗುವುದು, ತಿಳಿದಲ್ಲದೆ ಪ್ರತೀತಿ ಹೇಗೆ ಬರುವುದು ಇದಂತೂ ಸತ್ಯವಿದೆ. ಆದರೆ ಯಾವ ಪ್ರಕಾರ ಓರ್ವ ಪುರುಷನು ತನಗೆ ಪ್ರಯೋಜನವಿರದಂಥವುಗಳನ್ನು ಅನ್ಯಥಾ ತಿಳಿದರೆ ಅಥವಾ ಯಥಾರ್ಥ ತಿಳಿದರೆ ಮತ್ತು ತಿಳಿದಂತೆಯೇ ಮನ್ನಿಸಿದರೆ ಅದರಿಂದ ಅವನದೇನೂ ಒಳಿತು ಕೆಡಕು ಆಗುವುದಿಲ್ಲ, ಅದರಿಂದ ಅವನು ಪೆದ್ದ ಅಥವಾ ಪ್ರವೀಣನೆಂಬ ಹೆಸರು ಪಡೆಯುವುದಿಲ್ಲ; ಮತ್ತು ಪ್ರಯೋಜನವು ಕಂಡುಬರುತ್ತಿರುವಂಥವುಗಳನ್ನು ಒಂದು ವೇಳೆ ಅನ್ಯಥಾ ತಿಳಿದರೆ ಮತ್ತು ಹಾಗೇ ಮನ್ನಿಸಿದರೆ ಕೆಡಕಾಗುತ್ತದೆ, ಆದುದರಿಂದ ಅವನನ್ನು ಪೆದ್ದನೆಂದು ಹೇಳುತ್ತಾರೆ; ಇನ್ನು ಅವನ್ನು ಯಥಾರ್ಥ ತಿಳಿದರೆ ಮತ್ತು ಹಾಗೇ ಮನ್ನಿಸಿದರೆ ಒಳಿತಾಗುವುದರಿಂದ ಅವನನ್ನು ಪ್ರವೀಣನೆಂದು ಹೇಳುತ್ತಾರೆ. ಅದೇ ಪ್ರಕಾರ ಜೀವನು ಪ್ರಯೋಜನವಿರದಂಥವುಗಳನ್ನು ಅನ್ಯಥಾ ತಿಳಿದರೆ ಅಥವಾ ಯಥಾರ್ಥ ತಿಳಿದರೆ ಮತ್ತು ತಿಳಿದಂತೆಯೇ ಮನ್ನಿಸಿದರೆ ಇವನದೇನೂ ಒಳಿತು-ಕೆಡಕು ಆಗುವುದಿಲ್ಲ; ಅದರಿಂದ ಮಿಥ್ಯಾದೃಷ್ಟಿ ಅಥವಾ ಸಮ್ಯಗ್ದೃಷ್ಟಿಯೆಂಬ ಹೆಸರು ಪ್ರಾಪ್ತವಾಗುವುದಿಲ್ಲ; ಮತ್ತು ಪ್ರಯೋಜನವು ಕಂಡುಬರುವಂಥವುಗಳನ್ನು ಒಂದು ವೇಳೆ ಅನ್ಯಥಾ ತಿಳಿದರೆ ಮತ್ತು ಹಾಗೇ ಶ್ರದ್ಧೆ ಮಾಡಿದರೆ ಕೆಡಕಾಗುವುದರಿಂದ ಅವನನ್ನು ಮಿಥ್ಯಾದೃಷ್ಟಿಯೆಂದು ಹೇಳುತ್ತಾರೆ; ಇನ್ನು ಅವನ್ನು ಯಥಾರ್ಥ ತಿಳಿದರೆ ಮತ್ತು ಹಾಗೇ ಶ್ರದ್ಧೆ ಮಾಡಿದರೆ ಒಳಿತಾಗುವುದರಿಂದ ಅವನನ್ನು ಸಮ್ಯಗ್ದೃಷ್ಟಿಯೆಂದು ಹೇಳುತ್ತಾರೆ.

ಅಪ್ರಯೋಜನಭೂತ ಅಥವಾ ಪ್ರಯೋಜನಭೂತ ಪದಾರ್ಥಗಳನ್ನು ತಿಳಿಯದಿರುವಲ್ಲಿ ಅಥವಾ ಯಥಾರ್ಥ- ಅಯಥಾರ್ಥ ತಿಳಿಯುವುದರಲ್ಲಿ ಜ್ಞಾನದ ಹೀನಾಧಿಕತೆಯಾಗುವುದಿಷ್ಟೇ ಜೀವದ ಒಳಿತು-ಕೆಡಕಿದೆ. ಮತ್ತು ಅದರ ನಿಮಿತ್ತವಂತೂ ಜ್ಞಾನಾವರಣ ಕರ್ಮವಿದೆ. ಆದರೆ ಅಲ್ಲಿ ಪ್ರಯೋಜನಭೂತ ಪದಾರ್ಥಗಳ ಶ್ರದ್ಧೆಯನ್ನು ಅನ್ಯಥಾ ಅಥವಾ ಯಥಾರ್ಥ ಮಾಡುವುದರಿಂದ ಇನ್ನೂ ಒಂದಿಷ್ಟು ಜೀವದ ಒಳಿತು-ಕೆಡಕು ಆಗುತ್ತದೆ, ಆದುದರಿಂದ ಅದರ ನಿಮಿತ್ತವು ದರ್ಶನಮೋಹನಾಮದ ಕರ್ಮವಿದೆಯೆಂದು ತಿಳಿಯಬೇಕು.

**ಪ್ರಶ್ನೆ** :- ತಿಳಿಯುವಂತೆಯೇ ಶ್ರದ್ಧೆ ಮಾಡುವುದರಿಂದ ಶ್ರದ್ಧೆಯು ಜ್ಞಾನಾವರಣಕ್ಕನುಸಾರವಾಗಿಯೇ ಭಾಸವಾಗುತ್ತದೆ, ಇಲ್ಲಿ ದರ್ಶನಮೋಹದ ವಿಶೇಷ ನಿಮಿತ್ತವು ಹೇಗೆ ಭಾಸವಾಗುತ್ತದೆ ?

**ಉತ್ತರ** :- ಪ್ರಯೋಜನಭೂತ ಜೀವಾದಿತತ್ತ್ವಗಳ ಶ್ರದ್ಧೆಮಾಡಲು ಯೋಗ್ಯವಾದ ಜ್ಞಾನಾವರಣದ ಕ್ಷಯೋಪಶಮವಂತೂ ಎಲ್ಲ ಸಂಜ್ಞೀ ಪಂಚೇಂದ್ರಿಯಗಳಿಗೆ ಆಗಿದೆ. ಆದರೆ ದ್ರವ್ಯಲಿಂಗಿ ಮುನಿಗಳು ಹನ್ನೊಂದು ಅಂಗಗಳವರೆಗೆ ಪಠಿಸುತ್ತಾರೆ ಮತ್ತು ಗ್ರೈವೇಯಕದ ದೇವಗಳು ಅವಧಿಜ್ಞಾನದಿಂದ ಯುಕ್ತರಿದ್ದು ಅವರಿಗೆ ಜ್ಞಾನಾವರಣದ ಕ್ಷಯೋಪಶಮವು ಅಧಿಕವಿದ್ದರೂ ಕೂಡ ಪ್ರಯೋಜನಭೂತ ಜೀವಾದಿಗಳ ಶ್ರದ್ಧೆಯಿರುವುದಿಲ್ಲ; ಮತ್ತು ತಿರ್ಯಂಚಾದಿಗಳಿಗೆ ಜ್ಞಾನಾವರಣದ ಕ್ಷಯೋಪಶಮವು ಅಲ್ಪವಿದ್ದರೂ ಕೂಡ ಪ್ರಯೋಜನಭೂತ ಜೀವಾದಿಗಳ

ಶ್ರದ್ಧೆಯಿರುತ್ತದೆ. ಆದುದರಿಂದ ಜ್ಞಾನಾವರಣಕ್ಕನುಸಾರವಾಗಿಯೇ ಶ್ರದ್ಧೆಯಾಗುವುದಿಲ್ಲ; ಬೇರೆ ಯಾವುದೇ ಕರ್ಮವಿದೆ ಮತ್ತು ಅದು ದರ್ಶನಮೋಹವಿದೆಯೆಂದು ತಿಳಿದುಬರುತ್ತದೆ. ಅದರ ಉದಯದಿಂದ ಜೀವನಿಗೆ ಮಿಥ್ಯಾದರ್ಶನವಾದಾಗ ಅವನು ಪ್ರಯೋಜನಭೂತ ಜೀವಾದಿತತ್ತ್ವಗಳ ಅನ್ಯಥಾ ಶ್ರದ್ಧೆ ಮಾಡುತ್ತಾನೆ.

## ಪ್ರಯೋಜನಭೂತ-ಅಪ್ರಯೋಜನಭೂತ ಪದಾರ್ಥಗಳು :-

**ಪ್ರಶ್ನೆ :-** ಪ್ರಯೋಜನಭೂತ ಮತ್ತು ಅಪ್ರಯೋಜನಭೂತವಾದ ಪದಾರ್ಥಗಳು ಯಾವವಿವೆ ?

**ಉತ್ತರ :-** ಈ ಜೀವನಿಗೆ ದುಃಖವಾಗಕೂಡದು ಮತ್ತು ಸುಖವಾಗಬೇಕೆಂಬುದೊಂದೇ ಪ್ರಯೋಜನವಿದೆ. ಯಾವ ಜೀವಕ್ಕೂ ಬೇರಾವ ಪ್ರಯೋಜನವೂ ಇಲ್ಲ. ಮತ್ತು ದುಃಖವಾಗದಿರುವುದು, ಸುಖವಾಗುವುದು ಎರಡೂ ಒಂದೇ ಇವೆ; ಏಕೆಂದರೆ ದುಃಖದ ಅಭಾವವೇ ಸುಖವಿದೆ. ಮತ್ತು ಈ ಪ್ರಯೋಜನದ ಸಿದ್ಧಿಯು ಜೀವಾದಿಗಳಲ್ಲಿ ಸತ್ಯಶ್ರದ್ಧೆ ಮಾಡುವುದರಿಂದ ಆಗುತ್ತದೆ. ಹೇಗೆಂಬುದನ್ನು ಹೇಳುತ್ತಾರೆ,-

ದುಃಖವನ್ನು ದೂರಮಾಡುವಲ್ಲಿ ಮೊದಲಂತೂ ಸ್ವ-ಪರಗಳ ಜ್ಞಾನವು ಅವಶ್ಯವಾಗಿ ಇರಬೇಕಾಗುವುದು. ಒಂದು ವೇಳೆ ಸ್ವ-ಪರಗಳ ಜ್ಞಾನವಿಲ್ಲದಿದ್ದರೆ ಮೊದಲು ತನ್ನನ್ನು ತಿಳಿದುಕೊಂಡಲ್ಲದೆ ತನ್ನ ದುಃಖವನ್ನು ಹೇಗೆ ದೂರ ಮಾಡುವುದು ? ಅಥವಾ ಸ್ವ-ಪರಗಳನ್ನು ಒಂದೆಂದು ತಿಳಿದುಕೊಂಡು ತನ್ನ ದುಃಖ ದೂರಮಾಡುವ ಸಲುವಾಗಿ ಪರದ ಉಪಚಾರ ಮಾಡಿದರೆ ತನ್ನ ದುಃಖವು ಹೇಗೆ ದೂರವಾಗುವುದು ? ಅಥವಾ ತನ್ನಿಂದ ಪರಗಳು ಭಿನ್ನವಿದ್ದರೂ ಇವನು ಪರದಲ್ಲಿ ಅಹಂಕಾರ-ಮಮಕಾರ ಮಾಡಿದರೆ ಅದರಿಂದ ದುಃಖವೇ ಆಗುತ್ತದೆ. ಸ್ವ-ಪರಗಳ ಜ್ಞಾನವಾದ ನಂತರವೇ ದುಃಖವು ದೂರವಾಗುತ್ತದೆ ಮತ್ತು ಸ್ವ-ಪರಗಳ ಜ್ಞಾನವು ಜೀವ-ಅಜೀವದ ಜ್ಞಾನವಾದ ಮೇಲೆಯೇ ಆಗುತ್ತದೆ; ಏಕೆಂದರೆ ತಾನು ಸ್ವಯಂ ಜೀವವಿದ್ದು ಶರೀರ ಮೊದಲಾದವು ಅಜೀವವಿವೆ.

ಲಕ್ಷಣ ಮೊದಲಾದವುಗಳಿಂದ ಜೀವ-ಅಜೀವದ ಪರಿಚಯವಾದರೆ ತನ್ನ ಮತ್ತು ಪರದ ಭಿನ್ನತೆಯು ಭಾಸವಾಗುತ್ತದೆ; ಆದುದರಿಂದ ಜೀವ-ಅಜೀವಗಳನ್ನು ತಿಳಿಯಬೇಕು. ಅಥವಾ ಜೀವ-ಅಜೀವದ ಜ್ಞಾನವಾದ ಮೇಲೆ ಯಾವ ಪದಾರ್ಥಗಳ ಅನ್ಯಥಾ ಶ್ರದ್ಧೆಯಿಂದ ದುಃಖವಾಗುತ್ತಿತ್ತು ಅದು ಅವುಗಳ ಯಥಾರ್ಥ ಜ್ಞಾನವಾಗುವುದರಿಂದ ದೂರವಾಗುತ್ತದೆ; ಆದುದರಿಂದ ಜೀವ-ಅಜೀವಗಳನ್ನು ತಿಳಿಯಬೇಕು.

ದುಃಖದ ಕಾರಣವಂತೂ ಕರ್ಮಬಂಧನವಿದ್ದು ಅದರ ಕಾರಣವು ಮಿಥ್ಯಾತ್ವ ಮೊದಲಾದ ಆಸ್ರವಗಳಿವೆ. ಒಂದು ವೇಳೆ ಇವನ್ನು ಗುರುತಿಸದಿದ್ದರೆ, ಇವನ್ನು ದುಃಖದ ಮೂಲ ಕಾರಣವೆಂದು ತಿಳಿದುಕೊಳ್ಳದಿದ್ದರೆ ಇವುಗಳ ಅಭಾವ ಹೇಗೆ ಮಾಡುವುದು ಮತ್ತು ಇವುಗಳ ಅಭಾವ ಮಾಡದಿದ್ದರೆ ಕರ್ಮಬಂಧನವೇಕಾಗುವುದಿಲ್ಲ ? ಆದುದರಿಂದ ದುಃಖವೇ ಆಗುತ್ತದೆ. ಅಥವಾ ಮಿಥ್ಯಾತ್ವಾದಿಕ ಭಾವಗಳು ಅವು ದುಃಖಮಯವಿವೆ. ಒಂದು ವೇಳೆ ಅವನ್ನು ಇದ್ದ ಹಾಗೆ ತಿಳಿದುಕೊಳ್ಳದಿದ್ದರೆ ಅವುಗಳ ಅಭಾವ ಮಾಡುವುದಿಲ್ಲ, ಅದರಿಂದ ದುಃಖಿಯಾಗಿಯೇ ಉಳಿಯುವನು; ಆದುದರಿಂದ ಆಸ್ರವವನ್ನು ತಿಳಿಯಬೇಕು.

ಸಮಸ್ತ ದುಃಖದ ಕಾರಣವು ಕರ್ಮದ ಬಂಧನವಿದೆ. ಅದನ್ನು ತಿಳಿದುಕೊಳ್ಳದಿದ್ದರೆ ಅದರಿಂದ ಮುಕ್ತವಾಗುವ ಉಪಾಯ ಮಾಡುವುದಿಲ್ಲ, ಆಗ ಅದರ ನಿಮಿತ್ತದಿಂದ ದುಃಖಿಯಾಗುವನು; ಆದುದರಿಂದ ಬಂಧವನ್ನು ತಿಳಿಯಬೇಕು.

ಆಸ್ರವದ ಅಭಾವ ಮಾಡುವುದು ಅದು ಸಂವರವಿದೆ. ಅದರ ಸ್ವರೂಪ ತಿಳಿದುಕೊಳ್ಳದಿದ್ದರೆ ಅದರಲ್ಲಿ ಪ್ರವೃತ್ತಿ ಮಾಡುವುದಿಲ್ಲ; ಆಗ ಆಸ್ರವವೇ ಉಳಿಯುವುದು, ಅದರಿಂದ ವರ್ತಮಾನದಲ್ಲಿ ಹಾಗೂ ಭವಿಷ್ಯದಲ್ಲಿ ದುಃಖವೇ ಆಗುತ್ತದೆ; ಆದುದರಿಂದ ಸಂವರವನ್ನು ತಿಳಿಯಬೇಕು.

ಎಲ್ಲಾದರೂ ಒಂದಿಷ್ಟು ಕರ್ಮಬಂಧದ ಅಭಾವಮಾಡುವುದರ ಹೆಸರು ನಿರ್ಜರೆಯಿದೆ. ಒಂದು ವೇಳೆ ಅದನ್ನು ತಿಳಿದುಕೊಳ್ಳದಿದ್ದರೆ ಅದರ ಪ್ರವೃತ್ತಿಯ ಉದ್ಯೋಗವಾಗುವುದಿಲ್ಲ, ಆಗ ಸರ್ವಥಾ ಬಂಧವೇ ಉಳಿಯುವುದು, ಅದರಿಂದ ದುಃಖವೇ ಆಗುತ್ತದೆ; ಆದುದರಿಂದ ನಿರ್ಜರೆಯನ್ನು ತಿಳಿಯಬೇಕು.

ಇನ್ನು ಸರ್ವಥಾ ಸಮಸ್ತ ಕರ್ಮಬಂಧದ ಅಭಾವವಾಗುವುದರ ಹೆಸರು ಮೋಕ್ಷವಿದೆ. ಒಂದು ವೇಳೆ ಅದನ್ನು ತಿಳಿದುಕೊಳ್ಳದ್ದಿರೆ ಅದರ ಉಪಾಯ ಮಾಡುವುದಿಲ್ಲ, ಆಗ ಸಂಸಾರದಲ್ಲಿ ಕರ್ಮಬಂಧನದಿಂದ ಉತ್ಪನ್ನವಾಗುವ ದುಃಖಗಳನ್ನೇ ಸಹಿಸಬೇಕಾಗುವುದು; ಆದುದರಿಂದ ಮೋಕ್ಷವನ್ನು ತಿಳಿಯಬೇಕು. ಈ ಪ್ರಕಾರ ಜೀವ ಮೊದಲಾದ ಏಳು ತತ್ತ್ವಗಳನ್ನು ತಿಳಿದುಕೊಳ್ಳಬೇಕು.

ಶಾಸ್ತ್ರಾದಿಗಳ ಮುಖಾಂತರ ಎಂದಾದರೊಮ್ಮೆ ಅವನ್ನು ತಿಳಿದುಕೊಳ್ಳುವನು, ಆದರೆ ಹೇಗಿವೆ ಹಾಗೆ ಪ್ರತೀತಿ ಬಾರದಿದ್ದರೆ ತಿಳಿದುಕೊಳ್ಳುವುದರಿಂದೇನಾಗುವುದು ? ಆದುದರಿಂದ ಅವುಗಳ ಶ್ರದ್ಧೆ ಮಾಡುವುದು ಕಾರ್ಯಕಾರಿಯಿದೆ. ಹೀಗೆ ಜೀವಾದಿ ತತ್ತ್ವಗಳ ಸತ್ಯ ಶ್ರದ್ಧೆ ಮಾಡಿದನಂತರವೇ ದುಃಖವಾಗುವುದರ ಅಭಾವರೂಪವಾದ ಪ್ರಯೋಜನದ ಸಿದ್ಧಿಯಾಗುತ್ತದೆ. ಆದುದರಿಂದ ಜೀವಾದಿ ಪದಾರ್ಥಗಳೇ ಪ್ರಯೋಜನಭೂತವಿವೆಯೆಂದು ತಿಳಿದುಕೊಳ್ಳಬೇಕು.

ಮತ್ತು ಇವುಗಳ ವಿಶೇಷ ಭೇದಗಳು ಪುಣ್ಯ-ಪಾಪಾದಿರೂಪಗಳಿದ್ದು ಅವುಗಳ ಶ್ರದ್ಧೆ ಕೂಡ ಪ್ರಯೋಜನಭೂತವಿದೆ. ಏಕೆಂದರೆ ಸಾಮಾನ್ಯಕ್ಕಿಂತ ವಿಶೇಷವು ಬಲಿಷ್ಠವಿದೆ. ಹೀಗೆ ಈ ಪದಾರ್ಥಗಳಂತೂ ಪ್ರಯೋಜನಭೂತಗಳಿರುವುದರಿಂದ ಇವುಗಳ ಯಥಾರ್ಥ ಶ್ರದ್ಧೆ ಮಾಡಿದ ಮೇಲಂತೂ ದುಃಖವಾಗುವುದಿಲ್ಲ, ಸುಖವಾಗುತ್ತದೆ; ಮತ್ತು ಇವುಗಳ ಯಥಾರ್ಥ ಶ್ರದ್ಧೆ ಮಾಡದಿದ್ದರೆ ದುಃಖವಾಗುತ್ತದೆ, ಸುಖವಾಗುವುದಿಲ್ಲ.

ಇವನ್ನು ಹೊರತು ಪಡಿಸಿ ಅನ್ಯಪದಾರ್ಥಗಳು ಅವು ಅಪ್ರಯೋಜನಭೂತವಿವೆ, ಏಕೆಂದರೆ ಅವುಗಳ ಯಥಾರ್ಥ ಶ್ರದ್ಧೆ ಮಾಡಿರಿ ಅಥವಾ ಬಿಡಿರಿ ಅವುಗಳ ಶ್ರದ್ಧೆಯು ಯಾವ ಸುಖ-ದುಃಖಕ್ಕೆ ಕಾರಣವಾಗಿಲ್ಲ.

**ಪ್ರಶ್ನೆ ಃ-** ಮೊದಲು ಜೀವ-ಅಜೀವ ಪದಾರ್ಥಗಳನ್ನು ಹೇಳಿದಿರಿ ಅವುಗಳಲ್ಲಂತೂ ಎಲ್ಲ ಪದಾರ್ಥಗಳು ಬಂದು ಬಿಟ್ಟವು; ಅವುಗಳಲ್ಲದೆ ಅಪ್ರಯೋಜನಭೂತವಾದ ಪದಾರ್ಥಗಳು ಇನ್ನಾವವು ಉಳಿದವು ?

**ಉತ್ತರ ಃ-** ಎಲ್ಲ ಪದಾರ್ಥಗಳಂತೂ ಜೀವ-ಅಜೀವದಲ್ಲಿ ಗರ್ಭಿತವಿವೆ, ಆದರೆ ಆ ಜೀವ-ಅಜೀವಗಳ ವಿಶೇಷಗಳು ಬಹಳಷ್ಟು ಇವೆ. ಅವುಗಳಲ್ಲಿ ಯಾವ ವಿಶೇಷಗಳೊಡನೆ ಜೀವ-ಅಜೀವದ ಯಥಾರ್ಥ ಶ್ರದ್ಧೆ ಮಾಡುವುದರಿಂದ ಸ್ವಪರಗಳ-ಶ್ರದ್ಧೆಯಾಗುವುದು, ರಾಗಾದಿಗಳನ್ನು ದೂರಮಾಡುವ ಶ್ರದ್ಧೆಯಾಗುವುದು, ಅವುಗಳಿಂದ ಸುಖವು ಉತ್ಪನ್ನವಾಗುವುದು; ಮತ್ತು ಅಯಥಾರ್ಥ ಶ್ರದ್ಧೆ ಮಾಡುವುದರಿಂದ ಸ್ವ-ಪರಗಳ ಶ್ರದ್ಧೆಯಾಗುವುದಿಲ್ಲ, ರಾಗಾದಿಗಳನ್ನು ದೂರಮಾಡುವ ಶ್ರದ್ಧೆಯಾಗುವುದಿಲ್ಲ; ಆದುದರಿಂದ ದುಃಖವು ಉತ್ಪನ್ನವಾಗುವುದು; ಆ ವಿಶೇಷಗಳೊಡನೆ ಜೀವ-ಅಜೀವ ಪದಾರ್ಥಗಳಂತೂ ಪ್ರಯೋಜನಭೂತವೆಂದು ತಿಳಿದುಕೊಳ್ಳಬೇಕು.

ಯಾವ ವಿಶೇಷಗಳೊಡನೆ ಜೀವ-ಅಜೀವದ ಯಥಾರ್ಥ ಶ್ರದ್ಧೆ ಮಾಡುವುದರಿಂದ ಅಥವಾ ಮಾಡದಿರುವುದರಿಂದ ಸ್ವ-ಪರಗಳ ಶ್ರದ್ಧೆಯಾಗುವುದರ ಅಥವಾ ಆಗದಿರುವುದರ, ಹಾಗೂ ರಾಗಾದಿಗಳನ್ನು ದೂರಮಾಡುವ ಶ್ರದ್ಧೆಯಾಗುವುದರ ಅಥವಾ ಆಗದಿರುವುದರ ಯಾವ ನಿಯಮವಿಲ್ಲ; ಆ ವಿಶೇಷಗಳೊಡನೆ ಜೀವ-ಅಜೀವ ಪದಾರ್ಥಗಳು ಅಪ್ರಯೋಜನಭೂತವೆಂದು ತಿಳಿದುಕೊಳ್ಳಬೇಕು.

ಹೇಗೆಂದರೆ-ಜೀವ ಮತ್ತು ಶರೀರದ ಚೈತನ್ಯ ಹಾಗೂ ಮೂರ್ತತ್ವಾದಿ ವಿಶೇಷಗಳಿಂದ ಶ್ರದ್ಧೆ ಮಾಡುವುದಂತೂ ಪ್ರಯೋಜನಭೂತವಿದೆ; ಮತ್ತು ಮನುಷ್ಯಾದಿ ಪರ್ಯಾಯಗಳ ಹಾಗೂ ಘಟ-ಪಟಾದಿಗಳ ಅವಸ್ಥೆ, ಆಕಾರ ಮೊದಲಾದ ವಿಶೇಷಗಳಿಂದ ಶ್ರದ್ಧೆ ಮಾಡುವುದು ಅಪ್ರಯೋಜನಭೂತವಿದೆ. ಇದೇ ಪ್ರಕಾರ ಅನ್ಯ ತಿಳಿಯಬೇಕು.

ಈ ಪ್ರಕಾರ ಹೇಳಲಾದ ಆ ಪ್ರಯೋಜನಭೂತ ಜೀವಾದಿ ತತ್ತ್ವಗಳ ಅಯಥಾರ್ಥ ಶ್ರದ್ಧೆಯ ಹೆಸರು ಮಿಥ್ಯಾದರ್ಶನವಿದೆಯೆಂದು ತಿಳಿದುಕೊಳ್ಳಬೇಕು.

## ಮಿಥ್ಯಾದರ್ಶನದ ಪ್ರವೃತ್ತಿ

ಈಗ ಸಂಸಾರಿ ಜೀವರುಗಳಿಗೆ ಮಿಥ್ಯಾದರ್ಶನದ ಪ್ರವೃತ್ತಿಯು ಹೇಗೆ ಕಂಡು ಬರುತ್ತದೆಯೆಂಬುದನ್ನು ಹೇಳುತ್ತಾರೆ. ಇಲ್ಲಿ ಶ್ರದ್ಧೆಯ ವರ್ಣನೆಯನ್ನೇನೋ ಮಾಡುವುದಿದೆ, ಆದರೆ ತಿಳಿದರೇನೇ ಶ್ರದ್ಧೆ ಮಾಡುವನು, ಆದುದರಿಂದ ತಿಳಿದುಕೊಳ್ಳುವುದರ ಮುಖ್ಯತೆಯಿಂದ ವರ್ಣನೆ ಮಾಡಲಾಗುತ್ತದೆ.

### ಜೀವ-ಅಜೀವತತ್ತ್ವಗಳ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-

ಅನಾದಿಕಾಲದಿಂದ ಜೀವನು ಕರ್ಮದ ನಿಮಿತ್ತದಿಂದ ಅನೇಕ ಪರ್ಯಾಯಗಳನ್ನು ಧಾರಣ ಮಾಡುತ್ತಾನೆ. ಅಲ್ಲಿ ಪೂರ್ವ ಪರ್ಯಾಯವನ್ನು ಬಿಡುತ್ತಾನೆ, ನವೀನ ಪರ್ಯಾಯವನ್ನು ಧಾರಣ ಮಾಡುತ್ತಾನೆ. ಆ ಪರ್ಯಾಯವೆಂದರೆ ಒಂದಂತೂ ಸ್ವಯಂ ಆತ್ಮ ಮತ್ತು ಅನಂತ ಪುದ್ಗಲಪರಮಾಣುಮಯವಾದ ಶರೀರಗಳಿಂದ ಏಕಪಿಂಡ ಬಂಧನರೂಪವಿದೆ. ಮತ್ತು ಜೀವನಿಗೆ ಆ ಪರ್ಯಾಯದಲ್ಲಿ 'ಇವನು ನಾನಿದ್ದೇನೆ'ಂಬ ಅಹಂಬುದ್ಧಿಯಿರುತ್ತದೆ. ಮತ್ತು ಸ್ವಯಂ ಜೀವನಿದ್ದು ಅವನ ಸ್ವಭಾವವು ಜ್ಞಾನಾದಿಗಳಿವೆ ಹಾಗೂ ವಿಭಾವಗಳು ಕ್ರೋಧಾದಿಗಳಿವೆ, ಮತ್ತು ಪುದ್ಗಲ ಪರಮಾಣುಗಳ ಸ್ವಭಾವವು ವರ್ಣ, ಗಂಧ, ರಸ, ಸ್ಪರ್ಶಾದಿಗಳಿದ್ದು ಅವೆಲ್ಲವುಗಳನ್ನು ತನ್ನ ಸ್ವರೂಪವೆಂದು ಮನ್ನಿಸುತ್ತಾನೆ,

'ಇವು ನನ್ನವಿವೆ'ಯೆಂದು ಅವುಗಳಲ್ಲಿ ಮಮತ್ವ ಬುದ್ಧಿಯಿರುತ್ತದೆ. ಮತ್ತು ಸ್ವಯಂ ಜೀವನಿದ್ದು, ಅವನ ಜ್ಞಾನಾದಿಗಳ ಹಾಗೂ ಕ್ರೋಧಾದಿಗಳ ಅಧಿಕತೆ-ಹೀನತೆ ರೂಪದ ಅವಸ್ಥೆಯಾಗುತ್ತದೆ ಮತ್ತು ಪುದ್ಗಲ ಪರಮಾಣುಗಳ ಅವಸ್ಥೆಯು ವರ್ಣಾದಿಗಳ ಬದಲಾವಣೆ ರೂಪವಾಗಿ ಆಗುತ್ತದೆ ಅವೆಲ್ಲವುಗಳನ್ನು ತನ್ನ ಅವಸ್ಥೆಯೆಂದು ಮನ್ನಿಸುತ್ತಾನೆ 'ಇದು ನನ್ನ ಅವಸ್ಥೆಯಿದೆ'ಯೆಂದು ಮಮತ್ವಬುದ್ಧಿ ಮಾಡುತ್ತಾನೆ.

ಜೀವ ಮತ್ತು ಶರೀರದಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿರುವುದರಿಂದ ಆಗುತ್ತಿರುವ ಕ್ರಿಯೆಗಳನ್ನು ತನ್ನವೆಂದು ಮನ್ನಿಸುತ್ತಾನೆ. ದರ್ಶನ-ಜ್ಞಾನವು ತನ್ನ ಸ್ವಭಾವವಿದ್ದು, ಅದರ ಪ್ರವೃತ್ತಿಗೆ ನಿಮಿತ್ತ ಮಾತ್ರವಾಗಿ ಶರೀರದ ಅಂಗರೂಪಗಳಾದ ಸ್ಪರ್ಶನ ಮೊದಲಾದ ದ್ರವ್ಯೇಂದ್ರಿಯಗಳಿವೆ; ಇವನು ಅವನ್ನು ಒಂದೆಂದು ನಂಬಿ ನಾನು

ಕೈಯಿಂದ ಸ್ಪರ್ಶ ಮಾಡಿದೆ, ಜಿಹ್ವೆಯಿಂದ ಸ್ವಾದ ತಕ್ಕೊಂಡೆ, ನಾಸಿಕದಿಂದ ವಾಸನೆ ನೋಡಿದೆ, ಕಣ್ಣುಗಳಿಂದ ಕಂಡೆ, ಕಿವಿಗಳಿಂದ ಕೇಳಿದೆನೆಂದು ಮನ್ನಿಸುತ್ತಾನೆ. ಹೃದಯಸ್ಥಾನದಲ್ಲಿ ಅರಳಿದ ಅಷ್ಟದಲ ಕಮಲಾಕಾರದ ಮನೋವರ್ಗಣ ರೂಪವಾದ ದ್ರವ್ಯ ಮನಸ್ಸಿದೆ, ಅದು ದೃಷ್ಟಿಗೋಚರವಾಗದಂಥದ್ದಿದ್ದು ಶರೀರದ ಒಂದು ಅಂಗವಿದೆ; ಅದರ ನಿಮಿತ್ತವಾದ ಮೇಲೆ ಸ್ಮರಣೆಯರೂಪವಾದ ಜ್ಞಾನದ ಪ್ರವೃತ್ತಿಯಾಗುತ್ತದೆ. ಈ ದ್ರವ್ಯ ಮನಸ್ಸನ್ನು ಮತ್ತು ಜ್ಞಾನವನ್ನು ಒಂದೆಂದು ನಂಬಿ ನಾನು ಮನಸ್ಸಿನಿಂದ ತಿಳಿದೆನೆಂದು ಮನ್ನಿಸುತ್ತಾನೆ.

ತನಗೆ ಮಾತನಾಡುವ ಇಚ್ಛೆಯಾದಾಗ ಹೇಗೆ ಮಾತುಗಳು ಸಂಭವಿಸುತ್ತವೆ ಹಾಗೆ ತನ್ನ ಪ್ರದೇಶಗಳನ್ನು ಅಲ್ಲಾಡಿಸುತ್ತಾನೆ, ಆಗ ಏಕಕ್ಷೇತ್ರಾವಗಾಹಸಂಬಂಧದ ಕಾರಣ ಶರೀರದ ಅಂಗಗಳೂ ಅಲ್ಲಾಡುತ್ತವೆ. ಅವುಗಳ ನಿಮಿತ್ತದಿಂದ ಭಾಷಾವರ್ಗಣಾರೂಪದ ಪುದ್ಗಲಗಳು ವಚನರೂಪವಾಗಿ ಪರಿಣಮಿಸುತ್ತವೆ; ಇವೆಲ್ಲವುಗಳನ್ನು ಒಂದೆಂದು ನಂಬಿ ನಾನು ಮಾತನಾಡುತ್ತೇನೆಂದು ಮನ್ನಿಸುತ್ತಾನೆ.

ತನಗೆ ಗಮನಾದಿ ಕ್ರಿಯೆಗಳ ಅಥವಾ ವಸ್ತುಗ್ರಹಣಾದಿಗಳ ಇಚ್ಛೆಯಾದಾಗ ಕಾರ್ಯಕ್ಕೆ ಅನುಕೂಲವಾಗಿ ತನ್ನ ಪ್ರದೇಶಗಳನ್ನು ಅಲ್ಲಾಡಿಸುತ್ತಾನೆ. ಅಲ್ಲಿ ಏಕಕ್ಷೇತ್ರಾವಗಾಹದ ಕಾರಣ ಶರೀರದ ಅಂಗಗಳೂ ಅಲ್ಲಾಡಿದಾಗ ತನ್ನ ಪ್ರದೇಶಗಳು ಕೂಡ ಅಲ್ಲಾಡುತ್ತವೆ; ಇವೆಲ್ಲವುಗಳನ್ನು ಒಂದೆಂದು ನಂಬಿ ನಾನು ಗಮನಾದಿಕಾರ್ಯ ಮಾಡುತ್ತೇನೆ, ನಾನು ವಸ್ತುವಿನ ಗ್ರಹಣ ಮಾಡುತ್ತೇನೆ ಅಥವಾ ನಾನು ಮಾಡಿದ್ದೇನೆ. ಇವೇ ಮೊದಲಾದ ರೂಪದಿಂದ ಮನ್ನಿಸುತ್ತಾನೆ.

ಜೀವನಿಗೆ ಕಷಾಯಭಾವಗಳಾದಾಗ ಶರೀರದ ಚೇಷ್ಟೆಯು ಅವುಗಳ ಅನುಸಾರ ಆಗಿಬಿಡುತ್ತದೆ. ಹೇಗೆಂದರೆ- ಕ್ರೋಧವುಂಟಾದಾಗ ಕಣ್ಣುಗಳು ಕೆಂಪಾಗುತ್ತವೆ, ಹಾಸ್ಯವು ಉತ್ಪನ್ನವಾದಾಗ ಮುಖವು ಪ್ರಫುಲ್ಲವಾಗುತ್ತದೆ, ಪುರುಷವೇದಾದಿಗಳಾದಾಗ ಲಿಂಗದಲ್ಲಿ ಕಠಿಣತ್ವ ಮೊದಲಾದವುಗಳಾಗುತ್ತವೆ; ಇವೆಲ್ಲವುಗಳನ್ನು ಒಂದೆಂದು ನಂಬಿ ಇವೆಲ್ಲಕಾರ್ಯಗಳನ್ನು ನಾನು ಮಾಡಿದೆನೆಂದು ಮನ್ನಿಸುತ್ತಾನೆ. ಮತ್ತು ಶರೀರದಲ್ಲಿ ಶೀತ, ಉಷ್ಣ, ಕ್ಷುಧೆ, ತೃಷೆ, ರೋಗ ಇತ್ಯಾದಿ ಅವಸ್ಥೆಗಳಾಗುತ್ತವೆ; ಅವುಗಳ ನಿಮಿತ್ತದಿಂದ ಮೋಹಭಾವದ ಮುಖಾಂತರ ಸ್ವಯಂ ಸುಖ ದುಃಖ ಮನ್ನಿಸುತ್ತಾನೆ; ಇವೆಲ್ಲವುಗಳನ್ನು ಒಂದೆಂದು ತಿಳಿದುಕೊಂಡು ಶೀತಾದಿಗಳು ಹಾಗೂ ಸುಖ-ದುಃಖಗಳು ತನಗೇ ಆದುವೆಂದು ಮನ್ನಿಸುತ್ತಾನೆ.

ಶರೀರದ ಪರಮಾಣುಗಳ ಸೇರಿಕೆ-ಅಗಲುವಿಕೆಗಳಾಗುವುದರಿಂದ ಅಥವಾ ಅವುಗಳ ಅವಸ್ಥೆ ಬದಲಿಸುವುದರಿಂದ ಇಲ್ಲವೆ ಶರೀರ ಸ್ಕಂಧಗಳ ತುಂಡಾಗುವುದರಿಂದ ಸ್ಥೂಲ-ಕೃಶಾದಿಗಳು, ಬಾಲವೃದ್ಧಾದಿಗಳು ಅಥವಾ ಅಂಗಹೀನಾದಿಗಳಾಗುತ್ತವೆ ಮತ್ತು ಅದಕ್ಕನುಸರಿಸಿ ತನ್ನ ಪ್ರದೇಶಗಳ ಸಂಕೋಚ-ವಿಸ್ತಾರಗಳಾಗುತ್ತವೆ; ಇವೆಲ್ಲವನ್ನು ಒಂದೆಂದು ನಂಬಿ ನಾನು ಸ್ಥೂಲನಿದ್ದೇನೆ, ನಾನು ಕೃಶನಿದ್ದೇನೆ, ನಾನು ಬಾಲಕನಿದ್ದೇನೆ, ನಾನು ವೃದ್ಧನಿದ್ದೇನೆ, ಈ ನನ್ನ ಅವಯವಗಳು ಭಂಗವಾಗಿವೆ ಇತ್ಯಾದಿರೂಪವಾಗಿ ಮನ್ನಿಸುತ್ತಾನೆ.

ಶರೀರದ ಅಪೇಕ್ಷೆಯಿಂದ ಗತಿ ಕುಲಾದಿಗಳಾಗುತ್ತವೆ ಅವನ್ನು ತನ್ನವೆಂದು ನಂಬಿ ನಾನು ಮನುಷ್ಯನಿದ್ದೇನೆ, ನಾನು ತಿರ್ಯಂಚನಿದ್ದೇನೆ, ನಾನು ಕ್ಷತ್ರಿಯನಿದ್ದೇನೆ, ನಾನು ವೈಶ್ಯನಿದ್ದೇನೆ. ಇತ್ಯಾದಿರೂಪದಿಂದ ಮನ್ನಿಸುತ್ತಾನೆ.

ಮತ್ತು ಶರೀರದ ಸಂಯೋಗ ಹಾಗೂ ವಿಯೋಗದ ಅಪೇಕ್ಷೆಯಿಂದ ಜನ್ಮ-ಮರಣಗಳಾಗುತ್ತವೆ, ಅವನ್ನು ತನ್ನ ಜನ್ಮ-ಮರಣಗಳೆಂದು ನಂಬಿ ನಾನು ಉತ್ಪನ್ನನಾದೆನು ನಾನು ಸತ್ತುಹೋಗುವೆನೆಂದು ಮನ್ನಿಸುತ್ತಾನೆ.

ಶರೀರದ ಅಪೇಕ್ಷೆಯಿಂದ ಅನ್ಯವಸ್ತುಗಳೊಡನೆ ಸಂಬಂಧ ಕಲ್ಪಿಸುತ್ತಾನೆ. ಯಾರಿಂದ ಶರೀರದ ಉತ್ಪತ್ತಿಯಾಗಿದೆ ಅವರನ್ನು ನನ್ನ ತಂದೆ-ತಾಯಿಯೆಂದು ಮನ್ನಿಸುತ್ತಾನೆ; ಆ ಶರೀರವನ್ನು ರಮಿಸುವವರನ್ನು ತನ್ನ ರಮಣಿಯೆಂದು ಮನ್ನಿಸುತ್ತಾನೆ, ಆ ಶರೀರದಿಂದ ಉತ್ಪನ್ನವಾದವರನ್ನು ಮಕ್ಕಳೆಂದು ಮನ್ನಿಸುತ್ತಾನೆ; ಆ ಶರೀರಕ್ಕೆ ಉಪಕಾರಿಯಾದವರನ್ನು ಮಿತ್ರರೆಂದೂ ಅಪಕಾರಿಯಾದವರನ್ನು ಶತ್ರುಗಳೆಂದೂ ಮನ್ನಿಸುತ್ತಾನೆ. ಇತ್ಯಾದಿರೂಪದ ಮನ್ನಣೆಯಿರುತ್ತದೆ.

ಹೆಚ್ಚೇನು ಹೇಳುವುದು ? ಒಂದಿಲ್ಲೊಂದು ರೀತಿಯಿಂದ ತನ್ನನ್ನು ಮತ್ತು ಶರೀರವನ್ನು ಒಂದೆಂದೇ ಮನ್ನಿಸುತ್ತಾನೆ.

ಇಂದ್ರಿಯಾದಿಗಳ ಹೆಸರನ್ನಂತೂ ಇಲ್ಲಿ ಹೇಳಿದೆ, ಆದರೆ ಇವನಿಗಂತೂ ಯಾವುದರ ಗಮ್ಯವಿಲ್ಲ. ಎಚ್ಚರವಿಲ್ಲದೆ ಪರ್ಯಾಯದಲ್ಲಿ ಅಹಂಬುದ್ಧಿಧಾರಣ ಮಾಡುತ್ತಾನೆ. ಅದರ ಕಾರಣವೇನೆಂಬುದನ್ನು ತಿಳಿಸಿಕೊಡುತ್ತಾರೆ-

ಈ ಆತ್ಮನಿಗಂತೂ ಅನಾದಿಯಿಂದ ಇಂದ್ರಿಯಜ್ಞಾನವಿದೆ; ಅದರಿಂದ ಸ್ವಯಂ ಅಮೂರ್ತಿಕವಿರುವುದಂತೂ ಭಾಸವಾಗುವುದಿಲ್ಲ, ಆದರೆ ಶರೀರವು ಮೂರ್ತಿಕವಿದೆ ಅದೇ ಭಾಸವಾಗುತ್ತದೆ. ಮತ್ತು ಆತ್ಮನು ಯಾವುದನ್ನೋ ತಾನೆಂದು ತಿಳಿದುಕೊಂಡು ಅಹಂಬುದ್ಧಿಧಾರಣ ಮಾಡೇ ಮಾಡುತ್ತಾನೆ, ಆದರೆ ಸ್ವಯಂ ಪೃಥಕ್ಕೆಂಬ ಭಾಸವಾಗದಾಗ ಅವುಗಳ ಸಮುದಾಯರೂಪವಾದ ಪರ್ಯಾಯಗಳಲ್ಲಿಯೇ ಅಹಂಬುದ್ಧಿಧಾರಣ ಮಾಡುತ್ತಾನೆ.

ತನಗೆ ಮತ್ತು ಶರೀರಕ್ಕೆ ನಿಮಿತ್ತ-ನೈಮಿತ್ತಿಕ ಸಂಬಂಧವು ಅಧಿಕವಿರುವುದರಿಂದ ಭಿನ್ನತೆಯು ಭಾಸವಾಗುವುದಿಲ್ಲ. ಮತ್ತು ಯಾವ ವಿಚಾರದಿಂದ ಭಿನ್ನತೆಯ ಭಾಸವಾಗುತ್ತದೆ ಅದು ಮಿಥ್ಯಾದರ್ಶನದ ಬಲದಿಂದ ಆಗುವ ಸಾಧ್ಯತೆಯಿಲ್ಲ; ಆದುದರಿಂದ ಪರ್ಯಾಯದಲ್ಲಿಯೇ ಅಹಂಬುದ್ಧಿಯು ಕಂಡುಬರುತ್ತದೆ.

ಮಿಥ್ಯಾದರ್ಶನದಿಂದ ಈ ಜೀವನು ಎಂದಾದರೂ ಬಾಹ್ಯಸಾಮಗ್ರಿಯ ಸಂಯೋಗವಾದ ಮೇಲೆ ಅದನ್ನು ಕೂಡ ತನ್ನದೆಂದು ಮನ್ನಿಸುತ್ತಾನೆ. ಪುತ್ರ, ಸ್ತ್ರೀ, ಧನ, ಧಾನ್ಯ, ಆನೆ, ಕುದುರೆ, ಮನೆ, ಸೇವಕ ಮೊದಲಾದವು ಪ್ರತ್ಯಕ್ಷ ತನ್ನಿಂದ ಭಿನ್ನ ಮತ್ತು ಸದಾಕಾಲ ತನ್ನ ಆಧೀನವಿಲ್ಲವೆಂದು ತನಗೆ ಭಾಸವಾಗುತ್ತಿದ್ದರೂ ಅವುಗಳಲ್ಲಿ ಮಮತೆ ಮಾಡುತ್ತಾನೆ.

ಪುತ್ರಾದಿಕರಲ್ಲಿ 'ಇವರಿದ್ದರೆ ನಾನೇ ಇದ್ದೇನೆ'ಂದು ಕೂಡ ಒಮ್ಮೊಮ್ಮೆ ಭ್ರಾಂತಬುದ್ಧಿಯಾಗುತ್ತದೆ, ಮತ್ತು ಮಿಥ್ಯಾದರ್ಶನದಿಂದ ಶರೀರಾದಿಗಳ ಸ್ವರೂಪವು ಬೇರೆಯಾಗಿಯೇ ಭಾಸವಾಗುತ್ತದೆ. ಅನಿತ್ಯವನ್ನು ನಿತ್ಯವೆಂದು ಮನ್ನಿಸುತ್ತಾನೆ, ಭಿನ್ನವನ್ನು ಅಭಿನ್ನವೆಂದು ಮನ್ನಿಸುತ್ತಾನೆ, ದುಃಖದ ಕಾರಣವನ್ನು ಸುಖದ ಕಾರಣವೆಂದು ಮನ್ನಿಸುತ್ತಾನೆ, ದುಃಖವನ್ನು ಸುಖವೆಂದು ಮನ್ನಿಸುತ್ತಾನೆ. ಇತ್ಯಾದಿ ವಿಪರೀತಗಳು ಭಾಸವಾಗುತ್ತವೆ.

ಹೀಗೆ ಜೀವ-ಅಜೀವತತ್ತ್ವಗಳ ಅಯಥಾರ್ಥ ಜ್ಞಾನವಾದಮೇಲೆ ಅಯಥಾರ್ಥ ಶ್ರದ್ಧೆಯಾಗುತ್ತದೆ.

## ಆಸ್ರವತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-

ಈ ಜೀವನಿಗೆ ಮೋಹದ ಉದಯದಿಂದ ಮಿಥ್ಯಾತ್ವ-ಕಷಾಯ ಮೊದಲಾದ ಭಾವಗಳಾಗುತ್ತವೆ, ಅವನ್ನು ತನ್ನ ಸ್ವಭಾವವೆಂದು ಮನ್ನಿಸುತ್ತಾನೆ, ಕರ್ಮೋಪಾಧಿಯಿಂದ ಆಗಿದೆಯೆಂದು ಮನ್ನಿಸುವುದಿಲ್ಲ ದರ್ಶನ-ಜ್ಞಾನ ಉಪಯೋಗ ಮತ್ತು ಈ ಆಸ್ರವ ಭಾವಗಳನ್ನು ಒಂದೆಂದು ಮನ್ನಿಸುತ್ತಾನೆ; ಏಕೆಂದರೆ ಇವುಗಳ ಆಧಾರಭೂತವಂತೂ ಒಬ್ಬ ಆತ್ಮನಿದ್ದಾನೆ ಮತ್ತು ಇವುಗಳ ಪರಿಣಮನವು ಏಕಕಾಲದಲ್ಲಿ ಆಗುತ್ತಿರುವುದರಿಂದ ಇವನಿಗೆ ಭಿನ್ನತೆಯು ಭಾಸವಾಗುವುದಿಲ್ಲ ಮತ್ತು ಭಿನ್ನತೆಯು ಭಾಸವಾಗುವ ಕಾರಣವಾದ ಆ ವಿಚಾರವು ಮಿಥ್ಯಾದರ್ಶನದ ಬಲದಿಂದ ಆಗುವ ಸಾಧ್ಯತೆಯಿಲ್ಲ.

ಈ ಮಿಥ್ಯಾತ್ವ-ಕಷಾಯಭಾವಗಳು ಆಕುಲತಾಸಹಿತವಿರುವುದರಿಂದ ವರ್ತಮಾನದಲ್ಲಿ ದುಃಖಮಯವಿವೆ ಮತ್ತು ಕರ್ಮಬಂಧದ ಕಾರಣಗಳಿರುವುದರಿಂದ ಭವಿಷ್ಯಕಾಲದಲ್ಲಿ ದುಃಖ ಉತ್ಪನ್ನ ಮಾಡುತ್ತವೆಂದು ಅವನ್ನು ಮನ್ನಿಸುವುದಿಲ್ಲ ಮತ್ತು ಒಳ್ಳೆಯವೆಂದು ತಿಳಿದು ಈ ಭಾವಗಳ ರೂಪನಾಗಿ ಸ್ವಯಂ ಪ್ರವರ್ತಿಸುತ್ತಾನೆ, ಅವನು ಈ ತನ್ನ ಮಿಥ್ಯಾತ್ವ-ಕಷಾಯಭಾವಗಳಿಂದ ದುಃಖಿಯಂತೂ ಆಗುತ್ತಾನೆ ಮತ್ತು ವ್ಯರ್ಥವಾಗಿಯೇ ಇತರರನ್ನು ದುಃಖವನ್ನುತ್ಪನ್ನ ಮಾಡುವವರೆಂದು ಮನ್ನಿಸುತ್ತಾನೆ. ಹೇಗೆಂದರೆ-ದುಃಖವಂತೂ ಮಿಥ್ಯಾಶ್ರದ್ಧೆಯಿಂದ ಆಗುತ್ತದೆ, ಆದರೆ ತನ್ನ ಶ್ರದ್ಧೆಗೆ ಅನುಸರಿಸಿ ಆ ಪದಾರ್ಥಗಳು ಪರಿಣಮಿಸದಿದ್ದರೆ ಅವನ್ನು ದುಃಖದಾಯಕವೆಂದು ಮನ್ನಿಸುತ್ತಾನೆ, ದುಃಖವಂತೂ ಕ್ರೋಧದಿಂದಾಗುತ್ತದೆ, ಆದರೆ ಯಾವುದರಿಂದ ಕ್ರೋಧ ಮಾಡುತ್ತಾನೆ ಅದನ್ನು ದುಃಖದಾಯಕವೆಂದು ಮನ್ನಿಸುತ್ತಾನೆ. ದುಃಖವಂತೂ ಲೋಭದಿಂದಾಗುತ್ತದೆ, ಆದರೆ ಇಷ್ಟವಸ್ತುವಿನ ಅಪ್ರಾಪ್ತಿಯನ್ನು ದುಃಖದಾಯಕವೆಂದು ಮನ್ನಿಸುತ್ತಾನೆ. ಇದೇ ಪ್ರಕಾರ ಇತರೆಡೆಗಳಲ್ಲೂ ತಿಳಿಯಬೇಕು.

ಈ ಭಾವಗಳ ಫಲವು ಹೇಗೆ ಬರುತ್ತದೆ ಹಾಗೆ ಭಾಸವಾಗುವುದಿಲ್ಲ, ಇವುಗಳ ತೀವ್ರತೆಯಿಂದ ನರಕಾದಿಗಳಾದರೆ ಮಂದತೆಯಿಂದ ಸ್ವರ್ಗಾದಿಗಳಾಗುತ್ತವೆ, ಅಲ್ಲಿ ಅಧಿಕ ಅಲ್ಪ ಆಕುಲತೆಯಿರುತ್ತದೆ. ಹೀಗೆ ಭಾಸವಾಗದಿರುವುದರಿಂದ ಅವು ಕೆಡಕೆನಿಸುವುದಿಲ್ಲ. ಏಕೆಂದರೆ ಅವು ತಾನು ಮಾಡಿರುವಂತೆ ಭಾಸವಾಗದಿರುವುದರಿಂದ ಅವುಗಳನ್ನು ಕೆಡಕೆಂದು ಹೇಗೆ ಮನ್ನಿಸುವನು ?

ಹೀಗೆ ಆಸ್ರವತತ್ತ್ವದ ಕುರಿತು ಅಯಥಾರ್ಥ ಜ್ಞಾನವಾದ ಮೇಲೆ ಅಯಥಾರ್ಥ ಶ್ರದ್ಧೆಯಾಗುತ್ತದೆ.

## ಬಂಧತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-

ಈ ಆಸ್ರವ ಭಾವಗಳಿಂದ ಜ್ಞಾನಾವರಣ ಮೊದಲಾದ ಕರ್ಮಗಳ ಬಂಧವಾಗುತ್ತದೆ. ಅವುಗಳ ಉದಯವಾದನಂತರ ಜ್ಞಾನ-ದರ್ಶನಗಳ ಹೀನತೆಯಾಗುವ, ಮಿಥ್ಯಾತ್ವ-ಕಷಾಯರೂಪವಾಗಿ ಪರಿಣಮನವಾಗುವ, ಅಪೇಕ್ಷಿಸಿದ್ದು ಆಗದಿರುವ, ಸುಖ-ದುಃಖದ ಕಾರಣ ದೊರಕುವ, ಶರೀರ ಸಂಯೋಗವಿರುವ, ಗತಿ-ಜಾತಿ-ಶರೀರಾದಿಗಳು ಉತ್ಪನ್ನವಾಗುವ, ನೀಚ-ಉಚ್ಚಕುಲದ ಪ್ರಾಪ್ತಿಯಾಗುವದಾಗುತ್ತದೆ. ಇವೆಲ್ಲವುಗಳಾಗುವುದರ ಮೂಲಕಾರಣವು ಕರ್ಮವಿದೆ, ಅದನ್ನು ಇವನು ಗುರುತಿಸುವುದಿಲ್ಲ, ಏಕೆಂದರೆ ಅದು ಸೂಕ್ಷ್ಮವಿದ್ದು ಇವನಿಗೆ ಕಂಡು ಬರುವುದಿಲ್ಲ; ಮತ್ತು ಅದು ಇವನಿಗೆ ಈ ಕಾರ್ಯಗಳ ಕರ್ತೃವಾಗಿ ಕಂಡು ಬರುವುದಿಲ್ಲ; ಆದುದರಿಂದ

ಇವುಗಳಾಗುವಲ್ಲಿ ತನ್ನನ್ನು ಕರ್ತೃವೆಂದು ಮನ್ನಿಸುತ್ತಾನೆ ಅಥವಾ ಬೇರೆ ಯಾರನ್ನೋ ಕರ್ತೃವೆಂದು ಮನ್ನಿಸುತ್ತಾನೆ. ಮತ್ತು ತನ್ನ ಅಥವಾ ಅನ್ಯರ ಕರ್ತೃತ್ವವು ಭಾಸವಾಗದಿದ್ದರೆ ಮೂಢನಾಗಿ ಭವಿತವ್ಯವನ್ನು ಮನ್ನಿಸುತ್ತಾನೆ.

ಹೀಗೆ ಬಂಧತತ್ತ್ವದ ಕುರಿತು ಅಯಥಾರ್ಥ ಜ್ಞಾನವಾದ ಮೇಲೆ ಅಯಥಾರ್ಥ ಶ್ರದ್ಧೆಯಾಗುತ್ತದೆ.

**ಸಂವರತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-**

ಆಸ್ರವದ ಅಭಾವವಾಗುವುದು ಅದು ಸಂವರವಿದೆ. ಆಸ್ರವವನ್ನು ಯಥಾರ್ಥವಾಗಿ ಗುರುತಿಸದವನಿಗೆ ಸಂವರದ ಯಥಾರ್ಥ ಶ್ರದ್ಧೆ ಹೇಗಿರುವುದು ? ಹೇಗೆಂದರೆ-ಅಹಿತರೂಪವಾಗಿ ಆಚರಿಸುವವನಿಗೆ ಅದು ಅಹಿತರೂಪವಾಗಿ ಭಾಸವಾಗದಿದ್ದರೆ ಅದರ ಅಭಾವವನ್ನು ಹಿತರೂಪವಾಗಿ ಹೇಗೆ ಮನ್ನಿಸುವನು ? ಹೇಗೆಂದರೆ ಆಸ್ರವದ ಪ್ರವೃತ್ತಿಯಿರುವ ಜೀವನಿಗೆ ಅದು ಅಹಿತರೂಪವಾಗಿ ಭಾಸವಾಗದಿದ್ದರೆ ಅದರ ಅಭಾವರೂಪವಾದ ಸಂವರವನ್ನು ಹಿತರೂಪವಾಗಿ ಹೇಗೆ ಮನ್ನಿಸುವನು ?

ಈ ಜೀವನಿಗೆ ಅನಾದಿಯಿಂದ ಆಸ್ರವಭಾವವೇ ಆಗಿದೆ, ಸಂವರವೆಂದೂ ಆಗದಿರುವುದರಿಂದ ಸಂವರವಾಗುವುದು ಭಾಸವಾಗುವುದಿಲ್ಲ, ಸಂವರವಾದ ಮೇಲೆ ಸುಖವಾಗುವುದರ ಭಾಸವಾಗುವುದಿಲ್ಲ, ಸಂವರದಿಂದ ಭವಿಷ್ಯ ಕಾಲದಲ್ಲಿ ದುಃಖವಾಗದಿರುವುದರ ಭಾಸವಾಗುವುದಿಲ್ಲ. ಆದುದರಿಂದ ಆಸ್ರವವನ್ನಂತೂ ಸಂವರ ಮಾಡುವುದಿಲ್ಲ ಮತ್ತು ಆ ಅನ್ಯ ಪದಾರ್ಥಗಳನ್ನು ದುಃಖದಾಯಕವೆಂದು ಮನ್ನಿಸುತ್ತಾನೆ, ಅವುಗಳದು ಆಗದಿರುವಂತೆ ಉಪಾಯ ಮಾಡುತ್ತಿರುತ್ತಾನೆ, ಆದರೆ ಅವು ತನ್ನ ಆಧೀನವಾಗಿಲ್ಲ. ವ್ಯರ್ಥವಾಗಿಯೇ ಖೇದ-ಖಿನ್ನನಾಗುತ್ತಾನೆ.

ಹೀಗೆ ಸಂವರತತ್ತ್ವದ ಕುರಿತು ಅಯಥಾರ್ಥ ಜ್ಞಾನವಾದಮೇಲೆ ಅಯಥಾರ್ಥ ಶ್ರದ್ಧೆಯಾಗುತ್ತದೆ.

**ನಿರ್ಜರಾತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-**

ಬಂಧದ ಏಕದೇಶ ಅಭಾವವಾಗುವುದು ಅದು ನಿರ್ಜರೆಯಿದೆ. ಬಂಧವನ್ನು ಯಥಾರ್ಥವಾಗಿ ಗುರುತಿಸದವನಿಗೆ ನಿರ್ಜರೆಯ ಯಥಾರ್ಥ ಶ್ರದ್ಧೆ ಹೇಗಾಗುವುದು ? ಹೇಗೆಂದರೆ ಭಕ್ಷಣಮಾಡಿದ ವಿಷ ಮೊದಲಾದವುಗಳಿಂದ ದುಃಖವಾಗುವುದನ್ನು ತಿಳಿಯದವನು ಅದನ್ನು ನಾಶಮಾಡುವ ಉಪಾಯವು ಒಳ್ಳೆಯದೆಂದು ಹೇಗೆ ತಿಳಿಯುವನು ? ಅದೇ ಪ್ರಕಾರ ಬಂಧನರೂಪವಾದ ಕರ್ಮಗಳಿಂದ ದುಃಖವಾಗುವುದೆಂದು ತಿಳಿಯದಿದ್ದರೆ ಅವುಗಳ ನಿರ್ಜರೆಯ ಉಪಾಯವನ್ನು ಒಳ್ಳೆಯದೆಂದು ಹೇಗೆ ತಿಳಿಯುವನು ?

ಈ ಜೀವನಿಗೆ ಇಂದ್ರಿಯಗಳಿಂದ ಸೂಕ್ಷ್ಮರೂಪವಾದ ಕರ್ಮಗಳ ಜ್ಞಾನವಂತೂ ಆಗುವುದಿಲ್ಲ, ಮತ್ತು ಅವುಗಳಲ್ಲಿ ದುಃಖಗಳಿಗೆ ಕಾರಣಭೂತವಾದ ಶಕ್ತಿಯಿರುವುದರದೂ ಜ್ಞಾನವಿಲ್ಲ; ಆದುದರಿಂದ ಅನ್ಯ ಪದಾರ್ಥಗಳ ನಿಮಿತ್ತವನ್ನೇ ದುಃಖದಾಯಕವೆಂದು ತಿಳಿದುಕೊಂಡು ಅವುಗಳದೇ ಅಭಾವಮಾಡುವ ಉಪಾಯಮಾಡುತ್ತಾನೆ, ಆದರೆ ಅವು ತನ್ನ ಆಧೀನವಾಗಿಲ್ಲ. ಮತ್ತು ಎಂದಾದರೊಮ್ಮೆ ದುಃಖದೂರಮಾಡುವ ನಿಮಿತ್ತವಾಗಿ ಯಾವುದೇ ಇಷ್ಟ ಸಂಯೋಗಾದಿ ಕಾರ್ಯವಾಗುತ್ತಿದ್ದರೆ ಅದು ಕೂಡ ಕರ್ಮದ ಅನುಸಾರವಾಗಿ ಆಗುತ್ತದೆ. ಆದುದರಿಂದ ಅವುಗಳ ಉಪಾಯಮಾಡಿ ವ್ಯರ್ಥವಾಗಿಯೇ ದುಃಖಿಯಾಗುತ್ತಾನೆ.

ಹೀಗೆ ನಿರ್ಜರಾತತ್ತ್ವದ ಕುರಿತು ಅಯಥಾರ್ಥಜ್ಞಾನವಾದ ಮೇಲೆ ಅಯಥಾರ್ಥ ಶ್ರದ್ಧೆಯಾಗುತ್ತದೆ.

## ಮೋಕ್ಷತತ್ತ್ವದ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-

ಸಮಸ್ತ ಕರ್ಮಬಂಧದ ಅಭಾವದ ಹೆಸರು ಮೋಕ್ಷವಿದೆ, ಬಂಧವನ್ನು ಹಾಗೂ ಬಂಧಜನ್ಯ ಸಮಸ್ತ ದುಃಖಗಳನ್ನು ಗುರುತಿಸದವನಿಗೆ ಮೋಕ್ಷದ ಯಥಾರ್ಥ ಶ್ರದ್ಧೆ ಹೇಗಿರುವುದು ? ಹೇಗೆಂದರೆ ಒಬ್ಬನಿಗೆ ರೋಗವಿದ್ದು ಅವನು ಆ ರೋಗವನ್ನು ಹಾಗೂ ರೋಗಜನ್ಯ ದುಃಖವನ್ನು ತಿಳಿಯದಿದ್ದರೆ ಸಂಪೂರ್ಣ ರೋಗದ ಅಭಾವವನ್ನು ಹೇಗೆ ಒಳ್ಳೆಯದೆಂದು ನಂಬುವನು ? ಅದೇ ಪ್ರಕಾರ ಇವನಿಗೆ ಕರ್ಮಬಂಧನವಿದ್ದು ಇವನು ಆ ಬಂಧವನ್ನು ಹಾಗೂ ಬಂಧಜನ್ಯ ದುಃಖವನ್ನು ತಿಳಿಯದಿದ್ದರೆ ಸರ್ವಥಾ ಬಂಧದ ಅಭಾವವನ್ನು ಒಳ್ಳೆಯದೆಂದು ಹೇಗೆ ತಿಳಿಯುವನು?

ಮತ್ತು ಈ ಜೀವನಿಗೆ ಕರ್ಮಗಳ ಹಾಗೂ ಅವುಗಳ ಶಕ್ತಿಯದಂತೂ ಜ್ಞಾನವಿಲ್ಲ; ಆದುದರಿಂದ ಬಾಹ್ಯ ಪದಾರ್ಥಗಳನ್ನು ದುಃಖದ ಕಾರಣವೆಂದು ತಿಳಿದುಕೊಂಡು ಅವುಗಳ ಸರ್ವಥಾ ಅಭಾವ ಮಾಡುವ ಉಪಾಯ ಮಾಡುತ್ತಾನೆ. ಮತ್ತು ಇವನು ಸರ್ವಥಾ ದುಃಖದೂರವಾಗುವ ಕಾರಣವೆಂದರೆ ಇಷ್ಟಸಾಮಗ್ರಿಗಳನ್ನು ಸೇರಿಸಿ ಸರ್ವಥಾ ಸುಖಿಯಾಗುವುದೆಂದು ತಿಳಿಯುತ್ತಾನೆ, ಆದರೆ ಹೀಗೆಂದೂ ಆಗುವುದಿಲ್ಲ. ಇವನು ವ್ಯರ್ಥವಾಗಿಯೇ ದುಃಖಮಾಡುತ್ತಾನೆ.

ಹೀಗೆ ಮಿಥ್ಯಾದರ್ಶನದಿಂದ ಮೋಕ್ಷತತ್ತ್ವದ ಅಯಥಾರ್ಥ ಜ್ಞಾನವಾಗುವುದರಿಂದ ಅಯಥಾರ್ಥಶ್ರದ್ಧೆಯಿದೆ.

ಈ ಪ್ರಕಾರ ಈ ಜೀವನು ಮಿಥ್ಯಾದರ್ಶನದ ಕಾರಣವಾಗಿ ಪ್ರಯೋಜನಭೂತವಿರುವ ಜೀವಾದಿ ಸಪ್ತ ತತ್ತ್ವಗಳ ಕುರಿತು ಅಯಥಾರ್ಥ ಶ್ರದ್ಧೆ ಮಾಡುತ್ತಾನೆ.

## ಪುಣ್ಯ-ಪಾಪಗಳ ಸಂಬಂಧದಲ್ಲಿ ಅಯಥಾರ್ಥ ಶ್ರದ್ಧೆ :-

ಪುಣ್ಯ-ಪಾಪಗಳು ಇವುಗಳ ವಿಶೇಷಗಳೇ ಇದ್ದು ಈ ಪುಣ್ಯ-ಪಾಪದ ಜಾತಿಯು ಒಂದಿದೆ; ಆದಾಗ್ಯೂ ಮಿಥ್ಯಾದರ್ಶನದಿಂದ ಪುಣ್ಯವನ್ನು ಒಳ್ಳೆಯದೆಂದೂ ಪಾಪವನ್ನು ಕೆಡಕೆಂದೂ ತಿಳಿಯುತ್ತಾನೆ. ಪುಣ್ಯದಿಂದ ತನ್ನ ಇಚ್ಛೆಗೆ ಅನುಸರಿಸಿ ಒಂದಿಷ್ಟು ಕಾರ್ಯವಾದರೆ ಅದನ್ನು ಒಳ್ಳೆಯದೆಂದು ತಿಳಿಯುತ್ತಾನೆ ಮತ್ತು ಪಾಪದಿಂದ ಇಚ್ಛೆಗೆ ಅನುಸರಿಸಿ ಕಾರ್ಯವಾಗದಿದ್ದರೆ ಅದನ್ನು ಕೆಡಕೆಂದು ತಿಳಿಯುತ್ತಾನೆ; ಆದರೆ ಎರಡೂ ಆಕುಲತೆಗೆ ಕಾರಣಗಳಿರುವುದರಿಂದ ಕೆಡಕೇ ಇವೆ.

ಇವನು ತನ್ನ ಮನ್ನಣೆಯಿಂದ ಅಲ್ಲಿ ಸುಖ-ದುಃಖಗಳನ್ನು ಮನ್ನಿಸುತ್ತಾನೆ. ಪರಮಾರ್ಥದಿಂದ ಆಕುಲತೆಯಿರುವಲ್ಲಿ ದುಃಖವೇ ಇರುವುದರಿಂದ ಪುಣ್ಯ-ಪಾಪಗಳ ಉದಯವನ್ನು ಒಳಿತು-ಕೆಡಕೆಂದು ತಿಳಿದುಕೊಳ್ಳುವುದು ಭ್ರಾಂತಿಯೇ ಇದೆ.

ಅದೆಷ್ಟೋ ಜೀವರುಗಳು ಒಮ್ಮೊಮ್ಮೆ ಪುಣ್ಯ-ಪಾಪಗಳಿಗೆ ಕಾರಣವಾದ ಶುಭಾಶುಭ ಭಾವಗಳನ್ನು

ಒಳಿತು-ಕೆಡಕೆಂದು ತಿಳಿಯುತ್ತಾರೆ ಅದು ಕೂಡ ಭ್ರಾಂತಿಯೇ ಇದೆ. ಏಕೆಂದರೆ ಎರಡೂ ಕರ್ಮಬಂಧನಕ್ಕೆ ಕಾರಣವಿವೆ.

ಹೀಗೆ ಪುಣ್ಯ-ಪಾಪಗಳ ಕುರಿತು ಅಯಥಾರ್ಥ ಜ್ಞಾನವಾದ ಮೇಲೆ ಅಯಥಾರ್ಥ ಶ್ರದ್ಧೆಯಾಗುತ್ತದೆ.

ಈ ಪ್ರಕಾರ ಅತತ್ತ್ವಶ್ರದ್ಧಾರೂಪವಾದ ಮಿಥ್ಯಾದರ್ಶನದ ಸ್ವರೂಪ ಹೇಳಲಾಯಿತು. ಇದು ಅಸತ್ಯರೂಪ-ವಿರುವುದರಿಂದ ಇದರ ಹೆಸರೇ ಮಿಥ್ಯಾತ್ವವಿದೆ ಮತ್ತು ಇದು ಸತ್ಯಶ್ರದ್ಧೆಯಿಂದ ರಹಿತವಿರುವುದರಿಂದ ಇದರ ಹೆಸರೇ ಅದರ್ಶನವಿದೆ.

## ಮಿಥ್ಯಾಜ್ಞಾನದ ಸ್ವರೂಪ

ಈಗ ಮಿಥ್ಯಾಜ್ಞಾನದ ಸ್ವರೂಪ ಹೇಳುತ್ತಾರೆ-ಪ್ರಯೋಜನಭೂತವಾದ ಜೀವಾದಿ ತತ್ತ್ವಗಳನ್ನು ಅಯಥಾರ್ಥವಾಗಿ ತಿಳಿಯುವುದರ ಹೆಸರು ಮಿಥ್ಯಾಜ್ಞಾನವಿದೆ. ಅದರ ಮುಖಾಂತರ ಅವನ್ನು ತಿಳಿಯುವಲ್ಲಿ ಸಂಶಯ, ವಿಪರ್ಯಯ, ಅನಧ್ಯವಸಾಯಗಳಾಗುತ್ತವೆ. ಅಲ್ಲಿ 'ಹೀಗಿದೆಯೋ ಅಥವಾ ಹೀಗಿದೆ'ಯೆಂದು ಪರಸ್ಪರ ವಿರುದ್ಧತೆಯಿಂದ ಕೂಡಿದ ಉಭಯರೂಪ ಜ್ಞಾನದ ಹೆಸರು ಸಂಶಯವಿದೆ. ಹೇಗೆಂದರೆ - 'ನಾನು ಆತ್ಮನಿದ್ದೇನೆಯೋ ಅಥವಾ ಶರೀರನಿದ್ದೇನೆಯೋ ?' ಎಂದು ತಿಳಿಯುವುದು. ಮತ್ತು 'ಹೀಗೆಯೇ ಇದೆ'ಯೆಂದು ವಸ್ತುಸ್ವರೂಪದಿಂದ ವಿರುದ್ಧವಾಗಿರುವ ಏಕರೂಪಜ್ಞಾನದ ಹೆಸರು ವಿಪರ್ಯಯವಿದೆ. ಹೇಗೆಂದರೆ-'ನಾನು ಶರೀರನಿದ್ದೇನೆ'ಂದು ತಿಳಿಯುವುದು. ಇನ್ನು 'ಏನೋ ಇದೆ'ಯೆಂಬ ನಿರ್ಧಾರವಿಲ್ಲದ ವಿಚಾರದ ಹೆಸರು ಅನಧ್ಯವಸಾಯವಿದೆ. ಹೇಗೆಂದರೆ- 'ನಾನು ಯಾವನೋ ಇದ್ದೇನೆ'ಂದು ತಿಳಿಯುವುದು. ಈ ಪ್ರಕಾರ ಪ್ರಯೋಜನಭೂತವಾದ ಜೀವಾದಿತತ್ತ್ವಗಳಲ್ಲಿ ಸಂಶಯ, ವಿಪರ್ಯಯ, ಅನಧ್ಯವಸಾಯರೂಪದಿಂದ ತಿಳಿಯಲಾಗುತ್ತಿರುವುದರ ಹೆಸರು ಮಿಥ್ಯಾ ಜ್ಞಾನವಿದೆ.

ಇನ್ನು ಅಪ್ರಯೋಜನಭೂತವಾದ ಪದಾರ್ಥಗಳನ್ನು ಯಥಾರ್ಥ ಅಥವಾ ಅಯಥಾರ್ಥ ತಿಳಿಯುವುದರ ಅಪೇಕ್ಷೆಯಿಂದ ಮಿಥ್ಯಾಜ್ಞಾನ-ಸಮ್ಯಗ್ಜ್ಞಾನವೆಂಬ ಹೆಸರುಗಳಿಲ್ಲ. ಹೇಗೆಂದರೆ - ಮಿಥ್ಯಾದೃಷ್ಟಿಯು ಹಗ್ಗವನ್ನು ಹಗ್ಗವೆಂದು ತಿಳಿದರೆ ಅದು ಸಮ್ಯಗ್ಜ್ಞಾನವೆಂಬ ಹೆಸರು ಪಡೆಯುವುದಿಲ್ಲ, ಮತ್ತು ಸಮ್ಯಗ್ದೃಷ್ಟಿಯು ಹಗ್ಗವನ್ನು ಹಾವೆಂದು ತಿಳಿದರೆ ಅದು ಮಿಥ್ಯಾಜ್ಞಾನವೆಂಬ ಹೆಸರು ಪಡೆಯುವುದಿಲ್ಲ.

**ಪ್ರಶ್ನೆ :-** ಪ್ರತ್ಯಕ್ಷವಾದ ಸತ್ಯಾಸತ್ಯ ಜ್ಞಾನವನ್ನು ಸಮ್ಯಗ್ಜ್ಞಾನ-ಮಿಥ್ಯಾಜ್ಞಾನವೆಂದೇಕೆ ಹೇಳಬಾರದು ?

**ಉತ್ತರ :-** ತಿಳಿಯುವುದರ-ಸತ್ಯಾಸತ್ಯದ ನಿರ್ಧಾರ ಮಾಡುವುದರ ಪ್ರಯೋಜನವಿರುವಲ್ಲಿಯಂತೂ ಯಾವುದೇ ಪದಾರ್ಥದ ಸತ್ಯಾಸತ್ಯ ತಿಳಿಯುವ ಅಪೇಕ್ಷೆಯಿಂದಲೇ ಸಮ್ಯಗ್ಜ್ಞಾನ-ಮಿಥ್ಯಾಜ್ಞಾನವೆಂಬ ಹೆಸರು ಕೊಡಲಾಗುತ್ತದೆ. ಹೇಗೆಂದರೆ-ಪ್ರತ್ಯಕ್ಷ-ಪರೋಕ್ಷ ಪ್ರಮಾಣದ ವರ್ಣನೆಯಲ್ಲಿ ಯಾವುದೇ ಪದಾರ್ಥದ ನಿಜವನ್ನು ತಿಳಿಯುವ ರೂಪವು ಸಮ್ಯಗ್ಜ್ಞಾನದ ಗ್ರಹಣ ಮಾಡಿದ್ದರೆ ಸಂಶಯಾದಿರೂಪವಾಗಿ ತಿಳಿಯುವುದನ್ನು ಅಪ್ರಮಾಣ ರೂಪದ ಮಿಥ್ಯಾಜ್ಞಾನವೆಂದು ಹೇಳಿದೆ. ಇಲ್ಲಿ ಸಂಸಾರ-ಮೋಕ್ಷಕ್ಕೆ ಕಾರಣಭೂತವಾದ ಸತ್ಯಾಸತ್ಯಗಳನ್ನು ತಿಳಿಯುವ ನಿರ್ಧಾರ ಮಾಡುವುದಿದೆ; ಅಲ್ಲಿ ಹಗ್ಗ-ಹಾವಾದಿಗಳ ಯಥಾರ್ಥ ಅಥವಾ ಅನ್ಯಥಾ ಜ್ಞಾನವು ಸಂಸಾರ-ಮೋಕ್ಷದ

ಕಾರಣವಿಲ್ಲದುದರಿಂದ ಅವುಗಳ ಅಪೇಕ್ಷೆಯಿಂದ ಇಲ್ಲಿ ಸಮ್ಯಗ್ಜ್ಞಾನ-ಮಿಥ್ಯಾಜ್ಞಾನಗಳನ್ನು ಹೇಳಿಲ್ಲ. ಇಲ್ಲಿಯಂತೂ ಪ್ರಯೋಜನಭೂತವಾದ ಜೀವಾದಿ ತತ್ತ್ವಗಳನ್ನೇ ತಿಳಿಯುವ ಅಪೇಕ್ಷೆಯಿಂದ ಸಮ್ಯಗ್ಜ್ಞಾನ-ಮಿಥ್ಯಾಜ್ಞಾನಗಳನ್ನು ಹೇಳಿದ್ದಾರೆ.

ಇದೇ ಅಭಿಪ್ರಾಯದಿಂದ ಸಿದ್ಧಾಂತದಲ್ಲಿ ಮಿಥ್ಯಾದೃಷ್ಟಿಯದಂತೂ ಎಲ್ಲವನ್ನು ತಿಳಿಯುವುದಕ್ಕೆ ಮಿಥ್ಯಾಜ್ಞಾನವೆಂದು ಹೇಳಿದ್ದರೆ ಸಮ್ಯಗ್ದೃಷ್ಟಿಯ ಎಲ್ಲವನ್ನು ತಿಳಿಯುವುದಕ್ಕೆ ಸಮ್ಯಗ್ಜ್ಞಾನವೆಂದು ಹೇಳಿದೆ.

**ಪ್ರಶ್ನೆ ಃ-** ಮಿಥ್ಯಾದೃಷ್ಟಿಯ ಜೀವಾದಿತತ್ತ್ವಗಳನ್ನು ಅಯಥಾರ್ಥವಾಗಿ ತಿಳಿಯುವುದಕ್ಕೆ ಮಿಥ್ಯಾಜ್ಞಾನವೆನ್ನಿರಿ; ಆದರೆ ಹಗ್ಗ-ಹಾವಾದಿಗಳನ್ನು ಯಥಾರ್ಥವಾಗಿ ತಿಳಿಯುವುದಕ್ಕಂತೂ ಸಮ್ಯಗ್ಜ್ಞಾನವೆನ್ನಿರಿ ?

**ಉತ್ತರ ಃ-** ಮಿಥ್ಯಾದೃಷ್ಟಿಯು ತಿಳಿದುಕೊಳ್ಳುವಲ್ಲಿ ಅವನಿಗೆ ಸತ್ತಾ-ಅಸತ್ತಾದ ವಿಶೇಷಗಳಿಲ್ಲದಿರುವುದರಿಂದ ಕಾರಣವಿಪರ್ಯಾಯ, ಸ್ವರೂಪವಿಪರ್ಯಾಯ ಮತ್ತು ಭೇದಾಭೇದವಿಪರ್ಯಾಯವನ್ನು ಉತ್ಪನ್ನಮಾಡುತ್ತಾನೆ. ಯಾವುದನ್ನು ತಿಳಿಯುತ್ತಾನೆ ಅದರ ಮೂಲಕಾರಣವನ್ನು ಗುರುತಿಸುವುದಿಲ್ಲ, ಅನ್ಯಥಾ ಕಾರಣವನ್ನು ಮನ್ನಿಸುತ್ತಾನೆ; ಅದಂತೂ ಕಾರಣವಿಪರ್ಯಾಯವಿದೆ ಮತ್ತು ಯಾವುದನ್ನು ತಿಳಿಯುತ್ತಾನೆ ಅದರ ಮೂಲವಸ್ತು ಸ್ವರೂಪವಾದ ಸ್ವರೂಪವನ್ನು ಗುರುತಿಸುವುದಿಲ್ಲ, ಅನ್ಯಥಾ ಸ್ವರೂಪವನ್ನು ಮನ್ನಿಸುತ್ತಾನೆ; ಅದು ಸ್ವರೂಪ ವಿಪರ್ಯಾಯವಿದೆ. ಇನ್ನು ಯಾವುದನ್ನು ತಿಳಿಯುತ್ತಾನೆ ಅದನ್ನು ಇದು ಇವುಗಳಿಂದ ಭಿನ್ನವಿದೆ; ಇವುಗಳಿಂದ ಅಭಿನ್ನವಿದೆಯೆಂದು ಗುರುತಿಸುವುದಿಲ್ಲ, ಅನ್ಯಥಾ ಭಿನ್ನ-ಅಭಿನ್ನತೆಯನ್ನು ಮನ್ನಿಸುತ್ತಾನೆ; ಅದು ಭೇದಾಭೇದ ವಿಪರ್ಯಾಯವಿದೆ. ಈ ಪ್ರಕಾರ ಮಿಥ್ಯಾದೃಷ್ಟಿಯ ತಿಳಿಯುವಿಕೆಯಲ್ಲಿ ವಿಪರೀತತೆಯು ಕಂಡು ಬರುತ್ತದೆ.

ಯಾವ ಪ್ರಕಾರ ಮದ್ಯದ ಅಮಲಿನಲ್ಲೊಬ್ಬನು ಮಾತೆಯನ್ನು ಪತ್ನಿಯೆಂದೂ ಮತ್ತು ಪತ್ನಿಯನ್ನು ಮಾತೆಯೆಂದೂ ಮನ್ನಿಸುತ್ತಾನೆ, ಅದೇ ಪ್ರಕಾರ ಮಿಥ್ಯಾದೃಷ್ಟಿಯ ತಿಳಿಯುವಿಕೆಯು ವಿಪರೀತವಿರುತ್ತದೆ. ಮತ್ತು ಎಂದಾದರೊಮ್ಮೆ ಅಮಲಿನಲ್ಲಿದ್ದವನು ಮಾತೆಯನ್ನು ಮಾತೆಯೆಂದೂ ಮತ್ತು ಪತ್ನಿಯನ್ನು ಪತ್ನಿಯೆಂದು ತಿಳಿದರೂ ಕೂಡ ಅವನು ನಿಶ್ಚಯರೂಪ ನಿರ್ಧಾರದಿಂದ ಶ್ರದ್ಧೆಯೊಡನೆ ತಿಳಿಯದಿರುವುದರಿಂದ ಅವನ ಜ್ಞಾನವು ಯಥಾರ್ಥವೆಂದು ಹೇಳಲಾಗುವುದಿಲ್ಲ; ಅದೇ ಪ್ರಕಾರ ಮಿಥ್ಯಾದೃಷ್ಟಿಯು ಎಂದಾದರೊಮ್ಮೆ ಯಾವುದೇ ಪದಾರ್ಥವನ್ನು ಸತ್ಯವಾಗಿ ತಿಳಿದರೂ ಕೂಡ ಅವನ ತಿಳಿಯುವಿಕೆಯು ನಿಶ್ಚಯರೂಪ ನಿರ್ಧಾರದಿಂದ ಶ್ರದ್ಧೆಯೊಡನೆ ಆಗುವುದಿಲ್ಲ; ಅಥವಾ ಸತ್ಯ ತಿಳಿದರೂ ಕೂಡ ಅವುಗಳಿಂದ ತನ್ನ ಪ್ರಯೋಜನವನ್ನು ಅಯಥಾರ್ಥವಾಗಿಯೇ ಸಾಧಿಸುತ್ತಾನೆ; ಆದುದರಿಂದ ಅದನ್ನು ಸಮ್ಯಗ್ಜ್ಞಾನವೆಂದು ಹೇಳಲಾಗುವುದಿಲ್ಲ.

ಈ ಪ್ರಕಾರ ಮಿಥ್ಯಾದೃಷ್ಟಿಯ ಜ್ಞಾನವನ್ನು ಮಿಥ್ಯಾಜ್ಞಾನವೆಂದು ಹೇಳುತ್ತಾರೆ.

**ಪ್ರಶ್ನೆ ಃ-** ಈ ಮಿಥ್ಯಾಜ್ಞಾನದ ಕಾರಣವು ಯಾವುದಿದೆ ?

**ಉತ್ತರ ಃ-** ಮೋಹದ ಉದಯದಿಂದ ಆ ಮಿಥ್ಯಾಸ್ವಭಾವವಾಗುತ್ತದೆ, ಸಮ್ಯಕ್ತ್ವವಾಗುವುದಿಲ್ಲ; ಅದು ಈ ಮಿಥ್ಯಾಜ್ಞಾನದ ಕಾರಣವಿದೆ. ಹೇಗೆಂದರೆ ವಿಷದ ಸಂಯೋಗದಿಂದ ಭೋಜನವನ್ನು ಕೂಡ ವಿಷರೂಪವೆಂದು ಹೇಳುತ್ತಾರೆ ಹಾಗೆ ಮಿಥ್ಯಾತ್ವದ ಸಂಬಂಧದಿಂದ ಜ್ಞಾನವು ಮಿಥ್ಯಾಜ್ಞಾನವೆಂಬ ಹೆಸರು ಪಡೆಯುತ್ತದೆ.

**ಪ್ರಶ್ನೆ :-** ಜ್ಞಾನಾವರಣವನ್ನು ನಿಮಿತ್ತವೆಂದೇಕೆ ಹೇಳುವುದಿಲ್ಲ ?

**ಉತ್ತರ :-** ಜ್ಞಾನಾವರಣದ ಉದಯದಿಂದಂತೂ ಜ್ಞಾನದ ಅಭಾವರೂಪವಾದ ಅಜ್ಞಾನಭಾವವಾಗುತ್ತದೆ ಮತ್ತು ಅದರ ಕ್ಷಯೋಪಶಮದಿಂದ ಕಿಂಚಿತ್ ಜ್ಞಾನರೂಪ ಮತಿ ಮೊದಲಾದ ಜ್ಞಾನಗಳಾಗುತ್ತವೆ. ಇವುಗಳಲ್ಲಿ ಒಂದನ್ನು ಮಿಥ್ಯಾಜ್ಞಾನ ಇನ್ನೊಂದನ್ನು ಸಮ್ಯಗ್ಜ್ಞಾನವೆಂದು ಹೇಳಿದರೆ ಇವೆರಡೂ ಭಾವಗಳು ಮಿಥ್ಯಾದೃಷ್ಟಿ ಹಾಗೂ ಸಮ್ಯಗ್ದೃಷ್ಟಿಯಲ್ಲಿ ಕಂಡು ಬರುತ್ತಿರುವುದರಿಂದ ಅವೆರಡಕ್ಕೆ ಮಿಥ್ಯಾಜ್ಞಾನ ಹಾಗೂ ಸಮ್ಯಗ್ಜ್ಞಾನದ ಸದ್ಭಾವವಾಗಿ ಬಿಡುವುದು ಮತ್ತು ಅದು ಸಿದ್ಧಾಂತದಿಂದ ವಿರುದ್ಧವಿರುವುದರಿಂದ ಜ್ಞಾನಾವರಣದ ನಿಮಿತ್ತವಾಗುವುದಿಲ್ಲ.

**ಪ್ರಶ್ನೆ :-** ಹಗ್ಗ-ಹಾವಾದಿಗಳ ಅಯಥಾರ್ಥ-ಯಥಾರ್ಥ ಜ್ಞಾನದ ಕಾರಣವು ಯಾವುದಿದೆ ಅದನ್ನೇ ಜೀವಾದಿತತ್ತ್ವಗಳ ಅಯಥಾರ್ಥ-ಯಥಾರ್ಥ ಜ್ಞಾನದ ಕಾರಣವೆಂದು ಹೇಳಿರಲ್ಲ ?

**ಉತ್ತರ :-** ತಿಳಿಯುವಲ್ಲಿ ಎಷ್ಟು ಅಯಥಾರ್ಥತೆಯಾಗುತ್ತದೆ ಅಷ್ಟಂತೂ ಜ್ಞಾನಾವರಣದ ಉದಯ ದಿಂದಾಗುತ್ತದೆ; ಮತ್ತು ಯಥಾರ್ಥತೆಯಾಗುವಷ್ಟು ಜ್ಞಾನಾವರಣದ ಕ್ಷಯೋಪಶಮದಿಂದ ಆಗುತ್ತದೆ. ಹೇಗೆಂದರೆ ಹಗ್ಗವನ್ನು ಹಾವೆಂದು ತಿಳಿಯುವಲ್ಲಿ ಯಥಾರ್ಥ ತಿಳಿಯುವ ಶಕ್ತಿಗೆ ಬಾಧಕ ಕಾರಣದ ಉದಯವಿರುವುದರಿಂದ ಅಯಥಾರ್ಥ ತಿಳಿಯುತ್ತಾನೆ; ಮತ್ತು ಹಗ್ಗವನ್ನು ಹಗ್ಗವೆಂದು ತಿಳಿಯುವಲ್ಲಿ ಯಥಾರ್ಥ ತಿಳಿಯುವ ಶಕ್ತಿಯ ಕಾರಣದ ಕ್ಷಯೋಪಶಮವಿರುವುದರಿಂದ ಯಥಾರ್ಥ ತಿಳಿಯುತ್ತಾನೆ. ಅದೇ ಪ್ರಕಾರ ಜೀವಾದಿ ತತ್ತ್ವಗಳನ್ನು ಯಥಾರ್ಥ ತಿಳಿಯುವ ಶಕ್ತಿಯಿರುವಲ್ಲಿ ಅಥವಾ ಇಲ್ಲದಿರುವಲ್ಲಂತೂ ಜ್ಞಾನಾವರಣದ್ದೇ ನಿಮಿತ್ತವಿದೆ; ಆದರೆ ಹೇಗೆ ಓರ್ವ ಪುರುಷನಿಗೆ ಕ್ಷಯೋಪಶಮದಿಂದ ದುಃಖದ ಹಾಗೂ ಸುಖದ ಕಾರಣಭೂತ ಪದಾರ್ಥಗಳನ್ನು ಯಥಾರ್ಥ ತಿಳಿಯುವ ಶಕ್ತಿಯಿರುತ್ತದೆ; ಅಲ್ಲಿ ಅಸಾತಾವೇದನೀಯದ ಉದಯವಿರುವವನು ದುಃಖದ ಕಾರಣಭೂತವಾದವುಗಳದ್ದೇ ವೇದನ ಮಾಡುತ್ತಾನೆ, ಸುಖದ ಕಾರಣಭೂತ ಪದಾರ್ಥಗಳ ವೇದನ ಮಾಡುವುದಿಲ್ಲ. ಒಂದು ವೇಳೆ ಸುಖದ ಕಾರಣ ಭೂತ ಪದಾರ್ಥಗಳ ವೇದನ ಮಾಡಿದರೆ ಸುಖಿಯಾಗಿ ಹೋಗುವನು, ಆದರೆ ಅಸಾತಾದ ಉದಯವಿರುವುದರಿಂದ ಆಗುವ ಸಾಧ್ಯತೆಯಿಲ್ಲ. ಆದುದರಿಂದ ಇಲ್ಲಿ ದುಃಖದ ಕಾರಣಭೂತ ಹಾಗೂ ಸುಖದ ಕಾರಣಭೂತ ಪದಾರ್ಥಗಳ ಪ್ರಕಾರ ಜೀವದಲ್ಲಿ ಪ್ರಯೋಜನಭೂತ ಜೀವಾದಿತತ್ತ್ವಗಳನ್ನು ಮತ್ತು ಅಪ್ರಯೋಜನಭೂತ ಅನ್ಯವನ್ನು ಯಥಾರ್ಥ ತಿಳಿಯುವ ಶಕ್ತಿಯಿರುತ್ತದೆ. ಅಲ್ಲಿ ಮಿಥ್ಯಾತ್ವದ ಉದಯವಿರುವವನಂತೂ ಅಪ್ರಯೋಜನಭೂತವಾದವುಗಳ ವೇದನ ಮಾಡುತ್ತಾನೆ, ತಿಳಿಯುತ್ತಾನೆ; ಪ್ರಯೋಜನಭೂತವನ್ನು ತಿಳಿಯುವುದಿಲ್ಲ. ಒಂದು ವೇಳೆ ಪ್ರಯೋಜನಭೂತವನ್ನು ತಿಳಿದರೆ ಸಮ್ಯಗ್ದರ್ಶನವಾಗಿ ಹೋಗುವುದು, ಆದರೆ ಅದು ಮಿಥ್ಯಾತ್ವದ ಉದಯವಿದ್ದ ಮೇಲೆ ಆಗುವ ಸಾಧ್ಯತೆಯಿಲ್ಲ; ಆದುದರಿಂದ ಇಲ್ಲಿ ಪ್ರಯೋಜನಭೂತ ಹಾಗೂ ಅಪ್ರಯೋಜನಭೂತ ಪದಾರ್ಥಗಳನ್ನು ತಿಳಿಯುವಲ್ಲಿ ಜ್ಞಾನಾವರಣದ ನಿಮಿತ್ತವಿಲ್ಲ; ಮಿಥ್ಯಾತ್ವದ ಉದಯ-ಅನುದಯವೇ ಕಾರಣಭೂತವಿದೆ.

ಏಕೇಂದ್ರಿಯ ಮೊದಲಾದವುಗಳಲ್ಲಿ ಜೀವಾದಿ ತತ್ತ್ವಗಳನ್ನು ಯಥಾರ್ಥವಾಗಿ ತಿಳಿಯುವ ಶಕ್ತಿಯೇ ಇರುವುದಿಲ್ಲ, ಅಲ್ಲಿಯಂತೂ ಜ್ಞಾನಾವರಣದ ಉದಯ ಮತ್ತು ಮಿಥ್ಯಾತ್ವದ ಉದಯದಿಂದಾದ ಮಿಥ್ಯಾದರ್ಶನ

ಇವೆರಡರ ನಿಮಿತ್ತವಿದೆ. ಮತ್ತು ಸಂಜ್ಞೀ ಮನುಷ್ಯಾದಿಕರಲ್ಲಿ ಕ್ಷಯೋಪಶಮಾದಿಗಳ ಲಬ್ಧಿಯಿರುವುದರಿಂದ ಶಕ್ತಿಯಿರುವುದು ಮತ್ತು ತಿಳಿಯದಿದ್ದರೆ ಅಲ್ಲಿ ಮಿಥ್ಯಾತ್ವದ ಉದಯವೇ ನಿಮಿತ್ತವಿದೆಯೆಂದು ತಿಳಿಯಬೇಕು.

ಆದುದರಿಂದ ಮಿಥ್ಯಾಜ್ಞಾನದ ಮುಖ್ಯಕಾರಣವು ಜ್ಞಾನಾವರಣವೆಂದು ಹೇಳಿಲ್ಲ, ಆದರೆ ಮೋಹದ ಉದಯದಿಂದಾದ ಭಾವವೇ ಕಾರಣವೆಂದು ಹೇಳಿದೆ.

**ಪ್ರಶ್ನೆ :-** ಜ್ಞಾನವಾದ ಮೇಲೆ ಶ್ರದ್ಧೆಯಾಗುತ್ತದೆ, ಆದುದರಿಂದ ಮೊದಲು ಮಿಥ್ಯಾಜ್ಞಾನವೆಂದು ಹೇಳಿರಿ ಅನಂತರ ಮಿಥ್ಯಾದರ್ಶನವೆಂದು ಹೇಳಿರಿ ?

**ಉತ್ತರ :-** ಹೀಗೆಯೇ ಇದೆ ; ತಿಳಿದುಕೊಂಡಲ್ಲದೆ ಶ್ರದ್ಧೆ ಹೇಗಾಗುವುದು ? ಆದರೆ ಜ್ಞಾನಕ್ಕೆ ಮಿಥ್ಯೆ ಮತ್ತು ಸಮ್ಯಕ್‌ವೆಂಬ ಸಂಜ್ಞೆಯು ಮಿಥ್ಯಾದರ್ಶನ ಮತ್ತು ಸಮ್ಯಗ್ದರ್ಶನದ ನಿಮಿತ್ತದಿಂದ ಆಗುತ್ತದೆ. ಹೇಗೆಂದರೆ- ಮಿಥ್ಯಾದೃಷ್ಟಿ ಮತ್ತು ಸಮ್ಯಗ್ದೃಷ್ಟಿಯು ಚಿನ್ನ ಮೊದಲಾದ ಪದಾರ್ಥಗಳನ್ನು ಸಮಾನವಾಗೇನೋ ತಿಳಿಯುತ್ತಾರೆ; ಆದರೆ ಮಿಥ್ಯಾದೃಷ್ಟಿಯ ತಿಳಿಯುವಿಕೆಯು ಮಿಥ್ಯಾಜ್ಞಾನವೆಂಬ ಹೆಸರು ಪಡೆದರೆ ಸಮ್ಯಗ್ದೃಷ್ಟಿಯದು ಸಮ್ಯಗ್ಜ್ಞಾನವೆಂಬ ಹೆಸರು ಪಡೆಯುತ್ತದೆ. ಇದೇ ಪ್ರಕಾರ ಎಲ್ಲ ಮಿಥ್ಯಾಜ್ಞಾನ ಮತ್ತು ಸಮ್ಯಗ್ಜ್ಞಾನಕ್ಕೆ ಮಿಥ್ಯಾದರ್ಶನ ಮತ್ತು ಸಮ್ಯಗ್ದರ್ಶನಗಳು ಕಾರಣವೆಂದು ತಿಳಿಯಬೇಕು.

ಆದುದರಿಂದ ಸಾಮಾನ್ಯವಾಗಿ ಜ್ಞಾನ-ಶ್ರದ್ಧೆಗಳ ನಿರೂಪಣೆಯಿರುವಲ್ಲಿಯಂತೂ ಜ್ಞಾನವು ಕಾರಣಭೂತವಿದ್ದು ಅದನ್ನು ಮೊದಲು ಹೇಳಬೇಕು, ಮತ್ತು ಶ್ರದ್ಧೆಯು ಕಾರ್ಯಭೂತವಿರುವುದರಿಂದ ಅದನ್ನು ನಂತರ ಹೇಳಬೇಕು. ಇನ್ನು ಮಿಥ್ಯಾ-ಸಮ್ಯಕ್ ಜ್ಞಾನ-ಶ್ರದ್ಧೆಗಳ ನಿರೂಪಣೆಯಿರುವಲ್ಲಿ ಶ್ರದ್ಧೆಯು ಕಾರಣಭೂತವಿದ್ದು ಅದನ್ನು ಮೊದಲು ಹೇಳಬೇಕು ಮತ್ತು ಜ್ಞಾನವು ಕಾರ್ಯಭೂತವಿರುವುದರಿಂದ ಅದನ್ನು ನಂತರ ಹೇಳಬೇಕು.

**ಪ್ರಶ್ನೆ :-** ಜ್ಞಾನ-ಶ್ರದ್ಧೆಗಳಂತೂ ಯುಗಪತ್ ಆಗುತ್ತವೆ, ಅವುಗಳಲ್ಲಿ ಕಾರಣ-ಕಾರ್ಯತನವನ್ನು ಹೇಗೆ ಹೇಳುತ್ತೀರಿ ?

**ಉತ್ತರ :-** ಅದು ಇದ್ದರೆ ಅದು ಇರುತ್ತದೆಂಬ ಅಪೇಕ್ಷೆಯಿಂದ ಕಾರಣಕಾರ್ಯತನವಾಗುತ್ತದೆ. ಹೇಗೆಂದರೆ-ದೀವಿಗೆ ಮತ್ತು ಪ್ರಕಾಶ ಯುಗಪತ್ ಇರುತ್ತವೆ; ಆದಾಗ್ಯೂ ದೀವಿಗೆಯಿದ್ದರೆ ಪ್ರಕಾಶವಿರುವುದರಿಂದ ದೀವಿಗೆ ಕಾರಣವಿದೆ ಪ್ರಕಾಶವು ಕಾರ್ಯವಿದೆ. ಅದೇ ಪ್ರಕಾರ ಜ್ಞಾನ-ಶ್ರದ್ಧೆಗಳದ್ದಿದೆ. ಅಥವಾ ಮಿಥ್ಯಾದರ್ಶನ-ಮಿಥ್ಯಾಜ್ಞಾನದ ಮತ್ತು ಸಮ್ಯಗ್ದರ್ಶನ-ಸಮ್ಯಗ್ಜ್ಞಾನದ ಕಾರಣ-ಕಾರ್ಯತನವನ್ನು ತಿಳಿಯಬೇಕು.

**ಪ್ರಶ್ನೆ :-** ಮಿಥ್ಯಾದರ್ಶನದ ಸಂಯೋಗದಿಂದಲೇ ಮಿಥ್ಯಾಜ್ಞಾನವೆಂಬ ಹೆಸರು ಬರುತ್ತಿದ್ದರೆ ಒಂದು ಮಿಥ್ಯಾದರ್ಶನಕ್ಕೇನೇ ಸಂಸಾರದ ಕಾರಣವೆಂದು ಹೇಳಬೇಕಿತ್ತು, ಮಿಥ್ಯಾಜ್ಞಾನವನ್ನು ಬೇರೆ ಏತಕ್ಕಾಗಿ ಹೇಳಿದ್ದೀರಿ?

**ಉತ್ತರ :-** ಜ್ಞಾನದ ಅಪೇಕ್ಷೆಯಿಂದಂತೂ ಮಿಥ್ಯಾದೃಷ್ಟಿ ಮತ್ತು ಸಮ್ಯಗ್ದೃಷ್ಟಿಯ ಕ್ಷಯೋಪಶಮದಿಂದಾದ ಯಥಾರ್ಥ ಜ್ಞಾನದಲ್ಲಿ ಯಾವ ವಿಶೇಷವಿಲ್ಲ ಮತ್ತು ಆ ಜ್ಞಾನವು ಕೇವಲಜ್ಞಾನದಲ್ಲಿಯೂ ಹೋಗಿ ಕೂಡುತ್ತದೆ ನದಿಯು ಸಮುದ್ರದಲ್ಲಿ ಕೂಡುವಂತೆ. ಆದುದರಿಂದ ಜ್ಞಾನದಲ್ಲಿ ಯಾವ ದೋಷವಿಲ್ಲ. ಆದರೆ ಕ್ಷಯೋಪಶಮ ಜ್ಞಾನವು ಒಂದು ಜ್ಞೇಯದಲ್ಲಿ ಪ್ರವೃತ್ತವಾಗುತ್ತದೆ; ಮತ್ತು ಈ ಮಿಥ್ಯಾದರ್ಶನದ ನಿಮಿತ್ತದಿಂದ ಆ ಜ್ಞಾನವು ಅನ್ಯ

ಜ್ಞೇಯಗಳಲ್ಲಂತೂ ಪ್ರವೃತ್ತವಾಗುತ್ತದೆ, ಆದರೆ ಪ್ರಯೋಜನಭೂತವಾದ ಜೀವಾದಿ ತತ್ತ್ವಗಳ ಯಥಾರ್ಥ ನಿರ್ಣಯ ಮಾಡುವಲ್ಲಿ ತೊಡಗುವುದಿಲ್ಲ. ಆದುದರಿಂದ ಈ ಜ್ಞಾನದಲ್ಲಿ ದೋಷವಾಗಿ ಇದನ್ನು ಮಿಥ್ಯಾ ಜ್ಞಾನವೆಂದು ಹೇಳಿದೆ. ಮತ್ತು ಜೀವಾದಿತತ್ತ್ವಗಳ ಯಥಾರ್ಥ ಶ್ರದ್ಧೆಯಾಗದಿರುವುದರಿಂದ ಈ ಶ್ರದ್ಧೆಯಲ್ಲಿ ದೋಷವಾಗಿ ಇದನ್ನು ಮಿಥ್ಯಾದರ್ಶನವೆಂದು ಹೇಳಿದೆ. ಹೀಗೆ ಲಕ್ಷಣಭೇದದಿಂದ ಮಿಥ್ಯಾದರ್ಶನ, ಮಿಥ್ಯಾಜ್ಞಾನವನ್ನು ಭಿನ್ನವೆಂದು ಹೇಳಿದೆ.

ಈ ಪ್ರಕಾರ ಮಿಥ್ಯಾಜ್ಞಾನದ ಸ್ವರೂಪ ಹೇಳಲಾಯಿತು. ಇದನ್ನೇ ತತ್ತ್ವಜ್ಞಾನದ ಅಭಾವದಿಂದ ಅಜ್ಞಾನವೆಂದು ಹೇಳುತ್ತಾರೆ ಮತ್ತು ತನ್ನ ಪ್ರಯೋಜನವನ್ನು ಸಾಧಿಸದಿರುವುದರಿಂದ ಇದನ್ನೇ ಕುಜ್ಞಾನವೆಂದು ಹೇಳುತ್ತಾರೆ.

## ಮಿಥ್ಯಾಚಾರಿತ್ರದ ಸ್ವರೂಪ

ಈಗ ಮಿಥ್ಯಾಚಾರಿತ್ರದ ಸ್ವರೂಪ ಹೇಳುತ್ತಾರೆ,- ಚಾರಿತ್ರಮೋಹದ ಉದಯದಿಂದಾಗುವ ಕಷಾಯಭಾವಗಳ ಹೆಸರು ಮಿಥ್ಯಾಚಾರಿತ್ರವಿದೆ. ಇಲ್ಲಿ ತನ್ನ ಸ್ವಭಾವರೂಪ ಪ್ರವೃತ್ತಿಯಾಗುವುದಿಲ್ಲ, ಸುಳ್ಳು-ಪರ-ಸ್ವಭಾವರೂಪ ಪ್ರವೃತ್ತಿಮಾಡಲಪೇಕ್ಷಿಸುತ್ತಾನೆ, ಆದರೆ ಅದು ಆಗುವುದಿಲ್ಲ; ಆದುದರಿಂದ ಇದರ ಹೆಸರು ಮಿಥ್ಯಾ ಚಾರಿತ್ರವಿದೆ.

ತನ್ನ ಸ್ವಭಾವವಂತೂ ದೃಷ್ಟಾ-ಜ್ಞಾತಾ ಇದೆ; ಆದರೆ ತಾನು ಕೇವಲ ನೋಡುವವನಾಗಿ-ತಿಳಿಯುವವನಾಗಿ ಉಳಿಯುವುದಿಲ್ಲ, ಯಾವ ಪದಾರ್ಥಗಳನ್ನು ನೋಡುತ್ತಾನೆ-ತಿಳಿಯುತ್ತಾನೆ ಅವುಗಳಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸುತ್ತಿರುವುದರಿಂದ ರಾಗಿ-ದ್ವೇಷಿಯಾಗಿ ಒಂದರ ಸದ್ಭಾವವನ್ನಪೇಕ್ಷಿಸುತ್ತಾನೆ, ಒಂದರ ಅಭಾವವನ್ನಪೇಕ್ಷಿಸುತ್ತಾನೆ. ಆದರೆ ಅವುಗಳ ಸದ್ಭಾವ ಅಥವಾ ಅಭಾವವು ಇವನು ಮಾಡಿದಂತೆ ಆಗುವುದಿಲ್ಲ, **ಏಕೆಂದರೆ ಯಾವುದೇ ಒಂದು ದ್ರವ್ಯವು ಇನ್ನೊಂದು ದ್ರವ್ಯದ ಕರ್ತೃ-ಹರ್ತೃವಿಲ್ಲ, ಎಲ್ಲ ದ್ರವ್ಯಗಳು ತಮ್ಮ-ತಮ್ಮ ಸ್ವಭಾವರೂಪವಾಗಿ ಪರಿಣಮನ ಮಾಡುತ್ತವೆ;** ಇವನು ವ್ಯರ್ಥವಾಗಿಯೇ ಕಷಾಯಭಾವದಿಂದ ವ್ಯಾಕುಲನಾಗುತ್ತಾನೆ.

ಮತ್ತು ಎಂದಾದರೂ ಇವನು ಅಪೇಕ್ಷಿಸಿದಂತೆಯೇ ಪದಾರ್ಥವು ಪರಿಣಮಿಸಿದರೆ ಅದು ತಾನು ಪರಿಣಮಿಸುವುದರಿಂದಂತೂ ಪರಿಣಮಿತವಾಗಿಲ್ಲ. ಚಕ್ಕಡಿ ನಡೆಯುತ್ತಿರುವಾಗ ಬಾಲಕನೊಬ್ಬನು ಅದನ್ನು ತಳ್ಳಿ ಇದನ್ನು ನಾನು ನಡೆಸುತ್ತಿದ್ದೇನೆಂದು ಮನ್ನಿಸಿದರೆ ಅದು ಅಸತ್ಯ ಮನ್ನಣೆಯಿದೆ; ಒಂದು ವೇಳೆ ಅವನು ನಡೆಸುವುದರಿಂದ ನಡೆಯುತ್ತಿದ್ದರೆ ಅದು ನಿಂತುಕೊಂಡಾಗೇಕೆ ನಡೆಸುವುದಿಲ್ಲ ? ಅದೇ ಪ್ರಕಾರ ಪದಾರ್ಥಗಳು ಪರಿಣಮಿಸುತ್ತವೆ ಮತ್ತು ಈ ಜೀವನು ಅವುಗಳ ಅನುಸರಣೆ ಮಾಡಿ ನಾನು ಇವನ್ನು ಹೀಗೆ ಪರಿಣಮಿಸುತ್ತಿದ್ದೇನೆಂದು ಮನ್ನಿಸುತ್ತಾನೆ, ಆದರೆ ಅದು ಅಸತ್ಯ ಮನ್ನಣೆಯಿದೆ; ಒಂದು ವೇಳೆ ಅವನ ಪರಿಣಮಿಸುವಿಕೆಯಿಂದ ಪರಿಣಮಿಸಲ್ಪಡುತ್ತಿದ್ದರೆ ಅವು ಹಾಗೆ ಪರಿಣಮಿಸದಾಗೇಕೆ ಪರಿಣಮಿಸ ಹಚ್ಚುವುದಿಲ್ಲ ? ಆದರೆ ತನ್ನ ಅಪೇಕ್ಷೆಯಂತಂತೂ ಪದಾರ್ಥದ ಪರಿಣಮನವು ಎಂದಾದರೂ ಹಾಗೆಯೇ ಆಗುವುದಿದ್ದರೆ ಆಗುತ್ತದೆ. ಬಹಳಷ್ಟು ಪರಿಣಮನವಂತೂ ತಾನು ಅಪೇಕ್ಷಿಸದಂತೆಯೇ ಆಗುತ್ತಿರುವುದು ಕಂಡು ಬರುತ್ತದೆ. ಆದುದರಿಂದ ತಾನು ಮಾಡುವುದರಿಂದ ಯಾವುದರ ಸದ್ಭಾವ ಅಥವಾ ಅಭಾವವಾಗುವುದಿಲ್ಲವೆಂಬುದು ನಿಶ್ಚಿತವಿದೆ.

ಒಂದು ವೇಳೆ ತಾನು ಮಾಡುವುದರಿಂದ ಸದ್ಭಾವ-ಅಭಾವಗಳಾಗದಿದ್ದರೆ ಕಷಾಯಭಾವ ಮಾಡುವುದರಿಂದೇನಾಗುವುದು ? ಕೇವಲ ತಾನೇ ದುಃಖಿಯಾಗುತ್ತಾನೆ. ಹೇಗೆಂದರೆ ವಿವಾಹಾದಿ ಕಾರ್ಯಗಳಲ್ಲಿ ತಾನು ಹೇಳಿದ್ದು ಸ್ವಲ್ಪವೂ ನಡೆಯದಿದ್ದರೂ ಅಲ್ಲಿ ಸ್ವಯಂ ಕರ್ತೃವಾಗಿ ಕಷಾಯ ಮಾಡಿದರೆ ತಾನೇ ದುಃಖಿಯಾಗುತ್ತಾನೆ. ಅದೇ ಪ್ರಕಾರ ತಿಳಿಯಬೇಕು.

ಆದುದರಿಂದ ನೀರನ್ನು ಮಥಿಸಿದಂತೆ ಕಷಾಯಭಾವ ಮಾಡುವುದು ಕಾರ್ಯಕಾರಿಯಿಲ್ಲ. ಅದಕ್ಕಾಗಿಯೇ ಈ ಕಷಾಯಗಳ ಪ್ರವೃತ್ತಿಗೆ ಮಿಥ್ಯಾಚಾರಿತ್ರವೆಂದು ಹೇಳುತ್ತಾರೆ.

## ಇಷ್ಟಾನಿಷ್ಟತೆಯ ಮಿಥ್ಯಾಕಲ್ಪನೆ :-

ಪದಾರ್ಥಗಳನ್ನು ಇಷ್ಟಾನಿಷ್ಟವೆಂದು ಮನ್ನಿಸಿದ ಮೇಲೆ ಕಷಾಯಭಾವಗಳಾಗುತ್ತವೆ, ಆದುದರಿಂದ ಇಷ್ಟ-ಅನಿಷ್ಟವೆಂದು ಮನ್ನಿಸುವುದು ಕೂಡ ಮಿಥ್ಯೆಯಿದೆ; ಏಕೆಂದರೆ ಯಾವ ಪದಾರ್ಥವೂ ಇಷ್ಟ-ಅನಿಷ್ಟವಿಲ್ಲ.

ಹೇಗೆಂಬುದನ್ನು ಹೇಳುತ್ತಾರೆ-ತಮಗೆ ಸುಖದಾಯಕ-ಉಪಕಾರಿಯಾದುದನ್ನು ಇಷ್ಟವೆಂದು ಹೇಳುತ್ತಾರೆ; ತಮಗೆ ದುಃಖದಾಯಕ-ಅನುಪಕಾರಿಯಾಗಿರುವುದನ್ನು ಅನಿಷ್ಟವೆಂದು ಹೇಳುತ್ತಾರೆ. ಲೋಕದಲ್ಲಿ ಎಲ್ಲ ಪದಾರ್ಥಗಳು ತಮ್ಮ-ತಮ್ಮ ಸ್ವಭಾವದ್ದೇ ಕರ್ತೃಗಳಿದ್ದು ಯಾವುದೂ ಯಾವುದಕ್ಕೆ ಸುಖ-ದುಃಖದಾಯಕ, ಉಪಕಾರಿ-ಅನುಪಕಾರಿಯಿಲ್ಲ. ಈ ಜೀವನೇ ತನ್ನ ಪರಿಣಾಮಗಳಲ್ಲಿ ಅವನ್ನು ಸುಖದಾಯಕ-ಉಪಕಾರಿಯೆಂದು ಮನ್ನಿಸಿ ಇಷ್ಟವೆಂದು ತಿಳಿಯುತ್ತಾನೆ. ಅಥವಾ ದುಃಖದಾಯಕ-ಅನುಪಕಾರಿಯೆಂದು ತಿಳಿದು ಅನಿಷ್ಟವೆಂದು ಮನ್ನಿಸುತ್ತಾನೆ; ಏಕೆಂದರೆ ಒಂದೇ ಪದಾರ್ಥವು ಒಬ್ಬನಿಗೆ ಇಷ್ಟವೆನಿಸುತ್ತದೆ, ಇನ್ನೊಬ್ಬನಿಗೆ ಅನಿಷ್ಟವೆನಿಸುತ್ತದೆ. ಹೇಗೆಂದರೆ-ಬಟ್ಟೆಯು ದೊರಕದವನಿಗೆ ದಪ್ಪ ಬಟ್ಟೆಯು ಇಷ್ಟವೆನಿಸುತ್ತದೆ ಮತ್ತು ನಯವಾದ ಬಟ್ಟೆ ದೊರಕುವವನಿಗೆ ಅದು ಅನಿಷ್ಟವೆನಿಸುತ್ತದೆ. ಸೂಕರಾದಿಗಳಿಗೆ ಮಲವು ಇಷ್ಟವೆನಿಸಿದರೆ ದೇವಾದಿಕರಿಗೆ ಅನಿಷ್ಟವೆನಿಸುತ್ತದೆ, ಒಬ್ಬನಿಗೆ ಮೇಘವೃಷ್ಟಿಯು ಇಷ್ಟವೆನಿಸಿದರೆ ಇನ್ನೊಬ್ಬನಿಗೆ ಅನಿಷ್ಟವೆನಿಸುತ್ತದೆ. ಈ ಪ್ರಕಾರ ಉಳಿದವುಗಳನ್ನು ತಿಳಿಯಬೇಕು.

ಇದೇ ಪ್ರಕಾರ ಓರ್ವ ಜೀವನಿಗೆ ಕೂಡ ಒಂದೇ ಪದಾರ್ಥವು ಒಂದು ಕಾಲದಲ್ಲಿ ಇಷ್ಟವೆನಿಸುತ್ತದೆ ಮತ್ತೊಂದು ಕಾಲದಲ್ಲಿ ಅನಿಷ್ಟವೆನಿಸುತ್ತದೆ. ಈ ಜೀವನು ಮುಖ್ಯರೂಪದಿಂದ ಇಷ್ಟಮನ್ನಿಸುವುದು ಕೂಡ ಅನಿಷ್ಟವಾಗುತ್ತಿರುವುದು ಕಂಡು ಬರುತ್ತದೆ. ಇವೆಲ್ಲವನ್ನು ತಿಳಿಯಬೇಕು. ಹೇಗೆಂದರೆ-ಶರೀರವು ಇಷ್ಟವಿದ್ದರೂ ರೋಗಾದಿಗಳಾದ ಮೇಲೆ ಅನಿಷ್ಟವಾಗಿ ಬಿಡುತ್ತದೆ; ಪುತ್ರಾದಿಕರು ಇಷ್ಟರಿದ್ದರೂ ಕಾರಣ ದೊರೆತ ಮೇಲೆ ಅನಿಷ್ಟರಾಗುತ್ತಿರುವುದು ಕಂಡು ಬರುತ್ತದೆ. ಇವೆಲ್ಲವನ್ನು ತಿಳಿಯಬೇಕು ಮತ್ತು ಈ ಜೀವನು ಮುಖ್ಯರೂಪದಿಂದ ಅನಿಷ್ಟ ಮನ್ನಿಸುತ್ತಿರುವುದು ಕೂಡ ಇಷ್ಟವಾಗುತ್ತಿರುವುದನ್ನು ನೋಡುತ್ತೇವೆ. ಹೇಗೆಂದರೆ-ಬೈಗಳು ಅನಿಷ್ಟವೆನಿಸಿದರೂ ಮಾವನ ಮನೆಯಲ್ಲಿ ಇಷ್ಟವೆನಿಸುತ್ತವೆ.★ ಇವೇ ಮೊದಲಾದವುಗಳನ್ನು ತಿಳಿಯಬೇಕು.

ಈ ಪ್ರಕಾರ ಪದಾರ್ಥಗಳಲ್ಲಿ ಇಷ್ಟಾನಿಷ್ಟತೆಯಿಲ್ಲ. ಒಂದು ವೇಳೆ ಪದಾರ್ಥಗಳಲ್ಲಿ ಇಷ್ಟಾನಿಷ್ಟತೆಯಿದ್ದರೆ ಇಷ್ಟವಾದ ಪದಾರ್ಥವು ಎಲ್ಲರಿಗೂ ಇಷ್ಟವೇ ಆಗಬೇಕು ಮತ್ತು ಅನಿಷ್ಟವಾದದ್ದು ಅನಿಷ್ಟವೇ ಆಗಬೇಕು; ಆದರೆ

★ ರಾಜಸ್ಥಾನದಲ್ಲಿ ಈ ರೂಢಿಯಿದೆ.

ಹಾಗೆ ಇಲ್ಲ. ಈ ಜೀವನು ತನ್ನ ಕಲ್ಪನೆಯಿಂದ ಅವನ್ನು ಇಷ್ಟಾನಿಷ್ಟವೆಂದು ಮನ್ನಿಸುತ್ತಾನೆ, ಆದರೆ ಈ ಕಲ್ಪನೆಯು ಅಸತ್ಯವಿದೆ.

ಪದಾರ್ಥಗಳು ಸುಖದಾಯಕ-ಉಪಕಾರಿ ಅಥವಾ ದುಃಖದಾಯಕ-ಅನುಪಕಾರಿಯಾಗುತ್ತಿರುವುದು ತನ್ನಿಂದ ತಾನೇ ಆಗುತ್ತಿಲ್ಲ, ಆದರೆ ಪುಣ್ಯ-ಪಾಪದ ಉದಯಾನುಸಾರ ಆಗುತ್ತವೆ. ಪುಣ್ಯದ ಉದಯವಿರುವವನಿಗೆ ಪದಾರ್ಥಗಳ ಸಂಯೋಗವು ಸುಖದಾಯಕ-ಉಪಕಾರಿಯಾಗುತ್ತದೆ ಮತ್ತು ಪಾಪದ ಉದಯವಿರುವವನಿಗೆ ಪದಾರ್ಥಗಳ ಸಂಯೋಗವು ದುಃಖದಾಯಕ-ಅನುಪಕಾರಿಯಾಗುತ್ತದೆಯೆಂಬುದನ್ನು ಪ್ರತ್ಯಕ್ಷ ಕಾಣುತ್ತೇವೆ. ಒಬ್ಬನಿಗೆ ಸ್ತ್ರೀ-ಪುತ್ರಾದಿಕರು ಸುಖದಾಯಕರಿದ್ದರೆ ಇನ್ನೊಬ್ಬನಿಗೆ ದುಃಖದಾಯಕರಿದ್ದಾರೆ ಒಬ್ಬನಿಗೆ ವ್ಯಾಪಾರ ಮಾಡುವುದರಿಂದ ಲಾಭವಿದ್ದರೆ ಮತ್ತೊಬ್ಬನಿಗೆ ಹಾನಿಯಿದೆ; ಒಬ್ಬನಿಗೆ ಶತ್ರುಗಳೂ ಸೇವಕರಾದರೆ ಬೇರೊಬ್ಬನಿಗೆ ಪುತ್ರನೂ ಅಹಿತಕಾರಿಯಾಗುತ್ತಾನೆ. ಆದುದರಿಂದ ಪದಾರ್ಥಗಳು ತನ್ನಿಂದ ತಾನೇ ಇಷ್ಟಾನಿಷ್ಟವಾಗುವುದಿಲ್ಲ, ಆದರೆ ಕರ್ಮೋದಯದ ಅನುಸಾರ ಪ್ರವರ್ತಿಸುತ್ತವೆಂದು ತಿಳಿದುಬರುತ್ತದೆ. ಯಾವ ಪ್ರಕಾರ ಒಬ್ಬನ ಸೇವಕನು ತನ್ನ ಒಡೆಯನು ಹೇಳಿದ ಪ್ರಕಾರ  ಯಾವುದೇ ಪುರುಷನಿಗೆ ಇಷ್ಟಾನಿಷ್ಟವನ್ನುತ್ಪನ್ನ ಮಾಡಿದರೆ ಅದೇನು ಸೇವಕನ ಕರ್ತವ್ಯವಲ್ಲ, ಅವನ ಒಡೆಯನ ಕರ್ತವ್ಯವಿದೆ. ಯಾರಾದರೂ ಸೇವಕರನ್ನೇ ಇಷ್ಟಾನಿಷ್ಟವೆಂದು ಮನ್ನಿಸಿದರೆ ಅದು ಅಸತ್ಯವಿದೆ. ಅದೇ ಪ್ರಕಾರ ಕರ್ಮದ ಉದಯದಿಂದ ಪ್ರಾಪ್ತವಾದ ಪದಾರ್ಥಗಳು ಕರ್ಮದ ಅನುಸಾರ ಜೀವನಿಗೆ ಇಷ್ಟಾನಿಷ್ಟವನ್ನು ಉತ್ಪನ್ನ ಮಾಡಿದರೆ ಅದೇನು ಪದಾರ್ಥಗಳ ಕರ್ತವ್ಯವಲ್ಲ, ಅದು ಕರ್ಮದ ಕರ್ತವ್ಯವಿದೆ. ಆದ್ದರಿಂದ ಪದಾರ್ಥಗಳನ್ನೇ ಇಷ್ಟಾನಿಷ್ಟವೆಂದು ಮನ್ನಿಸಿದರೆ ಅದು ಅಸತ್ಯವಿದೆ.

ಆದುದರಿಂದ ಪದಾರ್ಥಗಳನ್ನು ಇಷ್ಟಾನಿಷ್ಟವೆಂದು ಮನ್ನಿಸಿ ಅವುಗಳಲ್ಲಿ ರಾಗ-ದ್ವೇಷಗಳನ್ನು ಮಾಡುವುದು ಅಸತ್ಯವಿದೆಯೆಂಬ ಮಾತು ಸಿದ್ಧವಾಯಿತು.

**ಪ್ರಶ್ನೆ :-** ಬಾಹ್ಯ ವಸ್ತುಗಳ ಸಂಯೋಗವು ಕರ್ಮದ ನಿಮಿತ್ತದಿಂದಾಗುತ್ತದೆಂದ ಮೇಲೆ ಕರ್ಮಗಳಲ್ಲಂತೂ ರಾಗ-ದ್ವೇಷ ಮಾಡಬೇಕಲ್ಲವೇ ?

**ಉತ್ತರ :-** ಕರ್ಮಗಳಂತೂ ಜಡವಿದ್ದು ಅವಕ್ಕೇನು ಸುಖ-ದುಃಖ ಕೊಡುವ ಇಚ್ಛೆಯಿಲ್ಲ. ಮತ್ತು ಅವು ತಾವಾಗಿಯಂತೂ ಕರ್ಮರೂಪವಾಗಿ ಪರಿಣಮಿಸುವುದಿಲ್ಲ, ಇವನ ಭಾವಗಳ ನಿಮಿತ್ತದಿಂದ ಕರ್ಮರೂಪವಾಗುತ್ತವೆ. ಹೇಗೆಂದರೆ-ಒಬ್ಬನು ತನ್ನ ಕೈಯಿಂದ ಕಲ್ಲು ತೆಗೆದುಕೊಂಡು ತನ್ನ ತಲೆ ಒಡೆದುಕೊಂಡರೆ ಅದರಲ್ಲಿ ಕಲ್ಲಿನ ದೋಷವೇನಿದೆ? ಅದೇ ಪ್ರಕಾರ ಜೀವನು ತನ್ನ ರಾಗಾದಿ ಭಾವಗಳಿಂದ ಪುದ್ಗಲವನ್ನು ಕರ್ಮರೂಪವಾಗಿ ಪರಿಣಮನ ಮಾಡಿ ತನ್ನ ಕೆಡಕು ಮಾಡಿಕೊಂಡರೆ ಅದರಲ್ಲಿ ಕರ್ಮದ ದೋಷವೇನಿದೆ ? ಆದುದರಿಂದ ಕರ್ಮದ ಮೇಲೆ ಕೂಡ ರಾಗ-ದ್ವೇಷ ಮಾಡುವುದು ಅಸತ್ಯವಿದೆ.

ಹೀಗೆ ಪರದ್ರವ್ಯಗಳನ್ನು ಇಷ್ಟಾನಿಷ್ಟವೆಂದು ಮನ್ನಿಸಿ ರಾಗ-ದ್ವೇಷ ಮಾಡುವುದು ಮಿಥ್ಯೆಯಿದೆ. ಒಂದು ವೇಳೆ ಪರದ್ರವ್ಯಗಳು ಇಷ್ಟಾನಿಷ್ಟವಿದ್ದು ಅಲ್ಲಿ ರಾಗ-ದ್ವೇಷ ಮಾಡಿದರೆ ಮಿಥ್ಯೆಯೆಂಬ ಹೆಸರು ಪಡೆಯುತ್ತಿರಲಿಲ್ಲ;

ಅವಂತೂ ಇಷ್ಟಾನಿಷ್ಟವಿಲ್ಲ ಮತ್ತು ಇವನು ಇಷ್ಟಾನಿಷ್ಟ ಮನ್ನಿಸಿ ರಾಗ-ದ್ವೇಷ ಮಾಡುತ್ತಾನೆ, ಆದುದರಿಂದ ಈ ಪರಿಣಮನವನ್ನು ಮಿಥ್ಯೆಯೆಂದು ಹೇಳಿದೆ. ಮಿಥ್ಯಾರೂಪವಾದ ಪರಿಣಮನದ ಹೆಸರು ಮಿಥ್ಯಾಚಾರಿತ್ರವಿದೆ.

## ರಾಗ-ದ್ವೇಷದ ವಿಧಾನ ಹಾಗೂ ವಿಸ್ತಾರ :-

ಈ ಜೀವನಿಗೆ ರಾಗ-ದ್ವೇಷಗಳಾಗುತ್ತವೆ, ಅವುಗಳ ವಿಧಾನ ಮತ್ತು ವಿಸ್ತಾರವನ್ನೀಗ ತಿಳಿಸಿಕೊಡುತ್ತಾರೆ.

ಮೊದಲಂತೂ ಈ ಜೀವನಿಗೆ ಪರ್ಯಾಯದಲ್ಲಿ ಅಹಂಬುದ್ಧಿಯಿರುವುದರಿಂದ ತನ್ನನ್ನು ಮತ್ತು ಶರೀರವನ್ನು ಒಂದೆಂದು ತಿಳಿದುಕೊಂಡು ಪ್ರವರ್ತಿಸುತ್ತಾನೆ. ಈ ಶರೀರದಲ್ಲಿ ತನಗೆ ಸೊಗಸೆನಿಸುವಂಥ ಇಷ್ಟ ಅವಸ್ಥೆಯಿದ್ದಾಗ ಅದರಲ್ಲಿ ರಾಗ ಮಾಡುತ್ತಾನೆ; ತನಗೆ ಸೊಗಸೆನಿಸದಂಥ ಅನಿಷ್ಟ ಅವಸ್ಥೆಯಿದ್ದಾಗ ಅದರಲ್ಲಿ ದ್ವೇಷ ಮಾಡುತ್ತಾನೆ. ಮತ್ತು ಶರೀರದ ಇಷ್ಟಾವಸ್ಥೆಗೆ ಕಾರಣಭೂತವಾದ ಬಾಹ್ಯಪದಾರ್ಥಗಳಲ್ಲಂತೂ ರಾಗ ಮಾಡುತ್ತಾನೆ ಹಾಗೂ ಅದಕ್ಕೆ ಘಾತಕವಾದವುಗಳಲ್ಲಿ ದ್ವೇಷ ಮಾಡುತ್ತಾನೆ. ಇನ್ನು ಶರೀರದ ಅನಿಷ್ಟ ಅವಸ್ಥೆಗೆ ಕಾರಣಭೂತವಾದ ಬಾಹ್ಯ ಪದಾರ್ಥಗಳಲ್ಲಂತೂ ದ್ವೇಷ ಮಾಡುತ್ತಾನೆ. ಮತ್ತು ಅವಕ್ಕೆ ಘಾತಕವಾದವುಗಳಲ್ಲಿ ರಾಗ ಮಾಡುತ್ತಾನೆ. ಮತ್ತು ಇವುಗಳಲ್ಲಿ ಯಾವ ಬಾಹ್ಯ ಪದಾರ್ಥಗಳಿಂದ ರಾಗ ಮಾಡುತ್ತಾನೆ ಅವಕ್ಕೆ ಕಾರಣಭೂತವಾದ ಅನ್ಯಪದಾರ್ಥಗಳಲ್ಲಿ ರಾಗ ಮಾಡುತ್ತಾನೆ ಹಾಗೂ ಅವಕ್ಕೆ ಘಾತಕವಾದವುಗಳಲ್ಲಿ ದ್ವೇಷ ಮಾಡುತ್ತಾನೆ. ಮತ್ತು ಯಾವ ಬಾಹ್ಯ ಪದಾರ್ಥಗಳಿಂದ ದ್ವೇಷ ಮಾಡುತ್ತಾನೆ ಅವಕ್ಕೆ ಕಾರಣಭೂತವಾದ ಅನ್ಯ ಪದಾರ್ಥಗಳಲ್ಲಿ ದ್ವೇಷ ಮಾಡುತ್ತಾನೆ ಹಾಗೂ ಅವಕ್ಕೆ ಘಾತಕವಾದವುಗಳಲ್ಲಿ ರಾಗ ಮಾಡುತ್ತಾನೆ. ಮತ್ತು ಇವುಗಳಲ್ಲೂ ಯಾವವುಗಳಿಂದ ರಾಗ ಮಾಡುತ್ತಾನೆ ಅವಕ್ಕೆ ಕಾರಣ ಹಾಗೂ ಘಾತಕವಾದ ಅನ್ಯಪದಾರ್ಥಗಳಲ್ಲಿ ರಾಗ-ದ್ವೇಷ ಮಾಡುತ್ತಾನೆ. ಇನ್ನು ಯಾವವುಗಳಿಂದ ದ್ವೇಷವಿದೆ ಅವಕ್ಕೆ ಕಾರಣ ಹಾಗೂ ಘಾತಕವಾದ ಅನ್ಯ ಪದಾರ್ಥಗಳಲ್ಲಿ ದ್ವೇಷ ಹಾಗೂ ರಾಗ ಮಾಡುತ್ತಾನೆ. ಹೀಗೆ ರಾಗ-ದ್ವೇಷಗಳ ಪರಂಪರೆಯು ಪ್ರವರ್ತಿಸುತ್ತದೆ.

ಅದೆಷ್ಟೋ ಬಾಹ್ಯ ಪದಾರ್ಥಗಳು ಶರೀರದ ಅವಸ್ಥೆಗೆ ಕಾರಣಗಳಿಲ್ಲ ಅವುಗಳಲ್ಲೂ ರಾಗ-ದ್ವೇಷ ಮಾಡುತ್ತಾನೆ. ಹೇಗೆಂದರೆ-ಹಸುಗಳಿಗೆ ಕರುಗಳಿಂದ ಯಾವ ಶರೀರದ ಇಷ್ಟವಾಗದಿದ್ದರೂ ಅಲ್ಲಿ ರಾಗ ಮಾಡುತ್ತವೆ. ಮತ್ತು ಶ್ವಾನಗಳಿಗೆ ಬೆಕ್ಕುಗಳಿಂದ ಯಾವ ಶರೀರದ ಅನಿಷ್ಟವಾಗದಿದ್ದರೂ ಅಲ್ಲಿ ದ್ವೇಷ ಮಾಡುತ್ತವೆ. ಮತ್ತು ಅದೆಷ್ಟೋ ವರ್ಣ, ಗಂಧ, ಶಬ್ದಾದಿಗಳ ಅವಲೋಕನದಿಂದ ಶರೀರದ ಇಷ್ಟವಾಗದಿದ್ದರೂ ಅವುಗಳಲ್ಲಿ ರಾಗ ಮಾಡುತ್ತಾನೆ. ಅದೆಷ್ಟೋ ವರ್ಣಾದಿಗಳ ಅವಲೋಕನದಿಂದ ಶರೀರಕ್ಕೆ ಅನಿಷ್ಟವಾಗದಿದ್ದರೂ ಅವುಗಳಲ್ಲಿ ದ್ವೇಷ ಮಾಡುತ್ತಾನೆ. ಹೀಗೆ ಭಿನ್ನ, ಬಾಹ್ಯ ಪದಾರ್ಥಗಳಲ್ಲಿ ರಾಗ-ದ್ವೇಷಗಳಾಗುತ್ತವೆ.

ಇವುಗಳಲ್ಲೂ ಯಾವವುಗಳಿಂದ ರಾಗ ಮಾಡುತ್ತಾನೆ ಅವಕ್ಕೆ ಕಾರಣ ಮತ್ತು ಘಾತಕವಾದ ಅನ್ಯ ಪದಾರ್ಥಗಳಲ್ಲಿ ರಾಗ ಹಾಗೂ ದ್ವೇಷ ಮಾಡುತ್ತಾನೆ, ಮತ್ತು ಯಾವವುಗಳಿಂದ ದ್ವೇಷ ಮಾಡುತ್ತಾನೆ ಅವಕ್ಕೆ ಕಾರಣ ಮತ್ತು ಘಾತಕವಾದ ಅನ್ಯ ಪದಾರ್ಥಗಳಲ್ಲಿ ದ್ವೇಷ ಹಾಗೂ ರಾಗ ಮಾಡುತ್ತಾನೆ. ಇದೇ ಪ್ರಕಾರ ಇಲ್ಲಿಯೂ ರಾಗ-ದ್ವೇಷಗಳ ಪರಂಪರೆಯು ಪ್ರವರ್ತಿಸುತ್ತದೆ.

**ಪ್ರಶ್ನೆ :-** ಅನ್ಯ ಪದಾರ್ಥಗಳಲ್ಲಂತೂ ರಾಗ-ದ್ವೇಷ ಮಾಡುವ ಪ್ರಯೋಜನ ತಿಳಿಯಿತು, ಆದರೆ ಮೊದಲೇ ಶರೀರದ ಮೂಲಭೂತ ಅವಸ್ಥೆಯಲ್ಲಿ ಹಾಗೂ ಆ ಶರೀರದ ಅವಸ್ಥೆಗೆ ಕಾರಣವಿಲ್ಲದಂಥ ಪದಾರ್ಥಗಳಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸುವುದರ ಪ್ರಯೋಜನವೇನು ?

**ಉತ್ತರ :-** ಮೊದಲು ಮೂಲಭೂತ ಶರೀರದ ಅವಸ್ಥೆ ಮೊದಲಾದವುಗಳಲ್ಲೂ ಪ್ರಯೋಜನ ವಿಚಾರೀರಿಸಿ ರಾಗ-ದ್ವೇಷ ಮಾಡಿದರೆ ಮಿಥ್ಯಾಚಾರಿತ್ರವೆಂಬ ಹೆಸರನ್ನೇಕೆ ಪಡೆಯಿತು ? ಅವುಗಳಲ್ಲಿ ಪ್ರಯೋಜನವಿಲ್ಲದೆಯೇ ರಾಗ-ದ್ವೇಷ ಮಾಡುತ್ತಾನೆ ಮತ್ತು ಅವುಗಳ ಸಲುವಾಗಿಯೇ ಉಳಿದವುಗಳಲ್ಲಿ ರಾಗ-ದ್ವೇಷ ಮಾಡುತ್ತಿರುವುದರಿಂದ ಸಮಸ್ತ ರಾಗ-ದ್ವೇಷ ಪರಿಣತಿಯ ಹೆಸರು ಮಿಥ್ಯಾಚಾರಿತ್ರವೆಂದು ಹೇಳಿದೆ.

**ಪ್ರಶ್ನೆ :-** ಶರೀರದ ಅವಸ್ಥೆ ಹಾಗೂ ಬಾಹ್ಯ ಪದಾರ್ಥಗಳಲ್ಲಿ ಇಷ್ಟಾನಿಷ್ಟ ಮನ್ನಿಸುವ ಪ್ರಯೋಜನವಂತೂ ಭಾಸವಾಗುವುದಿಲ್ಲ ಮತ್ತು ಇಷ್ಟಾನಿಷ್ಟವನ್ನು ಮನ್ನಿಸಿದಲ್ಲದೆ ಇರುವುದೂ ಆಗುವುದಿಲ್ಲ; ಹಾಗಾದರೆ ಇದರ ಕಾರಣವೇನು?

**ಉತ್ತರ :-** ಈ ಜೀವನಿಗೆ ಚಾರಿತ್ರಮೋಹದ ಉದಯದಿಂದ ರಾಗ-ದ್ವೇಷಗಳಾಗುತ್ತವೆ. ಮತ್ತು ಆ ಭಾವಗಳು ಯಾವುದೇ ಪದಾರ್ಥದ ಆಶ್ರಯವಿಲ್ಲದೆ ಆಗುವ ಸಾಧ್ಯತೆಯಿಲ್ಲ. ಹೇಗೆಂದರೆ ರಾಗವಾದರೆ ಒಂದು ಪದಾರ್ಥದಲ್ಲಿ ಆಗುತ್ತದೆ, ದ್ವೇಷವಾದರೆ ಒಂದು ಪದಾರ್ಥದಲ್ಲಿ ಆಗುತ್ತದೆ. ಹೀಗೆ ಆ ಪದಾರ್ಥಗಳಲ್ಲಿ ಮತ್ತು ರಾಗ-ದ್ವೇಷಗಳಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಅಲ್ಲಿ ಎಷ್ಟೋ ಪದಾರ್ಥಗಳು ಮುಖ್ಯರೂಪದಿಂದ ರಾಗಕ್ಕೆ ಕಾರಣವಿದ್ದರೆ ಎಷ್ಟೋ ಪದಾರ್ಥಗಳು ಮುಖ್ಯರೂಪದಿಂದ ದ್ವೇಷಕ್ಕೆ ಕಾರಣವಿವೆ. ಎಷ್ಟೋ ಪದಾರ್ಥಗಳು ಒಬ್ಬನಿಗೆ ಒಂದು ಕಾಲದಲ್ಲಿ ರಾಗಕ್ಕೆ ಕಾರಣವಾದರೆ ಇನ್ನೊಬ್ಬನಿಗೆ ಒಂದು ಕಾಲದಲ್ಲಿ ದ್ವೇಷಕ್ಕೆ ಕಾರಣವಾಗುತ್ತವೆಯೆಂಬ ವಿಶೇಷವನ್ನು ತಿಳಿಯಬೇಕು.

ಒಂದು ಕಾರ್ಯವಾಗುವಲ್ಲಿ ಅನೇಕ ಕಾರಣಗಳು ಬೇಕು. ಆದ್ದರಿಂದ ರಾಗಾದಿಗಳಾಗುವಲ್ಲಿ ಅಂತರಂಗ ಕಾರಣವು ಮೋಹದ ಉದಯವಿದ್ದು ಅದಂತೂ ಬಲಿಷ್ಠವಿದೆ ಮತ್ತು ಬಾಹ್ಯ ಕಾರಣವು ಪದಾರ್ಥವಿದ್ದು ಅದು ಬಲಿಷ್ಠವಿಲ್ಲ. ಮಹಾಮುನಿಗಳ ಮೋಹವು ಮಂದವಿರುವುದರಿಂದ ಬಾಹ್ಯ ಪದಾರ್ಥಗಳ ನಿಮಿತ್ತವಿದ್ದರೂ ರಾಗ-ದ್ವೇಷಗಳು ಉತ್ಪನ್ನವಾಗುವುದಿಲ್ಲ. ಪಾಪಿ ಜೀವಗಳಿಗೆ ಮೋಹವು ತೀವ್ರವಿರುವುದರಿಂದ ಬಾಹ್ಯ ಕಾರಣಗಳಿಲ್ಲದಿದ್ದರೂ ಅವರ ಸಂಕಲ್ಪದಿಂದಲೇ ರಾಗ-ದ್ವೇಷಗಳಾಗುತ್ತವೆ. ಆದುದರಿಂದ ಮೋಹದ ಉದಯವಿರುವುದರಿಂದ ರಾಗಾದಿಗಳಾಗುತ್ತವೆ. ಯಾವ ಬಾಹ್ಯ ಪದಾರ್ಥದ ಆಶ್ರಯದಿಂದ ರಾಗಭಾವವಾಗುತ್ತದೆ ಅದರಲ್ಲಿ ಪ್ರಯೋಜನವಿಲ್ಲದೆಯೇ ಅಥವಾ ಸ್ವಲ್ಪ ಪ್ರಯೋಜನದೊಡನೆ ಇಷ್ಟಬುದ್ಧಿಯಾಗುತ್ತದೆ. ಮತ್ತು ಯಾವ ಪದಾರ್ಥದ ಆಶ್ರಯದಿಂದ ದ್ವೇಷಭಾವವಾಗುತ್ತದೆ ಅದರಲ್ಲಿ ಪ್ರಯೋಜನವಿಲ್ಲದೆಯೇ ಅಥವಾ ಸ್ವಲ್ಪ ಪ್ರಯೋಜನದೊಡನೆ ಅನಿಷ್ಟ ಬುದ್ಧಿಯಾಗುತ್ತದೆ ಅದಕ್ಕಾಗಿ ಮೋಹದ ಉದಯದಿಂದ ಪದಾರ್ಥಗಳನ್ನು ಇಷ್ಟಾನಿಷ್ಟವೆಂದು ಮನ್ನಿಸಿದಲ್ಲದೆ ಇರುವುದಾಗುವುದಿಲ್ಲ.

ಹೀಗೆ ಪದಾರ್ಥಗಳಲ್ಲಿ ಇಷ್ಟಾನಿಷ್ಟಬುದ್ಧಿಯಾದ ಮೇಲೆ ಆ ರಾಗ-ದ್ವೇಷರೂಪ ಪರಿಣಮನವಾಗುವುದರ ಹೆಸರು ಮಿಥ್ಯಾಚಾರಿತ್ರವಿದೆಯೆಂದು ತಿಳಿಯಬೇಕು.

ಈ ರಾಗ-ದ್ವೇಷಗಳ ವಿಶೇಷಗಳೇ ಕ್ರೋಧ, ಮಾನ, ಮಾಯೆ, ಲೋಭ, ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀವೇದ, ಪುರುಷವೇದ, ನಪುಂಸಕವೇದರೂಪದ ಕಷಾಯಭಾವಗಳಿವೆ; ಇವೆಲ್ಲವು ಈ ಮಿಥ್ಯಾಚಾರಿತ್ರದ ಭೇದಗಳೆಂದೇ ತಿಳಿಯಬೇಕು. ಇವುಗಳ ವರ್ಣನೆಯನ್ನು ಈ ಮೊದಲು ೪೩, ೬೨ನೇ ಪುಟದಲ್ಲಿ ಮಾಡಿಯೇ ಆಗಿದೆ.

ಈ ಮಿಥ್ಯಾಚಾರಿತ್ರದಲ್ಲಿ ಸ್ವರೂಪಾಚರಣ ಚಾರಿತ್ರದ ಅಭಾವವಿರುವುದರಿಂದ ಇದರ ಹೆಸರು ಅಚಾರಿತ್ರವೆಂದೂ ಹೇಳಲಾಗುತ್ತದೆ. ಇಲ್ಲಿ ಆ ಪರಿಣಾಮಗಳು ದೂರವಾಗುವುದಿಲ್ಲ ಅಥವಾ ವಿರಕ್ತವಿಲ್ಲದಿರುವುದರಿಂದ ಇದರ ಹೆಸರೇ ಅಸಂಯಮ ಅಥವಾ ಅವಿರತಿಯೆಂದು ಹೇಳಲಾಗುತ್ತದೆ. ಏಕೆಂದರೆ ಐದು ಇಂದ್ರಿಯಗಳು ಮತ್ತು ಮನಸ್ಸಿನ ವಿಷಯಗಳಲ್ಲಿ ಹಾಗೂ ಐದು ಸ್ಥಾವರ ಮತ್ತು ತ್ರಸದ ಹಿಂಸೆಯಲ್ಲಿ ಸ್ವಚ್ಛಂದತೆಯಿರುವುದು ಹಾಗೂ ಅವುಗಳ ತ್ಯಾಗರೂಪ ಭಾವವಿಲ್ಲದಿರುವುದೇ ಹನ್ನೆರಡು ಪ್ರಕಾರದ ಅಸಂಯಮ ಅಥವಾ ಅವಿರತಿಯಿದೆ. ಕಷಾಯ ಭಾವಗಳಾದ ಮೇಲೆ ಇಂಥ ಕಷಾಯ ಕಾರ್ಯಗಳಾಗುವುದರಿಂದ ಮಿಥ್ಯಾಚಾರಿತ್ರದ ಹೆಸರು ಅಸಂಯಮ ಅಥವಾ ಅವಿರತಿಯಿದೆಯೆಂದು ತಿಳಿಯಬೇಕು. ಇದರ ಹೆಸರೇ ಅವ್ರತವೆಂದು ತಿಳಿಯುವುದು. ಏಕೆಂದರೆ ಹಿಂಸೆ, ಅನೃತ, ಅಸ್ತೇಯ, ಅಬ್ರಹ್ಮ, ಪರಿಗ್ರಹಗಳ ಪಾಪಕಾರ್ಯಗಳಲ್ಲಿನ ಪ್ರವೃತ್ತಿಯ ಹೆಸರು ಅವ್ರತವಿದೆ. ಇವುಗಳ ಮೂಲಕಾರಣ ಪ್ರಮತ್ತಯೋಗವೆಂದು ಹೇಳಿದೆ. ಪ್ರಮತ್ತಯೋಗವು ಕಷಾಯಮಯವಿರುವುದರಿಂದ ಮಿಥ್ಯಾಚಾರಿತ್ರದ ಹೆಸರು ಅವ್ರತವೆಂದೂ ಹೇಳಲಾಗುತ್ತದೆ. ಹೀಗೆ ಮಿಥ್ಯಾಚಾರಿತ್ರದ ಸ್ವರೂಪ ಹೇಳಲಾಯಿತು.

ಹೀಗೆ ಈ ಸಂಸಾರಿ ಜೀವನಿಗೆ ಮಿಥ್ಯಾದರ್ಶನ, ಮಿಥ್ಯಾಜ್ಞಾನ, ಮಿಥ್ಯಾಚಾರಿತ್ರರೂಪದ ಪರಿಣಮನವು ಅನಾದಿಯಿಂದ ಕಂಡು ಬರುತ್ತದೆ. ಇಂಥ ಪರಿಣಮನವು ಏಕೇಂದ್ರಿಯ ಮೊದಲಾಗಿ ಅಸಂಜ್ಞೀವರೆಗಿನ ಎಲ್ಲ ಜೀವಗಳಿಗೆ ಕಂಡು ಬರುತ್ತದೆ. ಮತ್ತು ಸಂಜ್ಞೀ ಪಂಚೇಂದ್ರಿಯಗಳಲ್ಲಿ ಸಮ್ಯಗ್ದೃಷ್ಟಿಯನ್ನು ಬಿಟ್ಟು ಉಳಿದ ಎಲ್ಲ ಜೀವಗಳಿಗೆ ಇಂಥ ಪರಿಣಮನವೇ ಕಂಡು ಬರುತ್ತದೆ. ಪರಿಣಮನದಲ್ಲಿ ಎಲ್ಲಿ ಹೇಗೆ ಸಂಭವವಿದೆ ಅಲ್ಲಿ ಹಾಗೆ ತಿಳಿಯಬೇಕು. ಹೇಗೆಂದರೆ-ಏಕೇಂದ್ರಿಯ ಮೊದಲಾದವುಗಳಿಗೆ ಇಂದ್ರಿಯಾದಿಗಳ ಹೀನಾಧಿಕತೆಯು ಕಂಡು ಬರುತ್ತದೆ. ಮತ್ತು ಧನ-ಪುತ್ರಾದಿಕರ ಸಂಬಂಧವು ಮನುಷ್ಯ ಮೊದಲಾದವರಿಗೂ ಕಂಡು ಬರುತ್ತದೆ. ಇವುಗಳ ನಿಮಿತ್ತದಿಂದಲೇ ಮಿಥ್ಯಾದರ್ಶನಾದಿಗಳ ವರ್ಣನೆ ಮಾಡಲಾಗಿದೆ. ಅದರಲ್ಲಿ ಹೇಗೆ ವಿಶೇಷತೆಯು ಸಂಭವಿಸುತ್ತದೆ ಹಾಗೆ ತಿಳಿಯಬೇಕು.

ಏಕೇಂದ್ರಿಯ ಮೊದಲಾದ ಜೀವಗಳು ಇಂದ್ರಿಯ, ಶರೀರಾದಿಗಳ ಹೆಸರು ತಿಳಿಯುವುದಿಲ್ಲ; ಆದರೆ ಆ ಹೆಸರಿನ ಅರ್ಥರೂಪವಾದ ಭಾವದಲ್ಲಿ ಪೂರ್ವೋಕ್ತ ಪ್ರಕಾರದಿಂದ ಪರಿಣಮನವು ಕಂಡು ಬರುತ್ತದೆ. ಹೇಗೆಂದರೆ ನಾನು ಶರೀರದಿಂದ ಸ್ಪರ್ಶಮಾಡುತ್ತೇನೆ. ಶರೀರವು ನನ್ನದಿದೆಯೆಂದು ಹೆಸರು ತಿಳಿಯದಿದ್ದರೂ ಅದರ ಅರ್ಥ

ರೂಪವಾದ ಯಾವ ಭಾವವಿದೆ ಆ ರೂಪವಾಗಿ ಪರಿಣಮಿಸುತ್ತದೆ. ಮತ್ತು ಮನುಷ್ಯಾದಿಕರು ಅದೆಷ್ಟೋ ಹೆಸರುಗಳನ್ನು ತಿಳಿಯುತ್ತಾರೆ ಮತ್ತು ಅವುಗಳ ಭಾವರೂಪವಾಗಿ ಪರಿಣಮನ ಮಾಡುತ್ತಾರೆ. ಇತ್ಯಾದಿ ವಿಶೇಷಗಳು ಸಂಭವಿಸುತ್ತಿರುವವುಗಳನ್ನು ತಿಳಿದುಕೊಳ್ಳಬೇಕು.

## ಮೋಹದ ಮಹಿಮೆ :-

ಹೀಗೆ ಈ ಮಿಥ್ಯಾದರ್ಶನಾದಿ ಭಾವಗಳು ಜೀವನಿಗೆ ಅನಾದಿಯಿಂದ ಕಂಡುಬರುತ್ತವೆ, ನವೀನ ಗ್ರಹಣ ಮಾಡಿಲ್ಲ. ಇದರ ಮಹಿಮೆ ನೋಡಿರಿ ! ಧಾರಣ ಮಾಡಿದ ಪರ್ಯಾಯದಲ್ಲಿ ಕಲಿಯದೆಯೇ ಮೋಹದ ಉದಯದಿಂದ ತಾನಾಗಿ ಇಂಥದೇ ಪರಿಣಮನವಾಗುತ್ತದೆ. ಮನುಷ್ಯ ಮೊದಲಾದವರಿಗೆ ಸತ್ಯವಿಚಾರವಾಗುವ ಕಾರಣಗಳು ದೊರೆತರೂ ಕೂಡ ಸಮ್ಯಕ್ ಪರಿಣಮನವಾಗುವುದಿಲ್ಲ; ಮತ್ತು ಶ್ರೀಗುರುಗಳ ಉಪದೇಶದ ನಿಮಿತ್ತ ಲಭಿಸಿ, ಅವರು ಪುನಃ ಪುನಃ ತಿಳಿಸಿದರೂ ಇವನು ಯಾವ ವಿಚಾರ ಮಾಡುವುದಿಲ್ಲ. ಮತ್ತು ತನಗೂ ಪ್ರತ್ಯಕ್ಷಭಾಸವಾದರೂ ಅದನ್ನಂತೂ ಮನ್ನಿಸುವುದಿಲ್ಲ ಮತ್ತು ವಿಪರೀತವಾಗಿಯೇ ಮನ್ನಿಸುತ್ತಾನೆ. ಹೇಗೆಂಬುದನ್ನು ಹೇಳುತ್ತಾರೆ.

ಮರಣವಾದ ಮೇಲೆ ಶರೀರ-ಆತ್ಮಗಳು ಪ್ರತ್ಯಕ್ಷ ಭಿನ್ನವಾಗುತ್ತವೆ. ಆತ್ಮನು ಒಂದು ಶರೀರವನ್ನು ಬಿಟ್ಟು ಬೇರೆ ಶರೀರ ಧಾರಣ ಮಾಡುತ್ತಾನೆ; ಅಲ್ಲಿ ವ್ಯಂತರಾದಿಕರು ತಮ್ಮ ಪೂರ್ವಭವದ ಸಂಬಂಧ ಪ್ರಕಟಪಡಿಸುತ್ತಿರುವುದು ಕಂಡು ಬರುತ್ತದೆ; ಆದರೆ ಇವನಿಗೆ ಶರೀರದಿಂದ ಭಿನ್ನಬುದ್ಧಿಯಾಗುವ ಸಾಧ್ಯತೆಯಿಲ್ಲ ಸ್ತ್ರೀ-ಪುತ್ರಾದಿಕರು ತಮ್ಮ ಸ್ವಾರ್ಥದ ಸಂಗಡಿಗರೆಂದು ಪ್ರತ್ಯಕ್ಷ ಕಂಡುಬರುತ್ತದೆ; ಅವರ ಪ್ರಯೋಜನವು ಸಿದ್ಧವಾಗದಿದ್ದರೆ ಕೂಡಲೇ ವಿಪರೀತರಾಗುತ್ತಿರುವುದು ಕಂಡು ಬರುತ್ತದೆ; ಇವನು ಅವರಲ್ಲಿ ಮಮತೆ ಮಾಡುತ್ತಾನೆ ಮತ್ತು ಅವರ ಸಲುವಾಗಿ ನರಕಾದಿಗಳಲ್ಲಿ ಇಳಿಯಲು ಕಾರಣಭೂತವಾದ ನಾನಾಪ್ರಕಾರದ ಪಾಪಗಳನ್ನು ಮಾಡುತ್ತಾನೆ. ಧನಾದಿಸಾಮಗ್ರಿಯು ಯಾರದೋ ಯಾರಿಗೋ ಆಗುತ್ತಿರುವುದು ಕಂಡುಬರುತ್ತದೆ, ಇವನು ಅವನ್ನು ತನ್ನವೆಂದು ಮನ್ನಿಸುತ್ತಾನೆ. ಶರೀರದ ಅವಸ್ಥೆ ಹಾಗೂ ಬಾಹ್ಯಸಾಮಗ್ರಿಗಳು ತಾವಾಗಿಯೇ ಉತ್ಪನ್ನವಾಗುತ್ತಿರುವುದು ಮತ್ತು ನಷ್ಟವಾಗುತ್ತಿರುವುದು ಕಂಡುಬರುತ್ತದೆ. ಆದರೆ ಇವನು ವ್ಯರ್ಥ ಸ್ವಯಂ ಕರ್ತೃವಾಗುತ್ತಾನೆ. ಅಲ್ಲಿ ತನ್ನ ಮನೋರಥದ ಅನುಸಾರವಾದ ಕಾರ್ಯವನ್ನು 'ನಾನು ಮಾಡಿದೆನೆ'ಂದು ಹೇಳುತ್ತಾನೆ; ಮತ್ತು ವಿಪರೀತವಾದರೆ 'ನಾನೇನು ಮಾಡಲಿ'? ಹೀಗೆಯೇ ಆಗುವುದಿತ್ತು ಅಥವಾ ಹೀಗೇಕಾಯಿತೆಂದು ಮನ್ನಿಸುತ್ತಾನೆ. ಆಗುವುದಿದ್ದರೆ ಎಲ್ಲವುಗಳ ಕರ್ತೃವಾಗಬೇಕಿತ್ತು ಅಥವಾ ಅಕರ್ತೃ ಉಳಿಯಬೇಕಿತ್ತು, ಯಾವುದರ ವಿಚಾರವೇ ಇಲ್ಲ.

ಮರಣವು ಅವಶ್ಯವಾಗಿ ಆಗುತ್ತದೆಂದು ತಿಳಿಯುತ್ತಾನೆ, ಆದರೆ ಮರಣದ ನಿಶ್ಚಯಮಾಡಿ ಯಾವ ಕರ್ತವ್ಯ ಮಾಡುವುದಿಲ್ಲ; ಈ ಪರ್ಯಾಯ ಸಂಬಂಧದ ಯತ್ನವನ್ನೇ ಮಾಡುತ್ತಾನೆ. ಮತ್ತು ಮರಣದ ನಿಶ್ಚಯಮಾಡಿ ಒಮ್ಮೆಯಂತೂ ನಾನು ಸಾಯುವೆನು ಮತ್ತು ಶರೀರವನ್ನು ಸುಟ್ಟುಹಾಕುವರೆಂದು ಹೇಳುತ್ತಾನೆ. ಒಮ್ಮೆ ನನ್ನನ್ನು ಸುಡುವರೆಂದು ಹೇಳುತ್ತಾನೆ. ಒಮ್ಮೆ ಯಶಸ್ಸು ಉಳಿದರೆ ನಾನು ಬದುಕಿದ್ದಂತೆಂದು ಹೇಳುತ್ತಾನೆ.

ಒಮ್ಮೆ ಪುತ್ರಾದಿಕರಿದ್ದರೆ ನಾನಿದ್ದಂತೆಂದು ಹೇಳುತ್ತಾನೆ. ಈ ಪ್ರಕಾರ ಹುಚ್ಚನಂತೆ ಹರಟುತ್ತಾನೆ, ಒಂದಿಷ್ಟೂ ಸಾವಧಾನತೆಯಿಲ್ಲ.

ತನಗೆ ಪರಲೋಕದಲ್ಲಿ ಹೋಗುವುದಿದೆಯೆಂದು ಪ್ರತ್ಯಕ್ಷ ತಿಳಿಯುತ್ತಾನೆ; ಅದರ ಇಷ್ಟಾನಿಷ್ಟತೆಯ ಉಪಾಯವನ್ನು ಸ್ವಲ್ಪವೂ ಮಾಡುವುದಿಲ್ಲ ಮತ್ತು ಇಲ್ಲಿ ಪುತ್ರ-ಪೌತ್ರ ಮೊದಲಾಗಿ ನನ್ನ ಸಂತತಿಯಲ್ಲಿ ಬಹಳಷ್ಟು ಕಾಲದವರೆಗೆ ಇಷ್ಟವಾಗಿರಲಿ-ಅನಿಷ್ಟವಾಗದಿರಲೆಂದು ಅನೇಕ ಉಪಾಯ ಮಾಡುತ್ತಾನೆ. ಪರಲೋಕಕ್ಕೆ ಹೋದ ನಂತರ ಈ ಲೋಕದ ಸಾಮಗ್ರಿಯಿಂದ ಯಾರಿಗೂ ಉಪಕಾರವಾದುದು ಕಂಡುಬಂದಿಲ್ಲ, ಆದರೆ ಇವನಿಗೆ ಪರಲೋಕವಾಗುವ ನಿಶ್ಚಯವಾದ ನಂತರವೂ ಈ ಲೋಕದ ಸಾಮಗ್ರಿಯದೇ ಪರಿಪಾಲನೆ ಇರುತ್ತದೆ.

ವಿಷಯ-ಕಷಾಯಗಳ ಪರಿಣತಿಯಿಂದ ಹಾಗೂ ಹಿಂಸಾದಿ ಕಾರ್ಯಗಳಿಂದ ಸ್ವಯಂ ದುಃಖಿಯಾಗುತ್ತಾನೆ, ಖೇದಖಿನ್ನನಾಗುತ್ತಾನೆ, ಇತರರಿಗೆ ಶತ್ರುವಾಗುತ್ತಾನೆ, ಈ ಲೋಕದಲ್ಲಿ ನಿಂದ್ಯನಾಗುತ್ತಾನೆ, ಪರಲೋಕದಲ್ಲಿ ಕೆಡಕಾಗುತ್ತದೆಯೆಂದು ಸ್ವಯಂ ಪ್ರತ್ಯಕ್ಷ ತಿಳಿಯುತ್ತಿದ್ದರೂ ಅವುಗಳಲ್ಲಿಯೇ ಪ್ರವರ್ತಿಸುತ್ತಾನೆ. ಇವೇ ಮೊದಲಾಗಿ ಅನೇಕ ಪ್ರಕಾರದಿಂದ ಪ್ರತ್ಯಕ್ಷ ಕಂಡುಬರುವುದು, ಅದರದೂ ಅನ್ಯಥಾ ಶ್ರದ್ಧೆ ಮಾಡುತ್ತಾನೆ, ತಿಳಿಯುತ್ತಾನೆ, ಆಚರಣೆ ಮಾಡುತ್ತಾನೆ; ಆದರೆ ಇದು ಮೋಹದ ಮಾಹಾತ್ಮ್ಯವಿದೆ.

ಹೀಗೆ ಈ ಜೀವನು ಅನಾದಿಯಿಂದ ಮಿಥ್ಯಾದರ್ಶನ-ಜ್ಞಾನ-ಚಾರಿತ್ರರೂಪವಾಗಿ ಪರಿಣಮನ ಮಾಡುತ್ತಲಿದ್ದಾನೆ. ಇದೇ ಪರಿಣಮನದಿಂದ ಸಂಸಾರದಲ್ಲಿ ಅನೇಕ ಪ್ರಕಾರದ ದುಃಖವನ್ನುತ್ಪನ್ನ ಮಾಡುವಂಥ ಕರ್ಮಗಳ ಸಂಬಂಧವು ಕಂಡುಬರುತ್ತದೆ. ಇವೇ ಭಾವಗಳು ದುಃಖಗಳಿಗೆ ಬೀಜಪ್ರಾಯವಿವೆ ಬೇರಾವವೂ ಇಲ್ಲ.

ಆದುದರಿಂದ ಎಲೈ ಭವ್ಯನೇ ! ನೀನು ದುಃಖಗಳಿಂದ ಮುಕ್ತನಾಗಲಪೇಕ್ಷಿಸುತ್ತಿದ್ದರೆ ಈ ಮಿಥ್ಯಾದರ್ಶನಾದಿ ವಿಭಾವಭಾವಗಳ ಅಭಾವ ಮಾಡುವುದೇ ಕಾರ್ಯವಿದೆ; ಈ ಕಾರ್ಯ ಮಾಡುವುದರಿಂದ ನಿನ್ನದು ಪರಮ ಕಲ್ಯಾಣವಾಗುವುದು.

**ಹೀಗೆ ಶ್ರೀ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರದಲ್ಲಿ**
**ಮಿಥ್ಯಾದರ್ಶನ-ಜ್ಞಾನ-ಚಾರಿತ್ರದ ನಿರೂಪಣೆ ಮಾಡುವ**
**ನಾಲ್ಕನೆಯ ಅಧಿಕಾರವು ಸಮಾಪ್ತವಾಯಿತು.**

# ಐದನೆಯ ಅಧಿಕಾರ
# ವಿವಿಧಮತ - ಸಮೀಕ್ಷೆ

**ಬಹುವಿಧ ಮಿಥ್ಯಾಧಾರಣದಿ ಮಲಿನಾಗಿದೆ ನಿಜಭಾವ ।**
**ಅದರಭಾವದಲಿ ತೋರುವುದು ಸಹಜರೂಪ ಸದ್ಭಾವ ॥**

ಈ ಜೀವನು ಪೂರ್ವೋಕ್ತ ಪ್ರಕಾರದಿಂದ ಅನಾದಿಯಿಂದಲೇ ಮಿಥ್ಯಾದರ್ಶನ-ಜ್ಞಾನ-ಚಾರಿತ್ರರೂಪವಾಗಿ ಪರಿಣಮಿಸುತ್ತಲಿದ್ದಾನೆ. ಅದರಿಂದ ಸಂಸಾರದಲ್ಲಿ ದುಃಖವನ್ನು ಸಹನೆ ಮಾಡುತ್ತ ಎಂದಾದರೊಮ್ಮೆ ಮನುಷ್ಯಾದಿ ಪರ್ಯಾಯಗಳಲ್ಲಿ ವಿಶೇಷ ಶ್ರದ್ಧೆಮಾಡುವ ಶಕ್ತಿಯನ್ನು ಪಡೆಯುತ್ತಾನೆ. ಇಲ್ಲಿ ಮಿಥ್ಯಾಶ್ರದ್ಧಾದಿಗಳ ವಿಶೇಷ ಕಾರಣಗಳಿಂದ ಆ ಮಿಥ್ಯಾಶ್ರದ್ಧಾದಿಗಳ ಪೋಷಣೆ ಮಾಡಿದರೆ ಆ ಜೀವನಿಗೆ ದುಃಖದಿಂದ ಮುಕ್ತವಾಗುವುದು ಅತ್ಯಂತ ದುರ್ಲಭವಾಗುತ್ತದೆ.

ಯಾವ ಪ್ರಕಾರ ರೋಗಿ ಪುರುಷನೋರ್ವನು ಸ್ವಲ್ಪ ಗುಣಮುಖನಾದ ಮೇಲೆ ಕುಪಥ್ಯ ಸೇವನೆ ಮಾಡಿದರೆ ಆ ರೋಗದಿಂದ ಬಿಡುಗಡೆ ಹೊಂದುವುದು ಕಠಿಣವೇ ಆಗುವುದು. ಅದೇ ಪ್ರಕಾರ ಮಿಥ್ಯಾತ್ವಾದಿಗಳಿಂದ ಕೂಡಿದ ಈ ಜೀವನು ಸ್ವಲ್ಪ ಜ್ಞಾನಾದಿ ಶಕ್ತಿಯನ್ನು ಪಡೆದು ವಿಶೇಷ ವಿಪರೀತ ಶ್ರದ್ಧಾದಿಯ ಕಾರಣಗಳ ಸೇವನೆ ಮಾಡಿದರೆ ಈ ಜೀವನು ಮುಕ್ತನಾಗುವುದು ಕಠಿಣವೇ ಆಗುವುದು.

ಆದುದರಿಂದ ಯಾವ ಪ್ರಕಾರ ವೈದ್ಯನು ಕುಪಥ್ಯ ಸೇವನೆಯ ದುಷ್ಪರಿಣಾಮಗಳನ್ನು ವಿಶೇಷವಾಗಿ ತಿಳಿಸಿ ಅವುಗಳ ಸೇವನೆಯ ನಿಷೇಧಮಾಡುತ್ತಾನೆ ಅದೇ ಪ್ರಕಾರ ಇಲ್ಲಿ ವಿಶೇಷ ಮಿಥ್ಯಾಶ್ರದ್ಧಾದಿಯ ಕಾರಣಗಳನ್ನು ವಿಶೇಷವಾಗಿ ತಿಳಿಸಿ ಅವುಗಳ ನಿಷೇಧ ಮಾಡುತ್ತಾರೆ.

ಅನಾದಿಯಿಂದ ಕಂಡುಬರುತ್ತಿರುವ ಮಿಥ್ಯಾತ್ವಭಾವಗಳನ್ನಂತೂ ಅಗೃಹೀತ ಮಿಥ್ಯಾತ್ವವೆಂದು ತಿಳಿಯಬೇಕು, ಏಕೆಂದರೆ ಅವು ಹೊಸದಾಗಿ ಗ್ರಹಣಮಾಡಿದವುಗಳಲ್ಲ. ಮತ್ತು ಅವನ್ನು ಪುಷ್ಟಮಾಡುವ ಕಾರಣಗಳಿಂದ ಆಗುತ್ತಿರುವ ವಿಶೇಷ ಮಿಥ್ಯಾತ್ವಭಾವಗಳನ್ನು ಗೃಹೀತ ಮಿಥ್ಯಾತ್ವವೆಂದು ತಿಳಿಯಬೇಕು. ಅಗೃಹೀತ ಮಿಥ್ಯಾತ್ವದ ವರ್ಣನೆಯನ್ನಂತೂ ಈ ಮೊದಲೇ ಮಾಡಿದೆ ಅದನ್ನು ತಿಳಿಯಬೇಕು ಮತ್ತು ಈಗ ಗೃಹೀತ ಮಿಥ್ಯಾತ್ವದ ನಿರೂಪಣೆ ಮಾಡುತ್ತಾರೆ ಅದನ್ನು ತಿಳಿಯಬೇಕು.

ಕುದೇವ-ಕುಗುರು-ಕುಧರ್ಮ ಮತ್ತು ಕಲ್ಪಿತ ತತ್ತ್ವಗಳ ಶ್ರದ್ಧೆಯಂತೂ ಮಿಥ್ಯಾದರ್ಶನವಿದೆ. ಮತ್ತು ಅವುಗಳಲ್ಲಿ ವಿಪರೀತ ನಿರೂಪಣೆಯಿಂದ ರಾಗಾದಿಗಳ ಪೋಷಣೆಮಾಡಿರುವಂಥ ಕುಶಾಸ್ತ್ರಗಳಲ್ಲಿ ಶ್ರದ್ಧೆಯಿಟ್ಟು

ಅಭ್ಯಾಸಮಾಡುವುದು ಅದು ಮಿಥ್ಯಾಜ್ಞಾನವಿದೆ. ಮತ್ತು ಯಾವ ಆಚರಣೆಯಲ್ಲಿ ಕಷಾಯಗಳ ಸೇವನೆಯಾಗುವುದು ಹಾಗೂ ಅದನ್ನು ಧರ್ಮರೂಪವೆಂದು ಅಂಗೀಕಾರ ಮಾಡುವುದು ಅದು ಮಿಥ್ಯಾಚಾರಿತ್ರವಿದೆ.

ಈಗ ಇವುಗಳನ್ನೇ ವಿಶೇಷವಾಗಿ ತಿಳಿಸಿಕೊಡುತ್ತಾರೆ.

ಇಂದ್ರ, ಲೋಕಪಾಲ ಇತ್ಯಾದಿ; ಅದ್ವೈತ ಬ್ರಹ್ಮ, ರಾಮ, ಕೃಷ್ಣ, ಮಹಾದೇವ, ಬುದ್ಧ, ಖುದಾ, ಪೀರ, ಪೈಗಂಬರ ಇತ್ಯಾದಿ; ಹನುಮಂತ, ಭೈರವ, ಕ್ಷೇತ್ರಪಾಲ, ದೇವಿ, ದಹಾಡಿ, ಸತಿ ಇತ್ಯಾದಿ; ಶೀತಲಾ, ಚೌಥಿ, ಗೌರಿ, ಹೋಲಿ ಇತ್ಯಾದಿ; ಸೂರ್ಯ, ಚಂದ್ರ, ಗ್ರಹ, ಔತ, ಪಿತೃ, ವ್ಯಂತರ ಇತ್ಯಾದಿ; ಹಸು, ಸರ್ಪ ಇತ್ಯಾದಿ;, ಅಗ್ನಿ, ಜಲ, ವೃಕ್ಷ ಇತ್ಯಾದಿ; ಮತ್ತು ಶಸ್ತ್ರ, ದೌತಿ, ಪಾತ್ರೆ ಇತ್ಯಾದಿಯಾಗಿ ಅನೇಕವಿದ್ದು ಅವುಗಳ ಅನ್ಯಥಾ ಶ್ರದ್ಧೆಮಾಡಿ ಅವನ್ನು ಪೂಜಿಸುತ್ತಾರೆ ಮತ್ತು ಅವುಗಳಿಂದ ತಮ್ಮ ಕಾರ್ಯಸಿದ್ಧಿಸಲೆಂದು ಅಪೇಕ್ಷಿಸುತ್ತಾರೆ, ಆದರೆ ಅವು ಕಾರ್ಯಸಿದ್ಧಿಯ ಕಾರಣಗಳಿಲ್ಲ. ಆದುದರಿಂದ ಇಂಥ ಶ್ರದ್ಧೆಯನ್ನು ಗೃಹೀತ ಮಿಥ್ಯಾತ್ವವೆಂದು ಹೇಳುತ್ತಾರೆ.

ಅಲ್ಲಿ ಅವುಗಳ ಕುರಿತು ವಿಪರೀತ ಶ್ರದ್ಧೆಯು ಹೇಗಾಗುತ್ತದೆಯೆಂಬುದನ್ನು ಹೇಳುತ್ತಾರೆ.

**ಸರ್ವವ್ಯಾಪಿ ಅದ್ವೈತಬ್ರಹ್ಮ :-**

ಅದ್ವೈತ★ ಬ್ರಹ್ಮನನ್ನು ಸರ್ವವ್ಯಾಪಿ ಎಲ್ಲವುಗಳ ಕರ್ತೃವೆಂದು ಮನ್ನಿಸುತ್ತಾರೆ, ಅಂಥವರು ಯಾರೂ ಇಲ್ಲ. ಮೊದಲು ಅವನನ್ನು ಸರ್ವವ್ಯಾಪಿಯೆಂದು ಮನ್ನಿಸುತ್ತಾರೆ, ಆದರೆ ಎಲ್ಲ ಪದಾರ್ಥಗಳಂತೂ ಪ್ರತ್ಯಕ್ಷ ಭಿನ್ನ-ಭಿನ್ನವಿವೆ ಮತ್ತು ಅವುಗಳ ಸ್ವಭಾವವು ಭಿನ್ನ-ಭಿನ್ನ ಕಂಡುಬರುತ್ತದೆ, ಅವನ್ನು ಒಂದೆಂದು ಹೇಗೆ ಮನ್ನಿಸುವುದು ? ಇವರ ಮನ್ನಣೆಯಂತೂ ಈ ಪ್ರಕಾರವಿವೆ.

ಮೊದಲನೆಯ ಪ್ರಕಾರ-ಎಲ್ಲವು ಭಿನ್ನ-ಭಿನ್ನವಿದ್ದು ಅವುಗಳ ಸಮುದಾಯದ ಕಲ್ಪನೆ ಮಾಡಿ ಅದಕ್ಕೆ ಒಂದು ಹೆಸರು ಇಟ್ಟಿದ್ದಾರೆ. ಹೇಗೆಂದರೆ ಆನೆ, ಕುದುರೆ ಮೊದಲಾದವು ಭಿನ್ನ-ಭಿನ್ನವಿದ್ದರೂ ಅವುಗಳ ಸಮುದಾಯದ ಹೆಸರು ಸೈನ್ಯವಿದೆ, ಸೇನೆಯೆಂಬುದು ಅವುಗಳಿಂದ ಭಿನ್ನವಾದ ಯಾವ ವಸ್ತುವಿಲ್ಲ. ಈ ಪ್ರಕಾರದಿಂದ ಎಲ್ಲ ಪದಾರ್ಥಗಳ ಹೆಸರು ಬ್ರಹ್ಮವಿದ್ದು ಆ ಬ್ರಹ್ಮವೆಂಬುದು ಯಾವ ಭಿನ್ನವಸ್ತುವೆಂದು ಸಿದ್ಧವಾಗಲಿಲ್ಲ, ಅದು ಕಲ್ಪನಾ ಮಾತ್ರವೆಂದು ನಿಶ್ಚಿತವಾಯಿತು.

ಎರಡನೆಯ ಪ್ರಕಾರ-ವ್ಯಕ್ತಿಯ ಅಪೇಕ್ಷೆಯಿಂದಂತೂ ಭಿನ್ನ-ಭಿನ್ನವಿದ್ದು ಅವರನ್ನು ಜಾತಿಯ ಅಪೇಕ್ಷೆಯಿಂದ - ಕಲ್ಪನೆಯಿಂದ ಒಂದೆಂದು ಹೇಳಲಾಗುತ್ತದೆ. ಹೇಗೆಂದರೆ-ನೂರು ಕುದುರೆಗಳಿವೆ, ಅವು ವ್ಯಕ್ತಿ ಅಪೇಕ್ಷೆಯಿಂದಂತೂ ಭಿನ್ನ-ಭಿನ್ನ ನೂರಿದ್ದು ಅವುಗಳ ಆಕಾರಾದಿಯ ಸಮಾನತೆ ನೋಡಿ ಒಂದು ಜಾತಿಯೆಂದು ಹೇಳುತ್ತಾರೆ, ಆದರೆ ಆ ಜಾತಿಯು ಅವುಗಳಿಂದೇನು ಭಿನ್ನವಾಗಿಲ್ಲ. ಆದುದರಿಂದ ಈ ಪ್ರಕಾರ ಒಂದು ವೇಳೆ ಯಾವುದೇ ಒಂದು ಜಾತಿಯ ಅಪೇಕ್ಷೆಯಿಂದ ಎಲ್ಲವನ್ನು ಒಂದು ಬ್ರಹ್ಮವೆಂದು ಮನ್ನಿಸಹೋದರೂ ಬ್ರಹ್ಮನೇನು ಭಿನ್ನವೆಂದು ಸಿದ್ಧವಾಗಲಿಲ್ಲ.

---

★ 'ಸರ್ವ ವೈಖಲ್ವಿದಂ ಬ್ರಹ್ಮ' - ಛಾಂದೋಗ್ಯೋಪನಿಷತ್ ಪ್ರ. ಖಂ. ೧೪ ಮಂ. ೧
'ನೇಹ ನಾನಾಸ್ತಿಕಿಂಚನ' - ಕಠೋಪನಿಷತ್ ಅ, ೨ ವ, ೪೧ ಮಂ. ೧೧
ಬ್ರಹ್ಮೈವೇದಮಮೃತಂ ಪುರಸ್ತಾದ ಬ್ರಹ್ಮದಕ್ಷಿಣತಪಶ್ಚೋತ್ತರೇಣ ।
ಅಧಶ್ಚೋರ್ಧ್ವಂ ಚ ಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂ ಪರಿಷ್ಟಮ್ ॥ -ಮುಂಡಕೋ. ಖಂ. ೨ ಮಂ. ೧೧

ಮೂರನೆಯ ಪ್ರಕಾರ-ಪದಾರ್ಥಗಳು ಭಿನ್ನ-ಭಿನ್ನವಿದ್ದು ಅವುಗಳ ಮಿಲನದಿಂದ ಒಂದು ಸ್ಕಂಧವಾದರೆ ಅದನ್ನು ಒಂದೆಂದು ಹೇಳುತ್ತಾರೆ. ಹೇಗೆಂದರೆ-ನೀರಿನ ಪರಮಾಣುಗಳು ಭಿನ್ನ-ಭಿನ್ನವಿದ್ದು ಅವುಗಳ ಮಿಶ್ರಣವಾದ ಮೇಲೆ ಸಮುದ್ರವೆಂದು ಹೇಳುತ್ತಾರೆ; ಅದರಂತೆ ಪೃಥ್ವಿಯ ಪರಮಾಣುಗಳ ಮಿಶ್ರಣವಾದ ಮೇಲೆ ಘಟಮೊದಲಾಗಿ ಹೇಳುತ್ತಾರೆ; ಆದರೆ ಇಲ್ಲಿ ಸಮುದ್ರ ಹಾಗೂ ಘಟಾದಿಗಳೇನು ಆ ಪರಮಾಣುಗಳಿಂದ ಭಿನ್ನವಾದ ಯಾವ ಬೇರೆ ವಸ್ತುಗಳಂತೂ ಇಲ್ಲ. ಆದುದರಿಂದ ಇದೇ ಪ್ರಕಾರ ಎಲ್ಲ ಪದಾರ್ಥಗಳು ಭಿನ್ನ-ಭಿನ್ನವಾಗಿದ್ದರೂ ಎಂದಾದರೊಮ್ಮೆ ಬೆರೆತು ಒಂದಾಗಿ ಹೋಗುತ್ತವೆ ಅದು ಬ್ರಹ್ಮವಿದೆಯೆಂದು ಮನ್ನಿಸಹೋದರೂ ಇವುಗಳಿಂದ ಬೇರೆಯಾದ ಯಾವ ಬ್ರಹ್ಮನು ಸಿದ್ಧವಾಗಲಿಲ್ಲ.

ನಾಲ್ಕನೆಯ ಪ್ರಕಾರ-ಅಂಗಗಳಂತೂ ಭಿನ್ನ-ಭಿನ್ನವಿದ್ದು ಅಂಗಗಳಿರುವವನು ಒಂದು ಅಂಗಿಯಿದ್ದಾನೆ, ಹೇಗೆಂದರೆ-ಕಣ್ಣು, ಕೈ, ಕಾಲುಗಳು ಭಿನ್ನ-ಭಿನ್ನವಿದ್ದು ಇವುಗಳಿರುವವನು ಒಬ್ಬ ಮನುಷ್ಯನಿದ್ದಾನೆ. ಆದುದರಿಂದ ಈ ಪ್ರಕಾರ ಇವೆಲ್ಲ ಪದಾರ್ಥಗಳಂತೂ ಅಂಗಗಳಿದ್ದು ಇವುಗಳಿರುವವನು ಅಂಗಿ ಎಂದರೆ ಬ್ರಹ್ಮನಿದ್ದಾನೆ. ಈ ಎಲ್ಲ ವಿರಾಟ ಸ್ವರೂಪದ ಲೋಕವು ಬ್ರಹ್ಮನ ಅಂಗಗಳೆಂದು ಮನ್ನಿಸುತ್ತಿದ್ದರೆ ಮನುಷ್ಯನ ಕೈ ಕಾಲು ಮೊದಲಾದ ಅಂಗಗಳಲ್ಲಿ ಪರಸ್ಪರ ಅಂತರಾಲವಾದ ಮೇಲಂತೂ ಏಕತ್ವತೆ ಉಳಿಯುವುದಿಲ್ಲ, ಕೂಡಿದ್ದರೇನೇ ಒಂದು ಶರೀರವೆಂಬ ಹೆಸರು ಪಡೆಯುತ್ತವೆ. ಆದುದರಿಂದ ಲೋಕದಲ್ಲಂತೂ ಪದಾರ್ಥಗಳಲ್ಲಿ ಪರಸ್ಪರ ಅಂತರಾಲವು ಕಂಡು ಬರುತ್ತದೆ; ಎಂದ ಬಳಿಕ ಅದರ ಏಕತೆಯನ್ನು ಹೇಗೆ ಮನ್ನಿಸುವುದು ? ಅಂತರವಿದ್ದರೂ ಕೂಡ ಏಕತೆ ಮನ್ನಿಸಿದರೆ ಭಿನ್ನತೆಯನ್ನೆಲ್ಲಿ ಮನ್ನಿಸಲಾಗುವುದು ?

**ಪ್ರಶ್ನೆ :-** ಸಮಸ್ತ ಪದಾರ್ಥಗಳ ಮಧ್ಯದಲ್ಲಿ ಸೂಕ್ಷ್ಮರೂಪದಿಂದ ಬ್ರಹ್ಮನ ಅಂಗಗಳಿದ್ದು ಅವುಗಳಿಂದ ಎಲ್ಲವು ಕೂಡಿಕೊಳ್ಳುತ್ತಿವೆ.

**ಉತ್ತರ :-** ಯಾವ ಅಂಗವು ಯಾವ ಅಂಗದಿಂದ ಕೂಡಿದೆ ಅದು ಅದರಿಂದಲೇ ಕೂಡಿರುತ್ತದೆಯೋ ಅಥವಾ ತುಂಡು-ತುಂಡಾಗಿ ಬೇರೆ-ಬೇರೆ ಅಂಗಗಳಿಂದ ಕೂಡಿಕೊಳ್ಳುತ್ತಿರುತ್ತದೆ ? ಪ್ರಥಮ ಪಕ್ಷವನ್ನು ಸ್ವೀಕರಿಸಿದರೆ ಗಮನ ಮಾಡುತ್ತಿರುವ ಸೂರ್ಯಾದಿಕರ ಜತೆ ಗಮನ ಮಾಡುವಂಥ ಯಾವ ಸೂಕ್ಷ್ಮಾಂಗಗಳಿಂದ ಕೂಡುತ್ತಾನೆ. ಮತ್ತು ಅವರು ಗಮನ ಮಾಡುವುದರಿಂದ ಯಾವ ಸೂಕ್ಷ್ಮಾಂಗಗಳು ಸ್ಥೂಲಾಂಗಗಳಿಂದ ಕೂಡಿಕೊಂಡಿರುತ್ತವೆ ಅವೂ ಗಮನ ಮಾಡಬಹುದು. ಇದರಿಂದ ಲೋಕವೆಲ್ಲ ಅಸ್ಥಿರವಾಗಿ ಹೋಗುವುದು. ಯಾವ ಪ್ರಕಾರ ಶರೀರದ ಒಂದು ಅಂಗವನ್ನು ಎಳೆದರೆ ಎಲ್ಲ ಅಂಗಗಳು ಎಳೆಯಲ್ಪಡುತ್ತವೆ; ಅದೇ ಪ್ರಕಾರ ಒಂದು ಪದಾರ್ಥವು ಗಮನ ಮಾಡುವುದರಿಂದ ಎಲ್ಲ ಪದಾರ್ಥಗಳ ಗಮನವಾಗುವುದು, ಆದರೆ ಹೀಗೆ ಕಂಡು ಬರುವುದಿಲ್ಲ. ಮತ್ತು ಎರಡನೇ ಪಕ್ಷ ಸ್ವೀಕರಿಸಿದರೆ ಅಂಗಗಳು ತುಂಡಾಗುವುದರಿಂದ ಭಿನ್ನತೆಯಾಗೇ ಹೋಗುತ್ತದೆ, ಆಗ ಏಕತೆಯು ಹೇಗೆ ಉಳಿಯಿತು ? ಆದುದರಿಂದ ಸಮಸ್ತ ಲೋಕದ ಏಕತ್ವವನ್ನು ಬ್ರಹ್ಮನೆಂದು ಮನ್ನಿಸುವುದು ಹೇಗೆ ಸಂಭವಿಸುವ ಸಾಧ್ಯತೆಯಿದೆ?

ಐದನೆಯ ಪ್ರಕಾರ-ಮೊದಲು ಒಂದಿದ್ದುದು ಅನೇಕವಾಯಿತು, ಪುನಃ ಒಂದಾಗಿ ಹೋಗುತ್ತದೆ; ಆದುದರಿಂದ ಏಕವಿದೆ. ಹೇಗೆಂದರೆ ಒಂದಿದ್ದ ನೀರು ಪಾತ್ರೆಗಳಲ್ಲಿ ಬೇರೆ-ಬೇರೆಯಾಯಿತು, ಪುನಃ ಕೂಡಿಕೊಂಡಾಗ

ಒಂದಾಗಿ ಹೋಗುತ್ತದೆ. ಮತ್ತೆ ಹೇಗೆಂದರೆ ಒಂದು ಚಿನ್ನದ ತುಂಡಿದ್ದದ್ದು ಕಂಕಣ-ಕುಂಡಲಾದಿರೂಪವಾಗಿ ಪುನಃ ಮಿಲನವಾಗಿ ಚಿನ್ನದ ತುಂಡಾಗಿ ಬಿಡುತ್ತದೆ; ಅದೇ ಪ್ರಕಾರ ಒಬ್ಬನಿದ್ದ ಬ್ರಹ್ಮನು ಅನೇಕ ರೂಪವಾಗಿ ಪುನಃ ಒಂದಾಗಿ ಹೋಗುವುದರಿಂದ ಒಬ್ಬನೇ ಇದ್ದಾನೆ.

ಈ ಪ್ರಕಾರ ಏಕತೆಯನ್ನು ಮನ್ನಿಸುತ್ತಿದ್ದರೆ ಅನೇಕ ರೂಪವಾದಾಗ ಕೂಡಿಕೊಂಡಿದ್ದಾನೋ ಅಥವಾ ಭಿನ್ನವಾಗುಳಿದನೋ ? ಕೂಡಿಕೊಂಡಿದ್ದನೆಂದು ಹೇಳಬೇಕಾದರೆ ಪೂರ್ವೋಕ್ತ ದೋಷವು ಬರುವುದು. ಭಿನ್ನವಾದನೆಂದು ಹೇಳಿದರೆ ಆ ಕಾಲದಲ್ಲಂತೂ ಏಕತೆ ಉಳಿಯಲಿಲ್ಲ. ಮತ್ತು ಜಲ-ಸುವರ್ಣಾದಿಗಳನ್ನು ಭಿನ್ನವಾದ ಮೇಲೂ ಒಂದೆಂದು ಹೇಳುತ್ತಿರುವುದಂತೂ ಒಂದು ಜಾತಿ ಅಪೇಕ್ಷೆಯಿಂದ ಹೇಳುತ್ತಾರೆ, ಆದರೆ ಇಲ್ಲಿ ಎಲ್ಲ ಪದಾರ್ಥಗಳ ಜಾತಿ ಒಂದಾಗಿ ಕಂಡು ಬರುವುದಿಲ್ಲ. ಕೆಲವು ಚೇತನವಿವೆ, ಕೆಲವು ಅಚೇತನವಿವೆ. ಇತ್ಯಾದಿ ಅನೇಕರೂಪಗಳಿದ್ದು ಅವುಗಳ ಒಂದು ಜಾತಿಯೆಂದು ಹೇಗೆ ಹೇಳುವುದು ? ಮತ್ತು ಮೊದಲು ಒಂದಿದ್ದು ನಂತರ ಭಿನ್ನವಾದನೆಂದು ಮನ್ನಿಸಿದರೆ ಹೇಗೆ ಒಂದು ಪಾಷಾಣವು ಒಡೆದು ತುಂಡುಗಳಾಗುತ್ತವೆ ಅದೇ ಪ್ರಕಾರ ಬ್ರಹ್ಮನು ತುಂಡಾಗಿ ಹೋಗಿ ಪುನಃ ಒಂದಾಗಿ ಹೋದನೆಂದು ಮನ್ನಿಸಿದರೆ ಅಲ್ಲಿ ಅವುಗಳ ಸ್ವರೂಪವು ಭಿನ್ನವಾಗಿರುವುದೋ ಅಥವಾ ಒಂದಾಗಿ ಹೋಗುವುದು ? ಭಿನ್ನವಿದ್ದರೆ ಅಲ್ಲಿ ತಮ್ಮ-ತಮ್ಮ ಸ್ವರೂಪದಿಂದ ಭಿನ್ನವೇ ಇವೆ ಮತ್ತು ಒಂದಾಗಿ ಹೋಗುತ್ತಿದ್ದರೆ ಜಡವೂ ಚೇತನವಾಗುವುದು ಮತ್ತು ಚೇತನವು ಜಡವಾಗಿ ಹೋಗುವುದು, ಅಲ್ಲಿ ಅನೇಕ ವಸ್ತುಗಳು ಒಂದು ವಸ್ತುವಾದಾಗ ಒಂದು ಕಾಲದಲ್ಲಿ ಅನೇಕ ವಸ್ತು, ಒಂದು ಕಾಲದಲ್ಲಿ ಏಕವಸ್ತುವೆಂದು ಹೇಳಬೇಕಾಗುವುದು 'ಅನಾದಿ-ಅನಂತ ಏಕಬ್ರಹ್ಮನಿದ್ದಾನೆ'ಂದು ಹೇಳಲಿಕ್ಕಾಗುವುದಿಲ್ಲ.

ಲೋಕರಚನೆಯಾಗುವುದರಿಂದ ಮತ್ತು ಆಗದಿರುವುದರಿಂದ ಬ್ರಹ್ಮನು ಇದ್ದ ಹಾಗೆಯೇ ಇರುವುದರಿಂದ ಅವನು ಅನಾದಿ-ಅನಂತನಿದ್ದಾನೆಂದು ಹೇಳಬಹುದು. ಆದರೆ ಲೋಕದಲ್ಲಿ ಪೃಥ್ವಿ, ಜಲಾದಿಗಳು ಕಂಡುಬರುತ್ತವೆ ಅವು ಬೇರೆ ನವೀನ ಉತ್ಪನ್ನವಾದವೋ ಅಥವಾ ಬ್ರಹ್ಮನೇ ಅವುಗಳ ಸ್ವರೂಪನಾದನೆಂದು ನಾವು ಕೇಳುತ್ತೇವೆ. ಬೇರೆ ನವೀನ ಉತ್ಪನ್ನವಾಗಿದ್ದರೆ ಅವು ಬೇರೆಯಾದವು ಬ್ರಹ್ಮನು ಬೇರೆಯಾದನು; ಸರ್ವವ್ಯಾಪಿ ಅದ್ವೈತ ಬ್ರಹ್ಮನು ಸಿದ್ಧವಾಗಲಿಲ್ಲ. ಮತ್ತು ಬ್ರಹ್ಮನೇ ಇವುಗಳ ಸ್ವರೂಪನಾಗಿದ್ದರೆ, ಒಮ್ಮೆ ಲೋಕವಾದನು, ಒಮ್ಮೆ ಬ್ರಹ್ಮನಾದನು, ಮತ್ತೆ ಇದ್ದ ಹಾಗೆ ಹೇಗೆ ಉಳಿದನು ?

ಇಡೀ ಬ್ರಹ್ಮನು ಲೋಕಸ್ವರೂಪವಾಗುವುದಿಲ್ಲ ಅವನ ಕೆಲವಂಶವಾಗುತ್ತದೆಂದು ಹೇಳುತ್ತಾರೆ. ಅವರಿಗೆ ಹೀಗೆ ಕೇಳುತ್ತಾರೆ-ಹೇಗೆ ಸಮುದ್ರದ ಒಂದು ಬಿಂದು ವಿಷರೂಪವಾದಾಗ ಅಲ್ಲಿ ಸ್ಥೂಲದೃಷ್ಟಿಯಿಂದಂತೂ ಗಮ್ಯವಿಲ್ಲ, ಆದರೆ ಸೂಕ್ಷ್ಮ ದೃಷ್ಟಿ ಹಾಕಿದ ಮೇಲೆ ಒಂದು ಬಿಂದುವಿನ ಅಪೇಕ್ಷೆಯಿಂದ ಸಮುದ್ರದ ಅನ್ಯಥಾತನವಾಯಿತು, ಅದೇ ಪ್ರಕಾರ ಬ್ರಹ್ಮನ ಒಂದಂಶವು ಭಿನ್ನವಾಗಿ ಲೋಕರೂಪವಾದಾಗ ಅಲ್ಲಿ ಸ್ಥೂಲ ವಿಚಾರದಿಂದಂತೂ ಸ್ವಲ್ಪವೂ ಗಮ್ಯವಿಲ್ಲ, ಆದರೆ ಸೂಕ್ಷ್ಮ ವಿಚಾರ ಮಾಡಿದ ಮೇಲಂತೂ ಒಂದಂಶದ ಅಪೇಕ್ಷೆಯಿಂದ ಬ್ರಹ್ಮನದು ಅನ್ಯಥಾತನವಾಯಿತು. ಈ ಅನ್ಯಥಾತನವಂತೂ ಬೇರೆ ಯಾರಿಗೂ ಆಗಿಲ್ಲ.

ಈ ಪ್ರಕಾರ ಸರ್ವರೂಪ ಬ್ರಹ್ಮನನ್ನು ಮನ್ನಿಸುವುದು ಭ್ರಾಂತಿಯೇ ಇದೆ.

ಆರನೆಯಪ್ರಕಾರ-ಯಾವ ಪ್ರಕಾರ ಆಕಾಶವು ಸರ್ವವ್ಯಾಪಿ ಏಕವಿದೆ, ಅದೇ ಪ್ರಕಾರ ಬ್ರಹ್ಮನು ಸರ್ವವ್ಯಾಪಿ ಏಕನಿದ್ದಾನೆ. ಈ ಪ್ರಕಾರ ಮನ್ನಿಸಿದರೆ ಬ್ರಹ್ಮನನ್ನು ಆಕಾಶದಷ್ಟು ದೊಡ್ಡವನೆಂದು ಮನ್ನಿಸು, ಮತ್ತು ಘಟಪಟಾದಿಗಳಿರುವಲ್ಲಿ ಹೇಗೆ ಆಕಾಶವಿದೆ ಅದೇ ಪ್ರಕಾರ ಬ್ರಹ್ಮನೂ ಇದ್ದಾನೆಂದೂ ಮನ್ನಿಸು. ಆದರೆ ಯಾವ ಪ್ರಕಾರ ಘಟಪಟಾದಿಗಳನ್ನು ಮತ್ತು ಆಕಾಶವನ್ನು ಒಂದೇ ಎಂದು ಹೇಳಿದರೆ ಹೇಗೆ ಸಿದ್ಧಿಸುವುದು ? ಅದೇ ಪ್ರಕಾರ ಲೋಕವನ್ನು ಮತ್ತು ಬ್ರಹ್ಮನನ್ನು ಒಂದೆಂದು ಮನ್ನಿಸುವುದು ಹೇಗೆ ಸಂಭವವಿದೆ ? ಮತ್ತು ಆಕಾಶದ ಲಕ್ಷಣವಂತೂ ಎಲ್ಲೆಡೆಗೆ ಕಂಡುಬರುವುದರಿಂದ ಅದರ ಸದ್ಭಾವವನ್ನಂತೂ ಎಲ್ಲೆಡೆಗೆ ಮನ್ನಿಸುತ್ತಾರೆ; ಬ್ರಹ್ಮನ ಲಕ್ಷಣವಂತೂ ಎಲ್ಲೆಡೆಗೆ ಕಂಡು ಬಾರದಿರುವುದರಿಂದ ಎಲ್ಲೆಡೆಗೆ ಅವನ ಸದ್ಭಾವ ಹೇಗೆ ಮನ್ನಿಸುವುದು ? ಈ ಪ್ರಕಾರದಿಂದಲೂ ಬ್ರಹ್ಮನು ಸರ್ವರೂಪನಿಲ್ಲ.

ಹೀಗೆ ವಿಚಾರ ಮಾಡಿದ ಮೇಲೆ ಯಾವುದೇ ಪ್ರಕಾರದಿಂದ ಏಕರೂಪಿಯಾದ ಬ್ರಹ್ಮನು ಸಂಭವನೀಯವಿಲ್ಲ. ಎಲ್ಲ ಪದಾರ್ಥಗಳು ಭಿನ್ನ-ಭಿನ್ನವಾಗಿಯೇ ಭಾಸವಾಗುತ್ತವೆ.

**ಪ್ರಶ್ನೆ ಃ-** ಎಲ್ಲವೂ ಒಂದೇ, ಇದೆ, ಆದರೆ ನಿಮಗೆ ಭ್ರಾಂತಿಯಿರುವುದರಿಂದ ಹಾಗೆ ನಿಮಗೆ ಭಾಸವಾಗುವುದಿಲ್ಲ. ಮತ್ತು ನೀವು ಯುಕ್ತಿ ಹೇಳಿದರಿ, ಆದರೆ ಬ್ರಹ್ಮನ ಸ್ವರೂಪವು ಯುಕ್ತಿಗಮ್ಯವಿಲ್ಲ, ವಚನ ಅಗೋಚರವಿದೆ. ಏಕನೂ ಇದ್ದಾನೆ, ಅನೇಕನೂ ಇದ್ದಾನೆ, ಭಿನ್ನನೂ ಇದ್ದಾನೆ, ಅಭಿನ್ನನೂ ಇದ್ದಾನೆ. ಅವನ ಮಹಿಮೆಯು ಹೀಗೆಯೇ ಇದೆ.

**ಉತ್ತರ ಃ-** ನಿನಗೆ, ನಮಗೆ ಮತ್ತು ಎಲ್ಲರಿಗೂ ಪ್ರತ್ಯಕ್ಷ ಭಾಸವಾಗುತ್ತಿರುವುದನ್ನಂತೂ ನೀನು ಭ್ರಮೆಯೆಂದು ಹೇಳುವೆ. ಮತ್ತು ಯುಕ್ತಿಯಿಂದ ಊಹೆ ಮಾಡಿದರೆ ಸತ್ಯಸ್ವರೂಪವು ಯುಕ್ತಿಗಮ್ಯವಿಲ್ಲವೆಂದು ನೀನು ಹೇಳುವೆ. ಮತ್ತು ಸತ್ಯಸ್ವರೂಪವು ವಚನ ಅಗೋಚರವಿದ್ದರೆ ವಚನವಿಲ್ಲದೆ ಹೇಗೆ ನಿರ್ಣಯ ಮಾಡುವುದು ? ಮತ್ತು ಏಕನೂ ಇದ್ದಾನೆ, ಅನೇಕನೂ ಇದ್ದಾನೆ, ಭಿನ್ನನೂ ಇದ್ದಾನೆ, ಕೂಡಿಯೂ ಇದ್ದಾನೆಂದರೆ ಅವುಗಳ ಅಪೇಕ್ಷೆ ತಿಳಿಸುವುದಿಲ್ಲ; ಮೂರ್ಖರಂತೆ ಹೀಗೂ ಇದೆ ಹೀಗೂ ಇದೆಯೆಂದು ಹೇಳಿ ಇವನ ಮಹಿಮೆ ಹೇಳುತ್ತಾನೆ. ಆದರೆ ನ್ಯಾಯವಿಲ್ಲದಲ್ಲಿ ಮಿಥ್ಯಾವಾದಿಗಳು ಹೀಗೆಯೇ ಬಡಾಯಿಕೊಚ್ಚಿಕೊಳ್ಳುತ್ತಿದ್ದರೆ ಕೊಚ್ಚಿಕೊಳ್ಳಲಿ, ನ್ಯಾಯವಂತೂ ಯಾವ ಪ್ರಕಾರ ಸತ್ಯವಿದೆ ಅದೇ ಪ್ರಕಾರ ಆಗುವುದು.

### ಸೃಷ್ಟಿಕರ್ತಾವಾದದ ನಿರಾಕರಣೆ ಃ-

ಆ ಬ್ರಹ್ಮನನ್ನು ಸೃಷ್ಟಿಯ ಕರ್ತೃವೆಂದು ಮನ್ನಿಸುತ್ತಿರುವುದನ್ನು ಅಸತ್ಯವೆಂದು ಈಗ ತಿಳಿಸಿಕೊಡುತ್ತಾರೆ.

ಮೊದಲಂತೂ **'ಏಕೋಽಹಂ ಬಹುಸ್ಯಾಂ'** ಎಂದರೆ ನಾನು ಒಬ್ಬನಿದ್ದೇನೆ ಅದು ಹಲವು ಆಗಲೆಂದು ಬ್ರಹ್ಮನಿಗೆ ಇಚ್ಛೆಯಾಯಿತೆಂದು ಮನ್ನಿಸುತ್ತಾರೆ.

ಪೂರ್ವಅವಸ್ಥೆಯಲ್ಲಿ ದುಃಖವಿದ್ದಾಗ ಅನ್ಯ ಅವಸ್ಥೆಯನ್ನು ಬಯಸುವುದು. ಆದರೆ ಬ್ರಹ್ಮನು ಒಂದು ಅವಸ್ಥೆಯಿಂದ ಹಲವುರೂಪಾಗುವ ಇಚ್ಛೆ ಮಾಡಿದರೆ ಆ ಏಕರೂಪವಾದ ಅವಸ್ಥೆಯಲ್ಲಿ ಯಾವ ದುಃಖವಿತ್ತೆಂದು ಕೇಳಿದರೆ ದುಃಖವಂತೂ ಇರಲಿಲ್ಲ ಹೀಗೆಯೇ ಕುತೂಹಲವು ಉತ್ಪನ್ನವಾಯಿತೆಂದು ಹೇಳುತ್ತಾರೆ. ಮೊದಲು

ಅಲ್ಪಸುಖವಿದ್ದು ಕುತೂಹಲ ಮಾಡುವುದರಿಂದ ಅಧಿಕಸುಖವಾಗುತ್ತಿದ್ದರೆ ಕುತೂಹಲ ಮಾಡುವ ವಿಚಾರ ಮಾಡಿರಬೇಕು. ಆದರೆ ಬ್ರಹ್ಮನಿಗೆ ಒಂದು ಅವಸ್ಥೆಯಿಂದ ಹಲವು ಅವಸ್ಥಾರೂಪವಾದ ಮೇಲೆ ಅಧಿಕ ಸುಖವಾಗುವುದು ಹೇಗೆ ಸಂಭವವಿದೆ? ಮತ್ತು ಮೊದಲೇ ಸಂಪೂರ್ಣ ಸುಖಿಯಿದ್ದರೆ ಅವಸ್ಥೆಯನ್ನೇಕೆ ಬದಲಿಸಿದನು ? ಪ್ರಯೋಜನವಿಲ್ಲದೆಯಂತೂ ಯಾರೂ ಯಾವ ಕರ್ತವ್ಯವನ್ನೂ ಮಾಡುವುದಿಲ್ಲ.

ಮೊದಲೂ ಸುಖಿಯಿರಬೇಕು, ಇಚ್ಛಾನುಸಾರ ಕಾರ್ಯವಾದಮೇಲೂ ಸುಖಿಯಿರಬೇಕು. ಆದರೆ ಇಚ್ಛೆಯಾದ ಕಾಲದಲ್ಲಂತೂ ದುಃಖಿಯಿರಬೇಕೆಂದಾಗ ಬ್ರಹ್ಮನಿಗೆ ಇಚ್ಛೆಯಾದ ಕಾಲದಲ್ಲಿಯೇ ಕಾರ್ಯವಾಗುವುದರಿಂದ ಅವನು ದುಃಖಿಯಾಗುವುದಿಲ್ಲವೆಂದು ಹೇಳುತ್ತಾರೆ. ಸ್ಥೂಲಕಾಲದ ಅಪೇಕ್ಷೆಯಿಂದಂತೂ ಹಾಗೆ ಮನ್ನಿಸಬಹುದು; ಆದರೆ ಸೂಕ್ಷ್ಮ ಕಾಲದ ಅಪೇಕ್ಷೆಯಿಂದಂತೂ ಇಚ್ಛೆಯಾಗುವುದು ಮತ್ತು ಕಾರ್ಯವಾಗುವುದು ಯುಗಪತ್ ಸಂಭವವಿಲ್ಲ. ಇಚ್ಛೆಯಂತೂ ಕಾರ್ಯವಾಗದಾಗ ಆಗುತ್ತದೆ. ಕಾರ್ಯವಾದಾಗ ಇಚ್ಛೆಯಿರುವುದಿಲ್ಲ, ಆದುದರಿಂದ ಸೂಕ್ಷ್ಮ ಕಾಲ ಮಾತ್ರ ಇಚ್ಛೆಯಿದ್ದಾಗಂತೂ ದುಃಖಿಯಾಗಿರಬೇಕು; ಏಕೆಂದರೆ ಇಚ್ಛೆಯೇ ದುಃಖವಿದ್ದು ದುಃಖದ ಸ್ವರೂಪವು ಬೇರೇನೂ ಇಲ್ಲ. ಆದುದರಿಂದ ಬ್ರಹ್ಮನಿಗೆ ಇಚ್ಛೆಯು ಹೇಗೆ ಸಂಭವಿಸುವುದು ?

ಇಚ್ಛೆಯಾದ ಮೇಲೆ ಬ್ರಹ್ಮನ ಮಾಯೆಯು ಪ್ರಕಟವಾಯಿತೆಂದು ಹೇಳುತ್ತಾರೆ, ಆದರೆ ಆ ಬ್ರಹ್ಮನಿಗೆ ಮಾಯೆಯಾದಾಗ ಬ್ರಹ್ಮನೂ ಮಾಯಾವಿಯಾದನು, ಶುದ್ಧ ಸ್ವರೂಪ ಹೇಗೆ ಉಳಿಯಿತು ? ಮತ್ತು ಬ್ರಹ್ಮನಿಗೆ ಹಾಗೂ ಮಾಯೆಗೆ ದಂಡಿ-ದಂಡದಂತೆ ಸಂಯೋಗ ಸಂಬಂಧವಿದೆ ಅಥವಾ ಅಗ್ನಿ-ಉಷ್ಣದಂತೆ ಸಮವಾಯ ಸಂಬಂಧವಿದೆ? ಆ ಸಂಯೋಗ ಸಂಬಂಧವಿದ್ದರೆ ಬ್ರಹ್ಮನು ಭಿನ್ನನಿದ್ದಾನೆ, ಮಾಯೆಯು ಭಿನ್ನವಿದೆ; ಬ್ರಹ್ಮನು ಅದ್ವೈತ ಹೇಗೆ ಉಳಿದನು? ಮತ್ತು ಹೇಗೆ ದಂಡಿಯು ದಂಡವನ್ನು ಉಪಕಾರಿಯೆಂದು ತಿಳಿದು ಗ್ರಹಣ ಮಾಡುತ್ತಾನೆ ಹಾಗೆ ಬ್ರಹ್ಮನು ಮಾಯೆಯನ್ನು ಉಪಕಾರಿಯೆಂದು ತಿಳಿದಾಗಲೇ ಗ್ರಹಣ ಮಾಡುತ್ತಾನೆ, ಇಲ್ಲದಿದ್ದರೇಕೆ ಗ್ರಹಣ ಮಾಡುವನು ? ಮತ್ತು ಬ್ರಹ್ಮನು ಗ್ರಹಣ ಮಾಡಿದ ಮಾಯೆಯನ್ನು ಹೇಗೆ ನಿಷೇಧ ಮಾಡುವ ಸಂಭವವಿದೆ ? ಅದಂತೂ ಉಪಾದೇಯವಾಯಿತು. ಮತ್ತು ಸಮವಾಯ ಸಂಬಂಧವಿದ್ದರೆ ಹೇಗೆ ಅಗ್ನಿಯ ಸ್ವಭಾವವು ಉಷ್ಣತೆಯಿದೆ ಹಾಗೆ ಬ್ರಹ್ಮನ ಸ್ವಭಾವವು ಮಾಯೆಯಾಯಿತು. ಆ ಬ್ರಹ್ಮನ ಸ್ವಭಾವದ ನಿಷೇಧ ಹೇಗೆ ಮಾಡುವ ಸಂಭವವಿದೆ? ಇದಂತೂ ಉತ್ತಮವಾಯಿತು.

ಬ್ರಹ್ಮನು ಚೈತನ್ಯನಿದ್ದು ಮಾಯೆಯು ಜಡವಿದೆಯೆಂದು ಅವರು ಹೇಳುತ್ತಾರೆ; ಆದರೆ ಸಮವಾಯ ಸಂಬಂಧದಲ್ಲಿ ಇಂಥ ಎರಡು ಸ್ವಭಾವಗಳು ಸಂಭವಿಸುವುದಿಲ್ಲ. ಪ್ರಕಾಶ ಮತ್ತು ಅಂಧಕಾರವು ಏಕತ್ರವಿರುವುದು ಹೇಗೆ ಸಂಭವವಿದೆ ?

ಮಾಯೆಯಿಂದ ಬ್ರಹ್ಮನು ತಾನಂತೂ ಭ್ರಾಂತಿರೂಪನಾಗುವುದಿಲ್ಲ, ಅವನ ಮಾಯೆಯಿಂದ ಜೀವವು ಭ್ರಾಂತಿ ರೂಪವಾಗುತ್ತದೆಂದು ಹೇಳುತ್ತಾರೆ. ಆದರೆ ಯಾವ ಪ್ರಕಾರ ಕಪಟಿಯು ತನ್ನ ಕಪಟವನ್ನು ತಾನು ತಿಳಿದರೂ ತಾನು ಭ್ರಾಂತಿರೂಪನಾಗುವುದಿಲ್ಲ, ಅವನ ಕಪಟದಿಂದ ಅನ್ಯರು ಭ್ರಾಂತಿರೂಪರಾಗುತ್ತಾರೆ. ಕಪಟಮಾಡಿದವನಿಗೆ ಕಪಟಿಯೆಂದು ಹೇಳುತ್ತಾರೆ, ಅವನ ಕಪಟದಿಂದ ಅನ್ಯರು ಭ್ರಾಂತಿರೂಪರಾದರೆ ಅವರಿಗೆ ಕಪಟಿಯೆಂದು ಹೇಳುವುದಿಲ್ಲ. ಅದೇ ಪ್ರಕಾರ ಬ್ರಹ್ಮನು ತನ್ನ ಮಾಯೆಯನ್ನು ತಾನು ತಿಳಿಯುತ್ತಾನೆ ತಾನಂತೂ

ಭ್ರಾಂತಿರೂಪನಾಗುವುದಿಲ್ಲ, ಆದರೆ ಅವನ ಮಾಯೆಯಿಂದ ಅನ್ಯರು ಭ್ರಾಂತಿರೂಪರಾಗುತ್ತಾರೆ ಅಲ್ಲಿ ಬ್ರಹ್ಮನಿಗೆ ಮಾಯಾವಿಯೆಂದು ಹೇಳಲಾಗುವುದು ಅವನ ಮಾಯೆಯಿಂದ ಭ್ರಾಂತಿರೂಪರಾದ ಅನ್ಯಜೀವರುಗಳನ್ನು ಮಾಯಾವಿಯೆಂದು ಏತಕ್ಕಾಗಿ ಹೇಳುತ್ತೀರಿ ?

ಆ ಜೀವರುಗಳು ಬ್ರಹ್ಮನಲ್ಲಿ ಏಕರಿದ್ದಾರೋ ಅಥವಾ ಭಿನ್ನರಿದ್ದಾರೆಂದು ನಾವು ಕೇಳುತ್ತೇವೆ. ಏಕರಿದ್ದರೆ ಯಾವ ಪ್ರಕಾರ ಒಬ್ಬನು ತಾನು ತನ್ನ ಅಂಗಗಳಿಗೆ ಪೀಡೆಯನ್ನುತ್ಪನ್ನ ಮಾಡಿದರೆ ಅವನನ್ನು ಮೂರ್ಖನೆಂದು ಹೇಳುತ್ತಾರೆ; ಅದೇ ಪ್ರಕಾರ ಬ್ರಹ್ಮನು ತಾನೇ ತನ್ನಿಂದ ಭಿನ್ನರಿರದಂಥ ಅನ್ಯಜೀವರುಗಳನ್ನು ಮಾಯೆಯಿಂದ ದುಃಖಿ ಮಾಡುತ್ತಾನೆಂದರೆ ಹೇಗೆ ಸಂಭವವಿದೆ ? ಮತ್ತು ಬೇರೆಯಿದ್ದರೆ ಹೇಗೆ ಭೂತವು ಪ್ರಯೋಜನವಿಲ್ಲದೆಯೇ ಅನ್ಯ ಜೀವರುಗಳಿಗೆ ಭ್ರಮೆಯನ್ನುತ್ಪನ್ನ ಮಾಡಿ ಪೀಡೆಯನ್ನುಂಟು ಮಾಡುತ್ತದೆ ಅದೇ ಪ್ರಕಾರ ಬ್ರಹ್ಮನು ಪ್ರಯೋಜನವಿಲ್ಲದೆಯೇ ಅನ್ಯ ಜೀವರುಗಳಿಗೆ ಮಾಯೆಯನ್ನುಂಟು ಮಾಡಿ ಪೀಡೆಯನ್ನುತ್ಪನ್ನ ಮಾಡಿದರೆ ಅದು ಕೂಡ ಸಂಭವಿಸುವುದಿಲ್ಲ.

ಈ ಪ್ರಕಾರ ಬ್ರಹ್ಮನ ಮಾಯೆಯೆಂದು ಹೇಳುತ್ತಾರೆ ಅದು ಹೇಗೆ ಸಂಭವವಿದೆ ?

ಮಾಯೆಯಿಂದ ಲೋಕವು ಉತ್ಪನ್ನವಾಯಿತು ಅಲ್ಲಿ ಜೀವರುಗಳ ಚೇತನವಂತೂ ಬ್ರಹ್ಮಸ್ವರೂಪವಿದ್ದು ಶರೀರಾದಿಗಳು ಮಾಯೆಯಿವೆಯೆಂದು ಅವರು ಹೇಳುತ್ತಾರೆ. ಯಾವ ಪ್ರಕಾರ ಭಿನ್ನ-ಭಿನ್ನ ಬಹಳಷ್ಟು ಪಾತ್ರೆಗಳಲ್ಲಿ ನೀರು ತುಂಬಿದ್ದು ಅವೆಲ್ಲವುಗಳಲ್ಲಿ ಚಂದ್ರನ ಪ್ರತಿಬಿಂಬವು ಬೇರೆ-ಬೇರೆಯಾಗಿ ಬೀಳುತ್ತದೆ ಚಂದ್ರನು ಒಬ್ಬನಿದ್ದಾನೆ; ಅದೇ ಪ್ರಕಾರ ಬೇರೆ-ಬೇರೆ ಬಹಳಷ್ಟು ಶರೀರಗಳಲ್ಲಿ ಬ್ರಹ್ಮನ ಚೈತನ್ಯ ಪ್ರಕಾಶವು ಬೇರೆ-ಬೇರೆಯಾಗಿ ಕಂಡು ಬರುತ್ತದೆ, ಬ್ರಹ್ಮನು ಒಬ್ಬನಿದ್ದಾನೆ. ಆದುದರಿಂದ ಜೀವರುಗಳಿಗಿರುವ ಚೇತನವು ಅದು ಬ್ರಹ್ಮನದಿದೆ.

ಹೀಗೆನ್ನುವುದು ಕೂಡ ಭ್ರಾಂತಿಯೇ ಇದೆ; ಏಕೆಂದರೆ ಶರೀರವು ಜಡವಿದ್ದು ಇದರಲ್ಲಿ ಬ್ರಹ್ಮನ ಪ್ರತಿಬಿಂಬದಿಂದ ಚೈತನ್ಯವಾದರೆ ಘಟ-ಪಟಾದಿಗಳು ಜಡವಿದ್ದು ಅವುಗಳಲ್ಲಿ ಬ್ರಹ್ಮನ ಪ್ರತಿಬಿಂಬವೇಕೆ ಬೀಳಲಿಲ್ಲ ಮತ್ತು ಚೈತನ್ಯವೇಕಾಗಲಿಲ್ಲ ?

ಶರೀರಕ್ಕೆ ಚೇತನವನ್ನುಂಟು ಮಾಡುವುದಿಲ್ಲ ಜೀವಕ್ಕೆ ಮಾಡುತ್ತಾನೆಂದು ಅವರು ಹೇಳುತ್ತಾರೆ.

ಆಗ ಜೀವದ ಸ್ವರೂಪವು ಚೇತನವಿದೆಯೋ ಅಥವಾ ಅಚೇತನವಿದೆಯೆಂದು ಅವರಿಗೆ ಕೇಳುತ್ತೇವೆ. ಚೇತನವಿದ್ದರೆ ಚೇತನಕ್ಕೆ ಚೇತನವೇನು ಮಾಡುವುದು ? ಅಚೇತನವಿದ್ದರೆ ಶರೀರದ, ಘಟಾದಿಗಳ ಹಾಗೂ ಜೀವದ ಜಾತಿಯು ಒಂದಾಯಿತು. ಮತ್ತು ಬ್ರಹ್ಮನ ಹಾಗೂ ಜೀವಗಳ ಚೇತನವು ಒಂದಿದೆಯೋ ಅಥವಾ ಭಿನ್ನವಿದೆಯೆಂದು ಕೇಳುತ್ತೇವೆ. ಒಂದಿದ್ದರೆ ಜ್ಞಾನದ ಹೀನಾಧಿಕತೆಯು ಹೇಗೆ ಕಂಡು ಬರುತ್ತದೆ ? ಮತ್ತು ಈ ಜೀವರುಗಳು ಪರಸ್ಪರದಲ್ಲಿ ಒಬ್ಬರು ಇನ್ನೊಬ್ಬರು ತಿಳಿದುದನ್ನು ತಿಳಿಯದಿರುವ ಕಾರಣವೇನು ? ಇದು ಘಟಉಪಾಧಿ ಭೇದವಿದೆಯೆಂದು ನೀನೆನ್ನಬಹುದು ; ಘಟ ಉಪಾಧಿಯಿರುವುದರಿಂದಂತೂ ಚೇತನವು ಭಿನ್ನ ಭಿನ್ನವಾದವು. ಘಟಉಪಾಧಿ ನಾಶವಾದ ಮೇಲೆ ಇದರ ಚೇತನವು ಬ್ರಹ್ಮನಲ್ಲಿ ಸೇರುವುದೋ ಅಥವಾ ನಾಶವಾಗಿ ಹೋಗುವುದು? ನಾಶವಾಗಿ ಹೋದರೆ ಈ ಜೀವನಂತೂ ಅಚೇತನ ಉಳಿಯುವನು. ಮತ್ತು ಜೀವವೇ ಬ್ರಹ್ಮನಲ್ಲಿ ಕೂಡಿ ಬಿಡುತ್ತದೆಂದರೆ ಅಲ್ಲಿ ಬ್ರಹ್ಮನಲ್ಲಿ ಕೂಡಿದ ಮೇಲೆ ಇದರ ಅಸ್ತಿತ್ವವು ಉಳಿಯುವುದೋ ಅಥವಾ

ಉಳಿಯುವುದಿಲ್ಲವೋ? ಅಸ್ತಿತ್ವವು ಉಳಿಯುತ್ತಿದ್ದರೆ ಇವನು ಉಳಿದನು, ಇವನ ಚೇತನವು ಇವನಿಗೆ ಉಳಿಯಿತು. ಬ್ರಹ್ಮನಲ್ಲಿ ಕೂಡಿದ್ದೇನು ? ಒಂದು ವೇಳೆ ಅಸ್ತಿತ್ವವು ಉಳಿಯದಿದ್ದರೆ ಅವನ ನಾಶವೇ ಆಯಿತು ಬ್ರಹ್ಮನಲ್ಲಿ ಕೂಡಿದವರಾರು ? ಬ್ರಹ್ಮನ ಮತ್ತು ಜೀವಗಳ ಚೇತನವು ಭಿನ್ನವಿದೆಯೆಂದು ನೀನು ಹೇಳಿದರೆ ಬ್ರಹ್ಮ ಮತ್ತು ಸಮಸ್ತ ಜೀವಗಳು ಭಿನ್ನ-ಭಿನ್ನವೆಂಬುದು ತಾನೇ ನಿಶ್ಚಯವಾಯಿತು.ಈ ಪ್ರಕಾರ ಜೀವಗಳ ಚೇತನವಿದೆ ಅದು ಬ್ರಹ್ಮನದಿದೆಯೆಂಬುದು ಕೂಡ ಸಿದ್ಧಿಸುವುದಿಲ್ಲ.

ಶರೀರಾದಿಗಳು ಮಾಯೆಯಿಂದಾಗಿವೆಯೆಂದು ಹೇಳುವೆ, ಆದರೆ ಮಾಯೆಯೇ ಮೂಳೆ-ಮಾಂಸಾದಿ-ರೂಪವಾಗುವುದೋ ಅಥವಾ ಮಾಯೆಯ ನಿಮಿತ್ತದಿಂದ ಬೇರಾವವು ಆ ರೂಪವಾಗುತ್ತವೆ. ಮಾಯೆಯೇ ಆಗುತ್ತಿದ್ದರೆ ವರ್ಣ-ಗಂಧಾದಿಗಳು ಮಾಯೆಗೆ ಮೊದಲೇ ಇದ್ದವೋ ಅಥವಾ ನವೀನವಾದವು ? ಮೊದಲೇ ಇದ್ದರೆ ಮೊದಲಂತೂ ಮಾಯೆಯು ಬ್ರಹ್ಮನದಿತ್ತು, ಅಮೂರ್ತಿಕ ಬ್ರಹ್ಮನಲ್ಲಿ ವರ್ಣಾದಿಗಳು ಹೇಗೆ ಸಂಭವವಿವೆ ? ಮತ್ತು ನವೀನವಾಗಿದ್ದರೆ ಅಮೂರ್ತಿಕವು ಮೂರ್ತಿಕವಾಯಿತು, ಆಗ ಅಮೂರ್ತಿಕ ಸ್ವಭಾವವು ಶಾಶ್ವತವೆಂದು ನಿಶ್ಚಿತವಾಗಲಿಲ್ಲ. ಮತ್ತು ಮಾಯೆಯ ನಿಮಿತ್ತದಿಂದ ಬೇರಾವುದು ಆಗುತ್ತದೆಂದಾಗ ಬೇರೆ ಪದಾರ್ಥವಂತೂ ನೀನು ನಿಶ್ಚಯಿಸುವುದೇ ಇಲ್ಲ, ಎಂದ ಮೇಲೆ ಆದವರು ಯಾರು.

ನವೀನ ಪದಾರ್ಥವು ಉತ್ಪನ್ನವಾಗುತ್ತದೆಂದು ನೀನು ಹೇಳಿದರೆ ಅದು ಮಾಯೆಯಿಂದ ಭಿನ್ನವಾಗಿ ಉತ್ಪನ್ನವಾಗುತ್ತದೆಯೋ ಅಥವಾ ಅಭಿನ್ನವಾಗಿ ಉತ್ಪನ್ನವಾಗುತ್ತದೆಯೋ ? ಮಾಯೆಯಿಂದ ಭಿನ್ನವಾಗಿ ಉತ್ಪನ್ನವಾಗುತ್ತಿದ್ದರೆ ಶರೀರಾದಿಗಳನ್ನು ಮಾಯಾಮಯಿಯೆಂದೇಕೆ ಹೇಳುತ್ತಾರೆ, ಅವಂತೂ ಆ ಪದಾರ್ಥಮಯವಾದವು. ಮತ್ತು ಅಭಿನ್ನವಾಗಿ ಉತ್ಪನ್ನವಾದರೆ ಮಾಯೆಯೇ ತದ್ರೂಪವಾಯಿತು. ನವೀನ ಪದಾರ್ಥ ಉತ್ಪನ್ನವಾಯಿತೆಂದೇಕೆ ಹೇಳುತ್ತಾರೆ?

ಈ ಪ್ರಕಾರ ಶರೀರಾದಿಗಳು ಮಾಯಾಸ್ವರೂಪವಿವೆಯೆಂದು ಹೇಳುವುದು ಭ್ರಾಂತಿಯಿದೆ.

ಮಾಯೆಯಿಂದ ರಾಜಸ, ತಾಮಸ, ಸಾತ್ವಿಕವೆಂದು ಮೂರು ಗುಣಗಳುತ್ಪನ್ನವಾದುವೆಂದು ಅವರು ಹೇಳುತ್ತಾರೆ. ಆದರೆ ಹೀಗೆ ಹೇಳುವುದು ಕೂಡ ಹೇಗೆ ಸಂಭವವಿದೆ ? ಏಕೆಂದರೆ ಮಾನಾದಿ ಕಷಾಯರೂಪ ಭಾವವನ್ನು ರಜೋಗುಣವೆಂದು ಹೇಳುತ್ತಾರೆ, ಕ್ರೋಧಾದಿ ಕಷಾಯರೂಪ ಭಾವವನ್ನು ತಮೋಗುಣವೆಂದು ಹೇಳುತ್ತಾರೆ, ಮಂದಕಷಾಯರೂಪ ಭಾವವನ್ನು ಸತ್ವಗುಣವೆಂದು ಹೇಳುತ್ತಾರೆ. ಆದರೆ ಈ ಭಾವಗಳಂತೂ ಪ್ರತ್ಯಕ್ಷ ಚೇತನಾಮಯವಾಗಿ ಕಂಡು ಬರುತ್ತವೆ ಮತ್ತು ಮಾಯೆಯ ಸ್ವರೂಪವು ಜಡವೆಂದು ಹೇಳುವಿರಿ, ಆ ಜಡದಿಂದ ಈ ಭಾವವು ಹೇಗೆ ಉತ್ಪನ್ನವಾಗುವುದು ? ಜಡಕ್ಕೂ ಆದರೆ ಪಾಷಾಣಾದಿಗಳಿಗೂ ಆಗುವುದು, ಆದರೆ ಚೇತನಸ್ವರೂಪವಾದ ಜೀವಗಳಿಗೇ ಈ ಭಾವಗಳು ಕಾಣುತ್ತವೆ; ಆದುದರಿಂದ ಈ ಭಾವಗಳು ಮಾಯೆಯಿಂದ ಉತ್ಪನ್ನವಾಗಿಲ್ಲ. ಮಾಯೆಗೆ ಚೇತನವು ನಿಶ್ಚಿತವಾದರೆ ಇದನ್ನು ಮನ್ನಿಸುವುದು. ಮಾಯೆಗೆ ಚೇತನವು ನಿಶ್ಚಿತವಾದ ಮೇಲೆ ಶರೀರ ಮೊದಲಾದವು ಮಾಯೆಯಿಂದ ಉತ್ಪನ್ನವಾದವೆಂದು ಹೇಳಿದರೆ ಮನ್ನಿಸಲಿಕ್ಕಾಗುವುದಿಲ್ಲ. ಆದುದರಿಂದ ನಿರ್ಣಯ ಮಾಡು; ಭ್ರಾಂತಿರೂಪವಾಗಿ ಮನ್ನಿಸುವುದರಿಂದ ಲಾಭವೇನಿದೆ ?

ಮತ್ತು ಆ ಗುಣಗಳಿಂದ ಬ್ರಹ್ಮ, ವಿಷ್ಣು, ಮಹೇಶರೆಂಬ ಮೂವರು ದೇವರು ಪ್ರಕಟವಾದರೆಂದು ಹೇಳುತ್ತಾರೆ ಅದು ಹೇಗೆ ಸಂಭವವಿದೆ ? ಏಕೆಂದರೆ ಗುಣಿಯಿಂದ ಗುಣಗಳಾಗುತ್ತವೆ ಗುಣಗಳಿಂದ ಗುಣಿಯ ಉತ್ಪತ್ತಿ ಹೇಗಾಗುವುದು ? ಪುರುಷನಿಂದ ಕ್ರೋಧವಾಗುವದು, ಕ್ರೋಧದಿಂದ ಪುರುಷನ ಉತ್ಪತ್ತಿ ಹೇಗಾಗುವುದು ? ಮತ್ತು ಈ ಗುಣಗಳದ್ದಂತೂ ನಿಂದೆ ಮಾಡುತ್ತಾರೆ, ಇವುಗಳಿಂದ ಉತ್ಪನ್ನರಾದ ಬ್ರಹ್ಮಾದಿಗಳನ್ನು ಪೂಜ್ಯರೆಂದು ಹೇಗೆ ಮನ್ನಿಸಲಾಗುತ್ತದೆ ? ಗುಣಗಳಂತೂ ಮಾಯಾಮಯಿ ಮತ್ತು ಇವಕ್ಕೆ [1]ಬ್ರಹ್ಮನ ಅವತಾರವೆಂದು ಹೇಳಲಾಗುತ್ತದೆ ಆದರೆ ಇದಂತೂ ಮಾಯೆಯ ಅವತಾರವಾಯಿತು, ಇವಕ್ಕೆ ಬ್ರಹ್ಮನ ಅವತಾರವೆಂದು ಹೇಗೆ ಹೇಳಲಾಗುತ್ತದೆ? ಮತ್ತು ಈ ಗುಣಗಳು ಅಲ್ಪವಾಗಿಯೂ ಕಂಡು ಬರುತ್ತವೆ. ಅವುಗಳನ್ನು ಬಿಡಿಸುವ ಉಪದೇಶ ಕೊಡುತ್ತಾರೆ ಮತ್ತು ಇವುಗಳ ಮೂರ್ತಿಮಂತರನ್ನು ಪೂಜ್ಯರೆಂದು ಮನ್ನಿಸುವುದು ಇದೆಂಥ ಭ್ರಾಂತಿಯಿದೆ ?

ಅವರ ಕರ್ತವ್ಯಕೂಡ ಇವುಗಳಮಯವಾಗಿ ಭಾಸವಾಗುತ್ತದೆ. ಕುತೂಹಲ, ಸ್ತ್ರೀ ಸೇವನೆ ಮತ್ತು ಯುದ್ಧ ಮೊದಲಾದ ಕಾರ್ಯಗಳನ್ನು ಮಾಡುತ್ತಾರೆ ಅವು ಆ ರಜಸ್ಸಾದಿ ಗುಣಗಳಿಂದಲೇ ಈ ಕ್ರಿಯೆಗಳಾಗುತ್ತವೆ; ಆದುದರಿಂದ ಅವರಲ್ಲಿ ರಜಸ್ಸಾದಿಗಳು ಕಂಡು ಬರುತ್ತವೆಂದು ಹೇಳು. ಇವರಿಗೆ ಪೂಜ್ಯರೆನ್ನುವುದು, ಪರಮೇಶ್ವರರೆನ್ನುವುದಂತೂ ಸಂಭವಿಸುವುದಿಲ್ಲ. ಬೇರೆ ಸಂಸಾರಿಗಳಿರುವಂತೆಯೇ ಇವರೂ ಇದ್ದಾರೆ.

ಸಂಸಾರಿಗಳಂತೂ ಮಾಯೆಯ ಆಧೀನರಿದ್ದು ಅವರು ತಿಳಿವಳಿಕೆಯಿಲ್ಲದೆ ಆ ಕಾರ್ಯಗಳನ್ನು ಮಾಡುತ್ತಾರೆ ಮತ್ತು ಮಾಯೆಯು ಬ್ರಹ್ಮಾದಿಗಳ ಆಧೀನವಿರುವುದರಿಂದ ಅವರು ತಿಳಿದೇ ಈ ಕಾರ್ಯಗಳನ್ನು ಮಾಡುತ್ತಾರೆನ್ನುವುದು ಕೂಡ ಭ್ರಾಂತಿಯಿದೆ. ಏಕೆಂದರೆ ಮಾಯೆಯ ಆಧೀನವಾಗುವುದರಿಂದಂತೂ ಕಾಮ-ಕ್ರೋಧಾದಿಗಳೇ ಉತ್ಪನ್ನವಾಗುತ್ತವಲ್ಲದೆ ಮತ್ತೇನು ಆಗುತ್ತವೆ ? ಆದುದರಿಂದ ಆ ಬ್ರಹ್ಮಾದಿಕರಲ್ಲಂತೂ ಕಾಮ-ಕ್ರೋಧಾದಿಗಳ ತೀವ್ರತೆಯು ಕಂಡು ಬರುತ್ತದೆ. ಕಾಮದ ತೀವ್ರತೆಯಿಂದ ಸ್ತ್ರೀಯ ವಶವರ್ತಿಯಾಗಿ ನೃತ್ಯ ಗಾಯನಾದಿಗಳನ್ನು ಮಾಡುವನು, ವಿಹ್ವಲನಾಗುವನು, ನಾನಾ ಪ್ರಕಾರದ ಕುಚೇಷ್ಟೆ ಮಾಡುವನು ಮತ್ತು ಕ್ರೋಧದ ವಶವರ್ತಿಯಾಗಿ ಅನೇಕ ಯುದ್ಧಾದಿಗಳನ್ನು ಮಾಡುವನು; ಮಾನದವಶವರ್ತಿಯಾಗಿ ತನ್ನ ಉಚ್ಚತೆಯನ್ನು ಪ್ರಕಟಿಸುವ ಸಲುವಾಗಿ ಅನೇಕ ಉಪಾಯ ಮಾಡುವನು; ಮಾಯೆಯ ವಶವರ್ತಿಯಾಗಿ ಅನೇಕ ಕಪಟ ಮಾಡುವನು; ಮತ್ತು ಲೋಭದ ವಶವರ್ತಿಯಾಗಿ ಪರಿಗ್ರಹದ ಸಂಗ್ರಹ ಮಾಡುವನು. ಹೀಗೆ ಎಷ್ಟೆಂದು ಹೇಳುವುದು ? ಹೀಗೆ ವಶವರ್ತಿಯಾಗಿ ವಸ್ತ್ರಾಪಹರಣದಂಥ ನಿರ್ಲಜ್ಜರ ಕ್ರಿಯೆ, ಮೊಸರು ಕದಿಯುವ ಕಳ್ಳರ ಕ್ರಿಯೆ, ರುಂಡಮಾಲೆ ಧರಿಸುವಂಥ ಮೂರ್ಖರ[2] ಕ್ರಿಯೆ, ಬಹುರೂಪ ಧಾರಣಾದಿ ಭೂತಗಳ ಕ್ರಿಯೆ, ಗೋವು ಕಾಯುವಂಥ ನೀಚ ಕುಲದವರ ಕ್ರಿಯೆ ಇವೇ ಮೊದಲಾದ ನಿಂದ್ಯ ಕ್ರಿಯೆಗಳನ್ನು ಮಾಡುವನು; ಮಾಯೆಯ ವಶವರ್ತಿಯಾದ ಮೇಲೆ ಇದಕ್ಕಿಂತಲೂ ಹೆಚ್ಚಿನ ಕ್ರಿಯೆಗಳು ಏನೇನು ಆಗುತ್ತವೆಂಬುದು ತಿಳಿವಳಿಕೆಯಲ್ಲಿ ಬರುವುದಿಲ್ಲ.

---

1 ಬ್ರಹ್ಮ, ವಿಷ್ಣು ಮತ್ತು ಶಿವ ಈ ಮೂರೂ ಬ್ರಹ್ಮನ ಮುಖ್ಯ ಶಕ್ತಿಗಳಿವೆ.-ವಿಷ್ಣು ಪುರಾಣ ಅ. ೨೨-೫೮

ಕಲಿಕಾಲದ ಪ್ರಾರಂಭದಲ್ಲಿ ಪರಬ್ರಹ್ಮನಾದ ಪರಮಾತ್ಮನು ರಜೋಗುಣದಿಂದ ಉತ್ಪನ್ನನಾಗಿ ಬ್ರಹ್ಮನೆನಿಸಿ ಪ್ರಜೆಗಳ ರಕ್ಷಣೆ ಮಾಡಿದನು. ಪ್ರಲಯದ ಸಮಯಕ್ಕೆ ತಮೋಗುಣದಿಂದ ಶಿವನೆನಿಸಿ ಸೃಷ್ಟಿಯನ್ನು ಗ್ರಾಸಮಾಡಿದನು.ಆ ಪರಮಾತ್ಮನು ಸತ್ವಗುಣದಿಂದ ಉತ್ಪನ್ನನಾಗಿ ನಾರಾಯಣನೆನಿಸಿ ಸಮುದ್ರದಲ್ಲಿ ಶಯನ ಮಾಡಿದನು,-ವಾಯು ಪುರಾಣ ಅ. ೭-೬೮, ೬೯.

2 ನಾನಾ ರೂಪಾಯ ಮುಂಡಾಯ ವರೂಥ ಪೃಥುದಂಡಿನೆ ।

ನಮಃ ಕಪಾಲಹಸ್ತಾಯ ದಿಗ್ವಾಸಾಯ ಶಿಖಂಡಿನೇ ॥-ಮತ್ಸ್ಯ ಪುರಾಣ. ಅ. ೨೫೦, ಶ್ಲೋಕ ೨

ಯಾವ ಪ್ರಕಾರ ಒಬ್ಬನು ಮೋಡಮುಸುಕಿದ ಅಮಾವಾಸ್ಯೆಯ ರಾತ್ರಿಯನ್ನು ಅಂಧಕಾರರಹಿತವೆಂದು ಮನ್ನಿಸುವನು; ಅದೇ ಪ್ರಕಾರ ಬಾಹ್ಯ ಕುಚೇಷ್ಟೆಗಳಿಂದ ಕೂಡಿದ ತೀವ್ರ ಕಾಮ-ಕ್ರೋಧಾದಿಗಳಿಂದ ತುಂಬಿದ ಬ್ರಹ್ಮಾದಿಗಳನ್ನು ಮಾಯಾರಹಿತರೆಂದು ಮನ್ನಿಸುವಂತಿದೆ.

ಇವರಿಗೆ ಕಾಮ-ಕ್ರೋಧಾದಿಗಳು ವ್ಯಾಪ್ತವಾಗುವುದಿಲ್ಲ, ಇದು ಕೂಡ ಪರಮೇಶ್ವರನ ಲೀಲೆಯಿದೆಯೆಂದು ಹೇಳುತ್ತಾರೆ. ಆದರೆ ಇಂಥ ಕಾರ್ಯ ಮಾಡುವವರು ಇಚ್ಛೆಯಿಂದ ಮಾಡುತ್ತಾರೋ ಅಥವಾ ಇಚ್ಛೆಯಿಲ್ಲದೆಯೇ ಮಾಡುತ್ತಾರೋ ? ಇಚ್ಛೆಯಿಂದ ಮಾಡುತ್ತಿದ್ದರೆ ಸ್ತ್ರೀ ಸೇವನೆಯ ಇಚ್ಛೆಯ ಹೆಸರೇ ಕಾಮವಿದೆ, ಯುದ್ಧ ಮಾಡುವ ಇಚ್ಛೆಯ ಹೆಸರೇ ಕ್ರೋಧವಿದೆ ಉಳಿದುವನ್ನು ಇದೇ ಪ್ರಕಾರ ತಿಳಿಯುವುದು. ಮತ್ತು ಇಚ್ಛೆಯಿಲ್ಲದೆ ಮಾಡುತ್ತಿದ್ದರೆ ತಾನು ಅಪೇಕ್ಷಿಸದಂಥ ಕಾರ್ಯವಂತೂ ಪರವಶವಾದಮೇಲೇ ಆಗುತ್ತದೆ, ಆದರೆ ಪರವಶತೆಯು ಹೇಗೆ ಸಂಭವವಿದೆ? ಮತ್ತು ನೀನು ಲೀಲೆಯೆಂದು ಹೇಳುತ್ತಿರುವೆ, ಆದರೆ ಪರಮೇಶ್ವರನು ಅವತಾರಧಾರಣ ಮಾಡಿ ಈ ಕಾರ್ಯಗಳ ಲೀಲೆ ಮಾಡುತ್ತಾನೆಂದರೆ ಅನ್ಯಜೀವರುಗಳನ್ನುಈ ಕಾರ್ಯಗಳಿಂದ ಬಿಡಿಸಿ ಮುಕ್ತ ಮಾಡುವ ಉಪದೇಶವನ್ನು ಏತಕ್ಕಾಗಿ ಕೊಡುತ್ತಾರೆ ? ಕ್ಷಮೆ, ಸಂತೋಷ, ಶೀಲ, ಸಂಯಮಾದಿಗಳ ಉಪದೇಶವೆಲ್ಲವು ವ್ಯರ್ಥವಾಯಿತು.

ಪರಮೇಶ್ವರನಿಗಂತೂ ಯಾವ ಪ್ರಯೋಜನವಿಲ್ಲ. ಲೋಕರೀತಿಯ ಪ್ರವೃತ್ತಿಗಾಗಿ ಅವನು ಭಕ್ತರ ರಕ್ಷಣೆ, ದುಷ್ಟರ ನಿಗ್ರಹದ ಸಲುವಾಗಿ ಅವತಾರ[1] ಧರಿಸುತ್ತಾನೆಂದು ಹೇಳುತ್ತಾರೆ, ಆದರೆ ಪ್ರಯೋಜನವಿಲ್ಲದೆ ಇರಿವೆ ಕೂಡ ಕಾರ್ಯಮಾಡುವುದಿಲ್ಲವೆಂದ ಮೇಲೆ ಪರಮೇಶ್ವರರು ಏತಕ್ಕಾಗಿ ಮಾಡುವರು ? ಲೋಕರೀತಿಯ ಪ್ರವೃತ್ತಿಗಾಗಿ ಮಾಡುತ್ತಾನೆಂದು ನೀನು ಪ್ರಯೋಜನವನ್ನು ಹೇಳಿರುವೆ. ಆದರೆ ಯಾವ ಪ್ರಕಾರ ಓರ್ವ ಪುರುಷನು ತಾನು ಕುಚೇಷ್ಟೆಯಿಂದ ತನ್ನ ಮಕ್ಕಳಿಗೆ ಕಲಿಸಿದರೆ ಮತ್ತು ಅವರು ಆ ಚೇಷ್ಟಾರೂಪವಾಗಿ ಪ್ರವರ್ತಿಸಿದಾಗ ಅವರನ್ನು ಹೊಡೆಯುವಂಥ ತಂದೆಗೆ ಒಳ್ಳೆಯವನೆಂದು ಹೇಗೆ ಹೇಳುವುದು ? ಅದೇ ಪ್ರಕಾರ ಬ್ರಹ್ಮಾದಿಗಳು ತಮ್ಮ ಕಾಮ-ಕ್ರೋಧರೂಪ ಚೇಷ್ಟೆಯಿಂದ ತಾವು ಉತ್ಪನ್ನಮಾಡಿದ ಜನರನ್ನು ಪ್ರವೃತ್ತಿ ಮಾಡಿಸುವುದು ಮತ್ತು ಆ ಜನರು ಆ ಪ್ರಕಾರ ಪ್ರವೃತ್ತಿ ಮಾಡಿದಾಗ ಅವರನ್ನು ನರಕಾದಿಗಳಲ್ಲಿ ತಳ್ಳಿದರು. ಶಾಸ್ತ್ರದಲ್ಲಿ ಇವೇ ಭಾವಗಳ ಫಲವು ನರಕವೆಂದು ಹೇಳಿದೆ, ಆದರೆ ಇಂಥ ಪ್ರಭುವನ್ನು ಒಳ್ಳೆಯವನೆಂದು ಹೇಗೆ ನಂಬುವುದು ?

ಭಕ್ತರರಕ್ಷಣೆ, ದುಷ್ಟರ ನಿಗ್ರಹ ಮಾಡುವ ಪ್ರಯೋಜನವನ್ನು ನೀನು ಹೇಳಿದೆ. ಆದರೆ ಭಕ್ತರಿಗೆ ದುಃಖಕೊಡುವಂಥ ದುಷ್ಟರು ಅವರು ಪರಮೇಶ್ವರನ ಇಚ್ಛೆಯಿಂದಾದರೋ ಅಥವಾ ಇಚ್ಛೆಯಿಲ್ಲದೆಯಾದರೋ? ಇಚ್ಛೆಯಿಂದಾಗಿದ್ದರೆ ಯಾವ ಪ್ರಕಾರ ಒಬ್ಬನು ತನ್ನ ಸೇವಕನನ್ನು ತಾನೇ ಯಾರಿಗೋ ಹೇಳಿ ಸಾಯಿಸುವುದು ಮತ್ತು ಸಾಯಿಸಿದವನನ್ನು ತಾನು ಹೊಡೆಯುವಂಥ ಸ್ವಾಮಿಯನ್ನು ಒಳ್ಳೆಯವನೆಂದು ಹೇಗೆ ಹೇಳುವುದು ? ಅದೇ ಪ್ರಕಾರ ತನ್ನ ಭಕ್ತನನ್ನು ತಾನೇ ಇಚ್ಛೆಯಿಂದ ದುಷ್ಟರ ಮುಖಾಂತರ ಬಾಧೆಗೊಳಿಸುವುದು ಮತ್ತು ಪುನಃ ಆ ದುಷ್ಟರನ್ನು ತಾನು ಅವತಾರ ಧಾರಣಮಾಡಿ ಕೊಲ್ಲುವಂಥ ಈಶ್ವರನನ್ನು ಒಳ್ಳೆಯವನೆಂದು ಹೇಗೆ ಮನ್ನಿಸಲಾಗುವುದು ?

ಇಚ್ಛೆಯಿಲ್ಲದೆ ದುಷ್ಟರಾದರೆಂದರೆ ಈ ದುಷ್ಟರು ನನ್ನ ಭಕ್ತರಿಗೆ ದುಃಖಕೊಡಬಹುದೆಂದು ಭವಿಷ್ಯಜ್ಞಾನವು

1 ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥ ಗೀತೆ ೪-೮

ಪರಮೇಶ್ವರನಿಗೆ ಇರಲಿಲ್ಲವೇನು ಅಥವಾ ಇವರನ್ನು ಹೀಗಾಗಗೊಡದಂಥ ಶಕ್ತಿಯು ಮೊದಲು ಇರಲಿಲ್ಲವೇನು? ಮತ್ತು ಇಂಥ ಕಾರ್ಯದ ಸಲುವಾಗಿ ಅವತಾರ ಧಾರಣಮಾಡಬೇಕಾದರೆ ಅವತಾರ ಧಾರಣ ಮಾಡದೆ ಅಂಥ ಶಕ್ತಿ ಇತ್ತೋ ಅಥವಾ ಇಲ್ಲವೋ ? ಇದ್ದರೆ ಅವತಾರವನ್ನೇಕೆ ಧಾರಣ ಮಾಡಿದನು ? ಮತ್ತು ಇಲ್ಲದಿದ್ದರೆ ನಂತರ ಆ ಸಾಮರ್ಥ್ಯವು ಬರಲು ಕಾರಣವಾದರೂ ಯಾವುದಾಯಿತು ?

ಹೀಗೆ ಮಾಡದೆ ಪರಮೇಶ್ವರನ ಮಹಿಮೆಯು ಹೇಗೆ ಪ್ರಕಟವಾಗುವುದೆಂದರೆ ತನ್ನ ಮಹಿಮೆಯ ಸಲುವಾಗಿ ತನ್ನ ಅನುಚರರ ರಕ್ಷಣೆ ಮಾಡುವುದು, ಪ್ರತಿಪಕ್ಷದವರನ್ನು ನಿಗ್ರಹಿಸುವುದೇ ರಾಗ-ದ್ವೇಷವಿದೆ. ಆ ರಾಗ-ದ್ವೇಷಗಳಂತೂ ಸಂಸಾರಿ ಜೀವನ ಲಕ್ಷಣವಿವೆ. ಪರಮೇಶ್ವರನಲ್ಲೂ ರಾಗ-ದ್ವೇಷಗಳು ಕಂಡುಬರುತ್ತಿದ್ದರೆ ಅನ್ಯ ಜೀವರುಗಳಿಗೆ ರಾಗ-ದ್ವೇಷಗಳನ್ನು ಬಿಟ್ಟು ಸಮತಾಭಾವ ಮಾಡುವ ಉಪದೇಶ ಏತಕ್ಕಾಗಿ ಕೊಡುವುದು ? ಮತ್ತು ರಾಗ-ದ್ವೇಷದ ಅನುಸಾರ ಕಾರ್ಯಮಾಡುವ ವಿಚಾರ ಮಾಡಿರುವುದು ಆ ಕಾರ್ಯವು ಹೆಚ್ಚು-ಕಡಿಮೆ ಕಾಲ ಕಳೆದಲ್ಲದೆ ಆಗುವುದಿಲ್ಲವೆಂದ ಬಳಿಕ ಅಷ್ಟು ಕಾಲದವರೆಗೆ ಪರಮೇಶ್ವರನಿಗೆ ಆಕುಲತೆಯೂ ಆಗುತ್ತಿರಬೇಕು ಮತ್ತು ಯಾವ ಕಾರ್ಯವನ್ನು ಸಾಮಾನ್ಯ ಮನುಷ್ಯನು ಕೂಡ ಮಾಡುವ ಸಾಧ್ಯತೆಯಿದೆ ಆ ಕಾರ್ಯವನ್ನು ದೊರೆಯು ಸ್ವಯಂ ಬಂದು ಮಾಡಿದರೆ ಆ ದೊರೆಯ ಮಹಿಮೆಯಾಗದೆ ನಿಂದೆಯೇ ಆಗುತ್ತದೆ. ಅದೇ ಪ್ರಕಾರ ಯಾವ ಕಾರ್ಯವನ್ನು ದೊರೆ ಮತ್ತು ವ್ಯಂತರರು ಮಾಡುವ ಸಾಧ್ಯತೆಯಿದೆ ಅದನ್ನು ಪರಮೇಶ್ವರನು ಸ್ವಯಂ ಅವತಾರ ಧಾರಣಮಾಡಿ ಮಾಡುತ್ತಾನೆಂದು ಮನ್ನಿಸಿದರೆ ಆ ಪರಮೇಶ್ವರನ ಮಹಿಮೆಯಾಗುವುದಿಲ್ಲ, ಆದರೆ ನಿಂದೆಯೇ ಆಗುತ್ತದೆ.

ಮಹಿಮೆಯನ್ನಂತೂ ಬೇರೆಯವರಿಗೆ ತೋರಿಸುತ್ತಾರೆ; ನೀನಂತೂ ಬ್ರಹ್ಮನನ್ನು ಅದ್ವೈತನೆಂದು ಮನ್ನಿಸುವೆ, ಮಹಿಮೆಯನ್ನು ಯಾರಿಗೆ ತೋರಿಸುತ್ತಾನೆ ? ಮಹಿಮೆ ತೋರಿಸುವುದರ ಫಲವಂತೂ ಸ್ತುತಿ ಮಾಡಿಸಿಕೊಳ್ಳುವುದಿದೆ, ಆದರೆ ಯಾರಿಂದ ಸ್ತುತಿ ಮಾಡಿಸಿಕೊಳ್ಳಲಪೇಕ್ಷಿಸುತ್ತಾನೆ ? ಎಲ್ಲ ಜೀವರುಗಳು ಪರಮೇಶ್ವರನ ಇಚ್ಛೆಗೆ ಅನುಸರಿಸಿ ಪ್ರವರ್ತಿಸುತ್ತಾರೆಂದು ನೀನು ಹೇಳುವೆ, ಮತ್ತು ತನಗೆ ಸ್ತುತಿ ಮಾಡಿಸಿಕೊಳ್ಳುವ ಇಚ್ಛೆಯಿದ್ದರೆ ಎಲ್ಲರನ್ನು ತನ್ನ ಸ್ತುತಿರೂಪವಾಗಿ ಪ್ರವರ್ತಿತ ಮಾಡಬೇಕು, ಅನ್ಯ ಕಾರ್ಯ ಏತಕ್ಕಾಗಿ ಮಾಡಬೇಕಾಗುವುದು ? ಆದುದರಿಂದ ಮಹಿಮೆಯ ಸಲುವಾಗಿ ಕೂಡ ಕಾರ್ಯ ಮಾಡುವುದು ಸಂಭವಿಸುವುದಿಲ್ಲ.

ಪರಮೇಶ್ವರನು ಈ ಕಾರ್ಯಗಳನ್ನು ಮಾಡುತ್ತಿದ್ದರೂ ಅಕರ್ತೃವಿದ್ದಾನೆ, ಅವನ ನಿಶ್ಚಯವಾಗುವುದಿಲ್ಲವೆಂದು ಹೇಳುವೆ, ಆದರೆ ಇವಳು ನನ್ನ ತಾಯಿಯೂ ಇದ್ದಾಳೆ ಮತ್ತು ಬಂಜೆಯೂ ಇದ್ದಾಳೆಂದು ಹೇಳಿದರೆ ನಿನ್ನ ಮಾತನ್ನು ಹೇಗೆ ನಂಬುವುದು ? ಕಾರ್ಯ ಮಾಡುವವನನು ಅಕರ್ತೃವೆಂದು ಹೇಗೆ ಮನ್ನಿಸುವುದು ? ಮತ್ತು ನಿಶ್ಚಯ ವಾಗುವುದಿಲ್ಲವೆಂದು ನೀನು ಹೇಳುವೆ ; ಹಾಗೆ ನಿಶ್ಚಯವಿಲ್ಲದೆ ಮನ್ನಿಸುವುದಾದರೆ ಆಕಾಶ ಪುಷ್ಪ, ಕತ್ತೆಯ ಕೋಡುಗಳನ್ನೂ ಮನ್ನಿಸು; ಆದರೆ ಇಂಥ ಅಸಂಭವವಾದವುಗಳನ್ನು ಹೇಳುವುದು ಯುಕ್ತವಲ್ಲ.

ಈ ಪ್ರಕಾರ ಬ್ರಹ್ಮ, ವಿಷ್ಣು, ಮಹೇಶರಿರುವಿಕೆಯನ್ನು ಹೇಳುತ್ತಾರೆ ಅದು ಅಸತ್ಯವಿದೆಯೆಂದು ತಿಳಿಯಬೇಕು.

ಮತ್ತು ಬ್ರಹ್ಮನು ಸೃಷ್ಟಿಯನ್ನು ಉತ್ಪನ್ನಮಾಡುತ್ತಾನೆ, ವಿಷ್ಣು ರಕ್ಷಣೆ ಮಾಡುತ್ತಾನೆ, ಮಹೇಶನು ಸಂಹಾರ ಮಾಡುತ್ತಾನೆಂದು ಅವರು ಹೇಳುತ್ತಾರೆ. ಆದರೆ ಹೀಗೆ ಹೇಳುವುದು ಕೂಡ ಸಂಭವವಿಲ್ಲ; ಏಕೆಂದರೆ ಈ

ಕಾರ್ಯಗಳನ್ನು ಮಾಡುತ್ತಿರುವಾಗ ಒಬ್ಬನು ಒಂದನ್ನು ಮಾಡಲಪೇಕ್ಷಿಸಿದರೆ ಇನ್ನೊಬ್ಬನು ಇನ್ನೊಂದನ್ನು ಅಪೇಕ್ಷಿಸುತ್ತಾನೆ, ಆಗ ಪರಸ್ಪರದಲ್ಲಿ ವಿರೋಧವಾಗುವುದು.

ಇದಂತೂ ಒಬ್ಬ ಪರಮೇಶ್ವರನದೇ ಸ್ವರೂಪವಿದ್ದು ವಿರೋಧವೇಕಾಗುವುದೆಂದು ನೀನು ಹೇಳುವೆ, ಆದರೆ ತಾನೇ ಉತ್ಪನ್ನ ಮಾಡಿ ತಾನೇ ನಷ್ಟ ಮಾಡುವಂಥ ಕಾರ್ಯದಲ್ಲಿ ಯಾವ ಫಲವಿದೆ ? ಸೃಷ್ಟಿಯು ತನಗೆ ಅನಿಷ್ಟವಿದ್ದರೆ ಉತ್ಪನ್ನವನ್ನೇಕೆ ಮಾಡಿದನು, ಮತ್ತು ಇಷ್ಟವಿದ್ದರೆ ನಷ್ಟವನ್ನೇಕೆ ಮಾಡಿದನು ? ಇನ್ನು ಮೊದಲು ಇಷ್ಟವೆನಿಸಿದಾಗ ಉತ್ಪನ್ನ ಮಾಡಿದನು ಪುನಃ ಅನಿಷ್ಟವೆನಿಸಿದಾಗ ನಷ್ಟಮಾಡಿದನೆಂದಿದ್ದರೆ ಪರಮೇಶ್ವರ ಸ್ವಭಾವವು ಅನ್ಯಥಾ ಆಯಿತು ಅಥವಾ ಸೃಷ್ಟಿಯ ಸ್ವರೂಪವು ಅನ್ಯಥಾ ಆಯಿತು. ಪ್ರಥಮಪಕ್ಷ ಸ್ವೀಕರಿಸಿದರೆ ಪರಮೇಶ್ವರನ ಸ್ವಭಾವವು ಏಕಪ್ರಕಾರ ಉಳಿಯಲಿಲ್ಲ. ಆದರೆ ಸ್ವಭಾವವು ಏಕಪ್ರಕಾರ ಉಳಿಯದುದರ ಕಾರಣವೇನಿದೆ ಅದನ್ನು ತಿಳಿಸು. ಕಾರಣವಿಲ್ಲದೆ ಸ್ವಭಾವದ ಪರಿವರ್ತನೆಯು ಹೇಗಾಗುವುದು ? ಮತ್ತು ದ್ವಿತೀಯಪಕ್ಷ ಸ್ವೀಕರಿಸಿದರೆ ಸೃಷ್ಟಿಯಂತೂ ಪರಮೇಶ್ವರನ ಆಧೀನವಿತ್ತು, ಅದನ್ನು ತನಗೆ ಅನಿಷ್ಟವೆನಿಸುವಂತೇಕೆ ಆಗಗೊಟ್ಟನು ?

ಬ್ರಹ್ಮನು ಸೃಷ್ಟಿಯ ಉತ್ಪನ್ನವನ್ನು ಹೇಗೆ ಮಾಡುತ್ತಾನೆ ? ಯಾವ ಪ್ರಕಾರ ಮಂದಿರ ಕಟ್ಟುವವನು ಕಲ್ಲು, ಗಚ್ಚು ಮೊದಲಾದ ಸಾಮಗ್ರಿಯನ್ನು ಒಂದುಗೂಡಿಸಿ ಆಕಾರಾದಿಗಳನ್ನು ತಯಾರಿಸುತ್ತಾನೆ; ಅದೇ ಪ್ರಕಾರ ಬ್ರಹ್ಮನು ಸಾಮಗ್ರಿಯನ್ನು ಏಕತ್ರಮಾಡಿ ಸೃಷ್ಟಿಯ ರಚನೆ ಮಾಡುತ್ತಾನೆ. ಹಾಗಾದರೆ ಆ ಸಾಮಗ್ರಿಯನ್ನು ಎಲ್ಲಿಂದ ತಂದು ಏಕತ್ರ ಮಾಡಿದನು ಆ ಸ್ಥಳವನ್ನು ತಿಳಿಸು ಮತ್ತು ಒಬ್ಬ ಬ್ರಹ್ಮನೇ ಇಷ್ಟು ರಚನೆ ಮಾಡಿದನೇನು, ಅದನ್ನು ಕಾಲಕ್ರಮದಲ್ಲಿ ರಚಿಸಿದನೋ ಅಥವಾ ತನ್ನ ಶರೀರದ ಹಸ್ತಾದಿಗಳನ್ನು ಅಸಂಖ್ಯ ನಿರ್ಮಿಸಿಕೊಂಡು ಏಕಕಾಲಕ್ಕೆ ರಚಿಸಿದನು ? ಅದು ಹೇಗಿದೆ ಹಾಗೆ ತಿಳಿಸು. ನೀನು ತಿಳಿಸುವುದರಲ್ಲಿ ವಿಚಾರ ಮಾಡುವುದರಿಂದ ವಿರುದ್ಧವಾಗಿ ಭಾಸವಾಗುವುದು.

ಒಂದು ಪ್ರಕಾರವು ಹೀಗಿದೆ - ಯಾವ ಪ್ರಕಾರ ದೊರೆಯು ಆಜ್ಞೆ ಮಾಡುವನು ಅದಕ್ಕನುಸರಿಸಿ ಕಾರ್ಯವಾಗುತ್ತದೆ, ಅದೇ ಪ್ರಕಾರ ಬ್ರಹ್ಮನ ಆಜ್ಞೆಯಿಂದ ಸೃಷ್ಟಿಯು ಉತ್ಪನ್ನವಾಗುತ್ತಿದ್ದರೆ ಆಜ್ಞೆಯನ್ನು ಯಾರಿಗೆ ಕೊಟ್ಟನು? ಮತ್ತು ಯಾರಿಗೆ ಆಜ್ಞೆ ಕೊಟ್ಟನು ಅವರು ಸಾಮಗ್ರಿಯನ್ನು ಎಲ್ಲಿಂದ ತಂದು ಹೇಗೆ ರಚನೆ ಮಾಡುತ್ತಾರೆಂಬುದನ್ನು ತಿಳಿಸು.

ಇನ್ನೊಂದು ಪ್ರಕಾರವು ಹೀಗಿದೆ - ಯಾವ ಪ್ರಕಾರ ಋದ್ಧಿಧಾರಿಯು ಇಚ್ಛೆ ಮಾಡಿದರೆ ಅದಕ್ಕನುಸಾರವಾದ ಕಾರ್ಯವು ತಾನೇ ಆಗುತ್ತದೆ; ಅದೇ ಪ್ರಕಾರ ಬ್ರಹ್ಮನು ಇಚ್ಛೆಮಾಡಿದರೆ ಅದಕ್ಕನುಸಾರವಾಗಿ ಸೃಷ್ಟಿಯು ಉತ್ಪನ್ನವಾಗುತ್ತದೆ, ಆದರೆ ಬ್ರಹ್ಮನು ಇಚ್ಛೆಯ ಕರ್ತೃವೇ ಆದನು, ಲೋಕವಂತೂ ತಾನಾಗಿಯೇ ಉತ್ಪನ್ನವಾಯಿತು. ಇಚ್ಛೆಯನ್ನಂತೂ ಪರಮಬ್ರಹ್ಮನು ಮಾಡಿದ್ದನು, ಬ್ರಹ್ಮನಿಗೆ ಸೃಷ್ಟಿಯ ಉತ್ಪನ್ನಮಾಡುವವನೆಂದು ಹೇಳಬೇಕಾದರೆ ಇದರಲ್ಲಿ ಬ್ರಹ್ಮನ ಕರ್ತವ್ಯವೇನಿದೆ ?

ಪರಮಬ್ರಹ್ಮನೂ ಇಚ್ಛೆಮಾಡಿದನು ಮತ್ತು ಬ್ರಹ್ಮನೂ ಇಚ್ಛೆಮಾಡಿದಾಗ ಲೋಕದ ಉತ್ಪತ್ತಿಯಾಯಿತೆಂದು ನೀನು ಹೇಳುವೆ, ಇದರಿಂದ ಕೇವಲ ಪರಮಬ್ರಹ್ಮನ ಇಚ್ಛೆಯು ಕಾರ್ಯಕಾರಿಯಾಗಲಿಲ್ಲವೆಂದು ತಿಳಿದು ಬರುತ್ತದೆ. ಅಲ್ಲಿ ಶಕ್ತಿಹೀನತೆಯು ಬಂದು ಬಿಟ್ಟಿತು.

ಜಗತ್ತು ಕೇವಲ ಮಾಡುವುದರಿಂದ ಆಗುತ್ತದೆಯೆಂದಾಗ ಮಾಡುವವನಂತೂ ಸುಖದ ಸಲುವಾಗಿ ಮಾಡುವನೆಂದರೆ ಇಷ್ಟವಾಗಿಯೇ ರಚನೆ ಮಾಡುವನು. ಈ ಜಗತ್ತಿನಲ್ಲಿ ಇಷ್ಟ ಪದಾರ್ಥಗಳು ಅಲ್ಪವಾಗಿ ಕಂಡು ಬಂದರೆ ಅನಿಷ್ಟ ಪದಾರ್ಥಗಳು ಅಧಿಕವಾಗಿ ಕಂಡು ಬರುತ್ತವೆ. ಜೀವರುಗಳಲ್ಲಿ ದೇವಾದಿಕರ ರಚನೆಯಂತೂ ರಮಣ ಮಾಡುವ ಹಾಗೂ ಭಕ್ತಿ ಮಾಡುವ ಸಲುವಾಗಿ ಇಷ್ಟವಾಗಿ ರಚಿಸಿದ್ದರೆ ಕ್ರಿಮಿ, ಕೀಟಕ, ನಾಯಿ, ಹಂದಿ, ಸಿಂಹ ಮೊದಲಾದುವನ್ನು ಯಾವುದರ ಸಲುವಾಗಿ ರಚಿಸಿದೆ ? ಅವಂತೂ ಸುಂದರವಿಲ್ಲ, ಭಕ್ತಿ ಮಾಡುವುದಿಲ್ಲ, ಎಲ್ಲ ಪ್ರಕಾರದಿಂದ ಅನಿಷ್ಟವೇ ಇವೆ. ಮತ್ತು ದರಿದ್ರಿ, ದುಃಖಿನಾರಕಿಗಳನ್ನು ನೋಡಿ ತಮಗೆ ಜುಗುಪ್ಸೆ, ಗ್ಲಾನಿ ಮೊದಲಾದ ದುಃಖವನ್ನುತ್ಪನ್ನ ಮಾಡುವಂಥ ಅನಿಷ್ಟಗಳನ್ನು ಏತಕ್ಕಾಗಿ ರಚಿಸಿರಬೇಕು ?

ಜೀವಗಳು ತಮ್ಮ ಪಾಪದಿಂದ ಕ್ರಿಮಿ, ಕೀಟಕ, ದರಿದ್ರಿ, ನಾರಕಿ ಮೊದಲಾದ ಪರ್ಯಾಯ ಭೋಗಿಸುತ್ತವೆನ್ನುವುದಕ್ಕಿಂತ ನಂತರದಲ್ಲಿ ಪಾಪದ ಫಲದಿಂದಲೇ ಈ ಪರ್ಯಾಯಗಳಾದುವೆಂದು ಹೇಳಿರಿ. ಆದರೆ ಮೊದಲು ಸೃಷ್ಟಿ ರಚನೆ ಮಾಡುವಾಗಲೇ ಅವನ್ನು ಮಾಡಿದೆಯೆಂದ ಮೇಲೆ ಏತಕ್ಕಾಗಿ ಮಾಡಿದೆ ? ಮತ್ತು ಅನಂತರ ಜೀವಗಳು ಪಾಪರೂಪವಾಗಿ ಹೇಗೆ ಪರಿಣಮಿಸಿದವು ? ತಾವೇ ಪರಿಣಮಿಸಿದವೆಂದು ಹೇಳಿದರೆ ಮೊದಲಂತೂ ಬ್ರಹ್ಮನು ಉತ್ಪನ್ನ ಮಾಡಿದನು ನಂತರ ಅವು ಇವನ ಆಧೀನ ಉಳಿಯಲಿಲ್ಲವೆಂದು ತಿಳಿದುಬರುತ್ತದೆ, ಇದರಿಂದ ಬ್ರಹ್ಮನಿಗೆ ದುಃಖವೇ ಆಯಿತು.

ಬ್ರಹ್ಮನು ಪರಿಣಮಿತ ಮಾಡುವುದರಿಂದ ಪರಿಣಮಿಸುತ್ತಿದ್ದರೆ ಅವನ್ನು ಪಾಪರೂಪವಾಗೇಕೆ ಪರಿಣಮಿತ ಮಾಡಿದನು, ಜೀವಗಳನ್ನಂತೂ ತಾನೇ ಉತ್ಪನ್ನಮಾಡಿ ಅವುಗಳ ಕೆಡಕನ್ನೇಕೆ ಮಾಡಿದನು ? ಆದುದರಿಂದ ಹೀಗೆ ಸಂಭವಿಸುವುದಿಲ್ಲ.

ಇನ್ನು ಅಜೀವಗಳಲ್ಲಿ ಚಿನ್ನ, ಸುಗಂಧ ಸಹಿತವಾದ ವಸ್ತುಗಳನ್ನಂತೂ ರಂಜನೆ ಮಾಡುವ ಸಲುವಾಗಿ ಮಾಡಿದ್ದರೆ ಕುವರ್ಣ, ದುರ್ಗಂಧಯುಕ್ತ ದುಃಖದಾಯಕ ವಸ್ತುಗಳನ್ನು ಯಾವುದರ ಸಲುವಾಗಿ ರಚಿಸಿದನು ? ಇವುಗಳ ದರ್ಶನದಿಂದ ಬ್ರಹ್ಮನಿಗೆ ಯಾವ ಸುಖವಂತೂ ಉತ್ಪನ್ನವಾಗುತ್ತಿರಲಿಕ್ಕಿಲ್ಲ. ಪಾಪೀ ಜೀವಗಳಿಗೆ ದುಃಖ ಕೊಡುವ ಸಲುವಾಗಿ ರಚಿಸಿದೆಯೆಂದರೆ ತಾನೇ ಉತ್ಪನ್ನ ಮಾಡಿದ ಜೀವಗಳಿಗೆ ದುಃಖದಾಯಕವಾದ ಸಾಮಗ್ರಿಯನ್ನು ಮೊದಲೇ ರಚಿಸಿ ಇಂಥ ದುಷ್ಟತೆಯನ್ನು ಏತಕ್ಕಾಗಿ ಮಾಡಿದೆ ? ಮತ್ತು ರಮಣೀಯವೂ ಹಾಗೂ ದುಃಖದಾಯಕವೂ ಇಲ್ಲದಂಥ ಧೂಳು, ಪರ್ವತ ಮೊದಲಾದ ಕೆಲವು ವಸ್ತುಗಳನ್ನು ಏತಕ್ಕಾಗಿ ರಚಿಸಿದೆ ? ತಾನಾಗಿಯಂತೂ ಹಾಗೆ-ಹೀಗೆಯೇ ಆಗುತ್ತವೆ ಮತ್ತು ರಚಿಸುವವನಂತೂ ಪ್ರಯೋಜನ ಸಹಿತವಾಗಿಯೇ ರಚಿಸುತ್ತಾನೆ; ಆದುದರಿಂದ ಬ್ರಹ್ಮನಿಗೆ ಸೃಷ್ಟಿಯ ಕರ್ತೃವೆಂದು ಹೇಗೆ ಹೇಳಲಾಗುತ್ತದೆ ?

ವಿಷ್ಣುವನ್ನು ಲೋಕದ ರಕ್ಷಕನೆಂದು ಹೇಳುತ್ತಾರೆ. ರಕ್ಷಕನಂತೂ ದುಃಖೋತ್ಪತ್ತಿಯ ಕಾರಣಗಳನ್ನು ಆಗಗೊಡದಿರುವುದು ಮತ್ತು ಸುಖನಾಶದ ಕಾರಣಗಳನ್ನು ಆಗಗೊಡದಿರುವಂಥ ಎರಡೇ ಕಾರ್ಯ ಮಾಡುತ್ತಾನೆ. ಆದರೆ ಜಗತ್ತಿನಲ್ಲಂತೂ ದುಃಖೋತ್ಪತ್ತಿಯ ಕಾರಣಗಳೇ ಎಲ್ಲೆಲ್ಲೂ ಕಂಡುಬರುತ್ತವೆ ಮತ್ತು ಅವುಗಳಿಂದ ಜೀವಗಳಿಗೆ ದುಃಖವೇ ಕಂಡು ಬರುತ್ತದೆ. ಕ್ಷುಧೆ-ತೃಷೆಗಳೆನಿಸುತ್ತಿವೆ, ಶೀತೋಷ್ಣಗಳಿಂದ ದುಃಖವಾಗುತ್ತದೆ, ಜೀವಗಳು ಪರಸ್ಪರರಲ್ಲಿ ದುಃಖವನ್ನುತ್ಪನ್ನ ಮಾಡುತ್ತವೆ, ಶಸ್ತ್ರಾದಿಗಳು ದುಃಖಕ್ಕೆ ಕಾರಣವಾಗುತ್ತಿವೆ, ಮತ್ತು ವಿನಷ್ಟವಾಗುವ ಅನೇಕ ಕಾರಣಗಳು

ರೂಪುಗೊಳ್ಳುತ್ತಿವೆ. ಜೀವಗಳಿಗೆ ರೋಗ, ಅಗ್ನಿ, ವಿಷ, ಶಸ್ತ್ರಾದಿ ಪರ್ಯಾಯನಾಶದ ಕಾರಣಗಳು ಕಂಡು ಬರುತ್ತಿವೆ, ಅಜೀವಗಳಲ್ಲೂ ಪರಸ್ಪರ ವಿನಷ್ಟವಾಗುವ ಕಾರಣಗಳು ಕಂಡು ಬರುತ್ತವೆ. ಹೀಗೆ ಎರಡೂ ಪ್ರಕಾರದ ರಕ್ಷಣೆಯನ್ನೇ ಮಾಡದಿದ್ದರೆ ವಿಷ್ಣುವು ರಕ್ಷಕನಾಗಿ ಏನು ಮಾಡಿದನು ?

ವಿಷ್ಣುವು ರಕ್ಷಕನೇ ಇದ್ದಾನೆ. ಕ್ಷುಧೆ-ತೃಷಾದಿಗಳಿಗಾಗಿ ಅನ್ನ-ಪಾನೀಯಗಳನ್ನು ರಚಿಸಿದ್ದಾನೆ; ಕ್ರಿಮಿಗಳಿಗೆ ಕಣ ಮತ್ತು ಕುಂಜರಕ್ಕೆ ಮಣ ತಲುಪಿಸುತ್ತಾನೆ, ಸಂಕಟದಲ್ಲಿ ಸಹಾಯ ಮಾಡುತ್ತಾನೆ. ಮೃತ್ಯುವಿನ ಕಾರಣವು ಉಪಸ್ಥಿತವಾದರೂ ಕೂಡ★ ಟಿಟ್ಟಿಭದ ಹಾಗೆ ಉದ್ಧರಿಸುತ್ತಾನೆ. ಇತ್ಯಾದಿ ಪ್ರಕಾರಗಳಿಂದ ವಿಷ್ಣುವು ರಕ್ಷಣೆ ಮಾಡುತ್ತಾನೆಂದು ಹೇಳುತ್ತಾರೆ. ಆದರೆ ಹೀಗಿದ್ದರೆ ಕ್ಷುಧೆ-ತೃಷಾದಿಗಳು ಜೀವಗಳನ್ನು ಅಧಿಕ ಬಾಧೆಗೊಳಿಸುತ್ತವೆ, ಅನ್ನ-ಪಾನೀಯಗಳು ದೊರಕುವುದಿಲ್ಲ, ಸಂಕಟ ಸಂಭವಿಸಿದ ಮೇಲೆ ಸಹಾಯ ಸಿಕ್ಕುವುದಿಲ್ಲ, ಸ್ವಲ್ಪ ಕಾರಣದಿಂದಾಗಿ ಮರಣವಾಗುತ್ತದೆ, ಅಲ್ಲಿ ವಿಷ್ಣುವಿನ ಶಕ್ತಿಯು ಹೀನವಾಯಿತೋ ಅಥವಾ ಅವನಿಗೆ ಜ್ಞಾನವೇ ಆಗಲಿಲ್ಲವೋ ? ಜಗತ್ತಿನಲ್ಲಿ ಅಧಿಕ ಜೀವಗಳು ಹೀಗೆ ದುಃಖಿಯೇ ಆಗುತ್ತಿವೆ. ಮರಣ ಹೊಂದುತ್ತಿವೆ. ಅವುಗಳನ್ನು ವಿಷ್ಣುವು ರಕ್ಷಣೆಯನ್ನೇಕೆ ಮಾಡಲಿಲ್ಲ ?

ಇದು ಜೀವಗಳ ತಮ್ಮ ಕರ್ತವ್ಯದ ಫಲವಿದೆಯೆಂದು ಹೇಳುತ್ತಾರೆ. ಆದರೆ ಯಾವ ಪ್ರಕಾರ ಶಕ್ತಿಹೀನ, ಲೋಭಿ, ಕೃತಕ ವೈದ್ಯನು ಒಬ್ಬನಿಗೆ ಸ್ವಲ್ಪ ಒಳ್ಳೆಯದಾದರೆ ನಾನು ಮಾಡಿದೆನೆಂದು ಹೇಳುತ್ತಾನೆ; ಮತ್ತು ಯಾವನಿಗೆ ಕೆಡಕಾಗುತ್ತದೆ, ಮರಣವಾಗುತ್ತದೆ ಆಗ ಇವನ ಭವಿತವ್ಯವೇ ಹೀಗಿತ್ತೆಂದು ಹೇಳುತ್ತಾನೆ. ಅದೇ ಪ್ರಕಾರ ನೀನು ಒಳ್ಳೆಯದಾದರೆ ವಿಷ್ಣುವು ಮಾಡಿದ್ದು ಮತ್ತು ಕೆಡಕಾದರೆ ಇವನ ಕರ್ತವ್ಯದ ಫಲವೆಂದು ಹೇಳುವೆ. ಈ ಪ್ರಕಾರ ಸುಳ್ಳು ಕಲ್ಪನೆಯನ್ನೇಕೆ ಮಾಡುವುದು ? ಒಳಿತು-ಕೆಡಕುಗಳೆರಡನ್ನು ವಿಷ್ಣುವು ಮಾಡಿದ್ದೆಂದು ಹೇಳು ಅಥವಾ ತನ್ನ ಕರ್ತವ್ಯದ ಫಲವೆಂದು ಹೇಳು. ವಿಷ್ಣುವು ಮಾಡಿದ್ದಾದರೆ ಅಧಿಕ ಜೀವಗಳು ದುಃಖಿ ಮತ್ತು ಶೀಘ್ರ ಸತ್ತು ಹೋಗುತ್ತಿರುವುದು ಕಂಡುಬರುತ್ತದೆ, ಆದರೆ ಇಂಥ ಕಾರ್ಯ ಮಾಡುವವನನ್ನು ರಕ್ಷಕನೆಂದು ಹೇಗೆ ಹೇಳುವುದು? ಮತ್ತು ತಮ್ಮ ಕರ್ತವ್ಯದ ಫಲವಿದ್ದರೆ ಮಾಡಿದವನು ಉಣ್ಣುತ್ತಾನೆ ಅದರಲ್ಲಿ ವಿಷ್ಣುವೇನು ರಕ್ಷಣೆ ಮಾಡುವನು ?

ವಿಷ್ಣು ತನ್ನ ಭಕ್ತರ ರಕ್ಷಣೆ ಮಾಡುತ್ತಾನೆಂದು ಹೇಳುತ್ತಾರೆ. ಆದರೆ ಹೀಗಿದ್ದರೆ ಕ್ರಿಮಿ, ಕುಂಜರಾದಿಗಳು ಭಕ್ತವಿಲ್ಲ ಅವಕ್ಕೆ ಅನ್ನಾದಿಗಳನ್ನು ತಲುಪಿಸುವಲ್ಲಿ, ಸಂಕಟದೊಳಗೆ ಸಹಾಯ ಮಾಡುವಲ್ಲಿ ಮತ್ತು ಮರಣವಾಗದಿರುವಲ್ಲಿ ವಿಷ್ಣುವಿನ ಕರ್ತವ್ಯವೆಂದು ಮನ್ನಿಸಿ ಸರ್ವರ ರಕ್ಷಕನೆಂದು ಏತಕ್ಕಾಗಿ ನಂಬುವಿರಿ, ಭಕ್ತರ ರಕ್ಷಕನೆಂದು ನಂಬಿರಿ. ಆದರೆ ಭಕ್ತರ ರಕ್ಷಕನಾಗಿ ಕೂಡ ಕಂಡುಬರುವುದಿಲ್ಲ, ಏಕೆಂದರೆ ಅಭಕ್ತರೂ ಕೂಡ ಭಕ್ತ ಪುರುಷರಿಗೆ ತೊಂದರೆಯನ್ನುಂಟು ಮಾಡುತ್ತಿರುವುದು ಕಂಡು ಬರುತ್ತದೆ.

ಕೆಲವೆಡೆ ಪ್ರಹ್ಲಾದ ಮೊದಲಾದವರಿಗೆ ಸಹಾಯಮಾಡಿದೆ. ಸಹಾಯ ಮಾಡಿದಲ್ಲಂತೂ ಹಾಗೆ ಮನ್ನಿಸು; ಆದರೆ ಪ್ರತ್ಯಕ್ಷ ಮ್ಲೇಚ್ಛ-ಮುಸಲಮಾನ ಮೊದಲಾದ ಅಭಕ್ತ ಪುರುಷರಿಂದ ಭಕ್ತ ಪುರುಷರಿಗೆ

★ ಟಿಟ್ಟಿಭವೆಂಬ ಪಕ್ಷಿಯು ಸಮುದ್ರದ ದಡದಲ್ಲಿ ವಾಸಿಸುತ್ತಿತ್ತು. ಸಮುದ್ರವು ಅದರ ಮೊಟ್ಟೆಗಳನ್ನು ತೇಲಿಸಿ ಒಯ್ಯುತ್ತಿತ್ತು. ಆಗ ಅದು ದುಃಖಿಯಾಗಿ ಗರುಡಪಕ್ಷಿಯ ಮುಖಾಂತರ ವಿಷ್ಣುವಿನಲ್ಲಿ ಪ್ರಾರ್ಥಿಸಿಕೊಳ್ಳುತ್ತದೆ, ಆಗ ವಿಷ್ಣುವು ಸಮುದ್ರದಿಂದ ಮೊಟ್ಟೆಗಳನ್ನು ಮರಳಿ ಕೊಡಿಸುತ್ತಾನೆಂಬುದಾಗಿ ಪುರಾಣಗಳಲ್ಲಿ ಕಥೆಯಿದೆ.

ತೊಂದರೆಯಾಗುತ್ತಿರುವುದನ್ನು ನೋಡಿ ಮತ್ತು ಮಂದಿರಗಳಿಗೆ ವಿಘ್ನ ಮಾಡುತ್ತಿರುವುದನ್ನು ನೋಡಿ ಅಲ್ಲಿ ಸಹಾಯ ಮಾಡದಿದ್ದರೆ ಶಕ್ತಿಹೀನನೋ ಅಥವಾ ಅರಿವಿಲ್ಲದವನೋ ? ಶಕ್ತಿಹೀನನಿದ್ದರೆ ಇವರಿಗಿಂತಲೂ ಹೀನ ಶಕ್ತಿಯ ಧಾರಕನಾದನು, ಅರಿವಿಲ್ಲದವನೆಂದರೆ ಇಷ್ಟು ಕೂಡ ಅರಿವಿಲ್ಲವೆಂದರೆ ಅವನು ಅಜ್ಞಾನಿಯಾದನು.

ಶಕ್ತಿಯೂ ಇದೆ ಮತ್ತು ತಿಳಿಯುತ್ತಾನೆ ಕೂಡ; ಆದರೆ ಇಚ್ಛೆಯು ಹೀಗೆಯೇ ಆಯಿತೆಂದು ನೀನು ಹೇಳಬಹುದು, ಹಾಗಾದರೆ ಭಕ್ತವತ್ಸಲನೆಂದು ಏತಕ್ಕಾಗಿ ಹೇಳುವುದು ?

ಈ ಪ್ರಕಾರ ವಿಷ್ಣುವನ್ನು ಲೋಕದ ರಕ್ಷಕನೆಂದು ಮನ್ನಿಸುವುದು ಸಿದ್ಧಿಸುವುದಿಲ್ಲ.

ಇನ್ನು ಮಹೇಶನು ಸಂಹಾರ ಮಾಡುತ್ತಾನೆಂದು ಅವರು ಹೇಳುತ್ತಾರೆ, ಆದರೆ ಮಹೇಶನು ಯಾವಾಗಲೂ ಸಂಹಾರ ಮಾಡುತ್ತಾನೆಯೋ ಅಥವಾ ಮಹಾಪ್ರಲಯವಾದಾಗ ಮಾತ್ರ ಮಾಡುತ್ತಾನೆಯೋ ? ಯಾವಾಗಲೂ ಮಾಡುತ್ತಿದ್ದರೆ ಯಾವ ಪ್ರಕಾರ ರಕ್ಷಣೆ ಮಾಡುವುದರಿಂದ ವಿಷ್ಣುವಿನ ಸ್ತುತಿ ಮಾಡಿದಿರಿ; ಅದೇ ಪ್ರಕಾರ ಸಂಹಾರ ಮಾಡುವುದರಿಂದ ಅವನ ನಿಂದೆ ಮಾಡಿರಿ. ಏಕೆಂದರೆ ರಕ್ಷಣೆ ಮತ್ತು ಸಂಹಾರಗಳು ಪ್ರತಿಪಕ್ಷಿಯಿವೆ.

ಮತ್ತು ಇವನು ಸಂಹಾರ ಹೇಗೆ ಮಾಡುತ್ತಾನೆ ? ಯಾವ ಪ್ರಕಾರ ಪುರುಷನು ಕೈಗಳಿಂದ ಒಬ್ಬನನ್ನು ಸಾಯಿಸುತ್ತಾನೆ ಅಥವಾ ಹೇಳಿ ಸಾಯಿಸುತ್ತಾನೆ; ಅದೇ ಪ್ರಕಾರ ಮಹೇಶನು ತನ್ನ ಅವಯವಗಳಿಂದ ಸಂಹಾರ ಮಾಡುತ್ತಾನೆಯೋ ಅಥವಾ ಆಜ್ಞೆಯಿಂದ ಸಾಯಿಸುತ್ತಾನೆಯೋ ? ಇಡೀ ಜಗತ್ತಿನಲ್ಲಿ ಬಹಳಷ್ಟು ಜೀವಗಳ ಸಂಹಾರವಂತೂ ಕ್ಷಣ-ಕ್ಷಣದಲ್ಲಿ ಆಗುತ್ತದೆ, ಇದನ್ನು ಯಾವ-ಯಾವ ಅವಯವಗಳಿಂದ ಮತ್ತು ಯಾರು-ಯಾರಿಗೆ ಆಜ್ಞೆಯಿತ್ತು ಯುಗಪತ್ (ಒಮ್ಮೆಲೆ) ಹೇಗೆ ಸಂಹಾರ ಮಾಡುತ್ತಾನೆ ? ಮತ್ತು ಮಹೇಶನಂತೂ ಇಚ್ಛೆಯನ್ನೇ ಮಾಡುತ್ತಾನೆ, ಅವನ ಇಚ್ಛೆಯಿಂದ ತಾನಾಗಿಯೇ ಅವುಗಳ ಸಂಹಾರವಾಗುತ್ತದೆಂದರೆ ಅವನಿಗೆ ಯಾವಾಗಲೂ ಕೊಲ್ಲುವ ರೂಪದ ದುಷ್ಟ ಪರಿಣಾಮವೇ ಇರುತ್ತಿರಬೇಕು. ಮತ್ತು ಅನೇಕ ಜೀವಗಳನ್ನು ಯುಗಪತ್ ಕೊಲ್ಲುವ ಇಚ್ಛೆಯು ಹೇಗಾಗುತ್ತಿರಬೇಕು ? ಮತ್ತು ಮಹಾ ಪ್ರಲಯವಾದ ಮೇಲೆ ಸಂಹಾರ ಮಾಡುತ್ತಾನೆಂದರೆ ಪರಬ್ರಹ್ಮನ ಇಚ್ಛೆಯಾದ ಮೇಲೆ ಮಾಡುತ್ತಾನೆಯೋ ಅಥವಾ ಅವನ ಇಚ್ಛೆಯಿಲ್ಲದೆ ಮಾಡುತ್ತಾನೆಯೋ ? ಇಚ್ಛೆಯಾದ ಮೇಲೆ ಮಾಡುತ್ತಾನೆಂದರೆ ಪರಬ್ರಹ್ಮನಿಗೆ ಎಲ್ಲದರ ಪ್ರಲಯ ಮಾಡುವ ಕ್ರೋಧದ ಇಚ್ಛೆಯಾದರೂ ಹೇಗೆ ಆಯಿತು ? ಏಕೆಂದರೆ ಯಾವುದೇ ಕಾರಣವಿಲ್ಲದೆ ನಾಶಮಾಡುವ ಇಚ್ಛೆಯಾಗುವುದಿಲ್ಲ ಮತ್ತು ನಾಶಮಾಡುವ ಆ ಇಚ್ಛೆಯ ಹೆಸರೇ ಕ್ರೋಧವಿದೆ. ಅದರ ಕಾರಣವನ್ನಾದರೂ ಹೇಳು ?

ಪರಮಬ್ರಹ್ಮನು ಈ ಆಟ ರಚಿಸಿದ್ದನು, ಪುನಃ ದೂರಮಾಡಿ ಬಿಟ್ಟನು, ಇದಕ್ಕೆ ಕಾರಣವೇನೂ ಇರಲಿಲ್ಲವೆಂದು ನೀನು ಹೇಳುವೆ. ಆದರೆ ಆಟ ರಚಿಸುವವನಿಗೆ ಕೂಡ ಆಟವು ಇಷ್ಟವೆನಿಸಿದಾಗ ರಚಿಸುತ್ತಾನೆ, ಅನಿಷ್ಟವೆನಿಸಿದಾಗ ದೂರ ಮಾಡುತ್ತಾನೆ. ಅವನಿಗೆ ಈ ಜಗತ್ತು ಇಷ್ಟಾನಿಷ್ಟವೆನಿಸುತ್ತಿದ್ದರೆ ಅವನಿಗೆ ಲೋಕದಿಂದ ರಾಗ-ದ್ವೇಷಗಳಂತೂ ಆದವು. ಬ್ರಹ್ಮನ ಸ್ವರೂಪವು ಸಾಕ್ಷೀಭೂತವೆಂದು ಏತಕ್ಕಾಗಿ ಹೇಳುವಿರಿ; ಸ್ವಯಮೇವ ಹೇಗಾಗುತ್ತದೆ ಹಾಗೆ ನೋಡುತ್ತ-ತಿಳಿಯುತ್ತಿರುವುದರ ಹೆಸರು ಸಾಕ್ಷೀಭೂತವಿದೆ. ಇಷ್ಟಾನಿಷ್ಟವೆಂದು ಮನ್ನಿಸಿ ಉತ್ಪನ್ನ ಮಾಡಿದರೆ, ನಷ್ಟ ಮಾಡಿದರೆ ಅದನ್ನು ಸಾಕ್ಷೀಭೂತವೆಂದು ಹೇಗೆ ಹೇಳುವರು ? ಏಕೆಂದರೆ ಸಾಕ್ಷೀಭೂತವಿರುವುದು ಮತ್ತು ಕರ್ತಾ-ಹರ್ತಾ ಆಗುವುದು ಇವೆರಡೂ ಪರಸ್ಪರ ವಿರೋಧಿಯಾಗಿವೆ; ಒಬ್ಬನಿಗೆ ಎರಡೂ ಸಂಭವಿಸುವುದಿಲ್ಲ.

ಮೊದಲಂತೂ ಪರಮಬ್ರಹ್ಮನಿಗೆ 'ನಾನು ಒಬ್ಬನಿದ್ದೇನೆ ಅದು ಹಲವಾಗಲೆ'ಂಬ ಇಚ್ಛೆಯಾದಾಗ ಹಲವಾದನು.ಈಗ 'ನಾನು ಹಲವಿದ್ದೇನೆ ಅದು ಕಡಿಮೆಯಾಗಲೆ'ಂಬ ಇಚ್ಛೆಯಾಗಿರಬೇಕು. ಯಾವ ಪ್ರಕಾರ ಓರ್ವನು ಮೂರ್ಖತನದಿಂದ ಕಾರ್ಯಮಾಡಿ ಪುನಃ ಆ ಕಾರ್ಯವನ್ನು ದೂರಮಾಡಲಪೇಕ್ಷಿಸುವನು ; ಅದೇ ಪ್ರಕಾರ ಪರಮ ಬ್ರಹ್ಮನು ಕೂಡ ಹಲವಾಗಿ ಒಂದಾಗುವ ಇಚ್ಛೆ ಮಾಡಿರುವುದು ಅದು ಮೂರ್ಖತನದಿಂದ ಹಲವಾಗುವ ಕಾರ್ಯ ಮಾಡಿರಬೇಕೆಂದು ತಿಳಿದು ಬರುತ್ತದೆ, ಭವಿಷ್ಯಜ್ಞಾನದಿಂದ ಮಾಡುತ್ತಿದ್ದರೆ ಅದನ್ನು ದೂರಮಾಡುವ ಇಚ್ಛೆ ಏತಕ್ಕಾಗಿ ಆಗುತ್ತಿತ್ತು ?

ಪರಮಬ್ರಹ್ಮನ ಇಚ್ಛೆಯಿಲ್ಲದೆಯೇ ಮಹೇಶನು ಸಂಹಾರ ಮಾಡುತ್ತಿದ್ದರೆ ಇವನು ಪರಮಬ್ರಹ್ಮನ ಮತ್ತು ಬ್ರಹ್ಮನ ವಿರೋಧಿಯಾದನು.

ಈ ಮಹೇಶನು ಲೋಕದ ಸಂಹಾರವನ್ನು ಹೇಗೆ ಮಾಡುತ್ತಾನೆ ? ತನ್ನ ಅವಯವಗಳಿಂದ ಸಂಹಾರ ಮಾಡುತ್ತಾನೆಯೋ ಅಥವಾ ಇಚ್ಛೆಯಾದ ಮೇಲೆ ತಾನಾಗಿಯೇ ಸಂಹಾರವಾಗುತ್ತದೆಯೋ ? ತನ್ನ ಅವಯವಗಳಿಂದ ಸಂಹಾರಮಾಡುತ್ತಿದ್ದರೆ ಎಲ್ಲರ ಸಂಹಾರ ಒಟ್ಟಿಗೆ ಹೇಗೆ ಮಾಡುತ್ತಾನೆ ? ಮತ್ತು ಇವನ ಇಚ್ಛೆಯಾಗುವುದರಿಂದ ತಾನಾಗಿಯೇ ಸಂಹಾರವಾಗುತ್ತಿದ್ದರೆ ಇಚ್ಛೆಯನ್ನಂತೂ ಪರಬ್ರಹ್ಮನು ಮಾಡಿದ್ದನು, ಇವನೇನು ಸಂಹಾರ ಮಾಡಿದನು?

**ಪ್ರಶ್ನೆ :-** ಸಂಹಾರವಾದ ಮೇಲೆ ಸಮಸ್ತ ಲೋಕದಲ್ಲಿರುವ ಜೀವ-ಅಜೀವಗಳೆಲ್ಲವು ಎಲ್ಲಿ ಹೋದವು?

**ಉತ್ತರ :-** ಭಕ್ತವಿದ್ದ ಜೀವಗಳಂತೂ ಬ್ರಹ್ಮನಲ್ಲಿ ಸೇರಿದರೆ ಅನ್ಯ ಜೀವಗಳು ಮಾಯೆಯಲ್ಲಿ ಸೇರಿದವು, ಮಾಯೆಯು ಬ್ರಹ್ಮನಿಂದ ಬೇರೆಯಿರುತ್ತದೆಯೋ ಅಥವಾ ಅನಂತರ ಒಂದಾಗಿ ಹೋಗುತ್ತದೆಯೋ ? ಬೇರೆಯಿರುತ್ತಿದ್ದರೆ ಮಾಯೆ ಕೂಡ ಬ್ರಹ್ಮನಂತೆ ನಿತ್ಯವಾಯಿತು, ಆಗ ಬ್ರಹ್ಮನು ಅದ್ವೈತ ಉಳಿಯಲಿಲ್ಲ. ಇನ್ನು ಮಾಯೆಯು ಬ್ರಹ್ಮನಲ್ಲಿ ಒಂದಾಗಿ ಹೋಗುತ್ತಿದ್ದರೆ ಮಾಯೆಯಲ್ಲಿ ಸೇರಿ ಹೋದ ಜೀವಗಳು ಕೂಡ ಮಾಯೆಯೊಡನೆ ಬ್ರಹ್ಮನಲ್ಲಿ ಸೇರಿದರೆ ಮಹಾಪ್ರಲಯವಾದ ಮೇಲೆ ಎಲ್ಲ ಜೀವಗಳು ಪರಮಬ್ರಹ್ಮನಲ್ಲಿ ಸೇರುವುದು ನಿಶ್ಚಿತವಾಯಿತು, ಎಂದ ಮೇಲೆ ಮೋಕ್ಷದ ಉಪಾಯವನ್ನೇಕೆ ಮಾಡುವುದು ?

ಇನ್ನು ಮಾಯೆಯಲ್ಲಿ ಸೇರಿಹೋದ ಜೀವಗಳೇ ಪುನಃ ಲೋಕರಚನೆಯಾದ ಮೇಲೆ ಲೋಕದಲ್ಲಿ ಬರುತ್ತವೆಯೋ ಅಥವಾ ಬ್ರಹ್ಮನಲ್ಲಿ ಸೇರಿಹೋಗಿರುವುದರಿಂದ ನವೀನ ಉತ್ಪನ್ನವಾಗುವವೋ ? ಅವೇ ಬರುತ್ತಿದ್ದರೆ ಬೇರೆ-ಬೇರೆ ಇರುತ್ತವೆಂದು ತಿಳಿದು ಬರುತ್ತದೆ, ಆದರೆ ಸೇರಿದುವೆಂದೇಕೆ ಹೇಳುತ್ತೀರಿ ? ಮತ್ತು ನವೀನವಾಗಿ ಉತ್ಪನ್ನವಾದರೆ ಜೀವದ ಅಸ್ತಿತ್ವವು ಕೆಲಕಾಲದವರೆಗೆ ಇದ್ದಂತಾಯಿತು, ಹಾಗಾದರೆ ಮುಕ್ತವಾಗುವ ಉಪಾಯವನ್ನು ಏತಕ್ಕಾಗಿ ಮಾಡುವುದು ?

ಪೃಥ್ವಿ ಮೊದಲಾದವು ಮಾಯೆಯಲ್ಲಿ ಬೆರೆಯುತ್ತವೆಂದರೆ ಮಾಯೆಯು ಅಮೂರ್ತಿಕವಾದ ಸಚೇತನವಿದೆಯೋ ಅಥವಾ ಮೂರ್ತಿಕ ಅಚೇತನವಿದೆಯೋ ? ಅಮೂರ್ತಿಕ ಸಚೇತನವಿದ್ದರೆ ಅಮೂರ್ತಿಕದಲ್ಲಿ ಮೂರ್ತಿಕ ಅಚೇತನವು ಹೇಗೆ ಬೆರೆಯುವುದು ? ಮತ್ತು ಮೂರ್ತಿಕ ಅಚೇತನವಿದ್ದರೆ ಇದು ಬ್ರಹ್ಮನಲ್ಲಿ ಸೇರುವುದೋ ಅಥವಾ ಇಲ್ಲವೋ ಸೇರುತ್ತಿದ್ದರೆ ಇದರ ಸೇರುವಿಕೆಯಿಂದ ಬ್ರಹ್ಮನು ಕೂಡ ಮೂರ್ತಿಕ ಅಚೇತನದಿಂದ ಮಿಶ್ರಿತನಾದನು. ಮತ್ತು ಸೇರುವುದಿಲ್ಲವೆಂದರೆ ಅದ್ವೈತತೆಯು ಉಳಿಯಲಿಲ್ಲ. ಇನ್ನು ಈ ಎಲ್ಲ ಅಮೂರ್ತಿಕಗಳು

ಅಚೇತನವಾಗಿ ಹೋಗುತ್ತವೆಂದರೆ ಆತ್ಮ ಹಾಗೂ ಶರೀರಾದಿಗಳ ಏಕತೆಯಾಯಿತು, ಆದರೆ ಈ ಸಂಸಾರಿಗಳು ಏಕತೆಯನ್ನೇ ಮನ್ನಿಸುತ್ತಾರೆ, ಇವರನ್ನು ಅಜ್ಞಾನಿಯೆಂದೇಕೆ ಹೇಳುವುದು ?

ಜಗತ್ತಿನ ಪ್ರಲಯವಾದ ಮೇಲೆ ಮಹೇಶನ ಪ್ರಲಯವಾಗುತ್ತದೆಯೋ ಅಥವಾ ಇಲ್ಲವೋ ? ಆಗುತ್ತಿದ್ದರೆ ಒಟ್ಟಿಗೆ ಆಗುತ್ತಿದೆಯೋ ಅಥವಾ ಹಿಂದೆ-ಮುಂದೆ ಆಗುತ್ತದೆಯೋ ? ಒಟ್ಟಿಗೆ ಆಗುತ್ತಿದ್ದರೆ ತಾನು ನಷ್ಟವಾಗುತ್ತಿರುವಾಗ ಜಗತ್ತನ್ನು ಹೇಗೆ ನಷ್ಟಮಾಡುವನು ? ಇನ್ನು ಹಿಂದೆ-ಮುಂದೆ ಆಗುತ್ತಿದ್ದರೆ ಮಹೇಶನು ಜಗತ್ತನ್ನು ನಷ್ಟಮಾಡಿ ತಾನೆಲ್ಲಿ ಉಳಿದನು ? ತಾನು ಕೂಡ ಜಗತ್ತಿನಲ್ಲಿಯೇ ಇದ್ದನಲ್ಲವೇ ?

ಈ ಪ್ರಕಾರ ಮಹೇಶನನ್ನು ಸೃಷ್ಟಿಯ ಸಂಹಾರಕರ್ತೃವೆಂದು ಮನ್ನಿಸುವುದು ಅದು ಅಸಂಭವವಿದೆ.

ಈ ಪ್ರಕಾರದಿಂದ ಹಾಗೂ ಅನ್ಯ ಅನೇಕ ಪ್ರಕಾರದಿಂದ ಬ್ರಹ್ಮ, ವಿಷ್ಣು, ಮಹೇಶರನ್ನು ಸೃಷ್ಟಿಯ ಉತ್ಪಾದಕರು, ರಕ್ಷಕರು ಮತ್ತು ಸಂಹಾರ ಮಾಡುವವರೆಂದು ಮನ್ನಿಸುವುದು ಸಿದ್ಧವಾಗುವುದಿಲ್ಲ, ಆದುದರಿಂದ ಜಗತ್ತನ್ನು ಅನಾದಿನಿಧನವೆಂದು ಮನ್ನಿಸಬೇಕಾಗುವುದು.

## ಲೋಕದ ಅನಾದಿನಿಧನತೆಯ ಪುಷ್ಟಿ :-

ಈ ಜಗತ್ತಿನಲ್ಲಿರುವ ಜೀವಾದಿ ಪದಾರ್ಥಗಳೆಲ್ಲವು ಭಿನ್ನ-ಭಿನ್ನವಿದ್ದು ಅನಾದಿನಿಧನವಿವೆ; ಅವುಗಳ ಅವಸ್ಥೆಯ ಪರಿವರ್ತನವಾಗುತ್ತಿರುವ ಅಪೇಕ್ಷೆಯಿಂದ ಉತ್ಪನ್ನ-ವಿನಷ್ಟವಾಗುತ್ತವೆಂದು ಹೇಳಲಾಗುತ್ತದೆ. ಮತ್ತು ಆ ಸ್ವರ್ಗ, ನರಕ, ದ್ವೀಪಾದಿಗಳೆಲ್ಲವು ಅನಾದಿಯಿಂದ ಇದೇ ಪ್ರಕಾರವೇ ಇವೆ ಮತ್ತು ಸದಾಕಾಲ ಇದೇ ಪ್ರಕಾರ ಉಳಿಯುವವು.

ರಚಿಸದೆಯೇ ಇಂಥ ಆಕಾರಾದಿಗಳು ಹೇಗಾದವು ? ಅವು ಆಗಿವೆಯೆಂದ ಮೇಲೆ ರಚಿಸಿದ ನಂತರವೇ ಆಗಿವೆಯೆಂದು ನೀನು ಹೇಳುವೆ. ಆದರೆ ಹಾಗೆ ಇಲ್ಲ, ಏಕೆಂದರೆ ಅನಾದಿಯಿಂದಲೇ ಅವು ಕಂಡು ಬರುತ್ತಿರುವಲ್ಲಿ ತರ್ಕವೇತರದು ? ಯಾವ ಪ್ರಕಾರ ಪರಮಬ್ರಹ್ಮನ ಸ್ವರೂಪವು ಅನಾದಿನಿಧನವೆಂದು ನೀನು ಮನ್ನಿಸುವೆ ಅದೇ ಪ್ರಕಾರ ಆ ಜೀವಾದಿಗಳನ್ನು ಹಾಗೂ ಸ್ವರ್ಗಾದಿಗಳನ್ನು ಅನಾದಿನಿಧನವೆಂದು ಮನ್ನಿಸುತ್ತೇವೆ. ಜೀವಾದಿಗಳು ಹಾಗೂ ಸ್ವರ್ಗಾದಿಗಳು ಹೇಗಾದುವೆಂದು ನೀನು ಕೇಳಿದರೆ ಪರಮಬ್ರಹ್ಮನು ಹೇಗಾದನೆಂದು ನಾವು ಕೇಳುತ್ತೇವೆ. ಇವುಗಳ ರಚನೆಯನ್ನು ಹೀಗೆ ಯಾರು ಮಾಡಿದರೆಂದು ನೀನು ಕೇಳಿದರೆ ಪರಮಬ್ರಹ್ಮನನ್ನು ಹೀಗೆ ಯಾರು ಮಾಡಿದರೆಂದು ನಾವು ಕೇಳುತ್ತೇವೆ. ಪರಮ ಬ್ರಹ್ಮನು ಸ್ವಯಂಸಿದ್ಧನಿದ್ದಾನೆಂದು ನೀನು ಹೇಳಿದರೆ ಜೀವಾದಿಗಳು ಹಾಗೂ ಸ್ವರ್ಗಾದಿಗಳು ಸ್ವಯಂಸಿದ್ಧವಿವೆಯೆಂದು ನಾವು ಹೇಳುತ್ತೇವೆ. ಇವುಗಳಲ್ಲಿ ಮತ್ತು ಪರಮಬ್ರಹ್ಮನಲ್ಲಿ ಸಮಾನತೆಯು ಹೇಗೆ ಸಂಭವವೆಂದು ನೀನು ಕೇಳಿದರೆ ಸಂಭಾವನೆಯಲ್ಲಿರುವ ದೋಷವನ್ನು ತಿಳಿಸು. ಜಗತ್ತನ್ನು ನವೀನ ಉತ್ಪನ್ನ ಮಾಡುವಲ್ಲಿ ಅದರ ನಾಶಮಾಡುವಲ್ಲಿ ಅನೇಕ ದೋಷಗಳನ್ನು ನಾವು ತೋರಿಸಿದ್ದೇವೆ. ಜಗತ್ತನ್ನು ಅನಾದಿನಿಧನವೆಂದು ಮನ್ನಿಸುವಲ್ಲಿರುವ ದೋಷವನ್ನು ನೀನು ತೋರಿಸಿಕೊಡು.

ನೀನು ಮನ್ನಿಸುತ್ತಿರುವ ಪರಮಬ್ರಹ್ಮನು ಬೇರೆ ಯಾರೂ ಇಲ್ಲ; ಈ ಸಂಸಾರದಲ್ಲಿರುವ ಜೀವರುಗಳೇ ಯಥಾರ್ಥಜ್ಞಾನದಿಂದ ಮೋಕ್ಷಮಾರ್ಗವನ್ನು ಸಾಧಿಸುವುದರಿಂದ ಸರ್ವಜ್ಞವೀತರಾಗರಾಗುತ್ತಾರೆ.

**ಪ್ರಶ್ನೆ :-** ಜೀವಗಳು ಭಿನ್ನ-ಭಿನ್ನವಿದ್ದು ಅನಾದಿನಿಧನವಿವೆಯೆಂದು ನೀವು ಹೇಳುತ್ತೀರಿ; ಆದರೆ

ಮುಕ್ತವಾದನಂತರ ನಿರಾಕಾರವಾಗುತ್ತವೆಂದ ಮೇಲೆ ಅಲ್ಲಿ ಭಿನ್ನ-ಭಿನ್ನತೆಯು ಹೇಗೆ ಸಂಭವಿಸುತ್ತದೆ ?

**ಉತ್ತರ :-** ಮುಕ್ತವಾದ ನಂತರ ಸರ್ವಜ್ಞರಿಗೆ ಕಾಣುತ್ತಾರೋ ಅಥವಾ ಇಲ್ಲವೋ ? ಕಾಣುತ್ತಿದ್ದರೆ ಸ್ವಲ್ಪ ಆಕಾರವು ಕಾಣುತ್ತಲೇ ಇರಬೇಕು. ಆಕಾರವಿಲ್ಲದೆ ಏನನ್ನು ನೋಡಿದರು ? ಮತ್ತು ಕಾಣದಿದ್ದರೆ ವಸ್ತುವೇ ಇಲ್ಲ ಅಥವಾ ಸರ್ವಜ್ಞನಿಲ್ಲ. ಆದುದರಿಂದ ಇಂದ್ರಿಯ ಜ್ಞಾನಗಮ್ಯ ಆಕಾರವಿಲ್ಲದ ಅಪೇಕ್ಷೆಯಿಂದ ನಿರಾಕಾರರಿದ್ದಾರೆ ಮತ್ತು ಸರ್ವಜ್ಞ ಜ್ಞಾನಗಮ್ಯವಿರುವುದರಿಂದ ಆಕಾರವುಳ್ಳವರಿದ್ದಾರೆ. ಆಕಾರವುಳ್ಳವರೆಂದು ನಿಶ್ಚಿತವಾದನಂತರ ಭಿನ್ನ-ಭಿನ್ನರಿರುವಲ್ಲಿ ತಗಲುವ ದೋಷವಾದರೂ ಏನು ? ಮತ್ತು ಹೇಗೆ ಗೋದಿಯಕಾಳುಗಳು ಭಿನ್ನ-ಭಿನ್ನವಿದ್ದು ಅವುಗಳ ಜಾತಿ ಒಂದೇ ಇದೆ ಹಾಗೆ ಜಾತಿಯ ಅಪೇಕ್ಷೆಯಿಂದ ಒಂದೆಂದು ಹೇಳಿದರೆ ನಾವೂ ಮನ್ನಿಸುತ್ತೇವೆ. ಈ ಪ್ರಕಾರ ಒಂದೆಂದು ಮನ್ನಿಸಿದರೆ ಯಾವುದೇ  ದೋಷವಿಲ್ಲ.

ಹೀಗೆ ಲೋಕದಲ್ಲಿರುವ ಎಲ್ಲ ಪದಾರ್ಥಗಳು ಅಕೃತ್ರಿಮವೂ, ಭಿನ್ನ-ಭಿನ್ನವೂ, ಅನಾದಿನಿಧನವೂ ಆಗಿವೆಯೆಂದು ಮನ್ನಿಸಬೇಕು. ವ್ಯರ್ಥವಾಗಿ ಭ್ರಾಂತಿಯಿಂದ ಸತ್ಯಾಸತ್ಯದ ನಿರ್ಣಯ ಮಾಡದಿದ್ದರೆ ತಮ್ಮ ಶ್ರದ್ಧೆಯ ಫಲವನ್ನು ತಾವೇ ಅನುಭವಿಸಬೇಕಾಗುವುದೆಂಬುದನ್ನು ನೀನು ತಿಳಿಯಬೇಕು.

## ಬ್ರಹ್ಮನಿಂದ ಕುಲಪ್ರವೃತ್ತಿ ಮೊದಲಾದವುಗಳ ಪ್ರತಿಷೇಧ :-

ಬ್ರಹ್ಮನಿಂದ ಪುತ್ರ-ಪೌತ್ರಾದಿಗಳ ರೂಪದಿಂದ ಕುಲಪರಂಪರೆಯನ್ನು ಅವರೇ ಹೇಳುತ್ತಾರೆ. ಮತ್ತು ಕುಲಗಳಲ್ಲಿ ರಾಕ್ಷಸ, ಮನುಷ್ಯ, ದೇವ, ತಿರ್ಯಂಚಗಳ ಪರಸ್ಪರ ಪ್ರಸೂತಿ ಭೇದ ತಿಳಿಸುತ್ತಾರೆ. ಅಲ್ಲಿ ದೇವನಿಂದ ಮನುಷ್ಯ, ಮನುಷ್ಯನಿಂದ ದೇವ ಮತ್ತು ೧ತಿರ್ಯಂಚದಿಂದ ಮನುಷ್ಯ ಇತ್ಯಾದಿ-ಯಾವುದೇ ತಾಯಿ ಯಾವುದೇ ತಂದೆಯಿಂದ ಯಾವುದೇ ಪುತ್ರ-ಪುತ್ರಿಯ ಉತ್ಪನ್ನವಾಗುವುದನ್ನು ಹೇಳುತ್ತಾರೆ ಅದು ಹೇಗೆ ಸಂಭವವಿದೆ ?

ಮನಸ್ಸಿನಿಂದ, ಪವನಾದಿಗಳಿಂದ ಹಾಗೂ ವೀರ್ಯದ ವಾಸನೆ ನೋಡುವುದರಿಂದ ಪ್ರಸೂತಿಯಾಗುವುದನ್ನು ಹೇಳುತ್ತಾರೆ ಅದು ಪ್ರತ್ಯಕ್ಷ ವಿರುದ್ಧವಾಗಿ ಕಂಡು ಬರುತ್ತದೆ. ಹೀಗಾಗುವುದರಿಂದ ಪುತ್ರ-ಪೌತ್ರಾದಿಗಳ ನಿಯಮವು ಹೇಗೆ ಉಳಿಯುವುದು ? ಮತ್ತು ದೊಡ್ಡ-ದೊಡ್ಡ ಮಹಾತ್ಮರನ್ನು ಬೇರೆ-ಬೇರೆ ತಂದೆ-ತಾಯಿಗಳಿಂದ ಆದುದನ್ನು ಹೇಳುತ್ತಾರೆ. ಆದರೆ ಮಹಾಪುರುಷರು ಕುಶೀಲ ತಂದೆ-ತಾಯಿಗಳಿಂದ ಹೇಗೆ ಉತ್ಪನ್ನರಾಗುವರು ? ಇದಂತೂ ಲೋಕದಲ್ಲಿ ಕಲಂಕವಿದೆ. ಹೀಗೆ ಹೇಳಿಯೂ ಕೂಡ ಅವರನ್ನು ಮಹಾಪುರುಷರೆಂದು ಏತಕ್ಕಾಗಿ ಹೇಳುತ್ತಾರೆ ?

ಅಲ್ಲದೆ ಮಾಲಿನ್ಯದಿಂದ ಗಣೇಶನ ಉತ್ಪತ್ತಿಯನ್ನು ಹೇಳುತ್ತಾರೆ. ಮತ್ತು ಒಬ್ಬನ ಅವಯವವನ್ನು ಇನ್ನೊಬ್ಬರಿಗೆ ಸೇರಿಸಿದುದನ್ನು ಹೇಳುತ್ತಾರೆ. ಇತ್ಯಾದಿ ಅನೇಕ ಪ್ರತ್ಯಕ್ಷ ವಿರುದ್ಧವಾದವುಗಳನ್ನು ಹೇಳುತ್ತಾರೆ.

## ಅವತಾರ ಮೀಮಾಂಸೆ :-

ಇಪ್ಪತ್ತಾನ್ಲುಕ್★ ಅವತಾರಗಳಾದುವೆಂದು ಹೇಳುತ್ತಾರೆ; ಅವುಗಳಲ್ಲಿ ಕೆಲವನ್ನು ಪೂರ್ಣಾವತಾರವೆಂದು

★ ೧) ಸನತ್ಕುಮಾರ, ೨) ಶೂಕರಾವತಾರ, ೩) ದೇವರ್ಷಿನಾರದ, ೪) ನರ-ನಾರಾಯಣ, ೫) ಕಪಿಲ, ೬) ದತ್ತಾತ್ರಯ, ೭) ಯಜ್ಞಪುರುಷ, ೮) ವೃಷಭಾವತಾರ, ೯) ಪೃಥು ಅವತಾರ, ೧೦) ಮತ್ಸ್ಯ, ೧೧) ಕಚ್ಛಪ, ೧೨) ಧನ್ವಂತರಿ, ೧೩) ಮೋಹಿನಿ, ೧೪) ನೃಸಿಂಹಾವತಾರ, ೧೫) ವಾಮನ, ೧೬) ಪರಶುರಾಮ, ೧೭) ವ್ಯಾಸ, ೧೮) ಹಂಸ, ೧೯) ರಾಮಾವತಾರ, ೨೦) ಕೃಷ್ಣಾವತಾರ, ೨೧) ಹಯಗ್ರೀವ, ೨೨) ಹರಿ, ೨೩) ಬುದ್ಧ ಮತ್ತು ೨೪) ಕಲ್ಕಿಯೆಂಬ ಇಪ್ಪತ್ತಾನ್ಲುಕ್ಕ ಅವತಾರಗಳನ್ನು ಮನ್ನಿಸಲಾಗುತ್ತದೆ.

ಕೆಲವನ್ನು ಅಂಶಾವತಾರವೆಂದು ಹೇಳುತ್ತಾರೆ. ಆದರೆ ಪೂರ್ಣಾವತಾರವಾದಾಗ ಬ್ರಹ್ಮನು ಉಳಿದೆಡೆಯಲ್ಲಿ ವ್ಯಾಪಿಸಿಕೊಂಡಿದ್ದನೋ ಅಥವಾ ಇಲ್ಲವೋ ? ವ್ಯಾಪಿಸಿಕೊಂಡಿದ್ದರೆ ಈ ಅವತಾರಗಳನ್ನು ಪೂರ್ಣಾವತಾರವೆಂದೇಕೆ ಹೇಳುತ್ತೀರಿ ? ಒಂದು ವೇಳೆ ವ್ಯಾಪಕನಿಲ್ಲದಿದ್ದರೆ ಬ್ರಹ್ಮನು ಅವತಾರದಷ್ಟೇ ಉಳಿದನು. ಮತ್ತು ಬ್ರಹ್ಮನ ಅಂಶವನ್ನಂತೂ ಎಲ್ಲೆಡೆಗೆ ಹೇಳುವಿರಿ, ಆದರೆ ಅಂಶಾವತಾರವಾದಾಗ ಇವುಗಳಲ್ಲಾದ ಅಧಿಕತೆಯೇನು ? ಕ್ಷುಲ್ಲಕ ಕಾರ್ಯದ ಸಲುವಾಗಿ ಬ್ರಹ್ಮನು ಸ್ವಯಂ ಅವತಾರ ಧಾರಣ ಮಾಡಿದನೆಂದು ಹೇಳುತ್ತಾರೆ, ಆದರೆ ಅವತಾರ ಧಾರಣ ಮಾಡಿದಲ್ಲದೆ ಆ ಕಾರ್ಯಮಾಡುವ ಶಕ್ತಿಯು ಬ್ರಹ್ಮನಲ್ಲಿರಲಿಲ್ಲವೆಂದು ತಿಳಿದು ಬರುತ್ತದೆ; ಏಕೆಂದರೆ ಅಲ್ಪ ಪರಿಶ್ರಮದಿಂದಾಗುವ ಕಾರ್ಯದಲ್ಲಿ ಅಧಿಕ ಪರಿಶ್ರಮವನ್ನು ಏತಕ್ಕಾಗಿ ಮಾಡುವುದು ?

ಇನ್ನು ಅವತಾರಗಳಲ್ಲಿ ಮತ್ಸ್ಯ, ಕಚ್ಛಪ ಮೊದಲಾದ ಅವತಾರಗಳಾದದ್ದು ಸ್ವಲ್ಪ ಕಾರ್ಯಮಾಡುವ ಸಲುವಾಗಿ ಕೀಳು ತಿರ್ಯಂಚ ಪರ್ಯಾಯರೂಪವಾಗುವುದು ಹೇಗೆ ಸಂಭವವಿದೆ ? ಮತ್ತು ಪ್ರಹ್ಲಾದನ ಸಲುವಾಗಿ ನರಸಿಂಹಾವತಾರವಾದನು, ಆದರೆ ಹರಿಣಾಂಕುಶನಿಗೆ ಹಾಗೇಕೆ ಆಗಗೊಟ್ಟನು, ಮತ್ತು ಅದೆಷ್ಟೋ ಕಾಲದವರೆಗೆ ತನ್ನ ಭಕ್ತನಿಗೆ ದುಃಖವನ್ನೇಕೆ ಕೊಡಿಸಿದನು ? ಇಂಥ ರೂಪನ್ನು ಏತಕ್ಕಾಗಿ ಧರಿಸಿದನು ? ನಾಭಿರಾಜನಿಂದ ವೃಷಭಾವತಾರವಾದುದನ್ನು ಹೇಳುತ್ತಾರೆ, ಅದು ನಾಭಿಗೆ ಪುತ್ರತ್ವದ ಸುಖವನ್ನುತ್ಪನ್ನಮಾಡುವುದಕ್ಕೆ ಅವತಾರ ಧಾರಣ ಮಾಡಿದನು. ಅದರ ಸಲುವಾಗಿ ಘೋರ ತಪಶ್ಚರ್ಣವನ್ನೇಕೆ ಮಾಡಿದನು ? ಅವರಿಗಂತೂ ಯಾವ ಸಾಧ್ಯವೇ ಇದ್ದಿರಲಿಲ್ಲ. ಜಗತ್ತಿಗೆ ತೋರಿಸುವ ಸಲುವಾಗಿ ಮಾಡಿದನೆಂದರೆ ಒಂದು ಅವತಾರದಲ್ಲಿ ತಪಶ್ಚರ್ಣವನ್ನು ತೋರಿಸಿದರೆ ಇನ್ನೊಂದು ಅವತಾರದಲ್ಲಿ ಭೋಗಾದಿಗಳನ್ನು ತೋರಿಸಿದರೆ ಅದರಲ್ಲಿ ಜಗತ್ತು ಯಾವುದನ್ನು ಒಳ್ಳೆಯದೆಂದು ತಿಳಿಯಬೇಕು ?

ಒಬ್ಬ ಅರಹಂತನಾಮದ ರಾಜನಾದನು ★ಅವನು ವೃಷಭಾವತಾರದ ಮತವನ್ನು ಅಂಗೀಕಾರ ಮಾಡಿ ಜೈನಮತ ಪ್ರಕಟ ಮಾಡಿದನೆಂದು ಹೇಳುತ್ತಾರೆ, ಆದರೆ ಜೈನರಲ್ಲಿ ಅರಹಂತನೆಂಬವನು ಯಾವನೂ ಆಗಿಲ್ಲ. ಸರ್ವಜ್ಞ ಪದವನ್ನು ಪಡೆದು ಪೂಜಾಯೋಗ್ಯನಾದವನ ಹೆಸರು ಅರ್ಹಂತವಿದೆ.

ಮತ್ತು ರಾಮ-ಕೃಷ್ಣ ಈ ಎರಡು ಅವತಾರಗಳನ್ನು ಮುಖ್ಯವೆಂದು ಹೇಳುತ್ತಾರೆ, ಆದರೆ ರಾಮಾವತಾರದಲ್ಲಿ ಏನು ಮಾಡಿದನು ? ಸೀತೆಯ ಸಲುವಾಗಿ ಶೋಕ ಮಾಡಿ ರಾವಣನೊಡನೆ ಹೋರಾಡಿ ಅವನನ್ನು ಸಾಯಿಸಿ ರಾಜ್ಯ ಮಾಡಿದನು. ಮತ್ತು ಕೃಷ್ಣಾವತಾರದಲ್ಲಿ ಮೊದಲು ಗೊಲ್ಲನಾಗಿ ಪರಸ್ತ್ರೀ ಗೋಪಿಯರಿಗಾಗಿ ಹಲವು ವಿಪರೀತ ನಿಂದ್ಯ ಚೇಷ್ಟೆಗಳನ್ನು ಮಾಡಿ, ಮತ್ತೆ ಜರಾಸಂಧ ಮೊದಲಾದವರನ್ನು ಸಾಯಿಸಿ ರಾಜ್ಯ ಮಾಡಿದನು. ಆದರೆ ಇಂಥ ಕಾರ್ಯ ಮಾಡುವಲ್ಲಿ ಯಾವ ಸಿದ್ಧಿಯಾಯಿತು ?

ರಾಮ-ಕೃಷ್ಣರನ್ನು ಏಕಸ್ವರೂಪವೆಂದು ಹೇಳುತ್ತಾರೆ, ಆದರೆ ಮಧ್ಯದಲ್ಲಿ ಇಷ್ಟು ಕಾಲ ಎಲ್ಲಿ ಉಳಿದನು? ಬ್ರಹ್ಮನಲ್ಲಿದ್ದರೆ ಭಿನ್ನವಿದ್ದನೋ ಅಥವಾ ಏಕನಿದ್ದನೋ ? ಭಿನ್ನವಿದ್ದರೆ ಅವರು ಬ್ರಹ್ಮನಿಂದ ಭಿನ್ನರಿರುತ್ತಾರೆಂದು ತಿಳಿದು ಬರುತ್ತದೆ. ಏಕವಿದ್ದರೆ ರಾಮನೇ ಕೃಷ್ಣನಾದನು, ಸೀತೆಯೇ ರುಕ್ಮಿಣಿಯಾದಳು. ಇವೆಲ್ಲವನ್ನು ಹೇಗೆ ಹೇಳುತ್ತಾರೆ ?

ಇನ್ನು ರಾಮಾವತಾರದಲ್ಲಂತೂ ಸೀತೆಯನ್ನು ಮುಖ್ಯ ಮಾಡುತ್ತಾರೆ ಮತ್ತು ಕೃಷ್ಣಾವತಾರದಲ್ಲಿ ಸೀತೆಯೇ

★ ಭಾಗವತ ಸ್ಕಂಧ-೫, ಅಧ್ಯಾಯ ೬,೭,೧೧

ರುಕ್ಮಿಣಿಯಾದಳೆಂದು ಹೇಳಿದರೂ ಅವಳನ್ನು ಮುಖ್ಯವೆಂದು ಹೇಳಿದೆ ರಾಧಿಕಾಕುಮಾರಿಯನ್ನು ಮುಖ್ಯವೆಂದು ಹೇಳುತ್ತಾರೆ. ಕೇಳಿದರೆ ರಾಧಿಕೆಯು ಭಕ್ತಳಿದ್ದಳೆಂದು ಹೇಳುತ್ತಾರೆ, ಆದರೆ ಸ್ವಸ್ತ್ರೀಯನ್ನು ಬಿಟ್ಟು ದಾಸಿಯನ್ನು ಮುಖ್ಯ ಮಾಡುವುದು ಹೇಗೆ ಸಂಭವಿಸುತ್ತದೆ ? ಕೃಷ್ಣನಿಗಂತೂ ರಾಧಿಕೆ ಸಹಿತ ಪರಸ್ತ್ರೀ ಸೇವನೆಯ ಎಲ್ಲ ವಿಧಾನಗಳಾದವು, ಆದರೆ ಇದು ಭಕ್ತಿ ಹೇಗಾಯಿತು, ಇಂಥ ಕಾರ್ಯಗಳಂತೂ ಅತ್ಯಂತ ನಿಂದ್ಯವಿವೆ. ರುಕ್ಮಿಣಿಯನ್ನು ಬಿಟ್ಟು ರಾಧೆಯನ್ನು ಮುಖ್ಯ ಮಾಡಿರುವುದು ಅದು ಪರಸ್ತ್ರೀಯ ಸೇವನೆಯನ್ನು ಒಳ್ಳೆಯದೆಂದು ತಿಳಿದುಕೊಂಡಿರಬೇಕಲ್ಲವೇ? ಓರ್ವ ರಾಧೆಯಲ್ಲಿಯೇ ಆಸಕ್ತನಾಗಲಿಲ್ಲ, ಅನ್ಯ ಕುಬ್ಜ★ ಮೊದಲಾದ ಅನೇಕ ಗೋಪಿಕಾ ಪರಸ್ತ್ರೀಯರಲ್ಲೂ ಆಸಕ್ತನಾದನು. ಆದುದರಿಂದ ಈ ಅವತಾರಗಳಲ್ಲಿ ಇಂಥ ಕಾರ್ಯಗಳ ಅಧಿಕಾರಿಯೇ ಆದನು.

ಲಕ್ಷ್ಮೀಯು ಅವನ ಪತ್ನಿಯಿದ್ದು ಹಣ ಮೊದಲಾದುವನ್ನು ಲಕ್ಷ್ಮಿಯೆಂದು ಹೇಳುತ್ತಾರೆ; ಆದರೆ ಇದಂತೂ ಪೃಥ್ವಿಯಲ್ಲಿ ಹೇಗೆ ಪಾಷಾಣ, ಧೂಳು ಇವೆ ಹಾಗೆಯೇ ರತ್ನ, ಸುವರ್ಣಾದಿಗಳನ್ನು ಧನರೂಪವಾಗಿ ನೋಡುತ್ತಾರೆ; ನರನಾರಾಯಣನು ಪತಿಯಿರುವಂಥ ಲಕ್ಷ್ಮಿಯು ಯಾವಳಿದ್ದಾಳೆ ? ಸೀತಾದಿಕರನ್ನು ಮಾಯೆಯ ಸ್ವರೂಪವೆಂದು ಹೇಳುತ್ತಾರೆ, ಆದರೆ ಇವರುಗಳಲ್ಲಿ ಆಸಕ್ತನಾದಾಗ ಮಾಯೆಯಲ್ಲಿ ಹೇಗೆ ಆಸಕ್ತನಾಗಲಿಲ್ಲ ? ಎಲ್ಲಿಯವರೆಗೆಂದು ಹೇಳುವುದು, ವಿರುದ್ಧವಾಗಿಯೇ ನಿರೂಪಣೆ ಮಾಡುತ್ತಾರೆ. ಆದರೆ ಜೀವರುಗಳಿಗೆ ಭೋಗಾದಿಗಳ ಕಥೆಯು ಒಳ್ಳೆಯದೆನಿಸುವುದರಿಂದ ಅವರ ಹೇಳಿಕೆಯು ಪ್ರಿಯವೆನಿಸುತ್ತದೆ.

ಇಂಥ ಅವತಾರಗಳನ್ನು ಬ್ರಹ್ಮಸ್ವರೂಪವೆಂದು ಹೇಳುತ್ತಾರೆ. ಮತ್ತು ಇತರರನ್ನೂ ಬ್ರಹ್ಮಸ್ವರೂಪವೆಂದು ಹೇಳುತ್ತಾರೆ. ಮಹಾದೇವನನ್ನು ಬ್ರಹ್ಮಸ್ವರೂಪವೆಂದು ಮನ್ನಿಸುತ್ತಾರೆ, ಅವನನ್ನು ಯೋಗಿಯೆಂದು ಹೇಳುತ್ತಾರೆ, ಅವನು ಯೋಗವನ್ನೇಕೆ ಗ್ರಹಣ ಮಾಡಿದನು ? ಮೃಗಚರ್ಮ, ಭಸ್ಮಧಾರಣ ಮಾಡುವುದರ ಕಾರಣವೇನು ? ಮೂಳೆಯ ಸ್ಪರ್ಶಮಾಡುವುದು ಕೂಡ ನಿಂದ್ಯವಿದೆಯೆಂದ ಮೇಲೆ ಕೊರಳಲ್ಲಿ ರುಂಡಮಾಲೆಯನ್ನು ಧಾರಣ ಮಾಡುವುದರ ಕಾರಣವೇನು? ಸರ್ಪಸಹಿತವಿರುವಲ್ಲಿ ಯಾವ ಮಹಿಮೆಯಿದೆ ? ಎಕ್ಕೆ-ಧತ್ತೂರಿಗಳನ್ನು ತಿನ್ನುವುದರಲ್ಲಿ ಯಾವ ಲಾಭವಿದೆ? ತ್ರಿಶೂಲಾದಿಗಳನ್ನಿಟ್ಟುಕೊಳ್ಳಬೇಕಾದರೆ ಯಾರ ಭಯವಿದೆ ? ಪಾರ್ವತಿಯನ್ನು ಜತೆಯಲ್ಲಿಟ್ಟುಕೊಂಡಿದ್ದಾನೆ, ಆದರೆ ಯೋಗಿಯಾಗಿ ಸ್ತ್ರೀಯನ್ನಿಟ್ಟುಕೊಳ್ಳವಂಥ ವಿಪರೀತತೆಯನ್ನೇಕೆ ಮಾಡಿದನು? ಕಾಮಾಸಕ್ತಿಯಿದ್ದರೆ ಮನೆಯಲ್ಲಿರಬೇಕಿತ್ತು, ಅವನು ನಾನಾ ಪ್ರಕಾರದ ವಿಪರೀತ ಚೇಷ್ಟೆ ಮಾಡಿರುವುದರ ಪ್ರಯೋಜನವೇನು ಭಾಸವಾಗುವುದಿಲ್ಲ, ತಲೆತಿರುಕನಂಥ ಕರ್ತವ್ಯದ ಭಾಸವಾಗುತ್ತದೆ, ಅದನ್ನು ಬ್ರಹ್ಮಸ್ವರೂಪವೆಂದು ಹೇಳುತ್ತಾರೆ.

ಒಮ್ಮೆ ಕೃಷ್ಣನನ್ನು ಅವನ ಸೇವಕನೆಂದು ಹೇಳುತ್ತಾರೆ. ಒಮ್ಮೆ ಇವನನ್ನು ಕೃಷ್ಣನ ಸೇವಕನೆಂದು ಹೇಳುತ್ತಾರೆ, ಒಮ್ಮೆ ಇಬ್ಬರನ್ನೂ ಒಂದೆಂದು ಹೇಳುತ್ತಾರೆ, ಯಾವ ಗೊತ್ತು ಗುರಿಯೇ ಇಲ್ಲ.

ಅಲ್ಲದೆ ಸೂರ್ಯಾದಿಕರನ್ನು ಬ್ರಹ್ಮನ ಸ್ವರೂಪವೆಂದು ಹೇಳುತ್ತಾರೆ. ಮತ್ತು ಧಾತುಗಳಲ್ಲಿ ಸುವರ್ಣ, ವೃಕ್ಷಗಳಲ್ಲಿ ಕಲ್ಪವೃಕ್ಷ, ಜೂಜಿನಲ್ಲಿ ಅಸತ್ಯ ಇತ್ಯಾದಿಗಳಲ್ಲಿ ನಾನಿರುವೆನೆಂದು ವಿಷ್ಣು ಹೇಳುತ್ತಾನೆಂದು ಹೇಳುತ್ತಾರೆ; ಆದರೆ ಯಾವ ಪೂರ್ವಾಪರ ವಿಚಾರ ಮಾಡುವುದಿಲ್ಲ. ಯಾವುದೇ ಒಂದು ಪ್ರಕಾರದಿಂದ ಅದೆಷ್ಟೋ ಸಂಸಾರಿಗಳು

★ ಭಾಗವತ ಸ್ಕಂಧ-೧೦, ಅ, ೪೮, ೧-೧೧

ಮಹಾತ್ಮನೆಂದು ಮನ್ನಿಸುವವನ್ನು ಬ್ರಹ್ಮನ ಸ್ವರೂಪವೆಂದು ಹೇಳುತ್ತಾರೆ. ಆ ಬ್ರಹ್ಮನು ಸರ್ವವ್ಯಾಪಿಯಿದ್ದರೆ ಇಂಥ ವಿಶೇಷಗಳನ್ನೇಕೆ ಮಾಡಿದನು ? ಸೂರ್ಯ-ಸುವರ್ಣಾದಿಗಳಲ್ಲಿ ಬ್ರಹ್ಮನಿದ್ದರೆ ಸೂರ್ಯನು ಬೆಳಕನ್ನುಂಟು ಮಾಡಿದರೆ ಸುವರ್ಣವು ಧನವಿದೆ, ಇತ್ಯಾದಿ ಗುಣಗಳಿಂದ ಬ್ರಹ್ಮನು ಮನ್ನಿಸಲ್ಪಟ್ಟರೆ ದೀವಿಗೆಗಳೂ ಸೂರ್ಯನಂತೆ ಬೆಳಕನ್ನುಂಟು ಮಾಡುತ್ತವೆ. ಬೆಳ್ಳಿ-ಕಬ್ಬಿಣಗಳೂ ಸುವರ್ಣದಂತೆ ಧನವಿವೆ, ಇತ್ಯಾದಿ ಗುಣಗಳು ಅನ್ಯಪದಾರ್ಥಗಳಲ್ಲೂ ಇವೆ, ಅವನ್ನೂ ಬ್ರಹ್ಮನೆಂದು ಮನ್ನಿಸಬೇಕು. ಹಿರಿ-ಕಿರಿಯವೆನ್ನಿರಿ, ಆದರೆ ಜಾತಿಯಂತೂ ಒಂದೇ ಆಯಿತು. ಹೀಗೆ ಅಸತ್ಯಮಹಿಮೆಯನ್ನು ನಿಶ್ಚಯಿಸುವ ಸಲುವಾಗಿ ಅನೇಕ ಪ್ರಕಾರದ ಯುಕ್ತಿಗಳನ್ನು ನಿರ್ಮಿಸುತ್ತಾರೆ.

ಮತ್ತು ಅನೇಕ ಜ್ವಾಲಾಮಾಲಿನಿ ಮೊದಲಾದ ದೇವಿಯರನ್ನು ಮಾಯೆಯ ಸ್ವರೂಪವೆಂದು ಹೇಳಿ ಹಿಂಸಾದಿ ಪಾಪಗಳನ್ನುತ್ಪನ್ನ ಮಾಡಿ ಅವರನ್ನು ಪೂಜಿಸಲು ನಿಶ್ಚಯಿಸುತ್ತಾರೆ; ಆದರೆ ಮಾಯೆಯಂತೂ ನಿಂದ್ಯವಿದ್ದು ಅದರ ಪೂಜೆಯು ಹೇಗೆ ಸಂಭವವಿದೆ ? ಹಿಂಸಾದಿಗಳನ್ನು ಮಾಡಿದರೆ ಒಳ್ಳೆಯದು ಹೇಗಾಗುವುದು ? ಮತ್ತು ಅಭಕ್ಷ್ಯ ಭಕ್ಷಣೆ ಮಾಡುವಂಥ ಹಸು, ಸರ್ಪ ಮೊದಲಾದುವನ್ನು ಪೂಜ್ಯವೆಂದು ಹೇಳುತ್ತಾರೆ. ಅಗ್ನಿ, ವಾಯು, ನೀರುಗಳನ್ನು ದೇವರೆಂದು ನಿಶ್ಚಯಿಸಿ ಪೂಜ್ಯವೆಂದು ಹೇಳುತ್ತಾರೆ; ಯುಕ್ತಿ ರಚಿಸಿ ವೃಕ್ಷಾದಿಗಳನ್ನು ಕೂಡ ಪೂಜ್ಯವೆಂದು ಹೇಳುತ್ತಾರೆ.

ಹೆಚ್ಚೇನು ಹೇಳುವುದು ? ಪುಲ್ಲಿಂಗ ನಾಮಸಹಿತವಾಗಿರುವವುಗಳಲ್ಲಿ ಬ್ರಹ್ಮನ ಕಲ್ಪನೆ ಮಾಡುತ್ತಾರೆ ಮತ್ತು ಸ್ತ್ರೀಲಿಂಗ ನಾಮಸಹಿತವಾಗಿರುವವುಗಳಲ್ಲಿ ಮಾಯೆಯ ಕಲ್ಪನೆ ಮಾಡಿ ಅನೇಕ ವಸ್ತುಗಳು ಪೂಜ್ಯಾಯೋಗ್ಯವೆಂದು ನಿಶ್ಚಯಿಸುತ್ತಾರೆ. ಇವುಗಳನ್ನು ಪೂಜಿಸುವುದರಿಂದ ಏನಾಗಬಹುದೆಂಬುದರ ವಿಚಾರವಿಲ್ಲ. ಸುಳ್ಳು ಲೌಕಿಕ ಪ್ರಯೋಜನದ ಕಾರಣಗಳೆಂದು ನಿಶ್ಚಯಿಸಿ ಜಗತ್ತನ್ನು ಮೋಸಗೊಳಿಸುತ್ತಾರೆ.

ಬ್ರಹ್ಮನು ಶರೀರದ ರಚನೆ ಮಾಡುತ್ತಾನೆ ಮತ್ತು ಯಮನು ಕೊಲ್ಲುತ್ತಾನೆ, ಮರಣಸಮಯದಲ್ಲಿ ಯಮದೂತರು ಒಯ್ಯಲು ಬರುತ್ತಾರೆ, ಮರಣದ ನಂತರ ಮಾರ್ಗದಲ್ಲಿ ಅಧಿಕಕಾಲ ಬೇಕಾಗುತ್ತದೆ, ಅಲ್ಲಿ ಪುಣ್ಯ-ಪಾಪದ ಎಣಿಕೆ ಮಾಡುತ್ತಾರೆ ಮತ್ತು ಶಿಕ್ಷೆಯನ್ನೂ ವಿಧಿಸುತ್ತಾರೆಂದು ಹೇಳುತ್ತಾರೆ; ಆದರೆ ಇದು ಕಪೋಲ ಕಲ್ಪಿತ ಯುಕ್ತಿಯಿದೆ. ಪ್ರತಿಯೊಂದು ಸಮಯದಲ್ಲಿ ಅನಂತ ಜೀವಗಳು ಹುಟ್ಟುತ್ತವೆ-ಸಾಯುತ್ತವೆ, ಅವುಗಳದು ಯುಗಪತ್ ಹೀಗಾಗುವುದು ಹೇಗೆ ಸಂಭವವಿದೆ ? ಮತ್ತು ಹೀಗೆ ಮನ್ನಿಸುವುದರ ಯಾವ ಕಾರಣವೂ ಕಂಡು ಬರುವುದಿಲ್ಲ.

ಮತ್ತು ಸತ್ತನಂತರ ಅವನ ಶ್ರಾದ್ಧ ಮಾಡುವುದರಿಂದ ಒಳ್ಳೆಯದಾಗುತ್ತದೆಯೆಂದು ಹೇಳುತ್ತಾರೆ, ಆದರೆ ಜೀವಿತಾವಸ್ಥೆಯಲ್ಲೂ ಒಬ್ಬನ ಪುಣ್ಯ-ಪಾಪದಿಂದ ಬೇರೊಬ್ಬನು ಸುಖಿ-ದುಃಖಿಯಾದದ್ದು ಕಂಡುಬರುವುದಿಲ್ಲವೆಂದರೆ ಮರಣದ ನಂತರ ಹೇಗಾಗುವುದು ? ಈ ಯುಕ್ತಿಯು ಮನುಷ್ಯರನ್ನು ಮರುಳಮಾಡಿ ತಮ್ಮ ಲೋಭ ಸಾಧಿಸಿಕೊಳ್ಳುವ ಸಲುವಾಗಿ ರಚಿಸಲ್ಪಟ್ಟಿದೆ.

ಕ್ರಿಮಿ, ಹುಳ, ಸಿಂಹ ಮೊದಲಾದ ಜೀವಗಳೂ ಹುಟ್ಟುತ್ತವೆ-ಸಾಯುತ್ತವೆ, ಅವನ್ನಂತೂ ಪ್ರಲಯದ ಜೀವವೆಂದು ನಿಶ್ಚಯಿಸುತ್ತಾರೆ, ಆದರೆ ಹೇಗೆ ಮನುಷ್ಯಾದಿಕರ ಜನ್ಮ-ಮರಣಗಳಾಗುತ್ತಿರುವುದು ಕಂಡು ಬರುತ್ತದೆ ಹಾಗೇ ಅವುಗಳದಾಗುತ್ತಿರುವುದು ಕಂಡು ಬರುತ್ತದೆ, ಸುಳ್ಳು ಕಲ್ಪನೆ ಮಾಡುವುದರಿಂದ ಆಗುವ ಸಿದ್ಧಿಯೇನು ?

ಮತ್ತು ಅವರು ಶಾಸ್ತ್ರಗಳಲ್ಲಿ ನಿರೂಪಣೆ ಮಾಡುತ್ತಿರುವ ಕಥೆ ಮೊದಲಾದವು ವಿಚಾರ ಮಾಡಿದ ಮೇಲೆ ವಿರುದ್ಧವಾಗಿಯೇ ಕಂಡು ಬರುತ್ತವೆ.

ಅಲ್ಲದೆ ಯಜ್ಞಾದಿಗಳನ್ನು ಮಾಡುವುದಕ್ಕೆ ಧರ್ಮವೆಂದು ಹೇಳುತ್ತಾರೆ, ಆದರೆ ಅಲ್ಲಿ ದೊಡ್ಡ ಜೀವಗಳ ಹೋಮ ಮಾಡುತ್ತಾರೆ, ಬೆಂಕಿ ಉರಿಸುವಂಥ ಆರಂಭ ಮಾಡುತ್ತಾರೆ, ಅದರಿಂದ ಜೀವಘಾತವಾಗುತ್ತದೆ; ಅವರ ಶಾಸ್ತ್ರಗಳಲ್ಲಿ ಹಾಗೂ ಲೋಕದಲ್ಲಿ ಹಿಂಸೆಯ ನಿಷೇಧವಿದೆ; ಆದರೆ ಅದನ್ನು ಗಣನೆಗೆ ತಂದುಕೊಳ್ಳದಷ್ಟು ನಿರ್ದಯರಿದ್ದು ''ಯಜ್ಞಾರ್ಥಂ ಪಶವಃ ಸೃಷ್ಟಾಃ''ವೆಂದು ಹೇಳುತ್ತಾರೆ, ಎಂದರೆ ಯಜ್ಞಗಳ ಸಲುವಾಗಿಯೇ ಪಶುಗಳ ನಿರ್ಮಾಣವಾಗಿದ್ದು ಘಾತ ಮಾಡಿದುದರ ದೋಷವಿಲ್ಲವೆಂದು ಹೇಳುತ್ತಾರೆ.

ಮಳೆಯಾಗುವುದು, ಶತ್ರುಗಳ ನಾಶವಾಗುವುದು ಮೊದಲಾದ ಫಲಗಳನ್ನು ತೋರಿಸಿ ತಮ್ಮ ಲೋಭದ ಸಲುವಾಗಿ ರಾಜಾದಿಕರಲ್ಲಿ ಭ್ರಾಂತಿ ಹುಟ್ಟಿಸುತ್ತಾರೆ. ಹೇಗೆ ವಿಷಸೇವನೆಯಿಂದ ಜೀವಿತವಿರುವುದನ್ನು ಹೇಳುವುದು ಪ್ರತ್ಯಕ್ಷ ವಿರುದ್ಧವಿದೆ; ಹಾಗೆ ಹಿಂಸೆ ಮಾಡುವುದರಿಂದ ಧರ್ಮ ಹಾಗೂ ಕಾರ್ಯಸಿದ್ಧಿಯಾಗುವುದೆಂದು ಹೇಳುವುದು ಪ್ರತ್ಯಕ್ಷ ವಿರುದ್ಧವಿದೆ. ಆದರೆ ಯಾವವುಗಳ ಹಿಂಸೆ ಮಾಡಲು ಹೇಳಿದೆ ಅವಕ್ಕಂತೂ ಯಾವ ಶಕ್ತಿಯಿಲ್ಲ, ಯಾರಿಗೂ ಅವುಗಳ ಬಾಧೆಯಿಲ್ಲ, ಯಾವುದೇ ಶಕ್ತಿಯುಕ್ತ ಹಾಗೂ ಇಷ್ಟದ ಹೋಮ ಮಾಡಲು ಹೇಳುತ್ತಿದ್ದರೆ ಒಳ್ಳೆಯದಿತ್ತು, ಪಾಪದ ಭಯವಿಲ್ಲದಿರುವುದರಿಂದ ಪಾಪಿಗಳು ದುರ್ಬಲ ಪ್ರಾಣಿಗಳ ಘಾತಕರಾಗಿ ತಮ್ಮ ಲೋಭದ ಸಲುವಾಗಿ ತಮ್ಮ ಹಾಗೂ ಇತರರ ಕೆಡಕು ಮಾಡುವಲ್ಲಿ ತತ್ಪರರಾಗಿದ್ದಾರೆ.

## ಯೋಗ ಮೀಮಾಂಸೆ

ಅವರು ಮೋಕ್ಷ ಮಾರ್ಗವನ್ನು ಭಕ್ತಿಯೋಗ ಮತ್ತು ಜ್ಞಾನಯೋಗವೆಂದು ಎರಡು ಪ್ರಕಾರದಿಂದ ನಿರೂಪಣೆ ಮಾಡುತ್ತಾರೆ.

### ಭಕ್ತಿಯೋಗ ಮೀಮಾಂಸೆ :-

ಈಗ ಭಕ್ತಿಯೋಗದಿಂದ ಮೋಕ್ಷಮಾರ್ಗವನ್ನು ಹೇಳುತ್ತಾರೆ ಅದರ ಸ್ವರೂಪವನ್ನು ಹೇಳಲಾಗುತ್ತದೆ,-

ಭಕ್ತಿಯನ್ನು ನಿರ್ಗುಣ ಸಗುಣದ ಭೇದದಿಂದ ಎರಡು ಪ್ರಕಾರವಾಗಿ ಹೇಳುತ್ತಾರೆ. ಅದ್ವೈತ ಪರಬ್ರಹ್ಮನ ಭಕ್ತಿ ಮಾಡುವುದು ಅದು ನಿರ್ಗುಣ ಭಕ್ತಿಯಿದೆ; ಅದನ್ನು ಹೀಗೆ ಮಾಡುತ್ತಾರೆ-ನೀವು ನಿರಾಕಾರರಿರುವಿರಿ, ನಿರಂಜನರಿರುವಿರಿ, ಮನ-ವಚನದಿಂದ ಅಗೋಚರರಿರುವಿರಿ, ಅಪಾರರಿರುವಿರಿ, ಸರ್ವವ್ಯಾಪಿಯಿರುವಿರಿ, ಏಕರಿರುವಿರಿ, ಎಲ್ಲರ ಪ್ರತಿಪಾಲಕರಿರುವಿರಿ, ಅಧಮೋದ್ಧಾರಕರಿರುವಿರಿ, ಎಲ್ಲರ ಕರ್ತೃ-ಹರ್ತೃರಿರುವಿರಿ ಇತ್ಯಾದಿ ವಿಶೇಷಣಗಳಿಂದ ಗುಣಗಳನ್ನು ಹಾಡುತ್ತಾರೆ, ಇವುಗಳಲ್ಲಿರುವ ಅದೆಷ್ಟೋ ನಿರಾಕಾರಾದಿ ವಿಶೇಷಣಗಳು ಅಭಾವ ರೂಪವಿವೆ, ಅವನ್ನು ಸರ್ವಥಾ ಮನ್ನಿಸುವುದರಿಂದ ಅಭಾವವೇ ಭಾಸವಾಗುತ್ತದೆ. ಏಕೆಂದರೆ ಆಕಾರಾದಿಗಳಿಲ್ಲದೆ ವಸ್ತು ಹೇಗಿರುವುದು ? ಮತ್ತು ಸರ್ವವ್ಯಾಪಿ ಮೊದಲಾದ ಎಷ್ಟೋ ವಿಶೇಷಣಗಳು ಅಸಂಭವವಿವೆ ಅವುಗಳ ಅಸಂಭವತೆಯನ್ನು ಈ ಮೊದಲೇ ತಿಳಿಸಿಕೊಡಲಾಗಿದೆ.

ಜೀವ ಬುದ್ಧಿಯಿಂದ ನಾನು ನಿಮ್ಮ ದಾಸನಿದ್ದೇನೆ. ಶಾಸ್ತ್ರದೃಷ್ಟಿಯಿಂದ ನಿಮ್ಮ ಅಂಶನಿದ್ದೇನೆ, ತತ್ತ್ವಬುದ್ಧಿಯಿಂದ 'ನೀನೇ ನಾನಿದ್ದೇನೆ'ಂದು ಹೇಳುತ್ತಾರೆ. ಆದರೆ ಇವು ಮೂರೂ ಭ್ರಮೆಯಿವೆ. ಭಕ್ತಿ ಮಾಡುವವನು ಚೇತನನಿದ್ದಾನೆಯೋ ಅಥವಾ ಜಡನಿದ್ದಾನೆಯೋ ? ಚೇತನನಿದ್ದರೆ ಈ ಚೇತನವು ಬ್ರಹ್ಮನದಿದೆಯೋ ಅಥವಾ ಇವನದಿದೆಯೋ ? ಬ್ರಹ್ಮನದಿದ್ದರೆ 'ನಾನು ದಾಸನಿದ್ದೇನೆ'ಂದು ಮನ್ನಿಸುವುದು ಚೇತನದ್ದೇ ಆಗುತ್ತದೆ ಆ ಚೇತನವು ಬ್ರಹ್ಮನ ಸ್ವಭಾವವಾಯಿತು ಮತ್ತು ಸ್ವಭಾವ-ಸ್ವಭಾವಿಯ ತಾದಾತ್ಮ್ಯ ಸಂಬಂಧವಿದೆ. ಅಲ್ಲಿ ದಾಸಸ್ವಾಮಿಯ ಸಂಬಂಧವು ಹೇಗೆ ಸಂಭವಿಸುತ್ತದೆ ? ದಾಸ-ಸ್ವಾಮಿಯ ಸಂಬಂಧವು ಭಿನ್ನ ಪದಾರ್ಥಗಳಿದ್ದಾಗಲೇ ಸಂಭವಿಸುತ್ತದೆ, ಮತ್ತು ಆ ಚೇತನವು ಇವನದಿದ್ದರೆ ಈ ತನ್ನ ಚೇತನದ ಪ್ರಭು ಭಿನ್ನ ಪದಾರ್ಥವಾಗುವನು, ಆಗ ನಾನು ಅಂಶನಿದ್ದೇನೆ ಮತ್ತು 'ನೀನೇ ನಾನಿದ್ದೇನೆ'ಂದು ಹೇಳುವುದು ಸುಳ್ಳಾಯಿತು. ಮತ್ತು ಭಕ್ತಿ ಮಾಡುವವನು ಜಡನಿದ್ದರೆ ಜಡಕ್ಕೆ ಬುದ್ಧಿಯಿರುವುದು ಅಸಂಭವವಿದೆ, ಇಂಥ ಬುದ್ಧಿ ಹೇಗಾಯಿತು ? ಆದುದರಿಂದ 'ನಾನು ದಾಸನಿದ್ದೇನೆ'ಂದು ಹೇಳುವುದು ಭಿನ್ನ-ಭಿನ್ನ ಪದಾರ್ಥಗಳಿದ್ದಾಗಲೇ ಸಂಭವಿಸುತ್ತದೆ. ಮತ್ತು 'ನಾನು ನಿನ್ನ ಅಂಶನಿದ್ದೇನೆ'ಂದು ಹೇಳುವುದು ಸಂಭವಿಸುವುದೇ ಇಲ್ಲ. ಏಕೆಂದರೆ 'ನೀನು ಮತ್ತು ನಾನೆ'ಂದು ಭಿನ್ನವಾದಾಗಲೇ ಸಂಭವಿಸುತ್ತದೆ, ಆದರೆ ಅಂಶ-ಅಂಶಿಯ ಭಿನ್ನತೆಯು ಹೇಗಾಗುವುದು ? ಅಂಶಿಯಂತೂ ಯಾವ ಭಿನ್ನವಸ್ತುವಿಲ್ಲ, ಅಂಶಗಳ ಸಮುದಾಯವೇ ಅಂಶಿಯಿದೆ. ಮತ್ತು 'ನೀನೇ ನಾನಿದ್ದೇನೆ'ಂಬ ವಚನವೂ ವಿರುದ್ಧವಿದೆ. ಒಂದು ಪದಾರ್ಥದಲ್ಲಿ ತನ್ನತನವನ್ನು ಮತ್ತು ಅನ್ಯತನವನ್ನೂ ಮನ್ನಿಸುವುದು ಹೇಗೆ ಸಂಭವವಿದೆ; ಆದುದರಿಂದ ಭ್ರಾಂತಿಯನ್ನು ಬಿಟ್ಟುಕೊಟ್ಟು ನಿರ್ಣಯ ಮಾಡಬೇಕು.

ಕೆಲವರು ಹೆಸರನ್ನೇ ಜಪಿಸುತ್ತಾರೆ; ಆದರೆ ಜಪಿಸುವವರ ಸ್ವರೂಪವನ್ನು ತಿಳಿದುಕೊಂಡಲ್ಲದೆ ಕೇವಲ ಹೆಸರನ್ನೇ ಜಪಿಸಿದರೆ ಹೇಗೆ ಕಾರ್ಯಕಾರಿಯಾಗುವುದು ? ಹೆಸರಿನದೇ ಮಹಿಮೆಯಿದೆಯೆಂದು ನೀನೆನ್ನಬಹುದು; ಆದರೆ ಈಶ್ವರನ ಹೆಸರನ್ನೇ ಓರ್ವ ಪಾಪಿ ಪುರುಷನಿಗೆ ಇಟ್ಟರೆ ಅವರೀರ್ವರ ನಾಮೋಚ್ಚರಣೆಯಲ್ಲಿ ಫಲದ ಸಮಾನತೆಯಾಗುವುದು ಹೇಗೆ ಸಾಧ್ಯವಿದೆ ? ಆದುದರಿಂದ ಸ್ವರೂಪದ ನಿರ್ಣಯ ಮಾಡಿ ಅನಂತರ ಭಕ್ತಿ ಮಾಡಲು ಯೋಗ್ಯವಿರುವವರ ಭಕ್ತಿ ಮಾಡಬೇಕು.

ಈ ಪ್ರಕಾರ ನಿರ್ಗುಣ ಭಕ್ತಿಯ ಸ್ವರೂಪವನ್ನು ತಿಳಿಸಿಕೊಡಲಾಯಿತು.

ಮತ್ತು ಕಾಮ-ಕ್ರೋಧಾದಿಗಳಿಂದ ಉತ್ಪನ್ನವಾದ ಕಾರ್ಯಗಳ ವರ್ಣನೆ ಮಾಡಿ ಸ್ತುತಿ ಮೊದಲಾದುವನ್ನು ಮಾಡಿದರೆ ಅದನ್ನು ಸಗುಣಭಕ್ತಿಯೆಂದು ಹೇಳುತ್ತಾರೆ.

ಸಗುಣ ಭಕ್ತಿಯಲ್ಲಿ ಹೇಗೆ ನಾಯಕ-ನಾಯಕಿಯರ ಲೌಕಿಕ ಶೃಂಗಾರದ ವರ್ಣನೆ ಮಾಡುತ್ತಾರೆ ಹಾಗೆ ಸ್ವಾಮಿ- ಸ್ವಾಮಿನಿಯ ವರ್ಣನೆ ಮಾಡುತ್ತಾರೆ. ಅಲ್ಲಿ ಸ್ವಕೀಯ-ಪರಕೀಯ ಸ್ತ್ರೀ ಸಂಬಂಧದಲ್ಲಿ ಸಂಯೋಗ-ವಿಯೋಗ ರೂಪದ ಎಲ್ಲ ವ್ಯವಹಾರವನ್ನು ನಿರೂಪಣೆ ಮಾಡುತ್ತಾರೆ. ಸ್ನಾನಮಾಡುತ್ತಿರುವ ಸ್ತ್ರೀಯರ ವಸ್ತ್ರ ಕದಿಯುವುದು, ಮೊಸರು ಅಪಹರಿಸುವುದು, ಸ್ತ್ರೀಯರ ಕಾಲಿಗೆ ಬೀಳುವುದು, ಸ್ತ್ರೀಯರ ಎದುರು ನರ್ತಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡಬೇಕಾದರೆ ಸಂಸಾರಿ ಜೀವರುಗಳಿಗೂ ನಾಚಿಕೆಯೆನಿಸುತ್ತದೆ, ಆದರೆ ಆ ಕಾರ್ಯಗಳನ್ನು ಮಾಡಲಪೇಕ್ಷಿಸುತ್ತಾರೆ; ಆದರೆ ಇಂಥ ಕಾರ್ಯಗಳು ಅತ್ಯಂತ ಕಾಮವಾಸನೆಯಿಂದ ಪೀಡಿತವಾದಾಗಲೇ ಆಗುತ್ತವೆ.

ಯುದ್ಧಾದಿಗಳನ್ನು ಮಾಡಿದರೆಂದು ಹೇಳುತ್ತಾರೆ, ಆದರೆ ಇವು ಕ್ರೋಧದ ಕಾರ್ಯಗಳಿವೆ. ತಮ್ಮ ಮಹಿಮೆಯನ್ನು ತೋರಿಸುವ ಸಲುವಾಗಿ ಉಪಾಯ ಮಾಡಿದರೆಂದು ಹೇಳುತ್ತಾರೆ, ಆದರೆ ಇವು ಮಾನದ ಕಾರ್ಯಗಳಿವೆ. ಅನೇಕ ಕಪಟ ಮಾಡಿದರೆಂದು ಹೇಳುತ್ತಾರೆ, ಆದರೆ ಇವು ಮಾಯೆಯ ಕಾರ್ಯಗಳಿವೆ. ವಿಷಯ ಸಾಮಗ್ರಿಯ ಪ್ರಾಪ್ತಿಗಾಗಿ ಯತ್ನ ಮಾಡಿದರೆಂದು ಹೇಳುತ್ತಾರೆ, ಆದರೆ ಇವು ಲೋಭದ ಕಾರ್ಯಗಳಿವೆ. ಕುತೂಹಲಾದಿಗಳನ್ನು ಮಾಡಿದರೆಂದು ಹೇಳುತ್ತಾರೆ, ಆದರೆ ಇವು ಹಾಸ್ಯಾದಿಗಳ ಕಾರ್ಯಗಳಿವೆ. ಇಂಥ ಕಾರ್ಯಗಳು ಕ್ರೋಧಾದಿಗಳಿಂದ ಯುಕ್ತವಾದಾಗಲೇ ಸಂಭವಿಸುತ್ತವೆ.

ಹೀಗೆ ಕಾಮ-ಕ್ರೋಧಾದಿಗಳಿಂದ ಉತ್ಪನ್ನವಾದ ಕಾರ್ಯಗಳನ್ನು ಪ್ರಕಟಪಡಿಸಿ ನಾವು ಸ್ತುತಿ ಮಾಡುತ್ತೇವೆಂದು ಹೇಳುತ್ತಾರೆ; ಆದರೆ ಕಾಮ-ಕ್ರೋಧಾದಿಗಳ ಕಾರ್ಯಗಳೇ ಸ್ತುತಿಯೋಗ್ಯವಾದರೆ ನಿಂದ್ಯ ಕರ್ತವ್ಯಗಳಾವವು ? ಲೋಕದಲ್ಲಿ, ಶಾಸ್ತ್ರಗಳಲ್ಲಿ ಅತ್ಯಂತ ನಿಂದ್ಯವೆನಿಸುವಂಥ ಕಾರ್ಯಗಳ ವರ್ಣನೆ ಮಾಡಿ ಸ್ತುತಿಮಾಡುವುದೆಂದರೆ ಅಂಗೈ ತೋರಿಸಿ ಅವಲಕ್ಷಣ ಮಾಡಿಕೊಂಡಂಥ ಕಾರ್ಯವಾಯಿತು.

ಯಾರಿಗೂ ಯಾರ ಹೆಸರನ್ನೂ ಹೇಳದೆ ಇಂಥ ಕಾರ್ಯಗಳ ನಿರೂಪಣೆ ಮಾಡಿ, ಇಂಥ ಕಾರ್ಯಮಾಡಿದ ವರನ್ನು ನೀವು ಒಳ್ಳೆಯವರೆಂದು ತಿಳಿಯುವಿರೋ ಅಥವಾ ಕೆಟ್ಟವರೆಂದು ತಿಳಿಯುವಿರೋ ? ಒಳ್ಳೆಯವರೆಂದು ತಿಳಿದರೆ ಪಾಪಿಯು ಒಳ್ಳೆಯವನಾದರೆ ಕೆಟ್ಟವನಾವನುಳಿದನು ? ಕೆಟ್ಟವನೆಂದರೆ ಇಂಥ ಕಾರ್ಯ ಯಾರು ಮಾಡಿದರೂ ಅವರು ಕೆಟ್ಟವರೇ ಆದರು. ಪಕ್ಷಪಾತವಿಲ್ಲದೆ ನ್ಯಾಯಮಾಡಬೇಕು.

ಸ್ವಾಮಿಯ ಇಂಥ ವರ್ಣನೆ ಮಾಡುವುದು ಕೂಡ ಸ್ತುತಿಯಿದೆಯೆಂದು ಪಕ್ಷಪಾತದಿಂದ ಹೇಳಿದರೆ ಸ್ವಾಮಿಯು ಇಂಥ ಕಾರ್ಯವನ್ನು ಏತಕ್ಕಾಗಿ ಮಾಡಿದನು ? ಇಂಥ ನಿಂದ್ಯ ಕಾರ್ಯಮಾಡುವುದರಿಂದಾದ ಸಿದ್ಧಿಯೇನು ? ಪ್ರವೃತ್ತಿ ನಿರ್ವಹಿಸುವುದಕ್ಕಾಗಿ ಮಾಡಿದೆಯೆಂದರೆ ಪರಸ್ತ್ರೀ ಸೇವನೆಯಂಥ ನಿಂದ್ಯ ಕಾರ್ಯಗಳ ಪ್ರವೃತ್ತಿ ನಿರ್ವಹಿಸುವಲ್ಲಿ ತಮಗೆ ಹಾಗೂ ಅನ್ಯರಿಗೆ ಯಾವ ಲಾಭವಾಯಿತು ? ಆದುದರಿಂದ ಸ್ವಾಮಿಗೆ ಇಂಥ ಕಾರ್ಯ ಮಾಡುವುದು ಸಂಭವವಿಲ್ಲ. ಮತ್ತು ಸ್ವಾಮಿಯು ಕಾರ್ಯ ಮಾಡದೆ ನೀವೇ ಹೇಳುತ್ತಿದ್ದರೆ ದೋಷವಿಲ್ಲದವನಿಗೆ ದೋಷ ತಗಲಿಸಿದಿರಿ. ಆದುದರಿಂದ ಇಂಥ ವರ್ಣನೆ ಮಾಡುವುದಂತೂ ನಿಂದೆಯಿದೆ ಅದು ಸ್ತುತಿಯಿಲ್ಲ.

ಸ್ತುತಿ ಮಾಡುತ್ತಿರುವಾಗ ಯಾವ ಗುಣಗಳ ವರ್ಣನೆ ಮಾಡುತ್ತೇವೆ, ಆ ರೂಪವಾಗಿಯೇ ಪರಿಣಾಮಗಳಾಗುತ್ತವೆ ಮತ್ತು ಅವುಗಳಲ್ಲಿಯೇ ಪ್ರೀತಿಯುಂಟಾಗುತ್ತದೆ, ಕಾಮ-ಕ್ರೋಧಾದಿಗಳ ಕಾರ್ಯಗಳ ವರ್ಣನೆ ಮಾಡುತ್ತಿರುವಾಗ ತಾವು ಕೂಡ ಕಾಮ-ಕ್ರೋಧಾದಿರೂಪವಾಗುವುದು ಅಥವಾ ಕಾಮ-ಕ್ರೋಧಾದಿಗಳಲ್ಲಿ ಅನುರಾಗವಾಗುವುದು, ಆದರೆ ಇಂಥ ಭಾವಗಳಂತೂ ಒಳ್ಳೆಯವಲ್ಲ. ಭಕ್ತನು ಇಂಥ ಭಾವಮಾಡುವುದಿಲ್ಲವೆಂದು ಹೇಳಬಹುದು, ಆದರೆ ಪರಿಣಾಮವಾದಲ್ಲದೆ ವರ್ಣನೆ ಹೇಗೆ ಮಾಡಿದಿರಿ ? ಅವುಗಳ ಅನುರಾಗವಾದಲ್ಲದೆ ಭಕ್ತಿ ಹೇಗೆ ಮಾಡಿದಿರಿ ? ಈ ಭಾವಗಳೇ ಒಳ್ಳೆಯವಿದ್ದರೆ ಬ್ರಹ್ಮಚರ್ಯವನ್ನು ಮತ್ತು ಕ್ಷಮಾದಿಗಳನ್ನು ಒಳ್ಳೆಯವೆಂದೇಕೆ ಹೇಳಿದಿರಿ ? ಇವುಗಳಲ್ಲಂತೂ ಪರಸ್ಪರ ವಿರೋಧವಿದೆ.

ಮತ್ತು ಸಗುಣ ಭಕ್ತಿ ಮಾಡುವುದಕ್ಕಾಗಿ ರಾಮ-ಕೃಷ್ಣಾದಿಗಳ ಮೂರ್ತಿಗಳನ್ನೂ ಶೃಂಗಾರಾದಿಗಳಿಂದ, ಕಪಟಾದಿಗಳೊಡನೆ, ಸ್ತ್ರೀ ಸಂಗ ಸಹಿತವಾಗಿ ರಚಿಸುತ್ತಾರೆ; ಅದನ್ನು ನೋಡುತ್ತಿದ್ದಂತೆಯೇ ಕಾಮ-ಕ್ರೋಧಾದಿ ಭಾವಗಳು ಪ್ರಕಟವಾಗಿ ಬಿಡುತ್ತವೆ. ಮತ್ತು ಮಹಾದೇವನ ಲಿಂಗದ ಆಕಾರವನ್ನೇ ರಚಿಸುತ್ತಾರೆ. ಎಂಥ ವಿಡಂಬನೆ! ಅದರ ಹೆಸರು ಎತ್ತಿದರೆ ನಾಚಿಕೆ ಎನಿಸುತ್ತದೆ, ಜಗತ್ತು ಅದನ್ನು ಬಚ್ಚಿಡುತ್ತದೆ ಅದರ ಆಕಾರದ ಪೂಜೆ ಮಾಡಿಸುತ್ತಾರೆ. ಅವನ ಅನ್ಯಲಿಂಗಗಳಿರಲಿಲ್ಲವೇನು ? ಆದರೆ ಅಧಿಕ ಪರಿಹಾಸ್ಯವು ಹೀಗೆ ಮಾಡುವುದರಿಂದಲೇ ಪ್ರಕಟವಾಗುತ್ತದೆ.

ಸಗುಣಭಕ್ತಿಯುಸಲುವಾಗಿ ನಾನಾ ಪ್ರಕಾರದ ವಿಷಯ ಸಾಮಗ್ರಿಗಳನ್ನು ಏಕತ್ರಮಾಡುತ್ತಾರೆ ಅಲ್ಲಿ ಸ್ವಾಮಿಯ ಹೆಸರು ಹೇಳುತ್ತಾರೆ ಮತ್ತು ಸ್ವಯಂ ಅದರ ಉಪಭೋಗ ಮಾಡುತ್ತಾರೆ. ಭೋಜ್ಯವನ್ನು ಸಿದ್ಧಮಾಡುತ್ತಾರೆ ಮತ್ತು ಸ್ವಾಮಿಗೆ ನೈವೇದ್ಯ ತೋರಿಸಿ ಪುನಃ ಪ್ರಸಾದದ ಕಲ್ಪನೆ ಮಾಡಿ ತಾವೇ ಅದರ ಭಕ್ಷಣೆ ಮಾಡುತ್ತಾರೆ. ತಾತ್ಪರ್ಯವೇನೆಂದರೆ ಮೊದಲು ಸ್ವಾಮಿಗೆ ಕ್ಷುಧೆ-ತೃಷೆಯ ಬಾಧೆಯಿರಬೇಕು, ಇಲ್ಲದಿದ್ದರೆ ಇಂಥ ಕಲ್ಪನೆಯು ಹೇಗೆ ಸಂಭವವಿದೆ ? ಮತ್ತು ಕ್ಷುಧಾದಿಯಿಂದ ಪೀಡಿತನಾದಾಗ ವ್ಯಾಕುಲನಾಗಿ ಈಶ್ವರನು ದುಃಖಿಯಾದರೆ ಇತರರ ದುಃಖವನ್ನು ಹೇಗೆ ದೂರ ಮಾಡುವನು ? ಮತ್ತು ಭೋಜನಾದಿ ಸಾಮಗ್ರಿಗಳನ್ನು ತಾವಂತೂ ಅವರ ಸಲುವಾಗಿ ಅರ್ಪಣ ಮಾಡಿದಿರಿ, ಪುನಃ ಅದು ಸ್ವಾಮಿಯು ಕೊಟ್ಟಾಗ ಪ್ರಸಾದವಾಗುತ್ತದೆ, ತಾವೇ ತೆಗೆದುಕೊಂಡರೆ ಆಗುವುದಿಲ್ಲ. ಹೇಗೆಂದರೆ ಒಬ್ಬನು ರಾಜನಿಗೆ ಕಾಣಿಕೆ ಕೊಟ್ಟರೆ ರಾಜನು ಪುನಃ ಬಹುಮಾನ ಕೊಟ್ಟರೆ ಅದನ್ನು ಗ್ರಹಣಮಾಡುವುದು ಯೋಗ್ಯವಿದೆ; ಆದರೆ ತಾವು ರಾಜನಿಗೆ ಕಾಣಿಕೆ ಕೊಡುವುದು, ಅಲ್ಲಿ ರಾಜನಂತೂ ಏನನ್ನೂ ಹೇಳುವುದಿಲ್ಲ ಮತ್ತು ತಾವೇ 'ರಾಜನು ನನಗೆ ಬಹುಮಾನ ಕೊಟ್ಟನೆ'ಂದು ಹೇಳಿ ಅದನ್ನು ಸ್ವೀಕಾರ ಮಾಡಿದರೆ ಅದು ಆಟವಾಯಿತು. ಅದೇ ಪ್ರಕಾರ ಇಲ್ಲಿ ಕೂಡ ಹೀಗೆ ಮಾಡುವುದರಿಂದ ಭಕ್ತಿಯಂತೂ ಆಗಲಿಲ್ಲ, ಆದರೆ ಹಾಸ್ಯ ಮಾಡಿದಂತೆ ಆಯಿತು.

ಇನ್ನು ಸ್ವಾಮಿ ಹಾಗೂ ನೀನು ಈರ್ವರಿರುವಿರೋ ಅಥವಾ ಒಂದಿರುವಿರೋ ? ಈರ್ವರಿದ್ದರೆ ನೀನು ಕಾಣಿಕೆ ಕೊಟ್ಟನಂತರ ಸ್ವಾಮಿ ಕೊಟ್ಟರೆ ಗ್ರಹಣ ಮಾಡಬೇಕು, ತಾವಾಗಿಯೇ ಏಕೆ ಗ್ರಹಣ ಮಾಡಬೇಕು ? ಸ್ವಾಮಿಯದಂತೂ ಮೂರ್ತಿಯಿರುವುದರಿಂದ ನಾನೇ ಕಲ್ಪನೆ ಮಾಡುತ್ತೇನೆಂದು ನೀನೆನ್ನಬಹುದು ; ಆದರೆ ಸ್ವಾಮಿ ಮಾಡುವ ಕಾರ್ಯ ನೀನೇ ಮಾಡಿದಾಗ ನೀನೇ ಸ್ವಾಮಿಯಾದೆ. ಮತ್ತು ಒಂದಿದ್ದರೆ ಕಾಣಿಕೆ ಕೊಡುವುದು, ಪ್ರಸಾದವೆಂದು ಹೇಳುವುದು ಸುಳ್ಳಾಯಿತು. ಒಂದಿದ್ದ ಮೇಲೆ ಈ ವ್ಯವಹಾರವು ಸಂಭವಿಸುವುದಿಲ್ಲ; ಆದ್ದರಿಂದ ಭೋಜನಾಸಕ್ತ ಪುರುಷರುಗಳಿಂದ ಇಂಥ ಕಲ್ಪನೆ ಮಾಡಲಾಗುತ್ತದೆ.

ಸ್ವಾಮಿಯ ಸಲುವಾಗಿ ನೃತ್ಯ-ಗಾಯನ ಮಾಡಿಸುವುದು; ಶೀತ, ಗ್ರೀಷ್ಮ, ವಸಂತಾದಿ ಋತುಗಳಲ್ಲಿ ಸಂಸಾರಿಗಳಿಗೆ ಸಂಭವಿಸುವಂಥ ವಿಷಯಸಾಮಗ್ರಿಗಳನ್ನು ಶೇಖರಿಸುವುದು ಇತ್ಯಾದಿ ಕಾರ್ಯಗಳನ್ನು ಮಾಡುತ್ತಾರೆ. ಅಲ್ಲಿ ಸ್ವಾಮಿಯ ಹೆಸರು ತೆಗೆದುಕೊಳ್ಳುವುದು ಮತ್ತು ತಮ್ಮ ಇಂದ್ರಿಯ ವಿಷಯಗಳನ್ನು ಪೋಷಿಸುವುದು ಇದು ವಿಷಯಾಸಕ್ತ ಜೀವಗಳಿಂದ ಮಾಡಲಾದ ಉಪಾಯವಿದೆ. ಅಲ್ಲಿ ಜನ್ಮ-ವಿವಾಹಾದಿಗಳ ಹಾಗೂ ಶಯನ-ಜಾಗರಣೆ ಇತ್ಯಾದಿಗಳ ಕಲ್ಪನೆ ಮಾಡುತ್ತಾರೆ ಅದು ಹೇಗೆ ಮಕ್ಕಳು ಗೊಂಬೆಯ ಆಟವಾಡಿ ಮೋಜು ಮಾಡುತ್ತಾರೆ ಅದೇ ಪ್ರಕಾರ ಇದು ಕೂಡ ಮೋಜು ಮಾಡುವುದಿದೆ, ಯಾವ ಪರಮಾರ್ಥರೂಪ ಗುಣವಿಲ್ಲ. ಬಾಲ ಸ್ವಾಮಿಯ

ಸೋಗು ರಚಿಸಿ ಚೇಷ್ಟೆಗಳನ್ನು ದರ್ಶಿಸುತ್ತಾರೆ, ಅದರಿಂದ ತಮ್ಮ ವಿಷಯಗಳ ಪೋಷಣೆ ಮಾಡುತ್ತಾರೆ. ಮತ್ತು ಇದು ಕೂಡ ಭಕ್ತಯಿದೆಯೆಂದು ಹೇಳುತ್ತಾರೆ, ಹೀಗೆ ಏನೇನು ಹೇಳುತ್ತಾರೆ, ಹೀಗೆ ಏನೇನು ಹೇಳುವುದು ? ಇಂಥ ಅನೇಕ ವಿಪರೀತತೆಗಳು ಸಗುಣ ಭಕ್ತಿಯಲ್ಲಿ ಕಂಡುಬರುತ್ತವೆ.

ಹೀಗೆ ಎರಡೂ ಪ್ರಕಾರದ ಭಕ್ತಿಯಿಂದ ಮೋಕ್ಷಮಾರ್ಗವನ್ನು ಹೇಳುತ್ತಾರೆ ಆದರೆ ಅದನ್ನು ಮಿಥ್ಯೆಯೆಂದು ತಿಳಿಸಿದೆ.

**ಜ್ಞಾನಯೋಗ ಮೀಮಾಂಸೆ :-**

ಈಗ ಅನ್ಯಮತದಲ್ಲಿ ನಿರೂಪಿಸಿದ ಜ್ಞಾನಯೋಗದಿಂದ ಮೋಕ್ಷಮಾರ್ಗದ ಸ್ವರೂಪ ತಿಳಿಸಿಕೊಡುತ್ತಾರೆ.

ಓರ್ವ ಅದ್ವೈತ ಸರ್ವವ್ಯಾಪಿಯಾದ ಪರಬ್ರಹ್ಮನನ್ನು ತಿಳಿಯುವುದಕ್ಕೆ ಜ್ಞಾನವೆಂದು ಹೇಳುತ್ತಾರೆ, ಆದರೆ ಅವರ ಮಿಥ್ಯಾತನವನ್ನಂತೂ ಈ ಮೊದಲೇ ಹೇಳಲಾಗಿದೆ.

ತನ್ನನ್ನು ಸರ್ವಥಾ ಶುದ್ಧ ಬ್ರಹ್ಮಸ್ವರೂಪವೆಂದು ಮನ್ನಿಸುವುದು, ಕಾಮ-ಕ್ರೋಧಾದಿಗಳನ್ನು ಹಾಗೂ ಶರೀರಾದಿಗಳನ್ನು ಭ್ರಮೆಯೆಂದು ತಿಳಿಯುವುದಕ್ಕೆ ಜ್ಞಾನವೆಂದು ಹೇಳುವುದು ಕೂಡ ಭ್ರಮೆಯಿದೆ, ತಾವು ಶುದ್ಧರಿದ್ದರೆ ಮೋಕ್ಷದ ಉಪಾಯವನ್ನೇಕೆ ಮಾಡುತ್ತಾರೆ ? ತಾನು ಶುದ್ಧ ಬ್ರಹ್ಮನೆಂದು ನಿಶ್ಚಯಿಸಿದರೆ ಕರ್ತವ್ಯವೇನು ಉಳಿಯಿತು! ತಮಗೆ ಕಾಮ-ಕ್ರೋಧಾದಿಗಳಾಗುತ್ತಿರುವುದು ಪ್ರತ್ಯಕ್ಷ ಕಂಡು ಬರುತ್ತದೆ, ಮತ್ತು ಶರೀರಾದಿಗಳ ಸಂಯೋಗವೂ ಕಂಡು ಬರುತ್ತದೆ; ಇವುಗಳ ಅಭಾವವಾದಾಗ ಆಗುವುದು, ವರ್ತಮಾನದಲ್ಲಿ ಇವುಗಳ ಸದ್ಭಾವ ಮನ್ನಿಸುವುದು ಭ್ರಾಂತಿ ಹೇಗಾಗುವುದು.

ಮೋಕ್ಷದ ಉಪಾಯ ಮಾಡುವುದೂ ಭ್ರಮೆಯೆಂದು ಹೇಳುತ್ತಾರೆ. ಹೇಗೆಂದರೆ ಹಗ್ಗವಂತೂ ಹಗ್ಗವೇ ಇದೆ ಅದನ್ನು ಸರ್ಪವೆಂದು ತಿಳಿಯುತ್ತಿತ್ತು ಅದು ಭ್ರಮೆಯಿತ್ತು, ಭ್ರಮೆಯು ದೂರವಾದರೆ ಹಗ್ಗವೇ ಇದೆ; ಅದೇ ಪ್ರಕಾರ ತಾವಂತೂ ಬ್ರಹ್ಮರೇ ಇದ್ದೀರಿ, ತಮ್ಮನ್ನು ಅಶುದ್ಧವೆಂದು ತಿಳಿಯುತ್ತಿತ್ತು ಅದು ಭ್ರಮೆಯಿತ್ತು, ಭ್ರಮೆಯು ದೂರವಾದರೆ ತಾವು ಬ್ರಹ್ಮರೇ ಇದ್ದೀರೆಂದು ಹೇಳುವುದು ಮಿಥ್ಯೆಯಿದೆ. ತಾವು ಶುದ್ಧರಿದ್ದು ಅದನ್ನು ಅಶುದ್ಧವೆಂದು ತಿಳಿದರೆ ಭ್ರಮೆಯಿದೆ; ಮತ್ತು ತಾವು ಕಾಮ-ಕ್ರೋಧಾದಿಗಳಿಂದ ಅಶುದ್ಧವಾಗುತ್ತಿರುವಾಗ ಅದನ್ನು ಅಶುದ್ಧವೆಂದು ತಿಳಿದರೆ ಭ್ರಾಂತಿ ಹೇಗಾಗುವುದು ? ಶುದ್ಧ ತಿಳಿದರೆ ಭ್ರಮೆಯಾಗುವುದು. ಸುಳ್ಳು ಭ್ರಾಂತಿಯಿಂದ ತಮ್ಮನ್ನು ಶುದ್ಧ ಬ್ರಹ್ಮನೆಂದು ಮನ್ನಿಸಿದರೆ ಯಾವ ಸಿದ್ಧಿಯಿದೆ ?

ಈ ಕಾಮ-ಕ್ರೋಧಾದಿಗಳು ಮನಸ್ಸಿನ ಧರ್ಮವಿದ್ದು ಬ್ರಹ್ಮನು ಬೇರೆಯಿದ್ದಾನೆಂದು ನೀನು ಹೇಳಬಹುದು, ಆದರೆ ಮನಸ್ಸು ನಿನ್ನ ಸ್ವರೂಪವಿದೆಯೋ ಅಥವಾ ಇಲ್ಲವೋ ? ಇದ್ದರೆ ಕಾಮ-ಕ್ರೋಧಾದಿಗಳೂ ನಿನ್ನವೇ ಆದವು ; ಮತ್ತು ಇಲ್ಲದಿದ್ದರೆ ನೀನು ಜ್ಞಾನಸ್ವಭಾವಿಯಿರುವೆಯೋ ಅಥವಾ ಜಡವಿರುವೆಯೋ ? ಜ್ಞಾನಸ್ವರೂಪನಿದ್ದರೆ ನಿನ್ನ ಜ್ಞಾನವು ಮನಸ್ಸು ಹಾಗೂ ಇಂದ್ರಿಯಗಳಿಂದಲೇ ಆಗುತ್ತಿರುವುದು ಕಂಡು ಬರುತ್ತದೆ. ಇವುಗಳಲ್ಲದೆ ಯಾವುದೇ ಜ್ಞಾನ ಹೇಳಿದರೆ ಅದನ್ನು ನಿನ್ನಿಂದ ಭಿನ್ನಸ್ವರೂಪವೆಂದು ಮನ್ನಿಸುವಂತೆ ಭಾಸವಾಗುವುದಿಲ್ಲ. 'ಮನಜ್ಞಾನೇ' ಧಾತುವಿನಿಂದ ಮನ ಶಬ್ದವು ಉತ್ಪನ್ನವಾಗುತ್ತದೆ ಆ ಮನವಂತೂ ಜ್ಞಾನಸ್ವರೂಪವಿದೆ; ಆದರೆ ಈ ಜ್ಞಾನವು

ಯಾರದಿದೆ ಅವರನ್ನು ತೋರಿಸು; ಆದರೆ ಬೇರೆ ಯಾರೂ ಕಂಡು ಬರುವುದಿಲ್ಲ. ಮತ್ತು ನೀನು ಜಡನಿದ್ದರೆ ಜ್ಞಾನವಿಲ್ಲದೆ ತನ್ನ ಸ್ವರೂಪದ ವಿಚಾರ ಹೇಗೆ ಮಾಡುತ್ತಾನೆ? ಇದಂತೂ ಸಾಧ್ಯವಿಲ್ಲ. ಮತ್ತು ಬ್ರಹ್ಮನು ಬೇರೆಯಿದ್ದಾನೆಂದು ನೀನು ಹೇಗೆ ಹೇಳುವೆ, ಆದರೆ ಆ ಬೇರೆ ಬ್ರಹ್ಮನು ನೀನೇ ಇರುವಿಯೋ ಅಥವಾ ಬೇರೆಯಿರುವರೋ ? ನೀನೇ ಇದ್ದರೆ 'ನಾನು ಬ್ರಹ್ಮನಿದ್ದೇನೆ'ಂದು ಮನ್ನಿಸುವಂಥ ಆ ನಿನ್ನ ಜ್ಞಾನವಂತೂ ಮನಸ್ವರೂಪವೇ ಇದೆ, ಮನದಿಂದ ಭಿನ್ನವಿಲ್ಲ; ಮತ್ತು ತನ್ನತನವನ್ನು ಮನ್ನಿಸುವುದಂತೂ ತನ್ನಲ್ಲಿಯೇ ಇರುತ್ತದೆ. ಅದನ್ನು ಭಿನ್ನ ತಿಳಿದರೆ ಅದರಲ್ಲಿ ತನ್ನತನವನ್ನು ಮನ್ನಿಸಲಾಗುವುದಿಲ್ಲ. ಬ್ರಹ್ಮನು ಮನದಿಂದ ಭಿನ್ನನಿದ್ದರೆ ಮನರೂಪದ ಜ್ಞಾನವು ಬ್ರಹ್ಮನಲ್ಲಿ ತನ್ನತನವನ್ನೇಕೆ ಮನ್ನಿಸುತ್ತದೆ ? ಮತ್ತು ಬ್ರಹ್ಮನು ಬೇರೆಯೇ ಇದ್ದರೆ ನೀನು ಬ್ರಹ್ಮನಲ್ಲಿ ತನ್ನತನವನ್ನೇಕೆ ಮನ್ನಿಸುವೆ ? ಆದುದರಿಂದ ಭ್ರಮೆಯನ್ನು ಬಿಟ್ಟುಕೊಟ್ಟು ಯಾವ ಪ್ರಕಾರ ಸ್ಪರ್ಶನಾದಿ ಇಂದ್ರಿಯಗಳು ಶರೀರದ ಸ್ವರೂಪವಿದ್ದು ಶರೀರವು ಜಡವಿದೆ, ಅದರಿಂದಾಗುತ್ತಿರುವ ತಿಳಿವಳಿಕೆಯು ಆತ್ಮನ ಸ್ವರೂಪವಿದೆ; ಅದೇ ಪ್ರಕಾರ ಮನಸ್ಸೂ ಸೂಕ್ಷ್ಮ ಪರಮಾಣುಗಳ ಪುಂಜವಿದ್ದು ಅದು ಶರೀರದ ಅಂಗವೇ ಇದೆ. ಅದರಿಂದ ಜ್ಞಾನವಾಗುತ್ತದೆ ಮತ್ತು ಕಾಮ-ಕ್ರೋಧಾದಿ ಭಾವಗಳಾಗುತ್ತವೆ ಅವೆಲ್ಲವು ಆತ್ಮನ ಸ್ವರೂಪವಿದೆ.

ಜ್ಞಾನವಂತೂ ನಿಜಸ್ವಭಾವವಿದ್ದು ಕಾಮ-ಕ್ರೋಧಾದಿಗಳು ಔಪಾಧಿಕ ಭಾವಗಳಿವೆ, ಅವುಗಳಿಂದ ಆತ್ಮನು ಅಶುದ್ಧನಿದ್ದಾನೆ. ಯೋಗ್ಯ ಸಮಯ ಬಂದಾಗ ಕಾಮ-ಕ್ರೋಧಾದಿಗಳು ದೂರವಾಗುವವು ಮತ್ತು ಜ್ಞಾನವು ಮನಸ್ಸು-ಇಂದ್ರಿಯಗಳ ಆಧೀನತೆಯಿಂದ ದೂರವಾದಾಗ ಕೇವಲಜ್ಞಾನಸ್ವರೂಪನಾದ ಆತ್ಮನು ಶುದ್ಧನಾಗುವನು.

ಇದೇ ಪ್ರಕಾರ ಬುದ್ಧಿ-ಅಹಂಕಾರಾದಿಗಳನ್ನು ತಿಳಿಯಬೇಕು. ಏಕೆಂದರೆ ಮನ, ಬುದ್ಧಿ ಮೊದಲಾದವು ಏಕಾರ್ಥವಾಚಿಯಿವೆ ಮತ್ತು ಅಹಂಕಾರಾದಿಗಳು ಕಾಮ-ಕ್ರೋಧಾದಿಗಳಂತೆ ಔಪಾಧಿಕ ಭಾವಗಳಿವೆ; ಇವನ್ನು ತಮ್ಮಿಂದ ಭಿನ್ನವೆಂದು ತಿಳಿಯುವುದು ಭ್ರಮೆಯಿದೆ. ಇವನ್ನು ತಮ್ಮವೆಂದು ತಿಳಿದುಕೊಂಡು ಔಪಾಧಿಕ ಭಾವಗಳ ಅಭಾವ ಮಾಡುವ ಉದ್ಯೋಗ ಮಾಡುವುದು ಯೋಗ್ಯವಿದೆ. ಯಾರಿಂದ ಇವುಗಳ ಅಭಾವವಾಗುವುದಿಲ್ಲ ಮತ್ತು ತಮ್ಮ ಮಹಿಮೆಯನ್ನಂತೂ ಅಪೇಕ್ಷಿಸುವಂಥ ಜೀವರುಗಳು ಇವನ್ನು ತಮ್ಮವೆಂದು ನಿಶ್ಚಯಿಸದೆ ಸ್ವಚ್ಛಂದವಾಗಿ ಪ್ರವರ್ತಿಸುತ್ತಾರೆ; ಕಾಮ-ಕ್ರೋಧಾದಿ ಭಾವಗಳನ್ನು ವೃದ್ಧಿಸಿ ವಿಷಯ-ಸಾಮಗ್ರಿಗಳಲ್ಲಿ ಹಾಗೂ ಹಿಂಸಾದಿ ಕಾರ್ಯಗಳಲ್ಲಿ ತತ್ಪರರಾಗುತ್ತಾರೆ.

ಅವರು ಅಹಂಕಾರಾದಿಗಳ ತ್ಯಾಗವನ್ನು ಕೂಡ ಅನ್ಯಥಾ ಮನ್ನಿಸುತ್ತಾರೆ. ಎಲ್ಲವನ್ನು ಪರಬ್ರಹ್ಮನೆಂದು ಮನ್ನಿಸುವುದು, ಎಲ್ಲಿಯೂ ತನ್ನತನವನ್ನು ಮನ್ನಿಸದಿರುವುದಕ್ಕೆ ಅಹಂಕಾರದ ತ್ಯಾಗವೆಂದು ಹೇಳುತ್ತಾರೆ ಅದು ಮಿಥ್ಯೆಯಿದೆ; ಏಕೆಂದರೆ ಯಾರೂ ತಾವಿದ್ದೀರೋ ಅಥವಾ ಇಲ್ಲವೋ ? ಇದ್ದರೆ ತಮ್ಮಲ್ಲಿ ತಮ್ಮತನವನ್ನೇಕೆ ಮನ್ನಿಸುವುದಿಲ್ಲ ? ತಾವು ಇಲ್ಲದಿದ್ದರೆ ಎಲ್ಲರನ್ನು ಬ್ರಹ್ಮನೆಂದಾರು ಮನ್ನಿಸುತ್ತಾರೆ ? ಆದುದರಿಂದ ಶರೀರ ಮೊದಲಾದ ಪರದಲ್ಲಿ ಅಹಂಬುದ್ಧಿ ಮಾಡದಿರುವುದು, ಅದರಲ್ಲಿ ಕರ್ತೃವಾಗದಿರುವುದು ಅದು ಅಹಂಕಾರದ ತ್ಯಾಗವಿದೆ, ತಮ್ಮಲ್ಲಿ ಅಹಂಬುದ್ಧಿ ಮಾಡುವುದು ದೋಷವಲ್ಲ.

ಎಲ್ಲವನ್ನು ಸಮಾನ ತಿಳಿಯುವುದು, ಯಾವುದರಲ್ಲೂ ಭೇದ ಮಾಡದಿರುವುದಕ್ಕೆ ರಾಗ-ದ್ವೇಷಗಳ ತ್ಯಾಗವೆಂದು ಹೇಳುತ್ತಾರೆ ಅದು ಕೂಡ ಮಿಥ್ಯೆಯಿದೆ; ಏಕೆಂದರೆ ಎಲ್ಲ ಪ್ರದಾರ್ಥಗಳು ಸಮಾನವಿಲ್ಲ. ಒಂದು

ಚೇತನವಿದ್ದರೆ ಒಂದು ಅಚೇತನವಿದೆ, ಒಂದು ಹಾಗಿದ್ದರೆ ಒಂದು ಹೀಗಿದೆ, ಅವನ್ನು ಸಮಾನ ಹೇಗೆ ಮನ್ನಿಸುವುದು? ಆದುದರಿಂದ ಪರದ್ರವ್ಯಗಳನ್ನು ಇಷ್ಟಾನಿಷ್ಟವೆಂದು ಮನ್ನಿಸದಿರುವುದು ಅದು ರಾಗ-ದ್ವೇಷಗಳ ತ್ಯಾಗವಿದೆ. ಪದಾರ್ಥಗಳ ವಿಶೇಷ ತಿಳಿಯುವಲ್ಲಿ ಯಾವ ದೋಷವಿಲ್ಲ.

ಇದೇ ರೀತಿ ಅನ್ಯ ಮೋಕ್ಷಮಾರ್ಗರೂಪ ಭಾವಗಳ ಕಲ್ಪನೆಯನ್ನೂ ಅನ್ಯಥಾ ಮಾಡುತ್ತಾರೆ. ಮತ್ತು ಇಂಥ ಕಲ್ಪನೆಯಿಂದ ಕುಶೀಲ ಸೇವನೆ ಮಾಡುತ್ತಾರೆ, ಅಭಕ್ಷ್ಯ ಭಕ್ಷಣೆ ಮಾಡುತ್ತಾರೆ, ವರ್ಣಾದಿ ಭೇದ ಮಾಡುವುದಿಲ್ಲ, ಹೀನ ಕ್ರಿಯೆಗಳನ್ನು ಆಚರಿಸುತ್ತಾರೆ ಇವೇ ಮೊದಲಾಗಿ ವಿಪರೀತರೂಪವಾಗಿ ಪ್ರವರ್ತಿಸುತ್ತಾರೆ. ಯಾರಾದರೂ ಕೇಳಿದರೆ ಇದಂತೂ ಶರೀರದ ಧರ್ಮವಿದೆ, ಅಥವಾ ಪ್ರಾರಬ್ಧವಿದ್ದಂತೆ ಆಗುತ್ತದೆ, ಅಥವಾ ಈಶ್ವರನ ಇಚ್ಛೆಯಿದ್ದಂತೆ ಆಗುತ್ತದೆ, ನಮಗಂತೂ ವಿಕಲ್ಪ ಮಾಡುವುದಿಲ್ಲವೆಂದು ಹೇಳುತ್ತಾರೆ.

ಈ ಮಿಥ್ಯಾಲಾಪವನ್ನು ನೋಡಿರಿ ! ತಾವು ತಿಳಿದೂ-ತಿಳಿದೂ ಪ್ರವರ್ತಿಸುತ್ತಿರುವುದನ್ನು ಶರೀರದ ಧರ್ಮವೆಂದು ಹೇಳುತ್ತಾರೆ, ಸ್ವಯಂ ಉದ್ಯಮಿಯಾಗಿ ಕಾರ್ಯಮಾಡುತ್ತಿರುವುದನ್ನು ಪ್ರಾರಬ್ಧವೆಂದು ಹೇಳುತ್ತಾರೆ, ಮತ್ತು ತಾವು ಇಚ್ಛೆಯಿಂದ ಸೇವನೆ ಮಾಡುತ್ತಿರುವುದನ್ನು ಈಶ್ವರನ ಇಚ್ಛೆಯೆಂದು ತಿಳಿಸುತ್ತಾರೆ. ವಿಕಲ್ಪ ಮಾಡುತ್ತಾರೆ ಮತ್ತು ನಮಗೆ ವಿಕಲ್ಪ ಮಾಡುವುದಿಲ್ಲವೆಂದು ಹೇಳುತ್ತಾರೆ. ಅವರು ಧರ್ಮದ ಆಶ್ರಯ ಪಡೆದು ವಿಷಯ ಕಷಾಯದ ಸೇವನೆ ಮಾಡುತ್ತಿರುವುದರಿಂದ ಇಂಥ ಸುಳ್ಳು ಯುಕ್ತಿ ರಚಿಸುತ್ತಾರೆ. ತಮ್ಮ ಪರಿಣಾಮವನ್ನು ಎಳ್ಳಷ್ಟೂ ಬೆರೆಸದಿದ್ದರೆ ನಾವು ಇವನ ಕರ್ತವ್ಯವೆಂದು ಮನ್ನಿಸುವುದಿಲ್ಲ. ಹೇಗೆಂದರೆ ತಾವು ಧ್ಯಾನ ಧರಿಸಿ ಕುಳಿತಿರುವಾಗ ಯಾವನೋ ತಮ್ಮ ಮೇಲೆ ಬಟ್ಟೆ ಹೊದಿಸಿದರೆ ತಾವು ಒಂದಿಷ್ಟೂ ಸುಖಿಯಾಗದಿದ್ದರೆ ತಮಗೆ ಅದರ ಕರ್ತವ್ಯವಿಲ್ಲವೆಂಬುದು ನಿಜವಿದೆ. ಮತ್ತು ತಾವು ಬಟ್ಟೆಯನ್ನು ಸ್ವೀಕರಿಸಿ ಹೊದ್ದುಕೊಂಡು ತಮ್ಮ ಶೀತಾದಿ ವೇದನೆಯನ್ನು ದೂರಮಾಡಿ ಸುಖಿಯಾಗುವುದು ಮತ್ತು ತನ್ನ ಕರ್ತವ್ಯವಿಲ್ಲವೆಂದು ಮನ್ನಿಸಿದರೆ ಅದು ಹೇಗೆ ಸಂಭವವಿದೆ ? ಕುಶೀಲ ಸೇವನೆ ಮಾಡುವುದು, ಅಭಕ್ಷ್ಯ ಭಕ್ಷಣೆ ಮಾಡುವುದು ಇತ್ಯಾದಿ ಕಾರ್ಯಗಳಂತೂ ಪರಿಣಾಮವಿಲ್ಲದೆ ಆಗುವುದಿಲ್ಲ; ಅದನ್ನು ತನ್ನ ಕರ್ತವ್ಯವಲ್ಲವೆಂದು ಹೇಗೆ ಮನ್ನಿಸುವುದು ? ಆದುದರಿಂದ ಕಾಮ-ಕ್ರೋಧಾದಿಗಳ ಅಭಾವವೇ ಆಗಿದ್ದರೆ ಯಾವ ಕ್ರಿಯೆಗಳಲ್ಲಿ ಪ್ರವೃತ್ತಿಯು ಸಂಭವಿಸುವುದಿಲ್ಲ. ಮತ್ತು ಕಾಮ-ಕ್ರೋಧಾದಿಗಳು ಕಂಡು ಬರುತ್ತಿದ್ದರೆ ಯಾವ ಪ್ರಕಾರ ಈ ಭಾವಗಳು ಕಡಿಮೆಯಾಗುವವು ಅದಕ್ಕನುಸಾರವಾಗಿ ಪ್ರವೃತ್ತಿ ಮಾಡಬೇಕು. ಸ್ವಚ್ಛಂದರಾಗಿ ಇವುಗಳನ್ನು ವೃದ್ಧಿಸುವುದು ಯುಕ್ತಿಯಲ್ಲ.

ಕೆಲವರು ಪ್ರಾಣಾಯಾಮದ ಸಾಧನೆ ಮಾಡಿ ತಮ್ಮನ್ನು ಜ್ಞಾನಿಯೆಂದು ಮನ್ನಿಸುತ್ತಾರೆ. ಅಲ್ಲಿ ರೇಚಕ, ಪೂರಕ, ಕುಂಭಕ ರೂಪವಾಗಿ ನಾಶಿಕದ್ವಾರದಿಂದ ಗಾಳಿಯು ಹೊರಟಾಗ ವರ್ಣಾದಿಗಳ ಭೇದದಿಂದ ಪವನವನ್ನೇ ಪೃಥ್ವಿತತ್ತ್ವಾದಿರೂಪವಾಗಿ ಕಲ್ಪನೆ ಮಾಡುತ್ತಾರೆ. ಅದರ ವಿಜ್ಞಾನ ಮುಖಾಂತರ ಸ್ವಲ್ಪ ಸಾಧನೆಯಿಂದ ನಿಮಿತ್ತದ ಜ್ಞಾನವಾಗುವುದರಿಂದ ಜಗತ್ತಿಗೆ ಇಷ್ಟಾನಿಷ್ಟವನ್ನು ತಿಳಿಸುತ್ತಾರೆ, ತಮ್ಮನ್ನು ಮಹಾನರೆಂದು ಹೇಳಿಕೊಳ್ಳುತ್ತಾರೆ; ಆದರೆ ಇದಂತೂ ಲೌಕಿಕ ಕಾರ್ಯವಿದೆ, ಇದೇನು ಮೋಕ್ಷಮಾರ್ಗವಲ್ಲ. ಜೀವರುಗಳಿಗೆ ಇಷ್ಟಾನಿಷ್ಟಗಳನ್ನು ತೋರಿಸಿ ಅವರ ರಾಗ-ದ್ವೇಷಗಳನ್ನು ಹೆಚ್ಚಿಸುವುದು ಮತ್ತು ತಮ್ಮ ಮಾನ-ಲೋಭಾದಿಗಳನ್ನು ಉತ್ಪನ್ನ ಮಾಡುವುದರಲ್ಲಿ ಯಾವ ಸಿದ್ಧಿಯಿದೆ?

ಪ್ರಾಣಾಯಾಮದ ಸಾಧನೆ ಮಾಡಿ, ವಾಯುವನ್ನು ಏರಿಸಿ ಸಮಾಧಿ ಹತ್ತಿದೆಯೆನ್ನುತ್ತಾರೆ; ಆದರೆ ಇದಂತೂ ಯಾವ ಪ್ರಕಾರ ನಟನು ಸಾಧನೆಯಿಂದ ಹಸ್ತಾದಿಗಳಿಂದ ಕ್ರಿಯೆ ಮಾಡುತ್ತಾನೆ, ಅದೇ ಪ್ರಕಾರ ಇಲ್ಲಿಯೂ ಸಾಧನೆಯಿಂದ ವಾಯುವಿನಿಂದ ಕ್ರಿಯೆ ಮಾಡಿದೆ. ಹಸ್ತಾದಿಗಳು ಮತ್ತು ವಾಯುವಂತೂ ಶರೀರದ ಅಂಗಗಳೇ ಇದ್ದು ಇವುಗಳ ಸಾಧನೆಯಿಂದ ಆತ್ಮಹಿತವನ್ನು ಹೇಗೆ ಸಾಧಿಸುವುದು ?

ಅಲ್ಲಿ ಮನಸ್ಸಿನ ವಿಕಲ್ಪವು ದೂರವಾಗುತ್ತದೆ, ಸುಖವು ಉತ್ಪನ್ನವಾಗುತ್ತದೆ, ಯಮನ ವಶೀಭೂತತೆ ಯಾಗುವುದಿಲ್ಲವೆಂದು ನೀನೆನ್ನುವೆ; ಆದರೆ ಇದು ಮಿಥ್ಯೆಯಿದೆ. ಯಾವ ಪ್ರಕಾರ ನಿದ್ರೆಯಲ್ಲಿ ಚೇತನದ ಪ್ರವೃತ್ತಿಯು ಇಲ್ಲದಂತಾಗುತ್ತದೆ. ಅದೇ ಪ್ರಕಾರ ವಾಯು ಸಾಧನೆಯಿಂದ ಇಲ್ಲಿ ಚೇತನದ ಪ್ರವೃತ್ತಿಯು ಇಲ್ಲದಂತಾಗುತ್ತದೆ. ಅಲ್ಲಿ ಮನಸ್ಸನ್ನು ತಡೆಹಿಡಿಯಲಾಗಿದೆ, ವಾಸನೆಯು ನಾಶವಾಗದಿರುವುದರಿಂದ ಮನಸ್ಸಿನ ವಿಕಲ್ಪವು ಹೋಗಿದೆಯೆನ್ನುವುದಿಲ್ಲ; ಮತ್ತು ಚೇತನವಿಲ್ಲದೆ ಸುಖವನ್ನಾರು ಭೋಗಿಸುತ್ತಾರೆ ? ಆದುದರಿಂದ ಸುಖವು ಉತ್ಪನ್ನವಾಗಿದೆಯೆಂದು ಹೇಳುವುದಿಲ್ಲ. ಈ ಸಾಧನೆಯುಳ್ಳವರಂತೂ ಈ ಕ್ಷೇತ್ರದಲ್ಲಿ ಆಗಿದ್ದಾರೆ, ಅವರಲ್ಲಿ ಯಾವನೂ ಅಮರನಾಗಿ ಕಂಡು ಬರುವುದಿಲ್ಲ. ಅಗ್ನಿ ತಗಲಿಸುವುದರಿಂದ ಅವನದೂ ಮರಣವಾಗುವುದು ಕಂಡು ಬರುತ್ತದೆ; ಆದುದರಿಂದ ಯಮನ ವಶೀಭೂತವಿಲ್ಲವೆಂಬುದು ಸುಳ್ಳು ಕಲ್ಪನೆಯಿದೆ.

ಸಾಧನೆಯಲ್ಲಿ ಸ್ವಲ್ಪ ಚೇತನವುಳಿದರೆ ಮತ್ತು ಸಾಧನೆಯಿಂದ ಶಬ್ದ ಕೇಳಿದರೆ ಅದನ್ನು 'ಅನಹದನಾದ'ವೆನ್ನುತ್ತಾರೆ. ಯಾವ ಪ್ರಕಾರ ವೀಣಾದಿಗಳ ಶಬ್ದ ಕೇಳುವುದರಿಂದ ಸುಖ ಮನ್ನಿಸುತ್ತದೆ ಅದೇ ಪ್ರಕಾರ ಅದನ್ನು ಕೇಳುವುದರಿಂದ ಸುಖಮನ್ನಿಸುವುದಿದೆ. ಇಲ್ಲಿಯಂತೂ ವಿಷಯ ಪೋಷಣೆಯಾಯಿತು, ಪರಮಾರ್ಥವಂತೂ ಏನೂ ಇಲ್ಲ. ಮತ್ತು ವಾಯು ಹೊರಡುವಲ್ಲಿ ಪ್ರವಿಷ್ಟವಾಗುವಲ್ಲಿ 'ಸೋಹಂ' ಶಬ್ದದ ಕಲ್ಪನೆ ಮಾಡಿ ಅದನ್ನು 'ಅಜಪಾಜಾಪ'ವೆಂದು ಹೇಳುತ್ತಾರೆ. ಆದರೆ ಹೇಗೆ ಕೌಜಿಗದ ಶಬ್ದದಲ್ಲಿ 'ನೀನೇ' ಶಬ್ದದ ಕಲ್ಪನೆ ಮಾಡುತ್ತಾರೆ, ಕೌಜಿಗವೇನು ಅರ್ಥದ ಅವಧಾರಣ ಮಾಡಿ ಇಂಥ ಶಬ್ದ ಹೇಳುವುದಿಲ್ಲ; ಅದೇ ಪ್ರಕಾರ ಇಲ್ಲಿ 'ಸೋಹಂ' ಶಬ್ದದ ಕಲ್ಪನೆಯಿದೆ; ವಾಯುವೇನು ಅರ್ಥದ ಅವಧಾರಣ ಮಾಡಿ ಇಂಥ ಶಬ್ದ ಹೇಳುವುದಿಲ್ಲ; ಮತ್ತು ಶಬ್ದವನ್ನು ಜಪಿಸುವುದರಿಂದ-ಕೇಳುವುದರಿಂದ ಯಾವ ಫಲದ ಪ್ರಾಪ್ತಿಯಾಗುವುದಿಲ್ಲ. ಅರ್ಥದ ಅವಧಾರಣೆ ಮಾಡುವುದರಿಂದ ಫಲದ ಪ್ರಾಪ್ತಿಯಾಗುತ್ತದೆ,

'ಅವನು ನಾನಿದ್ದೇನೆ'ಂಬುದೇ 'ಸೋಹಂ' ಶಬ್ದದ ಅರ್ಥವಿದೆ. ಇಲ್ಲಿ 'ಅವನು' ಯಾರೆಂಬ ಅಪೇಕ್ಷೆಬೇಕು, ಆಗ ಅವನ ನಿರ್ಣಯ ಮಾಡಬೇಕು; ಏಕೆಂದರೆ ತತ್‌ಶಬ್ದಕ್ಕೆ ಮತ್ತು ಯತ್ ಶಬ್ದಕ್ಕೆ ನಿತ್ಯ ಸಂಬಂಧವಿದೆ. ಆದುದರಿಂದ ವಸ್ತುವಿನ ನಿರ್ಣಯ ಮಾಡಿ ಅದರಲ್ಲಿ ಅಹಂಬುದ್ಧಿ ಧಾರಣಮಾಡುವಲ್ಲಿ 'ಸೋಹಂ' ಶಬ್ದವಾಗುತ್ತದೆ. ಅಲ್ಲಿಯೂ ತನ್ನನ್ನು ತನ್ನ ರೂಪದಿಂದ ಅನುಭವ ಮಾಡಿದರೆ 'ಸೋಹಂ' ಶಬ್ದವು ಸಂಭವವಿಲ್ಲ, ಪರವನ್ನು ತನ್ನ ರೂಪವಾಗಿ ತಿಳಿಸುವಲ್ಲಿ 'ಸೋಹಂ' ಶಬ್ದವು ಸಂಭವವಿದೆ, ಹೇಗೆಂದರೆ-ಪುರುಷನು ತನ್ನನ್ನು ತಾನು ತಿಳಿದರೆ ಅಲ್ಲಿ 'ಅವನು ನಾನಿದ್ದೇನೆ'ಂದು ಏತಕ್ಕಾಗಿ ವಿಚಾರಿಸುವನು ? ಯಾವನೋ ಅನ್ಯ ಜೀವನು ತನ್ನನ್ನು ಗುರುತಿಸದಿದ್ದರೆ ಮತ್ತು ಯಾವನೋ ತನ್ನ ಲಕ್ಷಣ ತಿಳಿಯದಿದ್ದರೆ 'ಹೀಗಿದ್ದವನು ನಾನಿದ್ದೇನೆ'ಂದು ಆಗ ಅವನಿಗೆ ಹೇಳುತ್ತಾರೆ, ಅದೇ ಪ್ರಕಾರ ಇಲ್ಲಿ ತಿಳಿಯಬೇಕು.

ಕೆಲವರು ಹಣೆ, ಹುಬ್ಬು ಮತ್ತು ನಾಸಿಕಾಗ್ರವನ್ನು ನೋಡುವ ಸಾಧನದಿಂದ ತ್ರಿಪುಟಿ ಧ್ಯಾನವಾಯಿತೆಂದು ಹೇಳಿ ಪರಮಾರ್ಥ ಮನ್ನಿಸುತ್ತಾರೆ. ಅಲ್ಲಿ ಕಣ್ಣಿನಗೊಂಬೆ ತಿರುವಿ ಮೂರ್ತಿಕ ವಸ್ತುವನ್ನು ನೋಡುವುದರಲ್ಲಿ ಯಾವ ಸಿದ್ಧಿಯಿದೆ ? ಇಂಥ ಸಾಧನದಿಂದ ಒಂದಿಷ್ಟು ಅತೀತ-ಅನಾಗತಾದಿಗಳ ಜ್ಞಾನವಾಗುವುದು, ವಚನಸಿದ್ಧಿಯಾಗುವುದು, ಪೃಥ್ವಿ-ಆಕಾಶಾದಿಗಳಲ್ಲಿ ಗಮನದ ಶಕ್ತಿಯಾಗುವುದು, ಮತ್ತು ಶರೀರದಲ್ಲಿ ಆರೋಗ್ಯತೆಯಾಗುವುದು ಇವೆಲ್ಲವೂ ಲೌಕಿಕ ಕಾರ್ಯಗಳಿವೆ; ದೇವಾದಿಕರಿಗೆ ತಾನಾಗಿಯೇ ಇಂಥ ಶಕ್ತಿಯು ಕಂಡು ಬರುತ್ತದೆ. ಇವುಗಳಿಂದೇನು ತನ್ನ ಒಳಿತಂತೂ ಆಗುವುದಿಲ್ಲ; ಒಳಿತಂದೂ ವಿಷಯ ಕಷಾಯಗಳ ವಾಸನೆಯು ದೂರವಾದಾಗ ಆಗುತ್ತದೆ; ಇವಂತೂ ವಿಷಯ ಕಷಾಯಗಳ ಪೋಷಣೆಮಾಡುವ ಉಪಾಯಗಳಿವೆ; ಆದುದರಿಂದ ಇವೆಲ್ಲ ಸಾಧನಗಳು ಸ್ವಲ್ಪ ಮಾತ್ರವೂ ಹಿತಕಾರಕಗಳಾಗಿಲ್ಲ. ಇವುಗಳಲ್ಲಿ ಮರಣದವರೆಗೆ ಅಧಿಕ ಕಷ್ಟವಾಗುತ್ತದೆ ಮತ್ತು ಹಿತಸಾಧಿಸುವುದಿಲ್ಲ; ಆದುದರಿಂದ ಜ್ಞಾನಿಗಳು ವ್ಯರ್ಥವಾಗಿ ಇಂಥ ಖೇದ ಮಾಡುವುದಿಲ್ಲ ಕಷಾಯವುಳ್ಳ ಜೀವರುಗಳೇ ಇಂಥ ಸಾಧನೆಯಲ್ಲಿ ತೊಡಗುತ್ತಾರೆ.

ಒಬ್ಬನಿಗೆ ಅಧಿಕ ತಪಶ್ಚರ್ಯದಿಂದ ಮೋಕ್ಷದ ಸಾಧನವು ಕಠಿಣವೆಂದು ತಿಳಿಸುತ್ತಾರೆ, ಒಬ್ಬನಿಗೆ ಸುಲಭತೆಯಿಂದಲೇ ಮೋಕ್ಷವಾಯಿತೆಂದು ಹೇಳುತ್ತಾರೆ. ಉದ್ಧವಾದಿಕರನ್ನು ಪರಮಭಕ್ತರೆಂದು ಹೇಳಿ ಅವರಿಗೆ ತಪಸ್ಸಿನ ಉಪದೇಶ ಕೊಟ್ಟರೆಂದು ಹೇಳುತ್ತಾರೆ ಮತ್ತು ವೇಶ್ಯೆಯರಿಗೆ ಪರಿಣಾಮವಿಲ್ಲದೆ ಕೇವಲ ನಾಮಸ್ಮರಣದಿಂದಲೇ ಸಂಸಾರ ದಾಟಿದರೆಂದು ತಿಳಿಸುತ್ತಾರೆ, ಯಾವ ಗೊತ್ತು ಗುರಿಯೇ ಇಲ್ಲ.

ಈ ಪ್ರಕಾರ ಮೋಕ್ಷಮಾರ್ಗವನ್ನು ವಿಪರೀತವಾಗಿ ಪ್ರರೂಪಣೆ ಮಾಡುತ್ತಾರೆ.

## ಅನ್ಯಮತದಲ್ಲಿ ಕಲ್ಪಿತ ಮೋಕ್ಷಮಾರ್ಗದ ಮೀಮಾಂಸೆ :-

ಮೋಕ್ಷಮಾರ್ಗದಲ್ಲಿ ಕೂಡ ವಿಪರೀತವಾಗಿ ಪ್ರರೂಪಣೆ ಮಾಡುತ್ತಾರೆ. ಅಲ್ಲಿ ಮೋಕ್ಷವನ್ನು ಅನೇಕ ಪ್ರಕಾರದಿಂದ ನಿದರ್ಶಿಸುತ್ತಾರೆ.

ವೈಕುಂಠ ಧಾಮದಲ್ಲಿ ಸ್ವಾಮಿಯು-ಸ್ವಾಮಿನಿಯೊಡನೆ ನಾನಾಭೋಗ ವಿಲಾಸಮಾಡುತ್ತಾನೆ, ಅಲ್ಲಿ ಹೋಗಿ ಅವರ ಸೇವೆ ಮಾಡುತ್ತಿರುವುದೇ ಮೋಕ್ಷವಿದೆಯೆಂದು ಒಬ್ಬನು ಹೇಳುತ್ತಾನೆ, ಆದರೆ ಇದಂತೂ ವಿರುದ್ಧವಿದೆ. ಮೊದಲಂತೂ ಸ್ವಾಮಿಯೇ ಸಂಸಾರಿಯಂತೆ ವಿಷಯಾಸಕ್ತನಾಗುತ್ತಲಿದ್ದಾನೆ; ಆ ರಾಜಾದಿಕರಂತೆಯೇ ಈ ಸ್ವಾಮಿಯಾದನು. ಮತ್ತು ಇತರರಿಂದ ಸೇವೆ ಮಾಡಿಸಿಕೊಳ್ಳಬೇಕಾಯಿತೆಂದರೆ ಸ್ವಾಮಿಯ ಪರಾಧೀನತೆಯಾಯಿತು. ಮತ್ತು ಅವನು ಮೋಕ್ಷಪ್ರಾಪ್ತ ಮಾಡಿಕೊಂಡು ಅಲ್ಲಿ ಸೇವೆ ಮಾಡುತ್ತಿದ್ದರೆ ದೊರೆಯ ನೌಕರಿ ಮಾಡಿದಂತೆ ಇದು ಕೂಡ ನೌಕರಿಯಾಯಿತು? ಅಲ್ಲಿ ಪರಾಧೀನವಾದ ಮೇಲೆ ಸುಖವು ಹೇಗಾಗುವುದು ? ಆದುದರಿಂದ ಇದು ಕೂಡ ಸಂಭವಿಸುವುದಿಲ್ಲ.

ಮೋಕ್ಷವೆಂದರೆ ತಾನು ಈಶ್ವರನ ಸಮಾನನಾಗುತ್ತಾನೆಂದು ಒಬ್ಬನು ಹೇಳುತ್ತಾನೆ; ಆದರೆ ಇದೂ ಮಿಥ್ಯೆಯಿದೆ. ಇತರರೂ ಅವನ ಸಮಾನರಾದರೆ ಈಶ್ವರರು ಹಲವರಾದರು. ಲೋಕದ ಕರ್ತೃ-ಹರ್ತೃಯಾರೆಂದು ನಿಶ್ಚಯಿಸುವುದು? ಎಲ್ಲರೂ ಈಶ್ವರರಾದರೆ ಭಿನ್ನ ಇಚ್ಛೆಯಾದ ಮೇಲೆ ಪರಸ್ಪರ ವಿರೋಧವಾಗುವುದು. ಒಬ್ಬನೇ

ಇದ್ದರೂ ಸಮಾನತೆ ಯಾಗಲಿಲ್ಲ. ನ್ಯೂನತೆಯಿದ್ದವನಿಗೆ ನೀಚತೆಯಿಂದ ಉಚ್ಚವಾಗುವ ಆಕುಲತೆಯುಳಿಯಿತು; ಆಗ ಸುಖಿ ಹೇಗಾಗುವನು? ಯಾವ ಪ್ರಕಾರ ಜಗತ್ತಿನಲ್ಲಿ ಚಿಕ್ಕದೊರೆ-ದೊಡ್ಡದೊರೆಗಳಿರುತ್ತಾರೆ ಅದೇ ಪ್ರಕಾರ ಮುಕ್ತಿಯಲ್ಲಿ ಹಿರಿ-ಕಿರಿಯ ಈಶ್ವರರಾದರು, ಇದೂ ಸಂಭವಿಸುವುದಿಲ್ಲ.

ವೈಕುಂಠದಲ್ಲಿ ದೀವಿಗೆಯಂಥ ಒಂದು ಜ್ಯೋತಿಯಿದೆ, ಆ ಜ್ಯೋತಿಯಲ್ಲಿ ಜ್ಯೋತಿಯು ಕೂಡಿಹೋಗುವುದೇ ಮೋಕ್ಷವೆಂದು ಒಬ್ಬನು ಹೇಳುತ್ತಾನೆ, ಆದರೆ ಇದೂ ಮಿಥ್ಯೆಯಿದೆ. ದೀವಿಗೆಯ ಜ್ಯೋತಿಯಂತೂ ಮೂರ್ತಿಕ ಅಚೇತನವಿದೆ, ಇಂಥ ಜ್ಯೋತಿಯು ಅಲ್ಲಿ ಹೇಗೆ ಸಂಭವವಿದೆ ? ಮತ್ತು ಜ್ಯೋತಿಯಲ್ಲಿ ಜ್ಯೋತಿಯು ಕೂಡಿದಮೇಲೆ ಈ ಜ್ಯೋತಿಯಿರುವುದೋ ಅಥವಾ ವಿನಷ್ಟವಾಗಿ ಹೋಗುವುದೋ? ಇರುತ್ತಿದ್ದರೆ ಜ್ಯೋತಿಯು ವೃದ್ಧಿಸುತ್ತ ಹೋಗುವುದು, ಆಗ ಜ್ಯೋತಿಯಲ್ಲಿ ಹೀನಾಧಿಕತೆಯಾಗುವುದು; ಮತ್ತು ವಿನಷ್ಟವಾಗಿ ಹೋಗುತ್ತಿದ್ದರೆ ತನ್ನ ಸತ್ತಾ ನಷ್ಟವಾಗುವಂಥ ಕಾರ್ಯವು ಉಪಾದೇಯ ಹೇಗಾಗುವುದು ? ಆದುದರಿಂದ ಹೀಗೆ ಕೂಡ ಸಂಭವಿಸುವುದಿಲ್ಲ.

ಆತ್ಮನು ಬ್ರಹ್ಮನೇ ಇದ್ದಾನೆ, ಮಾಯೆಯ ಆವರಣವು ದೂರವಾದರೆ ಮುಕ್ತಿಯೇ ಇದೆಯೆಂದು ಒಬ್ಬನು ಮೋಕ್ಷವನ್ನು ಹೀಗೆ ಹೇಳುತ್ತಾನೆ, ಆದರೆ ಇದು ಕೂಡ ಮಿಥ್ಯೆಯಿದೆ. ಇವನು ಮಾಯೆಯ ಆವರಣಸಹಿತನಿದ್ದಾಗ ಬ್ರಹ್ಮನೊಡನೆ ಏಕನಿದ್ದನೋ ಅಥವಾ ಭಿನ್ನನಿದ್ದನೋ ? ಏಕನಿದ್ದರೆ ಬ್ರಹ್ಮನೇ ಮಾಯಾರೂಪನಾದನು ಮತ್ತು ಭಿನ್ನನಿದ್ದರೆ ಮಾಯೆಯು ದೂರವಾದ ಮೇಲೆ ಬ್ರಹ್ಮನಲ್ಲಿ ಕೂಡಿದಾಗ ಇವನ ಅಸ್ತಿತ್ವವಿರುತ್ತದೆಯೋ ಅಥವಾ ಇಲ್ಲವೋ ? ಇರುತ್ತಿದ್ದರೆ ಸರ್ವಜ್ಞನಿಗಂತೂ ಇವನ ಅಸ್ತಿತ್ವವು ಭಿನ್ನವಾಗಿ ಭಾಸಿಸುತ್ತಿರಬೇಕು, ಆಗ ಸಂಯೋಗವಾಗುವುದರಿಂದ ಕೂಡಿದನೆಂದು ಹೇಳು, ಆದರೆ ಪರಮಾರ್ಥದಿಂದಂತೂ ಕೂಡಿಲ್ಲ. ಮತ್ತು ಅಸ್ತಿತ್ವ ಉಳಿಯದಿದ್ದರೆ ತಮ್ಮ ಅಭಾವವಾಗುವುದನ್ನು ಯಾರು ಅಪೇಕ್ಷಿಸುವರು ? ಆದುದರಿಂದ ಇದು ಕೂಡ ಸಂಭವಿಸುವುದಿಲ್ಲ;

ಬುದ್ಧಿ ಮೊದಲಾದವುಗಳ ನಾಶವಾದ ಮೇಲೆ ಮೋಕ್ಷವಾಗುತ್ತದೆಂದು ಕೆಲವರು ಮೋಕ್ಷವನ್ನು ಹೀಗೂ ಹೇಳುತ್ತಾರೆ. ಅದರಿಂದ ಜ್ಞಾನವು ಶರೀರದ ಅಂಗಭೂತಗಳಾದ ಮನಸ್ಸು, ಇಂದ್ರಿಯಗಳ ಆಧೀನ ಉಳಿಯಲಿಲ್ಲ, ಕಾಮ-ಕ್ರೋಧಾದಿಗಳು ದೂರವಾದ ಮೇಲೆ ಹೀಗೆನ್ನುವುದು ಸಂಭವಿಸುತ್ತದೆ; ಮತ್ತು ಅಲ್ಲಿ ಚೇತನದ್ದೂ ಅಭಾವವಾಯಿತೆಂದು ಮನ್ನಿಸಿದರೆ ಪಾಷಾಣಾದಿಗಳಂಥ ಜಡ ಅವಸ್ಥೆಗೆ ಒಳ್ಳೆಯದೆಂದು ಹೇಗೆ ಮನ್ನಿಸುವುದು ? ಇನ್ನು ಒಳ್ಳೆಯ ಸಾಧನೆ ಮಾಡುವುದರಿಂದ ಜ್ಞಾನವು ವೃದ್ಧಿಸುತ್ತದೆ, ಅಧಿಕ ಒಳ್ಳೆಯ ಸಾಧನೆ ಮಾಡಿದ ಮೇಲೆ ಜ್ಞಾನದ ಅಭಾವವಾಗುವುದೆಂದು ಹೇಗೆ ಮನ್ನಿಸುವುದು ? ಜಗತ್ತಿನಲ್ಲಿ ಜ್ಞಾನದ ಶ್ರೇಷ್ಠತೆಯಿಂದ ಜಡತೆಯ ಶ್ರೇಷ್ಠತೆಯಿಲ್ಲ; ಆದುದರಿಂದ ಇದು ಸಂಭವಿಸುವುದಿಲ್ಲ.

ಹೀಗೆ ಅನೇಕ ಪ್ರಕಾರದ ಕಲ್ಪನೆಗಳಿಂದ ಮೋಕ್ಷವನ್ನು ಹೇಳುತ್ತಾರೆ, ಆದರೆ ಯಾವ ಯಥಾರ್ಥತೆಯನ್ನಂತೂ ತಿಳಿಯುವುದಿಲ್ಲ; ಮುಕ್ತಾವಸ್ಥೆಯಲ್ಲಿ ಸಂಸಾರಾವಸ್ಥೆಯ ಕಲ್ಪನೆ ಮಾಡಿ ತಮ್ಮ ಇಚ್ಛಾನುಸಾರವಾಗಿ ಹರಟುತ್ತಾರೆ.

ಈ ಪ್ರಕಾರ ವೇದಾಂತ ಮೊದಲಾದ ಮತಗಳಲ್ಲಿ ವಿಪರೀತ ನಿರೂಪಣೆ ಮಾಡುತ್ತಾರೆ.

## ಮುಸ್ಲಿಮ ಮತ ಸಂಬಂಧದಲ್ಲಿ ವಿಚಾರ :-

ಇದೇ ಪ್ರಕಾರ ಮುಸಲ್ಮಾನರ ಮತದಲ್ಲಿ ವಿಪರೀತ ನಿರೂಪಣೆ ಮಾಡುತ್ತಾರೆ. ಯಾವ ಪ್ರಕಾರ ವೇದಾಂತಿಗಳು ಬ್ರಹ್ಮನನ್ನು ಸರ್ವವ್ಯಾಪಿ, ಏಕ, ನಿರಂಜನ, ಎಲ್ಲರ ಕರ್ತ-ಹರ್ತ್ಯವೆಂದು ಮನ್ನಿಸುತ್ತಾರೆ; ಅದೇ ಪ್ರಕಾರ ಇವರು ಖುದಾನನ್ನು ಮನ್ನಿಸುತ್ತಾರೆ. ಹೇಗೆ ಅವರು ಅವತಾರವಾದವೆಂದು ಮನ್ನಿಸುತ್ತಾರೆ. ಹಾಗೆಯೇ ಇವರು ಪೈಗಂಬರನಾದನೆಂದು ಮನ್ನಿಸುತ್ತಾರೆ. ಹೇಗೆ ಅವರು ಪುಣ್ಯ-ಪಾಪದ ಲೆಕ್ಕಾಚಾರ, ಶಿಕ್ಷೆವಿಧಿಸುವುದನ್ನು ನಿಶ್ಚಯಿಸುತ್ತಾರೆ; ಹಾಗೆ ಇವರು ಖುದಾನನ್ನು ನಿಶ್ಚಯಿಸುತ್ತಾರೆ. ಯಾವ ಪ್ರಕಾರ ಅವರು ಗೋವು ಮೊದಲಾದುವನ್ನು ಪೂಜ್ಯವೆಂದು ಹೇಳುತ್ತಾರೆ. ಅದೇ ಪ್ರಕಾರ ಇವರು ಹಂದಿ ಮೊದಲಾದುವನ್ನು ಹೇಳುತ್ತಾರೆ. ಎಲ್ಲವೂ ತಿರ್ಯಂಚಗಳೇ ಇವೆ. ಮತ್ತು ಹೇಗೆ ಅವರು ಈಶ್ವರನ ಭಕ್ತಿಯಿಂದ ಮುಕ್ತಿಯಾಗುವುದೆಂದು ಹೇಳುತ್ತಾರೆ; ಹಾಗೆ ಇವರು ಖುದಾನ ಭಕ್ತಿಯಿಂದ ಆಗುವುದೆಂದು ಹೇಳುತ್ತಾರೆ. ಮತ್ತು ಹೇಗೆ ಅವರು ಎಲ್ಲಿ ದಯೆಯ ಪೋಷಣೆ ಎಲ್ಲಿ ಹಿಂಸೆಯ ಪೋಷಣೆ ಮಾಡುತ್ತಾರೆ; ಹಾಗೆ ಇವರೂ ಎಲ್ಲಿ ಮಹರ ಮಾಡುವ, ಎಲ್ಲಿ ಕತ್ತಲ ಮಾಡುವ ಪೋಷಣೆ ಮಾಡುತ್ತಾರೆ ಮತ್ತು ಎಲ್ಲಿ ಅವರು ತಪಶ್ಚರ್ಯ ಮಾಡುವ, ಎಲ್ಲಿ ವಿಷಯ ಸೇವನೆಯ ಪೋಷಣೆ ಮಾಡುತ್ತಾರೆ; ಹಾಗೆ ಇವರೂ ಪೋಷಣೆ ಮಾಡುತ್ತಾರೆ. ಮತ್ತು ಹೇಗೆ ಅವರು ಎಲ್ಲಿ ಮದ್ಯ-ಮಾಂಸ, ಬೇಟೆ ಮೊದಲಾದವುಗಳ ನಿಷೇಧ ಮಾಡುತ್ತಾರೆ, ಎಲ್ಲಿ ಉತ್ತಮ ಪುರುಷರಿಂದ ಅವುಗಳ ಸ್ವೀಕಾರ ಮಾಡುವುದನ್ನು ಹೇಳುತ್ತಾರೆ; ಅದೇ ಪ್ರಕಾರ ಇವರೂ ಅವುಗಳ ನಿಷೇಧ ಮತ್ತು ಸ್ವೀಕಾರ ಮಾಡುವುದನ್ನು ಹೇಳುತ್ತಾರೆ. ಹೀಗೆ ಅನೇಕ ಪ್ರಕಾರದಿಂದ ಸಮಾನತೆಯು ಕಂಡು ಬರುತ್ತದೆ. ಹೆಸರುಗಳು ಭಿನ್ನ ಭಿನ್ನವಿದ್ದರೂ ಪ್ರಯೋಜನಭೂತ ಅರ್ಥದ ಏಕತೆಯು ಕಂಡು ಬರುತ್ತದೆ.

ಈಶ್ವರ, ಖುದಾ ಮೊದಲಾದ ಮೂಲ ಶ್ರದ್ಧೆಯದಂತೂ ಏಕತೆಯಿದೆ ಮತ್ತು ಉತ್ತರ ಶ್ರದ್ಧೆಯಲ್ಲಿ ಬಹಳೇ ವಿಶೇಷವಿದೆ; ಅವರಿಗಿಂತಲೂ ಇವರು ವಿಪರೀತರೂಪದಿಂದ ವಿಷಯ ಕಷಾಯದ ಪೋಷಣೆ, ಹಿಂಸಾದಿ ಪಾಪಗಳ ಪೋಷಣೆ, ಪ್ರತ್ಯಕ್ಷ ಪ್ರಮಾಣದಿಂದ ವಿರುದ್ಧವಾಗಿ ನಿರೂಪಣೆ ಮಾಡುತ್ತಾರೆ.

ಆದುದರಿಂದ ಮುಸಲ್ಮಾನರ ಮತವು ಮಹಾವಿಪರೀತರೂಪವಿದೆಯೆಂದು ತಿಳಿಯಬೇಕು,

ಹೀಗೆ ಈ ಕ್ಷೇತ್ರದಲ್ಲಿ ಈ ಕಾಲದಲ್ಲಿ ಯಾವ-ಯಾವ ಪ್ರಚುರ ಪ್ರವೃತ್ತಿಯಿದೆ ಅವುಗಳ ಅಸತ್ಯತೆಯನ್ನು ಪ್ರಕಟಪಡಿಸಲಾಯಿತು;

**ಪ್ರಶ್ನೆ :-** ಈ ಮತಗಳು ಅಸತ್ಯವಾಗಿದ್ದರೆ ದೊಡ್ಡ-ದೊಡ್ಡ ರಾಜರುಗಳು ಹಾಗೂ ವಿದ್ವಾಂಸರುಗಳು ಕೂಡ ಈ ಮತಗಳಲ್ಲಿ ಹೇಗೆ ಪ್ರವರ್ತಿಸುತ್ತಾರೆ ?

**ಉತ್ತರ :-** ಜೀವರುಗಳಿಗೆ ಮಿಥ್ಯಾವಾಸನೆಯು ಅನಾದಿಯಿಂದಿದೆ ಮತ್ತು ಈ ಮತಗಳಲ್ಲಿ ಮಿಥ್ಯಾತ್ವದ ಪೋಷಣೆಯೇ ಇದೆ. ಇನ್ನು ಜೀವರುಗಳಿಗೆ ವಿಷಯ ಕಷಾಯರೂಪ ಕಾರ್ಯಗಳ ಅಪೇಕ್ಷೆಯು ವರ್ತಿಸುತ್ತಿದ್ದು ಇವುಗಳಲ್ಲಿ ವಿಷಯ ಕಷಾಯರೂಪ ಕಾರ್ಯಗಳದ್ದೇ ಪೋಷಣೆಯಿದೆ. ಮತ್ತು ರಾಜರುಗಳ ಹಾಗೂ ವಿದ್ವಾಂಸರುಗಳ ವಿಷಯ ಕಷಾಯರೂಪ ಪ್ರಯೋಜನದ ಸಿದ್ಧಿಯು ಇಂಥ ಧರ್ಮಗಳಲ್ಲಿ ಆಗುತ್ತದೆ; ಜೀವನಂತೂ ಲೋಕ

ನಿಂದ್ಯತೆಯನ್ನು ಮೀರಿ ಪಾಪವೆಂದು ತಿಳಿದೂ ಕೂಡ ಅಪೇಕ್ಷಿತ ಕಾರ್ಯಗಳನ್ನು ಮಾಡುತ್ತ ಅದನ್ನು ಧರ್ಮವೆಂದು ಹೇಳಿದರೆ ಅಂಥ ಧರ್ಮದಲ್ಲಿ ಯಾರು ತೊಡಗುವುದಿಲ್ಲ ? ಅದಕ್ಕಾಗಿಯೇ ಇಂಥ ಧರ್ಮಗಳ ಪ್ರವೃತ್ತಿಯು ವಿಶೇಷವಾಗಿದೆ.

**ಪ್ರಶ್ನೆ :-** ಈ ಧರ್ಮಗಳಲ್ಲಿ ವೀತರಾಗತೆ, ದಯೆ ಮೊದಲಾದುವನ್ನು ಕೂಡ ಹೇಳುತ್ತಾರಲ್ಲ ?

**ಉತ್ತರ :-** ಯಾವ ಪ್ರಕಾರ ಗಿಲೀಟು ಮಾಡಿದಲ್ಲದೆ ನಕಲಿ ನಾಣ್ಯವು ನಡೆಯುವುದಿಲ್ಲ, ಅದೇ ಪ್ರಕಾರ ಸತ್ಯವನ್ನು ಬೆರೆಸಿದಲ್ಲದೆ ಅಸತ್ಯವು ನಡೆಯುವುದಿಲ್ಲ; ಆದರೆ ಎಲ್ಲರ ಹಿತ ಪ್ರಯೋಜನದಲ್ಲಿ ವಿಷಯ ಕಷಾಯದ ಪೋಷಣೆಯನ್ನೇ ಮಾಡಿದೆ. ಯಾವ ಪ್ರಕಾರ ಗೀತೆಯಲ್ಲಿ ಉಪದೇಶವಿತ್ತು ಯುದ್ಧಮಾಡುವ ಪ್ರಯೋಜನವನ್ನು ಪ್ರಕಟಪಡಿಸಿದೆ, ವೇದಾಂತದಲ್ಲಿ ಶುದ್ಧ ನಿರೂಪಣೆ ಮಾಡಿ ಸ್ವಚ್ಛಂದವಾಗುವ ಪ್ರಯೋಜನ ದರ್ಶಿಸಿದೆ ಅದೇ ಪ್ರಕಾರ ಉಳಿದವುಗಳನ್ನು ತಿಳಿಯಬೇಕು. ಮತ್ತು ಈ ಕಾಲವಂತೂ ನಿಕೃಷ್ಟವಿದ್ದು ಇದರಲ್ಲಿ ನಿಕೃಷ್ಟ ಧರ್ಮಗಳ ಪ್ರವೃತ್ತಿಯೇ ವಿಶೇಷವಾಗಿ ಆಗುತ್ತದೆ.

ನೋಡಿರಿ ! ಈ ಕಾಲದಲ್ಲಿ ಮುಸಲ್ಮಾನರು ಅಧಿಕವಾಗಿ ಹಿಂದುಗಳು ಕಡಿಮೆಯಾಗಿದ್ದಾರೆ; ಹಿಂದುಗಳಲ್ಲೂ ಇತರರು ವೃದ್ಧಿಸಿ ಜೈನರು ಕಡಿಮೆಯಾಗಿದ್ದಾರೆ, ಆದರೆ ಇದು ಕಾಲದೋಷವಿದೆ.

ಹೀಗೆ ಈ ಕ್ಷೇತ್ರದಲ್ಲಿ ಈ ಕಾಲದಲ್ಲಿ ಮಿಥ್ಯಾಧರ್ಮದ ಪ್ರವೃತ್ತಿಯು ಅಧಿಕವಾಗಿ ಕಂಡುಬರುತ್ತದೆ.

## ಅನ್ಯಮತಗಳಲ್ಲಿ ನಿರೂಪಿಸಿದ ತತ್ತ್ವವಿಚಾರ

ಈಗ ಪಾಂಡಿತ್ಯದ ಬಲದಿಂದ ಕಲ್ಪಿತ ಯುಕ್ತಿಗಳ ಮುಖಾಂತರ ನಾನಾ ಮತಗಳು ಸ್ಥಾಪನೆಯಾಗಿವೆ; ಅವುಗಳಲ್ಲಿ ಮನ್ನಿಸಲಾಗುತ್ತಿರುವ ತತ್ತ್ವಾದಿಗಳ ನಿರೂಪಣೆ ಮಾಡುತ್ತಾರೆ.

### ಸಾಂಖ್ಯಮತ :-

ಸಾಂಖ್ಯಮತದಲ್ಲಿ ಇಪ್ಪತ್ತೈದು ತತ್ತ್ವಗಳನ್ನು ಮನ್ನಿಸುತ್ತಾರೆ.★ ಅವರು ಸತ್ವ, ರಜ, ತಮ ಈ ಮೂರು ಗುಣಗಳನ್ನು ಹೇಳುತ್ತಾರೆ. ಅಲ್ಲಿ ಸತ್ವದಿಂದ ಪ್ರಸನ್ನತೆಯಾಗುತ್ತದೆ, ರಜೋಗುಣದಿಂದ ಚಿತ್ತದ ಚಂಚಲತೆಯಾಗುತ್ತದೆ, ತಮೋಗುಣದಿಂದ ಮೂಢತೆಯಾಗುತ್ತದೆಂಬ ಲಕ್ಷಣ ಹೇಳುತ್ತಾರೆ. ಇವುಗಳ ರೂಪವಾದ ಅವಸ್ಥೆಯ ಹೆಸರು ಪ್ರಕೃತಿಯಿದೆ; ಅದರಿಂದ ಬುದ್ಧಿಯು ಉತ್ಪನ್ನವಾಗುತ್ತದೆ; ಅದರ ಹೆಸರೇ ಮಹತತ್ತ್ವವಿದೆ, ಅದರಿಂದ ಅಹಂಕಾರವು ಉತ್ಪನ್ನವಾಗುತ್ತದೆ; ಅದರಿಂದ ಹದಿನಾರು ಮಾತ್ರೆಗಳಾಗುತ್ತವೆ. ಅಲ್ಲಿ ಸ್ಪರ್ಶನ, ರಸನ, ಘ್ರಾಣ, ಚಕ್ಷು, ಶ್ರೋತ್ರಗಳೆಂಬ ಐದಂತೂ ಜ್ಞಾನೇಂದ್ರಿಯಗಳಿದ್ದು ಒಂದು ಮನಸ್ಸಿರುತ್ತದೆ. ವಚನ, ಚರಣ, ಹಸ್ತ, ಲಿಂಗ, ಗುದಾವೆಂದು ಐದು ಕರ್ಮೇಂದ್ರಿಯಗಳಿರುತ್ತವೆ. ಮತ್ತು ರೂಪ, ರಸ, ಗಂಧ, ಸ್ಪರ್ಶ, ಶಬ್ದವೆಂದು ಐದು ತನ್ಮಾತ್ರೆಗಳಿರುತ್ತವೆ. ಇನ್ನು ರೂಪದಿಂದ ಅಗ್ನಿ, ರಸದಿಂದ ನೀರು, ಗಂಧದಿಂದ ಪೃಥ್ವಿ, ಸ್ಪರ್ಶದಿಂದ ಪವನ, ಶಬ್ದದಿಂದ ಆಕಾಶವಾದುದೆಂದು

★ ಪ್ರಕೃತಮಹಾಂಸ್ತತಾಽ ಹಂಕಾರಸ್ತಸ್ಮಾದ್ಗಣಶ್ಚ ಷೋಡಶಕಃ !
ತಸ್ಮಾದಪಿ ಷೋಡಶಕಾತ್ಪಂಚಭ್ಯಃ ಪಂಚ ಭೂತಾನಿ ॥ ಸಂಖ್ಯ ಕಾ-೧೨

ಹೇಳುತ್ತಾರೆ. ಈ ಪ್ರಕಾರ ಇಪ್ಪತ್ತಾ ನ್ಲುಕ್ಕ ತತ್ತ್ವಗಳಂತೂ ಪ್ರಕೃತಿ ಸ್ವರೂಪವಿದ್ದು ಇವುಗಳಿಂದ ಭಿನ್ನನೂ, ನಿರ್ಗುಣನೂ, ಕರ್ತೃ-ಭೋಕ್ತೃವು ಆದ ಒಬ್ಬ ಪುರುಷನಿದ್ದಾನೆ.

ಈ ಪ್ರಕಾರ ಇಪ್ಪತ್ತೈದು ತತ್ತ್ವಗಳನ್ನು ಹೇಳುತ್ತಾರೆ ಅವು ಕಲ್ಪಿತವಿವೆ; ಏಕೆಂದರೆ ರಾಜಸಾದಿ ಗುಣಗಳು ಆಶ್ರಯವಿಲ್ಲದೆ ಹೇಗಿರುತ್ತವೆ ? ಇವುಗಳ ಆಶ್ರಯವಂತೂ ಚೇತನ ದ್ರವ್ಯವೇ ಸಂಭವವಿದೆ. ಮತ್ತು ಇವುಗಳಿಂದ ಬುದ್ಧಿಯುಂಟಾಯಿತೆಂದು ಹೇಳುತ್ತಾರೆ, ಆದರೆ ಬುದ್ಧಿಯೆಂಬ ಹೆಸರಂತೂ ಜ್ಞಾನದ್ದಿದೆ, ಮತ್ತು ಜ್ಞಾನಗುಣವುಳ್ಳ ಪದಾರ್ಥದಲ್ಲಿ ಇದು ಇರುತ್ತಿರುವುದು ಕಂಡು ಬರುತ್ತದೆ, ಎಂದ ಮೇಲೆ ಇದರಿಂದ ಜ್ಞಾನವಾಯಿತೆಂದು ಹೇಗೆ ಮನ್ನಿಸುವುದು ? ಬುದ್ಧಿಯು ಬೇರೆಯಿದೆ, ಜ್ಞಾನವು ಬೇರೆಯಿದೆಯೆಂದು ಹೇಳಿದರೂ ಮೊದಲು ಮನಸ್ಸನ್ನು ಹದಿನಾರು ಮಾತ್ರೆಗಳಲ್ಲಿ ಹೇಳಿ ನಂತರ ಜ್ಞಾನವು ಬೇರೆಯಿದೆಯೆಂದು ಹೇಳಿದರೆ ಬುದ್ಧಿಯು ಯಾವುದರ ಹೆಸರಾಯಿತು ? ಮತ್ತು ಅದರಿಂದ ಅಹಂಕಾರವಾಯಿತೆಂದು ಹೇಳುವಿರಿ, ಆದರೆ ಪರವಸ್ತುವಿನಲ್ಲಿ 'ನಾನು ಮಾಡುತ್ತೇನೆ'ಂದು ಮನ್ನಿಸುವ ಹೆಸರು ಅಹಂಕಾರವಿದೆ, ಸಾಕ್ಷೀಭೂತವಿದ್ದು ತಿಳಿಯುವುದರಿಂದ ಅಹಂಕಾರವಾಗುವುದಿಲ್ಲ, ಎಂದ ಬಳಿಕ ಜ್ಞಾನದಿಂದ ಉತ್ಪನ್ನವಾಯಿತೆಂದು ಹೇಗೆ ಹೇಳುವುದು.

ಅಹಂಕಾರದಿಂದ ಹದಿನಾರು ಮಾತ್ರೆಗಳನ್ನು ಹೇಳಿ, ಅವುಗಳಲ್ಲಿ ಐದು ಜ್ಞಾನೇಂದ್ರಿಯಗಳನ್ನು ಹೇಳುವಿರಿ, ಆದರೆ ಶರೀರದಲ್ಲಿ ನೇತ್ರಾದಿ ಆಕಾರರೂಪದ ದ್ರವ್ಯೇಂದ್ರಿಯಗಳಿದ್ದು ಅವಂತೂ ಪೃಥ್ವೀ ಮೊದಲಾದುವಂತೆ ಜಡವಾಗಿ ಕಂಡು ಬರುತ್ತವೆ ಮತ್ತು ವರ್ಣಾದಿಗಳನ್ನು ತಿಳಿಯುವರೂಪದ ಭಾವೇಂದ್ರಿಯಗಳು ಜ್ಞಾನರೂಪವಿವೆ ಅಲ್ಲಿ ಅಹಂಕಾರದ ಪ್ರಯೋಜನವೇನಿದೆ ? ಒಬ್ಬನಿಗೆ ಯಾವನೋ ಒಬ್ಬನ ಅಹಂಕಾರವು ಬುದ್ಧಿ ರಹಿತವಾಗಿ ಕಂಡು ಬರುವಲ್ಲಿ ಅಹಂಕಾರದಿಂದ ಉತ್ಪನ್ನವಾಗುವುದು ಹೇಗೆ ಸಂಭವವಿದೆ ? ಮನಸ್ಸು ಕೂಡ ಇಂದ್ರಿಯಗಳಂತೆಯೇ ಇದೆ; ಏಕೆಂದರೆ ದ್ರವ್ಯ ಮನಸ್ಸು ಶರೀರರೂಪವಿದ್ದರೆ ಭಾವಮನಸ್ಸು ಜ್ಞಾನರೂಪವಿದೆ. ಮತ್ತು ಐದು ಕರ್ಮೇಂದ್ರಿಯಗಳು ಶರೀರದ ಅಂಗಗಳಿದ್ದು ಮೂರ್ತಿಕವಿವೆ. ಅಮೂರ್ತಿಕ ಅಹಂಕಾರದಿಂದ ಇವುಗಳ ಉತ್ಪನ್ನವಾಗುವಿಕೆಯನ್ನು ಹೇಗೆ ಮನ್ನಿಸುವುದು?

ಮತ್ತು ಕರ್ಮೇಂದ್ರಿಯಗಳು ಐದೇ ಇಲ್ಲ, ಶರೀರದ ಎಲ್ಲ ಅಂಗಗಳು ಕಾರ್ಯಕಾರಿಯಿವೆ. ವರ್ಣನೆಯೆಲ್ಲವೂ ಜೀವಾಶ್ರಿತವಿದ್ದು ಮನುಷ್ಯಾಶ್ರಿತವಂತೂ ಇಲ್ಲ, ಆದುದರಿಂದ ಸೊಂಡಿಲು, ಬಾಲ ಮೊದಲಾದ ಅಂಗಗಳೂ ಕೂಡ ಕರ್ಮೇಂದ್ರಿಯಗಳಿವೆ; ಐದರ ಸಂಖ್ಯೆಯನ್ನೇ ಏತಕ್ಕಾಗಿ ಹೇಳುತ್ತೀರಿ ?

ಸ್ಪರ್ಶ ಮೊದಲಾದ ಐದು ತನ್ಮಾತ್ರೆಗಳನ್ನು ಹೇಳಿದೆ, ಆದರೆ ರೂಪಾದಿಗಳೇನು ಬೇರೆ ವಸ್ತುಗಳಲ್ಲ, ಅವಂತೂ ಪರಮಾಣುಗಳಿಂದ ತನ್ಮಯವಾದ ಗುಣಗಳಿವೆ; ಅವು ಬೇರೆ ಹೇಗೆ ಉತ್ಪನ್ನವಾದವು ? ಮತ್ತು ಅಹಂಕಾರವಂತೂ ಅಮೂರ್ತಿಕ ಜೀವದ ಪರಿಣಾಮವಿರುವುದರಿಂದ ಈ ಮೂರ್ತಿಕ ಗುಣಗಳು ಅದರಿಂದ ಉತ್ಪನ್ನವಾದುವೆಂದು ಹೇಗೆ ಮನ್ನಿಸುವುದು ?

ಈ ಐದರಿಂದ ಅಗ್ನಿ ಮೊದಲಾದವು ಉತ್ಪನ್ನವಾದುವೆಂದು ಹೇಳುತ್ತಾರೆ, ಅದು ಪ್ರತ್ಯಕ್ಷ ಸುಳ್ಳಿದೆ. ರೂಪಾದಿಗಳ ಮತ್ತು ಅಗ್ನಿ ಮೊದಲಾದವುಗಳದ್ದಂತೂ ಸಹಭೂತದ ಗುಣ-ಗುಣಿ ಸಂಬಂಧವಿದೆ, ಕೇವಲ ಕಥನ ಭಿನ್ನವಿದೆ, ವಸ್ತುಭೇದವಿಲ್ಲ. ಯಾವುದೇ ಪ್ರಕಾರ ಯಾವುದೂ ಭಿನ್ನವಿದ್ದಂತೆ ಕಂಡುಬರುವುದಿಲ್ಲ, ಕಥನ ಮಾತ್ರದಿಂದ

ಭೇದವನ್ನುತ್ಪನ್ನ ಮಾಡುತ್ತಾರೆ; ಆದುದರಿಂದ ರೂಪಾದಿಗಳಿಂದ ಅಗ್ನಿ ಮೊದಲಾದವು ಉತ್ಪನ್ನವಾದುವೆಂದು ಹೇಗೆ ಹೇಳುವುದು ? ಮತ್ತು ಹೇಳುವಲ್ಲಿ ಕೂಡ ಗುಣಿಯಲ್ಲಿ ಗುಣಗಳಿವೆ, ಗುಣಗಳಿಂದ ಗುಣಿಯು ಉತ್ಪನ್ನನಾದನೆಂದು ಹೇಗೆ ಮನ್ನಿಸುವುದು?

ಮತ್ತು ಇವುಗಳಿಂದ ಭಿನ್ನನಾಗಿ ಒಬ್ಬ ಪುರುಷನಿದ್ದಾನೆಂದು ಹೇಳುತ್ತಾರೆ, ಆದರೆ ಅವನ ಸ್ವರೂಪವು ಅವ್ಯಕ್ತವ್ಯವೆಂದು ಹೇಳಿ ಪ್ರತ್ಯುತ್ತರ ಕೊಡದಿದ್ದರೆ ಯಾರು ತಿಳಿಯುವರು ? ಹೇಗಿದ್ದಾನೆ, ಎಲ್ಲಿದ್ದಾನೆ, ಹೇಗೆ ಕರ್ತೃ-ಹರ್ತೃವಿದ್ದಾನೆಂಬುದನ್ನು ತಿಳಿಸು. ತಿಳಿಸಿಕೊಟ್ಟಿರುವುದರಲ್ಲಿಯೇ ಒಂದು ವೇಳೆ ವಿಚಾರ ಮಾಡಿದರೆ ಅದರಿಂದ ವಿಪರೀತತೆಯು ಕಂಡುಬರುವುದು.

ಈ ಪ್ರಕಾರ ಸಾಂಖ್ಯಮತದವರಿಂದ ಕಲ್ಪಿತವಾದ ತತ್ತ್ವಗಳು ಮಿಥ್ಯೆಯಿವೆಯೆಂದು ತಿಳಿಯಬೇಕು.

ಪ್ರಕೃತಿಯಿಂದ ಪುರುಷನನ್ನು ಭಿನ್ನವಾಗಿ ತಿಳಿಯುವುದರ ಹೆಸರು ಮೋಕ್ಷಮಾರ್ಗವೆಂದು ಹೇಳುತ್ತಾರೆ; ಆದರೆ ಮೊದಲಂತೂ ಪ್ರಕೃತಿ ಮತ್ತು ಪುರುಷ ಯಾರೂ ಇಲ್ಲವೇ ಇಲ್ಲ ಮತ್ತು ಕೇವಲ ತಿಳಿಯುವುದರಿಂದಂತೂ ಸಿದ್ಧಿಯಾಗುವುದಿಲ್ಲ; ತಿಳಿದುಕೊಂಡು ರಾಗಾದಿಗಳು ದೂರವಾದಮೇಲೆ ಸಿದ್ಧಿಯಾಗುತ್ತದೆ. ಆದರೆ ಈ ಪ್ರಕಾರ ತಿಳಿಯುವುದರಿಂದೇನು ರಾಗಾದಿಗಳು ಕುಂದುವುದಿಲ್ಲ. ಎಲ್ಲವನ್ನು ಪ್ರಕೃತಿಯ ಕರ್ತವ್ಯವೆಂದು ಮನ್ನಿಸಿ ತಾವು ಅಕರ್ತೃವಾಗಿ ಉಳಿದರೆ ತಾವು ರಾಗಾದಿಗಳನ್ನು ಏತಕ್ಕಾಗಿ ಕಡಿಮೆ ಮಾಡುವಿರಿ ? ಆದುದರಿಂದ ಇದು ಮೋಕ್ಷಮಾರ್ಗವಲ್ಲ.

ಇನ್ನು ಪ್ರಕೃತಿ-ಪುರುಷನ ಭಿನ್ನವಾಗುವಿಕೆಯನ್ನು ಮೋಕ್ಷವೆಂದು ಹೇಳುತ್ತಾರೆ. ಆದರೆ ಇಪ್ಪತ್ತೈದು ತತ್ತ್ವಗಳಲ್ಲಿ ಇಪ್ಪತ್ತಾನ್ಲುಕ್ಕು ತತ್ತ್ವಗಳನ್ನಂತೂ ಪ್ರಕೃತಿ ಸಂಬಂಧವಾಗಿ ಹೇಳಿದೆ, ಒಬ್ಬ ಪುರುಷನು ಭಿನ್ನವೆಂದು ಹೇಳಿದೆ; ಆದರೆ ಅವಂತೂ ಭಿನ್ನವೇ ಇವೆ; ಮತ್ತು ಯಾವುದೇ ಜೀವ ಪದಾರ್ಥವನ್ನು ಇಪ್ಪತ್ತೈದು ತತ್ತ್ವಗಳಲ್ಲಿ ಹೇಳಿಯೇ ಇಲ್ಲ. ಮತ್ತು ಪುರುಷನಿಗೆ ಪ್ರಕೃತಿಯ ಸಂಯೋಗವಾದ ಮೇಲೆ ಜೀವ ಸಂಜ್ಞೆಯಾಗುತ್ತಿದ್ದರೆ ಪುರುಷನು ಬೇರೆ-ಬೇರೆ ಪ್ರಕೃತಿಸಹಿತನಿದ್ದಾನೆ, ಅನಂತರ ಸಾಧನೆಯ ಮುಖಾಂತರ ಯಾವನೋ ಪುರುಷನು ಪ್ರಕೃತಿ ರಹಿತನಾಗುತ್ತಾನೆಂಬುದು ಸಿದ್ಧವಾಗುವುದು, ಓರ್ವ ಪುರುಷನೆಂಬುದು ಸಿದ್ಧವಾಗುವುದಿಲ್ಲ.

ಪ್ರಕೃತಿಯು ಪುರುಷನ ಭ್ರಮೆಯಿದೆಯೋ ಅಥವಾ ಯಾವುದೇ ವ್ಯಂತರಿಯ ಹಾಗೆ ಭಿನ್ನವೇ ಇದೆ, ಅದು ಜೀವನಿಗೆ ಬಂದು ತಗಲುತ್ತದೆ ? ಒಂದು ವೇಳೆ ಅವನ ಭ್ರಮೆಯಿದ್ದರೆ ಪ್ರಕೃತಿಯಿಂದ ಇಂದ್ರಿಯಾದಿಗಳು ಹಾಗೂ ಸ್ಪರ್ಶಾದಿ ತತ್ತ್ವಗಳು ಉತ್ಪನ್ನವಾದುವೆಂದು ಹೇಗೆ ಮನ್ನಿಸುವುದು ? ಮತ್ತು ಭಿನ್ನವಿದ್ದರೆ ಅದೂ ಒಂದು ವಸ್ತುವಿದ್ದು ಎಲ್ಲ ಕರ್ತವ್ಯಗಳು ಅದರದಾಗುವವು. ಅದರಲ್ಲಿ ಪುರುಷನ ಯಾವ ಕರ್ತವ್ಯವೇ ಉಳಿಯಲಿಲ್ಲ, ಎಂದ ಮೇಲೆ ಏತಕ್ಕಾಗಿ ಉಪದೇಶ ಕೊಡುತ್ತಾರೆ ?

ಈ ಪ್ರಕಾರ ಇದನ್ನು ಮೋಕ್ಷಮಾರ್ಗವೆಂದು ಮನ್ನಿಸುವುದು ಮಿಥ್ಯೆಯಿದೆ.

ಮತ್ತು ಅಲ್ಲಿ ಪ್ರತ್ಯಕ್ಷ, ಅನುಮಾನ, ಆಗಮವೆಂದು ಮೂರು ಪ್ರಮಾಣಗಳನ್ನು ಹೇಳುತ್ತಾರೆ; ಆದರೆ ಅವುಗಳ ಸತ್ಯಾಸತ್ಯತೆಯ ನಿರ್ಣಯವನ್ನು ಜೈನರ ನ್ಯಾಯಗ್ರಂಥಗಳಿಂದ ತಿಳಿದುಕೊಳ್ಳಬೇಕು.

ಈ ಸಾಂಖ್ಯಮತದಲ್ಲಿ ಯಾರೂ ಈಶ್ವರನನ್ನು ಮನ್ನಿಸುವುದಿಲ್ಲ. ಕೆಲವರು ಒಬ್ಬ ಪುರುಷನನ್ನು ಈಶ್ವರನೆಂದು ಮನ್ನಿಸುತ್ತಾರೆ, ಕೆಲವರು ಶಿವನನ್ನು, ಕೆಲವರು ನಾರಾಯಣನನ್ನು ದೇವನೆಂದು ಮನ್ನಿಸುತ್ತಾರೆ. ತಮ್ಮ ಇಚ್ಛಾನುಸಾರವಾಗಿ ಕಲ್ಪನೆ ಮಾಡುತ್ತಾರೆ, ಯಾವ ನಿರ್ಣಯವಿಲ್ಲ. ಮತ್ತು ಈ ಮತದಲ್ಲಿ ಕೆಲವರು ಜಟಾಧಾರಣ ಮಾಡುತ್ತಾರೆ, ಕೆಲವರು ಚಂಡಿಕೆಯನ್ನಿಡುತ್ತಾರೆ, ಕೆಲವರು ತಲೆ ಬೋಳಿಸಿಕೊಳ್ಳುತ್ತಾರೆ, ಕೆಲವರು ಕ್ಯಾವಿಬಟ್ಟೆಯನ್ನು ತೊಟ್ಟುಕೊಳ್ಳುತ್ತಾರೆ. ಇವೇ ಮೊದಲಾಗಿ ಅನೇಕ ಪ್ರಕಾರದಿಂದ ವೇಷಧಾರಣ ಮಾಡಿ ತತ್ತ್ವಜ್ಞಾನದ ಆಶ್ರಯದಿಂದ ತಮ್ಮನ್ನು ಶ್ರೇಷ್ಠರೆಂದು ಕರೆಯಿಸಿಕೊಳ್ಳುತ್ತಾರೆ.

ಈ ಪ್ರಕಾರ ಸಾಂಖ್ಯ ಮತದ ನಿರೂಪಣೆ ಮಾಡಲಾಯಿತು.

## ಶಿವಮತ

ಶಿವಮತದಲ್ಲಿ ನೈಯಾಯಿಕ ಮತ್ತು ವೈಶೇಷಿಕವೆಂದು ಎರಡು ಭೇದಗಳಿವೆ.

### ನೈಯಾಯಿಕಮತ :-

ನೈಯಾಯಿಕ ಮತದಲ್ಲಿ ಪ್ರಮಾಣ, ಪ್ರಮೇಯ, ಸಂಶಯ, ಪ್ರಯೋಜನ, ದೃಷ್ಟಾಂತ, ಸಿದ್ಧಾಂತ, ಅವಯವ, ತರ್ಕ, ನಿರ್ಣಯ, ವಾದ, ಜಲ್ಪ, ವಿತಂಡ, ಹೇತ್ವಾಭಾಸ, ಛಲ, ಜಾತಿ, ನಿಗ್ರಹಸ್ಥಾನವೆಂದು ಹದಿನಾರು ತತ್ತ್ವಗಳನ್ನು ಹೇಳುತ್ತಾರೆ.

ಅಲ್ಲಿ ಪ್ರತ್ಯಕ್ಷ, ಅನುಮಾನ, ಶಬ್ದ, ಉಪಮೆಯೆಂದು ನಾಲ್ಕು ಪ್ರಕಾರದ ಪ್ರಮಾಣಗಳನ್ನು ಹೇಳುತ್ತಾರೆ, ಮತ್ತು ಆತ್ಮ, ದೇಹ, ಅರ್ಥ, ಬುದ್ಧಿ ಇತ್ಯಾದಿ ಪ್ರಮೇಯಗಳನ್ನು ಹೇಳುತ್ತಾರೆ. 'ಇದು ಏನಿದೆ'ಯೆಂಬುದರ ಹೆಸರು ಸಂಶಯವಿದೆ. ಯಾವುದರ ಸಲುವಾಗಿ ಪ್ರವೃತ್ತಿಯಾಗುವುದು ಅದು ಪ್ರಯೋಜನವಿದೆ. ಯಾವುದನ್ನು ವಾದಿ-ಪ್ರತಿವಾದಿಯೆನ್ನುತ್ತಾರೆ ಅದು ದೃಷ್ಟಾಂತವಿದೆ. ದೃಷ್ಟಾಂತದಿಂದ ಯಾವುದನ್ನು ನಿರ್ಣಯಿಸುತ್ತದೆ ಅದು ಸಿದ್ಧಾಂತವಿದೆ. ಮತ್ತು ಅನುಮಾನದ ಪ್ರತಿಜ್ಞೆ ಮೊದಲಾದ ಐದು ಅಂಗಗಳಿದ್ದದ್ದು ಅದು ಅವಯವವಿದೆ. ಸಂಶಯ ದೂರವಾದ ಮೇಲೆ ಯಾವ ವಿಚಾರದಿಂದ ಒಳ್ಳೆಯದಾಗುವುದು ಅದು ತರ್ಕವಿದೆ. ನಂತರ ಪ್ರತೀ ರೂಪದಿಂದ ತಿಳಿಯುವುದು ಅದು ನಿರ್ಣಯವಿದೆ. ಆಚಾರ್ಯ-ಶಿಷ್ಯರಲ್ಲಿ ಪಕ್ಷ-ಪ್ರತಿಪಕ್ಷದಿಂದ ಅಭ್ಯಾಸವಾಗುವುದು ಅದು ವಾದವಿದೆ. ತಿಳಿಯುವ ಇಚ್ಛಾರೂಪ ಕಥೆಯಲ್ಲಿ ಛಲ-ಜಾತಿ ಮೊದಲಾದ ದೋಷವು ಅದು ಜಲ್ಪವಿದೆ. ಪ್ರತಿಪಕ್ಷವಿಲ್ಲದ ವಾದವು ಅದು ವಿತಂಡವಿದೆ. ಸತ್ಯ ಹೇತುಗಳಿಲ್ಲದಂಥ ಅಸಿದ್ಧಾದಿ ಭೇದಸಹಿತವು ಹೇತ್ವಾಭಾಸವಿದೆ. ಛಲಸಹಿತವಾದ ವಚನವು ಛಲವಿದೆ. ಸತ್ಯ ದೂಷಣವಿಲ್ಲದಂಥ ದೂಷಣಾಭಾಸವು ಅದು ಜಾತಿಯಿದೆ. ಯಾವುದರಿಂದ ಪ್ರತಿವಾದಿಯ ನಿಗ್ರಹವಾಗುವುದು ಅದು ನಿಗ್ರಹಸ್ಥಾನವಿದೆ.

ಈ ಪ್ರಕಾರ ಸಂಶಯಾದಿ ತತ್ತ್ವಗಳನ್ನು ಹೇಳಿದ್ದಾರೆ, ಅವು ಯಾವವೂ ವಸ್ತುಸ್ವರೂಪವಾದ ತತ್ತ್ವಗಳಲ್ಲ. ಜ್ಞಾನದ ನಿರ್ಣಯ ಮಾಡುವುದಕ್ಕೆ ಹಾಗೂ ವಾದದಿಂದ ಪಾಂಡಿತ್ಯ ಪ್ರಕಟಮಾಡುವುದಕ್ಕೆ ಕಾರಣಭೂತವಾದ ವಿಚಾರರೂಪ ತತ್ತ್ವಗಳೆಂದು ಹೇಳಿದ್ದಾರೆ; ಆದರೆ ಇವುಗಳಿಂದ ಪರಮಾರ್ಥ ಕಾರ್ಯವೇನಾಗುವುದು ? ಕಾಮ-ಕ್ರೋಧಾದಿಭಾವಗಳನ್ನು ದೂರಮಾಡಿ ನಿರಾಕುಲವಾಗುವುದು ಅದು ಕಾರ್ಯವಿದೆ; ಆ

ಪ್ರಯೋಜನವನ್ನಂತೂ ಇಲ್ಲಿ ಒಂದಿಷ್ಟೂ ತೋರಿಸಿಲ್ಲ, ಬುದ್ಧಿವಂತಿಕೆಯ ಹಲವಾರು ಯುಕ್ತಿಗಳನ್ನು ರಚಿಸಿದ್ದಾರೆ, ಆದರೆ ಇದು ಕೂಡ ಒಂದು ಚಾತುರ್ಯವಿದೆ; ಆದುದರಿಂದ ಇವು ತತ್ತ್ವಭೂತಗಳಾಗಿಲ್ಲ.

ಇವನ್ನು ತಿಳಿದುಕೊಂಡಲ್ಲದೆ ಪ್ರಯೋಜನಭೂತವಾದ ತತ್ತ್ವಗಳ ನಿರ್ಣಯ ಮಾಡುವ ಸಾಧ್ಯತೆ-ಯಿಲ್ಲದಿರುವುದರಿಂದ ಈ ತತ್ತ್ವಗಳನ್ನು ಹೇಳಿದ್ದಾರೆಂದರೆ ಇಂಥ ಪರಂಪರೆಯನ್ನು ವ್ಯಾಕರಣ ಕಲಿತರೆ ಅರ್ಥದ ನಿರ್ಣಯವಾಗುವುದೆಂದು ವ್ಯಾಕರಣವಾದಿಗಳೂ ಮತ್ತು ಭೋಜನ ಮಾಡುವುದರಿಂದ ಶರೀರದ ಸ್ಥಿರತೆಯಾದ ಮೇಲೆ ತತ್ತ್ವನಿರ್ಣಯ ಮಾಡುವಲ್ಲಿ ಸಮರ್ಥರಾಗುತ್ತಾರೆಂದು ಭೋಜನಾದಿಗಳ ಅಧಿಕಾರಿಗಳು ಹೇಳುತ್ತಾರೆ; ಆದರೆ ಇಂಥ ಯುಕ್ತಿಗಳು ಕಾರ್ಯಕಾರಿಯಾಗಿಲ್ಲ.

ವ್ಯಾಕರಣ, ಭೋಜನಾದಿಗಳಂತೂ ತತ್ತ್ವಜ್ಞಾನಕ್ಕೆ ಅವಶ್ಯ ಕಾರಣಗಳಲ್ಲ, ಅವು ಲೌಕಿಕ ಕಾರ್ಯ ಸಾಧನೆಯ ಕಾರಣಗಳಿವೆಯೆಂದು ಹೇಳಬಹುದು; ಆದರೆ ಅವು ಹೇಗಿವೆ ಅದೇ ಪ್ರಕಾರ ನೀವು ಹೇಳಿದ ತತ್ತ್ವಗಳು ಕೂಡ ಲೌಕಿಕ (ಕಾರ್ಯ) ಸಾಧನೆಗೆ ಕಾರಣಗಳಾಗುತ್ತವೆ. ಯಾವ ಪ್ರಕಾರ ಇಂದ್ರಿಯಾದಿಗಳನ್ನು ತಿಳಿದುಕೊಳ್ಳಲು ಪ್ರತ್ಯಕ್ಷಾದಿ ಪ್ರಮಾಣ ಹೇಳಿದೆ ಮತ್ತು ಮೋಟುಮರ-ಪುರುಷಾದಿಗಳಲ್ಲಿ ಸಂಶಯಾದಿಗಳ ನಿರೂಪಣೆ ಮಾಡಿದೆ. ಆದುದರಿಂದ ಯಾವವುಗಳನ್ನು ತಿಳಿದುಕೊಳ್ಳುವುದರಿಂದ ಕಾಮ-ಕ್ರೋಧಾದಿಗಳು ಅವಶ್ಯವಾಗಿ ದೂರವಾಗುವವು ಮತ್ತು ನಿರಾಕುಲತೆಯು ಉತ್ಪನ್ನವಾಗುವುದು ಅವೇ ತತ್ತ್ವಗಳು ಕಾರ್ಯಕಾರಿಯಾಗಿವೆ.

ಪ್ರಮೇಯ ತತ್ತ್ವದಲ್ಲಿ ಆತ್ಮಾದಿಗಳ ನಿರ್ಣಯವಾಗುತ್ತದೆ ಅದು ಕಾರ್ಯಕಾರಿಯಿದೆಯೆಂದು ಹೇಳಬಹುದು; ಆದರೆ ಪ್ರಮೇಯವೆಲ್ಲವಂತೂ ವಸ್ತುವಿದೆ, ಪ್ರಮಿತಿಯ ವಿಷಯವಿಲ್ಲದಂಥ ಯಾವ ವಸ್ತುವೇ ಇಲ್ಲ; ಆದುದರಿಂದ ಪ್ರಮೇಯತತ್ತ್ವವನ್ನು ಏತಕ್ಕಾಗಿ ಹೇಳಿದೆ ? ಆತ್ಮ ಮೊದಲಾದ ತತ್ತ್ವಗಳನ್ನು ಹೇಳಬೇಕಿತ್ತು.

ಮತ್ತು ಆತ್ಮ ಮೊದಲಾದವುಗಳ ಸ್ವರೂಪವನ್ನು ವಿಪರೀತ ಪ್ರರೂಪಣೆ ಮಾಡಿದೆಯೆಂಬುದು ನಿಷ್ಪಕ್ಷದಿಂದ ವಿಚಾರ ಮಾಡಿದ ಮೇಲೆ ತಿಳಿದು ಬರುತ್ತದೆ. ಪರಮಾತ್ಮ ಮತ್ತು ಜೀವಾತ್ಮವೆಂದು ಆತ್ಮನಲ್ಲಿ ಎರಡು ಭೇದ ಹೇಳುತ್ತಾರೆ. ಅಲ್ಲಿ ಪರಮಾತ್ಮನನ್ನು ಸರ್ವರು ಕರ್ತೃವೆಂದು ಹೇಳುತ್ತಾರೆ. ಈ ಜಗತ್ತು ಕರ್ತೃವಿನಿಂದ ಉತ್ಪನ್ನವಾಗಿದೆಯೆಂದು ಊಹೆ ಮಾಡುತ್ತಾರೆ, ಏಕೆಂದರೆ ಇದು ಕಾರ್ಯವಿದೆ. ಘಟಾದಿಗಳಂತೆ ಕಾರ್ಯವಿದ್ದದ್ದು ಕರ್ತೃವಿನಿಂದ ಉತ್ಪನ್ನವಿದೆ. ಆದರೆ ಇದು ಅನುಮಾನಾಭಾಸವಿದೆ; ಏಕೆಂದರೆ ಇಂಥ ಅನುಮಾನಾಂತರವು ಸಂಭವವಿದೆ. ಈ ಜಗತ್ತೆಲ್ಲವು ಕರ್ತೃವಿನಿಂದ ಉತ್ಪನ್ನವಾಗಿಲ್ಲ, ಏಕೆಂದರೆ ಇದರಲ್ಲಿ ಅಕಾರ್ಯರೂಪ ಪದಾರ್ಥಗಳೂ ಇವೆ. ಸೂರ್ಯ ಬಿಂಬದಂತೆ ಅಕಾರ್ಯವಿದ್ದವುಗಳು ಕರ್ತೃವಿನಿಂದ ಉತ್ಪನ್ನವಾಗಿಲ್ಲ. ಏಕೆಂದರೆ ಅನೇಕ ಪದಾರ್ಥಗಳ ಸಮುದಾಯರೂಪವಾದ ಈ ಜಗತ್ತಿನಲ್ಲಿ ಕೆಲವು ಪದಾರ್ಥಗಳು ಕೃತ್ರಿಮವಿದ್ದು ಅವು ಮನುಷ್ಯಾದಿಕರಿಂದ ಮಾಡಿದವುಗಳಿವೆ, ಕೆಲವು ಅಕೃತ್ರಿಮವಿದ್ದು ಅವುಗಳ ಕರ್ತೃ ಯಾರೂ ಇಲ್ಲ. ಇದು ಪ್ರತ್ಯಕ್ಷಾದಿ ಪ್ರಮಾಣಕ್ಕೆ ಅಗೋಚರವಿರುವುದರಿಂದ ಈಶ್ವರನನ್ನು ಕರ್ತೃವೆಂದು ಮನ್ನಿಸುವುದು ಮಿಥ್ಯೆಯಿದೆ.

ಜೀವಾತ್ಮನಿಗೆ ಪ್ರತಿಯೊಂದು ಶರೀರವು ಭಿನ್ನ-ಭಿನ್ನವೆಂದು ಹೇಳುತ್ತಾರೆ, ಇದು ಸತ್ಯವಿದೆ; ಆದರೆ ಮುಕ್ತವಾದ ನಂತರವೂ ಭಿನ್ನವೆಂದೇ ಮನ್ನಿಸುವುದು ಯೋಗ್ಯವಿದೆ. ವಿಶೇಷವನ್ನಂತೂ ಈ ಮೊದಲೇ ಹೇಳಿದೆ.

ಈ ಪ್ರಕಾರ ಅನ್ಯ ತತ್ತ್ವಗಳನ್ನೂ ಮಿಥ್ಯೆಯೆಂದು ನಿರೂಪಣೆ ಮಾಡುತ್ತಾರೆ.

ಮತ್ತು ಪ್ರಮಾಣ ಮೊದಲಾದವುಗಳ ಸ್ವರೂಪದ ಕಲ್ಪನೆಯನ್ನು ಕೂಡ ವಿಪರೀತವಾಗಿ ಮಾಡುತ್ತಾರೆ ಅದು ಜೈನ ಗ್ರಂಥಗಳಿಂದ ಪರೀಕ್ಷೆ ಮಾಡಿದ ಮೇಲೆ ತಿಳಿದು ಬರುತ್ತದೆ.

ಈ ಪ್ರಕಾರ ನೈಯಾಯಿಕ ಮತದಲ್ಲಿ ಹೇಳಿದ ಕಲ್ಪಿತ ತತ್ತ್ವಗಳನ್ನು ತಿಳಿಯಬೇಕು.

**ವೈಶೇಷಿಕ ಮತ :-**

ವೈಶೇಷಿಕ ಮತದಲ್ಲಿ ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯವೆಂದು ಆರು ತತ್ತ್ವಗಳನ್ನು ಹೇಳಿದ್ದಾರೆ.

ಅಲ್ಲಿ ದ್ರವ್ಯವು ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ, ಕಾಲ, ದಿಶೆ, ಆತ್ಮ, ಮನಸ್ಸೆಂದು ಒಂಬತ್ತು ಪ್ರಕಾರವಿದೆ. ಪೃಥ್ವೀ, ಜಲ, ಅಗ್ನಿ, ಮತ್ತು ವಾಯುವಿನ ಪರಮಾಣುಗಳು ಭಿನ್ನ-ಭಿನ್ನವಿವೆ; ಆ ಪರಮಾಣುಗಳು ನಿತ್ಯವಿವೆ; ಅವುಗಳಿಂದ ಕಾರ್ಯರೂಪ ಪೃಥ್ವಿ ಮೊದಲಾದವುಗಳಾಗುತ್ತವೆ ಅವು ಅನಿತ್ಯವಿವೆ. ಆದರೆ ಹೀಗೆ ಹೇಳುವುದು ಪ್ರತ್ಯಕ್ಷ ಮೊದಲಾದುವಿಂದ ವಿರುದ್ಧವಿದೆ. ಸೌದೆ ರೂಪ ಪೃಥ್ವೀ ಮೊದಲಾದವುಗಳ ಪರಮಾಣುಗಳು ಅಗ್ನಿರೂಪವಾಗುತ್ತಿರುವುದು ಕಂಡು ಬರುತ್ತದೆ, ಅಗ್ನಿಯ ಪರಮಾಣುಗಳು ಭಸ್ಮರೂಪ ಪೃಥ್ವಿಯಾಗುತ್ತಿರುವುದು ಕಂಡು ಬರುತ್ತದೆ. ನೀರಿನ ಪರಮಾಣುಗಳು ಮುಕ್ತಾಫಲರೂಪ ಪೃಥ್ವಿಯಾಗುತ್ತಿರುವುದು ಕಂಡು ಬರುತ್ತದೆ. ಆ ಪರಮಾಣುಗಳು ಹೊರಟುಹೋಗುತ್ತವೆ, ಬೇರೆ ಪರಮಾಣುಗಳೇ ಅವುಗಳ ರೂಪವಾಗುತ್ತವೆಂದು ನೀನು ಹೇಳಬಹುದು, ಆದರೆ ಪ್ರತ್ಯಕ್ಷವನ್ನು ಅಸತ್ಯವೆಂದಂತಾಗುತ್ತದೆ. ಅಂಥ ಯಾವುದೇ ಪ್ರಬಲ ಯುಕ್ತಿ ಹೇಳಿದರೆ ಇದೇ ಪ್ರಕಾರ ಮನ್ನಿಸಲಾಗುವುದು, ಆದರೆ ಕೇವಲ ಹೇಳುವುದರಿಂದಲೇ ಹೀಗೆ ಸಿದ್ಧವಾಗುವುದಿಲ್ಲ. ಆದುದರಿಂದ ಸಮಸ್ತ ಪರಮಾಣುಗಳ ಒಂದು ಪುದ್ಗಲರೂಪ ಮೂರ್ತಿಕ ಜಾತಿಯಿದೆ, ಅದು ಪೃಥ್ವೀ ಮೊದಲಾದ ಅನೇಕ ಅವಸ್ಥೆಯರೂಪವಾಗಿ ಪರಿಣಮಿತವಾಗುತ್ತದೆ.

ಕೆಲವೆಡೆ ಈ ಪೃಥ್ವೀ ಮೊದಲಾದವುಗಳ ಶರೀರಗಳು ಪೃಥಕ್ಕೆಂದು ಹೇಳುತ್ತಾರೆ, ಅದೂ ಮಿಥ್ಯೆಯಿದೆ; ಏಕೆಂದರೆ ಅದರದೇನೂ ಪ್ರಮಾಣವಿಲ್ಲ. ಮತ್ತು ಪೃಥ್ವೀ ಮೊದಲಾದುವಂತೂ ಪರಮಾಣುಗಳ ಪಿಂಡವಿವೆ, ಇವುಗಳ ಶರೀರ ಒಂದೆಡೆ ಮತ್ತು ಇವು ಒಂದೆಡೆಯೆಂಬುದು ಸಂಭವಿಸದಿರುವುದರಿಂದ ಇದು ಮಿಥ್ಯೆಯಿದೆ. ಪದಾರ್ಥಗಳಿಗೆ ಅಡೆ- ತಡೆಯಿಲ್ಲದಂಥ ಪೊಳ್ಳು ಪ್ರದೇಶವನ್ನು ಆಕಾಶವೆಂದು ಹೇಳುತ್ತಾರೆ; ಕ್ಷಣ, ಘಳ ಮೊದಲಾದುವನ್ನು ಕಾಲವೆಂದು ಹೇಳುತ್ತಾರೆ; ಆದರೆ ಇವೆರಡೂ ಅವಸ್ತುಗಳಿದ್ದು ಇವು ಸತ್ತಾರೂಪ ಪದಾರ್ಥಗಳಲ್ಲ. ಪದಾರ್ಥಗಳ ಕ್ಷೇತ್ರ- ಪರಿಣಮನಾದಿಗಳ ಪೂರ್ವಾಪರ ವಿಚಾರ ಮಾಡುವ ಸಲುವಾಗಿ ಇವುಗಳ ಕಲ್ಪನೆ ಮಾಡುತ್ತಾರೆ. ಮತ್ತು ದಿಶೆಯೆಂಬುದು ಯಾವುದೂ ಇಲ್ಲ; ಆಕಾಶದಲ್ಲಿ ಖಂಡಕಲ್ಪನೆಯಿಂದ ದಿಶೆ ಮನ್ನಿಸುತ್ತಾರೆ. ಆತ್ಮನನ್ನು ಎರಡು ಪ್ರಕಾರದಿಂದ ಹೇಳುತ್ತಾರೆಂಬುದನ್ನು ಈ ಮೊದಲೇ ನಿರೂಪಣೆ ಮಾಡಿದೆ; ಮತ್ತು ಮನಸ್ಸೆಂಬುದು ಯಾವ ಪೃಥಕ್ ಪದಾರ್ಥವಿಲ್ಲ. ಭಾವಮನವಂತೂ ಜ್ಞಾನರೂಪವಿದ್ದು ಅದು ಆತ್ಮನ ಸ್ವರೂಪವಿದೆ, ದ್ರವ್ಯಮನಸ್ಸು ಪರಮಾಣುಗಳ ಪಿಂಡವಿದ್ದು ಅದು ಶರೀರದ ಅಂಗವಿದೆ. ಈ ಪ್ರಕಾರ ಈ ದ್ರವ್ಯಗಳು ಕಾಲ್ಪನಿಕವಿವೆಯೆಂದು ತಿಳಿಯಬೇಕು.

ಮತ್ತು ಸ್ಪರ್ಶ, ರಸ, ಗಂಧ, ವರ್ಣ, ಶಬ್ದ, ಸಂಖ್ಯೆ, ವಿಭಾಗ, ಸಂಯೋಗ, ಪರಿಣಾಮ, ಪೃಥಕತ್ವ, ಪರತ್ವ, ಅಪರತ್ವ, ಬುದ್ಧಿ, ಸುಖ, ದುಃಖ, ಇಚ್ಛೆ, ಧರ್ಮ, ಅಧರ್ಮ, ಪ್ರಯತ್ನ, ಸಂಸ್ಕಾರ, ದ್ವೇಷ, ಸ್ನೇಹ, ಗುರುತ್ವ, ದ್ರವ್ಯತ್ವವೆಂದು ಇಪ್ಪತ್ತಾನ್ಲುಕ್ಕು ಗುಣಗಳನ್ನು ಹೇಳುತ್ತಾರೆ. ಆದರೆ ಇವುಗಳಲ್ಲಿ ಸ್ಪರ್ಶಾದಿ ಗುಣಗಳಂತೂ ಪರಮಾಣುಗಳಲ್ಲಿ ಕಂಡುಬರುತ್ತವೆ; ಆದರೆ ಪೃಥ್ವಿಯನ್ನು ಗಂಧವತಿಯೆಂದೇ ಹೇಳುವುದು, ಜಲವನ್ನು ಶೀತಸ್ಪರ್ಶವುಳ್ಳದೆಂದೇ ಹೇಳುವುದೆಲ್ಲವೂ ಮಿಥ್ಯೆಯಿದೆ; ಏಕೆಂದರೆ ಪೃಥ್ವಿಯಲ್ಲಿ ಎಲ್ಲಿಯೂ ಗಂಧದ ಮುಖ್ಯತೆಯು ಕಂಡುಬರುವುದಿಲ್ಲ, ಜಲವು ಉಷ್ಣವಾದದ್ದೂ ಕಂಡು ಬರುತ್ತದೆ. ಆದ್ದರಿಂದ ಇವೆಲ್ಲವು ಪ್ರತ್ಯಕ್ಷ ವಿರುದ್ಧವಾಗಿವೆ. ಮತ್ತು ಶಬ್ದವನ್ನು ಆಕಾಶದ ಗುಣವೆಂದು ಹೇಳುತ್ತಾರೆ ಅದು ಮಿಥ್ಯೆಯಿದೆ; ಶಬ್ದವಂತೂ ಗೋಡೆ ಮೊದಲಾದುವಿಂದ ತಡೆಯಲ್ಪಡುವುದರಿಂದ ಮೂರ್ತಿಕವಿದೆ, ಮತ್ತು ಆಕಾಶವು ಅಮೂರ್ತಿಕವಿದ್ದು ಸರ್ವವ್ಯಾಪಿಯಿದೆ. ಗೋಡೆಯಲ್ಲಿ ಆಕಾಶವಿರುವುದು ಮತ್ತು ಶಬ್ದಗುಣವು ಪ್ರವೇಶ ಮಾಡದಿರುವುದು ಹೇಗೆ ಸಂಭವವಿದೆ ? ವಸ್ತುವಿನಲ್ಲಂತೂ ಸಂಖ್ಯಾದಿಗಳೇನೂ ಇಲ್ಲ, ಒಂದು ಪದಾರ್ಥದ ಅಪೇಕ್ಷೆಯಿಂದ ಇನ್ನೊಂದು ಪದಾರ್ಥದ ಹೀನಾಧಿಕತೆಯನ್ನು ತಿಳಿಯುವುದಕ್ಕಾಗಿ ತಮ್ಮ ಜ್ಞಾನದಲ್ಲಿ ಸಂಖ್ಯಾದಿಗಳ ಕಲ್ಪನೆಯಿಂದ ವಿಚಾರ ಮಾಡುತ್ತಾರೆ. ಬುದ್ಧಿ ಮೊದಲಾದವು ಆತ್ಮನ ಪರಿಣಮನವಿದ್ದು ಬುದ್ಧಿಯೆಂಬ ಹೆಸರು ಜ್ಞಾನದ್ದಿದ್ದರೆ ಆತ್ಮನಗುಣವೇ ಇದೆ, ಮತ್ತು ಮನಸ್ಸಿನ ಹೆಸರಿದ್ದರೆ ಮನಸ್ಸನ್ನಂತೂ ದ್ರವ್ಯಗಳಲ್ಲಿ ಹೇಳಿಯೇ ಇತ್ತು, ಇಲ್ಲಿ ಗುಣವನ್ನು ಏತಕ್ಕಾಗಿ ಹೇಳಿದೆ ? ಮತ್ತು ಸುಖಾದಿಗಳು ಎಂದಾದರೊಮ್ಮೆ ಆತ್ಮನಲ್ಲಿ ಕಂಡುಬರುತ್ತವೆ, ಆದರೆ ಇವು ಆತ್ಮನ ಲಕ್ಷಣಭೂತ ಗುಣಗಳಲ್ಲ, ಅವ್ಯಾಪ್ತತೆಯಿಂದ ಲಕ್ಷಣಾಭಾಸವಿವೆ. ಮತ್ತು ಸ್ನಿಗ್ಧಗಳು ಪುದ್ಗಲ ಪರಮಾಣುವಿನಲ್ಲಿ ಕಂಡುಬಂದರೂ ಆ ಸ್ನಿಗ್ಧ ಗುರುತ್ವಾದಿಗಳು ಸ್ಪರ್ಶನೇಂದ್ರಿಯದಿಂದ ತಿಳಿದುಬರುತ್ತಿರುವುದರಿಂದ ಸ್ಪರ್ಶಗುಣದಲ್ಲಿ ಗರ್ಭಿತವಾಗುತ್ತವೆ, ಅವನ್ನು ಬೇರೆ ಏತಕ್ಕಾಗಿ ಹೇಳಿದೆ ? ದ್ರವ್ಯತ್ವಗುಣವನ್ನು ಜಲದಲ್ಲಿ ಹೇಳಿದೆ, ಆದರೆ ಹೇಗೆ ಅಗ್ನಿಯಲ್ಲೂ ಊರ್ಧ್ವಗಮನತ್ವಾದಿಗಳು ಕಂಡು ಬರುತ್ತವೆ. ಬೇಕಾದರೆ ಎಲ್ಲವನ್ನು ಹೇಳಬೇಕಿತ್ತು ಅಥವಾ ಸಾಮಾನ್ಯದಲ್ಲಿ ಗರ್ಭಿತಮಾಡಬೇಕಿತ್ತು.ಈ ಪ್ರಕಾರ ಈ ಗುಣಗಳನ್ನು ಹೇಳಿದೆ ಅವು ಕೂಡ ಕಾಲ್ಪನಿಕವಿವೆ.

ಅದರಂತೆ ಉತ್ಕ್ಷೇಪಣ, ಅವಕ್ಷೇಪಣ, ಆಕುಂಚನ, ಪ್ರಸಾರಣ, ಯಮನವೆಂದು ಐದು ಪ್ರಕಾರದ ಕರ್ಮಗಳನ್ನು ಹೇಳುತ್ತಾರೆ, ಆದರೆ ಇವಂತೂ ಶರೀರದ ಕ್ರಿಯೆಗಳಿವೆ; ಇವನ್ನು ಭಿನ್ನವಾಗಿ ಹೇಳುವುದರ ಅರ್ಥವೇನು? ಮತ್ತು ಇಷ್ಟೇ ಕ್ರಿಯೆಗಳಾಗುವುದಿಲ್ಲ, ಕ್ರಿಯೆಗಳಂತೂ ಹಲವು ಪ್ರಕಾರವಾಗುತ್ತವೆ. ಮತ್ತು ಇವಕ್ಕೆ ಬೇರೆಯೇ ತತ್ತ್ವ ಸಂಜ್ಞೆಯಿತ್ತಿರುವಿರಿ, ಹಾಗೆ ಭಿನ್ನಪದಾರ್ಥಗಳಿದ್ದರೆ ಅವನ್ನು ಭಿನ್ನತತ್ತ್ವವೆಂದು ಹೇಳಬೇಕಿತ್ತು, ಅಥವಾ ಕಾಮ-ಕ್ರೋಧಾದಿಗಳನ್ನು ದೂರ ಮಾಡುವಲ್ಲಿ ವಿಶೇಷ ಪ್ರಯೋಜನಭೂತವಿದ್ದರೆ ತತ್ತ್ವವೆಂದು ಹೇಳಬೇಕಿತ್ತು, ಆದರೆ ಎರಡೂ ಇಲ್ಲ. ಮತ್ತು ಹಾಗೇ ಹೇಳುವುದಿದ್ದರೆ ಪಾಷಾಣಾದಿಗಳದ್ದೂ ಅನೇಕ ಅವಸ್ಥೆಗಳಾಗುತ್ತವೆ ಅವನ್ನೂ ತತ್ತ್ವಗಳೆಂದು ಹೇಳಬೇಕಿತ್ತು, ಆದರೆ ಅದರಿಂದ ಯಾವ ಪ್ರಯೋಜನವಿಲ್ಲ.

ಇನ್ನು ಪರ ಮತ್ತು ಅಪರವೆಂದು ಸಾಮಾನ್ಯವು ಎರಡು ಪ್ರಕಾರದಿಂದಿದೆ. ಅಲ್ಲಿ ಪರವು ಸತ್ತಾರೂಪವಿದ್ದರೆ ಅಪರವು ದ್ರವ್ಯತ್ವಾದಿ ರೂಪವಿದೆ. ದ್ರವ್ಯದಲ್ಲಿ ನಿತ್ಯ ಯಾವವುಗಳ ಪ್ರವೃತ್ತಿಯಾಗುವುದು ಅವು ವಿಶೇಷಗಳಿವೆ; ಅಯುತಸಿದ್ಧ ಸಂಬಂಧದ ಹೆಸರು ಸಮವಾಯವಿದೆ. ಈ ಸಾಮಾನ್ಯಾದಿಗಳಂತೂ ಹಲವಕ್ಕೆ ಏಕಪ್ರಕಾರದಿಂದ

ಮತ್ತು ಒಂದು ವಸ್ತುವಿನಲ್ಲಿ ಭೇದ ಕಲ್ಪನೆಯಿಂದ ಮತ್ತು ಭೇದಕಲ್ಪನೆಯ ಅಪೇಕ್ಷಾಸಂಬಂಧ ಮನ್ನಿಸುವುದರಿಂದ ತಮ್ಮ ವಿಚಾರದಲ್ಲಿಯೇ ಆಗುತ್ತವೆ, ಬೇರಾವ ಭಿನ್ನ ಪದಾರ್ಥವಂತೂ ಇಲ್ಲ. ಇವನ್ನು ತಿಳಿದುಕೊಳ್ಳುವುದರಿಂದ ಕಾಮ-ಕ್ರೋಧಾದಿಗಳನ್ನು ದೂರ ಮಾಡುವ ರೂಪದ ವಿಶೇಷ ಪ್ರಯೋಜನದ ಸಿದ್ಧಿಯೂ ಇಲ್ಲದಿರುವುದರಿಂದ ಇವಕ್ಕೆ ತತ್ತ್ವವೆಂದು ಏತಕ್ಕಾಗಿ ಹೇಳಿದೆ? ಮತ್ತು ಹೀಗೆಯೇ ತತ್ತ್ವವೆಂದು ಹೇಳುವುದಿದ್ದರೆ ವಸ್ತುವಿನಲ್ಲಿಯೇ ಪ್ರಮೇಯತ್ವಾದಿ ಅನೇಕ ಧರ್ಮಗಳಿವೆ ಹಾಗೂ ಸಂಬಂಧ, ಆಧಾರಾದಿಕ ಕಾರಕಗಳ ಅನೇಕ ಪ್ರಕಾರಗಳು ವಸ್ತುವಿನಲ್ಲಿ ಸಂಭವಿಸುತ್ತಿರುವುದರಿಂದ ಎಲ್ಲವನ್ನು ಹೇಳಬೇಕಿತ್ತು ಅಥವಾ ಪ್ರಯೋಜನ ತಿಳಿದುಕೊಂಡು ಹೇಳಬೇಕಿತ್ತು. ಆದುದರಿಂದ ಈ ಸಾಮಾನ್ಯ ಮೊದಲಾದ ತತ್ತ್ವಗಳನ್ನು ಕೂಡ ವ್ಯರ್ಥವಾಗಿಯೇ ಹೇಳಿದ್ದಾರೆ.

ಈ ಪ್ರಕಾರ ವೈಶೇಷಿಕರ ಮುಖಾಂತರ ಹೇಳಿದ ತತ್ವಗಳೂ ಕಾಲ್ಪನಿಕವಿವೆಯೆಂದು ತಿಳಿಯಬೇಕು.

ವೈಶೇಷಿಕರುಪ್ರತ್ಯಕ್ಷ ಮತ್ತು ಅನುಮಾನವೆಂಬ ಎರಡೇ ಪ್ರಮಾಣಗಳನ್ನು ಮನ್ನಿಸುತ್ತಾರೆ. ಆದರೆ ಇವುಗಳ ಸತ್ಯಾಸತ್ಯತೆಯ ನಿರ್ಣಯವನ್ನು ಜೈನ ನ್ಯಾಯಗ್ರಂಥಗಳಿಂದ★ ತಿಳಿದುಕೊಳ್ಳಬೇಕು.

ವಿಷಯ, ಇಂದ್ರಿಯ, ಬುದ್ಧಿ, ಶರೀರ, ಸುಖ, ದುಃಖಗಳ ಅಭಾವದಿಂದಾಗುವ ಆತ್ಮನ ಸ್ಥಿತಿಯು ಅದು ಮುಕ್ತಿಯಿದೆಯೆಂದು ನೈಯಾಯಿಕರು ಹೇಳುತ್ತಾರೆ. ಮತ್ತು ವೈಶೇಷಿಕರು ಇಪ್ಪತ್ತ್ನಾಲ್ಕು ಗುಣಗಳಲ್ಲಿ ಬುದ್ಧಿ ಮೊದಲಾದ ಒಂಭತ್ತು ಗುಣಗಳ ಅಭಾವವು ಅದು ಮುಕ್ತಿಯಿದೆಯೆಂದು ಹೇಳುತ್ತಾರೆ. ಇಲ್ಲಿ ಬುದ್ಧಿಯ ಅಭಾವ ಹೇಳಿದೆ, ಆದರೆ ಬುದ್ಧಿಯೆಂಬ ಹೆಸರು ಜ್ಞಾನದ್ದಿದ್ದು ಜ್ಞಾನದ ಅಧಿಕರಣತೆಯು ಆತ್ಮನ ಲಕ್ಷಣವೆಂದು ಹೇಳಿತ್ತು; ಈಗ ಜ್ಞಾನದ ಅಭಾವವಾದ ಮೇಲೆ ಎಂದರೆ ಲಕ್ಷಣದ ಅಭಾವವಾಗುವುದರಿಂದ ಲಕ್ಷ್ಯದ್ದೂ ಅಭಾವವಾಗುವುದು, ಆಗ ಆತ್ಮನ ಸ್ಥಿತಿಯು ಹೇಗೆ ಉಳಿಯುವುದು ? ಮತ್ತು ಬುದ್ಧಿಯೆಂಬ ಹೆಸರು ಮನಸ್ಸಿನದಿದ್ದರೆ ಭಾವಮನವಂತೂ ಜ್ಞಾನರೂಪೇ ಇದ್ದು ದ್ರವ್ಯಮನವು ಶರೀರರೂಪವಿದ್ದರೆ ಅದು ಮುಕ್ತವಾದ ಮೇಲೆ ದ್ರವ್ಯಮನದ ಸಂಬಂಧವು ಬಿಟ್ಟು ಹೋಗುತ್ತದೆಂದ ಮೇಲೆ ಜಡದ್ರವ್ಯಮನದ ಹೆಸರು ಬುದ್ಧಿ ಹೇಗಾಗುವುದು ? ಮತ್ತು ಮನಸ್ಸಿನಂತೆಯೇ ಇಂದ್ರಿಯಗಳನ್ನು ತಿಳಿಯಬೇಕು. ವಿಷಯದ ಅಭಾವವಾದರೆ ಸ್ಪರ್ಶಾದಿ ವಿಷಯಗಳನ್ನು ತಿಳಿಯುವುದು ನಿಂತು ಹೋಗುವುದು, ಆಗ ಜ್ಞಾನವು ಯಾವುದರ ಹೆಸರಾಗುವುದು ? ಮತ್ತು ಆ ವಿಷಯಗಳ ಅಭಾವವಾದರೆ ಲೋಕದ ಅಭಾವವಾಗುವುದು ಮತ್ತು ಸುಖದ ಅಭಾವಹೇಳಿದೆ, ಆದರೆ ಸುಖದ ಸಲುವಾಗಿಯೇ ಉಪಾಯ ಮಾಡುತ್ತಾರೆ; ಅದರ ಅಭಾವವಾದಾಗ ಉಪಾದೇಯ ಹೇಗಾಗುವುದು ? ಅಲ್ಲಿ ಆಕುಲತಾಮಯ ಇಂದ್ರಿಯಜನ್ಯ ಸುಖದ ಅಭಾವವಾಯಿತೆಂದು ಹೇಳಿದರೆ ಇದು ಸತ್ಯವಿದೆ; ಏಕೆಂದರೆ ನಿರಾಕುಲ ಲಕ್ಷಣವುಳ್ಳ ಅತೀಂದ್ರಿಯ ಸುಖವಂತೂ ಅಲ್ಲಿ ಸಂಪೂರ್ಣವಾಗಿ ಸಿಗುವ ಸಂಭವವಿರುವುದರಿಂದ ಸುಖದ ಅಭಾವವಿಲ್ಲ. ಮತ್ತು ಅಲ್ಲಿ ಶರೀರದ ದುಃಖ, ದ್ವೇಷಾದಿಗಳ ಅಭಾವವನ್ನು ಹೇಳುತ್ತಾರೆ ಅದು ಸತ್ಯವಿದೆ.

ಶಿವಮತದಲ್ಲಿ ಕರ್ತೃವಾದ ನಿರ್ಗುಣ ಈಶ್ವರನು ಶಿವನಿದ್ದು ಅವನನ್ನು ದೇವನೆಂದು ಮನ್ನಿಸುತ್ತಾರೆ; ಆದರೆ ಅವನ ಸ್ವರೂಪದ ವಿಪರೀತತೆಯನ್ನು ಪೂರ್ವೋಕ್ತ ಪ್ರಕಾರದಿಂದ ತಿಳಿಯಬೇಕು, ಇಲ್ಲಿ ಭಸ್ಮ, ಕೌಪೀನ, ಜಡೆ,

★ ದೇವಾಗಮ, ಯುಕ್ತ್ಯಾನುಶಾಸನ, ಅಷ್ಟಸಹಸ್ರೀ, ನ್ಯಾಯವಿನಿಶ್ಚಯ, ಸಿದ್ಧಿವಿನಿಶ್ಚಯ, ಪ್ರಮಾಣಸಂಗ್ರಹ, ತತ್ತ್ವಾರ್ಥಶ್ಲೋಕವಾರ್ತಿಕ, ರಾಜವಾರ್ತಿಕ, ಪ್ರಮೇಯಕಮಲಮಾರ್ತಂಡ ಮತ್ತು ನ್ಯಾಯಕುಮುದಚಂದ್ರಿಕೆ ಮೊದಲಾದ ದಾರ್ಶನಿಕ ಗ್ರಂಥಗಳಿಂದ ತಿಳಿದುಕೊಳ್ಳಬೇಕು.

ಯಜ್ಞೋಪವೀತ ಇತ್ಯಾದಿ ಚಿಹ್ನಗಳೊಡನೆ ವೇಷಗಳಿರುತ್ತವೆ, ಅವು ಆಚಾರಾದಿ ಭೇದದಿಂದ ಶೈವ, ಪಾಶುಪತ, ಮಹಾವ್ರತಿ, ಕಾಲಸುಖವೆಂದು ನಾಲ್ಕು ಪ್ರಕಾರಗಳಿವೆ. ಆದರೆ ಇವು ರಾಗಾದಿಗಳಿಂದ ಯುಕ್ತವಿರುವುದರಿಂದ ಸುಲಿಂಗಗಳಲ್ಲ.

ಈ ಪ್ರಕಾರ ಶಿವಮತದ ನಿರೂಪಣೆ ಮಾಡಲಾಯಿತು.

**ಮೀಮಾಂಸಕ ಮತ :-**

ಈಗ ಮೀಮಾಂಸಕ ಮತದ ಸ್ವರೂಪ ಹೇಳುತ್ತಾರೆ. ಬ್ರಹ್ಮವಾದಿ ಮತ್ತು ಕರ್ಮವಾದಿಯೆಂದು ಮೀಮಾಂಸಕರು ಎರಡು ಪ್ರಕಾರರಿದ್ದಾರೆ.

ಬ್ರಹ್ಮವಾದಿಗಳು 'ಇದೆಲ್ಲವೂ ಬ್ರಹ್ಮವಿದ್ದು ಬೇರೇನೂ ಇಲ್ಲ'ವೆಂದು ವೇದಾಂತದಲ್ಲಿ ಅದ್ವೈತಬ್ರಹ್ಮನನ್ನು ನಿರೂಪಣೆ ಮಾಡುತ್ತಾರೆ; ಮತ್ತು 'ಆತ್ಮನಲ್ಲಿ ಲಯವಾಗುವುದಕ್ಕೆ ಮುಕ್ತಿ'ಯೆಂದು ಹೇಳುತ್ತಾರೆ. ಇವರ ಮಿಥ್ಯಾತನವನ್ನು ಮೊದಲು ತಿಳಿಸಿದೆ ಅದನ್ನು ವಿಚಾರಿಸಬೇಕು. ಮತ್ತು ಕರ್ಮವಾದಿಗಳು ಕ್ರಿಯೆ, ಆಚಾರ, ಯಜ್ಞಾದಿ ಕಾರ್ಯಗಳ ಕರ್ತವ್ಯತೆಯನ್ನು ಪ್ರರೂಪಣೆ ಮಾಡುತ್ತಾರೆ, ಆದರೆ ಈ ಕ್ರಿಯೆಗಳಲ್ಲಿ ರಾಗಾದಿಗಳ ಸದ್ಭಾವವು ಕಂಡು ಬರುತ್ತಿರುವುದರಿಂದ ಈ ಕಾರ್ಯಗಳು ಒಂದಿಷ್ಟೂ ಕಾರ್ಯಕಾರಿಯಾಗಿಲ್ಲ.

ಅದರಲ್ಲಿ 'ಭಟ್ಟ' ಮತ್ತು 'ಪ್ರಭಾಕರ'ರಿಂದ ಪುರಸ್ಕೃತವಾದ ಎರಡು ಪದ್ಧತಿಗಳಿವೆ. ಅಲ್ಲಿ ಭಟ್ಟರಂತೂ ಪ್ರತ್ಯಕ್ಷ ಅನುಮಾನ, ವೇದ, ಉಪಮೆ, ಅರ್ಥಾಪತ್ತಿ, ಅಭಾವವೆಂದು ಆರು ಪ್ರಮಾಣಗಳನ್ನು ಮನ್ನಿಸುತ್ತಾರೆ. ಮತ್ತು ಪ್ರಭಾಕರರು ಅಭಾವವನ್ನುಳಿದು ಐದೇ ಪ್ರಮಾಣಗಳನ್ನು ಮನ್ನಿಸುತ್ತಾರೆ, ಆದರೆ ಇವುಗಳ ಸತ್ಯಾಸತ್ಯತೆಯನ್ನು ಜೈನ ಶಾಸ್ತ್ರಗಳಲ್ಲಿ ತಿಳಿದುಕೊಳ್ಳಬೇಕು.

ಅಲ್ಲಿ ಷಟ್ಕರ್ಮಸಹಿತ ಬ್ರಹ್ಮಸೂತ್ರದ ಧಾರಕರು, ಶೂದ್ರಾನ್ನವರ್ಜಿತರು, ಗೃಹಸ್ಥಾಶ್ರಮಿಗಳಾದಂಥವರು ಭಟ್ಟರಿದ್ದಾರೆ ಮತ್ತು ವೇದಾಂತದಲ್ಲಿ ಯಜ್ಞೋಪವೀತ ರಹಿತರು, ವಿಪ್ರಾನ್ನಗ್ರಾಹಕರು, ಭಗವತ್ ನಾಮಧಾರಕರಾದವರು ಕುಟೀಚರ, ಬಹೂದಕ, ಹಂಸ, ಪರಮಹಂಸರೆಂದು ನಾಲ್ಕು ಪ್ರಕಾರದವರಿದ್ದಾರೆ. ಇವರು ಅಲ್ಪತ್ಯಾಗದಿಂದ ಸಂತುಷ್ಟರಿದ್ದಾರೆ, ಆದರೆ ಜ್ಞಾನ-ಶ್ರದ್ಧೆಗಳ ಮಿಥ್ಯಾತನ ಮತ್ತು ರಾಗಾದಿಗಳ ಸದ್ಭಾವವು ಇವರಲ್ಲಿ ಕಂಡು ಬರುತ್ತದೆ; ಆದುದರಿಂದ ಈ ವೇಷಗಳು ಕಾರ್ಯಕಾರಿಯಾಗಿಲ್ಲ.

**ಜೈಮಿನೀಯ ಮತ :-**

ಈ ಕೆಳಗಿನಂತೆ ಹೇಳುವವರೇ ಜೈಮಿನೀಯ ಮತದವರಿದ್ದಾರೆ.

ಯಾವನೋ ಸರ್ವಜ್ಞದೇವನಿಲ್ಲ; ನಿತ್ಯ ವೇದ ವಚನಗಳಿವೆ ಅವುಗಳಿಂದ ಯಥಾರ್ಥ ನಿರ್ಣಯವಾಗುತ್ತದೆ. ಆದುದರಿಂದ ಮೊದಲು ವೇದಪಾಠದಿಂದ ಕ್ರಿಯೆಗಳಲ್ಲಿ ಪ್ರವರ್ತಿಸುವುದಂತೂ ಪ್ರೇರಣೆಯಿದ್ದು ಅದೇ ಲಕ್ಷಣವಿರುವಂಥ ಧರ್ಮದ ಸಾಧನೆ ಮಾಡಬೇಕು. 'ಸ್ವಃಕಾಮೋಽಗ್ನಿಂ ಯಜೇತ್' ಎಂದರೆ ಸ್ವರ್ಗಾಭಿಲಾಷೆಯುಳ್ಳವರು ಅಗ್ನಿಯನ್ನು ಪೂಜಿಸಬೇಕೆಂದು ಹೇಳುತ್ತಾರೆ; ಇತ್ಯಾದಿ ನಿರೂಪಣೆ ಮಾಡುತ್ತಾರೆ.

ಶೈವ, ಸಾಂಖ್ಯ, ನೈಯಾಯಿಕರೆಲ್ಲರು ವೇದವನ್ನು ಮನ್ನಿಸುತ್ತಾರೆ; ನೀವು ಕೂಡ ಮನ್ನಿಸುವಿರಿ; ಆದರೆ ನಿಮ್ಮ ಹಾಗೂ ಅವರೆಲ್ಲರ ತತ್ತ್ವಾದಿಗಳ ನಿರೂಪಣೆಯಲ್ಲಿ ಪರಸ್ಪರ ವಿರುದ್ಧತೆಯು ಕಂಡು ಬರುತ್ತಿರುವುದರ ಕಾರಣವೇನಿದೆ? ವೇದದಲ್ಲಿ ಒಂದೆಡೆ ಒಂದು ರೀತಿ ಇನ್ನೊಂದೆಡೆ ಇನ್ನೊಂದು ರೀತಿ ನಿರೂಪಣೆ ಮಾಡಿದ್ದರೆ ಅದರ ಪ್ರಾಮಾಣಿಕತೆ ಹೇಗುಳಿಯಿತು ? ಮತ್ತು ಮತಾನುಯಾಯಿಗಳೇ ಒಂದೆಡೆ ಒಂದು ರೀತಿ ಇನ್ನೊಂದೆಡೆ ಇನ್ನೊಂದು ರೀತಿ ನಿರೂಪಣೆ ಮಾಡುತ್ತಿದ್ದರೆ ನೀವು ಪರಸ್ಪರರಲ್ಲಿ ತಂಟೆ ನಿರ್ಣಯ ಮಾಡಿ ಒಬ್ಬರನ್ನು ವೇದಾನುಸಾರಿ ಮತ್ತು ಅನ್ಯರನ್ನು ವೇದದಿಂದ ಪರಾಙ್ಮುಖರೆಂದು ನಿಶ್ಚಯಿಸಿರಿ. ನಮಗಂತೂ ವೇದದಲ್ಲಿ ಪೂರ್ವಾಪರ ವಿರುದ್ಧತೆಯೊಡನೆ ಕೂಡಿದ ನಿರೂಪಣೆಯು ಕಂಡು ಬರುತ್ತದೆ. ಆದುದರಿಂದ ತಮ್ಮ -ತಮ್ಮ ಇಚ್ಛೆಗನುಸರಿಸಿ ಅದರ ಅರ್ಥವನ್ನು ಗ್ರಹಣಮಾಡಿ ಬೇರೆ-ಬೇರೆ ಮತಗಳ ಅಧಿಕಾರಿಯಾಗಿರುವಿರಿ. ಆದರೆ ಇಂಥ ವೇದವನ್ನು ಹೇಗೆ ಪ್ರಮಾಣ ಮಾಡುವುದು ? ಇನ್ನು ಅಗ್ನಿಪೂಜೆಯಿಂದ ಸ್ವರ್ಗವಾದರೆ ಅಗ್ನಿಯನ್ನು ಮನುಷ್ಯರಿಂದ ಉತ್ತಮವೆಂದು ಹೇಗೆ ಮನ್ನಿಸುವುದು ? ಇದು ಪ್ರತ್ಯಕ್ಷವಿರುದ್ಧವಿದೆ. ಮತ್ತು ಅದು ಸ್ವರ್ಗದಾತಾ ಹೇಗಾಗುವುದು ? ಇದೇ ಪ್ರಕಾರ ಅನ್ಯ ವೇದ ವಚನಗಳು ಪ್ರಮಾಣವಿರುದ್ಧವಿವೆ. ಮತ್ತು ವೇದದಲ್ಲಿ ಬ್ರಹ್ಮನು ಹೇಳಿದ್ದರೆ ಸರ್ವಜ್ಞನೆಂದೇಕೆ ಮನ್ನಿಸುವುದಿಲ್ಲ? ಇತ್ಯಾದಿ ಪ್ರಕಾರದಿಂದ ಜೈಮಿನಿ ಮತವು ಕಾಲ್ಪನಿಕವಿದೆಯೆಂದು ತಿಳಿಯಬೇಕು.

**ಬೌದ್ಧಮತ :-**

ಈಗ ಬೌದ್ಧ ಮತದ ಸ್ವರೂಪ ಹೇಳುತ್ತಾರೆ.

ಬೌದ್ಧಮತದಲ್ಲಿ ದುಃಖ, ಆಯತನ, ಸಮುದಾಯ, ಮಾರ್ಗವೆಂದು ನಾಲ್ಕು[1] ಆರ್ಯಸತ್ಯಗಳನ್ನು ಪ್ರರೂಪಣೆ ಮಾಡುತ್ತಾರೆ. ಸಂಸಾರಿಗೆ ಸ್ಕಂಧರೂಪವು ಅದು ದುಃಖವಿದೆ. ಅದು ವಿಜ್ಞಾನ, ವೇದನೆ, ಸಂಜ್ಞೆ, ಸಂಸ್ಕಾರ, ರೂಪವೆಂದು ಐದು ಪ್ರಕಾರದ್ದಿದೆ.[2]

ಅಲ್ಲಿ ರೂಪಾದಿಗಳನ್ನು ತಿಳಿಯುವುದು ಅದು ವಿಜ್ಞಾನವಿದೆ; ಸುಖ-ದುಃಖದ ಅನುಭವ ಮಾಡುವುದು ಅದು ವೇದನೆಯಿದೆ; ನಿದ್ರೆಯಿಂದ ಎಚ್ಚರಾಗುವುದು ಅದು ಸಂಜ್ಞೆಯಿದೆ; ಓದಿದ್ದನ್ನು ಸ್ಮರಣೆ ಮಾಡುವುದು ಅದು ಸಂಸ್ಕಾರವಿದೆ; ರೂಪ ಧಾರಣವು ಅದು [3]ರೂಪವಿದೆ, ಇಲ್ಲಿ ವಿಜ್ಞಾನಾದಿಗಳಿಗೆ ದುಃಖವೆಂದಿರುವುದು ಅದು ಮಿಥ್ಯೆಯಿದೆ; ದುಃಖವಂತೂ ಕಾಮ-ಕ್ರೋಧಾದಿಗಳಿದ್ದು ಜ್ಞಾನವು ದುಃಖವಿಲ್ಲ. ಯಾವನಿಗೆ ಜ್ಞಾನವು ಅಲ್ಪವಿದ್ದು ಕ್ರೋಧ-ಲೋಭಾದಿಗಳು ಅಧಿಕವಿವೆ ಅವನು ದುಃಖಿಯಿದ್ದಾನೆ; ಯಾವನಿಗೆ ಜ್ಞಾನವು ಅಧಿಕವಿದ್ದು ಕಾಮ-ಕ್ರೋಧಾದಿಗಳು ಅಲ್ಪವಿವೆ ಅಥವಾ ಇಲ್ಲ ಅವನು ಸುಖಿಯಿರುವುದನ್ನು ಪ್ರತ್ಯಕ್ಷ ಕಾಣುತ್ತೇವೆ. ಆದುದರಿಂದ ವಿಜ್ಞಾನಾದಿಗಳು ದುಃಖರೂಪವಾಗಿಲ್ಲ.

---

1 ದುಃಖಮಾಯತನಂ ಚೈವ ತತಃ ಸಮುದಯೋ ಮತಃ ।
ಮಾರ್ಗಶ್ಚೇತ್ಯಸ್ಯ ಚ ವ್ಯಾಖ್ಯಾ ಕ್ರಮೇಣ ಶ್ರೂಯತಾಮತಃ ॥೩೬॥ ವಿ.ವಿ.

2 ದುಃಖಂ ಸಂಸಾರಿಣಃ ಸ್ಕಂಧಾಸ್ತೇ ಚ ಪಂಚಪ್ರಕೀರ್ತಿತಃ ।
ವಿಜ್ಞಾನಂ ವೇದನಾ ಸಂಜ್ಞಾ ಸಂಸ್ಕಾರೋ ರೂಪಮೇವ ಚ ॥೩೭॥ ವಿ.ವಿ.

3 ರೂಪಂ ಪಂಚೇಂದ್ರಿಯಾಣ್ಯರ್ಥಾಃ ಪಂಚಾವಿಜ್ಞಾಪ್ತಿರೇವ ಚ ।
ತದ್ವಿಜ್ಞಾನಾಶ್ರಯಾ ರೂಪಪ್ರಸಾದಾಶ್ಚಕ್ಷುರಾದಯಾಃ ॥೩೭॥

ಐದು ಇಂದ್ರಿಯಗಳು ಮತ್ತು ಅವುಗಳ ಶಬ್ದಾದಿವಿಷಯಗಳು ಐದು, ಒಂದು ಮನಸ್ಸು ಹಾಗೂ ಒಂದು ಧರ್ಮಾಯತನವೆಂದು ಹನ್ನೆರಡು ಆಯತನ ಹೇಳಿದ್ದಾರೆ. ಎಲ್ಲವನ್ನೂ ಕ್ಷಣಿಕವೆಂದು ಹೇಳುತ್ತಾರೆಂದ ಮೇಲೆ ಈ ಆಯತನ ಏತಕ್ಕಾಗಿ ಹೇಳಿದ್ದಾರೆ, ಇವುಗಳ ಪ್ರಯೋಜನವೇನು ?

ರಾಗಾದಿಕಾರಣಗಳುತ್ಪನ್ನವಾಗುವಂಥ ಆತ್ಮ ಮತ್ತು ಆತ್ಮೀಯ ನಾಮವಿರುವುದು ಅದು ಸಮುದಾಯವಿದೆ. ಅಲ್ಲಿ ಅಹಂರೂಪವು ಆತ್ಮವಿದ್ದರೆ ಮಮರೂಪವು ಆತ್ಮೀಯವೆಂದು ತಿಳಿಯುವುದು. ಆದರೆ ಕ್ಷಣಿಕ ಮನ್ನಿಸುವುದರಿಂದ ಇವನ್ನು ಹೇಳುವುದರದೂ ಪ್ರಯೋಜನವಿಲ್ಲ.

ಎಲ್ಲ ಸಂಸ್ಕಾರಗಳು ಕ್ಷಣಿಕವಿವೆಯೆಂಬ ವಾಸನೆಯು ಅದು ಮಾರ್ಗವಿದೆ, ಆದರೆ ಅಧಿಕ ಕಾಲ ಸ್ಥಿರವಿರುವಂಥ ಅದೆಷ್ಟೋ ವಸ್ತುಗಳು ಕಂಡು ಬರುತ್ತವೆ. ಒಂದೇ ಅವಸ್ಥೆಯಿರುವುದಿಲ್ಲವೆಂದು ನೀನು ಹೇಳುವುದನ್ನು ನಾವು ಮನ್ನಿಸುತ್ತೇವೆ. ಸೂಕ್ಷ್ಮ ಪರ್ಯಾಯಗಳು ಕ್ಷಣಸ್ಥಾಯಿಯಿವೆ. ಮತ್ತು ಅದೇ ವಸ್ತುವಿನ ನಾಶವೆಂದು ಮನ್ನಿಸುತ್ತಾರೆ; ಆದರೆ ಇದಂತೂ ಆಗುತ್ತಿರುವುದು ಕಂಡು ಬರುವುದಿಲ್ಲ, ನಾವು ಹೇಗೆ ಮನ್ನಿಸುವುದು? ಬಾಲ-ವೃದ್ಧಾದಿ ಅವಸ್ಥೆಗಳಲ್ಲಿ ಒಬ್ಬ ಆತ್ಮನ ಅಸ್ತಿತ್ವವು ಭಾಸವಾಗುತ್ತದೆ; ಒಬ್ಬನಿಲ್ಲದಿದ್ದರೆ ಪೂರ್ವೋತ್ತರ ಕಾರ್ಯದ ಕರ್ತೃವು ಒಬ್ಬನೆಂದು ಹೇಗೆ ಮನ್ನಿಸುತ್ತೀರಿ? ಸಂಸ್ಕಾರದಿಂದಿದೆಯೆಂದರೆ ಸಂಸ್ಕಾರವು ಯಾವನಿಗಿದೆ ? ಯಾವನಿಗಿದೆ ಅವನು ನಿತ್ಯನಿದ್ದಾನೆಯೋ ಅಥವಾ ಕ್ಷಣಿಕನಿದ್ದಾನೆಯೋ ? ನಿತ್ಯನಿದ್ದರೆ ಎಲ್ಲವನ್ನು ಕ್ಷಣಿಕವೆಂದು ಹೇಗೆ ಹೇಳುತ್ತೀರಿ? ಕ್ಷಣಿಕವಿದ್ದರೆ ಯಾವುದರ ಆಧಾರವೇ ಕ್ಷಣಿಕವಿದೆ, ಆ ಸಂಸ್ಕಾರದ ಪರಂಪರೆಯನ್ನು ಹೇಗೆ ಹೇಳುತ್ತೀರಿ ? ಎಲ್ಲವೂ ಕ್ಷಣಿಕವಾದಾಗ ತಾವು ಕೂಡ ಕ್ಷಣಿಕವಾದಿರಿ. ಇಂಥ ವಾಸನೆಗೆ ನೀನು ಮಾರ್ಗವೆಂದು ಹೇಳುವೆ, ಆದರೆ ಈ ಮಾರ್ಗದ ಫಲವನ್ನು ತಾವಂತೂ ಪ್ರಾಪ್ತಮಾಡಿಕೊಳ್ಳುವುದೇ ಇಲ್ಲವೆಂದ ಮೇಲೆ ಈ ಮಾರ್ಗದಲ್ಲಿ ಏತಕ್ಕಾಗಿ ಪ್ರವರ್ತಿಸುವಿರಿ ? ನಿನ್ನ ಮತದಲ್ಲಿ ನಿರರ್ಥಕವಾದ ಶಾಸ್ತ್ರಗಳನ್ನು ಏತಕ್ಕಾಗಿ ರಚಿಸಿದಿರಿ ? ಉಪದೇಶವನ್ನಂತೂ ಒಂದಿಷ್ಟು ಕರ್ತವ್ಯದಿಂದ ಫಲಪ್ರಾಪ್ತಿ ಮಾಡಿಕೊಳ್ಳುವುದಕ್ಕಾಗಿ ಕೊಡಲಾಗುತ್ತದೆ, ಈ ಪ್ರಕಾರ ಈ ಮಾರ್ಗವು ಮಿಥ್ಯೆಯಿದೆ.

ರಾಗಾದಿಗಳ ಜ್ಞಾನ ಸಂತತಿಯ ವಾಸನೆಯ ಉಚ್ಛೇದವನ್ನು ಎಂದರೆ ನಿರೋಧವನ್ನು ಮೋಕ್ಷವೆಂದು ಹೇಳುತ್ತಾರೆ. ಆದರೆ ಎಲ್ಲವೂ ಕ್ಷಣಿಕವಾದಾಗ ಯಾರಿಗೆ ಮೋಕ್ಷ ಹೇಳುತ್ತಾರೆ ? ಮತ್ತು ರಾಗಾದಿಗಳ ಅಭಾವವಾಗುವುದನ್ನು ನಾವೂ ಮನ್ನಿಸುತ್ತೇವೆ; ಆದರೆ ತಮ್ಮ ಜ್ಞಾನಾದಿ ಸ್ವರೂಪದ ಅಭಾವವಾದ ಮೇಲಂತೂ ತಮ್ಮ ಅಭಾವವಾಗುವುದು, ಎಂದ ಮೇಲೆ ಅದರ ಉಪಾಯ ಮಾಡುವುದು ಹಿತಕಾರಿ ಹೇಗಾಗುವುದು ? ಹಿತಾಹಿತದ ವಿಚಾರ ಮಾಡುವಂಥದ್ದಂತೂ ಜ್ಞಾನವೇ ಇದೆ, ಆದರೆ ತನ್ನ ಅಭಾವಕ್ಕೆ ಜ್ಞಾನಿಯು ಹಿತವೆಂದು ಹೇಗೆ ಮನ್ನಿಸುವನು ?

ಬೌದ್ಧಮತದಲ್ಲಿ ಪ್ರತ್ಯಕ್ಷ ಮತ್ತು ಅನುಮಾನವೆಂದು ಎರಡು ಪ್ರಮಾಣ ಮನ್ನಿಸುತ್ತಾರೆ. ಇದರ ಸತ್ಯಾಸತ್ಯತೆಯ ನಿರೂಪಣೆಯನ್ನು ಜೈನ ಶಾಸ್ತ್ರಗಳಿಂದ ತಿಳಿಯಬೇಕು, ಇವೆರಡೇ ಪ್ರಮಾಣಗಳಿದ್ದರೆ ಇವರ ಶಾಸ್ತ್ರಗಳು ಅಪ್ರಮಾಣವಾದವು. ಅವುಗಳ ನಿರೂಪಣೆ ಏತಕ್ಕಾಗಿ ಮಾಡಿದೆ ? ಪ್ರತ್ಯಕ್ಷ-ಅನುಮಾನವನ್ನಂತೂ ಜೀವನು ತಾನೇ ಮಾಡಿಕೊಳ್ಳುವನು, ನೀವು ಶಾಸ್ತ್ರಗಳನ್ನು ಏತಕ್ಕಾಗಿ ರಚಿಸಿರುವಿರಿ ?

ಸುಗತನನ್ನು ದೇವನೆಂದು ಮನ್ನಿಸುತ್ತಾರೆ ಮತ್ತು ಅವನ ಸ್ವರೂಪವನ್ನು ನಗ್ನ ಹಾಗೂ ವಿಕ್ರಿಯರೂಪವಾಗಿ ಸ್ಥಾಪನೆ ಮಾಡುತ್ತಾರೆ ಅದು ಉಪಹಾಸರೂಪವಿದೆ. ಕಮಂಡಲು ಮತ್ತು ರಕ್ತಾಂಬರದ ಧಾರಿಗಳು, ಪೂರ್ವಾಹ್ನದಲ್ಲಿ ಭೋಜನ ಮಾಡುವಂಥ ಲಿಂಗರೂಪರುಗಳು ಬೌದ್ಧಮತದ ಭಿಕ್ಷುಕರಿದ್ದಾರೆ; ಆ ಕ್ಷಣಿಕರಿಗೆ ವೇಷಧಾರಣ ಮಾಡುವುದರ ಪ್ರಯೋಜನವೇನಿದೆ ? ಆದರೆ ಶ್ರೇಷ್ಠತೆಯ ಸಲುವಾಗಿ ಕಾಲ್ಪನಿಕ ನಿರೂಪಣೆ ಮಾಡುವುದು ಮತ್ತು ವೇಷಧಾರಣ ಮಾಡುವುದು ಇರುತ್ತದೆ.

ಈ ಪ್ರಕಾರ ಬೌದ್ಧರಲ್ಲಿ ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ, ಮಾಧ್ಯಮಿಕವೆಂದು ನಾಲ್ಕು ಪ್ರಕಾರಗಳಿವೆ. ವೈಭಾಷಿಕರಂತೂ ಜ್ಞಾನಸಹಿತವಾದ ಪದಾರ್ಥವನ್ನು ಮನ್ನಿಸುತ್ತಾರೆ; ಸೌತ್ರಾಂತಿಕರು ಪ್ರತ್ಯಕ್ಷ ಕಂಡು ಬರುತ್ತಿರುವುದಿಷ್ಟೇ ಇದೆ ಇದರಿಂದ ಬೇರೇನೂ ಇಲ್ಲವೆಂದು ಮನ್ನಿಸುತ್ತಾರೆ. ಯೋಗಾಚಾರದಲ್ಲಿ ಆಚಾರಸಹಿತವಾದ ಬುದ್ಧಿಯು ಕಂಡು ಬರುತ್ತದೆ; ಮತ್ತು ಮಾಧ್ಯಮಿಕರು ಪದಾರ್ಥದ ಆಶ್ರಯವಿಲ್ಲದ ಜ್ಞಾನವನ್ನೇ ಮನ್ನಿಸುತ್ತಾರೆ. ಅವರು ತಮ್ಮ-ತಮ್ಮ ಕಲ್ಪನೆ ಮಾಡುತ್ತಾರೆ; ಆದರೆ ವಿಚಾರ ಮಾಡಿದ ಮೇಲೆ ಯಾವ ತರದ ನಿರ್ಣಾಯಕದ ಮಾತಿಲ್ಲ.

ಈ ಪ್ರಕಾರ ಬೌದ್ಧಮತದ ನಿರೂಪಣೆ ಮಾಡಲಾಯಿತು.

**ಚಾರ್ವಾಕ ಮತ :-**

ಈಗ ಚಾರ್ವಾಕಮತದ ಸ್ವರೂಪ ಹೇಳುತ್ತಾರೆ.

ಯಾವನೋ ಸರ್ವಜ್ಞದೇವ, ಧರ್ಮ, ಅಧರ್ಮ, ಮೋಕ್ಷವೆಂಬವು ಇಲ್ಲ, ಪುಣ್ಯ-ಪಾಪದ ಫಲವಿಲ್ಲ, ಪರಲೋಕವಿಲ್ಲ, ಇಂದ್ರಿಯಗೋಚರವಿರುವುದಿಷ್ಟೇ ಲೋಕವಿದೆಯೆಂದು ಚಾರ್ವಾಕರು ಹೇಳುತ್ತಾರೆ.

ಸರ್ವಜ್ಞದೇವರು ಈ ಕಾಲದಲ್ಲಿ-ಈ ಕ್ಷೇತ್ರದಲ್ಲಿ ಇಲ್ಲವೋ ಅಥವಾ ಸರ್ವದಾ ಸರ್ವತ್ರವಿಲ್ಲವೋ ಎಂದು ಅವರಿಗೆ ಕೇಳುತ್ತೇವೆ. ಈ ಕಾಲ-ಈ ಕ್ಷೇತ್ರದಲ್ಲಂತೂ ನಾವು ಕೂಡ ಮನ್ನಿಸುವುದಿಲ್ಲ, ಆದರೆ ಎಲ್ಲ ಕಾಲ-ಕ್ಷೇತ್ರ ದಲ್ಲಿಲ್ಲವೆಂದು ತಿಳಿಯುವುದು ಸರ್ವಜ್ಞರಲ್ಲದೆ ಯಾರಿಗಾಯಿತು ? ಎಲ್ಲ ಕ್ಷೇತ್ರ-ಕಾಲವನ್ನು ತಿಳಿಯುವವನೇ ಸರ್ವಜ್ಞನು ಮತ್ತು ತಿಳಿಯದಿದ್ದರೆ ನಿಷೇಧ ಹೇಗೆ ಮಾಡುತ್ತಾನೆ.

ಮತ್ತು ಧರ್ಮ-ಅಧರ್ಮಗಳು ಲೋಕದಲ್ಲಿ ಪ್ರಸಿದ್ಧವಿವೆ. ಒಂದು ವೇಳೆ ಅವು ಕಾಲ್ಪನಿಕವಿದ್ದರೆ ಎಲ್ಲ ಜನರು ಸುಪ್ರಸಿದ್ಧ ಹೇಗಾಗುತ್ತಿದ್ದರು ? ಮತ್ತು ಧರ್ಮಾಧರ್ಮರೂಪದ ಪರಿಣತಿಯಾಗುತ್ತಿರುವುದು ಕಂಡು ಬರುತ್ತದೆ, ಅದರಿಂದ ವರ್ತಮಾನದಲ್ಲಿಯೇ ಸುಖಿ-ದುಃಖಿಯಾಗುತ್ತಾರೆ; ಅದನ್ನು ಹೇಗೆ ಮನ್ನಿಸದಿರುವುದು ? ಮತ್ತು ಮೋಕ್ಷದ ಅಸ್ತಿತ್ವವು ಅನುಮಾನದಿಂದ ಗಮ್ಯವಿದೆ. ಕ್ರೋಧಾದಿ ದೋಷಗಳು ಯಾರಿಗೆ ಅಲ್ಪವಿವೆ, ಯಾರಿಗೆ ಅಧಿಕವಿವೆ; ಯಾರಿಗೆ ಇವುಗಳ ನಾಸ್ತಿಯೂ ಇರುತ್ತಿರಬೇಕೆಂದು ತಿಳಿದುಬರುತ್ತದೆ. ಮತ್ತು ಜ್ಞಾನಾದಿ ಗುಣಗಳು ಯಾರಿಗೆ ಅಲ್ಪ ಯಾರಿಗೆ ಅಧಿಕವಾಗಿ ಭಾಸವಾಗುತ್ತವೆ; ಆದುದರಿಂದ ಯಾರಿಗೆ ಸಂಪೂರ್ಣವೂ ಇರುತ್ತಿರಬೇಕೆಂದು ತಿಳಿದು ಬರುತ್ತದೆ. ಹೀಗೆ ಯಾವುದರಲ್ಲಿ ಸಮಸ್ತ ದೋಷದ ಹಾನಿ; ಸಮಸ್ತ ಗುಣಗಳ ಪ್ರಾಪ್ತಿಯಿದೆ ಅದೇ ಮೋಕ್ಷಾವಸ್ಥೆಯಿದೆ.

ಅದರಂತೆ ಪುಣ್ಯ-ಪಾಪದ ಫಲವನ್ನೂ ಕಾಣುತ್ತೇವೆ. ಒಬ್ಬನು ಉದ್ಯೋಗ ಮಾಡಿದ ಮೇಲೂ ದರಿದ್ರಿಯಿರುತ್ತಾನೆ, ಒಬ್ಬನಿಗೆ ಸಂಪತ್ತು ತಾನಾಗಿಯೇ ಪ್ರಾಪ್ತವಾಗುತ್ತದೆ; ಒಬ್ಬನು ಶಾರೀರಿಕ ಯತ್ನ ಮಾಡಿದ ಮೇಲೂ ರೋಗಿಯಿರುತ್ತಾನೆ, ಒಬ್ಬನಿಗೆ ಯತ್ನವಿಲ್ಲದೆಯೇ ನಿರೋಗತೆಯಿರುತ್ತದೆಯೆಂಬುದನ್ನೆಲ್ಲ ಪ್ರತ್ಯಕ್ಷ ನೋಡಲಾಗುತ್ತದೆ; ಆದುದರಿಂದ ಇದರ ಕಾರಣವೇನಾದರೂ ಇರಲೇಬೇಕಲ್ಲವೇ ? ಇದರ ಕಾರಣವಿರುವುದು ಪುಣ್ಯ-ಪಾಪವಿದೆ.

ಪರಲೋಕ ಕೂಡ ಪ್ರತ್ಯಕ್ಷ ಹಾಗೂ ಅನುಮಾನದಿಂದ ಭಾಸವಾಗುತ್ತದೆ. 'ನಾನು ಇಂಥವನಿದ್ದವನು ದೇವನಾಗಿದ್ದೇನೆ'ಂದು ವ್ಯಂತರಾದಿಕರು ಹೇಳುತ್ತಿರುವುದನ್ನು ಕಾಣುತ್ತೇವೆ. 'ಇದಂತೂ ಗಾಳಿಯಿದೆ'ಯೆಂದು ನೀನೆನ್ನಬಹುದು; ಆದರೆ 'ನಾನಿದ್ದೇನೆ'ಂಬ ಚೇತನ ಭಾವವು ಯಾವುದರ ಆಶ್ರಯದಿಂದ ಕಂಡುಬರುತ್ತದೆ ಅದನ್ನೇ ನಾವು ಆತ್ಮನೆಂದು ಹೇಳುತ್ತೇವೆ, ನೀನು ಅದರ ಹೆಸರು ಪವನವೆನ್ನುವೆ. ಆದರೆ ಗಾಳಿಯಂತೂ ಗೋಡೆ ಮೊದಲಾದುವಿಂದ ತಡೆಯಲ್ಪಡುತ್ತದೆ, ಆತ್ಮನು ಬಂಧಿಸ್ತನಾದರೂ ಕೂಡ ತಡೆಯಲ್ಪಡುವುದಿಲ್ಲ; ಆದುದರಿಂದ ಗಾಳಿಯೆಂದು ಹೇಗೆ ಮನ್ನಿಸುವುದು ?

ಇಂದ್ರಿಯಗೋಚರವಿದ್ದಷ್ಟೇ ಲೋಕವೆಂದು ಹೇಳುವೆ; ಆದರೆ ನಿನ್ನ ಇಂದ್ರಿಯ ಗೋಚರವಂತೂ ಕೆಲವೇ ಯೋಜನ ದೂರದಲ್ಲಿರುವ ಕ್ಷೇತ್ರ ಮತ್ತು ಸ್ವಲ್ಪೇ ಅತೀತ-ಅನಾಗತಕಾಲದಂಥ ಕ್ಷೇತ್ರ-ಕಾಲವರ್ತಿಯಾದ ಪದಾರ್ಥಗಳೂ ಆಗುವ ಸಾಧ್ಯತೆಯಿಲ್ಲ, ಮತ್ತು ದೂರ ದೇಶದ ಹಾಗೂ ಅಧಿಕಕಾಲದ ಮಾತುಗಳು ಪರಂಪರೆಯಿಂದ ಕೇಳುತ್ತೇವೆ; ಆದುದರಿಂದ ಎಲ್ಲವನ್ನು ತಿಳಿಯುವುದು ನಿನಗೆ ಸಾಧ್ಯವಿಲ್ಲ, ನೀನು ಇಷ್ಟೇ ಲೋಕವೆಂದು ಹೇಗೆ ಹೇಳುತ್ತಿರುವೆ ?

ಇನ್ನು ಚಾರ್ವಾಕಮತದಲ್ಲಿ ಪೃಥ್ವಿ, ಅಪ, ತೇಜ, ವಾಯು, ಆಕಾಶಗಳು ಸೇರುವುದರಿಂದ ಚೇತನವಾಗುತ್ತದೆಂದು ಹೇಳುತ್ತಾರೆ. ಆದರೆ ಮರಣವಾದ ಮೇಲೆ ಪೃಥ್ವಿ ಮೊದಲಾದವು ಇಲ್ಲೇ ಉಳಿದು ಚೇತನವುಳ್ಳ ಪದಾರ್ಥವು ಹೋಗಿ ವ್ಯಂತರಾದಿಯಾಗುವುದು; ಅವು ಪ್ರತ್ಯಕ್ಷ ಭಿನ್ನ-ಭಿನ್ನವಾಗಿ ಕಂಡು ಬರುತ್ತವೆ. ಒಂದು ಶರೀರದಲ್ಲಿ ಪೃಥ್ವಿ ಮೊದಲಾದುವಂತೂ ಭಿನ್ನ-ಭಿನ್ನವಾಗಿ ಭಾಸವಾಗುತ್ತವೆ, ಒಂದು ಚೇತನವು ಭಾಸವಾಗುತ್ತದೆ. ಒಂದು ವೇಳೆ ಪೃಥ್ವಿ ಮೊದಲಾದವುಗಳ ಆಧಾರದಿಂದ ಚೇತನವಿದ್ದರೆ ಮೂಳೆ, ರಕ್ತ, ಉಚ್ಛ್ವಾಸಾದಿಗಳ ಚೇತನವು ಬೇರೆ ಬೇರೆಯಾಗಿರಬೇಕು. ಇನ್ನು ಕೈ ಮೊದಲಾದುವನ್ನು ಕತ್ತರಿಸಿದ ಮೇಲೆ ಅದರೊಡನೆ ವರ್ಣಾದಿಗಳಿರುವಂತೆ ಚೇತನವೂ ಇರಬೇಕು. ಮತ್ತು ಅಹಂಕಾರ, ಬುದ್ಧಿಗಳಂತೂ ಚೇತನದ್ದಿವೆ, ಆ ಪೃಥ್ವಿ ಆದಿರೂಪವಾದ ಶರೀರವಂತೂ ಇಲ್ಲೇ ಉಳಿಯಿತು, ಮುಂದೆ ವ್ಯಂತರಾದಿ ಪರ್ಯಾಯದಲ್ಲಿ ಪೂರ್ವಪರ್ಯಾಯದ ಅಹಂತನವು ಕಂಡು ಬರುತ್ತದೆ. ಅದು ಹೇಗಿರುತ್ತದೆ ? ಮತ್ತು ಪೂರ್ವಪರ್ಯಾಯದ ಗುಪ್ತ ಸಮಾಚಾರಗಳನ್ನು ಪ್ರಕಟಮಾಡುತ್ತಾರೆ ಈ ತಿಳಿಯುವಿಕೆಯು ಯಾರ ಜತೆ ಹೋಯಿತು ? ಯಾರ ಜತೆ ತಿಳಿಯುವಿಕೆಯು ಹೋಯಿತು ಅವನೇ ಆತ್ಮನಿದ್ದಾನೆ.

ಚಾರ್ವಾಕಮತದಲ್ಲಿ ತಿನ್ನುಣ್ಣುವ, ಭೋಗ-ವಿಲಾಸ ಮಾಡುವ ಇತ್ಯಾದಿ ಸ್ವಚ್ಛಂದ ವೃತ್ತಿಯ ಉಪದೇಶವಿದೆ; ಆದರೆ ಹಿಗಂತೂ ಜಗತ್ತು ತಾನಾಗಿಯೇ ಪ್ರವರ್ತಿಸುತ್ತದೆ. ಅಲ್ಲಿ ಶಾಸ್ತ್ರಾದಿಗಳನ್ನು ರಚಿಸಿ ಒಳ್ಳೆಯದಾಗುವ

ಉಪದೇಶವನ್ನೇನು ಕೊಟ್ಟಿರಿ ? ತಪಶ್ಚರಣ, ಶೀಲ, ಸಂಯಮಾದಿಗಳನ್ನು ಬಿಡಿಸುವ ಸಲುವಾಗಿ ಉಪದೇಶ ಕೊಟ್ಟಿದೆಯೆಂದು ನೀನೆನ್ನಬಹುದು, ಆದರೆ ಈ ಕಾರ್ಯಗಳಲ್ಲಿ ಕಷಾಯವು ಕುಂದುವುದರಿಂದ ಆಕುಲತೆಯು ಕುಂದುತ್ತಿರುವುದರಿಂದ ಇದೇ ಸುಖಿಯಾಗುವುದಿರುತ್ತದೆ, ಇದರಿಂದ ಯಶವಾಗುತ್ತದೆ, ನೀನು ಇವನ್ನು ಬಿಡಿಸಿ ಒಳ್ಳೆಯದನ್ನೇನು ಮಾಡುವೆ ? ವಿಷಯಾಸಕ್ತ ಜೀವಗಳಿಗೆ ರುಚಿಸುವ ಮಾತುಗಳನ್ನು ಹೇಳಿ ತಮಗೆ ಹಾಗೂ ಅನ್ಯರಿಗೆ ಕೆಡಕು ಮಾಡುವ ಭಯವಿಲ್ಲ; ಸ್ವಚ್ಛಂದರಾಗಿ ವಿಷಯ ಸೇವನೆಯ ಸಲುವಾಗಿ ಇಂಥ ಸುಳ್ಳು ಯುಕ್ತಿಗಳನ್ನು ರಚಿಸುತ್ತಾರೆ.

ಈ ಪ್ರಕಾರ ಚಾರ್ವಾಕಮತದ ನಿರೂಪಣೆ ಮಾಡಲಾಯಿತು.

## ಅನ್ಯಮತ ನಿರಾಕರಣದ ಉಪಸಂಹಾರ :-

ಇದೇ ಪ್ರಕಾರ ಅನ್ಯ ಅನೇಕ ಮತಗಳಿದ್ದು ಅವೆಲ್ಲವು ಸುಳ್ಳು ಕಾಲ್ಪನಿಕ ಯುಕ್ತಿಗಳನ್ನು ರಚಿಸಿ ವಿಷಯ ಕಷಾಯಾಸಕ್ತ ಪಾಪಿ ಜೀವರುಗಳಿಂದ ಪ್ರಕಟ ಮಾಡಲ್ಪಟ್ಟಿವೆ; ಅವುಗಳ ಶ್ರದ್ಧಾದಿಗಳಿಂದ ಜೀವರುಗಳಿಗೆ ಕೆಡಕಾಗುತ್ತದೆ. ಮತ್ತು ಒಂದು ಜಿನ ಮತವೇ ಸತ್ಯಾರ್ಥದ ಪ್ರರೂಪಕವಿದ್ದು ಸರ್ವಜ್ಞವೀತರಾಗ ದೇವರಿಂದ ಹೇಳಲ್ಪಟ್ಟಿದೆ. ಅದರ ಶ್ರದ್ಧಾದಿಗಳಿಂದಲೇ ಜೀವರುಗಳಿಗೆ ಒಳಿತಾಗುತ್ತದೆ.

ಇಂಥ ಜಿನಮತದಲ್ಲಿ ಜೀವಾದಿತತ್ತ್ವಗಳ ನಿರೂಪಣೆ ಮಾಡಿದೆ; ಪ್ರತ್ಯಕ್ಷ-ಪರೋಕ್ಷವೆಂಬೆರಡು ಪ್ರಮಾಣಗಳನ್ನು ಹೇಳಿದ್ದಾರೆ; ಸರ್ವಜ್ಞವೀತರಾಗ ಅರಹಂತದೇವರಿದ್ದಾರೆ; ಬಾಹ್ಯಾಭ್ಯಂತರ ಪರಿಗ್ರಹಗಳಿಂದ ರಹಿತರಾದ ನಿರ್ಗ್ರಂಥ ಗುರುಗಳಿದ್ದಾರೆ. ಇವರುಗಳ ವರ್ಣನೆಯನ್ನು ಈ ಗ್ರಂಥದಲ್ಲಿ ಮುಂದೆ ವಿಶೇಷವಾಗಿ ಬರೆಯಲಿದ್ದೇವೆ ಅದನ್ನು ತಿಳಿದುಕೊಳ್ಳಬೇಕು.

**ಪ್ರಶ್ನೆ :-** ನಿಮ್ಮಲ್ಲಿ ರಾಗ-ದ್ವೇಷಗಳಿರುವುದರಿಂದ ನೀವು ಅನ್ಯಮತದ ನಿಷೇಧ ಮಾಡಿ ನಿಮ್ಮ ಮತವನ್ನು ಸ್ಥಾಪನೆ ಮಾಡುತ್ತಿರುವಿರಿ ?

**ಉತ್ತರ :-** ಯಥಾರ್ಥವಸ್ತುವಿನ ಪ್ರರೂಪಣೆ ಮಾಡುವಲ್ಲಿ ರಾಗ-ದ್ವೇಷಗಳಿಲ್ಲ. ಯಾವುದಾದರೂ ತನ್ನ ಪ್ರಯೋಜನದ ವಿಚಾರ ಮಾಡಿ ಅನ್ಯಥಾ ಪ್ರರೂಪಣೆ ಮಾಡಿದರೆ ಅದು ರಾಗ-ದ್ವೇಷವೆಂಬ ಹೆಸರನ್ನು ಪಡೆಯುತ್ತದೆ.

**ಪ್ರಶ್ನೆ :-** ನಿಮ್ಮಲ್ಲಿ ರಾಗ-ದ್ವೇಷಗಳಿಲ್ಲದಿದ್ದರೆ ಅನ್ಯಮತವು ಕೆಡಕು ಮತ್ತು ಜೈನ ಮತವು ಒಳ್ಳೆಯದೆಂದು ಹೇಗೆ ಹೇಳುತ್ತಿರುವಿರಿ ? ಸಾಮ್ಯ ಭಾವವಿದ್ದರೆ ಎಲ್ಲವನ್ನು ಸಮಾನವಾಗಿ ತಿಳಿಯಿರಿ, ಮತದ ಪಕ್ಷವನ್ನು ಏತಕ್ಕಾಗಿ ವಹಿಸುತ್ತಿರುವಿರಿ ?

**ಉತ್ತರ :-** ಕೆಡಕನ್ನು ಕೆಡಕೆಂದು ಹೇಳುತ್ತೇವೆ, ಒಳ್ಳೆಯದನ್ನು ಒಳ್ಳೆಯದೆಂದು ಹೇಳುತ್ತೇವೆ; ಇದರಲ್ಲಿ ರಾಗ-ದ್ವೇಷವನ್ನೇನು ಮಾಡಿತು? ಒಳಿತು-ಕೆಡಕನ್ನು ಸಮಾನವಾಗಿ ತಿಳಿಯುವುದಂತೂ ಅಜ್ಞಾನಭಾವವಿದೆ; ಅದು ಸಾಮ್ಯಭಾವವಲ್ಲ.

**ಪ್ರಶ್ನೆ :-** ಎಲ್ಲ ಮತಗಳ ಪ್ರಯೋಜನವಂತೂ ಒಂದೇ ಇರುವುದರಿಂದ ಎಲ್ಲವನ್ನು ಸಮಾನವಾಗಿ ತಿಳಿಯಬೇಡವೇನು ?

**ಉತ್ತರ :-** ಒಂದೇ ಪ್ರಯೋಜನವಿದ್ದರೆ ನಾನಾ ಮತಗಳನ್ನು ಏತಕ್ಕಾಗಿ ಹೇಳಿರುವಿರಿ ? ಒಂದು ಮತದಲ್ಲಿ ಒಂದು ಪ್ರಯೋಜನದೊಡನೆ ಅನೇಕ ಪ್ರಕಾರದ ವ್ಯಾಖ್ಯಾನವಿರುತ್ತದೆ, ಅದನ್ನು ಭಿನ್ನಮತವೆಂದು ಯಾರು ಹೇಳುತ್ತಾರೆ? ಆದರೆ ಪ್ರಯೋಜನಗಳೇ ಭಿನ್ನ-ಭಿನ್ನವಿರುವುದನ್ನು ತಿಳಿಸಿಕೊಡುತ್ತಾರೆ.

## ಅನ್ಯಮತಗಳೊಡನೆ ಜೈನಮತದ ತುಲನೆ :-

ಜೈನಮತದಲ್ಲಿ ಒಂದು ವೀತರಾಗಭಾವದ ಪೋಷಣೆಯ ಪ್ರಯೋಜನವಿದೆ; ಅದು ಕಥೆಗಳಲ್ಲಿ, ಲೋಕಾದಿಗಳ ನಿರೂಪಣೆಯಲ್ಲಿ, ಆಚರಣೆಯಲ್ಲಿ ಹಾಗೂ ತತ್ತ್ವಗಳಲ್ಲಿ ಎಲ್ಲೆಲ್ಲೂ ವೀತರಾಗತೆಯ ಪುಷ್ಟಿಯನ್ನೇ ಮಾಡಿದೆ. ಮತ್ತು ಅನ್ಯ ಮತಗಳಲ್ಲಿ ಸರಾಗಭಾವದ ಪೋಷಣೆಯ ಪ್ರಯೋಜನವಿದೆ; ಏಕೆಂದರೆ ಕಾಲ್ಪನಿಕ ರಚನೆಯನ್ನು ಕಷಾಯವುಳ್ಳ ಜೀವರುಗಳೇ ಮಾಡುತ್ತಾರೆ ಮತ್ತು ಅನೇಕ ಯುಕ್ತಿಗಳನ್ನು ರಚಿಸಿ ಕಷಾಯಭಾವದ ಪೋಷಣೆಯನ್ನೇ ಮಾಡುತ್ತಾರೆ. ಹೇಗೆಂದರೆ-ಅದ್ವೈತ ಬ್ರಹ್ಮವಾದಿಗಳು ಎಲ್ಲವನ್ನು ಬ್ರಹ್ಮನೆಂದು ಮನ್ನಿಸುವುದರಿಂದ, ಸಾಂಖ್ಯಮತಿಗಳು ಎಲ್ಲ ಕಾರ್ಯವು ಪ್ರಕೃತಿಯದೆಂದು ಮನ್ನಿಸಿ ತಮ್ಮನ್ನು ಶುದ್ಧ ಅಕರ್ತೃವೆಂದು ಮನ್ನಿಸುವುದರಿಂದ, ಮತ್ತು ಶಿವಮತಿಗಳು ತತ್ತ್ವ ತಿಳಿಯುವುದರಿಂದ ಸಿದ್ಧಿಯಾಗುತ್ತದೆಂದು ಮನ್ನಿಸುವುದರಿಂದ, ಮೀಮಾಂಸಕರು ಕಷಾಯಜನ್ಯ ಆಚರಣೆಯನ್ನು ಧರ್ಮವೆಂದು ಮನ್ನಿಸುವುದರಿಂದ, ಬೌದ್ಧರು ಕ್ಷಣಿಕವನ್ನು ಮನ್ನಿಸುವುದರಿಂದ, ಚಾರ್ವಾಕರು ಪರಲೋಕಾದಿಗಳನ್ನು ಮನ್ನಿಸದಿರುವುದರಿಂದ ವಿಷಯ ಭೋಗಾದಿ ಕಷಾಯಕಾರ್ಯಗಳಲ್ಲಿ ಸ್ವಚ್ಛಂದವಾಗುವುದರದೇ ಪೋಷಣೆ ಮಾಡುತ್ತಾರೆ, ಯಾವುದೇ ಸ್ಥಾನದಲ್ಲಿ ಯಾವುದಾದರೊಂದು ಕಷಾಯವು ಕಡಿಮೆ ಮಾಡುವುದರ ನಿರೂಪಣೆ ಮಾಡುತ್ತಾರೆ, ಆದರೆ ಆ ಹಟದಿಂದ ಬೇರೊಂದು ಕಷಾಯದ ಪೋಷಣೆ ಮಾಡುತ್ತಾರೆ. ಹೇಗೆಂದರೆ ಗೃಹಕಾರ್ಯಬಿಟ್ಟು ಪರಮೇಶ್ವರನ ಭಜನೆ ಮಾಡುವ ನಿರ್ಣಯ ಮಾಡುವುದು ಮತ್ತು ಪರಮೇಶ್ವರನ ಸರಾಗ ಸ್ವರೂಪವನ್ನು ಸ್ಮರಿಸಿ ಅವುಗಳ ಆಶ್ರಯದಿಂದ ತಮ್ಮ ವಿಷಯಕಷಾಯದ ಪೋಷಣೆ ಮಾಡುತ್ತಾರೆ; ಮತ್ತು ಜೈನಧರ್ಮದಲ್ಲಿ ದೇವ-ಗುರು-ಧರ್ಮಗಳ ಸ್ವರೂಪವು ವೀತರಾಗವೆಂದೇ ನಿರೂಪಣೆ ಮಾಡಿ ಕೇವಲ ವೀತರಾಗತೆಯದೇ ಪೋಷಣೆಮಾಡುತ್ತಾರೆಂಬುದು ಸ್ಪಷ್ಟಪ್ರಕಟವಿದೆ.

ನಾವೇನು ಹೇಳುವುದು ? ಅನ್ಯಮತದ ಭರ್ತೃಹರಿಯು ಕೂಡ ವೈರಾಗ್ಯ ಪ್ರಕರಣದಲ್ಲಿ[1] ಹೀಗೆ ಹೇಳಿದ್ದಾನೆ,-

**ಏಕೋ[1] ರಾಗಿಷು ರಾಜತೇ ಪ್ರಿಯತಮಾ ದೇಹಾರ್ಧಧಾರೀ ಹರೋ**
**ನೀರಾಗೇಷು ಜಿನೋ ವಿಮುಕ್ತ ಲಲನಾಸಂಗೋ ನ ಯಸ್ಮಾತ್ಪರಃ ।**
**ದುರ್ವಾರಸ್ಮರವಾಣಪನ್ನಗವಿಷವ್ಯಾಸಕ್ತಮುಗ್ಧೋ ಜನಃ**
**ಶೇಷಃ ಕಾಮವಿಡಂಬಿತೋ ಹಿ ವಿಷಯಾನ್ ಭೋಕ್ತುಂ ನ ಮೋಕ್ತುಂ ಕ್ಷಮಃ ॥1॥**

---

1 ರಾಗೀ ಪುರುಷರಲ್ಲಿ ಒಬ್ಬ ಮಹಾದೇವನು ಮಾತ್ರ ಶೋಭಿಸುತ್ತಾನೆ, ಅವನು ತನ್ನ ಪ್ರಿಯತಮೆಯಾದ ಪಾರ್ವತಿಯನ್ನು ಅರ್ಧಶರೀರದಲ್ಲಿ ಧರಿಸಿಕೊಂಡಿದ್ದಾನೆ, ಮತ್ತ ವೀತರಾಗಿಗಳಲ್ಲಿ ಜಿನದೇವರು ಶೋಭಾಯಮಾನರಿದ್ದಾರೆ, ಅವರ ಸಮಾನವಾಗಿ ಸ್ತ್ರೀಯರ ಸಂಗವನ್ನು ಬಿಟ್ಟುಕೊಡುವಂಥವರು ಬೇರೆ ಯಾರೂ ಇಲ್ಲ. ಉಳಿದ ಜನರಂತೂ ದುರ್ನಿವಾರವಾದ ಕಾಮದೇವನ ಬಾಣರೂಪ ಸರ್ಪದ ವಿಷದಿಂದ ಮೂರ್ಛಿತರಾಗಿದ್ದಾರೆ ಅವರು ಕಾಮನ ವಿಡಂಬನೆ ಮಾಡಿ ವಿಷಯಗಳನ್ನು ಚನ್ನಾಗಿ ಭೋಗಿಸುವುದೂ ಇಲ್ಲ ಮತ್ತು ಬಿಟ್ಟುಕೊಡುವುದೂ ಇಲ್ಲ.

ಇದರಲ್ಲಿ ಸರಾಗಿಗಳಲ್ಲಿ ಮಹಾದೇವನನ್ನು ಮುಖ್ಯವೆಂದು ಹೇಳಿದ್ದರೆ ವೀತರಾಗಿಗಳಲ್ಲಿ ಜಿನದೇವರನ್ನು ಮುಖ್ಯವೆಂದು ಹೇಳಿದೆ, ಮತ್ತು ಸರಾಗಭಾವ ಹಾಗೂ ವೀತರಾಗಭಾವಗಳಲ್ಲಿ ಪರಸ್ಪರ ವಿರೋಧತೆಯಿದೆ. ಇವೆರಡೂ ಹಿತಕರವಿರುವ ಸಾಧ್ಯತೆಯಿಲ್ಲ; ಆದರೆ ಇವುಗಳಲ್ಲಿ ಒಂದೇ ಹಿತಕರವಿದೆ ಮತ್ತು ಅದು ವೀತರಾಗಭಾವವೇ ಇದೆ; ಅದರ ಪ್ರಾಪ್ತಿಯಿಂದ ಕೂಡಲೇ ಆಕುಲತೆಯು ದೂರವಾಗುವುದರಿಂದ ಸ್ತುತಿಯೋಗ್ಯನಾಗುತ್ತಾನೆ. ಅದರಿಂದ ಭವಿಷ್ಯದಲ್ಲಿ ಒಳ್ಳೆಯದಾಗುವುದೆಂದು ಕೇವಲ ನಾವಷ್ಟೇ ಹೇಳುವುದಿಲ್ಲ, ಆದರೆ ಎಲ್ಲ ಮತದವರು ಹೇಳುತ್ತಾರೆ. ಸರಾಗಭಾವವಾದಮೇಲೆ ಕೂಡಲೆ ಆಕುಲತೆಯಾಗುತ್ತದೆ, ನಿಂದನೀಯನಾಗುತ್ತಾನೆ, ಮತ್ತು ಭವಿಷ್ಯದಲ್ಲಿ ಕೆಡಕಾಗುವುದರ ಭಾಸವಾಗುತ್ತದೆ. ಆದುದರಿಂದ ವೀತರಾಗಭಾವದ ಪ್ರಯೋಜನವಿರುವಂಥ ಜೈನಮತವೇ ಇಷ್ಟವಿದೆ. ಸರಾಗಭಾವದ ಪ್ರಯೋಜನವನ್ನು ಪ್ರಕಟಮಾಡಿರುವಂಥ ಅನ್ಯಮತಗಳು ಅನಿಷ್ಟವಿವೆ, ಇವನ್ನು ಸಮಾನವೆಂದು ಹೇಗೆ ಮನ್ನಿಸುವುದು?

**ಪ್ರಶ್ನೆ :-** ಇದಂತೂ ನಿಜವಿದೆ; ಆದರೆ ಅನ್ಯಮತದ ನಿಂದೆ ಮಾಡುವುದರಿಂದ ಅನ್ಯಮತಿಗಳು ದುಃಖಿಯಾಗುವರು, ವಿರೋಧವುತ್ಪನ್ನವಾಗುವುದು; ಆದುದರಿಂದ ನಿಂದೆಯನ್ನು ಏತಕ್ಕಾಗಿ ಮಾಡುವುದು ?

**ಉತ್ತರ :-** ನಾವು ಕಷಾಯವಶದಿಂದ ನಿಂದೆ ಮಾಡಿದರೆ ಮತ್ತು ಇತರರಿಗೆ ದುಃಖವನ್ನುತ್ಪನ್ನ ಮಾಡಿದರೆ ನಾವು ಪಾಪಿಯೇ ಇದ್ದೇವೆ; ಆದರೆ ಅನ್ಯಮತದ ಶ್ರದ್ಧೆಯಿಂದ ಜೀವರುಗಳಿಗೆ ಅತತ್ತ್ವಶ್ರದ್ಧೆಯು ದೃಢವಾಗುವುದು, ಅದರಿಂದ ಜೀವಗಳು ಸಂಸಾರದಲ್ಲಿ ದುಃಖಿಯಾಗುವವು, ಅದಕ್ಕಾಗಿ ಕರುಣಾಭಾವದಿಂದ ಯಥಾರ್ಥನಿರೂಪಣೆ ಮಾಡಿದೆ. ದೋಷವಿಲ್ಲದೆಯೂ ಯಾರಾದರೂ ದುಃಖಿಯಾದರೆ, ವಿರೋಧವನ್ನುತ್ಪನ್ನ ಮಾಡಿದರೆ ನಾವೇನು ಮಾಡುವುದು? ಹೇಗೆಂದರೆ ಮದ್ಯದ ನಿಂದೆ ಮಾಡುವುದರಿಂದ ಕಲಾಲನು ದುಃಖಿಯಾದರೆ, ಕುಶೀಲದ ನಿಂದೆ ಮಾಡುವುದರಿಂದ ವೇಶ್ಯೆಯರು ದುಃಖಿಯಾದರೆ ಮತ್ತು ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವ ಪರೀಕ್ಷೆಯ ಪರಿಚಯ ಮಾಡಿಸುವುದರಿಂದ ವಂಚಕನು ದುಃಖಿಯಾದರೇನು ಮಾಡುವುದು ? ಇದೇ ಪ್ರಕಾರ ಪಾಪಿಗಳ ಭಯದಿಂದ ಧರ್ಮೋಪದೇಶ ಕೊಡದಿದ್ದರೆ ಜೀವರುಗಳ ಕಲ್ಯಾಣ ಹೇಗಾಗುವುದು ? ಎಲ್ಲರಿಗೂ ಸಂತೃಪ್ತಿ ತರುವಂಥ ಉಪದೇಶವು ಯಾವುದೂ ಇಲ್ಲ. ಮತ್ತು ಅವರು ವಿರೋಧವನ್ನುಂಟು ಮಾಡುತ್ತಿದ್ದರೂ ವಿರೋಧವಂತೂ ಪರಸ್ಪರ ಮಾಡಿದರೆ ಆಗುತ್ತದೆ; ಆದರೆ ನಾವು ಹೋರಾಟಕ್ಕಿಳಿಯುವುದಿಲ್ಲ, ಅವರು ತಾವೇ ಉಪಶಾಂತರಾಗುವರು. ನಮಗಂತೂ ನಮ್ಮ ಪರಿಣಾಮದ ಫಲವು ದೊರಕುವುದು.

**ಪ್ರಶ್ನೆ :-** ಪ್ರಯೋಜನಭೂತ ಜೀವಾದಿ ತತ್ತ್ವಗಳ ಶ್ರದ್ಧೆಯನ್ನು ವಿಪರೀತ ಮಾಡುವುದರಿಂದ ಮಿಥ್ಯಾ ದರ್ಶನಾದಿಗಳಾಗುತ್ತವೆ, ಅನ್ಯಮತಗಳ ಶ್ರದ್ಧೆಮಾಡುವುದರಿಂದ ಮಿಥ್ಯಾದರ್ಶನಾದಿಗಳು ಹೇಗಾಗುವವು ?

**ಉತ್ತರ :-** ಅನ್ಯಮತಗಳಲ್ಲಿ ವಿಪರೀತ ಯುಕ್ತಿರಚಿಸಿ ಜೀವಾದಿತತ್ತ್ವಗಳ ಸ್ವರೂಪವು ಯಥಾರ್ಥವಾಗಿ ಭಾಸವಾಗದಂತೆಯೇ ಉಪಾಯಮಾಡಿದೆ; ಏಕೆಂದರೆ ಜೀವಾದಿತತ್ತ್ವಗಳ ಯಥಾರ್ಥಸ್ವರೂಪವು ಭಾಸವಾದರೆ ವೀತರಾಗಭಾವವಾದ ಮೇಲೆಯೇ ಮಹಾನತೆಯು ಭಾಸವಾಗುವುದು; ಆದರೆ ಯಾವ ಜೀವರುಗಳು ವೀತರಾಗಿಗಳಿಲ್ಲ ಮತ್ತು ತಮ್ಮ ಮಹಾನತೆಯನ್ನಪೇಕ್ಷಿಸುತ್ತಾರೆ ಅವರು ಸರಾಗಭಾವವಿದ್ದರೂ ಕೂಡ ಮಹಾನತೆಯನ್ನು ಮನ್ನಿಸುವುದಕ್ಕಾಗಿ ಕಾಲ್ಪನಿಕ ಯುಕ್ತಿಗಳಿಂದ ವಿಪರೀತ ನಿರೂಪಣೆ ಮಾಡಿದೆ. ಅವರು ಅದ್ವೈತ ಬ್ರಹ್ಮಾದಿಕರ

ನಿರೂಪಣೆಯಿಂದ ಜೀವಾಜೀವಗಳ ಮತ್ತು ಸ್ವಚ್ಛಂದ ವೃತ್ತಿಯ ಪೋಷಣೆಯ ಮುಖಾಂತರ ಆಸ್ರವ-ಸಂವರಾದಿಗಳ ಮತ್ತು ಸಕಷಾಯದಂತೆ ಹಾಗೂ ಅಚೇತನದಂತೆ ಮೋಕ್ಷ ಹೇಳುವುದರಿಂದ ಮೋಕ್ಷದ ಅಯಥಾರ್ಥ ಶ್ರದ್ಧೆಯ ಪೋಷಣೆ ಮಾಡುತ್ತಾರೆ; ಆದುದರಿಂದ ಅನ್ಯಮತಗಳ ಅನ್ಯಥಾತನವನ್ನು ಪ್ರಕಟಮಾಡಿದೆ. ಇವುಗಳ ಅನ್ಯಥಾತನವು ಕಂಡುಬಂದರೆ ತತ್ತ್ವಶ್ರದ್ಧೆಯಲ್ಲಿ ರುಚಿಯುಳ್ಳವನಾಗುವನು, ಮತ್ತು ಅವರ ಯುಕ್ತಿಗಳಿಂದ ಭ್ರಮೆಯು ಉತ್ಪನ್ನವಾಗುವುದಿಲ್ಲ.

ಈ ಪ್ರಕಾರ ಅನ್ಯಮತಗಳ ನಿರೂಪಣೆ ಮಾಡಲಾಯಿತು.

## ಅನ್ಯಮತದ ಗ್ರಂಥೋದ್ಧರಣಗಳಿಂದ ಜೈನಧರ್ಮದ ಸಮೀಚೀನತೆ ಹಾಗೂ ಪ್ರಾಚೀನತೆ :-

ಈಗ ಅನ್ಯಮತ ಶಾಸ್ತ್ರಗಳ ಸಾಕ್ಷಿಯಿಂದಲೇ ಜಿನಮತದ ಸಮೀಚೀನತೆ ಮತ್ತು ಪ್ರಾಚೀನತೆಯನ್ನು ಪ್ರಕಟ ಮಾಡುತ್ತಾರೆ.

'ದೊಡ್ಡಯೋಗ ವಾಸಿಷ್ಠ'ವು ಮೂವತ್ತಾರು ಸಹಸ್ರಶ್ಲೋಕ ಪ್ರಮಾಣವಿದೆ, ಅದರ ಮೊದಲನೆಯ ವೈರಾಗ್ಯ ಪ್ರಕರಣದಲ್ಲಿ ಅಹಂಕಾರ ನಿಷೇಧ ಅಧ್ಯಾಯದಲ್ಲಿ ವಸಿಷ್ಠ ಮತ್ತು ರಾಮನ ಸಂವಾದದಲ್ಲಿ ಹೀಗೆ ಹೇಳಿದೆ,-

**ರಾಮೋವಾಚ-ನಾಹಂ ರಾಮೋ ನ ಮೇ ವಾಂಛಾ ಭಾವೇಷು ಚ ನ ಮೇ ಮನಃ ।**
**ಶಾಂತಿಮಾಸ್ಥಾತುಮಿಚ್ಛಾಮಿ ಸ್ವಾತ್ಮನ್ಯೇವ ಜಿನೋ ಯಥಾ[1] ।।1।।**

ಇದರಲ್ಲಿ ರಾಮನು ಜಿನರ ಸಮಾನವಾಗುವ ಇಚ್ಛೆ ಮಾಡಿರುವುದರಿಂದ ರಾಮನಿಂದ ಜಿನದೇವರ ಉತ್ತಮತೆಯು ಪ್ರಕಟವಾಯಿತು. ಮತ್ತು ಪ್ರಾಚೀನತೆಯು ಪ್ರಕಟವಾಯಿತು.

ಅದರಂತೆ 'ದಕ್ಷಿಣಾಮೂರ್ತಿ-ಸಹಸ್ರನಾಮದಲ್ಲಿ' ಹೀಗೆ ಹೇಳಿದೆ,-

**ಶಿವೋವಾಚ - ಜೈನಮಾರ್ಗರತೋ ಜೈನ ಜಿನ ಕ್ರೋಧೋ ಜಿತಾಮಯಃ ।**

ಇಲ್ಲಿ ಭಗವಂತನ ಹೆಸರು ಜೈನಮಾರ್ಗದಲ್ಲಿ ಅನುರಕ್ತ ಮತ್ತ ಜೈನನೆಂದು ಹೇಳಿದೆ, ಆದುದರಿಂದ ಇದರಲ್ಲಿ ಜೈನಮಾರ್ಗದ ಮುಖ್ಯತೆಯು ಮತ್ತು ಪ್ರಾಚೀನತೆಯು ಪ್ರಕಟವಾಯಿತು.

ಅದರಂತೆ 'ವೈಶಂಪಾಯನ ಸಹಸ್ರನಾಮ'ದಲ್ಲಿ ಹೀಗೆ ಹೇಳಿದೆ,-

**ಕಾಲನೇಮಿರ್ಮಹಾವೀರಃ ಶೂರಃ ಶೌರಿಜಿನೇಶ್ವರಃ ।**

ಇಲ್ಲಿ ಭಗವಂತನ ಹೆಸರು ಜಿನೇಶ್ವರರೆಂದು ಹೇಳಿರುವುದರಿಂದ ಜಿನೇಶ್ವರರು ಭಗವಂತರಿದ್ದಾರೆ. ಅದರಂತೆ ದುರ್ವಾಸಾಋಷಿಕೃತ 'ಮಹಿಮ್ನಿಸ್ತೋತ್ರ'ದಲ್ಲಿ ಹೀಗೆ ಹೇಳಿದೆ,-

**ತತ್ತದ್ದರ್ಶನಮುಖ್ಯಶಕ್ತಿರಿತಿ ಚ ತ್ವಂ ಬ್ರಹ್ಮ ಕರ್ಮೇಶ್ವರೀ ।**
**ಕರ್ತ್ತಾರ್ಹನ್ ಪುರುಷೋ ಹರಿಶ್ಚ ಸವಿತಾ ಬುದ್ಧಃ ಶಿವಸ್ತ್ವಂ ಗುರುಃ ।।1।।**

---

1 ಎಂದರೆ ನಾನು ರಾಮನಿದ್ದೇನೆ, ನನಗೆ ಯಾವ ಇಚ್ಛೆಯಿಲ್ಲ ಮತ್ತು ಭಾವಗಳಲ್ಲಿ ಹಾಗೂ ಪದಾರ್ಥಗಳಲ್ಲಿ ನನ್ನ ಮನಸ್ಸಿಲ್ಲ. ನಾನಂತೂ ಜಿನದೇವರ ಸಮಾನವಾಗಿ ನನ್ನ ಆತ್ಮನಲ್ಲಿಯೇ ಶಾಂತಿಯನ್ನು ಸ್ಥಾಪಿಸಲು ಇಚ್ಛಿಸುತ್ತೇನೆ.

ಇಲ್ಲಿ 'ನೀವು ಅರಹಂತರಿದ್ದೀರೆ'ಂದು ಭಗವಂತನ ಸ್ತುತಿ ಮಾಡಿರುವುದರಿಂದ ಅರಹಂತರಿಗೆ ಭಗವಾನತನವು ಪ್ರಕಟವಾಯಿತು.

ಅದರಂತೆ 'ಹನುಮನ್ನಾಟಕ'ದಲ್ಲಿ ಹೀಗೆ ಹೇಳಿದೆ,-

**ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನಃ**
**ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।**
**ಅರ್ಹನ್ನಿತ್ಯಥ ಜೈನಶಾಸನರತಃ ಕರ್ಮೇತಿ ಮೀಮಾಂಸಕಾಃ**
**ಸೋಽಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥಃ ಪ್ರಭು**[1] **।।1।।**

ಇಲ್ಲಿ ಆರುಮತಗಳಲ್ಲಿ ಒಬ್ಬ ಈಶ್ವರನನ್ನು ಹೇಳಿದೆ ಅಲ್ಲಿ ಅರಹಂತದೇವರಿಗೂ ಈಶ್ವರತೆಯನ್ನು ಪ್ರಕಟಮಾಡಿದೆ.

**ಪ್ರಶ್ನೆ ঃ-** ಇಲ್ಲಿ ಯಾವ ಪ್ರಕಾರ ಎಲ್ಲ ಮತಗಳಲ್ಲಿ ಒಬ್ಬ ಈಶ್ವರನನ್ನು ಹೇಳಿದೆ ಅದೇ ಪ್ರಕಾರ ನೀವು ಕೂಡ ಮನ್ನಿಸಿರಿ.

**ಉತ್ತರ ঃ-** ಇದನ್ನು ನೀವು ಹೇಳಿದ್ದೀರಿ, ನಾವಂತೂ ಹೇಳಿಲ್ಲ; ಆದುದರಿಂದ ನಿಮ್ಮ ಮತದಲ್ಲಿ ಅರಹಂತರಿಗೆ ಈಶ್ವರತೆಯು ಸಿದ್ಧವಾಯಿತು. ನಮ್ಮ ಮತದಲ್ಲೂ ಇದೇ ಪ್ರಕಾರ ಹೇಳಿದ್ದರೆ ನಾವು ಕೂಡ ಶಿವಾದಿಕರನ್ನು ಈಶ್ವರನೆಂದು ಮನ್ನಿಸುತ್ತಿದ್ದೆವು. ಯಾವ ಪ್ರಕಾರ ಒಬ್ಬ ವರ್ತಕನು ನಿಜವಾದ ರತ್ನಗಳನ್ನು ತೋರಿಸಿದರೆ ಇನ್ನೊಬ್ಬನು ನಕಲಿ ರತ್ನಗಳನ್ನು ತೋರಿಸುವನು, ಅಲ್ಲಿ ನಕಲಿ ರತ್ನವುಳ್ಳವನಂತೂ ರತ್ನಗಳ ಸಮಾನ ಬೆಲೆ ಪಡೆಯುವ ಸಲುವಾಗಿ ಹೇಳುತ್ತಾನೆ, ನಿಜವಾದ ರತ್ನವುಳ್ಳವನು ಸಮಾನವಾಗಿ ಹೇಗೆ ಮನ್ನಿಸುವನು ? ಅದೇ ಪ್ರಕಾರ ಜೈನನು ನಿಜವಾದ ದೇವಾದಿಕರ ನಿರೂಪಣೆ ಮಾಡುತ್ತಾನೆ, ಅನ್ಯಮತಿಯು ಸುಳ್ಳು ನಿರೂಪಣೆ ಮಾಡುತ್ತಾನೆ; ಅಲ್ಲಿ ಅನ್ಯಮತಿಯು ತನ್ನ ಸಮಾನ ಶ್ರೇಷ್ಠತೆಯ ಸಲುವಾಗಿ ಎಲ್ಲರನ್ನು ಸಮಾನವೆಂದು ಹೇಳುತ್ತಾನೆ, ಆದರೆ ಜೈನನು ಹೇಗೆ ಮನ್ನಿಸುವನು ?

ಅದರಂತೆ 'ರುದ್ರಯಾಮಲತಂತ್ರ'ದಲ್ಲಿ ಭವಾನೀ ಸಹಸ್ರನಾಮದಲ್ಲಿ ಹೀಗೆ ಹೇಳಿದೆ,-

**ಕುಂಡಾಸನಾ ಜಗದ್ಧಾತ್ರೀ ಬುದ್ಧಮಾತಾ ಜಿನೇಶ್ವರೀ ।**
**ಜಿನಮಾತಾ ಜಿನೇಂದ್ರಾ ಚ ಶಾರದಾ ಹಂಸವಾಹಿನೀ ।।1।।**

ಇಲ್ಲಿ ಭವಾನಿಯ ಹೆಸರನ್ನು ಜಿನೇಶ್ವರಿ ಮೊದಲಾಗಿ ಹೇಳಿರುವುದರಿಂದ ಜಿನರ ಉತ್ತಮತೆಯು ಪ್ರಕಟವಾಗಿದೆ.

ಅದರಂತೆ 'ಗಣೇಶ ಪುರಾಣ'ದಲ್ಲಿ 'ಜೈನಂ ಪಶುಪತಂ ಸಾಂಖ್ಯಂ' - ಎಂದು ಹೇಳಿದೆ.

---

1 ಇದುಹನುಮನ್ನಾಟಕದ ಮಂಗಲಾಚರಣೆಯ ಮೂರನೇ ಶ್ಲೋಕವಿದೆ. ಇದರಲ್ಲಿ ಯಾರನ್ನು ಶೈವರು ಶಿವನೆಂದು ಹೇಳಿ, ವೇದಾಂತಿಗಳು ಬ್ರಹ್ಮನೆಂದು ಹೇಳಿ, ಬೌದ್ಧರು ಬುದ್ಧನೆಂದು ಹೇಳಿ, ನೈಯಾಯಿಕರು ಕರ್ತೃವೆಂದು ಹೇಳಿ, ಜೈನರು ಅರಹಂತರೆಂದು ಹೇಳಿ ಮತ್ತು ಮೀಮಾಂಸಕರು ಕರ್ಮವೆಂದು ಹೇಳಿ ಉಪಾಸನೆ ಮಾಡುತ್ತಾರೆ ಆ ತ್ರೈಲೋಕ್ಯನಾಥನಾದ ಪ್ರಭುವು ತಮ್ಮ ಮನೋರಥವನ್ನು ಸಫಲಮಾಡಲೆಂದು ಹೇಳಿದೆ.

ಇನ್ನು 'ವ್ಯಾಸಕೃತ ಸೂತ್ರ'ದಲ್ಲಿ 'ಜೈನಾ ಏಕಸ್ಮಿನ್ನೇವ ವಸ್ತುನಿ ಉಭಯಂ ಪ್ರರೂಪಯಂತಿ ಸ್ಯಾದ್ವಾದಿನಃ[1]- ಎಂದು ಹೇಳಿದೆ. ಇವೇ ಮೊದಲಾದ ಅವರ ಶಾಸ್ತ್ರಗಳಲ್ಲಿ ಜೈನ ನಿರೂಪಣೆಯಿರುವುದರಿಂದ ಜೈನಮತದ ಪ್ರಾಚೀನತೆಯು ತಿಳಿದುಬರುತ್ತದೆ.

ಅದರಂತೆ 'ಭಾಗವತದ' ಪಂಚಮಸ್ಕಂಧದಲ್ಲಿ ಋಷಭಾವತಾರದ ವರ್ಣನೆಯಿದೆ.[2] ಅಲ್ಲಿ ಅವರನ್ನು ಕರುಣಾಮಯರೂ, ತೃಷ್ಣಾದಿಗಳಿಲ್ಲದವರೂ, ಧ್ಯಾನಮುದ್ರಾಧಾರಿಗಳೂ, ಸರ್ವಾಶ್ರಮದಿಂದ ಪೂಜಿತರೂ ಆಗಿದ್ದಾರೆಂದು ಹೇಳಿದೆ; ಅವರ ಹಾಗೆ ಅರ್ಹಂತ ರಾಜನು ಪ್ರವೃತ್ತಿ ಮಾಡಿದನೆಂದು ಹೇಳಿದ್ದಾರೆ. ಯಾವ ಪ್ರಕಾರ ರಾಮ-ಕೃಷ್ಣಾದಿಗಳ ಅವತಾರಗಳ ಹಾಗೆ ಅನ್ಯಮತವಿವೆ ಅದೇ ಪ್ರಕಾರ ಋಷಭಾವತಾರದ ಹಾಗೆ ಜೈನ ಮತವಿದೆ; ಈ ಪ್ರಕಾರ ನಿಮ್ಮ ಮತದ ಮುಖಾಂತರವೇ ಜೈನ ಮತವು ಪ್ರಮಾಣವಾಯಿತು-ಸತ್ಯವಾಯಿತು.

ಇಲ್ಲಿ ಕೃಷ್ಣಾದಿ ಅವತಾರಗಳಿಗೆ ಅನುಸರಿಸಿ ವಿಷಯ ಕಷಾಯಗಳ ಪ್ರವೃತ್ತಿಯಿದ್ದರೆ ಋಷಭಾವತಾರದ ಅನುಸಾರ ವೀತರಾಗ ಸಾಮ್ಯಭಾವದ ಪ್ರವೃತ್ತಿಯಿರುತ್ತದೆಯೆಂದು ತಿಳಿಯಬೇಕು. ಇವೆರಡೂ ಪ್ರವೃತ್ತಿಗಳನ್ನು ಸಮಾನ ಮನ್ನಿಸುವುದರಿಂದ ಧರ್ಮ-ಅಧರ್ಮದ ವಿಶೇಷತೆಯು ಉಳಿಯಲಾರದು ಮತ್ತು ಯಾವುದನ್ನು ವಿಶೇಷವೆಂದು ಮನ್ನಿಸುವುದರಿಂದ ಒಳಿತಾಗುತ್ತದೆ ಅದನ್ನು ಅಂಗೀಕಾರ ಮಾಡಬೇಕು.

ಅದರಂತೆ 'ಕಾಶೀಖಂಡ'ದಲ್ಲಿ ದೇವದಾಸನಿಗೆ ಸಂಬೋಧಿಸಿ ರಾಜ್ಯ ಬಿಡಿಸಿದೆ; ಅಲ್ಲಿ ನಾರಾಯಣನಂತೂ ವಿನಯಕೀರ್ತಿಯತಿಯಾದನು, ಲಕ್ಷ್ಮಿಯನ್ನು ವಿನಯಶ್ರೀ ಆರ್ಯಿಕೆಯನ್ನಾಗಿ ಮತ್ತು ಗರುಡನನ್ನು ಶ್ರಾವಕನನ್ನಾಗಿ ಮಾಡಿದಂತೆ ಕಥನವಿದೆ. ಸಂಬೋಧನೆ ಮಾಡಬೇಕಾದಲ್ಲಿ ಜೈನ ವೇಷಧರಿಸಿದನು; ಆದುದರಿಂದ ಜೈನ ಮತವು ಹಿತಕರವೂ, ಪ್ರಾಚೀನವೂ ಇದ್ದುದು ತಿಳಿದು ಬರುತ್ತದೆ.

ಮತ್ತು 'ದಶಾವತಾರ ಚರಿತ್ರ'ದಲ್ಲಿ 'ಬದ್ಧ್ವಾಪದ್ಮಾಸನಂ ಯೋ ನಯನಯುಗಮಿದಂ ನ್ಯಸ್ಯ ನಾಸಾಗ್ರದೇಶೇ' ಇತ್ಯಾದಿ ಬುದ್ಧಾವತಾರದ ಸ್ವರೂಪವನ್ನು ಅರಹಂತದೇವರ ಸಮಾನ ಹೇಳಿದೆ; ಇಂಥ ಸ್ವರೂಪವು ಪೂಜ್ಯವಿದ್ದರೆ ಅರಹಂತದೇವರು ಸ್ವಾಭಾವಿಕವಾಗಿಯೇ ಪೂಜ್ಯರಾದರು.

ಇನ್ನು 'ಪ್ರಭಾಸ ಪುರಾಣ'ದಲ್ಲಿ ಹೀಗೆ ಹೇಳಿದೆ,-

**ಭವಸ್ಯ ಪಶ್ಚಿಮೇ ಭಾಗೇ ವಾಮನೇನ ತಪಃ ಕೃತಮ್ ।**
**ತೇನೈವ ತಪಸಾಕೃಷ್ಣಃ ಶಿವಃ ಪ್ರತ್ಯಕ್ಷತಾಂ ಗತಃ ॥1॥**
**ಪದ್ಮಾಸನಮಾಸೀನಃ ಶ್ಯಾಮಮೂರ್ತಿದಿಗಂಬರಃ ।**
**ನೇಮಿನಾಥಃ ಶಿವತ್ಯೇವಂ ನಾಮ ಚಕ್ರೇಽಸ್ಯ ವಾಮನಃ ॥2॥**
**ಕಲಿಕಾಲೇ ಮಹಾಘೋರೇ ಸರ್ವ ಪಾಪಪ್ರಣಾಶಕಃ**
**ದರ್ಶನಾತ್ಸ್ಪರ್ಶನಾದೇವ ಕೋಟಿಯಜ್ಞ ಫಲಪ್ರದಃ ॥3॥**

1 ಪ್ರರೂಪಯಂತಿ ಸ್ಯಾದ್ವಾದಿನಃ ಇತಿ ಖರಡಾ ಪ್ರತೌಪಾಠಃ ।

2 ಭಾಗವತ ಸ್ಕಂಧ ೫, ಅಧ್ಯಾಯ ೫, ೨೯

ಇಲ್ಲಿ ವಾಮನನಿಗೆ ಪದ್ಮಾಸನದಲ್ಲಿರುವ ದಿಗಂಬರ ನೇಮಿನಾಥನ ದರ್ಶನವಾದುದನ್ನು ಹೇಳಿದೆ, ಅವನ ಹೆಸರೇ ಶಿವನೆಂದು ಹೇಳಿದೆ. ಮತ್ತು ಅವನ ದರ್ಶನದಿಂದ ಕೋಟಿಯಜ್ಞದ ಫಲವು ಲಭಿಸುವುದೆಂದು ಹೇಳಿದೆ, ಆದರೆ ಇಂಥ ನೇಮಿನಾಥನ ಸ್ವರೂಪವನ್ನಂತೂ ಜೈನರು ಪ್ರತ್ಯಕ್ಷವಾಗಿ ಮನ್ನಿಸುತ್ತಾರೆ; ಆದುದರಿಂದ ಪ್ರಮಾಣವಾಯಿತು.

ಅದರಂತೆ 'ಪ್ರಭಾಸ ಪುರಾಣ'ದಲ್ಲಿ ಹೀಗೆ ಹೇಳಿದೆ,-

**ರೈವತಾದ್ರೌ ಜಿನೋ ನೇಮಿರ್ಯುಗಾದಿರ್ವಿಮಲಾಚಲೇ ।**
**ಋಷೀಣಾಮಾಶ್ರಮಾದೇವ ಮುಕ್ತಿಮಾರ್ಗಸ್ಯ ಕಾರಣಮ್ ॥1॥**

ಇಲ್ಲಿ ನೇಮಿನಾಥನನ್ನು ಜಿನ ಸಂಜ್ಞೆಯಿಂದ ಹೇಳಿ, ಅವರ ಸ್ಥಾನವನ್ನು ಋಷಿಯ ಆಶ್ರಮ, ಮುಕ್ತಿಯ ಕಾರಣವೆಂದು ಹೇಳಿದೆ ಮತ್ತು ಯುಗಾದಿಯ ಸ್ಥಾನವನ್ನು ಕೂಡ ಹೀಗೇ ಹೇಳಿರುವುದರಿಂದ ಉತ್ತಮ-ಪೂಜ್ಯವೆಂದು ನಿಶ್ಚಿತವಾಯಿತು.

ಅದರಂತೆ 'ನಗರ ಪುರಾಣ'ದಲ್ಲಿ ಭವಾವತಾರದ ರಹಸ್ಯದೊಳಗೆ ಹೀಗೆ ಹೇಳಿದೆ,-

**ಅಕಾರಾದಿಹಕಾರಂತಮೂರ್ಧಾಧೋರೇಫ ಸಂಯುತಮ್ ।**
**ನಾದಬಿಂದು ಕಲಾಕ್ರಾಂತಂ ಚಂದ್ರಮಂಡಲ ಸನ್ನಿಭಮ್ ॥1॥**
**ಏತದ್ದೇವಿ ಪರಂತತ್ತ್ವಂ ಯೋ ವಿಜಾನಾತಿತತ್ತ್ವತಃ ।**
**ಸಂಸಾರಬಂಧನಂ ಛಿತ್ವಾಸ ಗಚ್ಛೇತ್ಪರಮಾಂ ಗತಿಮ್ ॥2॥**

ಇಲ್ಲಿ 'ಅರ್ಹಂ'ವೆಂಬ ಪದವನ್ನು ಪರಮತತ್ತ್ವವೆಂದು ಹೇಳಿದೆ. ಅದನ್ನು ತಿಳಿಯುವುದರಿಂದ ಪರಮಗತಿಯ ಪ್ರಾಪ್ತಿಯಾಗುವುದೆಂದು ಹೇಳಿದೆ; ಆದರೆ ಈ 'ಅರ್ಹಂ' ಪದವು ಜೈನಮತದಲ್ಲಿ ಹೇಳಿದೆ.

ಮತ್ತೆ ಅದೇ 'ನಗರ ಪುರಾಣ'ದಲ್ಲಿ ಹೀಗೆ ಹೇಳಿದೆ,-

**ದಶಭಿ ರ್ಭೋಜಿತೈರ್ವಿಪ್ರೈ ಯತ್ಫಲಂ ಜಾಯತೇ ಕೃತೇ ।**
**ಮುನೇರರ್ಹತ್ಸುಭಕ್ತಸ್ಯ ತತ್ಫಲಂ ಜಾಯತೇ ಕಲೌ ॥1॥**

ಕೃತಯುಗದಲ್ಲಿ ಹತ್ತು ಬ್ರಾಹ್ಮಣರಿಗೆ ಭೋಜನ ಮಾಡಿಸಿದರೆ ಎಷ್ಟು ಫಲವನ್ನು ಹೇಳಿದೆ ಅಷ್ಟು ಫಲವು ಕಲಿಯುಗದಲ್ಲಿ ಓರ್ವ ಅರ್ಹದ್ಭಕ್ತ ಮುನಿಗೆ ಭೋಜನ ಮಾಡಿಸಿದರೆ ಇದೆಯೆಂದು ಹೇಳಿದೆ; ಅದರಿಂದ ಜೈನ ಮುನಿಯು ಉತ್ತಮನೆಂದಾಯಿತು.

'ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ,-

**ಕುಲಾದಿಬೀಜಂ ಸರ್ವೇಷಾಂ ಪ್ರಥಮೋ ವಿಮಲವಾಹನಃ ।**
**ಚಕ್ಷುಷ್ಮಾನ್ ಯಶಸ್ವೀ ವಾಭಿಚಂದ್ರೋಽಥ ಪ್ರಸೇನಜಿತ್ ॥1॥**
**ಮರುದೇವಿ ಚ ನಾಭಿಶ್ಚ ಭರತೇ ಕುಲ ಸತ್ತಮಾಃ ।**
**ಅಷ್ಟಮೋ ಮರುದೇವ್ಯಾಂ ತು ನಾಭೇಜತಿ ಉರಕ್ರಮಃ ॥2॥**

**ದರ್ಶಯನ್ ವರ್ತ್ಮ ವೀರಾಣಾಂ ಸುರಾಸುರನಮಸ್ಕೃತಃ ।**
**ನೀತಿತ್ರಿತಯಕರ್ತಾ ಯೋ ಯುಗಾದೌ ಪ್ರಥಮೋ ಜಿನಃ ॥3॥**

ಇಲ್ಲಿ ವಿಮಲವಾಹನ ಮೊದಲಾದ ಮನುಗಳನ್ನು ಹೇಳಿದೆ ಅವರನ್ನು ಜೈನರಲ್ಲಿ ಕುಲಂಕರರೆಂಬ ಹೆಸರಿನಿಂದ ಹೇಳಿದ್ದಾರೆ ಮತ್ತು ಇಲ್ಲಿ ಪ್ರಥಮ ಜಿನನು ಯುಗದ ಆದಿಯಲ್ಲಿ ಮಾರ್ಗದರ್ಶಕ ಹಾಗೂ ಸುರಾಸುರರಿಂದ ಪೂಜಿತನೆಂದು ಹೇಳಿದೆ; ಅದು ಇದೇ ಈ ಪ್ರಕಾರವಿದ್ದರೆ ಜೈನಮತವು ಯುಗದ ಆದಿಯಿಂದಲೇ ಇದೆ, ಅದನ್ನು ಪ್ರಮಾಣಭೂತವೆಂದು ಹೇಗೆ ಹೇಳದಿರುವುದು ?

ಮತ್ತು ಋಗ್ವೇದದಲ್ಲಿ ಹೀಗೆ ಹೇಳಿದೆ,-

ಓಂ ತ್ರೈಲೋಕ್ಯ , ಪ್ರತಿಷ್ಠಿತಾನ್ ಚತುರ್ವಿಂಶತಿ ತೀರ್ಥಂಕರಾನ್ ಋಷಭಾದ್ಯಾನ್ ವರ್ಧಮಾನಾಂತಾನ್ ಸಿದ್ಧಾನ್ ಶರಣಂ ಪ್ರಪದ್ಯೇ । ಓಂ ಪವಿತ್ರ ನಗ್ನಮುಪವಿಸ್ಪ್ರಸಾಮಹೇ ಏಷಾಂ ನಗ್ನಂ ಏಷಾಂ ಜಾತಂ ಏಷಾಂ ವೀರಂ ಸುವೀರಂ... ಇತ್ಯಾದಿ.

ಅದರಂತೆ ಯಜುರ್ವೇದದಲ್ಲಿ ಹೀಗೆ ಹೇಳಿದೆ,-

**ಓಂ ನಮೋ ಅರ್ಹತೋ ಋಷಭಾಯ ।**

ಮತ್ತೆ ಹೀಗೆ ಹೇಳಿದೆ,-

ಓಂ ಋಷಭ ಪವಿತ್ರಂ ಪುರುಹೂತಮಧ್ವಜ್ಞಂ ಯಜ್ಞೇಷು ನಗ್ನಂ ಪರಮಂ ಮಹಾಸಂಸ್ತುತಂವರಂ ಶತ್ರುಂ ಜಯತಂ ಪಶುರಿದ್ರಮಾಹತಿರಿತಿ ಸ್ವಾಹಾ । ಓಂ ತ್ರಾತಾರಮಿಂದ್ರಂ ಋಷಭಂ ವದಂತಿ । ಅಮೃತಾರಮಿಂದ್ರಂ ಹವೇ ಸುಗುತಂ ಸುಪಾರ್ಶ್ವಮಿಂದ್ರಂ ಹವೇ ಶಕ್ರಮರ್ಜಿತಂ ತದ್ವರ್ಧಮಾನಪುರುಹೂತಮಿಂದ್ರಂ ಮಾಹರಿತಿ ಸ್ವಾಹಾ । ಓಂ ನಗ್ನಂ ಸುಧೀರಂ ದಿಗ್ವಾಸಸಂ ಬ್ರಹ್ಮಗರ್ಭ ಸನಾತನಂ ಉಪೈಮಿ ವೀರಂ ಪುರುಷರ್ಹಂತಮಾದಿತ್ಯವರ್ಣ ತಮಸಃ ಪರಸ್ತಾತ ಸ್ವಾಹಾ ? ಓಂ ಸ್ವಸ್ತಿನ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿ ಸ್ವಸ್ತಿನೋ ಬೃಹಸ್ಪತಿರ್ದಧಾತು । ದೀರ್ಘಾಯುಸ್ತ್ವಾಯುವಲಾಯುರ್ವಾಶುಭಾಜಾತಾಯು । ಓಂ ರಕ್ಷ ರಕ್ಷ ಅರಿಷ್ಟನೇಮಿಃ ಸ್ವಾಹಾऽ ವಾಮದೇವ ಶಾಂತ್ಯರ್ಥಮನು ವಿಧೀಯತೇ ಸೋऽ ಸ್ಮಾಕಂ ಅರಿಷ್ಟನೇಮಿಃ ಸ್ವಾಹಾ ।[1]

ಇಲ್ಲಿ ಜೈನ ತೀರ್ಥಂಕರರ ಪೂಜಾದಿಗಳನ್ನು ಹೇಳಿದೆ. ಇದರಿಂದ ಇವರ ನಂತರ ವೇದ ರಚನೆಯಾಗಿರುವಂತೆ ತಿಳಿದುಬರುತ್ತದೆ.

ಈ ಪ್ರಕಾರ ಅನ್ಯಮತದ ಗ್ರಂಥಗಳ ಸಮೀಕ್ಷೆಯಿಂದ ಕೂಡ ಜಿನಮತದ ಉತ್ತಮತೆ ಹಾಗೂ ಪ್ರಾಚೀನತೆಯು ದೃಢವಾಯಿತು. ಮತ್ತು ಜಿನಮತವನ್ನು ನೋಡುವುದರಿಂದ ಅವೆಲ್ಲ ಮತಗಳು ಕಾಲ್ಪನಿಕವಾಗಿ ಕಂಡುಬರುತ್ತವೆ; ಆದುದರಿಂದ ತಮ್ಮ ಹಿತವನ್ನು ಅಪೇಕ್ಷಿಸುವವರು ಪಕ್ಷಪಾತವನ್ನು ಬಿಟ್ಟುಕೊಟ್ಟು ನಿಜವಾದ ಜೈನಧರ್ಮವನ್ನು ಅಂಗೀಕಾರ ಮಾಡಬೇಕು.

1 ಯಜುರ್ವೇದ ಅ. ೨೫ ಮ. ೧೬ ಅಷ್ಟ ೯೧ ಅ. ೬ ವರ್ಗ ೧

ಅನ್ಯಮತಗಳಲ್ಲಿ ಪೂರ್ವಾಪರ ವಿರೋಧವು ಕಂಡು ಬರುತ್ತದೆ. ಮೊದಲನೇ ಅವತಾರದಲ್ಲಿ ವೇದದ ಉದ್ಧಾರ ಮಾಡಿ, ಅಲ್ಲಿ ಯಜ್ಞಾದಿಗಳಿಂದ ಹಿಂಸೆಯ ಪೋಷಣೆ ಮಾಡಿ, ಬುದ್ಧಾವತಾರದಲ್ಲಿ ಯಜ್ಞದ ನಿಂದಕನಾಗಿ ಹಿಂಸೆಯ ನಿಷೇಧ ಮಾಡಿದನು. ಋಷಭಾವತಾರದಲ್ಲಿ ವೀತರಾಗ ಸಂಯಮದ ಮಾರ್ಗ ತೋರಿಸಿದರೆ ಕೃಷ್ಣಾವತಾರದಲ್ಲಿ ಪರಸ್ತ್ರೀರಮಣದಂಥ ವಿಷಯಕಷಾಯಗಳ ಮಾರ್ಗ ತೋರಿಸಿದನು. ಈಗ ಈ ಸಂಸಾರಿಗಳು ಯಾರ ಹೇಳಿಕೆಯಂತೆ ಮಾಡುವುದು ? ಯಾರ ಅನುಸಾರ ವರ್ತಿಸುವುದು ? ಮತ್ತು ಇವೆಲ್ಲ ಅವತಾರಗಳನ್ನು ಒಂದೆಂದು ತಿಳಿಸಿ ಕೊಡುತ್ತಾರೆ, ಆದರೆ ಒಂದೇ ಅವತಾರದಲ್ಲಿ ಒಮ್ಮೆ ಒಂದು ಪ್ರಕಾರ ಇನ್ನೊಮ್ಮೆ ಇನ್ನೊಂದು ಪ್ರಕಾರ ಹೇಳುತ್ತಾರೆ ಮತ್ತು ಪ್ರವರ್ತಿಸುತ್ತಾರೆ; ಆದರೆ ಇವನಿಗೆ ಅವರ ಹೇಳಿಕೆಯ ಹಾಗೂ ನಡತೆಯ ಪ್ರತೀತಿಯು ಹೇಗೆ ಬರುವುದು ?

ಮತ್ತು ಒಮ್ಮೆ ಕ್ರೋಧಾದಿ ಕಷಾಯಗಳ ಹಾಗೂ ವಿಷಯಗಳ ನಿಷೇಧ ಮಾಡುತ್ತಾರೆ, ಒಮ್ಮೆ ಹೋರಾಟದ ಹಾಗೂ ವಿಷಯ ಸೇವನೆಯ ಉಪದೇಶ ಕೊಡುತ್ತಾರೆ; ಅದನ್ನು ಪ್ರಾರಬ್ಧವೆಂದು ಹೇಳುತ್ತಾರೆ. ಆದರೆ ಕ್ರೋಧಾದಿಗಳಿಲ್ಲದೆ ತಮ್ಮಿಂದ ತಾವೇ ಹೋರಾಟ ಮೊದಲಾದ ಕಾರ್ಯಗಳಾಗುತ್ತಿದ್ದರೆ ಇದನ್ನೂ ಮನ್ನಿಸಬಹುದು, ಆದರೆ ಅವಂತೂ ಆಗುವುದಿಲ್ಲ, ಮತ್ತು ಹೋರಾಟದಂಥ ಕಾರ್ಯಮಾಡಿದ ಮೇಲೂ ಕ್ರೋಧಾದಿಗಳಾದುವೆಂದು ಮನ್ನಿಸದಿದ್ದರೆ ಅವುಗಳ ನಿಷೇಧ ಮಾಡುವಂಥ ಬೇರೆ ಕ್ರೋಧಾದಿಗಳು ಯಾವುವು ಇವೆ ? ಆದುದರಿಂದ ಹೀಗಾಗುವುದಿಲ್ಲ. ಇದರಲ್ಲಿ ಪೂರ್ವಾಪರ ವಿರೋಧವಿದೆ. ಗೀತೆಯಲ್ಲಿ ವೀತರಾಗತೆ ಹೇಳಿ ಯುದ್ಧದ ಉಪದೇಶ ಮಾಡಿದೆ, ಆದರೆ ಇದು ಪ್ರತ್ಯಕ್ಷ ವಿರೋಧವಾಗಿ ಕಂಡುಬರುತ್ತದೆ. ಮತ್ತು ಋಷೀಶ್ವರರುಗಳಿಂದ ಶಾಪವಿತ್ತುದನ್ನು ಹೇಳುತ್ತಾರೆ, ಆದರೆ ಹೀಗೆ ಕ್ರೋಧ ಮಾಡಿದ ಮೇಲೆ ನಿಂದ್ಯತೆಯು ಹೇಗಾಗಲಿಲ್ಲ ? ಇವೇ ಮೊದಲಾದುವನ್ನು ತಿಳಿಯಬೇಕು.

ಅದರಂತೆ 'ಅಪುತ್ರಸ್ಯ ಗತಿರ್ನಾಸ್ತಿ' ಎಂದೂ ಹೇಳುತ್ತಾರೆ. ಮತ್ತು ಭಾರತದಲ್ಲಿ ಹೀಗೆ ಕೂಡ ಹೇಳಿದೆ,-

**ಅನೇಕಾನಿ ಸಹಸ್ರಾಣಿಕುಮಾರ ಬ್ರಹ್ಮಚಾರಿಣಾಮ್ ।**
**ದಿವಂ ಗತಾನಿ ರಾಜೇಂದ್ರ ಅಕೃತ್ವಾ ಕುಲಸಂತತಿಮ್ ॥1॥**

ಇಲ್ಲಿ ಕುಮಾರ ಬ್ರಹ್ಮಚಾರಿಗಳಿಗೆ ಸ್ವರ್ಗವಾದುದನ್ನು ಹೇಳುತ್ತಾರೆ; ಆದರೆ ಇದು ಪರಸ್ಪರ ವಿರೋಧವಿದೆ. ಅದರಂತೆ 'ಋಷೀಶ್ವರ ಭಾರತ'ದಲ್ಲಿ ಹೀಗೆ ಹೇಳಿದೆ,-

**ಮದ್ಯಮಾಂಸಾಶನಂ ರಾತ್ರೌ ಭೋಜನ ಕಂದಭಕ್ಷಣಮ್ ।**
**ಯೇ ಕುರ್ವಂತಿವೃಥಾಸ್ತೇಷಾಂ ತೀರ್ಥಯಾತ್ರಾ ಜಪಸ್ತಪಃ ॥1॥**
**ವೃಥಾ ಏಕಾದಶೀ ಪ್ರೋಕ್ತಾ ವೃಥಾ ಜಾಗರಣಂ ಹರೇಃ ।**
**ವೃಥಾ ಚ ಪೌಷ್ಕರೀ ಯಾತ್ರಾ ಕೃತ್ಸ್ನಂ ಚಂದ್ರಾಯಣಂ ವೃಥಾ ॥2॥**
**ಚಾತುರ್ಮಾಸ್ಯೇ ತು ಸಂಪ್ರಾಪ್ತೇ ರಾತ್ರಿ ಭೋಜ್ಯಂ ಕರೋತಿ ಯಃ ।**
**ತಸ್ಯ ಶುದ್ಧಿರ್ನ ವಿದ್ಯೇತ್ ಚಾಂದ್ರಾಯಣ ಶತೈರಪಿ ॥3॥**

ಇದರಲ್ಲಿ ಮದ್ಯ-ಮಾಂಸಾದಿಗಳ, ರಾತ್ರಿಭೋಜನದ ಮತ್ತು ವರ್ಷಾಯೋಗದಲ್ಲಿ ವಿಶೇಷರೂಪದಿಂದ ರಾತ್ರಿ ಭೋಜನದ ಹಾಗೂ ಕಂದಫಲ ಭಕ್ಷಣದ ನಿಷೇಧ ಮಾಡಿದೆ; ಮತ್ತು ಶ್ರೇಷ್ಠ ಪುರುಷರಿಗೆ ಮದ್ಯ ಮಾಂಸಾದಿಗಳ ಸೇವನೆ ಮಾಡಲು ಹೇಳುತ್ತಾರೆ, ವ್ರತಾದಿಗಳಲ್ಲಿ ರಾತ್ರಿ ಭೋಜನ, ಕಂದಮೂಲ ಭಕ್ಷಣವನ್ನು ಸ್ಥಾಪನೆ ಮಾಡುತ್ತಾರೆ; ಈ ಪ್ರಕಾರವಾಗಿ ವಿರುದ್ಧವಾಗಿ ನಿರೂಪಣೆ ಮಾಡುತ್ತಾರೆ.

ಹೀಗೆ ಪೂರ್ವಾಪರ ವಿರುದ್ಧವಾದ ಅನೇಕ ವಚನಗಳು ಅನ್ಯಮತದ ಶಾಸ್ತ್ರಗಳಲ್ಲಿವೆ. ಅವಕ್ಕೇನು ಮಾಡುವುದು? ಒಂದೆಡೆ ಪೂರ್ವ ಪರಂಪರೆಯನ್ನು ತಿಳಿದು ವಿಶ್ವಾಸ ಮಾಡಿಸುವ ಸಲುವಾಗಿ ಯಥಾರ್ಥ ಹೇಳಿದ್ದರೆ ಇನ್ನೊಂದೆಡೆ ವಿಷಯಕಷಾಯದ ಪೋಷಣೆ ಮಾಡುವ ಸಲುವಾಗಿ ಅನ್ಯಥಾ ಹೇಳಿದೆ ; ಆದ್ದರಿಂದ ಪೂರ್ವಾಪರ ವಿರೋಧವಿದ್ದಲ್ಲಿ ಅವರ ವಚನಗಳನ್ನು ಹೇಗೆ ಪ್ರಮಾಣವೆನ್ನುವುದು ?

ಅನ್ಯಮತಗಳಲ್ಲಿ ಕ್ಷಮೆ, ಶೀಲ, ಸಂತೋಷಾದಿಗಳ ಪೋಷಣೆ ಮಾಡುವಂಥ ವಚನಗಳಿವೆ ಅವಂತೂ ಜೈನ ಮತದಲ್ಲಿ ಕಂಡು ಬರುತ್ತವೆ, ಮತ್ತು ವಿಪರೀತ ವಚನಗಳು ಅವರ ಕಾಲ್ಪನಿಕವಿವೆ. ಜಿನಮತದ ಅನುಸಾರ ವಚನಗಳ ವಿಶ್ವಾಸದಿಂದ ಅವರ ವಿಪರೀತ ವಚನಗಳದ್ದೂ ಶ್ರದ್ಧಾದಿಗಳಾಗುತ್ತಿರುವುದರಿಂದ ಅನ್ಯಮತದ ಯಾವುದೇ ಮಾತನ್ನು ಒಳ್ಳೆಯದೆಂದು ತಿಳಿದರೂ ಕೂಡ ಅಲ್ಲಿ ಶ್ರದ್ಧೆ ಮಾಡಬಾರದು. ಹೇಗೆ ವಿಷಮಿಶ್ರಿತ ಭೋಜನವು ಹಿತಕರವಿಲ್ಲ ಹಾಗೆ ಅದನ್ನು ತಿಳಿಯಬೇಕು.

ಮತ್ತು ಯಾವುದೇ ಒಂದು ಉತ್ತಮಧರ್ಮದ ಅಂಗವು ಜಿನಮತದಲ್ಲಿ ಕಂಡುಬರದಿದ್ದರೆ ಮತ್ತು ಅನ್ಯ ಮತದಲ್ಲಿ ಕಂಡುಬಂದರೆ ಅಥವಾ ಯಾವುದೇ ಒಂದು ನಿಷಿದ್ಧಧರ್ಮದ ಅಂಗವು ಜಿನಮತದಲ್ಲಿ ಕಂಡುಬಂದರೆ ಹಾಗೂ ಅನ್ಯತ್ರ ಕಂಡುಬರದಿದ್ದರೆ ಅನ್ಯಮತದ ಆದರ ಮಾಡಿರಿ; ಆದರೆ ಹೀಗೆಂದೂ ಆಗುವುದೇ ಇಲ್ಲ. ಏಕೆಂದರೆ ಸರ್ವಜ್ಞರ ಜ್ಞಾನದಲ್ಲಿ ಯಾವುದೂ ಅಗೋಚರವಿಲ್ಲ. ಆದುದರಿಂದ ಅನ್ಯಮತದ ಶ್ರದ್ಧಾದಿಗಳನ್ನು ಬಿಟ್ಟುಕೊಟ್ಟು ಜಿನಮತದಲ್ಲಿ ದೃಢವಾದ ಶ್ರದ್ಧೆಯನ್ನು ಮಾಡಬೇಕು.

## ಶ್ವೇತಾಂಬರಮತ ವಿಚಾರ

ಕಾಲದೋಷದಿಂದ ಕಷಾಯಯುಕ್ತ ಜೀವರುಗಳಿಂದ ಜಿನಮತದಲ್ಲಿ ಕೂಡ ಕಾಲ್ಪನಿಕ ರಚನೆ ಮಾಡಿದ್ದಾರೆ, ಅದನ್ನು ತಿಳಿಸುತ್ತಾರೆ,

ಶ್ವೇತಾಂಬರಮತದವನೋರ್ವನು ಸೂತ್ರ ರಚಿಸಿದರೆ ಅವನ್ನು ಗಣಧರ ರಚಿತವೆಂದು ಹೇಳುತ್ತಾರೆ, ಆದರೆ ಗಣಧರರು ರಚಿಸಿದ ಆಚಾರಾಂಗಾದಿಗಳು ವರ್ತಮಾನದಲ್ಲಿ ನಿಮಗೆ ಕಂಡು ಬರುತ್ತಿರುವಷ್ಟೇ ಪ್ರಮಾಣದಲ್ಲಿ ರಚಿಸಿದ್ದರೋ ಅಥವಾ ಅಧಿಕ ಪ್ರಮಾಣದಲ್ಲಿ ರಚಿಸಿದ್ದರೋ ? ಒಂದು ವೇಳೆ ಇಷ್ಟೇ ಪ್ರಮಾಣದಲ್ಲಿ ರಚಿಸಿದ್ದರೆ ನಿಮ್ಮ ಶಾಸ್ತ್ರಗಳಲ್ಲಿ ಆಚಾರಾಂಗ ಮೊದಲಾದ ಪದಗಳ ಪ್ರಮಾಣವು ಹದಿನೆಂಟು ಸಾವಿರ ಮೊದಲಾಗಿ ಹೇಳಿದೆ, ಆದರೆ ಅವುಗಳ ವಿಧಿ ಹೊಂದಾಣಿಕೆ ಮಾಡಿಕೊಡಿರಿ.

ಪದದ ಪ್ರಮಾಣವೇನು ? ವಿಭಕ್ತಿಯ ಕೊನೆಯನ್ನು ಪದವೆಂದು ಹೇಳಿದರೆ ಹೇಳಲಾದ ಪ್ರಮಾಣದಿಂದ ಅಧಿಕಪದಗಳಾಗುವವು ಮತ್ತು ಪ್ರಮಾಣ ಪದವೆಂದು ಹೇಳಿದರೆ ಆ ಒಂದು ಪದಕ್ಕೆ ಸಾಧಿಕ ಎಂದರೆ ಸ್ವಲ್ಪ ಹೆಚ್ಚು

ಐವತ್ತೊಂದು ಕೋಟಿ ಶ್ಲೋಕಗಳಿವೆ. ಆದರೆ ಇವಂತೂ ತೀರ ಚಿಕ್ಕಶಾಸ್ತ್ರಗಳಿರುವುದರಿಂದ ಹೊಂದಿಕೆಯಾಗುವುದಿಲ್ಲ. ಮತ್ತು ಆಚಾರಾಂಗಗಳಿಗಿಂತ ದಶವೈತಾಲಿಕಗಳ ಪ್ರಮಾಣವನ್ನು ಕಡಿಮೆ ಹೇಳಿದೆ, ಆದರೆ ನಿಮ್ಮಲ್ಲಿ ಅಧಿಕವಿವೆ, ಅದರಿಂದ ಇದು ಹೇಗೆ ಸಂಭವಿಸುತ್ತದೆ ?

'ಆಚಾರಾಂಗ ಮೊದಲಾದವು ದೊಡ್ಡವಿದ್ದವು; ಕಾಲದೋಷವನ್ನು ತಿಳಿದುಕೊಂಡು ಅವುಗಳೊಳಗಿಂದ ಅದೆಷ್ಟೋ ಸೂತ್ರಗಳನ್ನು ತೆಗೆದುಹಾಕಿ ಈ ಶಾಸ್ತ್ರ ರಚಿಸಿದ್ದಾರೆ'ಂದು ಹೇಳಬಹುದು. ಆದರೆ ತುಂಡು ಗ್ರಂಥವು ಪ್ರಾರಂಭದಲ್ಲೇ ಪ್ರಮಾಣವಿಲ್ಲ. ಮತ್ತು ದೊಡ್ಡ ಗ್ರಂಥ ರಚಿಸಿದರೆ ಅದರಲ್ಲಿ ಎಲ್ಲ ವರ್ಣನೆಯನ್ನು ವಿಸ್ತಾರದೊಡನೆ ಮಾಡಬೇಕು ಹಾಗೂ ಚಿಕ್ಕ ಗ್ರಂಥ ರಚಿಸಿದರೆ ಅದರಲ್ಲಿ ಸಂಕ್ಷಿಪ್ತ ವರ್ಣನೆ ಮಾಡಬೇಕೆಂಬ ನಿಯಮವಿದೆ, ಅದರಿಂದ ಸಂಬಂಧವು ಕಡಿದುಹೋಗುವುದಿಲ್ಲ ಮತ್ತು ಯಾವುದೇ ಒಂದು ದೊಡ್ಡ ಗ್ರಂಥದೊಳಗಿಂದ ಸ್ವಲ್ಪ ಕಥನವನ್ನು ತೆಗೆದುಹಾಕಿದರೆ ಅಲ್ಲಿ ಸಂಬಂಧದ ಹೊಂದಾಣಿಕೆಯಾಗುವುದಿಲ್ಲ-ಕಥನದ ಅನುಕ್ರಮವು ಮುರಿದು ಬೀಳುವುದು. ಆದರೆ ನಿಮ್ಮ ಸೂತ್ರಗಳಲ್ಲಂತೂ ಕಥನಾದಿಗಳ ಸಂಬಂಧ ಕೂಡ ಹೊಂದಾಣಿಕೆಯಾಗುತ್ತಿರುವುದು ಕಂಡು ಬರುತ್ತದೆ-ತುಂಡುತನವು ಕಂಡುಬರುವುದಿಲ್ಲ.

ಅನ್ಯಕವಿಗಳಿಗಿಂತ ಗಣಧರರ ಬುದ್ಧಿಯಂತೂ ಅಧಿಕವಿರಬೇಕು, ಅವರು ರಚಿಸಿದ ಗ್ರಂಥಗಳಲ್ಲಿ ಕಡಿಮೆ ಶಬ್ದಗಳಲ್ಲಿ ಹೆಚ್ಚು ಅರ್ಥವು ಇರಲೇಬೇಕು; ಆದರೆ ಅನ್ಯಕವಿಗಳಂತೆ ಕೂಡ ಗಂಭೀರತೆಯಿಲ್ಲ.

ಇನ್ನು ಗ್ರಂಥ ರಚಿಸುವವನು ತನ್ನ ಹೆಸರನ್ನು 'ಇಂಥವನು ಹೇಳುತ್ತಾನೆ'ಂದು ಇಟ್ಟುಕೊಳ್ಳುವುದಿಲ್ಲ, 'ನಾನು ಹೇಳುತ್ತೇನೆ'ಂದು ಹೇಳುತ್ತಾನೆ; ಆದರೆ ನಿಮ್ಮ ಸೂತ್ರಗಳಲ್ಲಿ 'ಎಲೈ ಗೌತಮನೇ !' 'ಗೌತಮರು ಹೇಳುತ್ತಾರೆ'ಂದು ವಚನಗಳಿವೆ. ಆದರೆ ಇಂಥ ವಚನಗಳಂತೂ ಕರ್ತೃವು ಬೇರೆ ಇದ್ದಾಗಲೇ ಸಂಭವಿಸುತ್ತದೆ. ಆದುದರಿಂದ ಈ ಸೂತ್ರಗಳು ಗಣಧರಕೃತವಲ್ಲ, ಬೇರೆಯವರು ರಚಿಸಿದವುಗಳಿವೆ. ಗಣಧರರ ಹೆಸರಿನಲ್ಲಿ ಕಲ್ಪಿತ-ರಚನೆಯನ್ನು ಪ್ರಮಾಣ ಮಾಡಿಸಲಪೇಕ್ಷಿಸುತ್ತಾರೆ, ಆದರೆ ವಿವೇಕಿಗಳಂತೂ ಪರೀಕ್ಷೆಮಾಡಿ ಮನ್ನಿಸುತ್ತಾರೆ, ಹೇಳಿದೆಯೆಂದು ಮನ್ನಿಸುವುದಿಲ್ಲ.

ಗಣಧರರ ಸೂತ್ರಗಳಿಗನುಸರಿಸಿ ಕೆಲವರು ದಶಪೂರ್ವಧಾರಿಗಳಾಗಿದ್ದಾರೆ, ಅವರು ಈ ಸೂತ್ರಗಳನ್ನು ರಚಿಸಿದ್ದಾರೆಂದು ಹೇಳುತ್ತಾರೆ. ಆದರೆ ನವೀನ ಗ್ರಂಥಗಳನ್ನು ರಚಿಸಿದ್ದಾರೆಂದ ಮೇಲೆ ಹೊಸ ಹೆಸರನ್ನಿಡಬೇಕಿತ್ತು, ಅಂಗಗಳ ಹೆಸರನ್ನು ಏತಕ್ಕಾಗಿ ಇಟ್ಟಿದ್ದಾರೆ ? ಇದು ಒಬ್ಬ ದೊಡ್ಡ ಶ್ರೀಮಂತನ ಮಂಡಿಯ ಹೆಸರಿನಲ್ಲಿ ತನ್ನ ಶ್ರೀಮಂತಿಕೆಯನ್ನು ಪ್ರಕಟಪಡಿಸಿದಂಥ ಕಾರ್ಯವಾಯಿತು. ನಿಜವಾಗಿಯಂತೂ ದಿಗಂಬರರಲ್ಲಿ ಯಾವ ಪ್ರಕಾರ ಗ್ರಂಥಗಳಿಗೆ ಬೇರೆ ಹೆಸರನ್ನಿಟ್ಟು ಪೂರ್ವ ಗ್ರಂಥಗಳ ಅನುಸಾರವೆಂದು ಹೇಳಿದೆ; ಅದೇ ಪ್ರಕಾರ ಹೇಳುವುದು ಯೋಗ್ಯವಿತ್ತು. ಅಂಗಗಳ ಹೆಸರನ್ನಿಟ್ಟು ಗಣಧರ ಕೃತವೆಂಬ ಭ್ರಾಂತಿಯನ್ನು ಏತಕ್ಕಾಗಿ ಉತ್ಪನ್ನ ಮಾಡಿದೆ ? ಆದುದರಿಂದ ಗಣಧರರ ಪೂರ್ವಧಾರಿಗಳ ವಚನಗಳಲ್ಲ. ಮತ್ತು ಈ ಸೂತ್ರಗಳಲ್ಲಿ ವಿಶ್ವಾಸವಿಡುವುದರ ಸಲುವಾಗಿ ಆ ಜಿನಮತದ ಅನುಸಾರವಿರುವ ಕಥನವಂತೂ ಸತ್ಯವಿದೆ, ದಿಗಂಬರರು ಕೂಡ ಅದೇ ಪ್ರಕಾರ ಹೇಳುತ್ತಾರೆ.

ಇನ್ನು ಆ ಕಾಲ್ಪನಿಕ ರಚನೆ ಮಾಡಿರುವಲ್ಲಿ ಪೂರ್ವಾಪರ ವಿರೋಧತೆ ಹಾಗೂ ಪ್ರತ್ಯಕ್ಷಾದಿ ಪ್ರಮಾಣದಲ್ಲಿ ವಿರೋಧತೆಯು ಕಂಡು ಬರುತ್ತದೆ ಅದನ್ನೇ ತಿಳಿಸಿಕೊಡುತ್ತಾರೆ.

**ಅನ್ಯಲಿಂಗದಿಂದ ಮುಕ್ತಿಯ ನಿಷೇಧ :-**

ಅನ್ಯಲಿಂಗ, ಗೃಹಸ್ಥ, ಸ್ತ್ರೀ , ಚಾಂಡಾಲ ಮೊದಲಾದ ಶೂದ್ರರಿಗೆ ಪ್ರತ್ಯಕ್ಷ ಮೋಕ್ಷದ ಪ್ರಾಪ್ತಿಯಾಗುತ್ತದೆಂದು ಮನ್ನಿಸುತ್ತಾರೆ, ಆದರೆ ಅದು ಸಾಧ್ಯವಿಲ್ಲ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳ ಏಕತೆಯು ಮೋಕ್ಷಮಾರ್ಗವಿದೆ. ಆದರೆ ಆ ಸಮ್ಯಗ್ದರ್ಶನದ ಸ್ವರೂಪವನ್ನಂತೂ ಹೀಗೆ ಹೇಳುತ್ತಾರೆ,-

**ಅರಹಂತೋ ಮಹಾದೇವೋ ಜಾವಜ್ಜೀವಂ ಸುಸಾಹಣೋ ಗುರುಣೋ ।**
**ಜಿಣಪಣ್ಣತ್ತಂ ತತ್ತಂ ಏ ಸಮತ್ತಂ ಮಏ ಗ್ಮಹಿಯಂ ।।1।।**

ಅನ್ಯಲಿಂಗಿಗೆ ಅರಹಂತದೇವ, ಸಾಧು, ಗುರು, ಜಿನಪ್ರಣೀತ ತತ್ತ್ವಗಳನ್ನು ಮನ್ನಿಸುವುದು ಹೇಗೆ ಸಂಭವವಿದೆ ? ಸಮ್ಯಕ್ತ್ವವೇ ಆಗದಿದ್ದರೆ ಮೋಕ್ಷವು ಹೇಗಾಗುವುದು ?

ಅಂತರಂಗದಲ್ಲಿ ಶ್ರದ್ಧೆಯಿರುವುದರಿಂದ ಅವರಿಗೆ ಸಮ್ಯಕ್ತ್ವವಾಗುತ್ತದೆಂದು ಹೇಳಬಹುದು; ಆದರೆ ವಿಪರೀತ ಲಿಂಗಧಾರಕರ ಪ್ರಶಂಸೆ ಮಾಡಿದರೂ ಕೂಡ ಸಮ್ಯಕ್ತ್ವಕ್ಕೆ ಅತಿಚಾರ ತಗಲುತ್ತದೆಂದು ಹೇಳಿದೆಯೆಂದ ಮೇಲೆ **ನಿಜವಾದ ಶ್ರದ್ಧೆಯಾದ ನಂತರ ತಾವು ವಿಪರೀತಲಿಂಗದ ಧಾರಕರಾಗಿ ಹೇಗೆ ಉಳಿಯುವಿರಿ ?** ಶ್ರದ್ಧೆಯಾದನಂತರ ಮಹಾ ವ್ರತಗಳನ್ನು ಸ್ವೀಕಾರ ಮಾಡಿದ ಮೇಲೆ ಸಮ್ಯಕ್ಚಾರಿತ್ರವಾಗುತ್ತದೆ, ಅದು ಅನ್ಯಲಿಂಗದಲ್ಲಿ ಹೇಗಾಗುವುದು ? ಅನ್ಯಲಿಂಗದಲ್ಲಿ ಕೂಡ ಸಮ್ಯಕ್ಚಾರಿತ್ರವಾಗುತ್ತಿದ್ದರೆ ಜೈನಲಿಂಗವು ಅನ್ಯಲಿಂಗದ ಸಮಾನವಾಯಿತು, ಆದುದರಿಂದ ಅನ್ಯಲಿಂಗಿಗೆ ಮೋಕ್ಷವಾಗುತ್ತದೆಂದು ಹೇಳುವುದು ಮಿಥ್ಯೆಯಿದೆ.

**ಗೃಹಸ್ಥ ಮುಕ್ತಿಯ ನಿಷೇಧ :-**

ಗೃಹಸ್ಥನಿಗೆ ಮೋಕ್ಷವಾಗುತ್ತದೆಂದು ಹೇಳುತ್ತಾರೆ; ಆದರೆ ಹಿಂಸೆ ಮೊದಲಾದ ಸಮಸ್ತ ಸಾವದ್ಯಯೋಗದ ತ್ಯಾಗ ಮಾಡಿದ ಮೇಲೆ ಸಮ್ಯಕ್ಚಾರಿತ್ರವಾಗುತ್ತದೆ, ಆಗ ಸಮಸ್ತ ಸಾವದ್ಯಯೋಗದ ತ್ಯಾಗ ಮಾಡಿದ ಮೇಲೆ ಗೃಹಸ್ಥಾವಸ್ಥೆಯು ಹೇಗೆ ಸಂಭವವಿದೆ ? ಅಂತರಂಗದಲ್ಲಿ ತ್ಯಾಗವಾಗಿದೆಯೆನ್ನಬಹುದು, ಆದರೆ ಇಲ್ಲಿಯಂತೂ ಮೂರೂಯೋಗಗಳಿಂದ ತ್ಯಾಗ ಮಾಡುತ್ತಾರೆ ಎಂದ ಮೇಲೆ ತ್ಯಾಗವು ಕಾಯದಿಂದ ಹೇಗಾಯಿತು ? ಮತ್ತು ಬಾಹ್ಯಪರಿಗ್ರಹಗಳನ್ನಿಟ್ಟುಕೊಂಡರೂ ಮಹಾವ್ರತಗಳಾಗುತ್ತವೆಂದರೆ ಮಹಾವ್ರತಗಳಲ್ಲಂತೂ ಬಾಹ್ಯ ತ್ಯಾಗ ಮಾಡುವುದರದೇ ಪ್ರತಿಜ್ಞೆ ಮಾಡುತ್ತಾರೆ, ತ್ಯಾಗಮಾಡಿದಲ್ಲದೆ ಮಹಾವ್ರತಗಳಾಗುವುದಿಲ್ಲ. ಮಹಾವ್ರತಗಳಿಲ್ಲದೆ ಆರನೆಯ ಗುಣಸ್ಥಾನವಾಗುವುದಿಲ್ಲವೆಂದ ಬಳಿಕ ಮೋಕ್ಷ ಹೇಗಾಗುವುದು ? ಆದುದರಿಂದ ಗೃಹಸ್ಥನಿಗೆ ಮೋಕ್ಷವಾಗುತ್ತದೆಂದು ಹೇಳುವುದು ಮಿಥ್ಯಾವಚನವಿದೆ.

**ಸ್ತ್ರೀಮುಕ್ತಿಯ ನಿಷೇಧ :-**

ಸ್ತ್ರೀಯರಿಗೆ ಮೋಕ್ಷವಾಗುತ್ತದೆಂದು ಹೇಳುತ್ತಾರೆ; ಆದರೆ ಏಳನೆಯ ನರಕಗಮನ ಯೋಗ್ಯವಾದ ಪಾಪವು ಆಗದವರಿಂದ ಮೋಕ್ಷದ ಕಾರಣವಾದ ಶುದ್ಧಭಾವವು ಹೇಗಾಗುವುದು ? ಏಕೆಂದರೆ ದೃಢಭಾವವಿರುವವನೇ ಉತ್ಕೃಷ್ಟ ಪಾಪ ಹಾಗೂ ಧರ್ಮವನ್ನು ಉತ್ಪನ್ನ ಮಾಡುವ ಸಾಧ್ಯತೆಯಿದೆ. ಮತ್ತು ಸ್ತ್ರೀಯರಿಗೆ ಏಕಾಂತದಲ್ಲಿದ್ದು ನಿಶ್ಶಂಕತೆಯಿಂದ ಧ್ಯಾನ ಧರಿಸುವುದು ಮತ್ತು ಎಲ್ಲ ಪರಿಗ್ರಹಗಳ ತ್ಯಾಗಮಾಡುವುದು ಸಾಧ್ಯವಿಲ್ಲ.

ಒಂದು ಸಮಯದಲ್ಲಿ ಪುರುಷವೇದ, ಸ್ತ್ರೀವೇದ ಮತ್ತು ನಪುಂಸಕ ವೇದಗಳಿಗೆ ಸಿದ್ಧಿಯಾಗುತ್ತದೆಂದು ಸಿದ್ಧಾಂತದಲ್ಲಿ ಹೇಳಿರುವುದರಿಂದ ಸ್ತ್ರೀಗೆ ಮೋಕ್ಷವನ್ನು ಮನ್ನಿಸುತ್ತೇವೆಂದು ಹೇಳಬಹುದು. ಆದರೆ ಇಲ್ಲಿ ಅದು ಭಾವವೇದಿಯಿದೆಯೋ ಅಥವಾ ದ್ರವ್ಯವೇದಿಯಿದೆಯೋ ? ಭಾವವೇದಿಯಿದ್ದರೆ ನಾವು ಕೂಡ ಮನ್ನಿಸುತ್ತೇವೆ; ದ್ರವ್ಯವೇದಿಯಿದ್ದರೆ ಪುಂವೇದ-ಸ್ತ್ರೀವೇದಗಳಂತೂ ಲೋಕದಲ್ಲಿ ಪ್ರಚುರವಿದ್ದುದು ಕಂಡು ಬರುತ್ತದೆ ಮತ್ತು ನಪುಂಸಕವಂತೂ ಎಲ್ಲೋ ವಿರಳವಾಗಿ ಕಂಡುಬರುತ್ತವೆ; ಎಂದ ಬಳಿಕ ಒಂದು ಸಮಯದಲ್ಲಿ ಮೋಕ್ಷಕ್ಕೆ ಹೋಗುವಂಥ ಇಷ್ಟೊಂದು ನಪುಂಸಕರು ಹೇಗೆ ಸಂಭವವಿದೆ ? ಆದುದರಿಂದ ದ್ರವ್ಯವೇದದ ಅಪೇಕ್ಷೆಯಿಂದ ಕಥನವು ಸಿದ್ಧಿಸುವುದಿಲ್ಲ.

ಮತ್ತು ಒಂಭತ್ತನೆಯ ಗುಣಸ್ಥಾನದವರೆಗೆ ವೇದವನ್ನು ಹೇಳಿದ್ದರೂ ಕೂಡ ಅದು ಭಾವವೇದದ ಅಪೇಕ್ಷೆಯಿಂದಲೇ ಕಥನವಿದೆ. ದ್ರವ್ಯವೇದದ ಅಪೇಕ್ಷೆಯಿಂದಿದ್ದರೆ ಹದಿನಾಲ್ಕನೆಯ ಗುಣಸ್ಥಾನದವರೆಗೆ ವೇದದ ಸದ್ಭಾವವನ್ನು ಹೇಳುವ ಸಂಭವವಿರುವುದು.

ಆದುದರಿಂದ ಸ್ತ್ರೀಗೆ ಮೋಕ್ಷವಿದೆಯೆಂದು ಹೇಳುವುದು ಮಿಥ್ಯೆಯಿದೆ.

**ಶೂದ್ರಮುಕ್ತಿಯ ನಿಷೇಧ :-**

ಅದರಂತೆ ಶೂದ್ರರಿಗೆ ಮೋಕ್ಷ ಹೇಳುತ್ತಾರೆ; ಆದರೆ ಚಾಂಡಾಲ ಮೊದಲಾದವರಿಗೆ ಗೃಹಸ್ಥರು ಸನ್ಮಾನಪೂರ್ವಕವಾಗಿ ದಾನಾದಿಗಳನ್ನು ಹೇಗೆ ಕೊಡುವುದು ? ಇದು ಲೋಕವಿರುದ್ಧವಾಗುತ್ತದೆ. ಮತ್ತು ನೀಚಕುಲದವರಿಗೆ ಉತ್ತಮ ಪರಿಣಾಮಗಳಾಗುವ ಸಾಧ್ಯತೆಯಿಲ್ಲ, ನೀಚ ಗೋತ್ರಕರ್ಮದ ಉದಯವಂತೂ ಐದನೆಯ ಗುಣಸ್ಥಾನದವರೆಗೇನೇ ಇದೆ; ಮೇಲಿನ ಗುಣಸ್ಥಾನಗಳನ್ನು ಹತ್ತದೆ ಮೋಕ್ಷ ಹೇಗಾಗುವುದು ? ಸಂಯಮಧಾರಣ ಮಾಡಿದ ನಂತರ ಅವನಿಗೆ ಉಚ್ಚಗೋತ್ರದ ಉದಯ ಹೇಳಿದ್ದಾರೆಂದರೆ ಸಂಯಮಧಾರಣ ಮಾಡುವ ಅಥವಾ ಮಾಡದಿರುವ ಅಪೇಕ್ಷೆಯಿಂದ ಉಚ್ಚ-ನೀಚಗೋತ್ರದ ಉದಯವೆಂದಾಯಿತು. ಹೀಗಾಗುವುದ-ರಿಂದ ಅಸಂಯಮಿ ಮನುಷ್ಯ, ತೀರ್ಥಂಕರ, ಕ್ಷತ್ರಿಯ ಮೊದಲಾದವರಿಗೂ ನೀಚಗೋತ್ರದ ಉದಯವು ನಿಶ್ಚಯವಾಗುವುದು. ಅವರಿಗೆ ಕುಲದ ಅಪೇಕ್ಷೆಯಿಂದಲೇ ಉಚ್ಚಗೋತ್ರದ ಉದಯ ಹೇಳುವುದಾದರೆ ಚಾಂಡಾಲ ಮೊದಲಾದವರಿಗೂ ಕುಲದ ಅಪೇಕ್ಷೆಯಿಂದಲೇ ನೀಚಗೋತ್ರದ ಉದಯ ಹೇಳು. ಅದರ ಸದ್ಭಾವವನ್ನು ನಿಮ್ಮ ಸೂತ್ರಗಳಲ್ಲಿ ಕೂಡ ಐದನೆಯ ಗುಣಸ್ಥಾನದವರೆಗೇನೇ ಹೇಳಿದೆ. ಅದನ್ನು ಕಲ್ಪನೆಯಿಂದ ಹೇಳುವಲ್ಲಿ ಪೂರ್ವಾಪರ ವಿರೋಧವು ಬಂದೇ ಬರುವುದು; ಆದುದರಿಂದ ಶೂದ್ರರಿಗೆ ಮೋಕ್ಷವಿದೆಯೆಂದು ಹೇಳುವುದು ಮಿಥ್ಯೆಯಿದೆ.

ಈ ಪ್ರಕಾರ ಅವರು ಎಲ್ಲರಿಗೆ ಮೋಕ್ಷದ ಪ್ರಾಪ್ತಿಯಾಗುವುದೆಂದು ಹೇಳಿರುವುದರ ಪ್ರಯೋಜನವೆಂದರೆ ಎಲ್ಲರನ್ನು ಒಳ್ಳೆಯವರೆಂದು ಮನ್ನಿಸುವುದು, ಮೋಕ್ಷದ ಲಾಲಸೆ ತೋರುವುದು ಮತ್ತು ತಮ್ಮ ಕಾಲ್ಪನಿಕ ಮತದ ಪ್ರವೃತ್ತಿ ಮಾಡುವುದಿದೆ. ಆದರೆ ವಿಚಾರ ಮಾಡಿದ ಮೇಲೆ ಎಲ್ಲವೂ ಮಿಥ್ಯೆಯಾಗಿ ಭಾಸವಾಗುತ್ತದೆ.

**ಅಛೇರಾಗಳ ನಿರಾಕರಣೆ :-**

ಮತ್ತು ಅವರ ಶಾಸ್ತ್ರಗಳಲ್ಲಿ 'ಅಛೇರಾ' ಹೇಳುತ್ತಾರೆ, ಅವು ಹುಂಡಾವಸರ್ಪಿಣಿಯ ನಿಮಿತ್ತದಿಂದಾಗಿದ್ದು

ಅವನ್ನು ಕೇಳಕಬಾರದೆಂದು ಹೇಳುತ್ತಾರೆ. ಕಾಲದೋಷದಿಂದ ಅದೆಷ್ಟೋ ಘಟನೆಗಳಾಗುತ್ತಿದ್ದರೂ ಪ್ರಮಾಣ ವಿರುದ್ಧವಾಗಿಯಂತೂ ಆಗುವುದಿಲ್ಲ. ಒಂದು ವೇಳೆ ಪ್ರಮಾಣವಿರುದ್ಧವಾದರೆ ಆಕಾಶದ ಹೂವು, ಕತ್ತೆಯ ಕೋಡು ಇತ್ಯಾದಿಗಳು ಕೂಡ ಆಗುವವು, ಆದರೆ ಅದು ಸಂಭವವಿಲ್ಲ ಅವರು ಹೇಳುತ್ತಿರುವ ಅಛೇರಾಗಳು ಪ್ರಮಾಣ ವಿರುದ್ಧವಿವೆ ಹೇಗೆಂಬುದನ್ನು ಹೇಳುತ್ತಾರೆ.

ವರ್ಧಮಾನ ಜಿನರು ಕೆಲಕಾಲ ಬ್ರಾಹ್ಮಣ ಸ್ತ್ರೀಯ ಗರ್ಭದಲ್ಲಿದ್ದು ನಂತರ ಕ್ಷತ್ರಿಯ ಸ್ತ್ರೀ ಗರ್ಭದಲ್ಲಿ ಬೆಳೆದರೆಂದು ಹೇಳುತ್ತಾರೆ. ಆದರೆ ಒಬ್ಬಳ ಗರ್ಭವನ್ನು ಇನ್ನೊಬ್ಬಳ ಗರ್ಭಕ್ಕೆ ವರ್ಗಾಯಿಸಿದ್ದು ಪ್ರತ್ಯಕ್ಷ ಕಂಡುಬರುವುದಿಲ್ಲ, ಅನುಮಾನದಲ್ಲೂ ಬರುವುದಿಲ್ಲ, ಮತ್ತು ತೀರ್ಥಂಕರರಿಗಾಯಿತೆಂದರೆ ಗರ್ಭ ಕಲ್ಯಾಣವು ಒಬ್ಬರ ಮನೆಯಲ್ಲಾಯಿತು, ಜನ್ಮ ಕಲ್ಯಾಣವು ಒಬ್ಬರ ಮನೆಯಲ್ಲಾಯಿತು. ರತ್ನವೃಷ್ಟಿ ಮೊದಲಾದವು ಕೆಲವು ದಿವಸ ಒಬ್ಬರ ಮನೆಯಲ್ಲಾದರೆ ಕೆಲವು ದಿವಸ ಇನ್ನೊಬ್ಬರ ಮನೆಯಲ್ಲಾದವು. ಒಬ್ಬಳು ಹದಿನಾರು ಕನಸು ಕಂಡರೆ ಇನ್ನೊಬ್ಬಳಿಗೆ ಪುತ್ರಪ್ರಾಪ್ತಿಯಾಯಿತು, ಇತ್ಯಾದಿ ಅಸಂಭವಗಳು ಕಂಡುಬರುತ್ತವೆ. ತಾಯಂದಿರು ಇಬ್ಬರಾದರೆ ತಂದೆ ಬ್ರಾಹ್ಮಣನೊಬ್ಬನೇ ಉಳಿದನು. ಜನ್ಮಕಲ್ಯಾಣಾದಿಗಳಲ್ಲಿ ಅವನ ಸನ್ಮಾನ ಮಾಡಲಿಲ್ಲ, ಅನ್ಯ ಕಾಲ್ಪನಿಕ ತಂದೆಯ ಸನ್ಮಾನ ಮಾಡಲಾಯಿತು. ಹೀಗೆ ತೀರ್ಥಂಕರರಿಗೆ ಇಬ್ಬರು ತಂದೆಯರನ್ನು ಹೇಳುವುದು ತೀರ ವಿಪರೀತವಾಗಿ ಕಂಡು ಬರುತ್ತದೆ, ಸರ್ವೋತ್ಕೃಷ್ಟ ಪದವನ್ನು ಧರಿಸುವವರ ಸಲುವಾಗಿ ಇಂಥ ವಚನಗಳನ್ನು ಕೇಳುವುದು ಕೂಡ ಯೋಗ್ಯವಿಲ್ಲ.

ತೀರ್ಥಂಕರರ ಅವಸ್ಥೆಯೇ ಹೀಗಾಯಿತೆಂದರೆ ಎಲ್ಲೆಡೆಗೂ ಒಬ್ಬಳ ಗರ್ಭವನ್ನು ಇನ್ನೊಬ್ಬಳ ಗರ್ಭದಲ್ಲಿ ಇಟ್ಟು ಬಿಡುವುದು ನಿಶ್ಚಯವಾಗುವುದು. ವೈಷ್ಣವರು ಹೇಗೆ ಅನೇಕ ಪ್ರಕಾರದಿಂದ ಮಕ್ಕಳ ಉತ್ಪತ್ತಿಯಾದುದನ್ನು ಹೇಳುತ್ತಾರೆ ಹಾಗೆಯೇ ಈ ಕಾರ್ಯವಾಯಿತು. ಆದರೆ ಇಂಥ ನಿಕೃಷ್ಟ ಕಾಲದಲ್ಲಿ ಹೀಗಾಗುವುದಿಲ್ಲವೆಂದ ಮೇಲೆ ಆ ಕಾಲದಲ್ಲಿ ಹೇಗಾಗುವ ಸಂಭವವಿದೆ ? ಆದುದರಿಂದ ಇದು ಅಸತ್ಯವಿದೆ.

ಅಲ್ಲದೆ ಮಲ್ಲಿನಾಥ ತೀರ್ಥಂಕರರನ್ನು ಕನ್ಯೆಯೆಂದು ಹೇಳುತ್ತಾರೆ. ಆದರೆ ಮುನಿ, ದೇವಾದಿಕರ ಸಭೆಯಲ್ಲಿ ಸ್ತ್ರೀಯ ಉಪಸ್ಥಿತಿ ಮಾಡುವುದು, ಉಪದೇಶ ಕೊಡುವುದು ಸಂಭವವಿಲ್ಲ; ಮತ್ತು ಸ್ತ್ರೀಪರ್ಯಾಯವು ಹೀನವಿದ್ದು ಅದು ಉತ್ಕೃಷ್ಟ ತೀರ್ಥಂಕರ ಪದವೀಧಾರಕವಾಗುವುದಿಲ್ಲ. ಇನ್ನು ತೀರ್ಥಂಕರರಿಗೆ ನಗ್ನಲಿಂಗವನ್ನೇ ಹೇಳುತ್ತಾರೆ, ಆದರೆ ಸ್ತ್ರೀಗೆ ನಗ್ನತೆಯು ಸಂಭವಿಸುವುದಿಲ್ಲ. ಹೀಗೆ ವಿಚಾರ ಮಾಡುವುದರಿಂದ ಎಲ್ಲವೂ ಅಸಂಭವವಾಗಿ ತೋರುತ್ತದೆ.

ಅದರಂತೆ ಹರಿಕ್ಷೇತ್ರದ ಭೋಗ ಭೂಮಿಜರು ನರಕಕ್ಕೆ ಹೋದುದನ್ನು ಹೇಳುತ್ತಾರೆ. ಆದರೆ ಬಂಧ ವರ್ಣನೆಯಲ್ಲಂತೂ ಭೋಗಭೂಮಿಜರಿಗೆ ದೇವಗತಿ, ದೇವಾಯುವಿನ ಬಂಧವನ್ನೇ ಹೇಳುತ್ತಾರೆ, ನರಕದಲ್ಲಿ ಹೇಗೆ ಹೋದರು ? ಸಿದ್ಧಾಂತದಲ್ಲಂತೂ ಅನಂತಕಾಲದಲ್ಲಿ ನಡೆದ ಘಟನೆಗಳನ್ನೂ ಹೇಳುತ್ತಾರೆ. ಹೇಗೆಂದರೆ ಮೂರನೆಯ ನರಕದವರೆಗೆ ತೀರ್ಥಂಕರ ಪ್ರಕೃತಿಯ ಸತ್ವ ಹೇಳಿದೆ, ಭೋಗ ಭೂಮಿಜನರಿಗೆ ನರಕಾಯುಗತಿಯ ಬಂಧ ಹೇಳಿಲ್ಲ. ಎಂದರೆ ಕೇವಲಿಗಳಂತೂ  ಮರೆಯುವುದಿಲ್ಲ; ಆದುದರಿಂದ ಇದು ಅಸತ್ಯವಿದೆ.

ಈ ಪ್ರಕಾರ ಎಲ್ಲ ಅಛೇರಾಗಳು ಅಸಂಭವವೆಂದು ತಿಳಿಯಬೇಕು.

ಮತ್ತು ಇವನ್ನು ಕೇಳಕಬಾರದೆಂದು ಅವರು ಹೇಳುತ್ತಾರೆ; ಆದರೆ ಸುಳ್ಳು ಹೇಳುವವರು ಇದೇ ಪ್ರಕಾರ ಹೇಳುತ್ತಾರೆ.

ದಿಗಂಬರರಲ್ಲಿ ಯಾವ ಪ್ರಕಾರ ತೀರ್ಥಂಕರರಿಗೆ ಪುತ್ರಿ, ಚಕ್ರವರ್ತಿಯ ಮಾನಭಂಗ ಮೊದಲಾದ ಕಾರ್ಯಗಳು ಕಾಲದೋಷದಿಂದ ಆದುವೆಂದು ಹೇಳುತ್ತಾರೆ. ಅದೇ ಪ್ರಕಾರ ಇವೂ ಆದುವೆಂದು ಹೇಳುವರು. ಆದರೆ ಈ ಕಾರ್ಯಗಳಂತೂ ಪ್ರಮಾಣವಿರುದ್ಧವಿಲ್ಲ ಅನ್ಯರಿಗೆ ಆಗುತ್ತಿದ್ದವು ಅವು ಮಹಾಪುರುಷರಿಗೂ ಆಗಿವೆ; ಅದರಿಂದ ಕಾಲದೋಷವೆಂದು ಹೇಳಿದೆ. ಗರ್ಭಾವತರಣ ಮೊದಲಾದ ಕಾರ್ಯಗಳು ಪ್ರತ್ಯಕ್ಷ-ಅನುಮಾನಗಳಿಂದ ವಿರುದ್ಧವಿವೆ, ಅವುಗಳ ಆಗುವಿಕೆಯು ಹೇಗೆ ಸಂಭವವಿದೆ ?

ಉಳಿದ ಅದೆಷ್ಟೋ ಕಥನಗಳನ್ನು ಪ್ರಮಾಣವಿರುದ್ಧವಾಗಿ ಹೇಳುತ್ತಾರೆ. ಸರ್ವಾರ್ಥಸಿದ್ಧಿಯ ದೇವಗಳು ಮನಸ್ಸಿನಿಂದಲೇ ಪ್ರಶ್ನೆ ಮಾಡುತ್ತಾರೆ, ಕೇವಲೀ ಭಗವಂತರು ಮನಸ್ಸಿನಿಂದಲೇ ಉತ್ತರ ಕೊಡುತ್ತಾರೆಂದು ಹೇಳುತ್ತಾರೆ; ಆದರೆ ಸಾಮಾನ್ಯ ಜೀವಿಯ ಮನಸ್ಸಿನ ಮಾತನ್ನು ಮನಃಪರ್ಯಯ ಜ್ಞಾನಿಯಲ್ಲದೆ ತಿಳಿಯುವ ಸಾಧ್ಯತೆಯಿಲ್ಲವೆಂದ ಮೇಲೆ ಕೇವಲಿಯ ಮನಸ್ಸಿನ ಮಾತನ್ನು ಸರ್ವಾರ್ಥಸಿದ್ಧಿಯ ದೇವರು ಹೇಗೆ ತಿಳಿಯುವರು ? ಕೇವಲಿಗಂತೂ ಭಾವಮನಸ್ಸಿನ ಅಭಾವವಿದೆ, ದ್ರವ್ಯಮನಸ್ಸು ಜಡ-ಆಕಾರ ಮಾತ್ರವಿದೆ, ಉತ್ತರವನ್ನಾರು ಕೊಟ್ಟರು ? ಆದುದರಿಂದ ಇದು ಅಸತ್ಯವಿದೆ.

ಈ ಪ್ರಕಾರ ಅನೇಕ ಪ್ರಮಾಣವಿರುದ್ಧ ಕಥನ ಮಾಡಿರುವುದರಿಂದ ಅವರ ಆಗಮಗಳು ಕಾಲ್ಪನಿಕವಿವೆಯೆಂದು ತಿಳಿಯಬೇಕು.

## ಶ್ವೇತಾಂಬರಮತ ಕಥಿತ ದೇವ-ಗುರು-ಧರ್ಮಗಳ ಅನ್ಯಥಾಸ್ವರೂಪ

ಆ ಶ್ವೇತಾಂಬರ ಮತದವರು ದೇವ-ಗುರು-ಧರ್ಮಗಳ ಸ್ವರೂಪವನ್ನು ವಿಪರೀತವಾಗಿ ನಿರೂಪಣೆ ಮಾಡುತ್ತಾರೆ.

### ದೇವರ ಅನ್ಯಥಾ ಸ್ವರೂಪ :-

ಕೇವಲಿಗಳಿಗೆ ಕ್ಷುಧಾದಿ ದೋಷಗಳನ್ನು ಹೇಳುತ್ತಾರೆ ಇದು ದೇವರ ವಿಕೃತ ಸ್ವರೂಪವಿದೆ. ಏಕೆಂದರೆ ಕ್ಷುಧಾದಿ ದೋಷಗಳಿರುವುದರಿಂದ ಆಕುಲತೆಯಾಗುವುದು ಆಗ ಅನಂತ ಸುಖವು ಹೇಗೆ ಸಿದ್ಧವಾಗುವುದು ? ಶರೀರಕ್ಕೆ ಕ್ಷುಧೆಯಾಗುತ್ತದೆ ಆತ್ಮನು ತದ್ರೂಪನಾಗುವುದಿಲ್ಲವೆಂದು ಹೇಳುವರು; ಆದರೆ ಕ್ಷುಧಾದಿಗಳ ಉಪಾಯವೆಂದು ಆಹಾರ ಗ್ರಹಣ ಮಾಡಲಾಗುತ್ತದೆಯೆಂದೇಕೆ ಹೇಳುವಿರಿ ? ಕ್ಷುಧಾದಿಗಳಿಂದ ಪೀಡಿತವಾದಾಗಲೇ ಆಹಾರ ಗ್ರಹಣ ಮಾಡುವುದು. ಯಾವ ಪ್ರಕಾರ ಕರ್ಮೋದಯದಿಂದ ವಿಹಾರವಾಗುತ್ತದೆ ಅದೇ ಪ್ರಕಾರ ಆಹಾರ ಗ್ರಹಣವಾಗುತ್ತದೆಂದು ಹೇಳುವರು. ಆದರೆ ವಿಹಾರವಂತೂ ವಿಹಾಯೋಗತಿ ಪ್ರಕೃತಿಯ ಉದಯದಿಂದಾಗುತ್ತದೆ. ಅದು ಪೀಡೆಯ ಉಪಾಯವಿಲ್ಲ ಮತ್ತು ಅದು ಇಚ್ಛೆಯಿಲ್ಲದೆಯೂ ಕೆಲವು ಜೀವಗಳಿಗೆ ಆಗುತ್ತಿರುವುದು ಕಂಡು ಬರುತ್ತದೆ ಮತ್ತು ಆಹಾರವು ಪ್ರಕೃತಿಯ ಉದಯದಿಂದಿಲ್ಲ, ಕ್ಷುಧೆಯಿಂದ ಪೀಡಿತವಾದಾಗಲೇ ಗ್ರಹಣವಾಗುತ್ತದೆ. ಆತ್ಮನು ಪವನಕ್ಕೆ ಪ್ರೇರಣೆಯಿತ್ತಾಗಲೇ ತುತ್ತು ನುಂಗಲ್ಪಡುತ್ತದೆ, ಆದುದರಿಂದ ವಿಹಾರದಂತೆ ಆಹಾರವಿಲ್ಲ.

ಸಾತಾವೇದನೀಯದ ಉದಯದಿಂದ ಆಹಾರದ ಗ್ರಹಣವಾಗುತ್ತದೆಯೆಂದು ಹೇಳಿದರೆ ಅದೂ ಸಂಭವಿಸುವುದಿಲ್ಲ.ಜೀವನು ಕ್ಷುಧಾದಿಯಿಂದ ಪೀಡಿತನಾದಮೇಲೆ ಆಹಾರದ ಗ್ರಹಣದಿಂದ ಸುಖವೆಂದು ಮನ್ನಿಸಿದರೆ ಅವನ ಆಹಾರಾದಿಗಳು ಸಾತಾದ ಉದಯದಿಂದೆಂದು ಹೇಳಲಾಗುತ್ತದೆ. ಆಹಾರಾದಿಗಳ ಗ್ರಹಣವು ಸಾತಾವೇದನೀಯದ ಉದಯದಿಂದ ತಾನಾಗಿ ಆಗುವುದೆಂದೇನು ಇಲ್ಲ; ಹೀಗಿದ್ದರೆ ಸಾತಾವೇದನೀಯದ ಮುಖ್ಯ ಉದಯವು ದೇವಗಳಿಗಿದ್ದು ಅವರು ನಿರಂತರ ಆಹಾರವನ್ನೇಕೆ ಮಾಡುವುದಿಲ್ಲ ? ಮಹಾ ಮುನಿಗಳು ಉಪವಾಸ ಮಾಡಿದರೂ ಅವರಿಗೆ ಸಾತಾದ ಉದಯ ಮತ್ತು ನಿರಂತರ ಭೋಜನ ಮಾಡುವವರಿಗೆ ಅಸಾತಾದ ಉದಯವೇ ಸಂಭವವಿದೆ.

ಆದುದರಿಂದ ಯಾವ ಪ್ರಕಾರ ಇಚ್ಛೆಯಿಲ್ಲದೆ ವಿಹಾಯೋಗತಿಯ ಉದಯದಿಂದ ವಿಹಾರವು ಸಂಭವವಿದೆ, ಅದೇ ಪ್ರಕಾರ ಇಚ್ಛೆಯಿಲ್ಲದೆ ಕೇವಲ ಸಾತಾವೇದನೀಯದ ಉದಯದಿಂದಲೇ ಆಹಾರದ ಗ್ರಹಣವು ಸಂಭವವಿಲ್ಲ.

**ಪ್ರಶ್ನೆ :-** ಸಿದ್ಧಾಂತದಲ್ಲಿ ಕೇವಲಿಗೆ ಕ್ಷುಧಾದಿಯ ಹನ್ನೊಂದು ಪರೀಷಹಗಳನ್ನು ಹೇಳುವುದರಿಂದ ಅವರಿಗೆ ಕ್ಷುಧೆಯ ಸದ್ಭಾವವು ಸಂಭವವಿದೆ. ಮತ್ತು ಆಹಾರಾದಿಗಳಿಲ್ಲದೆ ಅದರ ಉಪಶಾಂತತೆಯು ಹೇಗಾಗುವುದು ? ಅದಕ್ಕಾಗಿ ಅವರಿಗೆ ಆಹಾರಾದಿಗಳನ್ನು ಮನ್ನಿಸುತ್ತಾರೆ.

**ಉತ್ತರ :-** ಕರ್ಮಪ್ರಕೃತಿಗಳ ಉದಯವು ತೀವ್ರ-ಮಂದ ಭೇದದೊಡನೆ ಆಗುತ್ತದೆ. ಅಲ್ಲಿ ಅತ್ಯಂತ ಮಂದ ಉದಯವಿರುವುದರಿಂದ ಆ ಉದಯಜನ್ಯ ಕಾರ್ಯದ ವ್ಯಕ್ತತೆಯು ಕಂಡುಬರುವುದಿಲ್ಲ; ಆದುದರಿಂದ ಮುಖ್ಯ ರೂಪದಿಂದ ಅಭಾವವೆಂದು ಹೇಳಲಾಗುತ್ತದೆ, ತಾರತಮ್ಯದಿಂದ ಸದ್ಭಾವವೆಂದು ಹೇಳಲಾಗುತ್ತದೆ. ಯಾವ ಪ್ರಕಾರ ಒಂಭತ್ತನೆಯ ಗುಣಸ್ಥಾನದಲ್ಲಿ ವೇದಾದಿಗಳ ಉದಯವು ಮಂದವಿದ್ದು ಅಲ್ಲಿ ಮೈಥುನಾದಿಗಳ ಕ್ರಿಯೆಗಳು ವ್ಯಕ್ತವಿಲ್ಲದಿರುವುದರಿಂದ ಅಲ್ಲಿ ಬ್ರಹ್ಮಚರ್ಯವೆಂದೇ ಹೇಳಿದೆ. ತಾರತಮ್ಯದಿಂದ ಮೈಥುನಾದಿಗಳ ಸದ್ಭಾವವೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಕೇವಲಿಗೆ ಅಸಾತಾದ ಉದಯವು ಅತ್ಯಂತ ಮಂದವಿದೆ; ಏಕೆಂದರೆ ಒಂದೊಂದು ಕಾಂಡದಲ್ಲಿ ಅನಂತದ ಭಾಗ-ಅನುಭಾಗಗಳಿರುತ್ತವೆ, ಇಂಥ ಬಹಳಷ್ಟು ಅನುಭಾಗಕಾಂಡಗಳಿಂದ ಹಾಗೂ ಗುಣ ಸಂಕ್ರಮಣಾದಿಗಳಿಂದ ಸತ್ತಾದಲ್ಲಿ ಅಸಾತಾವೇದನೀಯದ ಅನುಭಾಗವು ಅತ್ಯಂತ ಮಂದವಾಗಿದ್ದು ಅದರ ಉದಯದಲ್ಲಿ ಶರೀರವನ್ನು ಕ್ಷೀಣ ಮಾಡುವಂಥ ಕ್ಷುಧೆಯು ವ್ಯಕ್ತವಾಗುವುದಿಲ್ಲ. ಮತ್ತು ಮೋಹದ ಅಭಾವದಿಂದ ಕ್ಷುಧಾದಿ ಜನ್ಯ ದುಃಖವೂ ಇಲ್ಲದಿರುವುದರಿಂದ ಕ್ಷುಧಾದಿಗಳ ಅಭಾವವೆಂದು ಹೇಳಲಾಗುತ್ತದೆ ಮತ್ತು ತಾರತಮ್ಯದಿಂದ ಅದರ ಸದ್ಭಾವವೆಂದೂ ಹೇಳಲಾಗುತ್ತದೆ.

**ಪ್ರಶ್ನೆ :-** ಆಹಾರಾದಿಗಳಿಲ್ಲದೆ ಅದರ ಉಪಶಾಂತತೆಯು ಹೇಗಾಗುವುದು ?

**ಉತ್ತರ :-** ಆಹಾರಾದಿಗಳಿಂದ ಉಪಶಮನವಾಗುವಂಥ ಕ್ಷುಧೆಯಾದರೆ ಮಂದೋದಯ ಹೇಗೆ ಉಳಿಯಿತು? ದೇವ, ಭೋಗಭೂಮಿಜ ಮೊದಲಾದವರಿಗೆ ಸ್ವಲ್ಪ ಮಂದೋದಯವಿದ್ದರೂ ಅಧಿಕ ಕಾಲದ ನಂತರ ಸ್ವಲ್ಪ ಆಹಾರ ಗ್ರಹಣವಾಗುತ್ತದೆಂದ ಮೇಲೆ ಇವರಿಗೆ ಅತ್ಯಂತ ಮಂದ ಉದಯವಿರುವುದರಿಂದ ಇವರಿಗೆ ಆಹಾರದ ಅಭಾವವು ಸಂಭವವಿದೆ.

**ಪ್ರಶ್ನೆ ಃ-** ದೇವ, ಭೋಗಭೂಮಿಜರಿಗಂತೂ ಹಸಿವೆಯು ಅಲ್ಪ ಹಾಗೂ ಅಧಿಕ ಕಾಲದ ನಂತರ ಆಗುವಂಥ ಶರೀರವೇ ಇರುತ್ತದೆ, ಅವರಿಗಂತೂ ಕರ್ಮಭೂಮಿಯ ಔದಾರಿಕ ಶರೀರವಿರುವುದರಿಂದ ಇವರ ಶರೀರವು ಆಹಾರವಿಲ್ಲದೆ ಸ್ವಲ್ಪ ಕಡಿಮೆ ಒಂದು ಕೋಟಿ ಪೂರ್ವ ವರುಷಗಳವರೆಗೆ ಉತ್ಕೃಷ್ಟ ರೂಪದಿಂದ ಹೇಗೆ ಉಳಿಯುತ್ತದೆ?

**ಉತ್ತರ ಃ-** ದೇವಾದಿಕರ ಶರೀರವೂ ಹಾಗಿದ್ದು ಅದು ಕರ್ಮದನಿಮಿತ್ತದಿಂದಲೇ ಇದೆ; ಇಲ್ಲಿ ಕೇವಲ ಜ್ಞಾನವಾದ ಮೇಲೆ ಹಸಿವೆಯು ಪ್ರಕಟವಾಗದಂಥ ಶರೀರವಾಗುವ ಕರ್ಮದ ಉದಯವಾಗುವುದು. ಯಾವ ಪ್ರಕಾರ ಕೇವಲಜ್ಞಾನವಾಗುವ ಮುನ್ನ ನಖ, ಕೇಶಗಳ ವೃದ್ಧಿಯಾಗುತ್ತಿತ್ತು, ಈಗ ಆಗುವುದಿಲ್ಲ; ನೆರಳು ಬೀಳುತ್ತಿತ್ತು, ಈಗ ಬೀಳುವುದಿಲ್ಲ; ಶರೀರದಲ್ಲಿ ನಿಗೋದವಿತ್ತು, ಅದರ ಅಭಾವವಾಗಿದೆ. ಹಲವು ಪ್ರಕಾರದಿಂದ ಶರೀರದ ಅವಸ್ಥೆಯು ಹೇಗೆ ಬೇರೆಯಾಯಿತು ಹಾಗೆ ಆಹಾರವಿಲ್ಲದೆಯೂ ಶರೀರವು ಇದ್ದಕ್ಕಿದ್ದಂತೆ ಉಳಿಯುವಂಥ ಅವಸ್ಥೆಯೂ ಆಯಿತು. ಇತರರಿಗೆ ಮುಪ್ಪು ಬಂದರೆ ಶರೀರವು ಶಿಥಿಲವಾಗಿ ಬಿಡುತ್ತದೆ, ಇವರ ಶರೀರವು ಆಯುವಿರುವವರೆಗೆ ಶಿಥಿಲ ವಾಗುವುದಿಲ್ಲ; ಆದ್ದರಿಂದ ಅನ್ಯಮನುಷ್ಯರ ಹಾಗೂ ಇವರ ಶರೀರದ ಸಮಾನತೆಯು ಸಂಭವವಿಲ್ಲ.

**ಪ್ರಶ್ನೆ ಃ-** ಅಧಿಕಕಾಲದವರೆಗೆ ಹಸಿವೆಯಾಗದಂಥ ಆಹಾರವೇ ದೇವಾದಿಕರಿಗಿರುತ್ತದೆ, ಆದರೆ ಇವರಿಗೆ ಆಹಾರವಿಲ್ಲದೆ ಹಸಿವೆಯು ಹೇಗೆ ಶಾಂತವಾಗುತ್ತದೆ, ಶರೀರವು ಪುಷ್ಟವಾಗಿ ಹೇಗೆ ಉಳಿಯುತ್ತದೆ ?

**ಉತ್ತರ ಃ-** ಅಸಾತಾದ ಉದಯವು ಮಂದವಿರುವುದರಿಂದ ಹಸಿವೆ ಹೋಯಿತು, ಮತ್ತು ಸಮಯ-ಸಮಯಕ್ಕೆ ಪರಮೌದಾರಿಕ ಶರೀರ ವರ್ಗಣಗಳ ಗ್ರಹಣವಾಗುವಂಥ ನೋಕರ್ಮ ಆಹಾರವಿದೆ; ಆದುದರಿಂದ ಕ್ಷುಧಾದಿಗಳು ವ್ಯಾಪಿಸದಂಥ ಮತ್ತು ಶರೀರವು ಶಿಥಿಲವಾಗದಂಥ ವರ್ಗಣಗಳ ಗ್ರಹಣವಾಗುತ್ತದೆ. ಇದೇ ಅಪೇಕ್ಷೆಯಿಂದ ಸಿದ್ಧಾಂತದಲ್ಲಿ ಕೇವಲಿಗೆ ಆಹಾರ ಹೇಳಿದೆ.

ಅನ್ನಾದಿಗಳ ಆಹಾರವಂತೂ ಶರೀರದ ಪುಷ್ಟಿಗೆ ಮುಖ್ಯ ಕಾರಣವಾಗಿಲ್ಲ, ಏಕೆಂದರೆ ಅಲ್ಪ ಆಹಾರ ಗ್ರಹಣ ಮಾಡುವವನ ಶರೀರವು ಅಧಿಕ ಪುಷ್ಟವಿರುವುದನ್ನು ಮತ್ತು ಅಧಿಕ ಆಹಾರ ಗ್ರಹಣ ಮಾಡುವವನ ಶರೀರವು ಕ್ಷೀಣವಿರುವುದನ್ನು ಪ್ರತ್ಯಕ್ಷ ಕಾಣುತ್ತೇವೆ, ಅಲ್ಲದೆ ಪ್ರಾಣಾಯಾಮ ಸಾಧಿಸುವವನು ಅಧಿಕ ಕಾಲದವರೆಗೆ ಆಹಾರ ಸ್ವೀಕರಿಸುವುದಿಲ್ಲ ಮತ್ತು ಅವನ ಶರೀರವು ಪುಷ್ಟವಾಗಿರುತ್ತದೆ, ಋದ್ಧಿಧಾರಿ ಮುನಿಗಳು ಉಪವಾಸ ಮಾಡುತ್ತಿದ್ದರೂ ಶರೀರವು ಪುಷ್ಟವಾಗಿರುತ್ತದೆ; ಇನ್ನು ಕೇವಲಿಗಳಂತೂ ಸರ್ವೋತ್ಕೃಷ್ಟರಿದ್ದು ಅವರ ಶರೀರವು ಅನ್ನಾದಿಗಳಿಲ್ಲದೆ ಪುಷ್ಟವಾಗಿರುತ್ತದೆಂದರೆ ಏನಾಶ್ಚರ್ಯವಾಯಿತು ? ಮತ್ತು ಕೇವಲಿಗಳು ಆಹಾರಕ್ಕೆ ಹೇಗೆ ಹೋಗುವರು ? ಹೇಗೆ ಯಾಚನೆ ಮಾಡುವರು ?

ಅವರು ಆಹಾರಕ್ಕೆ ಹೋದರೆ ಸಮವಸರಣವು ಬರಿದಾಗಿ ಹೇಗಿರುವುದು ? ಮತ್ತು ಇತರರು ತಂದುಕೊಡುತ್ತಾರೆಂದರೆ ಯಾರು ತಂದುಕೊಡುವರು ? ಅವರ ಮಸ್ಸಿನಲ್ಲಿರುವುದನ್ನು ಯಾರು ತಿಳಿಯುವರು? ಪೂರ್ವದಲ್ಲಿ ಉಪವಾಸಾದಿಗಳ ಪ್ರತಿಜ್ಞೆ ಮಾಡಿರುವುದನ್ನು ಹೇಗೆ ನಿರ್ವಹಿಸುವರು ? ಎಲ್ಲೆಡೆಗೆ ಜೀವದ ಅಂತರಾಯವು ಭಾಸವಾಗುತ್ತಿರುವಲ್ಲಿ ಆಹಾರ ಗ್ರಹಣ ಹೇಗೆ ಮಾಡುವರು ? ಇತ್ಯಾದಿ ವಿಪರೀತತೆಯು

ಕಂಡುಬರುತ್ತದೆ, ಆಹಾರ ಗ್ರಹಣ ಮಾಡುತ್ತಾರೆ, ಆದರೆ ಯಾರಿಗೂ ಕಂಡುಬರುವುದಿಲ್ಲವೆಂದು ಹೇಳುತ್ತಾರೆ. ಆಹಾರ ಗ್ರಹಣವನ್ನು ನಿಂದ್ಯವೆಂದು ತಿಳಿದು ಅದು ಕಾಣುವುದಿಲ್ಲವೆಂದು ಅತಿಶಯತೆಯಲ್ಲಿ ಹೇಳಿದೆ, ಆದರೆ ಅವರ ನಿಂದ್ಯತೆಯಂತೂ ಉಳಿಯಿತು, ಮತ್ತು ಇತರರು ನೋಡದಿದ್ದರೇನಾಯಿತು ? ಹೀಗೆ ಅನೇಕ ಪ್ರಕಾರದ ವಿರುದ್ಧತೆಗಳು ಉತ್ಪನ್ನವಾಗುತ್ತವೆ.

ಅಲ್ಲದೆ ಕೇವಲಿಗೆ ನಿಹಾರ ಹೇಳುತ್ತಾರೆ, ರೋಗಾದಿಗಳಾದುವೆಂದು ಹೇಳುತ್ತಾರೆ ಮತ್ತು ಯಾವನೋ ಓರ್ವನು ತೇಜೋಲೇಶ್ಯೆ ಬಿಡುವುದರಿಂದ ವರ್ಧಮಾನ ಸ್ವಾಮಿಗೆ ರಕ್ತಭೇದಿರೋಗವಾಯಿತು, ಅದರಿಂದ ಎಷ್ಟೋ ಬಾರಿ ನಿಹಾರವಾಗಲಾರಂಭಿಸಿತೆಂದು ಹೇಳುತ್ತಾರೆ. ಆದರೆ ತೀರ್ಥಂಕರ ಕೇವಲಿಗಳಿಗೂ ಇಂಥ ಕರ್ಮದ ಉದಯವಿದ್ದರೆ ಮತ್ತು ಅತಿಶಯವಿರದಿದ್ದರೆ ಇಂದ್ರಾದಿಗಳಿಂದ ಪೂಜ್ಯತೆಯು ಹೇಗೆ ಶೋಭಿಸುವುದು ? ಮತ್ತು ನಿಹಾರವೆಲ್ಲಿ ಮಾಡುತ್ತಾರೆ, ಹೇಗೆ ಮಾಡುತ್ತಾರೆ ? ಯಾವ ಸಂಭವನೀಯ ಮಾತುಗಳೇ ಇಲ್ಲ ಮತ್ತು ಯಾವ ಪ್ರಕಾರ ರಾಗಯುಕ್ತ ಛದ್ಮಸ್ಥನ ಕ್ರಿಯೆಗಳಾಗುತ್ತವೆ ಅದೇ ಪ್ರಕಾರ ಕೇವಲಿಯ ಕ್ರಿಯೆಯನ್ನು ನಿಶ್ಚಯಿಸುವಂಥ ಅವಿವೇಕತೆಯ ಮಾತುಗಳನ್ನು ಆಡುತ್ತಾರೆ.

ವರ್ಧಮಾನಸ್ವಾಮಿಯ ಉಪದೇಶದಲ್ಲಿ 'ಎಲೈಗೌತಮನೇ!' ಎಂದು ಪುನಃ ಪುನಃ ಹೇಳುತ್ತಿದ್ದುದನ್ನು ನಿರ್ಧರಿಸುತ್ತಾರೆ; ಆದರೆ ಅವರಿಗಂತೂ ತಮ್ಮ ಕಾಲದಲ್ಲಿ ಸ್ವಾಭಾವಿಕವಾಗಿ ದಿವ್ಯ ಧ್ವನಿ ಹೊರಡುತ್ತಿತ್ತು , ಎಲ್ಲರಿಗೂ ಉಪದೇಶವಾಗುತ್ತಿತ್ತು , ಗೌತಮನಿಗೆ ಸಂಬೋಧಿಸುವುದು ಹೇಗೆ ಸಂಭವಿಸುತ್ತದೆ ? ಮತ್ತು ಕೇವಲಿಗೆ ನಮಸ್ಕಾರಾದಿಗಳಿದ್ದುವೆಂದು ಹೇಳುತ್ತಾರೆ, ಆದರೆ ಅನುರಾಗವಿಲ್ಲದೆ ವಂದನೆಯು ಸಂಭವವಿಲ್ಲ. ಮತ್ತು ವಂದನೆಯು ಗುಣಾಧಿಕರಿಗೆ ಸಂಭವವಿದೆ, ಆದರೆ ಅವರಿಗಿಂತ ಅಧಿಕ ಗುಣವುಳ್ಳವರು ಯಾರೂ ಉಳಿದಿಲ್ಲವೆಂದ ಮೇಲೆ ಇದು ಹೇಗೆ ಸಂಭವಿಸುತ್ತದೆ ?

ಮತ್ತು ಸಮವಸರಣವು ಸಂತೆಯಲ್ಲಿ ಇಳಿಯಿತೆಂದು ಹೇಳುತ್ತಾರೆ, ಆದರೆ ಇಂದ್ರಕೃತ ಸಮವಸರಣವು ಸಂತೆಯಲ್ಲಿ ಹೇಗೆ ನಿಲ್ಲುವುದು ? ಇಷ್ಟು ರಚನೆಯ ಸಮಾವೇಶವು ಅಲ್ಲಿ ಹೇಗಾಗುವುದು ? ಮತ್ತು ಸಂತೆಯಲ್ಲಿ ಏತಕ್ಕಾಗಿ ಉಳಿಯಿತು ? ಇಂದ್ರನು ಸಂತೆಯಂಥ ರಚನೆ ಮಾಡುವುದರಲ್ಲೂ ಅಸಮರ್ಥನಿರುವುದರಿಂದ ಸಂತೆಯ ಆಶ್ರಯ ಪಡೆಯಬೇಕಾಯಿತೇನು ?

ಕೇವಲಿಯು ಉಪದೇಶ ಕೊಡುವುದಕ್ಕಾಗಿ ಹೋದರೆಂದು ಹೇಳುತ್ತಾರೆ, ಆದರೆ ಮನೆಗೆ ಹೋಗಿ ಉಪದೇಶ ಕೊಡುವುದು ಅತಿಶಯ ಪ್ರೀತಿಯಿದ್ದರೆ ಆಗುತ್ತದೆ, ಇದು ಮುನಿಗಳಿಗೆ ಕೂಡ ಸಂಭವವಿಲ್ಲವೆಂದ ಮೇಲೆ ಕೇವಲಿಗೆ ಹೇಗಾಗುವುದು ? ಹೀಗೆ ಅಲ್ಲಿ ಅನೇಕ ವಿಪರೀತತೆಗಳನ್ನು ನಿರೂಪಣೆ ಮಾಡುತ್ತಾರೆ. ಕೇವಲಿಗಳು ಶುದ್ಧ ಕೇವಲಜ್ಞಾನ- ದರ್ಶನಮಯ ಹಾಗೂ ರಾಗಾದಿಗಳಿಂದ ರಹಿತರಾಗಿದ್ದಾರೆ, ಅವರಿಗೆ ಅಘಾತಿಕರ್ಮಗಳ ಉದಯದಿಂದ ಸಂಭವಿಸಬಹುದಾದ ಕೆಲವು ಕ್ರಿಯೆಗಳಾಗುತ್ತವೆ, ಆದರೆ ಅವರಿಗೆ ಮೋಹಾದಿಗಳ ಅಭಾವವಾಗಿರುವುದರಿಂದ ಉಪಯೋಗ ಹಚ್ಚುವುದರಿಂದಾಗಬಹುದಾದ ಕ್ರಿಯೆಗಳು ಸಂಭವಿಸುವುದಿಲ್ಲ. ಪಾಪ ಪ್ರಕೃತಿಯ ಅನುಭಾಗವು ಅತ್ಯಂತ ಮಂದವಾಗಿದ್ದು ಇಂಥ ಮಂದ ಅನುಭಾಗವು ಬೇರೆ ಯಾರಿಗೂ

ಇಲ್ಲದಿರುವುದರಿಂದ ಅನ್ಯ ಜೀವರುಗಳಿಗೆ ಪಾಪೋದಯದಿಂದ ಯಾವ ಕ್ರಿಯೆಗಳು ಆಗುತ್ತಿರುವುದು ಕಂಡು ಬರುತ್ತದೆ ಅವು ಕೇವಲಿಗೆ ಆಗುವುದಿಲ್ಲ.

ಈ ಪ್ರಕಾರ ಕೇವಲಿ ಭಗವಂತರಿಗೆ ಸಾಮಾನ್ಯ ಮನುಷ್ಯರಂಥ ಕ್ರಿಯೆಗಳನ್ನು ಹೇಳಿ ದೇವರ ಸ್ವರೂಪವನ್ನು ಅನ್ಯಥಾ ನಿರೂಪಣೆ ಮಾಡುತ್ತಾರೆ.

## ಗುರುವಿನ ಅನ್ಯಥಾ ಸ್ವರೂಪ :-

ಗುರುಗಳ ಸ್ವರೂಪವನ್ನು ವಿಪರೀತ ನಿರೂಪಣೆ ಮಾಡುತ್ತಾರೆ. ಮುನಿಗೆ ವಸ್ತ್ರ ಮೊದಲಾದ ಹದಿನಾಲ್ಕು ಉಪಕಾರಣಗಳನ್ನು[1] ಹೇಳುತ್ತಾರೆ, ಆದರೆ ಮುನಿಗೆ ನಿರ್ಗ್ರಂಥರೆಂದು ಹೇಳುತ್ತಾರೆ, ಮತ್ತು ಮುನಿಪದದ ಸ್ವೀಕಾರ ಸಮಯದಲ್ಲಿ ಒಂಭತ್ತು ಪ್ರಕಾರದ ಸಮಸ್ತ ಪರಿಗ್ರಹದ ತ್ಯಾಗ ಮಾಡಿ ಮಹಾವ್ರತಗಳನ್ನು ಸ್ವೀಕರಿಸುತ್ತಾರೆ; ಹಾಗಾದರೆ ಈ ವಸ್ತ್ರಾದಿಗಳು ಪರಿಗ್ರಹವಿವೆಯೋ ಅಥವಾ ಇಲ್ಲವೋ ? ಇದ್ದರೆ ತ್ಯಾಗ ಮಾಡಿದ ನಂತರವೇಕೆ ಇಟ್ಟುಕೊಳ್ಳುತ್ತಾರೆ? ಮತ್ತು ಇಲ್ಲದಿದ್ದರೆ ಗ್ರಹಸ್ಥರು ವಸ್ತ್ರಾದಿಗಳನ್ನು ಇಟ್ಟುಕೊಳ್ಳುತ್ತಾರೆ, ಅವನ್ನೂ ಪರಿಗ್ರಹವೆನ್ನಬೇಡಿರಿ? ಚಿನ್ನ ಮೊದಲಾದುವನ್ನು ಪರಿಗ್ರಹವೆಂದು ಹೇಳಿರಿ.

ಯಾವ ಪ್ರಕಾರ ಕ್ಷುಧಾದಿಗಳ ಸಲುವಾಗಿ ಆಹಾರ ಗ್ರಹಣ ಮಾಡುತ್ತಾರೆ, ಅದೇ ಪ್ರಕಾರ ಶೀತ-ಉಷ್ಣಾದಿಗಳ ಸಲುವಾಗಿ ವಸ್ತ್ರಾದಿಗಳನ್ನು ಗ್ರಹಣ ಮಾಡುತ್ತಾರೆಂದು ಹೇಳಬಹುದು, ಆದರೆ ಮುನಿಪದವನ್ನು ಸ್ವೀಕಾರ ಮಾಡುವಾಗ ಆಹಾರದ ತ್ಯಾಗ ಮಾಡಿಲ್ಲ, ಪರಿಗ್ರಹದ ತ್ಯಾಗ ಮಾಡಿದೆ. ಅನ್ನಾದಿಗಳ ಸಂಗ್ರಹ ಮಾಡುವುದಂತೂ ಪರಿಗ್ರಹವಿದೆ, ಭೋಜನ ಮಾಡಲು ಹೋಗುವುದು ಪರಿಗ್ರಹವಿಲ್ಲ. ಮತ್ತು ವಸ್ತ್ರಾದಿಗಳ ಸಂಗ್ರಹ ಮಾಡುವುದು ಹಾಗೂ ತೊಟ್ಟು ಕೊಳ್ಳುವುದು ಅದು ಎಲ್ಲಡೆಗೂ ಪರಿಗ್ರಹವಿದೆಯೆಂಬುದು ಲೋಕದಲ್ಲಿ ಪ್ರಸಿದ್ಧವಿದೆ.

ಶರೀರದ ಸ್ಥಿರತೆಗಾಗಿ ವಸ್ತ್ರಾದಿಗಳನ್ನು ಇಡುತ್ತಾರೆ; ಅದರಲ್ಲಿ ಮಮತೆಯಿಲ್ಲದಿರುವುದರಿಂದ ಅವಕ್ಕೆ ಪರಿಗ್ರಹವೆಂದು ಹೇಳುವುದಿಲ್ಲವೆಂದು ಹೇಳಬಹುದು, ಆದರೆ ಶ್ರದ್ಧೆಯಲ್ಲಂತೂ ಸಮ್ಯಗ್ದೃಷ್ಟಿಯಾದಾಗಲೇ ಸಮಸ್ತ ಪರದ್ರವ್ಯಗಳಲ್ಲಿನ ಮಮತೆಯ ಅಭಾವವಾಗುವುದು ; ಆ ಅಪೇಕ್ಷೆಯಿಂದ ನಾಲ್ಕನೇ ಗುಣಸ್ಥಾನವೇ ಪರಿಗ್ರಹರಹಿತವೆಂದು ಹೇಳು. ಇನ್ನು ಪ್ರವೃತ್ತಿಯಲ್ಲಿ ಮಮತೆಯಿಲ್ಲದಿದ್ದರೆ ಹೇಗೆ ಗ್ರಹಣಮಾಡುತ್ತಾರೆ ? ಆದುದರಿಂದ ವಸ್ತ್ರಾದಿಗಳ ಗ್ರಹಣ-ಧಾರಣವು ಬಿಟ್ಟಾಗಲೇ ಅಪರಿಗ್ರಹಿಯಾಗುವುದು.

ವಸ್ತ್ರಾದಿಗಳನ್ನು ಯಾರಾದರೂ ತೆಗೆದುಕೊಂಡು ಹೋದರೆ ಕ್ರೋಧ ಮಾಡುವುದಿಲ್ಲ, ಕ್ಷುಧಾದಿಗಳಾದಾಗ ಅವನ್ನು ಮಾರುವುದಿಲ್ಲ, ಬಟ್ಟೆತೊಟ್ಟುಕೊಂಡು ಪ್ರಮಾದ ಮಾಡುವುದಿಲ್ಲ; ಪರಿಣಾಮದ ಸ್ಥಿರತೆಯಿಂದ ಧರ್ಮದ ಸಾಧನವನ್ನೇ ಮಾಡುತ್ತಿರುವುದರಿಂದ ಮಮತೆಯಿಲ್ಲವೆಂದು ಹೇಳಬಹುದು. ಆದರೆ ಬಾಹ್ಯದಲ್ಲಿ ಕ್ರೋಧ ಮಾಡದಿದ್ದರೂ ಅದರ ಸ್ವೀಕಾರದಲ್ಲಿ ಇಷ್ಟಬುದ್ಧಿಯಾದರೆ ಅದರ ವಿಯೋಗದಲ್ಲಿ ಅನಿಷ್ಟ ಬುದ್ಧಿಯು ಆಗಿಯೇ ಆಗುವುದು. ಇಷ್ಟ ಬುದ್ಧಿಯಿಲ್ಲದಿದ್ದರೆ ಅದರ ಸಲುವಾಗಿ ಯಾಚನೆಯನ್ನೇಕೆ ಮಾಡುತ್ತಾರೆ ? ಮತ್ತು ಮಾರುವುದಿಲ್ಲ,

1 ೧) ಪಾತ್ರೆ, ೨) ಪಾತ್ರಬಂಧ, ೩) ಪಾತ್ರಕೇಸರಿಕರ, ೪-೫) ಪಟಲಿಕೆಗಳು, ೬) ರಜಸ್ತ್ರಾಣ, ೭) ಗೋಚ್ಛಕ, ೮) ರಜೋಹರಣ, ೯) ಮುಖವಸ್ತ್ರ, ೧೦-೧೧) ಎರಡು ನೂಲಿನ ಬಟ್ಟೆಗಳು, ೧೨) ಒಂದು ಉಣ್ಣೆಯ ಬಟ್ಟೆ, ೧೩) ಪಾತ್ರಕ, ೧೪) ಚೋಲಪಟ್ಟ.
-ಬೃ. ಕ.ಸೂ.ಉ. ೩ ಭಾ.ಗಾ. ೩೯೬೨ ರಿಂದ ೩೯೬೫

ಆದರೆ ಧಾತು ಇಟ್ಟುಕೊಂಡರೆ ತಮ್ಮ ಹೀನತೆಯೆಂದು ತಿಳಿದು ಮಾರುವುದಿಲ್ಲ. ಆದರೆ ಯಾವ ಪ್ರಕಾರ ಹಣ ಇಟ್ಟುಕೊಳ್ಳುವದಿದೆ. ಅದೇ ಪ್ರಕಾರ ವಸ್ತ್ರಾದಿಗಳನ್ನು ಇಟ್ಟುಕೊಳ್ಳುವುದಿದೆ. ಜಗತ್ತಿನಲ್ಲಿ ಪರಿಗ್ರಹದ ಅಪೇಕ್ಷೆಯುಳ್ಳ ಜೀವರುಗಳಿಗೆ ಎರಡರ ಇಚ್ಛೆಯಿರುವುದರಿಂದ ಕಳ್ಳರ ಭಯಾದಿಗಳಿಗೆ ಎರಡೂ ಕಾರಣಗಳು ಸಮಾನವಿವೆ. ಇನ್ನು ಪರಿಣಾಮದ ಸ್ಥಿರತೆಯಿಂದ ಧರ್ಮಸಾಧನದಿಂದ ಪರಿಗ್ರಹತೆಯಿಲ್ಲದ್ದಿದ್ದರೆ ಯಾವನಿಗೆ ಅಧಿಕ ಶೀತವೆನಿಸುತ್ತದೆ ಅವನು ರಜಾಯಿಯಿಟ್ಟುಕೊಂಡು ಪರಿಣಾಮದ ಸ್ಥಿರತೆ ಮಾಡುವನು ಮತ್ತು ಧರ್ಮಸಾಧಿಸುವನು; ಅವನನ್ನು ಕೂಡ ಅಪರಿಗ್ರಹಿಯೆಂದು ಹೇಳು ? ಹೀಗಾದರೆ ಗೃಹಸ್ಥ ಧರ್ಮದಲ್ಲಿ-ಮುನಿಧರ್ಮದಲ್ಲಿ ಅಂತರವೇನುಳಿಯಿತು ? ಪರೀಷಹ ಸಹನೆ ಮಾಡುವ ಶಕ್ತಿಯಿಲ್ಲದವನು ಪರಿಗ್ರಹವಿಟ್ಟುಕೊಂಡು ಧರ್ಮ ಸಾಧನೆ ಮಾಡುವುದರ ಹೆಸರು ಗೃಹಸ್ಥ ಧರ್ಮವಿದೆ; ಮತ್ತು ಪರಿಣಮನವು ನಿರ್ಮಲವಿರುವುದರಿಂದ ಪರೀಷಹಗಳಿಂದ ವ್ಯಾಕುಲಗೊಳ್ಳದವನು ಪರಿಗ್ರಹವಿಟ್ಟುಕೊಳ್ಳದೆ ಧರ್ಮ ಸಾಧನೆ ಮಾಡಿದರೆ ಅದರ ಹೆಸರು ಮುನಿಧರ್ಮವಿದೆ, ಇಷ್ಟು ವಿಶೇಷವಿದೆ.

ಮತ್ತು ಶೀತಾದಿಗಳ ಪರೀಷಹದಿಂದ ವ್ಯಾಕುಲತೆ ಹೇಗಾಗುವುದಿಲ್ಲವೆಂದರೆ ವ್ಯಾಕುಲತೆಯು ಮೋಹೋದಯದ ನಿಮಿತ್ತದಿಂದ ಇದೆ; ಇನ್ನು ಮುನಿಗಳಿಗೆ ಆರನೆಯ ಮೊದಲಾದ ಗುಣಸ್ಥಾನಗಳಲ್ಲಿ ಮೂರು ಚೌಕಡಿಯ ಉದಯವಿಲ್ಲ ಹಾಗೂ ಸಂಜ್ವಲನದ ಸರ್ವಘಾತಿ ಸ್ಪರ್ಧಕಗಳ ಉದಯವಿಲ್ಲ. ದೇಶಘಾತಿ ಸ್ಪರ್ಧಕಗಳ ಉದಯವಿದ್ದರೂ ಅವುಗಳ ಬಲವೇನೂ ಇಲ್ಲ. ಯಾವ ಪ್ರಕಾರ ವೇದಕ ಸಮ್ಯಗ್ದೃಷ್ಟಿಗೆ ಸಮ್ಯಗ್ಮೋಹನೀಯದ ಉದಯವಿದ್ದರೂ ಅದು ಸಮ್ಯಕ್ತ್ವದ ಘಾತ ಮಾಡುವ ಸಾಧ್ಯತೆಯಿಲ್ಲ; ಅದೇ ಪ್ರಕಾರ ದೇಶಘಾತಿ ಸಂಜ್ವಲನದ ಉದಯವು ಪರಿಣಾಮಗಳನ್ನು ವ್ಯಾಕುಲಮಾಡುವ ಸಾಧ್ಯತೆಯಿಲ್ಲ, ಅಯ್ಯಾ ! ಮುನಿಗಳ ಹಾಗೂ ಇತರರ ಪರಿಣಾಮಗಳ ಸಮಾನತೆಯಿಲ್ಲ. ಎಲ್ಲರಿಗೆ ಸರ್ವಘಾತಿಯ ಉದಯವಿದ್ದು ಇವರಿಗೆ ದೇಶಘಾತಿಯ ಉದಯವಿರುವುದರಿಂದ ಇತರರಿಗಾಗುವಂಥ ಪರಿಣಾಮಗಳು ಇವರಿಗೆಂದೂ ಆಗುವುದಿಲ್ಲ, ಸರ್ವಘಾತಿ ಕಷಾಯಗಳ ಉದಯವಿದ್ದವರು ಗೃಹಸ್ಥರೇ ಇದ್ದರೆ ದೇಶಘಾತಿಯ ಉದಯವಿದ್ದವರು ಮುನಿಧರ್ಮ ಸ್ವೀಕರಿಸುತ್ತಾರೆ; ಅವರ ಪರಿಣಾಮಗಳು ವ್ಯಾಕುಲಗೊಳ್ಳದಿರುವುದರಿಂದ ವಸ್ತ್ರಾದಿಗಳನ್ನಿಡುವುದಿಲ್ಲ.

ಜೈನಶಾಸ್ತ್ರಗಳಲ್ಲಿ ಮುನಿಗಳು ಹದಿನಾಲ್ಕು ಉಪಕರಣಗಳನ್ನಿಡುತ್ತಾರೆಂದು ಹೇಳಿದೆಯೆಂದು ಹೇಳುತ್ತಾರೆ. ಆದರೆ ನಿಮ್ಮ ಶಾಸ್ತ್ರಗಳಲ್ಲಿಯೇ ಹೇಳಿದೆ, ದಿಗಂಬರ ಜೈನಶಾಸ್ತ್ರಗಳಲ್ಲಂತೂ ಹೇಳಿಲ್ಲ; ಅಲ್ಲಿ ಮಾತ್ರ ಕೌಪೀನದ ಪರಿಗ್ರಹವಿದ್ದರೂ ಕೂಡ ಹನ್ನೊಂದನೆಯ ಪ್ರತಿಮಾಧಾರಕನಿಗೆ ಶ್ರಾವಕನೆಂದೇ ಹೇಳಿದೆ.

ಈಗ ಎರಡರಲ್ಲಿ ಕಾಲ್ಪನಿಕವಾದ ವಚನಗಳು ಯಾವವಿವೆಯೆಂಬುದನ್ನು ವಿಚಾರ ಮಾಡಿರಿ. ಮೊದಲಂತೂ ಕಾಲ್ಪನಿಕ ರಚನೆಯನ್ನು ಕಷಾಯಯುಕ್ತನು ಮಾಡುತ್ತಾನೆ; ಮತ್ತು ಕಷಾಯಯುಕ್ತನೇ ನೀಚಪದದಲ್ಲಿ ಉಚ್ಚತನವನ್ನು ಪ್ರಕಟಮಾಡುತ್ತಾನೆ. ದಿಗಂಬರರಲ್ಲಿ ವಸ್ತ್ರಾದಿಗಳನ್ನಿಟ್ಟುಕೊಳ್ಳುವುದರಿಂದ ಧರ್ಮವಾಗುವುದೇ ಇಲ್ಲವೆಂದಂತೂ ಹೇಳಿಲ್ಲ, ಆದರೆ ಅದನ್ನು ಶ್ರಾವಕ ಧರ್ಮವೆಂದು ಹೇಳಿದೆ; ಶ್ವೇತಾಂಬರರಲ್ಲಿ ಮುನಿಧರ್ಮವೆಂದು ಹೇಳಿದೆ. ಆದುದರಿಂದ ಇಲ್ಲಿ ನೀಚಕ್ರಿಯೆಗಳಿದ್ದರೂ ಕೂಡ ಉಚ್ಚತೆಯನ್ನು ಪ್ರಕಟ ಮಾಡಿದವನೇ ಕಷಾಯಿಯಿದ್ದಾನೆ. ಈ ಕಾಲ್ಪನಿಕ ಕಥನದಿಂದ ವಸ್ತ್ರಾದಿಗಳನ್ನಿಟ್ಟುಕೊಂಡರೂ ತಮ್ಮನ್ನು ಜನರು ಮುನಿಯೆಂದು ಮನ್ನಿಸತೊಡಗುವುದರಿಂದ ಮಾನಕಷಾಯದ ಪೋಷಣೆ ಮಾಡಿ ಸುಲಭ ಕ್ರಿಯೆಗಳಿಂದ ಉಚ್ಚಪದವಿಯಾಗುವುದೆಂದು ಇತರರಿಗೆ

ತೋರಿಸುವುದರಿಂದ ಅಧಿಕ ಜನರು ಬೆನ್ನುಹತ್ತಿದರು. ಕಾಲ್ಪನಿಕ ಮತಗಳು ಇದೇ ಪ್ರಕಾರ ಆಗಿವೆ. ಆದುದರಿಂದ ಕಷಾಯಿಯಾಗಿ ವಸ್ತ್ರಾದಿಗಳಿದ್ದರೂ ಕೂಡ ಮುನಿತನವನ್ನು ಹೇಳಿರುವುದು ಅದು ಪೂರ್ವೋಕ್ತ ಯುಕ್ತಿಯಲ್ಲಿ ವಿರುದ್ಧವಾಗಿ ಕಂಡುಬರುತ್ತದೆ; ಆದುದರಿಂದ ಇವು ಕಾಲ್ಪನಿಕ ವಚನಗಳಿವೆಯೆಂದು ತಿಳಿಯಬೇಕು.

**ಪ್ರಶ್ನೆ :-** ದಿಗಂಬರರಲ್ಲಿ ಕೂಡ ಶಾಸ್ತ್ರ, ಪಿಂಛಿ ಮೊದಲಾದ ಉಪಕರಣಗಳನ್ನು ಮುನಿಗಳಿಗೆ ಹೇಳಿದ್ದಾರೆ; ಅದೇ ಪ್ರಕಾರ ನಮ್ಮಲ್ಲಿ ಹದಿನಾರು ಉಪಕರಣಗಳನ್ನು ಹೇಳಿದ್ದಾರೆ, ಇದರಲ್ಲಿ ತಪ್ಪೇನಿದೆ ?

**ಉತ್ತರ :-** ಯಾವುದರಿಂದ ಉಪಕಾರವಾಗುವುದು ಅದರ ಹೆಸರು ಉಪಕರಣವಿದೆ. ಆದರೆ ಇಲ್ಲಿ ಶೀತಾದಿಗಳ ವೇದನವನ್ನು ದೂರ ಮಾಡುವುದರಿಂದ ಉಪಕರಣವೆಂದು ನಿಶ್ಚಿತವಾದರೆ ಎಲ್ಲ ಪರಿಗ್ರಹದ ಸಾಮಗ್ರಿಗಳು ಉಪಕರಣ ನಾಮ ಪಡೆಯುವವು, ಆದರೆ ಧರ್ಮದಲ್ಲಿ ಅವುಗಳ ಪ್ರಯೋಜನವೇನಿದೆ ? ಅವಂತೂ ಪಾಪದ ಕಾರಣಗಳಿವೆ; ಧರ್ಮದಲ್ಲಂತೂ ಯಾವವು ಧರ್ಮಕ್ಕೆ ಉಪಕಾರಿಯಾಗುವವು ಅವುಗಳ ಹೆಸರು ಉಪಕರಣವಿದೆ. ಅಲ್ಲಿ ಶಾಸ್ತ್ರವು ದಾನದಕಾರಣವಿದೆ, ಪಿಂಛಿ ದಯೆಗೆ ಕಾರಣವಿದೆ, ಕಮಂಡಲು ಶೌಚದ ಕಾರಣವಿದೆ, ಇವಂತೂ ಧರ್ಮಕ್ಕೆ ಉಪಕಾರಿಯಾದವು; ವಸ್ತ್ರಾದಿಗಳು ಯಾವ ಪ್ರಕಾರ ಧರ್ಮಕ್ಕೆ ಉಪಕಾರಿಯಾಗುವವು ಅವನ್ನಂತೂ ಶರೀರ ಸುಖದ ಸಲುವಾಗಿಯೇ ಧಾರಣಮಾಡಲಾಗುತ್ತವೆ.

ಇನ್ನೂ ಕೇಳಿರಿ, ಶಾಸ್ತ್ರಗಳನ್ನಿಟ್ಟುಕೊಂಡು ದೊಡ್ಡಸ್ತಿಕೆಯನ್ನು ಮೆರೆಸಿದರೆ, ಪಿಂಛಿಯಿಂದ ಕಸಗುಡಿಸಿದರೆ, ಕಮಂಡಲದಿಂದ ನೀರು ಕುಡಿದರೆ ಮತ್ತು ಮಲಿನತೆಯನ್ನು ಕಳೆದರೆ ಶಾಸ್ತ್ರ ಮೊದಲಾದವು ಕೂಡ ಪರಿಗ್ರಹವೇ ಇವೆ; ಆದರೆ ಮುನಿಗಳು ಇಂಥ ಕಾರ್ಯ ಮಾಡುವುದಿಲ್ಲ. ಆದುದರಿಂದ ಧರ್ಮದ ಸಾಧನಗಳಿಗೆ ಪರಿಗ್ರಹವೆಂಬ ಸಂಜ್ಞೆಯಿಲ್ಲ; ಆದರೆ ಭೋಗದ ಸಾಧನಗಳಿಗೆ ಪರಿಗ್ರಹವೆಂಬ ಸಂಜ್ಞೆಯು ಇರುತ್ತದೆಯೆಂದು ತಿಳಿಯಬೇಕು.

ಕಮಂಡಲದಿಂದಂತೂ ಶರೀರದ ಮಲವನ್ನೇ ದೂರಮಾಡುತ್ತಾರೆಂದು ಹೇಳಬಹುದು; ಆದರೆ ಮುನಿಗಳು ಮಲದೂರ ಮಾಡುವ ಇಚ್ಛೆಯಿಂದ ಕಮಂಡಲವನ್ನು ಇಟ್ಟುಕೊಳ್ಳುವುದಿಲ್ಲ. ಶಾಸ್ತ್ರ ಓದುವುದು ಮೊದಲಾದ ಕಾರ್ಯ ಮಾಡುತ್ತಾರೆ, ಅಲ್ಲಿ ಮಲಿಲಿಪ್ತ ಶರೀರದಿಂದ ಶಾಸ್ತ್ರದ ಅವಿನಯವಾಗುವುದು, ಲೋಕನಿಂದೆಯಾಗುವುದು; ಅದರಿಂದ ಧರ್ಮಪಾಲನೆಗಾಗಿ ಕಮಂಡಲವನ್ನಿಡುತ್ತಾರೆ. ಹೀಗೆ ಪಿಂಛಿ ಮೊದಲಾದವು ಉಪಕರಣವೆನಿಸುತ್ತವೆ, ವಸ್ತ್ರಾದಿಗಳಿಗೆ ಉಪಕರಣವೆಂಬ ಸಂಜ್ಞೆಯು ಸಂಭವಿಸುವುದಿಲ್ಲ.

ಕಾಮ, ಅರತಿ ಮೊದಲಾದ ಮೋಹದ ಉದಯದಿಂದ ವಿಕಾರಗಳು ಬಾಹ್ಯದಲ್ಲಿ ಪ್ರಕಟವಾಗುವುದರಿಂದ ಹಾಗೂ ಶೀತಾದಿಗಳನ್ನು ಸಹಿಸುವುದಾಗದಿರುವುದರಿಂದ ಆ ವಿಕಾರಗಳನ್ನು ಬಚ್ಚಿಡಲಿಕ್ಕೆ ಹಾಗೂ ಶೀತಾದಿಗಳ ನಿವಾರಣೆಗಾಗಿ ವಸ್ತ್ರಾದಿಗಳನ್ನಿಡುತ್ತಾರೆ. ಮತ್ತು ಮಾನದ ಉದಯದಿಂದ ತಮ್ಮ ಶ್ರೇಷ್ಠತೆಯನ್ನೂ ಬಯಸುತ್ತಿರುವುದರಿಂದ ಅವರು ಕಲ್ಪಿತ ಯುಕ್ತಿಯಿಂದ ಉಪಕರಣವೆಂದು ನಿರ್ಧಾರ ಮಾಡಿದ್ದಾರೆ.

ಅದರಂತೆ ಮನೆ-ಮನೆ ಬೇಡಿ ಆಹಾರ ತರುವುದನ್ನು ನಿರ್ಧರಿಸುತ್ತಾರೆ. ಆದರೆ ಯಾಚನೆ ಮಾಡುವುದು ಧರ್ಮದ ಅಂಗವಿದೆಯೋ ಅಥವಾ ಪಾಪದ ಅಂಗವಿದೆಯೋ ? ಒಂದು ವೇಳೆ ಧರ್ಮದ ಅಂಗವಿದ್ದರೆ ಯಾಚನೆ ಮಾಡುವವರೆಲ್ಲರೂ ಧರ್ಮಾತ್ಮರಾಗುವರು ; ಮತ್ತು ಪಾಪದ ಅಂಗವಿದ್ದರೆ ಅದು ಮುನಿಗಳಿಗೆ ಹೇಗೆ ಸಂಭವಿಸುತ್ತದೆ?

**ಪ್ರಶ್ನೆ :-** ಲೋಭದಿಂದ ಧನಾದಿಗಳ ಯಾಚನೆ ಮಾಡಿದರೆ ಪಾಪವಾಗುವುದು; ಇವರಂತೂ ಧರ್ಮಸಾಧನೆಗಾಗಿ ಶರೀರದ ಸ್ಥಿರತೆಯನ್ನು ಬಯಸುತ್ತಾರೆ, ಅದರಿಂದ ಆಹಾರ ಮೊದಲಾದವುಗಳ ಯಾಚನೆ ಮಾಡುತ್ತಾರೆ.

**ಉತ್ತರ :-** ಆಹಾರಾದಿಗಳಿಂದ ಧರ್ಮವಾಗುವುದಿಲ್ಲ, ಶರೀರಕ್ಕೆ ಸುಖವಾಗುತ್ತದೆ; ಆದುದರಿಂದ ಶರೀರ ಸುಖದ ಸಲುವಾಗಿ ಅಧಿಕ ಲೋಭವಾದ ಮೇಲೆ ಯಾಚನೆ ಮಾಡುತ್ತಾರೆ. ಒಂದು ವೇಳೆ ಅಧಿಕ ಲೋಭವಿಲ್ಲದಿದ್ದರೆ ತಾವು ಏತಕ್ಕಾಗಿ ಬೇಡುತ್ತೀರಿ ? ಅವರೇ ಕೊಡುತ್ತಿದ್ದರೆ ಕೊಡಲಿ ಕೊಡದಿದ್ದರೆ ಕೊಡದಿರಲಿ, ಅತಿಲೋಭವಾಯಿತು ಅದೇ ಪಾಪವಾಯಿತು, ಆಗ ಮುನಿಧರ್ಮವು ನಷ್ಟವಾಯಿತು; ಬೇರಿನ್ನಾವಧರ್ಮ ಸಾಧಿಸುವುದು ?

**ಪ್ರಶ್ನೆ :-** ಮನಸ್ಸಿನಲ್ಲಿ ಆಹಾರದ ಇಚ್ಛೆಯಿರುವುದು ಮತ್ತು ಯಾಚನೆ ಮಾಡದಿದ್ದರೆ ಮಾಯಾ ಕಷಾಯವಾಯಿತು, ಮತ್ತು ಯಾಚನೆ ಮಾಡುವಲ್ಲಿ ಹೀನತೆ ಬರುತ್ತದೆಂದು ಗರ್ವದ ಕಾರಣ ಯಾಚನೆ ಮಾಡದಿದ್ದರೆ ಮಾನಕಷಾಯವಾಯಿತು. ಆಹಾರ ತೆಗೆದುಕೊಳ್ಳುವುದಿತ್ತು ಅದರಿಂದ ಬೇಡಲಾಗಿದೆ, ಇದರಲ್ಲಿ ಅತಿಲೋಭವೇನಾಯಿತು ಮತ್ತು ಇದರಿಂದ ಮುನಿಧರ್ಮವು ಹೇಗೆ ನಷ್ಟವಾಯಿತೆಂಬುದನ್ನು ಹೇಳಿರಿ.

**ಉತ್ತರ :-** ಯಾವ ಪ್ರಕಾರ ಓರ್ವ ವರ್ತಕನಿಗೆ ಸಂಪಾದಿಸುವ ಇಚ್ಛೆ ಮಂದವಿದೆ, ಆದರೂ ಅಂಗಡಿಯಲ್ಲಿ ಕೂಡ್ರುತ್ತಾನೆ ಮತ್ತು ಮನಸ್ಸಿನಲ್ಲಿ ವ್ಯಾಪಾರ ಮಾಡುವ ಇಚ್ಛೆ ಕೂಡ ಇದೆ; ಆದರೆ ವಸ್ತುಗಳನ್ನು ಕೊಡ-ಕೊಳ್ಳುವ ರೂಪದ ವ್ಯಾಪಾರದ ಸಲುವಾಗಿ ಯಾರಲ್ಲೂ ಪ್ರಾರ್ಥನೆ ಮಾಡುವುದಿಲ್ಲ. ಯಾರಾದರೂ ತಾವಾಗಿಯೇ ಬಂದರೆ ತಮಗೆ ಒಪ್ಪಿಗೆಯಾದರೆ ವ್ಯಾಪಾರ ಮಾಡುತ್ತಿದ್ದರೆ ಅವನಿಗೆ ಲೋಭದ ಮಂದತೆಯಿದೆ, ಮಾಯೆ ಮತ್ತು ಮಾನಗಳಿಲ್ಲ, ಮೋಸ ಮಾಡುವ ಸಲುವಾಗಿ ಮತ್ತು ತನ್ನ ದೊಡ್ಡಸ್ತಿಕೆಯ ಸಲುವಾಗಿ ಇಂಥ ಸೋಗು ಮಾಡಿದರೆ ಆಗ ಮಾಯೆ, ಮಾನಕಷಾಯಗಳಾಗುತ್ತವೆ. ಆದರೆ ಒಳ್ಳೆಯ ವರ್ತಕನಿಗೆ ಇಂಥ ಪ್ರಯೋಜನವಿಲ್ಲದಿರುವುದರಿಂದ ಅವನಿಗೆ ಮಾಯಾವಿ-ಮಾನಿ ಎಂದು ಹೇಳಲಾಗುವುದಿಲ್ಲ, ಅದೇ ಪ್ರಕಾರ ಮುನಿಗಳಿಗೆ ಆಹಾರಾದಿಗಳ ಇಚ್ಛೆಯು ಮಂದವಿದೆ, ಅವರು ಆಹಾರ ತೆಗೆದುಕೊಳ್ಳಲು ಬರುತ್ತಾರೆ ಮತ್ತು ಮನಸ್ಸಿನಲ್ಲಿ ಆಹಾರ ತೆಗೆದುಕೊಳ್ಳುವ ಇಚ್ಛೆಯೂ ಇದೆ. ಆದರೆ ಆಹಾರದ ಸಲುವಾಗಿ ಪ್ರಾರ್ಥನೆ ಮಾಡುವುದಿಲ್ಲ; ತಾವಾಗಿಯೇ ಯಾರಾದರೂ ಕೊಟ್ಟರೆ ತಮ್ಮ ವಿಧಿ ಕೂಡಿ ಬಂದರೆ ಆಹಾರ ತೆಗೆದುಕೊಳ್ಳುತ್ತಾರೆ, ಅಲ್ಲಿ ಅವರಿಗೆ ಲೋಭದ ಮಂದತೆಯಿದೆ, ಮಾಯೆ ಮತ್ತು ಮಾನಗಳಿಲ್ಲ. ಮೋಸ ಮಾಡುವ ಸಲುವಾಗಿ ಮತ್ತು ತನ್ನ ದೊಡ್ಡಸ್ತಿಕೆಯ ಸಲುವಾಗಿ ಇಂಥ ಸೋಗು ಮಾಡಿದರೆ ಆಗ ಮಾಯೆ-ಮಾನಗಳಾಗುತ್ತವೆ. ಆದರೆ ಮುನಿಗಳಿಗೆ ಇಂಥ ಪ್ರಯೋಜನವಿಲ್ಲದಿರುವುದರಿಂದ ಅವರಿಗೆ ಮಾಯೆ-ಮಾನಗಳಿಲ್ಲ. ಒಂದು ವೇಳೆ ಇದೇ ಪ್ರಕಾರ ಮಾಯೆ-ಮಾನಗಳಾದರೆ ಯಾರು ಮನಸ್ಸಿನಿಂದಲೇ ಪಾಪ ಮಾಡುತ್ತಾರೆ, ವಚನ-ಕಾಯಗಳಿಂದ ಮಾಡುವುದಿಲ್ಲ ಅವರೆಲ್ಲರನ್ನು ಮಾಯಾವಿಯೆನ್ನಬೇಕಾಗುವುದು ಮತ್ತು ಆ ಉಚ್ಚ ಪದವಿಯ ಧಾರಕರು ನೀಚ-ವೃತ್ತಿಯನ್ನು ಅಂಗೀಕಾರ ಮಾಡುವುದಿಲ್ಲ ಅವರೆಲ್ಲರನ್ನು ಮಾನಿಯೆನ್ನಬೇಕಾಗುವುದು, ಇಂಥ ಅನರ್ಥವಾಗುವುದು.

'ಆಹಾರ ಬೇಡುವಲ್ಲಿ ಅತಿಲೋಭವೇನಾಯಿತು ?'-ಎಂದು ಕೇಳುತ್ತಾರೆ, ಆದರೆ ಅಧಿಕಕಷಾಯವಿದ್ದಾಗ ಲೋಕನಿಂದ್ಯಕಾರ್ಯವನ್ನು ಅಂಗೀಕಾರ ಮಾಡಿ ಕೂಡ ಮನೋರಥ ಪೂರ್ಣ ಮಾಡಲು ಅಪೇಕ್ಷಿಸುತ್ತಾನೆ; ಮತ್ತು

ಬೇಡುವುದು ಲೋಕನಿಂದ್ಯವಿದ್ದರೂ ಅದನ್ನು ಅಂಗೀಕಾರ ಮಾಡಿ ಆಹಾರದ ಇಚ್ಛೆಯನ್ನು ಪೂರ್ಣ ಮಾಡುವ ಬಯಕೆಯಾಯಿತು, ಅದರಿಂದ ಇಲ್ಲಿ ಅತಿಲೋಭವಾಯಿತು.

ಅದರಂತೆ 'ಮುನಿಧರ್ಮವು ಹೇಗೆ ನಷ್ಟವಾಯಿತೆ'ಂದು ಕೇಳುತ್ತಾರೆ, ಆದರೆ ಮುನಿಧರ್ಮದಲ್ಲಿ ಇಂಥ ತೀವ್ರಕಷಾಯವು ಸಂಭವವಿಲ್ಲ. ಮತ್ತು ಯಾವನಿಗೆ ಆಹಾರ ಕೊಡುವ ಪರಿಣಾಮವಿರಲಿಲ್ಲ, ಆದರೆ ಇವನು ಅವನ ಮನೆಯಲ್ಲಿ ಹೋಗಿ ಯಾಚನೆ ಮಾಡುವನು; ಅಲ್ಲಿ ಅವನಿಗೆ ಸಂಕೋಚವಾಗುವುದು ಮತ್ತು ಕೊಡದಿದ್ದರೆ ಲೋಕನಿಂದ್ಯವಾಗುವ ಭಯವಾಗುವುದರಿಂದ ಅವನಿಗೆ ಆಹಾರ ಕೊಡುವನು; ಆದರೆ ಅವನ (ಕೊಡುವವನ) ಅಂತರಂಗ ಪ್ರಾಣವು ಪೀಡಿತವಾಗುವುದರಿಂದ ಹಿಂಸೆಯ ಸದ್ಭಾವವು ಬಂದು ಬಿಟ್ಟಿತು, ಒಂದು ವೇಳೆ ಅವನ ಮನೆಯಲ್ಲಿ ಹೋಗದೆ ಅವನಿಗೇ ಕೊಡುವ ಮನಸ್ಸು ಬಂದು ಕೊಡುತ್ತಿದ್ದರೆ ಅವನಿಗೆ ಆನಂದವಾಗುತ್ತಿತ್ತು. ಇದಂತೂ ಬಲವಂತದಿಂದ ಮಾಡಿದ ಕಾರ್ಯವಾಯಿತು. ಮತ್ತು ತನ್ನ ಕಾರ್ಯದ ಸಲುವಾಗಿ ಯಾಚನೆಯ ರೂಪದ ವಚನವಿದೆ ಅದು ಪಾಪರೂಪವಿದೆ ಮತ್ತು ಇಲ್ಲಿ ಅಸತ್ಯವಚನವೂ ಆಯಿತು. ಇನ್ನು ಅವನಿಗೆ ಕೊಡುವ ಇಚ್ಛೆ ಇರಲಿಲ್ಲ, ಇವನು ಯಾಚನೆ ಮಾಡಿದಾಗ ಅವನು ತನ್ನ ಇಚ್ಛೆಯಿಂದ ಕೊಡಲಿಲ್ಲ, ಸಂಕೋಚದಿಂದ ಕೊಟ್ಟಿರುವುದರಿಂದ ಅದತ್ತ ಗ್ರಹಣ ಕೂಡ ಆಯಿತು. ಅಲ್ಲದೆ ಗೃಹಸ್ಥರ ಮನೆಯಲ್ಲಿ ಸ್ತ್ರೀಯರು ಅಸ್ತವ್ಯಸ್ತವಾಗಿ ಕುಳಿತಿರುತ್ತಾರೆ ಮತ್ತು ಇವನು ಹೋಗುತ್ತಾನೆ, ಅಲ್ಲಿ ಬ್ರಹ್ಮಚರ್ಯದ ಮರ್ಯಾದೆಯ ಭಂಗವಾಗುವುದು ಮತ್ತು ಆಹಾರ ತಂದು ಕೆಲಕಾಲದವರೆಗೆ ಇಟ್ಟನು; ಆಹಾರಾದಿಗಳನ್ನು ಇಟ್ಟುಕೊಳ್ಳಲು ಪಾತ್ರೆಗಳನ್ನಿಟ್ಟುಕೊಂಡಿರುವುದು ಅದು ಪರಿಗ್ರಹವಾಯಿತು. ಈ ಪ್ರಕಾರ ಐದೂ ಮಹಾವ್ರತಗಳ ಭಂಗವಾಗುವುದರಿಂದ ಮುನಿಧರ್ಮವು ನಷ್ಟವಾಗುತ್ತದೆ; ಅದಕ್ಕಾಗಿ ಮುನಿಗಳಿಗೆ ಯಾಚನೆಯಿಂದ ಆಹಾರ ತೆಗೆದುಕೊಳ್ಳುವುದು ಯುಕ್ತವಿಲ್ಲ.

**ಪ್ರಶ್ನೆ** :- ಮುನಿಗಳ ಇಪ್ಪತ್ತೆರಡು ಪರೀಷಹಗಳಲ್ಲಿ ಯಾಚನಾಪರೀಷಹವನ್ನು ಹೇಳಿದೆ; ಆದುದರಿಂದ ಯಾಚನೆ ಮಾಡಿದಲ್ಲದೆ ಆ ಪರೀಷಹದ ಸಹನೆ ಮಾಡುವುದು ಹೇಗಾಗುವುದು ?

**ಉತ್ತರ** :- ಯಾಚನೆ ಮಾಡುವುದರ ಹೆಸರು ಯಾಚನಾಪರೀಷಹವಿಲ್ಲ. ಯಾಚನೆ ಮಾಡದಿರುವುದರ ಹೆಸರು ಯಾಚನಾ ಪರೀಷಹವಿದೆ. ಹೇಗೆಂದರೆ-ಅರತಿ ಮಾಡುವುದರ ಹೆಸರು ಅರತಿಪರೀಷಹವಿಲ್ಲ; ಆದರೆ ಅರತಿ ಮಾಡದಿರುವುದರ ಹೆಸರು ಅರತಿ ಪರೀಷಹವಿದೆಯೆಂದು ತಿಳಿಯಬೇಕು. ಒಂದು ವೇಳೆ ಯಾಚನೆ ಮಾಡುವುದು ಪರೀಷಹವೆಂದಾದರೆ ಭಿಕ್ಷುಕರು ಅಧಿಕ ಯಾಚನೆ ಮಾಡುತ್ತಾರೆ, ಅವರಿಗೆ ಅಧಿಕ ಧರ್ಮವಾಗಬೇಕು. ಮತ್ತು ಮಾನ ಕಡಿಮೆ ಮಾಡುವ ಕಾರಣ ಇದಕ್ಕೆ ಪರೀಷಹವೆಂದು ಹೇಳುವುದಾದರೆ ಯಾವುದೇ ಒಂದು ಕಷಾಯ-ಕಾರ್ಯದ ಸಲುವಾಗಿ ಇನ್ನೊಂದು ಕಷಾಯವನ್ನು ಬಿಟ್ಟರೂ ಕೂಡ ಅವನು ಪಾಪಿಯೇ ಇರುತ್ತಾನೆ. ಹೇಗೆಂದರೆ-ಯಾವನೋ ಓರ್ವನು ಲೋಭದ ಸಲುವಾಗಿ ತನ್ನ ಅವಮಾನವನ್ನು ಕೂಡ ಎಣಿಕೆಗೆ ತಂದುಕೊಳ್ಳದಿದ್ದರೆ ಅವನಿಗೆ ಲೋಭದ ತೀವ್ರತೆಯಿದೆ, ಆ ಅವಮಾನ ಮಾಡಿಸುವುದರಿಂದಲೂ ಮಹಾಪಾಪವಾಗುತ್ತದೆ, ಮತ್ತು ತಮಗೆ ಸ್ವಲ್ಪವೂ ಇಚ್ಛೆಯಿಲ್ಲ, ಯಾರಾದರೂ ತಾವಾಗಿಯೇ ಅವಮಾನ ಮಾಡಿದರೆ ಅವನಿಗೆ ಮಹಾಧರ್ಮವಿದೆ; ಆದರೆ ಇಲ್ಲಿಯಂತೂ ಭೋಜನದ ಲೋಭದ ಸಲುವಾಗಿ ಯಾಚನೆ ಮಾಡಿ ಅವಮಾನ ಮಾಡಿಸಿಕೊಳ್ಳುವುದರಿಂದ ಪಾಪವೇ ಇದೆ, ಧರ್ಮವಿಲ್ಲ. ಮತ್ತು ವಸ್ತ್ರಾದಿಗಳ ಸಲುವಾಗಿ ಕೂಡ ಯಾಚನೆ ಮಾಡುತ್ತಾನೆ, ಆದರೆ ಆ

ವಸ್ತ್ರವೇನು ಧರ್ಮದ ಅಂಗವಿಲ್ಲ, ಅದು ಶರೀರ ಸುಖದ ಕಾರಣವಿರುವುದರಿಂದ ಪೂರ್ವೋಕ್ತ ಪ್ರಕಾರದಿಂದ ಅದರ ನಿಷೇಧವಿದೆಯೆಂದು ತಿಳಿಯಬೇಕು. ನೋಡಿರಿ, ತಮ್ಮ ಧರ್ಮರೂಪವಾದ ಉಚ್ಚಪದವನ್ನು ಯಾಚನೆ ಮಾಡಿ ನೀಚ ಮಾಡುತ್ತಾರೆ, ಆದರೆ ಅದರಿಂದ ಧರ್ಮದ ಹೀನತೆಯಾಗುತ್ತದೆ. ಹೀಗೆ ಅನೇಕ ಪ್ರಕಾರದಿಂದ ಮುನಿಧರ್ಮದಲ್ಲಿ ಯಾಚನೆ ಮೊದಲಾದವು ಸಂಭವಿಸುವುದಿಲ್ಲ; ಆದರೆ ಇಂಥ ಅಸಂಭವ ಕ್ರಿಯೆಗಳ ಧಾರಕರಿಗೆ ಸಾಧು-ಗುರುವೆಂದು ಹೇಳುತ್ತಾರೆ. ಆದುದರಿಂದ ಗುರುವಿನ ಸ್ವರೂಪವನ್ನು ವಿಪರೀತವಾಗಿ ಹೇಳುತ್ತಾರೆ.

**ಧರ್ಮದ ಅನ್ಯಥಾ ಸ್ವರೂಪ :-**

ಧರ್ಮದ ಸ್ವರೂಪವನ್ನು ವಿಪರೀತವಾಗಿ ಹೇಳುತ್ತಾರೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳ ಏಕತೆಯು ಮೋಕ್ಷಮಾರ್ಗವಿದೆ, ಅದೇ ಧರ್ಮವಿದೆ. ಆದರೆ ಅದರ ಸ್ವರೂಪವನ್ನು ವಿಪರೀತವಾಗಿ ನಿರೂಪಣೆ ಮಾಡುತ್ತಾರೆ. ಹೇಗೆಂಬುದನ್ನು ಹೇಳುತ್ತಾರೆ.

ತತ್ತ್ವಾರ್ಥಶ್ರದ್ಧೆಯು ಸಮ್ಯಗ್ದರ್ಶನವಿದೆ; ಅದರದಂತೂ ಮುಖ್ಯತೆಯಿಲ್ಲ. ತಾವು ಯಾವ ಪ್ರಕಾರ ಅರಹಂತ ದೇವ-ಸಾಧು-ಗುರು-ದಯೆ-ಧರ್ಮದ ನಿರೂಪಣೆ ಮಾಡುತ್ತಾರೆ ಅದರ ಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳುತ್ತಾರೆ. ಅಲ್ಲಿ ಮೊದಲಂತೂ ಅರಹಂತಾದಿಕರ ಸ್ವರೂಪವನ್ನು ವಿಪರೀತವಾಗಿ ಹೇಳುತ್ತಾರೆ; ಆದರೆ ತತ್ತ್ವಶ್ರದ್ಧೆಯಾದಲ್ಲದೆ ಇಷ್ಟೇ ಶ್ರದ್ಧೆಯಿಂದ ಸಮ್ಯಕ್ತ್ವವು ಹೇಗೆ ಆಗುವುದು ? ಆದುದರಿಂದ ಅಸತ್ಯವಾಗಿ ಹೇಳುತ್ತಾರೆ.

ಮತ್ತು ತತ್ತ್ವಗಳ ಶ್ರದ್ಧೆಗೆ ಕೂಡ ಸಮ್ಯಕ್ತ್ವವೆಂದು ಹೇಳುತ್ತಾರೆ, ಆದರೆ ಪ್ರಯೋಜನಸಹಿತವಾದ ತತ್ತ್ವಗಳ ಶ್ರದ್ಧೆಗೆಂದು ಹೇಳುವುದಿಲ್ಲ. ಗುಣಸ್ಥಾನ-ಮಾರ್ಗಣಾಸ್ಥಾನಾದಿರೂಪ ಜೀವದ, ಅಣು-ಸ್ಕಂಧಾದಿ ಅಜೀವದ, ಪುಣ್ಯ-ಪಾಪದ ಸ್ಥಾನಗಳ, ಅವಿರತಿ ಮೊದಲಾದ ಆಸ್ರವಗಳ, ವ್ರತಾದಿರೂಪ ಸಂವರದ, ತಪಶ್ಚರ್ಯಾದಿರೂಪ ನಿರ್ಜರೆಯ, ಸಿದ್ಧರಾಗುವ ಲಿಂಗಾದಿಯ ಭೇದಗಳಿಂದ ಮೋಕ್ಷದ ಸ್ವರೂಪವನ್ನು ಯಾವ ಪ್ರಕಾರ ಅವರ ಶಾಸ್ತ್ರಗಳಲ್ಲಿ ಹೇಳಿದೆ ಆ ಪ್ರಕಾರ ಕಲಿತುಕೊಳ್ಳುವುದು; ಮತ್ತು ಕೇವಲಿಯ ವಚನವು ಪ್ರಮಾಣವಿದೆಯೆಂಬ ತತ್ತ್ವಾರ್ಥಶ್ರದ್ಧೆಯಿಂದ ಸಮ್ಯಕ್ತ್ವವಾಯಿತೆಂದು ಮನ್ನಿಸುತ್ತಾರೆ.

ಹಾಗಾದರೆ ಗ್ರೈವೇಯಕದಲ್ಲಿ ಹೋಗುವಂಥ ದ್ರವ್ಯಲಿಂಗಿ ಮುನಿಗೆ ಇಂಥ ಶ್ರದ್ಧೆಯಿರುತ್ತದೆಯೋ ಅಥವಾ ಇಲ್ಲವೋ? ಇರುತ್ತಿದ್ದರೆ ಅವನನ್ನು ಮಿಥ್ಯಾದೃಷ್ಟಿಯೆಂದು ಏಕೆ ಹೇಳುತ್ತಾರೆ ? ಮತ್ತು ಇಲ್ಲದಿದ್ದರೆ ಅವನಂತೂ ಜೈನಲಿಂಗವನ್ನು ಧರ್ಮಬುದ್ಧಿಯಿಂದ ಧಾರಣ ಮಾಡಿದ್ದಾನೆ, ಅವನಿಗೆ ದೇವಾದಿಕರ ಪ್ರತೀತಿಯು ಹೇಗಾಗಲಿಲ್ಲ? ಮತ್ತು ಅವನಿಗೆ ಅಧಿಕ ಶಾಸ್ತ್ರಗಳ ಅಭ್ಯಾಸವಿದ್ದರೂ ಅವನು ಜೀವಾದಿಗಳ ಭೇದವನ್ನು ಹೇಗೆ ತಿಳಿಯಲಿಲ್ಲ ? ಮತ್ತು ಅನ್ಯಮತದ ಲವಲೇಶವೂ ಅವನ ಅಭಿಪ್ರಾಯದಲ್ಲಿಲ್ಲ, ಅವನಿಗೆ ಅರಹಂತ ವಚನದ ಪ್ರತೀತಿಯು ಹೇಗೆ ಬರಲಿಲ್ಲ? ಆದುದರಿಂದ ಅವನಿಗೆ ಇಂಥ ಶ್ರದ್ಧೆಯಂತೂ ಇರುತ್ತದೆ; ಆದರೆ ಸಮ್ಯಕ್ತ್ವವಿರುವುದಿಲ್ಲ. ಇನ್ನು ನಾರಕಿ, ಭೋಗ ಭೂಮಿಜ, ತಿರ್ಯಂಚ ಮೊದಲಾದುವಕ್ಕೆ ಇಂಥ ಶ್ರದ್ಧೆಯಾಗುವ ನಿಮಿತ್ತವಿಲ್ಲದಿದ್ದರೂ ಅವಕ್ಕೆ ಅಧಿಕಕಾಲದವರೆಗೆ ಸಮ್ಯಕ್ತ್ವವಿರುತ್ತದೆ, ಆದುದರಿಂದ ಅವಕ್ಕೆ ಇಂಥ ಶ್ರದ್ಧೆ ಇಲ್ಲದಾಗ ಕೂಡ ಸಮ್ಯಕ್ತ್ವವಿರುತ್ತದೆ.

**ಆದುದರಿಂದ ಇದು ಸಮ್ಯಕ್‌ಶ್ರದ್ಧೆಯ ಸ್ವರೂಪವಲ್ಲ. ನಿಜವಾದ ಸ್ವರೂಪವೇನಿದೆ ಅದರ ವರ್ಣನೆಯನ್ನು ಮುಂದೆ ಮಾಡಲಾಗುವುದು ಅದನ್ನು ತಿಳಿದುಕೊಳ್ಳಬೇಕು.**

ಅಲ್ಲದೆ ಅವರ ಶಾಸ್ತ್ರಗಳ ಅಭ್ಯಾಸ ಮಾಡುವುದಕ್ಕೆ ಸಮ್ಯಕ್‌ಜ್ಞಾನವೆಂದು ಹೇಳುತ್ತಾರೆ; ಆದರೆ ದ್ರವ್ಯಲಿಂಗಿ ಮುನಿಗೆ ಶಾಸ್ತ್ರಾಭ್ಯಾಸವಾದ ನಂತರವೂ ಮಿಥ್ಯಾಜ್ಞಾನವೆಂದು ಹೇಳಿದೆ, ವಿಷಯಾದಿರೂಪ ತಿಳಿಯುವ ಅಸಂಯತ ಸಮ್ಯಗ್ದೃಷ್ಟಿಯ ಜ್ಞಾನಕ್ಕೆ ಸಮ್ಯಕ್‌ಜ್ಞಾನವೆಂದು ಹೇಳಿದೆ.

**ಆದುದರಿಂದ ಇದು ಸ್ವರೂಪವಲ್ಲ, ನಿಜವಾದ ಸ್ವರೂಪವನ್ನು ಮುಂದೆ ಹೇಳಲಾಗುವುದು ಅದನ್ನು ತಿಳಿದುಕೊಳ್ಳಬೇಕು.**

ಅದರಂತೆ ಅವರ ಮುಖಾಂತರ ನಿರೂಪಿತವಾದ ಅಣುವ್ರತ-ಮಹಾವ್ರತಾದಿ ರೂಪದ ಶ್ರಾವಕ-ಯತಿಯ ಧರ್ಮ ಧಾರಣ ಮಾಡುವುದರಿಂದ ಸಮ್ಯಕ್ಚಾರಿತ್ರವಾಯಿತೆಂದು ಮನ್ನಿಸುತ್ತಾರೆ; ಆದರೆ ಮೊದಲು ವ್ರತಾದಿಗಳ ಸ್ವರೂಪವನ್ನು ವಿಪರೀತವಾಗಿ ಹೇಳುತ್ತಾರೆ ಅದನ್ನು ಈ ಮೊದಲು ಗುರುವರ್ಣನೆಯಲ್ಲಿ ಸ್ವಲ್ಪ ಹೇಳಿದೆ. ಇನ್ನು ದ್ರವ್ಯಲಿಂಗಿಗೆ ಮಹಾವ್ರತವಿದ್ದರೂ ಕೂಡ ಸಮ್ಯಕ್ಚಾರಿತ್ರವಿರುವುದಿಲ್ಲ, ಮತ್ತು ಅವರ ಮತದ ಅನುಸಾರ ಗೃಹಸ್ಥ ಮೊದಲಾದವರಿಗೆ ಮಹಾ ವ್ರತಾದಿಗಳನ್ನು ಅಂಗೀಕಾರ ಮಾಡದಿದ್ದರೂ ಕೂಡ ಸಮ್ಯಕ್ಚಾರಿತ್ರವಿರುತ್ತದೆ.

**ಆದುದರಿಂದ ಇದು ಸ್ವರೂಪವಲ್ಲ. ನಿಜವಾದ ಸ್ವರೂಪವು ಬೇರೆಯಿದೆ ಅದನ್ನು ಮುಂದೆ ಹೇಳಲಾಗುವುದು.**

**ಪ್ರಶ್ನೆ ః-** ದ್ರವ್ಯಲಿಂಗಿಗೆ ಅಂತರಂಗದಲ್ಲಿ ಪೂರ್ವೋಕ್ತ ಶ್ರದ್ಧಾದಿಗಳಿರುವುದಿಲ್ಲ, ಬಾಹ್ಯದಲ್ಲೇ ಆಗಿರುವುದರಿಂದ ಸಮ್ಯಕ್ತ್ವಾದಿಗಳು ಆಗಿಲ್ಲ.

**ಉತ್ತರ ః-** ಒಂದು ವೇಳೆ ಅಂತರಂಗದಲ್ಲಿ ಇಲ್ಲ ಮತ್ತು ಬಾಹ್ಯದಲ್ಲಿ ಧಾರಣಮಾಡುತ್ತಾನೆಂದರೆ ಅವನು ಕಪಟದಿಂದ ಧಾರಣ ಮಾಡುತ್ತಾನೆ. ಮತ್ತು ಅವನಿಗೆ ಕಪಟವಿದ್ದರೆ ಗ್ರೈವೇಯಕಕ್ಕೆ ಹೇಗೆ ಹೋಗುವನು ? ಅವನಂತೂ ನರಕದಲ್ಲಿ ಹೋಗುವನು. ಬಂಧವಂತೂ ಅಂತರಂಗದ ಪರಿಣಾಮಗಳಿಂದ ಆಗುತ್ತದೆ; ಆದುದರಿಂದ ಅಂತರಂಗದಲ್ಲಿ ಜೈನಧರ್ಮರೂಪದ ಪರಿಣಾಮಗಳಾದಲ್ಲದೆ ಗ್ರೈವೇಯಕಕ್ಕೆ ಹೋಗುವುದು ಸಂಭವವಿಲ್ಲ.

**ಅಲ್ಲದೆ ವ್ರತಾದಿರೂಪದ ಶುಭೋಪಯೋಗದಿಂದಲೇ ದೇವಗತಿಯ ಬಂಧವನ್ನು ಮನ್ನಿಸುತ್ತಾರೆ ಮತ್ತು ಅದನ್ನೇ ಮೋಕ್ಷಮಾರ್ಗವೆಂದು ಮನ್ನಿಸುತ್ತಾರೆ, ಹೀಗೆ ಬಂಧಮಾರ್ಗ-ಮೋಕ್ಷಮಾರ್ಗವನ್ನು ಒಂದು ಮಾಡಿತು, ಆದರೆ ಇದು ಮಿಥ್ಯೆಯಿದೆ.**

ಅದರಂತೆ ವ್ಯವಹಾರಧರ್ಮದಲ್ಲಿ ಅನೇಕ ವಿಪರೀತತೆಗಳನ್ನು ನಿರೂಪಣೆ ಮಾಡುತ್ತಾರೆ. ನಿಂದಕನನ್ನು ಹೊಡೆಯುವುದರಲ್ಲಿ ಪಾಪವಿಲ್ಲವೆಂದು ಹೇಳುತ್ತಾರೆ; ಆದರೆ ತೀರ್ಥಂಕರರ ಉಪಸ್ಥಿತಿಯಿದ್ದರೂ ಕೂಡ ಅನ್ಯಮತದ ನಿಂದಕರಾದರು; ಅವರನ್ನು ಇಂದ್ರ ಮೊದಲಾದವರು ಹೊಡೆಯುವುದಿಲ್ಲ, ಒಂದು ವೇಳೆ ಪಾಪವಾಗದಿರುತ್ತಿದ್ದರೆ ಇಂದ್ರಾದಿಕರೇಕೆ ಹೊಡೆಯುವುದಿಲ್ಲ ? ಅಲ್ಲದೆ ಪ್ರತಿಮೆಗಳಿಗೆ ಒಡವೆಗಳನ್ನು ಮಾಡಿಸುತ್ತಾರೆ; ಆದರೆ ಪ್ರತಿಬಿಂಬಗಳನ್ನಂತೂ ವೀತರಾಗಭಾವದ ವೃದ್ಧಿಯ ಸಲುವಾಗಿ ಸ್ಥಾಪಿಸುವುದಿರುತ್ತದೆ, ಒಡವೆಗಳನ್ನು ಹಾಕುವುದರಿಂದ ಇವು ಕೂಡ ಅನ್ಯಮತದ ಮೂರ್ತಿಯಂತೆಯೇ ಆದವು. ಇವೇ ಮೊದಲಾದುವನ್ನು ಎಲ್ಲಿಯವರೆಗೆಂದು ಹೇಳುವುದು ? ಅದೆಷ್ಟೋ ವಿಪರೀತ ನಿರೂಪಣೆ ಮಾಡುತ್ತಾರೆ.

ಈ ಪ್ರಕಾರ ಶ್ವೇತಾಂಬರ ಮತವು ಕಾಲ್ಪನಿಕವಿದೆಯೆಂದು ತಿಳಿಯಬೇಕು. ಇಲ್ಲಿ ಸಮ್ಯಗ್ದರ್ಶನ ಮೊದಲಾದುವನ್ನು ವಿಪರೀತವಾಗಿ ನಿರೂಪಣೆ ಮಾಡುವುದರಿಂದ ಮಿಥ್ಯಾದರ್ಶನಾದಿಗಳದೇ ಪುಷ್ಟತೆಯಾಗುತ್ತದೆ. ಆದುದರಿಂದ ಅದರ ಮೇಲೆ ಶ್ರದ್ಧೆ ಮಾಡಬಾರದು.

**ಢೂಂಢಕಮತ ವಿಚಾರ :-**

ಈ ಶ್ವೇತಾಂಬರರಲ್ಲಿಯೇ ಢೂಂಢಿಯರು ಪ್ರಕಟರಾಗಿದ್ದಾರೆ; ಅವರು ತಮ್ಮನ್ನು ನಿಜವಾದ ಧರ್ಮಾತ್ಮರೆಂದು ಮನ್ನಿಸುತ್ತಾರೆ, ಅದು ಭ್ರಮೆಯಿದೆ. ಹೇಗೆಂಬುದನ್ನು ಹೇಳುತ್ತಾರೆ.

ಕೆಲವರಂತೂ ವೇಷ ಧಾರಣ ಮಾಡಿ ತಮ್ಮನ್ನು ಸಾಧುವೆಂದು ಹೇಳಿಕೊಳ್ಳುತ್ತಾರೆ; ಆದರೆ ಅವರ ಗ್ರಂಥಗಳಿಗನುಸರಿಸಿಕೂಡ ವ್ರತ, ಸಮಿತಿ, ಗುಪ್ತಿ ಮೊದಲಾದವುಗಳ ಸಾಧನೆಯು ಅವರಲ್ಲಿ ಕಂಡು ಬರುವುದಿಲ್ಲ. ನೋಡಿರಿ ! ಮನ-ವಚನ-ಕಾಯ, ಕೃತ-ಕಾರಿತ-ಅನುಮೋದನದಿಂದ ಎಲ್ಲ ಸಾವದ್ಯಯೋಗಗಳನ್ನು ತ್ಯಾಗ ಮಾಡುವ ಪ್ರತಿಜ್ಞೆ ಮಾಡುತ್ತಾರೆ; ಅನಂತರ ಪಾಲನೆ ಮಾಡುವುದಿಲ್ಲ. ಬಾಲಕನಿಗೆ, ಅನನುಭವಿಗೆ ಮತ್ತು ಶೂದ್ರರಿಗೆ ಕೂಡ ದೀಕ್ಷೆ ಕೊಡುತ್ತಾರೆ. ಹೀಗೆ ತ್ಯಾಗ ಮಾಡುತ್ತಾರೆ ಮತ್ತು ತ್ಯಾಗ ಮಾಡುತ್ತಿರುವಾಗ ಏನನ್ನು ತ್ಯಾಗ ಮಾಡುತ್ತಿದ್ದೇನೆಂಬುದರ ವಿಚಾರ ಕೂಡ ಮಾಡುವುದಿಲ್ಲ, ಅನಂತರ ಪಾಲನೆಯನ್ನೂ ಮಾಡುವುದಿಲ್ಲ ಮತ್ತು ಅವರನ್ನು ಎಲ್ಲರೂ ಸಾಧುವೆಂದು ಮನ್ನಿಸುತ್ತಾರೆ.

ಅನಂತರ ಧರ್ಮಬುದ್ಧಿಯಾಗಬಹುದು ಆಗಲಾದರೂ ಅವನದು ಒಳ್ಳೆಯದಾದೀತೆಂದು ಹೇಳುತ್ತಾರೆ; ಆದರೆ ಮೊದಲೇ ದೀಕ್ಷೆಕೊಡುವವನು ಪ್ರತಿಜ್ಞೆಯು ಭಂಗವಾಗುವುದೆಂದೇ ತಿಳಿದುಕೊಂಡು ಪ್ರತಿಜ್ಞೆ ಮಾಡಿಸಿದನು ಮತ್ತು ಇವನು ಪ್ರತಿಜ್ಞೆ ಸ್ವೀಕಾರ ಮಾಡಿ ಭಂಗ ಮಾಡಿದರೆ ಈ ಪಾಪವು ಯಾರಿಗೆ ತಗಲಿತು ? ಅನಂತರ ಧರ್ಮಾತ್ಮನಾಗುವ ನಿಶ್ಚಯವೆಂತು ? ಮತ್ತು ಯಾವ ಸಾಧುವು ಧರ್ಮದ ಅಂಗೀಕಾರ ಮಾಡಿ ಯಥಾರ್ಥ ಪಾಲನೆ ಮಾಡದಿದ್ದರೆ ಅವನನ್ನು ಸಾಧುವೆಂದು ಮನ್ನಿಸಬೇಕೋ ಅಥವಾ ಮನ್ನಿಸಬಾರದೋ ? ಒಂದು ವೇಳೆ ಮನ್ನಿಸಿದರೆ ಯಾವ ಸಾಧುಗಳು ಮುನಿನಾಮದ ಧಾರಣ ಮಾಡುತ್ತಾರೆ ಮತ್ತು ಭ್ರಷ್ಟರಿದ್ದಾರೆ ಅವರೆಲ್ಲರನ್ನು ಸಾಧುಗಳೆಂದು ಮನ್ನಿಸಿರಿ. ಮನ್ನಿಸದಿದ್ದರೆ ಇವರಿಗೆ ಸಾಧುತನವು ಉಳಿಯಲಿಲ್ಲ, ನೀವು ಎಂಥ ಆಚರಣೆಯಿಂದ ಸಾಧುವೆಂದು ಮನ್ನಿಸುವಿರಿ, ಅದರ ಪಾಲನೆ ಕೂಡ ವಿರಳವಾಗಿ ಯಾರೋ ಓರ್ವರಲ್ಲಿ ಕಂಡುಬರುತ್ತದೆ; ಎಲ್ಲರನ್ನು ಸಾಧುಗಳೆಂದು ಏತಕ್ಕಾಗಿ ಮನ್ನಿಸುವಿರಿ ?

ನಾವಂತೂ ಯಾರಲ್ಲಿ ಯಥಾರ್ಥ ಆಚರಣೆಯು ಕಂಡುಬರುತ್ತದೆ ಅವರನ್ನು ಸಾಧುಗಳೆಂದು ಮನ್ನಿಸುತ್ತೇವೆ, ಇತರರನ್ನು ಇಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಒಂದು ಸಂಘದಲ್ಲಿ ಅದೆಷ್ಟೋ ವೇಷಧಾರಿಗಳಿದ್ದಾರೆ; ಅವರಲ್ಲಿ ನೀನು ಯಾರನ್ನು ಯಥಾರ್ಥ ಆಚರಣೆಯುಳ್ಳವರೆಂದು ಮನ್ನಿಸುವೆ ಅವನು ಇತರರನ್ನು ಸಾಧುಗಳೆಂದು ಮನ್ನಿಸುತ್ತಾನೆಯೋ ಅಥವಾ ಮನ್ನಿಸುವುದಿಲ್ಲವೋ ? ಒಂದು ವೇಳೆ ಮನ್ನಿಸುತ್ತಿದ್ದರೆ ಅವನು ನಿಮಗಿಂತಲೂ ಅಶ್ರದ್ಧೆಯುಳ್ಳವನಾದನು, ಅವನನ್ನು ಪೂಜ್ಯವೆಂದು ಹೇಗೆ ಮನ್ನಿಸುವಿರಿ ? ಮತ್ತು ಮನ್ನಿಸದಿದ್ದರೆ ಅವನೊಡನೆ ಸಾಧುವಿನ ವ್ಯವಹಾರವು ಏತಕ್ಕಾಗಿ ವರ್ತಿಸುತ್ತದೆ ? ಇನ್ನು ತಾವಂತೂ ಅವರನ್ನು ಸಾಧುವೆಂದು ಮನ್ನಿಸಲಿಲ್ಲ ಮತ್ತು

ಅವರನ್ನು ತಮ್ಮ ಸಂಘದಲ್ಲಿಟ್ಟುಕೊಂಡು ಇತರರಿಂದ ಸಾಧುವೆಂದು ಮನ್ನಿಸಹಚ್ಚಿ ಇತರರನ್ನು ಅಶ್ರದ್ಧೆಯುಳ್ಳವರನ್ನಾಗಿ ಮಾಡುತ್ತಾರೆ, ಇಂಥ ಕಪಟವನ್ನು ಏತಕ್ಕಾಗಿ ಮಾಡುತ್ತಾರೆ ? ಮತ್ತು ನೀವು ಯಾರನ್ನು ಸಾಧುವೆಂದು ಮನ್ನಿಸುವುದಿಲ್ಲ ಆಗ ಇತರರಿಗೆ ಕೂಡ 'ಇವರನ್ನು ಸಾಧುವೆಂದು ಮನ್ನಿಸಬೇಡಿರೆ'ಂದು ಉಪದೇಶ ಮಾಡುವಿರಿ, ಇದರಿಂದ ಧರ್ಮಪದ್ಧತಿಯಲ್ಲಿ ವಿರೋಧವಾಗುತ್ತದೆ. ಮತ್ತು ಯಾರನ್ನು ನೀವು ಸಾಧುವೆಂದು ಮನ್ನಿಸುವಿರಿ ಅವರಿಂದ ಕೂಡ ನಿಮ್ಮ ವಿರೋಧವಾಯಿತು, ಏಕೆಂದರೆ ಅವನು ಅವರನ್ನು ಸಾಧುವೆಂದು ಮನ್ನಿಸುತ್ತಾನೆ. ಮತ್ತು ನೀವು ಯಾರಲ್ಲಿ ಯಥಾರ್ಥ ಆಚರಣೆಯಿದೆಯೆಂದು ಮನ್ನಿಸುತ್ತಿರುವಿರಿ ಅವರಲ್ಲಿ ಕೂಡ ವಿಚಾರ ಮಾಡಿ ನೋಡಿರಿ; ಅವರು ಕೂಡ ಯಥಾರ್ಥ ಮುನಿಧರ್ಮದ ಪಾಲನೆ ಮಾಡುವುದಿಲ್ಲ.

ಉಳಿದ ವೇಷಧಾರಿಗಳಿಗಿಂತ ತುಂಬ ಒಳ್ಳೆಯವರಿದ್ದಾರೆ, ಅದಕ್ಕಾಗಿ ನಾವು ಮನ್ನಿಸುತ್ತೇವೆಂದು ಕೆಲವರು ಹೇಳುತ್ತಾರೆ; ಆದರೆ ಅನ್ಯಮತದವರಲ್ಲಂತೂ ನಾನಾ ಪ್ರಕಾರದ ವೇಷಗಳ ಸಂಭವವಿದೆ, ಏಕೆಂದರೆ ಅಲ್ಲಿ ರಾಗಭಾವದ ನಿಷೇಧವಿಲ್ಲ. ಈ ಜಿನಮತದಲ್ಲಂತೂ ಹೇಗೆ ಹೇಳಿದೆ ಹಾಗೆ ಇದ್ದರೇನೇ ಸಾಧು ಸಂಜ್ಞೆಯಿರುತ್ತದೆ.

**ಪ್ರಶ್ನೆ :-** ಶೀಲ-ಸಂಯಮಾದಿಗಳನ್ನು ಪಾಲಿಸುತ್ತಾರೆ, ತಪಶ್ಚರಣಾದಿಗಳನ್ನು ಮಾಡುತ್ತಾರೆ; ಅದನ್ನು ಎಷ್ಟು ಮಾಡುತ್ತಾರೆ ಅಷ್ಟೇ ಒಳ್ಳೆಯದಿದೆಯಲ್ಲವೆ ?

**ಉತ್ತರ :-** ಇದು ಸತ್ಯವಿದೆ, ಸ್ವಲ್ಪ ಪಾಲಿಸಿದ ಧರ್ಮಕೂಡ ಒಳ್ಳೆಯದೇ ಇದೆ; ಆದರೆ ಪ್ರತಿಜ್ಞೆಯನ್ನಂತೂ ದೊಡ್ಡ ಧರ್ಮದ್ದು ಮಾಡುವುದು ಮತ್ತು ಅಲ್ಪಪಾಲನೆ ಮಾಡಿದರೆ ಅಲ್ಲಿ ಪ್ರತಿಜ್ಞಾ ಭಂಗದಿಂದ ಮಹಾಪಾಪವಾಗುತ್ತದೆ. ಯಾವ ಪ್ರಕಾರ ಒಬ್ಬನು ಉಪವಾಸದ ಪ್ರತಿಜ್ಞೆಮಾಡಿ ಒಂದುಬಾರಿ ಊಟ ಮಾಡಿದರೆ ಅವನಿಗೆ ಅಧಿಕಬಾರಿ ಭೋಜನದ ಸಂಯಮವಾದರೂ ಕೂಡ ಪ್ರತಿಜ್ಞೆಯ ಭಂಗದಿಂದ ಪಾಪಿಯೆಂದು ಹೇಳುತ್ತಾರೆ, ಅದೇ ಪ್ರಕಾರ ಓರ್ವನು ಮುನಿಧರ್ಮದ ಪ್ರತಿಜ್ಞೆಮಾಡಿ ಸ್ವಲ್ಪ ಕೂಡ ಧರ್ಮಪಾಲಿಸದಿದ್ದರೆ ಅವನಿಗೆ ಶೀಲ-ಸಂಯಮಾದಿಗಳಿದ್ದರೂ ಕೂಡ ಪಾಪಿಯೆಂದು ಹೇಳುತ್ತಾರೆ. ಮತ್ತು ಏಕಾಶನದ ಪ್ರತಿಜ್ಞೆ ಮಾಡಿ ಒಂದು ಬಾರಿ ಭೋಜನ ಮಾಡಿದರೆ ಅವನು ಧರ್ಮಾತ್ಮನೇ ಇದ್ದಾನೆ; ಅದೇ ಪ್ರಕಾರ ತನ್ನ ಶ್ರಾವಕಪದವನ್ನು ಧಾರಣಮಾಡಿ ಸ್ವಲ್ಪ ಧರ್ಮಸಾಧನೆ ಮಾಡಿದರೂ ಕೂಡ ಧರ್ಮಾತ್ಮನೇ ಇದ್ದಾನೆ; ಇಲ್ಲಿ ಉಚ್ಚನಾಮವನ್ನಿಟ್ಟುಕೊಂಡು ನೀಚಕ್ರಿಯೆ ಮಾಡುವಲ್ಲಿ ಪಾಪೀತನವು ಸಂಭವಿಸುವುದು. ಯಥಾಯೋಗ್ಯ ನಾಮಧಾರಣ ಮಾಡಿ ಧರ್ಮಕ್ರಿಯೆಗಳನ್ನು ಮಾಡುವುದರಿಂದ ಪಾಪೀತನವು ಬರುವುದಿಲ್ಲ. ಎಷ್ಟು ಧರ್ಮಸಾಧನೆ ಮಾಡುತ್ತದೆ ಅಷ್ಟೇ ಒಳ್ಳೆಯದಿದೆ.

**ಪ್ರಶ್ನೆ :-** ಪಂಚಮಕಾಲದ ಕೊನೆಯವರೆಗೆ ಚತುರ್ವಿಧ ಸಂಘದ ಸದ್ಭಾವ ಹೇಳಿದೆ. ಇವರನ್ನು ಸಾಧುವೆಂದು ಮನ್ನಿಸದಿದ್ದರೆ ಯಾರನ್ನು ಮನ್ನಿಸುವುದು ?

**ಉತ್ತರ :-** ಯಾವ ಪ್ರಕಾರ ಈ ಕಾಲದಲ್ಲಿ ಹಂಸಪಕ್ಷಿಯ ಸದ್ಭಾವವನ್ನು ಹೇಳಿದ್ದರೂ ಕೂಡ ಗಮ್ಯವಿರುವ ಕ್ಷೇತ್ರದಲ್ಲಿ ಹಂಸಪಕ್ಷಿಯು ಕಂಡುಬರುವುದಿಲ್ಲವೆಂದು ಇತರ ಪಕ್ಷಿಗಳನ್ನು ಹಂಸವೆಂದು ಮನ್ನಿಸಲಾಗುವುದಿಲ್ಲ; ಹಂಸದ ಲಕ್ಷಣಗಳು ದೊರೆತನಂತರವೇ ಹಂಸವೆಂದು ಮನ್ನಿಸುತ್ತಾರೆ. ಅದೇ ಪ್ರಕಾರ ಈ ಕಾಲದಲ್ಲಿ ಸಾಧುವಿನ ಸದ್ಭಾವವಿದ್ದರೂ ಕೂಡ ಗಮ್ಯವಿರುವ ಕ್ಷೇತ್ರದಲ್ಲಿ ಸಾಧುವು ಕಂಡುಬರುವುದಿಲ್ಲವೆಂದು ಇತರರನ್ನಂತೂ ಸಾಧುವೆಂದು

ಮನ್ನಿಸಲಾಗುವುದಿಲ್ಲ; ಸಾಧುವಿನ ಲಕ್ಷಣಗಳು ದೊರೆತನಂತರವೇ ಸಾಧುವೆಂದು ಮನ್ನಿಸುತ್ತಾರೆ. ಮತ್ತು ಇವರ ಪ್ರಚಾರಕೂಡ ಅಲ್ಪಕ್ಷೇತ್ರದಲ್ಲೇ ಕಂಡುಬರುತ್ತದೆ, ಅಲ್ಲಿಂದ ದೂರದ ಕ್ಷೇತ್ರದಲ್ಲಿ ಸಾಧುವಿನ ಸದ್ಭಾವವನ್ನು ಹೇಗೆ ಮನ್ನಿಸುವುದು ? ಒಂದುವೇಳೆ ಲಕ್ಷಣಗಳು ದೊರೆತಮೇಲೆ ಮನ್ನಿಸಿದರೆ ಇಲ್ಲಿಯೂ ಇದೇ ಪ್ರಕಾರ ಮನ್ನಿಸಿರಿ. ಮತ್ತು ಲಕ್ಷಣಗಳು ದೊರಕದೆಯೇ ಮನ್ನಿಸುವುದಾದರೆ ಇಲ್ಲಿ ಅನ್ಯ ಕುಲಿಂಗಿಗಳಿದ್ದಾರೆ ಅವರನ್ನೂ ಸಾಧುವೆಂದು ಮನ್ನಿಸಿರಿ. ಈ ಪ್ರಕಾರ ವಿಪರೀತತೆಯಾಗುವುದರಿಂದ ಸಿದ್ಧಿಸುವುದಿಲ್ಲ.

ಈ ಪಂಚಮಕಾಲದಲ್ಲಿ ಸಾಧುಪದವು ಹೀಗೆ ಕೂಡ ಇರುತ್ತದೆಯೆಂದು ಯಾರಾದರೂ ಹೇಳುತ್ತಿದ್ದರೆ ಹಾಗೆ ಸಿದ್ಧಾಂತದ ವಚನವಿದ್ದರೆ ತೋರಿಸಿರಿ ! ತಾವು ಸಿದ್ಧಾಂತವಿಲ್ಲದೆಯೇ ಮನ್ನಿಸುತ್ತಿದ್ದರೆ ಪಾಪಿಯಾಗುವಿರಿ. ಈ ಪ್ರಕಾರ ಅನೇಕ ಯುಕ್ತಿಗಳಿಂದ ಇವರ ಸಾಧುತನವು ಸಿದ್ಧಿಸುವುದಿಲ್ಲ; ಮತ್ತು ಸಾಧುತ್ವವಿಲ್ಲದೆ ಸಾಧುವೆಂದು ನಂಬಿ ಗುರುವೆಂದು ಮನ್ನಿಸುವುದರಿಂದ ಮಿಥ್ಯಾದರ್ಶನವಾಗುತ್ತದೆ; ಏಕೆಂದರೆ ನಿಜವಾದ ಸಾಧುಗಳನ್ನು ಗುರುವೆಂದು ಮನ್ನಿಸುವುದರಿಂದಲೇ ಸಮ್ಯಗ್ದರ್ಶನವಾಗುತ್ತದೆ.

## ಪ್ರತಿಮಾಧಾರಿಯು ಶ್ರಾವಕನಾಗುವುದಿಲ್ಲವೆಂಬ ಮನ್ನಣೆಯ ನಿಷೇಧ :-

ಮತ್ತು ಶ್ರಾವಕಧರ್ಮದ ಪ್ರವೃತ್ತಿಯನ್ನು ವಿಪರೀತವಾಗಿ ಮಾಡಿಸುತ್ತಾರೆ. ತ್ರಸಹಿಂಸೆ ಹಾಗೂ ಸ್ಥೂಲ ಮೃಷೆಗಳಾಗುತ್ತಿದ್ದರೂ ಕೂಡ ಯಾವ ಪ್ರಯೋಜನವಿಲ್ಲದಂಥವುಗಳನ್ನು ಕಿಂಚಿತ್ ತ್ಯಾಗ ಮಾಡಿಸಿ ಅವನನ್ನು ದೇಶವ್ರತಿಯಾದನೆಂದು ಹೇಳುತ್ತಾರೆ; ಮತ್ತು ಅವನು ತ್ರಸಘಾತವಾಗುವಂಥ ಕಾರ್ಯಗಳನ್ನು ಮಾಡುತ್ತಾನೆ; ಆದರೆ ದೇಶವ್ರತ ಗುಣಸ್ಥಾನದಲ್ಲಂತೂ ಹನ್ನೊಂದು ಅವಿರತಿಗಳನ್ನು ಹೇಳಿದ್ದಾರೆ, ಅಲ್ಲಿ ತ್ರಸಘಾತವು ಹೇಗೆ ಸಂಭವವಿದೆ? ಮತ್ತು ಹನ್ನೊಂದು ಪ್ರತಿಮಾಭೇದಗಳು ಶ್ರಾವಕನಿಗಿವೆ, ಅವುಗಳಲ್ಲಿ ಹತ್ತನೆಯ-ಹನ್ನೊಂದನೆಯ ಪ್ರತಿಮಾಧಾರಕನಾದ ಶ್ರಾವಕನಂತೂ ಯಾವನೂ ಇರುವುದೇ ಇಲ್ಲ ಮತ್ತು ಸಾಧುವಿರುತ್ತಾನೆ.

ಈ ಕಾಲದಲ್ಲಿ ಪ್ರತಿಮಾಧಾರಕನಾದ ಶ್ರಾವಕನಾಗುವ ಸಾಧ್ಯತೆಯಿಲ್ಲವೆಂದು ಹೇಳುತ್ತಾರೆ, ಆದರೆ ಶ್ರಾವಕ ಧರ್ಮವಂತೂ ಕಠಿಣವಿದೆ ಮತ್ತು ಮುನಿಧರ್ಮವು ಸುಲಭವಿದೆಯೆಂದು ವಿರುದ್ಧವಾಗಿ ಹೇಳುತ್ತಾರೆ. ಇನ್ನು ಹನ್ನೊಂದನೆಯ ಪ್ರತಿಮಾಧಾರಕನಿಗೆ ಅಲ್ಪ ಪರಿಗ್ರಹ ಮುನಿಗೆ ಅಧಿಕ ಪರಿಗ್ರಹವೆಂದು ಹೇಳುತ್ತಾರೆ. ಇವು ಸಂಭವಿಸಬಹುದಾದ ವಚನಗಳಲ್ಲ. ಪುನಃ ಈ ಪ್ರತಿಮೆಗಳನ್ನು ಸ್ವಲ್ಪಕಾಲವೇ ಪಾಲನೆಮಾಡಿ ಬಿಟ್ಟುಕೊಡುತ್ತಾರೆಂದು ಹೇಳುತ್ತಾರೆ; ಆದರೆ ಈ ಕಾರ್ಯವು ಉತ್ತಮವಿದ್ದರೆ ಧರ್ಮ ಬುದ್ಧಿಯುಳ್ಳವನು ಉಚ್ಚ ಕ್ರಿಯೆಯನ್ನು ಏತಕ್ಕಾಗಿ ಬಿಡುವನು ಮತ್ತು ನೀಚ ಕಾರ್ಯವಿದ್ದರೆ ಏತಕ್ಕಾಗಿ ಅಂಗೀಕಾರ ಮಾಡುವನು ? ಇದು ನಿಜವಾಗಿ ಸಂಭವನೀಯವೇ ಇಲ್ಲ.

ಅಲ್ಲದೆ ಕುದೇವ-ಕುಗುರುಗಳಿಗೆ ನಮಸ್ಕಾರ ಮಾಡುವುದರಿಂದ ಕೂಡ ಶ್ರಾವಕತನವನ್ನು ಹೇಳುತ್ತಾರೆ. ಧರ್ಮ ಬುದ್ಧಿಯಿಂದಂತೂ ನಮಸ್ಕರಿಸುವುದಿಲ್ಲ, ಲೌಕಿಕ ವ್ಯವಹಾರವಿದೆಯೆಂದು ನಮಸ್ಕರಿಸುತ್ತಾರೆಂದು ಹೇಳುತ್ತಾರೆ; ಆದರೆ ಸಿದ್ಧಾಂತದಲ್ಲಂತೂ ಅವರ ಪ್ರಶಂಸೆ ಸ್ತವನಕ್ಕೆ ಕೂಡ ಸಮ್ಯಕ್ತ್ವದ ಅತಿಚಾರವೆಂದು ಹೇಳುತ್ತಾರೆ ಮತ್ತು ಗೃಹಸ್ಥರು ಒಳ್ಳೆಯವರೆನಿಸಿಕೊಳ್ಳುವ ಸಲುವಾಗಿ ವಂದನೆ ಮಾಡಿದ ಮೇಲೂ ಏನನ್ನೂ ಹೇಳುವುದಿಲ್ಲ.

ಭಯ, ಲಜ್ಜೆ, ಕುತೂಹಲಾದಿಗಳಿಂದ ವಂದಿಸುತ್ತಾರೆಂದು ಹೇಳುವುದಾದರೆ ಇವೇ ಕಾರಣಗಳಿಂದ ಕುಶೀಲಾದಿಗಳ ಸೇವನೆ ಮಾಡಿದ ನಂತರ ಕೂಡ ಪಾಪವೆಂದು ಹೇಳದಿರಿ, ಅಂತರಂಗದಲ್ಲಿ ಪಾಪವೆಂದು ತಿಳಿಯಬೇಕು. ಈ ಪ್ರಕಾರವಾಗಿಯಂತೂ ಎಲ್ಲ ಆಚಾರಗಳಲ್ಲಿ ವಿರೋಧವಾಗುವುದು.

ನೋಡಿರಿ ! ಮಿಥ್ಯಾತ್ವದಂಥ ಮಹಾಪಾಪದ ಪ್ರವೃತ್ತಿಯನ್ನು ಬಿಡಿಸುವುದರ ಮುಖ್ಯತೆಯೇ ಇಲ್ಲ ಮತ್ತು ವಾಯುಕಾಯದ ಹಿಂಸೆಯಾಗುತ್ತದೆಯೆಂದು ಮುಕ್ತ ಮುಖದಿಂದ ಮಾತನಾಡುವುದನ್ನು ಬಿಡಿಸುವ ಮುಖ್ಯತೆಯು ಕಂಡು ಬರುತ್ತದೆ; ಆದರೆ ಇದು ಕ್ರಮ ಭಂಗವಾದ ಉಪದೇಶವಿದೆ. ಮತ್ತು ಧರ್ಮದ ಅಂಗಗಳು ಅನೇಕವಿದ್ದು ಅವುಗಳಲ್ಲಿ ಒಂದು ಪರ-ಜೀವದ ದಯೆಯನ್ನು ಮುಖ್ಯವೆಂದು ಹೇಳುತ್ತಾರೆ. ಅದರದು ಕೂಡ ವಿವೇಕವಿಲ್ಲ. ನೀರು ಶೋಧಿಸಿ ಕುಡಿಯುವುದು, ಶುದ್ಧಾನ್ನ ಉಣ್ಣುವುದು, ಸದೋಷ ವಸ್ತುವಿನ ಭಕ್ಷಣೆ ಮಾಡದಿರುವುದು, ಹಿಂಸಾಸ್ವರೂಪವಾದ ವ್ಯಾಪಾರವನ್ನು ಮಾಡದಿರುವುದು ಇವೇ ಮೊದಲಾದ ಅಂಗಗಳದ್ದಂತೂ ಅವರಿಗೆ ಮುಖ್ಯತೆಯೇ ಇಲ್ಲ.

## ಮುಖಪಟ್ಟಿ ಮೊದಲಾದವುಗಳ ನಿಷೇಧ :-

ಮುಖಪಟ್ಟಿ ಕಟ್ಟಿಕೊಳ್ಳುವುದು, ಶೌಚಾದಿಗಳನ್ನು ಸ್ವಲ್ಪ ಮಾಡುವುದು, ಇತ್ಯಾದಿ ಕಾರ್ಯಗಳ ಮುಖ್ಯತೆ ಮಾಡುತ್ತಾರೆ; ಆದರೆ ಮಲಿನ ಬಟ್ಟೆಯಲ್ಲಿ ಉಗುಳಿದ ಸಂಬಂಧದಿಂದ ಸೂಕ್ಷ್ಮ ಜೀವಗಳು ಉತ್ಪನ್ನವಾಗುತ್ತವೆ, ಅವುಗಳದಂತೂ ಯತ್ನವಿಲ್ಲ ಮತ್ತು ವಾಯುಕಾಯಕದ ಹಿಂಸೆಯ ಯತ್ನ ಹೇಳುತ್ತಾರೆ. ಆದರೆ ಮೂಗಿನಿಂದ ಅಧಿಕ ವಾಯುವು ಹೊರಡುತ್ತದೆ ಅದರದಂತೂ ಯತ್ನ ಮಾಡುವುದೇ ಇಲ್ಲ. ಮತ್ತು ಅವರ ಶಾಸ್ತ್ರಾನುಸಾರ ಮಾತನಾಡುವುದರದೇ ಯತ್ನ ಮಾಡಿದ್ದರೆ ಯಾವಾಗಲೂ ಏತಕ್ಕಾಗಿ ಇಡುತ್ತಾರೆ ? ಮಾತನಾಡುವಾಗ ಜಾಗೃತೆ ವಹಿಸಿದರಾಯಿತು. ಮರೆತು ಹೋಗುತ್ತದೆಯೆಂದರೆ ಇಷ್ಟು ಸ್ಮರಣೆಯುಳಿಯದಿದ್ದರೆ ಇತರ ಧರ್ಮಸಾಧನೆ ಹೇಗಾಗುವುದು? ಮತ್ತು ಅಲ್ಪ ಶುದ್ಧಿ ಮಾಡುತ್ತಾರೆ, ಆದರೆ ಸಂಭವಿತ ಶುದ್ಧಿಯನ್ನು ಮುನಿಗಳು ಕೂಡ ಮಾಡುತ್ತಾರೆ; ಆದುದರಿಂದ ಗೃಹಸ್ಥರು ತಮ್ಮ ಯೋಗ್ಯ ಶುದ್ಧಿ ಮಾಡಿಕೊಳ್ಳಬೇಕಾಗುವುದು. ಸ್ತ್ರೀಸಂಗ ಮಾಡಿ ಶುದ್ಧಿ ಮಾಡಿಕೊಳ್ಳದೆ ಸಾಮಾಯಿಕ ಮೊದಲಾದ ಕ್ರಿಯೆ ಮಾಡುವುದರಿಂದ ಅವಿನಯ, ವಿಕ್ಷಿಪ್ತತೆ ಮೊದಲಾದವುಗಳಿಂದ ಪಾಪವು ಉತ್ಪನ್ನವಾಗುತ್ತದೆ. ಹೀಗೆ ಯಾವವುಗಳ ಮುಖ್ಯತೆ ಮಾಡುತ್ತಾರೆ ಅವುಗಳದೂ ಪತ್ತೆಯಿಲ್ಲ. ಮತ್ತು ದಯೆಯ ಎಷ್ಟೋ ಅಂಗಗಳನ್ನು ಯೋಗ್ಯ ಪಾಲಿಸುತ್ತಾರೆ, ಹರಿತಕಾಯ ಮೊದಲಾದವುಗಳ ತ್ಯಾಗ ಮಾಡುತ್ತಾರೆ, ನೀರು ಕಡಿಮೆ ಚೆಲ್ಲುತ್ತಾರೆ ಎಂದರೆ ಕಡಿಮೆ ಬಳಸುತ್ತಾರೆ; ನಾವು ಇವುಗಳ ನಿಷೇಧ ಮಾಡುವುದಿಲ್ಲ.

## ಮೂರ್ತಿಪೂಜೆ ನಿಷೇಧದ ನಿರಾಕರಣೆ :-

ಈ ಅಹಿಂಸೆಯನ್ನು ಏಕಾಂತವಾಗಿ ಗ್ರಹಿಸಿ ಪ್ರತಿಮೆ, ಚೈತ್ಯಾಲಯ, ಪೂಜೆ ಮೊದಲಾದ ಕ್ರಿಯೆಗಳ ಉಚ್ಚಾಟನೆ ಮಾಡುತ್ತಾರೆ; ಆದರೆ ಅವರ ಶಾಸ್ತ್ರಗಳಲ್ಲಿ ಪ್ರತಿಮೆ ಮೊದಲಾದವುಗಳ ನಿರೂಪಣೆಯಿದೆ, ಅದನ್ನು ಆಗ್ರಹದಿಂದ ಲೋಪ ಮಾಡುತ್ತಾರೆ, ಭಗವತೀ ಸೂತ್ರದಲ್ಲಿ ಋದ್ಧಿಧಾರಿ ಮುನಿಯ ನಿರೂಪಣೆಯಿದೆ ಅಲ್ಲಿ ಮೇರುಗಿರಿ ಮೊದಲಾದುವಲ್ಲಿ ಹೋಗಿ 'ತತ್ಥ ಚೇಯಯಾಇಂ ವಂದಈ'-ಎಂಬ ಪಾಠವಿದೆ. ಅಲ್ಲಿ ಚೈತ್ಯಗಳ ವಂದನೆ ಮಾಡುತ್ತಾರೆಂಬುದು ಇದರ ಅರ್ಥವಿದೆ. ಮತ್ತು ಚೈತ್ಯನಾಮವು ಪ್ರತಿಮೆಯದೆಂಬುದು ಪ್ರಸಿದ್ಧವಿದೆ.

ಆದರೂ ಅವರು ದುರಾಗ್ರಹದಿಂದ ಚೈತ್ಯ ಶಬ್ದಕ್ಕೆ ಜ್ಞಾನ ಮೊದಲಾದ ಅನೇಕ ಅರ್ಥಗಳಾಗುತ್ತವೆ, ಆದ್ದರಿಂದ ಬೇರೆ ಅರ್ಥವಿದೆ, ಪ್ರತಿಮೆಯ ಅರ್ಥವಿಲ್ಲವೆಂದು ಹೇಳುತ್ತಾರೆ. ಮೇರುಗಿರಿ ನಂದೀಶ್ವರ ದ್ವೀಪದಲ್ಲಿ ಪುನಃ ಪುನಃ ಹೋಗಿ ಅಲ್ಲಿ ಚೈತ್ಯ ವಂದನೆ ಮಾಡಿತೆಂದರೆ ಅದು ಅಲ್ಲಿ ಜ್ಞಾನಾದಿಗಳ ವಂದನೆ ಮಾಡುವ ಅರ್ಥವು ಹೇಗೆ ಸಂಭವವಿದೆ? ಜ್ಞಾನಾದಿಗಳ ವಂದನೆಯಂತೂ ಎಲ್ಲೆಡೆಗೂ ಸಂಭವವಿದೆ. ಆ ವಂದನಾಯೋಗ್ಯ ಚೈತ್ಯವೂ ಅಲ್ಲಿ ಸಂಭವವಿದೆ ಮತ್ತು ಎಲ್ಲೆಡೆಗೆ ಸಂಭವವಿಲ್ಲ ಅಲ್ಲಿ ಅವನಿಗೆ ವಂದನೆ ಮಾಡುವ ವಿಶೇಷ ಸಂಭವವಿದೆ ಮತ್ತು ಇಂಥ ಸಂಭವಿತ ಅರ್ಥವು ಪ್ರತಿಮೆಯೇ ಇದೆ ಹಾಗೂ ಚೈತ್ಯಶಬ್ದದ ಮುಖ್ಯ ಅರ್ಥವು ಪ್ರತಿಮೆಯೇ ಇದೆಯೆಂಬುದು ಪ್ರಸಿದ್ಧವಿದೆ. ಇದೇ ಅರ್ಥದಿಂದ ಚೈತ್ಯಾಲಯವೆಂಬ ಹೆಸರು ಸಂಭವವಿದೆ; ಅದನ್ನು ಹಟದಿಂದ ಏತಕ್ಕಾಗಿ ಲುಪ್ತ ಮಾಡುತ್ತಿರುವಿರಿ?

ಅದರಂತೆ ದೇವಾದಿಕರು ನಂದೀಶ್ವರ ದ್ವೀಪಗಳಿಗೆ ಹೋಗಿ ಪೂಜಾದಿಕ್ರಿಯೆಗಳನ್ನು ಮಾಡುತ್ತಾರೆಂಬುದರ ವರ್ಣನೆಯು ಅವರ ಶಾಸ್ತ್ರಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಮತ್ತು ಲೋಕದಲ್ಲಿ ಅಕೃತ್ರಿಮ ಪ್ರತಿಮೆಗಳಿದ್ದ ಬಗ್ಗೆ ಅಲ್ಲಲ್ಲಿ ನಿರೂಪಣೆಯಿದೆ. ಆದರೆ ಆ ರಚನೆಯು ಅನಾದಿಯಿದೆ, ಆ ರಚನೆಯು ಭೋಗ-ಕುತೂಹಲಾದಿಗಳ ಸಲುವಾಗಿಯಂತೂ ಇಲ್ಲ. ಮತ್ತು ಇಂದ್ರಾದಿಗಳ ಸ್ಥಾನಗಳಲ್ಲಿ ನಿಷ್ಪ್ರಯೋಜಕವಾದ ರಚನೆಯು ಸಂಭವವಿಲ್ಲ, ಆದುದರಿಂದ ಇಂದ್ರಾದಿಗಳು ಅದನ್ನು ನೋಡಿ ಏನು ಮಾಡುತ್ತಾರೆ ? ಅವರು ತಮ್ಮ ಮಂದಿರಗಳಲ್ಲಿ ಪ್ರಯೋಜನವಿಲ್ಲದ ರಚನೆ ನೋಡಿ ಅದರಿಂದ ಉದಾಸೀನರಾಗುತ್ತಿರಬೇಕು, ಇಲ್ಲ ದುಃಖಿಯಾಗುತ್ತಿರಬೇಕು, ಆದರೆ ಇದು ಸಂಭವವಿಲ್ಲ. ಅಥವಾ ಒಳ್ಳೆಯ ರಚನೆ ನೋಡಿ ವಿಷಯಗಳ ಪೋಷಣೆ ಮಾಡುತ್ತಿರಬೇಕು, ಆದರೆ ಅರಹಂತರ ಮೂರ್ತಿಯ ಮುಖಾಂತರ ಸಮ್ಯಗ್ದೃಷ್ಟಿಯು ತನ್ನ ವಿಷಯ ಪೋಷಣೆ ಮಾಡುವುದು ಕೂಡ ಸಂಭವವಿಲ್ಲ. ಆದುದರಿಂದ ಅಲ್ಲಿ ಅವರ ಭಕ್ತಿ ಮೊದಲಾದುವನ್ನೇ ಮಾಡುತ್ತಾರೆಂಬುದೇ ಸಂಭವವಿದೆ.

ಅವರ ಶಾಸ್ತ್ರಗಳಲ್ಲಿ ಸೂರ್ಯಾಭದೇವನ ವರ್ಣನೆಯಿದೆ, ಅಲ್ಲಿ ಮೂರ್ತಿ ಪೂಜೆಯ ವಿಶೇಷ ವರ್ಣನೆ ಮಾಡಿದೆ. ಅದನ್ನು ಬಚ್ಚಿಡುವ ಸಲುವಾಗಿ ದೇವಗಳ ಕರ್ತವ್ಯವೇ ಹೀಗೆಂದು ಹೇಳುತ್ತಾರೆ. ಅದು ಸತ್ಯವಿದೆ, ಆದರೆ ಕರ್ತವ್ಯದ ಫಲವಂತೂ ಇದ್ದೇ ಇರುತ್ತದೆ. ಅಲ್ಲಿ ಧರ್ಮವಾಗುತ್ತದೆಯೋ ಅಥವಾ ಪಾಪವಾಗುತ್ತದೆಯೋ ? ಧರ್ಮವಾಗುತ್ತಿದ್ದರೆ ಉಳಿದ ಕಡೆಗೆ ಪಾಪವಾಗುತ್ತಿತ್ತು ಇಲ್ಲಿ ಧರ್ಮವಾಯಿತು ; ಇದನ್ನು ಉಳಿದವುಗಳಂತೆಂದು ಹೇಗೆ ಹೇಳಿದಿರಿ ? ಇದಂತೂ ಯೋಗ್ಯ ಕಾರ್ಯವಾಯಿತು. ಮತ್ತು ಪಾಪವಾಗುತ್ತಿದ್ದರೆ ಅಲ್ಲಿ **'ಣಮೋತ್ಥುಣಂ'** ದ ಪಾಠ ಜಪಿಸಿದಿರಿ; ಆದರೆ ಪಾಪದ ಸ್ಥಾನದಲ್ಲಿ ಇಂಥ ಪಾಠವನ್ನು ಏತಕ್ಕಾಗಿ ಜಪಿಸಿರುವಿರಿ ?

'ಣಮೋತ್ಥುಣಂ'ದ ಪಾಠದಲ್ಲಂತೂ ಅರಹಂತರ ಭಕ್ತಿಯಿದೆ; ಪ್ರತಿಮೆಯ ಮುಂದೆ ಹೋಗಿ ಈ ಪಾಠ ಹೇಳಿರುವುದರಿಂದ ಪ್ರತಿಮೆಯ ಮುಂದೆ ಅರಹಂತ ಭಕ್ತಿಯ ಯಾವ ಕ್ರಿಯೆಯಿದೆ ಅದನ್ನು ಮಾಡುವುದು ಯೋಗ್ಯವೆಂದಂತಾಯಿತು.

ಇಂಥ ಕಾರ್ಯಗಳು ದೇವಗಳಿಗಿವೆ, ಮನುಷ್ಯರಿಗೆ ಇಲ್ಲ; ಏಕೆಂದರೆ ಮನುಷ್ಯರಿಗೆ ಪ್ರತಿಮೆ ಮೊದಲಾದುವನ್ನು ಮಾಡುವಲ್ಲಿ ಹಿಂಸೆಯಾಗುತ್ತದೆಯೆಂದು ಅವರು ಹೇಳುತ್ತಾರೆ. ಆದರೆ ಅವರ ಶಾಸ್ತ್ರಗಳಲ್ಲಿ ಸೂರ್ಯಾಭದೇವನು ಮಾಡಿರುವಂತೆಯೇ ದ್ರೌಪದಿ ರಾಣಿಯು ಪ್ರತಿಮೆಯ ಪೂಜಾದಿಗಳನ್ನು ಮಾಡತೊಡಗಿದಳೆಂಬ ಕಥನವಿದೆ; ಆದುದರಿಂದ ಮನುಷ್ಯರಿಗೆ ಕೂಡ ಇಂಥ ಕಾರ್ಯಮಾಡುವುದು ಕರ್ತವ್ಯವಿದೆ.

ಚೈತ್ಯಾಲಯ, ಪ್ರತಿಮೆಗಳನ್ನು ನಿರ್ಮಿಸುವ ಪ್ರವೃತ್ತಿಯೇ ಇಲ್ಲದಿದ್ದರೆ ದ್ರೌಪದಿಯು ಹೇಗೆ ಪ್ರತಿಮೆಯ

ಪೂಜೆ ಮಾಡಿದಳು ? ಮತ್ತು ಪ್ರವೃತ್ತಿಯಿದ್ದರೆ ನಿರ್ಮಿಸುವವನು ಧರ್ಮಾತ್ಮನಿದ್ದನೋ ಅಥವಾ ಪಾಪಿಯಿದ್ದನೋ? ಒಂದು ವೇಳೆ ಧರ್ಮಾತ್ಮನಿದ್ದರೆ ಗೃಹಸ್ಥರಿಗೆ ಇಂಥ ಕಾರ್ಯಮಾಡುವುದು ಯೋಗ್ಯವಾಯಿತು, ಮತ್ತು ಪಾಪಿಯಿದ್ದರೆ ಅಲ್ಲಿ ಭೋಗಾದಿಗಳ ಪ್ರಯೋಜನವಂತೂ ಇರಲಿಲ್ಲ, ಎಂದ ಬಳಿಕ ಏತಕ್ಕಾಗಿ ನಿರ್ಮಿಸಿದನು ? ಮತ್ತು ದ್ರೌಪದಿಯು ಅಲ್ಲಿ 'ಣಮೋತ್ಥುಣಂ'ದ ಪಾಠ ಹೇಳಿದಳು ಹಾಗೂ ಪೂಜೆ ಮಾಡಿದಳು, ಅವಳು ಕುತೂಹಲ ಮಾಡಿದಳೋ ಅಥವಾ ಧರ್ಮ ಮಾಡಿದಳೋ ? ಕುತೂಹಲ ಮಾಡಿದ್ದರೆ ಮಹಾ ಪಾಪಿಯಾದಳು. ಧರ್ಮದಲ್ಲಿ ಕುತೂಹಲವೆಂಥದು? ಮತ್ತು ಧರ್ಮ ಮಾಡಿದ್ದರೆ ಇತರರು ಕೂಡ ಪ್ರತಿಮೆಯ ಸ್ತುತಿ-ಪೂಜೆ ಮಾಡುವುದು ಯುಕ್ತವಿದೆ.

ಯಾವ ಪ್ರಕಾರ ಇಂದ್ರನ ಸ್ಥಾಪನೆಯಿಂದ ಇಂದ್ರನ ಕಾರ್ಯವು ಸಿದ್ಧವಾಗುವುದಿಲ್ಲ; ಅದೇ ಪ್ರಕಾರ ಅರಹಂತರ ಪ್ರತಿಮೆಯಿಂದ ಕಾರ್ಯಸಿದ್ಧವಾಗುವುದಿಲ್ಲವೆಂದು ಅವರು ಮಿಥ್ಯಾಯುಕ್ತಿ ರಚಿಸುತ್ತಾರೆ. ಆದರೆ ಅರಹಂತರು ಯಾರನ್ನಾದರೂ ಭಕ್ತರೆಂದು ಮನ್ನಿಸಿ ಅವರ ಒಳ್ಳೆಯದನ್ನು ಮಾಡುತ್ತಿದ್ದರೆ ಹೀಗೂ ಮನ್ನಿಸಬಹುದು; ಆದರೆ ಅವರಂತೂ ವೀತರಾಗರಿದ್ದಾರೆ. ಈ ಜೀವನು ತನ್ನ ಭಕ್ತಿರೂಪದ ಭಾವಗಳಿಂದ ಶುಭ ಫಲವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಯಾವ ಪ್ರಕಾರ ಸ್ತ್ರೀಯ ಆಕಾರ ರೂಪದ ಕಾಷ್ಠಪಾಷಾಣದ ಮೂರ್ತಿಯನ್ನು ನೋಡಿ ಅಲ್ಲಿ ವಿಕಾರರೂಪನಾಗಿ ಅನುರಾಗ ಮಾಡಿದರೆ ಅವನಿಗೆ ಪಾಪಬಂಧವಾಗುವುದು; ಅದೇ ಪ್ರಕಾರ ಅರಹಂತರ ಆಕಾರ ರೂಪದ ಧಾತು-ಪಾಷಾಣಗಳ ಮೂರ್ತಿಯನ್ನು ನೋಡಿ ಧರ್ಮಬುದ್ಧಿಯಿಂದ ಅಲ್ಲಿ ಅನುರಾಗ ಮಾಡಿದರೆ ಶುಭದ ಪ್ರಾಪ್ತಿಯು ಹೇಗಾಗುವುದಿಲ್ಲ?

**ಪ್ರಶ್ನೆ :-** ನಾವು ಪ್ರತಿಮೆಯಿಲ್ಲದೆಯೇ ಅರಹಂತರಲ್ಲಿ ಅನುರಾಗ ಮಾಡಿ ಶುಭವನ್ನು ಉತ್ಪನ್ನ ಮಾಡಿಕೊಳ್ಳುತ್ತೇವೆ.

**ಉತ್ತರ :-** ಆಕಾರ ನೋಡುವುದರಿಂದ ಹೇಗೆ ಭಾವವಾಗುತ್ತದೆ ಹಾಗೆ ಪರೋಕ್ಷ ಸ್ಮರಣೆ ಮಾಡುವುದರಿಂದ ಆಗುವುದಿಲ್ಲ; ಅದರಿಂದಲೇ ಲೋಕದಲ್ಲಿ ಕೂಡ ಸ್ತ್ರೀಯ ಅನುರಾಗವುಳ್ಳವನು ಸ್ತ್ರೀಯ ಚಿತ್ರ ಬಿಡಿಸುತ್ತಾನೆ; ಆದುದರಿಂದ ಪ್ರತಿಮೆಯ ಅವಲಂಬನದಿಂದ ಭಕ್ತಿಯು ವಿಶೇಷವಾಗುವುದರಿಂದ ವಿಶೇಷ ಶುಭದ ಪ್ರಾಪ್ತಿಯಾಗುತ್ತದೆ.

**ಪ್ರಶ್ನೆ :-** ಪ್ರತಿಮೆಗಳನ್ನು ನೋಡಿರಿ, ಆದರೆ ಪೂಜಾದಿಗಳನ್ನು ಮಾಡುವುದರ ಪ್ರಯೋಜನವೇನು ?

**ಉತ್ತರ :-** ಯಾವ ಪ್ರಕಾರ ಒಬ್ಬನು ಯಾವುದೇ ಒಂದು ಜೀವದ ಆಕಾರ ರಚಿಸಿ ಅದರ ಘಾತ ಮಾಡಿದರೆ ಅವನಿಗೆ ಆ ಜೀವದ ಹಿಂಸೆ ಮಾಡಿದಷ್ಟು ಪಾಪವಾಗುತ್ತದೆ, ಮತ್ತು ಒಬ್ಬನು ಯಾವುದೇ ಒಂದರ ಆಕಾರ ರಚಿಸಿ ದ್ವೇಷಬುದ್ಧಿಯಿಂದ ಅದರ ಅವಸ್ಥೆಯನ್ನು ಕೆಡಿಸಿದರೆ ಯಾವುದರ ಆಕಾರ ರಚಿಸಿದ್ದನು ಅದರ ಅವಸ್ಥೆಯನ್ನು ಕೆಡಿಸಿದಷ್ಟು ಪಾಪದ ಫಲ ದೊರಕುತ್ತದೆ; ಅದೇ ಪ್ರಕಾರ ಅರಹಂತರ ಆಕಾರವನ್ನು ರಚಿಸಿ ಧರ್ಮಾನುರಾಗದ ಬುದ್ಧಿಯಿಂದ ಪೂಜಾದಿಗಳನ್ನು ಮಾಡಿದರೆ ಅರಹಂತರ ಪೂಜಾದಿಗಳನ್ನು ಮಾಡಿದಂಥ ಶುಭವು (ಭಾವವು) ಉತ್ಪನ್ನವಾಗುತ್ತದೆ ಮತ್ತು ಅಂಥದೇ ಫಲವು ದೊರಕುತ್ತದೆ. ಅತ್ಯಂತ ಅನುರಾಗವು ಉತ್ಪನ್ನವಾದ ಮೇಲೆ ಪ್ರತ್ಯಕ್ಷ ದರ್ಶನವಾಗದಿರುವುದರಿಂದ ಆಕಾರ ರಚಿಸಿ ಪೂಜಾದಿಗಳನ್ನು ಮಾಡುತ್ತಾರೆ. ಇಂಥ ಧರ್ಮಾನುರಾಗದಿಂದ ಮಹಾ ಪುಣ್ಯವಾಗುತ್ತದೆ.

**ಪ್ರಶ್ನೆ :-** ಯಾರಿಗೆ ಯಾವ ವಸ್ತುವಿನ ತ್ಯಾಗವಿದೆ ಅವರ ಮುಂದೆ ಆ ವಸ್ತುವನ್ನು ಇಡುವುದೆಂದರೆ ಅವರ ಹಾಸ್ಯಮಾಡಿದಂತಿದೆ; ಆದುದರಿಂದ ಚಂದನಾದಿಗಳ ಮುಖಾಂತರ ಅರಹಂತರ ಪೂಜೆಯು ಯುಕ್ತವಲ್ಲ.

**ಉತ್ತರ :-** ಸಮಸ್ತ ಪರಿಗ್ರಹದ ತ್ಯಾಗವಾದ ನಂತರವೇ ಮುನಿಪದದ ಸ್ವೀಕಾರವಾಗುತ್ತದೆ, ಮುಂದೆ ಕೇವಲಜ್ಞಾನವಾದನಂತರ ತೀರ್ಥಂಕರದೇವರಿಗೆ ಸಮವಸರಣ, ಛತ್ರ-ಚಾಮರಾದಿಗಳನ್ನು ಮಾಡಿಸುತ್ತಾರೆ, ಅದೇನು ಹಾಸ್ಯ ಮಾಡಿದರೋ ಅಥವಾ ಭಕ್ತಿ ಮಾಡಿದರೋ ? ಹಾಸ್ಯ ಮಾಡಿದ್ದರೆ ಇಂದ್ರನು ಮಹಾಪಾಪಿಯಾಗುವನು; ಅದು ಸಂಭವಿಸುವುದಿಲ್ಲ ಭಕ್ತಿ ಮಾಡಿದ್ದರೆ ಪೂಜಾದಿಗಳಲ್ಲಿ ಕೂಡ ಭಕ್ತಿಯನ್ನೇ ಮಾಡುತ್ತಾರೆ. ಛದ್ಮಸ್ಥನ ಮುಂದೆ ತ್ಯಾಗಮಾಡಿದ ವಸ್ತುವನ್ನಿಡುವುದು ಹಾಸ್ಯ ಮಾಡಿದಂತಿದೆ; ಏಕೆಂದರೆ ಅವನಿಗೆ ವಿಕ್ಷಿಪ್ತತೆಯುಂಟಾಗುತ್ತದೆ. ಕೇವಲಿಗಳ ಹಾಗೂ ಪ್ರತಿಮೆಗಳ ಮುಂದೆ ಅನುರಾಗದಿಂದ ಉತ್ತಮ ವಸ್ತುಗಳನ್ನು ಇಡುವುದರಲ್ಲಿ ದೋಷವಿಲ್ಲ; ಅವರಿಗೆ ವಿಕ್ಷಿಪ್ತತೆಯಾಗುವುದಿಲ್ಲ. ಧರ್ಮಾನುರಾಗದಿಂದ ಜೀವದ ಒಳಿತಾಗುತ್ತದೆ.

**ಪ್ರಶ್ನೆ :-** ಪ್ರತಿಮೆಗಳನ್ನು ನಿರ್ಮಿಸುವಲ್ಲಿ, ಚೈತ್ಯಾಲಯಗಳನ್ನು ಕಟ್ಟಿಸುವುದರಲ್ಲಿ, ಪೂಜಾದಿಗಳನ್ನು ಮಾಡಿಸುವುದರಲ್ಲಿ ಹಿಂಸೆಯಾಗುತ್ತದೆ, ಮತ್ತು ಧರ್ಮವು ಅಹಿಂಸೆಯಲ್ಲಿದೆ; ಆದುದರಿಂದ ಹಿಂಸೆ ಮಾಡಿ ಧರ್ಮವಾಯಿತೆಂದು ಮನ್ನಿಸುವುದರಿಂದ ಮಹಾಪಾಪವಾಗುತ್ತದೆ; ಅದಕ್ಕಾಗಿಯೇ ನಾವು ಇಂಥ ಕಾರ್ಯಗಳ ನಿಷೇಧ ಮಾಡುತ್ತೇವೆ.

**ಉತ್ತರ :-** ಅವರ ಶಾಸ್ತ್ರದಲ್ಲಿಯೇ ಈ ಗಾಥೆಯಿದೆ,-

**ಸುಚ್ಚಾ ಜಾಣಇ ಕಲ್ಲಾಣಂ ಸುಚ್ಚಾ ಜಾಣಇ ಪಾವಗಂ ।**
**ಉಭಯಂ ಪಿ ಜಾಣಏ ಸುಚ್ಚಾ ಜಂ ಸೇಯ ತಂ ಸಮಾಯರ ॥1॥**

ಇಲ್ಲಿ ಕಲ್ಯಾಣ, ಪಾಪ ಮತ್ತು ಉಭಯವೆಂಬ ಈ ಮೂರನ್ನೂ ಶಾಸ್ತ್ರ ಕೇಳಿ ತಿಳಿಯಬೇಕೆಂದು ಹೇಳಿದೆ. ಆ ಉಭಯವಂತೂ ಪಾಪ ಮತ್ತು ಕಲ್ಯಾಣದ ಕೂಡುವಿಕೆಯಿಂದ ಆಗುವುದೆಂದರೆ ಇಂಥ ಕಾರ್ಯವು ಆಗುತ್ತದೆಂಬುದು ನಿಶ್ಚಿತವಾಯಿತು. ಕೇವಲ ಧರ್ಮದಿಂದಂತೂ ಉಭಯವು ಕೀಳು ಇದ್ದೇ ಇದೆ, ಮತ್ತು ಕೇವಲ ಪಾಪದಿಂದ ಉಭಯವು ಕೆಡಕಿದೆಯೋ ಅಥವಾ ಒಳ್ಳೆಯದಿದೆಯೋ ? ಒಂದು ವೇಳೆ ಕೆಡಕಿದ್ದರೆ ಇದರಲ್ಲಂತೂ ಸ್ವಲ್ಪ ಕಲ್ಯಾಣದ ಅಂಶವು ಕೂಡಿದೆ, ಪಾಪದಿಂದ ಕೆಡಕೆಂದು ಹೇಗೆ ಹೇಳುವಿರಿ ? ಒಳ್ಳೆಯದಿದ್ದರೆ ಕೇವಲ ಪಾಪವನ್ನು ಬಿಟ್ಟುಕೊಟ್ಟು ಇಂಥ ಕಾರ್ಯ ಮಾಡಬೇಕೆಂದಂತಾಯಿತು. ಮತ್ತು ಯುಕ್ತಿಯಿಂದ ಕೂಡ ಹೀಗೆಯೇ ಸಂಭವವಿದೆ. ಯಾವನೋ ಓರ್ವನು ತ್ಯಾಗಿಯಾಗಿ ಅವನು ಮಂದಿರಾದಿಗಳನ್ನು ಕಟ್ಟಿಸುವುದಿಲ್ಲ, ಆದರೆ ಸಾಮಾಯಿಕ ಮೊದಲಾದ ನಿರವದ್ಯ ಕಾರ್ಯಗಳಲ್ಲಿ ಪ್ರವರ್ತಿಸುತ್ತಾನೆ; ಆದರೆ ಅವನ್ನು ಬಿಟ್ಟುಕೊಟ್ಟು ಪ್ರತಿಮಾದಿಗಳನ್ನು ಮಾಡಿಸುವುದು ಮತ್ತು ಪೂಜಾದಿಗಳನ್ನು ಮಾಡುವುದು ಉಚಿತವಿಲ್ಲ. ಆದರೆ ಯಾವನೋ ಓರ್ವನು ತನಗೆ ಇರುವ ಸಲುವಾಗಿ ಮನೆ ಕಟ್ಟಿಸಿದರೆ ಅವನಿಗಿಂತ ಚೈತ್ಯಾಲಯಗಳನ್ನು ಕಟ್ಟಿಸುವವನು ಹೀನನಲ್ಲ. ಹಿಂಸೆಯಂತೂ ಆಯಿತು, ಆದರೆ ಅವನಿಗಂತೂ ಲೋಭ ಪಾಪಾನುರಾಗದ ವೃದ್ಧಿಯಾಯಿತು. ಮತ್ತು ಇವನಿಗೆ ಲೋಭವು ಹೊರಟು ಹೋಗಿ ಧರ್ಮಾನುರಾಗವಾಯಿತು. ಮತ್ತು ಯಾವನಾದರೂ ವ್ಯಾಪಾರಾದಿ ಕಾರ್ಯಗಳನ್ನು

ಮಾಡುವುದಕ್ಕಿಂತ ಪೂಜಾದಿ ಕಾರ್ಯಗಳನ್ನು ಮಾಡುವುದೇನು ಕೀಳಲ್ಲ. ಅಲ್ಲಿಯಂತೂ ಹಿಂಸಾದಿಗಳು ಅಧಿಕವಾಗುತ್ತವೆ, ಲೋಭಾದಿಗಳು ವೃದ್ಧಿಸುತ್ತವೆ, ಪಾಪದ ಪ್ರವೃತ್ತಿಯೇ ಇದೆ. ಇಲ್ಲಿ ಹಿಂಸಾದಿಗಳು ಕಡಿಮೆಯಾಗುತ್ತವೆ, ಲೋಭಾದಿಗಳು ಕುಂದುತ್ತವೆ ಮತ್ತು ಧರ್ಮಾನುರಾಗವು ವೃದ್ಧಿಸುತ್ತದೆ. ಈ ಪ್ರಕಾರ ಯಾರು ತ್ಯಾಗಿಗಳಾಗಿಲ್ಲ, ತಮ್ಮ ಹಣವನ್ನು ಪಾಪದಲ್ಲಿ ವ್ಯಯಿಸುತ್ತಿದ್ದಾರೆ ಅವರು ಚೈತ್ಯಾಲಯ ಮೊದಲಾದುವನ್ನು ಕಟ್ಟಿಸುವುದು ಯೋಗ್ಯವಿದೆ. ಮತ್ತು ಯಾರು ತಮ್ಮ ಉಪಯೋಗವನ್ನು ನಿರವದ್ಯ ಸಾಮಾಯಿಕ ಮೊದಲಾದ ಕಾರ್ಯಗಳಲ್ಲಿ ತೊಡಗಿಸುವ ಸಾಧ್ಯತೆಯಿಲ್ಲ ಅವರಿಗೆ ಪೂಜಾದಿಗಳನ್ನು ಮಾಡುವುದರ ನಿಷೇಧವಿಲ್ಲ.

**ಪ್ರಶ್ನೆ** :- ನಿರವದ್ಯ ಸಾಮಾಯಿಕ ಮೊದಲಾದ ಕಾರ್ಯಗಳನ್ನೇ ಏಕೆ ಮಾಡಬಾರದು ? ಧರ್ಮದಲ್ಲಿ ಕಾಲ ಕಳೆಯುವುದು, ಅಲ್ಲಿ ಇಂಥ ಕಾರ್ಯಗಳನ್ನು ಏತಕ್ಕಾಗಿ ಮಾಡುವುದು ?

**ಉತ್ತರ** :- ಒಂದು ವೇಳೆ ಶರೀರದಿಂದ ಪಾಪಬಿಟ್ಟ ಮಾತ್ರಕ್ಕೆ ನಿರವದ್ಯತೆಯಾಗುತ್ತಿದ್ದರೆ ಹಾಗೇ ಮಾಡುವುದು; ಆದರೆ ಪರಿಣಾಮದಲ್ಲಿ ಪಾಪವು ಬಿಟ್ಟಮೇಲೆ ನಿರವದ್ಯತೆಯಾಗುತ್ತದೆ. ಆದರೆ ಅವಲಂಬನವಿಲ್ಲದೆ ಸಾಮಾಯಿಕಾದಿಗಳಲ್ಲಿ ತನ್ನ ಪರಿಣಾಮವು ತೊಡಗುವುದಿಲ್ಲ ಅವನು ಪೂಜೆಯ ಮುಖಾಂತರ ಅಲ್ಲಿ ತನ್ನ ಉಪಯೋಗ ತೊಡಗಿಸುತ್ತಾನೆ. ಅಲ್ಲಿ ನಾನಾ ಪ್ರಕಾರದ ಅವಲಂಬನದಿಂದ ಉಪಯೋಗವು ತೊಡಗುತ್ತದೆ. ಒಂದು ವೇಳೆ ಅಲ್ಲಿ ಉಪಯೋಗವನ್ನು ತೊಡಗಿಸದಿದ್ದರೆ ಪಾಪಕಾರ್ಯಗಳಲ್ಲಿ ಉಪಯೋಗವು ಭ್ರಮಿಸುವುದು ಮತ್ತು ಅದರಿಂದ ಕೆಡಕಾಗುವುದು; ಆದುದರಿಂದ ಅಲ್ಲಿ ಪ್ರವೃತ್ತಿ ಮಾಡುವುದು ಯುಕ್ತವಿದೆ.

'ಧರ್ಮದ ಸಲುವಾಗಿ ಹಿಂಸೆ ಮಾಡುವುದರಿಂದ ಮಹಾಪಾಪವಾಗುತ್ತದೆ, ಉಳಿದಕಡೆ ಹಿಂಸೆ ಮಾಡುವುದರಿಂದ ಕಡಿಮೆ ಪಾಪವಾಗುತ್ತದೆ'ಯೆಂದು ನೀವು ಹೇಳುತ್ತೀರಿ; ಆದರೆ ಇದಂತೂ ಮೊದಲುಸಿದ್ಧಾಂತದ ವಚನವಲ್ಲ ಮತ್ತು ಯುಕ್ತಿಯಿಂದ ಕೂಡ ಹೊಂದುವುದಿಲ್ಲ ; ಏಕೆಂದರೆ ಹೀಗೆ ಮನ್ನಿಸುವುದರಿಂದ ಇಂದ್ರನು ಜನ್ಮಕಲ್ಯಾಣಕದಲ್ಲಿ ಅಧಿಕ ಜಲದಿಂದ ಅಭಿಷೇಕ ಮಾಡುತ್ತಾನೆ, ಸಮವಸರಣದಲ್ಲಿ ದೇವತೆಗಳು ಪುಷ್ಪವೃಷ್ಟಿ ಮಾಡುವುದು, ಚಾಮರ ಬೀಸುವುದು ಇತ್ಯಾದಿ ಕಾರ್ಯಗಳನ್ನು ಮಾಡುತ್ತಾರೆ ಅವರೆಲ್ಲರೂ ಮಹಾಪಾಪಿಗಳಾದರು.

ಅವರ ವ್ಯವಹಾರವು ಹೀಗೆಯೇ ಇದ್ದರೆ ಕ್ರಿಯೆಯ ಫಲವಂತೂ ದೊರೆತಲ್ಲದೆ ಇರಲಾರದೆಂದು ನೀವು ಹೇಳುವಿರಿ. ಆದರೆ ಪಾಪವಿದ್ದರೆ ಇಂದ್ರಾದಿಗಳಂತೂ ಸಮ್ಯಗ್ದೃಷ್ಟಿಗಳಿದ್ದಾರೆ, ಇಂಥ ಕಾರ್ಯವನ್ನು ಅವರು ಏತಕ್ಕಾಗಿ ಮಾಡುವರು? ಮತ್ತು ಧರ್ಮವಿದ್ದರೆ ಏತಕ್ಕಾಗಿ ನಿಷೇಧ ಮಾಡುವಿರಿ ?

ತೀರ್ಥಂಕರರ ವಂದನೆಗೆ ರಾಜರುಗಳು ಹೋಗುವರು, ಸಾಧುಗಳ ವಂದನೆಗಾಗಿ ದೂರ-ದೂರಕ್ಕೆ ಹೋಗುತ್ತಾರೆ, ಸಿದ್ಧಾಂತ ಕೇಳುವ ಮೊದಲಾದ ಕಾರ್ಯಗಳ ಸಲುವಾಗಿ ಗಮನ ಮಾಡುತ್ತಾರೆ, ಅಲ್ಲಿ ಮಾರ್ಗದಲ್ಲಿ ಹಿಂಸೆಯಾಗುವುದು, ಮತ್ತು ಸಾಧರ್ಮಿಗಳಿಗೆ ಭೋಜನ ಮಾಡಿಸುತ್ತಾರೆ, ಸಾಧುಗಳ ಮರಣವಾದ ಮೇಲೆ ಶವಸಂಸ್ಕಾರ ಮಾಡುತ್ತಾರೆ, ಸಾಧುವಾದ ಮೇಲೆ ಉತ್ಸವ ಮಾಡುತ್ತಾರೆ ಇತ್ಯಾದಿ ಪ್ರವೃತ್ತಿಗಳು ಈಗ ಕೂಡ ಕಂಡುಬರುತ್ತವೆ; ಆದರೆ ಅಲ್ಲಿ ಕೂಡ ಹಿಂಸೆಯಾಗುತ್ತದೆ; ಆದರೆ ಈ ಕಾರ್ಯಗಳಂತೂ ಧರ್ಮದ ಸಲುವಾಗಿಯೇ ಇವೆ, ಬೇರೆ ಯಾವ ಪ್ರಯೋಜನವಿಲ್ಲ ಒಂದು ವೇಳೆ ಇಲ್ಲಿ ಮಹಾಪಾಪವಾಗುತ್ತಿದ್ದರೆ ಪೂರ್ವಕಾಲದಲ್ಲಿ ಇಂಥ

ಕಾರ್ಯ ಮಾಡಿದ್ದಾರೆ ಅವುಗಳ ನಿಷೇಧ ಮಾಡಿರಿ ಮತ್ತು ಈಗ ಕೂಡ ಗೃಹಸ್ಥರು ಇಂಥ ಕಾರ್ಯ ಮಾಡುತ್ತಾರೆ ಅವುಗಳ ತ್ಯಾಗ ಮಾಡಿರಿ. ಮತ್ತು ಒಂದು ವೇಳೆ ಧರ್ಮವಾಗುತ್ತಿದ್ದರೆ ಧರ್ಮದ ಸಲುವಾಗಿ ಸಂಭವಿಸಬಹುದಾದ ಹಿಂಸೆಯಲ್ಲಿ ಮಹಾಪಾಪವಿದೆಯೆಂದು ತಿಳಿಸಿಕೊಡುತ್ತ ಭ್ರಾಂತಿಯನ್ನೇಕೆ ಹುಟ್ಟಿಸುತ್ತಿರುವಿರಿ ?

ಯಾವ ಪ್ರಕಾರ ಅಲ್ಪಧನ ತೊಡಗಿಸಿದ ಮೇಲೆ ಅಧಿಕ ಧನದ ಲಾಭವಾಗುತ್ತಿದ್ದರೆ ಆ ಕಾರ್ಯ ಮಾಡುವುದು ಯೋಗ್ಯವಿದೆ; ಅದೇ ಪ್ರಕಾರ ಹಿಂಸಾದಿ ಪಾಪಗಳು ಅಲ್ಪವಾಗಿ ಅಧಿಕ ಧರ್ಮವಾಗುತ್ತಿದ್ದರೆ ಆ ಕಾರ್ಯ ಮಾಡುವುದು ಯೋಗ್ಯವಿದೆಯೆಂದು ಮನ್ನಿಸುವುದು ಉಪಯುಕ್ತವಿದೆ. ಯಾವ ಪ್ರಕಾರ ಅಲ್ಪ ಧನದ ಲೋಭದಿಂದ ಕಾರ್ಯ ಕೆಡಿಸಿಕೊಳ್ಳುವವನು ಮೂರ್ಖನಿದ್ದಾನೆ; ಅದೇ ಪ್ರಕಾರ ಅಲ್ಪಹಿಂಸೆಯ ಭಯದಿಂದ ಅಧಿಕ ಧರ್ಮ ಬಿಟ್ಟುಕೊಡುವವನು ಪಾಪಿಯೇ ಆಗುತ್ತಾನೆ. ಇನ್ನು ಮತ್ತೊಬ್ಬನ್ನು ಅಧಿಕ ಧನ ತೊಡಗಿಸಿ ಅಲ್ಪಧನ ಸಂಪಾದಿಸಿದರೆ ಅಥವಾ ಸಂಪಾದಿಸದೇ ಹೋದರೆ ಅವನು ಮೂರ್ಖನಿದ್ದಾನೆ; ಅದೇ ಪ್ರಕಾರ ಅಧಿಕ ಹಿಂಸೆಯಿಂದ ಅಧಿಕ ಪಾಪ ಮಾಡಿದರೆ ಮತ್ತು ಭಕ್ತಿ ಮೊದಲಾದ ಧರ್ಮದಲ್ಲಿ ಕಡಿಮೆ ಪ್ರವರ್ತಿಸಿದರೆ ಮತ್ತು ಪ್ರವರ್ತಿಸದೇ ಹೋದರೆ ಅವನು ಪಾಪಿಯೇ ಆಗುತ್ತಾನೆ. ಮತ್ತು ಯಾವ ಪ್ರಕಾರ ಧನತೊಡಗಿಸದೆಯೇ ಧನದ ಲಾಭವಾದ ಮೇಲೆ ತೊಡಗಿಸುವವನು ಮೂರ್ಖನಿದ್ದಾನೆ; ಅದೇ ಪ್ರಕಾರ ನಿರವದ್ಯಧರ್ಮರೂಪದ ಉಪಯೋಗವಾದ ಮೇಲೆ ಸಾವದ್ಯಧರ್ಮದಲ್ಲಿ ಉಪಯೋಗ ತೊಡಗಿಸುವುದು ಯೋಗ್ಯವಿಲ್ಲ.

ಈ ಪ್ರಕಾರ ತಮ್ಮ ಪರಿಣಾಮಗಳ ಅವಸ್ಥೆಯನ್ನು ನೋಡಿಕೊಂಡು ಒಳ್ಳೆಯದಿರುವುದನ್ನು ಮಾಡಬೇಕು; ಆದರೆ ಏಕಾಂತ ಪಕ್ಷವು ಕಾರ್ಯಕಾರಿಯಿಲ್ಲ. ಮತ್ತು ಕೇವಲ ಅಹಿಂಸೆಯೇ ಧರ್ಮದ ಅಂಗವಲ್ಲ; ರಾಗಾದಿಗಳ ಕುಂದುವಿಕೆಯು ಧರ್ಮದ ಮುಖ್ಯ ಅಂಗವಿದೆ, ಆದುದರಿಂದ ಯಾವ ಪ್ರಕಾರ ಪರಿಣಾಮಗಳಲ್ಲಿ ರಾಗಾದಿಗಳು ಕಡಿಮೆಯಾಗುವವು ಆ ಕಾರ್ಯ ಮಾಡಬೇಕು, ಮತ್ತು ಗೃಹಸ್ಥರಿಗೆ ಅಣುವ್ರತಾದಿಗಳ ಸಾಧನೆಯಾಗದೆಯೇ ಸಾಮಾಯಿಕ, ಪ್ರತಿಕ್ರಮಣ, ಪ್ರೋಷಧ ಮೊದಲಾದ ಕ್ರಿಯೆಗಳ ಆಚರಣೆಯನ್ನು ಮುಖ್ಯವಾಗಿ ಮಾಡಿಸುತ್ತಾರೆ, ಆದರೆ ಸಾಮಾಯಿಕವಂತೂ ರಾಗ-ದ್ವೇಷರಹಿತ ಸಾಮ್ಯಭಾವವಾದ ಮೇಲೆ ಆಗುತ್ತದೆ, ಕೇವಲ ಪಾಠ ಪಠಿಸುವುದರಿಂದ ಮತ್ತು ಏಳುವುದು- ಕೂಡ್ರುವುದು ಮಾಡುವುದರಿಂದಂತೂ ಆಗುವುದೇ ಇಲ್ಲ.

ಅನ್ಯಕಾರ್ಯ ಮಾಡುವುದಕ್ಕಿಂತಂತೂ ಒಳ್ಳೆಯದಿದೆಯಲ್ಲವೇ ? ಎನ್ನಬಹುದು, ಅದು ಸತ್ಯವಿದೆ; ಆದರೆ ಸಾಮಾಯಿಕ ಪಾಠದಲ್ಲಿ ಮನ-ವಚನ-ಕಾಯಗಳಿಂದ ಸಾವದ್ಯವನ್ನು ಮಾಡಲಾರೆನು ; ಮಾಡಿಸಲಾರೆನೆಂದು ಪ್ರತಿಜ್ಞೆ ಮಾಡುತ್ತಾನೆ, ಆದರೆ ಮನಸ್ಸಿನಲ್ಲಂತೂ ವಿಕಲ್ಪವಾಗುತ್ತಲೇ ಇರುತ್ತದೆ, ಮತ್ತು ವಚನ-ಕಾಯದಲ್ಲಿ ಕೂಡ ಕಥಂಚಿತ್ ವಿಪರೀತ ಪ್ರವೃತ್ತಿಯಾಗುತ್ತದೆ ಆಗ ಪ್ರತಿಜ್ಞೆಯ ಭಂಗವಾಗುತ್ತದೆ. ಆದುದರಿಂದ ಪ್ರತಿಜ್ಞೆಯನ್ನು ಭಂಗ ಮಾಡುವುದಕ್ಕಿಂತ ಪ್ರತಿಜ್ಞೆ ಮಾಡದಿರುವುದೇ ಒಳ್ಳೆಯದಿದೆ; ಏಕೆಂದರೆ ಪ್ರತಿಜ್ಞೆಯ ಭಂಗ ಮಾಡುವುದು ಮಹಾಪಾಪವಿದೆ.

ಒಬ್ಬನು ಪ್ರತಿಜ್ಞೆಯನ್ನೇ ಮಾಡುವುದಿಲ್ಲ ಮತ್ತು ಭಾಷಾಪಾಠ ಪಠಿಸುತ್ತಾನೆ, ಅದರ ಅರ್ಥ ತಿಳಿದುಕೊಂಡು ಅದರಲ್ಲಿ ಉಪಯೋಗ ತೊಡಗಿಸುತ್ತಾನೆ. ಇನ್ನೊಬ್ಬನು ಪ್ರತಿಜ್ಞೆ ಮಾಡಿದುದನ್ನಂತೂ ಸರಿಯಾಗಿ ಪಾಲಿಸುವುದಿಲ್ಲ

ಮತ್ತು ಪ್ರಾಕೃತ ಪಾಠ ಪಠಿಸುತ್ತಾನೆ; ತನಗೆ ಅದರ ಅರ್ಥದ ಜ್ಞಾನವಿಲ್ಲ, ಅರ್ಥವು ತಿಳಿದಲ್ಲದೆ ಅಲ್ಲಿ ಉಪಯೋಗವು ತೊಡಗುವುದಿಲ್ಲ ಆಗ ಉಪಯೋಗವು ಅನ್ಯತ್ರ ಭ್ರಮಿಸುತ್ತದೆ. ಇಂಥ ಇವರೀರ್ವರಲ್ಲಿ ವಿಶೇಷ ಧರ್ಮಾತ್ಮನು ಯಾವನು? ಒಂದು ವೇಳೆ ಮೊದಲನೆಯವನೆಂದು ಹೇಳುವೆಯಾದರೆ ಇಂಥ ಉಪದೇಶವನ್ನೇ ಏಕೆ ಕೊಡುವುದಿಲ್ಲ? ಮತ್ತು ಎರಡನೆಯವನನ್ನು ಹೇಳುವೆಯಾದರೆ ಪ್ರತಿಜ್ಞಾಭಂಗದ ಪಾಪವಾಯಿತು. ಮತ್ತು ಪರಿಣಾಮಗಳಿಗೆ ಅನುಸರಿಸಿ ಧರ್ಮಾತ್ಮತನವೂ ಉಳಿಯಲಿಲ್ಲ; ಆದರೆ ಪಾಠಾದಿಗಳನ್ನು ಮಾಡುವುದಕ್ಕೆ ಅನುಸರಿಸಿ ಉಳಿಯುತ್ತಾನೆ.

ಆದುದರಿಂದ ತಮ್ಮ ಉಪಯೋಗವು ಯಾವುದರಿಂದ ನಿರ್ಮಲವಾಗುವುದು ಆ ಕಾರ್ಯ ಮಾಡಬೇಕು. ಸಿದ್ಧಿಸಬಹುದಾದ ಪ್ರತಿಜ್ಞೆ ಮಾಡಬೇಕು. ಯಾವುದರ ಅರ್ಥ ತಿಳಿಯುತ್ತದೆ ಆ ಪಾಠ ಪಠಿಸಬೇಕು, ರೂಢಿಗೆ ಅನುಸರಿಸಿ ಹೆಸರು ಗಳಿಸುವುದರಲ್ಲಿ ಲಾಭವಿಲ್ಲ.

ಇನ್ನು ಪೂರ್ವ ದೋಷಗಳ ನಿರಾಕರಣೆ ಮಾಡುವುದರ ಹೆಸರು ಪ್ರತಿಕ್ರಮಣವಿದೆ. ಆದರೆ 'ಮಿಚ್ಛಾಮಿದುಕ್ಕಡಂ' ಎಂದು ಹೇಳುವುದರಿಂದಂತೂ ದುಷ್ಕೃತವು ಮಿಥ್ಯೆಯಾಗುವುದಿಲ್ಲ, ಮಾಡಿದ ದುಷ್ಕೃತವು ಮಿಥ್ಯೆಯಾಗಲು ಯೋಗ್ಯವಾದ ಪರಿಣಾಮವಾದ ಮೇಲೆಯೇ ದುಷ್ಕೃತವು ಮಿಥ್ಯೆಯಾಗುತ್ತದೆ; ಆದುದರಿಂದ ಕೇವಲ ಪಾಠವು ಕಾರ್ಯಕಾರಿಯಿಲ್ಲ.

ಮತ್ತು ಪ್ರತಿಕ್ರಮಣದ ಪಾಠದಲ್ಲಿ ಹನ್ನೆರಡು ವ್ರತಗಳಲ್ಲಿ ಯಾವುವಾದರೂ ದೋಷಗಳು ತಗಲಿದ್ದರೆ ಅವು ಮಿಥ್ಯೆಯಾಗಲೆಂಬ ಅರ್ಥವಿದೆ; ಆದರೆ ವ್ರತಗಳನ್ನು ಧಾರಣ ಮಾಡದೆಯೇ ಅವುಗಳ ಪ್ರತಿಕ್ರಮಣ ಮಾಡುವುದು ಹೇಗೆ ಸಂಭವವಿದೆ ? ಉಪವಾಸವಿಲ್ಲದವನು ಉಪವಾಸದಲ್ಲಿ ತಗಲಿದ ದೋಷದ ನಿರಾಕರಣ ಮಾಡುವುದು ಅಸಂಭವತೆಯಾಗುವುದು.

ಆದುದರಿಂದ ಈ ಪಾಠ ಪಠಿಸುವುದು ಮತ್ತು ಅದಕ್ಕೆ ಪ್ರತಿಕ್ರಮಣವೆನ್ನುವುದು ಹೇಗೆ ಸಂಭವಿಸುತ್ತದೆ.

ಪ್ರೋಷಧದಲ್ಲಿ ಕೂಡ ಸಾಮಾಯಿಕದಂತೆ ಪ್ರತಿಜ್ಞೆ ಮಾಡಿ ಪಾಲನೆ ಮಾಡುವುದಿಲ್ಲ, ಆದುದರಿಂದ ಪೂರ್ವೋಕ್ತ ದೋಷವೇ ಬರುತ್ತದೆ. ಮತ್ತು ಪ್ರೋಷಧವೆಂಬ ಹೆಸರಂತೂ ಪರ್ವಕ್ಕಿದೆ, ಆದರೆ ಪರ್ವದ ದಿವಸ ಕೂಡ ಎಷ್ಟೋ ಕಾಲದವರೆಗೆ ಪಾಪ ಕ್ರಿಯೆ ಮಾಡುತ್ತಾನೆ, ನಂತರ ಪ್ರೋಷಧ ಧಾರಿಯಾಗುತ್ತಾನೆ. ಎಷ್ಟು ಕಾಲ ಮಾಡಿರುತ್ತದೆ ಅಷ್ಟು ಕಾಲ ಸಾಧನೆ ಮಾಡಿದರಂತೂ ದೋಷವಿಲ್ಲ; ಆದರೆ ಪ್ರೋಷಧದ ಹೆಸರು ಹೇಳುವುದು ಅದು ಯುಕ್ತವಿಲ್ಲ. ಸಂಪೂರ್ಣ ಪರ್ವದಲ್ಲಿ ನಿರವದ್ಯವಿದ್ದನಂತರವೇ ಪ್ರೋಷಧವಾಗುತ್ತದೆ. ಒಂದು ವೇಳೆ ಸ್ವಲ್ಪ ಕಾಲದಿಂದಲೇ ಪ್ರೋಷಧ ನಾಮವಾಗುತ್ತಿದ್ದರೆ ಸಾಮಾಯಿಕಕ್ಕೆ ಕೂಡ ಪ್ರೋಷಧವೆನ್ನಿರಿ, ಇಲ್ಲದಿದ್ದರೆ ಜಘನ್ಯ ಪ್ರೋಷಧಕಾಲವು ಇಷ್ಟೆಂದು ಶಾಸ್ತ್ರದಲ್ಲಿ ಪ್ರಮಾಣ ತೋರಿಸಿಕೊಡಿರಿ. ಇದಂತೂ ದೊಡ್ಡ ಹೆಸರನ್ನು ಇಟ್ಟುಕೊಂಡು ಜನರನ್ನು ಭ್ರಾಂತಿಯಲ್ಲಿ ಸಿಲುಕಿಸುವ ಪ್ರಯೋಜನವಿದೆಯೆಂದು ಭಾಸವಾಗುತ್ತದೆ.

ಅದರಂತೆ ವ್ರತಗಳನ್ನು ತೆಗೆದುಕೊಳ್ಳುವ ಪಾಠವನ್ನಂತೂ ಬೇರೆ ಯಾವನೋ ಓರ್ವನು ಪಠಿಸುತ್ತಾನೆ ಮತ್ತು ಸ್ವೀಕಾರವನ್ನು ಇನ್ನೊಬ್ಬನು ಮಾಡುತ್ತಾನೆ. ಆದರೆ ಪಾಠದಲ್ಲಂತೂ ''ನನ್ನ ತ್ಯಾಗವಿದೆ'ಯೆಂಬ ವಚನವಿದೆ;

ಆದುದರಿಂದ ಯಾವನು ತ್ಯಾಗ ಮಾಡುವವನಿದ್ದಾನೆ ಅವನೇ ಪಾತ ಪಠಿಸಬೇಕಾಗುವುದು. ಒಂದು ವೇಳೆ ಪಾಠವು ಬಾರದಿದ್ದರೆ ಮಾತುಗಳಲ್ಲೇ ಹೇಳಬೇಕು. ಆದರೆ ಪದ್ಧತಿಯ ಸಲುವಾಗಿ ಈ ತರದ ರೀತಿಯಿದೆ.

ಮತ್ತು ಪ್ರತಿಜ್ಞೆಯನ್ನು ಗ್ರಹಣ ಮಾಡುವ-ಮಾಡಿಸುವುದರದಂತೂ ಮುಖ್ಯತೆಯಿದೆ ಮತ್ತು ಅದನ್ನು ವಿಧಿ ನಿಯಮದಂತೆ ಪಾಲಿಸುವುದರಲ್ಲಿ ಶಿಥಿಲತೆಯಿದೆ, ಆದರೆ ಭಾವವು ನಿರ್ಮಲವಾಗುವ ವಿವೇಕವಿಲ್ಲ. ಆರ್ತಪರಿಣಾಮಗಳಿಂದ ಹಾಗೂ ಲೋಭಾದಿಗಳಿಂದ ಕೂಡ ಉಪವಾಸಾದಿಗಳನ್ನು ಮಾಡಿ ಅದನ್ನು ಧರ್ಮವೆಂದು ಮನ್ನಿಸುತ್ತಾರೆ, ಆದರೆ ಫಲವು ಪರಿಣಾಮಗಳಿಂದ ದೊರಕುತ್ತದೆ.

ಇವೇ ಮೊದಲಾದ ಅನೇಕ ಕಾಲ್ಪನಿಕ ಮಾತುಗಳನ್ನು ಆಡುತ್ತಾರೆ; ಅವು ಜೈನಧರ್ಮದಲ್ಲಿ ಸಂಭವಿಸುವುದಿಲ್ಲ.

ಈ ಪ್ರಕಾರ ಈ ಜೈನರಲ್ಲಿ ಶ್ವೇತಾಂಬರ ಮತವಿದೆ, ಅವರು ಕೂಡ ದೇವಾದಿಕರ ಮತ್ತು ತತ್ತ್ವಗಳ ಹಾಗೂ ಮೋಕ್ಷಮಾರ್ಗ ಮೊದಲಾದವುಗಳ ನಿರೂಪಣೆಯನ್ನು ವಿಪರೀತವಾಗಿ ಮಾಡುತ್ತಾರೆ; ಆದುದರಿಂದ ಮಿಥ್ಯಾದರ್ಶನ ಮೊದಲಾದವುಗಳ ಪೋಷಕವಾಗಿರುವುದರಿಂದ ತ್ಯಾಜ್ಯವಿದೆ.

ಜಿನಧರ್ಮದ ಸತ್ಯಸ್ವರೂಪವನ್ನು ಮುಂದೆ ಹೇಳುತ್ತೇವೆ; ಅದರ ಮುಖಾಂತರ ಮೋಕ್ಷಮಾರ್ಗದಲ್ಲಿ ಪ್ರವರ್ತನೆ ಮಾಡುವುದು ಯೋಗ್ಯವಿದೆ. ಅದರಲ್ಲಿ ಪ್ರವರ್ತಿಸುವುದರಿಂದ ತಮ್ಮದು ಪರಮ ಕಲ್ಯಾಣವಾಗುವುದು.

**ಈ ಪ್ರಕಾರ ಶ್ರೀ ಮೋಕ್ಷಮಾರ್ಗಪ್ರಕಾಶಕ ಶಾಸ್ತ್ರದಲ್ಲಿ**
**ಅನ್ಯಮತದ ನಿರೂಪಣೆ ಮಾಡುವ**
**ಐದನೆಯ ಅಧಿಕಾರವು ಸಮಾಪ್ತವಾಯಿತು.**

# ಆರನೆಯ ಅಧಿಕಾರ

## ಕುದೇವ, ಕುಗುರು ಮತ್ತು ಕುಧರ್ಮದ ನಿಷೇಧ

ಮಿಥ್ಯಾ ದೇವರ ಭಜಿಸಿದರೆ ಮಿಥ್ಯಾಭಾವವೆ ಬಂದಪುದು ।
ಅದನುಳಿದು ನಿಜ ಭಜಿಸಿದರೆ ಹಿತ-ಹೇತು ಆಗುವುದು ॥

**ಅರ್ಥ :-** ಅನಾದಿಯಿಂದ ಜೀವರುಗಳಲ್ಲಿ ಮಿಥ್ಯಾದರ್ಶನ ಮೊದಲಾದ ಭಾವಗಳು ಕಂಡು ಬರುತ್ತವೆ, ಅವುಗಳ ಪುಷ್ಟತೆಗೆ ಕುದೇವ-ಕುಗುರು-ಕುಧರ್ಮಗಳ ಸೇವನೆಯು ಕಾರಣವಾಗಿದೆ; ಅವುಗಳ ತ್ಯಾಗವಾದ ನಂತರ ಮೋಕ್ಷಮಾರ್ಗದಲ್ಲಿ ಪ್ರವೃತ್ತಿಯಾಗುತ್ತದೆ; ಆದುದರಿಂದ ಇವುಗಳ ನಿರೂಪಣೆ ಮಾಡಲಾಗುತ್ತದೆ.

### ಕುದೇವ ನಿರೂಪಣೆ ಹಾಗೂ ಕುದೇವ ಶ್ರದ್ಧೆಯ ನಿಷೇಧ :-

ಯಾರು ನಮ್ಮ ಹಿತದ ಕರ್ತೃಗಳಿಲ್ಲ ಮತ್ತು ಭ್ರಾಂತಿಯಿಂದ ಅವರನ್ನು ಹಿತದ ಕರ್ತೃಗಳೆಂದು ತಿಳಿದುಕೊಂಡು ಸೇವನೆ ಮಾಡಲಾಗುತ್ತಿದೆ ಅವರು ಕುದೇವರಿದ್ದಾರೆ.

ಅವರ ಸೇವೆಯನ್ನು ಮೂರು ಪ್ರಕಾರದ ಪ್ರಯೋಜನ ಸಹಿತ ಮಾಡುತ್ತಾರೆ. ಎಲ್ಲಿ ಮೋಕ್ಷದ ಪ್ರಯೋಜನ ವಿರುತ್ತದೆ, ಎಲ್ಲಿ ಪರಲೋಕದ ಪ್ರಯೋಜನವಿರುತ್ತದೆ ಮತ್ತು ಎಲ್ಲಿ ಇಹಲೋಕದ ಪ್ರಯೋಜನವಿರುತ್ತದೆ, ಆದರೆ ಪ್ರಯೋಜನವಂತೂ ಸಿದ್ಧವಾಗುವುದಿಲ್ಲ, ಒಂದಿಷ್ಟು ವಿಶೇಷ ಹಾನಿಯೇ ಆಗುತ್ತದೆ; ಆದುದರಿಂದ ಅವರ ಸೇವನೆಯು ಮಿಥ್ಯಾಭಾವವಿದೆ. ಅದನ್ನು ತಿಳಿಸಿಕೊಡುತ್ತಾರೆ.

ಅನ್ಯಮತಗಳಲ್ಲಿಯಾರ ಸೇವನೆಯಿಂದ ಮುಕ್ತಿಯಾಗುವುದೆಂದು ಹೇಳಿದೆ, ಅವರ ಸೇವನೆಯನ್ನು ಮೋಕ್ಷದ ಸಲುವಾಗಿ ಅದೆಷ್ಟೋ ಜೀವರುಗಳು ಮಾಡುತ್ತಾರೆ, ಆದರೆ ಮೋಕ್ಷವಾಗುವುದಿಲ್ಲ. ಅವರ ವರ್ಣನೆಯನ್ನು ಈ ಮೊದಲೇ ವಿವಿಧಮತ ಸಮೀಕ್ಷೆಯೆಂಬ ಅಧಿಕಾರದಲ್ಲಿ ಮಾಡಲಾಗಿದೆ. ಮತ್ತು ಅನ್ಯಮತದಲ್ಲಿ ಹೇಳಿದ ದೇವರುಗಳ ಸೇವೆಯನ್ನು ಅದೆಷ್ಟೋ ಜೀವರುಗಳು 'ಪರಲೋಕದಲ್ಲಿ ಸುಖವಾಗುವುದು, ದುಃಖವಾಗದಿರಲೆ'ಂಬ ಪ್ರಯೋಜನ ದೊಡನೆ ಮಾಡುತ್ತಾರೆ. ಆದರೆ ಇಂಥ ಸಿದ್ಧಿಯಂತೂ ಪುಣ್ಯವು ಉತ್ಪನ್ನವಾಗುವುದರಿಂದ ಮತ್ತು ಪಾಪವು ಉತ್ಪನ್ನವಾಗದಿರುವುದರಿಂದ ಆಗುತ್ತದೆ; ಆದರೆ ತಾನಂತೂ ಪಾಪವನ್ನು ಉತ್ಪನ್ನ ಮಾಡುತ್ತಾನೆ ಮತ್ತು ಈಶ್ವರನು ನನಗೆ ಒಳ್ಳೆಯದು ಮಾಡುತ್ತಾನೆಂದು ಹೇಳುವುದಂತೂ ಅನ್ಯಾಯವಿದೆ; ಏಕೆಂದರೆ ಒಬ್ಬನಿಗೆ ಪಾಪದ ಫಲ ಕೊಡುವುದು ಇನ್ನೊಬ್ಬನಿಗೆ ಕೊಡದಿರುವುದಂತೂ ಸಾಧ್ಯವಿಲ್ಲ. ಹೇಗೆ ತನ್ನ ಪರಿಣಾಮ ಮಾಡುವವನು ಹಾಗೆಯೇ ಫಲ ಪಡೆಯುವನು; ಯಾರ ಒಳಿತು ಕೆಡಕು ಮಾಡುವಂಥ ಈಶ್ವರನಿಲ್ಲ.

ಇನ್ನು ಆ ದೇವರುಗಳ ಸೇವನೆ ಮಾಡುತ್ತ ಆ ದೇವರುಗಳ ಹೆಸರನ್ನಂತೂ ಹೇಳುತ್ತಾರೆ ಮತ್ತು ಅನ್ಯ ಜೀವಗಳ ಹಿಂಸೆ ಮಾಡುತ್ತಾರೆ, ಅಲ್ಲದೆ ಭೋಜನ, ನೃತ್ಯ ಮೊದಲಾದವುಗಳ ಮುಖಾಂತರ ತಮ್ಮ ಇಂದ್ರಿಯಗಳ ವಿಷಯ ಪೋಷಣೆ ಮಾಡುತ್ತಾರೆ; ಆ ಪಾಪಪರಿಣಾಮಗಳ ಫಲವಂತೂ ತಗಲಿದಲ್ಲದೆ ಇರಲಾರದು. ಹಿಂಸೆ-ವಿಷಯ ಕಷಾಯಗಳನ್ನು ಎಲ್ಲರೂ ಪಾಪವೆಂದು ಹೇಳುತ್ತಾರೆ ಮತ್ತು ಪಾಪದ ಫಲವನ್ನು ಎಲ್ಲರೂ ಕೆಡಕೆಂದೇ ಮನ್ನಿಸುತ್ತಾರೆ; ಮತ್ತು ಕುದೇವಗಳ ಸೇವನೆಯಲ್ಲಿ ಹಿಂಸೆ-ವಿಷಯ ಕಷಾಯಗಳದ್ದೇ ಅಧಿಕಾರವಿದೆ; ಅದಕ್ಕಾಗಿ ಕುದೇವರ ಸೇವನೆಯಿಂದ ಪರಲೋಕದಲ್ಲಿ ಒಳ್ಳೆಯದಾಗುವುದಿಲ್ಲ.

## ವ್ಯಂತರಾದಿಕರ ಸ್ವರೂಪ ಮತ್ತು ಅವರ ಪೂಜೆಯ ನಿಷೇಧ :-

ಬಹಳಷ್ಟು ಜೀವರುಗಳು ಈ ಪರ್ಯಾಯಕ್ಕೆ ಸಂಬಂಧಿಸಿದ ಶತ್ರು ನಾಶ ಹಾಗೂ ರೋಗಾದಿಗಳ ನಿವಾರಣೆ, ಧನಪ್ರಾಪ್ತಿ ಮತ್ತು ಪುತ್ರ ಪ್ರಾಪ್ತಿ ಇತ್ಯಾದಿ ದುಃಖಗಳನ್ನು ದೂರಮಾಡುವ ಹಾಗೂ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವ ಹೀಗೆ ಅನೇಕ ಪ್ರಯೋಜನಗಳೊಡನೆ ಕುದೇವರುಗಳ ಸೇವನೆ ಮಾಡುತ್ತಾರೆ; ಹನುಮಂತ ಮೊದಲಾದವರನ್ನು ಪೂಜಿಸುತ್ತಾರೆ; ದೇವಿಯರನ್ನು ಪೂಜಿಸುತ್ತಾರೆ; ಗೌರಿ, ಸಾಂಝೀ ಮೊದಲಾದವರನ್ನು ರಚಿಸಿ ಪೂಜಿಸುತ್ತಾರೆ; ಚೌಥ, ಶೀತಲಮಾತಾ, ದಹಾಡಿ ಮೊದಲಾದವರನ್ನು ಪೂಜಿಸುತ್ತಾರೆ; ಭೂತ-ಪ್ರೇತ, ಪಿತೃ, ವ್ಯಂತರಾದಿಕರನ್ನು ಪೂಜಿಸುತ್ತಾರೆ; ಸೂರ್ಯ-ಚಂದ್ರ, ಶನಿ ಮೊದಲಾದ ಜ್ಯೋತಿಷ್ಕರುಗಳನ್ನು ಪೂಜಿಸುತ್ತಾರೆ; ಪೀರ-ಪೈಗಂಬರಾದಿಗಳನ್ನು ಪೂಜಿಸುತ್ತಾರೆ; ಹಸು, ಕುದುರೆ ಮೊದಲಾದ ತಿರ್ಯಂಚಗಳನ್ನು ಪೂಜಿಸುತ್ತಾರೆ; ಅಗ್ನಿ-ಜಲ ಮೊದಲಾದುವನ್ನು ಪೂಜಿಸುತ್ತಾರೆ; ಶಸ್ತ್ರಾದಿಗಳನ್ನು ಪೂಜಿಸುತ್ತಾರೆ; ಹೆಚ್ಚಿಗೇನು ಹೇಳುವುದು ತಿಪ್ಪೆ ಮೊದಲಾದವುಗಳನ್ನು ಕೂಡ ಪೂಜಿಸುತ್ತಾರೆ.

ಹೀಗೆ ಕುದೇವಾದಿಗಳ ಸೇವನೆಯು ಮಿಥ್ಯಾದೃಷ್ಟಿಯಿಂದಾಗುತ್ತದೆ; ಏಕೆಂದರೆ ಮೊದಲಂತೂ ಅವನು ಯಾರ ಸೇವನೆ ಮಾಡುತ್ತಾನೆ ಅವರಲ್ಲಿ ಕೆಲವರಂತೂ ಕಲ್ಪನಾ ಮಾತ್ರ ದೇವರಿದ್ದಾರೆ. ಆದುದರಿಂದ ಅವರ ಸೇವನೆಯು ಕಾರ್ಯಕಾರಿ ಹೇಗಾಗುವುದು ? ಮತ್ತು ಕೆಲವರಂತೂ ವ್ಯಂತರಾದಿಕರಿದ್ದಾರೆ. ಅವರು ಯಾರದೂ ಒಳಿತು-ಕೆಡಕು ಮಾಡಲಿಕ್ಕೆ ಸಮರ್ಥರಿಲ್ಲ. ಒಂದು ವೇಳೆ ಅವರೇ ಸಮರ್ಥರಿದ್ದರೆ ಅವರೇ ಕರ್ತೃಗಳಾಗುವರು; ಆದರೆ ಅವರು ಮಾಡುವುದರಿಂದ ಏನೂ ಆಗುತ್ತಿರುವಂತೆ ಕಂಡು ಬರುವುದಿಲ್ಲ. ಪ್ರಸನ್ನರಾಗಿ ಧನಾದಿಗಳನ್ನು ಕೊಡುವ ಸಾಧ್ಯತೆಯಿಲ್ಲ ಮತ್ತು ದ್ವೇಷಿಗಳಾಗಿ ಕೆಡಕನ್ನೂ ಮಾಡುವ ಸಾಧ್ಯತೆಯಿಲ್ಲ.

**ಪ್ರಶ್ನೆ :-** ದುಃಖ ಕೊಡುತ್ತಿರುವುದಂತೂ ಕಂಡುಬರುತ್ತದೆ, ಮನ್ನಿಸುವುದರಿಂದ ದುಃಖ ಕೊಡುವುದನ್ನು ನಿಲ್ಲಿಸಿ ಬಿಡುತ್ತಾರಲ್ಲವೇನು ?

**ಉತ್ತರ :-** ಈತನಿಗೆ ಪಾಪದ ಉದಯವಿದ್ದಾಗಲೇ ಅವರಿಗೆ ಅಂಥ ಕುತೂಹಲದ ಬುದ್ಧಿಯಾಗುತ್ತದೆ, ಅದರಿಂದ ಅವರು ಚೇಷ್ಟೆ ಮಾಡುತ್ತಾರೆ, ಚೇಷ್ಟೆ ಮಾಡುವುದರಿಂದ ಇವನು ದುಃಖಿಯಾಗುತ್ತಾನೆ. ಇನ್ನು ಅವರು ಕುತೂಹಲದಿಂದ ಏನಾದರೂ ಹೇಳುವರು ಮತ್ತು ಇವನು ಅವರು ಹೇಳಿದುದನ್ನು ಮಾಡದಿದ್ದರೆ ಅವರು ಚೇಷ್ಟೆ ಮಾಡುವುದನ್ನು ನಿಲ್ಲಿಸಿ ಬಿಡುತ್ತಾರೆ; ಮತ್ತು ಇವನನ್ನು ದುರ್ಬಲವೆಂದು ತಿಳಿದುಕೊಂಡು ಕುತೂಹಲ ಮಾಡುತ್ತಿರುತ್ತಾರೆ. ಒಂದು ವೇಳೆ ಈತನಿಗೆ ಪುಣ್ಯದ ಉದಯವಿದ್ದರೆ ಏನನ್ನೂ ಮಾಡುವ ಸಾಧ್ಯತೆಯಿಲ್ಲ.

ಯಾವ ಜೀವನು ಅವರನ್ನು ಪೂಜಿಸುವುದಿಲ್ಲ, ಮತ್ತು ಅವರ ನಿಂದೆ ಮಾಡುತ್ತಾನೆ ಅವನೊಡನೆ ಅವರು ಕೂಡ ದ್ವೇಷಮಾಡುತ್ತಾರೆ, ಆದರೆ ಅವನಿಗೆ ದುಃಖಕೊಡುವ ಸಾಧ್ಯತೆಯಿಲ್ಲವೆಂಬುದೂ ಕಂಡುಬರುತ್ತದೆ. ಇಂಥವನು ನಮ್ಮನ್ನು ಮನ್ನಿಸುವುದಿಲ್ಲ, ಆದರೆ ಅವನ ಮೇಲೆ ನಮ್ಮದೇನೂ ನಡೆಯುವುದಿಲ್ಲವೆಂದು ಹೇಳುತ್ತಿರುವುದು ತಿಳಿದುಬರುತ್ತದೆ. ಆದುದರಿಂದ ವ್ಯಂತರಾದಿಕರು ಏನನ್ನೂ ಮಾಡುವಲ್ಲಿ ಸಮರ್ಥರಿಲ್ಲ, ಇವನಿಗೆ ತನ್ನ ಪುಣ್ಯ-ಪಾಪಗಳಿಂದಲೇ ಸುಖ-ದುಃಖಗಳಾಗುತ್ತವೆ; ಪ್ರತಿಯಾಗಿ ಅವರನ್ನು ಮನ್ನಿಸುವುದರಿಂದ-ಪೂಜಿಸುವುದರಿಂದ ರೋಗವಾಗುತ್ತದೆಯೇ ವಿನಹ ಯಾವ ಕಾರ್ಯಸಿದ್ಧಿಯಾಗುವುದಿಲ್ಲ.

ಅದರಂತೆ ಕಾಲ್ಪನಿಕ ದೇವರಿದ್ದಾರೆ ಅವರಿಂದ ಕೂಡ ಕೆಲವೊಂದು ಅತಿಶಯ, ಚಮತ್ಕಾರಕಗಳು ಕಂಡಬರುತ್ತವೆ ಅವು ವ್ಯಂತರಾದಿಕರಿಂದ ಮಾಡಲ್ಪಟ್ಟಿರುತ್ತವೆಂದು ತಿಳಿಯಬೇಕು. ಪೂರ್ವಪರ್ಯಾಯದಲ್ಲಿ ಅವರ ಸೇವಕನಿದ್ದವನೊಬ್ಬನು ಸತ್ತು ವ್ಯಂತರನಾಗುವನು, ಅವನಿಗೆ ಯಾವುದೇ ನಿಮಿತ್ತದಿಂದ ಇಂಥ ಬುದ್ಧಿಯಾದಾಗ ಅವನು ಜಗತ್ತಿನಲ್ಲಿ ಅವನನ್ನು ಸೇವನೆ ಮಾಡುವ ಪ್ರವೃತ್ತಿಮಾಡಿಸುವ ಸಲುವಾಗಿ ಏನಾದರೂ ಚಮತ್ಕಾರ ತೋರಿಸುತ್ತಾನೆ. ಭಾವುಕ ಜಗತ್ತು ಒಂದಿಷ್ಟು ಚಮತ್ಕಾರ ನೋಡಿ ಆ ಕಾರ್ಯದಲ್ಲಿ ತೊಡಗುತ್ತದೆ. ಯಾವ ಪ್ರಕಾರ ಜಿನ ಪ್ರತಿಮೆಗಳದ್ದು ಕೂಡ ಅತಿಶಯವಾಗುವುದನ್ನು ಕೇಳುತ್ತೇವೆ-ನೋಡುತ್ತೇವೆ, ಆದರೆ ಅದು ಜಿನಕೃತವಲ್ಲ, ಜೈನ ವ್ಯಂತರಾದಿಕರಿರುತ್ತಾರೆ; ಅದೇ ಪ್ರಕಾರ ಕುದೇವರ ಯಾವ ಚಮತ್ಕಾರವಾಗುತ್ತದೆ ಅದು ಅವರ ಅನುಚರ ವ್ಯಂತರಾದಿಕರಿಂದ ಮಾಡಲ್ಪಟ್ಟಿರುತ್ತದೆಂದು ತಿಳಿಯಬೇಕು.

ಅದರಂತೆ ಅನ್ಯಮತದಲ್ಲಿ ಪರಮೇಶ್ವರನು ಭಕ್ತರಿಗೆ ಸಹಾಯ ಮಾಡಿದನು ಮತ್ತು ಪ್ರತ್ಯಕ್ಷ ದರ್ಶನ ಕೊಟ್ಟನೆಂಬುದಾಗಿ ಹೇಳುತ್ತಾರೆ; ಅಲ್ಲಿ ಅದೆಷ್ಟೋ ಕಾಲ್ಪನಿಕ ಮಾತುಗಳನ್ನು ಹೇಳಿದ್ದಾರೆ. ಅದೆಷ್ಟೋ ಅವರ ಅನುಚರ ವ್ಯಂತರಾದಿಕರಿಂದ ಮಾಡಲಾದ ಕಾರ್ಯಗಳನ್ನು ಪರಮೇಶ್ವರನು ಮಾಡಿದನೆಂದು ಹೇಳುತ್ತಾರೆ. ಒಂದು ವೇಳೆ ಪರಮೇಶ್ವರನು ಮಾಡಿದ್ದರೆ ಪರಮೇಶ್ವರನಂತೂ ತ್ರಿಕಾಲಜ್ಞನಿದ್ದಾನೆ, ಎಲ್ಲ ಪ್ರಕಾರದಿಂದ ಸಮರ್ಥನಿದ್ದಾನೆ; ಭಕ್ತರಿಗೆ ದುಃಖವನ್ನೇಕೆ ಆಗಗೊಡುವನು ? ಇಂದುಕೂಡ ಮ್ಲೇಚ್ಛರು ಬಂದು ಭಕ್ತರಿಗೆ ಉಪದ್ರವ ಮಾಡುತ್ತಿರುವುದು, ಧರ್ಮದ ವಿಧ್ವಂಸ ಮಾಡುತ್ತಿರುವುದು, ಮೂರ್ತಿಗಳಿಗೆ ವಿಘ್ನ ಮಾಡುತ್ತಿರುವುದನ್ನು ಕಾಣುತ್ತೇವೆ. ಒಂದು ವೇಳೆ ಪರಮೇಶ್ವರನಿಗೆ ಇಂಥ ಕಾರ್ಯಗಳ ಜ್ಞಾನವಿಲ್ಲದಿದ್ದರೆ ಅವನ ಸರ್ವಜ್ಞತೆಯು ಉಳಿಯುವುದಿಲ್ಲ. ತಿಳಿದ ನಂತರವೂ ಕೂಡ ಸಹಾಯ ಮಾಡದಿದ್ದರೆ ಭಕ್ತವತ್ಸಲತೆಯು ಹೊರಟುಹೋಯಿತು ಮತ್ತು ಸಾಮರ್ಥ್ಯಹೀನನಾದನು. ಇನ್ನು ಸಾಕ್ಷೀಭೂತನಿರುತ್ತಾನೆಂದರೆ ಮೊದಲು ಭಕ್ತರಿಗೆ ಸಹಾಯ ಮಾಡಿದನೆಂದು ಹೇಳುತ್ತಾರೆ ಅದು ಅಸತ್ಯವಿದೆ; ಏಕೆಂದರೆ ಅವನದಂತೂ ಒಂದೇ ವೃತ್ತಿಯಿದೆ.

ಅಂಥ ಭಕ್ತಿಯಿಲ್ಲವೆಂದು ಹೇಳಿದರೆ ಮ್ಲೇಚ್ಛರಿಗಿಂತಂತೂ ಒಳ್ಳೆಯವರಿದ್ದಾರೆ ಮತ್ತು ಮೂರ್ತಿ ಮೊದಲಾದುವಂತೂ ಅವನದೇ ಸ್ಥಾಪನೆಯಿತ್ತು, ಅವಕ್ಕಾದರೂ ವಿಘ್ನವಾಗಗೊಡಬಾರದಿತ್ತು ? ಮತ್ತು ಮ್ಲೇಚ್ಛ-ಪಾಪಿಗಳ ಉದಯವಾಗುತ್ತದೆ ಅದು ಪರಮೇಶ್ವರ ಮಾಡಿದ್ದಿದೆಯೋ ಅಥವಾ ಇಲ್ಲವೋ ? ಒಂದು ವೇಳೆ ಪರಮೇಶ್ವರನು ಮಾಡಿದ್ದಿದ್ದರೆ ನಿಂದಕರನ್ನು ಸುಖಿಗಳನ್ನಾಗಿ ಮಾಡುತ್ತಾನೆ, ಭಕ್ತರಿಗೆ ದುಃಖಕೊಡುವಂಥವರವನ್ನು ಉತ್ಪನ್ನ ಮಾಡುತ್ತಾನೆ, ಅಲ್ಲಿ ಭಕ್ತವತ್ಸಲತನವು ಹೇಗೆ ಉಳಿಯುವುದು ? ಮತ್ತು ಪರಮೇಶ್ವರನು ಮಾಡಿರದಿದ್ದರೆ

ಪರಮೇಶ್ವರನು ಸಾಮರ್ಥ್ಯಹೀನನಾದನು; ಆದುದರಿಂದ ಪರಮೇಶ್ವರ ಕೃತವಾದ ಕಾರ್ಯವಿಲ್ಲ. ಯಾವನೋ ಅನುಚರನಾದ ವ್ಯಂತರನೇ ಚಮತ್ಕಾರ ತೋರಿಸುತ್ತಾನೆಂದೇ ನಿಶ್ಚಯ ಮಾಡಬೇಕು.

**ಪ್ರಶ್ನೆ :-** ಯಾವನೋ ವ್ಯಂತರನು ತನ್ನ ಪ್ರಭುತ್ವ ಹೇಳುತ್ತಾನೆ, ಅಪ್ರತ್ಯಕ್ಷವನ್ನು ತೋರಿಸಿಕೊಡುತ್ತಾನೆ, ಯಾವನೋ ಕುಸ್ಥಾನ ನಿವಾಸಾದಿಗಳನ್ನು ತೋರಿಸಿ ತನ್ನ ಹೀನತೆ ಹೇಳುತ್ತಾನೆ, ಕೇಳಿದರೆ ಹೇಳುವುದಿಲ್ಲ, ಭ್ರಾಂತಿ ರೂಪದ ವಚನ ಆಡುತ್ತಾನೆ, ಇತರರನ್ನು ವಿಪರೀತವಾಗಿ ಪರಿಣಮಿತ ಮಾಡುತ್ತಾನೆ, ದುಃಖಕೊಡುತ್ತಾನೆ. ಇವೇ ಮೊದಲಾದ ವಿಚಿತ್ರತೆಯು ಯಾವ ಪ್ರಕಾರವಿದೆ ?

**ಉತ್ತರ :-** ವ್ಯಂತರರಲ್ಲಿ ಪ್ರಭುತ್ವದ ಹೀನಾಧಿಕತೆಯಂತೂ ಇದೆ, ಆದರೆ ಆ ಕುಸ್ಥಾನದಲ್ಲಿ ನಿವಾಸಾದಿಗಳನ್ನು ತಿಳಿಸಿ ಹೀನತೆಯನ್ನು ದರ್ಶಿಸುತ್ತಾರೆ ಅದಂತೂ ಕುತೂಹಲದಿಂದ ವಚನ ಆಡುತ್ತಾರೆ. ವ್ಯಂತರರು ಬಾಲಕರ ಹಾಗೆ ಕುತೂಹಲ ಮಾಡುತ್ತಿರುತ್ತಾರೆ. ಯಾವ ಪ್ರಕಾರ ಬಾಲಕನು ಕುತೂಹಲದಿಂದ ತನ್ನನ್ನು ಅಲ್ಪವಾಗಿ ತೋರಿಸುತ್ತಾನೆ, ಪೀಡಿಸುತ್ತಾನೆ, ಬಯ್ಯುತ್ತಾನೆ, ಉಚ್ಚಸ್ವರದಿಂದ ರೋದಿಸುತ್ತಾನೆ, ಅನಂತರ ನಗಲಾರಂಭಿಸುತ್ತಾನೆ; ಅದೇ ಪ್ರಕಾರ ವ್ಯಂತರರು ಚೇಷ್ಟೆ ಮಾಡುತ್ತಾರೆ. ಒಂದು ವೇಳೆ ಕುಸ್ಥಾನದ ನಿವಾಸಿಗಳೇ ಆಗಿದ್ದರೂ ಉತ್ತಮಸ್ಥಾನದಲ್ಲಿ ಬರುತ್ತಾರೆ; ಅಲ್ಲಿ ಯಾರ ತರುವಿಕೆಯಿಂದ ಬರುತ್ತಾರೆ ? ತಮ್ಮಿಂದ ತಾವೇ ಬರುತ್ತಾರೆಂದರೆ ತಮ್ಮ ಶಕ್ತಿಯಿದ್ದಮೇಲೇಕೆ ಕುಸ್ಥಾನದಲ್ಲಿರುತ್ತಾರೆ ? ಆದುದರಿಂದ ಇವರ ಸ್ಥಳವಂತೂ ಎಲ್ಲಿ ಉತ್ಪನ್ನರಾಗುತ್ತಾರೆ ಅಲ್ಲಿ ಎಂದರೆ ಈ ಪೃಥ್ವಿಯ ಕೆಳಗೆ ಮತ್ತು ಮೇಲೆ ಇದೆ, ಅದು ಮನೋಜ್ಞವಿದೆ. ಕುತೂಹಲದ ಸಲುವಾಗಿ ಬೇಕಾದಂತೆ ಆಡುತ್ತಾರೆ. ಒಂದು ವೇಳೆ ಇವರಿಗೆ ಪೀಡೆಯಾಗುತ್ತಿದ್ದರೆ ಅಳುತ್ತಿರುವಂತೆಯೇ ಹೇಗೆ ನಗಲು ತೊಡಗುತ್ತಾರೆ ?

ಮಂತ್ರಾದಿಗಳ ಶಕ್ತಿಯು ಅಚಿಂತ್ಯವಿದೆ; ಅಲ್ಲಿ ಯಾವುದೇ ಒಂದು ನಿಜವಾದ ಮಂತ್ರದ ನಿಮಿತ್ತ-ನೈಮಿತ್ತಿಕ ಸಂಬಂಧವಾದರೆ ಸ್ವಲ್ಪವೂ ಅವನ ಗಮನಾದಿಗಳಾಗುವ ಸಾಧ್ಯತೆಯಿಲ್ಲ, ಮತ್ತು ಸ್ವಲ್ಪ ದುಃಖವುತ್ಪನ್ನವಾಗುತ್ತದೆ ಮತ್ತು ಯಾವನೋ ಪ್ರಬಲನು ಅವನನ್ನು ತಡೆದಾಗ ನಿಂತು ಬಿಡುತ್ತಾನೆ ಮತ್ತು ತಾನೂ ಕೂಡ ನಿಂತು ಬಿಡುತ್ತಾನೆ. ಇತ್ಯಾದಿಯಾಗಿ ಮಂತ್ರದ ಶಕ್ತಿಯಿದೆ, ಆದರೆ ಸುಡಿಸುವುದು ಮೊದಲಾದವು ಆಗುವುದಿಲ್ಲ. ಮಂತ್ರವಾದಿಗಳು ಸುಡಿಸಿದೆವೆಂದು ಹೇಳುತ್ತಾರೆ; ಅವನು ಪುನಃ ಪ್ರಕಟವಾಗುತ್ತಾನೆ, ಏಕೆಂದರೆ ವೈಕ್ರಿಯಿಕ ಶರೀರವನ್ನು ಸುಡುವುದು ಮೊದಲಾದವು ಸಂಭವವಿಲ್ಲ.

ವ್ಯಂತರರ ಅವಧಿಜ್ಞಾನವು ಒಬ್ಬನಿಗೆ ಅಲ್ಪಕ್ಷೇತ್ರ-ಕಾಲಗಳನ್ನು ತಿಳಿಯುವದಿದ್ದರೆ ಇನ್ನೊಬ್ಬನಿಗೆ ಅಧಿಕವಿರುತ್ತದೆ. ಅಲ್ಲಿ ಅವರಿಗೆ ಇಚ್ಛೆಯಿದ್ದರೆ ಮತ್ತು ತಮಗೆ ಜ್ಞಾನವು ಅಧಿಕವಿದ್ದರೆ ಅಪ್ರತ್ಯಕ್ಷವನ್ನು ಕೇಳಿದ ಮೇಲೆ ಅದರ ಉತ್ತರ ಕೊಡುತ್ತಾರೆ ಅಲ್ಪ ಜ್ಞಾನವಿದ್ದರೆ ಅನ್ಯ ಅಧಿಕ ಜ್ಞಾನವುಳ್ಳವರನ್ನು ಕೇಳಿ ಬಂದು ಉತ್ತರ ಕೊಡುತ್ತಾರೆ. ತಮಗೆ ಅಲ್ಪ ಜ್ಞಾನವಿದ್ದರೆ ಮತ್ತು ಇಚ್ಛೆಯಿಲ್ಲದಿದ್ದರೆ ಕೇಳಿದರೂ ಕೂಡ ಅದರ ಉತ್ತರ ಕೊಡುವುದಿಲ್ಲವೆಂದು ತಿಳಿಯಬೇಕು. ಅಲ್ಪಜ್ಞಾನವುಳ್ಳ ವ್ಯಂತರರಿಗೆ ಉತ್ಪನ್ನವಾದನಂತರ ಕೆಲಕಾಲದ ಪೂರ್ವಜನ್ಮದ ಜ್ಞಾನವಾಗುವ ಸಾಧ್ಯತೆಯಿದೆ, ನಂತರ ಅದರಸ್ಮರಣ ಮಾತ್ರ ಉಳಿಯುತ್ತದೆ. ಆದುದರಿಂದ ಅಲ್ಲಿ ಇಚ್ಛೆಯಿಂದ ಅವರು ಸ್ವಲ್ಪ ಚೇಷ್ಟೆಮಾಡಿದರೆ ಮಾಡುತ್ತಾರೆ ಪೂರ್ವಜನ್ಮದ ಮಾತುಗಳನ್ನು ಹೇಳುತ್ತಾರೆ ಯಾವುದಾದರೂ ಬೇರೆ ಮಾತು ಕೇಳಿದರೆ ಅವಧಿಜ್ಞಾನವಂತೂ ಕಡಿಮೆಯಿರುವುದರಿಂದ ತನಗೆ ತಿಳಿಯದಿದ್ದರೆ ಹೇಗೆ ಹೇಳುವುದು ? ಯಾವುದರ

ಉತ್ತರ ತಮಗೆ ಕೊಡುವ ಸಾಧ್ಯತೆಯಿಲ್ಲ ಮತ್ತು ಕೊಡುವ ಇಚ್ಛೆಯಿಲ್ಲದಿದ್ದರೆ ಅಲ್ಲಿ ಮಾನ-ಕುತೂಹಲಾದಿಗಳಿಂದ ಉತ್ತರ ಕೊಡುವುದಿಲ್ಲ ಮತ್ತು ಸುಳ್ಳು ಹೇಳುತ್ತಾರೆಂದು ತಿಳಿಯಬೇಕು.

ತಮ್ಮ ಹಾಗೂ ಇತರರ ಶರೀರಗಳನ್ನು ಮತ್ತು ಪುದ್ಗಲ ಸ್ಕಂಧಗಳನ್ನು ತಮ್ಮ ಇಚ್ಛೆಗೆ ಅನುಸರಿಸಿ ಪರಿಣಮಿತ ಮಾಡುವಂಥ ಶಕ್ತಿಯು ದೇವಗಳಲ್ಲಿ ಇರುತ್ತದೆ; ಅದರಿಂದ ಅವರು ನಾನಾ ಆಕಾರಾದಿರೂಪವುಳ್ಳವರಾಗುತ್ತಾರೆ. ಮತ್ತು ಬೇರೆ ನಾನಾ ಚರಿತ್ರ ತೋರಿಸುತ್ತಾರೆ. ಇತರ ಜೀವಿಯ ಶರೀರವನ್ನು ರೋಗಾದಿಯುಕ್ತ ಮಾಡುತ್ತಾರೆ.

ತಮ್ಮ ಶರೀರಕ್ಕೆ ಮತ್ತು ಅನ್ಯಪುದ್ಗಲ ಸ್ಕಂಧಗಳಿಗೆ ಎಷ್ಟು ಶಕ್ತಿಯಿದೆ ಅಷ್ಟನ್ನೇ ಪರಿಣಮಿತ ಮಾಡಬಲ್ಲರು; ಆದುದರಿಂದ ಎಲ್ಲ ಕಾರ್ಯಮಾಡುವ ಶಕ್ತಿಯಿಲ್ಲವೆಂದು ತಿಳಿಯಬೇಕು. ಅನ್ಯಜೀವರುಗಳ ಶರೀರಾದಿಗಳನ್ನು ಅವರ ಪುಣ್ಯ-ಪಾಪದ ಅನುಸಾರವಾಗಿ ಪರಿಣಮಿತ ಮಾಡುತ್ತಾರೆ. ಅವರಿಗೆ ಪುಣ್ಯದ ಉದಯವಿದ್ದರೆ ತಾವು ರೋಗಾದಿರೂಪವಾಗಿ ಪರಿಣಮಿತ ಮಾಡುವ ಸಾಧ್ಯತೆಯಿಲ್ಲ, ಮತ್ತು ಪಾಪದ ಉದಯವಿದ್ದರೆ ಅವರ ಇಷ್ಟ ಕಾರ್ಯಮಾಡುವ ಸಾಧ್ಯತೆಯಿಲ್ಲ.

ಈ ಪ್ರಕಾರ ವ್ಯಂತರ ಮೊದಲಾದವರ ಶಕ್ತಿಯಿರುತ್ತದೆಯೆಂದು ತಿಳಿಯಬೇಕು.

**ಪ್ರಶ್ನೆ** ಃ- ಇಷ್ಟು ಶಕ್ತಿಯು ಅವರಲ್ಲಿ ಕಂಡುಬರುತ್ತದೆಯೆಂದ ಮೇಲೆ ಅವರನ್ನು ಮನ್ನಿಸುವಲ್ಲಿ-ಪೂಜಿಸುವಲ್ಲಿ ದೋಷವೇನಿದೆ ?

**ಉತ್ತರ** ಃ- ತಮ್ಮ ಪಾಪದ ಉದಯವಿರುವುದರಿಂದ ಸುಖಕೊಡುವ ಸಾಧ್ಯತೆಯಿಲ್ಲ, ಪುಣ್ಯದ ಉದಯವಿರುವುದರಿಂದ ದುಃಖಕೊಡುವ ಸಾಧ್ಯತೆಯಿಲ್ಲ; ಇನ್ನು ಅವರನ್ನು ಪೂಜಿಸುವುದರಿಂದ ಯಾವುದೇ ಪುಣ್ಯಬಂಧವಾಗುವುದಿಲ್ಲ, ರಾಗಾದಿಗಳ ವೃದ್ಧಿಯಾಗುವುದರಿಂದ ಪಾಪವೇ ಆಗುತ್ತದೆ; ಆದುದರಿಂದ ಅವರನ್ನು ಮನ್ನಿಸುವುದು ಪೂಜಿಸುವುದು ಕಾರ್ಯಕಾರಿಯಿಲ್ಲ. ಕೆಡಕನ್ನೇ ಮಾಡುವಂಥದ್ದಿದೆ, ಮತ್ತು ವ್ಯಂತರಾದಿಕರು ಮನ್ನಿಸಿಕೊಳ್ಳುತ್ತಾರೆ, ಪೂಜಿಸಿಕೊಳ್ಳುತ್ತಾರೆ ಅದು ಕುತೂಹಲ ಮಾಡುತ್ತಾರೆ; ಯಾವ ವಿಶೇಷ ಪ್ರಯೋಜನವನ್ನಿಟ್ಟುಕೊಳ್ಳುವುದಿಲ್ಲ. ಯಾರು ಅವರನ್ನು ಮನ್ನಿಸುತ್ತಾರೆ-ಪೂಜಿಸುತ್ತಾರೆ ಅವರೊಡನೆ ಕುತೂಹಲ ಮಾಡುತ್ತಿರುತ್ತಾರೆ; ಯಾರು ಮನ್ನಿಸುವುದಿಲ್ಲ-ಪೂಜಿಸುವುದಿಲ್ಲ ಅವರಿಗೆ ಏನನ್ನೂ ಹೇಳುವುದಿಲ್ಲ. ಒಂದು ವೇಳೆ ಅವರಿಗೆ ಪ್ರಯೋಜನವೇ ಇದ್ದರೆ ಮನ್ನಿಸದವರಿಗೆ-ಪೂಜಿಸದವರಿಗೆ ತುಂಬ ದುಃಖ ಕೊಡಬೇಕಿತ್ತು; ಆದರೆ ಅವರನ್ನು ಯಾರು ಮನ್ನಿಸುವುದಿಲ್ಲ-ಪೂಜಿಸುವುದಿಲ್ಲವೆಂಬ ನಿರ್ಣಯ ಮಾಡಿದ್ದಾರೆ ಅವರಿಗೆ ಏನನ್ನೂ ಹೇಳುವಂತೆ ಕಂಡುಬರುವುದಿಲ್ಲ. ಮತ್ತು ಪ್ರಯೋಜನವಂತೂ ಕ್ಷುಧಾದಿಗಳ ಪೀಡೆಯಾದಾಗ ಇರುವುದು, ಆದರೆ ಅದಂತೂ ಅವರಿಗೆ ವ್ಯಕ್ತವಾಗುವುದಿಲ್ಲ. ಒಂದು ವೇಳೆ ಆದರೆ ಅವರ ಸಲುವಾಗಿ ನೈವೇದ್ಯಾದಿಗಳನ್ನು ಕೊಡುತ್ತಾರೆ, ಅದನ್ನು ಗ್ರಹಣವನ್ನೇಕೆ ಮಾಡುವುದಿಲ್ಲ ? ಮತ್ತು ಇತರರಿಗೆ ಭೋಜನಾದಿಗಳನ್ನೇಕೆ ಮಾಡಿಸಲು ಹೇಳುತ್ತಾರೆ ? ಆದುದರಿಂದ ಅವರ ಕ್ರಿಯೆಯು ಕುತೂಹಲ ಮಾತ್ರವಿದೆ. ನಮ್ಮಲ್ಲಿ ಅವರದು ಕುತೂಹಲದ ಸ್ಥಾನವಾದ ಮೇಲೆ ದುಃಖವಾಗುವುದು, ಕೀಳುತನ ಬರುವುದು; ಆದುದರಿಂದ ಅವರನ್ನು ಮನ್ನಿಸುವುದು-ಪೂಜಿಸುವುದು ಯೋಗ್ಯವಿಲ್ಲ.

**ಪ್ರಶ್ನೆ :-** ಗಯಾ ಮೊದಲಾದವುಗಳಲ್ಲಿ ಪಿಂಡದಾನ ಮಾಡಿದರೆ ನಮಗೆ ಸದ್ಗತಿಯಾಗುವುದು, ನಾವು ಪುನಃ ಬರುವುದಿಲ್ಲವೆಂದು ವ್ಯಂತರರು ಹೇಳುತ್ತಾರೆ, ಅದು ಏನಿದೆ ?

**ಉತ್ತರ :-** ಜೀವರುಗಳಿಗೆ ಪೂರ್ವಭವದ ಸಂಸ್ಕಾರವಂತೂ ಇದ್ದೇ ಇರುತ್ತದೆ. ವ್ಯಂತರರಿಗೆ ಕೂಡ ಪೂರ್ವಭವದ ಸ್ಮರಣೆಯಿಂದ ವಿಶೇಷ ಸಂಸ್ಕಾರವಿರುತ್ತದೆ; ಆದುದರಿಂದ ಪೂರ್ವಭವದಲ್ಲಿ ಗಯಾ ಮೊದಲಾದುವಲ್ಲಿ ಪಿಂಡದಾನ ಮಾಡಿದ ಮೇಲೆ ಸದ್ಗತಿಯಾಗುತ್ತದೆಯೆಂಬ ವಾಸನೆಯಿರುವುದರಿಂದ ಇಂಥ ಕಾರ್ಯ ಮಾಡುವುದಕ್ಕೆ ಹೇಳುತ್ತಾರೆ. ಇನ್ನು ಮುಸಲ್ಮಾನ ಮೊದಲಾದವರು ಸತ್ತು ವ್ಯಂತರರಾಗುತ್ತಾರೆ ಅವರಂತೂ ಹೀಗೆ ಹೇಳುವುದಿಲ್ಲ, ಅವರಂತೂ ತಮ್ಮ ಸಂಸ್ಕಾರರೂಪವಾಗಿಯೇ ವಚನಗಳನ್ನಾಡುತ್ತಾರೆ; ಆದುದರಿಂದ ಎಲ್ಲ ವ್ಯಂತರರ ಅವಸ್ಥೆಯು ಅದೇ ಪ್ರಕಾರವಿರುತ್ತಿದ್ದರೆ ಎಲ್ಲರೂ ಸಮಾನ ಪ್ರಾರ್ಥನೆ ಮಾಡುವರು; ಆದರೆ ಹಾಗೆ ಇಲ್ಲವೆಂಬುದನ್ನು ತಿಳಿದುಕೊಳ್ಳಬೇಕು.

ಈ ಪ್ರಕಾರ ವ್ಯಂತರ ಮೊದಲಾದವರ ಸ್ವರೂಪವಿದೆಯೆಂದು ತಿಳಿಯಬೇಕು.

ಅದರಂತೆ ಸೂರ್ಯ, ಚಂದ್ರ, ಗ್ರಹ ಮೊದಲಾದವರು ಜ್ಯೋತಿಷಿಗಳಿದ್ದಾರೆ; ಅವರನ್ನು ಪೂಜಿಸುತ್ತಾರೆ ಅದು ಕೂಡ ಭ್ರಾಂತಿಯಿದೆ. ಸೂರ್ಯಾದಿಕರನ್ನು ಪರಮೇಶ್ವರರ ಅಂಶವೆಂದು ಮನ್ನಿಸಿ ಪೂಜಿಸುತ್ತಾರೆ, ಆದರೆ ಸೂರ್ಯನಲ್ಲಂತೂ ಒಂದು ಪ್ರಕಾಶದ್ದೇ ಅಧಿಕತೆಯು ಭಾಸವಾಗುತ್ತದೆ; ಹಾಗೆ ಪ್ರಕಾಶಮಾನವಂತೂ ಇತರ ರತ್ನಾದಿಗಳೂ ಇರುತ್ತವೆ; ಅವನನ್ನು ಪರಮೇಶ್ವರನ ಅಂಶವೆಂದು ಮನ್ನಿಸಬೇಕಾದರೆ ಬೇರೆ ಯಾವ ಅಂಥ ಲಕ್ಷಣವಿಲ್ಲ. ಮತ್ತು ಚಂದ್ರನನ್ನು ಹಣದ ಪ್ರಾಪ್ತಿಯ ಸಲುವಾಗಿ ಪೂಜಿಸುತ್ತಾರೆ, ಆದರೆ ಅವನ ಪೂಜೆಯಿಂದಲೇ ಹಣದ ಲಾಭವಾಗುತ್ತಿದ್ದರೆ ಸಮಸ್ತ ದರಿದ್ರರು ಈ ಕಾರ್ಯವನ್ನು ಮಾಡಬೇಕು, ಒಟ್ಟಿನಲ್ಲಿ ಇವೆಲ್ಲವು ಮಿಥ್ಯಾ-ಭಾವವಿವೆ. ಅಲ್ಲದೆ ಜ್ಯೋತಿಷ ಶಾಸ್ತ್ರದ ವಿಚಾರದಿಂದ ಅನಿಷ್ಟ ಗ್ರಹಗಳು ಬಂದ ಮೇಲೆ ಅವುಗಳ ಪೂಜೆ ಮಾಡುತ್ತಾರೆ, ಅದರ ಸಲುವಾಗಿ ದಾನ ಕೊಡುತ್ತಾರೆ; ಆದರೆ ಯಾವ ಪ್ರಕಾರ ಜಿಂಕೆ ಮೊದಲಾದವು ತಾವಾಗಿಯೇ ಗಮನ ಮಾಡುತ್ತವೆ, ಮತ್ತು ಅವು ಪುರುಷನ ಎಡ-ಬಲಕ್ಕೆ ಬಂದ ಮೇಲೆ ಸುಖ-ದುಃಖವಾಗುವ ಭವಿಷ್ಯ ಜ್ಞಾನಕ್ಕೆ ಕಾರಣವಾಗುತ್ತವೆ, ಆದರೆ ಅವೇನು ಸುಖ-ದುಃಖ ಕೊಡುವುದಕ್ಕೆ ಸಮರ್ಥವಿಲ್ಲ; ಅದೇ ಪ್ರಕಾರ ಗ್ರಹಗಳು ತಾವಾಗಿಯೇ ಗಮನ ಮಾಡುತ್ತವೆ, ಮತ್ತು ಜೀವದ ಯಥಾಸಂಭವ ಯೋಗವು ಪ್ರಾಪ್ತವಾದ ಮೇಲೆ ಸುಖ-ದುಃಖವಾಗುವ ಭವಿಷ್ಯ ಜ್ಞಾನಕ್ಕೆ ಕಾರಣವಾಗುತ್ತವೆ, ಆದರೆ ಅವೇನು ಸುಖ-ದುಃಖ ಕೊಡುವುದಕ್ಕೆ ಸಮರ್ಥವಿಲ್ಲ. ಕೆಲವರಂತೂ ಅವರ ಪೂಜೆ ಮಾಡುತ್ತಾರೆ ಅವರಿಗೆ ಕೂಡ ಇಷ್ಟಸಿದ್ಧಿಯಾಗುವುದಿಲ್ಲ; ಕೆಲವರು ಮಾಡುವುದಿಲ್ಲ ಅವರಿಗೆ ಇಷ್ಟಸಿದ್ಧಿಯಾಗುತ್ತದೆ; ಆದುದರಿಂದ ಅವರ ಪೂಜೆ ಮೊದಲಾದುವನ್ನು ಮಾಡುವುದು ಮಿಥ್ಯಾಭಾವವಿದೆ.

**ಪ್ರಶ್ನೆ :-** ದಾನ ಕೊಡುವುದಂತೂ ಪುಣ್ಯವಿದೆ. ಅದು ಒಳ್ಳೆಯದೇ ಇದೆಯಲ್ಲವೇ ?

**ಉತ್ತರ :-** ಧರ್ಮದ ಸಲುವಾಗಿ ಕೊಡುವುದು ಪುಣ್ಯವಿದೆ. ಇವರಂತೂ ದುಃಖದ ಭಯದಿಂದ ಮತ್ತು ಸುಖದ ಲೋಭದಿಂದ ಕೊಡುತ್ತಾರೆ, ಆದುದರಿಂದ ಪಾಪವೇ ಇದೆ.

ಹೀಗೆ ಅನೇಕ ಪ್ರಕಾರದಿಂದ ಜ್ಯೋತಿಷಿ ದೇವಗಳನ್ನು ಪೂಜಿಸುತ್ತಾರೆ ಅದು ಮಿಥ್ಯೆಯಿದೆ.

ಅಲ್ಲದೆ ದೇವಿ-ದಹಾಡಿ ಮೊದಲಾದವರಿದ್ದಾರೆ; ಅವರು ಕೆಲವರಂತೂ ವ್ಯಂತರಿ ಮತ್ತು ಜ್ಯೋತಿಷಿನಿಯರಿದ್ದಾರೆ, ಅವರ ಸ್ವರೂಪವನ್ನು ವಿಪರೀತವಾಗಿ ಮನ್ನಿಸಿ ಪೂಜಾದಿಗಳನ್ನು ಮಾಡುತ್ತಾರೆ. ಕೆಲವರಂತೂ ಕಾಲ್ಪನಿಕರಿದ್ದಾರೆ; ಎಂದರೆ ಅವರುಗಳ ಕಲ್ಪನೆ ಮಾಡಿ ಪೂಜಾದಿಗಳನ್ನು ಮಾಡುತ್ತಾರೆ.

ಈ ಪ್ರಕಾರ ವ್ಯಂತರ ಮೊದಲಾದವರ ಪೂಜೆಯ ನಿಷೇಧ ಮಾಡಲಾಗಿದೆ.

## ಕ್ಷೇತ್ರಪಾಲ, ಪದ್ಮಾವತಿ ಮೊದಲಾದವರ ಪೂಜೆಯ ನಿಷೇಧ :-

**ಪ್ರಶ್ನೆ :-** ಕ್ಷೇತ್ರಪಾಲ, ದಹಾಡಿ, ಪದ್ಮಾವತಿ ಮೊದಲಾದ ದೇವಿಯರು, ಯಕ್ಷ-ಯಕ್ಷಿಣಿ ಮೊದಲಾದವರು ಆ ಜಿನಮತದ ಅನುಸರಣೆ ಮಾಡುತ್ತಾರೆ ಅವರ ಪೂಜಾದಿಗಳನ್ನು ಮಾಡುವಲ್ಲಿ ಯಾವ ದೋಷವಿಲ್ಲವಲ್ಲವೇ?

**ಉತ್ತರ :-** ಜಿನಮತದಲ್ಲಿ ಸಂಯಮ ಧಾರಣ ಮಾಡುವುದರಿಂದ ಪೂಜ್ಯತೆಯು ಬರುತ್ತದೆ; ಮತ್ತು ದೇವಗಳಿಗೆ ಸಂಯಮವು ಇರುವುದೇ ಇಲ್ಲ. ಮತ್ತು ಇವರನ್ನು ಸಮ್ಯಕ್ತ್ವಿಗಳೆಂದು ಮನ್ನಿಸಿ ಪೂಜಿಸುತ್ತಾರೆ, ಆದರೆ ಭವನತ್ರಿಕದಲ್ಲಿ ಸಮ್ಯಕ್ತ್ವದ್ದು ಕೂಡ ಮುಖ್ಯತೆಯಿಲ್ಲ ಒಂದು ವೇಳೆ ಸಮ್ಯಕ್ತ್ವದಿಂದಲೇ ಪೂಜಿಸುತ್ತಿದ್ದರೆ ಸರ್ವಾರ್ಥ ಸಿದ್ಧಿಯದೇವ, ಲೌಕಾಂತಿಕದೇವ ಅವರನ್ನೂ ಏಕೆ ಪೂಜಿಸುವುದಿಲ್ಲ ? ಇವರ ಜಿನಭಕ್ತಿಯು ವಿಶೇಷವಿದೆಯೆಂದರೆ ಭಕ್ತಿಯ ವಿಶೇಷತೆಯು ಸೌಧರ್ಮ ಇಂದ್ರನದೂ ಇದೆ, ಅವನು ಸಮ್ಯಗ್ದೃಷ್ಟಿಯೂ ಇದ್ದಾನೆ; ಅವನನ್ನು ಬಿಟ್ಟುಕೊಟ್ಟು ಇವರನ್ನು ಏತಕ್ಕಾಗಿ ಪೂಜಿಸುವುದು ? ಯಾವ ಪ್ರಕಾರ ರಾಜನಿಗೆ ಪ್ರತಿಹಾರಿಗಳಿದ್ದಾರೆ ಅದೇ ಪ್ರಕಾರ ತೀರ್ಥಂಕರರಿಗೆ ಕ್ಷೇತ್ರಪಾಲಕರಿದ್ದಾರೆಂದು ಹೇಳಬಹುದು; ಆದರೆ ಸಮವಸರಣದಲ್ಲಿ ಇವರ ಅಧಿಕಾರವಿಲ್ಲ, ಇದಂತೂ ಕುರುಡು ನಂಬಿಗೆಯಿದೆ. ಮತ್ತು ಯಾವ ಪ್ರಕಾರ ಪ್ರತಿಹಾರಿಗಳಿಗೆ ಭೆಟ್ಟಿಯಾದರೆ ಅವರು ರಾಜನ ಭೆಟ್ಟಿ ಮಾಡಿಸುತ್ತಾರೆ; ಅದೇ ಪ್ರಕಾರ ಇವರು ತೀರ್ಥಂಕರರ ಸಂದರ್ಶನ ಮಾಡಿಸುವುದಿಲ್ಲ. ಅಲ್ಲಿಯಂತೂ ಭಕ್ತಿಯಿದ್ದವನೇ ತೀರ್ಥಂಕರರ ದರ್ಶನ ಮಾಡುತ್ತಾನೆ, ಯಾವುದೂ ಯಾರ ಆಧೀನವಾಗಿಲ್ಲ.

ಆಯುಧಧಾರಿಗಳೂ ರೌದ್ರ ಸ್ವರೂಪರೂ ಆದಂಥವರನ್ನು ಹಾಡಿ-ಹಾಡಿ ಭಜಿಸುತ್ತಾರೆ, ಇದೆಂಥ ಅಜ್ಞಾನತೆ! ಆದರೆ ಜಿನಮತದಲ್ಲಿ ಕೂಡ ರೌದ್ರರೂಪವು ಪೂಜ್ಯವಾದರೆ ಇದು ಕೂಡ ಅನ್ಯಮತದ ಸಮಾನವೇ ಆಯಿತು. ತೀವ್ರಮಿಥ್ಯಾತ್ವಭಾವದಿಂದ ಜಿನಮತದಲ್ಲಿ ಕೂಡ ಇಂಥ ವಿಪರೀತ ಪ್ರವೃತ್ತಿಗೆ ಮನ್ನಣೆಯಾಗುತ್ತದೆ.

ಈ ಪ್ರಕಾರ ಕ್ಷೇತ್ರಪಾಲ ಮೊದಲಾದವರನ್ನು ಕೂಡ ಪೂಜಿಸುವುದು ಯೋಗ್ಯವಿಲ್ಲ.

ಅದರಂತೆ ಹಸು, ಹಾವು ಮೊದಲಾದವು ತಿರ್ಯಂಚವಿದ್ದು ಅವು ಪ್ರತ್ಯಕ್ಷವಾಗಿ ತಮಗಿಂತ ಕೀಳಾಗಿ ಕಂಡು ಬರುತ್ತವೆ; ಅವುಗಳನ್ನು ತಿರಸ್ಕರಿಸಲಾಗುತ್ತಿದೆ, ಅವುಗಳ ನಿಂದ್ಯಾವಸ್ಥೆಯು ಪ್ರತ್ಯಕ್ಷವಾಗಿ ಕಂಡುಬರುತ್ತದೆ. ಇನ್ನು ವೃಕ್ಷ, ಅಗ್ನಿ, ಜಲ ಮೊದಲಾದವು ಸ್ಥಾವರವಿವೆ; ಅವು ತಿರ್ಯಂಚಗಳಿಗಿಂತಲೂ ಅತ್ಯಂತ ಹೀನಾವಸ್ಥೆಗೆ ಪ್ರಾಪ್ತವಾದದ್ದು ಕಂಡು ಬರುತ್ತದೆ. ಮತ್ತು ಶಸ್ತ್ರ ಮಸಿಕುಡಿಕೆ ಮೊದಲಾದವು ಅಚೇತನವಿವೆ; ಅವು ಸರ್ವಶಕ್ತಿಯಿಂದ ಹೀನವಿರುವುದು ಪ್ರತ್ಯಕ್ಷಭಾಸವಾಗುತ್ತದೆ, ಅವುಗಳಲ್ಲಿ ಪೂಜ್ಯತೆಯ ಉಪಚಾರ ಕೂಡ ಸಂಭವವಿಲ್ಲ. ಆದುದರಿಂದ ಇವುಗಳನ್ನು ಪೂಜಿಸುವುದು ಮಹಾಮಿಥ್ಯಾಭಾವವಿದೆ. ಇವುಗಳನ್ನು ಪೂಜಿಸುವುದರಿಂದ ಪ್ರತ್ಯಕ್ಷ ಹಾಗೂ

ಅನುಮಾನದಿಂದ ಕೂಡ ಯಾವ ಫಲಪ್ರಾಪ್ತಿಯು ಕಂಡು ಬರುವುದಿಲ್ಲ; ಆದುದರಿಂದ ಇವುಗಳನ್ನು ಪೂಜಿಸುವುದು ಯೋಗ್ಯವಿಲ್ಲ.

ಈ ಪ್ರಕಾರ ಸಮಸ್ತ ಕುದೇವಗಳನ್ನು ಪೂಜಿಸುವುದರ-ಮನ್ನಿಸುವುದರ ನಿಷೇಧವಿದೆ.

ಮಿಥ್ಯಾತ್ವದ ಮಹಿಮೆಯನ್ನಾದರೂ ನೋಡಿರಿ! ಜಗತ್ತಿನಲ್ಲಿ ತಮಗಿಂತ ಕೀಳರಿಗೆ ನಮಸ್ಕಾರ ಮಾಡುವಲ್ಲಿ ತಮಗೆ ಕಡಿಮೆತನವೆಂದು ಮನ್ನಿಸುತ್ತಾರೆ, ಮತ್ತು ಮೋಹಿತರಾಗಿ ತಿಪ್ಪೆಗಳವರೆಗೆ ಪೂಜಿಸುತ್ತಿರುವಲ್ಲಿಯೂ ಕಡಿಮೆತನವೆಂದು ಮನ್ನಿಸುವುದಿಲ್ಲ. ಇನ್ನು ಲೋಕದಲ್ಲಂತೂ ಯಾವುದರಿಂದ ತಮ್ಮ ಪ್ರಯೋಜನದ ಸಿದ್ಧಿಯಾಗುತ್ತದೆಂದು ತಿಳಿಯುತ್ತಾರೆ ಅದರದೇ ಸೇವೆ ಮಾಡುತ್ತಾರೆ ಮತ್ತು ಮೋಹಿತರಾಗಿ 'ಕುದೇವರಿಂದ ನನ್ನ ಪ್ರಯೋಜನದ ಸಿದ್ಧಿಯು ಹೇಗಾಗುವದೆ'ಂಬುದರ ವಿಚಾರ ಮಾಡದೆಯೇ ಕುದೇವರ ಸೇವನೆ ಮಾಡುತ್ತಾರೆ. ಆ ಕುದೇವರ ಸೇವನೆ ಮಾಡುತ್ತಿರುವಾಗ ಸಾವಿರಾರು ವಿಘ್ನಗಳು ಬಂದೊದಗಿದರೂ ಅವನ್ನು ಗಣನೆಗೆ ತಂದುಕೊಳ್ಳುವುದಿಲ್ಲ ಮತ್ತು ಯಾವುದೇ ಪುಣ್ಯದ ಉದಯದಿಂದ ಇಷ್ಟ ಕಾರ್ಯವಾದರೆ ಇವರ ಸೇವನೆಯಿಂದ ಈ ಕಾರ್ಯವಾಯಿತೆಂದು ಹೇಳುತ್ತಾರೆ. ಮತ್ತು ಕುದೇವಾದಿಗಳ ಸೇವನೆ ಮಾಡದೆಯೇ ಇಷ್ಟಕಾರ್ಯಗಳಾದರೆ ಅವನ್ನಂತೂ ಗಣನೆಗೆ ತಂದುಕೊಳ್ಳುವುದಿಲ್ಲ ಮತ್ತು ಯಾವುದಾದರೂ ಅನಿಷ್ಟವಾಗಿ ಹೋದರೆ ಇವರ ಸೇವನೆ ಮಾಡದಿರುವುದರಿಂದ ಅನಿಷ್ಟವಾಯಿತೆಂದು ಹೇಳುತ್ತಾರೆ. ಆದರೆ ಇವರುಗಳ ಆಧೀನದಲ್ಲಿ ಇಷ್ಟ-ಅನಿಷ್ಟ ಮಾಡುವುದಿದ್ದರೆ ಇವರನ್ನು ಪೂಜಿಸುವವರಿಗೆ ಇಷ್ಟವಾಗಬೇಕು ಮತ್ತು ಪೂಜಿಸದವರಿಗೆ ಅನಿಷ್ಟವಾಗಬೇಕೆಂದು ವಿಚಾರಿಸುವುದಿಲ್ಲ; ಆದರೆ ಹೀಗಂತೂ ಕಂಡು ಬರುವುದಿಲ್ಲ. ಯಾವ ಪ್ರಕಾರ ಶೀತಲಾಳನ್ನು ಅಧಿಕವಾಗಿ ಮನ್ನಿಸುತ್ತಿರುವವರ ಮಕ್ಕಳು ಸಾಯುತ್ತಿರುವುದು ಕಂಡು ಬರುತ್ತದೆ. ಮತ್ತು ಮನ್ನಿಸದವರ ಮಕ್ಕಳು ಜೀವಿತವಿದ್ದುದು ಕಂಡುಬರುತ್ತದೆ. ಆದುದರಿಂದ ಶೀತಲಾಳನ್ನು ಮನ್ನಿಸುವುದು ಕಿಂಚಿತ್ತೂ ಕಾರ್ಯಕಾರಿಯಾಗಿಲ್ಲ.

ಇದೇ ಪ್ರಕಾರ ಎಲ್ಲ ಕುದೇವಗಳನ್ನು ಮನ್ನಿಸುವುದು ಸ್ವಲ್ಪ ಕೂಡ ಕಾರ್ಯಕಾರಿಯಿಲ್ಲ.

**ಪ್ರಶ್ನೆ ಃ-** ಕಾರ್ಯಕಾರಿಯಿಲ್ಲದಿದ್ದರೆ ಬಿಡಲಿ, ಅವರನ್ನು ಮನ್ನಿಸುವುದರಿಂದ ಯಾವ ಕೆಡಕಂತೂ ಆಗುವುದಿಲ್ಲವಲ್ಲವೇ ?

**ಉತ್ತರ ಃ-** ಕೆಡಕಾಗದಿದ್ದರೆ ನಾವೇಕೆ ನಿಷೇಧ ಮಾಡುತ್ತಿದ್ದೆವು ? ಆದರೆ ಅದರಿಂದ ಮಿಥ್ಯಾತ್ವಾದಿಗಳು ದೃಢವಾಗುವುದರಿಂದ ಮೋಕ್ಷಮಾರ್ಗವು ದುರ್ಲಭವಾಗಿ ಹೋಗುತ್ತದೆ ಅದು ದೊಡ್ಡ ಕೆಡಕು ಇದೆ ಮತ್ತು ಇನ್ನೊಂದು ಕೆಡಕೆಂದರೆ ಪಾಪ ಬಂಧವಾಗುವುದರಿಂದ ಮುಂದೆ ಕೂಡ ದುಃಖವನ್ನು ಅನುಭವಿಸಬೇಕಾಗುತ್ತದೆ.

**ಪ್ರಶ್ನೆ ಃ-** ಮಿಥ್ಯಾತ್ವಾದಿ ಭಾವಗಳಂತೂ ಅತತ್ತ್ವ-ಶ್ರದ್ಧೆಯಾದ ಮೇಲೆ ಆಗುತ್ತವೆ ಮತ್ತು ಪಾಪಬಂಧವು ಕೀಳುಕಾರ್ಯ ಮಾಡುವುದರಿಂದ ಆಗುತ್ತದೆ; ಆದರೆ ಅವರನ್ನು ಮನ್ನಿಸುವುದರಿಂದ ಮಿಥ್ಯಾತ್ವ ಮತ್ತು ಪಾಪ ಬಂಧವು ಹೇಗಾಗುವುದು ?

**ಉತ್ತರ ಃ-** ಮೊದಲಂತೂ ಪರದ್ರವ್ಯಗಳನ್ನು ಇಷ್ಟಾನಿಷ್ಟವಾಗಿ ಮನ್ನಿಸುವುದೇ ಮಿಥ್ಯೆಯಿದೆ, ಏಕೆಂದರೆ ಯಾವುದೇ ದ್ರವ್ಯವು ಯಾರಿಗೂ ಶತ್ರು-ಮಿತ್ರವಿಲ್ಲ. ಮತ್ತು ಆ ಪದಾರ್ಥಗಳು ಇಷ್ಟಾನಿಷ್ಟವಾಗಿ ಕಂಡುಬರುತ್ತಿರುವುದರ

ಕಾರಣವು ಪಾಪ-ಪುಣ್ಯವಿದೆ; ಅದಕ್ಕಾಗಿ ಯಾವುದರಿಂದ ಪುಣ್ಯಬಂಧವಾಗುವುದು, ಪಾಪಬಂಧವಾಗುವುದಿಲ್ಲ ಅದನ್ನು ಮಾಡಬೇಕು. ಒಂದು ವೇಳೆ ಕರ್ಮೋದಯದ ನಿಶ್ಚಯವಿಲ್ಲದಿದ್ದರೂ ಇಷ್ಟಾನಿಷ್ಟದ ಬಾಹ್ಯ ಕಾರಣಗಳ ಸಂಯೋಗ-ವಿಯೋಗದ ಉಪಾಯ ಮಾಡಬೇಕು; ಆದರೆ ಕುದೇವರನ್ನು ಮನ್ನಿಸುವುದರಿಂದ ಇಷ್ಟಾನಿಷ್ಟದ ಬುದ್ಧಿಯು ದೂರವಾಗುವುದಿಲ್ಲ, ಕೇವಲ ವೃದ್ಧಿಗೆ ಪ್ರಾಪ್ತವಾಗುತ್ತದೆ; ಅದರಿಂದ ಪುಣ್ಯಬಂಧ ಕೂಡ ಆಗುವುದಿಲ್ಲ, ಪಾಪಬಂಧ ಮಾತ್ರ ಆಗುತ್ತದೆ. ಇನ್ನು ಕುದೇವರು ಯಾರಿಗೆ ಧನಾದಿಗಳನ್ನು ಕೊಡುತ್ತಿರುವುದು - ಕಸಿದುಕೊಳ್ಳುತ್ತಿರುವುದು ಕಂಡು ಬರುವುದಿಲ್ಲ, ಆದುದರಿಂದ ಇವರು ಬಾಹ್ಯಕಾರಣಕೂಡ ಇಲ್ಲ. ಇವರ ಮನ್ನಣೆಯನ್ನು ಯಾವುದರ ಸಲುವಾಗಿ ಮಾಡಲಾಗುತ್ತದೆ ? ಅತ್ಯಂತ ಭ್ರಾಂತ ಬುದ್ಧಿಯಾದಾಗ, ಜೀವಾದಿತತ್ತ್ವಗಳ ಶ್ರದ್ಧೆ-ಜ್ಞಾನದ ಅಂಶಕೂಡ ಇಲ್ಲದಾಗ ಮತ್ತು ರಾಗ-ದ್ವೇಷಗಳು ಅತ್ಯಂತ ತೀವ್ರವಾದಾಗ ಕಾರಣರಿಲ್ಲದವರನ್ನು ಕೂಡ ಇಷ್ಟಾನಿಷ್ಟದ ಕಾರಣರೆಂದು ಮನ್ನಿಸುತ್ತಾರೆ, ಆಗ ಕುದೇವರ ಮನ್ನಣೆಯಾಗುತ್ತದೆ.

ಇಂಥ ತೀವ್ರ ಮಿಥ್ಯಾತ್ವಾದಿ ಭಾವಗಳಾದ ಮೇಲೆ ಮೋಕ್ಷಮಾರ್ಗವು ಅತ್ಯಂತ ದುರ್ಲಭವಾಗಿ ಹೋಗುತ್ತದೆ.

## ಕುಗುರುವಿನ ನಿರೂಪಣೆ ಮತ್ತು ಅವನ ಶ್ರದ್ಧಾದಿಗಳ ನಿಷೇಧ :-

ಮುಂದೆ ಕುಗುರುವಿನ ಶ್ರದ್ಧಾದಿಗಳ ನಿಷೇಧ ಮಾಡುತ್ತಾರೆ.

ಯಾವ ಜೀವರುಗಳು ವಿಷಯ-ಕಷಾಯ ಮೊದಲಾದ ಅಧರ್ಮರೂಪವಾಗಿ ಪರಿಣಮಿಸುತ್ತಾರೆ, ಮತ್ತು ಮಾನಾದಿಗಳಿಂದ ತಮ್ಮನ್ನು ಧರ್ಮಾತ್ಮರೆಂದು ಮನ್ನಿಸುತ್ತಾರೆ, ಧರ್ಮಾತ್ಮರಿಗೆ ಯೋಗ್ಯವಾದ ನಮಸ್ಕಾರಾದಿ ಕ್ರಿಯೆಗಳನ್ನು ಮಾಡಿಸಿಕೊಳ್ಳುತ್ತಾರೆ ಅಥವಾ ಧರ್ಮದ ಯಾವುದಾದರೂ ಒಂದು ಅಂಗವನ್ನು ಸ್ವಲ್ಪಮಾತ್ರ ಧಾರಣಮಾಡಿ ದೊಡ್ಡ ಧರ್ಮಾತ್ಮರುಗಳೆಂದು ಕರೆಯಿಸಿಕೊಳ್ಳುತ್ತಾರೆ, ದೊಡ್ಡ ಧರ್ಮಾತ್ಮರಿಗೆ ಯೋಗ್ಯವಾದ ಕ್ರಿಯೆಗಳನ್ನು ಮಾಡಿಸಿಕೊಳ್ಳುತ್ತಾರೆ- ಈ ಪ್ರಕಾರ ಧರ್ಮದ ಆಶ್ರಯಮಾಡಿ ತಮ್ಮನ್ನು ದೊಡ್ಡವರೆಂದು ಮನ್ನಿಸಿಕೊಳ್ಳುತ್ತಾರೆ ಅವರೆಲ್ಲರು ಕುಗುರುಗಳೆಂದು ತಿಳಿಯಬೇಕು. ಏಕೆಂದರೆ ಧರ್ಮ ಪದ್ಧತಿಯಲ್ಲಂತೂ ವಿಷಯ-ಕಷಾಯಾದಿಗಳು ಬಿಟ್ಟುಹೋದ ಮೇಲೆ ಎಂಥ ಧರ್ಮವನ್ನು ಧಾರಣ ಮಾಡಿರುತ್ತದೆ ಅಂಥದೇ ತಮ್ಮ ಪದವನ್ನು ಮನ್ನಿಸುವುದು ಯೋಗ್ಯವಿದೆ.

## ಕುಲದ ಅಪೇಕ್ಷೆಯಿಂದ ಗುರುತನದ ನಿಷೇಧ :-

ಕೆಲವರಂತೂ ಕುಲದ ಮುಖಾಂತರ ತಮ್ಮನ್ನು ಗುರುಗಳೆಂದು ಮನ್ನಿಸುತ್ತಾರೆ. ಅವರಲ್ಲಿ ಬ್ರಾಹ್ಮಣ ಮೊದಲಾದವರಂತೂ ನಮ್ಮ ಕುಲವೇ ಉಚ್ಚವಿರುವುದರಿಂದ ನಾವು ಎಲ್ಲರ ಗುರುಗಳಿದ್ದೇವೆಂದು ಹೇಳುತ್ತಾರೆ. ಆದರೆ ಕುಲದ ಉಚ್ಚತೆಯು ಧರ್ಮದ ಸಾಧನೆಯಿಂದ ಇದೆ. ಒಂದು ವೇಳೆ ಉಚ್ಚಕುಲದಲ್ಲಿ ಉತ್ಪನ್ನನಾಗಿ ಹೀನ ಆಚರಣೆ ಮಾಡಿದರೆ ಅವನನ್ನು ಉಚ್ಚನೆಂದು ಹೇಗೆ ಮನ್ನಿಸುವುದು ? ಒಂದು ವೇಳೆ ಕುಲದಲ್ಲಿ ಉತ್ಪನ್ನವಾಗುವುದರಿಂದಲೇ ಉಚ್ಚತೆಯಿದ್ದರೆ ಮಾಂಸ ಭಕ್ಷಣ ಮೊದಲಾದುವನ್ನು ಮಾಡಿದ ಮೇಲೂ ಅವನನ್ನು ಉಚ್ಚನೆಂದೇ ಮನ್ನಿಸಿರಿ; ಆದರೆ ಅದು ಸಂಭವಿಸುವುದಿಲ್ಲ, ಮಹಾಭಾರತ ಗ್ರಂಥದಲ್ಲಿ ಅನೇಕ ಬ್ರಾಹ್ಮಣರನ್ನು ಹೇಳಿದ್ದಾರೆ. ಅಲ್ಲಿ 'ಯಾವನು ಬ್ರಾಹ್ಮಣನಾಗಿ ಚಾಂಡಾಲರ ಕಾರ್ಯಮಾಡುವನು ಅವನನ್ನು ಚಾಂಡಾಲ

ಬ್ರಾಹ್ಮಣನೆನ್ನಬೇಕೆ'ಂದು ಹೇಳಿದೆ ಒಂದು ವೇಳೆ ಕುಲದಿಂದಲೇ ಉಚ್ಚತನವಿರುತ್ತಿದ್ದರೆ ಇಂಥ ಹೀನ ಸಂಜ್ಞೆಯನ್ನು ಏತಕ್ಕಾಗಿ ಕೊಟ್ಟಿದ್ದಾರೆ ?

ಅದರಂತೆ ವೈಷ್ಣವ ಶಾಸ್ತ್ರಗಳಲ್ಲಿ ವೇದವ್ಯಾಸ ಮೊದಲಾದವರು ಮೀನು ಮೊದಲಾದವುಗಳಿಂದ ಉತ್ಪನ್ನರಾಗಿದ್ದಾರೆಂದು ಹೇಳುತ್ತಾರೆ. ಅಲ್ಲಿ ಕುಲದ ಪರಂಪರೆಯು ಹೇಗೆ ಉಳಿಯಿತು ? ಮತ್ತು ಮೂಲ ಉತ್ಪತ್ತಿಯಂತೂ ಬ್ರಾಹ್ಮಣರದೆಂದು ಹೇಳುತ್ತಾರೆ; ಆದುದರಿಂದ ಎಲ್ಲರ ಕುಲವು ಒಂದಿದೆ, ಬೇರೆ ಕುಲವು ಹೇಗಿರುತ್ತದೆ? ಮತ್ತು ಉಚ್ಚಕುಲದ ಸ್ತ್ರೀಗೆ ನೀಚಕುಲದ ಪುರುಷನಿಂದ ಹಾಗೂ ನೀಚ ಕುಲದ ಸ್ತ್ರೀಗೆ ಉಚ್ಚಕುಲದ ಪುರುಷನಿಂದ ಸಂಯೋಗವಾಗುವುದರಿಂದ ಸಂತತಿಯಾಗುತ್ತಿರುವುದು ಕಂಡು ಬರುತ್ತದೆ; ಅಲ್ಲಿ ಕುಲದ ಪ್ರಾಮಾಣಿಕತೆಯು ಹೇಗೆ ಉಳಿಯಿತು.

**ಪ್ರಶ್ನೆ :-** ಒಂದು ವೇಳೆ ಹೀಗಿದ್ದರೆ ಉಚ್ಚ-ನೀಚಕುಲದ ವಿಭಾಗವನ್ನು ಏತಕ್ಕಾಗಿ ಮನ್ನಿಸುವಿರಿ ?

**ಉತ್ತರ :-** ಈ ಲೌಕಿಕ ಕಾರ್ಯಗಳಲ್ಲಿ ಅಸತ್ಯ ಪ್ರವೃತ್ತಿಯು ಕೂಡ ಸಂಭವವಿದೆ, ಧರ್ಮಕಾರ್ಯದಲ್ಲಂತೂ ಅಸತ್ಯತೆಯು ಸಂಭವಿಸುವುದಿಲ್ಲ; ಆದುದರಿಂದ ಧರ್ಮಪದ್ಧತಿಯಲ್ಲಿ ಕುಲದ ಅಪೇಕ್ಷೆಯಿಂದ ಶ್ರೇಷ್ಠತೆಯು ಸಂಭವಿಸುವುದಿಲ್ಲ. ಧರ್ಮ ಸಾಧನದಿಂದಲೇ ಶ್ರೇಷ್ಠತೆಯು ಬರುತ್ತದೆ. ಬ್ರಾಹ್ಮಣ ಮೊದಲಾದ ಕುಲಗಳಲ್ಲಿನ ಶ್ರೇಷ್ಠತೆಯು ಅದು ಧರ್ಮ ಪ್ರವೃತ್ತಿಯಿಂದ ಇದೆ; ಧರ್ಮ ಪ್ರವೃತ್ತಿಯನ್ನು ಬಿಟ್ಟುಕೊಟ್ಟು ಹಿಂಸಾದಿ ಪಾಪಗಳಲ್ಲಿ ಪ್ರವರ್ತಿಸುವುದರಿಂದ ಆ ಶ್ರೇಷ್ಠತೆಯು ಹೇಗೆ ಉಳಿಯುವುದು ?

ಅದರಂತೆ ನಮ್ಮಲ್ಲಿ ದೊಡ್ಡ ಭಕ್ತರಾಗಿದ್ದಾರೆ, ಸಿದ್ಧರಾಗಿದ್ದಾರೆ, ಧರ್ಮಾತ್ಮರಾಗಿದ್ದಾರೆ; ನಾವು ಅವರ ಸಂತತಿಯಲ್ಲಿರುವುದರಿಂದ ನಾವು ಕೂಡ ಗುರುಗಳಿದ್ದೇವೆಂದು ಕೆಲವರು ಹೇಳುತ್ತಾರೆ. ಆದರೆ ಆ ದೊಡ್ಡವರ ದೊಡ್ಡವರಂತೂ ಹೀಗೆ ಉತ್ತಮರಿರಲಿಲ್ಲ; ಒಂದು ವೇಳೆ ಅವರ ಸಂತತಿಯಲ್ಲಿ ಉತ್ತಮ ಕಾರ್ಯ ಮಾಡುವುದರಿಂದ ಉತ್ತಮರೆಂದು ಮನ್ನಿಸುತ್ತಿದ್ದರೆ ಉತ್ತಮ ಪುರುಷರ ಸಂತತಿಯಲ್ಲಿ ಯಾವನು ಉತ್ತಮ ಕಾರ್ಯ ಮಾಡುವುದಿಲ್ಲ ಅವನನ್ನು ಉತ್ತಮನೆಂದು ಏತಕ್ಕಾಗಿ ಮನ್ನಿಸುವಿರಿ ? ಶಾಸ್ತ್ರಗಳಲ್ಲಿ ಮತ್ತು ಲೋಕದಲ್ಲಿ ಕೂಡ ತಂದೆಯು ಶುಭ ಕಾರ್ಯ ಮಾಡಿ ಉಚ್ಚಪದ ಪ್ರಾಪ್ತ ಮಾಡಿಕೊಂಡರೆ ಮಗನು ಅಶುಭ ಕಾರ್ಯ ಮಾಡಿ ನೀಚ ಪದವಿಗೆ ಪ್ರಾಪ್ತನಾಗುತ್ತಾನೆ; ತಂದೆಯು ಅಶುಭಕಾರ್ಯ ಮಾಡಿ ನೀಚ ಪದವಿಗೆ ಪ್ರಾಪ್ತನಾದರೆ ಮಗನು ಶುಭ ಕಾರ್ಯ ಮಾಡಿ ಉಚ್ಚ ಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆಂಬುದು ಪ್ರಸಿದ್ಧವಿದೆ. ಆದುದರಿಂದ ದೊಡ್ಡವರ ಅಪೇಕ್ಷೆಯಿಂದ ಶ್ರೇಷ್ಠರೆಂದು ಮನ್ನಿಸುವುದು ಯೋಗ್ಯವಿಲ್ಲ.

ಈ ಪ್ರಕಾರ ಕುಲದ ಮುಖಾಂತರ ಗುರುತನವನ್ನು ಮನ್ನಿಸುವುದು ಅದು ಮಿಥ್ಯಾಭಾವವಿದೆಯೆಂದು ತಿಳಿಯಬೇಕು,

ಮತ್ತೆ ಅದೆಷ್ಟೋ ಜನರು ಪಟ್ಟಪರಂಪರೆಯಿಂದ ಗುರುತನವನ್ನು ಮನ್ನಿಸುತ್ತಾರೆ. ಪೂರ್ವಕಾಲದಲ್ಲಿ ಯಾವನಾದರೂ ಶ್ರೇಷ್ಠ ಪುರುಷನಾಗಿದ್ದು ಅವನ ಗದ್ದುಗೆಯ ಮೇಲೆ ಯಾವ ಶಿಷ್ಯ-ಪ್ರತಿಶಿಷ್ಯರಾಗುತ್ತ ಬಂದಿದ್ದಾರೆ ಅವರಲ್ಲಿ ಆ ಮಹಾಪುರುಷನಂಥ ಗುಣಗಳಿಲ್ಲದಿದ್ದರೂ ಕೂಡ ಗುರುತನವನ್ನು ಮನ್ನಿಸುತ್ತಾರೆ. ಒಂದು ವೇಳೆ ಹೀಗೆ

ಇದ್ದರೆ ಆ ಗದ್ದುಗೆಯಲ್ಲಿ ಯಾವನಾದರೂ ಪರಸ್ತ್ರೀ ಗಮನ ಮೊದಲಾದ ಮಹಾಪಾಪ ಕಾರ್ಯಮಾಡುವನು ಅವನೂ ಧರ್ಮಾತ್ಮನಾಗುವನು, ಸದ್ಗತಿಗೆ ಪ್ರಾಪ್ತನಾಗುವನು; ಆದರೆ ಇದು ಸಂಭವವಿಲ್ಲ. ಮತ್ತು ಅವನು ಪಾಪಯಿದ್ದರೆ ಗದ್ದುಗೆಯ ಅಧಿಕಾರಿಯೆಲ್ಲಿ ಉಳಿಯುವನು ? ಗುರುಪದವಿಗೆ ಯೋಗ್ಯವಾದ ಕಾರ್ಯಮಾಡಿದವನೇ ಗುರು ಇದ್ದಾನೆ.

ಅದರಂತೆ ಕೆಲವರು ಮೊದಲಂತೂ ಸ್ತ್ರೀ ಮೊದಲಾದವರ ತ್ಯಾಗಿಯಿದ್ದು ಅನಂತರ ಭ್ರಷ್ಟರಾಗಿ ವಿವಾಹಾದಿಗಳನ್ನು ಮಾಡಿಕೊಂಡು ಗೃಹಸ್ಥರಾದವರ ಸಂತತಿಯವರು ತಮ್ಮನ್ನು ಗುರುಗಳೆಂದು ಮನ್ನಿಸುತ್ತಾರೆ; ಆದರೆ ಭ್ರಷ್ಟವಾದನಂತರ ಗುರುತನವು ಹೇಗೆ ಉಳಿಯಿತು ? ಇವರೂ ಅನ್ಯಗೃಹಸ್ಥರ ಸಮಾನರಾದರು. ಇವನು ಭ್ರಷ್ಟನಾಗಿ ಗೃಹಸ್ಥನಾಗಿರುವುದು ವಿಶೇಷವಾಯಿತು; ಇವರನ್ನು ಮೂಲ ಗೃಹಸ್ಥ ಧರ್ಮಿಗಳು ಗುರುಗಳೆಂದು ಹೇಗೆ ಮನ್ನಿಸಿಯಾರು ?

ಇನ್ನು ಕೆಲವರಂತೂ ಉಳಿದೆಲ್ಲ ಪಾಪಕಾರ್ಯಗಳನ್ನು ಮಾಡುತ್ತಾರೆ, ಓರ್ವ ಸ್ತ್ರೀಯೊಡನೆ ವಿವಾಹಮಾಡಿ ಕೊಳ್ಳುವುದಿಲ್ಲ ಮತ್ತು ಇದೇ ಅಂಶದಿಂದ ಗುರುತನವನ್ನು ಮನ್ನಿಸುತ್ತಾರೆ. ಆದರೆ ಒಂದು ಅಬ್ರಹ್ಮವಿಷ್ಟೇ ಪಾಪವಿಲ್ಲ, ಹಿಂಸೆ, ಪರಿಗ್ರಹ ಮೊದಲಾದವು ಕೂಡ ಪಾಪವಿವೆ; ಅವನ್ನು ಮಾಡುತ್ತ ಧರ್ಮಾತ್ಮ-ಗುರುವೆಂದು ಹೇಗೆ ಮನ್ನಿಸುವುದು ? ಮತ್ತು ಅವನು ಧರ್ಮಬುದ್ಧಿಯಿಂದ ವಿವಾಹಾದಿಗಳ ತ್ಯಾಗಿಯಾಗಿಲ್ಲ; ಆದರೆ ಒಂದು ಆಜೀವಿಕೆಯ ಸಾಧನವೆಂದು ಮತ್ತು ಲಜ್ಜೆ ಮೊದಲಾದ ಪ್ರಯೋಜನದ ಸಲುವಾಗಿ ವಿವಾಹ ಮಾಡಿಕೊಳ್ಳುವುದಿಲ್ಲ. ಒಂದು ವೇಳೆ ಧರ್ಮಬುದ್ಧಿ ಇರುತ್ತಿದ್ದರೆ ಹಿಂಸಾದಿಗಳನ್ನು ಏತಕ್ಕಾಗಿ ವೃದ್ಧಿಸುವನು ? ಮತ್ತು ಧರ್ಮಬುದ್ಧಿಯಿಲ್ಲದವನಿಗೆ ಶೀಲದ ದೃಢತೆಯೂ ಉಳಿಯುವುದಿಲ್ಲ, ಅವನು ವಿವಾಹ ಮಾಡಿಕೊಳ್ಳದಿರುವುದರಿಂದ ಪರಸ್ತ್ರೀ ಗಮನದಂಥ ಮಹಾಪಾಪ ಉತ್ಪನ್ನ ಮಾಡುತ್ತಾನೆ. ಇಂಥ ಕ್ರಿಯೆಗಳು ಇದ್ದ ಮೇಲೆ ಗುರುತನವನ್ನು ಮನ್ನಿಸುವುದು ಮಹಾಭ್ರಷ್ಟಬುದ್ಧಿಯಿದೆ.

ಕೆಲವರಂತೂ ಯಾವುದೇ ಒಂದು ಪ್ರಕಾರದ ವೇಷಧಾರಣ ಮಾಡುವುದರಿಂದ ಗುರುತನವನ್ನು ಮನ್ನಿಸುತ್ತಾರೆ; ಆದರೆ ವೇಷಧಾರಣ ಮಾಡುವುದರಿಂದ ಧರ್ಮಾತ್ಮ-ಗುರುವೆಂದು ಮನ್ನಿಸಲು ಯಾವ ಧರ್ಮವಾಯಿತು ? ಅಲ್ಲಿ ಕೆಲವರು ಟೊಪ್ಪಿಗೆ ಹಾಕಿಕೊಳ್ಳುತ್ತಾರೆ, ಕೆಲವರು ಬಟ್ಟೆ ಕಟ್ಟಿಕೊಳ್ಳುತ್ತಾರೆ, ಕೆಲವರು ನೀಳ ಷರಾಯಿ ಹಾಕಿಕೊಳ್ಳುತ್ತಾರೆ, ಕೆಲವರು ಚದ್ದರ ಹೊದೆಯುತ್ತಾರೆ, ಕೆಲವರು ಕೆಂಪು ವಸ್ತ್ರವನ್ನಿಟ್ಟುಕೊಳ್ಳುತ್ತಾರೆ, ಕೆಲವರು ಶ್ವೇತ ವಸ್ತ್ರವನ್ನಿಟ್ಟುಕೊಳ್ಳುತ್ತಾರೆ, ಕೆಲವರು ಕ್ಯಾವಿ ಬಟ್ಟೆ ಧರಿಸುತ್ತಾರೆ, ಕೆಲವರು ನಾರಿನ ಬಟ್ಟೆ ಉಡುತ್ತಾರೆ, ಕೆಲವರು ಚಿಗರೆಯ ಚರ್ಮವಿಟ್ಟುಕೊಳ್ಳುತ್ತಾರೆ, ಕೆಲವರು ಮೈಗೆಲ್ಲ ಭಸ್ಮ ಬಳೆದುಕೊಳ್ಳುತ್ತಾರೆ. ಇವೇ ಮೊದಲಾದ ಅನೇಕ ಸೋಗುಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ಚಳಿ-ಬಿಸಿಲುಗಳ ಸಹನೆಯಾಗದಿದ್ದರೆ, ಲಜ್ಜೆಯು ಬಿಟ್ಟು ಹೋಗಿರದಿದ್ದರೆ ಮುಂಡಾಸು, ಪೈಜಾಮು ಮೊದಲಾದ ಪ್ರವೃತ್ತಿರೂಪದ ಉಡುಪುಗಳ ತ್ಯಾಗವನ್ನು ಏತಕ್ಕಾಗಿ ಮಾಡುವುದು ? ಅವುಗಳನ್ನು ಬಿಟ್ಟುಕೊಟ್ಟು ಇಂಥ ಸೋಗು ಮಾಡಿಕೊಳ್ಳುವಲ್ಲಿ ಧರ್ಮದ ಯಾವ ಅಂಗವಾಗುವುದು? ಇಂಥ ವೇಷಗಳು ಗೃಹಸ್ಥರನ್ನು ಮೋಸಗೊಳಿಸುವ ಸಲುವಾಗಿ ಇವೆಯೆಂದು ತಿಳಿಯಬೇಕು. ಒಂದು ವೇಳೆ ಗೃಹಸ್ಥರಂತೆ ತಮ್ಮ ಸೋಗು ಇದ್ದರೆ ಗೃಹಸ್ಥರು ಹೇಗೆ ಮೋಸ ಹೋಗುವರು ? ಮತ್ತು ಇವರಿಗೆ

ಅವರ ಮುಖಾಂತರ ಆಜೀವಿಕೆ, ಧನ ಮತ್ತು ಮಾನಾದಿಗಳ ಪ್ರಯೋಜನ ಸಾಧಿಸುವುದಿದೆ. ಅದಕ್ಕಾಗಿ ಇಂಥ ಸೋಗು ಹಾಕಿಕೊಳ್ಳುತ್ತಾರೆ. ಭಾವುಕ ಜಗತ್ತು ಆ ಸೋಗವನ್ನು ನೋಡಿ ಮೋಸಹೋಗುತ್ತದೆ ಮತ್ತು ಧರ್ಮವಾಯಿತೆಂದು ಮನ್ನಿಸುತ್ತದೆ; ಆದರೆ ಇದು ಭ್ರಾಂತಿಯಿದೆ. ಇದನ್ನೇ ಹೇಳಿದ್ದಾರೆ,-

**ಜಹ ಕುವಿ ವೇಸ್ಸಾರತ್ತೋ ಮುಸಿಜ್ಜಮಾಣೋ ವಿಮಣ್ಣಏ ಹರಿಸಂ ।**
**ತಹ ಮಿಚ್ಛವೇಸಮುಸಿಯಾ ಗಯಂ ಪಿ ಣ ಮುಣಂತಿ ಧಮ್ಮ-ಣಿಹಿಂ ।।5।।**

-ಉಪದೇಶ ಸಿದ್ಧಾಂತ ರತ್ನಮಾಲೆ

**ಅರ್ಥ :-** ಯಾವ ಪ್ರಕಾರ ಓರ್ವ ವೇಶ್ಯಾಸಕ್ತ ಪುರುಷನು ತನ್ನ ಸಂಪತ್ತನ್ನು ಕಳೆದುಕೊಳ್ಳುತ್ತಿದ್ದರೂ ಹರ್ಷ ಮನ್ನಿಸುತ್ತಾನೆ ಅದೇ ಪ್ರಕಾರ ಮಿಥ್ಯಾವೇಷದಿಂದ ಮೋಸಹೋದ ಜೀವನು ಧರ್ಮಧನವು ನಷ್ಟವಾಗುತ್ತಿದ್ದರೂ ಅದನ್ನು ಲಕ್ಷ್ಯದಲ್ಲಿ ತಂದುಕೊಳ್ಳುವುದಿಲ್ಲ.

**ಭಾವಾರ್ಥ :-** ಈ ಮಿಥ್ಯಾವೇಷವುಳ್ಳ ಜೀವರುಗಳ ಸುಶ್ರೂಷೆ ಮೊದಲಾದವುಗಳಿಂದ ತಮ್ಮ ಧರ್ಮಧನವು ನಷ್ಟವಾಗುತ್ತಿರುವುದರ ವಿಷಾದವಿಲ್ಲ, ಆದರೆ ಮಿಥ್ಯಾ ಬುದ್ಧಿಯಿಂದ ಹರ್ಷ ಮನ್ನಿಸುತ್ತಾರೆ. ಅಲ್ಲಿ ಕೆಲವರಂತೂ ಮಿಥ್ಯಾಶಾಸ್ತ್ರಗಳಲ್ಲಿ ಯಾವ ವೇಷಗಳ ನಿರೂಪಣೆ ಮಾಡಿದ್ದಾರೆ ಅವನ್ನು ಧಾರಣ ಮಾಡುತ್ತಾರೆ; ಆದರೆ ಆ ಶಾಸ್ತ್ರಗಳ ಕರ್ತರಾದ ಪಾಪಿಗಳು ಸುಲಭ ಕ್ರಿಯೆ ಮಾಡುವುದರಿಂದ ಉಚ್ಚಪದ ಪ್ರರೂಪಣೆ ಮಾಡುವಲ್ಲಿ ತಮ್ಮ ಮನ್ನಣೆಯಾಗುವುದು ಹಾಗೂ ಇತರ ಬಹಳಷ್ಟು ಜೀವರುಗಳು ಈ ಮಾರ್ಗದಲ್ಲಿ ತೊಡಗಬಹುದೆಂಬ ಅಭಿಪ್ರಾಯದಿಂದ ಮಿಥ್ಯಾ ಉಪದೇಶ ಕೊಟ್ಟಿದ್ದಾರೆ. ಅವರ ಪರಂಪರೆಯಿಂದ ತಮ್ಮ ವೈಚಾರಿಕ ಶಕ್ತಿಯನ್ನು ಕಳೆದುಕೊಂಡ ಜೀವರುಗಳು ಸುಲಭವಾದ ಕ್ರಿಯೆಗಳಿಂದ ಉಚ್ಚಪದವು ದೊರಕುತ್ತದೆಯೆಂದು ಹೇಳುವಲ್ಲಿ ಏನಾದರೂ ವಂಚನೆಯಿರಬೇಕೆಂಬ ವಿಚಾರಕೂಡ ಮಾಡುವುದಿಲ್ಲ. ಭ್ರಾಂತಿಯಿಂದ ಅವರು ಹೇಳಿರುವ ಮಾರ್ಗದಲ್ಲಿ ಪ್ರವರ್ತನೆ ಮಾಡುತ್ತಾರೆ.

ಮತ್ತೆ ಕೆಲವರು ಶಾಸ್ತ್ರಗಳಲ್ಲಂತೂ ಕಠಿಣವಾದ ಮಾರ್ಗವನ್ನು ನಿರೂಪಣೆ ಮಾಡಿದ್ದಾರೆ, ಅದಂತೂ ಸಾಧ್ಯವಾಗುವುದಿಲ್ಲ ಮತ್ತು ತಮಗೆ ದೊಡ್ಡ ಹೆಸರನ್ನು ಇಟ್ಟುಕೊಂಡಲ್ಲದೆ ಜಗತ್ತು ಮನ್ನಿಸುವುದಿಲ್ಲವೆಂಬ ಅಭಿಪ್ರಾಯದಿಂದ ಯತಿ, ಮುನಿ, ಆಚಾರ್ಯ, ಉಪಾಧ್ಯಾಯ, ಸಾಧು, ಭಟ್ಟಾರಕ, ಸನ್ಯಾಸಿ, ಯೋಗಿ, ತಪಸ್ವಿ, ನಗ್ನ ಮೊದಲಾದ ದೊಡ್ಡ-ದೊಡ್ಡ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ ಮತ್ತು ಇವುಗಳ ಆಚಾರಗಳನ್ನು ಸಾಧಿಸುವ ಸಾಧ್ಯತೆಯಿಲ್ಲ; ಅದಕ್ಕಾಗಿ ಇಚ್ಛಾನುಸಾರ ನಾನಾವೇಷ ತಳೆಯುತ್ತಾರೆ. ಇನ್ನು ಕೆಲವರಂತೂ ತಮ್ಮ ಇಚ್ಛಾನುಸಾರವೇ ಹೊಸ ಹೆಸರನ್ನು ಧಾರಣ ಮಾಡುತ್ತಾರೆ ಮತ್ತು ಇಚ್ಛಾನುಸಾರವಾಗಿಯೇ ವೇಷಮಾಡುತ್ತಾರೆ.

ಹೀಗೆ ಅನೇಕ ವೇಷಧಾರಣ ಮಾಡುವುದರಿಂದ ಗುರುತನವೆಂದು ಮನ್ನಿಸುತ್ತಾರೆ; ಅದು ಮಿಥ್ಯೆಯಿದೆ.

**ಪ್ರಶ್ನೆ :-** ಬಹಳಷ್ಟು ಪ್ರಕಾರದ ವೇಷಗಳು ಕಂಡುಬರುತ್ತವೆ, ಅವುಗಳಲ್ಲಿ ಸತ್ಯ-ಅಸತ್ಯ ವೇಷದ ಪರಿಚಯ ಹೇಗಾಗುವುದು ?

**ಉತ್ತರ :-** ಯಾವ ವೇಷಗಳಲ್ಲಿ ವಿಷಯ-ಕಷಾಯಗಳ ಸಂಬಂಧವು ಸ್ವಲ್ಪ ಮಾತ್ರವೂ ಇಲ್ಲ ಆ

ವೇಷಗಳು ನಿಜವಾದ ವೇಷಗಳಿವೆ. ಆ ನಿಜವಾದ ವೇಷಗಳಲ್ಲಿ ಮೂರು ಪ್ರಕಾರಗಳಿದ್ದು ಉಳಿದೆಲ್ಲ ವೇಷಗಳು ಅಸತ್ಯವಾಗಿವೆ.

ಅದನ್ನೇ ಭ. ಕುಂದಕುಂದಾಚಾರ್ಯದೇವರು 'ಅಷ್ಟಪಾಹುಡ'ದಲ್ಲಿ ಹೇಳಿದ್ದಾರೆ,-

**ಏಗಂ ಜಿಣಸ್ಸ ರೂವಂ ಬಿದಿಯಂ ಉಕ್ಕಿಟ್ಠಸಾವಯಾಣಂ ತು ।**
**ಅವರಟ್ಠಿಯಾಣ ತಇಯಂ ಚಉತ್ಥ ಪುಣ ಲಿಂಗದಂಸಣಂ ಣತ್ಥಿ ।।18।। -ದರ್ಶನಪಾಹುಡ**

**ಅರ್ಥ :-** ಒಂದಂತೂ ಜಿನಸ್ವರೂಪದ ನಿರ್ಗ್ರಂಥ ದಿಗಂಬರ ಮುನಿಲಿಂಗವಿದೆ, ಎರಡನೆಯದು ಉತ್ಕೃಷ್ಟ ಶ್ರಾವಕರ ರೂಪು ಎಂದರೆ ಹತ್ತನೆಯ, ಹನ್ನೊಂದನೆಯ ಪ್ರತಿಮಾಧಾರಿ ಶ್ರಾವಕನಲಿಂಗವಿದೆ, ಮೂರನೆಯದು ಆರ್ಯಿಕೆಯ ರೂಪವಿದ್ದು, ಇದು ಸ್ತ್ರೀಯರಲಿಂಗವಿದೆ. ಹೀಗೆ ಈ ಮೂರು ಲಿಂಗಗಳಂತೂ ಶ್ರದ್ಧಾಪೂರ್ವಕವಿವೆ ಮತ್ತು ನಾಲ್ಕನೆಯ ಯಾವ ಲಿಂಗವೂ ಸಮ್ಯಗ್ದರ್ಶನ ಸ್ವರೂಪವಿಲ್ಲ.

**ಭಾವಾರ್ಥ :-** ಈ ಮೂರು ಲಿಂಗಗಳ ಅತಿರಿಕ್ತವಾಗಿ ಅನ್ಯಲಿಂಗವನ್ನು ಮನ್ನಿಸುವವನು ಶ್ರದ್ಧೆಯುಳ್ಳವನಿಲ್ಲ, ಮಿಥ್ಯಾದೃಷ್ಟಿಯಿದ್ದಾನೆ. ಇನ್ನು ಈ ವೇಷಧಾರಿಗಳಲ್ಲಿ ಅದೆಷ್ಟೋ ವೇಷಧಾರಿಗಳು ತಮ್ಮ ವೇಷದ ಪ್ರತೀತಿ ಮಾಡಿಸುವ ಸಲುವಾಗಿ ಸ್ವಲ್ಪ ಧರ್ಮದ ಅಂಗವನ್ನೂ ಪಾಲಿಸುತ್ತಾರೆ. ಯಾವ ಪ್ರಕಾರ ನಕಲಿ (ಖೋಟ್ಟಿ) ನಾಣ್ಯ ನಡೆಸಬೇಕೆನ್ನುವವನು ಅದರಲ್ಲಿ ಸ್ವಲ್ಪ ಬೆಳ್ಳಿಯ ಅಂಶವನ್ನೂ ಬೆರೆಸುತ್ತಾನೆ ಅದೇ ಪ್ರಕಾರ ಧರ್ಮದ ಯಾವುದೇ ಒಂದು ಅಂಗವನ್ನು ತೋರಿಸಿ ತಮ್ಮ ಶ್ರೇಷ್ಠತೆಯನ್ನು ಮನ್ನಿಸಿಕೊಳ್ಳುತ್ತಾರೆ.

**ಪ್ರಶ್ನೆ :-** ಯಾವ ಧರ್ಮದ ಸಾಧನೆ ಮಾಡಿದೆ ಅದರ ಫಲವಂತೂ ದೊರಕುವುದು ?

**ಉತ್ತರ :-** ಯಾವ ಪ್ರಕಾರ ಉಪವಾಸದ ಹೆಸರನ್ನಿಟ್ಟುಕೊಂಡು ಕಣಮಾತ್ರವೂ ಭಕ್ಷಣೆ ಮಾಡಿದರೆ ಪಾಪಿಯಿದ್ದಾನೆ, ಮತ್ತು ಏಕಾಶನದ ಹೆಸರನ್ನಿಟ್ಟುಕೊಂಡು ಸ್ವಲ್ಪ ಕಡಿಮೆ ಭೋಜನ ಮಾಡಿದರೆ ಅವನು ಧರ್ಮಾತ್ಮನಿದ್ದಾನೆ; ಅದೇ ಪ್ರಕಾರ ಉಚ್ಚಪದದ ಹೆಸರು ಹೇಳಿಕೊಂಡು ಅದರಲ್ಲಿ ಕಿಂಚಿತ್ ಕೂಡ ಅನ್ಯಥಾ ಪ್ರವರ್ತಿಸಿದರೆ ಮಹಾಪಾಪಿಯಿದ್ದಾನೆ, ಮತ್ತು ಕೆಳತರಗತಿಯ ಪದದ ಹೆಸರನ್ನಿಟ್ಟುಕೊಂಡು ಸ್ವಲ್ಪಾದರೂ ಧರ್ಮಸಾಧನೆ ಮಾಡಿದರೆ ಅವನು ಧರ್ಮಾತ್ಮನಿದ್ದಾನೆ. ಆದುದರಿಂದ ಧರ್ಮದ ಸಾಧನೆಯು ಎಷ್ಟು ಸಾಧ್ಯವಿದೆಯೋ ಅಷ್ಟನ್ನೇ ಮಾಡಬೇಕು, ಯಾವ ದೋಷವಿಲ್ಲ; ಆದರೆ ಉಚ್ಚ ಧರ್ಮಾತ್ಮನೆಂಬ ಹೆಸರನ್ನಿಟ್ಟುಕೊಂಡು ನೀಚ ಕ್ರಿಯೆಗಳನ್ನು ಮಾಡುವುದರಿಂದಂತೂ ಮಹಾಪಾಪವೇ ಆಗುತ್ತದೆ.

ಅದನ್ನೇ ಭ. ಕುಂದಕುಂದಾಚಾರ್ಯದೇವರು 'ಅಷ್ಟಪಾಹುಡ'ದಲ್ಲಿ ಹೇಳಿದ್ದಾರೆ,-

**ಜಹಜಾಯರೂವಸರಿಸೋ ತಿಲತುಸಮೇತ್ತಂ ಣ ಗಿಹದಿ ಹತ್ಥೇಸು ।**
**ಜಇ ಲೇಇ ಅಪ್ಪಬಹುಯಂ ತತ್ತೋ ಪುಣ ಜಾಇ ಣಿಗ್ಗೋದಂ ।।18।। -ಸೂತ್ರಪಾಹುಡ**

**ಅರ್ಥ :-** ಮುನಿಪದವು ಯಥಾಜಾತರೂಪ ಸದೃಶವಿದೆ. ಜನ್ಮವಾಗುತ್ತಿರುವಾಗ ಇರುವಂತೆ ನಗ್ನವಿದೆ. ಆ ಮುನಿಯು ಅರ್ಥ ಎಂದರೆ ಧನ-ವಸ್ತ್ರ ಮೊದಲಾದ ವಸ್ತುಗಳಲ್ಲಿ ತಿಲ ತುಷ ಮಾತ್ರವೂ ಗ್ರಹಣ ಮಾಡುವುದಿಲ್ಲ. ಒಂದು ವೇಳೆ ತಪ್ಪಿಕೂಡ ಅಲ್ಪ ಸ್ವಲ್ಪ ಗ್ರಹಣ ಮಾಡಿದರೆ ಅದರಿಂದ ಅವನು ನಿಗೋದಕ್ಕೆ ಹೋಗುತ್ತಾನೆ.

ನೋಡಿರಿ ! ಗೃಹಸ್ಥಾವಸ್ಥೆಯಲ್ಲಿ ಅಧಿಕ ಪರಿಗ್ರಹವನ್ನು ಇಟ್ಟುಕೊಂಡು ಅದರಲ್ಲಿ ಸ್ವಲ್ಪ ಪ್ರಮಾಣ ಮಾಡಿದರೂ ಕೂಡ ಸ್ವರ್ಗ-ಮೋಕ್ಷದ ಅಧಿಕಾರಿಯಾಗುತ್ತಾನೆ ಮತ್ತು ಮುನಿತನದಲ್ಲಿ ಕಿಂಚಿತ್ ಪರಿಗ್ರಹವನ್ನು ಅಂಗೀಕಾರ ಮಾಡಿದರೂ ಕೂಡ ನಿಗೋದಗಾಮಿಯಾಗುತ್ತಾನೆ. ಆದುದರಿಂದ ಉಚ್ಚ ಹೆಸರನ್ನಿಟ್ಟುಕೊಂಡು ನೀಚ ಪ್ರವೃತ್ತಿ ಮಾಡುವುದು ಯುಕ್ತವಿಲ್ಲ.

ನೋಡಿರಿ ! ಹುಂಡಾವಸರ್ಪಿಣೀ ಕಾಲದಲ್ಲಿ ಇದು ಕಲಿಕಾಲವು ವರ್ತಿಸುತ್ತಿದೆ. ಇದರ ದೋಷದಿಂದ ಜಿನಮತದಲ್ಲಿ ಮುನಿಗಳ ಸ್ವರೂಪವು ಹೇಗಿದೆಯೆಂದರೆ ಅಲ್ಲಿ ಬಾಹ್ಯಾಭ್ಯಂತರ ಪರಿಗ್ರಹಗಳ ಸಂಬಂಧವಿಲ್ಲ, ಕೇವಲ ತಮ್ಮ ಆತ್ಮನಲ್ಲಿ ಆತ್ಮರೂಪದ ಅನುಭವ ಮಾಡುತ್ತ ಶುಭಾಶುಭ ಭಾವಗಳಿಂದ ಉದಾಸೀನರಿರುತ್ತಾರೆ; ಮತ್ತು ಈಗ ವಿಷಯ-ಕಷಾಯಗಳಲ್ಲಿ ಆಸಕ್ತರಾದ ಜೀವರುಗಳು ಮುನಿಪದವನ್ನು ಧಾರಣ ಮಾಡುತ್ತಾರೆ; ಅಲ್ಲಿ ಸರ್ವ ಸಾವದ್ಯದ ತ್ಯಾಗಿಯಾಗಿ ಪಂಚಮಹಾವ್ರತಾದಿಗಳನ್ನು ಅಂಗೀಕಾರ ಮಾಡುತ್ತಾರೆ, ಶ್ವೇತ-ರಕ್ತ ವಸ್ತ್ರಗಳನ್ನು ಗ್ರಹಣ ಮಾಡುತ್ತಾರೆ, ಭೋಜನ ಮೊದಲಾದವುಗಳಲ್ಲಿ ಆಸಕ್ತರಿರುತ್ತಾರೆ, ತಮ್ಮ ಪದ್ಧತಿಯನ್ನು ವೃದ್ಧಿಸುವಲ್ಲಿ ಉದ್ಯಮಶೀಲರಿರುತ್ತಾರೆ ಮತ್ತು ಕೆಲವರಂತೂ ಹಣವನ್ನೂ ಇಟ್ಟುಕೊಂಡಿರುತ್ತಾರೆ, ಹಿಂಸಾದಿಗಳನ್ನು ಮಾಡುತ್ತಾರೆ ಮತ್ತು ನಾನಾ ಪ್ರಕಾರದ ಆರಂಭ ಮಾಡುತ್ತಾರೆ. ಆದರೆ ಅಲ್ಪ ಪರಿಗ್ರಹ ಗ್ರಹಣ ಮಾಡುವುದರ ಫಲವು ನಿಗೋದವೆಂದು ಹೇಳಿದೆ, ಇನ್ನು ಇಂಥ ಪಾಪಗಳ ಫಲದಿಂದಂತೂ ಅನಂತ ಸಂಸಾರವು ಆಗೇ ಆಗುತ್ತದೆ.

ಜನರ ಅಜ್ಞಾನವನ್ನಾದರೂ ನೋಡಿರಿ ! ಯಾರಾದರೂ ಒಂದು ಪ್ರತಿಜ್ಞೆಯನ್ನೇ ಭಂಗ ಮಾಡಿದರೆ ಅವನನ್ನಂತೂ ಪಾಪಿಯೆಂದು ಹೇಳುತ್ತಾರೆ ಮತ್ತು ಇಂಥ ದೊಡ್ಡ ಪ್ರತಿಜ್ಞೆ ಭಂಗ ಮಾಡುತ್ತಿರುವುದನ್ನು ನೋಡಿ ಕೂಡ ಅವರನ್ನು ಗುರುವೆಂದು ಮನ್ನಿಸುತ್ತಾರೆ, ಮುನಿಯಂತೆಯೇ ಅವರ ಸನ್ಮಾನಾದಿಗಳನ್ನು ಮಾಡುತ್ತಾರೆ, ಆದರೆ ಶಾಸ್ತ್ರದಲ್ಲಿ ಕೃತ, ಕಾರಿತ, ಅನುಮೋದನದ ಫಲ ಹೇಳಿದೆ; ಆದುದರಿಂದ ಅವರಿಗೆ ಕೂಡ ಅಂಥದೇ ಫಲವು ಲಭಿಸುತ್ತದೆ.

ಮುನಿಪದವನ್ನು ತೆಗೆದುಕೊಳ್ಳುವ ಕ್ರಮವಂತೂ ಹೇಗಿದೆಯೆಂದರೆ ಮೊದಲು ತತ್ತ್ವಜ್ಞಾನವಾಗುತ್ತದೆ, ಅನಂತರ ಉದಾಸೀನ ಪರಿಣಾಮಗಳಾಗುತ್ತವೆ, ಪರೀಷಹಾದಿಗಳನ್ನು ಸಹಿಸುವ ಶಕ್ತಿ ಬರುತ್ತದೆ; ಆಗ ಅವನು ತಾನಾಗಿಯೇ ಮುನಿಯಾಗಲು ಅಪೇಕ್ಷಿಸುತ್ತಾನೆ ಮತ್ತು ಆಗ ಶ್ರೀಗುರುಗಳು ಅವನಿಗೆ ಮುನಿಧರ್ಮದ ಅಂಗೀಕಾರ ಮಾಡಿಸುತ್ತಾರೆ.

ಇದು ಎಂಥ ವಿಪರೀತತೆಯಿದೆ ! ತತ್ತ್ವಜ್ಞಾನವಿಲ್ಲದ ವಿಷಯ-ಕಷಾಯಾಸಕ್ತರಾದ ಜೀವರುಗಳನ್ನು ಮಾಯೆಯಿಂದ ಮತ್ತು ಲೋಭ ತೋರಿಸಿ ಮುನಿಪದವನ್ನು ಕೊಡುವುದು, ಅನಂತರ ಅನ್ಯಥಾ ಪ್ರವೃತ್ತಿ ಮಾಡಿಸುವುದು; ಇದು ದೊಡ್ಡ ಅನ್ಯಾಯವಿದೆ.

ಈ ಪ್ರಕಾರ ಕುಗುರುಗಳ ಮತ್ತು ಅವರ ಸೇವನೆಯ ನಿಷೇಧ ಮಾಡಲಾಯಿತು.

ಈಗ ಈ ಕಥನವನ್ನು ದೃಢೀಕರಿಸುವ ಸಲುವಾಗಿ ಶಾಸ್ತ್ರಗಳ ಸಾಕ್ಷ್ಯ ಕೊಡುತ್ತಾರೆ.

'ಉಪದೇಶಸಿದ್ಧಾಂತರತ್ನಮಾಲೆ'ಯಲ್ಲಿ ಹೀಗೆ ಹೇಳಿದ್ದಾರೆ,-

**ಗುರುಣೋ ಭಟ್ಟಾ ಜಾಯಾ ಸದ್ದೇ ಥುಣಿ ಊಣ ಲಿಂತಿ ದಾಣೌಇಂ ।**
**ದೋಣ್ಣವಿ ಅಮುಣಿಯಸಾರಾ ದೂಸವಾಸಮಿಯಮ್ಮಿ ಬುಡ್ಡಂತಿ ॥31॥**

**ಅರ್ಥ :-** ಕಾಲದೋಷದಿಂದ ಗುರುಗಳಿರುವವರಂತೂ ಭಟ್ಟಂಗಿಗಳಾಗಿದ್ದಾರೆ; ಭಟ್ಟಂಗಿಗಳಂತೆ ಶಬ್ದಗಳ ಮುಖಾಂತರ ದಾನಿಗಳ ಸ್ತುತಿ ಮಾಡಿ ದಾನಾದಿಗಳನ್ನು ಸ್ವೀಕಾರ ಮಾಡುತ್ತಾರೆ. ಆದುದರಿಂದ ಈ ದುಃಖಮಕಾಲದಲ್ಲಿ ದಾನಕೊಡುವವನು ಮತ್ತು ದಾನ ಸ್ವೀಕರಿಸುವವರೀರ್ವರೂ ಸಂಸಾರ ಸಾಗರದಲ್ಲಿ ಮುಳುಗಿ ಹೋಗುತ್ತಾರೆ.

ಮತ್ತೆ ಅದರಲ್ಲಿಯೇ ಹೀಗೆ ಹೇಳಿದ್ದಾರೆ,-

**ಸಪ್ಪೇ ದಿಟ್ಠೇ ಣಾಸಇ ಲೋಓ ಣಹಿ ಕೋವಿ ಕಿಂಪಿ ಅಕ್ಖೇಇ ।**
**ಜೋ ಚಯಇ ಕುಗುರು ಸಪ್ಪಂ ಹಾ ಮೂಢಾ ಭಣಇ ತಂ ದುಟ್ಠಂ ॥36॥**

**ಅರ್ಥ :-** ಸರ್ಪವನ್ನು ನೋಡಿ ಯಾರಾದರೂ ಓಡಿ ಹೋದರೆ ಅವರಿಗಂತೂ ಜನರು ಏನನ್ನೂ ಹೇಳುವುದಿಲ್ಲ. ಆದರೆ ಅಯ್ಯಯ್ಯೋ ! ಯಾರು ಆ ಕುಗುರು ಸರ್ಪವನ್ನು ತ್ಯಜಿಸುತ್ತಾರೆ ಅವರನ್ನು ಮೂಢ ಜನರು ದುಷ್ಟನೆಂದು ಹೇಳುತ್ತಾರೆ, ಕೀಳು ನುಡಿಯುತ್ತಾರೆ. ಎಂಥ ವಿಚಿತ್ರವಿದೆ ನೋಡಿರಿ !

**ಸಪ್ಪೋ ಇಕ್ಕಂ ಮರಣಂ ಕುಗುರು ಅಣಂತಾಇ ದೇಹ ಮರಣಾಇಂ ।**
**ತೋ ವರ ಸಪ್ಪಂ ಗಹಿಯಂ ಮಾ ಕುಗುರು ಸೇವಣಂ ಭದ್ದಂ ॥37॥**

**ಅರ್ಥ :-** ಅಯ್ಯಾ ! ಸರ್ಪದಿಂದಂತೂ ಒಂದು ಮರಣವಾಗುತ್ತದೆ, ಮತ್ತು ಕುಗುರುವು ಅನಂತ ಮರಣಗಳನ್ನು ಒದಗಿಸುತ್ತಾನೆ ಎಂದರೆ ಅನಂತಬಾರಿ ಜನ್ಮ-ಮರಣಗಳನ್ನು ಮಾಡಿಸುತ್ತಾನೆ. ಆದುದರಿಂದ ಎಲೈ ಮಂಗಳಕರನೇ ! ಸರ್ಪದ ಗ್ರಹಣವಂತೂ ಒಳ್ಳೆಯದಿದೆ, ಆದರೆ ಕುಗುರುವಿನ ಸೇವನೆಯು ಒಳ್ಳೆಯದಿಲ್ಲ.

ಈ ಶ್ರದ್ಧೆಯನ್ನು ದೃಢೀಕರಿಸುವ ಸಲುವಾಗಿ ಅಲ್ಲಿ ಇನ್ನೂ ಅದೆಷ್ಟೋ ಗಾಥೆಗಳನ್ನು ಹೇಳಿದ್ದಾರೆ ಅವನ್ನು ಆ ಗ್ರಂಥದಿಂದ ತಿಳಿದುಕೊಳ್ಳಬೇಕು.

ಅದರಂತೆ 'ಸಂಘ ಪಟ್ಟ'ದಲ್ಲಿ ಹೀಗೆ ಹೇಳಿದ್ದಾರೆ,-

**ಕ್ಷುತ್ಕ್ಷಾಮಃ ಕಿಲ ಕೋಪಿ ರಂಕಶಿಶುಕಃ ಪ್ರವ್ರಜ್ಯ ಚೈತ್ಯೇ ಕ್ವಚಿತ್**
**ಕೃತ್ವಾ ಕಿಂಚನಪಕ್ಷಮಕ್ಷತಕಲಿಃ ಪ್ರಾಪ್ತಸ್ತದಾಚಾರ್ಯಕಮ್ ।**
**ಚಿತ್ರಂ ಚೈತ್ಯಗೃಹೇ ಗೃಹೀಯತಿ ನಿಜೇ ಗಚ್ಛೇ ಕುಟುಂಬೀಯತಿ ।**
**ಸ್ವಂ ಶಕ್ರೀಯತಿ ಬಾಲಿಶೀಯತಿ ಬುದ್ಧಾನ್ ವಿಶ್ವಂ ವರಾಕೀಯತಿ ॥**

**ಅರ್ಥ :-** ನೋಡಿರಿ, ಕ್ಷುಧೆಯಿಂದ ಕೃಶನಾದ ಓರ್ವ ಭಿಕ್ಷುಕ ಬಾಲಕನು ಎಲ್ಲೋ ಚೈತ್ಯಾಲಯಾದಿಗಳಲ್ಲಿ ದೀಕ್ಷೆ ಧಾರಣ ಮಾಡಿ ಪಾಪರಹಿತನಾಗದೆ ಕೂಡ ಯಾವುದೇ ಒಂದು ಪಕ್ಷದಿಂದ ಆಚಾರ್ಯಪದವಿಗೆ ಪ್ರಾಪ್ತನಾಗುವನು. ಅವನು ಚೈತ್ಯಾಲಯದಲ್ಲಿ ತನ್ನ ಮನೆಯಂತೆ ಪ್ರವರ್ತಿಸುತ್ತಾನೆ, ತನ್ನ ಗಚ್ಛದಲ್ಲಿ ಕುಟುಂಬದಂತೆ ಪ್ರವರ್ತಿಸುತ್ತಾನೆ, ತನ್ನನ್ನು ಇಂದ್ರನಂತೆ ಶ್ರೇಷ್ಠನೆಂದು ಮನ್ನಿಸುತ್ತಾನೆ, ಜ್ಞಾನಿಗಳನ್ನು ಬಾಲಕರಂತೆ ಅಜ್ಞಾನಿಗಳನ್ನಾಗಿ ಮನ್ನಿಸುತ್ತಾನೆ, ಸಮಸ್ತ ಗೃಹಸ್ಥರನ್ನು ಭಿಕ್ಷುಕರಂತೆ ಮನ್ನಿಸುತ್ತಾನೆ; ಆದುದರಿಂದ ಇದು ಮಹದಾಶ್ಚರ್ಯವಾಗಿದೆ.

ಅದರಂತೆ 'ಯೈರ್ಜಾತೋ ನ ಚ ವರ್ಧಿತೋ ನ ಚ ನ ಚ ಕ್ರೀತೋ' ಇತ್ಯಾದಿ ಕಾವ್ಯವಿದೆ; ಇದರ ಅರ್ಥವು ಹೀಗಿದೆ- ಯಾರಿಂದಲೂ ಇವನ ಜನ್ಮವಾಗಿಲ್ಲ, ಯಾರೂ ಬೆಳೆಯಿಸಿಲ್ಲ, ಯಾರೂ ಬೆಲೆಗೆ ಕೊಂಡು ಕೊಂಡಿಲ್ಲ, ಯಾರೂ ಸಾಲಗಾರರಾಗಿಲ್ಲ. ಇವೇ ಮೊದಲಾಗಿ ಯಾವುದೇ ಪ್ರಕಾರದ ಸಂಬಂಧವಿಲ್ಲ; ಮತ್ತು ಗೃಹಸ್ಥರನ್ನು ಎತ್ತುಗಳಂತೆ ಹೊಡೆಯುತ್ತಾನೆ, ಬಲವಂತದಿಂದ ದಾನಾದಿಗಳನ್ನು ತೆಗೆದುಕೊಳ್ಳುತ್ತಾನೆ; ಆದರೆ ಅಯ್ಯಯ್ಯೋ! ಏನು ಮಾಡುವುದು ಈ ಜಗತ್ತು ಅರಾಜಕವಾಗಿದೆ, ನ್ಯಾಯ ಕೇಳುವವರು ಯಾರೂ ಇಲ್ಲ.

ಈ ಪ್ರಕಾರ ಅಲ್ಲಿ ಈ ಶ್ರದ್ಧೆಗೆ ಪೋಷಕವಾಗುವಂಥ ಕಾವ್ಯಗಳಿವೆ. ಅವನ್ನು ಆ ಗ್ರಂಥದಿಂದ ತಿಳಿದುಕೊಳ್ಳಬೇಕು.

**ಪ್ರಶ್ನೆ :-** ಇದಂತೂ ಶ್ವೇತಾಂಬರರು ರಚಿಸಿದ ಉಪದೇಶವಿದೆ, ಅದರ ಸಾಕ್ಷ ಏತಕ್ಕಾಗಿ ಕೊಡುವಿರಿ ?

**ಉತ್ತರ :-** ಯಾವ ಪ್ರಕಾರ ನೀಚ ಪುರುಷರು ಯಾವುದರ ನಿಷೇಧ ಮಾಡುತ್ತಾರೆ ಅದರ ನಿಷೇಧವು ಉತ್ತಮ ಪುರುಷರಿಂದ ಸ್ವಾಭಾವಿಕವಾಗಿಯೇ ಆಗುವುದು; ಅದೇ ಪ್ರಕಾರ ವಸ್ತ್ರಾದಿ ಉಪಕರಣಗಳನ್ನು ಹೇಳಿದವರೇ ಅದರ ನಿಷೇಧ ಮಾಡಿದಾಗ ದಿಗಂಬರ ಧರ್ಮದಲ್ಲಂತೂ ಇಂಥ ವಿಪರೀತತೆಯ ನಿಷೇಧವು ಸ್ವಾಭಾವಿಕವಾಗಿಯೇ ಆಗುವುದು.

ಇನ್ನು ದಿಗಂಬರರ ಗ್ರಂಥಗಳಲ್ಲಿ ಕೂಡ ಈ ಶ್ರದ್ಧೆಗೆ ಪೋಷಕವಾದ ವಚನಗಳಿವೆ.

ಭ. ಕುಂದಕುಂದಾಚಾರ್ಯದೇವ ವಿರಚಿತ 'ಷಟ್ ಪಾಹುಡ'ದಲ್ಲಿ ಹೀಗೆ ಹೇಳಿದ್ದಾರೆ,-

**ದಂಸಣಮೂಲೋ ಧಮ್ಮೋ ಉವಇಟ್ಠೋ ಜಿಣವರೇಹಿಂ ಸಿಸ್ಸಾಣಂ ।**
**ತಂ ಸೋಊಣ ಸಕಣ್ಣೇ ದಂಸಣಹೀಣೋ ಣ ವಂದಿವ್ವೋ ॥2॥ -ದರ್ಶನಪಾಹುಡ**

**ಅರ್ಥ :-** ಸಮ್ಯಗ್ದರ್ಶನವು ಮೂಲವಿರುವಂಥ ಧರ್ಮವು ಜಿನವರರಿಂದ ಉಪದೇಶಿಸಲ್ಪಟ್ಟಿದೆ; ಅದನ್ನು ಕೇಳಿದ ಎಲೈ ಸಕರ್ಣ ಪುರುಷರೇ ! ಸಮ್ಯಕ್ತ್ವರಹಿತ ಜೀವನು ವಂದನೆಗೆ ಯೋಗ್ಯನಿಲ್ಲವೆಂಬುದನ್ನು ಮನ್ನಿಸಿರಿ. ಸ್ವಯಂ ಕುಗುರುವಿರುವವರ ಮೇಲೆ ಶ್ರದ್ಧೆಯಿಡುವುದರಿಂದ ಸಮ್ಯಕ್ತ್ವವು ಹೇಗಾಗುವ ಸಾಧ್ಯತೆಯಿದೆ ? ಸಮ್ಯಕ್ತ್ವವಿಲ್ಲದೆ ಯಾವ ಧರ್ಮವೂ ಆಗುವುದಿಲ್ಲ. ಧರ್ಮವಿಲ್ಲದೆ ವಂದನೆಗೆ ಯೋಗ್ಯ ಹೇಗಾಗುವನು ?

ಪುನಃ ಹೇಳುತ್ತಾರೆ,-

**ಜೇ ದಂಸಣೇಸು ಭಟ್ಠಾ ಣಾಣೇ ಭಟ್ಠಾ ಚರಿತ್ತ ಭಟ್ಠಾಯ ।**
**ಏದೇ ಭಟ್ಠ ವಿ ಭಟ್ಠಾ ಸೇಸಂ ಪಿ ಜಣಂ ವಿಣಾಸಂತಿ ॥8॥ -ದರ್ಶನಪಾಹುಡ**

**ಅರ್ಥ :-** ಯಾರು ದರ್ಶನದಲ್ಲಿ ಭ್ರಷ್ಟರಿದ್ದಾರೆ, ಜ್ಞಾನದಲ್ಲಿ ಭ್ರಷ್ಟರಿದ್ದಾರೆ, ಚಾರಿತ್ರದಲ್ಲಿ ಭ್ರಷ್ಟರಿದ್ದಾರೆ ಆ ಜೀವರುಗಳು ಭ್ರಷ್ಟರಿದ್ದಾರೆ; ಯಾವ ಜೀವರುಗಳು ಅವರ ಉಪದೇಶ ಮನ್ನಿಸುತ್ತಾರೆ ಆ ಜೀವರುಗಳ ನಾಶಮಾಡುತ್ತಾರೆ, ಕೆಡಕು ಮಾಡುತ್ತಾರೆ.

ಮತ್ತೆ ಹೇಳುತ್ತಾರೆ,-

**ಜೇ ದಂಸಣೇಸು ಭಟ್ಠಾ ಪಾಏ ಪಾಡಂತಿ ದಂಸಣಧರಾಣಂ ।**
**ತೇ ಹೋಂತಿ ಲಲ್ಲಮೂಆ ಬೋಹೀ ಪುಣ ದುಲ್ಲಹಾ ತೇಸಿಂ ॥12॥ -ದರ್ಶನಪಾಹುಡ**

**ಅರ್ಥ ೞ-** ಯಾರು ಸ್ವಯಂ ಸಮ್ಯಕ್ತ್ವದಿಂದ ಭ್ರಷ್ಟರಿದ್ದಾರೆ ಮತ್ತು ಸಮ್ಯಕ್ತ್ವಧಾರಕರನ್ನು ತಮ್ಮ ಕಾಲಿಗೆ ಬೀಳಿಸಿಕೊಳ್ಳಲು ಬಯಸುತ್ತಾರೆ ಅವರು ಹೆಳವ-ಮೂಕರಾಗುತ್ತಾರೆ ಎಂದರೆ ಸ್ಥಾವರರಾಗುತ್ತಾರೆ ಅಲ್ಲದೆ ಅವರಿಗೆ ಬೋಧದ ಪ್ರಾಪ್ತಿಯು ಕೂಡ ಅತ್ಯಂತ ದುರ್ಲಭವಾಗಿ ಹೋಗುತ್ತದೆ.

ಪುನಃ ಹೀಗೆ ಹೇಳುತ್ತಾರೆ,-

**ಜೇ ವಿ ಪಡಂತಿ ಚ ತೇಸಿಂ ಜಾಣಂತಾ ಲಜ್ಜಾಗಾರವಭಯೇಣ ।**
**ತೇಸಿಂ ಪಿ ಣತ್ಥಿ ಬೋಹೀ ಪಾವಂ ಅಣುಮೋಯಮಾಣಾಣಂ ॥13॥ - ದರ್ಶನಪಾಹುಡ**

**ಅರ್ಥ ೞ-** ತಿಳಿವಳಿಕೆಯಿದ್ದರೂ ಕೂಡ ಯಾರು ಲಜ್ಜೆ, ದೊಡ್ಡಸ್ತಿಕೆ ಮತ್ತು ಭಯದಿಂದ ಅವರ ಕಾಲು ಬೀಳುತ್ತಾರೆ ಅವರಿಗೆ ಕೂಡ ಬೋಧಿ ಎಂದರೆ ಸಮ್ಯಕ್ತ್ವವಾಗುವುದಿಲ್ಲ. ಆ ಜೀವರುಗಳು ಹೇಗಿದ್ದಾರೆಂದರೆ ಪಾಪದ ಅನುಮೋದನೆ ಮಾಡುತ್ತಾರೆ. ಪಾಪಿಗಳ ಸನ್ಮಾನಾದಿಗಳನ್ನು ಮಾಡುವುದರಿಂದ ಕೂಡ ಪಾಪದ ಅನುಮೋದನದ ಫಲವು ತಗಲುತ್ತದೆ.

ಮತ್ತೇ ಹೀಗೆ ಹೇಳುತ್ತಾರೆ,-

**ಜಸ್ಸ ಪರಿಗ್ಗಹಗಹಣಂ ಅಪ್ಪಂ ಬಹುಯಂ ಚ ಹವಇ ಲಿಂಗಸ್ಸ ।**
**ಸೋ ಗರಹಿಉ ಜಿಣವಯಣೇ ಪರಿಗಹರಹಿಓ ಣಿರಾಯಾರೋ ॥19॥ -ಸೂತ್ರಪಾಹುಡ**

**ಅರ್ಥ ೞ-** ಯಾವ ಲಿಂಗಕ್ಕೆ ಅಲ್ಪ ಇಲ್ಲವೆ ಅಧಿಕ ಪರಿಗ್ರಹದ ಅಂಗೀಕಾರವಾಗಿದೆ ಅದು ಜಿನಮತದಲ್ಲಿ ನಿಂದಾಯೋಗ್ಯವಿದೆ. ಅನಗಾರವು ಪರಿಗ್ರಹರಹಿತವಾಗಿಯೇ ಇರುತ್ತದೆ.

ಪುನಃ ಹೀಗೆ ಹೇಳುತ್ತಾರೆ,-

**ಧಮ್ಮಮ್ಮಿ ಣಿಪ್ಪವಾಸೋ ದೋಸಾವಾಸೋ ಯ ಉಚ್ಛುಫುಲ್ಲಸಮೋ ।**
**ಣಿಪ್ಫಲಣಿಗ್ಗುಣಯಾರೋ ಣಡವಸಣೋ ಣಗ್ಗ ರೂವೇಣ ॥71॥ -ಭಾವಪಾಹುಡ**

**ಅರ್ಥ ೞ-** ಯಾರು ಧರ್ಮದಲ್ಲಿ ನಿರುದ್ಯಮರಿದ್ದಾರೆ, ದೋಷಗಳ ಆಗರರಿದ್ದಾರೆ, ಇಕ್ಷು ಕುಸುಮದಂತೆ ನಿಷ್ಫಲರಿದ್ದಾರೆ, ಗುಣದ ಆಚರಣೆಯಿಂದ ರಹಿತರಿದ್ದಾರೆ ಅವರು ನಗ್ನರೂಪದಿಂದ-ನಟ-ಶ್ರಮಣರಿದ್ದಾರೆ, ವಿದೂಷಕರಂತೆ ವೇಷಧಾರಿಗಳಿದ್ದಾರೆ. ಈಗ ನಗ್ನವಾದ ಮೇಲೆ ವಿದೂಷಕನ ದೃಷ್ಟಾಂತವು ಸಂಭವವಿದೆ; ಪರಿಗ್ರಹವಿಟ್ಟುಕೊಂಡರೆ ಈ ದೃಷ್ಟಾಂತ ಕೂಡ ಸಂಭವಿಸುವುದಿಲ್ಲ.

ಮತ್ತೆ ಹೀಗೆ ಹೇಳಿದ್ದಾರೆ,-

**ಜೇ ಪಾವಮೋಹಿಯಮಈ ಲಿಂಗಂ ಘೇತ್ತೂಣ ಜಿಣವರಿಂದಾಣಂ ।**
**ಪಾವಂ ಕುಣಂತಿ ಪಾವಾ ತೇ ಚತ್ತಾ ಮೋಕ್ಖಮಗ್ಗಮ್ಮಿ ॥78॥ - ಮೋಕ್ಷಪಾಹುಡ**

**ಅರ್ಥ ೞ-** ಪಾಪದಿಂದ ಮೋಹಿತವಾಗಿರುವಂಥ ಬುದ್ಧಿಯುಳ್ಳ ಜೀವರುಗಳು ಜಿನವರರ ಲಿಂಗವನ್ನು ಧಾರಣ ಮಾಡಿ ಪಾಪ ಮಾಡುತ್ತಾರೆ ಆ ಪಾಪ ಮೂರ್ತಿಗಳು ಮೋಕ್ಷಮಾರ್ಗದಲ್ಲಿ ಭ್ರಷ್ಟರಿದ್ದಾರೆಂದು ತಿಳಿಯಬೇಕು.

ಮತ್ತೆ ಹೀಗೆ ಹೇಳಿದ್ದಾರೆ,-

**ಜೇ ಪಂಚಚೇಲಸತ್ತಾ ಗಂಥಗ್ಗಾಹೀ ಯ ಜಾಯಣಾಸೀಲಾ ।**
**ಆಧಾ ಕಮ್ಮಮ್ಮಿರಯಾ ತೇ ಚತ್ತಾ ಮೋಕ್ಖಮಗ್ಗಮ್ಮಿ ॥79॥ -ಮೋಕ್ಷಪಾಹುಡ**

**ಅರ್ಥ :-** ಯಾರು ಐದು ಪ್ರಕಾರದ ವಸ್ತ್ರಗಳಲ್ಲಿ ಆಸಕ್ತರಿದ್ದಾರೆ, ಪರಿಗ್ರಹವನ್ನು ಗ್ರಹಣ ಮಾಡುವಂಥವರಿದ್ದಾರೆ, ಯಾಚನಾ ಸಹಿತರಿದ್ದಾರೆ, ಅಧಃಕರ್ಮದೋಷಗಳಲ್ಲಿ ಮಗ್ನರಿದ್ದಾರೆ; ಅವರನ್ನು ಮೋಕ್ಷಮಾರ್ಗದಲ್ಲಿ ಭ್ರಷ್ಟರೆಂದು ತಿಳಿಯಬೇಕು.

ಈ ಶ್ರದ್ಧೆಯನ್ನು ದೃಢ ಮಾಡುವ ಸಲುವಾಗಿ ಅಲ್ಲಿ ಇನ್ನೂ ಅನೇಕ ಗಾಥಾ ಸೂತ್ರಗಳನ್ನು ಹೇಳಿದ್ದಾರೆ ಅವನ್ನು ಅಲ್ಲಿಂದಲೇ ತಿಳಿದುಕೊಳ್ಳಬೇಕು.

ಮತ್ತು ಭ. ಕುಂದಕುಂದಾಚಾರ್ಯದೇವ ಕೃತ 'ಲಿಂಗಪಾಹುಡ'ವಿದೆ, ಅದರಲ್ಲಿ ಮುನಿಧರ್ಮಧಾರಣ ಮಾಡಿ ಯಾರು ಹಿಂಸೆ, ಆರಂಭ, ಯಂತ್ರ-ಮಂತ್ರಾದಿಗಳನ್ನು ಮಾಡುತ್ತಾರೆ ಅವರ ನಿಷೇಧವನ್ನು ವಿಶೇಷವಾಗಿ ಮಾಡಲಾಗಿದೆ.

ಇನ್ನು ಗುಣಭದ್ರಾಚಾರ್ಯದೇವಕೃತ 'ಆತ್ಮಾನುಶಾಸನ'ದಲ್ಲಿ ಹೀಗೆ ಹೇಳಲಾಗಿದೆ,-

**ಇತಸ್ತತಶ್ಚ ತ್ರಸ್ಯಂತೋ ವಿಭಾವವರ್ಯ್ಯಾಂ ಯಥಾ ಮೃಗಾಃ ।**
**ವನಾಬ್ದಸಂತ್ಯುಗ್ರಾಮಂ ಕಲೌ ಕಷ್ಟಂ ತಪಸ್ವಿನಃ ॥197॥**

**ಅರ್ಥ :-** ಕಲಿಕಾಲದಲ್ಲಿತಪಸ್ವಿಗಳು ಜಿಂಕೆಗಳ ಹಾಗೆ ಈ ಕಡೆಯಿಂದ ಆ ಕಡೆಯಿಂದ ಭಯಭೀತರಾಗಿ ಅರಣ್ಯದಿಂದ ಸರಿದು ನಗರದ ಸಮೀಪ ವಾಸಮಾಡುತ್ತಾರೆ ಇದು ತೀರ ದುಃಖಕರವಾದ ಕಾರ್ಯವಿದೆ. ಇಲ್ಲಿ ನಗರದ ಸಮೀಪ ಕೂಡ ಇರುವುದರ ನಿಷೇಧ ಮಾಡಿದೆಯೆಂದ ಮೇಲೆ ನಗರದಲ್ಲಿರುವುದಂತೂ ನಿಷಿದ್ಧವೇ ಆಯಿತು.

**ವರಂ ಗಾರ್ಹಸ್ಥ್ಯಮೇವಾದ್ಯ ತಪಸೋ ಭಾವಿಜನ್ಮನಃ ।**
**ಸುಸ್ತ್ರೀಕಟಾಕ್ಷಲುಂಟಾಕಲುಪ್ತವೈರಾಗ್ಯ ಸಂಪದಃ ॥200॥**

**ಅರ್ಥ :-** ಯಾವುದರಿಂದ ಅನಂತ ಸಂಸಾರವಾಗುವಂತಿದೆ ಅಂಥ ತಪಸ್ಸಿಗಿಂತ ಗೃಹಸ್ಥಾವಸ್ಥೆಯೇ ಒಳ್ಳೆಯದಿದೆ. ಆ ತಪಸ್ಸು ಬೆಳಕು ಹರಿಯುತ್ತಿರುವಂತೆಯೇ ಸ್ತ್ರೀಯರ ಕಟಾಕ್ಷರೂಪದ ಕೊಳ್ಳೆಗಾರರಿಂದ ಅವರ ವೈರಾಗ್ಯವೆಂಬ ಸಂಪತ್ತು ಲೂಟಿಯಾಗಿ ಹೋಗಿರುವಂತಿದೆ.

ಅದರಂತೆ ಯೋಗೀಂದ್ರದೇವಕೃತ 'ಪರಮಾತ್ಮ ಪ್ರಕಾಶ'ದಲ್ಲಿ ಹೀಗೆ ಹೇಳಲಾಗಿದೆ,-

**ಚಿಲ್ಲಾಚಿಲ್ಲೀಪುತ್ಥಿಯಹಿಂ, ತೂಸಇ ಮೂಢು ಣಿಭಂತು ।**
**ಏಯಹಿಂ ಲಜ್ಜಇ ಣಾಣಿಯಉ, ಬಂಧಹಂ ಹೇಉ ಮುಣಂತು ॥215॥**

**ಅರ್ಥ :-** ಮೂಢನು ಶಿಷ್ಯ-ಶಿಷ್ಯೆಣಿ ಮತ್ತು ಪುಸ್ತಕಗಳಿಂದ ಸಂತುಷ್ಟನಾಗುತ್ತಾನೆ; ಭ್ರಾಂತಿರಹಿತನಾದಂಥ ಜ್ಞಾನಿಯು ಅವರನ್ನು ಬಂಧದ ಕಾರಣರೆಂದು ತಿಳಿದುಕೊಳ್ಳುತ್ತ ಅವರಿಂದ ಲಜ್ಜಾಯಮಾನನಾಗುತ್ತಾನೆ.

**ಕೇಣವಿ ಅಪ್ಪಉ ವಂಚಿಯಉ, ಸಿರುಲುಂಚಿವಿ ಛಾರೇಣ ।**
**ಸಯಲವಿ ಸಂಗ ಣ ಪರಿಹರಿಯ, ಜಿಣವರಲಿಂಗಧರೇಣ ॥217॥**

**ಅರ್ಥ :-** ಯಾವ ಜೀವನು ಜಿನವರರ ಲಿಂಗವನ್ನು ಧಾರಣಮಾಡಿದ್ದಾನೆ ಮತ್ತು ಬೂದಿಯಿಂದ ತಲೆಗೂದಲನ್ನು ಕಿತ್ತುಕೊಂಡಿದ್ದಾನೆ, ಆದರೆ ಸಮಸ್ತ ಪರಿಗ್ರಹವನ್ನು ಬಿಟ್ಟುಕೊಟ್ಟಿಲ್ಲ ಆ ಜೀವನು ತನ್ನ ಆತ್ಮನನ್ನು ಮೋಸ ಮಾಡಿದ್ದಾನೆ.

**ಜೇ ಜಿಣಲಿಂಗು ಧರೇವಿ ಮುಣಿ, ಇಟ್ಠಪರಿಗ್ಗಹ ಲಿಂತಿ ।**
**ಛದ್ದಿ ಕರೇವಿಣು ತೇ ಜಿ ಜಿಯ, ಸಾ ಪುಣು ಛದ್ದಿ ಗಿಲಂತಿ ॥218॥**

**ಅರ್ಥ :-** ಎಲೈ ಜೀವನೇ ! ಯಾವ ಮುನಿಗಳು ಜಿನಲಿಂಗವನ್ನು ಧಾರಣ ಮಾಡಿ ಇಷ್ಟ ಪರಿಗ್ರಹವನ್ನು ಗ್ರಹಣ ಮಾಡುತ್ತಾರೆ, ಅವರು ವಮನ ಮಾಡಿ ಪುನಃ ಅದೇ ವಮನವನ್ನು ಭಕ್ಷಣೆ ಮಾಡುತ್ತಾರೆ ಎಂದರೆ ಅತ್ಯಂತ ನಿಂದನೀಯರಿದ್ದಾರೆ. ಇತ್ಯಾದಿಯಾಗಿ ಅಲ್ಲಿ ಹೇಳುತ್ತಾರೆ.

ಈ ಪ್ರಕಾರ ಶಾಸ್ತ್ರಗಳಲ್ಲಿ ಕುಗುರುಗಳ ಮತ್ತು ಅವರ ಆಚರಣೆಯ ಹಾಗೂ ಅವರ ಸುಶ್ರೂಷೆಯ ನಿಷೇಧ ಮಾಡಲಾಗಿದೆಯೆಂಬುದನ್ನು ತಿಳಿದುಕೊಳ್ಳಬೇಕು.

ಮತ್ತು ಎಲ್ಲಿ ಮುನಿಗೆ ಆಹಾರದ ವಿಷಯದಲ್ಲಿ ಧಾತ್ರಿ-ದೂತ ಮೊದಲಾದ ನಲವತ್ತಾರು ದೋಷಗಳನ್ನು ಹೇಳಿದ್ದಾರೆ ಅಲ್ಲಿ ಗೃಹಸ್ಥರ ಬಾಲಕರನ್ನು ಪ್ರಸನ್ನ ಮಾಡುವುದು, ಸಮಾಚಾರ ಹೇಳುವುದು, ಮಂತ್ರ-ಔಷಧ-ಜ್ಯೋತಿಷ್ಯ ಮೊದಲಾದ ಕಾರ್ಯಗಳನ್ನು ತಿಳಿಸಿಕೊಡುವುದು ಮತ್ತು ಕೃತ-ಕಾರಿತ, ಅನುಮೋದನ ಸಹಿತವಾದ ಆಹಾರ ತೆಗೆದುಕೊಳ್ಳುವುದು ಇವೇ ಮೊದಲಾದ ಕ್ರಿಯೆಗಳ ನಿಷೇಧ ಮಾಡಲಾಗಿದೆ; ಆದರೆ ಈಗ ಕಾಲದೋಷದಿಂದ ಇವೇ ದೋಷಗಳನ್ನು ತಗಲಿಸಿ ಆಹಾರ ಗ್ರಹಣ ಮಾಡುತ್ತಾರೆ.

ಅದರಂತೆ ಪಾರ್ಶ್ವಸ್ಥ, ಕುಶೀಲ ಮೊದಲಾದ ಭ್ರಷ್ಟಾಚಾರಿ ಮುನಿಗಳ ನಿಷೇಧ ಮಾಡಿದೆ, ಅವರ ಲಕ್ಷಣಗಳನ್ನೇ ಧಾರಣ ಮಾಡುತ್ತಾರೆ. ವಿಶೇಷವೇನೆಂದರೆ ಅವರು ದ್ರವ್ಯದಿಂದಂತೂ ನಗ್ನರಿರುತ್ತಾರೆ, ಈ ನಾನಾ ಪರಿಗ್ರಹಗಳನ್ನಿಟ್ಟು ಕೊಳ್ಳುತ್ತಾರೆ. ಮತ್ತು ಅಲ್ಲಿ ಮುನಿಗಳಿಗೆ ಭ್ರಾಮರೀ ಮೊದಲಾದ ಆಹಾರ ಸ್ವೀಕರಿಸುವ ವಿಧಿಗಳನ್ನು ಹೇಳಿದೆ; ಆದರೆ ಇವರು ಆಸಕ್ತರಾಗಿ, ದಾನಿಗಳ ಪ್ರಾಣ ಹಿಂಡಿ ಆಹಾರಾದಿಗಳ ಗ್ರಹಣ ಮಾಡುತ್ತಾರೆ. ಮತ್ತು ಅವರು ಗೃಹಸ್ಥಧರ್ಮದಲ್ಲಿ ಕೂಡ ಉಚಿತವಿಲ್ಲದಂಥ ಅನ್ಯಾಯ, ಲೋಕನಿಂದೆ, ಹಾಗೂ ಪಾಪರೂಪದ ಕಾರ್ಯಗಳನ್ನು ಮಾಡುತ್ತಿರುವುದು ಪ್ರತ್ಯಕ್ಷವಾಗಿ ಕಂಡುಬರುತ್ತಿವೆ.

ಮತ್ತು ಜಿನಬಿಂಬ, ಶಾಸ್ತ್ರ ಮೊದಲಾದವು ಸರ್ವೋತ್ಕೃಷ್ಟ ಪೂಜ್ಯವಿದ್ದು ಅವುಗಳದೂ ಅವಿನಯ ಮಾಡುತ್ತಾರೆ, ತಾವು ಅವುಗಳಿಗಿಂತಲೂ ಶ್ರೇಷ್ಠರೆಂದುಕೊಂಡು ಉಚ್ಚಾಸನದ ಮೇಲೆ ಕೂಡ್ರುವುದು ಮೊದಲಾದ ಪ್ರವೃತ್ತಿಯನ್ನು ಧಾರಣ ಮಾಡುತ್ತಾರೆ. ಹೀಗೆ ಅನೇಕ ವಿಪರೀತತೆಗಳು ಪ್ರತ್ಯಕ್ಷವಾಗಿ ಕಂಡು ಬರುತ್ತವೆ ಮತ್ತು ತಮ್ಮನ್ನು ಮುನಿಯೆಂದು ಮನ್ನಿಸುತ್ತಾರೆ, ಮೂಲಗುಣಾದಿಗಳ ಧಾರಕರೆಂದು ಹೇಳಿಕೊಳ್ಳುತ್ತಾರೆ. ಹೀಗೆ ತಮ್ಮ ಮಹಿಮೆ ಮೆರೆಸುತ್ತಾರೆ, ಮತ್ತು ಸರಳ ಸ್ವಭಾವದ ಗೃಹಸ್ಥರು ಅವರ ಮುಖಾಂತರವಾಗುವ ಪ್ರಶಂಸೆಗಳಿಂದ ಮೋಸಹೋಗಿ

ಧರ್ಮದ ವಿಚಾರವನ್ನೇ ಮಾಡುವುದಿಲ್ಲ, ಅವರ ಭಕ್ತಿಯಲ್ಲಿ ತತ್ಪರರಿರುತ್ತಾರೆ; ಆದರೆ ದೊಡ್ಡ ಪಾಪವನ್ನು ದೊಡ್ಡ ಧರ್ಮವೆಂದು ಮನ್ನಿಸುವ ಈ ಮಿಥ್ಯಾತ್ವದ ಫಲದಿಂದ ಅನಂತ ಸಂಸಾರ ಹೇಗಾಗುವುದಿಲ್ಲ ಶಾಸ್ತ್ರದಲ್ಲಿ ಒಂದು ಜಿನವಚನವನ್ನು ವಿಪರೀತ ಮನ್ನಿಸುವುದರಿಂದ ಮಹಾಪಾಪಿಯಾಗುತ್ತಾನೆಂದು ಹೇಳಿದೆ;? ಇಲ್ಲಿಯಂತೂ ಜಿನವಚನದ ಯಾವ ಮಾತನ್ನೂ ಬಾಕಿ ಉಳಿಸಿಲ್ಲವೆಂದಬಳಿಕ ಇದರ ಸಮಾನವಾದ ಪಾಪವು ಬೇರೆ ಇನ್ನಾವುದಿದೆ ?

**ಶಿಥಿಲಾಚಾರ ಪೋಷಕ ಯುಕ್ತಿಗಳು ಮತ್ತು ಅವುಗಳ ನಿರಾಕರಣೆ :-**

ಈಗ ಇಲ್ಲಿ ಯಾರು ಕುಯುಕ್ತಿಗಳಿಂದ ಆ ಕುಗುರುಗಳ ಸ್ಥಾಪನೆ ಮಾಡುತ್ತಾರೆ ಅವರ ನಿರಾಕರಣೆ ಮಾಡುತ್ತಾರೆ.

**ಪ್ರಶ್ನೆ :-** ಗುರುವಿಲ್ಲದೆಯಂತೂ ನಿಗುರುವೆನಿಸಿಕೊಳ್ಳುವನಲ್ಲ ಮತ್ತು ಈ ಸಮಯದಲ್ಲಿ ಅಂಥ ಗುರುಗಳು ಕಾಣುವುದಿಲ್ಲ; ಆದುದರಿಂದ ಇವರನ್ನೇ ಗುರುಗಳೆಂದು ಮನ್ನಿಸುವುದು ?

**ಉತ್ತರ :-** ಯಾವನು ಗುರುವನ್ನು ಮನ್ನಿಸುವುದೇ ಇಲ್ಲ ಅವನ ಹೆಸರು ನಿಗುರು ಇದೆ. ಮತ್ತು ಯಾವನು ಗುರುವನ್ನಂತೂ ಮನ್ನಿಸುತ್ತಾನೆ, ಆದರೆ ಈ ಕ್ಷೇತ್ರದಲ್ಲಿ ಗುರುವಿನ ಲಕ್ಷಣವು ಕಂಡುಬರುವುದಿಲ್ಲವೆಂದು ಯಾವನನ್ನೋ ಗುರುವೆಂದು ಮನ್ನಿಸದಿರುವಂಥ ಶ್ರದ್ಧೆಯಿಂದಂತೂ ನಿಗುರುವಾಗುವುದಿಲ್ಲ. ಯಾವ ಪ್ರಕಾರ ಪರಮೇಶ್ವರನನ್ನು ಮನ್ನಿಸದವನಿಗೇ ನಾಸ್ತಿಕನೆಂಬ ಹೆಸರಿದೆ ಮತ್ತು ಯಾವನು ಪರಮೇಶ್ವರನನ್ನಂತೂ ಮನ್ನಿಸುತ್ತಾನೆ, ಆದರೆ ಈ ಕ್ಷೇತ್ರದಲ್ಲಿ ಪರಮೇಶ್ವರನ ಲಕ್ಷಣವು ಕಾಣದಿರುವುದರಿಂದ ಯಾವನನ್ನೋ ಪರಮೇಶ್ವರನೆಂದು ಮನ್ನಿಸದಿದ್ದರೆ ಅವನು ನಾಸ್ತಿಕನಂತೂ ಆಗುವುದಿಲ್ಲ; ಅದೇ ಪ್ರಕಾರ ಇದನ್ನು ತಿಳಿದುಕೊಳ್ಳಬೇಕು.

**ಪ್ರಶ್ನೆ :-** ಜೈನ ಶಾಸ್ತ್ರಗಳಲ್ಲಿ ವರ್ತಮಾನದೊಳಗೆ ಕೇವಲಿಗಳ ಅಭಾವ ಮಾತ್ರ ಹೇಳಿದೆ, ಮುನಿಗಳ ಅಭಾವವನ್ನಂತೂ ಹೇಳಿಲ್ಲವಲ್ಲ ?

**ಉತ್ತರ :-** ಈ ದೇಶಗಳಲ್ಲಿ ಸದ್ಭಾವವಿರುವುದೆಂದೇನು ಹೇಳಿಲ್ಲ; ಆದರೆ ಭರತ ಕ್ಷೇತ್ರದಲ್ಲಿ ಹೇಳಿದ್ದಾರೆ, ಆ ಭರತಕ್ಷೇತ್ರವಂತೂ ತುಂಬ ವಿಶಾಲವಾಗಿದೆ, ಎಲ್ಲಿಯಾದರೂ ಸದ್ಭಾವವಿರುವುದು; ಆದುದರಿಂದ ಅಭಾವವನ್ನು ಹೇಳಿಲ್ಲ. ಒಂದು ವೇಳೆ ನೀನು ಇರುತ್ತಿರುವ ಕ್ಷೇತ್ರದಲ್ಲೇ ಸದ್ಭಾವವನ್ನು ಮನ್ನಿಸಿದರೆ ಎಲ್ಲಿ ಇಂಥ ಗುರುಗಳೂ ದೊರಕುವುದಿಲ್ಲ ಅಲ್ಲಿ ಹೋದಾಗ ಯಾರನ್ನು ಗುರುವೆಂದು ಮನ್ನಿಸುವೆ ? ಯಾವ ಪ್ರಕಾರ ವರ್ತಮಾನದಲ್ಲಿ ಹಂಸಗಳ ಸದ್ಭಾವ ಹೇಳಿದೆ, ಆದರೆ ಹಂಸಗಳು ಕಂಡು ಬರದಿದ್ದರೆ ಇತರ ಪಕ್ಷಿಗಳನ್ನಂತೂ ಹಂಸವೆಂದು ಮನ್ನಿಸಲಾಗುವುದಿಲ್ಲ; ಅದೇ ಪ್ರಕಾರ ವರ್ತಮಾನದಲ್ಲಿ ಮುನಿಗಳ ಸದ್ಭಾವವನ್ನು ಹೇಳಿದೆ, ಆದರೆ ಮುನಿಗಳು ಕಂಡು ಬರದಿದ್ದರೆ ಇತರರನ್ನಂತೂ ಮುನಿಯೆಂದು ಮನ್ನಿಸುವ ಸಾಧ್ಯತೆಯಿಲ್ಲ.

**ಪ್ರಶ್ನೆ :-** ಒಂದು ಅಕ್ಷರವನ್ನು ಕಲಿಸಿದವರಿಗೆ ಗುರುಗಳೆಂದು ಮನ್ನಿಸುತ್ತಾರೆ; ಆದರೆ ಯಾರು ಶಾಸ್ತ್ರ ಕಲಿಸಿದ್ದಾರೆ ಮತ್ತು ಹೇಳಿದ್ದಾರೆ ಅವರನ್ನು ಗುರುಗಳೆಂದೇಕೆ ಮನ್ನಿಸಬಾರದು ?

**ಉತ್ತರ :-** ಗುರುವೆಂಬ ಹೆಸರು ದೊಡ್ಡವರದಿದೆ. ಯಾರಲ್ಲಿ ಯಾವ ಪ್ರಕಾರದ ಮಹಾನತೆಯು ಸಂಭವಿಸಿರುತ್ತದೆ ಅವರಿಗೆ ಆ ಪ್ರಕಾರದ ಗುರು ಸಂಜ್ಞೆಯು ಸಂಭವವಿದೆ. ಯಾವ ಪ್ರಕಾರ ಕುಲದ ಅಪೇಕ್ಷೆಯಿಂದ

ತಂದೆ-ತಾಯಿಗಳಿಗೆ ಗುರುಸಂಜ್ಞೆಯಿದೆ; ಅದೇ ಪ್ರಕಾರ ವಿದ್ಯೆ ಕಲಿಸುವವರಿಗೆ ವಿದ್ಯೆಯ ಅಪೇಕ್ಷೆಯಿಂದ ಗುರುಸಂಜ್ಞೆಯಿದೆ. ಇಲ್ಲಿಯಂತೂ ಧರ್ಮದ ಅಧಿಕಾರವಿರುವುದರಿಂದ ಯಾರಲ್ಲಿ ಧರ್ಮದ ಅಪೇಕ್ಷೆಯಿಂದ ಶ್ರೇಷ್ಠತೆಯು ಸಂಭವಿಸಿರುವುದು ಅವರನ್ನು ಗುರುಗಳೆಂದು ತಿಳಿಯಬೇಕು. ಆದರೆ ಧರ್ಮವೆಂಬ ಹೆಸರು ಚಾರಿತ್ರಕ್ಕಿದೆ **'ಚಾರಿತ್ತಂ ಖಲುಧಮ್ಮೋ'**[1] ಎಂದು ಶಾಸ್ತ್ರದಲ್ಲಿ ಹೇಳಿದೆ; ಆದುದರಿಂದ ಚಾರಿತ್ರದ ಧಾರಕರಿಗೇ ಗುರುಸಂಜ್ಞೆಯಿದೆ. ಮತ್ತು ಯಾವ ಪ್ರಕಾರ ಭೂತಾದಿಗಳ ಹೆಸರು ಕೂಡ ದೇವವಿದ್ದರೂ ಇಲ್ಲಿ ದೇವರ ಶ್ರದ್ಧೆಯಲ್ಲಿ ಅರಹಂತದೇವರದೇ ಗ್ರಹಣವಿದೆ; ಅದೇ ಪ್ರಕಾರ ಇತರರ ಹೆಸರು ಕೂಡ ಗುರುವೆಂದಿದ್ದರೂ ಇಲ್ಲಿ ಶ್ರದ್ಧೆಯೊಳಗೆ ನಿರ್ಗ್ರಂಥರದೇ ಗ್ರಹಣವಿದೆ. ಜೈನಧರ್ಮದಲ್ಲಿ ಅರಹಂತದೇವ, ನಿರ್ಗ್ರಂಥಗುರುವೆಂದು ಪ್ರಸಿದ್ಧ ವಚನವಿದೆ.

**ಪ್ರಶ್ನೆ :-** ನಿರ್ಗ್ರಂಥರ ಹೊರತು ಉಳಿದವರನ್ನು ಗುರುಗಳೆಂದು ಮನ್ನಿಸದಿರುವುದಕ್ಕೆ ಕಾರಣವೇನಿದೆ ?

**ಉತ್ತರ :-** ನಿರ್ಗ್ರಂಥರನ್ನು ಹೊರತುಪಡಿಸಿ ಅನ್ಯಜೀವರುಗಳು ಎಲ್ಲ ಪ್ರಕಾರದಿಂದ ಶ್ರೇಷ್ಠತೆಯನ್ನು ಧಾರಣ ಮಾಡುವುದಿಲ್ಲ. ಹೇಗೆಂದರೆ - ಲೋಭಿಯು ಶಾಸ್ತ್ರವ್ಯಾಖ್ಯಾನ ಮಾಡಿದರೆ ಅಲ್ಲಿ ಅವನು ಇವನಿಗೆ ಶಾಸ್ತ್ರ ಹೇಳುವುದರಿಂದ ಶ್ರೇಷ್ಠನಾದನು. ಮತ್ತು ಇವನು ಅವನಿಗೆ ಹಣ-ವಸ್ತ್ರಾದಿಗಳನ್ನು ಕೊಡುವುದರಿಂದ ಶ್ರೇಷ್ಠನಾದನು. ಬಾಹ್ಯದಲ್ಲಿ ಶಾಸ್ತ್ರ ಹೇಳುವವನು ಶ್ರೇಷ್ಠನಿರುತ್ತಾನೆ, ಆದರೆ ಅಂತರಂಗದಲ್ಲಿ ಲೋಭಿಯಿರುತ್ತಾನೆ; ಆದುದರಿಂದ ಸರ್ವಥಾ ಶ್ರೇಷ್ಠತೆಯಾಗಲಿಲ್ಲ.

**ಪ್ರಶ್ನೆ :-** ನಿರ್ಗ್ರಂಥರು ಕೂಡ ಆಹಾರ ತೆಗೆದುಕೊಳ್ಳುತ್ತಾರಲ್ಲ ?

**ಉತ್ತರ :-** ಅವರು ಲೋಭಿಯಾಗಿ, ದಾತಾರರ ಸುಶ್ರೂಷೆ ಮಾಡಿ, ದೀನತೆಯಿಂದ ಆಹಾರ ತೆಗೆದುಕೊಳ್ಳುವುದಿಲ್ಲ; ಅದಕ್ಕಾಗಿ ಅವರ ಮಹಾನತೆಯು ಕುಂದುವುದಿಲ್ಲ. ಲೋಭಿಯಿದ್ದವನೇ ಹೀನತೆಗೆ ಪ್ರಾಪ್ತನಾಗುತ್ತಾನೆ. ಇದೇ ಪ್ರಕಾರ ಅನ್ಯ ಜೀವರುಗಳನ್ನು ತಿಳಿಯಬೇಕು. ಆದುದರಿಂದ ನಿರ್ಗ್ರಂಥರೇ ಎಲ್ಲ ಪ್ರಕಾರದಿಂದ ಮಹಾನತೆಗೆ ಯುಕ್ತರಿದ್ದಾರೆ; ನಿರ್ಗ್ರಂಥರ ಹೊರತು ಅನ್ಯ ಜೀವರುಗಳು ಎಲ್ಲ ಪ್ರಕಾರದಿಂದ ಗುಣವಂತರಿಲ್ಲ. ಆದುದರಿಂದ ಗುಣಗಳ ಅಪೇಕ್ಷೆಯಿಂದ ಉಚ್ಚತೆಯು ಮತ್ತು ದೋಷಗಳ ಅಪೇಕ್ಷೆಯಿಂದ ನೀಚತೆಯು ಭಾಸವಾಗುತ್ತದೆ, ಆಗ ನಿಃಶಂಕದಿಂದ ಸ್ತುತಿಮಾಡುವ ಸಾಧ್ಯತೆಯಿಲ್ಲ.

ಮತ್ತು ನಿರ್ಗ್ರಂಥರ ಹೊರತಾಗಿ ಅನ್ಯ ಜೀವರುಗಳು ಎಂಥ ಧರ್ಮಸಾಧನೆ ಮಾಡುತ್ತಾರೆ, ಅಂಥ ಹಾಗೂ ಅದಕ್ಕಿಂತ ಅಧಿಕವಾದ ಧರ್ಮಸಾಧನೆಯನ್ನು ಗೃಹಸ್ಥರುಕೂಡ ಮಾಡುತ್ತಾರೆಂದ ಬಳಿಕ ಅಲ್ಲಿಗುರುಸಂಜ್ಞೆಯು ಯಾರಿಗೆ ಸಲ್ಲುವುದು ? ಆದುದರಿಂದ ಆ ಬಾಹ್ಯಾಭ್ಯಂತರ ಪರಿಗ್ರಹಗಳಿಂದ ರಹಿತರಾದ ನಿರ್ಗ್ರಂಥ ಮುನಿಗಳನ್ನೇ ಗುರುಗಳೆಂದು ತಿಳಿಯಬೇಕು.

**ಪ್ರಶ್ನೆ :-** ವರ್ತಮಾನದಲ್ಲಿ ಇಂಥ ಗುರುಗಳಂತೂ ಇಲ್ಲಿ ಇಲ್ಲ, ಆದುದರಿಂದ ಯಾವ ಪ್ರಕಾರ ಅರಹಂತರ ಸ್ಥಾಪನಾ ಪ್ರತಿಮೆಯಿದೆ; ಅದೇ ಪ್ರಕಾರ ಗುರುಗಳ ಸ್ಥಾಪನೆಯೆಂದರೆ ಈ ವೇಷಧಾರಿಗಳಿದ್ದಾರೆ ?

**ಉತ್ತರ :-** ಯಾವ ಪ್ರಕಾರ ದೊರೆಯ ಸ್ಥಾಪನೆಯನ್ನು ಚಿತ್ರಾದಿಗಳ ಮೂಲಕ ಮಾಡಿದರೆ ಅದು

1 ಪ್ರವಚನಸಾರ ಗಾಥೆ ೧-೭

ದೊರೆಯ ಪ್ರತಿಪಕ್ಷಿಯಲ್ಲ, ಮತ್ತು ಯಾವನೋ ಸಾಮಾನ್ಯ ಮನುಷ್ಯನು ತನ್ನನ್ನು ದೊರೆಯೆಂದು ಮನ್ನಿಸಿದರೆ ಅವನು ದೊರೆಯ ಪ್ರತಿಪಕ್ಷಿಯಾಗುತ್ತಾನೆ; ಅದೇ ಪ್ರಕಾರ ಅರಹಂತಾದಿಗಳ ಸ್ಥಾಪನೆಯನ್ನು ಪಾಷಾಣ ಮೊದಲಾದವುಗಳಲ್ಲಿ ಮಾಡಿದರೆ ಅವು ಅವರ ಪ್ರತಿಪಕ್ಷಿಯಾಗುವುದಿಲ್ಲ, ಮತ್ತು ಯಾವನೋ ಸಾಮಾನ್ಯ ಮನುಷ್ಯನು ತನ್ನನ್ನು ಮುನಿಯೆಂದು ಮನ್ನಿಸಿದರೆ ಅವನು ಮುನಿಗಳ ಪ್ರತಿಪಕ್ಷಿಯಾಗುವನು. ಈ ಪ್ರಕಾರ ಕೂಡ ಸ್ಥಾಪನೆಯಾಗುತ್ತಿದ್ದರೆ ತಮ್ಮನ್ನು ಅರಹಂತರೆಂದೂ ಮನ್ನಿಸಬಹುದಾಗಿದೆ ! ಮತ್ತು ಒಂದು ವೇಳೆ ಅವರ ಸ್ಥಾಪನೆಯಿದ್ದರೆ ಬಾಹ್ಯದಲ್ಲಿ ಕೂಡ ಹಾಗೇ ಆಗಬೇಕು, ಆದರೆ ಅವರು ನಿರ್ಗ್ರಂಥರು, ಇವರು ಅಧಿಕ ಪರಿಗ್ರಹಿಗಳು ಇದು ಹೇಗೆ ಸಂಭವಿಸುತ್ತದೆ ?

**ಪ್ರಶ್ನೆ :-** ಈಗ ಶ್ರಾವಕರೂ ಕೂಡ ಹೇಗೆ ಇರಬೇಕು ಹಾಗೆ ಇಲ್ಲ, ಆದುದರಿಂದ ಹೇಗೆ ಶ್ರಾವಕರಿದ್ದಾರೆ ಹಾಗೆ ಮುನಿಗಳಿದ್ದಾರೆ ?

**ಉತ್ತರ :-** ಶಾಸ್ತ್ರಗಳಲ್ಲಿ ಶ್ರಾವಕವೆಂಬ ಸಂಜ್ಞೆಯಂತೂ ಎಲ್ಲ ಜೈನ ಗೃಹಸ್ಥರಿಗಿದೆ. ಶ್ರೇಣಿಕನು ಅಸಂಯಮಿಯಿದ್ದರೂ ಅವನನ್ನು ಉತ್ತರ ಪುರಾಣದಲ್ಲಿ ಶ್ರಾವಕೋತ್ತಮನೆಂದು ಹೇಳಿದೆ. ಸಮವಸರಣದ ಹನ್ನೆರಡು ಸಭೆಗಳಲ್ಲಿ ಶ್ರಾವಕರನ್ನು ಹೇಳಿದೆ ಅಲ್ಲಿ ಅವರೆಲ್ಲರು ವ್ರತಧಾರಿಗಳಿರುವುದಿಲ್ಲ. ಎಲ್ಲರೂ ವ್ರತಧಾರಿಗಳಿರುತ್ತಿದ್ದರೆ ಅಸಂಯಮ ಮನುಷ್ಯರ ಸಂಖ್ಯೆಯನ್ನು ಬೇರೆ ಹೇಳುತ್ತಿದ್ದರು ಹೀಗೆ ಹೇಳಿಲ್ಲ; ಆದುದರಿಂದ ಜೈನ ಗೃಹಸ್ಥರು ಶ್ರಾವಕವೆಂಬ ಹೆಸರನ್ನು ಪಡೆಯುತ್ತಾರೆ. ಮತ್ತು ಮುನಿ ಸಂಜ್ಞೆಯನ್ನಂತೂ ನಿರ್ಗ್ರಂಥರನ್ನು ಹೊರತು ಪಡಿಸಿ ಬೇರೆ ಯಾರಿಗೂ ಹೇಳಲಾಗಿಲ್ಲ.

ಇನ್ನು ಶ್ರಾವಕರಿಗೆ ಎಂಟು ಮೂಲಗುಣಗಳನ್ನು ಹೇಳಿದ್ದಾರೆ. ಆದುದರಿಂದ ಮದ್ಯ, ಮಾಂಸ, ಮಧು, ಐದು ಔದುಂಬರ ಫಲ ಮೊದಲಾದವುಗಳ ಭಕ್ಷಣೆಯು ಶ್ರಾವಕರಿಗೆ ಇಲ್ಲ. ಅದಕ್ಕಾಗಿ ಯಾವುದೇ ಪ್ರಕಾರದಿಂದ ಶ್ರಾವಕತನವು ಸಂಭವಿಸುತ್ತದೆ; ಆದರೆ ಮುನಿಗಳಿಗೆ ಇಪ್ಪತ್ತೆಂಟು ಮೂಲಗುಣಗಳಿದ್ದು ಅವು ವೇಷಧಾರಿಗಳಲ್ಲಿ ಕಂಡುಬರುವುದೇ ಇಲ್ಲ. ಅದಕ್ಕಾಗಿಯೇ ಮುನಿತನವು ಯಾವುದೇ ಪ್ರಕಾರದಿಂದ ಸಂಭವಿಸುವುದಿಲ್ಲ. ಜಂಬುಕುಮಾರ ಮೊದಲಾದವರು ಗೃಹಸ್ಥಾವಸ್ಥೆಯಲ್ಲಿ ಬಹಳಷ್ಟು ಹಿಂಸಾದಿಕಾರ್ಯಗಳನ್ನು ಮಾಡಿರುವಂತೆ ಕೇಳಲಾಗುತ್ತದೆ; ಆದರೆ ಮುನಿಗಳಾಗಿಯಂತೂ ಯಾರೂ ಹಿಂಸಾದಿ ಕಾರ್ಯಗಳನ್ನು ಮಾಡಲಿಲ್ಲ, ಪರಿಗ್ರಹಗಳನ್ನಿಟ್ಟುಕೊಳ್ಳಲಿಲ್ಲ; ಆದುದರಿಂದ ಈ ತರದ ಯುಕ್ತಿವಾದವು ಕಾರ್ಯಕಾರಿಯಾಗುವುದಿಲ್ಲ.

ನೋಡಿರಿ ! ಋಷಭನಾಥರ ಜತೆಯಲ್ಲಿ ನಾಲ್ಕು ಸಾವಿರ ದೊರೆಗಳು ದೀಕ್ಷೆ ಸ್ವೀಕರಿಸಿ ಪುನಃ ಭ್ರಷ್ಟರಾದರು. ಆಗ ದೇವೇಂದ್ರನು 'ನೀವು ಜಿನಲಿಂಗಿಗಳಾಗಿ ವಿಪರೀತವಾಗಿ ನಡೆದುಕೊಂಡರೆ ನಾವು ಶಿಕ್ಷೆ ವಿಧಿಸುತ್ತೇವೆ, ತಮ್ಮ ಇಚ್ಛೆಯಿದ್ದ ಹಾಗೆ ನಡೆದುಕೊಳ್ಳುವುದಿದ್ದರೆ ಈ ಜಿನಲಿಂಗವನ್ನು ಬಿಟ್ಟುಕೊಡಿರೆ'ಂದು ಹೇಳುತ್ತಾನೆ. ಆದುದರಿಂದ ಜಿನಲಿಂಗಿಗಳೆಂದು ಹೇಳಿಸಿಕೊಂಡು ವಿಪರೀತವಾಗಿ ಪ್ರವರ್ತಿಸುವವರಂತೂ ಶಿಕ್ಷಾರ್ಹರೇ ಇದ್ದಾರೆ; ಅವರು ವಂದನೆ ಮೊದಲಾದವುಗಳಿಗೆ ಹೇಗೆ ತಾನೆ ಯೋಗ್ಯರಾಗುತ್ತಾರೆ.

ಈಗ ಹೆಚ್ಚಿಗೇನು ಹೇಳುವುದು ! ಜಿನಮತದಲ್ಲಿ ಕುವೇಷಧಾರಣ ಮಾಡುವವರು ಮಹಾಪಾಪ ಮಾಡುತ್ತಾರೆ; ಅವರ ಸೇವೆ-ಸುಶ್ರೂಷೆ ಮಾಡುವಂಥ ಜೀವರುಗಳು ಕೂಡ ಪಾಪಿಗಳಿರುತ್ತಾರೆ. ಧರ್ಮಾತ್ಮನಾದ

ಶ್ರೇಷ್ಠಿಯು ಭ್ರಾಂತಿವಶದಿಂದ ಚಾರಣ ಮುನಿಗಳನ್ನು ಭ್ರಷ್ಟರೆಂದು ತಿಳಿದುಕೊಂಡು ಅವರಿಗೆ ಆಹಾರ ಕೊಡಲಿಲ್ಲವೆಂಬ ಕಥೆಯು ಪದ್ಮಪುರಾಣದಲ್ಲಿ ಬರುತ್ತದೆ, ಆದುದರಿಂದ ಪ್ರತ್ಯಕ್ಷ ಭ್ರಷ್ಟರಿರುವವರಿಗೆ ಆಹಾರಾದಿಗಳನ್ನು ಕೊಡುವುದು ಹೇಗೆ ಉಚಿತವೆನಿಸುತ್ತದೆ ?

**ಪ್ರಶ್ನೆ :-** ನಮ್ಮ ಅಂತರಂಗದಲ್ಲಂತೂ ಸತ್ಯಶ್ರದ್ಧೆಯಿದೆ; ಆದರೆ ಬಾಹ್ಯದಲ್ಲಿ ಲಜ್ಜೆ ಮೊದಲಾದವುಗಳ ವಶೀಭೂತರಾಗಿ ಶಿಷ್ಟಾಚಾರ ಮಾಡುತ್ತೇವೆ, ಆದರೆ ಫಲವಂತೂ ಅಂತರಂಗಕ್ಕೆ ಅನುಸಾರವಾಗಿ ಆಗುತ್ತದೆಯಲ್ಲವೆ?

**ಉತ್ತರ :-** ಷಟ್‌ಪಾಹುಡದಲ್ಲಿ ಲಜ್ಜೆಯಿಂದ ವಂದನಾದಿಗಳ ನಿಷೇಧ ಮಾಡಿದೆಯೆಂಬ ಮಾತನ್ನು ಈ ಮೊದಲೇ ಹೇಳಲಾಗಿದೆ. ಯಾರಾದರೂ ನಮ್ಮ ಮಸ್ತಕ ಬಾಗಿಸಿ ಬಲವಂತದಿಂದ ಕೈಮುಗಿಯಿಸಿದರೆ ಮಾತ್ರ ನಮ್ಮ ಅಂತರಂಗದಲ್ಲಿರಲಿಲ್ಲವೆಂದು ಹೇಳಬಹುದಾಗಿದೆ; ಆದರೆ ತಾವೇ ಮಾನ ಮೊದಲಾದವುಗಳಿಂದ ನಮಸ್ಕಾರ ಮಾಡಿದರೆ ನಮ್ಮ ಮನಸ್ಸು ಇರಲಿಲ್ಲವೆಂದು ಹೇಗೆ ಹೇಳುವುದು ? ಯಾವನೋ ಓರ್ವನು ತನ್ನ ಅಂತರಂಗದಲ್ಲಿ ಮಾಂಸವನ್ನು ಕೆಡಕೆಂದು ತಿಳಿಯುತ್ತಾನೆ, ಆದರೆ ದೊರೆಯಿಂದ ಒಳ್ಳೆಯವನೆನಿಸಿಕೊಳ್ಳುವ ಸಲುವಾಗಿ ಮಾಂಸ ಭಕ್ಷಣೆ ಮಾಡಿದರೆ ಅವನನ್ನು ವ್ರತಿಯೆಂದು ಹೇಗೆ ಮನ್ನಿಸುವುದು ? ಅದೇ ಪ್ರಕಾರ ಅಂತರಂಗದಲ್ಲಿ ಕುಗುರುಗಳ ಸೇವನೆಯನ್ನು ಕೆಡಕೆಂದು ತಿಳಿದವನು ಕುಗುರುಗಳಿಗೆ ಹಾಗೂ ಇತರರಿಗೆ ಒಳ್ಳೆಯವನೆನಿಸಿಕೊಳ್ಳುವ ಸಲುವಾಗಿ ಸೇವನೆ ಮಾಡಿದರೆ ಅವನನ್ನು ಶ್ರದ್ಧೆಯುಳ್ಳವನೆಂದು ಹೇಗೆ ಹೇಳುವುದು ? ಆದುದರಿಂದ ಬಾಹ್ಯತ್ಯಾಗ ಮಾಡಿದ ಮೇಲೆಯೇ ಅಂತರಂಗ ತ್ಯಾಗವು ಸಂಭವವಿದೆ. ಅದಕ್ಕಾಗಿ ನಿಜವಾದ ಶ್ರದ್ಧೆಯುಳ್ಳವರೆಲ್ಲರೂ ಯಾವುದೇ ಪ್ರಕಾರದಿಂದ ಕುಗುರುಗಳ ಸೇವೆ, ಸುಶ್ರೂಷೆ ಮೊದಲಾದುವನ್ನು ಮಾಡುವುದು ಯೋಗ್ಯವಾಗಿಲ್ಲ.

ಈ ಪ್ರಕಾರ ಕುಗುರುಗಳ ಸೇವನೆಯ ನಿಷೇಧ ಮಾಡಲಾಯಿತು.

**ಪ್ರಶ್ನೆ :-** ಓರ್ವ ತತ್ತ್ವಶ್ರದ್ಧೆಯುಳ್ಳವನಿಗೆ ಕುಗುರುಗಳ ಸೇವನೆಯಿಂದ ಮಿಥ್ಯಾತ್ವ ಹೇಗಾಗುವುದು ?

**ಉತ್ತರ :-** ಯಾವ ಪ್ರಕಾರ ಶೀಲವಂತ ಸ್ತ್ರೀಯು ಪರಪುರುಷನ ಜತೆಯಲ್ಲಿ ಪತಿಯ ಹಾಗೆ ಸರ್ವಥಾ ಕ್ರೀಡಿಸುವುದಿಲ್ಲ, ಅದೇ ಪ್ರಕಾರ ತತ್ತ್ವಶ್ರದ್ಧೆಯುಳ್ಳ ಪುರುಷನು ಕುಗುರುಗಳ ಜತೆಯಲ್ಲಿ ಸುಗುರುಗಳ ಹಾಗೆ ನಮಸ್ಕಾರ ಮೊದಲಾದವುಗಳನ್ನು ಸರ್ವಥಾ ಮಾಡುವುದಿಲ್ಲ. ಏಕೆಂದರೆ ಇವನಂತೂ ಜೀವ, ಮೊದಲಾದ ತತ್ತ್ವಗಳ ಶ್ರದ್ಧೆಯುಳ್ಳವನಿದ್ದಾನೆ-ಅಲ್ಲಿ ರಾಗಾದಿಗಳ ನಿಷೇಧ ಮಾಡುವಂಥ ಶ್ರದ್ಧೆ ಮಾಡುತ್ತಾನೆ, ವೀತರಾಗ ಭಾವವನ್ನು ಶ್ರೇಷ್ಠವೆಂದು ಮನ್ನಿಸುತ್ತಾನೆ-ಅದಕ್ಕಾಗಿ ವೀತರಾಗತೆಯು ಕಂಡು ಬರುವಂಥ ಗುರುಗಳನ್ನೇ ಉತ್ತಮವೆಂದು ತಿಳಿದುಕೊಂಡು ಅವರಿಗೆ ನಮಸ್ಕಾರಾದಿಗಳನ್ನು ಮಾಡುತ್ತಾನೆ; ರಾಗಾದಿಗಳು ಕಂಡು ಬರುತ್ತಿರುವವರನ್ನು ನಿಷಿದ್ಧವೆಂದು ತಿಳಿದುಕೊಂಡು ಅವರಿಗೆ ಎಂದೂ ನಮಸ್ಕಾರಾದಿಗಳನ್ನು ಮಾಡುವುದಿಲ್ಲ.

**ಪ್ರಶ್ನೆ :-** ದೊರೆ ಮೊದಲಾದವರಿಗೆ ಮಾಡುವಂತೆಯೇ ಇವರಿಗೂ ಮಾಡುತ್ತಾನೆ ?

**ಉತ್ತರ :-** ದೊರೆ ಮೊದಲಾದವರು ಧರ್ಮಪದ್ಧತಿಯಲ್ಲಿ ಇಲ್ಲ, ಗುರುಗಳ ಸೇವನೆಯು ಧರ್ಮಪದ್ಧತಿಯಲ್ಲಿ ಇದೆ. ದೊರೆ ಮೊದಲಾದವರ ಸೇವೆಯು ಲೋಭಾದಿಗಳಿಂದ ಆಗುತ್ತದೆ, ಅಲ್ಲಿ ಚಾರಿತ್ರಮೋಹದ ಉದಯವೇ ಸಂಭವವಿದೆ; ಆದರೆ ಗುರುಗಳ ಸ್ಥಾನದಲ್ಲಿ ಕುಗುರುವಿನ ಸೇವನೆ ಮಾಡಿದರೆ ಅಲ್ಲಿ ತತ್ತ್ವಶ್ರದ್ಧೆಯ

ಕಾರಣರಂತೂ ಗುರುಗಳಿದ್ದು ಅವರಿಂದ ಇವನು ಪ್ರತಿಕೂಲನಾದನು. ಯಾವನು ಕಾರಣದಲ್ಲಿ ವಿಪರೀತತೆಯನ್ನುಂಟು ಮಾಡುವನು ಅವನು ಆ ತನ್ನ ಕಾರ್ಯಭೂತವಾದ ತತ್ತ್ವಶ್ರದ್ಧೆಯಲ್ಲಿ ದೃಢತೆ ಹೇಗೆ ಮಾಡುವನು ? ಆದುದರಿಂದ ಅಲ್ಲಿ ದರ್ಶನ ಮೋಹದ ಉದಯವು ಸಂಭವವಿದೆ.

ಈ ಪ್ರಕಾರ ಕುಗುರುಗಳ ನಿರೂಪಣೆ ಮಾಡಲಾಯಿತು.

## ಕುಧರ್ಮದ ನಿರೂಪಣೆ ಮತ್ತು ಅದರ ಶ್ರದ್ಧೆಯ ನಿಷೇಧ

ಈಗ ಕುಧರ್ಮದ ನಿರೂಪಣೆ ಮಾಡಲಾಗುವುದು.

ಹಿಂಸೆ ಮೊದಲಾದ ಪಾಪಗಳು ಉತ್ಪನ್ನವಾಗುವಲ್ಲಿ ಮತ್ತು ವಿಷಯಕಷಾಯಗಳ ವೃದ್ಧಿಯಾಗುವಲ್ಲಿ ಧರ್ಮವೆಂದು ಮನ್ನಿಸಿದರೆ ಅದು ಕುಧರ್ಮವಿದೆಯೆಂದು ತಿಳಿಯುವುದು. ಯಜ್ಞ ಮೊದಲಾದ ಕ್ರಿಯೆಗಳಲ್ಲಿ ಮಹಾಹಿಂಸೆಯನ್ನುತ್ಪನ್ನ ಮಾಡುವುದು, ದೊಡ್ಡ ಪ್ರಾಣಿಗಳ ವಧೆ ಮಾಡುವುದು ಮತ್ತು ಇಂದ್ರಿಯ ವಿಷಯಗಳ ಪೋಷಣೆ ಮಾಡುವುದು, ಆ ಪ್ರಾಣಿಗಳಲ್ಲಿ ದುಷ್ಟಬುದ್ಧಿ ಮಾಡಿ ರೌದ್ರಧ್ಯಾನಿಯಾಗುವುದು, ತೀವ್ರ ಲೋಭದಿಂದ ಇತರರ ಕೆಡಕು ಮಾಡಿ ತಮ್ಮ ಯಾವುದೇ ಪ್ರಯೋಜನವನ್ನು ಸಾಧಿಸಲು ಇಚ್ಛಿಸುವುದು; ಮತ್ತು ಇಂಥ ಕಾರ್ಯಮಾಡಿ ಅದನ್ನು ಧರ್ಮವೆಂದು ಮನ್ನಿಸಿದರೆ ಅದು ನಿಜವಾಗಿ ಕುಧರ್ಮವಿದೆ.

ಅದರಂತೆ ತೀರ್ಥಗಳಲ್ಲಿ ಹಾಗೂ ಇತರೆಡೆಗಳಲ್ಲಿ ಸ್ನಾನಾದಿಗಳನ್ನು ಮಾಡುವುದು, ಅಲ್ಲಿ ಬಹಳಷ್ಟು ಸ್ಥೂಲ ಸೂಕ್ಷ್ಮ ಜೀವಿಗಳ ಹಿಂಸೆಯಾಗುತ್ತದೆ, ಶರೀರಕ್ಕೆ ಸೌಖ್ಯ ದೊರಕುತ್ತದೆ, ವಿಷಯಗಳ ಪೋಷಣೆಯಾಗುತ್ತದೆ, ಕಾಮಾದಿ ವಿಕಾರಗಳು ವೃದ್ಧಿಸುತ್ತವೆ ಮತ್ತು ಕುತೂಹಲದಿಂದ ಕಷಾಯ ಭಾವವು ಬೆಳೆಯುತ್ತದೆ ಇವೆಲ್ಲವನ್ನು ಧರ್ಮವೆಂದು ಮನ್ನಿಸುವುದು ಅದು ಕುಧರ್ಮವಿದೆ.

ಇನ್ನು ಸಂಕ್ರಾಂತಿ, ಗ್ರಹಣ, ವ್ಯತಿಪಾತ ಮೊದಲಾದುವಲ್ಲಿ ದಾನ ಕೊಡುತ್ತಾರೆ ಮತ್ತು ಕೆಡಕು ಗ್ರಹಗಳ ಸಲುವಾಗಿ ದಾನ ಕೊಡುತ್ತಾರೆ ಪಾತ್ರವೆಂದು ತಿಳಿದುಕೊಂಡು ಲೋಭಿ ಜನರಿಗೆ ದಾನ ಕೊಡುತ್ತಾರೆ; ದಾನ ಕೊಡುವಾಗ ಚಿನ್ನ, ಆನೆ, ಕುದುರೆ ಮೊದಲಾದ ವಸ್ತುಗಳನ್ನು ಕೊಡುತ್ತಾರೆ. ಆದರೆ ಸಂಕ್ರಾಂತಿ ಮೊದಲಾದ ಪರ್ವಗಳು ಧರ್ಮರೂಪವಾಗಿಲ್ಲ, ಗ್ರಹಗಳ ಸಂಚಾರಾದಿಗಳಿಂದ ಸಂಕ್ರಾಂತಿ ಮೊದಲಾದವುಗಳಾಗುತ್ತವೆ ಮತ್ತು ದುಷ್ಟ ಗ್ರಹಾದಿಗಳ ಸಲುವಾಗಿ ಕೊಡುವಲ್ಲಿ ಭಯ, ಲೋಭಾದಿಗಳ ಅಧಿಕತೆಯಾಗುವುದರಿಂದ ಅಂಥ ದಾನಕೊಡುವಲ್ಲಿ ಧರ್ಮವಿಲ್ಲ. ಲೋಭಿ ಪುರುಷನು ದಾನ ಕೊಡಲು ಯೋಗ್ಯ ಪಾತ್ರನಿಲ್ಲ; ಏಕೆಂದರೆ ಲೋಭಿಗಳು ಅನೇಕ ಅಸತ್ಯಯುಕ್ತಿಗಳನ್ನು ಮಾಡಿ ಮೋಸ ಮಾಡುತ್ತಾರೆ, ಒಂದಿಷ್ಟೂ ಒಳ್ಳೆಯದನ್ನು ಮಾಡುವುದಿಲ್ಲ. ದಾನದ ಸಹಾಯದಿಂದ ಅವನು ಧರ್ಮ ಸಾಧಿಸಿದರೆ ಒಳ್ಳೆಯದಾಗುತ್ತದೆ. ಆದರೆ ಅವನು ಪಾಪರೂಪವಾಗಿ ಪ್ರವರ್ತಿಸುತ್ತಾನೆ. ಪಾಪದ ಸಹಾಯಕನಿಗೆ ಒಳ್ಳೆಯದು ಹೇಗಾಗುವುದು ?

ಇದನ್ನೇ 'ರಯಣಸಾರ' ಶಾಸ್ತ್ರದಲ್ಲಿ ಹೇಳುತ್ತಾರೆ,-

**ಸಪ್ಪುರಿಸಾಣಂ ದಾಣಂ ಕಪ್ಪತರೂಣಂ ಫಲಾಣಂ ಸೋಹಂ ವಾ ।**
**ಲೋಹೀಣಂ ದಾಣಂ ಜಇ ವಿಮಾಣಸೋಹಾ ಸವಸ್ಸ ಜಾಣೇಹ ।।26।।**

**ಅರ್ಥ** ಃ- ಸತ್ಪುರುಷರಿಗೆ ದಾನ ಕೊಡುವುದು ಅದು ಕಲ್ಪವೃಕ್ಷಗಳ ಫಲಗಳಂತೆ ಸುಶೋಭಿತವಿದೆ. ಶೋಭೆಯೂ ಇದೆ ಮತ್ತು ಸುಖದಾಯಕವೂ ಇದೆ, ಮತ್ತು ಲೋಭಿ ಪುರುಷರಿಗೆ ದಾನಕೊಡುವುದು ಅದು ಶವದ ಅಸ್ಥಿ ಪಂಜರದ ಶೋಭೆಯಂತಿದೆಯೆಂದು ತಿಳಿಯಬೇಕು. ಶೋಭೆಯೇನೋ ಇರುತ್ತದೆ, ಆದರೆ ಯಜಮಾನನಿಗೆ ಅತ್ಯಂತ ದುಃಖದಾಯಕವಾಗಿರುತ್ತದೆ; ಆದುದರಿಂದ ಲೋಭಿ ಪುರುಷನಿಗೆ ದಾನ ಕೊಡುವಲ್ಲಿ ಧರ್ಮವಿರುವುದಿಲ್ಲ.

ಧರ್ಮದ ವೃದ್ಧಿಯಾಗುವಂಥ ದ್ರವ್ಯವನ್ನು ಅವನಿಗೆ ದಾನ ಕೊಡಬೇಕು; ಆದರೆ ಚಿನ್ನ, ಆನೆ ಮೊದಲಾದುವನ್ನು ಕೊಡುವುದರಿಂದ ಹಿಂಸೆಯೇ ಉತ್ಪನ್ನವಾಗುವುದಲ್ಲದೇ ಮಾನ-ಲೋಭಾದಿಗಳೂ ಬೆಳೆಯುತ್ತವೆ, ಅದರಿಂದ ಮಹಾ ಪಾಪವೇ ಆಗುತ್ತದೆ ಆದುದರಿಂದ ಇಂಥ ವಸ್ತುಗಳನ್ನು ಕೊಡುವವನಿಗಾದರೂ ಪುಣ್ಯವೆಲ್ಲಿಂದ ಬರುವುದು ?

ಇನ್ನು ವಿಷಯಾಸಕ್ತ ಜೀವಗಳು ರತಿದಾನಾದಿಗಳಲ್ಲೂ ಪುಣ್ಯವಿದೆಯೆಂದು ನಂಬುತ್ತಾರೆ; ಆದರೆ ಪ್ರತ್ಯಕ್ಷ ಕುಶೀಲ ಮೊದಲಾದ ಪಾಪಗಳಿರುವಲ್ಲಿ ಪುಣ್ಯ ಹೇಗಿರುವುದು ? ಮತ್ತು ಯುಕ್ತಿಸಾಧಿಸುವ ಸಲುವಾಗಿ ಆ ಸ್ತ್ರೀಯು ಸಂತುಷ್ಟಳಾಗುತ್ತಾಳೆಂದು ಹೇಳುತ್ತಾರೆ. ಆ ಸ್ತ್ರೀಯು ವಿಷಯಸೇವನೆ ಮಾಡುವುದರಿಂದ ಸುಖಿಯಾಗುತ್ತಿದ್ದರೆ ಶೀಲದ ಉಪದೇಶವನ್ನೇಕೆ ಕೊಡಲಾಗಿದೆ ? ರತಿ ಕಾಲದ ಹೊರತಾಗಿ ಕೂಡ ಅವಳ ಮನೋರಥದಂತೆ ಪ್ರವರ್ತಿಸದಿದ್ದರೆ ದುಃಖವನ್ನೇ ಪಡೆಯುತ್ತಾಳೆ; ಆದುದರಿಂದ ಇಂಥ ಅಸತ್ಯ ಯುಕ್ತಿಗಳನ್ನು ರಚಿಸಿ ವಿಷಯ-ಪೋಷಣೆ ಮಾಡುವ ಉಪದೇಶ ಕೊಡುತ್ತಾರೆ.

ಇದೇ ಪ್ರಕಾರ ದಯೆ-ದಾನ ಮತ್ತು ಪಾತ್ರದಾನದ ಹೊರತಾಗಿ ಅನ್ಯದಾನವಿತ್ತು ಧರ್ಮ ಮನ್ನಿಸುವುದೆಲ್ಲವೂ ಕುಧರ್ಮವಿದೆ.

ಅದರಂತೆ ವ್ರತಗಳನ್ನು ಮಾಡಿ ಅಲ್ಲಿ ಹಿಂಸೆ ಮತ್ತು ವಿಷಯಾದಿಗಳನ್ನು ಬೆಳೆಸುತ್ತಾರೆ; ಆದರೆ ವ್ರತಾದಿಗಳನ್ನಂತೂ ಅವುಗಳನ್ನು ಕಡಿಮೆ ಮಾಡುವ ಸಲುವಾಗಿ ಮಾಡಲಾಗುತ್ತದೆ. ಮತ್ತು ಅಲ್ಲಿ ಅನ್ನದ ತ್ಯಾಗ ಮಾಡಿ ಕಂದಮೂಲ ಮೊದಲಾದವುಗಳ ಭಕ್ಷಣೆ ಮಾಡಿದರೆ ವಿಶೇಷ ಹಿಂಸೆಯಾಗುವುದು, ಸ್ವಾದ ಮೊದಲಾದವುಗಳ ವಿಷಯವು ವಿಶೇಷವಾಗುವುದು.

ಅಲ್ಲದೆ ಹಗಲು ಹೊತ್ತಿನಲ್ಲಿ ಭೋಜನ ಮಾಡುವುದಿಲ್ಲ ಮತ್ತು ರಾತ್ರಿಯಲ್ಲಿ ಭೋಜನ ಮಾಡುತ್ತಾರೆ ಹಗಲು ಭೋಜನಕ್ಕಿಂತ ರಾತ್ರಿ-ಭೋಜನದಲ್ಲಿ ವಿಶೇಷ ಹಿಂಸೆಯಾಗುವುದು ಪ್ರತ್ಯಕ್ಷ ಕಂಡು ಬರುತ್ತದೆ, ಪ್ರಮಾದವೂ ವಿಶೇಷವಾಗುತ್ತದೆ.

ಅಲ್ಲದೆ ವ್ರತಾದಿಗಳನ್ನು ಮಾಡಿ ನಾನಾ ಪ್ರಕಾರದ ಅಲಂಕಾರ ಮಾಡಿಕೊಳ್ಳುತ್ತಾರೆ, ಕುತೂಹಲ ಮಾಡುತ್ತಾರೆ, ಜೂಜು ಮೊದಲಾದುವಲ್ಲಿ ಪ್ರವರ್ತಿಸುತ್ತಾರೆ. ಇತ್ಯಾದಿ ಪಾಪಕಾರ್ಯ ಮಾಡುತ್ತಾರೆ ಮತ್ತು ವ್ರತಾದಿಗಳ ಫಲರೂಪವಾಗಿ ಲೌಕಿಕ ಇಷ್ಟ ಪಾಪ್ತಿ ಹಾಗೂ ಅನಿಷ್ಟದ ನಾಶವನ್ನು ಬಯಸುತ್ತಾರೆ; ಆದರೆ ಅಲ್ಲಿ ಕಷಾಯಗಳ ತೀವ್ರತೆಯು ವಿಶೇಷವಾಗುವುದು.

ಈ ಪ್ರಕಾರ ವ್ರತಾದಿಗಳಿಂದ ಧರ್ಮವನ್ನು ಮನ್ನಿಸುವುದು ಅದು ಕುಧರ್ಮವಿದೆ.

ಮತ್ತೆ ಕೆಲವರು ಭಕ್ತಿ ಮೊದಲಾದ ಕಾರ್ಯಗಳಲ್ಲಿ ಹಿಂಸೆ ಮೊದಲಾದ ಪಾಪಗಳನ್ನು ಬೆಳೆಸುತ್ತಾರೆ. ಗೀತ, ನೃತ್ಯ, ಗಾಯನ ಮೊದಲಾದ, ಇಷ್ಟ ಭೋಜನ ಮೊದಲಾದ ಹಾಗೂ ಅನ್ಯಸಾಮಗ್ರಿಗಳಿಂದ ವಿಷಯಗಳ ಪೋಷಣೆ ಮಾಡುತ್ತಾರೆ; ಬಯಕೆ ಪ್ರಮಾದಗಳ ರೂಪದಿಂದ ಪ್ರವರ್ತಿಸುತ್ತಾರೆ. ಆಗ ಬಹಳಷ್ಟು ಪಾಪವನ್ನಂತೂ ಉತ್ಪನ್ನ ಮಾಡುತ್ತಾರೆ ಮತ್ತು ಸ್ವಲ್ಪ ಕೂಡ ಧರ್ಮದ ಸಾಧನೆಯಿರುವುದಿಲ್ಲ. ಆದರೆ ಅದನ್ನು ಧರ್ಮವೆಂದು ಮನ್ನಿಸುತ್ತಾರೆ, ಅದೆಲ್ಲವು ಕುಧರ್ಮವಿದೆ.

ಅದರಂತೆ ಕೆಲವರಂತೂ ಶರೀರಕ್ಕೆ ಕ್ಲೇಶವನ್ನುತ್ಪನ್ನ ಮಾಡುತ್ತಾರೆ ಮತ್ತು ಅಲ್ಲಿ ಹಿಂಸಾದಿಗಳನ್ನು ಉತ್ಪನ್ನ ಮಾಡಿ ಕಷಾಯಗಳ ರೂಪದಿಂದ ಪ್ರವರ್ತಿಸುತ್ತಾರೆ. ಹೇಗೆಂದರೆ ಪಂಚಾಗ್ನಿ ಹೊತ್ತಿಸಿ ತಪಸ್ಸು ಮಾಡುತ್ತಾರೆ, ಆ ಅಗ್ನಿಯಿಂದ ಸ್ಥೂಲ-ಸೂಕ್ಷ್ಮ ಜೀವಗಳು ಸತ್ತು ಹೋಗುತ್ತವೆ, ಹಿಂಸಾದಿಗಳು ಹೆಚ್ಚುತ್ತವೆ, ಇದರಲ್ಲಿ ಧರ್ಮವೇನಾಯಿತು? ಮತ್ತು ತಲೆಕೆಳಗಾಗಿ ನೇತಾಡುತ್ತಾರೆ, ಬಾಹುಗಳನ್ನು ಮೇಲೆತ್ತುತ್ತಾರೆ. ಇಂಥ ಸಾಧನೆಯಿಂದ ಕ್ಲೇಶವೇ ಆಗುತ್ತದೆ. ಇವೇನು ಧರ್ಮದ ಅಂಗಗಳಲ್ಲ.

ಅದರಂತೆ ವಾಯುಸಾಧನೆ ಮಾಡುತ್ತಾರೆ ಅಲ್ಲಿ ನೇತಿ, ಧೋತಿ ಮೊದಲಾದ ಕಾರ್ಯಗಳಲ್ಲಿ ಜಲಾದಿಗಳಿಂದ ಹಿಂಸಾದಿಗಳೇ ಉತ್ಪನ್ನವಾಗುತ್ತವೆ. ಯಾವುದೇ ಚಮತ್ಕಾರವು ಉತ್ಪನ್ನವಾದರೆ ಅದರಿಂದ ಮಾನ ಕಷಾಯವು ವೃದ್ಧಿಸುತ್ತದೆ, ಅದರಲ್ಲಿ ಸ್ವಲ್ಪ ಕೂಡ ಧರ್ಮಸಾಧನೆಯಿಲ್ಲ. ಇವೇ ಮೊದಲಾದ ಕ್ಲೇಶಗಳನ್ನೇನೋ ಮಾಡುತ್ತಾರೆ, ಆದರೆ ವಿಷಯ ಕಷಾಯಗಳು ಕಡಿಮೆಯಾಗುವ ಯಾವ ಸಾಧನೆಯನ್ನೂ ಮಾಡುವುದಿಲ್ಲ. ಅಂತರಂಗದಲ್ಲಿ ಕ್ರೋಧ, ಮಾನ, ಮಾಯೆ, ಲೋಭಗಳ ಅಭಿಪ್ರಾಯವಿರುತ್ತದೆ, ಸುಮ್ಮನೆ ಕ್ಲೇಶ ಮಾಡಿ ಧರ್ಮವಾಯಿತೆಂದು ಮನ್ನಿಸುತ್ತಾರೆ, ಆದರೆ ಅದು ಕುಧರ್ಮವಿದೆ.

ಅಲ್ಲದೆ ಕೆಲವರಂತೂ ಈ ಲೋಕದಲ್ಲಿ ದುಃಖ ಸಹನೆಯಾಗದಿರುವುದರಿಂದ ಹಾಗೂ ಪರಲೋಕದಲ್ಲಿ ಇಷ್ಟ ಸಿದ್ಧಿ ಅದರಂತೆ ತಮ್ಮ ಪೂಜ್ಯತೆ ಹೆಚ್ಚುವ ಸಲುವಾಗಿ ಮತ್ತು ಯಾವುದೇ ಕ್ರೋಧಕ್ಕೆ ಕಟ್ಟುಬಿದ್ದು ಆತ್ಮಘಾತ ಮಾಡಿಕೊಳ್ಳುತ್ತಾರೆ. ಹೇಗೆಂದರೆ ಪತಿಯ ವಿಯೋಗದಿಂದ ಅಗ್ನಿಯಲ್ಲಿ ಹಾರಿ ಸತಿ ಎನಿಸಿಕೊಳ್ಳುತ್ತಾರೆ, ಹಿಮಾಲಯದ ಬರ್ಫದಲ್ಲಿ ಹೂಳಿ ಹೋಗುತ್ತಾರೆ, ಕಾಶಿಯಲ್ಲಿ ಕರಗಸದಿಂದ ಕತ್ತರಿಸಿಕೊಳ್ಳುತ್ತಾರೆ, ಜೀವಂತವಿದ್ದು ಮರಣ ತಂದುಕೊಳ್ಳುತ್ತಾರೆ-ಇವೇ ಮೊದಲಾದ ಕಾರ್ಯಗಳಿಂದ ಧರ್ಮ ಮನ್ನಿಸುತ್ತಾರೆ; ಆದರೆ ಆತ್ಮಘಾತವಂತೂ ಮಹಾಪಾಪವಿದೆ. ಒಂದು ವೇಳೆ ಶರೀರ ಮೊದಲಾದವುಗಳ ಮೇಲಿನ ಅನುರಾಗವು ಕಡಿಮೆಯಾಗಿದ್ದರೆ ತಪಶ್ಚರ್ಯ ಮಾಡಬೇಕಿತ್ತು, ಸತ್ತು ಹೋಗುವುದರಲ್ಲಿ ಧರ್ಮದ ಯಾವ ಅಂಗವಿದೆ ? ಆದುದರಿಂದ ಆತ್ಮಘಾತ ಮಾಡಿಕೊಳ್ಳುವುದು ಅದು ಕುಧರ್ಮವಿದೆ.

ಇದೇ ಪ್ರಕಾರ ಇನ್ನೂ ಅದೆಷ್ಟೋ ಕುಧರ್ಮದ ಅಂಗಗಳಿವೆ. ಅವನ್ನೆಲ್ಲ ಎಷ್ಟೆಂದು ಹೇಳುವುದು, ಯಾವುದರಲ್ಲಿ ವಿಷಯ ಕಷಾಯಗಳು ವೃದ್ಧಿಸುತ್ತವೆ ಮತ್ತು ಅವನ್ನು ಧರ್ಮವೆಂದು ಮನ್ನಿಸುತ್ತಾರೆ ಅವೆಲ್ಲವು ಕುಧರ್ಮಗಳೆಂದು ತಿಳಿಯಬೇಕು.

ಕಾಲದೋಷದಿಂದ ಜೈನ ಧರ್ಮದಲ್ಲಿ ಕೂಡ ಕುಧರ್ಮದ ಪ್ರವೃತ್ತಿಯು ಸೇರಿಕೊಂಡಿದೆ. ಜೈನಧರ್ಮದಲ್ಲಿ ಬರುವ ಧರ್ಮ ಪರ್ವಗಳಲ್ಲಂತೂ ವಿಷಯ-ಕಷಾಯಗಳನ್ನು ಬಿಟ್ಟುಕೊಟ್ಟು ಸಂಯಮರೂಪವಾಗಿ ಪ್ರವರ್ತಿಸುವುದು

ಯೋಗ್ಯವಿದೆ. ಅದನ್ನು ಗ್ರಹಣ ಮಾಡುವುದಿಲ್ಲ ಮತ್ತು ವ್ರತಾದಿಗಳ ಹೆಸರು ಹೇಳಿ ನಾನಾ ಪ್ರಕಾರದ ಅಲಂಕಾರ ಮಾಡಿಕೊಳ್ಳುತ್ತಾರೆ, ಇಷ್ಟ ಭೋಜನಾದಿಗಳನ್ನು ಮಾಡುತ್ತಾರೆ, ಕುತೂಹಲ ಮಾಡುತ್ತಾರೆ ಮತ್ತು ಕಷಾಯ ವೃದ್ಧಿಸುವ ಕಾರ್ಯವನ್ನೇ ಮಾಡುತ್ತಾರೆ. ಜೂಜು ಮೊದಲಾದ ಅತ್ಯಂತ ಪಾಪರೂಪವಾದ ಕಾರ್ಯಗಳಲ್ಲಿ ತೊಡಗುತ್ತಾರೆ.

ಅದರಂತೆ ಪೂಜೆ ಮೊದಲಾದ ಕಾರ್ಯಗಳಲ್ಲಿ **'ಸಾವದ್ಯಲೇಶೋ ಬಹುಪುಣ್ಯರಾಶೌ ದೋಷಾಯನಾಲಂ'**★ ಬಹಳಷ್ಟು ಪುಣ್ಯ ಸಮೂಹದಲ್ಲಿ ಪಾಪದ ಅಂಶವು ದೋಷಾಸ್ಪದವಲ್ಲವೆಂಬ ಉಪದೇಶವಿದೆ, ಈ ಛಲದಿಂದ ಪೂಜೆ-ಪ್ರಭಾವನೆ ಮೊದಲಾದ ಕಾರ್ಯಗಳಲ್ಲಿ ರಾತ್ರಿಯೊಳಗೆ ದೀಪಗಳನ್ನುರಿಸಿ, ಅನಂತ ಕಾಯಾದಿಗಳ ಸಂಗ್ರಹದಿಂದ ಮತ್ತು ಎಚ್ಚರಗೇಡಿತನದ ಪ್ರವೃತ್ತಿಯಿಂದ ಬಹಳಷ್ಟು ಹಿಂಸಾದಿರೂಪದ ಪಾಪಗಳನ್ನು ಮಾಡುತ್ತಾರೆ ಮತ್ತು ಭಕ್ತಿ-ಸ್ತುತಿ ಮೊದಲಾದ ಶುಭ ಪರಿಣಾಮಗಳಲ್ಲಿ ಪ್ರವರ್ತಿಸುವುದಿಲ್ಲ, ಪ್ರವರ್ತಿಸಿದರೂ ಅತ್ಯಲ್ಪ ಪ್ರವರ್ತಿಸುತ್ತಾರೆ, ಆದರೆ ಅಲ್ಲಿ ಹಾನಿಯೇ ಅಧಿಕವಿದ್ದು ಲಾಭವು ಕಡಿಮೆಯಿದೆ ಅಥವಾ ಸ್ವಲ್ಪವೂ ಇಲ್ಲ. ಇಂಥ ಕಾರ್ಯ ಮಾಡುವುದರಲ್ಲಿ ಕೆಡಕನ್ನೇ ನೋಡುವುದಾಗುತ್ತದೆ.

ಇನ್ನು ಜಿನಮಂದಿರವಂತೂ ಧರ್ಮದ ಸ್ಥಾನವಿದೆ. ಅಲ್ಲಿ ನಾನಾ ಪ್ರಕಾರದ ಕುಕಥೆಗಳನ್ನಾಡುವುದು ಮಲಗಿಕೊಳ್ಳುವುದು ಇವೇ ಮೊದಲಾದ ಪ್ರಮಾದರೂಪದಿಂದ ಪ್ರವರ್ತಿಸುತ್ತಾರೆ; ಮಂದಿರದಲ್ಲಿ ಹೂದೋಟ ಮೊದಲಾದುವನ್ನು ಬೆಳೆಸಿ ವಿಷಯ ಕಷಾಯದ ಪೋಷಣೆ ಮಾಡುತ್ತಾರೆ. ಲೋಭಿ ಪುರುಷರನ್ನು ಗುರುವೆಂದು ನಂಬಿ ಅವರಿಗೆ ದಾನ ಕೊಡುತ್ತಾರೆ ಮತ್ತು ಅವರ ಸುಳ್ಳು ಸ್ತುತಿ ಮಾಡಿ ಅವರ ದೊಡ್ಡಸ್ತಿಕೆಯನ್ನು ಮನ್ನಿಸುತ್ತಾರೆ. ಇವೇ ಮೊದಲಾದ ಪ್ರಕಾರದಿಂದ ವಿಷಯ-ಕಷಾಯಗಳನ್ನು ವೃದ್ಧಿಸುತ್ತಾರೆ ಮತ್ತು ಧರ್ಮವೆಂದು ಮನ್ನಿಸುತ್ತಾರೆ; ಆದರೆ ಜಿನಧರ್ಮವು ವೀತರಾಗಭಾವರೂಪವಿದ್ದು ಅದರಲ್ಲಿ ಈ ಪ್ರಕಾರದ ವಿಪರೀತ ಪ್ರವೃತ್ತಿಯು ಕಾಲದೋಷದಿಂದಲೇ ಕಂಡುಬರುತ್ತದೆ.

ಈ ಪ್ರಕಾರ ಕುಧರ್ಮ ಸೇವನೆಯ ನಿಷೇಧ ಮಾಡಲಾಯಿತು.

ಈಗ ಅದರೊಳಗೆ ಮಿಥ್ಯಾತ್ವಭಾವವು ಯಾವ ಪ್ರಕಾರವಾಗುತ್ತದೆಂಬುದನ್ನು ಹೇಳುತ್ತಾರೆ,-

ತತ್ತ್ವಶ್ರದ್ಧೆ ಮಾಡುವಲ್ಲಿ ರಾಗಾದಿಗಳನ್ನು ಬಿಟ್ಟುಕೊಡುವುದೊಂದೇ ಪ್ರಯೋಜನಭೂತವಿದೆ. ಇದೇ ಭಾವದ ಹೆಸರು ಧರ್ಮವಿದೆ. ಒಂದು ವೇಳೆ ರಾಗಾದಿಭಾವಗಳನ್ನು ಹೆಚ್ಚಿಸಿ ಅದನ್ನು ಧರ್ಮವೆಂದು ಮನ್ನಿಸಿದರೆ ಅಲ್ಲಿ ತತ್ತ್ವಶ್ರದ್ಧೆಯು ಹೇಗೆ ಉಳಿಯುವುದು ? ಮತ್ತು ಇದು ಜಿನಾಜ್ಞೆಗೆ ಪ್ರತಿಕೂಲವಾಯಿತು. ರಾಗಾದಿಯ ಭಾವಗಳಂತೂ ಪಾಪವಿದ್ದು ಅವನ್ನು ಧರ್ಮವೆಂದು ಮನ್ನಿಸುವುದು ಅದು ಸುಳ್ಳು ಶ್ರದ್ಧೆಯಿದೆ; ಆದುದರಿಂದ ಕುಧರ್ಮದ ಸೇವನೆಯಲ್ಲಿ ಮಿಥ್ಯಾತ್ವಭಾವವಿದೆ.

ಈ ಪ್ರಕಾರ ಕುದೇವ-ಕುಗುರು-ಕುಶಾಸ್ತ್ರಗಳ ಸೇವನೆಯಲ್ಲಿ ಮಿಥ್ಯಾತ್ವಭಾವದ ಪುಷ್ಟಿಯಾಗುವುದೆಂದು ತಿಳಿದುಕೊಂಡು ಅದರ ನಿರೂಪಣೆ ಮಾಡಲಾಯಿತು.

★ ಪೂಜ್ಯಂ ಜಿನಂ ತ್ವಾರ್ಚಯತೋ ಜನಸ್ಯ, ಸಾವದ್ಯಲೇಶೋ ಬಹುಪುಣ್ಯರಾಶೌ ।
ದೋಷಾಯನಾಲಂ ಕಣಿಕಾ ವಿಷಸ್ಯ, ನ ದೂಷಿಕಾ ಶೀತಶಿವಾಂಬುರಾಶೌ ॥೫೮॥ - ಬೃಹತ್ ಸ್ವಯಂಭೂಸ್ತೋತ್ರ

ಇದನ್ನೇ 'ಷಟ್‌ಪಾಹುಡ'ದಲ್ಲಿ ಹೇಳಿದ್ದಾರೆ,-

**ಕುಚ್ಛಿಯದೇವಂ ಧಮ್ಮಂ ಕುಚ್ಛಿಯಲಿಂಗಂ ಚ ವಂದಏ ಜೋ ದು ।**
**ಲಜ್ಜಾಭಯಗಾರವದೋ ಮಿಚ್ಛಾದಿಟ್ಠೀ ಹವೇ ಸೋ ಹು ॥92॥ - ಮೋಕ್ಷಪಾಹುಡ**

**ಅರ್ಥ :-** ಒಂದು ವೇಳೆ ಲಜ್ಜೆಯಿಂದ, ಭಯದಿಂದ ಮತ್ತು ದೊಡ್ಡಸ್ತಿಕೆಯಿಂದಕೂಡ ಕುತ್ಸಿತ ದೇವನಿಗೆ, ಕುತ್ಸಿತ ಧರ್ಮಕ್ಕೆ ಮತ್ತು ಕುತ್ಸಿತ ಲಿಂಗಕ್ಕೆ ವಂದಿಸುತ್ತಿದ್ದರೆ ಅವನು ಮಿಥ್ಯಾದೃಷ್ಟಿಯಿರುತ್ತಾನೆ.

ಆದುದರಿಂದ ಮಿಥ್ಯಾತ್ವವನ್ನು ಬಿಡಲು ಅಪೇಕ್ಷಿಸುವವರು ಮೊದಲು ಕುದೇವ, ಕುಗುರು, ಕುಧರ್ಮದ ತ್ಯಾಗಮಾಡಬೇಕು. ಸಮ್ಯಕ್ತ್ವದ ಇಪ್ಪತ್ತೈದು ದೋಷಗಳ ತ್ಯಾಗದಲ್ಲಿ, ಅಮೂಢದೃಷ್ಟಿಯಲ್ಲಿ ಮತ್ತು ಷಡಾಯತನಗಳಲ್ಲಿ ಕೂಡ ಇವುಗಳ ತ್ಯಾಗವನ್ನೇ ಮಾಡಿಸಿರುವುದರಿಂದ ಅವಶ್ಯವಾಗಿ ಇವುಗಳ ತ್ಯಾಗಮಾಡಬೇಕು.

ಅಲ್ಲದೆ ಕುದೇವ ಮೊದಲಾದವರ ಸೇವನೆಯಿಂದ ಆಗುವಂಥ ಮಿಥ್ಯಾತ್ವಭಾವವು ಅದು ಹಿಂಸೆ ಮೊದಲಾದ ಪಾಪಗಳಿಗಿಂತಲೂ ದೊಡ್ಡದಾದ ಪಾಪವಿದೆ. ಇದರ ಫಲದಲ್ಲಿ ನಿಗೋದ, ನರಕ ಮೊದಲಾದ ಪರ್ಯಾಯಗಳು ಪ್ರಾಪ್ತವಾಗುತ್ತವೆ. ಅಲ್ಲಿ ಅನಂತಕಾಲದವರೆಗೆ ಅಧಿಕ ಸಂಕಟ ಅನುಭವಿಸಬೇಕಾಗುತ್ತದೆ, ಸಮ್ಯಗ್ಜ್ಞಾನದ ಪ್ರಾಪ್ತಿಯು ಅತ್ಯಂತ ದುರ್ಲಭವಾಗಿ ಹೋಗುತ್ತದೆ.

ಇದನ್ನೇ 'ಷಟ್‌ಪಾಹುಡ'ದಲ್ಲಿ ಹೇಳಿದ್ದಾರೆ,-

**ಕುಚ್ಛಿಯಧಮ್ಮಮ್ಮಿ ರಓ ಕುಚ್ಛಿಯಪಾಸಂಡಿಭತ್ತಿಸಂಜುತ್ತೋ ।**
**ಕುಚ್ಛಿಯತವಂ ಕುಣಂತೋ ಕುಚ್ಛಿಯಗಇಭಾಯಣೋ ಹೋಇ ॥140॥ -ಭಾವಪಾಹುಡ**

**ಅರ್ಥ :-** ಯಾವನು ಕುತ್ಸಿತ ಧರ್ಮದಲ್ಲಿ ತತ್ಪರನಿದ್ದಾನೆ, ಕುತ್ಸಿತ ಪಾಖಂಡಿಗಳ ಭಕ್ತಿಯಲ್ಲಿ ಸಂಯುಕ್ತನಿದ್ದಾನೆ ಮತ್ತು ಕುತ್ಸಿತ ತಪಸ್ಸನ್ನು ಮಾಡುತ್ತಾನೆ ಆ ಜೀವನು ಕುತ್ಸಿತ ಎಂದರೆ ದುರ್ಗತಿಯನ್ನು ಭೋಗಿಸುವಂಥವನಿರುತ್ತಾನೆ.

ಆದುದರಿಂದ ಎಲೈ ಭವ್ಯೋತ್ತಮನೇ ! ಸ್ವಲ್ಪ ಮಾತ್ರ ಲೋಭದಿಂದ ಹಾಗೂ ಭಯದಿಂದ ಕುದೇವಾದಿಕರ ಸೇವನೆ ಮಾಡಿದರೆ ಅದರಿಂದ ಅನಂತಕಾಲದವರೆಗೆ ಮಹಾದುಃಖವನ್ನು ಸಹನೆ ಮಾಡುವಂಥ ಮಿಥ್ಯಾಭಾವ ಮಾಡುವುದು ಸರ್ವಥಾ ಯೋಗ್ಯವಿಲ್ಲ.

ಜಿನಧರ್ಮದಲ್ಲಿ ಮೊದಲು ದೊಡ್ಡ ಪಾಪಗಳನ್ನು ಬಿಡಿಸಿ ಅನಂತರ ಸಣ್ಣ ಪಾಪಗಳನ್ನು ಬಿಡಿಸುವ ಪರಂಪರೆಯಿರುವುದರಿಂದ ಈ ಮಿಥ್ಯಾತ್ವವನ್ನು ಸಪ್ತವ್ಯಸನಾದಿಗಳಿಗಿಂತಲೂ ದೊಡ್ಡ ಪಾಪವೆಂದು ತಿಳಿದುಕೊಂಡು ಮೊದಲು ಇದನ್ನು ಬಿಡಿಸಿದೆ. ಆದುದರಿಂದ ಪಾಪದ ಫಲಕ್ಕೆ ಹೆದರುವವರು, ತಮ್ಮ ಆತ್ಮನನ್ನು ದುಃಖಸಮುದ್ರದಲ್ಲಿ ಮುಳುಗಿಸಲು ಅಪೇಕ್ಷಿಸದವರು ಈ ಮಿಥ್ಯಾತ್ವವನ್ನು ಅವಶ್ಯವಾಗಿ ಬಿಡಬೇಕು; ನಿಂದೆ-ಪ್ರಶಂಸೆಗಳ ವಿಚಾರದಿಂದ ಶಿಥಿಲರಾಗುವುದು ಯೋಗ್ಯವಿಲ್ಲ. ಏಕೆಂದರೆ ನೀತಿಶಾಸ್ತ್ರದಲ್ಲೂ ಹೀಗೆ ಹೇಳಿದ್ದಾರೆ,-

**ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು,**
**ಲಕ್ಷ್ಮೀ ಸಮಾವಿಶತು ಗಚ್ಛತು ವಾಯಥೇಷ್ಟಮ್ ।**
**ಅದ್ಯೈವ ವಾಸ್ತು ಮರಣಂ ತು ಯುಗಾಂತರೇ ವಾ,**
**ನ್ಯಾಯಾತ್ಪಥಃ ಪ್ರವಿಚಲಂತಿಪದಂ ನ ಧೀರಾಃ ॥84॥**

-ನೀತಿಶತಕ

ಯಾರಾದರೂ ನಿಂದೆ ಮಾಡುತ್ತಿದ್ದರೆ ನಿಂದೆಮಾಡಲಿ, ಸ್ತುತಿಮಾಡುತ್ತಿದ್ದರೆ ಸ್ತುತಿ ಮಾಡಲಿ, ಲಕ್ಷ್ಮಿಯು ಬರಲಿ ಅಥವಾ ಹೊರಟು ಹೋಗಲಿ, ಈಗಲೇ ಮರಣವಾಗಲಿ ಇಲ್ಲವೆ ಯುಗಾಂತರದಲ್ಲಿ ಆಗಲಿ; ಆದರೆ ನೀತಿಯಲ್ಲಿ ನಿಪುಣನಾದ ಪುರುಷನು ನ್ಯಾಯಮಾರ್ಗದಿಂದ ಸ್ವಲ್ಪವೂ ಚಲಿತನಾಗುವುದಿಲ್ಲ-ಒಂದುಹೆಜ್ಜೆ ಕೂಡ ತಪ್ಪಿ ಇಡುವುದಿಲ್ಲ.

ಹೀಗೆ ನ್ಯಾಯದ ವಿಚಾರಮಾಡಿ ನಿಂದೆ-ಪ್ರಶಂಸೆಗಳ ಭಯದಿಂದ, ಲೋಭಾದಿಗಳಿಂದ ಅನ್ಯಾಯರೂಪವಾದ ಮಿಥ್ಯಾತ್ವದ ಪ್ರವೃತ್ತಿ ಮಾಡುವುದು ಸರ್ವಥಾ ಯುಕ್ತವಿಲ್ಲ.

ಅಯ್ಯಾ ! ದೇವ-ಗುರು-ಧರ್ಮಗಳಂತೂ ಸರ್ವೋತ್ಕೃಷ್ಟವಾದ ಪದಾರ್ಥಗಳಿದ್ದು ಇವುಗಳ ಆಧಾರದಿಂದ ಧರ್ಮವಿದೆ. ಇವುಗಳಲ್ಲಿ ಶಿಥಿಲತೆಯುಂಟಾಗುವುದರಿಂದ ಅನ್ಯಧರ್ಮಗಳು ಹೇಗಾಗುವವು ? ಆದುದರಿಂದ ಹೆಚ್ಚು ಹೇಳುವುದರಲ್ಲಿ ಏನಿದೆ ? ಎಲ್ಲ ಪ್ರಕಾರದಿಂದ ಕುದೇವ-ಕುಗುರು-ಕುಧರ್ಮದ ತ್ಯಾಗಿಯಾಗುವುದು ಯೋಗ್ಯವಿದೆ.

ಕುದೇವ ಮೊದಲಾದವರ ತ್ಯಾಗ ಮಾಡದಿರುವುದರಿಂದ ಮಿಥ್ಯಾಭಾವವು ಅಧಿಕ ಪುಷ್ಟವಾಗುತ್ತದೆ. ಮತ್ತು ವರ್ತಮಾನದಲ್ಲಿ ಇಲ್ಲಿ ಇವುಗಳ ಪ್ರವೃತ್ತಿಯು ವಿಶೇಷವಾಗಿ ಕಂಡುಬರುತ್ತಿರುವುದರಿಂದ ಇವುಗಳ ನಿಷೇಧರೂಪವಾದ ನಿರೂಪಣೆಯನ್ನು ಮಾಡಲಾಗಿದೆ. ಅದನ್ನು ತಿಳಿದುಕೊಂಡು ಮಿಥ್ಯಾತ್ವಭಾವವನ್ನು ಬಿಟ್ಟುಕೊಟ್ಟು ತಮ್ಮ ಕಲ್ಯಾಣ ಮಾಡಿಕೊಳ್ಳಬೇಕು.

**ಈ ಪ್ರಕಾರ ಶ್ರೀಮೋಕ್ಷಮಾರ್ಗಪ್ರಕಾಶಕ ನಾಮದ ಶಾಸ್ತ್ರದಲ್ಲಿ**
**ಕುದೇವ-ಕುಗುರು-ಕುಧರ್ಮಗಳ ನಿಷೇಧರೂಪ ವರ್ಣನೆಯ**
**ಆರನೆಯ ಅಧಿಕಾರವು ಸಮಾಪ್ತವಾಯಿತು.**

# ಏಳನೆಯ ಅಧಿಕಾರ
## ಜೈನ ಮಿಥ್ಯಾದೃಷ್ಟಿಗಳ ವಿವೇಚನೆ

**ಈ ಭವತರುಗೆ ಮೂಲವದೊಂದೆ, ತಿಳಿಯಿರಿ ಮಿಥ್ಯಾಭಾವ ।**
**ಮಾಡುವುದೀಗದ ನಿರ್ಮೂಲವ, ಉತ್ತಮ ಮೋಕ್ಷ ಉಪಾಯ ॥**

ಯಾರು ಸ್ವಯಂ ಜೈನರಿದ್ದು ಜಿನಾಜ್ಞೆಯನ್ನು ಮನ್ನಿಸುತ್ತಾರೆ ಅವರಲ್ಲಿ ಕೂಡ ಮಿಥ್ಯಾತ್ವವು ವಾಸಿಸುತ್ತಿದ್ದು ಈಗ ಅದರ ವರ್ಣನೆ ಮಾಡುತ್ತಾರೆ. ಏಕೆಂದರೆ ಈ ಮಿಥ್ಯಾತ್ವ ವೈರಿಯ ಅಂಶವು ಕೂಡ ಕೆಡಕಿರುವುದರಿಂದ ಸೂಕ್ಷ್ಮ ಮಿಥ್ಯಾತ್ವವು ಕೂಡ ತ್ಯಾಗಯೋಗ್ಯವಿದೆ.

ಜಿನಾಗಮದಲ್ಲಿ ನಿಶ್ಚಯ-ವ್ಯವಹಾರರೂಪದ ವರ್ಣನೆಯಿದ್ದು ಅದರಲ್ಲಿ ಯಥಾರ್ಥದ ಹೆಸರು ನಿಶ್ಚಯವಿದ್ದರೆ ಉಪಚಾರದ ಹೆಸರು ವ್ಯವಹಾರವಿದೆ. ಇವುಗಳ ಸ್ವರೂಪವನ್ನು ತಿಳಿಯದೆ ಅನ್ಯಥಾ ಪ್ರವರ್ತಿಸುತ್ತಾರೆ, ಅದನ್ನೇ ಹೇಳುತ್ತಾರೆ.

### ನಿಶ್ಚಯಾಭಾಸಿ ಮಿಥ್ಯಾದೃಷ್ಟಿ

ಅದೆಷ್ಟೋ ಜೀವರುಗಳು ನಿಶ್ಚಯವನ್ನು ತಿಳಿದುಕೊಳ್ಳದೆ ನಿಶ್ಚಯಾಭಾಸದ ಶ್ರದ್ಧೆಯುಳ್ಳವರಾಗಿ ತಮ್ಮನ್ನು ಮೋಕ್ಷಮಾರ್ಗಿಗಳೆಂದು ಮನ್ನಿಸುತ್ತಾರೆ, ತಮ್ಮ ಆತ್ಮನ ಅನುಭವವನ್ನು ಸಿದ್ಧ ಸಮಾನವಾಗಿ ಮಾಡುತ್ತಾರೆ, ತಾವು ಪ್ರತ್ಯಕ್ಷ ಸಂಸಾರಿಗಳಿದ್ದಾರೆ, ಭ್ರಾಂತಿಯಿಂದ ತಮ್ಮನ್ನು ಸಿದ್ಧರೆಂದು ಮನ್ನಿಸುತ್ತಾರೆ, ಅದುವೇ ಮಿಥ್ಯಾದೃಷ್ಟಿಯಿದೆ.

ಶಾಸ್ತ್ರಗಳಲ್ಲಿ ಆತ್ಮನನ್ನು ಸಿದ್ಧಸಮಾನವೆಂದು ಹೇಳಿದೆ ಅದು ದ್ರವ್ಯದೃಷ್ಟಿಯಿಂದ ಹೇಳಿದೆ, ಪರ್ಯಾಯದ ಅಪೇಕ್ಷೆಯಿಂದ ಸಿದ್ಧಸಮಾನವಿಲ್ಲ. ಹೇಗೆ ದೊರೆ ಮತ್ತು ದರಿದ್ರನು ಮನುಷ್ಯತ್ವದ ಅಪೇಕ್ಷೆಯಿಂದ ಸಮಾನರಿದ್ದಾರೆ, ಆದರೆ ದೊರೆತನ ಮತ್ತು ದರಿದ್ರತನದ ಅಪೇಕ್ಷೆಯಿಂದ ಸಮಾನರಿಲ್ಲ; ಹಾಗೆಯೇ ಸಿದ್ಧ ಮತ್ತು ಸಂಸಾರಿಯು ಜೀವತ್ವತನದ ಅಪೇಕ್ಷೆಯಿಂದ ಸಮಾನರಿದ್ದಾರೆ, ಆದರೆ ಸಿದ್ಧತನ ಮತ್ತು ಸಂಸಾರಿತನದ ಅಪೇಕ್ಷೆಯಿಂದ ಸಮಾನರಿಲ್ಲ. ಆದಾಗ್ಯೂ ಇವರು ಸಿದ್ಧರು ಹೇಗೆ ಶುದ್ಧರಿದ್ದಾರೆ ಹಾಗೆಯೇ ತಮ್ಮನ್ನು ಶುದ್ಧರೆಂದು ಮನ್ನಿಸುತ್ತಾರೆ. ಆದರೆ ಆ ಶುದ್ಧ-ಅಶುದ್ಧ ಅವಸ್ಥೆಗಳು ಪರ್ಯಾಯಗಳಿದ್ದು ಆ ಪರ್ಯಾಯದ ಅಪೇಕ್ಷೆಯಿಂದ ಸಮಾನತೆಯನ್ನು ಮನ್ನಿಸಹೊರಟಿರುವುದೇ ಮಿಥ್ಯಾದೃಷ್ಟಿಯಿದೆ.

ಅದರಂತೆ ತಮ್ಮಲ್ಲಿ ಕೇವಲಜ್ಞಾನಾದಿಗಳ ಸದ್ಭಾವವನ್ನು ಮನ್ನಿಸುತ್ತಾರೆ, ಆದರೆ ತಮ್ಮಲ್ಲಿ ಕ್ಷಯೋಪಶಮರೂಪದ ಮತಿ-ಶ್ರುತ ಜ್ಞಾನಗಳ ಸದ್ಭಾವವಿದೆ, ಕ್ಷಾಯಿಕಭಾವವಂತೂ ಕರ್ಮದ ಕ್ಷಯವಾದಮೇಲೆ ಆಗುತ್ತದೆ ಮತ್ತು ಇವರು ಭ್ರಾಂತಿಯಿಂದ ಕರ್ಮದ ಕ್ಷಯವಾದಲ್ಲದೆಯೇ ಕ್ಷಾಯಿಕಭಾವವನ್ನು ಮನ್ನಿಸುತ್ತಾರೆ, ಅದರಿಂದ ಅದುವೇ ಮಿಥ್ಯಾದೃಷ್ಟಿಯಿದೆ.

ಶಾಸ್ತ್ರದಲ್ಲಿ ಎಲ್ಲ ಜೀವಗಳಿಗೆ ಕೇವಲಜ್ಞಾನದ ಸ್ವಭಾವ ಹೇಳಿದೆ ಅದು ಶಕ್ತಿಯ ಅಪೇಕ್ಷೆಯಿಂದ ಹೇಳಿದೆ; ಏಕೆಂದರೆ ಎಲ್ಲ ಜೀವಗಳಲ್ಲಿ ಕೇವಲಜ್ಞಾನರೂಪವಾಗುವ ಶಕ್ತಿಯಿದೆ, ವರ್ತಮಾನ ವ್ಯಕ್ತತೆಯನ್ನು ವ್ಯಕ್ತವಾದ ಮೇಲೆಯೇ ಹೇಳಲಾಗುತ್ತದೆ.

ಆತ್ಮನ ಪ್ರದೇಶಗಳಲ್ಲಂತೂ ಕೇವಲಜ್ಞಾನವೇ ಇದ್ದು ಅದರ ಮೇಲೆ ಆವರಣವಿರುವುದರಿಂದ ಪ್ರಕಟವಾಗುವುದಿಲ್ಲವೆಂದು ಕೆಲವರು ಮನ್ನಿಸುತ್ತಾರೆ, ಆದರೆ ಅದು ಭ್ರಮೆಯಿದೆ. ಒಂದು ವೇಳೆ ಕೇವಲಜ್ಞಾನವಿದ್ದರೆ ವಜ್ರಪಟಲಾದಿಗಳು ಎದುರಾದರೂ ವಸ್ತುವನ್ನು ತಿಳಿಯುತ್ತದೆ; ಕರ್ಮವು ಎದುರಾದ ಮೇಲೆ ಅದು ಹೇಗೆ ತಡೆದೀತು? ಆದುದರಿಂದ ಕರ್ಮದ ನಿಮಿತ್ತದಿಂದ ಕೇವಲಜ್ಞಾನದ ಅಭಾವವೇ ಇದೆ. ಒಂದು ವೇಳೆ ಯಾವಾಗಲೂ ಇದರ ಸದ್ಭಾವವಿರುತ್ತಿದ್ದರೆ ಇದಕ್ಕೆ ಪಾರಿಣಾಮಿಕಭಾವವೆಂದು ಹೇಳುತ್ತಿತ್ತು , ಆದರೆ ಇದಂತೂ ಕ್ಷಾಯಿಕಭಾವವಿದೆ. **'ಎಲ್ಲ ಭೇದಗಳು ಗರ್ಭಿತವಿರುವಂಥ ಚೈತನ್ಯಭಾವವು ಅದು ಪಾರಿಣಾಮಿಕಭಾವವಿದೆ'** ಇದರ ಅನೇಕ ಅವಸ್ಥೆಗಳು ಮತಿಜ್ಞಾನಾದಿರೂಪ ಮತ್ತು ಕೇವಲಜ್ಞಾನಾದಿರೂಪಗಳಿದ್ದು ಅವು ಈ ಪಾರಿಣಾಮಿಕ ಭಾವಗಳಲ್ಲ. ಆದುದರಿಂದ ಯಾವಾಗಲೂ ಕೇವಲಜ್ಞಾನದ ಸದ್ಭಾವವನ್ನು ಮನ್ನಿಸಬಾರದು.

ಅದರಂತೆ ಶಾಸ್ತ್ರಗಳಲ್ಲಿ ಸೂರ್ಯನ ದೃಷ್ಟಾಂತ ಕೊಟ್ಟಿದೆ ಅದರ ಭಾವವನ್ನು ಹೇಗೆ ಮೇಘ-ಮಾಲೆಯಿರುವಾಗ ಸೂರ್ಯನ ಪ್ರಕಾಶವು ಪ್ರಕಟವಾಗುವುದಿಲ್ಲ ಹಾಗೆ ಕರ್ಮದ ಉದಯವಿರುವಾಗ ಕೇವಲಜ್ಞಾನವಾಗುವುದಿಲ್ಲವೆಂದು ಗ್ರಹಿಸಬೇಕು. ಆದರೆ ಹೇಗೆ ಸೂರ್ಯನ ಪ್ರಕಾಶವಿರುತ್ತದೆ ಹಾಗೆ ಆತ್ಮನಲ್ಲಿ ಕೇವಲಜ್ಞಾನವಿರುತ್ತದೆಂಬ ಭಾವವನ್ನು ಸ್ವೀಕರಿಸಬಾರದು. ಏಕೆಂದರೆ ದೃಷ್ಟಾಂತವು ಎಲ್ಲ ಪ್ರಕಾರದಿಂದ ಹೊಂದಿಕೆಯಾಗುವುದಿಲ್ಲ. ಯಾವ ಪ್ರಕಾರ ಪುದ್ಗಲದಲ್ಲಿ ವರ್ಣಗುಣವಿದ್ದು ಅದರ ಹಸಿರು-ಹಳದಿ ಅವಸ್ಥೆಗಳಿವೆ, ಆದರೆ ವರ್ತಮಾನದಲ್ಲಿ ಒಂದು ಅವಸ್ಥೆಯಿದ್ದಮೇಲೆ ಅನ್ಯ ಅವಸ್ಥೆಯ ಅಭಾವವಿರುತ್ತದೆ, ಅದೇ ಪ್ರಕಾರ ಆತ್ಮನಲ್ಲಿ ಚೈತನ್ಯ ಗುಣವಿದ್ದು ಮತಿಜ್ಞಾನಾದಿರೂಪಗಳು ಅದರ ಅವಸ್ಥೆಗಳಿವೆ, ಆದರೆ ವರ್ತಮಾನದಲ್ಲಿ ಯಾವುದೇ ಒಂದು ಅವಸ್ಥೆಯಿದ್ದ ಮೇಲೆ ಅನ್ಯ ಅವಸ್ಥೆಯ ಅಭಾವವೇ ಇರುತ್ತದೆ.

**ಪ್ರಶ್ನೆ :-** ಆವರಣವೆಂಬ ಹೆಸರಂತೂ ವಸ್ತುವನ್ನು ಮರೆಮಾಡುವುದಿದೆ, ಕೇವಲಜ್ಞಾನದ ಸದ್ಭಾವವೇ ಇಲ್ಲವೆಂದ ಮೇಲೆ ಕೇವಲಜ್ಞಾನಾವರಣವನ್ನು ಏತಕ್ಕಾಗಿ ಹೇಳುತ್ತಿರುವಿರಿ ?

**ಉತ್ತರ :-** ಶಕ್ತಿಯನ್ನು ವ್ಯಕ್ತವಾಗಗೊಡದಿರುವ ಅಪೇಕ್ಷೆಯಿಂದ ಆವರಣ ಹೇಳಿದೆ. ಹೇಗೆ ದೇಶಚಾರಿತ್ರದ ಅಭಾವವಾದನಂತರ ಶಕ್ತಿಯನ್ನು ಘಾತಮಾಡುವ ಅಪೇಕ್ಷೆಯಿಂದ ಪ್ರತ್ಯಾಖ್ಯಾನಾವರಣ ಕಷಾಯ ಹೇಳಿದೆ ಹಾಗೆಯೇ ತಿಳಿದುಕೊಳ್ಳಬೇಕು.

ಅದರಂತೆ ವಸ್ತುವಿನಲ್ಲಿ ಪರನಿಮಿತ್ತದಿಂದಾಗುವ ಭಾವದ ಹೆಸರು ಔಪಾಧಿಕಭಾವವಿದ್ದರೆ ಪರನಿಮಿತ್ತವಿಲ್ಲದೆ ಆಗುವ ಭಾವದ ಹೆಸರು ಸ್ವಭಾವಭಾವವಿದೆಯೆಂದು ತಿಳಿಯಬೇಕು. ಹೇಗೆಂದರೆ ನೀರಿಗೆ ಅಗ್ನಿಯ ನಿಮಿತ್ತ ದೊರಕಿದ ಮೇಲೆ ಅದು ಉಷ್ಣವಾಗುವುದು, ಅಲ್ಲಿ ಶೀತಲತೆಯ ಅಭಾವವೇ ಇದೆ; ಆದರೆ ಅಗ್ನಿಯ ನಿಮಿತ್ತವು ದೂರವಾದ ಮೇಲೆ ಶೀತಲತೆಯೇ ಬಂದು ಬಿಡುತ್ತದೆ. ಆದುದರಿಂದ ನೀರಿನ ಸ್ವಭಾವವನ್ನು ಯಾವಾಗಲೂ ಶೀತಲವೆಂದೇ ಹೇಳಲಾಗುತ್ತದೆ, ಏಕೆಂದರೆ ಅಂಥ ಶಕ್ತಿಯು ಯಾವಾಗಲೂ ಕಂಡು ಬರುತ್ತದೆ ಮತ್ತು ವ್ಯಕ್ತವಾದ ಮೇಲೆ ಸ್ವಭಾವವು ವ್ಯಕ್ತವಾಯಿತೆಂದು ಹೇಳುತ್ತಾರೆ. ಒಮ್ಮೊಮ್ಮೆ ವ್ಯಕ್ತರೂಪವಾಗುತ್ತದೆ. ಅದೇ ಪ್ರಕಾರ ಆತ್ಮನಿಗೆ ಕರ್ಮದ ನಿಮಿತ್ತವಾದ ಮೇಲೆ ಅನ್ಯರೂಪವಾಗುವುದು, ಅಲ್ಲಿ ಕೇವಲಜ್ಞಾನದ ಅಭಾವವೇ ಇದೆ; ಆದರೆ ಕರ್ಮದ ನಿಮಿತ್ತವು ದೂರವಾದ ಮೇಲೆ ಯಾವಾಗಲೂ ಕೇವಲಜ್ಞಾನವಾಗಿ ಬಿಡುತ್ತದೆ, ಆದುದರಿಂದ ಆತ್ಮನ ಸ್ವಭಾವವು ಯಾವಾಗಲೂ ಕೇವಲಜ್ಞಾನವೆಂದು ಹೇಳಲಾಗುತ್ತದೆ, ಏಕೆಂದರೆ ಅಂಥ ಶಕ್ತಿಯು ಸದಾ ಕಂಡು ಬರುತ್ತದೆ. ವ್ಯಕ್ತವಾದ ಮೇಲೆ ಸ್ವಭಾವವು ವ್ಯಕ್ತವಾಯಿತೆಂದು ಹೇಳಲಾಗುತ್ತದೆ.

ಯಾವ ಪ್ರಕಾರ ಶೈತ್ಯಸ್ವಭಾವದ ಕಾರಣ ಉಷ್ಣವಾದ ಜಲವನ್ನು ಶೀತಲವೆಂದು ನಂಬಿ ಕುಡಿದುಬಿಟ್ಟರೆ ಹೊಟ್ಟೆಯುರಿಯೇ ಆಗುವುದು ? ಅದೇ ಪ್ರಕಾರ ಕೇವಲಜ್ಞಾನಸ್ವಭಾವದ ಕಾರಣ ಅಶುದ್ಧನಾದ ಆತ್ಮನನ್ನು ಕೇವಲ ಜ್ಞಾನಿಯೆಂದು ಮನ್ನಿಸಿ ಅನುಭವ ಮಾಡಿದರೆ ದುಃಖವೇ ಆಗುವುದು.

ಈ ಪ್ರಕಾರ ಆತ್ಮನ ಅನುಭವವನ್ನು ಕೇವಲಜ್ಞಾನಾದಿಗಳ ರೂಪದಿಂದ ಮಾಡುವವರು ಮಿಥ್ಯಾದೃಷ್ಟಿಗಳಿದ್ದಾರೆ.

ಅಲ್ಲದೆ ತಮ್ಮಲ್ಲಿ ಪ್ರತ್ಯಕ್ಷ ರಾಗಾದಿಭಾವಗಳಿದ್ದರೂ ಭ್ರಾಂತಿಯಿಂದ ಆತ್ಮನನ್ನು ರಾಗಾದಿರಹಿತವೆಂದು ಮನ್ನಿಸುತ್ತಾರೆ. ಆದರೆ ಈ ರಾಗಾದಿಗಳಾಗುತ್ತಿರುವುದು ಕಂಡು ಬರುತ್ತವೆ ಅವು ಯಾವ ದ್ರವ್ಯದ ಅಸ್ತಿತ್ವದಲ್ಲಿವೆ ? ಒಂದು ವೇಳೆ ಶರೀರ ಅಥವಾ ಕರ್ಮರೂಪ ಪುದ್ಗಲದ ಅವಸ್ಥೆಯಲ್ಲಿದ್ದರೆ ಆ ಭಾವಗಳು ಅಚೇತನ ಅಥವಾ ಮೂರ್ತಿಕವಾಗುವವು; ಆದರೆ ಆ ರಾಗಾದಿಗಳಂತೂ ಪ್ರತ್ಯಕ್ಷ ಚೇತನತೆಯೊಡನೆ ಅಮೂರ್ತಿಕ ಭಾವವಾಗಿ ಭಾಸವಾಗುತ್ತವೆ. ಆದುದರಿಂದ ಈ ಭಾವಗಳು ಆತ್ಮನವೇ ಇವೆ.

ಇದನ್ನೇ ಸಮಯಸಾರ ಕಲಶದಲ್ಲಿ ಹೇಳಿದ್ದಾರೆ,-

**ಕಾರ್ಯತ್ವಾದಕೃತಂ ನ ಕರ್ಮ ನ ಚ ತಜ್ಜೀವಪ್ರಕೃತ್ಯೋರ್ದ್ವಯೋ-**
**ರಜ್ಞಾಯಾಃ ಪ್ರಕೃತೇಃ ಸ್ವಕಾರ್ಯಫಲಭುಗ್ ಭಾವಾನುಷಂಗಾತ್ಕೃತಿಃ ।**
**ನೈಕಸ್ಯಾಃ ಪ್ರಕೃತೇರಚಿತ್ತ್ವಲಸನಾಜ್ಜೀವೋಽಸ್ಯ ಕರ್ತಾ ತತೋ**
**ಜೀವಸ್ಯೈವ ಚ ಕರ್ಮ ತಚ್ಚಿದನುಗಂ ಜ್ಞಾತಾ ನ ಯತ್ಪುದ್ಗಲಃ ॥203॥**

**ಅರ್ಥ :-** ರಾಗಾದಿರೂಪದ ಭಾವಕರ್ಮವು ಯಾರಿಂದಲೂ ಮಾಡಲಾಗಿಲ್ಲವೆಂಬುದಾಗಿಲ್ಲ, ಏಕೆಂದರೆ ಅದು ಕಾರ್ಯಭೂತವಿದೆ. ಮತ್ತು ಜೀವ ಹಾಗೂ ಕರ್ಮಪ್ರಕೃತಿ ಇವೆರಡರ ಕರ್ತವ್ಯವೂ ಇಲ್ಲ, ಏಕೆಂದರೆ ಹೀಗಿದ್ದರೆ ಅಚೇತನ ಕರ್ಮ ಪ್ರಕೃತಿಗೆ ಕೂಡ ಆ ಭಾವಕರ್ಮದ ಫಲವಾದ ಸುಖ-ದುಃಖವನ್ನು ಭೋಗಿಸಬೇಕಾಗುವುದು; ಆದರೆ ಅದು ಅಸಂಭವವಿದೆ. ಇನ್ನು ಇದು ಏಕಾಕಿ ಕರ್ಮ ಪ್ರಕೃತಿಯ ಕರ್ತವ್ಯವೂ

ಇಲ್ಲ, ಏಕೆಂದರೆ ಅದರ ಅಚೇತನತೆಯು ಪ್ರಕಟವಿದೆ. ಆದುದರಿಂದ ಈ ರಾಗಾದಿಗಳ ಕರ್ತೃವು ಜೀವವೇ ಇದೆ ಮತ್ತು ಈ ರಾಗಾದಿಗಳು ಜೀವದ ಕರ್ಮಗಳೇ ಇವೆ. ಏಕೆಂದರೆ ಭಾವಕರ್ಮವಂತೂ ಚೇತನದ ಅನುಸಾರವಾಗಿದೆ, ಅದು ಚೇತನವಿಲ್ಲದೆ ಆಗುವುದಿಲ್ಲ ಮತ್ತು ಪುದ್ಗಲವು ಜ್ಞಾತಾ ಇಲ್ಲವೇ ಇಲ್ಲ.

ಈ ಪ್ರಕಾರ ರಾಗಾದಿಭಾವಗಳು ಜೀವದ ಅಸ್ತಿತ್ವದಲ್ಲಿವೆ.

ಕರ್ಮವನ್ನೇ ಆ ರಾಗಾದಿಭಾವಗಳ ನಿಮಿತ್ತವೆಂದು ಮನ್ನಿಸಿ ತಮ್ಮನ್ನು ರಾಗಾದಿಗಳ ಅಕರ್ತೃವೆಂದು ಮನ್ನಿಸುವವರು ಸ್ವಯಂ ಕರ್ತೃಗಳಿದ್ದಾರೆ; ಆದರೆ ತಮಗೆ ನಿರುದ್ಯಮಿಯಾಗಿ ಪ್ರಮಾದಿಮಾಗಿ ಇರುವುದಿದೆ, ಆದುದರಿಂದ ಕರ್ಮದ ಮೇಲೆಯೇ ದೋಷಾರೋಪಣೆ ಮಾಡುತ್ತಾರೆ, ಆದರೆ ಇದು ದುಃಖದಾಯಕವಾದ ಭ್ರಾಂತಿಯಿದೆ.

ಇದನ್ನೇ ಸಮಯಸಾರ ಕಲಶದಲ್ಲಿ ಹೇಳಿದ್ದಾರೆ,-

**ರಾಗಜನ್ಮನಿ ನಿಮಿತ್ತತಾಂ ಪರದ್ರವ್ಯಮೇವ ಕಲಯಂತಿ ಯೇ ತು ತೇ ।**
**ಉತ್ತರಂತಿ ನ ಹಿ ಮೋಹವಾಹಿನೀಂ ಶುದ್ಧಬೋಧವಿಧುರಾಂಧಬುದ್ಧಯಃ ॥221॥**

**ಅರ್ಥ :-** ಯಾವ ಜೀವರುಗಳು ರಾಗಾದಿಗಳ ಉತ್ಪತ್ತಿಯಲ್ಲಿ ಪರದ್ರವ್ಯಗಳನ್ನೇ ನಿಮಿತ್ತರೂಪವಾಗಿ ಮನ್ನಿಸುತ್ತಾರೆ, ಅವರು ಶುದ್ಧಜ್ಞಾನದಿಂದ ರಹಿತರಾದ ಅಂಧಬುದ್ಧಿಯವರಿದ್ದಾರೆ. ಅವರು ಹೀಗಾಗುತ್ತ ಮೋಹ ನದಿಯನ್ನು ದಾಂಟಿ ಹೋಗಲಾರರು.

ಅದರಂತೆ ಸಮಯಸಾರದ 'ಸರ್ವವಿಶುದ್ಧಜ್ಞಾನಾಧಿಕಾರ'ದಲ್ಲಿ ಆತ್ಮನನ್ನು ಅಕರ್ತೃವೆಂದು ಮನ್ನಿಸುವವರು ಕರ್ಮವೇ ಎಚ್ಚರಿಸುತ್ತದೆ-ಕರ್ಮವೇ ಮಲಗಿಸುತ್ತದೆ, ಪರಘಾತಕರ್ಮದಿಂದ ಹಿಂಸೆಯಿದೆ, ವೇದಕರ್ಮದಿಂದ ಅಬ್ರಹ್ಮವಿದೆ, ಅದಕ್ಕಾಗಿ ಕರ್ಮವೇ ಕರ್ತೃವಿದೆಯೆಂದು ಹೇಳುತ್ತಾರೆ. ಇಂಥ ಜೈನರನ್ನು ಸಾಂಖ್ಯಮತಿಗಳೆಂದು ಹೇಳಿದೆ. ಯಾವ ಪ್ರಕಾರ ಸಾಂಖ್ಯ ಮತದವರು ಆತ್ಮನನ್ನು ಶುದ್ಧವೆಂದು ಮನ್ನಿಸಿ ಸ್ವಚ್ಛಂದರಾಗುತ್ತಾರೆ ಅದೇ ಪ್ರಕಾರ ಇವರು ಕೂಡ ಆದರು.

ಇಂಥ ಶ್ರದ್ಧೆಯಿಂದ ರಾಗಾದಿಗಳನ್ನು ತಮ್ಮವೆಂದು ತಿಳಿಯದೆ, ತಮ್ಮನ್ನು ಅಕರ್ತೃವೆಂದು ಮನ್ನಿಸುವುದರಿಂದ ರಾಗಾದಿಗಳಾಗುವ ಭಯವೇ ಉಳಿಯಲಿಲ್ಲ ಮತ್ತು ರಾಗಾದಿಗಳನ್ನು ದೂರಮಾಡುವ ಉಪಾಯವೇ ಉಳಿಯಲಿಲ್ಲ. ಆಗ ಸ್ವೇಚ್ಛಾಚಾರಿಗಳಾಗಿ ದುಷ್ಟ ಕರ್ಮಗಳನ್ನು ಕಟ್ಟಿಕೊಂಡು ಅನಂತ ಸಂಸಾರದಲ್ಲಿ ಸುತ್ತುತ್ತಾರೆ.

**ಪ್ರಶ್ನೆ :- 'ವರ್ಣಾದ್ಯಾ ವಾ ರಾಗಮೋಹಾದಯೋ ವಾ ಭಿನ್ನಾಭಾವಾಃ ಸರ್ವ ಏವಾಸ್ಯ ಪುಂಸಃ'★** ಎಂದರೆ ವರ್ಣಾದಿಗಳು ಅಥವಾ ರಾಗಾದಿ ಭಾವಗಳೆಲ್ಲವೂ ಈ ಆತ್ಮನಿಂದ ಭಿನ್ನವಿವೆಯೆಂದು ಸಮಯಸಾರದಲ್ಲಿ ಹೇಳಿದೆ. ಮತ್ತು ಅವೇ ರಾಗಾದಿಗಳನ್ನು ಪುದ್ಗಲಮಯವೆಂದು ಹೇಳಿದೆ. ಅನ್ಯ ಶಾಸ್ತ್ರಗಳಲ್ಲೂ ಆತ್ಮನನ್ನು ರಾಗಾದಿಗಳಿಂದ ಭಿನ್ನವೆಂದು ಹೇಳಿದೆ, ಅದು ಯಾವ ಪ್ರಕಾರವಿದೆ ?

★ ವರ್ಣಾದ್ಯಾ ವಾ ರಾಗಮೋಹಾದಯೋ ವಾ ಭಿನ್ನಾ ಭಾವಾಃ ಸರ್ವ ಏವಾಸ್ಯ ಪುಂಸಃ ।
ತೇನೈವಾಂತಸ್ತತ್ತ್ವತಃ ಪಶ್ಯತೋಽಮೀ ನೋ ದೃಷ್ಟಾಃ ಸ್ಯುರ್ದೃಷ್ಟಮೇಕಂ ಪರಂ ಸ್ಯಾತ್ ॥೩೭॥ ಸಮಯಸಾರ ಕಲಶ

**ಉತ್ತರ :-** ರಾಗಾದಿಭಾವಗಳು ಪರದ್ರವ್ಯದ ನಿಮಿತ್ತದಿಂದ ಔಪಾಧಿಕ ಭಾವಗಳಾಗುತ್ತವೆ, ಮತ್ತು ಅವನ್ನು ಈ ಜೀವನು ಸ್ವಭಾವವೆಂದು ತಿಳಿಯುತ್ತಾನೆ, ಸ್ವಭಾವವೆಂದು ತಿಳಿದುದನ್ನು ಕೆಡಕೆಂದು ಹೇಗೆ ಮನ್ನಿಸುವನು, ಮತ್ತು ಅದರ ನಾಶದ ಉಪಾಯವನ್ನು ಏತಕ್ಕಾಗಿ ಮಾಡುವನು ? ಆದುದರಿಂದ ಈ ಶ್ರದ್ಧೆಯೇ ವಿಪರೀತವಿದೆ. ಅದನ್ನು ಬಿಡಿಸುವ ಸಲವಾಗಿ ಸ್ವಭಾವದ ಅಪೇಕ್ಷೆಯಿಂದ ರಾಗಾದಿಗಳನ್ನು ಭಿನ್ನವೆಂದು ಹೇಳಿದೆ ಮತ್ತು ನಿಮಿತ್ತದ ಮುಖ್ಯತೆಯಿಂದ ಪುದ್ಗಲಮಯವೆಂದು ಹೇಳಿದೆ. ಯಾವ ಪ್ರಕಾರ ರೋಗ ನಾಶ ಮಾಡಲು ಬಯಸುವ ವೈದ್ಯನು ಶೀತದ ಅಧಿಕತೆಯಿದ್ದಾಗ ಉಷ್ಣವಾದ ಔಷಧವನ್ನು ಹೇಳುತ್ತಾನೆ, ಮತ್ತು ಉಷ್ಣದ ಅಧಿಕತೆಯಿದ್ದಾಗ ಶೀತಲವಾದ ಔಷಧವನ್ನು ಹೇಳುತ್ತಾನೆ ಅದೇ ಪ್ರಕಾರ ರಾಗಾದಿಗಳನ್ನು ಬಿಡಿಸಲು ಬಯಸುವ ಶ್ರೀಗುರುಗಳು ರಾಗಾದಿಗಳನ್ನು ಪರವೆಂದು ಮನ್ನಿಸಿ ಸ್ವಚ್ಛಂದರಾಗಿ ನಿರುದ್ಯಮಿಯಾಗುವವರಿಗೆ ಉಪಾದಾನ ಕಾರಣದ ಮುಖ್ಯತೆಯಿಂದ ರಾಗಾದಿಗಳು ಆತ್ಮನವಿವೆಯೆಂಬ ಶ್ರದ್ಧೆ ಮಾಡಿಸಿದ್ದಾರೆ, ಮತ್ತು ರಾಗಾದಿಗಳನ್ನು ತಮ್ಮ ಸ್ವಭಾವವೆಂದು ಮನ್ನಿಸಿ ಅವುಗಳ ನಾಶದ ಉದ್ಯಮ ಮಾಡದವರಿಗೆ ನಿಮಿತ್ತಕಾರಣದ ಮುಖ್ಯತೆಯಿಂದ ರಾಗಾದಿಗಳು ಪರಭಾವಗಳಿವೆಯೆಂಬ ಶ್ರದ್ಧೆ ಮಾಡಿಸಿದ್ದಾರೆ.

ಇವೆರಡೂ ವಿಪರೀತ ಶ್ರದ್ಧೆಗಳಿಂದ ರಹಿತವಾದ ಮೇಲೆ ಸತ್ಯಶ್ರದ್ಧೆಯಾಗುವುದು, ಆಗ ಈ ರಾಗಾದಿಯ ಭಾವಗಳು ಆತ್ಮನ ಸ್ವಭಾವಗಳಂತೂ ಇಲ್ಲ, ಇವು ಕರ್ಮದ ನಿಮಿತ್ತದಿಂದ ಆತ್ಮನ ಅಸ್ತಿತ್ವದಲ್ಲಿ ವಿಭಾವಪರ್ಯಾಯ ರೂಪದಿಂದ ಉತ್ಪನ್ನವಾಗುತ್ತವೆ, ನಿಮಿತ್ತವು ದೂರವಾದ ಮೇಲೆ ಇವುಗಳ ನಾಶವಾಗುವುದರಿಂದ ಸ್ವಭಾವ ಭಾವವು ಉಳಿದುಬಿಡುತ್ತದೆ; ಆದುದರಿಂದ ಇವುಗಳ ನಾಶದ ಉದ್ಯಮವನ್ನು ಮಾಡಬೇಕಾಗುವುದೆಂದು ಮನ್ನಿಸುವನು.

**ಪ್ರಶ್ನೆ :-** ಇವು ಕರ್ಮದ ನಿಮಿತ್ತದಿಂದ ಆಗುತ್ತಿದ್ದರೆ ಕರ್ಮದ ಉದಯವಿರುವವರೆಗೆ ಈ ವಿಭಾವಗಳು ಹೇಗೆ ದೂರವಾಗುವವು ? ಆದುದರಿಂದ ಇದರ ಉದ್ಯಮ ಮಾಡುವುದು ನಿರರ್ಥಕವಿದೆಯಲ್ಲವೇ ?

**ಉತ್ತರ :-** ಒಂದು ಕಾರ್ಯವಾಗುವಲ್ಲಿ ಅನೇಕ ಕಾರಣಗಳು ಬೇಕು. ಅವುಗಳಲ್ಲಿ ಯಾವ ಕಾರಣಗಳು ಬುದ್ಧಿಪೂರ್ವಕವಾಗಿವೆ ಅವನ್ನಂತೂ ಉದ್ಯಮಮಾಡಿ ಪಡೆಯಬೇಕು, ಮತ್ತು ಅಬುದ್ಧಿಪೂರ್ವಕವಾದ ಕಾರಣಗಳು ತಾವಾಗಿಯೇ ದೊರಕಿದಾಗ ಕಾರ್ಯಸಿದ್ಧಿಯಾಗುತ್ತದೆ. ಯಾವ ಪ್ರಕಾರ ಪುತ್ರ ಪ್ರಾಪ್ತಿಯ ಕಾರಣವಾದ ವಿವಾಹಾದಿಗಳನ್ನು ಬುದ್ಧಿಪೂರ್ವಕವಾಗಿ ಮಾಡುವುದಿದೆ, ಮತ್ತು ಭವಿತವ್ಯವು ಅಬುದ್ಧಿಪೂರ್ವಕವಿದೆ; ಅಲ್ಲಿ ಪುತ್ರಾರ್ಥಿಗಾಗಿ ವಿವಾಹ ಮೊದಲಾದ ಉದ್ಯಮ ಮಾಡುವುದು ಮತ್ತು ಭವಿತವ್ಯವು ತಾನಾಗಿಯೇ ಬಂದಾಗ ಪುತ್ರಪ್ರಾಪ್ತಿಯಾಗುವುದು. ಅದೇ ಪ್ರಕಾರ ವಿಭಾವ ದೂರ ಮಾಡುವ ಕಾರಣಗಳಾದ ತತ್ತ್ವವಿಚಾರಾದಿಗಳು ಬುದ್ಧಿಪೂರ್ವಕವಿವೆ ಮತ್ತು ಮೋಹಕರ್ಮದ ಉಪಶಮಾದಿಗಳು ಅಬುದ್ಧಿಪೂರ್ವಕವಿವೆ; ಅದರಾರ್ಥಿಯು ತತ್ತ್ವವಿಚಾರಾದಿಗಳ ಉದ್ಯಮವನ್ನು ಮಾಡುವುದು ಮತ್ತು ತಾನಾಗಿಯೇ ಮೋಹಕರ್ಮದ ಉಪಶಮವಾದಾಗ ರಾಗಾದಿಗಳು ದೂರವಾಗುತ್ತವೆ.

**ಪ್ರಶ್ನೆ :-** ಯಾವ ಪ್ರಕಾರ ವಿವಾಹ ಮೊದಲಾದವು ಭವಿತವ್ಯದ ಆಧೀನವಿವೆ ಅದೇ ಪ್ರಕಾರ ತತ್ತ್ವವಿಚಾರ ಮೊದಲಾದವೂ ಕರ್ಮದ ಕ್ಷಯೋಪಶಮಾದಿಗಳ ಆಧೀನವಿರುವುದರಿಂದ ಪುರುಷಾರ್ಥ ಮಾಡುವುದು ನಿರರ್ಥಕವಿದೆಯಲ್ಲವೇ ?

**ಉತ್ತರ :-** ನಿನ್ನ ಜ್ಞಾನಾವರಣದ ಕ್ಷಯೋಪಶಮವು ತತ್ತ್ವವಿಚಾರ ಮಾಡಲು ಯೋಗ್ಯವಾಗಿದೆ;

ಅದಕ್ಕಾಗಿ ಉಪಯೋಗವನ್ನು ಅಲ್ಲಿ ತೊಡಗಿಸುವ ಉದ್ಯಮ ಮಾಡಿಸುತ್ತಾರೆ. ಅಸಂಜ್ಞೀ ಜೀವಗಳಿಗೆ ಕ್ಷಯೋಪಶಮವಿಲ್ಲವೆಂದ ಮೇಲೆ ಅವಕ್ಕೇಕೆ ಉಪದೇಶಕೊಡುವುದು !

**ಪ್ರಶ್ನೆ:-** ಭವಿತವ್ಯವಿದ್ದರೆ ಅಲ್ಲಿ ಉಪಯೋಗ ತೊಡಗುವುದು, ಭವಿತವ್ಯವಿಲ್ಲದಿದ್ದರೆ ಹೇಗೆ ತೊಡಗುವುದು?

**ಉತ್ತರ :-** ಇಂಥ ಶ್ರದ್ಧೆಯಿದ್ದರೆ ಎಲ್ಲೆಡೆಗೆ ಯಾವುದೇ ಕಾರ್ಯದ ಉದ್ಯಮ ಮಾಡಬೇಡ. ನೀನು ತಿನ್ನುವ- ಉಣ್ಣುವ-ವ್ಯಾಪಾರ ಮೊದಲಾದವುಗಳ ಉದ್ಯಮವನ್ನಂತೂ ಮಾಡುತ್ತಿರುವೆ ಮತ್ತು ಇಲ್ಲಿ ಭವಿತವ್ಯವನ್ನು ಹೇಳುತ್ತಿರುವೆ. ಇದರಿಂದ ನಿನ್ನ ಪ್ರೀತಿಯು ಇಲ್ಲಿ ಇಲ್ಲವೆಂದು ತಿಳಿದುಬರುತ್ತದೆ. ಅಭಿಮಾನದಿಂದ ಇಂಥ ಸುಳ್ಳು ಮಾತುಗಳನ್ನು ಸೃಷ್ಟಿಸುತ್ತಿರುವೆ.

ಈ ಪ್ರಕಾರ ರಾಗಾದಿಗಳಿರುತ್ತಿದ್ದರೂ ಆತ್ಮನನ್ನು ಅವುಗಳಿಂದ ರಹಿತವೆಂದು ಮನ್ನಿಸುವವರನ್ನು ಮಿಥ್ಯಾದೃಷ್ಟಿಗಳೆಂದು ತಿಳಿಯಬೇಕು.

ಅದರಂತೆ ಕರ್ಮ-ನೋಕರ್ಮದ ಸಂಬಂಧವಿದ್ದರೂ ಆತ್ಮನನ್ನು ನಿರ್ಬಂಧವೆಂದು ಮನ್ನಿಸುತ್ತಾರೆ, ಆದರೆ ಅವುಗಳ ಬಂಧನವು ಪ್ರತ್ಯಕ್ಷ ಕಂಡುಬರುತ್ತದೆ. ಜ್ಞಾನಾವರಣಾದಿಗಳಿಂದ ಜ್ಞಾನಾದಿಗಳ ಘಾತವು ಕಂಡುಬರುತ್ತದೆ, ಶರೀರದ ಮೂಲಕ ಅದಕ್ಕನುಸರಿಸಿ ಅವಸ್ಥೆಗಳಾಗುತ್ತಿರುವುದು ಕಂಡು ಬರುತ್ತವೆ, ಆದಾಗ್ಯೂ ಬಂಧನವು ಹೇಗಿಲ್ಲ? ಒಂದುವೇಳೆ ಬಂಧನವೇ ಇಲ್ಲದಿದ್ದರೆ ಮೋಕ್ಷಮಾರ್ಗಿಯು ಅವುಗಳ ನಾಶದ ಉದ್ಯಮವನ್ನು ಏತಕ್ಕಾಗಿ ಮಾಡುವನು?

**ಪ್ರಶ್ನೆ :-** ನಮಗಂತೂ ಬಂಧ-ಮುಕ್ತಿಯ ವಿಕಲ್ಪವನ್ನೇ ಮಾಡುವುದಿಲ್ಲ, ಏಕೆಂದರೆ ಶಾಸ್ತ್ರದಲ್ಲಿ '**ಜಇ ಬದ್ಧಉ ಮುಕ್ಕಉ ಮುಣಹಿ ಸೋ ಬಂಧಿಯಹಿ ಣಿಭಂತು★** ಎಂದರೆ ಯಾವ ಜೀವನು ಬದ್ಧನಿದ್ದೇನೆ ಮತ್ತು ಮುಕ್ತನಿದ್ದೇನೆಂದು ಮನ್ನಿಸುತ್ತಾನೆ ಅವನು ನಿಃಸಂದೇಹವಾಗಿ ಬದ್ಧನಾಗುತ್ತಾನೆಂದು ಹೇಳಿದೆಯಲ್ಲವೇ ?

**ಉತ್ತರ :-** ಯಾರು ಕೇವಲ ಪರ್ಯಾಯದೃಷ್ಟಿಯುಳ್ಳವರಾಗಿ ಬದ್ಧ-ಮುಕ್ತ ಅವಸ್ಥೆಯನ್ನೇ ಮನ್ನಿಸುತ್ತಾರೆ, ದ್ರವ್ಯಸ್ವಭಾವದ ಗ್ರಹಣ ಮಾಡುವುದಿಲ್ಲ ಅವರಿಗೆ ಯಾವ ಜೀವನು ದ್ರವ್ಯಸ್ವಭಾವವನ್ನು ತಿಳಿದುಕೊಳ್ಳಲಾರದೆ ಬದ್ಧ-ಮುಕ್ತನಾದೆನೆಂದು ಮನ್ನಿಸುತ್ತಾನೆ ಅವನು ಬದ್ಧನಾಗುತ್ತಾನೆಂಬ ಉಪದೇಶ ಕೊಡಲಾಗಿದೆ. ಮತ್ತು ಸರ್ವಥಾ ಬಂಧ-ಮುಕ್ತಿಗಳಿಲ್ಲದಿದ್ದರೆ ಈ ಜೀವವು ಬದ್ಧವಾಗುತ್ತದೆಂದೇಕೆ ಹೇಳುವರು ? ಮತ್ತು ಬಂಧನಾಶದ-ಮುಕ್ತಿಯಾಗುವ ಉದ್ಯಮವನ್ನೇಕೆ ಮಾಡಲಾಗುವುದು ? ಮತ್ತು ಆತ್ಮಾನುಭವವನ್ನು ಏತಕ್ಕಾಗಿ ಮಾಡಲಾಗುವುದು ? ಆದುದರಿಂದ ದ್ರವ್ಯದೃಷ್ಟಿಯಿಂದ ಒಂದು ದಶೆಯಿದ್ದರೆ ಪರ್ಯಾಯದೃಷ್ಟಿಯಿಂದ ಅನೇಕ ಅವಸ್ಥೆಗಳಾಗುತ್ತವೆಂಬುದನ್ನು ಮನ್ನಿಸುವುದು ಯೋಗ್ಯವಿದೆ.

ಹೀಗೆಯೇ ಅನೇಕ ಪ್ರಕಾರದಿಂದ ಕೇವಲ ನಿಶ್ಚಯನಯದ ಅಭಿಪ್ರಾಯದಿಂದ ವಿರುದ್ಧ ಶ್ರದ್ಧಾದಿಗಳನ್ನು ಮಾಡುತ್ತದೆ.

ಜಿನವಾಣಿಯಲ್ಲಂತೂ ನಾನಾ ನಯಗಳ ಅಪೇಕ್ಷೆಯಿಂದ ಎಲ್ಲಿ ಹೇಗೋ ಹಾಗೆ ನಿರೂಪಣೆ ಮಾಡಿದೆ.

★ ಜಇ ಬದ್ಧಉ ಮುಕ್ಕಉ ಮುಣಹಿ ತೋ ಬಂಧಿಯಹಿ ಣಿಭಂತು ।
ಸಹಜ-ಸರೂವಇ ಜಇ ರಮಹಿ ತೋ ಪಾವಹಿ ಸಿವ ಸಂತು ।।೮೭।। ಯೋಗಸಾರ

ಇವನು ತನ್ನ ಅಭಿಪ್ರಾಯದಿಂದ ನಿಶ್ಚಯನಯದ ಮುಖ್ಯತೆಯಿಂದ ಮಾಡಿದ ಕಥನವನ್ನು ಗ್ರಹಣಮಾಡಿ ಮಿಥ್ಯಾದೃಷ್ಟಿಯನ್ನು ಧಾರಣ ಮಾಡುತ್ತಾನೆ.

ಜಿನವಾಣಿಯಲ್ಲಂತೂ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕತೆಯಾದ ಮೇಲೆ ಮೋಕ್ಷಮಾರ್ಗವೆಂದು ಹೇಳಿದೆ, ಆದರೆ ಇವನಿಗೆ ಸಮ್ಯಗ್ದರ್ಶನ-ಜ್ಞಾನದಲ್ಲಿ ಏಳುತತ್ತ್ವಗಳ ಶ್ರದ್ಧೆ ಮತ್ತು ತಿಳಿಯುವುದಾಗಬೇಕು, ಆದರೆ ಅವುಗಳ ವಿಚಾರವಿಲ್ಲ. ಮತ್ತು ಚಾರಿತ್ರದಲ್ಲಿ ರಾಗಾದಿಗಳನ್ನು ದೂರಮಾಡಬೇಕು, ಅದರ ಉದ್ಯಮವಿಲ್ಲ; ತನ್ನ ಒಂದು ಆತ್ಮನ ಶುದ್ಧ ಅನುಭವವನ್ನೇ ಮೋಕ್ಷಮಾರ್ಗವೆಂದು ತಿಳಿದುಕೊಂಡು ಸಂತುಷ್ಟನಿದ್ದಾನೆ. ಅದರ ಅಭ್ಯಾಸ ಮಾಡುವುದಕ್ಕೆ ಅಂತರಂಗದಲ್ಲಿ 'ನಾನು ಸಿದ್ಧಸಮಾನ ಶುದ್ಧನಿದ್ದೇನೆ, ಕೇವಲಜ್ಞಾನಸಹಿತನಿದ್ದೇನೆ, ದ್ರವ್ಯಕರ್ಮ-ನೋಕರ್ಮಗಳಿಂದ ರಹಿತನಿದ್ದೇನೆ, ಪರಮಾನಂದಮಯನಿದ್ದೇನೆ, ಜನ್ಮ-ಮರಣಾದಿ ದುಃಖಗಳು ನನ್ನಲ್ಲಿಲ್ಲ'ವೆಂದು ಚಿಂತನೆ ಮಾಡುತ್ತಿರುತ್ತಾನೆ.

ಈ ಚಿಂತನೆಯನ್ನು ದ್ರವ್ಯದೃಷ್ಟಿಯಿಂದ ಮಾಡುತ್ತಿದ್ದರೆ ದ್ರವ್ಯವಂತೂ ಎಲ್ಲ ಶುದ್ಧಾಶುದ್ಧ ಪರ್ಯಾಯಗಳ ಸಮುದಾಯವಿದೆ; ನೀನು ಶುದ್ಧದ ಅನುಭವವನ್ನೇ ಏತಕ್ಕಾಗಿ ಮಾಡುತ್ತಿರುವೆ ? ಮತ್ತು ಪರ್ಯಾಯ ದೃಷ್ಟಿಯಿಂದ ಮಾಡುತ್ತಿದ್ದರೆ ನಿನಗೆ ವರ್ತಮಾನದಲ್ಲಿ ಅಶುದ್ಧ ಪರ್ಯಾಯವಿದೆ; ನೀನು ನಿನ್ನನ್ನು ಶುದ್ಧವೆಂದು ಹೇಗೆ ಮನ್ನಿಸುತ್ತಿರುವೆ?

ಒಂದು ವೇಳೆ ಶಕ್ತಿಯ ಅಪೇಕ್ಷೆಯಿಂದ ಶುದ್ಧವೆಂದು ಮನ್ನಿಸುತ್ತಿದ್ದರೆ 'ನಾನು ಹೀಗಾಗಲು ಯೋಗ್ಯನಿದ್ದೇನೆ'ಂದು ಮನ್ನಿಸು, 'ನಾನು ಹೀಗಿದ್ದೇನೆ'ಂದೇಕೆ ಮನ್ನಿಸುತ್ತಿರುವೆ ? ಆದುದರಿಂದ ತನ್ನನ್ನು ಶುದ್ಧರೂಪನೆಂದು ಚಿಂತನೆ ಮಾಡುವುದು ಭ್ರಮೆಯಿದೆ. ಏಕೆಂದರೆ ನೀನು ನಿನ್ನನ್ನು ಸಿದ್ಧಸಮಾನನೆಂದು ಮನ್ನಿಸಿದರೆ ಈ ಸಂಸಾರ ಅವಸ್ಥೆಯು ಯಾರದಿದೆ ? ಮತ್ತು ನಿನಗೆ ಕೇವಲಜ್ಞಾನ ಮೊದಲಾದವುಗಳಿದ್ದರೆ ಈ ಮತಿಜ್ಞಾನಾದಿಗಳು ಯಾರವಿವೆ ? ಮತ್ತು ದ್ರವ್ಯಕರ್ಮ-ನೋಕರ್ಮಗಳಿಂದ ರಹಿತನಿದ್ದರೆ ಜ್ಞಾನಾದಿಗಳ ವ್ಯಕ್ತತೆಯೇಕಿಲ್ಲ ? ಪರಮಾನಂದಮಯನಿದ್ದರೆ ಈಗ ಯಾವ ಕರ್ತವ್ಯವುಳಿಯಿತು ? ಜನ್ಮ-ಮರಣಗಳ ದುಃಖವಿಲ್ಲದಿದ್ದರೆ ಅದೇಕೆ ದುಃಖಿಯಾಗಿರುವೆ ? ಆದುದರಿಂದ ಒಂದು ಅವಸ್ಥೆಯಲ್ಲಿ ಇನ್ನೊಂದು ಅವಸ್ಥೆಯನ್ನು ಮನ್ನಿಸುವುದು ಭ್ರಮೆಯಿದೆ?

**ಪ್ರಶ್ನೆ :-** ಹಾಗಾದರೆ ಶಾಸ್ತ್ರದಲ್ಲಿ ಶುದ್ಧ ಚಿಂತನೆಮಾಡುವ ಉಪದೇಶವನ್ನು ಹೇಗೆ ಕೊಡಲಾಗಿದೆ ?

**ಉತ್ತರ :-** ಒಂದು ದ್ರವ್ಯದ ಅಪೇಕ್ಷೆಯಿಂದ ಶುದ್ಧತೆಯಿದ್ದರೆ ಒಂದು ಪರ್ಯಾಯದ ಅಪೇಕ್ಷೆಯಿಂದ ಶುದ್ಧತೆಯಿದೆ. ಅಲ್ಲಿ ದ್ರವ್ಯ ಅಪೇಕ್ಷೆಯಿಂದಂತೂ ಪರದ್ರವ್ಯದಿಂದ ಭಿನ್ನತೆ ಮತ್ತು ತನ್ನಭಾವಗಳಿಂದ ಅಭಿನ್ನತೆಯ ಹೆಸರು ಶುದ್ಧತೆಯಿದೆ. ಮತ್ತು ಪರ್ಯಾಯ ಅಪೇಕ್ಷೆಯಿಂದ ಔಪಾಧಿಕ ಭಾವಗಳ ಅಭಾವವಾಗುವುದರ ಹೆಸರು ಶುದ್ಧತೆಯಿದೆ. ಆ ಶುದ್ಧ ಚಿಂತನೆಯಲ್ಲಿ ದ್ರವ್ಯ ಅಪೇಕ್ಷೆಯಿಂದ ಶುದ್ಧತೆಯನ್ನು ಗ್ರಹಣ ಮಾಡಿದೆ. ಅದನ್ನೇ ಸಮಯಸಾರ ವ್ಯಾಖ್ಯೆಯಲ್ಲಿ ಹೇಳಿದ್ದಾರೆ,-

**'ಏಷ ಏವಾಶೇಷ ದ್ರವ್ಯಾಂತರ ಭಾವೇಭ್ಯೋ ಭಿನ್ನತ್ವೇನೋಪಾಸ್ಯಮಾನಃ ಶುದ್ಧ ಇತ್ಯಭಿಲಪ್ಯತೇ॥'**
೬ನೇ ಗಾಥೆಯ ಟೀಕೆ ಎಂದರೆ ಆತ್ಮನು ಪ್ರಮತ್ತ-ಅಪ್ರಮತ್ತನಿಲ್ಲ. ಇದೇ ಸಮಸ್ತ ಪರದ್ರವ್ಯಗಳ ಭಾವಗಳಿಂದ ಭಿನ್ನತೆಯ ಮೂಲಕ ಸೇವನೆ ಮಾಡಲಾದುದು ಶುದ್ಧವೆಂದು ಹೇಳಲಾಗುತ್ತದೆ. ಮತ್ತೆ ಅಲ್ಲಿಯೇ ಹೀಗೆ ಹೇಳಿದ್ದಾರೆ,-

**'ಸಮಸ್ತಕಾರಕಚಕ್ರ ಪ್ರಕ್ರಿಯೋತ್ತೀರ್ಣನಿರ್ಮಲಾನುಭೂತಿಮಾತ್ರತ್ವಾಚ್ಛುದ್ಧಃ'** (೭೩ನೇ ಗಾಥೆಯ ಟೀಕೆ) ಎಂದರೆ ಸಮಸ್ತ ಕರ್ತೃ, ಕರ್ಮ ಮೊದಲಾದ ಕಾರಕಗಳ ಸಮೂಹದ ಪ್ರಕ್ರಿಯೆಯಿಂದ ಪಾರಂಗತವಾದಂಥ ನಿರ್ಮಲ ಅನುಭೂತಿಯಿಂದ ಆ ಅಭೇದಜ್ಞಾನ ತನ್ಮಾತ್ರದಿಂದ ಶುದ್ಧವಿದೆ. ಆದುದರಿಂದ ಹೀಗೆ ಶುದ್ಧ ಶಬ್ದದ ಅರ್ಥ ತಿಳಿಯಬೇಕು.

ಇದೇ ಪ್ರಕಾರ 'ಯಾವುದು ಪರಭಾವಗಳಿಂದ ಭಿನ್ನ ನಿಃಕೇವಲ ಸ್ವ ಮಾತ್ರವಿದೆ' ಅದರ ಹೆಸರು ಕೇವಲವಿದೆಯೆಂಬುದನ್ನು ತಿಳಿಯಬೇಕು. ಇದರಂತೆ ಅನ್ಯ ಯಥಾರ್ಥ ಅರ್ಥದ ಅವಧಾರಣೆ ಮಾಡಬೇಕು.

ಪರ್ಯಾಯ ಅಪೇಕ್ಷೆಯಿಂದ ಶುದ್ಧತೆಯನ್ನು ಮನ್ನಿಸುವುದರಿಂದ ಮತ್ತು ತಮ್ಮನ್ನು ಕೇವಲಿಯೆಂದು ಮನ್ನಿಸುವುದರಿಂದ ಮಹಾವಿಪರೀತತೆಯಾಗುತ್ತದೆ, ಆದುದರಿಂದ ತಮ್ಮನ್ನು ದ್ರವ್ಯ-ಪರ್ಯಾಯರೂಪವಾಗಿ ಅವಲೋಕನ ಮಾಡಬೇಕು. ದ್ರವ್ಯದಿಂದ ಸಾಮಾನ್ಯ ಸ್ವರೂಪದ ಅವಲೋಕನ ಮಾಡುವುದು, ಪರ್ಯಾಯದಲ್ಲಿ ಅವಸ್ಥಾ ವಿಶೇಷಣದ ಅವಧಾರಣೆ ಮಾಡುವುದು.

ಈ ಪ್ರಕಾರ ಚಿಂತನೆ ಮಾಡುವುದರಿಂದ ಸಮ್ಯಗ್ದೃಷ್ಟಿಯಾಗುತ್ತಾನೆ, ಏಕೆಂದರೆ ನಿಜವಾದ ಅವಲೋಕನ ಮಾಡದ ಹೊರತು ಸಮ್ಯಗ್ದೃಷ್ಟಿಯೆಂಬ ಹೆಸರನ್ನು ಹೇಗೆ ಪ್ರಾಪ್ತ ಮಾಡುವುದು ?

## ನಿಶ್ಚಯಾಭಾಸಿಯ ಸ್ವಚ್ಛಂದತೆ ಮತ್ತು ಅದರ ನಿಷೇಧ :-

ಮೋಕ್ಷಮಾರ್ಗದಲ್ಲಿ ರಾಗಾದಿಗಳ ನಿವಾರಣೆಗೆ ಶ್ರದ್ಧೆ-ಜ್ಞಾನ-ಆಚರಣೆ ಮಾಡುವುದಿದೆ, ಅದರದಂತೂ ವಿಚಾರವೇ ಇಲ್ಲ, ತನ್ನ ಶುದ್ಧ ಅನುಭವದಲ್ಲಿಯೇ ತನ್ನನ್ನು ಸಮ್ಯಗ್ದೃಷ್ಟಿಯೆಂದು ಮನ್ನಿಸಿ ಉಳಿದ ಸಮಸ್ತ ಸಾಧನಗಳ ನಿಷೇಧ ಮಾಡುತ್ತಾನೆ.

ಶಾಸ್ತ್ರಾಭ್ಯಾಸ ಮಾಡುವುದು ನಿರರ್ಥಕವೆಂದು ಹೇಳುತ್ತಾನೆ ಮತ್ತು ಗುಣಸ್ಥಾನ-ಮಾರ್ಗಣಾಸ್ಥಾನ-ತ್ರಿಲೋಕ ಮೊದಲಾದವುಗಳ ವಿಚಾರವನ್ನು ವಿಕಲ್ಪವೆಂದು ನಿಶ್ಚಯಿಸುತ್ತಾನೆ, ತಪಶ್ಚರಣ ಮಾಡುವುದನ್ನು ವ್ಯರ್ಥ ಕ್ಲೇಶ ಪಡುವುದೆಂದು ಮನ್ನಿಸುತ್ತಾನೆ, ವ್ರತಾದಿಗಳ ಸ್ವೀಕಾರ ಮಾಡುವುದನ್ನು ಬಂಧನದಲ್ಲಿ ಬೀಳುವುದೆಂದು ನಿಶ್ಚಯಿಸುತ್ತಾನೆ, ಪೂಜಾದಿಕಾರ್ಯಗಳನ್ನು ಶುಭಾಸ್ರವವೆಂದು ತಿಳಿದುಕೊಂಡು ಹೇಯವೆಂದು ಪ್ರರೂಪಣೆ ಮಾಡುತ್ತಾನೆ. ಇವೇ ಮೊದಲಾದ ಸಮಸ್ತ ಸಾಧನಗಳನ್ನು ಎತ್ತಿಹಾಕಿ ಪ್ರಮಾದಿಯಾಗಿ ಪರಿಣಮಿಸುತ್ತಾನೆ.

ಒಂದು ವೇಳೆ ಶಾಸ್ತ್ರಾಭ್ಯಾಸವು ನಿರರ್ಥಕವಿದ್ದರೆ ಮುನಿಗಳಿಗೆ ಕೂಡ ಧ್ಯಾನ ಮತ್ತು ಅಧ್ಯಯನವೆಂಬ ಎರಡೇ ಕಾರ್ಯಗಳು ಮುಖ್ಯವಿವೆ. ಧ್ಯಾನದಲ್ಲಿ ಉಪಯೋಗವು ತೊಡಗದಿದ್ದಾಗ ಅವರು ಅಧ್ಯಯನದಲ್ಲಿಯೇ ಉಪಯೋಗವನ್ನು ತೊಡಗಿಸುತ್ತಾರೆ. ಮಧ್ಯದಲ್ಲಿ ಇತರ ಸ್ಥಾನಗಳು ಉಪಯೋಗ ತೊಡಗಿಸುವುದಕ್ಕೆ ಯೋಗ್ಯವಿಲ್ಲ. ಮತ್ತು ಶಾಸ್ತ್ರಾಭ್ಯಾಸದ ಮೂಲಕ ತತ್ತ್ವಗಳನ್ನು ವಿಶೇಷವಾಗಿ ತಿಳಿಯುವುದರಿಂದ ಸಮ್ಯಗ್ದರ್ಶನ-ಜ್ಞಾನಗಳು ನಿರ್ಮಲವಾಗುತ್ತವೆ. ಮತ್ತು ಅಲ್ಲಿ ಎಲ್ಲಿಯವರೆಗೆ ಉಪಯೋಗವಿರುತ್ತದೆ ಅಲ್ಲಿಯವರೆಗೆ ಕಷಾಯಗಳು ಮಂದವಿರುತ್ತವೆ ಅಲ್ಲದೆ ಮುಂಬರುವ ವೀತರಾಗ ಭಾವಗಳ ವೃದ್ಧಿಯಾಗುವುದು. ಇಂಥ ಕಾರ್ಯವನ್ನು ನಿರರ್ಥಕವೆಂದು ಹೇಗೆ ಮನ್ನಿಸುವುದು ?

**ಪ್ರಶ್ನೆ :-** ಯಾವ ಶಾಸ್ತ್ರಗಳಲ್ಲಿ ಅಧ್ಯಾತ್ಮದ ಉಪದೇಶವಿದೆ ಅವುಗಳ ಅಭ್ಯಾಸ ಮಾಡಬೇಕು, ಉಳಿದ ಶಾಸ್ತ್ರಗಳ ಅಭ್ಯಾಸ ಮಾಡುವುದರಿಂದ ಯಾವುದೇ ಸಿದ್ಧಿಯಾಗುವುದಿಲ್ಲವಲ್ಲವೇ ?

**ಉತ್ತರ :-** ಒಂದು ವೇಳೆ ನಿನ್ನ ದೃಷ್ಟಿಯು ಸರಿಯಾಗಿದ್ದರೆ ಸಮಸ್ತ ಜೈನ ಶಾಸ್ತ್ರಗಳು ಕಾರ್ಯಕಾರಿಯಿವೆ. ಅದರಲ್ಲೂ ಮುಖ್ಯವಾಗಿ ಅಧ್ಯಾತ್ಮ ಶಾಸ್ತ್ರಗಳಲ್ಲಂತೂ ಆತ್ಮಸ್ವರೂಪದ ಕಥನವು ಮುಖ್ಯವಿದೆ; ಆದರೆ ಸಮ್ಯಗ್ದೃಷ್ಟಿಯಾದ ಮೇಲೆ ಆತ್ಮಸ್ವರೂಪದ ನಿರ್ಣಯವಂತೂ ಆಗಿ ಹೋಗಿರುತ್ತದೆ, ಆಗಂತೂ ಜ್ಞಾನದ ನಿರ್ಮಲತೆಯ ಸಲುವಾಗಿ ಮತ್ತು ಉಪಯೋಗವನ್ನು ಮಂದಕಷಾಯರೂಪವಾಗಿ ಇಡುವ ಸಲುವಾಗಿ ಅನ್ಯಶಾಸ್ತ್ರಗಳ ಅಭ್ಯಾಸವು ಮುಖ್ಯವಾಗಿ ಬೇಕು. ಅದರಂತೆ ಆತ್ಮಸ್ವರೂಪದ ನಿರ್ಣಯವಾಗಿರುವುದನ್ನು ಸ್ಪಷ್ಟವಾಗಿ ಇರಿಸುವ ಸಲುವಾಗಿ ಅಧ್ಯಾತ್ಮ ಶಾಸ್ತ್ರಗಳ ಅಭ್ಯಾಸವನ್ನು ಕೂಡ ಮಾಡಬೇಕಾಗುವುದು ; ಆದರೆ ಅನ್ಯ ಶಾಸ್ತ್ರಗಳಲ್ಲಿ ಅರುಚಿಯು ಯಾವಾಗಲೂ ಆಗಲೇಬಾರದು ಯಾರಿಗೆ ಇತರ ಶಾಸ್ತ್ರಗಳ ಅರುಚಿಯಿದೆ ಅವರಿಗೆ ಅಧ್ಯಾತ್ಮದ ಅಭಿರುಚಿಯೂ ನಿಜವಾಗಿ ಇಲ್ಲ.

ಯಾವ ಪ್ರಕಾರ ವಿಷಯಾಸಕ್ತತೆಯಿರುವವನು ವಿಷಯಾಸಕ್ತ ಪುರುಷರ ಕಥೆಯನ್ನು ಅತ್ಯಂತ ರುಚಿಪೂರ್ವಕವಾಗಿ ಕೇಳುವನು ಮತ್ತು ವಿಷಯದ ವಿಶೇಷವನ್ನು ತಿಳಿಯುವನು ಅಲ್ಲದೆ ವಿಷಯದ ಆಚರಣೆಯಲ್ಲಿ ಸಾಧನವಿರುವುದನ್ನು ಕೂಡ ಹಿತರೂಪವೆಂದು ಮನ್ನಿಸುವನು ಅದರಂತೆ ವಿಷಯದ ಸ್ವರೂಪವನ್ನೂ ಗುರುತಿಸುವನು. ಅದೇ ಪ್ರಕಾರ ಆತ್ಮನ ಅಭಿರುಚಿಯಾದವನು ಆತ್ಮರುಚಿಯ ಧಾರಕರಾದ ತೀರ್ಥಂಕರ ಮೊದಲಾದವರ ಪುರಾಣಗಳನ್ನೂ ತಿಳಿಯುವನು ಮತ್ತು ಆತ್ಮನ ವಿಶೇಷತೆಯನ್ನು ತಿಳಿದುಕೊಳ್ಳುವ ಸಲುವಾಗಿ ಗುಣಸ್ಥಾನ ಮೊದಲಾದುವನ್ನೂ ತಿಳಿಯುವನು. ಅಲ್ಲದೆ ಆತ್ಮನ ಆಚರಣೆಯಲ್ಲಿ ಸಾಧನಗಳಿರುವಂಥ ವ್ರತಾದಿಗಳನ್ನೂ ಹಿತರೂಪವೆಂದು ಮನ್ನಿಸುತ್ತಾನೆ ಅದರಂತೆ ಆತ್ಮನ ಸ್ವರೂಪವನ್ನೂ ಗುರುತಿಸುವನು. ಆದುದರಿಂದ ನಾಲ್ಕೂ ಅನುಯೋಗಗಳು ಕಾರ್ಯಕಾರಿಯಾಗಿವೆ.

ಅಲ್ಲದೆ ಅವುಗಳ ಸರಿಯಾದ ಜ್ಞಾನವಾಗುವ ಸಲುವಾಗಿ ಶಬ್ದ-ನ್ಯಾಯಶಾಸ್ತ್ರ ಮೊದಲಾದುವನ್ನೂ ತಿಳಿದುಕೊಳ್ಳಬೇಕಾಗುವುದು. ಆದುದರಿಂದ ತಮ್ಮ ಶಕ್ತಿಗೆ ಅನುಸರಿಸಿ ಎಲ್ಲವುಗಳ ಅಭ್ಯಾಸವನ್ನು ಅಲ್ಪ ಅಥವಾ ಅಧಿಕವಾಗಿ ಮಾಡುವುದು ಯೋಗ್ಯವಿದೆ.

**ಪ್ರಶ್ನೆ :-** ಆತ್ಮಸ್ವರೂಪದಿಂದ ಹೊರಹೊರಟು ಬಾಹ್ಯ ಶಾಸ್ತ್ರಗಳಲ್ಲಿ ವಿಹರಿಸುವ ಬುದ್ಧಿಯು ಅದು ವ್ಯಭಿಚಾರಣಿಯಾದ ಬುದ್ಧಿಯಿದೆಯೆಂದು 'ಪದ್ಮನಂದಿ ಪಂಚವಿಂಶತಿ'★ಯಲ್ಲಿ ಹೇಳಿದ್ದಾರಲ್ಲವೇ ?

**ಉತ್ತರ :-** ಸತ್ಯವನ್ನೇ ಹೇಳಿದ್ದಾರೆ. ಬುದ್ಧಿಯಂತೂ ಆತ್ಮನದಿದ್ದು ಅದನ್ನು ಬಿಟ್ಟುಕೊಟ್ಟು ಪರದ್ರವ್ಯಗಳಲ್ಲಿ-ಶಾಸ್ತ್ರಗಳಲ್ಲಿ ಅನುರಾಗಿಣಿಯಾದರೆ ಅದನ್ನು ವ್ಯಭಿಚಾರಿಣಿಯೆಂದೇ ಹೇಳಲಾಗುತ್ತದೆ.

ಆದರೆ ಯಾವ ಪ್ರಕಾರ ಸ್ತ್ರೀಯು ಶೀಲವತಿಯಿದ್ದರೆ ಯೋಗ್ಯವೇ ಇದೆ, ಮತ್ತು ಉಳಿಯದೆ ಹೋದರೆ ಆಗ ಉತ್ತಮ ಪುರುಷನನ್ನು ಬಿಟ್ಟು ಚಾಂಡಾಲ ಮೊದಲಾದವರ ಸೇವನೆ ಮಾಡುವುದರಿಂದಂತೂ ಅತ್ಯಂತ ನಿಂದನೀಯಳಾಗುವಳು ; ಅದೇ ಪ್ರಕಾರ ಬುದ್ಧಿಯು ಆತ್ಮಸ್ವರೂಪದಲ್ಲಿ ಪ್ರವರ್ತಿಸಿದರಂತೂ ಯೋಗ್ಯವೇ ಇದೆ,

★ ಬಾಹ್ಯಶಾಸ್ತ್ರಗಹನೇ ವಿಹಾರಿಣೀ ಯಾ ಮತಿರ್ಬಹುವಿಕಲ್ಪಧಾರಿಣೀ ।
ಚಿತ್ಸ್ವರೂಪ ಕುಲ ಸದ್ಮನಿರ್ಗತಾ ಸಾ ಸತೀ ನ ಸದೃಶೀ ಕುಯೋಷಿತಾ ॥೩೮॥ ಸದ್ಬೋಧ ಚಂದ್ರೋದಯ ಅಧಿಕಾರ

ಮತ್ತು ಉಳಿಯದಿದ್ದರೆ ಪ್ರಶಸ್ತ ಶಾಸ್ತ್ರಮೊದಲಾದ ಪರದ್ರವ್ಯಗಳನ್ನು ಬಿಟ್ಟುಕೊಟ್ಟು ಅಪ್ರಶಸ್ತವಾದ ವಿಷಯಾದಿಗಳಲ್ಲಿ ತೊಡಗಿದರೆ ಅತ್ಯಂತ ನಿಂದನೀಯವೇ ಆಗುವುದು. ಆದುದರಿಂದ ಮುನಿಗಳ ಬುದ್ಧಿಯು ಕೂಡ ಸ್ವರೂಪದಲ್ಲಿ ಅಧಿಕಕಾಲದವರೆಗೆ ಉಳಿಯುವುದಿಲ್ಲವೆಂದ ಮೇಲೆ ನಿನ್ನದು ಹೇಗೆ ಉಳಿಯುವುದು ?

ಆದುದರಿಂದ ಶಾಸ್ತ್ರಾಭ್ಯಾಸದಲ್ಲಿ ಉಪಯೋಗವನ್ನು ತೊಡಗಿಸುವುದು ಯೋಗ್ಯವಿದೆ.

ಅದರಂತೆ ದ್ರವ್ಯಾದಿಗಳ ಹಾಗೂ ಗುಣಸ್ಥಾನಾದಿಗಳ ವಿಚಾರವನ್ನು ವಿಕಲ್ಪವೆಂದು ಹೇಳುವುದು ಸರಿಯಿದೆ, ಅವಂತೂ ವಿಕಲ್ಪಗಳೇ ಇವೆ; ಆದರೆ ಉಪಯೋಗವು ನಿರ್ವಿಕಲ್ಪವಾಗಿ ಉಳಿಯದಿರುವಾಗ ಈ ವಿಕಲ್ಪಗಳನ್ನು ಮಾಡದಿದ್ದರೆ ಅನ್ಯ ವಿಕಲ್ಪಗಳು ಬರುವವು, ಅವು ಬಹಳಷ್ಟು ರಾಗಾದಿಗಳಿಂದ ಗರ್ಭಿತವಿರುತ್ತವೆ, ಮತ್ತು ಯಾವಾಗಲೂ ನಿರ್ವಿಕಲ್ಪದಶೆಯು ಉಳಿಯುವುದಿಲ್ಲ; ಏಕೆಂದರೆ ಛದ್ಮಸ್ಥನ ಉಪಯೋಗವು ಏಕರೂಪವಾಗಿ ಉತ್ಕೃಷ್ಟವಾಗಿದ್ದರೆ ಒಂದು ಅಂತರ್ಮುಹೂರ್ತವಿರುತ್ತದೆ.

ನಾನು ಆತ್ಮಸ್ವರೂಪದ ಚಿಂತನೆಯನ್ನೇ ಅನೇಕ ಪ್ರಕಾರದಿಂದ ಮಾಡುತ್ತಿರುವೆನೆಂದು ನೀನೆನ್ನಬಹುದಾಗಿದೆ, ಆದರೆ ಸಾಮಾನ್ಯ ಚಿಂತನದಲ್ಲಂತೂ ಅನೇಕ ಪ್ರಕಾರಗಳು ಆಗುವುದೇ ಇಲ್ಲ, ಮತ್ತು ವಿಶೇಷ ಮಾಡಿದೆಯಾದರೆ ದ್ರವ್ಯ-ಗುಣ-ಪರ್ಯಾಯ, ಗುಣಸ್ಥಾನ, ಮಾರ್ಗಣಾಸ್ಥಾನ, ಶುದ್ಧ-ಅಶುದ್ಧ ಅವಸ್ಥೆ ಇವೇ ಮೊದಲಾದವುಗಳ ವಿಚಾರವಾಗುವುದು.

ಕೇವಲ ಆತ್ಮಜ್ಞಾನದಿಂದಲೇ ಮೋಕ್ಷಮಾರ್ಗವಾಗುವುದಿಲ್ಲ. ಏಳು ತತ್ತ್ವಗಳ ಶ್ರದ್ಧೆ-ಜ್ಞಾನಗಳಾದ ನಂತರ ಮತ್ತು ರಾಗಾದಿಗಳು ದೂರವಾದ ಮೇಲೆ ಮೋಕ್ಷಮಾರ್ಗವಾಗುವುದು. ಆದುದರಿಂದ ಏಳು ತತ್ತ್ವಗಳನ್ನು ವಿಶೇಷವಾಗಿ ತಿಳಿಯುವುದಕ್ಕೆ ಜೀವ-ಅಜೀವದ ವಿಶೇಷ ಹಾಗೂ ಕರ್ಮದ ಆಸ್ರವ-ಬಂಧಾದಿಗಳ ವಿಶೇಷವನ್ನು ಅವಶ್ಯವಾಗಿ ತಿಳಿದುಕೊಳ್ಳುವುದು ಯೋಗ್ಯವಿದೆ, ಅವುಗಳಿಂದ ಸಮ್ಯಗ್ದರ್ಶನ-ಜ್ಞಾನದ ಪ್ರಾಪ್ತಿಯಾಗುವುದು.

ಇದಾದನಂತರ ರಾಗಾದಿಗಳನ್ನು ದೂರ ಮಾಡಬೇಕು. ಆ ರಾಗಾದಿಗಳು ವೃದ್ಧಿಸುವ ಕಾರಣಗಳನ್ನು ಬಿಟ್ಟುಕೊಟ್ಟು ಆ ರಾಗಾದಿಗಳು ಕಡಿಮೆಯಾಗುವ ಕಾರಣಗಳಿರುವಲ್ಲಿ ಉಪಯೋಗವನ್ನು ತೊಡಗಿಸಬೇಕು. ಆ ದ್ರವ್ಯಾದಿಗಳ ಮತ್ತು ಗುಣಸ್ಥಾನಾದಿಗಳ ವಿಚಾರವು ರಾಗಾದಿಗಳನ್ನು ಕಡಿಮೆ ಮಾಡುವ ಕಾರಣಗಳಿವೆ. ಇವುಗಳಲ್ಲಿ ಯಾವವೂ ರಾಗಾದಿಗಳಿಗೆ ನಿಮಿತ್ತವಾಗಿಲ್ಲ. ಆದುದರಿಂದ ಸಮ್ಯಗ್ದೃಷ್ಟಿಯಾದ ನಂತರವೂ ಕೂಡ ಇಲ್ಲಿಯೇ ಉಪಯೋಗ ತೊಡಗಿಸಬೇಕು.

**ಪ್ರಶ್ನೆ :-** ರಾಗಾದಿಗಳು ದೂರವಾಗುವ ಕಾರಣಗಳಿರುವಲ್ಲಿಯಂತೂ ಉಪಯೋಗ ತೊಡಗಿಸಬೇಕು, ಆದರೆ ತ್ರಿಲೋಕವರ್ತಿ ಜೀವಗಳ ಗತಿ ಮೊದಲಾದವುಗಳ ವಿಚಾರ ಮಾಡುವುದು; ಕರ್ಮದ ಬಂಧ, ಉದಯ, ಸತ್ತಾದಿಗಳನ್ನು ವಿಶೇಷ ತಿಳಿಯುವುದು ಮತ್ತು ತ್ರಿಲೋಕದ ಆಕಾರ ಪ್ರಮಾಣಾದಿಗಳನ್ನು ತಿಳಿಯುವುದು. ಇವೇ ಮೊದಲಾದ ವಿಚಾರಗಳು ಅದೆಷ್ಟು ಕಾರ್ಯಕಾರಿಯಿವೆ ?

**ಉತ್ತರ :-** ಇವುಗಳ ವಿಚಾರ ಮಾಡುವುದರಿಂದಲೂ ರಾಗಾದಿಗಳು ವೃದ್ಧಿಸುವುದಿಲ್ಲ, ಏಕೆಂದರೆ ಆ ಜ್ಞೇಯಗಳು ಇದಕ್ಕೆ ಇಷ್ಟ-ಅನಿಷ್ಟರೂಪಗಳಿಲ್ಲ, ಆದುದರಿಂದ ವರ್ತಮಾನರಾಗಾದಿಗಳಿಗೆ ಕಾರಣಗಳಿಲ್ಲ. ಅದರಂತೆ

ಇವನ್ನು ವಿಶೇಷ ತಿಳಿಯುವುದರಿಂದ ತತ್ತ್ವಜ್ಞಾನವು ನಿರ್ಮಲವಾಗುವುದು, ಅದಕ್ಕಾಗಿ ಮುಂಬರುವ ರಾಗಾದಿಗಳ ನಾಶಕ್ಕೆ ಕಾರಣಗಳೇ ಆಗಿರುವುದರಿಂದ ಕಾರ್ಯಕಾರಿಯಿವೆ.

**ಪ್ರಶ್ನೆ ಃ-** ಸ್ವರ್ಗ-ನರಕಾದಿಗಳನ್ನು ತಿಳಿಯುವುದರಲ್ಲಂತೂ ರಾಗ-ದ್ವೇಷಗಳೇ ಆಗುತ್ತವಲ್ಲವೇ ?

**ಉತ್ತರ ಃ-** ಜ್ಞಾನಿಗೆ ಇಂಥ ಬುದ್ಧಿಯಿರುವುದಿಲ್ಲ, ಅಜ್ಞಾನಿಗೆ ಇರುತ್ತದೆ. ಅಲ್ಲಿ ಪಾಪಕಾರ್ಯ ಬಿಟ್ಟುಕೊಟ್ಟು ಪುಣ್ಯಕಾರ್ಯದಲ್ಲಿ ತೊಡಗಿದರೆ ಒಂದಿಷ್ಟು ರಾಗಾದಿಗಳು ಕಡಿಮೆಯೇ ಆಗುತ್ತವೆ.

**ಪ್ರಶ್ನೆ ಃ-** ಪ್ರಯೋಜನಭೂತವಿರುವುದನ್ನು ಸ್ವಲ್ಪ ತಿಳಿದರೂ ಕಾರ್ಯಕಾರಿಯಿದೆಯೆಂದು ಶಾಸ್ತ್ರದಲ್ಲಿ ಉಪದೇಶವಿದೆ, ಆದುದರಿಂದ ಹೆಚ್ಚು ವಿಕಲ್ಪವನ್ನು ಏತಕ್ಕಾಗಿ ಮಾಡುವುದು ?

**ಉತ್ತರ ಃ-** ಯಾರು ಉಳಿದವುಗಳನ್ನು ಬಹಳಷ್ಟು ತಿಳಿಯುತ್ತಾರೆ ಮತ್ತು ಪ್ರಯೋಜನಭೂತವನ್ನು ತಿಳಿಯುವುದಿಲ್ಲ; ಅಥವಾ ಯಾರಿಗೆ ಹೆಚ್ಚು ತಿಳಿಯುವ ಶಕ್ತಿಯಿಲ್ಲ ಅವರಿಗೆ ಈ ಉಪದೇಶ ಕೊಡಲಾಗಿದೆ, ಮತ್ತು ಯಾರಿಗೆ ಹೆಚ್ಚು ತಿಳಿದುಕೊಳ್ಳುವ ಶಕ್ತಿಯಿದೆ ಅವರಿಗೆ ಹೆಚ್ಚು ತಿಳಿಯುವುದರಿಂದ ಕೆಡಕಾಗುತ್ತದೆಯೆಂದು ಹೇಳಿಲ್ಲ. ಎಷ್ಟು ಹೆಚ್ಚು ತಿಳಿಯುವುದು ಅಷ್ಟು ಪ್ರಯೋಜನಭೂತ ತಿಳಿವಳಿಕೆ ನಿರ್ಮಲವಾಗುವುದು, ಏಕೆಂದರೆ ಶಾಸ್ತ್ರದಲ್ಲಿ ಹೀಗೆ ಹೇಳಿದ್ದಾರೆ,-

**''ಸಾಮಾನ್ಯ ಶಾಸ್ತ್ರೋ ನೂನಂ ವಿಶೇಷೋ ಬಲವಾನ್ ಭವೇತ್''**

**ಅರ್ಥ ಃ-** ಸಾಮಾನ್ಯ ಶಾಸ್ತ್ರದಿಂದ ವಿಶೇಷವು ಬಲವಂತವಿದೆ, ವಿಶೇಷದಿಂದಲೇ ಒಳ್ಳೆಯ ರೀತಿಯಿಂದ ನಿರ್ಣಯವಾಗುವುದರಿಂದ ವಿಶೇಷ ತಿಳಿದುಕೊಳ್ಳುವುದು ಯೋಗ್ಯವಿದೆ.

ಮತ್ತು ಅವನು ತಪಶ್ಚರ್ಯವನ್ನು ವ್ಯರ್ಥಕ್ಲೇಶವೆಂದು ನಿಶ್ಚಯಿಸುತ್ತಾನೆ; ಆದರೆ ಮೋಕ್ಷಮಾರ್ಗಿಯಾದ ನಂತರ ಸಂಸಾರೀ ಜೀವಗಳಿಂದ ವಿರುದ್ಧ ಪರಿಣತಿಬೇಕು. ಸಂಸಾರಿಗಳಿಗೆ ಇಷ್ಟಾನಿಷ್ಟ ಸಾಮಗ್ರಿಗಳಿಂದ ರಾಗ-ದ್ವೇಷಗಳಾಗುತ್ತವೆ, ಇವನಿಗೆ ರಾಗ-ದ್ವೇಷಗಳಾಗಕೂಡದು. ಅಲ್ಲಿ ರಾಗ ಬಿಟ್ಟುಕೊಡುವ ಸಲುವಾಗಿ ಇಷ್ಟ ಸಾಮಗ್ರಿಗಳಾದ ಭೋಜನಾದಿಗಳ ತ್ಯಾಗಿಯಾಗುತ್ತಾನೆ. ಮತ್ತು ದ್ವೇಷ ಬಿಟ್ಟುಕೊಡುವ ಸಲುವಾಗಿ ಅನಿಷ್ಟ ಸಾಮಗ್ರಿಗಳಾದ ಅನಶನಾದಿಗಳನ್ನು ಅಂಗೀಕಾರ ಮಾಡುತ್ತಾನೆ. ಸ್ವಾಧೀನರೂಪದಿಂದ ಇಂಥ ಸಾಧನೆಯಾದರೆ ಪರಾಧೀನವಾದ ಇಷ್ಟಾನಿಷ್ಟ ಸಾಮಗ್ರಿಗಳು ದೊರಕಿದ ನಂತರವೂ ರಾಗ-ದ್ವೇಷಗಳಾಗುವುದಿಲ್ಲ, ಆಗುವುದಂತೂ ಹೀಗೆ ಆಗಬೇಕು; ಆದರೆ ನನಗೆ ಅನಶನಾದಿಗಳಿಂದ ದ್ವೇಷವಾಯಿತು, ಅದಕ್ಕಾಗಿ ಅದನ್ನು ಕ್ಲೇಶವೆಂದು ನಿಶ್ಚಯಿಸಿತು. ಇದು ಕ್ಲೇಶವಾದಾಗ ಭೋಜನಮಾಡುವುದು ಸುಖವೆಂದು ತಾನಾಗಿಯೇ ನಿಶ್ಚಯವಾಗುವುದು ಮತ್ತು ಅಲ್ಲಿ ರಾಗ ಬರುವುದು; ಆದರೆ ಇಂಥ ಪರಿಣತಿಯು ಸಂಸಾರಿಗಳಿಗೇನೇ ಕಂಡುಬರುತ್ತದೆ, ನೀನು ಮೋಕ್ಷಮಾರ್ಗಿಯಾಗಿ ಏನು ಮಾಡಿದೆ ?

**ಪ್ರಶ್ನೆ ಃ-** ಅದೆಷ್ಟೋ ಸಮ್ಯಗ್ದೃಷ್ಟಿಗಳು ಕೂಡ ತಪಶ್ಚರಣವನ್ನೇ ಮಾಡುವುದಿಲ್ಲವಲ್ಲ ?

**ಉತ್ತರ ಃ-** ಕಾರಣ ವಿಶೇಷದಿಂದ ತಪಸ್ಸು ಆಗುವುದಿಲ್ಲ, ಆದರೆ ಶ್ರದ್ಧೆಯಲ್ಲಂತೂ ತಪಸ್ಸನ್ನು ಒಳ್ಳೆಯದೆಂದು ತಿಳಿಯುತ್ತಾರೆ. ಮತ್ತು ಅದರ ಸಾಧನದ ಪ್ರಯತ್ನ ಮಾಡುತ್ತಿರುತ್ತಾರೆ. ನಿನಗಂತೂ ತಪಸ್ಸು ಮಾಡುವುದು

ಕ್ಲೇಶವೆಂಬ ಶ್ರದ್ಧೆಯಿದೆ, ಮತ್ತು ತಪಸ್ಸಿನ ಸಲುವಾಗಿ ನಿನ್ನ ಪ್ರಯತ್ನವಿಲ್ಲ, ಆದುದರಿಂದ ನಿನಗೆ ಸಮ್ಯಗ್ದೃಷ್ಟಿಯು ಹೇಗಿರುವುದು?

**ಪ್ರಶ್ನೆ :-** ತಪಸ್ಸು ಮೊದಲಾದ ಕ್ಲೇಶ ಮಾಡುತ್ತಿದ್ದರೆ ಮಾಡಿಕೊಳ್ಳಿರಿ, ಆದರೆ ಜ್ಞಾನವಿಲ್ಲದೆ ಸಿದ್ಧಿಯಿಲ್ಲವೆಂದು ಶಾಸ್ತ್ರದಲ್ಲಿ ಹೇಳಿದೆಯಲ್ಲವೇ ?

**ಉತ್ತರ :-** ಯಾರು ತತ್ತ್ವಜ್ಞಾನದಿಂದ ಪರಾಙ್ಮುಖರಿದ್ದಾರೆ, ತಪಸ್ಸಿನಿಂದಲೇ ಮೋಕ್ಷವಾಗುತ್ತದೆಂದು ಮನ್ನಿಸುತ್ತಾರೆ ಅವರಿಗೆ ತತ್ತ್ವಜ್ಞಾನವಿಲ್ಲದೆ ಕೇವಲ ತಪಸ್ಸಿನಿಂದಲೇ ಮೋಕ್ಷಮಾರ್ಗವಾಗುವುದಿಲ್ಲವೆಂಬ ಉಪದೇಶ ಕೊಡಲಾಗಿದೆ ಮತ್ತು ತತ್ತ್ವಜ್ಞಾನವಾದ ಮೇಲೆ ರಾಗಾದಿಗಳನ್ನು ದೂರಮಾಡುವ ಸಲುವಾಗಿ ತಪಸ್ಸು ಮಾಡುವುದರದಂತೂ ನಿಷೇಧವಿಲ್ಲ. ನಿಷೇಧವಿದ್ದರೆ ಗಣಧರಾದಿಗಳು ಏತಕ್ಕಾಗಿ ತಪಸ್ಸು ಮಾಡಿದರು ? ಆದುದರಿಂದ ತನ್ನ ಶಕ್ತಿಗನುಸರಿಸಿ ತಪಸ್ಸು ಮಾಡುವುದು ಯೋಗ್ಯವಿದೆ.

ಮತ್ತು ಅವನು ವ್ರತಾದಿಗಳನ್ನು ಬಂಧನವೆಂದು ಮನ್ನಿಸುತ್ತಾನೆ; ಆದರೆ ಸ್ವಚ್ಛಂದ ವೃತ್ತಿಯಂತೂ ಅಜ್ಞಾನ ಅವಸ್ಥೆಯಲ್ಲಿಯೇ ಇತ್ತು, ಜ್ಞಾನ ಪ್ರಾಪ್ತಮಾಡಿದ ಮೇಲಂತೂ ಪರಿಣತಿಯನ್ನು ನಿಲ್ಲಿಸುತ್ತಾನೆ. ಮತ್ತು ಆ ಪರಿಣತಿಯನ್ನು ನಿಲ್ಲಿಸುವ ಸಲುವಾಗಿ ಬಾಹ್ಯ ಹಿಂಸಾದಿ ಕಾರಣಗಳ ತ್ಯಾಗಿಯು ಅವಶ್ಯವಾಗಿ ಆಗಬೇಕಾಗುವುದು.

**ಪ್ರಶ್ನೆ :-** ನಮ್ಮ ಪರಿಣಾಮಗಳಂತೂ ಶುದ್ಧವಿವೆ; ಬಾಹ್ಯ ತಾಗ ಮಾಡದಿದ್ದರೆ ಮಾಡಲಿಲ್ಲ ಅದರಲ್ಲೇನಿದೆ?

**ಉತ್ತರ :-** ಈ ಹಿಂಸೆ ಮೊದಲಾದ ಕಾರ್ಯಗಳು ನಿನ್ನ ಪರಿಣಾಮವಿಲ್ಲದೆ ತಾವಾಗಿಯೇ ಆಗುತ್ತಿದ್ದರೆ ನಾವು ಹಾಗೆ ಮನ್ನಿಸುವೆವು. ಮತ್ತು ನೀನು ನಿನ್ನ ಪರಿಣಾಮದಿಂದ ಕಾರ್ಯಮಾಡುತ್ತಿದ್ದರೆ ಅಲ್ಲಿ ನಿನ್ನ ಪರಿಣಾಮವನ್ನು ಶುದ್ಧವೆಂದು ಹೇಗೆ ಹೇಳುವುದು ? ವಿಷಯ ಸೇವನೆ ಮೊದಲಾದ ಕ್ರಿಯೆಗಳು ಅಥವಾ ಪ್ರಮಾದರೂಪದ ಗಮನಾದಿ ಕ್ರಿಯೆಗಳು ಪರಿಣಾಮವಿಲ್ಲದೆ ಹೇಗೆ ಆಗುವವು ? ಆ ಕ್ರಿಯೆಗಳನ್ನಂತೂ ನೀನು ಸ್ವಯಂ ಪ್ರಯತ್ನಪೂರ್ವಕಮಾಡುತ್ತಿರುವೆ ಮತ್ತು ಅಲ್ಲಿ ಆಗುತ್ತಿರುವ ಹಿಂಸಾದಿಗಳನ್ನು ಗಣಿಸುವುದಿಲ್ಲ, ಪರಿಣಾಮವನ್ನು ಶುದ್ಧವೆಂದು ಮನ್ನಿಸುವೆ. ಆದರೆ ಇಂಥ ಮನ್ನಣೆಯಿಂದ ನಿನ್ನ ಪರಿಣಾಮಗಳು ಅಶುದ್ಧವಾಗಿಯೇ ಉಳಿಯುವವು.

**ಪ್ರಶ್ನೆ :-** ಪರಿಣಾಮಗಳನ್ನು ತಡೆಯಬೇಕು, ಬಾಹ್ಯ ಹಿಂಸಾದಿಗಳನ್ನೂ ಕಡಿಮೆ ಮಾಡಬೇಕು; ಆದರೆ ಪ್ರತಿಜ್ಞೆ ಸ್ವೀಕರಿಸುವಲ್ಲಿ ಬಂಧನವಾಗುತ್ತದೆ, ಆದುದರಿಂದ ಪ್ರತಿಜ್ಞಾರೂಪದ ವ್ರತಗಳನ್ನು ಅಂಗೀಕಾರ ಮಾಡಬಾರದಲ್ಲವೇ?

**ಉತ್ತರ :-** ಯಾವ ಕಾರ್ಯವನ್ನು ಮಾಡುವ ಆಶೆಯುಳಿದಿದೆ ಅದರ ಪ್ರತಿಜ್ಞೆ ತೆಗೆದುಕೊಳ್ಳುವುದಿಲ್ಲ. ಮತ್ತು ಆಶೆಯಿರುವುದರಿಂದ ರಾಗವು ಉಳಿಯುತ್ತದೆ. ಆ ರಾಗಭಾವದಿಂದ ಕಾರ್ಯ ಮಾಡದಿದ್ದರೂ ಕೂಡ ಅವಿರತಿಯಿಂದ ಕರ್ಮಬಂಧವಾಗುತ್ತಿರುತ್ತದೆ. ಆದುದರಿಂದ ಅವಶ್ಯವಾಗಿ ಪ್ರತಿಜ್ಞೆ ಮಾಡುವುದು ಯೋಗ್ಯವಿದೆ. ಮತ್ತು ಕಾರ್ಯ ಮಾಡುವ ಬಂಧನವಾದಲ್ಲದೆ ಪರಿಣಾಮವು ಹೇಗೆ ನಿಲ್ಲುವುದು ? ಪ್ರಯೋಜನ ಬಿದ್ದ ಮೇಲೆ ಪರಿಣಾಮವು ತದ್ರೂಪವಾಗಿ ಆಗಿಯೇ ಆಗುವುದು, ಮತ್ತು ಪ್ರಯೋಜನ ಬೀಳದಿದ್ದರೆ ಅದರ ಆಶೆಯು ಉಳಿಯುತ್ತದೆ; ಆದುದರಿಂದ ಪ್ರತಿಜ್ಞೆ ಸ್ವೀಕರಿಸುವುದು ಯೋಗ್ಯವಿದೆ.

**ಪ್ರಶ್ನೆ :-** ಎಂಥ ಉದಯ ಬರುತ್ತದೆ ಯಾರಿಗೆ ಗೊತ್ತು, ಪ್ರತಿಜ್ಞೆ ಸ್ವೀಕರಿಸಿದ ನಂತರ ಭಂಗವಾದರೆ ಮಹಾಪಾಪ ತಗಲುತ್ತದೆ. ಆದುದರಿಂದ ಪ್ರಾರಬ್ಧಕ್ಕನುಸರಿಸಿ ಯಾವ ಕಾರ್ಯ ಆಗುವುದಿದೆ ಅದು ಆಗಲಿ, ಪ್ರತಿಜ್ಞೆಯ ವಿಕಲ್ಪ ಮಾಡುವುದು ಬೇಡ ?

**ಉತ್ತರ :-** ಪ್ರತಿಜ್ಞೆ ಗ್ರಹಣ ಮಾಡುವಾಗ ಯಾವುದರ ಪಾಲನೆಯಾಗುವುದಿಲ್ಲವೆಂದು ತಿಳಿದುಬರುತ್ತದೆ ಆ ಪ್ರತಿಜ್ಞೆ ಸ್ವೀಕರಿಸಬಾರದು; ಪ್ರತಿಜ್ಞೆ ಸ್ವೀಕರಿಸುವಾಗಲೇ ಪ್ರಯೋಜನ ಬಿದ್ದಮೇಲೆ ಬಿಟ್ಟುಕೊಡಬಹುದೆಂಬ ಅಭಿಪ್ರಾಯವಿರಕೂಡದು, ಅಂಥ ಪ್ರತಿಜ್ಞೆಯು ಕಾರ್ಯಕಾರಿಯಾಗುವುದಿಲ್ಲ. **ಪ್ರತಿಜ್ಞೆಯನ್ನು ಗ್ರಹಣ ಮಾಡುವಾಗ ಮರಣಾಂತ ಪ್ರಸಂಗ ಬಂದರೂ ಬಿಡುವುದಿಲ್ಲವೆಂಬ ಪರಿಣಾಮವಿದ್ದರೇನೇ ಪ್ರತಿಜ್ಞೆ ಸ್ವೀಕರಿಸುವುದು ಯುಕ್ತವಿದೆ.** ಪ್ರತಿಜ್ಞೆಯನ್ನು ಮಾಡಿದಲ್ಲದೆ ಅವಿರತ ಸಂಬಂಧದಿಂದಾಗುವ ಬಂಧವು ದೂರವಾಗುವುದಿಲ್ಲ.

ಮುಂಬರುವ ಉದಯದ ಭಯದಿಂದ ಪ್ರತಿಜ್ಞೆ ತೆಗೆದುಕೊಳ್ಳದಿದ್ದರೆ ಉದಯವನ್ನು ವಿಚಾರಿಸುವುದರಿಂದ ಸಮಸ್ತ ಕರ್ತವ್ಯದ ನಾಶವಾಗುತ್ತದೆ. ಹೇಗೆಂದರೆ ತಮಗೆ ಪಚನವಾಗುವಷ್ಟು ಭೋಜನ ಮಾಡಬೇಕು. ಒಮ್ಮೊಮ್ಮೆ ಯಾರಿಗಾದರೂ ಭೋಜನದಿಂದ ಅಜೀರ್ಣವಾಗಿದ್ದರೆ ಮತ್ತು ಆ ಭಯದಿಂದ ಭೋಜನ ಮಾಡುವುದನ್ನು ಬಿಟ್ಟುಕೊಟ್ಟರೆ ಮರಣವೇ ಆಗುವುದು. ಅದೇ ಪ್ರಕಾರ ತನ್ನಿಂದ ಪಾಲನೆಯಾಗುವಷ್ಟು ಪ್ರತಿಜ್ಞೆ ಮಾಡಬೇಕು. ಎಂದಾದರೊಮ್ಮೆ ಯಾವನಾದರೂ ಪ್ರತಿಜ್ಞೆಯಿಂದ ಭ್ರಷ್ಟನಾಗಿದ್ದರೆ ಮತ್ತು ಆ ಭಯದಿಂದ ಪ್ರತಿಜ್ಞೆ ಮಾಡುವುದನ್ನು ಬಿಟ್ಟುಕೊಟ್ಟರೆ ಅಸಂಯಮಿಯೇ ಉಳಿಯುವನು. ಆದುದರಿಂದ ಸಾಧ್ಯವಿರುವ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು ಯೋಗ್ಯವಿದೆ.

ಮತ್ತು ಪ್ರಾರಬ್ಧಕ್ಕೆ ಅನುಸರಿಸಿ ಕಾರ್ಯವಂತೂ ಆಗಿಯೇ ಆಗುತ್ತದೆ. ನೀನು ಉದ್ಯಮಶೀಲನಾಗಿ ಭೋಜನಾದಿಗಳನ್ನು ಏತಕ್ಕಾಗಿ ಮಾಡುತ್ತಿರುವೆ ? ಅದರ ಉದ್ಯಮ ಮಾಡುತ್ತಿದ್ದರೆ ತ್ಯಾಗ ಮಾಡುವುದರ ಉದ್ಯಮವನ್ನೂ ಮಾಡುವುದು ಯೋಗ್ಯವೇ ಇದೆ. ಪ್ರತಿಮೆಯಂತೆ ನಿನ್ನ ಅವಸ್ಥೆಯಾಗಿ ಹೋದಾಗ ನಾವು ಪ್ರಾರಬ್ಧವನ್ನೇ ಮನ್ನಿಸುವೆವು, ನಿನ್ನ ಕರ್ತವ್ಯವನ್ನು ಮನ್ನಿಸಲಾರೆವು. ಆದುದರಿಂದ ಸ್ವಚ್ಛಂದವಾಗುವ ಯುಕ್ತಿಯನ್ನು ಏತಕ್ಕಾಗಿ ರಚಿಸುತ್ತಿರುವೆ ? ಸಾಧ್ಯವಿರುವ ಪ್ರತಿಜ್ಞೆಯನ್ನು ಮಾಡಿ ವ್ರತಧಾರಣ ಮಾಡುವುದು ಯೋಗ್ಯವೇ ಇದೆ.

ಅದರಂತೆ ಅವನು ಪೂಜಾದಿ ಕಾರ್ಯಗಳನ್ನು ಶುಭಾಸ್ರವವೆಂದು ತಿಳಿದುಕೊಂಡು ಹೇಯವೆಂದು ಮನ್ನಿಸುತ್ತಾನೆ, ಆದರೆ ಅದು ಸತ್ಯವೇ ಇದೆ; ಆದಾಗ್ಯೂ ಈ ಕಾರ್ಯಗಳನ್ನು ಬಿಟ್ಟುಕೊಟ್ಟು ಶುದ್ಧೋಪಯೋಗರೂಪ ವಾದರಂತೂ ಒಳ್ಳೆಯದೇ ಇದೆ, ಮತ್ತು ವಿಷಯ ಕಷಾಯರೂಪವಾಗಿ-ಅಶುಭರೂಪವಾಗಿ ಪ್ರವರ್ತಿಸಿದರೆ ತಮ್ಮದು ಕೆಡಕೇ ಆಗುವುದು.

ಶುಭೋಪಯೋಗದಿಂದ ಸ್ವರ್ಗಾದಿಗಳಾಗುವವು, ಅಥವಾ ಒಳ್ಳೆಯ ಭಾವನೆಯಿಂದ ಇಲ್ಲವೆ ಒಳ್ಳೆಯ ನಿಮಿತ್ತದಿಂದ ಕರ್ಮದ ಸ್ಥಿತಿ ಅನುಭಾಗಗಳು ಕಡಿಮೆಯಾದರೆ ಸಮ್ಯಕ್ತ್ವದ ಪ್ರಾಪ್ತಿಯೂ ಆಗಿ ಹೋಗುವುದು. ಮತ್ತು ಅಶುಭೋಪಯೋಗದಿಂದ ನರಕ-ನಿಗೋದಾದಿಗಳಾಗುವವು, ಅಥವಾ ಕೆಡಕು ಭಾವನೆಯಿಂದ ಇಲ್ಲವೆ

ಕೆಡಕು ನಿಮಿತ್ತದಿಂದ ಕರ್ಮದ ಸ್ಥಿತಿ ಅನುಭಾಗಗಳು ವೃದ್ಧಿಸಿಹೋದರೆ ಸಮ್ಯಕ್ತ್ವ ಮೊದಲಾದವು ಅತ್ಯಂತ ದುರ್ಲಭವಾಗಿ ಹೋಗುವವು.

ಅದರಂತೆ ಶುಭೋಪಯೋಗವಿರುವುದರಿಂದ ಕಷಾಯಗಳು ಮಂದವಾಗುತ್ತವೆ ಮತ್ತು ಅಶುಭೋಪಯೋಗ ವಿರುವುದರಿಂದ ತೀವ್ರವಾಗುತ್ತವೆ. ಆದರೆ ಮಂದಕಷಾಯದ ಕಾರ್ಯಬಿಟ್ಟು ತೀವ್ರ ಕಷಾಯದ ಕಾರ್ಯ ಮಾಡುವುದೆಂದರೆ ಕಹಿ ವಸ್ತುವನ್ನು ತಿನ್ನದೆ ವಿಷವನ್ನು ತಿಂದ ಹಾಗೆ ಇದೆ, ಆದುದರಿಂದ ಇದು ಅಜ್ಞಾನತೆಯಿದೆ.

**ಪ್ರಶ್ನೆ** :- ಶಾಸ್ತ್ರದಲ್ಲಿ ಶುಭಾಶುಭಗಳನ್ನು ಸಮಾನವೆಂದು ಹೇಳಿರುವುದರಿಂದ ನಮಗಂತೂ ವಿಶೇಷ ತಿಳಿಯುವುದು ಯೋಗ್ಯವಿಲ್ಲವಲ್ಲವೇ ?

**ಉತ್ತರ** :- ಯಾರು ಶುಭೋಪಯೋಗವನ್ನು ಮೋಕ್ಷದ ಕಾರಣವೆಂದು ಮನ್ನಿಸಿ ಉಪಾದೇಯವೆಂದು ಮನ್ನಿಸುತ್ತಾರೆ ಮತ್ತು ಶುದ್ಧೋಪಯೋಗವನ್ನು ಗುರುತಿಸುವುದಿಲ್ಲ ಅವರಿಗೆ ಶುಭ-ಅಶುಭಗಳೆರಡನ್ನು ಅಶುದ್ಧತೆಯ ಅಪೇಕ್ಷೆಯಿಂದ ಮತ್ತು ಬಂಧಕಾರಣದ ಅಪೇಕ್ಷೆಯಿಂದ ಸಮಾನವೆಂದು ತಿಳಿಸಿಕೊಡಲಾಗಿದೆ.

ಅದರಂತೆ ಶುಭ-ಅಶುಭದ ಪರಸ್ಪರ ವಿಚಾರ ಮಾಡಿದರೆ ಶುಭಭಾವಗಳಲ್ಲಿ ಕಷಾಯವು ಮಂದವಿರುವುದರಿಂದ ಅಲ್ಪಬಂಧವಾಗುತ್ತದೆ ಮತ್ತು ಅಶುಭಭಾವಗಳಲ್ಲಿ ಕಷಾಯವು ತೀವ್ರವಿರುವುದರಿಂದ ಅಧಿಕ ಬಂಧವಾಗುತ್ತದೆ ಈ ಪ್ರಕಾರ ವಿಚಾರ ಮಾಡಿದ ಮೇಲೆ ಅಶುಭದ ಅಪೇಕ್ಷೆಯಿಂದ ಶುಭವನ್ನು ಒಳ್ಳೆಯದೆಂದು ಸಿದ್ಧಾಂತದಲ್ಲಿ ಹೇಳಲಾಗುತ್ತದೆ. ಹೇಗೆಂದರೆ ರೋಗವು ಅಲ್ಪ ಅಥವಾ ಅಧಿಕವಿದ್ದರೂ ಅದು ಕೆಡಕೇ ಇದೆ, ಆದರೆ ಅಧಿಕ ರೋಗದ ಅಪೇಕ್ಷೆಯಿಂದ ಅಲ್ಪರೋಗನ್ನು ಒಳ್ಳೆಯದೆಂದೂ ಹೇಳಲಾಗುತ್ತದೆ.

ಆದುದರಿಂದ ಶುದ್ಧೋಪಯೋಗವಿಲ್ಲದಾಗ ಅಶುಭದಿಂದ ಬಿಡುಗಡೆ ಹೊಂದಿ ಶುಭದಲ್ಲಿ ಪ್ರವರ್ತಿಸುವುದು ಯೋಗ್ಯವಿದೆ; ಆದರೆ ಶುಭವನ್ನು ಬಿಟ್ಟುಕೊಟ್ಟು ಅಶುಭದಲ್ಲಿ ಪ್ರವರ್ತಿಸುವುದು ಯೋಗ್ಯವಿಲ್ಲ.

**ಪ್ರಶ್ನೆ** :- ಕಾಮಾದಿಗಳನ್ನು ಅಥವಾ ಕ್ಷುಧಾದಿಗಳನ್ನು ನಿವಾರಿಸುವ ಸಲುವಾಗಿ ಅಶುಭರೂಪದ ಪ್ರವೃತ್ತಿಯಂತೂ ಆದಲ್ಲದೆ ಇರಲಾರದು, ಮತ್ತು ಶುಭ ಪ್ರವೃತ್ತಿಯನ್ನು ಇಚ್ಛೆಮಾಡಿ ಮಾಡಬೇಕಾಗುತ್ತದೆ; ಜ್ಞಾನಿಗೆ ಇಚ್ಛೆಯು ಬೇಕಿಲ್ಲ, ಆದುದರಿಂದ ಶುಭದ ಉದ್ಯಮವನ್ನು ಮಾಡಕೂಡದಲ್ಲವೇ ?

**ಉತ್ತರ** :- ಶುಭ ಪ್ರವೃತ್ತಿಯಲ್ಲಿ ಉಪಯೋಗ ತೊಡಗಿಸುವುದರಿಂದ ಮತ್ತು ಅದರ ನಿಮಿತ್ತದಿಂದ ವಿರಕ್ತತೆಯು ವೃದ್ಧಿಸುವುದರಿಂದ ಕಾಮ ಮೊದಲಾದವು ಮಂದವಾಗುತ್ತವೆ ಮತ್ತು ಕ್ಷುಧಾದಿಗಳಲ್ಲಿ ಕೂಡ ಸಂಕ್ಲೇಶವು ಅಲ್ಪವಾಗುತ್ತದೆ. ಆದುದರಿಂದ ಶುಭೋಪಯೋಗದ ಅಭ್ಯಾಸ ಮಾಡಬೇಕು. ಉದ್ಯಮ ಮಾಡಿದ ಮೇಲೆ ಕೂಡ ಕಾಮಾದಿಗಳು ಹಾಗೂ ಕ್ಷುಧಾದಿಗಳು ತೊಂದರೆಗೊಳಿಸುತ್ತಿದ್ದರೆ ಅವುಗಳ ಸಲುವಾಗಿ ಕಡಿಮೆ ಪಾಪ ತಗಲುವಂಥದನ್ನು ಮಾಡಬೇಕು. ಆದರೆ ಶುಭೋಪಯೋಗವನ್ನು ಬಿಟ್ಟುಕೊಟ್ಟು ನಿಃಶಂಕವಾಗಿ ಪಾಪರೂಪದಿಂದ ಪ್ರವೃತ್ತಿ ಮಾಡುವುದಂತೂ ಯೋಗ್ಯವಿಲ್ಲ.

ಜ್ಞಾನಿಗೆ ಇಚ್ಛೆಯಿರುವುದಿಲ್ಲ. ಮತ್ತು ಶುಭೋಪಯೋಗವು ಇಚ್ಛೆಮಾಡುವುದರಿಂದ ಆಗುತ್ತದೆಯೆಂದು ನೀನು ಹೇಳುತ್ತಿರುವೆ ; ಆದರೆ ಯಾವ ಪ್ರಕಾರ ಒಬ್ಬ ಮನುಷ್ಯನು ಸ್ವಲ್ಪ ಮಾತ್ರವೂ ತನ್ನ ಹಣವನ್ನು ಕೊಡಲು

ಇಷ್ಟ ಪಡುವುದಿಲ್ಲ, ಆದರೆ ಯಾವಾಗ ಅಧಿಕ ಹೋಗುತ್ತದೆಂದು ತಿಳಿದು ಬರುತ್ತದೆ ಆಗ ತನ್ನ ಇಚ್ಛೆಯಿಂದಲೇ ಅಲ್ಪ ಹಣ ಕೊಡುವ ಉಪಾಯ ಮಾಡುತ್ತಾನೆ; ಅದೇ ಪ್ರಕಾರ ಜ್ಞಾನಿಯು ಸ್ವಲ್ಪ ಮಾತ್ರವೂ ಕಷಾಯರೂಪದ ಕಾರ್ಯಮಾಡಲು ಇಷ್ಟಪಡುವುದಿಲ್ಲ, ಆದರೆ ಯಾವಾಗ ಅಧಿಕಕಷಾಯರೂಪದ ಅಶುಭಕಾರ್ಯವಾಗುತ್ತದೆಂದು ತಿಳಿಯುತ್ತಾನೆ ಆಗ ಇಚ್ಛಾಪೂರ್ವಕವಾಗಿ ಅಲ್ಪಕಷಾಯರೂಪದ ಶುಭಕಾರ್ಯ ಮಾಡುವ ಉದ್ಯಮ ಮಾಡುತ್ತಾನೆ.

ಈ ಪ್ರಕಾರ ಎಲ್ಲಿ ಶುದ್ಧೋಪಯೋಗವಾಗುತ್ತದೆಂದು ತಿಳಿದುಬರುತ್ತದೆ ಅಲ್ಲಿಯಂತೂ ಶುಭಕಾರ್ಯದ ನಿಷೇಧವೇ ಇದೆ, ಮತ್ತು ಎಲ್ಲಿ ಅಶುಭೋಪಯೋಗವಾಗುತ್ತದೆಂದು ತಿಳಿದು ಬರುತ್ತದೆ ಅಲ್ಲಿ ಶುಭದ ಉಪಾಯ ಮಾಡಿ ಅಂಗೀಕಾರ ಮಾಡುವುದು ಯೋಗ್ಯವಿದೆಯೆಂಬ ಮಾತು ಸಿದ್ಧವಾಯಿತು.

ಹೀಗೆಯೇ ಅನೇಕ ವ್ಯವಹಾರ ಕಾರ್ಯಗಳ ಉತ್ಥಾಪನೆ ಮಾಡಿ ಸ್ವಚ್ಛಂದತೆಯನ್ನು ಸ್ಥಾಪಿಸಲಾಗುತ್ತದೆ. ಅದರ ನಿಷೇಧ ಮಾಡಲಾಯಿತು.

### ಕೇವಲ ನಿಶ್ಚಯಾಭಾಸವನ್ನವಲಂಬಿಸಿದ ಜೀವದ ಪ್ರವೃತ್ತಿ :-

ಈಗ ಕೇವಲ ನಿಶ್ಚಯಾವಲಂಬಿಯಾದ ಜೀವದ ಪ್ರವೃತ್ತಿಯನ್ನು ತಿಳಿಸಿಕೊಡುತ್ತಾರೆ.

ಓರ್ವ ಶುದ್ಧಾತ್ಮನನ್ನು ತಿಳಿಯುವುದರಿಂದ ಜ್ಞಾನಿಯಾಗಿ ಹೋಗುತ್ತಾರೆ ಬೇರೇನೂ ಬೇಕಿಲ್ಲವೆಂದು ತಿಳಿದುಕೊಂಡು ಒಮ್ಮೊಮ್ಮೆ ಏಕಾಂತದಲ್ಲಿ ಕುಳಿತುಕೊಂಡು ಧ್ಯಾನಮುದ್ರೆಯನ್ನು ಧಾರಣಮಾಡಿ 'ನಾನು ಸಮಸ್ತ ಕರ್ಮೋಪಾಧಿಯಿಂದ ರಹಿತನಾಗಿ ಸಿದ್ಧಸಮಾನ ಆತ್ಮನಿದ್ದೇನೆ'ಂಬ ವಿಚಾರದಿಂದ ಸಂತುಷ್ಟನಾಗುತ್ತಾನೆ; ಆದರೆ ಈ ವಿಶೇಷಣವು ಹೇಗೆ ಸಂಭವವಿದೆಯೆಂದು ವಿಚಾರ ಮಾಡುವುದಿಲ್ಲ. ಅಥವಾ ಅಚಲ, ಅಖಂಡ, ಅನುಪಮ ಮೊದಲಾದ ವಿಶೇಷಣಗಳಿಂದ ಆತ್ಮನನ್ನು ಧ್ಯಾನಿಸುತ್ತಾನೆ; ಆದರೆ ಈ ವಿಶೇಷಗಳು ಅನ್ಯದ್ರವ್ಯಗಳಲ್ಲಿ ಕೂಡ ಸಂಭವಿಸುತ್ತವೆ. ಮತ್ತು ಈ ವಿಶೇಷಣಗಳು ಯಾವ ಅಪೇಕ್ಷೆಯಿಂದಿವೆಯೆಂಬುದರ ವಿಚಾರವಿಲ್ಲ. ಅಲ್ಲದೆ ಒಮ್ಮೊಮ್ಮೆ ಮಲಗುವಾಗ ಕೂಡ್ರುವಾಗ ಯಾವುದೇ ಅವಸ್ಥೆಯಲ್ಲಿ ಇಂಥ ವಿಚಾರವನ್ನಿಟ್ಟುಕೊಂಡು ತನ್ನನ್ನು ಜ್ಞಾನಿಯೆಂದು ಮನ್ನಿಸುತ್ತಾನೆ.

ಅದರಂತೆ ಜ್ಞಾನಿಗೆ ಆಸ್ರವ-ಬಂಧಗಳಿಲ್ಲವೆಂದು ಆಗಮದಲ್ಲಿ ಹೇಳಿದೆ; ಆದುದರಿಂದ ಒಮ್ಮೊಮ್ಮೆ ವಿಷಯಕಷಾಯ ರೂಪನಾಗುತ್ತಾನೆ, ಏಕೆಂದರೆ ಬಂಧವಾಗುವ ಭಯವಿಲ್ಲ, ಅದರಿಂದ ಸ್ವಚ್ಛಂದನಾಗಿ ರಾಗಾದಿಗಳ ರೂಪದಿಂದ ಪ್ರವರ್ತಿಸುತ್ತಾನೆ.

ಆದರೆ ಸ್ವ-ಪರಗಳನ್ನು ತಿಳಿದುಕೊಳ್ಳುವುದರ ಚಿಹ್ನವಂತೂ ವೈರಾಗ್ಯಭಾವವಿದೆ. ಅದನ್ನೇ ಸಮಯಸಾರದಲ್ಲಿ ಹೇಳಿದೆ,-

**'ಸಮ್ಯಗ್ದೃಷ್ಟೇರ್ಭವತಿ ನಿಯತಂ ಜ್ಞಾನ ವೈರಾಗ್ಯಜ್ಞಾನಶಕ್ತಿಃ-'** ★ಎಂದರೆ ಸಮ್ಯಗ್ದೃಷ್ಟಿಗೆ ನಿಶ್ಚಯದಿಂದ-ಜ್ಞಾನ-ವೈರಾಗ್ಯಗಳ ಶಕ್ತಿಯಿರುತ್ತದೆ. ಮತ್ತೇ ಹೇಳುತ್ತಾರೆ-

★ ಸಮ್ಯಗ್ದೃಷ್ಟೇರ್ಭವತಿ ನಿಯತಂ ಜ್ಞಾನವೈರಾಗ್ಯಶಕ್ತಿಃ, ಸ್ವಂ ವಸ್ತುತ್ವಂ ಕಲಯಿತುಮಯಂ ಸ್ವಾನ್ಯರೂಪಾಪ್ತಿ ಮುಕ್ತ್ಯಾ ।
ಯಸ್ಮಾಜ್ಞಾತ್ವಾವ್ಯತಿಕರಮಿದಂ ತತ್ತ್ವ ತಃ ಸ್ವಂ ಪರಂ ಚ, ಸ್ವಸ್ಮಿನ್ನಾಸ್ತೇ ವಿರಮತಿ ವರಾತ್ಸರ್ವತೋ ರಾಗಯೋಗಾತ್ ॥೧೩೬॥

**ಸಮ್ಯಗ್ದೃಷ್ಟಿಃ ಸ್ವಯಮಯಮಹಂ ಜಾತು ಬಂಧೋ ನ ಮೇ ಸ್ಯಾ -**
**ದಿತ್ಯುತ್ತಾನೋತ್ಪುಲಕವದನಾ ರಾಗಿಣೋಽಪ್ಯಾಚರಂತು ।**
**ಆಲಂಬತಾಂ ಸಮಿತಿ ಪರತಾಂ ತೇ ಯತೋ ದ್ಯಾಪಿ ಪಾಪಾ**
**ಆತ್ಮಾನಾತ್ಮಾವಗಮವಿರಹಾತ್ಸಂತಿ ಸಮ್ಯಕ್ತ್ವ ಶೂನ್ಯಾಃ ॥137॥**

**ಅರ್ಥ :-** ಈ ನಾನು ಸ್ವಯಂ ಸಮ್ಯಗ್ದೃಷ್ಟಿಯಿದ್ದೇನೆ, ನನಗೆಂದೂ ಬಂಧವಿಲ್ಲವೆಂದು ಅಭಿಮಾನದಿಂದ ಮೊಗವೆತ್ತಿಕೊಂಡವರು-ರಾಗಯುಕ್ತರು ವೈರಾಗ್ಯಶಕ್ತಿಯಿಂದ ರಹಿತರಾಗಿ ಆಚರಣೆ ಮಾಡುತ್ತಿದ್ದರೆ ಮಾಡಲಿ, ಮತ್ತು ಐದು ಸಮಿತಿಗಳ ಸಾವಧಾನತೆಯ ಅವಲಂಬನ ಪಡೆಯುತ್ತಿದ್ದರೆ ಪಡೆಯಲಿ; ಆದರೆ ಅವರು ಜ್ಞಾನಶಕ್ತಿಯಿಲ್ಲದೆ ಇಂದು ಕೂಡ ಪಾಪಿಗಳೇ ಇದ್ದಾರೆ; ಇವರೀರ್ವರು ಆತ್ಮ-ಅನಾತ್ಮನ ಜ್ಞಾನರಹಿತತೆಯಿಂದ ಸಮ್ಯಕ್ತ್ವದಿಂದ ರಹಿತರಾಗಿಯೇ ಇದ್ದಾರೆ.

**ಪ್ರಶ್ನೆ :-** ಪರವನ್ನು ಪರವೆಂದು ತಿಳಿದರೆ ಪರದ್ರವ್ಯಗಳಲ್ಲಿ ರಾಗಾದಿಗಳನ್ನು ಮಾಡುವ ಪ್ರಯೋಜನವೇನು ಉಳಿಯಿತೆಂದು ಕೇಳಿದರೆ ಮೋಹದ ಉದಯದಿಂದ ರಾಗಾದಿಗಳಾಗುತ್ತವೆಂದು ಹೇಳುತ್ತಾನೆ, ಪೂರ್ವಕಾಲದಲ್ಲಿ ಭರತ ಮೊದಲಾದ ಜ್ಞಾನಿಗಳಾಗಿದ್ದಾರೆ ಅವರಿಗೂ ವಿಷಯ-ಕಷಾಯರೂಪದ ಕಾರ್ಯಗಳಾಗುತ್ತಿದ್ದುವೆಂದು ಕೇಳುತ್ತೇವೆ.

**ಉತ್ತರ :- ಜ್ಞಾನಿಗೆ ಕೂಡ ಮೋಹದ ಉದಯದಿಂದ ರಾಗಾದಿಗಳಾಗುತ್ತವೆಂಬುದು ಸತ್ಯವಿದೆ; ಆದರೆ ರಾಗಾದಿಗಳು ಬುದ್ಧಿಪೂರ್ವಕವಾಗಿ ಆಗುವುದಿಲ್ಲ. ಇದರ ವಿಶೇಷ ವರ್ಣನೆಯನ್ನು ಮುಂದೆ ಮಾಡಲಾಗುವುದು.**

ಅಲ್ಲದೆ ರಾಗಾದಿಗಳಾಗುವ ಕುರಿತು ಸ್ವಲ್ಪವೂ ವಿಷಾದವಿಲ್ಲದವನಿಗೆ ನಾಶದ ಉಪಾಯವೂ ಇರುವುದಿಲ್ಲ, ಅವನಿಗೆ ರಾಗಾದಿಗಳು ಕೆಡಕಿವೆಯೆಂಬ ಶ್ರದ್ಧೆಯೂ ಸಂಭವಿಸುವುದಿಲ್ಲ, ಮತ್ತು ಇಂಥ ಶ್ರದ್ಧೆಯಿಲ್ಲದೆ ಸಮ್ಯಗ್ದೃಷ್ಟಿ ಹೇಗಾಗುವ ಸಾಧ್ಯತೆಯಿದೆ ? ಜೀವ-ಅಜೀವ ಮೊದಲಾದ ತತ್ತ್ವಗಳ ಶ್ರದ್ಧೆ ಮಾಡುವುದರ ಪ್ರಯೋಜನವಂತೂ ಇಷ್ಟು ಶ್ರದ್ಧೆಯೇ ಇದೆ.

**ಮತ್ತು ಭರತಮೊದಲಾದ ಸಮ್ಯಗ್ದೃಷ್ಟಿಗಳಿಗೆ ವಿಷಯ-ಕಷಾಯಗಳ ಪ್ರವೃತ್ತಿಯು ಹೇಗಿರುತ್ತದೆಂಬುದನ್ನು ವಿಶೇಷರೂಪದಿಂದ ಮುಂದೆ ಹೇಳುವೆವು.** ನೀನು ಅವರ ಉದಾಹರಣೆಯಿಂದ ಸ್ವಚ್ಛಂದನಾದರೆ ನಿನಗೆ ತೀವ್ರ ಆಸ್ರವ-ಬಂಧವಾಗುವುದು. ಅದನ್ನೇ ಸಮಯಸಾರದಲ್ಲಿ ಹೇಳಿದ್ದಾರೆ,-

**'ಮಗ್ನಾ ಜ್ಞಾನನಯೈಷಿಣೋಽಪಿ ಯದತಿಸ್ವಚ್ಛಂದ ಮಂದೋದ್ಯಮಃ'★**- ಎಂದರೆ ಜ್ಞಾನನಯದ ಅವಲೋಕನ ಮಾಡುವಂಥವರೂ ಸ್ವಚ್ಛಂದ ಮಂದೋದ್ಯಮಿಗಳಾದರೆ ಅವರು ಸಂಸಾರದಲ್ಲಿ ಮುಳುಗುತ್ತಾರೆ.

★ ಮಗ್ನಾಃ ಕರ್ಮನಯಾವಲಂಬನಪರಾ ಜ್ಞಾನಂ ನ ಜಾನಂತಿ ಯತ್, ಮಗ್ನಾ ಜ್ಞಾನನಯೈಷಿಣೋಽಪಿ ಯದತಿಸ್ವಚ್ಛಂದಮಂದೋದ್ಯಮಃ ।
ವಿಶ್ವಸ್ಯೋಪರಿ ತೇ ತರಂತಿ ಸತತಂ ಜ್ಞಾನಂ ಭವಂತಃ ಸ್ವಯಂ, ಯೇ ಕುರ್ವಂತಿ ನ ಕರ್ಮ ಜಾತು ನ ವಶಂ ಯಾಂತಿ ಪ್ರಮಾದಸ್ಯ ಚ ॥

ಅದರಂತೆ **'ಜ್ಞಾನಿನ್ ಕರ್ಮ ನ ಜಾತು ಕರ್ತುಮುಚಿತಂ'★** ಇತ್ಯಾದಿ ಕಲಶದಲ್ಲಿ ಮತ್ತು **'ತಥಾಪಿ ನ ನಿರರ್ಗಲಂ ಚರಿತುಮಿಷ್ಯತೇ ಜ್ಞಾನಿನಃ'★★** ಇತ್ಯಾದಿ ಕಲಶದಲ್ಲಿ ಸ್ವಚ್ಛಂದಿಯಾಗುವ ನಿಷೇಧ ಮಾಡಿದೆ. ಇಚ್ಛೆಯಿಲ್ಲದ ಕಾರ್ಯವು ಅದು ಕರ್ಮ ಬಂಧದ ಕಾರಣವಿಲ್ಲ. ಅಭಿಪ್ರಾಯದಿಂದ ಕರ್ತೃವಾಗಿ ಮಾಡುವುದು ಮತ್ತು ಜ್ಞಾತಾನಾಗಿ ಇರುವುದಂತೂ ಸಂಭವಿಸುವುದಿಲ್ಲ. ಇತ್ಯಾದಿ ನಿರೂಪಣೆ ಮಾಡಲಾಗಿದೆ.

ಆದುದರಿಂದ ರಾಗಾದಿಗಳನ್ನು ಅನಿಷ್ಟ-ಅಹಿತಕರವೆಂದು ತಿಳಿದುಕೊಂಡು ಅವುಗಳ ನಾಶದ ಸಲುವಾಗಿ ಪ್ರಯತ್ನಿಸಬೇಕು.

ಅನುಕ್ರಮದಿಂದ ಮೊದಲು ತೀವ್ರರಾಗಾದಿಗಳನ್ನು ಬಿಡುವ ಸಲುವಾಗಿ ಅಶುಭಕಾರ್ಯಗಳನ್ನು ಬಿಟ್ಟು ಶುಭದಲ್ಲಿ ತೊಡಗಬೇಕು, ಅನಂತರ ಮಂದರಾಗಾದಿಗಳನ್ನೂ ಬಿಡುವ ಸಲುವಾಗಿ ಶುಭವನ್ನು ಕೂಡ ಬಿಟ್ಟುಕೊಟ್ಟು ಶುದ್ಧೋಪಯೋಗರೂಪನಾಗಬೇಕು.

ಅದರಂತೆ ಎಷ್ಟೋ ಜನರು ಅಶುಭದಲ್ಲಿ ಕ್ಲೇಶವಿದೆಯೆಂದು ನಂಬಿ ವ್ಯಾಪಾರ ಮೊದಲಾದ ಕಾರ್ಯ ಹಾಗೂ ಸ್ತ್ರೀಸೇವನೆ ಮೊದಲಾದ ಕಾರ್ಯಗಳನ್ನೂ ಕಡಿಮೆಮಾಡುತ್ತಾರೆ ಮತ್ತು ಶುಭವನ್ನು ಹೇಯವೆಂದು ತಿಳಿದುಕೊಂಡು ಶಾಸ್ತ್ರಾಭ್ಯಾಸ ಮೊದಲಾದ ಕಾರ್ಯಗಳಲ್ಲಿ ಪ್ರವರ್ತಿಸುವುದಿಲ್ಲ, ವೀತರಾಗಭಾವರೂಪವಾದ ಶುದ್ಧೋಪಯೋಗಕ್ಕೆ ಪ್ರಾಪ್ತರಾಗಿಲ್ಲ; ಆದುದರಿಂದ ಆ ಜನರು ಅರ್ಥ, ಕಾಮ, ಧರ್ಮ ಮತ್ತು ಮೋಕ್ಷರೂಪದ ಪುರುಷಾರ್ಥದಿಂದ ರಹಿತರಾಗುತ್ತ ಸೋಮಾರಿಗಳು-ನಿರುದ್ಯೋಗಿಗಳು ಆಗುತ್ತಾರೆ.

ಅವರ ನಿಂದೆಯನ್ನು ಪಂಚಾಸ್ತಿಕಾಯದ ನೂರಾಎಪ್ಪತ್ತೆರಡನೆಯ ಗಾಥೆಯ ಟೀಕೆಯಲ್ಲಿ ಮಾಡಲಾಗಿದೆ. ಅವರ ಸಲುವಾಗ ದೃಷ್ಟಾಂತಕೊಡುತ್ತಾರೆ-ಹೇಗೆ ಪುರುಷನು ಹೆಚ್ಚು ಸಕ್ಕರೆ ಮಿಶ್ರಿತ ಪಾಯಸ ತಿಂದು ಆಲಸಿಯಾಗುತ್ತಾನೆ ಮತ್ತು ವೃಕ್ಷವು ಹೇಗೆ ನಿರುದ್ಯಮಿಯಿರುತ್ತದೆ ಹಾಗೆ ಅವರು ಕೂಡ ಆಲಸಿ ಮತ್ತು ನಿರುದ್ಯೋಗಿಗಳಾಗಿದ್ದಾರೆ.

**ಪ್ರಶ್ನೆ:-** ನೀವು ಬಾಹ್ಯದಲ್ಲಂತೂ ಶುಭಾಶುಭಕಾರ್ಯಗಳನ್ನು ಕಡಿಮೆಮಾಡಿದಿರಿ, ಆದರೆ ಉಪಯೋಗವು ಅವಲಂಬನೆಯಿಲ್ಲದೆ ಇರುವುದಿಲ್ಲ; ಆಗ ನಿಮ್ಮ ಉಪಯೋಗವು ಎಲ್ಲಿರುತ್ತದೆಂಬುದನ್ನು ಹೇಳಿರಿ ?

**ಉತ್ತರ :-** ಆತ್ಮನ ಚಿಂತನೆ ಮಾಡುತ್ತೇನೆಂದು ಹೇಳಬಹುದು, ಆದರೆ ಶಾಸ್ತ್ರಾದಿಗಳ ಮೂಲಕ ಅನೇಕ ಪ್ರಕಾರದಿಂದ ಆತ್ಮನ ವಿಚಾರ ಮಾಡುವುದಕ್ಕೆ ವಿಕಲ್ಪವೆಂದು ನೀವೇ ಹೇಳಿದ್ದೀರಿ, ಮತ್ತು ಆತ್ಮನ ಯಾವುದೇ ವಿಶೇಷಣವನ್ನು ತಿಳಿಯುವಲ್ಲಿ ಹೆಚ್ಚು ಸಮಯಬೇಕಾಗುವುದಿಲ್ಲ, ಪುನಃ ಪುನಃ ಏಕರೂಪವಾದ ಚಿಂತನದಲ್ಲಿ ಛದ್ಮಸ್ಥನ ಉಪಯೋಗವು ತಗಲುವುದಿಲ್ಲ, ಗಣಧರಾದಿಗಳ ಉಪಯೋಗವು ಕೂಡ ಈ ಪ್ರಕಾರ ಉಳಿಯುವ ಸಾಧ್ಯತೆಯಿಲ್ಲ, ಆದುದರಿಂದ ಅವರು ಕೂಡ ಶಾಸ್ತ್ರಾದಿಗಳ ಕಾರ್ಯಗಳಲ್ಲಿ ಪ್ರವರ್ತಿಸುತ್ತಾರೆ, ನಿಮ್ಮ ಉಪಯೋಗವು ಗಣಧರರುಗಳಿಗಿಂತಲೂ ಶುದ್ಧವಾಗಿದೆಯೆಂದು ಹೇಗೆ ಮನ್ನಿಸುವುದು ? ಆದುದರಿಂದ ನಿನ್ನ ಹೇಳಿಕೆಯು ನಂಬಲರ್ಹವಾಗಿಲ್ಲ.

★ ಜ್ಞಾನಿನ್ ಕರ್ಮ ನ ಜಾತು ಕರ್ತುಮುಚಿತಂ ಕಿಂಚಿತ್ತಥಾಪ್ಯುಚ್ಯತೇ, ಭುಂಕ್ಷೇಹಂತ ನ ಜಾತುಮೇ ಯದಿ ಪರಂ ದುರ್ಭುಕ್ತ ಏವಾಸಿ ಭೋಃ ।
ಬಂಧಃಸ್ಯಾದುಪಭೋಗತೋ ಯದಿ ನ ತತ್ಕಿಂಕಾಮಚಾರೋಽಸ್ತಿ ತೇ, ಜ್ಞಾನಂಸನ್ವಸ ಬಂಧಮೇಷ್ಯ ಪರಥಾ ಸ್ವಸ್ಯಾಪರಾಧಾದ್ ಧ್ರುವಮ್ ॥೧೫೧॥

★★ ತಥಾಪಿ ನ ನಿರರ್ಗಲಂ ಚರಿತುಮಿಷ್ಯತೇ ಜ್ಞಾನಿನಾಂ ತದಾಯತನಮೇವ ಸಾ ಕಿಲ ನಿರರ್ಗಲಾ ವ್ಯಾಪೃತಿಃ ।
ಅಕಾಮಕೃತಕರ್ಮ ತನ್ಮತಮಕಾರಣಂ ಜ್ಞಾನಿನಾಂ ದ್ವಯಂ ನ ಹಿ ವಿರುಧ್ಯತೇ ಕಿಮುಕರೋತಿ ಜಾನಾತಿ ಚ ॥೧೬೬॥-ಸಮಯಸಾರ ಕಲಶ

ಯಾವ ಪ್ರಕಾರ ಒಬ್ಬನು ವ್ಯಾಪಾರದಲ್ಲಿ ನಿರುದ್ಯಮಿಯಾಗಿ ಹಾಗೆ-ಹೀಗೆ ವ್ಯರ್ಥಕಾಲ ಕಳೆಯುತ್ತಾನೆ, ಅದೇ ಪ್ರಕಾರ ನೀನು ಧರ್ಮದಲ್ಲಿ ನಿರುದ್ಯಮಿಯಾಗಿ ಅಜಾಗರೂಕತೆಯಿಂದ ಸುಮ್ಮನೆ ಕಾಲ ಕಳೆಯುತ್ತಿರುವೆ. ಒಮ್ಮೆ ಚಿಂತನೆ ಮಾಡಿದಂತೆ ನಟಿಸುವೆ, ಒಮ್ಮೆ ಹರಟೆ ಹೊಡೆಯುವೆ, ಒಮ್ಮೆ ಭೋಜನಾದಿಗಳಲ್ಲಿ ಮಗ್ನನಾಗುವೆ; ಆದರೆ ನಿನ್ನ ಉಪಯೋಗವನ್ನು ನಿರ್ಮಲ ಮಾಡುವ ಸಲುವಾಗಿ ಶಾಸ್ತ್ರಾಭ್ಯಾಸ, ತಪಶ್ಚರಣ, ಭಕ್ತಿ ಮೊದಲಾದ ಕಾರ್ಯಗಳಲ್ಲಿ ಪ್ರವರ್ತಿಸುವುದಿಲ್ಲ. ಶೂನ್ಯದಂತೆ ಪ್ರಮಾದಿಯಾಗುವುದರ ಹೆಸರು ಶುದ್ಧೋಪಯೋಗವೆಂದು ನಿರ್ಧರಿಸುವೆ. ಅಲ್ಲಿ ಅಲ್ಪಕ್ಲೇಶವಿರುವುದರಿಂದ ಹೇಗೆ ಓರ್ವನು ಆಲಸಿಯಾಗಿ ಬಿದ್ದುಕೊಂಡಿರುವಲ್ಲಿ ಸುಖವೆಂದು ಮನ್ನಿಸುತ್ತಾನೆ ಹಾಗೆ ಆನಂದ ಮನ್ನಿಸುತ್ತಿರುವೆ.

ಅಥವಾ ಯಾವನೋ ಓರ್ವನು ಸ್ವಪ್ನದಲ್ಲಿ ತನ್ನನ್ನು ದೊರೆಯೆಂದು ಮನ್ನಿಸಿ ಸುಖಿಯಾಗುವಂತೆ ಭ್ರಾಂತಿಯಿಂದ ತಮ್ಮನ್ನು ಸಿದ್ಧಸಮಾನ ಶುದ್ಧವೆಂದು ಮನ್ನಿಸಿ ಸ್ವಯಂ ಆನಂದಿತರಾಗುತ್ತಾರೆ. ಅಥವಾ ಎಲ್ಲಿಯೋ ರತಿಯೆಂದು ಮನ್ನಿಸಿ ಸುಖಿಯಾಗುವಂತೆ ಯಾವುದೋ ವಿಚಾರ ಮಾಡುವಲ್ಲಿ ರತಿಯೆಂದು ಮನ್ನಿಸಿ ಸುಖಿಯಾಗುತ್ತಾನೆ ಮತ್ತು ಅದನ್ನು ಅನುಭವಜನ್ಯ ಆನಂದವೆಂದು ಹೇಳುತ್ತಾನೆ. ಇನ್ನು ಎಲ್ಲಿಯೋ ಅರತಿಯೆಂದು ಮನ್ನಿಸಿ ಉದಾಸನಾಗುವಂತೆ ವ್ಯಾಪಾರಾದಿಗಳನ್ನು-ಪುತ್ರಾದಿಕರನ್ನು ಖೇದದ ಕಾರಣವೆಂದು ತಿಳಿದುಕೊಂಡು ಅವರಿಂದ ಉದಾಸನಿರುತ್ತಾನೆ ಮತ್ತು ಅದನ್ನು ವೈರಾಗ್ಯವೆಂದು ಮನ್ನಿಸುತ್ತಾನೆ; ಆದರೆ ಇಂಥ ಜ್ಞಾನ-ವೈರಾಗ್ಯಗಳು ಕಷಾಯಗರ್ಭಿತವಿವೆ. ವೀತರಾಗರೂಪವಾದ ಉದಾಸೀನದಶೆಯಲ್ಲಿ ಆಗುವ ನಿರಾಕುಲತೆಯೇ ನಿಜವಾದ ಆನಂದ, ಜ್ಞಾನ, ವೈರಾಗ್ಯವು ಜ್ಞಾನೀ ಜೀವರುಗಳಿಗೆ ಚಾರಿತ್ರಮೋಹದ ಹೀನತೆಯಾದ ಮೇಲೆ ಪ್ರಕಟವಾಗುತ್ತದೆ.

ಅದರಂತೆ ಅವನು ವ್ಯಾಪಾರ ಮೊದಲಾದ ಕ್ಲೇಶಗಳನ್ನು ಬಿಟ್ಟುಕೊಟ್ಟು ಯಥೇಚ್ಛವಾದ ಭೋಜನಾದಿಗಳಿಂದ ಸುಖಿಯಾಗುವನೆಂಬಂತೆ ಪ್ರವರ್ತಿಸುತ್ತಾನೆ, ಮತ್ತು ಅಲ್ಲಿ ತನ್ನನ್ನು ಕಷಾಯರಹಿತನೆಂದು ಮನ್ನಿಸುತ್ತಾನೆ; ಆದರೆ ಈ ಪ್ರಕಾರ ಆನಂದರೂಪವಾಗುವುದರಿಂದ ರೌದ್ರಧ್ಯಾನವಾಗುತ್ತದೆ. ಸುಖಸಾಮಗ್ರಿಗಳನ್ನು ಬಿಟ್ಟುಕೊಟ್ಟು ದುಃಖಸಾಮಗ್ರಿಗಳ ಸಂಯೋಗವಾದರೂ ಕ್ಲೇಶವಾಗದಿದ್ದರೆ, ರಾಗ-ದ್ವೇಷಗಳು ಉತ್ಪನ್ನವಾಗದಿದ್ದರೆ ಆಗಮಾತ್ರ ನಿಷ್ಕಷಾಯಭಾವವಾಗುತ್ತದೆ.

ಹೀಗೆ ಭ್ರಮರೂಪವಾಗಿ ಅವರ ಪ್ರವೃತ್ತಿಯು ಕಂಡುಬರುತ್ತದೆ.

ಈ ಪ್ರಕಾರ ಕೇವಲ ನಿಶ್ಚಯಾಭಾಸದ ಅವಲಂಬಿಯಾಗಿರುವವರನ್ನು ಮಿಥ್ಯಾದೃಷ್ಟಿಗಳೆಂದು ತಿಳಿಯಬೇಕು. ಯಾವ ಪ್ರಕಾರ ವೇದಾಂತಿಗಳು ಮತ್ತು ಸಾಂಖ್ಯಮತಿಗಳು ಕೇವಲ ಶುದ್ಧಾತ್ಮನ ಶ್ರದ್ಧೆಯುಳ್ಳವರಿದ್ದಾರೆ ಅದೇ ಪ್ರಕಾರ ಇವರನ್ನೂ ತಿಳಿಯುವುದು. ಏಕೆಂದರೆ ಶ್ರದ್ಧೆಯ ಸಮಾನತೆಯ ಕಾರಣದಿಂದಾಗಿ ಅವರ ಉಪದೇಶವು ಇವರಿಗೆ ಇಷ್ಟವೆನಿಸುತ್ತದೆ, ಮತ್ತು ಇವರ ಉಪದೇಶವು ಅವರಿಗೆ ಇಷ್ಟವೆನಿಸುತ್ತದೆ.

ಅಲ್ಲದೆ ಅವರಿಗೆ ಕೇವಲ ಶುದ್ಧಾತ್ಮನ ಚಿಂತನೆಯಿಂದ ಸಂವರ-ನಿರ್ಜರೆಗಳಾಗುತ್ತವೆ ಹಾಗೂ ಅಲ್ಲಿ ಮುಕ್ತಾತ್ಮನ ಸುಖದ ಅಂಶವು ಪ್ರಕಟವಾಗುತ್ತದೆಯೆಂಬ ಶ್ರದ್ಧೆಯಿರುತ್ತದೆ. ಅದರಂತೆ ಜೀವದ ಗುಣಸ್ಥಾನ ಮೊದಲಾದ ಅಶುದ್ಧ ಭಾವಗಳ ಮತ್ತು ತನ್ನನ್ನು ಹೊರತುಪಡಿಸಿ ಇತರ ಜೀವ-ಪುದ್ಗಲಾದಿಗಳ ಚಿಂತನೆ ಮಾಡುವುದರಿಂದ ಆಸ್ರವ-ಬಂಧಗಳಾಗುತ್ತಿರುವುದರಿಂದ ಅವರು ಅನ್ಯವಿಚಾರಗಳಿಂದ ಪರಾಙ್ಮುಖರಿರುತ್ತಾರೆ.

ಆದರೆ ಇದು ಕೂಡ ಸತ್ಯ ಶ್ರದ್ಧೆಯಿಲ್ಲ, ಏಕೆಂದರೆ ಶುದ್ಧ ಸ್ವದ್ರವ್ಯದ ಚಿಂತನೆ ಮಾಡಿರಿ ಅಥವಾ ಅನ್ಯ ಚಿಂತೆ ಮಾಡಿರಿ; ಆದರೆ ಅಲ್ಲಿ ವೀತರಾಗತೆಯಿಂದ ಕೂಡಿದ ಭಾವಗಳಿದ್ದರೇನೇ ಸಂವರ-ನಿರ್ಜರೆಗಳಾಗುತ್ತವೆ, ಮತ್ತು ಅಲ್ಲಿ ರಾಗಾದಿರೂಪದ ಭಾವಗಳಿದ್ದರೆ ಆಸ್ರವ-ಬಂಧಗಳೇ ಇವೆ. ಒಂದು ವೇಳೆ ಪರದ್ರವ್ಯಗಳನ್ನು ತಿಳಿಯುವುದರಿಂದ ಆಸ್ರವ-ಬಂಧಗಳಾಗುತ್ತಿದ್ದರೆ ಕೇವಲಿಗಳಂತೂ ಸಮಸ್ತ ಪರದ್ರವ್ಯಗಳನ್ನು ತಿಳಿಯುತ್ತಾರೆ, ಆದುದರಿಂದ ಅವರಿಗೂ ಆಸ್ರವ-ಬಂಧಗಳಾಗಬೇಕಾಗುವುದು.

**ಪ್ರಶ್ನೆ :-** ಛದ್ಮಸ್ಥನಿಗಂತೂ ಪರದ್ರವ್ಯಗಳ ಚಿಂತನೆಯಿಂದ ಆಸ್ರವ-ಬಂಧಗಳಾಗುತ್ತವಲ್ಲವೇ ?

**ಉತ್ತರ :-** ಅವನಿಗೂ ಇಲ್ಲ; ಏಕೆಂದರೆ ಮುನಿಗಳಿಗೆ ಶುಕ್ಲಧ್ಯಾನದಲ್ಲಿ ಕೂಡ ಆರೂ ದ್ರವ್ಯಗಳ ದ್ರವ್ಯ-ಗುಣ-ಪರ್ಯಾಯಗಳ ಚಿಂತನೆಯಾಗುವುದರ ನಿರೂಪಣೆ ಮಾಡಿದೆ ಮತ್ತು ಅವಧಿ-ಮನಃಪರ್ಯಾಯ ಮೊದಲಾದವುಗಳಲ್ಲಿ ಪರದ್ರವ್ಯಗಳನ್ನು ತಿಳಿದುಕೊಳ್ಳುವುದರದೇ ವಿಶೇಷತೆಯಿರುತ್ತದೆ. ಇನ್ನು ನಾಲ್ಕನೆಯ ಗುಣಸ್ಥಾನದಲ್ಲಿ ಓರ್ವನು ತನ್ನ ಸ್ವರೂಪದ ಚಿಂತನೆ ಮಾಡುತ್ತಾನೆ ಅವನಿಗೆ ಆಸ್ರವ-ಬಂಧಗಳು ಅಧಿಕವಿವೆ ಮತ್ತು ಗುಣಶ್ರೇಣೀ ನಿರ್ಜರೆಯಿಲ್ಲ; ಐದನೆಯ-ಆರನೆಯ ಗುಣಸ್ಥಾನದಲ್ಲಿ ಆಹಾರ-ವಿಹಾರ ಮೊದಲಾದ ಕ್ರಿಯೆಗಳಾಗುತ್ತಿದ್ದರೂ ಪರದ್ರವ್ಯದ ಚಿಂತನದಿಂದ ಆಸ್ರವ-ಬಂಧಗಳು ಅಲ್ಪವಿವೆ ಮತ್ತು ಗುಣಶ್ರೇಣೀ ನಿರ್ಜರೆಯಾಗುತ್ತಿರುತ್ತದೆ ಅದುದರಿಂದ ಸ್ವದ್ರವ್ಯ-ಪರದ್ರವ್ಯದ ಚಿಂತನದಿಂದ ನಿರ್ಜರೆ ಬಂಧಗಳಾಗುವುದಿಲ್ಲ. ಆದರೆ ರಾಗಾದಿಗಳು ಕಡಿಮೆಯಾಗುವುದರಿಂದ ನಿರ್ಜರೆಯಿದೆ ಮತ್ತು ರಾಗಾದಿಗಳಿರುವುದರಿಂದ ಬಂಧವಿದೆ. ಅವನಿಗೆ ರಾಗಾದಿಗಳ ಸ್ವರೂಪದ ಯಥಾರ್ಥ ಜ್ಞಾನವಿಲ್ಲದಿರುವುದರಿಂದ ಅನ್ಯಥಾ ಮನ್ನಿಸುತ್ತಾನೆ.

**ಪ್ರಶ್ನೆ :-** ಹೀಗಿದ್ದರೆ ನಿರ್ವಿಕಲ್ಪ ಅನುಭವದ ದಶೆಯಲ್ಲಿ ನಯ-ಪ್ರಮಾಣ-ನಿಕ್ಷೇಪ ಮೊದಲಾದವುಗಳ ಹಾಗೂ ದರ್ಶನ-ಜ್ಞಾನಾದಿಗಳ ವಿಕಲ್ಪಗಳದ್ದೂ ನಿಷೇಧ ಮಾಡಿದೆ ಅದು ಯಾವ ಪ್ರಕಾರವಿದೆ ?

**ಉತ್ತರ :-** ಯಾರು ಇವೇ ವಿಕಲ್ಪಗಳಲ್ಲಿ ತೊಡಗಿರುತ್ತಾರೆ ಮತ್ತು ಅಭೇದರೂಪ ಒಬ್ಬ ಆತ್ಮನ ಅನುಭವ ಮಾಡುವುದಿಲ್ಲ ಅವರಿಗೆ ಈ ಎಲ್ಲ ವಿಕಲ್ಪಗಳು ವಸ್ತುವಿನ ನಿರ್ಣಯ ಮಾಡುವಲ್ಲಿ ಕಾರಣವಿವೆ, ವಸ್ತುವಿನ ನಿರ್ಣಯವಾದ ನಂತರ ಇವುಗಳ ಯಾವ ಪ್ರಯೋಜನವೂ ಉಳಿಯುವುದಿಲ್ಲ. ಆದುದರಿಂದ ಈ ವಿಕಲ್ಪಗಳನ್ನು ಕೂಡ ಬಿಟ್ಟುಕೊಟ್ಟು ಅಭೇದರೂಪನಾದ ಒಬ್ಬ ಆತ್ಮನ ಅನುಭವ ಮಾಡಬೇಕು, ಇವುಗಳ ವಿಚಾರರೂಪವಾದ ವಿಕಲ್ಪಗಳಲ್ಲಿ ಕೂಡ ಮೋಸ ಹೋಗುವುದು ಯೋಗ್ಯವಿಲ್ಲವೆಂಬ ಉಪದೇಶ ಕೊಡಲಾಗಿದೆ.

ಅದರಂತೆ ವಸ್ತುವಿನ ನಿಶ್ಚಯವಾದನಂತರ ಸಾಮಾನ್ಯರೂಪವಾದ ಸ್ವದ್ರವ್ಯದ ಚಿಂತನವೇ ಇರುತ್ತದೆಂದಿಲ್ಲ. ಸ್ವದ್ರವ್ಯದ ಹಾಗೂ ಪರದ್ರವ್ಯದ ಸಾಮಾನ್ಯರೂಪ ಮತ್ತು ವಿಶೇಷರೂಪಗಳನ್ನು ತಿಳಿಯುವುದಾಗುತ್ತದೆ, ಆದರೆ ವೀತರಾಗತೆ ಸಹಿತವಿರುತ್ತದೆ; ಅದರ ಹೆಸರೇ ನಿರ್ವಿಕಲ್ಪದಶೆಯಿದೆ.

**ಪ್ರಶ್ನೆ :-** ಇಲ್ಲಿಯಂತೂ ಬಹಳ ವಿಕಲ್ಪಗಳಾದವು, ಇದಕ್ಕೆ ನಿರ್ವಿಕಲ್ಪ ಸಂಜ್ಞೆಯು ಹೇಗೆ ಸಂಭವವಿದೆ?

**ಉತ್ತರ :-** ನಿರ್ವಿಚಾರವಾಗುವುದರ ಹೆಸರು ನಿರ್ವಿಕಲ್ಪವಿಲ್ಲ; ಏಕೆಂದರೆ ಛದ್ಮಸ್ಥನ ತಿಳಿಯುವಿಕೆಯು

ವಿಚಾರಸಹಿತವಿದೆ, ಅದರ ಅಭಾವ ಮನ್ನಿಸುವುದರಿಂದ ಜ್ಞಾನದ ಅಭಾವವಾಗುವುದು ಮತ್ತು ಆಗ ಜಡತ್ವ ಬರುವುದು; ಅದು ಆತ್ಮನಿಗೆ ಆಗುವುದಿಲ್ಲ. ಆದುದರಿಂದ ವಿಚಾರವಂತೂ ಇರುತ್ತದೆ.

ಮತ್ತು ಒಂದು ಸಾಮಾನ್ಯದ ವಿಚಾರವೇ ಇರುತ್ತದೆ ವಿಶೇಷದ್ದಿಲ್ಲವೆಂದು ಹೇಳಬಹುದು. ಆದರೆ ಸಾಮಾನ್ಯದ ವಿಚಾರವು ಅಧಿಕ ಕಾಲ ಉಳಿಯುವುದಲ್ಲ ಮತ್ತು ವಿಶೇಷದ ಅಪೇಕ್ಷೆಯಿಲ್ಲದೆ ಸಾಮಾನ್ಯದ ಸ್ವರೂಪವು ಭಾಸವಾಗುವುದಿಲ್ಲ.

ಮತ್ತು ತನ್ನದೇ ವಿಚಾರವಿರುತ್ತದೆ, ಪರದ್ದಿಲ್ಲವೆಂದು ಹೇಳಬಹುದು; ಆದರೆ ಪರದಲ್ಲಿ ಪರಬುದ್ಧಿಯಾದಲ್ಲದೆ ತನ್ನಲ್ಲಿ ನಿಜಬುದ್ಧಿ ಹೇಗಾಗುವುದು ? ಸಮಯಸಾರದಲ್ಲಿ ಹೀಗೆ ಹೇಳುತ್ತಾರೆ,-

**ಭಾವಯೇದ್ಭೇದವಿಜ್ಞಾನಮಿದಮಚ್ಛಿನ್ನಧಾರಯಾ ।**
**ತಾವದ್ಯಾವತ್ಪರಾಚ್ಚ್ಯುತ್ವಾ ಜ್ಞಾನಂ ಜ್ಞಾನೇ ಪ್ರತಿಷ್ಠತೇ ॥130॥ ಕಲಶ**

**ಅರ್ಥ :-** ಎಲ್ಲಿಯವರೆಗೆ ಜ್ಞಾನವು ಪರದಿಂದ ಬಿಡುಗಡೆಹೊಂದಿ ಜ್ಞಾನದಲ್ಲಿ ಲೀನವಾಗುವುದಿಲ್ಲ ಅಲ್ಲಿಯವರೆಗೆ ನಿರಂತರವಾಗಿ ಭೇದಜ್ಞಾನವನ್ನು ಭಾವಿಸಬೇಕು. ಆದ್ದರಿಂದ ಭೇದಜ್ಞಾನವು ಬಿಟ್ಟನಂತರ ಪರವನ್ನು ತಿಳಿಯುವುದು ನಿಂತು ಹೋಗುತ್ತದೆ. ಕೇವಲ ತನ್ನನ್ನೇ ತಾನು ತಿಳಿಯುತ್ತಿರುತ್ತಾನೆ.

ಪೂರ್ವಕಾಲದಲ್ಲಿ ಸ್ವ-ಪರಗಳನ್ನು ಒಂದೆಂದು ತಿಳಿಯಲಾಗುತ್ತಿತ್ತು; ಈಗ ಭಿನ್ನವೆಂದು ತಿಳಿಯುವ ಸಲುವಾಗಿ ಎಲ್ಲಿಯವರೆಗೆ ಜ್ಞಾನವು ಪರರೂಪವನ್ನು ಭಿನ್ನವೆಂದು ತಿಳಿದುಕೊಂಡು ತನ್ನ ಜ್ಞಾನಸ್ವರೂಪದಲ್ಲಿ ನಿಶ್ಚಿತವಾಗಿ ಹೋಗುವುದಿಲ್ಲ ಅಲ್ಲಿಯವರೆಗೆ ಭೇದಜ್ಞಾನವನ್ನು ಭಾವಿಸುವುದು ಯೋಗ್ಯವಿದೆ. ಅನಂತರ ಭೇದವಿಜ್ಞಾನ ಮಾಡುವ ಪ್ರಯೋಜನ ಉಳಿಯುವುದಿಲ್ಲ; ತಾನಾಗಿಯೇ ಪರವನ್ನು ಪರರೂಪ ಮತ್ತು ತನ್ನನ್ನು ತನ್ನ ರೂಪವಾಗಿ ತಿಳಿಯುತ್ತಿರುತ್ತಾನೆ. ಆಗ ಪರದ್ರವ್ಯವನ್ನು ತಿಳಿಯುವುದೇ ನಿಂತುಹೋಗುತ್ತದೆಯೆಂಬುದಾಗಿಲ್ಲ. ಆದುದರಿಂದ ಪರದ್ರವ್ಯವನ್ನು ತಿಳಿಯುವ ಅಥವಾ ನಿಜದ್ರವ್ಯದ ವಿಶೇಷಗಳನ್ನು ತಿಳಿಯುವುದರ ಹೆಸರು ವಿಕಲ್ಪವಲ್ಲ.

ಅದು ಯಾವ ಪ್ರಕಾರವಿದೆಯೆಂಬುದನ್ನು ಹೇಳುತ್ತಾರೆ. ರಾಗ-ದ್ವೇಷವಶದಿಂದ ಯಾವುದೇ ಜ್ಞೇಯವನ್ನು ತಿಳಿಯುವಲ್ಲಿ ಉಪಯೋಗ ತೊಡಗಿಸುವುದು ಮತ್ತು ಯಾವುದೇ ಜ್ಞೇಯವನ್ನು ತಿಳಿಯುವುದರಿಂದ ಬಿಡುಗಡೆ ಹೊಂದುವುದು ಈ ಪ್ರಕಾರ ಉಪಯೋಗವನ್ನು ಮತ್ತೆ ಮತ್ತೆ ತಿರುಗಾಡಿಸುವುದರ ಹೆಸರು ವಿಕಲ್ಪವಿದೆ. ಮತ್ತು ಎಲ್ಲಿ ವೀತರಾಗರೂಪವಾಗಿ ಯಾವುದನ್ನು ತಿಳಿಯುತ್ತಾರೆ ಅದನ್ನು ಯಥಾರ್ಥ ತಿಳಿಯುತ್ತಾರೆ, ಬೇರೆ-ಬೇರೆ ಜ್ಞೇಯಗಳನ್ನು ತಿಳಿಯುವ ಸಲುವಾಗಿ ಉಪಯೋಗವನ್ನು ತಿರುಗಾಡಿಸುವುದಿಲ್ಲ ಅಲ್ಲಿ ನಿರ್ವಿಕಲ್ಪದಶೆಯಿದೆಯೆಂದು ತಿಳಿಯುವುದು.

**ಪ್ರಶ್ನೆ :-** ಛದ್ಮಸ್ಥನ ಉಪಯೋಗವಂತೂ ನಾನಾ ಜ್ಞೇಯಗಳಲ್ಲಿ ಅಲೆದಾಡೇ ಅಲೆದಾಡುತ್ತದೆ ಅಲ್ಲಿ ನಿರ್ವಿಕಲ್ಪತೆಯು ಹೇಗೆ ಸಂಭವವಿದೆ ?

**ಉತ್ತರ :-** ಎಲ್ಲಿಯವರೆಗೆ ಒಂದು ತಿಳಿಯುವರೂಪವಿರುತ್ತದೆ ಅಲ್ಲಿಯವರೆಗೆ ನಿರ್ವಿಕಲ್ಪವೆಂಬ ಹೆಸರು ಪಡೆಯುತ್ತದೆ. ಸಿದ್ಧಾಂತದಲ್ಲಿ ಧ್ಯಾನದ ಲಕ್ಷಣವನ್ನು ಹೀಗೆಯೇ ಹೇಳಿದ್ದಾರೆ,-

**'ಏಕಾಗ್ರಚಿಂತಾನಿರೋಧೋ ಧ್ಯಾನಮ್ ।'** (ತತ್ತ್ವಾರ್ಥಸೂತ್ರ ೯-೨೭) ಒಂದರ ಮುಖ್ಯಚಿಂತನೆ ಯಿರುವುದು ಮತ್ತು ಅನ್ಯಚಿಂತೆ ನಿಂತು ಹೋಗುವುದರ ಹೆಸರು ಧ್ಯಾನವಿದೆ. ಎಲ್ಲ ಚಿಂತೆ ನಿಂತು ಹೋಗುವುದರ ಹೆಸರು ಧ್ಯಾನವಿದ್ದರೆ ಅಚೇತನತೆ ಬರಬಹುದೆಂದು ಸರ್ವಾರ್ಥಸಿದ್ಧಿ ಸೂತ್ರದ ಟೀಕೆಯಲ್ಲಿ ಈ ವಿಶೇಷ ಹೇಳಿದೆ. ಮತ್ತು ಸಂತಾನ ಅಪೇಕ್ಷೆಯಿಂದ ನಾನಾ ಜ್ಞೇಯಗಳನ್ನು ತಿಳಿಯುವುದೂ ಆಗುತ್ತದೆಂಬ ವಿವಕ್ಷೆಯಿದೆ; ಆದರೆ ಎಲ್ಲಿಯವರೆಗೆ ವೀತರಾಗತೆಯಿರುವುದು, ರಾಗಾದಿಗಳಿಂದ ತಾನು ಉಪಯೋಗವನ್ನು ತಿರುಗಾಡಿಸುವುದಿಲ್ಲ ಅಲ್ಲಿಯವರೆಗೆ ನಿರ್ವಿಕಲ್ಪದಶೆಯೆಂದು ಹೇಳುತ್ತಾರೆ.

**ಪ್ರಶ್ನೆ :-** ಹೀಗಿದ್ದರೆ ಪರದ್ರವ್ಯಗಳಿಂದ ಬಿಡಿಸಿ ಸ್ವರೂಪದಲ್ಲಿ ಉಪಯೋಗ ತೊಡಗಿಸುವುದರ ಉಪದೇಶವನ್ನು ಏತಕ್ಕಾಗಿ ಕೊಡಲಾಗಿದೆ ?

**ಉತ್ತರ :-** ಆ ಶುಭಾಶುಭಭಾವಗಳ ಕಾರಣ ಪರದ್ರವ್ಯಗಳಿದ್ದು ಅವುಗಳಲ್ಲಿ ಉಪಯೋಗ ತೊಡಗಿಸುವುದರಿಂದ ಯಾರಿಗೆ ರಾಗ-ದ್ವೇಷಗಳಾಗುತ್ತವೆ ಮತ್ತು ಸ್ವರೂಪದ ಚಿಂತನೆ ಮಾಡಿದರೆ ಯಾರ ರಾಗ-ದ್ವೇಷಗಳು ಕಡಿಮೆಯಾಗುತ್ತವೆ ಅಂಥ ಕೆಳತರಗತಿಯ ಜೀವರುಗಳ ಸಲುವಾಗಿ ಪೂರ್ವೋಕ್ತ ಉಪದೇಶವಿದೆ. ಯಾವ ಪ್ರಕಾರ ಓರ್ವ ಸ್ತ್ರೀಯು ವಿಕಾರ ಭಾವದಿಂದ ಇತರರ ಮನೆಗೆ ಹೋಗುತ್ತಿದ್ದಳು; ಅವಳನ್ನು ನೀನು ಇತರರ ಮನೆಗೆ ಹೋಗಬೇಡ ಮನೆಯಲ್ಲಿಯೇ ಕುಳಿತುಕೊಂಡಿರೆಂದು ತಡೆಯುವುದು, ಮತ್ತು ಆ ಸ್ತ್ರೀಯು ನಿರ್ವಿಕಾರ ಭಾವದಿಂದ ಯಾರ ಮನೆಗೋ ಹೋಗಿ ಅಲ್ಲಿ ಯಥಾಯೋಗ್ಯ ಪ್ರವರ್ತಿಸುತ್ತಿದ್ದರೆ ಯಾವ ದೋಷವಿಲ್ಲ. ಅದೇ ಪ್ರಕಾರ ಉಪಯೋಗರೂಪದ ಪರಿಣತಿಯು ರಾಗ-ದ್ವೇಷಗಳ ಭಾವದಿಂದ ಪರದ್ರವ್ಯಗಳಲ್ಲಿ ಪ್ರವರ್ತಿಸುತ್ತಿತ್ತು; ಅದನ್ನು ನೀನು ಪರದ್ರವ್ಯಗಳಲ್ಲಿ ಪ್ರವರ್ತಿಸಬೇಡ ಸ್ವರೂಪದಲ್ಲಿಯೇ ಮಗ್ನವಾಗಿರೆಂದು ತಡೆಯಲಾಗಿದೆ. ಮತ್ತು ಆ ಉಪಯೋಗರೂಪದ ಪರಿಣತಿಯು ವೀತರಾಗಭಾವದಿಂದ ಪರದ್ರವ್ಯಗಳನ್ನು ತಿಳಿದುಕೊಂಡು ಯಥಾಯೋಗ್ಯವಾಗಿ ಪ್ರವರ್ತಿಸಿದರೆ ಯಾವ ದೋಷವಿಲ್ಲ.

**ಪ್ರಶ್ನೆ :-** ಹೀಗಿದ್ದರೆ ಮಹಾಮುನಿಗಳು ಪರಿಗ್ರಹಾದಿಗಳ ಚಿಂತನದ ತ್ಯಾಗವನ್ನು ಏತಕ್ಕಾಗಿ ಮಾಡುತ್ತಾರೆ?

**ಉತ್ತರ :-** ಯಾವ ಪ್ರಕಾರ ವಿಕಾರವಿಲ್ಲದ ಸ್ತ್ರೀಯು ಕುಶೀಲದ ಕಾರಣ ಅನ್ಯರ ಮನೆಗಳ ತ್ಯಾಗ ಮಾಡುತ್ತಾಳೆ; ಅದೇ ಪ್ರಕಾರ ವೀತರಾಗ ಪರಿಣತಿಯು ರಾಗ-ದ್ವೇಷದ ಕಾರಣ ಪರದ್ರವ್ಯಗಳ ತ್ಯಾಗ ಮಾಡುತ್ತದೆ. ಮತ್ತು ವ್ಯಭಿಚಾರದ ಕಾರಣಗಳಿಲ್ಲದಂಥ ಇತರರ ಮನೆಗಳಲ್ಲಿ ಹೋಗುವುದರ ತ್ಯಾಗವಿಲ್ಲ. ಅದೇ ಪ್ರಕಾರ ರಾಗ-ದ್ವೇಷಗಳ ಕಾರಣಗಳಿಲ್ಲದಂಥ ಪರದ್ರವ್ಯಗಳನ್ನು ತಿಳಿದುಕೊಳ್ಳುವುದರ ತ್ಯಾಗವಿಲ್ಲ.

**ಪ್ರಶ್ನೆ :-** ಯಾವ ಪ್ರಕಾರ ಆ ಸ್ತ್ರೀಯು ಪ್ರಯೋಜನ ತಿಳಿದುಕೊಂಡು ತಂದೆ-ತಾಯಿಗಳ ಮನೆಗೆ ಹೋಗುತ್ತಿದ್ದರೆ ಹೋಗಲಿ, ಪ್ರಯೋಜನವಿಲ್ಲದೆ ಅವರಿವರ ಮನೆಗೆ ಹೋಗುವುದು ಯೋಗ್ಯವಿಲ್ಲ, ಅದೇ ಪ್ರಕಾರ ಪರಿಣತಿಯ ಪ್ರಯೋಜನ ತಿಳಿದುಕೊಂಡು ಸಪ್ತತತ್ತ್ವಗಳ ವಿಚಾರ ಮಾಡುವುದು, ಪ್ರಯೋಜನವಿಲ್ಲದೆ ಗುಣಸ್ಥಾನ ಮೊದಲಾದವುಗಳ ವಿಚಾರ ಮಾಡುವುದು ಯೋಗ್ಯವಿಲ್ಲವಲ್ಲವೇ ?

**ಉತ್ತರ** :- ಯಾವ ಪ್ರಕಾರ ಸ್ತ್ರೀಯು ಪ್ರಯೋಜನ ತಿಳಿದುಕೊಂಡು ತಂದೆ ಮೊದಲಾದವರ ಅಥವಾ ಮಿತ್ರ ಮೊದಲಾದವರ ಮನೆಗೂ ಹೋಗುವಳು;ಅದೇ ಪ್ರಕಾರ ಪರಿಣತಿಯು ತತ್ತ್ವಗಳ ವಿಶೇಷ ತಿಳಿಯುವ ಸಲುವಾಗಿ ಗುಣಸ್ಥಾನಾದಿಗಳನ್ನು ಮತ್ತು ಕರ್ಮಾದಿಗಳನ್ನೂ ತಿಳಿಯುವುದು. ಮತ್ತು ಹೇಗೆ ಶೀಲವಂತ ಸ್ತ್ರೀಯು ಪ್ರಯತ್ನಪೂರ್ವಕವಾಗಿ ವಿಟಪುರುಷರ ಸ್ಥಾನಗಳಿಗೆ ಹೋಗುವುದಿಲ್ಲ; ಒಂದು ವೇಳೆ ಪರಾಧೀನತೆಯಿಂದ ಅಲ್ಲಿ ಹೋಗಬೇಕಾಗಿ ಬಂದರೆ ಮತ್ತು ಅಲ್ಲಿ ಕುಶೀಲ ಸೇವನೆ ಮಾಡದಿದ್ದರೆ ಆ ಸ್ತ್ರೀಯು ಶೀಲವತಿಯೇ ಇದ್ದಾಳೆಂದು ಇಲ್ಲಿ ತಿಳಿಯಬೇಕು. ಅದೇ ಪ್ರಕಾರ ವೀತರಾಗ ಪರಿಣತಿಯು ಉಪಾಯಪೂರ್ವಕವಾಗಿ ರಾಗಾದಿಗಳಿಗೆ ಕಾರಣವಾದ ಪರದ್ರವ್ಯಗಳಲ್ಲಿ ತೊಡಗುವುದಿಲ್ಲ, ಒಂದು ವೇಳೆ ತಾನಾಗಿಯೇ ಅವುಗಳನ್ನು ತಿಳಿಯುವ ಪ್ರಸಂಗ ಬಂದರೆ ಮತ್ತು ಅಲ್ಲಿ ರಾಗಾದಿಗಳನ್ನು ಮಾಡದಿದ್ದರೆ ಆ ಪರಿಣತಿಯು ಶುದ್ಧವೇ ಇದೆ. ಆದುದರಿಂದ ಮುನಿಗಳಿಗೆ ಸ್ತ್ರೀ ಮೊದಲಾದವರ ಪರೀಷಹಗಳಾದರೆ ಅವನ್ನು ತಿಳಿಯುವುದೇ ಇಲ್ಲ, ತಮ್ಮ ಸ್ವರೂಪದ ತಿಳಿಯುವಿಕೆಯೇ ಇರುತ್ತದೆಂದು ಮನ್ನಿಸುವುದು ಮಿಥ್ಯೆಯಿದೆ. ಅವನ್ನೇನೋ ತಿಳಿಯುತ್ತಾರೆ, ಆದರೆ ರಾಗಾದಿಗಳನ್ನು ಮಾಡುವುದಿಲ್ಲ.

ಹೀಗೆ ಪರದ್ರವ್ಯಗಳನ್ನು ತಿಳಿಯುತ್ತಿದ್ದರೂ ವೀತರಾಗಭಾವವಿರುತ್ತದೆಂದು ಶ್ರದ್ಧೆ ಮಾಡಬೇಕು.

**ಪ್ರಶ್ನೆ** :- ಹೀಗಿದ್ದರೆ ಶಾಸ್ತ್ರಗಳಲ್ಲಿ ಆತ್ಮನಶ್ರದ್ಧೆ-ಜ್ಞಾನ-ಆಚರಣೆಗೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವೆಂದು ಹೇಗೆ ಹೇಳಿದೆ ?

**ಉತ್ತರ** :- ಅನಾದಿಯಿಂದ ಪರದ್ರವ್ಯಗಳಲ್ಲಿ ಶ್ರದ್ಧೆ-ಜ್ಞಾನ-ಆಚರಣೆಯಿತ್ತು; ಅದನ್ನು ಬಿಡಿಸುವ ಸಲುವಾಗಿ ಈ ಉಪದೇಶವಿದೆ. ತನ್ನಲ್ಲಿಯೇ ತನ್ನ ರೂಪದ ಶ್ರದ್ಧೆ-ಜ್ಞಾನ-ಆಚರಣೆಯಾಗುವುದರಿಂದ ಪರದ್ರವ್ಯದಲ್ಲಿ ರಾಗ-ದ್ವೇಷಾದಿ ಪರಿಣತಿ ಮಾಡುವ ಶ್ರದ್ಧೆ, ಜ್ಞಾನ ಮತ್ತು ಆಚರಣೆಯು ದೂರವಾಗುವುದು ಆಗ ಸಮ್ಯಗ್ದರ್ಶನಾದಿಗಳು ಆಗುತ್ತವೆ. ಒಂದು ವೇಳೆ ಪರದ್ರವ್ಯದ ಶ್ರದ್ಧಾದಿಗಳನ್ನು ಪರದ್ರವ್ಯರೂಪವಾಗಿ ಮಾಡುವುದರಿಂದ ಸಮ್ಯಗ್ದರ್ಶನಾದಿಗಳಾಗದಿದ್ದರೆ ಕೇವಲಿಗೂ ಅವುಗಳ ಅಭಾವವಾಗುವುದು. ಪರದ್ರವ್ಯಗಳನ್ನು ಕೆಡಕೆಂದು ತಿಳಿಯುವಲ್ಲಿ, ನಿಜದ್ರವ್ಯವನ್ನು ಒಳ್ಳೆಯದೆಂದು ತಿಳಿಯುವಲ್ಲಿ ರಾಗ-ದ್ವೇಷಗಳಂತೂ ಸ್ವಾಭಾವಿಕವಾಗಿ ಆಗುವವು. ತನ್ನನ್ನು ತನ್ನ ರೂಪದಿಂದ ಮತ್ತು ಪರವನ್ನು ಪರರೂಪದಿಂದ ಯಥಾರ್ಥವಾಗಿ ತಿಳಿಯುತ್ತಿರುವುದು, ಹಾಗೆಯೇ ಶ್ರದ್ಧಾದಿಗಳರೂಪದಿಂದ ಪ್ರವರ್ತನೆ ಮಾಡುವುದು ಆಗಲೇ ಸಮ್ಯಗ್ದರ್ಶನಾದಿಗಳಾಗುತ್ತವೆಂದು ತಿಳಿಯುವುದು.

**ಆದುದರಿಂದ ಹೆಚ್ಚಿಗೇನು ಹೇಳುವುದು, ಯಾವ ಪ್ರಕಾರದಿಂದ ರಾಗಾದಿಗಳನ್ನು ದೂರಮಾಡುವ ಶ್ರದ್ಧೆಯಾಗುವುದು ಆ ಶ್ರದ್ಧೆಯೇ ಸಮ್ಯಗ್ದರ್ಶನವಿದೆ, ಯಾವ ಪ್ರಕಾರದಿಂದ ರಾಗಾದಿಗಳನ್ನು ದೂರಮಾಡುವ ತಿಳಿವಳಿಕೆಯಾಗುವುದು ಆ ತಿಳಿವಳಿಕೆಯೇ ಸಮ್ಯಗ್ಜ್ಞಾನವಿದೆ, ಮತ್ತು ಯಾವ ಪ್ರಕಾರ ದಿಂದ ರಾಗಾದಿಗಳನ್ನು ದೂರ ಮಾಡಲಾಗುವುದು ಆ ಆಚರಣೆಯೇ ಸಮ್ಯಕ್ಚಾರಿತ್ರವಿದೆ; ಹೀಗೆಯೇ ಮೋಕ್ಷಮಾರ್ಗವನ್ನು ಮನ್ನಿಸುವುದು ಯೋಗ್ಯವಿದೆ.**

ಈ ಪ್ರಕಾರ ನಿಶ್ಚಯನಯದ ಆಭಾಸದೊಡನೆ ಏಕಾಂತ ಪಕ್ಷವನ್ನು ಧಾರಣ ಮಾಡಿದ ಜೈನಾಭಾಸಿಗಳ ಮಿಥ್ಯಾತ್ವದ ನಿರೂಪಣೆ ಮಾಡಲಾಯಿತು.

## ವ್ಯವಹಾರಾಭಾಸದ ಮಿಥ್ಯಾದೃಷ್ಟಿ

ಈಗ ವ್ಯವಹಾರಾಭಾಸ ಪಕ್ಷವನ್ನು ಧಾರಣಮಾಡಿದ ಜೈನಾಭಾಸಿಗಳ ಮಿಥ್ಯಾತ್ವದ ನಿರೂಪಣೆ ಮಾಡುತ್ತಾರೆ.

ಜಿನಾಗಮದೊಳಗೆ ಎಲ್ಲಿ ವ್ಯವಹಾರದ ಮುಖ್ಯತೆಯಿಂದ ಉಪದೇಶವಿದೆ ಅದನ್ನು ಮನ್ನಿಸಿ ಬಾಹ್ಯಸಾಧನಗಳದ್ದೇ ಶ್ರದ್ಧಾದಿಗಳನ್ನು ಮಾಡುತ್ತಾರೆ ಅವರ ಧರ್ಮದ ಎಲ್ಲ ಅಂಗಗಳು ಅನ್ಯಥಾ ರೂಪವಾಗಿ ಮಿಥ್ಯಾಭಾವಕ್ಕೆ ಪ್ರಾಪ್ತರಾಗುತ್ತಾರೆಂಬುದನ್ನು ವಿಶೇಷವಾಗಿ ಹೇಳುತ್ತಾರೆ.

ವ್ಯವಹಾರಧರ್ಮದ ಪ್ರವೃತ್ತಿಯಿಂದ ಪುಣ್ಯಬಂಧವಾಗುತ್ತಿರುವುದರಿಂದ ಪಾಪಪ್ರವೃತ್ತಿಯ ಅಪೇಕ್ಷೆಯಿಂದಂತೂ ಇದರ ನಿಷೇಧವಿಲ್ಲ; ಆದರೆ ಯಾರು ವ್ಯವಹಾರ ಪ್ರವೃತ್ತಿಯಿಂದ ಸಂತುಷ್ಟರಾಗಿ ನಿಜವಾದ ಮೊಕ್ಷಮಾರ್ಗದಲ್ಲಿ ಉದ್ಯಮಶೀಲರಾಗುವುದಿಲ್ಲ ಅವರನ್ನು ಮೋಕ್ಷಮಾರ್ಗದಲ್ಲಿ ಸನ್ಮುಖ ಮಾಡುವ ಸಲುವಾಗಿ ಆ ಶುಭರೂಪವಾದ ಮಿಥ್ಯಾಪ್ರವೃತ್ತಿಯದ್ದೂ ಇಲ್ಲಿ ನಿಷೇಧರೂಪ ನಿರೂಪಣೆ ಮಾಡುತ್ತಾರೆಂದು ತಿಳಿದುಕೊಳ್ಳಬೇಕು.

ಇಲ್ಲಿ ಮಾಡುತ್ತಿರುವ ಕಥನವನ್ನು ಕೇಳಿ ಒಂದು ವೇಳೆ ಶುಭ ಪ್ರವೃತ್ತಿಯನ್ನು ಬಿಟ್ಟುಕೊಟ್ಟು ಅಶುಭದಲ್ಲಿ ಪ್ರವೃತ್ತಿ ಮಾಡಿದರೆ ನಿಮ್ಮದು ಕೆಡಕಾಗುವುದು; ಮತ್ತು ಒಂದುವೇಳೆ ಯಥಾರ್ಥ ಶ್ರದ್ಧೆಮಾಡಿ ಮೋಕ್ಷಮಾರ್ಗದಲ್ಲಿ ಪ್ರವೃತ್ತಿ ಮಾಡಿದರೆ ನಿಮ್ಮದು ಒಳ್ಳೆಯದಾಗುವುದು. ಯಾವ ಪ್ರಕಾರ ಓರ್ವ ರೋಗಿಯು ನಿರ್ಗುಣ ಔಷಧದ ನಿಷೇಧವನ್ನು ಕೇಳಿ ಔಷಧ ಸಾಧನೆಯನ್ನು ಬಿಟ್ಟುಕೊಟ್ಟು ಕುಪಥ್ಯ ಮಾಡಿದರೆ ಅವನು ಸಾಯುವನು, ಅದರಲ್ಲಿ ವೈದ್ಯನದು ಯಾವ ದೋಷವಿಲ್ಲ; ಅದೇ ಪ್ರಕಾರ ಯಾವನೋ ಸಂಸಾರಿಯು ಪುಣ್ಯರೂಪ ಧರ್ಮದ ನಿಷೇಧ ಕೇಳಿ ಧರ್ಮಸಾಧನೆಯನ್ನು ಬಿಟ್ಟುಕೊಟ್ಟು ವಿಷಯ ಕಷಾಯರೂಪವಾಗಿ ಪ್ರವೃತ್ತಿ ಮಾಡಿದರೆ ಅವನೇ ನರಕಾದಿಗಳಲ್ಲಿ ದುಃಖ ಪಡೆಯುವನು. ಉಪದೇಶ ಕೊಡುವವನದಂತೂ ದೋಷವಿಲ್ಲ. ಉಪದೇಶಕೊಡುವವನ ಅಭಿಪ್ರಾಯದಲ್ಲಂತೂ ಅಸತ್ಯ ಶ್ರದ್ಧಾದಿಗಳನ್ನು ಬಿಡಿಸಿ ಮೋಕ್ಷಮಾರ್ಗದಲ್ಲಿ ತೊಡಗಿಸುವುದಿದೆಯೆಂದು ತಿಳಿಯಬೇಕು.

ಇಂಥ ಅಭಿಪ್ರಾಯದಿಂದಲೇ ಇಲ್ಲಿ ನಿರೂಪಣೆ ಮಾಡುತ್ತಾರೆ.

### ಕುಲಅಪೇಕ್ಷೆಯಿಂದ ಧರ್ಮಧಾರಕ ವ್ಯವಹಾರಾಭಾಸಿ

ಕೆಲವರಂತೂ ಕುಲಕ್ರಮದಿಂದಲೇ ಜೈನರಿದ್ದಾರೆ, ಅವರು ಜೈನಧರ್ಮದ ಸ್ವರೂಪ ತಿಳಿಯುವುದಿಲ್ಲ, ಆದರೆ ಕುಲದಲ್ಲಿ ಹೇಗೆ ಪ್ರವೃತ್ತಿಯು ನಡೆದು ಬಂದಿದೆ ಹಾಗೆ ಪ್ರವರ್ತಿಸುತ್ತಾರೆ. ಅಲ್ಲಿ ಯಾವ ಪ್ರಕಾರ ಅನ್ಯಮತದವರು ತಮ್ಮ ಕುಲಧರ್ಮದಲ್ಲಿ ಪ್ರವರ್ತಿಸುತ್ತಾರೆ ಅದೇ ಪ್ರಕಾರ ಇವರು ಪ್ರವರ್ತಿಸುತ್ತಾರೆ. ಒಂದು ವೇಳೆ ಕುಲಕ್ರಮದಿಂದಲೇ ಧರ್ಮವಾಗುತ್ತಿದ್ದರೆ ಮುಸಲ್ಮಾನ ಮೊದಲಾದವರೆಲ್ಲರೂ ಧರ್ಮಾತ್ಮರಾಗಿ ಹೋಗುವರು. ಅದರಲ್ಲಿ ಜೈನಧರ್ಮದ ವಿಶೇಷತೆಯೇನುಳಿಯಿತು ?

ಅದನ್ನೇ ಹೇಳಿದ್ದಾರೆ,-

**ಲೋಯಮ್ಮಿ ರಾಯಣೇಈ ಣಾಯಂ ಣ ಕುಲಕಮ್ಮಿ ಕಇಯಾವಿ ।**
**ಕಿಂ ಪುಣ ತಿಲೋಯ ಪಹುಣೋ ಜಿಣಂದಧಮ್ಮಾಹಿಗಾರಮ್ಮಿ ॥7॥**

ಉಪದೇಶ ಸಿದ್ಧಾಂತ ರತ್ನಮಾಲೆ

**ಅರ್ಥ :-** ಪ್ರಾಯಶಃ ಕುಲಕ್ರಮದಿಂದ ನ್ಯಾಯವಾಗುವುದಿಲ್ಲವೆಂದು ಲೋಕದಲ್ಲಿ ರಾಜನೀತಿಯಿದೆ. ಕಳ್ಳರ ಕುಲದಲ್ಲಿ ಹುಟ್ಟಿದವನನ್ನು ಅವನು ಕಳವು ಮಾಡುವಾಗ ಹಿಡಿದುಕೊಂಡರೆ ಅವನ ಕುಲಕ್ರಮವನ್ನು ತಿಳಿದುಕೊಂಡು ಬಿಡುವುದಿಲ್ಲ, ಶಿಕ್ಷೆಯನ್ನೇ ಕೊಡುತ್ತಾರೆ. ಹಾಗಾದರೆ ತ್ರಿಲೋಕಪ್ರಭುವಾದ ಜಿನೇಂದ್ರದೇವರ ಧರ್ಮದ ಅಧಿಕಾರದಲ್ಲಿ ಕುಲಕ್ರಮಕ್ಕೆ ಅನುಸರಿಸಿ ನ್ಯಾಯವು ಸಂಭವವಿದೆಯೇನು ?

ಅದರಂತೆ ತಂದೆಯು ದರಿದ್ರನಿರುವುದು ಮತ್ತು ತಾವು ಶ್ರೀಮಂತರಾದಾಗ ಅಲ್ಲಿಯಂತೂ ಕುಲಕ್ರಮದ ವಿಚಾರ ಮಾಡಿ ತಾವು ದರಿದ್ರರಾಗಿ ಉಳಿಯುವುದಿಲ್ಲ, ಎಂದ ಮೇಲೆ ಧರ್ಮದಲ್ಲಿ ಕುಲದ ಪ್ರಯೋಜನವೇನಿದೆ? ಮತ್ತು ತಂದೆಯು ನರಕದಲ್ಲಿ ಹೋದರೆ ಮಗನು ಮೋಕ್ಷದಲ್ಲಿ ಹೋಗುವವನು. ಅಲ್ಲಿ ಕುಲಕ್ರಮವೇನುಳಿಯಿತು? ಒಂದು ವೇಳೆ ಕುಲದ ಮೇಲೆ ದೃಷ್ಟಿಯಿದ್ದರೆ ಮಗನೂ ನರಕಗಾಮಿಯಾಗಬೇಕು, ಆದ್ದರಿಂದ ಧರ್ಮದಲ್ಲಿ ಕುಲಕ್ರಮದ ಯಾವ ಪ್ರಯೋಜನವೂ ಇಲ್ಲ.

ಶಾಸ್ತ್ರಗಳ ಅರ್ಥದ ವಿಚಾರ ಮಾಡಿ ಒಂದು ವೇಳೆ ಕಾಲದೋಷದಿಂದ ಜಿನಧರ್ಮದಲ್ಲಿ ಕೂಡ ಪಾಪೀ ಪುರುಷರ ಮೂಲಕ ಕುದೇವ-ಕುಗುರು-ಕುಧರ್ಮ ಸೇವನಾದಿಗಳರೂಪ ಮತ್ತು ವಿಷಯ-ಪೋಷಣಾದಿಗಳ ರೂಪದ ವಿಪರೀತ ಪ್ರವೃತ್ತಿಯು ನಡೆದು ಬಂದಿದ್ದರೆ ಅದರ ತ್ಯಾಗ ಮಾಡಿ ಜಿನರ ಆಜ್ಞೆಗೆ ಅನುಸರಿಸಿ ಪ್ರವರ್ತನೆ ಮಾಡುವುದು ಯೋಗ್ಯವಿದೆ.

**ಪ್ರಶ್ನೆ :-** ಪರಂಪರೆಯನ್ನು ಬಿಟ್ಟುಕೊಟ್ಟು ನವೀನ ಮಾರ್ಗದಲ್ಲಿ ಪ್ರವರ್ತನೆ ಮಾಡುವುದು ಹೇಗೆ ಯೋಗ್ಯವಿದೆ ?

**ಉತ್ತರ :-** ತಮ್ಮ ಬುದ್ಧಿಯಿಂದ ನವೀನ ಮಾರ್ಗವನ್ನು ಹಿಡಿದುಕೊಳ್ಳುವುದು ಯೋಗ್ಯವಿಲ್ಲ, ಅನಾದಿನಿಧನವಾದ ಪರಂಪರೆಯನ್ನು ಜೈನಧರ್ಮದ ಸ್ವರೂಪವನ್ನು ಶಾಸ್ತ್ರಗಳಲ್ಲಿ ಬರೆದಿದೆ, ಅದರ ಪ್ರವೃತ್ತಿಯನ್ನು ಕೆಡಿಸಿ ಪಾಪೀ ಪುರುಷರು ಮಧ್ಯದಲ್ಲಿ ವಿಪರೀತ ಪ್ರವೃತ್ತಿಯನ್ನು ನಡೆಯಿಸಿದ್ದಾರೆ, ಅದನ್ನು ಪರಂಪರೆಯ ಮಾರ್ಗವೆಂದು ಹೇಗೆ ಹೇಳುವ ಸಾಧ್ಯತೆಯಿದೆ ? ಮತ್ತು ಅದನ್ನು ಬಿಟ್ಟುಕೊಟ್ಟು ಪುರಾತನ ಜೈನ ಶಾಸ್ತ್ರಗಳಲ್ಲಿ ಧರ್ಮದ ಸ್ವರೂಪವನ್ನು ಹೇಗೆ ಹೇಳಿದೆ ಹಾಗೆ ಪ್ರವರ್ತನ ಮಾಡಿದರೆ ಅದನ್ನು ನವೀನಮಾರ್ಗವೆಂದು ಹೇಗೆ ಹೇಳುವ ಸಾಧ್ಯತೆಯಿದೆ ?

ಇನ್ನು ತಮ್ಮ ಕುಲದಲ್ಲಿ ಜಿನದೇವರ ಆಜ್ಞೆಯು ಹೇಗಿದೆ ಅದೇ ಪ್ರಕಾರ ಧರ್ಮದ ಪ್ರವೃತ್ತಿಯಿದ್ದರೆ ತಮಗೂ ಹಾಗೆಯೇ ಪ್ರವೃತ್ತಿ ಮಾಡುವುದು ಯೋಗ್ಯವಿದೆ; ಆದರೆ ಅದನ್ನು ಕುಲಾಚಾರವೆಂದು ತಿಳಿಯದೆ ಧರ್ಮವೆಂದು ತಿಳಿದುಕೊಂಡು, ಅದರ ಸ್ವರೂಪ, ಫಲಾದಿಗಳ ನಿಶ್ಚಯಮಾಡಿ ಅಂಗೀಕಾರ ಮಾಡುವುದು. ನಿಜವಾದ ಧರ್ಮವನ್ನು ಕೂಡ ಕುಲಾಚಾರವೆಂದು ತಿಳಿದುಕೊಂಡು ಪ್ರವರ್ತನೆ ಮಾಡುವವನನ್ನು ಧರ್ಮಾತ್ಮನೆಂದು ಹೇಳುವುದಿಲ್ಲ; ಏಕೆಂದರೆ ಕುಲದವರೆಲ್ಲರು ಆ ಆಚರಣೆಯನ್ನು ಬಿಟ್ಟುಕೊಟ್ಟರೆ ನೀವು ಕೂಡ ಬಿಟ್ಟುಕೊಡುವಿರಿ. ಮತ್ತು ಅವನು ಯಾವ ಆಚರಣೆ ಮಾಡುತ್ತಾನೆ ಅದನ್ನು ಕುಲದ ಭಯದಿಂದ ಮಾಡುತ್ತಾನೆ, ಧರ್ಮ ಬುದ್ಧಿಯಿಂದ ಮಾಡುವುದಿಲ್ಲ, ಅದಕ್ಕಾಗಿ ಅವನು ಧರ್ಮಾತ್ಮನಿಲ್ಲ.

**ಆದುದರಿಂದ ವಿವಾಹ ಮೊದಲಾದ ಕುಲಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಮಾತ್ರ ಕುಲಕ್ರಮದ ವಿಚಾರ ಮಾಡುವುದು, ಆದರೆ ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಕುಲದ ವಿಚಾರ ಮಾಡಬಾರದು** ನಿಜವಾದ ಧರ್ಮಮಾರ್ಗವು ಹೇಗಿದೆ ಅದೇ ಪ್ರಕಾರ ಪ್ರವರ್ತನೆ ಮಾಡುವುದು ಯೋಗ್ಯವಿದೆ.

**ಪರೀಕ್ಷೆಯಿಲ್ಲದೆ ಕೇವಲ ಆಜ್ಞಾನುಸಾರ ಧರ್ಮಧಾರಕ ವ್ಯವಹಾರಾಭಾಸಿ ಃ-**

ಅದೆಷ್ಟೋ ಜನರು ಆಜ್ಞಾನುಸಾರಿಯಾದ ಜೈನರಿರುತ್ತಾರೆ. ಅವರು ಶಾಸ್ತ್ರದಲ್ಲಿ ಆಜ್ಞೆಯಿರುವಂತೆ ಮನ್ನಿಸುತ್ತಾರೆ, ಆದರೆ ಆಜ್ಞೆಯ ಪರೀಕ್ಷೆ ಮಾಡುವುದಿಲ್ಲ. ಒಂದು ವೇಳೆ ಆಜ್ಞೆಯನ್ನು ಮನ್ನಿಸುವುದೇ ಧರ್ಮವಿದ್ದರೆ ಸಮಸ್ತ ಮತದವರು ತಮ್ಮ-ತಮ್ಮ ಶಾಸ್ತ್ರದ ಆಜ್ಞೆಯನ್ನು ಮನ್ನಿಸಿ ಧರ್ಮಾತ್ಮರಾಗಿ ಹೋಗುವರು ; ಆದುದರಿಂದ ಪರೀಕ್ಷೆ ಮಾಡಿ ಜಿನವಚನದ ಸತ್ಯತೆಯನ್ನು ಗುರುತಿಸಿ ಜಿನಾಜ್ಞೆಯನ್ನು ಮನ್ನಿಸುವುದು ಯೋಗ್ಯವಿದೆ.

ಪರೀಕ್ಷೆ ಮಾಡಿದಲ್ಲದೆ ಸತ್ಯಾಸತ್ಯತೆಗಳ ನಿರ್ಣಯ ಹೇಗಾಗುವುದು ? ಮತ್ತು ನಿರ್ಣಯಮಾಡಿದಲ್ಲದೆ ಯಾವ ಪ್ರಕಾರ ಅನ್ಯಮತದವರು ತಮ್ಮ ಶಾಸ್ತ್ರಗಳ ಆಜ್ಞೆಯನ್ನು ಮನ್ನಿಸುತ್ತಾರೆ ಅದೇ ಪ್ರಕಾರ ಇವನು ಜೈನ-ಶಾಸ್ತ್ರಗಳ ಆಜ್ಞೆಯನ್ನು ಮನ್ನಿಸುವನು. ಇದಂತೂ ಪಕ್ಷದಿಂದ ಆಜ್ಞೆ ಮನ್ನಿಸುವುದಿದೆ.

**ಪ್ರಶ್ನೆ ಃ-** ಶಾಸ್ತ್ರದಲ್ಲಿ ಹತ್ತು ಪ್ರಕಾರದ ಸಮ್ಯಕ್ತ್ವಗಳಲ್ಲಿ ಆಜ್ಞಾಸಮ್ಯಕ್ತ್ವವನ್ನು ಹೇಳಿದೆ ಮತ್ತು ಆಜ್ಞಾವಿಚಯವೆಂಬ ಧರ್ಮಧ್ಯಾನದ ಭೇದ ಹೇಳಿದೆ, ಅದರಂತೆ ನಿಃಶಂಕಿತ ಅಂಗದೊಳಗೆ ಜಿನವಚನದಲ್ಲಿ ಸಂಶಯದ ನಿಷೇಧ ಮಾಡಿದೆ; ಅದು ಯಾವ ಪ್ರಕಾರವಿದೆ ?

**ಉತ್ತರ ಃ-** ಶಾಸ್ತ್ರಗಳಲ್ಲಿ ಬರುವ ಅದೆಷ್ಟೋ ಕಥನಗಳನ್ನಂತೂ ಪ್ರತ್ಯಕ್ಷ-ಅನುಮಾನಾದಿಗಳ ಮೂಲಕ ಪರೀಕ್ಷೆ ಮಾಡಬಹುದಾಗಿದೆ, ಇನ್ನು ಕೆಲವು ಕಥನಗಳು ಪ್ರತ್ಯಕ್ಷ-ಅನುಮಾನಾದಿಗಳಿಗೆ ಗೋಚರವಿಲ್ಲ; ಆದುದರಿಂದ ಆಜ್ಞೆಯಿಂದಲೇ ಪ್ರಮಾಣವಾಗುತ್ತವೆ. ಅಲ್ಲಿ ನಾನಾ ಶಾಸ್ತ್ರಗಳೊಳಗೆ ಸಮಾನವಾಗಿರುವ ಕಥನಗಳನ್ನಂತೂ ಪರೀಕ್ಷೆ ಮಾಡುವ ಪ್ರಯೋಜನವೇ ಇಲ್ಲ; ಆದರೆ ಪರಸ್ಪರ ವಿರುದ್ಧವಾಗಿರುವಂಥ ಕಥನಗಳೊಳಗಿಂದ ಯಾವ ಕಥನಗಳು ಪ್ರತ್ಯಕ್ಷ-ಅನುಮಾನಾದಿಗಳಿಗೆ ಗೋಚರವಿವೆ. ಅವುಗಳದಂತೂ ಪರೀಕ್ಷೆ ಮಾಡುವುದು. ಅಲ್ಲಿ ಯಾವ ಶಾಸ್ತ್ರಗಳ ಕಥನದ ಪ್ರಾಮಾಣಿಕತೆಯು ನಿರ್ಧರಿಸುವುದು ಆ ಶಾಸ್ತ್ರಗಳಲ್ಲಿ ಪ್ರತ್ಯಕ್ಷ-ಅನುಮಾನಗೋಚರಗಳಿರದಂಥ ಕಥನಗಳನ್ನು ಮಾಡಿದ್ದರೆ ಅವುಗಳದೂ ಪ್ರಮಾಣತೆ ಮಾಡುವುದು. ಮತ್ತು ಯಾವ ಶಾಸ್ತ್ರಗಳ ಕಥನದ ಪ್ರಾಮಾಣಿಕತೆಯು ನಿರ್ಧರಿಸುವುದಿಲ್ಲ ಅವುಗಳ ಎಲ್ಲ ಕಥನಗಳೂ ಅಪ್ರಾಮಾಣಿಕವೆಂದು ಮನ್ನಿಸುವುದು.

**ಪ್ರಶ್ನೆ ಃ-** ಪರೀಕ್ಷೆ ಮಾಡಿದ ಮೇಲೆ ಯಾವುದೇ ಒಂದು ಕಥನವು ಯಾವುದೇ ಒಂದು ಶಾಸ್ತ್ರದಲ್ಲಿ ಪ್ರಾಮಾಣಿಕವಾಗಿ ಭಾಸವಾಗುವುದು, ಮತ್ತು ಒಂದು ಕಥನವು ಯಾವುದೇ ಶಾಸ್ತ್ರದಲ್ಲಿ ಪ್ರಾಮಾಣಿಕವಾಗಿ ಭಾಸವಾಗುವುದು ಆಗ ಏನು ಮಾಡುವುದು ?

**ಉತ್ತರ ಃ-** ಆಪ್ತಭಾಸಿತವಾದ ಶಾಸ್ತ್ರಗಳಲ್ಲಿ ಯಾವುದೇ ಕಥನವು ಪ್ರಮಾಣವಿರುದ್ಧವಾಗಿ ಇರುವುದಿಲ್ಲ. ಏಕೆಂದರೆ ಬುದ್ಧಿವಂತಿಕೆಯೇ ಇರದಿದ್ದರೆ ಅಥವಾ ರಾಗ-ದ್ವೇಷಗಳಿದ್ದರೆ ಮಾತ್ರ ಅಸತ್ಯ ಹೇಳುವರು, ಆದರೆ ಆಪ್ತರು ಹೀಗೆ ಇರುವುದಿಲ್ಲ. ನೀನು ಸರಿಯಾಗಿ ಪರೀಕ್ಷೆ ಮಾಡದಿರುವುದರಿಂದ ನಿನಗೆ ಭ್ರಮೆಯಿದೆ.

**ಪ್ರಶ್ನೆ :-** ಛದ್ಮಸ್ಥನಿಗೆ ವಿಪರೀತ ಪರೀಕ್ಷೆಯಾಗಿ ಹೋದರೆ ಅವನೇನು ಮಾಡುವುದು ?

**ಉತ್ತರ :-** ಸತ್ಯ-ಅಸತ್ಯ ಎರಡೂ ವಸ್ತುಗಳನ್ನು ಉಜ್ಜುವುದರಿಂದ ಮತ್ತು ಪ್ರಮಾದರಹಿತರಾಗಿ ಪರೀಕ್ಷೆ ಮಾಡುವುದರಿಂದ ನಿಜವಾದ ಪರೀಕ್ಷೆಯೇ ಆಗುತ್ತದೆ. ಪಕ್ಷಪಾತದ ಕಾರಣದಿಂದಾಗಿ ಸರಿಯಾದ ಪರೀಕ್ಷೆ ಮಾಡದಿದ್ದರೆ ಅಲ್ಲಿ ವಿಪರೀತ ಪರೀಕ್ಷೆಯಾಗುತ್ತದೆ.

**ಪ್ರಶ್ನೆ :-** ಶಾಸ್ತ್ರಗಳಲ್ಲಿ ಪರಸ್ಪರ ವಿರುದ್ಧವಾದ ಕಥನಗಳಂತೂ ಸಾಕಷ್ಟಿವೆ, ಯಾವ-ಯಾವುದರ ಪರೀಕ್ಷೆ ಮಾಡುವುದು ?

**ಉತ್ತರ :-** ಮೋಕ್ಷಮಾರ್ಗದಲ್ಲಿ ದೇವ-ಗುರು-ಧರ್ಮ, ಜೀವಾದಿ ತತ್ತ್ವಗಳು ಮತ್ತು ಬಂಧ-ಮೋಕ್ಷ ಮಾರ್ಗಗಳು ಪ್ರಯೋಜನಭೂತವಿವೆ, ಆದುದರಿಂದ ಇವುಗಳ ಪರೀಕ್ಷೆ ಮಾಡಿಕೊಳ್ಳಬೇಕು. ಯಾವ ಶಾಸ್ತ್ರಗಳಲ್ಲಿ ಇವನ್ನು ಸರಿಯಾಗಿ ಹೇಳಿದೆ ಅವುಗಳ ಎಲ್ಲ ಆಜ್ಞೆಯನ್ನು ಮನ್ನಿಸಬೇಕು. ಯಾವವುಗಳಲ್ಲಿ ಇವುಗಳ ಪ್ರರೂಪಣೆಯು ವಿಪರೀತವಾಗಿದೆ ಅವುಗಳ ಆಜ್ಞೆಯನ್ನು ಮನ್ನಿಸಬಾರದು.

ಯಾವ ಪ್ರಕಾರ ಲೋಕದಲ್ಲಿ ಪ್ರಯೋಜನಭೂತವಾದ ಕಾರ್ಯಗಳಲ್ಲಿ ಅಸತ್ಯ ನುಡಿಯದವನು ಪ್ರಯೋಜನರಹಿತವಾದ ಕಾರ್ಯಗಳಲ್ಲಿ ಹೇಗೆ ಅಸತ್ಯ ನುಡಿಯುವನು ? ಅದೇ ಪ್ರಕಾರ ಪ್ರಯೋಜನಭೂತವಾದ ದೇವಾದಿಕರ ಸ್ವರೂಪವನ್ನು ಅನ್ಯಥಾ ಹೇಳದಂಥ ಶಾಸ್ತ್ರದಲ್ಲಿ ಪ್ರಯೋಜನರಹಿತವಾದ ದ್ವೀಪ-ಸಮುದ್ರಾದಿಗಳ ಕಥನವು ಅನ್ಯಥಾ ಹೇಗಿರುವುದು ? ಏಕೆಂದರೆ ದೇವಾದಿಕರ ಕಥನವನ್ನು ಅನ್ಯಥಾ ಮಾಡುವುದರಿಂದ ವಕ್ತಾರನಿಗೆ ವಿಷಯ-ಕಷಾಯದ ಪೋಷಣೆಯಾಗುತ್ತದೆ.

**ಪ್ರಶ್ನೆ :-** ದೇವಾದಿಕರ ಕಥನವನ್ನಂತೂ ವಿಷಯ-ಕಷಾಯವಶದಿಂದ ಅನ್ಯಥಾ ಮಾಡಲಾಯಿತು; ಆದರೆ ಅವೇ ಶಾಸ್ತ್ರಗಳಲ್ಲಿ ಅನ್ಯಕಥನವನ್ನು ಏತಕ್ಕಾಗಿ ವಿಪರೀತ ಮಾಡಿದೆ ?

**ಉತ್ತರ :-** ಒಂದು ವೇಳೆ ಒಂದೇ ಕಥನವನ್ನು ಅನ್ಯಥಾ ಮಾಡಿದರೆ ಅದರ ಅನ್ಯಥಾತನವು ಶೀಘ್ರವಾಗಿ ಪ್ರಕಟವಾಗಿ ಬಿಡುವುದು ಮತ್ತು ಭಿನ್ನಪದ್ಧತಿಯು ನಿಲ್ಲಲಾರದು; ಆದುದರಿಂದ ಬಹಳಷ್ಟು ಕಥನಗಳನ್ನು ಅನ್ಯಥಾ ಮಾಡುವುದರಿಂದ ಭಿನ್ನಪದ್ಧತಿಯು ನಿಲ್ಲುವುದು. ಅಲ್ಲಿ ತುಚ್ಛಬುದ್ಧಿಯುಳ್ಳವರು ಇದು ಕೂಡ ಮತವಿದೆ, ಇದು ಕೂಡ ಮತವಿದೆಯೆಂದು ಭ್ರಾಂತಿಯಲ್ಲಿ ಬಿದ್ದುಬಿಡುತ್ತಾರೆ. ಆದುದರಿಂದ ಪ್ರಯೋಜನಭೂತದ ಅನ್ಯಥಾತನವನ್ನು ಬೆರೆಸುವ ಸಲುವಾಗಿ ಅಪ್ರಯೋಜನಭೂತ ಕಥನವನ್ನೂ ಬಹಳಷ್ಟು ಅನ್ಯಥಾ ಮಾಡಿದ್ದಾರೆ. ಮತ್ತು ಪ್ರತೀತಿ ಮಾಡಿಸುವ ಸಲುವಾಗಿ ಕೆಲಕೆಲವು ಸತ್ಯಕಥನಗಳನ್ನೂ ಮಾಡಿದ್ದಾರೆ. ಆದರೆ ಚತುರರಿದ್ದವರು ಭ್ರಾಂತಿಯಲ್ಲಿ ಬೀಳುವುದಿಲ್ಲ, ಪ್ರಯೋಜನಭೂತ ಕಥನದ ಪರೀಕ್ಷೆಮಾಡಿ ಯಾವುದು ಸತ್ಯವಾಗಿ ಕಂಡುಬರುತ್ತದೆ ಆ ಮತದ ಸಮಸ್ತ ಆಜ್ಞೆಗಳನ್ನು ಮನ್ನಿಸುವುದು.

ಹಾಗೆ ಪರೀಕ್ಷೆಮಾಡಿದ ಮೇಲೆ ಜೈನಮತವೇ ಸತ್ಯವೆಂದು ತಿಳಿದುಬರುತ್ತದೆ; ಅನ್ಯಮತಗಳಿಲ್ಲ. ಏಕೆಂದರೆ ಇದರ ವಕ್ತಾರರು ವೀತರಾಗ ಸರ್ವಜ್ಞರಿದ್ದಾರೆ, ಅವರು ಅಸತ್ಯವನ್ನು ಏತಕ್ಕಾಗಿ ಹೇಳುವರು ? ಈ ಪ್ರಕಾರ ಜಿನಾಜ್ಞೆಯನ್ನು ಮನ್ನಿಸುವುದರಿಂದ ಆಗುವ ನಿಜವಾದ ಶ್ರದ್ಧೆಯ ಹೆಸರು ಆಜ್ಞಾಸಮ್ಯಕ್ತ್ವವಿದೆ. ಮತ್ತು ಅಲ್ಲಿ ಏಕಾಗ್ರಚಿಂತನವಾಗುವುದರ ಹೆಸರು ಆಜ್ಞಾವಿಚಯ ಧರ್ಮಧ್ಯಾನವಿದೆ.

ಹೀಗೆ ಮನ್ನಿಸದಿರುವುದು ಮತ್ತು ಪರೀಕ್ಷೆ ಮಾಡದೆಯೇ ಆಜ್ಞೆಯನ್ನು ಮನ್ನಿಸುವುದರಿಂದ ಸಮ್ಯಕ್ತ್ವ ಹಾಗೂ ಧರ್ಮಧ್ಯಾನಗಳಾಗಿ ಬಿಡುತ್ತಿದ್ದರೆ ಆ ದ್ರವ್ಯಲಿಂಗಿಗಳು ಆಜ್ಞೆಯನ್ನು ಮನ್ನಿಸಿ ಮುನಿಯಾಗುವರು, ಆಜ್ಞಾನುಸಾರವಾದ ಸಾಧನೆಯಿಂದ ಗ್ರೈವೇಯಕದವರೆಗೆ ಹೋಗುತ್ತಾರೆ, ಆದರೂ ಅವರ ಮಿಥ್ಯಾದೃಷ್ಟಿತ್ವವು ಹೇಗೆ ಉಳಿಯಿತು ? ಆದುದರಿಂದ ಒಂದಿಷ್ಟು ಪರೀಕ್ಷೆ ಮಾಡಿ ಆಜ್ಞೆಯನ್ನು ಮನ್ನಿಸಿದ ನಂತರವೇ ಸಮ್ಯಕ್ತ್ವ ಹಾಗೂ ಧರ್ಮಧ್ಯಾನವಾಗುತ್ತದೆ. ಲೋಕದಲ್ಲೂ ಯಾವುದೇ ಪ್ರಕಾರದ ಪರೀಕ್ಷೆ ಮಾಡಿದ ನಂತರವೇ ಪುರುಷರ ಮೇಲೆ ವಿಶ್ವಾಸವಿಡುತ್ತಾರೆ.

ಅಲ್ಲದೆ ಜಿನವಚನದಲ್ಲಿ ಸಂಶಯಪಡುವುದರಿಂದ ಸಮ್ಯಕ್ತ್ವದಲ್ಲಿ ಶಂಕೆನಾಮದ ದೋಷಬರುತ್ತದೆಂದು ನೀನು ಹೇಳಿದೆ, ಆದರೆ ' ಅದು ಯಾವ ಪ್ರಕಾರವಿದೆ ಯಾರಿಗೆ ಗೊತ್ತೆ'ಂದು ಮನ್ನಿಸಿ ನಿರ್ಣಯ ಮಾಡದಿದ್ದರೆ ಅಲ್ಲಿ ಶಂಕೆನಾಮದ ದೋಷವು ಬರುತ್ತದೆ. ಮತ್ತು ನಿರ್ಣಯಮಾಡುವ ವಿಚಾರ ಮಾಡುತ್ತಿರುವಂತೆಯೇ ಸಮ್ಯಕ್ತ್ವದಲ್ಲಿ ದೋಷವು ತಗಲುತ್ತಿದ್ದರೆ ಅಷ್ಟಸಹಸ್ರಿಯಲ್ಲಿ ಆಜ್ಞಾಪ್ರಧಾನಕ್ಕಿಂತ ಪರೀಕ್ಷಾ ಪ್ರಧಾನವನ್ನು ಉತ್ತಮವೆಂದು ಏತಕ್ಕಾಗಿ ಹೇಳಿದೆ ? ಪ್ರಚ್ಛನಾ ಮೊದಲಾದ ಸ್ವಾಧ್ಯಾಯದ ಅಂಗಗಳನ್ನು ಹೇಗೆ ಹೇಳಿದೆ ? ಪ್ರಮಾಣ-ನಯಗಳಿಂದ ಪದಾರ್ಥಗಳ ನಿರ್ಣಯ ಮಾಡುವ ಉಪದೇಶವನ್ನು ಏತಕ್ಕಾಗಿ ಕೊಡಲಾಗಿದೆ ? ಆದುದರಿಂದ ಪರೀಕ್ಷೆ ಮಾಡಿ ಆಜ್ಞೆಯನ್ನು ಮನ್ನಿಸುವುದು ಯೋಗ್ಯವಿದೆ.

ಅಲ್ಲದೆ ಅದೆಷ್ಟೋ ಪಾಪೀ ಪುರುಷರು ತಮ್ಮ ಕಾಲ್ಪನಿಕ ಕಥನ ಮಾಡಿದ್ದಾರೆ ಮತ್ತು ಅವನ್ನು ಜಿನವಚನವೆಂದು ನಿಶ್ಚಯಿಸಿದ್ದಾರೆ, ಆದರೆ ಅವನ್ನು ಜೈನಮತದ ಶಾಸ್ತ್ರಗಳೆಂದು ತಿಳಿದು ಪ್ರಮಾಣ ಮಾಡಬಾರದು. ಅಲ್ಲಿ ಕೂಡ ಪ್ರಮಾಣ ಮೊದಲಾದವುಗಳಿಂದ ಪರೀಕ್ಷೆ ಮಾಡಿ, ಹಾಗೂ ಶಾಸ್ತ್ರಗಳಿಂದ ಪರಸ್ಪರ ವಿಧಿ ಸರಿಹೊಂದಿಸಿ ಮತ್ತು ಈ ಪ್ರಕಾರ ಸಂಭವವಿದೆಯೋ ಅಥವಾ ಇಲ್ಲವೋ-ಎಂದು ವಿಚಾರ ಮಾಡಿ ವಿರುದ್ಧಾರ್ಥವನ್ನು ಮಿಥ್ಯೆಯೆಂದೇ ತಿಳಿಯಬೇಕು.

ಯಾವ ಪ್ರಕಾರ ಓರ್ವ ಠಕ್ಕನು ಸ್ವಯಂ ಪತ್ರಬರೆದು ಅದರಲ್ಲಿ ಬರೆಯುವವನೆಂದು ಓರ್ವ ಸಾಹುಕಾರನ ಹೆಸರು ಹಾಕಿದರೆ ಆ ಹೆಸರಿನ ಭ್ರಮೆಯಿಂದ ಹಣವನ್ನಪಹರಿಸಿದರೆ ದರಿದ್ರನಾಗುವನು. ಅದೇ ಪ್ರಕಾರ ಪಾಪೀ ಪುರುಷರು ಸ್ವಯಂ ಗ್ರಂಥಗಳನ್ನು ರಚಿಸಿ ಅದರಲ್ಲಿ ಕರ್ತೃವೆಂದು ಜಿನ, ಗಣಧರ, ಆಚಾರ್ಯರುಗಳ ಹೆಸರು ಹಾಕಿದರೆ ಆ ಹೆಸರಿನ ಭ್ರಮೆಯಿಂದ ಸುಳ್ಳು ಶ್ರದ್ಧೆ ಮಾಡಿದರೆ ಮಿಥ್ಯಾದೃಷ್ಟಿಯೇ ಆಗುವನು.

**ಪ್ರಶ್ನೆ :-** ಸಮ್ಯಗ್ದೃಷ್ಟಿ ಜೀವನು ಅಜ್ಞಾನೀ ಗುರುವಿನ ನಿಮಿತ್ತದಿಂದ ಅಸತ್ಯದ ಶ್ರದ್ಧೆ ಮಾಡಿದರೂ ಆಜ್ಞೆಯನ್ನು ಮನ್ನಿಸುವುದರಿಂದ ಸಮ್ಯಗ್ದೃಷ್ಟಿಯೇ ಇದ್ದಾನೆಂದು ಗೊಮ್ಮಟಸಾರದಲ್ಲಿ★ ಹೇಳಿದೆ. ಆದರೆ ಈ ಕಥನ ಹೇಗೆ ಮಾಡಿದೆ ?

**ಉತ್ತರ :-** ಯಾವುದು ಪ್ರತ್ಯಕ್ಷ-ಅನುಮಾನಾದಿಗಳಿಗೆ ಗೋಚರವಿಲ್ಲ, ಮತ್ತು ಸೂಕ್ಷ್ಮತೆಯಿಂದ ನಿರ್ಣಯ ವಾಗುವ ಸಾಧ್ಯತೆಯಿಲ್ಲದಂಥವುಗಳ ಅಪೇಕ್ಷೆಯಿಂದ ಈ ಕಥನವಿದೆ; ಆದರೆ ಮೂಲಭೂತವಾದ

★ ಸಮ್ಮಾಇಟ್ಠೀ ಜೀವೋ ಉವಇಟ್ಠಂ ಪವಯಣಂ ತು ಸದ್ಧಹದಿ ।
ಸದ್ಧಹದಿ ಅಸಬ್ಭಾವಂ ಅಜಾಣಮಾಣೌ ಗುರುಣಿಯೋಗಾ ॥೨೭॥ - ಜೀವಕಾಂಡ

ದೇವ-ಗುರು-ಧರ್ಮಗಳ ಹಾಗೂ ತತ್ತ್ವಾದಿಗಳ ಶ್ರದ್ಧೆಯು ವಿಪರೀತವಾದ ಮೇಲಂತೂ ಸರ್ವಥಾ ಸಮ್ಯಕ್ತ್ವವು ಉಳಿಯುವುದಿಲ್ಲವೆಂದು ನಿಶ್ಚಯ ಮಾಡಬೇಕು. ಆದುದರಿಂದ ಪರೀಕ್ಷೆ ಮಾಡದೆ ಕೇವಲ ಆಜ್ಞೆಯ ಮೂಲಕವೇ ಯಾರು ಜೈನರಿದ್ದಾರೆ ಅವರನ್ನು ಕೂಡ ಮಿಥ್ಯಾದೃಷ್ಟಿಗಳೆಂದು ತಿಳಿಯಬೇಕು.

ಅಲ್ಲದೆ ಎಷ್ಟೋ ಜನರು ಪರೀಕ್ಷೆ ಮಾಡಿಯೂ ಜೈನರಾಗುತ್ತಾರೆ; ಆದರೆ ಮೂಲಭೂತ ಪರೀಕ್ಷೆ ಮಾಡುವುದಿಲ್ಲ. ದಯೆ, ಶೀಲ, ತಪ, ಸಂಯಮ ಮೊದಲಾದ ಕ್ರಿಯೆಗಳಿಂದ, ಮತ್ತು ಪೂಜೆ-ಪ್ರಭಾವನೆ ಮೊದಲಾದ ಕಾರ್ಯಗಳಿಂದ, ಹಾಗೂ ಅತಿಶಯ ಚಮತ್ಕಾರಾದಿಗಳಿಂದ ಅದರಂತೆ ಜಿನಧರ್ಮದಿಂದ ಇಷ್ಟಪ್ರಾಪ್ತಿಯಾಗುವ ಕಾರಣ ಜಿನಮತವನ್ನು ಉತ್ತಮವೆಂದು ತಿಳಿದುಕೊಂಡು ಪ್ರೀತಿವಂತರಾಗಿ ಜೈನರಾಗುತ್ತಾರೆ. ಆದರೆ ಅನ್ಯಮತಗಳಲ್ಲಿ ಕೂಡ ಈ ಕಾರ್ಯಗಳು ಕಂಡು ಬರುತ್ತವೆ; ಆದುದರಿಂದ ಈ ಲಕ್ಷಣಗಳಲ್ಲಂತೂ ಅತಿವ್ಯಾಪ್ತಿಯು ಕಂಡು ಬರುತ್ತದೆ.

**ಪ್ರಶ್ನೆ :-** ಈ ಕಾರ್ಯಗಳು ಜಿನಧರ್ಮದಲ್ಲಿರುವಂತೆ ಅನ್ಯಮತಗಳಲ್ಲಿ ಕಂಡು ಬರುವುದಿಲ್ಲ; ಆದುದರಿಂದ ಅತಿವ್ಯಾಪ್ತಿಯು ಇಲ್ಲವಲ್ಲವೇ ?

**ಉತ್ತರ :-** ಇದಂತೂ ಸತ್ಯವೇ ಇದೆ, ಹೀಗೆಯೇ ಇದೆ. ಆದರೆ ನೀನು ದಯಾದಿಗಳನ್ನು ಮನ್ನಿಸುತ್ತಿರುವೆ, ಅದೇ ಪ್ರಕಾರ ಅವರು ಕೂಡ ನಿರೂಪಣೆ ಮಾಡುತ್ತಾರೆ. ನೀನು ಪರಜೀವಗಳ ರಕ್ಷಣೆಗೆ ದಯೆಯೆಂದು ಹೇಳುತ್ತಿರುವೆ, ಅದನ್ನೇ ಅವರು ಹೇಳುತ್ತಾರೆ. ಇದೇ ಪ್ರಕಾರ ಉಳಿದವುಗಳನ್ನು ತಿಳಿಯುವುದು.

**ಪ್ರಶ್ನೆ :-** ಅವರು ಒಮ್ಮೆ ದಯೆಯನ್ನು ಪ್ರರೂಪಣೆ ಮಾಡಿದರೆ ಇನ್ನೊಮ್ಮೆ ಹಿಂಸೆಯನ್ನು ಪ್ರರೂಪಣೆ ಮಾಡುತ್ತಾರೆ; ಆದುದರಿಂದ ಅವರದು ಒಳ್ಳೆಯದಿಲ್ಲ ?

**ಉತ್ತರ :-** ಅಲ್ಲಿ ದಯೆ ಮೊದಲಾದವು ಅಂಶಮಾತ್ರವಾದರೂ ಬರುವುದರಿಂದ ಈ ಲಕ್ಷಣಗಳಲ್ಲಿ ಅತಿವ್ಯಾಪ್ತಿತನವು ಕಂಡು ಬರುತ್ತದೆ. ಇವುಗಳ ಮೂಲಕ ನಿಜವಾದ ಪರೀಕ್ಷೆಯಾಗುವುದಿಲ್ಲ, ಹೇಗಾಗುತ್ತದೆಯೆಂದರೆ-

ಜಿನಧರ್ಮದಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವನ್ನು ಮೋಕ್ಷಮಾರ್ಗವೆಂದು ಹೇಳಿದೆ. ಅಲ್ಲಿ ನಿಜವಾದ ದೇವಾದಿಗಳ ಹಾಗೂ ಜೀವಾದಿಗಳ ಶ್ರದ್ಧೆ ಮಾಡುವುದರಿಂದ ಸಮ್ಯಕ್ತ್ವವಾಗುತ್ತದೆ, ಮತ್ತು ಅವನ್ನು ತಿಳಿಯುವುದರಿಂದ ಸಮ್ಯಗ್ಜ್ಞಾನವಾಗುತ್ತದೆ, ಹಾಗೂ ವಾಸ್ತವಿಕವಾಗಿ ರಾಗಾದಿಗಳು ದೂರವಾದ ಮೇಲೆ ಸಮ್ಯಕ್ಚಾರಿತ್ರವಾಗುತ್ತದೆ. ಆದುದರಿಂದ ಇವುಗಳ ಸ್ವರೂಪದ ನಿರೂಪಣೆಯನ್ನು ಜಿನಮತದಲ್ಲಿ ಹೇಗೆ ಮಾಡಲಾಗಿದೆ ಹಾಗೆ ಅನ್ಯತ್ರ ಎಲ್ಲಿಯೂ ಮಾಡಲಾಗಿಲ್ಲ. ಮತ್ತು ಜೈನರನ್ನು ಹೊರತು ಪಡಿಸಿ ಅನ್ಯಮತದವರು ಇಂಥ ಕಾರ್ಯ ಮಾಡುವ ಸಾಧ್ಯತೆಯಿಲ್ಲ. ಆದುದರಿಂದ ಇದು ಜಿನ ಮತದ ನಿಜವಾದ ಲಕ್ಷಣವಿದೆ. ಈ ಲಕ್ಷಣವನ್ನು ಗುರುತಿಸಿ ಯಾರು ಪರೀಕ್ಷೆ ಮಾಡುತ್ತಾರೆ ಅವರೇ ಶ್ರದ್ಧೆಯುಳ್ಳವರಿದ್ದಾರೆ, ಇದನ್ನು ಹೊರತು ಪಡಿಸಿ ಅನ್ಯ ಪ್ರಕಾರದಿಂದ ಪರೀಕ್ಷೆ ಮಾಡುವವರು ಅವರು ಮಿಥ್ಯಾದೃಷ್ಟಿಗಳಾಗಿಯೇ ಉಳಿಯುತ್ತಾರೆ.

ಅಲ್ಲದೆ ಕೆಲವರಂತೂ ಸಹವಾಸದಿಂದ ಜೈನಧರ್ಮವನ್ನು ಧಾರಣ ಮಾಡುತ್ತಾರೆ, ಕೆಲವರಂತೂ ಮಹಾಪುರುಷರು ಜಿನಧರ್ಮದಲ್ಲಿ ಪ್ರವರ್ತಿಸುತ್ತಿರುವುದನ್ನು ನೋಡಿ ತಾವೂ ಪ್ರವರ್ತಿಸುತ್ತಾರೆ, ಕೆಲವರಂತೂ

ಅನುಕರಣ ಮಾಡಿ ಜಿನಧರ್ಮದ ಶುದ್ಧ ಅಥವಾ ಅಶುದ್ಧ ಕ್ರಿಯೆಗಳಲ್ಲಿ ಪ್ರವರ್ತಿಸುತ್ತಾರೆ. ಇತ್ಯಾದಿ ಅನೇಕ ಪ್ರಕಾರದ ಜೀವರುಗಳು ತಾವು ವಿಚಾರ ಮಾಡಿ ಜಿನಧರ್ಮದ ರಹಸ್ಯವನ್ನು ಗುರುತಿಸುವುದಿಲ್ಲ ಮತ್ತು ಜೈನವೆಂಬ ನಾಮವನ್ನು ಧಾರಣ ಮಾಡುತ್ತಾರೆ. ಅವರೆಲ್ಲರನ್ನು ಮಿಥ್ಯಾದೃಷ್ಟಿಗಳೆಂದೇ ತಿಳಿಯುವುದು.

ಜಿನಮತದಲ್ಲಿ ಪಾಪದ ಪ್ರವೃತ್ತಿಯು ವಿಶೇಷವಿರುವ ಸಾಧ್ಯತೆಯಿಲ್ಲ ಮತ್ತು ಪುಣ್ಯದ ನಿಮಿತ್ತಗಳು ಬಹಳಷ್ಟು ಇವೆ, ಅದರಂತೆ ಅಲ್ಲಿ ನಿಜವಾದ ಮೋಕ್ಷಮಾರ್ಗದ ಕಾರಣಗಳೂ ಸಂಭವಿಸುತ್ತಿರುತ್ತವೆ; ಆದುದರಿಂದ ಯಾರು ಕುಲ ಮೊದಲಾದವುಗಳಿಂದ ಕೂಡ ಜೈನರಿದ್ದಾರೆ ಅವರು ಇತರರಿಗಿಂತಲೂ ಒಳ್ಳೆಯವರೇ ಇದ್ದಾರೆ.

**ಸಂಸಾರದ ಪ್ರಯೋಜನಾರ್ಥ ಧರ್ಮಧಾರಕ ವ್ಯವಹಾರಾಭಾಸಿ :-**

ಯಾರು ಕಪಟದಿಂದ ಉಪಜೀವನದ ಸಲುವಾಗಿ ದೊಡ್ಡಸ್ತಿಕೆಯ ಸಲುವಾಗಿ ಮತ್ತು ಒಂದಿಷ್ಟು ವಿಷಯ ಕಷಾಯ ಸಂಬಂಧದ ಪ್ರಯೋಜನದ ವಿಚಾರ ಮಾಡಿ ಜೈನರಾಗುತ್ತಾರೆ ಅವರಂತೂ ಪಾಪಿಗಳೇ ಇದ್ದಾರೆ. ಅತ್ಯಂತ ತೀವ್ರ ಕಷಾಯವಿದ್ದ ಮೇಲೆ ಇಂಥ ಬುದ್ಧಿ ಬರುತ್ತದೆ. ಅವುಗಳ ತೊಡಕು ಬಿಡುವದೂ ಕಠಿಣವಿದೆ. ಜೈನಧರ್ಮದ ಸೇವನೆಯನ್ನಂತೂ ಸಂಸಾರ ನಾಶದ ಸಲುವಾಗಿ ಮಾಡಲಾಗುತ್ತದೆ, ಆದರೆ ಅದರ ಮೂಲಕ ಸಂಸಾರದ ಪ್ರಯೋಜನ ಸಾಧಿಸಲಪೇಕ್ಷಿಸುವವರು ದೊಡ್ಡ ಅನ್ಯಾಯ ಮಾಡುತ್ತಾರೆ. ಆದುದರಿಂದ ಅವರಂತೂ ಮಿಥ್ಯಾದೃಷ್ಟಿಗಳೇ ಇದ್ದಾರೆ.

**ಪ್ರಶ್ನೆ :-** ಹಿಂಸಾದಿಗಳ ಮೂಲಕ ಯಾವ ಕಾರ್ಯಗಳನ್ನು ಮಾಡುತ್ತಾರೋ ಅವೇ ಕಾರ್ಯಗಳನ್ನು ಧರ್ಮ ಸಾಧನದ ಮೂಲಕ ಸಿದ್ಧಮಾಡಹೋದರೆ ತಪ್ಪೇನಿದೆ ? ಎರಡೂ ಪ್ರಯೋಜನಗಳು ಸಿದ್ಧವಾಗುತ್ತವಲ್ಲವೇ?

**ಉತ್ತರ :-** ಪಾಪಕಾರ್ಯ ಮತ್ತು ಧರ್ಮಕಾರ್ಯವನ್ನು ಒಂದು ಸಾಧನವನ್ನಾಗಿ ಮಾಡುವುದರಿಂದ ಪಾಪವೇ ಆಗುತ್ತದೆ. ಹೇಗೆಂದರೆ ಒಬ್ಬನು ಧರ್ಮದ ಸಾಧನವೆಂದು ಚೈತ್ಯಾಲಯ ಕಟ್ಟಿಸಿದನು. ಮತ್ತು ಅದನ್ನು ಸ್ತ್ರೀ ಸೇವನೆ ಮೊದಲಾದ ಪಾಪಗಳ ಸಾಧನವನ್ನಾಗಿಯೂ ಮಾಡಿದರೆ ಪಾಪವೇ ಆಗುವುದು. ಹಿಂಸಾದಿಗಳ ಮೂಲಕ ಭೋಗಾದಿಗಳ ಕಾರಣವಾಗಿ ಬೇರೆ ಮನೆ ಕಟ್ಟಿಸುತ್ತಿದ್ದರೆ ಕಟ್ಟಿಸಲಿ, ಆದರೆ ಚೈತ್ಯಾಲಯದಲ್ಲಿ ಭೋಗಾದಿಗಳನ್ನು ಮಾಡುವುದು ಯೋಗ್ಯವಿಲ್ಲ. ಅದೇ ಪ್ರಕಾರ ಧರ್ಮದ ಸಾಧನವೂ ಪೂಜೆ, ಶಾಸ್ತ್ರಾದಿಗಳ ಕಾರ್ಯಗಳಿದ್ದು, ಅವನ್ನು ಉಪಜೀವನ ಮೊದಲಾದ ಪಾಪದ ಸಾಧನವನ್ನಾಗಿಯೂ ಮಾಡಿದರೆ ಪಾಪಿಯೇ ಆಗುವನು. ಹಿಂಸೆಯಿಂದ ಉಪಜೀವನದ ಸಲುವಾಗಿ ವ್ಯಾಪಾರಾದಿಗಳನ್ನು ಮಾಡುತ್ತಿದ್ದರೆ ಮಾಡಲಿ, ಆದರೆ ಪೂಜಾದಿಕಾರ್ಯಗಳಲ್ಲಿ ಉಪಜೀವನ ಮೊದಲಾದ ಪ್ರಯೋಜನದ ವಿಚಾರ ಮಾಡುವುದು ಯೋಗ್ಯವಿಲ್ಲ.

**ಪ್ರಶ್ನೆ :-** ಹೀಗಿದ್ದರೆ ಮುನಿಗಳು ಕೂಡ ಧರ್ಮಸಾಧನ ಮಾಡಿ ಇನ್ನೊಬ್ಬರ ಮನೆಯಲ್ಲಿ ಭೋಜನ ಮಾಡುತ್ತಾರೆ ಮತ್ತು ಸಾಧರ್ಮಿಯು ಸಾಧರ್ಮಿಗಳಿಗೆ ಉಪಕಾರ ಮಾಡುತ್ತಾರೆ-ಮಾಡಿಸಿಕೊಳ್ಳುತ್ತಾರೆ ಅದು ಹೇಗೆ ಆಗುವುದು ?

**ಉತ್ತರ :-** ಅವರು ತಾವಂತೂ ಯಾವ ಉಪಜೀವನ ಮೊದಲಾದ ಪ್ರಯೋಜನದ ವಿಚಾರ ಮಾಡಿ ಧರ್ಮಸಾಧನೆ ಮಾಡುವುದಿಲ್ಲ. ಅವರನ್ನು ಧರ್ಮಾತ್ಮರೆಂದು ತಿಳಿದುಕೊಂಡು ಅನೇಕರು ತಾವಾಗಿಯೇ ಭೋಜನ

ಉಪಕಾರಾದಿಗಳನ್ನು ಮಾಡುತ್ತಾರೆ, ಆಗಂತೂ ಯಾವ ದೋಷವಿಲ್ಲ; ಮತ್ತು ತಾವು ಭೋಜನ ಮೊದಲಾದ ಪ್ರಯೋಜನದ ವಿಚಾರ ಮಾಡಿ ಧರ್ಮಸಾಧಿಸುತ್ತಿದ್ದರೆ ಪಾಪಿಗಳೇ ಸರಿ. ವಿರಕ್ತರಾಗಿ ಮುನಿಪದವನ್ನು ಅಂಗೀಕಾರ ಮಾಡುವವರಿಗೆ ಭೋಜನಾದಿಗಳ ಪ್ರಯೋಜನವಿರುವುದಿಲ್ಲ. ಶರೀರ ಸ್ಥಿರತೆಯ ಸಲುವಾಗಿ ಯಾರಾದರೂ ತಾವಾಗಿಯೇ ಭೋಜನಾದಿಗಳನಿತ್ತರೆ ಸ್ವೀಕರಿಸುತ್ತಾರೆ ಇಲ್ಲದಿದ್ದರೆ ಸಮತೆಯನ್ನಿಡುತ್ತಾರೆ, ಸಂಕ್ಲೇಶರೂಪರಾಗುವುದಿಲ್ಲ. ಮತ್ತು ತಮ್ಮ ಹಿತದ ಸಲುವಾಗಿ ಧರ್ಮ ಸಾಧಿಸುತ್ತಾರೆ. ಉಪಕಾರ ಮಾಡಿಸಿಕೊಳ್ಳುವ ಅಭಿಪ್ರಾಯವಿರುವುದಿಲ್ಲ; ಮತ್ತು ತಮಗೆ ಯಾವುದರ ತ್ಯಾಗವಿಲ್ಲ ಅದರ ಉಪಕಾರ ಮಾಡಿಸಿಕೊಳ್ಳುತ್ತಾರೆ ಯಾವನಾದರೂ ಸಾಧರ್ಮಿಯು ತಾನಾಗಿಯೇ ಉಪಕಾರ ಮಾಡುತ್ತಿದ್ದರೆ ಮಾಡಲಿ, ಮತ್ತು ಒಂದು ವೇಳೆ ಮಾಡದಿದ್ದರೆ ಅವರಿಗೆ ಯಾವ ಸಂಕ್ಲೇಶವಾಗುವುದಿಲ್ಲ. ಆದುದರಿಂದ ಹೀಗಂತೂ ಯೋಗ್ಯವಿದೆ. ಆದರೆ ತಾವೇ ಉಪಜೀವನಾದಿ ಪ್ರಯೋಜನದ ವಿಚಾರ ಮಾಡಿ ಬಾಹ್ಯಧರ್ಮದ ಸಾಧನ ಮಾಡುವಲ್ಲಿ ಯಾರೂ ಭೋಜನಾದಿಗಳ ಉಪಕಾರ ಮಾಡದಿರುವಾಗ ಸಂಕ್ಲೇಶ ಪಟ್ಟರೆ, ಯಾಚನೆ ಮಾಡಿದರೆ, ಉಪಾಯ ಮಾಡಿದರೆ, ಅಥವಾ ಧರ್ಮ ಸಾಧನೆಯಲ್ಲಿ ಶಿಥಿಲನಾಗಿ ಹೋದರೆ ಅವನನ್ನು ಪಾಪಿಯೆಂದೇ ತಿಳಿಯುವುದು.

ಈ ಪ್ರಕಾರ ಸಂಸಾರದ ಪ್ರಯೋಜನದೊಡನೆ ಧರ್ಮ ಸಾಧಿಸುವವರು ಪಾಪಿಗಳೇ ಇದ್ದಾರೆ ಮತ್ತು ಅವರು ಮಿಥ್ಯಾದೃಷ್ಟಿಗಳೇ ಇದ್ದಾರೆ.

ಈ ಪ್ರಕಾರ ಜಿನಮತವುಳ್ಳವರೂ ಮಿಥ್ಯಾದೃಷ್ಟಿಗಳೆಂದು ತಿಳಿಯುವುದು.

**ಉಕ್ತವ್ಯವಹಾರಾಭಾಸಿ ಧರ್ಮಧಾರಕರ ಸಾಮಾನ್ಯ ಪ್ರವೃತ್ತಿ :-**

ಈಗ ಇವರ ಧರ್ಮಸಾಧನೆಯು ಹೇಗೆ ಕಂಡುಬರುತ್ತದೆಂಬುದನ್ನು ವಿಶೇಷವಾಗಿ ತಿಳಿಸಿಕೊಡುತ್ತಾರೆ.

ಅಲ್ಲಿ ಎಷ್ಟೋ ಜನರು ಕುಲಪ್ರವೃತ್ತಿಯಿಂದ ಅಥವಾ ಅನುಕರಣ ಮಾಡಿ ಲೋಭಾದಿಗಳ ಅಭಿಪ್ರಾಯದಿಂದ ಧರ್ಮಸಾಧನೆ ಮಾಡುತ್ತಾರೆ, ಅವರಿಗಂತೂ ಧರ್ಮದೃಷ್ಟಿಯೇ ಇಲ್ಲ.

ಭಕ್ತಿ ಮಾಡುತ್ತಿದ್ದರೆ ಚಿತ್ತವು ಎಲ್ಲಿಯೋ ಇರುತ್ತದೆ, ದೃಷ್ಟಿಯು ಸುತ್ತುತ್ತಿರುತ್ತದೆ. ಮತ್ತು ಮುಖದಿಂದ ಪಾಠಾದಿಗಳನ್ನು ಹೇಳುತ್ತಾರೆ ಹಾಗೂ ನಮಸ್ಕಾರಾದಿಗಳನ್ನು ಮಾಡುತ್ತಾರೆ; ಆದರೆ ಇದು ಒಳ್ಳೆಯದಿಲ್ಲ ನಾನು ಯಾರು, ಯಾರ ಸ್ತುತಿ ಮಾಡುತ್ತಿರುವೆನು, ಯಾವ ಪ್ರಯೋಜನದ ಸಲುವಾಗಿ ಸ್ತುತಿ ಮಾಡುತ್ತಿರುವೆನು ಪಾಠದಲ್ಲಿ ಯಾವ ಅರ್ಥವಿದೆ, ಇವು ಯಾವುದರ ಎಚ್ಚರವೇ ಇಲ್ಲ.

ಅಲ್ಲದೆ ಒಮ್ಮೊಮ್ಮೆ ಕುದೇವಾದಿಗಳ ಸೇವನೆಯನ್ನು ಕೂಡ ಮಾಡತೊಡಗುತ್ತಾನೆ; ಅಲ್ಲಿ ಸುದೇವ-ಗುರು-ಶಾಸ್ತ್ರಾದಿಗಳ ಮತ್ತು ಕುದೇವ-ಗುರು-ಶಾಸ್ತ್ರಾದಿಗಳ ವಿಶೇಷ ಪರಿಚಯವೇ ಇಲ್ಲ.

ಮತ್ತು ದಾನ ಕೊಡುವುದಾದರೆ ಪಾತ್ರ-ಅಪಾತ್ರಗಳ ವಿಚಾರವಿಲ್ಲದೆ ತನ್ನ ಪ್ರಶಂಸೆಯಾಗುವಂತೆ ದಾನ ಕೊಡುತ್ತಾನೆ.

ಮತ್ತು ತಪಸ್ಸು ಮಾಡುವುದಾದರೆ ಉಪವಾಸವಿದ್ದುಕೊಂಡು ದೊಡ್ಡಸ್ತನ ಬರುವಂಥ ಕಾರ್ಯ ಮಾಡುತ್ತಾನೆ; ಪರಿಣಾಮಗಳ ಪರಿಚಯವೇ ಇರುವುದಿಲ್ಲ.

ಅದರಂತೆ ವ್ರತಾದಿಗಳನ್ನು ಧಾರಣ ಮಾಡುವುದಾದರೆ ಅಲ್ಲಿ ಬಾಹ್ಯ ಕ್ರಿಯೆಗಳ ಮೇಲೆ ದೃಷ್ಟಿಯಿರುತ್ತದೆ; ಅದೂ ಓರ್ವನು ನಿಜವಾದ ಕ್ರಿಯೆ ಮಾಡಿದರೆ ಓರ್ವನು ಸಟೆಯಾದ ಕ್ರಿಯೆ ಮಾಡುತ್ತಾನೆ; ಮತ್ತು ಅಂತರಂಗದಲ್ಲಿ ರಾಗಾದಿಭಾವಗಳು ಕಂಡುಬರುತ್ತವೆ ಅವುಗಳ ವಿಚಾರವೇ ಇಲ್ಲ. ಮತ್ತು ಬಾಹ್ಯದಲ್ಲೂ ರಾಗಾದಿಗಳ ಪೋಷಣೆಯ ಸಾಧನ ಮಾಡುತ್ತಾನೆ.

ಅದರಂತೆ ಪೂಜೆ-ಪ್ರಭಾವನೆ ಮೊದಲಾದ ಕಾರ್ಯ ಮಾಡುವುದಾದರೆ ಅಲ್ಲಿ ಲೋಕದೊಳಗೆ ಯಾವ ಪ್ರಕಾರ ಪ್ರಶಂಸೆಯಾಗುವುದು, ಹಾಗೂ ವಿಷಯ-ಕಷಾಯಗಳ ಪೋಷಣೆಯಾಗುವುದು ಆ ಪ್ರಕಾರ ಕಾರ್ಯ ಮಾಡುತ್ತಾನೆ. ಮತ್ತು ಬಹಳಷ್ಟು ಹಿಂಸಾದಿಗಳನ್ನು ಉತ್ಪನ್ನ ಮಾಡುತ್ತಾನೆ.

ಈ ಕಾರ್ಯಗಳನ್ನಂತೂ ತಮ್ಮ ಹಾಗೂ ಅನ್ಯ ಜೀವರುಗಳ ಪರಿಣಾಮವು ಸುಧಾರಿಸುವ ಸಲುವಾಗಿ ಹೇಳಿದ್ದಾರೆ. ಇನ್ನು ಇಲ್ಲಿ ಒಂದಿಷ್ಟು ಹಿಂಸಾದಿಗಳೂ ಉತ್ಪನ್ನವಾಗುತ್ತವೆ, ಆದರೆ ಯಾವುದರಲ್ಲಿ ಕಡಿಮೆ ಅಪರಾಧವಿದೆ ಮತ್ತು ಗುಣಗಳು ಅಧಿಕವಿವೆ. ಆ ಕಾರ್ಯ ಮಾಡಲು ಹೇಳಿದೆ. ಆದರೆ ಪರಿಣಾಮಗಳದ್ದಂತೂ ಪರಿಚಯವೇ ಇಲ್ಲ ಮತ್ತು ಎಲ್ಲಿ ಎಷ್ಟು ಅಪರಾಧಗಳಾಗುತ್ತವೆ, ಗುಣಗಳೆಷ್ಟಾಗುತ್ತವೆಂಬ ಲಾಭ-ಹಾನಿಯ ಜ್ಞಾನವೇ ಇಲ್ಲ ಅದರಂತೆ ವಿಧಿ-ನಿಷೇಧಗಳ ಜ್ಞಾನ ಕೂಡ ಇಲ್ಲ.

ಇನ್ನು ಶಾಸ್ತ್ರಾಭ್ಯಾಸ ಮಾಡುವುದಾದರೆ ಅಲ್ಲಿ ಪದ್ಧತಿಗೆ ಅನುಸರಿಸಿ ಪ್ರವರ್ತಿಸುತ್ತಾನೆ. ಓದುವುದಾದರೆ ಇತರರಿಗೆ ಕೇಳಿಸುವಂತೆ ಓದುತ್ತಾನೆ, ಪಾಠ ಹೇಳುವುದಾದರೆ ತಾನು ಓದಿ ಬಿಡುತ್ತಾನೆ, ಕೇಳುವುದಾದರೆ ಏನು ಹೇಳುತ್ತಾನೆ ಅದನ್ನು ಕೇಳಿಕೊಳ್ಳುತ್ತಾನೆ; ಆದರೆ ಯಾವುದು ಶಾಸ್ತ್ರಾಭ್ಯಾಸದ ಪ್ರಯೋಜನವಿದೆ ಅದನ್ನು ತಾನು ಅಂತರಂಗದಲ್ಲಿ ಇಳಿಸಿಕೊಳ್ಳುವುದಿಲ್ಲ. ಇವೇ ಮೊದಲಾದ ಧರ್ಮಕಾರ್ಯಗಳ ಮರ್ಮವನ್ನು ಪರಿಚಯಿಸಿ ಕೊಳ್ಳುವುದಿಲ್ಲ.

ಕೆಲವರಂತೂ ತಮ್ಮ ಕುಲದಲ್ಲಿ ದೊಡ್ಡವರು ಯಾವ ಪ್ರಕಾರ ಪ್ರವರ್ತಿಸುತ್ತಾರೆ ಅದೇ ಪ್ರಕಾರ ನಾವೂ ಮಾಡುವುದಿದೆ, ಅಥವಾ ಇತರರು ಮಾಡುವಂತೆ ನಾವೂ ಮಾಡುವುದು, ಮತ್ತು ಹೀಗೆ ಮಾಡುವುದರಿಂದ ನಮ್ಮ ಲೋಭಾದಿಗಳ ಸಿದ್ಧಿಯಾಗುವುದು. ಇವೇ ಮೊದಲಾದ ವಿಚಾರ ಸಹಿತ ಅಭೂತಾರ್ಥವಾದ ಧರ್ಮವನ್ನು ಸಾಧಿಸುತ್ತಾರೆ.

ಇನ್ನು ಒಂದಿಷ್ಟು ಕುಲಾದಿರೂಪದ ಬುದ್ಧಿಯಿರುವಂಥ, ಒಂದಿಷ್ಟು ಧರ್ಮಬುದ್ಧಿಯಿರುವಂಥವರೂ ಕೆಲವರಿದ್ದಾರೆ. ಆದುದರಿಂದ ಪೂರ್ವೋಕ್ತ ಪ್ರಕಾರವಾಗಿಯೂ ಧರ್ಮದ ಸಾಧನೆ ಮಾಡುತ್ತಾರೆ. ಮತ್ತು ಕೆಲವರು ಮುಂದೆ ಹೇಳುವ ರೀತಿಯಿಂದ ತಮ್ಮ ಪರಿಣಾಮಗಳನ್ನೂ ತಿದ್ದಿಕೊಳ್ಳುತ್ತಾರೆ, ಹೀಗೆ ಮಿಶ್ರಿತನವು ಕಂಡು ಬರುತ್ತದೆ.

## ಧರ್ಮಬುದ್ಧಿಯಿಂದ ಧರ್ಮಧಾರಕ ವ್ಯವಹಾರಾಭಾಸಿ :-

ಅದೆಷ್ಟೋ ಜನರು ಧರ್ಮ ಬುದ್ಧಿಯಿಂದ ಧರ್ಮಸಾಧಿಸುತ್ತಾರೆ, ಆದರೆ ನಿಶ್ಚಯಧರ್ಮವನ್ನು ತಿಳಿಯದಿರುವುದರಿಂದ ಅಭೂತಾರ್ಥರೂಪವಾದ ಧರ್ಮವನ್ನು ಸಾಧಿಸುತ್ತಾರೆ. ಅವರು ವ್ಯವಹಾರ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರವನ್ನು ಮೋಕ್ಷಮಾರ್ಗವೆಂದು ತಿಳಿದುಕೊಂಡು ಅವುಗಳ ಸಾಧನೆ ಮಾಡುತ್ತಾರೆ.

## ಸಮ್ಯಗ್ದರ್ಶನದ ಅನ್ಯಥಾರೂಪ

ದೇವ-ಗುರು-ಧರ್ಮದ ಪ್ರತೀತಿ ಮಾಡುವುದರಿಂದ ಸಮ್ಯಕ್ತ್ವವಾಗುತ್ತದೆಂದು ಶಾಸ್ತ್ರದಲ್ಲಿ ಹೇಳಿದೆ. ಇಂಥ ಆಜ್ಞೆಯನ್ನು ಮನ್ನಿಸಿ ಅರಹಂತದೇವ, ನಿರ್ಗ್ರಂಥಗುರು, ಜೈನಶಾಸ್ತ್ರಗಳನ್ನು ಹೊರತು ಪಡಿಸಿ ಇತರರಿಗೆ ನಮಸ್ಕಾರಾದಿಗಳನ್ನು ಮಾಡುವುದರ ತ್ಯಾಗ ಮಾಡಿದೆ; ಆದರೆ ಅವರ ಗುಣ-ಅವಗುಣಗಳ ಪರೀಕ್ಷೆ ಮಾಡುವುದಿಲ್ಲ, ಅಥವಾ ಪರೀಕ್ಷೆ ಮಾಡಿದರೂ ಕೂಡ ತತ್ತ್ವಜ್ಞಾನಪೂರ್ವಕವಾಗಿ ನಿಜವಾದ ಪರೀಕ್ಷೆ ಮಾಡುವುದಿಲ್ಲ, ಬಾಹ್ಯ ಲಕ್ಷಣಗಳ ಮುಖಾಂತರ ಪರೀಕ್ಷೆ ಮಾಡುತ್ತಾರೆ. ಇಂಥ ಪ್ರತೀತಿಯಿಂದ ಸುದೇವ-ಗುರು-ಶಾಸ್ತ್ರಗಳ ಭಕ್ತಿಯಲ್ಲಿ ಪ್ರವರ್ತಿಸುತ್ತಾರೆ.

### ದೇವಭಕ್ತಿಯ ಅನ್ಯಥಾರೂಪ :-

ಅರಹಂತರು ದೇವರಿದ್ದಾರೆ. ಇಂದ್ರಾದಿಗಳಿಂದ ಪೂಜ್ಯರಿದ್ದಾರೆ, ಅನೇಕ ಅತಿಶಯ ಸಹಿತರಿದ್ದಾರೆ, ಕ್ಷುಧೆ ಮೊದಲಾದ ದೋಷಗಳಿಂದ ರಹಿತರಿದ್ದಾರೆ, ಶರೀರದ ಸುಂದರತೆಯನ್ನು ಧಾರಣ ಮಾಡುತ್ತಾರೆ, ಸ್ತ್ರೀ-ಸಂಗಮದಿಂದ ರಹಿತರಿದ್ದಾರೆ, ದಿವ್ಯಧ್ವನಿಯಿಂದ ಉಪದೇಶ ಕೊಡುತ್ತಾರೆ, ಕೇವಲಜ್ಞಾನದಿಂದ ಲೋಕಾಲೋಕಗಳನ್ನು ತಿಳಿಯುತ್ತಾರೆ. ಕಾಮ-ಕ್ರೋಧಾದಿಗಳನ್ನು ನಷ್ಟ ಮಾಡಿದ್ದಾರೆ ಇವೇ ಮೊದಲಾದ ವಿಶೇಷಣ ಹೇಳಿದ್ದಾರೆ. ಇವುಗಳಲ್ಲಿ ಹಲವು ವಿಶೇಷಣಗಳು ಪುದ್ಗಲಾಶ್ರಿತವಿದ್ದರೆ ಹಲವು ಜೀವಾಶ್ರಿತವಿವೆ, ಅವನ್ನು ಭಿನ್ನ ಭಿನ್ನವಾಗಿ ಗುರುತಿಸುವುದಿಲ್ಲ. ಯಾವ ಪ್ರಕಾರ ಓರ್ವನು ಅಸಮಾನ ಜಾತೀಯ ಮನುಷ್ಯಾದಿ ಪರ್ಯಾಯಗಳಲ್ಲಿ ಜೀವ-ಪುದ್ಗಲದ ವಿಶೇಷಣಗಳನ್ನು ಭಿನ್ನವಾಗಿ ತಿಳಿದುಕೊಳ್ಳದೆ ಮಿಥ್ಯಾದೃಷ್ಟಿಯನ್ನು ಧಾರಣ ಮಾಡುತ್ತಾನೆ, ಅದೇ ಪ್ರಕಾರ ಇವನೂ ಅಸಮಾನ ಜಾತೀಯ ಅರಹಂತ ಪರ್ಯಾಯದಲ್ಲಿ ಜೀವ-ಪುದ್ಗಲದ ವಿಶೇಷಣಗಳನ್ನು ಭಿನ್ನವಾಗಿ ತಿಳಿದುಕೊಳ್ಳದೆ ಮಿಥ್ಯಾದೃಷ್ಟಿಯನ್ನು ಧಾರಣ ಮಾಡುತ್ತಾನೆ.

ಅದರಂತೆ ಆ ಬಾಹ್ಯ ವಿಶೇಷಣಗಳನ್ನು ತಿಳಿದುಕೊಂಡು ಅವುಗಳ ಮೂಲಕ ಅರಹಂತದೇವರ ಮಹಾನತೆಯನ್ನು ವಿಶೇಷವಾಗಿ ಮನ್ನಿಸುತ್ತಾನೆ, ಮತ್ತು ಆ ಜೀವದ ವಿಶೇಷಣಗಳನ್ನು ಯಥಾವತ್ತಾಗಿ ತಿಳಿದುಕೊಳ್ಳದೆ ಅವುಗಳ ಮೂಲಕ ಅರಹಂತದೇವರ ಮಹಾನತೆಯನ್ನು ಆಜ್ಞಾನುಸಾರವಾಗಿ ಮನ್ನಿಸುತ್ತಾನೆ ಅಥವಾ ಅನ್ಯಥಾ ಮನ್ನಿಸುತ್ತಾನೆ. ಏಕೆಂದರೆ ಯಥಾವತ್ತಾಗಿ ಜೀವದ ವಿಶೇಷಣಗಳನ್ನು ತಿಳಿದುಕೊಂಡರೆ ಮಿಥ್ಯಾದೃಷ್ಟಿಯಾಗಿ ಉಳಿಯುವುದಿಲ್ಲ.

ಅದರಂತೆ ಆ ಅರಹಂತರನ್ನು ಸ್ವರ್ಗ-ಮೋಕ್ಷದಾತೃ, ದೀನದಯಾಳು, ಅಧಮೋದ್ಧಾರಕ, ಪತಿತಪಾವನರೆಂದು ಮನ್ನಿಸುತ್ತಾನೆ; ಅನ್ಯಮತದವರು ಕರ್ತೃತ್ವ ಬುದ್ಧಿಯಿಂದ ಹೇಗೆ ಈಶ್ವರನನ್ನು ಮನ್ನಿಸುತ್ತಾರೆ. ಅದೇ ಪ್ರಕಾರ ಇವನು ಅರಹಂತರನ್ನು ಮನ್ನಿಸುತ್ತಾನೆ. ಆದರೆ ಫಲವಂತೂ ತಮ್ಮ ಪರಿಣಾಮಕ್ಕೆ ಅನುಸರಿಸಿ ದೊರಕುತ್ತಿದ್ದು ಅರಹಂತರು ಅವಕ್ಕೆ ನಿಮಿತ್ತ ಮಾತ್ರರಿದ್ದಾರೆ, ಆದುದರಿಂದ ಆ ವಿಶೇಷಣಗಳು ಉಪಚಾರದಿಂದ ಸಂಭವಿಸುತ್ತವೆಂಬುದನ್ನು ತಿಳಿದುಕೊಳ್ಳುವುದಿಲ್ಲ.

ತಮ್ಮ ಪರಿಣಾಮಗಳು ಶುದ್ಧವಾದಲ್ಲದೆ ಅರಹಂತರು ಕೂಡ ಸ್ವರ್ಗ-ಮೋಕ್ಷಾದಿಗಳ ದಾತೃಗಳಿಲ್ಲ. ಮತ್ತು

ಅರಹಂತಾದಿಕರ ನಾಮಾದಿಗಳಿಂದ ಶ್ವಾನ ಮೊದಲಾದವು ಸ್ವರ್ಗ ಪಡೆದುವೆನ್ನುವಲ್ಲಿ ನಾಮಾದಿಗಳ ಅತಿಶಯವನ್ನೇ ಮನ್ನಿಸುತ್ತಾರೆ; ಆದರೆ ಪರಿಣಾಮವಿಲ್ಲದೆ ಕೇವಲ ನಾಮಸ್ಮರಣೆಯಿಂದಲೇ ಸ್ವರ್ಗದ ಪ್ರಾಪ್ತಿಯಾಗುವುದಿಲ್ಲ, ಎಂದ ಮೇಲೆ ಕೇಳುವವರಿಗೆ ಹೇಗೆ ಆಗುವುದು ? ಶ್ವಾನ ಮೊದಲಾದವುಗಳಿಗೆ ಹೆಸರು ಕೇಳುವ ನಿಮಿತ್ತದಿಂದ ಸ್ವಲ್ಪಾದರೂ ಮಂದ ಕಷಾಯರೂಪದ ಭಾವಗಳಾಗಿರಬೇಕು, ಅವುಗಳ ಫಲದಿಂದ ಸ್ವರ್ಗವಾಗಿದೆ; ಉಪಚಾರದಿಂದ ಹೆಸರಿನ ಮುಖ್ಯತೆಯನ್ನೇ ಮಾಡಿದೆ.

ಅರಹಂತಾದಿಕರ ನಾಮಸ್ಮರಣೆ-ಪೂಜಾದಿಗಳಿಂದ ಅನಿಷ್ಟ ಸಾಮಗ್ರಿಯ ನಾಶ ಹಾಗೂ ಇಷ್ಟ ಸಾಮಗ್ರಿಯ ಪ್ರಾಪ್ತಿಯಾಗುತ್ತದೆಂದು ಮನ್ನಿಸಿ, ರೋಗಾದಿಗಳ ನಾಶದ ಸಲುವಾಗಿ ಹಾಗೂ ಧನಾದಿಗಳ ಪ್ರಾಪ್ತಿಯ ಸಲುವಾಗಿ ನಾಮಸ್ಮರಣೆ ಮತ್ತು ಪೂಜಾದಿಗಳನ್ನು ಮಾಡುತ್ತಾರೆ. ಆದರೆ ಇಷ್ಟ-ಅನಿಷ್ಟದ ಕಾರಣವಂತೂ ಪೂರ್ವಕರ್ಮದ ಉದಯವಿದ್ದು ಅರಹಂತರಂತೂ ಕರ್ತೃಗಳಿಲ್ಲ. ಅರಹಂತ ಮೊದಲಾದವರ ಭಕ್ತಿರೂಪದ ಶುಭೋಪಯೋಗ ಪರಿಣಾಮಗಳಿಂದ ಪೂರ್ವಪಾಪದ ಸಂಕ್ರಮಣಾದಿಗಳು ಆಗುತ್ತವೆ, ಆದುದರಿಂದ ಅರಹಂತಾದಿಕರ ಭಕ್ತಿಯು ಅನಿಷ್ಟದ ನಾಶಕ ಹಾಗೂ ಇಷ್ಟದ ಪ್ರಾಪ್ತಿಯ ಕಾರಣವೆಂದು ಉಪಚಾರದಿಂದ ಹೇಳಲಾಗುತ್ತದೆ. ಆದರೆ ಯಾರು ಮೊದಲಿನಿಂದಲೂ ಸಂಸಾರದ ಪ್ರಯೋಜನ ಸಹಿತ ಭಕ್ತಿ ಮಾಡುತ್ತಾರೆ ಅವರಿಗಂತೂ ಪಾಪದ ಅಭಿಪ್ರಾಯವೇ ಇರುವುದು. ಕಾಂಕ್ಷೆ, ವಿಚಿಕಿತ್ಸರೂಪದ ಭಾವಗಳಾಗಿದ್ದು ಅವುಗಳಿಂದ ಪೂರ್ವಕರ್ಮದ ಸಂಕ್ರಮಣಾದಿಗಳು ಹೇಗಾಗುವವು ? ಆದುದರಿಂದ ಅವರ ಕಾರ್ಯವು ಸಿದ್ಧವಾಗುವುದಿಲ್ಲ.

ಅದರಂತೆ ಹಲವರಂತೂ ಭಕ್ತಿಯನ್ನು ಮುಕ್ತಿಯ ಕಾರಣವೆಂದು ತಿಳಿದುಕೊಂಡು ಅದರಲ್ಲಿ ಅತ್ಯಂತ ಅನುರಾಗಿಗಳಾಗಿ ಪ್ರವರ್ತಿಸುತ್ತಾರೆ. ಆದರೆ ಅನ್ಯಮತದವರು ಹೇಗೆ ಭಕ್ತಿಯಿಂದ ಮುಕ್ತಿಯನ್ನು ಮನ್ನಿಸುತ್ತಾರೆ ಹಾಗೆಯೇ ಇವರದೂ ಶ್ರದ್ಧೆಯಾಯಿತು. ಆದರೆ ಭಕ್ತಿಯು ರಾಗರೂಪವಿದ್ದು ಆ ರಾಗದಿಂದ ಬಂಧವಾಗುವುದರಿಂದ ಅದು ಮೋಕ್ಷದ ಕಾರಣವಿಲ್ಲ. ರಾಗದ ಉದಯಬಂದಾಗ ಭಕ್ತಿ ಮಾಡದಿದ್ದರೆ ಪಾಪಾನುರಾಗವಾಗುವುದು, ಆದುದರಿಂದ ಅಶುಭರಾಗವನ್ನು ಬಿಡುವ ಸಲುವಾಗಿ ಜ್ಞಾನಿಗಳು ಭಕ್ತಿಯಲ್ಲಿ ಪ್ರವರ್ತಿಸುತ್ತಾರೆ ಮತ್ತು ಮೋಕ್ಷ ಮಾರ್ಗವನ್ನು ಬಾಹ್ಯ ನಿಮಿತ್ತ ಮಾತ್ರವೆಂದೂ ತಿಳಿಯುತ್ತಾರೆ; ಆದರೆ ಇಲ್ಲಿಯೇ ಉಪಾದೇಯತೆಯನ್ನು ಮನ್ನಿಸಿ ಸಂತುಷ್ಟರಾಗುವುದಿಲ್ಲ, ಶುದ್ಧೋಪಯೋಗದ ಪ್ರಯತ್ನ ಮಾಡುತ್ತಿರುತ್ತಾರೆ.

**ಇಯಂ ಭಕ್ತಿಃ ಕೇವಲಭಕ್ತಿಪ್ರಧಾನಸ್ಯಾಜ್ಞಾನಿನೋ ಭವತಿ । ತೀವ್ರರಾಗಜ್ವರವಿನೋದಾರ್ಥಮಸ್ಥಾನ ರಾಗನಿಷೇಧಾರ್ಥಂ ಕ್ವಚಿತ್ ಜ್ಞಾನಿನೋಽಪಿ ಭವತಿ★॥**- ಎಂದು ಪಂಚಾಸ್ತಿಕಾಯದ ವ್ಯಾಖ್ಯಾನದಲ್ಲಿ ಹೇಳಿದೆ.

ಅರ್ಥ ಃ- ಈ ಭಕ್ತಿಯು ಕೇವಲ ಭಕ್ತಿಯೇ ಪ್ರಧಾನವಾಗಿರುವಂಥ ಅಜ್ಞಾನೀ ಜೀವನಿಗೆ ಆಗುತ್ತದೆ. ಮತ್ತು ತೀವ್ರವಾದ ರಾಗ ಜ್ವರವನ್ನು ದೂರ ಮಾಡುವ ಸಲುವಾಗಿ ಅಥವಾ ಕುಸ್ಥಾನದ ರಾಗದ ನಿಷೇಧ ಮಾಡುವ ಸಲುವಾಗಿ ಒಮ್ಮೊಮ್ಮೆ ಜ್ಞಾನಿಗೂ ಆಗುತ್ತದೆ.

**ಪ್ರಶ್ನೆ ಃ-** ಹೀಗಿದ್ದರೆ ಜ್ಞಾನಿಗಿಂತ ಅಜ್ಞಾನಿಗೆ ಭಕ್ತಿಯ ಅಧಿಕತೆಯಿರುತ್ತದೆಯೇನು ?

★ ಅಯಂ ಹಿ ಸ್ಥೂಲಲಕ್ಷತಯಾ ಕೇವಲಭಕ್ತಿಪ್ರಧಾನ್ಯಸ್ಯಾಜ್ಞಾನಿನೋ ಭವತಿ । ಉಪರಿತನಭೂಮಿಕಾಯಾಮಲಬ್ಧಾಸ್ಪದಸ್ಯಾಸ್ಥಾನ ರಾಗ ನಿಷೇಧಾರ್ಥಂ ತೀವ್ರರಾಗಜ್ವರವಿನೋದಾರ್ಥಂ ವಾ ಕದಾಚಿಜ್ ಜ್ಞಾನಿನೋಽಪಿ ಭವತೀತಿ- ೧೩೬ ನೇ ಗಾಥೆಯ ಟೀಕೆ.

**ಉತ್ತರ :-** ಯಥಾರ್ಥತೆಯ ಅಪೇಕ್ಷೆಯಿಂದ ಜ್ಞಾನಿಗೆ ನಿಜವಾದ ಭಕ್ತಿಯಿದ್ದರೆ ಅಜ್ಞಾನಿಗೆ ಇರುವುದಿಲ್ಲ ಮತ್ತು ರಾಗ ಭಾವದ ಅಪೇಕ್ಷೆಯಿಂದ ಅಜ್ಞಾನಿಯ ಶ್ರದ್ಧೆಯಲ್ಲಿ ಕೂಡ ಅದನ್ನು ಮುಕ್ತಿಯ ಕಾರಣವೆಂದು ತಿಳಿಯುವುದರಿಂದ ಅತ್ಯಂತ ಅನುರಾಗವಿದೆ, ಜ್ಞಾನಿಯ ಶ್ರದ್ಧೆಯಲ್ಲಿ ಶುಭವು ಬಂಧದ ಕಾರಣವೆಂದು ತಿಳಿಯುವುದರಿಂದ ಅಂಥ ಅನುರಾಗವಿಲ್ಲ. ಬಾಹ್ಯದಲ್ಲಿ ಒಮ್ಮೆ ಜ್ಞಾನಿಗೆ ಅಧಿಕ ಅನುರಾಗವಿದ್ದರೆ ಇನ್ನೊಮ್ಮೆ ಅಜ್ಞಾನಿಗೆ ಇರುತ್ತದೆಂದು ತಿಳಿಯುವುದು.

ಈ ಪ್ರಕಾರ ದೇವ ಭಕ್ತಿಯಸ್ವರೂಪ ತಿಳಿಸಿಕೊಡಲಾಯಿತು.

## ಗುರುಭಕ್ತಿಯ ಅನ್ಯಥಾರೂಪ :-

ಈಗ ಅವನಿಗೆ ಗುರುಭಕ್ತಿಯು ಹೇಗಿರುತ್ತದೆಂಬುದನ್ನು ಹೇಳುತ್ತಾರೆ.

ಅದೆಷ್ಟೋ ಜನರು ಆಜ್ಞಾನುಸಾರಿಯಿದ್ದಾರೆ, ಅವರಂತೂ ಇವರು ಜೈನರ ಸಾಧುಗಳಿದ್ದಾರೆ, ನಮ್ಮ ಗುರುಗಳಿದ್ದಾರೆ, ಆದುದರಿಂದ ಇವರ ಭಕ್ತಿ ಮಾಡಬೇಕೆಂದು ವಿಚಾರಮಾಡಿ ಅವರ ಭಕ್ತಿಮಾಡುತ್ತಾರೆ, ಇನ್ನು ಅದೆಷ್ಟೋ ಜನರು ಪರೀಕ್ಷೆಯನ್ನೂ ಮಾಡುತ್ತಾರೆ. ಈ ಮುನಿಗಳು ದಯೆ ಪಾಲಿಸುತ್ತಾರೆ, ಶೀಲ ಪಾಲಿಸುತ್ತಾರೆ, ಧನಾದಿಗಳನ್ನು ಇಟ್ಟುಕೊಳ್ಳುವುದಿಲ್ಲ, ಉಪವಾಸ ಮೊದಲಾದ ತಪಮಾಡುತ್ತಾರೆ, ಕ್ಷುಧಾದಿ ಪರೀಷಹಗಳನ್ನು ಸಹಿಸುತ್ತಾರೆ, ಯಾರ ಮೇಲೂ ಕ್ರೋಧಾದಿಗಳನ್ನು ಮಾಡುವುದಿಲ್ಲ, ಉಪದೇಶವಿತ್ತು ಇತರರನ್ನು ಧರ್ಮದಲ್ಲಿ ತೊಡಗಿಸುತ್ತಾರೆ. ಇತ್ಯಾದಿ ಗುಣಗಳ ವಿಚಾರಮಾಡಿ ಅವರಲ್ಲಿ ಭಕ್ತಿಭಾವ ಮಾಡುತ್ತಾರೆ. ಆದರೆ ಇಂಥ ಗುಣಗಳು ಪರಮಹಂಸ ಮೊದಲಾದ ಅನ್ಯಮತದವರಲ್ಲಿ ಹಾಗೂ ಜೈನ ಮಿಥ್ಯಾದೃಷ್ಟಿಗಳಲ್ಲಿ ಕೂಡ ಕಂಡು ಬರುತ್ತವೆ, ಆದುದರಿಂದ ಇವುಗಳಲ್ಲಿ ಅತಿವ್ಯಾಪ್ತಿತನವಿದೆ. ಇವುಗಳ ಮೂಲಕ ಸರಿಯಾದ ಪರೀಕ್ಷೆಯಾಗುವುದಿಲ್ಲ.

ಮತ್ತು ಯಾವ ಗುಣಗಳ ವಿಚಾರಮಾಡಲಾಗುತ್ತದೆ. ಅವುಗಳಲ್ಲಿ ಅದೆಷ್ಟೋ ಜೀವಾಶ್ರಿತವಿದ್ದರೆ ಅದೆಷ್ಟೋ ಪುದ್ಗಲಾಶ್ರಿತವಿವೆ; ಅವುಗಳ ವಿಶೇಷತೆಯನ್ನು ತಿಳಿದುಕೊಳ್ಳಲಾರದೆ ಅಸಮಾನ ಜಾತೀಯವಾದ ಮುನಿ ಪರ್ಯಾಯದಲ್ಲಿ ಏಕತ್ವ ಬುದ್ಧಿಯಿಂದ ಮಿಥ್ಯಾದೃಷ್ಟಿಯಾಗಿಯೇ ಉಳಿಯುತ್ತಾರೆ. ಇನ್ನು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕತಾ ರೂಪವಾದ ಮೋಕ್ಷಮಾರ್ಗವೇ ಮುನಿಗಳ ನಿಜವಾದ ಲಕ್ಷಣವಿದ್ದು ಅದನ್ನು ಗುರುತಿಸುವುದಿಲ್ಲ. ಏಕೆಂದರೆ ಇದರ ಪರಿಚಯವಾಗಿ ಹೋದರೆ ಮಿಥ್ಯಾದೃಷ್ಟಿಯಾಗಿ ಉಳಿಯುವುದಿಲ್ಲ. ಈ ಪ್ರಕಾರ ಮುನಿಗಳ ನಿಜವಾದ ಸ್ವರೂಪವನ್ನೇ ತಿಳಿದುಕೊಳ್ಳದಿದ್ದರೆ ನಿಜವಾದ ಭಕ್ತಿ ಹೇಗಾಗುವುದು ? ಪುಣ್ಯಬಂಧಕ್ಕೆ ಕಾರಣಭೂತವಾದ ಶುಭಕ್ರಿಯಾರೂಪದ ಗುಣಗಳನ್ನು ತಿಳಿದುಕೊಂಡು ಅವುಗಳ ಸೇವೆಯಿಂದ ತನ್ನದು ಒಳ್ಳೆಯದಾಗುವುದೆಂದು ತಿಳಿದುಕೊಂಡು ಅವುಗಳಲ್ಲಿ ಅನುರಾಗಿಯಾಗಿ ಭಕ್ತಿ ಮಾಡುತ್ತಾರೆ.

ಈ ಪ್ರಕಾರ ಗುರುಭಕ್ತಿಯ ಸ್ವರೂಪ ಹೇಳಲಾಯಿತು.

## ಶಾಸ್ತ್ರಭಕ್ತಿಯ ಅನ್ಯಥಾರೂಪ :-

ಈಗ ಶಾಸ್ತ್ರಭಕ್ತಿಯ ಸ್ವರೂಪ ಹೇಳುತ್ತಾರೆ.

ಅದೆಷ್ಟೋ ಜನರು ಇದು ಕೇವಲಿ ಭಗವಂತರ ವಾಣಿಯಿರುವುದರಿಂದ ಕೇವಲಿಯ ಪೂಜ್ಯತ್ವದ

ಕಾರಣದಿಂದಾಗಿ ಇದು ಕೂಡ ಪೂಜ್ಯವಿದೆಯೆಂದು ತಿಳಿದುಕೊಂಡು ಭಕ್ತಿ ಮಾಡುತ್ತಾರೆ. ಮತ್ತೆ ಹಲವರಂತೂ ಈ ಶಾಸ್ತ್ರಗಳಲ್ಲಿ ವಿರಕ್ತತೆ, ದಯೆ, ಕ್ಷಮೆ, ಶೀಲ, ಸಂತೋಷ ಮೊದಲಾದವುಗಳ ನಿರೂಪಣೆಯಿರುವುದರಿಂದ ಇವು ಉತ್ಕೃಷ್ಟವಿವೆಯೆಂದು ಪರೀಕ್ಷೆ ಮಾಡಿ ತಿಳಿದುಕೊಂಡು ಭಕ್ತಿ ಮಾಡುತ್ತಾರೆ. ಆದರೆ ಇಂಥ ಕಥನವಂತೂ ಅನ್ಯ ಶಾಸ್ತ್ರಗಳಲ್ಲಿ ವೇದಾಂತ ಮೊದಲಾದವುಗಳಲ್ಲಿ ಕೂಡ ಕಂಡು ಬರುತ್ತದೆ.

ಅದರಂತೆ ಈ ಶಾಸ್ತ್ರಗಳಲ್ಲಿ ತ್ರಿಲೋಕ ಮೊದಲಾದವುಗಳ ಗಂಭೀರ ನಿರೂಪಣೆಯಿರುವುದರಿಂದ ಉತ್ಕೃಷ್ಟತೆಯಿದೆಯೆಂದು ತಿಳಿದುಕೊಂಡು ಭಕ್ತಿ ಮಾಡುತ್ತಾರೆ. ಆದರೆ ಇಲ್ಲಿ ಅನುಮಾನಾದಿಗಳಿಗೆ ಪ್ರವೇಶವಿಲ್ಲದಿರುವುದರಿಂದ ಸತ್ಯಾಸತ್ಯದ ನಿರ್ಣಯ ಮಾಡಿ ಮಹಿಮೆಯನ್ನು ಹೇಗೆ ತಿಳಿಯುವುದು ? ಆದುದರಿಂದ ಈ ಪ್ರಕಾರ ನಿಜವಾದ ಪರೀಕ್ಷೆಯಾಗುವುದಿಲ್ಲ. ಇಲ್ಲಿಯಂತೂ ಅನೇಕಾಂತರೂಪದ ನಿಜವಾದ ಜೀವಾದಿ ತತ್ತ್ವಗಳ ನಿರೂಪಣೆಯಿದೆ ಮತ್ತು ನಿಜವಾದ ರತ್ನತ್ರಯರೂಪದ ಮೋಕ್ಷಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಅದರಿಂದಲೇ ಜೈನಶಾಸ್ತ್ರಗಳ ಉತ್ಕೃಷ್ಟತೆಯಿದೆಯೆಂಬುದನ್ನು ಗುರುತಿಸುವುದಿಲ್ಲ. ಏಕೆಂದರೆ ಇದರ ಪರಿಚಯವಾಗಿ ಹೋದರೆ ಮಿಥ್ಯಾದೃಷ್ಟಿಯಾಗಿ ಉಳಿಯುವುದಿಲ್ಲ.

ಈ ಪ್ರಕಾರ ಶಾಸ್ತ್ರಭಕ್ತಿಯ ಸ್ವರೂಪವನ್ನು ಹೇಳಲಾಯಿತು.

ಈ ಪ್ರಕಾರ ಇವನಿಗೆ ದೇವ-ಗುರು-ಶಾಸ್ತ್ರಗಳ ಪ್ರತೀತಿಯಾಗುವುದರಿಂದ ವ್ಯವಹಾರ ಸಮ್ಯಕ್ತ್ವವಾಯಿತೆಂದು ಮನ್ನಿಸುತ್ತಾನೆ. ಆದರೆ ಅವುಗಳ ನಿಜವಾದ ಸ್ವರೂಪವು ಭಾಸವಾಗದಿರುವುದರಿಂದ ನಿಜವಾದ ಪ್ರತೀತಿ ಕೂಡ ಆಗಿಲ್ಲ. ನಿಜವಾದ ಪ್ರತೀತಿಯಾದಲ್ಲದೆ ಸಮ್ಯಕ್ತ್ವದ ಪ್ರಾಪ್ತಿಯೂ ಆಗದಿರುವುದರಿಂದ ಮಿಥ್ಯಾದೃಷ್ಟಿಯೇ ಇದ್ದಾರೆ.

## ಸಪ್ತತತ್ತ್ವಗಳ ಅನ್ಯಥಾರೂಪ :-

ಅದರಂತೆ ಶಾಸ್ತ್ರದಲ್ಲಿ **'ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ'** (ತತ್ತ್ವಾರ್ಥಸೂತ್ರ ೧-೨) ಎಂಬ ವಚನ ಹೇಳಿರುವುದರಿಂದ ಶಾಸ್ತ್ರಗಳಲ್ಲಿ ಹೇಗೆ ಜೀವಾದಿತತ್ತ್ವಗಳನ್ನು ಹೇಳಿದ್ದಾರೆ ಹಾಗೆ ತಾನೂ ಕಲಿತುಕೊಳ್ಳುತ್ತಾನೆ ಮತ್ತು ಅಲ್ಲಿ ಉಪಯೋಗ ಹಚ್ಚುತ್ತಾನೆ, ಇತರರಿಗೆ ಉಪದೇಶ ಕೊಡುತ್ತಾನೆ; ಆದರೆ ಆ ತತ್ತ್ವಗಳ ಭಾವವು ಭಾಸವಾಗುವುದಿಲ್ಲ; ಮತ್ತು ಇಲ್ಲಿ ಆ ವಸ್ತುವಿನ ಭಾವದ ಹೆಸರನ್ನೇ ತತ್ತ್ವವೆಂದು ಹೇಳಿದೆ. ಆ ಭಾವವು ಭಾಸವಾದಲ್ಲದೆ ತತ್ತ್ವಾರ್ಥ ಶ್ರದ್ಧೆಯು ಹೇಗಾಗುವುದು ? ಭಾವವು ಭಾಸವಾಗುವುದೆಂದರೇನೆಂಬುದನ್ನು ಹೇಳುತ್ತಾರೆ.

ಯಾವನೋ ಓರ್ವ ಪುರುಷನು ಚತುರನಾಗುವ ಸಲುವಾಗಿ ಶಾಸ್ತ್ರದ ಮೂಲಕ ಸ್ವರ, ಗ್ರಾಮ, ಮೂರ್ಛನ, ರಾಗಗಳ ಸ್ವರೂಪ ಮತ್ತು ತಾಲ-ತಾನದ ಭೇದಗಳನ್ನಂತೂ ಕಲಿಯುತ್ತಾನೆ; ಆದರೆ ಸ್ವರಾದಿಗಳ ಸ್ವರೂಪವನ್ನು ಗುರುತಿಸುವುದಿಲ್ಲ. ಸ್ವರೂಪದ ಪರಿಚಯವಾದಲ್ಲದೆ ಅನ್ಯಸ್ವರಾದಿಗಳನ್ನು ಅನ್ಯಸ್ವರಾದಿಗಳ ರೂಪವಾಗಿ ಮನ್ನಿಸುತ್ತಾನೆ, ಅಥವಾ ಸತ್ಯವನ್ನು ಕೂಡ ಮನ್ನಿಸುತ್ತಿದ್ದರೂ ನಿರ್ಣಯಮಾಡಿ ಮನ್ನಿಸುವುದಿಲ್ಲ; ಆದುದರಿಂದ ಅವನಿಗೆ ಚತುರತೆಯು ಬರುವುದಿಲ್ಲ. ಅದೇ ಪ್ರಕಾರ ಯಾವನೋ ಓರ್ವ ಜೀವನು ಸಮ್ಯಕ್ತ್ವಿಯಾಗುವ ಸಲುವಾಗಿ ಶಾಸ್ತ್ರದ ಮೂಲಕ ಜೀವ ಮೊದಲಾದ ತತ್ತ್ವಗಳ ಸ್ವರೂಪವನ್ನು ಕಲಿತುಕೊಳ್ಳುತ್ತಾನೆ; ಆದರೆ ಅವುಗಳ ಸ್ವರೂಪವನ್ನು ಗುರುತಿಸುವುದಿಲ್ಲ. ಸ್ವರೂಪವನ್ನು ಪರಿಚಯಿಸಿಕೊಂಡಲ್ಲದೆ ಅನ್ಯತತ್ತ್ವಗಳನ್ನು ಅನ್ಯತತ್ತ್ವರೂಪವಾಗಿ

ಮನ್ನಿಸಿಕೊಳ್ಳುತ್ತಾನೆ, ಅಥವಾ ಸತ್ಯವನ್ನು ಮನ್ನಿಸುತ್ತಿದ್ದರೂ ನಿರ್ಣಯಮಾಡಿ ಮನ್ನಿಸುವುದಿಲ್ಲ; ಆದುದರಿಂದ ಅವನಿಗೆ ಸಮ್ಯಕ್ತ್ವವಾಗುವುದಿಲ್ಲ. ಮತ್ತು ಓರ್ವನು ಶಾಸ್ತ್ರಾದಿಗಳನ್ನು ಓದಿರಬಹುದು ಅಥವಾ ಓದಿರಲಿಕ್ಕಿಲ್ಲ; ಆದರೆ ಸ್ವರಾದಿಗಳ ಸ್ವರೂಪವನ್ನು ಗುರುತಿಸುತ್ತಿದ್ದರೆ ಅವನು ಚತುರನೇ ಇದ್ದಾನೆ. ಅದೇ ಪ್ರಕಾರ ಶಾಸ್ತ್ರ ಓದಿರಲಿ ಅಥವಾ ಓದದಿರಲಿ, ಒಂದು ವೇಳೆ ಜೀವಾದಿಗಳ ಸ್ವರೂಪವನ್ನು ಪರಿಚಯಿಸಿಕೊಂಡಿದ್ದರೆ ಅವನು ಸಮ್ಯಗ್ದೃಷ್ಟಿಯೇ ಇದ್ದಾನೆ. ಯಾವ ಪ್ರಕಾರ ಜಿಂಕೆಯು ಸ್ವರ-ರಾಗಾದಿಗಳ ಹೆಸರನ್ನು ತಿಳಿಯುವುದಿಲ್ಲ, ಆದರೆ ಅದರ ಸ್ವರೂಪವನ್ನು ಗುರುತಿಸುತ್ತದೆ; ಅದೇ ಪ್ರಕಾರ ತುಚ್ಛಬುದ್ಧಿಯುಳ್ಳವರು ಜೀವಾದಿಗಳ ಹೆಸರನ್ನು ತಿಳಿಯುವುದಿಲ್ಲ, ಆದರೆ ಅವುಗಳ ಸ್ವರೂಪವನ್ನು ಗುರುತಿಸುತ್ತಾರೆ. 'ಇದು ನಾನಿದ್ದೇನೆ, ಇವು ಪರವಿವೆ; ಈ ಭಾವಗಳು ಕೆಡಕಿವೆ, ಇವು ಒಳ್ಳೆಯವಿವೆ'ಯೆಂಬ ಸ್ವರೂಪವನ್ನು ಗುರುತಿಸುವುದರ ಹೆಸರು ಭಾವ-ಭಾಸನವಿದೆ. ಶಿವಭೂತಿ ಮುನಿಯು ಜೀವಾದಿಗಳ ಹೆಸರನ್ನು ತಿಳಿಯುತ್ತಿರಲಿಲ್ಲ, ಮತ್ತು 'ತುಷಮಾಷಭಿನ್ನ' ವೆಂದು★ ಉರುಹಾಕತೊಡಗಿದನು. ಇದಂತೂ ಸಿದ್ಧಾಂತದ ಶಬ್ದವಿಲ್ಲ; ಆದರೆ ಸ್ವ-ಪರದ ಭಾವರೂಪ ಧ್ಯಾನ ಮಾಡಿದನು, ಅದರಿಂದ ಕೇವಲಿಯಾದನು. ಮತ್ತು ಹನ್ನೊಂದು ಅಂಗಗಳ ಪಾಠಿಗಳು ಜೀವಾದಿತತ್ತ್ವಗಳ ವಿಶೇಷ ಭೇದ ತಿಳಿಯುತ್ತಾರೆ, ಆದರೆ ಭಾವಭಾಸವಾಗದಿರುವುದರಿಂದ ಮಿಥ್ಯಾದೃಷ್ಟಿಗಳಾಗಿರುತ್ತಾರೆ.

ಈಗ ಇವನಿಗೆ ತತ್ತ್ವಶ್ರದ್ಧೆಯು ಯಾವ ಪ್ರಕಾರ ಆಗುತ್ತದೆಂಬುದನ್ನು ಹೇಳುತ್ತಾರೆ.

## ಜೀವ-ಅಜೀವ ತತ್ತ್ವಗಳ ಅನ್ಯಥಾರೂಪ :-

ಜಿನಶಾಸ್ತ್ರಗಳಿಂದ ಜೀವದ ತ್ರಸ-ಸ್ಥಾವರಾದಿರೂಪ ಮತ್ತು ಗುಣಸ್ಥಾನ-ಮಾರ್ಗಣಾದಿ ರೂಪದ ಭೇದಗಳನ್ನು ತಿಳಿಯುತ್ತಾನೆ, ಅಜೀವದ ಪುದ್ಗಲಾದಿ ಭೇದಗಳನ್ನು ಹಾಗೂ ಅವುಗಳ ವರ್ಣಾದಿ ವಿಶೇಷಗಳನ್ನು ತಿಳಿಯುತ್ತಾನೆ; ಆದರೆ ಅಧ್ಯಾತ್ಮ ಶಾಸ್ತ್ರಗಳಲ್ಲಿ ಭೇದವಿಜ್ಞಾನಕ್ಕೆ ಕಾರಣಭೂತ ಹಾಗೂ ವೀತರಾಗ ಅವಸ್ಥೆಯಾಗುವುದಕ್ಕೆ ಕಾರಣಭೂತವಾದ ಯಾವ ನಿರೂಪಣೆಯನ್ನು ಮಾಡಿದೆ ಅದನ್ನು ತಿಳಿಯುವುದಿಲ್ಲ.

ಇನ್ನು ಯಾವುದೇ ಪ್ರಸಂಗವಶದಿಂದ ಅದೇ ಪ್ರಕಾರ ತಿಳಿಯಬೇಕಾದಾಗ ಶಾಸ್ತ್ರಾನುಸಾರವಾಗೇನೋ ತಿಳಿದುಕೊಳ್ಳುತ್ತಾನೆ; **ಆದರೆ ತನ್ನನ್ನು ತನ್ನ ರೂಪವಾಗಿ ತಿಳಿದುಕೊಂಡು ತನ್ನಲ್ಲಿ ಪರದ ಅಂಶವನ್ನೂ ಬೆರಸದಂತೆ ಮತ್ತು ಪರದಲ್ಲಿ ತನ್ನ ಅಂಶವನ್ನೂ ಬೆರಸದಂತೆ ನಿಜವಾದ ಶ್ರದ್ಧೆ ಮಾಡುವುದಿಲ್ಲ.** ಯಾವ ಪ್ರಕಾರ ಅನ್ಯ ಮಿಥ್ಯಾದೃಷ್ಟಿಗಳು ನಿರ್ಧಾರವಿಲ್ಲದೆ ಪರ್ಯಾಯ ಬುದ್ಧಿಯಿಂದ ಜ್ಞಾನದಲ್ಲಿ ಹಾಗೂ ವರ್ಣಾದಿಗಳಲ್ಲಿ ಅಹಂಬುದ್ಧಿಯನ್ನು ಧಾರಣ ಮಾಡುತ್ತಾರೆ; ಅದೇ ಪ್ರಕಾರ ಈತನೂ ಆತ್ಮಾಶ್ರಿತವಾದ ಜ್ಞಾನಾದಿಗಳಲ್ಲಿ ಮತ್ತು ಶರೀರಾಶ್ರಿತವಾದ ಉಪದೇಶ-ಉಪವಾಸ ಮೊದಲಾದ ಕ್ರಿಯೆಗಳಲ್ಲಿ ತನ್ನತನವನ್ನು ಮನ್ನಿಸುತ್ತಾನೆ.

ಮತ್ತು ಒಮ್ಮೆ ಶಾಸ್ತ್ರಾನುಸಾರ ಸತ್ಯ ಮಾತನ್ನು ಆಡುತ್ತಾನೆ; ಆದರೆ ಅಂತರಂಗದಲ್ಲಿ ನಿರ್ಧಾರ ರೂಪದ ಶ್ರದ್ಧೆಯಿರುವುದಿಲ್ಲ. ಆದುದರಿಂದ ಯಾವ ಪ್ರಕಾರ ಮದ್ಯಕುಡಿದು ಅಮಲೇರಿದವನು ತಾಯಿಗೆ ತಾಯಿಯೆಂದು ಹೇಳಿದರೂ ಅದು ಸತ್ಯವಿಲ್ಲ; ಅದೇ ಪ್ರಕಾರ ಇವನನ್ನು ಸಮ್ಯಕ್ತ್ವಿಯೆಂದು ಹೇಳಲಾಗುವುದಿಲ್ಲ.

★ ತುಸಮಾಸಂ ಘೋಸಂತೋ ಭಾವವಿಸುದ್ಧೋ ಮಹಾಣುಭಾವೋ ಯ ।
ಣಾಮೇಣ ಯ ಸಿವಭೂಈ ಕೇವಲಣಾಣೀ ಫುಡಂ ಜಾವೋ ॥೫೩॥ ಭಾವಪಾಹುಡ

ಯಾವ ಪ್ರಕಾರ ಬೇರೆ ಯಾವುದೇ ಮಾತನ್ನು ಆಡುತ್ತಾನೆ, ಅದೇ ಪ್ರಕಾರ ಆತ್ಮನ ಕಥನ ಮಾಡುತ್ತಾನೆ; ಆದರೆ ಈ ಆತ್ಮನು 'ನಾನೇ ಇದ್ದೇನೆ'ಎಂಬ ಭಾವವು ಭಾಸವಾಗುವುದಿಲ್ಲ.

ಯಾವ ಪ್ರಕಾರ ಯಾವುದೇ ಒಂದನ್ನು ಇನ್ನೊಂದರಿಂದ ಭಿನ್ನವಾಗಿ ತಿಳಿಸಿಕೊಡುತ್ತಾರೆ, ಅದೇ ಪ್ರಕಾರ ಆತ್ಮ ಮತ್ತು ಶರೀರದ ಭಿನ್ನತೆಯನ್ನು ಪ್ರರೂಪಣೆ ಮಾಡುತ್ತಾನೆ; ಆದರೆ ನಾನು ಈ ಶರೀರ ಮೊದಲಾದವುಗಳಿಂದ ಭಿನ್ನನಿದ್ದೇನೆಂಬ ಭಾವವು ಭಾಸವಾಗುವುದಿಲ್ಲ.

ಅದರಂತೆ ಪರ್ಯಾಯದಲ್ಲಿ ಜೀವ-ಪುದ್ಗಲಗಳ ಪರಸ್ಪರ ನಿಮಿತ್ತದಿಂದ ಅನೇಕ ಕ್ರಿಯೆಗಳಾಗುತ್ತವೆ, ಅವನ್ನು ಎರಡೂ ದ್ರವ್ಯಗಳ ಸಂಯೋಗದಿಂದ ಉತ್ಪನ್ನವಾದವುಗಳೆಂದು ತಿಳಿಯುತ್ತಾನೆ. ಇದು ಜೀವದ ಕ್ರಿಯೆಯಿದ್ದು ಪುದ್ಗಲವು ಅದರ ನಿಮಿತ್ತವಿದೆ, ಇದು ಪುದ್ಗಲದ ಕ್ರಿಯೆಯಿದ್ದು ಜೀವವು ಅದರ ನಿಮಿತ್ತವಿದೆಯೆಂಬ ಭಿನ್ನ ಭಿನ್ನಭಾವವು ಭಾಸವಾಗುವುದಿಲ್ಲ. ಇತ್ಯಾದಿ ಭಾವಗಳು ಭಾಸವಾದಲ್ಲದೆ ಅವನನ್ನು ಜೀವ-ಅಜೀವದ ನಿಜವಾದ ಶ್ರದ್ಧೆಯುಳ್ಳವನೆಂದು ಹೇಳಲಾಗುವುದಿಲ್ಲ; ಏಕೆಂದರೆ ಜೀವ-ಅಜೀವಗಳನ್ನು ತಿಳಿಯುವುದರದಂತೂ ಪ್ರಯೋಜನವು ಇದುವೇ ಇದ್ದು ಅದು ಆಗಲಿಲ್ಲ.

**ಆಸ್ರವತತ್ತ್ವದ ಅನ್ಯಥಾರೂಪ :-**

ಆಸ್ರವತತ್ತ್ವದಲ್ಲಿರುವ ಹಿಂಸಾರೂಪದ ಪಾಪಾಸ್ರವಗಳನ್ನು ಹೇಯವೆಂದು ತಿಳಿಯುತ್ತಾನೆ ಮತ್ತು ಅಹಿಂಸಾರೂಪದ ಪುಣ್ಯಾಸ್ರವಗಳನ್ನು ಉಪಾದೇಯವೆಂದು ಮನ್ನಿಸುತ್ತಾನೆ. ಆದರೆ ಇವೆರಡೂ ಕರ್ಮಬಂಧದ ಕಾರಣಗಳಿದ್ದು ಇವುಗಳಲ್ಲಿ ಉಪಾದೇಯತೆಯನ್ನು ಮನ್ನಿಸುವುದೇ ಮಿಥ್ಯಾತ್ವವಿದೆ. ಇದನ್ನು ಸಮಯಸಾರದ ಬಂಧಾಧಿಕಾರದಲ್ಲಿ ಹೇಳಿದೆ.★

ಎಲ್ಲ ಜೀವಗಳಿಗೆ ಜೀವನ-ಮರಣ, ಸುಖ-ದುಃಖಗಳು ತಮ್ಮ ಕರ್ಮದ ನಿಮಿತ್ತದಿಂದ ಆಗುತ್ತವೆ. ಒಂದು ಜೀವವು ಇನ್ನೊಂದು ಜೀವದ ಈ ಕಾರ್ಯಗಳ ಕರ್ತೃವಾಗುವ ಮಿಥ್ಯಾಧ್ಯವಸಾಯವೇ ಬಂಧದ ಕಾರಣವಿದೆ. ಅಲ್ಲಿ ಅನ್ಯ ಜೀವಗಳನ್ನು ಬದುಕಿಸುವ ಅಥವಾ ಸುಖಿಮಾಡುವ ಅಧ್ಯವಸಾಯವಿದ್ದರೆ ಅದು ಪುಣ್ಯಬಂಧದ ಕಾರಣವಿದೆ ಮತ್ತು ಕೊಂದು ಹಾಕುವ ಅಥವಾ ದುಃಖಮಾಡುವ ಅಧ್ಯವಸಾಯವಿದ್ದರೆ ಅದು ಪಾಪ ಬಂಧದ ಕಾರಣವಿದೆ.

ಈ ಪ್ರಕಾರ ಅಹಿಂಸೆಯಂತೆ ಸತ್ಯ ಮೊದಲಾದವು ಪುಣ್ಯ ಬಂಧಕ್ಕೆ ಕಾರಣವಿವೆ ಮತ್ತು ಹಿಂಸೆಯಂತೆ ಅಸತ್ಯ ಮೊದಲಾದವು ಪಾಪ ಬಂಧಕ್ಕೆ ಕಾರಣವಿವೆ. ಇವೆಲ್ಲವು ಮಿಥ್ಯಾಧ್ಯವಸಾಯಗಳಿದ್ದು ಇವು ತ್ಯಾಜ್ಯವಿವೆ. ಆದುದರಿಂದ ಹಿಂಸಾದಿಗಳಂತೆ ಅಹಿಂಸೆ ಮೊದಲಾದುವನ್ನೂ ಬಂಧದ ಕಾರಣವೆಂದೇ ತಿಳಿದುಕೊಂಡು ಹೇಯವೆಂದೇ ಮನ್ನಿಸುವುದು.

ಹಿಂಸೆಯಲ್ಲಿ ಕೊಲ್ಲುವ ಬುದ್ಧಿಯಿದೆ, ಆದರೆ ಅವನ ಆಯುಪೂರ್ಣವಾದಲ್ಲದೆ ಸಾಯುವುದಿಲ್ಲ, ಇವನು ತನ್ನ ದ್ವೇಷಪರಿಣತಿಯಿಂದ ತಾನೇ ಪಾಪ ಕಟ್ಟಿಕೊಳ್ಳುತ್ತಾನೆ. ಅಹಿಂಸೆಯಲ್ಲಿ ರಕ್ಷಣೆಮಾಡುವ ಬುದ್ಧಿಯಿದೆ, ಆದರೆ ಅವನ ಆಯು ಬಾಕಿ ಉಳಿದಲ್ಲದೆ ಬದುಕುವುದಿಲ್ಲ, ಇವನು ತನ್ನ ಪ್ರಶಸ್ತ ರಾಗಪರಿಣತಿಯಿಂದ ತಾನೇ

★ ಸಮಯಸಾರದ ೨೫೪ ರಿಂದ ೨೫೬ ನೇ ಗಾಥೆಯ ನಂತರದ ಕಲಶಗಳು.

ಸರ್ವಂಸದೈವ ನಿಯತಂ ಭವತಿ ಸ್ವಕೀಯ ಕರ್ಮೋದಯಾನ್ಮರಣ ಜೀವಿತ ದುಃಖಸೌಖ್ಯಮ್ ।
ಅಜ್ಞಾನಮೇತದಿಹ ಯತ್ತು ಪರಃ ಪರಸ್ಯ ಕುರ್ಯಾತ್ಪುಮಾನ್ಮರಣ ಜೀವಿತ ದುಃಖ ಸೌಖ್ಯಮ್ ॥೧೬೮॥
ಅಜ್ಞಾನಮೇತದಧಿಗಮ್ಯ ಪರಾತ್ಪರಸ್ಯ ಪಶ್ಯಂತಿ ಯೇ ಮರಣ ಜೀವಿತ ದುಃಖ ಸೌಖ್ಯಮ್ ।
ಕರ್ಮ್ಮಾಣ್ಯ ಹಂಕೃತಿರಸೇನ ಚಿಕೀರ್ಷವಸ್ತೇ ಮಿಥ್ಯಾದೃಶೋ ನಿಯತಮಾತ್ಮಹನೋ ಭವಂತಿ ॥೧೬೯॥

ಪುಣ್ಯಕಟ್ಟಿಕೊಳ್ಳುತ್ತಾನೆ. ಈ ಪ್ರಕಾರ ಇವೆರಡೂ ಹೇಯವಿವೆ; ಆದರೆ ವೀತರಾಗನಾಗಿ ದೃಷ್ಟಾಜ್ಞಾತಾರೂಪದಿಂದ ಪ್ರವರ್ತಿಸುವಲ್ಲಿ ನಿರ್ಬಂಧವಿದೆ ಅದು ಉಪಾದೇಯವಿದೆ.

ಆದುದರಿಂದ ಇಂಥ ದಶೆಯಾಗದವರೆಗೆ ಪ್ರಶಸ್ತರಾಗರೂಪದಿಂದ ಪ್ರವರ್ತಿಸುವುದು; **ಆದರೆ ಇದು ಕೂಡ ಬಂಧದ ಕಾರಣವಿದೆ, ಹೇಯವಿದೆಯೆಂದು ಶ್ರದ್ಧೆಯಿಡಬೇಕು, ಶ್ರದ್ಧೆಯಲ್ಲಿ ಇದನ್ನು ಮೋಕ್ಷಮಾರ್ಗವೆಂದು ತಿಳಿದುಕೊಂಡರೆ ಮಿಥ್ಯಾದೃಷ್ಟಿಯೇ ಆಗುತ್ತಾನೆ.**

ಅದರಂತೆ ಮಿಥ್ಯಾತ್ವ, ಅವಿರತಿ, ಕಷಾಯ, ಯೋಗ ಇವು ಆಸ್ರವದ ಭೇದಗಳಿದ್ದು ಅವನ್ನು ಬಾಹ್ಯರೂಪದಿಂದ ಮನ್ನಿಸುತ್ತಾನೆ, ಆದರೆ ಅಂತರಂಗದಲ್ಲಿ ಈ ಭಾವಗಳ ಜಾತಿಯನ್ನು ಗುರುತಿಸುವುದಿಲ್ಲ.

ಅನ್ಯದೇವಾದಿಗಳ ಸೇವನೆಯರೂಪದ ಗೃಹೀತ ಮಿಥ್ಯಾತ್ವವನ್ನು ಮಿಥ್ಯಾತ್ವವೆಂದು ತಿಳಿಯುತ್ತಾನೆ, ಆದರೆ ಅನಾದಿ ಅಗೃಹಿತ ಮಿಥ್ಯಾತ್ವವಿದೆ ಅದನ್ನು ಗುರುತಿಸುವುದಿಲ್ಲ.

ಅದರಂತೆ ಬಾಹ್ಯದಲ್ಲಿ ತ್ರಸ-ಸ್ಥಾವರಗಳ ಹಿಂಸೆ ಹಾಗೂ ಇಂದ್ರಿಯ-ಮನದ ವಿಷಯಗಳಲ್ಲಿನ ಪ್ರವೃತ್ತಿಯನ್ನು ಅವಿರತಿಯೆಂದು ತಿಳಿಯುತ್ತಾನೆ. **ಆದರೆ ಹಿಂಸೆಯಲ್ಲಿ ಪ್ರಮಾದ ಪರಿಣತಿಯು ಮೂಲವಿದ್ದರೆ ವಿಷಯಸೇವನೆಯಲ್ಲಿ ಅಭಿಲಾಷೆಯು ಮೂಲವಿದ್ದು** ಅದರ ಅವಲೋಕನ ಮಾಡುವುದಿಲ್ಲ.

ಇನ್ನು ಬಾಹ್ಯದಲ್ಲಿ ಕ್ರೋಧಾದಿಗಳನ್ನು ಮಾಡುವುದಕ್ಕೆ ಕಷಾಯವೆಂದು ತಿಳಿಯುತ್ತಾನೆ, ಆದರೆ ಅಭಿಪ್ರಾಯದಲ್ಲಿ ರಾಗ-ದ್ವೇಷಗಳು ವಾಸಿಸುತ್ತಿದ್ದು ಅವನ್ನೂ ಗುರುತಿಸುವುದಿಲ್ಲ.

ಮತ್ತು ಬಾಹ್ಯದಲ್ಲಿ ಚೇಷ್ಟೆಯಾಗುತ್ತಿದ್ದರೆ ಅದನ್ನು ಯೋಗವೆಂದು ತಿಳಿಯುತ್ತಾನೆ, ಆದರೆ ಶಕ್ತಿಭೂತವಾದ ಯೋಗಗಳನ್ನು ತಿಳಿಯುವುದಿಲ್ಲ.

ಈ ಪ್ರಕಾರ ಆಸ್ರವಗಳ ಸ್ವರೂಪವನ್ನು ವಿಪರೀತವಾಗಿ ತಿಳಿಯುತ್ತಾನೆ.

ಯಾವ ರಾಗ-ದ್ವೇಷ-ಮೋಹರೂಪದ ಆಸ್ರವ ಭಾವಗಳಿವೆ, ಅವನ್ನು ನಾಶಮಾಡುವ ಚಿಂತೆಯಿಲ್ಲ ಮತ್ತು ಬಾಹ್ಯಕ್ರಿಯೆ ಅಥವಾ ಬಾಹ್ಯನಿಮಿತ್ತಗಳನ್ನು ದೂರಮಾಡುವ ಉಪಾಯಮಾಡುತ್ತಾನೆ; ಆದರೆ ಅವನ್ನು ದೂರಮಾಡುವುದರಿಂದ ಆಸ್ರವದ ನಾಶವಾಗುವುದಿಲ್ಲ. ದ್ರವ್ಯಲಿಂಗಿಮುನಿಯು ಅನ್ಯದೇವಾದಿಗಳ ಸೇವೆ ಮಾಡುವುದಿಲ್ಲ, ಹಿಂಸೆ ಅಥವಾ ವಿಷಯಗಳಲ್ಲಿ ಪ್ರವರ್ತಿಸುವುದಿಲ್ಲ. ಕ್ರೋಧಾದಿಗಳನ್ನು ಮಾಡುವುದಿಲ್ಲ, ಮನ-ವಚನ-ಕಾಯಗಳನ್ನು ನಿರೋಧಿಸುತ್ತಾನೆ; ಆದಾಗ್ಯೂ ಅವನಿಗೆ ಮಿಥ್ಯಾತ್ವ ಮೊದಲಾದ ನಾಲ್ಕೂ ಆಸ್ರವಗಳು ಕಂಡು ಬರುತ್ತವೆ ಮತ್ತು ಅವರು ಕಪಟದಿಂದಲೂ ಕಾರ್ಯಮಾಡುವುದಿಲ್ಲ, ಕಪಟದಿಂದ ಮಾಡಿದರೆ ಗ್ರೈವೇಯಕದವರೆಗೆ ಹೇಗೆ ತಲುಪುವರು ? ಆದುದರಿಂದ ಆ ಅಂತರಂಗದ ಅಭಿಪ್ರಾಯದಲ್ಲಿ ಇರುವ ಮಿಥ್ಯಾತ್ವ ಮೊದಲಾದ ರೂಪದ ರಾಗಾದಿ ಭಾವಗಳೇ ಆಸ್ರವಗಳಿವೆ.

ಅವನ್ನು ಗುರುತಿಸದಿರುವುದರಿಂದ ಇವನಿಗೆ ಆಸ್ರವ ತತ್ತ್ವದ್ದೂ ಕೂಡ ಸತ್ಯ ಶ್ರದ್ಧೆಯಿಲ್ಲ.

**ಬಂಧತತ್ತ್ವದ ಅನ್ಯಥಾರೂಪ :-**

ಅಲ್ಲದೆ ಬಂಧತತ್ತ್ವದಲ್ಲಿ ಆ ಅಶುಭ-ಭಾವಗಳಿಂದ ನರಕಾದಿಗಳ ರೂಪದ ಪಾಪದ ಬಂಧವಾಗುವುದನ್ನು ಕೆಡಕೆಂದು ತಿಳಿಯುತ್ತಾನೆ ಮತ್ತು ಶುಭ ಭಾವಗಳಿಂದ ದೇವಾದಿಗಳ ರೂಪದ ಪುಣ್ಯದ ಬಂಧವಾಗುವುದನ್ನು

ಒಳ್ಳೆಯದೆಂದು ತಿಳಿಯುತ್ತಾನೆ. ಆದರೆ ಸಮಸ್ತ ಜೀವರುಗಳ ದುಃಖ ಸಾಮಗ್ರಿಯಲ್ಲಿ ದ್ವೇಷ ಮತ್ತು ಸುಖ ಸಾಮಗ್ರಿಯಲ್ಲಿ ರಾಗವು ಕಂಡು ಬರುತ್ತದೆ, ಹಾಗೆ ಇವನಿಗೂ ರಾಗ-ದ್ವೇಷ ಮಾಡುವ ಶ್ರದ್ಧೆಯಿದೆ. ಯಾವ ಪ್ರಕಾರ ಈ ಪರ್ಯಾಯಕ್ಕೆ ಸಂಬಂಧಿಸಿದ ಸುಖ-ದುಃಖದ ಸಾಮಗ್ರಿಯಲ್ಲಿ ರಾಗ-ದ್ವೇಷ ಮಾಡುವುದಿದೆ ಅದೇ ಪ್ರಕಾರ ಮುಂಬರುವ ಪರ್ಯಾಯಕ್ಕೆ ಸಂಬಂಧಿಸಿದ ಸುಖ-ದುಃಖದ ಸಾಮಗ್ರಿಯಲ್ಲಿ ರಾಗ-ದ್ವೇಷ ಮಾಡುವುದಿದೆ.

ಅದರಂತೆ ಶುಭಾಶುಭ ಭಾವಗಳಿಂದ ಪುಣ್ಯ-ಪಾಪದ ವಿಶೇಷತೆಯಂತೂ ಅಘಾತಿ ಕರ್ಮಗಳಲ್ಲಿ ಆಗುತ್ತದೆ ಆದರೆ ಅಘಾತಿ ಕರ್ಮಗಳು ಆತ್ಮ ಗುಣದ ಘಾತ ಮಾಡುವುದಿಲ್ಲ. ಮತ್ತು ಶುಭಾಶುಭ ಭಾವಗಳಲ್ಲಿ ನಿರಂತರ ಘಾತಿಕರ್ಮಗಳ ಬಂಧವಾಗುತ್ತದೆ, ಅವೆಲ್ಲವೂ ಪಾಪ ರೂಪಗಳೇ ಇವೆ, ಮತ್ತು ಅವೇ ಆತ್ಮ ಗುಣದ ಘಾತಕವಿವೆ. ಆದುದರಿಂದ ಅಶುದ್ಧ ಭಾವಗಳಿಂದ ಕರ್ಮಬಂಧವಾಗುತ್ತದೆ. ಅದರಲ್ಲಿ ಒಳಿತು-ಕೆಡಕೆಂದು ತಿಳಿಯುವುದೇ ಮಿಥ್ಯಾಶ್ರದ್ಧೆಯಿದೆ.

ಆದುದರಿಂದ ಇಂಥ ಶ್ರದ್ಧೆಯಿಂದ ಅವನಿಗೆ ಬಂಧದ ಕುರಿತೂ ಸತ್ಯ ಶ್ರದ್ಧೆಯಿಲ್ಲ.

## ಸಂವರತತ್ತ್ವದ ಅನ್ಯಥಾರೂಪ :-

ಅಲ್ಲದೆ ಸಂವರ ತತ್ತ್ವದಲ್ಲಿ ಅಹಿಂಸಾದಿ ರೂಪದ ಶುಭಾಸ್ರವಭಾವಗಳಿಗೆ ಸಂವರವೆಂದು ತಿಳಿಯುತ್ತಾನೆ, ಆದರೆ ಒಂದೇ ಕಾರಣದಿಂದ ಪುಣ್ಯ ಬಂಧವನ್ನೂ ಮನ್ನಿಸುವುದು ಮತ್ತು ಸಂವರವನ್ನೂ ಮನ್ನಿಸುವುದು ಅದು ಆಗುವ ಸಾಧ್ಯತೆಯಿಲ್ಲ.

**ಪ್ರಶ್ನೆ :-** ಮುನಿಗಳಿಗೆ ಒಂದು ಕಾಲದಲ್ಲಿ ಒಂದು ಭಾವವಿರುತ್ತದೆ, ಅಲ್ಲಿ ಅವರಿಗೆ ಅನ್ಯ ಬಂಧವೂ ಆಗುತ್ತದೆ ಮತ್ತು ಸಂವರ-ನಿರ್ಜರೆಗಳೂ ಆಗುತ್ತವೆ. ಅದು ಯಾವ ಪ್ರಕಾರ ಆಗುತ್ತದೆ ?

**ಉತ್ತರ :-** ಆ ಭಾವವು ಮಿಶ್ರರೂಪವಿರುತ್ತದೆ, ಅದು ಸ್ವಲ್ಪ ವೀತರಾಗವಾಗಿದ್ದರೆ ಸ್ವಲ್ಪ ಸರಾಗವುಳಿದಿರುತ್ತದೆ. ಆ ವೀತರಾಗದ ಅಂಶಗಳಿಂದ ಸಂವರವಿದೆ ಮತ್ತು ಆ ಸರಾಗವುಳಿದಿರುವ ಅಂಶಗಳಿಂದ ಬಂಧವಿದೆ. ಆ ಒಂದು ಭಾವದಿಂದ ಎರಡು ಕಾರ್ಯಗಳಾಗುತ್ತವೆ, ಆದರೆ ಒಂದು ಪ್ರಶಸ್ತರಾಗದಿಂದಲೇ ಪುಣ್ಯಾಸ್ರವವನ್ನೂ ಮನ್ನಿಸುವುದು ಮತ್ತು ಸಂವರ-ನಿರ್ಜರೆಗಳನ್ನೂ ಮನ್ನಿಸುವುದು ಅದು ಭ್ರಮೆಯಿದೆ. ಮಿಶ್ರಭಾವದಲ್ಲಿ ಕೂಡ ಇದು ಸರಾಗವಿದೆ ಇದು ವೀತರಾಗವಿದೆಯೆಂಬ ಪರಿಚಯವು ಸಮ್ಯಗ್ದೃಷ್ಟಿಗೆ ಇರುವುದರಿಂದ ಅವನು ಉಳಿದ ಸರಾಗತೆಯನ್ನು ಹೇಯರೂಪವೆಂದು ಶ್ರದ್ಧೆ ಮಾಡುತ್ತಾನೆ. ಮಿಥ್ಯಾದೃಷ್ಟಿಗೆ ಇಂಥ ಪರಿಚಯವಿಲ್ಲದಿರುವುದರಿಂದ ಸರಾಗ ಭಾವದಲ್ಲಿ ಸಂವರದ ಭ್ರಮೆಯಿಂದ ಅಪ್ರಶಸ್ತರೂಪಗಳಾದ ಕಾರ್ಯಗಳನ್ನು ಉಪಾದೇಯರೂಪವೆಂದು ಶ್ರದ್ಧೆ ಮಾಡುತ್ತಾನೆ.

ಅದರಂತೆ ಸಿದ್ಧಾಂತದಲ್ಲಿ ಗುಪ್ತಿ, ಸಮಿತಿ, ಧರ್ಮ, ಅನುಪ್ರೇಕ್ಷೆ, ಪರೀಷಹಜಯ, ಚಾರಿತ್ರ ಇವುಗಳ ಮೂಲಕ ಸಂವರವಾಗುತ್ತದೆಂದು ಹೇಳಿದೆ. ★ಆದರೆ ಇವುಗಳದಂತೂ ಯಥಾರ್ಥ ಶ್ರದ್ಧೆ ಮಾಡುವುದಿಲ್ಲ. ಹೇಗೆಂಬುದನ್ನು ಹೇಳುತ್ತಾರೆ.

---

★ ಸ ಗುಪ್ತಿಸಮಿತಿಧರ್ಮಾನುಪ್ರೇಕ್ಷಾಪರಿಷಹಜಯ ಚಾರಿತ್ರೈಃ । ತತ್ತ್ವಾರ್ಥಸೂತ್ರ ೯-೨

**ಗುಪ್ತಿ :-** ಬಾಹ್ಯದಲ್ಲಿ ಮನ-ವಚನ-ಕಾಯದ ಚೇಷ್ಟೆಯನ್ನು ನಿರೋಧಿಸುವುದು, ಪಾಪಚಿಂತನೆ ಮಾಡದಿರುವುದು, ಮೌನಧಾರಣ ಮಾಡುವುದು, ಗಮನಾದಿಗಳನ್ನು ಮಾಡದಿರುವುದಕ್ಕೆ ಅವನು ಗುಪ್ತಿಯೆಂದು ಮನ್ನಿಸುತ್ತಾನೆ. ಆದರೆ ಇಲ್ಲಿ ಮನಸ್ಸಿನಲ್ಲಂತೂ ಭಕ್ತಿಮೊದಲಾದ ರೂಪದ ಪ್ರಶಸ್ತರಾಗದಿಂದ ನಾನಾವಿಕಲ್ಪಗಳಾಗುತ್ತವೆ, ವಚನ-ಕಾಯದ ಚೇಷ್ಟೆಯನ್ನು ಸ್ವಯಂ ತಡೆದಿಟ್ಟಿದ್ದಾನೆ, ಅಲ್ಲಿ ಶುಭಪ್ರವೃತ್ತಿಯಿದ್ದು ಆ ಪ್ರವೃತ್ತಿಯಲ್ಲಿ ಗುಪ್ತಿತನವು ಸಂಭವಿಸುವುದಿಲ್ಲ. ಆದುದರಿಂದ ವೀತರಾಗಭಾವವಾದ ಮೇಲೆ ಮನ-ವಚನ-ಕಾಯದ ಚೇಷ್ಟೆಯಾಗದಿರುವುದೇ ನಿಜವಾದ ಗುಪ್ತಿಯಿದೆ.

**ಸಮಿತಿ :-** ಅದರಂತೆ ಪರಜೀವಗಳ ರಕ್ಷಣೆಯ ಸಲುವಾಗಿ ಮಾಡುವ ಯತ್ನಾಚಾರದ ಪ್ರವೃತ್ತಿಯನ್ನು ಸಮಿತಿಯೆಂದು ಮನ್ನಿಸುತ್ತಾನೆ. ಆದರೆ ಹಿಂಸೆಯಪರಿಣಾಮಗಳಿಂದಂತೂ ಪಾಪವಾಗುತ್ತದೆ ಮತ್ತು ರಕ್ಷಣೆಯ ಪರಿಣಾಮಗಳಿಂದ ಸಂವರವೆಂದು ಹೇಳಿದರೆ ಪುಣ್ಯಬಂಧದ ಕಾರಣವು ಯಾವುದಾಗುವುದು ? ಮತ್ತು ಏಷಣಾ ಸಮಿತಿಯಲ್ಲಿ ದೋಷವು ತೋಗಲುತ್ತದೆ ಅಲ್ಲಿ ರಕ್ಷಣೆಯ ಪ್ರಯೋಜನವಿಲ್ಲ; ಆದುದರಿಂದ ರಕ್ಷಣೆಯ ಸಲುವಾಗಿಯೇ ಸಮಿತಿಯಿಲ್ಲ.

ಮುನಿಗಳಿಗೆ ಒಂದಿಷ್ಟು ರಾಗವಾದ ಮೇಲೆ ಗಮನಾದಿಕ್ರಿಯೆಗಳಾಗುತ್ತವೆ, ಆಗ ಆ ಕ್ರಿಯೆಗಳಲ್ಲಿ ಅತಿ ಆಸಕ್ತಿಯ ಅಭಾವದಿಂದ ಪ್ರಮಾದರೂಪದ ಪ್ರವೃತ್ತಿಯಾಗುವುದಿಲ್ಲ. ಮತ್ತು ಅನ್ಯ ಜೀವಗಳನ್ನು ದುಃಖಿಯನ್ನಾಗಿ ಮಾಡಿ ತಮ್ಮ ಗಮನಾದಿ ಪ್ರಯೋಜನ ಸಾಧಿಸುವುದಿಲ್ಲ. ಆದುದರಿಂದ ತಾನಾಗಿಯೇ ದಯೆಯ ಪಾಲನೆಯಾಗುತ್ತದೆ. ಈ ಪ್ರಕಾರ ನಿಜವಾದ ಸಮಿತಿಯಿದೆ.

**ಧರ್ಮ :-** ಅಲ್ಲದೆ ಬಂಧ ಮೊದಲಾದವುಗಳ ಭಯದಿಂದ ಅಥವಾ ಸ್ವರ್ಗ-ಮೋಕ್ಷದ ಇಚ್ಛೆಯಿಂದ ಕ್ರೋಧಾದಿಗಳನ್ನು ಮಾಡುವುದಿಲ್ಲ, ಆದರೆ ಅಲ್ಲಿ ಕ್ರೋಧಾದಿಗಳನ್ನು ಮಾಡುವ ಅಭಿಪ್ರಾಯವಂತೂ ನಾಶವಾಗಿಲ್ಲ. ಹೇಗೆಂದರೆ ಯಾವನೋ ಓರ್ವನು ದೊರೆ ಮೊದಲಾದವರ ಭಯದಿಂದ ಅಥವಾ ದೊಡ್ಡಸ್ತನದ ಲೋಭದಿಂದ ಪರಸ್ತ್ರೀಯ ಸೇವನೆ ಮಾಡದಿದ್ದರೆ ಅವನನ್ನು ತ್ಯಾಗಿಯೆಂದು ಹೇಳುವುದಿಲ್ಲ. ಅದೇ ಪ್ರಕಾರ ಇವನು ಕ್ರೋಧಾದಿಗಳ ತ್ಯಾಗಿಯಿಲ್ಲ. ಪದಾರ್ಥಗಳು ಇಷ್ಟಾನಿಷ್ಟವಾಗಿ ಭಾಸವಾಗುವುದರಿಂದ ಕ್ರೋಧಾದಿಗಳಾಗುತ್ತವೆ; ಆದರೆ ತತ್ತ್ವಜ್ಞಾನದ ಅಭ್ಯಾಸದಿಂದ ಯಾವುದೂ ಇಷ್ಟಾನಿಷ್ಟವಾಗಿ ಭಾಸವಾಗದಿರುವಾಗ ತಾನಾಗಿಯೇ ಕ್ರೋಧಾದಿಗಳು ಉತ್ಪನ್ನವಾಗುವುದಿಲ್ಲ; ಆಗ ನಿಜವಾದ ಧರ್ಮವಾಗುತ್ತದೆ.

**ಅನುಪ್ರೇಕ್ಷೆ :-** ಅದರಂತೆ ಅನಿತ್ಯಾದಿಗಳ ಚಿಂತನದಿಂದ ಶರೀರ ಮೊದಲಾದುವನ್ನು ಕೆಡಕೆಂದು ತಿಳಿದು, ಹಿತಕರವಿಲ್ಲವೆಂದು ತಿಳಿದುಕೊಂಡು ಅವುಗಳಿಂದ ಉದಾಸವಾಗುವುದರ ಹೆಸರು ಅನುಪ್ರೇಕ್ಷೆಯೆಂದು ಹೇಳುತ್ತಾನೆ. ಆದರೆ ಇದಂತೂ ಹೇಗೆ ಓರ್ವನು ಮಿತ್ರನಿರುವಾಗ ಅವನಲ್ಲಿ ಅನುರಾಗವಿರುತ್ತದೆ, ಮತ್ತು ಅವನ ಅವಗುಣ ನೋಡಿದ ನಂತರ ಉದಾಸೀನನಾಗುವನು ; ಅದೇ ಪ್ರಕಾರ ಶರೀರ ಮೊದಲಾದವುಗಳಲ್ಲಿ ರಾಗವಿತ್ತು, ನಂತರ ಅನಿತ್ಯಾದಿ ಅವಗುಣಗಳ ಅವಲೋಕನ ಮಾಡಿ ಉದಾಸೀನನಾದನು; ಆದರೆ ಇಂಥ ಉದಾಸೀನತೆಯು ದ್ವೇಷರೂಪವಿದೆ. ತನ್ನ ಹಾಗೂ ಶರೀರ ಮೊದಲಾದವುಗಳ ಸ್ವಭಾವವು ಎಲ್ಲಿ, ಹೇಗಿದೆ ಹಾಗೆ ಗುರುತಿಸಿಕೊಂಡು ಭ್ರಾಂತಿಯನ್ನು ದೂರಮಾಡಿ, ಒಳ್ಳೆಯದೆಂದು ತಿಳಿದುಕೊಂಡು ರಾಗಮಾಡದಿರುವಂಥ ಮತ್ತು ಕೆಡಕೆಂದು

ತಿಳಿದುಕೊಂಡು ದ್ವೇಷ ಮಾಡದಿರುವಂಥ ನಿಜವಾದ ಉದಾಸೀನತೆಯ ಸಲುವಾಗಿ ಯಥಾರ್ಥ ಅನಿತ್ಯತ್ವಾದಿಗಳ ಚಿಂತನೆ ಮಾಡುವುದೇ ನಿಜವಾದ ಅನುಪ್ರೇಕ್ಷೆಯಿದೆ.

**ಪರೀಷಹಜಯ :-** ಅಲ್ಲದೆ ಕ್ಷುಧಾದಿಗಳು ಆದ ಮೇಲೆ ಅವುಗಳ ನಾಶದ ಉಪಾಯ ಮಾಡದಿರುವುದನ್ನು ಪರೀಷಹ ಸಹನೆಯೆಂದು ಹೇಳುತ್ತಾನೆ. ಉಪಾಯವನ್ನೇನೋ ಮಾಡಲಿಲ್ಲ, ಆದರೆ ಅಂತರಂಗದಲ್ಲಿ ಕ್ಷುಧಾದಿ ಅನಿಷ್ಟ ಸಾಮಗ್ರಿಗಳು ದೊರಕಿದ ಮೇಲೆ ದುಃಖಿಯಾದನು, ರತಿ ಮೊದಲಾದವುಗಳ ಕಾರಣ ದೊರಕಿದ ಮೇಲೆ ಸುಖಿಯಾದನು, ಆ ಸುಖ-ದುಃಖ ರೂಪದ ಪರಿಣಾಮಗಳೇ ಆರ್ತಧ್ಯಾನ-ರೌದ್ರಧ್ಯಾನಗಳಿವೆ. ಇಂಥ ಭಾವಗಳಿಂದ ಸಂವರ ಹೇಗಾಗುವುದು ? ಆದ್ದರಿಂದ ದುಃಖದ ಕಾರಣಗಳು ದೊರಕಿದ ಮೇಲೆ ದುಃಖಿಯಾಗದಿರುವುದು ಮತ್ತು ಸುಖದ ಕಾರಣಗಳು ದೊರಕಿದ ಮೇಲೆ ಸುಖಿಯಾಗದಿರುವುದು, ಜ್ಞೇಯರೂಪದಿಂದ ಅವುಗಳನ್ನು ತಿಳಿಯುವವನಾಗಿರುವುದೇ ನಿಜವಾದ ಪರೀಷಹಜಯವಿದೆ.

**ಚಾರಿತ್ರ :-** ಅದರಂತೆ ಹಿಂಸೆ ಮೊದಲಾದ ಸಾವದ್ಯಯೋಗದ ತ್ಯಾಗವನ್ನು ಚಾರಿತ್ರವೆಂದು ಮನ್ನಿಸುತ್ತಾನೆ, ಅಲ್ಲಿ ಮಹಾ ವ್ರತಾದಿಗಳ ರೂಪದ ಶುಭಯೋಗವನ್ನು ಉಪಾದೇಯತೆಯಿಂದ ಗ್ರಾಹ್ಯವೆಂದು ಮನ್ನಿಸುತ್ತಾನೆ. **ಆದರೆ ತತ್ತ್ವಾರ್ಥಸೂತ್ರದಲ್ಲಿ ಆಸ್ರವ ಪದಾರ್ಥದ ನಿರೂಪಣೆ ಮಾಡುತ್ತ ಮಹಾವ್ರತ-ಅಣುವ್ರತಗಳನ್ನು ಕೂಡ ಆಸ್ರವರೂಪವೆಂದು ಹೇಳಿದೆ. ಅವು ಉಪಾದೇಯ ಹೇಗಾಗುವವು ? ಮತ್ತು ಆಸ್ರವವಂತೂ ಬಂಧದ ಸಾಧನವಿದ್ದು ಚಾರಿತ್ರವು ಮೋಕ್ಷದ ಸಾಧನವಿದೆ; ಆದುದರಿಂದ ಮಹಾ ವ್ರತಾದಿಗಳ ರೂಪದ ಆಸ್ರವ ಭಾವಗಳಿಗೆ ಚಾರಿತ್ರತನವು ಸಂಭವಿಸುವುದಿಲ್ಲ; ಸಕಲ ಕಷಾಯರಹಿತವಾದ ಆ ಉದಾಸೀನ ಭಾವದ ಹೆಸರೇ ಚಾರಿತ್ರವಿದೆ.**

ಚಾರಿತ್ರಮೋಹದ ದೇಶಘಾತಿ ಸ್ಪರ್ಧಕಗಳ ಉದಯದಿಂದ ಯಾವ ಅತ್ಯಂತ ಮಂದವಾದ ಪ್ರಶಸ್ತರಾಗವಾಗುತ್ತದೆ, ಅದು ಚಾರಿತ್ರದ ಮಲವಿದೆ. ಅದನ್ನು ಬಿಡುವ ಸಾಧ್ಯತೆಯಿಲ್ಲವೆಂದು ತಿಳಿದು ಅದರ ತ್ಯಾಗ ಮಾಡುವುದಿಲ್ಲ, ಸಾವದ್ಯಯೋಗದ ತ್ಯಾಗವನ್ನೇ ಮಾಡುತ್ತಾರೆ. ಯಾವ ಪ್ರಕಾರ ಓರ್ವ ಪುರುಷನು ಕಂದಮೂಲ ಮೊದಲಾದ ಅಧಿಕ ದೋಷವುಳ್ಳ ಹಸಿರು ಕಾಯದ ತ್ಯಾಗ ಮಾಡುತ್ತಾನೆ, ಮತ್ತು ಎಷ್ಟೋ ಹಸಿರು ಕಾಯಗಳ ಭಕ್ಷಣೆ ಮಾಡುತ್ತಾನೆ; ಆದರೆ ಅದನ್ನು ಧರ್ಮವೆಂದು ಮನ್ನಿಸುವುದಿಲ್ಲ; ಅದೇ ಪ್ರಕಾರ ಮುನಿಗಳು ಹಿಂಸೆ ಮೊದಲಾದ ತೀವ್ರ ಕಷಾಯರೂಪದ ಭಾವಗಳ ತ್ಯಾಗ ಮಾಡುತ್ತಾರೆ, ಮತ್ತು ಅದೆಷ್ಟೋ ಮಂದಕಷಾಯರೂಪದ ಮಹಾವ್ರತಾದಿಗಳ ಪಾಲನೆ ಮಾಡುತ್ತಾರೆ. ಆದರೆ ಅದನ್ನು ಮೋಕ್ಷಮಾರ್ಗವೆಂದು ಮನ್ನಿಸುವುದಿಲ್ಲ.

**ಪ್ರಶ್ನೆ :-** ಹೀಗಿದ್ದರೆ ಚಾರಿತ್ರದ ಹದಿಮೂರು ಭೇದಗಳಲ್ಲಿ ಮಹಾವ್ರತಾದಿಗಳನ್ನು ಹೇಗೆ ಹೇಳಿದ್ದಾರೆ.

**ಉತ್ತರ :-** ಅದು ವ್ಯವಹಾರ ಚಾರಿತ್ರ ಹೇಳಿದೆ, ಮತ್ತು ವ್ಯವಹಾರವು ಉಪಚಾರದ ಹೆಸರಿದೆ. ಆದುದರಿಂದ ಮಹಾವ್ರತಾದಿಗಳಿದ್ದ ಮೇಲೆಯೇ ವೀತರಾಗ ಚಾರಿತ್ರವಾಗುತ್ತದೆಂಬ ಸಂಬಂಧ ತಿಳಿದು ಮಹಾವ್ರತಾದಿಗಳಲ್ಲಿ ಚಾರಿತ್ರದ ಉಪಚಾರ ಮಾಡಿದೆ; ನಿಶ್ಚಯದಿಂದ ಕಷಾಯರಹಿತವಾದ ಭಾವವೇ ನಿಜವಾದ ಚಾರಿತ್ರವಿದೆ.

ಈ ಪ್ರಕಾರ ಸಂವರದ ಕಾರಣಗಳನ್ನು ವಿಪರೀತವಾಗಿ ತಿಳಿಯುತ್ತ ಸಂವರದ ನಿಜವಾದ ಶ್ರದ್ಧೆಯುಳ್ಳವರಾಗುವುದಿಲ್ಲ.

## ನಿರ್ಜರಾತತ್ತ್ವದ ಅನ್ಯಥಾರೂಪ :-

ಅದರಂತೆ ಈ ಅನಶನ ಮೊದಲಾದ ತಪದಿಂದ ನಿರ್ಜರೆಯನ್ನು ಮನ್ನಿಸುತ್ತಾನೆ, ಆದರೆ ಕೇವಲ ಬಾಹ್ಯ ತಪವನ್ನೇ ಮಾಡುವುದರಿಂದ ನಿರ್ಜರೆಯಾಗುವುದಿಲ್ಲ. ಬಾಹ್ಯ ತಪವನ್ನಂತೂ ಶುದ್ಧೋಪಯೋಗವು ವೃದ್ಧಿಸುವ ಸಲುವಾಗಿ ಮಾಡುತ್ತಾರೆ. ಶುದ್ಧೋಪಯೋಗವು ನಿರ್ಜರೆಗೆ ಕಾರಣವಿರುವುದರಿಂದ ಉಪಚಾರದಿಂದ ತಪವನ್ನು ಕೂಡ ನಿರ್ಜರೆಗೆ ಕಾರಣವೆಂದು ಹೇಳಿದೆ. ಒಂದು ವೇಳೆ ಬಾಹ್ಯದುಃಖವನ್ನು ಸಹಿಸುವುದೇ ನಿರ್ಜರೆಗೆ ಕಾರಣವಾದರೆ ತಿರ್ಯಂಚಾದಿಗಳೂ ಹಸಿವು-ಬಾಯಾರಿಕೆ ಮೊದಲಾದುವನ್ನು ಸಹಿಸುತ್ತವೆ.

**ಪ್ರಶ್ನೆ :-** ಅವಂತೂ ಪರಾಧೀನತೆಯಿಂದ ಸಹಿಸುತ್ತವೆ; ಸ್ವಾಧೀನತೆಯಿಂದ ಧರ್ಮಬುದ್ಧಿಪೂರ್ವಕವಾಗಿ ಉಪವಾಸಾದಿರೂಪದ ತಪಸ್ಸು ಮಾಡಿದರೆ ಅವನಿಗೆ ನಿರ್ಜರೆಯಾಗುತ್ತದಲ್ಲವೇ ?

**ಉತ್ತರ :-** ಧರ್ಮಬುದ್ಧಿಯಿಂದ ಬಾಹ್ಯ ಉಪವಾಸಾದಿಗಳನ್ನಂತೂ ಮಾಡಿತು; ಮತ್ತು ಅಲ್ಲಿ ಉಪಯೋಗವು ಅಶುಭ, ಶುಭ, ಶುದ್ಧರೂಪವಾಗಿ ಹೇಗೆ ಪರಿಣಮಿಸುವುದು ಹಾಗೆ ಪರಿಣಮಿಸಲಿ. ಇದರಿಂದ ಅಧಿಕ ಉಪವಾಸಾದಿಗಳನ್ನು ಮಾಡುವುದರಿಂದ ಅಧಿಕ ನಿರ್ಜರೆಯಾಗುವುದು ಮತ್ತು ಕಡಿಮೆ ಮಾಡುವುದರಿಂದ ಕಡಿಮೆ ನಿರ್ಜರೆಯಾಗುವುದೆಂಬ ನಿಯಮವು ನಿಶ್ಚಿತವಾಗುವುದು, ಆಗ ಉಪವಾಸ ಮೊದಲಾದುವೇ ನಿರ್ಜರೆಯ ಮುಖ್ಯಕಾರಣಗಳಾಗಿ ನಿಶ್ಚಿತವಾಗುವವು; ಹಾಗಂತೂ ಸಂಭವಿಸುವುದಿಲ್ಲ. ಪರಿಣಾಮವು ದುಷ್ಟವಿದ್ದ ಮೇಲೆ ಉಪವಾಸ ಮೊದಲಾದವುಗಳಿಂದ ನಿರ್ಜರೆಯಾಗುವುದು ಹೇಗೆ ಸಂಭವವಿದೆ ?

ಒಂದು ವೇಳೆ ಉಪಯೋಗವು ಹೇಗೆ ಅಶುಭ, ಶುಭ, ಶುದ್ಧರೂಪವಾಗಿ ಪರಿಣಮಿಸುವುದು ಅದಕ್ಕೆ ಅನುಸರಿಸಿ ಬಂಧ-ನಿರ್ಜರೆಗಳಿವೆಯೆಂದು ಹೇಳಿದರೆ ಉಪವಾಸಾದಿ ತಪವು ಮುಖ್ಯವಾಗಿ ನಿರ್ಜರೆಯ ಕಾರಣ ಹೇಗೆ ಉಳಿಯಿತು ? ಅಲ್ಲಿ ಅಶುಭ-ಶುಭ ಪರಿಣಾಮಗಳು ಬಂಧದ ಕಾರಣವೆಂದು ನಿಶ್ಚಿತವಾದರೆ, ಶುದ್ಧ ಪರಿಣಾಮವು ನಿರ್ಜರೆಯ ಕಾರಣವೆಂದು ನಿಶ್ಚಿತವಾಯಿತು.

**ಪ್ರಶ್ನೆ :-** ಹಾಗಾದರೆ ತತ್ತ್ವಾರ್ಥಸೂತ್ರದಲ್ಲಿ ''**ತಪಸಾ ನಿರ್ಜರಾ ಚ**'(೯-೩) ವೆಂದು ಹೇಗೆ ಹೇಳಿದ್ದಾರೆ?

**ಉತ್ತರ :-** ಶಾಸ್ತ್ರದಲ್ಲಿ '**ಇಚ್ಛಾನಿರೋಧಸ್ತಪಃ**' - ★ಎಂದು ಹೇಳಿದ್ದಾರೆ; ಇಚ್ಛೆಯನ್ನು ತಡೆಯುವುದರ ಹೆಸರು ತಪವಿದೆ. ಆದುದರಿಂದ ಶುಭಾಶುಭ ಇಚ್ಛೆಗಳು ದೂರವಾದನಂತರ ಉಪಯೋಗವು ಶುದ್ಧವಾಗುವಲ್ಲಿ ನಿರ್ಜರೆಯಿದೆ. ಆದುದರಿಂದ ತಪದಿಂದ ನಿರ್ಜರೆಯೆಂದು ಹೇಳಿದೆ.

**ಪ್ರಶ್ನೆ :-** ಆಹಾರಾದಿ ರೂಪವಾದ ಅಶುಭದ ಇಚ್ಛೆಯು ದೂರವಾದ ಮೇಲೆಯೇ ತಪವಾಗುತ್ತದೆ, ಆದರೆ ಉಪವಾಸಾದಿಗಳು ಹಾಗೂ ಪ್ರಾಯಶ್ಚಿತ್ತಾದಿಗಳು ಶುಭಕಾರ್ಯಗಳಿದ್ದು ಇವುಗಳ ಇಚ್ಛೆಯಂತೂ ಇರುತ್ತದೆಯಲ್ಲವೆ?

★ ಧವಲ ಪುಸ್ತಕ ೧೩, ಖಂಡ ೫, ಭಾಗ ४, ಸೂತ್ರ ೨೬, ಪುಟ ೫४

**ಉತ್ತರ :-** ಜ್ಞಾನೀ ಜನರಿಗೆ ಉಪವಾಸಾದಿಗಳ ಇಚ್ಛೆಯಿರುವುದಿಲ್ಲ, ಒಂದು ಶುದ್ಧೋಪಯೋಗದ ಇಚ್ಛೆ ಇರುತ್ತದೆ; ಉಪವಾಸಾದಿಗಳನ್ನು ಮಾಡುವುದರಿಂದ ಶುದ್ಧೋಪಯೋಗವು ವೃದ್ಧಿಸುತ್ತದೆ, ಅದಕ್ಕಾಗಿ ಉಪವಾಸಾದಿಗಳನ್ನು ಮಾಡುತ್ತಾರೆ. ಮತ್ತು ಉಪವಾಸಾದಿಗಳಿಂದ ಶರೀರ ಮತ್ತು ಪರಿಣಾಮಗಳ ಶಿಥಿಲತೆಯ ಕಾರಣ ಶುದ್ಧೋಪಯೋಗವು ಶಿಥಿಲವಾಗುತ್ತದೆಂದು ತಿಳಿದರೆ ಆಗ ಆಹಾರಾದಿಗಳನ್ನು ಗ್ರಹಣ ಮಾಡುತ್ತಾರೆ. ಒಂದು ವೇಳೆ ಉಪವಾಸಾದಿಗಳಿಂದ ಸಿದ್ಧಿಯಾಗುತ್ತಿದ್ದರೆ ಅಜಿತನಾಥ ಮೊದಲಾದ ಇಪ್ಪತ್ತುಮೂರು ತೀರ್ಥಂಕರರು ದೀಕ್ಷೆ ಸ್ವೀಕರಿಸಿ ಎರಡೇ ಉಪವಾಸಗಳನ್ನೇಕೆ ಧಾರಣ ಮಾಡುತ್ತಿದ್ದರು ? ಅವರಿಗೆ ಶಕ್ತಿಯು ಕೂಡ ಅಧಿಕವಿತ್ತು. ಆದರೆ ಹೇಗೆ ಪರಿಣಾಮವಾಯಿತು ಹಾಗೆ ಬಾಹ್ಯ ಸಾಧನದ ಮೂಲಕ ಒಂದು ವೀತರಾಗ ಶುದ್ಧೋಪಯೋಗದ ಅಭ್ಯಾಸ ಮಾಡಿದರು.

**ಪ್ರಶ್ನೆ :-** ಹೀಗಿದ್ದರೆ ಅನಶನಾದಿಗಳಿಗೆ ತಪವೆಂಬ ಸಂಜ್ಞೆಯು ಹೇಗೆ ಪ್ರಾಪ್ತವಾಯಿತು ?

**ಉತ್ತರ :-** ಅವನ್ನು ಬಾಹ್ಯತಪವೆಂದು ಹೇಳಿದೆ. 'ಇವನು ತಪಸ್ವಿಯಿದ್ದಾನೆಂದು ಹೊರಗಿನಿಂದ ಇತರರಿಗೆ ಕಂಡು ಬರಲೆ'ನ್ನುವುದು ಬಾಹ್ಯದ ಅರ್ಥವಿದೆ; ಆದರೆ ತಾವಂತೂ ಅಂತರಂಗ ಪರಿಣಾಮಗಳಿದ್ದ ಹಾಗೆಯೇ ಫಲವನ್ನು ಪಡೆಯುವಿರಿ, ಏಕೆಂದರೆ ಪರಿಣಾಮಶೂನ್ಯವಾದ ಶರೀರದ ಕ್ರಿಯೆಯು ಫಲದಾಯಕವಿಲ್ಲ.

**ಪ್ರಶ್ನೆ :-** ಶಾಸ್ತ್ರದಲ್ಲಿ ಅಕಾಮ-ನಿರ್ಜರೆ ಹೇಳಿದೆ. ಅಲ್ಲಿ ಇಚ್ಛೆಯಿಲ್ಲದೆ ಹಸಿವೆ-ಬಾಯಾರಿಕೆಗಳನ್ನು ಸಹಿಸುವುದರಿಂದ ನಿರ್ಜರೆಯಾಗುತ್ತಿದ್ದರೆ ಉಪವಾಸಾದಿಗಳ ಮೂಲಕ ಕಷ್ಟ ಸಹಿಸುವುದರಿಂದ ನಿರ್ಜರೆ ಹೇಗಾಗುವುದಿಲ್ಲ?

**ಉತ್ತರ :-** ಅಕಾಮನಿರ್ಜರೆಯಲ್ಲಿ ಕೂಡ ಬಾಹ್ಯ ನಿಮಿತ್ತವು ಇಚ್ಛೆಯಿಲ್ಲದೆ ಹಸಿವೆ-ಬಾಯಾರಿಕೆಗಳನ್ನು ಸಹನೆ ಮಾಡುವುದಿದೆ, ಮತ್ತು ಅಲ್ಲಿ ಮಂದಕಷಾಯರೂಪದ ಭಾವಗಳಿದ್ದರೆ ಪಾಪದ ನಿರ್ಜರೆಯಾಗುತ್ತದೆ, ದೇವಾದಿ ಪುಣ್ಯದ ಬಂಧವಾಗುತ್ತದೆ. ಆದರೆ ತೀವ್ರ ಕಷಾಯಗಳಿದ್ದರೂ ಕೂಡ ಕಷ್ಟ ಸಹಿಸುವುದರಿಂದ ಪುಣ್ಯ ಬಂಧವಾಗುತ್ತಿದ್ದರೆ ಸಮಸ್ತ ತಿರ್ಯಂಚಾದಿಗಳು ದೇವವೇ ಆಗಬೇಕು, ಹಾಗೆ ಆಗುವುದಿಲ್ಲ. ಅದೇ ಪ್ರಕಾರ ಇಚ್ಛಾಪೂರ್ವಕವಾಗಿ ಉಪವಾಸಾದಿಗಳನ್ನು ಮಾಡುವುದರಿಂದ ಹಸಿವೆ-ಬಾಯಾರಿಕೆಗಳ ಕಷ್ಟವನ್ನು ಸಹಿಸುತ್ತಾರೆ, ಆದರೆ ಅದು ಬಾಹ್ಯ ನಿಮಿತ್ತವಿದೆ; ಅಲ್ಲಿ ಪರಿಣಾಮವಿರುವಂತೆ ಫಲ ಪಡೆಯುತ್ತಾರೆ. ಹೇಗೆ ಅನ್ನಕ್ಕೆ ಪ್ರಾಣವೆಂದು ಹೇಳಿದೆ ಅದೇ ಪ್ರಕಾರ, ಮತ್ತು ಹೀಗೆ ಬಾಹ್ಯಸಾಧನವಿರುವುದರಿಂದ ಅಂತರಂಗ ತಪದ ವೃದ್ಧಿಯಾಗುತ್ತದೆ, ಅದಕ್ಕಾಗಿ ಉಪಚಾರದಿಂದ ಇವನ್ನು ತಪವೆಂದು ಹೇಳಿದೆ; ಆದರೆ ಬಾಹ್ಯ ತಪ ಮಾಡುವುದು ಮತ್ತು ಅಂತರಂಗತಪವಿಲ್ಲದಿದ್ದರೆ ಅದಕ್ಕೆ ಉಪಚಾರದಿಂದ ಕೂಡ ತಪವೆಂಬ ಸಂಜ್ಞೆಯಿಲ್ಲ. ಹಾಗೆ ಹೇಳಿಯೇ ಇದ್ದಾರೆ,-

**ಕಷಾಯವಿಷಯಾಹಾರೋ ತ್ಯಾಗೋ ಯತ್ರ ವೀಧಿಯತೇ ।**
**ಉಪವಾಸಃ ಸ ವಿಜ್ಞೇಯಃ ಶೇಷಂ ಲಂಘನಕಂ ವಿದುಃ ॥**

ಎಲ್ಲಿ ಕಷಾಯ-ವಿಷಯ ಮತ್ತು ಆಹಾರದ ತ್ಯಾಗ ಮಾಡಲಾಗುತ್ತದೆ ಅದನ್ನು ಉಪವಾಸವೆಂದು ತಿಳಿಯುವುದು. ಉಳಿದವುಗಳನ್ನು ಶ್ರೀಗುರುಗಳು ಲಂಘನವೆಂದು ಹೇಳುತ್ತಾರೆ.

**ಪ್ರಶ್ನೆ :-** ಹೀಗಿದ್ದರೆ ನಾವು ಉಪವಾಸಾದಿಗಳನ್ನು ಮಾಡುವುದಿಲ್ಲ, ಏಕೆ ಮಾಡಬೇಕು ?

**ಉತ್ತರ :-** ಉಪದೇಶವನ್ನು ಮೇಲೆ ಹತ್ತುವುದಕ್ಕಾಗಿ ಕೊಡಲಾಗುತ್ತದೆ; ಪ್ರತಿಯಾಗಿ ನೀನು ಕೆಳಗುರುಳ ಬಯಸಿದರೆ ನಾವೇನು ಮಾಡುವುದು ? ನೀನು ಮಾನಾದಿಗಳಿಂದ ಉಪವಾಸ ಮೊದಲಾದುವನ್ನು ಮಾಡುತ್ತಿದ್ದರೆ ಮಾಡು ಅಥವಾ ಬಿಡು; ಅದರಿಂದ ಯಾವ ಸಿದ್ಧಿಯಿಲ್ಲ. ಮತ್ತು ಧರ್ಮಬುದ್ಧಿಯಿಂದ ಆಹಾರಾದಿಗಳ ಅನುರಾಗ ಬಿಡುತ್ತಿದ್ದರೆ ಎಷ್ಟು ರಾಗವು ಬಿಟ್ಟಿತು ಅಷ್ಟೇ ಬಿಟ್ಟಿತು; ಆದರೆ ಅದನ್ನೇ ತಪವೆಂದು ತಿಳಿದುಕೊಂಡು ಇದರಿಂದ ನಿರ್ಜರೆಯೆಂದು ಮನ್ನಿಸಿ ಸಂತುಷ್ಟನಾಗಬೇಡ.

ಅಲ್ಲದೆ ಅಂತರಂಗ ತಪಗಳಲ್ಲಿ ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ತ್ಯಾಗ ಮತ್ತು ಧ್ಯಾನ ರೂಪದ ಕ್ರಿಯೆಗಳಲ್ಲಿನ ಬಾಹ್ಯ ಪ್ರವರ್ತನೆಯನ್ನು ಬಾಹ್ಯ ತಪಗಳಂತೆಯೇ ತಿಳಿಯುವುದು. ಹೇಗೆ ಅನಶನಾದಿಗಳು ಬಾಹ್ಯ ಕ್ರಿಯೆಗಳಿವೆ ಹಾಗೆ ಇವು ಕೂಡ ಬಾಹ್ಯ ಕ್ರಿಯೆಗಳಿವೆ; ಆದುದರಿಂದ ಪ್ರಾಯಶ್ಚಿತ್ತ ಮೊದಲಾದ ಬಾಹ್ಯ ಸಾಧನಗಳು ಅಂತರಂಗ ತಪಗಳಲ್ಲ. ಇಂಥ ಬಾಹ್ಯ ಪ್ರವರ್ತನೆಯಾದ ಮೇಲೆ ಅಂತರಂಗ ಪರಿಣಾಮಗಳ ಶುದ್ಧತೆಯಾಗುವುದರ ಹೆಸರು ಅಂತರಂಗ ತಪವಿದೆಯೆಂದು ತಿಳಿಯಬೇಕು.

ಅಧಿಕ ಶುದ್ಧತೆಯಾದ ಮೇಲೆ ಶುದ್ಧೋಪಯೋಗರೂಪದ ಪರಿಣತಿಯಾಗುತ್ತದೆ ಆಗಂತೂ ನಿರ್ಜರೆಯೇ ಇದೆ; ಬಂಧವಿರುವುದಿಲ್ಲ. ಮತ್ತು ಅಲ್ಪ ಶುದ್ಧತೆಯಾದ ಮೇಲೆ ಶುದ್ಧೋಪಯೋಗದ ಅಂಶವೂ ಇರುತ್ತದೆ; ಆದುದರಿಂದ ಎಷ್ಟು ಶುದ್ಧತೆಯಾಗಿದೆ ಅದರಿಂದ ನಿರ್ಜರೆಯಿದೆ. ಮತ್ತು ಎಷ್ಟು ಶುಭ ಭಾವಗಳಿವೆ ಅದರಿಂದ ಬಂಧವಿದೆ. ಇಂಥ ಮಿಶ್ರ ಭಾವಗಳು ಯುಗಪತ್ ಆಗುತ್ತವೆ, ಆಗ ಬಂಧ ಮತ್ತು ನಿರ್ಜರೆ ಎರಡೂ ಆಗುತ್ತವೆ.

**ಪ್ರಶ್ನೆ :-** ಶುಭಭಾವದಿಂದ ಪಾಪದ ನಿರ್ಜರೆಯಾಗುತ್ತದೆ ಪುಣ್ಯದ ಬಂಧವಾಗುತ್ತದೆ; ಆದರೆ ಶುದ್ಧಭಾವಗಳಿಂದ, ಎರಡರ ನಿರ್ಜರೆಯಾಗುತ್ತದೆಂದೇಕೆ ಹೇಳುವುದಿಲ್ಲ ?

**ಉತ್ತರ :-** ಮೋಕ್ಷಮಾರ್ಗದಲ್ಲಿ ಸಮಸ್ತ ಪ್ರಕೃತಿಗಳ ಸ್ಥಿತಿಯು ಕುಗ್ಗುವಿಕೆಯಾಗುತ್ತದೆ; ಅಲ್ಲಿ ಪುಣ್ಯ ಪಾಪದ ವಿಶೇಷವೇ ಇಲ್ಲ. ಮತ್ತು ಅನುಭಾಗದ ಕುಗ್ಗುವಿಕೆಯು ಪುಣ್ಯ-ಪ್ರಕೃತಿಗಳಲ್ಲಿ ಶುದ್ಧೋಪಯೋಗದಿಂದಲೂ ಆಗುವುದಿಲ್ಲ. ಮೇಲೆ ಮೇಲೆ ಪುಣ್ಯ ಪ್ರಕೃತಿಗಳ ಅನುಭಾಗದ ತೀವ್ರ ಬಂಧ-ಉದಯವಾಗುತ್ತದೆ ಮತ್ತು ಪಾಪ ಪ್ರಕೃತಿಗಳ ಪರಮಾಣುಗಳು ಬದಲಾಗಿ ಶುಭ ಪ್ರಕೃತಿರೂಪವಾಗುತ್ತದೆ. ಇಂಥ ಸಂಕ್ರಮಣವು ಶುಭ ಹಾಗೂ ಶುದ್ಧ ಎರಡೂ ಭಾವಗಳಿದ್ದ ಮೇಲೆ ಆಗುತ್ತದೆ; ಆದುದರಿಂದ ಪೂರ್ವೋಕ್ತ ನಿಯಮವು ಸಂಭವವಿಲ್ಲ, ವಿಶುದ್ಧತೆಗೆ ಅನುಸಾರವಾಗಿಯೇ ನಿಯಮವು ಸಂಭವವಿದೆ.

ನೋಡಿರಿ ! ಚತುರ್ಥಗುಣಸ್ಥಾನವುಳ್ಳವನು ಶಾಸ್ತ್ರಾಭ್ಯಾಸ, ಆತ್ಮಚಿಂತನೆ ಮೊದಲಾದ ಕಾರ್ಯ ಮಾಡಿದರೂ ಅಲ್ಲಿ ನಿರ್ಜರೆಯಿಲ್ಲ, ಬಂಧವೇ ಅಧಿಕವಾಗುತ್ತದೆ. ಮತ್ತು ಪಂಚಮ ಗುಣಸ್ಥಾನವುಳ್ಳವನು ವಿಷಯ ಸೇವನೆ ಮೊದಲಾದ ಕಾರ್ಯ ಮಾಡಿದರೂ ಅಲ್ಲಿ ಅವನಿಗೆ ಗುಣಶ್ರೇಣೀ ನಿರ್ಜರೆಯಾಗುತ್ತಿರುತ್ತದೆ, ಸ್ವಲ್ಪ ಬಂಧವೂ ಆಗುತ್ತದೆ. ಮತ್ತು ಪಂಚಮಗುಣಸ್ಥಾನವುಳ್ಳವನು ಉಪವಾಸ ಅಥವಾ ಪ್ರಾಯಶ್ಚಿತ್ತ ಮೊದಲಾದ ತಪ ಮಾಡಿದರೂ ಆ ಕಾಲದಲ್ಲಿ ಅವನಿಗೆ ಸ್ವಲ್ಪ ನಿರ್ಜರೆಯಾಗುತ್ತದೆ. ಮತ್ತು ಆರನೆಯ ಗುಣಸ್ಥಾನವುಳ್ಳವನು ಆಹಾರ-ವಿಹಾರ

ಮೊದಲಾದ ಕ್ರಿಯೆ ಮಾಡುವ ಸಮಯದಲ್ಲಿಯೂ ಅವನಿಗೆ ಅಧಿಕ ನಿರ್ಜರೆಯಾಗುತ್ತದೆ, ಮತ್ತು ಬಂಧವು ಅದಕ್ಕಿಂತಲೂ ಕಡಿಮೆಯಾಗುತ್ತದೆ.

**ಆದುದರಿಂದ ಬಾಹ್ಯ ಪ್ರವೃತ್ತಿಗೆ ಅನುಸರಿಸಿ ನಿರ್ಜರೆಯಿಲ್ಲ, ಅಂತರಂಗದ ಕಷಾಯ ಶಕ್ತಿಯು ಕುಗ್ಗುವುದರಿಂದ ವಿಶುದ್ಧತೆಯಾದ ಮೇಲೆ ನಿರ್ಜರೆಯಾಗುತ್ತದೆ. ಇದರ ಸ್ಪಷ್ಟ ಸ್ವರೂಪದ ನಿರೂಪಣೆಯನ್ನು ಮುಂದೆ ಮಾಡಲಾಗುವುದು ಅಲ್ಲಿಂದ ತಿಳಿದುಕೊಳ್ಳಬೇಕು.**

ಈ ಪ್ರಕಾರ ಅನಶನ ಮೊದಲಾದ ಕ್ರಿಯೆಗಳಿಗೆ ತಪವೆಂಬ ಸಂಜ್ಞೆಯು ಉಪಚಾರದಿಂದ ಇದೆಯೆಂದು ತಿಳಿಯುವುದು. ಇದರಿಂದಲೇ ಇದಕ್ಕೆ ವ್ಯವಹಾರ ತಪವೆಂದು ಹೇಳಿದೆ. ವ್ಯವಹಾರ ಮತ್ತು ಉಪಚಾರದ ಅರ್ಥವು ಒಂದೇ ಇದೆ. ಮತ್ತು ಸಾಧನದಿಂದ ಯಾವ ವೀತರಾಗಭಾವರೂಪದ ವಿಶುದ್ಧತೆಯಾಗುವುದು ಆ ನಿಜವಾದ ತಪವು ನಿರ್ಜರೆಗೆ ಕಾರಣವೆಂದು ತಿಳಿಯುವುದು.

ಧನವನ್ನು ಮತ್ತು ಅನ್ನವನ್ನು ಪ್ರಾಣವೆಂದು ಹೇಳಿದೆ. ಆ ಧನದಿಂದ ಅನ್ನ ತಂದು ಅದರ ಭಕ್ಷಣೆ ಮಾಡಿ ಪ್ರಾಣಗಳ ಪೋಷಣೆ ಮಾಡಲಾಗುತ್ತದೆ; ಆದುದರಿಂದ ಧನವನ್ನು ಮತ್ತು ಅನ್ನವನ್ನು ಉಪಚಾರದಿಂದ ಪ್ರಾಣವೆಂದು ಹೇಳಿದೆ. ಯಾವನೋ ಓರ್ವನು ಇಂದ್ರಿಯ ಮೊದಲಾದ ಪ್ರಾಣಗಳನ್ನು ತಿಳಿದುಕೊಳ್ಳದೆ ಇವನ್ನೇ ಪ್ರಾಣವೆಂದು ತಿಳಿದುಕೊಂಡು ಸಂಗ್ರಹ ಮಾಡಿದರೆ ಮರಣವನ್ನೇ ಪಡೆಯುವನು. ಅದೇ ಪ್ರಕಾರ ಅನಶನಾದಿಗಳನ್ನು ಹಾಗೂ ಪ್ರಾಯಶ್ಚಿತ್ತಾದಿಗಳನ್ನು ತಪವೆಂದು ಹೇಳಿದೆ, ಏಕೆಂದರೆ ಅನಶನಾದಿಗಳ ಸಾಧನದಿಂದ ಪ್ರಾಯಶ್ಚಿತ್ತ ಮೊದಲಾದರೂಪದಿಂದ ಪ್ರವರ್ತನೆ ಮಾಡಿ ವೀತರಾಗಭಾವರೂಪವಾದ ಸತ್ಯ ತಪದ ಪೋಷಣೆ ಮಾಡಲಾಗುತ್ತದೆ; ಆದುದರಿಂದ ಅನಶನಾದಿಗಳನ್ನು ಹಾಗೂ ಪ್ರಾಯಶ್ಚಿತ್ತಾದಿಗಳನ್ನು ಉಪಚಾರದಿಂದ ತಪವೆಂದು ಹೇಳಿದೆ. ಯಾವನೋ ಓರ್ವನು ವೀತರಾಗಭಾವರೂಪದ ತಪವನ್ನು ತಿಳಿದುಕೊಳ್ಳಲಾರದೆ ಇವನ್ನೇ ತಪವೆಂದು ತಿಳಿದುಕೊಂಡು ಸಂಗ್ರಹ ಮಾಡಿದರೆ ಸಂಸಾರದಲ್ಲಿಯೇ ಭ್ರಮಣ ಮಾಡುವನು.

ಹೆಚ್ಚೇನು ಹೇಳುವುದು, ನಿಶ್ಚಯಧರ್ಮವಂತೂ ವೀತರಾಗ ಭಾವವಿದ್ದು, ಉಳಿದೆಲ್ಲ ವಿಶೇಷಗಳು ಬಾಹ್ಯ ಸಾಧನದ ಅಪೇಕ್ಷೆಯಿಂದ ಉಪಚಾರದಿಂದ ಮಾಡಿವೆ ಅವಕ್ಕೆ ವ್ಯವಹಾರ ಮಾತ್ರದಿಂದ ಧರ್ಮಸಂಜ್ಞೆಯಿದೆಯೆಂದು ತಿಳಿಯುವುದು. ಈ ರಹಸ್ಯವನ್ನು ತಿಳಿದುಕೊಳ್ಳದಿರುವುದರಿಂದ ಅವನಿಗೆ ನಿರ್ಜರೆಯ ನಿಜವಾದ ಶ್ರದ್ಧೆಯು ಇಲ್ಲ.

## ಮೋಕ್ಷತತ್ತ್ವದ ಅನ್ಯಥಾರೂಪ :-

ಸಿದ್ಧವಾಗುವುದಕ್ಕೆ ಮೋಕ್ಷವೆಂದು ಮನ್ನಿಸುತ್ತಾನೆ. ಅಲ್ಲಿ ಜನ್ಮ-ಮರಣ-ರೋಗ-ಕ್ಲೇಶ ಮೊದಲಾದ ದುಃಖಗಳು ದೂರವಾದವು, ಅನಂತಜ್ಞಾನದ ಮೂಲಕ ಲೋಕಾಲೋಕವನ್ನು ತಿಳಿಯುವುದಾಯಿತು, ತ್ರಿಲೋಕ ಪೂಜ್ಯತೆಯಾಯಿತು, ಇತ್ಯಾದಿಗಳ ರೂಪದಿಂದ ಅದರ ಮಹಿಮೆಯನ್ನು ತಿಳಿಯುತ್ತಾನೆ. ಆದುದರಿಂದ ಎಲ್ಲ ಜೀವಗಳ ದುಃಖ ದೂರ ಮಾಡುವ, ಜ್ಞೇಯಗಳನ್ನು ತಿಳಿಯುವ ಹಾಗೂ ಪೂಜ್ಯವಾಗುವ ಇಚ್ಛೆಯಿದೆ. ಇವುಗಳ ಸಲುವಾಗಿಯೇ ಮೋಕ್ಷದ ಇಚ್ಛೆ ಮಾಡಿದರೆ ಇವನಿಗೆ ಅನ್ಯ ಜೀವಗಳ ಶ್ರದ್ಧೆಯಿಂದ ಯಾವ ವಿಶೇಷತೆಯಾಯಿತು?

ಅದರಂತೆ ಸ್ವರ್ಗದಲ್ಲಿ ಸುಖವಿದ್ದು ಅದರ ಅನಂತಗುಣಿತ ಸುಖವು ಮೋಕ್ಷದಲ್ಲಿದೆಯೆಂದೂ ಇವನ ಅಭಿಪ್ರಾಯವಿದೆ. ಆದರೆ ಈ ಗುಣಾಕಾರದಲ್ಲಿ ಅವನು ಸ್ವರ್ಗ-ಮೋಕ್ಷಸುಖದ ಜಾತಿಯು ಒಂದೆಂದು ತಿಳಿಯುತ್ತಾನೆ. ಸ್ವರ್ಗದಲ್ಲಿ ವಿಷಯಾದಿ ಸಾಮಗ್ರಿಗಳಿಂದ ಜನಿಸಿದ ಸುಖವಾಗುತ್ತದೆಂದು ಅದರ ಜಾತಿಯು ಇವನಿಗೆ ಭಾಸವಾಗುತ್ತದೆ, ಆದರೆ ಮೋಕ್ಷದಲ್ಲಿ ವಿಷಯಾದಿ ಸಾಮಗ್ರಿಗಳಿಲ್ಲ, ಆದುದರಿಂದ ಅಲ್ಲಿಯ ಸುಖದ ಜಾತಿಯು ಇವನಿಗೆ ಭಾಸವಾಗುವುದಿಲ್ಲ; ಆದರೆ ಮಹಾಪುರುಷರು ಸ್ವರ್ಗಕ್ಕಿಂತಲೂ ಮೋಕ್ಷವನ್ನು ಉತ್ತಮವೆಂದು ಹೇಳುತ್ತಿರುವುದರಿಂದ ಇವನೂ ಉತ್ತಮವೆಂದೇ ಮನ್ನಿಸುತ್ತಾನೆ. ಹೇಗೆ ಓರ್ವನು ಸಂಗೀತದ ಸ್ವರೂಪ ತಿಳಿಯುವುದಿಲ್ಲ; ಆದರೆ ಸಭೆಯ ಜನರೆಲ್ಲರು ಹೊಗಳುತ್ತಿರುವುದರಿಂದ ತಾನೂ ಹೊಗಳುತ್ತಾನೆ. ಅದೇ ಪ್ರಕಾರ ಇವನು ಮೋಕ್ಷವನ್ನು ಉತ್ತಮವೆಂದು ಮನ್ನಿಸುತ್ತಾನೆ.

**ಪ್ರಶ್ನೆ :-** ಇಂದ್ರರುಗಳಿಗಿಂತ ಅನಂತಗುಣ ಸುಖವು ಸಿದ್ಧರಿಗಿರುತ್ತದೆಂದು ಶಾಸ್ತ್ರದಲ್ಲಿ ಕೂಡ ಪ್ರರೂಪಣೆ ಮಾಡಿಲ್ಲವೇನು ?

**ಉತ್ತರ :-** ಹೇಗೆ ತೀರ್ಥಂಕರರ ಶರೀರದ ಪ್ರಭೆಯನ್ನು ಸೂರ್ಯಪ್ರಭೆಗಿಂತ ಕೋಟಿಗುಣಿತವೆಂದು ಹೇಳಿದೆ, ಅಲ್ಲಿ ಅವುಗಳ ಜಾತಿ ಒಂದಿಲ್ಲ! ಆದರೆ ಲೋಕದಲ್ಲಿ ಸೂರ್ಯಪ್ರಭೆಯ ಮಹಿಮೆಯನ್ನು ಅದಕ್ಕಿಂತಲೂ ಅಧಿಕ ಮಹಿಮೆಯನ್ನು ತಿಳಿಸಿಕೊಡುವ ಸಲುವಾಗಿ ಉಪಮಾಲಂಕಾರದಿಂದ ಹೇಳುತ್ತಾರೆ. ಅದೇ ಪ್ರಕಾರ ಸಿದ್ಧ ಸುಖವನ್ನು ಇಂದ್ರಸುಖಕ್ಕಿಂತ ಅನಂತಗುಣಿತವೆಂದು ಹೇಳಿದೆ, ಅಲ್ಲಿ ಅವುಗಳ ಜಾತಿ ಒಂದಿಲ್ಲ; ಆದರೆ ಲೋಕದಲ್ಲಿ ಇಂದ್ರಾದಿಗಳ ಸುಖದ ಮಹಿಮೆಯಿದ್ದು ಅದಕ್ಕಿಂತಲೂ ಅಧಿಕ ಮಹಿಮೆಯನ್ನು ತಿಳಿಸಿಕೊಡುವ ಸಲುವಾಗಿ ಉಪಮಾಲಂಕಾರದಿಂದ ಹೇಳುತ್ತಾರೆ.

**ಪ್ರಶ್ನೆ :-** ಆ ಸಿದ್ಧರ ಸುಖ ಮತ್ತು ಇಂದ್ರಾದಿಗಳ ಸುಖದ ಜಾತಿಯು ಒಂದೆಂದು ತಿಳಿಯುತ್ತಾನೆಂಬ ನಿಶ್ಚಯವನ್ನು ನೀವು ಹೇಗೆ ಮಾಡಿದಿರಿ ?

**ಉತ್ತರ :-** ಯಾವ ಧರ್ಮಸಾಧನದ ಫಲವು ಸ್ವರ್ಗವೆಂದು ಮನ್ನಿಸುತ್ತಾರೆ, ಅದೇ ಧರ್ಮಸಾಧನದ ಫಲವು ಮೋಕ್ಷವೆಂದು ಮನ್ನಿಸುತ್ತಾನೆ. ಓರ್ವನು ಇಂದ್ರ ಪದವನ್ನು ಪ್ರಾಪ್ತಮಾಡಿಕೊಳ್ಳಲಿ, ಓರ್ವನು ಮೋಕ್ಷ ಪ್ರಾಪ್ತಮಾಡಿಕೊಳ್ಳಲಿ, ಅಲ್ಲಿ ಅವೆರಡನ್ನು ಒಂದು ಜಾತಿಯ ಧರ್ಮದ ಫಲವೆಂದು ಮನ್ನಿಸುತ್ತಾನೆ. ಯಾವನ ಸಾಧನವು ಅಲ್ಪವಿರುತ್ತದೆ ಅವನು ಇಂದ್ರ ಪದ ಪಡೆಯುತ್ತಾನೆ, ಯಾವನ ಸಾಧನವು ಸಂಪೂರ್ಣವಾಗುವುದು ಅವನು ಮೋಕ್ಷಪ್ರಾಪ್ತಮಾಡಿಕೊಳ್ಳುತ್ತಾನೆಂದೂ ಮನ್ನಿಸುತ್ತಾನೆ; ಆದರೆ ಅಲ್ಲಿ ಧರ್ಮದ ಜಾತಿಯು ಒಂದೆಂದು ತಿಳಿಯುತ್ತಾನೆ. ಆದರೆ ಯಾವನು ಕಾರಣದ ಜಾತಿಯು ಒಂದೆಂದು ತಿಳಿಯುತ್ತಾನೆ ಅವನಿಗೆ ಕಾರ್ಯದ ಜಾತಿಯು ಕೂಡ ಒಂದೆಂಬ ಶ್ರದ್ಧೆಯು ಅವಶ್ಯವಿರುತ್ತದೆ; ಏಕೆಂದರೆ ಕಾರಣವಿಶೇಷವಿದ್ದ ಮೇಲೆಯೇ ಕಾರ್ಯವಿಶೇಷವಾಗುತ್ತದೆ. ಆದುದರಿಂದ ಅವನ ಅಭಿಪ್ರಾಯದಲ್ಲಿ ಇಂದ್ರಾದಿಗಳ ಸುಖ ಮತ್ತು ಸಿದ್ಧರ ಸುಖದ ಜಾತಿಯು ಒಂದಿದೆಯೆಂಬ ಶ್ರದ್ಧೆಯಿದೆಯೆಂಬುದನ್ನು ನಾವು ನಿಶ್ಚಯ ಮಾಡಿದೆವು.

ಅದರಂತೆ ಕರ್ಮದ ನಿಮಿತ್ತದಿಂದ ಆತ್ಮನಿಗೆ ಔಪಾಧಿಕ ಭಾವಗಳಿದ್ದವು, ಅವುಗಳ ಅಭಾವವಾದ ಮೇಲೆ ತಾನು ಶುದ್ಧಸ್ವಭಾವರೂಪದ ಕೇವಲ ಆತ್ಮನಾದನು. ಯಾವ ಪ್ರಕಾರ ಪರಮಾಣುವು ಸ್ಕಂಧದಿಂದ ಪೃಥಕ್ಕಾದ ಮೇಲೆ

ಶುದ್ಧವಾಗುತ್ತದೆ, ಅದೇ ಪ್ರಕಾರ ಇವನು ಕರ್ಮಾದಿಗಳಿಂದ ಭಿನ್ನವಾಗಿ ಶುದ್ಧನಾಗುತ್ತಾನೆ. ವಿಶೇಷವೆಂದರೆ ಅದು ಎರಡೂ ಅವಸ್ಥೆಗಳಲ್ಲಿ ದುಃಖೀ-ಸುಖೀಯಿಲ್ಲ; ಆದರೆ ಆತ್ಮನು ಅಶುದ್ಧ ಅವಸ್ಥೆಯಲ್ಲಿ ದುಃಖಿಯಿದ್ದನು, ಈಗ ಅದರ ಅಭಾವವಾಗುವುದರಿಂದ ನಿರಾಕುಲ ಲಕ್ಷಣವಿರುವ ಅನಂತಸುಖದ ಪ್ರಾಪ್ತಿಯಾಯಿತು.

ಅದರಂತೆ ಇಂದ್ರಾದಿಗಳ ಯಾವ ಸುಖವಿದೆ ಅದು ಕಷಾಯಭಾವಗಳಿಂದ ಆಕುಲತೆಯ ರೂಪವಿದೆ, ಆದುದರಿಂದ ಅದು ಪರಮಾರ್ಥದಿಂದ ದುಃಖವೇ ಇದೆ; ಅದಕ್ಕಾಗಿ ಅದರ ಮತ್ತು ಇದರ ಜಾತಿಯು ಒಂದಿಲ್ಲ, ಮತ್ತು ಸ್ವರ್ಗಸುಖದ ಕಾರಣವು ಪ್ರಶಸ್ತರಾಗವಿದ್ದರೆ ಮೋಕ್ಷಸುಖದ ಕಾರಣವು ವೀತರಾಗಭಾವವಿದೆ; ಆದುದರಿಂದ ಕಾರಣದಲ್ಲಿ ಕೂಡ ವಿಶೇಷವಿದೆ; ಆದರೆ ಇಂಥ ಭಾವವು ಇವನಿಗೆ ಭಾಸವಾಗುವುದಿಲ್ಲ.

ಆದುದರಿಂದ ಇವನಿಗೆ ಮೋಕ್ಷದ್ದೂ ಕೂಡ ನಿಜವಾದ ಶ್ರದ್ಧೆಯಿಲ್ಲ.

ಈ ಪ್ರಕಾರ ಇವನಿಗೆ ನಿಜವಾದ ತತ್ತ್ವಶ್ರದ್ಧೆಯಿಲ್ಲ. ಆದುದರಿಂದ ಅಭವ್ಯನಿಗೆ ತತ್ತ್ವಶ್ರದ್ಧೆಯಾದ ಮೇಲೆ ಕೂಡ ಮಿಥ್ಯಾದರ್ಶನವೇ ಇರುತ್ತದೆಂದು ಸಮಯಸಾರದಲ್ಲಿ (೨೭೬-೨೭೭ನೇ ಗಾಥೆಯ ಟೀಕೆ) ಹೇಳಿದೆ. ಮತ್ತು ಪ್ರವಚನಸಾರದಲ್ಲಿ ಆತ್ಮಜ್ಞಾನದಿಂದ ಶೂನ್ಯವಾದ ತತ್ತ್ವಾರ್ಥಶ್ರದ್ಧೆಯು ಕಾರ್ಯಕಾರಿಯಿಲ್ಲವೆಂದು ಹೇಳಿದೆ.

ಇನ್ನು ವ್ಯವಹಾರ ದೃಷ್ಟಿಯಿಂದ ಸಮ್ಯಗ್ದರ್ಶನದ ಎಂಟು ಅಂಗಗಳನ್ನು ಹೇಳಿದ್ದಾರೆ ಅವನ್ನು ಇವನು ಪಾಲಿಸುತ್ತಾನೆ, ಇಪ್ಪತ್ತೈದು ದೋಷಗಳನ್ನು ಹೇಳಿದ್ದಾರೆ ಅವನ್ನು ನಿವಾರಿಸುತ್ತಾನೆ, ಸಂವೇಗ ಮೊದಲಾದ ಗುಣಗಳನ್ನು ಹೇಳಿದ್ದಾರೆ ಅವನ್ನು ಧಾರಣಮಾಡುತ್ತಾನೆ; ಆದರೆ ಹೇಗೆ ಬೀಜ ಬಿತ್ತದೆ ಭೂಮಿಯ ಎಲ್ಲ ಸಾಧನ ಮಾಡಿದ ಮೇಲೂ ಧಾನ್ಯ ಸಿದ್ಧವಾಗುವುದಿಲ್ಲ; ಅದೇ ಪ್ರಕಾರ ನಿಜವಾದ ತತ್ತ್ವಶ್ರದ್ಧೆಯಾದಲ್ಲದೆ ಸಮ್ಯಕ್ತ್ವವಾಗುವುದಿಲ್ಲ. ಪಂಚಾಸ್ತಿಕಾಯದ ವ್ಯಾಖ್ಯೆಯಲ್ಲಿ ಕೊನೆಗೆ ವ್ಯವಹಾರಾಭಾಸವುಳ್ಳವರ ವರ್ಣನೆ ಮಾಡಲಾಗಿದ್ದು ಅಲ್ಲಿ ಕೂಡ ಹೀಗೆಯೇ ಕಥನ ಮಾಡಲಾಗಿದೆ.

ಈ ಪ್ರಕಾರ ಇವನಿಗೆ ಸಮ್ಯಗ್ದರ್ಶನದ ಸಲುವಾಗಿ ಸಾಧನ ಮಾಡಿದ ಮೇಲೆ ಕೂಡ ಸಮ್ಯಗ್ದರ್ಶನವಾಗುವುದಿಲ್ಲ.

### ಸಮ್ಯಗ್ಜ್ಞಾನದ ಅನ್ಯಥಾರೂಪ :-

ಸಮ್ಯಗ್ಜ್ಞಾನದ ಸಲುವಾಗಿ ಶಾಸ್ತ್ರಾಭ್ಯಾಸ ಮಾಡುವುದರಿಂದ ಸಮ್ಯಗ್ಜ್ಞಾನವಾಗುತ್ತದೆಂದು ಶಾಸ್ತ್ರದಲ್ಲಿ ಹೇಳಿದೆ; ಆದುದರಿಂದ ಇವನು ಶಾಸ್ತ್ರಾಭ್ಯಾಸದಲ್ಲಿ ತತ್ಪರನಿರುತ್ತಾನೆ. ಅಲ್ಲಿ ಕಲಿಯುವುದು, ಕಲಿಸುವುದು, ಸ್ಮರಣ ಮಾಡುವುದು, ಓದುವುದು, ಪಠಿಸುವುದು, ಮೊದಲಾದ ಕ್ರಿಯೆಗಳಲ್ಲಿ ಉಪಯೋಗ ತೊಡಗಿಸುತ್ತಾನೆ; ಆದರೆ ಅವನಿಗೆ ಪ್ರಯೋಜನದ ಮೇಲೆ ದೃಷ್ಟಿಯಿಲ್ಲ. ಈ ಉಪದೇಶದಲ್ಲಿ ನನಗೆ ಕಾರ್ಯಕಾರಿಯೇನಿದೆಯೆಂಬುದರ ಅಭಿಪ್ರಾಯವಿಲ್ಲ; ಸ್ವಯಂ ಶಾಸ್ತ್ರಾಭ್ಯಾಸ ಮಾಡಿ ಇತರರಿಗೆ ತಿಳಿಸಿಕೊಡುವ ಅಭಿಪ್ರಾಯವಿಡುತ್ತಾನೆ, ಮತ್ತು ಬಹಳಷ್ಟು ಜನರು ಉಪದೇಶ ಮನ್ನಿಸಿದರೆ ಸಂತುಷ್ಟನಾಗುತ್ತಾನೆ; ಆದರೆ ಶಾಸ್ತ್ರಾಭ್ಯಾಸವನ್ನು ತನ್ನ ಸಲುವಾಗಿ ಮಾಡಲಾಗುತ್ತದೆ ಮತ್ತು ಸಮಯ ನೋಡಿ ಇತರರದೂ ಒಳ್ಳೆಯದಾಗುತ್ತಿದ್ದರೆ ಅವರದೂ ಒಳ್ಳೆಯದು ಮಾಡಬೇಕು. ಮತ್ತು ಯಾರೂ ಉಪದೇಶ ಕೇಳದಿದ್ದರೆ ಬಿಡಲಿ, ತಾವೇಕೆ ವಿಷಾದ ಪಟ್ಟುಕೊಳ್ಳಬೇಕು ? ಶಾಸ್ತ್ರಾರ್ಥದ ಭಾವ ತಿಳಿದುಕೊಂಡು ತಮ್ಮದು ಒಳ್ಳೆಯದು ಮಾಡಿಕೊಳ್ಳಬೇಕು.

ಇನ್ನು ಶಾಸ್ತ್ರಾಭ್ಯಾಸದಲ್ಲಿ ಕೂಡ ಅದೆಷ್ಟೋ ಜನರು ವ್ಯಾಕರಣ, ನ್ಯಾಯ, ಕಾವ್ಯ ಮೊದಲಾದ ಶಾಸ್ತ್ರಗಳ ಅಭ್ಯಾಸವನ್ನು ಹೆಚ್ಚಾಗಿ ಮಾಡುತ್ತಾರೆ; ಆದರೆ ಅವಂತೂ ಲೋಕದಲ್ಲಿ ಪಾಂಡಿತ್ಯ ಪ್ರದರ್ಶಿಸುವ ಕಾರಣಗಳಿವೆ; ಅವುಗಳಲ್ಲಿ ಆತ್ಮಹಿತದ ನಿರೂಪಣೆಯೇ ಇಲ್ಲ. ಇವುಗಳ ಪ್ರಯೋಜನವೆಂದರೆ ತಮ್ಮ ಬುದ್ಧಿ ಅಧಿಕವಿದ್ದರೆ ಇವುಗಳ ಅಭ್ಯಾಸವನ್ನು ಒಂದಿಷ್ಟು ಮಾಡಿ ನಂತರ ಆತ್ಮಹಿತಕ್ಕೆ ಸಾಧಕವಾದ ಶಾಸ್ತ್ರಗಳ ಅಭ್ಯಾಸ ಮಾಡಬೇಕು. ಒಂದು ವೇಳೆ ಬುದ್ಧಿಯು ಕಡಿಮೆಯಿದ್ದರೆ ಆತ್ಮಹಿತಕ್ಕೆ ಸಾಧಕವಾದ ಸುಲಭಶಾಸ್ತ್ರಗಳ ಅಭ್ಯಾಸವನ್ನೇ ಮಾಡುವುದು, ವ್ಯಾಕರಣಾದಿಗಳ ಅಭ್ಯಾಸವನ್ನೇ ಮಾಡುತ್ತ-ಮಾಡುತ್ತ ಆಯುಪೂರ್ಣವಾಗಿ ಹೋಗುವುದು ಮತ್ತು ತತ್ತ್ವಜ್ಞಾನದ ಪ್ರಾಪ್ತಿಯು ಆಗದಿರುವ ಹಾಗೆ ಮಾಡಬಾರದು.

**ಪ್ರಶ್ನೆ** ಃ- ಹೀಗಿದ್ದರೆ ವ್ಯಾಕರಣಾದಿಗಳ ಅಭ್ಯಾಸವನ್ನು ಮಾಡಬಾರದೇನು ?

**ಉತ್ತರ** ಃ- ಅವುಗಳ ಅಭ್ಯಾಸವಿಲ್ಲದೆ ಮಹಾಗ್ರಂಥಗಳ ಅರ್ಥವು ಸ್ಪಷ್ಟವಾಗುವುದಿಲ್ಲ, ಆದುದರಿಂದ ಅವುಗಳ ಅಭ್ಯಾಸವನ್ನೂ ಮಾಡುವುದು ಯೋಗ್ಯವಿದೆ.

**ಪ್ರಶ್ನೆ** ಃ- ವ್ಯಾಕರಣಾದಿಗಳ ಸಹಾಯವಿಲ್ಲದೆ ಅರ್ಥವಾಗದಂಥ ಮಹಾಗ್ರಂಥಗಳನ್ನೇಕೆ ರಚಿಸಿದರು ? ಸುಲಭರೂಪವಾದ ಭಾಷೆಯಲ್ಲೇಕೆ ಹಿತೋಪದೇಶ ಮಾಡಲಿಲ್ಲ ? ಅವುಗಳ ಯಾವ ಪ್ರಯೋಜನವೂ ಇರಲಿಲ್ಲವಲ್ಲವೇ?

**ಉತ್ತರ** ಃ- ಭಾಷೆಯಲ್ಲಿ ಕೂಡ ಪ್ರಾಕೃತ, ಸಂಸ್ಕೃತ ಮೊದಲಾದ ಶಬ್ದಗಳೇ ಇವೆ; ಆದರೆ ಅಪಭ್ರಂಶ ಸಹಿತವಿವೆ. ಮತ್ತು ದೇಶ ದೇಶಗಳಲ್ಲಿ ಭಾಷೆಯು ಬೇರೆ-ಬೇರೆ ಪ್ರಕಾರವಿದೆ, ಆದರೆ ಮಹಾಪುರುಷರು ಶಾಸ್ತ್ರಗಳಲ್ಲಿ ಅಪಭ್ರಂಶ ಶಬ್ದಗಳನ್ನೇಕೆ ಬಳಸುತ್ತಾರೆ ? ಬಾಲಕರು ತೊದಲು ಆಡಿದರೆ ದೊಡ್ಡವರು ಆಡುವುದಿಲ್ಲ. ಮತ್ತು ಒಂದು ದೇಶದ ಭಾಷಾರೂಪಶಾಸ್ತ್ರವು ಇನ್ನೊಂದು ದೇಶದಲ್ಲಿ ಹೋದರೆ ಅಲ್ಲಿ ಅದರ ಅರ್ಥವು ಹೇಗೆ ತಿಳಿದು ಬರುವುದು? ಆದುದರಿಂದ ಪ್ರಾಕೃತ, ಸಂಸ್ಕೃತ ಮೊದಲಾದ ಶುದ್ಧ ಶಬ್ದಗಳ ರೂಪದಲ್ಲಿ ಗ್ರಂಥಗಳನ್ನು ರಚಿಸುತ್ತಾರೆ.

ಮತ್ತು ವ್ಯಾಕರಣವಿಲ್ಲದ ಶಬ್ದಗಳ ಅರ್ಥವು ಯಥಾವತ್ತಾಗಿ ತಿಳಿದು ಬರುವುದಿಲ್ಲ; ನ್ಯಾಯವಿಲ್ಲದೆ ಲಕ್ಷಣ ಪರೀಕ್ಷೆ ಮೊದಲಾದವು ಯಥಾ ಪ್ರಕಾರವಾಗುವ ಸಾಧ್ಯತೆಯಿಲ್ಲ. ವಚನದ ಮೂಲಕ ವಸ್ತು ಸ್ವರೂಪದ ನಿರ್ಣಯವು ವ್ಯಾಕರಣಾದಿಗಳಿಲ್ಲದೆ ಯಥಾರ್ಥವಾಗಿ ಆಗುವುದಿಲ್ಲವೆಂದು ತಿಳಿದುಕೊಂಡು ಅವುಗಳ ಪರಂಪರೆಗೆ ಅನುಸರಿಸಿ ಕಥನ ಮಾಡಿದೆ. ಭಾಷೆಯಲ್ಲಿ ಕೂಡ ಅವುಗಳ ಪರಂಪರೆಯು ಅಲ್ಪ-ಸ್ವಲ್ಪ ಬಂದನಂತರವೇ ಉಪದೇಶವಾಗುವ ಸಾಧ್ಯತೆಯಿದೆ; ಆದರೆ ಅವುಗಳ ಅಧಿಕ ಅಭ್ಯಾಸದಿಂದ ಯಥಾರ್ಥ ನಿರ್ಣಯವಾಗುವ ಸಾಧ್ಯತೆಯಿದೆ.

**ಪ್ರಶ್ನೆ** ಃ- ಹೀಗಿದ್ದರೆ ಈಗ ಪ್ರಚಲಿತ ಭಾಷಾರೂಪದ ಗ್ರಂಥವನ್ನು ಏತಕ್ಕಾಗಿ ರಚಿಸುತ್ತಿರುವಿರಿ ?

**ಉತ್ತರ** ಃ- ಕಾಲದೋಷದಿಂದ ಸಂಭವಿಸಿದ ಜೀವರುಗಳ ಮಂದಬುದ್ಧಿಯನ್ನು ತಿಳಿದುಕೊಂಡು ಯಾರಿಗೆ ಎಷ್ಟು ಜ್ಞಾನವಾಗುವುದು. ಅಷ್ಟಾದರೂ ಆಗಲೆಂಬ ಅಭಿಪ್ರಾಯದಿಂದ ವಿಚಾರಮಾಡಿ ಈ ಭಾಷಾಗ್ರಂಥ ರಚಿಸುತ್ತೇವೆ. ಆದುದರಿಂದ ಯಾರು ವ್ಯಾಕರಣಾದಿಗಳ ಅಭ್ಯಾಸಮಾಡುವ ಸಾಧ್ಯತೆಯಿಲ್ಲ ಅವರು ಇಂಥ ಗ್ರಂಥಗಳ ಮೂಲಕ ಅಭ್ಯಾಸ ಮಾಡಬೇಕು.

ಅಲ್ಲದೆ ಯಾರು ಶಬ್ದಗಳ ಅರ್ಥವನ್ನು ನಾನಾಯುಕ್ತಿಗಳಿಂದ ಮಾಡುವ ಸಲುವಾಗಿಯೇ ವ್ಯಾಕರಣಾದಿಗಳ ಮನನ ಮಾಡುತ್ತಾರೆ, ವಾದ-ವಿವಾದ ಮಾಡಿ ದೊಡ್ಡವನಾಗುವ ಸಲುವಾಗಿ ನ್ಯಾಯದ ಮನನ ಮಾಡುತ್ತಾರೆ, ಮತ್ತು ಚಾತುರ್ಯ ತೋರಿಸುವ ಸಲುವಾಗಿ ಕಾವ್ಯದ ಮನನ ಮಾಡುತ್ತಾರೆ, ಇಂಥ ಲೌಕಿಕ ಪ್ರಯೋಜನದೊಡನೆ ಇವುಗಳ ಅಭ್ಯಾಸ ಮಾಡುತ್ತಾರೆ ಅವರು ಧರ್ಮಾತ್ಮರುಗಳಿಲ್ಲ. ಎಷ್ಟು ತಮಗೆ ಸಾಧ್ಯವಿದೆ ಅಷ್ಟು ಇವುಗಳ ಅಭ್ಯಾಸ ಮಾಡಿ ಆತ್ಮಹಿತದ ಸಲುವಾಗಿ ಆ ತತ್ತ್ವಾದಿಗಳ ನಿರ್ಣಯ ಮಾಡುವವರೇ ನಿಜವಾದ ಧರ್ಮಾತ್ಮರು-ಪಂಡಿತರಿದ್ದಾರೆಂದು ತಿಳಿಯುವುದು.

ಅದರಂತೆ ಎಷ್ಟೋ ಜನರು ಪುಣ್ಯ-ಪಾಪಾದಿಗಳ ಫಲದ ನಿರೂಪಣೆ ಮಾಡುವ ಪುರಾಣಾದಿ ಶಾಸ್ತ್ರಗಳ, ಪುಣ್ಯ-ಪಾಪಕ್ರಿಯೆಗಳ ನಿರೂಪಣೆ ಮಾಡುವ ಆಚಾರಾದಿ ಶಾಸ್ತ್ರಗಳ ಮತ್ತು ಗುಣಸ್ಥಾನ-ಮಾರ್ಗಣಾಸ್ಥಾನ, ಕರ್ಮ ಪ್ರಕೃತಿ, ತ್ರಿಲೋಕ ಮೊದಲಾದವುಗಳ ನಿರೂಪಣೆ ಮಾಡುವ ಕರಣಾನುಯೋಗದ ಶಾಸ್ತ್ರಗಳ ಅಭ್ಯಾಸ ಮಾಡುತ್ತಾರೆ; ಆದರೆ ತಾವು ಇವುಗಳ ಪ್ರಯೋಜನದ ವಿಚಾರ ಮಾಡದಿದ್ದರೆ ಅದು ಗಿಳಿಪಾಠದಂತೆಯೇ ಆಗುವುದು. ಮತ್ತು ಒಂದು ವೇಳೆ ಇವುಗಳ ಪ್ರಯೋಜನದ ವಿಚಾರ ಮಾಡುತ್ತಿದ್ದರೆ ಅಲ್ಲಿ ಪಾಪವನ್ನು ಕೆಡಕೆಂದು ತಿಳಿಯುವುದು, ಪುಣ್ಯವನ್ನು ಒಳ್ಳೆಯದೆಂದು ತಿಳಿಯುವುದು, ಗುಣಸ್ಥಾನಾದಿಗಳ ಸ್ವರೂಪವನ್ನು ತಿಳಿದುಕೊಳ್ಳುವುದು ಮತ್ತು ಇವುಗಳ ಅಭ್ಯಾಸ ಮಾಡಿದಷ್ಟು ನಮ್ಮದು ಒಳ್ಳೆಯದಿದೆಯೆಂದು ತಮ್ಮ ಪ್ರಯೋಜನದ ವಿಚಾರ ಮಾಡಿದ್ದರೆ ಇದರಿಂದ ನರಕಾದಿಗಳಾಗುವುದಿಲ್ಲ, ಸ್ವರ್ಗಾದಿಗಳು ದೊರಕುವವು, ಆದರೆ ಮೋಕ್ಷಮಾರ್ಗದ ಪ್ರಾಪ್ತಿಯಂತೂ ಆಗಲಾರದು.

ಮೊದಲು ನಿಜವಾದ ತತ್ತ್ವಜ್ಞಾನವಾಗುವುದು, ನಂತರ ಪುಣ್ಯ-ಪಾಪದ ಫಲವನ್ನು ಸಂಸಾರವೆಂದು ತಿಳಿಯುವುದು, ಶುದ್ಧೋಪಯೋಗದಿಂದ ಮೋಕ್ಷವನ್ನು ಮನ್ನಿಸುವುದು, ಗುಣಸ್ಥಾನಾದಿಗಳ ರೂಪವು ಜೀವದ ವ್ಯವಹಾರ ನಿರೂಪಣೆಯಿದೆಯೆಂದು ತಿಳಿಯುವುದು, ಇವೇ ಮೊದಲಾದುವನ್ನು ಇದ್ದ ಹಾಗೆಯೇ ಶ್ರದ್ಧೆ ಮಾಡುತ್ತ ಇವುಗಳ ಅಭ್ಯಾಸ ಮಾಡಿದರೆ ಸಮ್ಯಗ್ಜ್ಞಾನವಾಗುವುದು.

ಆ ತತ್ತ್ವಜ್ಞಾನಕ್ಕೆ ಅಧ್ಯಾತ್ಮರೂಪವಾದ ದ್ರವ್ಯಾನುಯೋಗದ ಶಾಸ್ತ್ರಗಳು ಕಾರಣವಿವೆ. ಮತ್ತು ಅದೆಷ್ಟೋ ಜನರು ಆ ಶಾಸ್ತ್ರಗಳ ಅಭ್ಯಾಸವನ್ನೂ ಮಾಡುತ್ತಾರೆ; ಆದರೆ ಅಲ್ಲಿ ಹೇಗೆ ಹೇಳಿದೆ ಹಾಗೆ ಸ್ವಯಂ ನಿರ್ಣಯ ಮಾಡಿ ತಮ್ಮನ್ನು ತಮ್ಮ ರೂಪ ಪರವನ್ನು ಪರರೂಪ ಮತ್ತು ಆಸ್ರವಾದಿಗಳನ್ನು ಆಸ್ರವಾದಿಗಳ ರೂಪವಾಗಿ ಶ್ರದ್ಧೆ ಮಾಡುವುದಿಲ್ಲ. ಅವರ ಉಪದೇಶದಿಂದ ಅನ್ಯ ಜೀವರುಗಳು ಸಮ್ಯಗ್ದೃಷ್ಟಿಯಾಗಿ ಹೋಗುವಂತೆ ಮುಖದಿಂದಂತೂ ಯಥಾವತ್ತಾಗಿ ನಿರೂಪಣೆ ಮಾಡುತ್ತಾರೆ. ಆದರೆ ಹೇಗೆ ಓರ್ವ ತರುಣನು ಸ್ತ್ರೀಯವೇಷ ಹಾಕಿಕೊಂಡು ಅತ್ಯಂತ ಮಧುರವಾಗಿ ಹಾಡುತ್ತಾನೆ. ಅದನ್ನು ಕೇಳಿ ಅನ್ಯ ಸ್ತ್ರೀ-ಪುರುಷರು ವಿಷಯಾಸಕ್ತರಾಗಿ ಹೋಗುವರು; ಆದರೆ ಅವನಂತೂ ಹೇಗೆ ಕಲಿತಿದ್ದಾನೆ ಹಾಗೆ ಹೇಳುತ್ತಾನೆ ಅವನಿಗೆ ಸ್ವಲ್ಪವೂ ಭಾವ ಭಾಸನವಾಗುವುದಿಲ್ಲ, ಅದರಿಂದ ಸ್ವಯಂ ಕಾಮಸಕ್ತನಾಗುವುದಿಲ್ಲ. ಅದೇ ಪ್ರಕಾರ ಇವನು ಹೇಗೆ ಹೇಳಿದೆ ಹಾಗೆ ಉಪದೇಶ ಕೊಡುತ್ತಾನೆ; ಆದರೆ ತಾನು ಅನುಭವ ಮಾಡುವುದಿಲ್ಲ. ಒಂದು ವೇಳೆ ತನಗೆ ಶ್ರದ್ಧೆಯಾಗಿ ಬಿಟ್ಟಿದ್ದರೆ ಅನ್ಯ ತತ್ತ್ವದ ಅಂಶವನ್ನು ಅನ್ಯತತ್ತ್ವದಲ್ಲಿ ಸೇರಿಸುವುದಿಲ್ಲ; ಆದರೆ ಇದರ ಗೊತ್ತು ಗುರಿಯಿಲ್ಲದಿರುವುದರಿಂದ ಸಮ್ಯಗ್ಜ್ಞಾನವಾಗುವುದಿಲ್ಲ.

ಈ ಪ್ರಕಾರ ಇವನು ಹನ್ನೊಂದು ಅಂಗಗಳವರೆಗೆ ಓದಿದರೂ ಸಿದ್ಧಿಯಾಗುವುದಿಲ್ಲ. ಆದುದರಿಂದ ಸಮಯಸಾರಾದಿಗಳಲ್ಲಿ ಮಿಥ್ಯಾದೃಷ್ಟಿಗೆ ಹನ್ನೊಂದು ಅಂಗಗಳ ಜ್ಞಾನವಾಗುವುದನ್ನು ಹೇಳಲಾಗಿದೆ.

**ಪ್ರಶ್ನೆ :-** ಜ್ಞಾನವಂತೂ ಇಷ್ಟು ಆಗುತ್ತದೆ; ಆದರೆ ಅಭವ್ಯಸೇನನಿಗೆ ಹೇಗೆ ಶ್ರದ್ಧಾರಹಿತವಾದ ಜ್ಞಾನವಾಗಿತ್ತು ಹಾಗೆ ಆಗುತ್ತದೆಯೇನು ?

**ಉತ್ತರ :-** ಅವನಂತೂ ಪಾಪಿಯಿದ್ದನು, ಅವನಿಗೆ ಹಿಂಸಾದಿಗಳ ಪ್ರವೃತ್ತಿಯ ಭಯವಿರಲಿಲ್ಲ. ಆದರೆ ಗ್ರೈವೇಯಕ ಮೊದಲಾದವುಗಳಲ್ಲಿ ಹೋಗುವಂಥ ಜೀವನಿಗೆ ಇಂಥ ಜ್ಞಾನವಾಗುತ್ತದೆ; ಅವನಂತೂ ಶ್ರದ್ಧೆರಹಿತನಿಲ್ಲ. ಅವನಿಗೆ ಈ ಗ್ರಂಥಗಳು ಪ್ರಾಮಾಣಿಕವಿವೆಯೆಂಬ ಶ್ರದ್ಧೆಯಿದೆ, ಆದರೆ ನಿಜವಾದ ತತ್ತ್ವ ಶ್ರದ್ಧೆಯಿಲ್ಲ, ಸಮಯಸಾರದಲ್ಲಿ ಒಂದೇ ಜೀವಕ್ಕೆ ಧರ್ಮದ ಶ್ರದ್ಧೆ ಹನ್ನೊಂದು ಅಂಗಗಳ ಜ್ಞಾನ ಮತ್ತು ಮಹಾವ್ರತಾದಿಗಳನ್ನು ಪಾಲನೆ ಮಾಡುವುದು ಹೇಳಿದೆ. ಆಗಮಜ್ಞಾನದ ಮೂಲಕ ಸಮಸ್ತ ಪದಾರ್ಥಗಳನ್ನು ಕರತಲಾಮಲಕದಂತೆ ತಿಳಿಯುತ್ತಾನೆಂದು ಪ್ರವಚನಸಾರದಲ್ಲಿ ಹೇಳಿದೆ. ಇವುಗಳನ್ನು ತಿಳಿಯುವವನು ನಾನಿದ್ದೇನೆಂಬುದನ್ನು ತಿಳಿಯುತ್ತಾನೆ; **ಆದರೆ ನಾನು ಜ್ಞಾನಸ್ವರೂಪನಿದ್ದೇನೆಂದು ತನ್ನನ್ನು ಪರದ್ರವ್ಯದಿಂದ ಭಿನ್ನವಾಗಿ ಕೇವಲ ಚೈತನ್ಯದ್ರವ್ಯದ ಅನುಭವ ಮಾಡುವುದಿಲ್ಲ.** ಆದುದರಿಂದ ಆತ್ಮಜ್ಞಾನಶೂನ್ಯವಾದ ಆಗಮ ಜ್ಞಾನವು ಕೂಡ ಕಾರ್ಯಕಾರಿಯಿಲ್ಲ.

**ಸಮ್ಯಕ್ಚಾರಿತ್ರದ ಅನ್ಯಥಾರೂಪ :-**

ಈಗ ಇವನಿಗೆ ಸಮ್ಯಕ್ಚಾರಿತ್ರದ ಸಲುವಾಗಿ ಎಂಥ ಪ್ರವೃತ್ತಿಯಿದೆಯೆಂಬುದನ್ನು ಹೇಳುತ್ತಾರೆ,-

ಇವನ ದೃಷ್ಟಿಯು ಬಾಹ್ಯಕ್ರಿಯೆಗಳ ಮೇಲಿದೆ, ಆದರೆ ತನ್ನ ಬುದ್ಧಿಯು ಸುಧಾರಿಸುವ-ಕೆಡುವ ವಿಚಾರವಿಲ್ಲ. ಮತ್ತು ಒಂದು ವೇಳೆ ಪರಿಣಾಮಗಳ ವಿಚಾರ ಮಾಡಿದರೆ ತನ್ನ ಪರಿಣಾಮಗಳು ಹೇಗಾಗುತ್ತಿರುವುದು ಕಂಡು ಬರುತ್ತವೆ ಅವುಗಳ ಮೇಲೆ ದೃಷ್ಟಿಯಿರುತ್ತದೆ, ಆದರೆ ಆ ಪರಿಣಾಮಗಳ ಪರಂಪರೆಯ ವಿಚಾರ ಮಾಡಿದ ಮೇಲೆ ಅಭಿಪ್ರಾಯದಲ್ಲಿ ಯಾವ ಭಾವನೆಯಿದೆ ಅದರ ವಿಚಾರ ಮಾಡುವುದಿಲ್ಲ. **ಮತ್ತು ಅಭಿಪ್ರಾಯದಲ್ಲಿ ಯಾವ ಭಾವನೆಯಿದೆ ಅದಕ್ಕೆ ಅನುಸರಿಸಿ ಫಲವು ಸಿಗುತ್ತದೆ. ಇದರ ವಿಶೇಷ ವ್ಯಾಖ್ಯಾನ ಮುಂದೆ ಮಾಡುವೆವು ಅಲ್ಲಿ ಯಥಾರ್ಥವಾದ ಸ್ವರೂಪವು ಭಾಸವಾಗುವುದು.**

ಈ ಪ್ರಕಾರ ಪರಿಚಯವಿಲ್ಲದೆ ಬಾಹ್ಯ ಆಚರಣೆಯದೇ ಪ್ರಯತ್ನವಿದೆ.

ಅದೆಷ್ಟೋ ಜನರು ಕುಲಕ್ರಮದಿಂದ ಅಥವಾ ಅನುಕರಣ ಮಾಡಿ ಇಲ್ಲವೆ ಕ್ರೋಧ, ಮಾನ, ಮಾಯೆ, ಲೋಭಾದಿಗಳಿಂದ ಆಚರಣೆ ಮಾಡುತ್ತಾರೆ; ಅವರಿಗೆ ಧರ್ಮಬುದ್ಧಿಯೇ ಇಲ್ಲವೆಂದ ಮೇಲೆ ಸಮ್ಯಕ್ಚಾರಿತ್ರವೆಲ್ಲಿಂದ ಇರುತ್ತದೆ ? ಅವರುಗಳಲ್ಲಿ ಹಲವರು ಸರಳ ಸ್ವಭಾವದವರಿದ್ದರೆ ಹಲವರು ಕಷಾಯಯುಕ್ತರಿದ್ದಾರೆ; ಆ ಅಜ್ಞಾನ ಭಾವ ಮತ್ತು ಕಷಾಯಗಳಿದ್ದ ಮೇಲೆ ಸಮ್ಯಕ್ಚಾರಿತ್ರವಾಗುವುದಿಲ್ಲ.

ಇನ್ನು ಹಲವರಂತೂ ತಿಳಿದುಕೊಳ್ಳುವುದರಲ್ಲಿ ಏನಿದೆ ಏನಾದರೂ ಮಾಡಿದರೆ ಫಲವು ದೊರಕಬಹುದೆಂದು ಮನ್ನಿಸುತ್ತಾರೆ. ಹೀಗೆ ವಿಚಾರ ಮಾಡಿ ವ್ರತ-ತಪ ಮೊದಲಾದ ಕ್ರಿಯೆಗಳಲ್ಲಿ ಉದ್ಯಮಶೀಲರಿರುತ್ತಾರೆ ಮತ್ತು ತತ್ತ್ವಜ್ಞಾನದ ಉಪಾಯ ಮಾಡುವುದಿಲ್ಲ. ಆದರೆ ತತ್ತ್ವಜ್ಞಾನವಿಲ್ಲದೆ ಮಹಾವ್ರತಾದಿಗಳ ಆಚರಣೆಯು ಕೂಡ

ಮಿಥ್ಯಾಚಾರಿತ್ರವೆಂಬ ಹೆಸರನ್ನೇ ಪಡೆಯುತ್ತದೆ, ಮತ್ತು ತತ್ತ್ವಜ್ಞಾನವಾದ ಮೇಲೆ ಯಾವ ವ್ರತಾದಿಗಳಿಲ್ಲದಿದ್ದರೂ ಕೂಡ ಅಸಂಯತ ಸಮ್ಯಗ್ದೃಷ್ಟಿಯೆಂಬ ಹೆಸರನ್ನು ಪಡೆಯುತ್ತದೆ. ಆದುದರಿಂದ ಮೊದಲು ತತ್ತ್ವಜ್ಞಾನದ ಉಪಾಯ ಮಾಡುವುದು, ನಂತರ ಕಷಾಯ ಕಡಿಮೆ ಮಾಡುವ ಸಲುವಾಗಿ ಬಾಹ್ಯಸಾಧನ ಮಾಡುವುದು. ಇದನ್ನೇ ಯೋಗೀಂದ್ರದೇವರು ಸಾವಯಧಮ್ಮದಲ್ಲಿ ಹೇಳಿದ್ದಾರೆ,-

**'ದಂಸಣಭೂಮಿಹಂ ಬಾಹಿರಾ, ಜಿಯ ವಯರುಂಕ್ಖ ಣ ಹುಂತಿ'**- ಎಂದರೆ ಎಲೈ ಜೀವನೇ ! ಈ ಸಮ್ಯಗ್ದರ್ಶನ ಭೂಮಿಯಿಲ್ಲದೆ ವ್ರತರೂಪದ ವೃಕ್ಷವಾಗುವುದಿಲ್ಲ. ಎಂದರೆ ತತ್ತ್ವಜ್ಞಾನವಿಲ್ಲದವರು ಯಥಾರ್ಥ ಆಚರಣೆ ಆಚರಿಸುವುದಿಲ್ಲ.

ಅದನ್ನೇ ವಿಶೇಷವಾಗಿ ತಿಳಿಸಿಕೊಡುತ್ತಾರೆ,-

ಅದೆಷ್ಟೋ ಜನರು ಮೊದಲು ದೊಡ್ಡ ಪ್ರತಿಜ್ಞೆಧಾರಣಮಾಡಿ ಕೂಡ್ರುತ್ತಾರೆ; ಆದರೆ ಅಂತರಂಗದಲ್ಲಿ ವಿಷಯ-ಕಷಾಯದ ವಾಸನೆಯು ದೂರವಾಗದಿರುವುದರಿಂದ ಹೇಗೆ-ಹೇಗೋ ಮಾಡಿ ಪ್ರತಿಜ್ಞೆಯನ್ನು ಪೂರ್ಣ ಮಾಡಲಿಚ್ಛಿಸುತ್ತಾರೆ. ಆಗ ಆ ಪ್ರತಿಜ್ಞೆಯಿಂದ ಪರಿಣಾಮದಲ್ಲಿ ದುಃಖಿಯಾಗುತ್ತಾರೆ. ಹೇಗೆಂದರೆ ಓರ್ವನು ಅಧಿಕ ಉಪವಾಸದ ಪ್ರತಿಜ್ಞೆಮಾಡಿಕೂಡ್ರುತ್ತಾನೆ ಮತ್ತು ನಂತರ ಬಾಧೆಯಿಂದ ದುಃಖಿಯಾಗಿ ರೋಗಿಯ ಹಾಗೆ ಕಾಲ ಕಳೆಯುತ್ತಾನೆ, ಧರ್ಮಸಾಧನೆ ಮಾಡುವುದಿಲ್ಲ; ಹೀಗಿದ್ದರೆ ಮೊದಲೇ ತನಗೆ ಸಾಧ್ಯವಿದ್ದಷ್ಟೇ ಪ್ರತಿಜ್ಞೆಯನ್ನೇಕೆ ಸ್ವೀಕರಿಸುವುದಿಲ್ಲ? ದುಃಖಿಯಾಗುವಲ್ಲಿ ಆರ್ತಧ್ಯಾನವಾಗುವುದು, ಅದರ ಫಲವು ಒಳ್ಳೆಯದು ಹೇಗೆ ಸಿಕ್ಕುವುದು? ಅಥವಾ ಆ ಪ್ರತಿಜ್ಞೆಯ ದುಃಖವನ್ನು ಸಹಿಸಲಾಗದಿರುವಾಗ ಅದಕ್ಕೆ ಪ್ರತಿಯಾಗಿ ವಿಷಯ-ಪೋಷಣೆಯ ಸಲುವಾಗಿ ಅನ್ಯ ಉಪಾಯ ಮಾಡುತ್ತಾನೆ. ಹೇಗೆಂದರೆ ಬಾಯಾರಿಕೆಯಾದಾಗ ನೀರು ಕುಡಿಯಲಿಲ್ಲ, ಆದರೆ ಅನ್ಯ ಅನೇಕ ಪ್ರಕಾರದ ಶೈತ್ಯೋಪಚಾರ ಮಾಡುವನು, ಮತ್ತು ತುಪ್ಪವನ್ನಂತೂ ಬಿಡುತ್ತಾನೆ, ಆದರೆ ಉಪಾಯ ಮಾಡಿ ಅನ್ಯಸ್ನಿಗ್ಧ ವಸ್ತುವಿನ ಭಕ್ಷಣ ಮಾಡುವನು. ಈ ಪ್ರಕಾರ ಉಳಿದವುಗಳನ್ನೂ ತಿಳಿಯುವುದು.

ಒಂದು ವೇಳೆ ಪರೀಷಹಗಳ ಸಹನೆಯಾಗದಿದ್ದರೆ, ವಿಷಯ-ವಾಸನೆಯು ಬಿಟ್ಟಿರದಿದ್ದರೆ ಇಂಥ ಪ್ರತಿಜ್ಞೆಯನ್ನು ಏತಕ್ಕಾಗಿ ಮಾಡಿದೆ ? ಸುಲಭ ವಿಷಯ ಬಿಟ್ಟುಕೊಟ್ಟು ನಂತರ ವಿಷಮ ವಿಷಯಗಳ ಉಪಾಯ ಮಾಡಬೇಕಾಗುವಂಥ ಕಾರ್ಯವನ್ನೇಕೆ ಮಾಡುವುದು ? ಇಲ್ಲಿಯಂತೂ ಪ್ರತಿಯಾಗಿ ರಾಗಭಾವವು ತೀವ್ರವಾಗುತ್ತದೆ.

ಅಥವಾ ಪ್ರತಿಜ್ಞೆಯಲ್ಲಿ ದುಃಖವಾದಾಗ ಪರಿಣಾಮ ತೊಡಗಿಸುವ ಸಲುವಾಗಿ ಯಾವುದೇ ಅವಲಂಬನದ ವಿಚಾರ ಮಾಡುತ್ತಾನೆ. ಹೇಗೆಂದರೆ ಉಪವಾಸ ಮಾಡಿ ಪುನಃ ಕ್ರೀಡೆ ಮಾಡುತ್ತಾನೆ, ಎಷ್ಟೋ ಪಾಪಿಗಳು ಜೂಜು ಮೊದಲಾದ ಕೆಟ್ಟ ವ್ಯಸನಗಳಲ್ಲಿ ತೊಡಗುತ್ತಾರೆ, ಅಥವಾ ಮಲಗಿಕೊಂಡಿರಲು ಬಯಸುತ್ತಾರೆ. ಹೇಗಾದರೂ ಮಾಡಿ ಕಾಲ ಪೂರ್ಣ ಮಾಡುವುದನ್ನೇ ನೋಡುತ್ತಿರುತ್ತಾರೆ. ಇದೇ ಪ್ರಕಾರ ಇತರ ಪ್ರತಿಜ್ಞೆಗಳಲ್ಲಿ ಕೂಡ ತಿಳಿಯುವುದು.

ಅದರಂತೆ ಎಷ್ಟೋ ಪಾಪಿಗಳು ಮೊದಲು ಪ್ರತಿಜ್ಞೆ ಸ್ವೀಕರಿಸುತ್ತಾರೆ, ನಂತರ ಅದರಿಂದ ದುಃಖಿಗಳಾದಾಗ ಪ್ರತಿಜ್ಞೆಯನ್ನು ಬಿಟ್ಟುಕೊಡುವಂಥವರೂ ಇದ್ದಾರೆ. ಅವರಿಗೆ ಪ್ರತಿಜ್ಞೆಯನ್ನು ಸ್ವೀಕರಿಸುವುದು-ಬಿಟ್ಟುಕೊಡುವುದು

ಒಂದು ಆಟವಾಗಿದೆ; ಆದರೆ ಪ್ರತಿಜ್ಞೆ ಭಂಗ ಮಾಡುವುದು ಮಹಾಪಾಪವಿದೆ. ಇದಕ್ಕಿಂತ ಪ್ರತಿಜ್ಞೆ ಸ್ವೀಕರಿಸದಿರುವುದೇ ಒಳ್ಳೆಯದಿದೆ.

ಹೀಗೆ ಮೊದಲು ವಿಚಾರಹಿತರಾಗಿ ಪ್ರತಿಜ್ಞೆ ಮಾಡುತ್ತಾರೆ ಮತ್ತು ನಂತರ ಇಂಥ ಅವಸ್ಥೆಯಾಗುತ್ತದೆ.

ಜೈನಧರ್ಮದಲ್ಲಿ ಪ್ರತಿಜ್ಞೆ ಸ್ವೀಕರಿಸದಿರುವುದಕ್ಕೆ ಶಿಕ್ಷೆಯಿಲ್ಲ. ಜೈನಧರ್ಮದಲ್ಲಿನ ಉಪದೇಶವೇನೆಂದರೆ ಮೊದಲು ತತ್ತ್ವಜ್ಞಾನಿಯಾಗು; ನಂತರ ಯಾವುದರ ತ್ಯಾಗ ಮಾಡುವೆ ಅದರ ದೋಷ ತಿಳಿದುಕೊಳ್ಳು; ತ್ಯಾಗ ಮಾಡುವಲ್ಲಿ ಗುಣಗಳಿರುವುದನ್ನು ತಿಳಿದುಕೊಳ್ಳು; ಅನಂತರ ತನ್ನ ಪರಿಣಾಮಗಳನ್ನು ತಿದ್ದಿಕೊಳ್ಳು; ವರ್ತಮಾನ ಪರಿಣಾಮಗಳ ಭರವಸೆಯಿಂದ ಪ್ರತಿಜ್ಞೆ ಮಾಡಿ ಕೂಡ್ರಬೇಡ; ಭವಿಷ್ಯದಲ್ಲಿ ಪಾಲನೆಯಾಗುವುದೆಂದು ತಿಳಿದರೆ ಪ್ರತಿಜ್ಞೆ ಮಾಡು; ಮತ್ತು ಶರೀರದ ಶಕ್ತಿ ಹಾಗೂ ದ್ರವ್ಯ, ಕ್ಷೇತ್ರ, ಕಾಲ, ಭಾವಾದಿಗಳ ವಿಚಾರ ಮಾಡಿ ಮಾಡುವುದು. ಈ ಪ್ರಕಾರ ವಿಚಾರ ಮಾಡಿದ ನಂತರ ಪ್ರತಿಜ್ಞೆ ಮಾಡುವುದು. ಅದನ್ನೂ ಪ್ರತಿಜ್ಞೆಯ ಕುರಿತು ಯಾವುದೇ ನಿರಾದರದ ಭಾವವಾಗದಂತೆ ಮಾಡುವುದು, ಪರಿಣಾಮದಲ್ಲಿ ವೃದ್ಧಿಯಾಗುತ್ತಿರಬೇಕು. ಹೀಗೆ ಜೈನಧರ್ಮದ ಪರಂಪರೆಯಿದೆ.

**ಪ್ರಶ್ನೆ** :- ಚಾಂಡಾಲ ಮೊದಲಾದವರು ಪ್ರತಿಜ್ಞೆ ಮಾಡುತ್ತಾರೆ ಅವರಿಗೆ ಇಷ್ಟೆಲ್ಲ ವಿಚಾರವೆಲ್ಲಿರುತ್ತದೆ ?

**ಉತ್ತರ** :- ಮರಣದವರೆಗೆ ಕಷ್ಟವಾದರೆ ಆಗಲಿ, ಆದರೆ ಪ್ರತಿಜ್ಞೆ ಬಿಡುವುದಿಲ್ಲವೆಂದು ವಿಚಾರಮಾಡಿ ಪ್ರತಿಜ್ಞೆ ಸ್ವೀಕರಿಸುತ್ತಾರೆ; ಪ್ರತಿಜ್ಞೆಯ ಕುರಿತು ನಿರಾದರ ಭಾವನೆಯಿರುವುದಿಲ್ಲ.

ಮತ್ತು ಸಮ್ಯಗ್ದೃಷ್ಟಿಗಳು ತತ್ತ್ವಜ್ಞಾನಪೂರ್ವಕವಾಗಿಯೇ ಪ್ರತಿಜ್ಞೆ ಮಾಡುತ್ತಾರೆ.

ಇನ್ನು ಯಾರ ಅಂತರಂಗದಲ್ಲಿ ವಿರಕ್ತತೆಯಿಲ್ಲ ಮತ್ತು ಬಾಹ್ಯದಲ್ಲಿ ಪ್ರತಿಜ್ಞೆ ಧಾರಣ ಮಾಡುತ್ತಾರೆ ಅವರು ಪ್ರತಿಜ್ಞೆಯ ಮೊದಲು ಮತ್ತು ನಂತರ ಯಾವುದರ ಪ್ರತಿಜ್ಞೆ ಮಾಡುವರು ಅದರಲ್ಲಿ ಅತ್ಯಂತ ಆಸಕ್ತರಾಗತೊಡಗುತ್ತಾರೆ. ಹೇಗೆಂದರೆ ಉಪವಾಸದ ಧಾರಣೆ-ಪಾರಣೆಯ ಭೋಜನದಲ್ಲಿ ಅತ್ಯಂತ ಲೋಭಿಗಳಾಗಿ ಗರಿಷ್ಠ ಭೋಜನ ಮಾಡುತ್ತಾರೆ, ಅಧಿಕ ಶೀಘ್ರತೆ ಮಾಡುತ್ತಾರೆ. ಹೇಗೆಂದರೆ ಒಡ್ಡು ಹಾಕಿ ನೀರು ನಿಲ್ಲಿಸಿರುತ್ತದೆ ಅದು ಒಡೆದೊಡನೆ ಪ್ರವಾಹವು ವೇಗವಾಗಿ ಹೋಗುತ್ತದೆ; ಅದೇ ಪ್ರಕಾರ ಪ್ರತಿಜ್ಞೆಯ ಮೂಲಕ ವಿಷಯ ಪ್ರವೃತ್ತಿಯನ್ನು ತಡೆ ಹಿಡಿಯಲಾಗಿತ್ತು, ಆದರೆ ಅಂತರಂಗದಲ್ಲಿ ಆಸಕ್ತಿಯು ಬೆಳೆಯುತ್ತ ಹೋಯಿತು ಮತ್ತು ಪ್ರತಿಜ್ಞೆಯು ಪೂರ್ಣವಾಗುತ್ತಿದ್ದಂತೆ ವಿಷಯ ವೃತ್ತಿಯು ತೀವ್ರವಾಗತೊಡಗುವುದು; ಆದ್ದರಿಂದ ಪ್ರತಿಜ್ಞೆಯ ಕಾಲದಲ್ಲಿ ವಿಷಯ ವಾಸನೆಯು ದೂರವಾಗಲಿಲ್ಲ, ಅದಕ್ಕೆ ಪ್ರತಿಯಾಗಿ ಅಧಿಕರಾಗವಾಯಿತು; ಆದರೆ ಫಲವಂತೂ ರಾಗ ಭಾವವು ದೂರವಾಗುವುದರಿಂದ ದೊರಕುವುದು. ಆದುದರಿಂದ ಎಷ್ಟು ವಿರಕ್ತಿಯಾಗಿರುತ್ತದೆ ಅಷ್ಟೇ ಪ್ರತಿಜ್ಞೆ ಮಾಡಬೇಕು. ಮಹಾಮುನಿಗಳು ಕೂಡ ಅಲ್ಪ ಪ್ರತಿಜ್ಞೆ ಮಾಡಿ ಪುನಃ ಆಹಾರಾದಿಗಳಲ್ಲಿ ಕಡಿಮೆ ಮಾಡುತ್ತಾರೆ. ಮತ್ತು ದೊಡ್ಡ ಪ್ರತಿಜ್ಞೆ ಮಾಡುವುದಾದರೆ ತಮ್ಮ ಶಕ್ತಿ ನೋಡಿಕೊಂಡು ಮಾಡುತ್ತಾರೆ. ಪರಿಣಾಮಗಳು ಉನ್ನತಿ ಹೊಂದುತ್ತಿರುವಂತೆ ಮಾಡುತ್ತಾರೆ. ಪ್ರಮಾದವೂ ಆಗದಂಥ ಮತ್ತು ಆಕುಲತೆಯೂ ಉತ್ಪನ್ನವಾಗದಂಥ ಪ್ರವೃತ್ತಿಯು ಕಾರ್ಯಕಾರಿಯಿದೆಯೆಂದು ತಿಳಿಯಬೇಕು.

ಇನ್ನು ಧರ್ಮದ ಮೇಲೆ ದೃಷ್ಟಿಯಿಲ್ಲದವರು ಒಮ್ಮೆ ದೊಡ್ಡ ಧರ್ಮ ಆಚರಿಸುತ್ತಾರೆ, ಇನ್ನೊಮ್ಮೆ ಅಧಿಕ ಸ್ವಚ್ಛಂದಿಯಾಗಿ ಪ್ರವರ್ತಿಸುತ್ತಾರೆ. ಹೇಗೆಂದರೆ ಒಂದು ಧರ್ಮ ಪರ್ವದಲ್ಲಿ ಅಧಿಕ ಉಪವಾಸಾದಿಗಳನ್ನು ಮಾಡುತ್ತಾರೆ ಇನ್ನೊಂದು ಧರ್ಮ ಪರ್ವದಲ್ಲಿ ಮತ್ತೆ ಮತ್ತೆ ಭೋಜನಾದಿಗಳನ್ನು ಮಾಡುತ್ತಾರೆ. ಒಂದು ವೇಳೆ ಧರ್ಮಬುದ್ಧಿಯಿದ್ದರೆ ಯಥಾಯೋಗ್ಯವಾಗಿ ಎಲ್ಲ ಧರ್ಮ ಪರ್ವಗಳಲ್ಲಿ ಯಥಾಯೋಗ್ಯವಾದ ಸಂಯಮಾದಿಗಳನ್ನು ಧಾರಣ ಮಾಡಬೇಕು. ಮತ್ತು ಒಮ್ಮೆ ಒಂದು ಧರ್ಮಕಾರ್ಯದಲ್ಲಿ ಅಧಿಕ ಹಣ ಖರ್ಚು ಮಾಡುತ್ತಾರೆ, ಇನ್ನೊಮ್ಮೆ ಇನ್ನೊಂದು ಧರ್ಮಕಾರ್ಯವು ಬಂದು ತಲುಪಿದರೂ ಅದಕ್ಕೆ ಒಂದಿಷ್ಟೂ ಹಣ ಖರ್ಚು ಮಾಡುವುದಿಲ್ಲ. ಒಂದು ವೇಳೆ ಧರ್ಮಬುದ್ಧಿಯಿದ್ದರೆ ಎಲ್ಲ ಧರ್ಮ ಕಾರ್ಯಗಳಲ್ಲಿ ಯಥಾಶಕ್ತಿ ಯಥಾಯೋಗ್ಯವಾದ ಹಣ ಖರ್ಚು ಮಾಡುತ್ತಿರಬೇಕು. ಇದೇ ಪ್ರಕಾರ ಉಳಿದವುಗಳನ್ನೂ ತಿಳಿಯುವುದು.

ಅದರಂತೆ ನಿಜವಾದ ಧರ್ಮಸಾಧನವಿಲ್ಲದವರು ಯಾವುದೇ ಒಂದು ಕ್ರಿಯೆಯನ್ನು ಅಧಿಕ ಆಡಂಬರದಿಂದ ಅಂಗೀಕಾರ ಮಾಡುತ್ತಾರೆ, ಮತ್ತು ಇನ್ನೊಂದು ಕ್ರಿಯೆಯನ್ನು ಕೀಳಾಗಿ ಮಾಡುತ್ತಾರೆ. ಹೇಗೆಂದರೆ ಧನಾದಿಗಳ ತ್ಯಾಗ ಮಾಡುತ್ತಾರೆ ಮತ್ತು ಒಳ್ಳೆಯ ಭೋಜನ, ಒಳ್ಳೆಯ ಬಟ್ಟೆ ಇತ್ಯಾದಿ ವಿಷಯಗಳಲ್ಲಿ ವಿಶೇಷವಾಗಿ ಪ್ರವರ್ತಿಸುತ್ತಾರೆ. ಅಲ್ಲದೆ ಕೆಲವೊಂದು ಉಡುಪು ಧರಿಸುವುದು, ಸ್ತ್ರೀ-ಸೇವನೆ ಮಾಡುವುದು ಇತ್ಯಾದಿ ಕಾರ್ಯಗಳ ತ್ಯಾಗ ಮಾಡಿ ಧರ್ಮಾತ್ಮತನವನ್ನು ತೋರಿಸಿಕೊಳ್ಳುತ್ತಾರೆ; ಮತ್ತು ನಂತರ ದುಷ್ಟವ್ಯಾಪಾರಾದಿಕಾರ್ಯ ಮಾಡುತ್ತಾರೆ, ಲೋಕನಿಂದ್ಯವಾದ ಪಾಪ ಕ್ರಿಯೆಗಳಲ್ಲಿ ಪ್ರವರ್ತಿಸುತ್ತಾರೆ. ಇದೇ ಪ್ರಕಾರ ಒಂದು ಕ್ರಿಯೆ ಅತ್ಯಂತ ಉಚ್ಚವಾಗಿ ಮತ್ತು ಇನ್ನೊಂದು ಕ್ರಿಯೆ ಅತ್ಯಂತ ನೀಚವಾಗಿ ಮಾಡುತ್ತಾರೆ. ಇಂಥ ಧರ್ಮಾತ್ಮನು ಇಂಥ ಕಾರ್ಯ ಮಾಡುತ್ತಾನೆಂಬ ಲೋಕ ನಿಂದೆಗೆ ಗುರಿಯಾಗಿ ಧರ್ಮದ ಅಪಹಾಸ್ಯ ಮಾಡುತ್ತಾರೆ. ಹೇಗೆಂದರೆ ಒಬ್ಬ ಪುರುಷನು ಒಂದು ಉತ್ತಮ ವಸ್ತ್ರ ಇನ್ನೊಂದು ಕೀಳು ವಸ್ತ್ರ ಧರಿಸಿದರೆ ಅಪಹಾಸ್ಯವೇ ಆಗುತ್ತದೆ. ಅದೇ ಪ್ರಕಾರ ಇವರು ಕೂಡ ಹಾಸ್ಯಾಸ್ಪದಕ್ಕೆ ಪ್ರಾಪ್ತರಾಗುತ್ತಾರೆ.

ತಮ್ಮ ರಾಗಾದಿಗಳು ಎಷ್ಟು ದೂರವಾಗಿವೆ ಅದಕ್ಕೆ ಅನುಸರಿಸಿ ಯಾವ ಪದದಲ್ಲಿ ಯಾವ ಧರ್ಮ ಕ್ರಿಯೆಯು ಸಂಭವವಿದೆ ಅದೆಲ್ಲವನ್ನು ಅಂಗೀಕಾರ ಮಾಡಬೇಕು. ಅಲ್ಪರಾಗಾದಿಗಳು ದೂರವಾಗಿದ್ದರೆ ಕೆಳಗಿನ ಪದದಲ್ಲಿಯೇ ಪ್ರವರ್ತಿಸಬೇಕು; ಆದರೆ ಉಚ್ಚ ಪದವನ್ನು ಧಾರಣ ಮಾಡಿ ನೀಚ ಕ್ರಿಯೆ ಮಾಡಬಾರದೆಂಬುದು ನಿಜವಾದ ಧರ್ಮದ ಪರಂಪರೆಯಿದೆ.

**ಪ್ರಶ್ನೆ :-** ಸ್ತ್ರೀ-ಸೇವನಾದಿಗಳ ತ್ಯಾಗವನ್ನು ಮೇಲಿನ ಪ್ರತಿಮೆಗಳಲ್ಲಿ ಹೇಳಿರುವುದರಿಂದ ಕೆಳಗಿನ ಅವಸ್ಥೆಯುಳ್ಳವರು ಅವುಗಳ ತ್ಯಾಗ ಮಾಡಬೇಕೋ ಅಥವಾ ಮಾಡಬಾರದೋ ?

**ಉತ್ತರ :-** ಕೆಳಗಿನ ಅವಸ್ಥೆಯಲ್ಲಿರುವವರು ಸರ್ವಥಾ ಅವುಗಳ ತ್ಯಾಗ ಮಾಡುವ ಸಾಧ್ಯತೆಯಿಲ್ಲ, ಕೆಲವೊಂದು ದೋಷ ತಗಲುತ್ತದೆ; ಅದಕ್ಕಾಗಿ ಮೇಲಿನ ಪ್ರತಿಮೆಗಳಲ್ಲಿ ತ್ಯಾಗ ಹೇಳಿದ್ದಾರೆ. ಕೆಳಗಿನ ಅವಸ್ಥೆಯಲ್ಲಿ ಯಾವ ಪ್ರಕಾರದ ತ್ಯಾಗ ಸಂಭವವಿದೆ. ಅದನ್ನು ಕೆಳಗಿನ ಅವಸ್ಥೆಯುಳ್ಳವರೂ ಮಾಡಬೇಕು; ಆದರೆ ಕೆಳಗಿನ ಅವಸ್ಥೆಯಲ್ಲಿ ಸಂಭವಿಸದಂಥ ಕಾರ್ಯವನ್ನು ಮಾಡಿದರೆ ಅದು ಕಷಾಯಭಾವಗಳಿಂದಲೇ ಆಗುತ್ತದೆ. ಹೇಗೆಂದರೆ ಓರ್ವನು ಸಪ್ತವ್ಯಸನಗಳ ಸೇವನೆ ಮಾಡುತ್ತಿದ್ದು ಅವನು ಸ್ವಸ್ತ್ರೀಯ ತ್ಯಾಗ ಮಾಡಿದರೆ ಹೇಗೆ ಸಾಧ್ಯವಿದೆ ? ಸ್ವಸ್ತ್ರೀಯ

ತ್ಯಾಗ ಮಾಡುವುದು ಧರ್ಮವಿದ್ದರೂ ಮೊದಲು ಸಪ್ತವ್ಯಸನದ ತ್ಯಾಗವಾದಾಗಲೇ ಸ್ವಸ್ತ್ರೀಯ ತ್ಯಾಗ ಮಾಡುವುದು ಯೋಗ್ಯವಿದೆ. ಹೀಗೆ ಉಳಿದುವನ್ನೂ ತಿಳಿಯುವುದು.

ಮತ್ತು ಎಲ್ಲ ಪ್ರಕಾರದಿಂದ ಧರ್ಮವನ್ನು ತಿಳಿದುಕೊಳ್ಳದಂಥ ಜೀವನು ಧರ್ಮದ ಯಾವುದೇ ಒಂದು ಅಂಗವನ್ನು ಮುಖ್ಯ ಮಾಡಿ ಅನ್ಯಧರ್ಮಗಳನ್ನು ಗೌಣ ಮಾಡುತ್ತಾನೆ. ಹೇಗೆಂದರೆ ಕೆಲವರು ದಯಾಧರ್ಮವನ್ನು ಮುಖ್ಯಮಾಡಿ ಪೂಜೆ-ಪ್ರಭಾವನೆ ಮೊದಲಾದ ಕಾರ್ಯದ ಉತ್ಥಾಪನೆ ಮಾಡುತ್ತಾರೆ; ಅದೆಷ್ಟೋ ಜನರು ಪೂಜೆ-ಪ್ರಭಾವನಾದಿಗಳ ಧರ್ಮವನ್ನು ಮುಖ್ಯ ಮಾಡಿ ಹಿಂಸಾದಿಗಳ ಭಯವನ್ನು ಇಟ್ಟುಕೊಳ್ಳುವುದಿಲ್ಲ; ಹಲವರು ತಪದ ಮುಖ್ಯತೆಯಿಂದ ಆರ್ತಧ್ಯಾನಾದಿಗಳನ್ನು ಮಾಡಿ ಕೂಡ ಉಪವಾಸಾದಿಗಳನ್ನು ಮಾಡುತ್ತಾರೆ, ಮತ್ತು ತಮ್ಮನ್ನು ತಪಸ್ವಿಯೆಂದು ಮನ್ನಿಸಿ ನಿಃಶ್ಶಂಕರಾಗಿ ಕ್ರೋಧಾದಿಗಳನ್ನು ಮಾಡುತ್ತಾರೆ; ಕೆಲವರು ದಾನದ ಮುಖ್ಯತೆಯಿಂದ ಹೆಚ್ಚು ಪಾಪ ಮಾಡಿ ಧನೋಪಾರ್ಜನೆ ಮಾಡಿ ದಾನಕೊಡುತ್ತಾರೆ; ಹಲವರು ಆರಂಭತ್ಯಾಗದ ಮುಖ್ಯತೆಯಿಂದ ಯಾಚನಾದಿಗಳನ್ನು ಮಾಡುತ್ತಾರೆ.★ ಇತ್ಯಾದಿ ಪ್ರಕಾರಗಳಿಂದ ಯಾವುದೇ ಒಂದು ಧರ್ಮವನ್ನು ಮುಖ್ಯಮಾಡಿ ಅನ್ಯಧರ್ಮವನ್ನು ಗಣನೆ ಮಾಡುವುದಿಲ್ಲ ಮತ್ತು ಅದರ ಆಶ್ರಯದಿಂದ ಪಾಪದ ಆಚರಣೆ ಮಾಡುತ್ತಾರೆ.

ಓರ್ವ ಅವಿವೇಕಿಯಾದ ವ್ಯಾಪಾರಿಗೆ ಲಾಭಕ್ಕೆ ಪ್ರತಿಯಾಗಿ ಅನ್ಯಪ್ರಕಾರದಿಂದ ಬಹಳಷ್ಟು ಹಾನಿಗೊಳಗಾಗುವಂತೆ ಅವರ ಈ ಕಾರ್ಯವಾಯಿತು. ಹೇಗೆ ವ್ಯಾಪಾರಿಯ ಪ್ರಯೋಜನವು ಲಾಭವಿದ್ದು ಅವನು ಎಲ್ಲ ವಿಚಾರ ಮಾಡಿ ಅಧಿಕ ಲಾಭವಾಗುವಂತೆ ಮಾಡುವನು; ಅದೇ ಪ್ರಕಾರ ಜ್ಞಾನಿಯ ಪ್ರಯೋಜನವು ವೀತರಾಗಭಾವವಿದ್ದು ಅವನು ಎಲ್ಲ ವಿಚಾರಮಾಡಿ ಅಧಿಕ ವೀತರಾಗಭಾವವು ಹೇಗಾಗುವುದು ಹಾಗೆ ಮಾಡುವನು, ಏಕೆಂದರೆ ಮೂಲಧರ್ಮವು ವೀತರಾಗಭಾವವಿದೆ.

ಈ ಪ್ರಕಾರ ಅವಿವೇಕಿಗಳು ವಿಪರೀತ ಧರ್ಮದ ಅಂಗೀಕಾರ ಮಾಡುತ್ತಾರೆ; ಅವರಿಗೆ ಸಮ್ಯಕ್ಚಾರಿತ್ರದ ಆಭಾಸವು ಕೂಡ ಆಗುವುದಿಲ್ಲ.

ಅದರಂತೆ ಅದೆಷ್ಟೋ ಜನರು ಅಣುವ್ರತ-ಮಹಾವ್ರತಾದಿಗಳ ರೂಪದ ಯಥಾರ್ಥ ಆಚರಣೆ ಮಾಡುತ್ತಾರೆ ಮತ್ತು ಆಚರಣೆಗೆ ಅನುಸರಿಸಿಯೇ ಪರಿಣಾಮಗಳಿವೆ, ಯಾವುದೇ ಮಾಯೆ-ಲೋಭಾದಿಗಳ ಅಭಿಪ್ರಾಯವಿಲ್ಲ; ಅವನ್ನು ಧರ್ಮವೆಂದು ತಿಳಿದುಕೊಂಡು ಮೋಕ್ಷದ ಸಲುವಾಗಿ ಅವುಗಳ ಸಾಧನೆ ಮಾಡುತ್ತಾರೆ, ಯಾವುದೇ ಸ್ವರ್ಗಾದಿಗಳ ಭೋಗಗಳ ಇಚ್ಛೆಯನ್ನೂ ಇಡುವುದಿಲ್ಲ; ಆದರೆ ಮೊದಲು ತತ್ತ್ವಜ್ಞಾನವಾಗಿಲ್ಲ, ಆದುದರಿಂದ ನಾನು ಮೋಕ್ಷದ ಸಾಧನೆ ಮಾಡುತ್ತಿದ್ದೇನೆ; ಆದರೆ ಮೋಕ್ಷದ ಸಾಧನವನ್ನು ತಿಳಿಯುವುದು ಕೂಡ ಇಲ್ಲ, ಕೇವಲ ಸ್ವರ್ಗಾದಿಗಳ ಸಾಧನೆ ಮಾಡುತ್ತಿದ್ದೇನೆಂಬುದನ್ನು ತಾವಂತೂ ತಿಳಿಯುತ್ತಾರೆ. ಒಬ್ಬನು ಕಲ್ಲುಸಕ್ಕರೆಯನ್ನು ಅಮೃತವೆಂದು ತಿಳಿದುಕೊಂಡು ಭಕ್ಷಣೆ ಮಾಡಿದರೆ ಅದರಿಂದ ಅಮೃತದ ಗುಣವಂತೂ ಆಗುವುದಿಲ್ಲ; ತನ್ನ ಪ್ರತೀತಿಗೆ ಅನುಸರಿಸಿ ಫಲವು ದೊರಕುವುದಿಲ್ಲ; ಫಲವಂತೂ ಹೇಗೆ ಸಾಧನೆ ಮಾಡುತ್ತದೆ ಹಾಗೆಯೇ ಲಭಿಸುತ್ತದೆ.

★ ಇಲ್ಲಿ ಸ್ನಾನ ಮೊದಲಾದ ಶೌಚಧರ್ಮದ ಕಥನ ಮತ್ತು ಲೌಕಿಕ ಕಾರ್ಯಗಳು ಬಂದಾಗ ಧರ್ಮ ಬಿಟ್ಟು ಅವುಗಳ ಬೆನ್ನು ಹತ್ತಿದರೆ ಎಂಬ ಕಥನ ಮಾಡುವುದಿದೆಯೆಂದು ಪಂ. ಟೋಡರಮಲ್ಲರ ಹಸ್ತ ಪ್ರತಿಯಲ್ಲಿ ಬರೆಯಲಾಗಿದೆ.

ಚಾರಿತ್ರದಲ್ಲಿ 'ಸಮ್ಯಕ್' ಪದವಿದ್ದು ಅದು ಅಜ್ಞಾನಪೂರ್ವಕವಾದ ಆಚರಣೆಯ ನಿವೃತ್ತಿಯ ಸಲುವಾಗಿ ಇದೆ; ಆದುದರಿಂದ ಮೊದಲು ತತ್ತ್ವಜ್ಞಾನವಾಗಿ ನಂತರ ಚಾರಿತ್ರವಾದರೆ ಅದು ಸಮ್ಯಕ್ಚಾರಿತ್ರವೆಂಬ ಹೆಸರು ಪಡೆಯುತ್ತದೆಂದು ಶಾಸ್ತ್ರಗಳಲ್ಲಿ ಹೇಳಿದೆ. ಹೇಗೆಂದರೆ ಓರ್ವ ಕೃಷಿಕನು ಬೀಜವನ್ನು ಬಿತ್ತಲಿಲ್ಲ ಮತ್ತು ಅನ್ಯ ಸಾಧನಗಳನ್ನು ಮಾಡಿದರೆ ಧಾನ್ಯದ ಪ್ರಾಪ್ತಿ ಹೇಗಾಗುವುದು ? ಹುಲ್ಲು-ಕಸವೇ ಬರುವುದು; ಅದೇ ಪ್ರಕಾರ ಅಜ್ಞಾನಿಯು ತತ್ತ್ವಜ್ಞಾನದ ಅಭ್ಯಾಸವನ್ನಂತೂ ಮಾಡುವುದಿಲ್ಲ ಮತ್ತು ಅನ್ಯಸಾಧನೆ ಮಾಡಿದರೆ ಮೋಕ್ಷದ ಪ್ರಾಪ್ತಿ ಹೇಗಾಗುವುದು ? ದೇವ ಪದ ಮೊದಲಾದುವೇ ದೊರಕುವವು.

ಅದರಂತೆ ಅದೆಷ್ಟೋ ಜೀವರುಗಳು ತತ್ತ್ವಾದಿಗಳ ಹೆಸರನ್ನು ಕೂಡ ಸರಿಯಾಗಿ ತಿಳಿಯುವುದಿಲ್ಲ, ಕೇವಲ ವ್ರತಾದಿಗಳಲ್ಲಿಯೇ ಪ್ರವರ್ತಿಸುತ್ತಾರೆ. ಮತ್ತೆ ಅದೆಷ್ಟೋ ಜೀವರುಗಳು ಪೂರ್ವೋಕ್ತ ಪ್ರಕಾರ ಸಮ್ಯಗ್ದರ್ಶನ ಜ್ಞಾನಗಳ ಸಾಧನೆಯನ್ನು ಅಯಥಾರ್ಥವಾಗಿ ಮಾಡಿ ವ್ರತಾದಿಗಳಲ್ಲಿ ಪ್ರವರ್ತಿಸುತ್ತಾರೆ. ಅವರು ವ್ರತಾದಿಗಳ ಯಥಾರ್ಥ ಆಚರಣೆ ಮಾಡುತ್ತಿದ್ದರೂ ಯಥಾರ್ಥ ಶ್ರದ್ಧೆ-ಜ್ಞಾನಗಳಿಲ್ಲದೆ ಅವರು ಮಾಡುವ ಎಲ್ಲ ಆಚರಣೆಯು ಮಿಥ್ಯಾಚಾರಿತ್ರವೇ ಇದೆ.

ಇದನ್ನೇ ಸಮಯಸಾರಕಲಶದಲ್ಲಿ ಹೇಳಿದ್ದಾರೆ,-

**ಕ್ಲಿಶ್ಯಂತಾಂ ಸ್ವಯಮೇವ ದುಷ್ಕರತರೈರ್ಮೋಕ್ಷೋನ್ಮುಖೈಃ ಕರ್ಮಭಿಃ**
**ಕ್ಲಿಶ್ಯಂತಾಂ ಚ ಪರೇ ಮಹಾವ್ರತತಪೋಭಾರೇಣ ಭಗ್ನಾಶ್ಚಿರಮ್ ।**
**ಸಾಕ್ಷಾನ್ಮೋಕ್ಷಮಿದಂ ನಿರಾಮಯಪದಂ ಸಂವೇದ್ಯಮಾನಂ ಸ್ವಯಂ**
**ಜ್ಞಾನಂ ಜ್ಞಾನಗುಣಂ ವಿನಾ ಕಥಮಪಿ ಪ್ರಾಪ್ತುಂ ಕ್ಷಮಂತೇ ನ ಹಿ ।।142।।**

**ಅರ್ಥ :-** ಮೋಕ್ಷದಿಂದ ಪರಾಙ್ಮುಖವಾದಂಥ ಅತ್ಯಂತ ದುಸ್ತರವಾದ ಪಂಚಾಗ್ನಿ ತಪ ಮೊದಲಾದ ಕಾರ್ಯಗಳಿಂದ ತಾವೇ ಕ್ಲೇಶ ಮಾಡಿಕೊಳ್ಳುತ್ತಿದ್ದರೆ ಮಾಡಿಕೊಳ್ಳಲಿ; ಮತ್ತು ಉಳಿದ ಅದೆಷ್ಟೋ ಜನರು ಮಹಾವ್ರತ ಹಾಗೂ ತಪದ ಭಾರದಿಂದ ಚಿರಕಾಲದವರೆಗೆ ಕ್ಷೀಣರಾಗುತ್ತ ಕ್ಲೇಶಪಡುತ್ತಿದ್ದರೆ ಪಡಲಿ; ಆದರೆ ಈ ಪ್ರತ್ಯಕ್ಷ ಮೋಕ್ಷಸ್ವರೂಪವು, ಸಮಸ್ತ ರೋಗರಹಿತವಾದ ಪದವು, ತನ್ನಿಂದ ತಾನೇ ಅನುಭವದಲ್ಲಿ ಬರುವಂಥ ಜ್ಞಾನಸ್ವಭಾವವು ಅದನ್ನು ಜ್ಞಾನಗುಣವಿಲ್ಲದೆ ಬೇರೆ ಯಾವುದೇ ಪ್ರಕಾರದಿಂದ ಪ್ರಾಪ್ತಮಾಡಿಕೊಳ್ಳುವಲ್ಲಿ ಸಮರ್ಥವಿಲ್ಲ.

ಮತ್ತು ಪಂಚಾಸ್ತಿಕಾಯದ ಕೊನೆಯಲ್ಲಿ ವ್ಯವಹಾರಾಭಾಸಿಯ ಕಥನ ಮಾಡಿದ್ದು ಅಲ್ಲಿ ಹದಿಮೂರು ಪ್ರಕಾರದ ಚಾರಿತ್ರಗಳಿದ್ದರೂ ಮೋಕ್ಷಮಾರ್ಗದಲ್ಲಿ ಆತನ ನಿಷೇಧ ಮಾಡಲಾಗಿದೆ.

ಇನ್ನು ಪ್ರವಚನಸಾರದಲ್ಲಿ ಆತ್ಮಜ್ಞಾನದಿಂದ ಶೂನ್ಯವಾದ ಸಂಯಮಭಾವವನ್ನು ಅಕಾರ್ಯಕಾರಿಯೆಂದು ಹೇಳಿದೆ.

ಮತ್ತು ಇವೇ ಗ್ರಂಥಗಳಲ್ಲಿ ಹಾಗೂ ಅನ್ಯ ಪರಮಾತ್ಮಪ್ರಕಾಶ ಮೊದಲಾದ ಶಾಸ್ತ್ರಗಳಲ್ಲಿ ಈ ಪ್ರಯೋಜನದ ಸಲುವಾಗಿ ಅಲ್ಲಲ್ಲಿ ನಿರೂಪಣೆ ಮಾಡಲಾಗಿದೆ.

ಆದುದರಿಂದ ಮೊದಲು ತತ್ತ್ವಜ್ಞಾನವಾದ ನಂತರವೇ ಆಚರಣೆಯು ಕಾರ್ಯಕಾರಿಯಿದೆ.

ಬಾಹ್ಯದಲ್ಲಂತೂ ಅಣುವ್ರತ-ಮಹಾವ್ರತಾದಿಗಳನ್ನು ಸಾಧಿಸುತ್ತಾರೆ, ಅಂತರಂಗದಲ್ಲಿ ಪರಿಣಾಮಗಳಿಲ್ಲ, ಮತ್ತು ಸ್ವರ್ಗಾದಿಗಳ ಇಚ್ಛೆಯಿಂದ ಸಾಧಿಸುತ್ತಾರೆಂದು ಯಾರೋ ತಿಳಿಯಬಹುದು; ಆದರೆ ಈ ಪ್ರಕಾರದ ಸಾಧನೆಯಿಂದ ಪಾಪಬಂಧವಾಗುತ್ತದೆ. ದ್ರವ್ಯಲಿಂಗಿ ಮುನಿಗಳು ಅಂತಿಮ ಗ್ರೈವೇಯಕದವರೆಗೆ ಹೋಗುತ್ತಾರೆ, ಮತ್ತು ಪಂಚಪರಾವರ್ತನಗಳಲ್ಲಿ ಮೂವತ್ತೊಂದು ಸಾಗರದವರೆಗೆ ದೇವಾಯುವಿನ ಪ್ರಾಪ್ತಿಯು ಅನಂತಬಾರಿ ಆಗುವುದೆಂದು ಹೇಳಿದೆ; ಆದರೆ ಇಂಥ ಉಚ್ಚಪದವಂತೂ ಯಾವಾಗ ಅಂತರಂಗ ಪರಿಣಾಮ ಪೂರ್ವಕವಾಗಿ ಮಹಾವ್ರತಪಾಲಿಸುವುದು, ಅತ್ಯಂತ ಮಂದಕಷಾಯಿಯಾಗುವುದು, ಈ ಲೋಕ-ಪರಲೋಕಗಳ ಭೋಗದ ಇಚ್ಛೆಯಿಲ್ಲದಿರುವುದು, ಕೇವಲ ಧರ್ಮಬುದ್ಧಿಯಿಂದ ಮೋಕ್ಷಾಭಿಲಾಷಿಯಾಗಿ ಸಾಧನೆ ಮಾಡುವುದು ಆಗ ಪ್ರಾಪ್ತವಾಗುವುದು. ಆದುದರಿಂದ ದ್ರವ್ಯಲಿಂಗಿಗೆ ಸ್ಥೂಲವಾಗಿಯಂತೂ ವಿಪರೀತತೆಯಿಲ್ಲ, ಸೂಕ್ಷ್ಮ ವಿಪರೀತತೆಯಿದೆ; ಅದು ಸಮ್ಯಗ್ದೃಷ್ಟಿಗೆ ತಿಳಿದುಬರುತ್ತದೆ.

ಈಗ ಇವರ ಧರ್ಮಸಾಧನೆ ಹೇಗಿದೆ ಮತ್ತು ಅದರಲ್ಲಿ ವಿಪರೀತತೆಯು ಹೇಗಿದೆಯೆಂಬುದನ್ನು ಹೇಳುತ್ತಾರೆ,-

ಮೊದಲಂತೂ ಸಂಸಾರದಲ್ಲಿ ನರಕಾದಿಗಳ ದುಃಖ ತಿಳಿದುಕೊಂಡು ಮತ್ತು ಸ್ವರ್ಗಾದಿಗಳಲ್ಲಿಯೂ ಜನ್ಮ-ಮರಣಾದಿಗಳ ದುಃಖ ತಿಳಿದುಕೊಂಡು ಸಂಸಾರದಿಂದ ಉದಾಸರಾಗಿ ಮೋಕ್ಷವನ್ನು ಬಯಸುತ್ತಾರೆ. ಆದರೆ ಈ ದುಃಖಗಳನ್ನಂತೂ ದುಃಖವೆಂದು ಎಲ್ಲರೂ ತಿಳಿಯುತ್ತಾರೆ. ಇಂದ್ರ-ಅಹಮಿಂದ್ರ ಮೊದಲಾದವರು ವಿಷಯಾನುರಾಗದಿಂದ ಇಂದ್ರಿಯಜನ್ಯ ಸುಖವನ್ನು ಭೋಗಿಸುತ್ತಾರೆ; ಅದನ್ನೂ ದುಃಖವೆಂದು ತಿಳಿದುಕೊಂಡು ನಿರಾಕುಲವಾದ ಸುಖದ ಅವಸ್ಥೆಯನ್ನು ಗುರುತಿಸಿಕೊಂಡು ಮೋಕ್ಷವನ್ನು ಅಪೇಕ್ಷಿಸುತ್ತಾರೆ; ಅವರನ್ನೇ ಸಮ್ಯಗ್ದೃಷ್ಟಿಗಳೆಂದು ತಿಳಿಯಬೇಕು.

ಅಲ್ಲದೆ ವಿಷಯ ಸುಖಾದಿಗಳ ಫಲವು ನರಕ ಮೊದಲಾದುವಿವೆ; ಶರೀರವು ಅಶುಚಿಯಿದೆ, ವಿನಾಶಶೀಲವಿದೆ- ಪೋಷಣೆ ಯೋಗ್ಯವಿಲ್ಲ; ಕುಟುಂಬ ವರ್ಗದವರು ಸ್ವಾರ್ಥದ ಸಂಗಡಿಗರಿದ್ದಾರೆ; ಇತ್ಯಾದಿಯಾಗಿ ಪರದ್ರವ್ಯಗಳ ದೋಷದ ವಿಚಾರ ಮಾಡಿ ಅವುಗಳ ತ್ಯಾಗ ಮಾಡುತ್ತಾರೆ. ಮತ್ತು ವ್ರತಾದಿಗಳ ಫಲವು ಸ್ವರ್ಗ-ಮೋಕ್ಷಗಳಿವೆ; ತಪಶ್ಚರ್ಯಾದಿಗಳು ಅವಿನಾಶಿಯಾದ ಫಲವನ್ನು ಕೊಡುತ್ತವೆ; ಅವುಗಳ ಮೂಲಕ ಶರೀರದ ಶೋಷಣೆ ಮಾಡುವುದು ಯೋಗ್ಯವಿದೆ; ದೇವ-ಗುರು-ಶಾಸ್ತ್ರಗಳು ಹಿತಕಾರಕವಿವೆ; ಇವೇ ಮೊದಲಾದ ಪರದ್ರವ್ಯಗಳ ಗುಣಗಳ ವಿಚಾರ ಮಾಡಿ ಅವನ್ನು ಅಂಗೀಕರಿಸುತ್ತಾರೆ. ಇದೇ ಪ್ರಕಾರದಿಂದ ಒಂದು ದ್ರವ್ಯವನ್ನು ಕೆಡಕೆಂದು ತಿಳಿದು ಅನಿಷ್ಟರೂಪದ ಶ್ರದ್ಧೆಮಾಡುತ್ತಾರೆ, ಒಂದು ದ್ರವ್ಯವನ್ನು ಒಳ್ಳೆಯದೆಂದು ತಿಳಿದು ಇಷ್ಟಶ್ರದ್ಧೆ ಮಾಡುತ್ತಾರೆ. ಆದರೆ ಪರದ್ರವ್ಯಗಳಲ್ಲಿ ಇಷ್ಟಾನಿಷ್ಟರೂಪದ ಶ್ರದ್ಧೆಯು ಅದು ಮಿಥ್ಯೆಯಿದೆ.

ಇದೇ ಶ್ರದ್ಧೆಯಿಂದ ಇವರ ಉದಾಸೀನತೆಯು ಕೂಡ ದ್ವೇಷಬುದ್ಧಿರೂಪವಾಗಿದೆ; ಏಕೆಂದರೆ ಯಾವುದನ್ನಾದರೂ ಕೆಡಕೆಂದು ತಿಳಿಯುವುದರ ಹೆಸರೇ ದ್ವೇಷವಿದೆ.

**ಪ್ರಶ್ನೆ :-** ಸಮ್ಯಗ್ದೃಷ್ಟಿಗಳು ಕೂಡ ಪರದ್ರವ್ಯಗಳನ್ನು ಕೆಡಕೆಂದು ತಿಳಿದುಕೊಂಡು ಅವುಗಳ ತ್ಯಾಗ ಮಾಡುತ್ತಾರೆಯಲ್ಲವೆ ?

**ಉತ್ತರ :-** ಸಮ್ಯಗ್ದೃಷ್ಟಿಗಳು ಪರದ್ರವ್ಯಗಳನ್ನು ಕೆಡಕೆಂದು ತಿಳಿಯುವುದಿಲ್ಲ. ಅವರು ತಮ್ಮ ರಾಗವನ್ನು ಕೆಡಕೆಂದು ತಿಳಿಯುತ್ತಾರೆ. ಅವರು ರಾಗ ಭಾವವನ್ನು ಬಿಡುತ್ತಾರೆ. ಅದರಿಂದ ಅದರ ಕಾರಣದ ತ್ಯಾಗವೂ ಆಗುತ್ತದೆ. ವಸ್ತುವಿನ ವಿಚಾರ ಮಾಡಿದ ನಂತರ ಯಾವುದೇ ಪರದ್ರವ್ಯವು ಒಳಿತು ಕೆಡಕು ಇಲ್ಲವೇ ಇಲ್ಲ.

**ಪ್ರಶ್ನೆ :-** ನಿಮಿತ್ತ ಮಾತ್ರವಾದರೂ ಇದೆಯಲ್ಲವೆ ?

**ಉತ್ತರ :-** ಯಾವುದೇ ಪರದ್ರವ್ಯವು ಬಲವಂತದಿಂದ ಕೆಡಿಸುವುದಿಲ್ಲ. ತಮ್ಮ ಭಾವವು ಕೆಟ್ಟಾಗ ಅದು ಬಾಹ್ಯ ನಿಮಿತ್ತವಿದೆ. ಮತ್ತು ಇವನ ಭಾವಗಳು ನಿಮಿತ್ತವಿಲ್ಲದೆಯೂ ಕೆಡುತ್ತವೆ, ಅದಕ್ಕಾಗಿ ನಿಯಮ ರೂಪದಿಂದ ನಿಮಿತ್ತವೂ ಇಲ್ಲ. ಈ ಪ್ರಕಾರ ಪರದ್ರವ್ಯದ ದೋಷ ನೋಡುವುದು ಮಿಥ್ಯಾಭಾವವಿದೆ. ರಾಗಾದಿಭಾವಗಳು ಕೆಡಕಿವೆ, ಆದರೆ ಇವನಿಗೆ ಅಂಥ ತಿಳಿವಳಿಕೆಯಿಲ್ಲ. ಇವನು ಪರದ್ರವ್ಯಗಳ ದೋಷ ನೋಡಿ ಅವುಗಳಲ್ಲಿ ದ್ವೇಷ ರೂಪದ ಉದಾಸೀನತೆ ಮಾಡುತ್ತಾನೆ. ಯಾವುದೇ ದ್ರವ್ಯದ ದೋಷ ಅಥವಾ ಗುಣವು ಭಾಸವಾಗದಿರುವುದು ಅದರಿಂದ ಯಾವುದನ್ನೂ ಒಳಿತು-ಕೆಡಕೆಂದು ತಿಳಿಯದಿರುವುದು; ತನ್ನನ್ನು ತಾನೆಂದು ತಿಳಿಯುವುದು, ಪರವನ್ನು ಪರವೆಂದು ತಿಳಿಯುವುದು, ಪರದಿಂದ ನನಗೆ ಯಾವುದೇ ಪ್ರಯೋಜನವಿಲ್ಲವೆಂದು ಮನ್ನಿಸಿ ಸಾಕ್ಷೀಭೂತವಾಗಿರುವುದರ ಹೆಸರು ನಿಜವಾದ ಉದಾಸೀನತೆಯಿದೆ. ಆದರೆ ಇಂಥ ಉದಾಸೀನತೆಯು ಜ್ಞಾನಿಗಳಿಗೇ ಇರುತ್ತದೆ.

ಮತ್ತು ಇವನು ಉದಾಸೀನನಾಗಿ ಶಾಸ್ತ್ರದಲ್ಲಿ ಹೇಳಿದ ಅಣುವ್ರತ-ಮಹಾವ್ರತರೂಪದ ವ್ಯವಹಾರ ಚಾರಿತ್ರವನ್ನು ಅಂಗೀಕಾರ ಮಾಡುತ್ತಾನೆ, ಹಿಂಸಾದಿ ಪಾಪಗಳನ್ನು ಏಕದೇಶ ಅಥವಾ ಸರ್ವದೇಶ ಬಿಡುತ್ತಾನೆ; ಅವುಗಳ ಸ್ಥಾನದಲ್ಲಿ ಅಹಿಂಸೆ ಮೊದಲಾದ ಪುಣ್ಯರೂಪದ ಕಾರ್ಯಗಳಲ್ಲಿ ಪ್ರವರ್ತಿಸುತ್ತಾನೆ. ಮತ್ತು ಯಾವ ಪ್ರಕಾರ ಪರ್ಯಾಯಾಶ್ರಿತವಾದ ಪಾಪ ಕಾರ್ಯಗಳಲ್ಲಿ ತನ್ನ ಕರ್ತೃತ್ವವನ್ನು ಮನ್ನಿಸುತ್ತಿದ್ದನು ಅದೇ ಪ್ರಕಾರ ಈಗ ಪರ್ಯಾಯಾಶ್ರಿತವಾದ ಪುಣ್ಯ ಕಾರ್ಯಗಳಲ್ಲಿ ತನ್ನ ಕರ್ತೃತ್ವವನ್ನು ಮನ್ನಿಸತೊಡಗಿದನು. ಈ ಪ್ರಕಾರ ಪರ್ಯಾಯಾಶ್ರಿತವಾದ ಕಾರ್ಯಗಳಲ್ಲಿ ಅಹಂಬುದ್ಧಿಯನ್ನು ಮನ್ನಿಸುವ ಸಮಾನತೆಯಾಯಿತು. ಹೇಗೆಂದರೆ 'ನಾನು ಜೀವಗಳನ್ನು ಕೊಲ್ಲುತ್ತೇನೆ, ನಾನು ಪರಿಗ್ರಹ ಧಾರಿಯಿದ್ದೇನೆ'ಂಬ ರೂಪದ ಮನ್ನಣೆಯಿತ್ತು; ಅದೇ ಪ್ರಕಾರ ಈಗ 'ನಾನು ಜೀವಗಳ ರಕ್ಷಣೆ ಮಾಡುತ್ತೇನೆ, ನಾನು ನಗ್ನನಿದ್ದೇನೆ ಅಪರಿಗ್ರಹಿಯಿದ್ದೇನೆ'ಂಬ ಮನ್ನಣೆಯಾಯಿತು. ಆದುದರಿಂದ ಪರ್ಯಾಯಾಶ್ರಿತವಾದ ಕಾರ್ಯಗಳಲ್ಲಿನ ಅಹಂಬುದ್ಧಿಯೇ ಮಿಥ್ಯಾದೃಷ್ಟಿತ್ವವಿದೆ.

ಇದನ್ನೇ ಸಮಯಸಾರ ಕಲಶದಲ್ಲಿ ಹೇಳಿದ್ದಾರೆ,-

**ಯೇ ತು ಕರ್ತಾರಮಾತ್ಮಾನಂ ಪಶ್ಯಂತಿ ತಮಸಾ ತತಾಃ ।**
**ಸಾಮಾನ್ಯ ಜನವತ್ತೇಷಾಂ ನ ಮೋಕ್ಷೋಽಪಿ ಮುಮುಕ್ಷುತಾಂ ॥199॥**

**ಅರ್ಥ :-** ಯಾರು ಮಿಥ್ಯಾ ಅಂಧಕಾರದಿಂದ ವ್ಯಾಪ್ತರಾಗುತ್ತ ತಮ್ಮನ್ನು ಪರ್ಯಾಯಾಶ್ರಿತವಾದ ಕ್ರಿಯೆಗಳ ಕರ್ತೃವೆಂದು ಮನ್ನಿಸುತ್ತಾರೆ ಅವರು ಮೋಕ್ಷಾಭಿಲಾಷಿಗಳಿದ್ದರೂ ಕೂಡ ಹೇಗೆ ಅನ್ಯಮತದ ಸಾಮಾನ್ಯ ಮನುಷ್ಯರಿಗೆ ಮೋಕ್ಷವಾಗುವುದಿಲ್ಲ; ಅದೇ ಪ್ರಕಾರ ಅವರಿಗೆ ಮೋಕ್ಷವಾಗುವುದಿಲ್ಲ; ಏಕೆಂದರೆ ಕರ್ತೃತ್ವತೆಯ ಸಂಬಂಧದಲ್ಲಿ ಶ್ರದ್ಧೆಯ ಸಮಾನತೆಯಿದೆ.

ಈ ಪ್ರಕಾರ ತಾವು ಕರ್ತೃವಾಗಿ ಶ್ರಾವಕಧರ್ಮ ಅಥವಾ ಮುನಿಧರ್ಮದ ಕ್ರಿಯೆಗಳಲ್ಲಿ ನಿರಂತರ ಮನ-ವಚನ-ಕಾಯದ ಪ್ರವೃತ್ತಿಯನ್ನಿಡುತ್ತಾರೆ, ಆ ಕ್ರಿಯೆಗಳಲ್ಲಿ ಭಂಗ ಬಾರದಂತೆ ಪ್ರವರ್ತಿಸುತ್ತಾರೆ; ಆದರೆ ಇಂಥ ಭಾವಗಳು ಸರಾಗವಿದ್ದು ಚಾರಿತ್ರವು ವೀತರಾಗಭಾವರೂಪವಿದೆ. ಆದುದರಿಂದ ಇಂಥ ಸಾಧನೆಗೆ ಮೋಕ್ಷಮಾರ್ಗವೆಂದು ಮನ್ನಿಸುವುದು ಮಿಥ್ಯಾಬುದ್ಧಿಯಿದೆ.

**ಪ್ರಶ್ನೆ :-** ಸರಾಗ-ವೀತರಾಗ ಭೇದದಿಂದ ಎರಡು ಪ್ರಕಾರದ ಚಾರಿತ್ರ ಹೇಳಿದೆ ಅದು ಯಾವ ಪ್ರಕಾರವಿದೆ?

**ಉತ್ತರ :-** ಅಕ್ಕಿಯು ತವಡು ಸಹಿತ ಮತ್ತು ತವಡು ರಹಿತವೆಂದು ಎರಡು ಪ್ರಕಾರವಿದೆ. ಅಲ್ಲಿ ತವಡು ಅದು ಅಕ್ಕಿಯ ಸ್ವರೂಪವಲ್ಲ, ಆದರೆ ಅಕ್ಕಿಯ ದೋಷವಿದೆಯೆಂದು ತಿಳಿಯುವುದು. ಓರ್ವ ವಿವೇಕಿಯು ತವಡು ಸಹಿತ ಅಕ್ಕಿಯ ಸಂಗ್ರಹ ಮಾಡುತ್ತಿದ್ದನು; ಅದನ್ನು ನೋಡಿ ಓರ್ವ ಅನನುಭವಿಯು ತವಡನ್ನೇ ಅಕ್ಕಿಯೆಂದು ಮನ್ನಿಸಿ ಸಂಗ್ರಹ ಮಾಡಿದರೆ ವ್ಯರ್ಥವಾಗಿ ಖೇದ ಖಿನ್ನನಾಗುವನು. ಅದೇ ಪ್ರಕಾರ ಚಾರಿತ್ರವು ಸರಾಗ ಮತ್ತು ವೀತರಾಗವೆಂದು ಎರಡು ಪ್ರಕಾರವಿದೆ. ಅಲ್ಲಿ ರಾಗವಿದೆ ಅದು ಚಾರಿತ್ರದ ಸ್ವರೂಪವಲ್ಲ, ಆದರೆ ಚಾರಿತ್ರದ ದೋಷವೆಂದು ತಿಳಿಯುವುದು ಮತ್ತು ಎಷ್ಟೋ ಜ್ಞಾನಿಗಳು ಪ್ರಶಸ್ತರಾಗ ಸಹಿತವಾದ ಚಾರಿತ್ರದ ಧಾರಣೆ ಮಾಡುತ್ತಾರೆ; ಅವರನ್ನು ನೋಡಿ ಓರ್ವ ಅಜ್ಞಾನಿಯು ಪ್ರಶಸ್ತರಾಗವನ್ನೇ ಚಾರಿತ್ರವೆಂದು ಮನ್ನಿಸಿ ಸಂಗ್ರಹ ಮಾಡಿದರೆ ಅವನು ವೃಥಾ ಖೇದಖಿನ್ನನೇ ಆಗುವನು.

**ಪ್ರಶ್ನೆ :-** ಪಾಪಕ್ರಿಯೆ ಮಾಡುವುದರಿಂದ ತೀವ್ರರಾಗಾದಿಗಳಾಗುತ್ತಿದ್ದವು, ಈಗ ಈ ಕ್ರಿಯೆಗಳನ್ನು ಮಾಡಿದ ನಂತರ ರಾಗವು ಮಂದವಾಯಿತು, ಆದುದರಿಂದ ಎಷ್ಟು ಅಂಶದಲ್ಲಿ ರಾಗಭಾವವು ಕಡಿಮೆಯಾಯಿತು ಅಷ್ಟು ಅಂಶಗಳಲ್ಲಿ ಚಾರಿತ್ರವೆನ್ನಿರಿ, ಎಷ್ಟು ಅಂಶಗಳಲ್ಲಿ ರಾಗ ಉಳಿದಿದೆ ಅಷ್ಟು ಅಂಶಗಳಲ್ಲಿ ರಾಗವೆನ್ನಿರಿ, ಹೀಗೆ ಅವನಿಗೆ ಸರಾಗಚಾರಿತ್ರ ಸಂಭವವಿದೆ.

**ಉತ್ತರ :-** ತತ್ತ್ವಜ್ಞಾನಪೂರ್ವಕವಾಗಿ ಹೀಗಿದ್ದರೆ ನೀವು ಹೇಳಿದ ಪ್ರಕಾರವೇ ಇದೆ. ತತ್ತ್ವಜ್ಞಾನವಿಲ್ಲದೆ ಉತ್ಕೃಷ್ಟ ಆಚರಣೆಯಾದರೂ ಅಸಂಯಮವೆಂಬ ಹೆಸರನ್ನೇ ಪಡೆಯುತ್ತದೆ, ಏಕೆಂದರೆ ರಾಗಭಾವ ಮಾಡುವ ಅಭಿಪ್ರಾಯವು ದೂರವಾಗಿಲ್ಲ.

ದ್ರವ್ಯಲಿಂಗಿ ಮುನಿಯು ರಾಜ್ಯಾದಿಗಳನ್ನು ಬಿಟ್ಟುಕೊಟ್ಟು ನಿರ್ಗ್ರಂಥನಾಗುತ್ತಾನೆ, ಇಪ್ಪತ್ತೆಂಟು ಮೂಲ ಗುಣಗಳ ಪಾಲನೆ ಮಾಡುತ್ತಾನೆ, ಅತ್ಯಂತ ಉಗ್ರವಾದ ಅನಶನಾದಿ ತಪಸ್ಸನ್ನು ಅಧಿಕವಾಗಿ ಮಾಡುತ್ತಾನೆ, ಕ್ಷುಧೆ ಮೊದಲಾದ ಇಪ್ಪತ್ತೆರಡು ಪರೀಷಹಗಳನ್ನು ಸಹಿಸುತ್ತಾನೆ, ಶರೀರವನ್ನು ತುಂಡು-ತುಂಡು ಮಾಡಿದರೂ ವ್ಯಗ್ರನಾಗುವುದಿಲ್ಲ, ವ್ರತಭಂಗವಾಗುವ ಅನೇಕ ಕಾರಣಗಳು ದೊರಕಿದರೂ ದೃಢನಿರುತ್ತಾನೆ, ಯಾರಲ್ಲಿಯೂ ಕ್ರೋಧ ಮಾಡುವುದಿಲ್ಲ, ಇಂಥ ಸಾಧನಗಳ ಅಭಿಮಾನ ಮಾಡುವುದಿಲ್ಲ, ಇಂಥ ಸಾಧನಗಳಲ್ಲಿ ಯಾವುದೇ ಕಪಟವಿಲ್ಲ, ಈ ಸಾಧನಗಳ ಮೂಲಕ ಇಹಲೋಕ-ಪರಲೋಕದ ವಿಷಯ ಸುಖವನ್ನು ಬಯಸುವುದಿಲ್ಲ; ಹೀಗೆ ಅವನ ದಶೆಯಾಗಿದೆ. ಇಂಥ ದಶೆಯಾದಲ್ಲದೆ ಗ್ರೈವೇಯಕದವರೆಗೆ ಹೇಗೆ ತಲುಪುವನು ? ಆದರೆ ಶಾಸ್ತ್ರದಲ್ಲಿ ಅವನನ್ನು ಮಿಥ್ಯಾದೃಷ್ಟಿ ಅಸಂಯಮಿಯೆಂದೇ ಹೇಳಿದೆ, ಅದರ ಕಾರಣವೇನೆಂದರೆ ತತ್ತ್ವಗಳ ನಿಜವಾದ

ಶ್ರದ್ಧೆ-ಜ್ಞಾನವಾಗಿಲ್ಲ. ಮೊದಲು ವರ್ಣನೆ ಮಾಡಿದ ಪ್ರಕಾರ ತತ್ತ್ವಗಳ ಶ್ರದ್ಧೆ-ಜ್ಞಾನವಾಗಿದೆ; ಅದೇ ಅಭಿಪ್ರಾಯದಿಂದ ಎಲ್ಲ ಸಾಧನೆಗಳನ್ನು ಮಾಡುತ್ತಾನೆ. ಆದರೆ ಆ ಸಾಧನೆಗಳ ಅಭಿಪ್ರಾಯದ ಪರಂಪರೆಯ ವಿಚಾರ ಮಾಡಿದಮೇಲೆ ಕಷಾಯಗಳ ಅಭಿಪ್ರಾಯವು ಬರುತ್ತದೆ.

ಅವನು ಪಾಪದ ಕಾರಣಗಳಾದ ರಾಗಾದಿಗಳನ್ನು ಹೇಯವೆಂದು ತಿಳಿದುಕೊಂಡು ಬಿಡುತ್ತಾನೆ; ಆದರೆ ಪುಣ್ಯದ ಕಾರಣವಾದ ಪ್ರಶಸ್ತರಾಗವನ್ನು ಉಪಾದೇಯವೆಂದು ಮನ್ನಿಸುತ್ತಾನೆ, ಅದರ ವೃದ್ಧಿಯ ಉಪಾಯ ಮಾಡುತ್ತಾನೆ, ಆದರೆ ಪ್ರಶಸ್ತರಾಗವು ಕೂಡ ಕಷಾಯವಿದೆ. ಕಷಾಯವನ್ನು ಉಪಾದೇಯವೆಂದು ಮನ್ನಿಸಿದಾಗ ಕಷಾಯ ಮಾಡುವ ಶ್ರದ್ಧೆಯೇ ಉಳಿಯಿತು. ಅಪ್ರಶಸ್ತವಾದ ಪರದ್ರವ್ಯಗಳಲ್ಲಿ ದ್ವೇಷ ಮಾಡಿ ಪ್ರಶಸ್ತ ಪರದ್ರವ್ಯಗಳಲ್ಲಿ ರಾಗ ಮಾಡುವ ಅಭಿಪ್ರಾಯವಾಯಿತು, ಯಾವ ಪರದ್ರವ್ಯಗಳಲ್ಲಿ ಸಾಮ್ಯಭಾವರೂಪದ ಅಭಿಪ್ರಾಯವಾಗಲಿಲ್ಲ.

**ಪ್ರಶ್ನೆ** :- ಸಮ್ಯಗ್ದೃಷ್ಟಿಯು ಕೂಡ ಪ್ರಶಸ್ತರಾಗದ ಉಪಾಯವಿಟ್ಟಿರುತ್ತಾನಲ್ಲವೆ ?

**ಉತ್ತರ** :- ಯಾವ ಪ್ರಕಾರ ಒಬ್ಬನಿಗೆ ಅಧಿಕ ಶಿಕ್ಷೆಯಾಗುತ್ತಿತ್ತು, ಅವನು ಸ್ವಲ್ಪ ಶಿಕ್ಷೆ ಕೊಡುವ ಉಪಾಯವಿಡುತ್ತಾನೆ, ಸ್ವಲ್ಪ ಶಿಕ್ಷೆಯಿತ್ತು ಹರ್ಷವನ್ನೂ ಮನ್ನಿಸುತ್ತಾನೆ, ಆದರೆ ಶ್ರದ್ಧೆಯಲ್ಲಿ ಶಿಕ್ಷೆಕೊಡುವುದನ್ನು ಅನಿಷ್ಟವೆಂದೇ ಮನ್ನಿಸುತ್ತಾನೆ, ಅದೇ ಪ್ರಕಾರ ಸಮ್ಯಗ್ದೃಷ್ಟಿಗೆ ಪಾಪರೂಪದ ಕಷಾಯಗಳು ಅಧಿಕವಾಗುತ್ತಿದ್ದವು, ಆದ್ದರಿಂದ ಅವನು ಸ್ವಲ್ಪ ಪುಣ್ಯರೂಪದ ಕಷಾಯ ಮಾಡುವ ಉಪಾಯವಿಡುತ್ತಾನೆ, ಸ್ವಲ್ಪ ಕಷಾಯವಾದ ಮೇಲೆ ಹರ್ಷವನ್ನೂ ಮನ್ನಿಸುತ್ತಾನೆ, ಆದರೆ ಶ್ರದ್ಧೆಯಲ್ಲಿ ಕಷಾಯವನ್ನು ಹೇಯವೆಂದೇ ಮನ್ನಿಸುತ್ತಾನೆ. ಮತ್ತು ಯಾವ ಪ್ರಕಾರ ಒಬ್ಬನು ಸಂಪಾದನೆಯ ಕಾರಣ ತಿಳಿದುಕೊಂಡು ವ್ಯಾಪಾರಾದಿಗಳ ಉಪಾಯವಿಡುತ್ತಾನೆ, ಉಪಾಯ ಕೂಡಿ ಬಂದ ಮೇಲೆ ಹರ್ಷ ಮನ್ನಿಸುತ್ತಾನೆ; ಅದೇ ಪ್ರಕಾರ ದ್ರವ್ಯಲಿಂಗಿಯು ಮೋಕ್ಷದ ಕಾರಣ ತಿಳಿದುಕೊಂಡು ಪ್ರಶಸ್ತರಾಗದ ಉಪಾಯವಿಡುತ್ತಾನೆ, ಉಪಾಯ ಕೂಡಿಬಂದ ಮೇಲೆ ಹರ್ಷ ಮನ್ನಿಸುತ್ತಾನೆ. ಈ ಪ್ರಕಾರ ಪ್ರಶಸ್ತರಾಗದ ಉಪಾಯದಲ್ಲಿ ಮತ್ತು ಹರ್ಷದಲ್ಲಿ ಸಮಾನತೆಯಿದ್ದರೂ ಕೂಡ ಸಮ್ಯಗ್ದೃಷ್ಟಿಗೆ ಶಿಕ್ಷೆಯ ಸಮಾನ ಮತ್ತು ಮಿಥ್ಯಾದೃಷ್ಟಿಗೆ ವ್ಯಾಪಾರದ ಸಮಾನವಾದ ಶ್ರದ್ಧೆಯು ಕಂಡು ಬರುತ್ತದೆ. ಆದುದರಿಂದ ಅಭಿಪ್ರಾಯದಲ್ಲಿ ವಿಶೇಷತೆಯಾಯಿತು.

ಅಲ್ಲದೆ ಇವನಿಗೆ ಪರೀಷಹ-ತಪಶ್ಚರಣ ಮೊದಲಾದವುಗಳ ನಿಮಿತ್ತದಿಂದ ದುಃಖವಾದರೆ ಅದರ ಉಪಚಾರ ಮಾಡುವುದಿಲ್ಲ; ಆದರೆ ದುಃಖದ ವೇದನ ಮಾಡುತ್ತಾನೆ; ಆ ದುಃಖದ ವೇದನ ಮಾಡುವುದು ಕಷಾಯವೇ ಇದೆ, ಎಲ್ಲಿ ವೀತರಾಗತೆಯಾಗುತ್ತದೆ ಅಲ್ಲಿ ಅನ್ಯ ಜ್ಞೇಯವನ್ನು ಹೇಗೆ ತಿಳಿಯುತ್ತಾನೆ; ಅದೇ ಪ್ರಕಾರ ದುಃಖಕ್ಕೆ ಕಾರಣವಾದ ಜ್ಞೇಯವನ್ನು ತಿಳಿಯುತ್ತಾನೆ, ಅದರಿಂದ ಇಂಥ ದಶೆಯು ಇವನಿಗೆ ಆಗಿರುವುದಿಲ್ಲ. ಮತ್ತು ಅವನ್ನು ಸಹಿಸುತ್ತಾನೆ ಅದು ಕೂಡ ಕಷಾಯದ ಅಭಿಪ್ರಾಯರೂಪದ ವಿಚಾರದಿಂದ ಸಹಿಸುತ್ತಾನೆ. ಪರವಶತೆಯಿಂದ ನರಕ ಮೊದಲಾದ ಗತಿಗಳಲ್ಲಿ ಬಹಳಷ್ಟು ದುಃಖ ಸಹನೆ ಮಾಡಿದೆ, ಈ ಪರೀಷಹಾದಿಗಳ ದುಃಖವಂತೂ ಅಲ್ಪವಿದೆ. ಇದನ್ನು ಸ್ವವಶತೆಯಿಂದ ಸಹಿಸಿದರೆ ಸ್ವರ್ಗ-ಮೋಕ್ಷ ಸುಖದ ಪ್ರಾಪ್ತಿಯಾಗುತ್ತದೆಂಬ ವಿಚಾರವಿರುತ್ತದೆ. ಒಂದು ವೇಳೆ ಇವನ್ನು ಸಹಿಸದಿದ್ದರೆ ಮತ್ತು ವಿಷಯ ಸುಖದ ಸೇವನೆ ಮಾಡಿದರೆ ನರಕಾದಿಗಳ ಪ್ರಾಪ್ತಿಯಾಗುವುದು, ಅಲ್ಲಿ

ಅಧಿಕ ದುಃಖವಾಗುವುದು ಇತ್ಯಾದಿ ವಿಚಾರಗಳಿಂದ ಪರೀಷಹಗಳಲ್ಲಿ ಅನಿಷ್ಟ ಬುದ್ಧಿಯುಳಿಯುತ್ತದೆ. ಕೇವಲ ನರಕಾದಿಗಳ ಭಯದಿಂದ ಹಾಗೂ ಸುಖದ ಲೋಭದಿಂದ ಅವನು ಸಹನೆ ಮಾಡುತ್ತಾನೆ; ಆದರೆ ಇವೆಲ್ಲವು ಕಷಾಯಭಾವಗಳೇ ಇವೆ. ಮತ್ತು ಕಟ್ಟಿದ ಕರ್ಮಗಳು ಭೋಗಿಸಿದಲ್ಲದೆ ಬಿಡುವುದಿಲ್ಲ; ಆದುದರಿಂದ ನನಗೆ ಸಹಿಸಬೇಕಾಗಿದೆಯೆಂಬ ವಿಚಾರವಿರುತ್ತದೆ. ಆದರೆ ಇಂಥ ವಿಚಾರದಿಂದ ಕರ್ಮಫಲಚೇತನಾರೂಪವಾಗಿ ಪ್ರವರ್ತಿಸುತ್ತಾನೆ ಮತ್ತು ಪರ್ಯಾಯದೃಷ್ಟಿಯಿಂದ ಯಾವ ಪರೀಷಹಾದಿಗಳ ರೂಪದ ಅವಸ್ಥೆಯಾಗುತ್ತದೆ ಅದನ್ನು ತನಗಾಯಿತೆಂದು ಮನ್ನಿಸುತ್ತಾನೆ, ದ್ರವ್ಯದೃಷ್ಟಿಯಿಂದ ತನ್ನ ಮತ್ತು ಶರೀರಾದಿಗಳ ಅವಸ್ಥೆಯನ್ನು ಭಿನ್ನವಾಗಿ ಗುರುತಿಸುವುದಿಲ್ಲ. ಹೀಗೆ ನಾನಾ ಪ್ರಕಾರದ ವ್ಯವಹಾರ ವಿಚಾರದಿಂದ ಪರೀಷಹಾದಿಗಳ ಸಹನೆ ಮಾಡುತ್ತಾನೆ.

ಅಲ್ಲದೆ ಅವನಿಗೆ ರಾಜ್ಯಮೊದಲಾದ ವಿಷಯ ಸಾಮಗ್ರಿಗಳ ತ್ಯಾಗವಿದೆ ಮತ್ತು ಇಷ್ಟ ಭೋಜನಾದಿಗಳ ತ್ಯಾಗ ಮಾಡುತ್ತಿರುತ್ತಾನೆ. ಅವನಂತೂ ಹೇಗೆ ಓರ್ವ ದಾಹಜ್ವರವುಳ್ಳವನು ವಾತವಾಗುವ ಭಯದಿಂದ ಶೀತಲ ವಸ್ತು ಸೇವನೆಯ ತ್ಯಾಗ ಮಾಡುತ್ತಾನೆ, ಆದರೆ ಎಲ್ಲಿಯವರೆಗೆ ಶೀತಲವಸ್ತುವಿನ ಸೇವನೆಯು ರುಚಿಸುತ್ತದೆ ಅಲ್ಲಿಯವರೆಗೆ ಅವನಿಗೆ ದಾಹದ ಅಭಾವವೆಂದು ಹೇಳಲಾಗುವುದಿಲ್ಲ; ಅದೇ ಪ್ರಕಾರ ರಾಗಸಹಿತನಾದ ಜೀವನು ನರಕಾದಿಗಳ ಭಯದಿಂದ ವಿಷಯ ಸೇವನೆಯ ತ್ಯಾಗ ಮಾಡುತ್ತಾನೆ, ಆದರೆ ಎಲ್ಲಿಯವರೆಗೆ ವಿಷಯ ಸೇವನೆಯು ರುಚಿಸುತ್ತದೆ ಅಲ್ಲಿಯವರೆಗೆ ಅವನಿಗೆ ರಾಗದ ಅಭಾವವೆಂದು ಹೇಳಲಾಗುವುದಿಲ್ಲ. ಮತ್ತು ಹೇಗೆ ಅಮೃತದ ಆಸ್ವಾದನೆ ಮಾಡುವ ದೇವನಿಗೆ ಅನ್ಯ ಭೋಜನಗಳು ತಾನಾಗಿಯೇ ರುಚಿಸುವುದಿಲ್ಲ; ಅದೇ ಪ್ರಕಾರ ನಿಜರಸದ ಆಸ್ವಾದನೆ ಮಾಡಿ ವಿಷಯ ಸೇವನೆಯ ಅರುಚಿಯು ಇವನಿಗೆ ಆಗಿಲ್ಲ. ಈ ಪ್ರಕಾರ ಫಲಾದಿಗಳ ಅಪೇಕ್ಷೆಯಿಂದ ಪರೀಷಹ ಸಹನೆ ಮೊದಲಾದವುಗಳನ್ನು ಸುಖದ ಕಾರಣಗಳೆಂದು ತಿಳಿಯುತ್ತಾನೆ, ಮತ್ತು ವಿಷಯ ಸೇವನೆ ಮೊದಲಾದುವನ್ನು ದುಃಖದ ಕಾರಣಗಳೆಂದು ತಿಳಿಯುತ್ತಾನೆ.

ಅದರಂತೆ ಕೂಡಲೇ ಪರೀಷಹ ಸಹನಾದಿಗಳಿಂದ ದುಃಖವಾಗುವುದನ್ನು ಮನ್ನಿಸುತ್ತಾನೆ, ಮತ್ತು ವಿಷಯ ಸೇವನೆ ಮೊದಲಾದವುಗಳಿಂದ ಸುಖವನ್ನು ಮನ್ನಿಸುತ್ತಾನೆ; ಮತ್ತು ಯಾವವುಗಳಿಂದ ಸುಖ-ದುಃಖಗಳಾಗುವುದನ್ನು ಮನ್ನಿಸಲಾಗುತ್ತದೆ ಅವುಗಳಲ್ಲಿ ಇಷ್ಟಾನಿಷ್ಟಬುದ್ಧಿಯಿಂದ ರಾಗ-ದ್ವೇಷರೂಪದ ಅಭಿಪ್ರಾಯದ ಅಭಾವವಾಗುವುದಿಲ್ಲ; ಮತ್ತು ರಾಗ-ದ್ವೇಷಗಳಿರುವಲ್ಲಿ ಚಾರಿತ್ರವಾಗುವುದಿಲ್ಲ. ಆದುದರಿಂದ ಈ ದ್ರವ್ಯಲಿಂಗಿಗಳು ವಿಷಯ ಸೇವನೆಯನ್ನು ಬಿಟ್ಟುಕೊಟ್ಟು ತಪಶ್ಚರ್ಯಾದಿಗಳನ್ನು ಮಾಡುತ್ತಿದ್ದರೂ ಅಸಂಯಮಿಗಳೇ ಇದ್ದಾರೆ. ಸಿದ್ಧಾಂತದಲ್ಲಿ ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಯಿಂದಲೂ ಇವನನ್ನು ಕೀಳೆಂದು ಹೇಳಿದೆ; ಏಕೆಂದರೆ ಅವರಿಗೆ ನಾಲ್ಕನೆಯ-ಐದನೆಯ ಗುಣಸ್ಥಾನಗಳಿದ್ದರೆ ದ್ರವ್ಯಲಿಂಗಿಗೆ ಮೊದಲನೆಯ ಗುಣಸ್ಥಾನವೇ ಇದೆ.

**ಪ್ರಶ್ನೆ :-** ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗೆ ಕಷಾಯಗಳ ಪ್ರವೃತ್ತಿಯು ವಿಶೇಷವಿದೆ ಮತ್ತು ದ್ರವ್ಯಲಿಂಗಿ ಮುನಿಗೆ ಕಡಿಮೆಯಿದೆ; ಅದರಿಂದಲೇ ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗಳು ಹದಿನಾರನೇ ಸ್ವರ್ಗದವರೆಗೇ ಹೋಗುತ್ತಾರೆ ಮತ್ತು ದ್ರವ್ಯಲಿಂಗಿಯು ಅಂತಿಮ ಗ್ರೈವೇಯಕದವರೆಗೆ ಹೋಗುತ್ತಾನೆ. ಆದ್ದರಿಂದ ಭಾವಲಿಂಗಿ ಮುನಿಗಿಂತ ದ್ರವ್ಯಲಿಂಗಿಯನ್ನು ಕೀಳೆಂದು ಹೇಳು, ಅವನನ್ನು ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗಿಂತ ಕೀಳೆಂದು ಹೇಗೆ ಹೇಳುವುದು ?

**ಉತ್ತರ :-** ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗಳಿಗೆ ಕಷಾಯಗಳ ಪ್ರವೃತ್ತಿಯಂತೂ ಇದೆ; ಆದರೆ ಶ್ರದ್ಧೆಯಲ್ಲಿ ಯಾವುದೇ ಕಷಾಯ ಮಾಡುವ ಅಭಿಪ್ರಾಯವಿಲ್ಲ. ಮತ್ತು ದ್ರವ್ಯಲಿಂಗಿಗೆ ಶುಭ ಕಷಾಯ ಮಾಡುವ ಅಭಿಪ್ರಾಯವು ಕಂಡು ಬರುತ್ತದೆ, ಶ್ರದ್ಧೆಯಲ್ಲಿ ಅವನ್ನು ಒಳ್ಳೆಯವೆಂದು ತಿಳಿಯುತ್ತಿರುವುದರಿಂದ ಶ್ರದ್ಧೆಯ ಅಪೇಕ್ಷೆಯಿಂದ ಇವನಿಗೆ ಅಸಂಯತ ಸಮ್ಯಗ್ದೃಷ್ಟಿಗಿಂತಲೂ ಅಧಿಕ ಕಷಾಯವಿದೆ.

ಅಲ್ಲದೆ ದ್ರವ್ಯಲಿಂಗಿಗೆ ಯೋಗಗಳ ಪ್ರವೃತ್ತಿಯು ಅಧಿಕ ಶುಭರೂಪವಿರುತ್ತದೆ ಮತ್ತು ಅಘಾತಿಕರ್ಮಗಳಲ್ಲಿ ಪುಣ್ಯ-ಪಾಪ ಬಂಧದ ವಿಶೇಷತೆಯು ಶುಭ-ಅಶುಭ ಯೋಗಗಳ ಅನುಸಾರವಿದೆ, ಆದುದರಿಂದ ಅವನು ಅಂತಿಮ ಗ್ರೈವೇಯಕದವರೆಗೆ ತಲುಪುತ್ತಾನೆ; ಆದರೆ ಅದೇನು ಕಾರ್ಯಕಾರಿಯಿಲ್ಲ, ಏಕೆಂದರೆ ಅಘಾತಿಕರ್ಮಗಳು ಆತ್ಮನ ಗುಣದ ಘಾತ ಮಾಡುವುದಿಲ್ಲ; ಅವುಗಳ ಉದಯದಿಂದ ಉಚ್ಚ-ನೀಚಪದ ಪ್ರಾಪ್ತವಾದರೇನಾಯಿತು? ಅವಂತೂ ಬಾಹ್ಯ ಸಂಯೋಗ ಮಾತ್ರ ಸಂಸಾರದಶೆಯ ಸೋಗುಗಳಿವೆ, ತಾವಂತೂ ಆತ್ಮನಿರುವುದರಿಂದ ಆತ್ಮಗುಣದ ಘಾತಕವಾದ ಆ ಘಾತಿಕರ್ಮಗಳ ಹೀನತೆಯು ಕಾರ್ಯಕಾರಿಯಿದೆ.

ಆ ಘಾತಿಕರ್ಮಗಳ ಬಂಧವು ಬಾಹ್ಯ ಪ್ರವೃತ್ತಿಗೆ ಅನುಸರಿಸಿ ಇಲ್ಲ, ಅಂತರಂಗ ಕಷಾಯ ಶಕ್ತಿಯ ಅನುಸಾರವಿದೆ; ಆದುದರಿಂದ ದ್ರವ್ಯಲಿಂಗಿಯ ಅಪೇಕ್ಷೆಯಿಂದ ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗೆ ಘಾತಿಕರ್ಮಗಳ ಬಂಧವು ಕಡಿಮೆಯಿದೆ. ದ್ರವ್ಯಲಿಂಗಿಗೆ ಎಲ್ಲ ಘಾತಿಕರ್ಮಗಳ ಬಂಧವು ಅಧಿಕ ಸ್ಥಿತಿ-ಅನುಭಾಗದೊಡನೆ ಆಗುತ್ತದೆ, ಮತ್ತು ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗೆ ಮಿಥ್ಯಾತ್ವ-ಅನಂತಾನುಬಂಧಿ ಮೊದಲಾದ ಕರ್ಮಗಳ ಬಂಧವೇ ಇಲ್ಲ, ಉಳಿದವುಗಳ ಬಂಧವಾಗುತ್ತದೆ ಅದು ಅಲ್ಪ ಸ್ಥಿತಿ-ಅನುಭಾಗಸಹಿತ ಆಗುತ್ತದೆ. ಮತ್ತು ದ್ರವ್ಯಲಿಂಗಿಗೆ ಎಂದೂ ಗುಣಶ್ರೇಣೀ ನಿರ್ಜರೆಯಾಗುವುದಿಲ್ಲ, ಸಮ್ಯಗ್ದೃಷ್ಟಿಗೆ ಒಮ್ಮೊಮ್ಮೆ ಆಗುತ್ತದೆ ಮತ್ತು ದೇಶ ಹಾಗೂ ಸಕಲ ಸಂಯಮವಾದ ನಂತರ ನಿರಂತರ ಆಗುತ್ತದೆ. ಆದರಿಂದಲೇ ಇವನು ಮೋಕ್ಷಮಾರ್ಗಿಯಾಗಿದ್ದಾನೆ. ಆದುದರಿಂದ ದ್ರವ್ಯಲಿಂಗಿ ಮುನಿಯನ್ನು ಅಸಂಯತ ಹಾಗೂ ದೇಶಸಂಯತ ಸಮ್ಯಗ್ದೃಷ್ಟಿಗಿಂತ ಹೀನನೆಂದು ಶಾಸ್ತ್ರದಲ್ಲಿ ಹೇಳಿದೆ.

ಸಮಯಸಾರ ಶಾಸ್ತ್ರದಲ್ಲಿ ದ್ರವ್ಯಲಿಂಗಿ ಮುನಿಯ ಹೀನತೆಯನ್ನು ಗಾಥೆ, ಟೀಕೆ ಮತ್ತು ಕಲಶಗಳಲ್ಲಿ ಪ್ರಕಟಿಸಿದ್ದಾರೆ. ಮತ್ತು ಪಂಚಾಸ್ತಿಕಾಯದ ಟೀಕೆಯಲ್ಲಿ ಕೇವಲ ವ್ಯವಹಾರಾವಲಂಬಿಯ ಕಥನ ಮಾಡಿರುವಲ್ಲಿ ವ್ಯವಹಾರ ಪಂಚಾಚಾರವಿದ್ದರೂ ಕೂಡ ಅವನ ಹೀನತೆಯನ್ನೇ ಪ್ರಕಟಿಸಿದೆ. ಅದರಂತೆ ಪ್ರವಚನಸಾರದಲ್ಲಿ ದ್ರವ್ಯಲಿಂಗಿಯನ್ನು ಸಂಸಾರತತ್ತ್ವವೆಂದು ಹೇಳಿದೆ. ಪರಮಾತ್ಮ ಪ್ರಕಾಶ ಮೊದಲಾದ ಅನ್ಯ ಶಾಸ್ತ್ರಗಳಲ್ಲಿ ಕೂಡ ಈ ವ್ಯಾಖ್ಯಾನವನ್ನು ಸ್ಪಷ್ಟಪಡಿಸಲಾಗಿದೆ. ದ್ರವ್ಯಲಿಂಗಿಯಲ್ಲಿ ಕಂಡುಬರುವ ಜಪ, ತಪ, ಶೀಲ, ಸಂಯಮಾದಿ ಕ್ರಿಯೆಗಳೆಲ್ಲವನ್ನೂ ಈ ಶಾಸ್ತ್ರಗಳಲ್ಲಿ ಅಲ್ಲಲ್ಲಿ ಅಕಾರ್ಯಕಾರಿಯೆಂದೂ ತಿಳಿಸಿಕೊಡಲಾಗಿದೆ, ಅದನ್ನು ಅಲ್ಲಿ ಅವಲೋಕಿಸಬೇಕು. ಇಲ್ಲಿ ಗ್ರಂಥವು ವಿಸ್ತರಿಸುವ ಭಯದಿಂದ ಹೇಳಲಾಗಿಲ್ಲ.

ಈ ಪ್ರಕಾರ ಕೇವಲ ವ್ಯವಹಾರಾಭಾಸವನ್ನವಲಂಬಿಸಿದ ಮಿಥ್ಯಾದೃಷ್ಟಿಗಳ ನಿರೂಪಣೆ ಮಾಡಲಾಗಿದೆ.

## ಉಭಯಾಭಾಸಿ ಮಿಥ್ಯಾದೃಷ್ಟಿ

ಈಗ ನಿಶ್ಚಯ-ವ್ಯವಹಾರ ಇವೆರಡೂ ನಯಗಳ ಆಭಾಸದ ಅವಲಂಬನೆ ಪಡೆಯುವಂಥ ಮಿಥ್ಯಾದೃಷ್ಟಿಗಳ ನಿರೂಪಣೆ ಮಾಡುತ್ತಾರೆ.

ಜಿನಮತದಲ್ಲಿ ನಿಶ್ಚಯ-ವ್ಯವಹಾರವೆಂದು ಎರಡು ನಯಗಳನ್ನು ಹೇಳಿರುವುದರಿಂದ ನಮಗೆ ಅವೆರಡರ ಅಂಗೀಕಾರ ಮಾಡಬೇಕಾಗುವುದೆಂದು ವಿಚಾರ ಮಾಡಿ ಹೇಗೆ ಕೇವಲ ನಿಶ್ಚಯಾಭಾಸವನ್ನವಲಂಬಿಸಿದವರ ಕಥನ ಮಾಡಿದೆ ಹಾಗಂತೂ ನಿಶ್ಚಯದ ಅಂಗೀಕಾರ ಮಾಡುತ್ತಾರೆ. ಮತ್ತು ಹೇಗೆ ಕೇವಲ ವ್ಯವಹಾರಾಭಾಸವನ್ನವಲಂಬಿಸಿದವರ ಕಥನ ಮಾಡಿದೆ ಹಾಗೆ ವ್ಯವಹಾರದ ಅಂಗೀಕಾರ ಮಾಡುತ್ತಾರೆ.

ಈ ಪ್ರಕಾರ ಅಂಗೀಕಾರ ಮಾಡುವಲ್ಲಿ ಎರಡೂ ನಯಗಳ ಪರಸ್ಪರ ವಿರೋಧವಿದ್ದರೂ ಮಾಡುವುದೇನು? ನಿಜವಾಗಿಯಂತೂ ಎರಡೂ ನಯಗಳ ಸ್ವರೂಪವು ಭಾಸವಾಗಿಲ್ಲ, ಮತ್ತು ಜಿನಮತದಲ್ಲಿ ಎರಡು ನಯಗಳನ್ನು ಹೇಳಿದ್ದಾರೆ ಅವುಗಳಲ್ಲಿ ಯಾವುದನ್ನೂ ಬಿಡಲಾಗುವುದಿಲ್ಲ, ಆದುದರಿಂದ ಭ್ರಮವಶರಾಗಿ ಎರಡರ ಸಾಧನೆ ಮಾಡುತ್ತಾರೆ; ಅವರುಗಳನ್ನು ಕೂಡ ಮಿಥ್ಯಾದೃಷ್ಟಿಗಳೆಂದು ತಿಳಿಯುವುದು.

ಈಗ ಅವರ ಪ್ರವೃತ್ತಿಯ ವಿಶೇಷತೆಯನ್ನು ತಿಳಿಸಿಕೊಡುತ್ತಾರೆ.

ತಾವಂತೂ ಅಂತರಂಗದಲ್ಲಿ ನಿರ್ಧಾರಮಾಡಿ ಯಥಾ ಪ್ರಕಾರ ನಿಶ್ಚಯ-ವ್ಯವಹಾರ ಮೋಕ್ಷಮಾರ್ಗವನ್ನು ಗುರುತಿಸುವುದಿಲ್ಲ, ಜಿನಾಜ್ಞೆಯನ್ನು ಮನ್ನಿಸಿ ನಿಶ್ಚಯ-ವ್ಯವಹಾರರೂಪ ಮೋಕ್ಷಮಾರ್ಗವನ್ನು ಎರಡು ಪ್ರಕಾರವಾಗಿ ಮನ್ನಿಸುತ್ತಾರೆ. **ಆದರೆ ಮೋಕ್ಷಮಾರ್ಗಗಳು ಎರಡಿಲ್ಲ, ಮೋಕ್ಷಮಾರ್ಗದ ನಿರೂಪಣೆಯು ಎರಡು ಪ್ರಕಾರವಿದೆ.** ಎಲ್ಲಿ ನಿಜವಾದ ಮೋಕ್ಷಮಾರ್ಗವನ್ನು ಮೋಕ್ಷಮಾರ್ಗವೆಂದು ನಿರೂಪಣೆ ಮಾಡಲಾಗುತ್ತದೆ ಅದು 'ನಿಶ್ಚಯ ಮೋಕ್ಷಮಾರ್ಗ'ವಿದೆ. ಮತ್ತು ಯಾವುದು ಮೋಕ್ಷಮಾರ್ಗವಂತೂ ಇಲ್ಲ, ಆದರೆ ಮೋಕ್ಷಮಾರ್ಗದ ನಿಮಿತ್ತವಿದೆ, ಸಹಕಾರಿಯಿದೆ ಅದನ್ನು ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳಲಾಗುತ್ತದೆ ಅದು 'ವ್ಯವಹಾರ ಮೋಕ್ಷಮಾರ್ಗ'ವಿದೆ. ಏಕೆಂದರೆ ನಿಶ್ಚಯ-ವ್ಯವಹಾರದ ಲಕ್ಷಣವು ಎಲ್ಲೆಡೆಗೆ ಹೀಗೆಯೇ ಇದೆ. ನಿಜವಾದ ನಿರೂಪಣೆಯು ಅದು ನಿಶ್ಚಯ, ಉಪಚಾರ ನಿರೂಪಣೆಯು ಅದು ವ್ಯವಹಾರವಿರುವುದರಿಂದ ಮೋಕ್ಷಮಾರ್ಗವು ನಿರೂಪಣೆಯ ಅಪೇಕ್ಷೆಯಿಂದ ಎರಡು ಪ್ರಕಾರವೆಂದು ತಿಳಿಯುವುದು. ಆದರೆ ಒಂದು ನಿಶ್ಚಯಮೋಕ್ಷಮಾರ್ಗವಿದೆ, ಮತ್ತು ಒಂದು ವ್ಯವಹಾರಮೋಕ್ಷಮಾರ್ಗವಿದೆಯೆಂದು ಎರಡು ಮೋಕ್ಷಮಾರ್ಗಗಳನ್ನು ಮನ್ನಿಸುವುದು ಅದು ನಿಜವಾಗಿ ಮಿಥ್ಯೆಯಿದೆ.

ಇನ್ನು ನಿಶ್ಚಯ-ವ್ಯವಹಾರಗಳೆರಡನ್ನು ಉಪಾದೇಯವೆಂದು ಮನ್ನಿಸುವುದು ಕೂಡ ಭ್ರಮೆಯಿದೆ; ಏಕೆಂದರೆ ನಿಶ್ಚಯ-ವ್ಯವಹಾರದ ಸ್ವರೂಪವು ಪರಸ್ಪರ ವಿರೋಧಸಹಿತವಿದೆ. ಕಾರಣವೇನೆಂದರೆ ಸಮಯಸಾರದಲ್ಲಿ ಹೀಗೆ ಹೇಳಿದ್ದಾರೆ,-

**'ವ್ಯವಾಹರೋऽಭೂದತ್ಥೋ ಭೂದತ್ಥೋ ದೇಸಿಊಣ ಸುದ್ಧಣಓ'**-★ಎಂದರೆ ವ್ಯವಹಾರವು

★ ವವಹಾರೋऽಭೂಯತ್ಥೋ ಭೂಯತ್ಥೋ ದೇಸಿದೋ ದು ಸುದ್ಧಣಓ ।
ಭೂಯತ್ಥಮಸ್ಸಿದೋ ಖಲು ಸಮ್ಮಾಇಟ್ಠೀ ಹವಇ ಜೀವೋ ॥೧೧॥

ಅಭೂತಾರ್ಥವಿದೆ, ಅದು ಸತ್ಯಸ್ವರೂಪದ ನಿರೂಪಣೆ ಮಾಡುವುದಿಲ್ಲ, ಒಂದು ಅಪೇಕ್ಷೆಯಿಂದ ಉಪಚಾರದಿಂದ ಅನ್ಯಥಾ ನಿರೂಪಣೆ ಮಾಡುತ್ತದೆ. ಮತ್ತು ಶುದ್ಧನಯವು ನಿಶ್ಚಯವಿದೆ, ಭೂತಾರ್ಥವಿದೆ, ವಸ್ತುವಿನ ಸ್ವರೂಪವಿರುವಂತೆಯೇ ನಿರೂಪಣೆ ಮಾಡುತ್ತದೆ.

ಅಲ್ಲದೆ ನೀನು ಸಿದ್ಧ ಸಮಾನ ಶುದ್ಧ ಆತ್ಮನ ಅನುಭವವು ಅದು ನಿಶ್ಚಯ, ಮತ್ತು ವ್ರತ, ಶೀಲ, ಸಂಯಮಾದಿಗಳರೂಪದ ಪ್ರವೃತ್ತಿಯು ಅದು ವ್ಯವಹಾರವೆಂದು ಮನ್ನಿಸುವೆ, ಆದರೆ ನಿನ್ನ ಇಂಥ ಮನ್ನಣೆಯು ಒಳ್ಳೆಯದಿಲ್ಲ; ಏಕೆಂದರೆ ಯಾವುದೇ ಒಂದು ದ್ರವ್ಯಭಾವದ ಹೆಸರು ನಿಶ್ಚಯ ಮತ್ತು ಇನ್ನೊಂದರ ಹೆಸರು ವ್ಯವಹಾರವೆಂದಿಲ್ಲ. ಒಂದೇ ದ್ರವ್ಯದ ಭಾವವನ್ನು ಆ ಸ್ವರೂಪವಾಗಿಯೇ ನಿರೂಪಣೆ ಮಾಡುವುದು ಅದು ನಿಶ್ಚಯನಯವಿದೆ. ಆ ದ್ರವ್ಯದ ಭಾವವನ್ನು ಉಪಚಾರದಿಂದ ಅನ್ಯದ್ರವ್ಯದ ಭಾವಸ್ವರೂಪವಾಗಿ ನಿರೂಪಣೆ ಮಾಡುವುದು ಅದು ವ್ಯವಹಾರವಿದೆ. ಹೇಗೆಂದರೆ ಮಣ್ಣಿನ ಕೊಡವನ್ನು ಮಣ್ಣಿನ ಕೊಡವೆಂದು ನಿರೂಪಣೆ ಮಾಡುವುದು ಅದು ನಿಶ್ಚಯವಿದೆ ಮತ್ತು ಅದನ್ನೇ ಘೃತಸಂಯೋಗದ ಉಪಚಾರದಿಂದ ತುಪ್ಪದಕೊಡವೆಂದು ಹೇಳುವುದು ಅದು ವ್ಯವಹಾರವಿದೆ. ಹೀಗೆಯೇ ಅನ್ಯತ್ರ ತಿಳಿಯುವುದು.

ಆದುದರಿಂದ ನೀನು ಒಂದನ್ನು ನಿಶ್ಚಯವೆಂದು ಮತ್ತು ಒಂದನ್ನು ವ್ಯವಹಾರವೆಂದು ಮನ್ನಿಸುವುದು ಅದು ಭ್ರಮೆಯಿದೆ.

ಮತ್ತು ನೀನು ನಿಶ್ಚಯ-ವ್ಯವಹಾರವನ್ನು ಮನ್ನಿಸುವಲ್ಲಿ ಕೂಡ ಪರಸ್ಪರ ವಿರೋಧ ಬರುವುದು. ನೀನು ನಿನ್ನನ್ನು ಸಿದ್ಧಸಮಾನ ಶುದ್ಧವೆಂದು ಮನ್ನಿಸುತ್ತಿದ್ದರೆ ವ್ರತಾದಿಗಳನ್ನು ಏತಕ್ಕಾಗಿ ಮಾಡುತ್ತಿರುವೆ ? ವ್ರತಾದಿಗಳ ಸಾಧನದಿಂದ ಸಿದ್ಧನಾಗಲು ಅಪೇಕ್ಷಿಸುತ್ತಿದ್ದರೆ ವರ್ತಮಾನದಲ್ಲಿ ಶುದ್ಧಾತ್ಮನ ಅನುಭವವು ಅದು ಮಿಥ್ಯೆಯಿದೆ.

ಹೀಗೆ ಎರಡೂ ನಯಗಳಲ್ಲಿ ಪರಸ್ಪರ ವಿರೋಧವಿದೆ; ಆದುದರಿಂದ ಎರಡೂ ನಯಗಳ ಉಪಾದೇಯತೆಯು ಸಂಭವಿಸುವುದಿಲ್ಲ.

**ಪ್ರಶ್ನೆ :-** ಸಮಯಸಾರಾದಿಗಳಲ್ಲಿ ಶುದ್ಧಾತ್ಮನ ಅನುಭವಕ್ಕೆ ನಿಶ್ಚಯವೆಂದು ಹೇಳಿದೆ, ಮತ್ತು ವ್ರತ, ತಪ, ಸಂಯಮಾದಿಗಳನ್ನು ವ್ಯವಹಾರವೆಂದು ಹೇಳಿದೆ; ನಾವು ಆ ಪ್ರಕಾರವಾಗಿಯೇ ಮನ್ನಿಸುತ್ತೇವೆ ತಪ್ಪೇನಿದೆ ?

**ಉತ್ತರ :-** ಶುದ್ಧಾತ್ಮನ ಅನುಭವವು ನಿಜವಾದ ಮೋಕ್ಷಮಾರ್ಗವಿರುವುದರಿಂದ ಅದನ್ನು ನಿಶ್ಚಯವೆಂದು ಹೇಳಿದೆ. ಇಲ್ಲಿ 'ಶುದ್ಧ' ಶಬ್ದದ ಅರ್ಥವನ್ನು ಸ್ವಭಾವದಿಂದ ಅಭಿನ್ನ, ಪರಭಾವದಿಂದ ಭಿನ್ನವೆಂದು ತಿಳಿಯುವುದು. ಸಂಸಾರಿಯನ್ನು ಸಿದ್ಧನೆಂದು ಮನ್ನಿಸುವಂಥ ಭ್ರಾಂತಿರೂಪದ ಅರ್ಥವು 'ಶುದ್ಧ' ಶಬ್ದದಿಲ್ಲವೆಂದು ತಿಳಿಯುವುದು.

ಇನ್ನು ವ್ರತ, ತಪಾದಿಗಳು ಮೋಕ್ಷಮಾರ್ಗವಲ್ಲ, ಅವನ್ನು ನಿಮಿತ್ತಾದಿಗಳ ಅಪೇಕ್ಷೆಯಿಂದ ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳುತ್ತಾರೆ, ಆದ್ದರಿಂದ ಅವಕ್ಕೆ ವ್ಯವಹಾರವೆಂದು ಹೇಳಿದೆ. ಹೀಗೆ ಭೂತಾರ್ಥ-ಅಭೂತಾರ್ಥ ಮೋಕ್ಷಮಾರ್ಗತನದಿಂದ ಇವನ್ನು ನಿಶ್ಚಯ-ವ್ಯವಹಾರವೆಂದು ಹೇಳಿದೆ; ಇವನ್ನು ಹೀಗೆ ಮನ್ನಿಸಬೇಕು. ಆದರೆ ಇವೆರಡೂ ನಿಜವಾದ ಮೋಕ್ಷಮಾರ್ಗವಿವೆ, ಇವೆರಡನ್ನೂ ಉಪಾದೇಯವೆಂದು ಮನ್ನಿಸುವುದು ಅದಂತೂ ಮಿಥ್ಯಾಬುದ್ಧಿಯೇ ಇದೆ.

**ಪ್ರಶ್ನೆ :-** ನಿಶ್ಚಯದ ಶ್ರದ್ಧೆಯನ್ನಿಡುತ್ತೇವೆ ಮತ್ತು ಪ್ರವೃತ್ತಿಯಲ್ಲಿ ವ್ಯವಹಾರರೂಪವಾಗಿರುತ್ತೇವೆ. ಈ ಪ್ರಕಾರವಾಗಿ ನಾವು ಎರಡನ್ನೂ ಅಂಗೀಕಾರ ಮಾಡುತ್ತೇವೆ.

**ಉತ್ತರ :-** ಹೀಗೂ ಸಂಭವಿಸುವುದಿಲ್ಲ. ಏಕೆಂದರೆ ನಿಶ್ಚಯವನ್ನು ನಿಶ್ಚಯರೂಪ ಮತ್ತು ವ್ಯವಹಾರವನ್ನು ವ್ಯವಹಾರರೂಪವಾಗಿ ಶ್ರದ್ಧೆ ಮಾಡುವುದು ಯೋಗ್ಯವಿದೆ. ಒಂದೇ ನಯದ ಶ್ರದ್ಧೆಯಿರುವುದರಿಂದ ಏಕಾಂತ ಮಿಥ್ಯಾತ್ವವಾಗುತ್ತದೆ. ಮತ್ತು ಪ್ರವೃತ್ತಿಯಲ್ಲಿ ನಯದ ಪ್ರಯೋಜನವೇ ಇಲ್ಲ. ಪ್ರವೃತ್ತಿಯಂತೂ ದ್ರವ್ಯದ ಪರಿಣತಿಯಿದೆ; ಅಲ್ಲಿ ಯಾವ ದ್ರವ್ಯದ ಪರಿಣತಿಯಿದೆ ಅದನ್ನು ಅದರದೆಂದೇ ಪ್ರರೂಪಣೆ ಮಾಡುವುದು ಅದು ನಿಶ್ಚಯನಯವಿದೆ ಮತ್ತು ಅದನ್ನೇ ಅನ್ಯದ್ರವ್ಯದ್ದೆಂದು ಪ್ರರೂಪಣೆ ಮಾಡುವುದು ಅದು ವ್ಯವಹಾರನಯವಿದೆ. ಇಂಥ ಅಭಿಪ್ರಾಯಕ್ಕನುಸರಿಸಿ ಪ್ರರೂಪಣೆಯಿಂದ ಆ ಪ್ರವೃತ್ತಿಯಲ್ಲಿ ಎರಡೂ ನಯಗಳಾಗುತ್ತವೆ; ಯಾವ ಪ್ರವೃತ್ತಿಯೂ ನಯರೂಪವಿಲ್ಲ. ಅದಕ್ಕಾಗಿ ಈ ಪ್ರಕಾರ ಕೂಡ ಎರಡೂ ನಯಗಳ ಸ್ವೀಕಾರವನ್ನು ಮನ್ನಿಸುವುದು ಮಿಥ್ಯೆಯಿದೆ. ಹಾಗಾದರೆ ಏನು ಮಾಡಬೇಕೆಂಬುದನ್ನು ಹೇಳುತ್ತಾರೆ.

ನಿಶ್ಚಯನಯದಿಂದ ನಿರೂಪಣೆ ಮಾಡಿರುವುದನ್ನು ಸತ್ಯಾರ್ಥವೆಂದು ಮನ್ನಿಸಿ ಅದರ ಶ್ರದ್ಧೆಯ ಸ್ವೀಕಾರ ಮಾಡುವುದು ಮತ್ತು ವ್ಯವಹಾರ ನಯದಿಂದ ನಿರೂಪಣೆ ಮಾಡಿರುವುದನ್ನು ಅಸತ್ಯಾರ್ಥವೆಂದು ಮನ್ನಿಸಿ ಅದರ ಶ್ರದ್ಧೆಯನ್ನು ಬಿಡುವುದು.

ಇದನ್ನೇ ಸಮಯಸಾರಕಲಶದಲ್ಲಿ ಹೇಳಿದ್ದಾರೆ,-

**ಸರ್ವತ್ರಾಧ್ಯವಸಾನಮೇವಮಖಿಲಂ ತ್ಯಾಜ್ಯಂ ಯದುಕ್ತಂ ಜಿನೈ-**
**ಸ್ತನ್ಮನ್ಯೇವ್ಯವಹಾರ ಏವ ನಿಖಿಲೋऽಪ್ಯನ್ಯಾಶ್ರಯಸ್ತ್ಯಾಜಿತಃ ।**
**ಸಮ್ಯಕ್ ನಿಶ್ಚಯಮೇಕಮೇವ ಪರಮಂ ನಿಷ್ಕಂಪಮಾಕ್ರಮ್ಯ ಕಿಂ**
**ಶುದ್ಧಜ್ಞಾನಘನೇ ಮಹಿಮ್ನಿ ನ ನಿಜೇ ಬಧ್ನಂತಿ ಸಂತೋ ಧೃತಿಮ್ ॥173॥**

**ಅರ್ಥ :-** ಏಕೆಂದರೆ ಎಲ್ಲ ಹಿಂಸಾದಿಗಳಲ್ಲಿ ಹಾಗೂ ಅಹಿಂಸಾದಿಗಳಲ್ಲಿ ಅಧ್ಯವಸಾಯವಿದೆ, ಆದ್ದರಿಂದ ಎಲ್ಲವನ್ನೂ ಬಿಡಬೇಕೆಂದು ಜಿನದೇವರು ಹೇಳಿದ್ದಾರೆ. ಆದುದರಿಂದ ಯಾವ ಪರಾಶ್ರಿತ ವ್ಯವಹಾರವಿದೆ ಅದೆಲ್ಲವನ್ನೂ ಬಿಡಿಸಿದ್ದಾರೆಂದು ನಾನು ಮನ್ನಿಸುತ್ತೇನೆ. ಸಂತಪುರುಷರು ಒಂದು ಪರಮ ನಿಶ್ಚಯವನ್ನೇ ಒಳ್ಳೆಯ ಪ್ರಕಾರ ನಿಷ್ಕಂಪ ರೂಪದಿಂದ ಅಂಗೀಕಾರ ಮಾಡಿ ಶುದ್ಧಜ್ಞಾನಘನರೂಪವಾದ ನಿಜಮಹಿಮೆಯಲ್ಲೇಕೆ ಸ್ಥಿರತೆ ಮಾಡುವುದಿಲ್ಲ ?

**ಭಾವಾರ್ಥ :-** ಇಲ್ಲಿ ವ್ಯವಹಾರದ ತ್ಯಾಗ ಮಾಡಿಸಿರುವುದರಿಂದ ನಿಶ್ಚಯವನ್ನು ಅಂಗೀಕಾರ ಮಾಡಿ ನಿಜಮಹಿಮಾರೂಪವಾಗಿ ಪ್ರವರ್ತಿಸುವುದು ಯುಕ್ತವಿದೆ.

ಅದರಂತೆ ಷಟ್ ಪಾಹುಡದಲ್ಲಿ ಹೀಗೆ ಹೇಳುತ್ತಾರೆ,-

**ಜೋ ಸುತ್ತೋ ವವಹಾರೇ ಸೋ ಜೋಈ ಜಗ್ಗಏ ಸಕಜ್ಜಮ್ಮಿ ।**
**ಜೋ ಜಗ್ಗದಿ ವವಹಾರೋ ಸೋ ಸುತ್ತೋ ಅಪ್ಪಣೋ ಕಜ್ಜೇ ॥31॥ ಮೋಕ್ಷಪಾಹುಡ**

**ಅರ್ಥ :-** ವ್ಯವಹಾರದಲ್ಲಿ ಮಲಗಿರುವಂಥ ಯೋಗಿಯು ತನ್ನ ಕಾರ್ಯದಲ್ಲಿ ಜಾಗೃತನಿದ್ದಾನೆ. ಮತ್ತು ಯಾವನು ವ್ಯವಹಾರದಲ್ಲಿ ಜಾಗೃತನಿದ್ದಾನೆ ಅವನು ತನ್ನ ಕಾರ್ಯದಲ್ಲಿ ಮಲಗಿರುತ್ತಾನೆ.

ಆದುದರಿಂದ ವ್ಯವಹಾರನಯದ ಶ್ರದ್ಧೆಯನ್ನು ಬಿಟ್ಟುಕೊಟ್ಟು ನಿಶ್ಚಯನಯದ ಶ್ರದ್ಧೆ ಮಾಡುವುದು ಯೋಗ್ಯವಿದೆ.

ವ್ಯವಹಾರನಯವು ಸ್ವದ್ರವ್ಯ-ಪರದ್ರವ್ಯಗಳನ್ನು ಮತ್ತು ಅವುಗಳ ಭಾವಗಳನ್ನು ಹಾಗೂ ಕಾರಣ ಕಾರ್ಯಾದಿಗಳನ್ನು ಒಂದನ್ನು ಇನ್ನೊಂದರಲ್ಲಿ ಸೇರಿಸಿ ನಿರೂಪಣೆ ಮಾಡುತ್ತದೆ; ಇಂಥದರ ಶ್ರದ್ಧೆಯಿಂದಲೇ ಮಿಥ್ಯಾತ್ವವಿದೆ; ಆದುದರಿಂದ ಅದರ ತ್ಯಾಗ ಮಾಡುವುದು, ಮತ್ತು ನಿಶ್ಚಯನಯವು ಅದನ್ನೇ ಯಥಾವತ್ತಾಗಿ ನಿರೂಪಣೆ ಮಾಡುತ್ತದೆ, ಒಂದನ್ನು ಇನ್ನೊಂದರಲ್ಲಿ ಸೇರಿಸುವುದಿಲ್ಲ; ಇಂಥದರ ಶ್ರದ್ಧೆಯಿಂದಲೇ ಸಮ್ಯಕ್ತ್ವವಾಗುತ್ತದೆ; ಆದುದರಿಂದ ಅದರ ಶ್ರದ್ಧೆಮಾಡುವುದು.

**ಪ್ರಶ್ನೆ :-** ಹೀಗಿದ್ದರೆ ಜಿನಮಾರ್ಗದಲ್ಲಿ ಎರಡೂ ನಯಗಳ ಗ್ರಹಣ ಮಾಡಲಿಕ್ಕೆ ಹೇಳಿದೆ, ಅದು ಹೇಗೆ?

**ಉತ್ತರ :-** ಜಿನಮಾರ್ಗದಲ್ಲಿ ಒಂದೆಡೆ ನಿಶ್ಚಯನಯದ ಮುಖ್ಯತೆಯ ಸಲುವಾಗಿ ವ್ಯಾಖ್ಯಾನವಿದ್ದು ಅದನ್ನು 'ಸತ್ಯಾರ್ಥವು ಹೀಗೇ ಇದೆ'ಯೆಂದು ತಿಳಿಯುವುದು ಮತ್ತು ಒಂದೆಡೆ ವ್ಯವಹಾರನಯದ ಮುಖ್ಯತೆಯಸಲುವಾಗಿ ವ್ಯಾಖ್ಯಾನವಿದ್ದು ಅದನ್ನು 'ಹೀಗೆ ಇಲ್ಲ, ನಿಮಿತ್ತಾದಿಗಳ ಅಪೇಕ್ಷೆಯಿಂದ ಉಪಚಾರ ಮಾಡಿದೆ'ಯೆಂದು ತಿಳಿಯುವುದು. ಹೀಗೆ ತಿಳಿದುಕೊಳ್ಳುವುದರ ಹೆಸರೇ ಎರಡೂ ನಯಗಳ ಗ್ರಹಣವಿದೆ. ಮತ್ತು ಎರಡೂ ನಯಗಳ ವ್ಯಾಖ್ಯಾನವನ್ನು ಸಮಾನ ಸತ್ಯಾರ್ಥ ತಿಳಿದು 'ಹೀಗೂ ಇದೆ, ಹೀಗೂ ಇದೆ'ಯೆಂದು ಭ್ರಮರೂಪದ ಪ್ರವರ್ತನೆಯಿಂದ ಎರಡೂ ನಯಗಳ ಗ್ರಹಣ ಮಾಡುವುದೆಂದು ಹೇಳಿಲ್ಲ.

**ಪ್ರಶ್ನೆ :-** ವ್ಯವಹಾರನಯವು ಅಸತ್ಯಾರ್ಥವಿದ್ದರೆ ಜಿನಮಾರ್ಗದಲ್ಲಿ ಅದರ ಉಪದೇಶವನ್ನು ಏತಕ್ಕಾಗಿ ಮಾಡಿದ್ದಾರೆ ? ಒಂದು ನಿಶ್ಚಯನಯದ ನಿರೂಪಣೆಯನ್ನೇ ಮಾಡಬೇಕಿತ್ತಲ್ಲ ?

**ಉತ್ತರ :-** ಇದೇ ತರ್ಕವನ್ನು ಸಮಯಸಾರದಲ್ಲಿ ಮಾಡಿದ್ದು ಅಲ್ಲಿ ಕೊಟ್ಟಿರುವ ಉತ್ತರವೇನೆಂದರೆ,-

**ಜಹ ಣವಿ ಸಕ್ಕಮಣಜ್ಜೋ ಅಣಜ್ಜಭಾಸಂ ವಿಣಾ ಉ ಗಾಹೇಉಂ ।**
**ತಹ ವವಹಾರೇಣ ವಿಣಾ ಪರಮತ್ಥುವಏಸಣಮಸಕ್ಕಂ ॥8॥**

**ಅರ್ಥ :-** ಯಾವ ಪ್ರಕಾರ ಅನಾರ್ಯ ಎಂದರೆ ಮ್ಲೇಚ್ಛನಿಗೆ ಮೇಚ್ಛಭಾಷೆಯಿಲ್ಲದೆ ಅರ್ಥಗ್ರಹಣ ಮಾಡಿಸುವಲ್ಲಿ ಯಾರೂ ಸಮರ್ಥರಿಲ್ಲ; ಅದೇ ಪ್ರಕಾರ ವ್ಯವಹಾರವಿಲ್ಲದೆ ಪರಮಾರ್ಥದ ಉಪದೇಶವು ಅಶಕ್ಯವಿರುವುದರಿಂದ ವ್ಯವಹಾರದ ಉಪದೇಶವಿದೆ.

ಮತ್ತು ಇದೇ ಗಾಥೆಯ ವ್ಯಾಖ್ಯಾನದಲ್ಲಿ **'ವ್ಯವಹಾರನಯೋ ನಾನುಸರ್ತವ್ಯ'**★ವೆಂದು ಹೇಳಿದೆ.

★ ಏವಂ ಮ್ಲೇಚ್ಛಸ್ಥಾನೀಯತ್ವಾಜ್ಜಗತೋ ವ್ಯವಹಾರನಯೋಪಿ ಮ್ಲೇಚ್ಛಭಾಷಾಸ್ಥಾನೀಯತ್ವೇನ ಪರಮಾರ್ಥಪ್ರತಿಪಾದಕತ್ವಾದುಪನ್ಯಸನೀಯೋಽಥ ಚ ಬ್ರಾಹ್ಮಣೋ ನ ಮ್ಲೇಚ್ಛಿತವ್ಯ ಇತಿ ವಚನಾದ್ವ್ಯವಹಾರನಯೋ ನಾನುಸರ್ತವ್ಯಃ । ೮ನೇ ಗಾಥೆ ಆತ್ಮಖ್ಯಾತಿ ಟೀಕೆ.

ಎಂದರೆ ಈ ನಿಶ್ಚಯನಯವನ್ನು ಅಂಗೀಕಾರ ಮಾಡುವ ಸಲುವಾಗಿ ವ್ಯವಹಾರದ ಮೂಲಕ ಉಪದೇಶ ಕೊಡುತ್ತಾರೆ; ಆದರೆ ಆ ವ್ಯವಹಾರನಯವು ಅಂಗೀಕಾರ ಮಾಡಲು ಯೋಗ್ಯವಿಲ್ಲ.

**ಪ್ರಶ್ನೆ :-** ವ್ಯವಹಾರವಿಲ್ಲದೆ ನಿಶ್ಚಯದ ಉಪದೇಶವು ಏಕಾಗುವುದಿಲ್ಲ ? ಮತ್ತು ವ್ಯವಹಾರನಯವನ್ನೇಕೆ ಅಂಗೀಕಾರ ಮಾಡಬಾರದು ? ಇದನ್ನು ತಿಳಿಸಿ ಕೊಡಿರಿ !

**ಉತ್ತರ :-** ನಿಶ್ಚಯದಿಂದಂತೂ ಆತ್ಮನು ಪರದ್ರವ್ಯಗಳಿಂದ ಭಿನ್ನ, ಸ್ವಭಾವಗಳಿಂದ ಅಭಿನ್ನನಾದ ಸ್ವಯಂ ಸಿದ್ಧ ವಸ್ತುವಿದ್ದಾನೆ; ಅವನನ್ನು ಗುರುತಿಸದವರಿಗೆ ಇದೇ ಪ್ರಕಾರ ಹೇಳುತ್ತಿದ್ದರೂ ಕೂಡ ಅವರು ತಿಳಿದುಕೊಳ್ಳುವುದಿಲ್ಲ. ಆದುದರಿಂದ ಅವರಿಗೆ ವ್ಯವಹಾರ ನಯದಿಂದ ಶರೀರ ಮೊದಲಾದ ಪರದ್ರವ್ಯಗಳ ಸಾಪೇಕ್ಷತೆಯ ಮೂಲಕ ನರ-ನಾರಕ-ಪೃಥ್ವೀಕಾಯಾದಿರೂಪ ಜೀವದ ಭೇದ ಮಾಡಿದಾಗ ಇದು ಮನುಷ್ಯ ಜೀವವಿದೆ, ಇದು ನಾರಕೀ ಜೀವವಿದೆ ಇತ್ಯಾದಿ ಪ್ರಕಾರದೊಡನೆ ಅವರಿಗೆ ಜೀವದ ಪರಿಚಯವಾಗುವುದು.

ಅಥವಾ ಅಭೇದ ವಸ್ತುವಿನಲ್ಲಿ ಭೇದವನ್ನುತ್ಪನ್ನ ಮಾಡಿ ಜ್ಞಾನ-ದರ್ಶನ ಮೊದಲಾದ ಗುಣ-ಪರ್ಯಾಯರೂಪ ಜೀವದ ಭೇದ ಮಾಡಿದಾಗ ತಿಳಿದುಕೊಳ್ಳುವವನು ಜೀವನಿದ್ದಾನೆ, ನೋಡುವವನು ಜೀವನಿದ್ದಾನೆ ಇತ್ಯಾದಿ ಪ್ರಕಾರದೊಡನೆ ಅವರಿಗೆ ಜೀವದ ಪರಿಚಯವಾಗುವುದು.

ಮತ್ತು ನಿಶ್ಚಯದಿಂದ ವೀತರಾಗಭಾವವು ಮೋಕ್ಷಮಾರ್ಗವಿದ್ದು ಅದನ್ನು ಯಾರು ಗುರುತಿಸುವುದಿಲ್ಲ ಅವರಿಗೆ ಹೀಗೆಯೇ ಹೇಳುತ್ತಿದ್ದರೆ ಅವರು ತಿಳಿದುಕೊಳ್ಳುವುದಿಲ್ಲ. ಆಗ ಅವರಿಗೆ ವ್ಯವಹಾರ ನಯದಿಂದ ತತ್ತ್ವ ಶ್ರದ್ಧೆ -ಜ್ಞಾನಪೂರ್ವಕವಾಗಿ ಪರದ್ರವ್ಯಗಳ ನಿಮಿತ್ತ ದೂರ ಮಾಡುವ ಸಾಪೇಕ್ಷತೆಯ ಮೂಲಕ ವ್ರತ, ಶೀಲ, ಸಂಯಮಾದಿ ರೂಪದ ವೀತರಾಗಭಾವದ ಭೇದವನ್ನು ತಿಳಿಸಿಕೊಟ್ಟಾಗ ಅವರಿಗೆ ವೀತರಾಗಭಾವದ ಪರಿಚಯವಾಗುವುದು.

ಇದೇ ಪ್ರಕಾರ ಇತರೆಡೆಯಲ್ಲೂ ವ್ಯವಹಾರವಿಲ್ಲದೆ ನಿಶ್ಚಯದ ಉಪದೇಶವಾಗುವುದಿಲ್ಲವೆಂದು ತಿಳಿಯುವುದು.

ಇಲ್ಲಿ ವ್ಯವಹಾರದಿಂದ ನರ-ನಾರಕ ಮೊದಲಾದ ಪರ್ಯಾಯಗಳಿಗೇ ಜೀವವೆಂದು ಹೇಳಿದೆ, ಆದರೆ ಪರ್ಯಾಯವನ್ನೇ ಜೀವವೆಂದು ಮನ್ನಿಸಬಾರದು. ಪರ್ಯಾಯಗಳಂತೂ ಜೀವ-ಪುದ್ಗಲದ ಸಂಯೋಗರೂಪವಿವೆ. ಅಲ್ಲಿ ನಿಶ್ಚಯದಿಂದ ಜೀವದ್ರವ್ಯವು ಭಿನ್ನವಿದ್ದು ಅದನ್ನೇ ಜೀವವೆಂದು ಮನ್ನಿಸುವುದು. ಜೀವದ ಸಂಯೋಗದಿಂದ ಶರೀರ ಮೊದಲಾದುವನ್ನೂ ಉಪಚಾರದಿಂದ ಜೀವವೆಂದು ಹೇಳಿದೆ, ಅದು ಕಥನ ಮಾತ್ರವೇ ಇದೆ. ಪರಮಾರ್ಥದಿಂದ ಶರೀರ ಮೊದಲಾದವು ಜೀವವಾಗುವುದಿಲ್ಲವೆಂದೇ ಶ್ರದ್ಧೆ ಮಾಡುವುದು.

ಅಲ್ಲದೆ ಅಭೇದ ಆತ್ಮನಲ್ಲಿ ಜ್ಞಾನ-ದರ್ಶನಾದಿಗಳ ಭೇದ ಮಾಡಿದ್ದು ಅವನ್ನು ಭೇದರೂಪವೆಂದೇ ಮನ್ನಿಸಬಾರದು, ಏಕೆಂದರೆ ಭೇದವನ್ನು ತಿಳಿಸಿಕೊಡುವ ಸಲುವಾಗಿ ಮಾಡಿದೆ. ನಿಶ್ಚಯದಿಂದ ಆತ್ಮನು ಅಭೇದನೇ ಇದ್ದಾನೆ; ಅವನನ್ನೇ ಜೀವ ವಸ್ತುವೆಂದು ಮನ್ನಿಸುವುದು. ಸಂಜ್ಞೆ-ಸಂಖ್ಯಾದಿಗಳಿಂದ ಭೇದ ಹೇಳಿದೆ ಅದು ಕೂಡ ಕಥನ ಮಾತ್ರವಿದೆ; ಪರಮಾರ್ಥದಿಂದ ಭಿನ್ನ-ಭಿನ್ನವಿಲ್ಲವೆಂದೇ ಶ್ರದ್ಧೆ ಮಾಡುವುದು.

ಅದರಂತೆ ಪರದ್ರವ್ಯದ ನಿಮಿತ್ತ ದೂರಮಾಡುವ ಅಪೇಕ್ಷೆಯಿಂದ ವ್ರತ, ಶೀಲ, ಸಂಯಮಾದಿಗಳನ್ನು

ಮೋಕ್ಷಮಾರ್ಗವೆಂದು ಹೇಳಿದೆ, ಆದರೆ ಇವನ್ನೇ ಮೋಕ್ಷಮಾರ್ಗವೆಂದು ಮನ್ನಿಸಬಾರದು; ಏಕೆಂದರೆ ಪರದ್ರವ್ಯದ ಗ್ರಹಣ ತ್ಯಾಗವು ಆತ್ಮನದಾದರೆ ಆತ್ಮನು ಪರದ್ರವ್ಯದ ಕರ್ತೃ-ಹರ್ತೃವಾಗಿ ಬಿಡುವನು. ಆದರೆ ಒಂದು ದ್ರವ್ಯವು ಇನ್ನೊಂದು ದ್ರವ್ಯದ ಆಧೀನವಿಲ್ಲ; ಆದುದರಿಂದ ಆತ್ಮನು ತನ್ನ ರಾಗಾದಿಭಾವಗಳನ್ನು ಬಿಟ್ಟುಕೊಟ್ಟು ವೀತರಾಗಿಯಾಗುತ್ತಾನೆ; ಅದಕ್ಕಾಗಿ ನಿಶ್ಚಯದಿಂದ ವೀತರಾಗಭಾವವೇ ಮೋಕ್ಷಮಾರ್ಗವಿದೆ. ಎಂದಾದರೊಮ್ಮೆ ವೀತರಾಗಭಾವಗಳ ಮತ್ತು ವ್ರತಾದಿಗಳ ಕಾರ್ಯ-ಕಾರಣತನವಿರುವುದರಿಂದ ವ್ರತಾದಿಗಳಿಗೆ ಮೋಕ್ಷಮಾರ್ಗವೆಂದು ಹೇಳಿದೆ ಅದು ಕಥನಮಾತ್ರವೇ ಇದೆ. ಪರಮಾರ್ಥದಿಂದ ಬಾಹ್ಯಕ್ರಿಯೆಗಳು ಮೋಕ್ಷಮಾರ್ಗವಿಲ್ಲವೆಂದೇ ಶ್ರದ್ಧೆಮಾಡುವುದು.

ಇದೇ ಪ್ರಕಾರ ಇತರಡೆಯಲ್ಲೂ ವ್ಯವಹಾರನಯದ ಅಂಗೀಕಾರ ಮಾಡಬಾರದೆಂದು ತಿಳಿದುಕೊಳ್ಳಬೇಕು.

**ಪ್ರಶ್ನೆ** :- ವ್ಯವಹಾರನಯವು ಇತರರಿಗೆ ಉಪದೇಶಿಸುವಲ್ಲಿಯೇ ಕಾರ್ಯಕಾರಿಯಿದೆಯೋ ಅಥವಾ ತಮ್ಮ ಪ್ರಯೋಜನವನ್ನೂ ಸಾಧಿಸುತ್ತದೆಯೋ ?

**ಉತ್ತರ** :- ತಾವು ಎಲ್ಲಿಯವರೆಗೆ ನಿಶ್ಚಯನಯದಿಂದ ಪ್ರರೂಪಿಸಲ್ಪಟ್ಟ ವಸ್ತುವನ್ನು ಗುರುತಿಸುವುದಿಲ್ಲ ಅಲ್ಲಿಯವರೆಗೆ ವ್ಯವಹಾರ ಮಾರ್ಗದಿಂದ ವಸ್ತುವಿನ ನಿಶ್ಚಯ ಮಾಡಬೇಕು ; ಆದುದರಿಂದ ಕೆಳಗಿನ ಅವಸ್ಥೆಯಲ್ಲಿ ತಮಗೂ ವ್ಯವಹಾರನಯವು ಕಾರ್ಯಕಾರಿಯಿದೆ; ಆದರೆ ವ್ಯವಹಾರವನ್ನು ಉಪಚಾರ ಮಾತ್ರವೆಂದು ಮನ್ನಿಸಿ ಅದರ ಮೂಲಕ ವಸ್ತುವನ್ನು ಸರಿಯಾಗಿ ತಿಳಿದುಕೊಂಡಾಗ ಕಾರ್ಯಕಾರಿಯಿದೆ; ಆದರೆ ನಿಶ್ಚಯದ ಹಾಗೆ ವ್ಯವಹಾರವನ್ನೂ ಸತ್ಯಭೂತವೆಂದು ಮನ್ನಿಸಿ 'ವಸ್ತುವು ಹೀಗೆಯೇ ಇದೆ'ಯೆಂದು ಶ್ರದ್ಧೆ ಮಾಡಿದರೆ ಪ್ರತಿಯಾಗಿ ಅಕಾರ್ಯಕಾರಿಯಾಗಿ ಹೋಗುವುದು.

ಇದನ್ನೇ ಪುರುಷಾರ್ಥಸಿದ್ಧ್ಯುಪಾಯದಲ್ಲಿ ಹೇಳಿದ್ದಾರೆ,-

**ಅಬುಧಸ್ಯ ಬೋಧನಾರ್ಥಂ ಮುನೀಶ್ವರಾ ದೇಶಯಂತ್ಯಭೂತಾರ್ಥಮ್ ।**
**ವ್ಯವಹಾರಮೇವ ಕೇವಲಮವೈತಿ ಯಸ್ತಸ್ಯ ದೇಶನಾ ನಾಸ್ತಿ ॥6॥**
**ಮಾಣವಕ ಏವ ಸಿಂಹೋ ಯಥಾ ಭವತ್ಯನವಗೀತಸಿಂಹಸ್ಯ ।**
**ವ್ಯವಹಾರ ಏವ ಹಿ ತಥಾ ನಿಶ್ಚಯತಾಂ ಯಾತ್ಯ ನಿಶ್ಚಯಜ್ಞಸ್ಯ ॥7॥**

**ಅರ್ಥ** :- ಮುನಿರಾಜರು ಅಜ್ಞಾನಿಗಳಿಗೆ ತಿಳಿಸಿಕೊಡುವ ಸಲುವಾಗಿ ಅಸತ್ಯಾರ್ಥವಾದ ಆ ವ್ಯವಹಾರನಯದ ಉಪದೇಶ ಕೊಡುತ್ತಾರೆ. ಕೇವಲ ವ್ಯವಹಾರವನ್ನೇ ತಿಳಿಯುವವರಿಗೆ ಉಪದೇಶ ಕೊಡುವುದೂ ಯೋಗ್ಯವಿಲ್ಲ. ಮತ್ತು ಹೇಗೆ ನಿಜವಾದ ಸಿಂಹವನ್ನು ತಿಳಿಯದವರಿಗೆ ಮಾರ್ಜಾಲವೇ ಸಿಂಹವಿದೆ; ಅದೇ ಪ್ರಕಾರ ನಿಶ್ಚಯವನ್ನು ತಿಳಿಯದವರಿಗೆ ವ್ಯವಹಾರವೇ ನಿಶ್ಚಯತನಕ್ಕೆ ಪ್ರಾಪ್ತವಾಗುತ್ತದೆ.

**ಪ್ರಶ್ನೆ** :- ನೀವು ವ್ಯವಹಾರವನ್ನು ಅಸತ್ಯಾರ್ಥ ಹೇಯವೆಂದು ಹೇಳುತ್ತಿರುವುದರಿಂದ ನಾವು ವ್ರತ, ಶೀಲ, ಸಂಯಮಾದಿಗಳ ವ್ಯವಹಾರ ಕಾರ್ಯವನ್ನೇಕೆ ಮಾಡುವುದು ? ಎಲ್ಲವನ್ನೂ ಬಿಟ್ಟುಕೊಡುತ್ತೇವೆಂದು ವಿಚಾರಶೂನ್ಯ ಮನುಷ್ಯರು ಹೇಳುತ್ತಾರೆ.

**ಉತ್ತರ :-** ಯಾವ ವ್ರತ, ಶೀಲ, ಸಂಯಮಾದಿಗಳ ಹೆಸರು ವ್ಯವಹಾರವಿಲ್ಲ; ಇವನ್ನು ಮೋಕ್ಷಮಾರ್ಗವೆಂದು ಮನ್ನಿಸುವ ವ್ಯವಹಾರವನ್ನು ಬಿಟ್ಟುಕೊಡು; ಮತ್ತು ಇವನ್ನು ಬಾಹ್ಯಸಹಾಯಕವೆಂದು ತಿಳಿದುಕೊಂಡು ಉಪಚಾರದಿಂದ ಮೋಕ್ಷಮಾರ್ಗವೆಂದು ಹೇಳಿದೆ, ಇವಂತೂ ಪರದ್ರವ್ಯಾಶ್ರಿತವಿವೆ; ಮತ್ತು ನಿಜವಾದ ಮೋಕ್ಷಮಾರ್ಗವು ವೀತರಾಗಭಾವವಿದೆ, ಅದು ಸ್ವದ್ರವ್ಯಾಶ್ರಿತವಿದೆ. ಈ ಪ್ರಕಾರ ವ್ಯವಹಾರವನ್ನು ಅಸತ್ಯಾರ್ಥವೆಂದು ಹೇಯವೆಂದು ತಿಳಿಯುವುದು. ವ್ರತಾದಿಗಳನ್ನು ಬಿಡುವುದರಿಂದಂತೂ ವ್ಯವಹಾರದ ಹೇಯತನವಾಗುವುದಿಲ್ಲ.

ಅಲ್ಲದೆ ವ್ರತಾದಿಗಳನ್ನು ಬಿಟ್ಟುಕೊಟ್ಟು ಏನು ಮಾಡುವೆ ? ಹಿಂಸಾದಿಗಳರೂಪವಾಗಿ ಪ್ರವರ್ತಿಸಿದರೆ ಅಲ್ಲಿಯಂತೂ ಮೋಕ್ಷಮಾರ್ಗದ ಉಪಚಾರಕೂಡ ಸಂಭವವಿಲ್ಲ; ಹಾಗೆ ಪ್ರವರ್ತಿಸುವುದರಿಂದ ಏನು ಒಳ್ಳೆಯದಾಗುವುದು ? ನರಕಾದಿಗಳಿಗೆ ಪ್ರಾಪ್ತನಾಗುವೆ. ಆದುದರಿಂದ ಹೀಗೆ ಮಾಡುವುದಂತೂ ವಿಚಾರ ಶೂನ್ಯತೆಯೇ ಇದೆ. ಮತ್ತು ವ್ರತಾದಿಗಳ ಪರಿಣತಿಯನ್ನು ದೂರ ಮಾಡಿ ಕೇವಲ ವೀತರಾಗ ಭಾವರೂಪವಾಗಿ ಇರುವಂತಾದರೆ ಒಳ್ಳೆಯದೇ ಇದೆ, ಅದು ಕೆಳಗಿನ ಅವಸ್ಥೆಯಲ್ಲಿ ಆಗುವ ಸಾಧ್ಯತೆಯಿಲ್ಲ; ಆದುದರಿಂದ ವ್ರತಾದಿಗಳ ಸಾಧನವನ್ನು ಬಿಟ್ಟುಕೊಟ್ಟು ಸ್ವಚ್ಛಂದವಾಗುವುದು ಯೋಗ್ಯವಿಲ್ಲ. ಈ ಪ್ರಕಾರ ಶ್ರದ್ಧೆಯಲ್ಲಿ ನಿಶ್ಚಯವನ್ನು ಪ್ರವೃತ್ತಿಯಲ್ಲಿ ವ್ಯವಹಾರವನ್ನು ಮನ್ನಿಸುವುದು ಅದು ಕೂಡ ಮಿಥ್ಯಾಭಾವವೇ ಇದೆ.

ಅಲ್ಲದೆ ಈ ಜೀವನು ಎರಡೂ ನಯಗಳ ಅಂಗೀಕಾರ ಮಾಡುವ ಸಲುವಾಗಿ ಒಮ್ಮೊಮ್ಮೆ ತನ್ನನ್ನು ಶುದ್ಧ ಸಿದ್ಧಸಮಾನ ರಾಗಾದಿಗಳಿಂದ ರಹಿತ ಕೇವಲಜ್ಞಾನಾದಿಗಳಿಂದ ಸಹಿತನಾದ ಆತ್ಮನೆಂದು ಅನುಭವಿಸುತ್ತಾನೆ. ಧ್ಯಾನಮುದ್ರೆಯನ್ನು ಧಾರಣಮಾಡಿ ಇಂಥ ವಿಚಾರಗಳಲ್ಲಿ ತೊಡಗುತ್ತಾನೆ, ಆದರೆ ತಾನು ಹೀಗಿಲ್ಲದಿದ್ದರೂ ಭ್ರಾಂತಿಯಿಂದ 'ನಾನು ನಿಶ್ಚಯದಿಂದ ಹೀಗೆಯೇ ಇದ್ದೇನೆ'ಂದು ಮನ್ನಿಸಿ ಸಂತುಷ್ಟನಾಗುತ್ತಾನೆ. ಮತ್ತು ಒಮ್ಮೊಮ್ಮೆ ವಚನದ ಮೂಲಕ ಹೀಗೆಯೇ ನಿರೂಪಣೆ ಮಾಡುತ್ತಾನೆ. ಆದರೆ ನಿಶ್ಚಯವಂತೂ ವಸ್ತುವನ್ನು ಯಥಾವತ್ತಾಗಿ ನಿರೂಪಣೆ ಮಾಡುತ್ತದೆ. ತಾನು ಪ್ರತ್ಯಕ್ಷ ಹೇಗೆ ಇಲ್ಲ ಹಾಗೆ ತನ್ನನ್ನು ಮನ್ನಿಸಿದರೆ ನಿಶ್ಚಯವೆಂಬ ಹೆಸರನ್ನು ಹೇಗೆ ಪಡೆಯುವುದು ? ಹೇಗೆ ಮೊದಲು ಕೇವಲ ನಿಶ್ಚಯಾಭಾಸವುಳ್ಳ ಜೀವದ ಅಯಥಾರ್ಥತೆಯನ್ನು ಹೇಳಿತ್ತು ಅದೇ ಪ್ರಕಾರ ಇವನನ್ನು ತಿಳಿಯುವುದು.

ಅಥವಾ ಆತ್ಮನು ಈ ನಯದಿಂದ ಹೀಗಿದ್ದಾನೆ, ಈ ನಯದಿಂದ ಹೀಗಿದ್ದಾನೆಂದು ಮನ್ನಿಸುತ್ತಾನೆ. ಆದರೆ ಆತ್ಮನು ಹೇಗಿದ್ದಾನೆ ಹಾಗೆಯೇ ಇದ್ದಾನೆ; ಆದಾಗ್ಯೂ ಅದರಲ್ಲಿ ನಯದ ಮೂಲಕ ನಿರೂಪಣೆ ಮಾಡುವ ಅಭಿಪ್ರಾಯವನ್ನು ಗುರುತಿಸುವುದಿಲ್ಲ. ಹೇಗೆಂದರೆ ಆತ್ಮನು ನಿಶ್ಚಯನಯದಿಂದ ಸಿದ್ಧಸಮಾನ ಕೇವಲಜ್ಞಾನಾದಿಗಳಿಂದ ಯುಕ್ತ, ದ್ರವ್ಯ ಕರ್ಮ-ನೋಕರ್ಮ-ಭಾವಕರ್ಮಗಳಿಂದ ರಹಿತನಿದ್ದಾನೆ, ಮತ್ತು ವ್ಯವಹಾರನಯದಿಂದ ಸಂಸಾರಿಯಿದ್ದಾನೆ, ಮತಿಜ್ಞಾನಾದಿಗಳಿಂದ ಯುಕ್ತ ಹಾಗೂ ದ್ರವ್ಯಕರ್ಮ-ನೋಕರ್ಮ-ಭಾವಕರ್ಮಗಳಿಂದ ಸಹಿತನಿದ್ದಾನೆಂದು ಮನ್ನಿಸುತ್ತಾನೆ; ಆದರೆ ಒಬ್ಬ ಆತ್ಮನಿಗೆ ಹೀಗೆ ಎರಡು ಸ್ವರೂಪಗಳಿರುವುದಿಲ್ಲ; ಒಂದು ವಸ್ತುವಿನಲ್ಲಿ ಯಾವ ಭಾವದ ಸಹಿತತೆಯಿದೆ ಅದೇ ಭಾವದ ರಹಿತತೆಯು ಹೇಗೆ ಸಂಭವವಿದೆ ? ಆದುದರಿಂದ ಹೀಗೆ ಮನ್ನಿಸುವುದು ಭ್ರಮೆಯಿದೆ.

**ಪ್ರಶ್ನೆ :-** ಹಾಗಾದರೆ ಯಾವ ಪ್ರಕಾರವಿದೆ ?

**ಉತ್ತರ :-** ಯಾವ ಪ್ರಕಾರ ದೊರೆ ಮತ್ತು ದರಿದ್ರನು ಮನುಷ್ಯತನದ ಅಪೇಕ್ಷೆಯಿಂದ ಸಮಾನರಿದ್ದಾರೆ, ಅದೇ ಪ್ರಕಾರ ಸಿದ್ಧ ಮತ್ತು ಸಂಸಾರಿಯನ್ನು ಜೀವತನದ ಅಪೇಕ್ಷೆಯಿಂದ ಸಮಾನವೆಂದು ಹೇಳಿದೆ. ಕೇವಲ ಜ್ಞಾನಾದಿಗಳ ಅಪೇಕ್ಷೆಯಿಂದ ಸಮಾನತೆಯನ್ನು ಮನ್ನಿಸ ಹೋದರೆ ಹಾಗೆ ಇಲ್ಲ; ಸಂಸಾರಿಗೆ ನಿಶ್ಚಯದಿಂದ ಮತಿಜ್ಞಾನಾದಿಗಳೇ ಇವೆ, ಸಿದ್ಧರಿಗೆ ಕೇವಲಜ್ಞಾನವಿದೆ. ವಿಶೇಷತೆಯೇನೆಂದರೆ ಸಂಸಾರಿಗೆ ಮತಿಜ್ಞಾನಾದಿಗಳು ಕರ್ಮದ ನಿಮಿತ್ತದಿಂದಿರುವುದರಿಂದ ಸ್ವಭಾವದ ಅಪೇಕ್ಷೆಯಿಂದ ಸಂಸಾರಿಯಲ್ಲಿ ಕೇವಲಜ್ಞಾನದ ಶಕ್ತಿಯಿದೆಯೆಂದು ಹೇಳುವುದು ದೋಷವಿಲ್ಲ. ಹೇಗೆ ದರಿದ್ರ ಮನುಷ್ಯನಲ್ಲಿ ದೊರೆಯಾಗುವ ಶಕ್ತಿಯು ಕಂಡುಬರುತ್ತದೆ, ಅದೇ ಪ್ರಕಾರ ಈ ಶಕ್ತಿಯನ್ನು ತಿಳಿಯುವುದು. ಮತ್ತು ದ್ರವ್ಯಕರ್ಮ-ನೋಕರ್ಮಗಳು ಪುದ್ಗಲದಿಂದ ಉತ್ಪನ್ನವಾಗಿರುವುದರಿಂದ ನಿಶ್ಚಯದಿಂದ ಸಂಸಾರಿಗೆ ಕೂಡ ಇವುಗಳ ಭಿನ್ನತೆಯಿದೆ, ಆದರೆ ಸಿದ್ಧರ ಹಾಗೆ ಕಾರಣಕಾರ್ಯ ಅಪೇಕ್ಷೆಯಿಂದ ಇವುಗಳ ಸಂಬಂಧವನ್ನೂ ಮನ್ನಿಸದಿದ್ದರೆ ಭ್ರಾಂತಿಯೇ ಇದೆ. ಇನ್ನು ಭಾವಕರ್ಮವು ಆತ್ಮನ ಭಾವವಿದ್ದು ಅದು ನಿಶ್ಚಯದಿಂದ ಆತ್ಮನದೇ ಇದೆ, ಆದರೆ ಕರ್ಮದ ನಿಮಿತ್ತದಿಂದ ಆಗುತ್ತದೆಯೆಂದು ಅದನ್ನು ವ್ಯವಹಾರದಿಂದ ಕರ್ಮದ್ದೆಂದು ಹೇಳಲಾಗುತ್ತದೆ. ಮತ್ತು ಸಿದ್ಧರ ಹಾಗೆ ಸಂಸಾರಿಗೆ ಕೂಡ ರಾಗಾದಿಗಳನ್ನು ಮನ್ನಿಸದಿರುವುದು, ಅವನ್ನು ಕರ್ಮದ್ದೆಂದೇ ಮನ್ನಿಸುವುದು ಅದು ಕೂಡ ಭ್ರಾಂತಿಯಿದೆ.

ಈ ಪ್ರಕಾರ ನಯಗಳ ಮೂಲಕ ಒಂದೇ ವಸ್ತುವನ್ನು ಒಂದು ಭಾವದ ಅಪೇಕ್ಷೆಯಿಂದ 'ಹೀಗೂ ಮನ್ನಿಸುವುದು ಮತ್ತು ಹೀಗೂ ಮನ್ನಿಸುವುದೆ'ಂಬುದು ಮಿಥ್ಯಾಬುದ್ಧಿಯಿದೆ; ಆದರೆ ಭಿನ್ನ-ಭಿನ್ನ ಭಾವಗಳ ಅಪೇಕ್ಷೆಯಿಂದ ನಯಗಳ ಪ್ರರೂಪಣೆಯಿದೆಯೆಂದು ಮನ್ನಿಸಿ ವಸ್ತುವನ್ನು ಯಥಾಪ್ರಕಾರವಾಗಿ ಮನ್ನಿಸುವುದು ಅದು ನಿಜವಾದ ಶ್ರದ್ಧೆಯಿದೆ. ಆದ್ದರಿಂದ ಮಿಥ್ಯಾದೃಷ್ಟಿಯು ಅನೇಕಾಂತರೂಪವಾದ ವಸ್ತುವನ್ನು ಮನ್ನಿಸುತ್ತಾನೆ, ಆದರೆ ಯಥಾರ್ಥ ಭಾವವನ್ನು ಪರಿಚಯಿಸಿಕೊಂಡು ಮನ್ನಿಸುವ ಸಾಧ್ಯತೆಯಿಲ್ಲವೆಂದು ತಿಳಿಯುವುದು.

ಅಲ್ಲದೆ ಈ ಜೀವನಿಗೆ ವ್ರತ, ಶೀಲ, ಸಂಯಮಾದಿಗಳ ಅಂಗೀಕಾರವು ಕಂಡುಬರುತ್ತದೆ, ಆದರೆ ವ್ಯವಹಾರದಿಂದ 'ಇವು ಕೂಡ ಮೋಕ್ಷದ ಕಾರಣವಿವೆ'ಯೆಂದು ಮನ್ನಿಸಿ ಅವನ್ನು ಉಪಾದೇಯವೆಂದು ಮನ್ನಿಸುತ್ತಾನೆ; ಆದರೆ ಹೇಗೆ ಮೊದಲು ಕೇವಲ ವ್ಯವಹಾರಾವಲಂಬಿ ಜೀವದ ಅಯಥಾರ್ಥತೆಯನ್ನು ಹೇಳಿತ್ತು ಹಾಗೆಯೇ ಇವನದು ಅಯಥಾರ್ಥತೆಯನ್ನು ತಿಳಿಯುವುದು.

ಅಲ್ಲದೆ ಇವನು ಯಥಾಯೋಗ್ಯ ವ್ರತಾದಿ ಕ್ರಿಯೆಗಳನ್ನು ಮಾಡುವುದು ಯೋಗ್ಯವಿದೆ, ಆದರೆ ಅದರಲ್ಲಿ ಮಮತೆ ಮಾಡಬಾರದೆಂದು ಮನ್ನಿಸುತ್ತಾನೆ. ಆದರೆ ತಾನು ಯಾವುದರ ಕರ್ತೃವಾಗುವನು ಅದರಲ್ಲಿ ಮಮತೆಯನ್ನು ಹೇಗೆ ಮಾಡುವುದಿಲ್ಲ ? ತಾನು ಕರ್ತೃವಿಲ್ಲದಿದ್ದರೆ ನನಗೆ ಮಾಡಲು ಯೋಗ್ಯವಿದೆ'ಯೆಂಬ ಭಾವವನ್ನು ಹೇಗೆ ಮಾಡುವುದು ? ಮತ್ತು ತಾನು ಕರ್ತೃವಿದ್ದರೆ ಅದು ತನ್ನ ಕರ್ಮವಾಯಿತು, ಹೀಗೆ ಕರ್ತಾ-ಕರ್ಮ ಸಂಬಂಧವು ತಾನಾಗಿಯೇ ಆಗುವುದು; ಆದುದರಿಂದ ಇಂಥ ಮನ್ನಣೆಯು ಭ್ರಮೆಯಿದೆ.

ಹೇಗೆಂದರೆ ಬಾಹ್ಯವ್ರತಾದಿಗಳಂತೂ ಶರೀರ ಮೊದಲಾದ ಪರದ್ರವ್ಯಗಳ ಆಶ್ರಯದಿಂದಿವೆ, ತಾನು ಪರದ್ರವ್ಯದ ಕರ್ತೃವಿಲ್ಲದಿರುವುದರಿಂದ ಅದರಲ್ಲಿ ಕರ್ತೃತ್ವಬುದ್ಧಿಯನ್ನೂ ಮಾಡಬಾರದು ಮತ್ತು ಮಮತೆಯನ್ನೂ

ಮಾಡಬಾರದು. ಇನ್ನು ವ್ರತಾದಿಗಳಲ್ಲಿ ಗ್ರಹಣ-ತ್ಯಾಗರೂಪದ ತಮ್ಮ ಶುಭೋಪಯೋಗವಾಗುವುದು ಅದು ತಮ್ಮ ಆಶ್ರಿತವಿದೆ; ತಾವು ಅದರ ಕರ್ತೃವಿರುವುದರಿಂದ ಅದರಲ್ಲಿ ಕರ್ತೃತ್ವ ಬುದ್ಧಿಯನ್ನೂ ಮನ್ನಿಸುವುದು ಮತ್ತು ಅಲ್ಲಿ ಮಮತೆಯನ್ನೂ ಮಾಡುವುದು. ಆದರೆ ಈ ಶುಭೋಪಯೋಗವನ್ನು ಬಂಧದ ಕಾರಣವೆಂದೇ ತಿಳಿಯುವುದು, ಮೋಕ್ಷದ ಕಾರಣವೆಂದು ತಿಳಿಯಬಾರದು; ಏಕೆಂದರೆ ಬಂಧ ಮತ್ತು ಮೋಕ್ಷದಲ್ಲಿ ಪ್ರತಿಪಕ್ಷಿತನವಿರುವುದರಿಂದ ಒಂದೇ ಭಾವವು ಪುಣ್ಯ ಬಂಧದ ಕಾರಣವೂ ಆಗುವುದು ಮತ್ತು ಮೋಕ್ಷದ ಕಾರಣವೂ ಆಗುವುದೆಂದು ಮನ್ನಿಸುವುದು ಭ್ರಮೆಯಿದೆ.

ಆದುದರಿಂದ ವ್ರತ-ಅವ್ರತ ಇವೆರಡೂ ವಿಕಲ್ಪಗಳಿಂದ ರಹಿತ ಮತ್ತು ಪರದ್ರವ್ಯದ ಗ್ರಹಣ-ತ್ಯಾಗದ ಯಾವ ಪ್ರಯೋಜವಿಲ್ಲದಂಥ ಉದಾಸೀನ ವೀತರಾಗ ಶುದ್ಧೋಪಯೋಗವೇ ಮೋಕ್ಷಮಾರ್ಗವಿದೆ. ಮತ್ತು ಕೆಳಗಿನ ಅವಸ್ಥೆಯಲ್ಲಿ ಅದೆಷ್ಟೋ ಜೀವಗಳಲ್ಲಿ ಶುಭೋಪಯೋಗ ಮತ್ತು ಶುದ್ಧೋಪಯೋಗದ ಯುಕ್ತತೆಯು ಕಂಡು ಬರುತ್ತದೆ; ಅದಕ್ಕಾಗಿ ಉಪಚಾರದಿಂದ ವ್ರತಾದಿಗಳ ಶುಭೋಪಯೋಗವನ್ನು ಮೋಕ್ಷಮಾರ್ಗವೆಂದು ಹೇಳಿದೆ; ವಸ್ತುವಿನ ವಿಚಾರ ಮಾಡಿದ ಮೇಲೆ ಶುಭೋಪಯೋಗವು ಮೋಕ್ಷದ ಘಾತಕವೇ ಇದೆ; ಏಕೆಂದರೆ ಬಂಧದ ಕಾರಣವೇ ಮೋಕ್ಷದ ಘಾತಕವಿದೆಯೆಂದು ಶ್ರದ್ಧೆ ಮಾಡುವುದು.

ಈ ಪ್ರಕಾರ ಶುದ್ಧೋಪಯೋಗವನ್ನೇ ಉಪಾದೇಯವೆಂದು ಮನ್ನಿಸಿ ಅದರ ಉಪಾಯ ಮಾಡುವುದು, ಮತ್ತು ಶುಭೋಪಯೋಗ ಹಾಗೂ ಅಶುಭೋಪಯೋಗವನ್ನು ಹೇಯವೆಂದು ತಿಳಿದುಕೊಂಡು ಅವುಗಳ ತ್ಯಾಗದ ಉಪಾಯ ಮಾಡುವುದು. ಎಲ್ಲಿ ಶುದ್ಧೋಪಯೋಗವಾಗುವುದಿಲ್ಲ ಅಲ್ಲಿ ಅಶುಭೋಪಯೋಗವನ್ನು ಬಿಟ್ಟುಕೊಟ್ಟು ಶುಭದಲ್ಲಿಯೇ ಪ್ರವರ್ತನೆ ಮಾಡುವುದು, ಏಕೆಂದರೆ ಶುಭೋಪಯೋಗದ ಅಪೇಕ್ಷೆಯಿಂದ ಅಶುಭೋಪಯೋಗದಲ್ಲಿ ಅಶುದ್ಧತೆಯ ಅಧಿಕತೆಯಿದೆ. ಮತ್ತು ಶುದ್ಧೋಪಯೋಗವಿದ್ದಾಗ ಪರದ್ರವ್ಯದ ಕುರಿತು ಸಾಕ್ಷೀಭೂತನಾಗಿಯೇ ಇರುತ್ತಾನೆ, ಅಲ್ಲಿ ಯಾವ ಪರದ್ರವ್ಯದ ಪ್ರಯೋಜನವೇ ಇರುವುದಿಲ್ಲ. ಶುಭೋಪಯೋಗವಿದ್ದಾಗ ಅಲ್ಲಿ ಬಾಹ್ಯವ್ರತಾದಿಗಳ ಪ್ರವೃತ್ತಿಯಿರುತ್ತದೆ, ಮತ್ತು ಅಶುಭೋಪಯೋಗವಿದ್ದಾಗ ಅಲ್ಲಿ ಬಾಹ್ಯದಲ್ಲಿ ಅವ್ರತಾದಿಗಳ ಪ್ರವೃತ್ತಿಯಿರುತ್ತದೆ; ಏಕೆಂದರೆ ಅಶುದ್ಧೋಪಯೋಗದಲ್ಲಿ ಮತ್ತು ಪರದ್ರವ್ಯದ ಪ್ರವೃತ್ತಿಯಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವು ಕಂಡು ಬರುತ್ತದೆ. ಇನ್ನು ಮೊದಲು ಅಶುಭೋಪಯೋಗವು ದೂರವಾಗಿ ಶುಭೋಪಯೋಗವಾಗುವುದು, ನಂತರ ಶುಭೋಪಯೋಗವು ದೂರವಾಗಿ ಶುದ್ಧೋಪಯೋಗವಾಗುವುದು. ಹೀಗೆ ಪರಂಪರೆಯಿದೆ.

ಅಲ್ಲದೆ ಶುಭೋಪಯೋಗವು ಶುದ್ಧೋಪಯೋಗದ ಕಾರಣವಿದೆ; ಹೇಗೆ ಅಶುಭೋಪಯೋಗವು ದೂರವಾಗಿ ಶುಭೋಪಯೋಗವಾಗುತ್ತದೆ ಹಾಗೆ ಶುಭೋಪಯೋಗವು ದೂರವಾಗಿ ಶುದ್ಧೋಪಯೋಗವಾಗುತ್ತದೆಂದು ಕೆಲವರು ಮನ್ನಿಸುತ್ತಾರೆ. ಹೀಗೆಯೇ ಕಾರ್ಯಕಾರಣತೆಯಿದ್ದರೆ ಶುಭೋಪಯೋಗದ ಕಾರಣವು ಅಶುಭೋಪಯೋಗವೆಂದು ನಿಶ್ಚಿತವಾಗುವುದು. ಅಥವಾ ದ್ರವ್ಯಲಿಂಗಿಗೆ ಉತ್ಕೃಷ್ಟ ಶುಭೋಪಯೋಗವಿರುತ್ತದೆ, ಶುದ್ಧೋಪಯೋಗವಾಗುವುದೇ ಇಲ್ಲ; ಅದಕ್ಕಾಗಿ ಪರಮಾರ್ಥದಿಂದ ಇವುಗಳಲ್ಲಿ ಕಾರಣ-ಕಾರ್ಯತನವಿಲ್ಲ. ಹೇಗೆ ರೋಗಿಗೆ ಅಧಿಕರೋಗವಿದ್ದು ನಂತರ ಅಲ್ಪರೋಗ ಉಳಿದರೆ ಆ ಅಲ್ಪರೋಗವು ನಿರೋಗವಾಗುವುದರ

ಕಾರಣವಿಲ್ಲ. ಅಲ್ಪರೋಗ ಉಳಿದ ಮೇಲೆ ನಿರೋಗವಾಗುವ ಉಪಾಯ ಮಾಡಿದರೆ ಆಗಿಹೋಗುವುದು; ಆದರೆ ಅಲ್ಪ ರೋಗವನ್ನೇ ಒಳ್ಳೆಯದೆಂದು ತಿಳಿದುಕೊಂಡು ಅದನ್ನು ಇಟ್ಟುಕೊಳ್ಳುವ ಯತ್ನ ಮಾಡಿದರೆ ನಿರೋಗ ಹೇಗಾಗುವುದು ? ಅದೇ ಪ್ರಕಾರ ಕಷಾಯಿಗೆ ತೀವ್ರಕಷಾಯರೂಪದ ಅಶುಭೋಪಯೋಗವಿದ್ದು ನಂತರ ಮಂದಕಷಾಯರೂಪದ ಶುಭೋಪಯೋಗವಾದರೆ ಆ ಶುಭೋಪಯೋಗವು ನಿಷ್ಕಷಾಯರೂಪ ಶುದ್ಧೋಪಯೋಗವಾಗುವುದರ ಕಾರಣವಿಲ್ಲ. ಆ ಶುಭೋಪಯೋಗವಾದ ಮೇಲೆ ಶುದ್ಧೋಪಯೋಗದ ಯತ್ನಮಾಡಿದರೆ ಆಗಿಬಿಡುವುದು; ಆದರೆ ಶುಭೋಪಯೋಗವನ್ನೇ ಒಳ್ಳೆಯದೆಂದು ತಿಳಿದುಕೊಂಡು ಅದರ ಸಾಧನ ಮಾಡಿದರೆ ಶುದ್ಧೋಪಯೋಗ ಹೇಗಾಗುವುದು ? ಆದುದರಿಂದ ಮಿಥ್ಯಾದೃಷ್ಟಿಯ ಶುಭೋಪಯೋಗವು ಶುದ್ಧೋಪಯೋಗದ ಕಾರಣವಿಲ್ಲ, ಸಮ್ಯಗ್ದೃಷ್ಟಿಗೆ ಶುಭೋಪಯೋಗವಾದ ಮೇಲೆ ನಿಕಟದಲ್ಲೇ ಶುದ್ಧೋಪಯೋಗವು ಪ್ರಾಪ್ತವಾಗುವುದರ ಮುಖ್ಯತೆಯಿಂದ ಒಮ್ಮೊಮ್ಮೆ ಶುಭೋಪಯೋಗವನ್ನು ಶುದ್ಧೋಪಯೋಗದ ಕಾರಣವೆಂದು ಹೇಳುತ್ತಾರೆಂದು ತಿಳಿಯುವುದು.

ಮತ್ತು ಈ ಜೀವನು ತನ್ನನ್ನು ನಿಶ್ಚಯ-ವ್ಯವಹಾರರೂಪ ಮೋಕ್ಷಮಾರ್ಗದ ಸಾಧಕನೆಂದು ಮನ್ನಿಸುತ್ತಾನೆ. ಅಲ್ಲಿ ಪೂರ್ವೋಕ್ತ ಪ್ರಕಾರದಿಂದ ತನ್ನನ್ನು ಶುದ್ಧನೆಂದು ಮನ್ನಿಸುವುದು ಅದು ಸಮ್ಯಗ್ದರ್ಶನವಾಯಿತು; ಹಾಗೆಯೇ ತಿಳಿದುಕೊಳ್ಳುವುದು ಅದು ಸಮ್ಯಗ್ಜ್ಞಾನವಾಯಿತು; ಹಾಗೇಯೇ ವಿಚಾರದಲ್ಲಿ ಪ್ರವರ್ತಿಸುವುದು ಅದು ಸಮ್ಯಕ್ಚಾರಿತ್ರವಾಯಿತು. ಈ ಪ್ರಕಾರ ತನಗೆ ನಿಶ್ಚಯ ರತ್ನತ್ರಯವಾಗಿದೆಯೆಂದು ಮನ್ನಿಸುತ್ತಾನೆ; ಆದರೆ ನಾನು ಪ್ರತ್ಯಕ್ಷ ಅಶುದ್ಧನಿದ್ದೇನೆ; ಆದರೆ ಶುದ್ಧ ಹೇಗೆ ಮನ್ನಿಸುವುದು-ತಿಳಿಯುವುದು-ವಿಚಾರಿಸುವುದೆಂಬ ವಿವೇಕದಿಂದ ರಹಿತನಾಗಿ ಭ್ರಾಂತಿಯಿಂದ ಸಂತುಷ್ಟನಾಗುತ್ತಾನೆ.

ಅದರಂತೆ ಅರಹಂತಾದಿಕರನ್ನು ಹೊರತುಪಡಿಸಿ ಅನ್ಯ ದೇವಾದಿಕರನ್ನು ಮನ್ನಿಸುವುದಿಲ್ಲ ಮತ್ತು ಜೈನ ಶಾಸ್ತ್ರಾನುಸಾರ ಜೀವಾದಿಗಳ ಭೇದ ಕಲಿತುಕೊಂಡು ಅವನ್ನೇ ಮನ್ನಿಸುತ್ತಾನೆ, ಉಳಿದುವನ್ನು ಮನ್ನಿಸುವುದಿಲ್ಲ, ಅದು ಸಮ್ಯಗ್ದರ್ಶನವಾಯಿತು; ಮತ್ತು ಜೈನ ಶಾಸ್ತ್ರಗಳ ಅಭ್ಯಾಸದಲ್ಲಿ ಹೆಚ್ಚಾಗಿ ಪ್ರವರ್ತಿಸುತ್ತಾನೆ ಅದು ಸಮ್ಯಗ್ಜ್ಞಾನವಾಯಿತು; ಇನ್ನು ವ್ರತಾದಿಗಳ ರೂಪವಾದ ಕ್ರಿಯೆಗಳಲ್ಲಿ ಪ್ರವರ್ತಿಸುತ್ತಾನೆ ಅದು ಸಮ್ಯಕ್ಚಾರಿತ್ರವಾಯಿತು. ಹೀಗೆ ತನಗೆ ವ್ಯವಹಾರ ರತ್ನತ್ರಯವಾಗಿದೆಯೆಂದು ಮನ್ನಿಸುತ್ತಾನೆ. ಆದರೆ ವ್ಯವಹಾರವೆಂಬುದು ಉಪಚಾರದ ಹೆಸರಿದ್ದು ಆ ಉಪಚಾರವು ಕೂಡ ಸತ್ಯಭೂತ ನಿಶ್ಚಯರತ್ನತ್ರಯದ ಕಾರಣಗಳಿದ್ದರೆ ಮಾತ್ರ ಸಂಭವಿಸುತ್ತದೆ. ಯಾವ ಪ್ರಕಾರ ನಿಶ್ಚಯರತ್ನತ್ರಯವನ್ನು ಸಾಧಿಸಲಾಗುವುದು ಅದೇ ಪ್ರಕಾರ ಇವನ್ನು ಸಾಧಿಸಿದಾಗಲೇ ವ್ಯವಹಾರತನವು ಸಂಭವಿಸುವುದು; ಆದರೆ ಇವನಿಗೆ ಸತ್ಯಭೂತ ನಿಶ್ಚಯರತ್ನತ್ರಯದ ಪರಿಚಯವೇ ಆಗಿಲ್ಲವೆಂದ ಮೇಲೆ ಈ ಪ್ರಕಾರ ಹೇಗೆ ಸಾಧಿಸುವನು ? ಆಜ್ಞಾನುಸಾರವಾಗಿ ಅನುಕರಣ ಮಾಡಿ ಸಾಧನೆ ಮಾಡುತ್ತಾನೆ ಆದುದರಿಂದ ಇವನಿಗೆ ನಿಶ್ಚಯ-ವ್ಯವಹಾರ ಮೋಕ್ಷಮಾರ್ಗವು ಆಗಿಲ್ಲ.

**ನಿಶ್ಚಯ-ವ್ಯವಹಾರ ಮೋಕ್ಷಮಾರ್ಗದನಿರೂಪಣೆಯನ್ನು ಮುಂದೆ ಮಾಡುವೆವು, ಅದರ ಸಾಧನವಾದ ಮೇಲೆಯೇ ಮೋಕ್ಷಮಾರ್ಗವಾಗುವುದು.**

ಈ ಪ್ರಕಾರ ಈ ಜೀವನು ನಿಶ್ಚಯಾಭಾಸವನ್ನು ಮನ್ನಿಸುತ್ತಾನೆ-ತಿಳಿಯುತ್ತಾನೆ; ಆದರೆ ವ್ಯವಹಾರ

ಸಾಧನವನ್ನು ಕೂಡ ಒಳ್ಳೆಯದೆಂದು ತಿಳಿಯುವುದರಿಂದ ಸ್ವಚ್ಛಂದನಾಗಿ ಅಶುಭರೂಪದಿಂದ ಪ್ರವರ್ತಿಸುವುದಿಲ್ಲ, ವ್ರತಾದಿಗಳ ಶುಭೋಪಯೋಗರೂಪವಾಗಿ ಪ್ರವರ್ತಿಸುವುದರಿಂದ ಅಂತಿಮ ಗ್ರೈವೇಯಕದವರೆಗಿನ ಪದವನ್ನು ಪ್ರಾಪ್ತಮಾಡಿ ಕೊಳ್ಳುತ್ತಾನೆ. ಮತ್ತು ನಿಶ್ಚಯಾಭಾಸದ ಪ್ರಬಲತೆಯಿಂದ ಅಶುಭರೂಪದ ಪ್ರವೃತ್ತಿಯಾದರೆ ಕುಗತಿಗಳಲ್ಲಿಯೇ ಗಮನವಾಗುತ್ತದೆ. ಪರಿಣಾಮಗಳಿಗೆ ಅನುಸರಿಸಿ ಫಲವನ್ನು ಪಡೆಯುತ್ತಾನೆ; ಆದರೆ ಸಂಸಾರದ ಭೋಕ್ತೃವಾಗಿಯೇ ಉಳಿಯುತ್ತಾನೆ; ನಿಜವಾದ ಮೋಕ್ಷಮಾರ್ಗ ಪಡೆಯದೆ ಸಿದ್ಧಪದವನ್ನು ಪ್ರಾಪ್ತಮಾಡಿಕೊಳ್ಳುವುದಿಲ್ಲ.

ಈ ಪ್ರಕಾರ ನಿಶ್ಚಯಾಭಾಸ-ವ್ಯವಹಾರಾಭಾಸ ಇವೆರಡನ್ನು ಅವಲಂಬಿಸಿದ ಮಿಥ್ಯಾದೃಷ್ಟಿಗಳ ನಿರೂಪಣೆ ಮಾಡಲಾಯಿತು.

## ಸಮ್ಯಕ್ತ್ವ ಸನ್ಮುಖ ಮಿಥ್ಯಾದೃಷ್ಟಿ

ಈಗ ಸಮ್ಯಕ್ತ್ವದ ಸನ್ಮುಖವಿರುವ ಮಿಥ್ಯಾದೃಷ್ಟಿಗಳ ನಿರೂಪಣೆ ಮಾಡುತ್ತಾರೆ.

ಕೆಲವು ಮಂದಕಷಾಯಾದಿಗಳ ಕಾರಣ ಪಡೆದು ಜ್ಞಾನಾವರಣ ಮೊದಲಾದ ಕರ್ಮಗಳ ಕ್ಷಯೋಪಶಮ ವಾಗುವುದರಿಂದ ತತ್ತ್ವವಿಚಾರ ಮಾಡುವ ಶಕ್ತಿಯಾಯಿತು; ಮತ್ತು ಮೋಹವು ಮಂದವಾಗುವುದರಿಂದ ತತ್ತ್ವವಿಚಾರದಲ್ಲಿ ಉದ್ಯಮವಾಯಿತು, ಮತ್ತು ದೇವ-ಗುರು-ಶಾಸ್ತ್ರಾದಿಗಳ ಬಾಹ್ಯ ನಿಮಿತ್ತ ದೊರಕುವುದರಿಂದ ನಿಜವಾದ ಉಪದೇಶದ ಲಾಭವಾಯಿತು.

ಅಲ್ಲಿ ತನ್ನ ಪ್ರಯೋಜನಭೂತ ಮೋಕ್ಷಮಾರ್ಗದ, ದೇವ-ಗುರು-ಧರ್ಮಾದಿಗಳ, ಜೀವ ಮೊದಲಾದ ತತ್ತ್ವಗಳ, ನಿಜ-ಪರದ ಹಾಗೂ ತನಗೆ ಅಹಿತಕರ-ಹಿತಕರವಾದ ಭಾವಗಳ ಇವೇ ಮೊದಲಾದವುಗಳ ಉಪದೇಶದಿಂದ ಸಾವಧಾನನಾಗಿ ಓಹೋ ! ನನಗೆ ಈ ಮಾತುಗಳ ಅರಿವೇ ಇಲ್ಲ ನಾನು ಭ್ರಾಂತಿಯಿಂದ ಮೈಮರೆದು ಪ್ರಾಪ್ತ ಪರ್ಯಾಯದಲ್ಲಿಯೇ ತನ್ಮಯನಾದೆನು; ಆದರೆ ಈ ಪರ್ಯಾಯದ ಸ್ಥಿತಿಯು ಸ್ವಲ್ಪ ಸಮಯದ್ದೇ ಇದೆ; ಮತ್ತು ಇಲ್ಲಿ ನನಗೆ ಎಲ್ಲ ನಿಮಿತ್ತಗಳು ದೊರಕಿರುವುದರಿಂದ ನನಗೆ ಈ ಮಾತುಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗಿದೆ, ಏಕೆಂದರೆ ಇವುಗಳಲ್ಲಿ ನನ್ನ ಪ್ರಯೋಜನವೇ ಭಾಸವಾಗುತ್ತಿದೆಯೆಂದು ವಿಚಾರ ಮಾಡುತ್ತಾನೆ. ಹೀಗೆ ವಿಚಾರ ಮಾಡಿ ತಾನು ಕೇಳಿದ ಉಪದೇಶದ ನಿರ್ಧಾರ ಮಾಡುವ ಉದ್ಯಮ ಮಾಡುತ್ತಾನೆ.

ಅಲ್ಲಿ ಉದ್ದೇಶ, ಲಕ್ಷಣನಿರ್ದೇಶ ಮತ್ತು ಪರೀಕ್ಷೆಯ ಮೂಲಕ ಅವುಗಳ ನಿರ್ಧಾರವಾಗುತ್ತದೆ. ಆದುದರಿಂದ ಮೊದಲು ಅವುಗಳ ಹೆಸರು ಕಲಿಯುವುದು ಅದು ಉದ್ದೇಶವಾಯಿತು. ನಂತರ ಅವುಗಳ ಲಕ್ಷಣ ತಿಳಿಯುವುದು, ಅನಂತರ ಹೀಗೆ ಸಂಭವಿಸುತ್ತದೆಯೋ ಅಥವಾ ಇಲ್ಲವೋ ? -ಎಂಬ ವಿಚಾರದೊಡನೆ ಪರೀಕ್ಷೆ ಮಾಡತೊಡಗುವುದು.

ಅಲ್ಲಿ ಹೆಸರು ಕಲಿಯುವುದು ಮತ್ತು ಲಕ್ಷಣ ತಿಳಿಯುವುದು ಇವೆರಡು ಉಪದೇಶದ ಅನುಸಾರ ಆಗುತ್ತವೆ. ಹೇಗೆ ಉಪದೇಶ ಕೊಡಲಾಗಿದೆ ಹಾಗೆ ಸ್ಮರಣೆ ಮಾಡಿಕೊಳ್ಳುವುದು. ಇನ್ನು ಪರೀಕ್ಷೆ ಮಾಡುವಲ್ಲಿ ತನಗೆ

ವಿವೇಕ ಬೇಕಾಗುವುದು. ಆ ವಿವೇಕಪೂರ್ವಕವಾಗಿ ಏಕಾಂತದಲ್ಲಿ ತನ್ನ ಉಪಯೋಗದಲ್ಲಿ ವಿಚಾರ ಮಾಡುವುದು. ಉಪದೇಶ ಕೊಟ್ಟ ಹಾಗೆಯೇ ಇದೆಯೋ ಅಥವಾ ಅನ್ಯಥಾ ಇದೆಯೋ ? ಅಲ್ಲಿ ಅನುಮಾನ ಮೊದಲಾದ ಪ್ರಮಾಣದಿಂದ ಸರಿಯಾಗಿ ತಿಳಿದುಕೊಳ್ಳುವುದು. ಅಥವಾ ಉಪದೇಶ ಹೀಗಿದೆ, ಮತ್ತು ಹೀಗೆ ಮನ್ನಿಸದಿದ್ದರೆ ಹೀಗಾಗುವುದು; ಆದರೆ ಇವುಗಳಲ್ಲಿ ಪ್ರಬಲ ಯುಕ್ತಿಯು ಯಾವುದಿದೆ ಮತ್ತು ನಿರ್ಬಲ ಯುಕ್ತಿಯು ಯಾವುದಿದೆ ? ಪ್ರಬಲವಾಗಿ ಕಂಡು ಬರುವುದನ್ನು ಸತ್ಯವೆಂದು ತಿಳಿಯುವುದು. ಮತ್ತು ಉಪದೇಶದಲ್ಲಿ ಸತ್ಯವು ಅನ್ಯಥಾ ಭಾಸವಾದರೆ, ಅಥವಾ ಅದರಲ್ಲಿ ಸಂದೇಹ ಉಳಿದರೆ, ನಿರ್ಧಾರವಾಗದಿದ್ದರೆ ವಿಶೇಷಜ್ಞರನ್ನು ಕೇಳಬೇಕು ಮತ್ತು ಅವರು ಕೊಟ್ಟ ಉತ್ತರದ ವಿಚಾರ ಮಾಡಬೇಕು. ಇದೇ ಪ್ರಕಾರ ಎಲ್ಲಿಯವರೆಗೆ ನಿರ್ಧಾರವಾಗುವುದಿಲ್ಲ ಅಲ್ಲಿಯವರೆಗೆ ಪ್ರಶ್ನೋತ್ತರ ಮಾಡುತ್ತಿರಬೇಕು. ಮತ್ತು ಸಮಾನ ಬುದ್ಧಿಯ ಧಾರಕರಿದ್ದರೆ ಅವರಲ್ಲಿ ತಮ್ಮ ವಿಚಾರ ಹೇಗಾಗಿದೆ ಹಾಗೆ ಹೇಳಿ ಪ್ರಶ್ನೋತ್ತರದ ಮೂಲಕ ಪರಸ್ಪರ ಚರ್ಚೆ ಮಾಡುವುದು; ಇನ್ನು ಆ ಪ್ರಶ್ನೋತ್ತರದಲ್ಲಿ ನಿರೂಪಣೆಯಾದುದರ ಕುರಿತು ಏಕಾಂತದಲ್ಲಿ ವಿಚಾರ ಮಾಡಬೇಕು. ಇದೇ ಪ್ರಕಾರ ಎಲ್ಲಿಯವರೆಗೆ ತನ್ನ ಅಂತರಂಗದಲ್ಲಿ ಹೇಗೆ ಉಪದೇಶ ಕೊಟ್ಟಿದ್ದರು ಹಾಗೆಯೇ ನಿರ್ಣಯವಾಗಿ ಭಾವವು ಭಾಸವಾಗುವುದಿಲ್ಲ ಅಲ್ಲಿಯವರೆಗೆ ಇದೇ ಪ್ರಕಾರ ಪ್ರಯತ್ನ ಮಾಡುತ್ತಿರಬೇಕು.

ಮತ್ತು ಅನ್ಯಮತದವರ ಮೂಲಕ ಕೊಡಲ್ಪಟ್ಟ ಕಾಲ್ಪನಿಕ ತತ್ತ್ವಗಳ ಉಪದೇಶದಿಂದ ಜೈನ ಉಪದೇಶದಲ್ಲಿ ಅನ್ಯಥಾ ಭಾಸವಾಗಿದ್ದರೆ ಮತ್ತು ಸಂದೇಹ ಉಂಟಾಗಿದ್ದರೆ ಆಗ ಕೂಡ ಪೂರ್ವೋಕ್ತ ಪ್ರಕಾರದಿಂದ ಪ್ರಯತ್ನ ಮಾಡುವುದು.

ಹೀಗೆ ಪ್ರಯತ್ನ ಮಾಡಿದ ಮೇಲೆ ಜಿನದೇವರ ಉಪದೇಶವು ಹೇಗಿದೆ ಹಾಗೆಯೇ ಸತ್ಯವಿದೆ, ನನಗೆ ಕೂಡ ಇದೇ ಭಾಸವಾಗುತ್ತಿದೆಯೆಂದು ನಿರ್ಣಯವಾಗುತ್ತದೆ; ಏಕೆಂದರೆ ಜಿನದೇವರು ಅನ್ಯಥಾವಾದಿಗಳಿಲ್ಲ.

**ಪ್ರಶ್ನೆ** :- ಜಿನದೇವರು ಅನ್ಯಥಾವಾದಿಗಳಿಲ್ಲದಿದ್ದರೆ ಅವರ ಉಪದೇಶವು ಹೇಗಿದೆ ಹಾಗೆಯೇ ಶ್ರದ್ಧೆ ಮಾಡಿಕೊಂಡು ಬಿಡಿರಿ, ಪರೀಕ್ಷೆಯನ್ನೇಕೆ ಮಾಡುವುದು ?

**ಉತ್ತರ** :- ಪರೀಕ್ಷೆ ಮಾಡದಿದ್ದರೆ ಜಿನದೇವರು ಹೀಗೆ ಹೇಳಿದ್ದಾರೆ ಅದು ಸತ್ಯವಿದೆ; ಆದರೆ ಅವರ ಭಾವವು ತಮಗೆ ಭಾಸವಾಗುವುದಿಲ್ಲವೆಂದು ಮನ್ನಿಸುವ ಸಾಧ್ಯತೆಯಿದೆ. ಮತ್ತು ಭಾವವು ಭಾಸವಾದಲ್ಲದೆ ಶ್ರದ್ಧೆಯು ನಿರ್ಮಲವಾಗುವುದಿಲ್ಲ; ಏಕೆಂದರೆ ಯಾರೋ ಓರ್ವರ ವಚನದಿಂದ ಯಾವುದರ ಪ್ರತೀತಿ ಮಾಡಲಾಗುವುದು ಅದರ ಪ್ರತೀತಿಯೂ ಇನ್ನೋರ್ವರ ವಚನದಿಂದ ಬೇರೆ ಬಗೆಯಾಗಿಯೇ ಆಗುವುದು; ಆದುದರಿಂದ ಶಕ್ತಿಯ ಅಪೇಕ್ಷೆಯಿಂದ ವಚನದಿಂದ ಮಾಡಲಾದ ಪ್ರತೀತಿಯು ಅಪ್ರತೀತಿಯಂತೆ ಇದೆ. ಮತ್ತು ಯಾವುದರ ಭಾವವು ಭಾಸವಾಗಿದೆ ಅದನ್ನು ಅನೇಕ ಪ್ರಕಾರದಿಂದಲೂ ಅನ್ಯಥಾ ಮನ್ನಿಸುವುದಿಲ್ಲ; ಆದುದರಿಂದ ಭಾವಭಾಸವಾದ ಮೇಲೆ ಆಗುವ ಪ್ರತೀತಿಯೇ ನಿಜವಾದ ಪ್ರತೀತಿಯಿದೆ.

**ಪ್ರಶ್ನೆ** :- ಪುರುಷನ ಪ್ರಾಮಾಣಿಕತೆಯಿಂದ ವಚನದ ಪ್ರಾಮಾಣಿಕತೆ ಮಾಡಲಾಗುತ್ತದೆಯೇನು ?

**ಉತ್ತರ** :- ಪುರುಷನ ಪ್ರಾಮಾಣಿಕತೆ ಕೂಡ ತಾನಾಗಿಯೇ ಆಗುವುದಿಲ್ಲ; ಮೊದಲು ಅವನ ಕೆಲವು

ವಚನಗಳ ಪರೀಕ್ಷೆ ಮಾಡಿಕೊಂಡಿದ್ದರೆ ಮಾತ್ರ ಪುರುಷನ ಪ್ರಾಮಾಣಿಕತೆಯು ಸಿದ್ಧವಾಗುತ್ತದೆ.

**ಪ್ರಶ್ನೆ :–** ಅನೇಕ ಪ್ರಕಾರದ ಉಪದೇಶಗಳಿದ್ದು ಯಾವು-ಯಾವುದರ ಪರೀಕ್ಷೆ ಮಾಡುವುದು ?

**ಉತ್ತರ :–** ಉಪದೇಶದಲ್ಲಿ ಕೆಲವು ಉಪಾದೇಯ, ಕೆಲವು ಹೇಯ ಮತ್ತು ಕೆಲವು ಜ್ಞೇಯತತ್ತ್ವಗಳ ನಿರೂಪಣೆ ಮಾಡುತ್ತವೆ. ಅಲ್ಲಿ ಉಪಾದೇಯ-ಹೇಯತತ್ತ್ವಗಳ ಪರೀಕ್ಷೆ ಮಾಡಿಕೊಳ್ಳಬೇಕು; ಏಕೆಂದರೆ ಅವುಗಳಲ್ಲಿ ಅನ್ಯಥಾತನವಿರುವುದರಿಂದ ತಮ್ಮದು ಕೆಡಕಾಗುತ್ತದೆ. ಉಪಾದೇಯವನ್ನು ಹೇಯವೆಂದು ಮನ್ನಿಸಿದರೆ ಕೆಡಕಾಗುವುದು ಮತ್ತು ಹೇಯವನ್ನು ಉಪಾದೇಯವೆಂದು ಮನ್ನಿಸಿದರೆ ಕೆಡಕಾಗುವುದು.

**ಪ್ರಶ್ನೆ :–** ಸ್ವಯಂ ಪರೀಕ್ಷೆ ಮಾಡದೆ ಜಿನವಚನದಿಂದಲೇ ಉಪಾದೇಯವನ್ನು ಉಪಾದೇಯವೆಂದು ತಿಳಿದರೆ ಮತ್ತು ಹೇಯವನ್ನು ಹೇಯವೆಂದು ತಿಳಿದರೆ ಇದರಲ್ಲಿ ಹೇಗೆ ಕೆಡಕಾಗುವುದು ?

**ಉತ್ತರ :–** ಅರ್ಥದ ಭಾವವು ಭಾಸವಾದಲ್ಲದೆ ವಚನದ ಅಭಿಪ್ರಾಯವು ತಿಳಿದು ಬರುವುದಿಲ್ಲ. ನಾನು ಜಿನವಚನದ ಅನುಸಾರ ಮನ್ನಿಸುತ್ತೇನೆಂದು ಹೇಳಬಹುದು, ಆದರೆ ಭಾವವು ಭಾಸವಾದಲ್ಲದೆ ಅನ್ಯಥಾತನವಾಗುವುದು. ಲೋಕದಲ್ಲಿ ಕೂಡ ಯಾವುದೇ ಕಾರ್ಯದ ಸಲುವಾಗಿ ಸೇವಕನನ್ನು ಕಳಿಸುತ್ತಾರೆ; ಅಲ್ಲಿ ಅವನು ಆ ಕಾರ್ಯದ ಭಾವ ತಿಳಿದುಕೊಂಡಿದ್ದರೆ ಕಾರ್ಯವನ್ನು ಸರಿಪಡಿಸುವನು; ಭಾವವು ಭಾಸವಾಗಿರದಿದ್ದರೆ ಎಲ್ಲಿಯಾದರೂ ತಪ್ಪಿಬಿಡುವನು. ಆದುದರಿಂದ ಭಾವವು ಭಾಸವಾಗುವ ಸಲುವಾಗಿ ಹೇಯ-ಉಪಾದೇಯ ತತ್ತ್ವಗಳ ಪರೀಕ್ಷೆಯನ್ನು ಅವಶ್ಯವಾಗಿ ಮಾಡಬೇಕಾಗುವುದು.

**ಪ್ರಶ್ನೆ :–** ಒಂದು ವೇಳೆ ಪರೀಕ್ಷೆಯೇ ವಿಪರೀತವಾಗಿಬಿಟ್ಟರೆ ಏನು ಮಾಡುವುದು ?

**ಉತ್ತರ :–** ಜಿನವಚನ ಮತ್ತು ತನ್ನ ಪರೀಕ್ಷೆಯಲ್ಲಿ ಸಮಾನತೆಯಾದಾಗ ನಿಜವಾದ ಪರೀಕ್ಷೆಯಾಯಿತೆಂದು ತಿಳಿಯುವುದು. ಎಲ್ಲಿಯವರೆಗೆ ಹೀಗಾಗುವುದಿಲ್ಲ ಅಲ್ಲಿಯವರೆಗೆ ಹೇಗೆ ಓರ್ವನು ಲೆಕ್ಕ ಮಾಡುತ್ತಿರುವಾಗ ಅದರ ಉತ್ತರ ದೊರಕುವವರೆಗೆ ತನ್ನ ತಪ್ಪನ್ನು ಹುಡುಕುತ್ತಿರುತ್ತಾನೆ; ಅದೇ ಪ್ರಕಾರ ಈ ತನ್ನ ಪರೀಕ್ಷೆಯಲ್ಲಿ ವಿಚಾರ ಮಾಡುತ್ತಿರಬೇಕು.

ಅದರಂತೆ ಆ ಜ್ಞೇಯತತ್ತ್ವಗಳ ಪರೀಕ್ಷೆಯಾಗುವಂತಿದ್ದರೆ ಪರೀಕ್ಷೆಮಾಡಬೇಕು; ಇಲ್ಲದಿದ್ದರೆ ಆ ಹೇಯ ಉಪಾದೇಯ ತತ್ತ್ವಗಳನ್ನೇ ಅನ್ಯಥಾ ಹೇಳಿಲ್ಲವೆಂದಮೇಲೆ ಜ್ಞೇಯತತ್ತ್ವಗಳನ್ನು ಏತಕ್ಕಾಗಿ ಅನ್ಯಥಾ ಹೇಳುವರೆಂದು ಊಹೆಮಾಡಬೇಕು. ಹೇಗೆ ಓರ್ವನು ಪ್ರಯೋಜನಭೂತ ಕಾರ್ಯಗಳಲ್ಲೂ ಸುಳ್ಳು ಆಡದವನು ಅಪ್ರಯೋಜನ ಸುಳ್ಳನ್ನೇಕೆ ಆಡುವನು ? ಆದುದರಿಂದ ಜ್ಞೇಯತತ್ತ್ವಗಳ ಸ್ವರೂಪವನ್ನು ಪರೀಕ್ಷೆಯ ಮೂಲಕವಾಗಿಯೂ ಅಥವಾ ಆಜ್ಞೆಯಿಂದ ತಿಳಿಯಬೇಕು. ಒಂದು ವೇಳೆ ಅವುಗಳ ಯಥಾರ್ಥಭಾವವು ಭಾಸವಾಗದಿದ್ದರೂ ಕೂಡ ದೋಷವಿಲ್ಲ.

ಆದುದರಿಂದ ಜೈನ ಶಾಸ್ತ್ರಗಳಲ್ಲಿ ತತ್ತ್ವ ಮೊದಲಾದವುಗಳ ನಿರೂಪಣೆ ಮಾಡಿರುವಲ್ಲಿ ಹೇತು, ಯುಕ್ತಿ ಮೊದಲಾದವುಗಳಿಂದ ಯಾವ ಪ್ರಕಾರ ಊಹೆ ಮೊದಲಾದವುಗಳಿಂದ ಅದರ ಪ್ರತೀತಿ ಬರುವುದು ಅದೇ ಪ್ರಕಾರ ಕಥನ ಮಾಡಿದೆ. ಮತ್ತು ತ್ರಿಲೋಕ, ಗುಣಸ್ಥಾನ, ಮಾರ್ಗಣಾಸ್ಥಾನ, ಪುರಾಣ ಮೊದಲಾದವುಗಳ ಕಥನವನ್ನು ಆಜ್ಞಾನುಸಾರವಾಗಿ ಮಾಡಿದ್ದಾರೆ. ಆದುದರಿಂದ ಹೇಯೋಪಾದೇಯ ತತ್ತ್ವಗಳ ಪರೀಕ್ಷೆ ಮಾಡುವುದು ಯೋಗ್ಯವಿದೆ.

ಅಲ್ಲಿ ಜೀವಾದಿ ದ್ರವ್ಯಗಳನ್ನು ಮತ್ತು ತತ್ತ್ವಗಳನ್ನು ಹಾಗೂ ಸ್ವ-ಪರಗಳನ್ನು ಪರಿಚಯ ಮಾಡಿಕೊಳ್ಳುವುದು. ಅದರಂತೆ ತ್ಯಾಗಯೋಗ್ಯವಾದ ಮಿಥ್ಯಾತ್ವ-ರಾಗಾದಿಗಳ ಹಾಗೂ ಗ್ರಹಣ ಮಾಡಲು ಯೋಗ್ಯವಾದ ಸಮ್ಯಗ್ದರ್ಶನ ಮೊದಲಾದವುಗಳ ಸ್ವರೂಪವನ್ನು ಪರಿಚಯ ಮಾಡಿಕೊಳ್ಳುವುದು. ಮತ್ತು ನಿಮಿತ್ತ-ನೈಮಿತ್ತಿಕಾದಿಗಳು ಹೇಗಿವೆ ಹಾಗೆ ಪರಿಚಯಮಾಡಿಕೊಳ್ಳುವುದು. ಇವೇ ಮೊದಲಾಗಿ ಯಾವವುಗಳನ್ನು ತಿಳಿಯುವುದರಿಂದ ಮೋಕ್ಷ ಮಾರ್ಗದಲ್ಲಿ ಪ್ರವೃತ್ತಿಯಾಗುವುದು ಅವನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ಇವುಗಳ ಪರೀಕ್ಷೆ ಮಾಡಬೇಕು, ಸಾಮಾನ್ಯರೂಪದಿಂದ ಯಾವುದೇ ಹೇತು-ಯುಕ್ತಿಯ ಮೂಲಕ ಇವನ್ನು ತಿಳಿಯುವುದು, ಮತ್ತು ಪ್ರಮಾಣ-ನಯಗಳ ಮೂಲಕ ತಿಳಿಯುವುದು, ಅದರಂತೆ ನಿರ್ದೇಶ-ಸ್ವಾಮಿತ್ವಾದಿಗಳಿಂದ ಮತ್ತು ಸತ್-ಸಂಖ್ಯಾದಿಗಳಿಂದ ಇವುಗಳ ವಿಶೇಷವನ್ನು ತಿಳಿಯುವುದು. ಬುದ್ಧಿಯಾದ ಹಾಗೆ ನಿಮಿತ್ತ ಕೈಗೂಡುವವು, ಅದೇ ಪ್ರಕಾರ ಇವನ್ನು ಸಾಮಾನ್ಯ-ವಿಶೇಷರೂಪದಿಂದ ಪರಿಚಯ ಮಾಡಿಕೊಳ್ಳುವುದು. ಮತ್ತು ಈ ತಿಳಿದುಕೊಳ್ಳುವಿಕೆಯಲ್ಲಿ ಉಪಕಾರಿಯಾದ ಗುಣಸ್ಥಾನ- ಮಾರ್ಗಣಾದಿಗಳನ್ನು, ಪುರಾಣಾದಿಗಳನ್ನು, ವ್ರತಮೊದಲಾದ ಕ್ರಿಯಾದಿಗಳನ್ನು ಕೂಡ ತಿಳಿದುಕೊಳ್ಳುವುದು ಯೋಗ್ಯವಿದೆ. ಇಲ್ಲಿ ಯಾವವುಗಳ ಪರೀಕ್ಷೆಯಾಗುವ ಸಾಧ್ಯತೆಯಿದೆ ಅವುಗಳ ಪರೀಕ್ಷೆ ಮಾಡುವುದು, ಸಾಧ್ಯತೆಯಾಗದಿದ್ದವುಗಳನ್ನು ಆಜ್ಞಾನುಸಾರವಾಗಿ ತಿಳಿದುಕೊಳ್ಳುವುದು.

ಈ ಪ್ರಕಾರ ತಿಳಿದುಕೊಳ್ಳುವ ಸಲುವಾಗಿ ಒಮ್ಮೆ ತಾನೇ ವಿಚಾರ ಮಾಡುತ್ತಾನೆ, ಒಮ್ಮೆ ಶಾಸ್ತ್ರಸ್ವಾಧ್ಯಾಯ ಮಾಡುತ್ತಾನೆ, ಒಮ್ಮೆ ಆಲಿಸುತ್ತಾನೆ, ಒಮ್ಮೆ ಅಭ್ಯಾಸ ಮಾಡುತ್ತಾನೆ, ಒಮ್ಮೆ ಪ್ರಶ್ನೋತ್ತರ ಮಾಡುತ್ತಾನೆ, ಇತ್ಯಾದಿಗಳ ರೂಪದಿಂದ ಪ್ರವರ್ತಿಸುತ್ತಾನೆ. ಇವನಿಗೆ ತನ್ನ ಕಾರ್ಯಮಾಡುವ ಕುರಿತು ತುಂಬ ಸಂತೋಷವಿರುವುದರಿಂದ ಅಂತರಂಗದ ಪ್ರೀತಿಯಿಂದ ಅದರ ಸಾಧನೆ ಮಾಡುತ್ತಾನೆ. **ಈ ಪ್ರಕಾರ ಸಾಧನೆ ಮಾಡುತ್ತ ಎಲ್ಲಿಯವರೆಗೆ ೧) ನಿಜವಾದ ತತ್ತ್ವಶ್ರದ್ಧೆಯಾಗುವುದಿಲ್ಲ ೨) 'ಇದು ಇದೇ ಪ್ರಕಾರವಿದೆ'ಯೆಂಬ ಪ್ರತೀತಿಯೊಡನೆ ಜೀವಾದಿ ತತ್ತ್ವಗಳ ಸ್ವರೂಪವು ತಮಗೆ ಭಾಸವಾಗುವುದಿಲ್ಲ, ೩) ಹೇಗೆ ಪರ್ಯಾಯದಲ್ಲಿ ಅಹಂ ಬುದ್ಧಿಯಿದೆ ಹಾಗೆ ಕೇವಲ ಆತ್ಮನಲ್ಲಿ ಅಹಂಬುದ್ಧಿಯು ಬರುವುದಿಲ್ಲ, ೪) ಹಿತ-ಅಹಿತ ರೂಪವಾದ ತನ್ನ ಭಾವಗಳ ಪರಿಚಯ ಮಾಡಿಕೊಳ್ಳುವುದಿಲ್ಲ ಅಲ್ಲಿಯವರೆಗೆ ಸಮ್ಯಕ್ತ್ವದ ಸನ್ಮುಖನಾದ ಮಿಥ್ಯಾದೃಷ್ಟಿಯಿದ್ದಾನೆ. ಈ ಜೀವನು ಅಲ್ಪಕಾಲದಲ್ಲಿಯೇ ಸಮ್ಯಕ್ತ್ವವನ್ನು ಪಡೆಯುವನು; ಇದೇ ಭವದಲ್ಲಿ ಅಥವಾ ಅನ್ಯ ಪರ್ಯಾಯದಲ್ಲಿ ಸಮ್ಯಕ್ತ್ವವನ್ನು ಪ್ರಾಪ್ತಮಾಡಿಕೊಳ್ಳುವನು.**

ಈ ಭವದಲ್ಲಿ ಅಭ್ಯಾಸ ಮಾಡಿ ಪರಲೋಕದಲ್ಲಿ ತಿರ್ಯಂಚ ಮೊದಲಾದ ಗತಿಗಳಲ್ಲಿ ಹೋದರೂ ಕೂಡ ಅಲ್ಲಿ ಸಂಸ್ಕಾರದ ಬಲದಿಂದ ದೇವ-ಗುರು-ಶಾಸ್ತ್ರಗಳ ನಿಮಿತ್ತವಿಲ್ಲದೆಯೂ ಸಮ್ಯಕ್ತ್ವವಾಗುವುದು, ಏಕೆಂದರೆ ಇಂಥ ಅಭ್ಯಾಸದ ಬಲದಿಂದ ಮಿಥ್ಯಾತ್ವಕರ್ಮದ ಅನುಭಾಗವು ಹೀನವಾಗುತ್ತದೆ. ಎಲ್ಲಿ ಅದರ ಉದಯವಿಲ್ಲ ಅಲ್ಲಿ ಸಮ್ಯಕ್ತ್ವವಾಗಿ ಬಿಡುತ್ತದೆ.

ಇದೇ ಮೂಲ ಕಾರಣವಿದೆ. ದೇವಾದಿಕರಂತೂ ಬಾಹ್ಯ ನಿಮಿತ್ತರಿದ್ದಾರೆ; ಆದರೆ ಮುಖ್ಯವಾಗಿ ಇವುಗಳ

ನಿಮಿತ್ತದಿಂದಲೇ ಸಮ್ಯಕ್ತ್ವವಾಗುತ್ತದೆ. ತರತಮತೆಯಿಂದ ಪೂರ್ವ ಅಭ್ಯಾಸ-ಸಂಸ್ಕಾರದಿಂದ ವರ್ತಮಾನದಲ್ಲಿ ಇವುಗಳ ನಿಮಿತ್ತವಿಲ್ಲದಿದ್ದರೂ ಕೂಡ ಸಮ್ಯಕ್ತ್ವವಾಗುವ ಸಾಧ್ಯತೆಯಿದೆ. ಸಿದ್ಧಾಂತದಲ್ಲಿ **'ತನ್ನಿಸರ್ಗಾದಧಿಗಮಾದ್ವಾ'** (ತತ್ತ್ವಾರ್ಥಸೂತ್ರ ೧-೩)-ಎಂಬ ಸೂತ್ರವಿದೆ. ಆ ಸಮ್ಯಗ್ದರ್ಶನವು ನಿಸರ್ಗ ಅಥವಾ ಅಧಿಗಮದಿಂದ ಆಗುತ್ತದೆಂಬುದು ಇದರ ಅರ್ಥವಿದೆ. ದೇವ ಮೊದಲಾದವರ ಬಾಹ್ಯನಿಮಿತ್ತವಿಲ್ಲದೆ ಆಗುವುದನ್ನು ನಿಸರ್ಗದಿಂದಾಯಿತೆಂದು ಹೇಳುತ್ತಾರೆ ಮತ್ತು ದೇವಾದಿಕರ ನಿಮಿತ್ತದಿಂದ ಆಗುವುದನ್ನು ಅಧಿಗಮದಿಂದಾಯಿತೆಂದು ಹೇಳುತ್ತಾರೆ.

**ತತ್ತ್ವವಿಚಾರದ ಮಹಿಮೆಯನ್ನಾದರೂ ನೋಡಿರಿ! ತತ್ತ್ವವಿಚಾರವಿಲ್ಲದೆ ದೇವಾದಿಕರ ಪ್ರತೀತಿ ಮಾಡಿದರೂ, ಬಹಳಷ್ಟು ಶಾಸ್ತ್ರಗಳ ಅಭ್ಯಾಸ ಮಾಡಿದರೂ, ವ್ರತಾದಿಗಳನ್ನು ಪಾಲಿಸಿದರೂ ತಪಶ್ಚರ್ಯಾದಿಗಳನ್ನು ಮಾಡಿದರೂ ಅವನಿಗಂತೂ ಸಮ್ಯಕ್ತ್ವವಾಗುವ ಅಧಿಕಾರವಿಲ್ಲ; ಮತ್ತು ತತ್ತ್ವವಿಚಾರವುಳ್ಳವನು ಇವುಗಳಿಲ್ಲದೆಯೂ ಕೂಡ ಸಮ್ಯಕ್ತ್ವದ ಅಧಿಕಾರಿಯಾಗುತ್ತಾನೆ.**

ಅಲ್ಲದೆ ಯಾವುದೇ ಜೀವನಿಗೆ ತತ್ತ್ವವಿಚಾರವಾಗುವ ಮೊದಲು ಯಾವುದೇ ಕಾರಣ ಪಡೆದು ದೇವಾದಿಕರ ಪ್ರತೀತಿಯಾಗುವುದು, ಮತ್ತು ವ್ರತ-ತಪದ ಅಂಗೀಕಾರವಾಗುವುದು, ಅನಂತರ ತತ್ತ್ವವಿಚಾರಮಾಡುವನು; ಆದರೆ ತತ್ತ್ವವಿಚಾರವಾದನಂತರವೇ ಸಮ್ಯಕ್ತ್ವದ ಅಧಿಕಾರಿಯಾಗುತ್ತಾನೆ.

ಇನ್ನು ಒಬ್ಬನಿಗೆ ತತ್ತ್ವವಿಚಾರವಾದನಂತರ ತತ್ತ್ವಪ್ರತೀತಿ ಮಾಡದಿರುವುದರಿಂದ ಸಮ್ಯಕ್ತ್ವವಂತೂ ಆಗುವುದಿಲ್ಲ ಮತ್ತು ವ್ಯವಹಾರಧರ್ಮದ ಪ್ರತೀತಿ-ರುಚಿಯಾಗುವುದರಿಂದ ದೇವಾದಿಕರ ಪ್ರತೀತಿ ಮಾಡುತ್ತಾನೆ ಮತ್ತು ವ್ರತ-ತಪಗಳನ್ನು ಅಂಗೀಕಾರ ಮಾಡುತ್ತಾನೆ. ಒಬ್ಬನಿಗೆ ದೇವಾದಿಕರ ಪ್ರತೀತಿ ಹಾಗೂ ಸಮ್ಯಕ್ತ್ವವು ಯುಗಪತ್ ಆಗುತ್ತವೆ. ಅದರಂತೆ ವ್ರತ-ತಪಗಳು ಸಮ್ಯಕ್ತ್ವದ ಜತೆಯಲ್ಲೂ ಆಗುತ್ತವೆ ಮತ್ತು ಹಿಂದೆ-ಮುಂದೆಯೂ ಆಗುತ್ತವೆ. ದೇವಾದಿಕರ ಪ್ರತೀತಿಯದಂತೂ ನಿಯಮವಿದೆ, ಅದರ ಹೊರತಾಗಿ ಸಮ್ಯಕ್ತ್ವವಾಗುವುದಿಲ್ಲ; ವ್ರತಾದಿಗಳದ್ದು ನಿಯಮವಿಲ್ಲ. ಬಹಳಷ್ಟು ಜೀವರುಗಳು ಮೊದಲು ಸಮ್ಯಕ್ತ್ವಾಗುವುದು ನಂತರವೇ ವ್ರತಾದಿಗಳನ್ನು ಧಾರಣ ಮಾಡುತ್ತಾರೆ. ಕೆಲವರಿಗೆ ಯುಗಪತ್ ಕೂಡ ಆಗುತ್ತದೆ. ಹೀಗೆ ಈ ತತ್ತ್ವವಿಚಾರವುಳ್ಳ ಜೀವನು ಸಮ್ಯಕ್ತ್ವದ ಅಧಿಕಾರಿಯಾಗುತ್ತಾನೆ; ಆದರೆ ಅವನಿಗೆ ಸಮ್ಯಕ್ತ್ವವಾಗೇ ಆಗುವುದೆಂಬ ನಿಯಮವಿಲ್ಲ; ಏಕೆಂದರೆ ಸಮ್ಯಕ್ತ್ವವಾಗುವ ಮೊದಲು ಐದು ಲಬ್ಧಿಗಳಾಗಬೇಕೆಂದು ಶಾಸ್ತ್ರದಲ್ಲಿ ಹೇಳಿದೆ.

## ಐದು ಲಬ್ಧಿಗಳ ಸ್ವರೂಪ

ಕ್ಷಯೋಪಶಮ, ವಿಶುದ್ಧ, ದೇಶನಾ, ಪ್ರಾಯೋಗ್ಯ ಮತ್ತು ಕರಣವೆಂದು ಐದು ಲಬ್ಧಿಗಳಿವೆ. ಯಾವುದರಿಂದ ತತ್ತ್ವವಿಚಾರವಾಗುವುದು-ಅಂಥ ಜ್ಞಾನಾವರಣಾದಿ ಕರ್ಮಗಳ ಕ್ಷಯೋಪಶಮವಾಗುವುದು ಎಂದರೆ ಉದಯ ಕಾಲಕ್ಕೆ ಪ್ರಾಪ್ತವಾದ ಸರ್ವಘಾತಿ ಸ್ಪರ್ಧಕಗಳ ನಿಷೇಕಗಳ ಉದಯದ ಅಭಾವವು ಅದು ಕ್ಷಯವಿದೆ, ಮತ್ತು ಭವಿಷ್ಯಕಾಲದಲ್ಲಿ ಉದಯಕ್ಕೆ ಬರಲು ಯೋಗ್ಯವಾದವುಗಳ ಸತ್ತಾರೂಪವಿರುವುದು ಅದು ಉಪಶಮವಿದೆ, ಇಂಥ ದೇಶಘಾತಿ ಸ್ಪರ್ಧಕಗಳ ಉದಯಸಹಿತವಾದ ಕರ್ಮಗಳ ಅವಸ್ಥೆಯ ಹೆಸರು ಕ್ಷಯೋಪಶಮವಿದೆ; ಅದರ ಪ್ರಾಪ್ತಿಯು ಅದು ಕ್ಷಯೋಪಶಮಲಬ್ಧಿಯಿದೆ.

ಮೋಹದ ಉದಯವು ಮಂದವಾಗಿ ಬರುವುದರಿಂದ ಮಂದಕಷಾಯರೂಪವಾದ ಭಾವಗಳಿರುವಲ್ಲಿ ತತ್ತ್ವವಿಚಾರವಾಗುವ ಸಾಧ್ಯತೆಯಿದೆ ಅದು ವಿಶುದ್ಧಲಬ್ಧಿಯಿದೆ.

ಮತ್ತು ಜಿನದೇವರು ಉಪದೇಶಿಸಿದ ತತ್ತ್ವದ ಧಾರಣವಾಗುವುದು, ವಿಚಾರವಾಗುವುದು ಅದು ದೇಶನಾಲಬ್ಧಿಯಿದೆ. ನರಕಾದಿಗಳಲ್ಲಿ ಉಪದೇಶದ ನಿಮಿತ್ತವಿರುವುದಿಲ್ಲ ಅಲ್ಲಿ ಅದು ಪೂರ್ವ ಸಂಸ್ಕಾರದಿಂದ ಆಗುತ್ತದೆ.

ಅದರಂತೆ ಕರ್ಮಗಳ ಪೂರ್ವಸತ್ತಾ ಅಂತಃಕೋಟಾಕೋಟಿ ಸಾಗರ ಪ್ರಮಾಣ ಉಳಿಯುವುದು ಮತ್ತು ನವೀನ ಬಂಧವು ಅಂತಃಕೋಟಾಕೋಟಿ ಪ್ರಮಾಣದ ಸಂಖ್ಯಾತಭಾಗ ಮಾತ್ರವಿರುವುದು, ಅದು ಕೂಡ ಆ ಲಬ್ಧಿಕಾಲದಿಂದ ಹಿಡಿದು ಕ್ರಮದಿಂದ ಕಡಿಮೆಯಾಗುತ್ತ ಹೋಗುವುದು ಮತ್ತು ಅದೆಷ್ಟೋ ಪಾಪಪ್ರಕೃತಿಗಳ ಬಂಧವು ಕ್ರಮದಿಂದ ದೂರವಾಗುತ್ತ ಹೋಗುವುದು ಇತ್ಯಾದಿಯೋಗ್ಯ ಅವಸ್ಥೆಯಾಗುವುದು ಅದು ಪ್ರಾಯೋಗ್ಯ ಲಬ್ಧಿಯಿದೆ.

ಇವು ನಾಲ್ಕು ಲಬ್ಧಿಗಳು ಭವ್ಯ ಅಥವಾ ಅಭವ್ಯನಿಗೆ ಆಗುತ್ತವೆ. ಈ ನಾಲ್ಕು ಲಬ್ಧಿಗಳಾದ ನಂತರ ಸಮ್ಯಕ್ತ್ವವಾದರೆ ಆಗುವುದು, ಆಗದಿದ್ದರೆ ಆಗುವುದೂ ಇಲ್ಲವೆಂದು 'ಲಬ್ಧಿಸಾರ'ದಲ್ಲಿ (ಗಾಥೆ-೩ರಲ್ಲಿ) ಹೇಳಿದೆ. ಆದುದರಿಂದ ಆ ತತ್ತ್ವವಿಚಾರವುಳ್ಳವರಿಗೆ ಸಮ್ಯಕ್ತ್ವವಾಗುವ ನಿಯಮವಿಲ್ಲ. ಹೇಗೆಂದರೆ ಒಬ್ಬನಿಗೆ ಹಿತದ ಶಿಕ್ಷಣ ಕೊಡುತ್ತದೆ ಅದನ್ನು ತಿಳಿದುಕೊಂಡು ಅವನು ಈ ಕೊಟ್ಟ ಶಿಕ್ಷಣವು ಹೇಗಿದೆಯೆಂದು ವಿಚಾರ ಮಾಡುವನು ನಂತರ ವಿಚಾರ ಮಾಡಿದಮೇಲೆ ಅವನಿಗೆ 'ಹೀಗೆಯೇ ಇದೆ'ಯೆಂದು ಆ ಶಿಕ್ಷಣದ ಪ್ರತೀತಿಯಾಗುವುದು; ಅಥವಾ ಅನ್ಯಥಾ ವಿಚಾರವಾದರೆ ಇಲ್ಲವೆ ಅನ್ಯವಿಚಾರದಲ್ಲಿ ತೊಡಗಿ ಆ ಶಿಕ್ಷಣದ ನಿರ್ಧಾರ ಮಾಡದಿದ್ದರೆ ಪ್ರತೀತಿಯು ಆಗುವುದೂ ಇಲ್ಲ; ಅದೇ ಪ್ರಕಾರ ಶ್ರೀಗುರುಗಳು ತತ್ತ್ವೋಪದೇಶ ಕೊಡುವರು, ಅದನ್ನು ತಿಳಿದುಕೊಂಡು ಈ ಕೊಟ್ಟ ಉಪದೇಶವು ಯಾವ ಪ್ರಕಾರವಿದೆಯೆಂದು ವಿಚಾರ ಮಾಡುವನು, ನಂತರ ವಿಚಾರ ಮಾಡಿದಮೇಲೆ ಅವನಿಗೆ 'ಹೀಗೆಯೇ ಇದೆ'ಯೆಂದು ಪ್ರತೀತಿಯಾಗುವುದು; ಅಥವಾ ಅನ್ಯಥಾ ವಿಚಾರವಾಗುವುದು ಇಲ್ಲವೆ ಅನ್ಯವಿಚಾರದಲ್ಲಿ ತೊಡಗಿ ಆ ಉಪದೇಶದ ನಿರ್ಧಾರ ಮಾಡದಿದ್ದರೆ ಪ್ರತೀತಿಯು ಆಗುವುದೂ ಇಲ್ಲ. ಅದರ ಮೂಲ ಕಾರಣವು ಮಿಥ್ಯಾತ್ವಕರ್ಮವಿದೆ; ಅದರ ಉದಯವು ದೂರವಾದರೆ ಪ್ರತೀತಿಯಾಗುವುದು, ದೂರವಾಗದಿದ್ದರೆ ಆಗುವುದಿಲ್ಲವೆಂಬ ನಿಯಮವಿದೆ. ಅದರ ಉದ್ಯಮವೆಂದರೆ ತತ್ತ್ವವಿಚಾರ ಮಾಡುವುದೊಂದೇ ಇದೆ.

ಇನ್ನು ಐದನೆಯದಾದ ಕರಣಲಬ್ಧಿಯಾದಮೇಲೆ ಸಮ್ಯಕ್ತ್ವವು ಆಗಿಯೇ ಆಗುವುದೆಂಬ ನಿಯಮವಿದೆ. ಆದರೆ ಯಾರಿಗೆ ಮೊದಲು ಹೇಳಲಾದ ನಾಲ್ಕು ಲಬ್ಧಿಗಳು ಆಗಿವೆ, ಮತ್ತು ಅಂತರ್ಮುಹೂರ್ತದ ನಂತರ ಯಾರಿಗೆ ಸಮ್ಯಕ್ತ್ವವಾಗುವುದಿದೆ ಅದೇ ಜೀವನಿಗೆ ಕರಣಲಬ್ಧಿಯಾಗುತ್ತದೆ.

ಆ ತತ್ತ್ವವಿಚಾರದಲ್ಲಿ ಉಪಯೋಗವನ್ನು ತದ್ರೂಪಮಾಡಿ ತೊಡಗಿಸುವುದೇ ಈ ಕರಣಲಬ್ಧಿಯುಳ್ಳವನ ಬುದ್ಧಿಪೂರ್ವಕವಾದ ಉದ್ಯಮವಾಗಿರುತ್ತದೆ, ಅದರಿಂದ ಸಮಯ-ಸಮಯಕ್ಕೆ ಪರಿಣಾಮಗಳು ನಿರ್ಮಲವಾಗುತ್ತ ಹೋಗುತ್ತವೆ. ಹೇಗೆಂದರೆ ಒಬ್ಬನಿಗೆ ಶಿಕ್ಷಣದ ವಿಚಾರವು ನಿರ್ಮಲವಾಗುತ್ತ ಹೋಗುವುದರಿಂದ ಅವನಿಗೆ

ಶೀಘ್ರವಾಗಿಯೇ ಅದರ ಪ್ರತೀತಿಯಾಗಿ ಹೋಗುವುದು; ಅದೇ ಪ್ರಕಾರ ತತ್ತ್ವೋಪದೇಶದ ವಿಚಾರವು ನಿರ್ಮಲವಾಗುತ್ತ ಹೋಗುವುದರಿಂದ ಅವನಿಗೆ ಶೀಘ್ರವಾಗಿಯೇ ಅದರ ಶ್ರದ್ಧೆಯಾಗಿ ಬಿಡುವುದು. ಮತ್ತು ಈ ಪರಿಣಾಮಗಳ ತರತಮತೆಯನ್ನು ಕೇವಲಜ್ಞಾನದಮೂಲಕ ನೋಡಲಾಗಿದ್ದು ಅದರ ನಿರೂಪಣೆಯನ್ನು ಕರಣಾನುಯೋಗದಲ್ಲಿ ಮಾಡಿದೆ.

ಈ ಕರಣಲಬ್ಧಿಯಲ್ಲಿ ಅಧಃಕರಣ, ಅಪೂರ್ವಕರಣ, ಅನಿವೃತ್ತಿಕರಣವೆಂದು ಮೂರು ಭೇದಗಳಿವೆ. ಇವುಗಳ ವಿಶೇಷ ವ್ಯಾಖ್ಯಾನವನ್ನು ಲಬ್ಧಿಸಾರ ಶಾಸ್ತ್ರದಲ್ಲಿ ಮಾಡಿದ್ದು ಅಲ್ಲಿಂದ ತಿಳಿದುಕೊಳ್ಳುವುದು. ಇಲ್ಲಿ ಸಂಕ್ಷೇಪದಲ್ಲಿ ಹೇಳುತ್ತೇವೆ.

ತ್ರಿಕಾಲವರ್ತಿ ಸಮಸ್ತಕರಣಲಬ್ಧಿಯುಳ್ಳ ಜೀವರುಗಳ ಪರಿಣಾಮಗಳ ಅಪೇಕ್ಷೆಯಿಂದ ಇವು ಮೂರು ಹೆಸರುಗಳಿವೆ. ಇಲ್ಲಿ ಕರಣವೆಂಬುದು ಪರಿಣಾಮದ ಹೆಸರು ಇದೆ.

ಮೊದಲಿನ ಮತ್ತು ನಂತರದ ಸಮಯಗಳ ಪರಿಣಾಮಗಳು ಸಮಾನವಿರುವುದು ಅದು ಅಧಃಕರಣವಿದೆ★ ಹೇಗೆಂದರೆ ಒಬ್ಬ ಜೀವನ ಪರಿಣಾಮವು ಆ ಕರಣದ ಮೊದಲಿನ ಸಮಯದಲ್ಲಿ ಅಲ್ಪವಿಶುದ್ಧತೆಯೊಡನೆ ಆಗುವುದು. ಅನಂತರ ಸಮಯ-ಸಮಯಕ್ಕೆ ಅನಂತಗುಣಿತ ವಿಶುದ್ಧತೆಯಿಂದ ಬೆಳೆಯುತ್ತ ಹೋಗುವುದು, ಮತ್ತು ಅದರ ಎರಡನೆಯ-ಮೂರನೆಯ ಮೊದಲಾದ ಸಮಯಗಳಲ್ಲಿ ಹೇಗೆ ಪರಿಣಾಮಗಳಿರುವವು ಹಾಗೆ ಯಾರೋ ಅನ್ಯ ಜೀವರುಗಳಿಗೆ ಮೊದಲ ಸಮಯದಲ್ಲಿಯೇ ಆಗುವುವು ಮತ್ತು ಅವರಿಗೆ ಅದರಿಂದ ಸಮಯ-ಸಮಯಕ್ಕೆ ಅನಂತ ಗುಣಿತ ವಿಶುದ್ಧತೆಯಿಂದ ಬೆಳೆಯುತ್ತ ಹೋಗುವವು. ಈ ಪ್ರಕಾರ ಅಧಃಪ್ರವೃತ್ತಿಕರಣವೆಂದು ತಿಳಿಯುವುದು.

ಮತ್ತು ಅದರಲ್ಲಿ ಮೊದಲಿನ ಮತ್ತು ನಂತರದ, ಸಮಯಗಳ ಪರಿಣಾಮಗಳು ಸಮಾನವಿಲ್ಲದಿರುವುದು. ಅಪೂರ್ವವೇ ಆಗುವುದು ಅದು ಅಪೂರ್ವಕರಣವಿದೆ. ಹೇಗೆಂದರೆ ಆ ಕರಣದ ಪರಿಣಾಮಗಳು ಮೊದಲಿನ ಸಮಯದಲ್ಲಿರುವ ಹಾಗೆ ಯಾವುದೇ ಜೀವನಿಗೆ ದ್ವಿತೀಯಾದಿ ಸಮಯಗಳಲ್ಲಿ ಇರುವುದಿಲ್ಲ, ವೃದ್ಧಿಸುತ್ತಲೇ ಇರುತ್ತವೆ; ಮತ್ತು ಇಲ್ಲಿ ಅಧಃಕರಣದಂತೆ ಯಾವ ಜೀವರುಗಳಿಗೆ ಕರಣದ ಮೊದಲ ಸಮಯವೇ ಇದೆ, ಆ ಅನೇಕ ಜೀವರುಗಳ ಪರಿಣಾಮಗಳು ಪರಸ್ಪರ ಸಮಾನವೇ ಇರುತ್ತವೆ ಮತ್ತು ಹೀನಾಧಿಕ ವಿಶುದ್ಧತೆ ಸಹಿತವೂ ಇರುತ್ತವೆ;ಆದರೆ ಇಲ್ಲಿನ ವಿಶೇಷತೆಯೇನೆಂದರೆ ಇವನ ಉತ್ಕೃಷ್ಟತೆಗಿಂತ ಕೂಡ ದ್ವಿತೀಯಾದಿ ಸಮಯವುಳ್ಳವನ ಜಘನ್ಯ ಪರಿಣಾಮಗಳೂ ಅನಂತಗುಣಿತ ವಿಶುದ್ಧತೆಯೊಡನೆಯೇ ಇರುತ್ತವೆ. ಇದೇ ಪ್ರಕಾರ ಯಾರು ಕರಣ ಪ್ರಾರಂಭ ಮಾಡಿ ದ್ವಿತೀಯಾದಿ ಸಮಯಗಳಾಗಿವೆ, ಅವರ ಆ ಸಮಯವುಳ್ಳವರ ಪರಿಣಾಮಗಳು ಸರ್ವಥಾ ಆ ಸಮಯಸಮಾನ ಇರುವುದಿಲ್ಲ. ಅಪೂರ್ವವೇ ಇರುತ್ತವೆ. ಈ ಪ್ರಕಾರ ಅಪೂರ್ವಕರಣವನ್ನು★★ ತಿಳಿಯುವುದು.

---

★ ಲಬ್ಧಿಸಾರ, ಗಾಥೆ-೩೫

★★ ಸಮಏ ಸಮಏ ಭಿಣ್ಣಾ ಭಾವಾ ತಮ್ಹಾ ಅಪುವ್ವಕರಣೋ ಹು ||೩೬|| ಲಬ್ಧಿಸಾರ
ಜಮ್ಹಾ ಉವರಿಮಭಾವಾ ಹೇಟ್ಠಿಮಭಾವೇಹಿಂ ಣತ್ಥಿಸರಿಸತ್ತಿಂ ।
ತಮ್ಹಾ ವಿದಿಯಂ ಕರಣಂ ಅಪುವ್ವಕರಣೇತ್ತಿ ಣಿದ್ದಿಟ್ಠಂ ||೫೧|| ಲಬ್ಧಿಸಾರ

ಕರಣಂ ಪರಿಣಾಮೋ ಅಪುವ್ವಾಣಿ ಚ ತಾಣಿ ಕರಣಾಣಿ ಚ ಅಪುವ್ವಕರಣಾಣಿ, ಅಸಮಾಣಪರಿಣಾಮಾ ತ್ತಿ ಜು ಉತ್ತಂ ಹೋದಿ || -ಧವಲಾ ೧-೯-೮-೪

ಮತ್ತು ಅದರಲ್ಲಿ ಸಮಾನ ಸಮಯವರ್ತಿ ಜೀವರುಗಳ ಪರಿಣಾಮಗಳು ಸಮಾನವೇ ಇರುತ್ತವೆ, ನಿವೃತ್ತಿ ಎಂದರೆ ಪರಸ್ಪರ ಭೇದದಿಂದ ರಹಿತವಿರುತ್ತವೆ; ಯಾವ ಪ್ರಕಾರ ಆ ಕರಣದ ಮೊದಲನೆಯ ಸಮಯದಲ್ಲಿ ಎಲ್ಲ ಜೀವರುಗಳ ಪರಿಣಾಮಗಳು ಪರಸ್ಪರ ಸಮಾನವಾಗಿಯೇ ಇರುತ್ತವೆ, ಅದೇ ಪ್ರಕಾರ ದ್ವಿತೀಯಾದಿ ಸಮಯಗಳಲ್ಲಿ ಪರಸ್ಪರ ಸಮಾನತೆಯೆಂದು ತಿಳಿಯುವುದು. ಇನ್ನು ಪ್ರಥಮಾದಿ ಸಮಯವುಳ್ಳವರಿಗಿಂತ ದ್ವಿತೀಯಾದಿ ಸಮಯವುಳ್ಳವರಿಗೆ ಅನಂತ ಗುಣಿತ ವಿಶುದ್ಧತೆ ಸಹಿತವಿರುತ್ತವೆ. ಈ ಪ್ರಕಾರ ಅನಿವೃತ್ತಿಕರಣವನ್ನು[1] ತಿಳಿಯುವುದು.

ಈ ಪ್ರಕಾರ ಇವು ಮೂರು ಕರಣಗಳನ್ನು ತಿಳಿಯುವುದು.

ಅಲ್ಲಿ ಮೊದಲು ಅಂತರ್ಮುಹೂರ್ತಕಾಲದವರೆಗೆ ಅಧಃಕರಣವಿರುತ್ತದೆ. ಅಲ್ಲಿ ನಾಲ್ಕು ಆವಶ್ಯಕಗಳಿದ್ದು ಸಮಯ-ಸಮಯಕ್ಕೆ ಅನಂತಗುಣಿತ ವಿಶುದ್ಧತೆಯಾಗುತ್ತದೆ; ಮತ್ತು ಒಂದೊಂದು ಅಂತರ್ಮುಹೂರ್ತದಲ್ಲಿ ನವೀನ ಬಂಧದ ಸ್ಥಿತಿಯು ಕಡಿಮೆಯಾಗುತ್ತ ಹೋಗುತ್ತದೆ, ಅದು ಸ್ಥಿತಿಬಂಧಾಪಸರಣವಿದೆ; ಅದರಂತೆ ಪ್ರಶಸ್ತ ಪ್ರಕೃತಿಗಳ ಅನುಭಾಗವು ಸಮಯ-ಸಮಯಕ್ಕೆ ಅನಂತಗುಣಿತ ವೃದ್ಧಿಸುತ್ತದೆ; ಮತ್ತು ಅಪ್ರಶಸ್ತ ಪ್ರಕೃತಿಗಳ ಅನುಭಾಗ-ಬಂಧಗಳು ಸಮಯ-ಸಮಯಕ್ಕೆ ಅನಂತದ ಭಾಗದಷ್ಟಾಗುತ್ತವೆ. ಈ ಪ್ರಕಾರ ನಾಲ್ಕು ಆವಶ್ಯಕಗಳಾಗುತ್ತವೆ.

ಅಲ್ಲಿ ನಂತರ ಅಪೂರ್ವಕರಣವಾಗುತ್ತದೆ. ಅದರ ಕಾಲವು ಅಧಃಕರಣ ಕಾಲದ ಸಂಖ್ಯಾತದ ಭಾಗವಿದೆ. ಅದರಲ್ಲಿ ಈ ಆವಶ್ಯಕಗಳು ಸಹ ಇರುತ್ತವೆ. ಒಂದೊಂದು ಅಂತರ್ಮುಹೂರ್ತದಲ್ಲಿ ಸತ್ತಾಭೂತ ಪೂರ್ವಕರ್ಮದ ಸ್ಥಿತಿಯನ್ನು ಕಡಿಮೆ ಮಾಡುತ್ತದೆ ಅದು ಸ್ಥಿತಿಕಾಂಡ ಘಾತಕವಿದೆ; ಮತ್ತು ಅದರಿಂದ ಚಿಕ್ಕ ಒಂದೊಂದು ಅಂತರ್ಮುಹೂರ್ತದಲ್ಲಿ ಪೂರ್ವಕರ್ಮದ ಅನುಭಾಗವನ್ನು ಕಡಿಮೆ ಮಾಡುತ್ತದೆ ಅದು ಅನುಭಾಗಕಾಂಡಕ ಘಾತವಿದೆ; ಮತ್ತು ಗುಣಶ್ರೇಣಿಯ ಕಾಲದಲ್ಲಿ ಕ್ರಮದಿಂದ ಅಸಂಖ್ಯಾತ ಗುಣಿತ ಪ್ರಮಾಣಸಹಿತ ಕರ್ಮಗಳನ್ನು ನಿರ್ಜರೆಗೆ ಯೋಗ್ಯ ಮಾಡುತ್ತದೆ ಅದು ಗುಣಶ್ರೇಣಿ ನಿರ್ಜರೆಯಿದೆ. ಅಲ್ಲಿ ಗುಣಸಂಕ್ರಮಣವಾಗದಿದ್ದರೂ ಅನ್ಯತ್ರ ಅಪೂರ್ವಕರಣವಾಗುವುದು ಅಲ್ಲಿ ಆಗುತ್ತದೆ.

ಈ ಪ್ರಕಾರ ಅಪೂರ್ವಕರಣವಾದ ನಂತರ ಅನಿವೃತ್ತಿಕರಣವಾಗುತ್ತದೆ. ಅದರ ಕಾಲವು ಅಪೂರ್ವಕರಣಕ್ಕಿಂತಲೂ ಅಸಂಖ್ಯಾತದ ಭಾಗವಿದೆ. ಅದರಲ್ಲಿ ಪೂರ್ವೋಕ್ತ ಆವಶ್ಯಕ ಸಹಿತ ಅದೆಷ್ಟೋ ಕಾಲವು ಹೋದ ನಂತರ ಅಂತರಕರಣ★ ಮಾಡುತ್ತದೆ. ಆ ಅನಿವೃತ್ತಿಕರಣ ಕಾಲದ ನಂತರ ಉದಯದಲ್ಲಿ ಬರಲು

1 ಏಗಸಮಏ ವಟ್ಟಂತಾಣಂ ಜೀವಾಣಂ ಪರಿಣಾಮೆಹೀ ಣ ವಿಜ್ಜದೇ ಣಿಯಟ್ಟೀ ಣಿವಿತ್ತೀ ಜತ್ಥ ತೇ ಅಣಿಯಟ್ಟಿಪರಿಣಾಮಾ ॥ ಧವಲಾ ೧-೯-೮-೪
ಏಕಮ್ಹಿ ಕಾಲಸಮಯೇ ಸಂಠಾಣಾದೀಹಿಂ ಜಹ ಣಿವಟ್ಟಂತಿ ।
ಣ ಣಿವಟ್ಟಂತಿ ತಹಾ ವಿಯ ಪರಿಣಾಮೇಹಿಂ ಮಿಹೋ ಜೇಹಿಂ ॥೫೬॥ ಗೊಮ್ಮಟಸಾರ ಜೀವಕಾಂಡ

★ ಕಿಮಂತರಕರಣಂ ಣಾಮ ? ವಿವಕ್ಖಿಯಕಮ್ಮಾಣಂ ಹೇಟ್ಠಿಮೋವರಿಮಟ್ಠಿದೀಓ ಮೋತ್ತೂಣ ಮಜ್ಝೇ ಅಂತೋಮುಹುತ್ತ ಮೇತ್ತಾಣಂ ಟ್ಠಿದೀಣಂ ಪರಿಣಾಮವಿಸೇಸೇಣ ಣಿಸೇಗಾಣಮಭಾವೀಕರಣಮಂತರಕರಣಮಿದಿ ಭಣ್ಣದೇ ।. ಜಯಧವಲ ಅ.ಪ. ॥೯೫೩॥
**ಅರ್ಥ** :- ಅಂತರಕರಣದ ಸ್ವರೂಪವೇನಿದೆ ? **ಉತ್ತರ** :- ವಿವಕ್ಷಿತ ಕರ್ಮಗಳ ಅಧಸ್ತನ ಮತ್ತು ಉಪರಿಮ ಸ್ಥಿತಿಗಳನ್ನು ಬಿಟ್ಟು ಮಧ್ಯವರ್ತಿ ಅಂತರ್ಮುಹೂರ್ತ ಮಾತ್ರ ಸ್ಥಿತಿಗಳ ನಿಷೇಕಗಳ ಪರಿಣಾಮ ವಿಶೇಷದ ಮೂಲಕ ಅಭಾವ ಮಾಡುವುದನ್ನು ಅಂತರಕರಣವೆಂದು ಹೇಳುತ್ತಾರೆ.

ಯೋಗ್ಯವಾದಂಥ ಮಿಥ್ಯಾತ್ವಕರ್ಮದ ಮುಹೂರ್ತ ಮಾತ್ರ ನಿಷೇಕಗಳ ಅಭಾವ ಮಾಡುತ್ತದೆ; ಆ ಪರಮಾಣುಗಳನ್ನು ಅನ್ಯಸ್ಥಿತಿರೂಪವಾಗಿ ಪರಿಣಮಿತ ಮಾಡುತ್ತದೆ. ಮತ್ತು ಅಂತರಕರಣ ಮಾಡಿದ ನಂತರ ಉಪಶಮಕರಣ ಮಾಡುತ್ತದೆ. ಅಂತರಕರಣದ ಮೂಲಕ ಅಭಾವರೂಪ ಮಾಡಿದ ನಿಷೇಕಗಳ ಕಾಲವು ಬಂದಾಗ ನಿಷೇಕಗಳಿಲ್ಲದೆ ಯಾವುದರ ಉದಯವು ಬರುವುದು ? ಆದುದರಿಂದ ಮಿಥ್ಯಾತ್ವದ ಉದಯವಿಲ್ಲದಿರುವುದರಿಂದ ಪ್ರಥಮೋಪಶಮ ಸಮ್ಯಕ್ತ್ವದ ಪ್ರಾಪ್ತಿಯಾಗುತ್ತದೆ. ಅನಾದಿಮಿಥ್ಯಾದೃಷ್ಟಿಗೆ ಸಮ್ಯಕ್ತ್ವ ಮೋಹನೀಯ ಮತ್ತು ಮಿಶ್ರಮೋಹನೀಯದ ಸತ್ತಾ ಇಲ್ಲದಿರುವುದರಿಂದ ಅವನು ಒಂದು ಮಿಥ್ಯಾತ್ವಕರ್ಮದ ಉಪಶಮವನ್ನೇ ಮಾಡಿ ಉಪಶಮಸಮ್ಯಗ್ದೃಷ್ಟಿಯಾಗುತ್ತಾನೆ. ಮತ್ತು ಯಾವ ಜೀವನು ಸಮ್ಯಕ್ತ್ವ ಪಡೆದು ಪುನಃ ಭ್ರಷ್ಟನಾಗುತ್ತಾನೆ, ಅವನ ಅವಸ್ಥೆಯು ಅನಾದಿ ಮಿಥ್ಯಾದೃಷ್ಟಿಯಂತೆಯೇ ಆಗಿ ಬಿಡುತ್ತದೆ.

**ಪ್ರಶ್ನೆ :-** ಪರೀಕ್ಷೆ ಮಾಡಿ ತತ್ತ್ವಶ್ರದ್ಧೆ ಮಾಡಿದ ನಂತರ ಅದರ ಅಭಾವ ಹೇಗಾಗುವುದು ?

**ಉತ್ತರ :-** ಹೇಗೆ ಒಬ್ಬ ಪುರುಷನಿಗೆ ಶಿಕ್ಷಣ ಕೊಡುತ್ತದೆ. ಅದರ ಪರೀಕ್ಷೆಯ ಮೂಲಕ ಅವನಿಗೆ 'ಹೀಗೆಯೇ ಇದೆಯೆಂಬ' ಪ್ರತೀತಿಯೂ ಬರುತ್ತದೆ; ನಂತರ ಯಾವುದೇ ಪ್ರಕಾರದಿಂದ ಅನ್ಯಥಾ ವಿಚಾರವಾಗುವುದರಿಂದ ಆ ಶಿಕ್ಷಣದಲ್ಲಿ ಸಂದೇಹ ಬರುವುದು. ಹೀಗಿದೆಯೋ ? ಇಲ್ಲವೆ ಹೀಗಿದೆಯೋ ? ಅಥವಾ ಹೇಗಿದೆ ಯಾರಿಗೆ ಗೊತ್ತು ? ಅಥವಾ ಆ ಶಿಕ್ಷಣವನ್ನು ಅಸತ್ಯವೆಂದು ತಿಳಿದುಕೊಂಡು ಅದರಿಂದ ವಿಪರೀತತೆಯಾದಾಗ ಅವನಿಗೆ ಅಪ್ರತೀತಿಯಾಯಿತು. ಮತ್ತು ಅವನಿಗೆ ಆ ಶಿಕ್ಷಣದ ಪ್ರತೀತಿಯ ಅಭಾವವಾಗುವುದು. ಅಥವಾ ಮೊದಲಂತೂ ಅನ್ಯಥಾ ಪ್ರತೀತಿಯೇ ಇತ್ತು. ಮಧ್ಯದಲ್ಲಿ ಶಿಕ್ಷಣದ ವಿಚಾರದಿಂದ ಯಥಾರ್ಥ ಪ್ರತೀತಿಯಾಗಿತ್ತು; ಆದರೆ ಆ ಶಿಕ್ಷಣದ ವಿಚಾರ ಮಾಡಿ ಬಹಳಷ್ಟು ಕಾಲ ಕಳೆಯಿತು, ಆಗ ಅದನ್ನು ಮರೆತು ಮೊದಲು ಹೇಗೆ ಅನ್ಯಥಾ ಪ್ರತೀತಿಯಿತ್ತು ಹಾಗೆ ತಾನಾಗಿಯೇ ಆಗಿ ಹೋಯಿತು. ಆಗ ಆ ಶಿಕ್ಷಣದ ಪ್ರತೀತಿಯ ಅಭಾವವಾಗಿ ಹೋಗುತ್ತದೆ. ಅಥವಾ ಮೊದಲಂತೂ ಯಥಾರ್ಥ ಪ್ರತೀತಿ ಮಾಡಿತು, ಅನಂತರ ಯಾವುದೇ ಅನ್ಯಥಾ ವಿಚಾರ ಮಾಡಲಿಲ್ಲ, ಅಧಿಕ ಕಾಲ ಕಳೆಯಲಿಲ್ಲ; ಆದರೆ ಅಂಥದೇ ಕರ್ಮೋದಯದಿಂದ ಭವಿತವ್ಯಕ್ಕೆ ಅನುಸರಿಸಿ ತಾನಾಗಿಯೇ ಆ ಪ್ರತೀತಿಯ ಅಭಾವವಾಗಿ ಅನ್ಯಥಾತನವಾಯಿತು. ಹೀಗೆ ಅನೇಕ ಪ್ರಕಾರದಿಂದ ಆ ಶಿಕ್ಷಣದ ಯಥಾರ್ಥ ಪ್ರತೀತಿಯ ಅಭಾವವಾಗುತ್ತದೆ. ಅದೇ ಪ್ರಕಾರ ಜೀವನಿಗೆ ಜಿನದೇವರ ತತ್ತ್ವಾದಿಗಳ ರೂಪದ ಉಪದೇಶವಾಗುವುದು; ಅದರ ಪರೀಕ್ಷೆ ಮಾಡಿ ಅವನಿಗೆ 'ಹೀಗೆಯೇ ಇದೆ'ಯೆಂಬ ಶ್ರದ್ಧೆಯಾಗುವುದು, ನಂತರ ಮೊದಲು ಹೇಳಿದ ಹಾಗೆ ಅನೇಕ ಪ್ರಕಾರದಿಂದ ಆ ಯಥಾರ್ಥ ಶ್ರದ್ಧೆಯ ಅಭಾವವಾಗುತ್ತದೆ. ಈ ಕಥನವನ್ನು ಸ್ಥೂಲರೂಪದಿಂದ ತಿಳಿಸಿಕೊಡಲಾಗಿದೆ. ತಾರತಮ್ಯದಿಂದ ' ಈ ಸಮಯದಲ್ಲಿ ಶ್ರದ್ಧೆಯಿದೆ ಮತ್ತು ಈ ಸಮಯದಲ್ಲಿ ಇಲ್ಲ'ವೆಂಬುದು ಕೇವಲಜ್ಞಾನದಲ್ಲಿ ತಿಳಿದುಬರುತ್ತದೆ; ಏಕೆಂದರೆ ಇಲ್ಲಿ ಮೂಲ ಕಾರಣವು ಮಿಥ್ಯಾತ್ವ ಕರ್ಮವಿದೆ. ಅದರ ಉದಯವಾದರೆ ಅನ್ಯವಿಕಾರಾದಿ ಕಾರಣಗಳು ದೊರಕಲಿ ಅಥವಾ ದೊರಕದಿರಲಿ, ತಾನಾಗಿಯೇ ಸಮ್ಯಕ್ ಶ್ರದ್ಧೆಯ ಅಭಾವವಾಗುತ್ತದೆ. ಮತ್ತು ಅದರ ಉದಯವಿಲ್ಲದಾಗ ಅನ್ಯಕಾರಣಗಳು ದೊರಕಲಿ ಅಥವಾ ದೊರಕದಿರಲಿ ತಾನಾಗಿಯೇ ಸಮ್ಯಕ್ ಶ್ರದ್ಧೆಯಾಗುತ್ತದೆ. ಆದ್ದರಿಂದ

ಸಮಯ-ಸಮಯಕ್ಕೆ ಸಂಬಂಧಿಸಿದ ಇಂಥ ಅಂತರಂಗದ ಸೂಕ್ಷ್ಮದಶೆಯನ್ನು ತಿಳಿದುಕೊಳ್ಳುವುದು ಛದ್ಮಸ್ಥನಿಗೆ ಆಗುವುದಿಲ್ಲ, ಅದಕ್ಕಾಗಿ ಇವನಿಗೆ ತನ್ನ ಮಿಥ್ಯಾ-ಸಮ್ಯಕ್ ಶ್ರದ್ಧಾರೂಪ ಅವಸ್ಥೆಯ ತಾರತಮ್ಯದ ನಿಶ್ಚಯವಾಗುವುದಿಲ್ಲ; ಅದು ಕೇವಲಜ್ಞಾನದಲ್ಲಿ ಭಾಸವಾಗುತ್ತದೆ. ಈ ಅಪೇಕ್ಷೆಯಿಂದ ಗುಣಸ್ಥಾನಗಳ ಬದಲಾಗುವಿಕೆಯನ್ನು ಶಾಸ್ತ್ರದಲ್ಲಿ ಹೇಳಿದೆ.

ಈ ಪ್ರಕಾರ ಸಮ್ಯಕ್ತ್ವದಿಂದ ಭ್ರಷ್ಟನಾದವನನ್ನು ಸಾದಿ ಮಿಥ್ಯಾದೃಷ್ಟಿಯೆಂದು ಹೇಳುತ್ತಾರೆ. ಅವನಿಗೂ ಪುನಃ ಸಮ್ಯಕ್ತ್ವದ ಪ್ರಾಪ್ತಿಯಲ್ಲಿ ಪೂರ್ವೋಕ್ತ ಪಂಚಲಬ್ಧಿಗಳಾಗುತ್ತವೆ. ವಿಶೇಷವೆಂದರೆ ಇಲ್ಲಿ ಯಾವ ಜೀವನಿಗೆ ದರ್ಶನಮೋಹದ ಮೂರು ಪ್ರಕೃತಿಗಳ ಸತ್ತಾ ಇರುತ್ತದೆ, ಆ ಮೂರನ್ನು ಉಪಶಮಮಾಡಿ ಪ್ರಥಮೋಪಶಮ ಸಮ್ಯಕ್ತ್ವಿಯಾಗುತ್ತಾನೆ. ಅಥವಾ ಯಾವನಿಗೆ ಸಮ್ಯಕ್ತ್ವ ಮೋಹನೀಯದ ಉದಯ ಬರುತ್ತದೆ. ಎರಡು ಪ್ರಕೃತಿಗಳ ಉದಯವಿರುವುದಿಲ್ಲ, ಅವನು ಕ್ಷಯೋಪಶಮ ಸಮ್ಯಕ್ತ್ವಿಯಾಗುತ್ತಾನೆ; ಅವನಿಗೆ ಗುಣಶ್ರೇಣೀ ಮೊದಲಾದ ಕ್ರಿಯೆಗಳಾಗುವುದಿಲ್ಲ ಮತ್ತು ಅನಿವೃತ್ತಿಕರಣವಾಗುವುದಿಲ್ಲ. ಇನ್ನು ಒಬ್ಬನಿಗೆ ಮಿಶ್ರಮೋಹನೀಯದ ಉದಯ ಬರುತ್ತದೆ, ಎರಡು ಪ್ರಕೃತಿಗಳ ಉದಯವಿರುವುದಿಲ್ಲ, ಅವನು ಮಿಶ್ರಗುಣಸ್ಥಾನಕ್ಕೆ ಪ್ರಾಪ್ತನಾಗುತ್ತಾನೆ ಅವನಿಗೆ ಕರಣಗಳಾಗುವುದಿಲ್ಲ. ಈ ಪ್ರಕಾರ ಸಾದಿ ಮಿಥ್ಯಾದೃಷ್ಟಿಯ ಮಿಥ್ಯಾತ್ವವು ಹೊರಟು ಹೋದ ಮೇಲೆ ಇಂಥ ದಶೆಯಾಗುತ್ತದೆ. ಕ್ಷಾಯಿಕ ಸಮ್ಯಕ್ತ್ವವನ್ನು ವೇದಕ ಸಮ್ಯಗ್ದೃಷ್ಟಿಯೇ ಪ್ರಾಪ್ತಮಾಡಿಕೊಳ್ಳುವುದರಿಂದ ಅದರ ಕಥನವನ್ನಿಲ್ಲಿ ಮಾಡಿಲ್ಲ. ಈ ಪ್ರಕಾರ ಸಾದಿಮಿಥ್ಯಾದೃಷ್ಟಿಯ ಜಘನ್ಯವಂತೂ ಮಧ್ಯಮ ಅಂತರ್ಮುಹೂರ್ತ ಮಾತ್ರ ಉತ್ಕೃಷ್ಟವು ಕಿಂಚಿತ್ ನ್ಯೂನ ಅರ್ಧಪುದ್ಗಲಪರಾವರ್ತನ ಮಾತ್ರ ಕಾಲವೆಂದು ತಿಳಿಯುವುದು.

ಪರಿಣಾಮಗಳ ವಿಚಿತ್ರತೆಯನ್ನು ನೋಡಿರಿ ! ಓರ್ವ ಜೀವನು ಹನ್ನೊಂದನೆಯ ಗುಣಸ್ಥಾನದಲ್ಲಿ ಯಥಾಖ್ಯಾತ ಚಾರಿತ್ರವನ್ನು ಪ್ರಾಪ್ತಮಾಡಿಕೊಂಡು ಪುನಃ ಮಿಥ್ಯಾದೃಷ್ಟಿಯಾಗಿ ಕಿಂಚಿತ್ ನ್ಯೂನ ಅರ್ಧಪುದ್ಗಲ ಪರಾವರ್ತನ ಕಾಲದವರೆಗೆ ಸಂಸಾರದಲ್ಲಿ ಸುತ್ತುತ್ತಾನೆ, ಮತ್ತು ಓರ್ವನು ನಿತ್ಯ ನಿಗೋದದಿಂದ ಹೊರಹೊರಟು ಮನುಷ್ಯನಾಗಿ ಮಿಥ್ಯಾತ್ವವು ಹೊರಟುಹೋದನಂತರ ಅಂತರ್ಮುಹೂರ್ತದಲ್ಲಿ ಕೇವಲಜ್ಞಾನ ಪ್ರಾಪ್ತಮಾಡಿಕೊಳ್ಳುತ್ತಾನೆ. **ಹೀಗೆ ತಿಳಿದುಕೊಂಡು ತಮ್ಮ ಪರಿಣಾಮವು ಕೆಡುವುದರ ಭಯವಿರಬೇಕು ಮತ್ತು ಪರಿಣಾಮ ಸುಧಾರಿಸುವ ಉಪಾಯ ಮಾಡಬೇಕು.**

ಇನ್ನು ಆ ಸಾದಿ ಮಿಥ್ಯಾದೃಷ್ಟಿಗೆ ಸ್ವಲ್ಪ ಕಾಲ ಮಿಥ್ಯಾತ್ವದ ಉದಯವಿದ್ದರೆ ಬಾಹ್ಯದಲ್ಲಿ ಜೈನತ್ವವು ನಷ್ಟವಾಗುವುದಿಲ್ಲ, ಮತ್ತು ತತ್ತ್ವಗಳ ಅಶ್ರದ್ಧೆಯು ವ್ಯಕ್ತವಾಗುವುದಿಲ್ಲ, ಆಮೇಲೆ ವಿಚಾರಮಾಡದೆಯೇ ಅಥವಾ ಸ್ವಲ್ಪ ವಿಚಾರದಿಂದಲೇ ಪುನಃ ಸಮ್ಯಕ್ತ್ವದ ಪ್ರಾಪ್ತಿಯಾಗಿಬಿಡುತ್ತದೆ. ಮತ್ತು ಅಧಿಕಕಾಲದವರೆಗೆ ಮಿಥ್ಯಾತ್ವದ ಉದಯವಿದ್ದರೆ ಹೇಗೆ ಅನಾದಿ ಮಿಥ್ಯಾದೃಷ್ಟಿಯ ದಶೆಯಾಗುತ್ತದೆ ಹಾಗೆ ಈತನ ದಶೆಯೂ ಆಗುತ್ತದೆ. ಅವನು ಗೃಹೀತ ಮಿಥ್ಯಾತ್ವವನ್ನೂ ಗ್ರಹಣ ಮಾಡುತ್ತಾನೆ ಮತ್ತು ನಿಗೋದಾದಿಗಳಲ್ಲಿಯೂ ಸುತ್ತುತ್ತಾನೆ. ಇದರದು ಯಾವ ಪ್ರಮಾಣವಿಲ್ಲ.

ಮತ್ತು ಓರ್ವ ಜೀವನು ಸಮ್ಯಕ್ತ್ವದಿಂದ ಭ್ರಷ್ಟನಾಗಿ ಸಾಸಾದನದಲ್ಲಿ ಬರುತ್ತಾನೆ ಮತ್ತು ಅಲ್ಲಿ ಜಘನ್ಯ ಒಂದು ಸಮಯ ಉತ್ಕೃಷ್ಟ ಆರು ಆವಲಿ ಪ್ರಮಾಣಕಾಲ ಉಳಿಯುತ್ತಾನೆ. ಅವನ ಪರಿಣಾಮದ ದಶೆಯನ್ನು ವಚನಗಳ ಮೂಲಕ ಹೇಳಲಾಗುವುದಿಲ್ಲ. ಸೂಕ್ಷ್ಮಕಾಲಮಾತ್ರ ಯಾವುದೇ ಒಂದು ಜಾತಿಯ ಕೇವಲಜ್ಞಾನಗಮ್ಯ ಪರಿಣಾಮಗಳಿರುತ್ತವೆ. ಅಲ್ಲಿ ಅನಂತಾನುಬಂಧಿಯ ಉದಯವಿರುತ್ತದೆ, ಆದರೆ ಮಿಥ್ಯಾತ್ವದ ಉದಯವಿರುವುದಿಲ್ಲ. ಆಗಮ ಪ್ರಮಾಣಗಳಿಂದ ಅದರ ಸ್ವರೂಪವನ್ನು ತಿಳಿದುಕೊಳ್ಳುವುದು.

ಅದರಂತೆ ಒಬ್ಬ ಜೀವನು ಸಮ್ಯಕ್ತ್ವದಿಂದ ಭ್ರಷ್ಟನಾಗಿ ಮಿಶ್ರಗುಣಸ್ಥಾನಕ್ಕೆ ಪ್ರಾಪ್ತನಾಗುತ್ತಾನೆ. ಅಲ್ಲಿ ಮಿಶ್ರಮೋಹನೀಯದ ಉದಯವಿರುತ್ತದೆ, ಅದರ ಕಾಲವು ಮಧ್ಯಮ ಅಂತರ್ಮುಹೂರ್ತಮಾತ್ರವಿದೆ. ಇದರ ಕಾಲವೂ ಅಲ್ಪವಿರುವುದರಿಂದ ಇದರ ಪರಿಣಾಮಗಳು ಕೂಡ ಕೇವಲಜ್ಞಾನ ಗಮ್ಯವಿವೆ. ಇಲ್ಲಿ ತಿಳಿದು ಬರುವುದೇನೆಂದರೆ ಹೇಗೆ ಒಬ್ಬನಿಗೆ ಶಿಕ್ಷಣ ಕೊಟ್ಟಿತು; ಅದನ್ನು ಅವನು ಸ್ವಲ್ಪ ಸತ್ಯ ಮತ್ತು ಸ್ವಲ್ಪ ಅಸತ್ಯವಾಗಿ ಏಕಕಾಲದಲ್ಲಿಯೇ ಮನ್ನಿಸುವನು, ಅದೇ ಪ್ರಕಾರ ತತ್ತ್ವಗಳ ಶ್ರದ್ಧೆ-ಅಶ್ರದ್ಧೆಯು ಏಕಕಾಲದಲ್ಲಿಯೇ ಆಗುವುದು ಅದು ಮಿಶ್ರದಶೆಯಿದೆ.

'ನಮಗಂತೂ ಜಿನದೇವರು ಹಾಗೂ ಅನ್ಯದೇವರುಗಳೆಲ್ಲರೂ ವಂದನೆ ಮಾಡಲು ಯೋಗ್ಯರಿದ್ದಾರೆ'-ಎಂಬ ಇತ್ಯಾದಿ ಮಿಶ್ರಶ್ರದ್ಧೆಯನ್ನು ಮಿಶ್ರಗುಣಸ್ಥಾನವೆಂದು ಹೇಳುತ್ತಾರೆಂದು ಕೆಲವರು ಹೇಳುತ್ತಾರೆ; ಆದರೆ ಹಾಗೆ ಇಲ್ಲ; ಇದಂತೂ ಪ್ರತ್ಯಕ್ಷ ಮಿಥ್ಯಾತ್ವದಶೆಯಿದೆ. ವ್ಯವಹಾರರೂಪ ದೇವಾದಿಕರ ಶ್ರದ್ಧೆಯಾದಮೇಲೆ ಕೂಡ ಮಿಥ್ಯಾತ್ವವಿರುತ್ತದೆ, ಆಗ ಇವನಿಗಂತೂ ದೇವ-ಕುದೇವದ ಯಾವ ನಿರ್ಣಯವೂ ಇಲ್ಲದಿರುವುದರಿಂದ ಇವನಿಗಂತೂ ಸ್ಪಷ್ಟವಾಗಿ ವಿನಯಮಿಥ್ಯಾತ್ವವಿದೆಯೆಂದು ತಿಳಿಯುವುದು.

ಈ ಪ್ರಕಾರ ಸಮ್ಯಕ್ತ್ವಸನ್ಮುಖವಾದ ಮಿಥ್ಯಾದೃಷ್ಟಿಗಳ ಕಥನ ಮಾಡಿದೆ, ಪ್ರಸಂಗವಶದಿಂದ ಅನ್ಯಕಥನವನ್ನೂ ಮಾಡಿದೆ.

ಈ ಪ್ರಕಾರ ಜೈನಮತಾನುಯಾಯಿ ಮಿಥ್ಯಾದೃಷ್ಟಿಗಳ ಸ್ವರೂಪದ ನಿರೂಪಣೆ ಮಾಡಲಾಗಿದೆ.

ಇಲ್ಲಿ ನಾನಾ ಪ್ರಕಾರದ ಮಿಥ್ಯಾದೃಷ್ಟಿಗಳ ಕಥನ ಮಾಡಿದೆ. ಅದರ ಪ್ರಯೋಜನವೇನೆಂದರೆ ಆ ನಾನಾ ಪ್ರಕಾರಗಳನ್ನು ಪರಿಚಯಮಾಡಿಕೊಂಡು ತಮ್ಮಲ್ಲಿ ಅಂಥ ದೋಷಗಳಿದ್ದರೆ ಅವನ್ನು ದೂರಮಾಡಿ ಸಮ್ಯಕ್ ಶ್ರದ್ಧೆಯುಳ್ಳವರಾಗಬೇಕು, ಇತರರ ಇಂಥ ದೋಷಗಳನ್ನೇ ನೋಡಿ-ನೋಡಿ ಕಷಾಯವಶರಾಗಬಾರದು; ಏಕೆಂದರೆ ತಮ್ಮ ಒಳಿತು-ಕೆಡಕುಗಳಂತೂ ತಮ್ಮ ಪರಿಣಾಮಗಳಿಂದ ಆಗುವವು. ಇತರರು ರುಚಿಯುಳ್ಳವರಾಗಿ ಕಂಡರೆ ಅವರಿಗೂ ಒಂದಿಷ್ಟು ಉಪದೇಶ ಮಾಡಿ ಒಳ್ಳೆಯವರನ್ನಾಗಿ ಮಾಡುವುದು. **ಆದುದರಿಂದ ತಮ್ಮ ಪರಿಣಾಮ ಸುಧಾರಿಸುವ ಉಪಾಯ ಮಾಡುವುದು ಯೋಗ್ಯವಿದೆ; ಎಲ್ಲ ಪ್ರಕಾರದ ಮಿಥ್ಯಾತ್ವಭಾವ ಬಿಟ್ಟುಕೊಟ್ಟು ಸಮ್ಯಗ್ದೃಷ್ಟಿಯಾಗುವುದು ಯೋಗ್ಯವಿದೆ; ಏಕೆಂದರೆ ಸಂಸಾರದ ಮೂಲವು ಮಿಥ್ಯಾತ್ವವಿದೆ, ಮಿಥ್ಯಾತ್ವದ ಸಮಾನವಾದ ಪಾಪವು ಬೇರೆ ಯಾವುದೂ ಇಲ್ಲ.**

ಒಂದು ಮಿಥ್ಯಾತ್ವ ಮತ್ತು ಅದರ ಜತೆಯಲ್ಲಿ ಅನಂತಾನುಬಂಧಿಯ ಅಭಾವವಾದ ಮೇಲೆ ನಲವತ್ತೊಂದು ಪ್ರಕೃತಿಗಳ★ ಬಂಧವಾಗುವುದೇ ನಿಂತು ಹೋಗುತ್ತದೆ, ಸ್ಥಿತಿಯು ಅಂತಃಕೋಟಾಕೋಟಿಸಾಗರದ್ದು ಉಳಿದು ಬಿಡುತ್ತದೆ, ಅನುಭಾಗವು ಸ್ವಲ್ಪವೇ ಉಳಿಯುತ್ತದೆ ಮತ್ತು ಶೀಘ್ರವಾಗಿಯೇ ಮೋಕ್ಷಪದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಇನ್ನು ಮಿಥ್ಯಾತ್ವದ ಸದ್ಭಾವವಿರುವಾಗ ಇತರ ಅನೇಕ ಉಪಾಯ ಮಾಡಿದರೂ ಕೂಡ ಮೋಕ್ಷ ಮಾರ್ಗವಾಗುವುದಿಲ್ಲ. ಆದುದರಿಂದ ಯಾವುದಾದರೂ ಉಪಾಯದಿಂದ ಎಲ್ಲ ಪ್ರಕಾರದ ಮಿಥ್ಯಾತ್ವವನ್ನು ನಾಶ ಮಾಡುವುದು ಯೋಗ್ಯವಿದೆ.

**ಈ ಪ್ರಕಾರ ಶ್ರೀ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರದಲ್ಲಿ ಜೈನಮತಾವಲಂಬಿಯಾದ ಮಿಥ್ಯಾದೃಷ್ಟಿಗಳ ನಿರೂಪಣೆ ಮಾಡುವ ಏಳನೆಯ ಅಧಿಕಾರವು ಇಲ್ಲಿಗೆ ಸಮಾಪ್ತವಾಯಿತು.**

★ ನಲವತ್ತೊಂದು ಪ್ರಕೃತಿಗಳ ಹೆಸರು-

ಮಿಥ್ಯಾತ್ವಕ್ಕೆ ಸಂಬಂಧಿಸಿದವು ೧೬

ಮಿಥ್ಯಾತ್ವ, ಹುಂಡಕಸಂಸ್ಥಾನ, ನಪುಂಸಕವೇದ, ನರಕಗತಿ, ನರಕಗತ್ಯಾನುಪೂರ್ವೀ, ನರಕಾಯು, ಅಸಂಪ್ರಾಪ್ತಾಸೃಪಾಟಿಕಾಸಂಹನನ, ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯವೆಂಬ ನಾಲ್ಕು ಜಾತಿಗಳು, ಸ್ಥಾವರ, ಆತಾಪ, ಸೂಕ್ಷ್ಮ, ಅಪರ್ಯಾಪ್ತ, ಸಾಧಾರಣ.

ಅನಂತಾನುಬಂಧಿಗೆ ಸಂಬಂಧಿಸಿದವು ೨೫.

ಅನಂತಾನುಬಂಧೀ ಕ್ರೋಧ, ಮಾನ, ಮಾಯೆ, ಲೋಭ; ಸ್ತ್ಯಾನಗೃದ್ಧಿ, ನಿದ್ರಾನಿದ್ರಾ, ಪ್ರಚಲಾಪ್ರಚಲಾ, ದುರ್ಭಗ, ದುಸ್ವರ, ಅನಾದೇಯ, ಅಪ್ರಶಸ್ತವಿಹಾಯೋಗತಿ, ಸ್ತ್ರೀವೇದ, ನೀಚಗೋತ್ರ, ತಿರ್ಯಗ್ಗತಿ, ತಿರ್ಯಗ್ಗತ್ಯಾನುಪೂರ್ವೀ, ತಿರ್ಯಂಗಾಯು, ಉದ್ಯೋತ, (ನ್ಯಗ್ರೋಧ, ಸ್ವಾತಿ, ಕುಬ್ಜಕ, ವಾಮನ) ವೆಂಬ ನಾಲ್ಕು ಸಂಸ್ಥಾನಗಳು, (ವಜ್ರನಾರಾಚ, ನಾರಾಚ, ಅರ್ಧನಾರಾಚ, ಕೀಲಕವೆಂಬ ನಾಲ್ಕು ಸಂಹನನಗಳು)

# ಎಂಟನೆಯ ಅಧಿಕಾರ

## ಉಪದೇಶದ ಸ್ವರೂಪ

ಈಗ ಮಿಥ್ಯಾದೃಷ್ಟಿ ಜೀವರುಗಳಿಗೆ ಮೋಕ್ಷಮಾರ್ಗದ ಉಪದೇಶವಿತ್ತು ಅವರಿಗೆ ಉಪಕಾರ ಮಾಡುವುದೇ ನಿಜವಾಗಿ ಉತ್ತಮ ಉಪಕಾರವಿದೆ. ತೀರ್ಥಂಕರ, ಗಣಧರ ಮೊದಲಾದವರು ಕೂಡ ಇಂಥದೇ ಉಪಕಾರ ಮಾಡುತ್ತಾರೆ; ಆದುದರಿಂದ ಈ ಶಾಸ್ತ್ರದಲ್ಲಿ ಕೂಡ ಅವರುಗಳ ಉಪದೇಶಕ್ಕೆ ಅನುಸರಿಸಿ ಉಪದೇಶ ಕೊಡಲಾಗುವುದು.

ಉಪದೇಶದ ಸ್ವರೂಪವನ್ನು ತಿಳಿದುಕೊಳ್ಳುವ ಸಲುವಾಗಿ ಒಂದಿಷ್ಟು ವ್ಯಾಖ್ಯಾನ ಮಾಡುತ್ತಾರೆ; ಏಕೆಂದರೆ ಉಪದೇಶವನ್ನು ಯಥಾಪ್ರಕಾರ ಪರಿಚಯಮಾಡಿಕೊಳ್ಳದಿದ್ದರೆ ಅನ್ಯಥಾ ಮನ್ನಿಸಿ ವಿಪರೀತವಾಗಿ ಪ್ರವರ್ತನೆಯಾಗುವುದು. ಆದುದರಿಂದ ಉಪದೇಶದ ಸ್ವರೂಪವನ್ನು ಹೇಳುತ್ತಾರೆ.

ಜಿನಮತದಲ್ಲಿ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗವೆಂದು ಈ ನಾಲ್ಕು ಅನುಯೋಗಗಳ ಮೂಲಕ ಉಪದೇಶ ಕೊಡಲಾಗಿದೆ.

ತೀರ್ಥಂಕರ-ಚಕ್ರವರ್ತಿ ಮೊದಲಾದ ಮಹಾಪುರುಷರ ಚಾರಿತ್ರದ ನಿರೂಪಣೆ ಮಾಡಿರುವುದು ಅದು ಪ್ರಥಮಾನುಯೋಗವಿದೆ [1], ಜೀವದ ಗುಣಸ್ಥಾನ ಮಾರ್ಗಣಾದಿರೂಪಗಳ ಮತ್ತು ಕರ್ಮಗಳ ಹಾಗೂ ತ್ರಿಲೋಕಾದಿಗಳ ನಿರೂಪಣೆ ಮಾಡಿರುವುದು ಅದು ಕರಣಾನುಯೋಗವಿದೆ.[2] ಗೃಹಸ್ಥರ-ಮುನಿಗಳ ಧರ್ಮಾಚರಣೆಯ ನಿರೂಪಣೆ ಮಾಡಿರುವುದು ಅದು ಚರಣಾನುಯೋಗವಿದೆ.[3] ಮತ್ತು ಷಟ್‌ದ್ರವ್ಯ, ಸಪ್ತತತ್ತ್ವಾದಿಗಳ ಹಾಗೂ ಸ್ವ-ಪರಭೇದ ವಿಜ್ಞಾನಾದಿಗಳ ನಿರೂಪಣೆ ಮಾಡಿರುವುದು ಅದು ದ್ರವ್ಯಾನುಯೋಗವಿದೆ.[4]

## ಅನುಯೋಗಗಳ ಪ್ರಯೋಜನ

ಈಗ ಇವುಗಳ ಪ್ರಯೋಜನ ಹೇಳುತ್ತಾರೆ,-

### ಪ್ರಥಮಾನುಯೋಗದ ಪ್ರಯೋಜನ ಃ-

ಪ್ರಥಮಾನುಯೋಗದಲ್ಲಿ ಸಂಸಾರದ ವಿಚಿತ್ರತೆ, ಪುಣ್ಯ-ಪಾಪದ ಫಲ, ಮಹಾಪುರುಷರ ಪ್ರವೃತ್ತಿ ಇತ್ಯಾದಿಗಳ ನಿರೂಪಣೆಯಿಂದ ಜೀವರುಗಳನ್ನು ಧರ್ಮದಲ್ಲಿ ತೊಡಗಿಸಲಾಗಿದೆ. ತುಚ್ಛಬುದ್ಧಿಯುಳ್ಳ ಜೀವರುಗಳು ಕೂಡ ಅದರಿಂದ ಧರ್ಮಸನ್ಮುಖರಾಗುತ್ತಾರೆ; ಏಕೆಂದರೆ ಆ ಜೀವರುಗಳು ಸೂಕ್ಷ್ಮ ನಿರೂಪಣೆಯನ್ನು

---

1, ರತ್ನಕರಂಡ೨-೨; 2-ರತ್ನಕರಂಡ೨-೩; 3-ರತ್ನಕರಂಡ ೨-೪; 4-ರತ್ನಕರಂಡ ೨-೫

ತಿಳಿದುಕೊಳ್ಳುವುದಿಲ್ಲ, ಲೌಕಿಕ ಕಥೆಗಳನ್ನು ತಿಳಿಯುತ್ತಾರೆ, ಅಲ್ಲಿ ಅವರ ಉಪಯೋಗವು ತೊಡಗುತ್ತದೆ. ಮತ್ತು ಪ್ರಥಮಾನುಯೋಗದಲ್ಲಿ ಲೌಕಿಕ ಪ್ರವೃತ್ತಿರೂಪದ ನಿರೂಪಣೆಯೇ ಇರುವುದರಿಂದ ಅದನ್ನು ಅವರು ಸರಿಯಾಗಿ ತಿಳಿದುಕೊಳ್ಳುತ್ತಾರೆ. ಲೋಕದಲ್ಲಿ ರಾಜಾದಿಕರ ಕಥೆಗಳಲ್ಲಿ ಪಾಪದ ಪೋಷಣೆಯಾಗುತ್ತದೆ. ಇಲ್ಲಿ ಮಹಾಪುರುಷರೆನಿಸಿದ ರಾಜಾದಿಕರ ಕಥೆಗಳೇನೋ ಇವೆ, ಆದರೆ ಪಾಪವನ್ನು ಬಿಡಿಸಿ ಧರ್ಮದಲ್ಲಿ ತೊಡಗಿಸುವ ಪ್ರಯೋಜನವನ್ನು ಅಲ್ಲಲ್ಲಿ ಪ್ರಕಟ ಮಾಡುತ್ತಾರೆ; ಆದುದರಿಂದ ಆ ಜೀವರುಗಳು ಕಥೆಗಳ ಲಾಲಸೆಯಿಂದ ಅವನ್ನು ಓದುತ್ತಾರೆ-ಕೇಳುತ್ತಾರೆ ಮತ್ತು ಅದರಿಂದ ಪಾಪವನ್ನು ಕೆಡಕೆಂದು, ಧರ್ಮವನ್ನು ಒಳ್ಳೆಯದೆಂದು ತಿಳಿದುಕೊಂಡು ಧರ್ಮದಲ್ಲಿ ಅಭಿರುಚಿಯುಳ್ಳವರಾಗುತ್ತಾರೆ.

ಈ ಪ್ರಕಾರ ತುಚ್ಛ ಬುದ್ಧಿಯುಳ್ಳವರಿಗೆ ತಿಳಿಸಿಕೊಡುವ ಸಲುವಾಗಿ ಈ ಅನುಯೋಗವಿದೆ. 'ಪ್ರಥಮ' ಎಂದರೆ 'ಅವ್ಯುತ್ಪನ್ನ ಮಿಥ್ಯಾದೃಷ್ಟಿ'ಗಳ ಸಲುವಾಗಿ ಇರುವ ಅನುಯೋಗವು ಅದು ಪ್ರಥಮಾನುಯೋಗವಿದೆ. ಗೋಮ್ಮಟಸಾರದ ಟೀಕೆಯಲ್ಲಿ[5] ಹೀಗೆ ಅರ್ಥ ಮಾಡಲಾಗಿದೆ.

ಇನ್ನು ತತ್ವಜ್ಞಾನವಾಗಿರುವಂಥ ಜೀವರುಗಳು ಈ ಪ್ರಥಮಾನುಯೋಗವನ್ನು ಓದಿದರೆ-ಕೇಳಿದರೆ ಅವರಿಗೆ ಇದು ಅದರ ಉದಾಹರಣೆಯರೂಪವಾಗಿ ಭಾಸವಾಗುತ್ತದೆ. ಹೇಗೆಂದರೆ ಜೀವನು ಅನಾದಿನಿಧನವಿದ್ದು ಶರೀರ ಮೊದಲಾದವು ಸಂಯೋಗಿ ಪದಾರ್ಥಗಳಿವೆಯೆಂದು ಇವನು ತಿಳಿಯುತ್ತಿದ್ದನು. ಮತ್ತು ಪುರಾಣಗಳಲ್ಲಿ ಜೀವರುಗಳ ಭವಾಂತರಗಳ ನಿರೂಪಣೆ ಮಾಡಿದ್ದು ಅವು ಆ ತಿಳಿದುಕೊಂಡಿರುವುದಕ್ಕೆ ಉದಾಹರಣೆಯಾದವು. ಅದರಂತೆ ಶುಭ-ಅಶುಭ-ಶುದ್ಧೋಪಯೋಗಗಳನ್ನು ತಿಳಿಯುತ್ತಿದ್ದನು ಹಾಗೂ ಅದರ ಫಲವನ್ನು ತಿಳಿಯುತ್ತಿದ್ದನು. ಪುರಾಣಗಳಲ್ಲಿ ಆ ಉಪಯೋಗಗಳ ಪ್ರವೃತ್ತಿ ಮತ್ತು ಅವುಗಳ ಫಲವು ಜೀವನಿಗಾದುದರ ನಿರೂಪಣೆ ಮಾಡಿದೆ, ಅದೇ ಆ ತಿಳಿಯುವುದರ ಉದಾಹರಣೆಯಾಯಿತು. ಇದೇ ಪ್ರಕಾರ ಉಳಿದವುಗಳನ್ನು ತಿಳಿಯುವುದು.

ಯಾವ ಪ್ರಕಾರ ತಿಳಿಯುತ್ತಿತ್ತು ಅದೇ ಪ್ರಕಾರ ಯಾವುದೇ ಒಂದು ಜೀವದ ಅವಸ್ಥೆಯಾಗುವುದರಿಂದ ಇದು ಆ ತಿಳಿಯುವುದರ ಸಾಕ್ಷಿಯಾಗುವುದೆಂದರೇನೇ ಉದಾಹರಣೆಯ ಅರ್ಥವಿದೆ.

ಹೇಗೆ ಓರ್ವ ಸುಭಟನಿದ್ದು ಅವನು ಸುಭಟರ ಪ್ರಶಂಸೆ ಮತ್ತು ಹೇಡಿಗಳ ನಿಂದೆಯಿರುವಂಥ ಯಾರೋ ಪುರಾಣ-ಪುರುಷರ ಕಥೆಯನ್ನು ಕೇಳುವುದರಿಂದ ಸುಭಟತನದಲ್ಲಿ ಅತ್ಯಂತ ಉತ್ಸಾಹವುಳ್ಳವನಾಗುತ್ತಾನೆ; ಅದೇ ಪ್ರಕಾರ ಧರ್ಮಾತ್ಮನಿದ್ದವನು ಧರ್ಮಾತ್ಮ ಪುರುಷರ ಪ್ರಶಂಸೆ ಮತ್ತು ಪಾಪಿಗಳ ನಿಂದೆಯಿರುವಂಥ ಯಾರೋ ಪುರಾಣ-ಪುರುಷರ ಕಥೆಯನ್ನು ಕೇಳುವುದರಿಂದ ಧರ್ಮದಲ್ಲಿ ಅತ್ಯಂತ ಉತ್ಸಾಹವುಳ್ಳವನಾಗುತ್ತಾನೆ.

ಈ ಪ್ರಕಾರ ಈ ಪ್ರಥಮಾನುಯೋಗದ ಪ್ರಯೋಜನವನ್ನು ತಿಳಿಯುವುದು.

## ಕರಣಾನುಯೋಗದ ಪ್ರಯೋಜನ :-

ಕರಣಾನುಯೋಗದಲ್ಲಿ ಜೀವರುಗಳ ಮತ್ತು ಕರ್ಮಗಳ ವಿಶೇಷತೆ ಹಾಗೂ ತ್ರಿಲೋಕ ಮೊದಲಾದವುಗಳ ರಚನೆಯ ನಿರೂಪಣೆ ಮಾಡಿ ಜೀವರುಗಳನ್ನು ಧರ್ಮದಲ್ಲಿ ತೊಡಗಿಸುತ್ತಾರೆ. ಯಾರು ಧರ್ಮದಲ್ಲಿ ಉಪಯೋಗ

5 ಪ್ರಥಮಂ ಮಿಥ್ಯಾದೃಷ್ಟಿಮವ್ರತಿಕಮವ್ಯುತ್ಪನ್ನಂ ವಾ ಪ್ರತಿಪಾದ್ಯಮಾಶ್ರಿತ್ಯ ಪ್ರವೃತ್ತೋಽನುಯೋಗೋಽಧಿಕಾರಃ ಪ್ರಥಮಾನುಯೋಗ । ಜೀ. ಪ್ರ. ಟೀ. ಗಾ. ೩೬೧-೩೬೨

ತೊಡಗಿಸಲು ಬಯಸುತ್ತಾರೆ ಅವರು ಜೀವರುಗಳ ಗುಣಸ್ಥಾನ, ಮಾರ್ಗಣಾ ಮೊದಲಾದವುಗಳ ವಿಶೇಷ ಹಾಗೂ ಕರ್ಮಗಳ ಕಾರಣ-ಅವಸ್ಥೆ-ಫಲಗಳು ಯಾರು -ಯಾರಿಗೆ ಹೇಗೆ-ಹೇಗೆ ಕಂಡು ಬರುತ್ತವೆ ಇತ್ಯಾದಿಗಳ ವಿಶೇಷ ಮತ್ತು ನರಕ-ಸ್ವರ್ಗಗಳ ಸ್ಥಾನ ಮೊದಲಾದವುಗಳ ಪರಿಚಯ ಮಾಡಿಕೊಂಡು ಪಾಪದಿಂದ ವಿಮುಖರಾಗಿ ಧರ್ಮದಲ್ಲಿ ತೊಡಗುತ್ತಾರೆ. ಮತ್ತು ಇಂಥ ವಿಚಾರದಲ್ಲಿ ಉಪಯೋಗವು ನಿಂತುಕೊಂಡಾಗ ಪಾಪ-ಪ್ರವೃತ್ತಿಯಿಂದ ಬಿಡುಗಡೆ ಹೊಂದಿ ಕೂಡಲೆ ಧರ್ಮದ ಉತ್ಪತ್ತಿಯು ತಾನಾಗಿಯೇ ಆಗುತ್ತದೆ; ಆ ಅಭ್ಯಾಸದಿಂದ ತತ್ತ್ವಜ್ಞಾನದ ಪ್ರಾಪ್ತಿಯು ಕೂಡ ಶೀಘ್ರವಾಗಿ ಆಗುತ್ತದೆ. ಇಂಥ ಸೂಕ್ಷ್ಮವಾದ ಯಥಾರ್ಥ ಕಥನವು ಜಿನ ಮತದಲ್ಲಿಯೇ ಇದೆ, ಉಳಿದೆಡೆಗಳಲ್ಲಿಲ್ಲ; ಈ ಪ್ರಕಾರ ಜಿನಮತದ ಮಹಿಮೆಯನ್ನು ತಿಳಿದುಕೊಂಡು ಜಿನಮತದ ಶ್ರದ್ಧೆಯುಳ್ಳವನಾಗುತ್ತಾನೆ.

ಯಾರು ತತ್ತ್ವಜ್ಞಾನಿಗಳಾಗಿ ಈ ಕರಣಾನುಯೋಗದ ಅಭ್ಯಾಸ ಮಾಡುತ್ತಾರೆ, ಅವರಿಗೆ ಇದು ಅದರ ವಿಶೇಷಣರೂಪವಾಗಿ ಭಾಸವಾಗುತ್ತದೆ. ತಾವು ತಿಳಿದುಕೊಂಡ ಜೀವ ಮೊದಲಾದ ತತ್ತ್ವಗಳ ವಿಶೇಷವನ್ನು ಕರಣಾನುಯೋಗದಲ್ಲಿ ಮಾಡಿದ್ದಾರೆ. ಅಲ್ಲಿ ಅದೆಷ್ಟೋ ವಿಶೇಷಣಗಳು ಯಥಾಪ್ರಕಾರ ನಿಶ್ಚಯರೂಪವಿವೆ, ಅದೆಷ್ಟೋ ಉಪಚಾರ ಸಹಿತ ವ್ಯವಹಾರರೂಪವಿವೆ, ಅದೆಷ್ಟೋ ದ್ರವ್ಯ-ಕ್ಷೇತ್ರ-ಕಾಲ-ಭಾವಾದಿಗಳ ಸ್ವರೂಪದಿಂದ ಪ್ರಮಾಣಾದಿಗಳ ರೂಪವಿವೆ, ಅದೆಷ್ಟೋ ನಿಮಿತ್ತ-ಆಶ್ರಯಾದಿಗಳ ಅಪೇಕ್ಷಾಸಹಿತವಿವೆ. ಇತ್ಯಾದಿ ಅನೇಕ ಪ್ರಕಾರದ ವಿಶೇಷಣಗಳನ್ನು ನಿರೂಪಿಸಲಾಗಿದ್ದು ಅವನ್ನು ಇದ್ದ ಹಾಗೆಯೇ ಮನ್ನಿಸುತ್ತ ಆ ಕರಣಾನುಯೋಗದ ಅಭ್ಯಾಸ ಮಾಡುತ್ತಾರೆ.

ಈ ಅಭ್ಯಾಸದಿಂದ ತತ್ತ್ವಜ್ಞಾನವು ನಿರ್ಮಲವಾಗುತ್ತದೆ. ಹೇಗೆಂದರೆ ಒಬ್ಬನು ಇದು ರತ್ನವಿದೆಯೆಂದು ತಿಳಿಯುತ್ತಿದ್ದನು, ಆದರೆ ಆ ರತ್ನದ ಬಹಳಷ್ಟು ವಿಶೇಷಗಳನ್ನು ತಿಳಿದುಕೊಂಡ ನಂತರ ನಿರ್ಮಲ ರತ್ನದ ಪರೀಕ್ಷಕನಾಗುತ್ತಾನೆ; ಅದೇ ಪ್ರಕಾರ ಇವು ಜೀವಾದಿಗಳಿವೆಯೆಂದು ತತ್ತ್ವಗಳನ್ನು ತಿಳಿಯುತ್ತಿದ್ದನು, ಆದರೆ ಆ ತತ್ತ್ವಗಳ ಬಹಳಷ್ಟು ವಿಶೇಷಗಳನ್ನು ತಿಳಿದರೆ ನಿರ್ಮಲ ತತ್ತ್ವಜ್ಞಾನವಾಗುತ್ತದೆ. ತತ್ತ್ವಜ್ಞಾನವು ನಿರ್ಮಲವಾದ ನಂತರ ತಾನೇ ವಿಶೇಷ ಧರ್ಮಾತ್ಮನಾಗುತ್ತಾನೆ.

ಇನ್ನು ಅನ್ಯಸ್ಥಾನದಲ್ಲಿ ಉಪಯೋಗವನ್ನು ತೊಡಗಿಸಿದರೆ ರಾಗಾದಿಗಳ ವೃದ್ಧಿಯಾಗುತ್ತದೆ, ಮತ್ತು ಛದ್ಮಸ್ಥನ ಉಪಯೋಗವು ನಿರಂತರ ಏಕಾಗ್ರವಿರುವುದಿಲ್ಲ; ಅದಕ್ಕಾಗಿಯೇ ಜ್ಞಾನಿಗಳು ಈ ಕರುಣಾನುಯೋಗದ ಅಭ್ಯಾಸದಲ್ಲಿ ಉಪಯೋಗವನ್ನು ತೊಡಗಿಸುತ್ತಾರೆ, ಅದರಿಂದ ಇವರಿಗೆ ಕೇವಲಜ್ಞಾನದ ಮೂಲಕ ನೋಡಲಾದ ಪದಾರ್ಥಗಳ ಜ್ಞಾನವಾಗುತ್ತದೆ; ಅಲ್ಲಿ ಪ್ರತ್ಯಕ್ಷ-ಅಪ್ರತ್ಯಕ್ಷದ್ದೇ ಭೇದವಿದ್ದು ಭಾಸವಾಗುವುದರಲ್ಲಿ ವಿರುದ್ಧತೆಯಿರುವುದಿಲ್ಲ.

ಈ ಪ್ರಕಾರ ಈ ಕರಣಾನುಯೋಗದ ಪ್ರಯೋಜನವನ್ನು ತಿಳಿಯುವುದು.

## ಚರಣಾನುಯೋಗದ ಪ್ರಯೋಜನ :-

ಈಗ ಚರಣಾನುಯೋಗದ ಪ್ರಯೋಜನ ಹೇಳುತ್ತಾರೆ. ಚರಣಾನುಯೋಗದಲ್ಲಿ ನಾನಾ ಪ್ರಕಾರ ಧರ್ಮದ ಸಾಧನಗಳನ್ನು ನಿರೂಪಣೆ ಮಾಡಿ ಜೀವರುಗಳನ್ನು ಧರ್ಮದಲ್ಲಿ ತೊಡಗಿಸುತ್ತಾರೆ. ಯಾರು ಹಿತ-ಅಹಿತಗಳನ್ನು ತಿಳಿಯುವುದಿಲ್ಲ, ಹಿಂಸೆ ಮೊದಲಾದ ಪಾಪಕಾರ್ಯಗಳಲ್ಲಿ ತತ್ಪರರಿರುತ್ತಾರೆ ಅವರಿಗೆ ಯಾವ ಪ್ರಕಾರ

ಪಾಪಕಾರ್ಯಗಳನ್ನು ಬಿಟ್ಟುಕೊಟ್ಟು ಧರ್ಮಕಾರ್ಯಗಳಲ್ಲಿ ತೊಡಗಬೇಕು ಆ ಪ್ರಕಾರದ ಉಪದೇಶ ಕೊಡಲಾಗಿದೆ; ಅದನ್ನು ತಿಳಿದುಕೊಂಡು ಧರ್ಮದ ಆಚರಣೆ ಮಾಡುವುದರ ಕಡೆಗೆ ತಿರುಗಿದ ಜೀವರುಗಳು ಗೃಹಸ್ಥಧರ್ಮ ಮತ್ತು ಮುನಿಧರ್ಮದ ವಿಧಾನಗಳನ್ನು ಕೇಳಿ ತಮ್ಮಿಂದ ಯಾವುದು ಸಾಧಿಸುತ್ತದೆ ಆ ಧರ್ಮಸಾಧನೆಯಲ್ಲಿ ತೊಡಗುತ್ತಾರೆ.

ಇಂಥ ಸಾಧನದಿಂದ ಕಷಾಯಗಳು ಮಂದವಾಗುತ್ತವೆ ಮತ್ತು ಅದರ ಫಲದಲ್ಲಿ ಕುಗತಿಯಲ್ಲಿ ದುಃಖ ಪಡೆಯುವುದಿಲ್ಲ, ಆದರೆ ಸುಗತಿಯಲ್ಲಿ ಸುಖ ಪ್ರಾಪ್ತಮಾಡಿಕೊಳ್ಳುತ್ತಾರೆ; ಮತ್ತು ಇಂಥ ಸಾಧನದಿಂದ ಜಿನಮತದ ನಿಮಿತ್ತವು ಉಳಿದುಬಿಡುತ್ತದೆ, ಅಲ್ಲಿ ತತ್ತ್ವಜ್ಞಾನದ ಪ್ರಾಪ್ತಿಯಾಗುವುದಿದ್ದರೆ ಆಗಿಹೋಗುತ್ತದೆ.

ಮತ್ತು ತತ್ತ್ವಜ್ಞಾನಿಗಳಾಗಿ ಚರಣಾನುಯೋಗದ ಅಭ್ಯಾಸ ಮಾಡುವವರಿಗೆ ಈ ಸಮಸ್ತ ಆಚರಣೆಗಳು ತಮ್ಮ ವೀತರಾಗ ಭಾವನೆಗೆ ಅನುಸರಿಸಿ ಭಾಸವಾಗುತ್ತವೆ. ಏಕದೇಶ ಹಾಗೂ ಸರ್ವದೇಶ ವೀತರಾಗತೆಯಾದ ಮೇಲೆ ಇಂಥ ಶ್ರಾವಕದಶೆ-ಮುನಿದಶೆಗಳಾಗುತ್ತವೆ; ಏಕೆಂದರೆ ಇವುಗಳ ನಿಮಿತ್ತ-ನೈಮಿತ್ತಿಕತನವು ಕಂಡು ಬರುತ್ತದೆ. ಹೀಗೆ ತಿಳಿದುಕೊಂಡು ಶ್ರಾವಕಧರ್ಮ-ಮುನಿಧರ್ಮದ ವಿಶೇಷ ಪರಿಚಯಮಾಡಿಕೊಂಡು ಹೇಗೆ ತಮ್ಮ ವೀತರಾಗಭಾವವಾಗಿದೆ ಹಾಗೆ ತಮಗೆ ಯೋಗ್ಯವಾದ ಧರ್ಮವನ್ನು ಸಾಧಿಸುತ್ತಾರೆ. ಅಲ್ಲಿ ಎಷ್ಟು ಅಂಶದಲ್ಲಿ ವೀತರಾಗತೆಯಾಗುತ್ತದೆ ಅದನ್ನು ಕಾರ್ಯಕಾರಿಯೆಂದು ತಿಳಿಯುತ್ತಾರೆ; ಎಷ್ಟು ಅಂಶದಲ್ಲಿ ರಾಗವು ಉಳಿದುಕೊಳ್ಳುತ್ತದೆ ಅದನ್ನು ಹೇಯವೆಂದು ತಿಳಿಯುತ್ತಾರೆ ಮತ್ತು ಸಂಪೂರ್ಣ ವೀತರಾಗತೆಯನ್ನು ಪರಮಧರ್ಮವೆಂದು ಮನ್ನಿಸುತ್ತಾರೆ.

ಹೀಗೆ ಚರಣಾನುಯೋಗದ ಪ್ರಯೋಜನವಿದೆ.

## ದ್ರವ್ಯಾನುಯೋಗದ ಪ್ರಯೋಜನ :-

ಈಗ ದ್ರವ್ಯಾನುಯೋಗದ ಪ್ರಯೋಜನ ಹೇಳುತ್ತಾರೆ. ದ್ರವ್ಯಾನುಯೋಗದಲ್ಲಿ ದ್ರವ್ಯಗಳ ಮತ್ತು ತತ್ತ್ವಗಳ ನಿರೂಪಣೆಮಾಡಿ ಜೀವರುಗಳನ್ನು ಧರ್ಮದಲ್ಲಿ ತೊಡಗಿಸುತ್ತಾರೆ ಯಾರು ಜೀವ ಮೊದಲಾದ ದ್ರವ್ಯಗಳನ್ನು ಹಾಗೂ ತತ್ತ್ವಗಳನ್ನು ಪರಿಚಯ ಮಾಡಿಕೊಳ್ಳುವುದಿಲ್ಲ, ತಮ್ಮನ್ನು-ಪರವನ್ನು ಭಿನ್ನವಾಗಿ ತಿಳಿಯುವುದಿಲ್ಲ ಅವರಿಗೆ ಹೇತು-ದೃಷ್ಟಾಂತ-ಯುಕ್ತಿಗಳ ಮೂಲಕ ಹಾಗೂ ಪ್ರಮಾಣ-ನಯಾದಿಗಳ ಮೂಲಕ ಅವುಗಳ ಸ್ವರೂಪವನ್ನು ಅವರಿಗೆ ಪ್ರತೀತಿಯಾಗಿ ಬಿಡುವಂತೆ ತೋರಿಸಿಕೊಡಲಾಗಿದೆ. ಅದರ ಅಭ್ಯಾಸದಿಂದ ಅನಾದಿ ಅಜ್ಞಾನತೆಯು ದೂರವಾಗುತ್ತದೆ. ಅನ್ಯಮತದ ಕಾಲ್ಪನಿಕ ತತ್ತ್ವಾದಿಗಳು ಅಸತ್ಯವಾಗಿ ಭಾಸವಾಗುವವು ಆಗ ಜಿನಮತದ ಪ್ರತೀತಿಯಾಗುವುದು ಮತ್ತು ಅದರ ಭಾವವನ್ನು ಪರಿಚಯಮಾಡಿಕೊಳ್ಳುವ ಅಭ್ಯಾಸ ಮಾಡಿದರೆ ಶೀಘ್ರವಾಗಿ ತತ್ತ್ವಜ್ಞಾನದ ಪ್ರಾಪ್ತಿಯಾಗಿ ಬಿಡುವುದು.

ಅದರಂತೆ ಯಾರಿಗೆ ತತ್ತ್ವಜ್ಞಾನವಾಗಿದೆ ಅವರು ದ್ರವ್ಯಾನುಯೋಗದ ಅಭ್ಯಾಸ ಮಾಡಿದರೆ ಅವರಿಗೆ ತಮ್ಮ ಶ್ರದ್ಧೆಗೆ ಅನುಸರಿಸಿ ಆ ಎಲ್ಲ ಕಥನದ ಪ್ರತಿಭಾಸವಾಗುವುದು. ಹೇಗೆಂದರೆ ಯಾವನೋ ಓರ್ವನು ಒಂದು ವಿದ್ಯೆ ಕಲಿಯುತ್ತಾನೆ, ಆದರೆ ಅದರ ಅಭ್ಯಾಸ ಮಾಡುತ್ತಿದ್ದರೆ ಅದು ಸ್ಮರಣೆಯಲ್ಲಿರುತ್ತದೆ, ಮಾಡದಿದ್ದರೆ ಮರೆತು ಹೋಗುತ್ತದೆ. ಅದೇ ಪ್ರಕಾರ ಇವನಿಗೆ ತತ್ತ್ವಜ್ಞಾನವಾಗಿದ್ದರೂ ಅದರ ಪ್ರತಿಪಾದಕವಾದ ದ್ರವ್ಯಾನುಯೋಗದ ಅಭ್ಯಾಸ ಮಾಡುತ್ತಿದ್ದರೆ ಆ ತತ್ತ್ವಜ್ಞಾನವು ಉಳಿಯುತ್ತದೆ; ಮಾಡದಿದ್ದರೆ ಮರೆತು ಹೋಗುತ್ತದೆ. ಅಥವಾ

ಸಂಕ್ಷೇಪರೂಪದಿಂದ ತತ್ತ್ವಜ್ಞಾನವಾಗಿದ್ದು ಅದು ನಾನಾಯುಕ್ತಿ-ಹೇತು-ದೃಷ್ಟಾಂತಾದಿಗಳ ಮೂಲಕ ಸ್ಪಷ್ಟವಾಗಿ ಹೋದರೆ ಅದರಲ್ಲಿ ಶಿಥಿಲತೆಯು ಬರುವ ಸಾಧ್ಯತೆಯಿಲ್ಲ. ಮತ್ತು ಈ ಅಭ್ಯಾಸದಿಂದ ರಾಗಾದಿಗಳು ದೂರವಾಗುವುದರಿಂದ ಶೀಘ್ರವಾಗಿ ಮೋಕ್ಷ ಸಾಧಿಸುತ್ತದೆ.

ಈ ಪ್ರಕಾರ ದ್ರವ್ಯಾನುಯೋಗದ ಪ್ರಯೋಜನವನ್ನು ತಿಳಿಯುವುದು.

## ಅನುಯೋಗಗಳ ವ್ಯಾಖ್ಯಾನದ ವಿಧಾನ

ಈಗ ಈ ಅನುಯೋಗಗಳಲ್ಲಿ ಯಾವ ಪ್ರಕಾರ ವ್ಯಾಖ್ಯಾನವಿದೆಯೆಂಬುದನ್ನು ಹೇಳುತ್ತಾರೆ.

**ಪ್ರಥಮಾನುಯೋಗದ ವ್ಯಾಖ್ಯಾನದ ವಿಧಾನ :-**

ಪ್ರಥಮಾನುಯೋಗದಲ್ಲಿ ಮೂಲಕಥೆಗಳು ಹೇಗಿವೆ ಹಾಗೆಯೇ ಅವನ್ನು ನಿರೂಪಣೆ ಮಾಡುತ್ತಾರೆ. ಮತ್ತು ಅವುಗಳಲ್ಲಿ ಪ್ರಸಂಗಕ್ಕೆ ಅನುಸರಿಸಿ ವ್ಯಾಖ್ಯಾನವಾಗುತ್ತದೆ; ಅವುಗಳಲ್ಲಿ ಕೆಲವಂತೂ ಇದ್ದ ಹಾಗೆಯೇ ಇರುತ್ತವೆ. ಕೆಲವು ಗ್ರಂಥಕರ್ತೃವಿನ ವಿಚಾರಕ್ಕನುಸರಿಸಿ ಇರುತ್ತವೆ; ಆದರೆ ಪ್ರಯೋಜನವು ಅನ್ಯಥಾ ಇರುವುದಿಲ್ಲ.

ಹೇಗೆಂದರೆ ತೀರ್ಥಂಕರ ದೇವರುಗಳ ಕಲ್ಯಾಣಕಗಳಲ್ಲಿ ಇಂದ್ರನು ಬರುವ ಕಥೆಯಂತೂ ಸತ್ಯವಿದೆ. ಇನ್ನು ಇಂದ್ರನು ಸ್ತುತಿ ಮಾಡಿದುದರ ವ್ಯಾಖ್ಯಾನ ಮಾಡಿದೆ; ಅಲ್ಲಿ ಇಂದ್ರನು ಅನ್ಯ ಪ್ರಕಾರದಿಂದ ಸ್ತುತಿ ಮಾಡಿರುವುದನ್ನು ಇಲ್ಲಿ ಗ್ರಂಥಕರ್ತರುಗಳು ಬೇರೆ ಪ್ರಕಾರದಿಂದಲೇ ಸ್ತುತಿ ಮಾಡಿರುವಂತೆ ಬರೆಯುತ್ತಾರೆ; ಆದರೆ ಸ್ತುತಿರೂಪದ ಪ್ರಯೋಜನವು ಅನ್ಯಥಾ ಇರುವುದಿಲ್ಲ. ಅದರಂತೆ ಯಾರದೋ ಪರಸ್ಪರ ಸಂಭಾಷಣೆಯು ಅನ್ಯ ಪ್ರಕಾರದಿಂದಾಗಿರುತ್ತದೆ, ಇಲ್ಲಿ ಗ್ರಂಥಕರ್ತರು ಅನ್ಯ ಪ್ರಕಾರದಿಂದ ಹೇಳುವರು; ಆದರೆ ಒಂದೇ ಪ್ರಯೋಜನವನ್ನು ತೋರಿಸಿಕೊಡುತ್ತಾರೆ. ಇನ್ನು ನಗರ, ಸಂಗ್ರಾಮಾದಿಗಳ ಹೆಸರುಗಳು ಯಥಾವತ್ತಾಗಿಯೇ ಇರುತ್ತವೆ, ಮತ್ತು ವರ್ಣನೆಯನ್ನು ಹೀನಾಧಿಕ ಪ್ರಯೋಜನದ ಪೋಷಣೆ ಮಾಡುತ್ತ ನಿರೂಪಣೆ ಮಾಡುತ್ತಾರೆ. ಇವೇ ಮೊದಲಾದುವನ್ನು ಇದೇ ಪ್ರಕಾರ ತಿಳಿಯುವುದು.

ಮತ್ತು ಗ್ರಂಥಕರ್ತರು ಪ್ರಸಂಗರೂಪ ಕಥೆಯನ್ನು ತಮ್ಮ ವಿಚಾರಕ್ಕನುಸರಿಸಿ ಹೇಳುತ್ತಾರೆ. ಹೇಗೆಂದರೆ 'ಧರ್ಮಪರೀಕ್ಷೆ' ಯಲ್ಲಿ ಮೂರ್ಖರ ಕಥೆ ಬರುತ್ತದೆ, ಆ ಕಥೆಯನ್ನು ಮನೋವೇಗನೇ ಹೇಳಿದ್ದನೆಂಬ ನಿಯಮವಿಲ್ಲ; ಆದರೆ ಮೂರ್ಖತನದ ಪೋಷಣೆ ಮಾಡುವಂಥ ಕಥೆಯನ್ನು ಯಾರೋ ಹೇಳಿದ್ದರೆಂಬ ಅಭಿಪ್ರಾಯದ ಪೋಷಣೆ ಮಾಡುತ್ತಾರೆ. ಇದೇ ಪ್ರಕಾರ ಉಳಿದೆಡೆಗಳಲ್ಲಿಯೂ ತಿಳಿಯುವುದು.

**ಪ್ರಶ್ನೆ :-** ಜೈನ ಶಾಸ್ತ್ರದಲ್ಲಿ ಅಯಥಾರ್ಥ ಕಥನವು ಸಂಭವವಿಲ್ಲವಲ್ಲವೇ ?

**ಉತ್ತರ :-** ಒಂದು ಪ್ರಯೋಜನವನ್ನು ಇನ್ನೊಂದಾಗಿ ಪ್ರಕಟ ಮಾಡುವುದರ ಹೆಸರು ಅನ್ಯಥಾ ಇದೆ. ಹೇಗೆಂದರೆ ನೀನು ಹೀಗೆ ಹೇಳೆಂದು ಯಾರಿಗಾದರೂ ಹೇಳಿದರೆ ಅವನು ಅವೇ ಅಕ್ಷರಗಳನ್ನು ಹೇಳುವುದಿಲ್ಲ, ಆದರೆ ಅದೇ ಪ್ರಯೋಜನಸಹಿತ ಹೇಳಿದರೆ ಅವನನ್ನು ಮಿಥ್ಯಾವಾದಿಯೆಂದು ಹೇಳುವುದಿಲ್ಲವೆಂದು ತಿಳಿಯುವುದು. ಒಂದು ವೇಳೆ ಇದ್ದಕ್ಕಿದ್ದ ಹಾಗೆ ಬರೆಯುವ ಸಂಪ್ರದಾಯವಿದ್ದರೆ ಒಬ್ಬನು ಹಲವು ಪ್ರಕಾರದಿಂದ ವೈರಾಗ್ಯದ ಚಿಂತನೆ ಮಾಡಿದ್ದು ಅದೆಲ್ಲದರ ವರ್ಣನೆ ಮಾಡುವುದರಿಂದ ಗ್ರಂಥವು ವಿಸ್ತರಿಸುವುದು, ಮತ್ತು ಕೆಲವನ್ನು

ಬರೆಯದಿರುವುದರಿಂದ ಅದರ ಭಾವವು ಭಾಸವಾಗುವುದಿಲ್ಲ, ಅದಕ್ಕಾಗಿ ವೈರಾಗ್ಯದ ಸ್ಥಾನದಲ್ಲಿ ಒಂದಿಷ್ಟು ತಮ್ಮ ವಿಚಾರಕ್ಕೆ ಅನುಸರಿಸಿ ವೈರಾಗ್ಯ ಪೋಷಕವಾಗಿಯೇ ಕಥನ ಮಾಡುವರು, ಸರಾಗ ಪೋಷಣೆಯ ಕಥನ ಮಾಡಲಾರರು. ಅಲ್ಲಿ ಪ್ರಯೋಜನವು ಅನ್ಯಥಾ ಆಗದಿರುವುದರಿಂದ ಅದನ್ನು ಅಯಥಾರ್ಥವೆಂದು ಹೇಳುವುದಿಲ್ಲ. ಇದೇ ಪ್ರಕಾರ ಇತರೆಡೆಗಳಲ್ಲಿಯೂ ತಿಳಿಯುವುದು.

ಮತ್ತು ಪ್ರಥಮಾನುಯೋಗದಲ್ಲಿ ಯಾವುದರ ಮುಖ್ಯತೆಯಿರುವುದು ಅದರದೇ ಪೋಷಣೆ ಮಾಡುತ್ತಾರೆ. ಹೇಗೆಂದರೆ ಒಬ್ಬನು ಉಪವಾಸ ಮಾಡುವನು, ಅದರ ಫಲವು ಅಲ್ಪವಿದ್ದರೂ ಅವನಿಗೆ ಅನ್ಯ ಧರ್ಮಪರಿಣತಿಯ ವಿಶೇಷತೆಯಾಗುವುದರಿಂದ ವಿಶೇಷ ಉಚ್ಚಪದದ ಪ್ರಾಪ್ತಿಯಾಗುವುದು, ಅಲ್ಲಿ ಅದನ್ನು ಉಪವಾಸದ ಫಲವೆಂದೇ ನಿರೂಪಣೆ ಮಾಡುತ್ತಾರೆ. ಇದೇ ಪ್ರಕಾರ ಉಳಿದುವನ್ನು ತಿಳಿಯುವುದು.

ಯಾವ ಪ್ರಕಾರ ಒಬ್ಬನು ಶೀಲದ ಪ್ರತಿಜ್ಞೆಯನ್ನು ದೃಢವಾಗಿಟ್ಟುಕೊಂಡು ನಮಸ್ಕಾರ ಮಂತ್ರದ ಸ್ಮರಣೆ ಮಾಡುವನು ಮತ್ತು ಅನ್ಯಧರ್ಮ-ಸಾಧನ ಮಾಡುವುದರಿಂದ ಅವನ ಕಷ್ಟವು ದೂರವಾಗಿ ಅತಿಶಯವು ಪ್ರಕಟವಾಗುವುದು, ಅಲ್ಲಿ ಅವುಗಳ ಫಲವೇ ಹಾಗೆ ಆಗಿಲ್ಲ, ಆದರೆ ಬೇರೆ ಯಾವುದೇ ಕರ್ಮದ ಉದಯದಿಂದ ಅಂಥಕಾರ್ಯಗಳಾಗಿವೆ; ಆದಾಗ್ಯೂ-ಅವನ್ನು ಆ ಶೀಲಾದಿಗಳ ಫಲವೆಂದೇ ನಿರೂಪಣೆ ಮಾಡುತ್ತಾರೆ. ಅದೇ ಪ್ರಕಾರ ಯಾವನೋ ಓರ್ವನು ಪಾಪಕ್ರಿಯೆ ಮಾಡಿದರೆ ಅವನಿಗೆ ಅದರದೇ ಫಲವು ಹಾಗೆ ಆಗಿಲ್ಲ, ಆದರೆ ಬೇರೆ ಕರ್ಮದ ಉದಯದಿಂದ ನೀಚಗತಿಗೆ ಪ್ರಾಪ್ತನಾಗುವನು ಅಥವಾ ಕಷ್ಟಾದಿಗಳಾಗುವವು; ಅದನ್ನು ಅದೇ ಪಾಪದ ಫಲವೆಂದು ನಿರೂಪಣೆ ಮಾಡುತ್ತಾರೆ. ಇತ್ಯಾದಿಗಳನ್ನು ಇದೇ ಪ್ರಕಾರ ತಿಳಿಯುವುದು.

**ಪ್ರಶ್ನೆ :-** ಇಂಥ ಅಸತ್ಯ ಫಲವನ್ನು ತೋರಿಸಿಕೊಡುವುದು ಯೋಗ್ಯವಿಲ್ಲ; ಈ ಪ್ರಕಾರದ ಕಥನವನ್ನು ಹೇಗೆ ಪ್ರಮಾಣ ಮಾಡುವುದು.

**ಉತ್ತರ :-** ಅಜ್ಞಾನೀ ಜೀವನು ಅಧಿಕ ಫಲವನ್ನು ತೋರಿಸಿದಲ್ಲದೆ ಧರ್ಮದಲ್ಲಿ ತೊಡಗುವುದಿಲ್ಲ ಮತ್ತು ಪಾಪದಿಂದ ಭಯ ಪಡುವುದಿಲ್ಲ, ಅವನದು ಕಲ್ಯಾಣ ಮಾಡುವ ಸಲುವಾಗಿಯೇ ಇಂಥ ವರ್ಣನೆ ಮಾಡುತ್ತಾರೆ. ಧರ್ಮದ ಫಲವನ್ನು ಪಾಪದ ಫಲವೆಂದು ಮತ್ತು ಪಾಪದ ಫಲವನ್ನು ಧರ್ಮದ ಫಲವೆಂದು ತಿಳಿಸಿದರೆ ಮಾತ್ರ ಅಸತ್ಯವಾಗುವುದು; ಆದರೆ ಹಾಗಂತೂ ಇಲ್ಲ. ಹೇಗೆಂದರೆ ಹತ್ತು ಪುರುಷರು ಸೇರಿ ಒಂದು ಕಾರ್ಯ ಮಾಡಿದರೆ ಅದನ್ನು ಉಪಚಾರದಿಂದ ಒಬ್ಬನೇ ಪುರುಷನು ಮಾಡಿದನೆಂದು ಹೇಳಿದರೆ ದೋಷವಿಲ್ಲ. ಅಥವಾ ಯಾರೋ ಹಿರಿಯರು ಯಾವುದೇ ಒಂದು ಕಾರ್ಯ ಮಾಡಿದ್ದರೆ ಅದನ್ನು ಜಾತಿಯ ಅಪೇಕ್ಷೆಯಿಂದ ಉಪಚಾರವಾಗಿ ಮಕ್ಕಳು ಮಾಡಿದರೆಂದು ಹೇಳುವುದರಲ್ಲಿ ದೋಷವಿಲ್ಲ. ಅದೇ ಪ್ರಕಾರ ಅಧಿಕ ಶುಭ ಮತ್ತು ಅಶುಭ ಕಾರ್ಯಗಳ ಫಲವು ಒಂದಾದುದನ್ನು ಉಪಚಾರದಿಂದ ಒಂದು ಶುಭ ಮತ್ತು ಅಶುಭ ಕಾರ್ಯದ ಫಲವೆಂದು ಹೇಳಿದರೆ ದೋಷವಿಲ್ಲ. ಅಥವಾ ಅನ್ಯ ಶುಭ ಮತ್ತು ಅಶುಭ ಕಾರ್ಯದ ಫಲವಾಗಿರುವುದನ್ನು ಒಂದು ಜಾತಿಯ ಅಪೇಕ್ಷೆಯಿಂದ ಉಪಚಾರವಾಗಿ ಯಾವುದೇ ಬೇರೆ ಶುಭ ಮತ್ತು ಅಶುಭ ಕಾರ್ಯದ ಫಲವೆಂದು ಹೇಳಿದರೆ ದೋಷವಿಲ್ಲ.

ಉಪದೇಶದಲ್ಲಿ ಕೆಲವೆಡೆ ವ್ಯವಹಾರ ವರ್ಣನೆಯಿದ್ದರೆ ಕೆಲವೆಡೆ ನಿಶ್ಚಯ ವರ್ಣನೆಯಿದೆ. ಇಲ್ಲಿ ಉಪಚಾರ ರೂಪವಾಗಿ ವ್ಯವಹಾರ ವರ್ಣನೆ ಮಾಡಲಾಗಿದೆಯೆಂದು ಇದನ್ನು ಪ್ರಮಾಣ ಮಾಡುತ್ತಾರೆ. ಇದನ್ನು

ತಾರತಮ್ಯದಿಂದ ಮನ್ನಿಸಬಾರದು; ತಾರತಮ್ಯದ ನಿರೂಪಣೆಯನ್ನು ಕರಣಾನುಯೋಗದಲ್ಲಿ ಮಾಡಿದೆ, ಅದನ್ನು ತಿಳಿಯುವುದು.

ಪ್ರಥಮಾನುಯೋಗದಲ್ಲಿ ಉಪಚಾರರೂಪವಾಗಿ ಒಂದು ಧರ್ಮದ ಅಂಗವಿದ್ದ ಮೇಲೆ ಸಂಪೂರ್ಣ ಧರ್ಮವಾಯಿತೆಂದು ಹೇಳುತ್ತಾರೆ. ಹೇಗೆಂದರೆ ಯಾರಿಗೆ ಶಂಕೆ-ಕಾಂಕ್ಷಾದಿಗಳಿರುವುದಿಲ್ಲ ಅವರಿಗೆ ಸಮ್ಯಕ್ತ್ವವಾಗಿದೆ ಯೆಂದು ಹೇಳುತ್ತಾರೆ; ಆದರೆ ಯಾವುದೇ ಒಂದು ಕಾರ್ಯದಲ್ಲಿ ಶಂಕೆ-ಕಾಂಕ್ಷೆ ಮಾಡದಿರುವುದರಿಂದೇನು ಸಮ್ಯಕ್ತ್ವವಾಗುವುದಿಲ್ಲ, ಸಮ್ಯಕ್ತ್ವವು ತತ್ತ್ವಶ್ರದ್ಧೆಯಾದ ಮೇಲೆಯೇ ಆಗುತ್ತದೆ; ಆದರೆ ವ್ಯವಹಾರ ಸಮ್ಯಕ್ತ್ವದಲ್ಲಿ ನಿಶ್ಚಯಸಮ್ಯಕ್ತ್ವದ ಉಪಚಾರ ಮಾಡಿದೆ ಮತ್ತು ವ್ಯವಹಾರ ಸಮ್ಯಕ್ತ್ವದ ಯಾವುದೇ ಒಂದು ಅಂಗದಲ್ಲಿ ಸಂಪೂರ್ಣ ವ್ಯವಹಾರ ಸಮ್ಯಕ್ತ್ವದ ಉಪಚಾರ ಮಾಡಿದೆ. ಈ ಪ್ರಕಾರ ಉಪಚಾರದ ಮೂಲಕ ಸಮ್ಯಕ್ತ್ವವಾಯಿತೆಂದು ಹೇಳುತ್ತಾರೆ.

ಜೈನಶಾಸ್ತ್ರದ ಯಾವುದೇ ಒಂದು ಅಂಗವನ್ನು ತಿಳಿದ ಮೇಲೆ ಸಮ್ಯಗ್ಜ್ಞಾನವಾಯಿತೆಂದು ಹೇಳುತ್ತಾರೆ. ಆದರೆ ಸಂಶಯಾದಿಗಳಿಂದ ರಹಿತವಾದ ತತ್ತ್ವಜ್ಞಾನವಾದ ನಂತರ ಸಮ್ಯಗ್ಜ್ಞಾನವಾಗುತ್ತದೆ; ಆದರೆ ಇಲ್ಲಿ ಮೊದಲಿನಂತೆ ಉಪಚಾರದಿಂದ ಸಮ್ಯಗ್ಜ್ಞಾನ ಹೇಳುತ್ತಾರೆ.

ಅದರಂತೆ ಯಾರದಾದರೂ ಒಳ್ಳೆಯ ಆಚರಣೆಯಿದ್ದರೆ ಸಮ್ಯಕ್ಚಾರಿತ್ರವಾಯಿತೆಂದು ಹೇಳುತ್ತಾರೆ. ಮತ್ತು ಯಾವನಾದರೂ ಜೈನಧರ್ಮ ಅಂಗೀಕಾರ ಮಾಡಿ ಯಾವುದಾದರೂ ಹಿರಿ-ಕಿರಿಯ ಪ್ರತಿಜ್ಞೆ ಗ್ರಹಣ ಮಾಡಿದ್ದರೆ ಅವನನ್ನು ಶ್ರಾವಕನೆಂದು ಹೇಳುತ್ತಾರೆ. ಆದರೆ ಶ್ರಾವಕನಂತೂ ಪಂಚಮ ಗುಣಸ್ಥಾನವರ್ತಿಯಾದ ಮೇಲೆ ಆಗುತ್ತಾನೆ; ಆದಾಗ್ಯೂ ಮೊದಲಿನಂತೆ ಉಪಚಾರದಿಂದ ಇವನನ್ನು ಶ್ರಾವಕನೆಂದು ಹೇಳಿದೆ. ಉತ್ತರ ಪುರಾಣದಲ್ಲಿ ಶ್ರೇಣಿಕನನ್ನು ಶ್ರಾವಕೋತ್ತಮನೆಂದು ಹೇಳಿದ್ದರೂ ಅವನು ಅಸಂಯತನಿದ್ದನು; ಆದರೆ ಜೈನನಿರುವುದರಿಂದ ಹೇಳಿದೆ. ಹೀಗೆ ಇತರೆಡೆಯೂ ತಿಳಿಯುವುದು.

ಇನ್ನು ಸಮ್ಯಕ್ತ್ವವಿಲ್ಲದೆ ಮುನಿಲಿಂಗ ಧಾರಣ ಮಾಡುವವನಿಗೆ ಮತ್ತು ದ್ರವ್ಯದಿಂದಲೂ ಅತಿಚಾರವೆಸಗುತ್ತಿರುವವನಿಗೆ ಮುನಿಯೆಂದು ಹೇಳುತ್ತಾರೆ. ಆದರೆ ಮುನಿಯಂತೂ ಆರನೆಯ ಗುಣಸ್ಥಾನವರ್ತಿಯಾದ ನಂತರವೇ ಆಗುತ್ತಾನೆ; ಆದಾಗ್ಯೂ ಮೊದಲಿನಂತೆ ಉಪಚಾರದಿಂದ ಅವನನ್ನು ಮುನಿಯೆಂದು ಹೇಳಿದೆ. ಸಮವಸರಣ ಸಭೆಯಲ್ಲಿ ಮುನಿಗಳ ಸಂಖ್ಯೆ ಹೇಳಿದ್ದು ಅವರೆಲ್ಲರು ಶುದ್ಧ ಭಾವಲಿಂಗಿ ಮುನಿಗಳಿರಲಿಲ್ಲ; ಆದರೆ ಮುನಿಲಿಂಗಧಾರಣ ಮಾಡಿರುವುದರಿಂದ ಎಲ್ಲರನ್ನು ಮುನಿಯೆಂದು ಹೇಳಿದೆ. ಇದೇ ಪ್ರಕಾರ ಉಳಿದೆಡೆಗಳಲ್ಲಿಯೂ ತಿಳಿಯುವುದು.

ಅದರಂತೆ ಪ್ರಥಮಾನುಯೋಗದಲ್ಲಿ ಧರ್ಮಬುದ್ಧಿಯಿಂದ ಯಾವುದಾದರೂ ಅನುಚಿತ ಕಾರ್ಯ ಮಾಡಿದರೆ ಅದರದೂ ಪ್ರಶಂಸೆ ಮಾಡುತ್ತಾರೆ. ಹೇಗೆಂದರೆ ವಿಷ್ಣುಕುಮಾರನು ಧರ್ಮಾನುರಾಗದಿಂದ ಮುನಿಗಳ ಉಪಸರ್ಗವನ್ನು ದೂರ ಮಾಡಿದನು; ಆದರೆ ಮುನಿ ಪದವನ್ನು ಬಿಟ್ಟುಕೊಟ್ಟು ಈ ಕಾರ್ಯ ಮಾಡುವುದು ಯೋಗ್ಯವಿರಲಿಲ್ಲ; ಏಕೆಂದರೆ ಇಂಥ ಕಾರ್ಯಗಳು ಗೃಹಸ್ಥ ಧರ್ಮದಲ್ಲಿ ಸಂಭವವಿವೆ, ಮತ್ತು ಗೃಹಸ್ಥ ಧರ್ಮದಿಂದ ಮುನಿ ಧರ್ಮವು

ಉನ್ನತವಿದೆ, ಅಂಥ ಉನ್ನತ ಧರ್ಮವನ್ನು ಬಿಟ್ಟುಕೊಟ್ಟು ಕೀಳುಧರ್ಮದ ಅಂಗೀಕಾರ ಮಾಡಿರುವುದು ಅಯೋಗ್ಯವಿದೆ; ಆದರೆ ವಾತ್ಸಲ್ಯಾಂಗದ ಮುಖ್ಯತೆಯಿಂದ ವಿಷ್ಣುಕುಮಾರರ ಪ್ರಶಂಸೆ ಮಾಡಲಾಗಿದೆ. ಈ ಛಲದಿಂದ ಇತರರು ಉನ್ನತ ಧರ್ಮವನ್ನು ಬಿಟ್ಟುಕೊಟ್ಟು ಕೀಳು ಧರ್ಮದ ಅಂಗೀಕಾರ ಮಾಡುವುದು ಯೋಗ್ಯವಿಲ್ಲ.

ಯಾವ ಪ್ರಕಾರ ಗೊಲ್ಲನು ಮುನಿಯನ್ನು ಅಗ್ನಿಯಿಂದ ಕಾಯಿಸಿದನು. ಅವನು ಕರುಣೆಯಿಂದ ಈ ಕಾರ್ಯ ಮಾಡಿದನು; ಆದರೆ ಬಂದಿರುವ ಉಪಸರ್ಗವನ್ನು ದೂರ ಮಾಡಿದನು, ಸಹಜ ಅವಸ್ಥೆಯಲ್ಲಿ ಆ ಶೀತಾದಿಗಳ ಪರೀಷಹವಾಗುತ್ತದೆ ಅದನ್ನು ದೂರ ಮಾಡಿದ ಮೇಲೆ ರತಿ ಮನ್ನಿಸುವ ಕಾರಣವಾಗುತ್ತದೆ, ಮತ್ತು ಅವರಿಗೆ ರತಿ ಮಾಡುವುದಿರಲಿಲ್ಲ, ಆಗ ಪ್ರತಿಯಾಗಿ ಉಪಸರ್ಗವಾಗುತ್ತದೆ. ಅದರಿಂದ ವಿವೇಕಿಗಳು ಅವರಿಗೆ ಶೀತಾದಿಗಳ ಉಪಚಾರ ಮಾಡುವುದಿಲ್ಲ; ಗೊಲ್ಲನು ಅವಿವೇಕಿಯಿದ್ದು ಕರುಣೆಯಿಂದ ಈ ಕಾರ್ಯ ಮಾಡಿರುವುದರಿಂದ ಅವನ ಪ್ರಶಂಸೆ ಮಾಡಿದೆ; ಆದರೆ ಈ ಛಲದಿಂದ ಇತರರು ಧರ್ಮಪದ್ಧತಿಯಲ್ಲಿ ವಿರುದ್ಧವಿರುವ ಕಾರ್ಯಮಾಡುವುದು ಯೋಗ್ಯವಿಲ್ಲ.

ಮತ್ತು ವಜ್ರಕರಣ ದೊರೆಯು ಸಿಂಹೋದರ ದೊರೆಗೆ ನಮನ ಮಾಡಲಿಲ್ಲ, ಉಂಗುರದಲ್ಲಿ ಪ್ರತಿಮೆಯಿಟ್ಟಿದ್ದನು; ಆದರೆ ದೊಡ್ಡ-ದೊಡ್ಡ ಸಮ್ಯಗ್ದೃಷ್ಟಿಗಳು ದೊರೆಗಳಿಗೆ ನಮನ ಮಾಡುತ್ತಾರೆ, ಅದರಲ್ಲಿ ದೋಷವಿಲ್ಲ; ಮತ್ತು ಉಂಗುರದಲ್ಲಿ ಪ್ರತಿಮೆಯಿಡುವಲ್ಲಿ ಅವಿನಯವಾಗುತ್ತದೆ, ಯಥಾಪ್ರಕಾರದ ವಿಧಿಯಿಂದ ಹೀಗೆ ಪ್ರತಿಮೆಯಾಗುವುದಿಲ್ಲ, ಆದುದರಿಂದ ಈ ಕಾರ್ಯದಲ್ಲಿ ದೋಷವಿದೆ; ಆದರೆ ಅವನಿಗೆ ಅಂಥ ಜ್ಞಾನವಿರಲಿಲ್ಲ, ಅವನಿಗಂತೂ ಧರ್ಮಾನುರಾಗದಿಂದ 'ನಾನು ಇತರರಿಗೆ ನಮನ ಮಾಡಲಾರೆ'ನೆಂಬ ಬುದ್ಧಿಯಿತ್ತು; ಅದರಿಂದಾಗಿ ಅವನ ಪ್ರಶಂಸೆ ಮಾಡಲಾಗಿದೆ; ಆದರೆ ಈ ಛಲದಿಂದ ಇತರರು ಇಂಥ ಕಾರ್ಯ ಮಾಡುವುದು ಯೋಗ್ಯವಿಲ್ಲ.

ಅದರಂತೆ ಅದೆಷ್ಟೋ ಪುರುಷರು ಪುತ್ರಾದಿಕರ ಪ್ರಾಪ್ತಿಯ ಸಲುವಾಗಿ ಅಥವಾ ರೋಗ-ಕಷ್ಟ ಮೊದಲಾದುವನ್ನು ದೂರಮಾಡುವ ಸಲುವಾಗಿ ಚೈತ್ಯಾಲಯ ಪೂಜಾದಿಗಳನ್ನು ಮಾಡುವರು, ಸ್ತೋತ್ರಾದಿಗಳನ್ನು ಮಾಡುವರು, ನಮಸ್ಕಾರ ಮಂತ್ರದ ಸ್ಮರಣೆ ಮಾಡುವರು; ಆದರೆ ಹೀಗೆ ಮಾಡುವುದರಿಂದ ನಿಃಶಂಕಿತಗುಣದ ಅಭಾವವಾಗುತ್ತದೆ, ನಿದಾನಬಂಧ ನಾಮದ ಆರ್ತಧ್ಯಾನವಾಗುತ್ತದೆ, ಅಂತರಂಗದಲ್ಲಿ ಪಾಪದ ಪ್ರಯೋಜನವೇ ಇರುವುದರಿಂದ ಪಾಪದ ಬಂಧವೇ ಆಗುತ್ತದೆ; ಆದರೆ ಮೋಹಿತರಾಗಿಯೂ ಕೂಡ ಅಧಿಕ ಪಾಪಬಂಧದ ಕಾರಣವಾದ ಕುದೇವಾದಿಗಳ ಪೂಜೆಯನ್ನಂತೂ ಮಾಡಲಿಲ್ಲ, ಇಷ್ಟು ಅವರ ಗುಣ ಗ್ರಹಣ ಮಾಡಿ ಅವರ ಪ್ರಶಂಸೆ ಮಾಡುತ್ತಾರೆ. ಈ ಛಲದಿಂದ ಇತರರು ಲೌಕಿಕ ಕಾರ್ಯಗಳ ಸಲುವಾಗಿ ಧರ್ಮಸಾಧನ ಮಾಡುವುದು ಯುಕ್ತವಿಲ್ಲ. ಇದೇ ಪ್ರಕಾರ ಅನ್ಯತ್ರವೂ ತಿಳಿಯುವುದು.

ಈ ಪ್ರಕಾರ ಪ್ರಥಮಾನುಯೋಗದಲ್ಲಿ ಅನ್ಯಕಥನಗಳಿದ್ದರೂ ಅವನ್ನು ಯಥೋಚಿತವಾಗಿ ತಿಳಿದುಕೊಂಡು ಭ್ರಾಂತಿವಶರಾಗಬಾರದು.

## ಕರಣಾನುಯೋಗದ ವ್ಯಾಖ್ಯಾನದ ವಿಧಾನ :-

ಕೇವಲಜ್ಞಾನದ ಮೂಲಕ ಹೇಗೆ ತಿಳಿದು ಬಂದಿದೆ ಹಾಗೆ ಕರಣಾನುಯೋಗದಲ್ಲಿ ವ್ಯಾಖ್ಯಾನವಿದೆ. ಕೇವಲ ಜ್ಞಾನದ ಮೂಲಕವಂತೂ ಬಹಳಷ್ಟು ತಿಳಿದು ಬಂದಿದೆ, ಆದರೆ ಜೀವನಿಗೆ ಕಾರ್ಯಕಾರಿಯಾದ ಜೀವ-ಕರ್ಮಾದಿಗಳ ಹಾಗೂ ತ್ರಿಲೋಕ ಮೊದಲಾದವುಗಳ ನಿರೂಪಣೆಯೇ ಇದರಲ್ಲಿರುತ್ತದೆ. ಅವುಗಳ ಸ್ವರೂಪವನ್ನೂ ಸಂಪೂರ್ಣವಾಗಿ ನಿರೂಪಣೆ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ಯಾವ ಪ್ರಕಾರ ವಚನಗೋಚರವಾಗಿ ಛದ್ಮಸ್ಥನ ಜ್ಞಾನದಲ್ಲಿ ಅವುಗಳ ಕೆಲಭಾವವು ಭಾಸವಾಗಿದೆ ಆ ಪ್ರಕಾರ ಸಂಕೋಚಮಾಡಿ ನಿರೂಪಣೆ ಮಾಡುತ್ತಾರೆ. ಉದಾಹರಣಾರ್ಥವಾಗಿ ಜೀವದ ಭಾವಗಳ ಅಪೇಕ್ಷೆಯಿಂದ ಗುಣಸ್ಥಾನಗಳನ್ನು ಹೇಳಿದ್ದಾರೆ, ಆ ಭಾವಗಳು ಅನಂತಸ್ವರೂಪ ಸಹಿತವಿದ್ದು ವಚನಗೋಚರವಿಲ್ಲ, ಅಲ್ಲಿ ಬಹಳಷ್ಟು ಭಾವಗಳ ಒಂದು ಜಾತಿ ಮಾಡಿ ಹದಿನಾಲ್ಕು ಗುಣಸ್ಥಾನಗಳನ್ನು ಮಾಡಿದ್ದಾರೆ. ಅದರಂತೆ ಜೀವಗಳನ್ನು ತಿಳಿದುಕೊಳ್ಳುವ ಪ್ರಕಾರಗಳೂ ಅನೇಕವಿದ್ದು ಅಲ್ಲಿ ಮುಖ್ಯವಾಗಿ ಹದಿನಾಲ್ಕು ಮಾರ್ಗಣಗಳ ನಿರೂಪಣೆ ಮಾಡಿದೆ ಮತ್ತು ಕರ್ಮಪರಮಾಣುಗಳು ಅನಂತ ಪ್ರಕಾರದ ಶಕ್ತಿಗಳಿಂದ ಯುಕ್ತವಿದ್ದು ಅವುಗಳಲ್ಲಿ ಬಹಳಷ್ಟರ ಒಂದು ಜಾತಿ ಮಾಡಿ ಎಂಟು ಮತ್ತು ನೂರನಲವತ್ತೆಂಟು ಪ್ರಕೃತಿಗಳನ್ನು ಹೇಳಿದ್ದಾರೆ. ಅದರಂತೆ ತ್ರಿಲೋಕದಲ್ಲಿ ಅನೇಕ ರಚನೆಗಳಿದ್ದು ಅಲ್ಲಿಕೆಲವು ಮುಖ್ಯರಚನೆಗಳ ನಿರೂಪಣೆ ಮಾಡುತ್ತಾರೆ. ಅದರಂತೆ ಪ್ರಮಾಣದ ಅನಂತ ಭೇದಗಳಿದ್ದು ಅಲ್ಲಿ ಸಂಖ್ಯಾತ ಮೊದಲಾದ ಮೂರು ಭೇದ ಮತ್ತು ಇವುಗಳ ಇಪ್ಪತ್ತೊಂದು ಭೇದಗಳ ನಿರೂಪಣೆ ಮಾಡಲಾಗಿದೆ. ಈ ಪ್ರಕಾರ ಉಳಿದಕಡೆಗಳಲ್ಲಿಯೂ ತಿಳಿಯುವುದು.

ಅದರಂತೆ ವಸ್ತುವಿನ ಕ್ಷೇತ್ರ, ಕಾಲ, ಭಾವ ಮೊದಲಾದವು ಅಖಂಡವಾಗಿದ್ದರೂ ಛದ್ಮಸ್ಥನಿಗೆ ಅವುಗಳ ನ್ಯೂನಾಧಿಕ ಜ್ಞಾನವಾಗುವ ಸಲುವಾಗಿ ಪ್ರದೇಶ, ಸಮಯ, ಅವಿಭಾಗ-ಪ್ರತಿಚ್ಛೇದಾದಿಗಳ ಕಲ್ಪನೆಮಾಡಿ ಕರಣಾನುಯೋಗದಲ್ಲಿ ಅವುಗಳ ಪ್ರಮಾಣದ ನಿರೂಪಣೆ ಮಾಡುತ್ತಾರೆ. ಮತ್ತು ಒಂದು ವಸ್ತುವಿನಲ್ಲಿ ಭಿನ್ನ-ಭಿನ್ನ ಗುಣಗಳ ಹಾಗೂ ಪರ್ಯಾಯಗಳ ಭೇದಮಾಡಿ ನಿರೂಪಣೆ ಮಾಡುತ್ತಾರೆ. ಅದರಂತೆ ಜೀವ-ಪುದ್ಗಲಾದಿಗಳು ಭಿನ್ನ-ಭಿನ್ನವಾಗಿದ್ದರೂ ಸಂಬಂಧಾದಿಗಳ ಮೂಲಕ ಅನೇಕ ದ್ರವ್ಯದಿಂದ ನಿಷ್ಪನ್ನವಾದ ಗತಿ, ಜಾತಿ ಮೊದಲಾದ ಭೇದಗಳನ್ನು ಒಂದು ಜೀವನಿಗೆಂದು ನಿರೂಪಣೆ ಮಾಡುತ್ತಾರೆ. ಇತ್ಯಾದಿ ವ್ಯಾಖ್ಯಾನಗಳು ವ್ಯವಹಾರನಯದ ಮುಖ್ಯತೆಯೊಡನಿವೆಯೆಂದು ತಿಳಿಯುವುದು, ಏಕೆಂದರೆ ವ್ಯವಹಾರವಿಲ್ಲದೆ ವಿಶೇಷ ತಿಳಿಯುವ ಸಾಧ್ಯತೆಯಿಲ್ಲ. ಕೆಲವೆಡೆ ನಿಶ್ಚಯವರ್ಣನೆಯೂ ಕಂಡುಬರುತ್ತದೆ. ಹೇಗೆಂದರೆ ಜೀವಾದಿ ದ್ರವ್ಯಗಳ ಪ್ರಮಾಣ ನಿರೂಪಣೆ ಮಾಡಿದೆ, ಅಲ್ಲಿ ಭಿನ್ನ-ಭಿನ್ನ ಇಷ್ಟೇ ದ್ರವ್ಯಗಳಿವೆಯೆಂಬುದನ್ನು ಯಥಾಸಂಭವ ತಿಳಿದುಕೊಳ್ಳುವುದು.

ಕರಣಾನುಯೋಗದಲ್ಲಿರುವ ಕಥನಗಳಲ್ಲಿ ಕೆಲವಂತೂ ಛದ್ಮಸ್ಥನಿಗೆ ಪ್ರತ್ಯಕ್ಷ-ಅನುಮಾನಾದಿಗಳಿಂದ ಗೋಚರವಾಗುತ್ತವೆ, ಮತ್ತು ಗೋಚರವಾಗದವುಗಳನ್ನು ಆಜ್ಞಾಪ್ರಮಾಣದ ಮೂಲಕ ಮನ್ನಿಸುವುದು. ಯಾವ ಪ್ರಕಾರ ಜೀವ-ಪುದ್ಗಲದ ಸ್ಥೂಲ ಅಧಿಕಕಾಲ ಸ್ಥಾಯಿಯಾದ ಮನುಷ್ಯಾದಿ ಪರ್ಯಾಯಗಳು ಮತ್ತು ಘಟಾದಿ ಪರ್ಯಾಯಗಳು ನಿರೂಪಣೆಯಾಗಿವೆ ಅವುಗಳದಂತೂ ಪ್ರತ್ಯಕ್ಷ ಅನುಮಾನಾದಿಗಳಾಗುವ ಸಾಧ್ಯತೆಯಿದೆ; ಆದರೆ ಪ್ರತಿಸಮಯದಲ್ಲಾಗುವ ಸೂಕ್ಷ್ಮ ಪರಿಣಮನದ ಅಪೇಕ್ಷೆಯಿಂದ ಜ್ಞಾನಾದಿಗಳ ಹಾಗೂ ಸ್ನಿಗ್ಧ-ರೂಕ್ಷಾದಿಗಳ ಅಂಶಗಳನ್ನು ನಿರೂಪಣೆ ಮಾಡಿದೆ ಅವು ಆಜ್ಞೆಯಿಂದಲೇ ಪ್ರಮಾಣವಾಗುತ್ತವೆ. ಇದೇ ಪ್ರಕಾರ ಇತರೆಡೆಗಳಲ್ಲಿಯೂ ತಿಳಿಯುವುದು.

ಕರಣಾನುಯೋಗದಲ್ಲಿ ಛದ್ಮಸ್ಥರ ಪ್ರವೃತ್ತಿಗೆ ಅನುಸರಿಸಿ ವರ್ಣನೆ ಮಾಡದೆ, ಕೇವಲಜ್ಞಾನಗಮ್ಯ ಪದಾರ್ಥಗಳ ನಿರೂಪಣೆ ಮಾಡಿದೆ. ಅದೆಷ್ಟೋ ಜೀವರುಗಳು ದ್ರವ್ಯಾದಿಗಳ ವಿಚಾರ ಮಾಡುತ್ತಾರೆ ಮತ್ತು ವ್ರತಾದಿಗಳನ್ನು ಪಾಲಿಸುತ್ತಾರೆ; ಆದರೆ ಅವರ ಅಂತರಂಗದಲ್ಲಿ ಸಮ್ಯಕ್ತ್ವಚಾರಿತ್ರದ ಶಕ್ತಿಯಿಲ್ಲದುದರಿಂದ ಅವರನ್ನು ಮಿಥ್ಯಾದೃಷ್ಟಿಗಳೆಂದು -ಅವ್ರತಿಗಳೆಂದು ಹೇಳುತ್ತಾರೆ. ಅದರಂತೆ ಅದೆಷ್ಟೋ ಜೀವರುಗಳು ದ್ರವ್ಯಾದಿಗಳ ಹಾಗೂ ವ್ರತಾದಿಗಳ ವಿಚಾರದಿಂದ ರಹಿತರಿದ್ದು, ಅನ್ಯಕಾರ್ಯಗಳಲ್ಲಿ ಪ್ರವರ್ತಿಸುತ್ತಾರೆ ಮತ್ತು ನಿದ್ರಾದಿಗಳಿಂದ ನಿರ್ವಿಚಾರಿಗಳಾಗುತ್ತಿದ್ದಾರೆ; ಆದರೆ ಅವರಲ್ಲಿ ಸಮ್ಯಕ್ತ್ವ ಮೊದಲಾದ ಶಕ್ತಿಯ ಸದ್ಭಾವವಿರುವುದರಿಂದ ಅವರನ್ನು ಸಮ್ಯಕ್ತ್ವಿಗಳೆಂದು ಮತ್ತು ವ್ರತಿಗಳೆಂದು ಹೇಳುತ್ತಾರೆ.

ಓರ್ವ ಜೀವನಿಗೆ ಕಷಾಯಗಳ ಪ್ರವೃತ್ತಿಯು ಅಧಿಕವಿದ್ದರೆ ಮತ್ತು ಅವನ ಅಂತರಂಗದಲ್ಲಿ ಕಷಾಯ ಶಕ್ತಿಯು ಕಡಿಮೆಯಿದ್ದರೆ ಅವನನ್ನು ಮಂದಕಷಾಯಿಯೆಂದು ಹೇಳುತ್ತಾರೆ. ಇನ್ನು ಓರ್ವ ಜೀವನಿಗೆ ಕಷಾಯಗಳ ಪ್ರವೃತ್ತಿಯು ಅಲ್ಪವಿದ್ದರೆ ಮತ್ತು ಅವನ ಅಂತರಂಗದಲ್ಲಿ ಕಷಾಯಶಕ್ತಿಯು ಅಧಿಕವಿದ್ದರೆ ಅವನನ್ನು ತೀವ್ರ ಕಷಾಯಿಯೆಂದು ಹೇಳುತ್ತಾರೆ, ಹೇಗೆಂದರೆ ವ್ಯಂತರ ಮೊದಲಾದ ದೇವಗಳು ಕಷಾಯಗಳಿಂದ ನಗರನಾಶ ಮೊದಲಾದ ಕಾರ್ಯ ಮಾಡುತ್ತಿದ್ದರೂ ಅಲ್ಪಕಷಾಯ ಶಕ್ತಿಯಿಂದ ಅವರಿಗೆ ಪೀತ ಲೇಶ್ಯೆ ಹೇಳಿದೆ. ಇನ್ನು ಏಕೇಂದ್ರಿಯ ಮೊದಲಾದ ಜೀವಗಳು ಕಷಾಯ ಕಾರ್ಯ ಮಾಡುತ್ತಿರುವುದು ಕಂಡು ಬಾರದಿದ್ದರೂ ಅಧಿಕ ಕಷಾಯ ಶಕ್ತಿಯಿಂದ ಅವುಗಳಿಗೆ ಕೃಷ್ಣಲೇಶ್ಯೆ ಹೇಳಿದೆ, ಅಲ್ಲದೆ ಸರ್ವಾರ್ಥಸಿದ್ಧಿಯ ದೇವಗಳು ಅಲ್ಪ ಕಷಾಯರೂಪವಾಗಿ ಪ್ರವರ್ತಿಸುತ್ತಾರೆ, ಆದರೆ ಅಧಿಕ ಕಷಾಯ ಶಕ್ತಿಯಿಂದ ಅವರನ್ನು ಅಸಂಯಮಿಯೆಂದು ಹೇಳಿದೆ. ಮತ್ತು ಪಂಚಮಗುಣಸ್ಥಾನಾವರ್ತಿಗಳು ವ್ಯಾಪಾರ, ಅಬ್ರಹ್ಮ ಮೊದಲಾದ ಕಷಾಯಶಕ್ತಿರೂಪವಾಗಿ ಅಧಿಕ ಪ್ರವರ್ತಿಸುತ್ತಾರೆ, ಆದರೆ ಮಂದಕಷಾಯ ಶಕ್ತಿಯಿಂದ ಅವರಿಗೆ ದೇಶಸಂಯಮಿಯೆಂದು ಹೇಳಿದೆ. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಒಬ್ಬ ಜೀವನಿಗೆ ಮನ-ವಚನ-ಕಾಯಗಳ ಚೇಷ್ಟೆಯು ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತಿದ್ದರೂ ಕರ್ಮಾಕರ್ಷಣ ಶಕ್ತಿಯ ಅಪೇಕ್ಷೆಯಿಂದ ಅವನಿಗೆ ಅಧಿಕ ಯೋಗ ಹೇಳಿದೆ. ಒಬ್ಬನಿಗೆ ಅಧಿಕ ಚೇಷ್ಟೆಯು ಕಂಡು ಬರುತ್ತಿದ್ದರೂ ಶಕ್ತಿಯ ಹೀನತೆಯಿಂದ ಅಲ್ಪಯೋಗ ಹೇಳಿದೆ. ಹೇಗೆಂದರೆ ಕೇವಲಿಗಳು ಗಮನಾದಿ ಕ್ರಿಯೆಗಳಿಂದ ರಹಿತರಾಗಿದ್ದರೂ ಅವರಿಗೆ ಅಧಿಕ ಯೋಗ ಹೇಳಿದೆ. ದ್ವೀಂದ್ರಿಯ ಮೊದಲಾದ ಜೀವಗಳು ಗಮನಾದಿಗಳನ್ನು ಮಾಡುತ್ತಿದ್ದರೂ ಅವುಗಳಿಗೆ ಅಲ್ಪಯೋಗ ಹೇಳಿದೆ. ಇದೇ ಪ್ರಕಾರ ಇತರೆಡೆಗಳಲ್ಲಿಯೂ ತಿಳಿಯುವುದು.

ಎಲ್ಲಿ ಯಾವುದರ ವ್ಯಕ್ತತೆಯು ಸ್ವಲ್ಪವೂ ಭಾಸವಾಗುವುದಿಲ್ಲ, ಆದರೆ ಸೂಕ್ಷ್ಮ ಶಕ್ತಿಯ ಸದ್ಭಾವದಿಂದ ಅಲ್ಲಿ ಅದರ ಅಸ್ತಿತ್ವವನ್ನು ಹೇಳಿದೆ. ಹೇಗೆಂದರೆ ಮುನಿಗಳಿಗೆ ಅಬ್ರಹ್ಮಕಾರ್ಯವು ಏನೂ ಇಲ್ಲದಿದ್ದರೂ ಒಂಭತ್ತನೆಯ ಗುಣಸ್ಥಾನದವರೆಗೆ ಮೈಥುನ ಸಂಜ್ಞೆಯನ್ನು ಹೇಳಿದೆ. ಅಹಮಿಂದ್ರರುಗಳಿಗೆ ದುಃಖದ ಕಾರಣಗಳು ವ್ಯಕ್ತವಿಲ್ಲದಿದ್ದರೂ ಒಮ್ಮೊಮ್ಮೆ ಅಸಾತಾದ ಉದಯ ಕೂಡ ಹೇಳಿದೆ. ಇದೇ ಪ್ರಕಾರ ಉಳಿದ ಕಡೆಗಳಲ್ಲಿಯೂ ತಿಳಿಯುವುದು.

ಕರಣಾನುಯೋಗವು ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಮೊದಲಾದ ಧರ್ಮದ ನಿರೂಪಣೆಯನ್ನು ಕರ್ಮ ಪ್ರಕೃತಿಗಳ ಉಪಶಮಾದಿಗಳ ಅಪೇಕ್ಷೆಯೊಡನೆ ಸೂಕ್ಷ್ಮಶಕ್ತಿಯು ಹೇಗೆ ಕಂಡು ಬರುತ್ತದೆ ಹಾಗೆ ಗುಣಸ್ಥಾನಾದಿಗಳಲ್ಲಿ

ನಿರೂಪಣೆ ಮಾಡುತ್ತದೆ. ಮತ್ತು ಸಮ್ಯಗ್ದರ್ಶನ ಮೊದಲಾದವುಗಳ ವಿಷಯಭೂತಗಳಾದ ಜೀವಾದಿಗಳ ನಿರೂಪಣೆಯನ್ನೂ ಸೂಕ್ಷ್ಮ ಭೇದಾದಿಗಳೊಡನೆ ಮಾಡುತ್ತದೆ. ಇಲ್ಲಿ ಯಾರಾದರೂ ಕರಣಾನುಯೋಗಕ್ಕೆ ಅನುಸರಿಸಿ ತಾವು ಉದ್ಯಮ ಮಾಡಿದರೆ ಆಗುವ ಸಾಧ್ಯತೆಯಿಲ್ಲ; ಏಕೆಂದರೆ ಕರಣಾನುಯೋಗದಲ್ಲಿ ಯಥಾರ್ಥ ಪದಾರ್ಥಗಳನ್ನು ತಿಳಿಸಿಕೊಡುವುದರ ಮುಖ್ಯ ಪ್ರಯೋಜನವಿದೆ, ಆಚರಣೆ ಮಾಡಿಸುವ ಮುಖ್ಯತೆಯಿಲ್ಲ. ಆದುದರಿಂದ ಇವನಂತೂ ಚರಣಾನುಯೋಗಕ್ಕೆ ಅನುಸರಿಸಿ ಪ್ರವರ್ತನೆ ಮಾಡುವನು, ಅದರಿಂದ ಯಾವ ಕಾರ್ಯವಾಗುವುದಿದೆ ಅದು ತಾನಾಗಿಯೇ ಆಗುತ್ತದೆ. ತಾನು ಕರ್ಮಗಳ ಉಪಶಮಾದಿಗಳನ್ನು ಮಾಡಲಪೇಕ್ಷಿಸಿದರೆ ಅದು ಹೇಗಾಗುವುದು? ತಾವಂತೂ ತತ್ತ್ವಾದಿಗಳ ನಿಶ್ಚಯ ಮಾಡುವ ಉದ್ಯಮ ಮಾಡಬೇಕು, ಅದರಿಂದ ತಾನಾಗಿಯೇ ಉಪಶಮ ಮೊದಲಾದ ಸಮ್ಯಕ್ತ್ವಗಳಾಗುತ್ತವೆ. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಒಂದು ಅಂತರ್ಮುಹೂರ್ತದಲ್ಲಿ ಹನ್ನೊಂದನೆಯ ಗುಣಸ್ಥಾನದಿಂದ ಉರುಳಿ ಕ್ರಮದಿಂದ ಮಿಥ್ಯಾದೃಷ್ಟಿಯಾಗುತ್ತಾನೆ ಮತ್ತು ಮೇಲೆ ಹತ್ತಿ ಕೇವಲಜ್ಞಾನ ಉತ್ಪನ್ನ ಮಾಡುತ್ತಾನೆ. ಆದುದರಿಂದ ಇಂಥ ಸಮ್ಯಕ್ತ್ವಾದಿಗಳ ಸೂಕ್ಷ್ಮ ಭಾವಗಳು ಬುದ್ಧಿಗೋಚರವಿಲ್ಲ, ಅದಕ್ಕಾಗಿ ಕರಣಾನುಯೋಗದ ಅನುಸಾರ ಹೇಗಿದೆ ಹಾಗೆ ತಿಳಿದುಕೊಳ್ಳಬೇಕು. ಆದರೆ ಪ್ರವೃತ್ತಿಯನ್ನು ಬುದ್ಧಿಗೋಚರವಾಗಿ ಹೇಗೆ ಒಳ್ಳೆಯದಾಗುವುದು ಹಾಗೆ ಮಾಡುವುದು.

ಕರಣಾನುಯೋಗದಲ್ಲಿ ಕೂಡ ಎಲ್ಲಿಯೋ ಉಪದೇಶದ ಮುಖ್ಯತೆಯೊಡನೆ ವ್ಯಾಖ್ಯಾನವಿರುತ್ತದೆ, ಅದನ್ನು ಸರ್ವಥಾ ಅದೇ ಪ್ರಕಾರ ಮನ್ನಿಸಬಾರದು. ಹೇಗೆಂದರೆ ಹಿಂಸಾದಿಗಳ ಉಪಾಯವನ್ನು ಕುಮತಿಜ್ಞಾನವೆಂದು ಹೇಳಿದೆ; ಅನ್ಯಮತಾದಿಗಳ ಶಾಸ್ತ್ರಾಭ್ಯಾಸವನ್ನು ಕುಶ್ರುತ ಜ್ಞಾನವೆಂದು ಹೇಳಿದೆ; ಕೆಡಕು ಕಾಣುವುದು ಒಳ್ಳೆಯದು ಕಾಣದಿರುವುದನ್ನು ವಿಭಂಗಜ್ಞಾನವೆಂದು ಹೇಳಿದೆ; ಆದರೆ ಇವನ್ನು ಬಿಡುವ ಸಲುವಾಗಿ ಉಪದೇಶದ ಮೂಲಕ ಹೀಗೆ ಹೇಳಿದೆ. ತಾರತಮ್ಯದಿಂದ ಮಿಥ್ಯಾದೃಷ್ಟಿಯ ಎಲ್ಲ ಜ್ಞಾನಗಳು ಕುಜ್ಞಾನವಿದ್ದರೆ ಸಮ್ಯಗ್ದೃಷ್ಟಿಯ ಎಲ್ಲ ಜ್ಞಾನಗಳು ಸುಜ್ಞಾನವಿವೆ. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಮತ್ತು ಎಲ್ಲಿಯಾದರೂ ಸ್ಥೂಲ ಕಥನ ಮಾಡಿದ್ದರೆ ಅದನ್ನು ತಾರತಮ್ಯರೂಪದಿಂದ ತಿಳಿಯಬಾರದು ಹೇಗೆಂದರೆ ವ್ಯಾಸದ ಮೂರರಷ್ಟು ಪರೀಘವನ್ನು ಹೇಳಲಾಗುತ್ತದೆ, ಆದರೆ ಸೂಕ್ಷ್ಮತೆಯಿಂದ ಮೂರರಷ್ಟಕ್ಕಿಂತ ಸ್ವಲ್ಪ ಅಧಿಕವೇ ಇರುತ್ತದೆ. ಇದೇ ಪ್ರಕಾರ ಉಳಿದ ಕಡೆಯಲ್ಲೂ ತಿಳಿಯುವುದು.

ಅದರಂತೆ ಎಲ್ಲಾದರೂ ಮುಖ್ಯತೆಯ ಅಪೇಕ್ಷೆಯಿಂದ ವ್ಯಾಖ್ಯಾನವಿದ್ದರೆ ಅದನ್ನು ಎಲ್ಲ ಪ್ರಕಾರ ತಿಳಿಯಬಾರದು. ಹೇಗೆಂದರೆ ಮಿಥ್ಯಾದೃಷ್ಟಿ ಮತ್ತು ಸಾಸಾದನ ಗುಣಸ್ಥಾನವುಳ್ಳವರನ್ನು ಪಾಪ ಜೀವಗಳೆಂದು ಹೇಳಿದೆ. ಅಸಂಯತ ಗುಣಸ್ಥಾನವುಳ್ಳವರನ್ನು ಪುಣ್ಯ ಜೀವವೆಂದು ಹೇಳಿದೆ, ಆದರೆ ಮುಖ್ಯತೆಯಿಂದ ಹೀಗೆ ಹೇಳಿದೆ, ತಾರತಮ್ಯದಿಂದ ಎರಡರಲ್ಲೂ ಪಾಪ-ಪುಣ್ಯಗಳು ಯಥಾಸಂಭವ ಕಂಡು ಬರುತ್ತವೆ. ಇದೇ ಪ್ರಕಾರ ಉಳಿದೆಡೆಯಲ್ಲೂ ತಿಳಿಯುವುದು.

ಇದೇ ಪ್ರಕಾರ ಇನ್ನೂ ಅನೇಕ ಪ್ರಕಾರಗಳು ಕಂಡು ಬರುತ್ತವೆ, ಅವನ್ನು ಯಥಾಸಂಭವ ತಿಳಿಯುವುದು.

ಈ ಪ್ರಕಾರ ಕರಣಾನುಯೋಗದಲ್ಲಿ ವ್ಯಾಖ್ಯಾನದ ವಿಧಾನ ತಿಳಿಸಲಾಗಿದೆ.

**ಚರಣಾನುಯೋಗದ ವ್ಯಾಖ್ಯಾನದ ವಿಧಾನ :-**

ಈಗ ಚರಣಾನುಯೋಗದಲ್ಲಿ ವ್ಯಾಖ್ಯಾನದ ವಿಧಾನವನ್ನು ತಿಳಿಸಿಕೊಡುತ್ತಾರೆ.

ಚರಣಾನುಯೋಗದಲ್ಲಿ ಜೀವರುಗಳಿಗೆ ಹೇಗೆ ತಮ್ಮ ಬುದ್ಧಿಗೋಚರವಾಗಿ ಧರ್ಮದ ಆಚರಣೆಯಾಗುವುದು ಹಾಗೆ ಉಪದೇಶ ಕೊಟ್ಟಿದೆ. ಅಲ್ಲಿ ಧರ್ಮವಂತೂ ನಿಶ್ಚಯರೂಪ ಮೋಕ್ಷಮಾರ್ಗವಿದೆ ಅದೇ ಇದೆ, ಅದರ ಸಾಧನಾದಿಗಳು ಉಪಚಾರದಿಂದ ಧರ್ಮವಿವೆ. ಆದುದರಿಂದ ವ್ಯವಹಾರನಯದ ಮುಖ್ಯತೆಯಿಂದ ನಾನಾ ಪ್ರಕಾರ ಉಪಚಾರ ಧರ್ಮದ ಭೇದಾದಿಗಳ ನಿರೂಪಣೆಯನ್ನು ಇದರಲ್ಲಿ ಮಾಡಲಾಗುತ್ತದೆ; ಏಕೆಂದರೆ ನಿಶ್ಚಯಧರ್ಮದಲ್ಲಿ ಯಾವ  ಗ್ರಹಣ-ತ್ಯಾಗದ ವಿಕಲ್ಪವಿಲ್ಲ, ಮತ್ತು ಇದರ ಕೆಳಗಿನ ಅವಸ್ಥೆಯಲ್ಲಿ ವಿಕಲ್ಪಗಳು ಬಿಡುವುದಿಲ್ಲ; ಆದುದರಿಂದ ಈ ಜೀವನಿಗೆ ಧರ್ಮವಿರೋಧಿಯಾದ ಕಾರ್ಯಗಳನ್ನು ಬಿಡಿಸುವ ಮತ್ತು ಧರ್ಮಸಾಧನದ ಕಾರ್ಯಗಳನ್ನು ಗ್ರಹಣ ಮಾಡಿಸುವ ಉಪದೇಶವು ಇದರಲ್ಲಿ ಇದೆ.

ಆ ಉಪದೇಶವನ್ನು ಎರಡು ಪ್ರಕಾರದಿಂದ ಕೊಡಲಾಗುತ್ತದೆ. ಒಂದಂತೂ ವ್ಯವಹಾರದ ಉಪದೇಶವನ್ನೇ ಕೊಡುತ್ತಾರೆ, ಇನ್ನೊಂದು ನಿಶ್ಚಯ ಸಹಿತವಾದ ವ್ಯವಹಾರದ ಉಪದೇಶ ಕೊಡುತ್ತಾರೆ.

ಯಾವ ಜೀವರುಗಳಿಗೆ ನಿಶ್ಚಯದ ಜ್ಞಾನವಿಲ್ಲ ಮತ್ತು ಉಪದೇಶ ಕೊಟ್ಟ ನಂತರವೂ ಆಗುವಂತೆ ಕಂಡು ಬರುವುದಿಲ್ಲ ಅಂಥ ಮಿಥ್ಯಾದೃಷ್ಟಿ ಜೀವರುಗಳು ಒಂದಿಷ್ಟು ಧರ್ಮಸನ್ಮುಖರಾದ ಮೇಲೆ ಅವರಿಗೆ ವ್ಯವಹಾರದ ಉಪದೇಶವನ್ನೇ ಕೊಡುತ್ತಾರೆ. ಮತ್ತು ಯಾವ ಜೀವರುಗಳಿಗೆ ನಿಶ್ಚಯ ವ್ಯವಹಾರದ ಜ್ಞಾನವಿದೆ ಹಾಗೂ ಉಪದೇಶ ಕೊಟ್ಟ ಮೇಲೆ ಅವುಗಳ ಜ್ಞಾನವಾಗುವುದು ಕಂಡು ಬರುತ್ತದೆ ಅಂಥ ಸಮ್ಯಗ್ದೃಷ್ಟಿ ಜೀವರುಗಳಿಗೆ ಹಾಗೂ ಸಮ್ಯಕ್ತ್ವ ಸನ್ಮುಖ ಮಿಥ್ಯಾದೃಷ್ಟಿ ಜೀವರುಗಳಿಗೆ ನಿಶ್ಚಯ ಸಹಿತ ವ್ಯವಹಾರದ ಉಪದೇಶ ಕೊಡುತ್ತಾರೆ; ಏಕೆಂದರೆ ಶ್ರೀಗುರುಗಳು ಸಮಸ್ತ ಜೀವರುಗಳ ಉಪಕಾರಿಯಿದ್ದಾರೆ.

ಆದರೆ ಅಸಂಜ್ಞೀ ಜೀವಗಳಂತೂ ಉಪದೇಶ ಗ್ರಹಣ ಮಾಡಲು ಯೋಗ್ಯವಿಲ್ಲ, ಇತರ ಜೀವರುಗಳಿಗೆ ಅವುಗಳ ದಯೆಯ ಉಪದೇಶ ಮಾಡಿರುವುದೇ ಅಸಂಜ್ಞೀ ಜೀವರುಗಳ ಮೇಲೆ ಮಾಡಿದ ಉಪಕಾರವಿದೆ.

ಅದರಂತೆ ಯಾವ ಜೀವರುಗಳು ಕರ್ಮದ ಪ್ರಾಬಲ್ಯದಿಂದ ನಿಶ್ಚಯ ಮೋಕ್ಷಮಾರ್ಗವನ್ನು ಪ್ರಾಪ್ತಮಾಡಿಕೊಳ್ಳುವ ಸಾಧ್ಯತೆಯಿಲ್ಲ, ಅವರಿಗೆ ವ್ಯವಹಾರ ಧರ್ಮದ ಉಪದೇಶವಿತ್ತು ಕುಗತಿಯ ದುಃಖಗಳಿಗೆ ಕಾರಣವಾದ ಪಾಪ ಕಾರ್ಯಗಳನ್ನು ಬಿಡಿಸಿ ಸುಗತಿಗೆ ಇಂದ್ರಿಯ ಸುಖಗಳಿಗೆ ಕಾರಣರೂಪವಾದ ಪುಣ್ಯಕಾರ್ಯಗಳಲ್ಲಿ ತೊಡಗಿಸಿ ಉಪಕಾರ ಮಾಡಿದ್ದಾರೆ. ಅಲ್ಲಿ ಎಷ್ಟು ದುಃಖವು ದೂರವಾಗುವುದು ಅಷ್ಟೇ ಉಪಕಾರವಾಯಿತು.

ಪಾಪಿಗಂತೂ ಪಾಪ ವಾಸನೆಯೇ ಇರುತ್ತದೆ ಮತ್ತು ಅವನು ಕುಗತಿಯಲ್ಲಿ ಹೋಗುತ್ತಾನೆ, ಅಲ್ಲಿ ಧರ್ಮದ ನಿಮಿತ್ತಗಳಿಲ್ಲದಿರುವುದರಿಂದ ಪರಂಪರೆಯಿಂದ ದುಃಖವನ್ನೇ ಪ್ರಾಪ್ತ ಮಾಡಿಕೊಳ್ಳುತ್ತಿರುತ್ತಾನೆ. ಇನ್ನು ಪುಣ್ಯವಂತನಿಗೆ ಧರ್ಮವಾಸನೆಯಿರುತ್ತದೆ ಮತ್ತು ಅವನು ಸುಗತಿಯಲ್ಲಿ ಹೋಗುತ್ತಾನೆ, ಅಲ್ಲಿ ಧರ್ಮದ ನಿಮಿತ್ತಗಳು ಪ್ರಾಪ್ತವಾಗುತ್ತಿರುವುದರಿಂದ ಪರಂಪರೆಯಿಂದ ಸುಖವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ; ಅಥವಾ ಕರ್ಮವು ಶಕ್ತಿಹೀನವಾಗಿ ಬಿಟ್ಟರೆ ಮೋಕ್ಷಮಾರ್ಗಕ್ಕೂ ಪ್ರಾಪ್ತವಾಗುತ್ತಾನೆ. ಆದುದರಿಂದ ವ್ಯವಹಾರ ಉಪದೇಶದ ಮೂಲಕ ಪಾಪದಿಂದ ಬಿಡಿಸಿ ಪುಣ್ಯಕಾರ್ಯಗಳಲ್ಲಿ ತೊಡಗಿಸುತ್ತಾರೆ.

ಮತ್ತು ಯಾವನು ಮೋಕ್ಷಮಾರ್ಗವನ್ನು ಪ್ರಾಪ್ತ ಮಾಡಿಕೊಂಡಿದ್ದಾನೆ ಹಾಗೂ ಪ್ರಾಪ್ತ ಮಾಡಿಕೊಳ್ಳಲು ಯೋಗ್ಯನಿದ್ದಾನೆ ಅವನಿಗೆ ನಿಶ್ಚಯಸಹಿತ ವ್ಯವಹಾರದ ಉಪದೇಶವಿತ್ತು ಮೋಕ್ಷಮಾರ್ಗದಲ್ಲಿ ಪ್ರವೃತ್ತಿ ಮಾಡಿಸುವ ಉಪಕಾರ ಮಾಡುತ್ತಾರೆ.

ಶ್ರೀಗುರುಗಳಂತೂ ಎಲ್ಲರಿಗೂ ಇಂಥದೇ ಉಪಕಾರ ಮಾಡುತ್ತಾರೆ; ಆದರೆ ಯಾವ ಜೀವರುಗಳಿಗೆ ಇಂಥ ಉಪಕಾರವು ಕೂಡಿ ಬರುವುದಿಲ್ಲ ಅದಕ್ಕೆ ಶ್ರೀಗುರುಗಳೇನು ಮಾಡುವರು ? ಹೇಗೆ ಸಂಭವಿಸುವುದು ಹಾಗೆಯೇ ಉಪಕಾರ ಮಾಡುವರು; ಆದುದರಿಂದ ಎರಡು ಪ್ರಕಾರದಿಂದ ಉಪದೇಶ ಕೊಡುತ್ತಾರೆ.

ಅಲ್ಲಿ ವ್ಯವಹಾರ ಉಪದೇಶದಲ್ಲಿ ಬಾಹ್ಯಕ್ರಿಯೆಗಳದೇ ಮುಖ್ಯತೆಯಿದೆ, ಅವುಗಳ ಉಪದೇಶದಿಂದ ಜೀವನು ಪಾಪಕ್ರಿಯೆಗಳನ್ನು ಬಿಟ್ಟುಕೊಟ್ಟು ಪುಣ್ಯಕ್ರಿಯೆಗಳಲ್ಲಿ ಪ್ರವರ್ತಿಸುತ್ತಾನೆ. ಅಲ್ಲಿ ಕ್ರಿಯೆಗಳಿಗೆ ಅನುಸರಿಸಿ ಪರಿಣಾಮಗಳೂ ತೀವ್ರ ಕಷಾಯ ಬಿಟ್ಟುಕೊಟ್ಟು ಒಂದಿಷ್ಟು ಮಂದ ಕಷಾಯಿಯಾಗುತ್ತವೆ, ಮುಖ್ಯತೆಯಿಂದಂತೂ ಈ ಪ್ರಕಾರವಿದೆ; ಯಾರಿಗೆ ಆಗುವುದಿಲ್ಲ ಅವರಿಗೆ ಆಗದಿರಲಿ, ಶ್ರೀಗುರುಗಳಂತೂ ಪರಿಣಾಮ ಸುಧಾರಿಸುವ ಸಲುವಾಗಿ ಬಾಹ್ಯಕ್ರಿಯೆಗಳ ಉಪದೇಶ ಕೊಡುತ್ತಾರೆ.

ಇನ್ನು ನಿಶ್ಚಯ ಸಹಿತವಾದ ವ್ಯವಹಾರದ ಉಪದೇಶದಲ್ಲಿ ಪರಿಣಾಮಗಳ ಮುಖ್ಯತೆಯೇ ಇದೆ; ಅದರ ಉಪದೇಶದಿಂದ ತತ್ತ್ವಜ್ಞಾನದ ಅಭ್ಯಾಸದ ಮೂಲಕ ಮತ್ತು ವೈರಾಗ್ಯಭಾವನೆಯ ಮೂಲಕ ಪರಿಣಾಮಗಳು ಸುಧಾರಿಸಿದಲ್ಲಿ ಆ ಪರಿಣಾಮಗಳಿಗೆ ಅನುಸರಿಸಿ ಬಾಹ್ಯ ಕ್ರಿಯೆಗಳು ಕೂಡ ಸುಧಾರಿಸಿ ಹೋಗುತ್ತವೆ. ಪರಿಣಾಮಗಳು ಸುಧಾರಿಸಿದ ಮೇಲೆ ಬಾಹ್ಯಕ್ರಿಯೆಗಳು ನಿಯಮದಿಂದ ಸುಧಾರಿಸುತ್ತವೆ. ಆದುದರಿಂದ **ಶ್ರೀಗುರುಗಳು ಮುಖ್ಯವಾಗಿ ಪರಿಣಾಮ ಸುಧಾರಿಸುವ ಉಪದೇಶ ಕೊಡುತ್ತಾರೆ.**

ಹೀಗೆ ಎರಡು ಪ್ರಕಾರದ ಉಪದೇಶದಲ್ಲಿ ವ್ಯವಹಾರದ ಉಪದೇಶವೇ ಇರುವಲ್ಲಿ ಸಮ್ಯಗ್ದರ್ಶನದ ಸಲುವಾಗಿ ಅರಹಂತದೇವ, ನಿರ್ಗ್ರಂಥಗುರು, ದಯಾಧರ್ಮವನ್ನೇ ಮನ್ನಿಸುವುದು, ಉಳಿದವುಗಳನ್ನು ಮನ್ನಿಸಬಾರದು; ಮತ್ತು ಜೀವ ಮೊದಲಾದ ತತ್ತ್ವಗಳ ವ್ಯವಹಾರ ಸ್ವರೂಪ ಹೇಳಿದೆ ಅದರ ಶ್ರದ್ಧೆ ಮಾಡುವುದು; ಶಂಕೆ ಮೊದಲಾದ ಇಪ್ಪತ್ತೈದು ದೋಷ ತಗಲಿಸದಿರುವುದು ನಿಃಶಂಕಿತಾದಿ ಅಂಗ ಹಾಗೂ ಸಂವೇಗಾದಿ ಗುಣಗಳ ಪಾಲನೆ ಮಾಡುವುದು ಇತ್ಯಾದಿಗಳ ಉಪದೇಶ ಕೊಡುತ್ತಾರೆ.

ಅದರಂತೆ ಸಮ್ಯಗ್ಜ್ಞಾನದ ಸಲುವಾಗಿ ಜಿನಮತದ ಶಾಸ್ತ್ರಗಳ ಅಭ್ಯಾಸ ಮಾಡುವುದು, ಅರ್ಥ-ವ್ಯಂಜನ ಮೊದಲಾದ ಅಂಗಗಳ ಸಾಧನ ಮಾಡುವುದು ಇತ್ಯಾದಿ ಉಪದೇಶ ಕೊಡುತ್ತಾರೆ. ಮತ್ತು ಸಮ್ಯಕ್ಚಾರಿತ್ರದ ಸಲುವಾಗಿ ಏಕದೇಶ ಹಾಗೂ ಸರ್ವದೇಶ ಹಿಂಸೆ ಮೊದಲಾದ ಪಾಪಗಳ ತ್ಯಾಗ ಮಾಡುವುದು, ವ್ರತಾದಿ ಅಂಗಗಳ ಪಾಲನೆ ಮಾಡುವುದು ಇತ್ಯಾದಿ ಉಪದೇಶ ಕೊಡುತ್ತಾರೆ. ಇನ್ನು ಯಾವುದೇ ಜೀವನಿಗೆ ವಿಶೇಷ ಧರ್ಮದ ಸಾಧನವಾಗದಿರುವುದನ್ನು ತಿಳಿದುಕೊಂಡು ಒಂದು ವಿಶಿಷ್ಟವ್ರತಾದಿಗಳದ್ದೇ ಉಪದೇಶ ಕೊಡುತ್ತಾರೆ. ಹೇಗೆಂದರೆ ಭಿಲ್ಲನಿಗೆ ಕಾಗೆಯ ಮಾಂಸ ಬಿಡಿಸುವುದು, ಗೊಲ್ಲನಿಗೆ ನಮಸ್ಕಾರ ಮಂತ್ರ ಜಪಿಸುವ ಉಪದೇಶ ಕೊಡುವುದು, ಗೃಹಸ್ಥನಿಗೆ ಚೈತ್ಯಾಲಯ, ಪೂಜೆ-ಪ್ರಭಾವನೆ ಮೊದಲಾದ ಕಾರ್ಯದ ಉಪದೇಶ ಕೊಡುವುದು, ಇತ್ಯಾದಿಯಾಗಿ ಜೀವನ ಯೋಗ್ಯತೆಗೆ ಅನುಸರಿಸಿ ಉಪದೇಶ ಕೊಡುತ್ತಾರೆ.

ಅದರಂತೆ ನಿಶ್ಚಯಸಹಿತ ವ್ಯವಹಾರದ ಉಪದೇಶವಿರುವಲ್ಲಿ ಸಮ್ಯಗ್ದರ್ಶನದ ಸಲುವಾಗಿ ಯಥಾರ್ಥತತ್ತ್ವಗಳ ಶ್ರದ್ಧೆ ಮಾಡಿಸುತ್ತಾರೆ ಅವುಗಳ ಆ ನಿಶ್ಚಯ ಸ್ವರೂಪವು ಅದು ಭೂತಾರ್ಥವಿದ್ದು ವ್ಯವಹಾರ ಸ್ವರೂಪವು ಅದು ಉಪಚಾರವಿದೆಯೆಂಬ ಶ್ರದ್ಧೆಯೊಡನೆ ಮತ್ತು ಸ್ವ-ಪರದ ಭೇದ ಜ್ಞಾನದ ಮೂಲಕ ಪರದ್ರವ್ಯದಲ್ಲಿ ರಾಗಾದಿಗಳನ್ನು ಬಿಡುವ ಪ್ರಯೋಜನದಿಂದ ಆ ತತ್ತ್ವಗಳ ಶ್ರದ್ಧೆ ಮಾಡುವ ಉಪದೇಶ ಕೊಡುತ್ತಾರೆ. ಇಂಥ ಶ್ರದ್ಧೆಯಿಂದ ಅರಹಂತಾದಿಕರನ್ನು ಹೊರತು ಪಡಿಸಿ ಅನ್ಯದೇವಾದಿಕರು ಅಸತ್ಯವೆಂದು ಭಾಸವಾಗುತ್ತಾರೆ, ಆಗ ತಾನಾಗಿಯೇ ಅವರನ್ನು ಮನ್ನಿಸುವುದು ಬಿಟ್ಟುಹೋಗುತ್ತದೆಂಬುದರ ನಿರೂಪಣೆಯನ್ನು ಮಾಡುತ್ತಾರೆ. ಮತ್ತು ಸಮ್ಯಗ್ಜ್ಞಾನದ ಸಲುವಾಗಿ ಸಂಶಯಾದಿಗಳಿಂದ ರಹಿತವಾಗಿ ಅದೇ ತತ್ತ್ವಗಳನ್ನು ಅದೇ ಪ್ರಕಾರ ತಿಳಿದುಕೊಳ್ಳುವ ಉಪದೇಶ ಕೊಡುತ್ತಾರೆ, ಅವನ್ನು ತಿಳಿದುಕೊಳ್ಳುವುದರ ಕಾರಣವು ಜಿನಶಾಸ್ತ್ರಗಳ ಅಭ್ಯಾಸವಿರುವುದರಿಂದ ಆ ಪ್ರಯೋಜನದ ಸಲುವಾಗಿ ಜಿನಶಾಸ್ತ್ರಗಳ ಅಭ್ಯಾಸವೂ ತಾನಾಗಿಯೇ ಆಗುತ್ತದೆ; ಅದರ ನಿರೂಪಣೆ ಮಾಡುತ್ತಾರೆ ಇನ್ನು ಸಮ್ಯಕ್ಚಾರಿತ್ರದ ಸಲುವಾಗಿ ರಾಗಾದಿಗಳನ್ನು ದೂರ ಮಾಡುವ ಉಪದೇಶ ಕೊಡುತ್ತಾರೆ; ಅಲ್ಲಿ ಏಕದೇಶ ಹಾಗೂ ಸರ್ವದೇಶ ತೀವ್ರರಾಗಾದಿಗಳ ಅಭಾವವಾದ ಮೇಲೆ ಅವುಗಳ ನಿಮಿತ್ತದಿಂದ ಆಗುತ್ತಿರುವ ಏಕದೇಶ ಹಾಗೂ ಸರ್ವದೇಶ ಪಾಪಕ್ರಿಯೆಗಳು ಬಿಟ್ಟುಹೋಗುತ್ತವೆ ಮತ್ತು ಮಂದರಾಗದಿಂದ ಶ್ರಾವಕ-ಮುನಿಯವ್ರತಗಳ ಪ್ರವೃತ್ತಿಯಾಗುತ್ತದೆ ಅದರಂತೆ ಮಂದರಾಗದ್ದೂ ಅಭಾವವಾದ ನಂತರ ಶುದ್ಧೋಪಯೋಗದ ಪ್ರವೃತ್ತಿಯಾಗುತ್ತದೆಂಬುದರದೂ ನಿರೂಪಣೆ ಮಾಡುತ್ತಾರೆ.

ಹೀಗೆ ಯಥಾರ್ಥ ಶ್ರದ್ಧೆಯೊಡನೆ ಸಮ್ಯಗ್ದೃಷ್ಟಿಗಳಿಗೆ ಯಾವ ಯಥಾರ್ಥ ವ್ರತಗಳಾಗುತ್ತವೆ ಅಥವಾ ಭಕ್ತಿಯಾಗುತ್ತದೆ ಅಥವಾ ಪೂಜೆ-ಪ್ರಭಾವನೆ ಮೊದಲಾದ ಕಾರ್ಯಗಳಾಗುತ್ತವೆ ಅಥವಾ ಧ್ಯಾನಾದಿಗಳಾಗುತ್ತವೆ ಅವುಗಳ ಉಪದೇಶ ಕೊಡುತ್ತಾರೆ. ಜಿನಮತದಲ್ಲಿ ನಿಜವಾದ ಪರಂಪರಾಮಾರ್ಗವಿರುವಂತೆ ಉಪದೇಶ ಕೊಡುತ್ತಾರೆ.

ಹೀಗೆ ಚರಣಾನುಯೋಗದಲ್ಲಿ ಎರಡು ಪ್ರಕಾರದಿಂದ ಉಪದೇಶವಿದೆಯೆಂದು ತಿಳಿಯುವುದು.

ಅದರಂತೆ ಚರಣಾನುಯೋಗದಲ್ಲಿ ತೀವ್ರಕಷಾಯಗಳ ಕಾರ್ಯ ಬಿಡಿಸಿ ಮಂದಕಷಾಯರೂಪ ಕಾರ್ಯ ಮಾಡುವ ಉಪದೇಶ ಕೊಡುತ್ತಾರೆ. ಕಷಾಯ ಮಾಡುವುದು ನಿಕೃಷ್ಟವಾಗಿದ್ದರೂ ಎಲ್ಲ ಕಷಾಯಗಳು ಬಿಡುವುದಿಲ್ಲವೆಂದು ತಿಳಿದುಕೊಂಡು ಕಷಾಯಗಳು ಕಡಿಮೆಯಾದಷ್ಟು ಒಳ್ಳೆಯದಾಗುವುದೆಂಬ ಪ್ರಯೋಜನವನ್ನು ತಿಳಿಯುವುದು. ಹೇಗೆಂದರೆ ಯಾವ ಜೀವರುಗಳಿಗೆ ಆರಂಭಾದಿಗಳನ್ನು ಮಾಡುವ, ಮಂದಿರಗಳನ್ನು ಕಟ್ಟಿಸುವ, ವಿಷಯಸೇವನೆಯ ಮತ್ತು ಕ್ರೋಧಾದಿಗಳನ್ನು ಮಾಡುವ ಇಚ್ಛೆಯು ಸರ್ವಥಾ ದೂರವಾಗದಿರುವುದನ್ನು ತಿಳಿದುಕೊಂಡು, ಅವರಿಗೆ ಪೂಜೆ-ಪ್ರಭಾವನೆ ಮೊದಲಾದುವನ್ನು ಮಾಡುವ, ಚೈತ್ಯಾಲಯಗಳನ್ನು ಕಟ್ಟಿಸುವ ಜಿನದೇವರುಗಳ ಎದುರಿಗೆ ಶೋಭೆ ಮಾಡುವ, ನೃತ್ಯ-ಗಾಯನಗಳನ್ನು ಮಾಡುವ ಮತ್ತು ಧರ್ಮಾತ್ಮ ಪುರುಷರಿಗೆ ಸಹಾಯಾದಿಗಳನ್ನು ಮಾಡುವ ಉಪದೇಶ ಕೊಡುತ್ತಾರೆ. ಏಕೆಂದರೆ ಇವುಗಳಲ್ಲಿ ಪರಂಪರೆಯಿಂದ ಕಷಾಯದ ಪೋಷಣೆಯಾಗುವುದಿಲ್ಲ. ಪಾಪಕಾರ್ಯಗಳಲ್ಲಿ ಪರಂಪರೆಯಿಂದ ಕಷಾಯದ ಪೋಷಣೆಯಾಗುತ್ತದೆ, ಅದಕ್ಕಾಗಿ ಪಾಪಕಾರ್ಯಗಳಿಂದ ಬಿಡಿಸಿ ಈ ಕಾರ್ಯಗಳಲ್ಲಿ ತೊಡಗಿಸುತ್ತಾರೆ. ಅಲ್ಪ-ಸ್ವಲ್ಪ ಎಷ್ಟು ಬಿಡಲು ಸಾಧ್ಯವಿದೆಯೋ ಅಷ್ಟು ಪಾಪಕಾರ್ಯಗಳನ್ನು ಬಿಡಿಸಿ ಅವರಿಗೆ ಸಮ್ಯಕ್ತ್ವ ಮತ್ತು ಅಣುವ್ರತಾದಿಗಳನ್ನು ಪಾಲಿಸುವ ಉಪದೇಶ

ಕೊಡುತ್ತಾರೆ. ಯಾವ ಜೀವರುಗಳಿಗೆ ಸರ್ವಥಾ ಆರಂಭ ಮೊದಲಾದವುಗಳ ಇಚ್ಛೆಯು ದೂರವಾಗಿದೆ ಅವರಿಗೆ ಪೂರ್ವೋಕ್ತ ಪೂಜಾದಿಗಳ ಕಾರ್ಯ ಹಾಗೂ ಸಮಸ್ತ ಪಾಪಕಾರ್ಯಗಳನ್ನು ಬಿಡಿಸಿ ಮಹಾವ್ರತಾದಿಗಳ ಕ್ರಿಯೆಗಳ ಉಪದೇಶ ಮಾಡುತ್ತಾರೆ. ಮತ್ತು ಒಂದಿಷ್ಟು ರಾಗಾದಿಗಳು ಬಿಡುತ್ತಿರುವುದನ್ನು ತಿಳಿದು ಅವರಿಗೆ ದಯೆ, ಧರ್ಮೋಪದೇಶ, ಪ್ರತಿಕ್ರಮಣ ಮೊದಲಾದ ಕಾರ್ಯ ಮಾಡುವ ಉಪದೇಶ ಕೊಡುತ್ತಾರೆ. ಸಂಪೂರ್ಣರಾಗವು ದೂರವಾದರೆ ಅಲ್ಲಿ ಯಾವ ಕಾರ್ಯ ಮಾಡುವುದೇ ಉಳಿಯಲಿಲ್ಲ; ಅದಕ್ಕಾಗಿ ಅವರಿಗೆ ಯಾವ ಉಪದೇಶವೇ ಇಲ್ಲ. ಹೀಗೆ ಕ್ರಮವಿದೆಯೆಂದು ತಿಳಿಯುವುದು.

ಅದರಂತೆ ಚರಣಾನುಯೋಗದಲ್ಲಿ ಕಷಾಯವುಳ್ಳ ಜೀವರುಗಳಿಗೆ ಕಷಾಯ ಉತ್ಪನ್ನ ಮಾಡಿ ಕೂಡ ಪಾಪವನ್ನು ಬಿಡಿಸುತ್ತಾರೆ ಮತ್ತು ಧರ್ಮದಲ್ಲಿ ತೊಡಗಿಸುತ್ತಾರೆ. ಹೇಗೆಂದರೆ ಪಾಪದ ಫಲವು ನರಕಾದಿಗಳ ದುಃಖಕ್ಕೆ ಕಾರಣವೆಂಬುದನ್ನು ತಿಳಿಸಿಕೊಟ್ಟು ಅವರಿಗೆ ಭಯಕಷಾಯವನ್ನುತ್ಪನ್ನ ಮಾಡಿ ಪಾಪ ಕಾರ್ಯ ಬಿಡಿಸುತ್ತಾರೆ, ಮತ್ತು ಪುಣ್ಯದ ಫಲವು ಸ್ವರ್ಗಾದಿಗಳ ಸುಖಕ್ಕೆ ಕಾರಣವೆಂಬುದನ್ನು ತಿಳಿಸಿಕೊಟ್ಟು ಅವರಿಗೆ ಲೋಭಕಷಾಯವನ್ನುತ್ಪನ್ನ ಮಾಡಿ ಧರ್ಮಕಾರ್ಯಗಳಲ್ಲಿ ತೊಡಗಿಸುತ್ತಾರೆ. ಮತ್ತು ಈ ಜೀವನು ಇಂದ್ರಿಯವಿಷಯ, ಶರೀರ, ಪುತ್ರ, ಧನ ಮೊದಲಾದವುಗಳ ಅನುರಾಗದಿಂದ ಪಾಪಮಾಡುತ್ತಾನೆ, ಧರ್ಮದಿಂದ ಪರಾಙ್ಮುಖನಿರುತ್ತಾನೆ; ಅದಕ್ಕಾಗಿ ಇಂದ್ರಿಯ ವಿಷಯಗಳು ಮರಣ, ಕ್ಲೇಶಾದಿಗಳಿಗೆ ಕಾರಣವೆಂದು ತಿಳಿಸಿಕೊಟ್ಟು ಅಲ್ಲಿ ಜುಗುಪ್ಸೆಕಷಾಯ ಮಾಡಿಸುತ್ತಾರೆ; ಪುತ್ರಾದಿಕರು ಧನಾದಿಗಳ ಗ್ರಾಹಕರೆಂದು ತಿಳಿಸಿಕೊಟ್ಟು ಅವರಲ್ಲಿ ದ್ವೇಷ ಮಾಡಿಸುತ್ತಾರೆ; ಮತ್ತು ಧನ ಮೊದಲಾದುವನ್ನು ಮರಣ, ಕ್ಲೇಶಾದಿಗಳಿಗೆ ಕಾರಣವೆಂದು ತಿಳಿಸಿಕೊಟ್ಟು ಅಲ್ಲಿ ಅನಿಷ್ಟ ಬುದ್ಧಿ ಮಾಡಿಸುತ್ತಾರೆ ಇವೇ ಮೊದಲಾದ ಉಪಾಯಗಳಿಂದ ವಿಷಯಾದಿಗಳಲ್ಲಿರುವ ತೀವ್ರರಾಗವು ದೂರವಾಗುವುದರಿಂದ ಅವರ ಪಾಪಕ್ರಿಯೆಗಳು ಹೊರಟು ಹೋಗಿ ಧರ್ಮದಲ್ಲಿ ಪ್ರವೃತ್ತಿಯಾಗುತ್ತದೆ. ಮತ್ತು ನಾಮಸ್ಮರಣೆ, ಸ್ತುತಿಕರಣ, ಪೂಜೆ, ದಾನ, ಶೀಲಾದಿಗಳಿಂದ ಇಹಲೋಕದಲ್ಲಿ ದಾರಿದ್ರ್ಯ, ಕಷ್ಟಗಳು ದೂರವಾಗುತ್ತವೆ, ಪುತ್ರ-ಧನಾದಿಗಳ ಪ್ರಾಪ್ತಿಯಾಗುತ್ತದೆ. ಈ ಪ್ರಕಾರದ ನಿರೂಪಣೆಯಿಂದ ಅವರಲ್ಲಿ ಲೋಭವನ್ನುತ್ಪನ್ನ ಮಾಡಿ ಆ ಧರ್ಮಕಾರ್ಯಗಳಲ್ಲಿ ತೊಡಗಿಸುತ್ತಾರೆ.

ಇದೇ ಪ್ರಕಾರ ಇನ್ನುಳಿದ ಉದಾಹರಣೆಗಳನ್ನು ತಿಳಿಯುವುದು.

**ಪ್ರಶ್ನೆ** ಃ- ಒಂದು ಕಷಾಯ ಬಿಡಿಸಿ ಇನ್ನೊಂದು ಕಷಾಯ ಮಾಡಿಸುವ ಪ್ರಯೋಜನವೇನಿದೆ ?

**ಉತ್ತರ** ಃ- ಚಳಿ ಮತ್ತು ಜ್ವರ ಇವೆರಡೂ ರೋಗಗಳಿದ್ದರೂ ಒಬ್ಬನಿಗೆ ಶೀತಬಾಧೆಯಿಂದ ಮರಣವಾಗುವುದನ್ನು ತಿಳಿದು ವೈದ್ಯನು ಅವನಿಗೆ ಜ್ವರ ಬರುವ ಉಪಾಯ ಮಾಡುತ್ತಾನೆ, ಮತ್ತು ಜ್ವರವು ಬಂದ ನಂತರ ಅವನು ಬದುಕುವ ಆಸೆಯು ಕಂಡು ಬಂದರೆ ಆ ಜ್ವರವನ್ನು ದೂರಮಾಡುವ ಉಪಾಯ ಮಾಡುತ್ತಾನೆ. ಅದೇ ಪ್ರಕಾರ ಎಲ್ಲಕಷಾಯಗಳು ಹೇಯವಿದ್ದರೂ ಕೆಲವು ಜೀವರುಗಳಿಗೆ ಕಷಾಯಗಳಿಂದ ಪಾಪಕಾರ್ಯಗಳಾಗುತ್ತಿರುವುದನ್ನು ತಿಳಿದು ಶ್ರೀಗುರುಗಳು ಅವರಿಗೆ ಪುಣ್ಯಕಾರ್ಯಗಳಿಗೆ ಕಾರಣಭೂತವಾದ ಕಷಾಯವಾಗುವ ಉಪಾಯ ಮಾಡುತ್ತಾರೆ, ಅನಂತರ ಅವರಿಗೆ ನಿಜವಾದ ಧರ್ಮಬುದ್ಧಿಯಾಗಿರುವುದನ್ನು ತಿಳಿದು ಆ ಕಷಾಯ ದೂರ ಮಾಡುವ ಉಪಾಯಮಾಡುತ್ತಾರೆ. ಹೀಗೆ ಪ್ರಯೋಜನ ತಿಳಿಯುವುದು.

ಮತ್ತು ಚರಣಾನುಯೋಗದಲ್ಲಿ ಜೀವರುಗಳು ಪಾಪ ಬಿಟ್ಟು ಧರ್ಮದಲ್ಲಿ ತೊಡಗುವಂತೆ ಅನೇಕ ಯುಕ್ತಿಗಳಿಂದ ವರ್ಣನೆ ಮಾಡುತ್ತಾರೆ. ಅಲ್ಲಿ ಲೌಕಿಕ ದೃಷ್ಟಾಂತ, ಯುಕ್ತಿ, ಉದಾಹರಣೆಗಳ ಮೂಲಕ ನ್ಯಾಯಪದ್ಧತಿಯಿಂದ ತಿಳಿಸಿಕೊಡುತ್ತಾರೆ ಮತ್ತು ಕೆಲವೆಡೆ ಅನ್ಯಮತದ ಉದಾಹರಣೆಗಳನ್ನು ಹೇಳುತ್ತಾರೆ. ಹೇಗೆಂದರೆ 'ಸೂಕ್ತಮುಕ್ತಾವಲಿ'ಯಲ್ಲಿ ಲಕ್ಷ್ಮಿಯನ್ನು ಕಮಲವಾಸಿನಿಯೆಂದು ಹೇಳಿದೆ ಮತ್ತು ಸಮುದ್ರದಲ್ಲಿ ವಿಷ ಹಾಗೂ ಲಕ್ಷ್ಮಿ ಉತ್ಪನ್ನವಾಗಿರುವ ಅಪೇಕ್ಷೆಯಿಂದ ಅವಳನ್ನು ವಿಷದ ಸೋದರಿಯೆಂದು ಹೇಳಿದೆ, ಇದೇ ಪ್ರಕಾರ ಇತರೆಡೆಗಳಲ್ಲಿ ಹೇಳುತ್ತಾರೆ.

ಅವುಗಳಲ್ಲಿ ಅದೆಷ್ಟೋ ಉದಾಹರಣೆಗಳು ಅಸತ್ಯವಾಗಿಯೂ ಇವೆ; ಆದರೆ ನಿಜವಾದ ಪ್ರಯೋಜನದ ಪೋಷಣೆ ಮಾಡುತ್ತವೆ, ಆದುದರಿಂದ ದೋಷವಿಲ್ಲ.

**ಪ್ರಶ್ನೆ :-** ಅಸತ್ಯದ ದೋಷವು ತಗಲುತ್ತದೆಯಲ್ಲವೇ ?

**ಉತ್ತರ :-** ಒಂದು ವೇಳೆ ಅಸತ್ಯವಿದ್ದು ಅದು ನಿಜವಾದ ಪ್ರಯೋಜನದ ಪೋಷಣೆ ಮಾಡುತ್ತಿದ್ದರೆ ಅದನ್ನು ಅಸತ್ಯವೆಂದು ಹೇಳುವುದಿಲ್ಲ. ಮತ್ತು ಸತ್ಯವಿದ್ದು ಅದು ಅಸತ್ಯಪ್ರಯೋಜನದ ಪೋಷಣೆ ಮಾಡುತ್ತಿದ್ದರೆ ಅದು ಅಸತ್ಯವೇ ಇದೆ.

ಅಲಂಕಾರ-ಯುಕ್ತಿ-ನಾಮ ಮೊದಲಾದವುಗಳಲ್ಲಿ ವಚನದ ಅಪೇಕ್ಷೆಯಿಂದ ಸತ್ಯ-ಅಸತ್ಯಗಳಿಲ್ಲ, ಪ್ರಯೋಜನದ ಅಪೇಕ್ಷೆಯಿಂದ ಸತ್ಯ-ಅಸತ್ಯಗಳಿವೆ. ಹೇಗೆಂದರೆ ಸಾಧಾರಣ ಶೋಭೆಯುಳ್ಳ ನಗರವನ್ನು ಇಂದ್ರಪುರಿಗೆ ಸಮಾನವಾಗಿ ಹೇಳುತ್ತಾರೆ ಅದು ಅಸತ್ಯವಿದೆ, ಆದರೆ ಶೋಭೆಯ ಪ್ರಯೋಜನದ ಪೋಷಣೆ ಮಾಡುತ್ತಿರುವುದರಿಂದ ಅಸತ್ಯವಿಲ್ಲ. ಮತ್ತು 'ಈ ನಗರದಲ್ಲಿ ಕೋಲು ಕೊಡೆಯಲ್ಲೇ ಇದೆ ಅನ್ಯತ್ರವಿಲ್ಲ'ವೆಂದು ಹೇಳುವುದು ಅದು ಅಸತ್ಯವಿದೆ, ಇತರೆಡೆಗಳಲ್ಲೂ ಶಿಕ್ಷೆ ಕೊಡುತ್ತಿರುವುದು ಕಂಡು ಬರುತ್ತದೆ, ಆದರೆ ಇಲ್ಲಿ ಅನ್ಯಾಯವಂತರು ಕಡಿಮೆಯಿದ್ದಾರೆ ಮತ್ತು ನ್ಯಾಯವಂತರಿಗೆ ಶಿಕ್ಷೆ ಕೊಡುವುದಿಲ್ಲವೆಂಬ ಪ್ರಯೋಜನದ ಪೋಷಣೆ ಮಾಡುತ್ತಿರುವುದರಿಂದ ಅಸತ್ಯವಿಲ್ಲ. ಇನ್ನು ಬೃಹಸ್ಪತಿಯ ಹೆಸರು 'ಸುರಗುರು' ಎಂದಿದ್ದರೆ ಮಂಗಲದ ಹೆಸರು 'ಕುಜ'ಎಂದಿದ್ದಾರೆ, ಆದರೆ ಇಂಥ ಹೆಸರುಗಳು ಅನ್ಯಮತದ ಅಪೇಕ್ಷೆಯಿಂದ ಇವೆ. ಇವುಗಳ ಅಕ್ಷರಾರ್ಥವು ಅದು ಅಸತ್ಯವಿದೆ; ಆದರೆ ಆ ಹೆಸರು ಆ ಪದಾರ್ಥದ ಅರ್ಥವನ್ನು ಪ್ರಕಟ ಮಾಡುತ್ತಿರುವುದರಿಂದ ಅಸತ್ಯವಿಲ್ಲ.

ಹೀಗೆ ಅನ್ಯಮತದವರ ಉದಾಹರಣೆ ಕೊಡುತ್ತಿರುವುದು ಅಸತ್ಯವಿದೆ; ಆದರೆ ಉದಾಹರಣೆಗಳ ಶ್ರದ್ಧೆ ಮಾಡಿಸುವುದಿಲ್ಲ, ಪ್ರಯೋಜನದ ಶ್ರದ್ಧೆ ಮಾಡಿಸುವುದಿದೆ, ಮತ್ತು ಪ್ರಯೋಜನವು ಸತ್ಯವಿರುವುದರಿಂದ ದೋಷವಿಲ್ಲ.

ಮತ್ತು ಚರಣಾನುಯೋಗದಲ್ಲಿ ಛದ್ಮಸ್ಥನಿಗೆ ಬುದ್ಧಿಗೋಚರವಾಗುವಂತೆ ಸ್ಥೂಲತೆಯ ಅಪೇಕ್ಷೆಯಿಂದ ಲೋಕಪ್ರವೃತ್ತಿಯ ಮುಖ್ಯತೆಯೊಡನೆ ಉಪದೇಶ ಕೊಡುತ್ತಾರೆ; ಆದರೆ ಕೇವಲಜ್ಞಾನಗೋಚರವಾದ ಸೂಕ್ಷ್ಮತೆಯ ಅಪೇಕ್ಷೆಯಿಂದ ಕೊಡುವುದಿಲ್ಲ; ಏಕೆಂದರೆ ಅದರ ಆಚರಣೆಯಾಗುವುದಿಲ್ಲ. ಇಲ್ಲಿ ಆಚರಣೆ ಮಾಡುವುದರ ಪ್ರಯೋಜನವಿದೆ.

ಹೇಗೆಂದರೆ ಅಣುವ್ರತಿಗೆ ತ್ರಸಹಿಂಸೆಯ ತ್ಯಾಗ ಹೇಳಿದೆ ಮತ್ತು ಅವನಿಗೆ ಸ್ತ್ರೀ-ಸೇವನೆ ಮೊದಲಾದ ಕ್ರಿಯೆಗಳಲ್ಲಿ ತ್ರಸಹಿಂಸೆಯಾಗುತ್ತದೆ. ಇಲ್ಲಿ ತ್ರಸದ ಉತ್ಪತ್ತಿಯಿದೆಯೆಂದು ಜಿನವಾಣಿಯಲ್ಲಿ ಹೇಳಿರುವುದನ್ನು ಅವನೂ ತಿಳಿಯುತ್ತಾನೆ; ಆದರೆ ಅವನಿಗೆ ತ್ರಸದ ಘಾತ ಮಾಡುವ ಅಭಿಪ್ರಾಯವಿಲ್ಲ, ಮತ್ತು ಲೋಕದಲ್ಲಿ ಯಾವುದರ ಹೆಸರು ತ್ರಸಘಾತವಿದೆ ಅದನ್ನು ಮಾಡುವುದಿಲ್ಲ; ಆದುದರಿಂದ ಆ ಅಪೇಕ್ಷೆಯಿಂದ ಅವನಿಗೆ ತ್ರಸಹಿಂಸೆಯ ತ್ಯಾಗವಿದೆ.

ಅದರಂತೆ ಮುನಿಗೆ ಸ್ಥಾವರಹಿಂಸೆಯದೂ ತ್ಯಾಗ ಹೇಳಿದೆ; ಆದರೆ ಮುನಿಗಳು ಪೃಥ್ವಿ, ಜಲ ಮೊದಲಾದುವಲ್ಲಿ ಗಮನ ಮಾಡುತ್ತಾರೆ; ಅಲ್ಲಿ ಸರ್ವಥಾ ತ್ರಸದ ಅಭಾವವೂ ಇಲ್ಲ; ಏಕೆಂದರೆ ತ್ರಸಜೀವಗಳ ಅವಗಾಹನವೂ ಎಷ್ಟು ಚಿಕ್ಕದಿರುತ್ತದೆಯೆಂದರೆ ಅದು ದೃಷ್ಟಿಗೋಚರವಾಗುವುದಿಲ್ಲ ಮತ್ತು ಅವುಗಳ ಸ್ಥಿತಿಯು ಪೃಥ್ವೀ , ಜಲಾದಿಗಳಲ್ಲಿಯೂ ಇದೆಯೆಂಬುದನ್ನು ಮುನಿಗಳು ಜಿನವಾಣಿಯಿಂದ ತಿಳಿಯುತ್ತಾರೆ ಅಲ್ಲದೆ ಒಮ್ಮೊಮ್ಮೆ ಅವಧಿಜ್ಞಾನದಿಂದಲೂ ತಿಳಿಯುತ್ತಾರೆ; ಆದರೆ ಅವರಿಗೆ ಪ್ರಮಾದದಿಂದ ಸ್ಥಾವರ-ತ್ರಸಹಿಂಸೆಯ ಅಭಿಪ್ರಾಯವಿಲ್ಲ. ಮತ್ತು ಲೋಕದಲ್ಲಿ ಭೂಮಿ ಅಗೆಯುವುದು ಹಾಗೂ ಅಪ್ರಾಸುಕ ಜಲದಿಂದ ಕ್ರಿಯೆಮಾಡುವುದರ ಹೆಸರು ತ್ರಸಹಿಂಸೆಯಿದೆ ಅದನ್ನು ಮಾಡುವುದಿಲ್ಲ; ಆದುದರಿಂದ ಮುನಿಗೆ ಸರ್ವಥಾ ಹಿಂಸೆಯತ್ಯಾಗ ಹೇಳುತ್ತಾರೆ. ಇದೇ ಪ್ರಕಾರ ಅಸತ್ಯ , ಸ್ತೇಯ, ಅಬ್ರಹ್ಮ, ಪರಿಗ್ರಹಗಳ ತ್ಯಾಗ ಹೇಳಿದೆ.

ಕೇವಲಜ್ಞಾನದಿಂದ ತಿಳಿದುಕೊಳ್ಳುವ ಅಪೇಕ್ಷೆಯಿಂದ ಅಸತ್ಯವಚನಯೋಗವನ್ನು ಹನ್ನೆರಡನೆಯ ಗುಣಸ್ಥಾನದವರೆಗೆ ಹೇಳಿದೆ, ಅದತ್ತಕರ್ಮಪರಮಾಣು ಮೊದಲಾದ ಪರದ್ರವ್ಯದ ಗ್ರಹಣವು ಹದಿಮೂರನೆಯ ಗುಣಸ್ಥಾನದವರೆಗೆ ಇದೆ, ವೇದದ ಉದಯವು ಒಂಭತ್ತನೆಯ ಗುಣಸ್ಥಾನದವರೆಗೆ ಇದೆ, ಅಂತರಂಗ ಪರಿಗ್ರಹವು ಹತ್ತನೆಯ ಗುಣಸ್ಥಾನದವರೆಗೆ ಇದೆ, ಸಮವಸರಣ ಮೊದಲಾದ ಬಾಹ್ಯ ಪರಿಗ್ರಹವು ಕೇವಲಿಗಳಿಗೆ ಕೂಡ ಇರುತ್ತದೆ; ಆದರೆ (ಮುನಿಗಳಿಗೆ) ಪ್ರಮಾದದಿಂದ ಪಾಪರೂಪದ ಅಭಿಪ್ರಾಯವು ಇರುವುದಿಲ್ಲ. ಮತ್ತು ಲೋಕ ಪ್ರವೃತ್ತಿಯಲ್ಲಿ ಯಾವ ಕ್ರಿಯೆಗಳ ಮೂಲಕ 'ಇವನು ಸುಳ್ಳು ಹೇಳುತ್ತಾನೆ, ಕಳವು ಮಾಡುತ್ತಾನೆ, ಕುಶೀಲ ಸೇವನೆ ಮಾಡುತ್ತಾನೆ, ಪರಿಗ್ರಹವನ್ನಿಟ್ಟುಕೊಳ್ಳುತ್ತಾನೆ' ಇತ್ಯಾದಿ ನಾಮ ಪಡೆಯುವಂಥ ಆ ಕ್ರಿಯೆಗಳು ಮುನಿಗಳಿಗೆ ಇರುವುದಿಲ್ಲ; ಆದುದರಿಂದ ಇವರಿಗೆ ಅಸತ್ಯ ಮೊದಲಾದವುಗಳ ತ್ಯಾಗ ಹೇಳಲಾಗುತ್ತದೆ.

ಅದರಂತೆ ಮುನಿಗಳಿಗೆ ಮೂಲಗುಣಗಳಲ್ಲಿ ಪಂಚೇಂದ್ರಿಯಗಳ ವಿಷಯದ ತ್ಯಾಗ ಹೇಳಿದೆ; ಆದರೆ ಇಂದ್ರಿಯಗಳಿಂದ ತಿಳಿದುಕೊಳ್ಳುವುದಂತೂ ನಿಂತು ಹೋಗಿಲ್ಲ, ಮತ್ತು ವಿಷಯಗಳಲ್ಲಿಯ ರಾಗ-ದ್ವೇಷಗಳು ಸರ್ವಥಾ ದೂರವಾಗಿದ್ದರೆ ಯಥಾಖ್ಯಾತ ಚಾರಿತ್ರವಾಗಬೇಕು ಅದೂ ಆಗಿಲ್ಲ, ಆದರೆ ಸ್ಥೂಲರೂಪದಿಂದ ವಿಷಯೇಚ್ಛೆಯ ಅಭಾವವಾಗಿದೆ ಮತ್ತು ಬಾಹ್ಯವಿಷಯ ಸಾಮಗ್ರಿಗಳನ್ನು ದೊರಕಿಸುವ ಪ್ರವೃತ್ತಿಯು ದೂರವಾಗಿರುವುದರಿಂದ ಅವರಿಗೆ ಇಂದ್ರಿಯ ವಿಷಯದ ತ್ಯಾಗ ಹೇಳಿದೆ.

ಇದೇ ಪ್ರಕಾರ ಇತರೆಡೆಗಳಲ್ಲಿಯೂ ತಿಳಿಯುವುದು.

ಇನ್ನು ವ್ರತಿ ಜೀವನು ತ್ಯಾಗ ಹಾಗೂ ಆಚರಣೆ ಮಾಡುತ್ತಾನೆ ಅದು ಚರಣಾನುಯೋಗದ ಪದ್ಧತಿಗೆ ಅನುಸರಿಸಿ ಮತ್ತು ಲೋಕ ಪ್ರವೃತ್ತಿಗೆ ಅನುಸರಿಸಿ ತ್ಯಾಗ ಮಾಡುತ್ತಾನೆ. ಹೇಗೆಂದರೆ ಒಬ್ಬನು ತ್ರಸ ಹಿಂಸೆಯ ತ್ಯಾಗ

ಮಾಡುವವನು, ಅವನು ಚರಣಾನುಯೋಗದಲ್ಲಿ ಮತ್ತು ಲೋಕದಲ್ಲಿ ಯಾವುದಕ್ಕೆ ತ್ರಸಹಿಂಸೆಯೆಂದು ಹೇಳುತ್ತಾರೆ ಅದರ ತ್ಯಾಗ ಮಾಡುವವನು, ಕೇವಲ ಜ್ಞಾನದ ಮೂಲಕ ಯಾವ ತ್ರಸಗಳನ್ನು ನೋಡಲಾಗುತ್ತದೆ ಅವುಗಳ ಹಿಂಸೆಯ ತ್ಯಾಗವು ಸಂಭವಿಸುವುದೇ ಇಲ್ಲ. ಅಲ್ಲಿ ಯಾವ ತ್ರಸ ಹಿಂಸೆಯ ತ್ಯಾಗ ಮಾಡುವವನು ಆ ರೂಪವಾಗಿ ಮನದ ವಿಕಲ್ಪ ಮಾಡದಿರುವುದು ಅದು ಮನಸ್ಸಿನಿಂದ ತ್ಯಾಗವಿದೆ, ವಚನ ಆಡದಿರುವುದು ಅದು ವಚನದಿಂದ ತ್ಯಾಗವಿದೆ, ಕಾಯದಿಂದ ಪ್ರವರ್ತಿಸದಿರುವುದು ಅದು ಕಾಯದಿಂದ ತ್ಯಾಗವಿದೆ. ಹೀಗೆ ಅನ್ಯ ತ್ಯಾಗ ಹಾಗೂ ಗ್ರಹಣವಾಗುತ್ತದೆ. ಅದು ಇಂಥ ಪದ್ಧತಿಯಿಂದಲೇ ಆಗುತ್ತದೆಯೆಂದು ತಿಳಿಯುವುದು.

**ಪ್ರಶ್ನೆ** :- ಕರಣಾನುಯೋಗದಲ್ಲಿ ಕೇವಲಜ್ಞಾನದ ಅಪೇಕ್ಷೆಯಿಂದ ತಾರತಮ್ಯ ಕಥನವಿದೆ, ಅಲ್ಲಿ ಆರನೆಯ ಗುಣಸ್ಥಾನದಲ್ಲಿ ಸರ್ವಥಾ ಹನ್ನೆರಡು ಅವಿರತಿಗಳ ಅಭಾವ ಹೇಳಿದೆ, ಅದನ್ನು ಯಾವ ಪ್ರಕಾರ ಹೇಳಿದೆ?

**ಉತ್ತರ** :- ಅವಿರತಿ ಕೂಡ ಯೋಗ ಕಷಾಯದಲ್ಲಿ ಗರ್ಭಿತವಿತ್ತು, ಆದರೆ ಅಲ್ಲಿ ಕೂಡ ಚರಣಾನುಯೋಗದ ಅಪೇಕ್ಷೆಯಿಂದ ತ್ಯಾಗದ ಅಭಾವದ ಹೆಸರೇ ಅವಿರತಿಯೆಂದು ಹೇಳಿರುವುದರಿಂದ ಅಲ್ಲಿ ಅವುಗಳ ಅಭಾವವಿದೆ. ಮನ-ಅವಿರತಿಯ ಅಭಾವ ಹೇಳಿದೆ, ಅದು ಮುನಿಗಳಿಗೆ ಮನಸ್ಸಿನ ವಿಕಲ್ಪಗಳಿರುತ್ತವೆ; ಆದಾಗ್ಯೂ ಸ್ವೇಚ್ಛಾಚಾರಿ ಮನಸ್ಸಿನ ಪಾಪರೂಪ ಪ್ರವೃತ್ತಿಯ ಅಭಾವದಿಂದ ಮನ-ಅವಿರತಿಯ ಅಭಾವ ಹೇಳಿದೆಯೆಂದು ತಿಳಿಯುವುದು.

ಮತ್ತು ಚರಣಾನುಯೋಗದಲ್ಲಿ ವ್ಯವಹಾರ ಲೋಕ-ಪ್ರವೃತ್ತಿಯ ಅಪೇಕ್ಷೆಯಿಂದಲೇ ನಾಮಾದಿಗಳನ್ನು ಹೇಳುತ್ತಾರೆ. ಹೇಗೆಂದರೆ ಸಮ್ಯಗ್ದೃಷ್ಟಿಯನ್ನು ಪಾತ್ರವೆಂದು ಹೇಳಿದರೆ ಮಿಥ್ಯಾದೃಷ್ಟಿಯನ್ನು ಅಪಾತ್ರವೆಂದು ಹೇಳಿದೆ ಆದರೆ ಇಲ್ಲಿ ಯಾವನಿಗೆ ಜಿನದೇವಾದಿಗಳ ಶ್ರದ್ಧೆಯು ಕಂಡು ಬರುವುದು ಅವನು ಸಮ್ಯಕ್ತ್ವೀ, ಯಾವನಿಗೆ ಅವರ ಶ್ರದ್ಧೆಯಿಲ್ಲ ಅವನು ಮಿಥ್ಯಾತ್ವಿಯೆಂದು ತಿಳಿಯುವುದು. ಏಕೆಂದರೆ ಚರಣಾನುಯೋಗದಲ್ಲಿ ದಾನ ಕೊಡಲು ಹೇಳಿರುವುದರಿಂದ ಚರಣಾನುಯೋಗದ ಅಪೇಕ್ಷೆಯಿಂದಲೇ ಸಮ್ಯಕ್ತ್ವ-ಮಿಥ್ಯಾತ್ವದ ಗ್ರಹಣ ಮಾಡುವುದು. ಕರಣಾನುಯೋಗದ ಅಪೇಕ್ಷೆಯಿಂದ ಸಮ್ಯಕ್ತ್ವ ಮಿಥ್ಯಾತ್ವಗಳನ್ನು ಗ್ರಹಣ ಮಾಡುವುದರಿಂದ ಅದೇ ಜೀವನು ಹನ್ನೊಂದನೆಯ ಗುಣಸ್ಥಾನದಲ್ಲಿದ್ದನು ಮತ್ತು ಅವನೇ ಅಂತರ್ಮುಹೂರ್ತದಲ್ಲಿ ಮೊದಲನೆಯ ಗುಣಸ್ಥಾನದಲ್ಲಿ ಬಂದರೆ ಅಲ್ಲಿ ದಾತಾರನು ಪಾತ್ರ-ಅಪಾತ್ರದ ನಿರ್ಣಯವನ್ನು ಹೇಗೆ ಮಾಡುವ ಸಾಧ್ಯತೆಯಿದೆ ?

ಇನ್ನು ದ್ರವ್ಯಾನುಯೋಗದ ಅಪೇಕ್ಷೆಯಿಂದ ಸಮ್ಯಕ್ತ್ವ-ಮಿಥ್ಯಾತ್ವದ ಗ್ರಹಣ ಮಾಡಿದ ಮೇಲೆ ಮುನಿ ಸಂಘದಲ್ಲಿ ದ್ರವ್ಯಲಿಂಗಿಗಳೂ ಇರುವರು ಮತ್ತು ಭಾವಲಿಂಗಿಗಳೂ ಇರುವರು; ಆದುದರಿಂದ ಮೊದಲು ಅವರ ಸರಿಯಾದ ನಿರ್ಣಯವಾಗುವುದು ಕಠಿಣವಿದೆ; ಏಕೆಂದರೆ ಬಾಹ್ಯ ಪ್ರವೃತ್ತಿಗಳು ಸಮಾನವಿವೆ; ಮತ್ತು ಒಂದು ವೇಳೆ ಸಮ್ಯಕ್ತ್ವಿಗೆ ಯಾವುದೇ ಚಿಹ್ನದಿಂದ ಸರಿಯಾಗಿ ನಿರ್ಣಯವಾಗಿ ಹೋದರೆ ಮತ್ತು ಅವನು ಅವನ ಭಕ್ತಿ ಮಾಡದಿದ್ದರೆ ಇವನ ಭಕ್ತಿಯನ್ನೇಕೆ ಮಾಡಲಿಲ್ಲವೆಂದು ಇತರರಿಗೆ ಸಂಶಯ ಬರುವುದು. ಈ ಪ್ರಕಾರ ಅವನ ಮಿಥ್ಯಾದೃಷ್ಟಿತನವು ಪ್ರಕಟವಾದರೆ ಆಗ ಸಂಘದಲ್ಲಿ ವಿರೋಧವು ಉತ್ಪನ್ನವಾಗುವುದು; ಆದುದರಿಂದ ಇಲ್ಲಿ ವ್ಯವಹಾರ ಸಮ್ಯಕ್ತ್ವ-ಮಿಥ್ಯಾತ್ವದ ಅಪೇಕ್ಷೆಯಿಂದ ಕಥನವಿದೆಯೆಂದು ತಿಳಿಯುವುದು.

**ಪ್ರಶ್ನೆ :-** ಸಮ್ಯಗ್ದೃಷ್ಟಿಯು ದ್ರವ್ಯಲಿಂಗಿಯನ್ನು ತನಗಿಂತ ಹೀನ ಗುಣಯುಕ್ತನೆಂದು ಮನ್ನಿಸುತ್ತಾನೆ, ಆದುದರಿಂದ ಅವನು ಅವನ ಭಕ್ತಿಯನ್ನು ಹೇಗೆ ಮಾಡುವನು ?

**ಉತ್ತರ :-** ದ್ರವ್ಯಲಿಂಗಿಗೆ ವ್ಯವಹಾರಧರ್ಮದ ಸಾಧನವು ಅಧಿಕವಿದೆ ಮತ್ತು ಭಕ್ತಿ ಮಾಡುವುದು ಕೂಡ ವ್ಯವಹಾರವೇ ಇದೆ. ಆದುದರಿಂದ ಯಾವ ಪ್ರಕಾರ ಒಬ್ಬನು ಧನಾಢ್ಯನಿದ್ದರೂ ಯಾವನು ಕುಲದಲ್ಲಿ ದೊಡ್ಡವನಿದ್ದಾನೆ ಅವನನ್ನು ಕುಲದ ಅಪೇಕ್ಷೆಯಿಂದ ದೊಡ್ಡವನೆಂದು ತಿಳಿದುಕೊಂಡು ಸತ್ಕಾರ ಮಾಡುತ್ತಾನೆ; ಅದೇ ಪ್ರಕಾರ ತಾವು ಸಮ್ಯಕ್ತ್ವಗುಣಸಹಿತರಿದ್ದರೂ ಯಾವನು ವ್ಯವಹಾರ ಧರ್ಮದಲ್ಲಿ ಮುಖ್ಯನಿರುವನು ಅವನನ್ನು ವ್ಯವಹಾರಧರ್ಮದ ಅಪೇಕ್ಷೆಯಿಂದ ಗುಣಾಧಿಕನೆಂದು ಮನ್ನಿಸಿ ಅವನ ಭಕ್ತಿ ಮಾಡುತ್ತಾರೆಂದು ತಿಳಿಯುವುದು. ಇದೇ ಪ್ರಕಾರ ಅಧಿಕ ಉಪವಾಸಾದಿಗಳನ್ನು ಮಾಡುವಂಥ ಜೀವನನ್ನು ತಪಸ್ವಿಯೆಂದು ಹೇಳುತ್ತಾರೆ; ಒಬ್ಬನು ಧ್ಯಾನ-ಅಧ್ಯಯನಾದಿಗಳನ್ನು ವಿಶೇಷವಾಗಿ ಮಾಡುತ್ತಿದ್ದು ಅವನು ಉತ್ಕೃಷ್ಟ ತಪಸ್ವಿಯಿದ್ದರೂ ಇಲ್ಲಿ ಚರಣಾನುಯೋಗದಲ್ಲಿ ಬಾಹ್ಯ ತಪಸ್ಸಿನ ಮುಖ್ಯತೆಯೇ ಇರುವುದರಿಂದ ಅವನನ್ನೇ ತಪಸ್ವಿಯೆಂದು ಹೇಳುತ್ತಾರೆ. ಇದೇ ಪ್ರಕಾರ ಇತರ ನಾಮಾದಿಗಳನ್ನು ತಿಳಿಯುವುದು.

ಹೀಗೆಯೇ ಅನ್ಯ ಪ್ರಕಾರದಿಂದ ಚರಣಾನುಯೋಗದಲ್ಲಿ ವ್ಯಾಖ್ಯಾನದ ವಿಧಾನವನ್ನು ತಿಳಿಯುವುದು.

## ದ್ರವ್ಯಾನುಯೋಗದ ವ್ಯಾಖ್ಯಾನದ ವಿಧಾನ :-

ಈಗ ದ್ರವ್ಯಾನುಯೋಗದಲ್ಲಿರುವ ವ್ಯಾಖ್ಯಾನದ ವಿಧಾನವನ್ನು ಹೇಳುತ್ತಾರೆ.

ಜೀವರುಗಳಿಗೆ ಜೀವಾದಿ ದ್ರವ್ಯಗಳ ಯಥಾರ್ಥ ಶ್ರದ್ಧೆಯು ಯಾವ ಪ್ರಕಾರವಾಗುವುದು ಅದೇ ಪ್ರಕಾರ ವಿಶೇಷ, ಯುಕ್ತಿ, ಹೇತು, ದೃಷ್ಟಾಂತ ಮೊದಲಾದವುಗಳ ನಿರೂಪಣೆಯನ್ನು ಇಲ್ಲಿ ಮಾಡುತ್ತಾರೆ; ಏಕೆಂದರೆ ಇದರಲ್ಲಿ ಯಥಾರ್ಥ ಶ್ರದ್ಧೆ ಮಾಡಿಸುವ ಪ್ರಯೋಜನವಿದೆ. ಅಲ್ಲಿ ಜೀವ ಮೊದಲಾದ ವಸ್ತುಗಳು ಅಭೇದವಿದ್ದರೂ ಅವುಗಳಲ್ಲಿ ಭೇದ ಕಲ್ಪನೆಯ ಮೂಲಕ ವ್ಯವಹಾರದಿಂದ ದ್ರವ್ಯ-ಗುಣ-ಪರ್ಯಾಯ ಮೊದಲಾದ ಭೇದಗಳ ನಿರೂಪಣೆ ಮಾಡುತ್ತಾರೆ. ಮತ್ತು ಪ್ರತೀತಿ ಮಾಡಿಸುವ ಸಲುವಾಗಿ ಅನೇಕ ಯುಕ್ತಿಗಳ ಮೂಲಕ ಉಪದೇಶ ಕೊಡುತ್ತಾರೆ ಅಥವಾ ಪ್ರಮಾಣ-ನಯಗಳ ಮೂಲಕ ಉಪದೇಶ ಕೊಡುತ್ತಾರೆ ಅದು ಕೂಡ ಯುಕ್ತಿಯಿದೆ. ಅಲ್ಲದೆ ವಸ್ತುವಿನ ಅನುಮಾನ ಪ್ರತ್ಯಭಿಜ್ಞಾನಾದಿಗಳನ್ನು ಮಾಡಿಸುವ ಕುರಿತು ಹೇತು-ದೃಷ್ಟಾಂತಾದಿಗಳನ್ನು ಕೊಡುತ್ತಾರೆ. ಹೀಗೆ ಇಲ್ಲಿ ವಸ್ತುವಿನ ಪ್ರತೀತಿ ಮಾಡಿಸಲು ಉಪದೇಶ ಕೊಡುತ್ತಾರೆ.

ಅದರಂತೆ ಇಲ್ಲಿ ಮೋಕ್ಷಮಾರ್ಗದ ಶ್ರದ್ಧೆ ಮಾಡಿಸುವ ಸಲುವಾಗಿ ಜೀವಾದಿ ತತ್ತ್ವಗಳ ನಿರೂಪಣೆಯನ್ನು ಯುಕ್ತಿ-ಹೇತು-ದೃಷ್ಟಾಂತಾದಿಗಳ ಮೂಲಕ ಮಾಡುತ್ತಾರೆ. ಅಲ್ಲಿ ಸ್ವ-ಪರ ಭೇದವಿಜ್ಞಾನ ಮೊದಲಾದವು ಹೇಗಿವೆ ಹಾಗೆ ಜೀವ-ಅಜೀವದ ನಿರ್ಣಯ ಮಾಡುತ್ತಾರೆ; ಮತ್ತು ವೀತರಾಗಭಾವವು ಯಾವ ಪ್ರಕಾರವಿದೆ ಅದೇ ಪ್ರಕಾರ ಆಸ್ರವ ಮೊದಲಾದವುಗಳ ಸ್ವರೂಪ ತಿಳಿಸಿಕೊಡುತ್ತಾರೆ; ಅಲ್ಲಿ ಮುಖ್ಯರೂಪದಿಂದ ಜ್ಞಾನ-ವೈರಾಗ್ಯಗಳಿಗೆ ಕಾರಣವಾದ ಆ ಆತ್ಮಾನುಭವಾದಿಗಳ ಮಹಿಮೆಯನ್ನು ಹಾಡುತ್ತಾರೆ.

ಇನ್ನು ದ್ರವ್ಯಾನುಯೋಗದಲ್ಲಿ ನಿಶ್ಚಯ ಅಧ್ಯಾತ್ಮ-ಉಪದೇಶದ ಮುಖ್ಯತೆಯಿರುವಲ್ಲಿ ವ್ಯವಹಾರ ಧರ್ಮದ ನಿಷೇಧವನ್ನೂ ಮಾಡುತ್ತಾರೆ. ಯಾವ ಜೀವನು ಆತ್ಮಾನುಭವದ ಉಪಾಯಮಾಡುವುದಿಲ್ಲ ಮತ್ತು ಬಾಹ್ಯ

ಕ್ರಿಯಾಕಾಂಡದಲ್ಲಿ ಮಗ್ನನಿರುತ್ತಾನೆ, ಅವನನ್ನು ಅಲ್ಲಿಂದ ಉದಾಸಮಾಡಿ ಆತ್ಮಾನುಭವದಲ್ಲಿ ತೊಡಗಿಸಲು ವ್ರತ-ಶೀಲ-ಸಂಯಮ ಮೊದಲಾದವುಗಳ ಹೀನತೆಯನ್ನು ಪ್ರಕಟ ಮಾಡುತ್ತಾರೆ. ಅಲ್ಲಿ ಇವನ್ನು ಬಿಟ್ಟು ಪಾಪದಲ್ಲಿ ತೊಡಗುವುದೆಂದು ತಿಳಿದುಕೊಳ್ಳಬಾರದು; **ಏಕೆಂದರೆ ಆ ಉಪದೇಶದ ಪ್ರಯೋಜನವು ಅಶುಭದಲ್ಲಿ ತೊಡಗಿಸುವುದಿಲ್ಲ ಶುದ್ಧೋಪಯೋಗದಲ್ಲಿ ತೊಡಗಿಸುವ ಸಲುವಾಗಿ ಶುಭೋಪಯೋಗದ ನಿಷೇಧ ಮಾಡುತ್ತಾರೆ.**

**ಪ್ರಶ್ನೆ :-** ಅಧ್ಯಾತ್ಮ ಶಾಸ್ತ್ರದಲ್ಲಿ ಪುಣ್ಯ-ಪಾಪಗಳೆರಡನ್ನು ಸಮಾನವೆಂದು ಹೇಳಿರುವುದರಿಂದ ಶುದ್ಧೋಪಯೋಗವಿದ್ದರೆ ಒಳ್ಳೆಯದೇ ಇದೆ, ಇಲ್ಲದಿದ್ದರೆ ಪುಣ್ಯದಲ್ಲಿ ತೊಡಗಲಿ ಅಥವಾ ಪಾಪದಲ್ಲಿ ತೊಡಗಲಿ ಅಲ್ಲವೆ?

**ಉತ್ತರ :-** ಹೇಗೆ ಶೂದ್ರಜಾತಿಯ ಅಪೇಕ್ಷೆಯಿಂದ ಜಾಟ-ಚಾಂಡಾಲ ಇವೆರಡನ್ನು ಸಮಾನವೆಂದು ಹೇಳಿದ್ದಾರೆ; ಆದರೆ ಚಾಂಡಾಲನಿಗಿಂತ ಜಾಟನು ಸ್ವಲ್ಪ ಉತ್ತಮನಿದ್ದಾನೆ, ಅವನು ಅಸ್ಪೃಶ್ಯನಿದ್ದರೆ ಇವನು ಸ್ಪೃಶ್ಯನಿದ್ದಾನೆ; ಅದೇ ಪ್ರಕಾರ ಬಂಧಕಾರಣದ ಅಪೇಕ್ಷೆಯಿಂದ ಪುಣ್ಯ-ಪಾಪಗಳು ಸಮಾನವಿವೆ; ಆದರೆ ಪಾಪಕ್ಕಿಂತ ಪುಣ್ಯವು ಸ್ವಲ್ಪ ಒಳ್ಳೆಯದಿದೆ, ಅದು ತೀವ್ರ ಕಷಾಯರೂಪವಿದ್ದರೆ ಇದು ಮಂದಕಷಾಯರೂಪವಿದೆ; ಅದಕ್ಕಾಗಿ ಪುಣ್ಯ ಬಿಟ್ಟು ಪಾಪದಲ್ಲಿ ತೊಡಗುವುದು ಯುಕ್ತವಿಲ್ಲವೆಂದು ತಿಳಿಯುವುದು.

ಅದರಂತೆ ಜಿನಬಿಂಬದ ಭಕ್ತಿ ಮೊದಲಾದ ಕಾರ್ಯಗಳಲ್ಲಿಯೇ ಮಗ್ನರಿರುವವರಿಗೆ ಆತ್ಮಶ್ರದ್ಧೆಯನ್ನು ಹುಟ್ಟಿಸುವ ಸಲುವಾಗಿ 'ದೇಹದಲ್ಲಿ ದೇವನಿದ್ದಾನೆ, ಮಂದಿರಗಳಲ್ಲಿಲ್ಲ'ವೆಂದು ಮೊದಲಾದ ಉಪದೇಶ ಕೊಡುತ್ತಾರೆ. ಅಲ್ಲಿ ಭಕ್ತಿಯನ್ನು ಬಿಟ್ಟುಕೊಟ್ಟು ಭೋಜನಾದಿಗಳಿಂದ ತಮ್ಮನ್ನು ಸುಖಿಯನ್ನಾಗಿ ಮಾಡಿಕೊಳ್ಳಬೇಕೆಂದು ತಿಳಿದುಕೊಳ್ಳಬಾರದು; ಏಕೆಂದರೆ ಆ ಉಪದೇಶದ ಪ್ರಯೋಜನವು ಹೀಗೆ ಇಲ್ಲ.

ಇದೇ ಪ್ರಕಾರ ಅಲ್ಲಿ ಅನ್ಯ ವ್ಯವಹಾರದ ನಿಷೇಧ ಮಾಡಿದ್ದರೆ ಅದನ್ನು ತಿಳಿದುಕೊಂಡು ಪ್ರಮಾದಿಯಾಗಬಾರದು. ಕೇವಲ ವ್ಯವಹಾರದಲ್ಲಿಯೇ ಮಗ್ನರಿರುವವರಿಗೆ ನಿಶ್ಚಯದ ಅಭಿರುಚಿ ಮಾಡಿಸುವ ಸಲುವಾಗಿ ವ್ಯವಹಾರವನ್ನು ಹೀನವಾಗಿ ತಿಳಿಸಿಕೊಡಲಾಗಿದೆಯೆಂದು ತಿಳಿಯುವುದು.

ಅವೇ ಅಧ್ಯಾತ್ಮ ಶಾಸ್ತ್ರಗಳಲ್ಲಿ ಸಮ್ಯಗ್ದೃಷ್ಟಿಯ ವಿಷಯ ಭೋಗಾದಿಗಳನ್ನು ಬಂಧದ ಕಾರಣವೆಂದು ಹೇಳಿಲ್ಲ. ನಿರ್ಜರೆಗೆ ಕಾರಣವೆಂದು ಹೇಳಿದೆ; ಆದರೆ ಇಲ್ಲಿ ಭೋಗಗಳ ಉಪಾದೇಯತೆಯನ್ನು ತಿಳಿದುಕೊಳ್ಳಬಾರದು ಅಲ್ಲಿ ಸಮ್ಯಗ್ದೃಷ್ಟಿಯ ಮಹಿಮೆಯನ್ನು ತಿಳಿಸಿಕೊಡಲು ತೀವ್ರ ಬಂಧಕ್ಕೆ ಕಾರಣವೆಂದು ಪ್ರಸಿದ್ಧವಾದ ಆ ಭೋಗಾದಿಗಳಿದ್ದರೂ ಕೂಡ ಶ್ರದ್ಧಾ ಶಕ್ತಿಯ ಬಲದಿಂದ ಮಂದ ಬಂಧವಾಗುತ್ತಿರುವುದನ್ನು ಗಣನೆ ಮಾಡಿಲ್ಲ. ಮತ್ತು ಅದೇ ಬಲದಿಂದ ವಿಶೇಷ ನಿರ್ಜರೆಯಾಗತೊಡಗಿದೆ, ಅದಕ್ಕಾಗಿ ಉಪಚಾರದಿಂದ ಭೋಗಗಳನ್ನು ಕೂಡ ಬಂಧದ ಕಾರಣವೆಂದು ಹೇಳಿಲ್ಲ, ನಿರ್ಜರೆಯ ಕಾರಣವೆಂದು ಹೇಳಿದೆ. ವಿಚಾರ ಮಾಡಿದ ಮೇಲೆ ಭೋಗಗಳು ನಿರ್ಜರೆಗೆ ಕಾರಣವಾಗಿದ್ದರೆ ಅವನ್ನು ಬಿಟ್ಟುಕೊಟ್ಟು ಸಮ್ಯಗ್ದೃಷ್ಟಿಯು ಮುನಿಪದದ ಸ್ವೀಕಾರವನ್ನೇಕೆ ಮಾಡುವನು ? ಇಲ್ಲಿ ಈ ಕಥನದ ಪ್ರಯೋಜನವೆಂದರೆ ಸಮ್ಯಕ್ತ್ವದ ಮಹಿಮೆಯನ್ನು ನೋಡಿರಿ ! ಅದರ ಬಲದಿಂದ ಭೋಗಗಳು ತಮ್ಮ ಗುಣಗಳನ್ನು ಮಾಡುವ ಸಾಧ್ಯತೆಯಿಲ್ಲ.

ಇದೇ ಪ್ರಕಾರ ಅನ್ಯಕಥನಗಳಿದ್ದರೂ ಅವುಗಳ ಯಥಾರ್ಥತೆಯನ್ನು ತಿಳಿದುಕೊಳ್ಳುವುದು.

ಇನ್ನು ದ್ರವ್ಯಾನುಯೋಗದಲ್ಲಿ ಕೂಡ ಚರಣಾನುಯೋಗದಂತೆ ಗ್ರಹಣ-ತ್ಯಾಗ ಮಾಡಿಸುವ ಪ್ರಯೋಜನವಿದೆ; ಅದಕ್ಕಾಗಿ ಅಲ್ಲಿ ಛದ್ಮಸ್ಥನ ಬುದ್ಧಿಗೋಚರ ಪರಿಣಾಮಗಳ ಅಪೇಕ್ಷೆಯಿಂದಲೇ ಕಥನ ಮಾಡುತ್ತಾರೆ. ಅಲ್ಲಿರುವ ವಿಶೇಷತೆಯೆಂದರೆ ಚರಣಾನುಯೋಗದಲ್ಲಿ ಬಾಹ್ಯಕ್ರಿಯೆಯ ಮುಖ್ಯತೆಯಿಂದ ವರ್ಣನೆ ಮಾಡಿದರೆ ದ್ರವ್ಯಾನುಯೋಗದಲ್ಲಿ ಆತ್ಮಪರಿಣಾಮಗಳ ಮುಖ್ಯತೆಯಿಂದ ನಿರೂಪಣೆ ಮಾಡುತ್ತಾರೆ; ಆದರೆ ಕರಣಾನುಯೋಗದಂತೆ ಸೂಕ್ಷ್ಮ ವರ್ಣನೆ ಮಾಡುವುದಿಲ್ಲ. ಅದರ ಉದಾಹರಣೆ ಕೊಡುತ್ತಾರೆ.

ಉಪಯೋಗದಲ್ಲಿ ಶುಭ, ಅಶುಭ, ಶುದ್ಧವೆಂದು ಮೂರು ಭೇದ ಹೇಳಿದ್ದಾರೆ; ಅಲ್ಲಿ ಧರ್ಮಾನುರೂಪದ ಪರಿಣಾಮವು ಅದು ಶುಭೋಪಯೋಗವಿದೆ, ಪಾಪಾನುರೂಪ ಹಾಗೂ ದ್ವೇಷರೂಪದ ಪರಿಣಾಮವು ಅದು ಅಶುಭೋಪಯೋಗವಿದೆ ಮತ್ತು ರಾಗ-ದ್ವೇಷಗಳಿಲ್ಲದ ಪರಿಣಾಮವು ಅದು ಶುದ್ಧೋಪಯೋಗವಿದೆಯೆಂದು ಹೇಳಿದೆ; ಇದು ಈ ಛದ್ಮಸ್ಥನ ಬುದ್ಧಿಗೋಚರ ಪರಿಣಾಮಗಳ ಅಪೇಕ್ಷೆಯಿಂದ ಕಥನವಿದೆ; ಕರಣಾನುಯೋಗದಲ್ಲಿ ಕಷಾಯಶಕ್ತಿಯ ಅಪೇಕ್ಷೆಯಿಂದ ಗುಣಸ್ಥಾನಾದಿಗಳಲ್ಲಿ ಸಂಕ್ಲೇಶ ವಿಶುದ್ಧ ಪರಿಣಾಮಗಳ ಅಪೇಕ್ಷೆಯಿಂದ ನಿರೂಪಣೆ ಮಾಡಲಾಗಿದೆ. ಈ ವಿವಕ್ಷೆಯು ಇಲ್ಲಿ ಇಲ್ಲ.

ಕರಣಾನುಯೋಗದಲ್ಲಿ ರಾಗಾದಿಗಳಿಂದ ರಹಿತವಾದ ಶುದ್ಧೋಪಯೋಗವು ಯಥಾಖ್ಯಾತ ಚಾರಿತ್ರವಾದ ಮೇಲೆ ಆಗುತ್ತದೆ, ಅದು ಮೋಹದ ನಾಶದಿಂದ ತಾನಾಗಿಯೇ ಆಗುವುದು; ಕೆಳಗಿನ ಅವಸ್ಥೆಯುಳ್ಳವನು ಶುದ್ಧೋಪಯೋಗದ ಸಾಧನೆ ಹೇಗೆ ಮಾಡುವನು ? ಮತ್ತು ದ್ರವ್ಯಾನುಯೋಗದಲ್ಲಿ ಶುದ್ಧೋಪಯೋಗ ಮಾಡುವುದರದೇ ಮುಖ್ಯ ಉಪದೇಶವಿದೆ; ಆದುದರಿಂದ ಅಲ್ಲಿ ಛದ್ಮಸ್ಥನು ಯಾವ ಕಾಲದಲ್ಲಿ ಬುದ್ಧಿಗೋಚರವಾದ ಭಕ್ತಿ ಮೊದಲಾದ ಹಾಗೂ ಹಿಂಸೆ ಮೊದಲಾದ ಕಾರ್ಯರೂಪದ ಪರಿಣಾಮಗಳನ್ನು ಬಿಟ್ಟುಕೊಟ್ಟು ಆತ್ಮಾನುಭವದ ಕಾರ್ಯಗಳಲ್ಲಿ ಪ್ರವರ್ತಿಸುವನು ಆ ಕಾಲದಲ್ಲಿ ಅವನನ್ನು ಶುದ್ಧೋಪಯೋಗಿಯೆಂದು ಹೇಳುತ್ತಾರೆ. ಇಲ್ಲಿ ಕೇವಲಜ್ಞಾನಗೋಚರವಾದ ಸೂಕ್ಷ್ಮರಾಗಾದಿಗಳಿದ್ದರೂ ಅದರ ವಿವಕ್ಷೆ ಇಲ್ಲಿ ಇಲ್ಲ. ತನ್ನ ಬುದ್ಧಿಗೋಚರವಾದ ರಾಗಾದಿಗಳನ್ನು ಬಿಡುತ್ತಾನೆ, ಆ ಅಪೇಕ್ಷೆಯಿಂದ ಅವನನ್ನು ಶುದ್ಧೋಪಯೋಗಿಯೆಂದು ಹೇಳಿದೆ.

ಇದೇ ಪ್ರಕಾರ ಸ್ವ-ಪರ ಶ್ರದ್ಧೆ ಮೊದಲಾದವುಗಳಾದ ಮೇಲೆ ಸಮ್ಯಕ್ತ್ವವನ್ನು ಹೇಳಿದೆ, ಅದು ಬುದ್ಧಿಗೋಚರ ಅಪೇಕ್ಷೆಯಿಂದ ನಿರೂಪಣೆಯಿಲ್ಲ; ಸೂಕ್ಷ್ಮ ಭಾವಗಳ ಅಪೇಕ್ಷೆಯಿಂದ ಗುಣಸ್ಥಾನಾದಿಗಳಲ್ಲಿ ಸಮ್ಯಕ್ತ್ವದ ನಿರೂಪಣೆಯು ಕರಣಾನುಯೋಗದಲ್ಲಿ ಕಂಡುಬರುತ್ತದೆ. ಇದೇ ಪ್ರಕಾರ ಉಳಿದೆಡೆಗಳಲ್ಲಿ ತಿಳಿಯುವುದು.

ಆದುದರಿಂದ ದ್ರವ್ಯಾನುಯೋಗದ ಕಥನದ ವಿಧಿಯನ್ನು ಕರಣಾನುಯೋಗದೊಡನೆ ಹೊಂದಿಸ ಬಯಸಿದರೆ ಕೆಲವೆಡೆ ಹೊಂದಿಕೆಯಾಗುವುದು ಕೆಲವೆಡೆ ಹೊಂದಿಕೆಯಾಗುವುದಿಲ್ಲ. ಯಾವ ಪ್ರಕಾರ ಯಥಾಖ್ಯಾತಚಾರಿತ್ರವಾದ ನಂತರ ಎರಡೂ ಅಪೇಕ್ಷೆಯಿಂದ ಶುದ್ಧೋಪಯೋಗವಿದೆ, ಆದರೆ ಕೆಳಗಿನ ಅವಸ್ಥೆಯಲ್ಲಿ ದ್ರವ್ಯಾನುಯೋಗದ ಅಪೇಕ್ಷೆಯಿಂದ ಒಮ್ಮೊಮ್ಮೆ ಶುದ್ಧೋಪಯೋಗವಾಗುತ್ತದೆ, ಆದರೆ ಕರಣಾನುಯೋಗದ ಅಪೇಕ್ಷೆಯಿಂದ ಸದಾಕಾಲ ಕಷಾಯ ಅಂಶದ ಸದ್ಭಾವದಿಂದ ಶುದ್ಧೋಪಯೋಗವಾಗುವುದಿಲ್ಲ. ಇದೇ ಪ್ರಕಾರ ಅನ್ಯಕಥನಗಳನ್ನು ತಿಳಿದುಕೊಳ್ಳುವುದು.

ಮತ್ತು ದ್ರವ್ಯಾನುಯೋಗದಲ್ಲಿ ಪರಮತದೊಳಗೆ ಹೇಳಿರುವ ತತ್ತ್ವಾದಿಗಳನ್ನು ಅಸತ್ಯವೆಂದು ತಿಳಿಸಿಕೊಡುವ ಸಲುವಾಗಿ ಅವುಗಳ ನಿಷೇಧ ಮಾಡುತ್ತಾರೆ; ಅಲ್ಲಿ ದ್ವೇಷಬುದ್ಧಿಯಿಲ್ಲವೆಂದು ತಿಳಿಯುವುದು. ಅವುಗಳನ್ನು ಅಸತ್ಯವೆಂದು ತಿಳಿಸಿಕೊಟ್ಟು ಸತ್ಯ ಶ್ರದ್ಧೆ ಮಾಡಿಸುವುದರ ಪ್ರಯೋಜನವಿದೆಯೆಂದು ತಿಳಿಯುವುದು.

ಇದೇ ಪ್ರಕಾರ ಇನ್ನೂ ಅನೇಕ ಪ್ರಕಾರದಿಂದ ದ್ರವ್ಯಾನುಯೋಗದಲ್ಲಿ ವ್ಯಾಖ್ಯಾನದ ವಿಧಾನವಿದೆ.

ಹೀಗೆ ನಾಲ್ಕೂ ಅನುಯೋಗಗಳ ವ್ಯಾಖ್ಯಾನದ ವಿಧಾನ ಹೇಳಲಾಯಿತು. ಯಾವುದೇ ಒಂದು ಗ್ರಂಥದಲ್ಲಿ ಒಂದು ಅನುಯೋಗದ, ಒಂದರಲ್ಲಿ ಎರಡರ, ಒಂದರಲ್ಲಿ ಮೂರರ ಮತ್ತು ಒಂದರಲ್ಲಿ ನಾಲ್ಕರ ಮುಖ್ಯತೆಯೊಡನೆ ವ್ಯಾಖ್ಯಾನವಿರುತ್ತದೆ; ಆದುದರಿಂದ ಎಲ್ಲಿ ಹೇಗೆ ಸಂಭವವಿದೆ ಅಲ್ಲಿ ಹಾಗೆ ತಿಳಿದುಕೊಳ್ಳುವುದು.

## ಅನುಯೋಗಗಳ ವ್ಯಾಖ್ಯಾನದ ಪದ್ಧತಿ

ಈಗ ಈ ಅನುಯೋಗಗಳಲ್ಲಿ ಯಾವ ಪದ್ಧತಿಯ ಮುಖ್ಯತೆಯು ಕಂಡು ಬರುತ್ತದೆಂಬುದನ್ನು ಹೇಳುತ್ತಾರೆ.

ಪ್ರಥಮಾನುಯೋಗದಲ್ಲಿ ಅಲಂಕಾರ ಶಾಸ್ತ್ರದ ಮತ್ತು ಕಾವ್ಯ ಮೊದಲಾದ ಶಾಸ್ತ್ರಗಳ ಪದ್ಧತಿಯ ಮುಖ್ಯತೆಯಿದೆ; ಏಕೆಂದರೆ ಅಲಂಕಾರ ಮೊದಲಾದವುಗಳಿಂದ ಮನಸ್ಸು ರಂಜಿಸಿ ಹೋಗುತ್ತದೆ, ಅಲಂಕಾರ ಯುಕ್ತಿಸಹಿತವಾದ ಕಥನದಿಂದ ಉಪಯೋಗವು ತೊಡಗುವಂತೆ ಸರಳವಾದ ಮಾತುಗಳನ್ನು ಹೇಳುವುದರಿಂದ ಹಾಗೆ ಉಪಯೋಗವು ತೊಡಗುವುದಿಲ್ಲ. ಮತ್ತು ಪರೋಕ್ಷಮಾತನ್ನು ಒಂದಿಷ್ಟು ಅಧಿಕತೆಯೊಡನೆ ನಿರೂಪಣೆ ಮಾಡಿದರೆ ಅದರ ಸ್ವರೂಪವು ಚನ್ನಾಗಿ ಭಾಸವಾಗುತ್ತದೆ.

ಕರಣಾನುಯೋಗದಲ್ಲಿ ಗಣಿತ ಮೊದಲಾದ ಶಾಸ್ತ್ರಗಳ ಪದ್ಧತಿಯ ಮುಖ್ಯತೆಯಿದೆ; ಏಕೆಂದರೆ ಅಲ್ಲಿ ದ್ರವ್ಯ- ಕ್ಷೇತ್ರ-ಕಾಲ-ಭಾವದ ಪ್ರಮಾಣ ಮೊದಲಾದವುಗಳ ನಿರೂಪಣೆ ಮಾಡುತ್ತಾರೆ; ಆ ಗಣಿತ ಶಾಸ್ತ್ರಗಳ ಪರಂಪರೆಯಿಂದ ಅದರ ತಿಳುವಳಿಕೆಯು ಸುಲಭವಾಗುತ್ತದೆ.

ಚರಣಾನುಯೋಗದಲ್ಲಿ ಸುಭಾಷಿತ ನೀತಿಶಾಸ್ತ್ರಗಳ ಪದ್ಧತಿಯು ಮುಖ್ಯವಿದೆ; ಏಕೆಂದರೆ ಅಲ್ಲಿ ಆಚರಣೆ ಮಾಡಿಸುವುದಿದೆ; ಆದುದರಿಂದ **ಲೋಕಪ್ರವೃತ್ತಿಗೆ ಅನುಸರಿಸಿ ನೀತಿಮಾರ್ಗ ತಿಳಿಸಿದ ಮೇಲೆ ಅವನು ಆಚರಣೆ ಮಾಡುತ್ತಾನೆ.**

ಇನ್ನು ದ್ರಾವ್ಯಾನುಯೋಗದಲ್ಲಿ ನ್ಯಾಯಶಾಸ್ತ್ರಗಳ ಪದ್ಧತಿಯ ಮುಖ್ಯತೆಯಿದೆ; ಏಕೆಂದರೆ ಅಲ್ಲಿ ನಿರ್ಣಯ ಮಾಡುವ ಪ್ರಯೋಜನವಿದೆ ಮತ್ತು ನ್ಯಾಯಶಾಸ್ತ್ರಗಳಲ್ಲಿ ನಿರ್ಣಯ ಮಾಡುವ ಮಾರ್ಗವನ್ನು ತೋರಿಸಿಕೊಟ್ಟಿದೆ.

ಈ ಪ್ರಕಾರ ಈ ಅನುಯೋಗಗಳಲ್ಲಿ ಮುಖ್ಯ ಪದ್ಧತಿಯಿದೆ ಇದಲ್ಲದೆ ಇನ್ನೂ ಅನೇಕ ಪದ್ಧತಿಸಹಿತವಾದ ವ್ಯಾಖ್ಯಾನವು ಇವುಗಳಲ್ಲಿ ಕಂಡುಬರುತ್ತದೆ.

**ಪ್ರಶ್ನೆ :-** ಅಲಂಕಾರ, ಗಣಿತ, ನೀತಿ, ನ್ಯಾಯಗಳ ಜ್ಞಾನವು ವಿದ್ವಾಂಸರುಗಳಿಗೆ ಇರುತ್ತದೆ; ಅಲ್ಪಬುದ್ಧಿಯುಳ್ಳವರು ತಿಳಿಯುವುದಿಲ್ಲ; ಆದುದರಿಂದ ಸುಲಭವಾದ ಕಥನವನ್ನೇಕೆ ಮಾಡಲಿಲ್ಲ ?

**ಉತ್ತರ :-** ಶಾಸ್ತ್ರಗಳು ಮುಖ್ಯವಾಗಿ ಪಂಡಿತರುಗಳಿಗೆ ಮತ್ತು ಚತುರ ವಿದ್ವಾಂಸರುಗಳಿಗೆ ಅಭ್ಯಾಸ

ಮಾಡಲು ಯೋಗ್ಯವಿವೆ, ಅಲಂಕಾರ ಮೊದಲಾದ ಪರಂಪರೆ ಸಹಿತ ಕಥನವಿದ್ದರೆ ಅವರ ಮನಸ್ಸು ತೊಡಗುವುದು. ಮತ್ತು ಆ ಹೀನಬುದ್ಧಿಯುಳ್ಳವರಿಗೆ ಪಂಡಿತರು ತಿಳಿಸಿಕೊಡುವರು, ಇನ್ನು ತಿಳಿದುಕೊಳ್ಳದವರಿಗೆ ಮೌಖಿಕದಿಂದ ಸುಲಭಮಾಡಿ ಹೇಳುವರು. ಆದರೆ ಗ್ರಂಥಗಳಲ್ಲಿ ಸುಲಭಕಥನ ಮಾಡುವುದರಿಂದ ವಿಶೇಷ ಬುದ್ಧಿಯುಳ್ಳವರು ಅವುಗಳ ಅಭ್ಯಾಸದಲ್ಲಿ ವಿಶೇಷವಾಗಿ ಪ್ರವರ್ತಿಸದಿರುವುದರಿಂದ ಅಲಂಕಾರ ಮೊದಲಾದ ಪರಂಪರೆಯೊಡನೆ ಕಥನ ಮಾಡುತ್ತಾರೆ.

ಈ ಪ್ರಕಾರ ಈ ನಾಲ್ಕು ಅನುಯೋಗಗಳ ನಿರೂಪಣೆ ಮಾಡಲಾಯಿತು.

ಜೈನಮತದಲ್ಲಿ ಬಹಳಷ್ಟು ಶಾಸ್ತ್ರಗಳು ಈ ನಾಲ್ಕು ಅನುಯೋಗಗಳಲ್ಲಿ ಗರ್ಭಿತವಿವೆ.

ಅದರಂತೆ ವ್ಯಾಕರಣ, ನ್ಯಾಯ, ಛಂದಸ್ಸು, ಕೋಶ ಮೊದಲಾದ ಶಾಸ್ತ್ರಗಳೂ ಮತ್ತು ವೈದ್ಯಕೀಯ ಜ್ಯೋತಿಷ್ಯ , ಮಂತ್ರ ಮೊದಲಾದ ಶಾಸ್ತ್ರಗಳೂ ಜಿನಮತದಲ್ಲಿ ಕಂಡು ಬರುತ್ತವೆ. ಅವುಗಳ ಪ್ರಯೋಜನವೇನೆಂಬುದನ್ನು ಹೇಳುತ್ತಾರೆ.

## ವ್ಯಾಕರಣ, ನ್ಯಾಯ ಮೊದಲಾದ ಶಾಸ್ತ್ರಗಳ ಪ್ರಯೋಜನ :-

ವ್ಯಾಕರಣ ನ್ಯಾಯ ಮೊದಲಾದವುಗಳ ಅಭ್ಯಾಸವಾದ ಮೇಲೆ ಅನುಯೋಗರೂಪ ಶಾಸ್ತ್ರಗಳ ಅಭ್ಯಾಸವಾಗುವ ಸಾಧ್ಯತೆಯಿದೆ; ಅದಕ್ಕಾಗಿ ವ್ಯಾಕರಣ ಮೊದಲಾದ ಶಾಸ್ತ್ರಗಳನ್ನು ಹೇಳಿದ್ದಾರೆ.

**ಪ್ರಶ್ನೆ :-** ಸುಲಭವಾದ ಭಾಷೆಯಲ್ಲಿ ನಿರೂಪಣೆ ಮಾಡಿದ್ದರೆ ವ್ಯಾಕರಣಾದಿಗಳ ಪ್ರಯೋಜನವೇನಿತ್ತು?

**ಉತ್ತರ :-** ಭಾಷೆಯಂತೂ ಅಪಭ್ರಂಶ ರೂಪವಾದ ಅಶುದ್ಧ ವಾಣಿಯಿದೆ, ಅದು ದೇಶ-ದೇಶದಲ್ಲಿ ಬೇರೆ-ಬೇರೆಯಿದೆ ಅದಕ್ಕಾಗಿ ಮಹಾಪುರುಷರು ಶಾಸ್ತ್ರಗಳಲ್ಲಿ ಅಂಥ ರಚನೆಯನ್ನು ಹೇಗೆ ಮಾಡುವರು ? ಮತ್ತು ವ್ಯಾಕರಣ-ನ್ಯಾಯಾದಿಗಳ ಮೂಲಕ ಹೇಗೆ ಯಥಾರ್ಥ ಸೂಕ್ಷ್ಮ ಅರ್ಥದ ನಿರೂಪಣೆಯಾಗುತ್ತದೆ ಹಾಗೆ ಸರಳ ಭಾಷೆಯಲ್ಲಿ ಆಗುವ ಸಾಧ್ಯತೆಯಿಲ್ಲ; ಆದುದರಿಂದ ವ್ಯಾಕರಣಾದಿಗಳ ಪರಂಪರೆಯಿಂದ ವರ್ಣನೆ ಮಾಡಲಾಗಿದೆ. ಅದಕ್ಕಾಗಿ ತಮ್ಮ ಬುದ್ಧಿಗೆ ಅನುಸರಿಸಿ ಒಂದಿಷ್ಟು ಇವುಗಳ ಅಭ್ಯಾಸ ಮಾಡಿ ಪ್ರಯೋಜನಭೂತವಾದ ಅನುಯೋಗರೂಪ ಶಾಸ್ತ್ರಗಳ ಅಭ್ಯಾಸ ಮಾಡುವುದು.

ಅದರಂತೆ ವೈದ್ಯಕೀಯ ಮೊದಲಾದ ಚಮತ್ಕಾರದಿಂದ ಜಿನಮತದ ಪ್ರಭಾವನೆಯಾಗುವುದು ಮತ್ತು ಔಷಧಾದಿಗಳಿಂದ ಉಪಕಾರವೂ ಆಗುವುದು; ಅಥವಾ ಲೌಕಿಕ ಕಾರ್ಯಗಳಲ್ಲಿ ಅನುರಕ್ತರಾಗಿರುವವರು ವೈದ್ಯಕೀಯ ಮೊದಲಾದ ಚಮತ್ಕಾರದಿಂದ ಜೈನರಾಗಿ ಅನಂತರ ನಿಜವಾದ ಧರ್ಮದ ಪ್ರಾಪ್ತಿ ಮಾಡಿಕೊಂಡು ತಮ್ಮ ಕಲ್ಯಾಣ ಮಾಡಿಕೊಳ್ಳುವರು. ಇವೇ ಮೊದಲಾದ ಪ್ರಯೋಜನಗಳಿಂದ ವೈದ್ಯಕೀಯ ಮೊದಲಾದ ಶಾಸ್ತ್ರಗಳನ್ನು ಹೇಳಿದ್ದಾರೆ.

ಆದರೆ ಇವು ಕೂಡ ಜೈನಶಾಸ್ತ್ರಗಳಿವೆಯೆಂದು ತಿಳಿದುಕೊಂಡು ಹೆಚ್ಚಾಗಿ ಇವುಗಳ ಅಭ್ಯಾಸದಲ್ಲಿ ತೊಡಗಬಾರದು. ತೀಕ್ಷ್ಣಬುದ್ಧಿಯಿಂದ ಸಹಜವಾಗಿ ಇವನ್ನು ತಿಳಿಯುವುದು ಮತ್ತು ಇವನ್ನು ತಿಳಿಯುವುದರಿಂದ ತಮ್ಮ ರಾಗಾದಿ ವಿಕಾರಗಳು ವೃದ್ಧಿಸುವುದಿಲ್ಲವೆಂದು ತಿಳಿದು ಬಂದರೆ ಇವುಗಳನ್ನು ತಿಳಿಯಬೇಕು. ಅನುಯೋಗ

ಶಾಸ್ತ್ರಗಳಂತೆ ಈ ಶಾಸ್ತ್ರಗಳು ಅಧಿಕ ಕಾರ್ಯಕಾರಿಯಿಲ್ಲ, ಆದುದರಿಂದ ಹೆಚ್ಚಾಗಿ ಇವುಗಳ ಅಭ್ಯಾಸದ ಉದ್ಯಮ ಮಾಡುವುದು ಯೋಗ್ಯವಿಲ್ಲ.

**ಪ್ರಶ್ನೆ :-** ಹೀಗಿದ್ದರೆ ಗಣಧರಾದಿಗಳು ಇವುಗಳ ರಚನೆಯನ್ನೇಕೆ ಮಾಡಿದರು ?

**ಉತ್ತರ :-** ಒಂದಿಷ್ಟು ಪೂರ್ವೋಕ್ತ ಪ್ರಯೋಜನ ತಿಳಿದುಕೊಂಡು ಇವುಗಳ ರಚನೆ ಮಾಡಿದೆ. ಯಾವ ಪ್ರಕಾರ ಅಧಿಕ ಹಣವುಳ್ಳವನು ಒಮ್ಮೊಮ್ಮೆ ಅಲ್ಪಕಾರ್ಯಕಾರಿಯಾದ ವಸ್ತುಗಳನ್ನೂ ಸಂಗ್ರಹಿಸುತ್ತಾನೆ; ಆದರೆ ಅಲ್ಪ ಧನವುಳ್ಳವನು ಆ ವಸ್ತುಗಳ ಸಂಗ್ರಹ ಮಾಡಿದರೆ ಹಣವಂತೂ ಅದರಲ್ಲಿ ಖರ್ಚಾಗುವುದು, ಅನಂತರ ಅಧಿಕ ಕಾರ್ಯಕಾರಿಯಾದ ವಸ್ತುವಿನ ಸಂಗ್ರಹ ಎಲ್ಲಿಂದ ಮಾಡುವುದು ? ಅದೇ ಪ್ರಕಾರ ಅಧಿಕ ಬುದ್ಧಿವಂತರಾದ ಗಣಧರಾದಿಕರು ಒಮ್ಮೊಮ್ಮೆ ಅಲ್ಪಕಾರ್ಯಕಾರಿಯಾದ ವೈದ್ಯಕೀಯ ಮೊದಲಾದ ಶಾಸ್ತ್ರಗಳ ಸಂಗ್ರಹವನ್ನೂ ಮಾಡುತ್ತಾರೆ; ಆದರೆ ಅಲ್ಪಬುದ್ಧಿವಂತರು ಅವುಗಳ ಅಭ್ಯಾಸದಲ್ಲಿ ತೊಡಗಿದರೆ ಬುದ್ಧಿಯು ಅಲ್ಲಿ ಖರ್ಚಾಗುವುದು, ನಂತರ ಉತ್ಕೃಷ್ಟಕಾರ್ಯಕಾರಿ ಶಾಸ್ತ್ರಗಳ ಅಭ್ಯಾಸವನ್ನು ಹೇಗೆ ಮಾಡುವುದು ?

ಅದರಂತೆ ಮಂದರಾಗವುಳ್ಳವನು ಪುರಾಣಗಳಲ್ಲಿ ಶೃಂಗಾರಾದಿಗಳ ನಿರೂಪಣೆ ಮಾಡಿದರೂ ವಿಕಾರ ವಶನಾಗುವುದಿಲ್ಲ ಆದರೆ ತೀವ್ರರಾಗವುಳ್ಳವನು ಹಾಗೆ ಶೃಂಗಾರಾದಿಗಳ ನಿರೂಪಣೆ ಮಾಡಿದರೆ ಪಾಪವನ್ನೇ ಕಟ್ಟಿಕೊಳ್ಳುವನು. ಅದೇ ಪ್ರಕಾರ ಮಂದರಾಗವುಳ್ಳ ಗಣಧರಾದಿಕರು ವೈದ್ಯಕೀಯ ಮೊದಲಾದ ಶಾಸ್ತ್ರಗಳ ನಿರೂಪಣೆ ಮಾಡಿದರೂ ವಿಕಾರ ವಶರಾಗುವುದಿಲ್ಲ; ಆದರೆ ತೀವ್ರರಾಗವುಳ್ಳವರು ಅವುಗಳ ಅಭ್ಯಾಸದಲ್ಲಿ ತೊಡಗಿದರೆ ರಾಗಾದಿಗಳನ್ನು ಹೆಚ್ಚಿಸಿಕೊಂಡು ಪಾಪಕರ್ಮವನ್ನು ಕಟ್ಟಿಕೊಳ್ಳುವರೆಂದು ತಿಳಿಯುವುದು.

ಈ ಪ್ರಕಾರ ಜೈನಮತದ ಉಪದೇಶದ ಸ್ವರೂಪವಿದೆಯೆಂದು ತಿಳಿಯುವುದು.

## ಅನುಯೋಗಗಳಲ್ಲಿ ದೋಷ-ಕಲ್ಪನೆಗಳ ನಿರಾಕರಣೆ

ಈಗ ಇವುಗಳಲ್ಲಿ ಕೆಲವರು ದೋಷ ಕಲ್ಪನೆ ಮಾಡುತ್ತಾರೆ, ಅದರ ನಿರಾಕರಣೆ ಮಾಡುತ್ತಾರೆ.

### ಪ್ರಥಮಾನುಯೋಗದಲ್ಲಿ ದೋಷ-ಕಲ್ಪನೆಯ ನಿರಾಕರಣೆ :-

ಪ್ರಥಮಾನುಯೋಗದಲ್ಲಿ ಶೃಂಗಾರಾದಿಗಳ ಮತ್ತು ಸಂಗ್ರಾಮಾದಿಗಳ ಕಥನವನ್ನು ಬಹಳಷ್ಟು ಮಾಡುತ್ತಾರೆ, ಅವುಗಳ ನಿಮಿತ್ತದಿಂದ ರಾಗಾದಿಗಳು ವೃದ್ಧಿಸಿ ಬಿಡುತ್ತವೆ, ಆದುದರಿಂದ ಇಂಥ ಕಥನವನ್ನು ಮಾಡಬಾರದಿತ್ತು, ಮತ್ತು ಇಂಥ ಕಥನವನ್ನು ಕೇಳಲೂಬಾರದೆಂದು ಅದೆಷ್ಟೋ ಜನರು ಹೇಳುತ್ತಾರೆ.

ಕಥೆ ಹೇಳುವುದಿದ್ದರೆ ಎಲ್ಲ ಅವಸ್ಥೆಗಳ ಕಥನ ಮಾಡಬೇಕಾಗುವುದು; ಮತ್ತು ಅಲಂಕಾರಾದಿಗಳ ಮೂಲಕ ವೃದ್ಧಿಸಿ ಕಥನ ಮಾಡುತ್ತಾರೆ, ಆದರೆ ವಿದ್ವಾಂಸರುಗಳ ವಚನಗಳಂತೂ ಯುಕ್ತಿಯುಕ್ತವಾಗಿಯೇ ಹೊರಡುತ್ತವೆ.

**ಪ್ರಶ್ನೆ :-** ಸಂಬಂಧ ಹೊಂದಿಸಲು ಸಾಮಾನ್ಯ ಕಥನ ಮಾಡಬೇಕಿತ್ತು, ಕಥನವನ್ನು ವೃದ್ಧಿಸಿ ಏಕೆ ಮಾಡಬೇಕಿತ್ತು ?

**ಉತ್ತರ :-** ಪರೋಕ್ಷ ಕಥನವನ್ನು ವೃದ್ಧಿಸಿ ಹೇಳಿದಲ್ಲದೆ ಅದರ ಸ್ವರೂಪವು ಭಾಸವಾಗುವುದಿಲ್ಲ. ಮತ್ತು ವೃದ್ಧಿಸಿ ಕಥನ ಮಾಡಿದಾಗಲೇ ಮೊದಲು ಈ ಪ್ರಕಾರ ಭೋಗ-ಸಂಗ್ರಾಮ ಮೊದಲಾದುವನ್ನು ಮಾಡಿ ನಂತರ ಎಲ್ಲವುಗಳ ತ್ಯಾಗ ಮಾಡಿ ಮುನಿಯಾದನೆಂಬ ಇತ್ಯಾದಿ ಚಮತ್ಕಾರಗಳು ಆಗಲೇ ಭಾಸವಾಗುವವು.

ಇನ್ನು ಅದರ ನಿಮಿತ್ತದಿಂದ ರಾಗಾದಿಗಳು ಬೆಳೆಯುತ್ತವೆಂದು ನೀನೆನ್ನಬಹುದು; ಆದರೆ ಯಾವ ಪ್ರಕಾರ ಒಬ್ಬನು ಅಲ್ಲಿ ಧರ್ಮಕಾರ್ಯ ಮಾಡಿಸುವ ಪ್ರಯೋಜನದಿಂದ ಚೈತ್ಯಾಲಯ ಕಟ್ಟಿಸುವನು ; ಮತ್ತು ಯಾವನೋ ಪಾಪಿಯು ಅಲ್ಲಿ ಪಾಪಕಾರ್ಯ ಮಾಡಿದರೆ ಅದರಲ್ಲಿ ಆ ಚೈತ್ಯಾಲಯ ಕಟ್ಟಿಸುವವನ ದೋಷವಿಲ್ಲ. ಅದೇ ಪ್ರಕಾರ ಶ್ರೀಗುರುಗಳು ಪುರಾಣಗಳಲ್ಲಿ ಶೃಂಗಾರಾದಿಗಳ ವರ್ಣನೆ ಮಾಡಿದರು; ಅಲ್ಲಿ ಅವರ ಪ್ರಯೋಜನವು ರಾಗಾದಿಗಳನ್ನು ಮಾಡಿಸುವುದಿಲ್ಲ, ಧರ್ಮದಲ್ಲಿ ತೊಡಗಿಸುವ ಪ್ರಯೋಜನವಿದೆ; ಆದರೆ ಯಾವನೋ ಪಾಪಿಯು ಧರ್ಮಮಾಡುವುದಕ್ಕೆ ಪ್ರತಿಯಾಗಿ ರಾಗಾದಿಗಳನ್ನೇ ವೃದ್ಧಿಸಿಕೊಂಡರೆ ಅದರಲ್ಲಿ ಶ್ರೀಗುರುಗಳ ದೋಷವೇನಿದೆ ?

**ಪ್ರಶ್ನೆ :-** ರಾಗಾದಿಗಳಿಗೆ ನಿಮಿತ್ತವಾಗುವಂಥ ಕಥನವನ್ನೇ ಮಾಡಬಾರದಾಗಿತ್ತಲ್ಲವೇ ?

**ಉತ್ತರ :-** ಸರಾಗಿ ಜೀವರುಗಳ ಮನಸ್ಸು ಕೇವಲ ವೈರಾಗ್ಯ ಕಥನದಲ್ಲಿ ತೊಡಗುವುದಿಲ್ಲ. ಆದುದರಿಂದ ಯಾವ ಪ್ರಕಾರ ಚಿಕ್ಕ ಬಾಲಕನಿಗೆ ಮಿಠಾಯಿಯ ಆಶ್ರಯದಿಂದ ಔಷಧ ಕೊಡುತ್ತಾರೆ; ಅದೇ ಪ್ರಕಾರ ರಾಗಯುಕ್ತ ಜೀವನಿಗೆ ಭೋಗಾದಿ ಕಥನದ ಆಶ್ರಯದಿಂದ ಧರ್ಮದಲ್ಲಿ ಅಭಿರುಚಿ ಹುಟ್ಟಿಸುತ್ತಾರೆ.

**ಪ್ರಶ್ನೆ :-** ಹೀಗಿದ್ದರೆ ವಿರಕ್ತ ಪುರುಷರು ಇಂಥ ಗ್ರಂಥಗಳ ಅಭ್ಯಾಸ ಮಾಡುವುದು ಯೋಗ್ಯವಿಲ್ಲವಲ್ಲವೇ?

**ಉತ್ತರ :-** ಯಾರ ಅಂತರಂಗದಲ್ಲಿ ರಾಗದ ಭಾವಗಳೇ ಇಲ್ಲ ಅವರಿಗೆ ಶೃಂಗಾರ ಮೊದಲಾದ ಕಥನ ಕೇಳಿದ ನಂತರ ರಾಗಾದಿಗಳು ಉತ್ಪನ್ನವಾಗುವುದೇ ಇಲ್ಲ. ಇಲ್ಲಿ ಇದೇ ಪ್ರಕಾರ ಕಥನ ಮಾಡುವ ಪದ್ಧತಿಯಿದೆಯೆಂದು ಅವರು ತಿಳಿಯುತ್ತಾರೆ.

**ಪ್ರಶ್ನೆ :-** ಯಾರಿಗೆ ಶೃಂಗಾರಾದಿಗಳ ಕಥನ ಕೇಳಿದ ಮೇಲೆ ರಾಗಾದಿಗಳಾಗುವವು, ಅವರಂತೂ ಅಂಥ ಕಥನ ಕೇಳುವುದು ಕೂಡ ಯೋಗ್ಯವಿಲ್ಲವಲ್ಲವೇ ?

**ಉತ್ತರ :-** ಎಲ್ಲಿ ಧರ್ಮದ ಪ್ರಯೋಜನವೇ ಇದೆ ಮತ್ತು ಅಲ್ಲಲ್ಲಿ ಧರ್ಮದ ಪೋಷಣೆ ಮಾಡುವಂಥ ಜೈನ ಪುರಾಣ ಮೊದಲಾದವುಗಳಲ್ಲಿ ಪ್ರಸಂಗವಶದಿಂದ ಶೃಂಗಾರಾದಿಗಳ ಕಥನವನ್ನು ಮಾಡಲಾಗಿದೆ. ಅದನ್ನು ಕೇಳಿಕೂಡ ಯಾವನು ಅಧಿಕರಾಗಿಯಾಗುವನು ಅವನು ಬೇರೆ ಮತ್ತೆಲ್ಲಿ ವಿರಕ್ತನಾಗುವನು ? ಅವನು ಪುರಾಣ ಕೇಳುವುದನ್ನು ಬಿಟ್ಟು ಕೊಟ್ಟು ಹೀಗೆಯೇ ಅನ್ಯಕಾರ್ಯ ಮಾಡಿದರೂ ಅಲ್ಲಿ ಹೆಚ್ಚು ರಾಗಾದಿಗಳಾಗುವವು; ಆದುದರಿಂದ ಅವನಿಗೆ ಕೂಡ ಪುರಾಣ ಕೇಳುವುದರಿಂದ ಒಂದಿಷ್ಟು ಧರ್ಮಬುದ್ಧಿಯಾದರೆ ಆಗುವುದು. ಇತರ ಕಾರ್ಯಗಳಿಗಿಂತ ಈ ಕಾರ್ಯವು ಒಳ್ಳೆಯದೇ ಇದೆ.

**ಪ್ರಶ್ನೆ :-** ಪ್ರಥಮಾನುಯೋಗದಲ್ಲಿ ಅನ್ಯ ಜೀವರುಗಳ ಕಥೆಗಳಿವೆ, ಅವುಗಳಿಂದ ತಮ್ಮ ಯಾವ ಪ್ರಯೋಜನವನ್ನು ಸಾಧಿಸಬಹುದಾಗಿದೆ ?

**ಉತ್ತರ :-** ಯಾವ ಪ್ರಕಾರ ಕಾಮುಕ ಪುರುಷರ ಕಥೆ ಕೇಳುವುದರಿಂದ ತಮಗೆ ಕೂಡ ಕಾಮದ

ಪ್ರೀತಿಯು ಹೆಚ್ಚುತ್ತದೆ; ಅದೇ ಪ್ರಕಾರ ಧರ್ಮಾತ್ಮ ಪುರುಷರುಗಳ ಕಥೆ ಕೇಳಿದ ನಂತರ ತಮಗೆ ಕೂಡ ಧರ್ಮದ ಪ್ರೀತಿಯು ವಿಶೇಷವಾಗುತ್ತದೆ. ಆದುದರಿಂದ ಪ್ರಥಮಾನುಯೋಗದ ಅಭ್ಯಾಸ ಮಾಡುವುದು ಯೋಗ್ಯವಿದೆ.

**ಕರಣಾನುಯೋಗದಲ್ಲಿ ದೋಷ-ಕಲ್ಪನೆಯ ನಿರಾಕರಣೆ :-**

**ಪ್ರಶ್ನೆ :-** ಕರಣಾನುಯೋಗದಲ್ಲಿ ಗುಣಸ್ಥಾನ, ಮಾರ್ಗಣಾದಿಗಳ ಹಾಗೂ ಕರ್ಮಪ್ರಕೃತಿಗಳ ಕಥನ ಮಾಡಿದೆ ಅದರಂತೆ ತ್ರೀಲೋಕಾದಿಗಳ ಕಥನವನ್ನೂ ಮಾಡಿದೆ, ಆದರೆ ಅವನ್ನು 'ಇದು ಹೀಗಿದೆ, ಇದು ಹೀಗಿದೆ'ಯೆಂದು ತಿಳಿದುಕೊಳ್ಳುವುದರಲ್ಲಿ ತಮ್ಮ ಯಾವ ಕಾರ್ಯದ ಸಿದ್ಧಿಯಾಗುವುದು ? ಭಕ್ತಿ ಮಾಡಿದರೆ ಅಥವಾ ವ್ರತ ದಾನಾದಿಗಳನ್ನು ಮಾಡಿದರೆ ಇಲ್ಲವೆ ಆತ್ಮಾನುಭವ ಮಾಡಿಕೊಂಡರೆ ತಮ್ಮದು ಒಳ್ಳೆಯದಾಗುವುದೆಂದು ಅದೆಷ್ಟೋ ಜನರು ಹೇಳುತ್ತಾರೆ.

**ಉತ್ತರ :-** ಪರಮೇಶ್ವರರಂತೂ ವೀತರಾಗರಿದ್ದಾರೆ; ಭಕ್ತಿ ಮಾಡುವುದರಿಂದ ಅವರು ಪ್ರಸನ್ನರಾಗಿ ಏನನ್ನೂ ಮಾಡುವುದಿಲ್ಲ. ಭಕ್ತಿ ಮಾಡುವುದರಿಂದ ಕಷಾಯಗಳು ಮಂದವಾಗುತ್ತವೆ ಅದರಿಂದ ತಾನಾಗಿಯೇ ಉತ್ತಮ ಫಲವು ದೊರಕುತ್ತದೆ. ಆ ಕರಣಾನುಯೋಗದ ಅಭ್ಯಾಸದಲ್ಲಿ ಅದಕ್ಕಿಂತಲೂ ಅಧಿಕ ಕಷಾಯಗಳು ಮಂದವಾಗುವ ಸಾಧ್ಯತೆಯಿರುವುದರಿಂದ ಇದರ ಫಲವು ಅತ್ಯಂತ ಉತ್ತಮವಾಗುತ್ತದೆ. ವ್ರತ, ದಾನ ಮೊದಲಾದವು ಕಷಾಯ ಕಡಿಮೆ ಮಾಡಲು ಬಾಹ್ಯ ನಿಮಿತ್ತದ ಸಾಧನಗಳಿವೆ ಮತ್ತು ಕರಣಾನುಯೋಗದ ಅಭ್ಯಾಸ ಮಾಡಿದ ಮೇಲೆ ಅಲ್ಲಿ ಉಪಯೋಗವು ತೊಡಗಿದರೆ ರಾಗಾದಿಗಳು ದೂರವಾಗುತ್ತವೆ ಅದರಿಂದ ಇದು ಅಂತರಂಗದ ಸಾಧನವಿರುವುದರಿಂದ ಇದು ವಿಶೇಷ ಕಾರ್ಯಕಾರಿಯಿದೆ. ವ್ರತಾದಿಗಳನ್ನು ಧಾರಣ ಮಾಡಿ ಅಧ್ಯಯನ ಮಾಡುತ್ತಾರೆ. ಮತ್ತು ಆತ್ಮಾನುಭವವು ಸರ್ವೋತ್ತಮ ಕಾರ್ಯವಿದೆ; ಆದರೆ ಸಾಮಾನ್ಯ ಅನುಭವದಲ್ಲಿ ಉಪಯೋಗವು ಸ್ಥಿರಗೊಳ್ಳುವುದಿಲ್ಲ, ಮತ್ತು ಸ್ಥಿರಗೊಳ್ಳದಾಗ ಅನ್ಯವಿಕಲ್ಪಗಳಾಗುತ್ತವೆ; ಅಲ್ಲಿ ಕರಣಾನುಯೋಗದ ಅಭ್ಯಾಸವಿದ್ದರೆ ಆ ವಿಚಾರದಲ್ಲಿ ಉಪಯೋಗವನ್ನು ತೊಡಗಿಸುತ್ತಾನೆ.

ಈ ವಿಚಾರವು ವರ್ತಮಾನದಲ್ಲೂ ರಾಗಾದಿಗಳನ್ನು ಕಡಿಮೆ ಮಾಡುತ್ತದೆ ಮತ್ತು ಮುಂಬರುವ ರಾಗಾದಿಗಳನ್ನು ಕಡಿಮೆ ಮಾಡುವ ಕಾರಣವಿರುವುದರಿಂದ ಇಲ್ಲಿ ಉಪಯೋಗವನ್ನು ತೊಡಗಿಸಬೇಕು.

ನಾನಾ ಪ್ರಕಾರದಿಂದ ಜೀವ-ಕರ್ಮಾದಿಗಳ ಭೇದ ತಿಳಿಯುವಾಗ ಅವುಗಳಲ್ಲಿ ರಾಗಾದಿಗಳನ್ನು ಮಾಡುವ ಪ್ರಯೋಜನವಿಲ್ಲದಿರುವುದರಿಂದ ರಾಗಾದಿಗಳು ವೃದ್ಧಿಸುವುದಿಲ್ಲ; ವೀತರಾಗವಾಗುವ ಪ್ರಯೋಜನವು ಅಲ್ಲಲ್ಲಿ ಪ್ರಕಟವಾಗುವುದರಿಂದ ರಾಗಾದಿಗಳನ್ನು ನಾಶಮಾಡುವ ಕಾರಣವಿದೆ.

**ಪ್ರಶ್ನೆ :-** ಕೆಲವೊಂದು ಕಥನವು ಹೀಗಿಯೇ ಇದೆ, ಆದರೆ ದ್ವೀಪ-ಸಮುದ್ರ ಮೊದಲಾದವುಗಳ ಯೋಜನಾದಿಗಳ ನಿರೂಪಣೆ ಮಾಡಿದೆ ಅವುಗಳಲ್ಲಿ ಯಾವ ಸಿದ್ಧಿಯಿದೆ ?

**ಉತ್ತರ :-** ಅವನ್ನು ತಿಳಿಯುವುದರಿಂದ ಅವುಗಳಲ್ಲಿ ಯಾವ ಇಷ್ಟ-ಅನಿಷ್ಟ ಬುದ್ಧಿಯಾಗುವುದಿಲ್ಲ, ಆದುದರಿಂದ ಪೂರ್ವೋಕ್ತ ಸಿದ್ಧಿಯಾಗುತ್ತದೆ.

**ಪ್ರಶ್ನೆ :-** ಹೀಗಿದ್ದರೆ ಯಾವ ಪ್ರಯೋಜನವೂ ಇಲ್ಲದಂಥ ಪಾಷಾಣ ಮೊದಲಾದುವನ್ನು

ತಿಳಿಯುತ್ತಿರುವಾಗಲೂ ಅಲ್ಲಿ ಇಷ್ಟಾನಿಷ್ಟತೆಯನ್ನು ಮನ್ನಿಸದಿರುವುದರಿಂದ ಅದು ಕೂಡ ಕಾರ್ಯಕಾರಿಯಾಗುವುದಲ್ಲವೆ?

**ಉತ್ತರ :-** ರಾಗಯುಕ್ತ ಜೀವನು ರಾಗಾದಿಗಳ ಪ್ರಯೋಜನವಿಲ್ಲದೆ ಯಾವುದನ್ನೂ ತಿಳಿದುಕೊಳ್ಳುವ ಪ್ರಯತ್ನ ಮಾಡುವುದಿಲ್ಲ; ಒಂದು ವೇಳೆ ಸ್ವಾಭಾವಿಕವಾಗಿ ಅವನ್ನು ತಿಳಿದುಕೊಳ್ಳುವ ಯೋಗ ಬಂದರೆ ಅಂತರಂಗದಲ್ಲಿ ರಾಗಾದಿಗಳ ಅಭಿಪ್ರಾಯವಿರುವುದರಿಂದ ಉಪಯೋಗವನ್ನು ಅಲ್ಲಿಂದ ಬಿಡಿಸಿಕೊಳ್ಳಲೇ ಬಯಸುತ್ತಾನೆ. ಇಲ್ಲಿ ಪ್ರಯತ್ನಪೂರ್ವಕ ದ್ವೀಪ-ಸಮುದ್ರಗಳನ್ನು ತಿಳಿದುಕೊಳ್ಳುವಲ್ಲಿ ಉಪಯೋಗ ತೊಡಗಿಸುತ್ತಾನೆ; ಆದರೆ ರಾಗಾದಿಗಳು ಕಡಿಮೆಯಾದ ಮೇಲೆ ಇಂಥ ಕಾರ್ಯವಾಗುತ್ತದೆ. ಮತ್ತು ಪಾಷಾಣಾದಿಗಳಲ್ಲಿ ಈ ಲೋಕದ ಯಾವುದಾದರೂ ಪ್ರಯೋಜನವು ಕಂಡು ಬಂದರೆ ರಾಗಾದಿಗಳು ಉತ್ಪನ್ನವಾಗುತ್ತವೆ. ಮತ್ತು ದ್ವೀಪ-ಸಮುದ್ರಗಳಲ್ಲಿ ಈ ಲೋಕಕ್ಕೆ ಸಂಬಂಧಿಸಿದ ಯಾವ ಕಾರ್ಯವು ಇಲ್ಲದಿರುವುದರಿಂದ ರಾಗಾದಿಗಳಿಗೆ ಕಾರಣವಿಲ್ಲ.

ಸ್ವರ್ಗಾದಿಗಳ ರಚನೆ ಕೇಳಿ ಅಲ್ಲಿ ರಾಗವಾದರೆ ಪರಲೋಕ ಸಂಬಂಧದ್ದಾಗುವುದು; ಅದರ ಕಾರಣವಾದ ಪುಣ್ಯವನ್ನು ತಿಳಿದಾಗ ಪಾಪ ಬಿಟ್ಟು ಪುಣ್ಯದಲ್ಲಿ ಪ್ರವರ್ತಿಸುವಷ್ಟಾದರೂ ಲಾಭವಾಗುವುದು; ಮತ್ತು ದ್ವೀಪ ಮೊದಲಾದುವನ್ನು ತಿಳಿದ ಮೇಲೆ ಯಥಾವತ್ ರಚನೆಯು ಭಾಸವಾದಾಗ ಅನ್ಯಮತದವರು ಹೇಳಿದ್ದು ಅಸತ್ಯವೆಂದು ತಿಳಿದು ಬರುವುದರಿಂದ ಸತ್ಯಶ್ರದ್ಧೆಯುಳ್ಳವನಾಗುವನು ಮತ್ತು ಯಥಾವತ್ ರಚನೆಯನ್ನು ತಿಳಿಯುವುದರಿಂದ ಭ್ರಾಂತಿಯು ಹೊರಟು ಹೋಗಿ ಉಪಯೋಗದ ನಿರ್ಮಲತೆಯಾಗುವುದು; ಆದುದರಿಂದ ಆ ಅಭ್ಯಾಸವು ಕಾರ್ಯಕಾರಿಯಿದೆ.

**ಪ್ರಶ್ನೆ :-** ಕರಣಾನುಯೋಗದಲ್ಲಿ ಅಧಿಕ ಕಠಿಣತೆಯಿರುವುದರಿಂದ ಅದರ ಅಭ್ಯಾಸದಲ್ಲಿ ಖೇದವಾಗುತ್ತದಲ್ಲವೆ?

**ಉತ್ತರ :-** ವಸ್ತುವು ಶೀಘ್ರವಾಗಿ ತಿಳಿದು ಬಂದರೆ ಅಲ್ಲಿ ಉಪಯೋಗವು ನಿಂತುಕೊಳ್ಳುವುದಿಲ್ಲ; ಮತ್ತು ತಿಳಿದುಕೊಂಡ ವಸ್ತುವನ್ನು ಮತ್ತೆ ಮತ್ತೆ ತಿಳಿದುಕೊಳ್ಳುವ ಉತ್ಸಾಹವಿರುವುದಿಲ್ಲ, ಆಗ ಉಪಯೋಗವು ಪಾಪಕಾರ್ಯಗಳಲ್ಲಿ ತೊಡಗಿ ಬಿಡುತ್ತದೆ; ಆದುದರಿಂದ ತಮ್ಮ ಬುದ್ಧಿಗೆ ಅನುಸರಿಸಿ ಕಠಿಣತೆಯಿಂದಾದರೂ ಆಗುವಂತಿರುವುದರ ಅಭ್ಯಾಸವನ್ನು ಮಾಡಬೇಕು, ಮತ್ತು ಯಾವುದರ ಅಭ್ಯಾಸವಾಗುವ ಸಾಧ್ಯತೆಯೇ ಇಲ್ಲ ಅದರದು ಹೇಗೆ ಮಾಡುವುದು ?

ಇನ್ನು ಖೇದವಾಗುತ್ತದೆಯೆಂದು ನೀನು ಹೇಳುವೆ, ಆದರೆ ಪ್ರಮಾದಿಯಾಗಿದ್ದರೆ ಧರ್ಮವಾಗುವುದಿಲ್ಲ; ಪ್ರಮಾದದಿಂದ ಸುಖಿಯಾಗಿರುವಲ್ಲಿಯಂತೂ ಪಾಪವೇ ಆಗುತ್ತದೆ; ಅದಕ್ಕಾಗಿ ಧರ್ಮದ ಸಲುವಾಗಿ ಉದ್ಯಮ ಮಾಡುವುದೇ ಯೋಗ್ಯವಿದೆ.

ಹೀಗೆ ವಿಚಾರ ಮಾಡಿ ಕರಣಾನುಯೋಗದ ಅಭ್ಯಾಸ ಮಾಡುವುದು.

## ಚರಣಾನುಯೋಗದಲ್ಲಿ ದೋಷ-ಕಲ್ಪನೆಯ ನಿರಾಕರಣೆ :-

ಚರಣಾನುಯೋಗದಲ್ಲಿ ಬಾಹ್ಯವ್ರತಾದಿಗಳ ಸಾಧನದ ಉಪದೇಶವಿದೆ. ಆದರೆ ಇವುಗಳಿಂದ ಯಾವ

ಸಿದ್ಧಿಯಿಲ್ಲ; ತಮ್ಮ ಪರಿಣಾಮವು ನಿರ್ಮಲವಾಗಬೇಕಾಗುವುದು, ಬಾಹ್ಯದಲ್ಲಿ ಬೇಕಾದ ಹಾಗೆ ಪ್ರವರ್ತಿಸಿರಿ; ಆದುದರಿಂದ ಈ ಉಪದೇಶದಿಂದ ಪರಾಙ್ಮುಖರಿರುತ್ತೇವೆಂದು ಅದೆಷ್ಟೋ ಜನರು ಹೇಳುತ್ತಾರೆ.

ಆತ್ಮನ ಪರಿಣಾಮಗಳಲ್ಲಿ ಮತ್ತು ಬಾಹ್ಯ ಪ್ರವೃತ್ತಿಯಲ್ಲಿ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ. ಏಕೆಂದರೆ ಛದ್ಮಸ್ಥನ ಕ್ರಿಯೆಗಳು ಪರಿಣಾಮಪೂರ್ವಕವಾಗಿ ಆಗುತ್ತವೆ; ಎಂದಾದರೊಮ್ಮೆ ಪರಿಣಾಮವಿಲ್ಲದೆ ಯಾವುದೇ ಕ್ರಿಯೆಯಾದರೆ ಅದು ಪರವಶತೆಯಿಂದ ಆಗುತ್ತದೆ. ತನ್ನ ಇಚ್ಛೆಯಿಂದ ಪ್ರಯತ್ನಪೂರ್ವಕವಾಗಿ ಕಾರ್ಯ ಮಾಡುವುದು ಮತ್ತು 'ಆ ರೂಪವಾಗಿ ಪರಿಣಾಮವಿರಲಿಲ್ಲ'ವೆಂದು ಹೇಳುವುದು ಅದು ಭ್ರಮೆಯಿದೆ. ಅಥವಾ ಬಾಹ್ಯ ಪದಾರ್ಥಗಳ ಆಶ್ರಯ ಪಡೆದು ಪರಿಣಾಮಗಳಾಗುವ ಸಾಧ್ಯತೆಯಿದೆ; ಆದುದರಿಂದ ಪರಿಣಾಮ ನಿವಾರಿಸುವ ಸಲುವಾಗಿ ಬಾಹ್ಯ ವಸ್ತುಗಳ ನಿಷೇಧ ಮಾಡಲು ಸಮಯಸಾರಾದಿಗಳಲ್ಲಿ ಹೇಳಿದೆ; ಆದುದರಿಂದ ರಾಗಾದಿಭಾವಗಳು ಕಡಿಮೆಯಾದನಂತರ ಬಾಹ್ಯದಲ್ಲಿ ಹಾಗೆ ಶ್ರಾವಕಧರ್ಮ-ಮುನಿಧರ್ಮಗಳಾಗುತ್ತವೆ. ಅಥವಾ ಈ ಪ್ರಕಾರ ಶ್ರಾವಕಧರ್ಮ-ಮುನಿಧರ್ಮ ಅಂಗೀಕಾರ ಮಾಡಿದ ಮೇಲೆ ಐದನೆಯ-ಆರನೆಯ ಮೊದಲಾದ ಗುಣಸ್ಥಾನಗಳಲ್ಲಿ ರಾಗಾದಿಗಳು ಕಡಿಮೆಯಾದ ಮೇಲೆ ಪರಿಣಾಮಗಳ ಪ್ರಾಪ್ತಿಯಾಗುತ್ತದೆಂಬ ನಿರೂಪಣೆಯನ್ನು ಚರಣಾನುಯೋಗದಲ್ಲಿ ಮಾಡಲಾಗಿದೆ.

ಮತ್ತು ಬಾಹ್ಯ ಸಂಯಮದಿಂದ ಯಾವ ಸಿದ್ಧಿಯಾಗದಿದ್ದರೆ ಸರ್ವಾರ್ಥಸಿದ್ಧಿಯಲ್ಲಿನ ಸಮ್ಯಗ್ದೃಷ್ಟಿದೇವಗಳು ಅಧಿಕ ಜ್ಞಾನಿಗಳಾಗಿದ್ದರೂ ಅವರಿಗೆ ನಾಲ್ಕನೆಯ ಗುಣಸ್ಥಾನವಿರುತ್ತದೆ ಮತ್ತು ಗೃಹಸ್ಥರಾದ ಶ್ರಾವಕ ಮನುಷ್ಯರಿಗೆ ಐದನೆಯ ಗುಣಸ್ಥಾನವಿರುತ್ತದೆ ಇದರ ಕಾರಣವೇನು ? ಮತ್ತು ತೀರ್ಥಂಕರ ಮೊದಲಾದವರು ಗೃಹಸ್ಥಪದವನ್ನು ಬಿಟ್ಟುಕೊಟ್ಟು ಸಂಯಮದ ಗ್ರಹಣವನ್ನೇಕೆ ಮಾಡುವರು ? **ಆದುದರಿಂದ ಬಾಹ್ಯದಲ್ಲಿ ಸಂಯಮದ ಸಾಧನವಿಲ್ಲದೆ ಪರಿಣಾಮವು ನಿರ್ಮಲವಾಗುವ ಸಾಧ್ಯತೆಯಿಲ್ಲವೆಂಬ ನಿಯಮವಿದೆ.** ಅದಕ್ಕಾಗಿ ಬಾಹ್ಯ ಸಾಧನದ ವಿಧಾನವನ್ನು ತಿಳಿದುಕೊಳ್ಳುವ ಸಲುವಾಗಿ ಚರಣಾನುಯೋಗದ ಅಭ್ಯಾಸವನ್ನು ಅವಶ್ಯವಾಗಿ ಮಾಡಬೇಕಾಗುವುದು.

## ದ್ರವ್ಯಾನುಯೋಗದಲ್ಲಿ ದೋಷ-ಕಲ್ಪನೆಯ ನಿರಾಕರಣೆ :-

ದ್ರವ್ಯಾನುಯೋಗದಲ್ಲಿ ವ್ರತ-ಸಂಯಮ ಮೊದಲಾದ ವ್ಯವಹಾರ ಧರ್ಮದ ಹೀನತೆಯನ್ನು ಪ್ರಕಟ ಮಾಡಿದೆ. ಸಮ್ಯಗ್ದೃಷ್ಟಿಯ ವಿಷಯ-ಭೋಗಾದಿಗಳನ್ನು ನಿರ್ಜರೆಗೆ ಕಾರಣವೆಂದು ಹೇಳಿದೆ. ಇಂಥ ಕಥನಗಳನ್ನು ಕೇಳಿ ಜನರು ಸ್ವಚ್ಛಂದರಾಗಿ ಪುಣ್ಯವನ್ನು ಬಿಟ್ಟು ಪಾಪದಲ್ಲಿ ಪ್ರವರ್ತಿಸುವರು. ಆದುದರಿಂದ ಇವುಗಳನ್ನು ಓದುವುದು- ಕೇಳುವುದು ಯೋಗ್ಯವಿಲ್ಲವೆಂದು ಅದೆಷ್ಟೋ ಜನರು ಹೇಳುತ್ತಾರೆ.

ಯಾವ ಪ್ರಕಾರ ಕತ್ತೆಯು ಸಕ್ಕರೆ ತಿಂದು ಸತ್ತುಹೋಗುತ್ತಿದ್ದರೆ ಮನುಷ್ಯನು ಸಕ್ಕರೆ ತಿನ್ನುವುದನ್ನು ಬಿಡುವುದಿಲ್ಲ; ಅದೇ ಪ್ರಕಾರ ವಿಪರೀತ ಬುದ್ಧಿಯುಳ್ಳವರು ಅಧ್ಯಾತ್ಮ ಗ್ರಂಥಗಳನ್ನು ಕೇಳಿ ಸ್ವಚ್ಛಂದರಾಗಿ ಬಿಡುತ್ತಿದ್ದರೆ ವಿವೇಕಿಗಳು ಅಧ್ಯಾತ್ಮ ಗ್ರಂಥಗಳ ಅಭ್ಯಾಸವನ್ನು ಬಿಡುವುದಿಲ್ಲ. ಯಾವನು ಸ್ವಚ್ಛಂದವಾಗುತ್ತಿರುವುದು ತಿಳಿದು ಬರುತ್ತದೆ ಅವನು ಸ್ವಚ್ಛಂದವಾಗದ ಹಾಗೆ ಅವನಿಗೆ ಉಪದೇಶ ಕೊಡುವುದನ್ನು ಮಾಡಬೇಕು. ಮತ್ತು ಅಧ್ಯಾತ್ಮ ಶಾಸ್ತ್ರಗಳಲ್ಲಿ ಕೂಡ

ಅಲ್ಲಲ್ಲಿ ಸ್ವಚ್ಛಂದವಾಗುವುದರ ನಿಷೇಧ ಮಾಡುತ್ತಾರೆ, ಆದುದರಿಂದ ಅವನ್ನು ಚನ್ನಾಗಿ ಕೇಳಿದರೆ ಅವನು ಸ್ವಚ್ಛಂದನಾಗುವುದಿಲ್ಲ; ಆದರೆ ಯಾವನಾದರೂ ಒಂದು ಮಾತು ಕೇಳಿ ತನ್ನ ಅಭಿಪ್ರಾಯದಿಂದ ಸ್ವಚ್ಛಂದನಾದರೆ ಅದು ಗ್ರಂಥದ ದೋಷವಿಲ್ಲ, ಆ ಜೀವದ್ದೇ ದೋಷವಿದೆ.

ಒಂದು ವೇಳೆ ಸುಳ್ಳು ದೋಷದ ಕಲ್ಪನೆ ಮಾಡಿ ಅಧ್ಯಾತ್ಮ ಶಾಸ್ತ್ರಗಳನ್ನು ಓದುವುದರ-ಕೇಳುವುದರ ನಿಷೇಧ ಮಾಡಿದರೆ ಮೋಕ್ಷಮಾರ್ಗದ ಮೂಲ ಉಪದೇಶವೇ ಅದರಲ್ಲಿದ್ದು ಅದರ ನಿಷೇಧ ಮಾಡುವುದರಿಂದ ಮೋಕ್ಷ ಮಾರ್ಗದ ನಿಷೇಧವಾಗುತ್ತದೆ. ಹೇಗೆಂದರೆ ಮೇಘ ವೃಷ್ಟಿಯಿಂದ ಬಹಳಷ್ಟು ಜೀವರುಗಳ ಕಲ್ಯಾಣವಾಗುತ್ತದೆ ಮತ್ತು ಯಾವನೋ ಓರ್ವನಿಗೆ ಪ್ರತಿಯಾಗಿ ಹಾನಿಯಾದರೆ ಅದರ ಮುಖ್ಯತೆ ಮಾಡಿ ಮೇಘ ವೃಷ್ಟಿಯ ನಿಷೇಧ ಮಾಡುವುದಿಲ್ಲ; ಅದೇ ಪ್ರಕಾರ ಸಭೆಯಲ್ಲಿ ಅಧ್ಯಾತ್ಮದ ಉಪದೇಶವಾದ ಮೇಲೆ ಬಹಳಷ್ಟು ಜೀವರುಗಳಿಗೆ ಮೋಕ್ಷಮಾರ್ಗದ ಪ್ರಾಪ್ತಿಯಾಗುತ್ತದೆ. ಆದರೆ ಯಾವನೋ ಓರ್ವನು ಪ್ರತಿಯಾಗಿ ಪಾಪದಲ್ಲಿ ಪ್ರವರ್ತಿಸಿದರೆ ಅವನ ಮುಖ್ಯತೆ ಮಾಡಿ ಅಧ್ಯಾತ್ಮ ಶಾಸ್ತ್ರಗಳ ನಿಷೇಧ ಮಾಡಬಾರದು.

ಮತ್ತು ಅಧ್ಯಾತ್ಮ ಗ್ರಂಥಗಳಿಂದ ಯಾವನಾದರೂ ಸ್ವಚ್ಛಂದನಾದರೆ ಅವನಂತೂ ಮೊದಲೇ ಮಿಥ್ಯಾದೃಷ್ಟಿಯಿದ್ದನು, ಈಗ ಕೂಡ ಮಿಥ್ಯಾದೃಷ್ಟಿಯೇ ಉಳಿದನು. ಅವನಿಗೆ ಸುಗತಿಯಾಗದೆ ಕುಗತಿಯಾಗುವುದು, ಇಷ್ಟು ಮಾತ್ರ ಹಾನಿಯಾಗುವುದು. ಆದರೆ ಅಧ್ಯಾತ್ಮದ ಉಪದೇಶವಾಗದಿದ್ದರೆ ಬಹಳಷ್ಟು ಜೀವರುಗಳಿಗೆ ಮೋಕ್ಷಮಾರ್ಗದ ಪ್ರಾಪ್ತಿಯ ಅಭಾವವಾಗುತ್ತದೆ ಮತ್ತು ಇದರಿಂದ ಬಹಳಷ್ಟು ಜೀವರುಗಳಿಗೆ ಅಧಿಕ ಕೆಡಕಾಗುತ್ತದೆ; ಆದುದರಿಂದ ಅಧ್ಯಾತ್ಮ-ಉಪದೇಶದ ನಿಷೇಧ ಮಾಡಬಾರದು.

ದ್ರವ್ಯಾನುಯೋಗ ರೂಪದ ಅಧ್ಯಾತ್ಮ-ಉಪದೇಶವು ಉತ್ಕೃಷ್ಟವಿದ್ದು ಅದು ಉಚ್ಚದಶೆಗೆ ಪ್ರಾಪ್ತರಾದವರಿಗೆ ಕಾರ್ಯಕಾರಿಯಿದೆ; ಕೆಳ ಅವಸ್ಥೆಯುಳ್ಳವರಿಗೆ ವ್ರತ-ಸಂಯಮಾದಿಗಳ ಉಪದೇಶ ಕೊಡುವುದೇ ಯೋಗ್ಯವಿದೆಯೆಂದು ಅದೆಷ್ಟೋ ಜನರು ಹೇಳುತ್ತಾರೆ.

ಜಿನಮತದಲ್ಲಿರುವ ಕ್ರಮವೆಂದರೆ ಮೊದಲು ಸಮ್ಯಕ್ತ್ವವಾಗುತ್ತದೆ. ಅನಂತರ ವ್ರತಗಳಾಗುತ್ತವೆ; ಆ ಸಮ್ಯಕ್ತ್ವವು ಸ್ವ-ಪರದ ಶ್ರದ್ಧೆಯಾದ ಮೇಲೆ ಆಗುತ್ತದೆ ಮತ್ತು ಆ ಶ್ರದ್ಧೆಯು ದ್ರವ್ಯಾನುಯೋಗದ ಅಭ್ಯಾಸ ಮಾಡಿದ ಮೇಲೆ ಆಗುತ್ತದೆ. ಆದುದರಿಂದ ಮೊದಲು ದ್ರವ್ಯಾನುಯೋಗದ ಅನುಸಾರ ಶ್ರದ್ಧೆ ಮಾಡಿ ಸಮ್ಯಗ್ದೃಷ್ಟಿಯಾಗುವುದು, ಅನಂತರ ಚರಣಾನುಯೋಗದ ಅನುಸಾರ ವ್ರತಗಳನ್ನು ಧಾರಣ ಮಾಡಿ ವ್ರತಿಯಾಗುವುದು ಈ ಪ್ರಕಾರ ಮುಖ್ಯರೂಪದಿಂದ ಕೆಳಗಿನ ಅವಸ್ಥೆಯಲ್ಲಿಯೇ ದ್ರವ್ಯಾನುಯೋಗವು ಕಾರ್ಯಕಾರಿಯಿದೆ; ಯಾವನಿಗೆ ಮೋಕ್ಷಮಾರ್ಗದ ಪ್ರಾಪ್ತಿಯಾಗಿಲ್ಲವೆಂದು ತಿಳಿದು ಬರುತ್ತದೆ ಅವನಿಗೆ ಮೊದಲು ಗೌಣರೂಪದಿಂದ ಯಾವುದಾದರೂ ವ್ರತದ ಉಪದೇಶ ಕೊಡುತ್ತಾರೆ; ಆದುದರಿಂದ ಉಚ್ಚದಶೆಯುಳ್ಳವರಿಗೆ ಅಧ್ಯಾತ್ಮದ ಅಭ್ಯಾಸವು ಯೋಗ್ಯವಿದೆಯೆಂದು ತಿಳಿದುಕೊಂಡು ಕೆಳಗಿನ ಅವಸ್ಥೆಯುಳ್ಳವರು ಅಲ್ಲಿಂದ ಪರಾಙ್ಮುಖವಾಗುವುದು ಯೋಗ್ಯವಿಲ್ಲ.

**ಪ್ರಶ್ನೆ :-** ಉಚ್ಚ ಉಪದೇಶದ ಸ್ವರೂಪವು ಕೆಳಗಿನ ದಶೆಯುಳ್ಳವರಿಗೆ ಭಾಸವಾಗುವುದಿಲ್ಲವಲ್ಲವೆ ?

**ಉತ್ತರ :-** ಉಳಿದ ಅನೇಕ ಪ್ರಕಾರದ ಚತುರತೆಯನ್ನು ತಿಳಿಯುವುದು ಮತ್ತು ಇಲ್ಲಿ ಮೂರ್ಖತೆಯನ್ನು

ಪ್ರಕಟಮಾಡುವುದು ಯೋಗ್ಯವಿಲ್ಲ. ಅಭ್ಯಾಸ ಮಾಡುವುದರಿಂದ ಸ್ವರೂಪವು ಚೆನ್ನಾಗಿಯೇ ತಿಳಿದು ಬರುತ್ತದೆ, ತಮ್ಮ ಬುದ್ಧಿಗೆ ಅನುಸರಿಸಿ ನ್ಯೂನಾಧಿಕವಾಗಿ ತಿಳಿದು ಬರುವುದು; ಆದರೆ ಸರ್ವಥಾ ನಿರುದ್ಯೋಗಿಯಾಗುವ ಪೋಷಣೆ ಮಾಡುವುದೆಂದರೆ ಜಿನಮಾರ್ಗದ ದ್ವೇಷಿಯಾಗುವುದಿದೆ.

**ಪ್ರಶ್ನೆ :-** ಇದು ನಿಕೃಷ್ಟಕಾಲವಿರುವುದರಿಂದ ಉತ್ಕೃಷ್ಟ ಅಧ್ಯಾತ್ಮ ಉಪದೇಶದ ಮುಖ್ಯತೆ ಮಾಡಬಾರದಲ್ಲವೆ?

**ಉತ್ತರ :-** ಈ ಕಾಲವು ಪ್ರತ್ಯಕ್ಷ ಮೋಕ್ಷವಾಗದಿರುವುದರ ಅಪೇಕ್ಷೆಯಿಂದ ನಿಕೃಷ್ಟವಿದೆ, ಆದರೆ ಈ ಕಾಲದಲ್ಲಿ ಆತ್ಮಾನುಭವದ ಮೂಲಕ ಸಮ್ಯಕ್ತ್ವ ಮೊದಲಾದವುಗಳಾಗುವುದರ ನಿಷೇಧವಿಲ್ಲ; ಆದುದರಿಂದ ಆತ್ಮಾನುಭವದ ಸಲುವಾಗಿ ದ್ರವ್ಯಾನುಯೋಗದ ಅಭ್ಯಾಸವನ್ನು ಅವಶ್ಯವಾಗಿ ಮಾಡಬೇಕು. ಇದನ್ನೇ ಮೋಕ್ಷಪಾಹುಡದಲ್ಲಿ ಹೇಳಿದ್ದಾರೆ,-

**ಅಜ್ಜ ವಿ ತಿರಯಣಸುದ್ಧಾ ಅಪ್ಪಾ ಝಾಊಣ ಜಂತಿ ಸುರಲೋಏ ।**
**ಲೋಯಂತಿಯದೇವತ್ತಂ ತತ್ಥ ಚುಆ ಣಿವ್ವುದಿಂ ಜಂತಿ ॥೭೭॥**

**ಅರ್ಥ :-** ಇಂದು ಕೂಡ ಮೂರು ರತ್ನಗಳಿಂದ ಶುದ್ಧರಾದ ಜೀವರುಗಳು ಆತ್ಮನನ್ನು ಧ್ಯಾನಿಸಿ ಸ್ವರ್ಗ ಲೋಕವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ ಮತ್ತು ಲೋಕಾಂತಿಕದಲ್ಲಿ ದೇವತ್ವವನ್ನು ಪ್ರಾಪ್ತಮಾಡಿಕೊಂಡು ಅಲ್ಲಿಂದ ಚ್ಯುತರಾಗಿ ಮೋಕ್ಷಕ್ಕೆ ಹೋಗುತ್ತಾರೆ. 'ಬಹುರಿ...'★ ಆದುದರಿಂದ ಈ ಕಾಲದಲ್ಲೂ ದ್ರವ್ಯಾನುಯೋಗದ ಉಪದೇಶವು ಮುಖ್ಯವಾಗಿಬೇಕು.

ದ್ರವ್ಯಾನುಯೋಗದಲ್ಲಿ ಅಧ್ಯಾತ್ಮ-ಶಾಸ್ತ್ರಗಳಿವೆ; ಅದರಲ್ಲಿ ಸ್ವ-ಪರ ಭೇದ ವಿಜ್ಞಾನಾದಿಗಳ ಉಪದೇಶವಿದ್ದು ಅದು ಹೆಚ್ಚು ಕಾರ್ಯಕಾರಿಯೂ ಇದೆ ಮತ್ತು ಶೀಘ್ರವಾಗಿ ತಿಳುವಳಿಕೆಯಲ್ಲೂ ಬರುತ್ತದೆ. ಆದರೆ ದ್ರವ್ಯ-ಗುಣ-ಪರ್ಯಾಯಗಳ ಮತ್ತು ಪ್ರಮಾಣ-ನಯಗಳ ಹಾಗೂ ಅನ್ಯಮತದವರು ಹೇಳಿದ ತತ್ತ್ವಾದಿಗಳ ನಿರಾಕರಣದ ಕಥನ ಮಾಡಿದೆ, ಅವುಗಳ ಅಭ್ಯಾಸದಿಂದ ಅಧಿಕ ವಿಕಲ್ಪಗಳಾಗುತ್ತವೆ ಮತ್ತು ಅವು ಅಧಿಕ ಪ್ರಯಾಸಮಾಡಿದ ಮೇಲೆ ತಿಳುವಳಿಕೆಯಲ್ಲಿ ಬರುತ್ತವೆ; ಆದುದರಿಂದ ಅವುಗಳ ಅಭ್ಯಾಸ ಮಾಡಬಾರದೆಂದು ಕೆಲವರು ಹೇಳುತ್ತಾರೆ.

ಅವರಿಗೆ ಹೇಳುವುದೇನೆಂದರೆ ಸಾಮಾನ್ಯ ತಿಳಿಯುವುದಕ್ಕಿಂತ ವಿಶೇಷ ತಿಳಿಯುವುದು ಬಲವಂತವಿದೆ. ಹೇಗೆ ಹೇಗೆ ವಿಶೇಷವು ತಿಳಿಯುತ್ತದೆ ಹಾಗೆ-ಹಾಗೆ ವಸ್ತುಸ್ವಭಾವವು ನಿರ್ಮಲವಾಗಿ ಭಾಸವಾಗುತ್ತದೆ, ಶ್ರದ್ಧೆಯೂ ದೃಢವಾಗುತ್ತದೆ, ರಾಗಾದಿಗಳು ಕಡಿಮೆಯಾಗುತ್ತವೆ; ಆದುದರಿಂದ ಅದರ ಅಭ್ಯಾಸದಲ್ಲಿ ಪ್ರವರ್ತಿಸುವುದು ಯೋಗ್ಯವಿದೆ.

ಈ ಪ್ರಕಾರ ನಾಲ್ಕು ಅನುಯೋಗಗಳಲ್ಲಿ ದೋಷ ಕಲ್ಪನೆ ಮಾಡಿ ಅಭ್ಯಾಸದಿಂದ ಪರಾಙ್ಮುಖವಾಗುವುದು ಯೋಗ್ಯವಿಲ್ಲ.

---

★ ಇಲ್ಲಿ 'ಬಹುರಿ'ಯ ಮುಂದೆ ೩-೪ ಪಂಕ್ತಿಗಳಷ್ಟು ಸ್ಥಳವನ್ನು ಹಸ್ತಪ್ರತಿಯಲ್ಲಿ ಕಾದಿರಿಸಿದೆ. ಇದರಿಂದ ಗ್ರಂಥಕರ್ತರಾದ ಪಂ. ಟೋಡರಮಲ್ಲರು ಏನನ್ನಾದರೂ ಬರೆಯಲಿಚ್ಛಿಸಿದ್ದರು, ಆದರೆ ಬರೆಯುವುದಾಗಿಲ್ಲವೆಂದು ತಿಳಿದು ಬರುತ್ತದೆ.

### ವ್ಯಾಕರಣ-ನ್ಯಾಯಶಾಸ್ತ್ರಗಳ ಉಪಯೋಗತೆ :-

ವ್ಯಾಕರಣ-ನ್ಯಾಯ ಮೊದಲಾದ ಶಾಸ್ತ್ರಗಳ ಅಭ್ಯಾಸವನ್ನೂ ಅಲ್ಪ-ಸ್ವಲ್ಪ ಮಾಡಬೇಕು; ಏಕೆಂದರೆ ಅವುಗಳ ಜ್ಞಾನವಿಲ್ಲದೆ ದೊಡ್ಡ ಶಾಸ್ತ್ರಗಳ ಅರ್ಥವು ಭಾಸವಾಗುವುದಿಲ್ಲ. ಮತ್ತು ವಸ್ತುವಿನ ಸ್ವರೂಪವು ಕೂಡ ಇವುಗಳ ಪದ್ಧತಿಯನ್ನು ತಿಳಿದನಂತರ ಹೇಗೆ ಭಾಸವಾಗುತ್ತದೆ ಹಾಗೆ ಭಾಷಾದಿಗಳ ಮೂಲಕ ಭಾಸವಾಗುವುದಿಲ್ಲ; ಆದುದರಿಂದ ಪರಂಪರೆಯ ಕಾರ್ಯಕಾರಿಯನ್ನು ತಿಳಿದುಕೊಂಡು ಇವುಗಳ ಅಭ್ಯಾಸವನ್ನೂ ಮಾಡಬೇಕು; ಆದರೆ ಇವುಗಳಲ್ಲಿಯೇ ಮೋಸಹೋಗಬಾರದು. ಸ್ವಲ್ಪ ಇವುಗಳ ಅಭ್ಯಾಸಮಾಡಿ ಪ್ರಯೋಜನಭೂತವಾದ ಶಾಸ್ತ್ರಗಳ ಅಭ್ಯಾಸದಲ್ಲಿ ತೊಡಗಬೇಕು.

ಇನ್ನು ವೈದ್ಯಕೀಯ ಮೊದಲಾದ ಶಾಸ್ತ್ರಗಳಿಂದ ಮೋಕ್ಷಮಾರ್ಗದಲ್ಲಿ ಯಾವ ಪ್ರಯೋಜನವೇ ಇಲ್ಲ; ಆದುದರಿಂದ ವ್ಯವಹಾರ ಧರ್ಮದ ಅಭಿಪ್ರಾಯದಿಂದ ಯಾವ ಖೇದವಿಲ್ಲದೆ ಇವುಗಳ ಅಭ್ಯಾಸವಾಗುವಂತಿದ್ದರೆ ಮಾಡಿ ಉಪಕಾರ ಮಾಡಬೇಕು; ಪಾಪರೂಪವಾಗಿ ಪ್ರವರ್ತಿಸಬಾರದು; ಮತ್ತು ಇವುಗಳ ಅಭ್ಯಾಸವಾಗದಿದ್ದರೆ ಹೋಗಲಿ, ಅದರಿಂದೇನೂ ಹಾನಿಯಿಲ್ಲ.

ಈ ಪ್ರಕಾರ ಜಿನಮತದ ಶಾಸ್ತ್ರಗಳು ನಿರ್ದೋಷವಿವೆಯೆಂದು ಅವುಗಳ ಉಪದೇಶವನ್ನು ನಂಬಬೇಕು.

## ಅನುಯೋಗಗಳಲ್ಲಿ ಕಂಡುಬರುವ ಪರಸ್ಪರ ವಿರೋಧದ ನಿರಾಕರಣೆ

ಶಾಸ್ತ್ರಗಳಲ್ಲಿ ವಿವಕ್ಷೆ ಮೊದಲಾದುವನ್ನು ತಿಳಿಯದಿರುವುದರಿಂದ ಪರಸ್ಪರ ವಿರೋಧವು ಕಂಡುಬರುತ್ತದೆ, ಈಗ ಅದರ ನಿರಾಕರಣೆ ಮಾಡುತ್ತಾರೆ.

ಪ್ರಥಮಾನುಯೋಗಗಳ ಪರಂಪರೆಗೆ ಅನುಸರಿಸಿ ಎಲ್ಲಿ ಯಾವ ಪ್ರಕಾರ ಕಥನ ಮಾಡಿದೆ, ಅಲ್ಲಿ ಅದೇ ಪ್ರಕಾರ ತಿಳಿದುಕೊಳ್ಳುವುದು; ಒಂದು ಅನುಯೋಗದ ಕಥನವನ್ನು ಇನ್ನೊಂದು ಅನುಯೋಗದ ಕಥನದಿಂದ ಅನ್ಯಥಾ ತಿಳಿದುಕೊಂಡು ಸಂದೇಹಪಡಬಾರದು. ಹೇಗೆಂದರೆ ಒಂದೆಡೆ ನಿರ್ಮಲ ಸಮ್ಯಗ್ದೃಷ್ಟಿಗೆ ಕೂಡ ಶಂಕೆ, ಕಾಂಕ್ಷೆ, ವಿಚಿಕಿತ್ಸೆಯ ಅಭಾವ ಹೇಳಿದೆ; ಒಂದೆಡೆ ಎಂಟನೆಯ ಗುಣಸ್ಥಾನದವರೆಗೆ ಭಯದ, ಹತ್ತನೆಯದರವರೆಗೆ ಲೋಭದ, ಎಂಟನೆಯದರವರೆಗೆ ಜುಗುಪ್ಸೆಯ ಉದಯ ಹೇಳಿದೆ; ಅಲ್ಲಿ ವಿರುದ್ಧವಾಗಿ ತಿಳಿಯಬಾರದು. ಸಮ್ಯಗ್ದೃಷ್ಟಿಗೆ ಶ್ರದ್ಧಾಪೂರ್ವಕ ತೀವ್ರ ಶಂಕಾದಿಗಳ ಅಭಾವವಾಗಿದೆ. ಅಥವಾ ಮುಖ್ಯವಾಗಿ ಸಮ್ಯಗ್ದೃಷ್ಟಿಯು ಶಂಕಾದಿಗಳನ್ನೇ ಮಾಡುವುದಿಲ್ಲ, ಆ ಅಪೇಕ್ಷೆಯಿಂದ ಚರಣಾನುಯೋಗದಲ್ಲಿ ಸಮ್ಯಗ್ದೃಷ್ಟಿಗೆ ಶಂಕಾದಿಗಳ ಅಭಾವ ಹೇಳಿದೆ, ಆದರೆ ಸೂಕ್ಷ್ಮ ಶಕ್ತಿಯ ಅಪೇಕ್ಷೆಯಿಂದ ಭಯ ಮೊದಲಾದವುಗಳ ಉದಯವು ಎಂಟನೆಯ ಮೊದಲಾದ ಗುಣಸ್ಥಾನಗಳವರೆಗೆ ಕಂಡುಬರುತ್ತವೆ, ಆದುದರಿಂದ ಕರಣಾನುಯೋಗದಲ್ಲಿ ಅಲ್ಲಿಯವರೆಗೆ ಅವುಗಳ ಸದ್ಭಾವ ಹೇಳಿದೆ ಇದೇ ಪ್ರಕಾರ ಉಳಿದಕಡೆಗಳಲ್ಲಿ ತಿಳಿಯುವುದು.

ಮೊದಲು ಅನುಯೋಗಗಳ ಉಪದೇಶದ ವಿಧಾನದಲ್ಲಿ ಕೆಲವು ಉದಾಹರಣೆಗಳನ್ನು ಹೇಳಿದ್ದಾರೆ ಅವನ್ನು ತಿಳಿಯುವುದು ಅಥವಾ ತಮ್ಮ ಬುದ್ಧಿಯಿಂದ ಅರಿತುಕೊಳ್ಳುವುದು.

ಒಂದೇ ಅನುಯೋಗದಲ್ಲಿ ವಿವಕ್ಷೆಯ ವಶದಿಂದ ಅನೇಕ ರೂಪವಾಗಿ ಕಥನ ಮಾಡುತ್ತಾರೆ. ಹೇಗೆಂದರೆ ಕರಣಾನುಯೋಗದಲ್ಲಿ ಏಳನೆಯ ಗುಣಸ್ಥಾನದೊಳಗೆ ಪ್ರಮಾದಗಳ ಅಭಾವ ಹೇಳಿದೆ, ಅಲ್ಲಿ ಕಷಾಯಗಳನ್ನು ಪ್ರಮಾದದ ಭೇದವೆಂದು ಹೇಳಿದೆ; ಮತ್ತು ಅಲ್ಲೇ ಕಷಾಯಾದಿಗಳ ಸದ್ಭಾವವನ್ನು ಹತ್ತನೆಯ ಮೊದಲಾದ ಗುಣಸ್ಥಾನದವರೆಗೆ ಹೇಳಿದೆ, ಅಲ್ಲಿ ವಿರುದ್ಧ ತಿಳಿಯಬಾರದು; ಏಕೆಂದರೆ ಇಲ್ಲಿ ಪ್ರಮಾದಗಳಲ್ಲಂತೂ ಯಾವ ಶುಭಾಶುಭ ಭಾವಗಳ ಅಭಿಪ್ರಾಯದೊಡನೆ ಕಷಾಯಗಳಿರುತ್ತವೆ ಅವುಗಳ ಗ್ರಹಣವಿದೆ, ಮತ್ತು ಏಳನೆಯ ಗುಣಸ್ಥಾನದಲ್ಲಿ ಇಂಥ ಅಭಿಪ್ರಾಯವು ದೂರವಾಗಿರುವುದರಿಂದ ಅಲ್ಲಿ ಅವುಗಳ ಅಭಾವ ಹೇಳಿದೆ. ಮತ್ತು ಸೂಕ್ಷ್ಮ ಮೊದಲಾದ ಭಾವಗಳ ಅಪೇಕ್ಷೆಯಿಂದ ಹತ್ತನೆಯ ಮೊದಲಾದ ಗುಣಸ್ಥಾನದವರೆಗೆ ಅವುಗಳದೇ ಸದ್ಭಾವ ಹೇಳಿದೆ.

ಅದರಂತೆ ಚರಣಾನುಯೋಗದಲ್ಲಿ ಕಳವು, ಪರಸ್ತ್ರೀ ಮೊದಲಾದ ಸಪ್ತವ್ಯಸನದ ತ್ಯಾಗವನ್ನು ಮೊದಲನೇ ಪ್ರತಿಮೆಯಲ್ಲಿ ಹೇಳಿದೆ, ಮತ್ತು ಅಲ್ಲೇ ಅವುಗಳ ತ್ಯಾಗವನ್ನು ಎರಡನೇ ಪ್ರತಿಮೆಯಲ್ಲಿ ಹೇಳಿದೆ, ಅದನ್ನು ವಿರುದ್ಧ ತಿಳಿಯಬಾರದು; ಏಕೆಂದರೆ ಸಪ್ತವ್ಯಸನದಲ್ಲಿ ಕಳವು ಮೊದಲಾದ ಕಾರ್ಯಗಳನ್ನು ಶಿಕ್ಷೆಗೆ ಒಳಪಡುವ, ಲೋಕದಲ್ಲಿ ಅತ್ಯಂತ ನಿಂದೆಯಾಗುವ ಅರ್ಥದಲ್ಲಿ ಗ್ರಹಣ ಮಾಡಿದ್ದಾರೆ. ಮತ್ತು ವ್ರತಗಳಲ್ಲಿ ಇಂಥ ಕಳವು ಮೊದಲಾದವು ತ್ಯಾಗಮಾಡಲು ಯೋಗ್ಯವೆಂದು ಹೇಳಿದ್ದಾರೆ, ಏಕೆಂದರೆ ಅವು ಗೃಹಸ್ಥಧರ್ಮದಿಂದ ವಿರುದ್ಧವಾಗಿರುತ್ತವೆ, ಒಂದಿಷ್ಟು ಲೋಕನಿಂದ್ಯವಾಗಿರುತ್ತವೆಂಬ ಅರ್ಥವನ್ನು ತಿಳಿಯುವುದು. ಇದೇ ಪ್ರಕಾರ ಉಳಿದವುಗಳನ್ನು ತಿಳಿಯುವುದು.

ಅದರಂತೆ ನಾನಾ ಭಾವಗಳ ಸಾಪೇಕ್ಷತೆಯಿಂದ ಒಂದೇ ಭಾವವನ್ನು ಬೇರೆ-ಬೇರೆ ಪ್ರಕಾರದಿಂದ ನಿರೂಪಣೆ ಮಾಡುತ್ತಾರೆ. ಹೇಗೆಂದರೆ ಒಂದೆಡೆ ಮಹಾವ್ರತಾದಿಗಳನ್ನು ಚಾರಿತ್ರದ ಭೇದವೆಂದು ಹೇಳಿದೆ, ಇನ್ನೊಂದು ಕಡೆ ಮಹಾವ್ರತಾದಿಗಳಿದ್ದರೂ ಕೂಡ ದ್ರವ್ಯಲಿಂಗಿಯನ್ನು ಅಸಂಯಮಿಯೆಂದು ಹೇಳಿದೆ, ಅಲ್ಲಿ ವಿರುದ್ಧ ತಿಳಿಯಬಾರದು; ಏಕೆಂದರೆ ಸಮ್ಯಗ್ಜ್ಞಾನ ಸಹಿತವಾದ ಮಹಾವ್ರತಗಳು ಚಾರಿತ್ರವಿವೆ ಮತ್ತು ಅಜ್ಞಾನಪೂರ್ವಕವಾಗಿ ವ್ರತಾದಿಗಳಿದ್ದರೂ ಕೂಡ ಅಸಂಯಮಿಯೇ ಇದ್ದಾನೆ.

ಯಾವ ಪ್ರಕಾರ ಐದು ಮಿಥ್ಯಾತ್ವಗಳಲ್ಲಿ ಕೂಡ ವಿನಯ ಹೇಳಿದೆ ಮತ್ತು ಹನ್ನೆರಡು ಪ್ರಕಾರದ ತಪಗಳಲ್ಲಿ ಕೂಡ ವಿನಯ ಹೇಳಿದೆ, ಅಲ್ಲಿ ವಿರುದ್ಧ ತಿಳಿಯಬಾರದು; ಏಕೆಂದರೆ ವಿನಯಮಾಡಲು ಯೋಗ್ಯವಿಲ್ಲದಂಥವರದೂ ಕೂಡ ವಿನಯ ಮಾಡಿ ಧರ್ಮವೆಂದು ಮನ್ನಿಸುವುದಂತೂ ವಿನಯ ಮಿಥ್ಯಾತ್ವವಿದೆ ಮತ್ತು ಧರ್ಮಪದ್ಧತಿಯಲ್ಲಿ ವಿನಯ ಮಾಡಲು ಯೋಗ್ಯವಿರುವಂಥವರ ಯಥಾಯೋಗ್ಯ ವಿನಯ ಮಾಡುವುದು ಅದು ವಿನಯ ತಪವಿದೆ.

ಯಾವ ಪ್ರಕಾರ ಒಂದೆಡೆ ಅಭಿಮಾನದ ನಿಂದೆ ಮಾಡಿದೆ, ಮತ್ತು ಒಂದೆಡೆ ಪ್ರಶಂಸೆ ಮಾಡಿದೆ ಅಲ್ಲಿ ವಿರುದ್ಧ ತಿಳಿಯಬಾರದು ಏಕೆಂದರೆ ಮಾನಕಷಾಯದಿಂದ ತನ್ನನ್ನು ಉಚ್ಚನೆಂದು ಮನ್ನಿಸಿಕೊಳ್ಳುವ ಸಲುವಾಗಿ ವಿನಯಾದಿಗಳನ್ನು ಮಾಡದಿರುವುದು ಆ ಅಭಿಮಾನವಂತೂ ನಿಂದ್ಯವೇ ಇದೆ, ಮತ್ತು ನಿರ್ಲೋಭಿತನದಿಂದ ದೀನತೆ ಮೊದಲಾದವುಗಳನ್ನು ಮಾಡದಿರುವುದು ಆ ಅಭಿಮಾನವು ಪ್ರಶಂಸನೀಯವಿದೆ.

ಇನ್ನು ಒಂದೆಡೆ ಚತುರತೆಯ ನಿಂದೆ ಮಾಡಿದೆ, ಒಂದು ಕಡೆ ಪ್ರಶಂಸೆ ಮಾಡಿದೆ ಅಲ್ಲಿ ವಿರುದ್ಧ ತಿಳಿಯಬಾರದು; ಏಕೆಂದರೆ ಮಾಯಾಕಷಾಯದಿಂದ ಯಾರಿಗಾದರೂ ಮೋಸಮಾಡುವ ಸಲುವಾಗಿ ಚತುರತೆ

ಮಾಡಿದರೆ ಅದಂತೂ ನಿಂದ್ಯವೇ ಇದೆ. ಮತ್ತು ವಿವೇಕಸಹಿತ ಯಥಾಸಂಭವ ಕಾರ್ಯಮಾಡುವಲ್ಲಿ ಚತುರತೆಯಾದರೆ ಅದು ಶ್ಲಾಘ್ಯನೀಯವೇ ಇದೆ. ಇದೇ ಪ್ರಕಾರ ಉಳಿದ ಕಡೆಗಳಲ್ಲಿ ತಿಳಿಯುವುದು.

ಮತ್ತು ಒಂದೇ ಭಾವವನ್ನು ಒಂದೆಡೆ ಅದಕ್ಕಿಂತ ಉತ್ಕೃಷ್ಟವಾದ ಭಾವದ ಅಪೇಕ್ಷೆಯಿಂದ ನಿಂದೆ ಮಾಡಿದ್ದರೆ, ಮತ್ತು ಇನ್ನೊಂದೆಡೆ ಅದಕ್ಕಿಂತ ಹೀನಭಾವದ ಅಪೇಕ್ಷೆಯಿಂದ ಪ್ರಶಂಸೆಮಾಡಿದ್ದರೆ ಅಲ್ಲಿ ವಿರುದ್ಧ ತಿಳಿಯಬಾರದು. ಹೇಗೆಂದರೆ ಎಲ್ಲಿ ಒಂದು ಶುಭಕ್ರಿಯೆಯ ನಿಂದೆ ಮಾಡಿರುವುದು ಅಲ್ಲಿಯಂತೂ ಅದಕ್ಕಿಂತ ಉಚ್ಚ ಶುಭಕ್ರಿಯೆಯ ಹಾಗೂ ಶುದ್ಧಭಾವದ ಅಪೇಕ್ಷೆಯಿಂದ ಮಾಡಿದೆಯೆಂದು ತಿಳಿಯುವುದು; ಮತ್ತು ಎಲ್ಲಿ ಪ್ರಶಂಸೆ ಮಾಡಿರುವುದು ಅಲ್ಲಿ ಅದಕ್ಕಿಂತ ಕೀಳುಕ್ರಿಯೆ ಹಾಗೂ ಅಶುಭಕ್ರಿಯೆಯ ಅಪೇಕ್ಷೆಯಿಂದ ಮಾಡಿದೆಯೆಂದು ತಿಳಿಯುವುದು. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಇದೇ ಪ್ರಕಾರ ಉಚ್ಚ ಜೀವದ ಅಪೇಕ್ಷೆಯಿಂದ ಒಂದು ಜೀವದ ನಿಂದೆ ಮಾಡಿದ್ದರೆ ಅಲ್ಲಿ ಸರ್ವಥಾ ನಿಂದೆ ಯೆಂದು ತಿಳಿಯಬಾರದು; ಮತ್ತು ನೀಚ ಜೀವದ ಅಪೇಕ್ಷೆಯಿಂದ ಒಂದು ಜೀವದ ಪ್ರಶಂಸೆ ಮಾಡಿದ್ದರೆ ಅದನ್ನು ಸರ್ವಥಾ ಪ್ರಶಂಸೆಯೆಂದು ತಿಳಿಯಬಾರದು. ಆದರೆ ಯಥಾಪ್ರಕಾರ ಅವುಗಳ ಗುಣ-ದೋಷ ತಿಳಿದುಕೊಳ್ಳುವುದು.

ಇದೇ ಪ್ರಕಾರ ಅನ್ಯ ವ್ಯಾಖ್ಯಾನಗಳನ್ನು ಯಾವ ಅಪೇಕ್ಷೆಯೊಡನೆ ಮಾಡಿರುತ್ತದೆ ಅದೇ ಅಪೇಕ್ಷೆಯಿಂದ ಅವುಗಳ ಅರ್ಥವನ್ನು ತಿಳಿದುಕೊಳ್ಳಬೇಕು.

ಅದರಂತೆ ಶಾಸ್ತ್ರದಲ್ಲಿ ಒಂದೇ ಶಬ್ದದ ಅರ್ಥವು ಒಂದು ಕಡೆ ಒಂದು ಆದರೆ ಇನ್ನೊಂದು ಕಡೆ ಇನ್ನೊಂದು ಆಗುತ್ತದೆ; ಅಲ್ಲಿ ಪ್ರಸಂಗ ಪರಿಚಯ ಮಾಡಿಕೊಂಡು ಅದರ ಆಗಬಹುದಾದ ಅರ್ಥ ತಿಳಿಯುವುದು. ಹೇಗೆಂದರೆ ಮೋಕ್ಷಮಾರ್ಗದಲ್ಲಿ ಸಮ್ಯಗ್ದರ್ಶನ ಹೇಳಿದೆ, ಅಲ್ಲಿ ದರ್ಶನ ಶಬ್ದದ ಅರ್ಥವು ಶ್ರದ್ಧೆಯಿದೆ ಮತ್ತು ಉಪಯೋಗ ವರ್ಣನೆಯಲ್ಲಿ ದರ್ಶನ ಶಬ್ದದ ಅರ್ಥವು ವಸ್ತುವಿನ ಸಾಮಾನ್ಯ ಸ್ವರೂಪದ ಗ್ರಹಣ ಮಾತ್ರವಿದೆ, ಇನ್ನು ಇಂದ್ರಿಯ ವರ್ಣನೆಯಲ್ಲಿ ದರ್ಶನ ಶಬ್ದದ ಅರ್ಥವು ನೇತ್ರದಿಂದ ನೋಡುವುದು ಮಾತ್ರವಿದೆ. ಅದರಂತೆ ಸೂಕ್ಷ್ಮ ಮತ್ತು ಬಾದರದ ಅರ್ಥವು ವಸ್ತುಗಳ ಪ್ರಮಾಣ ಮೊದಲಾದವುಗಳ ಕಥನದಲ್ಲಿ ಚಿಕ್ಕ ಪ್ರಮಾಣ ಸಹಿತವಿರುವುದರ ಹೆಸರು ಸೂಕ್ಷ್ಮ, ಮತ್ತು ದೊಡ್ಡ ಪ್ರಮಾಣ ಸಹಿತವಿರುವುದರ ಹೆಸರು ಬಾದರವೆಂದಾಗುತ್ತದೆ. ಅದರಂತೆ ಪುದ್ಗಲ ಸ್ಕಂಧಾದಿಗಳ ಕಥನದಲ್ಲಿ ಇಂದ್ರಿಯಗಮ್ಯವಿಲ್ಲದುದು ಅದು ಸೂಕ್ಷ್ಮ, ಮತ್ತು ಇಂದ್ರಿಯಗಮ್ಯವಿದ್ದುದು ಅದು ಬಾದರವೆಂದು ಅರ್ಥವಿದೆ. ಜೀವಾದಿಗಳ ಕಥನದಲ್ಲಿ ಋದ್ಧಿ ಮೊದಲಾದವುಗಳ ನಿಮಿತ್ತವಿಲ್ಲದೆ ತಾನಾಗಿ ತಡೆಯದಿರುವುದರ ಹೆಸರು ಸೂಕ್ಷ್ಮ ಮತ್ತು ತಡೆಯುವುದರ ಹೆಸರು ಬಾದರವೆಂದು ಅರ್ಥವಿದೆ. ವಸ್ತ್ರಾದಿಗಳ ಕಥನದಲ್ಲಿ ಜಿಣುಗುತನದ ಹೆಸರು ಸೂಕ್ಷ್ಮ ಮತ್ತು ಉರುಟುತನದ ಹೆಸರು ಬಾದರವೆಂದು ಅರ್ಥವಿದೆ.

ಅದರಂತೆ ಪ್ರತ್ಯಕ್ಷ ಶಬ್ದದ ಅರ್ಥವು ಲೋಕ ವ್ಯವಹಾರದಲ್ಲಿ ಇಂದ್ರಿಯಗಳ ಮೂಲಕ ತಿಳಿಯುವುದರ ಹೆಸರು ಪ್ರತ್ಯಕ್ಷವಿದೆ, ಪ್ರಮಾಣ ಭೇದಗಳಲ್ಲಿ ಸ್ಪಷ್ಟ ಪ್ರತಿಭಾಸವಾಗುವುದರ ಹೆಸರು ಪ್ರತ್ಯಕ್ಷವಿದೆ, ಆತ್ಮಾನುಭವ ಮೊದಲಾದವುಗಳಲ್ಲಿ ತಮ್ಮಲ್ಲಿ ಅವಸ್ಥೆಯಾಗುವುದರ ಹೆಸರು ಪ್ರತ್ಯಕ್ಷವಿದೆ. ಅದರಂತೆ ಮಿಥ್ಯಾದೃಷ್ಟಿಗೆ ಅಜ್ಞಾನಿಯೆಂದು ಹೇಳಿದೆ, ಅಲ್ಲಿ ಸರ್ವಥಾ ಜ್ಞಾನದ ಅಭಾವವಿದೆಯೆಂದು ತಿಳಿಯಬಾರದು, ಸಮ್ಯಗ್ಜ್ಞಾನದ ಅಭಾವದಿಂದ ಅಜ್ಞಾನಿಯೆಂದು ಹೇಳಿದೆ. ಅದರಂತೆ ಉದೀರಣ ಶಬ್ದದ ಅರ್ಥವು ದೇವಾದಿಕರಿಗೆ ಉದೀರಣ ಹೇಳಿಲ್ಲ ಅಲ್ಲಿ

ಅನ್ಯನಿಮಿತ್ತದಿಂದ ಮರಣವಾಗುವುದರ ಹೆಸರು ಉದೀರಣವಿದೆ, ಮತ್ತು ಹತ್ತು ಕರಣಗಳ ಕಥನದಲ್ಲಿ ಉದೀರಣಾಕರಣವನ್ನು ದೇವಾಯುವಿಗೂ ಹೇಳಿದೆ, ಅಲ್ಲಿ ಮೇಲಿನ ನಿಷೇಕಗಳಲ್ಲಿಯ ದ್ರವ್ಯವು ಉದಯಾವಲಿಯಲ್ಲಿ ಕೊಡಲಾಗುವುದರ ಹೆಸರು ಉದೀರಣವಿದೆ. ಇದೇ ಪ್ರಕಾರ ಉಳಿದೆಡೆಗಳಲ್ಲಿ ಯಥಾಸಂಭವ ಅರ್ಥ ತಿಳಿಯುವುದು.

ಅದರಂತೆ ಒಂದೇ ಶಬ್ದಕ್ಕೆ ಮೊದಲು ಶಬ್ದ ಸೇರಿಸುವುದರಿಂದ ಅನೇಕ ಪ್ರಕಾರದ ಅರ್ಥಗಳಾಗುತ್ತವೆ ಮತ್ತು ಅದೇ ಶಬ್ದಕ್ಕೆ ಅನೇಕ ಅರ್ಥಗಳಿವೆ. ಅಲ್ಲಿ ಹೇಗೆ ಸಂಭವವಿದೆ ಹಾಗೆ ಅರ್ಥ ತಿಳಿಯುವುದು. ಹೇಗೆಂದರೆ 'ಜಯಿಸು' ಅವನ ಹೆಸರು 'ಜಿನ' ಇದೆ, ಆದರೆ ಧರ್ಮಪದ್ಧತಿಯಲ್ಲಿ ಕರ್ಮಶತ್ರುವನ್ನು ಜಯಿಸುವವನ ಹೆಸರು 'ಜಿನ'ನೆಂದು ತಿಳಿಯುವುದು. ಇಲ್ಲಿ ಕರ್ಮಶತ್ರು ಶಬ್ದವನ್ನು ಮೊದಲು ಸೇರಿಸುವುದರಿಂದ ಯಾವ ಅರ್ಥವಾಗುತ್ತದೆ ಅದನ್ನು ಗ್ರಹಣ ಮಾಡಿದೆ, ಉಳಿದುದನ್ನು ಮಾಡಿಲ್ಲ. ಅದರಂತೆ 'ಪ್ರಾಣಧಾರಣ ಮಾಡುವುದು' ಅದರ ಹೆಸರು 'ಜೀವ'ವಿದೆ. ಎಲ್ಲಿ ಜೀವನ-ಮರಣದ ಕಥನವು ವ್ಯವಹಾರ ಅಪೇಕ್ಷೆಯಿಂದ ಇರುವುದು ಅಲ್ಲಿ ಇಂದ್ರಿಯ ಮೊದಲಾದ ಪ್ರಾಣಗಳನ್ನು ಧಾರಣ ಮಾಡುವುದು ಅದು ಜೀವವಿದೆ; ಮತ್ತು ನಿಶ್ಚಯದ ಅಪೇಕ್ಷೆಯಿಂದ ದ್ರವ್ಯಾದಿಗಳ ನಿರೂಪಣೆಯಿರುವಲ್ಲಿ ಚೈತನ್ಯ ಪ್ರಾಣವನ್ನು ಧಾರಣ ಮಾಡುವುದು ಅದು ಜೀವವಿದೆ. ಅದರಂತೆ ಸಮಯ ಶಬ್ದಕ್ಕೆ ಅನೇಕ ಅರ್ಥಗಳಿವೆ; ಆತ್ಮನ ಹೆಸರು ಸಮಯವಿದೆ, ಎಲ್ಲ ಪದಾರ್ಥದ ಹೆಸರು ಸಮಯವಿದೆ, ಕಾಲದ ಹೆಸರು ಸಮಯವಿದೆ, ಸಮಯ ಮಾತ್ರ ಕಾಲದ ಹೆಸರು ಸಮಯವಿದೆ, ಶಾಸ್ತ್ರದ ಹೆಸರು ಸಮಯವಿದೆ, ಮತದ ಹೆಸರು ಸಮಯವಿದೆ. ಇದೇ ಪ್ರಕಾರ ಅನೇಕ ಅರ್ಥಗಳಲ್ಲಿ ಎಲ್ಲಿ ಹೇಗೆ ಸಂಭವವಿದೆ ಅಲ್ಲಿ ಹಾಗೆ ಅರ್ಥವನ್ನು ತಿಳಿದುಕೊಳ್ಳುವುದು.

ಅದರಂತೆ ಒಂದೆಡೆ ಅರ್ಥದ ಅಪೇಕ್ಷೆಯಿಂದ ಹೆಸರುಗಳನ್ನು ಹೇಳುತ್ತಾರೆ, ಇನ್ನೊಂದೆಡೆ ರೂಢಿಯ ಅಪೇಕ್ಷೆಯಿಂದ ಹೆಸರುಗಳನ್ನು ಹೇಳುತ್ತಾರೆ. ರೂಢಿಯ ಅಪೇಕ್ಷೆಯಿಂದ ಹೆಸರುಗಳನ್ನು ಹೇಳಿರುವಲ್ಲಿ ಅವುಗಳ ಶಬ್ದಾರ್ಥವನ್ನು ಗ್ರಹಣ ಮಾಡಬಾರದು; ಆದರೆ ಅದರ ರೂಢಿರೂಪವಾದ ಅರ್ಥವನ್ನೇ ಗ್ರಹಣ ಮಾಡಬೇಕು. ಹೇಗೆಂದರೆ ಸಮ್ಯಕ್ತ್ವ ಮೊದಲಾದುವನ್ನು ಧರ್ಮವೆಂದು ಹೇಳಿದೆ, ಅಲ್ಲಿ ಈ ಜೀವವನ್ನು ಉತ್ತಮಸ್ಥಾನದಲ್ಲಿ ಧಾರಣ ಮಾಡುತ್ತಿರುವುದರಿಂದ ಅದರ ಹೆಸರು ಸಾರ್ಥಕವಿದೆ; ಮತ್ತು ಧರ್ಮದ್ರವ್ಯದ ಹೆಸರನ್ನು ಧರ್ಮವೆಂದು ಹೇಳಿದೆ ಅಲ್ಲಿ ಅದು ರೂಢಿನಾಮವಿದೆ, ಅದರ ಅಕ್ಷರಾರ್ಥವನ್ನು ಗ್ರಹಣ ಮಾಡಬಾರದು, ಆದರೆ ಈ ನಾಮದ ಧಾರಕವಾದುದು ಒಂದು ವಸ್ತುವಿದೆಯೆಂಬ ಅರ್ಥವನ್ನು ಗ್ರಹಣ ಮಾಡುವುದು. ಇದೇ ಪ್ರಕಾರ ಉಳಿದ ಕಡೆಗಳಲ್ಲಿ ತಿಳಿಯುವುದು.

ಅದರಂತೆ ಕೆಲವೆಡೆ ಶಬ್ದದ ಯಾವ ಅರ್ಥವಾಗುವುದು ಅದನ್ನು ಗ್ರಹಣ ಮಾಡಬಾರದು, ಆದರೆ ಅಲ್ಲಿ ಯಾವ ಅರ್ಥವು ಪ್ರಯೋಜನಭೂತವಿದೆ ಅದನ್ನು ಗ್ರಹಣ ಮಾಡುವುದು. ಹೇಗೆಂದರೆ ಎಲ್ಲಿ ಯಾವುದರ ಅಭಾವ ಹೇಳಿದೆ ಅಲ್ಲಿ ಒಂದಿಷ್ಟು ಸದ್ಭಾವವು ಕಂಡು ಬಂದರೆ ಅಲ್ಲಿ ಸರ್ವಥಾ ಅಭಾವವನ್ನು ಗ್ರಹಣ ಮಾಡಬಾರದು; ಸ್ವಲ್ಪ ಸದ್ಭಾವವನ್ನು ಗಣಿಸಿಯೇ ಅಭಾವ ಹೇಳಿದೆಯೆಂಬ ಅರ್ಥ ತಿಳಿಯುವುದು. ಸಮ್ಯಗ್ದೃಷ್ಟಿಗೆ ರಾಗಾದಿಗಳ ಅಭಾವ ಹೇಳಿದೆ, ಅಲ್ಲಿ ಇದೇ ಪ್ರಕಾರ ಅರ್ಥ ತಿಳಿಯುವುದು. ಅದರಂತೆ ನೋಕಷಾಯದ ಅರ್ಥವು 'ಕಷಾಯದ ನಿಷೇಧ'ವಿದೆ; ಆದರೆ ಈ ಅರ್ಥವನ್ನು ಗ್ರಹಣ ಮಾಡಬಾರದು; ಇಲ್ಲಿ ಕ್ರೋಧಾದಿಗಳಿಗೆ ಸಮಾನವಾಗಿ ಈ

ಕಷಾಯಗಳಿಲ್ಲ, ಕಿಂಚಿತ್ ಕಷಾಯಗಳಿರುವುದರಿಂದ ನೋಕಷಾಯಗಳಿವೆಯೆಂಬ ಅರ್ಥವನ್ನು ಗ್ರಹಣ ಮಾಡುವುದು. ಇದೇ ಪ್ರಕಾರ ಇತೆರೆಡೆ ತಿಳಿಯುವುದು.

ಅದರಂತೆ ಯಾವುದೇ ಒಂದು ಯುಕ್ತಿಯಿಂದ ಕಥನ ಮಾಡಿರುವಲ್ಲಿ ಪ್ರಯೋಜನವನ್ನು ಗ್ರಹಣ ಮಾಡುವುದು. ಸಮಯಸಾರ ಕಲಶದಲ್ಲಿ★ 'ಮಡಿವಾಳನ ದೃಷ್ಟಾಂತದಂತೆ ಪರಭಾವದ ತ್ಯಾಗದ ದೃಷ್ಟಿಯು ಎಲ್ಲಿಯವರೆಗೆ ಪ್ರವೃತ್ತಿಗೆ ಪ್ರಾಪ್ತವಾಗುವುದಿಲ್ಲ ಅಲ್ಲಿಯವರೆಗೆ ಈ ಅನುಭೂತಿಯು ಪ್ರಕಟವಾಯಿತು;' ಆದುದರಿಂದ ಪರಭಾವದ ತ್ಯಾಗವಾದೊಡನೆಯೇ ಅನುಭೂತಿಯು ಪ್ರಕಟವಾಗುತ್ತದೆಂಬ ಪ್ರಯೋಜನವು ಇಲ್ಲಿ ಇದೆ. ಲೋಕದಲ್ಲಿ ಯಾವನೋ ಬರುತ್ತಿರುವಂತೆಯೇ ಯಾವುದೇ ಕಾರ್ಯವಾಗಿದ್ದರೆ 'ಇವನು ಒಳಗೆ ಬರುವ ಮುನ್ನವೇ ಇಂಥ ಕಾರ್ಯವಾಯಿತೆ'ಂದು ಹೇಳುತ್ತಾರೆ. ಇಂಥ ಪ್ರಯೋಜನವನ್ನೇ ಇಲ್ಲಿ ಗ್ರಹಣ ಮಾಡುವುದು. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಅದರಂತೆ ಎಲ್ಲಿ ಒಂದಿಷ್ಟು ಪ್ರಮಾಣಾದಿಗಳನ್ನು ಹೇಳಿದ್ದರೆ ಅಲ್ಲಿ ಅದನ್ನೇ ಮನ್ನಿಸಬಾರದು, ಆದರೆ ಪ್ರಯೋಜನವಿರುವುದನ್ನು ತಿಳಿಯುವುದು. ಜ್ಞಾನಾರ್ಣವದಲ್ಲಿ= 'ಈ ಕಾಲದೊಳಗೆ ಇಬ್ಬರು-ಮೂವರು ಸತ್ಪುರುಷರಿದ್ದಾರೆ'ಂದು ಹೇಳಿದೆ, ಆದರೆ ನಿಯಮದಿಂದ ಇಷ್ಟೇ ಇಲ್ಲ, ಆದರೆ 'ಕಡಿಮೆ ಇದ್ದಾರೆ'ಂಬ ಪ್ರಯೋಜನ ತಿಳಿಯುವುದು. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಇದೇ ರೀತಿಯಿಂದ ಶಬ್ದಗಳ ಅರ್ಥವು ಇನ್ನೂ ಅನೇಕ ಪ್ರಕಾರದಿಂದ ಆಗುತ್ತದೆ. ಅವನ್ನು ಯಥಾಪ್ರಕಾರ ತಿಳಿದುಕೊಳ್ಳುವುದು, ವಿಪರೀತ ಅರ್ಥವನ್ನು ತಿಳಿದುಕೊಳ್ಳಬಾರದು.

ಅದರಂತೆ ಆ ಉಪದೇಶವನ್ನು ಯಥಾರ್ಥವಾಗಿ ಪರಿಚಯಮಾಡಿಕೊಂಡು ತಮಗೆ ಯೋಗ್ಯವಾದ ಉಪದೇಶವನ್ನೇ ಅಂಗೀಕಾರ ಮಾಡಬೇಕು. ಹೇಗೆಂದರೆ ವೈದ್ಯಕೀಯ ಶಾಸ್ತ್ರಗಳಲ್ಲಿ ಅನೇಕ ಔಷಧಗಳನ್ನು ಹೇಳಿದೆ, ಅವನ್ನು ತಿಳಿದುಕೊಳ್ಳುವುದು; ಆದರೆ ಯಾವವುಗಳಿಂದ ತನ್ನ ರೋಗವು ದೂರವಾಗುವುದು ಅವನ್ನೇ ಗ್ರಹಣ ಮಾಡುವುದು. ತಮಗೆ ಚಳಿಯ ಬಾಧೆಯಿದ್ದರೆ ಉಷ್ಣ ಔಷಧವನ್ನೇ ಗ್ರಹಣ ಮಾಡಬೇಕು, ಶೀತಲ ಔಷಧದ ಗ್ರಹಣ ಮಾಡಬಾರದು. ಈ ಔಷಧವು ಇತರರಿಗೆ ಕಾರ್ಯಕಾರಿಯಿದೆಯೆಂದು ತಿಳಿಯುವುದು. ಅದೇ ಪ್ರಕಾರ ಜೈನ ಶಾಸ್ತ್ರಗಳಲ್ಲಿ ಅನೇಕ ಉಪದೇಶಗಳಿವೆ, ಅವನ್ನು ತಿಳಿಯುವುದು; ಆದರೆ ಯಾವುದರಿಂದ ತಮ್ಮ ವಿಕಾರವು ದೂರವಾಗುವುದು ಅದನ್ನೇ ಗ್ರಹಣಮಾಡಬೇಕು. ತಮಗೆ ಯಾವ ವಿಕಾರವಿದೆ ಅದರ ನಿಷೇಧ ಮಾಡುವಂಥ ಉಪದೇಶವನ್ನು ಗ್ರಹಣ ಮಾಡಬೇಕು, ಅದಕ್ಕೆ ಪೋಷಕವಾದ ಉಪದೇಶವನ್ನು ಗ್ರಹಣ ಮಾಡಬಾರದು; ಈ ಉಪದೇಶವು ಇತರರಿಗೆ ಕಾರ್ಯಕಾರಿಯಿದೆಯೆಂದು ತಿಳಿಯುವುದು.

---

★ ಅವತರತಿ ನ ಯಾವದ್ ವೃತ್ತಿ ಮತ್ಯಂತವೇಗಾದನವಮಪರಭಾವತ್ಯಾಗದೃಷ್ಟಾಂತದೃಷ್ಟಿಃ ।
ಝಟಿತಿ ಸಕಲಭಾವೈರನ್ಯದೀಯೈರ್ವಿಮುಕ್ತಾ ಸ್ವಯಮಿಯಮನುಭೂತಿಸ್ತಾವದಾವಿರ್ಭಭೂವ ॥೨೯॥

= ದುಃ ಪ್ರಜ್ಞಾಬಲಲುಪ್ತವಸ್ತುನಿಚಯಾ ವಿಜ್ಞಾನಶೂನ್ಯಾಶಯಾಃ ।
ವಿದ್ಯಂತೇ ಪ್ರತಿಮಂದಿರಂ ನಿಜನಿಜಸ್ವಾರ್ಥೋದ್ಯತಾ ದೇಹಿನಃ ।
ಆನಂದಾಮೃತಸಿಂಧುಶೀಕರಚಯೈರ್ನಿರ್ವಾಪ್ಯ ಜನ್ಮಜ್ವರಂ ।
ಯೇ ಮುಕ್ತೇರ್ವದನೇಂದುರ್ವಿಕ್ಷಣಪರಾಸ್ತೇ ಸಂತಿ ದ್ವಿತ್ರಾ ಯದಿ ॥೨೪॥

ಅದರಂತೆ ಶಾಸ್ತ್ರಗಳಲ್ಲಿ ಕೆಲವೆಡೆ ನಿಶ್ಚಯಪೋಷಕ ಉಪದೇಶವಿದ್ದರೆ ಕೆಲವೆಡೆ ವ್ಯವಹಾರಪೋಷಕ ಉಪದೇಶವಿದೆ. ಅಲ್ಲಿ ತಮಗೆ ವ್ಯವಹಾರದ ಅಧಿಕತೆಯಿದ್ದರೆ ನಿಶ್ಚಯ ಪೋಷಕ ಉಪದೇಶದ ಗ್ರಹಣ ಮಾಡಿ ಯಥಾಪ್ರಕಾರ ಪ್ರವರ್ತಿಸುವುದು ಮತ್ತು ತಮಗೆ ನಿಶ್ಚಯದ ಅಧಿಕತೆಯಿದ್ದರೆ ವ್ಯವಹಾರ ಪೋಷಕ ಉಪದೇಶದ ಗ್ರಹಣ ಮಾಡಿ ಯಥಾಪ್ರಕಾರ ಪ್ರವರ್ತಿಸುವುದು. ಮತ್ತು ಮೊದಲಂತೂ ವ್ಯವಹಾರ ಶ್ರದ್ಧೆಯ ಕಾರಣವಾಗಿ ಆತ್ಮಜ್ಞಾನದಿಂದ ಭ್ರಷ್ಟವಾಗುತ್ತಲಿದ್ದನು, ಅನಂತರ ವ್ಯವಹಾರ ಉಪದೇಶದ ಮುಖ್ಯತೆಯನ್ನೇ ಮಾಡಿ ಆತ್ಮ ಜ್ಞಾನದ ಉದ್ಯಮ ಮಾಡುವುದಿಲ್ಲ; ಅಥವಾ ಮೊದಲಂತೂ ನಿಶ್ಚಯ ಶ್ರದ್ಧೆಯ ಕಾರಣವಾಗಿ ವ್ಯವಹಾರದಿಂದ ಭ್ರಷ್ಟನಾಗಿ ಸ್ವಚ್ಛಂದಿಯಾಗುತ್ತಲಿದ್ದನು, ಅನಂತರ ನಿಶ್ಚಯ ಉಪದೇಶದ ಮುಖ್ಯತೆ ಮಾಡಿ ವಿಷಯ-ಕಷಾಯಗಳ ಪೋಷಣೆ ಮಾಡುತ್ತಾನೆ. ಈ ಪ್ರಕಾರ ವಿಪರೀತವಾದ ಉಪದೇಶವನ್ನು ಗ್ರಹಣ ಮಾಡುವುದರಿಂದ ಕೆಡಕೇ ಆಗುತ್ತದೆ.

ಅದರಂತೆ 'ನೀನು ಗುಣವಂತನಾಗಿ ದೋಷವನ್ನೇಕೆ ತಗಲಿಸುತ್ತಿರುವೆ ? ದೋಷವುಳ್ಳವನಾಗುವುದಿದ್ದರೆ ದೋಷಮಯಿಯೇ ಏಕಾಗಲಿಲ್ಲ ?'ವೆಂದು ಆತ್ಮಾನುಶಾಸನದಲ್ಲಿ[1] ಹೇಳಿದೆ. ಆದುದರಿಂದ ಜೀವನು ತಾನಂತೂ ಗುಣವಂತನಿರುವನು ಮತ್ತು ಯಾವುದಾದರೂ ದೋಷತಗಲುತ್ತಿದ್ದರೆ ಅಲ್ಲಿ ಆ ದೋಷವನ್ನು ದೂರ ಮಾಡುವ ಸಲುವಾಗಿ ಆ ಉಪದೇಶವನ್ನು ಅಂಗೀಕಾರ ಮಾಡಬೇಕು. ಮತ್ತು ತಾನಂತೂ ದೋಷವಂತನಿದ್ದು ಈ ಉಪದೇಶದ ಸ್ವೀಕಾರ ಮಾಡಿ ಗುಣವಂತ ಪುರುಷರನ್ನು ಕೀಳಾಗಿ ಕಾಣಿಸಿದರೆ ಕೆಡಕೇ ಆಗುವುದು. ಸಂಪೂರ್ಣ ದೋಷಮಯ ನಾಗುವುದಕ್ಕಿಂತ ಕಿಂಚಿತ್ ದೋಷರೂಪನಿರುವುದೇನು ಕೆಡಕಿಲ್ಲ, ಆದುದರಿಂದ ನಿನಗಿಂತಲೂ ಅವನು ಒಳ್ಳೆಯನಿದ್ದಾನೆ. ಮತ್ತು 'ನೀನು ದೋಷಮಯನಾಗಿಯೇ ಏಕಾಗಲಿಲ್ಲ'ವೆಂದು ಇಲ್ಲಿ ಹೇಳಿದೆ, ಆದರೆ ಇದಂತೂ ತರ್ಕ ಮಾಡಿದೆ, ದೋಷಮಯನಾಗಿ ಆಗುವ ಸಲುವಾಗಿ ಈ ಉಪದೇಶವಿಲ್ಲ. ಗುಣವಂತರಿಗೆ ಕಿಂಚಿತ್ ದೋಷವಾದರೂ ನಿಂದೆಯಿದೆ, ಸರ್ವದೋಷರಹಿತರಂತೂ ಸಿದ್ಧರುಗಳಿದ್ದಾರೆ; ಕೆಳಗಿನ ಅವಸ್ಥೆಯಲ್ಲಿ ಕೆಲವು ಗುಣ, ಕೆಲವು ದೋಷಗಳು ಇದ್ದೇ ಇರುತ್ತವೆ.

**ಪ್ರಶ್ನೆ :-** ಹೀಗಿದ್ದರೆ 'ಮುನಿಲಿಂಗ ಧಾರಣಮಾಡಿ ಕಿಂಚಿತ್ ಪರಿಗ್ರಹವಿದ್ದರೂ ಅವನು ನಿಗೋದಕ್ಕೆ ಹೋಗುತ್ತಾನೆ'ಂದು ಷಟ್‌ಪಾಹುಡದಲ್ಲಿ[2] ಹೇಗೆ ಹೇಳಿದೆ ?

**ಉತ್ತರ :-** ಉಚ್ಚ ಪದವನ್ನು ಧಾರಣ ಮಾಡಿ ಆ ಪದದಲ್ಲಿ ಸಂಭವಿಸದಂಥ ಕೀಳು ಕಾರ್ಯವನ್ನು ಮಾಡಿದರೆ ಪ್ರತಿಜ್ಞೆಗಳು ಭಂಗವಾಗುವುದರಿಂದ ಮಹಾದೋಷವು ತಗಲುತ್ತದೆ, ಮತ್ತು ಕೆಳ ಅವಸ್ಥೆಯಲ್ಲಿ ಅಲ್ಲಿ ಸಂಭವಿಸುವಂಥ ಗುಣ-ದೋಷಗಳಿದ್ದರೆ ಇರಲಿ, ಅಲ್ಲಿ ಅವನ ದೋಷ ಗ್ರಹಣ ಮಾಡುವುದು ಯೋಗ್ಯವಿಲ್ಲವೆಂದು ತಿಳಿಯುವುದು.

ಅದರಂತೆ 'ಆಜ್ಞಾನುಸಾರ ಉಪದೇಶ ಕೊಡುವವನ ಕ್ರೋಧವು ಕೂಡ ಕ್ಷಮೆಯ ಭಂಡಾರವಿದೆ'ಯೆಂದು ಉಪದೇಶ ಸಿದ್ಧಾಂತರತ್ನಮಾಲೆಯಲ್ಲಿ[3] ಹೇಳಿದೆ; ಆದರೆ ಈ ಉಪದೇಶವು ವಕ್ತಾರನಿಗೆ ಗ್ರಹಣ ಮಾಡಲು

1 ಹೇ ಚಂದ್ರಮಃ ಕಿಮಿತಿ ಲಾಂಛನವಾನಭೂಸ್ತ್ವಂ । ತದ್ವಾನ್ ಭವೇಃ ಕಿಮಿತಿ ತನ್ಮಯ ಏವ ನಾಭೂಃ ।
ಕಿಂ ಜ್ಯೋತ್ಸ್ನಯಾ ಮಲಮಲಂ ತವ ಘೋಷಯಂತ್ಯಾ । ಸ್ವರ್ಭಾವನ್ನನು ತಥಾಸತಿ ನಾಽಸಿ ಲಕ್ಷಃ ॥೧೪೦॥

2 ಜಹಾಜಾಯರೂವ ಸರಿಸೋತಿಲತುಸಮೇತ್ತಂ ಣ ಗಿಹದಿ ಹತ್ಥೇಸು ।
ಜಇ ಲೇಇ ಅಪ್ಪಬಹುಯಂ ತತ್ತೋ ಪುಣ ಜಾಇ ಣಿಗ್ಗೋದಮ್ ॥೧೮॥ ಸೂತ್ರ ಪಾಹುಡ.

3 ರೋಸೋವಿ ಖಮಾಕೋಸೋ ಸುತ್ತಂ ಭಾಸಂತ ಜಸ್ಸಣಧಣಸ್ಸ ।
ಉಸ್ಸುತ್ತೇಣ ಖಮಾವಿಯ ದೋಸ ಮಹಾಮೋಹ ಆವಾಸೋ ॥೧೪॥

ಯೋಗ್ಯವಿಲ್ಲ. ಈ ಉಪದೇಶದಿಂದ ವಕ್ತಾರನು ಕ್ರೋಧ ಮಾಡುತ್ತಲೇ ಇದ್ದರೆ ಅವನದು ಕೆಡಕೇ ಆಗುವುದು. ಈ ಉಪದೇಶವು ಶ್ರೋತೃಗಳಿಗೆ ಗ್ರಹಣ ಮಾಡಲು ಯೋಗ್ಯವಿದೆ. ಎಂದಾದರೂ ವಕ್ತಾರನು ಕ್ರೋಧ ಮಾಡಿ ಕೂಡ ನಿಜವಾದ ಉಪದೇಶವಿತ್ತರೆ ಶ್ರೋತಾರನು ಅದನ್ನು ಗುಣವೆಂದೇ ಮನ್ನಿಸುವನು. ಇದೇ ಪ್ರಕಾರ ಇತರೆಡೆಗಳಲ್ಲಿ ತಿಳಿಯುವುದು.

ಅದರಂತೆ ಯಾವನಿಗೆ ಅತ್ಯಂತ ಶೀತಬಾಧೆಯ ರೋಗವಿದೆ ಅವನ ಸಲುವಾಗಿ ಅತ್ಯಂತ ಉಷ್ಣರಸಗಳ ಔಷಧಿಗಳನ್ನು ಹೇಳಿದ್ದಾರೆ; ಆ ಔಷಧಗಳನ್ನು ದಾಹವಿದ್ದವನು ಮತ್ತು ಕಡಿಮೆ ಶೀತವಿದ್ದವನು ಗ್ರಹಣ ಮಾಡಿದರೆ ದುಃಖವನ್ನೇ ಪಡೆಯುವನು. ಅದೇ ಪ್ರಕಾರ ಒಬ್ಬನಿಗೆ ಒಂದು ಕಾರ್ಯದ ಕುರಿತು ಅತ್ಯಂತ ಮುಖ್ಯತೆಯಿದ್ದು ಅದರ ಸಲುವಾಗಿ ಅವನಿಗೆ ಅತ್ಯಂತ ಬಲವಂತದಿಂದ ನಿಷೇಧದ ಉಪದೇಶ ಕೊಡುವುದು ; ಅದನ್ನು ಯಾವನಿಗೆ ಆ ಕಾರ್ಯದ ಮುಖ್ಯತೆಯಿಲ್ಲ ಮತ್ತು ಸ್ವಲ್ಪ ಮುಖ್ಯತೆಯಿದ್ದವನು ಗ್ರಹಣ ಮಾಡಿದರೆ ಕೆಡಕೇ ಆಗುವುದು.

ಒಬ್ಬನಿಗೆ ಶಾಸ್ತ್ರಾಭ್ಯಾಸದ ಅತ್ಯಂತ ಮುಖ್ಯತೆಯಿದೆ ಮತ್ತು ಆತ್ಮಾನುಭವದ ಪ್ರಯತ್ನವೇ ಇಲ್ಲದಿದ್ದರೆ ಅವನ ಸಲುವಾಗಿ ಅಧಿಕ ಶಾಸ್ತ್ರಾಭ್ಯಾಸದ ನಿಷೇಧ ಮಾಡಿದೆ. ಮತ್ತು ಯಾವನಿಗೆ ಶಾಸ್ತ್ರಾಭ್ಯಾಸವೇ ಇಲ್ಲ ಮತ್ತು ಸ್ವಲ್ಪ ಶಾಸ್ತ್ರಾಭ್ಯಾಸವಿದೆ ಆ ಜೀವನು ಈ ಉಪದೇಶದಿಂದ ಶಾಸ್ತ್ರಾಭ್ಯಾಸವನ್ನು ಬಿಟ್ಟುಕೊಟ್ಟರೆ ಮತ್ತು ಆತ್ಮಾನುಭವದಲ್ಲಿ ಉಪಯೋಗವು ಉಳಿಯದಿದ್ದರೆ ಆಗ ಅವನದಂತೂ ಕೆಡಕೇ ಆಗುವುದು.

ಅದರಂತೆ ಯಾವನು ಯಜ್ಞ-ಸ್ನಾನಾದಿಗಳಿಂದಾಗುವ ಹಿಂಸೆಯಿಂದ ಧರ್ಮವಾಗುತ್ತದೆಂದು ಮನ್ನಿಸುವ ಮುಖ್ಯತೆಯಿದೆ, ಅವನ ಸಲುವಾಗಿ 'ಪೃಥ್ವಿಯು ತಲೆಕೆಳಗಾಗಿ ಹೋದರೂ ಕೂಡ ಹಿಂಸೆ ಮಾಡುವುದರಿಂದ ಪುಣ್ಯ ಫಲವಾಗುವುದಿಲ್ಲ'ವೆಂದು ಉಪದೇಶಕೊಟ್ಟಿದೆ. ಮತ್ತು ಯಾವ ಜೀವನು ಪೂಜೆ ಮೊದಲಾದ ಕಾರ್ಯಗಳಿಂದ ಒಂದಿಷ್ಟು ಹಿಂಸೆ ತಗಲುತ್ತದೆ ಮತ್ತು ಅಧಿಕ ಪುಣ್ಯವಾಗುತ್ತದೆ ಆ ಜೀವನು ಈ ಉಪದೇಶದಿಂದ ಪೂಜಾದಿ ಕಾರ್ಯಗಳನ್ನು ಬಿಟ್ಟುಕೊಟ್ಟರೆ ಮತ್ತು ಸಾಮಾಯಿಕ ಮೊದಲಾದ ಧರ್ಮದಲ್ಲಿ ತೊಡಗದಿದ್ದರೆ ಅವನದಂತೂ ಕೆಡಕೇ ಆಗುವುದು. ಇದೇ ಪ್ರಕಾರ ಅನ್ಯತ್ರ ತಿಳಿಯುವುದು.

ಅದರಂತೆ ಒಂದು ಔಷಧವು ಗುಣಕಾರಕವಿದೆ; ಆದರೆ ತನಗೆ ಎಲ್ಲಿಯವರೆಗೆ ಆ ಔಷಧದಿಂದ ಹಿತವಾಗುವುದು ಅಲ್ಲಿಯವರೆಗೆ ಅದರ ಗ್ರಹಣ ಮಾಡುವುದು ; ಒಂದು ವೇಳೆ ಶೀತವು ನಿವಾರಣೆಯಾದ ಮೇಲೂ ಉಷ್ಣ ಔಷಧಿಯ ಸೇವನೆಯನ್ನು ಮಾಡುತ್ತಲೇ ಇದ್ದರೆ ಪ್ರತಿಯಾಗಿ ರೋಗವಾಗುವುದು. ಅದೇ ಪ್ರಕಾರ ಒಂದು ಧರ್ಮಕಾರ್ಯವಿದೆ; ಆದರೆ ತನಗೆ ಎಲ್ಲಿಯವರೆಗೆ ಆ ಧರ್ಮಕಾರ್ಯದಿಂದ ಹಿತವಾಗುವುದು ಅಲ್ಲಿಯವರೆಗೆ ಅದರ ಗ್ರಹಣ ಮಾಡುವುದು; ಒಂದು ವೇಳೆ ಉಚ್ಚದಶೆಯಾದ ಮೇಲೂ ಕೆಳದಶೆಗೆ ಸಂಬಂಧಿಸಿದ ಧರ್ಮದ ಸೇವನೆಯಲ್ಲಿ ತೊಡಗಿದರೆ ಅದರಿಂದ ಪ್ರತಿಯಾಗಿ ವಿಕಾರವೇ ಆಗುವುದು.

ಅದರಂತೆ ಪಾಪವನ್ನು ನಾಶಮಾಡುವ ಸಲುವಾಗಿ ಪ್ರತಿಕ್ರಮಣ ಮೊದಲಾದ ಧರ್ಮಕಾರ್ಯಗಳನ್ನು ಹೇಳಿದ್ದಾರೆ; ಆದರೆ ಆತ್ಮಾನುಭವವಾದ ಮೇಲೆ ಪ್ರತಿಕ್ರಮಣಾದಿಗಳ ವಿಕಲ್ಪ ಮಾಡಿದರೆ ಪ್ರತಿಯಾಗಿ ವಿಕಾರವು ವೃದ್ಧಿಸುವುದು; ಅದಕ್ಕಾಗಿಯೇ ಸಮಯಸಾರದಲ್ಲಿ ಪ್ರತಿಕ್ರಮಣಾದಿಗಳಿಗೆ ವಿಷವೆಂದು ಹೇಳಿದೆ. ಅದರಂತೆ ಅವ್ರತಿಗೆ

ಮಾಡಲು ಯೋಗ್ಯವಾದ ಪ್ರಭಾವನೆ ಮೊದಲಾದ ಧರ್ಮಕಾರ್ಯಗಳನ್ನು ಹೇಳಿದ್ದಾರೆ, ಅವನ್ನು ವ್ರತಿಯಾಗಿಯೂ ಮಾಡಿದರೆ ಪಾಪವೇ ಕಟ್ಟುವುದು. ವ್ಯಾಪಾರ ಮೊದಲಾದ ಆರಂಭವನ್ನು ಬಿಟ್ಟುಕೊಟ್ಟು ಚೈತ್ಯಾಲಯ ಮೊದಲಾದ ಕಾರ್ಯಗಳ ಅಧಿಕಾರಿಯಾಗುವುದು ಹೇಗೆ ಸಂಭವಿಸುವುದು ? ಇದೇ ಪ್ರಕಾರ ಉಳಿದ ಕಡೆಯಲ್ಲೂ ತಿಳಿಯುವುದು.

ಅದರಂತೆ ಔಷಧಪಾಕ ಮೊದಲಾದ ಔಷಧಗಳು ಪುಷ್ಟಿಕಾರಕವಿವೆ, ಆದರೆ ಜ್ವರಬಂದವನು ಅವುಗಳ ಸೇವನೆ ಮಾಡಿದರೆ ಮಹಾದೋಷವು ಉತ್ಪನ್ನವಾಗುವುದು; ಅದೇ ಪ್ರಕಾರ ಉಚ್ಚಧರ್ಮವು ತುಂಬ ಒಳ್ಳೆಯದಿದೆ, ಆದರೆ ತಮ್ಮ ವಿಕಾರ ಭಾವಗಳು ದೂರವಾಗಿರದಿದ್ದರೆ ಮತ್ತು ಉಚ್ಚಧರ್ಮದ ಸ್ವೀಕಾರ ಮಾಡಿದರೆ ಮಹಾದೋಷವು ಉತ್ಪನ್ನವಾಗುವುದು. ಹೇಗೆಂದರೆ ತಮ್ಮ ಅಶುಭ ವಿಕಾರಗಳೂ ಬಿಟ್ಟುಹೋಗಿಲ್ಲ ಮತ್ತು ನಿರ್ವಿಕಲ್ಪದಶೆಯನ್ನು ಅಂಗೀಕಾರ ಮಾಡಿದರೆ ಪ್ರತಿಯಾಗಿ ವಿಕಾರಗಳು ವೃದ್ಧಿಸುವವು. ಅದರಂತೆ ಭೋಜನ ಮೊದಲಾದ ವಿಷಯಗಳಲ್ಲಿ ಆಸಕ್ತನಿರುವುದು ಮತ್ತು ಆರಂಭತ್ಯಾಗ ಮೊದಲಾದ ಧರ್ಮವನ್ನು ಅಂಗೀಕಾರ ಮಾಡಿದರೆ ದೋಷವೇ ಉತ್ಪನ್ನವಾಗುವುದು. ಅದರಂತೆ ವ್ಯಾಪಾರ ಮೊದಲಾದುವನ್ನು ಮಾಡುವ ವಿಕಾರವಂತೂ ಬಿಟ್ಟು ಹೋಗಿಲ್ಲ ಮತ್ತು ತ್ಯಾಗದ ವೇಷರೂಪಧರ್ಮದ ಅಂಗೀಕಾರ ಮಾಡಿದರೆ ಮಹಾ ದೋಷವು ಉತ್ಪನ್ನವಾಗುವುದು. ಇದೇ ಪ್ರಕಾರ ಉಳಿದ ಕಡೆಗಳಲ್ಲಿ ತಿಳಿಯುವುದು.

ಇದೇ ಪ್ರಕಾರ ಇನ್ನುಳಿದ ಉಪದೇಶಗಳನ್ನೂ ಸರಿಯಾದ ವಿಚಾರದಿಂದ ಯಥಾರ್ಥವಾಗಿ ತಿಳಿದುಕೊಂಡು ಅಂಗೀಕಾರ ಮಾಡುವುದು. ಅಧಿಕ ವಿಸ್ತರಿಸಿ ಎಷ್ಟೆಂದು ಹೇಳುವುದು; ತಮಗೆ ಸಮ್ಯಗ್ಜ್ಞಾನವಾದನಂತರ ತಮಗೇ ಯಥಾರ್ಥವಾಗಿ ತಿಳಿದುಬರುತ್ತದೆ. ಉಪದೇಶವಂತೂ ವಚನಾತ್ಮಕವಿದ್ದು ವಚನದಿಂದ ಅನೇಕ ಅರ್ಥಗಳನ್ನು ಯುಗಪತ್ ಹೇಳುವ ಸಾಧ್ಯತೆಯಿಲ್ಲ. ಆದುದರಿಂದ ಉಪದೇಶವು ಒಂದೇ ಅರ್ಥದ ಮುಖ್ಯತೆಯೊಡನೆ ಆಗುತ್ತದೆ.

ಮತ್ತು ಎಲ್ಲಿ ಯಾವ ಅರ್ಥದ ವರ್ಣನೆಯಿದೆ ಅಲ್ಲಿ ಅದರದೇ ಮುಖ್ಯತೆಯಿದೆ; ಅಲ್ಲಿ ಇನ್ನೊಂದು ಅರ್ಥದ ಮುಖ್ಯತೆ ಮಾಡಿದರೆ ಎರಡೂ ಉಪದೇಶಗಳು ದೃಢವಾಗುವುದಿಲ್ಲ; ಆದುದರಿಂದ ಉಪದೇಶದಲ್ಲಿ ಒಂದು ಅರ್ಥವನ್ನು ದೃಢ ಮಾಡಬೇಕು; ಆದರೆ ಸಂಪೂರ್ಣ ಜಿನಮತದ ಚಿಹ್ನವು ಸ್ಯಾದ್ವಾದವಿದೆ, ಮತ್ತು 'ಸ್ಯಾತ್' ಪದದ ಅರ್ಥವು 'ಕಥಂಚಿತ್'ಇದೆ; ಆದುದರಿಂದ ಯಾವ ಉಪದೇಶವಿದೆ ಅದನ್ನು ಸರ್ವಥಾ ತಿಳಿದುಕೊಳ್ಳಬಾರದು. ಉಪದೇಶದ ಅರ್ಥವನ್ನು ತಿಳಿದುಕೊಂಡು ಈ ಉಪದೇಶವು ಯಾವ ಪ್ರಕಾರವಿದೆ, ಯಾವ ಪ್ರಯೋಜನ ಸಹಿತವಿದೆ, ಯಾವ ಜೀವನಿಗೆ ಕಾರ್ಯಕಾರಿಯಿದೆ ? ಇವೇ ಮೊದಲಾದ ವಿಚಾರ ಮಾಡಿ ಅದರ ಯಥಾರ್ಥ ಅರ್ಥವನ್ನು ಗ್ರಹಣ ಮಾಡಬೇಕು. ಅನಂತರ ತಮ್ಮ ದಶೆ ನೋಡಬೇಕು. ಆ ಉಪದೇಶವು ತಮಗೆ ಯಾವ ಪ್ರಕಾರ ಕಾರ್ಯಕಾರಿಯಾಗುವುದು ಅದನ್ನು ತಾವು ಅದೇ ಪ್ರಕಾರ ಅಂಗೀಕಾರ ಮಾಡಬೇಕು; ಮತ್ತು ಆ ಉಪದೇಶವು ತಿಳಿದುಕೊಳ್ಳಲು ಯೋಗ್ಯವೇ ಇದ್ದರೆ ಅದನ್ನು ಯಥಾರ್ಥವಾಗಿ ತಿಳಿದುಕೊಳ್ಳಬೇಕು. ಈ ಪ್ರಕಾರ ಉಪದೇಶದ ಫಲವನ್ನು ಪ್ರಾಪ್ತಮಾಡಿಕೊಳ್ಳಬೇಕು.

**ಪ್ರಶ್ನೆ:-** ಆ ಮಂದಬುದ್ಧಿಯು ಇಷ್ಟು ವಿಚಾರ ಮಾಡುವ ಸಾಧ್ಯತೆಯಿಲ್ಲದಿದ್ದರೆ ಅವನೇನು ಮಾಡಬೇಕು?

**ಉತ್ತರ :-** ಯಾವ ಪ್ರಕಾರ ವ್ಯಾಪಾರಿಯು ತನ್ನ ಬುದ್ಧಿಗೆ ಅನುಸರಿಸಿ ಯಾವುದರಲ್ಲಿ ಅಲ್ಪ-ಸ್ವಲ್ಪ ತಿಳಿಯುತ್ತದೆ ಅದರ ವ್ಯಾಪಾರ ಮಾಡುವನು, ಆದರೆ ಲಾಭ-ಹಾನಿಯ ಜ್ಞಾನವಂತೂ ಅವಶ್ಯವಾಗಿ ಇರಬೇಕಾಗುವುದು; ಅದೇ ಪ್ರಕಾರ ವಿವೇಕಿಯು ತನ್ನ ಬುದ್ಧಿಗೆ ಅನುಸರಿಸಿ ಯಾವುದರಲ್ಲಿ ಅಧಿಕ ಅಥವಾ ಅಲ್ಪ ತಿಳಿಯುವುದು ಆ ಉಪದೇಶವನ್ನು ಗ್ರಹಣ ಮಾಡುವನು, ಆದರೆ ನನಗೆ ಇದು ಕಾರ್ಯಕಾರಿಯಾಗಿದೆ. ಇದು ಕಾರ್ಯಕಾರಿಯಿಲ್ಲವೆಂಬ ಜ್ಞಾನವಂತೂ ಅವಶ್ಯವಾಗಿ ಇರಬೇಕಾಗುವುದು. ಎಂದರೆ ಕಾರ್ಯವಂತೂ ಯಥಾರ್ಥ ಶ್ರದ್ಧೆ-ಜ್ಞಾನಮಾಡಿಕೊಂಡು ರಾಗಾದಿಗಳನ್ನು ಕಡಿಮೆ ಮಾಡುವುದೊಂದೆ ಇದೆ. ಆದುದರಿಂದ ತಮ್ಮ ಈ ಕಾರ್ಯವು ಸಿದ್ಧಿಯಾಗುವಂಥ ಉಪದೇಶದ ಪ್ರಯೋಜನ ಗ್ರಹಣ ಮಾಡಬೇಕು; ವಿಶೇಷ ಜ್ಞಾನವಿಲ್ಲದಿದ್ದರೆ ಪ್ರಯೋಜನವನ್ನಂತೂ ಮರೆಯಬಾರದು; ಇಷ್ಟು ಸಾವಧಾನತೆಯಂತೂ ಅವಶ್ಯ ಇರಬೇಕಾಗುವುದು. ತಮ್ಮ ಹಿತದ ಹಾನಿಯಾಗುವಂತೆ ಉಪದೇಶದ ಅರ್ಥ ತಿಳಿದುಕೊಳ್ಳುವುದು ಯೋಗ್ಯವಿಲ್ಲ.

**ಪ್ರಶ್ನೆ :-** ಬೇರೆ-ಬೇರೆ ಪ್ರಕಾರಗಳು ಸಂಭವಿಸುವಲ್ಲಿಯಂತೂ ಸ್ಯಾದ್ವಾದವು ಸಂಭವವಿದೆ; ಆದರೆ ಒಂದೇ ಪ್ರಕಾರದಿಂದ ಶಾಸ್ತ್ರದಲ್ಲಿ ಪರಸ್ಪರ ವಿರೋಧವು ಭಾಸವಾಗುವಲ್ಲಿ ಏನು ಮಾಡುವುದು ? ಹೇಗೆಂದರೆ ಪ್ರಥಮಾನುಯೋಗದಲ್ಲಿ ಒಬ್ಬ ತೀರ್ಥಂಕರರ ಜತೆಯಲ್ಲಿ ಸಾವಿರಾರು ಮುನಿಗಳು ಮೋಕ್ಷಕ್ಕೆ ಹೋದರೆಂದು ತಿಳಿಸುತ್ತಾರೆ; ಕರಣಾನುಯೋಗದಲ್ಲಿ ಆರು ತಿಂಗಳು ಎಂಟು ಸಮಯದಲ್ಲಿ ಆರುನೂರಾ ಎಂಟು ಜೀವರುಗಳು ಮೋಕ್ಷಕ್ಕೆ ಹೋಗುತ್ತಾರೆಂದು ನಿಯಮ ಹೇಳಿದೆ. ಪ್ರಥಮಾನುಯೋಗದಲ್ಲಿ ದೇವ-ದೇವಾಂಗನೆಯರಾಗಿ ಉತ್ಪನ್ನವಾಗಿ ಪುನಃ ಮರಣಹೊಂದಿ ಜತೆಯಲ್ಲೇ ಮನುಷ್ಯ ಪರ್ಯಾಯದಲ್ಲಿ ಉತ್ಪನ್ನರಾಗುತ್ತಾರೆಂಬ ಕಥನ ಮಾಡಿದೆ. ಕರಣಾನುಯೋಗದಲ್ಲಿ ದೇವನ ಆಯು ಸಾಗರಗಳ ಪ್ರಮಾಣ ಮತ್ತು ದೇವಾಂಗನೆಯ ಆಯು ಪಲ್ಯಗಳ ಪ್ರಮಾಣವೆಂದು ಹೇಳಿದೆ. ಇತ್ಯಾದಿ ವಿಧಿಗಳು ಹೇಗೆ ಹೊಂದುತ್ತವೆ ?

**ಉತ್ತರ :-** ಕರಣಾನುಯೋಗದಲ್ಲಿರುವ ಕಥನವಂತೂ ತಾರತಮ್ಯದಿಂದ ಕೂಡಿದೆ, ಮತ್ತು ಉಳಿದ ಅನುಯೋಗಗಳಲ್ಲಿನ ಕಥನವು ಪ್ರಯೋಜನಾನುಸಾರವಿದೆ; ಆದುದರಿಂದ ಕರಣಾನುಯೋಗದ ಕಥನವು ಯಾವ ಪ್ರಕಾರ ಮಾಡಿದೆ ಅದೇ ಪ್ರಕಾರವಿದೆ. ಉಳಿದವುಗಳ ಕಥನದ ವಿಧಿಯು ಹೇಗೆ ಹೊಂದುವುದು ಹಾಗೆ ಹೊಂದಿಸಿಕೊಳ್ಳುವುದು. ಸಾವಿರಾರು ಮುನಿಗಳು ತೀರ್ಥಂಕರರ ಜತೆಯಲ್ಲಿ ಮೋಕ್ಷಕ್ಕೆ ಹೋದರೆಂದು ಹೇಳಲಾಗಿದೆ, ಅಲ್ಲಿ ಒಂದೇ ಕಾಲದಲ್ಲಿ ಇಷ್ಟು ಮುನಿಗಳು ಮೋಕ್ಷಕ್ಕೆ ಹೋದರೆಂದು ತಿಳಿಯಬಾರದು; ಆದರೆ ತೀರ್ಥಂಕರರು ಗಮನಾದಿ ಕ್ರಿಯೆಗಳನ್ನು ನಿವಾರಿಸಿ ಎಲ್ಲಿ ಸ್ಥಿರರಾದರು ಅಲ್ಲಿ ಅವರ ಜತೆ ಇಷ್ಟು ಮುನಿಗಳಿದ್ದರು, ಪುನಃ ಮೋಕ್ಷಕ್ಕೆ ಹೋಗುವಾಗ ಹಿಂದೆ-ಮುಂದೆ ಹೋಗಿದ್ದಾರೆ. ಈ ಪ್ರಕಾರ ಪ್ರಥಮಾನುಯೋಗ ಮತ್ತು ಕರಣಾನುಯೋಗದ ವಿರೋಧವು ದೂರವಾಗುತ್ತದೆ. ಮತ್ತು ದೇವ-ದೇವಾಂಗನೆಯರು ಜತೆಯಲ್ಲಿ ಉತ್ಪನ್ನರಾದರು, ಅನಂತರ ದೇವಾಂಗನೆಯು ಚ್ಯುತವಾಗಿ ಮಧ್ಯದಲ್ಲಿ ಬೇರೆ ಪರ್ಯಾಯ ಧಾರಣ ಮಾಡುವಳು, ಅವುಗಳ ಪ್ರಯೋಜನವಿಲ್ಲವೆಂದು ತಿಳಿದು ಕಥನ ಮಾಡಿಲ್ಲ. ಪುನಃ ಅವಳು ಜತೆಯಾಗಿ ಮನುಷ್ಯ ಪರ್ಯಾಯದಲ್ಲಿ ಉತ್ಪನ್ನವಾಗುವಳು. ಹೀಗೆ ವಿಧಿ ಹೊಂದಾಣಿಕೆಯಿಂದ ವಿರೋಧವು ದೂರವಾಗುತ್ತದೆ. ಇದೇ ಪ್ರಕಾರ ಅನ್ಯತ್ರ ವಿಧಿ ಹೊಂದಿಸಿಕೊಳ್ಳುವುದು.

**ಪ್ರಶ್ನೆ :-** ಈ ಪ್ರಕಾರದ ಕಥನಗಳಲ್ಲೂ ಯಾವುದೇ ಪ್ರಕಾರ ವಿಧಿ ಹೊಂದುತ್ತದೆ, ಆದರೆ ನೇಮಿನಾಥರ ಜನ್ಮವು ಒಂದೆಡೆ ಶೌರಿಪುರವೆಂದೂ ಒಂದೆಡೆ ದ್ವಾರಾವತಿಯೆಂದೂ ಹೇಳಿದೆ; ಮತ್ತು ರಾಮಚಂದ್ರನ ಕಥೆಯು ಬೇರೆ-ಬೇರೆ ಪ್ರಕಾರದಿಂದಿದೆ ಇತ್ಯಾದಿ; ಮತ್ತು ಏಕೇಂದ್ರಿಯಗಳಿಗೆ ಒಂದೆಡೆ ಸಾಸಾದನ ಗುಣಸ್ಥಾನವೆಂದು ಹೇಳಿದ್ದರೆ ಒಂದೆಡೆ ಹೇಳಿಲ್ಲ ಇತ್ಯಾದಿ; ಈ ಕಥನಗಳ ವಿಧಿಯು ಯಾವ ಪ್ರಕಾರ ಹೊಂದಾಣಿಕೆಯಾಗುವುದು?

**ಉತ್ತರ :-** ಈ ಪ್ರಕಾರ ವಿರೋಧಸಹಿತ ಕಥನಗಳು ಕಾಲದೋಷದಿಂದ ಆಗಿವೆ. ಈ ಕಾಲದಲ್ಲಿ ಪ್ರತ್ಯಕ್ಷ ಜ್ಞಾನಿಗಳ ಹಾಗೂ ಬಹುಶ್ರುತರ ಅಭಾವವಾಗಿದೆ ಮತ್ತು ಅಲ್ಪ ಬುದ್ಧಿಯುಳ್ಳವರು ಗ್ರಂಥರಚನೆಯ ಅಧಿಕಾರಿಗಳಾಗಿದ್ದಾರೆ. ಅವರಿಗೆ ಭ್ರಾಂತಿಯಿಂದ ಕೆಲ ಅರ್ಥಗಳು ಅನ್ಯಥಾ ಭಾಸವಾದವು ಅವನ್ನು ಹಾಗೇ ಬರೆದರು. ಅಲ್ಲದೆ ಈ ಕಾಲದಲ್ಲಿ ಜೈನಮತದಲ್ಲಿ ಕೂಡ ಅದೆಷ್ಟೋ ಜನರು ಕಷಾಯವಶರಾಗಿ ಯಾವುದೇ ಕಾರಣ ಪಡೆದು ವಿಪರೀತವಾಗಿ ಕಥನ ಮಾಡಿದ್ದಾರೆ. ಈ ಪ್ರಕಾರ ಅನ್ಯಥಾ ಕಥನವಾಗಿರುವುದರಿಂದ ಜೈನಶಾಸ್ತ್ರಗಳಲ್ಲಿ ವಿರೋಧವು ಕಂಡು ಬರತೊಡಗಿದೆ.

ವಿರೋಧವು ಕಂಡುಬರುತ್ತಿರುವಲ್ಲಿ ಈ ಕಥನ ಮಾಡುವಂಥವರು ಅಧಿಕ ಪ್ರಾಮಾಣಿಕರಿದ್ದಾರೆಯೋ ಅಥವಾ ಈ ಕಥನ ಮಾಡುವಂಥವರು ಅಧಿಕ ಪ್ರಾಮಾಣಿಕರಿದ್ದಾರೆಯೋ ? ಎಂದು ವಿಚಾರಮಾಡಿ ದೊಡ್ಡ ಆಚಾರ್ಯರುಗಳು ಹೇಳಿರುವ ಕಥನವನ್ನು ಪ್ರಮಾಣವೆಂದು ತಿಳಿಯುವುದು. ಅದರಂತೆ ಜಿನಮತದಲ್ಲಿ ಬಹಳಷ್ಟು ಶಾಸ್ತ್ರಗಳಿದ್ದು ಅವುಗಳ ಪರಂಪರೆಗೆ ಸರಿಹೊಂದಿಸಿ ನೋಡಬೇಕು. ಯಾವ ಕಥನವು ರೂಢಿ ಪರಂಪರೆಗೆ ಸರಿಹೊಂದುವುದು ಆ ಕಥನವನ್ನು ಪ್ರಮಾಣಮಾಡುವುದು. ಈ ಪ್ರಕಾರ ವಿಚಾರಮಾಡಿದಮೇಲೆ ಕೂಡ ಸತ್ಯ-ಅಸತ್ಯದ ನಿರ್ಣಯವಾಗದಿದ್ದರೆ 'ಹೇಗೆ ಕೇವಲಿಗೆ ಭಾಸವಾಗಿದೆ ಹಾಗೆ ಪ್ರಮಾಣವಿದೆಯೆಂದು ಮನ್ನಿಸಿಕೊಳ್ಳುವುದು, ಏಕೆಂದರೆ ದೇವಾದಿಕರ ಹಾಗೂ ತತ್ತ್ವಗಳ ನಿರ್ಧಾರವಾದಲ್ಲದೆ ಮೋಕ್ಷವಾಗುವುದಿಲ್ಲ. ಅದರದಂತೂ ನಿರ್ಧಾರವೂ ಆಗಿಹೋಗುವುದು, ಆದುದರಿಂದ ಯಾರಾದರೂ ಅವುಗಳ ಸ್ವರೂಪವನ್ನು ವಿರುದ್ಧವಾಗಿ ಹೇಳಿದರೆ ಅದು ತಮಗೆ ತಿಳಿದು ಹೋಗುವುದು. ಮತ್ತು ಅನ್ಯಕಥನದ ನಿರ್ಧಾರವಾಗದಿದ್ದರೆ, ಅಥವಾ ಸಂಶಯಗಳುಳಿದರೆ, ಅಥವಾ ವಿಪರೀತವಾಗಿ ತಿಳಿದುಬಂದರೆ, ಕೇವಲಿಗಳು ಹೇಳಿದ್ದು ಪ್ರಮಾಣವಿದೆಯೆಂಬ ಶ್ರದ್ಧೆಯುಳಿದರೆ ಮೋಕ್ಷಮಾರ್ಗದಲ್ಲಿ ವಿಘ್ನವಿಲ್ಲವೆಂದು ತಿಳಿಯುವುದು.

**ಪ್ರಶ್ನೆ :-** ಜಿನಮತದಲ್ಲಿ ಹೇಗೆ ನಾನಾಪ್ರಕಾರದ ಕಥನಗಳು ಕಂಡುಬರುತ್ತವೆ ಹಾಗೆ ಅನ್ಯಮತಗಳಲ್ಲಿ ಕೂಡ ಕಥನಗಳು ಕಂಡು ಬರುತ್ತವೆ. ಆದರೆ ನೀವು ನಿಮ್ಮ ಮತದ ಕಥನಗಳನ್ನು ಆಯಾ ಪ್ರಕಾರದಿಂದ ಸ್ಥಾಪನೆ ಮಾಡಿದಿರಿ ಮತ್ತು ಅನ್ಯಮತದಲ್ಲಿರುವ ಇಂಥ ಕಥನಕ್ಕೆ ತಾವು ದೋಷ ತಗಲಿಸುತ್ತಿರುವಿರಿ, ಅದರಿಂದ ನಿಮ್ಮಲ್ಲಿ ರಾಗ-ದ್ವೇಷಗಳಿವೆ?

**ಉತ್ತರ :-** ಕಥನಗಳು ನಾನಾ ಪ್ರಕಾರದವಾಗಿದ್ದರೂ ಒಂದೇ ಪ್ರಯೋಜನದ ಪೋಷಣೆ ಮಾಡಿದರೆ ಯಾವ ದೋಷವಿಲ್ಲ, ಆದರೆ ಒಂದೆಡೆ ಒಂದು ಪ್ರಯೋಜನದ ಇನ್ನೊಂದೆಡೆ ಇನ್ನೊಂದು ಪ್ರಯೋಜನದ ಪೋಷಣೆ ಮಾಡಿದರೆ ದೋಷವೇ ಇದೆ. ಜಿನಮತದಲ್ಲಂತೂ ರಾಗಾದಿಗಳನ್ನು ದೂರಮಾಡುವ ಒಂದೇ ಒಂದು

ಪ್ರಯೋಜನವಿದೆ; ಆದುದರಿಂದ ಒಂದು ಕಡೆ ಅಧಿಕ ರಾಗಾದಿಗಳನ್ನು ಬಿಡಿಸಿ ಅಲ್ಪ ರಾಗಾದಿಗಳನ್ನು ಮಾಡಿಸುವ ಪ್ರಯೋಜನದ ಪೋಷಣೆ ಮಾಡಿದೆ, ಒಂದು ಕಡೆ ಸಮಸ್ತ ರಾಗಾದಿಗಳನ್ನು ನಾಶಮಾಡುವ ಪ್ರಯೋಜನದ ಪೋಷಣೆ ಮಾಡಿದೆ; ಆದರೆ ರಾಗಾದಿಗಳನ್ನು ಹೆಚ್ಚಿಸುವ ಪ್ರಯೋಜನವು ಎಲ್ಲಿಯೂ ಇಲ್ಲ, ಅದಕ್ಕಾಗಿಯೇ ಜಿನಮತದ ಸಮಸ್ತ ಕಥನವು ನಿರ್ದೋಷವಿದೆ. ಮತ್ತು ಅನ್ಯಮತಗಳಲ್ಲಿ ಒಂದು ಕಡೆ ರಾಗಾದಿಗಳನ್ನು ದೂರ ಮಾಡುವ ಪ್ರಯೋಜನ ಸಹಿತ ಕಥನ ಮಾಡುತ್ತಾರೆ, ಒಂದು ಕಡೆ ರಾಗಾದಿಗಳನ್ನು ವೃದ್ಧಿಸುವ ಪ್ರಯೋಜನಸಹಿತ ಕಥನ ಮಾಡುತ್ತಾರೆ; ಇದೇ ಪ್ರಕಾರ ಇತರ ಪ್ರಯೋಜನದ ವಿರುದ್ಧತೆಯೊಡನೆ ಕಥನ ಮಾಡುತ್ತಾರೆ, ಅದರಿಂದಾಗಿಯೇ ಅನ್ಯಮತದವರ ಕಥನವು ಸದೋಷವಿದೆ. ಲೋಕದಲ್ಲಿ ಕೂಡ ಒಂದು ಪ್ರಯೋಜನದ ಪೋಷಣೆ ಮಾಡುವಂಥ ನಾನಾಕಥನ ಮಾಡಿದರೆ ಅವನನ್ನು ಪ್ರಾಮಾಣಿಕನೆಂದು ಹೇಳಲಾಗುತ್ತದೆ ಮತ್ತು ಅನ್ಯ-ಅನ್ಯ ಪ್ರಯೋಜನದ ಪೋಷಣೆ ಮಾಡುವಂಥ ಮಾತು ಹೇಳಿದರೆ ಅವನನ್ನು ಮೂರ್ಖನೆಂದು ಹೇಳುತ್ತಾರೆ.

ಅದರಂತೆ ಜಿನಮತದಲ್ಲಿ ನಾನಾಪ್ರಕಾರದ ಕಥನಗಳಿದ್ದು ಅವು ಭಿನ್ನ-ಭಿನ್ನ ಅಪೇಕ್ಷಾಸಹಿತವಾಗಿದ್ದರೂ ಅಲ್ಲಿ ದೋಷವಿಲ್ಲ. ಅನ್ಯಮತದಲ್ಲಿ ಒಂದೇ ಅಪೇಕ್ಷೆಯೊಡನೆ ಬೇರೆ-ಬೇರೆ ಕಥನ ಮಾಡುತ್ತಾರೆ, ಅಲ್ಲಿ ದೋಷವಿದೆ. ಹೇಗೆಂದರೆ ಜಿನದೇವರಿಗೆ ವೀತರಾಗ ಭಾವವಿದೆ ಮತ್ತು ಅಲ್ಲಿ ಸಮವಸರಣ ಮೊದಲಾದ ವಿಭೂತಿಗಳು ಕಂಡುಬರುತ್ತವೆ ಅಲ್ಲಿ ವಿರೋಧವಿಲ್ಲ. ಸಮವಸರಣ ಮೊದಲಾದ ವಿಭೂತಿಗಳ ರಚನೆಯನ್ನು ಇಂದ್ರಾದಿಗಳು ಮಾಡುತ್ತಾರೆ, ಅವರಿಗೆ ಅದರಲ್ಲಿ ರಾಗಾದಿಗಳಿಲ್ಲದಿರುವುದರಿಂದ ಎರಡೂ ಮಾತುಗಳು ಸಂಭವಿಸುತ್ತವೆ. ಮತ್ತು ಅನ್ಯಮತದಲ್ಲಿ ಈಶ್ವರರನ್ನು ಸಾಕ್ಷೀಭೂತ ವೀತರಾಗನೆಂದೂ ಹೇಳುತ್ತಾರೆ ಹಾಗೂ ಅವನ ಮೂಲಕವೇ ಮಾಡಲಾದ ಕಾಮ-ಕ್ರೋಧಾದಿ ಭಾವಗಳ ನಿರೂಪಣೆ ಮಾಡುತ್ತಾರೆ, ಆದರೆ ಒಬ್ಬನೇ ಆತ್ಮನಿಗೆ ವೀತರಾಗತೆ ಮತ್ತು ಕಾಮ-ಕ್ರೋಧಾದಿ ಭಾವಗಳು ಹೇಗೆ ಸಂಭವಿಸುತ್ತವೆ ? ಇದೇ ಪ್ರಕಾರ ಉಳಿದ ಕಡೆಯಲ್ಲಿ ತಿಳಿಯುವುದು.

ಕಾಲದೋಷದಿಂದ ಜಿನಮತದಲ್ಲಿ ಒಂದೇ ಪ್ರಕಾರದಿಂದ ಕೆಲವು ಕಥನಗಳನ್ನು ವಿರುದ್ಧವಾಗಿ ಬರೆದಿದ್ದಾರೆ. ಆದರೆ ಇದು ತುಚ್ಛ ಬುದ್ಧಿಯುಳ್ಳವರ ದೋಷವಿದೆ, ಮತದಲ್ಲಿ ಯಾವ ದೋಷವಿಲ್ಲ, ಅಲ್ಲಿ ಕೂಡ ಜಿನಮತದ ವಿಶೇಷತೆಯೆಂದರೆ ಪ್ರಮಾಣ ವಿರುದ್ಧವಾದ ಕಥನವನ್ನು ಯಾರೂ ಮಾಡುವ ಸಾಧ್ಯತೆಯಿಲ್ಲ, ನೇಮಿನಾಥಸ್ವಾಮಿಯ ಜನ್ಮವನ್ನು ಒಂದು ಕಡೆ ಶೌರೀಪುರ ಇನ್ನೊಂದು ಕಡೆ ದ್ವಾರಾವತಿಯೆಂದು ಹೇಳಿದೆ; ಅದು ಎಲ್ಲಿಯೇ ಇರಲಿ, ಆದರೆ ನಗರದಲ್ಲಿ ಜನ್ಮವಾಗುವುದು ಪ್ರಮಾಣ ವಿರುದ್ಧವಿಲ್ಲ, ಇಂದು ಕೂಡ ಆಗುತ್ತಿರುವುದು ಕಂಡು ಬರುತ್ತದೆ.

ಅದರಂತೆ ಅನ್ಯಮತದಲ್ಲಿ ಸರ್ವಜ್ಞ ಮೊದಲಾದ ಯಥಾರ್ಥ ಜ್ಞಾನಿಗಳು ರಚಿಸಿದ ಗ್ರಂಥಗಳೆಂದು ಹೇಳುತ್ತಾರೆ, ಆದರೆ ಅವುಗಳಲ್ಲಿ ಪರಸ್ಪರ ವಿರುದ್ಧತೆಯು ಕಂಡು ಬರುತ್ತದೆ. ಕೆಲವೆಡೆ ಬಾಲ ಬ್ರಹ್ಮಚಾರಿಗಳ ಪ್ರಶಂಸೆ ಮಾಡುತ್ತಾರೆ, ಕೆಲವೆಡೆ 'ಮಕ್ಕಳಿಲ್ಲದವರಿಗೆ ಗತಿಯಿಲ್ಲ'ವೆಂದು ಹೇಳುತ್ತಾರೆ. ಆದರೆ ಎರಡೂ ಸತ್ಯ ಹೇಗಾಗುವವು? ಇಂಥ ಕಥನಗಳು ಅಲ್ಲಿ ಸಾಕಷ್ಟು ಕಂಡು ಬರುತ್ತವೆ. ಮತ್ತು ಅವುಗಳಲ್ಲಿ ಪ್ರಮಾಣವಿರುದ್ಧವಾದ ಕಥನಗಳು ಕಂಡು ಬರುತ್ತವೆ. ಹೇಗೆಂದರೆ 'ಮೀನಿನ ಮುಖದಲ್ಲಿ ವೀರ್ಯ ಬೀಳುವುದರಿಂದ ಮೀನಿನ ಮಗನಾದನು, ಆದರೆ ಈ ಕಾಲದಲ್ಲಿ ಹೀಗೆ ಯಾರಿಗೂ ಆಗುತ್ತಿರುವುದು ಕಂಡು ಬರುವುದಿಲ್ಲ, ಮತ್ತು ಅನುಮಾನದಿಂದಲೂ ಹೊಂದಿಕೆಯಾಗುವುದಿಲ್ಲ, ಇಂಥ ಕಥನಗಳು ಬಹಳಷ್ಟು ಕಂಡು ಬರುತ್ತವೆ, ಒಂದು ವೇಳೆ ಇಲ್ಲಿ ಸರ್ವಜ್ಞರ

ದೋಷವೆಂದು ಮನ್ನಿಸಿದರೆ ಅವರು ಹೇಗೆ ತಪ್ಪು ಮಾಡುವರು ? ಮತ್ತು ವಿರುದ್ಧ ಕಥನವೆಂದು ಮನ್ನಿಸುವುದರಲ್ಲಿ ಬರುವುದಿಲ್ಲ; ಆದುದರಿಂದ ಅವರ ಮತದಲ್ಲಿ ದೋಷಗಳಿರುವುದು ಸಿದ್ಧವಾಗುತ್ತದೆ. ಹೀಗೆ ತಿಳಿದುಕೊಂಡು ಒಂದು ಜಿನಮತದ ಉಪದೇಶವೇ ಗ್ರಹಣ ಮಾಡಲು ಯೋಗ್ಯವಿದೆ.

**ಅನುಯೋಗಗಳ ಅಭ್ಯಾಸಕ್ರಮ :-**

ಈ ಪ್ರಥಮಾನುಯೋಗ ಮೊದಲಾದವುಗಳ ಅಭ್ಯಾಸ ಮಾಡುವುದು. ಮೊದಲು ಇದರ ಅಭ್ಯಾಸ ಮಾಡಬೇಕು, ನಂತರ ಇದರ ಅಭ್ಯಾಸಮಾಡಬೇಕೆಂಬ ನಿಯಮವಿಲ್ಲ, ಆದರೆ ತಮ್ಮ ಪರಿಣಾಮಗಳ ಅವಸ್ಥೆಯನ್ನು ನೋಡಿಕೊಂಡು ಯಾವುದರ ಅಭ್ಯಾಸದಿಂದ ಧರ್ಮದಲ್ಲಿ ತಮ್ಮ ಪ್ರವೃತ್ತಿಯಾಗುವುದು ಅದರದೇ ಅಭ್ಯಾಸ ಮಾಡುವುದು. ಅಥವಾ ಒಮ್ಮೆ ಒಂದು ಶಾಸ್ತ್ರದ ಅಭ್ಯಾಸ ಮಾಡಿದರೆ ಇನ್ನೊಮ್ಮೆ ಇನ್ನೊಂದು ಶಾಸ್ತ್ರದ ಅಭ್ಯಾಸ ಮಾಡುವುದು. ಹೇಗೆಂದರೆ ದಿನಕೀರ್ದಿಯಲ್ಲಿ ಅನೇಕ ಮೊತ್ತಗಳನ್ನು ಅಲ್ಲಲ್ಲಿ ಬರೆದಿರುತ್ತದೆ, ಅವನ್ನು ಖಾತೆಯಲ್ಲಿ ಸರಿಯಾಗಿ ಖತಾವಣಿ ಮಾಡಿದರೆ ಕೊಡ-ಕೊಳ್ಳುವುದರ ನಿಶ್ಚಯವಾಗುವುದು; ಅದೇ ಪ್ರಕಾರ ಶಾಸ್ತ್ರಗಳಲ್ಲಿ ಅನೇಕ ಪ್ರಕಾರದ ಉಪದೇಶಗಳನ್ನು ಅಲ್ಲಲ್ಲಿ ಮಾಡಲಾಗಿದೆ, ಅವನ್ನು ಸಮ್ಯಗ್ಜ್ಞಾನದಲ್ಲಿ ಯಥಾರ್ಥ ಪ್ರಯೋಜನದೊಡನೆ ಪರಿಚಯ ಮಾಡಿಕೊಂಡರೆ ಹಿತ-ಅಹಿತದ ನಿಶ್ಚಯವಾಗುವುದು.

ಆದುದರಿಂದ ಸ್ಯಾತ್‌ಪದದ ಸಾಪೇಕ್ಷತೆಯೊಡನೆ ಸಮ್ಯಗ್ಜ್ಞಾನದ ಮೂಲಕ ಯಾರು ಜಿನವಚನಗಳಲ್ಲಿ ವಿಹರಿಸುತ್ತಾರೆ ಅವರು ಶೀಘ್ರವಾಗಿಯೇ ಶುದ್ಧಾತ್ಮ ಸ್ವರೂಪವನ್ನು ಪಡೆದುಕೊಳ್ಳುತ್ತಾರೆ. ಮೋಕ್ಷಮಾರ್ಗದಲ್ಲಿ ಮೊದಲನೆಯ ಉಪಾಯವು ಆಗಮ ಜ್ಞಾನವೆಂದು ಹೇಳಿದೆ, ಆಗಮಜ್ಞಾನವಿಲ್ಲದೆ ಧರ್ಮದ ಸಾಧನೆಯಾಗುವ ಸಾಧ್ಯತೆಯಿಲ್ಲ, ಆದುದರಿಂದ ತಾವು ಕೂಡ ಯಥಾರ್ಥ ಬುದ್ಧಿಯಿಂದ ಆಗಮದ ಅಭ್ಯಾಸ ಮಾಡಬೇಕು. ತಮ್ಮದು ಕಲ್ಯಾಣವಾಗುವುದು.

**ಈ ಪ್ರಕಾರ ಶ್ರೀ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರದಲ್ಲಿ**
**ಉಪದೇಶ ಸ್ವರೂಪ ಪ್ರತಿಪಾದಕವೆಂಬ**
**ಎಂಟನೆಯ ಅಧಿಕಾರವು ಸಮಾಪ್ತವಾಯಿತು.**

# ಒಂಭತ್ತನೆಯ ಅಧಿಕಾರ

## ಮೋಕ್ಷಮಾರ್ಗದ ಸ್ವರೂಪ

**ಶಿವ ಉಪಾಯ ಮಾಡಲು ಪ್ರಥಮ, ಕಾರಣ ಮಂಗಲರೂಪ ।**
**ವಿಘ್ನ ವಿನಾಶಕ ಸುಖಕಾರಕ, ನಮೋ ಶುದ್ಧ ಶಿವಭೂಪ ॥**

ಈಗ ಮೋಕ್ಷಮಾರ್ಗದ ಸ್ವರೂಪ ಹೇಳುತ್ತಾರೆ. ಈ ಮೊದಲು ಮೋಕ್ಷಮಾರ್ಗದ ಪ್ರತಿಪಕ್ಷಿಯಾದ ಮಿಥ್ಯಾದರ್ಶನ ಮೊದಲಾದವುಗಳ ಸ್ವರೂಪ ತಿಳಿಸಿಕೊಡಲಾಯಿತು. ಅವನ್ನಂತೂ ದುಃಖರೂಪ, ದುಃಖದ ಕಾರಣಗಳೆಂದು ತಿಳಿದುಕೊಂಡು, ಹೇಯವೆಂದು ಮನ್ನಿಸಿ ಅವುಗಳ ತ್ಯಾಗ ಮಾಡುವುದು. ಮತ್ತು ಮಧ್ಯದಲ್ಲಿ ಉಪದೇಶದ ಸ್ವರೂಪ ತಿಳಿಸಿದೆ ಅದನ್ನು ತಿಳಿದುಕೊಂಡು ಉಪದೇಶವನ್ನು ಯಥಾರ್ಥವಾಗಿ ಗ್ರಹಣ ಮಾಡುವುದು. ಈಗ ಮೋಕ್ಷದ ಮಾರ್ಗವಾದ ಆ ಸಮ್ಯಗ್ದರ್ಶನ-ಮೊದಲಾದವುಗಳ ಸ್ವರೂಪ ತಿಳಿಸಿಕೊಡುತ್ತಾರೆ. ಅವನ್ನು ಸುಖರೂಪ, ಸುಖದ ಕಾರಣವೆಂದು ತಿಳಿದುಕೊಂಡು, ಉಪಾದೇಯವೆಂದು ಮನ್ನಿಸಿ ಅಂಗೀಕಾರ ಮಾಡುವುದು; ಏಕೆಂದರೆ ಆತ್ಮನ ಹಿತವು ಮೋಕ್ಷವೇ ಇದೆ; ಅದರದೇ ಉಪಾಯ ಮಾಡುವುದು ಆತ್ಮನ ಕರ್ತವ್ಯವಿದೆ; ಆದುದರಿಂದ ಇಲ್ಲಿ ಅದರದೇ ಉಪದೇಶ ಕೊಡುತ್ತಾರೆ.

### ಆತ್ಮನ ಹಿತವು ಮೋಕ್ಷವೇ ಇದೆ :-

ಆತ್ಮನಹಿತವು ಮೋಕ್ಷವೇ ಇದೆ, ಬೇರೆ ಯಾವುದೂ ಇಲ್ಲವೆಂಬ ನಿಶ್ಚಯವು ಯಾವ ಪ್ರಕಾರ ಆಗುತ್ತದೆಂಬುದನ್ನು ಹೇಳುತ್ತಾರೆ.

ಆತ್ಮನಲ್ಲಿ ಗುಣ-ಪರ್ಯಾಯರೂಪದ ಅವಸ್ಥೆಗಳು ನಾನಾ ಪ್ರಕಾರ ಕಂಡು ಬರುತ್ತವೆ. ಅವುಗಳಲ್ಲಿ ಬೇರೆ ಯಾವ ಅವಸ್ಥೆಯಿಂದಲೂ ಆತ್ಮನ ಕೆಡಕು-ಸುಧಾರಣೆಗಳಿಲ್ಲ; ಒಂದು ಸುಖ-ದುಃಖದ ಅವಸ್ಥೆಯಿಂದಲೇ ಕೆಡಕು ಸುಧಾರಣೆಗಳಿವೆ. ಅದಕ್ಕಾಗಿ ಯಾವ ಹೇತು-ದೃಷ್ಟಾಂತಗಳು ಬೇಕಿಲ್ಲ; ಹಾಗೆ ಪ್ರತ್ಯಕ್ಷವಾಗಿಯೇ ಪ್ರತಿಭಾಸವಾಗುತ್ತದೆ.

ಜಗತ್ತಿನಲ್ಲಿ ಎಷ್ಟು ಆತ್ಮರುಗಳಿದ್ದಾರೆ ಅವರೆಲ್ಲರ ಉಪಾಯವು 'ದುಃಖವಾಗದಿರಲಿ, ಸುಖವಾಗಲೆ'ಂಬು ದೊಂದೇ ಕಂಡು ಬರುತ್ತದೆ. ಮತ್ತು ಇತರ ಎಷ್ಟೆಷ್ಟು ಉಪಾಯ ಮಾಡುತ್ತಾರೆ ಅವೆಲ್ಲವೂ ಇದೊಂದರ ಪ್ರಯೋಜನಕ್ಕಾಗಿಯೇ ಮಾಡುತ್ತಾರೆ, ಬೇರೆ ಯಾವ ಪ್ರಯೋಜನದ ಸಲುವಾಗಿ ಇಲ್ಲ. ಯಾವ ಯಾವ ನಿಮಿತ್ತಗಳಿಂದ ದುಃಖವಾಗುತ್ತದೆಂಬುದನ್ನು ತಿಳಿಯುತ್ತಾರೆ ಅವೆಲ್ಲವುಗಳನ್ನು ದೂರ ಮಾಡುವ ಉಪಾಯ ಮಾಡುತ್ತಾರೆ. ಇನ್ನು ಯಾವ ನಿಮಿತ್ತಗಳಿಂದ ಸುಖವಾಗುತ್ತದೆಂಬುದನ್ನು ತಿಳಿಯುತ್ತಾರೆ ಅವೆಲ್ಲವುಗಳಾಗುವ ಉಪಾಯ ಮಾಡುತ್ತಾರೆ.

ಅದರಂತೆ ಸಂಕೋಚ-ವಿಸ್ತಾರ ಮೊದಲಾದ ಅವಸ್ಥೆಗಳು ಕೂಡ ಆತ್ಮನಿಗೆ ಆಗುತ್ತವೆ, ಮತ್ತು ಅನೇಕ ಪರದ್ರವ್ಯಗಳ ಸಂಯೋಗವು ಕೂಡ ದೊರಕುತ್ತದೆ; ಆದರೆ ಯಾವವುಗಳಿಂದ ಸುಖ-ದುಃಖವಾಗುವುದನ್ನು ತಿಳಿಯುವುದಿಲ್ಲ ಅವನ್ನು ದೂರ ಮಾಡುವ ಮತ್ತು ಇರುವ ಯಾವುದೇ ಉಪಾಯವನ್ನು ಯಾರೂ ಮಾಡುವುದಿಲ್ಲ.

ಆತ್ಮದ್ರವ್ಯದ ಸ್ವಭಾವವು ಹೀಗೆಯೇ ಇದೆಯೆಂದು ತಿಳಿಯುವುದು. ಇನ್ನುಳಿದ ಎಲ್ಲ ಅವಸ್ಥೆಗಳನ್ನು ಸಹಿಸುವ ಸಾಧ್ಯತೆಯಿದೆ, ಆದರೆ ಒಂದು ದುಃಖವನ್ನು ಸಹಿಸುವ ಸಾಧ್ಯತೆಯಿಲ್ಲ. ಪರವಶತೆಯಿಂದ ದುಃಖವಾದರೆ ಜೀವನು ಏನು ಮಾಡುವನು, ಅದನ್ನು ಭೋಗಿಸುತ್ತಾನೆ; ಆದರೆ ಸ್ವವಶತೆಯಿಂದ ಮಾತ್ರ ಕಿಂಚಿತ್ ದುಃಖವನ್ನು ಸಹನೆ ಮಾಡುವುದಿಲ್ಲ. ಮತ್ತು ಸಂಕೋಚ-ವಿಸ್ತಾರ ಮೊದಲಾದ ಅವಸ್ಥೆಗಳು ಹೇಗಾಗುವವು ಹಾಗಾಗಲಿ, ಅವನ್ನು ಸ್ವವಶತೆಯಿಂದಲೂ ಭೋಗಿಸುತ್ತಾನೆ; ಆ ಸ್ವಭಾವದಲ್ಲಿ ತರ್ಕ ನಡೆಯುವುದಿಲ್ಲ. ಆತ್ಮನ ಸ್ವಭಾವವೇ ಹೀಗಿದೆಯೆಂದು ತಿಳಿಯುವುದು.

ನೋಡಿರಿ ! ದುಃಖವಿದ್ದಾಗ ಮಲಗಿಕೊಂಡಿರಲು ಬಯಸುತ್ತಾನೆ; ಆ ಮಲಗಿಕೊಂಡಿರುವಲ್ಲಿ ಜ್ಞಾನಾದಿಗಳು ಮಂದವಾಗಿ ಹೋಗುತ್ತವೆ, ಆದರೆ ಜಡದಂತಾಗಿಯೂ ಕೂಡ ದುಃಖವನ್ನು ದೂರಮಾಡಲು ಬಯಸುತ್ತಾನೆ. ಮತ್ತು ಸಾಯಲು ಬಯಸುತ್ತಾನೆ; ಆ ಸತ್ತು ಬಿಡುವುದರಲ್ಲಿ ತನ್ನ ನಾಶವನ್ನು ಮನ್ನಿಸುತ್ತಾನೆ, ಆದರೆ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಕೂಡ ದುಃಖದೂರ ಮಾಡಲು ಬಯಸುತ್ತಾನೆ. ಆದುದರಿಂದ ಒಂದು ದುಃಖರೂಪವಾದ ಪರ್ಯಾಯದ ಅಭಾವ ಮಾಡುವುದೇ ಇವನ ಕರ್ತವ್ಯವಿದೆ.

ಅದರಂತೆ ದುಃಖವಿಲ್ಲದಿರುವುದೇ ಸುಖವಿದೆ; ಏಕೆಂದರೆ ಆಕುಲತೆಯ ಲಕ್ಷಣ ಯುಕ್ತವಾದ ದುಃಖದ ಅಭಾವವೆಂದರೇನೇ ನಿರಾಕುಲಲಕ್ಷಣ ಸುಖವಿದೆಯೆಂಬುದು ಪ್ರತ್ಯಕ್ಷ ಕಂಡು ಬರುತ್ತದೆ. ಬಾಹ್ಯದಲ್ಲಿ ಯಾವುದೇ ಸಾಮಗ್ರಿಯ ಸಂಯೋಗವು ದೊರಕಲಿ ಅದರಿಂದ ಅಂತರಂಗದಲ್ಲಿ ಆಕುಲತೆಯಿದ್ದು ಅದು ದುಃಖವೇ ಇದೆ; ಯಾವುದರಿಂದ ಆಕುಲತೆಯಿಲ್ಲ ಅದು ಸುಖವಿದೆ ಎಂದರೆ ಬಾಹ್ಯ ಸಾಮಗ್ರಿಗಳ ಸಂಯೋಗದಿಂದ ಅಂತರಂಗದಲ್ಲಿ ಆಕುಲನಾಗುವವನು ದುಃಖಿಯಿದ್ದರೆ ಆಕುಲತೆಯಿಲ್ಲದವನು ಸುಖಿಯಿದ್ದಾನೆ. ಮತ್ತು ರಾಗ ಮೊದಲಾದ ಕಷಾಯ ಭಾವಗಳಾದ ಮೇಲೆ ಆಕುಲತೆಯಾಗುತ್ತದೆ ಏಕೆಂದರೆ ರಾಗಾದಿಭಾವಗಳಿಂದ ಇವನು ದ್ರವ್ಯಗಳನ್ನು ಬೇರೆ ಪ್ರಕಾರ ಪರಿಣಮಿತ ಮಾಡಲು ಇಚ್ಛಿಸುವನು, ಮತ್ತು ಆ ದ್ರವ್ಯಗಳು ಬೇರೆ ಪ್ರಕಾರ ಪರಿಣಮಿತವಾಗುವವು; ಆಗ ಇವನಿಗೆ ಆಕುಲತೆಯಾಗುತ್ತದೆ. ಆಗ ಬೇಕಾದರೆ ತನ್ನ ರಾಗಾದಿಗಳು ದೂರವಾಗಬೇಕು ಇಲ್ಲವೆ ತಾನು ಬಯಸಿದ ಪ್ರಕಾರವೇ ಸಮಸ್ತ ದ್ರವ್ಯಗಳು ಪರಿಣಮಿತವಾಗಬೇಕು; ಎಂದರೆ ಆಕುಲತೆಯು ನಾಶವಾಗುವುದು; ಆದರೆ ಸಮಸ್ತ ದ್ರವ್ಯಗಳು ಇವನ ಆಧೀನವಿಲ್ಲ. ಎಂದಾದರೊಮ್ಮೆ ಯಾವುದೇ ದ್ರವ್ಯವು ಇವನ ಇಚ್ಛೆಯಿರುವಂತೆಯೇ ಪರಿಣಮಿತವಾದಾಗಲೂ ಇವನ ಆಕುಲತೆಯು ಸರ್ವಥಾ ದೂರವಾಗುವುದಿಲ್ಲ, ಸಮಸ್ತ ಕಾರ್ಯಗಳು ಇವನು ಇಚ್ಛಿಸಿದ ಹಾಗೆಯೇ ಆದರೆ, ಅನ್ಯಥಾ ಆಗದಿದ್ದರೆ ಇವನು ನಿರಾಕುಲನಿರುವನು; ಆದರೆ ಇದಂತೂ ಆಗುವ ಸಾಧ್ಯತೆಯೇ ಇಲ್ಲ, **ಏಕೆಂದರೆ ಒಂದು ದ್ರವ್ಯದ ಪರಿಣಮನವು ಇನ್ನೊಂದು ದ್ರವ್ಯದ ಆಧೀನವಿಲ್ಲ. ಆದುದರಿಂದ ತಮ್ಮ ರಾಗಾದಿ ಭಾವಗಳು ದೂರವಾದ ಮೇಲೆ ನಿರಾಕುಲತೆಯಾಗುವುದು, ಎಂದರೆ ಈ ಕಾರ್ಯವು ಆಗುವ ಸಾಧ್ಯತೆಯಿದೆ;** ಏಕೆಂದರೆ ರಾಗಾದಿ ಭಾವಗಳು ಆತ್ಮನ ಸ್ವಭಾವ ಭಾವಗಳಂತೂ ಇಲ್ಲ, ಅವು ಔಪಾಧಿ

ಕ ಭಾವಗಳಿದ್ದು ಪರನಿಮಿತ್ತದಿಂದ ಆಗಿವೆ, ಮತ್ತು ಆ ನಿಮಿತ್ತವು ಮೋಹಕರ್ಮದ ಉದಯವಿದೆ; ಅದರ ಅಭಾವವಾದ ಮೇಲೆ ಸಮಸ್ತ ರಾಗಾದಿಗಳು ವಿಲಯವಾಗಿ ಹೋಗುವವು. ಆಗ ಆಕುಲತೆಯ ನಾಶವಾದ ಮೇಲೆ ದುಃಖವು ದೂರವಾಗುವುದು, ಸುಖದ ಪ್ರಾಪ್ತಿಯಾಗುವುದು. ಆದುದರಿಂದ ಮೋಹಕರ್ಮದ ನಾಶಮಾಡುವುದು ಹಿತಕರವಿದೆ.

ಮತ್ತು ಆ ಆಕುಲತೆಗೆ ಜ್ಞಾನಾವರಣಾದಿಗಳ ಉದಯವು ಸಹಕಾರಿ ಕಾರಣವಿದೆ. ಜ್ಞಾನಾವರಣ, ದರ್ಶನಾವರಣಗಳ ಉದಯದಿಂದ ಜ್ಞಾನ-ದರ್ಶನಗಳು ಸಂಪೂರ್ಣವಾಗಿ ಪ್ರಕಟವಾಗುವುದಿಲ್ಲ; ಆದುದರಿಂದ ಇವನಿಗೆ ನೋಡುವ-ತಿಳಿದುಕೊಳ್ಳುವ ಆಕುಲತೆಯಾಗುತ್ತದೆ. ಅಥವಾ ಸಂಪೂರ್ಣ ವಸ್ತುವಿನ ಸ್ವಭಾವವು ತಿಳಿಯದಿರುವಾಗ ರಾಗಾದಿಗಳ ರೂಪವಾಗಿ ಪ್ರವರ್ತಿಸುತ್ತಾನೆ, ಆಗ ಆಕುಲತೆಯಾಗುತ್ತದೆ.

ಅದರಂತೆ ಅಂತರಾಯದ ಉದಯದಿಂದ ಇಚ್ಛೆಗೆ ಅನುಸರಿಸಿ ದಾನಾದಿ ಕಾರ್ಯಗಳು ಆಗದಿರುವಾಗ ಆಕುಲತೆಯಾಗುತ್ತದೆ. ಮೋಹಕರ್ಮದ ಉದಯವಾದ ಮೇಲೆ ಅವುಗಳ ಉದಯವಿದೆ ಅದು ಆಕುಲತೆಗೆ ಸಹಕಾರಿ ಕಾರಣವಿದೆ; ಮೋಹದ ಉದಯದ ನಾಶವಾದ ಮೇಲೆ ಅವುಗಳ ಬಲವಿರುವುದಿಲ್ಲ; ಅವು ಅಂತರ್ಮುಹೂರ್ತ ಕಾಲದಲ್ಲಿ ತಮ್ಮಿಂದ ತಾವೇ ನಾಶಕ್ಕೆ ಪ್ರಾಪ್ತವಾಗುತ್ತವೆ; ಆದರೆ ಸಹಕಾರಿ ಕಾರಣಗಳು ಕೂಡ ದೂರವಾದಾಗ ಪ್ರಕಟರೂಪದಿಂದ ನಿರಾಕುಲದಶೆಯು ಭಾಸವಾಗುತ್ತದೆ. ಆಗ ಕೇವಲಜ್ಞಾನಿ ಭಗವಂತರು ಅನಂತಸುಖರೂಪವಾದ ಅವಸ್ಥೆಗೆ ಪ್ರಾಪ್ತರಾದರೆಂದು ಹೇಳಲಾಗುತ್ತದೆ.

ಅದರಂತೆ ಅಘಾತಿಕರ್ಮಗಳ ಉದಯದ ನಿಮಿತ್ತದಿಂದ ಶರೀರ ಮೊದಲಾದವುಗಳ ಸಂಯೋಗವಾಗುತ್ತದೆ; ಆಗ ಮೋಹಕರ್ಮದ ಉದಯವಿರುವುದರಿಂದ ಶರೀರ ಮೊದಲಾದವುಗಳ ಸಂಯೋಗವು ಆಕುಲತೆಗೆ ಬಾಹ್ಯ ಸಹಕಾರಿ ಕಾರಣವಿದೆ. ಅಂತರಂಗ ಮೋಹದ ಉದಯದಿಂದ ರಾಗಾದಿಗಳಾಗುವವು ಮತ್ತು ಬಾಹ್ಯ ಅಘಾತಿಕರ್ಮಗಳ ಉದಯದಿಂದ ರಾಗಾದಿಗಳಿಗೆ ಕಾರಣವಾದ ಶರೀರ ಮೊದಲಾದವುಗಳ ಸಂಯೋಗವಾದಾಗ ಆಕುಲತೆಯು ಉತ್ಪನ್ನವಾಗುತ್ತದೆ, ಮತ್ತು ಮೋಹದ ಉದಯದ ನಾಶವಾದ ನಂತರವೂ ಕೂಡ ಅಘಾತಿಕರ್ಮದ ಉದಯವಿರುತ್ತದೆ ಅದು ಒಂದಿಷ್ಟೂ ಆಕುಲತೆಯನ್ನು ಉತ್ಪನ್ನಮಾಡುವುದಿಲ್ಲ; ಆದರೆ ಅದು ಪೂರ್ವದಲ್ಲಿ ಆಕುಲತೆಗೆ ಸಹಕಾರೀ ಕಾರಣವಿರುವುದರಿಂದ ಅಘಾತಿಕರ್ಮದ ನಾಶವು ಕೂಡ ಆತ್ಮನಿಗೆ ಇಷ್ಟವೇ ಇದೆ. ಕೇವಲಿಗಳಿಗೆ ಇವುಗಳಿದ್ದರೂ ಕೂಡ ಯಾವ ದುಃಖವಿಲ್ಲದಿರುವುದರಿಂದ ಇವುಗಳ ನಾಶದ ಉದ್ಯಮವೂ ಇರುವುದಿಲ್ಲ; ಆದರೆ ಮೋಹದ ನಾಶವಾದನಂತರ ಈ ಕರ್ಮಗಳು ತನ್ನಿಂದ ತಾನೇ ಅಲ್ಪ ಸಮಯದಲ್ಲಿಯೇ ಸಂಪೂರ್ಣನಾಶಕ್ಕೆ ಪ್ರಾಪ್ತವಾಗುತ್ತವೆ.

ಈ ಪ್ರಕಾರ ಸಮಸ್ತ ಕರ್ಮಗಳ ನಾಶವಾಗುವುದರಲ್ಲಿಯೇ ಆತ್ಮನ ಹಿತವಿದೆ. ಮತ್ತು ಸಮಸ್ತ ಕರ್ಮಗಳ ನಾಶದ ಹೆಸರೇ ಮೋಕ್ಷವಿದೆ. ಆದುದರಿಂದ ಆತ್ಮನಹಿತವು ಒಂದು ಮೋಕ್ಷವೇ ಇದೆ, ಮತ್ತೇನೂ ಇಲ್ಲವೆಂದು ನಿಶ್ಚಯ ಮಾಡುವುದು.

**ಪ್ರಶ್ನೆ** :- ಸಂಸಾರದಶೆಯಲ್ಲಿ ಪುಣ್ಯಕರ್ಮದ ಉದಯವಾದ ಮೇಲೂ ಜೀವನು ಸುಖಿಯಾಗುತ್ತಾನೆ; ಆದುದರಿಂದ ಕೇವಲ ಮೋಕ್ಷವೇ ಹಿತಕಾರಕವಿದೆಯೆಂದು ಏತಕ್ಕಾಗಿ ಹೇಳುತ್ತಿರುವಿರಿ ?

**ಉತ್ತರ ಃ-** ಸಂಸಾರದಶೆಯಲ್ಲಿ ಸುಖವಂತೂ ಸರ್ವಥಾ ಇಲ್ಲವೇ ಇಲ್ಲ; ದುಃಖವೇ ಇದೆ. ಆದರೆ ಒಬ್ಬನಿಗೆ ಒಮ್ಮೆ ಅಧಿಕ ದುಃಖವಿರುತ್ತದೆ, ಮತ್ತೊಬ್ಬನಿಗೆ ಒಮ್ಮೆ ಕಡಿಮೆ ದುಃಖವಿರುತ್ತದೆ; ಆದರೆ ಮೊದಲು ಅಧಿಕ ದುಃಖವಿದ್ದರೆ ಅಥವಾ ಅನ್ಯ ಜೀವರುಗಳಿಗೆ ಅಧಿಕ ದುಃಖವು ಕಂಡು ಬರುತ್ತಿದ್ದರೆ ಆ ಅಪೇಕ್ಷೆಯಿಂದ ಕಡಿಮೆ ದುಃಖವಿರುವವನನ್ನು ಸುಖಿಯೆಂದು ಹೇಳುತ್ತಾರೆ. ಮತ್ತು ಅದೇ ಅಭಿಪ್ರಾಯದಿಂದ ಕಡಿಮೆ ದುಃಖವುಳ್ಳವನು ತನ್ನನ್ನು ಸುಖಿಯೆಂದು ಮನ್ನಿಸುತ್ತಾನೆ; ವಾಸ್ತವಿಕವಾಗಿ ಸುಖವು ಇಲ್ಲವೇ ಇಲ್ಲ. ಇನ್ನು ಅಲ್ಪವಾದ ದುಃಖವು ಯಾವಾಗಲೂ ಇರುತ್ತಿದ್ದರೆ ಅದನ್ನು ಕೂಡ ಹಿತರೂಪವೆನ್ನಬಹುದಾಗಿದೆ; ಆದರೆ ಅದು ಕೂಡ ಇಲ್ಲ; ಸ್ವಲ್ಪ ಕಾಲವೇ ಪುಣ್ಯದ ಉದಯವಿರುತ್ತದೆ, ಆಗ ಅಲ್ಲಿ ಕಡಿಮೆ ದುಃಖವಿರುತ್ತದೆ ಅನಂತರ ಅಧಿಕ ದುಃಖವಾಗಿ ಬಿಡುತ್ತದೆ; ಆದುದರಿಂದ ಸಂಸಾರದ ಅವಸ್ಥೆಯು ಹಿತರೂಪವಿಲ್ಲ.

ಹೇಗೆಂದರೆ ಒಬ್ಬನಿಗೆ ವಿಷಮಜ್ವರವಿದೆ; ಅವನಿಗೆ ಒಮ್ಮೆ ಅಸಾತಾ ಅಧಿಕವಿರುತ್ತದೆ, ಒಮ್ಮೆ ಕಡಿಮೆಯಿರುತ್ತದೆ. ಕಡಿಮೆ ಅಸಾತಾ ಇದ್ದರೆ ಅವನು ತನಗೆ ಒಳ್ಳೆಯದಿದೆಯೆಂದು ಮನ್ನಿಸುತ್ತಾನೆ ಜನರು ಕೂಡ ಒಳ್ಳೆಯದಿದೆಯೆಂದು ಹೇಳುತ್ತಾರೆ; ಆದರೆ ವಾಸ್ತವಿಕವಾಗಿ ಎಲ್ಲಿಯವರೆಗೆ ಜ್ವರದ ಸದ್ಭಾವವಿದೆ ಅಲ್ಲಿಯವರೆಗೆ ಒಳ್ಳೆಯದು ಇಲ್ಲ. ಅದೇ ಪ್ರಕಾರ ಸಂಸಾರಿಗೆ ಮೋಹದ ಉದಯವಿದೆ; ಅವನಿಗೆ ಒಮ್ಮೆ ಅಧಿಕ ಆಕುಲತೆಯಿರುತ್ತದೆ, ಒಮ್ಮೆ ಕಡಿಮೆಯಿರುತ್ತದೆ. ಕಡಿಮೆ ಆಕುಲತೆಯಿದ್ದಾಗ ಅವನು ತನ್ನನ್ನು ಸುಖಿಯೆಂದು ಮನ್ನಿಸುತ್ತಾನೆ. ಜನರು ಕೂಡ ಸುಖಿಯೆಂದು ಹೇಳುತ್ತಾರೆ; ಆದರೆ ವಾಸ್ತವಿಕವಾಗಿ ಎಲ್ಲಿಯವರೆಗೆ ಮೋಹದ ಸದ್ಭಾವವಿದೆ ಅಲ್ಲಿಯವರೆಗೆ ಸುಖವಿಲ್ಲ.

ಅದರಂತೆ ಸಂಸಾರದಶೆಯಲ್ಲೂ ಆಕುಲತೆಯು ಕಡಿಮೆಯಾದ ಮೇಲೆ ಸುಖವೆಂಬ ಹೆಸರು ಪಡೆಯುತ್ತದೆ. ಆಕುಲತೆಯು ವೃದ್ಧಿಸಿದ ಮೇಲೆ ದುಃಖವೆಂಬ ಹೆಸರು ಪಡೆಯುತ್ತದೆ. ಬಾಹ್ಯ ಸಾಮಗ್ರಿಗಳಿಂದೇನೂ ಸುಖ-ದುಃಖಗಳಿಲ್ಲ. ಹೇಗೆಂದರೆ ಓರ್ವ ದರಿದ್ರನಿಗೆ ಒಂದಿಷ್ಟು ಧನದ ಪ್ರಾಪ್ತಿಯಾದಾಗ ಆಕುಲತೆಯು ಸ್ವಲ್ಪ ಕಡಿಮೆಯಾಗುವುದರಿಂದ ಅವನನ್ನು ಸುಖಿಯೆಂದು ಹೇಳುತ್ತಾರೆ, ಮತ್ತು ಅವನು ಕೂಡ ತನ್ನನ್ನು ಸುಖಿಯೆಂದು ಮನ್ನಿಸುತ್ತಾನೆ. ಅದರಂತೆ ಓರ್ವ ಅಧಿಕ ಶ್ರೀಮಂತನಿಗೆ ಒಂದಿಷ್ಟು ಧನದ ಹಾನಿಯಾದರೆ ಆಗ ಸ್ವಲ್ಪ ಆಕುಲತೆಯು ವೃದ್ಧಿಸುವುದರಿಂದ ಅವನನ್ನು ದುಃಖಿಯೆಂದು ಹೇಳುತ್ತಾರೆ ಮತ್ತು ಅವನು ಕೂಡ ತನ್ನನ್ನು ದುಃಖಿಯೆಂದೇ ಮನ್ನಿಸುತ್ತಾನೆ.

ಇದೇ ಪ್ರಕಾರ ಎಲ್ಲ ಕಡೆಗೆ ತಿಳಿಯುವುದು.

ಅದರಂತೆ ಆಕುಲತೆಯು ಹೆಚ್ಚುವುದು-ಕಡಿಮೆಯಾಗುವುದು ಕೂಡ ಬಾಹ್ಯ ಸಾಮಗ್ರಿಗಳ ಅನುಸಾರವಿಲ್ಲ, ಕಷಾಯ ಭಾವಗಳು ಹೆಚ್ಚುವುದರ-ಕಡಿಮೆಯಾಗುವುದರ ಅನುಸಾರವಿದೆ. ಹೇಗೆಂದರೆ ಒಬ್ಬನ ಹತ್ತಿರ ಅಲ್ಪ ಧನವಿದ್ದರೂ ಅವನು ಸಂತೋಷವಾಗಿದ್ದರೆ ಅವನಿಗೆ ಆಕುಲತೆಯು ಕಡಿಮೆಯಿದೆ; ಮತ್ತು ಒಬ್ಬನ ಹತ್ತಿರ ಬಹಳಷ್ಟು ಧನವಿದ್ದರೂ ಅವನಿಗೆ ತೃಷ್ಣೆಯಿದ್ದರೆ ಅವನಿಗೆ ಆಕುಲತೆಯು ಅಧಿಕವಿದೆ. ಅದರಂತೆ ಒಬ್ಬನಿಗೆ ಇನ್ನೊಬ್ಬನು ಬಹಳಷ್ಟು ಕೆಡಕು ನುಡಿ ಆಡಿದರೂ ಅವನಿಗೆ ಕ್ರೋಧ ಬಾರದಿದ್ದರೆ ಅವನಿಗೆ ಆಕುಲತೆಯಾಗುವುದಿಲ್ಲ, ಮತ್ತು ಸ್ವಲ್ಪ ಮಾತು ಆಡಿದರೂ ಕ್ರೋಧವು ಬಂದು ಬಿಟ್ಟರೆ ಅವನಿಗೆ ಆಕುಲತೆಯು ಅಧಿಕವಾಗುತ್ತದೆ. ಅದರಂತೆ

ಹಸುವಿಗೆ ಕರುವಿನಿಂದ ಯಾವ ಪ್ರಯೋಜನವೂ ಇರುವುದಿಲ್ಲ, ಆದರೆ ಮೋಹವು ಅಧಿಕವಿರುವುದರಿಂದ ಅದರ ರಕ್ಷಣೆ ಮಾಡುವುದರ ಕುರಿತು ಅಧಿಕ ಆಕುಲತೆಯಾಗುತ್ತದೆ; ಅದರಂತೆ ಯೋಧನ ಶರೀರಾದಿಗಳಿಂದ ಬಹಳಷ್ಟು ಕಾರ್ಯಗಳು ಸಾಧಿಸುತ್ತವೆ, ಆದರೆ ಸಂಗ್ರಾಮದಲ್ಲಿ ಮಾನ ಮೊದಲಾದವುಗಳ ಕಾರಣವಾಗಿ ಶರೀರದ ಮೇಲಿನ ಮೋಹವು ಕಡಿಮೆಯಾದಾಗ ಮರಣದ ಕುರಿತೂ ಕಡಿಮೆ ಆಕುಲತೆಯಾಗುತ್ತದೆ. ಆದುದರಿಂದ ಸಂಸಾರ ಅವಸ್ಥೆಯಲ್ಲಿ ಕೂಡ ಆಕುಲತೆಯು ಕ್ಷೀಣಿಸುವುದರಿಂದ-ಹೆಚ್ಚುವುದರಿಂದಲೇ ಸುಖ-ದುಃಖಗಳನ್ನು ಮನ್ನಿಸಲಾಗುತ್ತದೆಯೆಂದು ತಿಳಿಯುವುದು. ಮತ್ತು ಆಕುಲತೆಯ ಕುಂದುವಿಕೆ-ಹೆಚ್ಚುವಿಕೆಯು ರಾಗಾದಿ ಕಷಾಯಗಳು ಕುಂದುವುದರ-ಹೆಚ್ಚುವುದರ ಅನುಸಾರವಿದೆ.

ಅದರಂತೆ ಪರದ್ರವ್ಯರೂಪವಾದ ಬಾಹ್ಯ ಸಾಮಗ್ರಿಗಳ ಅನುಸಾರ ಸುಖ-ದುಃಖಗಳಿಲ್ಲ. ಕಷಾಯಗಳಿಂದ ಇವನಿಗೆ ಇಚ್ಛೆಯು ಉತ್ಪನ್ನವಾದಾಗ ಮತ್ತು ಈತನ ಇಚ್ಛೆಗೆ ಅನುಸರಿಸಿ ಬಾಹ್ಯ ಸಾಮಗ್ರಿಗಳು ದೊರಕಿದಾಗ ಇವನಿಗೆ ಒಂದಿಷ್ಟು ಕಷಾಯದ ಉಪಶಮನವಾಗುವುದರಿಂದ ಆಕುಲತೆಯು ಕಡಿಮೆಯಾಗುತ್ತದೆ ಆಗ ಸುಖವೆಂದು ಮನ್ನಿಸುತ್ತಾನೆ. ಮತ್ತು ಇಚ್ಛೆಗೆ ಅನುಸರಿಸಿ ಸಾಮಗ್ರಿಗಳು ದೊರಕದಿರುವಾಗ ಕಷಾಯವು ವೃದ್ಧಿಸುವುದರಿಂದ ಆಕುಲತೆಯು ಹೆಚ್ಚುತ್ತದೆ, ಆಗ ದುಃಖವೆಂದು ಮನ್ನಿಸುತ್ತಾನೆ, ನಿಜವಾಗಿ ಇರುವುದೇ ಹೀಗೆ; ಆದರೆ ಇವನು ತನಗೆ ಪರದ್ರವ್ಯದ ನಿಮಿತ್ತದಿಂದ ಸುಖ-ದುಃಖಗಳಾಗುತ್ತವೆಂದು ತಿಳಿಯುತ್ತಾನೆ. ಹೀಗೆ ತಿಳಿಯುವುದು ಭ್ರಾಂತಿಯೇ ಇದೆ. ಆದುದರಿಂದ ಸಂಸಾರ ಅವಸ್ಥೆಯಲ್ಲಿ ಒಂದಿಷ್ಟು ಕಷಾಯವು ಕಡಿಮೆಯಾಗುವುದರಿಂದ ಸುಖವೆಂದು ಮನ್ನಿಸುತ್ತಾನೆ, ಅದನ್ನು ಹಿತವೆಂದು ತಿಳಿಯುತ್ತಾನೆ; ಆದರೆ ಸರ್ವಥಾ ಕಷಾಯವು ದೂರವಾದ ಮೇಲೆ ಮತ್ತು ಕಷಾಯದ ಕಾರಣಗಳು ದೂರವಾದ ಮೇಲೆ ಪರಮ ನಿರಾಕುಲತೆಯಾಗುವುದರಿಂದ ಅನಂತ ಸುಖದ ಪ್ರಾಪ್ತಿಯಾಗುವಂಥ ಮೋಕ್ಷದ ಅವಸ್ಥೆಗೆ ಹಿತಕರವೆಂದು ಏಕೆ ಮನ್ನಿಸುವುದಿಲ್ಲವೆಂಬುದರ ವಿಚಾರವನ್ನಿಲ್ಲಿ ಮಾಡಬೇಕು.

ಅದರಂತೆ ಸಂಸಾರ ಅವಸ್ಥೆಯಲ್ಲಿ ಉಚ್ಚಪದವನ್ನು ಪ್ರಾಪ್ತಮಾಡಿಕೊಂಡಿದ್ದರೂ ವಿಷಯಸಾಮಗ್ರಿಗಳನ್ನು ದೊರಕಿಸಿಕೊಳ್ಳುವ ಆಕುಲತೆಯಿರುತ್ತದೆ, ಅಥವಾ ವಿಷಯ ಸೇವನೆಯ ಆಕುಲತೆಯಿರುತ್ತದೆ, ಅಥವಾ ತನಗೆ ಬೇರಾವುದೋ ಕ್ರೋಧಾದಿ ಕಷಾಯದಿಂದ ಇಚ್ಛೆಯು ಉತ್ಪನ್ನವಾಗಿದ್ದರೆ ಅದನ್ನು ಪೂರ್ಣ ಮಾಡುವ ಆಕುಲತೆಯಿರುತ್ತದೆ; ಎಂದೂ ಸರ್ವಥಾ ನಿರಾಕುಲವಾಗುವ ಸಾಧ್ಯತೆಯಿಲ್ಲ; ಅಭಿಪ್ರಾಯದಲ್ಲಿ ಅನೇಕ ಪ್ರಕಾರದ ಆಕುಲತೆಯು ಅಖಂಡವಾಗಿಯೇ ಇರುತ್ತದೆ. ಮತ್ತು ಯಾವುದೇ ಆಕುಲತೆಯನ್ನು ದೂರಮಾಡುವ ಸಲುವಾಗಿ ಬಾಹ್ಯ ಉಪಾಯ ಮಾಡಿದರೂ ಮೊದಲಂತೂ ಕಾರ್ಯಸಿದ್ಧಿಯಾಗುವುದಿಲ್ಲ; ಒಂದು ವೇಳೆ ಭವಿತವ್ಯಯೋಗದಿಂದ ಆ ಕಾರ್ಯದ ಸಿದ್ಧಿಯಾಗಿ ಹೋದರೆ ಕೂಡಲೇ ಬೇರೊಂದು ಆಕುಲತೆಯನ್ನು ದೂರಮಾಡುವ ಉಪಾಯದಲ್ಲಿ ತೊಡಗುತ್ತಾನೆ. **ಈ ಪ್ರಕಾರ ಆಕುಲತೆಯನ್ನು ದೂರಮಾಡುವ ಆಕುಲತೆಯು ನಿರಂತರ ಇದ್ದೇ ಇರುತ್ತದೆ.** ಒಂದು ವೇಳೆ ಇಂಥ ಆಕುಲತೆಯಿಲ್ಲದಿದ್ದರೆ ಅವನು ಹೊಸ-ಹೊಸ ವಿಷಯಸೇವನೆ ಮೊದಲಾದ ಕಾರ್ಯಗಳಲ್ಲಿ ಏತಕ್ಕಾಗಿ ಪ್ರವರ್ತಿಸುತ್ತಾನೆ? ಆದುದರಿಂದ ಸಂಸಾರ ಅವಸ್ಥೆಯಲ್ಲಿ ಪುಣ್ಯದ ಉದಯದಿಂದ ಇಂದ್ರ-ಅಹಮಿಂದ್ರ ಮೊದಲಾದ ಪದಗಳನ್ನು ಪ್ರಾಪ್ತಮಾಡಿಕೊಂಡರೂ ಕೂಡ ನಿರಾಕುಲತೆಯಾಗುವುದಿಲ್ಲ, ದುಃಖಿಯಾಗಿಯೇ ಇರುತ್ತಾನೆ. ಆದುದರಿಂದ ಸಂಸಾರದ ಅವಸ್ಥೆಯು ಹಿತಕರವಾಗಿಲ್ಲ.

ಇನ್ನು ಮೋಕ್ಷದ ಅವಸ್ಥೆಯಲ್ಲಿ ಯಾವುದೇ ಪ್ರಕಾರದ ಆಕುಲತೆಯು ಉಳಿಯದಿರುವುದರಿಂದ ಆಕುಲತೆಯನ್ನು ನಾಶಮಾಡುವ ಉಪಾಯಮಾಡುವುದರದೂ ಪ್ರಯೋಜನವಿಲ್ಲ; ಸದಾಕಾಲ ಶಾಂತರಸದಿಂದ ಸುಖಿಯಾಗಿರುತ್ತಾರೆ, ಆದುದರಿಂದ ಮೋಕ್ಷದ ಅವಸ್ಥೆಯೇ ಹಿತಕಾರಕವಿದೆ. ಈ ಮೊದಲು ಸಂಸಾರ ಅವಸ್ಥೆಯಲ್ಲಿನ ದುಃಖದ ಹಾಗೂ ಮೋಕ್ಷ ಅವಸ್ಥೆಯಲ್ಲಿನ ಸುಖದ ವಿಶೇಷ ವರ್ಣನೆ ಮಾಡಿದೆ, ಅದನ್ನು ಇದೇ ಪ್ರಯೋಜನದ ಸಲುವಾಗಿ ಮಾಡಲಾಗಿದೆ. **ಅದರದೂ ವಿಚಾರ ಮಾಡಿ ಮೋಕ್ಷವನ್ನು ಹಿತರೂಪವೆಂದು ತಿಳಿದುಕೊಂಡು ಮೋಕ್ಷದ ಉಪಾಯ ಮಾಡಬೇಕು. ಸಮಸ್ತ ಉಪದೇಶದ ತಾತ್ಪರ್ಯವು ಇಷ್ಟು ಮಾತ್ರವಿದೆ.**

## ಪುರುಷಾರ್ಥದಿಂದಲೇ ಮೋಕ್ಷಪ್ರಾಪ್ತಿ :-

**ಪ್ರಶ್ನೆ :-** ಮೋಕ್ಷದ ಉಪಾಯವು ಕಾಲಲಬ್ಧಿ ಬಂದ ಮೇಲೆ ಭವಿತವ್ಯಕ್ಕೆ ಅನುಸರಿಸಿ ಆಗುತ್ತದೆಯೋ ಅಥವಾ ಮೋಹ ಮೊದಲಾದವು ಉಪಶಮವಾದ ಮೇಲೆ ಆಗುತ್ತದೆಯೋ, ಅಥವಾ ತಮ್ಮ ಪುರುಷಾರ್ಥದಿಂದ ಪ್ರಯತ್ನ ಮಾಡಿದ ಮೇಲೆ ಆಗುತ್ತದೆಯೋ ? - ಎಂಬುದನ್ನು ಹೇಳಿರಿ. ಒಂದು ವೇಳೆ ಮೊದಲಿನ ಎರಡು ಕಾರಣಗಳು ದೊರಕಿದ ಮೇಲೆ ಆಗುತ್ತಿದ್ದರೆ ನಮಗೆ ಏತಕ್ಕಾಗಿ ಉಪದೇಶ ಕೊಡುತ್ತಿರುವಿರಿ ? ಮತ್ತು ಪುರುಷಾರ್ಥದಿಂದ ಆಗುತ್ತಿದ್ದರೆ ಎಲ್ಲರೂ ಉಪದೇಶ ಕೇಳುತ್ತಾರೆ ಅವರಲ್ಲಿ ಕೆಲವರು ಉಪಾಯ ಮಾಡುತ್ತಾರೆ, ಕೆಲವರು ಮಾಡುವುದಿಲ್ಲ; ಇದಕ್ಕೆ ಕಾರಣವೇನು ?

**ಉತ್ತರ :-** ಒಂದು ಕಾರ್ಯವಾಗುವಲ್ಲಿ ಅನೇಕ ಕಾರಣಗಳು ದೊರಕುತ್ತವೆ. ಆ ಮೋಕ್ಷದ ಉಪಾಯವಾಗುವಲ್ಲಿ ಯಂತೂ ಪೂರ್ವೋಕ್ತ ಮೂರೂ ಕಾರಣಗಳು ದೊರಕುತ್ತವೆ, ಮತ್ತು ಆಗದಿರುವಲ್ಲಿ ಮೂರೂ ಕಾರಣಗಳು ದೊರಕುವುದಿಲ್ಲ, ಪೂರ್ವೋಕ್ತ ಮೂರು ಕಾರಣಗಳನ್ನು ಹೇಳಿದೆ ಅವುಗಳಲ್ಲಿ ಕಾಲಲಬ್ಧಿ ಮತ್ತು ಭವಿತವ್ಯವಂತೂ ಯಾವ ವಸ್ತುಗಳಿಲ್ಲ; ಯಾವ ಕಾಲದಲ್ಲಿ ಕಾರ್ಯವಾಗುತ್ತದೆ ಅದೇ ಕಾಲಲಬ್ಧಿಯಿದೆ ಮತ್ತು ಯಾವ ಕಾರ್ಯವಾಯಿತು ಅದುವೇ ಭವಿತವ್ಯವಿದೆ. ಇನ್ನು ಆ ಕರ್ಮದ ಉಪಶಮ ಮೊದಲಾದವು ಪುದ್ಗಲದ ಶಕ್ತಿಯಿದ್ದು ಆತ್ಮನು ಅದರ ಕರ್ತೃಹರ್ತೃವಿಲ್ಲ, ಅಲ್ಲದೆ ಪುರುಷಾರ್ಥದಿಂದ ಪ್ರಯತ್ನ ಮಾಡುತ್ತಾರೆ ಅದು ಈ ಆತ್ಮನ ಕಾರ್ಯವಿದೆ; ಆದುದರಿಂದ ಆತ್ಮನಿಗೆ ಪುರುಷಾರ್ಥದಿಂದ ಪ್ರಯತ್ನ ಮಾಡುವ ಉಪದೇಶ ಕೊಡುತ್ತಾರೆ.

ಈ ಆತ್ಮನು ಯಾವ ಕಾರಣದಿಂದ ಅವಶ್ಯವಾಗಿ ಕಾರ್ಯಸಿದ್ಧಿಯಾಗುವುದು ಆ ಕಾರಣ ರೂಪವಾಗಿ ಉದ್ಯಮ ಮಾಡಬೇಕು, ಅಲ್ಲಿ ಇತರ ಕಾರಣಗಳು ದೊರಕೇ ದೊರಕುತ್ತವೆ, ಮತ್ತು ಕಾರ್ಯದ ಸಿದ್ಧಿಯೂ ಕೂಡ ಆಗಿಯೇ ಆಗುತ್ತದೆ. ಇನ್ನು ಯಾವ ಕಾರಣದಿಂದ ಕಾರ್ಯದ ಸಿದ್ಧಿಯಾಗುವುದು ಅಥವಾ ಆಗುವುದೂ ಇಲ್ಲ, ಆ ಕಾರಣರೂಪವಾಗಿ ಉದ್ಯಮ ಮಾಡಿದರೆ ಅಲ್ಲಿ ಅನ್ಯಕಾರಣಗಳು ದೊರೆತರೆ ಕಾರ್ಯಸಿದ್ಧಿಯಾಗುತ್ತದೆ, ದೊರಕದಿದ್ದರೆ ಸಿದ್ಧಿಯಾಗುವದಿಲ್ಲ.

ಜಿನಾಗಮದಲ್ಲಿ ಹೇಳಿರುವ ಮೋಕ್ಷದ ಉಪಾಯದಿಂದಂತೂ ಮೋಕ್ಷವು ಆಗಿಯೇ ಆಗುತ್ತದೆ. ಆದುದರಿಂದ ಯಾವ ಜೀವನು ಪುರುಷಾರ್ಥದಿಂದ ಜಿನೇಶ್ವರರ ಉಪದೇಶಕ್ಕೆ ಅನುಸರಿಸಿ ಮೋಕ್ಷದ ಉಪಾಯ ಮಾಡುತ್ತಾನೆ ಅವನಿಗೆ ಕಾಲಲಬ್ಧಿ ಹಾಗೂ ಭವಿತವ್ಯವೂ ಕೂಡಿ ಬಂದಿದ್ದರೆ ಮತ್ತು ಕರ್ಮದ ಉಪಶಮ ಮೊದಲಾದವುಗಳಾಗಿದ್ದರೆ ಅವನು ಇಂಥ ಉಪಾಯ ಮಾಡುತ್ತಾನೆ. ಆದುದರಿಂದ ಯಾವನು ಪುರುಷಾರ್ಥದಿಂದ ಮೋಕ್ಷದ ಉಪಾಯ

ಮಾಡುತ್ತಾನೆ ಅವನಿಗೆ ಎಲ್ಲ ಕಾರಣಗಳು ದೊರಕುತ್ತವೆ ಮತ್ತು ಅವನಿಗೆ ಅವಶ್ಯವಾಗಿ ಮೋಕ್ಷದ ಪ್ರಾಪ್ತಿಯಾಗುತ್ತದೆಂದು ನಿಶ್ಚಯ ಮಾಡುವುದು. ಇನ್ನು ಯಾವ ಜೀವನು ಪುರುಷಾರ್ಥದಿಂದ ಮೋಕ್ಷದ ಉಪಾಯ ಮಾಡುವುದಿಲ್ಲ ಅವನಿಗೆ ಕಾಲಲಬ್ಧಿ ಹಾಗೂ ಭವಿತವ್ಯವೂ ಇಲ್ಲದಿದ್ದರೆ ಮತ್ತು ಕರ್ಮದ ಉಪಶಮಾದಿಗಳೂ ಆಗಿರದಿದ್ದರೆ ಇವನು ಉಪಾಯ ಮಾಡುವುದಿಲ್ಲ. ಆದುದರಿಂದ ಯಾವನು ಪುರುಷಾರ್ಥದಿಂದ ಮೋಕ್ಷದ ಉಪಾಯ ಮಾಡುವುದಿಲ್ಲ ಅವನಿಗೆ ಯಾವ ಕಾರಣಗಳು ದೊರಕುವುದಿಲ್ಲ ಮತ್ತು ಅವನಿಗೆ ಮೋಕ್ಷದ ಪ್ರಾಪ್ತಿಯು ಆಗುವುದಿಲ್ಲವೆಂದು ನಿಶ್ಚಯ ಮಾಡುವುದು.

**ಪ್ರಶ್ನೆ :-** ಉಪದೇಶವನ್ನಂತೂ ಎಲ್ಲರೂ ಕೇಳುತ್ತಾರೆ, ಆದರೆ ಒಬ್ಬನು ಮೋಕ್ಷದ ಉಪಾಯ ಮಾಡುವ ಸಾಧ್ಯತೆಯಿದೆ, ಒಬ್ಬನು ಮಾಡುವ ಸಾಧ್ಯತೆಯಿಲ್ಲ; ಇದರ ಕಾರಣವೇನು ?

**ಉತ್ತರ :-** ಯಾರು ಉಪದೇಶ ಕೇಳಿ ಪುರುಷಾರ್ಥ ಮಾಡುತ್ತಾರೆ ಅವರು ಮೋಕ್ಷದ ಉಪಾಯ ಮಾಡುವ ಸಾಧ್ಯತೆಯಿದೆ ಮತ್ತು ಯಾರು ಪುರುಷಾರ್ಥ ಮಾಡುವುದಿಲ್ಲ ಅವರು ಮೋಕ್ಷದ ಉಪಾಯ ಮಾಡುವ ಸಾಧ್ಯತೆಯಿಲ್ಲ. **ಉಪದೇಶವಂತೂ ಕೇವಲ ಬೋಧಕವಿದ್ದು ಫಲವು ಹೇಗೆ ಪುರುಷಾರ್ಥ ಮಾಡುತ್ತದೆ ಹಾಗೆ ದೊರಕುತ್ತದೆ.**

**ಪ್ರಶ್ನೆ :-** ದ್ರವ್ಯಲಿಂಗಿ ಮುನಿಗಳು ಮೋಕ್ಷದ ಸಲುವಾಗಿ ಗೃಹಸ್ಥಾವಸ್ಥೆಯನ್ನು ಬಿಟ್ಟುಕೊಟ್ಟು ತಪಶ್ಚರ್ಯ ಮೊದಲಾದುವನ್ನು ಮಾಡುತ್ತಾರೆ, ಅವರು ಪುರುಷಾರ್ಥ ಮಾಡಿದರೂ ಕಾರ್ಯಸಿದ್ಧಿಯಾಗಲಿಲ್ಲ; ಆದುದರಿಂದ ಪುರುಷಾರ್ಥ ಮಾಡುವುದರಿಂದಂತೂ ಯಾವ ಸಿದ್ಧಿಯಾಗುವುದಿಲ್ಲ ?

**ಉತ್ತರ :-** ವಿಪರೀತ ಪುರುಷಾರ್ಥದಿಂದ ಫಲದ ಅಪೇಕ್ಷೆ ಮಾಡಿದರೆ ಹೇಗೆ ಸಿದ್ಧಿಯಾಗುವುದು ? ತಪಶ್ಚರ್ಯ ಮೊದಲಾದ ವ್ಯವಹಾರ ಸಾಧನದಲ್ಲಿ ಅನುರಾಗಿಯಾಗಿ ಪ್ರವರ್ತಿಸಿದರೆ ಅದರ ಫಲವು ಶುಭ ಬಂಧವೆಂದು ಶಾಸ್ತ್ರದಲ್ಲಿ ಹೇಳಿದೆ, ಮತ್ತು ಅದರಿಂದ ಮೋಕ್ಷ ಬಯಸಿದರೆ ಹೇಗಾಗುವುದು ? ಇದಂತೂ ಭ್ರಮೆಯಿದೆ.

**ಪ್ರಶ್ನೆ :-** ಭ್ರಮೆಯ ಕಾರಣವು ಕೂಡ ಕರ್ಮವೇ ಇದೆ, ಪುರುಷಾರ್ಥವೇನು ಮಾಡುವುದು ?

**ಉತ್ತರ :-** ನಿಜವಾದ ಉಪದೇಶದಿಂದ ನಿರ್ಣಯ ಮಾಡಿದ ಮೇಲೆ ಭ್ರಮೆಯು ದೂರವಾಗುತ್ತದೆ; ಆದರೆ ಇಂಥ ಪುರುಷಾರ್ಥ ಮಾಡದಿರುವುದರಿಂದಲೇ ಭ್ರಮೆಯು ಉಳಿಯುತ್ತದೆ. ನಿರ್ಣಯ ಮಾಡುವ ಪುರುಷಾರ್ಥ ಮಾಡಿದರೆ ಭ್ರಮೆಗೆ ಕಾರಣವಾದ ಆ ಮೋಹಕರ್ಮದ ಉಪಶಮಾದಿಗಳು ಕೂಡ ಆಗಿ ಭ್ರಮೆಯು ದೂರವಾಗುವುದು; ಏಕೆಂದರೆ ನಿರ್ಣಯ ಮಾಡುತ್ತಿರುವಾಗ ಪರಿಣಾಮಗಳ ವಿಶುದ್ಧತೆಯಾಗುತ್ತದೆ, ಅದರಿಂದ ಮೋಹದ ಸ್ಥಿತಿ-ಅನುಭಾಗಗಳು ಕ್ಷೀಣಿಸುತ್ತವೆ.

**ಪ್ರಶ್ನೆ :-** ನಿರ್ಣಯ ಮಾಡುವಲ್ಲಿ ಉಪಯೋಗವು ತೊಡಗದಿದ್ದರೆ ಅದರ ಕಾರಣವೂ ಕರ್ಮವಿದೆಯಲ್ಲವೆ?

**ಉತ್ತರ :-** ಏಕೇಂದ್ರಿಯ ಮೊದಲಾದವುಗಳಿಗೆ ವಿಚಾರಮಾಡುವ ಶಕ್ತಿಯಿಲ್ಲ ಅವಕ್ಕಂತೂ ಕರ್ಮದ್ದು ಕಾರಣವಿದೆ. ಇವನಿಗೆ ಜ್ಞಾನಾವರಣ ಮೊದಲಾದವುಗಳ ಕ್ಷಯೋಪಶಮದಿಂದ ನಿರ್ಣಯ ಮಾಡುವ

ಶಕ್ತಿಯುಂಟಾಗಿದೆ, ಎಲ್ಲಿ ಉಪಯೋಗ ತೊಡಗಿಸುವನು ಅದರದೇ ನಿರ್ಣಯವಾಗುವ ಸಾಧ್ಯತೆಯಿದೆ. ಆದರೆ ಇವನು ಇತರ ನಿರ್ಣಯ ಮಾಡುವಲ್ಲಿ ಉಪಯೋಗ ತೊಡಗಿಸುತ್ತಾನೆ, ಇಲ್ಲಿ ಉಪಯೋಗ ತೊಡಗಿಸುವುದಿಲ್ಲ, ಆದುದರಿಂದ ಇದಂತೂ ಇವನದೇ ದೋಷವಿದೆ ಕರ್ಮದ್ದಂತೂ ಯಾವ ಪ್ರಯೋಜನವಿಲ್ಲ.

**ಪ್ರಶ್ನೆ :-** ಮೋಹವು ಸಮ್ಯಕ್ತ್ವ-ಚಾರಿತ್ರದ ಘಾತಕವಿದ್ದು, ಅದರ ಅಭಾವವಾಗದ ಹೊರತು ಮೋಕ್ಷದ ಉಪಾಯವು ಹೇಗಾಗುತ್ತದೆ ?

**ಉತ್ತರ :-** ತತ್ತ್ವನಿರ್ಣಯ ಮಾಡುವಲ್ಲಿ ಉಪಯೋಗ ತೊಡಗಿಸದಿರುವುದು ಇವನದೇ ದೋಷವಿದೆ. ಮತ್ತು ತತ್ತ್ವನಿರ್ಣಯದಲ್ಲಿ ಪುರುಷಾರ್ಥದಿಂದ ಉಪಯೋಗ ತೊಡಗಿಸಿದಾಗ ತಾನಾಗಿಯೇ ಮೋಹದ ಅಭಾವವಾದ ಮೇಲೆ ಸಮ್ಯಕ್ತ್ವ ಮೊದಲಾದರೂಪ ಮೋಕ್ಷದ ಉಪಾಯದ ಪುರುಷಾರ್ಥವಾಗುತ್ತದೆ. ಅದಕ್ಕಾಗಿ ಮುಖ್ಯರೂಪದಿಂದ ತತ್ತ್ವನಿರ್ಣಯದಲ್ಲಿ ಉಪಯೋಗ ತೊಡಗಿಸುವುದರ ಪುರುಷಾರ್ಥಮಾಡಬೇಕು. ಮತ್ತು ಉಪದೇಶ ಕೊಡುತ್ತಾರೆ ಅದು ಕೂಡ ಇದೇ ಪುರುಷಾರ್ಥ ಮಾಡಿಸುವ ಸಲುವಾಗಿ ಕೊಡಲಾಗುತ್ತದೆ, ಈ ಪುರುಷಾರ್ಥದಿಂದ ಮೋಕ್ಷದ ಉಪಾಯದ ಪುರುಷಾರ್ಥವು ತನ್ನಿಂದ ತಾನೇ ಸಿದ್ಧವಾಗುವುದು.

ಮತ್ತು ತತ್ತ್ವನಿರ್ಣಯ ಮಾಡದಿರುವಲ್ಲಿ ಯಾವುದೇ ಕರ್ಮದ ದೋಷವಿಲ್ಲ, ಅದು ನಿನ್ನದೇ ದೋಷವಿದೆ; ಆದರೆ ಸ್ವಯಂ ನೀನಂತೂ ದೊಡ್ಡ ಮನುಷ್ಯನಾಗಿರಲು ಬಯಸುತ್ತಿರುವೆ ಮತ್ತು ನಿನ್ನ ದೋಷವನ್ನು ಕರ್ಮಗಳ ಮೇಲೆ ಹೊರೆಸುತ್ತಿರುವೆ; ಆದರೆ ಜಿನಾಜ್ಞೆಯನ್ನು ಮನ್ನಿಸಿದರೆ ಇಂಥ ಅನೀತಿಯು ಸಂಭವಿಸುವುದಿಲ್ಲ. ನಿನಗೆ ವಿಷಯ-ಕಷಾಯರೂಪವಾಗಿಯೇ ಇರುವುದಿರುವುದರಿಂದ ಅಸತ್ಯ ಆಡುತ್ತಿರುವೆ. ನಿಜವಾಗಿ ಮೋಕ್ಷದ ಅಭಿಲಾಷೆಯಿದ್ದರೆ ಇಂಥ ಯುಕ್ತಿಗಳನ್ನು ಏತಕ್ಕಾಗಿ ರಚಿಸುತ್ತಿರುವೆ ? ಸಂಸಾರದ ಕಾರ್ಯಗಳಲ್ಲಿ ನಿನ್ನ ಪುರುಷಾರ್ಥದಿಂದ ಸಿದ್ಧಿಯಾಗದಿರುವುದನ್ನು ತಿಳಿದರೂ ಪುರುಷಾರ್ಥದಿಂದ ಉದ್ಯಮ ಮಾಡುತ್ತಿರುವೆ, ಇಲ್ಲಿ ಪುರುಷಾರ್ಥವನ್ನು ಕಳೆದುಕೊಂಡು ಕುಳಿತಿರುವೆ; ಆದುದರಿಂದ ಕೇವಲ ಅನುಕರಣದಿಂದ ಮೋಕ್ಷವನ್ನು ಉತ್ಕೃಷ್ಟವೆಂದು ಹೇಳುತ್ತಿರುವೆ, ಆದರೆ ಅದರ ಸ್ವರೂಪ ಪರಿಚಯಿಸಿಕೊಂಡು ಅದನ್ನು ಹಿತರೂಪವೆಂದು ತಿಳಿಯುವುದಿಲ್ಲ. ಹಿತರೂಪವೆಂದು ತಿಳಿದುಕೊಂಡು ಸಾಧ್ಯವಿರುವ ಅದರ ಉದ್ಯಮ ಮಾಡದಿದ್ದರೆ ಇದು ಅಸಂಭವವಿದೆ.

**ಪ್ರಶ್ನೆ :-** ನೀವು ಹೇಳಿದುದು ಸತ್ಯವಿದೆ; ಆದರೆ ದ್ರವ್ಯಕರ್ಮದ ಉದಯದಿಂದ ಭಾವಕರ್ಮವಾಗುತ್ತದೆ, ಭಾವಕರ್ಮದಿಂದ ದ್ರವ್ಯಕರ್ಮದ ಬಂಧವಾಗುತ್ತದೆ. ಮತ್ತು ಪುನಃ ಅದರ ಉದಯದಿಂದ ಭಾವಕರ್ಮವಾಗುತ್ತದೆ. ಇದೇ ಪ್ರಕಾರ ಅನಾದಿಯಿಂದ ಪರಂಪರೆಯಿದೆಯೆಂದ ಮೇಲೆ ಮೋಕ್ಷದ ಉಪಾಯ ಹೇಗಾಗುವುದು ?

**ಉತ್ತರ :-** ಕರ್ಮದ ಉದಯ ಹಾಗೂ ಬಂಧವು ಯಾವಾಗಲೂ ಸಮಾನವಾಗಿಯೇ ಆಗುತ್ತಿದ್ದರೆ ಮಾತ್ರ ಹೀಗೆಯೇ ಇದೆ; ಆದರೆ ಪರಿಣಾಮಗಳ ನಿಮಿತ್ತದಿಂದ ಪೂರ್ವಬದ್ಧಕರ್ಮದ್ದೂ ಉತ್ಕರ್ಷಣ-ಅಪಕರ್ಷಣ-ಸಂಕ್ರಮಣ ಮೊದಲಾದವುಗಳಾಗುವುದರಿಂದ ಅವುಗಳ ಶಕ್ತಿಯು ಹೀನಾಧಿಕವಾಗುತ್ತದೆ; ಆದುದರಿಂದ ಅವುಗಳ ಉದಯವು ಕೂಡ ಮಂದ-ತೀವ್ರವಾಗುತ್ತದೆ. ಅವುಗಳ ನಿಮಿತ್ತದಿಂದ ನವೀನ ಕರ್ಮದ ಬಂಧವೂ ಮಂದ-ತೀವ್ರವಾಗುತ್ತದೆ. ಆದುದರಿಂದ ಸಂಸಾರೀ ಜೀವರುಗಳಿಗೆ ಕರ್ಮೋದಯದ ನಿಮಿತ್ತದಿಂದ

ಒಮ್ಮೆ ಜ್ಞಾನಾದಿಗಳು ಅಧಿಕವಾಗಿ ಪ್ರಕಟವಾಗುತ್ತವೆ, ಒಮೆ ಅಲ್ಪವಾಗಿ ಪ್ರಕಟವಾಗುತ್ತವೆ; ಒಮ್ಮೆ ರಾಗಾದಿಗಳು ಮಂದವಾಗುತ್ತವೆ, ಒಮ್ಮೆ ತೀವ್ರವಾಗುತ್ತವೆ. ಇದೇ ಪ್ರಕಾರದ ಪರಿವರ್ತನವು ಆಗುತ್ತಿರುತ್ತದೆ.

ಎಂದಾದರೂ ಸಂಜ್ಞೀ ಪಂಚೇಂದ್ರಿಯ ಪರ್ಯಾಪ್ತ ಪರ್ಯಾಯವು ಪ್ರಾಪ್ತವಾದಾಗ ಮನಸ್ಸಿನ ಮೂಲಕ ವಿಚಾರ ಮಾಡುವ ಶಕ್ತಿಯಾಗುವುದು. ಆಗ ಇವನಿಗೆ ಒಮ್ಮೆ ತೀವ್ರರಾಗಾದಿಗಳಾಗುತ್ತವೆ, ಒಮ್ಮೆ ಮಂದವಾಗುತ್ತವೆ. ಅಲ್ಲಿ ರಾಗಾದಿಗಳ ತೀವ್ರ ಉದಯವಾಗುವುದರಿಂದ ವಿಷಯಕಷಾಯ ಮೊದಲಾದವುಗಳ ಕಾರ್ಯಗಳಲ್ಲಿಯೇ ಪ್ರವೃತ್ತಿಯಾಗುತ್ತದೆ. ಮತ್ತು ರಾಗಾದಿಗಳ ಮಂದ ಉದಯವಾಗುವುದರಿಂದ ಬಾಹ್ಯದಲ್ಲಿ ಉಪದೇಶ ಮೊದಲಾದವುಗಳ ನಿಮಿತ್ತ ದೊರಕುವುದು ಮತ್ತು ಸ್ವಯಂ ಪುರುಷಾರ್ಥ ಮಾಡಿ ಆ ಉಪದೇಶ ಮೊದಲಾದವುಗಳಲ್ಲಿ ಉಪಯೋಗವನ್ನು ತೊಡಗಿಸಿದರೆ ಧರ್ಮಕಾರ್ಯಗಳಲ್ಲಿ ಪ್ರವೃತ್ತಿಯಾಗುವುದು; ಆಗ ನಿಮಿತ್ತವು ದೊರಕದಿದ್ದರೆ ಹಾಗೂ ಸ್ವಯಂ ಪುರುಷಾರ್ಥ ಮಾಡದಿದ್ದರೆ ಅನ್ಯ ಕಾರ್ಯಗಳಲ್ಲಿಯೇ ಪ್ರವೃತ್ತಿ ಮಾಡುವುದು, ಆದರೆ ಮಂದ ರಾಗಾದಿಗಳೊಡನೆ ಪ್ರವೃತ್ತಿ ಮಾಡಿದರೆ ಅಂಥ ಅವಸರದಲ್ಲಿ ಉಪದೇಶವು ಕಾರ್ಯಕಾರಿಯಿದೆ.

ವಿಚಾರಶಕ್ತಿಯಿಂದ ರಹಿತವಾದ ಆ ಏಕೇಂದ್ರಿಯ ಮೊದಲಾದವುಗಳಿಗಂತೂ ಉಪದೇಶವನ್ನು ತಿಳಿದುಕೊಳ್ಳುವ ಜ್ಞಾನವೇ ಇರುವುದಿಲ್ಲ; ಮತ್ತು ತೀವ್ರರಾಗಾದಿಗಳಿಂದ ಕೂಡಿದ ಜೀವರುಗಳ ಉಪಯೋಗವು ಉಪದೇಶದಲ್ಲಿ ತೊಡಗುವುದಿಲ್ಲ, ಆದುದರಿಂದ ವಿಚಾರ ಶಕ್ತಿಯಿಂದ ಯುಕ್ತರಾದ ಜೀವರುಗಳಿಗೆ, ರಾಗಾದಿಗಳಿಂದ ಮಂದವಿರುವವರಿಗೆ ಉಪದೇಶದ ನಿಮಿತ್ತದಿಂದ ಧರ್ಮದ ಪ್ರಾಪ್ತಿಯಾಗಿ ಹೋದರೆ ಅವರದು ಒಳ್ಳೆಯದಾಗುವುದು; ಮತ್ತು ಇದೇ ಅವಸರದಲ್ಲಿ ಪುರುಷಾರ್ಥವು ಕಾರ್ಯಕಾರಿಯಿದೆ.

ಏಕೇಂದ್ರಿಯ ಮೊದಲಾದುವಂತೂ ಧರ್ಮಕಾರ್ಯ ಮಾಡುವಲ್ಲಿ ಸಮರ್ಥವೇ ಇಲ್ಲವೆಂದ ಮೇಲೆ ಪುರುಷಾರ್ಥ ಹೇಗೆ ಮಾಡುವವು ? ಮತ್ತು ತೀವ್ರ ಕಷಾಯವುಳ್ಳವರು ಪುರುಷಾರ್ಥ ಮಾಡಿದರೆ ಪಾಪದ ಪುರುಷಾರ್ಥವನ್ನೇ ಮಾಡುವರು, ಅವರಿಗೆ ಧರ್ಮ ಕಾರ್ಯದ ಪುರುಷಾರ್ಥವು ಆಗುವ ಸಾಧ್ಯತೆಯಿಲ್ಲ.

ಆದುದರಿಂದ ವಿಚಾರ ಶಕ್ತಿಯಿಂದ ಯುಕ್ತವಿರುವ ಮತ್ತು ರಾಗಾದಿಗಳಿಂದ ಮಂದವಿರುವ ಜೀವರುಗಳು ಪುರುಷಾರ್ಥದಿಂದ ಉಪದೇಶ ಮೊದಲಾದವುಗಳ ನಿಮಿತ್ತದಿಂದ ತತ್ತ್ವನಿರ್ಣಯ ಮಾಡುವಲ್ಲಿ ಉಪಯೋಗ ತೊಡಗಿಸಿದರೆ ಅವರ ಉಪಯೋಗವು ಅಲ್ಲಿ ತೊಡಗುವುದು ಮತ್ತು ಆಗ ಅವರದು ಒಳ್ಳೆಯದಾಗುವುದು. ಒಂದು ವೇಳೆ ಇಂಥ ಅವಸರದಲ್ಲೂ ತತ್ತ್ವನಿರ್ಣಯ ಮಾಡುವ ಪುರುಷಾರ್ಥ ಮಾಡದೆ ಪ್ರಮಾದದಿಂದ ಕಾಲ ಕಳೆದರೆ ಅಥವಾ ಮಂದರಾಗಾದಿಗಳಿಂದ ವಿಷಯ ಕಷಾಯಗಳ ಕಾರ್ಯಗಳಲ್ಲಿಯೇ ಪ್ರವರ್ತಿಸಿದರೆ ಅಥವಾ ವ್ಯವಹಾರ ಧರ್ಮಕಾರ್ಯಗಳಲ್ಲಿಯೇ ಪ್ರವರ್ತಿಸಿದರೆ ಪ್ರಾಪ್ತವಾದ ಅವಸರವಂತೂ ಹೊರಟು ಹೋಗುವುದು ಮತ್ತು ಸಂಸಾರದಲ್ಲಿಯೇ ಭ್ರಮಣವಾಗುವುದು.

ಇಂಥ ಅವಸರದಲ್ಲಿ ಯಾರು ಪುರುಷಾರ್ಥದಿಂದ ತತ್ತ್ವನಿರ್ಣಯ ಮಾಡುವಲ್ಲಿ ಉಪಯೋಗ ತೊಡಗಿಸುವ ಅಭ್ಯಾಸವಿಡುತ್ತಾರೆ ಅವರ ವಿಶುದ್ಧತೆಯು ವೃದ್ಧಿಸುವುದು; ಅದರಿಂದ ಕರ್ಮಗಳ ಶಕ್ತಿಯು ಹೀನವಾಗುವುದು, ಕೆಲಕಾಲದಲ್ಲಿ ದರ್ಶನಮೋಹದ ಉಪಶಮವು ತನ್ನಿಂದ ತಾನೇ ಆಗುವುದು; ಆಗ ತತ್ತ್ವಗಳ ಪ್ರತೀತಿಯು ಯಥಾವತ್ತಾಗಿ ಬರುವುದು. ಆದುದರಿಂದ ಇವನ ಕರ್ತವ್ಯವಂತೂ ತತ್ತ್ವನಿರ್ಣಯದ ಅಭ್ಯಾಸವೇ ಇದೆ,

ಇದರಿಂದಲೇ ದರ್ಶನಮೋಹದ ಉಪಶಮವು ತಾನಾಗಿಯೇ ಆಗುತ್ತದೆ; ಅದರಲ್ಲಿ ಜೀವದ ಕರ್ತವ್ಯವು ಸ್ವಲ್ಪವೂ ಇಲ್ಲ.

ಆ ದರ್ಶನಮೋಹದ ಉಪಶಮವಾದ ಮೇಲೆ ಜೀವನಿಗೆ ತಾನಾಗಿಯೇ ಸಮ್ಯಗ್ದರ್ಶನವಾಗುತ್ತದೆ. ಮತ್ತು ಸಮ್ಯಗ್ದರ್ಶನವಾದ ಮೇಲೆ 'ನಾನು ಆತ್ಮನಿದ್ದೇನೆ, ನನಗೆ ರಾಗಾದಿಗಳನ್ನು ಮಾಡುವುದಿಲ್ಲ'ವೆಂಬ ಶ್ರದ್ಧೆಯಾಗುವುದು; ಆದರೆ ಚಾರಿತ್ರಮೋಹದ ಉದಯದಿಂದ ರಾಗಾದಿಗಳಾಗುತ್ತವೆ. ಅಲ್ಲಿ ತೀವ್ರ ಉದಯವಿದ್ದಾಗ ವಿಷಯಾದಿಗಳಲ್ಲಿ ಪ್ರವರ್ತಿಸುತ್ತಾನೆ, ಮತ್ತು ಮಂದ ಉದಯವಿದ್ದಾಗ ತನ್ನ ಪುರುಷಾರ್ಥದಿಂದ ಧರ್ಮಕಾರ್ಯಗಳಲ್ಲಿ ಹಾಗೂ ವೈರಾಗ್ಯ ಮೊದಲಾದ ಭಾವನೆಗಳಲ್ಲಿ ಉಪಯೋಗವನ್ನು ತೊಡಗಿಸುತ್ತಾನೆ; ಅದರ ನಿಮಿತ್ತದಿಂದ ಚಾರಿತ್ರ ಮೋಹವು ಮಂದವಾಗಿ ಹೋಗುತ್ತದೆ. ಹೀಗಾದ ನಂತರ ದೇಶಚಾರಿತ್ರ ಹಾಗೂ ಸಕಲ ಚಾರಿತ್ರವನ್ನು ಅಂಗೀಕಾರ ಮಾಡುವ ಪುರುಷಾರ್ಥವು ಪ್ರಕಟವಾಗುತ್ತದೆ. ಮತ್ತು ಚಾರಿತ್ರವನ್ನು ಧಾರಣ ಮಾಡಿ ತನ್ನ ಪುರುಷಾರ್ಥದಿಂದ ಧರ್ಮದಲ್ಲಿ ಪರಿಣತಿಯನ್ನು ಹೆಚ್ಚಿಸಿದರೆ ಆ ವಿಶುದ್ಧತೆಯಿಂದ ಕರ್ಮದ ಶಕ್ತಿಯು ಕಡಿಮೆಯಾಗುತ್ತದೆ, ಅದರಿಂದ ವಿಶುದ್ಧತೆಯು ಇನ್ನೂ ಹೆಚ್ಚುತ್ತದೆ, ಮತ್ತು ಅದರಿಂದ ಕರ್ಮದ ಶಕ್ತಿಯು ಅಧಿಕ ಹೀನವಾಗುತ್ತದೆ. ಈ ಪ್ರಕಾರ ಕ್ರಮದಿಂದ ಮೋಹದ ನಾಶಮಾಡಿದರೆ ಆಗ ಪರಿಣಾಮಗಳು ಸರ್ವಥಾ ವಿಶುದ್ಧವಾಗುತ್ತವೆ, ಅವುಗಳ ಮೂಲಕ ಜ್ಞಾನಾವರಣಾದಿಗಳ ನಾಶವಾಗುವುದು ಮತ್ತು ಕೇವಲಜ್ಞಾನವು ಪ್ರಕಟವಾಗುವುದು. ಅನಂತರ ಯಾವ ಉಪಾಯವಿಲ್ಲದೆ ಅಘಾತಿಕರ್ಮಗಳನ್ನು ನಾಶ ಮಾಡಿ ಶುದ್ಧವಾದ ಸಿದ್ಧಪದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಈ ಪ್ರಕಾರ ಉಪದೇಶದ ನಿಮಿತ್ತವಾಗುವುದು ಮತ್ತು ತಾನು ಪುರುಷಾರ್ಥ ಮಾಡಿದರೆ ಕರ್ಮದ ನಾಶವಾಗುತ್ತದೆ.

ಅದರಂತೆ ಕರ್ಮದ ಉದಯವು ತೀವ್ರವಿರುವಾಗ ಪುರುಷಾರ್ಥವಾಗುವ ಸಾಧ್ಯತೆಯಿಲ್ಲ; ಮೇಲಿನ ಗುಣಸ್ಥಾನಗಳಿಂದ ಕೂಡ ಉರುಳಿ ಬೀಳುತ್ತಾನೆ; ಅಲ್ಲಿಯಂತೂ ಭವಿತವ್ಯವಿದ್ದಂತೆಯೇ ಆಗುತ್ತದೆ. ಆದರೆ ಎಲ್ಲಿ ಮಂದರಾಗದ ಉದಯವಿದೆ ಮತ್ತು ಪುರುಷಾರ್ಥವಾಗುವ ಸಾಧ್ಯತೆಯಿದೆ ಅಲ್ಲಿಯಂತೂ ಪ್ರಮಾದಿಯಾಗಬಾರದು ಜಾಗರೂಕವಾಗಿದ್ದುಕೊಂಡು ತಮ್ಮ ಕಾರ್ಯ ಮಾಡಬೇಕು.

ಹೇಗೆಂದರೆ ಒಬ್ಬ ಪುರುಷನು ನದಿಯ ಪ್ರವಾಹದಲ್ಲಿ ಬಿದ್ದು ಹರಿದು ಹೋಗುತ್ತಿದ್ದಾನೆ, ಅಲ್ಲಿ ನೀರಿನ ವೇಗವಿರುವಾಗವಂತೂ ಅವನ ಪುರುಷಾರ್ಥವು ನಿರರ್ಥಕವಿದೆ, ಉಪದೇಶವು ಕೂಡ ಕಾರ್ಯಕಾರಿಯಿಲ್ಲ. ಮತ್ತು ನೀರಿನ ವೇಗವು ಕಡಿಮೆಯಿರುವಾಗ ಒಂದು ವೇಳೆ ಪುರುಷಾರ್ಥ ಮಾಡಿ ಹೊರಟರೆ ಹೊರಗೆ ಬರುವನು. ಅವನಿಗೆ ಮಾತ್ರ ಹೊರಡುವುದರ ಶಿಕ್ಷಣ ಕೊಡುತ್ತಾರೆ. ಮತ್ತು ಹೊರಡದಿದ್ದರೆ ಕ್ರಮ-ಕ್ರಮದಿಂದ ಹರಿದು ಹೋಗುವನು, ಮತ್ತೆ ಪುನಃ ನೀರಿನ ವೇಗ ಹೆಚ್ಚಿದರೆ ಅದರ ಸುಳಿಯಲ್ಲಿ ತಾನೂ ಹರಿದು ಹೋಗುವನು. ಅದೇ ಪ್ರಕಾರ ಜೀವನು ಸಂಸಾರದಲ್ಲಿ ಭ್ರಮಣ ಮಾಡುತ್ತಾನೆ, ಅಲ್ಲಿ ಕರ್ಮಗಳ ತೀವ್ರ ಉದಯವಿದ್ದಾಗಂತೂ ಅವನ ಪುರುಷಾರ್ಥವು ನಿರರ್ಥಕವಿದೆ, ಉಪದೇಶವು ಕೂಡ ಕಾರ್ಯಕಾರಿಯಿಲ್ಲ. ಮತ್ತು ಕರ್ಮದ ಮಂದ ಉದಯವಿದ್ದಾಗ ಪುರುಷಾರ್ಥ ಮಾಡಿ ಮೋಕ್ಷಮಾರ್ಗದಲ್ಲಿ ಪ್ರವರ್ತನೆ ಮಾಡಿದರೆ ಮೋಕ್ಷಪ್ರಾಪ್ತಮಾಡಿಕೊಳ್ಳುವನು. ಅವನಿಗೆ ಮಾತ್ರ ಮೋಕ್ಷಮಾರ್ಗದ ಉಪದೇಶ ಕೊಡುತ್ತಾರೆ. ಮತ್ತು ಮೋಕ್ಷಮಾರ್ಗದಲ್ಲಿ ಪ್ರವರ್ತನೆ ಮಾಡದಿದ್ದರೆ

ಒಂದಿಷ್ಟು ವಿಶುದ್ಧತೆಯನ್ನು ಪಡೆದು ಪುನಃ ತೀವ್ರ ಉದಯವು ಬಂದ ಮೇಲೆ ನಿಗೋದ ಮೊದಲಾದ ಪರ್ಯಾಯಗಳನ್ನು ಪ್ರಾಪ್ತಮಾಡಿಕೊಳ್ಳುವನು.

**ಆದುದರಿಂದ ದೊರೆತ ಅವಕಾಶ ತಪ್ಪಿಸಿಕೊಳ್ಳುವುದು ಯೋಗ್ಯವಿಲ್ಲ. ಈಗ ಎಲ್ಲ ಪ್ರಕಾರದಿಂದ ಅವಸರವು ಬಂದಿದೆ, ಇಂಥ ಅವಸರವನ್ನು ಪ್ರಾಪ್ತಮಾಡಿಕೊಳ್ಳುವುದು ಕಠಿಣವಿದೆ. ಆದುದರಿಂದ ಶ್ರೀಗುರುಗಳು ದಯಾಳುಗಳಾಗಿ ಮೋಕ್ಷಮಾರ್ಗದ ಉಪದೇಶ ಕೊಡುತ್ತಾರೆ, ಅದರಲ್ಲಿ ಭವ್ಯ ಜೀವರುಗಳು ಪ್ರವೃತ್ತಿ ಮಾಡಬೇಕು.**

## ಮೋಕ್ಷಮಾರ್ಗದ ಸ್ವರೂಪ

ಈಗ ಮೋಕ್ಷಮಾರ್ಗದ ಸ್ವರೂಪ ಹೇಳುತ್ತಾರೆ.

ಯಾವವುಗಳ ನಿಮಿತ್ತದಿಂದ ಆತ್ಮನು ಅಶುದ್ಧದಶೆಯನ್ನು ಧಾರಣ ಮಾಡಿ ದುಃಖಿಯಾಗಿದ್ದಾನೆ ಅಂಥ ಆ ಮೋಹ ಮೊದಲಾದ ಕರ್ಮಗಳ ನಾಶವು ಸಂಪೂರ್ಣವಾಗಿ ಆದಮೇಲೆ ಎಲ್ಲ ಪ್ರಕಾರದಿಂದ ಕೇವಲ ಆತ್ಮನ ಶುದ್ಧ ಅವಸ್ಥೆಯಾಗುವುದು ಅದು ಮೋಕ್ಷವಿದೆ. ಅದರ ಯಾವ ಉಪಾಯವಿದೆ-ಕಾರಣವಿದೆ ಅದನ್ನು ಮೋಕ್ಷಮಾರ್ಗವೆಂದು ತಿಳಿಯುವುದು.

ಅಲ್ಲಿ ಅನೇಕ ಪ್ರಕಾರದ ಕಾರಣಗಳಿರುತ್ತವೆ. ಅವುಗಳಲ್ಲಿ ಕೆಲವು ಕಾರಣಗಳು ಹೇಗಿವೆಯೆಂದರೆ ಅವು ಇಲ್ಲದೆ ಕಾರ್ಯವಾಗುವುದಿಲ್ಲ, ಇನ್ನು ಕೆಲವು ಅವು ಇದ್ದರೆ ಕಾರ್ಯವಾಗುವುದು ಅಥವಾ ಆಗದೆಯೂ ಇರುವುದು. ಹೇಗೆಂದರೆ ಮುನಿಲಿಂಗ ಧಾರಣ ಮಾಡಿದಲ್ಲದೆ ಮೋಕ್ಷವಾಗುವುದಿಲ್ಲ; ಆದರೆ ಮುನಿಲಿಂಗ ಧಾರಣ ಮಾಡಿದ ಮೇಲೆ ಮೋಕ್ಷವು ಆಗುತ್ತದೆ ಕೂಡ ಮತ್ತು ಆಗುವುದೂ ಇಲ್ಲ. ಮತ್ತೆ ಕೆಲವು ಕಾರಣಗಳು ಹೇಗಿವೆಯೆಂದರೆ ಮುಖ್ಯವಾಗಿ ಅವು ಇದ್ದ ಮೇಲೆ ಕಾರ್ಯವಾಗುತ್ತದೆ, ಆದರೆ ಅವುಗಳಿಲ್ಲದೆಯೂ ಕಾರ್ಯಸಿದ್ಧಿಯಾಗುತ್ತದೆ. ಹೇಗೆಂದರೆ ಅನಶನ ಮೊದಲಾದ ಬಾಹ್ಯ ತಪದ ಸಾಧನ ಮಾಡಿದ ಮೇಲೆ ಮುಖ್ಯವಾಗಿ ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ; ಆದರೆ ಭರತ ಮೊದಲಾದವರಿಗೆ ಬಾಹ್ಯ ತಪಸ್ಸು ಮಾಡದೆಯೇ ಮೋಕ್ಷದ ಪ್ರಾಪ್ತಿಯಾಗಿದೆ. ಇನ್ನು ಕೆಲವು ಕಾರಣಗಳು ಹೇಗಿವೆಯೆಂದರೆ ಅವು ಇದ್ದ ಮೇಲೆ ಕಾರ್ಯಸಿದ್ಧಿಯು ಆಗಿಯೇ ಆಗುತ್ತದೆ, ಮತ್ತು ಅವು ಇಲ್ಲದಿದ್ದರೆ ಸರ್ವಥಾ ಕಾರ್ಯಸಿದ್ಧಿಯಾಗುವುದಿಲ್ಲ. ಹೇಗೆಂದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕತೆಯಾದ ಮೇಲಂತೂ ಮೋಕ್ಷವು ಆಗಿಯೇ ಆಗುತ್ತದೆ, ಮತ್ತು ಅವು ಇಲ್ಲದಿದ್ದರೆ ಮೋಕ್ಷವು ಸರ್ವಥಾ ಆಗುವುದಿಲ್ಲ. ಹೀಗೆ ಈ ಕಾರಣ ಹೇಳಿದೆ, ಅವುಗಳಲ್ಲಿ ಅತಿಶಯಪೂರ್ವಕವಾದ ನಿಯಮದಿಂದ ಮೋಕ್ಷದ ಸಾಧಕವಾದ ಆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದ ಏಕೀಭಾವವು ಅದು ಮೋಕ್ಷಮಾರ್ಗವೆಂದು ತಿಳಿಯುವುದು. ಈ ಸಮ್ಯಗ್ದರ್ಶನ- ಸಮ್ಯಗ್ಜ್ಞಾನ-ಸಮ್ಯಕ್ಚಾರಿತ್ರದಲ್ಲಿ ಒಂದೂ ಇಲ್ಲದಿದ್ದರೆ ಮೋಕ್ಷಮಾರ್ಗವಾಗುವುದಿಲ್ಲ.

ಅದನ್ನೇ ತತ್ತ್ವಾರ್ಥಸೂತ್ರದಲ್ಲಿ ಹೇಳಿದ್ದಾರೆ-'ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ ।' ೧-೧

ಈ ಸೂತ್ರದ ಟೀಕೆಯಲ್ಲಿ 'ಮೋಕ್ಷಮಾರ್ಗಃ' ಎಂದು ಏಕವಚನ ಪದಪ್ರಯೋಗವಿದ್ದು ಅದರ

ಅರ್ಥವೇನೆಂದರೆ ಈ ಮೂರೂ ಸೇರಿದ ಮೇಲೆ ಒಂದು ಮೋಕ್ಷಮಾರ್ಗವಿದೆ, ಆದರೆ ಬೇರೆ-ಬೇರೆ ಮೂರು ಮಾರ್ಗಗಳಿಲ್ಲ.

**ಪ್ರಶ್ನೆ** :- ಅಸಂಯತ ಸಮ್ಯಗ್ದೃಷ್ಟಿಗೆ ಚಾರಿತ್ರವಿಲ್ಲ, ಅವನಿಗೆ ಮೋಕ್ಷಮಾರ್ಗವಾಗಿದೆಯೋ ಅಥವಾ ಇಲ್ಲವೋ ?

**ಉತ್ತರ** :- ಅವನಿಗೆ ಮೋಕ್ಷಮಾರ್ಗವಾಗುವುದೆಂಬುದಂತೂ ನಿಯಮವಿದೆ; ಆದುದರಿಂದ ಅವನಿಗೆ ಮೋಕ್ಷಮಾರ್ಗವಾಗಿದೆಯೆಂದೂ ಉಪಚಾರದಿಂದ ಹೇಳುತ್ತಾರೆ; ಪರಮಾರ್ಥದಿಂದ ಸಮ್ಯಕ್ಚಾರಿತ್ರವಾದ ನಂತರವೇ ಮೋಕ್ಷಮಾರ್ಗವಾಗುತ್ತದೆ. ಹೇಗೆಂದರೆ ಒಬ್ಬ ಪುರುಷನು ಒಂದು ನಗರಕ್ಕೆ ಹೋಗುವ ನಿಶ್ಚಯ ಮಾಡಿದರೆ ಅವನನ್ನು ವ್ಯವಹಾರದಿಂದ 'ಇವನು ಆ ನಗರಕ್ಕೆ ಹೊರಟಿದ್ದಾನೆ'ಂದೂ ಹೇಳುತ್ತಾರೆ; ಆದರೆ ಪರಮಾರ್ಥದಿಂದ ಮಾರ್ಗದಲ್ಲಿ ಗಮನ ಮಾಡಿದ ಮೇಲೆಯೇ ನಡೆಯುವುದಾಗುವುದು. ಅದೇ ಪ್ರಕಾರ ಅಸಂಯಮ ಸಮ್ಯಗ್ದೃಷ್ಟಿಗೆ ವೀತರಾಗ ಭಾವರೂಪವಾದ ಮೋಕ್ಷಮಾರ್ಗದ ಶ್ರದ್ಧೆಯಾಗಿರುವುದರಿಂದ ಅವನನ್ನು ಉಪಚಾರದಿಂದ ಮೋಕ್ಷ ಮಾರ್ಗಿಯೆಂದು ಹೇಳುತ್ತಾರೆ; ಪರಮಾರ್ಥದಿಂದ ವೀತರಾಗಭಾವರೂಪದ ಪರಿಣತಿಯಾದ ಮೇಲೆಯೇ ಮೋಕ್ಷಮಾರ್ಗವಾಗುವುದು. ಮತ್ತು ಪ್ರವಚನಸಾರದಲ್ಲಿ ಕೂಡ ಮೂರರ ಏಕಾಗ್ರತೆಯಾದ ನಂತರವೇ ಮೋಕ್ಷಮಾರ್ಗವೆಂದು ಹೇಳಿದೆ. ಆದುದರಿಂದ ತತ್ತ್ವಶ್ರದ್ಧೆ ಹಾಗೂ ಜ್ಞಾನವಿಲ್ಲದೆ ರಾಗಾದಿಗಳು ಕ್ಷೀಣಿಸುವುದರಿಂದ ಮೋಕ್ಷಮಾರ್ಗವಿಲ್ಲ, ಮತ್ತು ರಾಗಾದಿಗಳು ಕ್ಷೀಣಿಸಿದಲ್ಲದೆ ತತ್ತ್ವಶ್ರದ್ಧೆ ಹಾಗೂ ಜ್ಞಾನದಿಂದ ಕೂಡ ಮೋಕ್ಷಮಾರ್ಗವಿಲ್ಲವೆಂದು ತಿಳಿಯುವುದು. ಮೂರೂ ಸೇರಿದ ಮೇಲೆ ಸಾಕ್ಷಾತ್ ಮೋಕ್ಷಮಾರ್ಗವಾಗುತ್ತದೆ.

ಈಗ ನಿರ್ದೇಶ, ಲಕ್ಷಣನಿರ್ದೇಶ ಮತ್ತು ಪರೀಕ್ಷೆಯ ಸಾಧನದಿಂದ ಇವುಗಳ ನಿರೂಪಣೆ ಮಾಡುತ್ತಾರೆ.

'ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರವು ಮೋಕ್ಷಮಾರ್ಗವಿದೆ'ಯೆಂಬ ನಾಮ ಮಾತ್ರವಾದ ಕಥನವು ಅದು 'ನಿರ್ದೇಶ'ವಿದೆಯೆಂದು ತಿಳಿಯುವುದು.

ಅದರಂತೆ ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವತೆಯಿಂದ ರಹಿತವಾದ ಮತ್ತು ಯಾವುದರಿಂದ ಇವನ್ನು ಗುರುತಿಸಲಾಗುವುದು ಅದನ್ನು 'ಲಕ್ಷಣ'ವೆಂದು ತಿಳಿಯುವುದು; ಅದರ ಆ ನಿರ್ದೇಶ ಎಂದರೆ ನಿರೂಪಣೆಯು ಅದು 'ಲಕ್ಷಣ ನಿರ್ದೇಶ'ವೆಂದು ತಿಳಿಯುವುದು.

ಯಾವುದನ್ನು ಪರಿಚಯ ಮಾಡಿಕೊಳ್ಳುವುದಿದೆ ಅದರ ಹೆಸರು ಲಕ್ಷ್ಯವಿದೆ, ಅದನ್ನು ಹೊರತುಪಡಿಸಿ ಉಳಿದವುಗಳ ಹೆಸರು ಅಲಕ್ಷವಿದೆ, ಆ ಲಕ್ಷ್ಯ ಹಾಗೂ ಅಲಕ್ಷ್ಯ ಇವೆರಡರಲ್ಲಿ ಕಂಡು ಬರುವಂಥ ಲಕ್ಷಣವನ್ನು ಎಲ್ಲಿ ಹೇಳಲಾಗುವುದು ಅಲ್ಲಿ ಅತಿವ್ಯಾಪ್ತಿತನವೆಂದು ತಿಳಿಯುವುದು. ಹೇಗೆಂದರೆ ಆತ್ಮನ ಲಕ್ಷಣವು 'ಅಮೂರ್ತತ್ವ'ವೆಂದು ಹೇಳಿದೆ; ಆ ಅಮೂರ್ತತ್ವಲಕ್ಷಣವು ಲಕ್ಷ್ಯಭೂತನಾದ ಆತ್ಮನಲ್ಲೂ ಕಂಡು ಬರುತ್ತದೆ, ಮತ್ತು ಅಲಕ್ಷ್ಯಭೂತಗಳಾದ ಆಕಾಶ ಮೊದಲಾದವುಗಳಲ್ಲೂ ಕಂಡುಬರುತ್ತದೆ; ಆದುದರಿಂದ ಇದು 'ಅತಿವ್ಯಾಪ್ತಿ' ಲಕ್ಷಣವಿದೆ. ಇದರ ಮೂಲಕ ಆತ್ಮನನ್ನು ತಿಳಿದುಕೊಳ್ಳುವುದರಿಂದ ಆಕಾಶ ಮೊದಲಾದವು ಆತ್ಮವಾಗಿ ಹೋಗುವಂಥ ದೋಷವು ತಗಲುವುದು.

ಅದರಂತೆ ಯಾವುದೇ ಒಂದು ಲಕ್ಷ್ಯದಲ್ಲಂತೂ ಇರುವುದು ಮತ್ತು ಒಂದರಲ್ಲಿ ಇರುವುದಿಲ್ಲ ಅಂಥ ಲಕ್ಷ್ಯದ ಏಕದೇಶದಲ್ಲಿ ಕಂಡು ಬರುವಂಥ ಲಕ್ಷಣವನ್ನು ಎಲ್ಲಿ ಹೇಳಲಾಗುವುದು ಅಲ್ಲಿ ಅವ್ಯಾಪ್ತಿತನವೆಂದು ತಿಳಿಯುವುದು. ಹೇಗೆಂದರೆ ಆತ್ಮನ ಲಕ್ಷಣವು ಕೇವಲಜ್ಞಾನಾದಿಗಳೆಂದು ಹೇಳಲಾಗುವುದು; ಆದರೆ ಕೇವಲಜ್ಞಾನವು ಒಬ್ಬ ಆತ್ಮನಲ್ಲಿ ಕಂಡು ಬರುತ್ತದೆ ಒಬ್ಬನಲ್ಲಿ ಕಂಡು ಬರುವುದಿಲ್ಲ; ಆದುದರಿಂದ ಇದು 'ಅವ್ಯಾಪ್ತ' ಲಕ್ಷಣವಿದೆ. ಇದರ ಮೂಲಕ ಆತ್ಮನನ್ನು ಪರಿಚಯ ಮಾಡಿಕೊಳ್ಳುವುದರಿಂದ ಅಲ್ಪಜ್ಞಾನಿಯು ಆತ್ಮನಾಗಲಾರನೆಂಬ ದೋಷವು ತಗಲುವುದು.

ಅದರಂತೆ ಆ ಲಕ್ಷ್ಯದಲ್ಲಿ ಕಂಡು ಬರಬಾರದಂಥ ಲಕ್ಷಣವನ್ನು ಎಲ್ಲಿ ಹೇಳಲಾಗುವುದು ಅಲ್ಲಿ ಅಸಂಭವತನ ವೆಂದು ತಿಳಿಯುವುದು. ಹೇಗೆಂದರೆ ಆತ್ಮನ ಲಕ್ಷಣವು ಜಡತ್ವವೆಂದು ಹೇಳಲಾಗುವುದು; ಆದರೆ ಪ್ರತ್ಯಕ್ಷ ಮೊದಲಾದ ಪ್ರಮಾಣದಿಂದ ಇದು ವಿರುದ್ಧವಿದೆ; ಏಕೆಂದರೆ ಇದು 'ಅಸಂಭವ' ಲಕ್ಷಣವಿದೆ. ಇದರ ಮೂಲಕ ಆತ್ಮನನ್ನು ಮನ್ನಿಸುವುದರಿಂದ ಪುದ್ಗಲ ಮೊದಲಾದವೂ ಆತ್ಮವಾಗಿ ಹೋಗುವವು, ಮತ್ತು ಆತ್ಮನಿದ್ದವನು ಅನಾತ್ಮನಾಗಿ ಹೋಗುವಂಥ ದೋಷವು ತಗಲುವುದು.

ಈ ಪ್ರಕಾರ ಅತಿವ್ಯಾಪ್ತ, ಅವ್ಯಾಪ್ತ ಹಾಗೂ ಅಸಂಭವ ಲಕ್ಷಣವಿದ್ದರೆ ಅದು ಲಕ್ಷಣಾಭಾಸವಿದೆ. ಮತ್ತು ಲಕ್ಷ್ಯದಲ್ಲಿ ಎಲ್ಲೆಡೆಗೂ ಕಂಡು ಬರುವುದು ಹಾಗೂ ಅಲಕ್ಷ್ಯದಲ್ಲಿ ಎಲ್ಲಿಯೂ ಕಂಡು ಬರದಿರುವುದು ಅದು ನಿಜವಾದ ಲಕ್ಷಣವಿದೆ. ಹೇಗೆಂದರೆ ಆತ್ಮನ ಸ್ವರೂಪವು ಚೈತನ್ಯವಿದೆ; ಎಂದರೆ ಈ ಲಕ್ಷಣವು ಎಲ್ಲ ಆತ್ಮಗಳಲ್ಲಿಯೂ ಕಂಡುಬರುತ್ತದೆ, ಅನಾತ್ಮನಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ; ಆದುದರಿಂದ ಇದು ನಿಜವಾದ ಲಕ್ಷಣವಿದೆ. ಇದರ ಮೂಲಕ ಆತ್ಮನನ್ನು ಮನ್ನಿಸುವುದರಿಂದ ಆತ್ಮ-ಅನಾತ್ಮನ ಯಥಾರ್ಥ ಜ್ಞಾನವಾಗುತ್ತದೆ; ಯಾವ ದೋಷವು ತಗಲುವುದಿಲ್ಲ. ಈ ಪ್ರಕಾರ ಲಕ್ಷಣದ ಸ್ವರೂಪವು ಉದಾಹರಣ ಮಾತ್ರವೆಂದು ಹೇಳಿದೆ.

ಈಗ ಸಮ್ಯಗ್ದರ್ಶನದ ನಿಜವಾದ ಲಕ್ಷಣ ಹೇಳುತ್ತಾರೆ.

## ಸಮ್ಯಗ್ದರ್ಶನದ ನಿಜವಾದ ಲಕ್ಷಣ :-

ವಿಪರೀತಾಭಿನಿವೇಶವಿಲ್ಲದ ಜೀವ ಮೊದಲಾದ ತತ್ತ್ವಾರ್ಥಗಳ ಶ್ರದ್ಧೆಯು ಅದು ಸಮ್ಯಗ್ದರ್ಶನದ ಲಕ್ಷಣವಿದೆ. ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷ ಇವು ಏಳು ತತ್ತ್ವಾರ್ಥಗಳಿವೆ. ಇವುಗಳ ಶ್ರದ್ಧೆಯು ಎಂದರೆ 'ಹೀಗೆಯೇ ಇದೆ, ಅನ್ಯಥಾ ಇಲ್ಲ'ವೆಂಬ ಪ್ರತೀತಿ ಭಾವವು ಅದು ತತ್ತ್ವಾರ್ಥ ಶ್ರದ್ಧೆಯಿದೆ; ಮತ್ತು ವಿಪರೀತಾಭಿನಿವೇಶವು ಎಂದರೆ ಅನ್ಯಥಾ ಅಭಿಪ್ರಾಯದಿಂದ ರಹಿತವಾದುದು ಅದು ಸಮ್ಯಗ್ದರ್ಶನವಿದೆ.

ಇಲ್ಲಿ ವಿಪರೀತಾಭಿನಿವೇಶದ ನಿರಾಕರಣೆಯ ಸಲುವಾಗಿ 'ಸಮ್ಯಕ್' ಪದವನ್ನು ಹೇಳಿದೆ, ಏಕೆಂದರೆ 'ಸಮ್ಯಕ್' ವೆಂಬ ಶಬ್ದವು ಪ್ರಶಂಸಾವಾಚಕವಿದೆ; ಶ್ರದ್ಧೆಯಲ್ಲಿ ವಿಪರೀತಾಭಿನಿವೇಶದ ಅಭಾವವಾದ ಮೇಲೆಯೇ ಪ್ರಶಂಸೆಯು ಸಂಭವವಿದೆಯೆಂದು ತಿಳಿಯುವುದು.

**ಪ್ರಶ್ನೆ :-** 'ತತ್ತ್ವ' ಮತ್ತು 'ಅರ್ಥ'ವೆಂಬ ಈ ಎರಡು ಪದಗಳನ್ನು ಹೇಳಿದೆ, ಅವುಗಳ ಪ್ರಯೋಜನವೇನು?

**ಉತ್ತರ :-** 'ತತ್' ಶಬ್ದವಿದೆ ಅದು 'ಯತ್' ಶಬ್ದದ ಅಪೇಕ್ಷಾ ಸಹಿತವಿರುವುದರಿಂದ ಯಾವುದರ

ಪ್ರಕರಣವಿದೆ ಅದನ್ನು ತತ್‌ವೆಂದು ಹೇಳಲಾಗುತ್ತದೆ. ಮತ್ತು ಅದರ ಆ ಭಾವವು ಎಂದರೆ ಸ್ವರೂಪವು ಅದು ತತ್ತ್ವವೆಂದು ತಿಳಿಯುವುದು. ಏಕೆಂದರೆ **'ತಸ್ಯ ಭಾವಸ್ತತ್ತ್ವ'**ವೆಂದು ತತ್ತ್ವ ಶಬ್ದದ ಸಮಾಸವಿರುತ್ತದೆ. ಅದರಂತೆ ತಿಳಿಯುವುದರಲ್ಲಿ ಬಂದಿರುವಂಥ 'ದ್ರವ್ಯ' ಮತ್ತು 'ಗುಣ-ಪರ್ಯಾಯ'ದ ಹೆಸರು ಅರ್ಥವಿದೆ. ಅದರಂತೆ **'ತತ್ತ್ವೇನ ಅರ್ಥಸ್ತತ್ತ್ವಾರ್ಥಃ'** ತತ್ತ್ವ ಎಂದರೆ ತಮ್ಮ ಸ್ವರೂಪವು, ಅದರಿಂದ ಯುಕ್ತವಾದ ಪದಾರ್ಥಗಳ ಶ್ರದ್ಧೆಯು ಅದು ಸಮ್ಯಗ್ದರ್ಶನವಿದೆ. ಇಲ್ಲಿ ಒಂದು ವೇಳೆ ತತ್ತ್ವಶ್ರದ್ಧೆಯೆಂದೇ ಹೇಳಿದರೆ ಯಾವುದರದು ಇದು ಭಾವ(ತತ್ತ್ವ)ವಿದೆ ಅದರ ಶ್ರದ್ಧೆಯಿಲ್ಲದೆ ಕೇವಲ ಭಾವದ ಶ್ರದ್ಧೆಯೇ ಕಾರ್ಯಕಾರಿಯಿಲ್ಲ. ಮತ್ತು ಒಂದು ವೇಳೆ ಅರ್ಥಶ್ರದ್ಧೆಯೆಂದೇ ಹೇಳಿದರೆ ಭಾವದ ಶ್ರದ್ಧೆಯಿಲ್ಲದೆ ಪದಾರ್ಥದ ಶ್ರದ್ಧೆಯು ಕೂಡ ಕಾರ್ಯಕಾರಿಯಿಲ್ಲ.

ಹೇಗೆಂದರೆ ಒಬ್ಬನಿಗೆ ಜ್ಞಾನ-ದರ್ಶನಗಳ ಹಾಗೂ ವರ್ಣಾದಿಗಳ ಶ್ರದ್ಧೆಯಿದೆ ಎಂದರೆ ಇದು ಜ್ಞಾನತನವಿದೆ, ಇದು ಶುಭ್ರತನವಿದೆಯೆಂದು ಮೊದಲಾಗಿ ಪ್ರತೀತಿಯಿದೆ; ಆದರೆ ಜ್ಞಾನ-ದರ್ಶನಗಳು ಆತ್ಮನ ಸ್ವಭಾವವಿದ್ದು ನಾನು ಆತ್ಮನಿದ್ದೇನೆ; ಮತ್ತು ವರ್ಣಾದಿಗಳು ಪುದ್ಗಲದ ಸ್ವಭಾವವಿದ್ದು ಪುದ್ಗಲವು ನನ್ನಿಂದ ಭಿನ್ನ-ಬೇರೆ ಪದಾರ್ಥವಿದೆಯೆಂದು ಪದಾರ್ಥದ ಶ್ರದ್ಧೆಯಿಲ್ಲದಿದ್ದರೆ ಭಾವದ ಶ್ರದ್ಧೆಯು ಕಾರ್ಯಕಾರಿಯಿಲ್ಲ. ಮತ್ತು 'ನಾನು ಆತ್ಮನಿದ್ದೇನೆ'ಂದು ಶ್ರದ್ಧೆ ಮಾಡಲಾಯಿತು; ಆದರೆ ಆತ್ಮನ ಸ್ವರೂಪವು ಹೇಗಿದೆ ಹಾಗೆ ಶ್ರದ್ಧೆ ಮಾಡದಿದ್ದರೆ ಭಾವದ ಶ್ರದ್ಧೆಯಿಲ್ಲದೆ ಪದಾರ್ಥದ ಶ್ರದ್ಧೆಯು ಕೂಡ ಕಾರ್ಯಕಾರಿಯಿಲ್ಲ. ಆದುದರಿಂದ ತತ್ತ್ವಸಹಿತವಾಗಿ ಅರ್ಥದ ಶ್ರದ್ಧೆಯಾಗುತ್ತದೆ ಅದುವೇ ಕಾರ್ಯಕಾರಿಯಿದೆ. ಅಥವಾ ಜೀವ ಮೊದಲಾದುವಕ್ಕೆ ತತ್ತ್ವವೆಂಬ ಸಂಜ್ಞೆಯೂ ಇದೆ ಮತ್ತು ಅರ್ಥ ಸಂಜ್ಞೆಯೂ ಇದೆ, ಆದುದರಿಂದ **'ತತ್ತ್ವಮೇವಾರ್ಥಸ್ತತ್ತ್ವಾರ್ಥಃ'** ಯಾವುದು ತತ್ತ್ವವಿದೆ ಅದುವೇ ಅರ್ಥವಿದೆ, ಅವುಗಳ ಶ್ರದ್ಧೆಯು ಅದು ಸಮ್ಯಗ್ದರ್ಶನವಿದೆ.

ಈ ಅರ್ಥದಿಂದ ಒಂದು ಕಡೆ ತತ್ತ್ವಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳಿದೆ ಮತ್ತು ಒಂದು ಕಡೆ ಪದಾರ್ಥ ಶ್ರದ್ಧೆಯನ್ನು ಸಮ್ಯಗ್ದರ್ಶನವೆಂದು ಹೇಳಿದೆ. ಅಲ್ಲಿ ವಿರೋಧವಿದೆಯೆಂದು ತಿಳಿಯಬಾರದು.

ಈ ಪ್ರಕಾರ 'ತತ್ತ್ವ' ಮತ್ತು 'ಅರ್ಥ'ವೆಂದು ಎರಡು ಪದಗಳನ್ನು ಹೇಳುವುದರ ಪ್ರಯೋಜನವಿದೆ.

## ತತ್ತ್ವಾರ್ಥಗಳು ಏಳೇ ಏಕೆ ?

**ಪ್ರಶ್ನೆ :-** ತತ್ತ್ವಾರ್ಥಗಳಂತೂ ಅನಂತವಿವೆ. ಅವು ಸಾಮಾನ್ಯ ಅಪೇಕ್ಷೆಯಿಂದ ಜೀವ-ಅಜೀವದಲ್ಲಿ ಎಲ್ಲವೂ ಗರ್ಭಿತವಾಗುವುದರಿಂದ ಎರಡೇ ಹೇಳಬೇಕಿತ್ತು ಇಲ್ಲವೆ ಅನಂತ ಹೇಳಬೇಕಿತ್ತು. ಆಸ್ರವ ಮೊದಲಾದುವಂತೂ ಜೀವ-ಅಜೀವದ ವಿಶೇಷಗಳೇ ಇವೆ, ಇವನ್ನು ಬೇರೆಯಾಗಿ ಹೇಳುವುದರ ಪ್ರಯೋಜನವೇನು?

**ಉತ್ತರ :-** ಒಂದು ವೇಳೆ ಇಲ್ಲಿ ಪದಾರ್ಥಗಳ ಶ್ರದ್ಧೆ ಮಾಡುವುದರದೇ ಪ್ರಯೋಜನವಿರುತ್ತಿದ್ದರೆ ಸಾಮಾನ್ಯದಿಂದ ಅಥವಾ ವಿಶೇಷದಿಂದ ಹೇಗೆ ಎಲ್ಲ ಪದಾರ್ಥಗಳನ್ನು ತಿಳಿಯುವುದಾಗುವುದು ಹಾಗೆಯೇ ಕಥನ ಮಾಡುತ್ತಿತ್ತು; ಆದರೆ ಇಲ್ಲಿ ಅದಂತೂ ಪ್ರಯೋಜನವಿಲ್ಲ; ಇಲ್ಲಿಯಂತೂ ಮೋಕ್ಷದ ಪ್ರಯೋಜನವಿದೆ. ಯಾವ ಸಾಮಾನ್ಯ ಅಥವಾ ವಿಶೇಷ ಭಾವಗಳ ಶ್ರದ್ಧೆ ಮಾಡುವುದರಿಂದ ಮೋಕ್ಷವಾಗುವುದು ಮತ್ತು ಯಾವವುಗಳ ಶ್ರದ್ಧೆ ಮಾಡಿದಲ್ಲದೆ ಮೋಕ್ಷವಾಗುವುದಿಲ್ಲ ಅವುಗಳ ನಿರೂಪಣೆಯನ್ನೇ ಇಲ್ಲಿ ಮಾಡಲಾಗಿದೆ.

ಆದುದರಿಂದ ಜೀವ-ಅಜೀವವೆಂಬ ಈ ಎರಡನ್ನಂತೂ ಅಧಿಕ ದ್ರವ್ಯಗಳ ಒಂದು ಜಾತಿಯ ಅಪೇಕ್ಷೆಯಿಂದ ಸಾಮಾನ್ಯರೂಪದ ತತ್ತ್ವ ಹೇಳಿದೆ. ಇವೆರಡೂ ಜಾತಿಗಳನ್ನು ತಿಳಿಯುವುದರಿಂದ ಜೀವನಿಗೆ ಸ್ವ-ಪರದ ಶ್ರದ್ಧೆಯಾಗುವುದು. ಆಗ ತನ್ನನ್ನು ಪರದಿಂದ ಭಿನ್ನವೆಂದು ತಿಳಿಯುವನು, ತನ್ನ ಹಿತದ ಸಲುವಾಗಿ ಮೋಕ್ಷದ ಉಪಾಯ ಮಾಡುವನು; ಮತ್ತು ತನ್ನಿಂದ ಭಿನ್ನವಾದ ಪರವನ್ನು ತಿಳಿಯುವನು, ಆಗ ಪರದ್ರವ್ಯದಿಂದ ಉದಾಸೀನನಾಗಿ ರಾಗಾದಿಗಳ ತ್ಯಾಗ ಮಾಡಿ ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವನು. ಆದುದರಿಂದ ಇವು ಎರಡು ಜಾತಿಗಳ ಶ್ರದ್ಧೆಯಾದ ಮೇಲೆಯೇ ಮೋಕ್ಷವಾಗುತ್ತದೆ. ಮತ್ತು ಎರಡು ಜಾತಿಗಳನ್ನು ತಿಳಿದುಕೊಂಡಲ್ಲದೆ ಸ್ವ-ಪರದ ಶ್ರದ್ಧೆಯಾಗುವುದಿಲ್ಲ, ಆಗ ಪರ್ಯಾಯ ಬುದ್ಧಿಯಿಂದ ಸಂಸಾರದ ಪ್ರಯೋಜನದ ಉಪಾಯವನ್ನೇ ಮಾಡುತ್ತಾನೆ. ಪರದ್ರವ್ಯಗಳಲ್ಲಿ ರಾಗ-ದ್ವೇಷಗಳ ರೂಪನಾಗಿ ಪ್ರವರ್ತಿಸುವನು, ಆಗ ಮೋಕ್ಷಮಾರ್ಗದಲ್ಲಿ ಹೇಗೆ ಪ್ರವರ್ತಿಸುವನು? ಆದುದರಿಂದ ಇವೆರಡು ಜಾತಿಗಳ ಶ್ರದ್ಧೆಯಾಗದಿದ್ದರೆ ಮೋಕ್ಷವಾಗುವುದಿಲ್ಲ. ಆದುದರಿಂದ ಇವೆರಡು ಸಾಮಾನ್ಯ ತತ್ತ್ವಗಳಂತೂ ಅವಶ್ಯವಾಗಿ ಶ್ರದ್ಧೆ ಮಾಡಲು ಯೋಗ್ಯವೆಂದು ಹೇಳಿದ್ದಾರೆ.

ಅದರಂತೆ ಆಸ್ರವ ಮೊದಲಾದ ಐದು ಹೇಳಿದೆ. ಅವು ಜೀವ-ಪುದ್ಗಲದ ಪರ್ಯಾಯಗಳಿವೆ; ಆದುದರಿಂದ ಇವು ವಿಶೇಷರೂಪದ ತತ್ತ್ವಗಳಿವೆ; ಈ ಐದು ಪರ್ಯಾಯಗಳನ್ನು ತಿಳಿಯುವುದರಿಂದ ಮೋಕ್ಷದ ಉಪಾಯ ಮಾಡುವ ಶ್ರದ್ಧೆಯಾಗುತ್ತದೆ.

ಮೋಕ್ಷವನ್ನು ಪರಿಚಯ ಮಾಡಿಕೊಂಡರೇನೇ ಅದನ್ನು ಹಿತವೆಂದು ಮನ್ನಿಸಿ ಅದರ ಉಪಾಯ ಮಾಡುವನು; ಆದುದರಿಂದ ಮೋಕ್ಷದ ಶ್ರದ್ಧೆ ಮಾಡಬೇಕು.

ಮತ್ತು ಮೋಕ್ಷದ ಉಪಾಯವು ಸಂವರ-ನಿರ್ಜರೆಯಿವೆ; ಅವನ್ನು ಪರಿಚಯ ಮಾಡಿಕೊಂಡರೆ ಹೇಗೆ ಸಂವರ-ನಿರ್ಜರೆಯಾಗುವವು ಹಾಗೆ ಪ್ರವರ್ತಿಸುವನು; ಆದುದರಿಂದ ಸಂವರ-ನಿರ್ಜರೆಗಳ ಶ್ರದ್ಧೆ ಮಾಡುವುದು.

ಸಂವರ ನಿರ್ಜರೆಗಳಂತೂ ಅಭಾವ ಲಕ್ಷಣಯುಕ್ತವಿವೆ; ಆದುದರಿಂದ ಯಾವವುಗಳ ಅಭಾವ ಮಾಡುವುದಿದೆ ಅವನ್ನು ಪರಿಚಯಸಿಕೊಳ್ಳಬೇಕಾಗುವುದು. ಹೇಗೆಂದರೆ ಕ್ರೋಧದ ಅಭಾವವಾದ ಮೇಲೆ ಕ್ಷಮೆಯಾಗುತ್ತದೆ; ಆದುದರಿಂದ ಕ್ರೋಧವನ್ನು ಪರಿಚಯಿಸಿಕೊಂಡರೆ ಅದರ ಅಭಾವ ಮಾಡಿ ಕ್ಷಮಾರೂಪವಾಗಿ ಪರಿವರ್ತನ ಮಾಡಲಾಗುವುದು. ಅದೇ ಪ್ರಕಾರ ಆಸ್ರವದ ಅಭಾವವಾದ ಮೇಲೆ ಸಂವರವಾಗುತ್ತದೆ ಮತ್ತು ಬಂಧದ ಏಕದೇಶ ಅಭಾವವಾದ ಮೇಲೆ ನಿರ್ಜರೆಯಾಗುತ್ತದೆ; ಆದುದರಿಂದ ಆಸ್ರವ -ಬಂಧಗಳನ್ನು ಪರಿಚಯಿಸಿಕೊಂಡರೆ ಅವುಗಳ ನಾಶ ಮಾಡಿ ಸಂವರ-ನಿರ್ಜರಾರೂಪವಾಗಿ ಪ್ರವರ್ತನೆ ಮಾಡಲಾಗುವುದು. ಆದುದರಿಂದ ಆಸ್ರವ-ಬಂಧಗಳ ಶ್ರದ್ಧೆ ಮಾಡುವುದು.

ಈ ಪ್ರಕಾರ ಇವು ಐದು ಪರ್ಯಾಯಗಳ ಶ್ರದ್ಧೆಯಾದ ಮೇಲೆಯೇ ಮೋಕ್ಷಮಾರ್ಗವಾಗುತ್ತದೆ. ಇವನ್ನು ಪರಿಚಯಿಸಿಕೊಳ್ಳದೆ ಮೋಕ್ಷದ ಪರಿಚಯವಿಲ್ಲದೆ ಅದರ ಉಪಾಯ ಏತಕ್ಕಾಗಿ ಮಾಡುವುದು ? ಸಂವರ-ನಿರ್ಜರೆಗಳ ಪರಿಚಯವಿಲ್ಲದೆ ಅವುಗಳಲ್ಲಿ ಹೇಗೆ ಪ್ರವರ್ತನೆ ಮಾಡುವುದು ? ಆಸ್ರವ-ಬಂಧಗಳ ಪರಿಚಯವಿಲ್ಲದೆ ಅವುಗಳ ನಾಶ ಹೇಗೆ ಮಾಡುವುದು ? ಈ ಪ್ರಕಾರ ಇವು ಐದು ಪರ್ಯಾಯಗಳ ಶ್ರದ್ಧೆಯಾಗದಿದ್ದರೆ ಮೋಕ್ಷಮಾರ್ಗ ವಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು.

ಈ ಪ್ರಕಾರ ತತ್ತ್ವಾರ್ಥಗಳು ಅನಂತವಿವೆ, ಅವುಗಳ ಪ್ರರೂಪಣೆಯು ಸಾಮಾನ್ಯ-ವಿಶೇಷದಿಂದ ಅನೇಕ ಪ್ರಕಾರವಾಗುವುದು; ಆದರೆ ಇಲ್ಲಿ ಒಂದು ಮೋಕ್ಷದ ಪ್ರಯೋಜನವಿದೆ; ಆದುದರಿಂದ ಎರಡಂತೂ ಜಾತಿ ಅಪೇಕ್ಷೆಯಿಂದ ಸಾಮಾನ್ಯ ತತ್ತ್ವವಿವೆ. ಮತ್ತು ಪರ್ಯಾಯರೂಪವಾಗಿ ಐದು ವಿಶೇಷತತ್ತ್ವಗಳಿವೆ, ಇವೆಲ್ಲವು ಸೇರಿ ಏಳೇ ತತ್ತ್ವಗಳನ್ನು ಹೇಳಿದೆ.

ಇವುಗಳ ಯಥಾರ್ಥ ಶ್ರದ್ಧೆಯ ಆಧೀನದಲ್ಲಿ ಮೋಕ್ಷಮಾರ್ಗವಿದೆ ಇದನ್ನು ಹೊರತು ಪಡಿಸಿ ಉಳಿದವುಗಳ ಶ್ರದ್ಧೆಯಿರಲಿ ಅಥವಾ ಬಿಡಲಿ ಅಥವಾ ಅನ್ಯಥಾ ಶ್ರದ್ಧೆಯಿರಲಿ ಯಾವುದರ ಆಧೀನವೂ ಮೋಕ್ಷಮಾರ್ಗವಿಲ್ಲವೆಂದು ತಿಳಿಯುವುದು.

ಇನ್ನು ಕೆಲವೆಡೆ ಪುಣ್ಯ-ಪಾಪ ಸಹಿತ ನವಪದಾರ್ಥ ಹೇಳಿದ್ದಾರೆ; ಆ ಪುಣ್ಯ-ಪಾಪಗಳು ಆಸ್ರವದ ವಿಶೇಷಗಳಿರುವುದರಿಂದ ಏಳು ತತ್ತ್ವಗಳಲ್ಲಿ ಗರ್ಭಿತವಾದವು. ಅಥವಾ ಪುಣ್ಯ-ಪಾಪದ ಶ್ರದ್ಧೆಯಾದ ಮೇಲೆ ಪುಣ್ಯವನ್ನು ಮೋಕ್ಷಮಾರ್ಗವೆಂದು ಮನ್ನಿಸಬಾರದು. ಮತ್ತು ಸ್ವಚ್ಛಂದಿಯಾಗಿ ಪಾಪರೂಪದಿಂದ ಪ್ರವರ್ತಿಸಬಾರದು. ಆದುದರಿಂದ ಮೋಕ್ಷಮಾರ್ಗದಲ್ಲಿ ಇವುಗಳ ಶ್ರದ್ಧೆಯು ಕೂಡ ಉಪಕಾರಿಯಿದೆಯೆಂದು ತಿಳಿದುಕೊಂಡು ಎರಡು ತತ್ತ್ವವಿಶೇಷಗಳನ್ನು ವಿಶೇಷವಾಗಿ ಸೇರಿಸಿ ನವಪದಾರ್ಥ ಹೇಳಿದೆ. ಮತ್ತು ಸಮಯಸಾರದಲ್ಲಿ ಇವನ್ನು ನವತತ್ತ್ವವೆಂದೂ ಹೇಳಿದೆ.

**ಪ್ರಶ್ನೆ :-** ಇವುಗಳ ಶ್ರದ್ಧೆಗೆ ಸಮ್ಯಗ್ದರ್ಶನವೆಂದು ಹೇಳಿದೆ; ಆದರೆ ದರ್ಶನವು ಸಾಮಾನ್ಯ ಅವಲೋಕನ ಮಾತ್ರವಿದ್ದರೆ ಶ್ರದ್ಧೆಯು ಪ್ರತೀತಿಮಾತ್ರವಿದೆ; ಎಂದಮೇಲೆ ಇವುಗಳ ಏಕಾರ್ಥತೆಯು ಯಾವ ಪ್ರಕಾರ ಸಂಭವವಿದೆ?

**ಉತ್ತರ :-** ಪ್ರಕರಣವಶದಿಂದ ಧಾತುವಿನ ಅರ್ಥವು ಅನ್ಯಥಾ ಆಗುತ್ತದೆ, ಇಲ್ಲಿ ಮೋಕ್ಷಮಾರ್ಗದ ಪ್ರಕರಣವಿದೆ. ಅದರಲ್ಲಿ 'ದರ್ಶನ' ಶಬ್ದದ ಅರ್ಥವು ಸಾಮಾನ್ಯ ಅವಲೋಕನ ಮಾತ್ರವೆಂದು ಗ್ರಹಣ ಮಾಡಬಾರದು, ಏಕೆಂದರೆ ಚಕ್ಷು-ಅಚಕ್ಷುದರ್ಶನದಿಂದ ಸಾಮಾನ್ಯ ಅವಲೋಕನವು ಸಮ್ಯಗ್ದೃಷ್ಟಿ-ಮಿಥ್ಯಾದೃಷ್ಟಿಗೆ ಸಮಾನವಾಗುತ್ತದೆ. ಇದರಿಂದೇನು ಮೋಕ್ಷಮಾರ್ಗದ ಪ್ರವೃತ್ತಿ ಅಪ್ರವೃತ್ತಿಯಾಗುವುದಿಲ್ಲ. ಮತ್ತು ಶ್ರದ್ಧೆಯಾಗುತ್ತದೆ ಅದು ಸಮ್ಯಗ್ದೃಷ್ಟಿಗೇನೇ ಆಗುತ್ತದೆ, ಇದರಿಂದ ಮೋಕ್ಷಮಾರ್ಗದ ಪ್ರವೃತ್ತಿಯಾಗುತ್ತದೆ. ಆದುದರಿಂದ 'ದರ್ಶನ' ಶಬ್ದದ ಅರ್ಥವನ್ನು ಕೂಡ ಇಲ್ಲಿ ಶ್ರದ್ಧಾನಮಾತ್ರವೆಂದೇ ಗ್ರಹಣ ಮಾಡುವುದು.

**ಪ್ರಶ್ನೆ :-** ಇಲ್ಲಿ ವಿಪರೀತಾಭಿನಿವೇಶರಹಿತ ಶ್ರದ್ಧೆ ಮಾಡಲು ಹೇಳಿದೆ, ಅದರ ಪ್ರಯೋಜನವೇನು ?

**ಉತ್ತರ :-** ಅಭಿಪ್ರಾಯದ ಹೆಸರು ಅಭಿನಿವೇಶವಿದೆ. ಆದರೆ ಹೇಗೆ ತತ್ತ್ವಾರ್ಥಶ್ರದ್ಧೆಯ ಅಭಿಪ್ರಾಯವಿದೆ ಹಾಗೆ ಆಗದೆ ಅನ್ಯಥಾ ಅಭಿಪ್ರಾಯವಾಗುವುದರ ಹೆಸರು ವಿಪರೀತಾಭಿನಿವೇಶವಿದೆ. ತತ್ತ್ವಾರ್ಥಶ್ರದ್ಧೆ ಮಾಡುವ ಅಭಿಪ್ರಾಯವು ಕೇವಲ ಅವುಗಳ ನಿಶ್ಚಯ ಮಾಡುವುದು ಮಾತ್ರವೇ ಇಲ್ಲ; ಆದರೆ ಅಲ್ಲಿ ಜೀವ-ಅಜೀವಗಳ ಪರಿಚಯ ಮಾಡಿಕೊಂಡು ತನ್ನನ್ನು ಹಾಗೂ ಪರವನ್ನು ಹೇಗಿವೆ ಹಾಗೆ ಮನ್ನಿಸುವುದು, ಅದರಂತೆ ಆಸ್ರವವನ್ನು ಪರಿಚಯಿಸಿಕೊಂಡು ಅದನ್ನು ಹೇಯವೆಂದು ಮನ್ನಿಸುವುದು, ಅದರಂತೆ ಬಂಧವನ್ನು ಪರಿಚಯಿಸಿಕೊಂಡು

ಅದನ್ನು ಅಹಿತವೆಂದು ಮನ್ನಿಸುವುದು, ಅದರಂತೆ ಸಂವರವನ್ನು ಪರಿಚಯಿಸಿಕೊಂಡು ಅದನ್ನು ಉಪಾದೇಯವೆಂದು ಮನ್ನಿಸುವುದು, ಅದರಂತೆ ನಿರ್ಜರೆಯನ್ನು ಪರಿಚಯಿಸಿಕೊಂಡು ಅದನ್ನು ಹಿತದ ಕಾರಣವೆಂದು ಮನ್ನಿಸುವುದು, ಅದರಂತೆ ಮೋಕ್ಷವನ್ನು ಪರಿಚಯಿಸಿಕೊಂಡು ಅದನ್ನು ತನ್ನ ಪರಮಹಿತವೆಂದು ಮನ್ನಿಸುವುದು. ಹೀಗೆ ತತ್ತ್ವಾರ್ಥಶ್ರದ್ಧೆಯ ಅಭಿಪ್ರಾಯವಿದೆ; ಅದರಿಂದ ಪ್ರತಿಯಾದ ಅಭಿಪ್ರಾಯದ ಹೆಸರು ವಿಪರೀತಾಭಿನಿವೇಶವಿದೆ. ನಿಜವಾದ ತತ್ತ್ವಾರ್ಥಶ್ರದ್ಧೆಯಾದ ಮೇಲೆ ಇದರ ಅಭಾವವಾಗುತ್ತದೆ. ಆದುದರಿಂದ ತತ್ತ್ವಾರ್ಥಶ್ರದ್ಧೆಯಿದೆ, ಅದು ವಿಪರೀತಾಭಿನಿವೇಶದಿಂದ ರಹಿತವಿದೆಯೆಂದು ಇಲ್ಲಿ ಹೇಳಿದೆ.

ಅಥವಾ ಒಬ್ಬನಿಗೆ ಆಭಾಸ ಮಾತ್ರ ತತ್ತ್ವಾರ್ಥಶ್ರದ್ಧೆಯಾಗುತ್ತದೆ; ಆದರೆ ಅಭಿಪ್ರಾಯದಲ್ಲಿನ ವಿಪರೀತತೆಯು ಬಿಟ್ಟು ಹೋಗುವುದಿಲ್ಲ. ಅಂತರಂಗದಲ್ಲಿ ಪೂರ್ವೋಕ್ತ ಅಭಿಪ್ರಾಯದಿಂದ ವಿರುದ್ಧವಾದ ಅಭಿಪ್ರಾಯವು ಯಾವುದೇ ಪ್ರಕಾರದಿಂದ ಕಂಡುಬರುತ್ತಿದ್ದರೆ ಅವನಿಗೆ ಸಮ್ಯಗ್ದರ್ಶನವಾಗುವುದಿಲ್ಲ. ಹೇಗೆಂದರೆ ದ್ರವ್ಯಲಿಂಗಿ ಮುನಿಯು ಜಿನವಚನಗಳಿಂದ ತತ್ತ್ವಗಳ ಪ್ರತೀತಿ ಮಾಡುವನು, ಆದರೆ ಶರೀರಾಶ್ರಿತವಾದ ಕ್ರಿಯೆಗಳಲ್ಲಿ ಅಹಂಕಾರ ಹಾಗೂ ಪುಣ್ಯಾಸ್ರವದಲ್ಲಿ ಉಪಾದೇಯತೆ ಇತ್ಯಾದಿ ವಿಪರೀತ ಅಭಿಪ್ರಾಯದಿಂದ ಮಿಥ್ಯಾದೃಷ್ಟಿಯಾಗಿಯೇ ಉಳಿಯುತ್ತಾನೆ. ಆದುದರಿಂದ ವಿಪರೀತಾಭಿನಿವೇಶದಿಂದ ರಹಿತವಾದ ಆ ತತ್ತ್ವಾರ್ಥಶ್ರದ್ಧೆಯೇ ಸಮ್ಯಗ್ದರ್ಶನವಿದೆ.

ಈ ಪ್ರಕಾರ ವಿಪರೀತಾಭಿನಿವೇಶದಿಂದ ರಹಿತವಾದ ಜೀವಾದಿ ತತ್ತ್ವಾರ್ಥಗಳ ಶ್ರದ್ಧಾನವು ಅದು ಸಮ್ಯಗ್ದರ್ಶನದ ಲಕ್ಷಣವಿದೆ ಮತ್ತು ಸಮ್ಯಗ್ದರ್ಶನವು ಲಕ್ಷ್ಯವಿದೆ.

ಅದನ್ನೇ ತತ್ತ್ವಾರ್ಥಸೂತ್ರದಲ್ಲಿ **'ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಮ್'**॥೧-೨॥ ಎಂದು ಹೇಳಿದ್ದಾರೆ, ತತ್ತ್ವಾರ್ಥಗಳ ಶ್ರದ್ಧೆಯೇ ಸಮ್ಯಗ್ದರ್ಶನವಿದೆ.

ತತ್ತ್ವಾರ್ಥಸೂತ್ರದ ಮೇಲೆ 'ಸರ್ವಾರ್ಥಸಿದ್ಧಿ' ನಾಮದ ಟೀಕಾಗ್ರಂಥವಿದ್ದು, ಅದರಲ್ಲಿ ತತ್ತ್ವಮೊದಲಾದ ಪದಗಳ ಅರ್ಥವನ್ನು ಸ್ಪಷ್ಟವಾಗಿ ಹೇಳಿದೆ ಮತ್ತು ಜತೆಯಲ್ಲಿ ತತ್ತ್ವವೆಂದೇಕೆ ಹೇಳಿದೆಯೆಂಬುದರ ಪ್ರಯೋಜನ ಹೇಳಿದ್ದಾರೆ. ಅದರ ಅನುಸಾರ ಇಲ್ಲಿ ಸ್ವಲ್ಪ ಕಥನ ಮಾಡಲಾಗಿದೆಯೆಂದು ತಿಳಿಯುವುದು.

ಅದರಂತೆ ಪುರುಷಾರ್ಥಸಿದ್ಧ್ಯುಪಾಯದಲ್ಲಿ ಕೂಡ ಇದೇ ಪ್ರಕಾರ ಹೇಳಿದೆ,-

**ಜೀವಾಜೀವಾದೀನಾಂ ತತ್ತ್ವಾರ್ಥಾನಾಂ ಸದೈವ ಕರ್ತವ್ಯಮ್ ।**
**ಶ್ರದ್ಧಾನಂ ವಿಪರೀತಾಭಿನಿವಿವೇಶವಿವಿಕ್ತಮಾತ್ಮರೂಪಂ ತತ್ ॥೨೨॥**

**ಅರ್ಥ :-** ವಿಪರೀತಾಭಿನಿವೇಶದಿಂದ ರಹಿತವಾಗಿ ಜೀವ-ಅಜೀವ ಮೊದಲಾದ ತತ್ತ್ವಾರ್ಥಗಳ ಶ್ರದ್ಧೆಯನ್ನು ಸದಾಕಾಲ ಮಾಡುವುದು ಯೋಗ್ಯವಿದೆ. ಈ ಶ್ರದ್ಧೆಯು ಆತ್ಮನ ಸ್ವರೂಪವಿದೆ, ಇದು ದರ್ಶನ ಮೋಹದ ಉಪಾಧಿಯು ದೂರವಾದ ಮೇಲೆ ಪ್ರಕಟವಾಗುತ್ತದೆ, ಆದುದರಿಂದ ಆತ್ಮನ ಸ್ವಭಾವವಿದೆ. ನಾಲ್ಕನೆಯ ಮೊದಲಾದ ಗುಣಸ್ಥಾನದಲ್ಲಿ ಪ್ರಕಟವಾಗುತ್ತದೆ, ಅನಂತರ ಸಿದ್ಧ ಅವಸ್ಥೆಯಲ್ಲಿ ಕೂಡ ಸದಾಕಾಲ ಇದರ ಸದ್ಭಾವವಿರುತ್ತದೆಯೆಂದು ತಿಳಿಯುವುದು.

**ತತ್ತ್ವಾರ್ಥಶ್ರದ್ಧೆಯ ಲಕ್ಷಣದಲ್ಲಿ ಅವ್ಯಾಪ್ತಿ, ಅತಿವ್ಯಾಪ್ತಿ ಮತ್ತು ಅಸಂಭವ ದೋಷದ ಪರಿಹಾರಃ-**

**ಪ್ರಶ್ನೆ ಃ-** ತಿರ್ಯಂಚ ಮೊದಲಾಗಿ ಅದೆಷ್ಟೋ ಅಲ್ಪಜ್ಞಾನಿ ಜೀವಗಳು ಏಳು ತತ್ತ್ವಗಳ ಹೆಸರನ್ನು ಕೂಡ ತಿಳಿಯುವ ಸಾಧ್ಯತೆಯಿಲ್ಲ, ಆದರೆ ಅವುಗಳಿಗೆ ಕೂಡ ಸಮ್ಯಗ್ದರ್ಶನದ ಪ್ರಾಪ್ತಿಯಾಗುತ್ತದೆಂದು ಶಾಸ್ತ್ರದಲ್ಲಿ ಹೇಳಿದೆ; ಆದುದರಿಂದ ತಾವು ತತ್ತ್ವಾರ್ಥಶ್ರದ್ಧೆಯು ಸಮ್ಯಕ್ತ್ವದ ಲಕ್ಷಣವೆಂದು ಹೇಳಿರುವುದರಲ್ಲಿ ಅವ್ಯಾಪ್ತಿಯ ದೋಷವು ತಗಲುತ್ತದೆ.

**ಉತ್ತರ ಃ-** ಜೀವ-ಅಜೀವ ಮೊದಲಾದವುಗಳ ಹೆಸರುಗಳನ್ನು ತಿಳಿಯಲಿ ಅಥವಾ ತಿಳಿಯದಿರಲಿ ಅಥವಾ ಅನ್ಯಥಾ ತಿಳಿಯಲಿ, ಅವುಗಳ ಸ್ವರೂಪವನ್ನು ಯಥಾರ್ಥವಾಗಿ ಪರಿಚಯಿಸಿಕೊಂಡು ಶ್ರದ್ಧೆ ಮಾಡಿದ ಮೇಲೆ ಸಮ್ಯಕ್ತ್ವವಾಗುತ್ತದೆ.

ಅಲ್ಲಿ ಒಬ್ಬನು ಸಾಮಾನ್ಯರೂಪದಿಂದ ಸ್ವರೂಪವನ್ನು ಪರಿಚಯಮಾಡಿಕೊಂಡು ಶ್ರದ್ಧೆ ಮಾಡುತ್ತಾನೆ. ಒಬ್ಬನು ವಿಶೇಷರೂಪದಿಂದ ಸ್ವರೂಪವನ್ನು ಪರಿಚಯಮಾಡಿಕೊಂಡು ಶ್ರದ್ಧೆ ಮಾಡುತ್ತಾನೆ. ಆದುದರಿಂದ ಆ ತುಚ್ಛಜ್ಞಾನಿಯಾದ ತಿರ್ಯಂಚ ಮೊದಲಾದವು ಸಮ್ಯಗ್ದೃಷ್ಟಿಯಿವೆ ಅವು ಜೀವ ಮೊದಲಾದವುಗಳ ಹೆಸರುಗಳನ್ನು ತಿಳಿಯದಿದ್ದರೂ ಕೂಡ ಸಾಮಾನ್ಯರೂಪದಿಂದ ಅವುಗಳ ಸ್ವರೂಪವನ್ನು ಪರಿಚಯಮಾಡಿಕೊಂಡು ಶ್ರದ್ಧೆ ಮಾಡುತ್ತವೆ, ಆದುದರಿಂದ ಅವಕ್ಕೆ ಸಮ್ಯಕ್ತ್ವದ ಪ್ರಾಪ್ತಿಯಾಗುತ್ತದೆ.

ಹೇಗೆಂದರೆ ಯಾವುದೇ ತಿರ್ಯಂಚವು ತನ್ನ ಹಾಗೂ ಉಳಿದವುಗಳ ಹೆಸರುಗಳನ್ನಂತೂ ತಿಳಿಯುವುದಿಲ್ಲ, ಆದರೆ ತನ್ನಲ್ಲಿಯೇ ತನ್ನತನವನ್ನು ಮನ್ನಿಸುತ್ತದೆ, ಉಳಿದವುಗಳನ್ನು ಪರವೆಂದು ಮನ್ನಿಸುತ್ತದೆ. ಅದೇ ಪ್ರಕಾರ ಅಲ್ಪಜ್ಞಾನಿಯು ಜೀವ-ಅಜೀವಗಳ ಹೆಸರು ತಿಳಿಯುವುದಿಲ್ಲ; ಆದರೆ ಯಾವ ಜ್ಞಾನಸ್ವರೂಪನಾದ ಆತ್ಮನಿದ್ದಾನೆ ಅವನಲ್ಲಿ ತನ್ನತನವನ್ನು ಮನ್ನಿಸುತ್ತಾನೆ, ಮತ್ತು ಯಾವ ಶರೀರ ಮೊದಲಾದವುಗಳಿವೆ ಅವನ್ನು ಪರವೆಂದು ಮನ್ನಿಸುತ್ತಾನೆ. ಇಂಥ ಶ್ರದ್ಧೆಯು ಅವನಿಗಿರುತ್ತದೆ; ಅದುವೇ ಜೀವ-ಅಜೀವದ ಶ್ರದ್ಧೆಯಿದೆ. ಅದರಂತೆ ಅದೇ ತಿರ್ಯಂಚವು ಸುಖ ಮೊದಲಾದವುಗಳ ಹೆಸರುಗಳನ್ನು ತಿಳಿಯುವುದಿಲ್ಲ, ಆದಾಗ್ಯೂ ಸುಖದ ಅವಸ್ಥೆಯನ್ನು ಪರಿಚಯ ಮಾಡಿಕೊಂಡು ಅದರ ಸಲುವಾಗಿ ಮುಂಬರುವ ದುಃಖದ ಕಾರಣವನ್ನು ತಿಳಿದುಕೊಂಡು ಅದರ ತ್ಯಾಗ ಮಾಡಲು ಬಯಸುತ್ತದೆ ಮತ್ತು ಯಾವುದು ದುಃಖದ ಕಾರಣವಾಗುತ್ತಿದೆ ಅದರ ಅಭಾವದ ಉಪಾಯ ಮಾಡುತ್ತದೆ. ಅದೇ ಪ್ರಕಾರ ಅಲ್ಪಜ್ಞಾನಿಯು ಮೋಕ್ಷ ಮೊದಲಾದವುಗಳ ಹೆಸರನ್ನು ತಿಳಿಯುವುದಿಲ್ಲ, ಆದಾಗ್ಯೂ ಸರ್ವಥಾ ಸುಖರೂಪವಾದ ಮೋಕ್ಷ ಅವಸ್ಥೆಯ ಶ್ರದ್ಧೆಮಾಡುತ್ತ ಅದರ ಸಲುವಾಗಿ ಮುಂಬರುವ ಬಂಧದ ಕಾರಣವಾದ ಆ ರಾಗ ಮೊದಲಾದ ಆಸ್ರವದ ತ್ಯಾಗರೂಪವಾದ ಸಂವರ ಮಾಡಲು ಬಯಸುತ್ತಾನೆ, ಮತ್ತು ಆ ಸಂಸಾರವು ದುಃಖದ ಕಾರಣವಿದ್ದು ಶುದ್ಧಭಾವದಿಂದ ಅದರ ನಿರ್ಜರೆ ಮಾಡಲು ಬಯಸುತ್ತಾನೆ. ಈ ಪ್ರಕಾರ ಅವನಿಗೆ ಆಸ್ರವ ಮೊದಲಾದವುಗಳ ಶ್ರದ್ಧೆಯಿದೆ.

ಈ ಪ್ರಕಾರ ಅವನಲ್ಲಿ ಕೂಡ ಸಪ್ತತತ್ತ್ವಗಳ ಶ್ರದ್ಧೆಯು ಕಂಡು ಬರುತ್ತದೆ, ಒಂದು ವೇಳೆ ಇಂಥ ಶ್ರದ್ಧೆಯಿಲ್ಲದಿದ್ದರೆ ರಾಗಾದಿಗಳ ತ್ಯಾಗ ಮಾಡಿ ಶುದ್ಧಭಾವ ಮಾಡುವ ಅಪೇಕ್ಷೆಯಿರುತ್ತಿರಲಿಲ್ಲ. ಅದನ್ನೇ ಹೇಳುತ್ತಾರೆ.

ಒಂದುವೇಳೆ ಜೀವ-ಅಜೀವದ ಜಾತಿಯನ್ನು ತಿಳಿದುಕೊಳ್ಳದಿದ್ದರೆ ಸ್ವ-ಪರಗಳನ್ನು ಪರಿಚಯ

ಮಾಡಿಕೊಳ್ಳದಿದ್ದರೆ ಪರದಲ್ಲಿ ರಾಗಾದಿಗಳನ್ನು ಹೇಗೆ ಮಾಡುವುದಿಲ್ಲ? ರಾಗಾದಿಗಳನ್ನು ಪರಿಚಯ ಮಾಡಿಕೊಳ್ಳದಿದ್ದರೆ ಅವುಗಳ ತ್ಯಾಗ ಹೇಗೆ ಮಾಡಬಯಸುತ್ತಾನೆ ? ಆ ರಾಗಾದಿಗಳೇ ಆಸ್ರವವಿವೆ. ರಾಗಾದಿಗಳ ಫಲವನ್ನು ಅನಿಷ್ಟವೆಂದು ತಿಳಿದುಕೊಳ್ಳದಿದ್ದರೆ ರಾಗಾದಿಗಳನ್ನು ಏತಕ್ಕಾಗಿ ಬಿಟ್ಟುಕೊಡಲು ಬಯಸುತ್ತಾನೆ ? ಆ ರಾಗಾದಿಗಳ ಫಲವೇ ಬಂಧವಿದೆ. ಮತ್ತು ರಾಗಾದಿಗಳಿಂದ ರಹಿತವಾದ ಪರಿಣಾಮವನ್ನು ಗುರುತಿಸುತ್ತಿದ್ದರೆ ಆ ರೂಪವಾಗಲು ಬಯಸುತ್ತಾನೆ. ಆ ರಾಗಾದಿಗಳಿಂದ ರಹಿತವಾದ ಪರಿಣಾಮದ ಹೆಸರೇ ಸಂವರವಿದೆ. ಅದರಂತೆ ಮೊದಲಿನ ಸಂಸಾರ ಅವಸ್ಥೆಯ ಕಾರಣದ ಹಾನಿಯನ್ನು ಗುರುತಿಸುತ್ತಿದ್ದರೆ ಅದರ ಸಲುವಾಗಿ ತಪಶ್ಚರ್ಯ ಮೊದಲಾದವುಗಳಿಂದ ಶುದ್ಧಭಾವ ಮಾಡಲು ಬಯಸುತ್ತಾನೆ. ಆ ಮೊದಲಿನ ಸಂಸಾರ ಅವಸ್ಥೆಯ ಕಾರಣವು ಕರ್ಮವಿದ್ದು ಅದರ ಹಾನಿಯೇ ನಿರ್ಜರೆಯಿದೆ. ಅದರಂತೆ ಸಂಸಾರ ಅವಸ್ಥೆಯ ಅಭಾವವನ್ನು ಪರಿಚಯಮಾಡಿಕೊಳ್ಳದಿದ್ದರೆ ಸಂವರ-ನಿರ್ಜರೆಯ ರೂಪವಾಗಿ ಏತಕ್ಕಾಗಿ ಪ್ರವರ್ತಿಸುವುದು ? ಆ ಸಂಸಾರ ಅವಸ್ಥೆಯ ಅಭಾವವೇ ಮೋಕ್ಷವಿದೆ. ಆದುದರಿಂದ ಏಳು ತತ್ತ್ವಗಳ ಶ್ರದ್ಧೆಯಾದ ಮೇಲೆಯೇ ರಾಗಾದಿಗಳನ್ನು ಬಿಟ್ಟುಕೊಟ್ಟು ಶುದ್ಧಭಾವ ಮಾಡುವ ಇಚ್ಛೆಯು ಉತ್ಪನ್ನವಾಗುತ್ತದೆ. ಒಂದು ವೇಳೆ ಇವುಗಳಲ್ಲಿ ಒಂದೂ ತತ್ತ್ವದ ಶ್ರದ್ಧೆಯಾಗದಿದ್ದರೆ ಇಂಥ ಅಪೇಕ್ಷೆಯು ಉತ್ಪನ್ನವಾಗುವುದಿಲ್ಲ. ಮತ್ತು ಇಂಥ ಅಪೇಕ್ಷೆಯು ಅಲ್ಪಜ್ಞಾನವುಳ್ಳ ತಿರ್ಯಂಚ ಮೊದಲಾದ ಸಮ್ಯಗ್ದೃಷ್ಟಿ ಜೀವಗಳಿಗೆ ಇದ್ದೇ ಇರುತ್ತದೆ; ಆದುದರಿಂದ ಅವುಗಳಿಗೆ ಸಪ್ತತತ್ತ್ವಗಳ ಶ್ರದ್ಧೆಯು ಕಂಡು ಬರುತ್ತದೆಯೆಂದು ನಿಶ್ಚಯ ಮಾಡುವುದು. ಜ್ಞಾನಾವರಣದ ಕ್ಷಯೋಪಶಮವು ಕಡಿಮೆಯಿರುವುದರಿಂದ ವಿಶೇಷ ರೂಪದಿಂದ ತತ್ತ್ವಗಳ ಜ್ಞಾನವಾಗದಿದ್ದರೂ ದರ್ಶನಮೋಹದ ಉಪಶಮಾದಿಗಳಿಂದ ಸಾಮಾನ್ಯರೂಪದಿಂದ ತತ್ತ್ವಜ್ಞಾನದ ಶಕ್ತಿಯು ಪ್ರಕಟವಾಗುತ್ತದೆ. ಈ ಪ್ರಕಾರ ಈ ಲಕ್ಷಣದಲ್ಲಿ ಅವ್ಯಾಪ್ತಿಯ ದೋಷವು ಬರುವುದಿಲ್ಲ.

**ಪ್ರಶ್ನೆ** :- ಯಾವ ಕಾಲದಲ್ಲಿ ಸಮ್ಯಗ್ದೃಷ್ಟಿಯು ವಿಷಯಕಷಾಯಗಳ ಕಾರ್ಯಗಳಲ್ಲಿ ಪ್ರವರ್ತಿಸುತ್ತಾನೆ ಆ ಕಾಲದಲ್ಲಿ ಏಳು ತತ್ತ್ವಗಳ ವಿಚಾರವೇ ಇರುವುದಿಲ್ಲವೆಂದಮೇಲೆ ಶ್ರದ್ಧೆಯು ಹೇಗೆ ಸಂಭವವಿದೆ ? ಮತ್ತು ಸಮ್ಯಕ್ತ್ವವು ಇದ್ದೇ ಇರುತ್ತದೆ; ಆದುದರಿಂದ ಆ ಲಕ್ಷಣದಲ್ಲಿ ಅವ್ಯಾಪ್ತಿಯ ದೋಷವು ಬರುತ್ತದೆಯಲ್ಲವೇ ?

**ಉತ್ತರ** :- ವಿಚಾರವಂತೂ ಉಪಯೋಗದ ಆಧೀನವಿದೆ; ಉಪಯೋಗವು ಎಲ್ಲಿ ತೊಡಗುತ್ತದೆ ಅದರದೇ ವಿಚಾರವಿರುತ್ತದೆ. ಮತ್ತು ಶ್ರದ್ಧೆಯು ಅದು ಪ್ರತೀತಿರೂಪವಿದೆ. ಆದುದರಿಂದ ಅನ್ಯಜ್ಞೇಯಗಳ ವಿಚಾರವಿದ್ದ ಮೇಲೆ ಹಾಗೂ ಮಲಗಿಕೊಳ್ಳುವ ಮೊದಲಾದ ಕ್ರಿಯೆಗಳಾದ ಮೇಲೆ ತತ್ತ್ವಗಳ ವಿಚಾರವಿರುವುದಿಲ್ಲ; ಆದರೆ ಅವುಗಳ ಪ್ರತೀತಿಯು ಅಖಂಡವಾಗಿರುತ್ತದೆ. ಅದು ನಷ್ಟವಾಗುವುದಿಲ್ಲ; ಆದುದರಿಂದ ಅವನಿಗೆ ಸಮ್ಯಕ್ತ್ವದ ಸದ್ಭಾವವಿದೆ.

ಯಾವ ಪ್ರಕಾರ ಓರ್ವರೋಗಿ ಮನುಷ್ಯನಿಗೆ ನಾನು ಮನುಷ್ಯನಿದ್ದೇನೆ, ತಿರ್ಯಂಚ ಮೊದಲಾದವು ನಾನು ಇಲ್ಲ, ನನಗೆ ಈ ಕಾರಣದಿಂದ ರೋಗವಾಗಿದೆ, ಈಗ ಆ ಕಾರಣಗಳನ್ನು ದೂರಮಾಡಿ ರೋಗವನ್ನು ನಾಶಪಡಿಸಿ ನಿರೋಗಿಯಾಗುವುದಿದೆಯೆಂಬ ಪ್ರತೀತಿಯಿರುತ್ತದೆ. ಮತ್ತು ಅದೇ ಮನುಷ್ಯನು ಬೇರೆ ವಿಚಾರ ಮೊದಲಾದವುಗಳ ರೂಪದಿಂದ ಪ್ರವರ್ತಿಸುವಾಗ ಅವನಿಗೆ ಇಂಥ ವಿಚಾರಗಳಿರುವುದಿಲ್ಲ, ಆದರೆ ಶ್ರದ್ಧೆಯು ಮಾತ್ರ ಹೀಗೆಯೇ ಇರುತ್ತದೆ. ಅದೇ ಪ್ರಕಾರ ಈ ಆತ್ಮನಿಗೆ 'ನಾನು ಆತ್ಮನಿದ್ದೇನೆ, ಪುದ್ಗಲ ಮೊದಲಾದವುಗಳಿಲ್ಲ,

ನನಗೆ ಆಸ್ರವದಿಂದ ಬಂಧವಾಗಿದೆ, ಈಗ ಅದನ್ನು ಸಂವರಮಾಡಿ, ನಿರ್ಜರೆಮಾಡಿ, ಮೋಕ್ಷರೂಪವಾಗುವುದಿದೆ'ಯೆಂಬ ಪ್ರತೀತಿಯಿರುತ್ತದೆ. ಮತ್ತು ಅದೇ ಆತ್ಮನು ಅನ್ಯ ವಿಚಾರ ಮೊದಲಾದವುಗಳ ರೂಪದಿಂದ ಪ್ರವರ್ತಿಸುವಾಗ ಅವನಿಗೆ ಇಂಥ ವಿಚಾರಗಳಿರುವುದಿಲ್ಲ. ಆದರೆ ಶ್ರದ್ಧೆಯು ಮಾತ್ರ ಹೀಗೆಯೇ ಅಖಂಡವಾಗಿರುತ್ತದೆ.

**ಪ್ರಶ್ನೆ :-** ಇಂಥ ಶ್ರದ್ಧೆಯಿರುತ್ತಿದ್ದರೆ ಬಂಧವಾಗುವ ಕಾರಣಗಳಲ್ಲೇಕೆ ಪ್ರವರ್ತಿಸುತ್ತಾನೆ ?

**ಉತ್ತರ :-** ಯಾವ ಪ್ರಕಾರ ಅದೇ ಮನುಷ್ಯನು ಯಾವುದೇ ಕಾರಣದ ವಶದಿಂದ ರೋಗ ವೃದ್ಧಿಸುವ ಕಾರಣಗಳಲ್ಲಿಯೂ ಪ್ರವರ್ತಿಸುತ್ತಾನೆ, ವ್ಯಾಪಾರ ಮೊದಲಾದ ಕಾರ್ಯ ಹಾಗೂ ಕ್ರೋಧಾದಿಗಳ ಕಾರ್ಯಮಾಡುತ್ತಿದ್ದರೂ ಅವನಿಗೆ ಆ ಶ್ರದ್ಧೆಯ ನಾಶವಾಗುವುದಿಲ್ಲ; ಅದೇ ಪ್ರಕಾರ ಅದೇ ಆತ್ಮನು ಕರ್ಮೋದಯದ ನಿಮಿತ್ತದ ವಶದಿಂದ ಬಂಧವಾಗುವ ಕಾರಣಗಳಲ್ಲಿಯೂ ಪ್ರವರ್ತಿಸುತ್ತಾನೆ, ವಿಷಯಸೇವನೆ ಮೊದಲಾದ ಕಾರ್ಯ ಹಾಗೂ ಕ್ರೋಧಾದಿಗಳ ಕಾರ್ಯಮಾಡುತ್ತಾನೆ. **ಆದಾಗ್ಯೂ ಅವನಿಗೆ ಆ ಶ್ರದ್ಧೆಯ ನಾಶವಾಗುವುದಿಲ್ಲ, ಇದರ ವಿಶೇಷ ನಿರ್ಣಯವನ್ನು ಮುಂದೆ ಮಾಡಲಾಗುವುದು.**

ಈ ಪ್ರಕಾರ ಸಪ್ತತತ್ತ್ವಗಳ ವಿಚಾರವಿಲ್ಲದಿದ್ದರೂ ಕೂಡ ಶ್ರದ್ಧೆಯ ಸದ್ಭಾವವು ಕಂಡುಬರುತ್ತದೆ, ಆದುದರಿಂದ ಅಲ್ಲಿ ಅವ್ಯಾಪ್ತಿತನವಿಲ್ಲ.

**ಪ್ರಶ್ನೆ :-** ಉಚ್ಚತರವಾದ ಅವಸ್ಥೆಯಲ್ಲಿ ಎಂದರೆ ನಿರ್ವಿಕಲ್ಪ ಆತ್ಮಾನುಭವವಿರುತ್ತದೆ ಅಲ್ಲಿಯಂತೂ ಸಪ್ತತತ್ತ್ವ ಮೊದಲಾದವುಗಳ ವಿಕಲ್ಪವನ್ನೂ ನಿಷೇಧಮಾಡಲಾಗಿದೆ. ಆದುದರಿಂದ ಸಮ್ಯಕ್ತ್ವದ ಲಕ್ಷಣದ ನಿಷೇಧ ಮಾಡುವುದು ಹೇಗೆ ಸಂಭವವಿದೆ ? ಮತ್ತು ಅಲ್ಲಿ ನಿಷೇಧವು ಸಂಭವವಿದ್ದರೆ ಅವ್ಯಾಪ್ತಿಯ ದೋಷವು ಬರುತ್ತದೆಯಲ್ಲವೇ ?

**ಉತ್ತರ :-** ಕೆಳಗಿನ ಅವಸ್ಥೆಯಲ್ಲಿ ಸಪ್ತತತ್ತ್ವಗಳ ವಿಕಲ್ಪಗಳಲ್ಲಿ ಉಪಯೋಗ ತೊಡಗಿಸುವುದರಿಂದ ಪ್ರತೀತಿಯನ್ನು ದೃಢಪಡಿಸಿದನು ಮತ್ತು ವಿಷಯಾದಿಗಳಿಂದ ಉಪಯೋಗವನ್ನು ಬಿಡಿಸಿ ರಾಗಾದಿಗಳನ್ನು ಕಡಿಮೆ ಮಾಡಿದನು. ಮತ್ತು ಕಾರ್ಯಸಿದ್ಧವಾದ ಮೇಲೆ ಕಾರಣಗಳ ನಿಷೇಧವನ್ನೂ ಮಾಡುತ್ತಾರೆ; ಆದುದರಿಂದ ಎಲ್ಲಿ ಪ್ರತೀತಿಯೂ ದೃಢವಾಗುವುದು ಮತ್ತು ರಾಗಾದಿಗಳೂ ದೂರವಾಗುವವು ಅಲ್ಲಿ ಉಪಯೋಗ ಭ್ರಮಿಸುವ ಖೇದ ಏತಕ್ಕಾಗಿ ಮಾಡುವುದು ? ಆದುದರಿಂದ ಅಲ್ಲಿ ಆ ವಿಕಲ್ಪಗಳ ನಿಷೇಧ ಮಾಡಲಾಗಿದೆ. ಮತ್ತು ಸಮ್ಯಕ್ತ್ವದ ಲಕ್ಷಣವಂತೂ ಪ್ರತೀತಿಯೇ ಇದೆ; ಆ ಪ್ರತೀತಿಯ ನಿಷೇಧವನ್ನಂತೂ ಮಾಡಲಿಲ್ಲ. ಒಂದು ವೇಳೆ ಪ್ರತೀತಿಯನ್ನು ಬಿಡಿಸಿದ್ದರೆ ಈ ಲಕ್ಷಣದ ನಿಷೇಧ ಮಾಡಲಾಯಿತೆಂದು ಹೇಳಬಹುದು; ಆದರೆ ಅದಂತೂ ಇಲ್ಲ ಏಳೂ ತತ್ತ್ವಗಳ ಪ್ರತೀತಿಯು ಅಲ್ಲಿ ಕೂಡ ಅಖಂಡವಾಗಿರುತ್ತದೆ, ಆದುದರಿಂದ ಇಲ್ಲಿ ಅವ್ಯಾಪ್ತಿಯ ದೋಷವು ಬರುವುದಿಲ್ಲ.

**ಪ್ರಶ್ನೆ :-** ಛದ್ಮಸ್ಥನಿಗಂತೂ ಪ್ರತೀತಿ-ಅಪ್ರತೀತಿ ಹೇಳುವ ಸಂಭವವಿದೆ, ಆದುದರಿಂದ ಅಲ್ಲಿ ಸಪ್ತತತ್ತ್ವಗಳ ಪ್ರತೀತಿಯು ಸಮ್ಯಕ್ತ್ವದ ಲಕ್ಷಣವೆಂದು ಹೇಳಿರುವುದನ್ನು ನಾವು ಮನ್ನಿಸಿದೆವು; ಆದರೆ ಕೇವಲೀ-ಸಿದ್ಧಭಗವಂತರಿಗಂತೂ ಎಲ್ಲವುಗಳ ಜ್ಞಾನವು ಸಮಾನರೂಪದಿಂದಿರುವಲ್ಲಿ ಸಪ್ತತತ್ತ್ವಗಳ ಪ್ರತೀತಿ ಹೇಳುವ ಸಂಭವವಿಲ್ಲ, ಮತ್ತು ಅವರಿಗೆ ಸಮ್ಯಕ್ತ್ವಗುಣವು ಕಂಡು ಬರುತ್ತಿರುವುದರಿಂದ ಅಲ್ಲಿ ಆ ಲಕ್ಷಣದ ಅವ್ಯಾಪ್ತಿತನವು ಬರುವುದಿಲ್ಲವೇನು ?

**ಉತ್ತರ :-** ಯಾವ ಪ್ರಕಾರ ಛದ್ಮಸ್ಥನಿಗೆ ಶ್ರುತಜ್ಞಾನಕ್ಕೆ ಅನುಸರಿಸಿ ಪ್ರತೀತಿಯು ಕಂಡು ಬರುತ್ತದೆ, ಅದೇ ಪ್ರಕಾರ ಕೇವಲೀ-ಸಿದ್ಧಭಗವಂತರಿಗೆ ಕೇವಲಜ್ಞಾನಕ್ಕೆ ಅನುಸರಿಸಿ ಪ್ರತೀತಿಯು ಕಂಡು ಬರುತ್ತದೆ. ಮೊದಲು ಯಾವ ಸಪ್ತತತ್ತ್ವಗಳ ಸ್ವರೂಪ ನಿಶ್ಚಿತ ಮಾಡಿತ್ತು ಅದನ್ನೇ ಕೇವಲಜ್ಞಾನದ ಮೂಲಕ ತಿಳಿದನು, ಅಲ್ಲಿ ಪ್ರತೀತಿಯ ಪರಮಾವಗಾಢತನವಾಯಿತು; ಅದರಿಂದಲೇ ಪರಮಾವಗಾಢಸಮ್ಯಕ್ತ್ವವೆಂದು ಹೇಳಿದೆ. ಮೊದಲು ಯಾವುದರ ಶ್ರದ್ಧೆ ಮಾಡಿದ್ದನು ಅದನ್ನು ಅಸತ್ಯವೆಂದು ತಿಳಿಯುತ್ತಿದ್ದರೆ ಅಲ್ಲಿ ಅಪ್ರತೀತಿಯಾಗುತ್ತಿತ್ತು; ಆದರೆ ಸಪ್ತತತ್ತ್ವಗಳ ಶ್ರದ್ಧೆಯು ಹೇಗೆ ಛದ್ಮಸ್ಥನಿಗೆ ಆಗಿತ್ತು ಹಾಗೆಯೇ ಕೇವಲೀ-ಸಿದ್ಧಭಗವಂತರಿಗೆ ಕಂಡು ಬರುತ್ತದೆ; ಆದುದರಿಂದ ಜ್ಞಾನಾದಿಗಳ ಹೀನತೆ-ಅಧಿಕತೆಯಿದ್ದರೂ ಕೂಡ ತಿರ್ಯಂಚ ಮೊದಲಾದವುಗಳ ಹಾಗೂ ಕೇವಲೀ-ಸಿದ್ಧಭಗವಂತರ ಸಮ್ಯಕ್ತ್ವಗುಣವನ್ನು ಸಮಾನವೆಂದೇ ಹೇಳಿದೆ.

ಅದರಂತೆ ಪೂರ್ವ ಅವಸ್ಥೆಯಲ್ಲಿ ಸಂವರ-ನಿರ್ಜರೆಯಿಂದ ಮೋಕ್ಷದ ಉಪಾಯ ಮಾಡುವುದೆಂದು ಮನ್ನಿಸಲಾಗಿತ್ತು. ಅನಂತರ ಮುಕ್ತಾವಸ್ಥೆಯಾದ ಮೇಲೆ ನಮಗೆ ಸಂವರ-ನಿರ್ಜರೆಯಿಂದ ಮೋಕ್ಷವಾಯಿತೆಂದು ಮನ್ನಿಸತೊಡಗಿದನು. ಅದರಂತೆ ಮೊದಲು ಜ್ಞಾನದ ಹೀನತೆಯಿಂದ ಜೀವಾದಿಗಳ ವಿಶೇಷವನ್ನು ಸ್ವಲ್ಪ ತಿಳಿಯಲಾಗಿತ್ತು ಅನಂತರ ಕೇವಲಜ್ಞಾನವಾದ ನಂತರ ಅವುಗಳ ಸಮಸ್ತ ವಿಶೇಷಗಳನ್ನು ತಿಳಿಯಲಾಯಿತು; ಆದರೆ ಮೂಲಭೂತ ಜೀವ ಮೊದಲಾದವುಗಳ ಸ್ವರೂಪದ ಶ್ರದ್ಧೆಯು ಹೇಗೆ ಛದ್ಮಸ್ಥನಿಗೆ ಕಂಡು ಬರುತ್ತದೆ ಹಾಗೆಯೇ ಕೇವಲಿಗೆ ಕಂಡು ಬರುತ್ತದೆ. ಮತ್ತು ಕೇವಲೀ-ಸಿದ್ಧಭಗವಂತರು ಅನ್ಯಪದಾರ್ಥಗಳನ್ನು ಕೂಡ ಪ್ರತೀತಿಪೂರ್ವಕವಾಗಿ ತಿಳಿಯುತ್ತಾರೆ, ಆದಾಗ್ಯೂ ಆ ಪದಾರ್ಥಗಳು ಪ್ರಯೋಜನಭೂತವಾಗಿಲ್ಲ; ಆದುದರಿಂದ ಸಮ್ಯಕ್ತ್ವಗುಣದಲ್ಲಿ ಸಪ್ತ ತತ್ತ್ವಗಳ ಶ್ರದ್ಧೆಯನ್ನೇ ಗ್ರಹಣ ಮಾಡಿದೆ. **ಕೇವಲಿಗಳು-ಸಿದ್ಧಭಗವಂತರು ರಾಗಾದಿಗಳ ರೂಪವಾಗಿ ಪರಿಣಮಿಸುವುದಿಲ್ಲ, ಸಂಸಾರದ ಅವಸ್ಥೆಯನ್ನು ಅಪೇಕ್ಷಿಸುವುದಿಲ್ಲ; ಎಂದರೆ ಇದು ಈ ಶ್ರದ್ಧೆಯ ಸಾಮರ್ಥ್ಯವೆಂದು ತಿಳಿಯುವುದು.**

**ಪ್ರಶ್ನೆ :-** ಸಮ್ಯಗ್ದರ್ಶನವನ್ನು ಮೋಕ್ಷಮಾರ್ಗವೆಂದು ಹೇಳಲಾಗಿದೆ, ಆದರೆ ಮೋಕ್ಷದಲ್ಲಿ ಇದರ ಸದ್ಭಾವವಿದೆಯೆಂದು ಹೇಗೆ ಹೇಳುತ್ತಾರೆ ?

**ಉತ್ತರ :-** ಕೆಲವೊಂದು ಕಾರಣಗಳು ಕಾರ್ಯದ ಸಿದ್ಧಿಯಾದ ನಂತರವೂ ಕೂಡ ನಷ್ಟವಾಗದ ಹಾಗೆ ಇರುತ್ತವೆ. ಯಾವ ಪ್ರಕಾರ ಒಂದು ವೃಕ್ಷದ ಯಾವುದೇ ಒಂದು ರೆಂಬೆಯಿಂದ ಅನೇಕ ಶಾಖಾಯುಕ್ತ ಅವಸ್ಥೆಯಾಗುವುದು, ಇಷ್ಟೆಲ್ಲ ಆದಮೇಲೆ ಆ ಒಂದು ಮೂಲ ಶಾಖೆಯು ನಷ್ಟವಾಗುವುದಿಲ್ಲ; ಅದೇ ಪ್ರಕಾರ ಒಬ್ಬ ಆತ್ಮನಿಗೆ ಸಮ್ಯಕ್ತ್ವಗುಣದಿಂದ ಅನೇಕ ಗುಣಯುಕ್ತವಾದ ಮುಕ್ತಾವಸ್ಥೆಯಾಗುವುದು. ಅದು ಆದ ಮೇಲೆಯೂ ಸಮ್ಯಕ್ತ್ವ ಗುಣವು ನಷ್ಟವಾಗುವುದಿಲ್ಲ. ಈ ಪ್ರಕಾರ ಕೇವಲಿಗಳಿಗೆ-ಸಿದ್ಧಭಗವಂತರಿಗೆ ಕೂಡ ತತ್ತ್ವಾರ್ಥ ಶ್ರದ್ಧೆಯ ಲಕ್ಷಣರೂಪವಾದ ಸಮ್ಯಕ್ತ್ವವೇ ಕಂಡು ಬರುತ್ತದೆ, ಆದುದರಿಂದ ಅಲ್ಲಿ ಅವ್ಯಾಪ್ತಿತನವು ಇರುವುದಿಲ್ಲ.

**ಪ್ರಶ್ನೆ :-** ಮಿಥ್ಯಾದೃಷ್ಟಿಗೆ ಕೂಡ ತತ್ತ್ವಶ್ರದ್ಧೆಯಿರುತ್ತದೆಯೆಂದು ಶಾಸ್ತ್ರದಲ್ಲಿ ನಿರೂಪಣೆಯಿದೆ. ಪ್ರವಚನಸಾರದಲ್ಲಿ ಆತ್ಮಜ್ಞಾನಶೂನ್ಯವಾದ ತತ್ತ್ವಾರ್ಥಶ್ರದ್ಧೆಯು ಅಕಾರ್ಯಕಾರಿಯೆಂದು ಹೇಳಿದೆ; ಆದುದರಿಂದ ಸಮ್ಯಕ್ತ್ವದ ಲಕ್ಷಣವು ತತ್ತ್ವಾರ್ಥಶ್ರದ್ಧೆಯೆಂದು ಹೇಳಿದ ಮೇಲೆ ಅದರಲ್ಲಿ ಅತಿವ್ಯಾಪ್ತಿಯ ದೋಷವು ತಗಲುತ್ತದೆಯಲ್ಲವೇ ?

**ಉತ್ತರ :-** ಮಿಥ್ಯಾದೃಷ್ಟಿಗೆ ಯಾವ ತತ್ತ್ವಶ್ರದ್ಧೆ ಹೇಳಿದೆ ಅದು ನಾಮನಿಕ್ಷೇಪದಿಂದ ಹೇಳಿದೆ. ಅದರಲ್ಲಿ ತತ್ತ್ವಶ್ರದ್ಧೆಯ ಗುಣವಿಲ್ಲ, ಮತ್ತು ವ್ಯವಹಾರದಲ್ಲಿ ಯಾವುದರ ಹೆಸರು ತತ್ತ್ವಶ್ರದ್ಧೆಯೆಂದು ಹೇಳಲಾಗುವುದು ಅದು ಮಿಥ್ಯಾದೃಷ್ಟಿಗೆ ಇರುತ್ತದೆ; ಅಥವಾ ಆಗಮದ್ರವ್ಯನಿಕ್ಷೇಪದಿಂದ ಇರುತ್ತದೆ. ತತ್ತ್ವಶ್ರದ್ಧೆಯ ಪ್ರತಿಪಾದಕವಾದ ಶಾಸ್ತ್ರಗಳ ಅಭ್ಯಾಸ ಮಾಡುತ್ತಾನೆ, ಆದರೆ ಅವುಗಳ ಸ್ವರೂಪ ನಿಶ್ಚಯಮಾಡುವಲ್ಲಿ ಉಪಯೋಗ ತೊಡಗಿಸುವುದಿಲ್ಲವೆಂದು ತಿಳಿಯುವುದು. ಅದರಂತೆ ಇಲ್ಲಿ ಸಮ್ಯಕ್ತ್ವದ ಲಕ್ಷಣವು ತತ್ತ್ವಾರ್ಥಶ್ರದ್ಧೆಯೆಂದು ಹೇಳಿದೆ, ಅದು ಭಾವನಿಕ್ಷೇಪದಿಂದ ಹೇಳಿದೆ. ಇಂಥ ಗುಣಸಹಿತವಾದ ನಿಜವಾದ ತತ್ತ್ವಾರ್ಥಶ್ರದ್ಧೆಯು ಮಿಥ್ಯಾದೃಷ್ಟಿಗೆ ಬಹುಶಃ ಆಗುವುದಿಲ್ಲ. ಮತ್ತು ಆತ್ಮಜ್ಞಾನಶೂನ್ಯವಾದ ತತ್ತ್ವಾರ್ಥಶ್ರದ್ಧೆ ಹೇಳಿರುವಲ್ಲಿ ಕೂಡ ಅದೇ ಅರ್ಥ ತಿಳಿಯುವುದು. ಜೀವ-ಅಜೀವ ಮೊದಲಾದವುಗಳ ನಿಜವಾದ ಶ್ರದ್ಧೆಯಿರುವವನಿಗೆ ಆತ್ಮನ ಜ್ಞಾನ ಹೇಗಾಗುವುದಿಲ್ಲ? ಆಗಿಯೇ ಆಗುತ್ತದೆ.ಈ ಪ್ರಕಾರ ಯಾವುದೇ ಮಿಥ್ಯಾದೃಷ್ಟಿಗೆ ನಿಜವಾದ ತತ್ತ್ವಶ್ರದ್ಧೆಯು ಸರ್ವಥಾ ಕಂಡು ಬರುವುದಿಲ್ಲ. ಆದುದರಿಂದ ಆ ಲಕ್ಷಣದಲ್ಲಿ ಅತಿವ್ಯಾಪ್ತಿಯ ದೋಷವು ತಗಲುವುದಿಲ್ಲ.

ಅದರಂತೆ ಯಾವ ಈ ತತ್ತ್ವಾರ್ಥಶ್ರದ್ಧೆಯ ಲಕ್ಷಣ ಹೇಳಿದೆ, ಅದು ಅಸಂಭವವೂ ಇಲ್ಲ; ಏಕೆಂದರೆ ಸಮ್ಯಕ್ತ್ವದ ಪ್ರತಿಪಕ್ಷಿಯಾದ ಮಿಥ್ಯಾತ್ವದಲ್ಲಿ ಇದು ಇಲ್ಲ; ಅದರ ಲಕ್ಷಣವು ಇದರಿಂದ ವಿಪರೀತ ಸಹಿತವಾಗಿದೆ.

ಈ ಪ್ರಕಾರ ಅವ್ಯಾಪ್ತಿ, ಅತಿವ್ಯಾಪ್ತಿ, ಅಸಂಭವತೆಯಿಂದ ರಹಿತರಾದ ಸಮಸ್ತ ಸಮ್ಯಗ್ದೃಷ್ಟಿಗಳಲ್ಲಿ ಕಂಡು ಬರುವ ಮತ್ತು ಯಾವ ಮಿಥ್ಯಾದೃಷ್ಟಿಯಲ್ಲೂ ಕಂಡು ಬಾರದಂಥ ಸಮ್ಯಗ್ದರ್ಶನದ ನಿಜವಾದ ಲಕ್ಷಣವು ತತ್ತ್ವಾರ್ಥ ಶ್ರದ್ಧೆಯಿದೆ.

## ಸಮ್ಯಕ್ತ್ವದ ವಿಭಿನ್ನ ಲಕ್ಷಣಗಳ ಸಮನ್ವಯ :-

**ಪ್ರಶ್ನೆ :-** ಇಲ್ಲಿ ಏಳೂ ತತ್ತ್ವಗಳ ಶ್ರದ್ಧೆಯ ನಿಯಮ ಹೇಳುತ್ತೀರಿ, ಅದು ಸಿದ್ಧವಾಗುವುದಿಲ್ಲ. ಏಕೆಂದರೆ ಕೆಲವೆಡೆ ಪರದಿಂದ ಭಿನ್ನವಾದ ತನ್ನ ಆತ್ಮನ ಶ್ರದ್ಧೆಗೇನೇ ಸಮ್ಯಕ್ತ್ವವೆಂದು ಹೇಳುತ್ತಾರೆ. ಸಮಯಸಾರದಲ್ಲಿ★ **'ಏಕತ್ವೇ ನಿಯತಸ್ಯ'**-ಎಂಬಿತ್ಯಾದಿ ಕಲಶವಿದ್ದು ಅದರಲ್ಲಿ ಪರದ್ರವ್ಯದಿಂದ ಭಿನ್ನವಾದ ಈ ಆತ್ಮನ ಅವಲೋಕನವೇ ನಿಯಮದಿಂದ ಸಮ್ಯಗ್ದರ್ಶನವಿದೆಯೆಂದು ಹೇಳಿದೆ. ಆದುದರಿಂದ ನವತತ್ತ್ವಗಳ ಪರಂಪರೆಯನ್ನು ಬಿಟ್ಟುಕೊಟ್ಟು ನಮಗೆ ಈ ಒಬ್ಬ ಆತ್ಮನೇ ಇರಲಿ.

ಅದರಂತೆ ಇನ್ನೊಂದೆಡೆ ಒಬ್ಬ ಆತ್ಮನ ನಿಶ್ಚಯಕ್ಕೇನೇ ಸಮ್ಯಕ್ತ್ವವೆಂದು ಹೇಳುತ್ತಾರೆ. ಪುರುಷಾರ್ಥ ಸಿದ್ಧ್ಯುಪಾಯದಲ್ಲಿ-**'ದರ್ಶನಮಾತ್ಮವಿನಿಶ್ಚಿತಿಃ'** ಎಂಬ ಪದವಿದ್ದು ಅದರ ಅರ್ಥವು ಇದೇ ಇದೆ. ಆದುದರಿಂದ ಜೀವ-ಅಜೀವದ ಮತ್ತು ಕೇವಲ ಜೀವದ್ದೇ ಶ್ರದ್ಧೆಯಾದ ಮೇಲೆ ಸಮ್ಯಕ್ತ್ವವಾಗುತ್ತದೆ, ಏಳರದೂ ಶ್ರದ್ಧೆಯ ನಿಯಮವಿರುತ್ತಿದ್ದರೆ ಹೀಗೆ ಏತಕ್ಕಾಗಿ ಬರೆಯುತ್ತಿದ್ದರು ?

---

★ ಏಕತ್ವೇ ನಿಯತಸ್ಯಶುದ್ಧನಯತೋ ವ್ಯಾಪ್ತುರ್ಯದಸ್ಯಾತ್ಮನಃ, ಪೂರ್ಣಜ್ಞಾನಘನಸ್ಯ ದರ್ಶನಮಿಹ ದ್ರವ್ಯಾಂತರೇಭ್ಯಃ ಪೃಥಕ್
ಸಮ್ಯಗ್ದರ್ಶನಮೇತದೇವ ನಿಯಮಾದಾತ್ಮಾ ಚ ತಾವಾನಯಮ್, ತನ್ಮುಕ್ತ್ವಾ ನವತತ್ತ್ವಸಂತತಿಮಿಮಾಮಾತ್ಮಾಯಮೇಕೋऽಸ್ತು ನಃ ॥೬॥
(ಸಮಯಸಾರಕಲಶ)

ದರ್ಶನಮಾತ್ಮವಿನಿಶ್ಚಿತಿರಾತ್ಮಪರಿಜ್ಞಾನಮಿಷ್ಯತೇ ಬೋಧಃ । ಸ್ಥಿತಿರಾತ್ಮನಿ ಚಾರಿತ್ರಂ ಕುತ ಏತೇಭ್ಯೋ ಭವತಿ ಬಂಧಃ ॥೨೧೬॥

**ಉತ್ತರ :-** ಪರದಿಂದ ಭಿನ್ನವಾದ ತನ್ನ ಆತ್ಮನ ಶ್ರದ್ಧೆಯಾಗುತ್ತದೆ ಅದು ಆಸ್ರವಾದಿಗಳ ಶ್ರದ್ಧೆಯಿಂದ ರಹಿತ ವಾಗುತ್ತದೆಯೋ ಅಥವಾ ಸಹಿತವಾಗುತ್ತದೆಯೋ ? ಒಂದು ವೇಳೆ ರಹಿತವಾಗಿ ಆಗುತ್ತಿದ್ದರೆ ಮೋಕ್ಷದ ಶ್ರದ್ಧೆಯಿಲ್ಲದೆ ಯಾವ ಪ್ರಯೋಜನದ ಸಲುವಾಗಿ ಇಂಥ ಉಪಾಯ ಮಾಡುತ್ತಾನೆ ? ಸಂವರ-ನಿರ್ಜರೆಗಳ ಶ್ರದ್ಧೆಯಿಲ್ಲದೆ ರಾಗಾದಿಗಳಿಂದ ರಹಿತನಾಗಿ ಸ್ವರೂಪದಲ್ಲಿ ಉಪಯೋಗ ತೊಡಗಿಸುವ ಉದ್ಯೋಗವನ್ನು ಏತಕ್ಕಾಗಿ ಮಾಡುತ್ತಾನೆ? ಆಸ್ರವ-ಬಂಧಗಳ ಶ್ರದ್ಧೆಯಿಲ್ಲದೆ ಮೊದಲಿನ ಅವಸ್ಥೆಯನ್ನು ಏತಕ್ಕಾಗಿ ಬಿಟ್ಟುಕೊಡುತ್ತಾನೆ ? ಆದುದರಿಂದ ಆಸ್ರವ ಮೊದಲಾದವುಗಳ ಶ್ರದ್ಧೆಯಿಂದ ರಹಿತನಾಗಿ ಸ್ವಪರದ ಶ್ರದ್ಧೆ ಮಾಡುವುದು ಸಂಭವಿಸುವುದಿಲ್ಲ. ಮತ್ತು ಒಂದು ವೇಳೆ ಆಸ್ರವಾದಿಗಳ ಶ್ರದ್ಧಾಸಹಿತವಾಗುತ್ತಿದ್ದರೆ ಏಳೂ ತತ್ತ್ವಗಳ ಶ್ರದ್ಧೆಯ ನಿಯಮವೂ ತಾನಾಗಿಯೇ ಆಯಿತು. ಇನ್ನು ಕೇವಲ ಆತ್ಮನ ನಿಶ್ಚಯವಿದೆ ಅದು ಪರದ ಶ್ರದ್ಧೆಯು ಪರರೂಪವಾದದಲ್ಲದೆ ಆತ್ಮನ ಶ್ರದ್ಧೆಯಾಗುವುದಿಲ್ಲ. ಆದುದರಿಂದ ಅಜೀವದ ಶ್ರದ್ಧೆಯಾದನಂತರವೇ ಜೀವದ ಶ್ರದ್ಧೆಯಾಗುತ್ತದೆ. ಮತ್ತು ಅವನಿಗೆ ಮೊದಲಿನಂತೆ ಆಸ್ರವ ಮೊದಲಾದವುಗಳ ಶ್ರದ್ಧೆಯು ಕೂಡ ಆಗಿಯೇ ಆಗುತ್ತದೆ, ಆದುದರಿಂದ ಅಲ್ಲಿ ಕೂಡ ಏಳು ತತ್ತ್ವಗಳ ಶ್ರದ್ಧೆಯದೇ ನಿಯಮವಾಯಿತೆಂದು ತಿಳಿಯುವುದು.

ಅದರಂತೆ ಆಸ್ರವ ಮೊದಲಾದವುಗಳ ಶ್ರದ್ಧೆಯಾದಲ್ಲದೆ ಸ್ವ-ಪರದ ಶ್ರದ್ಧೆ ಮತ್ತು ಕೇವಲ ಆತ್ಮನ ಶ್ರದ್ಧೆಯು ನಿಜವಾಗಿ ಆಗುವುದಿಲ್ಲ; ಏಕೆಂದರೆ ಆತ್ಮನು ದ್ರವ್ಯನಿದ್ದು ಅವನು ಶುದ್ಧ-ಅಶುದ್ಧ ಪರ್ಯಾಯಸಹಿತನಿದ್ದಾನೆ. ಯಾವ ಪ್ರಕಾರ ನೂಲಿನ ಅವಲೋಕನವಿಲ್ಲದೆ ಬಟ್ಟೆಯ ಅವಲೋಕನವಾಗುವುದಿಲ್ಲ, ಅದೇ ಪ್ರಕಾರ ಶುದ್ಧ-ಅಶುದ್ಧ ಪರ್ಯಾಯಗಳನ್ನು ಪರಿಚಯ ಮಾಡಿಕೊಂಡಲ್ಲದೆ ಆತ್ಮದ್ರವ್ಯದ ಶ್ರದ್ಧೆಯಾಗುವುದಿಲ್ಲ; ಆ ಶುದ್ಧ-ಅಶುದ್ಧ ಅವಸ್ಥೆಯ ಪರಿಚಯವು ಆಸ್ರವಾದಿಗಳ ಪರಿಚಯದಿಂದ ಆಗುತ್ತದೆ. ಅದರಂತೆ ಆಸ್ರವಾದಿಗಳ ಶ್ರದ್ಧೆಯಾದಲ್ಲದೆ ಸ್ವ-ಪರದ ಶ್ರದ್ಧೆ ಮತ್ತು ಕೇವಲ ಆತ್ಮನ ಶ್ರದ್ಧೆಯು ಕಾರ್ಯಕಾರಿ ಕೂಡ ಇಲ್ಲ; ಏಕೆಂದರೆ ಶ್ರದ್ಧೆ ಮಾಡಿರಿ ಅಥವಾ ಬಿಡಿರಿ, ತಾನು ಇದೇ ಅದು ತಾನೇ ಇದೆ, ಪರವಿದೆ ಅದು ಪರವೇ ಇದೆ. ಮತ್ತು ಆಸ್ರವಾದಿಗಳ ಶ್ರದ್ಧೆಯಾದರೆ ಆಸ್ರವ-ಬಂಧಗಳ ಅಭಾವಮಾಡಿ, ಸಂವರ-ನಿರ್ಜರೆಗಳ ರೂಪದ ಉಪಾಯದಿಂದ ಮೋಕ್ಷಪದವನ್ನು ಪ್ರಾಪ್ತಮಾಡಿಕೊಳ್ಳುವನು. ಇನ್ನು ಸ್ವ-ಪರಗಳ ಶ್ರದ್ಧೆಯನ್ನು ಮಾಡಿಸುತ್ತಿರುವವರು ಕೂಡ ಅದೇ ಪ್ರಯೋಜನದ ಸಲುವಾಗಿ ಮಾಡಿಸುತ್ತಾರೆ. ಆದುದರಿಂದ ಆಸ್ರವಾದಿಗಳ ಶ್ರದ್ಧಾಪೂರ್ವಕವಾಗಿ ಸ್ವ-ಪರಗಳನ್ನು ತಿಳಿಯುವುದು ಮತ್ತು ತನ್ನನ್ನು ತಿಳಿಯುವುದು ಕಾರ್ಯಕಾರಿಯಿದೆ.

**ಪ್ರಶ್ನೆ :-** ಶಾಸ್ತ್ರಗಳಲ್ಲಿ ಸ್ವ-ಪರದ ಶ್ರದ್ಧೆಯನ್ನು ಮತ್ತು ಕೇವಲ ಆತ್ಮನ ಶ್ರದ್ಧೆಗೇನೇ ಸಮ್ಯಕ್ತ್ವವೆಂದು ಹೇಳಿದೆ. ಹಾಗೂ ಕಾರ್ಯಕಾರಿಯೆಂದು ಹೇಳಿದೆ; ಅದರಂತೆ ನವತತ್ತ್ವಗಳ ಪರಂಪರೆಯನ್ನು ಬಿಟ್ಟುಕೊಟ್ಟು ನಮಗೆ ಒಬ್ಬ ಆತ್ಮನೇ ಇರಲೆಂದು ಹೇಳಿದೆ, ಅದನ್ನು ಯಾವ ಪ್ರಕಾರ ಹೇಳಿದೆ ?

**ಉತ್ತರ :-** ಯಾರಿಗೆ ನಿಜವಾಗಿ ಸ್ವ-ಪರದ ಶ್ರದ್ಧೆ ಹಾಗೂ ಆತ್ಮನ ಶ್ರದ್ಧೆಯಿದೆ, ಅವರಿಗೆ ಏಳೂ ತತ್ತ್ವಗಳ ಶ್ರದ್ಧೆಯು ಆಗಿಯೇ ಆಗುತ್ತದೆ. ಮತ್ತು ಯಾರಿಗೆ ನಿಜವಾಗಿ ಏಳುತತ್ತ್ವಗಳ ಶ್ರದ್ಧೆಯಿದೆ ಅವರಿಗೆ ಸ್ವ-ಪರದ ಹಾಗೂ ಆತ್ಮನ ಶ್ರದ್ಧೆಯು ಆಗಿಯೇ ಆಗುತ್ತದೆ. - ಎಂಬ ಪರಸ್ಪರ ಅವಿನಾಭಾವೀತನವನ್ನು ತಿಳಿದುಕೊಂಡು ಸ್ವ-ಪರದ ಶ್ರದ್ಧೆಯನ್ನು ಅಥವಾ ಕೇವಲ ಆತ್ಮನ ಶ್ರದ್ಧೆಗೇನೇ ಸಮ್ಯಕ್ತ್ವವೆಂದು ಹೇಳಲಾಗಿದೆ.

ಇದೇ ಛಲದಿಂದ ಯಾರಾದರೂ ಸಾಮಾನ್ಯರೂಪದಿಂದ ಸ್ವ-ಪರಗಳನ್ನು ತಿಳಿದುಕೊಂಡು ಮತ್ತು ಆತ್ಮನನ್ನು ತಿಳಿದುಕೊಂಡು ಕೃತಾರ್ಥರಾದೆವೆಂದು ಮನ್ನಿಸಿದರೆ ಅದು ಭ್ರಾಂತಿಯಿದೆ; ಏಕೆಂದರೆ ಆಲಾಪಪದ್ಧತಿಯಲ್ಲಿ ಹೀಗೆ ಹೇಳಿದ್ದಾರೆ,-

'ನಿರ್ವಿಶೇಷಂ ಹಿ ಸಾಮಾನ್ಯಂ ಭವೇತ್ಖರವಿಷಾಣವತ್ ॥೯॥'

**ಅರ್ಥ :-** ವಿಶೇಷರಹಿತವಾದ ಸಾಮಾನ್ಯವಿದೆ ಅದು ಕತ್ತೆಯ ಕೋಡಿನಂತಿದೆ ಎಂದರೆ ಶೂನ್ಯರೂಪವಿದೆ.

ಆದುದರಿಂದ ಪ್ರಯೋಜನಭೂತವಾದ ಆಸ್ರವಾದಿಗಳ ವಿಶೇಷಗಳೊಡನೆ ಸ್ವ-ಪರಗಳ ಮತ್ತು ಆತ್ಮನ ಶ್ರದ್ಧೆ ಮಾಡುವುದು ಯೋಗ್ಯವಿದೆ. ಅಥವಾ ಏಳೂ ತತ್ತ್ವಾರ್ಥಗಳ ಶ್ರದ್ಧೆಯಿಂದ ರಾಗಾದಿಗಳನ್ನು ದೂರ ಮಾಡುವ ಸಲುವಾಗಿ ಪರಪದಾರ್ಥಗಳನ್ನು ಭಿನ್ನವಾಗಿ ಭಾವಿಸುತ್ತಾನೆ ಮತ್ತು ತನ್ನ ಆತ್ಮನನ್ನೇ ಭಾವಿಸುತ್ತಾನೆ, ಅವನಿಗೆ ಪ್ರಯೋಜನದ ಸಿದ್ಧಿಯಾಗುತ್ತದೆ. ಆದುದರಿಂದ ಮುಖ್ಯರೂಪದಿಂದ ಭೇದವಿಜ್ಞಾನವನ್ನು ಮತ್ತು ಆತ್ಮಜ್ಞಾನವನ್ನು ಕಾರ್ಯಕಾರಿಯೆಂದು ಹೇಳಿದೆ.

ಅದರಂತೆ ತತ್ತ್ವಾರ್ಥಶ್ರದ್ಧೆ ಮಾಡಿದಲ್ಲದೆ ಎಲ್ಲವನ್ನು ತಿಳಿಯುವುದು ಕಾರ್ಯಕಾರಿಯಿಲ್ಲ, ಏಕೆಂದರೆ ರಾಗಾದಿಗಳನ್ನು ದೂರಮಾಡುವ ಪ್ರಯೋಜನವಿದೆ; ಆದರೆ ಆಸ್ರವಾದಿಗಳ ಶ್ರದ್ಧೆಯಿಲ್ಲದೆ ಈ ಪ್ರಯೋಜನವು ಭಾಸವಾಗುವುದಿಲ್ಲ. ಆಗ ಕೇವಲ ತಿಳಿಯುವುದರಿಂದಲೇ ಮಾನವನ್ನು ವೃದ್ಧಿಸುತ್ತದೆ; ರಾಗಾದಿಗಳನ್ನು ಬಿಡುವುದಿಲ್ಲ, ಆಗ ಅವನ ಕಾರ್ಯವು ಹೇಗೆ ಸಿದ್ಧವಾಗುವುದು ? ಅದರಂತೆ ನವತತ್ತ್ವಗಳ ಪರಂಪರೆಯನ್ನು ಬಿಡಲು ಹೇಳಿದೆ; ಆದರೆ ಪೂರ್ವದಲ್ಲಿ ನವತತ್ತ್ವಗಳ ವಿಚಾರದಿಂದ ಸಮ್ಯಗ್ದರ್ಶನವಾಯಿತು; ಅನಂತರ ನಿರ್ವಿಕಲ್ಪದಶೆಯಾಗುವ ಸಲುವಾಗಿ ನವತತ್ತ್ವಗಳ ವಿಕಲ್ಪವನ್ನು ಕೂಡ ಬಿಡುವ ಅಪೇಕ್ಷೆ ಮಾಡಿತು. ಮತ್ತು ಯಾರಿಗೆ ಮೊದಲೇ ನವತತ್ತ್ವಗಳ ವಿಚಾರವಿಲ್ಲ, ಅವರಿಗೆ ಈ ವಿಕಲ್ಪ ಬಿಡುವುದರ ಪ್ರಯೋಜನವೇನಿದೆ ? ಅನ್ಯ ಅನೇಕ ವಿಕಲ್ಪಗಳು ತಮ್ಮಲ್ಲಿ ಕಂಡು ಬರುತ್ತವೆ ಅವುಗಳದೇ ತ್ಯಾಗ ಮಾಡುವುದು.

ಈ ಪ್ರಕಾರ ಸ್ವ-ಪರಗಳ ಶ್ರದ್ಧೆಯಲ್ಲಿ ಮತ್ತು ಆತ್ಮ ಶ್ರದ್ಧೆಯಲ್ಲಿ ಸಪ್ತತತ್ತ್ವಗಳ ಶ್ರದ್ಧೆಯ ಸಾಪೇಕ್ಷತೆಯು ಕಂಡು ಬರುತ್ತದೆ, ಆದುದರಿಂದ ತತ್ತ್ವಾರ್ಥಶ್ರದ್ಧೆಯು ಸಮ್ಯಕ್ತ್ವದ ಲಕ್ಷಣವಿದೆ.

**ಪ್ರಶ್ನೆ :-** ಎಲ್ಲಿಯೋ ಶಾಸ್ತ್ರಗಳಲ್ಲಿ ಅರಹಂತದೇವ, ನಿರ್ಗ್ರಂಥಗುರು, ಹಿಂಸಾರಹಿತವಾದ ಧರ್ಮದ ಶ್ರದ್ಧೆಯನ್ನು ಸಮ್ಯಕ್ತ್ವವೆಂದು ಹೇಳಿದೆ, ಅದು ಯಾವ ಪ್ರಕಾರವಿದೆ ?

**ಉತ್ತರ :-** ಅರಹಂತದೇವ ಮೊದಲಾದವರ ಶ್ರದ್ಧೆಯಿಂದ ಕುದೇವಾದಿಗಳ ಶ್ರದ್ಧೆಯು ದೂರವಾಗುವುದರಿಂದ ಗೃಹೀತ-ಮಿಥ್ಯಾತ್ವದ ಅಭಾವವಾಗುತ್ತದೆ, ಆ ಅಪೇಕ್ಷೆಯಿಂದ ಇದಕ್ಕೆ ಸಮ್ಯಕ್ತ್ವವೆಂದು ಹೇಳಿದೆ. ಇದು ಸರ್ವಥಾ ಸಮ್ಯಕ್ತ್ವದ ಲಕ್ಷಣವಲ್ಲ; ಏಕೆಂದರೆ ದ್ರವ್ಯಲಿಂಗಿ ಮುನಿ ಮೊದಲಾಗಿ ವ್ಯವಹಾರ ಧರ್ಮದ ಧಾರಕರಾದ ಮಿಥ್ಯಾದೃಷ್ಟಿಗಳಿಗೆ ಕೂಡ ಇಂಥ ಶ್ರದ್ಧೆಯು ಇರುತ್ತದೆ.

ಅಥವಾ ಯಾವ ಪ್ರಕಾರ ಅಣುವ್ರತ, ಮಹಾವ್ರತಗಳಾದ ಮೇಲಂತೂ ದೇಶಚಾರಿತ್ರ , ಸಕಲಚಾರಿತ್ರಗಳಾಗಲಿ ಅಥವಾ ಆಗದಿರಲಿ; ಆದರೆ ಅಣುವ್ರತ, ಮಹಾವ್ರತಗಳಾದಲ್ಲದೆ ದೇಶಚಾರಿತ್ರ , ಸಕಲಚಾರಿತ್ರಗಳೆಂದೂ

ಆಗುವುದಿಲ್ಲ; ಆದುದರಿಂದ ಈ ವ್ರತಗಳನ್ನು ಅನ್ವಯರೂಪದ ಕಾರಣವೆಂದು ತಿಳಿದುಕೊಂಡು ಕಾರಣದಲ್ಲಿ ಕಾರ್ಯದ ಉಪಚಾರ ಮಾಡಿ ಇವನ್ನು ಚಾರಿತ್ರವೆಂದು ಹೇಳಿದೆ. ಅದೇ ಪ್ರಕಾರ ಅರಹಂತ ದೇವಾದಿಕರ ಶ್ರದ್ಧೆಯಾದ ಮೇಲಂತೂ ಸಮ್ಯಕ್ತ್ವವಾಗಲಿ ಅಥವಾ ಆಗದಿರಲಿ; ಆದರೆ ಅರಹಂತ ಮೊದಲಾದವರ ಶ್ರದ್ಧೆಯಾದಲ್ಲದೆ ತತ್ತ್ವಾರ್ಥಶ್ರದ್ಧಾನರೂಪದ ಸಮ್ಯಕ್ತ್ವವು ಎಂದೂ ಆಗುವುದಿಲ್ಲ; ಆದುದರಿಂದ ಅರಹಂತಾದಿಕರ ಶ್ರದ್ಧೆಯನ್ನು ಅನ್ವಯರೂಪದ ಕಾರಣವೆಂದು ತಿಳಿದುಕೊಂಡು ಕಾರಣದಲ್ಲಿ ಕಾರ್ಯದ ಉಪಚಾರ ಮಾಡಿ ಈ ಶ್ರದ್ಧೆಯನ್ನು ಸಮ್ಯಕ್ತ್ವವೆಂದು ಹೇಳಿದೆ. ಇದರಿಂದಲೇ ಇದರ ಹೆಸರು ವ್ಯವಹಾರ ಸಮ್ಯಕ್ತ್ವವಿದೆ.

ಅಥವಾ ಯಾರಿಗೆ ತತ್ತ್ವಾರ್ಥಶ್ರದ್ಧೆಯಾಗಿದೆ, ಅವರಿಗೆ ನಿಜವಾದ ಅರಹಂತಾದಿಕರ ಸ್ವರೂಪದ ಶ್ರದ್ಧೆಯು ಆಗಿಯೇ ಆಗುತ್ತದೆ. ತತ್ತ್ವಾರ್ಥಶ್ರದ್ಧೆಯಿಲ್ಲದೆ ಪಕ್ಷದಿಂದ ಅರಹಂತ ಮೊದಲಾದವರ ಶ್ರದ್ಧೆ ಮಾಡುವರು, ಆದರೆ ಯಥಾಪ್ರಕಾರ ಸ್ವರೂಪದ ಪರಿಚಯ ಸಹಿತ ಶ್ರದ್ಧೆಯಾಗುವುದಿಲ್ಲ. ಮತ್ತು ಯಾರಿಗೆ ನಿಜವಾದ ಅರಹಂತಾದಿಕರ ಸ್ವರೂಪದ ಶ್ರದ್ಧೆಯಾಗಿದೆ, ಅವರಿಗೆ ತತ್ತ್ವಶ್ರದ್ಧೆಯು ಆಗಿಯೇ ಆಗುತ್ತದೆ. ಏಕೆಂದರೆ ಅರಹಂತಾದಿಕರ ಸ್ವರೂಪ ಪರಿಚಯ ಮಾಡಿಕೊಳ್ಳುವುದರಿಂದ ಜೀವ-ಅಜೀವ-ಆಸ್ರವ ಮೊದಲಾದವುಗಳ ಪರಿಚಯವಾಗುತ್ತದೆ.

ಈ ಪ್ರಕಾರ ಇವನ್ನು ಪರಸ್ಪರ ಅವಿನಾಭಾವಿಯೆಂದು ತಿಳಿದುಕೊಂಡು ಕೆಲವುಕಡೆ ಅರಹಂತಾದಿಕರ ಶ್ರದ್ಧೆಯನ್ನು ಸಮ್ಯಕ್ತ್ವವೆಂದು ಹೇಳಿದೆ.

**ಪ್ರಶ್ನೆ :-** ನಾರಕೀ ಮೊದಲಾದ ಜೀವರುಗಳಿಗೆ ದೇವ-ಕುದೇವಾದಿಗಳ ವ್ಯವಹಾರವಿಲ್ಲ ಮತ್ತು ಅವರಿಗೆ ಸಮ್ಯಕ್ತ್ವವು ಕಂಡು ಬರುತ್ತದೆ; ಆದುದರಿಂದ ಸಮ್ಯಕ್ತ್ವವಾದ ನಂತರ ಅರಹಂತ ಮೊದಲಾದವರ ಶ್ರದ್ಧೆಯು ಆಗಿಯೇ ಆಗುತ್ತದೆಂಬ ನಿಯಮವು ಸಂಭವವಿಲ್ಲವಲ್ಲವೇ ?

**ಉತ್ತರ :-** ಸಪ್ತತತ್ತ್ವಗಳ ಶ್ರದ್ಧೆಯಲ್ಲಿ ಅರಹಂತ ಮೊದಲಾದವರ ಶ್ರದ್ಧೆಯು ಗರ್ಭಿತವಿದೆ ; ಏಕೆಂದರೆ ತತ್ತ್ವಶ್ರದ್ಧೆಯಲ್ಲಿ ಮೋಕ್ಷತತ್ತ್ವವನ್ನು ಸರ್ವೋತ್ಕೃಷ್ಟವೆಂದು ಮನ್ನಿಸುತ್ತಾರೆ. ಆ ಮೋಕ್ಷತತ್ತ್ವವಂತೂ ಅರಹಂತ-ಸಿದ್ಧರ ಲಕ್ಷಣವಿದೆ. ಲಕ್ಷಣವನ್ನು ಉತ್ಕೃಷ್ಟವೆಂದು ಮನ್ನಿಸುವವರು ಅದರ ಲಕ್ಷ್ಯವನ್ನು ಉತ್ಕೃಷ್ಟವೆಂದು ಮನ್ನಿಸಿಯೇ ಮನ್ನಿಸುತ್ತಾರೆ; ಆದುದರಿಂದ ಅವರನ್ನೂ ಸರ್ವೋತ್ಕೃಷ್ಟವೆಂದು ಮನ್ನಿಸಿದರು; ಇತರರನ್ನು ಮನ್ನಿಸಲಿಲ್ಲ; ಅದುವೇ ದೇವರ ಶ್ರದ್ಧೆಯಾಯಿತು. ಮತ್ತು ಮೋಕ್ಷದ ಕಾರಣಗಳು ಸಂವರ-ನಿರ್ಜರೆಗಳಿರುವುದರಿಂದ ಇವನ್ನು ಕೂಡ ಉತ್ಕೃಷ್ಟವೆಂದು ಮನ್ನಿಸುತ್ತಾರೆ; ಇನ್ನು ಸಂವರ-ನಿರ್ಜರೆಗಳ ಧಾರಕರು ಮುಖ್ಯವಾಗಿ ಮುನಿಗಳಿರುವುದರಿಂದ ಮುನಿಗಳನ್ನು ಕೂಡ ಉತ್ತಮವೆಂದು ಮನ್ನಿಸಿದರು, ಇತರರನ್ನು ಮನ್ನಿಸಲಿಲ್ಲ; ಅದುವೇ ಗುರುಗಳ ಶ್ರದ್ಧೆಯಾಯಿತು. ಅದರಂತೆ ರಾಗಾದಿಗಳಿಂದ ರಹಿತವಾದ ಭಾವದ ಹೆಸರು ಅಹಿಂಸೆಯಿದೆ, ಅದನ್ನೇ ಉಪಾದೇಯವೆಂದು ಮನ್ನಿಸುತ್ತಾರೆ, ಉಳಿದುವನ್ನು ಮನ್ನಿಸುವುದಿಲ್ಲ; ಅದುವೇ ಧರ್ಮದ ಶ್ರದ್ಧೆಯಾಯಿತು, ಈ ಪ್ರಕಾರ ತತ್ತ್ವಶ್ರದ್ಧೆಯಲ್ಲಿ ಗರ್ಭಿತವಾದ ಅರಹಂತ ದೇವಾದಿಕರ ಶ್ರದ್ಧೆಯಾಗುತ್ತದೆ. ಅಥವಾ ಯಾವ ನಿಮಿತ್ತದಿಂದ ಇವರಿಗೆ ತತ್ತ್ವಾರ್ಥಶ್ರದ್ಧೆಯಾಗುತ್ತದೆ, ಆ ನಿಮಿತ್ತದಿಂದ ಅರಹಂತ ದೇವಾದಿಕರ ಶ್ರದ್ಧೆಕೂಡ ಆಗುತ್ತದೆ. ಆದುದರಿಂದ ಸಮ್ಯಕ್ತ್ವದಲ್ಲಿ ದೇವಾದಿಕರ ಶ್ರದ್ಧೆಯ ನಿಯಮವಿದೆ.

**ಪ್ರಶ್ನೆ :-** ಎಷ್ಟೋ ಜೀವರುಗಳು ಅರಹಂತಾದಿಕರ ಶ್ರದ್ಧೆ ಮಾಡುತ್ತಾರೆ, ಅವರ ಗುಣಗಳನ್ನು ಗುರುತಿಸುತ್ತಾರೆ ಮತ್ತು ಅವರಿಗೆ ತತ್ತ್ವ ಶ್ರದ್ಧೆರೂಪದ ಸಮ್ಯಕ್ತ್ವವಾಗುವುದಿಲ್ಲ; ಆದುದರಿಂದ ಯಾರಿಗೆ ನಿಜವಾದ ಅರಹಂತಾದಿಕರ ಶ್ರದ್ಧೆಯಾಗಿದೆ ಅವರಿಗೆ ತತ್ತ್ವಶ್ರದ್ಧೆಯು ಆಗಿಯೇ ಆಗುತ್ತದೆಂಬ ನಿಯಮವು ಸಂಭವವಿಲ್ಲವಲ್ಲವೇ ?

**ಉತ್ತರ :-** ತತ್ತ್ವಶ್ರದ್ಧೆಯಿಲ್ಲದೆ ಅರಹಂತಾದಿಕರ ನಲವತ್ತಾರು ಮೊದಲಾದ ಗುಣಗಳನ್ನು ತಿಳಿಯುತ್ತಾನೆ ಅವನು ಪರ್ಯಾಯಾಶ್ರಿತವಾದ ಗುಣಗಳನ್ನು ತಿಳಿಯುತ್ತಾನೆ; ಆದರೆ ಭಿನ್ನ-ಭಿನ್ನ ಜೀವ-ಪುದ್ಗಲಗಳಲ್ಲಿ ಯಾವ ಪ್ರಕಾರ ಸಂಭವವಿವೆ ಆ ಪ್ರಕಾರ ಯಥಾರ್ಥವಾಗಿ ಗುರುತಿಸುವುದಿಲ್ಲ, ಆದುದರಿಂದ ನಿಜವಾದ ಶ್ರದ್ಧೆಯು ಆಗುವುದಿಲ್ಲ; ಏಕೆಂದರೆ ಜೀವ-ಅಜೀವಗಳ ಜಾತಿಯನ್ನು ಗುರುತಿಸಿದಲ್ಲದೆ ಅರಹಂತ ಮೊದಲಾದವರ ಆತ್ಮಾಶ್ರಿತವಾದ ಗುಣಗಳನ್ನು ಹಾಗೂ ಶರೀರಾಶ್ರಿತವಾದ ಗುಣಗಳನ್ನು ಭಿನ್ನ-ಭಿನ್ನವಾಗಿ ತಿಳಿಯುವುದಿಲ್ಲ. ಒಂದುವೇಳೆ ತಿಳಿದರೆ ತನ್ನ ಆತ್ಮನನ್ನು ಪರದ್ರವ್ಯಗಳಿಂದ ಭಿನ್ನವಾಗಿ ಹೇಗೆ ಮನ್ನಿಸುವುದಿಲ್ಲ ? ಆದುದರಿಂದ ಪ್ರವಚನಸಾರದಲ್ಲಿ ಹೀಗೆ ಹೇಳುತ್ತಾರೆ,-

**ಜೋ ಜಾಣದಿ ಅರಹಂತಂ ದವ್ವತ್ತಗುಣತ್ತಪಜ್ಜಯತ್ತೇಹಿಂ ।**
**ಸೋ ಜಾಣದಿ ಅಪ್ಪಾಣಂ ಮೋಹೋ ಖಲು ಜಾದಿ ತಸ್ಸ ಲಯಂ ॥೮೦॥**

**ಅರ್ಥ :-** ಯಾವನು ಅರಹಂತರನ್ನು ದ್ರವ್ಯತ್ವ, ಗುಣತ್ವ, ಪರ್ಯಾಯತ್ವದಿಂದ ತಿಳಿಯುತ್ತಾನೆ ಅವನು ಆತ್ಮನನ್ನು ತಿಳಿಯುತ್ತಾನೆ; ಅವನ ಮೋಹವು ವಿನಾಶಕ್ಕೆ ಪ್ರಾಪ್ತವಾಗುತ್ತದೆ.

ಆದುದರಿಂದ ಯಾರಿಗೆ ಜೀವ ಮೊದಲಾದ ತತ್ತ್ವಗಳ ಶ್ರದ್ಧೆಯಿಲ್ಲ, ಅವರಿಗೆ ಅರಹಂತ ಮೊದಲಾದವರದೂ ನಿಜವಾದ ಶ್ರದ್ಧೆಯಿಲ್ಲ. ಅದರಂತೆ ಮೋಕ್ಷ ಮೊದಲಾದ ತತ್ತ್ವಗಳ ಶ್ರದ್ಧೆಯಿಲ್ಲದೆ ಅರಹಂತಾದಿಕರ ಮಾಹಾತ್ಮ್ಯವನ್ನು ಯಥಾರ್ಥವಾಗಿ ತಿಳಿಯುವುದಿಲ್ಲ. ಲೌಕಿಕ ಅತಿಶಯಾದಿಗಳಿಂದ ಅರಹಂತರನ್ನು ತಪಶ್ಚರಣಾದಿಗಳಿಂದ ಗುರುಗಳನ್ನು ಮತ್ತು ಪರಜೀವಗಳ ಅಹಿಂಸಾದಿಯಿಂದ ಧರ್ಮದ ಮಹಿಮೆಯನ್ನು ತಿಳಿಯುತ್ತಾನೆ; ಆದರೆ ಇವು ಪರಾಶ್ರಿತ ಭಾವಗಳಿವೆ. ಮತ್ತು ಆತ್ಮಾಶ್ರಿತವಾದ ಭಾವಗಳಿಂದ ಅರಹಂತಾದಿಕರ ಸ್ವರೂಪವನ್ನು ತತ್ತ್ವಶ್ರದ್ಧೆಯಾದನಂತರವೇ ತಿಳಿಯಲಾಗುತ್ತದೆ; ಆದುದರಿಂದ ಯಾರಿಗೆ ನಿಜವಾಗಿ ಅರಹಂತಾದಿಕರ ಶ್ರದ್ಧೆಯಾಗಿದೆ ಅವರಿಗೆ ತತ್ತ್ವಶ್ರದ್ಧೆಯು ಆಗಿಯೇ ಆಗುತ್ತದೆಂಬ ನಿಯಮವಿದೆಯೆಂಬುದನ್ನು ತಿಳಿಯುವುದು.

ಈ ಪ್ರಕಾರ ಸಮ್ಯಕ್ತ್ವದ ಲಕ್ಷಣವನ್ನು ನಿರ್ದೇಶಿಸಲಾಯಿತು.

**ಪ್ರಶ್ನೆ :-** ನಿಜವಾದ ತತ್ತ್ವಾರ್ಥಶ್ರದ್ಧೆ, ಸ್ವ-ಪರಗಳ ಶ್ರದ್ಧೆ, ಆತ್ಮನಶ್ರದ್ಧೆ ಮತ್ತು ದೇವ-ಗುರು-ಧರ್ಮದ ಶ್ರದ್ಧೆಯು ಸಮ್ಯಕ್ತ್ವದ ಲಕ್ಷಣವೆಂದು ಹೇಳಿದೆ. ಮತ್ತು ಈ ಎಲ್ಲ ಲಕ್ಷಣಗಳ ಪರಸ್ಪರ ಏಕತೆಯನ್ನೂ ದರ್ಶಿಸಿದುದು ತಿಳಿಯಿತು; ಆದರೆ ಬೇರೆ-ಬೇರೆ ಪ್ರಕಾರದ ಲಕ್ಷಣ ಹೇಳುವುದರ ಪ್ರಯೋಜನವೇನು ?

**ಉತ್ತರ :-** ಇವು ನಾಲ್ಕು ಲಕ್ಷಣ ಹೇಳಿದೆ, ಅವುಗಳಲ್ಲಿ ನಿಜವಾದ ದೃಷ್ಟಿಯಿಂದ ಒಂದು ಲಕ್ಷಣವನ್ನು ಗ್ರಹಣ ಮಾಡಿದ ಮೇಲೆ ನಾಲ್ಕೂ ಲಕ್ಷಣಗಳ ಗ್ರಹಣವಾಗುತ್ತದೆ. ಆದಾಗ್ಯೂ ಮುಖ್ಯ ಪ್ರಯೋಜನವನ್ನು ಭಿನ್ನ-ಭಿನ್ನವಾಗಿ ವಿಚಾರ ಮಾಡಿ ಬೇರೆ-ಬೇರೆ ಪ್ರಕಾರದ ಲಕ್ಷಣಗಳನ್ನು ಹೇಳಿದ್ದಾರೆ.

ತತ್ತ್ವಾರ್ಥಶ್ರದ್ಧೆಯ ಲಕ್ಷಣ ಹೇಳಿರುವಲ್ಲಿಯಂತೂ ಈ ತತ್ತ್ವಗಳನ್ನು ಪರಿಚಯ ಮಾಡಿಕೊಂಡರೆ ಯಥಾರ್ಥ ವಸ್ತುವಿನ ಸ್ವರೂಪದ ಹಾಗೂ ತಮ್ಮ ಹಿತಾಹಿತದ ಶ್ರದ್ಧೆಮಾಡಿದಾಗ ಮೋಕ್ಷಮಾರ್ಗದಲ್ಲಿ ಪ್ರವರ್ತಿಸುವ ಪ್ರಯೋಜನವಿದೆ.

ಅದರಂತೆ ಸ್ವ-ಪರಗಳ ಭಿನ್ನ ಶ್ರದ್ಧೆಯ ಲಕ್ಷಣ ಹೇಳಿರುವಲ್ಲಿ ತತ್ತ್ವಾರ್ಥಶ್ರದ್ಧೆಯ ಪ್ರಯೋಜನವು ಯಾವುದರಿಂದ ಸಿದ್ಧವಾಗುವುದು ಆ ಶ್ರದ್ಧೆಯನ್ನು ಮುಖ್ಯ ಲಕ್ಷಣವೆಂದು ಹೇಳಿದೆ. ಜೀವ-ಅಜೀವಗಳ ಶ್ರದ್ಧೆಯ ಪ್ರಯೋಜನವು ಸ್ವ-ಪರಗಳ ಭಿನ್ನಶ್ರದ್ಧೆ ಮಾಡುವುದಿದೆ. ಅದರಂತೆ ಆಸ್ರವ ಮೊದಲಾದವುಗಳ ಶ್ರದ್ಧೆಯ ಪ್ರಯೋಜನವು ರಾಗಾದಿಗಳನ್ನು ಬಿಡುವುದಿದೆ, ಅದು ಸ್ವ-ಪರಗಳ ಭಿನ್ನಶ್ರದ್ಧೆಯಾದ ಮೇಲೆ ಪರದ್ರವ್ಯಗಳಲ್ಲಿ ರಾಗಾದಿಗಳನ್ನು ಮಾಡಬಾರದೆಂಬ ಶ್ರದ್ಧೆಯಾಗುತ್ತದೆ. ಈ ಪ್ರಕಾರ ತತ್ತ್ವಾರ್ಥಶ್ರದ್ಧೆಯ ಪ್ರಯೋಜನವು ಸ್ವ-ಪರಗಳ ಭಿನ್ನ ಶ್ರದ್ಧೆಯಿಂದ ಸಿದ್ಧವಾಗುತ್ತದೆಂದು ತಿಳಿದುಕೊಂಡು ಈ ಲಕ್ಷಣವನ್ನು ಹೇಳಿದೆ.

ಅದರಂತೆ ಆತ್ಮಶ್ರದ್ಧೆಯ ಲಕ್ಷಣ ಹೇಳಿರುವಲ್ಲಿ ಸ್ವ-ಪರಗಳ ಭಿನ್ನಶ್ರದ್ಧೆಯ ಪ್ರಯೋಜನವೆಂದರೆ ತನ್ನನ್ನು ತಾನೆಂದು ತಿಳಿಯುವುದಿಷ್ಟೇ ಇದೆ. ತನ್ನನ್ನು ತಾನೆಂದು ತಿಳಿದಮೇಲೆ ಪರದ ವಿಕಲ್ಪವು ಕೂಡ ಕಾರ್ಯಕಾರಿಯಿಲ್ಲ. ಈ ಪ್ರಕಾರ ಮೂಲಭೂತ ಪ್ರಯೋಜನದ ಮುಖ್ಯತೆಯನ್ನು ತಿಳಿದುಕೊಂಡು ಆತ್ಮಶ್ರದ್ಧೆಯನ್ನು ಮುಖ್ಯಲಕ್ಷಣವೆಂದು ಹೇಳಿದೆ.

ಅದರಂತೆ ದೇವ-ಗುರು-ಧರ್ಮಗಳ ಶ್ರದ್ಧೆಯ ಲಕ್ಷಣ ಹೇಳಿರುವಲ್ಲಿ ಬಾಹ್ಯ ಸಾಧನದ ಮುಖ್ಯತೆಮಾಡಿದೆ; ಏಕೆಂದರೆ ಅರಹಂತದೇವಾದಿಕರ ಶ್ರದ್ಧೆಯು ನಿಜವಾದ ತತ್ತ್ವಾರ್ಥಶ್ರದ್ಧೆಯ ಕಾರಣವಿದೆ ಮತ್ತು ಕುದೇವ ಮೊದಲಾದವರ ಶ್ರದ್ಧೆಯು ಕಾಲ್ಪನಿಕ ತತ್ತ್ವಶ್ರದ್ಧೆಯ ಕಾರಣವಿದೆ. ಆದುದರಿಂದ ಬಾಹ್ಯಕಾರಣದ ಮುಖ್ಯತೆಯಿಂದ ಕುದೇವಾದಿಗಳ ಶ್ರದ್ಧೆಯನ್ನು ಬಿಡಿಸಿ ಸುದೇವಾದಿಗಳ ಶ್ರದ್ಧೆ ಮಾಡಿಸುವ ಸಲುವಾಗಿ ದೇವ-ಗುರು-ಧರ್ಮಗಳ ಶ್ರದ್ಧೆಯನ್ನು ಮುಖ್ಯಲಕ್ಷಣವೆಂದು ಹೇಳಿದೆ.

ಈ ಪ್ರಕಾರ ಭಿನ್ನ-ಭಿನ್ನ ಪ್ರಯೋಜನಗಳ ಮುಖ್ಯತೆಯಿಂದ ಭಿನ್ನ-ಭಿನ್ನ ಲಕ್ಷಣಗಳನ್ನು ಹೇಳಲಾಗಿದೆ.

**ಪ್ರಶ್ನೆ :-** ಈ ನಾಲ್ಕು ಲಕ್ಷಣಗಳನ್ನು ಹೇಳಿದೆ, ಅವುಗಳಲ್ಲಿ ಈ ಜೀವನು ಯಾವ ಲಕ್ಷಣವನ್ನು ಅಂಗೀಕಾರ ಮಾಡಬೇಕು ?

**ಉತ್ತರ :-** ಮಿಥ್ಯಾತ್ವಕರ್ಮದ ಉಪಶಮಾದಿಗಳಾದ ಮೇಲೆ ವಿಪರೀತಾಭಿನಿವೇಶದ ಅಭಾವವಾಗುತ್ತದೆ; ಅಲ್ಲಿ ನಾಲ್ಕೂ ಲಕ್ಷಣಗಳು ಯುಗಪತ್ ಕಂಡುಬರುತ್ತವೆ. ಮತ್ತು ವಿಚಾರದ ಅಪೇಕ್ಷೆಯಿಂದ ಮುಖ್ಯರೂಪವಾಗಿ ತತ್ತ್ವಾರ್ಥಗಳ ವಿಚಾರಮಾಡುತ್ತಾನೆ, ಅಥವಾ ಸ್ವ-ಪರಗಳ ಭೇದವಿಜ್ಞಾನ ಮಾಡುತ್ತಾನೆ, ಅಥವಾ ಆತ್ಮ-ಸ್ವರೂಪದ ಸ್ಮರಣೆಯನ್ನೇ ಮಾಡುತ್ತಾನೆ, ಅಥವಾ ದೇವಾದಿಕರ ಸ್ವರೂಪದ ವಿಚಾರ ಮಾಡುತ್ತಾನೆ ಈ ಪ್ರಕಾರ ಜ್ಞಾನದಲ್ಲಿ ನಾನಾ ಪ್ರಕಾರದ ವಿಚಾರಗಳಾಗುತ್ತವೆ; ಆದರೆ ಶ್ರದ್ಧೆಯಲ್ಲಿ ಎಲ್ಲೆಡೆಗೆ ಪರಸ್ಪರ ಸಾಪೇಕ್ಷತೆಯು ಕಂಡು ಬರುತ್ತದೆ. ತತ್ತ್ವವಿಚಾರ ಮಾಡುತ್ತಿದ್ದರೆ ಭೇದವಿಜ್ಞಾನಾದಿಗಳ ಅಭಿಪ್ರಾಯ ಸಹಿತವಾಗಿಯೇ ಮಾಡುತ್ತಾನೆ. ಮತ್ತು ಭೇದವಿಜ್ಞಾನ ಮಾಡುತ್ತಿದ್ದರೆ ತತ್ತ್ವವಿಚಾರ ಮೊದಲಾದವುಗಳ ಅಭಿಪ್ರಾಯಸಹಿತವೇ ಮಾಡುತ್ತಾನೆ. ಇದೇ ಪ್ರಕಾರ

ಉಳಿದೆಡೆಗಳಲ್ಲೂ ಪರಸ್ಪರ ಸಾಪೇಕ್ಷತೆಯಿದೆ; ಆದುದರಿಂದ ಸಮ್ಯಗ್ದೃಷ್ಟಿಯ ಶ್ರದ್ಧೆಯಲ್ಲಿ ನಾಲ್ಕೂ ಲಕ್ಷಣಗಳ ಅಂಗೀಕಾರವಿದೆ.

ಅದರಂತೆ ಯಾವನಿಗೆ ಮಿಥ್ಯಾತ್ವದ ಉದಯವಿದೆ ಅವನಿಗೆ ವಿಪರೀತಾಭಿನಿವೇಶವು ಕಂಡು ಬರುತ್ತದೆ; ಅವನಿಗೆ ಈ ಲಕ್ಷಣಗಳು ಆಭಾಸಮಾತ್ರವಿರುತ್ತವೆ, ನಿಜವಾಗಿ ಇರುವುದಿಲ್ಲ. ಅವನು ಜಿನಮತದ ಜೀವ ಮೊದಲಾದ ತತ್ತ್ವಗಳನ್ನು ಮನ್ನಿಸುತ್ತಾನೆ, ಉಳಿದವುಗಳನ್ನು ಮನ್ನಿಸುವುದಿಲ್ಲ, ಅವುಗಳ ಹೆಸರು-ಭೇದಾದಿಗಳನ್ನು ಕಲಿಯುತ್ತಾನೆ. ಇಂಥ ತತ್ತ್ವಶ್ರದ್ಧೆಯಿರುತ್ತದೆ; ಆದರೆ ಅವುಗಳ ಯಥಾರ್ಥಭಾವದ ಶ್ರದ್ಧೆಯಾಗುವುದಿಲ್ಲ. ಅದರಂತೆ ಸ್ವ-ಪರದ ಭಿನ್ನತೆಯ ಮಾತುಗಳನ್ನಾಡುವನು, ಚಿಂತನೆ ಮಾಡುವನು ; ಆದರೆ ಹೇಗೆ ಪರ್ಯಾಯದಲ್ಲಿ ಅಹಂಬುದ್ಧಿಯಿದೆ ಮತ್ತು ವಸ್ತ್ರಾದಿಗಳಲ್ಲಿ ಪರಬುದ್ಧಿಯಿದೆ, ಹಾಗೆ ಆತ್ಮನಲ್ಲಿ ಅಹಂಬುದ್ಧಿ ಮತ್ತು ಶರೀರಾದಿಗಳಲ್ಲಿ ಪರಬುದ್ಧಿಯಾಗುವುದಿಲ್ಲ. ಅದರಂತೆ ಜಿನವಚನದ ಅನುಸಾರ ಆತ್ಮನ ಚಿಂತನೆ ಮಾಡುವನು; ಆದರೆ ಪ್ರತೀತಿರೂಪದಿಂದ ತನ್ನನ್ನು ತನ್ನರೂಪವಾಗಿ ಶ್ರದ್ಧೆಮಾಡುವುದಿಲ್ಲ. ಅದರಂತೆ ಅರಹಂತ ದೇವಾದಿಕರನ್ನು ಹೊರತುಪಡಿಸಿ ಅನ್ಯಕುದೇವಾದಿಗಳನ್ನು ಮನ್ನಿಸುವುದಿಲ್ಲ; ಆದರೆ ಇವರ ಯಥಾರ್ಥಸ್ವರೂಪವನ್ನು ಪರಿಚಯಮಾಡಿಕೊಂಡು ಶ್ರದ್ಧೆ ಮಾಡುವುದಿಲ್ಲ. ಈ ಪ್ರಕಾರ ಈ ಲಕ್ಷಣಾಭಾಸಗಳು ಮಿಥ್ಯಾದೃಷ್ಟಿಗೆ ಇರುತ್ತವೆ. ಇವುಗಳಲ್ಲಿ ಕೆಲವು ಇರುತ್ತವೆ, ಕೆಲವು ಇರುವುದಿಲ್ಲ; ಅಲ್ಲಿ ಇವುಗಳ ಭಿನ್ನತೆಯು ಕೂಡ ಸಂಭವವಿದೆ.

ಈ ಲಕ್ಷಣಾಭಾಸಗಳಲ್ಲಿರುವ ವಿಶೇಷವೆಂದರೆ ಮೊದಲಂತೂ ದೇವಾದಿಕರ ಶ್ರದ್ಧೆಯಾಗುವುದು, ನಂತರ ತತ್ತ್ವಗಳ ವಿಚಾರವಾಗುವುದು, ಅನಂತರ ಸ್ವ-ಪರದ ಚಿಂತನೆಮಾಡುವುದು, ನಂತರ ಕೇವಲ ಆತ್ಮನಚಿಂತನೆ ಮಾಡುವುದು. ಈ ಅನುಕ್ರಮದಿಂದ ಸಾಧನೆ ಮಾಡಿದರೆ ಪರಂಪರೆಯಿಂದ ನಿಜವಾದ ಮೋಕ್ಷಮಾರ್ಗವನ್ನು ಪಡೆದು ಯಾವನೋ ಜೀವನು ಸಿದ್ಧಪದವನ್ನು ಕೂಡ ಪ್ರಾಪ್ತಮಾಡಿಕೊಳ್ಳುವನು ಮತ್ತು ಈ ಅನುಕ್ರಮದ ಉಲ್ಲಂಘನೆ ಮಾಡಿ ಯಾವನಿಗೆ ದೇವಾದಿಕರ ಮನ್ನಣೆಯ ಯಾವ ಗೊತ್ತು ಗುರಿಯೂ ಇರುವುದಿಲ್ಲ ಮತ್ತು ಬುದ್ಧಿಯ ತೀವ್ರತೆಯಿಂದ ತತ್ತ್ವವಿಚಾರಾದಿಗಳಲ್ಲಿ ಪ್ರವರ್ತಿಸುತ್ತಾನೆ, ಅದರಿಂದ ತನ್ನನ್ನು ಜ್ಞಾನಿಯೆಂದು ತಿಳಿಯುತ್ತಾನೆ; ಅಥವಾ ತತ್ತ್ವವಿಚಾರದಲ್ಲೂ ಉಪಯೋಗ ತೊಡಗಿಸುವುದಿಲ್ಲ, ಸ್ವ-ಪರದ ಭೇದವಿಜ್ಞಾನಿಯಾಗಿರುತ್ತಾನೆ; ಅಥವಾ ಸ್ವ-ಪರದ ಭೇದವಿಜ್ಞಾನವನ್ನೂ ಸರಿಯಾಗಿ ಮಾಡುವುದಿಲ್ಲ ಮತ್ತು ತನ್ನನ್ನು ಆತ್ಮಜ್ಞಾನಿಯೆಂದು ಮನ್ನಿಸುತ್ತಾನೆ. ಆದರೆ ಇವೆಲ್ಲವು ಚತುರತೆಯ ಮಾತುಗಳಿವೆ, ಮಾನ ಮೊದಲಾದ ಕಷಾಯದ ಸಾಧನವಿವೆ, ಯಾವ ಕಾರ್ಯಕಾರಿಯಿಲ್ಲ. ಆದುದರಿಂದ ಯಾವ ಜೀವನು ತನ್ನ ಒಳ್ಳೆಯದನ್ನು ಮಾಡಿಕೊಳ್ಳಲು ಬಯಸುತ್ತಾನೆ, ಅವನು ಎಲ್ಲಿಯವರೆಗೆ ನಿಜವಾದ ಸಮ್ಯಗ್ದರ್ಶನದ ಪ್ರಾಪ್ತಿಯಾಗುವುದಿಲ್ಲ ಅಲ್ಲಿಯವರೆಗೆ ಇವುಗಳನ್ನೇ ಅನುಕ್ರಮದಿಂದ ಅಂಗೀಕಾರ ಮಾಡುವುದು.

ಮೊದಲು ಆಜ್ಞಾದಿಗಳಿಂದ ಮತ್ತು ಯಾವುದಾದರೂ ಪರೀಕ್ಷೆಯಿಂದ ಕುದೇವಾದಿಗಳ ಮನ್ನಣೆಯನ್ನು ಬಿಟ್ಟುಕೊಟ್ಟು ಅರಹಂತದೇವಾದಿಕರ ಶ್ರದ್ಧೆ ಮಾಡಬೇಕು; ಏಕೆಂದರೆ ಈ ಶ್ರದ್ಧೆಯಾದ ಮೇಲೆ ಗೃಹೀತ ಮಿಥ್ಯಾತ್ವದ ಅಭಾವವಾಗುತ್ತದೆ, ಮತ್ತು ಮೋಕ್ಷಮಾರ್ಗದಲ್ಲಿ ವಿಘ್ನವನ್ನುಂಟು ಮಾಡುವಂಥ ಕುದೇವಾದಿಗಳ ನಿಮಿತ್ತವೂ ದೂರವಾಗುತ್ತದೆ; ಮೋಕ್ಷಮಾರ್ಗದಲ್ಲಿ ಸಹಾಯಕರಾದ ಅರಹಂತ ದೇವಾದಿಕರ ನಿಮಿತ್ತವು ದೊರಕುತ್ತದೆ.

ಆದುದರಿಂದ ಮೊದಲು ದೇವಾದಿಕರ ಶ್ರದ್ಧೆ ಮಾಡಬೇಕು. ಅನಂತರ ಜಿನಮತದಲ್ಲಿ ಹೇಳಿದ ಜೀವ ಮೊದಲಾದ ತತ್ವಗಳ ವಿಚಾರ ಮಾಡಬೇಕು, ನಾಮ-ಲಕ್ಷಣ ಮೊದಲಾದುವನ್ನು ಕಲಿಯಬೇಕು ಏಕೆಂದರೆ ಈ ಅಭ್ಯಾಸದಿಂದ ತತ್ತ್ವಾರ್ಥ ಶ್ರದ್ಧೆಯ ಪ್ರಾಪ್ತಿಯಾಗುತ್ತದೆ. ಅನಂತರ ಸ್ವ-ಪರಗಳ ಭಿನ್ನತೆಯು ಹೇಗೆ ಭಾಸವಾಗುವುದು ಹಾಗೆ ವಿಚಾರ ಮಾಡುತ್ತಿರಬೇಕು; ಏಕೆಂದರೆ ಈ ಅಭ್ಯಾಸದಿಂದ ಭೇದವಿಜ್ಞಾನವಾಗುತ್ತದೆ. ಪುನಃ ತನ್ನಲ್ಲಿ ತನ್ನತನವನ್ನು ಮನ್ನಿಸುವ ಸಲುವಾಗಿ ಸ್ವರೂಪದ ವಿಚಾರ ಮಾಡುತ್ತಿರಬೇಕು; ಏಕೆಂದರೆ ಈ ಅಭ್ಯಾಸದಿಂದ ಆತ್ಮಾನುಭವದ ಪ್ರಾಪ್ತಿಯಾಗುತ್ತದೆ.

ಈ ಪ್ರಕಾರ ಅನುಕ್ರಮದಿಂದ ಇವುಗಳನ್ನು ಅಂಗೀಕಾರ ಮಾಡಿ ಪುನಃ ಇವುಗಳಲ್ಲಿಯೇ ಒಮ್ಮೆ ದೇವಾದಿಕರ ವಿಚಾರದಲ್ಲಿ, ಒಮ್ಮೆ ತತ್ತ್ವವಿಚಾರದಲ್ಲಿ, ಒಮ್ಮೆ ಸ್ವ-ಪರದ ವಿಚಾರದಲ್ಲಿ, ಒಮ್ಮೆ ಆತ್ಮನ ವಿಚಾರದಲ್ಲಿ, ಉಪಯೋಗ ತೊಡಗಿಸಬೇಕು. ಇಂಥ ಅಭ್ಯಾಸದಿಂದ ದರ್ಶನಮೋಹವು ಮಂದವಾಗುತ್ತ ಹೋಗುವುದು ಆಗ ಪ್ರಾಯಶಃ ನಿಜವಾದ ಸಮ್ಯಗ್ದರ್ಶನದ ಪ್ರಾಪ್ತಿಯಾಗುತ್ತದೆ. ಆದರೆ ಹೀಗೆ ನಿಯಮವಂತೂ ಇಲ್ಲ; ಯಾವುದೇ ಜೀವನಿಗೆ ಯಾವುದಾದರೊಂದು ಪ್ರಬಲಕಾರಣವು ಮಧ್ಯದಲ್ಲಿ ಬಂದು ಬಿಟ್ಟರೆ ಸಮ್ಯಗ್ದರ್ಶನದ ಪ್ರಾಪ್ತಿಯು ಆಗುವುದೂ ಇಲ್ಲ; ಆದರೆ ಮುಖ್ಯರೂಪದಿಂದ ಬಹಳಷ್ಟು ಜೀವರುಗಳಿಗೆ ಈ ಅನುಕ್ರಮದಿಂದ ಕಾರ್ಯಸಿದ್ಧಿಯಾಗುತ್ತದೆ; ಆದುದರಿಂದ ಇವನ್ನು ಇದೇ ಪ್ರಕಾರ ಅಂಗೀಕಾರ ಮಾಡಬೇಕು. ಯಾವ ಪ್ರಕಾರ ಪುತ್ರ ಪ್ರಾಪ್ತಿಯ ಸಲುವಾಗಿ ವಿವಾಹ ಮೊದಲಾದ ಕಾರಣಗಳನ್ನು ಸೇರಿಸುತ್ತಾರೆ, ಅನಂತರ ಬಹಳಷ್ಟು ಪುರುಷರಿಗೆ ಪುತ್ರಪ್ರಾಪ್ತಿಯು ಆಗಿಯೇ ಆಗುತ್ತದೆ; ಯಾವನೋ ಒಬ್ಬನಿಗೆ ಆಗುವುದಿಲ್ಲದಿದ್ದರೆ ಆಗುವುದಿಲ್ಲ. ಉಪಾಯವನ್ನಂತೂ ಮಾಡಲೇಬೇಕು. ಅದೇ ಪ್ರಕಾರ ಸಮ್ಯಕ್ತ್ವದ ಅಪೇಕ್ಷೆಯುಳ್ಳವನು ಈ ಕಾರಣಗಳನ್ನು ಸೇರಿಸಬೇಕು, ಅನಂತರ ಬಹಳಷ್ಟು ಜೀವರುಗಳಿಗೆ ಸಮ್ಯಕ್ತ್ವದ ಪ್ರಾಪ್ತಿಯು ಆಗಿಯೇ ಆಗುತ್ತದೆ. ಯಾವನೋ ಒಬ್ಬನಿಗೆ ಆಗುವುದಿಲ್ಲದಿದ್ದರೆ ಆಗುವುದೂ ಇಲ್ಲ. ಆದರೆ ಅವನು ತನ್ನಿಂದ ಸಾಧ್ಯವಿರುವ ಉಪಾಯ ಮಾಡಬೇಕು.

ಈ ಪ್ರಕಾರ ಸಮ್ಯಕ್ತ್ವದ ಲಕ್ಷಣವನ್ನು ನಿರ್ದೇಶಿಸಲಾಗಿದೆ.

**ಪ್ರಶ್ನೆ :-** ಸಮ್ಯಕ್ತ್ವದ ಲಕ್ಷಣವನ್ನು ಅನೇಕ ಪ್ರಕಾರವಾಗಿ ಹೇಳಿದೆ, ಅವುಗಳಲ್ಲಿ ನೀವು ತತ್ತ್ವಾರ್ಥ ಶ್ರದ್ಧೆಯ ಲಕ್ಷಣವನ್ನು ಮುಖ್ಯ ಮಾಡಿರುವ ಕಾರಣವೇನು ?

**ಉತ್ತರ :-** ಅಲ್ಪಬುದ್ಧಿಯುಳ್ಳವರಿಗೆ ಅನ್ಯ ಲಕ್ಷಣಗಳಲ್ಲಿ ಪ್ರಯೋಜನವು ಸ್ಪಷ್ಟವಾಗಿ ಭಾಸವಾಗುವುದಿಲ್ಲ ಮತ್ತು ಭ್ರಮೆಯು ಉತ್ಪನ್ನವಾಗುತ್ತದೆ. ಇನ್ನು ಈ ತತ್ತ್ವಾರ್ಥಶ್ರದ್ಧೆಯ ಲಕ್ಷಣದಲ್ಲಿ ಪ್ರಯೋಜನವು ಸ್ಪಷ್ಟವಾಗಿ ಭಾಸವಾಗುತ್ತದೆ, ಯಾವ ಭ್ರಾಂತಿಯು ಉತ್ಪನ್ನವಾಗುವುದಿಲ್ಲ, ಆದುದರಿಂದ ಈ ಲಕ್ಷಣವನ್ನು ಮುಖ್ಯ ಮಾಡಿದೆ. ಅದನ್ನೇ ತಿಳಿಸಿಕೊಡುತ್ತಾರೆ.

ಅಲ್ಪಬುದ್ಧಿಯುಳ್ಳವರಿಗೆ ದೇವ-ಗುರು-ಧರ್ಮದ ಶ್ರದ್ಧೆಯಿಲ್ಲ ಅರಹಂತದೇವಾದಿಕರನ್ನು ಮನ್ನಿಸಬೇಕು, ಇತರರನ್ನು ಮನ್ನಿಸದಿರುವುದೇ ಸಮ್ಯಕ್ತ್ವವಿದೆಯೆಂದು ಭಾಸವಾಗುತ್ತದೆ. ಅಲ್ಲಿ ಜೀವ-ಅಜೀವದ, ಬಂಧ-ಮೋಕ್ಷದ ಹಾಗೂ ಕಾರಣ-ಕಾರ್ಯದ ಸ್ವರೂಪವು ಭಾಸವಾಗದಿದ್ದರೆ ಮೋಕ್ಷಮಾರ್ಗಪ್ರಯೋಜನದ ಸಿದ್ಧಿಯಾಗುವುದಿಲ್ಲ. ಮತ್ತು ಜೀವ ಮೊದಲಾದವುಗಳ ಶ್ರದ್ಧೆಯಾದಲ್ಲದೆ ಇದೇ ಶ್ರದ್ಧೆಯಲ್ಲಿ ಸಂತುಷ್ಟರಾಗಿ ತಮ್ಮನ್ನು ಸಮ್ಯಕ್ತ್ವಿಗಳೆಂದು

ಮನ್ನಿಸುವರು, ಇದರಲ್ಲಿ ಕುದೇವಾದಿಗಳಲ್ಲಿ ದ್ವೇಷವಿಟ್ಟುಕೊಂಡು, ಅನ್ಯರಾಗಾದಿಗಳನ್ನು ಬಿಡುವ ಉದ್ಯಮ ಮಾಡದಂಥ ಭ್ರಾಂತಿಯು ಉತ್ಪನ್ನವಾಗುವುದು.

ಅದರಂತೆ ಅಲ್ಪಬುದ್ಧಿಯುಳ್ಳವರಿಗೆ ಸ್ವ-ಪರದ ಶ್ರದ್ಧೆಯಲ್ಲಿ ಸ್ವ-ಪರಗಳನ್ನು ತಿಳಿಯುವುದೇ ಕಾರ್ಯಕಾರಿಯಿದೆ ಇದರಿಂದಲೇ ಸಮ್ಯಕ್ತ್ವವಾಗುತ್ತದೆಯೆಂದು ಭಾಸವಾಗುತ್ತದೆ. ಅಲ್ಲಿ ಆಸ್ರವಾದಿಗಳ ಸ್ವರೂಪವು ಭಾಸವಾಗದಿದ್ದರೆ ಮೋಕ್ಷಮಾರ್ಗಪ್ರಯೋಜನದ ಸಿದ್ಧಿಯಾಗುವುದಿಲ್ಲ, ಮತ್ತು ಆಸ್ರವ ಮೊದಲಾದವುಗಳ ಶ್ರದ್ಧೆಯಾದಲ್ಲದೆ ಇಷ್ಟನ್ನೇ ತಿಳಿಯುವುದರಲ್ಲಿ ಸಂತುಷ್ಟರಾಗಿ ತಮ್ಮನ್ನು ಸಮ್ಯಕ್ತ್ವಿಗಳೆಂದು ಮನ್ನಿಸುವರು, ಸ್ವಚ್ಛಂದರಾಗಿ ರಾಗಾದಿಗಳನ್ನು ಬಿಟ್ಟುಕೊಡುವ ಉದ್ಯಮ ಮಾಡದಿರುವಂಥ ಭ್ರಾಂತಿಯು ಉತ್ಪನ್ನವಾಗುವುದು.

ಅದರಂತೆ ಅಲ್ಪಬುದ್ಧಿಯುಳ್ಳವರಿಗೆ ಆತ್ಮಶ್ರದ್ಧೆಯಲ್ಲಿ ಆತ್ಮನ ವಿಚಾರವೇ ಕಾರ್ಯಕಾರಿಯಿದೆ, ಇದರಿಂದಲೇ ಸಮ್ಯಕ್ತ್ವವಾಗುತ್ತದೆಯೆಂದು ಭಾಸವಾಗುತ್ತದೆ. ಅಲ್ಲಿ ಜೀವ-ಅಜೀವಾದಿಗಳ ವಿಶೇಷ ಹಾಗೂ ಆಸ್ರವಾದಿಗಳ ಸ್ವರೂಪವು ಭಾಸವಾಗದಿರುವಾಗ ಮೋಕ್ಷಮಾರ್ಗ ಪ್ರಯೋಜನದ ಸಿದ್ಧಿಯಾಗುವುದಿಲ್ಲ; ಮತ್ತು ಜೀವಾದಿಗಳ ವಿಶೇಷ ಹಾಗೂ ಆಸ್ರವಾದಿಗಳ ಸ್ವರೂಪದ ಶ್ರದ್ಧೆಯಾದಲ್ಲದೆ ಇದಿಷ್ಟೇ ವಿಚಾರದಿಂದ ತಮ್ಮನ್ನು ಸಮ್ಯಕ್ತ್ವಿಗಳೆಂದು ಮನ್ನಿಸಿ, ಸ್ವಚ್ಛಂದರಾಗಿ ರಾಗ ಮೊದಲಾದುವನ್ನು ಬಿಟ್ಟುಕೊಡುವ ಉದ್ಯಮ ಮಾಡುವುದಿಲ್ಲ. ಇವರಿಗೆ ಕೂಡ ಅಂಥ ಭ್ರಮೆಯು ಉತ್ಪನ್ನವಾಗುವುದು.

ಹೀಗೆ ತಿಳಿದುಕೊಂಡು ಈ ಲಕ್ಷಣಗಳನ್ನು ಮುಖ್ಯಮಾಡಲಾಗಿಲ್ಲ.

ಇನ್ನು ತತ್ತ್ವಾರ್ಥಶ್ರದ್ಧೆಯ ಲಕ್ಷಣದಲ್ಲಿ ಜೀವ-ಅಜೀವ ಮೊದಲಾದವುಗಳ ಹಾಗೂ ಆಸ್ರವ ಮೊದಲಾದವುಗಳ ಶ್ರದ್ಧೆಯಾಗುತ್ತದೆ, ಅಲ್ಲಿ ಎಲ್ಲವುಗಳ ಸ್ವರೂಪವು ಚನ್ನಾಗಿ ಭಾಸವಾಗುತ್ತದೆ, ಆಗ ಮೋಕ್ಷಮಾರ್ಗದ ಪ್ರಯೋಜನದ ಸಿದ್ಧಿಯಾಗುತ್ತದೆ. ಮತ್ತು ಈ ಶ್ರದ್ಧೆಯಾದ ಮೇಲೆ ಸಮ್ಯಕ್ತ್ವವಾಗುತ್ತದೆ, ಆದರೆ ಇವನು ಅಷ್ಟರಲ್ಲಿ ಸಂತುಷ್ಟನಾಗುವುದಿಲ್ಲ. ಆಸ್ರವಾದಿಗಳ ಶ್ರದ್ಧೆಯಾಗುವುದರಿಂದ ರಾಗಾದಿಗಳನ್ನು ಬಿಟ್ಟುಕೊಟ್ಟು ಮೋಕ್ಷದ ಉದ್ಯಮವನ್ನಿಟ್ಟುಕೊಳ್ಳುತ್ತಾನೆ. ಇವನಿಗೆ ಭ್ರಾಂತಿ ಉತ್ಪನ್ನವಾಗುವುದಿಲ್ಲ. ಆದುದರಿಂದಲೇ ತತ್ತ್ವಾರ್ಥಶ್ರದ್ಧೆಯ ಲಕ್ಷಣವನ್ನು ಮುಖ್ಯಮಾಡಲಾಗಿದೆ.

ಅದರಂತೆ ಈ ತತ್ತ್ವಾರ್ಥಶ್ರದ್ಧೆಯ ಲಕ್ಷಣದಲ್ಲಿ ದೇವಾದಿಕರ ಶ್ರದ್ಧೆ, ಸ್ವ-ಪರದ ಶ್ರದ್ಧೆ ಹಾಗೂ ಆತ್ಮಶ್ರದ್ಧೆಗಳೆಲ್ಲವೂ ಗರ್ಭಿತವಾಗುತ್ತವೆಂಬುದು ಅಲ್ಪಬುದ್ಧಿಯುಳ್ಳವರಿಗೆ ಕೂಡ ಭಾಸವಾಗುತ್ತದೆ. ಮತ್ತು ಇತರ ಲಕ್ಷಣಗಳಲ್ಲಿ ತತ್ತ್ವಾರ್ಥಶ್ರದ್ಧೆಯ ಒಳಗೊಳ್ಳುವಿಕೆಯು ವಿಶೇಷ ಬುದ್ಧಿವಂತರಿರುವವರಿಗೆ ಮಾತ್ರ ಭಾಸವಾಗುತ್ತದೆ, ಅಲ್ಪಬುದ್ಧಿಯುಳ್ಳವರಿಗೆ ಭಾಸವಾಗುವುದಿಲ್ಲ; ಆದುದರಿಂದಲೇ ತತ್ತ್ವಾರ್ಥಶ್ರದ್ಧೆಯ ಲಕ್ಷಣವನ್ನು ಮುಖ್ಯಮಾಡಲಾಗಿದೆ.

ಇದು ಮಿಥ್ಯಾದೃಷ್ಟಿಗಳಿಗೆ ಆಭಾಸಮಾತ್ರವಿದ್ದರೂ ಅಲ್ಲಿ ತತ್ತ್ವಾರ್ಥಗಳ ವಿಚಾರವು ಶೀಘ್ರತೆಯಿಂದ ವಿಪರೀತಾಭಿನಿವೇಶವನ್ನು ದೂರಮಾಡುವುದಕ್ಕೆ ಕಾರಣವಾಗುತ್ತದೆ, ಇತರ ಲಕ್ಷಣಗಳು ಶೀಘ್ರವಾಗಿ ಕಾರಣಗಳಾಗುವುದಿಲ್ಲ, ಮತ್ತು ವಿಪರೀತಾಭಿನಿವೇಶಕ್ಕೆ ಕೂಡ ಕಾರಣಗಳಾಗಿ ಬಿಡುವವು.

ಆದುದರಿಂದ ಇಲ್ಲಿ ವಿಪರೀತಾಭಿನಿವೇಶದಿಂದ ರಹಿತವಾದ ಜೀವ ಮೊದಲಾದ ತತ್ತ್ವಾರ್ಥಗಳ ಶ್ರದ್ಧೆಯೇ ಸಮ್ಯಕ್ತ್ವದ ಲಕ್ಷಣವಿದೆಯೆಂಬುದನ್ನು ಎಲ್ಲ ಪ್ರಕಾರದಿಂದ ಸ್ಪಷ್ಟವಾಗಿ ತಿಳಿದುಕೊಂಡು ನಿರ್ದೇಶಿಸಲಾಗಿದೆ. ಹೀಗೆ ಲಕ್ಷಣ ನಿರ್ದೇಶನದ ನಿರೂಪಣೆಯನ್ನು ಮಾಡಲಾಯಿತು.

ಇಂಥ ಲಕ್ಷಣವು ಯಾವ ಆತ್ಮನ ಸ್ವಭಾವದಲ್ಲಿ ಕಂಡು ಬರುತ್ತದೆ ಅವನೇ ಸಮ್ಯಗ್ದೃಷ್ಟಿಯೆಂದು ತಿಳಿಯಬೇಕು.

## ಸಮ್ಯಕ್ತ್ವದ ಭೇದ ಮತ್ತು ಅವುಗಳ ಸ್ವರೂಪ :-

ಈಗ ಈ ಸಮ್ಯಕ್ತ್ವದ ಭೇದಗಳನ್ನು ತಿಳಿಸಿಕೊಡುತ್ತಾರೆ.

ಮೊದಲು ನಿಶ್ಚಯ-ವ್ಯವಹಾರದ ಭೇದ ತಿಳಿಸುತ್ತಾರೆ. ವಿಪರೀತಾಭಿನಿವೇಶವಿಲ್ಲದೆ ಶ್ರದ್ಧೆಯರೂಪದ ಆತ್ಮನ ಪರಿಣಾಮವು ಅದು ನಿಶ್ಚಯಸಮ್ಯಕ್ತ್ವವಿದೆ. ಏಕೆಂದರೆ ಇದು ಸತ್ಯಾರ್ಥಸಮ್ಯಕ್ತ್ವದ ಸ್ವರೂಪವಿದೆ, ಸತ್ಯಾರ್ಥದ ಹೆಸರೇ ನಿಶ್ಚಯವಿದೆ. ಮತ್ತು ವಿಪರೀತಾಭಿನಿವೇಶದಿಂದ ರಹಿತವಾದ ಶ್ರದ್ಧೆಗೆ ಕಾರಣಭೂತವಾದ ಶ್ರದ್ಧೆಯು ಅದು ವ್ಯವಹಾರಸಮ್ಯಕ್ತ್ವವಿದೆ, ಏಕೆಂದರೆ ಕಾರಣದಲ್ಲಿ ಕಾರ್ಯದ ಉಪಚಾರ ಮಾಡಿದೆ, ಆ ಉಪಚಾರದ ಹೆಸರೇ ವ್ಯವಹಾರವಿದೆ.

ಅಲ್ಲಿ ಸಮ್ಯಗ್ದೃಷ್ಟಿ ಜೀವನಿಗೆ ದೇವ-ಗುರು-ಧರ್ಮಗಳ ಕುರಿತು ನಿಜವಾದ ಶ್ರದ್ಧೆಯಿದೆ, ಅದೇ ನಿಮಿತ್ತದಿಂದ ಅವನ ಶ್ರದ್ಧೆಯಲ್ಲಿ ವಿಪರೀತಾಭಿನಿವೇಶದ ಅಭಾವವಿದೆ. ಇಲ್ಲಿ ವಿಪರೀತಾಭಿನಿವೇಶದಿಂದ ರಹಿತವಾದ ಶ್ರದ್ಧೆಯು ಅದು ನಿಶ್ಚಯಸಮ್ಯಕ್ತ್ವವಿದೆ ಮತ್ತು ದೇವ-ಗುರು-ಧರ್ಮ ಮೊದಲಾದವುಗಳ ಶ್ರದ್ಧೆಯು ಅದು ವ್ಯವಹಾರ ಸಮ್ಯಕ್ತ್ವವಿದೆ.

ಈ ಪ್ರಕಾರ ಒಂದೇ ಸಮಯದಲ್ಲಿ ಎರಡೂ ಸಮ್ಯಕ್ತ್ವಗಳು ಕಂಡುಬರುತ್ತವೆ.

ಅದರಂತೆ ಮಿಥ್ಯಾದೃಷ್ಟಿ ಜೀವನಿಗೆ ದೇವ-ಗುರು-ಧರ್ಮಗಳ ಶ್ರದ್ಧೆಯು ಆಭಾಸಮಾತ್ರವಿರುತ್ತದೆ. ಮತ್ತು ಅವನ ಶ್ರದ್ಧೆಯಲ್ಲಿ ವಿಪರೀತಾಭಿನಿವೇಶದ ಅಭಾವವಾಗುವುದಿಲ್ಲ; ಆದುದರಿಂದ ಅಲ್ಲಿ ನಿಶ್ಚಯ ಸಮ್ಯಕ್ತ್ವವಂತೂ ಇಲ್ಲವೇ ಇಲ್ಲ ಮತ್ತು ವ್ಯವಹಾರಸಮ್ಯಕ್ತ್ವವು ಕೂಡ ಆಭಾಸಮಾತ್ರವಿದೆ; ಏಕೆಂದರೆ ಅವನಿಗೆ ದೇವ-ಗುರು-ಧರ್ಮಗಳ ಶ್ರದ್ಧೆಯಿದೆ ಅದು ವಿಪರೀತಾಭಿನಿವೇಶದ ಅಭಾವಕ್ಕೆ ಪ್ರತ್ಯಕ್ಷ ಕಾರಣವಾಗಿಲ್ಲ. ಕಾರಣವಾದಲ್ಲದೆ ಉಪಚಾರವು ಸಂಭವವಿಲ್ಲ; ಆದುದರಿಂದ ಪ್ರತ್ಯಕ್ಷ ಕಾರಣದ ಅಪೇಕ್ಷೆಯಿಂದ ವ್ಯವಹಾರ ಸಮ್ಯಕ್ತ್ವವು ಕೂಡ ಅವನಿಗೆ ಸಂಭವವಿಲ್ಲ.

ಅಥವಾ ಅವನಿಗೆ ದೇವ-ಗುರು-ಧರ್ಮಗಳ ಶ್ರದ್ಧೆಯು ನಿಯಮರೂಪವಿರುತ್ತದೆ ಅದು ವಿಪರೀತಾಭಿ ನಿವೇಶದಿಂದ ರಹಿತವಾದ ಶ್ರದ್ಧೆಗೆ ಪರಂಪರೆಯಿಂದ ಕಾರಣಭೂತವಿದೆ. ನಿಯಮರೂಪದಿಂದ ಕಾರಣವಿಲ್ಲದಿದ್ದರೂ ಮುಖ್ಯರೂಪದಿಂದ ಕಾರಣವಿದೆ. ಅದರಂತೆ ಕಾರಣದಲ್ಲಿ ಕಾರ್ಯದ ಉಪಚಾರವು ಸಂಭವವಿದೆ; ಆದುದರಿಂದ ಮುಖ್ಯರೂಪ ಪರಂಪರೆಯ ಕಾರಣದ ಅಪೇಕ್ಷೆಯಿಂದ ಮಿಥ್ಯಾದೃಷ್ಟಿಗೆ ಕೂಡ ವ್ಯವಹಾರ ಸಮ್ಯಕ್ತ್ವವನ್ನು ಹೇಳಲಾಗುತ್ತದೆ.

**ಪ್ರಶ್ನೆ :-** ಅದೆಷ್ಟೋ ಶಾಸ್ತ್ರಗಳಲ್ಲಿ ದೇವ-ಗುರು-ಧರ್ಮಗಳ ಶ್ರದ್ಧೆಯನ್ನು ಹಾಗೂ ತತ್ತ್ವಶ್ರದ್ಧೆಯನ್ನು ವ್ಯವಹಾರ ಸಮ್ಯಕ್ತ್ವವೆಂದು ಹೇಳಿದೆ ಮತ್ತು ಸ್ವ-ಪರದ ಶ್ರದ್ಧೆಯನ್ನು ಹಾಗೂ ಕೇವಲ ಆತ್ಮನ ಶ್ರದ್ಧೆಯನ್ನು ನಿಶ್ಚಯಸಮ್ಯಕ್ತ್ವವೆಂದು ಹೇಳಿದೆ ಅದು ಯಾವ ಪ್ರಕಾರವಿದೆ ?

**ಉತ್ತರ :-** ದೇವ-ಗುರು-ಧರ್ಮದ ಶ್ರದ್ಧೆಯಲ್ಲಿ ಪ್ರವೃತ್ತಿಯ ಮುಖ್ಯತೆಯಿದೆ; ಆ ಪ್ರವೃತ್ತಿಯಲ್ಲಿ ಅರಹಂತ ಮೊದಲಾದವರನ್ನು ದೇವಾದಿಕರೆಂದು ಮನ್ನಿಸುವವನಿಗೆ ಮತ್ತು ಇತರರನ್ನು ಮನ್ನಿಸದಿರುವವನಿಗೆ ದೇವಾದಿಕರ ಶ್ರದ್ಧೆಯುಳ್ಳವನೆಂದು ಹೇಳಲಾಗುತ್ತದೆ. ಮತ್ತು ತತ್ತ್ವಶ್ರದ್ಧೆಯಲ್ಲಿ ಅವುಗಳ ವಿಚಾರದ ಮುಖ್ಯತೆಯಿದೆ; ಜ್ಞಾನದಲ್ಲಿ ಜೀವ ಮೊದಲಾದ ತತ್ತ್ವಗಳ ವಿಚಾರ ಮಾಡುವವನನ್ನು ತತ್ತ್ವಶ್ರದ್ಧೆಯುಳ್ಳವನೆಂದು ಹೇಳುತ್ತಾರೆ. ಈ ಪ್ರಕಾರ ಮುಖ್ಯತೆಯು ಕಂಡು ಬರುತ್ತದೆ. ಇವೆರಡೂ ಯಾವುದೇ ಜೀವನಿಗೆ ಸಮ್ಯಕ್ತ್ವಕ್ಕೆ ಕಾರಣಗಳಂತೂ ಆಗುತ್ತವೆ; ಆದರೆ ಇವುಗಳ ಸದ್ಭಾವವು ಮಿಥ್ಯಾದೃಷ್ಟಿಗೆ ಕೂಡ ಸಂಭವವಿದೆ; ಅದಕ್ಕಾಗಿ ಇವನ್ನು ವ್ಯವಹಾರಸಮ್ಯಕ್ತ್ವವೆಂದು ಹೇಳಿದೆ.

ಅದರಂತೆ ಸ್ವ-ಪರದ ಶ್ರದ್ಧೆಯಲ್ಲಿ ಹಾಗೂ ಆತ್ಮಶ್ರದ್ಧೆಯಲ್ಲಿ ವಿಪರೀತಾಭಿನಿವೇಶರಹಿತತೆಯ ಮುಖ್ಯತೆಯಿದೆ. ಸ್ವ-ಪರದ ಭೇದವಿಜ್ಞಾನ ಮಾಡುವವನಿಗೆ ಹಾಗೂ ತನ್ನ ಆತ್ಮನ ಅನುಭವ ಮಾಡುವವನಿಗೆ ಮುಖ್ಯರೂಪದಿಂದ ವಿಪರೀತಾಭಿನಿವೇಶವಿರುವುದಿಲ್ಲ; ಆದುದರಿಂದ ಭೇದವಿಜ್ಞಾನಿಯನ್ನು ಹಾಗೂ ಆತ್ಮಜ್ಞಾನಿಯನ್ನು ಸಮ್ಯಗ್ದೃಷ್ಟಿಯೆಂದು ಹೇಳುತ್ತಾರೆ. ಈ ಪ್ರಕಾರ ಸ್ವ-ಪರದ ಶ್ರದ್ಧೆ ಮತ್ತು ಆತ್ಮನ ಶ್ರದ್ಧೆಯು ಮುಖ್ಯರೂಪದಿಂದ ಸಮ್ಯಗ್ದೃಷ್ಟಿಗೇನೇ ಕಂಡು ಬರುತ್ತವೆ. ಆದುದರಿಂದ ಇವನ್ನು ನಿಶ್ಚಯಸಮ್ಯಕ್ತ್ವವೆಂದು ಹೇಳಿದೆ.

ಈ ಕಥನವು ಮುಖ್ಯತೆಯ ಅಪೇಕ್ಷೆಯಿಂದ ಇದೆ. ತಾರತಮ್ಯರೂಪದಿಂದ ಇವು ನಾಲ್ಕೂ ಆಭಾಸಮಾತ್ರವಾಗಿ ಮಿಥ್ಯಾದೃಷ್ಟಿಗೆ ಇರುತ್ತವೆ, ನಿಜವಾಗಿ ಸಮ್ಯಗ್ದೃಷ್ಟಿಗೆ ಇರುತ್ತವೆ. ಅಲ್ಲಿ ಆಭಾಸಮಾತ್ರವಿವೆ ಅವಂತೂ ನಿಯಮವಿಲ್ಲದೆ ಪರಂಪರೆಯಿಂದ ಕಾರಣವಿವೆ ಮತ್ತು ನಿಜವಾಗಿವೆ ಅವು ನಿಯಮರೂಪದಿಂದ ಪ್ರತ್ಯಕ್ಷ ಕಾರಣವಿವೆ; ಆದುದರಿಂದ ಇವನ್ನು ವ್ಯವಹಾರರೂಪವೆಂದು ಹೇಳುತ್ತಾರೆ. ಇವುಗಳ ನಿಮಿತ್ತದಿಂದ ಆ ವಿಪರೀತಾಭಿನಿವೇಶದಿಂದ ರಹಿತವಾದ ಶ್ರದ್ಧೆಯಾಗುವುದು ಅದು ನಿಶ್ಚಯಸಮ್ಯಕ್ತ್ವವಿದೆಯೆಂದು ತಿಳಿಯುವುದು.

**ಪ್ರಶ್ನೆ :-** ಅದೆಷ್ಟೋ ಶಾಸ್ತ್ರಗಳಲ್ಲಿ ಆತ್ಮನೇ ನಿಶ್ಚಯಸಮ್ಯಕ್ತ್ವನಿದ್ದಾನೆ ಮತ್ತು ಉಳಿದವುಗಳೆಲ್ಲವೂ ವ್ಯವಹಾರವಿವೆಯೆಂದು ಹೇಳಿದೆ, ಅದು ಯಾವ ಪ್ರಕಾರವಿದೆ. ?

**ಉತ್ತರ :-** ವಿಪರೀತಾಭಿನಿವೇಶವಿಲ್ಲದ ಶ್ರದ್ಧೆಯಾಗುವುದು ಅದು ಆತ್ಮನದೇ ಸ್ವರೂಪವಿದೆ; ಅಲ್ಲಿ ಅಭೇದ ಬುದ್ಧಿಯಿಂದ ಆತ್ಮ ಮತ್ತು ಸಮ್ಯಕ್ತ್ವದಲ್ಲಿ ಭಿನ್ನತೆಯಿಲ್ಲ; ಅದರಿಂದಾಗಿಯೇ ನಿಶ್ಚಯದಿಂದ ಆತ್ಮನಿಗೇನೇ ಸಮ್ಯಕ್ತ್ವವೆಂದು ಹೇಳಿದೆ. ಉಳಿದವುಗಳೆಲ್ಲವೂ ಸಮ್ಯಕ್ತ್ವಕ್ಕೆ ನಿಮಿತ್ತಮಾತ್ರವಿವೆ, ಮತ್ತು ಭೇದ-ಕಲ್ಪನೆ ಮಾಡಿದ ಮೇಲೆ ಆತ್ಮ ಮತ್ತು ಸಮ್ಯಕ್ತ್ವದಲ್ಲಿ ಭಿನ್ನತೆಯನ್ನು ಹೇಳಲಾಗುತ್ತದೆ; ಆದುದರಿಂದ ಉಳಿದೆಲ್ಲ ವ್ಯವಹಾರ ಹೇಳಿದೆಯೆಂದು ತಿಳಿಯಬೇಕು.

ಈ ಪ್ರಕಾರ ನಿಶ್ಚಯ ಸಮ್ಯಕ್ತ್ವ ಮತ್ತು ವ್ಯವಹಾರಸಮ್ಯಕ್ತ್ವವೆಂದು ಸಮ್ಯಕ್ತ್ವದಲ್ಲಿ ಎರಡು ಭೇದಗಳಿವೆ.

ಇನ್ನು ಅನ್ಯ ನಿಮಿತ್ತಾದಿಗಳ ಅಪೇಕ್ಷೆಯಿಂದ ಸಮ್ಯಕ್ತ್ವದಲ್ಲಿ ಆಜ್ಞಾಸಮ್ಯಕ್ತ್ವ ಮೊದಲಾದ ಹತ್ತು ಭೇದಗಳನ್ನು ಮಾಡಲಾಗಿದೆ.

ಅದನ್ನು ಆತ್ಮಾನುಶಾಸನದಲ್ಲಿ ಹೇಳುತ್ತಾರೆ,-

**ಆಜ್ಞಾಮಾರ್ಗಸಮುದ್ಭವಮುಪದೇಶಾತತೂತ್ರ ಬೀಜಸಂಕ್ಷೇಪಾತ್ ।**
**ವಿಸ್ತಾರಾರ್ಥಾಭ್ಯಾಂ ಭವಮವಪರಮಾವಾದಿಗಾಢೇ ಚ ॥೧೧॥**

ಜಿನಾಜ್ಞೆಯಿಂದ ತತ್ತ್ವಶ್ರದ್ಧೆಯಾಗಿರುವುದು ಅದು ಆಜ್ಞಾಸಮ್ಯಕ್ತ್ವವಿದೆ. 'ನನಗೆ ಜಿನಾಜ್ಞೆಯು ಪ್ರಮಾಣವಿದೆ' ಯೆಂಬುದಿಷ್ಟೇ ಶ್ರದ್ಧೆಯು ಸಮ್ಯಕ್ತ್ವವಲ್ಲವೆಂದು ತಿಳಿಯಬೇಕು. ಆಜ್ಞೆ ಮನ್ನಿಸುವುದಂತೂ ಸಮ್ಯಕ್ತ್ವಕ್ಕೆ ಕಾರಣಭೂತವಿದೆ, ಇದರಿಂದಲೇ ಇಲ್ಲಿ ಆಜ್ಞೆಯಿಂದ ಉತ್ಪನ್ನವಾದದ್ದೆಂದು ಹೇಳಿದೆ. ಆದುದರಿಂದ ಮೊದಲು ಜಿನಾಜ್ಞೆಯನ್ನು ಮನ್ನಿಸುವುದರಿಂದ ನಂತರ ಯಾವ ತತ್ತ್ವಶ್ರದ್ಧೆಯಾಗುವುದು ಅದು **ಆಜ್ಞಾಸಮ್ಯಕ್ತ್ವವಿದೆ.** ಇದೇ ಪ್ರಕಾರ ನಿರ್ಗ್ರಂಥ ಮಾರ್ಗದ ಅವಲೋಕನದಿಂದ ತತ್ತ್ವಶ್ರದ್ಧೆಯಾಗುವುದು **ಅದು ಮಾರ್ಗಸಮ್ಯಕ್ತ್ವವಿದೆ**★.....

ಈ ಪ್ರಕಾರ ಎಂಟು ಭೇದಗಳನ್ನಂತೂ ಕಾರಣದ ಅಪೇಕ್ಷೆಯಿಂದ ಮಾಡಿದೆ. ಇನ್ನು ಶ್ರುತಕೇವಲಿಯ ಯಾವ ತತ್ತ್ವಶ್ರದ್ಧೆಯಿದೆ ಅದನ್ನು **ಅವಗಾಢ ಸಮ್ಯಕ್ತ್ವ**ವೆಂದು ಹೇಳುತ್ತಾರೆ. ಕೇವಲಜ್ಞಾನಿಯ ಆ ತತ್ತ್ವಶ್ರದ್ಧೆಯನ್ನು **ಪರಮಾವಗಾಢಸಮ್ಯಕ್ತ್ವ**ವೆಂದು ಹೇಳುತ್ತಾರೆ. ಹೀಗೆ ಎರಡು ಭೇದಗಳನ್ನು ಜ್ಞಾನಕ್ಕೆ ಪೋಷಕತೆಯ ಅಪೇಕ್ಷೆಯಿಂದ ಮಾಡಿದೆ.

ಈ ಪ್ರಕಾರ ಸಮ್ಯಕ್ತ್ವದಲ್ಲಿ ಹತ್ತು ಭೇದಗಳನ್ನು ಮಾಡಲಾಗಿದೆ.

ಎಲ್ಲ ಕಡೆಗೆ ಸಮ್ಯಕ್ತ್ವದ ಸ್ವರೂಪವೆಂದರೆ ತತ್ತ್ವಾರ್ಥಶ್ರದ್ಧೆಯೆಂದೇ ತಿಳಿಯುವುದು.

ಮತ್ತು ಸಮ್ಯಕ್ತ್ವದಲ್ಲಿ ಔಪಶಮಿಕ, ಕ್ಷಾಯೋಪಶಮಿಕ ಮತ್ತು ಕ್ಷಾಯಿಕವೆಂದು ಮೂರು ಭೇದಗಳನ್ನು ಮಾಡಲಾಗಿದೆ. ಆದರೆ ಈ ಮೂರು ಭೇದಗಳನ್ನು ದರ್ಶನಮೋಹದ ಅಪೇಕ್ಷೆಯಿಂದ ಮಾಡಲಾಗಿದೆ.

ಇನ್ನು ಔಪಶಮಿಕ ಸಮ್ಯಕ್ತ್ವದಲ್ಲಿ ಪ್ರಥಮೋಪಶಮಸಮ್ಯಕ್ತ್ವ ಮತ್ತು ದ್ವಿತಿಯೋಪಶಮಸಮ್ಯಕ್ತ್ವವೆಂದು ಎರಡು ಭೇದಗಳಿವೆ. ಅಲ್ಲಿ ಮಿಥ್ಯಾತ್ವಗುಣಸ್ಥಾನದಲ್ಲಿ ಕರಣದ ಮೂಲಕ ದರ್ಶನಮೋಹದ ಉಪಶಮ ಮಾಡಿ ಯಾವ ಸಮ್ಯಕ್ತ್ವವು ಉತ್ಪನ್ನವಾಗುವುದು ಅದನ್ನು ಪ್ರಥಮೋಪಶಮಸಮ್ಯಕ್ತ್ವವೆಂದು ಹೇಳುತ್ತಾರೆ.

---

★ ಮಾರ್ಗಸಮ್ಯಕ್ತ್ವದ ನಂತರ ಇಲ್ಲಿ ಗ್ರಂಥಕರ್ತೃಗಳು ತಮ್ಮ ಹಸ್ತಲಿಖಿತ ಪ್ರತಿಯಲ್ಲಿ ಆರು ಸಮ್ಯಕ್ತ್ವಗಳ ವರ್ಣನೆ ಮಾಡುವ ಸಲುವಾಗಿ ಸ್ಥಳವನ್ನು ಕಾಯ್ದಿರಿಸಿದ್ದಾರೆ, ಆದರೆ ಅವರು ಅದನ್ನು ಬರೆಯಲಾಗಿಲ್ಲ. ಈ ವರ್ಣನೆಯನ್ನು ಅನ್ಯಗ್ರಂಥಕ್ಕನುಸರಿಸಿ ಕೊಡಲಾಗಿದೆ.

ತೀರ್ಥಂಕರ ಮೊದಲಾದ ಉತ್ಕೃಷ್ಟ ಪುರುಷರ ಪುರಾಣಗಳ ಉಪದೇಶದಿಂದ ಉತ್ಪನ್ನವಾದ ಯಾವ ಸಮ್ಯಗ್ಜ್ಞಾನವಿದೆ ಅದರಿಂದ ಉತ್ಪನ್ನವಾದ ಆಗಮ ಸಮುದ್ರದಲ್ಲಿ ಪ್ರವೀಣ ಪುರುಷರ ಉಪದೇಶಾದಿಗಳಿಂದ ಉಂಟಾದ ಯಾವ ಉಪದೇಶದೃಷ್ಟಿಯಿದೆ ಅದು ಉಪದೇಶಸಮ್ಯಕ್ತ್ವವಿದೆ. ಮುನಿಗಳ ಆಚರಣೆಯ ವಿಧಾನವನ್ನು ಪ್ರತಿಪಾದನೆ ಮಾಡುವಂಥ ಆ ಆಚಾರ ಸೂತ್ರಗಳನ್ನು ಕೇಳಿ ಯಾವ ಶ್ರದ್ಧೆಯಾಗುವುದು ಅದನ್ನು ಒಳ್ಳೆಯ ಪ್ರಕಾರದ ಸೂತ್ರದೃಷ್ಟಿಯೆಂದು ಹೇಳಿದೆ, ಇದು ಸೂತ್ರಸಮ್ಯಕ್ತ್ವವಿದೆ. ಗಣಿತ ಜ್ಞಾನಕ್ಕೆ ಕಾರಣವಾದ ಆ ಬೀಜಸೂತ್ರದಿಂದ ದರ್ಶನಮೋಹದ ಅನುಪಮವಾದ ಉಪದೇಶದ ಬಲದಿಂದ ಅತ್ಯಂತ ದುಷ್ಕರವಾದ ಪದಾರ್ಥಗಳ ಸಮೂಹದ ಉಪಲಬ್ಧಿಯು ಎಂದರೆ ಶ್ರದ್ಧೆಯರೂಪದ ಪರಿಣತಿಯು ಪ್ರಾಪ್ತವಾಗಿರುವಂಥ ಕರಣಾನುಯೋಗದ ಜ್ಞಾನಿಗೆ ಬೀಜದೃಷ್ಟಿಯಿರುತ್ತದೆ, ಅದನ್ನು ಬೀಜಸಮ್ಯಕ್ತ್ವವೆಂದು ತಿಳಿಯುವುದು, ಮತ್ತು ಪದಾರ್ಥಗಳನ್ನು ಸಂಕ್ಷೇಪತೆಯಿಂದ ತಿಳಿದುಕೊಂಡು ಯಾವ ಶ್ರದ್ಧೆಯಾಗುವುದು ಅದು ಒಳ್ಳೆಯ ಸಂಕ್ಷೇಪದೃಷ್ಟಿಯಿದ್ದು ಅದನ್ನು ಸಂಕ್ಷೇಪಸಮ್ಯಕ್ತ್ವವೆಂದು ತಿಳಿಯುವುದು, ದ್ವಾದಶಾಂಗವಾಣಿಯನ್ನು ಕೇಳಿಉಂಟಾದ ಆ ರುಚಿ, ಶ್ರದ್ಧೆಯನ್ನು ಎಲೈ ಭವ್ಯನೇ ! ನೀನು ವಿಸ್ತಾರ ದೃಷ್ಟಿಯಿಂದ ತಿಳಿದುಕೊಳ್ಳು, ಇದು ವಿಸ್ತಾರಸಮ್ಯಕ್ತ್ವವಿದೆ. ಮತ್ತು ಜೈನಶಾಸ್ತ್ರದ ಹೊರತಾಗಿ ಯಾವುದೇ ಅರ್ಥದ ನಿಮಿತ್ತದಿಂದ ಉಂಟಾದ ಅರ್ಥದೃಷ್ಟಿಯಿದೆ ಅದು ಅರ್ಥಸಮ್ಯಕ್ತ್ವವಿದೆಯೆಂದು ತಿಳಿಯುವುದು.

ಅಲ್ಲಿನ ವಿಶೇಷತೆಯೆಂದರೆ ಅನಾದಿಮಿಥ್ಯಾದೃಷ್ಟಿಗಂತೂ ಒಂದು ಮಿಥ್ಯಾತ್ವ ಪ್ರಕೃತಿಯದೇ ಉಪಶಮವಾಗುತ್ತದೆ, ಏಕೆಂದರೆ ಅವನಿಗೆ ಮಿಶ್ರಮೋಹನೀಯ ಮತ್ತು ಸಮ್ಯಕ್ತ್ವಮೋಹನೀಯದ ಸತ್ತಾ ಇರುವುದಿಲ್ಲ. ಯಾವಾಗ ಜೀವನು ಉಪಶಮಸಮ್ಯಕ್ತ್ವವನ್ನು ಪಡೆಯುವನು ಆಗ ಆ ಸಮ್ಯಕ್ತ್ವದ ಕಾಲದಲ್ಲಿ ಮಿಥ್ಯಾತ್ವದ ಪರಮಾಣುಗಳನ್ನು ಮಿಶ್ರಮೋಹನೀಯರೂಪ ಹಾಗೂ ಸಮ್ಯಕ್ತ್ವಮೋಹನೀಯರೂಪವಾಗಿ ಪರಿಣಮಿತ ಮಾಡುತ್ತಾನೆ ಆಗ ಮೂರು ಪ್ರಕೃತಿಗಳ ಸತ್ತಾ ಇರುತ್ತದೆ; ಆದುದರಿಂದ ಅನಾದಿ ಮಿಥ್ಯಾದೃಷ್ಟಿಗೆ ಒಂದು ಮಿಥ್ಯಾತ್ವ ಪ್ರಕೃತಿಯ ಸತ್ತಾ ಇದ್ದು ಅದರದೇ ಉಪಶಮವಾಗುತ್ತದೆ ಮತ್ತು ಸಾದಿ ಮಿಥ್ಯಾದೃಷ್ಟಿಗೆ ಒಬ್ಬನಿಗೆ ಮೂರು ಪ್ರಕೃತಿಗಳ ಸತ್ತಾ ಇದ್ದರೆ ಒಬ್ಬನಿಗೆ ಒಂದರದೇ ಸತ್ತಾ ಇರುತ್ತದೆ; ಯಾವನಿಗೆ ಸಮ್ಯಕ್ತ್ವದ ಕಾಲದಲ್ಲಿ ಮೂರರ ಸತ್ತಾ ಉಂಟಾಗಿದ್ದು ಆ ಸತ್ತಾ ಕಂಡು ಬಂದರೆ ಅವನಿಗೆ ಮೂರರ ಸತ್ತಾ ಇರುವುದು ಮತ್ತು ಯಾವನಿಗೆ ಮಿಶ್ರಮೋಹನೀಯ, ಸಮ್ಯಕ್ತ್ವ ಮೋಹನೀಯದ ಉದ್ವೇಲನವಾಗಿ ಹೋಗಿದೆ, ಅವುಗಳ ಪರಮಾಣುಗಳು ಮಿಥ್ಯಾತ್ವರೂಪದಿಂದ ಪರಿಣಮಿತವಾಗಿದ್ದರೆ ಅವನಿಗೆ ಒಂದು ಮಿಥ್ಯಾತ್ವದ ಸತ್ತಾ ಇರುತ್ತದೆ; ಆದುದರಿಂದ ಸಾದಿ ಮಿಥ್ಯಾದೃಷ್ಟಿಗೆ ಮೂರು ಪ್ರಕೃತಿಗಳ ಮತ್ತು ಒಂದು ಪ್ರಕೃತಿಯ ಉಪಶಮವಾಗುತ್ತದೆ.

ಉಪಶಮವೆಂದರೇನೆಂಬುದನ್ನು ಹೇಳುತ್ತಾರೆ. ಅನಿವೃತ್ತಿಕರಣದಲ್ಲಿ ಮಾಡಿರುವ ಅಂತರಕರಣವಿಧಾನದಿಂದ ಆ ಸಮ್ಯಕ್ತ್ವದ ಕಾಲದಲ್ಲಿ ಉದಯದೊಳಗೆ ಬರಲು ಯೋಗ್ಯವಾದ ನಿಷೇಕಗಳದ್ದಂತೂ ಅಭಾವ ಮಾಡಲಾಯಿತು, ಅವುಗಳ ಪರಮಾಣುಗಳನ್ನು ಅನ್ಯಕಾಲದಲ್ಲಿ ಉದಯದೊಳಗೆ ಬರಲು ಯೋಗ್ಯನಿಷೇಕರೂಪವಾಗಿ ಮಾಡಲಾಯಿತು. ಮತ್ತು ಅನಿವೃತ್ತಿಕರಣದಲ್ಲಿ ಮಾಡಿದ ಉಪಶಮವಿಧಾನದಿಂದ ಆ ಕಾಲದನಂತರ ಉದಯದಲ್ಲಿ ಬರಲು ಯೋಗ್ಯವಾದ ನಿಷೇಕವಿದ್ದವು ಅವು ಉದೀರಣಾರೂಪವಾಗಿ ಈ ಕಾಲದಲ್ಲಿ ಉದಯದೊಳಗೆ ಬರದ ಹಾಗೆ ಮಾಡಲಾಯಿತು.

ಈ ಪ್ರಕಾರ ಎಲ್ಲಿ ಸತ್ತಾ ಕಂಡು ಬರುತ್ತದೆ ಮತ್ತು ಉದಯವು ಕಂಡು ಬರುವುದಿಲ್ಲ ಅದರ ಹೆಸರು ಉಪಶಮವಿದೆ.

ಇದು ಮಿಥ್ಯಾತ್ವದಿಂದಾದ ಪ್ರಥಮೋಪಶಮ ಸಮ್ಯಕ್ತ್ವವಿದ್ದು ಅದು ನಾಲ್ಕರಿಂದ ಏಳನೆಯ ಗುಣಸ್ಥಾನದವರೆಗೆ ಕಂಡು ಬರುತ್ತದೆ.

ಅದರಂತೆ ಉಪಶಮಶ್ರೇಣಿಯ ಸನ್ಮುಖವಾದ ಮೇಲೆ ಏಳನೆಯ ಗುಣಸ್ಥಾನದಲ್ಲಿ ಕ್ಷಯೋಪಶಮ ಸಮ್ಯಕ್ತ್ವದಿಂದ ಯಾವ ಉಪಶಮಸಮ್ಯಕ್ತ್ವವಾಗುವುದು ಅದರ ಹೆಸರು ದ್ವಿತೀಯೋಪಶಮಸಮ್ಯಕ್ತ್ವವಿದೆ. ಇಲ್ಲಿ ಕರಣದ ಮೂಲಕ ಮೂರೂ ಪ್ರಕೃತಿಗಳ ಉಪಶಮವಾಗುತ್ತದೆ, ಏಕೆಂದರೆ ಇದಕ್ಕೆ ಮೂರರದೇ ಸತ್ತಾ ಕಂಡು ಬರುತ್ತದೆ. ಇಲ್ಲಿ ಕೂಡ ಅಂತರಕರಣ ವಿಧಾನದಿಂದ ಮತ್ತು ಉಪಶಮ ವಿಧಾನದಿಂದ ಅವುಗಳ ಉದಯದ ಅಭಾವ ಮಾಡುತ್ತದೆ ಅದೇ ಉಪಶಮವಿದೆ, ಇನ್ನು ಈ ದ್ವಿತೀಯೋಪಶಮಸಮ್ಯಕ್ತ್ವವು ಏಳರಿಂದ ಹನ್ನೊಂದನೆಯ ಗುಣಸ್ಥಾನದವರೆಗೆ ಆಗುತ್ತದೆ. ಅಲ್ಲಿಂದ ಉರುಳುತ್ತಿರುವವನಿಗೆ ಆರು, ಐದು ಮತ್ತು ನಾಲ್ಕನೆಯ ಗುಣಸ್ಥಾನದಲ್ಲಿ ಕೂಡ ಇರುತ್ತದೆಯೆಂದು ತಿಳಿಯುವುದು.

ಈ ಪ್ರಕಾರ ಉಪಶಮಸಮ್ಯಕ್ತ್ವವು ಎರಡು ಪ್ರಕಾರದ್ದಿದೆ. ಆದರೆ ಈ ಸಮ್ಯಕ್ತ್ವವು ವರ್ತಮಾನಕಾಲದಲ್ಲಿ ಕ್ಷಾಯಿಕದಂತೆ ನಿರ್ಮಲವಿದೆ; ಇದರ ಪ್ರತಿ ಪಕ್ಷಿಯಾದ ಕರ್ಮದ ಸತ್ತಾ ಕಂಡು ಬರುತ್ತದೆ, ಆದುದರಿಂದ ಈ ಸಮ್ಯಕ್ತ್ವವು ಅಂತರ್ಮುಹೂರ್ತಕಾಲ ಮಾತ್ರ ಇರುತ್ತದೆ. ಅನಂತರ ದರ್ಶನಮೋಹದ ಉದಯ ಬರುತ್ತದೆಯೆಂದು ತಿಳಿಯುವುದು.

ಈ ಪ್ರಕಾರ ಉಪಶಮಸಮ್ಯಕ್ತ್ವದ ಸ್ವರೂಪವನ್ನು ಹೇಳಲಾಯಿತು.

ಇನ್ನು ಎಲ್ಲಿ ದರ್ಶನಮೋಹದ ಮೂರು ಪ್ರಕೃತಿಗಳಲ್ಲಿ ಸಮ್ಯಕ್ತ್ವಮೋಹನೀಯದ ಉದಯವಿದೆ, ಉಳಿದೆರಡರ ಉದಯವಿಲ್ಲ ಅಲ್ಲಿ ಕ್ಷಯೋಪಶಮ ಸಮ್ಯಕ್ತ್ವವಾಗುತ್ತದೆ, ಮತ್ತು ಸಾದಿಮಿಥ್ಯಾದೃಷ್ಟಿಗೆ ಮಿಥ್ಯಾತ್ವಗುಣಸ್ಥಾನದಿಂದ ಹಾಗೂ ಮಿಶ್ರ ಗುಣಸ್ಥಾನದಿಂದ ಕೂಡ ಇದರ ಪ್ರಾಪ್ತಿಯಾಗುತ್ತದೆ. ಈಗ ಕ್ಷಯೋಪಶಮವೆಂದರೇನೆಂಬುದನ್ನು ಹೇಳುತ್ತಾರೆ.

ದರ್ಶನಮೋಹದ ಮೂರು ಪ್ರಕೃತಿಗಳಲ್ಲಿ ಯಾವ ಮಿಥ್ಯಾತ್ವದ ಅನುಭಾಗವಿದೆ, ಅದರ ಅನಂತದ ಭಾಗವು ಮಿಶ್ರಮೋಹನೀಯದ್ದಿದೆ, ಅದರ ಅನಂತದ ಭಾಗವು ಸಮ್ಯಕ್ತ್ವಮೋಹನೀಯದ್ದಿದೆ. ಇವುಗಳಲ್ಲಿ ಸಮ್ಯಕ್ತ್ವ ಮೋಹನೀಯದ ಪ್ರಕೃತಿಯು ದೇಶಘಾತಿಯಿದ್ದು ಅದರ ಉದಯವಾದ ಮೇಲೆ ಕೂಡ ಸಮ್ಯಕ್ತ್ವದ ಘಾತವಾಗುವುದಿಲ್ಲ. ಕಿಂಚಿತ್ ಮಲಿನತೆ ಮಾಡುವುದು, ಮೂಲಘಾತ ಮಾಡುವ ಸಾಧ್ಯತೆಯಿಲ್ಲ, ಅದರ ಹೆಸರೇ ದೇಶಘಾತಿಯಿದೆ.

ಎಲ್ಲಿ ಮಿಥ್ಯಾತ್ವ ಹಾಗೂ ಮಿಶ್ರಮಿಥ್ಯಾತ್ವದ ಉದಯವು ವರ್ತಮಾನ ಕಾಲದಲ್ಲಿ ಬರಲು ಯೋಗ್ಯವಾದ ನಿಷೇಕಗಳ ಉದಯವಾದಲ್ಲದೆಯೇ ನಿರ್ಜರೆಯಾಗುತ್ತದೆ ಅದನ್ನು ಕ್ಷಯವೆಂದು ತಿಳಿಯುವುದು. ಮತ್ತು ಇವುಗಳದೇ ಭವಿಷ್ಯಕಾಲದಲ್ಲಿ ಉದಯದೊಳಗೆ ಬರಲುಯೋಗ್ಯವಾದ ನಿಷೇಕಗಳ ಸತ್ತಾ ಕಂಡು ಬರುತ್ತದೆ ಅದೇ ಉಪಶಮವಿದೆ ಮತ್ತು ಎಲ್ಲಿ ಸಮ್ಯಕ್ತ್ವ ಮೋಹನೀಯದ ಉದಯವು ಕಂಡು ಬರುವಂಥ ದಶೆಯಿದೆ ಅದು ಕ್ಷಯೋಪಶಮವಿದೆ; ಆದುದರಿಂದ ಸಮಲತತ್ತ್ವಾರ್ಥಶ್ರದ್ಧೆಯಿದೆ ಅದು ಕ್ಷಯೋಪಶಮಸಮ್ಯಕ್ತ್ವವಿದೆ.

ಎಲ್ಲಿ ಯಾವ ಮಲವು ತಗಲುತ್ತದೆ ಅದನ್ನು ತಾರತಮ್ಯರೂಪದಿಂದ ಕೇವಲಿಗಳು ತಿಳಿಯುತ್ತಾರೆ; ಉದಾಹರಣೆ ತಿಳಿಸಿಕೊಡುವ ಸಲುವಾಗಿ ಚಲ-ಮಲಿನ-ಅಗಾಢತೆಯನ್ನು ಹೇಳಿದೆ. ಅಲ್ಲಿ ವ್ಯವಹಾರ ಮಾತ್ರವಾಗಿ ದೇವಾದಿಕರ ಪ್ರತೀತಿಯಂತೂ ಇರುವುದು, ಆದರೆ ಅರಹಂತದೇವ ಮೊದಲಾದವರಲ್ಲಿ ಇವರು ನನ್ನವರು, ಇವರು ಅನ್ಯರವರೆಂಬ ಭಾವವು ಅದು ಚಲತನವಿದೆ. ಶಂಕೆ ಮೊದಲಾದ ಮಲ ತಗಲುವುದು ಅದು ಮಲಿನತೆಯಿದೆ. ಈ ಶಾಂತಿನಾಥರು ಶಾಂತಿಕರ್ತೃಗಳಿದ್ದಾರೆ-ಇತ್ಯಾದಿ ಭಾವವು ಅದು ಅಗಾಢತೆಯಿದೆ. ಈ ಉದಾಹರಣೆಗಳನ್ನು ವ್ಯವಹಾರ ಮಾತ್ರವಾಗಿ ಹೇಳಿದೆ. ಆದರೆ ನಿಯಮರೂಪವಾಗಿ ಇಲ್ಲ. ಕ್ಷಯೋಪಶಮ ಸಮ್ಯಕ್ತ್ವದಲ್ಲಿ ನಿಯಮರೂಪದಿಂದ ಯಾವ ಒಂದಿಷ್ಟು ಮಲವು ತಗಲುತ್ತದೆ ಅದನ್ನು ಕೇವಲಿಗಳು ತಿಳಿಯುತ್ತಾರೆ. ಇದರ ತತ್ತ್ವಾರ್ಥಶ್ರದ್ಧೆಯಲ್ಲಿ ಯಾವುದೇ ಪ್ರಕಾರದಿಂದ ಸಮಲತೆಯಾಗುತ್ತದೆ, ಆದುದರಿಂದ ಈ ಸಮ್ಯಕ್ತ್ವವು ನಿರ್ಮಲವಿಲ್ಲ. ಈ ಕ್ಷಯೋಪಶಮ ಸಮ್ಯಕ್ತ್ವವು ಒಂದೇ ಪ್ರಕಾರದ್ದಿದೆ, ಇದರಲ್ಲಿ ಯಾವ ಭೇದಗಳಿಲ್ಲ.

ಕ್ಷಾಯಿಕ ಸಮ್ಯಕ್ತ್ವದ ಸನ್ಮುಖವಾದ ಮೇಲೆ ಅಂತರ್ಮುಹೂರ್ತಕಾಲಮಾತ್ರ ಎಲ್ಲಿ ಮಿಥ್ಯಾತ್ವದ ಪ್ರಕೃತಿಯ ಕ್ಷಯ ಮಾಡುತ್ತದೆ ಅಲ್ಲಿ ಎರಡೇ ಪ್ರಕೃತಿಗಳ ಸತ್ತಾ ಉಳಿಯುತ್ತದೆ. ಅನಂತರ ಮಿಶ್ರಮೋಹನೀಯದ್ದೂ ಕ್ಷಯ ಮಾಡುತ್ತದೆ ಅಲ್ಲಿ ಸಮ್ಯಕ್ತ್ವಮೋಹನೀಯದ್ದೇ ಸತ್ತಾ ಉಳಿಯುತ್ತದೆ. ಅನಂತರ ಸಮ್ಯಕ್ತ್ವ ಮೋಹನೀಯದ ಕಾಂಡಕಘಾತ ಮೊದಲಾದ ಕ್ರಿಯೆ ಮಾಡುವಲ್ಲಿ ಕೃತಕೃತ್ಯವೇದಕ ಸಮ್ಯಗ್ದೃಷ್ಟಿಯೆಂಬ ಹೆಸರು ಪಡೆಯುತ್ತಾನೆಂದು ತಿಳಿಯುವುದು.

ಅದರಂತೆ ಈ ಕ್ಷಯೋಪಶಮ ಸಮ್ಯಕ್ತ್ವದ ಹೆಸರೇ ವೇದಕಸಮ್ಯಕ್ತ್ವವಿದೆ. ಎಲ್ಲಿ ಮಿಥ್ಯಾತ್ವಮಿಶ್ರಮೋಹನೀಯದ ಮುಖ್ಯತೆಯಿಂದ ಹೇಳಲಾಗುತ್ತದೆ ಅಲ್ಲಿ ಕ್ಷಯೋಪಶಮನಾಮ ಪಡೆಯುತ್ತದೆ. ಸಮ್ಯಕ್ತ್ವಮೋಹನೀಯದ ಮುಖ್ಯತೆಯಿಂದ ಹೇಳಲಾಗುತ್ತದೆ ಅಲ್ಲಿ ವೇದಕ ನಾಮ ಪಡೆಯುತ್ತದೆ. ಅವು ಕಥನ ಮಾತ್ರ ಎರಡು ಹೆಸರುಗಳಿದ್ದು ಸ್ವರೂಪದಲ್ಲಿ ಭೇದವಿಲ್ಲ. ಮತ್ತು ಈ ಕ್ಷಯೋಪಶಮ ಸಮ್ಯಕ್ತ್ವವು ನಾಲ್ಕನೇ ಗುಣಸ್ಥಾನದಿಂದ ಏಳನೆಯ ಗುಣಸ್ಥಾನದವರೆಗೆ ಕಂಡು ಬರುತ್ತದೆ.

ಈ ಪ್ರಕಾರ ಕ್ಷಯೋಪಶಮಸಮ್ಯಕ್ತ್ವದ ಸ್ವರೂಪವನ್ನು ಹೇಳಲಾಯಿತು.

ಇನ್ನು ದರ್ಶನಮೋಹದ ಮೂರೂ ಪ್ರಕೃತಿಗಳ ಸರ್ವಥಾ ಸರ್ವ ನಿಷೇಕಗಳ ನಾಶವಾದ ಮೇಲೆ ಅತ್ಯಂತ ನಿರ್ಮಲವಾದ ತತ್ತ್ವಾರ್ಥಶ್ರದ್ಧೆಯಾಗುವುದು ಅದು ಕ್ಷಾಯಿಕಸಮ್ಯಕ್ತ್ವವಿದೆ. ಅದು ನಾಲ್ಕರಿಂದ ಮೊದಲು ಮಾಡಿ ನಾಲ್ಕು ಗುಣಸ್ಥಾನಗಳಲ್ಲಿ ಎಲ್ಲಿಯಾದರೂ ಕ್ಷಯೋಪಶಮ ಸಮ್ಯಗ್ದೃಷ್ಟಿಗೆ ಇದರ ಪ್ರಾಪ್ತಿಯಾಗುತ್ತದೆ.

ಅದು ಹೇಗಾಗುತ್ತದೆಂಬುದನ್ನು ಹೇಳುತ್ತಾರೆ. ಮೊದಲು ಮೂರು ಕರಣಗಳ ಮೂಲಕ ಅಲ್ಲಿ ಮಿಥ್ಯಾತ್ವದ ಪರಮಾಣುಗಳನ್ನು ಮಿಶ್ರಮೋಹನೀಯ ಮತ್ತು ಸಮ್ಯಕ್ತ್ವಮೋಹನೀಯರೂಪವಾಗಿ ಪರಿಣಮಿತ ಮಾಡುವುದು ಮತ್ತು ನಿರ್ಜರೆ ಮಾಡುವುದು; ಈ ಪ್ರಕಾರ ಮಿಥ್ಯಾತ್ವದ ಸತ್ತಾ ನಾಶ ಮಾಡುವುದು. ಅದರಂತೆ ಮಿಶ್ರಮೋಹನೀಯದ ಪರಮಾಣುಗಳನ್ನು ಸಮ್ಯಕ್ತ್ವಮೋಹನೀಯರೂಪವಾಗಿ ಪರಿಣಮಿತ ಮಾಡುವುದು, ಮತ್ತು ನಿರ್ಜರೆ ಮಾಡುವುದು; ಈ ಪ್ರಕಾರ ಮಿಶ್ರಮೋಹನೀಯದ ನಾಶ ಮಾಡುವುದು. ಅದರಂತೆ ಸಮ್ಯಕ್ತ್ವಮೋಹನೀಯದ ನಿಷೇಕಗಳು ಉದಯದಲ್ಲಿ ಬಂದು ಉದುರಿ ಹೋಗುವವು, ಅದರ ಸ್ಥಿತಿ ಮೊದಲಾದವು ಅಧಿಕವಿದ್ದರೆ ಅದನ್ನು ಸ್ಥಿತಿಕಾಂಡಕಾದಿಗಳ ಮೂಲಕ ಕ್ಷೀಣಿಸುವುದು. ಅಲ್ಲಿ ಅಂತರ್ಮುಹೂರ್ತಸ್ಥಿತಿ ಉಳಿದಾಗ ಕೃತಕೃತ್ಯವೇದಕ ಸಮ್ಯಗ್ದೃಷ್ಟಿಯಾಗುವನು. ಮತ್ತು ಅನುಕ್ರಮದಿಂದ ಈ ನಿಷೇಕಗಳ ನಾಶ ಮಾಡಿ ಕ್ಷಾಯಿಕ ಸಮ್ಯಗ್ದೃಷ್ಟಿಯಾಗುತ್ತಾನೆ.

ಆದುದರಿಂದ ಇದು ಪ್ರತಿಪಕ್ಷಿಯಾದ ಕರ್ಮದ ಅಭಾವದಿಂದ ನಿರ್ಮಲವಿದೆ ಮತ್ತು ಮಿಥ್ಯಾತ್ವರೂಪವಾದ ಕಾಡಿಗೆಯ ಅಭಾವದಿಂದ ವೀತರಾಗವಿದೆ; ಇದರ ನಾಶವಾಗುವುದಿಲ್ಲ. ಯಾವಾಗ ಉತ್ಪನ್ನವಾಗುವುದು ಆಗಿನಿಂದ ಸಿದ್ಧಾವಸ್ಥೆಯವರೆಗೆ ಇದರ ಸದ್ಭಾವವಿದೆ.

ಈ ಪ್ರಕಾರ ಕ್ಷಾಯಿಕ ಸಮ್ಯಕ್ತ್ವದ ಸ್ವರೂಪವನ್ನು ಹೇಳಲಾಯಿತು.

ಹೀಗೆ ಸಮ್ಯಕ್ತ್ವದಲ್ಲಿ ಮೂರು ಕೂಡ ಭೇದಗಳಿವೆ.

ಅದರಂತೆ ಸಮ್ಯಕ್ತ್ವವಾದ ಮೇಲೆ ಅನಂತಾನುಬಂಧೀ ಕಷಾಯದಲ್ಲಿ ಎರಡು ಅವಸ್ಥೆಗಳಾಗುತ್ತವೆ. ಅಪ್ರಶಸ್ತ ಉಪಶಮವಾಗುತ್ತದೆ ಅಥವಾ ವಿಸಂಯೋಜನವಾಗುತ್ತದೆ.

ಅಲ್ಲಿ ಆ ಕರಣದ ಮೂಲಕ ಉಪಶಮ ವಿಧಾನದಿಂದ ಉಪಶಮವಾಗುವುದರ ಹೆಸರು ಪ್ರಶಸ್ತ ಉಪಶಮವಿದೆ. ಉದಯದ ಅಭಾವದ ಹೆಸರು ಅಪ್ರಶಸ್ತ ಉಪಶಮವಿದೆ.

ಆದುದರಿಂದ ಅನಂತಾನುಬಂಧಿಯ ಪ್ರಶಸ್ತ ಉಪಶಮವಂತೂ ಆಗುವುದೇ ಇಲ್ಲ, ಇತರ ಮೋಹದ ಪ್ರಕೃತಿಗಳದ್ದು ಆಗುತ್ತದೆ, ಮತ್ತು ಇದರದು ಅಪ್ರಶಸ್ತ ಉಪಶಮವಾಗುತ್ತದೆ.

ಮತ್ತು ಆ ಮೂರು ಕರಣಗಳ ಮೂಲಕ ಅನಂತಾನುಬಂಧಿಯ ಪರಮಾಣುಗಳನ್ನು ಅನ್ಯ ಚಾರಿತ್ರಮೋಹದ ಪ್ರಕೃತಿರೂಪವಾಗಿ ಪರಿಣಮಿತಮಾಡಿ, ಅವುಗಳ ಸತ್ತಾ ನಾಶಮಾಡುವುದರ ಹೆಸರು ವಿಸಂಯೋಜನವಿದೆ.

ಇವುಗಳೊಳಗೆ ಪ್ರಥಮೋಪಶಮ ಸಮ್ಯಕ್ತ್ವದಲ್ಲಂತೂ ಅನಂತಾನುಬಂಧಿಯ ಅಪ್ರಶಸ್ತ ಉಪಶಮವೇ ಇದೆ. ಮತ್ತು ದ್ವಿತಿಯೋಪಶಮ ಸಮ್ಯಕ್ತ್ವದ ಪ್ರಾಪ್ತಿಯು ಮೊದಲು ಅನಂತಾನುಬಂಧಿಯ ವಿಸಂಯೋಜನವಾದ ಮೇಲೆಯೇ ಆಗುತ್ತದೆಂಬ ನಿಯಮ ಕೆಲವು ಆಚಾರ್ಯರು ಹೇಳುತ್ತಾರೆ, ಕೆಲವರು ನಿಯಮ ಹೇಳುವುದಿಲ್ಲ. ಇನ್ನು ಕ್ಷಯೋಪಶಮ ಸಮ್ಯಕ್ತ್ವದಲ್ಲಿ ಒಬ್ಬನಿಗೆ ಅಪ್ರಶಸ್ತ ಉಪಶಮವಾಗುತ್ತದೆ ಹಾಗೆ ಇನ್ನೊಬ್ಬನಿಗೆ ವಿಸಂಯೋಜನವಾಗುತ್ತದೆ. ಮತ್ತು ಕ್ಷಾಯಿಕ ಸಮ್ಯಕ್ತ್ವವಿದೆ ಅದು ಮೊದಲು ಅನಂತಾನುಬಂಧಿಯ ವಿಸಂಯೋಜನವಾದ ಮೇಲೆಯೇ ಆಗುತ್ತದೆಯೆಂದು ತಿಳಿಯುವುದು.

ಉಪಶಮ ಹಾಗೂ ಕ್ಷಯೋಪಶಮ ಸಮ್ಯಗ್ದೃಷ್ಟಿಗೆ ಅನಂತಾನುಬಂಧಿಯ ವಿಸಂಯೋಜನದಿಂದ ಸತ್ತಾದ ನಾಶವಾಗುವುದು, ಅವನು ಪುನಃ ಮಿಥ್ಯಾತ್ವದಲ್ಲಿ ಬಂದರೆ ಅನಂತಾನುಬಂಧಿಯ ಬಂಧವಾಗುವುದು, ಅಲ್ಲಿ ಪುನಃ ಅದರ ಸತ್ತಾದ ಸದ್ಭಾವವಾಗುತ್ತದೆ. ಮತ್ತು ಕ್ಷಾಯಿಕ ಸಮ್ಯಗ್ದೃಷ್ಟಿಯು ಮಿಥ್ಯಾತ್ವದಲ್ಲಿ ಬರುವುದಿಲ್ಲ, ಆದುದರಿಂದ ಅವನಿಗೆ ಅನಂತಾನುಬಂಧಿಯ ಸತ್ತಾವು ಎಂದೂ ಆಗುವುದಿಲ್ಲವೆಂಬುದು ಇಲ್ಲಿನ ವಿಶೇಷವಿದೆ.

**ಪ್ರಶ್ನೆ** :- ಅನಂತಾನುಬಂಧಿಯಂತೂ ಚಾರಿತ್ರಮೋಹದ ಪ್ರಕೃತಿಯಿದ್ದು ಅದು ಚಾರಿತ್ರದ ಘಾತ ಮಾಡುವುದು, ಇದರಿಂದ ಸಮ್ಯಕ್ತ್ವದ ಘಾತವು ಹೇಗೆ ಸಂಭವವಿದೆ ?

**ಉತ್ತರ** :- ಅನಂತಾನುಬಂಧಿಯ ಉದಯದಿಂದ ಕ್ರೋಧಾದಿರೂಪದ ಪರಿಣಾಮಗಳಾಗುತ್ತವೆ, ಯಾವ ಅತತ್ತ್ವಶ್ರದ್ಧೆಯಾಗುವುದಿಲ್ಲ; ಆದುದರಿಂದ ಅನಂತಾನುಬಂಧಿಯು ಚಾರಿತ್ರದ ಘಾತವನ್ನೇ ಮಾಡುತ್ತದೆ, ಸಮ್ಯಕ್ತ್ವದ ಘಾತ ಮಾಡುವುದಿಲ್ಲ. ಅದು ಪರಮಾರ್ಥದಿಂದಂತೂ ಹೀಗೆಯೇ ಇದೆ, ಆದರೆ ಅನಂತಾನುಬಂಧಿಯ ಉದಯದಿಂದ ಹೇಗೆ ಕ್ರೋಧಾದಿಗಳಾಗುತ್ತವೆ ಹಾಗೆ ಕ್ರೋಧಾದಿಗಳು ಸಮ್ಯಕ್ತ್ವವಾದ ಮೇಲೆ ಆಗುವುದಿಲ್ಲವೆಂಬ ನಿಮಿತ್ತ-ನೈಮಿತ್ತಿಕತನವು ಕಂಡು ಬರುತ್ತದೆ. ಯಾವ ಪ್ರಕಾರ ತ್ರಸತನದ ಘಾತಕವಂತೂ ಸ್ಥಾವರ ಪ್ರಕೃತಿಯೇ ಇದೆ, ಆದರೆ ತ್ರಸತನವಿದ್ದ ಮೇಲೆ ಏಕೇಂದ್ರಿಯ ಜಾತಿಯ ಪ್ರಕೃತಿಯ ಉದಯವು ಕೂಡ ಆಗುವುದಿಲ್ಲ, ಆದುದರಿಂದ ಉಪಚಾರದಿಂದ ಏಕೇಂದ್ರಿಯ ಪ್ರಕೃತಿಗೆ ಕೂಡ ತ್ರಸತನದ ಘಾತಕತನವೆಂದು ಹೇಳಹೋದರೆ ದೋಷವಿಲ್ಲ. ಅದೇ

ಪ್ರಕಾರ ಸಮ್ಯಕ್ತ್ವದ ಘಾತಕವಂತೂ ದರ್ಶನಮೋಹವಿದೆ, ಆದರೆ ಸಮ್ಯಕ್ತ್ವವಿದ್ದ ಮೇಲೆ ಅನಂತಾನುಬಂಧೀ ಕಷಾಯಗಳ ಉದಯ ಕೂಡ ಇರುವುದಿಲ್ಲ, ಆದುದರಿಂದ ಉಪಚಾರದಿಂದ ಅನಂತಾನುಬಂಧಿಗೆ ಕೂಡ ಸಮ್ಯಕ್ತ್ವದ ಘಾತಕವೆಂದು ಹೇಳುವುದರಲ್ಲಿ ದೋಷವಿಲ್ಲ.

**ಪ್ರಶ್ನೆ :-** ಅನಂತಾನುಬಂಧೀ ಕೂಡ ಚಾರಿತ್ರದ ಘಾತವನ್ನೇ ಮಾಡುತ್ತಿದ್ದರೆ ಇದರ ನಾಶವಾದ ಮೇಲೆ ಸ್ವಲ್ಪ ಚಾರಿತ್ರವಾಯಿತೆಂದು ಹೇಳಿರಿ. ಅಸಂಯತ ಗುಣಸ್ಥಾನದಲ್ಲಿ ಅಸಂಯಮವನ್ನು ಏತಕ್ಕಾಗಿ ಹೇಳುವಿರಿ ?

**ಉತ್ತರ :-** ಅನಂತಾನುಬಂಧೀ ಮೊದಲಾದ ಭೇದಗಳಿವೆ ಅವು ತೀವ್ರ-ಮಂದಕಷಾಯದ ಅಪೇಕ್ಷೆಯಿಂದ ಇಲ್ಲ; ಏಕೆಂದರೆ ಮಿಥ್ಯಾದೃಷ್ಟಿಗೆ ತೀವ್ರಕಷಾಯವಿದ್ದ ಮೇಲೆ ಮತ್ತು ಮಂದಕಷಾಯವಿದ್ದ ಮೇಲೆ ಅನಂತಾನುಬಂಧೀ ಮೊದಲಾದ ನಾಲ್ಕರ ಉದಯವು ಯುಗಪತ್ ಇರುತ್ತದೆ.ಅಲ್ಲಿ ನಾಲ್ಕರ ಉತ್ಕೃಷ್ಟ ಸ್ಪರ್ಧಕಗಳನ್ನು ಸಮಾನವೆಂದು ಹೇಳಿದ್ದಾರೆ.

ಅನಂತಾನುಬಂಧಿಯ ಜತೆಗೆ ಅಪ್ರತ್ಯಾಖ್ಯಾನ ಮೊದಲಾದವುಗಳ ತೀವ್ರ ಉದಯವು ಹೇಗೆ ಇರುವುದು ಹಾಗೆ ಅದರ ಅಭಾವದಲ್ಲಿ ಇರುವುದಿಲ್ಲವೆಂಬುದು ಇಲ್ಲಿನ ವಿಶೇಷತೆಯಿದೆ. ಇದೇ ಪ್ರಕಾರ ಅಪ್ರತ್ಯಾಖ್ಯಾನದ ಜತೆಗೆ ಪ್ರತ್ಯಾಖ್ಯಾನ, ಸಂಜ್ವಲನದ ಉದಯವು ಹೇಗೆ ಇರುವುದು ಹಾಗೆ ಅದರ ಅಭಾವದಲ್ಲಿ ಇರುವುದಿಲ್ಲ. ಮತ್ತು ಪ್ರತ್ಯಾಖ್ಯಾನದ ಜತೆಗೆ ಹೇಗೆ ಸಂಜ್ವಲನದ ಉದಯವಿದೆ, ಹಾಗೆ ಕೇವಲ ಸಂಜ್ವಲನದ ಉದಯವಿರುವುದಿಲ್ಲ. ಆದುದರಿಂದ ಅನಂತಾನುಬಂಧಿಯ ಅಭಾವದಲ್ಲಿ ಕಷಾಯಗಳ ಮಂದತೆಯಂತೂ ಸ್ವಲ್ಪ ಇರುತ್ತದೆ, ಆದರೆ ಅದರಿಂದ ಚಾರಿತ್ರವೆಂಬ ಹೆಸರು ಪ್ರಾಪ್ತಮಾಡಿಕೊಳ್ಳುವಷ್ಟು ಮಂದತೆಯಿರುವುದಿಲ್ಲ. ಏಕೆಂದರೆ ಕಷಾಯಗಳ ಸ್ಥಾನವು ಅಸಂಖ್ಯಾತ ಲೋಕಪ್ರಮಾಣವಿದ್ದು ಅವುಗಳಲ್ಲಿ ಎಲ್ಲೆಡೆಗೆ ಪೂರ್ವಸ್ಥಾನದಿಂದ ಉತ್ತರ ಸ್ಥಾನದಲ್ಲಿ ಮಂದತೆಯು ಕಂಡು ಬರುತ್ತದೆ; ಆದರೆ ವ್ಯವಹಾರದಿಂದ ಆ ಸ್ಥಾನಗಳಲ್ಲಿ ಮೂರು ಮರ್ಯಾದೆಗಳನ್ನು ಮಾಡಿದೆ. ಮೊದಲಿನ ಬಹಳಷ್ಟು ಸ್ಥಾನಗಳನ್ನು ಅಸಂಯಮರೂಪವೆಂದು ಹೇಳಿದೆ, ಪುನಃ ಎಷ್ಟೋ ಸ್ಥಾನಗಳನ್ನು ದೇಶಸಂಯಮ ರೂಪವೆಂದು ಹೇಳಿದೆ, ಪುನಃ ಎಷ್ಟೋ ಸ್ಥಾನಗಳನ್ನು ಸಕಲಸಂಯಮರೂಪವೆಂದು ಹೇಳಿದೆ. ಅವುಗಳಲ್ಲಿ ಮೊದಲನೆಯ ಗುಣಸ್ಥಾನದಿಂದ ಹಿಡಿದು ನಾಲ್ಕನೆಯ ಗುಣಸ್ಥಾನದವರೆಗೆ ಯಾವ ಕಷಾಯದ ಸ್ಥಾನಗಳಿರುತ್ತವೆ ಅವೆಲ್ಲವು ಅಸಂಯಮಿಗೇ ಇರುತ್ತವೆ. ಆದುದರಿಂದ ಕಷಾಯಗಳ ಮಂದತೆಯಾದ ಮೇಲೆ ಕೂಡ ಚಾರಿತ್ರವೆಂಬ ಹೆಸರು ಪಡೆಯುವುದಿಲ್ಲ.

ಪರಮಾರ್ಥದಿಂದ ಕಷಾಯಗಳ ಕುಂದುವಿಕೆಯು ಅದು ಚಾರಿತ್ರದ ಅಂಶವಿದ್ದರೂ ವ್ಯವಹಾರದಿಂದ ಎಲ್ಲಿ ಯಾವುದರಿಂದ ಶ್ರಾವಕಧರ್ಮ ಅಥವಾ ಮುನಿಧರ್ಮದ ಅಂಗೀಕಾರವಾಗುವಂತೆ ಕಷಾಯಗಳು ಕಡಿಮೆಯಾಗುತ್ತವೆಯೋ ಅದುವೇ ಚಾರಿತ್ರವೆಂಬ ಹೆಸರನ್ನು ಪಡೆಯುತ್ತದೆ. ಆದುದರಿಂದ ಅಸಂಯತ ಗುಣಸ್ಥಾನದಲ್ಲಿ ಹೀಗೆಕಷಾಯಗಳು ಕಡಿಮೆಯಾಗದಿರುವುದರಿಂದ ಇಲ್ಲಿ ಅಸಂಯಮವೆಂದು ಹೇಳಿದೆ. ಕಷಾಯಗಳ ಹೀನತೆ-ಅಧಿ ಕತೆಯಿದ್ದರೂ ಕೂಡ ಯಾವ ಪ್ರಕಾರ ಪ್ರಮತ್ತ ಮೊದಲಾದ ಗುಣಸ್ಥಾನಗಳಲ್ಲಿ ಎಲ್ಲೆಡೆಗೆ ಸಕಲಸಂಯಮವೆಂಬ

ಹೆಸರನ್ನು ಪಡೆಯುತ್ತದೆ, ಅದೇ ಪ್ರಕಾರ ಮಿಥ್ಯಾತ್ವ ಮೊದಲಾದ ಅಸಂಯತದವರೆಗಿನ ಗುಣಸ್ಥಾನಗಳಲ್ಲಿ ಅಸಂಯಮವೆಂಬ ಹೆಸರು ಪಡೆಯುತ್ತದೆ. ಎಲ್ಲೆಡೆಗೆ ಅಸಂಯಮದ ಸಮಾನತೆಯಿದೆಯೆಂದು ತಿಳಿಯಬಾರದು.

**ಪ್ರಶ್ನೆ :-** ಅನಂತಾನುಬಂಧಿಯು ಸಮ್ಯಕ್ತ್ವದ ಘಾತಮಾಡುವುದಿಲ್ಲವೆಂದರೆ ಅದರ ಉದಯವಾದ ಮೇಲೆ ಜೀವನು ಸಮ್ಯಕ್ತ್ವದಿಂದ ಭ್ರಷ್ಟನಾಗಿ ಸಾಸಾದನ ಗುಣಸ್ಥಾನವನ್ನು ಹೇಗೆ ಪ್ರಾಪ್ತಮಾಡಿಕೊಳ್ಳುತ್ತಾನೆ ?

**ಉತ್ತರ :-** ಯಾವ ಪ್ರಕಾರ ಒಬ್ಬ ಮನುಷ್ಯನಿಗೆ ಮನುಷ್ಯ ಪರ್ಯಾಯದ ನಾಶಕ್ಕೆ ಕಾರಣವಾದ ತೀವ್ರ ರೋಗವು ಪ್ರಕಟವಾದರೆ ಅವನಿಗೆ ಮನುಷ್ಯಪರ್ಯಾಯವನ್ನು ಬಿಡುವಂಥವನೆಂದು ಹೇಳುತ್ತಾರೆ. ಮತ್ತು ಮನುಷ್ಯತನವು ದೂರವಾದ ಮೇಲೆ ದೇವ ಪರ್ಯಾಯವಾಗುವುದು, ಅದಂತೂ ರೋಗದ ಅವಸ್ಥೆಯಲ್ಲಿ ಆಗಲಿಲ್ಲ. ಇಲ್ಲಿ ಮನುಷ್ಯ ಆಯುವೇ ಇದೆ. ಅದೇ ಪ್ರಕಾರ ಸಮ್ಯಗ್ದೃಷ್ಟಿಗೆ ಸಮ್ಯಕ್ತ್ವದ ನಾಶಕ್ಕೆ ಕಾರಣವಾದ ಅನಂತಾನುಬಂಧಿಯ ಉದಯವು ಪ್ರಕಟವಾದರೆ ಅದನ್ನು ಸಮ್ಯಕ್ತ್ವದ ವಿರೋಧಕವಾದ ಸಾಸಾದನವೆನ್ನುವರು. ಮತ್ತು ಸಮ್ಯಕ್ತ್ವದ ಅಭಾವವಾದ ಮೇಲೆ ಮಿಥ್ಯಾತ್ವವಾಗುತ್ತದೆ, ಅದಂತೂ ಸಾಸಾದನದಲ್ಲಿ ಆಗಲಿಲ್ಲ. ಇಲ್ಲಿ ಉಪಶಮ ಸಮ್ಯಕ್ತ್ವದ್ದೇ ಕಾಲವಿದೆಯೆಂದು ತಿಳಿಯುವುದು.

ಈ ಪ್ರಕಾರ ಸಮ್ಯಕ್ತ್ವವಾದ ಮೇಲೆ ಅನಂತಾನುಬಂಧೀ ಚತುಷ್ಟಯದ ಅವಸ್ಥೆಯಿರುವುದಿಲ್ಲ, ಆದುದರಿಂದ ಏಳು ಪ್ರಕೃತಿಗಳ ಉಪಶಮಾದಿಗಳಿಂದ ಕೂಡ ಸಮ್ಯಕ್ತ್ವದ ಪ್ರಾಪ್ತಿಯನ್ನು ಹೇಳಲಾಗುತ್ತದೆ.

**ಪ್ರಶ್ನೆ :-** ಸಮ್ಯಕ್ತ್ವಮಾರ್ಗಣಾದಲ್ಲಿ ಆರು ಭೇದ ಮಾಡಿದ್ದಾರೆ, ಅವು ಯಾವ ಪ್ರಕಾರವಿವೆ ?

**ಉತ್ತರ :-** ಸಮ್ಯಕ್ತ್ವದ ಭೇದಗಳಂತೂ ಮೂರೇ ಇವೆ. ಮತ್ತು ಸಮ್ಯಕ್ತ್ವದ ಅಭಾವರೂಪವಾಗಿ ಮಿಥ್ಯಾತ್ವವಿದೆ. ಎರಡರ ಮಿಶ್ರಭಾವವು ಅದು ಮಿಶ್ರವಿದೆ. ಸಮ್ಯಕ್ತ್ವದ ಘಾತಕವಾದ ಭಾವವು ಅದು ಸಾಸಾದನವಿದೆ. ಈ ಪ್ರಕಾರ ಸಮ್ಯಕ್ತ್ವಮಾರ್ಗಣಾದಿಂದ ಜೀವದ ವಿಚಾರ ಮಾಡಿದ ಮೇಲೆ ಆರು ಭೇದಗಳಾಗುತ್ತವೆ.

ಸಮ್ಯಕ್ತ್ವದಿಂದ ಭ್ರಷ್ಟವಾಗಿ ಮಿಥ್ಯಾತ್ವದಲ್ಲಿ ಬಂದಿದ್ದರೆ ಅವನನ್ನು ಮಿಥ್ಯಾತ್ವ-ಸಮ್ಯಕ್ತ್ವವೆಂದು ಹೇಳಬಹುದೆಂದು ಯಾರೋ ಹೇಳುತ್ತಾರೆ. ಆದರೆ ಇದು ಅಸತ್ಯವಿದೆ, ಏಕೆಂದರೆ ಅಭವ್ಯನಲ್ಲಿ ಕೂಡ ಅದರ ಸದ್ಭಾವವು ಕಂಡು ಬರುತ್ತದೆ. ಮತ್ತು ಮಿಥ್ಯಾತ್ವ-ಸಮ್ಯಕ್ತ್ವವೆಂದು ಹೇಳುವುದು ಕೂಡ ಅಶುದ್ಧವಿದೆ. ಯಾವ ಪ್ರಕಾರ ಸಂಯಮಮಾರ್ಗಣಾದಲ್ಲಿ ಅಸಂಯಮ ಹೇಳಿದೆ, ಭವ್ಯಮಾರ್ಗಣಾದಲ್ಲಿ ಅಭವ್ಯ ಹೇಳಿದೆ, ಅದೇ ಪ್ರಕಾರ ಸಮ್ಯಕ್ತ್ವಮಾರ್ಗಣಾದಲ್ಲಿ ಮಿಥ್ಯಾತ್ವ ಹೇಳಲಾಗಿದೆ, ಮಿಥ್ಯಾತ್ವವನ್ನು ಸಮ್ಯಕ್ತ್ವದ ಭೇದವೆಂದು ತಿಳಿಯಬಾರದು. ಸಮ್ಯಕ್ತ್ವದ ಅಪೇಕ್ಷೆಯಿಂದ ವಿಚಾರ ಮಾಡಿದ ಮೇಲೆ ಅದೆಷ್ಟೋ ಜೀವರುಗಳಿಗೆ ಸಮ್ಯಕ್ತ್ವದ ಅಭಾವವು ಭಾಸವಾಗುವುದು, ಅಲ್ಲಿ ಮಿಥ್ಯಾತ್ವವು ಕಂಡು ಬರುತ್ತದೆಯೆಂಬ ಅರ್ಥವನ್ನು ಪ್ರಕಟಮಾಡುವ ಸಲುವಾಗಿ ಸಮ್ಯಕ್ತ್ವಮಾರ್ಗಣಾದಲ್ಲಿ ಮಿಥ್ಯಾತ್ವವನ್ನು ಹೇಳಲಾಗಿದೆ. ಇದೇ ಪ್ರಕಾರ ಸಾಸಾದನ ಮತ್ತು ಮಿಶ್ರ ಕೂಡ ಸಮ್ಯಕ್ತ್ವದ ಭೇದಗಳಿಲ್ಲ. ಸಮ್ಯಕ್ತ್ವದ ಭೇದಗಳು ಮೂರೇ ಇವೆಯೆಂದು ತಿಳಿಯುವುದು.

ಇಲ್ಲಿ ಕರ್ಮದ ಉಪಶಮ ಮೊದಲಾದವುಗಳಿಂದ ಉಪಶಮ ಮೊದಲಾದ ಸಮ್ಯಕ್ತ್ವ ಹೇಳಿದೆ, ಆದರೆ ಕರ್ಮದ ಉಪಶಮಾದಿಗಳು ಇದನ್ನು ಮಾಡುವುದರಿಂದ ಆಗುವುದಿಲ್ಲ. ಮೊದಲಂತೂ ತತ್ತ್ವಶ್ರದ್ಧೆ ಮಾಡುವ ಉದ್ಯಮ ಮಾಡಬೇಕು, ಆದರೆ ನಿಮಿತ್ತದಿಂದ ಕರ್ಮದ ಉಪಶಮಾದಿಗಳು ತಾನಾಗಿಯೇ ಆಗುತ್ತವೆ, ಆಗ ಇವನಿಗೆ ತತ್ತ್ವಶ್ರದ್ಧೆಯ ಪ್ರಾಪ್ತಿಯಾಗುತ್ತದೆಯೆಂದು ತಿಳಿಯುವುದು.

ಹೀಗೆ ಸಮ್ಯಕ್ತ್ವದ ಭೇದಗಳನ್ನು ತಿಳಿಯಬೇಕು.

ಈ ಪ್ರಕಾರ ಸಮ್ಯಗ್ದರ್ಶನದ ಸ್ವರೂಪವನ್ನು ಹೇಳಲಾಯಿತು.

**ಸಮ್ಯಗ್ದರ್ಶನದ ಎಂಟು ಅಂಗಗಳು ಃ-**

ಸಮ್ಯಗ್ದರ್ಶನದಲ್ಲಿ ನಿಃಶಂಕಿತತ್ವ, ನಿಃಕಾಂಕ್ಷಿತತ್ವ, ನಿರ್ವಿಚಿಕಿತ್ಸತ್ವ, ಅಮೂಢದೃಷ್ಟಿತ್ವ, ಉಪಬೃಂಹಣ, ಸ್ಥಿತಿಕರಣ, ಪ್ರಭಾವನೆ ಮತ್ತು ವಾತ್ಸಲ್ಯವೆಂಬ ಎಂಟು ಅಂಗಗಳನ್ನು ಹೇಳಿದ್ದಾರೆ.

ಭಯದ ಅಭಾವ ಅಥವಾ ತತ್ತ್ವಗಳಲ್ಲಿ ಸಂಶಯದ ಅಭಾವವು ಅದು ನಿಃಶಂಕಿತತ್ವವಿದೆ. ಅದರಂತೆ ಪರದ್ರವ್ಯಗಳಲ್ಲಿ ರಾಗರೂಪವಾದ ಇಚ್ಛೆಯ ಅಭಾವವು ಅದು ನಿಃಕಾಂಕ್ಷಿತತ್ತ್ವವಿದೆ. ಅದರಂತೆ ಪರದ್ರವ್ಯಗಳಲ್ಲಿ ದ್ವೇಷರೂಪವಾದ ಗ್ಲಾನಿಯ ಅಭಾವವು ಅದು ನಿರ್ವಿಚಿಕಿತ್ಸತ್ವವಿದೆ. ಅದರಂತೆ ತತ್ತ್ವಗಳಲ್ಲಿ ಹಾಗೂ ದೇವಾದಿಕರಲ್ಲಿ ಅನ್ಯಥಾ ಪ್ರತೀತಿರೂಪವಾದ ಮೋಹದ ಅಭಾವವು ಅದು ಅಮೂಢದೃಷ್ಟಿತ್ವವಿದೆ. ಅದರಂತೆ ಆತ್ಮಧರ್ಮದ ಹಾಗೂ ಜಿನಧರ್ಮದ ವೃದ್ಧಿ ಮಾಡುವುದರ ಹೆಸರು ಉಪಬೃಂಹಣವಿದೆ, ಇದೇ ಅಂಗದ ಹೆಸರನ್ನು ಉಪಗೂಹನವೆಂದೂ ಹೇಳಲಾಗುತ್ತದೆ; ಅಲ್ಲಿ ಅದರ ಅರ್ಥವು ಧರ್ಮಾತ್ಮ ಜೀವರುಗಳ ದೋಷವನ್ನು ಬಚ್ಚಿಡುವುದೆಂದು ತಿಳಿಯುವುದು. ಅದರಂತೆ ತಮ್ಮ ಸ್ವಭಾವದಲ್ಲಿ ಮತ್ತು ಜಿನಧರ್ಮದಲ್ಲಿ ತಮ್ಮನ್ನು ಮತ್ತು ಇತರರನ್ನು ಸ್ಥಾಪಿಸುವುದು ಅದು ಸ್ಥಿತಿಕರಣವಿದೆ. ಅದರಂತೆ ತಮ್ಮ ಸ್ವರೂಪದ ಮತ್ತು ಜಿನಧರ್ಮದ ಮಹಿಮೆಯನ್ನು ಪ್ರಕಟಮಾಡುವುದು ಅದು ಪ್ರಭಾವನೆಯಿದೆ. ಅದರಂತೆ ಸ್ವರೂಪದಲ್ಲಿ ಹಾಗೂ ಜಿನಧರ್ಮದಲ್ಲಿ ಮತ್ತು ಧರ್ಮಾತ್ಮ ಜೀವರುಗಳಲ್ಲಿ ಅತ್ಯಂತ ಪ್ರೀತಿಯ ಭಾವವು ಅದು ವಾತ್ಸಲ್ಯವಿದೆ. ಹೀಗೆ ಈ ಎಂಟು ಅಂಗಗಳನ್ನು ತಿಳಿಯುವುದು.

ಯಾವ ಪ್ರಕಾರ ಮನುಷ್ಯನ ಶರೀರದಲ್ಲಿ ಕೈ-ಕಾಲು ಮೊದಲಾದ ಅಂಗಗಳಿವೆ ಅದೇ ಪ್ರಕಾರ ಇವು ಸಮ್ಯಕ್ತ್ವದ ಅಂಗಗಳಿವೆ.

**ಪ್ರಶ್ನೆ ಃ-** ಅದೆಷ್ಟೋ ಸಮ್ಯಗ್ದೃಷ್ಟಿ ಜೀವರುಗಳಲ್ಲಿ ಕೂಡ ಭಯ, ಇಚ್ಛೆ, ಗ್ಲಾನಿ ಮೊದಲಾದವು ಕಂಡು ಬರುತ್ತವೆ, ಮತ್ತು ಅದೆಷ್ಟೋ ಮಿಥ್ಯಾದೃಷ್ಟಿಗಳಲ್ಲಿ ಕಂಡು ಬರುವುದಿಲ್ಲ; ಆದುದರಿಂದ ನಿಃಶಂಕಿತ ಮೊದಲಾದ ಅಂಗಗಳು ಸಮ್ಯಕ್ತ್ವದ ಅಂಗಗಳೆಂದು ಹೇಗೆ ಹೇಳುವಿರಿ ?

**ಉತ್ತರ ಃ-** ಯಾವ ಪ್ರಕಾರ ಕೈ-ಕಾಲು ಮೊದಲಾದವು ಮನುಷ್ಯ-ಶರೀರದ ಅಂಗಗಳೆಂದು ಹೇಳಲಾಗುತ್ತದೆ; ಅವರಲ್ಲಿ ಕೆಲವು ಮನುಷ್ಯರಂತೂ ಕೈ-ಕಾಲು ಮೊದಲಾದವುಗಳಲ್ಲಿ ಕೆಲವು ಅಂಗಗಳು

ಇಲ್ಲದವರಿರುವರು, ಅಲ್ಲಿ ಅದಕ್ಕೆ ಮನುಷ್ಯ ಶರೀರವೆಂದಂತೂ ಹೇಳಲಾಗುತ್ತದೆ, ಆದರೆ ಆ ಅಂಗಗಳಿಲ್ಲದೆ ಆ ಶರೀರವು ಶೋಭಾಯಮಾನವೂ, ಪೂರ್ಣಕಾರ್ಯಕಾರಿಯೂ ಆಗುವುದಿಲ್ಲ. ಅದೇ ಪ್ರಕಾರ ಸಮ್ಯಕ್ತ್ವಕ್ಕೆ ನಿಃಶಂಕಿತ ಮೊದಲಾದ ಅಂಗಗಳನ್ನು ಹೇಳಲಾಗುತ್ತದೆ; ಅಲ್ಲಿ ಒಬ್ಬ ಸಮ್ಯಕ್ತ್ವಿಯು ನಿಃಶಂಕಿತತ್ತ್ವ ಮೊದಲಾದವುಗಳಲ್ಲಿ ಯಾವುದೇ ಒಂದು ಅಂಗವಿಲ್ಲದವನೂ ಇರುವನು, ಅದಕ್ಕೆ ಸಮ್ಯಕ್ತ್ವವೆಂದಂತೂ ಹೇಳಲಾಗುತ್ತದೆ, ಆದರೆ ಆ ಅಂಗಳಿಲ್ಲದೆ ಅದು ನಿರ್ಮಲ ಹಾಗೂ ಸಂಪೂರ್ಣ ಕಾರ್ಯಕಾರಿಯಾಗುವುದಿಲ್ಲ. ಮತ್ತು ಯಾವ ಪ್ರಕಾರ ಕೋತಿಗೆ ಕೂಡ ಕೈ-ಕಾಲು ಮೊದಲಾದ ಅಂಗಗಳಿರುತ್ತವೆ, ಆದರೆ ಮನುಷ್ಯರಿಗೆ ಇರುವಂತೆ ಇರುವುದಿಲ್ಲ; ಅದೇ ಪ್ರಕಾರ ಮಿಥ್ಯಾದೃಷ್ಟಿಗಳಿಗೆ ಕೂಡ ವ್ಯವಹಾರ ರೂಪದ ನಿಃಶಂಕಿತ ಮೊದಲಾದ ಅಂಗಗಳಿರುತ್ತವೆ ಆದರೆ ನಿಶ್ಚಯದ ಸಾಪೇಕ್ಷತೆಯಿಂದ ಸಮ್ಯಗ್ದೃಷ್ಟಿಗೆ ಇರುವಂತೆ ಇರುವುದಿಲ್ಲ.

**ಸಮ್ಯಗ್ದರ್ಶನದ ಇಪ್ಪತ್ತೈದು ದೋಷಗಳು :-**

ಅದರಂತೆ ಸಮ್ಯಕ್ತ್ವದಲ್ಲಿ ಎಂಟು ಶಂಕಾದಿಗಳು, ಎಂಟು ಮದಗಳು, ಮೂರು ಮೂಢತೆಗಳು, ಆರು ಅನಾಯತಗಳೆಂದು ಇಪ್ಪತ್ತೈದು ದೋಷಗಳನ್ನು ಹೇಳಿದ್ದಾರೆ. ಆದರೆ ಇವು ಸಮ್ಯಗ್ದೃಷ್ಟಿಗೆ ಇರುವುದಿಲ್ಲ, ಎಂದಾದರೂ ಯಾರಿಗಾದರೂ ಒಂದಿಷ್ಟು ದೋಷವು ತಗಲುವುದು, ಆದರೆ ಅದರಿಂದ ಸರ್ವಥಾ ಸಮ್ಯಕ್ತ್ವದ ನಾಶವಾಗುವುದಿಲ್ಲ. ಅಲ್ಲಿ ಸಮ್ಯಕ್ತ್ವವು ಮಲಿನವೇ ಆಗುತ್ತದೆಯೆಂದು ತಿಳಿಯುವುದು. ಬಹು..........................

**ಈ ಪ್ರಕಾರ ಶ್ರೀ ಮೋಕ್ಷಮಾರ್ಗಪ್ರಕಾಶಕವೆಂಬ ಹೆಸರಿನ ಶಾಸ್ತ್ರದಲ್ಲಿ ಮೋಕ್ಷಮಾರ್ಗದ ಸ್ವರೂಪವೆಂಬ ಒಂಭತ್ತನೆಯ ಅಧ್ಯಾಯದ ಉಪಲಬ್ಧ ಭಾಗವು ಸಮಾಪ್ತವಾಯಿತು.**

# ರಹಸ್ಯಪೂರ್ಣ ಪತ್ರ

## (ಆಚಾರ್ಯಕಲ್ಪ ಪಂಡಿತ ಟೋಡರಮಲ್ಲರು ಬರೆದುದು)

ಸಿದ್ಧಶ್ರೀ ಮುಲತಾನನಗರ ಮಹಾಶುಭಸ್ಥಾನದಲ್ಲಿ ವಾಸಿಸುವ ಸದ್ಧರ್ಮ ಬಂಧುಗಳೂ, ಅನೇಕ ಉಪಮಾಯುಕ್ತರೂ, ಅಧ್ಯಾತ್ಮ ರಸದ ಅಭಿರುಚಿಯುಳ್ಳವರೂ ಆದ ಶ್ರೀ ಖಾನಚಂದ, ಗಂಗಾಧರ, ಶ್ರೀಪಾಲ, ಸಿದ್ಧಾರ್ಥದಾಸ ಮೊದಲಾದ ಸಮಸ್ತ ಸಾಧರ್ಮಿಸೋದರರು ಟೋಡರಮಲ್ಲರ ಶ್ರೀ ಪ್ರಮುಖ ವಿನಯ ಶಬ್ದವನ್ನು ಅವಧರಿಸಬೇಕು.

ಇಲ್ಲಿ ಯಥಾಸಂಭವ ಆನಂದವಿದೆ, ತಮ್ಮ ಚಿದಾನಂದಘನದ ಅನುಭವದಿಂದ ಸಹಜಾನಂದದ ವೃದ್ಧಿಯನ್ನಪೇಕ್ಷಿಸುತ್ತೇನೆ. ಅಪರಂಚ ತಮ್ಮ ಒಂದು ಪತ್ರವು ಸಹೋದರರಾದ ಶ್ರೀ ರಾಮಸಿಂಹ ಭುವಾನೀದಾಸರಲ್ಲಿ ಬಂದಿತ್ತು, ಅದರ ಸಮಾಚಾರವನ್ನು ಅನ್ಯಸಾಧರ್ಮಿಗಳು ಜಹಾನಾಬಾದದಿಂದ ನನಗೆ ಬರೆದಿದ್ದರು.

ಆದುದರಿಂದ ಸೋದರರೇ ! ಇಂಥ ಪ್ರಶ್ನೆಗಳನ್ನು ತಮ್ಮಂಥವರೇ ಬರೆಯಬಹುದಾಗಿದೆ. ಈ ವರ್ತಮಾನ ಕಾಲದಲ್ಲಿ ಅಧ್ಯಾತ್ಮರಸದ ರಸಿಕರು ತೀರ ಕಡಿಮೆಯಿದ್ದಾರೆ. ಸ್ವಾತ್ಮಾನುಭವದ ಮಾತುಗಳನ್ನಾಡುವವರು ಧನ್ಯರಿದ್ದಾರೆ, ಅದನ್ನೇ ಹೇಳಿದ್ದಾರೆ.

**ತತ್ಪ್ರತಿ ಪ್ರೀತಿಚಿತ್ತೇನ ಯೇನ ವಾರ್ತಾಪಿ ಹಿ ಶ್ರುತಾ ।**
**ನಿಶ್ಚಿತಂ ಸ ಭವೇದ್ಭವ್ಯೋ ಭಾವಿನಿರ್ವಾಣ ಭಾಜನಮ್ ॥**

**ಪದ್ಮನಂದೀಪಂಚವಿಂಶತಿಕೆ ಏಕತ್ವಾಶೀತಿ ॥೨೩॥**

**ಅರ್ಥ :-** ಯಾರು ಪ್ರಸನ್ನ ಚಿತ್ತದಿಂದ ಈ ಚೈತನ್ಯಸ್ವರೂಪವಾದ ಆತ್ಮನ ಮಾತನ್ನು ಕೇಳಿದ್ದಾರೆ ಅವರು ನಿಶ್ಚಯದಿಂದ ಭವ್ಯರಿದ್ದಾರೆ. ಅಲ್ಪಕಾಲದಲ್ಲಿ ಮೋಕ್ಷದ ಪಾತ್ರರಿದ್ದಾರೆ.

ಆದುದರಿಂದ ಸೋದರರೇ ! ತಾವು ಪ್ರಶ್ನೆ ಕೇಳಿದ್ದೀರಿ ಅವುಗಳ ಉತ್ತರವನ್ನು ನಮ್ಮ ಬುದ್ಧಿಗೆ ಅನುಸರಿಸಿ ಒಂದಿಷ್ಟು ಬರೆಯುತ್ತೇವೆ ಅವನ್ನು ತಿಳಿದುಕೊಳ್ಳುವುದು. ಮತ್ತು ಆಗಮದ ಸಾರಯುಕ್ತ ಅಧ್ಯಾತ್ಮಿಕ ಚರ್ಚೆಯಿಂದ ಕೂಡಿದ ಪತ್ರವನ್ನು ಮೇಲಿಂದ ಮೇಲೆ ಬರೆಯುತ್ತಿರಬೇಕು, ಭೆಟ್ಟಿಯಂತೂ ಯಾವಾಗ ಆಗುವುದು ಆಗ ಆಗುವುದು. ಮತ್ತು ನಿರಂತರವಾಗಿ ಸ್ವರೂಪಾನುಭವದ ಅಭ್ಯಾಸವು ನಡೆಯುತ್ತಿರಲಿ ಶ್ರೀರಸ್ತು.

ಈಗ ಸ್ವಾನುಭವ ದಶೆಯಲ್ಲಿ ಪ್ರತ್ಯಕ್ಷ-ಪರೋಕ್ಷ ಮೊದಲಾದ ಪ್ರಶ್ನೆಗಳ ಉತ್ತರವನ್ನು ನಮ್ಮ ಬುದ್ಧಿಗೆ ಅನುಸರಿಸಿ ಬರೆಯುತ್ತೇವೆ.

ಮೊದಲು ಸ್ವಾನುಭವದ ಸ್ವರೂಪವನ್ನು ತಿಳಿದುಕೊಳ್ಳುವ ನಿಮಿತ್ತಗಳನ್ನು ಹೇಳುತ್ತೇವೆ.

ಜೀವ ಪದಾರ್ಥವು ಅನಾದಿಯಿಂದ ಮಿಥ್ಯಾದೃಷ್ಟಿಯಿದೆ. ಸ್ವ-ಪರದ ಯಥಾರ್ಥರೂಪದಿಂದ ವಿಪರೀತವಾದ ಶ್ರದ್ಧೆಯ ಹೆಸರು ಮಿಥ್ಯಾತ್ವವಿದೆ. ಮತ್ತು ಯಾವಾಗ ಯಾವುದೇ ಜೀವನಿಗೆ ದರ್ಶನಮೋಹದ ಉಪಶಮ ಕ್ಷಯ-ಕ್ಷಯೋಪಶಮದಿಂದ ಸ್ವ-ಪರದ ಯಥಾರ್ಥ ಶ್ರದ್ಧಾರೂಪದ ತತ್ತ್ವಾರ್ಥಶ್ರದ್ಧೆಯಾಗುವುದು ಆಗ ಜೀವನಿಗೆ ಸಮ್ಯಕ್ತ್ವವಾಗುತ್ತದೆ; ಆದುದರಿಂದ ಸ್ವ-ಪರದ ಶ್ರದ್ಧೆಯಲ್ಲಿ ಶುದ್ಧಾತ್ಮಶ್ರದ್ಧೆಯರೂಪದ ನಿಶ್ಚಯಸಮ್ಯಕ್ತ್ವವು ಗರ್ಭಿತವಿದೆ.

ಒಂದು ವೇಳೆ ಸ್ವ-ಪರದ ಶ್ರದ್ಧೆಯಿಲ್ಲದಿದ್ದರೆ ಮತ್ತು ಜಿನಾಗಮದಲ್ಲಿ ಹೇಳಿದ ಆ ದೇವ-ಗುರು-ಧರ್ಮಗಳನ್ನು ಮನ್ನಿಸುತ್ತಿದ್ದರೆ, ಸಪ್ತತತ್ತ್ವಗಳನ್ನು ಮನ್ನಿಸುತ್ತಿದ್ದರೆ, ಅನ್ಯಮತಗಳಲ್ಲಿ ಹೇಳಿದ ದೇವಾದಿಗಳನ್ನು ಹಾಗೂ ತತ್ತ್ವಾದಿಗಳನ್ನು

ಮನ್ನಿಸದಿದ್ದರೆ ಈ ಪ್ರಕಾರದ ಕೇವಲ ವ್ಯವಹಾರ ಸಮ್ಯಕ್ತ್ವದಿಂದ ಸಮ್ಯಕ್ತ್ವಿಯೆಂಬ ಹೆಸರನ್ನು ಪಡೆಯುವುದಿಲ್ಲ. ಆದುದರಿಂದ  ಸ್ವ-ಪರದ ಭೇದವಿಜ್ಞಾನ ಸಹಿತ ಯಾವ ತತ್ತ್ವಾರ್ಥಶ್ರದ್ಧೆಯಾಗುವುದು ಅದನ್ನೇ ಸಮ್ಯಕ್ತ್ವವೆಂದು ತಿಳಿಯುವುದು.

ಹೀಗೆ ಸಮ್ಯಕ್ತ್ವಿಯಾದ ಮೇಲೆ ಆ ಜ್ಞಾನವು ಪಂಚೇಂದ್ರಿಯ ಹಾಗೂ ಆರನೆಯದಾದ ಮನಸ್ಸಿನ ಮೂಲಕ ಕ್ಷಯೋಪಶಮರೂಪವಾದ ಮಿಥ್ಯಾತ್ವದಶೆಯಲ್ಲಿ ಕುಮತಿ-ಕುಶ್ರುತಿರೂಪವಾಗುತ್ತಲಿತ್ತು ಅದೇ ಜ್ಞಾನವು ಈಗ ಮತಿ-ಶ್ರುತರೂಪದ ಸಮ್ಯಗ್ಜ್ಞಾನವಾಗಿದೆ. ಸಮ್ಯಕ್ತ್ವಿಯು ಯಾವುದನ್ನೆಷ್ಟು ತಿಳಿಯುತ್ತಾನೆ ಆ ತಿಳಿಯುವಿಕೆಯೆಲ್ಲವೂ ಸಮ್ಯಗ್ಜ್ಞಾನರೂಪವಿದೆ.

ಒಂದು ವೇಳೆ ಎಲ್ಲಾದರೂ ಘಟ-ಪಟ ಮೊದಲಾದ ಪದಾರ್ಥಗಳನ್ನು ಅಯಥಾರ್ಥವಾಗಿ ತಿಳಿದರೂ ಅದು ಆವರಣ ಜನ್ಯವಾದ ಔದಯಿಕ ಅಜ್ಞಾನಭಾವವಿದೆ. ಆ ಕ್ಷಯೋಪಶಮರೂಪವಾದ ಪ್ರಕಟ ಜ್ಞಾನವಂತೂ ಎಲ್ಲವೂ ಸಮ್ಯಗ್ಜ್ಞಾನವೇ ಇದೆ, ಏಕೆಂದರೆ ಪದಾರ್ಥಗಳನ್ನು ತಿಳಿಯುವುದರಲ್ಲಿ ವಿಪರೀತರೂಪವಾಗಿ ಸಾಧಿಸುವುದಿಲ್ಲ. ಆದುದರಿಂದ ಈ ಸಮ್ಯಗ್ಜ್ಞಾನವು ಕೇವಲಜ್ಞಾನದ ಅಂಶವಿದೆ. ಹೇಗೆಂದರೆ ಒಂದಿಷ್ಟು ಮೇಘಮಾಲೆಯು ವಿಲಯವಾದ ಮೇಲೆ ಸ್ವಲ್ಪ ಪ್ರಕಾಶವು ಪ್ರಕಟವಾಗುತ್ತದೆ ಅದೆಲ್ಲವು ಪ್ರಕಾಶದ ಅಂಶವಿದೆ.

ಯಾವ ಜ್ಞಾನವು ಮತಿ-ಶ್ರುತರೂಪವಾಗಿ ಪ್ರವರ್ತಿಸುತ್ತದೆ ಅದೇ ಜ್ಞಾನವು ಬೆಳೆಯುತ್ತ-ಬೆಳೆಯುತ್ತ ಕೇವಲಜ್ಞಾನರೂಪವಾಗುತ್ತದೆ ಸಮ್ಯಗ್ಜ್ಞಾನದ ಅಪೇಕ್ಷೆಯಿಂದಂತೂ ಒಂದು ಜಾತಿಯಿದೆ.

ಈ ಸಮ್ಯಗ್ದೃಷ್ಟಿಯ ಪರಿಣಾಮವು ಸವಿಕಲ್ಪ ಹಾಗೂ ನಿರ್ವಿಕಲ್ಪರೂಪವಾಗಿ ಎರಡು ಪ್ರಕಾರದಿಂದ ಪ್ರವರ್ತಿಸುತ್ತದೆ. ಅಲ್ಲಿ ಯಾವ ಪರಿಣಾಮವು ವಿಷಯ-ಕಷಾಯಗಳ ರೂಪವಾಗಿ ಮತ್ತು ಪೂಜೆ, ದಾನ, ಶಾಸ್ತ್ರಾಭ್ಯಾಸ ಮೊದಲಾದವುಗಳ ರೂಪವಾಗಿ ಪ್ರವರ್ತಿಸುತ್ತದೆ ಅದನ್ನು ಸವಿಕಲ್ಪರೂಪವೆಂದು ತಿಳಿಯುವುದು.

**ಪ್ರಶ್ನೆ :-** ಶುಭಾಶುಭರೂಪವಾಗಿ ಪರಿಣಮಿಸುತ್ತಿರುವಾಗ ಸಮ್ಯಕ್ತ್ವದ ಅಸ್ತಿತ್ವವನ್ನು ಹೇಗೆ ಕಂಡು ಕೊಳ್ಳುವುದು?

**ಉತ್ತರ :-** ಯಾವ ಪ್ರಕಾರ ಒಬ್ಬ ಗುಮಾಸ್ತನು ಒಡೆಯನ ಕಾರ್ಯದಲ್ಲಿ ಪ್ರವರ್ತಿಸುತ್ತಾನೆ, ಆ ಕಾರ್ಯವನ್ನು ತನ್ನದೆಂದೂ ಹೇಳುತ್ತಾನೆ, ಹರ್ಷ-ವಿಷಾದಗಳಿಗೂ ಪ್ರಾಪ್ತನಾಗುತ್ತಾನೆ, ಆ ಕಾರ್ಯದಲ್ಲಿ ಪ್ರವರ್ತಿಸುತ್ತಿರುವಾಗ ತನ್ನ ಹಾಗೂ ಒಡೆಯನ ಭಿನ್ನತೆಯ ವಿಚಾರವನ್ನೂ ಮಾಡುವುದಿಲ್ಲ; ಆದರೆ ಅಂತರಂಗದಲ್ಲಿ ಇದು ನನ್ನ ಕಾರ್ಯವಲ್ಲವೆಂಬ ಶ್ರದ್ಧೆಯಿದೆ. ಇಂಥ ಕಾರ್ಯ ಮಾಡುವ ಗುಮಾಸ್ತನು ಒಡೆಯನಿದ್ದಾನೆ. ಒಂದು ವೇಳೆ ಅವನು ಒಡೆಯನ ಧನವನ್ನು ಅಪಹರಿಸಿ ತನ್ನದೆಂದು ಮನ್ನಿಸಿದರೆ ಗುಮಾಸ್ತನು ಕಳ್ಳನಿರುವನು. ಅದೇ ಪ್ರಕಾರ ಕರ್ಮೋದಯಜನ್ಯ ಶುಭಾಶುಭರೂಪದ ಕಾರ್ಯವನ್ನು ಮಾಡುತ್ತಿರುವಾಗ ತದ್ರೂಪವಾಗಿ ಪರಿಣಮಿಸಿದರೂ ಅಂತರಂಗದಲ್ಲಿ ಇದು ನನ್ನ ಕಾರ್ಯವಲ್ಲವೆಂಬ ಶ್ರದ್ಧೆಯಿದೆ. ಒಂದು ವೇಳೆ ಶರೀರಾಶ್ರಿತವಾದ ವ್ರತ-ಸಂಯಮಗಳನ್ನು ಕೂಡ ತನ್ನವೆಂದು ಮನ್ನಿಸಿದರೆ ಮಿಥ್ಯಾದೃಷ್ಟಿಯಿರುವನು. ಆದುದರಿಂದ ಹೀಗೆ ಸವಿಕಲ್ಪ ಪರಿಣಾಮಗಳಾಗುತ್ತವೆ.

ಈಗ ಸವಿಕಲ್ಪದ ಮೂಲಕ ನಿರ್ವಿಕಲ್ಪ ಪರಿಣಾಮವಾಗುವ ವಿಧಾನ ಹೇಳುತ್ತಾರೆ.

ಅದೇ ಸಮ್ಯಕ್ತ್ವಿಯು ಒಮ್ಮೊಮ್ಮೆ ಸ್ವರೂಪದ ಧ್ಯಾನ ಮಾಡಲು ಉದ್ಯತನಾಗುತ್ತಾನೆ ಆಗ ಮೊದಲು ಸ್ವರೂಪದ ಭೇದವಿಜ್ಞಾನ ಮಾಡುವನು; ತನ್ನ ಸ್ವರೂಪವನ್ನು ನೋಕರ್ಮ-ದ್ರವ್ಯಕರ್ಮ-ಭಾವಕರ್ಮಗಳಿಂದ ರಹಿತ ಕೇವಲ ಚೈತನ್ಯ-ಚಮತ್ಕಾರ ಮಾತ್ರವೆಂದು ತಿಳಿಯುವನು; ಅನಂತರ ಪರದ ವಿಚಾರವೂ ಹೊರಟು ಹೋಗಿ ಸ್ವಾತ್ಮವಿಚಾರವೇ

ಉಳಿಯುತ್ತದೆ; ಆಗ ನಿಜಸ್ವರೂಪದಲ್ಲಿ ಅನೇಕ ಪ್ರಕಾರ ಅಹಂಬುದ್ಧಿಧಾರಣ ಮಾಡುತ್ತಾನೆ. ನಾನು ಚಿದಾನಂದನಿದ್ದೇನೆ, ಶುದ್ಧನಿದ್ದೇನೆ, ಸಿದ್ಧನಿದ್ದೇನೆಂಬ ವಿಚಾರಗಳಾದ ಮೇಲೆ ಸ್ವಾಭಾವಿಕವಾಗಿಯೇ ಆನಂದತರಂಗಗಳೇಳುತ್ತವೆ; ರೋಮಾಂಚವಾಗಿ ಬಿಡುತ್ತದೆ; ಅದಾದ ನಂತರ ಇಂಥ ವಿಚಾರಗಳೂ ಹೊರಟು ಹೋಗಿ ಕೇವಲ ಚಿನ್ಮಾತ್ರಸ್ವರೂಪವು ಭಾಸವಾಗತೊಡಗುವುದು; ಆಗ ಸಮಸ್ತ ಪರಿಣಾಮಗಳು ಆ ರೂಪದಲ್ಲಿ ಏಕಾಗ್ರವಾಗಿ ಪ್ರವರ್ತಿಸುವವು; ಆಗ ದರ್ಶನ-ಜ್ಞಾನಾದಿಗಳ ಹಾಗೂ ನಯ-ಪ್ರಮಾಣ ಮೊದಲಾದವುಗಳ ವಿಚಾರಕೂಡ ವಿಲಯವಾಗಿ ಹೋಗುತ್ತದೆ.

ಈ ಸವಿಕಲ್ಪದಿಂದ ನಿಶ್ಚಯ ಮಾಡಿದ ಚೈತನ್ಯಸ್ವರೂಪದಲ್ಲಿಯೇ ವ್ಯಾಪ್ಯ-ವ್ಯಾಪಕರೂಪವಾಗಿ ಪ್ರವರ್ತಿಸುವವನು ಆಗ ಧ್ಯಾತಾ-ಧ್ಯೇಯತನವೂ ದೂರವಾಗಿ ಬಿಡುವುದು. ಆದುದರಿಂದ ಇಂಥ ದಶೆಯ ಹೆಸರು ನಿರ್ವಿಕಲ್ಪ ಅನುಭವವಿದೆ. ಬೃಹನ್‌ನಯಚಕ್ರವೆಂಬ ಗ್ರಂಥದಲ್ಲಿ ಹೀಗೆಯೇ ಹೇಳಿದ್ದಾರೆ,-

**ತಚ್ಚಾಣೇಸಣಕಾಲೇ ಸಮಯಂ ಬುಜ್ಝೇಹಿ ಜುತ್ತಿಮಗ್ಗೇಣ ।**
**ಣೋ ಆರಾಇಣಸಮಯೇ ಪಚ್ಚಕ್ಖೋ ಅಣುಹವೋ ಜಮ್ಹಾ ॥೨೬೬॥**

**ಅರ್ಥ :-** ತತ್ತ್ವದ ಅವಲೋಕನದ-ಅನ್ವೇಷಣದ ಕಾಲದಲ್ಲಿ ಸಮಯ ಎಂದರೆ ಶುದ್ಧಾತ್ಮನನ್ನು ಯುಕ್ತಿ ಎಂದರೆ ನಯ-ಪ್ರಮಾಣಗಳ ಮೂಲಕ ಮೊದಲು ತಿಳಿಯುವುದು. ಅನಂತರ ಆರಾಧನ ಸಮಯವಾದ ಆ ಅನುಭವದ ಕಾಲದಲ್ಲಿ ನಯ-ಪ್ರಮಾಣಗಳೂ ಇರುವುದಿಲ್ಲ, ಏಕೆಂದರೆ ಪ್ರತ್ಯಕ್ಷ ಅನುಭವವಿದೆ.

ಯಾವ ಪ್ರಕಾರ ರತ್ನಹಾರವನ್ನು ಕೊಂಡುಕೊಳ್ಳುವಲ್ಲಿ ಅನೇಕ ವಿಕಲ್ಪ ಮಾಡುತ್ತಾರೆ, ಆದರೆ ಅದನ್ನು ಯಾವಾಗ ಪ್ರತ್ಯಕ್ಷ ಧರಿಸುತ್ತಾರೆ, ಆಗ ವಿಕಲ್ಪವಿರುವುದಿಲ್ಲ-ಧರಿಸಿದುದರ ಆನಂದವೇ ಇರುತ್ತದೆ. ಈ ಪ್ರಕಾರ ಸವಿಕಲ್ಪದ ಮೂಲಕ ನಿರ್ವಿಕಲ್ಪದ ಅನುಭವವಾಗುತ್ತದೆ.

ಮತ್ತು ಯಾವ ಜ್ಞಾನವು ಐದು ಇಂದ್ರಿಯಗಳು ಹಾಗೂ ಆರನೆಯದಾದ ಮನಸ್ಸಿನ ಮೂಲಕ ಪ್ರವರ್ತಿಸುತ್ತಿತ್ತು ಆ ಜ್ಞಾನವು ಎಲ್ಲ ಕಡೆಗಳಿಂದ ಆಕೃಷ್ಟವಾಗಿ ಈ ನಿರ್ವಿಕಲ್ಪ ಅನುಭವದಲ್ಲಿ ಕೇವಲ ಸ್ವರೂಪ ಸನ್ಮುಖವಾಯಿತು. ಏಕೆಂದರೆ ಆ ಜ್ಞಾನವು ಕ್ಷಯೋಪಶಮರೂಪವಿರುವುದರಿಂದ ಒಂದು ಕಾಲದಲ್ಲಿ ಒಂದು ಜ್ಞೇಯವನ್ನೇ ತಿಳಿಯುತ್ತದೆ, ಆ ಜ್ಞಾನವು ಸ್ವರೂಪ ತಿಳಿಯುವುದಕ್ಕೆ ಪ್ರವರ್ತಿಸಿದಾಗ ಅನ್ಯವನ್ನು ತಿಳಿಯುವುದು ಸ್ವಾಭಾವಿಕವಾಗಿಯೇ ನಿಂತು ಹೋಗುವುದು. ಅಲ್ಲಿ ಬಾಹ್ಯದೊಳಗೆ ಶಬ್ದ ಮೊದಲಾದ ಅನೇಕ ವಿಕಾರಗಳಾದರೂ ಸ್ವರೂಪ ಧ್ಯಾನಿಗೆ ಯಾವುದರ ಎಚ್ಚರವಿಲ್ಲದಂಥ ದಶೆಯಾಗುವುದು. ಈ ಪ್ರಕಾರ ಮತಿಜ್ಞಾನವು ಕೂಡ ಸ್ವರೂಪ ಸನ್ಮುಖವಾಗುವುದು. ಮತ್ತು ನಯಾದಿಗಳ ವಿಚಾರವು ದೂರವಾದ ಮೇಲೆ ಶ್ರುತಜ್ಞಾನವು ಕೂಡ ಸ್ವರೂಪಸನ್ಮುಖವಾಗುವುದು.

ಇಂಥ ವರ್ಣನೆಯು ಸಮಯಸಾರದ ಟೀಕೆಯಾದ ಆತ್ಮಖ್ಯಾತಿಯಲ್ಲಿದೆ ಮತ್ತು ಆತ್ಮಾವಲೋಕನಾದಿಗಳಲ್ಲೂ ಇದೆ. ಆದುದರಿಂದ ನಿರ್ವಿಕಲ್ಪವಾದ ಅನುಭವವನ್ನು ಅತೀಂದ್ರಿಯವೆಂದು ಹೇಳುತ್ತಾರೆ. ಏಕೆಂದರೆ ಸ್ಪರ್ಶ, ರಸ, ಗಂಧ, ವರ್ಣ, ಶಬ್ದಗಳನ್ನು ತಿಳಿಯುವುದು ಅದು ಇಂದ್ರಿಯಗಳ ಧರ್ಮವಿದ್ದು ಅದು ಇಲ್ಲಿ ಇಲ್ಲ; ಮತ್ತು ಅನೇಕ ವಿಕಲ್ಪಗಳನ್ನು ಮಾಡುವುದು ಅದು ಮನಸ್ಸಿನ ಧರ್ಮವಿದ್ದು ಅದು ಕೂಡ ಇಲ್ಲಿ ಇಲ್ಲ; ಆದುದರಿಂದ ಯಾವ ಜ್ಞಾನವು ಇಂದ್ರಿಯ-ಮನದಲ್ಲಿ ಪ್ರವರ್ತಿಸುತ್ತಿತ್ತು ಅದೇ ಜ್ಞಾನವು ಈಗ ಅನುಭವದಲ್ಲಿ ಪ್ರವರ್ತಿಸುತ್ತಿರುವುದರಿಂದ ಈ ಜ್ಞಾನವನ್ನು ಅತೀಂದ್ರಿಯವೆಂದು ಹೇಳುತ್ತಾರೆ.

ಅದರಂತೆ ಈ ಸ್ವಾನುಭವವನ್ನು ಮನಸ್ಸಿನ ಮೂಲಕ ಆದುದೆಂದು ಹೇಳುತ್ತಾರೆ; ಏಕೆಂದರೆ ಈ ಅನುಭವದಲ್ಲಿ ಮತಿಜ್ಞಾನ-ಶ್ರುತಜ್ಞಾನಗಳೇ ಇವೆ, ಬೇರೆ ಯಾವ ಜ್ಞಾನವಿಲ್ಲ.

ಮತಿ-ಶ್ರುತಜ್ಞಾನಗಳು ಇಂದ್ರಿಯ-ಮನಸ್ಸಿನ ಅವಲಂಬನವಿಲ್ಲದೆ ಆಗುವುದಿಲ್ಲ, ಆದುದರಿಂದ ಇಲ್ಲಿ ಇಂದ್ರಿಯಗಳದ್ದಂತೂ ಅಭಾವವೇ ಇದೆ, ಏಕೆಂದರೆ ಇಂದ್ರಿಯಗಳ ವಿಷಯವು ಮೂರ್ತಿಕ ಪದಾರ್ಥಗಳೇ ಇವೆ. ಮತ್ತು ಇಲ್ಲಿ ಮನಜ್ಞಾನವಿದೆ, ಏಕೆಂದರೆ ಮನಸ್ಸಿನ ವಿಷಯವು ಅಮೂರ್ತಿಕ ಪದಾರ್ಥವೂ ಇರುವುದರಿಂದ ಇಲ್ಲಿ ಮನಸ್ಸಿಗೆ ಸಂಬಂಧಿಸಿದ ಪರಿಣಾಮವು ಸ್ವರೂಪದಲ್ಲಿ ಏಕಾಗ್ರವಾಗಿ ಅನ್ಯ ಚಿಂತೆಯ ನಿರೋಧ ಮಾಡುತ್ತಿರುವುದರಿಂದ ಇದನ್ನು ಮನಮೂಲಕವೆಂದು ಹೇಳುತ್ತಾರೆ. '

**ಏಕಾಗ್ರಚಿಂತಾನಿರೋಧೋ ಧ್ಯಾನಮ್'** ಇಂಥ ಧ್ಯಾನದ ಲಕ್ಷಣವೂ ಇಂಥ ಅನುಭವದಶೆಯಲ್ಲಿ ಸಂಭವವಿದೆ.

ಅದರಂತೆ ಸಮಯಸಾರ ನಾಟಕದ ಕಾವ್ಯದಲ್ಲಿ ಹೇಳಿದ್ದಾರೆ,-

**ವಸ್ತು ವಿಚಾರತ ಧ್ಯಾವತೈ, ಮನ ಪಾವೈ ವಿಶ್ರಾಮ ।**
**ರಸ ಸ್ವಾದತ ಸುಖ ಉಪಜೈ, ಅನುಭವಯಾಕೌ ನಾಮ ॥**

ಈ ಪ್ರಕಾರ ಪರಿಣಾಮವು ಮನಸ್ಸಿನಲ್ಲದೆ ಬೇರೆಯೇ ಸ್ವರೂಪದಲ್ಲಿ ಪ್ರವರ್ತಿಸದಿರುವುದರಿಂದ ಸ್ವಾನುಭವವನ್ನು ಮನಜನಿತವೆಂದೂ ಹೇಳುತ್ತಾರೆ; ಆದುದರಿಂದ ಅತೀಂದ್ರಿಯವೆಂದು ಹೇಳುವಲ್ಲಿ ಮತ್ತು ಮನಜನಿತವೆಂದು ಹೇಳುವಲ್ಲಿ ಯಾವ ವಿರೋಧವಿಲ್ಲ, ವಿವಕ್ಷಾ ಭೇದವಿದೆ.

ಅದರಂತೆ 'ಆತ್ಮನು ಅತೀಂದ್ರಿಯನಿರುವುದರಿಂದ ಅತೀಂದ್ರಿಯ ಮೂಲಕವೇ ಗ್ರಹಣ ಮಾಡಲ್ಪಡುತ್ತಾನೆ'ಂದು ತಾವು ಬರೆದಿದ್ದೀರಿ; ಆದರೆ ಸೋದರರೇ ! ಮನವು ಅಮೂರ್ತಿಕವನ್ನೂ ಗ್ರಹಣ ಮಾಡುತ್ತವೆ, ಏಕೆಂದರೆ ಮತಿ-ಶ್ರುತಜ್ಞಾನದ ವಿಷಯವು ಸರ್ವದ್ರವ್ಯವೆಂದು ಹೇಳುತ್ತಾರೆ. ತತ್ತ್ವಾರ್ಥಸೂತ್ರದಲ್ಲಿ ಹೀಗೆ ವಿಧಾನವಿದೆ,-

'ಮತಿಶ್ರುತಯೋರ್ನಿಬಂಧೋ ದ್ರವ್ಯೇಷ್ವಸರ್ವಪರ್ಯಾಯೇಷು ।' -೧-೨೬

ಅದರಂತೆ ತಾವು ಪ್ರತ್ಯಕ್ಷ-ಪರೋಕ್ಷದ ಪ್ರಶ್ನೆ ಮಾಡಿದ್ದೀರಿ; ಆದರೆ ಸೋದರರೇ ! ಪ್ರತ್ಯಕ್ಷ-ಪರೋಕ್ಷಗಳು ಸಮ್ಯಕ್ತ್ವದ ಭೇದಗಳಲ್ಲ. ನಾಲ್ಕನೆಯ ಗುಣಸ್ಥಾನದಲ್ಲಿ ಸಿದ್ಧಸಮಾನ ಕ್ಷಾಯಿಕ ಸಮ್ಯಕ್ತ್ವವಾಗಿ ಹೋಗುತ್ತದೆ, ಆದುದರಿಂದ ಸಮ್ಯಕ್ತ್ವವು ಕೇವಲ ಯಥಾರ್ಥಶ್ರದ್ಧೆಯ ರೂಪವೇ ಇದೆ. ಅವನು (ಜೀವನು) ಶುಭಾಶುಭಕಾರ್ಯ ಮಾಡುತ್ತಲೂ ಇರುತ್ತಾನೆ. ಆದುದರಿಂದ 'ನಿಶ್ಚಯಸಮ್ಯಕ್ತ್ವವು ಪ್ರತ್ಯಕ್ಷವಿದೆ ಮತ್ತು ವ್ಯವಹಾರ ಸಮ್ಯಕ್ತ್ವವು ಪರೋಕ್ಷವಿದೆ'ಯೆಂದು ತಾವು ಬರೆದಿದ್ದೀರಿ, ಆದರೆ ಹಾಗೆ ಇಲ್ಲ. ಸಮ್ಯಕ್ತ್ವದಲ್ಲಂತೂ ಮೂರು ಭೇದಗಳಿದ್ದು ಅವುಗಳಲ್ಲಿ ಉಪಶಮಸಮ್ಯಕ್ತ್ವ ಮತ್ತು ಕ್ಷಾಯಿಕ ಸಮ್ಯಕ್ತ್ವವು ನಿರ್ಮಲವಿವೆ, ಏಕೆಂದರೆ ಅವು ಮಿಥ್ಯಾತ್ವದ ಉದಯದಿಂದ ರಹಿತವಿವೆ, ಇನ್ನು ಕ್ಷಯೋಪಶಮ ಸಮ್ಯಕ್ತ್ವವು ಸಮಲವಿದೆ, ಏಕೆಂದರೆ ಸಮ್ಯಕ್ತ್ವವು ಮೋಹನೀಯದ ಉದಯದಿಂದ ಸಹಿತವಿದೆ. ಆದರೆ ಈ ಸಮ್ಯಕ್ತ್ವದಲ್ಲಿ ಪ್ರತ್ಯಕ್ಷ-ಪರೋಕ್ಷದ ಯಾವ ಭೇದಗಳು ಇಲ್ಲ.

ಕ್ಷಾಯಿಕ ಸಮ್ಯಕ್ತ್ವಿಯು ಶುಭಾಶುಭರೂಪದಿಂದ ಪ್ರವರ್ತಿಸುವಾಗ ಮತ್ತು ಸ್ವಾನುಭವರೂಪದಿಂದ ಪ್ರವರ್ತಿಸುವಾಗ ಸಮ್ಯಕ್ತ್ವಗುಣವಂತೂ ಸಮಾನವೇ ಇರುವುದರಿಂದ ಸಮ್ಯಕ್ತ್ವದಲ್ಲಿ ಪ್ರತ್ಯಕ್ಷ-ಪರೋಕ್ಷವೆಂಬ ಭೇದ ಮನ್ನಿಸಬಾರದು.

ಅದರಂತೆ ಪ್ರಮಾಣದಲ್ಲಿ ಪ್ರತ್ಯಕ್ಷ-ಪರೋಕ್ಷಗಳೆಂಬ ಭೇದಗಳಿದ್ದು ಅದು ಪ್ರಮಾಣ ಸಮ್ಯಗ್ಜ್ಞಾನವಿದೆ, ಆದುದರಿಂದ ಮತಿಜ್ಞಾನ-ಶ್ರುತಜ್ಞಾನಗಳಂತೂ ಪರೋಕ್ಷ ಪ್ರಮಾಣವಿವೆ, ಅವಧಿ-ಮನಃಪರ್ಯಾಯ- ಕೇವಲಜ್ಞಾನಗಳು ಪ್ರತ್ಯಕ್ಷ ಪ್ರಮಾಣವಿವೆ. **'ಆದ್ಯೇ ಪರೋಕ್ಷಂ ಪ್ರತ್ಯಕ್ಷಮನ್ಯತ್'** (ತತ್ತ್ವಾರ್ಥಸೂತ್ರ ಅ. ೧, ಸೂತ್ರ ೧೧-೧೨) ಎಂದು ಸೂತ್ರದ ವಚನವಿದೆ. ಅದರಂತೆ ತರ್ಕಶಾಸ್ತ್ರದಲ್ಲಿ **'ಸ್ಪಷ್ಟ ಪ್ರತಿಭಾಸಾತ್ಮಕಂ ಪ್ರತ್ಯಕ್ಷ ಮಸ್ಪಷ್ಟಂ ಪರೋಕ್ಷ!'** ಎಂದು ಪ್ರತ್ಯಕ್ಷ-ಪರೋಕ್ಷದ ಲಕ್ಷಣ ಹೇಳಲಾಗಿದೆ.

ಯಾವ ಜ್ಞಾನವು ತನ್ನ ವಿಷಯವನ್ನು ನಿರ್ಮಲರೂಪದಿಂದ ಸ್ಪಷ್ಟವಾಗಿ ಒಳ್ಳೆಯ ರೀತಿಯಿಂದ ತಿಳಿಯುವುದು ಅದು ಪ್ರತ್ಯಕ್ಷವಿದೆ ಮತ್ತು ಯಾವುದು ಸ್ಪಷ್ಟವಾಗಿ ಒಳ್ಳೆಯ ರೀತಿಯಿಂದ ತಿಳಿಯುವುದಿಲ್ಲ ಅದು ಪರೋಕ್ಷವಿದೆ. ಅಲ್ಲಿ ಮತಿಜ್ಞಾನ-ಶ್ರುತಜ್ಞಾನದ ವಿಷಯಗಳಂತೂ ವಿಪುಲವಾಗಿದ್ದರೂ ಒಂದೂ ಜ್ಞೇಯವನ್ನು ಸಂಪೂರ್ಣವಾಗಿ ತಿಳಿಯುವ ಸಾಧ್ಯತೆಯಿಲ್ಲದಿರುವುದರಿಂದ ಪರೋಕ್ಷವೆಂದು ಹೇಳಿದೆ ಮತ್ತು ಅವಧಿ-ಮನಃಪರ್ಯಾಯ ಜ್ಞಾನದ ವಿಷಯಗಳು ಕಡಿಮೆಯಿದ್ದರೂ ತಮ್ಮ ವಿಷಯಗಳನ್ನು ಸ್ಪಷ್ಟವಾಗಿ ಒಳ್ಳೆಯ ರೀತಿಯಿಂದ ತಿಳಿಯುತ್ತಿರುವುದರಿಂದ ಏಕದೇಶ ಪ್ರತ್ಯಕ್ಷವಿವೆ ಮತ್ತು ಕೇವಲಜ್ಞಾನವು ಎಲ್ಲ ಜ್ಞೇಯಗಳನ್ನು ಸ್ವಯಂ ಸ್ಪಷ್ಟವಾಗಿ ತಿಳಿಯುತ್ತಿರುವುದರಿಂದ ಸರ್ವಪ್ರತ್ಯಕ್ಷವಿದೆ.

ಮತ್ತು ಪ್ರತ್ಯಕ್ಷದಲ್ಲಿ ಪರಮಾರ್ಥಪ್ರತ್ಯಕ್ಷ ಹಾಗೂ ಸಾಂವ್ಯವಹಾರಿಕ ಪ್ರತ್ಯಕ್ಷವೆಂದು ಎರಡು ಭೇದಗಳಿವೆ. ಅಲ್ಲಿ ಅವಧಿ, ಮನಃಪರ್ಯಾಯ ಮತ್ತು ಕೇವಲಜ್ಞಾನಗಳಂತೂ ಸ್ಪಷ್ಟ ಪ್ರತಿಭಾಸರೂಪವಾಗಿಯೇ ಇರುವುದರಿಂದ ಪಾರಮಾರ್ಥಿಕ ಪ್ರತ್ಯಕ್ಷವಿವೆ. ಅದರಂತೆ ಕಣ್ಣುಗಳಿಂದ ವರ್ಣಾದಿಗಳನ್ನು ತಿಳಿಯುತ್ತಾರೆ, ಆಗ 'ಇವನು ವರ್ಣಾದಿಗಳನ್ನು ಪ್ರತ್ಯಕ್ಷ ತಿಳಿದ'ನೆಂದು ಹೇಳುತ್ತಾರೆ, ಅಲ್ಲಿ ಏಕದೇಶ ನಿರ್ಮಲತೆಯೂ ಕಂಡು ಬರುತ್ತಿರುವುದರಿಂದ ಇವನ್ನು ಸಾಂವ್ಯವಹಾರಿಕ ಪ್ರತ್ಯಕ್ಷವೆಂದು ಹೇಳುತ್ತಾರೆ; ಆದರೆ ಒಂದು ವಸ್ತುವಿನಲ್ಲಿ ಅನೇಕ ಮಿಶ್ರವರ್ಣಗಳಿದ್ದು ಅವನ್ನು ಕಣ್ಣುಗಳ ಮೂಲಕ ಒಳ್ಳೆಯ ರೀತಿಯಿಂದ ಗ್ರಹಣ ಮಾಡಲಾಗುವುದಿಲ್ಲ, ಆದುದರಿಂದ ಇವನ್ನು ಪರಮಾರ್ಥ-ಪ್ರತ್ಯಕ್ಷವೆಂದು ಹೇಳಲಾಗುವುದಿಲ್ಲ.

ಅದರಂತೆ ಪರೋಕ್ಷ ಪ್ರಮಾಣದಲ್ಲಿ ಸ್ಮೃತಿ, ಪ್ರತ್ಯಭಿಜ್ಞಾನ, ತರ್ಕ, ಅನುಮಾನ ಮತ್ತು ಆಗಮವೆಂದು ಐದು ಭೇದಗಳಿವೆ.

ಅಲ್ಲಿ ಪೂರ್ವಕಾಲದಲ್ಲಿ ಯಾವ ವಸ್ತುವನ್ನು ತಿಳಿದುಕೊಂಡಿತ್ತು ಅದನ್ನು ಸ್ಮರಣೆ ಮಾಡಿಕೊಂಡು ತಿಳಿಯುವುದಕ್ಕೆ ಸ್ಮೃತಿಯೆಂದು ಹೇಳುತ್ತಾರೆ. ದೃಷ್ಟಾಂತದ ಮೂಲಕ ವಸ್ತುವಿನ ನಿಶ್ಚಯ ಮಾಡಲಾಗುವುದಕ್ಕೆ ಪ್ರತ್ಯಭಿಜ್ಞಾನವೆಂದು ಹೇಳುತ್ತಾರೆ. ಹೇತುವಿನ ವಿಚಾರಯುಕ್ತವಾದ ಜ್ಞಾನವನ್ನು ತರ್ಕವೆಂದು ಹೇಳುತ್ತಾರೆ. ಹೇತುವಿನಿಂದ ಸಾಧ್ಯವಾದ ವಸ್ತುವಿನ ಜ್ಞಾನವನ್ನು ಅನುಮಾನವೆಂದು ಹೇಳುತ್ತಾರೆ. ಆಗಮದಿಂದಾಗುವ ಜ್ಞಾನವನ್ನು ಆಗಮವೆಂದು ಹೇಳುತ್ತಾರೆ.

ಹೀಗೆ ಪ್ರತ್ಯಕ್ಷ-ಪರೋಕ್ಷ ಪ್ರಮಾಣದ ಭೇದಗಳನ್ನು ಹೇಳಿದ್ದಾರೆ.

ಅಲ್ಲಿ ಈ ಸ್ವಾನುಭವದಶೆಯಲ್ಲಿ ಆತ್ಮನನ್ನು ತಿಳಿಯಲಾಗುತ್ತದೆ ಅದು ಶ್ರುತಜ್ಞಾನದ ಮೂಲಕ ತಿಳಿಯಲಾಗುತ್ತದೆ. ಶ್ರುತಜ್ಞಾನವು ಮತಿಜ್ಞಾನಪೂರ್ವಕವಾಗಿಯೇ ಇದೆ. ಆ ಮತಿಜ್ಞಾನ-ಶ್ರುತಜ್ಞಾನಗಳನ್ನು ಪರೋಕ್ಷವೆಂದು ಹೇಳಿದ್ದಾರೆ, ಆದುದರಿಂದ ಇಲ್ಲಿ ಆತ್ಮನನ್ನು ತಿಳಿಯುವುದು ಪ್ರತ್ಯಕ್ಷವಿಲ್ಲ. ಅದರಂತೆ ಅವಧಿ-ಮನಃಪರ್ಯಾಯದ ವಿಷಯವು ರೂಪೀ ಪದಾರ್ಥವೇ ಇದೆ ಮತ್ತು ಕೇವಲಜ್ಞಾನವು ಛದ್ಮಸ್ಥರಿಗೆ ಇಲ್ಲದಿರುವುದರಿಂದ ಅನುಭವದಲ್ಲಿ ಅವಧಿ-ಮನಃಪರ್ಯಾಯ-ಕೇವಲದ ಮೂಲಕ ಆತ್ಮನನ್ನು ತಿಳಿಯುವುದಿಲ್ಲ. ಮತ್ತು ಇಲ್ಲಿ ಆತ್ಮನನ್ನು ಸ್ಪಷ್ಟವಾಗಿ ಒಳ್ಳೆಯರೀತಿಯಿಂದ ತಿಳಿಯದಿರುವುದರಿಂದ ಪಾರಮಾರ್ಥಿಕ ಪ್ರತ್ಯಕ್ಷತೆಯಂತೂ ಸಂಭವವಿಲ್ಲ.

ಕಣ್ಣುಗಳಿಂದ ಹೇಗೆ ವರ್ಣಾದಿಗಳನ್ನು ತಿಳಿಯುತ್ತಾರೆ ಹಾಗೆ ಏಕದೇಶ ನಿರ್ಮಲತೆಯೊಡನೆ ಕೂಡ ಆತ್ಮನ ಅಸಂಖ್ಯಾತ ಪ್ರದೇಶಾದಿಗಳನ್ನು ತಿಳಿಯುವುದಿಲ್ಲ, ಆದುದರಿಂದ ಸಾಂವ್ಯವಹಾರಿಕ ಪ್ರತ್ಯಕ್ಷತನವು ಕೂಡ ಸಂಭವವಿಲ್ಲ.

ಇಲ್ಲಿಯಂತೂ ಆಗಮ-ಅನುಮಾನಾದಿಗಳ ಪರೋಕ್ಷ ಜ್ಞಾನದಿಂದ ಆತ್ಮನ ಅನುಭವವಾಗುತ್ತದೆ. ಜೈನಾಗಮದಲ್ಲಿ ಹೇಗೆ ಆತ್ಮನ ಸ್ವರೂಪ ಹೇಳಿದೆ ಹಾಗೆ ಅದನ್ನು ತಿಳಿದುಕೊಂಡು ಅದರಲ್ಲಿ ಪರಿಣಾಮಗಳನ್ನು ಮಗ್ನ ಮಾಡುವುದರಿಂದ ಆಗಮಪರೋಕ್ಷ ಪ್ರಮಾಣವೆಂದು ಹೇಳುತ್ತಾರೆ. ಅಥವಾ 'ನಾನು ಆತ್ಮನೇ ಇದ್ದೇನೆ, ಏಕೆಂದರೆ ನನ್ನಲ್ಲಿ ಜ್ಞಾನವಿದೆ; ಎಲ್ಲೆಲ್ಲಿ ಜ್ಞಾನವಿದೆ ಅಲ್ಲಲ್ಲಿ ಆತ್ಮನಿದ್ದಾನೆ. ಹೇಗೆಂದರೆ ಸಿದ್ಧಾದಿಕರಿದ್ದಾರೆ; ಮತ್ತು ಎಲ್ಲಿ ಆತ್ಮನಿಲ್ಲ ಅಲ್ಲಿ ಜ್ಞಾನವೂ ಇಲ್ಲ, ಹೇಗೆಂದರೆ ಮೃತಶರೀರಾದಿಗಳಿವೆ' ಈ ಪ್ರಕಾರ ಅನುಮಾನದ ಮೂಲಕ ವಸ್ತುವಿನ ನಿರ್ಣಯ ಮಾಡಿ ಅದರಲ್ಲಿ ಪರಿಣಾಮವನ್ನು ಮಗ್ನಮಾಡುವುದರಿಂದ ಅನುಮಾನಪರೋಕ್ಷಪ್ರಮಾಣವೆಂದು ಹೇಳಲಾಗುತ್ತದೆ. ಅಥವಾ ಆಗಮ-ಅನುಮಾನಾದಿಗಳ ಮೂಲಕ ಯಾವ ವಸ್ತುವು ತಿಳಿಯುವುದರಲ್ಲಿ ಬರುವುದು ಅದನ್ನೇ ಸ್ಮರಣೆಯಲ್ಲಿಟ್ಟುಕೊಂಡು ಅದರಲ್ಲಿ ಪರಿಣಾಮವನ್ನು ಮಗ್ನಮಾಡುವುದರಿಂದ ಸ್ಮೃತಿಯೆಂದು ಕರೆಯಿಸಿಕೊಳ್ಳುತ್ತದೆ. ಇವೇ ಮೊದಲಾದ ಪ್ರಕಾರದಿಂದ ಸ್ವಾನುಭವದಲ್ಲಿ ಪರೋಕ್ಷ ಪ್ರಮಾಣದ ಮೂಲಕವೇ ಆತ್ಮನನ್ನು ತಿಳಿಯುವುದಾಗುತ್ತದೆ. ಅನಂತರ ಯಾವ ಸ್ವರೂಪ ತಿಳಿಯುವುದು ಅದರಲ್ಲಿ ಪರಿಣಾಮಗಳು ಮಗ್ನವಾಗುತ್ತವೆ. ಪರಿಣಾಮಗಳು ಮಗ್ನವಾದ ನಂತರ ಯಾವ ವಿಶೇಷದ ತಿಳಿವಳಿಕೆಯಾಗುವುದಿಲ್ಲ.

**ಪ್ರಶ್ನೆ :- ಒಂದುವೇಳೆ ಸವಿಕಲ್ಪ-ನಿರ್ವಿಕಲ್ಪದಲ್ಲಿ ತಿಳಿದುಕೊಳ್ಳುವುದರ ವಿಶೇಷತೆಯಿಲ್ಲದಿದ್ದರೆ ಅಧಿಕ ಆನಂದವು ಹೇಗಾಗುತ್ತದೆ ?**

**ಉತ್ತರ :-** ಸವಿಕಲ್ಪದಶೆಯಲ್ಲಿ ಜ್ಞಾನವು ಅನೇಕ ಜ್ಞೇಯಗಳನ್ನು ತಿಳಿಯುವ ರೂಪವಾಗಿ ಪ್ರವರ್ತಿಸುತ್ತಿತ್ತು, ನಿರ್ವಿಕಲ್ಪದಶೆಯಲ್ಲಿ ಕೇವಲ ಆತ್ಮನನ್ನೇ ತಿಳಿಯುವುದಿದೆ; ಇದಂತೂ ಒಂದು ವಿಶೇಷತೆಯಿದೆ. ಇನ್ನೊಂದು ವಿಶೇಷತೆಯೆಂದರೆ ಯಾವ ಪರಿಣಾಮವು ನಾನಾ ವಿಕಲ್ಪಗಳಲ್ಲಿ ಪರಿಣಮಿಸುತ್ತಿತ್ತು ಅದು ಈಗ ಸ್ವರೂಪದಲ್ಲಿಯೇ ತಾದಾತ್ಮ್ಯರೂಪವಾಗಿ ಪ್ರವೃತ್ತವಾಯಿತು; ಇದು ಎರಡನೇ ವಿಶೇಷತೆಯಿದೆ.

ಇಂಥ ವಿಶೇಷತೆಗಳಾದ ಮೇಲೆ ಯಾವುದೇ ಒಂದು ವಚನಾತೀತವಾದ ಅಪೂರ್ವ ಆನಂದವಾಗುತ್ತದೆ, ವಿಷಯ ಸೇವನೆಯಲ್ಲಿ ಅದರ ಜಾತಿಯ ಅಂಶವೂ ಇಲ್ಲದಿರುವುದರಿಂದ ಆ ಆನಂದವನ್ನು ಅತೀಂದ್ರಿಯವೆಂದು ಹೇಳುತ್ತಾರೆ.

**ಪ್ರಶ್ನೆ :- ಅನುಭವದಲ್ಲಿ ಕೂಡ ಆತ್ಮನು ಪರೋಕ್ಷನೇ ಇದ್ದರೆ ಗ್ರಂಥಗಳಲ್ಲಿ ಅನುಭವವನ್ನು ಪ್ರತ್ಯಕ್ಷವೆಂದು ಹೇಗೆ ಹೇಳುತ್ತಾರೆ? 'ಪಚ್ಚಕ್ಖೋ ಅಣುಹವೋ ಜಮ್ಹಾ' ಎಂದು ಮೇಲಿನ ಗಾಥೆಯಲ್ಲೇ ಹೇಳಿದ್ದಾರೆ ಅದು ಹೇಗೆ ?**

**ಉತ್ತರ :-** ಆತ್ಮನು ಅನುಭವದಲ್ಲಿ ಪರೋಕ್ಷನೇ ಇದ್ದಾನೆ, ಆತ್ಮನ ಪ್ರದೇಶ-ಆಕಾರಗಳೇನು ಭಾಸವಾಗುವುದಿಲ್ಲ; ಆದರೆ ಸ್ವರೂಪದಲ್ಲಿ ಪರಿಣಾಮವು ಮಗ್ನವಾಗುವುದರಿಂದ ಯಾವ ಸ್ವಾನುಭವವಾಗುವುದು ಅದು ಸ್ವಾನುಭವ ಪ್ರತ್ಯಕ್ಷವಿದೆ. ಸ್ವಾನುಭವದ ಸ್ವಾದವು ಯಾವ ಆಗಮ-ಅನುಮಾನಾದಿಗಳ ಪರೋಕ್ಷ ಪ್ರಮಾಣದ ಮೂಲಕ ತಿಳಿದು ಬರುವುದಿಲ್ಲ, ಆ ಅನುಭವದ ರಸಾಸ್ವಾದವನ್ನು ತಾನೇ ಅನುಭವಿಸುತ್ತಾನೆ. ಹೇಗೆಂದರೆ ಯಾವನೋ ಓರ್ವ ಅಂಧ ಪುರುಷನು ಕಲ್ಲುಸಕ್ಕರೆಯನ್ನು ಆಸ್ವಾದಿಸುತ್ತಾನೆ, ಆಗ ಕಲ್ಲು ಸಕ್ಕರೆಯ ಆಕಾರಾದಿಗಳಂತೂ ಪರೋಕ್ಷವಿವೆ, ನಾಲಗೆಯಿಂದ

ಸ್ವಾದ ತೆಗೆದುಕೊಂಡಿದೆ ಆ ಸ್ವಾದವು ಪ್ರತ್ಯಕ್ಷವಿದೆ. ಹಾಗೆ ಸ್ವಾನುಭವದಲ್ಲಿ ಆತ್ಮನು ಪರೋಕ್ಷನಿದ್ದಾನೆ, ಯಾವ ಪರಿಣಾಮದಿಂದ ಸ್ವಾದ ಬಂದಿದೆ ಆ ಸ್ವಾದವು ಪ್ರತ್ಯಕ್ಷವಿದೆಯೆಂದು ತಿಳಿಯುವುದು.

ಅಥವಾ ಯಾವುದೇ ಪ್ರತ್ಯಕ್ಷದ ರೀತಿಯಲ್ಲೇ ಇರುವುದು ಅದನ್ನು ಕೂಡ ಪ್ರತ್ಯಕ್ಷವೆಂದು ಹೇಳುತ್ತಾರೆ. ಯಾವ ಪ್ರಕಾರ 'ನಾವು ಸ್ವಪ್ನದಲ್ಲಿ ಅಥವಾ ಧ್ಯಾನದಲ್ಲಿ ಇಂಥ ಪುರುಷನನ್ನು ಪ್ರತ್ಯಕ್ಷ ನೋಡಿದೆವೆ'ಂದು ಲೋಕದಲ್ಲಿ ಹೇಳುತ್ತಾರೆ; ಅಲ್ಲೇನು ಪ್ರತ್ಯಕ್ಷ ನೋಡಿಲ್ಲ, ಆದರೆ ಪ್ರತ್ಯಕ್ಷದ ರೀತಿಯಲ್ಲೇ ಪ್ರತ್ಯಕ್ಷದಂತೆ ಯಥಾರ್ಥ ನೋಡಿರುವುದರಿಂದ ಅದನ್ನು ಪ್ರತ್ಯಕ್ಷವೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಆತ್ಮನು ಅನುಭವದಲ್ಲಿ ಪ್ರತ್ಯಕ್ಷದ ರೀತಿಯಲ್ಲಿ ಯಥಾರ್ಥ ಪ್ರತಿಭಾಸಿತನಾಗುತ್ತಿರುವುದರಿಂದ ಈ ನ್ಯಾಯದಿಂದ ಆತ್ಮನನ್ನು ಕೂಡ ಪ್ರತ್ಯಕ್ಷ ತಿಳಿಯಲಾಗುತ್ತದೆಯೆಂದು ಹೇಳಿದರೆ ದೋಷವಿಲ್ಲ. ಕಥನವಂತೂ ಅನೇಕ ಪ್ರಕಾರದಿಂದಿದ್ದು ಅದನ್ನು ಸಮಸ್ತ ಆಗಮ ಅಧ್ಯಾತ್ಮ ಶಾಸ್ತ್ರಗಳೊಡನೆ ವಿರೋಧವಾಗದ ಹಾಗೆ ವಿವಕ್ಷಾಭೇದದಿಂದ ಕಥನವನ್ನು ತಿಳಿದುಕೊಳ್ಳಬೇಕು.

**ಪ್ರಶ್ನೆ :- ಇಂಥ ಅನುಭವವು ಯಾವ ಗುಣಸ್ಥಾನದಲ್ಲಿ ಆಗುತ್ತದೆ ?**

**ಉತ್ತರ :-** ನಾಲ್ಕರಿಂದಲೇ ಆಗುತ್ತದೆ, ಆದರೆ ನಾಲ್ಕನೆಯದರಲ್ಲಿ ಅಧಿಕ ಕಾಲದ ಅಂತರಾಳದಿಂದ ಆಗುತ್ತದೆ ಮತ್ತು ಮೇಲಿನ ಗುಣಸ್ಥಾನಗಳಲ್ಲಿ ಶೀಘ್ರ-ಶೀಘ್ರವಾಗಿ ಆಗುತ್ತದೆ.

**ಪ್ರಶ್ನೆ :- ಅನುಭವವಂತೂ ನಿರ್ವಿಕಲ್ಪವಿದ್ದ ಮೇಲೆ ಮೇಲಿನ ಮತ್ತು ಕೆಳಗಿನ ಗುಣಸ್ಥಾನಗಳಲ್ಲಿ ಭೇದವೇನು?**

**ಉತ್ತರ :-** ಪರಿಣಾಮಗಳ ಮಗ್ನತೆಯಲ್ಲಿ ವಿಶೇಷವಿದೆ. ಯಾವ ಪ್ರಕಾರ ಈರ್ವರು ಪುರುಷರು ನಾಮಸ್ಮರಣೆ ಮಾಡುತ್ತಾರೆ ಮತ್ತು ಅವರೀರ್ವರ ಪರಿಣಾಮಗಳು ನಾಮಸ್ಮರಣೆಯಲ್ಲಿವೆ; ಅಲ್ಲಿ ಒಬ್ಬನ ಮಗ್ನತೆಯು ವಿಶೇಷವಿದ್ದರೆ ಇನ್ನೊಬ್ಬನದು ಅಲ್ಪವಿರುತ್ತದೆ. ಅದೇ ಪ್ರಕಾರ ತಿಳಿಯುವುದು.

**ಪ್ರಶ್ನೆ :- ಒಂದು ವೇಳೆ ನಿರ್ವಿಕಲ್ಪ ಅನುಭವದಲ್ಲಿ ಯಾವ ವಿಕಲ್ಪಗಳಿಲ್ಲದಿದ್ದರೆ ಶುಕ್ಲಧ್ಯಾನದ ಮೊದಲನೆಯ ಭೇದವಾದ ಪೃಥಕ್ತ್ವವಿತರ್ಕವೀಚಾರ ಹೇಳಿದೆ, ಅಲ್ಲಿ 'ಪೃಥಕ್ತ್ವವಿತರ್ಕ'- ನಾನಾಪ್ರಕಾರದ ಶ್ರುತದ 'ವೀಚಾರ' ಎಂದರೆ ಅರ್ಥ-ವ್ಯಂಜನ-ಯೋಗಸಂಕ್ರಮಣವೆಂದೇಕೆ ಹೇಳಿದೆ ?**

**ಉತ್ತರ :-** ಕಥನವು ಸ್ಥೂಲರೂಪ ಮತ್ತು ಸೂಕ್ಷ್ಮರೂಪವೆಂದು ಎರಡು ಪ್ರಕಾರದ್ದಿದೆ. ಹೇಗೆಂದರೆ ಸ್ಥೂಲತೆಯಿಂದ ಆರನೆಯ ಗುಣಸ್ಥಾನದಲ್ಲಿಯೇ ಸಂಪೂರ್ಣ ಬ್ರಹ್ಮಚರ್ಯ ವ್ರತವನ್ನು ಹೇಳಿದೆ ಮತ್ತು ಸೂಕ್ಷ್ಮತೆಯಿಂದ ಒಂಭತ್ತನೆಯ ಗುಣಸ್ಥಾನದವರೆಗೆ ಮೈಥುನ ಸಂಜ್ಞೆಯನ್ನು ಹೇಳಿದೆ; ಅದೇ ಪ್ರಕಾರ ಇಲ್ಲಿ ಅನುಭವದಲ್ಲಿ ನಿರ್ವಿಕಲ್ಪತೆಯನ್ನು ಸ್ಥೂಲರೂಪದಿಂದ ಹೇಳುತ್ತಾರೆ. ಅದರಂತೆ ಸೂಕ್ಷ್ಮತೆಯಿಂದ ಪೃಥಕ್ತ್ವವಿತರ್ಕವೀಚಾರ ಮೊದಲಾದ ಭೇದಗಳನ್ನು ಹಾಗೂ ಕಷಾಯಾದಿಗಳನ್ನು ಹತ್ತನೆಯ ಗುಣಸ್ಥಾನದವರೆಗೆ ಹೇಳಿದ್ದಾರೆ. ಅಲ್ಲಿ ತನ್ನ ತಿಳಿಯುವಿಕೆಯಲ್ಲಿ ಹಾಗೂ ಇತರರ ತಿಳಿಯುವಿಕೆಯಲ್ಲಿ ಬರುವಂಥ ಭಾವದ ಕಥನವು ಸ್ಥೂಲವೆಂದು ತಿಳಿಯುವುದು ಮತ್ತು ಯಾವುದನ್ನು ತಾನೂ ತಿಳಿಯುವುದಿಲ್ಲ ಅದನ್ನು ಕೇವಲೀ ಭಗವಂತರೇ ತಿಳಿಯುತ್ತಾರೆ, ಅಂಥ ಭಾವದ ಕಥನವು ಸೂಕ್ಷ್ಮವೆಂದು ತಿಳಿಯುವುದು. ಚರಣಾನುಯೋಗ ಮೊದಲಾದುವಲ್ಲಿ ಸ್ಥೂಲ ಕಥನದ ಮುಖ್ಯತೆಯಿದ್ದರೆ ಕರಣಾನುಯೋಗದಲ್ಲಿ ಸೂಕ್ಷ್ಮಕಥನದ ಮುಖ್ಯತೆಯಿದೆ. ಇಂಥ ಭೇದವನ್ನು ಇತರೆಡೆಗಳಲ್ಲಿಯೂ ತಿಳಿಯುವುದು.

ಈ ಪ್ರಕಾರ ನಿರ್ವಿಕಲ್ಪ ಅನುಭವದ ಸ್ವರೂಪವನ್ನು ತಿಳಿಯುವುದು.

ಅದರಂತೆ ತಾವು ಮೂರು ದೃಷ್ಟಾಂತಗಳನ್ನು ಕೊಟ್ಟು ಆ ದೃಷ್ಟಾಂತದಲ್ಲಿ ಪ್ರಶ್ನೆ ಕೇಳಿದ್ದೀರಿ, ಆದರೆ ಸೋದರರೇ! ದೃಷ್ಟಾಂತವು ಸರ್ವಾಂಗದಿಂದ ಹೊಂದಿಕೆಯಾಗುವುದಿಲ್ಲ. ದೃಷ್ಟಾಂತವು ಅದು ಒಂದು ಪ್ರಯೋಜನವನ್ನು ತಿಳಿಸಿಕೊಡುತ್ತದೆ; ಆದುದರಿಂದ ಇಲ್ಲಿ ಬಿದಿಗೆಯ ಚಂದ್ರ, ಜಲಬಿಂದು, ಬೆಂಕಿಯ ಕಿಡಿ- ಇವಂತೂ ಏಕದೇಶವಿವೆ, ಮತ್ತು ಪೂರ್ಣಿಮೆಯಚಂದ್ರ, ಮಹಾಸಾಗರ ಹಾಗೂ ಅಗ್ನಿಕುಂಡ ಇವು ಸರ್ವದೇಶವಿವೆ,. ಅದೇ ಪ್ರಕಾರ ನಾಲ್ಕನೆಯ ಗುಣಸ್ಥಾನದಲ್ಲಿ ಆತ್ಮನ ಜ್ಞಾನ ಮೊದಲಾದ ಗುಣಗಳು ಏಕದೇಶ ಪ್ರಕಟವಾಗಿರುತ್ತವೆ, ಇನ್ನು ಹದಿಮೂರನೆಯ ಗುಣಸ್ಥಾನದಲ್ಲಿ ಆತ್ಮನ ಜ್ಞಾನ ಮೊದಲಾದ ಗುಣಗಳು ಸರ್ವಥಾ ಪ್ರಕಟವಾಗುತ್ತವೆ; ಮತ್ತು ಹೇಗೆ ದೃಷ್ಟಾಂತಗಳ ಜಾತಿಯು ಒಂದು ಇದೆ ಹಾಗೆಯೇ ಎಷ್ಟು ಗುಣಗಳು ಅವಿರತ ಸಮ್ಯಗ್ದೃಷ್ಟಿಗೆ ಪ್ರಕಟವಾಗಿವೆ ಅವುಗಳ ಮತ್ತು ಹದಿಮೂರನೆಯ ಗುಣಸ್ಥಾನದಲ್ಲಿ ಯಾವ ಗುಣಗಳು ಪ್ರಕಟವಾಗುತ್ತವೆ ಅವುಗಳ ಜಾತಿಯು ಒಂದು ಇದೆ.

**ಪ್ರಶ್ನೆ ಃ- ಒಂದು ಜಾತಿಯದಿದ್ದರೆ ಯಾವ ಪ್ರಕಾರ ಕೇವಲಿಗಳು ಸಮಸ್ತ ಜ್ಞೇಯಗಳನ್ನು ಪ್ರತ್ಯಕ್ಷ ತಿಳಿಯುತ್ತಾರೆ ಅದೇ ಪ್ರಕಾರ ನಾಲ್ಕನೆಯ ಗುಣಸ್ಥಾನವುಳ್ಳವರೂ ಆತ್ಮನನ್ನು ಪ್ರತ್ಯಕ್ಷ ತಿಳಿಯುತ್ತಿರಬೇಕು?**

**ಉತ್ತರ ಃ-** ಸೋದರರೇ ಪ್ರತ್ಯಕ್ಷತೆಯ ಅಪೇಕ್ಷೆಯಿಂದ ಒಂದು ಜಾತಿಯಿಲ್ಲ, ಸಮ್ಯಗ್ಜ್ಞಾನದ ಅಪೇಕ್ಷೆಯಿಂದ ಒಂದು ಜಾತಿಯಿದೆ. ನಾಲ್ಕನೆಯ ಗುಣಸ್ಥಾನವುಳ್ಳವರಿಗೆ ಮತಿ-ಶ್ರುತರೂಪದ ಸಮ್ಯಗ್ಜ್ಞಾನವಿದ್ದರೆ ಹದಿಮೂರನೆಯ ಗುಣಸ್ಥಾನವುಳ್ಳವರಿಗೆ ಕೇವಲಜ್ಞಾನರೂಪದ ಸಮ್ಯಗ್ಜ್ಞಾನವಿದೆ. ಅದರಂತೆ ಏಕದೇಶ-ಸರ್ವದೇಶದ ಅಂತರವೆಂದರೆ ಮತಿ-ಶ್ರುತಜ್ಞಾನವುಳ್ಳವನು ಅಮೂರ್ತಿಕ ವಸ್ತುವನ್ನು ಅಪ್ರತ್ಯಕ್ಷ, ಮತ್ತು ಮೂರ್ತಿಕ ವಸ್ತುವನ್ನು ಕೂಡ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಒಂದಿಷ್ಟು ಅನುಕ್ರಮದಿಂದ ತಿಳಿಯುತ್ತಾನೆ ಮತ್ತು ಸರ್ವಥಾ ಸಮಸ್ತ ವಸ್ತುಗಳನ್ನು ಕೇವಲ ಜ್ಞಾನವು ಯುಗಪತ್ ತಿಳಿಯುತ್ತದೆ; ಅವನು ಪರೋಕ್ಷ ತಿಳಿಯುತ್ತಾನೆ ಇವರು ಪ್ರತ್ಯಕ್ಷ ತಿಳಿಯುತ್ತಾರೆ ಇದಿಷ್ಟೇ ವಿಶೇಷವಿದೆ. ಮತ್ತು ಎಲ್ಲ ಪ್ರಕಾರದಿಂದ ಒಂದೇ ಜಾತಿಯೆಂದು ಹೇಳಿದರೆ ಯಾವ ಪ್ರಕಾರ ಕೇವಲಿಗಳು ಯುಗಪತ್ ಪ್ರತ್ಯಕ್ಷ ಅಪ್ರಯೋಜನರೂಪವಾದ ಜ್ಞೇಯಗಳನ್ನು ನಿರ್ವಿಕಲ್ಪರೂಪದಿಂದ ತಿಳಿಯುತ್ತಾರೆ, ಅದೇ ಪ್ರಕಾರ ಇವನು ಕೂಡ ತಿಳಿಯುತ್ತಾನೆಂಬುದಾಗಿಲ್ಲ; ಆದುದರಿಂದ ಪ್ರತ್ಯಕ್ಷ ಪರೋಕ್ಷದ ವಿಶೇಷತೆಯನ್ನು ತಿಳಿಯಬೇಕು.

ಅಷ್ಟಸಹಸ್ರಿಯಲ್ಲಿ ಇದನ್ನೇ ಹೇಳುತ್ತಾರೆ,-

**ಸ್ಯಾದ್ವಾದಕೇವಲಜ್ಞಾನೇ ಸರ್ವತತ್ತ್ವಪ್ರಕಾಶನೇ ।**

**ಭೇದಃ ಸಾಕ್ಷಾದಸಾಕ್ಷಾಚ್ಚ ಹ್ಯವಸ್ತ್ವನ್ಯತಮಂ ಭವೇತ್ ॥** ಅಷ್ಟಸಹಸ್ರೀ ಹತ್ತನೇಪರಿಚ್ಛೇದ-೧೦೫

**ಅರ್ಥ ಃ-** ಸ್ಯಾದ್ವಾದ ಎಂದರೆ ಶ್ರುತಜ್ಞಾನ ಮತ್ತು ಕೇವಲಜ್ಞಾನ ಇವೆರಡೂ ಸಮಸ್ತ ತತ್ತ್ವಗಳನ್ನು ಪ್ರಕಟಪಡಿಸುವಂಥವಿವೆ. ವಿಶೇಷವೆಂದರೆ ಕೇವಲಜ್ಞಾನವು ಪ್ರತ್ಯಕ್ಷವಿದೆ, ಶ್ರುತಜ್ಞಾನವು ಪರೋಕ್ಷವಿದೆ. ಆದರೆ ವಸ್ತುವಿದೆ ಅದು ಬೇರೆಯಿಲ್ಲ.

ಅದರಂತೆ ತಾವು ನಿಶ್ಚಯ ಸಮ್ಯಕ್ತ್ವದ ಮತ್ತು ವ್ಯವಹಾರ ಸಮ್ಯಕ್ತ್ವದ ಸ್ವರೂಪವನ್ನು ತಿಳಿಸಿದ್ದೀರಿ ಅದು ಸತ್ಯವಿದೆ, ಆದರೆ ಸಮ್ಯಗ್ದೃಷ್ಟಿಯ ವ್ಯವಹಾರ ಸಮ್ಯಕ್ತ್ವದಲ್ಲಿ ಮತ್ತು ಇತರ ಕಾಲದಲ್ಲಿ ಅಂತರಂಗವು ನಿಶ್ಚಯ ಸಮ್ಯಕ್ತ್ವದಿಂದ ಗರ್ಭಿತವಿದ್ದು ಯಾವಾಗಲೂ ಗಮನರೂಪವಿರುತ್ತದೆಯೆಂದು ತಿಳಿಯಬೇಕು.

**ಪ್ರಶ್ನೆ ಃ- ಆತ್ಮನನ್ನು ಪ್ರತ್ಯಕ್ಷ ತಿಳಿದರೆ ಕರ್ಮವರ್ಗಣಾಗಳನ್ನೇಕೆ ಪ್ರತ್ಯಕ್ಷ ತಿಳಿಯುವುದಿಲ್ಲವೆಂದು ಕೆಲವು ಸಾಧರ್ಮಿಗಳು ಕೇಳುತ್ತಾರೆ.**

**ಉತ್ತರ :-** ಆತ್ಮನನ್ನು ಪ್ರತ್ಯಕ್ಷವಾಗಿ ಕೇವಲಿಗಳೇ ತಿಳಿಯುತ್ತಾರೆ, ಕರ್ಮವರ್ಗಣಾಗಳನ್ನು ಅವಧಿಜ್ಞಾನಿಗಳು ಕೂಡ ತಿಳಿಯುತ್ತಾರೆ.

**ಪ್ರಶ್ನೆ :- ಬಿದಿಗೆಯ ಚಂದ್ರನಹಾಗೆ ಆತ್ಮನ ಪ್ರದೇಶಗಳು ಒಂದಿಷ್ಟು ಪ್ರಕಟವಿವೆಯೆಂದು ಹೇಳಿರಲ್ಲ ?**

**ಉತ್ತರ :-** ಈ ದೃಷ್ಟಾಂತವು ಪ್ರದೇಶಗಳ ಅಪೇಕ್ಷೆಯಿಂದಿಲ್ಲ, ಈ ದೃಷ್ಟಾಂತವು ಗುಣದ ಅಪೇಕ್ಷೆಯಿಂದಿದೆ.

ತಾವುಗಳು ಸಮ್ಯಕ್ತ್ವದ ಸಂಬಂಧದಲ್ಲಿ ಮತ್ತು ಅನುಭವದ ಸಂಬಂಧದಲ್ಲಿ ಪ್ರತ್ಯಕ್ಷ -ಅಪ್ರತ್ಯಕ್ಷ ಮೊದಲಾದವುಗಳ ಪ್ರಶ್ನೆ ಕೇಳಿದ್ದೀರಿ, ಅವುಗಳ ಉತ್ತರವನ್ನು ನಮ್ಮ ಬುದ್ಧಿಗೆ ಅನುಸರಿಸಿ ಬರೆದಿದ್ದೇವೆ; ತಾವು ಕೂಡ ಜಿನವಾಣಿಯಿಂದ ಹಾಗೂ ತಮ್ಮ ಪರಿಣತಿಯಿಂದ ಸರಿಹೊಂದಿಸಿಕೊಳ್ಳಬೇಕು.

ಅಯ್ಯಾ ಸೋದರರೇ ! ವಿಶೇಷವನ್ನು ಎಲ್ಲಿಯವರೆಗೆಂದು ಬರೆಯುವುದು, ಯಾವ ಮಾತನ್ನು ತಿಳಿಯುತ್ತೇವೆ ಅದನ್ನು ಬರವಣಿಗೆಯಲ್ಲಿ ಇಳಿಸುವುದು ಕಷ್ಟವಿದೆ. ಪ್ರತ್ಯಕ್ಷ ಭೆಟ್ಟಿಯಾದಾಗ ಒಂದಿಷ್ಟು ಹೇಳಲೂಬಹುದು, ಆದರೆ ಭೆಟ್ಟಿಯಾಗುವುದು ಕರ್ಮಾಧೀನವಿದೆ, ಆದುದರಿಂದ ಚೈತನ್ಯಸ್ವರೂಪದ ಅನುಭವದ ಉದ್ಯಮ ಮಾಡುತ್ತಿರುವುದೇ ಒಳ್ಳೆಯದಿದೆ.

ವರ್ತಮಾನಕಾಲದಲ್ಲಿ ಅಧ್ಯಾತ್ಮತತ್ತ್ವವಂತೂ ಸಮಯಸಾರ ಗ್ರಂಥದ ಮೇಲೆ ಆಚಾರ್ಯ ಅಮೃತಚಂದ್ರದೇವರು ಬರೆದ ಆತ್ಮಖ್ಯಾತಿಯೆಂಬ ಸಂಸ್ಕೃತ ಟೀಕೆಯಲ್ಲಿದೆ ಮತ್ತು ಆಗಮದ ಚರ್ಚೆಯು ಗೊಮ್ಮಟಸಾರದಲ್ಲಿದೆ ಅದರಂತೆ ಅನ್ಯಗ್ರಂಥಗಳಲ್ಲೂ ಇದೆ.

ಯಾವುದನ್ನು ತಿಳಿಯಲಾಗುತ್ತದೆ ಅದೆಲ್ಲವನ್ನು ಬರೆಯಲಿಕ್ಕೆ ಬರುವುದಿಲ್ಲ, ಆದುದರಿಂದ ತಾವು ಕೂಡ ಅಧ್ಯಾತ್ಮ ಹಾಗೂ ಆಗಮ ಗ್ರಂಥಗಳ ಅಭ್ಯಾಸ ಮಾಡುವುದು ಮತ್ತು ಸ್ವರೂಪಾನಂದದಲ್ಲಿ ನಿಮಗ್ನರಾಗಿರುವುದು,

ಮತ್ತು ತಾವು ಕೂಡ ಯಾವುದಾದರೂ ವಿಶೇಷ ಗ್ರಂಥವನ್ನು ತಿಳಿದುಕೊಂಡಿದ್ದರೆ ಅದನ್ನು ನಮಗೂ ಬರೆದು ಕಳುಹಿಸಬೇಕು. ಸಾಧರ್ಮಿಗಳಲ್ಲಂತೂ ಪರಸ್ಪರ ಚರ್ಚೆಯೇ ಬೇಕು. ಮತ್ತು ನನ್ನಲ್ಲಂತೂ ಅಷ್ಟು ಬುದ್ಧಿಯಿಲ್ಲ. ಆದರೆ ತಮ್ಮಂಥ ಸಹೋದರರೊಡನೆ ಪರಸ್ಪರ ವಿಚಾರವಿದೆ ಅದು ಪರಮ ಸೌಭಾಗ್ಯವಿದೆ.

ಎಲ್ಲಿಯವರೆಗೆ ಭೆಟ್ಟಿಯಾಗುವುದು ಆಗುವುದಿಲ್ಲ ಅಲ್ಲಿಯವರೆಗೆ ಪತ್ರವನ್ನಂತೂ ಅವಶ್ಯವಾಗಿ ಬರೆಯುತ್ತಿರಬೇಕು.

ಮಿತಿ ಫಾಲ್ಗುಣವದ್ಯ ಪಂಚಮಿ,

ಸಂವತ್. ೧೮೧೧

# ಕಥಾ ಸಂದರ್ಭ

## ಮುನಿಗಳು ಭ್ರಷ್ಟಾಚಾರರೆಂದು ಬಗೆದು ದಾನ ಕೊಡಲಿಲ್ಲ
## (ಅಧ್ಯಾಯ ೬ ಪುಟ ೧೮೪ ಪಂಕ್ತಿ ೧)

ಪ್ರಭಾಪುರದ ದೊರೆ ಅಭಿನಂದ ಹಾಗೂ ರಾಣಿ ಧಾರಿಣಿಯರಿಗೆ ಸುರಮನ್ಯು, ಶ್ರೀಮನ್ಯು, ನಿಚಯ, ಸರ್ವಸುಂದರ, ಜಯವಾನ, ವಿನಯಲಾಲಸ ಮತ್ತು ಜಯಮಿತ್ರರೆಂದು ಏಳು ಜನ ಮಕ್ಕಳಿದ್ದರು. ಅವರು ಒಂದು ಸಲ ಪ್ರೀತಿಂಕರ ಕೇವಲಿಗಳ ದರ್ಶನಕ್ಕಾಗಿ ಹೋಗುತ್ತಿರುವ ದೇವಾದಿಕರನ್ನು ಕಂಡು ತಂದೆ-ಮಕ್ಕಳುಗಳೆಲ್ಲ ಸಂಸಾರದಿಂದ ವಿರಕ್ತರಾಗಿ ದೀಕ್ಷೆ ವಹಿಸಿದರು. ಮುಂದೆ ಅವರುಗಳಲ್ಲಿಯ ಶ್ರೀನಂದನನು ಕೇವಲಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ಮುಕ್ತಿಗೆ ಹೋದನು. ಮತ್ತು ಉಳಿದ ಮುನಿರಾಜರು ಚಾರಣಋದ್ಧಿಯನ್ನು ಪ್ರಾಪ್ತ ಮಾಡಿಕೊಂಡು ಸಪ್ತರ್ಷಿ ಎಂಬ ಹೆಸರಿನಿಂದ ವಿಹಾರ ಮಾಡುತ್ತಿದ್ದರು. ಒಮ್ಮೆ ಅವರು ಆಹಾರಕ್ಕೆಂದು ಅಯೋಧ್ಯೆಗೆ ಬಂದು ಅರ್ಹದ್ದತ್ತ ಶ್ರೇಷ್ಠಿಯ ಮನೆಯ ಮುಂದೆ ನಿಂತುಕೊಳ್ಳಲು ಅವರನ್ನು ನೋಡಿದ ಶ್ರೇಷ್ಠಿಯು ಮುನಿಗಳಿಗೆ ವರ್ಷಾಯೋಗದಲ್ಲಿ ವಿಹಾರವಿರುವುದಿಲ್ಲ, ಇವರು ಎಲ್ಲಿಂದ ಬಂದರು ನಮ್ಮೂರ ಹೊರವಲಯದಲ್ಲಿರುವ ಮುನಿಗಳನ್ನೆಲ್ಲ ನಾನು ಗುರುತಿಸುತ್ತೇನೆ, ಇವರು ಅವರಲ್ಲಿಯವರಾರೂ ಅಲ್ಲ, ಇವರು ಬೇರಾರೋ ಅವಿವೇಕಿಗಳಾದ ಭ್ರಷ್ಟರೂ, ಶಿಥಿಲಾಚಾರಿಗಳೂ ಆಗಿರಬೇಕೆಂದು ವಿಚಾರಮಾಡಿ ಅವರಿಗೆ ಆಹಾರ ಕೊಡುವ ಮನಸ್ಸಿಲ್ಲದೆ ಹಾಗೇ ಹೊರಟು ಹೋಗುತ್ತಾನೆ. ಆದರೆ ಆ ಶ್ರೇಷ್ಠಿಯ ಸೊಸೆಯು ಮಾತ್ರ ಅವರನ್ನು ಬಲವಂದು ತಂದು ಆಹಾರ ಕೊಡುತ್ತಾಳೆ. ಆಹಾರ ಮುಗಿದ ಮೇಲೆ ಮುನಿಗಳು ಆಕಾಶಮಾರ್ಗದಿಂದ ಜಿನಮಂದಿರಕ್ಕೆ ಬರುತ್ತಾರೆ. ಅಲ್ಲಿ ದ್ಯುತಿ ಮೊದಲಾದ ಮುನಿಗಳು ಅವರಿಗೆ ವಂದನೆ ಮಾಡುತ್ತಾರೆ. ಅನಂತರ ಆ ಮುನಿಗಳು ದೇವ ದರ್ಶನ ಮಾಡಿ ತಮ್ಮ ಸ್ಥಳಕ್ಕೆ ಹೊರಟು ಹೋಗುತ್ತಾರೆ. ಈ ಸಂಗತಿಯನ್ನು ಅರ್ಹದತ್ತ ಶ್ರೇಷ್ಠಿಗೆ ಅಲ್ಲಿಯ ಮುನಿಗಳು ತಿಳಿಸಿ, ಚಾರಣಋದ್ಧಿ ಮುನಿಗಳಿಗೆ ವರ್ಷಾಯೋಗದಲ್ಲಿ ವಿಹಾರ ಮಾಡಲು ನಿರ್ಬಂಧವಿಲ್ಲವೆಂದೂ ತಿಳಿಸುತ್ತಾರೆ. ಇದೆಲ್ಲವನ್ನು ಕೇಳಿ ಆ ಮುನಿಗಳಿಗೆ ಆಹಾರ ಕೊಡದಿರುವುದಕ್ಕೆ ಪಶ್ಚಾತ್ತಾಪಪಟ್ಟು, ಮುಂದೆ ಅಷ್ಟಾಹ್ನಿಕಪರ್ವದಲ್ಲಿ ಮಥುರೆಗೆ ಹೋಗಿ ಆ ಮುನಿಗಳಿಗೆ ಆಹಾರವಿತ್ತು ಸಂತುಷ್ಟನಾಗುತ್ತಾನೆ.

## ನಾಯಿಯು ಸತ್ತು ದೇವವಾದದ್ದು
## (ಅಧ್ಯಾಯ ೭ ಪುಟ ೨೧೭ ಪಂಕ್ತಿ ೨೭)

ಒಮ್ಮೆ ಎಷ್ಟೋ ಜನ ಬ್ರಾಹ್ಮಣರು ಯಜ್ಞ ಮಾಡುತ್ತಿರುವಾಗ ಅಲ್ಲಿ ಒಂದು ನಾಯಿಯು ಹೋಗಿ ಅವರ ಯಾಗದ ಸಾಮಗ್ರಿಗಳನ್ನೆಲ್ಲ ಮುಟ್ಟಿ ಎಂಜಲ ಮಾಡಿದ ಕಾರಣದಿಂದ ಆ ಬ್ರಾಹ್ಮಣರು ಆ ನಾಯಿಯನ್ನು ಚನ್ನಾಗಿ ಥಳಿಸಿದರು. ಅದರಿಂದಾಗಿ ಅದು ಕಂಠಗತ ಪ್ರಾಣವಾಗಿ ದಾರಿಯಲ್ಲಿ ನರಳುತ್ತ ಬಿದ್ದುಕೊಂಡಿತ್ತು. ಆ ಸಮಯಕ್ಕೆ ದೈವಯೋಗದಿಂದ ಜೀವಂಧರ ಕುಮಾರನು ಅದೇ ದಾರಿಯಿಂದ ಎಲ್ಲಿಗೋ ಹೊರಟಿದ್ದನು ನಡುದಾರಿಯಲ್ಲಿ ಕಂಠಗತ ಪ್ರಾಣವಾದ ನಾಯಿಯನ್ನು ನೋಡಿ ಅದರ ಹತ್ತಿರ ಹೋಗಿ ಅದನ್ನು ತೊಡೆಯ ಮೇಲೆ ತೆಗೆದುಕೊಂಡು ಅದರ ಕಿವಿಯಲ್ಲಿ ಣಮೋಕಾರ ಮಂತ್ರವನ್ನು ಬೋಧಿಸಿದನು. ಆ ಮಂತ್ರದ ಮಾಹಾತ್ಮ್ಯದಿಂದ ಆ ನಾಯಿಯು ಸತ್ತು ಸ್ವರ್ಗದಲ್ಲಿ ಯಕ್ಷ ಜಾತಿಯ ದೇವವಾಯಿತು. ಹುಟ್ಟಿದ ಕೂಡಲೇ ಅವಧಿಜ್ಞಾನದಿಂದ ತನಗೆ ಉಪಕಾರ ಮಾಡಿದ ಜೀವಂಧರ ಕುಮಾರನ ಸ್ಮರಣೆಯಾಗಿ ಆತನ ಕಡೆಗೆ ಹೋಗಿ ಅಲ್ಲಿ ಅವನ ಸ್ತುತಿ ಮಾಡಿ ಅವನಿಗೆ ಬಯಸಿದ ರೂಪು

ಧರಿಸುವ ಮತ್ತು ಗಾಯನ ವಿದ್ಯೆ ಎಂಬೆರಡು ವಿದ್ಯೆಗಳನ್ನಿತ್ತು ಆ ದೇವನು ತನ್ನ ಸ್ಥಾನಕ್ಕೆ ಹೊರಟು ಹೋಗುತ್ತಾನೆ. ಆದರೆ ನಿಜವಾಗಿ ನೋಡಿದರೆ ಆ ನಾಯಿಯ ಜೀವವು ದೇವಗತಿಗೆ ಅನುಕೂಲವಾದ ಶುಭ ಪರಿಣಾಮವನ್ನು ಮಾಡಿದುದರಿಂದಲೇ ದೇವಗತಿಯು ಪ್ರಾಪ್ತವಾಯಿತು. ವಿನಹ ಕೇವಲ ಣಮೋಕಾರ ಮಂತ್ರವು ಕಿವಿಗೆ ಬೀಳುವುದರಿಂದಲ್ಲ. ಆದರೆ ಣಮೋಕಾರ ಮಂತ್ರವು ಸ್ವಾಭಾವಿಕವಾಗಿ ನಿಮಿತ್ತವಾಗಿದೆ.

## ಶಿವಭೂತಿ ಕೇವಲಿ

### (ಅಧ್ಯಾಯ ೭ ಪುಟ ೨೨೦ ಪಂಕ್ತಿ ೨೪)

ಶಿವಭೂತಿಯೆಂಬ ಹೆಸರಿನ ಆಸನ್ನಭವ್ಯಜೀವನೊಬ್ಬನು ಸಂಸಾರದಿಂದ ವಿರಕ್ತವಾಗಿ ಗುರುಗಳಿಂದ ಸನ್ಯಸನ ಪಡೆದು ತಪಶ್ಚರ್ಯ ಮಾಡುತ್ತಿದ್ದನು. ಆತ ಅಶಿಕ್ಷಿತನೂ ಮತ್ತು ಅತ್ಯಂತ ಮಂದಬುದ್ಧಿಯುಳ್ಳವನೂ ಆಗಿದ್ದನು. ಅವನಿಗೆ ಆರು ದ್ರವ್ಯಗಳ ಹಾಗೂ ಏಳು ತತ್ತ್ವಗಳ ಬಗ್ಗೆ ವಿಶೇಷ ಜ್ಞಾನವಿರಲಿಲ್ಲ. ಆದರೂ ಆ ತತ್ತ್ವಗಳ ಸಾರಸ್ವರೂಪಗಳಾದ ಐದು ಸಮಿತಿ ಹಾಗೂ ಮೂರು ಗುಪ್ತಿಗಳ ಜ್ಞಾನವಾಗಿತ್ತು. ಅವನು ಶರೀರ ಮತ್ತು ಆತ್ಮಗಳ ಭೇದ ವಿಜ್ಞಾನಕ್ಕಾಗಿ ಗುರುಗಳು ಹೇಳಿದ ಉದ್ದಿನ ಬೇಳೆ ಮತ್ತು ಅದರ ಮೇಲಿನ ಚಿಪ್ಪು ಈ ದೃಷ್ಟಾಂತದ ಮುಖಾಂತರ ನಿಜಸ್ವರೂಪವನ್ನು ತಿಳಿದುಕೊಂಡಿದ್ದನು. ಆದರೆ ಬುದ್ಧಿ ಮಂದತೆಯ ಕಾರಣದಿಂದಾಗಿ ಆ ದೃಷ್ಟಾಂತವನ್ನೂ ಮರೆತನು, ಎಷ್ಟು ಪ್ರಯತ್ನ ಮಾಡಿದರೂ ಆ ದೃಷ್ಟಾಂತವು ಅವನ ಸ್ಮರಣೆಗೆ ಬಾರಲೇ ಇಲ್ಲ. ಹೀಗಾಗಿ ಅವನು ಒಬ್ಬನೇ ವಿಹಾರ ಮಾಡುತ್ತ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತಿದ್ದನು. ಆಗ ದಾರಿಯಲ್ಲಿ ತನ್ನ ಮನೆಯಂಗಳದೊಳಗೆ ಒಬ್ಬ ಹೆಣ್ಣು ಮಗಳು ಉದ್ದಿನ ಬೇಳೆಯನ್ನು ಸ್ವಚ್ಛ ಮಾಡುತ್ತಿದ್ದಳು. ಸ್ವಾಭಾವಿಕವಾಗಿ ಇನ್ನೊಬ್ಬ ಹೆಣ್ಣು ಮಗಳು 'ಏನು ಮಾಡುತ್ತಿದ್ದೀಯಮ್ಮ'- ಎಂದು ಅವಳನ್ನು ಕೇಳಿದಾಗ ಉದ್ದಿನ ಬೇಳೆಯಿಂದ ಈ ಚಿಪ್ಪನ್ನು ಬೇರೆ ಮಾಡುತ್ತಿದ್ದೇನೆಂದು ಅವಳು ಹೇಳಿದ ಮಾತು ಅಲ್ಲಿಂದಲೇ ಹೋಗುತ್ತಿದ್ದ ಈ ಮುನಿಗೆ ಕೇಳಿಸಿತು. ಕೂಡಲೆ ಅವನಿಗೆ ತಮ್ಮ ಗುರುಗಳು ಹೇಳಿದ ದೃಷ್ಟಾಂತವು ಸ್ಮರಣೆಯಾಯಿತು. ಅಲ್ಲಿಂದ ಆತ ನೇರವಾಗಿ ಅರಣ್ಯಕ್ಕೆ ಬಂದು ಪದ್ಮಾಸನ ಹಾಕಿ ಕುಳಿತು ಇದಿಷ್ಟೇ ಶರೀರ ಮತ್ತು ಆತ್ಮನ ಭೇದ ವಿಜ್ಞಾನಾತ್ಮಕವಾದ ದ್ರವ್ಯಶ್ರುತ ಹಾಗೂ ಭಾವಶ್ರುತದ ಆಶ್ರಯದಿಂದ ಕೇವಲಿಯಾದನು. ಮತ್ತು ಮೋಕ್ಷಕ್ಕೆ ಹೋದನು. ಯಾವ ತತ್ತ್ವಗಳ ವಿಶೇಷ ಜ್ಞಾನವಿಲ್ಲದಿದ್ದರೂ ಕೂಡ ಅವುಗಳ ಭಾವವನ್ನು ಭಾವಿಸುವುದಿದ್ದರೆ ಅದಷ್ಟೇ ಮೋಕ್ಷಮಾರ್ಗದಲ್ಲಿ ಪ್ರಯೋಜನಕಾರಿಯಾಗಿದೆ. ಭಾವವನ್ನು ಭಾವಿಸುವುದೇ ನಿಜವಾದ ತತ್ತ್ವಗಳ ಶ್ರದ್ಧೆಯಾಗಿದೆ.

## ದ್ರವ್ಯಲಿಂಗಿಯಾದ ಭವ್ಯಸೇನ

### (ಅಧ್ಯಾಯ ೭ ಪುಟ ೨೩೨ ಪಂಕ್ತಿ ೨೫)

ಮೇಘಕೂಟದ ದೊರೆ ಚಂದ್ರಪ್ರಭನು ಸಂಸಾರಕ್ಕೆ ಹೇಸಿ ತನ್ನ ಮಗನಾದ ಚಂದ್ರಶೇಖರನಿಗೆ ರಾಜ್ಯಭಾರವನ್ನಿತ್ತು ಮುನಿಗುಪ್ತರೆಂಬ ಆಚಾರ್ಯರ ಹತ್ತಿರ ಕ್ಷುಲ್ಲಕ ದೀಕ್ಷೆಯನ್ನು ಸ್ವೀಕಾರ ಮಾಡಿದನು. ಅಲ್ಲಿ ಕೆಲ ದಿವಸಗಳವರೆಗಿದ್ದು, ಮುಂದೆ ಸಾಧುಗಳ ವಂದನೆಗೆಂದು ಮಧುರೆಯತ್ತ ಪ್ರಸ್ಥಾನ ಬೆಳೆಸುತ್ತಾನೆ. ಅಲ್ಲಿಂದ ಹೊರಡುವ ಮುಂಚೆ ಕ್ಷುಲ್ಲಕನು ತನ್ನ ಗುರುಗಳಿಗೆ 'ಯಾರಿಗೆ ಏನಾದರೂ ಹೇಳುವುದಿದ್ದರೆ ಹೇಳಿರಿ, ನಾನು ಅಲ್ಲಿ ಅವರಿಗೆ ಹೇಳುತ್ತೇನೆ'ಯೆಂದು

ಕೇಳಿದನು. ಆಗ ಗುರುಗಳು ಸುವ್ರತ ಮುನಿಗಳಿಗೆ ನಮೋಸ್ತುವನ್ನೂ ಮತ್ತು ವರುಣ ರಾಜನ ಧರ್ಮಪತ್ನಿಯಾದ ರೇವತೀ ರಾಣಿಗೆ ಸದ್ಧರ್ಮವೃದ್ಧಿಯೆಂಬ ಆಶೀರ್ವಾದವನ್ನೂ ಹೇಳುತ್ತಾರೆ. ಅಲ್ಲಿಯೇ ಭವ್ಯಸೇನರೆಂಬ ಮುನಿಗಳಿದ್ದಾರೆ ಗುರುಗಳಿಗೆ ವಿಸ್ಮರಣೆಯಾಗಿರಬೇಕೆಂದು ಬಗೆದ ಕ್ಷುಲ್ಲಕನು 'ಮತ್ತೆ ಯಾರಿಗೇನಾದರೂ ಹೇಳುವುದಿದೆಯೋ ?' ಎಂದು ಪುನ- ಪುನಃ ಕೇಳಿದರೂ ಗುರುಗಳು ಏನನ್ನೂ ಮಾತನಾಡದೆ ಮೌನವಾಗುಳಿದರು. ಆಗ ಇದರ ಕಾರಣವನ್ನು ಅಲ್ಲಿಯೇ ಹೋಗಿ ನೋಡಬಹುದೆಂದು ಬಗೆದ ಕ್ಷುಲ್ಲಕನು ಮಧುರೆಗೆ ಬರುತ್ತಾನೆ. ಅಲ್ಲಿ 'ಸುವ್ರತ' ಮುನಿಗಳಿಗೆ ನಮೋಸ್ತು ಹೇಳಿ, ಭವ್ಯಸೇನ ಮುನಿಗಳ ಗುಹೆಯೊಳಗೆ ಪ್ರವೇಶಿಸುತ್ತಾನೆ. ಭವ್ಯಸೇನ ಮುನಿಯು ಕ್ಷುಲ್ಲಕನು ಬಂದುದನ್ನು ನೋಡಿಯೂ ಕೂಡ ಏನನ್ನೂ ಮಾತನಾಡಲಿಲ್ಲ ಇಷ್ಟೇ ಅಲ್ಲ, ಕಮಂಡಲು ತೆಗೆದುಕೊಂಡು ಎದ್ದು ಹೊರಗೆ ಹೊರಟು ಹೋದನು. ಇದನ್ನೆಲ್ಲ ನೋಡುತ್ತಿದ್ದ ಕ್ಷುಲ್ಲಕನು ತನ್ನ ವಿದ್ಯೆಯ ಬಲದಿಂದ ಪರಿಸರದ ಭಾಗದಲ್ಲೆಲ್ಲ ಹಸಿರು ಹುಲ್ಲನ್ನು ಬೆಳೆಯಿಸಿದನು. ಆದರೂ ಭವ್ಯಸೇನನು ಆ ಹುಲ್ಲನ್ನು ತುಳಿಯುತ್ತ ಹಾಗೆ ಹೋದನು. ಅವನು ಶೌಚ ತೀರಿಸಿಕೊಂಡು ಬರುವಷ್ಟರಲ್ಲಿ ಕ್ಷುಲ್ಲಕನು ಪುನಃ ವಿದ್ಯೆಯ ಬಲದಿಂದ ಅವನ ಕಮಂಡಲದ ನೀರನ್ನೆಲ್ಲ ಇಲ್ಲದಂತೆ ಮಾಡಿದನು. ಆಗ ಬೇರೆ ಪ್ರಾಸುಕ ಸಾಮಗ್ರಿಗಳಾವವೂ ದೊರಕದ ಮೂಲಕ ಅವನು ಕೆರೆಯೊಳಗಿನ ನೀರಿನಿಂದ ಶುದ್ಧಿ ಮಾಡಿಕೊಂಡನು. ತಿಳಿದೂ ತಿಳಿದೂ ಈ ಅಪರಾಧವನ್ನು ಮಾಡಿದನು. ಆಗ ಆ ಕ್ಷುಲ್ಲಕನು ಈತ ದ್ರವ್ಯಲಿಂಗಿಯಿದ್ದಾನೆಂದು ತಿಳಿದನು. ಮತ್ತು ಈತನ ಹೆಸರು ಭವ್ಯಸೇನಕ್ಕೆ ಪ್ರತಿಯಾಗಿ ಅಭವ್ಯಸೇನವೆಂದಿದ್ದರೇನೇ ಚೆನ್ನೆಂದು ವಿಚಾರಿಸುತ್ತ ತನ್ನ ಸ್ಥಾನಕ್ಕೆ ಮರಳಿ ಬರುತ್ತಾನೆ.

## ಯಮಪಾಲ ಚಾಂಡಾಲ

### (ಅಧ್ಯಾಯ ೭ ಪುಟ ೨೩೪ ಪಂಕ್ತಿ ೨೭)

ಪೌದನಪುರದ ದೊರೆಗಳಾದ ಮಹಾಬಲರು ತಮ್ಮ ರಾಜ್ಯದಲ್ಲಿ ಅಷ್ಟಾಹ್ನಿಕ ಪರ್ವದೊಳಗೆ ಯಾರೂ ಜೀವ ಹಿಂಸೆ ಮಾಡಬಾರದೆಂದು ಆಜ್ಞೆ ಹೊರಡಿಸಿದ್ದರು. ಆದರೆ ಸ್ವತಃ ರಾಜಕುಮಾರನಿಗೇ ಮಾಂಸಾಹಾರದ ಚಟವು ಇದ್ದುದರಿಂದ ಅವನು ರಾಜಾಜ್ಞೆಯನ್ನುಲ್ಲಂಘಿಸಿ ಒಂದು ಮೇಕೆಯ ಮರಿಯನ್ನು ಕೊಂದು ಅದರ ಮಾಂಸವನ್ನು ಬೇಯಿಸಿ ತಿನ್ನುತ್ತಾನೆ. ಆದರೆ ಮರುದಿವಸವೇ ಈ ಅಪರಾಧದ ಶೋಧಹಚ್ಚಿ ತನಿಖೆ ನಡೆಸಿದಾಗ ಸ್ವತಃ ರಾಜಕುಮಾರನೇ ಅಪರಾಧಿಯೆಂಬುದರ ನಿರ್ಣಯವಾಗಿ ಅವನಿಗೆ ದೊರೆಯು ದೇಹಾಂತದ ಶಿಕ್ಷೆ ವಿಧಿಸುತ್ತಾನೆ. ಮತ್ತು ಆ ಕಾರ್ಯವನ್ನು ನಿರ್ವಹಿಸಲಿಕ್ಕೆಂದು ಯಮಪಾಲನನ್ನು ಕರೆಯಲು ಸೇವಕರನ್ನು ಕಳಿಸುತ್ತಾನೆ. ಅಂದು ಚತುರ್ದಶಿಯ ದಿವಸವಿತ್ತು. ಮತ್ತು ಯಮಪಾಲನು ಚತುರ್ದಶಿಯ ದಿವಸ ಹಿಂಸೆ ಮಾಡುವುದಿಲ್ಲವೆಂಬ ವ್ರತವನ್ನು ಸ್ವೀಕರಿಸಿರುವುದರಿಂದ ತಾನು ಒಳಗೆ ಮರೆಯಲ್ಲಿ ಕುಳಿತು,ಕರೆಯಲೆಂದು ಬಂದಿರುವ ರಾಜಸೇವಕರಿಗೆ 'ಅವನು ಮನೆಯಲ್ಲಿಲ್ಲ, ಎಲ್ಲಿಯೋ ಹೊರಗೆ ಹೋಗಿದ್ದಾನೆ'ಂದು ಹೆಂಡತಿಯ ಕಡೆಯಿಂದ ಹೇಳಿಸಿದನು. ಆಗ ಸೇವಕರು ಸ್ವಾಭಾವಿಕವಾಗಿಯೇ' ಈ ಮಾತಂಗನು ಅದೆಂಥ ಮಂದ ಭಾಗ್ಯದವನು ಇಂದು ರಾಜಪುತ್ರನ ವಧೆಯಿತ್ತು, ಅದರಿಂದಾಗಿ ಈತನಿಗೆ ಎಷ್ಟೊಂದು ಧನ ಸಿಗುತ್ತಿತ್ತಲ್ಲ !' ಎಂದು ಯಮಪಾಲನ ಹೆಂಡತಿಗೆ ಕೇಳುವಂತೆ ಆಡುತ್ತಾರೆ. ಅದನ್ನು ಕೇಳಿದ ಆ ಹೆಣ್ಣು ದುಡ್ಡಿನ ಲೋಭದಿಂದ ಮನೆಯಲ್ಲಿ ಅಡಗಿಕೊಂಡು ಕುಳಿತ ಪತಿಯತ್ತ ಕೈಸನ್ನೆಯಿಂದ ಸೂಚನೆ ಮಾಡುತ್ತಾಳೆ. ಅದನ್ನು ಗ್ರಹಿಸಿದ ಸೇವಕರು ಯಮಪಾಲನನ್ನೆಳೆದುಕೊಂಡು ಹೋಗುತ್ತಾರೆ. ಮತ್ತು ರಾಜಕುಮಾರನಿಗೆ ದೇಹಾಂತ ಶಿಕ್ಷೆ ಕೊಡಬೇಕೆನ್ನುವ

ರಾಜಾಜ್ಞೆಯನ್ನು ತಿಳಿಸುತ್ತಾರೆ. ಆಗ ಅವನು 'ಇಂದು ಚತುರ್ದಶಿಯಾದುದರಿಂದ ನಾನು ಜೀವಹಿಂಸೆ ಮಾಡುವುದಿಲ್ಲ'ವೆನ್ನುತ್ತಾನೆ. ಸೇವಕರು ಈ ಸುದ್ದಿಯನ್ನು ರಾಜನಿಗೆ ತಿಳಿಸಲು ಅವನು ಯಮಪಾಲನನ್ನು ಕರೆದು ಕೇಳಲು ಯಮಪಾಲನು ಹೀಗೆ ಹೇಳುತ್ತಾನೆ-ದೊರೆಗಳೇ ! ನನಗೊಮ್ಮೆ ಹಾವು ಕಚ್ಚಿದುದರಿಂದ ನಾನು ಸತ್ತು ಹೋದನೆಂದು ತಿಳಿದುಕೊಂಡು ನನ್ನನ್ನು ಸ್ಮಶಾನಕ್ಕೆ ಸಾಗಿಸಿದರು. ಆ ಸ್ಮಶಾನದ ಪಕ್ಕದಲ್ಲೇ ಓರ್ವ ಸರ್ವೌಷಧ ಋದ್ಧಿ ಸಂಪನ್ನರಾದ ಮುನಿಗಳು ಧ್ಯಾನದಲ್ಲಿ ಮಗ್ನವಾಗಿದ್ದರು. ಆಗ ಆ ದಿಕ್ಕಿನಿಂದಲೇ ಬೀಸುತ್ತಿದ್ದ ಗಾಳಿಯು ಆ ಋಷಿಗಳ ಮೈ ಸ್ಪರ್ಶ ಮಾಡಿ ಬಂದು ನನ್ನ ಮೈಗೆ ತೀಡಿದುದರಿಂದ ನನ್ನ ಶರೀರದಲ್ಲಿ ವ್ಯಾಪಿಸಿದ ವಿಷವು ಹೊರಟು ಹೋಗಿ ನಾನು ಜಾಗೃತನಾದೆನು. ಅಂದಿನಿಂದ ನಾನು ಚತುರ್ದಶಿಯ ದೀವಸ ಜೀವಹಿಂಸೆ ಮಾಡುವುದಿಲ್ಲವೆಂದು ಅದೇ ಮುನಿಮಹಾರಾಜರಿಂದ ವ್ರತ ಸ್ವೀಕರಿಸಿದ್ದೇನೆ. ಅದಕ್ಕಾಗಿ ನನಗಿಂದು ರಾಜಕುಮಾರನಿಗೆ ಶಿಕ್ಷೆ ವಿಧಿಸುವುದು ಸಾಧ್ಯವಿಲ್ಲ, ಕೃಪೆ ತೋರಬೇಕೆಂದು ಹೇಳಿದರೂ ಇದರಿಂದ ರಾಜನ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಅವನು ಈ ಚಾಂಡಾಲನನ್ನೂ ಮತ್ತು ರಾಜಕುಮಾರನನ್ನೂ ಕೊಂಡೊಯ್ದು ನದಿಯ ಆಳವಾದ ಮಡುವಿನಲ್ಲಿ ಎಸೆದು ಬಿಡಿ-ಎಂದು ಸೇವಕರಿಗೆ ಆಜ್ಞೆ ಮಾಡಿದನು. ಸೇವಕರು ಒಯ್ದು ಮಡುವಿನಲ್ಲಿ ಹಾಕಿದರು. ಆಗ ರಾಜಕುಮಾರನನ್ನು ಮೀನು ಮೊಸಳೆಗಳು ತಿಂದು ಹಾಕಿದರೆ ಯಮಪಾಲನನ್ನು ದೇವತೆಗಳು ಎತ್ತಿ ಸಿಂಹಾಸನದಲ್ಲಿ ಕೂಡ್ರಿಸಿದರು. ಇದನ್ನು ನೋಡಿದ ದೊರೆಯು ಚಾಂಡಾಲನನ್ನು ಕರೆಸಿ ಸತ್ಕಾರ ಮಾಡಿದನು. ಆ ಚಾಂಡಾಲನಲ್ಲಿ ಜೀವ ಹೋದರೂ ಅಡ್ಡಿಯಿಲ್ಲ, ಆದರೆ ವ್ರತಭಂಗ ಮಾಡಲಾರೆನೆಂಬ ವಿವೇಕವೂ, ಶ್ರದ್ಧೆಯೂ ಜಾಗೃತವಾಗಿತ್ತು. ಅದಕ್ಕಾಗಿಯೇ ಅವನಿಗೆ ಇಂಥ ಫಲವು ದೊರಕಿತು. ತಮಗೆ ಯಾವುದನ್ನು ಕಡೆಗಾಣಿಸುವುದು ಸಾಧ್ಯವಿದೆಯೋ ಅಂಥ ಪ್ರತಿಜ್ಞೆಯನ್ನೇ ವಿಚಾರ ಪೂರ್ವಕವಾಗಿ ಸ್ವೀಕರಿಸಬೇಕು.

## ವಿಷ್ಣುಕುಮಾರ ಮುನಿ

### (ಅಧ್ಯಾಯ ೮ ಪುಟ ೨೬೮ ಪಂಕ್ತಿ ೯)

ಉಜ್ಜಯನಿಯನ್ನಾಳುತ್ತಿದ್ದ ದೊರೆ ಶ್ರೀವರ್ಮನಲ್ಲಿ ಬಲಿ, ಬೃಹಸ್ಪತಿ, ಪ್ರಲ್ಹಾದ ಮತ್ತು ನಮುಚಿಯೆಂಬ ನಾಲ್ವರು ಮಂತ್ರಿಗಳಿದ್ದರು. ಒಮ್ಮೆ ಅಕಂಪನಾಚಾರ್ಯರು ತಮ್ಮ ಏಳುನೂರು ಶಿಷ್ಯರೊಡಗೂಡಿ ಬಂದು ಉಜ್ಜಯನಿಯ ಹೊರ ವಲಯದಲ್ಲಿ ಉಳಿಯುತ್ತಾರೆ. ಸೇವಕರಿಂದ ಈ ಸುದ್ದಿ ತಿಳಿದ ದೊರೆಯು ಮಂತ್ರಿ, ಪ್ರಜೆಗಳೊಳಗೂಡಿ ಮುನಿಗಳ ದರ್ಶನಕ್ಕೆಂದು ಬರುತ್ತಾರೆ. ಆಗ ಅಕಂಪನಾಚಾರ್ಯರು ಈ ಮಂತ್ರಿಗಳು ವಿಪರೀತ ಆಶಯ ಹೊಂದಿದವರಿದ್ದಾರೆಂದು ತಮ್ಮ ಅಂತರ್ಜ್ಞಾನದಿಂದ ತಿಳಿದುಕೊಂಡು ಯಾರೂ ಅವರೊಡನೆ ಮಾತನಾಡಬಾರದೆಂದು ತಮ್ಮ ಶಿಷ್ಯರಿಗೆ ತಿಳಿಸುತ್ತಾರೆ. ಅದೇ ಪ್ರಕಾರ ಅವರು ಬಂದು ದರ್ಶನ ಮಾಡಿದರೂ ಯಾರೂ ಆಶೀರ್ವಾದವನ್ನು ಕೂಡ ಕೊಡಲಿಲ್ಲ. ಇದರಿಂದ ಉಪಹಾಸಕ್ಕೀಡಾದ ಮಂತ್ರಿಗಳು 'ಇವರೆಲ್ಲರೂ ದನಗಳಿದ್ದಾರೆ, ಇವಕ್ಕೇನೂ ತಿಳಿಯುವುದಿಲ್ಲ'-ಎಂದು ಅಂದುಕೊಳ್ಳುತ್ತ ಮರಳಿ ಊರ ಕಡೆಗೆ ಬರುತ್ತಿರುವಾಗ ದಾರಿಯಲ್ಲಿ ಊರೊಳಗೆ ಆಹಾರ ಮಾಡಿ ಸಂಘಸ್ಥಾನದ ಕಡೆಗೆ ಮರಳಿ ಬರುತ್ತಿದ್ದ ಶ್ರುತಸಾಗರರೆಂಬ ಮುನಿಗಳ ಭೆಟ್ಟಿಯಾಯಿತು. ಅವರೊಡನೆ ವಾದ-ವಿವಾದ ಮಾಡಿ ಮಂತ್ರಿಗಳು ಸೋತು ಹೋದರು. ಶ್ರುತಸಾಗರ ಮುನಿಗಳು ಸಂಘ ಸ್ಥಾನಕ್ಕೆ ಬಂದು, ದಾರಿಯಲ್ಲಿ ನಡೆದ ಎಲ್ಲ ಸಂಗತಿಯನ್ನೂ ಆಚಾರ್ಯ ಅಕಂಪನರಿಗೆ ನಿವೇದಿಸುತ್ತಾರೆ. ಅದನ್ನು ಕೇಳಿದ ಆಚಾರ್ಯರು

ಇದೇನು ಒಳ್ಳೆಯದಾಗಲಿಲ್ಲ, ಅದಕ್ಕೆ ನೀವೀಗ ಎಲ್ಲಿ ವಾದ-ವಿವಾದವಾಯಿತೋ ಅದೇ ಸ್ಥಾನದಲ್ಲಿ ಕಾಯೋತ್ಸರ್ಗ ಧ್ಯಾನ ಮಾಡಿರೆಂದು ಹೇಳುತ್ತಾರೆ. ಪರಾಭವದಿಂದ ರೊಚ್ಚಿಗೆದ್ದ ಮಂತ್ರಿಗಳು ಸೇಡು ತೀರಿಸಿಕೊಳ್ಳದೆ ಬಿಟ್ಟಾರೆ ? ಸಂಘದ ಮೇಲೆ ಉಪಸರ್ಗ ಮಾಡುವುದೆಂದು ನಾಲ್ವರೂ ಒಟ್ಟಾಗಿ ರಾತ್ರಿಯ ಸಮಯದಲ್ಲಿ ಸಂಘಸ್ಥಾನಕ್ಕೆ ಬರುತ್ತಿರುವಾಗ ದಾರಿಯಲ್ಲಿ ತಮ್ಮೊಡನೆ ವಾದ ಮಾಡಿದ ಮುನಿಯೇ ಕಾಯೋತ್ಸರ್ಗ ನಿಂತಿದ್ದು ಕಾಣಿಸಿತು. ಸೇಡಿನ ಭಾವನೆಯಿಂದ ರೋಸಿ ಹೋದ ನಾಲ್ವರೂ ಒಮ್ಮೆಲೇ ಆ ಮುನಿಯ ಮೇಲೆ ಕತ್ತಿ ಬೀಸಿದರು. ಅಷ್ಟರಲ್ಲಿ ದೇವತೆಗಳು ತಮ್ಮ ವಿದ್ಯೆಯಿಂದ ಅವರ ಕೈಗಳನ್ನು ಮೇಲೆಯೇ ಕೀಲಿತಗೊಳಿಸಿದರು. ಈ ಸುದ್ದಿಯು ಮರುದಿವಸ ಬೆಳಗಾಗುತ್ತಲೇ ರಾಜನಿಗೆ ತಿಳಿಯಿತು. ರಾಜನು ಅವರನ್ನು ಅವಮಾನಗೊಳಿಸಿ ರಾಜ್ಯದಿಂದ ಹೊರಗೆ ಹಾಕಿಸಿದನು.

ಅಲ್ಲಿಂದ ಹೊರಟ ಮಂತ್ರಿಗಳು ಹಸ್ತಿನಾಪುರಕ್ಕೆ ಬರುತ್ತಾರೆ. ಆಗ ಅದರ ದೊರೆಯಾದ ಮಹಾಪದ್ಮನು ತನ್ನ ಕಿರಿಯ ಮಗನೊಡನೆ ದೀಕ್ಷೆ ವಹಿಸಿ ಹೊರಟು ಹೋದುದರಿಂದ ಹಿರಿಯನಾದ ಪದ್ಮರಾಜನು ರಾಜ್ಯ ಮಾಡುತ್ತಿದ್ದನು. ಅವನಲ್ಲಿ ಇವರು ತಮಗೆ ಸ್ಥಾನ ದೊರಕಿಸಿಕೊಂಡರು. ಮುಂದೆ ಪದ್ಮರಾಜನಿಗೆ ಅಜೇಯನಾದ ಸಿಂಹಬಲನನ್ನು ಈ ಮಂತ್ರಿಗಳು ಚಾತುರ್ಯದಿಂದ ಸೋಲಿಸಿ ಕಟ್ಟಿ ತರುತ್ತಾರೆ. ಅದರಿಂದ ಸಂತುಷ್ಟನಾದ ಪದ್ಮರಾಜನು ಅವರಿಗೆ ಅಪೇಕ್ಷಿಸಿದ ವರವನ್ನು ಬೇಡಲು ಹೇಳುತ್ತಾನೆ. ಆಗ ಅವರು ಸಮಯ ಬಂದಾಗ ಪಡೆಯುತ್ತೇವೆಂದು ತಿಳಿಸುತ್ತಾರೆ.

ದೈವಾನುಯೋಗದಿಂದ ಆ ಅಕಂಪನಾಚಾರ್ಯರು ತಮ್ಮ ಸಂಘದೊಡನೆ ವಿಹಾರ ಮಾಡುತ್ತ ಆ ಹಸ್ತಿನಾಪುರಕ್ಕೆ ಬರುತ್ತಾರೆ. ಆ ಮಂತ್ರಿಗಳಿಗೆ ತಮ್ಮ ಅವಮಾನದ ಸೇಡು ತೀರಿಸಿಕೊಳ್ಳಲು ಈ ಸಮಯವು ತುಂಬಾ ಉಪಯುಕ್ತವೆನಿಸಿತು. ರಾಜನಿಂದ ಕೇವಲ ಏಳು ದಿವಸಗಳವರೆಗೆ ರಾಜ್ಯ ಬೇಡಿಕೊಂಡರು. ಮರುದಿವಸವೇ ಆಚಾರ್ಯರ ಸಂಘವಿದ್ದೆಡೆಯಲ್ಲಿ ಪಶುಗಳ ಯಜ್ಞವನ್ನಾರಂಭಿಸಿದರು. ಅದರ ದುರ್ಗಂಧ ಮತ್ತು ಹೊಗೆಯಿಂದಾಗಿ ಮುನಿ ಸಂಘಕ್ಕೆ ಅತಿಯಾದ ತೊಂದರೆಯಾಗುತ್ತಿದ್ದುದರಿಂದ ಅವರು ಈ ಉಪಸರ್ಗವು ನಿವಾರಣೆಯಾಗುವವರೆಗೆ ಅನ್ನಾಹಾರಾದಿಗಳನ್ನು ತ್ಯಾಗ ಮಾಡಿ ಧ್ಯಾನಮಗ್ನರಾದರು. ಇತ್ತ ಮಿಥಿಲಾ ನಗರದ ಹೊರವಲಯದಲ್ಲಿರುತ್ತಿದ್ದ ಆಚಾರ್ಯ ಶ್ರುತಸಾಗರರು ಮಧ್ಯರಾತ್ರಿಯಲ್ಲಿ ಶ್ರವಣ ನಕ್ಷತ್ರವು ಕಂಪಿಸುತ್ತಿರುವುದನ್ನು ನೋಡಿ ನಿಮಿತ್ತಜ್ಞಾನದಿಂದ ಮುನಿಸಂಘದ ಮೇಲೆ ಘೋರೋಪಸರ್ಗವಾಗುತ್ತಿರುವುದನ್ನು ತಿಳಿದುಕೊಂಡರು. ಮರುದಿವಸ ಪುಷ್ಪಧರ ಕ್ಷುಲ್ಲಕನಿಗೆ ಇದರ ವೃತ್ತಾಂತವನ್ನು ತಿಳಿಸಿ, ಅದರ ನಿವಾರಣೆಯ ಉಪಾಯವನ್ನೂ ಹೇಳುತ್ತಾರೆ. ಆಗ ಆ ಕ್ಷುಲ್ಲಕನು ಧರಣಿಭೂಷಣ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ ವಿಷ್ಣುಕುಮಾರ ಮುನಿಗಳ ಹತ್ತಿರ ಬಂದು ಎಲ್ಲ ವೃತ್ತಾಂತವನ್ನು ತಿಳಿಸಿ, ತಮಗೆ ವಿಕ್ರಿಯಋದ್ಧಿ ಪ್ರಾಪ್ತವಾಗಿದೆ ಅದರ ನೆರವಿನಿಂದ ತಾವು ಉಪಸರ್ಗವನ್ನು ನಿವಾರಣೆ ಮಾಡಬಹುದೆಂದು ತಿಳಿಸಿದನು. ಆಗ ವಿಷ್ಣುಕುಮಾರ ಮುನಿಗಳು ವಾಮನನ ರೂಪವನ್ನು ಧರಿಸಿ, ವೇದಮಂತ್ರಗಳನ್ನುಚ್ಚರಿಸುತ್ತ ಯಜ್ಞ ನಡೆಯುತ್ತಿದ್ದ ಸ್ಥಳಕ್ಕೆ ಬರುತ್ತಾರೆ. ಪ್ರಸನ್ನವಾದ ಮಂತ್ರಿಗಳು ಏನನ್ನಾದರೂ ಬೇಡಬೇಕೆಂದು ಕೇಳುತ್ತಾರೆ. ಆಗ ಇವರು ಮೂರು ಹೆಜ್ಜೆ ಭೂಮಿಯನ್ನು ಕೊಡೆಂದು ಕೇಳುತ್ತಾರೆ. ಕೂಡಲೆ ಅವರು ಒಪ್ಪಿಕೊಳ್ಳಲು ಇವರು ಒಂದು ಹೆಜ್ಜೆಯನ್ನು ಸುಮೇರು ಪರ್ವತದ ಮೇಲೂ ಇನ್ನೊಂದು ಹೆಜ್ಜೆಯನ್ನು ಮಾನುಷೋತ್ತರ ಪರ್ವತದ ಮೇಲೆಯೂ ಇಟ್ಟು ಸಂಪೂರ್ಣ ಪೃಥ್ವಿಯನ್ನು ವ್ಯಾಪಿಸಿದರು. ಮೂರನೆಯ ಹೆಜ್ಜೆಯನ್ನಿಡಲು ಸ್ಥಳಾವಕಾಶವಿಲ್ಲದುದರಿಂದ ಗಾಬರಿಯಾಗಿ ನಡುಗುತ್ತಿರುವ

ಬಲಿಮಂತ್ರಿಯ ಬೆನ್ನಮೇಲಿರಿಸಿ, ಪೂರ್ಣ ಪೃಥ್ವಿಯನ್ನು ವಶಪಡಿಸಿಕೊಂಡು ಮುನಿಸಂಘದ ಮೇಲಾಗುತ್ತಿದ್ದ ಉಪಸರ್ಗವನ್ನು ನಿವಾರಣೆ ಮಾಡಿದರು. ಆಪತ್ಕಾಲದಲ್ಲಿ ಈ ತರದ ಕಾರ್ಯಗಳು ಧರ್ಮಾನುರಾಗದಿಂದಲೇ ಸಂಭವಿಸುತ್ತವೆ. ಆದರೆ ಯಾರೇ ಆಗಲಿ ಪದಭ್ರಷ್ಟರಾಗಿ ನಿತ್ಯವೂ ಇಂಥ ಕೀಳು ಕರ್ತವ್ಯಗಳನ್ನು ಮಾಡಬಾರದು.

## ವಜ್ರಕರ್ಣ ಸಿಂಹೋದರ

### (ಅಧ್ಯಾಯ ೮ ಪುಟ ೨೬೮ ಪಂಕ್ತಿ ೨೨)

ದಶಾಂಗಪುರದ ದೊರೆ ವಜ್ರಕರ್ಣನು ಅತ್ಯಂತ ಧರ್ಮಪ್ರಿಯನಾಗಿದ್ದನು. ಅವನು ನಿಜವಾದ ದೇವ-ಗುರು-ಶಾಸ್ತ್ರಗಳ ಹೊರತು ಇತರರಿಗೆ ವಂದಿಸಲಾರೆನೆಂದು ಪ್ರತಿಜ್ಞೆ ಸ್ವೀಕರಿಸಿದ್ದನು. ಆ ಪ್ರತಿಜ್ಞೆಯ ನಿರ್ವಹಣೆಗಾಗಿ ಅವನು ತನ್ನ ಬೆರಳಿನಲ್ಲಿ ಧರಿಸುವ ಉಂಗುರದಲ್ಲಿ ಜಿನರದೊಂದು ಪ್ರತಿಬಿಂಬವನ್ನು ಕೂಡ್ರಿಸಿ ಯಾರಿಗಾದರೂ ವಂದಿಸುವ ಪ್ರಸಂಗ ಉದ್ಭವಿಸಿದಾಗ ಆ ಉಂಗುರದಲ್ಲಿರುವ ಜಿನಬಿಂಬಕ್ಕೆ ನಮಿಸುತ್ತಿದ್ದನು. ಅವನು ತನ್ನ ಅಧಿರಾಜನಾದ ಸಿಂಹೋದರನೊಡನೆಯೂ ಇದೇ ರೀತಿಯಿಂದ ವ್ಯವಹರಿಸುತ್ತಿದ್ದನಂತೆ. ಈ ಸುದ್ದಿಯು ಹೇಗೆಯೋ ಸಿಂಹೋದರನಿಗೆ ತಿಳಿಯುತ್ತದೆ. ಆಗ ಸಿಂಹೋದರನು ಅತ್ಯಂತ ಕೋಪಾವಿಷ್ಟನಾಗಿ ದಶಾಂಗಪುರದತ್ತ ದಂಡೆತ್ತಿ ಬರುತ್ತಾನೆ. ಬಂದು ವಜ್ರಕರ್ಣನಿಗೆ ನಮಸ್ಕರಿಸುವಂತೆ ಸೆರೆ ಹಿಡಿಯುತ್ತಾನೆ. ಅದೇ ಆದೇಶ ನೀಡುತ್ತಾನೆ. ಅದಕ್ಕೆ ವಜ್ರಕರ್ಣನು ಒಪ್ಪದಿರಲು ಅವನ ಪುರದ ಬಾಗಿಲು ತೆಗೆಸಿ, ವಜ್ರಕರ್ಣನನ್ನು ಬಂಧಿಯನ್ನಾಗಿ ಮಾಡುತ್ತಾನೆ. ಆದರೆ ವಜ್ರಕರ್ಣನ ಸಮಯಕ್ಕೆ ಯೋಗಾಯೋಗದಿಂದ ರಾಮ-ಲಕ್ಷಣ-ಸೀತೆಯರು ಆ ನಗರಕ್ಕೆ ಬಂದು ಅಲ್ಲಿಯ ಸಂಗತಿಯನ್ನೆಲ್ಲ ತಿಳಿದುಕೊಂಡು ಸಿಂಹೋದರನಿಗೆ ಬುದ್ಧಿಕಲಿಸಿ ವಜ್ರಕರ್ಣನನ್ನು ಸೆರೆಯಿಂದ ಬಿಡಿಸಿ ಅವನ ರಾಜ್ಯವನ್ನು ಅವನಿಗೆ ಮರಳಿ ಕೊಡಿಸಿದರು.

ಈ ಉದಾಹರಣೆಯನ್ನು ಯಾರೂ ಈ ರೀತಿಯಿಂದ ಜಿನಬಿಂಬಗಳಿಗೆ ಅವಿನಯ ಮಾಡಬಾರದೆಂಬ ಆಶಯದಿಂದಲೇ ಕೊಡಲಾಗಿದೆ. ಈ ತರದ ಬಿಂಬವು ಸದೋಷವಿದೆ ವಂದನೆಗೆ ಯೋಗ್ಯವಾದುದಲ್ಲವೆಂಬ ಜ್ಞಾನವಿಲ್ಲದುದರಿಂದಲೇ ವಜ್ರಕರ್ಣನು ಹೀಗೆ ಮಾಡುತ್ತಿದ್ದನು. ಪ್ರಥಮಾನುಯೋಗದಲ್ಲಿ ಇಂಥ ಉಚಿತವಲ್ಲದ ಕಾರ್ಯಗಳು ಎಲ್ಲಿಯೋ ತಪ್ಪಿಯೇ ಆಗಿದ್ದರೂ ಧರ್ಮಬುದ್ಧಿಯಿಂದಲೇ ಅವುಗಳ ಪ್ರಶಂಸೆಯನ್ನು ಮಾಡಲಾಗಿರುತ್ತದೆ. ಇದರ ಮೇಲಿಂದ ಎಲ್ಲರೂ ಯಾವಾಗಲೂ ಇದೇ ರೀತಿಯಿಂದ ವರ್ತಿಸಬಾರದೆಂದು ಸೂಚಿಸಲಾಗುತ್ತಿದೆ.

# ಕರಣಲಬ್ಧಿ

## ಅಂಧಃಕರಣ, ಅಪೂರ್ವಕರಣ, ಅನಿವೃತ್ತಿಕರಣ

'ಕರಣಲಬ್ಧಿ' ಕರಣವೆಂದರೆ ಜೀವದ ವಿಶುದ್ಧ ಪರಿಣಾಮ, ಲಬ್ಧಿ ಎಂದರೆ ಲಂಭನಂ ಲಬ್ಧಿಃ–ಪ್ರಾಪ್ತವಾಗುವುದು. ಜೀವವು ವಿಶುದ್ಧ ಪರಿಣಾಮವನ್ನು ಪ್ರಾಪ್ತಮಾಡಿಕೊಳ್ಳುವುದೇ ಕರಣಲಬ್ಧಿಯಾಗಿದೆ. ಕರಣಲಬ್ಧಿ ರೂಪವಾದ ಆತ್ಮನ ಪರಿಣಾಮವು ಅತ್ಯಂತ ಸೂಕ್ಷ್ಮ ಭಾವಗಳಿಂದ ಕೂಡಿರುತ್ತದೆ. ಈ ಭಾವಗಳನ್ನು ಯಥಾರ್ಥದಲ್ಲಿ ವಚನ ರೂಪದಿಂದ ಪ್ರತಿಪಾದನೆ ಮಾಡುವುದು ಅಶಕ್ಯಕೋಟಿಯ ಮಾತಾಗಿದೆ. ಇದರ ವಿಷಯವು ಶ್ರುತಕೇವಲಿ ಅಥವಾ ಕೇವಲೀ ಗಮ್ಯವಿರುತ್ತದೆ. ಆದರೂ ಈ ಭಾವದಿಂದ ಕರ್ಮಗಳಲ್ಲಿ ಯಾವ ಅವಸ್ಥೆಯಾಗುತ್ತದೆ. ಅದರ ಮೇಲಿಂದ ಭಾವದ ಕಲ್ಪನೆ ಮಾಡಿ ಮತ್ತು ಲಬ್ಧಿಸಾರ, ಗೊಮ್ಮಟಸಾರ ಮೊದಲಾದ ಕರಣಾನುಯೋಗ ಗ್ರಂಥಗಳ ಆಧಾರದಿಂದ ಆ ವಿಶುದ್ಧ ಪರಿಣಾಮದ ಪ್ರಕಾರವೇನೆಂಬುದರ ಸ್ಥೂಲ ಕಲ್ಪನೆಯಾದರೂ ಬರಲೆಂದು ಇಲ್ಲಿ ಸಂಕ್ಷೇಪವಾಗಿ ವಿವೇಚಿಸಿದೆ.

ಕರಣಲಬ್ಧಿ ರೂಪವಾದ ಭಾವವು ಧ್ಯಾನಾವಸ್ಥೆಯಲ್ಲಿಯೇ ಆಗುತ್ತದೆ. ಆಗ ಆತ್ಮನು ನಿಯಮದಿಂದ ಸಮ್ಯಗ್ದರ್ಶನವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ. ಈ ಭಾವದಲ್ಲಿ ಆತ್ಮನು ಉರುಳಿ ಬೀಳುವ ಭಯವಿಲ್ಲ ಆತ್ಮನು ತನ್ನ ಧ್ಯೇಯವನ್ನು ಸಾಧಿಸಿಕೊಳ್ಳುವ ಶಕ್ತಿಯು ಈ ಭಾವದಲ್ಲಿದೆ ಇದೇ ಈ ಭಾವದ ವಿಶೇಷತೆಯಿದೆ. ಇದರಲ್ಲಿ ಅಧಃಕರಣ, ಅಪೂರ್ವಕರಣ ಮತ್ತು ಅನಿವೃತ್ತಿಕರಣವೆಂದು ಮೂರು ಪ್ರಕಾರಗಳಿವೆ.

ಮೂರು ದರ್ಶನ ಮೋಹನಿಯ ಮತ್ತು ನಾಲ್ಕು ಅನಂತಾನುಬಂಧಿ ಹೀಗೆ ಏಳು ಕರ್ಮಪ್ರಕೃತಿಯ ಅಥವಾ ಚಾರಿತ್ರಮೋಹದ ಇಪ್ಪತ್ತೊಂದು ಪ್ರಕೃತಿಯ ಉಪಶಮ ಇಲ್ಲವೆ ಕ್ಷಯ ಮಾಡುವುದಕ್ಕಾಗಿ ಯಾವ ಜೀವದ ಮಿಥ್ಯಾತ್ವ ಭಾವವು ಅಭಾವವಾಗುವುದಕ್ಕೆ ಇನ್ನು ಕೇವಲ ಒಂದು ಅಂತರ್ಮುಹೂರ್ತ ಮಾತ್ರವಿರುತ್ತದೆ ಅದೇ ಜೀವಕ್ಕೆ ಕರಣಲಬ್ಧಿಯ ಭಾವವಾಗುತ್ತದೆ. ಇದರ ಪರಿಣಾಮವು ಅತ್ಯಂತ ಉಜ್ವಲವಿದ್ದು ಅದರಲ್ಲಿ ಸಮಯ ಸಮಯಕ್ಕೆ ಅನಂತಗುಣಿತ ವಿಶುದ್ಧತೆಯಿರುತ್ತದೆ. ಆ ವಿಶುದ್ಧತೆಯಿಂದ ಕರ್ಮದ ಉಪಶಮ ಮತ್ತು ಕ್ಷಯವು ಆಗುತ್ತದೆ, ಸ್ಥಿತಿ ಮತ್ತು ಅನುಭಾಗವೂ ಕಡಿಮೆ-ಕಡಿಮೆಯಾಗುತ್ತ ಹೋಗುತ್ತದೆ. ಈ ಮೂರು ಕರಣದ ಕಾಲವು ಸಾಮಾನ್ಯವಾಗಿ ಒಂದು ಅಂತರ್ಮುಹೂರ್ತವಿದೆ. ಆದರೂ ಅಪೂರ್ವಕರಣದ ಕಾಲವು ಅಧಃಕರಣದ ಸಂಖ್ಯಾತ ಭಾಗವಿದ್ದರೆ ಅನಿವೃತ್ತಿಕರಣದ ಕಾಲವು ಅಪೂರ್ವಕರಣದ ಸಂಖ್ಯಾತದ ಭಾಗವಿದೆ. ಇನ್ನು ಅಧಃಕರಣದ ಪರಿಣಾಮವು ಅಸಂಖ್ಯಾತ ಲೋಕ ಪ್ರಮಾಣವಿದ್ದರೆ ಅಪೂರ್ವಕರಣದ ಪರಿಣಾಮವು ಅಧಃಕರಣದ ಪರಿಣಾಮಗಳಿಗಿಂತ ಅಸಂಖ್ಯಾತಲೋಕ ಗುಣಿತವಾಗಿದೆ. ಮತ್ತು ಅನಿವೃತ್ತಿಕರಣದ ಪರಿಣಾಮಗಳ ಸಂಖ್ಯೆಯು ಅದರ ಕಾಲದ ಸಮಯಗಳ ಸಮಾನವಾಗಿದೆ. ಇಲ್ಲಿ ಒಂದು ದೃಷ್ಟಾಂತದ ಮುಖಾಂತರ ಇದನ್ನು ಅವಲೋಕಿಸೋಣ.

ಅಧಃಕರಣ ಕಾಲದ ಸಮಯಗಳ ಪ್ರಮಾಣ ೧೬, ಅಪೂರ್ವಕರಣ ಕಾಲದ ಸಮಯಗಳ ಪ್ರಮಾಣ ೮, ಮತ್ತು ಅನಿವೃತ್ತಿಕರಣ ಕಾಲದ ಸಮಯಗಳ ಪ್ರಮಾಣ ೪ ಎಂದು ಕಲ್ಪನೆ ಮಾಡೋಣ. ಈಗ ಅಧಃಕರಣ ಪರಿಣಾಮಗಳ ಸಂಖ್ಯೆ ೩೦೭೨, ಅಪೂರ್ವಕರಣದ ಪರಿಣಾಮಗಳ ಸಂಖ್ಯೆ ೪೮೯೬ ಮತ್ತು ಅನಿವೃತ್ತಿಕರಣದ ಪರಿಣಾಮಗಳ ಸಂಖ್ಯೆ ೪ ಇದೆ. ಒಂದು ಜೀವಕ್ಕೆ ಒಂದು ಸಮಯದಲ್ಲಿ ಒಂದೇ ಪರಿಣಾಮವಾಗುತ್ತದೆ; ಆದ್ದರಿಂದ ಒಂದು ಜೀವವು ಅಧಃಕರಣದ ೧೬ ಸಮಯಗಳಲ್ಲಿ ೧೬ ಪರಿಣಾಮಗಳನ್ನೇ ಸ್ವೀಕರಿಸಲು ಸಾಧ್ಯವಿದೆ. ಅಧಃಕರಣ ಮತ್ತು ಅಪೂರ್ವಕರಣದ ಪರಿಣಾಮಗಳು ೧೬ ಮತ್ತು ೮ ಕ್ಕಿಂತ ಹೆಚ್ಚೆಂದು ಹೇಳಿದ್ದಾರೆ. ಅವು ಹಲವು ಜೀವಗಳ

ಅಪೇಕ್ಷೆಯಿಂದ ಹೇಳಿದ್ದಾರೆ. ಇಲ್ಲಿ ಅಧಃಕರಣದ ೧೬ ಸಮಯಗಳ ಮೊದಲನೆಯ ಸಮಯದಲ್ಲಿ ಯಾವುದೇ ಜೀವವು ಅಧಃಕರಣವನ್ನು ಹಚ್ಚಿದರೆ ಅವನಿಗೆ ಅಧಃಕರಣದ ಎಲ್ಲ ಪರಿಣಾಮಗಳಲ್ಲಿಂದ ಮೊದಲು ೧೬೨ ಪರಿಣಾಮಗಳಲ್ಲಿ ಯಾವುದೇ ಒಂದು ಪರಿಣಾಮವಾಗುವುದು. ಎಂದರೆ ಮೂರು ಕಾಲಗಳಲ್ಲಿ ಯಾವಾಗ ಬೇಕಾದಾಗ ಅಧಃಕರಣ ಹಚ್ಚಿದರೆ ಅದರ ಮೊದಲನೆಯ ಸಮಯದಲ್ಲಿ ನಂಬರ ೧ ರಿಂದ ಹಿಡಿದು ೧೬೨ ರ ವರೆಗಿನ ಪರಿಣಾಮಗಳಲ್ಲಿ ಅವನ ಯೋಗ್ಯತೆಗನುಸರಿಸಿ ಯಾವುದೇ ಒಂದು ಪರಿಣಾಮವಾಗುವುದು. ಇದೇ ಪ್ರಕಾರ ಯಾವುದೇ ಜೀವಕ್ಕೆ ಅಧಃಕರಣ ಹಚ್ಚುವ ಎರಡನೇ ಸಮಯದಲ್ಲಿ ನಂಬರ ೪೦ ರಿಂದ ೨೦೫ ರ ವರೆಗೆ ಇರುವ ೧೬೬ ಪರಿಣಾಮಗಳಲ್ಲಿ ಯಾವುದೇ ಒಂದು ಪರಿಣಾಮವಾಗುವುದು. ಇದೇ ಪ್ರಕಾರ ಮೂರನೆಯ, ನಾಲ್ಕನೆಯ ಮೊದಲಾದ ಸಮಯಗಳಲ್ಲೂ ಕ್ರಮದಿಂದ ನಂಬರ ೮೦ ರಿಂದ ಹಿಡಿದು ೨೪೯ ರ ವರೆಗಿನ ೧೭೦ ಪರಿಣಾಮಗಳಲ್ಲಿ ಯಾವುದೇ ಒಂದು ಮತ್ತು ೧೨೧ ರಿಂದ ೨೯೪ ರ ವರೆಗಿನ ೧೭೪ ಪರಿಣಾಮಗಳಲ್ಲಿ ಯಾವುದೇ ಒಂದು ಪರಿಣಾಮವಾಗುವುದು. ಇದೇ ಪ್ರಕಾರ ಮುಂದಿನ ಸಮಯಗಳಲ್ಲಾಗುವ ಪರಿಣಾಮಗಳನ್ನು ಗೊಮ್ಮಟಸಾರದಿಂದ ತಿಳಿದುಕೊಳ್ಳಬೇಕು. ಇಲ್ಲಿ ಸವಿಸ್ತಾರ ವಿವರಣೆ ನೀಡಲು ಕಾಲಾವಕಾಶವಿಲ್ಲ.

ಅಧಃಕರಣದ ಪುನರುಕ್ತವಲ್ಲದ ಪರಿಣಾಮಗಳು ಕೇವಲ ೯೧೨ ಇವೆ. ಮತ್ತು ಎಲ್ಲ ಸಮಯಗಳಲ್ಲಾಗುವ ಪುನರುಕ್ತ ಮತ್ತು ಪುನರುಕ್ತವಲ್ಲದ ಪರಿಣಾಮಗಳು ಒಟ್ಟು ೩೦೭೨ ಇವೆ. ಈ ಅಧಃಕರಣದ ಪರಿಣಾಮಗಳು ಸಮಾನ ವೃದ್ಧಿಗಾಗಿ ಆಗಿವೆ. ಎಂದರೆ ಮೊದಲನೆಯ ಸಮಯದ ಪರಿಣಾಮದಿಂದ ಎರಡನೆಯ ಸಮಯದ ಪರಿಣಾಮಗಳು ಎಷ್ಟು ಹೆಚ್ಚಾಗಿವೆ ಅಷ್ಟೇ ಅಷ್ಟು ಎರಡನೆಯ ಮೊದಲಾದ ಸಮಯಗಳ ಪರಿಣಾಮಗಳಿಂದ ಮೂರನೆಯ ಮೊದಲಾದ ಸಮಯಗಳ ಪರಿಣಾಮಗಳು ಹೆಚ್ಚಾಗಿವೆ. ಈ ಸಮಾನ ವೃದ್ಧಿಗೇನೇ ಚಯವೆನ್ನುತ್ತಾರೆ. ಈ ದೃಷ್ಟಾಂತದಲ್ಲಿ ಚಯದ ಪ್ರಮಾಣ ೪, ಸ್ಥಾನದ ಪ್ರಮಾಣ ೧೬ ಮತ್ತು ಸರ್ವಧನದ ಪ್ರಮಾಣ ೩೦೭೨ ಇದೆ. ಮೊದಲ ಸ್ಥಾನದಲ್ಲಿ ವೃದ್ಧಿಯ ಅಭಾವವಿರುವುದರಿಂದ ಕೊನೆಯ ಸ್ಥಾನಗಳಲ್ಲಿ ಒಂದು ಘಟಿ ಪದ ಪ್ರಮಾಣ ಚಯ ವರ್ಧಿಸಿವೆ. ಆದುದರಿಂದ ಒಂದು ಘಟಿ ಪದದ ಅರ್ಧಕ್ಕೆ ಚಯ ಮತ್ತು ಪದದಿಂದ ಗುಣಾಕಾರ ಮಾಡಿದರೆ ೧೫X೪X೧೬/೨=೪೮೦ ಚಯ ಧನದ ಪ್ರಮಾಣವಾಗುತ್ತದೆ. ಮೊದಲ ಸಮಯದಂತೆ ಎಲ್ಲ ಸಮಯಗಳಲ್ಲಿಯ ಪರಿಣಾಮಗಳನ್ನು ಬೇರೆಯೆಂದು ತಿಳಿದುಕೊಂಡು ವೃದ್ಧಿಸಿದ ಪ್ರಮಾಣದ ಕೂಟಕ್ಕೆ ಚಯಧನ ಇಲ್ಲವೆ ಉತ್ತರ ಧನವೆನ್ನುತ್ತಾರೆ. ಎಲ್ಲ ಧನಗಳಲ್ಲಿ ಚಯಧನವನ್ನು ಕಡಿಮೆ ಮಾಡಿ ಉಳಿದುದರಲ್ಲಿ ಪದದಿಂದ ಭಾಗಿಸಿದರೆ ಮೊದಲ ಸಮಯ ಸಂಬಂಧದ ಪರಿಣಾಮ ಪುಂಜದ ಪ್ರಮಾಣವು ೩೦೭೨-೪೮೦/೧೬=೧೬೨ ಆಗುತ್ತದೆ. ಇದರಲ್ಲಿ ಕ್ರಮದಿಂದ ಒಂದೊಂದು ಚಯವನ್ನು ಕೂಡಿಸಿದರೆ ದ್ವಿತಿಯ ಮೊದಲಾದ ಸಮಯಗಳ ಪರಿಣಾಮ ಪುಂಜದ ಪ್ರಮಾಣವಾಗುತ್ತದೆ. ಒಂದು ಘಟಿಪದ ಪ್ರಮಾಣ ಚಯವನ್ನು ಕೂಡಿಸಿದರೆ ಕೊನೆಯ ಸಮಯ ಸಂಬಂಧದ ಪರಿಣಾಮ ಪುಂಜದ ಪ್ರಮಾಣವು ೧೬೨+೧೫X೪=೨೨೨ ಆಗುತ್ತದೆ. ಒಂದು ಸಮಯದಲ್ಲಿ ಹಲವು ಪರಿಣಾಮಗಳ ಸಂಭಾವನೆಯಿರುವುದರಿಂದ ಒಂದು ಸಮಯದಲ್ಲಿ ಎಷ್ಟೋ ಜೀವಗಳು ಎಷ್ಟೋ ಪರಿಣಾಮಗಳನ್ನು ಸ್ವೀಕರಿಸುತ್ತವೆ ಆದ್ದರಿಂದ ಒಂದು ಸಮಯದಲ್ಲಿ ಹಲವು ಜೀವಗಳ ಅಪೇಕ್ಷೆಯಿಂದ ಪರಿಣಾಮಗಳಲ್ಲಿ ಸಾದೃಶ್ಯತೆಯಿಲ್ಲ. ಒಂದು ಸಮಯದಲ್ಲಿ ಹಲವು ಜೀವಗಳು ಒಂದು ಪರಿಣಾಮವನ್ನು ಸ್ವೀಕಾರ ಮಾಡುತ್ತವೆ. ಆದ್ದರಿಂದ ಒಂದು ಸಮಯದಲ್ಲಿ ಹಲವು ಜೀವಗಳ ಅಪೇಕ್ಷೆಯಿಂದ ಪರಿಣಾಮಗಳಲ್ಲಿ ಸಾದೃಶ್ಯತೆಯಿದೆ. ಭಿನ್ನ ಸಮಯಗಳಲ್ಲಿ ಹಲವು ಜೀವಗಳು ಹಲವು ಪರಿಣಾಮಗಳನ್ನು

ಗ್ರಹಣ ಮಾಡುತ್ತವೆ, ಆದ್ದರಿಂದ ಭಿನ್ನ ಸಮಯಗಳಲ್ಲಿ ಹಲವು ಜೀವಗಳ ಅಪೇಕ್ಷೆಯಿಂದ ಪರಿಣಾಮಗಳಲ್ಲಿ ಸಾದೃಶ್ಯತೆಯಿಲ್ಲ. ಯಾವ ಪರಿಣಾಮವು ಯಾವುದೇ ಒಂದು ಜೀವಕ್ಕೆ ಮೊದಲನೆಯ ಸಮಯದಲ್ಲಾಗುತ್ತದೆ ಅದೇ ಪರಿಣಾಮವು ಬೇರೆ ಇನ್ನೊಂದು ಜೀವಕ್ಕೆ ಎರಡನೆಯ ಸಮಯದಲ್ಲಿ ಹಾಗೂ ಮೂರನೆಯ ಜೀವಕ್ಕೆ ಮೂರನೆಯ ಸಮಯದಲ್ಲಿ ಮತ್ತು ನಾಲ್ಕನೆಯ ಜೀವಕ್ಕೆ ನಾಲ್ಕನೆಯ ಸಮಯದಲ್ಲಿ ಆಗುವ ಸಾಧ್ಯತೆಯಿದೆ. ಆದ್ದರಿಂದ ಭಿನ್ನ ಸಮಯವರ್ತಿಯಾದ ಹಲವು ಜೀವಗಳ ಪರಿಣಾಮಗಳಿಂದ ಸಾದೃಶ್ಯತೆಯೂ ಆಗುತ್ತದೆ. ಹೇಗೆ ೧೬೨ ನಂಬರದ ಪರಿಣಾಮವು ಮೊದಲನೆಯ, ಎರಡನೆಯ, ಮೂರನೆಯ, ನಾಲ್ಕನೆಯ ಸಮಯಗಳಲ್ಲಾಗುವ ಸಾಧ್ಯತೆಯಿದೆ. ಮೊದಲನೆಯ ಸಮಯ ಸಂಬಂಧದ ಪರಿಣಾಮ ಪುಂಜದಲ್ಲೂ ೩೯, ೪೦, ೪೧, ೪೨ ಹೀಗೆ ನಾಲ್ಕು ಭಾಗ ಮಾಡಿದ್ದಾರೆ. ಎಂದರೆ ಮೊದಲನೆಯ ನಂಬರದಿಂದ ಹಿಡಿದು ೩೯ ನಂಬರದವರೆಗೆ ೩೯ರ ಪರಿಣಾಮಗಳಾಗುತ್ತವೆ ಅವು ಮೊದಲನೆಯ ಸಮಯದಲ್ಲೇ ಕಂಡು ಬರುತ್ತವೆ, ಎರಡನೆಯ ಮೊದಲಾದ ಸಮಯಗಳಲ್ಲಿಲ್ಲ. ಇವೇ ೩೯ ಪರಿಣಾಮಗಳ ಪುಂಜಕ್ಕೆ ಮೊದಲನೆಯ ಭಾಗವೆನ್ನುತ್ತಾರೆ ಎರಡನೆಯ ಭಾಗದಲ್ಲಿ ನಂಬರ ೪೦ ರಿಂದ ೭೯ ರ ವರೆಗೆ ೪೦ ಪರಿಣಾಮಗಳು ಹೀಗಿವೆ ಅವು ಮೊದಲನೆಯ, ಮತ್ತು ಎರಡನೆಯ ಸಮಯಗಳಲ್ಲಿ ಕಂಡು ಬರುತ್ತವೆ ಇದಕ್ಕೆ ಎರಡನೆಯ ಭಾಗವೆನ್ನುತ್ತಾರೆ. ಮೂರನೆಯ ಭಾಗದಲ್ಲಿ ನಂ. ೮೦ ರಿಂದ ೧೨೦ ರ ವರೆಗೆ ೪೧ ಪರಿಣಾಮಗಳಾಗುತ್ತವೆ ಅವು ಮೊದಲನೆಯ, ಎರಡನೆಯ, ಮೂರನೆಯ ಸಮಯಗಳಲ್ಲಿ ಕಂಡುಬರುತ್ತವೆ. ಮತ್ತು ನಾಲ್ಕನೆಯ ಭಾಗದಲ್ಲಿ ನಂ. ೧೨೧ ರಿಂದ ೧೬೨ ರ ವರೆಗೆ ೪೨ ಪರಿಣಾಮಗಳಾಗುತ್ತವೆ. ಅವು ಮೊದಲಿನ ನಾಲ್ಕೂ ಸಮಯಗಳಲ್ಲಿ ಕಂಡು ಬರುತ್ತವೆ. ಇದೇ ಪ್ರಕಾರ ಉಳಿದ ಸಮಯಗಳದ್ದೂ ತಿಳಿಯಬೇಕು. ಅಧಃಕರಣದ ಮೇಲೆ ಮೇಲಿನ ಎಲ್ಲ ಪರಿಣಾಮಗಳು ಮೊದ ಮೊದಲಿನ ಪರಿಣಾಮದ ಅಪೇಕ್ಷೆಯಿಂದ ಅನಂತ-ಅನಂತ ಗುಣಿತ ವಿಶುದ್ಧತೆಯಿಂದ ಕೂಡಿರುತ್ತದೆ.

ಈ ಅಧಃಪ್ರವೃತ್ತಿಕರಣದಲ್ಲಿ ಸ್ಥಿತಿಕಾಂಡಕಘಾತ, ಅನುಭಾಗಕಾಂಡಕಘಾತ, ಗುಣಶ್ರೇಣಿ ಮತ್ತು ಗುಣಸಂಕ್ರಮಣಗಳಾಗುವುದಿಲ್ಲ. ಏಕೆಂದರೆ ಇದರಲ್ಲಿ ಮೇಲಿನ ಕಾರ್ಯಗಳನ್ನು ಉತ್ಪನ್ನ ಮಾಡುವ ಶಕ್ತಿಯ ಅಭಾವವಿರುತ್ತದೆ. ಕೇವಲ ಅನಂತಗುಣಿತ ವಿಶುದ್ಧಿಯಿಂದ ಪ್ರತಿಯೊಂದು ಸಮಯದಲ್ಲಿ ವಿಶುದ್ಧಿಗೆ ಪಾತ್ರವಾಗುತ್ತದೆ. ಅಧಃಕರಣದಲ್ಲಿ ಸ್ಥಿತಿಬಂಧದ ಕಾಲವು ಕೇವಲ ಅಂತರ್ಮುಹೂರ್ತ ಮಾತ್ರವಿದೆ. ಒಂದೊಂದು ಸ್ಥಿತಿಬಂಧ ಕಾಲವು ಪೂರ್ಣವಾದ ಮೇಲೆ ಪಲ್ಯೋಪಮದ ಸಂಖ್ಯಾತದ ಭಾಗದಿಂದ ಕಡಿಮೆಯಾದ ಬೇರೆ ಸ್ಥಿತಿಯನ್ನು ಕಟ್ಟುತ್ತದೆ. ಹೀಗೆ ಸಂಖ್ಯಾತ ಸಹಸ್ರಬಾರಿ ಸ್ಥಿತಿಬಂಧಾಪಸರಣಗಳಾದ ಮೇಲೆ ಅಧಃಪ್ರವೃತ್ತಿಕರಣದ ಕಾಲವು ಪೂರ್ಣಗೊಳ್ಳುತ್ತದೆ.

ಅಧಃಕರಣದ ಅಂತರ್ಮುಹೂರ್ತ ಮಾತ್ರ ಕಾಲವನ್ನು ಕಳೆದ ಮೇಲೆ ಜೀವವು ಅನಂತಗುಣಿತ ವಿಶುದ್ಧಿಯನ್ನು ಹೊಂದಿ ಅಪೂರ್ವಕರಣ ಜಾತಿಯ ಪರಿಣಾಮಗಳನ್ನು ಮಾಡುತ್ತದೆ. ಅಲ್ಲಿ ಪೂರ್ವಸಮಯದಲ್ಲೆಂದೂ ಪ್ರಾಪ್ತವಾಗದಂಥ ಅಪೂರ್ವ ಪರಿಣಾಮಗಳನ್ನು ಧರಿಸುತ್ತದೆಂದು ಅದಕ್ಕೆ ಅಪೂರ್ವಕರಣವೆನ್ನುತ್ತಾರೆ. ಅಧಃಕರಣದಲ್ಲಿ ಯಾವ ಪ್ರಕಾರ ಬೇರೆ ಸಮಯವರ್ತಿಯಾದ ಜೀವಗಳ ಪರಿಣಾಮಗಳು ಸಾದೃಶ್ಯ ಮತ್ತು ಅಸಾದೃಶ್ಯವೆಂದು ಎರಡೂ ಪ್ರಕಾರಗಳಿಂದಾಗುತ್ತವೆ ಹಾಗೆ ಅಪೂರ್ವಕರಣದಲ್ಲಾಗುವುದಿಲ್ಲ. ಆದರೆ ಇಲ್ಲಿ ಬೇರೆ ಸಮಯವರ್ತಿಯಾದ ಜೀವಗಳ ಪರಿಣಾಮವು ಸಾದೃಶ್ಯವಾಗದೆ ಅಸಾದೃಶ್ಯವೇ ಆಗುತ್ತದೆ. ಆದರೆ ಒಂದು ಸಮಯವರ್ತಿಯಾದ ಜೀವಗಳಲ್ಲಿ ಸಾದೃಶ್ಯ-ಅಸಾದೃಶ್ಯಗಳೆರಡೂ ಕಂಡು ಬರುತ್ತವೆ.

ಅಧಃಕರಣದ ಕಾಲದಿಂದ ಅಪೂರ್ವಕರಣದ ಕಾಲವು ಒಂದು ವೇಳೆ ಸಂಖ್ಯಾತಗುಣಿತ ಕಡಿಮೆಯಿದ್ದರೂ ಸಾಮಾನ್ಯವಾಗಿ ಅಂತರ್ಮುಹೂರ್ತವೇ ಇದೆ. ಮತ್ತು ಇದರಲ್ಲಿ ಪರಿಣಾಮಗಳ ಸಂಖ್ಯೆಯು ಅಧಃಕರಣದ ಪರಿಣಾಮಗಳ ಸಂಖ್ಯೆಯಿಂದ ಅಸಂಖ್ಯಾತ ಲೋಕಗುಣಿತವಿದ್ದು ಈ ಪರಿಣಾಮಗಳಲ್ಲಿ ಪ್ರತಿಯೊಂದು ಸಮಯಕ್ಕೆ ಸಮಾನವಾಗಿ ಉತ್ತರೋತ್ತರ ವೃದ್ಧಿಯಾಗುತ್ತ ಹೋಗಿದೆ. ಎಂದರೆ ಮೊದಲನೆಯ ಸಮಯದ ಪರಿಣಾಮಗಳಿಗಿಂತ ಎರಡನೆಯ ಸಮಯದ ಪರಿಣಾಮಗಳು ಎಷ್ಟು ಹೆಚ್ಚಾಗಿವೆ ಅಷ್ಟಷ್ಟೇ ಹೆಚ್ಚು ಎರಡನೆಯ ಸಮಯಕ್ಕಿಂತ ಮೂರನೆಯ ಸಮಯದ ಪರಿಣಾಮಗಳಿವೆ. ಮತ್ತು ಅಧಃಕರಣದಲ್ಲಿ ಬೇರೆ ಸಮಯವರ್ತಿಯಾದ ಜೀವಗಳ ಪರಿಣಾಮಗಳಲ್ಲಿಸಾದೃಶ್ಯತೆ ಕಂಡು ಬರುತ್ತದೆಂದು ಅಲ್ಲಿ ಅನುಕೃಷ್ಟಿಯ ರಚನೆ ಮಾಡಿದೆ ಹಾಗೆ ಅಪೂರ್ವಕರಣದಲ್ಲಿ ಬೇರೆ ಸಮಯವರ್ತಿಯಾದ  ಜೀವಗಳ ಪರಿಣಾಮಗಳಲ್ಲಿಸಾದೃಶ್ಯತೆ ಕಂಡು ಬರುವುದಿಲ್ಲದೆಂದು ಅನುಕೃಷ್ಟಿಯ ರಚನೆಯಿರುವುದಿಲ್ಲ. ಇದರ ಅಂಕ ಸಂದೃಷ್ಟಿಯು ಹೀಗಿದೆ-ಸರ್ವಧನದ ಪ್ರಮಾಣ ೪೦೯೬, ಚಯದ ಪ್ರಮಾಣ ೧೬, ಮತ್ತು ಸ್ಥಾನದ ಪ್ರಮಾಣ ೮ ಇದೆ. ಒಂದು ಘಟಿಪದದ ಅರ್ಧಕ್ಕೆ ಚಯ ಮತ್ತು ಪದದಿಂದ ಗುಣಾಕಾರ ಮಾಡಿದ ಮೇಲೆ ಚಯ ಧನದ ಪ್ರಮಾಣವು ೭X೧೬X೮/೨=೪೪೮ ಆಗುತ್ತದೆ. ಸರ್ವಧನದಿಂದ ಚಯಧನವನ್ನು ಕಡಿಮೆ ಮಾಡಿ ಪದದಿಂದ ಭಾಗಿಸಿದರೆ ಮೊದಲನೆಯ ಸಮಯ ಸಂಬಂಧದ ಪರಿಣಾಮಪುಂಜದ ಪ್ರಮಾಣವು ೪೦೯೬-೪೪೮/೮=೪೫೬ ಆಗುತ್ತದೆ. ಇದರಲ್ಲಿ ಒಂದೊಂದು ಚಯವನ್ನು ಕೂಡಿಸಿದರೆ ಎರಡನೆಯ ಮೊದಲಾದ ಸಮಯಗಳಲ್ಲಾಗುವಂಥ ಪರಿಣಾಮಗಳ ಪ್ರಮಾಣವು ಹೊರಡುತ್ತದೆ. ಇದರಲ್ಲಿ ಒಂದು ಘಟಿಪದ ಪ್ರಮಾಣದ ಚಯವನ್ನು ಕೂಡಿಸುವುದರಿಂದ ಕೊನೆಯ ಸಮಯ ಸಂಬಂಧದ ಪರಿಣಾಮಗಳ ಪ್ರಮಾಣವು ೪೫೬+೭X೧೬=೫೬೮ ಆಗುತ್ತದೆ.

ಈ ಅಪೂರ್ವಕರಣದಲ್ಲಿ ಕೊನೆಯ ಸಮಯದವರೆಗೆ ಗುಣಶ್ರೇಣಿ, ಗುಣಸಂಕ್ರಮಣ, ಸ್ಥಿತಿಕಾಂಡಘಾತ, ಅನುಭಾಗಕಾಂಡಘಾತವೆಂದು ನಾಲ್ಕು ಆವಶ್ಯಕಗಳಿರುತ್ತವೆ. ಹೀಗೆ ಪೂರ್ವ ಸಮಯದ ಉತ್ಕೃಷ್ಟ ಹಾಗೂ ಉತ್ತರ ಸಮಯದ ಜಘನ್ಯ ಪರಿಣಾಮಗಳ ಕ್ರಮದಿಂದ ಅನಂತಗುಣಿತ ವಿಶುದ್ಧತೆಯನ್ನು ಪಡೆದು ಸರ್ಪದ ನಡಿಗೆಯಂತಿರುವುದೆಂದು ತಿಳಿಯಬೇಕು. ಅಪೂರ್ವಕರಣ ಪರಿಣಾಮಗಳ ನಿಮಿತ್ತದಿಂದ ಮೋಹನೀಯದ ಉಪಶಮವಾಗುತ್ತದೆ.

ಅಂತರ್ಮುಹೂರ್ತಮಾತ್ರವಾಗಿರುವ ಅನಿವೃತ್ತಿಕರಣದ ಸಮಯಗಳಲ್ಲಿಂದ ಯಾವುದೇ ಒಂದು ಸಮಯ-ದಲ್ಲಿರುವಂಥ ಹಲವು ಜೀವಗಳಲ್ಲಿ ಹೇಗೆ ಶರೀರದ ಆಕಾರ, ವರ್ಣ ಮೊದಲಾದ ಬಾಹ್ಯ ಕಾರಣಗಳಿಂದ ಮತ್ತು ಜ್ಞಾನೋಪಯೋಗ ಮೊದಲಾದ ಅಂತರಂಗ ಕಾರಣಗಳಿಂದ ಪರಸ್ಪರದಲ್ಲಿ ಭೇದವು ಕಂಡು ಬರುತ್ತದೆ ಹಾಗೆ ಯಾವ ಪರಿಣಾಮಗಳ ನಿಮಿತ್ತದಿಂದ ಪರಸ್ಪರದಲ್ಲಿ ಭೇದವು ಕಂಡು ಬರುವುದಿಲ್ಲ ಅವಕ್ಕೆ ಅನಿವೃತ್ತಿಕರಣ ಪರಿಣಾಮಗಳೆನ್ನುತ್ತಾರೆ. ಇನ್ನು ಅನಿವೃತ್ತಿಕರಣದ ಕಾಲವು ಎಷ್ಟಿದೆ ಅಷ್ಟೇ ಅದರ ಪರಿಣಾಮಗಳಿವೆ. ಆದುದರಿಂದ ಅದರ ಕಾಲದ ಪ್ರತಿಯೊಂದು ಸಮಯದಲ್ಲಿ ಅನಿವೃತ್ತಿಕರಣದ ಒಂದೊಂದೇ ಪರಿಣಾಮವಾಗುತ್ತದೆ, ಮತ್ತು ಈ ಪರಿಣಾಮಗಳು ಅತ್ಯಂತ ನಿರ್ಮಲವಾಗಿದ್ದು ಧ್ಯಾನರೂಪದ ಅಗ್ನಿ ಜ್ವಾಲೆಯ ನೆರವಿನಿಂದ ಕರ್ಮಕಾಂತಾರವನ್ನು ಭಸ್ಮೀಭೂತಗೊಳಿಸುತ್ತವೆ, ಇಲ್ಲಿ ಬೇರೆ ಸಮಯದಲ್ಲಿರುವ ಪರಿಣಾಮಗಳಲ್ಲಿ ಸಂಪೂರ್ಣವಾಗಿ ಅಸಾದೃಶ್ಯತೆ ಮತ್ತು ಒಂದು ಸಮಯದಲ್ಲಿರುವ ಜೀವಗಳ ಪರಿಣಾಮಗಳಲ್ಲಿ ಸಂಪೂರ್ಣವಾಗಿ ಸಾದೃಶ್ಯತೆಯೇ ಇರುತ್ತದೆ. ಈ ಪರಿಣಾಮಗಳಿಂದಲೇ ಆಯುಕರ್ಮವೊಂದನ್ನು ಹೊರತು ಪಡಿಸಿ ಉಳಿದ ಏಳು ಕರ್ಮಗಳ ಗುಣಶ್ರೇಣಿನಿರ್ಜರೆ, ಗುಣಸಂಕ್ರಮಣ,

ಸ್ಥಿತಿಖಂಡನ, ಅನುಭಾಗಕಾಂಡಕ ಖಂಡನವಾಗುತ್ತದೆ. ಮತ್ತು ಮೋಹನೀಯಕರ್ಮದ ಬಾದರಕೃಷ್ಟಿ, ಸೂಕ್ಷ್ಮಕೃಷ್ಟಿ ಮೊದಲಾದವುಗಳಾಗುತ್ತವೆ.

ಇನ್ನು, ಅನಿವೃತ್ತಿಕರಣದಲ್ಲಿ ಪರಿಣಾಮಗಳ ವಿಶುದ್ಧಿಯು ಮೊದಲ ಸಮಯದಲ್ಲಿ ಎಲ್ಲಕ್ಕಿಂತ ಕಡಿಮೆಯಿರುತ್ತದೆ. ಅದಕ್ಕಿಂತ ಎರಡನೆಯ ಸಮಯದಲ್ಲಿ ವಿಶುದ್ಧಿಯು ಅನಂತಗುಣಿತ ಹೆಚ್ಚುತ್ತದೆ. ಅದಕ್ಕಿಂತ ಮೂರನೆಯ ಸಮಯದ ವಿಶುದ್ಧಿಯು ಜಘನ್ಯವಲ್ಲದ ಉತ್ಕೃಷ್ಟ ಅನಂತಗುಣಿತ ಆಗುತ್ತದೆ. ಹೀಗೆ ಈ ಕ್ರಮವನ್ನು ಅನಿವೃತ್ತಿಕರಣದ ಕೊನೆಯ ಸಮಯದವರೆಗೆ ಕೊಂಡೊಯ್ಯಬೇಕಾಗುವುದು. ಇಲ್ಲಿ ಅನಿವೃತ್ತಿಕರಣದ ಒಂದು ಸಮಯದಲ್ಲಿರುವ ಸಂಪೂರ್ಣ ಜೀವಗಳ ಪ್ರದೇಶಬಂಧವು ಸಮಾನವಾಗಿರುತ್ತದೆಂದು ತಿಳಿದುಕೊಳ್ಳಬಾರದು. ಏಕೆಂದರೆ ಪ್ರದೇಶಬಂಧವು ಯೋಗದ ನಿಮಿತ್ತದಿಂದಾಗುತ್ತದೆ ಮತ್ತು ಅಲ್ಲಿ ಯೋಗಗಳ ಸಮಾನತೆಯಾಗುವ ನಿಯಮವಿಲ್ಲ. ಹೇಗೆ ಲೋಕಪೂರಣ ಸಮುದ್ಘಾತದಲ್ಲಿ ಸ್ಥಿರವಾಗಿರುವ ಕೇವಲಿಗಳ ಯೋಗದ ಸಮಾನತೆಗೆ ಪ್ರತಿಪಾದಕವಾದ ಪರಮಾಗಮವಿದೆ ಹಾಗೆ ಅನಿವೃತ್ತಿಕರಣದಲ್ಲಿ ಯೋಗದ ಸಮಾನತೆಗೆ ಪ್ರತಿಪಾದಕವಾದ ಪರಮಾಗಮದ ಅಭಾವವಿದೆ.

ಅನಿವೃತ್ತಿಕರಣವನ್ನಾರಂಭ ಮಾಡುವ ಸಮಯದಲ್ಲೇ ಬೇರೆ ಸ್ಥಿತಿಖಂಡ, ಬೇರೆ ಅನುಭಾಗಖಂಡ ಮತ್ತು ಬೇರೆ ಸ್ಥಿತಿಬಂಧ (ಅಪಸರಣ)ಗಳನ್ನು ಆರಂಭಿಸಲಾಗುತ್ತದೆ. ಮೊದಲು ಅಪಕರ್ಷಿತವಾದ ಪ್ರದೇಶಾಗ್ರದಿಂದ ಅಂಸಖ್ಯಾತಗುಣಿತ ಪ್ರದೇಶದ ಅಪಕರ್ಷಣಮಾಡಿ, ಸಾವಿರಾರು ಸ್ಥಿತಿಬಂಧ, ಸ್ಥಿತಿಕಾಂಡಕಘಾತ ಮತ್ತು ಅನುಭಾಗ ಕಾಂಡಕ ಘಾತಗಳು ಕಳೆದುಹೋದಮೇಲೆ ಅನಿವೃತ್ತಿಕರಣ ಕಾಲದ ಕೊನೆಯ ಸಮಯವು ಪ್ರಾಪ್ತವಾಗುತ್ತದೆ. ಆಗ ಉದಯಕ್ಕೆ ಬರಲು ಯೋಗ್ಯವಾದ ಮಿಥ್ಯಾತ್ವಕರ್ಮದ ನಿಷೇಕಗಳ ಉದಯವಾಗದಿರುವುದರಿಂದ ಅದೇ ಸಮಯದಲ್ಲಿ ಉಪಶಮ ಸಮ್ಯಕ್ತ್ವದ ಪ್ರಾಪ್ತಿಯಾಗುತ್ತದೆ. ಮತ್ತು ಅದೇ ಸಮಯದಲ್ಲಿ ಮಿಥ್ಯಾತ್ವಕರ್ಮ ಪ್ರಕೃತಿಯೊಳಗೆ ಮಿಥ್ಯಾತ್ವ, ಮಿಶ್ರಮೋಹನೀಯ ಮತ್ತು ಸಮ್ಯಕ್ತ್ವ ಮೋಹನೀಯವೆಂದು ಮೂರು ಭಾಗಗಳಾಗುತ್ತವೆ. ಈ ಮೂರೂ ಕರಣಗಳ ಭಾವವು ಧ್ಯಾನಾವಸ್ಥೆಯಲ್ಲಿಯೇ ಆಗುತ್ತದೆ. ಹೀಗೆ ಆತ್ಮನ ಪರಿಣಾಮಗಳಿಂದ ಸಮ್ಯಗ್ದರ್ಶನ ಸ್ವರೂಪ ಪರಿಣಾಮದ ಪ್ರಾಪ್ತಿಯಾಗುತ್ತದೆ. ಈ ಉಪಶಮ ಸಮ್ಯಕ್ತ್ವವು ವರ್ತಮಾನಕಾಲದ ವಿಷಯದಲ್ಲಿ ಕ್ಷಾಯಿಕ ಸಮ್ಯಗ್ದರ್ಶನದಂತೆಯೇ ನಿರ್ಮಲವಾಗಿದೆ.

## ಪಾರಿಭಾಷಿಕ ಶಬ್ದಕೋಶ

**ಅಕಾಮನಿರ್ಜರೆ :-** ಬಂಧನದಲ್ಲಿರಿಸಿದ ಮೇಲೆ ಇಲ್ಲವೆ ಹಗ್ಗ ಮೊದಲಾದವುಗಳಿಂದ ಕಟ್ಟಿ ಹಾಕಿದ ಮೇಲೆ ಯಾವ ಹಸಿವು-ಬಾಯಾರಿಕೆಗಳನ್ನು ಸಹನೆ ಮಾಡಬೇಕಾಗುತ್ತದೆ, ಬ್ರಹ್ಮಚರ್ಯವನ್ನು ಪಾಲಿಸಬೇಕಾಗುತ್ತದೆ, ನೆಲದ ಮೇಲೆ ಮಲಗಬೇಕಾಗುತ್ತದೆ, ಮಲ-ಮೂತ್ರಗಳನ್ನು ತಡೆದುಕೊಳ್ಳಬೇಕಾಗುತ್ತದೆ ಮತ್ತು ನಾನಾ ಪ್ರಕಾರದ ಕಷ್ಟಗಳಾಗುತ್ತವೆ ಇವೆಲ್ಲವೂ ಅಕಾಮವಾಗಿವೆ ಮತ್ತು ಇವುಗಳಿಂದ ಯಾವ ನಿರ್ಜರೆಯಾಗುತ್ತದೆ ಅದು ಅಕಾಮನಿರ್ಜರೆಯಿದೆ.

-ಸರ್ವಾರ್ಥಸಿದ್ಧಿ ೬/೨೦/೩೩೫/೧೦

**ಅಗುರುಲಘು :-** ಜಡ ಇಲ್ಲವೆ ಚೈತನ್ಯಯುಕ್ತವಾದ ಪ್ರತಿಯೊಂದು ದ್ರವ್ಯದಲ್ಲಿ ಅಗುರುಲಘುವೆಂಬ ಹೆಸರಿನ ಒಂದು ಸೂಕ್ಷ್ಮ ಗುಣವನ್ನು ಸ್ವೀಕಾರ ಮಾಡಲಾಗಿದೆ. ಯಾವುದರ ಕಾರಣದಿಂದ ಪ್ರತಿಕ್ಷಣದಲ್ಲಿ ಸೂಕ್ಷ್ಮ ಪರಿಣಮನ ಮಾಡುತ್ತಿದ್ದರೂ ಅದು ಹೇಗಿರುತ್ತದೆಯೋ ಹಾಗೇ ಇರುತ್ತದೆ. ಸಂಯೋಗಾವಸ್ಥೆಯಲ್ಲಿ ಅದರ ಪರಿಣಮನವು ಸ್ಥೂಲರೂಪದಿಂದ ದೃಷ್ಟಿ ಗೋಚರವಾಗುತ್ತದೆ. ಶರೀರ ಧರಿಸಿದ ಜೀವವೂ ತಿಳುವು-ದಪ್ಪತನದ ಕಲ್ಪನೆಯಿಂದ ಕೂಡಿರುತ್ತದೆ. ಈ ಕಲ್ಪನೆಯ ಕಾರಣದಿಂದ ಅಗುರುಲಘುವೆಂಬ ಹೆಸರಿನ ಒಂದು ಕರ್ಮವನ್ನು ಸ್ವೀಕಾರ ಮಾಡಲಾಗಿದೆ. ಅಗುರುಲಘು ಗುಣದ ಷಡ್‌ಗುಣಹಾನಿ-ವೃದ್ಧಿರೂಪದಿಂದ ಪ್ರತಿ ಕ್ಷಣದಲ್ಲಿ ಪ್ರವರ್ತಮಾನಾರ್ಥವಾಗಿ ಪರ್ಯಾಯಗಳಾಗುತ್ತವೆ. ಇನ್ನು ಸಿದ್ಧರ ಸ್ವರೂಪವು ಜಡವೂ ಇರುವುದಿಲ್ಲ ಮತ್ತು ಹಗುರೂ ಇರುವುದಿಲ್ಲವೆಂದು ಅವರಿಗೆ ಅಗುರುಲಘು' ಗುಣವುಳ್ಳವರೆಂದು ಹೇಳಲಾಗುತ್ತದೆ. -ದ್ರವ್ಯಸಂಗ್ರಹ ಟೀಕೆ ೧೪/೪೩

**ಅಘಾತಿಕರ್ಮ :-** ಯಾವುದರಲ್ಲಿ ಪ್ರತ್ಯಕ್ಷವಾಗಿ ಜೀವ ಗುಣಗಳನ್ನು ನಾಶ ಮಾಡುವಂಥ ಶಕ್ತಿಯು ಕಂಡುಬರುವುದಿಲ್ಲವೋ ಅದನ್ನು ಅಘಾತಿಕರ್ಮವೆಂದು ಹೇಳಲಾಗುತ್ತದೆ.

**ಅಚಕ್ಷುದರ್ಶನ :-** ದೃಷ್ಟಾಂತ ಎಂದರೆ ನೋಡದ ಪದಾರ್ಥಗಳ ಸ್ಮರಣೆ ಮಾಡುವುದು ಅಚಕ್ಷುದರ್ಶನ-ವಿದೆಯೆಂದು ಎಷ್ಟೋ ಜನರು ಹೇಳುತ್ತಾರೆ, ಆದರೆ ಅವರ ಈ ಹೇಳಿಕೆಯು ಹೊಂದಿಕೆಯಾಗುವುದಿಲ್ಲ. ಏಕೆಂದರೆ ಹೀಗೆನ್ನುವುದರಿಂದ ಏಕೇಂದ್ರಿಯ ಜೀವಗಳಲ್ಲಿ ಚಕ್ಷುರಿಂದ್ರಿಯದ ಅಭಾವವಿದೆಯೆಂದಮೇಲೆ ಅವಕ್ಕೆ ಅಚಕ್ಷುದರ್ಶನದ ಅಭಾವದ ಪ್ರಶ್ನೆ ಬರಬಹುದು. ಏಕೆಂದರೆ ಉಪಲಬ್ಧ ಪದಾರ್ಥದ ಗ್ರಹಣ ಮಾಡುವಂಥ ಸ್ಮೃತಿಗೆ ದರ್ಶನವೆಂದು ಸ್ವೀಕರಿಸಿದ ಮೇಲೆ ಮನಸ್ಸಿಗೆ ವಿಷಯ ರಹಿತತೆಯ ಆಪತ್ತಿಯು ಬರುತ್ತದೆ. ಆದ್ದರಿಂದ ಸ್ವರೂಪ ಸಂವೇದನವು ಅಚಕ್ಷುದರ್ಶನವಿದೆಯೆಂದು ಸ್ವೀಕಾರ ಮಾಡಬೇಕಾಗುವುದು. -ಧವಲ. ೧/೧, ೧, ೧೩೩/೩೮೩/೮

ತನ್ನ ಆವರಣದ ಕ್ಷಯೋಪಶಮದಿಂದ ಮತ್ತು ಚಕ್ಷುರಿಂದ್ರಿಯವೊಂದನ್ನುಳಿದು ಉಳಿದ ನಾಲ್ಕು ಇಂದ್ರಿಯಗಳ ಹಾಗೂ ಮನಸ್ಸಿನ ಅವಲಂಬನೆಯಿಂದ ಮೂರ್ತ, ಅಮೂರ್ತ ದ್ರವ್ಯಗಳನ್ನು ವಿಕಲರೂಪದಿಂದ ಸಾಮಾನ್ಯವಾಗಿ ಅವಲೋಕನ ಮಾಡುತ್ತದೆ. ಅದು ಅಚಕ್ಷುದರ್ಶನವಿದೆ. -ಪಂಚಾಸ್ತಿಕಾಯ ತ. ಪ್ರ. ೪೨

**ಅಛೇರಾ :-** ಆಶ್ಚರ್ಯಕಾರಕವೂ, ಅಘಟಿತವೂ, ಅಪೂರ್ವವೂ ಎನಿಸಿದ ಕಾರ್ಯಗಳಿಗೆ ಅಛೇರಾ ಎನ್ನುತ್ತಾರೆ.

**ಅಜೀವ :-** ಜೀವದಿಂದ ವಿಪರೀತವಾದ ಲಕ್ಷಣವುಳ್ಳದ್ದು ಅಜೀವವಿದೆ. ಇನ್ನು ಯಾವುದರಲ್ಲಿ ಉಪಯೋಗದ ಜೊತೆಗಿರುವಂಥ ಯಥೋಕ್ತ ಲಕ್ಷಣವುಳ್ಳ ಚೈತನ್ಯದ ಅಭಾವವಾಗಿರುವುದರಿಂದ ಒಳಗೂ ಹೊರಗೂ ಅಚೇತನತನವೇ ಅವತರಿಸಿದ್ದು ಪ್ರತಿಭಾಸವಾಗುತ್ತದೆ ಅದು ಅಜೀವವಿದೆ. ಧರ್ಮ ಮೊದಲಾದ ದ್ರವ್ಯಗಳಲ್ಲಿ ಜೀವದ ಲಕ್ಷಣಗಳು ಕಂಡುಬರುವುದಿಲ್ಲವೆಂದು ಅವಕ್ಕೆ ಅಜೀವವೆಂಬ ಸಾಮಾನ್ಯ ಸಂಜ್ಞೆಯಿದೆ. -ಸರ್ವಾರ್ಥಸಿದ್ಧಿ ೫/೨/೨೬೬

**ಅಣುವ್ರತ-ಮಹಾವ್ರತ ಃ-** ಬದುಕಿರುವಷ್ಟು ಕಾಲ ಪಾಪಗಳ ಏಕದೇಶ ಇಲ್ಲವೆ ಸರ್ವದೇಶಗಳ ನಿವೃತ್ತಿಗೆ ವ್ರತವೆನ್ನುತ್ತಾರೆ. ಇದರಲ್ಲಿ ಶ್ರಾವಕರಿಗೆ ಅಣುವ್ರತವೆಂದೂ ಸಾಧುಗಳಿಗೆ ಮಹಾವ್ರತವೆಂದೂ ಎರಡು ಪ್ರಕಾರಗಳಿವೆ. ಇವನ್ನು ಅತಿಚಾರವಿಲ್ಲದೆ ಭಾವನೆಯಿಂದ ಕೂಡಿ ಪಾಲಿಸಿದರೆ ಸಾಧಕನಿಗೆ ಸಾಕ್ಷಾತ್ ಇಲ್ಲವೆ ಪರಂಪರೆಯಿಂದ ಮೋಕ್ಷದ ಪ್ರಾಪ್ತಿಯಾಗುತ್ತದೆ, ಹಿಂಸೆ, ಹುಸಿ, ಕಳವು, ಕುಶೀಲ ಮತ್ತು ಪರಿಗ್ರಹ ಈ ಐದು ಸ್ಥೂಲ ಪಾಪಗಳಿಂದ ವಿರಕ್ತವಾಗುವುದು **ಅಣುವ್ರತ**ವಿದೆ. ಮತ್ತು ಹಿಂಸೆ ಮೊದಲಾದ ಐದೂ ಪಾಪಗಳನ್ನು ಮನ, ವಚನ, ಕಾಯ ಹಾಗೂ ಕೃತ-ಕಾರಿತ-ಅನುಮೋದನೆಯಿಂದ ತ್ಯಾಗ ಮಾಡುವುದು **ಮಹಾವ್ರತ**ವಿದೆ. ಇದು ಮಹಾನ್ ಮೋಕ್ಷರೂಪ ಅರ್ಥದ ಸಿದ್ಧಿ ಮಾಡುತ್ತದೆ, ಮಹಾನ್ ತೀರ್ಥಂಕರಾದಿ ಪುರುಷರು ಇವನ್ನು ಪಾಲನೆ ಮಾಡಿದ್ದಾರೆ, ಎಲ್ಲ ತರದ ಪಾಪಯೋಗಗಳ ತ್ಯಾಗವಾಗುವುದರಿಂದ ಸ್ವಯಂ ಮಹಾನ್ ಆಗಿವೆ, ಪೂಜ್ಯವಾಗಿವೆಯೆಂದು ಇವುಗಳ ಹೆಸರು ಮಹಾವ್ರತವಿದೆ. -ಭಗವತೀ ಆರಾಧನೆ. ೧೧೮೪

**ಅಧ್ಯವಸಾಯ ಃ-** ನಾನು ಬೇರೆ ಜೀವಗಳನ್ನು ಬದುಕಿಸುತ್ತೇನೆ ಮತ್ತು ಬೇರೆ ಜೀವಗಳು ನನ್ನನ್ನು ಬದುಕಿಸುತ್ತವೆಂಬ ಆಶಯವು ನಿಶ್ಚಯದಿಂದ ಅಜ್ಞಾನವಿದೆ, ಅಧ್ಯವಸಾಯವಿದೆ. ಅಸತ್ಯ, ಅಧ್ಯವಸಾಯ, ಅಭಿನಿವೇಶ ಇವೆಲ್ಲವೂ ಏಕಾರ್ಥ ವಾಚಿಯಾಗಿವೆ. ಶುದ್ಧಾತ್ಮನ ಸಮ್ಯಕ್‌ಶ್ರದ್ಧೆ, ಜ್ಞಾನ, ಆಚರಣರೂಪವಾದ ನಿಶ್ಚಯ ರತ್ನತ್ರಯ ಲಕ್ಷಣವುಳ್ಳ ಭೇದಜ್ಞಾನವು ಯಾವಾಗ ಆಗುವುದಿಲ್ಲ ಆಗ 'ನಾನು ಜೀವಗಳನ್ನು ಕೊಲ್ಲುತ್ತೇನೆ' ಇತ್ಯಾದಿ ರೂಪವಾದ ಹಿಂಸಾದಿ ಅಧ್ಯವಸಾಯವಾಗುತ್ತದೆ. 'ನಾನು ನಾರಕಿಯಿದ್ದೇನೆ' ಇತ್ಯಾದಿ ಕರ್ಮೋದಯ ರೂಪವಾದ ಅಧ್ಯವಸಾಯವಾಗುತ್ತದೆ. 'ಇದು ಧರ್ಮಾಸ್ತಿಕಾಯವಿದೆ' ಇತ್ಯಾದಿ ಜ್ಞೇಯಪದಾರ್ಥದ ಅಧ್ಯವಸಾಯವಾಗುತ್ತದೆ, ನಿರ್ವಿಕಲ್ಪವಾದ ಶುದ್ಧಾತ್ಮನನ್ನು ಇವೆಲ್ಲವುಗಳಿಂದ ಬೇರೆಯಾಗಿ ತಿಳಿಯುವುದಿಲ್ಲ. -ಸಮಯಸಾರ. ತಾ. ವೃ.೨೭೦/೩೪೮

**ಅಧಿಗಮ ಃ-** 'ಅಧಿ' ಉಪಸರ್ಗಪೂರ್ವಕವಾದ 'ಗಮ್' ಧಾತುವಿನಲ್ಲಿ ಭಾವ ಸಾಧನವಾದ 'ಅಚ್' ಪ್ರತ್ಯಯ ಹೆಚ್ಚುವುದರಿಂದ ಅಧಿಗಮ ಎಂದರೆ ಪದಾರ್ಥದ ಜ್ಞಾನ ಮಾಡುವುದು ಅದು ಅಧಿಗಮವಿದೆ. ಮೌಖಿಕ ಉಪದೇಶಗಳನ್ನು ಕೇಳಿ ಇಲ್ಲವೆ ಬರೆದ ಉಪದೇಶಗಳನ್ನು ಓದಿ ಜೀವವು ಯಾವುದೇ ಗುಣ-ದೋಷಗಳನ್ನು ಮಾಡಲಿ ಅವು ಅಧಿಗಮವೆನಿಸುತ್ತವೆ, ಏಕೆಂದರೆ ಅವು ಅಧಿಗಮಪೂರ್ವಕವಾಗಿರುತ್ತವೆ. ಅವೇ ಗುಣ-ದೋಷಗಳು ಒಂದು ವೇಳೆ ಬೇರೆ ಯಾವುದೇ ಜೀವಗಳಲ್ಲಿ ಸ್ವಾಭಾವಿಕವಾಗಿದ್ದರೆ ಅವಕ್ಕೆ ನಿಸರ್ಗಜನ್ಯವೆನ್ನುತ್ತಾರೆ. ಸಮ್ಯಗ್ದರ್ಶನ, ಸಮ್ಯಗ್ಜ್ಞಾನಗಳಂತೂ ಎರಡು ಪ್ರಕಾರದಿಂದಾಗುತ್ತವೆ. ಆದರೆ ಚಾರಿತ್ರವು ಕೇವಲ ಅಧಿಗಮಜನ್ಯವೇ ಆಗುತ್ತದೆ. ಏಕೆಂದರೆ ಅದರಲ್ಲಿ ಯಾರದೇ ಉಪದೇಶ ಇಲ್ಲವೆ ಅನುಸರಣೆಯ ಅವಶ್ಯಕತೆಯು ಬೀಳುವುದಿಲ್ಲ. ಅದರಲ್ಲಿ ಸ್ವಾರ್ಥಾಧಿಗಮ, ಪರಾರ್ಥಾಧಿಗಮವೆಂದು ಎರಡು ಪ್ರಕಾರಗಳಿವೆ. ಇವುಗಳಲ್ಲಿ ನಯ, ಪ್ರಮಾಣ ಭೇದಗಳಿಂದ ಪುನಃ ಎರಡೆರಡು ಭೇದಗಳಿವೆ. ಜ್ಞಾನಸ್ವರೂಪವಾದದ್ದು ಸ್ವಾರ್ಥಾಧಿಗಮವಾದರೆ ವಚನ ಸ್ವರೂಪವಾದದ್ದು ಪರಾರ್ಥಾಧಿ ಗಮವಿದೆ. ಇನ್ನು ಯಾವುದು ಬಾಹ್ಯೋಪದೇಶವಿಲ್ಲದೆ ಆಗುತ್ತದೆ ಅದು ನೈಸರ್ಗಿಕ ಸಮ್ಯಗ್ದರ್ಶನವಿದೆ. ನಿಸರ್ಗವೆಂದರೆ ಸ್ವಭಾವವಲ್ಲ, ಪರರ ಉಪದೇಶವನ್ನುಳಿದು ಋದ್ಧಿದರ್ಶನ, ಜಿನಬಿಂಬದರ್ಶನ, ವೇದನೆ ಮೊದಲಾದ ಬಾಹ್ಯಕಾರಣಗಳಿಂದ ಹುಟ್ಟಿದ ತತ್ತ್ವಾರ್ಥ ಜ್ಞಾನದಿಂದ ಉತ್ಪನ್ನವಾದ ತತ್ತ್ವಾರ್ಥಶ್ರದ್ಧೆಯನ್ನು ನೈಸರ್ಗಿಕವೆಂದು ತಿಳಿಯಬೇಕು. -ಶ್ಲೋಕವಾರ್ತಿಕ, ೨ ೧ ೩ /೧೩/೮೫/೨೮

**ಅಧಃಕರಣ ಃ-** ಮೂರನೆಯ ಪರಿಶಿಷ್ಟವನ್ನು ನೋಡಿರಿ.

**ಅಧಃಕರ್ಮ :-** ಯಾವ ಕಾರ್ಯಗಳನ್ನು ಮಾಡುವುದರಿಂದ ಜೀವ ಹಿಂಸೆಯಾಗುತ್ತದೆ ಅವಕ್ಕೆ ಅಧಃಕರ್ಮ ವೆನ್ನುತ್ತಾರೆ. ಅಧಃಕರ್ಮದಿಂದ ಕೂಡಿದ ಯಾವುದೇ ಪದಾರ್ಥಕ್ಕೆ ಸಾಧು ಜನರು ಮನ, ವಚನ, ಕಾಯಗಳಿಂದ ಅನುಮೋದನೆ ಕೊಡುವುದಿಲ್ಲ. ಪೃಥ್ವಿಕಾಯ ಮೊದಲಾದ ಷಟ್ಕಾಯ ಜೀವಗಳಿಗೆ ದುಃಖ ಕೊಡುವುದು, ಹೊಡೆಯುವುದು ಅದರಿಂದ ಉತ್ಪನ್ನವಾದ ಆಹಾರ ಮೊದಲಾದ ಯಾವ ವಸ್ತುಗಳಿವೆ ಅವು ಅಧಃಕರ್ಮವಾಗಿವೆ. ಹೀಗೆ ಉಪದ್ರವಣ, ವಿದ್ರಾವಣ, ಪರಿತಪನ, ಆರಂಭ ಕ್ರಿಯೆಗಳಿಂದ ಯಾವ ಆಹಾರ ಸಿದ್ಧಮಾಡಿದೆ, ಯಾವುದು ತಮ್ಮ ಕೈಯಿಂದ ಮಾಡಿದೆ, ಇಲ್ಲವೆ ಇನ್ನೊಬ್ಬರಿಂದ ಮಾಡಿಸಿದೆ ಅಥವಾ ಮಾಡುತ್ತಿರುವಾಗ ಅನುಮೋದನೆ ಕೊಟ್ಟಿದೆ ಇಂಥ ಆಹಾರ ಸ್ವೀಕರಿಸುವ ಮುನಿಗಳ ಉಪವಾಸದ ತಪಶ್ಚರ್ಯಗಳು ನಷ್ಟವಾಗುತ್ತವೆ. - ಚಾರಿತ್ರಸಾರ. ೯೮/೧

**ಅನಂತ :-** ದ್ರವ್ಯ, ಪದಾರ್ಥ ಹಾಗೂ ಭಾವಗಳವರೆಗೆ ಸಂಖ್ಯೆಗಳನ್ನು ವಿಚಿತ್ರ ಪ್ರಕಾರದಿಂದ ನಿರೂಪಣೆ ಮಾಡುವ ಪದ್ಧತಿಯು ಸರ್ವಜ್ಞರ ಮತವನ್ನುಳಿದು ಬೇರೆಡೆ ಉಪಲಬ್ಧವಿಲ್ಲ. ಈ ಸಂಖ್ಯೆಗಳು ಎಣಿಕೆಯನ್ನು ಮೀರಿ ವರ್ತಿಸುವ ಕಾರಣದಿಂದ ಅಸಂಖ್ಯಾತ ಮತ್ತು ಅನಂತದ ಮುಖಾಂತರ ಪ್ರರೂಪಣೆ ಮಾಡಲಾಗುತ್ತದೆ, ಆದಾಗ್ಯೂ ಅನಂತ ಸಂಖ್ಯೆಯನ್ನು ತಿಳಿಯುವುದು ಅಲ್ಪಜ್ಞರಿಗೆ ಅಸಂಭವವಾದರೂ ಅದರಲ್ಲಿ ಒಂದನ್ನು ಇನ್ನೊಂದರ ಅಪೇಕ್ಷೆಯಿಂದ ತರತಮತೆಯನ್ನು ತೋರಿಸಿ ಅದರ ಅಂದಾಜು ಮಾಡಿಸಲಾಗುತ್ತದೆ. ಒಂದೊಂದು ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಹೋದಮೇಲೆ ಯಾವ ರಾಶಿಯು ಸಮಾಪ್ತವಾಗುತ್ತದೆ ಅದು ಅಸಂಖ್ಯಾತವಿದೆ, ಮತ್ತು ಯಾವ ರಾಶಿಯು ಸಮಾಪ್ತವಾಗುವುದಿಲ್ಲ ಅದು ಅನಂತವಿದೆ. ಇದರಲ್ಲಿ ನಾಮಾನಂತ, ಸ್ಥಾಪನಾನಂತ, ದ್ರವ್ಯಾನಂತ, ಶಾಶ್ವತಾನಂತ, ಗಣನಾನಂತ, ಅಪ್ರದೇಶಿಕಾನಂತ, ಏಕಾನಂತ, ಉಭಯಾನಂತ, ವಿಸ್ತಾರಾನಂತ, ಸರ್ವಾನಂತ ಮತ್ತು ಭಾವಾನಂತವೆಂದು ಹನ್ನೊಂದು ಪ್ರಕಾರಗಳಿವೆ. ಈ ಭೇದಗಳಲ್ಲಿ ಪುನಃ ಪ್ರಭೇದಗಳಾಗುತ್ತವೆ. ಇವೆಲ್ಲವುಗಳ ವಿಸ್ತಾರ ವಿವರಣೆಯನ್ನು ಧವಲಗ್ರಂಥದಿಂದ ತಿಳಿದುಕೊಳ್ಳಬಹುದಾಗಿದೆ. -ನೋಡಿ ಧವಲ. ೩,೧,೨,೨/೧೧-೧೬/೯

**ಅನಂತಕಾಯ (ವನಸ್ಪತಿ) :-** ಜೈನ ದರ್ಶನದಲ್ಲಿ ವನಸ್ಪತಿಗೂ ಏಕೇಂದ್ರಿಯಜೀವಶರೀರವೆಂದು ನಂಬಲಾಗಿದೆ. ಅದು ಪ್ರತ್ಯೇಕ ಮತ್ತು ಅನಂತ ಜೀವಗಳ ಪಾಲುಳ್ಳ ಶರೀರಕ್ಕೆ ಸಾಧಾರಣವೆನ್ನುತ್ತಾರೆ. ಏಕೆಂದರೆ ಆ ಶರೀರಗಳಲ್ಲಿ ಆ ಅನಂತ ಜೀವಗಳ ಜನ್ಮ-ಮರಣ, ಶ್ವಾಸೋಚ್ಛ್ವಾಸ ಮೊದಲಾದವು ಸಮರೂಪದಿಂದಾಗುತ್ತವೆ ಒಂದು ವೇಳೆ ಶರೀರದಲ್ಲಿ ಅನಂತ ಜೀವಗಳು ವಾಸಿಸುತ್ತವೆಂದು ಆ ಶರೀರಕ್ಕೆ ನಿಗೋದವೆನ್ನುತ್ತಾರೆ. ಆ ನಿಗೋದಲ್ಲೂ ನಿತ್ಯ ಹಾಗೂ ಇತರವೆಂದು ಎರಡು ಪ್ರಕಾರಗಳಿವೆ. ಯಾವವು ಅನಾದಿಕಾಲದಿಂದ ಇಂದಿನವರೆಗೆ ನಿಗೋದಪರ್ಯಾಯದಿಂದ ಹೊರಗೆ ಬಂದಿಲ್ಲ ಅವು ನಿತ್ಯನಿಗೋದ ಇವೆ. ಮತ್ತು ತ್ರಸ-ಸ್ಥಾವರ ಮೊದಲಾದ ಉಳಿದ ಪರ್ಯಾಯಗಳಲ್ಲಿ ಪರಿಭ್ರಮಣಮಾಡಿ ಪಾಪೋದಯದಿಂದ ಪುನಃ ನಿಗೋದಕ್ಕೆ ಪ್ರಾಪ್ತವಾಗುತ್ತವೆ ಅವು ಇತರ ನಿಗೋದವಿವೆ. ಪ್ರತಿಯೊಂದು ಶರೀರವು ಬಾದರವೇ ಇರುತ್ತದೆ. ಆದರೆ ಸಾಧಾರಣವಾಗಿ ಬಾದರ ಮತ್ತು ಸೂಕ್ಷ್ಮ ಎರಡು ಪ್ರಕಾರವಿರುತ್ತದೆ. ದಿನನಿತ್ಯ ತಿನ್ನುಣ್ಣುವ ಕೆಲಸಕ್ಕೆ ಬರುವಂಥ ಪ್ರತ್ಯೇಕ ವನಸ್ಪತಿ ಶರೀರದಲ್ಲಿ ಅಪ್ರತಿಷ್ಠಿತ-ಸಪ್ರತಿಷ್ಠಿತವೆಂದು ಎರಡು ಪ್ರಕಾರವಿವೆ. ಒಂದೇ ಜೀವದ ಶರೀರವುಳ್ಳ ವನಸ್ಪತಿಯು ಅಪ್ರತಿಷ್ಠಿತವಿದೆ, ಹಾಗೂ ಅಸಂಖ್ಯಾತ ಸಾಧಾರಣ ಶರೀರಗಳ ಸಮವಾಯದಿಂದ ನಿಷ್ಪನ್ನವಾದ ವನಸ್ಪತಿಯು ಸಪ್ರತಿಷ್ಠಿತವಿದೆ. ಅಲ್ಲಿ ಒಂದೊಂದು ವನಸ್ಪತಿ ಸ್ಕಂಧದಲ್ಲಿ ಒಂದು ರಸವಾಗಿ ಅಸಂಖ್ಯಾತ ಸಾಧಾರಣ ಶರೀರಗಳಾಗುತ್ತವೆ. ಮತ್ತು ಒಂದೊಂದು ಆ ಸಾಧರಣ ಶರೀರಗಳಲ್ಲಿ ಅಸಂಖ್ಯಾತ ನಿಗೋದ ಜೀವಗಳು ವಾಸಮಾಡುತ್ತವೆ. ಸೂಕ್ಷ್ಮ ಸಾಧಾರಣ ಶರೀರ ಅಥವಾ ನಿಗೋದ ಜೀವಗಳು ಲೋಕದಲ್ಲೆಲ್ಲಾ ಒತ್ತೊತ್ತಾಗಿ ತುಂಬಿವೆ. ಆದರೆ ಸೂಕ್ಷ್ಮವಾಗಿರುವುದರಿಂದ ನಮ್ಮ ಜ್ಞಾನದ ವಿಷಯವಾಗಿಲ್ಲ. ಮಾವು, ಕಿತ್ತಳೆ ಮೊದಲಾದವು

ಅಪ್ರತಿಷ್ಠಿತವಾದರೆ ಆಲೂಗಡ್ಡೆ, ಗಜ್ಜರಿ, ಮೊದಲಾದವು ಸಪ್ರತಿಷ್ಠಿತವಾಗಿವೆ. ಒಂದು ನಿಗೋದ ಶರೀರದಲ್ಲಿ ಅನಂತಾನಂತ ಜೀವಗಳು ಕೂಡಿಯೇ ಹುಟ್ಟುತ್ತವೆ, ಕೂಡಿಯೇ ಸಾಯುತ್ತವೆ. ಮತ್ತು ನಿಗೋದ ಶರೀರವು ಹೇಗಿರುತ್ತದೆ ಹಾಗೆ ಇರುತ್ತದೆ. ಹೀಗೆ ನಿಗೋದ ಶರೀರದಲ್ಲಿ ಉತ್ಕೃಷ್ಟ ಸ್ಥಿತಿಯು ಅಸಂಖ್ಯಾತ ಕೋಟಾಕೋಟಿ ಸಾಗರ ಪ್ರಮಾಣವಿದೆ.
-ಗೋ. ಜಿ. ೧೯೩/೪೩೧/೧೬

**ಅನಂತಚತುಷ್ಟಯ :-** ಸಹಜ ಶುದ್ಧ ನಿಶ್ಚಯ ನಯದಿಂದ ಅನಾದಿ-ಅನಂತ, ಅಮೂರ್ತ- ಅತೀಂದ್ರಿಯ ಸ್ವಭಾವವುಳ್ಳ ಶುದ್ಧವಾದಂಥ ಸಹಜದರ್ಶನ-ಸಹಜಜ್ಞಾನ-ಸಹಜಚಾರಿತ್ರ-ಸಹಜಪರಮವೀತರಾಗ ಮುಖಾತ್ಮಕವಾದ ಶುದ್ಧ ಅಂತಃತತ್ತ್ವ ಸ್ವರೂಪವುಳ್ಳ ಯಾವ ಸ್ವಭಾವವಿದೆ ಅದು ಅನಂತಚತುಷ್ಟಯ ಸ್ವರೂಪವಿದೆ. ಮತ್ತು ಸಾದಿ, ಅನಂತ, ಅಮೂರ್ತ, ಅತೀಂದ್ರಿಯ ಸ್ವಭಾವವುಳ್ಳ ಶುದ್ಧ ಸದ್ಭೂತ ವ್ಯವಹಾರದಿಂದ ಕೇವಲಜ್ಞಾನ-ಕೇವಲದರ್ಶನ-ಕೇವಲಸುಖ-ಕೇವಲಶಕ್ತಿಯುಕ್ತವಾದ ಫಲರೂಪವು ಅನಂತಚತುಷ್ಟಯವಿದೆ. -ನಿಯಮಸಾರ.ತಾ.ವೃ.೧೫

**ಅನಂತಾನುಬಂಧೀ :-** ಜೀವದ ಕಷಾಯಗಳ ವಿಚಿತ್ರತೆಯು ಸಾಮಾನ್ಯಬುದ್ಧಿಯ ವಿಷಯವಲ್ಲ. ಆ ಕಷಾಯಗಳನ್ನು ಅನಂತಾನುಬಂಧೀ ಮೊದಲಾಗಿ ನಾಲ್ಕು ಪ್ರಕಾರಗಳಿಂದ ಆಗಮುಗಳಲ್ಲಿ ಹೇಳಿದ್ದಾರೆ. ಇವು ವ್ಯಕ್ತರೂಪವಾಗಿರದೆ ಭಾವನೆಯ ರೂಪವಾಗಿರುತ್ತವೆ. ಅಲ್ಲಿ ಪರ-ಪದಾರ್ಥಗಳ ಬಗ್ಗೆ ನನ್ನ-ನಿನ್ನತನದ, ಇಲ್ಲವೆ ಇಷ್ಟಾನಿಷ್ಟತ್ವದ ಯಾವ ಭಾವನೆಯು ಜೀವಿಗಳಲ್ಲಿ ಕಂಡುಬರುತ್ತದೆ ಅದು ಅನಂತಾನುಬಂಧೀ ಕಷಾಯವಿದೆ. ಏಕೆಂದರೆ ಅದು ಜೀವಿಗಳನ್ನು ಅನಂತ ಸಂಸಾರದಲ್ಲಿ ಬಂಧಿಸುತ್ತದೆ. ಇದು ಅನಂತಾನುಬಂಧೀ ಪ್ರಕೃತಿಯ ಉದಯದಿಂದಾಗುತ್ತದೆ. ಅಭಿಪ್ರಾಯದ ವಿಪರೀತತೆಯ ಕಾರಣದಿಂದಾಗಿ ಇದಕ್ಕೆ ಸಮ್ಯಕ್ತ್ವಘಾತಕವೆಂದೂ ಮತ್ತು ಪರಪದಾರ್ಥಗಳಲ್ಲಿ ರಾಗ-ದ್ವೇಷಗಳನ್ನುಂಟು ಮಾಡುವ ಕಾರಣದಿಂದಾಗಿ ಚಾರಿತ್ರಘಾತಕವೆಂದೂ ಸ್ವೀಕರಿಸಲಾಗಿದೆ. ಇನ್ನು ಮೊದಲನೆಯ ಅನಂತಾನುಬಂಧೀ ಕಷಾಯವು ಸಮ್ಯಗ್ದರ್ಶನದ ಘಾತಮಾಡುತ್ತದೆ, ಎರಡನೆಯ ಅಪ್ರತ್ಯಾಖ್ಯಾನಾವರಣ ಕಷಾಯವು ದೇಶವಿರತಿಯ ಘಾತಮಾಡುತ್ತದೆ, ಮೂರನೆಯ ಪ್ರತ್ಯಾಖ್ಯಾನಾವರಣ ಕಷಾಯವು ಸಕಲ ಸಂಯಮದ ಘಾತ ಮಾಡುತ್ತದೆ ಮತ್ತು ನಾಲ್ಕನೆಯ ಸಂಜ್ವಲನ ಕಷಾಯವು ಯಥಾಖ್ಯಾತ ಚಾರಿತ್ರದ ಘಾತ ಮಾಡುತ್ತದೆ. ಇದರ ಜಘನ್ಯಕಾಲವು ಅಂತರ್ಮುಹೂರ್ತವಿದ್ದರೆ ಉತ್ಕೃಷ್ಟ ಕಾಲವು ಸ್ವಲ್ಪ ಕಡಿಮೆ ಅರ್ಧ ಪುದ್ಗಲ ಪರಾವರ್ತನ ಪ್ರಮಾಣವಿದೆ.
- ಪ್ರಾ.ಪಂ.ಸಂ. ೧/೧೦೦

**ಅನಂತಾನುಬಂಧೀ ಕ್ರೋಧ-ಮಾನ-ಮಾಯಾ-ಲೋಭ :-** ಯಾವುದರ ಸ್ವಭಾವವು ಅನಂತಭವಗಳ ಬಂಧನಕ್ಕೇನೇ ಕಾರಣವಾಗಿದೆ ಅದಕ್ಕೆ ಅನಂತಾನುಬಂಧಿಯೆನ್ನುತ್ತಾರೆ. ಯಾವ ಕ್ರೋಧ, ಮಾನ, ಮಾಯೆ, ಲೋಭಗಳು ಅನಂತಾನುಬಂಧಿಯಾಗುತ್ತವೆ. ಅವು ಅನಂತಾನುಬಂಧಿ ಕ್ರೋಧ, ಮಾನ, ಮಾಯೆ, ಲೋಭಗಳೆನ್ನಿಸಿಕೊಳ್ಳುತ್ತವೆ. ಯಾವ ಅವಿನಾಶ ಸ್ವರೂಪವುಳ್ಳ ಎಂದರೆ ಅನಾದಿ-ಪರಂಪರಾಗತವಾದ ಕ್ರೋಧ, ಮಾನ, ಮಾಯೆ ಲೋಭಗಳೊಡನೆ ಜೀವವು ಅನಂತಭವಗಳಲ್ಲಿ ಪರಿಭ್ರಮಣೆ ಮಾಡುತ್ತದೆ ಆ ಕ್ರೋಧ, ಮಾನ, ಮಾಯೆ, ಲೋಭಗಳಿಗೆ 'ಅನಂತಾನು-ಬಂಧಿ' ಎಂಬ ಸಂಕೇತವಿದೆ. -ಧವಲ ೬ ೧-೯,೧--೨೩-೪೧-೫

**ಅನಶನ :-** ನಾಲ್ಕು ಪ್ರಕಾರದ ಆಹಾರಗಳನ್ನು ತ್ಯಾಗ ಮಾಡುವುದಕ್ಕೆ ಅನಶನವೆನ್ನುತ್ತಾರೆ. ಯಾರು ಮನಸ್ಸು ಹಾಗೂ ಇಂದ್ರಿಯಗಳನ್ನು ಗೆಲ್ಲುತ್ತಾರೆ, ಈ ಭವ ಮತ್ತು ಮರುಭವದ ವಿಷಯ ಸುಖದ ಅಪೇಕ್ಷೆ ಮಾಡುವುದಿಲ್ಲ, ತಮ್ಮ ಆತ್ಮ ಸುಖದಲ್ಲೇ ವಾಸ ಮಾಡುತ್ತಾರೆ ಹಾಗೂ ಸ್ವಾಧ್ಯಾಯದಲ್ಲಿ ತತ್ಪರರಿರುತ್ತಾರೆ ಅಂಥ ಪುರುಷರು ಕರ್ಮನಿರ್ಜರೆಗಾಗಿ ಸ್ವೇಚ್ಛೆಯಿಂದ ಆಹಾರದ ತ್ಯಾಗ ಮಾಡುತ್ತಾರೆ ಅದಕ್ಕೆ ಅನಶನ ತಪವೆನ್ನುತ್ತಾರೆ. ಇದರಲ್ಲಿ

ಅರ್ಧಾನಶನ ಮತ್ತು ಸಾರ್ವಾನಶನವೆಂದು ಎರಡು ಪ್ರಕಾರಗಳಿವೆ. ಅನಶನವನ್ನು ಶಕ್ತಿಗನುಸಾರವಾಗಿ ದ್ರವ್ಯ, ಕ್ಷೇತ್ರ, ಕಾಲ, ಭಾವ, ಬಲ ಮತ್ತು ವೀರ್ಯ ಈ ಆರರ ಬಗ್ಗೆ ಒಳ್ಳೆಯ ರೀತಿಯಿಂದ ಪರ್ಯಾಲೋಚನೆ ಮಾಡಿ ಆಹಾರದಲ್ಲಿ ಪ್ರವೃತ್ತಿ ಮಾಡಬೇಕು. ಅನಶನತಪವನ್ನು ಪ್ರಾಣಿ ಸಂಯಮ ಮತ್ತು ಇಂದ್ರಿಯ ಸಂಯಮದ ಸಿದ್ಧಿಯಾಗಿ ಮಾಡಲಾಗುತ್ತದೆ. ಏಕೆಂದರೆ ಭೋಜನದೊಡನೆ ಎರಡೂ ಪ್ರಕಾರದ ಅಸಂಯಮದ ಅವಿನಾಭಾವವು ಕಂಡು ಬರುತ್ತದೆ. ಮಂತ್ರ ಸಾಧನೆ ಮೊದಲಾದ ಯಾವುದೇ ಇಷ್ಟ ಫಲದ ಅಪೇಕ್ಷೆಯಿಲ್ಲದೆ ಮಾಡಲಾದ ಉಪವಾಸವು ಅನಶನವೆನಿಸಿಕೊಳ್ಳುತ್ತದೆ. -ಚಾರಿತ್ರಸಾರ ೧೩೪/೪

**ಅನಾದೇಯ :-** ಯಾವ ಕರ್ಮದ ಉದಯದಿಂದ ಒಳ್ಳೆಯ ಕಾರ್ಯ ಮಾಡಿದಮೇಲೂ ಕೂಡ ಜೀವವು ಗೌರವಕ್ಕೆ ಪ್ರಾಪ್ತವಾಗುವುದಿಲ್ಲ ಅದು ಅನಾದೇಯನಾಮಕರ್ಮವಿದೆ. -ಧವಲ, ೧೩/೫,೫,೧೦೧/೩೬೬/೩

**ಅನಿವೃತ್ತಿಕರಣ :-** ಮೂರನೆಯ ಪರಿಶಿಷ್ಟವನ್ನು ನೋಡಿರಿ.

**ಅನುಪ್ರೇಕ್ಷೆ :-** ಯಾವುದೇ ಮಾತನ್ನು ಪುನಃ-ಪುನಃ ಚಿಂತನೆ ಮಾಡುತ್ತಿರುವುದು ಅನುಪ್ರೇಕ್ಷೆಯಿದೆ. ಮೋಕ್ಷಮಾರ್ಗದಲ್ಲಿ ವೈರಾಗ್ಯದ ವೃದ್ಧಿಗಾಗಿ ಹನ್ನೆರಡು ಪ್ರಕಾರದ ಅನುಪ್ರೇಕ್ಷೆಗಳ ಕಥನವು ಜೈನಾಗಮಗಳಲ್ಲಿ ಪ್ರಸಿದ್ಧವಿದೆ. ಇವಕ್ಕೆ ಹನ್ನೆರಡು ವೈರಾಗ್ಯ ಭಾವನೆಗಳೆಂದೂ ಹೇಳುತ್ತಾರೆ. ಇವನ್ನು ಭಾವಿಸುವುದರಿಂದ ವ್ಯಕ್ತಿಯು ಶರೀರ ಮತ್ತು ಭೋಗಗಳಿಂದ ನಿರ್ವಿಣ್ಣನಾಗಿ ಸಾಮ್ಯಭಾವನೆಯಲ್ಲಿ ಸ್ಥಿರತೆ ಹೊಂದುತ್ತಾನೆ.

**ಅನುಭಾಗ :-** ದ್ರವ್ಯದಶಕ್ತಿಗೆ ಅನುಭಾಗವೆಂದು ಹೇಳುತ್ತಾರೆ. ಜೀವದ ರಾಗಾದಿ ಭಾವಗಳ ತರತಮಗನುಸರಿಸಿ ಅದರೊಡನೆ ಕಟ್ಟುವ ಕರ್ಮಗಳ ಫಲದಾನ ಶಕ್ತಿಗಳಲ್ಲಿಯೂ ಹೆಚ್ಚು ಕಡಿಮೆಯಾಗುವುದು ಸ್ವಾಭಾವಿಕವಿದೆ ಮೋಕ್ಷದ ಪ್ರಕರಣದಲ್ಲಿ ಕರ್ಮಗಳ ಈ ಶಕ್ತಿಯೂ ಹೆಚ್ಚು ಇಷ್ಟವಿದೆ. ಅನುಭಾಗಯುಕ್ತ ಸ್ವಲ್ಪೇ ಕರ್ಮಪ್ರದೇಶವು ಜೀವದ ಗುಣಗಳನ್ನು ಘಾತ ಮಾಡುವಲ್ಲಿ ಸಮರ್ಥವಿದೆ. ಆದರೆ ಸ್ವಲ್ಪ ಅನುಭಾಗಯುಕ್ತ ಹೆಚ್ಚು ಕರ್ಮ ಪ್ರದೇಶವೂ ಅದನ್ನು ಪರಾಭವಗೊಳಿಸುವಲ್ಲಿ ಸಮರ್ಥವಾಗಿಲ್ಲ. ಆದ್ದರಿಂದ ಕರ್ಮಬಂಧದ ಪ್ರಕರಣದಲ್ಲಿ ಕರ್ಮಪ್ರದೇಶಗಳ ಎಣಿಕೆಯು ಪ್ರಧಾನವಾಗಿಲ್ಲ, ಆದರೆ ಅನುಭಾಗವೇ ಪ್ರಧಾನವಾಗಿದೆ. ಕಡಿಮೆ ಶಕ್ತಿಯುಳ್ಳ ಅನುಭಾಗವು ಕೇವಲ ಏಕದೇಶರೂಪದಿಂದ ಗುಣದ ಘಾತ ಮಾಡುವಲ್ಲಿ ಕಾರಣವಾಗುವುದು ದೇಶಘಾತಿಯೆಂದೂ ಮತ್ತು ಹೆಚ್ಚು ಶಕ್ತಿಯುಳ್ಳ ಅನುಭಾಗವು ಪೂರ್ಣರೂಪದಿಂದ ಗುಣದ ಘಾತ ಮಾಡುವಲ್ಲಿ ಕಾರಣವಾಗುವುದು ಸರ್ವಘಾತಿಯೆಂದೂ ಹೇಳಲಾಗುತ್ತದೆ, ಅದರಲ್ಲಿ ದೇಶಘಾತಿಯ ಪ್ರಕೃತಿಗಳು ಇಪ್ಪತ್ತಾರು ಇದ್ದರೆ ಸರ್ವಘಾತಿಯ ಪ್ರಕೃತಿಗಳು ಇಪ್ಪತ್ತೊಂದು ಇವೆ.

-ಪ್ರಾಕೃತ ಪಂಚಸಂಗ್ರಹ ೪೮೩/೪೮೪

**ಅನುಭಾಗ ಕಾಂಡಕಘಾತ :-** ಪ್ರಾರಂಭ ಮಾಡಲಾದ ಮೊದಲನೆಯ ಸಮಯದಿಂದ ಹಿಡಿದು ಅಂತರ್ಮುಹೂರ್ತಕಾಲದೊಳಗೆ ಯಾವ ಘಾತವು ನಿಷ್ಪನ್ನವಾಗುತ್ತದೆ ಅದು ಅನುಭಾಗಕಾಂಡಕಘಾತವಿದೆ. ಒಟ್ಟು ಅನುಭಾಗದ ವಿಭಾಗಮಾಡಿ ಒಂದೊಂದು ವಿಭಾಗದ ಫಾಲಿಯ ಕ್ರಮದಿಂದ ಅಂತರ್ಮುಹೂರ್ತ ಕಾಲದಲ್ಲಿ ಅಭಾವ ಮಾಡುವುದು ಅನುಭಾಗಕಾಂಡಕ ಘಾತವೆನಿಸುವುದು. ಶುಭ ಪ್ರಕೃತಿಗಳ ಅನುಭಾಗದ ಘಾತವು ವಿಶುದ್ಧಿ ಕೇವಲಿ ಸಮುದ್ಘಾತ ಇಲ್ಲವೆ ಯೋಗ ನಿರೋಧದಿಂದ ಆಗುವುದಿಲ್ಲ ಕ್ಷೀಣಕಷಾಯ ಮತ್ತು ಸಯೋಗಕೇವಲಿ ಗುಣಸ್ಥಾನಗಳಲ್ಲಿ ಸ್ಥಿತಿಘಾತ ಹಾಗೂ ಅನುಭಾಗಘಾತಗಳಾದ ಮೇಲೂ ಶುಭ ಪ್ರಕೃತಿಗಳ ಅನುಭಾಗದ ಘಾತವು ಅಲ್ಲಿ ಆಗುವುದಿಲ್ಲವೆಂಬುದು ಸಿದ್ಧವಾದ ಮೇಲೆ 'ಸ್ಥಿತಿ ಮತ್ತು ಅನುಭಾಗಗಳಿಂದ ರಹಿತವಾದಂಥ ಅಯೋಗಿಗುಣಸ್ಥಾನದಲ್ಲಿ ಶುಭ ಪ್ರಕೃತಿಗಳ ಉತ್ಕೃಷ್ಟ ಅನುಭಾಗವಾಗುತ್ತದೆ' ಇದು ಅರ್ಥಾಪತ್ತಿಯಿಂದ ಸಿದ್ಧವಿದೆ. ಪ್ರದೇಶಗಳ ಪತನದಿಂದ ಹೇಗೆ

ಸ್ಥಿತಿಘಾತವಾಗುತ್ತದೆ ಹಾಗೆ ಪ್ರದೇಶಗಳ ಪತನದಿಂದ ಅನುಭಾಗದ ಘಾತವಾಗುವುದಿಲ್ಲ ಮತ್ತು ಶುಭ ಪ್ರಕೃತಿಗಳ ಅನುಭಾಗಕಾಂಡಕಘಾತವು ನಿಯಮದಿಂದಲೇ ಆಗುವುದಿಲ್ಲ. -ಲಬ್ಧಿಸಾರ. ಮೂಲ ೮೦/೧೧೪

**ಅನುಭಾಗಬಂಧ :-** ಜ್ಞಾನಾವರಣ ಮೊದಲಾದ ಕರ್ಮಗಳ ಯಾವ ಕಷಾಯ ಮೊದಲಾದ ಪರಿಣಾಮಗಳಿಂದ ಹುಟ್ಟಿದ ಶುಭ ಅಥವಾ ಅಶುಭ ರಸವಿದೆ ಅದು ಅನುಭಾಗಬಂಧವಿದೆ. ಮತ್ತು ಶುಭಾಶುಭ ಕರ್ಮಗಳ ನಿರ್ಜರೆಯ ಸಮಯದಲ್ಲಿ ಸುಖ-ದುಃಖರೂಪವಾದ ಫಲವನ್ನು ಕೊಡುವ ಶಕ್ತಿಯುಳ್ಳದ್ದು ಅನುಭಾಗಬಂಧವಿದೆ. -ನಿಯಮಸಾರ. ತಾತ್ಪರ್ಯವೃತ್ತಿ-೪೦

**ಅನುಯೋಗ :-** ಜೈನಾಗಮವು ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗವೆಂದು ನಾಲ್ಕು ಭಾಗಗಳಲ್ಲಿ ವಿಭಕ್ತಗೊಂಡಿದೆ. ಇವಕ್ಕೆ ನಾಲ್ಕು ಅನುಯೋಗಗಳೆನ್ನುತ್ತಾರೆ, ಈ ನಾಲ್ಕರಲ್ಲೂ ಕ್ರಮದಿಂದ ಪುರಾಣ ಹಾಗೂ ಕಥೆ, ಕರ್ಮಸಿದ್ಧಾಂತ ಹಾಗೂ ಲೋಕ ವಿಭಾಗ, ಜೀವಿಗಳ ಆಚಾರ ಹಾಗೂ ವಿಚಾರಗಳು ಮತ್ತು ಚೇತನಾಚೇತನ ದ್ರವ್ಯಗಳ ಸ್ವರೂಪ ಹಾಗೂ ತತ್ತ್ವಗಳ ನಿರ್ದೇಶವಿದೆ. ಇವಲ್ಲದೆ ವಸ್ತುವಿನ ಕಥನ ಮಾಡುವಲ್ಲಿ ಯಾವ ಅಧಿಕಾರಗಳ ಅವಶ್ಯಕತೆ ಬೀಳುತ್ತದೆ ಅವಕ್ಕೆ ಅನುಯೋಗ ದ್ವಾರಗಳೆನ್ನುತ್ತಾರೆ. ಅನುಯೋಗ, ಅಧಿಕಾರ, ಪ್ರಕರಣ, ಪರಿಚ್ಛೇದ ಇವೆಲ್ಲವು ಏಕಾರ್ಥವಾಚಿಯಾಗಿವೆ. -ದ್ರವ್ಯಸಂಗ್ರಹ ಟೀ. ೪೨/೧೮೩/೨

**ಅನೇಕಾಂತ :-** ಯಾವುದು ತತ್ತ್ವವಿದೆ ಅದೇ ಅತತ್ತ್ವವಿದೆ, ಯಾವುದು ಏಕವಿದೆ ಅದೇ ಅನೇಕವಿದೆ, ಯಾವುದು ಸತ್ ಇದೇ ಅದೇ ಅಸತ್ ಇದೆ, ಯಾವುದು ನಿತ್ಯವಿದೆ ಅದೇ ಅನಿತ್ಯವಿದೆ. ಹೀಗೆಯೇ ಒಂದು ವಸ್ತುವಿನಲ್ಲಿ ವಸ್ತುತ್ವದಿಂದ ಹುಟ್ಟುವ ಪರಸ್ಪರ ವಿರುದ್ಧವಾದ ಎರಡು ಶಕ್ತಿಗಳನ್ನು ಪ್ರಕಟ ಪಡಿಸುವುದು ಅದು ಅನೇಕಾಂತವಿದೆ. ಇದು ಸಮ್ಯಕ್ ಅನೇಕಾಂತ ಮತ್ತು ಮಿಥ್ಯಾ ಅನೇಕಾಂತವೆಂದು ಎರಡು ಪ್ರಕಾರದಿಂದಿದೆ. ಯುಕ್ತಿ ಹಾಗೂ ಆಗಮಗಳಿಗೆ ವಿರೋಧವಲ್ಲದ ಒಂದೇ ಸ್ಥಾನದಲ್ಲಿ ಪ್ರತಿಪಕ್ಷಿಯಾಗಿ ಅನೇಕ ಧರ್ಮಗಳ ಸ್ವರೂಪಗಳನ್ನು ನಿರೂಪಣೆ ಮಾಡುವುದು ಅದು ಸಮ್ಯಕ್ ಅನೇಕಾಂತವಿದೆ. ಮತ್ತು ತತ್ತ್ವ ಹಾಗೂ ಅತತ್ತ್ವಸ್ವಭಾವ ವಸ್ತುವಿನಿಂದ ಶೂನ್ಯವಾದ ಕೇವಲ ವಚನವಿಲಾಸರೂಪವಾಗಿ ಪರಿಕಲ್ಪಿತವೂ ಅನೇಕ ಧರ್ಮಾತ್ಮಕವೂ ಆದುದು ಮಿಥ್ಯಾ ಅನೇಕಾಂತವಿದೆ. ಅನೇಕಾಂತವಿಲ್ಲದೆ ವಸ್ತುವಿನ ಸಿದ್ಧಿಯೇ ಆಗುವುದಿಲ್ಲ ಹೇಗೆಂದರೆ-ವಸ್ತುವು ಯಾವಾಗಲೂ ನಿತ್ಯವಾಗಿದ್ದರೆ ಅದು ಉದಯ ಹಾಗೂ ಅಸ್ತಕ್ಕೆ ಪ್ರಾಪ್ತವಾಗುತ್ತಿರಲಿಲ್ಲ. ದೀಪವು ಆರಿದ ಮೇಲೆ ಸಂಪೂರ್ಣವಾಗಿ ನಾಶಕ್ಕೆ ಪ್ರಾಪ್ತವಾಗುವುದಿಲ್ಲ. ಅದು ಅಂಧಃಕಾರರೂಪವಾದ ಪರ್ಯಾಯವನ್ನು ಧರಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ನಿಜವಾಗಿ ವಿಧಿ-ನಿಷೇಧಗಳೆರಡೂ ಇಷ್ಟವಾಗಿವೆ. ಅಪೇಕ್ಷೆಯ ವಶದಿಂದ ಅವುಗಳಲ್ಲಿ ಮುಖ್ಯ-ಗೌಣದ ವ್ಯವಸ್ಥೆಯಿರುತ್ತದೆ. ಹೀಗೆ ಜೀವ ಮೊದಲಾದ ಎಲ್ಲ ಪದಾರ್ಥಗಳಲ್ಲಿ ವಿಭಿನ್ನ ಅಪೇಕ್ಷೆಯಿಂದ ಅನೇಕ ಧರ್ಮಗಳ ಆಧಾರವು ಸಿದ್ಧವಾಗುತ್ತದೆ. ಅದಕ್ಕಾಗಿ ಜೈನ ಸಿದ್ಧಾಂತದಲ್ಲಿ ಅನೇಕಾಂತವು ಬಲಿಷ್ಠವಿದೆ, ಸರ್ವಥಾ ಏಕಾಂತವು ಬಲಿಷ್ಠವಿಲ್ಲ. ಆದ್ದರಿಂದ ಅನೇಕಾಂತ ಪೂರ್ವಕವಾದ ಕಥನವೆಲ್ಲವು ವಿರೋಧವಿಲ್ಲದಿದ್ದರೆ ಅನೇಕಾಂತವಿಲ್ಲದ ಎಲ್ಲ ಕಥನವು ವಿರೋಧವಾಗಿ ಬಿಡುತ್ತದೆ. ಅದರಿಂದ ಏಕಾಂತವಾದಿಗಳ ಎಲ್ಲ ಕಥನವು ಮಿಥ್ಯೆಯಿದ್ದರೆ ಅನೇಕಾಂತವಾದಿಗಳ ಸಂಪೂರ್ಣ ಕಥನವು ಸಮ್ಯಕ್ ಆಗಿದೆ. - ಗೋ.ಕ.ಮೂ. ೮೯೫/೧೦೬೪

**ಅಪಕರ್ಷಣ :-** ಸ್ಥಿತಿ ಮತ್ತು ಅನುಭಾಗದ ಹಾನಿ ಎಂದರೆ ಮೊದಲು ಬಂಧವಾದದ್ದನ್ನು ಕಡಿಮೆ ಮಾಡುವುದು ಅಪಕರ್ಷಣವಿದೆ. ಸಮ್ಯಗ್ದರ್ಶನ-ಜ್ಞಾನ-ಚಾರಿತ್ರಗಳ ಕಾರಣದಿಂದ ಸ್ವತಃ ಅಥವಾ ತಪಶ್ಚರ್ಯೆ ಮೊದಲಾದವುಗಳ ಮುಖಾಂತರ ಸಾಧಕನು ಪೂರ್ವೋಪಾರ್ಜಿತ ಕರ್ಮಗಳ ಸ್ಥಿತಿ ಮತ್ತು ಅನುಭಾಗಗಳನ್ನು

ಸರಿಯಾಗಿ ಕಡಿಮೆ ಮಾಡುತ್ತ ಇಲ್ಲವೆ ಘಾತಮಾಡುತ್ತ ಮುಂದುವರಿಯುತ್ತಾನೆ. ಮೋಕ್ಷಮಾರ್ಗದಲ್ಲಿ ಇದರ ಹೆಸರು ಅಪಕರ್ಷಣವೆಂದು ಇಷ್ಟವಿದೆ. ಸಂಸಾರಿ ಜೀವಗಳಿಗೂ ಪ್ರತಿಪಕ್ಷವಾದ ಶುಭ ಇಲ್ಲವೆ ಅಶುಭ ಪರಿಣಾಮಗಳ ಕಾರಣದಿಂದ ಪುಣ್ಯ ಇಲ್ಲವೆ ಪಾಪ ಪ್ರಕೃತಿಗಳ ಅಪಕರ್ಷಣವಾಗುತ್ತಿರುತ್ತದೆ. ಆ ಅಪಕರ್ಷಣವು ಸಾಧಾರಣ ಹಾಗೂ ಗುಣಾಕಾರರೂಪದಿಂದ ಎರಡು ಪ್ರಕಾರಗಳಿಂದಾಗುತ್ತದೆ. ಇವುಗಳಲ್ಲಿ ಮೊದಲನೆಯದನ್ನು ಅಪಕರ್ಷಣ ಹಾಗೂ ಅಪಸರಣವೆಂದೂ ಎರಡನೆಯದನ್ನು ಕಾಂಡಘಾತವೆಂದೂ ಹೇಳುತ್ತಾರೆ. ಏಕೆಂದರೆ ಇವುಗಳಲ್ಲಿ ಕರ್ಮಗಳ ಗಂಟು-ಗಂಟುಗಳನ್ನೇ ಒಂದೊಂದು ಸರತಿಗೆ ಕಡಿದು ಹಾಕಲಾಗುತ್ತದೆ. ಈ ಕಾಂಡಕ ಘಾತವೇ ಮೋಕ್ಷಮಾರ್ಗಕ್ಕೆ ಸಾಕ್ಷಾತ್ ಕಾರಣವಾಗಿದೆ. ಮತ್ತು ಇದು ಕೇವಲ ಉಚ್ಚತರಗತಿಯ ಧ್ಯಾನಿಗಳಿಗೆ ಆಗುತ್ತದೆ.

**ಅಪ್ರತ್ಯಾಖ್ಯಾನಾವರಣ :-** ಅನಂತ ಸಂಸಾರಕ್ಕೆ ಕಾರಣವಾಗಿರುವುದರಿಂದ ಮಿಥ್ಯಾದರ್ಶನವು ಅನಂತವೆನಿಸುತ್ತದೆ ಮತ್ತು ಯಾವ ಕಷಾಯಗಳು ಅದಕ್ಕೆ ಸಂಬಂಧವಾಗಿವೆ ಅವು ಅನಂತಾನುಬಂಧೀ ಕ್ರೋಧ, ಮಾನ, ಮಾಯೆ, ಲೋಭಗಳಾಗಿವೆ. ಯಾವುದರ ಉದಯದಿಂದ ಯಾವುದರ ಇನ್ನೊಂದು ಹೆಸರು ಸಂಯತಾಸಂಯತವಿದೆ ಅಂಥ ದೇಶವಿರತಿಯನ್ನು ಮಾಡಲು ಈ ಜೀವವು ಸ್ವಲ್ಪವೂ ಸಮರ್ಥವಾಗುವುದಿಲ್ಲ ಆ ದೇಶ ಪ್ರತ್ಯಾಖ್ಯಾನವನ್ನು ಆವೃತ್ತಗೊಳಿಸುವ ಅಪ್ರತ್ಯಾಖ್ಯಾನಾವರಣ ಕ್ರೋಧ, ಮಾನ, ಮಾಯೆ, ಲೋಭಗಳಿವೆ. ಇನ್ನು ಮೊದಲನೆಯ ಅನಂತಾನುಬಂಧಿಯಂತೂ ಸಮ್ಯಗ್ದರ್ಶನದ ಘಾತಮಾಡುತ್ತದೆ ಮತ್ತು ಎರಡನೆಯ ಅಪ್ರತ್ಯಾಖ್ಯಾನಾವರಣ ಕಷಾಯವು ದೇಶವಿರತಿಯ ಘಾತ ಮಾಡುತ್ತದೆ ಅಪ್ರತ್ಯಾಖ್ಯಾನಾವರಣದ ವಾಸನಾಕಾಲವು ಆರು ತಿಂಗಳುಗಳಿವೆ.

-ಸರ್ವಾರ್ಥಸಿದ್ಧಿ ೮/೯/೩೮೬/೭

**ಅಪೂರ್ವಕರಣ :-** ಮೂರನೆಯ ಪರಿಶಿಷ್ಟವನ್ನು ನೋಡಿರಿ.

**ಅಭವ್ಯ :-** ಯಾರಲ್ಲಿ ಸಮ್ಯಗ್ದರ್ಶನ ಮೊದಲಾದ ಭಾವಗಳು ಪ್ರಕಟವಾಗುವ ಯೋಗ್ಯತೆಯಿಲ್ಲ ಮತ್ತು ಯಾರ ಘಾತಿ ಕರ್ಮಗಳು ನಷ್ಟವಾಗಿ ಹೋಗಿವೆ ಅವರ ಸುಖವು ಎಲ್ಲ ಸುಖಗಳಲ್ಲಿ ಉತ್ಕೃಷ್ಟವಾಗಿದೆಯೆಂಬುದನ್ನು ಕೇಳಿಯೂ ಯಾರು ಅದರ ಮೇಲೆ ಶ್ರದ್ಧೆಯಿಡುವುದಿಲ್ಲ ಅಂಥ ಜೀವಗಳನ್ನು ಅಭವ್ಯವೆಂದು ತಿಳಿಯುವುದು.

**ಅಭಿನಿವೇಶ :-** 'ಇದು ನನ್ನದಿದೆ' ಎಂಬ ಭಾವನೆಗೆ ಅಭಿನಿವೇಶವೆನ್ನುತ್ತಾರೆ. ಅನಾತ್ಮೀಯ ಹಾಗೂ ಕರ್ಮ ಜನ್ಯವಾದ ತನ್ನ ಶರೀರ ಮೊದಲಾದ ದ್ರವ್ಯಗಳಲ್ಲಿ ಶಾಶ್ವತರೂಪದಿಂದ ಆತ್ಮೀಯತನವುಳ್ಳ ಭಾವನೆಗೆ ಅಭಿನಿವೇಶ ವೆನ್ನಲಾಗುತ್ತದೆ. ಹೇಗೆಂದರೆ 'ಈ ಶರೀರ ನನ್ನದಿದೆ' ನಾನು ಈ ಸ್ತ್ರೀ ಮೊದಲಾದವರೆಲ್ಲರ ಒಡೆಯನಿದ್ದೇನೆ, ಇಂಥ ಕ್ರಿಯೆಗಳಿಗೆ ಅಹಂಕ್ರಿಯೆಗಳೆನ್ನುತ್ತಾರೆ. ಇವುಗಳಲ್ಲಿ ಪ್ರಸಕ್ತ ಇಲ್ಲವೆ ಸುಲಗ್ನ ಪ್ರವೃತ್ತಿಯು ಮಿಥ್ಯೆಯಿದೆ, ಅಸತ್ಯವಿದೆ, ವಿಪರೀತವಿದೆ, ಅಧ್ಯವಸಾಯವಿದೆ, ಅಭಿನಿವೇಶವಿದೆ.

-ಸ.ಸ್ತೋ.ಟೀ. ೧೨/೨೬

**ಅಭೂತಾರ್ಥ :-** ಯಾವುದರ ವಿಷಯವು ವಿದ್ಯಮಾನವಿಲ್ಲ, ಇಲ್ಲವೆ ಅಸತ್ಯಾರ್ಥವಿದೆ ಅದಕ್ಕೆ ಅಭೂತಾರ್ಥ ವೆನ್ನುತ್ತಾರೆ. ಹೇಗೆಂದರೆ ಕತ್ತೆಗೆ ಕೊಂಬುಗಳು ವಿದ್ಯಮಾನವಿಲ್ಲದಿರುವ ಕಾರಣದಿಂದ ಅದು ಅಭೂತಾರ್ಥವಿದೆ, ಮತ್ತು ಘಟ-ಪಟ ಮೊದಲಾದ ಸಂಯೋಗಿ ಪದಾರ್ಥಗಳು ಅಸತ್ಯವಾಗಿರುವ ಕಾರಣದಿಂದ ಅಭೂತಾರ್ಥವಾಗಿವೆ. ಇನ್ನು ಇದಕ್ಕೆ ವಿಪರೀತವಾದದ್ದು ಎಂದರೆ ಯಾವುದು ವಿದ್ಯಮಾನಿದೆ, ಸತ್ಯಾರ್ಥವಿದೆ ಅದು ಭೂತಾರ್ಥವಿದೆ.

- ಸಮಯಸಾರ. ಗಾಥೆ ೧೧

**ಅಮೂಢದೃಷ್ಟಿ :-** ಹಲವು ಪ್ರಕಾರದ ಮಿಥ್ಯಾವಾದಿಗಳ ಏಕಾಂತ ದರ್ಶನದಲ್ಲಿ ತತ್ತ್ವಬುದ್ಧಿ ಮತ್ತು ಯುಕ್ತಾಯುಕ್ತತೆಯನ್ನು ಬಿಟ್ಟುಕೊಟ್ಟು ಪರೀಕ್ಷೆಯ ಸ್ವಭಾವದ ದೃಷ್ಟಿಯಿಂದ ಸತ್ಯಾಸತ್ಯತೆಯ ನಿರ್ಣಯ ಮಾಡುತ್ತ

ಮೋಹರಹಿತವಾಗುವುದು ಅದು ಅಮೂಢದೃಷ್ಟಿತ್ವವಿದೆ. ಕುದೃಷ್ಟಿಗಳಿಂದ ರಚಿಸಲ್ಪಟ್ಟ ಅಜ್ಞಾನಿಗಳ ಚಿತ್ತದಲ್ಲಿ ವಿಸ್ಮಯವನ್ನುಂಟು ಮಾಡುವಂಥ ರಸಾಯನ ಮೊದಲಾದ ಶಾಸ್ತ್ರಗಳನ್ನು ನೋಡಿ ಇಲ್ಲವೆ ಕೇಳಿ ಯಾರಾದರೂ ಮೂಢ ಭಾವನೆಗೊಳಗಾಗಿ ಧರ್ಮಬುದ್ಧಿಯಿಂದ ಅವುಗಳಲ್ಲಿ ಪ್ರೀತಿ ಹಾಗೂ ಭಕ್ತಿ ಮಾಡುತ್ತಾರೆ ಅವರಿಗೆ ವ್ಯವಹಾರದಿಂದ ಅಮೂಢದೃಷ್ಟಿಯೆನ್ನುತ್ತಾರೆ. -ದ್ರವ್ಯಸಂಗ್ರಹ. ಟೀ ೪೧/೧೭೩/೫.

**ಅರಹಂತ :-** ಜೈನದರ್ಶನಾನುಸಾರವಾಗಿ ವ್ಯಕ್ತಿಯು ತನ್ನ ಕರ್ಮಗಳನ್ನು ನಾಶಮಾಡಿಕೊಂಡು ಸ್ವಯಂ ಪರಮಾತ್ಮನಾಗುತ್ತಾನೆ ಆ ಪರಮಾತ್ಮ ಅವಸ್ಥೆಯಲ್ಲಿ ಒಂದು ಶರೀರ ಸಹಿತವಾದ ಜೀವನ್ಮುಕ್ತಾವಸ್ಥೆ, ಇನ್ನೊಂದು ಶರೀರರಹಿತವಾದ ದೇಹಮುಕ್ತಾವಸ್ಥೆಯೆಂದು ಎರಡು ಪ್ರಕಾರಗಳಿವೆ. ಮೊದಲನೆಯ ಅವಸ್ಥೆಗೆ ಅರಹಂತರೆಂದು ಎರಡನೆಯ ಅವಸ್ಥೆಗೆ ಸಿದ್ಧರೆಂದೂ ಹೇಳಲಾಗುತ್ತದೆ. ಅರಹಂತರಲ್ಲೂ ತೀರ್ಥಂಕರ ಮತ್ತು ಸಾಮಾನ್ಯರೆಂದು ಎರಡು ಪ್ರಕಾರಗಳು. ವಿಶೇಷ ಪುಣ್ಯದಿಂದ ಕೂಡಿದ ಮತ್ತು ಯಾರಿಗೆ ಕಲ್ಯಾಣಿಕಗಳನ್ನು ಆಚರಿಸಲಾಗುತ್ತದೆ ಅವರು ತೀರ್ಥಂಕರರೆನ್ನಿಸಿಕೊಳ್ಳುತ್ತಾರೆ, ಇನ್ನುಳಿದವರು ಸಾಮಾನ್ಯ ಅರಹಂತರೆನ್ನಿಸಿಕೊಳ್ಳುತ್ತಾರೆ. ಕೇವಲಜ್ಞಾನ ಎಂದರೆ ಸರ್ವಜ್ಞತ್ವದಿಂದ ಕೂಡಿರುವುದರಿಂದ ಇವರಿಗೆ ಕೇವಲಿಗಳೆಂದು ಹೇಳುತ್ತಾರೆ. ಇನ್ನು 'ಅರಿ' ಎಂದರೆ ಮೋಹಕರ್ಮ 'ರಜ' ಎಂದರೆ ಜ್ಞಾನಾವರಣ, ದರ್ಶನಾವರಣ ಹಾಗೂ ಅಂತರಾಯ ಕರ್ಮ ಈ ನಾಲ್ಕನ್ನು ಹನನ-ನಾಶ ಮಾಡುತ್ತಾರೆ. ಆದ್ದರಿಂದ 'ಅರಿ'ಯ ಮೋದಲಾಕ್ಷರ 'ಅ' ತೆಗೆದುಕೊಂಡು ಹಾಗೂ ರಜದ ಮೊದಲಾಕ್ಷರ 'ರ' ತೆಗೆದುಕೊಂಡು ಅದರ ಮುಂದೆ ಹನನದ ವಾಚಕವಾದ 'ಹಂತ'ಶಬ್ದವನ್ನು ಸೇರಿಸುವುದರಿಂದ ಅರಹಂತವಾಗುತ್ತದೆ. ಕ್ರೋಧ, ಮಾನ, ಮಾಯೆ, ಲೋಭ ಈ ಕಷಾಯಗಳನ್ನು ಗೆಲ್ಲುವುದರಿಂದ ಜಿನರೂ ಮತ್ತು ಕರ್ಮಶತ್ರು ಹಾಗೂ ಸಂಸಾರವನ್ನು ನಾಶಮಾಡುವುದರಿಂದ ಅರಹಂತರೂ ಎನಿಸುತ್ತಾರೆ. -ಮೂಲಾರಾಧನೆ ೫೦೫-೫೬೧

**ಅವಗಾಹನತ್ವ :-** ಒಂದು ಜೀವದ ಅವಗಾಹ ಕ್ಷೇತ್ರದಲ್ಲಿ ಅನಂತ ಜೀವಗಳು ಸಮಾವೇಶಗೊಳ್ಳುವಂತೆ ಅವಕಾಶ ಕೊಡುವ ಸಾಮರ್ಥ್ಯಕ್ಕೆ ಅವಗಾಹನ ಗುಣವೆಂದು ಹೇಳುತ್ತಾರೆ. ಈ ಗುಣವು ಸಿದ್ಧರಲ್ಲಿ ವ್ಯಕ್ತವಾಗುತ್ತದೆಂದು ಅವರಿಗೆ ಅವಗಾಹನತ್ವ ಗುಣವುಳ್ಳವರೆನ್ನುತ್ತಾರೆ.

**ಅವಧಿಜ್ಞಾನ :-** ಸಮ್ಯಗ್ದರ್ಶನ ಇಲ್ಲವೆ ಚಾರಿತ್ರದ ವಿಶುದ್ಧತೆಯ ಪ್ರಭಾವದಿಂದ ಎಂದಾದರೂ ಯಾವುದೇ ಸಾಧಕರಿಗೆ ಒಂದು ವಿಶೇಷ ಪ್ರಕಾರದ ಜ್ಞಾನವು ಉತ್ಪನ್ನವಾಗಿಬಿಡುತ್ತದೆ, ಅದನ್ನು ಅವಧಿಜ್ಞಾನವೆಂದು ಹೇಳುತ್ತಾರೆ. ಒಂದು ವೇಳೆ ಇದು ಮೂರ್ತಿಕ ಇಲ್ಲವೆ ಸಂಯೋಗಿ ಪದಾರ್ಥಗಳನ್ನು ತಿಳಿಯುತ್ತಿದ್ದರೂ ಇಂದ್ರಿಯ ಮೊದಲಾದವುಗಳ ಸಹಾಯವಿಲ್ಲದೆಯೇ ತಿಳಿಯುವುದರಿಂದ ಪ್ರತ್ಯಕ್ಷವಿದೆ. ಎಲ್ಲ ಪದಾರ್ಥಗಳನ್ನು ತಿಳಿಯದಿರುವುದರಿಂದ ದೇಶ ಪ್ರತ್ಯಕ್ಷವಿದೆ. ಭಾವಗಳ ವೃದ್ಧಿ-ಹಾನಿಯ ಜೊತೆಗೆ ಇದರಲ್ಲಿ ವೃದ್ಧಿ-ಹಾನಿಗಳಾಗುವುದು ಸ್ವಾಭಾವಿಕವಾಗಿದೆ, ಆದ್ದರಿಂದ ಇದು ಹಲವು ಪ್ರಕಾರದ್ದಾಗುತ್ತದೆ ಇದನ್ನು ತಿಳಿಯುವ ಶಕ್ತಿಗಳು ಜಘನ್ಯದಿಂದ ಉತ್ಕೃಷ್ಟದವರೆಗೆ ಅನೇಕ ಪ್ರಕಾರಗಳಿಂದಾಗುತ್ತವೆ. ಪರಿಣಾಮಗಳಲ್ಲಿ ಸಂಕ್ಲೇಶ ಉಂಟಾದರೆ ಇದು ಬಿಟ್ಟೂ ಹೋಗುತ್ತದೆ. ದೇವ, ನಾರಕಿಗಳಲ್ಲಿ ಇದು ಅಹೇತುವಾಗಿರುತ್ತದೆ. ಅದರಿಂದ ಭವಪ್ರತ್ಯಯವೆಂದು ಹೇಳಲಾಗುತ್ತದೆ. ಮತ್ತು ಮನುಷ್ಯ-ತಿರ್ಯಂಚಗಳಲ್ಲಿ ಗುಣಪ್ರತ್ಯಯವಿದೆ. ಒಂದು ವೇಳೆ ಲೌಕಿಕ ದೃಷ್ಟಿಯಿಂದ ಇದು ಚಮತ್ಕಾರವಾಗಿದ್ದರೂ ಮೋಕ್ಷಮಾರ್ಗದಲ್ಲಿ ಇದಕ್ಕೆ ಯಾವ ಬೆಲೆಯೂ ಇಲ್ಲ.

**ಅವ್ಯಾಬಾಧತ್ವ :-** ಸ್ವಾಭಾವಿಕವಾದ ಶುದ್ಧಾತ್ಮ ಸ್ವರೂಪದ ಅನುಭವದಿಂದ ಉತ್ಪನ್ನವಾದ ಹಾಗೂ ರಾಗಾದಿ

ವಿಭಾವಗಳಿಂದ ದೂರವಾದ ಯಾವ ಸುಖ ಸ್ವರೂಪ ಅಮೃತದ ಏಕದೇಶ ಅನುಭವವನ್ನು ಮೊದಲು ತೆಗೆದುಕೊಂಡಿತ್ತು ಅದರ ಫಲಸ್ವರೂಪವಾಗಿಯೇ ಅವ್ಯಾಬಾಧ ಅನಂತ ಸುಖವುಳ್ಳ ಗುಣವು ಸಿದ್ಧರಲ್ಲಿರುತ್ತದೆ.

**ಅವ್ಯಾಪ್ತಿ-ಅತಿವ್ಯಾಪ್ತಿ :-** ಯಾವುದರ ಅಭಾವದಲ್ಲಿ ದ್ರವ್ಯದ ಅಭಾವವೇ ಆಗಿ ಬಿಡುತ್ತದೆ ಅದೇ ಆ ದ್ರವ್ಯದ ಲಕ್ಷಣವಿದೆ. ಇನ್ನು ಸದೋಷ ಲಕ್ಷಣಕ್ಕೆ ಲಕ್ಷಣಾಭಾಸವೆನ್ನುತ್ತಾರೆ. ಈ ಲಕ್ಷಣಾಭಾಸದಲ್ಲಿ ಅವ್ಯಾಪ್ತ, ಅತಿವ್ಯಾಪ್ತ, ಅಸಂಭವವೆಂದು ಮೂರು ಭೇದಗಳಿವೆ. ಲಕ್ಷ್ಯದ ಒಂದು ದೇಶದಲ್ಲಿ (ಭಾಗ) ಲಕ್ಷಣವಿರುವುದಕ್ಕೆ ಅವ್ಯಾಪ್ತವೆನ್ನುತ್ತಾರೆ. ಹೇಗೆಂದರೆ ಹಸುವಿನ ಶಾಲೀನತೆ. ಶಾಲೀನತೆಯು ಎಲ್ಲ ಹಸುಗಳಲ್ಲಿ ಕಂಡುಬರುವುದಿಲ್ಲ. ಅದು ಕೆಲವೇ ಹಸುಗಳ ಧರ್ಮವಿದೆ ಆದ್ದರಿಂದ ಅವ್ಯಾಪ್ತವಿದೆ. ಲಕ್ಷ್ಯ ಮತ್ತು ಅಲಕ್ಷ್ಯದಲ್ಲಿ ಲಕ್ಷಣವಿರುವುದಕ್ಕೆ ಅತಿವ್ಯಾಪ್ತವೆನ್ನುತ್ತಾರೆ. ಹೇಗೆಂದರೆ ಹಸುವಿನಲ್ಲೇ ಪಶುತ್ವದ ಲಕ್ಷಣವನ್ನು ಹೇಳುವುದು. ಆದರೆ ಈ ಪಶುತ್ವದ ಲಕ್ಷಣವು ಹಸುವಿನಲ್ಲಿ ಅಲ್ಲದೆ ಕುದುರೆ ಮೊದಲಾದ ಪಶುಗಳಲ್ಲೂ ಕಂಡುಬರುತ್ತದೆ. ಆದ್ದರಿಂದ ಪಶುತ್ವವು ಅತಿವ್ಯಾಪ್ತವಿದೆ.

- ನ್ಯಾಯದೀಪಿಕೆ.೧/೫/೭/೫.

**ಅವಿರತಿ :-** ಅಂತರಂಗದಲ್ಲಿ ತನ್ನ ಪರಮಾತ್ಮ ಸ್ವರೂಪದ ಭಾವನೆಯಿಂದ ಉತ್ಪನ್ನವಾದ ಶ್ರೇಷ್ಠತರ ಸುಖಾಮೃತದಲ್ಲಿ ಯಾವ ಪ್ರೀತಿಯಿದೆ ಅದರಿಂದ ವಿಲಕ್ಷಣ ಹಾಗೂ ಬಾಹ್ಯ ವಿಷಯಗಳಲ್ಲಿ ವ್ರತ ಮೊದಲಾದವುಗಳನ್ನು ಸ್ವೀಕಾರ ಮಾಡದಿರುವುದಕ್ಕೆ ಅವಿರತಿಯೆನ್ನುತ್ತಾರೆ.

**ಅಶುಭೋಪಯೋಗ :-** ಯಾರ ಉಪಯೋಗವು ವಿಷಯ ಕಷಾಯಗಳಲ್ಲಿ ಮಗ್ನವಾಗಿದೆ, ಮತ್ತು ಯಾವನು ಕುಶ್ರುತಿ, ಕುವಿಚಾರ ಹಾಗೂ ಕುಸಂಗತಿಗಳಲ್ಲಿ ತೊಡಗಿದ್ದಾನೆ, ಉಗ್ರನಿದ್ದಾನೆ ಹಾಗೂ ಉನ್ಮಾರ್ಗದಲ್ಲಿ ಪ್ರವರ್ತಿಸುತ್ತಾನೆ ಅವನಿಗೆ ಅಶುಭೋಪಯೋಗವಿದೆ. ಇನ್ನು ಎಲ್ಲಿ ಮೋಹ, ದ್ವೇಷ ಹಾಗೂ ಅಪ್ರಶಸ್ತವಾದ ರಾಗವಿರುತ್ತದೆ ಅಲ್ಲಿ ಅಶುಭೋಪಯೋಗವಿರುತ್ತದೆ.

**ಅಸಂಪ್ರಾಪ್ತಸೃಪಾಟಿಕಾ ಸಂಹನನ :-** ಯಾವುದರಲ್ಲಿ ಒಳಗೆ ಮೂಳೆಗಳು ಪರಸ್ಪರಕಟ್ಟಲ್ಪಡದೆ ಹೊರಗಿನಿಂದ ಮಾತ್ರ ಅವು ರಕ್ತವಾಹಿನಿ, ಸ್ನಾಯು, ಮಾಂಸ ಮೊದಲಾದವುಗಳಿಂದ ಕೂಡಿಸಿ ಸಂಘಟಿಸಲ್ಪಟ್ಟಿದೆ ಅದು ಅಸಂಪ್ರಾಪ್ತಸೃಪಾಟಿಕಾ ಸಂಹನನವಿದೆ. -ರಾಜವಾರ್ತಿಕ-೮/೧೧/೯/೫೭೭ ೭.

**ಅಸಾತಾವೇದನೀಯ :-** ಅರತಿಮೋಹನೀಯ ಕರ್ಮದ ಉದಯದ ಬಲದಿಂದ ದುಃಖಕ್ಕೆ ಕಾರಣ ಭೂತವಾದ ಯಾವ ಇಂದ್ರಿಯ ವಿಷಯಗಳ ಅನುಭವ ಮಾಡಿಸುತ್ತದೆ ಅದು ಅಸಾತಾವೇದನೀಯ ಕರ್ಮವಿದೆ.

**ಅಂಗ :-** 'ಅಂಗ್ಯತೆ' ಎಂದರೆ ಮಧ್ಯಮ ಪದಗಳಿಂದ ಯಾವುದನ್ನು ಬರೆಯಲಾಗುತ್ತದೆ ಅದು ಅಂಗವೆನ್ನಿಸಿಕೊಳ್ಳುತ್ತದೆ. ಇಲ್ಲವೆ ಸಂಪೂರ್ಣಶ್ರುತದ ಒಂದೊಂದು ಆಚಾರ ಮೊದಲಾದ ರೂಪಾವಯವಗಳಿಗೆ ಅಂಗವೆನ್ನುತ್ತಾರೆ. ಇದರಲ್ಲಿ ಅಂಗಬಾಹ್ಯ, ಅಂಗಪ್ರವಿಷ್ಟವೆಂದು ಎರಡು ಪ್ರಕಾರಗಳು. ಅಂಗ ಪ್ರವಿಷ್ಟದಲ್ಲಿ ಆಚಾರ, ಸೂತ್ರಕೃತ, ಸ್ಥಾನ, ಸಮವಾಯ, ವ್ಯಾಖ್ಯಾಪ್ರಜ್ಞಪ್ತಿ, ಜ್ಞಾತೃಧರ್ಮಕಥೆ, ಉಪಾಸಕಾಧ್ಯಯನ, ಅಂತಕೃದ್ದಶ, ಅನುತ್ತರೋಪಪಾದಿಕದಶ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರ, ಮತ್ತು ದೃಷ್ಟಿವಾದಾಂಗವೆಂದು ಹನ್ನೆರಡು ಪ್ರಕಾರಗಳಿವೆ. ಆ ದೃಷ್ಟಿವಾದಾಂಗದಲ್ಲಿ ಪರಿಕರ್ಮ, ಸೂತ್ರ, ಪ್ರಥಮಾನುಯೋಗ, ಪೂರ್ವಗತ, ಚೂಲಿಕೆಯೆಂದು ಐದು ಭೇದಗಳಿವೆ. ಆ ಪೂರ್ವಗತದಲ್ಲಿ ಪುನಃ ಹದಿನಾಲ್ಕು ಭೇದಗಳಿವೆ. ಇನ್ನು ಅಂಗ ಬಾಹ್ಯದಲ್ಲಿ ಕಾಲಿಕ, ಉತ್ಕಾಲಿಕವೆಂದು ಅನೇಕ ಪ್ರಕಾರಗಳಿವೆ. ಸ್ವಾಧ್ಯಾಯದ ಸಮಯದಲ್ಲಿಯಾವುದರ ಪಠಣ-ಪಾಠಣದ ನಿಯಮವಿದೆ ಅದಕ್ಕೆ ಕಾಲಿಕವೆನ್ನುತ್ತಾರೆ.

ಮತ್ತು ಯಾವುದರ ಪತಣ-ಪಾತಣದ ಯಾವ ನಿಯಮ ಸಮಯಗಳಿಲ್ಲ ಅವು ಉತ್ಕಾಲಿಕಗಳಿವೆ. ಉತ್ತರಾಧ್ಯಯನ ಮೊದಲಾದ ಅಂಗಬಾಹ್ಯ ಗ್ರಂಥಗಳು ಅನೇಕ ಪ್ರಕಾರವಾಗಿವೆ. -ಸರ್ವಾರ್ಥಸಿದ್ಧಿ ೧/೨೦/೧೨೩/೨

**ಅಂತರ್ಮುಹೂರ್ತ :-** ಒಂದು ಆವಲಿಯಲ್ಲಿ ಅಸಂಖ್ಯಾತ ಸಮಯಗಳಾಗುತ್ತವೆ. ಒಂದು ಆವಲಿಯನ್ನು ಗ್ರಹಣಮಾಡಿ ಅದರಲ್ಲಿ ಅಸಂಖ್ಯಾತ ಸಮಯಗಳನ್ನು ಮಾಡಿಕೊಳ್ಳಬೇಕು. ಇಲ್ಲಿ ಮುಹೂರ್ತದಲ್ಲಿಂದ ಒಂದು ಸಮಯವನ್ನು ತೆಗೆದಮೇಲೆ ಉಳಿದ ಕಾಲ ಪ್ರಮಾಣಕ್ಕೆ ಭಿನ್ನ ಮುಹೂರ್ತವೆಂದು ಹೇಳುತ್ತಾರೆ. ಆ ಭಿನ್ನ ಮುಹೂರ್ತದಲ್ಲಿಂದ ಒಂದು ಸಮಯವನ್ನು ಮತ್ತೆ ತೆಗೆದುಹಾಕಿದ ಮೇಲೆ ಉಳಿದ ಕಾಲ ಪ್ರಮಾಣವು ಅಂತರ್ಮುಹೂರ್ತವಾಗುತ್ತದೆ. ಈ ಪ್ರಕಾರ ಉತ್ತರೋತ್ತರವಾಗಿ ಒಂದೊಂದು ಸಮಯವನ್ನು ಕಡಿಮೆ ಮಾಡುತ್ತ ಉಚ್ಛ್ವಾಸವು ಉತ್ಪನ್ನವಾಗುವವರೆಗೆ ಒಂದೊಂದು ಸಮಯವನ್ನು ತೆಗೆದು ಹಾಕುತ್ತ ಹೋಗಬೇಕು. ಅದೆಲ್ಲವೂ ಒಂದೊಂದು ಸಮಯವನ್ನು ಕಡಿಮೆ ಮಾಡಿದ ಕಾಲವೂ ಕೂಡ ಅಂತರ್ಮುಹೂರ್ತ ಪ್ರಮಾಣವಾಗುತ್ತದೆ. ಇದೇ ಪ್ರಕಾರ ಎಲ್ಲಿಯವರೆಗೆ ಆವಲಿ ಉತ್ಪನ್ನವಾಗುವುದಿಲ್ಲವೋ ಅದುವರೆಗೆ ಉಳಿದ ಒಂದು ಉಚ್ಛ್ವಾಸದಲ್ಲಿಂದಲೂ ಒಂದೊಂದು ಸಮಯವನ್ನು ಕಡಿಮೆ ಮಾಡುತ್ತ ಹೋಗಬೇಕು, ಹೀಗೆ ಮಾಡುತ್ತ ಯಾವ ಆವಲಿ ಉತ್ಪನ್ನವಾಗುತ್ತದೆ ಅದನ್ನೂ ಅಂತರ್ಮುಹೂರ್ತವೆಂದು ಹೇಳುತ್ತಾರೆ.

**ಅಂತರಕರಣ :-** ಪೂರ್ವೋಪಾರ್ಜಿತ ಕರ್ಮವು ಯಥಾ ಕಾಲದಲ್ಲಿ ಉದಯಕ್ಕೆ ಬಂದು ಜೀವದ ಗುಣಗಳನ್ನು ಪರಾಭವಗೊಳಿಸುವಲ್ಲಿ ಕಾರಣವಾಗುತ್ತಿರುತ್ತದೆ, ಮತ್ತು ಈ ಪ್ರಕಾರ ಜೀವವು ಅದರ ಪ್ರಭಾವದಿಂದ ಎಂದೂ ಬಿಡುಗಡೆ ಹೊಂದುವುದಿಲ್ಲ. ಆದರೆ ಆಧ್ಯಾತ್ಮಿಕ ಸಾಧನೆಗಳಿಂದ ಅವುಗಳಲ್ಲಿ ಎಂದಾದರೂ ಅಂತರ ಬೀಳುವ ಸಂಭವವಿದೆ. ಕೆಲಕಾಲಕ್ಕಾಗಿ ಕರ್ಮನಿಕ್ಷೇಪಗಳು ತಮ್ಮ ಸ್ಥಾನವನ್ನು ಬಿಟ್ಟು ಹಿಂದೆ-ಮುಂದೆಯಾಗುತ್ತವೆ. ಆ ಕಾಲಕ್ಕಿಂತ ಮುಂಚೆಯೂ ಮತ್ತು ನಂತರವೂ ಕರ್ಮಗಳ ಉದಯವಿರುತ್ತದೆ. ಆದರೆ ಅಷ್ಟು ಕಾಲದವರೆಗೆ ಕರ್ಮವು ಉದಯಕ್ಕೆ ಬರುವುದಿಲ್ಲ. ಈ ಪ್ರಕಾರವಾಗಿ ಕರ್ಮಗಳಲ್ಲಿ ಅಂತರವನ್ನುಂಟು ಮಾಡುವುದಕ್ಕೇನೇ ಅಂತರಕರಣವೆನ್ನುತ್ತಾರೆ.

**ಆಗಮದ್ರವ್ಯ ನಿಕ್ಷೇಪ :-** ಯಾವನು ಜೀವ ವಿಷಯವಾದ ಇಲ್ಲವೆ ಮನುಷ್ಯಜೀವ ವಿಷಯವಾದ ಶಾಸ್ತ್ರವನ್ನು ತಿಳಿಯುತ್ತಾನೆ, ಆದರೆ ವರ್ತಮಾನ ಕಾಲದಲ್ಲಿ ಅದರ ಉಪಯೋಗದಿಂದ ರಹಿತನಾಗಿದ್ದಾನೆ ಅವನು ಆಗಮ ದ್ರವ್ಯಜೀವವಿದ್ದಾನೆ. ಇದೇ ಪ್ರಕಾರ ಉಳಿದ ಯಾವ ಯಾವ ವಿಷಯದ ಸಂಬಂಧವಾಗಿ ಶಾಸ್ತ್ರಗಳನ್ನು ತಿಳಿಯುತ್ತ ಅದರ ಉಪಯೋಗದಿಂದ ದೂರವಾದಂಥ ಆತ್ಮವು ಆಯಾ ಹೆಸರಿನ ಆಗಮದ್ರವ್ಯವಿದೆ, ಹೇಗೆಂದರೆ ಮಂಗಲ ವಿಷಯದ ಶಾಸ್ತ್ರವನ್ನು ತಿಳಿಯುವ ಆತ್ಮವು ಆಗಮದ್ರವ್ಯಮಂಗಲವಿದೆ. -ರಾಜವಾರ್ತಿಕ. ೧/೫/೫೨೯/೩.

**ಆಚಾರ್ಯ :-** ಸಾಧುಗಳಿಗೆ ದೀಕ್ಷೆ, ಶಿಕ್ಷೆ ಕೊಡುವ, ಅವರ ದೋಷಗಳನ್ನು ನಿವಾರಿಸುವ ಹಾಗೂ ಉಳಿದ ಅನೇಕ ಗುಣವಿಶಿಷ್ಟರಾದ ಸಂಘನಾಯಕ ಸಾಧುವಿಗೆ ಆಚಾರ್ಯರೆನ್ನುತ್ತಾರೆ. ವೀತರಾಗರಾಗಿರುವ ಕಾರಣದಿಂದ ಪಂಚಪರಮೇಷ್ಠಿಗಳಲ್ಲಿ ಇವರ ಸ್ಥಾನವಿದೆ. ಇವರಲ್ಲದೆ ಗೃಹಸ್ಥರಿಗೆ ಧರ್ಮ-ಕರ್ಮಗಳ ವಿಧಿ-ವಿಧಾನಗಳನ್ನು ಮಾಡಿಸುವಂಥ ಗೃಹಸ್ಥಾಚಾರ್ಯರಿದ್ದಾರೆ. ಪೂಜೆ-ಪ್ರತಿಷ್ಠೆಗಳನ್ನು ಮಾಡಿಸುವಂಥ ಪ್ರತಿಷ್ಠಾಚಾರ್ಯರಿದ್ದಾರೆ, ಸಲ್ಲೇಖನ ಸ್ವೀಕರಿಸಿದ ಕ್ಷಪಕಸಾಧುಗಳಿಗೆ ಆಚರಣೆ ಮಾಡಿಸುವಂಥ ನಿರ್ಯಾಪಕಾಚಾರ್ಯರಿದ್ದಾರೆ. ಇವರೆಲ್ಲರಲ್ಲಿ ಸಾಧುರೂಪ ಧರಿಸಿದ ಆಚಾರ್ಯರೇ ಪೂಜ್ಯರೆನಿಸುತ್ತಾರೆ.

> ''ಮೂವತ್ತಾರುಂ ಗುಣಂಗಳ್ ತಮಗಮರ್ದಿರೆ ಸಂದ್ಯೆದುಮಾಚಾರದೊಳ್ ಸ
> ದ್ಭಾವಂ ಕೈಗಣ್ಮೆ ಶಿಷ್ಯಾಚರಣ ವಿಧಿಗಳಂ ತಿರ್ದಿ ಕಾರುಣ್ಯದಿಂದಂ
> ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರ್ ......................
> ...................................................................

-ಮಹಾಕವಿ ಪಂಪ, ಆದಿಪುರಾಣ. ೧-೩

**ಆಜ್ಞಾವಿಚಯ :-** ಉಪದೇಶ ಕೊಡುವ ಆಚಾರ್ಯರ ಅಭಾವವಾಗಿರುವುದರಿಂದ, ತಾನು ಮಂದಬುದ್ಧಿಯವನಾಗಿರುವುದರಿಂದ, ಕರ್ಮಗಳ ಉದಯವಾಗಿರುವುದರಿಂದ, ಪದಾರ್ಥಗಳು ಸೂಕ್ಷ್ಮವಾಗಿರುವುದರಿಂದ, ತತ್ತ್ವಸಮರ್ಥನೆಯಲ್ಲಿ ಹೇತು ಹಾಗೂ ದೃಷ್ಟಾಂತಗಳ ಅಭಾವವಾಗಿರುವುದರಿಂದ ಸರ್ವಜ್ಞ ಪ್ರಣೀತವಾದ ಆಗಮವನ್ನು ಪ್ರಮಾಣ ಮಾಡಿ 'ಇದು ಇದೇ ಪ್ರಕಾರವಿದೆ, ಏಕೆಂದರೆ ಜಿನೇಂದ್ರರು ಅನ್ಯಥಾವಾದಿಗಳಿಲ್ಲ'-ಎಂದು ಗೂಢ ಪದಾರ್ಥದ ಅರ್ಥವನ್ನು ಶ್ರದ್ಧೆಯಿಂದ ತಿಳಿಯುವುದು ಅದು ಆಜ್ಞಾವಿಚಯಧರ್ಮಧ್ಯಾನವಿದೆ. -ರಾಜವಾರ್ತಿಕ. ೯/೩೬/೪.

**ಆಜ್ಞಾಸಮ್ಯಕ್ತ್ವ :-** ದರ್ಶನಮೋಹನೀಯವು ಉಪಶಾಂತವಾಗಿರುವುದರಿಂದ ಶಾಸ್ತ್ರ ಕೇಳದೆಯೇ ಕೇವಲ ವೀತರಾಗಭಗವಂತರ ಆಜ್ಞೆಯಿಂದಲೇ ಯಾವ ತತ್ತ್ವಜ್ಞಾನವು ಉತ್ಪನ್ನವಾಗುತ್ತದೆ ಅದಕ್ಕೆ ಆಜ್ಞಾಸಮ್ಯಕ್ತ್ವವೆನ್ನುತ್ತಾರೆ. ಅರಹಂತರೊಬ್ಬರೇ ದೇವರಿದ್ದಾರೆ, ಅವರ ವಚನವೇ ಸತ್ಯವಿದೆ ಮತ್ತು ಅವರು ಹೇಳಿದ ಧರ್ಮವೇ ಮೋಕ್ಷಪ್ರದವಿದೆಯೆಂಬ ಅಭಿನಿವೇಶವೇ ಆಜ್ಞಾಸಮ್ಯಕ್ತ್ವವನ್ನು ಸಿದ್ಧಮಾಡುತ್ತದೆ. -ಅನಗಾರ ಧರ್ಮಾಮೃತ ೨/೬೩.

**ಆತಪ :-** ಯಾವುದರ ಉದಯದಿಂದ ಶರೀರದಲ್ಲಿ ಆತಪದ ಪ್ರಾಪ್ತಿಯಾಗುತ್ತದೆ ಅದಕ್ಕೆ ಆತಪನಾಮ ಕರ್ಮವೆನ್ನುತ್ತಾರೆ. -ಸರ್ವಾರ್ಥಸಿದ್ಧಿ-೮/೧೧/೩೯೧.

**ಆರ್ತಧ್ಯಾನ :-** ಹಾಗೆ ನೋಡಿದರೆ ಧ್ಯಾನ ಶಬ್ದವು ಪಾರಮಾರ್ಥಿಕ ಯೋಗ ಮತ್ತು ಸಮಾಧಿಯ ಅರ್ಥದಲ್ಲಿ ಪ್ರಯುಕ್ತವಾಗುತ್ತದೆ, ಆದರೆ ನಿಜವಾಗಿ ಯಾವುದೇ ಶುಭ ಅಥವಾ ಅಶುಭ ಪರಿಣಾಮಗಳಲ್ಲಿ ಏಕಾಗ್ರತೆಯಾಗುವುದಕ್ಕೇನೇ ಧ್ಯಾನವೆನ್ನುತ್ತಾರೆ. ಸಂಸಾರೀ ಜೀವಕ್ಕೆ ಇಪ್ಪತ್ತಾನ್ಲುಗಂಟೆ ಕಲುಷಿತ ಪರಿಣಾಮಗಳೇ ಆಗುತ್ತವೆ. ಕೆಲವು ಇಷ್ಟವಿಯೋಗಜನ್ಯವಾಗಿದ್ದರೆ ಕೆಲವು ಅನಿಷ್ಟಸಂಯೋಗಜನ್ಯವಾಗಿರುತ್ತವೆ. ಕೆಲವು ವೇದನಾಜನ್ಯವಾಗಿದ್ದರೆ ಕೆಲವು ಮುಂಬರುವ ಭೋಗದ ತೃಷ್ಣೆಯಿಂದ ಹುಟ್ಟಿದವುಗಳಾಗಿರುತ್ತವೆ. ಈ ಎಲ್ಲ ಪ್ರಕಾರದ ಪರಿಣಾಮಗಳು ಆರ್ತಧ್ಯಾನವೆನಿಸಿಕೊಳ್ಳುತ್ತವೆ. ಅವು ಜೀವಕ್ಕೆ ಪಾರಮಾರ್ಥಿಕ ಅಧಃಪತನಕ್ಕೆ ಕಾರಣವಾಗಿವೆ ಮತ್ತು ವ್ಯವಹಾರದಿಂದ ಅಧೋಗತಿಗೆ ಕಾರಣವಾಗಿವೆ. ಮೊದಲಿನ ಅಭ್ಯಾಸದ ಕಾರಣದಿಂದಾಗಿ ಅವು ಮೋಕ್ಷಮಾರ್ಗದ ಸಾಧಕರಿಗೂ ಒಮ್ಮೊಮ್ಮೆ ಆಗುತ್ತವೆ. ಆದರೆ ಅವು ಎಷ್ಟೆಷ್ಟು ಮೇಲೆದ್ದು ಬರುತ್ತವೆ. ಅಷ್ಟಷ್ಟು ಒತ್ತಿಡುತ್ತಾರೆ ಆರ್ತಧ್ಯಾನದಲ್ಲಿ ನಾಲ್ಕು ಪ್ರಕಾರಗಳಿವೆ. ಈ ನಾಲ್ಕೂ ಪ್ರಕಾರದ ಆರ್ತಧ್ಯಾನಗಳು ಅತ್ಯಂತ ಅಶುಭವಾದ ಕೃಷ್ಣ, ನೀಲ, ಕಾಪೋತ ಲೇಶ್ಯೆಗಳ ಆಶ್ರಯದಿಂದ ಉತ್ಪನ್ನವಾಗುತ್ತವೆ. ಇದರ ಕಾಲವು ಅಂತರ್ಮುಹೂರ್ತವಿದೆ. ಆರ್ತಧ್ಯಾನದಿಂದ ಅನಂತ ದುಃಖಗಳಿಂದ ವ್ಯಾಪ್ತವಾದ ತಿರ್ಯಂಚ ಗತಿಯಾಗುತ್ತದೆ. -ಮಹಾಪುರಾಣ, ೨೧-೩೮

**ಆಪ್ತ :-** ಯಾರು ರಾಗ-ದ್ವೇಷ-ಮೋಹಗಳನ್ನು ಸಂಪೂರ್ಣವಾಗಿ ನಾಶಮಾಡಿದ್ದಾರೆ, ಹಾಗೂ ಪ್ರತ್ಯಕ್ಷ ಜ್ಞಾನದಿಂದ ಸಮಸ್ತ ಪದಾರ್ಥಗಳನ್ನು ತಿಳಿಯುತ್ತಾರೆ, ಪರಮಹಿತೋಪದೇಶಿಗಳಿದ್ದಾರೆ ಅವರು ಆಪ್ತರಿದ್ದಾರೆ. ಈ

ಪರಮಹಿತೋಪದೇಶ ವಿಶೇಷಣದಿಂದ ಸಿದ್ಧರೊಡನೆ ಅತಿವ್ಯಾಪ್ತಿಯಾಗುವ ಸಾಧ್ಯತೆಯಿಲ್ಲ. ಏಕೆಂದರೆ ಅರಹಂತ ಭಗವಂತರೇ ಉಪದೇಶಕರಾಗಿರುವ ಕಾರಣದಿಂದ ಆಪ್ತರೆನಿಸುತ್ತಾರೆ; ಸಿದ್ಧರಲ್ಲ. -ನ್ಯಾಯದೀಪಕೆ ೩/೭೪/೧೧೩

**ಆಬಾಧಾಕಾಲ :-** ಕರ್ಮದ ಬಂಧವಾದನಂತರ ಅದು ಕೂಡಲೆ ಉದಯಕ್ಕೆ ಬರುವುದಿಲ್ಲ, ಆದರೆ ಕೆಲ ಕಾಲದ ನಂತರ ಪರಿಪಕ್ವ ಅವಸ್ಥೆಗೆ ಪ್ರಾಪ್ತವಾಗಿಯೇ ಉದಯಕ್ಕೆ ಬರುತ್ತದೆ. ಈ ಮಧ್ಯಂತರ ಕಾಲಕ್ಕೆ ಅಬಾಧಾಕಾಲವೆಂದು ಹೇಳುತ್ತಾರೆ ಎಂದರೆ ಒಂದು ಕರ್ಮದ ಸ್ಥಿತಿಯು ಒಂದು ಕೋಟಾಕೋಟಿಸಾಗರದಿದ್ದರೆ ಅದರ ಅಬಾಧಾಕಾಲವು ೧೦೦ ವರ್ಷವಿರುವುದೆಂದು ತಿಳಿಯಬೇಕು. (ಹೆಚ್ಚಿನ ವಿವರಣೆಗೆ ಗೋ. ಕರ್ಮಕಾಂಡ ಗಾಥೆ ೧೫೫-೧೬೨ ನೋಡುವುದು)

**ಆಮ್ನಾಯ :-** ಶುದ್ಧವಾದ ಉಚ್ಚಾರಪೂರ್ವಕವಾಗಿ ಪಾಠವನ್ನು ಪುನಃ ಪುನಃ ಉಚ್ಚರಿಸುವುದಕ್ಕೆ ಆಮ್ನಾಯವೆನ್ನುತ್ತಾರೆ. -ಸರ್ವಾರ್ಥಸಿದ್ಧಿ ೯/೨೫/೪೪೩/೫

**ಆಯತನ-ಅನಾಯತನ :-** ಜಿನಮಾರ್ಗದಂತೆ ಸಂಯಮಸಹಿತವಾದ ಮುನಿರೂಪವಿದೆ ಅದು ಆಯತನವಿದೆ. ಸಮ್ಯಕ್ತ್ವ ಮೊದಲಾದ ಗುಣಗಳ ಆಯತನ-ಆಶ್ರಯ-ಮನೆ ಆವಾಸ ಮಾಡಲಿಕ್ಕೆ ಯಾವುದು ನಿಮಿತ್ತವಿದೆ ಅದನ್ನು ಆಯತನವೆನ್ನುತ್ತಾರೆ. ಮತ್ತು ಅದರಿಂದ ವಿಪರೀತವಾದದ್ದು **ಅನಾಯತನ**ವಿದೆ. ಮಿಥ್ಯಾದೇವ, ಮಿಥ್ಯಾದೇವರ ಸೇವಕ, ಮಿಥ್ಯಾತಪ, ಮಿಥ್ಯಾತಪಸ್ವಿ, ಮಿಥ್ಯಾಶಾಸ್ತ್ರ ಮತ್ತು ಮಿಥ್ಯಾಶಾಸ್ತ್ರಗಳನ್ನಾಧರಿಸುವವ ಹೀಗೆ ಈ ಆರು ಅನಾಯತನಗಳನ್ನು ಸರಾಗ ಸಮ್ಯಗ್ದೃಷ್ಟಿಗಳು ತ್ಯಾಗ ಮಾಡಬೇಕಾಗುವುದು.

-ದ್ರವ್ಯಸಂಗ್ರಹ ಟೀಕೆ ೪೧/೧೬೯/೨

**ಆರ್ಯಿಕೆ :-** ಆರ್ಯಿಕೆಯರು ಪರಸ್ಪರರಲ್ಲಿ ಅನುಕೂಲರಾಗಿರುತ್ತಾರೆ, ಈರ್ಷೆಯ ಭಾವನೆಯನ್ನು ಮಾಡುವುದಿಲ್ಲ, ಕ್ರೋಧ, ವಿರೋಧ, ಮಾಯಾಚಾರ ಈ ಮೂರರಿಂದಲೂ ದೂರವಾಗಿರುತ್ತಾರೆ. ಶಾಸ್ತ್ರ ಓದುವುದರಲ್ಲಿ ಓದಿದ ಶಾಸ್ತ್ರವನ್ನು ಪಾಠಮಾಡುವುದರಲ್ಲಿ, ಶಾಸ್ತ್ರ ಕೇಳುವುದರಲ್ಲಿ, ಶಾಸ್ತ್ರದ ಚಿಂತನೆಯಲ್ಲಿ ಮತ್ತು ತಪಸ್ಸು, ವಿನಯ, ಸಂಯಮ ಇವೆಲ್ಲವುಗಳಲ್ಲಿ ತತ್ಪರರಾಗಿರುತ್ತಾರೆ. ಅವರ ವಸ್ತ್ರಗಳು ವಿಕಾರರಹಿತವಾಗಿರುತ್ತವೆ ಮತ್ತು ಶರೀರದ ಆಕಾರವೂ ವಿಕಾರರಹಿತವಾಗಿರುತ್ತದೆ. ಹೀಗೆ ಆರ್ಯಿಕೆಯರಿರುತ್ತಾರೆ. ಆರ್ಯಿಕೆಯರಿಗೆ ಉಪಚಾರದಿಂದ ಮಹಾವ್ರತಿಯೆನ್ನುತ್ತಾರೆ, ಆದರೆ ಉಪಚಾರದಲ್ಲಿ ಪ್ರತ್ಯಕ್ಷವಾಗುವ ಸಾಮರ್ಥ್ಯವಿಲ್ಲ. ಹೀಗೆ ಪ್ರತ್ಯಕ್ಷದಲ್ಲಿ ಮಹಾವ್ರತದ ಅಭಾವವಿರುವುದರಿಂದ ಸ್ತ್ರೀಯರಿಗೆ ತದ್ಭವದಲ್ಲಿ ಮೋಕ್ಷವಾಗುವುದಿಲ್ಲ. -ಮೋ.ಪಾ. ಟೀಕೆ ೧೨/೯೧೩/೧೮.

**ಆವಲಿ :-** ಒಂದು ಪರಮಾಣುವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮಂದಗತಿಯಿಂದ ಹೋಗುವ ಕಾಲಕ್ಕೆ **ಸಮಯ**ವೆನ್ನುತ್ತಾರೆ. ಜಘನ್ಯಯುಕ್ತ ಅಸಂಖ್ಯಾತ ಸಮಯಗಳಿಗೆ ಒಂದು ಆವಲಿಯೆನ್ನುತ್ತಾರೆ. ಇದರಲ್ಲಿ ಅಚಲಾವಲಿ, ಅತಿಸ್ಥಾವಲಿ, ಉಚ್ಛಿಷ್ಟಾವಲಿ, ಉದಯಾವಲಿ, ದ್ವಿತೀಯಾವಲಿ ಮತ್ತು ವೃಂದಾವಲಿಯೆಂದು ಆರು ಭೇದಗಳನ್ನು ಮಾಡಿರುವ ಉಲ್ಲೇಖವು ದೊರಕುತ್ತದೆ -ಇನ್ನು ಇವುಗಳಲ್ಲಿ ಅಚಲಾವಲಿಗೆ ಬಂಧಾವಲಿಯೆಂದೂ ಮತ್ತು ದ್ವಿತೀಯಾವಲಿಗೆ ಪ್ರತ್ಯಾವಲಿಯೆಂದೂ ಹೇಳುತ್ತಾರೆ. -ಗೊಮ್ಮಟಸಾರ ಕರ್ಮಕಾಂಡ. ಸಂ.ಪುಟ-೨೪

**ಆಸ್ರವ :-** ಕಾಯ, ವಚನ, ಮತ್ತು ಮನಸ್ಸಿನ ಕ್ರಿಯೆಗಳಿಗೆ ಯೋಗವೆನ್ನುತ್ತಾರೆ, ಅದೇ ಆಸ್ರವವಿದೆ. ಇದರಲ್ಲಿ ಭಾವಾಸ್ರವ, ದ್ರವ್ಯಾಸ್ರವವೆಂದು ಎರಡು ಪ್ರಕಾರಗಳಿವೆ. ಜೀವದ ಮುಖಾಂತರ ಪ್ರತಿಕ್ಷಣದಲ್ಲಿ ಮನಸ್ಸಿನಿಂದ, ವಚನದಿಂದ ಇಲ್ಲವೆ ಕಾಯದಿಂದ ಶುಭ ಅಥವಾ ಅಶುಭವಾದ ಯಾವ ಕೆಲವು ಪ್ರವೃತ್ತಿಗಳಾಗುತ್ತವೆ ಅದನ್ನು ಭಾವಾಸ್ರವವೆನ್ನುತ್ತಾರೆ ಅದರ ನಿಮಿತ್ತದಿಂದ ಯಾವುದಾದರೊಂದು ವಿಶೇಷ ಪ್ರಕಾರದ ಜಡ ಪುದ್ಗಲ ವರ್ಗಣೆಗಳು

ಆಕರ್ಷಿತವಾಗಿ ಅದರ ಪ್ರದೇಶದಲ್ಲಿ ಪ್ರವೇಶ ಮಾಡುತ್ತವೆ ಅದು ದ್ರವ್ಯಾಸ್ರವವಿದೆ. ಸರ್ವಸಾಮಾನ್ಯ ಜನರಂತೂ ಕಷಾಯ ವಶವಾಗುವ ಕಾರಣದಿಂದ ಈ ಆಸ್ರವವು ಮುಂಬರುವ ಬಂಧಕ್ಕೆ ಕಾರಣ ಬೀಳುತ್ತದೆಂದು ಸಾಂಪ್ರದಾಯಿಕವೆನ್ನಲಾಗುತ್ತದೆ. ಆದರೆ ವೀತರಾಗಿ ಜನರಿಗೆ ಅದು ನಿರಪೇಕ್ಷೆಯಿಂದ ಕರ್ಮವಶವಾಗುತ್ತದೆಂದು ಮುಂಬರುವ ಬಂಧಕ್ಕೆ ಕಾರಣವಾಗುವುದಿಲ್ಲ. ಮತ್ತು ನಂತರದ ಕ್ಷಣದಲ್ಲೇ ಉದುರಿ ಹೋಗುವುದರಿಂದ ಈರ್ಯಾಪಥವೆಂಬ ಹೆಸರನ್ನು ಪಡೆಯುತ್ತದೆ. ಇನ್ನು ನದಿಗಳ ಮುಖಾಂತರ ಪ್ರತಿ ದಿವಸ ಸಮುದ್ರವು ಹೇಗೆ ನೀರಿನಿಂದ ತುಂಬಿ ಹೋಗುತ್ತದೆ ಹಾಗೆಯೇ ಮಿಥ್ಯಾದರ್ಶನ ಮೊದಲಾದ ಪ್ರವಾಹಗಳಿಂದ ಆತ್ಮನಲ್ಲಿ ಕರ್ಮವು ಬರುತ್ತದೆ.

**ಉತ್ಕರ್ಷಣ ：-** ಕರ್ಮ ಪ್ರದೇಶಗಳ ಸ್ಥಿತಿ ಮತ್ತು ಅನುಭಾಗಗಳನ್ನು ಹೆಚ್ಚಿಸುವುದಕ್ಕೆ ಉತ್ಕರ್ಷಣವೆಂದು ಹೇಳಲಾಗುತ್ತದೆ. ಉತ್ಕರ್ಷಣವಾದ ಮೇಲೆ ಅನುಭಾಗಸ್ಥಾನದ ಅವಿಭಾಗಿ ಪ್ರತಿಚ್ಛೇದಗಳ ವೃದ್ಧಿಯಾಗುವುದಿಲ್ಲ. ಏಕೆಂದರೆ ಬಂಧವಾದಲ್ಲದೆ ಅದರ ಉತ್ಕರ್ಷಣವಾಗುವ ಸಾಧ್ಯತೆಯಿಲ್ಲ.

**ಉತ್ಪಾದವ್ಯಯಧ್ರೌವ್ಯ ：-** 'ಸತ್' ಇದು ಒಂದು ವೇಳೆ ತ್ರಿಕಾಲನಿತ್ಯವಿದ್ದರೂ ಅದರಲ್ಲಿ ಯಾವಾಗಲೂ ಪರಿಣಮನವಾಗುತ್ತಿರುವ ಕಾರಣದಿಂದ ಆ ನಿತ್ಯದಲ್ಲೂ ಯಾವುದೇ ಒಂದು ಅವಸ್ಥೆಯ ಉತ್ಪಾದವು ಇನ್ನೊಂದು ಅವಸ್ಥೆಯ ವ್ಯಯವು ಆಗುತ್ತಿರುತ್ತದೆ. ಆದ್ದರಿಂದ ಪದಾರ್ಥವು ನಿತ್ಯವಾಗಿದ್ದರೂ ಕಥಂಚಿತ್ ಅನಿತ್ಯವಾಗಿದೆ ಮತ್ತು ಅನಿತ್ಯವಾಗಿದ್ದರೂ ಕಥಂಚಿತ್ ನಿತ್ಯವಾಗಿದೆ. ಇದು ವಸ್ತುವಿನಲ್ಲೇ ಅಲ್ಲ ಅದರ ಪ್ರತಿಯೊಂದು ಗುಣದಲ್ಲಿಯೂ ಈ ಸ್ವಾಭಾವಿಕವಾದ ವ್ಯವಸ್ಥೆಯು ಸ್ವಯಂ ಸಿದ್ಧವಿದೆ. ೧) ಚೇತನಾಚೇತನ ದ್ರವ್ಯಗಳೆರಡೂ ತಮ್ಮ ಜಾತಿಯನ್ನೆಂದೂ ಬಿಡುವುದಿಲ್ಲ. ಆದರೂ ಅಂತರಂಗ ಮತ್ತು ಬಹಿರಂಗದ ನಿಮಿತ್ತವಶವಾಗಿ ಪ್ರತಿಯೊಂದು ಸಮಯದಲ್ಲಿ ಯಾವ ಹೊಸ ಅವಸ್ಥೆಗೆ ಪ್ರಾಪ್ತವಾಗುತ್ತದೆ ಅದನ್ನು ಉತ್ಪಾದವೆನ್ನುತ್ತಾರೆ. ಇದರಲ್ಲಿ ಸ್ವ-ನಿಮಿತ್ತ, ಪರ-ನಿಮಿತ್ತವೆಂದು ಎರಡು ಪ್ರಕಾರಗಳಿವೆ. ೨) ಮೊದಲಿನ ಅವಸ್ಥೆಯ ತ್ಯಾಗಕ್ಕೆ ವ್ಯಯವೆನ್ನುತ್ತಾರೆ. ಹೇಗೆಂದರೆ ಘಟದ ಉತ್ಪತ್ತಿಯಾದ ಮೇಲೆ ಪಿಂಡರೂಪವಾದ ಆಕಾರದ ತ್ಯಾಗವಾಗುತ್ತದೆ. ೩) ಯಾವ ಅನಾದಿಕಾಲದ ಪಾರಿಣಾಮಿಕ ಸ್ವಭಾವವಿದೆ ಅದರ ವ್ಯಯ ಮತ್ತು ಉದಯವಾಗುವುದಿಲ್ಲ. ಆದರೆ ಅದು 'ಧ್ರುವತಿ' ಎಂದರೆ ಸ್ಥಿರವಾಗಿರುತ್ತದೆ. ಆದ್ದರಿಂದ ಅದನ್ನು ಧ್ರುವವೆನ್ನುತ್ತಾರೆ. ಮತ್ತು ಈ ಧ್ರುವದ ಭಾವ ಇಲ್ಲವೆ ಕರ್ಮಕ್ಕೆ ಧ್ರೌವ್ಯವೆನ್ನುತ್ತಾರೆ. ಹೇಗೆಂದರೆ ಮಣ್ಣಿನ ಪಿಂಡ ಮತ್ತು ಘಟದ ಅವಸ್ಥೆಗಳಲ್ಲಿ ಮಣ್ಣಿನ ಅಂಶವು ಇದ್ದೇ ಇರುತ್ತದೆ. ಆದುದರಿಂದ ಯಾವುದು ಉತ್ಪಾದ ವ್ಯಯ ಮತ್ತು ಧ್ರೌವ್ಯ ಈ ಮೂರರಿಂದ ಯುಕ್ತವಾಗಿದೆ ಅದು 'ಸತ್'ಇದೆ. ಉತ್ಪಾದ-ವ್ಯಯಗಳು ದ್ರವ್ಯಾಂಶಗಳಲ್ಲಿಲ್ಲ ಪರ್ಯಾಯಾಂಶಗಳಲ್ಲಿ ಆಗುತ್ತವೆ. ಆದರೂ ದ್ರವ್ಯ, ಗುಣ, ಪರ್ಯಾಯ ಈ ಮೂರು ಸತ್ ಆಗಿವೆ. ಈ ಮೂರು ಲೋಕಾಕಾಶದಲ್ಲೂ ಕಂಡು ಬರುತ್ತವೆ. ಮುಕ್ತಾವಸ್ಥೆಯಲ್ಲೂ ಈ ಮೂರನ್ನು ನೋಡುವ ಸಾಧ್ಯತೆಯಿದೆ. ಸಿದ್ಧರ ವಿನಾಶರಹಿತತೆಯು ಉತ್ಪಾದವಿದೆ ಮತ್ತು ಉತ್ಪಾದರಹಿತತೆಯು ವಿನಾಶವಿದೆ. ಪುನಃ ಅವರದೇ ಧ್ರೌವ್ಯ, ಉತ್ಪಾದ ಮತ್ತು ವಿನಾಶದ ಸಮೂಹವು ವಿದ್ಯಮಾನವಿದೆ. -ಪ್ರವಚನಸಾರ ಗಾ/೧೭.

**ಉದಯ ：-** ಜೀವದ ಪೂರ್ವಕೃತವಾದ ಶುಭ ಅಥವಾ ಅಶುಭ ಕರ್ಮವು ಅದರ ಚಿತ್ತಭೂಮಿಯ ಮೇಲೆ ಗುರುತಿಸಲ್ಪಟ್ಟಿರುತ್ತದೆ ಅದು ತನ್ನ-ತನ್ನ ಸಮಯಕ್ಕನುಸರಿಸಿ ಪರಿಪಕ್ವ ಅವಸ್ಥೆಗೆ ತಲುಪಿ ಜೀವಕ್ಕೆ ಫಲಕೊಟ್ಟು ಉದುರಿ ಹೋಗುತ್ತದೆ. ಇದಕ್ಕೇನೇ ಕರ್ಮದ ಉದಯವೆಂದು ಹೇಳುತ್ತಾರೆ. ಕರ್ಮದ ಈ ಉದಯವು ದ್ರವ್ಯ, ಕ್ಷೇತ್ರ, ಕಾಲ, ಭಾವದ ಅಪೇಕ್ಷೆಗನುಸರಿಸಿ ಬರುತ್ತದೆ. ಕರ್ಮದ ಉದಯದಲ್ಲಿ ಜೀವದ ಪರಿಣಾಮವು ಆ ಕರ್ಮ ಪ್ರಕೃತಿಗನುಸರಿಸಿಯೇ

ನಿಯಮದಿಂದ ಆಗುತ್ತದೆ. ಇದರಿಂದಲೇ ಕರ್ಮವು ಜೀವನವನ್ನು ಪರಾಭವಗೊಳಿಸುವುದೆಂದು ಹೇಳಲಾಗಿದೆ. ಕರ್ಮವು ಸ್ವರೂಪದಿಂದ ಇಲ್ಲವೆ ಪರರೂಪದಿಂದ ಫಲಕೊಟ್ಟಲ್ಲದೆ ಕರ್ಮರಹಿತ ಭಾವಕ್ಕೆ ಪ್ರಾಪ್ತವಾಗುವುದಿಲ್ಲ. ಅನುದಯರೂಪವಾದ ಪ್ರಕೃತಿಗಳ ಪ್ರತಿಯೊಂದು ನಿಷೇಕವು ಒಂದು ಸಮಯದವರೆಗೆ ಸ್ವರೂಪದಿಂದಿದ್ದು ಎರಡನೆಯ ಸಮಯದಲ್ಲಿ ಪರಪ್ರಕೃತಿ ರೂಪವಾಗಿ ಮೂರನೆಯ ಸಮಯದಲ್ಲಿ ಕರ್ಮರಹಿತಾವಸ್ಥೆಗೆ ತಲುಪುತ್ತವೆಂಬ ನಿಯಮವಿದೆ.

- ಕಷಾಯಪಾಹುಡ

(ವಿಶೇಷ ವಿವರಣೆಗಾಗಿ ಜೈನೇಂದ್ರ ಸಿದ್ಧಾಂತಕೋಶ ಭಾಗ ೧ ರಲ್ಲಿ ಪುಟ ೩೭೭ ರಿಂದ ೪೩೪ ನೋಡಿರಿ)

**ಉದೀರಣಾ :-** ಕರ್ಮದ ಉದಯದಂತೆ ಕರ್ಮಫಲ ವ್ಯಕ್ತತೆಯ ಹೆಸರು ಉದೀರಣಾ ಎಂದಿದೆ. ಆದರೆ ಇಲ್ಲಿರುವ ವಿಶೇಷತೆಯೆಂದರೆ ಯಾವುದೇ ಕ್ರಿಯೆ ಇಲ್ಲವೆ ಅನುಷ್ಠಾನ ವಿಶೇಷಗಳ ಮುಖಾಂತರ ಕರ್ಮವನ್ನು ಅದರ ಸಮಯಕ್ಕಿಂತ ಮುಂಚೆಯೇ ಪಕ್ವಮಾಡಿಕೊಳ್ಳಲಾಗುತ್ತದೆ. ಇಲ್ಲವೆ ಅಪಕರ್ಷಣ ಮುಖಾಂತರ ಅದರ ಸಮಯಕ್ಕಿಂತ ಮೊದಲೇ ಉದಯದಲ್ಲಿ ತಂದುಕೊಳ್ಳಲಾಗುತ್ತದೆ. ಉಳಿದೆಲ್ಲ ಕಥನವನ್ನು ಉದಯದಂತೆಯೇ ತಿಳಿದುಕೊಳ್ಳಬೇಕು. ಕರ್ಮಪ್ರಕೃತಿಗಳ ಉದಯ ಹಾಗೂ ಉದೀರಣಾದಿಗಳ ಪ್ರರೂಪಣೆಯಲ್ಲಿಯೂ ಕೆಲವು ವಿಶೇಷ ಅಂತರಗಳನ್ನು ಹೇಳಿದ್ದಾರೆ. ಇದನ್ನು ಜೈನೇಂದ್ರ ಸಿದ್ಧಾಂತ ಕೋಶ ಭಾಗ-೧ ರಲ್ಲಿ ಪು. ೪೩೫-೪೩೭ ನೋಡುವುದು.

**ಊರ್ಧ್ವಗಮನ :-** ಒಂದು ಸ್ಥಾನದಿಂದ ಇನ್ನೊಂದು ಸ್ಥಾನವನ್ನು ಪ್ರಾಪ್ತಮಾಡಿಕೊಳ್ಳುವ ಯಾವ ಸಾಧನೆಯಿದೆ ಅದಕ್ಕೆ ಗತಿಯೆನ್ನುತ್ತಾರೆ. ಊರ್ಧ್ವಗತಿಯು ಜೀವದ ಸ್ವಭಾವವಿದೆ. ಆದ್ದರಿಂದ ಅದು ಕರ್ಮ ಸಂಪರ್ಕವು ದೂರವಾದೊಡನೆ ಮೇಲ್ಭಾಗದ ಕಡೆಗೇ ಹೋಗುತ್ತದೆ, ಬೇರೆ ಕಡೆ ಹೋಗುವುದಿಲ್ಲ. ಏಕೆಂದರೆ ಸಂಸಾರಾವಸ್ಥೆಯಲ್ಲಿ ಅದರ ಯಾವ ಷಟೋಪಕ್ರಮಗತಿಯು ಕಂಡು ಬರುತ್ತದೆ. ಅದು ಕರ್ಮನಿಮಿತ್ತದಿಂದಾದ ವಿಭಾವವಿದೆ, ಸ್ವಭಾವವಲ್ಲ. ಆದರೆ ಈ ಸ್ವಭಾವವು ಜ್ಞಾನಸ್ವಭಾವದಂತೆ ಯಾವ ತ್ರಿಕಾಲಿ ಸ್ವಭಾವವಲ್ಲ, ಏಕೆಂದರೆ ಸಿದ್ಧಶಿಲೆಯಿಂದ ಮುಂದೆ ಅದರ ಗಮನವು ತಡೆಯಲ್ಪಡುವುದರಿಂದ ಜೀವದ ಅಭಾವದ ಆಶಂಕೆಯುಂಟಾದೀತು.

**ಉದ್ಯೋತ :-** ಉಷ್ಣತೆಯಿಲ್ಲದ ಪ್ರಭೆಗೆ ಉದ್ಯೋತವೆನ್ನುತ್ತಾರೆ. ಇನ್ನು ಯಾವುದರ ನಿಮಿತ್ತದಿಂದ ಶರೀರದಲ್ಲಿ ಉದ್ಯೋತವಾಗುತ್ತದೆ ಅದು ಉದ್ಯೋತನಾಮಕರ್ಮವಿದೆ. ಅದು ಚಂದ್ರಬಿಂಬ ಮತ್ತು ಮಿಂಚುಹುಳ ಮೊದಲಾದವುಗಳಲ್ಲಿ ಆಗುತ್ತದೆ. -ಸರ್ವಾರ್ಥಸಿದ್ಧಿ. ೮/೧೧/೯೧/೫.

**ಉಪಚಾರ :-** ಬೇರೆ ವಸ್ತುವಿನ ಧರ್ಮವನ್ನು ಪ್ರಯೋಜನ ವಶದಿಂದ ಇನ್ನೊಂದು ವಸ್ತುವಿನಲ್ಲಿ ಕಲ್ಪಿಸುವುದು ಉಪಚಾರವಿದೆ. ಹೇಗೆಂದರೆ ಮೂರ್ತ ಪದಾರ್ಥದಿಂದ ಉತ್ಪನ್ನವಾದ ಜ್ಞಾನಕ್ಕೆ ಮೂರ್ತವೆನ್ನುವುದು ಇಲ್ಲವೆ ಮುಖ್ಯದ ಅಭಾವದಲ್ಲಿ ಯಾವುದೇ ಪದಾರ್ಥದ ಸ್ಥಾನದಲ್ಲಿ ಇನ್ನೊಂದನ್ನು ಕಲ್ಪಿಸುವುದು ಉಪಚಾರವಿದೆ. ಹೇಗೆಂದರೆ ಸಂಕ್ಲೇಶ-ಸಂಬಂಧದ ಕಾರಣದಿಂದ ಶರೀರಕ್ಕೇನೇ ಜೀವವೆನ್ನುವುದು ಇಲ್ಲವೆ ನಿಮಿತ್ತವಶದಿಂದ ಯಾವುದೇ ಬೇರೆ ಪದಾರ್ಥಕ್ಕೆ ಇನ್ನೊಂದರದೆನ್ನುವುದು ಉಪಚಾರವಿದೆ. ಹೇಗೆಂದರೆ ಹಾಲಿನ ಕೊಡ ಎನ್ನುವುದು. ಹೀಗೆ ಈ ಉಪಚಾರವು ಒಂದು ದ್ರವ್ಯದ್ದು ಇನ್ನೊಂದು ದ್ರವ್ಯದಲ್ಲಿ, ಒಂದು ಗುಣದ್ದು ಇನ್ನೊಂದು ಗುಣದಲ್ಲಿ, ಒಂದು ಪರ್ಯಾಯದ್ದು ಇನ್ನೊಂದು ಪರ್ಯಾಯದಲ್ಲಿ, ಸ್ವಜಾತೀಯ ದ್ರವ್ಯ-ಗುಣ-ಪರ್ಯಾಯದ್ದು ವಿಜಾತೀಯ ದ್ರವ್ಯ-ಗುಣ-ಪರ್ಯಾಯದಲ್ಲಿ; ಕಾರಣದ್ದು ಕಾರ್ಯದಲ್ಲಿ, ಕಾರ್ಯದ್ದು ಕಾರಣದಲ್ಲಿ ಇವೇ ಮೊದಲಾಗಿ ಅನೇಕ ಪ್ರಕಾರಗಳಿಂದ ಮಾಡುವುದರಲ್ಲಿ ಬರುತ್ತದೆ. ಆದರೂ ಯಥಾರ್ಥ ದೃಷ್ಟಿಯಿಂದ ನೋಡಿದರೆ ಇದು ಅಸತ್ಯವಿದೆ, ಆದಾಗ್ಯೂ ಅಪೇಕ್ಷೆ ಇಲ್ಲವೆ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಒಂದು ವೇಳೆ ಸಮ್ಯಕ್ ಇದೆ

ಇದರಿಂದಲೇ ಉಪಚಾರವನ್ನೂ ಒಂದು ನಯವೆಂದು ಸ್ವೀಕರಿಸಲಾಗಿದೆ. ವ್ಯವಹಾರನಯಕ್ಕೇನೇ ಉಪಚಾರವೆಂದು ಹೇಳಲಾಗುತ್ತದೆ. ವ್ಯವಹಾರ ನಯವು ಸದ್ಭೂತ ಮತ್ತು ಅಸದ್ಭೂತರೂಪದಿಂದ ಎರಡು ಪ್ರಕಾರವಿದೆ, ಅದರಂತೆ ಉಪಚಾರವೂ ಎರಡು ಪ್ರಕಾರವಿದೆ. ಅಭೇದ ವಸ್ತುವಿನಲ್ಲಿ ಗುಣಗುಣಿ ಮೊದಲಾದ ಭೇದ ಮಾಡುವುದು ಭೇದೋಪಚಾರ ಇಲ್ಲವೆ ಅಸದ್ಭೂತ ವ್ಯವಹಾರವಿದೆ. ಭಿನ್ನವಸ್ತುವಿನಲ್ಲಿ ಪ್ರಯೋಜನ ವಶದಿಂದ ಒಂದರ ವ್ಯವಹಾರವು ಅಭೇದೋಪಚಾರ ಇಲ್ಲವೆ ಅಸದ್ಭೂತ ವ್ಯವಹಾರವಿದೆ. ಅಸದ್ಭೂತ ವ್ಯವಹಾರವೇ ಉಪಚಾರವಿದೆ, ಉಪಚಾರದ್ದೂ ಯಾವುದು ಉಪಚಾರ ಮಾಡುತ್ತದೆ ಅದು ಉಪಚರಿತಾಸದ್ಭೂತ ವ್ಯವಹಾರವಿದೆ. -ಆಲಾಪ ಪದ್ಧತಿ-೯.

**ಉಪದೇಶ ः-** ಪಾರಮಾರ್ಥದಿಂದ ಮೋಕ್ಷಮಾರ್ಗದ ಉಪದೇಶವು ಎಲ್ಲಕ್ಕಿಂತ ದೊಡ್ಡ ಉಪಕಾರವಾಗಿದೆ. ಆದರೆ ಇದರ ವಿಷಯವು ಅತ್ಯಂತ ಗುಪ್ತವಾಗಿರುವ ಕಾರಣದಿಂದ ಅಪಾತ್ರಕ್ಕೆ ಕೊಡದೆ ಕೇವಲಪಾತ್ರಕ್ಕೇನೇ ಕೊಡುವುದು ಯೋಗ್ಯವಿದೆ. ಉಪದೇಶದ ಪಾತ್ರತೆಯು ನಿರಭಿಮಾನ, ವಿನಯ ಹಾಗೂ ವಿಚಾರ ಶೀಲತೆಯಲ್ಲಿ ನಿಹಿತವಾಗಿದೆ. ಕಠೋರತೆಯಿಂದ ಕೊಡಲಾಗುವ ಪರಮಾರ್ಥೋಪದೇಶವೂ ಪಾತ್ರದ ಹಿತಕ್ಕಾಗಿಯೇ ಇರುತ್ತದೆ. ಆದುದರಿಂದ ತಮ್ಮ ಸಾಧನೆಯಲ್ಲಿ ವ್ಯತ್ಯಯವುಂಟಾಗದಂತೆ ಉಪದೇಶ ಕೊಡುವುದು ಕರ್ತವ್ಯವಾಗಿದೆ. ಮೊದಲು ಮುನಿಧರ್ಮದ ಅನಂತರ ಗೃಹಸ್ಥಧರ್ಮದ ಉಪದೇಶ ಕೊಡಬೇಕೆಂಬ ನಿಯಮವಿದೆ. ಬುದ್ಧಿವಂತ ಹಾಗೂ ವಿದ್ವಾಂಸರ ಸಭೆಯಲ್ಲಿಯೇ ಜ್ಞಾನ ಮತ್ತು ವಿದ್ವತ್ತೆಯ ಚರ್ಚೆ ಮಾಡಬೇಕು. ಆದರೆ ಮೂರ್ಖರಿಗೆ ಅವರ ಮೂರ್ಖತೆಯನ್ನು ಲಕ್ಷದಲ್ಲಿಟ್ಟುಕೊಂಡೇ ಉತ್ತರ ಕೊಡಬೇಕು. ಇನ್ನು ಹಿತೋಪದೇಶ ಕೊಡುವುದರ ಸರಿದೊರೆಯಾಗಿ ಬೇರಾವ ಪಾರಮಾರ್ಥಿಕ ಉಪಕಾರವೇ ಇಲ್ಲ. ಉಪದೇಶ ಕೇಳುವವರೆಲ್ಲರಿಗೂ ಪುಣ್ಯವಾಗುವುದಿಲ್ಲ. ಆದರೆ ಅನುಗ್ರಹಬುದ್ಧಿಯಿಂದ ಹಿತೋಪದೇಶ ಮಾಡುವವನಿಗೆ ಮಾತ್ರ ನಿಶ್ಚಿತವಾಗಿ ಪುಣ್ಯವು ಆಗೇ ಆಗುತ್ತದೆ.

(ಸ್ಯಾದ್ವಾದಮಂಜರಿ ३-೧४-೨೭-೨४)

**ಉಪಯೋಗ ः-** ಚೈತನ್ಯದ ಪರಿಣತಿ ವಿಶೇಷಕ್ಕೆ ಉಪಯೋಗವೆನ್ನುತ್ತಾರೆ ಚೈತನ್ಯವು ಸಾಮಾನ್ಯ-ಗುಣವಿದ್ದರೆ, ಜ್ಞಾನ-ದರ್ಶನಗಳು ಅದರ ಪರ್ಯಾಯ ಇಲ್ಲವೆ ಅವಸ್ಥೆಗಳಿವೆ ಇವಕ್ಕೇನೇ ಉಪಯೋಗವೆನ್ನುತ್ತಾರೆ. ಈ ಉಪಯೋಗವು ಯಾವಾಗ ಬಾಹ್ಯದಲ್ಲಿ ಶುಭ ಇಲ್ಲವೆ ಅಶುಭ ಪದಾರ್ಥಗಳ ಆಶ್ರಯ ಮಾಡುತ್ತದೆ ಆಗ ಶುಭಾಶುಭ ವಿಕಲ್ಪಗಳ ರೂಪವಾಗಿ ಬಿಡುತ್ತದೆ, ಮತ್ತು ಯಾವಾಗ ಕೇವಲ ಅಂತರಾತ್ಮನ ಆಶ್ರಯ ಮಾಡುತ್ತದೆ. ಆಗ ನಿರ್ವಿಕಲ್ಪವಾಗುವ ಕಾರಣದಿಂದ ಶುದ್ಧವೆನ್ನಿಸಿಕೊಳ್ಳುತ್ತದೆ. ಶುಭಾಶುಭ ಉಪಯೋಗವು ಸಂಸಾರಕ್ಕೆ ಕಾರಣವಿರುವುದರಿಂದ ಪರಮಾರ್ಥದಿಂದ ಹೇಯವಿದೆ ಮತ್ತು ಶುದ್ಧೋಪಯೋಗವು ಮೋಕ್ಷ ಹಾಗೂ ಆನಂದಕ್ಕೆ ಕಾರಣವಾಗಿರುವುದರಿಂದ ಉಪಾದೇಯವಿದೆ. ಇನ್ನು ಜೀವದ ಯಾವ ಭಾವವು ವಸ್ತುವನ್ನು ಗ್ರಹಣ ಮಾಡುವುದಕ್ಕಾಗಿ ಪ್ರವೃತ್ತವಾಗುತ್ತದೆ ಅದನ್ನು ಉಪಯೋಗವೆನ್ನುತ್ತಾರೆ. -ಪ್ರಾಕೃತಪಂಚಸಂಗ್ರಹ ೧-೧೭೮

**ಉಪಶಮ ः-** ಕರ್ಮದ ಉದಯವನ್ನು ಕೆಲ ಸಮಯಕ್ಕಾಗಿ ತಡೆಹಿಡಿಯುವುದಕ್ಕೆ ಉಪಶಮವೆಂದು ಹೇಳಲಾಗುತ್ತದೆ. ಕರ್ಮಗಳ ಉದಯದ ಅಭಾವದ ಕಾರಣದಿಂದ ಅಷ್ಟು ಸಮಯಕ್ಕಾಗಿ ಜೀವದ ಪರಿಣಾಮವು ಅತ್ಯಂತ ಶುದ್ಧವಾಗಿ ಬಿಡುತ್ತದೆ, ಆದರೆ ಅವಧಿಯು ಪೂರ್ಣವಾದ ಮೇಲೆ ಕರ್ಮವು ಪುನಃ ನಿಯಮದಿಂದ ಉದಯಕ್ಕೆ ಬರುತ್ತದೆ ಮತ್ತು ಜೀವದ ಪರಿಣಾಮವು ಪುನಃ ಕುಸಿದು ಬೀಳುತ್ತದೆ. ಉಪಶಮ-ಕರಣದ ಸಂಬಂಧವು ಕೇವಲ ಮೋಹಕರ್ಮ ಹಾಗೂ ತಜ್ಜನ್ಯ ಪರಿಣಾಮಗಳಿಗೇ ಇದೆ. ಜ್ಞಾನ ಮೊದಲಾದ ಉಳಿದ ಭಾವಗಳಿಂದ ಇಲ್ಲ. ಏಕೆಂದರೆ ರಾಗಾದಿ ವಿಕಾರಗಳಲ್ಲಿ ಕ್ಷಣಿಕವಾದ ಏರಿಳಿತಗಳು ಸಂಭವಿಸುತ್ತವೆ. ಕರ್ಮಗಳನ್ನು ಒತ್ತಿಡುವುದಕ್ಕೆ

ಉಪಶಮವೆಂದೂ ಮತ್ತು ಅದರಿಂದ ಉತ್ಪನ್ನವಾದ ಜೀವದ ಶುದ್ಧ ಪರಿಣಾಮಗಳಿಗೆ ಔಪಶಮಿಕ ಭಾವವೆಂದೂ ಹೇಳುತ್ತಾರೆ.

**ಉಪಾದಾನ :-** ದ್ರವ್ಯಗಳಲ್ಲಿ ಶಾಶ್ವತ ಮತ್ತು ಕ್ಷಣಿಕವೆಂದು ಎರಡು ಅಂಶಗಳಿವೆ. ಗುಣವು ಶಾಶ್ವತವಾಗಿರುವ ಕಾರಣದಿಂದ ತನ್ನ ಸ್ವರೂಪವನ್ನು ತ್ರಿಕಾಲದಲ್ಲೂ ಬಿಡುವುದಿಲ್ಲ ಮತ್ತು ಪರ್ಯಾಯವು ಕ್ಷಣಿಕವಾಗಿರುವ ಕಾರಣದಿಂದ ತನ್ನ ಸ್ವರೂಪವನ್ನು ಪ್ರತಿಕ್ಷಣದಲ್ಲೂ ಬಿಡುತ್ತವೆ. ಇವೆರಡೂ ಅಂಶಗಳು ಆ ದ್ರವ್ಯದಿಂದ ಬೇರಾವ ಅರ್ಥಾಂತರ ರೂಪವಾಗಿಲ್ಲ. ಇವೆರಡರಿಂದಲೂ ಕೂಡಿದ ದ್ರವ್ಯವೇ ಕಾರ್ಯದ ಉಪಾದಾನ ಕಾರಣವಿದೆ. ಅರ್ಥಾಂತರಭೂತ ರೂಪದಿಂದ ಸ್ವೀಕರಿಸಲಾದ ಶಾಶ್ವತ ಪದಾರ್ಥವಾಗಲಿ ಇಲ್ಲವೆ ಕ್ಷಣಿಕ ಪದಾರ್ಥವಾಗಲಿ ಎಂದೂ ಉಪಾದಾನ ಕಾರಣವಾಗುವುದಿಲ್ಲ. ಏಕೆಂದರೆ ಸಂಪೂರ್ಣ ಶಾಶ್ವತವಾಗಿರುವ ಪದಾರ್ಥದಲ್ಲಿ ಪರಿಣಮನದ ಅಭಾವವಾಗಿರುವ ಕಾರಣದಿಂದ ಕಾರ್ಯವೇ ಇಲ್ಲವೆಂದಾಗ ಕಾರಣ ಯಾವುದಕ್ಕೆನ್ನುವುದು. ಮತ್ತು ಸಂಪೂರ್ಣ ಕ್ಷಣಿಕವಾದ ಪದಾರ್ಥವು ಪ್ರತಿಕ್ಷಣದಲ್ಲಿ ವಿನಷ್ಟವೇ ಆಗಿಬಿಡುತ್ತದೆಂದ ಮೇಲೆ ಅದಕ್ಕೆ ಕಾರಣತನವು ಹೇಗೆ ಬರುತ್ತದೆ. ಪರಿಣಾಮವು ಕ್ಷಣಿಕ ಉಪಾದಾನವಾದರೆ ಗುಣವು ಶಾಶ್ವತ ಉಪಾದಾನವಿದೆ. -ಅಷ್ಟಸಹಸ್ರೀ ಪುಟ. ೨೧೦

**ಋದ್ಧಿ :-** ತಪಶ್ಚರ್ಯೆಯ ಪ್ರಭಾವದಿಂದ ಎಂದಾದರೂ ಯಾವುದಾದರೂ ಯೋಗಿಜನಗಳಿಗೆ ಕೆಲವು ಚಮತ್ಕಾರಿಕವಾದ ಶಕ್ತಿಗಳು ಪ್ರಾಪ್ತವಾಗುತ್ತವೆ. ಅವನ್ನು ಋದ್ಧಿ ಎನ್ನುತ್ತಾರೆ. ಇದರಲ್ಲಿ ಅನೇಕ ಭೇದ ಪ್ರಭೇದಗಳಿದ್ದರೂ ಮುಖ್ಯವಾಗಿ ಬುದ್ಧಿ, ವಿಕ್ರಿಯೆ, ತಪ, ಬಲ, ಔಷಧ, ರಸ, ಕ್ಷೇತ್ರವೆಂದು ಏಳು ಭಾಗಗಳಾಗುತ್ತವೆ, ೧) ಬುದ್ಧಿಯೆಂದರೆ ಜ್ಞಾನದ ಹೆಸರಿದೆ ಇದನ್ನು ವಿಷಯವನ್ನಾಗಿ ಮಾಡಿದ ಹದಿನೆಂಟು ಋದ್ಧಿಗಳಿವೆ. ೨) ತಪಸ್ಸಿನ ವಿಶೇಷತೆಯಿಂದ ಆಗುವ ಋದ್ಧಿಯು-ವಿಕ್ರಿಯ ಋದ್ಧಿಯು, ಇದು ಅಣಿಮಾ, ಮಹಿಮಾ, ಲಘಿಮಾ ಮೊದಲಾಗಿ ಅನೇಕ ಭೇದಗಳಿಂದ ಕೂಡಿದೆ. ೩) ಕಠಿಣ ತಪಸ್ಸಿನಿಂದ ಉಂಟಾದುದು ತಪಋದ್ಧಿಯು ಇದರಲ್ಲಿ ಉಗ್ರತಪ, ದೀಪ್ತತಪ, ತಪ್ತತಪ, ಮಹಾತಪವೆಂದು ಅನೇಕ ಭೇದ-ಪ್ರಭೇದಗಳಿವೆ. ೪) ಬಲಋದ್ಧಿಯು ಮನ, ವಚನ, ಕಾಯಗಳ ಭೇದದಿಂದ ಮನೋಬಲ, ವಚನಬಲ, ಕಾಯಬಲವೆಂದು ಮೂರು ಪ್ರಕಾರಗಳಿವೆ. ೫) ಅಸಾಧ್ಯವಾದ ಎಲ್ಲ ರೋಗಗಳ ನಿವೃತ್ತಿಗಾಗಿ ಔಷಧಋದ್ಧಿಯು ಆಮರ್ಷ, ಕ್ಷೇಲ, ಜಲ್ಲ ಮೊದಲಾಗಿ ಎಂಟು ಪ್ರಕಾರವಾಗಿವೆ, ೬) ರಸಋದ್ಧಿಯು ಆಶೀವಿಷ, ದೃಷ್ಟಿವಿಷವೆಂದು ಎರಡು ಮತ್ತು ಕ್ಷೀರಸ್ರವಿ, ಅಮೃತಸ್ರವಿ, ಮಧುಸ್ರವಿ ಮತ್ತು ಸರ್ಪಿಸ್ರವಿಯೆಂದು ನಾಲ್ಕು ಹೀಗೆ ಒಟ್ಟು ಆರು ಭೇದಗಳಿಂದ ಕೂಡಿದೆ. ೭) ಮೂರು ಲೋಕಗಳನ್ನು ವಿಸ್ಮಯಗೊಳಿಸುವಂತೆ ಕ್ಷೇತ್ರಋದ್ಧಿಯಲ್ಲಿ ಅಕ್ಷೀಣಮಹಾನಾಸಿಕ ಮತ್ತು ಅಕ್ಷೀಣಮಹಾಲಯವೆಂದು ಎರಡು ಪ್ರಕಾರಗಳಿವೆ. ಲಾಭಾಂತರಾಯಕರ್ಮದ ಕ್ಷಯೋಪಶಮದಿಂದುಂಟಾದ ಋದ್ಧಿಯ ಪ್ರಭಾವದಿಂದ ಮುನಿಯ ಆಹಾರದಿಂದ ಉಳಿದ ಯಾವುದೇ ಪ್ರಿಯವಸ್ತುವನ್ನು ಆ ದಿನ ಚಕ್ರವರ್ತಿಯ ಸಂಪೂರ್ಣ ಸೈನ್ಯಕ್ಕೆ ಹಾಕಿದರೂ ಅದರಲ್ಲಿಂದ ತಿಲ ಮಾತ್ರವೂ ಕಡಿಮೆಯಾಗುವುದಿಲ್ಲ ಅದು ಅಕ್ಷೀಣ ಮಹಾನಾಸಿಕ ಋದ್ಧಿಯಿದೆ.

(ಹೆಚ್ಚಿನ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೧ ರಲ್ಲಿ ಪುಟ ೪೭೫ ರಿಂದ ೪೮೭ ನೋಡಿರಿ)

**ಏಕಕ್ಷೇತ್ರಾವಗಾಹ :-** ವರ್ತಮಾನ ಕಾಲದ ವಿಷಯವಾಗಿರುವ ನಿವಾಸಕ್ಕೆ ಕ್ಷೇತ್ರವೆನ್ನುತ್ತಾರೆ. ಮತ್ತು ಆತ್ಮಪ್ರದೇಶದಲ್ಲಿ ವ್ಯಾಪ್ತವಾಗಿರುವುದಕ್ಕೆ ಅವಗಾಹವೆನ್ನುತ್ತಾರೆ. ಈ ಅವಗಾಹಕ್ಷೇತ್ರವು ಒಂದು, ಎರಡು, ಮೂರು, ನಾಲ್ಕು, ಸಂಖ್ಯಾತ; ಅಸಂಖ್ಯಾತ ಮತ್ತು ಅನಂತ ಪ್ರದೇಶವುಳ್ಳ ಪುದ್ಗಲ ದ್ರವ್ಯಕ್ಕೆ ಅವಗಾಹ ಕೊಡುವಂಥ ಆಕಾಶ ಪ್ರದೇಶಗಳ ದೃಷ್ಟಿಯಿಂದ ಅನೇಕ ಪ್ರಕಾರವಾಗಿದೆ. - ರಾಜವಾರ್ತಿಕ ೩/೩೮/೭/೨೦೮/೩೦

**ಏಷಣಾ :-** ಅಶನ, ಪಾನ, ಖಾದ್ಯ ಮತ್ತು ಸ್ವಾದ್ಯ ಇವುಗಳ ಹೆಸರು ಏಷಣಾಯಿದೆ.

-ಧವಲ. ೧೩/೫, ೪, /೨೬/೫೫/೨

**ಔದಯಿಕಭಾವ :-** ಯಾವುದರ ಪ್ರಯೋಜನವು ಉದಯವೇ ಇದೆ ಅದು ಔದಯಿಕ ಭಾವವಿದೆ. ಯಾವುದು ಕರ್ಮಗಳ ಉದಯದಿಂದ ಉತ್ಪನ್ನವಾಗುತ್ತದೆ ಅದನ್ನು ಔದಯಿಕ ಭಾವವೆನ್ನುತ್ತಾರೆ. ಇದರಲ್ಲಿ ಗತಿ ನಾಲ್ಕು, ಕಷಾಯ ನಾಲ್ಕು, ಲಿಂಗ ಮೂರು, ಮಿಥ್ಯಾದರ್ಶನ ಒಂದು, ಅಜ್ಞಾನ ಒಂದು, ಅಸಂಯಮ ಒಂದು, ಅಸಿದ್ಧಭಾವ ಒಂದು ಮತ್ತು ಲೇಶ್ಯೆಗಳು ಆರು, ಹೀಗೆ ಒಟ್ಟು ಇಪ್ಪತ್ತೊಂದು ಭೇದಗಳಿವೆ. ನಿಜವಾಗಿ ಮೋಹ ಜನ್ಯವಾದ ಭಾವಗಳೇ ಔದಯಿಕವಾಗಿವೆ, ಉಳಿದುವೆಲ್ಲ ಕ್ಷಾಯಿಕ ಭಾವಗಳು ಮತ್ತು ಔದಯಿಕ ಭಾವಗಳೇ ಬಂಧಕ್ಕೆ ಕಾರಣವಾಗಿವೆ, ಉಳಿದುವಿಲ್ಲ. ಆದ್ದರಿಂದ ಮೋಹ ಮೊದಲಾದ ಘಾತಿ ಮತ್ತು ಅಘಾತಿ ಕರ್ಮಗಳ ಉದಯದಿಂದ ಆತ್ಮನಲ್ಲಿ ಅದೆಷ್ಟು ಭಾವಗಳಾಗುತ್ತವೋ ಅವೆಲ್ಲವೂ ಔದಯಿಕ ಭಾವಗಳೇ ಆಗಿವೆ. ಆದರೆ ಈ ಭಾವಗಳಲ್ಲೂ ಮೋಹಜನ್ಯ ವಿಕೃತ ಭಾವಗಳೇ ನಿಜವಾಗಿ ವಿಕಾರಯುಕ್ತ ಭಾವಗಳಾಗಿವೆ, ಮತ್ತು ಉಳಿದುವೆಲ್ಲ ಲೋಕರೂಢಿಯಿಂದ ವಿಕಾರಯುಕ್ತ ಔದಯಿಕ ಭಾವಗಳಾಗಿವೆಯೆಂದು ತಿಳಿಯಬೇಕು.

-ಪಂಚಾಧ್ಯಾಯಿ ೧೦೨೪-೧೦೨೫

**ಕರ್ಮ :-** ಯಾವುದು ಜೀವವನ್ನು ಪರತಂತ್ರ ಮಾಡುತ್ತದೆ, ಇಲ್ಲವೆ ಯಾವುದರ ಮುಖಾಂತರ ಜೀವವು ಪರತಂತ್ರವಾಗುತ್ತದೆ ಅದನ್ನು ಕರ್ಮವೆಂದು ಹೇಳುತ್ತಾರೆ. ಅಥವಾ ಜೀವದ ಮುಖಾಂತರ ಮಿಥ್ಯಾದರ್ಶನ ಮೊದಲಾದ ಪರಿಣಾಮಗಳಿಂದ ಯಾವುದನ್ನು ಮಾಡಲಾಗುತ್ತದೆ, ಉಪಾರ್ಜಿತವಾಗುತ್ತದೆ ಅದು ಕರ್ಮವಿದೆ.

**ಕರ್ಮಚೇತನ ಹಾಗೂ ಕರ್ಮಫಲ ಚೇತನ :-** ಜ್ಞಾನದಿಂದ ಬೇರೆಯಾದ ಎಂದರೆ 'ಇದನ್ನು ನಾನು ಮಾಡುತ್ತೇನೆ'ಂದು ಅನುಭವ ಮಾಡುವುದಕ್ಕೆ ಕರ್ಮಚೇತನವೆನ್ನುತ್ತಾರೆ. ಮತ್ತು ಜ್ಞಾನದಿಂದ ಬೇರೆಯಾದ ಎಂದರೆ 'ಇದನ್ನು ನಾನು ಭೋಗಿಸುತ್ತೇನೆ'ಂದು ಅನುಭವ ಮಾಡುವುದಕ್ಕೆ ಕರ್ಮಫಲಚೇತನವೆನ್ನುತ್ತಾರೆ. ಅಲ್ಲದೆ ಬುದ್ಧಿಪೂರ್ವಕವಾದ ಇಷ್ಟಾನಿಷ್ಟಗಳ ವಿಕಲ್ಪರೂಪದಿಂದ ಯಾವ ರಾಗ-ದ್ವೇಷರೂಪವಾದ ವಿಶೇಷ ಪರಿಣಾಮಗಳಿವೆ ಅದು ಕರ್ಮಫಲಚೇತನವಿದೆ. - ಸಮಯಸಾರ-ಆತ್ಮಖ್ಯಾತಿ ೩೮೭

**ಕಲ್ಪಕಾಲ :-** ಉತ್ಸರ್ಪಿಣಿ ಮತ್ತು ಅವಸರ್ಪಿಣಿಗಳೆಂಬೆರಡು ಕಾಲಗಳು ಕೂಡಿದರೆ ಒಂದು ಕಲ್ಪಕಾಲವಾಗುತ್ತದೆ. ಇದು ಇಪ್ಪತ್ತು ಕೋಟಾಕೋಟಿ ಸಾಗರೋಪಮ ಪ್ರಮಾಣವಾಗಿರುತ್ತದೆ.

**ಕಷಾಯ :-** ಆತ್ಮನ ಒಳಗಿರುವ ಕಲುಷಿತ ಪರಿಣಾಮಗಳಿಗೆ ಕಷಾಯವೆಂದು ಹೇಳುತ್ತಾರೆ. ಆದಾಗ್ಯೂ ಕ್ರೋಧ, ಮಾನ, ಮಾಯೆ, ಲೋಭ ಈ ನಾಲ್ಕೇ ಕಷಾಯಗಳು ಪ್ರಸಿದ್ಧವಾಗಿವೆ. ಆದರೆ ಇವುಗಳಲ್ಲದೆಯೂ ಅನೇಕ ಪ್ರಕಾರದ ಕಷಾಯಗಳ ನಿರ್ದೇಶನವು ಆಗಮಗಳಲ್ಲಿ ದೊರೆಯುತ್ತದೆ. ಹಾಸ್ಯ , ರತಿ, ಅರತಿ, ಶೋಕ, ಭಯ, ಜುಗುಪ್ಸೆ ಮತ್ತು ಮೈಥುನ ಈ ಭಾವಗಳಿಗೆ ನೋಕಷಾಯವೆಂದು ಹೇಳಲಾಗುತ್ತದೆ, ಏಕೆಂದರೆ ಕಷಾಯಗಳಂತೆ ವ್ಯಕ್ತವಾಗುವುದಿಲ್ಲ. ಇವೆಲ್ಲವುಗಳನ್ನೂ ರಾಗ-ದ್ವೇಷಗಳಲ್ಲಿ ಸಮಾವೇಶ ಮಾಡಲಾಗುತ್ತದೆ. ಆತ್ಮ ಸ್ವರೂಪವನ್ನು ಘಾತ ಮಾಡುವ ಕಾರಣದಿಂದ ಕಷಾಯವೇ ಹಿಂಸೆಯಿದೆ. ಮಿಥ್ಯಾತ್ವವು ಎಲ್ಲಕ್ಕಿಂತ ದೊಡ್ಡ ಕಷಾಯವಿದೆ.

**ಕೃತಕೃತ್ಯ ವೇದಕ :-** ದರ್ಶನಮೋಹನೀಯ ಕರ್ಮವನ್ನು ನಾಶ ಮಾಡುವಂಥ ಯಾವುದೇ ಒಂದು ಜೀವವು ಏಳನೆಯ ಗುಣಸ್ಥಾನದ ಕೊನೆಯ ಸಾತಿಶಯ ಭಾಗದಲ್ಲಿ ಕರ್ಮಗಳ ಸ್ಥಿತಿಯನ್ನೂ ಕಾಂಡಕಘಾತ ಮಾಡುತ್ತದೆ

ಇಲ್ಲ ಕೊನೆಯ ಸ್ಥಿತಿಕಾಂಡಕದ ಸಮಾನವಾದ ಮೇಲೆ ಅದು ಕೃತಕೃತ್ಯವೇದಕವೆನ್ನಿಸಿಕೊಳ್ಳುತ್ತದೆ. ಈ ಕೃತಕೃತ್ಯವೇದಕ ಕಾಲದಲ್ಲಿ ಅವನ ಮರಣವಾಗಲಿ, ಕಾಪೋತ, ತೇಜ, ಪದ್ಮ ಮತ್ತು ಶುಕ್ಲ ಲೇಶ್ಯೆಗಳಲ್ಲಿ ಯಾವುದೇ ಒಂದು ಲೇಶ್ಯೆಯಿಂದ ಪರಿಣಮಿಸುತ್ತಿರಲಿ, ಸಂಕ್ಲೇಶ ಅಥವಾ ವಿಶುದ್ಧಿಗೆ ಪ್ರಾಪ್ತವಾಗಿದ್ದರೂ ಅಸಂಖ್ಯಾತ ಗುಣಿತ ಶ್ರೇಣಿಯಿಂದ ಎಲ್ಲಿಯವರೆಗೆ ಒಂದು ಸಮಯ ಹೆಚ್ಚಾದ ಆವಲಿ ಕಾಲವು ಬಾಕಿ ಉಳಿದಿರುತ್ತದೆ. ಅದುವರೆಗೆ ಅಸಂಖ್ಯಾತ ಸಮಯದವರೆಗೆ ಪ್ರಬದ್ಧಗಳ ಉದೀರಣಾ ಆಗುತ್ತಿರುತ್ತದೆ. (ಧವಲ.೬/೧,೯-೮,೧೨/೨೬೩-೧)

**ಕೃಷ್ಣಲೇಶ್ಯೆ :-** ಕೃಷ್ಣಲೇಶ್ಯೆಯಿಂದ ಯುಕ್ತನಾದ ದುಷ್ಟ ಮನುಷ್ಯನು ತನ್ನ ವಂಶಜರನ್ನೂ ಮತ್ತು ತನ್ನ ಏಕ ಮಾತ್ರ ಪತ್ನಿಯನ್ನೂ ಕೊಲ್ಲಲು ಇಚ್ಛೆಪಡುತ್ತಾನೆ. ದಯಾಧರ್ಮಗಳಿಂದ ರಹಿತನಾದಂಥವನೂ, ವೈರವನ್ನೆಂದೂ ಬಿಡದಂಥವನೂ ಪ್ರಚಂಡ ಕಲಹ ಮಾಡುವಂಥವನೂ ಮತ್ತು ಕ್ರೋಧಿಯೂ ಆದ ಜೀವನು ಕೃಷ್ಣಲೇಶ್ಯೆಯಿಂದ ಧೂಮಪ್ರಭ ಪೃಥ್ವಿಯಿಂದ ಹಿಡಿದು ಕೊನೆಯ ಪೃಥ್ವಿಯವರೆಗೆ ಜನ್ಮ ಸ್ವೀಕರಿಸುತ್ತಾನೆ.(ತ್ರಿಲೋಯಪಣ್ಣತ್ತಿ. ೨/೨೬೫,೨೬೬)

**ಕೇವಲಜ್ಞಾನ :-** ಕೇವಲ ಶಬ್ದವು ಅಸಹಾಯವಾಚಿಯಾಗಿರುವುದರಿಂದ ಅಸಹಾಯಜ್ಞಾನಕ್ಕೆ ಕೇವಲಜ್ಞಾನ ವೆನ್ನುತ್ತಾರೆ. ಜೀವನ್ಮುಕ್ತರಾದ ಯೋಗಿಗಳಿಗೆ ಒಂದು ನಿರ್ವಿಕಲ್ಪವಾದ, ಅತೀಂದ್ರಿಯವಾದ ಅತಿಶಯ ಜ್ಞಾನವಿದೆ, ಅದು ಇಚ್ಛೆ ಹಾಗೂ ಬುದ್ಧಿಯ ಪ್ರಯೋಗವಿಲ್ಲದೆ ಸರ್ವಾಂಗದಿಂದ ಎಲ್ಲ ಕ್ಷೇತ್ರ ಹಾಗೂ ಎಲ್ಲ ಕಾಲ ಸಂಬಂಧವಾಗಿ ಎಲ್ಲ ಪದಾರ್ಥಗಳನ್ನು ಅಂಗೈನೆಲ್ಲಿಯಂತೆ ಪ್ರತ್ಯಕ್ಷ ನೋಡುತ್ತದೆ. ಇದೇ ಕಾರಣದಿಂದ ಆ ಯೋಗಿಗಳು ಸರ್ವಜ್ಞರೆನಿಸಿ ಕೊಳ್ಳುತ್ತಾರೆ. ಸ್ವ ಹಾಗೂ ಪರಗ್ರಾಹಿಯಾಗಿರುವ ಕಾರಣದಿಂದ ಇದರಲ್ಲೂ ಜ್ಞಾನದ ಸಾಮಾನ್ಯ ಲಕ್ಷಣವು ಸಂಭವಿಸುತ್ತದೆ. ಇದು ಜ್ಞಾನದ ಸ್ವಾಭಾವಿಕ ಹಾಗೂ ಶುದ್ಧವಾದ ಪರಿಣಮನವಿದೆ. ಕೇವಲಜ್ಞಾನವು ಒಂದೇ ಪ್ರಕಾರದ್ದಿರುತ್ತದೆ. ಏಕೆಂದರೆ ಅದು ಕರ್ಮಕ್ಷಯದಿಂದ ಉಂಟಾಗುವಂಥದ್ದಿದೆ, ತಮ್ಮ ಆತ್ಮನನ್ನು ತಿಳಿಯುವುದರಿಂದ ಈ ಮೂರು ಲೋಕವೂ ತಿಳಿಯಲ್ಪಡುತ್ತದೆ. ಏಕೆಂದರೆ ಅದು ಆತ್ಮನ ಭಾವರೂಪವಾದ ಕೇವಲ ಜ್ಞಾನದಲ್ಲಿ ಪ್ರತಿಬಿಂಬಿತವಾಗಿ ಆಧೀನವಾಗಿದೆ. ಕೇವಲೀ ಭಗವಂತರು ಕೇವಲಜ್ಞಾನವೆಂಬ ಹೆಸರುಳ್ಳ ಪ್ರತ್ಯಕ್ಷ ಜ್ಞಾನದಿಂದ ಎಲ್ಲ ದ್ರವ್ಯಗಳನ್ನು ಮತ್ತು ಎಲ್ಲ ಪರ್ಯಾಯಗಳನ್ನು ತಿಳಿಯುತ್ತಾರೆ. ಆದರೆ ಆಗಮ ಮೊದಲಾದ ಯಾವ ಜ್ಞಾನದಿಂದಲ್ಲ. -ಅಷ್ಟಶತಿ.ಕಾ.೧೦೬

**ಗಣಧರ :-** ಐದು ಮಹಾವ್ರತಗಳನ್ನು ಧರಿಸಿದವರು, ಮೂರುಗುಪ್ತಿಗಳನ್ನು ಪಾಲಿಸುವವರು, ಐದು ಸಮಿತಿಗಳಿಂದ ಯುಕ್ತರು ಎಂಟು ಮದಗಳಿಂದ ರಹಿತರು, ಏಳು ಭಯಗಳಿಂದ ಮುಕ್ತರು, ಉತ್ಕೃಷ್ಟ ಅವಧಿ ಜ್ಞಾನದಿಂದ ಯುಕ್ತರು, ತಪ್ತಾತಪಲಬ್ಧಿಯ ಪ್ರಭಾವದಿಂದ ಮಲ, ಮೂತ್ರ ರಹಿತರು, ದೀಪ್ತತಪಲಬ್ಧಿಯ ಬಲದಿಂದ ಸರ್ವಕಾಲ ಉಪವಾಸವಿದ್ದೂ ಶರೀರದ ಪ್ರಭೆಯಿಂದ ಹತ್ತೂ ದಿಕ್ಕುಗಳನ್ನು ಪ್ರಕಾಶಿತಗೊಳಿಸುವಂಥವರು, ಸರ್ವೌಷಧಿ ಲಬ್ಧಿಯ ನಿಮಿತ್ತದಿಂದ ಸಮಸ್ತ ಔಷಧಗಳ ಸ್ವರೂಪರು, ಮಹಾತಪಗುಣದಿಂದ ಕಲ್ಪವೃಕ್ಷ ಸಮಾನರು, ಅಕ್ಷೀಣಮ ಹಾನಸಲಬ್ಧಿಯ ಬಲದಿಂದ ತಮ್ಮ ಕೈಯಲ್ಲಿ ಬಿದ್ದ ಆಹಾರವನ್ನು ಅಕ್ಷಯವನ್ನಾಗಿ ಮಾಡುವಂಥವರು, ಅಘೋರ ತಪಋದ್ಧಿಯ ಮಹಾತ್ಮ್ಯದಿಂದ ಜೀವಗಳ ಮನ, ವಚನ, ಕಾಯಗತವಾದ ಸಮಸ್ತ ಕಷ್ಟಗಳನ್ನು ದೂರಮಾಡು ವಂಥವರು, ಮೂರೂ ಲೋಕದ ಜನಗಳಲ್ಲಿ ಶ್ರೇಷ್ಠರು, ಪರರ ಉಪದೇಶವಿಲ್ಲದೆ ಅಕ್ಷರ-ಅನಕ್ಷರ ರೂಪವಾದ ಎಲ್ಲ ಭಾಷೆಗಳಲ್ಲಿ ಕುಶಲರು, ಸಮವಸರಣದಲ್ಲಿರುವ ಜನ ಮಾತ್ರರ ರೂಪಗಳನ್ನು ಧರಿಸುವುದರಿಂದ ನಮ್ಮ ನಮ್ಮ ಭಾಷೆಗಳಲ್ಲಿ ನಮ-ನಮಗೆ ಹೇಳುವಂತೆ ಎಲ್ಲರಲ್ಲೂ ವಿಶ್ವಾಸ ಹುಟ್ಟಿಸುವಂಥವರು ಮತ್ತು ಸಮವಸರಣದಲ್ಲಿರುವ ಜನರ ಕರ್ಣೇಂದ್ರಿಯಗಳಲ್ಲಿ ತಮ್ಮ ಮುಖದಿಂದ ಹೊರಟಂಥ ಅನೇಕ ಭಾಷೆಗಳ ಸಮ್ಮಿಶ್ರಿತ ಪ್ರವೇಶದ ನಿವಾರಕರಾದಂಥವರು ಗಣಧರರೆನಿಸುತ್ತಾರೆ.

**ಗುಣಶ್ರೇಣೀ ನಿರ್ಜರೆ :-** ಗುಣಶಬ್ದದ ಅರ್ಥವು ಗುಣಾಕಾರವಿದೆ. ಮತ್ತು ಅದರ ಶ್ರೇಣಿ ಎಂದರೆ ಪಂಕ್ತಿಯ ಹೆಸರು ಗುಣಶ್ರೇಣಿಯಿದೆ. ದರ್ಶನಮೋಹವನ್ನು ಉಪಶಮ ಮಾಡುವಂಥ ಜೀವಕ್ಕೆ ಮೊದಲ ಸಮಯದಲ್ಲಿ ನಿರ್ಜರೆಗೆ ಪ್ರಾಪ್ತವಾಗುವಂಥ ದ್ರವ್ಯವು ಸ್ತೋಕವಿದೆ. ಅದರ ಎರಡನೆಯ ಸಮಯದಲ್ಲಿ ನಿರ್ಜರೆಗೆ ಪ್ರಾಪ್ತವಾದ ದ್ರವ್ಯವು ಅಸಂಖ್ಯಾತ ಗುಣಿತವಿದೆ. ಅದರ ಮೂರನೆಯ ಸಮಯದಲ್ಲಿ ನಿರ್ಜರೆಗೆ ಪ್ರಾಪ್ತವಾದ ದ್ರವ್ಯವು ಅಸಂಖ್ಯಾತ ಗುಣಿತವಿದೆ. ಈ ಪ್ರಕಾರವಾಗಿ ದರ್ಶನಮೋಹದ ಕೊನೆಯ ಸಮಯದವರೆಗೆ ಕೊಂಡೊಯ್ಯಬೇಕು. ಈ ಗುಣಾಕಾರ ಪಂಕ್ತಿಯು ಗುಣಶ್ರೇಣಿಯಿದೆ. ಮತ್ತು ಈ ಗುಣಶ್ರೇಣಿರೂಪದಲ್ಲಿ ನಿರ್ಜರೆಯಾಗುವುದು ಗುಣಶ್ರೇಣಿನಿರ್ಜರೆಯಿದೆ.

-ಧವಲ. ೧೨/೪, ೨, ೭, ೧೭೫/೮೦/೬

**ಗುಣಸ್ಥಾನ :-** ಮೋಹ ಮತ್ತು ಮನ, ವಚನ, ಕಾಯಗಳ ಪ್ರವೃತ್ತಿಯ ಕಾರಣದಿಂದಾಗಿ ಜೀವದ ಅಂತರಂಗ ಪರಿಣಾಮಗಳಲ್ಲಿ ಪ್ರತಿಕ್ಷಣದಲ್ಲಿ ಆಗುವಂಥ ಪರಿಣಾಮಗಳ ಏರಿಳಿಕೆಯ ಹೆಸರು ಗುಣಸ್ಥಾನವಿದೆ.

**ಗುಣಸಂಕ್ರಮಣ :-** ಯಾವ ಸ್ಥಾನದಲ್ಲಿ ಪ್ರತಿಯೊಂದು ಸಮಯಕ್ಕೆ ಪರಮಾಣು ಪ್ರದೇಶವು ಅಸಂಖ್ಯಾತ ಗುಣಶ್ರೇಣೀ ಕ್ರಮದಿಂದ ಬೇರೆ ಪ್ರಕೃತಿರೂಪವಾಗಿ ಪರಿಣಮಿಸುತ್ತದೆ ಅದು ಗುಣಸಂಕ್ರಮಣವಿದೆ. ಗುಣಸಂಕ್ರಮಣವು ತನ್ನ ಯೋಗ್ಯ ಸಮಯದಲ್ಲಾಗುತ್ತದೆ. ಅಪೂರ್ವಕರಣದ ಮೊದಲನೆಯ ಸಮಯದಲ್ಲಿ ಆಗುವುದಿಲ್ಲ ಯಾವುದು ಅಸಂಖ್ಯಾತಗುಣಿತ ಕ್ರಮಕ್ಕಾಗಿ ಆಗುತ್ತದೆ ಅದಕ್ಕೆ ಗುಣಸಂಕ್ರಮಣವೆನ್ನುತ್ತಾರೆ. ಅನಂತಾನುಬಂಧೀ ಕಷಾಯಗಳ ಗುಣಸಂಕ್ರಮಣವು ಅವುಗಳ ವಿಸಂಯೋಜನೆಯಲ್ಲಿ ಆಗುತ್ತದೆ. ಮಿಥ್ಯಾತ್ವ ಮತ್ತು ಮಿಥ್ಯಾಪ್ರಕೃತಿಯ ಗುಣಸಂಕ್ರಮಣವು ಅವುಗಳ ಕ್ಷಯದಲ್ಲಾಗುತ್ತದೆ. ಮತ್ತು ಉಳಿದ ಪ್ರಕೃತಿಗಳ ಗುಣಸಂಕ್ರಮಣವು ಉಪಶಮ ಇಲ್ಲವೆ ಕ್ಷಪಕ ಶ್ರೇಣಿಯಲ್ಲಾಗುತ್ತದೆ. - ಲಬ್ಧಿಸಾರ. ಜೀ. ಪ್ರ. ೭೫-೭೬-೧೦೯-೧೧೦-೧

**ಗುಪ್ತಿ :-** ಮನ, ವಚನ, ಕಾಯಗಳ ಪ್ರವೃತ್ತಿಯನ್ನು ನಿರೋಧಿಸಿ ಕೇವಲ ಜ್ಞಾತಾ-ದೃಷ್ಟಾ ಭಾವದಿಂದ ನಿಶ್ಚಯಸಮಾಧಿಯನ್ನು ಧರಿಸುವುದು ಪೂರ್ಣಗುಪ್ತಿಯಿದೆ. ಇನ್ನು ಕೆಲವು ಶುಭರಾಗ ಮಿಶ್ರಿತವಾದ ವಿಕಲ್ಪ ಹಾಗೂ ಪ್ರವೃತ್ತಿಗಳಿಂದ ಕೂಡಿ ಯಥಾ ಶಕ್ತಿಯಾಗಿ ಸ್ವರೂಪದಲ್ಲಿ ನಿಮಗ್ನನಿರುವುದು ಅಂಶಿಕಗುಪ್ತಿಯಿದೆ. ಪೂರ್ಣಗುಪ್ತಿಯು ಪೂರ್ಣನಿವೃತ್ತಿರೂಪವಾಗಿರುವ ಕಾರಣದಿಂದ ಅದು ನಿಶ್ಚಯಗುಪ್ತಿಯಿದೆ, ಮತ್ತು ಅಂಶಿಕಗುಪ್ತಿಯು ಪ್ರವೃತ್ತಿಯ ಅಂಶದೊಡನೆ ವರ್ತಿಸುವ ಕಾರಣದಿಂದ ವ್ಯವಹಾರಗುಪ್ತಿಯಿದೆ.

**ಗೃಹೀತ-ಅಗೃಹೀತ ಮಿಥ್ಯಾತ್ವ :-** ಎರಡನೆಯವರ ಉಪದೇಶ ಕೇಳಿ ಜೀವ ಮೊದಲಾದವುಗಳ ಅಸ್ತಿತ್ವದಲ್ಲಿ ಅಥವಾ ಅವುಗಳ ಧರ್ಮಗಳಲ್ಲಿ ಅಶ್ರದ್ಧೆಯಾಗುತ್ತದೆ ಅದು **ಗೃಹೀತಮಿಥ್ಯಾತ್ವ**ವಿದೆ ಮತ್ತು ಎರಡನೆಯವರ ಉಪದೇಶವಿಲ್ಲದೆಯೇ ಮಿಥ್ಯಾತ್ವಕರ್ಮದ ಉದಯದಿಂದ ಯಾವ ಅಶ್ರದ್ಧೆಯುಂಟಾಗುತ್ತದೆ ಅದು **ಅಗೃಹೀತ ಮಿಥ್ಯಾತ್ವವಿದೆ.** - ಭ. ಆರಾಧನೆ. ೪೩/೧೪೦/೨೨

**ಘಾತಿಕರ್ಮ :-** ಕೇವಲಜ್ಞಾನ, ಕೇವಲದರ್ಶನ, ಸಮ್ಯಕ್ತ್ವ, ಚಾರಿತ್ರ ಮತ್ತು ವೀರ್ಯರೂಪವಾದ ಯಾವ ಅನೇಕ ಭೇದ-ಭಿನ್ನವಾದ ಜೀವಗುಣಗಳಿವೆ ಅವನ್ನು ಯಾವ ಕರ್ಮವು ವಿರೋಧ ಎಂದರೆ ಘಾತ ಮಾಡುತ್ತದೆ ಅದನ್ನು ಘಾತಿಕರ್ಮವೆಂದು ಹೇಳಲಾಗುತ್ತದೆ.

**ಚಾರಿತ್ರ :-** ಮೋಕ್ಷಮಾರ್ಗದಲ್ಲಿ ಚಾರಿತ್ರವು ಒಂದು ಪ್ರಧಾನ ಅಂಗವಿದೆ. ಅಭಿಪ್ರಾಯದಲ್ಲಿ ಸಮ್ಯಕ್ ಇಲ್ಲವೆ ಮಿಥ್ಯೆಯಾಗುವುದರಿಂದ ಚಾರಿತ್ರವು ಸಮ್ಯಕ್ ಇಲ್ಲವೆ ಮಿಥ್ಯೆಯಾಗಿ ಬಿಡುತ್ತದೆ. ನಿಶ್ಚಯ-ವ್ಯವಹಾರ,

ಸರಾಗ-ವೀತರಾಗ, ಸ್ವ-ಪರ ಮೊದಲಾದ ಭೇದಗಳಿಂದ ಅದನ್ನು ಅನೇಕ ಪ್ರಕಾರಗಳಿಂದ ನಿರ್ದಿಷ್ಟ ಮಾಡಲಾಗುತ್ತದೆ. ಆದರೆ ವಾಸ್ತವಿಕವಾಗಿ ಆ ಎಲ್ಲ ಭೇದ-ಪ್ರಭೇದಗಳು ಒಂದಿಲ್ಲೊಂದು ರೀತಿಯಿಂದ ಒಂದು ವೀತರಾಗ ಸ್ವರೂಪವಾದ ನಿಶ್ಚಯಚಾರಿತ್ರದ ಗರ್ಭದಲ್ಲಿ ಸಮಾವೇಶವಾಗುತ್ತವೆ. ಜ್ಞಾತಾ, ದೃಷ್ಟಾ ಮಾತ್ರವಾದ ಸಾಕ್ಷೀ ಭಾವವು ಇಲ್ಲವೆ ಸಮತೆಯ ಹೆಸರು ವೀತರಾಗತೆಯಿದೆ. ಪ್ರತಿಯೊಂದು ಚಾರಿತ್ರದಲ್ಲಿ ಅದರ ಅಂಶವು ಅವಶ್ಯವಾಗಿರುತ್ತದೆ, ಸಂಪೂರ್ಣವಾಗಿ ಅದರ ಲೋಪವಾದ ಮೇಲೆ ಕೇವಲ ಬಾಹ್ಯವಸ್ತುಗಳ ತ್ಯಾಗ ಮೊದಲಾದವು ಚಾರಿತ್ರವೆಂಬ ಸಂಜ್ಞೆಗೆ ಪ್ರಾಪ್ತವಾಗುವುದಿಲ್ಲ. ಆದರೆ ಬಾಹ್ಯವ್ರತ, ತ್ಯಾಗ ಮೊದಲಾದವು ಪೂರ್ಣ ನಿರರ್ಥಕವೆಂದು ಇದರ ಅರ್ಥವಲ್ಲ.

(ವಿಶೇಷ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೨ ರಲ್ಲಿ ಪುಟ ೨೮೦ ರಿಂದ ೨೯೪ ನೋಡಿರಿ)

**ಚಾರಿತ್ರಮೋಹನೀಯ :-** ಪಾಪರೂಪವಾದ ಕ್ರಿಯೆಗಳ ನಿವೃತ್ತಿಗೆ ಚಾರಿತ್ರವೆನ್ನುತ್ತಾರೆ. ಮಿಥ್ಯಾತ್ವ ಅಸಂಯಮ, ಕಷಾಯ ಇವು ಪಾಪದ ಕ್ರಿಯೆಗಳಾಗಿವೆ. ಈ ಪಾಪ ಕ್ರಿಯೆಗಳ ಅಭಾವಕ್ಕೆ ಚಾರಿತ್ರವೆನ್ನುತ್ತಾರೆ, ಆ ಚಾರಿತ್ರವನ್ನು ಯಾವುದು ಮೋಹಗೊಳಿಸುತ್ತದೆ. ಎಂದರೆ ಆಚ್ಛಾದನೆ ಮಾಡುತ್ತದೆ ಅದನ್ನು ಚಾರಿತ್ರಮೋಹನೀಯವೆನ್ನುತ್ತಾರೆ.

**ಚೈತ್ಯ :-** ಬಂಧ, ಮೋಕ್ಷ, ಸುಖ, ದುಃಖಗಳನ್ನು ಭೋಗಿಸುವಂಥ ಆತ್ಮನು ಚೈತ್ಯನಿದ್ದಾನೆ. ಯಾರ ಆಚರಣೆಯು ದರ್ಶನ ಜ್ಞಾನಗಳಿಂದ ಶುದ್ಧವಾಗಿದೆ ಅಂಥ ವೀತರಾಗ ನಿರ್ಗ್ರಂಥ ಸಾಧುವಿನ ದೇಹವು ಅವನ ಆತ್ಮನಿಂದ ಬೇರೆಯಾಗಿರುವ ಕಾರಣದಿಂದ ಜಿನಮಾರ್ಗದಲ್ಲಿ ಜಂಗಮ ಪ್ರತಿಮೆಯೆಂದು ಹೇಳಲಾಗುತ್ತದೆ. ಇನ್ನು ವ್ಯವಹಾರದಿಂದ ಚಂದನ, ಕನಕ, ಮಹಾಮಣಿ, ಸ್ಪಟಿಕ ಮೊದಲಾದವುಗಳಿಂದ ನಿರ್ಮಿಸಿದವು ಸ್ಥಾವರಪ್ರತಿಮೆಗಳಾಗಿವೆ. ಮತ್ತು ಸಮವಸರಣದಲ್ಲಿ ಮಂಡಿಸಿದ ಅರಹಂತ ಪ್ರಭುಗಳು ಜಂಗಮ ಜಿನಪ್ರತಿಮೆಯಾಗಿದ್ದಾರೆ.

**ಚೈತ್ಯಾಲಯ :-** ತನ್ನ ಹಾಗೂ ಪರರ ಆತ್ಮಗಳನ್ನು ತಿಳಿಯುವಂಥ ಜ್ಞಾನಿಯಾದ ಆತ್ಮನು ಯಾವುದರಲ್ಲಿ ವಾಸಮಾಡುತ್ತಾನೆ ಅಂಥ ಪಂಚ ಮಹಾವ್ರತಗಳಿಂದ ಸಂಯುಕ್ತವಾದ ಮುನಿಯು ಚೈತ್ಯಗೃಹನಿದ್ದಾನೆ. ಆ ಚೈತ್ಯ ಗೃಹವು ಜಿನಮಾರ್ಗದಲ್ಲಿ ಷಟ್‌ಕಾಯಜೀವಗಳ ಹಿತಮಾಡುವನೆಂದು ಹೇಳಲಾಗಿದೆ. ಕರ್ಮಬದ್ಧವಾದ ಭವ್ಯ ಜೀವಸಮೂಹವನ್ನು ತಿಳಿಯುವಂಥ ಆತ್ಮನು ನಿಶ್ಚಯವಾಗಿ ಚೈತ್ಯಗೃಹ ಅಥವಾ ಚೈತ್ಯಾಲಯನಿದ್ದಾನೆ, ಇನ್ನು ವ್ಯವಹಾರನಯದಿಂದ ನಿಶ್ಚಯ ಚೈತ್ಯಾಲಯದ ಪ್ರಾಪ್ತಿಗೆ ಕಾರಣಭೂತವಾದ ಯಾವ ಇಟ್ಟಿಗೆ ಕಲ್ಲು ಹಾಗೂ ಕಟ್ಟಿಗೆ ಮೊದಲಾದವುಗಳಿಂದ ರಚಿಸಲಾಗುತ್ತದೆ ಮತ್ತು ಅವುಗಳಲ್ಲಿ ಸರ್ವಜ್ಞ ವೀತರಾಗಭಗವಂತರ ಪ್ರತಿಮೆಯಿರುತ್ತದೆ ಅದು ಚೈತ್ಯಗೃಹವಿದೆ.

**ಛದ್ಮಸ್ಥ :-** ಜ್ಞಾನಾವರಣ ಮತ್ತು ದರ್ಶನಾವರಣಗಳಿಗೆ ಛದ್ಮವೆನ್ನುತ್ತಾರೆ; ಮತ್ತು ಅದರಲ್ಲಿ ಯಾರು ಇರುತ್ತಾರೆ ಅವರಿಗೆ ಛದ್ಮಸ್ಥರೆನ್ನುತ್ತಾರೆ. ಎಂದರೆ ಯಾವ ಘಾತಿಕರ್ಮ ಸಮೂಹದ ಕಾರಣದಿಂದ ಜೀವಗಳು ನಾಲ್ಕೂ ಗತಿಗಳಲ್ಲಿ ಸಂಸರಣ ಮಾಡುತ್ತವೆ ಅದು ಘಾತಿಕರ್ಮ ಸಮೂಹ ಸಂಸಾರವಿದೆ. ಮತ್ತು ಅದರಲ್ಲಿ ಇರುವಂಥ ಜೀವಗಳು ಛದ್ಮಸ್ಥವಿವೆ. ಇದರಲ್ಲಿ ಸರಾಗ, ವೀತರಾಗವೆಂದು ಎರಡು ಪ್ರಕಾರಗಳಿವೆ. ೪ ರಿಂದ ೧೦ ಗುಣಸ್ಥಾನದವರೆಗಿನವರಿಗೆ ಸರಾಗ ಛದ್ಮಸ್ಥರೆಂದರೆ ೧೦-೧೨ ಗುಣಸ್ಥಾನದವರಿಗೆ ವೀತರಾಗ ಛದ್ಮಸ್ಥರೆನ್ನುತ್ತಾರೆ. ವೀತರಾಗ ಛದ್ಮಸ್ಥದಲ್ಲೂ ಉಪಶಾಂತಕಷಾಯ, ಕ್ಷೀಣಕಷಾಯವೆಂದು ಎರಡು ಭೇದಗಳಿವೆ. -ಧವಲ ೭-೨,೧೧-೫-೨

**ಜಾತಿ (ನಾಮಕರ್ಮ) :-** ಆ ನರಕ ಮೊದಲಾದ ಗತಿಗಳಲ್ಲಿ ಯಾವ ವ್ಯಭಿಚಾರಿಯಲ್ಲದ ಸಾದೃಶ್ಯದಿಂದ ಏಕತ್ವದ ಬೋಧವಾಗುತ್ತದೆ ಅದು ಜಾತಿಯಿದೆ. ಮತ್ತು ಇದರ ನಿಮಿತ್ತದಿಂದ ಜಾತಿನಾಮಕರ್ಮವಿದೆ. ಇನ್ನು

ಯಾವುದರ ಉದಯದಿಂದ ಆತ್ಮವು ಏಕೇಂದ್ರಿಯವೆನ್ನಿಸಿಕೊಳ್ಳುತ್ತದೆ ಅದು ಏಕೇಂದ್ರಿಯ ಜಾತಿನಾಮಕರ್ಮವಿದೆ. ಇದರಂತೆ ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯಗಳಿಗೆ ಅನ್ವಯಿಸಿಕೊಳ್ಳಬೇಕು.

-ಸರ್ವಾರ್ಥಸಿದ್ಧಿ. ೮-೧೧-೩೮೯-೩-೫.

**ಜೀವ :-** ಯಾವುದು ನಾಲ್ಕು ಪ್ರಾಣಗಳಿಂದ ಜೀವಿಸುತ್ತದೆ, ಜೀವಿಸುವುದು ಮತ್ತು ಮೊದಲು ಜೀವಿಸಿತ್ತು ಅದು ಜೀವವಿದೆ. ಸಂಸಾರ ಹಾಗೂ ಮೋಕ್ಷ ಇವೆರಡರಲ್ಲೂ ಜೀವವು ಪ್ರಧಾನ ತತ್ತ್ವವಿದೆ. ಆದಾಗ್ಯೂ ಜ್ಞಾನ-ದರ್ಶನ ಸ್ವಭಾವಿಯಾಗಿರುವುದರಿಂದ ಅದು ಆತ್ಮವೇ ಇದೆ. ಆದರೂ ಸಂಸಾರಾವಸ್ಥೆಯಲ್ಲಿ ಪ್ರಾಣಧಾರಣೆ ಮಾಡುವುದರಿಂದ ಜೀವವೆನ್ನಲಾಗುತ್ತದೆ. ಸಂಸಾರಾವಸ್ಥೆಯಲ್ಲಿ ಶರೀರದಲ್ಲಿರುತ್ತಿದ್ದರೂ ಶರೀರದಿಂದ ಭಿನ್ನವಿದೆ, ಲೌಕಿಕ ವಿಷಯಗಳನ್ನು ಮಾಡುತ್ತ, ಭೋಗಿಸುತ್ತಿದ್ದರೂ ಅದು ಅವುಗಳ ಜ್ಞಾತಾಮಾತ್ರವಿದೆ. ಅದು ಒಂದು ಲೋಕಪ್ರಮಾಣ ಅಸಂಖ್ಯಾತ ಪ್ರದೇಶಿಯಾಗಿದ್ದರೂ ಸಂಕೋಚ-ವಿಸ್ತಾರ ಶಕ್ತಿಯ ಕಾರಣದಿಂದ ಶರೀರ ಪ್ರಮಾಣವಾಗಿರುತ್ತದೆ. ಯಾವುದೇ ಒಂದು ಜೀವವು ಸರ್ವವ್ಯಾಪಕವಾಗಿದೆಯೆಂದು ಜೈನದರ್ಶನವು ಮನ್ನಿಸುವುದಿಲ್ಲ. ಅವು ಅನಂತಾನಂತವಾಗಿವೆ. ಅವುಗಳಲ್ಲಿಂದ ಯಾವುದೇ ಜೀವವು ಸಾಧನೆಯ ವಿಶೇಷದಿಂದ ಕರ್ಮ ಹಾಗೂ ಸಂಸಾರವನ್ನು ನಾಶಮಾಡಿ, ಅತೀಂದ್ರಿಯಾನಂದದ ಭೋಕ್ತೃವಾದ ಪರಮಾತ್ಮನಾಗುತ್ತಾನೆ. ಆಗ ಅವನು ವಿಕಲ್ಪಗಳಿಂದ ಸಂಪೂರ್ಣ ಶೂನ್ಯನಾಗಿ ಕೇವಲ ಜ್ಞಾತಾ-ದೃಷ್ಟಾ ಭಾವಗಳಲ್ಲಿ ಸ್ಥಿರತೆಯನ್ನು ಪಡೆಯುತ್ತಾನೆ. ಜೈನದರ್ಶನವು ಅವನನ್ನೇ ಈಶ್ವರ ಇಲ್ಲವೆ ಭಗವಂತನೆಂದು ಸ್ವೀಕರಿಸಿದೆ, ಇವನಿಂದ ಬೇರೆಯಾದ ಯಾವ ಈಶ್ವರನನ್ನೂ ಮನ್ನಿಸುವುದಿಲ್ಲ.

**ಜ್ಞೇಯ :-** ಚೈತನ್ಯಶಕ್ತಿಯಲ್ಲಿ ಜ್ಞಾನಾಕಾರ ಮತ್ತು ಜ್ಞೇಯಾಕಾರವೆಂದು ಎರಡು ಪ್ರಕಾರಗಳಿವೆ. ಅಲ್ಲಿ ಪ್ರತಿಬಿಂಬವಿಲ್ಲದ ಕನ್ನಡಿಯಂತಿರುವುದು ಜ್ಞಾನಾಕಾರವಾದರೆ ಪ್ರತಿಬಿಂಬಸಹಿತವಾದ ಕನ್ನಡಿಯಂತಿರುವುದು ಜ್ಞೇಯಾಕಾರವಿದೆ. ಇನ್ನು ಅನೇಕಾಂತಾತ್ಮಕವಾದ ದ್ರವ್ಯ ಸಿದ್ಧಿಯ ಭಯದಿಂದ ಕೇವಲ ಆಕಾರವೇ ಆಕಾರವೆಂದು ಮನ್ನಿಸುತ್ತಿದ್ದರೆ-ಜ್ಞಾನವಿಲ್ಲದಿದ್ದರೆ ಆಕಾರವು ಯಾವುದರಿಂದಿರುತ್ತದೆ ?-ಎಂಬ ಪ್ರಶ್ನೆ ಏಳುತ್ತದೆ. ಏಕೆಂದರೆ ಆಶ್ರಯವಿಲ್ಲದೆ ಆಕಾರವಂತೂ ಇರುವ ಸಾಧ್ಯತೆಯಿಲ್ಲ ಜ್ಞಾನದ ಅಭಾವವಾಗುವುದರಿಂದ ಆಕಾರದ ಅಭಾವವೂ ಆಗುವುದು. ಅದಕ್ಕಾಗಿ ಹೇಗೆ ಹಾಲಿನಲ್ಲಿ ಬಿದ್ದಂಥ ಇಂದ್ರನೀಲ ರತ್ನವು ತನ್ನ ಪ್ರಭೆಯ ಕಿರಣಗಳಿಂದ ಹಾಲಿನಲ್ಲೆಲ್ಲ ವ್ಯಾಪಿಸಿ ವರ್ತಿಸುತ್ತಿರುವುದು ಕಾಣಬರುವಂತೆ ಸಂವೇದನೆಯೂ ಆತ್ಮನಿಂದ ಅಭಿನ್ನವಾಗಿರುವುದರಿಂದ ಸಂಪೂರ್ಣ ಜ್ಞೇಯಾಕಾರಗಳಲ್ಲಿ ವ್ಯಾಪ್ತವಾಗಿ ವರ್ತಿಸುತ್ತದೆ. ಆದುದರಿಂದ ಕಾರ್ಯದಲ್ಲಿ ಕಾರಣದ ಉಪಚಾರ ಮಾಡಿ, ಜ್ಞಾನವು ಪದಾರ್ಥಗಳಲ್ಲಿ ವ್ಯಾಪ್ತವಾಗಿ ವರ್ತಿಸುತ್ತದೆಯೆಂದು ಹೇಳುವಲ್ಲಿ ಯಾವ ವಿರೋಧವು ಬರುವುದಿಲ್ಲ.

-ಪ್ರವಚನಸಾರ. ತಾ.ವೃ. ೩೦

**ತತ್ತ್ವ :-** ಪ್ರಯೋಜನಭೂತವಾದ ವಸ್ತುವಿನ ಸ್ವಭಾವಕ್ಕೆ ತತ್ತ್ವವೆನ್ನುತ್ತಾರೆ. ಪಾರಮಾರ್ಥ್ಯದಿಂದ ಒಂದು ಶುದ್ಧಾತ್ಮವೇ ಪ್ರಯೋಜನಭೂತವಾದ ತತ್ತ್ವವಿದೆ. ಅದು ಸಂಸಾರಾವಸ್ಥೆಯಲ್ಲಿ ಕರ್ಮಗಳಿಂದ ಬಂಧಿಸಲ್ಪಟ್ಟಿದೆ. ಅದಕ್ಕೆ ಆ ಬಂಧನದಿಂದ ಬಿಡುಗಡೆ ಹೊಂದುವುದು ಇಷ್ಟವಿದೆ. ಹೀಗೆ ಅದು ಹೇಯ-ಉಪಾದೇಯ ಭೇದದಿಂದ ಎರಡು ಪ್ರಕಾರದ್ದಿದೆ, ಇಲ್ಲವೆ ವಿಶೇಷಭೇದ ಮಾಡುವುದರಿಂದ ಅದು ಏಳು ಪ್ರಕಾರವೆಂದು ಹೇಳಲಾಗುತ್ತದೆ. ಆದಾಗ್ಯೂ ಪುಣ್ಯ ಹಾಗೂ ಪಾಪ ಇವೆರಡೂ ಆಸ್ರವವಾಗಿವೆ, ಆದರೆ ಸಂಸಾರದಲ್ಲಿ ಇವೆರಡು ಪ್ರಸಿದ್ಧವಾಗಿರುವ ಕಾರಣದಿಂದ ಇವನ್ನು ಬೇರೆ ನಿರ್ದೇಶ ಮಾಡುವುದರಿಂದ ಆ ತತ್ತ್ವಗಳು ಒಂಭತ್ತಾಗಿ ಬಿಡುತ್ತವೆ. ಇನ್ನು ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಇವು ಏಳು ತತ್ತ್ವಗಳಿವೆ, ಇವಕ್ಕೆ ಸಪ್ತ ತತ್ತ್ವಗಳೆಂದು ಹೇಳುತ್ತಾರೆ. ಈ

ಜೀವ ಮೊದಲಾದ ಬಾಹ್ಯತತ್ತ್ವಗಳು ಹೇಯವಿವೆ. ಕರ್ಮೋಪಾಧಿಜನ್ಯ ಗುಣ ಪರ್ಯಾಯಗಳಿಂದ ವ್ಯತಿರಿಕ್ತನಾದ ಆತ್ಮನೇ ಆತ್ಮನಿಗೆ ಉಪಾದೇಯನಾಗಿದ್ದಾನೆ. (ನಿಯಮಸಾರ, ಗಾಥೆ ೩೮)

**ತಪ :-** ಇಚ್ಛೆಯ ನಿರೋಧವನ್ನು ತಪವೆಂದು ಹೇಳಿದ್ದಾರೆ. ಆದ್ದರಿಂದ ಜ್ಞಾನಿಯು ತನ್ನ ಶಕ್ತಿಗನುಸರಿಸಿ ನಿತ್ಯವೂ ತಪಮಾಡುವ ಭಾವನೆಯನ್ನು ಭಾವಿಸುತ್ತಿರುತ್ತಾನೆ ಮತ್ತು ಪ್ರಮಾದರಹಿತನಾಗಿರುತ್ತಾನೆ. ಅಂತರಂಗದಲ್ಲಿ ಸಮತೆಯ ಅಪೇಕ್ಷೆಯಿಲ್ಲದೆ ಮಾಡಲಾದ ತಪಸ್ಸು ಕೇವಲ ಕಾಯಕ್ಲೇಶವಾಗಿದೆ, ಮೋಕ್ಷಮಾರ್ಗದಲ್ಲಿ ಅದಕ್ಕೆ ಯಾವ ಸ್ಥಾನವಿಲ್ಲ. ಅನಾದಿಯಿಂದ ಕಟ್ಟಿದ ಕರ್ಮ ಹಾಗೂ ಸಂಸ್ಕಾರಗಳು ತಪದಿಂದ ಕ್ಷಣಾರ್ಧದಲ್ಲಿ ವಿನಾಶವಾಗುತ್ತವೆ. ಅದಕ್ಕಾಗಿ ಸಮ್ಯಕ್ ತಪಕ್ಕೆ ಮೋಕ್ಷಮಾರ್ಗದಲ್ಲಿ ಒಂದು ಹಿರಿಯ ಸ್ಥಾನವಿದೆ. ಇನ್ನು ಸಮ್ಯಕ್‌ಜ್ಞಾನಸ್ವರೂಪದ ನೇತ್ರಗಳನ್ನು ಧಾರಣೆ ಮಾಡಿರುವ ಸಾಧುವಿನಿಂದ ಯಾವ ಕರ್ಮರೂಪದ ಮಾಲಿನ್ಯವನ್ನು ದೂರಮಾಡುವುದಕ್ಕಾಗಿ ತಪಿಸಲಾಗುತ್ತದೆ ಅದನ್ನು ತಪವೆಂದು ಹೇಳಿದ್ದಾರೆ. (ಪ.ಪಂ. ವಿಂಶತಿ. ೧/೯೮)

ಸಂಪೂರ್ಣ ತಪಸ್ಸಿನ ಸಾರವೆಂದರೆ ದುಃಖಗಳನ್ನು ಶಾಂತಿಪೂರ್ವಕವಾಗಿ ಸಹನೆ ಮಾಡುವುದು ಮತ್ತು ಜೀವಹಿಂಸೆ ಮಾಡದಿರುವುದೇ ಆಗಿದೆ. (ಕುರಲ ಕಾವ್ಯ ೨೭/೧೭)

**ತಾದಾತ್ಮ್ಯ ಸಂಬಂಧ :-** ಅಗ್ನಿ ಮತ್ತು ಉಷ್ಣತೆಯದು ತಾದಾತ್ಮ್ಯ ಸಂಬಂಧವಿದೆ. ಯಾವುದು ನಿಶ್ಚಯದಿಂದ ಎಲ್ಲ ಅವಸ್ಥೆಗಳಲ್ಲಿಯೂ ಯಾವ ಸ್ವರೂಪತನದಿಂದ ವ್ಯಾಪ್ತವಾಗಿದೆ ಮತ್ತು ಆ ಸ್ವರೂಪತನದ ವ್ಯಾಪ್ತಿಯಿಂದ ರಹಿತವಾಗಿದೆ ಅದರೊಡನೆ ಅವುಗಳ ತಾದಾತ್ಮ್ಯ ಲಕ್ಷಣ ಸಂಬಂಧವಾಗುತ್ತದೆ. -ಸಮಯಸಾರ, ೫೭

**ತಿರ್ಯಗ್ಗತ್ಯಾನುಪೂರ್ವಿ :-** ಪೂರ್ವ ಮತ್ತು ಉತ್ತರ ಶರೀರಗಳ ಮಧ್ಯದಲ್ಲಿ ಒಂದು, ಎರಡು, ಮೂರು ಸಮಯಗಳಲ್ಲಿ ವರ್ತಮಾನ ಜೀವಕ್ಕೆ ಯಾವ ಕರ್ಮದ ಉದಯದಿಂದ ಜೀವಪ್ರದೇಶಗಳ ವಿಶಿಷ್ಟವಾದ ಆಕಾರವಿಶೇಷವಾಗುತ್ತದೆ ಆ ಕರ್ಮಕ್ಕೆ ಅನುಪೂರ್ವಿಯೆಂಬ ಸಂಕೇತವಿದೆ. -ಧವಲ. ೬-೧, ೯-೧, ೨೮-೫೬-೨.

**ತಿರ್ಯಗ್ಗತಿ :-** ಯಾವುದರ ಉದಯದಿಂದ ಆತ್ಮನು ಭವಾಂತರಗಳಲ್ಲಿ ಸುತ್ತುತ್ತಾನೆ ಅದನ್ನು ಗತಿಯೆನ್ನುತ್ತಾರೆ. ಇನ್ನು ತಿರ್ಯಗ್ಗತಿ ನಾಮಕರ್ಮದ ಉದಯದಿಂದ ಜೀವವು ತಿರ್ಯಗ್ಗತಿಯಲ್ಲಿ ಹುಟ್ಟುತ್ತದೆ ಅದನ್ನು ತಿರ್ಯಗ್ಗತಿಯೆನ್ನುತ್ತಾರೆ. -ಸರ್ವಾರ್ಥಸಿದ್ಧಿ. ೨-೬-೧೫೯-೩

**ತಿರ್ಯಂಗಾಯು :-** ಧರ್ಮೋಪದೇಶದಲ್ಲಿ ಮಿಥ್ಯಾ ಮಾತುಗಳನ್ನು ಬೆರೆಸಿ ಅವುಗಳ ಪ್ರಚಾರ ಮಾಡುವುದು, ಶೀಲವಿಲ್ಲದೆ ಜೀವನ ಕಳೆಯುವುದು, ವೈರ ಸಾಧನೆಯಲ್ಲಿ ಅತ್ಯಂತ ಪ್ರಿಯವಾಗಿರುವುದು ಮತ್ತು ಮರಣಕಾಲಕ್ಕೆ ನೀಲ, ಕಾಪೋತ ಲೇಶ್ಯೆ ಮತ್ತು ಆರ್ತಧ್ಯಾನಿಯಾಗಿರುವುದು ಇವೇ ಮೊದಲಾದವುಗಳು ತಿರ್ಯಂಗಾಯು ಬಂಧಕ್ಕೆ ಕಾರಣವಾಗಿವೆ. -ಸರ್ವಾರ್ಥಸಿದ್ಧಿ. ೬-೧೬-೩೩೪-೩

**ತೀರ್ಥಂಕರ :-** ಸಂಸಾರಸಾಗರವನ್ನು ಸ್ವತಃ ದಾಟುವ ಹಾಗೂ ಇತರರನ್ನು ದಾಟಿಸುವ ಮಹಾಪುರುಷರಿಗೆ ತೀರ್ಥಂಕರರೆನ್ನುತ್ತಾರೆ. ಅವರ ಗರ್ಭ, ಜನ್ಮ, ದೀಕ್ಷೆ, ಕೇವಲಜ್ಞಾನೋತ್ಪತ್ತಿ ಮತ್ತು ನಿರ್ವಾಣ ಈ ಐದು ಅವಸರಗಳಲ್ಲಿ ದೊಡ್ಡ ಉತ್ಸವಗಳಾಗುತ್ತವೆ ಅವನ್ನು ಪಂಚ ಕಲ್ಯಾಣಕವೆನ್ನುತ್ತಾರೆ. ತೀರ್ಥಂಕರರಾಗುವ ಸಂಸ್ಕಾರವು ಷೋಡಶಕಾರಣರೂಪವಾದ ಅತ್ಯಂತ ವಿಶುದ್ಧಭಾವನೆಗಳಿಂದ ಉತ್ಪನ್ನವಾಗುತ್ತದೆ. ಅದನ್ನು ತೀರ್ಥಂಕರ ಪ್ರಕೃತಿಯ ಬಂಧವೆನ್ನುತ್ತಾರೆ. ಇಂಥ ಪರಿಣಾಮವು ಮನುಷ್ಯಭವದಲ್ಲಿ ಮತ್ತು ಅದೂ ಯಾವುದೇ ತೀರ್ಥಂಕರ ಇಲ್ಲವೆ ಕೇವಲಿಯ ಪಾದಮೂಲದಲ್ಲೇ ಆಗುವ ಸಾಧ್ಯತೆಯಿದೆ. ಇಂಥ ವ್ಯಕ್ತಿಗಳು ಕೇವಲ ದೇವಗತಿಗೇನೇ ಹೋಗುತ್ತಾರೆ.

ಆದರೆ ಒಂದು ವೇಳೆ ಮೊದಲೇ ನರಕಾಯುಷ್ಯದ ಬಂಧವಾಗಿದ್ದರೆ ಮತ್ತು ಹಿಂದಿನಿಂದ ತೀರ್ಥಂಕರ ಪ್ರಕೃತಿಯ ಬಂಧವಾಗಿದ್ದರೆ ಆ ಜೀವವು ಮೂರನೆಯ ನರಕದವರೆಗೇನೇ ಉತ್ಪನ್ನವಾಗುತ್ತದೆ ಅನಂತರ ಮರುಭವದಲ್ಲೇ ಅವಶ್ಯವಾಗಿ ಮೋಕ್ಷಕ್ಕೆ ಹೋಗುತ್ತದೆ. ನರಕಾಯು ಬಂಧವಾದ ಜೀವವು ಮರಣ ಕಾಲಕ್ಕೆ ಸಮ್ಯಕ್ತ್ವದಿಂದ ಚ್ಯುತವಾಗುತ್ತದೆ. ಇನ್ನು ಅಸಂಯತ ಸಮ್ಯಗ್ದೃಷ್ಟಿ ಜೀವವು ತೀರ್ಥಂಕರ ಪ್ರಕೃತಿಯ ಉತ್ಕೃಷ್ಟ ಸ್ಥಿತಿ ಬಂಧದ ಅಧಿಪತಿಯಿದೆ.

-ಮಹಾಬಂಧ-೧-೧೮೭-೧೩೨-೪.

**ತುಷಮಾಷಭಿನ್ನ :-** ಯಾವ ಪ್ರಕಾರ ಉದ್ದಿನಬೇಳೆಯು ಮೇಲಿನ ಹೊದಿಕೆಯಿಂದ ಸಂಪೂರ್ಣವಾಗಿ ಬೇರೆಯಾಗಿರುತ್ತದೆ ಅದೇ ಪ್ರಕಾರ ಶರೀರ ಮೊದಲಾದ ಪುದ್ಗಲಗಳಿಂದ ಆತ್ಮನು ಪರಿಪೂರ್ಣ ಬೇರೆಯಾಗಿದ್ದಾನೆಂದು ತಿಳಿಯುವುದೇ ತುಷಮಾಷಭಿನ್ನತೆಯ ಅರ್ಥವಿದೆ.

**ದಶಕರಣ :-** ಬಂಧ, ಉತ್ಕರ್ಷಣ, ಸಂಕ್ರಮಣ, ಅಪಕರ್ಷಣ, ಉದೀರಣಾ, ಸತ್ತ್ವ, ಉದಯ, ಉಪಶಮ, ನಿಧತ್ತಿ ಮತ್ತು ನಿಷ್ಕಾಚನಾ ಎಂಬ ಹತ್ತು ಕರಣಗಳು ಕರ್ಮಪ್ರಕೃತಿಗಳಲ್ಲಿ ಸಂಭವಿಸುತ್ತವೆ.

-ನೋಡಿರಿ ಗೋ.ಕ. ಗಾಥೆ ೪೩೭ ರಿಂದ ೪೫೦.

**ದರ್ಶನಮೋಹನೀಯ :-** ಯಾವ ಕರ್ಮದ ಉದಯದಿಂದ ಅನಾಗಮಗಳಲ್ಲಿ ಆಗಮಬುದ್ಧಿ, ಅನಾತ್ಮನಲ್ಲಿ ಆತ್ಮಬುದ್ಧಿ, ಅಪದಾರ್ಥಗಳಲ್ಲಿ ಪದಾರ್ಥಬುದ್ಧಿಯಾಗುತ್ತದೆ; ಇಲ್ಲವೆ ಆಪ್ತ, ಆಗಮ ಮತ್ತು ಪದಾರ್ಥಗಳಲ್ಲಿ ಶ್ರದ್ಧೆಯ ಅಸ್ಥಿರತೆಯಾಗುತ್ತದೆ; ಇಲ್ಲವೆ ಎರಡರಲ್ಲೂ ಎಂದರೆ ಆಪ್ತ-ಅನಾಪ್ತ ಆಗಮ-ಅನಾಗಮಗಳಲ್ಲಿ ಪದಾರ್ಥ-ಅಪದಾರ್ಥಗಳಲ್ಲಿ ಶ್ರದ್ಧೆಯಾಗುತ್ತದೆ. ಅದನ್ನು ದರ್ಶನಮೋಹನೀಯವೆನ್ನುತ್ತಾರೆ.

**ದ್ರವ್ಯಕರ್ಮ :-** ಎಲ್ಲ ಪ್ರಕಾರದ ಶರೀರಗಳ ಉತ್ಪತ್ತಿಗೆ ಮೂಲ ಕಾರಣವಾದ ಕಾರ್ಮಣಶರೀರಕ್ಕೆ ದ್ರವ್ಯಕರ್ಮವೆಂದು ಹೇಳುತ್ತಾರೆ.

**ದ್ರವ್ಯಪ್ರಾಣ :-** ಜೀವಿಗಳಲ್ಲಿರುವ ಜೀವಂತತೆಯ ಲಕ್ಷಣಗಳಿಗೆ ಪ್ರಾಣವೆನ್ನುತ್ತಾರೆ. ಅದು ನಿಶ್ಚಯ ಅಥವಾ ಭಾವ ಮತ್ತು ವ್ಯವಹಾರ ಅಥವಾ ದ್ರವ್ಯವೆಂದು ಎರಡು ಪ್ರಕಾರವಿದೆ. ಜೀವದ ಸಹಜ ಚೈತನ್ಯವುಳ್ಳ ಶಕ್ತಿಯು ಅದರ ನಿಶ್ಚಯ (ಭಾವ) ಪ್ರಾಣವಿದೆ ಮತ್ತು ಪುದ್ಗಲ ದ್ರವ್ಯದಿಂದುತ್ಪನ್ನವಾದ ಐದು ಇಂದ್ರಿಯ ಪ್ರಾಣಗಳು, ಮನ, ವಚನ, ಕಾಯರೂಪವಾದ ಮೂರು ಬಲಪ್ರಾಣಗಳು, ಶ್ವಾಸೋಚ್ಛ್ವಾಸಪ್ರಾಣ ಮತ್ತು ಆಯುಪ್ರಾಣ ಈ ಹತ್ತು ಪ್ರಾಣಗಳು ವ್ಯವಹಾರ ಅಥವಾ ದ್ರವ್ಯಪ್ರಾಣಗಳಿವೆ. ಇವು ಜೀವದ ಸ್ವಭಾವಗಳಲ್ಲ ಏಕೆಂದರೆ ಇವು ಪುದ್ಗಲ ದ್ರವ್ಯದಿಂದ ರಚಿಸಲ್ಪಟ್ಟಿವೆ. ಆದ್ದರಿಂದ ಶುದ್ಧ ಚೈತನ್ಯ ಮೊದಲಾದ ಶುದ್ಧ ಪ್ರಾಣಗಳಿಂದ ಕೂಡಿದ ಶುದ್ಧ ಜೀವಾಸ್ತಿಕಾಯವೇ ಉಪಾದೇಯವಿದೆ. ಸಂಸಾರಿ ಜೀವವನ್ನು ದ್ರವ್ಯಪ್ರಾಣದ ಅಪೇಕ್ಷೆಯಿಂದ ಮತ್ತು ಸಿದ್ಧಜೀವವನ್ನು ಭಾವಪ್ರಾಣದ ಅಪೇಕ್ಷೆಯಿಂದ ಜೀವವೆನ್ನಲಾಗುತ್ತದೆ.

**ದ್ರವ್ಯಮನ ಭಾವಮನ :-** ನಾನಾ ಪ್ರಕಾರದ ವಿಕಲ್ಪಗಳ ಜಾಲಕ್ಕೆ ಮನಸ್ಸೆನ್ನುತ್ತಾರೆ. ಇದೊಂದು ಅಭ್ಯಂತರ ಇಂದ್ರಿಯವಿದೆ. ಇದರಲ್ಲಿ ದ್ರವ್ಯಮನ, ಭಾವಮನವೆಂದು ಎರಡು ಪ್ರಕಾರಗಳು. ಯಾವುದು ಹೃದಯ ಸ್ಥಾನದಲ್ಲಿ ಎಂಟುದಲದ ಕಮಲದ ಆಕಾರವುಳ್ಳದಿದೆ, ಮತ್ತು ಅಂಗೋಪಾಂಗ ನಾಮಕರ್ಮದ ಉದಯದಿಂದ ಮನೋವರ್ಗಣೆಯ ಸ್ಕಂಧದಿಂದುಂಟಾಗಿದೆ ಅದನ್ನು **ದ್ರವ್ಯಮನ**ವೆನ್ನುತ್ತಾರೆ. ಅದು ಅತ್ಯಂತ ಸೂಕ್ಷ್ಮ ಹಾಗೂ ಇಂದ್ರಿಯ ಗೋಚರವಿದೆ. ಇನ್ನು ವೀರ್ಯಾಂತರಾಯ ಮತ್ತು ನೋಇಂದ್ರಿಯಾವರಣ ಕರ್ಮಗಳ ಕ್ಷಯೋಪಶಮವನ್ನಪೇಕ್ಷಿಸುವ ಆತ್ಮನ ವಿಶುದ್ಧಿಗೆ

**ಭಾವಮನ**ವೆನ್ನುತ್ತಾರೆ. ಇದು ಜ್ಞಾನಸ್ವರೂಪವಿದೆ, ಮತ್ತು ಜ್ಞಾನವು ಜೀವದ ಗುಣವಾಗಿರುವುದರಿಂದ ಆತ್ಮನಲ್ಲಿ ಅದರ ಅಂತರ್ಭಾವವಾಗುತ್ತದೆ. (ಸರ್ವಾರ್ಥಸಿದ್ಧಿ ೫-೧೯-೨೮೭-೧)

**ದ್ರವ್ಯಲಿಂಗ-ಭಾವಲಿಂಗ :-** ಸಾಧು ಮೊದಲಾದವರ ಬಾಹ್ಯವೇಷಕ್ಕೆ ಲಿಂಗವೆನ್ನುತ್ತಾರೆ. ಜೈನ ಆಮ್ನಾಯದಲ್ಲಿ ಅದನ್ನು ಸಾಧು, ಆರ್ಯಿಕೆ, ಉತ್ಕೃಷ್ಟ ಶ್ರಾವಕವೆಂದು ಮೂರು ಪ್ರಕಾರವಾಗಿ ಮನ್ನಿಸಲಾಗಿದೆ. ಈ ಮೂರು ದ್ರವ್ಯ ಹಾಗೂ ಭಾವಭೇದದಿಂದ ಎರಡೆರಡು ಪ್ರಕಾರವಾಗುತ್ತವೆ. ಬಾಹ್ಯ ಶರೀರ ವೇಶವು ದ್ರವ್ಯಲಿಂಗವಿದ್ದರೆ ಅಂತರಂಗದ ವೀತರಾಗತೆಯು **ಭಾವಲಿಂಗ**ವಿದೆ. ಭಾವಲಿಂಗದ ಅಪೇಕ್ಷೆಯಿಂದಲೇ ದ್ರವ್ಯಲಿಂಗವು ಸಾರ್ಥಕವಿದೆ. ಅದಿಲ್ಲದಿದ್ದರೆ ಕೇವಲ ಸೋಗುಮಾತ್ರವಿದೆ. ಜನ್ಮಸಮಯದಂಥ ರೂಪವುಳ್ಳ, ತಲೆಗೂದಲು, ದಾಡಿ, ಮೀಸೆಗಳನ್ನು ಲೋಚ ಮಾಡಿದಂಥ ಶುದ್ಧ ಅಹಿಂಸೆ ಹಾಗೂ ಶರೀರ ಶೃಂಗಾರಗಳಿಂದ ರಹಿತವಾದಂಥ ಲಿಂಗವು **ದ್ರವ್ಯಲಿಂಗ**ವಿದೆ. ಮತ್ತು ಮೂರ್ಛೆ (ಮಮತ್ವ) ಹಾಗೂ ಆರಂಭವಿಲ್ಲದ ಉಪಯೋಗ ಹಾಗೂ ಯೋಗಶುದ್ಧಿಯಿಂದ ಕೂಡಿದ ಪರಾಪೇಕ್ಷೆಯಿಲ್ಲ ದಂಥ ಜಿನೇಂದ್ರ ಕಥಿತಲಿಂಗವು ಭಾವಲಿಂಗವಿದೆ. ಅದು ಮೋಕ್ಷಕ್ಕೆ ಕಾರಣವಾಗಿದೆ. ಸಮ್ಯಗ್ದರ್ಶನವಿಲ್ಲದೆ ಮುನಿದೀಕ್ಷೆ ಸ್ವೀಕರಿಸುವುದು ವ್ಯರ್ಥವಿದೆ. ಅದರಿಂದ ಮೋಕ್ಷಪ್ರಾಪ್ತಿಯಾಗುವುದಿಲ್ಲ. ಲಿಂಗ(ವೇಷ)ವು ಶರೀರಾಶ್ರಿತವಾಗಿದೆ, ಶರೀರವೇ ಆತ್ಮನ ಸಂಸಾರವಿದೆ. ಆದ್ದರಿಂದ ಯಾರಿಗೆ ಕೇವಲ ಲಿಂಗದ ಆಗ್ರಹವಿದೆ ಅವರು ಸಂಸಾರದಿಂದ ಬಿಡುಗಡೆ ಹೊಂದುವುದಿಲ್ಲ. ನಿಜವಾಗಿ ದ್ರವ್ಯಲಿಂಗವು ಮೋಕ್ಷಮಾರ್ಗವಲ್ಲ, ಏಕೆಂದರೆ ಅದು ಶರೀರಾಶ್ರಿತವಾಗಿರುವುದರಿಂದ ಪರದ್ರವ್ಯವಿದೆ. ದರ್ಶನ-ಜ್ಞಾನ-ಚಾರಿತ್ರಗಳೇ ಮೋಕ್ಷಮಾರ್ಗವಾಗಿದೆ. ಏಕೆಂದರೆ ಅವು ಆತ್ಮಾಶ್ರಿತವಾಗಿರುವುದರಿಂದ ಸ್ವದ್ರವ್ಯವಾಗಿದೆ. ಆದ್ದರಿಂದ ದ್ರವ್ಯಲಿಂಗದ ತ್ಯಾಗಮಾಡಿ, ಆತ್ಮನನ್ನು ದರ್ಶನ-ಜ್ಞಾನ-ಚಾರಿತ್ರದಲ್ಲೇ ತೊಡಗಿಸಬೇಕು. ಅದರಲ್ಲೇ ಮೋಕ್ಷಮಾರ್ಗವಿದೆ. -ಸಮಯಸಾರ-ಆತ್ಮಖ್ಯಾತಿ, ೪೧೦-೪೧೧

**ದಿವ್ಯಧ್ವನಿ :-** ಕೇವಲಜ್ಞಾನವಾದ ನಂತರ ಅರಹಂತಪ್ರಭುಗಳ ಸರ್ವಾಂಗದಿಂದ ಒಂದು ವಿಚಿತ್ರತರವಾದ ಗರ್ಜನೆ ಸ್ವರೂಪವಾದ ಓಂಕಾರ ಧ್ವನಿಯು ಹೊರಡುತ್ತದೆ ಅದನ್ನು ದಿವ್ಯಧ್ವನಿಯೆಂದು ಹೇಳುತ್ತಾರೆ. ಭಗವಂತರ ಇಚ್ಛೆಯಿಲ್ಲದಿದ್ದರೂ ಕೂಡ ಭವ್ಯಜೀವಗಳ ಪುಣ್ಯೋದಯದಿಂದ ಇದು ಸ್ವಾಭಾವಿಕವಾಗಿಯೇ ಹೊರಡುತ್ತದೆ. ಆದರೆ ಇದು ಮುಖದಿಂದ ಹೊರಡುತ್ತದೆಯೋ ಅಥವಾ ಇಲ್ಲವೋ, ಭಾಷಾತ್ಮಕವಾಗಿರುತ್ತದೋ ಅಥವಾ ಇಲ್ಲವೋ, ಮತ್ತು ಗಣಧರರ ಅನುಪಸ್ಥಿತಿಯಲ್ಲಿ ಹೊರಡುತ್ತದೋ ಅಥವಾ ಇಲ್ಲವೋ-ಎಂಬಿತ್ಯಾದಿ ಊಹಾಪೋಹಗಳ ಬಗ್ಗೆ ವಿಶೇಷವಾಗಿ ತಿಳಿದುಕೊಳ್ಳುವುದಿದ್ದಲ್ಲಿ ಜೈನೇಂದ್ರಸಿದ್ಧಾಂತ ಕೋಶ ಭಾಗ ೨ ರಲ್ಲಿ ಪುಟ ೪೨೯ ರಿಂದ ೪೩೨ ರ ವರೆಗೆ ನೋಡಿರಿ.

**ದ್ವಿತಿಯೋಪಶಮ ಸಮ್ಯಕ್ತ್ವ :-** ಇದು ಉಪಶಮ ಸಮ್ಯಕ್ತ್ವದ ಇನ್ನೊಂದು ಭಾಗವು. ಉಪಶಮ ಶ್ರೇಣಿಯನ್ನು ಹತ್ತುವಾಗ ಕ್ಷಯೋಪಶಮ ಸಮ್ಯಕ್ತ್ವದಿಂದ ಯಾವ ಉಪಶಮ ಸಮ್ಯಕ್ತ್ವವಾಗುತ್ತದೆ ಅದನ್ನು ದ್ವಿತಿಯೋಪಶಮ ಸಮ್ಯಕ್ತ್ವವೆನ್ನುತ್ತಾರೆ. ದ್ವಿತಿಯೋಶಮ ಸಮ್ಯಕ್ತ್ವವು ಅಸಂಯತ ಮೊದಲಾದ ಉಪಶಾಂತ ಕಷಾಯಗುಣಸ್ಥಾನದವರೆಗೆ ಆಗುತ್ತದೆ. ಅಪ್ರಮತ್ತ ಗುಣಸ್ಥಾನವನ್ನು ಪ್ರಾಪ್ತಮಾಡಿಕೊಂಡು, ಮೇಲೆ ಉಪಶಾಂತ ಕಷಾಯಗುಣಸ್ಥಾನದವರೆಗೆ ಹೋಗಿ ಪುನಃ ಕೆಳಗಿಳಿಯುತ್ತ ಅಸಂಯತ ಗುಣಸ್ಥಾನದವರೆಗೂ ಸಂಭವವಿದೆ.

(ಗೋ. ಜೀ. ಜೀ. ಪ್ರ-೭೩೧-೧೩೨೫-೧)

**ದೀಕ್ಷೆ :-** ವೈರಾಗ್ಯದ ಉತ್ತಮ ಭೂಮಿಕೆಯನ್ನು ಪ್ರಾಪ್ತ ಮಾಡಿಕೊಂಡ ಮುಮುಕ್ಷು ವ್ಯಕ್ತಿಯು ತನ್ನೆಲ್ಲ ಸಂಬಂಧಿಕರಿಂದ ಕ್ಷಮೆಕೋರಿ, ಗುರುಗಳ ಹತ್ತಿರ ಹೋಗಿ ಸಂಪೂರ್ಣ ಪರಿಗ್ರಹದ ತ್ಯಾಗ ಮಾಡುತ್ತಾನೆ, ಮತ್ತು ಜ್ಞಾತಾ-ದೃಷ್ಟಾಯಿದ್ದು ಸೌಮ್ಯ ಜೀವನ ಸಾಗಿಸುವ ಪ್ರತಿಜ್ಞೆ ಮಾಡುತ್ತಾನೆ. ಇದನ್ನೇ ಪ್ರವ್ರಜ್ಯ ಅಥವಾ ಜಿನದೀಕ್ಷೆಯೆನ್ನುತ್ತಾರೆ.

ಈ ಪಂಚಮಕಾಲದಲ್ಲೂ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಈ ಮೂರೂ ವರ್ಣಗಳಲ್ಲಿ ಯಾವುದೇ ಒಂದು ವರ್ಣದ, ನಿರೋಗಪ್ರಕೃತಿಯ, ತಪದಲ್ಲಿ ಸಮರ್ಥವಾದ, ಹೆಚ್ಚು ಬಾಲ್ಯ ಹಾಗೂ ವೃದ್ಧತ್ವವಿಲ್ಲದೆ ಯೋಗ್ಯ ಆಯುಷ್ಯವುಳ್ಳ, ದುರಾಚಾರ ಮೊದಲಾದ ಲೋಕಾಪವಾದವಿಲ್ಲದ, ಸುಂದರ ಪುರುಷನೇ ಜಿನಲಿಂಗವನ್ನು ಸ್ವೀಕರಿಸಲು ಯೋಗ್ಯನಿದ್ದಾನೆ.
-ಪ್ರ.ಸಾ. ತಾ. ವೃ. ೧೨೨೫-೧೦-೩೫

**ದುರ್ಭಗ ಃ-** ಯಾವುದರ ಉದಯದಿಂದ ರೂಪ ಮೊದಲಾದ ಗುಣಗಳಿಂದ ಯುಕ್ತವಾಗಿದ್ದರೂ ಪ್ರೀತಿಯಿಲ್ಲದಂಥ ಅವಸ್ಥೆಯುಂಟಾಗುತ್ತದೆ ಅದು ದುರ್ಭಗನಾಮಕರ್ಮವಿದೆ. -ಸರ್ವಾರ್ಥಸಿದ್ಧಿ ೮-೧೧-೩೯೧-೧೧

**ದುಸ್ವರ ಃ-** ಯಾವ ಕರ್ಮದ ಉದಯದಿಂದ ಕಿವಿಗಳಿಗೆ ಪ್ರಿಯವೆನಿಸುವಂಥ ಸ್ವರವು ಉಂಟಾಗುತ್ತದೆ ಅದು ಸುಸ್ವರ ನಾಮಕರ್ಮವಿದೆ, ಮತ್ತು ಕರ್ಮದ ಉದಯದಿಂದ ಕತ್ತೆ, ಒಂಟೆಗಳ ಸ್ವರಗಳಂತೆ ಕಿವಿಗಳಿಗೆ ಪ್ರಿಯವೆನಿಸದಂಥ ಸ್ವರವು ಉತ್ಪನ್ನವಾಗುತ್ತದೆ ಅದು ದುಸ್ವರ ನಾಮಕರ್ಮವಿದೆ. -ಧವಲ, ೧೩-೫,೫,೧೦೧-೩೬೬-೧

**ದೇಶಘಾತಿ-ಸರ್ವಘಾತಿ ಸ್ಪರ್ಧಕ ಃ-** ಎಲ್ಲ ಪ್ರಕಾರಗಳಿಂದ ಆತ್ಮನ ಗುಣಗಳನ್ನು ಆಚ್ಛಾದನೆ ಮಾಡುವಂಥ ಯಾವ ಕರ್ಮಗಳ ಶಕ್ತಿಗಳಿವೆ ಅವನ್ನು **ಸರ್ವಘಾತಿ ಸ್ಪರ್ಧಕ**ವೆನ್ನುತ್ತಾರೆ. ಮತ್ತು ಅಪೇಕ್ಷಾವಶವಾಗಿ ಒಂದು ಭಾಗದಿಂದ ಯಾವ ಆತ್ಮನ ಗುಣಗಳನ್ನು ಆಚ್ಛಾದನೆ ಮಾಡುವಂಥ ಕರ್ಮ ಶಕ್ತಿಗಳಿವೆ **ಅವನ್ನು ದೇಶಘಾತಿ ಸ್ಪರ್ಧಕವೆನ್ನುತ್ತಾರೆ.** -ದ್ರವ್ಯಸಂಗ್ರಹ ಟೀಕೆ. ೩೪-೯೯-೪.

**ಧರ್ಮ ಃ-** ಸ್ವಭಾವದ ಹೆಸರು ಧರ್ಮವಿದೆ. ಜೀವದ ಸ್ವಭಾವವು ಆನಂದವಾಗಿದೆ. ಇಂದ್ರಿಯ ಸುಖವು ಸುಖವಲ್ಲ. ಆದುದರಿಂದ ಆ ಅತೀಂದ್ರಿಯ ಆನಂದವೇ ಜೀವದ ಧರ್ಮವಿದೆ, ಇಲ್ಲವೆ ಕಾರಣದಲ್ಲಿ ಕಾರ್ಯದ ಉಪಚಾರ ಮಾಡಿ, ಯಾವ ಅನುಷ್ಠಾನ ವಿಶೇಷದಿಂದ ಆ ಆನಂದದ ಪ್ರಾಪ್ತಿಯಾಗುತ್ತದೆ ಅದನ್ನು ಧರ್ಮವೆನ್ನುತ್ತಾರೆ. ಇನ್ನು ಯಾವುದು ಪ್ರಾಣಿಗಳನ್ನು ಸಂಸಾರದ ದುಃಖದಿಂದ ಎತ್ತಿ ಉತ್ತಮ ಸುಖದಲ್ಲಿ ಧಾರಣ ಮಾಡುತ್ತದೆ ಅದನ್ನು ಧರ್ಮವೆನ್ನುತ್ತಾರೆ. ಆ ಧರ್ಮದಲ್ಲಿ ಬಾಹ್ಯ, ಅಂತರಂಗವೆಂದು ಎರಡು ಪ್ರಕಾರಗಳಿವೆ ಬಾಹ್ಯಾನುಷ್ಠಾನವಂತೂ ವ್ರತ, ಶೀಲ, ಸಂಯಮ, ದಾನ, ಪೂಜೆ ಮೊದಲಾದವುಗಳನ್ನು ಮಾಡುವುದಿದ್ದರೆ ಅಂತರಂಗ ಅನುಷ್ಠಾನವು ಸಮತೆ ಹಾಗೂ ವೀತರಾಗ ಭಾವನೆಯಲ್ಲಿ ಸ್ಥಿರತೆಯನ್ನು ಹೆಚ್ಚು ಹೆಚ್ಚಾಗಿ ಸಾಧನೆ ಮಾಡುವುದಿದೆ. ಬಾಹ್ಯಾನುಷ್ಠಾನಕ್ಕೆ ವ್ಯವಹಾರ ಧರ್ಮವೆಂದರೆ ಅಂತರಂಗಕ್ಕೆ ನಿಶ್ಚಯಧರ್ಮವೆನ್ನುತ್ತಾರೆ. ಮೊದಲನೆಯದು ಕೃತ್ರಿಮವಾಗಿದ್ದರೆ ಎರಡನೆಯದು ಸ್ವಾಭಾವಿಕವಾಗಿದೆ. ಮೊದಲನೆಯದು ಬಾಹ್ಯದಿಂದ ಒಳಕ್ಕೆ ಪ್ರವೇಶಿಸಿದರೆ ಎರಡನೆಯದು ಒಳಗಿನಿಂದ ಹೊರಗೆ ಹೊರಡುತ್ತದೆ. (ಹೆಚ್ಚು ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೨ ರಲ್ಲಿ ಪುಟ ೪೬೩ ರಿಂದ ೪೭೪)

**ಧರ್ಮಧ್ಯಾನ ಃ-** ಮನಸ್ಸನ್ನು ಏಕಾಗ್ರ ಮಾಡುವುದು ಧ್ಯಾನವಿದೆ. ಪ್ರತಿಯೊಂದು ಸಮಯವೂ ಹಾಗೆ ಒಂದಿಲ್ಲೊಂದು ವಿಷಯದಲ್ಲಿ ಮನಸ್ಸು ಸಿಕ್ಕಿ ಬೀಳುವುದರಿಂದ ವ್ಯಕ್ತಿಗೆ ಯಾವುದೇ ಧ್ಯಾನವು ನಡದೇ ಇರುತ್ತದೆ, ಆದರೆ ರಾಗ-ದ್ವೇಷ ಮೂಲಕವಾಗಿರುವುದರಿಂದ ಶ್ರೇಯೋ ಮಾರ್ಗದಲ್ಲಿ ಅವೆಲ್ಲವು ಅನಿಷ್ಟವಾಗಿವೆ. ಸಾಧಕನು ಸಾಮ್ಯತೆಯ ಅಭ್ಯಾಸ ಮಾಡುವುದಕ್ಕಾಗಿ ಯಾವ ಧ್ಯಾನವನ್ನು ಧಾನಿಸುತ್ತಾನೆ ಅದು ಧರ್ಮಧ್ಯಾನವಿದೆ. ಅಭ್ಯಾಸದ ಅವಸ್ಥೆಯು ಮುಗಿದ ಮೇಲೆ ಪೂರ್ಣಜ್ಞಾತಾ ದೃಷ್ಟಾರೂಪವಾದ ಭಾವವು ಶುಕ್ಲಧ್ಯಾನವಾಗುತ್ತದೆ. ಧರ್ಮ ಧ್ಯಾನವು ಬಾಹ್ಯ ಹಾಗೂ ಆಧ್ಯಾತ್ಮಿಕವೆಂದು ಎರಡು ಪ್ರಕಾರದ್ದಿದೆ. ವಚನ ಹಾಗೂ ಕಾಯದಿಂದ ಎಲ್ಲವೂ ಪ್ರತ್ಯಕ್ಷವಾಗುವಂಥದ್ದು ಬಾಹ್ಯ ಮತ್ತು ಮಾನಸಿಕ ಚಿಂತನೆರೂಪವಾದದ್ದು ಆಧ್ಯಾತ್ಮಿಕವಿದೆ. ಆ ಆಧ್ಯಾತ್ಮಿಕವೂ ಆಜ್ಞಾ, ಅಪಾಯ ಮೊದಲಾದ ಭೇದದಿಂದ ಹತ್ತು ರೂಪವಾಗಿದೆ. ಈ ಹತ್ತೂ ಭೇದಗಳು ಅವುಗಳ ಲಕ್ಷಣಗಳ ಮೇಲಿಂದ ಪ್ರಕಟವಿವೆ, ಆಜ್ಞಾ, ಅಪಾಯ, ವಿಪಾಕ ಹಾಗೂ ಸಂಸ್ಥಾನ ಈ ನಾಲ್ಕರಲ್ಲಿ ಗರ್ಭಿತವಾಗುತ್ತವೆ. ಅಪಾಯವಿಚಯವಂತೂ ಅಪಾಯದಲ್ಲಿ ಸೇರಿಕೊಳ್ಳುತ್ತದೆ. ಮತ್ತು ಜೀವ,

ಅಜೀವ, ಭವ, ವಿರಾಗ ಹಾಗೂ ಹೇತು ವಿಚಯವು ಸಂಸ್ಥಾನ ವಿಚಯದಲ್ಲಿ ಸೇರಿಕೊಳ್ಳುತ್ತವೆ. ಪುನಃ ಇವೆಲ್ಲವನ್ನೂ ವ್ಯವಹಾರ ಹಾಗೂ ನಿಶ್ಚಯದಲ್ಲಿ ಗರ್ಭೀಕರಿಸಲಾಗುತ್ತದೆ. ಆಜ್ಞಾ, ಅಪಾಯ, ವಿಪಾಕಗಳಂತೂ ಪರಾವಲಂಬಿಯಾಗಿರುವುದರಿಂದ ವ್ಯವಹಾರವೇ ಇವೆ. ಆದರೆ ಸಂಸ್ಥಾನವಿಚಯವು ಪಿಂಡಸ್ಥ, ಪದಸ್ಥ, ರೂಪಸ್ಥ, ರೂಪಾತೀತವೆಂದು ನಾಲ್ಕು ಭೇದರೂಪವಿದೆ. ಇಲ್ಲಿ ಮೊದಲಿನ ಮೂರು ಧರ್ಮಧ್ಯಾನದ ರೂಪವಿದ್ದರೆ ಕೊನೆಯದೊಂದು ಶುಕ್ಲಧ್ಯಾನ ರೂಪವಿದೆ. ಮೊದಲಿನ ಮೂರರಲ್ಲಿ 'ಪಿಂಡಸ್ಥ' ಹಾಗೂ 'ಪದಸ್ಥ'ಗಳಂತೂ ಪರಾವಲಂಬಿಯಾಗಿರುವುದರಿಂದ ವ್ಯವಹಾರವಿದೆ. 'ರೂಪಸ್ಥ'ವು ಸ್ವಾವಲಂಬಿಯಾಗಿರುವುದರಿಂದ ನಿಶ್ಚಯವಿದೆ ನಿಶ್ಚಯಧ್ಯಾನವೇ ವಾಸ್ತವಿಕವಿದೆ, ಆದರೆ ವ್ಯವಹಾರವೂ ಅದಕ್ಕೆ ಸಾಧಕವಾಗಿರುವುದರಿಂದ ಇಷ್ಟವಿದೆ. ಈ ಪಂಚಮ ಕಾಲದಲ್ಲೂ ಆತ್ಮಸ್ವಭಾವಸ್ಥಿತನಾದ ಸಾಧುವಿಗೆ ಧರ್ಮಧ್ಯಾನವಾಗುತ್ತದೆ. ಇದನ್ನು ಯಾರು ನಂಬುವುದಿಲ್ಲ ಅವರು ಅಜ್ಞಾನಿಗಳಿದ್ದಾರೆ.-ಮೋಕ್ಷಪಾಹುಡ,೭೬

**ನಪುಂಸಕವೇದ :-** ಯಾರು ಭಾವದಿಂದ ಸ್ತ್ರೀಲಿಂಗ, ಪುಲ್ಲಿಂಗವಿಲ್ಲ, ಮತ್ತು ಯಾರು ದ್ರವ್ಯದ ಅಪೇಕ್ಷೆಯಿಂದ ಸ್ತ್ರೀಲಿಂಗ, ಪುಲ್ಲಿಂಗವಿಲ್ಲ ಹಾಗೂ ಇಟ್ಟಿಗೆ ಸುಡುವ ಬೆಂಕಿಯಂತೆ ವೇದದ ಪ್ರಬಲ ವೇದನೆಯಿಂದ ಕೂಡಿ ಯಾವಾಗಲೂ ಕಲುಷಿತ ಚಿತ್ತವುಳ್ಳವರಿದ್ದಾರೆ ಅವರನ್ನು ನಪುಂಸಕವೇದವೆಂದು ತಿಳಿಯಬೇಕು.

-ಪ್ರಾಕೃತ ಪಂಚಸಂಗ್ರಹ ೧-೧೩೭.

**ನಯ :-** ವಸ್ತುವನ್ನು ನಾನಾ ಸ್ವಭಾವಗಳಿಂದ ಅಗಲಿಸಿ ಒಂದು ಸ್ವಭಾವದಲ್ಲಿ ಯಾವುದು ಪ್ರಾಪ್ತ ಮಾಡಿಸುತ್ತದೆ ಅದನ್ನು ನಯವೆನ್ನುತ್ತಾರೆ. ವಸ್ತುವು ಅನಂತ ಧರ್ಮಾತ್ಮಕವಾಗಿರುವ ಕಾರಣದಿಂದ ಅತ್ಯಂತ ಜಟಿಲವಾಗಿದೆ. ಅದನ್ನು ತಿಳಿದುಕೊಳ್ಳಲಾಗುತ್ತದೆ. ವಿನಹ ಹೇಳಲಾಗುವುದಿಲ್ಲ. ಅದನ್ನು ಹೇಳುವುದಕ್ಕಾಗಿ ವಸ್ತುವಿನ ವಿಶ್ಲೇಷಣೆಮಾಡಿ ಒಂದೊಂದು ಧರ್ಮದಿಂದ ಕ್ರಮವಾಗಿ ಅದರ ನಿರೂಪಣೆ ಮಾಡದ ಹೊರತು ಬೇರೆ ಉಪಾಯವಿಲ್ಲ. ಯಾವ ಧರ್ಮವನ್ನು ಮೊದಲು ಯಾವ ಧರ್ಮವನ್ನು ಅನಂತರ ಹೇಳಬೇಕೆಂಬುದರ ಯಾವ ನಿಯಮವೂ ಇಲ್ಲ. ಒಂದು ಧರ್ಮವನ್ನು ಮುಖ್ಯಮಾಡಿ ಕಥನ ಮಾಡುವಾಗ ಉಳಿದ ಧರ್ಮಗಳು ಗೌಣವಾಗಿರುತ್ತವೆ ವಿನಹ ನಿಷಿದ್ಧವಾಗಿರುವುದಿಲ್ಲ. ನಿಷ್ಪಕ್ಷಪಾತಿಯು ಆ ಪ್ರರೂಪಣೆಯನ್ನು ಕ್ರಮ ಪೂರ್ವಕವಾಗಿ ಕೇಳಿ, ಕೊನೆಗೆ ವಸ್ತುವಿನ ಯಥಾರ್ಥ ಅಖಂಡ ಸ್ವರೂಪವನ್ನು ಗ್ರಹಣ ಮಾಡುತ್ತಾನೆ ಆದ್ದರಿಂದ ಈ ನ್ಯಾಯವನ್ನು ಸಿದ್ಧಾಂತರೂಪದಲ್ಲಿ ಸ್ವೀಕರಿಸುವುದು ನ್ಯಾಯ ಸಮ್ಮತವಾಗಿದೆ. ಈ ನ್ಯಾಯವು ವಸ್ತುವಿನ ನಿಕಟದಲ್ಲಿ ಕೊಂಡೊಯ್ಯುವುದರಿಂದ 'ನಯತೀತ ನಯಃ ಎಂಬ ನ್ಯಾಯಕ್ಕನುಸರಿಸಿ ನಯವೆಂದು ಹೇಳಲಾಗುತ್ತದೆ. ಸಂಪೂರ್ಣ ವಸ್ತುವಿನ ಜ್ಞಾನಕ್ಕೆ ಪ್ರಮಾಣವೆಂದೂ ಅದರ ಅಂಶಕ್ಕೆ ನಯ'ವೆಂದೂ ಹೇಳುತ್ತಾರೆ. ವಸ್ತುವಿನ ಸಾಮಾನ್ಯಾಂಶವನ್ನು ಎಂದರೆ ದ್ರವ್ಯವನ್ನು ವಿಷಯವನ್ನಾಗಿ ಮಾಡುವಂಥನಯವು ದ್ರವ್ಯಾರ್ಥಿಕವು ಮತ್ತು ಅದರ ವಿಶೇಷಾಂಶವನ್ನು ಎಂದರೆ ಪರ್ಯಾಯವನ್ನು ವಿಷಯವನ್ನಾಗಿ ಮಾಡುವಂಥ ನಯವು ಪರ್ಯಾಯಾರ್ಥಿಕವಾಗುತ್ತದೆ. ಮೂಲ ಇವೆರಡೂ ಭೇದಗಳಲ್ಲಿ ಮುಂದೆ ಅನೇಕ ಉತ್ತರ ಭೇದಗಳಾಗುತ್ತವೆ ಅದರಂತೆ ವಸ್ತುವಿನ ಅಂತರಂಗ ರೂಪವನ್ನು ವಿಷಯವನ್ನಾಗಿ ಮಾಡುವಂಥ ನಯವು ನಿಶ್ಚಯವು ಮತ್ತು ಬಾಹ್ಯರೂಪವನ್ನು ವಿಷಯವನ್ನಾಗಿ ಮಾಡುವಂಥ ನಯವು ವ್ಯವಹಾರವಾಗುತ್ತದೆ. ನಿಶ್ಚಯನಯವೇ ಸಮ್ಯಕ್ತ್ವಕ್ಕೆ ಕಾರಣವಾಗಿದೆ, ಅದರಿಂದಲೇ ಆತ್ಮನು ಅಂತರ್ದೃಷ್ಟಿಯಾಗುತ್ತಾನೆ.

(ಹೆಚ್ಚಿನ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೨ ರಲ್ಲಿ ಪುಟ ೫೦೬ ರಿಂದ ೫೬೮ ರವರೆಗೆ ನೋಡುವುದು.)

**ನರಕಗತಿ :-** ಯಾವ ಗತಿಯ ಉದಯವು ಸಂಪೂರ್ಣವಾಗಿ ಅಶುಭ ಕರ್ಮಗಳ ಉದಯಕ್ಕೆ ಸಹಕಾರ ಕಾರಣವಾಗಿದೆ ಅದನ್ನು ನರಕಗತಿಯೆನ್ನುತ್ತಾರೆ. -ಧವಲ ೧/೧, ೨೪/೨೦೧/೬.

**ನರಕಾಯು :-** ಕಠೋರ ಕಲ್ಲಿನಂತಿರುವ ತೀವ್ರ ಮಾನ, ಪರ್ವತಶ್ರೇಣಿಯಂತಿರುವ ಅಭೇದ್ಯ ಕ್ರೋಧ, ಮಿಥ್ಯಾದೃಷ್ಟಿಯಾಗಿರುವುದು, ತೀವ್ರ ಲೋಭಿಯಾಗಿರುವುದು, ಯಾವಾಗಲೂ ನಿರ್ದಯಿಯಾಗಿರುವುದು, ಜೀವಘಾತ ಮಾಡುವುದು, ಹುಸಿ ನುಡಿಯುವುದರಲ್ಲಿ ಪ್ರೇಮವಿಡುವುದು, ಯಾವಾಗಲೂ ಪರಧನವನ್ನು ಎತ್ತಿಹಾಕುವುದರಲ್ಲಿ ತತ್ಪರವಿರುವುದು, ನಿತ್ಯ ಮೈಥುನಸೇವೆ ಮಾಡುವುದು,ಕಾಮ ಭೋಗದ ಅಭಿಲಾಷೆ ಮಾಡುವುದು, ಸಾಧು ಧರ್ಮದ ಉಚ್ಛೇದ ಮಾಡುವುದು, ನಾಯಿ, ಬೆಕ್ಕು, ಕೋಳಿ ಮೊದಲಾದ ಪಾಪಿ ಪ್ರಾಣಿಗಳನ್ನು ಸಾಕುವುದು, ಶೀಲ-ಸಂಯಮ ರಹಿತವಾಗಿರುವುದು, ಆರಂಭ ಪರಿಗ್ರಹಗಳನ್ನು ಹೆಚ್ಚಾಗಿ ಬೆಳೆಸುವುದು, ಕೃಷ್ಣಲೇಶ್ಯೆಯಿಂದಿರುವುದು, ನಾಲ್ಕೂ ರೌದ್ರಧ್ಯಾನಗಳಲ್ಲಿ ನಿರತವಾಗಿರುವುದು-ಈ ಎಲ್ಲ ಅಶುಭ ಕರ್ಮಗಳು ನರಕಾಯುವಿನ ಬಂಧಕ್ಕೆ ಕಾರಣವಾಗಿವೆ.

-ತತ್ತ್ವಾರ್ಥಸಾರ. ೪/೩೦-೩೮

**ನರಕಗತ್ಯಾನುಪೂರ್ವಿ :-** ಯಾವುದರ ಉದಯದಿಂದ ಮೊದಲಿನ ಶರೀರದ ಆಕಾರವು ವಿನಾಶವಾಗುವುದಿಲ್ಲ ಅದು ಆನುಪೂರ್ವಿ ನಾಮಕರ್ಮವಿದೆ. ಆನುಪೂರ್ವಿನಾಮಕರ್ಮದಿಂದ ಐಚ್ಛಿಕಗತಿಯಲ್ಲಿ ಗಮನವಾಗುವುದು.

-ರಾಜವಾರ್ತಿಕ. ೮/೧೧/೧೧/೫೭೭

**ನಾಮನಿಕ್ಷೇಪ :-** ಹೆಸರಿನ ಪ್ರಕಾರ ಯಾವುದರಲ್ಲಿ ಗುಣಗಳಿರುವುದಿಲ್ಲ ಅಂಥ ವಸ್ತುವಿನಲ್ಲಿ ವ್ಯವಹಾರದ ಸಲುವಾಗಿ ತಮ್ಮ ಇಚ್ಛೆಗನುಸರಿಸಿ ಕೊಡಲಾದ ಹೆಸರುಗಳಿಗೆ ನಾಮನಿಕ್ಷೇಪವೆಂದು ಹೇಳುತ್ತಾರೆ.

**ನಿಗೋದ :-** ಸಾಧಾರಣವೆಂಬ ಹೆಸರಿನ ನಾಮಕರ್ಮದ ಉದಯದಿಂದ ಜೀವವು ನಿಗೋದ ಶರೀರಿಯಾಗುತ್ತದೆ. 'ನಿ' ಯಾವುದರ ಅನನ್ಯತೆಯು ನಿಶ್ಚಿತವಿದೆ ಅಂಥ ಜೀವಗಳಿಗೆ 'ಗೋ' ಎಂದರೆ ಒಂದೇ ಕ್ಷೇತ್ರ 'ದ' ಎಂದರೆ ಕೊಡುತ್ತದೆ ಅದನ್ನು ನಿಗೋದವೆಂದು ಹೇಳುತ್ತಾರೆ. ಎಂದರೆ ಯಾವುದು ಅನಂತ ಜೀವಗಳಿಗೆ ಒಂದು ನಿವಾಸಕೊಡುತ್ತದೆ ಅದನ್ನು ನಿಗೋದವೆನ್ನುತ್ತಾರೆ.

**ನಿತ್ಯನಿಗೋದ :-** ಯಾವ ಜೀವಗಳಲ್ಲಿ ಎಂದೂ ತ್ರಸಪರ್ಯಾಯವನ್ನು ಪ್ರಾಪ್ತಮಾಡಿಕೊಳ್ಳುವ ಯೋಗ್ಯತೆಯಿಲ್ಲ ಅವು ನಿತ್ಯ ನಿಗೋದಿಗಳಾಗಿವೆ.

**ನಿರ್ಜರೆ :-** ಕರ್ಮಗಳನ್ನು ಜಾಡಿಸುವುದರ ಹೆಸರು ನಿರ್ಜರೆಯಿದೆ. ಇದರಲ್ಲಿ ಸವಿಪಾಕ, ಅವಿಪಾಕವೆಂದು ಎರಡು ಭೇದಗಳಿವೆ. ಕರ್ಮಗಳ ಉದಯವು ತನ್ನ ಸಮಯದಲ್ಲಿ ತಾನೇ ಬಂದು ಉದುರುತ್ತಿರುವುದು **ಸವಿಪಾಕವಿದೆ** ಮತ್ತು ಸಮಯಕ್ಕಿಂತ ಮುಂಚೆಯೇ ತಪದ ಮುಖಾಂತರ ಅವನ್ನು ಉದುರಿಸುವುದು **ಅವಿಪಾಕ** ನಿರ್ಜರೆಯಿದೆ. ಇವುಗಳಲ್ಲಿ ಸವಿಪಾಕನಿರ್ಜರೆಯು ಎಲ್ಲ ಜೀವಗಳಿಗೂ ಯಾವಾಗಲೂ ನಿರಂತರವಾಗಿ ಆಗುತ್ತಿರುತ್ತದೆ. ಆದರೆ ಅವಿಪಾಕ ನಿರ್ಜರೆಯು ಕೇವಲ ತಪಸ್ವಿಗಳಿಗೇನೆ ಆಗುತ್ತದೆ. ಅದರಲ್ಲೂ ಮಿಥ್ಯೆ ಮತ್ತು ಸಮ್ಯಕ್ತ್ವವೆಂದು ಎರಡು ಪ್ರಕಾರಗಳಿವೆ. ಇಚ್ಛೆಯ ನಿರೋಧವಿಲ್ಲದೆ ಕೇವಲ ಬಾಹ್ಯತಪದಿಂದ ಮಾಡಲಾದದ್ದು ಮಿಥ್ಯೆ ಮತ್ತು ಸಾಮ್ಯತೆಯ ವೃದ್ಧಿಯಿಂದ ಕೂಡಿದ ಕಾಯಕ್ಲೇಶಾದಿಗಳಿಂದ ಮಾಡಲಾದದ್ದು ಸಮ್ಯಕ್ತ್ವವಿದೆ. ಮೊದಲನೆಯದರಲ್ಲಿ ಕರ್ಮಗಳ ಆಗಮನರೂಪವಾದ ಸಂವರೆಗೆ ತಡೆಯುಂಟಾಗುವುದಿಲ್ಲ ಮತ್ತು ಎರಡನೆಯದರಲ್ಲಿ ತಡೆಯುಂಟಾಗುತ್ತದೆ. ಆದ್ದರಿಂದ ಮೋಕ್ಷಮಾರ್ಗದಲ್ಲಿ ಕೊನೆಯ ಈ ಸಮ್ಯಕ್ ಅವಿಪಾಕ ನಿರ್ಜರೆಯದೇ ನಿರ್ದೇಶವಾಗುತ್ತದೆ ಮೊದಲನೆಯ ಮಿಥ್ಯಾ ಸವಿಪಾಕ ನಿರ್ಜರೆಯದಲ್ಲ. ವೀತರಾಗ ಸಮ್ಯಗ್ದೃಷ್ಟಿಗಳ ಪುಣ್ಯ ಹಾಗೂ ಪಾಪಗಳೆರಡೂ ನಾಶವಾದ ಮೇಲೆ ಅವಿಪಾಕ ನಿರ್ಜರೆಯು ಅದೇ ಭವದಲ್ಲಿ ಮೋಕ್ಷಕ್ಕೆ ಕಾರಣವಾಗುತ್ತದೆ. -ದ್ರ.ಸಂ. ಟೀಕೆ. ೩೬/೧೫೨

**ನಿದಾನ :-** ಯಾವುದರಲ್ಲಿ ಅಥವಾ ಯಾವುದರ ಕಾರಣಕ್ಕಾಗಿ ಅವಶ್ಯವಾಗಿ ಲಕ್ಷ್ಯ ಕೊಡಲಾಗುತ್ತದೆ ಅದು ನಿದಾನವಿದೆ. ಇದರಲ್ಲಿ ಪ್ರಶಸ್ತ ಹಾಗೂ ಅಪ್ರಶಸ್ತವೆಂದು ಎರಡು ಪ್ರಕಾರಗಳಿವೆ. ಪೌರುಷ, ಶಾರೀರಿಕಬಲ, ವೀರ್ಯಾಂತರಾಯ ಕರ್ಮವು ಕ್ಷಯೋಪಶಮವಾಗುವುದರಿಂದ ಉತ್ಪನ್ನವಾಗುವಂಥ ದೃಢವಾದ ಪರಿಣಾಮ, ವಜ್ರ ವೃಷಭನಾರಾಚಸಂಹನನ ಈ ಎಲ್ಲ ಸಂಯಮ ಸಾಧಕವಾದ ಸಾಮಗ್ರಿಗಳು ನನಗೆ ಪ್ರಾಪ್ತವಾಗಲಿ ಎಂದು ಮನಸ್ಸಿನ ಏಕಾಗ್ರತೆಯಾಗುತ್ತದೆ ಅದನ್ನು ಅಪ್ರಶಸ್ತ ನಿದಾನವೆನ್ನುತ್ತಾರೆ. ಅಭಿಮಾನಕ್ಕೆ ವಶವಾಗಿ ಉತ್ತಮ ಮಾತೃ-ಪಿತೃಗಳ ವಂಶವನ್ನಿಚ್ಛಿಸುವುದು. ಆಚಾರ್ಯ, ಗಣಧರ, ತೀರ್ಥಂಕರ ಪದವಿಗಳನ್ನು ಮತ್ತು ಸೌಭಾಗ್ಯ ಸೌಂದರ್ಯಗಳನ್ನು ಪ್ರಾರ್ಥಿಸುವುದೆಲ್ಲವು ಅಪ್ರಶಸ್ತ ನಿದಾನವಿದೆ. ಏಕೆಂದರೆ ಮಾನಕಷಾಯಕ್ಕೆ ಬಲಿಬಿದ್ದು ಉಪಯುಕ್ತ ಅವಸ್ಥೆಯ ಅಭಿಲಾಷೆ ಮಾಡಲಾಗುತ್ತದೆ. ಮರಣ ಸಮಯಕ್ಕೆ ಕ್ರೋಧ ವಶದಿಂದ ಶತ್ರುನಾಶ ಮೊದಲಾದವುಗಳ ಅಭಿಲಾಷೆ ಮಾಡುವುದು ಭೋಗಕೃತನಿದಾನವಿದೆ. -ಭ. ಆರಾಧನೆ-೧೨೧೬.

**''ತಪೋವಲ್ಲಿಯೊಳಪ್ಪನಲ್ಪಸುಖಮೆಲ್ಲಮನಲ್ಪ ಸುಖಕ್ಕೆ ಮಾರಿ ಬಂದಿಲ್ಲಿ ನಿದಾನದಿಂದತಿಬಲಂಗೆ ಮಹಾಬಲನಾಗಿ ಪುಟ್ಟಿದಂ''** -ಮಹಾಕವಿ ಪಂಪನ ಆದಿಪುರಾಣದಿಂದ

**ನಿದ್ರಾನಿದ್ರಾ :-** ಮದ, ಖೇದ ಮತ್ತು ಪರಿಗ್ರಹ ಜನ್ಯದಿಂದಾದ ಆಯಾಸವನ್ನು ದೂರ ಮಾಡುವುದಕ್ಕಾಗಿ ನಿದ್ರೆ ಹೋಗುವುದು ನಿದ್ರೆಯಿದೆ ಅದರ ಪ್ರವೃತ್ತಿಯು ಉತ್ತರೋತ್ತರ ಎಂದರೆ ಪುನಃ ಪುನಃ ಆಗುವುದು ನಿದ್ರಾನಿದ್ರಾ ನಾಮಕರ್ಮವಿದೆ. -ಸರ್ವಾರ್ಥಸಿದ್ಧಿ. ೮/೭/೩೮೩/೫

**ನಿಮಿತ್ತ :-** ಪ್ರತ್ಯಯ, ಕಾರಣ, ನಿಮಿತ್ತ ಇವು ಏಕಾರ್ಥವಾಚಿಯಾಗಿವೆ. ಇನ್ನು ಕರ್ಮದ ಕುರಿತು ಸಂಚಲ ನೋದ್ದೇಶಕ್ಕೆ ಕಾರಣವೆನ್ನುತ್ತಾರೆ. ಅದರಲ್ಲಿ ಅಂತರಂಗ, ಬಹಿರಂಗವೆಂದು ಎರಡು ಪ್ರಕಾರಗಳಿವೆ. ಅಂತರಂಗಕ್ಕೆ ಉಪಾದಾನ ಮತ್ತು ಬಹಿರಂಗಕ್ಕೆ ನಿಮಿತ್ತವೆನ್ನುತ್ತಾರೆ. ಪ್ರತಿಯೊಂದು ಕಾರ್ಯವು ಇವೆರಡರ ಅನುಗ್ರಹಕ್ಕೆ ಒಳಗಾಗಿವೆ. ನಿಮಿತ್ತದಲ್ಲಿ ಸಾಧಾರಣ, ಅಸಾಧಾರಣವೆಂದು ಅನೇಕ ಪ್ರಕಾರಗಳಿವೆ. ಆದಾಗ್ಯೂ ಶುದ್ಧದ್ರವ್ಯಗಳ ಒಂದು ಸಮಯಸ್ಥಾಯಿಯಾದ ಶುದ್ಧ ಪರ್ಯಾಯಗಳಲ್ಲಿ ಕೇವಲಕಾಲದ್ರವ್ಯವೇ ಸಾಧಾರಣ ನಿಮಿತ್ತವಾಗುತ್ತದೆ ಎಂದರೆ ಉಳಿದ ನಿಮಿತ್ತಗಳಿಗೆ ವಿಶ್ವದಲ್ಲಿ ಯಾವ ಸ್ಥಾನವೇ ಇಲ್ಲವೆಂದಲ್ಲ, ಪ್ರೇರಕ ಮೊದಲಾದ ನಿಮಿತ್ತಗಳಿಂದ ಯಥಾಯೋಗ್ಯರೂಪದಲ್ಲಿ ಅನುಗ್ರಹಿಸಲ್ಪಡುತ್ತವೆ. ಆದರೂ ಉಪಾದಾನದ ಶಕ್ತಿಯೇ ಎಲ್ಲೆಡೆಗೆ ಪ್ರಧಾನವಾಗಿರುತ್ತದೆ. ಏಕೆಂದರೆ ಅದರ ಅಭಾವದಲ್ಲಿ ನಿಮಿತ್ತವು ಯಾವುದರ ಜೊತೆಯಲ್ಲೂ ಬಲವಂತ ಮಾಡುವುದಿಲ್ಲ. ಆದರೆ ಕಾರ್ಯೋತ್ಪತ್ತಿಯಲ್ಲಿ ಎರಡರ ಸ್ಥಾನವು ಸಮಾನವಾಗಿದ್ದರೂ ನಿರ್ವಿಕಲ್ಪಾವಸ್ಥೆಯಲ್ಲಿರುವ ಸಾಧಕನಿಗೆ ಪರಮಾರ್ಥದ ಆಶ್ರಯವಿರುವುದರಿಂದ ನಿಮಿತ್ತವು ಇಲ್ಲವೇ ಇಲ್ಲವೆನ್ನುವಷ್ಟು ಅದು ಗೌಣವಾಗಿರುತ್ತದೆ. ಸಂಯೋಗಿ ಕಾರ್ಯಗಳ ಮೇಲಿನ ದೃಷ್ಟಿಯು ಹೊರಟು ಹೋಗಿರುವುದರಿಂದ ಅವನಿಗೆ ಕೇವಲ ಉಪಾದಾನವೇ ಕಂಡು ಬರುತ್ತದೆ, ನಿಮಿತ್ತವಿಲ್ಲ. ಮತ್ತು ಅವನ ಸ್ವಾಭಾವಿಕವಾದ ಶುದ್ಧ ಪರಿಣಮನವೇ ಕಂಡು ಬರುತ್ತದೆ ವಿನಃ ಅಶುದ್ಧ ಪರಿಣಮನವಿಲ್ಲ. ಆದಾಗ್ಯೂ ಪೂರ್ವಬದ್ಧ ಕರ್ಮಗಳ ನಿಮಿತ್ತದಿಂದ ಜೀವದ ಪರಿಣಾಮ ಮತ್ತು ಪರಿಣಾಮಗಳ ನಿಮಿತ್ತದಿಂದ ಕರ್ಮಗಳ ಬಂಧ ಹೀಗೆ ಅಖಂಡ ಶೃಂಖಲೆಯು ಹೀಗೆ ಅನಾದಿಯಿಂದ ನಡೆದುಬರುತ್ತದೆ. ಆದರೂ ಸಾಧಕನು ಸತ್ಯಪುರುಷಾರ್ಥದಿಂದ ಈ ಶೃಂಖಲೆಯನ್ನು ಕಡಿದು ಹಾಕಿ ಮುಕ್ತಿಯ ಲಾಭ ಮಾಡಿಕೊಳ್ಳಬಲ್ಲನು, ಏಕೆಂದರೆ ಅದರ ಪ್ರಭಾವದಿಂದ ಅಸ್ತಿತ್ವದಲ್ಲಿರುವ ಕರ್ಮಗಳಲ್ಲಿ ಹೆಚ್ಚಿನ ಅಂತರವಾಗುತ್ತದೆ. ಪರಿಣಮನದಲ್ಲಿ ಉಪಾದಾನದ ಯೋಗ್ಯತೆಯೇ ಪ್ರಧಾನವಾಗಿದೆ. (ನೋಡಿ ಜೈನೇಂದ್ರ ಸಿದ್ಧಾಂತಕೋಶ ಭಾಗ ೨ ರಲ್ಲಿ ಪುಟ ೫೧ ರಿಂದ ೭೪)

**ನಿಮಿತ್ತ-ನೈಮಿತ್ತಿಕ ಸಂಬಂಧ :-** ಆತ್ಮನು ಪ್ರಕೃತಿಯ ನಿಮಿತ್ತದಿಂದ ಉತ್ಪನ್ನವಾಗುತ್ತಾನೆ ಮತ್ತು ನಷ್ಟವಾಗುತ್ತಾನೆ, ಅದರಂತೆ ಪ್ರಕೃತಿಯೂ ಆತ್ಮನ ನಿಮಿತ್ತದಿಂದ ಉತ್ಪನ್ನವಾಗುತ್ತದೆ ಮತ್ತು ನಷ್ಟವಾಗುತ್ತದೆ. ಹೀಗೆ ಪರಸ್ಪರ ನಿಮಿತ್ತದಿಂದ ಆತ್ಮ ಮತ್ತು ಪ್ರಕೃತಿ ಇವೆರಡರ ಬಂಧವಾಗುತ್ತದೆ, ಇದರಿಂದ ಸಂಸಾರವಾಗುತ್ತದೆ ಇದನ್ನು ನಿಮಿತ್ತ ನೈಮಿತ್ತಿಕ ಸಂಬಂಧವೆನ್ನುತ್ತಾರೆ. -(ಸಮಯಸಾರ ಗಾ. ೩೧೨, ೩೧೩.)

**ನಿರ್ವಿಚಿಕಿತ್ಸೆ :-** ಸ್ವಭಾವದಿಂದ ಅಪವಿತ್ರವೂ ಮತ್ತು ರತ್ನತ್ರಯದಿಂದ ಪವಿತ್ರವೂ ಆದಂಥ ಧರ್ಮಾತ್ಮರುಗಳ ಶರೀರದಲ್ಲಿ ಗ್ಲಾನಿಪಟ್ಟುಕೊಳ್ಳದಿರುವುದೂ ಮತ್ತು ಅವರ ಗುಣಗಳಲ್ಲಿ ಪ್ರೀತಿ ಮಾಡುವುದೂ ಇದನ್ನು ಸಮ್ಯಗ್ದರ್ಶನದ ನಿರ್ವಿಚಿಕಿತ್ಸಾಂಗವೆಂದು ಮನ್ನಿಸಲಾಗಿದೆ. ಇದರಲ್ಲಿ ದ್ರವ್ಯನಿರ್ವಿಚಿಕಿತ್ಸೆ, ಭಾವನಿರ್ವಿಚಿಕಿತ್ಸೆಯೆಂದು ಎರಡು ಪ್ರಕಾರಗಳು. ಸಾಧು ಶರೀರದ ಮಲ-ಮೂತ್ರಾದಿಗಳನ್ನು ನೋಡಿ ಗ್ಲಾನಿಪಟ್ಟುಕೊಳ್ಳದಿರುವುದು ದ್ರವ್ಯ ನಿರ್ವಿಚಿಕಿತ್ಸೆಯಿದೆ ಮತ್ತು ಕ್ಷುಧೆ ಮೊದಲಾದ ಇಪ್ಪತ್ತೆರಡು ಪರೀಷಹಗಳಲ್ಲಿ ಸಂಕ್ಲೇಶಪರಿಣಾಮ ಮಾಡದಿರುವುದು ಭಾವನಿರ್ವಿಚಿಕಿತ್ಸೆಯಿದೆ.

-ರತ್ನಕರಂಡಕ ಶ್ರಾ. ೧೩

**ನಿಷೇಕ :-** 'ನಿಷೇಚನಂ ನಿಷೇಕಃ' ಎಂಬ ನಿರುಕ್ತಿಗೆ ಅನುಸಾರವಾಗಿ ಆಯುಕರ್ಮವೊಂದನ್ನುಳಿದು ಉಳಿದ ಏಳೂ ಕರ್ಮಗಳು ತಮ್ಮ-ತಮ್ಮ ಉತ್ಕೃಷ್ಟಸ್ಥಿತಿಯಿಂದ ಅವುಗಳ ಆಬಾಧಾಕಾಲವನ್ನು ಕಡಿಮೆ ಮಾಡಿ ಯಾವ ಶೇಷ ಉಳಿಯುತ್ತದೆ ಅಷ್ಟು ಕಾಲದ ಸಮಯಗಳೆಷ್ಟಾಗುತ್ತವೆ ಅಷ್ಟನ್ನೇ ಆಯಾಕರ್ಮದ ನಿಷೇಕವೆಂದು ತಿಳಿಯಬೇಕು. ಮತ್ತು ಆಯುಕರ್ಮದ ಸ್ಥಿತಿಯ ಪ್ರಮಾಣಕಾಲದ ಸಮಯಗಳಷ್ಟು ಅದರ ನಿಷೇಕಗಳಿವೆ, ಏಕೆಂದರೆ ಆಯುವಿನ ಆಬಾಧಾವು ಪೂರ್ವಭವದ ಆಯುವಿನಲ್ಲಿ ವ್ಯತೀತವಾಗಿರುತ್ತದೆ. ಇನ್ನು ಕರ್ಮಪರಮಾಣುಗಳನ್ನು ಸ್ಕಂಧಗಳನ್ನು ನಿಕ್ಷೇಪಣ ಮಾಡುವುದರ ಹೆಸರು ನಿಷೇಕವಿದೆ. ಗೋ.ಕ. ಮೂಲ. ೧೬೦ ೧೯೪

**ನೀಚಗೋತ್ರ :-** ಯಾವುದರ ಉದಯದಿಂದ ನಿಂದ್ಯ ಎಂದರೆ ದರಿದ್ರ, ಪ್ರಸಿದ್ಧವಲ್ಲದ ಮತ್ತು ದುಃಖ ಹಾಗೂ ಆಕುಲತೆಗಳಿಂದ ಕೂಡಿದ ಕುಲಗಳಲ್ಲಿ ಜನ್ಮವಾಗುವುದು ಅದು ನೀಚಗೋತ್ರವಿದೆ. ಇನ್ನು ಯಾವುದರಿಂದ ಆತ್ಮವು ಕೀಳು ವ್ಯವಹಾರಗಳಲ್ಲಿ ಬರುತ್ತದೆ ಅದು ನೀಚಗೋತ್ರವಿದೆ. -ರಾಜವಾರ್ತಿಕ, ೬/೨೫/೬/೫೩೧/೭

**ನೋಕರ್ಮ :-** ಔದಾರಿಕ, ವೈಕ್ರಿಯಿಕ, ಆಹಾರಕ ಮತ್ತು ತೈಜಸ ನಾಮಕರ್ಮದ ಉದಯದಿಂದ ನಾಲ್ಕು ಪ್ರಕಾರದ ಶರೀರಗಳಾಗುತ್ತವೆ ಅವೆಲ್ಲವು ನೋಕರ್ಮಶರೀರಗಳಾಗಿವೆ. ಐದನೆಯದಾದ ಯಾವ ಕಾರ್ಮಣ ಶರೀರವಿದೆ ಅದು ಕರ್ಮರೂಪವೇ ಇದೆ.

**ನೋಕಷಾಯ :-** ಇಲ್ಲಿ ಈಷತ್ ಎಂದರೆ ಕಿಂಚಿತ್ ಅರ್ಥದಲ್ಲಿ 'ನತ್ರ್' ಶಬ್ದದ ಪ್ರಯೋಗವಾಗುವುದರಿಂದ ಕಿಂಚಿತ್ ಕಷಾಯವನ್ನು ಅಕಷಾಯ ಇಲ್ಲವೆ ನೋಕಷಾಯವೆಂದು ಹೇಳುತ್ತಾರೆ.

**ಪರ್ಯಾಪ್ತ-ಅಪರ್ಯಾಪ್ತ :-** ಯಾವ ಪ್ರಕಾರ ಗೃಹ, ವಸ್ತ್ರ ಮೊದಲಾದ ಅಚೇತನ ದ್ರವ್ಯಗಳು ಪೂರ್ಣ ಮತ್ತು ಅಪೂರ್ಣವೆಂದು ಎರಡು ಪ್ರಕಾರಗಳಿಂದಾಗುತ್ತವೆ, ಅದೇ ಪ್ರಕಾರ ಜೀವಗಳೂ ಪೂರ್ಣ ಮತ್ತು ಅಪೂರ್ಣವೆಂದು ಎರಡು ಪ್ರಕಾರಗಳಿಂದಾಗುತ್ತವೆ. ಪೂರ್ಣ ಜೀವಗಳಿಗೆ ಪರ್ಯಾಪ್ತವೆಂದೂ ಮತ್ತು ಅಪೂರ್ಣ ಜೀವಗಳಿಗೆ ಅಪ್ರರ್ಯಾಪ್ತವೆಂದು ತಿಳಿದುಕೊಳ್ಳಬೇಕು.

**ಪ್ರಯಾಪ್ತಿ :-** ಯೋನಿಮಾರ್ಗದಲ್ಲಿ ಪ್ರವೇಶ ಮಾಡಿದ ಕೂಡಲೇ ಜೀವವು ಅಲ್ಲಿ ತನ್ನ ಶರೀರಕ್ಕೆ ಯೋಗ್ಯವಾದ ಕೆಲವು ಪುದ್ಗಲವರ್ಗಣೆಗಳನ್ನು ಗ್ರಹಣ ಇಲ್ಲವೆ ಆಹಾರ ಮಾಡುತ್ತದೆ. ಅನಂತರ ಅವುಗಳಿಂದ ಕ್ರಮವಾಗಿ ಶರೀರ, ಶ್ವಾಸ, ಇಂದ್ರಿಯ, ಭಾಷೆ ಹಾಗೂ ಮನಸ್ಸುಗಳನ್ನು ನಿರ್ಮಿಸುತ್ತದೆ. ಒಂದು ವೇಳೆ ಸ್ಥೂಲ ದೃಷ್ಟಿಯಿಂದ ನೋಡಿದರೆ ಈ ಕಾರ್ಯಗಳಿಗೆ ಬಹಳಷ್ಟು ಕಾಲ ಬೇಕಾಗುತ್ತದೆ, ಆದರೆ ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಈ ಮೇಲೆ ಹೇಳಿದ ಆರೂ ಕಾರ್ಯಗಳ ಶಕ್ತಿಯನ್ನು ಒಂದು ಅಂತರ್ಮುಹೂರ್ತದಲ್ಲಿ ಪೂರ್ಣಮಾಡಿಕೊಳ್ಳುತ್ತದೆ. ಇವಕ್ಕೇ ಅದರ ಆರು ಪರ್ಯಾಪ್ತಿಗಳೆಂದು ಹೇಳುತ್ತಾರೆ. ಏಕೇಂದ್ರಿಯ ಮೊದಲಾದ ಜೀವಗಳಿಗೆ ನಾಲ್ಕು, ಐದು, ಆರರವರೆಗೆ ಪರ್ಯಾಪ್ತಿಗಳು ಸಂಭವಿಸುತ್ತವೆ. ಎಲ್ಲಿಯವರೆಗೆ ಶರೀರವು ಪರ್ಯಾಪ್ತಿ ನಿಷ್ಪನ್ನವಾಗುವುದಿಲ್ಲ ಅದುವರೆಗೆ ಅದು ನಿರ್ವೃತ್ತಿಪರ್ಯಾಪ್ತಿಯೆಂಬ ಸಂಜ್ಞೆಗೆ ಪ್ರಾಪ್ತವಾಗುವುದಿಲ್ಲ ಮತ್ತು ಶರೀರ ಪರ್ಯಾಪ್ತಿಯನ್ನು ಪೂರ್ಣ ಮಾಡಿಕೊಂಡ ಮೇಲೆ ಇನ್ನೂ ಇಂದ್ರಿಯ ಮೊದಲಾದ ನಾಲ್ಕು ಪರ್ಯಾಪ್ತಿಗಳನ್ನು ಪೂರ್ಣ ಮಾಡಿಕೊಳ್ಳದಿದ್ದರೂ ಪರ್ಯಾಪ್ತಿಯೆನ್ನಿಸಿಕೊಳ್ಳುತ್ತದೆ. ಕೆಲವು ಜೀವಗಳಂತೂ ಶರೀರ ಪರ್ಯಾಪ್ತಿಯನ್ನು ಪೂರ್ಣ ಮಾಡಿಕೊಳ್ಳದೆಯೇ ಸತ್ತು ಹೋಗುತ್ತವೆ. ಅವು ಕ್ಷುದ್ರಭವವುಳ್ಳ ಒಂದು ಸಮಯದಲ್ಲಿ ೧೮ ಸಲ ಜನ್ಮ-ಮರಣ ಮಾಡುವಂಥ **ಲಬ್ಧಿಪರ್ಯಾಪ್ತಿ** ಜೀವಗಳಿವೆ.

**ಪರ್ಯಾಯ :-** ಪರ್ಯಾಯದ ನಿಜವಾದ ಅರ್ಥವೆಂದರೆ ವಸ್ತುವಿನ ಅಂಶವಿದೆ. ಇದು ಕ್ರಮಭಾವಿ, ಸಹಭಾವಿ ಇಲ್ಲವೆ ಗುಣಾತ್ಮಕ, ದ್ರವ್ಯಾತ್ಮಕ ಅಥವಾ ದ್ರವ್ಯಪರ್ಯಾಯ, ಗುಣಪರ್ಯಾಯ ಭೇದದಿಂದ ಎರಡು ಪ್ರಕಾರವಿದೆ. ಅದರಲ್ಲಿ ಅನ್ವಯಿಗೆ ಗುಣ ಮತ್ತು ವ್ಯತಿರೇಕಕ್ಕೆ ಪರ್ಯಾಯವೆನ್ನುತ್ತಾರೆ. ಅಂಶದ ಅಪೇಕ್ಷೆಯಿಂದ ಎರಡೂ ಅಂಶಪರ್ಯಾಯಗಳಿವೆ. ಆದರೆ ಕೇವಲ ರೂಢಿಯಿಂದ ವ್ಯತಿರೇಕದ ಅಂಶಕ್ಕೂ ಪರ್ಯಾಯವೆನ್ನುವುದು ಪ್ರಸಿದ್ಧವಿದೆ. ಈ ಪರ್ಯಾಯವೂ ಅರ್ಥ, ವ್ಯಂಜನವೆಂದು ಎರಡು ಪ್ರಕಾರವಾಗುತ್ತದೆ, ಆರೂ ದ್ರವ್ಯಗಳಲ್ಲಿ ಸಮಾನರೂಪದಿಂದಾಗುವ ಕ್ಷಣಸ್ಥಾಯಿಯಾದ ಸೂಕ್ಷ್ಮ ಪರಿಣಮನಕ್ಕೆ ಅರ್ಥಪರ್ಯಾಯವೆನ್ನುತ್ತಾರೆ. ಜೀವ ಮತ್ತು ಪುದ್ಗಲದ ಸಂಯೋಗ ಅವಸ್ಥೆಗಳಿಗೆ ವ್ಯಂಜನಪರ್ಯಾಯವೆನ್ನುತ್ತಾರೆ. ಇಲ್ಲವೆ ಭಾವಾತ್ಮಕಪರ್ಯಾಯಗಳಿಗೆ ಅರ್ಥಪರ್ಯಾಯವೆಂದೂ ಮತ್ತು ಪ್ರದೇಶಾತ್ಮಕವಾದ ಆಕಾರಗಳಿಗೆ ವ್ಯಂಜನಪರ್ಯಾಯವೆಂದೂ ಹೇಳುತ್ತಾರೆ. ಎರಡೂ ಸ್ವಭಾವ, ವಿಭಾವ ಭೇದದಿಂದ ಎರಡು ಪ್ರಕಾರವಾಗುತ್ತವೆ. ಶುದ್ಧದ್ರವ್ಯ ಮತ್ತು ಗುಣಗಳ ಪರ್ಯಾಯವು ಸ್ವಾಭಾವಿಕವಾದರೆ ಅಶುದ್ಧ ದ್ರವ್ಯ ಮತ್ತು ಗುಣಗಳ ಪರ್ಯಾಯವು ವಿಭಾವಿಕವಾಗುತ್ತದೆ. ಈ ಧ್ರುವ ಮತ್ತು ಕ್ಷಣಿಕ ಇವೆರಡೂ ಅಂಶಗಳಿಂದಲೇ ಉತ್ಪಾದ, ವ್ಯಯ, ದ್ರವ್ಯ ರೂಪವಾದ ವಸ್ತುವಿನ ಅರ್ಥಕ್ರಿಯೆಯು ಸಿದ್ಧವಾಗುತ್ತದೆ. ಇನ್ನು ಯಾವುದು ಸ್ವಭಾವ-ವಿಭಾವರೂಪದಿಂದ ಗಮನ ಮಾಡುತ್ತದೆ ಪರ್ಯೇತಿ ಎಂದರೆ ಪರಿಣಮನ ಮಾಡುತ್ತದೆ ಅದು ಪರ್ಯಾಯವಿದೆ.

**ಪರ್ಯಾಯದೃಷ್ಟಿ :-** ಯಾವುದು ಸ್ವಭಾವ-ವಿಭಾವರೂಪದಿಂದ ಗಮನ ಮಾಡುತ್ತದೆ ಪರ್ಯೇತಿ ಎಂದರೆ ಪರಿಣಮನ ಮಾಡುತ್ತದೆ ಅದು ಪರ್ಯಾಯವಿದೆ. ಎಂದರೆ ಪ್ರತಿಸಮಯದಲ್ಲಾಗುವ ಗುಣಗಳ ಪರಿಣಮನಾವಸ್ಥೆಯು ಪರ್ಯಾಯವು. ಇನ್ನು ವಸ್ತುವಿನ ಸಾಮಾನ್ಯ ಅಂಶವನ್ನು ಗೌಣಮಾಡಿ ಈ ಪರ್ಯಾಯವನ್ನು ಗ್ರಹಣ ಮಾಡುವ ಅಪೇಕ್ಷೆಗೆ ಪರ್ಯಾಯದೃಷ್ಟಿಯೆನ್ನುತ್ತಾರೆ.

**ಪರಮಹಂಸ :-** ಇದೊಂದು ನಿಶ್ಚಯ ಮೋಕ್ಷಮಾರ್ಗದ ಅಪರನಾಮವಿದೆ ಪರಮಾತ್ಮಸ್ವರೂಪ, ಪರಮ ಬ್ರಹ್ಮಸ್ವರೂಪ, ಶುದ್ಧಾತ್ಮಸ್ವರೂಪ, ಪರಮಹಂಸಸ್ವರೂಪ -ಇವೇ ಮೊದಲಾಗಿ ಸಂಪೂರ್ಣ ರಾಗಾದಿವಿಕಲ್ಪೋಪಾಧಿ

ಯಿಂದ ರಹಿತವಾದ, ಪರಮಾಹ್ಲಾದಕ ಮುಖಲಕ್ಷಣವುಳ್ಳ, ಧ್ಯಾನಸ್ವರೂಪಿಯಾದಂಥ ನಿಶ್ಚಯಮೋಕ್ಷಮಾರ್ಗವನ್ನು ಹೇಳುವಂಥ ಇನ್ನುಳಿದ ಪರ್ಯಾಯನಾಮಗಳನ್ನು ತಿಳಿದುಕೊಳ್ಳಬೇಕು. ಇನ್ನು ವೈಷ್ಣವ ನಾಗಾ ಸಂಪ್ರದಾಯದ ನಗ್ನಸಾಧುವಿಗೂ ಪರಮಹಂಸವೆನ್ನುತ್ತಾರೆ.

**ಪರಮಾಣು :-** ಪುದ್ಗಲದ್ರವ್ಯದ ಕೊನೆಯದಾದ ಎಲ್ಲಕ್ಕಿಂತ ಚಿಕ್ಕಭಾಗಕ್ಕೆ ಪರಮಾಣುವೆಂದು ಹೇಳುತ್ತಾರೆ. ಇನ್ನು ಯಾವುದು ಅತ್ಯಂತ ತೀಕ್ಷ್ಣವಾದ ಶಸ್ತ್ರದಿಂದಲೂ ಛೇದ-ಭೇದವಾಗುವುದಿಲ್ಲ ಮತ್ತು ಬೆಂಕಿ ಹಾಗೂ ನೀರಿನಿಂದಲೂ ನಾಶವಾಗುವುದಿಲ್ಲ ಅದು ಪರಮಾಣುವಿದೆ. (ಇದರ ಬಗ್ಗೆ ಹೆಚ್ಚಿನ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೩ ರಲ್ಲಿ ಪುಟ ೧೩ ರಿಂದ ೧೮ ರ ವರೆಗೆ ನೋಡುವುದು)

**ಪರೀಷಹ :-** ಶೀತ, ಉಷ್ಣ, ಹಸಿವು, ನೀರಡಿಕೆ ಮೊದಲಾದ ಬಾಧೆಗಳುಂಟಾದರೂ ಆರ್ತ ಪರಿಣಾಮ ಗಳುಂಟಾಗದಿರುವುದು ಅಥವಾ ಧ್ಯಾನದಿಂದ ಚಲಿಸದಿರುವುದು ಪರೀಷಹಜಯವಿದೆ. ಒಂದು ವೇಳೆ ಕಡಿಮೆ ಭೂಮಿಕೆಗಳಲ್ಲಿರುವ ಸಾಧಕನಿಗೆ ಅವುಗಳ ಅನುಭವವಾಗುತ್ತದೆ. ಆದರೆ ವೈರಾಗ್ಯ ಭಾವನೆ ಮೊದಲಾದವುಗಳಿಂದ ಅವನು ಪರಮಾರ್ಥದಿಂದ ಚಲಿಸುವುದಿಲ್ಲ. ಮಾರ್ಗದಿಂದ ಚ್ಯುತನಾಗದಿರುವುದಕ್ಕಾಗಿ ಮತ್ತು ಕರ್ಮಗಳ ನಿರ್ಜರೆಗಾಗಿ ಯಾವವು ಸಹನೆ ಮಾಡಲು ಯೋಗ್ಯವಾಗಿವೆ ಅವು ಪರೀಷಹಗಳಿವೆ.

**ಪ್ರಕೃತಿಬಂಧ :-** ಜ್ಞಾನಾವರಣ ಮೊದಲಾದ ಎಂಟು ಪ್ರಕಾರದ ಕರ್ಮಗಳಿವೆ. ಅವುಗಳಲ್ಲಿ ಆಯಾ ಕರ್ಮಕ್ಕೆ ಯೋಗ್ಯವಾದ ಯಾವ ಪುದ್ಗಲ ದ್ರವ್ಯದ ಸ್ವ-ಆಕಾರವಿದೆ ಅದು ಪ್ರಕೃತಿ ಬಂಧವಿದೆ. (ವಿಶೇಷ ವಿವರಣೆಗಾಗಿ ಜೈನೇಂದ್ರ ಸಿದ್ಧಾಂತಕೋಶ ಭಾಗ ೩ ರಲ್ಲಿ ಪುಟ ೮೭ ರಿಂದ ೧೧೪ ರ ವರೆಗೆ ನೋಡುವುದು)

**ಪ್ರಚಲಾ ಪ್ರಚಲಾ :-** ಯಾವುದು ಶೋಕ, ಶ್ರಮ ಮತ್ತು ಮದ ಮೊದಲಾದವುಗಳ ಕಾರಣದಿಂದ ಉತ್ಪನ್ನವಾಗಿದೆ ಮತ್ತು ಯಾವುದು ಕುಳಿತಂಥ ಪ್ರಾಣಿಯ ನೇತ್ರ ಗಾತ್ರದ ವಿಕ್ರಿಯದ ಸೂಚಕವಿದೆ ಅಂಥ ಯಾವಕ್ರಿಯೆಯು ಆತ್ಮನನ್ನು ಚಂಚಲ ಮಾಡುತ್ತದೆ ಅದು ಪ್ರಚಲಾ ಇದೆ, ಮತ್ತು ಅದರದೇ ಪುನಃ ಪುನಃ ಪ್ರವೃತ್ತಿಯಾಗುವುದು ಅದು ಪ್ರಚಲಾ ಪ್ರಚಲಾ ಇದೆ. -ರಾಜವಾರ್ತಿಕ. ೮/೭/೨-೬/೫೭೨/೬

**ಪ್ರತಿಕ್ರಮಣ :-** ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಜೀವನ ಯಾತ್ರೆಯಲ್ಲಿ ಕಷಾಯ ವಶದಿಂದ ಅಂತರಂಗ ಹಾಗೂ ಬಾಹ್ಯ ದೋಷಗಳು ಹೆಜ್ಜೆ-ಹೆಜ್ಜೆಗೆ ತಗಲುತ್ತವೆ. ಒಂದು ಶ್ರೇಯೋಮಾರ್ಗಕ್ಕಾಗಿ ಅವುಗಳ ಶೋಧನೆಯು ಅವಶ್ಯಕವಾಗಿದೆ, ಭೂತಕಾಲದಲ್ಲಿ ಯಾವ ದೋಷಗಳು ತಗಲಿವೆ ಅವುಗಳ ಶೋಧಕ್ಕಾಗಿ ಪ್ರಾಯಶ್ಚಿತ್ತ, ಪಶ್ಚಾತ್ತಾಪ ಹಾಗೂ ಗುರುಗಳ ಎದುರು ತಮ್ಮ ನಿಂದೆ-ಅವಮಾನ ಮಾಡಿಕೊಳ್ಳುವುದಕ್ಕೆ ಪ್ರತಿಕ್ರಮಣವೆನ್ನುತ್ತಾರೆ. ಹಗಲು, ರಾತ್ರಿ, ಪಕ್ಷ, ತಿಂಗಳು, ವರುಷ ಮೊದಲಾದವುಗಳಲ್ಲಿ ತಗಲಿದ ದೋಷಗಳನ್ನು ದೂರ ಮಾಡುವ ಅಪೇಕ್ಷೆಯಿಂದ ಅದು ಎಷ್ಟೋ ಪ್ರಕಾರವಿದೆ.

**ಪ್ರತಿಮಾ :-** ದೇಶ ಸಂಯಮದ ಪ್ರಾಮುಖ್ಯದಿಂದ ಶ್ರಾವಕರ (ನೈಷ್ಠಿಕ) ಹನ್ನೊಂದು ಸ್ಥಾನಗಳನ್ನು ಕಲ್ಪಿಸಲಾಗಿದೆ ಅವಕ್ಕೆ ಹನ್ನೊಂದು ಪ್ರತಿಮೆ(ನೆಲೆ)ಗಳೆನ್ನುತ್ತಾರೆ. ಹನ್ನೊಂದನೆಯ ಪ್ರತಿಮೆಯಲ್ಲಿ ಪ್ರವೇಶಿಸಿದ ಶ್ರಾವಕನಿಗೆ ಉತ್ಕೃಷ್ಟಶ್ರಾವಕನೆನ್ನುತ್ತಾರೆ. ಇದರಲ್ಲಿ ಕ್ಷುಲ್ಲಕ (ಒಂದು ವಸ್ತ್ರವನ್ನಿಟ್ಟುಕೊಳ್ಳುವವನು) ಮತ್ತು ಐಲಕ (ಕೇವಲ ಲಂಗೋಟಿ ಮಾತ್ರ ಇದ್ದವನು) ಎಂದು ಎರಡು ಪ್ರಕಾರಗಳಿವೆ.

ಇನ್ನು ಮುನಿಗಳು ಹನ್ನೆರಡು ವರ್ಷಗಳ ಕಾರ್ಯಕ್ರಮವನ್ನಿಟ್ಟುಕೊಂಡು ಆಹಾರಗ್ರಹಣ-ತ್ಯಾಗದ ಬಗ್ಗೆ ಹನ್ನೆರಡು ಪ್ರಕಾರದ ನಿಯಮಗಳಿವೆ ಅವಕ್ಕೆ ಆಹಾರ ತ್ಯಾಗದ ಹನ್ನೆರಡು ಪ್ರತಿಮೆಗಳೆನ್ನುತ್ತಾರೆ.

(ನೋಡಿರಿ-ಮೂಲಾರಾಧನೆ ಟೀಕೆ ೨೪೯/೪೮೧/೫)

**ಪ್ರತ್ಯಭಿಜ್ಞಾನ :-** 'ಅದು ಇದೇ ಇದೆ' ಈ ಪ್ರಕಾರದ ಸ್ಮರಣೆಗೆ ಪ್ರತ್ಯಭಿಜ್ಞಾನವೆಂದು ಹೇಳುತ್ತಾರೆ. ಅದು ಆಕಸ್ಮಿಕವಾಗಿಯಂತೂ ಆಗುವುದಿಲ್ಲ. ಆದುದರಿಂದ ಯಾವುದು ಇದರ ಕಾರಣವಿದೆ ಅದೇ ಆ ಭಾವವಿದೆ. ಸಾರಾಂಶವೇನೆಂದರೆ ಮೊದಲು ಯಾವ ರೂಪದ ವಸ್ತುವನ್ನು ನೋಡಲಾಗಿತ್ತು ಅದೇ ರೂಪವು ಪುನಃ ಅವನಿಗಾಗುವುದರಿಂದ 'ಅದೇ ಇದು ಇದೆ' ಎಂಬ ಪ್ರಕಾರದ ಪ್ರತ್ಯಭಿಜ್ಞಾನವಾಗುತ್ತದೆ. ಇದು ಸಮ್ಯಕ್ ಮತ್ತು ಮಿಥ್ಯೆಯೆಂದು ಎರಡು ಪ್ರಕಾರವಾಗಿದೆ. ಸಮ್ಯಕ್ ಪ್ರತ್ಯಿಭಿಜ್ಞಾನವು ಪ್ರಮಾಣಪೂರ್ವಕವಾಗಿ ಆಗುತ್ತದೆ. ಹೇಗೆಂದರೆ ನೀರಿನಲ್ಲೇಳುವ ಚಕ್ರ ಮೊದಲಾದವುಗಳನ್ನು ನೋಡದೆ ಕೇವಲ ನೀರು ಮಾತ್ರದಿಂದ ಮೊದಲು ಗ್ರಹಿಸಿದ ನೀರಿನೊಡನೆ ಸಾದೃಶ್ಯರೂಪದಿಂದ ನೋಡುವುದರಿಂದ 'ಇದು ನೀರೇ ಇದೆ' ಎಂಬ ನಿರ್ಣಯವಾಗುತ್ತದೆ. ಇನ್ನು ಮಿಥ್ಯಾ ಪ್ರತ್ಯಭಿಜ್ಞಾನವು ಪ್ರಮಾಣಪೂರ್ವಕವಾಗಿ ಆಗುವುದಿಲ್ಲ. ಆದರೆ ದೃಷ್ಟಿಯ ಮಂದತೆ ಮೊದಲಾದ ದೋಷಗಳ ಕಾರಣದಿಂದ ಎಂದಾದರೊಮ್ಮೆ ಮೃಗಜಲದಲ್ಲೂ ನೀರಿನ ಅಭಿಪ್ರಾಯವನ್ನು ಹೊಂದಿ ಕೂಡ್ರುತ್ತಾರೆ.

-ನ್ಯಾಯವಿನಿಶ್ಚಯ ೨/೫೦-೫೧/೭೬

**ಪ್ರಥಮೋಪಶಮ ಸಮ್ಯಕ್ತ್ವ :-** ಇದು ಉಪಶಮ ಸಮ್ಯಕ್ತ್ವದ ಒಂದು ಭಾಗವು. ಸಾಸಾದನಸಮ್ಯಗ್ದೃಷ್ಟಿ, ಸಮ್ಯಗ್ಮಿಥ್ಯಾದೃಷ್ಟಿ ಅಥವಾ ವೇದಕ ಸಮ್ಯಗ್ದೃಷ್ಟಿ ಜೀವವು ಪ್ರಥಮೋಪಶಮ ಸಮ್ಯಕ್ತ್ವಕ್ಕೆ ಪ್ರಾಪ್ತವಾಗುವುದಿಲ್ಲ. ಏಕೆಂದರೆ ಈ ಜೀವಗಳಲ್ಲಿ ಆ ಪ್ರಥಮೋಪಶಮ ಸಮ್ಯಕ್ತ್ವ ರೂಪವಾದ ಪರ್ಯಾಯದಿಂದ ಪರಿಣಮಿಸುವ ಶಕ್ತಿಯಿರುವುದಿಲ್ಲ. ಉಪಶಮಶ್ರೇಣಿಯನ್ನು ಹತ್ತುವ ವೇದಕ ಸಮ್ಯಗ್ದೃಷ್ಟಿ ಜೀವವು ಒಂದು ವೇಳೆ ಉಪಶಮಸಮ್ಯಕ್ತ್ವವನ್ನು ಪ್ರಾಪ್ತಮಾಡಿಕೊಳ್ಳಬಹುದು ಆದರೆ ಆ ಸಮ್ಯಕ್ತ್ವಕ್ಕೆ ಪ್ರಥಮೋಪಶಮ ಸಮ್ಯಕ್ತ್ವವೆಂಬ ಹೆಸರಿಲ್ಲ. ಏಕೆಂದರೆ ಆ ಉಪಶಮ ಶ್ರೇಣಿಯವರ ಉಪಶಮಸಮ್ಯಕ್ತ್ವದ ಉತ್ಪತ್ತಿಯು ಸಮ್ಯಕ್ತ್ವದಿಂದಾಗುತ್ತದೆ ಆದ್ದರಿಂದ ಪ್ರಥಮೋಪಶಮ ಸಮ್ಯಕ್ತ್ವವನ್ನು ಪ್ರಾಪ್ತಮಾಡಿಕೊಳ್ಳುವ ಜೀವವು ಮಿಥ್ಯಾದೃಷ್ಟಿಯೇ ಆಗಿರಬೇಕು. -ಧವಲ.೬/೧,೯-೮,೪/೨೦೬/೯

**ಪ್ರದೇಶ :-** ಆಕಾಶದ ಎಲ್ಲಕ್ಕಿಂದ ಚಿಕ್ಕದಾದ ಅವಿಭಕ್ತವಾದ ಅಂಶವನ್ನು ಪ್ರದೇಶವೆನ್ನುತ್ತಾರೆ. ಎಂದರೆ ಒಂದು ಪರಮಾಣುವು ಎಷ್ಟು ಸ್ಥಳವನ್ನು ವ್ಯಾಪಿಸುತ್ತದೆ ಅದು ಪ್ರದೇಶವಿದೆ. ಯಾವ ಪ್ರಕಾರ ಅಖಂಡಾಕಾಶದಲ್ಲೂ ಪ್ರದೇಶ ಭೇದದ ಕಲ್ಪನೆ ಮಾಡಿ ಅನಂತಪ್ರದೇಶಗಳನ್ನು ಹೇಳಿದ್ದಾರೆ, ಅದರಂತೆ ಎಲ್ಲ ದ್ರವ್ಯಗಳಲ್ಲಿ ಬೇರೆ ಬೇರೆ ಪ್ರದೇಶಗಳ ಗಣನೆಯ ನಿರ್ದೇಶ ಮಾಡಿದ್ದಾರೆ. ಪುದ್ಗಲ ಪರಮಾಣುವಿಗೂ ಉಪಚಾರದಿಂದ ಪ್ರದೇಶವೆನ್ನುತ್ತಾರೆ. ಇನ್ನು ಪ್ರದೇಶ ಶಬ್ದದ ಉತ್ಪತ್ತಿಯು 'ಪ್ರದಿಶ್ಯಂತೆ' ಎಂದಾಗುತ್ತದೆ, ಇದರ ಅರ್ಥವು ಪರಮಾಣುವಿದೆ. ಒಂದು ಪರಮಾಣುವು ಎಷ್ಟು ಆಕಾಶದಲ್ಲಿರುತ್ತದೆ ಅಷ್ಟು ಪ್ರದೇಶಕ್ಕೆ 'ಆಕಾಶ ಪ್ರದೇಶ' ವೆಂಬ ಹೆಸರಿನಿಂದ ಕರೆದಿದ್ದಾರೆ ಮತ್ತು ಅದು ಸಂಪೂರ್ಣ ಪರಮಾಣುಗಳಿಗೆ ಅವಕಾಶ ಕೊಡುವುದರಲ್ಲಿ ಸಮರ್ಥವಾಗಿದೆ. ಪ್ರದೇಶ ಹೆಸರಿನ ಅವುಗಳ ಯಾವ ಅವಯವಗಳಿವೆ ಅವೂ ಪರಸ್ಪರ ವ್ಯತಿರೇಕವುಳ್ಳವುಗಳಾಗಿರುವುದರಿಂದ ಪರ್ಯಾಯವೆನ್ನಿಸಿಕೊಳ್ಳುತ್ತವೆ.

-ಪ್ರವಚನಸಾರ ೧೪೦.

**ಪ್ರದೇಶಬಂಧ :-** ಕರ್ಮ ಪ್ರಕೃತಿಗಳಿಗೆ ಕಾರಣಭೂತವಾದ ಪ್ರತಿಯೊಂದು ಸಮಯಕ್ಕೆ ಯೋಗವಿಶೇಷದಿಂದ ಸೂಕ್ಷ್ಮ, ಏಕಕ್ಷೇತ್ರಾವಗಾಹಿ ಮತ್ತು ಸ್ಥಿತವಾದ ಅನಂತಾನಂತ ಪುದ್ಗಲ ಪರಮಾಣುಗಳು ಎಲ್ಲ ಆತ್ಮಪ್ರದೇಶಗಳಲ್ಲಿ ಗ್ರಹಣವಾಗುತ್ತವೆ. (ವಿಶೇಷ ವಿವರಣೆಗೆ ಸರ್ವಾರ್ಥಸಿದ್ಧಿ ಅಧ್ಯಾಯ ೮-೨೪ ಪುಟ ೩೦೬-೩೦೭ ನೋಡಿರಿ.)

**ಪ್ರಮತ್ತ-ಅಪ್ರಮತ್ತ ಸಂಯತ :-** ಯಾವ ಮನುಷ್ಯನು ಸಂಪೂರ್ಣ ಮೂಲ ಗುಣಗಳಿಂದ ಮತ್ತು ಶೀಲ ಎಂದರೆ ಉತ್ತರ ಗುಣಗಳಿಂದ ಕೂಡಿರುವಂಥ ಮಹಾವ್ರತಿಯೂ, ಮತ್ತು ವ್ಯಕ್ತ ಹಾಗೂ ಅವ್ಯಕ್ತ ಪ್ರಮಾದದಿಂದಿರುವಂಥ ವಿಚಿತ್ರಾಚರಣೆಯೂ ಆದವನು **ಪ್ರಮತ್ತ ಸಂಯತ**ನೆನಿಸುತ್ತಾನೆ.

ಇನ್ನು ಯಾವನು ವ್ಯಕ್ತ ಹಾಗೂ ಅವ್ಯಕ್ತರೂಪವಾದ ಎಲ್ಲ ಪ್ರಕಾರದ ಪ್ರಮಾದಗಳಿಂದ ದೂರವಿದ್ದಾನೆ, ಮಹಾವ್ರತ, ಮೂಲಗುಣ ಮತ್ತು ಉತ್ತರ ಗುಣಗಳಿಂದ ಅಲಂಕೃತವಾಗಿದ್ದಾನೆ, ಸ್ವ-ಪರಗಳ ಜ್ಞಾನದಿಂದ ಕೂಡಿದ್ದಾನೆ ಮತ್ತು ಕಷಾಯಗಳು ಉಪಶಾಂತವಾಗಿರದಿದ್ದರೂ ಕೂಡ ನಿರಂತರವಾಗಿ ಧ್ಯಾನದಲ್ಲಿ ಲೀನನಿರುತ್ತಾನೆ ಅವನು **ಅಪ್ರಮತ್ತ ಸಂಯತ**ನೆನಿಸುತ್ತಾನೆ. - ಪ್ರಾಕೃತ ಪಂಚಸಂಗ್ರಹ ೧/೧೪-೧೬

**ಪ್ರಶಸ್ತರಾಗ ః-** ಇಷ್ಟ ಪದಾರ್ಥಗಳ ಬಗೆಗಿರುವ ರತಿ (ಪ್ರೀತಿ) ಭಾವಕ್ಕೆ ರಾಗವೆನ್ನುತ್ತಾರೆ. ಇದನ್ನು ಶುಭ-ಅಶುಭವೆಂದೂ, ಪ್ರಶಸ್ತ-ಅಪ್ರಶಸ್ತವೆಂದೂ ವಿಂಗಡಿಸುತ್ತಾರೆ. ಇನ್ನು ಅರಹಂತ, ಸಿದ್ಧ, ಸಾಧುಗಳ ಬಗೆಗೆ ಭಕ್ತಿ, ಧರ್ಮದಲ್ಲಿ ಯಥಾರ್ಥವಾದ ಅಭಿಲಾಷೆ, ಗುರುಗಳ ಆಜ್ಞಾಧಾರಕ ವೃತ್ತಿ ಮತ್ತು ದಾನ-ವ್ರತ-ಪೂಜಾದಿ ರೂಪವಾದ ಪರಿಣಾಮವು ಪ್ರಶಸ್ತರಾಗವೆನಿಸುತ್ತದೆ. -ಪಂಚಾಸ್ತಿಕಾಯ ತ. ಪು. ೧೩೧.

**ಪ್ರಾಯಶ್ಚಿತ್ತ ః-** ಪ್ರತಿಯೊಂದು ಸಮಯದಲ್ಲಿ ತಗಲುವ ಅಂತರಂಗ ಹಾಗೂ ಬಾಹ್ಯ ದೋಷಗಳ ನಿವೃತ್ತಿ ಮಾಡಿ ಅಂತಃಶೋಧನೆ ಮಾಡುವುದಕ್ಕಾಗಿ ಪಶ್ಚಾತ್ತಾಪ ಇಲ್ಲವೆ ದಂಡನೆಯ ರೂಪದಲ್ಲಿ ಉಪವಾಸಾದಿಗಳನ್ನು ಸ್ವೀಕರಿಸುವುದು ಪ್ರಾಯಶ್ಚಿತ್ತವೆನಿಸುತ್ತದೆ, ಅದು ಅನೇಕ ಪ್ರಕಾರದಿಂದಾಗುತ್ತದೆ. ಬಾಹ್ಯ ದೋಷಗಳ ಪ್ರಾಯಶ್ಚಿತ್ತವು ಪಶ್ಚಾತ್ತಾಪಮಾತ್ರದಿಂದಾಗುತ್ತದೆ. ಆದರೆ ಅಂತರಂಗ ದೋಷಗಳ ಪ್ರಾಯಶ್ಚಿತ್ತವು ಗುರುವಿನ ಸಮಕ್ಷಮದಲ್ಲಿ ಸರಳ ಮನಸ್ಸಿನಿಂದ ಆಲೋಚನೆಪೂರ್ವಕವಾಗಿ ದಂಡನೆ ಸ್ವೀಕರಿಸಿದಲ್ಲದೆ ಆಗುವುದಿಲ್ಲ. ಆದರೆ ಈ ಪ್ರಕಾರದ ಪ್ರಾಯಶ್ಚಿತ್ತವನ್ನು ಶಾಸ್ತ್ರದಲ್ಲಿ ಅತ್ಯಂತ ನಿಪುಣ ಹಾಗೂ ಕುಶಲರಾದ ಆಚಾರ್ಯರೇ ಶಿಷ್ಯನ ಶಕ್ತಿ ಹಾಗೂ ಯೋಗ್ಯತೆಯನ್ನು ನೋಡಿ ಕೊಡುತ್ತಾರೆ, ಉಳಿದವರಿಲ್ಲ. ಪ್ರಾಯಸ್+ಚಿತ್+ತ್ತ=ಪ್ರಾಯಶ್ಚಿತ್ತ, ಪ್ರಾಯಸ್-ತಪಸ್ಯೆ, ಚಿತ್-ನಿಶ್ಚಯ ಎಂದರೆ ನಿಶ್ಚಯದಿಂದ ಕೂಡಿದ ತಪಸ್ಯೆಗೆ ಪ್ರಾಯಶ್ಚಿತ್ತವೆನ್ನುತ್ತಾರೆ. -ಪದ್ಮಚಂದ್ರಕೋಷ, ಪು. ೨೫೮

**ಪುಣ್ಯ ః-** ದಯೆ, ದಾನರೂಪವಾದ ಜೀವದ ಶುಭಪರಿಣಾಮಕ್ಕೆ ಪುಣ್ಯವೆನ್ನುತ್ತಾರೆ. ಜಗತ್ತಿನಲ್ಲಿ ಪುಣ್ಯದ ಸಲುವಾಗಿ ವಿಶೇಷ ಆಕರ್ಷಣೆಯಿದೆ. ಆದರೆ ಮುಮುಕ್ಷುಜೀವನು ಅದು ಕೇವಲ ಬಂಧರೂಪವಾಗಿರುವುದರಿಂದ ಅದನ್ನು ಪಾಪಕ್ಕಿಂತಲೂ ಯಾವುದೇ ಪ್ರಕಾರದಿಂದ ಹೆಚ್ಚೆಂದು ತಿಳಿಯುವುದಿಲ್ಲ. ಅದರ ಪ್ರಲೋಭನೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಯಾವಾಗಲೂ ಅದರ ಅನಿಷ್ಟತೆಯ ವಿಚಾರವನ್ನೇ ಮಾಡುತ್ತಾನೆ. ಆದರೆ ಪುಣ್ಯವು ಸಂಪೂರ್ಣ ಪಾಪರೂಪವೇ ಆಗಿದೆಯೆಂದು ಇದರರ್ಥವಲ್ಲ. ಲೌಕಿಕ ಜನರಿಗಾಗಿ ಇದು ಪಾಪದ ಅಪೇಕ್ಷೆಯಿಂದ ಅವಶ್ಯವಾಗಿ ಬಹಳೇ ಒಳ್ಳೆಯದಿದೆ. ಆದಾಗ್ಯೂ ಮುಮುಕ್ಷುಜೀವಗಳಿಗೂ ಕೆಳಗಿನ ಅವಸ್ಥೆಯಲ್ಲಿ ಪುಣ್ಯಪ್ರವೃತ್ತಿಯು ಅವಶ್ಯವಾಗಿ ಆಗುತ್ತಿದ್ದರೂ ಅದು ನಿದಾನರಹಿತವಾಗಿರುವ ಕಾರಣದಿಂದ ಅವರ ಪುಣ್ಯವು ಪುಣ್ಯಾನುಬಂಧಿಯಿದ್ದು ಅದು ಪರಂಪರೆಯಿಂದ ಮೋಕ್ಷಕ್ಕೆ ಕಾರಣವಾಗಿದೆ. ಲೌಕಿಕ ಜನರ ಪುಣ್ಯವು ನಿದಾನ ಹಾಗೂ ತೃಷ್ಣೆಯಿಂದ ಕೂಡಿರುವ ಕಾರಣದಿಂದ ಪಾಪಾನುಬಂಧೀಯಿದ್ದು ಅದು ಸಂಸಾರದಲ್ಲಿ ಮುಳುಗಿಸುವಂಥದ್ದಿದೆ. ಆದ್ದರಿಂದ ಪುಣ್ಯ-ಪಾಪಗಳೆರಡೂ ಸಂಸಾರಕ್ಕೆ ಕಾರಣವಾಗಿವೆ. ಇಷ್ಟೇ ಅಲ್ಲ, ನಿಶ್ಚಯನಯದಿಂದ ಶುಭೋಪಯೋಗವು ಸಂಸಾರಕ್ಕೆ ಕಾರಣವಾಗಿರುವುದರಿಂದ ಅದಕ್ಕೆ ಶುಭವೆಂದು ಹೇಳುವುದೂ ಕೂಡ ಇಲ್ಲ. ಇನ್ನು ಯಾರು ಸಮ್ಯಗ್ದರ್ಶನದ ಸಮ್ಮುಖರಿದ್ದಾರೆ ಅವರು ಅನಂತ ಸುಖವನ್ನು ಪಡೆಯುತ್ತಾರೆ. ಮತ್ತು ಯಾರು ಸಮ್ಯಕ್ತ್ವರಹಿತರಾಗಿದ್ದಾರೆ. ಅವರು ಪುಣ್ಯ ಮಾಡುತ್ತಿದ್ದರೂ ಪುಣ್ಯದ ಫಲದಿಂದ ಅಲ್ಪಸುಖವನ್ನು ಪಡೆದು ಸಂಸಾರದಲ್ಲಿ ಅನಂತ ದುಃಖ ಭೋಗಿಸುತ್ತಾರೆ. ಆದ್ದರಿಂದ ತಾವು ಸಮ್ಯಗ್ದರ್ಶನ ಸಮ್ಮುಖರಾಗಿ ಸಾಯುವುದು ಲೇಸು; ಆದರೆ ಸಮ್ಯಗ್ದರ್ಶನ ವಿಮುಖರಾಗಿ ಪುಣ್ಯ ಮಾಡುವುದು ಒಳ್ಳೆಯದಲ್ಲ !

-ಪ. ಪ್ರಕಾಶ ೨/೫೮-೫೯-೨.

**ಪುದ್ಗಲ :-** ಯಾವುದೊಂದು ಇನ್ನೊಂದರೊಡನೆ ಕೂಡಿ ಅಗಲುತ್ತಿರುತ್ತದೆ, ಅಂಥ ಗಲನ-ಪೂರಣವಾಗುವ ಸ್ವಭಾವವುಳ್ಳ ಮೂರ್ತ ಸ್ವರೂಪದ ಜಡಪದಾರ್ಥವು 'ಪುದ್ಗಲ'ವೆಂಬ ಅನ್ವರ್ಥಕ ನಾಮವನ್ನು ಪಡೆಯುತ್ತದೆ. ಅಲ್ಲಿಯೂ ಮೂಲಭೂತವಾದ ಪುದ್ಗಲ ಪದಾರ್ಥವಂತೂ ಅವಿಭಾಗವಾದ ಪರಮಾಣುವೇ ಇದೆ. ಅವುಗಳ ಪರಸ್ಪರ ಬಂಧನದಿಂದಲೇ ಜಗತ್ತಿನ ಚಿತ್ರವಿಚಿತ್ರವಾದ ಪದಾರ್ಥಗಳು ನಿರ್ಮಾಣವಾಗುತ್ತವೆ ಅವಕ್ಕೆ 'ಸ್ಕಂಧ'ವೆನ್ನುತ್ತಾರೆ. ಸ್ಪರ್ಶ, ರಸ, ಗಂಧ, ವರ್ಣ ಇವು ಪುದ್ಗಲದ ಪ್ರಸಿದ್ಧವಾದ ಗುಣಗಳಾಗಿವೆ. ಅವುಗಳಲ್ಲಿ ಪರಮಾಣುವು ಸ್ವಭಾವ ಪುದ್ಗಲವಾದರೆ ಸ್ಕಂಧವು ವಿಭಾವ ಪುದ್ಗಲವಾಗಿದೆ. ಶರೀರ, ಸುಖ, ದುಃಖ, ಜೀವನ, ಮರಣಗಳೆಲ್ಲವೂ ಪುದ್ಗಲದ ಉಪಕಾರವಾಗಿವೆ. ಏಕೆಂದರೆ ಮೂರ್ತ ಕಾರಣಗಳು ಇದ್ದ ಮೇಲೆಯೇ ಇವುಗಳ ಉತ್ಪತ್ತಿಯಾಗುತ್ತದೆ. ಪುದ್ಗಲಗಳಲ್ಲಿ ಅನಂತ ಶಕ್ತಿಯಿದೆ.

- ಸರ್ವಾರ್ಥಸಿದ್ಧಿ ೫, ೨೦, ೨೮೯, ೨

**ಪಂಚಾಚಾರ :-** ತಮ್ಮ ಶಕ್ತಿಗನುಸರಿಸಿ ನಿರ್ಮಲ ಮಾಡಲಾದ ಸಮ್ಯಗ್ದರ್ಶನ ಮೊದಲಾದವುಗಳಲ್ಲಿ ಯಾವ ಪ್ರಯತ್ನ ಮಾಡಲಾಗುತ್ತದೆ. ಅದನ್ನು ಆಚಾರವೆನ್ನುತ್ತಾರೆ. ಇದರಲ್ಲಿ ಸಮ್ಯಗ್ದರ್ಶನಾಚಾರ, ಜ್ಞಾನಾಚಾರ, ಚಾರಿತ್ರಾಚಾರ, ತಪಾಚಾರ ಮತ್ತು ವೀರ್ಯಾಚಾರವೆಂದು ಐದು ಭೇದಗಳಿರುವುದರಿಂದ ಇವೆಲ್ಲಕ್ಕೆ ಪಂಚಾಚಾರವೆನ್ನುತ್ತಾರೆ, ಇವನ್ನು ಆಚಾರ್ಯರ ಗುಣಗಳಲ್ಲಿ ಮುಖ್ಯವಾಗಿ ಹೇಳುತ್ತಾರೆ,-

**ಮೂವತ್ತಾರುಂ ಗುಣಂಗಳ್ ತಮಗಮಳ್ದಿರೆ ಸಂದೈದುಮಾಚಾರದೊಳ್ ಸ ।**
**ದ್ಭಾವಂ ಕೈಗಣ್ಮೆ ಶಿಷ್ಯಾಚರಣವಿಧಿಗಳಂ ತಿರ್ದಿ ಕಾರುಣ್ಯದಿಂದಂ**
**ಸಾವದ್ಯಂ ಸಾರದಂತಾಗಿರೆ ನಿಯಮಿಸುವಾಚಾರ್ಯರ್ ........** ಮಹಾಕವಿ ಪಂಪ, ಆದಿಪುರಾಣ. ೧-೩

**ಪಾಪ :-** ಯಾವುದರಿಂದ ಅನಿಷ್ಟ ಪದಾರ್ಥಗಳ ಪ್ರಾಪ್ತಿಯಾಗುತ್ತದೆ, ಅಂಥ ಕಾರ್ಯ ಭಾವಗಳಿಗೆ ಪಾಪವೆನ್ನುತ್ತಾರೆ, ಕೇವಲ ಬಾಹ್ಯ ನಿಮಿತ್ತ ಮಾತ್ರದಿಂದ ಪಾಪಬಂಧವಾಗುವುದಿಲ್ಲ ಮಿಥ್ಯಾದರ್ಶನ, ಅಸ್ಥಿರ ಚಿತ್ತ ಸ್ವಭಾವ, ಪರನಿಂದೆ, ಆತ್ಮಪ್ರಶಂಸೆ, ಮಿಥ್ಯಾಭಾಷಣ, ಪರದ್ರವ್ಯಹರಣ, ಮಹಾರಂಭ, ಮಹಾಪರಿಗ್ರಹ, ತೀವ್ರ ಕ್ರೋಧ, ಮಾನ, ಮಾಯೆ, ಲೋಭಗಳೆಲ್ಲವೂ ಪಾಪಬಂಧಕ್ಕೆ ಕಾರಣವಾಗಿವೆ. -ರಾಜವಾರ್ತಿಕ ೬/೨೨/೪-೫೨೮/೧೮

**ಪಾರಿಣಾಮಿಕ ಭಾವ :-** ಯಾವುದರ ಪ್ರಯೋಜನವು ಪರಿಣಾಮ ಎಂದರೆ ಸ್ವಭಾವವೇ ಇದೆ ಅದು ಪಾರಿಣಾಮಿಕವಿದೆ. ಕರ್ಮದ ಉದಯ, ಉಪಶಮ, ಕ್ಷಯ ಮತ್ತು ಕ್ಷಯೋಪಶಮದ ಅಪೇಕ್ಷೆಯನ್ನಿಡದೆ ದ್ರವ್ಯದ ಸ್ವಭಾವಭೂತವಾದ ಅನಾದಿ ಪಾರಿಣಾಮಿಕ ಶಕ್ತಿಯಿಂದಲೇ ಆವಿರ್ಭೂತವಾದ ಭಾವಗಳು ಪಾರಿಣಾಮಿಕ ಭಾವಗಳಿವೆ. ಪಾರಿಣಾಮಿಕ ಭಾವಗಳಂತೂ ಅನಾದಿ ಅನಂತವೂ, ಉಪಾಧಿರಹಿತವೂ, ಸ್ವಾಭಾವಿಕವೂ ಆಗಿವೆ. ಈ ಪಾರಿಣಾಮಿಕ ಭಾವಗಳು ಬಂಧ ಮತ್ತು ಮೋಕ್ಷ ಇವೆರಡೂ ಕಾರಣಗಳಿಂದ ರಹಿತವಾಗಿವೆ. ಪಾರಿಣಾಮಿಕ ಭಾವಕ್ಕೆ ಸ್ವಭಾವ ಭಾವವೆಂದೂ ಹೇಳಲಾಗುತ್ತದೆ. -ಧವಲ೧/೧,೧.೮/೧೬೧/೩

**ಪುದ್ಗಲಪರಿವರ್ತನ :-** ಪರಿವರ್ತನವೆಂದರೆ ಭ್ರಮಣ ಮಾಡುವುದು. ಇದರಲ್ಲಿ ದ್ರವ್ಯ, ಕ್ಷೇತ್ರ, ಕಾಲ, ಭವ ಭಾವವೆಂದು ಐದು ಭೇದಗಳಿವೆ. ಇನ್ನು ದ್ರವ್ಯದಲ್ಲಿ ಕರ್ಮದ್ರವ್ಯ, ನೋಕರ್ಮದ್ರವ್ಯವೆಂದು ಪುನಃ ಎರಡು ಪ್ರಕಾರ. ಇವೆರಡಕ್ಕೂ ಕೂಡಿ ಪುದ್ಗಲ ಪರಿವರ್ತನವೆನ್ನುತ್ತಾರೆ. ಮೂರು ಶರೀರಗಳಲ್ಲಿ ಯಾವುದೇ ಶರೀರದ ಸಂಬಂಧವಾಗಿ ಆರು ಪರ್ಯಾಪ್ತಿಯ ಯೋಗ್ಯ ಪುದ್ಗಲಗಳನ್ನು ಒಂದು ಸಮಯದಲ್ಲಿ ಸ್ನಿಗ್ಧ-ರೂಕ್ಷ, ಗಂಧ-ವರ್ಣ ಮೊದಲಾದ ರೂಪದಿಂದ ತೀವ್ರ ಮಂದ-ಮಧ್ಯಮ ಭಾವಗಳನ್ನು ಸ್ವೀಕರಿಸುತ್ತದೆ. ಎರಡನೆಯ ಮೊದಲಾದ ಸಮಯಗಳಲ್ಲಿ ಅವನ್ನು ಬಿಟ್ಟು ಬಿಡುತ್ತದೆ. ಅನಂತರ ಎಷ್ಟೋ ಸಲ ಅಗೃಹೀತ ಪುದ್ಗಲಗಳನ್ನು ಗ್ರಹಣಮಾಡಿ ನಂತರ ಅನಂತಸಲ ಮಿಶ್ರ ಪುದ್ಗಲಗಳನ್ನು ಗ್ರಹಣ ಮಾಡುತ್ತದೆ. ಮತ್ತು ಮಧ್ಯ-ಮಧ್ಯ ಗೃಹೀತಪುದ್ಗಲಗಳನ್ನೂ ಕೂಡ

ಅನಂತಸಲ ಗ್ರಹಣಮಾಡಿ ಬಿಟ್ಟುಬಿಡುತ್ತದೆ. ಇದೇ ಕ್ರಮದಿಂದ ಯಾವಾಗ ಅದೇ ಪುದ್ಗಲಪರಮಾಣು ಅದೇ ಜೀವಕ್ಕೆ ಅದೇ ಸ್ನಿಗ್ಧ-ರೂಕ್ಷ, ಗಂಧ-ವರ್ಣ ಮೊದಲಾದ ರೂಪದಿಂದ ಅದೇ ತೀವ್ರ-ಮಂದ ಭಾವಗಳನ್ನು ಪಡೆದು ನೋಕರ್ಮರೂಪವಾಗುತ್ತದೆ ಅಷ್ಟು ಕಾಲಸಮೂಹಕ್ಕೆ ನೋಕರ್ಮದ್ರವ್ಯಪರಿವರ್ತನಕಾಲವೆನ್ನುತ್ತಾರೆ. ಅದೇ ಪ್ರಕಾರ ಜೀವವು ಒಂದು ಸಮಯದಲ್ಲಿ ಎಂಟು ಪ್ರಕಾರದ ಕರ್ಮಪರಮಾಣುಗಳನ್ನು ಗ್ರಹಣ ಮಾಡುತ್ತದೆ. ಅನಂತರ ಆವಲಿಗಿಂತ ಸ್ವಲ್ಪ ಹೆಚ್ಚುಕಾಲ ಕಳೆದ ಮೇಲೆ ಎರಡನೆಯ ಮೊದಲಾದ ಸಮಯದಲ್ಲಿ ಅದರ ನಿರ್ಜರೆ ಮಾಡುತ್ತದೆ. ಪುನಃ ಪೂರ್ವೋಕ್ತಪ್ರಕಾರದಿಂದ ಯಾವಾಗ ಅದೇ ಕರ್ಮಪರಮಾಣುವು ಅದೇ ಜೀವಕ್ಕೆ ಅದೇ ಪ್ರಕಾರದಿಂದ ಕರ್ಮರೂಪವಾಗಿ ಸಂಬದ್ಧವಾಗುತ್ತದೆ ಆ ಕಾಲಸಮೂಹಕ್ಕೆ ಒಂದು ಕರ್ಮದ್ರವ್ಯಪರಿವರ್ತನಕಾಲವೆನ್ನುತ್ತಾರೆ. ಇವೆರಡಕ್ಕೂ ಕೂಡಿಯೇ ಪುದ್ಗಲಪರಿವರ್ತನಕಾಲವೆನ್ನುವರು. ಒಂದು ಕರ್ಮದ್ರವ್ಯಪರಿವರ್ತನ ಇಲ್ಲವೆ ನೋಕರ್ಮದ್ರವ್ಯ ಪರಿವರ್ತನದ ಕಾಲವು ಅನಂತವಾಗಿದೆ. ಹೇಗೆಂದರೆ ಅದೇ ಪುದ್ಗಲ ಪರಮಾಣು ಅದೇ ಪ್ರಮಾಣದಲ್ಲಿ ಅದೇ ಸ್ನಿಗ್ಧ-ರೂಕ್ಷ, ಗಂಧ-ವರ್ಣ ಮೊದಲಾದ ಭಾವರೂಪದಿಂದ ಮತ್ತು ಅದೇ ತೀವ್ರ-ಮಂದ-ಮಧ್ಯಮಗಳ ತಾರತಮ್ಯದಿಂದ ಅದೇ ಜೀವಕ್ಕೆ ಅದೇ ಪ್ರಕಾರದಿಂದ ಪುನಃ ಸಂಬದ್ಧವಾಗುವಂಥ ಸಂಯೋಗವು ಎಂದಾದರೊಮ್ಮೆ ಆಗುವುದಿರುತ್ತದೆ. ಯಾವಾಗ ಪುನಃ ಇಂಥ ಸಂಯೋಗವಾಗುತ್ತದೆ ಆಗ ಅನಂತಕಾಲವು ಕಳೆದು ಹೋಗಿರುತ್ತದೆ.

-ಭಾ.ಪಾ.ಮಾ.೨

**ಬಂಧ :-** ಅನೇಕ ಪದಾರ್ಥಗಳು ಕೂಡಿ ಒಂದಾಗುವುದಕ್ಕೆ ಬಂಧವೆನ್ನುತ್ತಾರೆ. ಅದರಲ್ಲಿ ಜೀವಬಂಧ, ಅಜೀವಬಂಧ, ಉಭಯಬಂಧವೆಂದು ಮೂರು ಪ್ರಕಾರಗಳಿವೆ. ಸಂಸಾರ, ಧನ ಮೊದಲಾದ ಬಾಹ್ಯಪದಾರ್ಥಗಳೊಡನೆ ಜೀವವನ್ನು ಕಟ್ಟಿಬಿಡುವುದರಿಂದ ಜೀವದಪರ್ಯಾಯಭೂತವಾದ ಮಿಥ್ಯಾತ್ವ ಹಾಗೂ ರಾಗಾದಿ ಪ್ರತ್ಯಯಗಳು ಜೀವಬಂಧ ಅಥವಾ ಭಾವಬಂಧವಿದೆ. ಸ್ಕಂಧನಿರ್ಮಾಣಕ್ಕೆ ಕಾರಣಭೂತವಾದ ಪರಮಾಣುಗಳ ಪರಸ್ಪರ ಬಂಧವು ಅಜೀವ ಅಥವಾ ಪುದ್ಗಲ ಬಂಧವಿದೆ. ಜೀವಪ್ರದೇಶಗಳೊಡನೆ ಕರ್ಮಪ್ರದೇಶಗಳ ಅಥವಾ ಶರೀರದ ಬಂಧವು ಉಭಯ ಇಲ್ಲವೆ ದ್ರವ್ಯಬಂಧವಿದೆ. ಇವಲ್ಲದೆ ಪರಸ್ಪರ ಸಂಯೋಗ ಸಂಬಂಧದಿಂದ ಇನ್ನೂ ಎಷ್ಟೋ ಭೇದಗಳನ್ನು ಮಾಡಲಾಗುತ್ತದೆ. ದ್ರವ್ಯ ಮತ್ತು ಭಾವಬಂಧಗಳಲ್ಲಿ ಭಾವಬಂಧವೇ ಪ್ರಧಾನವಿದೆ, ಏಕೆಂದರೆ ಇದಿಲ್ಲದೆ ಕರ್ಮ ಹಾಗೂ ಶರೀರದಬಂಧವು ಜೀವದೊಡನೆ ಆಗುವ ಸಂಭವವಿಲ್ಲ. ಮಿಥ್ಯಾತ್ವ ಮೊದಲಾದ ಪ್ರತ್ಯಯಗಳ ನಿರೋಧದಿಂದ ದ್ರವ್ಯಬಂಧದ ನಿರೋಧವಾದರೆ ಜೀವಕ್ಕೆ ಮೋಕ್ಷವಾಗುತ್ತದೆ. ಆದಾಗ್ಯೂ ಜ್ಞಾನವೇ ಮೋಕ್ಷಕ್ಕೆ ಕಾರಣವಿದೆ, ಅಜ್ಞಾನವೇ ಬಂಧಕ್ಕೆ ಕಾರಣವಿದೆಯೆಂಬ ನಿಯಮವಿದೆ. ವ್ರತ ನಿಯಮಗಳನ್ನು ಮಾಡುತ್ತಿದ್ದರೂ ಮತ್ತು ಶೀಲ ಹಾಗೂ ತಪವನ್ನಾಚರಿಸುತ್ತಿದ್ದರೂ ಯಾರು ಪರಮಾರ್ಥದಿಂದ ಹೊರಗಿದ್ದಾರೆ ಅವರು ನಿರ್ವಾಣಕ್ಕೆ ಪ್ರಾಪ್ತವಾಗುವುದಿಲ್ಲ.

(ಸಮಯಸಾರ ಗಾಥೆ, ೧೫೩.)

**ಭವ್ಯ :-** ಸಂಸಾರದಲ್ಲಿ ಮುಕ್ತವಾಗುವ ಯೋಗ್ಯತೆಯಿಂದ ಕೂಡಿದ ಸಂಸಾರಿ ಜೀವಗಳಿಗೆ ಭವ್ಯವೆಂದೂ ಮತ್ತು ಅಂಥ ಯೋಗ್ಯತೆಯಿಂದ ರಹಿತವಾದಂಥ ಜೀವಗಳಿಗೆ ಅಭವ್ಯವೆಂದೂ ಹೇಳುತ್ತಾರೆ. ಆದರೆ ಎಲ್ಲ ಭವ್ಯ ಜೀವಗಳು ಅವಶ್ಯವಾಗಿ ಮುಕ್ತವಾಗುತ್ತವೆಂದೇನು ಇದರ ಅರ್ಥವಲ್ಲ. ಒಂದು ವೇಳೆ ಈ ಸಮ್ಯಕ್ ಪುರುಷಾರ್ಥವನ್ನು ಮಾಡಿದರೆ ಮಾತ್ರ ಮುಕ್ತವಾಗುತ್ತವೆ, ಇಲ್ಲದಿದ್ದರೆ ಇಲ್ಲ ಎಂಬ ಅಭಿಪ್ರಾಯವಿದೆ. ಭವ್ಯ ಜೀವಗಳಲ್ಲೂ ಇಂಥ ಪುರುಷಾರ್ಥವನ್ನು ಎಂದೂ ಮಾಡದಂಥ ಕೆಲವು ಜೀವಗಳಿರುತ್ತವೆ, ಇಂಥ ಜೀವಗಳಿಗೆ ಅಭವ್ಯ ಸಮಾನವಾದ ಭವ್ಯವೆಂದು ಹೇಳಲಾಗುತ್ತದೆ. ಮತ್ತು ಯಾವವು ಅನಂತಕಾಲ ಕಳೆದ ಮೇಲೆ ಪುರುಷಾರ್ಥ ಮಾಡುತ್ತವೆ. ಅವಕ್ಕೆ ದೂರಾನುದೂರ ಭವ್ಯವೆಂದು ಹೇಳಲಾಗುತ್ತದೆ ಮುಕ್ತವಾದ ಜೀವಿಗಳಿಗೆ ಭವ್ಯ ಅಭವ್ಯವೆಂದು ಏನನ್ನೂ

ಹೇಳಲಾಗುವುದಿಲ್ಲ. ಇನ್ನು ಇದೇ ಸಮಯದಲ್ಲಿ ಆಪ್ತವಚನವನ್ನು ಸ್ವೀಕರಿಸುವಂಥವು ಆಸನ್ನಭವ್ಯ ಮತ್ತು ಸ್ವಲ್ಪ ಮುಂದೆ ಹೋಗಿ ಸ್ವೀಕರಿಸುವಂಥವು ದೂರ ಭವ್ಯವಿದೆ.

**ಭಾವಕರ್ಮ :-** ಆತ್ಮನ ಚೈತನ್ಯ ಪರಿಣಾಮಾತ್ಮಕವಾದ ಕರ್ಮಕ್ಕೆ ಭಾವಕರ್ಮವೆನ್ನುತ್ತಾರೆ. ಏಕೆಂದರೆ ಆತ್ಮನಿಂದ ಒಂದು ವೇಳೆ ಅಭಿನ್ನ ರೂಪದಿಂದ ಸ್ವವೇದ್ಯವಾಗಿ ಪ್ರತೀತಿಯಾಗುತ್ತವೆ. ಮತ್ತು ಅವು ಕ್ರೋಧಾದಿ ರೂಪವಾಗಿವೆ. -ಆಪ್ತಪರೀಕ್ಷೆ ಮೂಲ/೧೧೩-೧೧೪

**ಭಾವನಿಕ್ಷೇಪ :-** ಯಾವುದರ ಮುಖಾಂತರ ವಸ್ತುವನ್ನು ಜ್ಞಾನದಲ್ಲಿ ಎಳೆಯಲ್ಪಡುತ್ತದೆ ಇಲ್ಲವೆ ಉಪಚಾರದಿಂದ ವಸ್ತುವನ್ನು ಯಾವ ಪ್ರಕಾರಗಳಿಂದ ಆಕ್ಷೇಪಿಸಲಾಗುತ್ತದೆ ಅದಕ್ಕೆ ನಿಕ್ಷೇಪವೆನ್ನುತ್ತಾರೆ. ಎಂದರೆ ಅನಿರ್ಣಿತ ವಸ್ತುಗಳನ್ನು ಹೆಸರು ಮೊದಲಾದವುಗಳ ಮುಖಾಂತರ ನಿರ್ಣಯಿಸುವುದಕ್ಕೆ ನಿಕ್ಷೇಪವೆನ್ನುತ್ತಾರೆ. ಇದರಲ್ಲಿ ನಾಮ, ಸ್ಥಾಪನಾ, ದ್ರವ್ಯ ಮತ್ತು ಭಾವವೆಂದು ಸಂಕ್ಷೇಪವಾಗಿ ನಾಲ್ಕು ಪ್ರಕಾರಗಳಿದ್ದು ವಿಸ್ತಾರದಿಂದ ಅನಂತ ಪ್ರಕಾರಗಳಿವೆ, ಇನ್ನು ವರ್ತಮಾನ ಪರ್ಯಾಯದಿಂದ ಯುಕ್ತವಾದ ದ್ರವ್ಯಕ್ಕೆ **ಭಾವನಿಕ್ಷೇಪ**ವೆನ್ನುತ್ತಾರೆ. ಭಾವನಿಕ್ಷೇಪವು ಪರ್ಯಾಯಾರ್ಥಿಕ ನಯದ ಆಶ್ರಯದಿಂದಾಗುತ್ತದೆ. -ಸರ್ವಾರ್ಥಸಿದ್ಧಿ. ೧/೬/೨೦/೯

**ಭಟ್ಟಾರಕ :-** ಅರಹಂತ, ಸಿದ್ಧ ಮತ್ತು ಸಾಧುವಿಗೆ ಭಟ್ಟಾರಕವೆನ್ನಲಾಗಿದೆ. ಅರಹಂತರ ಸಲುವಾಗಿ ಭಟ್ಟಾರಕ ಶಬ್ದವನ್ನು ಪ್ರಯೋಗಿಸಲಾಗಿದೆ. -ಧವಲ. ೯/೧೩೦.

**ಭಿಕ್ಷೆ :-** ಸಾಧುಜನರು ಸಾಮ್ಯರಸದಲ್ಲಿ ಮುಳುಗಿರುವುದರಿಂದ ಲಾಭ-ಅಲಾಭಗಳಲ್ಲಿ ಸಮಭಾವನೆಯನ್ನಿಟ್ಟು ದಿವಸದಲ್ಲಿ ಒಂದು ಸಲ ಅದೂ ಕೊಡುವವರಿಗೆ ಯಾವುದೇ ಪ್ರಕಾರದ ಭಾರ ಬೀಳದಂತೆ ಉದರಾಗ್ನಿಪ್ರಶಮನ, ಅಕ್ಷಮ್ರಕ್ಷಣ, ಗೋಚರ, ಗರ್ತಪೂರಣ, ಭ್ರಾಮರಿ ವೃತ್ತಿಯಿಂದ ಭಿಕ್ಷೆ ಸ್ವೀಕರಿಸುತ್ತಾರೆ. ಅದೂ ಮೌನದಿಂದ ಹಾಗೂ ರಸಸ್ವಾದದಿಂದ ನಿರಪೇಕ್ಷವಾಗಿದ್ದು ಕೇವಲ ಉದರಪೂರ್ತಿಗಾಗಿ ಭಿಕ್ಷೆ ತೆಗೆದುಕೊಳ್ಳುತ್ತಾರೆ. ಇಷ್ಟಾದನಂತರವೂ ಅಲ್ಲಿ ಯಾಚನೆರೂಪವಾದ ದೀನ, ಹೀನ ಭಾವನೆಯು ಜಾಗ್ರತವಾಗುವುದಿಲ್ಲ. ಯಾರಾದರೂ ಭಕ್ತಿಪೂರ್ವಕವಾಗಿ ಕೊಟ್ಟರೆ ಸ್ವೀಕರಿಸುತ್ತಾರೆ. ನೀಚ, ಅತ್ಯಂತ ದರಿದ್ರ ಮತ್ತು ಹೆಚ್ಚು ಶ್ರೀಮಂತರ ಆಹಾರ ಸ್ವೀಕರಿಸುವುದಿಲ್ಲ. ಕ್ರಮಪೂರ್ವಕವಾಗಿ ಯೋಗ್ಯವಾದ ಮನೆಗಳ ಮುಂದಿನಿಂದ ತಿರುಗುತ್ತಾರೆ ಮತ್ತು ಶರೀರದ ಅಂಗೋಪಾಂಗಗಳಿಂದ ಯಾವುದೇ ಪ್ರಕಾರದ ಸನ್ನೆ-ಸೂಚನೆಗಳನ್ನು ಮಾಡುವುದಿಲ್ಲ. -ಆಚಾರಸಾರ. ೫/೧೮

**ಭೇದವಿಜ್ಞಾನ :-** ಉಪಯೋಗವು ಉಪಯೋಗದಲ್ಲಿದೆ, ಕ್ರೋಧಾದಿಗಳಲ್ಲಿ ಯಾವುದೇ ಉಪಯೋಗವಿಲ್ಲ. ಮತ್ತು ಕ್ರೋಧವು ಕ್ರೋಧದಲ್ಲೇ ಇದೆ, ಉಪಯೋಗದಲ್ಲಿ ನಿಶ್ಚಯದಿಂದ ಕ್ರೋಧವಿಲ್ಲ. ಎಂಟು ಪ್ರಕಾರದ ಕರ್ಮಗಳಲ್ಲಿ ಮತ್ತು ನೋಕರ್ಮಗಳಲ್ಲಿ ಉಪಯೋಗವಿಲ್ಲ ಮತ್ತು ಉಪಯೋಗದಲ್ಲಿ ಕರ್ಮ ಹಾಗೂ ನೋಕರ್ಮಗಳಿಲ್ಲ. ಇಂಥ ವಿಪರೀತವಲ್ಲದ ಜ್ಞಾನವು ಯಾವಾಗ ಜೀವಕ್ಕಾಗುತ್ತದೆ ಆಗ ಅದು ಉಪಯೋಗರೂಪವಾದ ಶುದ್ಧಾತ್ಮನ ಉಪಯೋಗವಲ್ಲದೆ ಬೇರೆ ಯಾವುದೇ ಭಾವವನ್ನು ಮಾಡುವುದಿಲ್ಲ. ಆದುದರಿಂದ ಉಪಯೋಗವು ಉಪಯೋಗದಲ್ಲಿಯೇ ಇದೆ ಮತ್ತು ಕ್ರೋಧವು ಕ್ರೋಧದಲ್ಲೇ ಇದೆ. - ಎಂಬ ಭೇದವಿಜ್ಞಾನವು ಚನ್ನಾಗಿ ಸಿದ್ಧವಾಯಿತು. ಇನ್ನು ಯಾವ ಮನುಷ್ಯನು ಜೀವ ಮತ್ತು ಅಜೀವ ಇವುಗಳ ಭೇದವನ್ನು ಸರಿಯಾಗಿ ತಿಳಿಯುತ್ತಾನೆ ಅವನು ಸಮ್ಯಗ್ಜ್ಞಾನಿಯಾಗುತ್ತಾನೆ. ರಾಗ-ದ್ವೇಷಗಳಿಂದ ದೂರವಾದಂಥ ಆ ಭೇದ ವಿಜ್ಞಾನವೇ ಜಿನಶಾಸನದಲ್ಲಿ ಮೋಕ್ಷಮಾರ್ಗವೆನಿಸಿದೆ. -ಸಮಯಸಾರ ಆತ್ಮಖ್ಯಾತಿ ಟೀಕೆ ೧೮೧

**ಮತಿಜ್ಞಾನ :-** ಇಂದ್ರಿಯಜ್ಞಾನಕ್ಕೇನೇ 'ಮತಿ ಇಲ್ಲವೆ ಅಭಿನಿಬೋಧ' ಎಂಬ ಸಂಜ್ಞೆಯಿದೆ. ಇದು ದರ್ಶನಪೂರ್ವಕವಾಗಿ ಅವಗ್ರಹ, ಈಹಾ, ಅವಾಯ ಮತ್ತು ಧಾರಣಾದ ಕ್ರಮದಿಂದ ಉತ್ಪನ್ನವಾಗುತ್ತದೆ. ನಾಲ್ಕೂ

ಉತ್ಪನ್ನವಾಗುತ್ತವೆಂಬ ನಿಯಮವಿಲ್ಲ ೧, ೨ ಮತ್ತು ೩ ಆಗಿ ಬಿಟ್ಟುಹೋಗಬಹುದು. ಧಾರಣಾದ ನಂತರ ಕ್ರಮದಿಂದ ಸ್ಮೃತಿ, ಪ್ರತ್ಯಭಿಜ್ಞಾನ ಮತ್ತು ತರ್ಕ ಇಲ್ಲವೆ ವ್ಯಾಪ್ತಿಜ್ಞಾನವು ಉತ್ಪನ್ನವಾಗುತ್ತದೆ. ಧಾರಣಾದ ಮೊದಲಿನ ಜ್ಞಾನವು ಪಂಚೇಂದ್ರಿಯಗಳ ನಿಮಿತ್ತದಿಂದ ಮತ್ತು ಅದಕ್ಕಿಂತ ಮುಂಚಿನ ಜ್ಞಾನವು ಮನದ ನಿಮಿತ್ತದಿಂದ ಆಗುತ್ತದೆ ತರ್ಕದ ನಂತರ ಅನುಮಾನದ ನಂಬರ ಬರುತ್ತದೆ ಅದು ಶ್ರುತಜ್ಞಾನದಲ್ಲಿ ಗರ್ಭಿತವಾಗಿದೆ. ಏಕ, ಅನೇಕ, ಧ್ರುವ, ಅಧ್ರುವ ಮೊದಲಾಗಿ ೧೨ ಪ್ರಕಾರದ ಅರ್ಥಗಳು ಈ ಮತಿಜ್ಞಾನದ ವಿಷಯವಾಗಿರುವುದರಿಂದ ಇದು ಅನೇಕ ಪ್ರಕಾರದ್ದಾಗುತ್ತದೆ.

**ಮನಃಪರ್ಯಯಜ್ಞಾನ :-** ಕೇಳದೆಯೇ ಯಾರದೇ ಮನಸ್ಸಿನ ಮಾತನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳುವುದು ಮನಃಪರ್ಯಾಯ ಜ್ಞಾನವಿದೆ. ಒಂದು ವೇಳೆ ಇದರ ವಿಷಯವು ಅವಧಿಜ್ಞಾನಕ್ಕಿಂತ ಅಲ್ಪವಾಗಿದ್ದರೂ ಸೂಕ್ಷ್ಮವಾಗಿರುವ ಕಾರಣದಿಂದ ಅದಕ್ಕಿಂತ ಹೆಚ್ಚು ವಿಶುದ್ಧವಾಗಿದೆ ಅದರಿಂದ ಇದು ಸಂಯಮಶೀಲರಾದ ಸಾಧುಗಳಿಗೇ ಉಂಟಾಗುವ ಸಂಭವವಿದೆ. ಒಂದು ವೇಳೆ ಇದು ಪ್ರತ್ಯಕ್ಷವಾಗಿದ್ದರೂ ಇದರಲ್ಲಿ ಮನಸ್ಸಿನ ನಿಮಿತ್ತವನ್ನು ಉಪಚಾರದಿಂದ ಸ್ವೀಕಾರ ಮಾಡಲಾಗಿದೆ. ಋಜುಮತಿ, ವಿಪುಲಮತಿಯೆಂದು ಇದರಲ್ಲಿ ಎರಡು ಪ್ರಕಾರಗಳಿವೆ, ಮೊದಲನೆಯದು ಕೇವಲ ಚಿಂತಿತಪದಾರ್ಥಗಳನ್ನೇ ತಿಳಿಯುತ್ತದೆ, ಆದರೆ ವಿಪುಲಮತಿಯು ಚಿಂತಿತ, ಅಚಿಂತಿತ ಅರ್ಧಚಿಂತಿತ ಮತ್ತು ಚಿಂತಿತ ಪೂರ್ವ ಇವೆಲ್ಲವುಗಳನ್ನೂ ತಿಳಿಯುವುದರಲ್ಲಿ ಸಮರ್ಥವಾಗಿದೆ.

**ಮಾರ್ಗಣಾ :-** ಯಾವ ಪ್ರವಚನದೃಷ್ಟ ಜೀವವು ಯಾವಭಾವಗಳಿಂದ ಇಲ್ಲವೆ ಯಾವ ಪರ್ಯಾಯಗಳಲ್ಲಿ ಅನುಮಾರ್ಗಣೆ ಮಾಡಲಾಗುತ್ತದೆ ಎಂದರೆ ಶೋಧಿಸಲಾಗುತ್ತದೆ ಅದನ್ನು ಮಾರ್ಗಣಾ ಎನ್ನುತ್ತಾರೆ. ಹೀಗೆ ಅನ್ವೇಷಣೆ ಮಾಡುವಂಥ ಹದಿನಾಲ್ಕು ಮಾರ್ಗಣಾಗಳನ್ನು ಶ್ರುತಜ್ಞಾನದಲ್ಲಿ ಹೇಳಿದ್ದಾರೆ. ಗತಿ, ಇಂದ್ರಿಯ, ಕಾಯ, ಯೋಗ, ವೇದ, ಕಷಾಯ, ಜ್ಞಾನ, ಸಂಯಮ, ದರ್ಶನ, ಲೇಶ್ಯೆ, ಭವ್ಯ, ಸಮ್ಯಕ್ತ್ವ, ಸಂಜ್ಞೀ ಮತ್ತು ಆಹಾರಕ ಇವು ಹದಿನಾಲ್ಕು ಮಾರ್ಗಣಾಸ್ಥಾನಗಳಿವೆ. -ಪ್ರಾಕೃತ ಪಂಚಸಂಗ್ರಹ. ೧/೫೬.

**ಮಿಥ್ಯಾದರ್ಶನ :-** ಸ್ವಾತ್ಮ ತತ್ತ್ವದಿಂದ ಅಪರಿಚಿತ ಹಾಗೂ ಲೌಕಿಕ ಜನರು, ಶರೀರ, ಸ್ತ್ರೀ-ಪುತ್ರ, ಮಿತ್ರ ಮೊದಲಾದವರಲ್ಲೇ ತಾನು ಹಾಗೂ ತನ್ನತನವನ್ನು ಮತ್ತು ಇಷ್ಟಾನಿಷ್ಟತ್ವವನ್ನು ಮನ್ನಿಸಿ, ಅದಕ್ಕನುಸರಿಸಿಯೇ ಪ್ರವೃತ್ತಿ ಮಾಡುತ್ತಾನೆಂದು ಯಾವ ಅಭಿಪ್ರಾಯ ಇಲ್ಲವೆ ಅಭಿರುಚಿಯಿದೆ ಅದನ್ನು ಮಿಥ್ಯಾದರ್ಶನವೆನ್ನುತ್ತಾರೆ. ಇದರಲ್ಲಿ ಗೃಹೀತ, ಅಗೃಹೀತ, ಏಕಾಂತ, ಸಂಶಯ, ವಿನಯ, ವಿಪರೀತ, ಅಜ್ಞಾನ ಮೊದಲಾಗಿ ಅನೇಕ ಪ್ರಕಾರಗಳಿವೆ ಇವುಗಳಲ್ಲಿ ಸಾಂಪ್ರದಾಯಿಕತೆಯು ಗೃಹೀತ ಮಿಥ್ಯಾತ್ವವಾದರೆ ಪಕ್ಷಪಾತವು ಏಕಾಂತಮಿಥ್ಯಾತ್ವವಿದೆ, ಎಲ್ಲ ಭೇದಗಳಲ್ಲಿ ಇವೆರಡೂ ಅತ್ಯಂತ ಘಾತಕ ಹಾಗೂ ಪ್ರಬಲವಾಗಿವೆ. ಒಳ್ಳೆಯರೀತಿಯಿಂದ ಮಹಾವ್ರತಾದಿಗಳನ್ನು ಅವಲಂಬನೆ ಮಾಡಲಿ ಇಲ್ಲವೆ ಉತ್ಕೃಷ್ಟ ರೀತಿಯಿಂದ ಸಮಿತಿಗಳನ್ನು ಆಶ್ರಯಿಸಲಿ ಆದರೂ ಅವನು ಪಾಪಿಯೇ ಸರಿ, ಏಕೆಂದರೆ ಅವನು ಆತ್ಮ ಹಾಗೂ ಅನಾತ್ಮಗಳ ಜ್ಞಾನದಿಂದ ದೂರವಾಗಿರುವುದರಿಂದ ಸಮ್ಯಕ್ತ್ವ ರಹಿತನಿದ್ದಾನೆ. ಮಿಥ್ಯಾತ್ವಸೇವನೆಯು ಗೃಹಸ್ಥನಿಗೆ ಮಹಾಪಾಪವಿದೆ. ಜಗತ್ತಿನ ತಲೆಯ ಮೇಲೆ ಮಿಥ್ಯಾತ್ವದಂಥ ಪಾಪವು ಇನ್ನಾವುದೂ ಇಲ್ಲ.

(ಸ.ಸಾ. ಆತ್ಮಖ್ಯಾತಿ/೨೦೦/ಕ/೧೩೦)

**ಮಿಶ್ರಗುಣಸ್ಥಾನ :-** ಮೊಸರು ಮತ್ತು ಬೆಲ್ಲವನ್ನು ಕೂಡಿಸಿದ ಸ್ವಾದದಂತೆ ಸಮ್ಯಕ್ ಮತ್ತು ಮಿಥ್ಯಾರೂಪ ಮಿಶ್ರಾವಸ್ಥೆಯ ಶ್ರದ್ಧೆ ಹಾಗೂ ಜ್ಞಾನವನ್ನು ಸ್ವೀಕಾರ ಮಾಡುವ ವಿಶೇಷಾವಸ್ಥೆಗೆ ಸಮ್ಯಗ್ಮಿಥ್ಯಾತ್ವ ಅಥವಾ ಮಿಶ್ರಗುಣಸ್ಥಾನವೆಂದು ಹೇಳುತ್ತಾರೆ. ಸಮ್ಯಕ್ತ್ವದಿಂದ ಉರುಳುವ ಸಮಯದಲ್ಲಿ ಇಲ್ಲವೆ ಮಿಥ್ಯಾತ್ವದಿಂದ ಏರುವ ಸಮಯದಲ್ಲಿ ಒಂದುಕ್ಷಣದ ಸಲುವಾಗಿ ಈ ಅವಸ್ಥೆಯ ಅನುಭವ ಆಗುವ ಸಂಭವವಿದೆ.

**ಮಿಶ್ರಮೋಹನೀಯ :-** ಮಿಥ್ಯಾತ್ವ ಪ್ರಕ್ಷಾಲನೆಯ ವಿಪರೀತ ಕಾರಣದಿಂದ ಕ್ಷೀಣ-ಕ್ಷೀಣವಾದ ಮದಶಕ್ತಿಯುಳ್ಳ ಕದನ್ನದಂತೆ ಅರ್ಧಶುದ್ಧವಾದ (ತನ್ನ) ಸ್ವರಸವುಳ್ಳವನಾಗಿರುವುದರಿಂದ ಆ ಎರಡನ್ನೂ ಸಮ್ಯಗ್ಮಿಥ್ಯಾತ್ವ ಅಥವಾ ಮಿಶ್ರಮೋಹನೀಯವೆನ್ನಲಾಗುತ್ತದೆ. ಇದರ ಉದಯದಿಂದ ಅರ್ಧಶುದ್ಧ ಮದಶಕ್ತಿಯುಳ್ಳ ಕದನ್ನ ಮತ್ತು ಒಳ್ಳೆಯ ಅನ್ನದ ಉಪಯೋಗದಿಂದಾದ ಮಿಶ್ರಪರಿಣಾಮದಂತೆ ಉಭಯಾತ್ಮಕವಾದ ಪರಿಣಾಮವಾಗುತ್ತದೆ ಇದಕ್ಕೇನೇ ಮಿಶ್ರಮೋಹನೀಯವೆನ್ನುತ್ತಾರೆ. -ಸರ್ವಾರ್ಥಸಿದ್ಧಿ ೮/೯/೩೮೫/೫

**ಮೂರ್ಛಾ :-** 'ಮೂಛ' ಧಾತುವಿನ ಸಾಮಾನ್ಯಾರ್ಥವು ಮೋಹವಿದ್ದರೆ ವಿಶೇಷಾರ್ಥವು ಪರಿಗ್ರಹವಿದೆ. ಎಮ್ಮೆ, ಆಕಳು, ಮಣಿ, ಮುತ್ತು ಮೊದಲಾದ ಚೇತನಾಚೇತನ ಬಾಹ್ಯ ಉಪಾಧಿ ಹಾಗೂ ರಾಗಾದಿರೂಪವಾದ ಅಂತರಂಗ ಉಪಾಧಿಯ ಸಂರಕ್ಷಣೆ, ಸಂಪಾದನೆ ಮತ್ತು ಸಂಸ್ಕಾರ ಮೊದಲಾದ ರೂಪವಾದ ವ್ಯಾಪಾರವೇ ಮೂರ್ಛೆಯಿದೆ.

**ಮೂರ್ತ, ಅಮೂರ್ತ :-** ಯಾವ ಪದಾರ್ಥಗಳು ಜೀವಗಳಿಗೆ ಇಂದ್ರಿಯ ಗ್ರಾಹ್ಯ ವಿಷಯಗಳಾಗಿವೆ ಅವು ಮೂರ್ತವಿವೆ, ಮತ್ತು ಉಳಿದ ಪದಾರ್ಥ ಸಮೂಹವೆಲ್ಲವು ಅಮೂರ್ತವಿವೆ.

**ಮೂಲಗುಣ :-** ಅನಶನ ಮೊದಲಾದ ತಪಗಳು ಉತ್ತರ ಗುಣಗಳಿವೆ ಅವುಗಳ ಕಾರಣದಿಂದಾಗುವ ವ್ರತಗಳಲ್ಲಿ ಮೂಲಗುಣದ ವ್ಯಪದೇಶವಾಗುತ್ತದೆ. ಶ್ರಾವಕರಿಗೆ ಎಂಟುಮೂಲಗುಣಗಳಿದ್ದರೆ ಮುನಿಗಳಿಗೆ ಇಪ್ಪತ್ತೆಂಟು ಮೂಲಗುಣಗಳಿವೆ.

**ಮೋಹನೀಯ ಕರ್ಮ :-** ಎಂಟೂ ಕರ್ಮಗಳಲ್ಲಿ ಮೋಹನೀಯವೇ ಹೆಚ್ಚು ಬಲಿಷ್ಠವಿದೆ. ಏಕೆಂದರೆ ಜೀವಗಳ ಸಂಸಾರಾವಸ್ಥೆಗೆ ಇದೇ ಮೂಲ ಕಾರಣವಿದೆ. ಇದರಲ್ಲಿ ದರ್ಶನಮೋಹನೀಯ, ಚಾರಿತ್ರಮೋಹನೀಯವೆಂದು ಎರಡು ಪ್ರಕಾರಗಳಿವೆ. ದರ್ಶನಮೋಹನೀಯವು ಸಮ್ಯಕ್ತ್ವವನ್ನು ಮತ್ತು ಚಾರಿತ್ರಮೋಹನೀಯವು ಸಭ್ಯತೆಯ ಸ್ವರೂಪವಾದ ಸ್ವಾಭಾವಿಕಚಾರಿತ್ರವನ್ನೇ ಘಾತಮಾಡುತ್ತದೆ ಇವೆರಡರ ಉದಯದಿಂದ ಜೀವವು ಮಿಥ್ಯಾದೃಷ್ಟಿ ಹಾಗೂ ರಾಗ-ದ್ವೇಷಿಯಾಗಿ ಬಿಡುತ್ತದೆ. ಇನ್ನು ದರ್ಶನಮೋಹದಲ್ಲಿ ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಹಾಗೂ ಸಮ್ಯಕ್ತ್ವ ಪ್ರಕೃತಿಯೆಂದು ಮೂರು ಭೇದಗಳಿವೆ. ಚಾರಿತ್ರಮೋಹದಲ್ಲಿ ಕಷಾಯ ವೇದನೀಯ ಮತ್ತು ಅಕಷಾಯವೇದನೀಯವೆಂದು ಎರಡು ಪ್ರಕಾರಗಳಿವೆ. ಕ್ರೋಧಾದಿ ಕಷಾಯಗಳು ನಾಲ್ಕು ಮತ್ತು ಹಾಸ್ಯಾದಿ ಅಕಷಾಯಗಳು ಒಂಭತ್ತು ಇವೆ. ಇನ್ನು ಯಾವುದು ಮೋಹಿತ ಮಾಡುತ್ತದೆ ಇಲ್ಲವೆ ಯಾವುದರ ಮುಖಾಂತರ ಮೋಹಿಸಲ್ಪಡುತ್ತದೆ ಅದು ಮೋಹನೀಯಕರ್ಮವಿದೆ. ಇದು ಸಮಸ್ತ ದುಃಖಗಳ ಪ್ರಾಪ್ತಿಗೆ ನಿಮಿತ್ತವಾಗಿರುವುದರಿಂದ ಇದನ್ನು 'ಅರಿ' ಎಂದರೆ ಶತ್ರು ಎನ್ನುತ್ತಾರೆ.

-ಧವಲ ೧/೧-೧-೧/೪೩/೧

**ಮೋಕ್ಷ :-** ಬಂಧಹೇತುಗಳ ಅಭಾವ ಮತ್ತು ನಿರ್ಜರೆಯಿಂದ ಎಲ್ಲ ಕರ್ಮಗಳ ಆತ್ಯಂತಿಕ ನಿವೃತ್ತಿಯೇ ಮೋಕ್ಷವಿದೆ. ಮನುಷ್ಯಗತಿಯಲ್ಲಿಯೇ ಜೀವಕ್ಕೆ ಮೋಕ್ಷವಾಗುವ ಸಾಧ್ಯತೆಯಿದೆ. ಮೋಕ್ಷವು ಸಾಮಾನ್ಯತೆಯ ಅಪೇಕ್ಷೆಯಿಂದ ಒಂದೇ ಪ್ರಕಾರವಾಗಿದ್ದರೂ ದ್ರವ್ಯ, ಭಾವ ಅಪೇಕ್ಷೆಯಿಂದ ಎರಡು ಪ್ರಕಾರಗಳಾಗುತ್ತವೆ. ಶುದ್ಧರತ್ನತ್ರಯದ ಸಾಧನೆಯಿಂದ ಎಂಟುಕರ್ಮಗಳನ್ನು ಆತ್ಮನಿಂದ ಬೇರ್ಪಡಿಸುವುದು ದ್ರವ್ಯ ಮೋಕ್ಷವಾದರೆ ರಾಗಾದಿ ಭಾವಗಳ ನಿವೃತ್ತಿಯು ಭಾವಮೋಕ್ಷವಿದೆ. ಹೀಗೆ ದ್ರವ್ಯ, ಭಾವಕರ್ಮಗಳೆರಡರಿಂದಲೂ ಮುಕ್ತವಾದ ಜೀವವು ಸಿದ್ಧಾಲಯದಲ್ಲಿ ವಿರಾಜಿಸುತ್ತದೆ. ಮುಕ್ತ ಜೀವವು ನಿಜವಾಗಿ-ನಿಶ್ಚಯದಿಂದ ತನ್ನಲ್ಲಿಯೇ ಇರುತ್ತದೆ, ಸಿದ್ಧಲೋಕದಲ್ಲಿರುವುದು ವ್ಯವಹಾರದಿಂದಿದೆ. ಅಲ್ಲಿ ಅದು ಅತೀಂದ್ರಿಯಸುಖದ ಉಪಭೋಗ ಮಾಡುತ್ತ ಅನಂತಕಾಲದವರೆಗೆ ಇರುತ್ತದೆ. ಪುನಃ ಶರೀರಧಾರಣೆ ಮಾಡಿ ಜನ್ಮ-ಮರಣಗಳ ಸುಳಿಗೆ ಎಂದೂ ಸಿಲುಕುವುದಿಲ್ಲ. ಜ್ಞಾನವೇ ಅದರ ಶರೀರವಾಗಿರುತ್ತದೆ. ಎಂಟು ಕರ್ಮಗಳು

ನಷ್ಟವಾಗುವುದರಿಂದ ಸ್ವಭಾವಭೂತವಾದ ಎಂಟು ಮಹಾಗುಣಗಳು ಪ್ರಕಟವಾಗುತ್ತವೆ. ''ಪೆಣೆದೆಂಟುಂಕಿಲ್ಬಿಷಂಗಳ್ ಕಿಡೆ ಕಿಡದ ಗುಣಂ ಪೊರ್ದೆ ಬಂದೆಂಟುಮಾದಂತಣಿವಂ ಕೈಕೊಂಡಮೂರ್ತರ್ ಚರಮತನುಸಮಾಕಾರರು-ದ್ಧೂತಲೇಪರ್ । ಪ್ರಣುತರ್ ನಿತ್ಯರ್ ಜಗನ್ಮಂಗಲನಿಲಯರ್ ಅನಂತರ್ ತ್ರಿಲೋಕೈಕ ಚೂಡಾಮಣಿಗಳ್‌ಸಿದ್ಧರ್'' ಆದಿ ಮಹಾಕವಿ ಪಂಪನ ಆದಿಪುರಾಣ ಅ. ೧. ಪ. ೨

(ಇನ್ನೂ ಹೆಚ್ಚಿನ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೩ ರಲ್ಲಿ ಪುಟ ೩೩೨ ರಿಂದ ೩೪೨ ರ ವರೆಗೆ ನೋಡುವುದು)

**ಮೋಕ್ಷಮಾರ್ಗಃ-** ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ ಈ ಮೂರರ ಏಕತೆಯೇ ಮೋಕ್ಷಮಾರ್ಗವಿದೆ. ಆದರೆ ಈ ಮೂರರಲ್ಲಿ ಯಾವುದಾದರೂ ಒಂದು ಅಥವಾ ಎರಡು ಬೇರೆ-ಬೇರೆಯಾದರೆ ಅದು ಮೋಕ್ಷಕ್ಕೆ ಕಾರಣವಾಗುವುದಿಲ್ಲ. ಅಲ್ಲದೆ ಇವು ಮೂರು ಸಮೂಹರೂಪದಿಂದ ಏಕರಸವಾದರೇನೇ ಮೋಕ್ಷಮಾರ್ಗವಿದೆ. ಇನ್ನು ಆತ್ಮನನ್ನು ಹೊರತು ಪಡಿಸಿ ಉಳಿದ ದ್ರವ್ಯಗಳಲ್ಲಿ ರತ್ನತ್ರಯವಿರುವುದಿಲ್ಲ, ಆದಕಾರಣ ಆ ರತ್ನತ್ರಯಮಯವಾದ ಆತ್ಮನೇ ನಿಶ್ಚಯದಿಂದ ಮೋಕ್ಷಕ್ಕೆ ಕಾರಣವಾಗಿದ್ದಾನೆ. ಆದ್ದರಿಂದ ದರ್ಶನ-ಜ್ಞಾನ-ಚಾರಿತ್ರರೂಪವಾದ ಯಾವ ನಿರ್ದಿಷ್ಟ ಮೋಕ್ಷಮಾರ್ಗವಿದೆ. ಅದರಲ್ಲಿಯೇ ಯಾವ ಪುರುಷನು ಸ್ಥಿರವಾಗುತ್ತಾನೆ, ನಿರಂತರವಾಗಿ ಅದರದೇ ಧ್ಯಾನ ಮಾಡುತ್ತಾನೆ, ಅದರದೇ ಅನುಭವ ಮಾಡುತ್ತಾನೆ ಮತ್ತು ಉಳಿದ ದ್ರವ್ಯಗಳನ್ನು ಸ್ಪರ್ಶ ಮಾಡದೆ ನಿರಂತರವಾಗಿ ಅದರಲ್ಲಿಯೇ ವಿಹರಿಸುತ್ತಾನೆ ಅವನು ನಿತ್ಯೋದಿತವಾದ ಸಮಯಸಾರವನ್ನು ಅಲ್ಪಕಾಲದಲ್ಲೇ ಅವಶ್ಯವಾಗಿ ಪ್ರಾಪ್ತಮಾಡಿಕೊಳ್ಳುತ್ತಾನೆ, ಎಂದರೆ ಅದರ ಅನುಭವ ಮಾಡುತ್ತಾನೆ. -ಸಮಯಸಾರ ಆ.ಟೀಕೆ ೪೧೨/ಕಲಶ ಟೀಕಾ/೨೪೦

**ಯಥಾಖ್ಯಾತಚಾರಿತ್ರ ಃ-** ಸಂಪೂರ್ಣವಾಗಿ ಮೋಹನೀಯ ಕರ್ಮದ ಉಪಶಮ ಇಲ್ಲವೆ ಕ್ಷಯದಿಂದ ಹೇಗೆ ಆತ್ಮನ ಸ್ವಭಾವವಿದೆ ಆ ಅವಸ್ಥೆಯ ಸ್ವರೂಪವಾದ ಯಾವ ಚಾರಿತ್ರವಾಗುತ್ತದೆ ಅದು ಯಥಾಖ್ಯಾತ ಚಾರಿತ್ರವಿದೆ. ಯಾವ ಪ್ರಕಾರವಾಗಿ ಆತ್ಮನ ಸ್ವಭಾವವು ಉಪಸ್ಥಿತವಿದೆ ಅದೇ ಪ್ರಕಾರ ಇದನ್ನು ಹೇಳಲಾಗಿದೆಯೆಂದು ಇದಕ್ಕೆ ಯಥಾಖ್ಯಾತವೆನ್ನುತ್ತಾರೆ. -ರಾಜವಾರ್ತಿಕ ೯/೧೮/೧೧/೬೧೭/೨೯

**ಯೋಗ ಃ-** ಕರ್ಮಗಳ ಸಂಯೋಗದ ಕಾರಣದಿಂದ ಜೀವಪ್ರದೇಶಗಳ ಪರಿಸ್ಪಂದನೆಗೆ ಯೋಗವೆನ್ನುತ್ತಾರೆ. ಅಥವಾ ಮನ, ವಚನ, ಕಾಯಗಳ ಪ್ರವೃತ್ತಿಯಿಂದಾಗಿ ಜೀವದ ಉಪಯೋಗ ಇಲ್ಲವೆ ಪ್ರಯತ್ನ ವಿಶೇಷಕ್ಕೆ ಯೋಗವೆನ್ನುತ್ತಾರೆ. ಅದು ಒಂದೇ ಇರುತ್ತಿರುವಾಗಲೂ ಮನ-ವಚನ ಮೊದಲಾದವುಗಳ ನಿಮಿತ್ತದ ಅಪೇಕ್ಷೆಯಿಂದ ಮೂರು ಇಲ್ಲವೆ ಹದಿನೈದು ಪ್ರಕಾರದ್ದಿದೆ. ಈ ಎಲ್ಲ ಯೋಗಗಳು ನಿಯಮದಿಂದ ಕ್ರಮಪೂರ್ವಕವಾಗಿಯೇ ಪ್ರವೃತ್ತಿ ಹೊಂದುತ್ತವೆ, ಒಮ್ಮೆಲೇ ಇಲ್ಲ. ಜೀವ ಭಾವದ ಅಪೇಕ್ಷೆಯಿಂದ ಪಾರಿಣಾಮಿಕವಿದ್ದರೆ ಶರೀರದ ಅಪೇಕ್ಷೆಯಿಂದ ಕ್ಷಾಯೋಪಶಮಿಕ ಇಲ್ಲವೆ ಔದಾಯಿಕವಿದೆ. ಇನ್ನು ಯಾವ ಜೈನನು ವಿಪರೀತಾಭಿನಿವೇಶದ ಪರಿತ್ಯಾಗ ಮಾಡಿ ಹೇಳಿದ ತತ್ತ್ವಗಳಲ್ಲಿ ಆತ್ಮನನ್ನು ತೊಡಗಿಸುತ್ತಾನೆ, ಅವನ ಆ ಭಾವಕ್ಕೆ ಯೋಗವೆನ್ನುತ್ತಾರೆ. -ನಿಯಮಸಾರ ಗಾಥೆ. ೧೩೬

**ರತ್ನತ್ರಯ ಃ-** ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ ಈ ಮೂರು ಗುಣಗಳಿಗೆ ರತ್ನತ್ರಯ ವೆನ್ನುತ್ತಾರೆ. ಇವನ್ನು ವಿಕಲ್ಪರೂಪದಿಂದ ಸ್ವೀಕರಿಸುವುದು ಭೇದರತ್ನತ್ರಯವಾದರೆ ನಿರ್ವಿಕಲ್ಪರೂಪದಿಂದ ಸ್ವೀಕರಿಸುವುದು ಅಭೇದರತ್ನತ್ರಯವಾಗಿದೆ. ಎಂದರೆ ಸಪ್ತ ತತ್ತ್ವಗಳು, ದೇವ, ಶಾಸ್ತ್ರ, ಗುರು ಮೊದಲಾದವರ ಶ್ರದ್ಧೆ ಆಗಮಜ್ಞಾನ ಹಾಗೂ ವ್ರತಾದಿಚಾರಿತ್ರಗಳಂತೂ ಭೇದರತ್ನತ್ರಯವಾದರೆ ಆತ್ಮಸ್ವರೂಪದ ಜ್ಞಾನ, ಸ್ವಸಂವೇದನಜ್ಞಾನ ಮತ್ತು ಆತ್ಮನ ನಿಶ್ಚಲಸ್ಥಿತಿ ಇವು ನಿರ್ವಿಕಲ್ಪಸಮಾಧಿರೂಪವಾದ ಅಭೇದರತ್ನತ್ರಯವಾಗಿವೆ. ರತ್ನತ್ರಯವೇ ಮೋಕ್ಷಮಾರ್ಗವಿದೆ. ಭೇದರತ್ನತ್ರಯವು ವ್ಯವಹಾರ ಮೋಕ್ಷಮಾರ್ಗವಾದರೆ ಅಭೇದರತ್ನತ್ರಯವು ನಿಶ್ಚಯ ಮೋಕ್ಷಮಾರ್ಗವಾಗಿದೆ.

**ರೌದ್ರಧ್ಯಾನ :-** ಹಿಂಸೆ, ಹುಸಿ, ಕಳವು ಮತ್ತು ವಿಷಯ ಸಂರಕ್ಷಣೆಗಾಗಿ ಯಾವಾಗಲೂ ಚಿಂತೆ ಮಾಡುವುದು. ಗರ್ವ ಹಾಗೂ ಅಭಿಮಾನ ಪಟ್ಟುಕೊಳ್ಳುವುದು ರೌದ್ರಧ್ಯಾನವಿದೆ. ಬೇರೆಯವರ ದ್ರವ್ಯವನ್ನು ಎತ್ತಿಹಾಕುವ ಅಭಿಪ್ರಾಯ, ಹುಸಿನುಡಿಯುವುದರಲ್ಲಿ ಆನಂದಭಾವನೆ, ಇನ್ನೊಬ್ಬರನ್ನು ಹೊಡೆಯುವ ಅಭಿಪ್ರಾಯ, ಷಟ್‌ಕಾಯಜೀವಗಳ ವಿರೋಧ ಅಥವಾ ಅಸಿ-ಮಸಿ ಮೊದಲಾದ ಪರಿಗ್ರಹದ ಆರಂಭ ಮತ್ತು ಸಂಗ್ರಹ ಮಾಡುವುದರಲ್ಲಿ ಆನಂದವೆನಿಸುವುದು ಇವೆಲ್ಲವುಗಳಲ್ಲಿ ಕಷಾಯ ಕೂಡಿದ ಮನಸ್ಸು ಮಾಡುವುದು ರೌದ್ರಧ್ಯಾನವೆನಿಸುತ್ತದೆ. ಇದರಲ್ಲಿ ಹಿಂಸಾನಂದ, ಮೃಷಾನಂದ, ಸ್ತೇಯಾನಂದ ಮತ್ತು ಸಂರಕ್ಷಣಾನಂದ ಎಂದರೆ ಪರಿಗ್ರಹದ ರಕ್ಷಣೆಯಲ್ಲಿ ಹಗಲಿರುಳೆನ್ನದೆ ಮೆತ್ತಿಕೊಂಡಿರುವುದು ಹೀಗೆ ನಾಲ್ಕು ಪ್ರಕಾರಗಳಿವೆ. ಈ ರೌದ್ಯಧ್ಯಾನವು ಆರನೆಯ ಗುಣಸ್ಥಾನದ ಮೊದ-ಮೊದಲು ಐದು ಗುಣಸ್ಥಾನಗಳಲ್ಲಿ ಆಗುತ್ತದೆ. -ಮಹಾಪುರಾಣ ೨೧/೪೩

**ಲಬ್ಧ್ಯಪರ್ಯಾಪ್ತಕ :-** ಅಪ್ರಯಾಪ್ತಿ ನಾಮಕರ್ಮದ ಉದಯದಿಂದ ಏಕೇಂದ್ರಿಯ ಮೊದಲಾದ ಯಾವ ಜೀವಗಳು ತಮ್ಮ-ತಮ್ಮ ಯೋಗ್ಯ ಪರ್ಯಾಪ್ತಿಗಳನ್ನು ಪೂರ್ಣಮಾಡದೆ ಉಚ್ಛ್ವಾಸದ ಹದಿನೆಂಟನೆಯ ಭಾಗ ಪ್ರಮಾಣವಾದ ಅಂತರ್ಮುಹೂರ್ತದಲ್ಲಿಯೇ ಮರಣ ಹೊಂದುತ್ತವೆ ಆ ಜೀವಕ್ಕೆ ಲಬ್ಧ್ಯಪರ್ಯಾಪ್ತಕವೆನ್ನುತ್ತಾರೆ. -ಗೋಮ್ಮಟಸಾರ ಜೀ. ಮೂಲ ೧೨೨

**ಲಬ್ಧಿ :-** ಜೀವಕ್ಕೆ ಯಾವ ಮತಿಜ್ಞಾನಾವರಣ ಕರ್ಮದ ಕ್ಷಯೋಪಶಮದಿಂದ ಉತ್ಪನ್ನವಾದ ವಿಶುದ್ಧಿಯು ಮತ್ತು ಅದರಿಂದ ಉತ್ಪನ್ನವಾದ ಪದಾರ್ಥಗಳನ್ನು ಗ್ರಹಣ ಮಾಡುವ ಯಾವ ಶಕ್ತಿಯಿದೆ ಅದನ್ನು ಲಬ್ಧಿಯೆನ್ನುತ್ತಾರೆ. ಇದರಲ್ಲಿ ಕ್ಷಯೋಪಶಮ, ವಿಶುದ್ಧಿ, ದೇಶನಾ, ಪ್ರಾಯೋಗ್ಯ ಮತ್ತು ಕರಣವೆಂದು ಐದು ಪ್ರಕಾರಗಳಿವೆ. ಸಮ್ಯಕ್ತ್ವ ಪ್ರಾಪ್ತಿಯಲ್ಲಿ ಈ ಐದೂ ಲಬ್ಧಿಗಳು ಆಗುವುದು ಆವಶ್ಯಕವೆಂದು ಹೇಳಲಾಗಿದೆ. ಅವುಗಳಲ್ಲಿ ಕರಣಲಬ್ಧಿಯು ಉಪಯೋಗಾತ್ಮಕವಾಗಿರುವ ಕಾರಣದಿಂದ ಪ್ರಧಾನವೆನಿಸಿದೆ. ಈ ಐದರಲ್ಲಿ ಮೊದಲಿನ ನಾಲ್ಕು ಲಬ್ಧಿಗಳಂತೂ ಸಾಮಾನ್ಯವಾಗಿವೆ ಎಂದರೆ ಭವ್ಯ-ಅಭವ್ಯಗಳೆರಡಕ್ಕೂ ಆಗುತ್ತವೆ; ಆದರೆ ಕರಣಲಬ್ಧಿಯು ಮಾತ್ರ ಸಮ್ಯಕ್ತ್ವವು ಪ್ರಾಪ್ತವಾಗುವ ಸಮಯದಲ್ಲೇ ಆಗುತ್ತದೆ. ಅಭವ್ಯ ಜೀವಗಳಿಗೂ ಯೋಗ್ಯವಾದಂಥ ನಾಲ್ಕೂ ಲಬ್ಧಿರೂಪವಾದ ಪರಿಣಾಮಗಳನ್ನು ಪೂರ್ಣಗೊಳಿಸಿದ ನಂತರ ಯಾವ ಜೀವವು ಭವ್ಯವಿದೆ ಅದು ಕರಣಲಬ್ಧಿಯನ್ನು ಮಾಡುತ್ತದೆ. ಕರಣಲಬ್ಧಿಯಲ್ಲಿ ಅಧಃಕರಣ, ಅಪೂರ್ವಕರಣ, ಅನಿವೃತ್ತಿಕರಣವೆಂದು ಮೂರು ಪ್ರಕಾರಗಳಿವೆ. ಕರಣಲಬ್ಧಿಯು ಭವ್ಯಜೀವಕ್ಕೇನೆ ಆಗುತ್ತದೆ. ಕರಣಲಬ್ಧಿಯಾದ ಮೇಲೆ ಸಮ್ಯಕ್ತ್ವವು ನಿಶ್ಚಿತವಾಗಿ ಆಗೇ ಆಗುತ್ತದೆ ಎಂಬ ನಿಯಮವಿದೆ. ಅಧಃಕರಣ, ಅಪೂರ್ವಕರಣ, ಅನಿವೃತ್ತಿಕರಣಗಳಲ್ಲಿ ಪರಿಣಾಮದ ವಿಶದ್ಧತೆಯು ಸಮಯ-ಸಮಯಕ್ಕೆ ಅನಂತ ಗುಣಿತವಾಗಿ ಬೆಳೆಯುತ್ತ ಹೋಗಿ ಕೊನೆಯ ಅನಿವೃತ್ತಿಕರಣದ ಪೂರ್ಣತೆಯಲ್ಲಿ ಜೀವಕ್ಕೆ ಸಮ್ಯಕ್ತ್ವವು ಪ್ರಾಪ್ತವಾಗುತ್ತದೆ. -ಲಬ್ಧಿಸಾರ. ೮೩/೮೯

**ಲಕ್ಷಣ :-** ಪರಸ್ಪರ ಸಮ್ಮಿಳಿತವಾದ ವಸ್ತುಗಳಲ್ಲಿ ಯಾವುದರ ಮುಖಾಂತರ ಯಾವುದೇ ವಸ್ತುವನ್ನು ಪೃಥಕ್ಕರಣಮಾಡಲಾಗುತ್ತದೆ ಅದು ಅದರ ಲಕ್ಷಣವಾಗುತ್ತದೆ. ಇದರಲ್ಲಿ ಆತ್ಮಭೂತ, ಅನಾತ್ಮಭೂತವೆಂದು ಎರಡು ಪ್ರಕಾರಗಳಿವೆ. ಅಗ್ನಿಯ ಉಷ್ಣತೆಯು ಆತ್ಮಭೂತ ಲಕ್ಷಣವಿದೆ ಮತ್ತು ದಂಡಕ ಪುರುಷನ ಭೇದಮಾಡುವ ಕೋಲು ಅನಾತ್ಮಭೂತ ಲಕ್ಷಣವಿದೆ. ರಾಜವಾರ್ತಿಕ ೨/೮/೩/೧೧೯/೧೧

**ಲೇಶ್ಯೆ :-** ಯಾವುದು ಆತ್ಮನನ್ನು ಕರ್ಮಗಳಿಂದ ಬಳೆಯಲ್ಪಡುತ್ತದೆ ಅದಕ್ಕೆ ಲೇಶ್ಯೆಯೆನ್ನುತ್ತಾರೆ. ಅದರಲ್ಲಿ ದ್ರವ್ಯಲೇಶ್ಯೆ, ಭಾವಲೇಶ್ಯೆಯೆಂದು ಎರಡು ಪ್ರಕಾರಗಳಿವೆ. ಮೋಹನೀಯ ಕರ್ಮದ ಉದಯ, ಕ್ಷಯೋಪಶಮ

ಹಾಗೂ ಉಪಶಮದಿಂದ ಉತ್ಪನ್ನವಾದ ಜೀವದ ಯಾವ ಸ್ಪಂದನವಿದೆ ಅದು ಭಾವಲೇಶ್ಯೆಯಿದೆ. ಇದರಲ್ಲಿ ಕೃಷ್ಣ, ನೀಲ ಮೊದಲಾಗಿ ಆರು ಭೇದಗಳಿವೆ. ಅವುಗಳಲ್ಲಿ ಮೂರು ಶುಭವಿದ್ದರೆ ಮೂರು ಅಶುಭವಾಗಿವೆ, ರಾಗ ಹಾಗೂ ಕಷಾಯಗಳ ಅಭಾವವಾಗಿರುವುದರಿಂದ ಮುಕ್ತ ಜೀವಿಗಳಿಗೆ ಲೇಶ್ಯೆಗಳಿರುವುದಿಲ್ಲ. ಇನ್ನು ವರ್ಣ ನಾಮಕರ್ಮೋದಯ ದಿಂದ ಉತ್ಪನ್ನವಾದ ಯಾವ ಶರೀರದ ವರ್ಣವಿದೆ ಅದಕ್ಕೆ ದ್ರವ್ಯಲೇಶ್ಯೆಯೆನ್ನುತ್ತಾರೆ. ದೇವ ಹಾಗೂ ನಾರಕಿಗಳಿಗೆ ದ್ರವ್ಯ ಮತ್ತು ಭಾವ ಲೇಶ್ಯೆಗಳು ಸಮನಾಗಿರುತ್ತವೆ. ಆದರೆ ಉಳಿದ ಜೀವಗಳಲ್ಲಿ ಇವುಗಳ ಸಮಾನತೆಯ ನಿಯಮವಿಲ್ಲ. ದ್ರವ್ಯಲೇಶ್ಯೆಯು ಆಯುವಿನ ಕೊನೆಯವರೆಗೆ ಒಂದೇ ಇದ್ದರೆ ಭಾವಲೇಶ್ಯೆಯು ಜೀವಗಳ ಪರಿಣಾಮಗಳಿಗನುಸಾರವಾಗಿ ಒಂದೇ ಸಮನೆ ಬದಲಾಗುತ್ತಿರುತ್ತದೆ.

**ವರ್ಗಣಾ :-** ಸಮಾನಗುಣವುಳ್ಳ ಪರಮಾಣುವಿನ ಪಿಂಡಕ್ಕೆ ವರ್ಗಣಾ ಎನ್ನುತ್ತಾರೆ. ಅದು ಐದು ಪ್ರಧಾನ ಜಾತಿಯುಳ್ಳ ಸೂಕ್ಷ್ಮ ಸ್ಕಂಧಗಳ ರೂಪದಲ್ಲಿ ಲೋಕದ ಎಲ್ಲ ಪ್ರದೇಶಗಳಲ್ಲಿ ಉಪಸ್ಥಿತವಾಗಿರುತ್ತ ಜೀವದ ಎಲ್ಲ ಪ್ರಕಾರದ ಶರೀರಗಳಿಗೆ ಹಾಗೂ ಲೋಕದ ಎಲ್ಲ ಸ್ಥೂಲ ಭೌತಿಕ ಪದಾರ್ಥಗಳಿಗೆ ಉಪಾದಾನ ಕಾರಣವಾಗುತ್ತದೆ. ಆದಾಗ್ಯೂ ವರ್ಗಣೆಯ ವ್ಯವಹಾರಾರ್ಥವಾದ ಜಾತಿಗಳು ಐದೇ ಇವೆ. ಆದರೆ ಎಲ್ಲ ಮೂರ್ತಿಕ ಮತ್ತು ಅಮೂರ್ತಿಕ ಭೌತಿಕ ಪದಾರ್ಥಗಳಲ್ಲಿ ಪ್ರದೇಶಗಳ ಕ್ರಮಿಕ ವೃದ್ಧಿಯನ್ನು ತೋರಿಸುವುದಕ್ಕಾಗಿ ಅದರಲ್ಲಿ ೨೩ ಭೇದಗಳನ್ನು ಮಾಡಿ ತೋರಿಸಿದ್ದಾರೆ. ಆಯಾ ಜಾತಿಯ ವರ್ಗಣೆಯಿಂದ ಆಯಾ ಜಾತಿಯ ಪದಾರ್ಥಗಳೇ ನಿರ್ಮಾಣವಾಗುತ್ತವೆಯೇ ವಿನಹ ಬೇರೆ ಜಾತಿಯವಲ್ಲ. ಆದರೆ ಪರಮಾಣುಗಳಲ್ಲಿ ಹಾನಿ-ವೃದ್ಧಿಗಳುಂಟಾಗುವುದರಿಂದ ಆ ವರ್ಗಣೆಯು ತಾನೇ ತನ್ನ ಜಾತಿಯಿಂದ ಬದಲಾವಣೆಯಾಗಿ ಬೇರೊಂದು ಜಾತಿಯ ವರ್ಗಣೆಯಲ್ಲಿ ಪರಿಣಮಿಸುವ ಸಾಧ್ಯತೆಯಿದೆ. ಇನ್ನು ಆಹಾರದ್ರವ್ಯವರ್ಗಣಾ ತೈಜಸದ್ರವ್ಯವರ್ಗಣಾ, ಭಾಷಾದ್ರವ್ಯವರ್ಗಣಾ, ಮನೋದ್ರವ್ಯವರ್ಗಣಾ ಮತ್ತು ಕಾರ್ಮಣ ದ್ರವ್ಯವರ್ಗಣಾಗಳೆಂದು ಈ ಐದು ಪ್ರಮುಖ ಭೇದಗಳಿವೆ. ವಿಶೇಷ ವಿವರಣೆಗಾಗಿ ಷಟ್ ಖಂಡಾಮಗದ ೧೪/೬,೬ ನೋಡಿರಿ.

**ವಿಕ್ರಿಯಋದ್ಧಿ :-** ತಪಶ್ಚರ್ಯದ ಪ್ರಭಾವದಿಂದ ಎಂದಾದರೊಮ್ಮೆ ಯಾವುದೇ ಯೋಗೀಶ್ವರರಿಗೆ ಕೆಲವು ಚಮತ್ಕಾರಿಕವಾದ ಶಕ್ತಿಗಳು ಪ್ರಾಪ್ತವಾಗುತ್ತವೆ ಅವನ್ನು ಋದ್ಧಿ ಎನ್ನುತ್ತಾರೆ. ಇನ್ನು ಅಣಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವವಶಿತ್ವ, ಅಪ್ರತಿಘಾತ, ಅಂತರ್ಧಾನ ಮತ್ತು ಕಾಮರೂಪವೆಂದು ಅನೇಕ ಪ್ರಕಾರದ ಭೇದಗಳಿಂದ ಕೂಡಿದ ವಿಕ್ರಿಯವೆಂಬ ಋದ್ಧಿಯು ಶ್ರಮಣರಿಗೆ ತಪೋ ವಿಶೇಷದಿಂದಾಗುತ್ತದೆ.

(ಧವಲಾ ೯/೪,೧.೧೫/೭೫/೪)

**ವಿಪರೀತಾಭಿನಿವೇಶ :-** ಹಿಂಸೆ, ಅಸತ್ಯ, ಕಳವು, ಮೈಥುನ, ಪರಿಗ್ರಹ, ರಾಗ, ದ್ವೇಷ, ಮೋಹ ಮತ್ತು ಅಜ್ಞಾನ ಇವುಗಳಿಂದಲೇ ಮುಕ್ತಿಯಾಗುತ್ತದೆನ್ನುವುದು, ಅತತ್ತ್ವಬುದ್ಧಿಯನ್ನಿಡುವುದು ಮತ್ತು ವಸ್ತು ಸ್ವರೂಪವನ್ನು ವಿಪರೀತವಾಗಿ ಮನ್ನಿಸುವುದಕ್ಕೆ ವಿಪರೀತಾಭಿನಿವೇಶವೆನ್ನುತ್ತಾರೆ. -ಧವಲ ೮/೩,೬/೨೦/೬.

**ವಿಭಂಗಜ್ಞಾನ :-** ಯಾವ ಕ್ಷಯೋಪಶಮ ಅವಧಿಜ್ಞಾನವು ಮಿಥ್ಯಾತ್ವದಿಂದ ಸಂಯುಕ್ತವಾಗಿರುವ ಕಾರಣದಿಂದ ವಿಪರೀತ ಸ್ವರೂಪವಾಗಿದೆ ಮತ್ತು ಹೊಸದಾದ ಕರ್ಮಕ್ಕೆ ಬೀಜಪ್ರಾಯವಾಗಿದೆ ಅದಕ್ಕೆ ಆಗಮಗಳಲ್ಲಿ ಕುಅವಧಿ ಅಥವಾ ವಿಭಂಗಜ್ಞಾನವೆಂದು ಹೇಳುತ್ತಾರೆ. ಈ ವಿಭಂಗಜ್ಞಾನವು ಮಿಥ್ಯಾದೃಷ್ಟಿ ಜೀವಗಳಿಗೂ ಮತ್ತು ನಾರಕಿ ಜೀವಗಳಿಗೂ ಇರುತ್ತದೆ. -ಪ್ರಾಕೃತ ಪಂಚಸಂಗ್ರಹ ೧/೧೨೦

**ವಿಭಾವ :-** ಕರ್ಮೋದಯದಿಂದ ಆಗುವ ಜೀವದ ರಾಗಾದಿ ವಿಕಾರ ಭಾವಗಳಿಗೆ ವಿಭಾವವೆನ್ನುತ್ತಾರೆ. ನಿಮಿತ್ತದ ಅಪೇಕ್ಷೆಯಿಂದ ಕಥನ ಮಾಡಿದರೆ ಇವು ಕರ್ಮದ್ದೆನಿಸುತ್ತವೆ. ಮತ್ತು ಜೀವದ ಅಪೇಕ್ಷೆಯಿಂದ ಕಥನ

ಮಾಡಿದರೆ ಇವು ಜೀವದ್ದೆನಿಸುತ್ತವೆ. ಸಂಯೋಗಿಯಾಗಿರುವ ಕಾರಣದಿಂದ ಇವು ಯಾವುದೇ ಒಂದರದೆಂದು ಹೇಳಲಾಗುವುದಿಲ್ಲ. ಶುದ್ಧನಯದಿಂದ ನೋಡಿದರೆ ಇವುಗಳ ಅಸ್ತಿತ್ವವೇ ಇಲ್ಲ ಆತ್ಮನು ಯಾವ ಶುಭ ಇಲ್ಲವೆ ಅಶುಭ ಭಾವವನ್ನು ಮಾಡುತ್ತಾನೆ ಅವನು ವಾಸ್ತವಿಕವಾಗಿ ಆ ಭಾವದ ಕರ್ತೃವಾಗುತ್ತಾನೆ. ಆ ಭಾವವು ಅವನ ಕರ್ಮವಾಗುತ್ತದೆ ಮತ್ತು ಆ ಆತ್ಮನು ಅದರ ಭೋಕ್ತೃವಾಗುತ್ತಾನೆ. ರಾಗ-ದ್ವೇಷ ಹಾಗೂ ಮೋಹಗಳು ಜೀವದ ಅನನ್ಯ ಪರಿಣಾಮಗಳೇ ಇವೆ. ಈ ಕಾರಣದಿಂದ ರಾಗಾದಿಗಳು ಇಂದ್ರಿಯಗಳ ಶಬ್ದ ಮೊದಲಾದ ವಿಷಯಗಳಲ್ಲಿಲ್ಲ.

-ಸಮಯಸಾರ ಗಾಥೆ ೧೦೨ ಮತ್ತು ೩೭೧

**ವಿಶುದ್ಧಿ ಹಾಗೂ ಸಂಕ್ಲೇಶ :-** ಸಾತಾವೇದನೀಯದ ಬಂಧಕ್ಕೆ ಕಾರಣಭೂತವಾದ ಪರಿಣಾಮವು ವಿಶುದ್ಧಿ ಯಾದರೆ ಅಸಾತಾ ವೇದನೀಯದ ಬಂಧಕ್ಕೆ ಕಾರಣಭೂತವಾದದ್ದು ಸಂಕ್ಲೇಶವಿದೆ. ಮನಃಪರ್ಯಯ ಜ್ಞಾನಾವರಣದ ಕ್ಷಯೋಪಶಮವಾದ ಮೇಲೆ ಆತ್ಮನಲ್ಲಿ ಯಾವ ನಿರ್ಮಲತೆಯುಂಟಾಗುತ್ತದೆ ಅದನ್ನು ವಿಶುದ್ಧಿಯನ್ನುತ್ತಾರೆ. ಇನ್ನು ಜೀವಕ್ಕೆ ಪ್ರಾಯಶಃ ಮರಣದ ಸಮಯಕ್ಕೆ ಉತ್ಕೃಷ್ಟವಾದ ಸಂಕ್ಲೇಶವಾಗುತ್ತದೆ. -ರಾಜವಾರ್ತಿಕ ೧/೨೪/೮೫/೧೯

**ವಿಸಂಯೋಜನ :-** ಉಪಶಮ ಮತ್ತು ಕ್ಷಾಯಿಕಸಮ್ಯಕ್ತ್ವ ಪ್ರಾಪ್ತಿಯ ವಿಧಿಯಲ್ಲಿ ಅನಂತಾನುಬಂಧಿ ಕ್ರೋಧ, ಮಾನ, ಮಾಯೆ, ಲೋಭಗಳನ್ನು ಪ್ರತ್ಯಾಖ್ಯಾನ ಮೊದಲಾದ ಕ್ರೋಧ, ಮಾನ, ಮಾಯೆ, ಲೋಭಗಳ ರೂಪದಿಂದ ಪರಿಣಮಿಸಲ್ಪಡುವುದಕ್ಕೆ ವಿಸಂಯೋಜನವೆನ್ನುತ್ತಾರೆ. ಸಮ್ಯಗ್ದೃಷ್ಟಿ ಜೀವವು ವಿಸಂಯೋಜನೆಯನ್ನು ಮಾಡುತ್ತದೆ. -ಕಷಾಯ ಪಾಹುಡ ೨/೨-೨೨

**ವಿಹಾಯೋಗತಿ :-** ವಿಹಾಯಸ್ ಎಂದರೆ ಆಕಾಶವಿದೆ. ಯಾವ ಕರ್ಮದ ಉದಯದಿಂದ ಭೂಮಿಯ ಆಶ್ರಯ ಪಡೆದು ಇಲ್ಲವೆ ಆ ಆಶ್ರಯದ ನೆರವಿಲ್ಲದೆಯೇ ಆಕಾಶದಲ್ಲಿ ಜೀವಿಗಳ ಗಮನವಾಗುತ್ತದೆ ಅದು ವಿಹಾಯೋಗತಿಯಿದೆ. ಅದರಲ್ಲಿ ಪ್ರಶಸ್ತ, ಅಪ್ರಶಸ್ತವೆಂದು ಎರಡು ಪ್ರಕಾರಗಳಿವೆ. ಆನೆ, ಎತ್ತು ಮೊದಲಾದ ಪ್ರಶಸ್ತ, ಗತಿಯಲ್ಲಿ ಕಾರಣವಾದದ್ದು ಪ್ರಶಸ್ತವಿಹಾಯೋಗತಿ ನಾಮಕರ್ಮವಿದೆ ಮತ್ತು ಒಂಟೆ, ಕತ್ತೆ ಮೊದಲಾದ ಅಪ್ರಶಸ್ತ ಗತಿಗಳಲ್ಲಿ ಕಾರಣವಾದದ್ದು ಅಪ್ರಶಸ್ತವಿಹಾಯೋಗತಿ ನಾಮಕರ್ಮವಿದೆ. -ರಾಜವಾರ್ತಿಕ, ೮/೧೧/೧೮-೫೭೮-೧೨

**ವೀತರಾಗ :-** ಯಾರ ರಾಗವು ಸಂಪೂರ್ಣವಾಗಿ ನಷ್ಟವಾಗಿ ಹೋಗಿದೆಯೋ ಅವರಿಗೆ ವೀತರಾಗರೆಂದು ಹೇಳುತ್ತಾರೆ.

**ವೇದಕ ಸಮ್ಯಗ್ದೃಷ್ಟಿ :-** ಸಮ್ಯಕ್ತ್ವ ಮೋಹನೀಯ ಪ್ರಕೃತಿಯ ಉದಯದಿಂದ ಪದಾರ್ಥಗಳ ಯಾವ ಚಲ, ಮಲಿನ ಮತ್ತು ಅವಗಾಢರೂಪವಾದ ಶ್ರದ್ಧೆಯಾಗುತ್ತದೆ ಅದನ್ನು ವೇದಕಸಮ್ಯಗ್ದರ್ಶನವೆನ್ನುತ್ತಾರೆ. ವೇದಕ ಸಮ್ಯಕ್ತ್ವವು ಉಂಟಾದ ಮೇಲೆ ಜೀವದ ಬುದ್ಧಿಯು ಶುಭಾನುಬಂಧಿ ಇಲ್ಲವೆ ಸುಖಾನುಬಂಧಿಯಾಗುತ್ತದೆ ನಿರ್ಮಲ ಕರ್ಮದಲ್ಲಿ ಪ್ರೀತಿಯು ಉಂಟಾಗುತ್ತದೆ. ಶ್ರುತಗಳಲ್ಲಿ ಸಂವೇಗ ಎಂದರೆ ಪ್ರೀತಿ ಹುಟ್ಟುತ್ತದೆ. ತತ್ತ್ವಾರ್ಥಗಳಲ್ಲಿ ಶ್ರದ್ಧೆ, ಪ್ರಿಯವಾದ ಧರ್ಮದಲ್ಲಿ ಅನುರಾಗ ಹಾಗೂ ಸಂಸಾರದಲ್ಲಿ ತೀವ್ರ ನಿರ್ವೇದ ಎಂದರೆ ವೈರಾಗ್ಯವು ಜಾಗೃತವಾಗುತ್ತದೆ. ಈ ಗುಣಗಳನ್ನು ಮೊದಲು ಮಾಡಿಕೊಂಡು ಈ ಪ್ರಕಾರದ ಎಷ್ಟು ಗುಣಗಳಿವೆ ಅವೆಲ್ಲವು ವೇದಕಸಮ್ಯಕ್ತ್ವವುಳ್ಳ ಜೀವಕ್ಕೆ ಪ್ರಕಟವಾಗುತ್ತವೆ. ಸಮ್ಯಕ್ತ್ವ ಪ್ರಕೃತಿಯ ಉದಯದ ವೇದನೆ ಮಾಡುವಂಥ ಜೀವವನ್ನು ವೇದಕಸಮ್ಯಗ್ದೃಷ್ಟಿಯೆಂದು ತಿಳಿಯಬೇಕು. (ಪ್ರಾ. ಪಂಚಸಂಗ್ರಹ ೧/೧೬೩-೧೬೪)

**ವೈಯಾವೃತ್ಯ :-** ಗುಣಗಳಲ್ಲಿ ಅನುರಾಗ ಪೂರ್ವಕವಾಗಿ ಸಂಯಮೀ ಪುರುಷರ ದುಃಖವನ್ನು ದೂರ ಮಾಡುವುದು, ಕಾಲು ಒತ್ತುವುದು ಇವೇ ಮೊದಲಾದ ಇತರ ಉಪಕಾರಗಳನ್ನು ಮಾಡುವುದಕ್ಕೆ ವೈಯಾವೃತ್ಯ

ವೆನ್ನುತ್ತಾರೆ. ವೈಯಾವೃತ್ಯದಲ್ಲಿ ಆಚಾರ್ಯ, ಉಪಾಧ್ಯಾಯ, ತಪಸ್ವಿ, ಶಿಷ್ಯ, ರೋಗಿ, ಗಣ, ಕುಲ, ಸಂಘ, ಸಾಧು ಮತ್ತು ಮನೋಜ್ಞ ಹೀಗೆ ಹತ್ತು ಪ್ರಕಾರಗಳಿವೆ. ಕೇವಲ ಸ್ವಾಧ್ಯಾಯ ಮಾಡುವವರು ತಮ್ಮ ಆತ್ಮೋನ್ನತಿಯನ್ನು ಮಾಡಿಕೊಳ್ಳುವ ಸಾಧ್ಯತೆಯಿದೆ. ಆದರೆ ವೈಯಾವೃತ್ಯ ಮಾಡುವವರು ತಮ್ಮ ಹಾಗೂ ಇತರರ ಉನ್ನತಿಯನ್ನು ಮಾಡುತ್ತಾರೆ. ವೈಯಾವೃತ್ಯದಲ್ಲಿ ಹದಿನೈದು ಭಾವನೆಗಳ ಅಂತರ್ಭಾವವಿದೆ. ಅವುಗಳಲ್ಲಿ ವೈಯಾವೃತ್ಯಯೋಗಯುಕ್ತತೆಯಿಂದ ತೀರ್ಥಂಕರ ನಾಮಕರ್ಮವು ಕಟ್ಟುತ್ತದೆ. -ಧವಲ ೮/೩,೪೧/೮೮/೮.

**ಶ್ರಾವಕ :-** ವಿವೇಕವುಳ್ಳವನೂ, ವಿರಕ್ತಚಿತ್ತನೂ, ಅಣುವ್ರತಿಯೂ ಆದ ಗೃಹಸ್ಥನಿಗೆ ಶ್ರಾವಕನೆಂದು ಹೇಳುತ್ತಾರೆ. ಇದರಲ್ಲಿ ಪಾಕ್ಷಿಕ, ನೈಷ್ಟಿಕ, ಸಾಧಕವೆಂದು ಮೂರು ಪ್ರಕಾರಗಳಿವೆ. ಕೇವಲ ತನ್ನ ಧರ್ಮದ ಪಕ್ಷ ವಹಿಸುವವನು ಪಾಕ್ಷಿಕನಿದ್ದಾನೆ ಮತ್ತು ವ್ರತಧಾರಿಯು ನೈಷ್ಠಿಕನಿದ್ದಾನೆ ಇದರಲ್ಲಿ ವೈರಾಗ್ಯದ ಉತ್ಕರ್ಷದಿಂದ ಉತ್ತರೋತ್ತರವಾಗಿ ಹನ್ನೊಂದು ಶ್ರೇಣಿಗಳಿವೆ. ಅವಕ್ಕೆ ಹನ್ನೊಂದು ಪ್ರತಿಮೆಗಳೆಂದು ಹೇಳುತ್ತಾರೆ. ಶಕ್ತಿಯನ್ನು ಬಚ್ಚಿಡದೆ ಅದು ಕೆಳಗಿನ ಅವಸ್ಥೆಯಿಂದ ಕ್ರಮವಾಗಿ ಏರುತ್ತ ಹೋಗುತ್ತದೆ. ಕೊನೆಯ ಶ್ರೇಣಿಯಲ್ಲಿ ಇದರ ರೂಪವು ಸಾಧುವಿಗಿಂತ ಸ್ವಲ್ಪ ಕಡಿಮೆಯಾಗಿರುತ್ತದೆ. ಇನ್ನು ಯಾವನು ಶ್ರದ್ಧಾಪೂರ್ವಕವಾಗಿ ಗುರು ಮೊದಲಾದವರಿಂದ ಧರ್ಮ ಶ್ರವಣ ಮಾಡುತ್ತಾನೆ ಅವನು ಶ್ರಾವಕನೆನಿಸಿಕೊಳ್ಳುತ್ತಾನೆ. (ಸಾ.ಧ. ಸ್ವೋಪಜ್ಞ ಟೀಕೆ. ೧/೧೫.)

**ಶ್ರುತಕೇವಲಿ :-** ಜ್ಞಾನ ಸ್ವರೂಪವಾಗುವ ಕಾರಣದಿಂದ ಆತ್ಮನು ಸ್ವಯಂ ಜ್ಞೇಯಾಕಾರ ಸ್ವರೂಪನಿದ್ದಾನೆ. ಆದುದರಿಂದ ಆತ್ಮನನ್ನು ತಿಳಿಯುವುದರಿಂದಲೇ ಸಂಪೂರ್ಣ ವಿಶ್ವವು ಪ್ರತ್ಯಕ್ಷ ರೂಪದಿಂದ ತಿಳಿಯತೊಡಗುತ್ತದೆ. ಅದಕ್ಕಾಗಿ ಕೇವಲ ಆತ್ಮನನ್ನು ತಿಳಿಯುವವನು ಅಥವಾ ಸಕಲ ಶ್ರುತವನ್ನು ತಿಳಿಯುವವನೇ ಶ್ರುತಕೇವಲಿಯಿದ್ದಾನೆ. ಇದರಿಂದ ೧೧ ಇಲ್ಲವೆ ೧೪ ಅಂಗಗಳನ್ನು ತಿಳಿಯುವುದರಿಂದಲೂ ಶ್ರುತಕೇವಲಿಯೆಂದು ಹೇಳುತ್ತಾರೆ, ಮತ್ತು ಕೇವಲ ಸಮಿತಿ, ಗುಪ್ತಿರೂಪವಾದ ಎಂಟು ಪ್ರವಚನಗಳನ್ನು ತಿಳಿಯುವುದರಿಂದಲೂ ಶ್ರುತಕೇವಲಿಯೆಂದೂ ಹೇಳುತ್ತಾರೆ.

**ಶ್ರುತಜ್ಞಾನ :-** ಇಂದ್ರಿಯಗಳ ಮುಖಾಂತರ ವಿವಕ್ಷಿತ ಪದಾರ್ಥಗಳನ್ನು ಗ್ರಹಣ ಮಾಡಿ ಅದರಿಂದ ಸಂಬಂಧಿಸಿದ ಬೇರೆ ಪದಾರ್ಥಗಳನ್ನು ತಿಳಿಯುವುದು ಶ್ರುತಜ್ಞಾನವಿದೆ. ಇದರಲ್ಲಿ ಅರ್ಥಲಿಂಗಜ, ಶಬ್ದಲಿಂಗಜವೆಂದು ಎರಡು ಪ್ರಕಾರಗಳಿವೆ. ಪದಾರ್ಥಗಳನ್ನು ತಿಳಿದುಕೊಂಡು ಅವುಗಳಲ್ಲಿ ಇಷ್ಟಾನಿಷ್ಟಗಳ ಜ್ಞಾನವಾಗುವುದು ಇಲ್ಲವೆ ಹೊಗೆಯನ್ನು ನೋಡಿ ಅಗ್ನಿಯ ಜ್ಞಾನವಾಗುವುದು. ಇದು ಅರ್ಥಲಿಂಗಜ ಶ್ರುತಜ್ಞಾನವಿದೆ. ವಾಚಕ ಶಬ್ದವನ್ನು ಕೇಳಿ ಇಲ್ಲವೆ ಓದಿ ವಾಚ್ಯದ ಜ್ಞಾನವಾಗುವುದು ಇದು ಶಬ್ದಲಿಂಗಜಶ್ರುತಜ್ಞಾನವಿದೆ. ಇದು ಲೌಕಿಕವೂ, ಲೋಕೋತ್ತರವೂ ಆಗುತ್ತದೆ. ಲೋಕೋತ್ತರ ಶ್ರುತಜ್ಞಾನದಲ್ಲಿ ೧೨ ಅಂಗ ೧೪ ಪೂರ್ವ ಮೊದಲಾದ ರೂಪದಿಂದ ಅನೇಕ ಪ್ರಕಾರಗಳಿವೆ. ಮೊದಲನೆಯ ಅರ್ಥಲಿಂಗಜವಂತೂ ಕ್ಷುಲ್ಲಕ ಜೀವಿಗಳಿಂದ ಆರಂಭವಾಗಿ ಕ್ರಮದಿಂದ ವೃದ್ಧಿಂಗತವಾಗುತ್ತ ಹೋಗಿ ಋದ್ಧಿಧಾರಿ ಮುನಿಗಳವರೆಗೆ ಆಗುತ್ತದೆ. ಆದರೆ ಎರಡನೆಯ ಅರ್ಥಲಿಂಗಜ ಹಾಗೂ ಶಬ್ದಲಿಂಗಜಗಳು ಸಂಜ್ಞೀ ಪಂಚೇಂದ್ರಿಯ ಜೀವಗಳಿಗೂ ಸಂಭವವಿದೆ. ಶ್ರುತಕೇವಲಿಗೆ ಇದು ಉತ್ಕೃಷ್ಟವಾಗಿರುತ್ತದೆ.

**ಶುಭೋಪಯೋಗ :-** ವೀತರಾಗ ಪರಮಾತ್ಮ ದ್ರವ್ಯದಿಂದ ವಿಲಕ್ಷಣವಾದ ಪಂಚ ಪರಮೇಷ್ಠಿಗಳ ನಿರ್ಭರ ಗುಣಾನುರಾಗವು ಪ್ರಶಸ್ತವಾದ ಧರ್ಮಾನುರಾಗವಿದೆ. ಅನುಕಂಪೆಯಿಂದ ಕೂಡಿದ ಪರಿಣಾಮವು ಹಾಗೂ ದಯೆಯಿಂದ ಕೂಡಿದ ಮನ, ವಚನ ಕಾಯಗಳ ವ್ಯಾಪಾರ ರೂಪವಾದ ಪರಿಣಾಮವು ಶುಭಪರಿಣಾಮವಿದೆ. ಇನ್ನು ಈ ಆತ್ಮವು ಯಾವಾಗ ಅಶುಭೋಪಯೋಗದ ಭೂಮಿಕೆಯನ್ನುಲ್ಲಂಘಿಸಿ, ದೇವ, ಗುರು, ಯತಿಗಳ ಪೂಜೆ, ದಾನ, ಶೀಲ ಮತ್ತು ಉಪವಾಸ ಮೊದಲಾದವುಗಳ ಪ್ರತೀತಿರೂಪವಾದ ಧರ್ಮಾನುರಾಗವನ್ನು ಸ್ವೀಕರಿಸುತ್ತದೆ ಆಗ ಅದು ಇಂದ್ರಿಯ ಸುಖಕ್ಕೆ ಸಾಧನಭೂತವಾದ ಶುಭೋಪಯೋಗದಲ್ಲಿ ಆರೂಢವಾಗುತ್ತದೆ.

**ಶುಕ್ಲಲೇಶ್ಯೆ :-** ಯಾರು ಪಕ್ಷಪಾತ ಮಾಡುವುದಿಲ್ಲ ಮತ್ತು ಅನ್ಯರನ್ನು ಕೀಳಾಗಿ ಭಾವಿಸುವುದಿಲ್ಲ,ಎಲ್ಲರೊಡನೆ ಸಮನಾಗಿ ವ್ಯವಹರಿಸುತ್ತಾರೆ, ಯಾರಿಗೆ ಪರವಸ್ತುಗಳಲ್ಲಿ ರಾಗ-ದ್ವೇಷ ಹಾಗೂ ಸ್ನೇಹಗಳಿಲ್ಲ. ಇವೆಲ್ಲವೂ ಶುಕ್ಲಲೇಶ್ಯೆಯ ಲಕ್ಷಣಗಳೆಂದು ತಿಳಿಯಬೇಕು. (ಪ್ರಾಕೃತ ಪಂಚಸಂಗ್ರಹ. ೧/೧೫೨)

**ಶುದ್ಧೋಪಯೋಗ :-** ಯಾರು ಪದಾರ್ಥಗಳನ್ನು ಮತ್ತು ಸೂತ್ರಗಳನ್ನು ಚನ್ನಾಗಿ ತಿಳಿದುಕೊಂಡಿದ್ದಾರೆ, ಯಾರು ಸಂಯಮ ಮತ್ತು ತಪಯುಕ್ತರುಗಳಾಗಿದ್ದಾರೆ, ಯಾರು ವೀತರಾಗಿಯಾಗಿದ್ದಾರೆ ಮತ್ತು ಯಾರಿಗೆ ಸುಖ-ದುಃಖಗಳು ಸಮಾನವಾಗಿವೆ ಇಂಥ ಶ್ರಮಣರಿಗೆ ಶುದ್ಧೋಪಯೋಗಿಯೆಂದು ಹೇಳುತ್ತಾರೆ. ಇನ್ನು ಶುಭ-ಅಶುಭ ಪರಿಣಾಮಗಳಿಂದ ಕರ್ಮದ ಬಂಧವಾಗುತ್ತದೆ ಮತ್ತು ಶುದ್ಧೋಪಯೋಗದಿಂದ ಅವೆರಡೂ ಸಮೂಲವಾಗಿ ನಷ್ಟವಾಗುತ್ತದೆ.

**ಸಮಭಿರೂಢನಯ :-** ಹಲವು ಅರ್ಥಗಳನ್ನು ಸಮಭಿರೋಹಣ ಮಾಡುವುದರಿಂದ ಸಮಭಿರೂಢನಯ ವೆನ್ನಲಾಗುತ್ತದೆ. ಎಂದರೆ ಯಾವ ಹಲವು ಅರ್ಥಗಳನ್ನು ಸಮ ಎಂದರೆ ಬಿಟ್ಟುಕೊಟ್ಟು ಪ್ರಾಧಾನ್ಯದಿಂದ ಒಂದು ಅರ್ಥದಲ್ಲಿ ರೂಢವಾಗುತ್ತದೆ ಅದು ಸಮಭಿರೂಢನಯವಿದೆ. ಉದಾಹರಣೆಗಾಗಿ-'ಗೋ' ಶಬ್ದದ ಹೇಳಿಕೆಯು ಪೃಥ್ವಿ ಮೊದಲಾಗಿ ಹನ್ನೊಂದು ಅರ್ಥಗಳಲ್ಲಿ ಪ್ರವೃತ್ತಿ ಹೊಂದುತ್ತದೆ. ಆದರೂ ಈ ನಯದ ಅಪೇಕ್ಷೆಯಿಂದ ಅದು ಹಸುವೆಂಬ ವಿಶೇಷಾರ್ಥದಲ್ಲಿ ರೂಢವಿದೆ. ಪರ್ಯಾಯವಾಚಿ ಶಬ್ದಗಳ ವಾಚ್ಯಗಳಲ್ಲಿ ಯಾವಾಗಲೂ ಅನೇಕತ್ವವನ್ನು ಮನ್ನಿಸುವುದು ಸಮಭಿರೂಢಾಭಾಸವಿದೆ; ಹೇಗೆಂದರೆ ಇಂದ್ರ, ಶಕ್ರ, ಪುರಂದರ ಇತ್ಯಾದಿ ಶಬ್ದಗಳ ಅರ್ಥವು ಬೇರೆ ಶಬ್ದಗಳಾಗಿರುವ ಕಾರಣದಿಂದ ಅದೇ ಪ್ರಕಾರವಾಗಿ ಬೇರೆಯೇ ಮನ್ನಿಸಬೇಕು. ಏಕೆಂದರೆ ವ್ಯುತ್ಪತ್ತಿಯ ಅಪೇಕ್ಷೆಯಿಂದ ಐಶ್ವರ್ಯವಂತನಾಗಿರುವುದರಿಂದ ಇಂದ್ರನು, ಸಮರ್ಥನಾಗಿರುವುದರಿಂದ ಶಕ್ರನು ಮತ್ತು ನಗರಗಳನ್ನು ಒಡೆಯುವುದರಿಂದ ಪುರಂದರನಾಗುತ್ತಾನೆ ಇದೇ ಪ್ರಕಾರ ಎಲ್ಲ ಕಡೆಗೆ ತಿಳಿಯಬೇಕು.

(ಸರ್ವಾರ್ಥಸಿದ್ಧಿ ೧/೩೩/೧೪೪/೪)

**ಸಮಯ :-** ಮಂದಗತಿಯಿಂದ ಒಂದು ಪರಮಾಣು ಇನ್ನೊಂದು ಪರಮಾಣುವಿನವರೆಗೆ ಹೋಗಲು ಎಷ್ಟು ಕಾಲ ಬೇಕಾಗುತ್ತದೆಯೋ ಅದಕ್ಕೆ ಸಮಯವೆನ್ನುತ್ತಾರೆ.

**ಸಮಿತಿ :-** ನಡೆದಾಡುವಲ್ಲಿ, ಮಾತಾಡುವಲ್ಲಿ, ಆಹಾರ ಸ್ವೀಕರಿಸುವಲ್ಲಿ, ವಸ್ತುಗಳನ್ನು ಇಡುವಲ್ಲಿ-ತೆಗೆದು ಕೊಳ್ಳುವಲ್ಲಿ ಮತ್ತು ಮಲ-ಮೂತ್ರಗಳನ್ನು ವಿಸರ್ಜನೆ ಮಾಡುವಲ್ಲಿ ವಿವೇಕ ಪೂರ್ವಕವಾಗಿ ಸಮ್ಯಕ್ ಪ್ರಕಾರದಿಂದ ಪ್ರವೃತ್ತಿ ಮಾಡುತ್ತ ಜೀವಗಳನ್ನು ರಕ್ಷಣೆ ಮಾಡುವುದು ಅದು ಸಮಿತಿಯಿದೆ.

**ಸಮುದ್ಘಾತ :-** ಮೂಲ ಶರೀರವನ್ನು ಬಿಡದೆ ತೈಜಸ, ಕಾರ್ಮಾಣರೂಪವಾದ ಉತ್ತರ ಶರೀರದ ಜೊತೆ ಜೊತೆಯಲ್ಲಿ ಜೀವ ಪ್ರದೇಶಗಳನ್ನು ಶರೀರದಿಂದ ಹೊರಗೆ ತೆಗೆಯುವುದಕ್ಕೆ ಸಮುದ್ಘಾತವೆನ್ನುತ್ತಾರೆ.

**ಸಮ್ಮೂರ್ಚ್ಛನ :-** ಮೂರೂ ಲೋಕಗಳಲ್ಲಿ ಮೇಲೆ, ಕೆಳಗೆ ಹಾಗೂ ವಕ್ರ ಹೀಗೆ ದೇಹದ ನಾಲ್ಕೂ ನಿಟ್ಟಿನಿಂದ ಮೂರ್ಚ್ಛನ್ ಎಂದರೆ ಪುದ್ಗಲದ ಸ್ವೀಕಾರವಾಗುವುದು ಸಮ್ಮೂರ್ಚ್ಛನವಿದೆ. ಇನ್ನು 'ಸಂ' ಎಂದರೆ ಸಂಪೂರ್ಣವಾಗಿ 'ಮೂರ್ಚ್ಛನಂ' ಎಂದರೆ ಜನ್ಮಗ್ರಹಣ ಮಾಡುವ ಯಾವ ಜೀವವು ಅದಕ್ಕೆ ಉಪಕಾರಕವಾದಂಥ ಯಾವ ಶರೀರಾಕಾರವಾಗಿ ಪರಿಣಮಿಸುವುದಕ್ಕೆ ಯೋಗ್ಯವಾದ ಪುದ್ಗಲ ಸ್ಕಂಧಗಳು ತಾನಾಗಿಯೇ ಪ್ರಕಟವಾಗುವುದು ಅದು ಸಮ್ಮೂರ್ಚ್ಛನ ಜನ್ಮವಿದೆ ಮನುಷ್ಯರ ಜನ್ಮವು ಗರ್ಭ ಹಾಗೂ ಸಮ್ಮೂರ್ಚ್ಛನವೆಂದು ಎರಡು ಪ್ರಕಾರಗಳಿಂದಾಗುತ್ತದೆ.

**ಸಮ್ಯಕ್ತ್ವ :-** ಸಮ್ಯಕ್ ಶಬ್ದವು ಅವ್ಯುತ್ಪನ್ನ ಎಂದರೆ ರೂಢಿಯ ಮತ್ತು ವ್ಯುತ್ಪನ್ನ ಎಂದರೆ ವ್ಯಾಕರಣಸಿದ್ಧವಿದೆ.

ಹೇಗೆಂದರೆ 'ಸಮ್' ಉಪಸರ್ಗಪೂರ್ವಕವಾಗಿ 'ಅಂಚ' ಧಾತುವಿನಿಂದ ಕ್ಲಿಪ್ತ ಪ್ರತ್ಯಯ ಹಚ್ಚಿದರೆ 'ಸಮ್ಯಕ್' ಶಬ್ದವಾಗುತ್ತದೆ. ಸಂಸ್ಕೃತದಲ್ಲಿ ಇದರ ವ್ಯುತ್ಪತ್ತಿಯು 'ಸಮಂಚತಿ ಇತಿಸಮ್ಯಕ್' ಎಂದಿದೆ ಪ್ರಾಕೃತದಲ್ಲಿ ಇದರ ಅರ್ಥವು ಪ್ರಶಂಸೆಯಿದೆ. ಈ ಶಬ್ದವನ್ನು ದರ್ಶನ, ಜ್ಞಾನ, ಚಾರಿತ್ರಗಳಲ್ಲಿ ಪ್ರತಿಯೊಂದು ಶಬ್ದಕ್ಕೆ ಸೇರಿಸಿದರೆ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರಗಳಾಗುತ್ತವೆ. ಪದಾರ್ಥಗಳ ಯಥಾರ್ಥವಾದ ಜ್ಞಾನಮೂಲದ ಶ್ರದ್ಧೆಯ ಸಂಗ್ರಹಕ್ಕಾಗಿ ದರ್ಶನದ ಮೊದಲು ಸಮ್ಯಕ್ ವಿಶೇಷಣವನ್ನಿಟ್ಟಿದೆ. ಸಮ್ಯಕ್ತ್ವವು ನಿಜವಾಗಿ ಸೂಕ್ಷ್ಮವಿದೆ, ಕೇವಲಜ್ಞಾನಗೋಚರವಿದೆ ಆದರೆ ಮತಿಜ್ಞಾನ, ಶ್ರುತಜ್ಞಾನ ಮತ್ತು ದೇಶಾವಧಿ ಇವುಗಳಿಂದ ಅದರ ಉಪಲಬ್ಧಿಯ ಸಾಧ್ಯತೆಯಿದೆ. ಸಮ್ಯಕ್ತ್ವವು ಸರಾಗ, ವೀತರಾಗಗಳೆರಡರಲ್ಲಿಯೂ ಸಂಭವವಿದೆ. ಸರಾಗದಲ್ಲಿ ಪ್ರಶಮ ಮೊದಲಾದ ಲಕ್ಷಣಗಳಿಂದ ಅದರ ಅಭಿವ್ಯಕ್ತಿಯಾಗುತ್ತದೆ ಮತ್ತು ವೀತರಾಗದಲ್ಲಿ ಅದು ಚಿತ್ತವಿಶುದ್ಧಿಯಿಂದ ಲಕ್ಷಿತವಾಗುತ್ತದೆ. ಪ್ರಶಮಾದಿ ಗುಣಗಳು ಒಂದೊಂದಾಗಿ ಸಮೂಹರೂಪದಿಂದ ತಮ್ಮ ಆತ್ಮನಲ್ಲಿ ಸ್ವಸಂವೇದನಗಮ್ಯವಿದೆ ಮತ್ತು ಎರಡನೆಯದರಲ್ಲಿ ಕಾಯ, ವಚನ ವ್ಯವಹಾರ ರೂಪವಾದ ವಿಶೇಷಜ್ಞಾಪಕಲಿಂಗಗಳಿಂದ ಅನುಮಾನಗಮ್ಯವಿದೆ.

**ಪರಮೋಪಶಮಂ ಧರ್ಮಾ । ನುರಾಗಮನುಕಂಪೆ ನೆರೆದ ನಂಬುಗೆಯೆಂಬೀ ।**
**ಪರಮ ಜಿನಗಧಿತಗುಣ । ಪರಿಕರದೊಳ್ ಕೂಡಿದುದೆ ನಿರುಪಮಂ ಸಮ್ಯಕ್ತ್ವಂ ॥**

-ಮಹಾಕವಿ ಪಂಪನ ಆದಿಪುರಾಣದಿಂದ

**ಸಮ್ಯಕ್ತ್ವ ಮೋಹನೀಯ :-** ಮದ್ಯ ಕುಡಿದವರ ಹಾಗೆ ಹೇಯ-ಉಪಾದೇಯಗಳ ಜ್ಞಾನವಿಲ್ಲದಿರುವಿಕೆಯು ಮೋಹನೀಯವಿದೆ. ಇದರಲ್ಲಿ ದರ್ಶನಮೋಹನೀಯ, ಚಾರಿತ್ರಮೋಹನೀಯವೆಂದು ಎರಡು ಪ್ರಕಾರಗಳು. ಇನ್ನು ಆ ದರ್ಶನಮೋಹನೀಯದಲ್ಲಿ ಸಮ್ಯಕ್ತ್ವ, ಮಿಥ್ಯಾತ್ವ ಮತ್ತು ಸಮ್ಯಗ್ಮಿಥ್ಯಾತ್ವ ಅಥವಾ ಮಿಶ್ರಮೋಹನೀಯವೆಂದು ಮೂರು ಪ್ರಕಾರಗಳು ಶುಭ ಪರಿಣಾಮಗಳ ಕಾರಣದಿಂದಾಗಿ ಮಿಥ್ಯಾತ್ವವು ಯಾವಾಗ ತನ್ನ ಸ್ವರಸವನ್ನು ತಡೆ ಹಿಡಿಯುತ್ತದೆ, ಮತ್ತು ಉದಾಸೀನ ರೂಪದಿಂದ ಅವಸ್ಥಿತವಿದ್ದು ಆತ್ಮನ ಶ್ರದ್ಧೆಯನ್ನು ತಡೆಯುವುದಿಲ್ಲ ಆಗ ಸಮ್ಯಕ್ತ್ವಮೋಹನೀಯವೆನಿಸುತ್ತದೆ. ಇನ್ನು ಯಾವ ಕರ್ಮದ ಉದಯದಿಂದ ಆಪ್ತ, ಆಗಮ ಹಾಗೂ ಪದಾರ್ಥಗಳ ಶ್ರದ್ಧೆಯಲ್ಲಿ ಶಿಥಿಲತೆಯುಂಟಾಗುತ್ತದೆ ಅದು ಸಮ್ಯಕ್ ಪ್ರಕೃತಿಯಿದೆ. -ಧವಲ, ೬/೧, ೯-೮, ೭/೨೩೫/೧

**ಸಮ್ಯಗ್ಜ್ಞಾನ :-** ಜ್ಞಾನವು ಜೀವದ ಒಂದು ವಿಶೇಷ ಗುಣವಿದೆ. ಅದು ಸ್ವ-ಪರಗಳೆರಡನ್ನು ತಿಳಿಯುವುದರಲ್ಲಿ ಸಮರ್ಥವಾಗಿದೆ. ಅದು ಮತಿ, ಶ್ರುತ, ಅವಧಿ, ಮನಃಪರ್ಯಾಯ ಮತ್ತು ಕೇವಲಜ್ಞಾನವೆಂದು ಐದು ಪ್ರಕಾರವಿದೆ. ಇದು ಅನಾದಿ ಕಾಲದಿಂದ ಮೋಹ ಮಿಶ್ರಿತವಾಗಿರುವ ಕಾರಣದಿಂದ ಸ್ವ-ಪರಗಳ ಭೇದವನ್ನು ಕಾಣಲು ಶಕ್ತವಾಗಿಲ್ಲ. ಶರೀರ ಮೊದಲಾದ ಪರ-ಪದಾರ್ಥಗಳಿಗೇನೇ ತನ್ನ ಸ್ವರೂಪವೆಂದು ನಂಬುತ್ತದೆ. ಇದರಿಂದಲೇ ಮಿಥ್ಯಾಜ್ಞಾನ ಅಥವಾ ಅಜ್ಞಾನವೆಂಬ ಹೆಸರನ್ನು ಪಡೆಯುತ್ತದೆ. ಯಾವಾಗ ಸಮ್ಯಕ್ತ್ವದ ಪ್ರಭಾವದಿಂದ ಪರ ಪದಾರ್ಥಗಳಿಂದ ಬೇರೆಯಾದ ನಿಜ ಸ್ವರೂಪವನ್ನು ತಿಳಿಯ ತೊಡಗುತ್ತದೆ. ಆಗ ಭೇದಜ್ಞಾನವೆಂಬ ಹೆಸರನ್ನು ಹೊಂದುತ್ತದೆ, ಅದೇ ಸಮ್ಯಗ್ಜ್ಞಾನವಿದೆ. ಜ್ಞಾನವು ವಾಸ್ತವಿಕವಾಗಿ ಸಮ್ಯಕ್ ಹಾಗೂ ಮಿಥ್ಯೆ ಇರುವುದಿಲ್ಲ. ಆದರೆ ಸಮ್ಯಕ್ತ್ವ ಹಾಗೂ ಮಿಥ್ಯಾತ್ವದ ಸಹಕಾರತ್ವದಿಂದ ಸಮ್ಯಕ್ ಇಲ್ಲವೆ ಮಿಥ್ಯೆಯೆಂಬ ಹೆಸರನ್ನು ಪಡೆಯುತ್ತದೆ. ಸಮ್ಯಗ್ಜ್ಞಾನವೇ ಮೋಕ್ಷಮಾರ್ಗವನ್ನು ಸಿದ್ಧಿ ಮಾಡುವುದರಲ್ಲಿ ಸಮರ್ಥವಾಗಿರುವ ಕಾರಣದಿಂದ ಜೀವಗಳಿಗೆ ಇಷ್ಟವಿದೆ. ಜೀವಕ್ಕೆ ತನ್ನ ಪ್ರತಿಭಾಸವಂತೂ ನಿಶ್ಚಯ ಸಮ್ಯಗ್ಜ್ಞಾನವಿದೆ ಮತ್ತು ಅದನ್ನು ಪ್ರಕಟಮಾಡುವಲ್ಲಿ ಕಾರಣಕರ್ತೃವಾದ ಆಗಮ ಜ್ಞಾನವು ವ್ಯವಹಾರ ಸಮ್ಯಗ್ಜ್ಞಾನವಿದೆ. ಆದರೆ ನಿಶ್ಚಯ ಸಮ್ಯಗ್ಜ್ಞಾನವೇ ನಿಜವಾಗಿ ಮೋಕ್ಷಕ್ಕೆ ಕಾರಣವಿದೆಯೇ ವಿನಹ ವ್ಯವಹಾರ ಸಮ್ಯಗ್ಜ್ಞಾನವಿಲ್ಲ, ಸಮ್ಯಗ್ದರ್ಶನದ

ಆರಾಧನೆ ಮಾಡುವವರು ನಿಯಮದಿಂದ ಜ್ಞಾನಾರಾಧನೆ ಮಾಡುತ್ತಾರೆ ಆದರೆ ಮಾಡುವವರು ದರ್ಶನದ ಆರಾಧಕರಾಗೇ ಆಗುತ್ತಾರೆಂಬ ನಿಯಮವಿಲ್ಲ. ಅದಕ್ಕಾಗಿಯೇ ಸಮ್ಯಗ್ದರ್ಶನವಿಲ್ಲದೆ ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರಗಳು ನಿಯಮದಿಂದಾಗುವುದಿಲ್ಲವೆಂದು ಹೇಳುತ್ತಾರೆ. ಸಮ್ಯಕ್ತ್ವವಾದ ಮೇಲೆ ಮೊದಲಿನ ಮಿಥ್ಯಾಜ್ಞಾನವೂ ಸಮ್ಯಕ್ತ್ವವಾಗಿ ಬಿಡುತ್ತದೆ. -ರಯಣಸಾರ-೪೭

**ಸಮ್ಯಗ್ದರ್ಶನ :-** ದುರಭಿನಿವೇಶವಿಲ್ಲದ ಪದಾರ್ಥಗಳ ಶ್ರದ್ಧೆ ಅಥವಾ ತನ್ನಾತ್ಮ ಪ್ರತ್ಯಕ್ಷಪೂರ್ವಕವಾಗಿ ಸ್ವ-ಪರಶ್ರದ್ಧೆ ಇಲ್ಲವೆ ಕರ್ತವ್ಯ-ಅಕರ್ತವ್ಯದ ವಿವೇಕವು ಸಮ್ಯಗ್ದರ್ಶನವೆನಿಸುತ್ತದೆ. ಯಾರಿಗೆ ಇದು ಸ್ವಭಾವದಿಂದ ಯಾರಿಗೆ ಉಪದೇಶಪೂರ್ವಕವಾಗುತ್ತದೆ. ಇದು ಆಜ್ಞಾದಿ ಭೇದದಿಂದ ಹತ್ತು ಪ್ರಕಾರವಿದೆ. ಕರ್ಮಗಳ ಉಪಶಮ, ಕ್ಷಯ, ಕ್ಷಯೋಪಶಮದಿಂದ ಮೂರು ಪ್ರಕಾರವಿದೆ. ಇವುಗಳಲ್ಲಿ ಮೊದಲಿನವೆರಡು ಅತ್ಯಂತ ನಿರ್ಮಲ, ನಿಶ್ಚಿತವಾಗಿರುತ್ತದೆ. ಮೂರನೆಯದು ಸಮಲವಾಗಿರುವುದರಿಂದ ಅತಿಚಾರತಗಲುವ ಸಂಭವವಿದೆ. ರಾಗದ ಸದ್ಭಾವ ಅಭಾವದಿಂದ ಸರಾಗ-ವೀತರಾಗವೆಂದು ಎರಡು ಭೇದಗಳಿವೆ. ಅಲ್ಲಿ ಸರಾಗವು ಪ್ರಶಮ, ಸಂವೇಗ ಗುಣಗಳಿಂದ ಅನುಮಾನಗಮ್ಯವಿದ್ದರೆ ವೀತರಾಗವು ಅದು ಕೇವಲ ಸ್ವಾನುಭವಗಮ್ಯವಿದೆ, ಎಲ್ಲ ಭೇದಗಳು ನಿಶ್ಶಂಕಿತ ಮೊದಲಾದ ಗುಣಗಳಿಂದ ಭೂಷಿತವಾಗಿವೆ. ಸಮ್ಯಕ್ತ್ವ ಮತ್ತು ಜ್ಞಾನದಲ್ಲಿ ಬಹಳ ಅಂತರವಿದೆ ಅದು ಸೂಕ್ಷ್ಮವಿಚಾರವಿಲ್ಲದೆ ತಿಳಿವಳಿಕೆಗೆ ಬರುವುದಿಲ್ಲ. ಎಷ್ಟು ವಿಕಲ್ಪಾತ್ಮಕವಾದ ಉಪಲಬ್ಧಿಗಳಿವೆ ಅವೆಲ್ಲವೂ ಜ್ಞಾನ ರೂಪವಾಗಿವೆ. ಸಮ್ಯಗ್ದರ್ಶನವು ನಿರ್ವಿಕಲ್ಪವಾಗಿರುವುದರಿಂದ ಅಂತರಂಗದಲ್ಲಿ ಲಬ್ಧಿರೂಪವಾಗಿರುತ್ತದೆ. ಮೋಕ್ಷಮಾರ್ಗದಲ್ಲಿ ಇದಕ್ಕೆ ಸರ್ವೋಚ್ಚಸ್ಥಾನವಿದೆ. ಏಕೆಂದರೆ ಇದಿಲ್ಲದೆ ಆಗಮಜ್ಞಾನ, ವ್ರತ, ತಪಾದಿಗಳೆಲ್ಲವು ವ್ಯರ್ಥವಾಗಿವೆ. ಈ ಸಮ್ಯಗ್ದರ್ಶನವು ತಾನಾಗಿ ಇಲ್ಲವೆ ಯಾರದೇ ಉಪದೇಶದಿಂದ ಅಥವಾ ಜಾತಿಸ್ಮರಣ, ಜಿನಬಿಂಬ ದರ್ಶನಾದಿ ನಿಮಿತ್ತಗಳಿಂದ ಭವ್ಯ ಜೀವಗಳಿಗೆ ಆಗುತ್ತದೆ. ಇದನ್ನು ಪಡೆವ ಯೋಗ್ಯತೆಯು ಸಂಜ್ಞೀಪರ್ಯಾಪ್ತ ಜೀವಗಳಲ್ಲಿರುತ್ತದೆ. ಅನಾದಿ ಮಿಥ್ಯಾದೃಷ್ಟಿಗೆ ಮೊದಲು ಪ್ರಥಮೋಪಶಮಸಮ್ಯಕ್ತ್ವವಾಗುತ್ತದೆ. ಅಲ್ಲಿಂದ ಉರುಳಿ ನಿಮಯಮದಿಂದ ಮಿಥ್ಯಾದೃಷ್ಟಿಯಾಗುತ್ತಾನೆ. ಅನಂತರ ವೇದಕಸಮ್ಯಕ್ತ್ವ ಮತ್ತು ಆ ಪೂರ್ವಕವಾಗಿ ಯಥಾಯೋಗ್ಯ ಗುಣಸ್ಥಾನಗಳಲ್ಲಿ ದ್ವಿತೀಯೋಪಶಮ ಹಾಗೂ ಕ್ಷಾಯಿಕವಾಗುತ್ತದೆ, ಕ್ಷಾಯಿಕ ಸಮ್ಯಗ್ದರ್ಶನವು ಅತ್ಯಂತ ಅಚಲವಿದೆ. ಮತ್ತು ಅದು ಕೇವಲಿಯ ಪಾದಮೂಲದಲ್ಲಿ ಮನುಷ್ಯರಿಗೆ ಆಗುವುದಕ್ಕೆ ಪ್ರಾರಂಭವಾಗುತ್ತದೆ. ಹಿಂದಿನಿಂದ ಒಂದು ವೇಳೆ ಮರಣವಾದರೂ ನಾಲ್ಕೂ ಗತಿಗಳಲ್ಲಿ ಪೂರ್ಣವಾಗುತ್ತದೆ. ಸಮ್ಯಗ್ದರ್ಶನವನ್ನು ಅಂತರಂಗ ಭಾವಗಳಿಂದ ಸ್ವೀಕಾರಮಾಡಬೇಕು. ಏಕೆಂದರೆ ಇದು ಎಲ್ಲ ಗುಣಗಳಲ್ಲಿ ಮತ್ತು ರತ್ನತ್ರಯದಲ್ಲಿ ಶ್ರೇಷ್ಠವಿದೆ. ಹಾಗೂ ಮೋಕ್ಷ ಮಂದಿರದ ಮೊದಲು ಮೆಟ್ಟಲಿದೆ. -ದರ್ಶನಪಾಹುಡ-೨೦

(ಹೆಚ್ಚಿನ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೪ ರಲ್ಲಿ ಪುಟ ೩೪೫-೩೭೪ ನೋಡಿರಿ)

**ಸಮ್ಯಗ್ದೃಷ್ಟಿ :-** ಸಮ್ಯಗ್ದರ್ಶನದಿಂದ ಕೂಡಿದ ಜೀವಕ್ಕೆ ಸಮ್ಯಗ್ದೃಷ್ಟಿಯೆನ್ನುತ್ತಾರೆ. ಅದು ನಾಲ್ಕೂ ಗತಿಗಳಲ್ಲಿ ಆಗುವ ಸಾಧ್ಯತೆಯಿದೆ. ದೃಷ್ಟಿಯ ವಿಚಿತ್ರತೆಯ ಕಾರಣದಿಂದಾಗಿ ಇವರ ವಿಚಾರಣೆ ಹಾಗೂ ಚಿಂತನೆಯು ಸಂಸಾರದ ಜನರಿಗಿಂತ ಸ್ವಲ್ಪ ವಿಭಿನ್ನಪ್ರಕಾರವಾಗಿರುತ್ತದೆ. ಅದನ್ನು ಸಾಮಾನ್ಯ ಜನರು ತಿಳಿಯುವ ಸಾಧ್ಯತೆಯಿಲ್ಲ. ಸಂಸಾರೀ ಜನರು ಬಾಹ್ಯ ಜಗತ್ತಿನತ್ತ ಓಡಿದರೆ ಅವರು ಅಂತರಂಗ ಜಗತ್ತಿನತ್ತ ಧಾವಿಸುತ್ತಾರೆ. ಬಾಹ್ಯ ಪದಾರ್ಥಗಳ ಸಂಯೋಗ ಮೊದಲಾದುವನ್ನೂ ಸ್ವಲ್ಪ ವಿಚಿತ್ರತರವಾಗಿಯೇ ಸ್ವೀಕಾರ ಮಾಡುತ್ತಾರೆ; ಇದೇ ಕಾರಣದಿಂದ ಅವರು ಬಾಹ್ಯದಲ್ಲಿ ರಾಗಿ ಹಾಗೂ ಭೋಗಿಯಾಗಿರುತ್ತಿದ್ದರೂ ಅಂತರಂಗದಲ್ಲಿ ವಿರಕ್ತರೂ ಯೋಗಿಗಳೂ ಆಗಿರುತ್ತಾರೆ. ಒಂದು ವೇಳೆ ಕಷಾಯೋದ್ರೇಕದಿಂದ ಕಷಾಯ ಮೊದಲಾದವುಗಳನ್ನೂ ಮಾಡುತ್ತಾರೆ.; ಆದರೆ ವಿವೇಕೋದಯವಾಗಿರುವ ಕಾರಣದಿಂದ

ಯಾವಾಗಲೂ ಅವುಗಳ ಬಗ್ಗೆ ನಿಂದೆ ಹಾಗೂ ದೋಷಣೆಯುಕ್ತವಾಗಿಯೇ ವರ್ತಿಸುತ್ತಾರೆ. ಸಮ್ಯಗ್ದೃಷ್ಟಿ ಜೀವನು ಯಾವ ಇಂದ್ರಿಯಗಳಿಂದ ಚೇತನಾಚೇತನ ದ್ರವ್ಯಗಳ ಉಪಭೋಗ ಮಾಡುತ್ತಾನೆ ಅವೆಲ್ಲವೂ ಅವನ ಸಲುವಾಗಿ ನಿರ್ಜರೆಗೇನೇ ನಿಮಿತ್ತವಾಗಿದೆ. ಜ್ಞಾನವು ಬೇಕಾದರೆ ಆತ್ಮನಲ್ಲಿ ಉಪಯುಕ್ತವಾಗಿರಲಿ ಆದರೆ ಸಮ್ಯಕ್ತ್ವಭಾವವುಂಟಾದ ಮೇಲೆ ಅದು ಅವಶ್ಯವಾಗಿ ನಿರ್ಜರೆಗೆ ಕಾರಣವಾಗುತ್ತದೆ. ಇನ್ನು ಯಾವ ಯೋಗಿಯು ವ್ಯವಹಾರದಲ್ಲಿ ಮಲಗಿರುತ್ತಾನೆ ಅವನು ತನ್ನ ಸ್ವರೂಪದ ಕಾರ್ಯಗಳಲ್ಲಿ ಎಚ್ಚರಿರುತ್ತಾನೆ ಮತ್ತು ವ್ಯವಹಾರದಲ್ಲಿ ಎಚ್ಚರಿರುವಂಥವನು ಅವನು ತನ್ನ ಕಾರ್ಯಗಳಲ್ಲಿ ಮಲಗಿರುತ್ತಾನೆ. -ಸಮಯಸಾರ ೩೧

**ಸರ್ವಾರ್ಥಸಿದ್ಧಿ :-** ಎಲ್ಲ ಅರ್ಥಗಳು ಎಂದರೆ ಎಲ್ಲ ಪ್ರಯೋಜನಗಳ ಸಿದ್ಧಿಯಾಗಿರುವುದರಿಂದ ಅದಕ್ಕೆ ಸರ್ವಾರ್ಥಸಿದ್ಧಿಯೆಂಬ ಅನ್ವರ್ಥನಾಮವಿದೆ. ಸರ್ವಾರ್ಥಸಿದ್ಧಿಯಲ್ಲಿರುವ ದೇವಗಳು ನಿಯಮದಿಂದ ದ್ವಿಚರಮ ಶರೀರಿಗಳಾಗಿದ್ದಾರೆ. ಎಂದರೆ ಮುಂದಿನ ಭವದಿಂದ ಮೋಕ್ಷಕ್ಕೆ ಹೋಗುತ್ತಾರೆ. -ತ್ರಿಲೋಯಪಣ್ಣತ್ತಿ ೮/೬೭೫

**ಸ್ಕಂಧ :-** ಪರಮಾಣುಗಳಲ್ಲಿ ಅವುಗಳ ಸ್ವಾಭಾವಿಕವಾದ ರೂಪದಿಂದ ಸ್ನಿಗ್ಧ ಹಾಗೂ ರೂಕ್ಷ ಗುಣಗಳಲ್ಲಿ ಹಾನಿ-ವೃದ್ಧಿಯಾಗುತ್ತಿರುತ್ತದೆ. ವಿಶೇಷವಾಗಿ ಸಮಾನಭಾವವುಳ್ಳ ಗುಣಗಳು ಪ್ರಾಪ್ತವಾದ ಮೇಲೆ ಅವು ಪರಸ್ಪರದಲ್ಲಿ ಬಂಧಿಸಲ್ಪಡುತ್ತವೆ. ಅದರಿಂದಾಗಿ ಸೂಕ್ಷ್ಮತೆಯಿಂದ ಸ್ಥೂಲದವರೆಗೆ ಅನೇಕ ಪ್ರಕಾರದ ಸ್ಕಂಧಗಳು ಉತ್ಪನ್ನವಾಗುತ್ತವೆ. ನೆಲ, ನೀರು, ಬೆಳಕು, ನೆರಳು ಮೊದಲಾದವುಗಳೆಲ್ಲವೂ ಪುದ್ಗಲಸ್ಕಂಧಗಳಿವೆ. ಜಗತ್ತಿನ ಎಲ್ಲ ದ್ವೀಪಗಳು, ಚಂದ್ರ, ಸೂರ್ಯ ಮೊದಲಾದವು ಈ ಮಹಾ ಪೃಥ್ವಿಯಲ್ಲಿ ಕೂಡಿಕೊಂಡು ಒಂದು ಮಹಾಸ್ಕಂಧವಾಗುತ್ತದೆ. ಏಕೆಂದರೆ ಇವೆಲ್ಲವು ಬೇರೆ-ಬೇರೆಯಾಗಿರುತ್ತಿದ್ದರೂ ಮಧ್ಯವರ್ತಿಯಾದ ಸೂಕ್ಷ್ಮ ಸ್ಕಂಧಗಳ ಮುಖಾಂತರ ಪರಸ್ಪರದಲ್ಲಿ ಬಂಧಿ ಸಲ್ಪಟ್ಟು ಒಂದಾಗಿವೆ.

**ಸ್ವರೂಪಾಚರಣ ಚಾರಿತ್ರ :-** ಅಸಂಯತ ಮೊದಲಾದ ಗುಣಸ್ಥಾನಗಳಲ್ಲಿ ಸಮ್ಯಕ್ತ್ವದ ಕಾರಣದಿಂದಾಗಿ ಪರಿಣಾಮಗಳಲ್ಲಿ ಯಾವ ನಿರ್ಮಲತೆಯು ಅಥವಾ ಅಂಶಿಕ ಸಾಮ್ಯತೆಯು ಜಾಗೃತವಾಗುತ್ತದೆ ಅದಕ್ಕೇನೇ ಆಗಮದಲ್ಲಿ ಸ್ವರೂಪಾಚರಣಚಾರಿತ್ರ ಇಲ್ಲವೆ ಸಮ್ಯಕ್ತ್ವಚಾರಿತ್ರವೆಂದು ಹೇಳುತ್ತಾರೆ. ಮೋಕ್ಷಮಾರ್ಗದಲ್ಲಿ ಇದರ ಸ್ಥಾನವು ಪ್ರಧಾನವಾಗಿದೆ. ಇನ್ನು ಯಾವುದು ಕರ್ಮಗಳ ಆಸ್ರವರೂಪವಾದ ಕ್ರಿಯೆಗಳನ್ನು ತಡೆಯುತ್ತದೆ ಅದೇ ಸ್ವರೂಪಾಚರಣೆಯಿದೆ, ಅದೇ ಚಾರಿತ್ರವೆಂಬ ಹೆಸರನ್ನು ಪಡೆಯುತ್ತದೆ, ಅದೇ ಶುದ್ಧೋಪಯೋಗವಿದೆ, ಅದೇ ಧರ್ಮವಿದೆ. ನಿಶ್ಚಯದಿಂದ ಕಷಾಯಗಳ ಅಭಾವವು ಎಷ್ಟಿದೆಯೋ ಅಷ್ಟೇ ಚಾರಿತ್ರವಿದೆ. ಮತ್ತು ಯಾವ ಕಷಾಯಗಳ ಉದಯವಿದೆ ಅದೇ ಚಾರಿತ್ರದಿಂದ ಚ್ಯುತವಾಗುತ್ತದೆ. -ಪಂಚಾಧ್ಯಾಯಿ ಉತ್ತರಾರ್ಧ ೭೬೪-೭೬೨

**ಸಾಗಾರ-ಅನಗಾರ :-** ಉತ್ತಮ ಚಾರಿತ್ರವುಳ್ಳ ಮುನಿಗಳಿಗೆ ಶ್ರಮಣ, ಋಷಿ, ಸಾಧು, ಮುನಿ, ವೀತರಾಗ, ಅನಗಾರ, ಯತಿ-ಎಂಬ ಹೆಸರುಗಳಿವೆ. ಸಂಯಮವುಳ್ಳ ಚಾರಿತ್ರವು ಸಾಗಾರ, ಅನಗಾರವೆಂದು ಎರಡು ಪ್ರಕಾರದ್ದಿದೆ. ಚಾರಿತ್ರಮೋಹನೀಯದ ಉದಯವಾದ ಮೇಲೆ ಮನೆಯಿಂದ ನಿವೃತ್ತಿ ಹೊಂದದ ಯಾವ ಪರಿಣಾಮವಿದೆ ಅದಕ್ಕೆ ಭಾವಾಗಾರವೆನ್ನುತ್ತಾರೆ. ಅದು ಯಾರಲ್ಲಿ ಇದೆ ಅವರು ವನದಲ್ಲಿ ವಾಸಮಾಡುತ್ತಿದ್ದರೂ ಸಾಗಾರರಿದ್ದಾರೆ ಮತ್ತು ಯಾರಲ್ಲಿ ಈ ಪ್ರಕಾರದ ಪರಿಣಾಮವಿಲ್ಲ ಅವರು ಮನೆಯಲ್ಲಿದ್ದರೂ ಅನಗಾರರಿದ್ದಾರೆ. ಸಾಮಾನ್ಯವಾಗಿ ಸಾಧುಗಳಿಗೆ ಅನಗಾರರೆನ್ನುತ್ತಾರೆ. ಏಕೆಂದರೆ ಸುಖ-ದುಃಖರೂಪವಾದ ಎಲ್ಲ ವಿಷಯಗಳಲ್ಲಿಯೂ ಅವರು ಸಮಭಾವನೆಯಿಂದಿರುತ್ತಾರೆ. -ಚಾರಿತ್ರಸಾರ ೪೭/೪

**ಸಾತಾವೇದನೀಯ :-** ರತಿಮೋಹನೀಯ ಕರ್ಮದ ಉದಯದ ಬಲದಿಂದ ಸುಖಕ್ಕೆ ಕಾರಣವಾದ ಯಾವ ಇಂದ್ರಿಯ ವಿಷಯಗಳ ಅನುಭವ ಮಾಡಿಸುತ್ತದೆ. ಅದು ಸಾತಾವೇದನೀಯ ಕರ್ಮವಿದೆ.

**ಸಾಧಾರಣ :-** ಬಹಳಷ್ಟು ಆತ್ಮಗಳ ಉಪಭೋಗದ ಅಪೇಕ್ಷೆಯರೂಪದಿಂದ ಸಾಧಾರಣ ಶರೀರವು ಯಾವುದರ ನಿಮಿತ್ತದಿಂದಾಗುತ್ತದೆ ಅದು ಸಾಧಾರಣಶರೀರನಾಮಕರ್ಮವಿದೆ. ಸಾಧಾರಣ ಆಹಾರಣ ಮತ್ತು ಸಾಧಾರಣ ಉಚ್ಛ್ವಾಸ-ನಿಶ್ವಾಸದ ಗ್ರಹಣ ಇದು ಸಾಧಾರಣ ಜೀವಿಗಳ ಸಾಧಾರಣ ಲಕ್ಷಣವೆಂದು ಹೇಳಲಾಗಿದೆ.

-ಷಟ್ ಖಂಡಾಗಮ ೧೪/೫/೬/೧೨೨

**ಸಾಮಾಯಿಕ :-** ಸುಖ-ದುಃಖ, ಲಾಭ-ಹಾನಿ, ಇಷ್ಟ-ಅನಿಷ್ಟ ಮೊದಲಾದ ವಿಷಮತೆಗಳಲ್ಲಿ ರಾಗ-ದ್ವೇಷಗಳನ್ನು ಮಾಡದಿರುವುದು ಮತ್ತು ಸಾಕ್ಷೀ ಭಾವದಿಂದ ಅವುಗಳ ಜ್ಞಾತಾ-ದೃಷ್ಟಾ ಆದ ಸಮಸ್ವಭಾವದ ಆತ್ಮನಲ್ಲಿ ಸ್ಥಿರವಾಗಿರುವುದು, ಅಥವಾ ಎಲ್ಲ ಸಾವದ್ಯಯೋಗಗಳಿಂದ ನಿವೃತ್ತಿ ಹೊಂದುವುದು ಅದು ಸಾಮಾಯಿಕವಿದೆ. ಆವಶ್ಯಕ, ಚಾರಿತ್ರ, ವ್ರತ ಮತ್ತು ಪ್ರತಿಮಾ (ನೆಲೆ) ಈ ನಾಲ್ಕೂ ಒಂದೇ ಪ್ರಕಾರದ ಲಕ್ಷಣಗಳಿಂದ ಕೂಡಿವೆ. ಆದರೆ ಅಂತರವಿಷ್ಟೆ, ಶ್ರಾವಕನು ಆ ಸಾಮಾಯಿಕವನ್ನು ನಿಯಮಿತ ಕಾಲದಲ್ಲಿ ನಿಯಮಿತಕಾಲದವರೆಗೆ ಸ್ವೀಕರಿಸಿ ಅಭ್ಯಾಸ ಮಾಡುತ್ತಾನೆ ಮತ್ತು ಸಾಧುವು ಇಡೀ ಜೀವನವೇ ಸಮತಾಮಯವಾಗುತ್ತಾನೆ. ಶ್ರಾವಕನ ಆ ಸಾಮಾಯಿಕಕ್ಕೆ ವ್ರತ, ಪ್ರತಿಮಾ (ನೆಲೆ) ಎಂದು ಹೇಳಿದರೆ ಸಾಧುವಿನ ಆ ಸಾರ್ವಕಾಲಿಕವಾದ ಸಮತೆಗೆ ಸಾಮಾಯಿಕಚಾರಿತ್ರವೆನ್ನುತ್ತಾರೆ. ಇನ್ನು ಒಳ್ಳೆಯ ರೀತಿಯಿಂದ ಪ್ರಾಪ್ತವಾಗುವುದು ಎಂದರೆ ಏಕಾಂತರೂಪದಿಂದ ಆತ್ಮನಲ್ಲಿ ತಲ್ಲೀನತೆ ಹೊಂದುವುದು ಸಮಯವಿದೆ. ಮನ, ವಚನ, ಕಾಯಗಳ ಕ್ರಿಯೆಗಳನ್ನೆಲ್ಲ ತಮ್ಮ ತಮ್ಮ ವಿಷಯಗಳಿಂದ ಹಿಂದಿರುಗಿಸಿ ಆತ್ಮನೊಡನೆ ತಲ್ಲೀನವಾಗುವುದರಿಂದ ದ್ರವ್ಯ ಹಾಗೂ ಅರ್ಥಗಳೆರಡರಿಂದಲೂ ಆತ್ಮನ ಜೊತೆಯಲ್ಲಿ ಐಕ್ಯತೆ ಹೊಂದುವುದೇ ಸಮಯದ ಅಭಿಪ್ರಾಯವಿದೆ. ಸಮಯಕ್ಕೇನೇ ಸಾಮಾಯಿಕವೆಂದು ಹೇಳುತ್ತಾರೆ. ಅಥವಾ ಯಾವುದರ ಪ್ರಯೋಜನವು ಸಮಯವೇ ಆಗಿದೆಯೋ ಅದೇ ಸಾಮಾಯಿಕವಿದೆ. ಇನ್ನು ನಾನು ಶರಣೆಲ್ಲದ, ಅಶುಭರೂಪವಾದ, ಅನಿತ್ಯವಾದ, ದುಃಖಮಯವಾದ ಮತ್ತು ಪಾಪರೂಪವಾದ ಸಂಸಾರದಲ್ಲಿ ವಾಸಮಾಡುತ್ತೇನೆ. ಮತ್ತು ಮೋಕ್ಷವು ಇದರಿಂದ ವಿಪರೀತವಾಗಿದೆಯೆಂದು ಸಾಮಾಯಿಕದಲ್ಲಿ ಧ್ಯಾನ ಮಾಡಬೇಕಾಗುವುದು. -ರತ್ನಕರಂಡ ಶ್ರಾವಕಾಚಾರ ೧೦೪

**ಸಾವದ್ಯಯೋಗ :-** ಹಿಂಸಾಜನ್ಯ ಮನ, ವಚನ, ಕಾಯಗಳ ವ್ಯಾಪಾರಕ್ಕೆ ಸಾವದ್ಯವೆನ್ನುತ್ತಾರೆ. 'ಸರ್ವಸಾವದ್ಯಯೋಗ' ಈ ಪದದಲ್ಲಿ ಅರ್ಥದ ಅಪೇಕ್ಷೆಯಿಂದ 'ಸರ್ವ' ಶಬ್ದದಲ್ಲಿ ಅಂತರಂಗ ಮತ್ತು ಬಹಿರಂಗ ಪ್ರವೃತ್ತಿ ಎಂದರೆ ಮನ, ವಚನ, ಕಾಯ ಈ ಮೂರರ ಪ್ರವೃತ್ತಿಯಿದೆ ಅಲ್ಲದೆ ನಿಶ್ಚಯದಿಂದ 'ಸಾವದ್ಯ' ಶಬ್ದದ ಅರ್ಥವು ಪ್ರಾಣಚ್ಛೇದವಿದೆ. ಮತ್ತು ಅದನ್ನೆ ಹಿಂಸೆಯೆಂದು ಹೇಳಲಾಗುತ್ತದೆ. ಆ ಹಿಂಸೆಯಲ್ಲಿ ಬುದ್ಧಿಪೂರ್ವಕ ಇಲ್ಲವೆ ಅಬುದ್ಧಿಪೂರ್ವಕವಾಗಿ ಯಾವ ಸ್ಥೂಲ ಇಲ್ಲವೆ ಸೂಕ್ಷ್ಮ ಉಪಯೋಗವಾಗುತ್ತದೆ ಅದುವೆ ಯೋಗ ಶಬ್ದದ ಅರ್ಥವಿದೆ.

**ಸಾಸಾದನ :-** ಪ್ರಥಮೋಪಶಮ ಸಮ್ಯಕ್ತ್ವದ ಕಾಲದಲ್ಲಿ ಆರು ಆವಲಿಗಳು ಬಾಕಿ ಉಳಿದಿರುವಾಗ ಜೀವವು ಸಮ್ಯಕ್ತ್ವದಿಂದ ಉರುಳಿ ಅಷ್ಟು ಕಾಲಕ್ಕಾಗಿ ಯಾವ ಗುಣಸ್ಥಾನಕ್ಕೆ ಪ್ರಾಪ್ತವಾಗುತ್ತದೆ ಅದಕ್ಕೆ ಸಾಸಾದನವೆಂದು ಹೇಳುತ್ತಾರೆ. ಮರುಕ್ಷಣದಲ್ಲೇ ಅದು ಅವಶ್ಯವಾಗಿ ಮಿಥ್ಯಾತ್ವಕ್ಕೆ ಪ್ರಾಪ್ತವಾಗುತ್ತದೆ. ಮಿಥ್ಯಾತ್ವದ ಉದಯವಿಲ್ಲದುದರಿಂದ ಅದಕ್ಕೆ ಸಮ್ಯಗ್ದೃಷ್ಟಿಯೆಂದು ಹೇಳಲಾಗುತ್ತದೆ. ಮಿಥ್ಯಾತ್ವದ ಉದಯ, ಉಪಶಮ ಹಾಗೂ ಕ್ಷಯ ಇವು ಮೂರು ಇಲ್ಲದಿರುವುದರಿಂದ ಇದಕ್ಕೆ ಪಾರಿಣಾಮಿಕಭಾವವೆಂದು ಹೇಳಲಾಗುತ್ತದೆ.

**ಸ್ಥಾವರ :-** ಪೃಥ್ವಿ, ಆಪ್ ಮೊದಲಾದ ಏಕೇಂದ್ರಿಯ ಕಾಯದ ಜೀವಗಳು ತಮ್ಮ ಸ್ಥಾನದ ಮೇಲೆ

ಸ್ಥಿರವಾಗಿರುವ ಕಾರಣದಿಂದ ಇಲ್ಲವೆ ಸ್ಥಾವರ ನಾಮಕರ್ಮದ ಉದಯದಿಂದ ಸ್ಥಾವರವೆನಿಸುತ್ತದೆ. ಈ ಜೀವಗಳು ಸೂಕ್ಷ್ಮ ಹಾಗೂ ಬಾದರ ಹೀಗೆ ಎರಡೂ ಪ್ರಕಾರವಾಗಿರುತ್ತ ಇಡೀ ಲೋಕದಲ್ಲೆಲ್ಲ ಕಂಡು ಬರುತ್ತವೆ. ಇನ್ನು ಯಾವುದರ ಉದಯದಿಂದ ಏಕೇಂದ್ರಿಯಗಳಲ್ಲಿ ಉತ್ಪನ್ನವಾಗುತ್ತದೆ ಅದು ಸ್ಥಾವರ ನಾಮಕರ್ಮವಿದೆ. ಇದರಲ್ಲಿ ನೆಲ, ನೀರು, ಬೆಂಕಿ, ವಾಯು, ಆಕಾಶವೆಂದು ಐದು ಪ್ರಕಾರಗಳಿವೆ. ಈ ಐದೂ ಸ್ಥಾವರ ಜೀವಗಳ ಅವಾಂತರ ಜಾತಿ ಅಪೇಕ್ಷೆಯಿಂದ ಅವುಗಳ ಸಂಖ್ಯೆಯು ಬಹಳವಾದರೂ ಅವೆಲ್ಲವೂ ಅವುಗಳಲ್ಲಿರುವಂಥ ಜೀವಿಗಳೊಡನೆ ನಿಜವಾಗಿ ಅತ್ಯಂತ ಮೋಹವಿರುವುದರಿಂದ ಸಂಯುಕ್ತವಾಗಿ ಸ್ಪರ್ಶಕೊಡುತ್ತವೆ. -ಪಂಚಾಸ್ತಿಕಾಯ, ಮೂಲ-೧೧೦

**ಸ್ತ್ಯಾನಗೃದ್ಧಿ :-** ಯಾವುದರ ನಿಮಿತ್ತದಿಂದ ಸ್ವಪ್ನದಲ್ಲಿ ವೀರ್ಯವಿಶೇಷದ ಆವಿರ್ಭಾವವಾಗುತ್ತದೆ ಅದು ಸ್ತ್ಯಾನಗೃದ್ಧಿಯಿದೆ. ಸ್ತ್ಯಾಯಾತಧಾತುವಿಗೆ ಅನೇಕಾರ್ಥಗಳಿವೆ. ಅವುಗಳಲ್ಲಿಂದ ಇಲ್ಲಿ ಸ್ವಪ್ನ ಎಂಬ ಅರ್ಥವನ್ನು ಸ್ವೀಕರಿಸಿದೆ. ಮತ್ತು 'ಗೃದ್ಧಿ' ದಿಪ್ಯತೆ ಯಾವುದು ಸ್ವಪ್ನದಲ್ಲಿ ಪ್ರದೀಪ್ತವಾಗುತ್ತದೆ ಅದು 'ಸ್ತ್ಯಾನಗೃದ್ಧಿ' ಉತ್ಪತ್ತಿಯಿಂದಾದ ಅರ್ಥವಿದೆ. ಯಾವುದರ ಉದಯದಿಂದ ಆತ್ಮನು ರೌದ್ರರೂಪದ ಬಹುಕರ್ಮಗಳನ್ನು ಮಾಡುತ್ತಾನೆ ಅದು ಸ್ತ್ಯಾನಗೃದ್ಧಿಯಿದೆ.

-ಗೋ.ಕ. ೩೩/೨೮/೧೦

**ಸ್ಯಾದ್ವಾದ :-** ಅನೇಕಾಂತಮಯವಾದ ವಸ್ತುವಿನ ಕಥನ ಮಾಡುವ ಪದ್ಧತಿಗೆ ಸ್ಯಾದ್ವಾದವೆನ್ನುತ್ತಾರೆ. ಯಾವುದೇ ಒಂದು ಶಬ್ದ ಇಲ್ಲವೆ ವಾಕ್ಯದಿಂದ ಒಮ್ಮೆಲೇ ಸಂಪೂರ್ಣ ವಸ್ತುವಿನ ಕಥನ ಮಾಡುವುದು ಅಶಕ್ಯವಾಗಿರುವುದರಿಂದ ಪ್ರಯೋಜನವಶವಾಗಿ ಒಮ್ಮೆ ಒಂದು ಧರ್ಮವನ್ನು ಇನ್ನೊಮ್ಮೆ ಮತ್ತೊಂದು ಧರ್ಮವನ್ನು ಮುಖ್ಯಮಾಡಿ ಕಥನ ಮಾಡುತ್ತಾರೆ. ಶ್ರೋತೃಗಳು ಮುಖ್ಯ ಧರ್ಮವನ್ನು ಕೇಳುತ್ತಿರುವಾಗ ಉಳಿದ ಧರ್ಮಗಳ ನಿಷೇಧವಾಗದೆ ಅವೂ ಗೌಣರೂಪದಿಂದ ಸ್ವೀಕಾರವಾಗುತ್ತಿರಬೇಕೆಂಬ ಪ್ರಯೋಜನದಿಂದ ಅನೇಕಾಂತವಾದಿಯು ತನ್ನ ಪ್ರತಿಯೊಂದು ವಾಕ್ಯದ ಜೊತೆಗೆ ಸ್ಯಾತ್ ಇಲ್ಲವೆ ಕಥಂಚಿತ್ ಶಬ್ದದ ಪ್ರಯೋಗ ಮಾಡುತ್ತಾನೆ. ಸ್ಯಾತ್ ಎಂದರೆ ಕಥಂಚಿತ್ ಇಲ್ಲವೆ ಅಪೇಕ್ಷಿತ ಪ್ರಕಾರದಿಂದ ಅನೇಕಾಂತರೂಪವಾಗಿ ಹೇಳುವುದು, ವಾದಮಾಡುವುದು, ಕಥನ ಮಾಡುವುದು, ಪ್ರತಿಪಾದನೆ ಮಾಡುವುದು ಅದುಸ್ಯಾದ್ವಾದವಿದೆ. ಅಪೇಕ್ಷೆಯ ಸರಿಯಾದ ಸ್ವೀಕಾರವೇ ಸ್ಯಾದ್ವಾದದ ಸತ್ಯತೆಯಿದೆ. (ನೋಡಿ, ಜೈನೇಂದ್ರ ಸಿದ್ಧಾಂತಕೋಶ ಭಾಗ ೪ ರಲ್ಲಿ ಪುಟ ೪೯೭ ರಿಂದ ೫೦೩)

**ಸಿದ್ಧಾಂತ :-** ಶಾಸ್ತ್ರದ ಅರ್ಥವನ್ನು ಸಂಸ್ಥಿತಗೊಳಿಸಲಾದ ಅರ್ಥಕ್ಕೆ ಸಿದ್ಧಾಂತವೆನ್ನುತ್ತಾರೆ. ಇದರಲ್ಲಿ ಸರ್ವತಂತ್ರ, ಪ್ರತಿತಂತ್ರ, ಅಧಿಕರಣ, ಅಭ್ಯುಪಗಮವೆಂದು ನಾಲ್ಕು ಪ್ರಕಾರಗಳಿವೆ. ಯಾವುದರ ಅರ್ಥವನ್ನು ಎಲ್ಲ ಶಾಸ್ತ್ರಗಳಲ್ಲಿ ಅವಿರೋಧವಾಗಿ ಮನ್ನಿಸಲಾಗುತ್ತದೆ ಅದಕ್ಕೆ ಸರ್ವತಂತ್ರಸಿದ್ಧಾಂತವೆಂದು ಹೇಳುತ್ತಾರೆ. ಎಂದರೆ ಯಾವ ಮಾತನ್ನು ಎಲ್ಲ ಶಾಸ್ತ್ರಕಾರರು ಮನ್ನಿಸುತ್ತಾರೆ ಹೇಗೆ ಘ್ರಾಣ ಮೊದಲಾದ ಐದು ಇಂದ್ರಿಯ, ಗಂಧ ಮೊದಲಾದ ಅವುಗಳ ವಿಷಯ ಮತ್ತು ಪೃಥ್ವೀ ಮೊದಲಾದ ಐದು ಭೂತಗಳು ಹಾಗೂ ಪ್ರಮಾಣದ ಮುಖಾಂತರ ಪದಾರ್ಥಗಳನ್ನು ಸ್ವೀಕಾರ ಮಾಡುವುದು ಇವೇ ಮೊದಲಾದವುಗಳನ್ನು ಎಲ್ಲ ಶಾಸ್ತ್ರಕಾರರೂ ಮನ್ನಿಸುತ್ತಾರೆ. ೨) ಯಾವ ಮಾತು ಒಂದು ಶಾಸ್ತ್ರದಲ್ಲಿ ಸಿದ್ಧವಾಗುತ್ತದೆ, ಮತ್ತು ಇನ್ನೊಂದರಲ್ಲಿ ಸಿದ್ಧವಾಗುವುದಿಲ್ಲ ಅದಕ್ಕೆ ಪ್ರತಿತಂತ್ರ ಸಿದ್ಧಾಂತವೆನ್ನುತ್ತಾರೆ. ೩) ಯಾವ ಅರ್ಥವು ಸಿದ್ಧವಾಗುವುದರಿಂದ ಉಳಿದ ಅರ್ಥಗಳೂ ನಿಯಮದಿಂದ ಸಿದ್ಧವಾಗುತ್ತವೆ ಅದಕ್ಕೆ ಅಧಿಕರಣ ಸಿದ್ಧಾಂತವೆನ್ನುತ್ತಾರೆ. ಹೇಗೆಂದರೆ ದೇಹ ಮತ್ತು ಇಂದ್ರಿಯಗಳಿಂದ ಬೇರೆಯಾದ ಯಾವುದನ್ನು ತಿಳಿಯುವುದಿದೆ ಅದಕ್ಕೆ ಆತ್ಮವೆನ್ನುತ್ತಾರೆ. ಯಾವ ಪದಾರ್ಥವನ್ನು ಪರೀಕ್ಷೆ ಮಾಡದೆಯೇ ನಂಬಿ, ಪುನಃ ಆ ಪದಾರ್ಥದ ವಿಶೇಷ ಪರೀಕ್ಷೆ ಮಾಡುವುದಕ್ಕೆ ಅಭ್ಯುಪಗಮಸಿದ್ಧಾಂತವೆನ್ನುತ್ತಾರೆ. -ನ್ಯಾಯದರ್ಶನ ಸೂತ್ರ ಮಾ.ಟೀ. ೧/೧/೨೬-೩೧.

**ಸ್ಥಿತಿಕಾಂಡಕ ಘಾತ :-** ಸೂಚ್ಯಂಗುಲದ ಅನಂತದ ಭಾಗಕ್ಕೆ ಕಾಂಡಕವೆನ್ನುತ್ತಾರೆ. ಅವ್ಯಾಘಾತವಿಧಾನದಲ್ಲಿ ಪ್ರತಿಯೊಂದು ಸಮಯಕ್ಕೆ ಒಂದೇ ನಿಷೇಕವನ್ನೆತ್ತಿಕೊಂಡರೆ ಇಲ್ಲಿ ಪ್ರತಿಯೊಂದು ಸಮಯಕ್ಕೆ ಅಸಂಖ್ಯಾತ ನಿಷೇಕಗಳ ದ್ರವ್ಯವನ್ನು ಕೂಡಿಸಿ ಎತ್ತಿಕೊಳ್ಳಲಾಗುತ್ತದೆ. ಒಂದು ಸಮಯದಲ್ಲಿ ಎತ್ತಿಕೊಳ್ಳಲಾದ ಎಲ್ಲ ದ್ರವ್ಯಗಳಿಗೆ ಒಂದು ಫಾಲಿ ಎನ್ನುತ್ತಾರೆ. ವ್ಯಾಘಾತ ವಿಧಾನದ ಒಟ್ಟು ಕಾಲವು ಕೇವಲ ಒಂದು ಅಂತರ್ಮುಹೂರ್ತವಿದೆ. ಅಂತರ್ಮುಹೂರ್ತದಲ್ಲಿ ಅಸಂಖ್ಯಾತ ಖಂಡಗಳಿವೆ. ಪ್ರತಿಯೊಂದು ಖಂಡದಲ್ಲೂ ಒಂದು ಹಾಗೂ ಪ್ರತಿಯೊಂದು ಸಮಯದಲ್ಲಿ ಒಂದೊಂದು ಫಾಲಿಯಕ್ರಮದಿಂದ ಎಷ್ಟು ದ್ರವ್ಯಗಳನ್ನು ಎತ್ತಿಕೊಂಡಿರುತ್ತದೆ ಅದಕ್ಕೆ ಒಂದು ಕಾಂಡಕವೆನ್ನುತ್ತಾರೆ. ಹೀಗೆ ಒಂದೊಂದು ಅಂತರ್ಮುಹೂರ್ತದಲ್ಲಿ ಒಂದೊಂದು ಕಾಂಡಕದ ನಿಕ್ಷೇಪಣೆ ಮಾಡುತ್ತ ಒಟ್ಟು ವ್ಯಾಘಾತದ ಕಾಲದಲ್ಲಿ ಅಸಂಖ್ಯಾತ ಕಾಂಡಕಗಳನ್ನು ಎತ್ತಿಕೊಳ್ಳಲಾಗುತ್ತದೆ. ಮತ್ತು ನಿಕ್ಷೇಪರೂಪವಾದ ನಿಷೇಕಗಳಲ್ಲದೆ ಮೇಲಿನ ಎಲ್ಲ ನಿಷೇಕಗಳ ಸಮಯಗಳನ್ನು ಕಾರ್ಮಾಣ ದ್ರವ್ಯದಿಂದ ಶೂನ್ಯಮಾಡಿ ಬಿಡಲಾಗುತ್ತದೆ. ಆದ್ದರಿಂದ ಸ್ಥಿತಿಯ ಘಾತವಾಯಿತೆನ್ನಲಾಗುತ್ತದೆ. ಏಕೆಂದರೆ ಈ ವಿಧಾನದಲ್ಲಿ ಕಾಂಡಕರೂಪದಿಂದ ದ್ರವ್ಯದ ನಿಕ್ಷೇಪಣವಾಗುತ್ತದೆ, ಅದರಿಂದ ಇದಕ್ಕೆ ಕಾಂಡಕಘಾತವೆನ್ನುತ್ತಾರೆ. ಮತ್ತು ಸ್ಥಿತಿಯ ಘಾತವಾಗುವ ಕಾರಣದಿಂದ ಸ್ಥಿತಿಕಾಂಡಕಘಾತವೆನ್ನಲಾಗುತ್ತದೆ. ಕಾಂಡಕ ಘಾತವಿಲ್ಲದೆ ಕರ್ಮಸ್ಥಿತಿಯಘಾತವು ಸಂಭವಿಸುವುದಿಲ್ಲ. -ಲಬ್ಧಿಸಾರ ಮೂಲ ೬೦/೯೨ (ಕೇವಲಭಾವಾರ್ಥ)

**ಸ್ಥಿತಿಬಂಧ :-** ಯಾವುದು ಯಾವುದರ ಸ್ವಭಾವವಿರುತ್ತದೆ ಅದರಿಂದ ಚ್ಯುತಿ ಹೊಂದದಿರುವುದಕ್ಕೆ ಸ್ಥಿತಿಯೆನ್ನುತ್ತಾರೆ. ಯಾವ ಪ್ರಕಾರ ಎಮ್ಮೆ, ಆಕಳು, ಆಡು ಮೊದಲಾದವುಗಳ ಹಾಲು ಮಾಧುರ್ಯದಿಂದ ಸ್ವಾಭಾವಿಕವಾಗಿ ಚ್ಯುತಿಹೊಂದದಿರುವುದಕ್ಕೆ ಸ್ಥಿತಿಯೆನ್ನುತ್ತಾರೆ. ಅದೇ ಪ್ರಕಾರ ಜ್ಞಾನಾವರಣ ಮೊದಲಾದ ಕರ್ಮಗಳು ಅರ್ಥದ ಜ್ಞಾನವು ಆಗಗೊಡದಿರುವುದು ಮೊದಲಾದ ಸ್ವಭಾವದಿಂದ ಚ್ಯುತವಾಗದಿರುವುದು ಸ್ಥಿತಿಯಾಗಿದೆ.

(ಪ್ರಾಕೃತಪಂಚಸಂಗ್ರಹ ೪/ಪುಟ ೫೧೪-೫೧೫ ನೋಡುವುದು.)

**ಸ್ಥಿತಿಬಂಧಾಪಸರಣ :-** ಕರ್ಮಪ್ರದೇಶಗಳ ಸ್ಥಿತಿಗಳ ಅಪವರ್ತನೆಯ ಹೆಸರು ಅಪಕರ್ಷಣ ಅಥವಾ ಅಪಸರಣವಿದೆ. ಇದರಲ್ಲಿ ಅವ್ಯಾಘಾತ ಮತ್ತು ವ್ಯಾಘಾತ ಅಥವಾ ಕಾಂಡಕಘಾತವೆಂದು ಎರಡು ಪ್ರಕಾರಗಳಿವೆ. ಎಲ್ಲಿ ಸ್ಥಿತಿಕಾಂಡಕಘಾತವಾಗುವುದಿಲ್ಲ ಅದು ಅವ್ಯಾಘಾತ ಮತ್ತು ಎಲ್ಲಿ ಸ್ಥಿತಿಕಾಂಡಕಘಾತವಾಗುತ್ತದೆ ಅದು ವ್ಯಾಘಾತವಿದೆ. ಇನ್ನು ಪ್ರಥಮೋಪಶಮ ಸಮ್ಯಕ್ತ್ವ ಸಮ್ಮುಖಮಿಥ್ಯಾದೃಷ್ಟಿಜೀವವು ವಿಶುದ್ಧತೆಯ ವೃದ್ಧಿಯಿಂದ ವರ್ಧಮಾನವಾಗುತ್ತ ಪ್ರಾಯೋಗ್ಯಲಬ್ಧಿಯ ಪ್ರಥಮ ಸಮಯದಲ್ಲಿ ಪೂರ್ವಸ್ಥಿತಿಬಂಧದ ಸಂಖ್ಯಾತದ ಭಾಗ ಮಾತ್ರ ಅಂತಃಕೋಟಾಕೋಟಿ ಸಾಗರ ಪ್ರಮಾಣಾಯುಷ್ಯವು ಏಳು ಕರ್ಮಗಳಿಲ್ಲದೆ ಸ್ಥಿತಿಬಂಧವಾಗುತ್ತದೆ. ಆ ಅಂತಃಕೋಟಾಕೋಟಿ ಸಾಗರ ಸ್ಥಿತಿಬಂಧದಲ್ಲಿ ಪಲ್ಯದ ಸಂಖ್ಯಾತದ ಭಾಗ ಮಾತ್ರ ಕಡಿಮೆಯಾದ ಸ್ಥಿತಿಬಂಧವು ಅಂತರ್ಮುಹೂರ್ತದವರೆಗೆ ಸಮಾನವಾಗಿರುತ್ತದೆ. ಪುನಃ ಅದೇ ಪಲ್ಯದ ಸಂಖ್ಯಾತದ ಭಾಗದಷ್ಟು ಕಡಿಮೆಯಾದ ಸ್ಥಿತಿಬಂಧವು ಅಂತರ್ಮುಹೂರ್ತದ ವರೆಗಿರುತ್ತದೆ. ಈ ಕ್ರಮದಿಂದ ಸಂಖ್ಯಾತ ಸ್ಥಿತಿಬಂಧಾಪಸರಣ ಮಾಡಿ ಪೃಥಕ್ತ್ವ ನೂರು (೮೦೦-೯೦೦) ಸಾಗರ ಕಡಿಮೆಯಾದರೆ ಮೊದಲನೆಯ ಸ್ಥಿತಿಬಂಧಾಪಸರಣವಾಗುವುದು. ಹೀಗೆ ಮೂವತ್ತುನಾಲ್ಕು ಬಂಧಾಪಸರಣ ಸ್ಥಾನಗಳಿವೆ. ಅವೆಲ್ಲವುಗಳಿಗಾಗಿ ಲಬ್ಧಿಸಾರಗ್ರಂಥವನ್ನವಲೋಕನೆ ಮಾಡಬೇಕು.

-ಲಬ್ಧಿಸಾರ. ಮಾ. ಹಾಗೂ. ಜೀ. ಪು. ೮/೯-೧೬/೪೨-೫೩

**ಸ್ತ್ರೀವೇದ :-** ಯಾವ ಕರ್ಮ ಸ್ಕಂಧಗಳ ಉದಯದಿಂದ ಪುರುಷರಲ್ಲಿ ಆಕಾಂಕ್ಷೆ ಉತ್ಪನ್ನವಾಗುತ್ತದೆ ಆ ಕರ್ಮಸ್ಕಂಧಗಳಿಗೆ ಸ್ತ್ರೀವೇದವೆಂಬ ಸಂಕೇತವಿದೆ. -ಧವಲ ೬/೧,೯,೧,೨೪/೪೨/೧

**ಸೂಕ್ಷ್ಮ :-** ಯಾವುದು ಯಾವುದರಿಂದಲೂ ಬಾಧೆಗೊಳಗಾಗುವುದಿಲ್ಲ ಮತ್ತು ಯಾವುದಕ್ಕೂ ಬಾಧೆಕೊಡುವುದಿಲ್ಲ ಆ ಪದಾರ್ಥವು ಇಲ್ಲವೆ ಜೀವವು ಸೂಕ್ಷ್ಮವಿದೆ. ಮತ್ತು ಇದಕ್ಕೆ ವಿಪರೀತವಾದದ್ದು ಸ್ಥೂಲ ಅಥವಾ ಬಾದರವಿದೆ. ಇಂದ್ರಿಯ ಗ್ರಾಹ್ಯ ಪದಾರ್ಥಗಳಿಗೆ ಸ್ಥೂಲವೆಂದು ಮತ್ತು ಇಂದ್ರಿಯ ಗ್ರಾಹ್ಯವಲ್ಲದ ಪದಾರ್ಥಗಳಿಗೆ ಸೂಕ್ಷ್ಮವೆಂದು ಹೇಳುವುದು ವ್ಯವಹಾರವಿದೆ, ಪರಮಾರ್ಥವಿಲ್ಲ. ಸೂಕ್ಷ್ಮ ಮತ್ತು ಬಾದರಗಳಲ್ಲಿ ಅವಗಾಹನದ ಅಥವಾ ಪ್ರದೇಶಗಳ ಹೀನಾಧಿಕತೆಯು ಕಾರಣವಾಗಿರದೆ ನಾಮಕರ್ಮದ ಕಾರಣವೇ ಆಗಿದೆ. ಸೂಕ್ಷ್ಮ ಸ್ಕಂಧ ಮತ್ತು ಜೀವಗಳು ಲೋಕದಲ್ಲೆಲ್ಲ ತುಂಬಿವೆ. ಆದರೆ ಸ್ಥೂಲಗಳು ಆಧಾರವಿಲ್ಲದೆ ಇರುವ ಸಾಧ್ಯತೆಯಿಲ್ಲವೆಂದು ತ್ರಸನಾಡಿಯ ಯಥಾಯೋಗ್ಯ ಸ್ಥಾನಗಳಲ್ಲೇ ಕಂಡು ಬರುತ್ತವೆ. ಇನ್ನು ಯಾವ ಕರ್ಮದ ಉದಯದಿಂದ ಜೀವವು ಸೂಕ್ಷ್ಮತೆಗೆ ಪ್ರಾಪ್ತವಾಗುತ್ತದೆ ಅದು ಸೂಕ್ಷ್ಮನಾಮಕರ್ಮವಿದೆ. -ಧವಲ ೬/೧,೯,೧,೨೮.೬೨/೧

**ಸಂಕ್ರಮಣ :-** ಪರಿಣಾಮಗಳ ವಶದಿಂದ ಜೀವದ ಕರ್ಮಪ್ರಕೃತಿಯು ಬದಲಾವಣೆಯಾಗಿ ಬೇರೆ ಪ್ರಕೃತಿ ರೂಪವಾಗುವುದು ಸಂಕ್ರಮಣವಿದೆ. ಇದರಲ್ಲಿ ಉದ್ವೇಲನೆ ಮೊದಲಾಗಿ ಎಷ್ಟೋ ಭೇದಗಳಿವೆ. ಇವುಗಳ ಹೆಸರು ವಾಸ್ತವಿಕವಾಗಿ ಸಂಕ್ರಮಣವೆಂದು ಭಾಗಾಕಾರವಿದೆ. ಇವಕ್ಕೆ ಉಪಚಾರದಿಂದ ಸಂಕ್ರಮಣವೆಂದು ಹೇಳಲಾಗುತ್ತದೆ. ಆದ್ದರಿಂದ ಇವುಗಳಲ್ಲಿ ಪರಿಣಾಮಗಳ ಉತ್ಕೃಷ್ಟತೆ ಮೊದಲಾದವುಗಳ ಕುರಿತೇ ಸಂಕೇತ ಮಾಡಲಾಗಿದೆ. ಉಚ್ಚಪರಿಣಾಮಗಳಿಂದ ಹೆಚ್ಚು ದ್ರವ್ಯವು ಪ್ರತಿಸಮಯದಲ್ಲಿ ಸಂಕ್ರಮಿತವಾಗುವ ಕಾರಣದಿಂದ ಅದರ ಭಾಗಾಕಾರವು ಉಚ್ಚಪರಿಣಾಮಗಳಿಂದ ಹೆಚ್ಚು ದ್ರವ್ಯವು ಪ್ರತಿ ಸಮಯದಲ್ಲಿ ಸಂಕ್ರಮಿತವಾಗುವ ಕಾರಣದಿಂದ ಅದರ ಭಾಗಾಕಾರವು ಕಡಿಮೆಯಾಗಬೇಕು. ಮತ್ತು ನೀಚಪರಿಣಾಮಗಳಿಂದ ಕಡಿಮೆ ದ್ರವ್ಯವು ಸಂಕ್ರಮಿತವಾಗುವ ಕಾರಣದಿಂದ ಅದರ ಭಾಗಾಕಾರವು ಹೆಚ್ಚು ಆಗಬೇಕು. ಇದೇ ಮಾತನ್ನು ಈ ಎಲ್ಲ ಭೇದಗಳ ಲಕ್ಷಣಗಳಿಂದ ತಿಳಿದುಕೊಳ್ಳಬೇಕು. ಉದ್ವೇಲನ, ಮಿಥ್ಯಾತ್ವ ಹಾಗೂ ಅಧಃಪ್ರವೃತ್ತ ಈ ಮೂರು ಭೇದಗಳಲ್ಲಿ ಭಾಗಾಕಾರಕ್ರಮದಿಂದ ದ್ರವ್ಯವು ಸಂಕ್ರಮಿಸಲ್ಪಡುತ್ತದೆ. ಗುಣಶ್ರೇಣಿಯ ಸಂಕ್ರಮಣದಲ್ಲಿ ಗುಣಶ್ರೇಣಿಯ ರೂಪದಿಂದ ಮತ್ತು ಪೂರ್ಣ ಸಂಕ್ರಮಣದಲ್ಲಿ ಕೊನೆಗೆ ಉಳಿದ ಎಲ್ಲ ದ್ರವ್ಯವು ಒಮ್ಮೆಲೆ ಸಂಕ್ರಮಿಸಲ್ಪಡುತ್ತದೆ.

(ವಿಶೇಷ ವಿವರಣೆಗೆ ಜೈನೇಂದ್ರ ಸಿದ್ಧಾಂತಕೋಶ ಭಾಗ ೪ ರಲ್ಲಿ ಪುಟ ೮೨ ರಿಂದ ೯೦ ರ ವರೆಗೆ ನೋಡುವುದು.)

**ಸಂಜ್ವಲನ :-** ''ಸ'' ಇದು ಒಂದಾಗುವುದರ ಅರ್ಥದಲ್ಲಿರುತ್ತದೆ. ಸಂಯಮದ ಜೊತೆಗೆ ಕೊಡುವುದರಿಂದ ಒಂದಾಗಿ ಉಜ್ವಲವಾಗುತ್ತದೆ. ಎಂದರೆ ಹೊಳೆಯುತ್ತದೆ ಅಥವಾ ಯಾವುದರ ಸದ್ಭಾವದಲ್ಲಿ ಸಂಯಮವು ಹೊಳೆಯುತ್ತಿರುತ್ತದೆ ಅದು ಸಂಜ್ವಲನ ಕ್ರೋಧ, ಮಾನ, ಮಾಯೆ, ಲೋಭವಿದೆ. ಇನ್ನು ಯಾವುದು ಸಮ್ಯಕ್ ಎಂದರೆ ಒಳ್ಳೆಯ ರೂಪದಿಂದ 'ಜ್ವಲತಿ' ಎಂದರೆ ಪ್ರಕಾಶಿತವಾಗುತ್ತದೆ ಅದು ಸಂಜ್ವಲನವಿದೆ. ಇದು ಯಥಾಖ್ಯಾತ ಚಾರಿತ್ರವನ್ನು ಘಾತಮಾಡುತ್ತದೆ. ಸಂಜ್ವಲನ ಕಷಾಯದ ವಾಸನಾಕಾಲವು ಅಂತರ್ಮುಹೂರ್ತವಿದೆ. ಉದಯದ ಅಭಾವವಾದ ಮೇಲೂ ಕಷಾಯದ ಸಂಸ್ಕಾರವು ಎಷ್ಟು ಕಾಲದವರೆಗಿರುತ್ತದೆ ಅದಕ್ಕೆ ವಾಸನಾಕಾಲವೆನ್ನುತ್ತಾರೆ.

-ಸರ್ವಾರ್ಥಸಿದ್ಧಿ ೮/೯/೩೮೬/೧೧

**ಸಂಜ್ಞೀ, ಅಸಂಜ್ಞೀ :-** ಯಾವ ಜೀವವು ಮನಸ್ಸಿನ ಅವಲಂಬನೆಯಿಂದ ಶಿಕ್ಷೆ, ಕ್ರಿಯೆ, ಉಪದೇಶ ಹಾಗೂ ಸಂಭಾಷಣೆಗಳನ್ನು ಗ್ರಹಣ ಮಾಡುತ್ತದೆಯೋ ಅದಕ್ಕೆ ಸಂಜ್ಞೀಯೆನ್ನುತ್ತಾರೆ. ಇನ್ನು ಯಾವುದು ಇದಕ್ಕೆ ವಿಪರೀತವಾಗಿದೆ ಅದಕ್ಕೆ ಅಸಂಜ್ಞೀಯೆನ್ನುತ್ತಾರೆ, ಅಥವಾ ಹಿತಾಹಿತದ ಪರೀಕ್ಷೆಯ ಸಂಬಂಧದಲ್ಲಿ ಯಾವುದು ಅಸಮರ್ಥವಾಗಿದೆ ಅದು ಅಸಂಜ್ಞೀಯಿದೆ.

ಯಾವುದು ಒಳ್ಳೆಯ ರೀತಿಯಿಂದ ತಿಳಿಯುತ್ತದೆ ಅದಕ್ಕೆ ಸಂಜ್ಞ ಎಂದರೆ ಮನಸ್ಸೆನ್ನುತ್ತಾರೆ, ಆ ಮನಸ್ಸು ಯಾರಲ್ಲಿ ಕಂಡುಬರುತ್ತದೆ ಅದಕ್ಕೆ ಸಂಜ್ಞೀಯೆನ್ನುತ್ತಾರೆ.

**ಸಂವೇಗ :-** ದ್ರವ್ಯ ಮತ್ತು ಭಾವರೂಪವಾದ ಪಂಚಪರಿವರ್ತನ ಸಂಸಾರದಿಂದ ಯಾರಿಗೆ ಭಯವುಂಟಾಗಿದೆ ಅದು ಸಂವೇಗವಿದೆ. ಇನ್ನು ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರಗಳಲ್ಲಿ ಯಾವ ಜೀವದ ಸಮಾಗಮವಾಗುತ್ತದೆ ಅದಕ್ಕೆ ಲಬ್ಧಿಯೆನ್ನುತ್ತಾರೆ, ಮತ್ತು ಅವುಗಳಲ್ಲಿ ಹರುಷ ಹಾಗೂ ಸಾತ್ವಿಕಭಾವನೆಯ ಹೆಸರು ಸಂವೇಗವಿದೆ. ಸಂವೇಗದಲ್ಲಿ ಹದಿನೈದು ಭಾವನೆಗಳ ಸಮಾವೇಶವಾಗುತ್ತದೆ. ಇನ್ನು ಧರ್ಮ ಹಾಗೂ ಧರ್ಮ ಫಲದಲ್ಲಿ ಆತ್ಮನಿಗಿರುವ ಪರಮೋತ್ಸಾಹಕ್ಕೆ ಸಂವೇಗವೆನ್ನುತ್ತಾರೆ. -ಧವಲ ೮/೩/೪೮/೧೬/೩

**ಸಂವರ :-** ಯಾವ ಸಮ್ಯಗ್ದರ್ಶನ ಮೊದಲಾದ ಪರಿಣಾಮಗಳಿಂದ ಇಲ್ಲವೆ ಗುಪ್ತಿ, ಸಮಿತಿ ಮೊದಲಾದ ಪರಿಣಾಮಗಳಿಂದ ಮಿಥ್ಯಾದರ್ಶನ ಮೊದಲಾದ ಪರಿಣಾಮಗಳನ್ನು ತಡೆಯಲ್ಪಡುತ್ತದೆ ಆ ತಡೆಯಲ್ಪಡುವ ಪರಿಣಾಮಗಳಿಗೆ ಸಂವರವೆನ್ನುತ್ತಾರೆ. ಮಿಥ್ಯಾತ್ವ, ಅವಿರತಿ, ಪ್ರಮಾದ, ಕಷಾಯ ಮತ್ತು ಮನ-ವಚನ-ಕಾಯಗಳ ಪ್ರವೃತ್ತಿ ಇವೆಲ್ಲವೂ ಕರ್ಮಬರುವುದಕ್ಕೆ ಮಾರ್ಗವಾಗಿರುವುದರಿಂದ ಆಸ್ರವವಿದೆ, ಇದಕ್ಕೆ ವಿಪರೀತವಾಗಿ ಸಮ್ಯಕ್ತ್ವ, ಮಹಾವ್ರತ, ಅಪ್ರಮಾದ, ಮೋಹ ಹಾಗೂ ಕಷಾಯವಿಲ್ಲದ ಶುದ್ಧಾತ್ಮ ಪರಿಣತಿ ಮತ್ತು ಮನ-ವಚನ-ಕಾಯಗಳ ವ್ಯಾಪಾರದ ನಿವೃತ್ತಿ ಇವೆಲ್ಲವು ಹೊಸ ಕರ್ಮಗಳ ನಿರೋಧಕ್ಕೆ ಕಾರಣವಾಗಿರುವುದರಿಂದ ಸಂವರವಿದೆ. ಇದರಲ್ಲಿ ಭಾವಸಂವರ, ದ್ರವ್ಯಸಂವರವೆಂದು ಎರಡು ಪ್ರಕಾರಗಳಿವೆ. ಆತ್ಮನ ಯಾವ ಪರಿಣಾಮವು ಕರ್ಮದ ಆಸ್ರವವನ್ನು ತಡೆಯುವಲ್ಲಿ ಕಾರಣವಿದೆ ಅದು ಭಾವಸಂವರವು. ಮತ್ತು ದ್ರವ್ಯಾಸ್ರವವನ್ನು ತಡೆಯುವಲ್ಲಿ ಕಾರಣವಾದುದು ಅದು ದ್ರವ್ಯಸಂವರವಿದೆ. ಐದು ವ್ರತ, ಐದು ಸಮಿತಿ, ಮೂರು ಗುಪ್ತಿ, ಹತ್ತುಧರ್ಮ, ಹನ್ನೆರಡು ಅನುಪ್ರೇಕ್ಷೆ, ಇಪ್ಪತ್ತೆರಡು ಪರೀಷಹಜಯ ಹಾಗೂ ಅನೇಕ ಪ್ರಕಾರದ ಚಾರಿತ್ರ ಹೀಗೆ ಇವೆಲ್ಲವೂ ಸಂವರದ ವಿಶೇಷಗಳೆಂದು ತಿಳಿಯಬೇಕು. (ದ್ರವ್ಯಸಂಗ್ರಹ ೩೪,೩೫)

**ಸಂಸ್ಥಾನ :-** ಸಂಸ್ಥಾನಶಬ್ದದ ಅರ್ಥವು ಆಕೃತಿ ಎಂದಿದೆ. ಯಾವುದರ ಉದಯದಿಂದ ಔದಾರಿಕ ಮೊದಲಾದ ಶರೀರಗಳ ಆಕೃತಿಯಾಗುತ್ತದೆ ಅದು ಸಂಸ್ಥಾನನಾಮಕರ್ಮವಿದೆ. ಇದರಲ್ಲಿ ಆರು ಪ್ರಕಾರಗಳಿವೆ. ೧) ಕುಶಲಶಿಲ್ಪಿಯಿಂದ ನಿರ್ಮಿಸಲಾದ ಸಮಚಕ್ರದಂತೆ ಮೇಲೆ, ಕೆಳಗೆ, ಮಧ್ಯದಲ್ಲಿ ಸಮಾನರೂಪದಿಂದ ಅವಯವಗಳ ರಚನೆಯಾಗುವುದು ಸಮಚತುರಸ್ರಸಂಸ್ಥಾನವಿದೆ. ೨) ವಟವೃಕ್ಷದಂತೆ ನಾಭಿಯಿಂದ ಮೇಲೆ ತುಂಬಿದ್ದು ಮತ್ತು ಕೆಳಗೆ ಚಿಕ್ಕ ಪ್ರದೇಶಗಳ ರಚನೆಯಾಗುವುದು ನ್ಯಗ್ರೋಧಪರಿಮಂಡಲಸಂಸ್ಥಾನವಿದೆ. ೩) ನ್ಯಗ್ರೋಧಕ್ಕೆ ವಿರುದ್ಧವಾಗಿ ಎಂದರೆ ವಲ್ಮೀಕದಂತೆ ಮೇಲೆ ಕಿರಿದಾಗಿ ಕೆಳಗೆ ವಿಶಾಲವಾದ ರಚನೆಗೆ ಸ್ವಾತಿಸಂಸ್ಥಾನವೆನ್ನುತ್ತಾರೆ. ೪) ಬೆನ್ನಿನ ಮೇಲೆ ಬಹಳಷ್ಟು ಪುದ್ಗಲಗಳ ಪಿಂಡವಾಗಿಬಿಡುವುದು ಎಂದರೆ ಗೂನುತನ (ಡೂಗ)ವಾಗುವುದು ಕುಬ್ಜಕಸಂಸ್ಥಾನವಿದೆ. ೫) ಎಲ್ಲ ಅಂಗಉಪಾಂಗಗಳು ಚಿಕ್ಕವುಗಳಾಗಿ ರಚನೆಯಾಗುವಲ್ಲಿ ಕಾರಣವಾದುದು ವಾಮನಸಂಸ್ಥಾನವಿದೆ. ೬) ಎಲ್ಲ ಅಂಗ ಉಪಾಂಗಗಳು ಅನುಚಿತವಾಗಿ ಅನಾಗರಿಕ ರೀತಿಯಲ್ಲಿ ರಚನೆಯಾಗುವುದು ಹುಂಡಕಸಂಸ್ಥಾನವಿದೆ.

-ರಾಜವಾರ್ತಿಕ ೮ ೧೧ ೮ ೫೭೬-೫೭೭ ೪

**ಸಂಸಾರ :-** ಸಂಸರಣ ಮಾಡುವುದು ಎಂದರೆ ಜನ್ಮ-ಮರಣ ಮಾಡುವುದರ ಹೆಸರು ಸಂಸಾರವಿದೆ. ಅನಾದಿ ಕಾಲದಿಂದ ಜನ್ಮ-ಮರಣ ಮಾಡುತ್ತಿರುವ ಈ ಜೀವವು ಒಂದೊಂದನ್ನಾಗಿ ಮಾಡಿ ಲೋಕದ ಎಲ್ಲ ಪರಮಾಣುಗಳನ್ನು, ಎಲ್ಲ ಪ್ರದೇಶಗಳನ್ನು, ಕಾಲದ ಎಲ್ಲಸಮಯಗಳನ್ನು, ಎಲ್ಲ ಪ್ರಕಾರದ ಕಷಾಯಭಾವಗಳನ್ನು ಮತ್ತು ನರಕ ಮೊದಲಾದ ಎಲ್ಲ ಭವಗಳನ್ನು ಅನಂತ-ಅನಂತ ಸಲ ಸ್ವೀಕಾರಮಾಡಿಬಿಟ್ಟಿದೆ. ಹೀಗೆ ದ್ರವ್ಯ, ಕ್ಷೇತ್ರ,

ಕಾಲ, ಭಾವ ಹಾಗೂ ಭವದ ಭೇದದಿಂದ ಈ ಸಂಸಾರವು ಪಂಚಪರಾವರ್ತನರೂಪವೆಂದು ಹೇಳಲಾಗುತ್ತದೆ. ಇವುಗಳಲ್ಲಿ ಪುದ್ಗಲ ಪರಾವರ್ತನದ ಕಾಲವು ಎಲ್ಲಕ್ಕಿಂತ ಕಡಿಮೆಯಿದೆ. ಕ್ಷೇತ್ರ ಪರಾವರ್ತನದ ಕಾಲವು ಪುದ್ಗಲ ಪರಾವರ್ತನ ಕಾಲದ ಅನಂತಗುಣಿತವಿದೆ. ಕಾಲಪರಾವರ್ತನದ ಕಾಲವು ಕ್ಷೇತ್ರ ಪರಾವರ್ತನಕಾಲದ ಅನಂತಗುಣಿತವಿದೆ. ಭವಪರಾವರ್ತನದ ಕಾಲವು ಕಾಲ ಪರಾವರ್ತನದ ಕಾಲದ ಅನಂತಗುಣಿತವಿದೆ. ಭಾವಪರಾವರ್ತನದ ಕಾಲವು ಭವಪರಾವರ್ತನಕಾಲದ ಅನಂತಗುಣಿತವಿದೆ. (ವಿಶೇಷಕ್ಕಾಗಿ ಗೋ.ಜೀ.ಗಾ. ೫೬೦ರಿಂದ ೫೬೪)

**ಸಂಹನನ ಃ-** ಯಾವುದರ ಉದಯದಿಂದ ಅಸ್ಥಿಗಳ ಬಂಧನವು ವಿಶೇಷರೀತಿಯಿಂದಾಗುತ್ತದೆ. ಅದು ಸಂಹನನ ನಾಮಕರ್ಮವಿದೆ. ಇದರಲ್ಲಿ ಆರು ಪ್ರಕಾರಗಳಿವೆ. ೧) ಎರಡೂ ಮೂಳೆಗಳ ಜೋಡಣೆಯು ವಜ್ರಾಕಾರವಿದ್ದು ಪ್ರತಿಯೊಂದರಲ್ಲಿ ವಲಯಬಂಧನ ಮತ್ತು ನಾರಾಚವಿದ್ದಂಥ ಸುಸಂಘಟಿತಬಂಧನವು ವಜ್ರವೃಷಭನಾರಾಚವಿದೆ. ೨) ವಲಯಬಂಧನದಿಂದ ರಹಿತವಾದದ್ದೇ ವಜ್ರನಾರಾಚಸಂಹನನವಿದೆ. ೩) ವಜ್ರಾಕಾರಬಂಧನ ಮತ್ತು ವಲಯಬಂಧನದಿಂದ ರಹಿತವಾಗಿದ್ದರೂ ನಾರಾಚದಿಂದ ಯುಕ್ತವಾದದ್ದು ಯಾವುದೋ ಅದೇ ನಾರಾಚಸಂಹನನವಿದೆ. ೪) ಒಂದು ಮಗ್ಗಲು ನಾರಾಚದಿಂದ ಕೂಡಿದ್ದೂ ಮತ್ತು ಇನ್ನೊಂದು ಮಗ್ಗಲು ನಾರಾಚದಿಂದ ರಹಿತವಾದಂಥ ಅವಸ್ಥೆಯಲ್ಲಿದ್ದುದು ಅರ್ಧನಾರಾಚಸಂಹನನವಿದೆ. ೫) ಯಾವಾಗ ಎರಡೂ ಮೂಳೆಗಳ ಕೊನೆಯಲ್ಲಿ ಕೀಲು ಸೇರಿಸಲ್ಪಟ್ಟಿದ್ದರೆ ಆಗ ಅದು ಕೀಲಕಸಂಹನನವಾಗುತ್ತದೆ. ೬) ಯಾವುದರಲ್ಲಿ ಮೂಳೆಗಳು ಒಳಗೆ ಪರಸ್ಪರ ಕಟ್ಟಲ್ಪಡದೆ ಹೊರಗಿನಿಂದ ಮಾತ್ರ ಅವು ರಕ್ತವಾಹಿನಿ, ಸ್ನಾಯು, ಮಾಂಸ ಮೊದಲಾದವುಗಳಿಂದ ಕೂಡಿಸಿ ಸಂಘಟಿಸಲ್ಪಟ್ಟಿದೆ ಅದು ಅಸಂಪ್ರಾಪ್ತಸೃಪಾಟಿಕಾ ಸಂಹನನವಿದೆ. -ರಾಜವಾರ್ತಿಕ ೮/೧೧/೯/೫೭೬/೭

**ಹುಂಡಕಸಂಸ್ಥಾನ ಃ-** ವಿಷಮ ಎಂದರೆ ಸಮಾನತೆಯಿಲ್ಲದ ಹಲವು ಆಕಾರವುಳ್ಳ ಪಾಷಾಣಗಳಿಂದ ತುಂಬಿದ ಸೊಳ್ಳೆಯಂತೆ ಎಲ್ಲಕಡೆಯಿಂದ ವಿಷಮ ಆಕಾರಕ್ಕೆ ಹುಂಡವೆನ್ನುತ್ತಾರೆ ಹುಂಡದ ಶರೀರಕ್ಕೆ ಹುಂಡಶರೀರ ವೆನ್ನುತ್ತಾರೆ. ಅದರ ಸಂಸ್ಥಾನದಂತೆ ಯಾವುದರ ಸಂಸ್ಥಾನವಿರುತ್ತದೆ ಅದಕ್ಕೆ ಹುಂಡಶರೀರಸಂಸ್ಥಾನವೆನ್ನುತ್ತಾರೆ. ಯಾವ ಕರ್ಮದ ಉದಯದಿಂದ ಐದು ಸಂಸ್ಥಾನಗಳಲ್ಲದೆ ಮೂವತ್ತೊಂದು ಭೇದಗಳಿಂದ ಭಿನ್ನವಾದ ಬೇರೆ ಸಂಸ್ಥಾನವು ಉತ್ಪನ್ನವಾಗುತ್ತದೆ ಆ ಶರೀರವು ಹುಂಡಕ ಸಂಸ್ಥಾನವಿದೆಯೆಂದು ತಿಳಿಯಬೇಕು. -ಧವಲ೬/೧,೯,೧,೩೪/೭೨/೨

**ಕ್ಷಯೋಪಶಮಜ್ಞಾನ ಃ-** ಕ್ಷಯೋಪಶಮಜ್ಞಾನವು ಪದಾರ್ಥಗಳನ್ನು ಗ್ರಹಣಮಾಡುತ್ತಿರುವಾಗ ತದ್ರೂಪವಾಗಿ ಪರಿಣಮಿಸುವುದು ನಿಜವಾಗಿ ಜ್ಞಾನದಸ್ವರೂಪವಲ್ಲ, ಅದು ರಾಗದ ಕಾರ್ಯವಿದೆ. ಪ್ರತಿಯೊಂದು ಪದಾರ್ಥವು ಸ್ವತಃ ಪರಿಣಮನಶೀಲವಿದ್ದು ಜ್ಞೇಯ ಮತ್ತು ಜ್ಞಾನ ಇವುಗಳ ಪರಸ್ಪರ ನಿಮಿತ್ತದಿಂದ ಪರಿಣಮನವಾಗುತ್ತದೆ. ಜೀವವು ಯಾವ ಕ್ಷಣದಲ್ಲಿ ತಿಳಿಯುತ್ತದೆ ಅದೇ ಕ್ಷಣದಲ್ಲಿ ಪದಾರ್ಥಗಳಲ್ಲಿ ರಾಗ-ದ್ವೇಷ ಹಾಗೂ ಮೋಹಮಾಡುತ್ತದೆ. ರಾಗ ಹಾಗೂ ಜ್ಞಾನದಲ್ಲಿ ಬುದ್ಧಿಪೂರ್ವಕವಾಗಿ ಅವಿನಾಭಾವಿಯಾದ ಸಂಬಂಧವಿರುತ್ತದೆ. ಅಜ್ಞಾತ ಪದಾರ್ಥಗಳಲ್ಲಿ ರಾಗ-ದ್ವೇಷಗಳೆಂದೂ ಉಂಟಾಗುವುದಿಲ್ಲವಾದ್ದರಿಂದ ಅಸಂಭವವಿದೆ. ಇದರಿಂದ ಇಚ್ಚೆಗೆ ಕ್ಷಯೋಪಶಮಜ್ಞಾನವೆಂದು ಉಪಚಾರದಿಂದ ಹೇಳಲಾಗಿದೆ. ಜ್ಞಾನಸ್ವಭಾವವು ನಿಜವಾಗಿ ಕರ್ಮಬಂಧಕ್ಕೆ ಹಾಗೂ ದುಃಖಕ್ಕೆ ಕಾರಣವಾಗುವುದಿಲ್ಲ. ಆದರೆ ದುಃಖರೂಪವಾದ ರಾಗದ ಸಹಚರ್ಯೆಯಿಂದ ಜ್ಞಾನವೂ ದುಃಖರೂಪವಾಗಿದೆ.

-ಪಂಚಾಧ್ಯಾಯಿ ಅಧ್ಯಾಯ ೨ ರಲ್ಲಿ ಶ್ಲೋಕ ೯೦೭ ರಿಂದ ೯೦೯

**ಕ್ಷಾಯಿಕಭಾವ ಃ-** ಸಂಪೂರ್ಣಕರ್ಮಗಳ ನಾಶಕ್ಕೆ ಕ್ಷಯವೆನ್ನುತ್ತಾರೆ. ತಪಶ್ಚರ್ಯ ಮತ್ತು ಸಾಮ್ಯ ಭಾವನೆಯ ನಿಶ್ಚಲತೆಯ ಪ್ರಭಾವದಿಂದ ಅನಾದಿಕಾಲದಿಂದ ಕಟ್ಟಿದ ಕರ್ಮಗಳು ಕ್ಷಣದಲ್ಲಿ ವಿನಾಶವಾಗುತ್ತವೆ. ಮತ್ತು

ಸಾಧಕನಿಗೆ ಮುಕ್ತಿಯಾಗುತ್ತದೆ. ಕರ್ಮಗಳು ನಾಶವಾದ ಮೇಲೆ ಜೀವದಲ್ಲಿ ಯಾವ ಜ್ಞಾತಾ-ದೃಷ್ಟಾಭಾವವು ಹಾಗೂ ಅತೀಂದ್ರಿಯ ಆನಂದವು ಪ್ರಕಟವಾಗುತ್ತದೆ. ಅದು ಕ್ಷಾಯಿಕಭಾವವೆನ್ನಿಸಿಕೊಳ್ಳುತ್ತದೆ. ಮತ್ತು ಕರ್ಮಗಳು ನಾಶವಾದಮೇಲೆ ಉತ್ಪನ್ನವಾಗುವ ಭಾವವು ಕ್ಷಾಯಿಕಭಾವವಿದೆ. ಈ ಕ್ಷಾಯಿಕಭಾವದಲ್ಲಿ ಕ್ಷಾಯಿಕ ಜ್ಞಾನ, ಕ್ಷಾಯಿಕದರ್ಶನ, ಕ್ಷಾಯಿಕದಾನ, ಕ್ಷಾಯಿಕಲಾಭ, ಕ್ಷಾಯಿಕಭೋಗ, ಕ್ಷಾಯಿಕಉಪಭೋಗ, ಕ್ಷಾಯಿಕವೀರ್ಯ, ಕ್ಷಾಯಿಕ ಸಮ್ಯಕ್ತ್ವ ಮತ್ತು ಕ್ಷಾಯಿಕ ಚಾರಿತ್ರವೆಂದು ಒಂಭತ್ತು ಭೇದಗಳಿವೆ. -ತತ್ತ್ವಾರ್ಥಸೂತ್ರ೨/೩-೪

**ಕ್ಷಾಯಿಕ ಸಮ್ಯಕ್ತ್ವ :-** ದರ್ಶನಮೋಹನೀಯ ಕರ್ಮವು ಸಂಪೂರ್ಣವಾಗಿ ನಾಶವಾದಮೇಲೆ ಯಾವ ನಿರ್ಮಲ ಶ್ರದ್ಧೆಯಾಗುತ್ತದೆ ಅದನ್ನು ಕ್ಷಾಯಿಕ ಸಮ್ಯಕ್ತ್ವವೆನ್ನುತ್ತಾರೆ. ಆ ಸಮ್ಯಕ್ತ್ವವು ನಿತ್ಯವಿದೆ, ಕರ್ಮಗಳ ನಾಶಕ್ಕೆ ಕಾರಣವಾಗಿದೆ. ಕ್ಷಾಯಿಕ ಸಮ್ಯಕ್ತ್ವವು ನರಕಗತಿಯಲ್ಲಿ ಕೇವಲ ಪ್ರಥಮಪೃಥ್ವಿಯಲ್ಲಿ, ಭೋಗಭೂಮಿಯ ತಿರ್ಯಂಚಗಳಲ್ಲಿ, ಕರ್ಮಭೂಮಿಯ ಮನುಷ್ಯರಲ್ಲಿ ಮತ್ತು ವೈಮಾನಿಕ ದೇವರುಗಳಲ್ಲಿ ಪರ್ಯಾಪ್ತ-ಅಪರ್ಯಾಪ್ತ ಎರಡೂ ಅವಸ್ಥೆಗಳಲ್ಲಿ ಆಗುತ್ತದೆ. ಸಮ್ಯಗ್ದರ್ಶನದಲ್ಲಿ ಮೊದಲು ನಿಶ್ಚಯದಿಂದ ಔಪಶಮಿಕಭಾವವಾಗುತ್ತದೆ. ಅನಂತರ ಕ್ಷಾಯೋಪಶಮಿಕವಾಗುತ್ತದೆ ಮತ್ತು ಕೊನೆಗೆ ಕ್ಷಾಯಿಕವಾಗುತ್ತದೆ. ಈ ಕ್ಷಾಯಿಕ ಸಮ್ಯಕ್ತ್ವವು ಕರ್ಮಭೂಮಿಯಲ್ಲಿರುವ ಮನುಷ್ಯರಿಗೆ ತೀರ್ಥಂಕರರ ಪಾದಮೂಲದಲ್ಲಿ ಇಲ್ಲವೆ ಕೇವಲಿ ಅಥವಾ ಶ್ರುತಕೇವಲಿಗಳ ಪಾದಮೂಲದಲ್ಲೇ ಆಗುತ್ತದೆ. -ಲಬ್ಧಿಸಾರ ಮೂಲ ೧೧೦/೧೪೯

# ಪ್ರಸ್ತುತ ಗ್ರಂಥದಲ್ಲಿ ಉದ್ಧೃತವಾದ ಕೆಲವು ಗ್ರಂಥಗಳ ಪರಿಚಯ

**ಅಷ್ಟಪಾಹುಡ** :- ಇದನ್ನು ಭಗವಾನ್ ಕುಂದಕುಂದ ದೇವರು ರಚಿಸಿದ್ದಾರೆ. ಶ್ರೀ ಕುಂದಕುಂದದೇವರು ಒಟ್ಟು ೮೪ ಪಾಹುಡಗಳನ್ನು ರಚಿಸಿದ ಬಗ್ಗೆ ಪ್ರಸಿದ್ಧಿಯಿದೆ. ಆದರೆ ಇವುಗಳಲ್ಲಿ ಸಮಯಸಾರ, ಪ್ರವಚನಸಾರ, ನಿಯಮಸಾರ, ಪಂಚಾಸ್ತಿಕಾಯ, ದರ್ಶನಪಾಹುಡ, ಸೂತ್ರಪಾಹುಡ, ಚಾರಿತ್ರಪಾಹುಡ, ಬೋಧಪಾಹುಡ, ಭಾವಪಾಹುಡ, ಮೋಕ್ಷಪಾಹುಡ, ಲಿಂಗಪಾಹುಡ ಮತ್ತು ಶೀಲಪಾಹುಡಗಳೆಂದು ೧೨ ಪಾಹುಡಗಳು ಉಪಲಬ್ಧಿವಿವೆ. ಅವುಗಳಲ್ಲಿ ದರ್ಶನಪಾಹುಡದಿಂದ ಶೀಲಪಾಹುಡದವರೆಗಿನ ಎಂಟು ಪಾಹುಡಗಳು ಅಷ್ಟಪಾಹುಡವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇವುಗಳಲ್ಲಿ ಕೊನೆಯ ಎರಡು ಪಾಹುಡಗಳನ್ನುಳಿದು ಉಳಿದವುಗಳಿಗೆ ಷಟ್‌ಪಾಹುಡವೆಂದು ಹೇಳುತ್ತಾರೆ. ಷಟ್ ಪಾಹುಡದ ಮೇಲೆ ಆಚಾರ್ಯ ಶ್ರೀ ಶ್ರುತಸಾಗರರು ರಚಿಸಿದ ಸಂಸ್ಕೃತ ಟೀಕೆಯೂ ಮತ್ತು ಅಷ್ಟಪಾಹುಡದ ಮೇಲೆ ಪಂ. ಜಯಚಂದ್ರಛಾಬಡಾರು ಬರೆದ ಭಾಷಾವಚನಿಕೆಯೂ ಉಪಲಬ್ಧವಿದೆ.

**ಅಷ್ಟಸಹಸ್ರಿ** :- ಆಚಾರ್ಯದೇವ ಶ್ರೀ ಸಮಂತಭದ್ರರಿಂದ ರಚಿಸಲ್ಪಟ್ಟ ಆಪ್ತಮೀಮಾಂಸೆ ಇದರ ಇನ್ನೊಂದು ಹೆಸರು ದೇವಾಗಮ ಸ್ತೋತ್ರದ ಮೇಲೆ ಆಚಾರ್ಯದೇವ ಶ್ರೀ ಅಕಲಂಕರು 'ಅಷ್ಟಶತೀ' ಎಂಬ ವೃತ್ತಿಯನ್ನು ಬರೆದಿದ್ದಾರೆ. ಅದರ ಮೇಲೆ ಆಚಾರ್ಯದೇವ ಶ್ರೀ ವಿದ್ಯಾನಂದರು ಕ್ರಿ.ಶ. ೭೭೫ ರಲ್ಲಿ ೮೦೦೦ ಶ್ಲೋಕ ಪ್ರಮಾಣದ ಒಂದು ಸಂಸ್ಕೃತ ವೃತ್ತಿಯನ್ನು ರಚಿಸಿದ್ದಾರೆ. ಇದರ ಹೆಸರು ಅಷ್ಟಸಹಸ್ರಿಯಿದೆ. ಈ ಕೃತಿಯು ಅತ್ಯಂತ ಪ್ರೌಢವೂ, ಗಂಭೀರವೂ, ಕಠಿಣವೂ ಆಗಿದೆ. ಇದನ್ನು ಓದಿ ಅರ್ಥವಿಸಿಕೊಳ್ಳುವುದು ಎಂಥೆಂಥ ಹಿರಿಯ ವಿದ್ವಾಂಸರಿಗೂ ಕಷ್ಟಸಾಧ್ಯವಾಗಿದೆ. ಅದರಿಂದಲೇ ಆ ಹಿರಿಯ ವಿದ್ವಾಂಸರು ಇದಕ್ಕೆ ಅಷ್ಟಸಹಸ್ರಿ ಎನ್ನುವ ಬದಲು ಕಷ್ಟಸಹಸ್ರಿ ಎನ್ನುತ್ತಾರೆ.

**ಆತ್ಮಖ್ಯಾತಿ** :- ಇದು ಆಚಾರ್ಯದೇವ ಶ್ರೀ ಅಮೃತಚಂದ್ರರಿಂದ ಸಮಯಸಾರದ ಮೇಲೆ ಸಂಸ್ಕೃತದಲ್ಲಿ ಬರೆದ ಟೀಕಾಗ್ರಂಥವಾಗಿದೆ. ಆಚಾರ್ಯ ಶ್ರೀ ಅಮೃತಚಂದ್ರರು, ಆಚಾರ್ಯವರ್ಯ ಶ್ರೀ ಕುಂದಕುಂದರ ಹೃದಯವನ್ನೇ ಇಲ್ಲಿ ಹೊರಗೆಡವಿದ್ದಾರೋ ಏನೋ ಎನ್ನುವಂತೆ ಆತ್ಮಖ್ಯಾತಿ ಟೀಕೆಯು ಅತ್ಯಂತ ಗಂಭೀರವೂ ಪ್ರೌಢವೂ ಆಗಿದೆ. ಈ ಟೀಕೆಯಲ್ಲಿ ಬಂದಂಥ ಕಲಶ ಸ್ವರೂಪದ ಶ್ಲೋಕಗಳನ್ನು ಸಂಗ್ರಹಿಸಿ 'ಸಮಯಸಾರ ಕಲಶ'ವೆಂಬ ಹೆಸರಿನಿಂದ ಅದೊಂದು ಸ್ವತಂತ್ರ ಗ್ರಂಥವಾಗಿ ಅತ್ಯಂತ ಪ್ರಸಿದ್ಧವಾಗಿದೆ. ಆತ್ಮಖ್ಯಾತಿಯ ಮೇಲೆ ಯಾರೂ ಟೀಕೆ ಬರೆದಿಲ್ಲ. ಪ್ರಸ್ತುತ ಆಚಾರ್ಯರ ಕಾಲವು ಕಿ.ಶ. ೯೬೨ ರಿಂದ ೧೦೫೫ ರವರೆಗೆಂದು ಮನ್ನಿಸಲಾಗಿದೆ.

**ಆತ್ಮಾನುಶಾಸನ** :- ಇದೊಂದು ಸಂಸ್ಕೃತ ಶ್ಲೋಕ ಬದ್ಧವಾದ ಆಧ್ಯಾತ್ಮಿಕ ಶಾಸ್ತ್ರವಾಗಿದೆ. ಇದನ್ನು ಆಚಾರ್ಯದೇವ ಶ್ರೀ ಗುಣಭದ್ರರು ರಚಿಸಿದ್ದಾರೆ. ಇವರ ಕಾಲ ೮೦೩-೮೯೫ ರ ವರೆಗಿರುತ್ತದೆ. ಪ್ರಸ್ತುತ ಗ್ರಂಥದಲ್ಲಿ ೨೭೦ ಶ್ಲೋಕಗಳಿವೆ. ಇದರ ಮೇಲೆ. ಪಂ. ಟೋಡರಮಲ್ಲರು ಒಂದು ಭಾಷಾಮಯವಾದ ಟೀಕೆಯನ್ನು ಬರೆದಿದ್ದಾರೆ. ಇವರು ಸುಮಾರು ೧೭೩೬ ರಲ್ಲಿದ್ದರು.

**ಆಪ್ತಮೀಮಾಂಸೆ** :- ಇದು 'ತತ್ತ್ವಾರ್ಥಸೂತ್ರ'ಗ್ರಂಥದ ಮಂಗಲಾಚರಣೆಯ ಮೇಲೆ ಆಚಾರ್ಯ ಶ್ರೀ ಸಮಂತಭದ್ರದೇವರು ರಚಿಸಿದ, ೧೧೫ ಸಂಸ್ಕೃತ ಶ್ಲೋಕಗಳುಳ್ಳ ಒಂದು ನ್ಯಾಯಪೂರ್ಣವಾದ ಗ್ರಂಥವಾಗಿದೆ. ಇದರ ಇನ್ನೊಂದು ಹೆಸರು ದೇವಾಗಮಸ್ತೋತ್ರವೆಂದೂ ಇದೆ. ಇದರಲ್ಲಿ ನ್ಯಾಯಪೂರ್ವಕವಾಗಿ ಭಾವವಾದ, ಅಭಾವವಾದ ಮೊದಲಾದ ಏಕಾಂತ ಮತಗಳ ನಿರಾಕರಣೆ ಮಾಡುತ್ತ ಭ. ಮಹಾವೀರರ ಆಪ್ತತ್ವದ ಸಿದ್ಧಿಯನ್ನು ಮಾಡಲಾಗಿದೆ. ಇದರ ಮೇಲೆ ಆಚಾರ್ಯ ದೇವರುಗಳಾದ ಶ್ರೀ ಅಕಲಂಕರ 'ಅಷ್ಟಶತಿ' ಶ್ರೀ ವಿದ್ಯಾನಂದರ 'ಅಷ್ಟಸಹಸ್ರಿ' ಶ್ರೀ ವಾದೀಭಸಿಂಹರ 'ವೃತ್ತಿ' ಶ್ರೀ ವಸುನಂದಿಗಳ 'ವೃತ್ತಿ' ಮತ್ತು ಪಂ. ಜಯಚಂದ ಛಾಬಡಾ ಬರೆದ ಸಂಕ್ಷಿಪ್ತ ಭಾಷಾ ಟೀಕೆಗಳು ಉಪಲಬ್ಧವಿವೆ.

**ಆಲಾಪಪದ್ಧತಿ ಃ-** ಇದನ್ನು ಆಚಾರ್ಯದೇವ ಶ್ರೀ ದೇವಸೇನರು ಕಿ.ಶ. ೮೬೩ ರಲ್ಲಿ ಸಂಸ್ಕೃತ ಗದ್ಯದಲ್ಲಿ ರಚಿಸಿದ್ದಾರೆ. ಇದು ಪ್ರಮಾಣ ಮತ್ತು ನಯಗಳ ಭೇದ-ಪ್ರಭೇದಗಳನ್ನು ನಿರೂಪಣೆ ಮಾಡುವ ಒಂದು ಹಿರಿಯ ಗ್ರಂಥವಾಗಿದೆ.

**ಕ್ಷಪಣಾಸಾರ ಃ-** ಇದೊಂದು ಮೋಹನೀಯಕರ್ಮದ ಕ್ಷಯದ ವಿಷಯವಾಗಿ ಆಚಾರ್ಯದೇವ ಶ್ರೀ ನೇಮಿಚಂದ್ರ ಸಿದ್ಧಾಂತಚಕ್ರವರ್ತಿಗಳಿಂದ ರಚಿಸಲ್ಪಟ್ಟ ಪ್ರಾಕೃತ ಭಾಷೆಯ ಗ್ರಂಥವಾಗಿದೆ. ಇದರಲ್ಲಿ ೬೫೩ ಗಾಥಾ ಸೂತ್ರಗಳಿವೆ. ಇದರ ಆಧಾರದ ಮೇಲೆ ಶ್ರೀ ಮಾಧವಚಂದ್ರ ತ್ರೈವಿದ್ಯದೇವರು ಕ್ಷಪಣಾಸಾರವೆಂಬ ಹೆಸರಿನ ಒಂದು ಸ್ವತಂತ್ರ ಗ್ರಂಥವನ್ನು ಸಂಸ್ಕೃತ ಗದ್ಯದಲ್ಲಿ ಬರೆದಿದ್ದಾರೆ. ಇದರ ಮೇಲೆ ಪಂ. ಟೋಡರಮಲ್ಲರು ಬರೆದ ಒಂದು ಟೀಕಾಗ್ರಂಥವು ಉಪಲಬ್ಧವಿದೆ. ಮೂಲಗ್ರಂಥಕರ್ತೃಗಳ ಕಾಲವು ೧೧ನೇ ಶತಮಾನದ ಪೂರ್ವಾರ್ಧವೆಂದು ಸಿದ್ಧಮಾಡಲಾಗಿದೆ.

**ಗೊಮ್ಮಟಸಾರ ಃ-** ಇದನ್ನು ಆಚಾರ್ಯ ಶ್ರೀ ನೇಮಿಚಂದ್ರಸಿದ್ಧಾಂತದೇವರು ಹನ್ನೊಂದನೆಯ ಶತಮಾನದ ಪೂರ್ವಾರ್ಧದಲ್ಲಿ ಚಾಮುಂಡರಾಯನಿಗಾಗಿ ರಚಿಸಿದ್ದಾರೆ. ಇದರಲ್ಲಿ ಜೀವಕಾಂಡ, ಕರ್ಮಕಾಂಡವೆಂದು ಎರಡು ಭಾಗಗಳಿದ್ದು ಜೀವಕಾಂಡದಲ್ಲಿ ೨೦ ಅಧಿಕಾರಗಳು ೭೩೫ ಗಾಥೆಗಳಿದ್ದರೆ ಕರ್ಮಕಾಂಡದಲ್ಲಿ ೮ ಅಧಿಕಾರಗಳು ೬೭೨ ಗಾಥೆಗಳಿವೆ. ಗ್ರಂಥವು ಪೂರ್ಣ ಪ್ರಾಕೃತದಲ್ಲಿದೆ. ಇದರ ಮೇಲೆ ಚಾಮುಂಡರಾಯನು ಕನ್ನಡದಲ್ಲಿ ಬರೆದ 'ವೀರಮಾರ್ತಂಡ'ವೆಂಬ ಟೀಕಾ ಗ್ರಂಥವಲ್ಲದೆ ಆಚಾರ್ಯ ಶ್ರೀ ಅಭಯನಂದಿ ಹಾಗೂ ಆಚಾರ್ಯ ಶ್ರೀ ಅಭಯಚಂದ್ರರುಗಳ ಸಂಸ್ಕೃತ ಟೀಕೆಗಳು ಮತ್ತು ಬ್ರ. ಕೇಶವವರ್ಣಿಯ ಸಂಸ್ಕೃತ ಟೀಕೆ ಹಾಗೂ ಆಚಾರ್ಯ ಶ್ರೀ ನೇಮಿಚಂದ್ರರ (ಕಾಲ ಃ ೬ನೇ ಶತಮಾನ) ಸಂಸ್ಕೃತ ಟೀಕೆಗಳಲ್ಲದೆ ಪಂ. ಹೇಮಚಂದ್ರ ಹಾಗೂ ಪಂ. ಟೋಡರಮಲ್ಲರ ಭಾಷಾವಚನಿಕೆಗಳೂ ಉಪಲಬ್ಧವಿವೆ. ಪಂ. ಟೋಡರಮಲ್ಲರು ರಚಿಸಿದ ಭಾಷಾವಚನಿಕೆಯು ಅತ್ಯಂತ ವಿಸ್ತಾರವೂ ಗಂಭೀರವೂ ಆಗಿದೆ.

**ಜಯಧವಲ ಃ-** ದಿಗಂಬರಾಚಾರ್ಯರಲ್ಲಿ ಯತಿ ವೃಷಭಾಚಾರ್ಯರ ಸ್ಥಾನವು ಅತ್ಯಂತ ಎತ್ತರದಲ್ಲಿದೆ ಏಕೆಂದರೆ ಅವರ ರಚನೆಗಳ ಸಂಬಂಧವು ಭಗವಾನ್ ಮಹಾವೀರರ ಮೂಲ ಪರಂಪರೆಯಿಂದ ಬಂದ ಸೂತ್ರಗಳೊಡನೆ ಮನ್ನಿಸಲಾಗುತ್ತಿದೆ. ಅವರು ರಚಿಸಿದ 'ಕಷಾಯ ಪ್ರಾಭೃತವೆಂಬ ಚೂರ್ಣಸೂತ್ರಗಳ ಮೇಲೆ ಈ 'ಜಯಧವಲ' ಟೀಕೆಯನ್ನು ಬರೆಯಲಾಗಿದೆ. ಇದು ೬೦,೦೦೦ ಸಾವಿರ ಶ್ಲೋಕ ಪ್ರಮಾಣದಷ್ಟು ವಿಸ್ತಾರವಾದ ಟೀಕಾ ಗ್ರಂಥವಾಗಿದೆ. ಇದರಲ್ಲಿ ಮೊದಲಿನ ೨೦,೦೦೦ ಶ್ಲೋಕ ಪ್ರಮಾಣದಷ್ಟು ಭಾಗವನ್ನು ಆಚಾರ್ಯದೇವ ಶ್ರೀ ವೀರಸೇನ ಸ್ವಾಮಿಗಳೂ ಮತ್ತು ಉಳಿದ ೪೦,೦೦೦ ಶ್ಲೋಕ ಪ್ರಮಾಣದಷ್ಟು ಭಾಗವನ್ನು ಅವರ ಶಿಷ್ಯೋತ್ತಮರಾದ ಆಚಾರ್ಯ ಶ್ರೀ ಜಿನಸೇನ ಸ್ವಾಮಿಗಳೂ ರಚಿಸಿದ್ದಾರೆ. ಪೂರ್ಣಗ್ರಂಥ ಮುಗಿದ ಕಾಲ ಸಂ.ಕ್ರಿ.ಶ. ೮೦೦ ಇದೆ.

**ಜ್ಞಾನಾರ್ಣವ ಃ-** ಇದು ಸಂಸ್ಕೃತ ಶ್ಲೋಕಗಳಲ್ಲಿ ರಚಿಸಲ್ಪಟ್ಟ ಒಂದು ಆಧ್ಯಾತ್ಮಿಕ ಹಾಗೂ ಧ್ಯಾನದ ವಿಷಯಕ್ಕೆ ಸಂಬಂಧಿಸಿದ ಗ್ರಂಥವಾಗಿದೆ. ಇದರಲ್ಲಿ ೪೨ ಪ್ರಕರಣಗಳಿದ್ದು ಒಟ್ಟು ೨೫೦೦ ಶ್ಲೋಕಗಳಿವೆ. ಇದನ್ನು ಆಚಾರ್ಯದೇವ ಶ್ರೀ ಶುಭಚಂದ್ರರು ರಚಿಸಿದ್ದಾರೆ. ಇವರ ಕಾಲ ೧೦೦೩-೧೦೬೮ ರ ವರೆಗೆ ಇರುತ್ತದೆ. ಈ ಗ್ರಂಥದ ಮೇಲೆ ಎರಡು ಟೀಕಾ ಗ್ರಂಥಗಳಿವೆ.

೧) ಆ-ಶ್ರುತಸಾಗರರಿಂದ ರಚಿಸಲ್ಪಟ್ಟದ್ದು ''ರತ್ನತ್ರಯ ಪ್ರಕಾಶಿಕೆ'' ಇದರಲ್ಲಿ ಶಿವತತ್ತ್ವ, ಗರುಡತತ್ತ್ವ, ಮತ್ತು ಕಾಮತತ್ತ್ವಗಳ ವರ್ಣನೆಯಿದೆ. ೨) ಪಂ. ಜಯಚಂದ ಛಾಬಡಾ ಬರೆದ ಭಾಷಾವಚನಿಕೆ.

**ತತ್ತ್ವಾರ್ಥಸೂತ್ರ :-** ಈ ಮಹಾನ್ ಗ್ರಂಥವನ್ನು ಆಚಾರ್ಯದೇವ ಶ್ರೀ ಗೃದ್ಧಪಿಚ್ಛಾಚಾರ್ಯರು ರಚಿಸಿದ್ದಾರೆಂಬುದು ''ತತ್ತ್ವಾರ್ಥಸೂತ್ರ ಕರ್ತಾರಂ ಗೃದ್ಧಪಿಚ್ಛೋಪಲಕ್ಷಿತಂ'' ಎಂಬ ಸೂತ್ರದಿಂದ ಸಿದ್ಧವಾಗುತ್ತದೆ. ಈ ಗ್ರಂಥವು ವೈದಿಕರಲ್ಲಿ ಹೇಗೆ 'ಗೀತೆ'ಯೋ, ಮುಸಲ್ಮಾನರಲ್ಲಿ ಹೇಗೆ 'ಕುರಾನ'ವೋ, ಈಸಾಯಿಗಳಲ್ಲಿ ಹೇಗೆ 'ಬಾಯಬಲ್ಲ'ವೋ ಹಾಗೆ ಜೈನ ಪರಂಪರೆಯಲ್ಲಿ ಸರ್ವ ಪ್ರಧಾನವೆಂದು ಮನ್ನಿಸಲಾಗುತ್ತಿದೆ. ಇದರಲ್ಲಿ ತತ್ತ್ವಾರ್ಥ ಮತ್ತು ದರ್ಶನದ ವಿಷಯವಾಗಿ ಹತ್ತು ಅಧ್ಯಾಯಗಳಿದ್ದು ಒಟ್ಟು ೩೫೭ ಸೂತ್ರಗಳಿವೆ. ಮೊದಲಿನ ನಾಲ್ಕು ಅಧ್ಯಾಯಗಳಲ್ಲಿ ಜೀವತತ್ತ್ವವನ್ನೂ, ಐದನೆಯ ಅಧ್ಯಾಯದಲ್ಲಿ ಪುದ್ಗಲತತ್ತ್ವವನ್ನೂ, ಆರನೆಯ ಏಳನೆಯ ಅಧ್ಯಾಯಗಳಲ್ಲಿ ಆಸ್ರವತತ್ತ್ವವನ್ನೂ, ಎಂಟನೆಯ ಅಧ್ಯಾಯದಲ್ಲಿ ಬಂಧತತ್ತ್ವವನ್ನೂ, ಒಂಭತ್ತನೆಯ ಅಧ್ಯಾಯದಲ್ಲಿ ಸಂವರ ಹಾಗೂ ನಿರ್ಜರಾತತ್ತ್ವಗಳನ್ನೂ ಮತ್ತು ಹತ್ತನೆಯ ಅಧ್ಯಾಯದಲ್ಲಿ ಮೋಕ್ಷ ತತ್ತ್ವವನ್ನೂ ವರ್ಣನೆ ಮಾಡಿದ್ದಾರೆ. ಈ ಜೀವಕ್ಕೆ ಮೋಕ್ಷದ ಪ್ರಾಧಾನ್ಯತೆಯೇ ಗುರಿಯಾಗಿರುವುದರಿಂದ ಈ ಗ್ರಂಥಕ್ಕೆ ''ಮೋಕ್ಷ ಶಾಸ್ತ್ರ''ವೆಂದು ಕರೆದುದೂ ತುಂಬಾ ಸಾರ್ಥಕವಾಗಿದೆ. ಇದರಲ್ಲಿ ಬರುವ ಸಣ್ಣ-ಸಣ್ಣ ಸೂತ್ರಗಳ ಅರ್ಥ ಗಾಂಭೀರ್ಯವನ್ನು ಕಂಡು ವಿದ್ವಾಂಸರುಗಳು ಆಶ್ಚರ್ಯಚಕಿತರಾಗಿದ್ದಾರೆ. ಈ ಗ್ರಂಥದ ಮಂಗಲಾಚರಣೆಯ ಮೊದಲ ಸೂತ್ರದ ಮೇಲೆಯೇ ಆಚಾರ್ಯ ಸಮಂತಭದ್ರರು 'ಆಪ್ತಮೀಮಾಂಸೆ'ಯೆಂಬ ಟೀಕೆ ಬರೆದಿದ್ದಾರೆ. ಅನಂತರ ಆಚಾರ್ಯ ಶ್ರೀ ಭಟ್ಟಾಕಲಂಕ, ವಿದ್ಯಾನಂದಿ ಮೊದಲಾಗಿ ಹದಿನಾರು ಆಚಾರ್ಯರುಗಳು ಈ ಗ್ರಂಥದ ಮೇಲೆ ಟೀಕಾ ಗ್ರಂಥಗಳನ್ನು ರಚಿಸಿದ್ದಾರೆ, ಇದರ ಮೇಲೆ 'ತತ್ತ್ವಾರ್ಥಸೂತ್ರವ್ಯಾಖ್ಯಾನ'ವೆಂಬ ಹೆಸರಿನ ಒಂದು ಟೀಕಾ ಗ್ರಂಥವು ಕನ್ನಡ ಭಾಷೆಯಲ್ಲಿ ರಚನೆಯಾಗಿದೆ. ಅದರಂತೆ ಆಧುನಿಕ ಅನೇಕ ವಿದ್ವಾಂಸರುಗಳು ಬೇರೆ-ಬೇರೆಯಾಗಿ ಸ್ವತಂತ್ರ-ಸ್ವತಂತ್ರ ಟೀಕೆಗಳನ್ನು ಬರೆದಿದ್ದಾರೆ.

**ತತ್ತ್ವಾರ್ಥಶ್ಲೋಕವಾರ್ತಿಕ :-** ಇದು ಆಚಾರ್ಯಶ್ರೀ ಗೃದ್ಧಪಿಚ್ಛ ದೇವರು ರಚಿಸಿದ ತತ್ತ್ವಾರ್ಥಸೂತ್ರದ ಮೇಲೆ ಶ್ರೀ ವಿದ್ಯಾನಂದಿ ಆಚಾರ್ಯರು ಬರೆದ ವಿಸ್ತಾರವಾದ ಟೀಕಾ ಗ್ರಂಥವಾಗಿದೆ. ಇದನ್ನು ಆಚಾರ್ಯ ಶ್ರೀಯವರು ಕ್ರಿ. ಶ. ೭೭೫ ರಲ್ಲಿ ಬರೆದು ಮುಗಿಸಿದ್ದಾರೆ.

**ತ್ರಿಲೋಕಸಾರ :-** ಈ ಗ್ರಂಥವು ೧೦೧೮ ಪ್ರಾಕೃತ ಗಾಥೆಗಳಿಂದ ಅಲಂಕೃತವಾಗಿದೆ ಇದನ್ನು ಆಚಾರ್ಯದೇವ ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ರಚಿಸಿದ್ದಾರೆ. ಗ್ರಂಥದ ಹೆಸರೇ ಸೂಚಿಸುವಂತೆ ಇದು ಲೋಕ ಪ್ರರೂಪಣೆಯನ್ನು ಒಳಗೊಂಡಿದೆ ಇದರ ಮೇಲೆ ಆಚಾರ್ಯ ಶ್ರೀ ಮಾಧವಚಂದ್ರ ತ್ರೈವಿದ್ಯದೇವರು ಸಂಸ್ಕೃತದಲ್ಲಿ ಟೀಕಾ ಗ್ರಂಥವನ್ನು ರಚಿಸಿದ್ದಾರೆ. ಮತ್ತು ಪಂ. ಟೋಡರಮಲ್ಲರು ಒಂದು ಭಾಷಾ ಟೀಕೆಯನ್ನೂ ರಚಿಸಿದ್ದಾರೆ.

**ದೋಹಾಪಾಹುಡ :-** ಇದು ಆಚಾರ್ಯ ಶ್ರೀ ಯೋಗೀಂದು ದೇವರಿಂದ ರಚಿಸ್ಪಟ್ಟಿದೆ ಪಾಕೃತ ದೋಹಾ ಬದ್ಧವಾಗಿರುವ ಈ ಗ್ರಂಥದಲ್ಲಿ ಆಧ್ಯಾತ್ಮಿಕ ವಿಷಯವಿದೆ, ಆಚಾರ್ಯ ಶ್ರೀಯವರ ಕಾಲವು ಕ್ರಿ. ಶ. ೬ ನೆಯ ಶತಮಾನವಾಗಿದೆ.

**ಧರ್ಮಪರೀಕ್ಷೆ :-** ಇದು ಆಚಾರ್ಯ ಶ್ರೀ ಅಮಿತಗತಿಗಳು ಸಂಸ್ಕೃತದಲ್ಲಿ ಶ್ಲೋಕಬದ್ಧವಾಗಿ ರಚಿಸಿದ ಗ್ರಂಥವಾಗಿದೆ. ಇದರಲ್ಲಿ ಒಂದು ರೋಚಕವಾದ ಕಥೆಯ ಮುಖಾಂತರ ವೈದಿಕ ಪುರಾಣಗಳಲ್ಲಿಯ ಕೆಲವು ವಿಸಂಗತ ಮಾತುಗಳ ವಿಡಂಬನೆ ಮಾಡಲಾಗಿದೆ. ಇವರ ಕಾಲ ಕ್ರಿ. ಶ. ೯೯೩ ರಿಂದ ೧೦೨೩ ರ ವರೆಗಿರುತ್ತದೆ.

ಕನ್ನಡದ ವೃತ್ತಿವಿಲಾಸನೆಂಬ ಕವಿಯು ಸುಮಾರು ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಇದೇ ವಿಷಯವನ್ನೆತ್ತಿಕೊಂಡು ಕನ್ನಡ ಭಾಷೆಯಲ್ಲಿ 'ಧರ್ಮ ಪರೀಕ್ಷೆ' ಎಂಬ ಗ್ರಂಥವನ್ನು ರಚಿಸಿದ್ದಾರೆ.

**ನಿಯಮಸಾರ :-** ಇದು ಭಗವಾನ್ ಕುಂದಕುಂದದೇವರಿಂದ ರಚಿಸಲ್ಪಟ್ಟ ಆಧ್ಯಾತ್ಮ ವಿಷಯಗಳನ್ನೊಳಗೊಂಡ ಅಪೂರ್ವ ಗ್ರಂಥರತ್ನವಾಗಿದೆ. ಇದರಲ್ಲಿ ೧೮೭ ಪ್ರಾಕೃತ ಗಾಥೆಗಳಿದ್ದು ಇದು ಶುದ್ಧಾತ್ಮನ ಸ್ವರೂಪವನ್ನು ಪ್ರದರ್ಶಿಸುವ ಅದ್ವಿತೀಯ ಗ್ರಂಥವಾಗಿದೆ. ಇದರ ಕೇವಲ ಒಂದೇ ಒಂದು ಟೀಕಾ ಗ್ರಂಥವು ಉಪಲಬ್ಧವಿದೆ. ಆಚಾರ್ಯದೇವ ಶ್ರೀ ಪದ್ಮಪ್ರಭಮಲಧಾರಿದೇವರು ಸಂಸ್ಕೃತದಲ್ಲಿ ಆ ಟೀಕಾ ಗ್ರಂಥವನ್ನು ರಚಿಸಿದ್ದಾರೆ. ಪದ್ಮಪ್ರಭಮಲಧಾರಿದೇವರ ಕಾಲವು ಕ್ರಿ.ಶ. ೧೧೪೦-೧೧೮೫ ರ ವರೆಗಿದೆ.

**ಧವಲ :-** ಇಡೀ ಜೈನ ಪರಂಪರೆಯಲ್ಲಿ ಮೂಲ ಶ್ರುತಾವತಾರವೆಂದು ಅತ್ಯಂತ ಆದರಣೀಯವೂ ಪೂಜ್ಯವೂ ಎನಿಸಿದ ಷಟ್‌ಖಂಡಾಗಮವನ್ನು ಮೊದಲನೆಯ ಶತಮಾನದಲ್ಲಿ ಕೊನೆಯ ಅಂಗಶ್ರುತ ಜ್ಞಾನಿಗಳಾದ ಆಚಾರ್ಯದೇವ ಶ್ರೀಧರಸೇನರ ಪರಮ ಶಿಷ್ಯರಾದ ಶ್ರೀ ಭೂತಬಲಿ ಶ್ರೀ ಪುಷ್ಪದಂತ ಆಚಾರ್ಯವರ್ಯರುಗಳು ರಚಿಸಿದ್ದಾರೆ. ಈ ಷಟ್‌ಖಂಡಾಗಮದ ಮೊದಲಿನ ಐದು ಖಂಡಗಳ ಮೇಲೆ ೭೨,೦೦೦ ಶ್ಲೋಕ ಪ್ರಮಾಣದ ಅತ್ಯಂತ ಪ್ರೌಢವೂ, ವಿಸ್ತಾರವೂ ಆದ ಟೀಕೆಯನ್ನು ಕ್ರಿ.ಶ. ೮೧೭ ರಲ್ಲಿ ಆಚಾರ್ಯದೇವ ಶ್ರೀ ವೀರಸೇನರು 'ಧವಲ' ಎಂಬ ಹೆಸರಿನಿಂದ ಬರೆದು ಪೂರ್ಣ ಮಾಡಿದ್ದಾರೆ. ಇದೂ ಆ ಷಟ್‌ಖಂಡಾಗಮದಷ್ಟೇ ಪೂಜ್ಯವೆನಿಸಿದೆ. ಇದರಲ್ಲಿ ಕರ್ಮಸಿದ್ಧಾಂತದ ಬಗ್ಗೆ ಸಂಪೂರ್ಣವಾದ ವಿವೇಚನೆಯಿದೆ.

**ನ್ಯಾಯ ಕುಮುದ ಚಂದ್ರಿಕೆ :-** ಆಚಾರ್ಯದೇವ ಶ್ರೀ ಅಕಲಂಕ ಭಟ್ಟರಿಂದ ರಚಿಸಲ್ಪಟ್ಟ 'ಲಘೀಯಸ್ತ್ರಯ' ವೆಂಬ ಗ್ರಂಥದ ಮೇಲೆ ಕಿ. ಶ. ೯೨೫ ರಲ್ಲಿ ಆಚಾರ್ಯದೇವ ಶ್ರೀ ಪ್ರಭಾಚಂದ್ರದೇವರು ರಚಿಸಿದ್ದು ಇದೊಂದು ಟೀಕಾ ಗ್ರಂಥವಾಗಿದೆ.

**ನ್ಯಾಯವಿನಿಶ್ಚಯ :-** ನ್ಯಾಯದ ವಿಷಯವಾಗಿರುವ ಈ ಗ್ರಂಥವನ್ನು ಕ್ರಿ. ಶ. ೯೪೦ ರಲ್ಲಿ ಆಚಾರ್ಯ ದೇವ ಅಕಲಂಕಭಟ್ಟರು ರಚಿಸಿದ್ದಾರೆ. ಇದರಲ್ಲಿ ಆಚಾರ್ಯ ಶ್ರೀಯವರು ಮೂರು ಪ್ರಸ್ತಾವನೆಗಳಲ್ಲಿ ೪೮೦ ಸಂಸ್ಕೃತ ಶ್ಲೋಕಗಳಿಂದ ರಚಿಸಿ ಸ್ವತಃ ತಾವೇ ಇದರ ಮೇಲೆ ಸಂಸ್ಕೃತದಲ್ಲಿ ಒಂದು ವೃತ್ತಿಯನ್ನೂ ಬರೆದಿದ್ದಾರೆ. ಇದರ ಮೂರು ಪ್ರಸ್ತಾವನೆಗಳಲ್ಲಿ ಪ್ರತ್ಯಕ್ಷ, ಅನುಮಾನ ಮತ್ತು ಪ್ರವಚನಗಳೆಂಬ ಮೂರು ವಿಷಯಗಳು ನಿಬದ್ಧವಾಗಿವೆ, ಈ ಗ್ರಂಥದ ಮೇಲೆ ಆಚಾರ್ಯದೇವ ಶ್ರೀ ವಾದಿರಾಜ ಸೂರಿಯವರು ಕ್ರಿ. ಶ. ೧೦೦೦ ದಲ್ಲಿ ಸಂಸ್ಕೃತ ಭಾಷೆಯಲ್ಲಿ ವಿಸ್ತಾರವಾದ ಒಂದು ವೃತ್ತಿಯನ್ನು ಬರೆದಿದ್ದಾರೆ.

**ಪಂಚಾಸ್ತಿಕಾಯ :-** ಸಮ್ಯಕ್‌ಜ್ಞಾನ ಪ್ರಧಾನವಾದ ಈ ಗ್ರಂಥವನ್ನು ಭಗವಾನ್ ಕುಂದಕುಂದದೇವರು ರಚಿಸಿದ್ದಾರೆ. ಇದರಲ್ಲಿ ೧೭೩ ಪ್ರಾಕೃತ ಗಾಥೆಗಳಿದ್ದು ತತ್ತ್ವಾರ್ಥಗಳ ವಿಷಯವನ್ನು ನಿರೂಪಿಸುತ್ತದೆ. ಇದನ್ನು ಶಿವಕುಮಾರ ರಾಜನ ಸಲುವಾಗಿ ಬರೆಯಲಾಗಿದೆ. ಇದರ ಮೇಲೆ ಆಚಾರ್ಯ ಶ್ರೀ ಅಮೃತಚಂದ್ರರು ಬರೆದ 'ತತ್ತ್ವಪ್ರದೀಪಿಕೆಯೆಂಬ ಸಂಸ್ಕೃತ ಟೀಕೆಯೂ ಮತ್ತು ಆಚಾರ್ಯಶ್ರೀಗಳಾದ ಮಲ್ಲಿಷೇಣ, ಜಯಸೇನ, ಪ್ರಭಾಚಂದ್ರ, ಬಾಲಚಂದ್ರರುಗಳು ಬರೆದ ಸಂಸ್ಕೃತ ಟೀಕೆಗಳೂ ಹಾಗೂ ಭಟ್ಟಾರಕ ಜ್ಞಾನಚಂದ ಪಂ. ಹೇಮಚಂದ ಪಂ. ಬುಧಜನರುಗಳು ಬರೆದ ಭಾಷಾ ಟೀಕೆಗಳೂ ಉಪಲಬ್ಧವಿವೆ.

**ಪುರುಷಾರ್ಥ ಸಿದ್ಧ್ಯುಪಾಯ :-** ಇದು ಆಚಾರ್ಯದೇವ ಶ್ರೀ ಅಮೃತಚಂದ್ರರಿಂದ ರಚಿಸಲ್ಪಟ್ಟ ಸಂಸ್ಕೃತ ಭಾಷೆಯಲ್ಲಿಯ ಒಂದು ಛಂದೋಬದ್ಧವಾದ ಗ್ರಂಥವಾಗಿದೆ. ಇದರಲ್ಲಿ ೨೪೩ ಶ್ಲೋಕಗಳಿವೆ. ಇವರ ಕಾಲ ೯೬೩-೧೦೫೫ ರವರೆಗಿರುತ್ತದೆ. ಇದರ ಮೇಲೆ ಪಂ. ಟೋಡರಮಲ್ಲರು ಒಂದು ಟೀಕಾಗ್ರಂಥವನ್ನು ಬರೆದಿದ್ದಾರೆ. ಆದರೆ ಅದು ಪೂರ್ಣವಾಗುವ ಮುನ್ನವೇ ವಿಧಿಯು ಅವರನ್ನು ಕೊಂಡೊಯ್ಯುತ್ತದೆ. ಆದ್ದರಿಂದ ಅಪೂರ್ಣವಾದ ಅವರ ಕೃತಿಯನ್ನು ಹಿಂದಿನಿಂದ ದೌಲತರಾಮರು ಪೂರ್ಣಗೊಳಿಸಿದ್ದಾರೆ.

**ಪ್ರಮಾಣ ಸಂಗ್ರಹ :-** ಇದು ಆಚಾರ್ಯ ಶ್ರೀ ಅಕಲಂಕ ದೇವರ ಕೊನೆಯ ಕೃತಿಯಾಗಿದೆ. ನ್ಯಾಯದ ವಿಷಯವಾಗಿ ರಚಿಸಲ್ಪಟ್ಟ ಈ ಗ್ರಂಥವು ಅತ್ಯಂತ ಜಟಿಲವಾಗಿದೆ. ಮತ್ತು ಸಂಸ್ಕೃತ ಗದ್ಯ-ಪದ್ಯಗಳಿಂದ ಮಿಶ್ರಿತವಾಗಿದೆ. ಇದರಲ್ಲಿ ಒಂಭತ್ತು ಪ್ರಸ್ತಾವ ಹಾಗೂ ಎಂಭತ್ತೇಳೂವರೆ ಕಾರಕಗಳಿವೆ. ಈ ಕಾರಕಗಳ ಮೇಲೆ ಸ್ವತಃ ಅಕಲಂಕದೇವರು ಒಂದು ವೃತ್ತಿಯನ್ನು ಬರೆದಿದ್ದಾರೆ. ಈ ಪ್ರಮಾಣ ಸಂಗ್ರಹದ ಮೇಲೆ ಆಚಾರ್ಯ ಶ್ರೀ ಅನಂತ ಕೀರ್ತಿಗಳು ಬರೆದ 'ಪ್ರಮಾಣ ಸಂಗ್ರಹಾಲಂಕಾರ'ವೆಂಬ ಹೆಸರಿನ ಸಂಸ್ಕೃತ ಟೀಕೆಯು ಉಪಲಬ್ಧವಿದೆ ಇವೆರಡೂ ಕೂಡಿ ಒಟ್ಟು ಗದ್ಯ-ಪದ್ಯಗಳ ಪ್ರಮಾಣವು ೮೦೦ ಶ್ಲೋಕಗಳಷ್ಟಾಗುತ್ತದೆ.

**ಪ್ರಮೇಯಕಮಲ ಮಾರ್ತಂಡ :-** ಆಚಾರ್ಯ ಶ್ರೀ ಮಾಣಿಕ್ಯನಂದಿ ದೇವರು ಕ್ರಿ.ಶ. ೯೨೫ ರಲ್ಲಿ ರಚಿಸಿದ 'ಪರೀಕ್ಷಾಮುಖ'ವೆಂಬ ಗ್ರಂಥದ ಮೇಲೆ ಆಚಾರ್ಯ ಶ್ರೀ ಪ್ರಭಾಚಂದ್ರದೇವರು ಬರೆದ ವಿಸ್ತಾರವಾದ ಟೀಕಾ ಗ್ರಂಥವು ಇದಾಗಿದೆ. ಈ ಗ್ರಂಥದಲ್ಲಿ ನ್ಯಾಯದ ವಿಷಯವು ಬರುತ್ತದೆ. ಇದರ ರಚನೆಯ ಕಾಲವು ಕ್ರಿ. ಶ. ೯೫೦ ರಿಂದ ೧೦೨೩ ರ ವರೆಗಿರುತ್ತದೆ.

**ಪ್ರವಚನಸಾರ :-** ಇದು ಭಗವಾನ್ ಕುಂದಕುಂದದೇವರಿಂದ ರಚಿಸಲ್ಪಟ್ಟ ಆಧ್ಯಾತ್ಮ ಹಾಗೂ ಚಾರಿತ್ರ ಪ್ರಧಾನವಾದ ಗ್ರಂಥವಾಗಿದೆ. ಇದರಲ್ಲಿ ೨೭೫ ಪ್ರಾಕೃತ ಗಾಥೆಗಳಿವೆ. ಇದರ ಮೇಲೆ ಆಚಾರ್ಯಶ್ರೀ ಅಮೃತಚಂದ್ರರು ಬರೆದ 'ತತ್ತ್ವಪ್ರದೀಪಿಕೆ'ಯೆಂಬ ಸಂಸ್ಕೃತ ಟೀಕೆಯೂ ಆಚಾರ್ಯ ಶ್ರೀ ಮಲ್ಲಿಷೇಣ ಹಾಗೂ ಆಚಾರ್ಯ ಶ್ರೀ ಜಯಸೇನರು ಬರೆದ ಸಂಸ್ಕೃತ ಟೀಕೆಗಳಿವೆ ಮತ್ತು ಪಂ. ಹೇಮಚಂದ್ರರು ಬರೆದ ಭಾಷಾ ಟೀಕೆಯೂ ಇನ್ನು ಕವಿ ದೇವಿದಯಾಲ ಹಾಗೂ ಕವಿ ವೃಂದಾವನರು ಹಿಂದಿಯಲ್ಲಿ ಬರೆದ ಭಾಷಾ ಟೀಕೆಗಳು ಉಪಲಬ್ಧವಿವೆ.

**ಯುಕ್ತ್ಯನುಶಾಸನ :-** ಇದು ಎರಡನೆಯ ಶತಮಾನದಲ್ಲಿ ಆಚಾರ್ಯದೇವ ಶ್ರೀ ಸಮಂತಭದ್ರರಿಂದ ರಚಿಸಲ್ಪಟ್ಟ ಸಂಸ್ಕೃತ ಛಂದೋಬದ್ಧವಾದ ಗ್ರಂಥವಾಗಿದೆ. ಇದರಲ್ಲಿ ಜಿನಶಾಸನದ ಸ್ಥಾಪನೆಯನ್ನು ನ್ಯಾಯ ಮತ್ತು ಯುಕ್ತಿಪೂರ್ವಕವಾಗಿ ಮಾಡಲಾಗಿದೆ. ೬೪ ಶ್ಲೋಕಗಳಿಂದ ಕೂಡಿದ ಈ ಗ್ರಂಥದ ಮೇಲೆ. ಕ್ರಿ. ಶ. ೭೭೫ ರಲ್ಲಿ ಆಚಾರ್ಯದೇವ ಶ್ರೀ ವಿದ್ಯಾನಂದರು 'ಯುಕ್ತ್ಯನುಶಾಸನಾಲಂಕಾರ'ವೆಂಬ ಹೆಸರಿನ ವೃತ್ತಿಯನ್ನು ಬರೆದಿದ್ದಾರೆ.

**ಯೋಗಸಾರ :-** ಇದು ಆಚಾರ್ಯ ಶ್ರೀ ಯೋಗಿಂದುದೇವರಿಂದ ರಚಿಸಲ್ಪಟ್ಟ ಪ್ರಾಕೃತ ದೋಹಾ (ದ್ವಿಪದಿ) ಬದ್ಧವಾದ ಆಧ್ಯಾತ್ಮಿಕ ಗ್ರಂಥವಾಗಿದೆ. ಇದರಲ್ಲಿ ಒಟ್ಟು ೧೦೮ ಶ್ಲೋಕಗಳಿವೆ. ಮತ್ತು ಆಚಾರ್ಯ ಶ್ರೀ ಅಮಿತಗತಿಗಳು ಬರೆದ ಇನ್ನೊಂದು ಯೋಗಸಾರವಿದೆ ಅದು ಸಂಸ್ಕೃತ ಛಂದೋಬದ್ಧವಾಗಿದ್ದು ಆಧ್ಯಾತ್ಮವಿಷಯಗಳಿಂದೊಡಗೂಡಿದೆ. ಇದರಲ್ಲಿ ೯ ಅಧಿಕಾರಗಳಿದ್ದು ಒಟ್ಟು ೫೪೦ ಶ್ಲೋಕಗಳಿವೆ. ಮತ್ತೊಂದು ಯೋಗಸಾರವು ಆಚಾರ್ಯ ಶ್ರೀ ಯೋಗಚಂದ್ರರಿಂದ ರಚಿಸಲ್ಪಟ್ಟಿದೆ. ಇದೂ ಆಧ್ಯಾತ್ಮ ವಿಷಯಗಳಿಂದ ತುಂಬಿದೆ. ಇದಕ್ಕೆ 'ದೋಹಾಸಾರ'ವೆಂದೂ ಹೇಳುತ್ತಾರೆ.

**ರತ್ನಕರಂಡ ಶ್ರಾವಕಾಚಾರ :-** ಇದನ್ನು ಆಚಾರ್ಯ ಶ್ರೀ ಸಮಂತಭದ್ರದೇವರು ರಚಿಸಿದ್ದಾರೆ. ಇದು ಸಂಸ್ಕೃತ ಛಂದೋಬದ್ಧವಾಗಿದ್ದು ಇದರಲ್ಲಿ ಏಳು ಪರಿಚ್ಛೇದಗಳು ೧೫೦ ಶ್ಲೋಕಗಳು ಇವೆ. ಶ್ರಾವಕರ ವಿಷಯವಾಗಿರುವ ಉಪಲಬ್ಧ ಗ್ರಂಥಗಳಲ್ಲಿ ಇದು ಮೊದಲನೆಯದಾಗಿದೆ. ಇದಕ್ಕೆ ಆಚಾರ್ಯ ಶ್ರೀಯವರು 'ಸಮೀಚೀನ ಧರ್ಮ'ವೆಂದು ಕರೆದಿದ್ದಾರೆ. ಇದರ ಮೇಲೆ ಆಚಾರ್ಯ ಶ್ರೀಪ್ರಭಾಚಂದ್ರ ದೇವರು ಕ್ರಿ.ಶ. ೧೧೮೫ ರಲ್ಲಿ ಒಂದು ಟೀಕಾ ಗ್ರಂಥವನ್ನು ರಚಿಸಿದ್ದಾರೆ. ಅದು ಸಂಸ್ಕೃತದಲ್ಲಿದೆ. ಇನ್ನೊಂದು ಪಂ. ಸದಾಸುಖರು ಕ್ರಿ.ಶ. ೧೮೬೩ ರಲ್ಲಿ ಒಂದು ಭಾಷಾ ಟೀಕೆಯನ್ನು ಬರೆದಿದ್ದಾರೆ.

**ರಯಣಸಾರ :-** ಇದು ಭಗವಾನ್ ಕುಂದಕುಂದಾಚಾರ್ಯದೇವರು ಆಚರಣೆಯ ವಿಷಯವಾಗಿ ರಚಿಸಿದ ಪ್ರಾಕೃತ ಗ್ರಂಥವಾಗಿದೆ. ಇದರಲ್ಲಿ ೧೬೭ ಶ್ಲೋಕಗಳಿರುತ್ತವೆ. ಇದರ ಮೇಲೆ ಯಾರೂ ವೃತ್ತಿ ಮೊದಲಾದುವನ್ನು ಬರೆದಿಲ್ಲ.

**ರಾಜವಾರ್ತಿಕ :-** ಇದು ಆಚಾರ್ಯದೇವ ಶ್ರೀ ಅಕಲಂಕಭಟ್ಟರು ಕ್ರಿ. ಶ. ೬೪೦ ರಲ್ಲಿ ಸರ್ವಾರ್ಥ ಸಿದ್ಧಿಯ ಮೇಲೆ ಮಾಡಲಾದ ವಿಸ್ತಾರವಾದ ಸಂಸ್ಕೃತ ವೃತ್ತಿಯಾಗಿದೆ. ಇದರಲ್ಲಿ ಸರ್ವಾರ್ಥಸಿದ್ಧಿಯ ವಾಕ್ಯಗಳನ್ನು ವಾರ್ತಿಕರೂಪದಿಂದ ಸ್ವೀಕಾರಮಾಡಿ ಅವುಗಳ ಟೀಕೆ ಮಾಡಲಾಗಿದೆ. ಈ ಗ್ರಂಥವು ಜ್ಞೇಯಾರ್ಥದಿಂದ ಪರಿಪೂರ್ಣ ತುಂಬಿಹೋಗಿದೆ. ಒಂದು ವೇಳೆ ಇದಕ್ಕೆ ದಿಗಂಬರ ಜೈನಸಂಪ್ರದಾಯದ ಕೋಶವೆಂದು ಕರೆದರೂ ಅತಿಶಯೋಕ್ತಿಯೆನಿಸಲಾರದು. ಇದರ ಮೇಲೆ ಕ್ರಿ. ಶ. ೧೮೯೩ ರಲ್ಲಿ ಪನ್ನಾಲಾಲರು ಬರೆದ ಒಂದು ಭಾಷಾವಚನಿಕೆಯು ಉಪಲಬ್ಧವಿದೆ.

**ಲಬ್ಧಿಸಾರ :-** ಈ ಗ್ರಂಥವನ್ನು ಆಚಾರ್ಯ ಶ್ರೀ ನೇಮಿಚಂದ್ರಸಿದ್ಧಾಂತ ಚಕ್ರವರ್ತಿಗಳು ರಚಿಸಿದ್ದಾರೆ. ಇದರಲ್ಲಿ ಮೋಹನೀಯ ಕರ್ಮದ ಉಪಶಮದ ವಿಷಯವಾಗಿ ಅತ್ಯಂತ ಸೂಕ್ಷ್ಮವಾದ ವಿವರಣೆಯಿದೆ. ಇದು ೬೫೧ ಪ್ರಾಕೃತ ಗಾಥೆಗಳಿಂದ ಕೂಡಿದ್ದು ಇದರ ಮೇಲೆ 'ಸಂಜೀವಿನಿ'ಯೆಂಬ ಸಂಸ್ಕೃತ ಟೀಕೆಯೂ ಮತ್ತು ಪಂ. ಟೋಡರಮಲ್ಲರು ರಚಿಸಿದ ವಿಸ್ತಾರವಾದ ಭಾಷಾ ಟೀಕೆಯೂ ಉಪಲಬ್ಧವಿದೆ.

**ಸಮಯಸಾರ :-** ಇದು ಭಗವಾನ್ ಕುಂದಕುಂದಾಚಾರ್ಯ ದೇವರಿಂದ ರಚಿಸಲ್ಪಟ್ಟ ಮಹೋಜ್ವಲ ಗ್ರಂಥರತ್ನವಾಗಿದೆ. ಜೈನಪರಂಪರೆಯಲ್ಲಿ ಇದಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಇದರಲ್ಲಿ ಬರುವ ಆಧ್ಯಾತ್ಮಿಕ ವಿಷಯವು ತನ್ನ ಚರಮಸೀಮೆಯನ್ನು ತಲುಪಿದೆ. ಈ ಪರಮಾಗಮದಲ್ಲಿ ಒಟ್ಟು ೪೧೫ ಪ್ರಾಕೃತ ಗಾಥೆಗಳಿವೆ. ಇದರ ಮೇಲೆ ಆಚಾರ್ಯ ಶ್ರೀಗಳಾದ ಅಮೃತಚಂದ್ರದೇವರು 'ಆತ್ಮಖ್ಯಾತಿ'ಯೆಂಬ ಟೀಕಾ ಗ್ರಂಥವನ್ನು ರಚಿಸಿದ್ದಾರೆ. ಅಲ್ಲದೆ ಇತ್ತೀಚಿನ ವಿದ್ವಾಂಸರಲ್ಲಿ ಒಬ್ಬರಾದ ಪಂ. ಜಯಚಂದಛಾವಡಾ ಅವರು ಭಾಷಾವಚನಿಕೆಯನ್ನು ರಚಿಸಿದ್ದಾರೆ. ಅದು ಆತ್ಮಖ್ಯಾತಿಯನ್ನಾಧರಿಸಿದೆ. ಪ್ರಸ್ತುತ ಆಚಾರ್ಯ ಶ್ರೀ ಕುಂದಕುಂದದೇವರ ಕಾಲವು ಸುಮಾರು ಮೊದಲನೆಯ ಶತಮಾನದ ಆದಿಭಾಗವೆಂದು ಪರಿಗಣಿಸಲಾಗಿದೆ.

**ಸಮಯಸಾರ ಕಲಶ :-** ಭಗವಾನ್ ಕುಂದಕುಂದಾಚಾರ್ಯ ದೇವರಿಂದ ರಚಿಸಲ್ಪಟ್ಟ ಸಮಯಸಾರ ಪರಮಾಗಮದ ಮೇಲೆ ಶ್ರೀ ಅಮೃತಚಂದ್ರ ಆಚಾರ್ಯದೇವರು 'ಆತ್ಮಖ್ಯಾತಿ' ಎಂಬ ವೃತ್ತಿಯನ್ನು ಬರೆದಿದ್ದಾರೆ. ಅದರಲ್ಲಿ ಬರುವ ಕಲಶ ಸ್ವರೂಪದ ಶ್ಲೋಕಗಳನ್ನು ಒತ್ತಟ್ಟಿಗೆ ಮಾಡಿ, ಒಂದುಗೂಡಿಸಿ ರಚಿಸಲಾದುದೇ ಈ 'ಸಮಯಸಾರ ಕಲಶ'ವು ಇದರಲ್ಲಿ ಒಂಭತ್ತು ಅಧಿಕಾರಗಳಿದ್ದು ಒಟ್ಟು ೨೭೮ ಶ್ಲೋಕಗಳಿವೆ. ಜಿನಮಂದಿರದ ಕಳಸದಂತೆ ಆತ್ಮಖ್ಯಾತಿ ವೃತ್ತಿಯ ಮಧ್ಯ-ಮಧ್ಯ ಬರುವ ಶ್ಲೋಕಗಳನ್ನು ಕ್ರೋಢೀಕರಿಸಿ 'ಸಮಯಸಾರಕಲಶ'ವೆಂಬ ಸಾರ್ಥಕ ಹೆಸರನ್ನಿರಿಸಿದ್ದಾರೆ. ಇದಕ್ಕೆ 'ಪರಮಾಧ್ಯಾತ್ಮ ತರಂಗಿನಿ'ಯೆಂಬ ಇನ್ನೊಂದು ಹೆಸರೂ ಉಂಟು.

**ಸ್ವಯಂಭೂ ಸ್ತೋತ್ರ :-** ಇದನ್ನು ಆಚಾರ್ಯಶ್ರೀ ಸಮಂತಭದ್ರದೇವರು ಎರಡನೆಯ ಶತಮಾನದಲ್ಲಿ ರಚಿಸಿದ್ದಾರೆ. ಇದು ಸಂಸ್ಕೃತ ಛಂದೋಬದ್ಧವಾಗಿದ್ದು ಇದರಲ್ಲಿ ೨೪ ತೀರ್ಥಂಕರ ಪರಮದೇವರನ್ನು ಸ್ತುತಿಸಲಾಗಿದೆ ಅದೂ ನ್ಯಾಯಪೂರ್ವಕವಾಗಿ ಅನೇಕಾಂತದ ಸ್ಥಾಪನೆ ಮಾಡುತ್ತ ಸ್ತುತಿಸಿರುವುದು ಅದರ ಒಂದು ವೈಶಿಷ್ಟ್ಯವಾಗಿದೆ. ಇದರಲ್ಲಿ ನಂಬರ ೨ ಮತ್ತು ೩ ಉಳಿದು ಉಳಿದ ತೀರ್ಥಂಕರರ ಸ್ತವನಕ್ಕೆ ಐದೈದು ಶ್ಲೋಕಗಳನ್ನು ಬಳಸಲಾಗಿದೆ. ಒಟ್ಟು ೧೪೩ ಶ್ಲೋಕಗಳಿವೆ.

**ಸಿದ್ಧಿವಿನಿಶ್ಚಯ :-** ಇದು ಆಚಾರ್ಯ ಶ್ರೀ ಅಕಲಂಕ ದೇವರಿಂದ ರಚಿಸಲ್ಪಟ್ಟಂಥ ನ್ಯಾಯದ ವಿಷಯವಾಗಿರುವ ಸಂಸ್ಕೃತ ಪದ್ಯಮಯ ಗ್ರಂಥವಾಗಿದೆ ಇದರ ಮೇಲೆ ತಾವೇ ಸಂಸ್ಕೃತ ಪದ್ಯಗಳಲ್ಲಿ ಒಂದು ವೃತ್ತಿಯನ್ನು ಬರೆದಿದ್ದಾರೆ. ಇದರಲ್ಲಿ ಹನ್ನೆರಡು ಪ್ರಸ್ತಾವಗಳಿವೆ. ಮೂಲಗ್ರಂಥದಲ್ಲಿ ಒಟ್ಟು ೨೮ ಶ್ಲೋಕಗಳಿವೆ. ಈ ಗ್ರಂಥದ ಮೇಲೆ ಆಚಾರ್ಯ ಶ್ರೀ ಅನಂತವೀರ್ಯರು ಸಂಸ್ಕೃತದಲ್ಲಿ ಒಂದು ಟೀಕಾ ಗ್ರಂಥವನ್ನು ರಚಿಸಿದ್ದಾರೆ. 1




ಪ್ರಕಾಶಕರು :

**ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ,**

ಬೆಂಗಳೂರು.